MICROFILMED BY
NEHRU MEMORIAL MUSEUM AND LIBRARY
TEEN MURTI HOUSE
NEW DELHI

SWADESHABHIMANI
KANNADA WEEKLY
PUBLISHED FROM
MANGALORE

ROLL No. 2

CONTD

FROM
1910

P.K.G
15.380

Registered No M. 498.

ಸ್ವದೇಶಾಭಿಮಾನಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ವರ್ಷ ೧ಕ್ಕೆ ರೂ. 1-4-0. ಟಪ್ಪಾಲು ಹಾಸಲು ಶೇರಿ ರೂ. 2-1-0.

ಪುಸ್ತಕ 4. ಮಂಗಳೂರು, ತಾರೀಕು 25ನೇ ಶುಕ್ರವಾರ ನವಂಬರ 1910. ಸಂಚಿಕೆ 47

Amrutanjan Depot Fort Bombay.

ಅಮೃತಾಂಜನ

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗವಾಯು, ಸೊಂಟದನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃಂತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು. ಬಾಟ್ಲಿ ೧ರ ಕಿಮ್ಮತು 8 ಆಣೆ.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲಿ ಒಂದರ ಕಿಮ್ಮತು ರೂ. 1.

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

SAFE ★ EFFICACIOUS ★ SURE ★ WILLIAM & Co. BOMBAY ★ PILLS ★ OINTMENTS ★ POWDERS

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ. 4.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ. 1.

ಸುಂದರಿ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ.

ವಿಳಾಸ:—ಅಮೃತಾಂಜನ ಡಿಪೊ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ", ಮುಂಬಯಿ.

"ಚಮತ್ಕಾರ ಚಿಂತಾಮಣಿ"

ಶಬ್ದ ಚಮತ್ಕಾರ ಅರ್ಥ ಚಮತ್ಕೃತಿಗಳಿಂದೊಡಗೂಡಿ ಮೃದುಮಧುರ ಶೈಲಿಯಿಂದ ಸಹಿತವಾಗಿ, ಧರ್ಮನೀತಿ ಜ್ಞಾನಗಳನ್ನೂ ವಿಶದಪಡಿಸುತ್ತಿರುವ ರಸಭರಿತವಾದ ಈ ಕಥೆಯನ್ನು ಓದತಕ್ಕವರು ರಾಮಾಯಣದಲ್ಲಿನ ಹೆಸರುಗಳನ್ನು ಮಾತ್ರ ಜ್ಞಾಪಿಸಿಕೊಂಡು ಇದರಲ್ಲಿ ಹೊಂದಿಸಿಕೊಂಡರೆ ಮುಂದೆ ಇದರಲ್ಲಿನ ಸವಿಯು ಬೇಗನೆ ಗೊತ್ತಾಗುತ್ತದೆ. ಕ್ರಯ ರೂ. 0—10—0.

"ವಿದ್ಯಾನಂದ' ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ತಿ ಪ್ರಿಂಟಾಗಿ ಸಿದ್ಧವಾಗಿದೆ. ಬೆಲೆ 1—0—0.

ಮುಕುಂದಮಾಲಾ ಸ್ತೋತ್ರ.

ಹೆಚ್ಚು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ. ಬೆಲೆ 0—4—0.

ವಿಳಾಸ:— ಮ್ಯಾನೇಜರ್,

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ.

೧೯೧೧ನೇ ದಿ "ಮಾಡಲ್" ಪಾಕೆಟ್ ಡೈರಿ.

ವಿವರಣೆ.

ನಂ. 1. ಪಂಚಾಂಗಸಹಿತವಾದ ಚಿಕ್ಕ ಸೈಜ್ ಡೈರಿ $3\frac{1}{2}$ ಅಂಗುಲ, ಅಗಲ $4\frac{3}{4}$ ಉದ್ದವಿರುವ 540 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 4ಆಣೆ.

ನಂ. 2. ಡಿಟೊ ಮೇಲ್ಕಂಡ ಚಿಕ್ಕ ಸೈಜ್ ಪ್ಲಾಪ್ ಬೈಂಡು ಮಾಡಿರುವುದು. ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಸ್ಟಾಂಪು ವಗೈರೆ ಇಡುವುದಕ್ಕೆ ಜೇಲವಿದೆ. ಮೇಲಗಡೆ ಮುಚ್ಚುವದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್‌ಸಲ್ ಇಟ್ಟಿದೆ. ಇದರ ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 3. ಪಂಚಾಂಗಸಹಿತವಾದ ದೊಡ್ಡ ಸೈಜ್ ಡೈರಿ $4\frac{1}{4}$ ಅಂಗುಲ ಅಗಲ 7 ಅಂಗುಲ ಉದ್ದವಿರುವ 490 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 4. ಡಿಟೊ ಮೇಲ್ಕಂಡ ದೊಡ್ಡ ಸೈಜ್. ಪ್ಲಾಪ್ ಬೈಂಡು ಮಾಡಿರುವದು ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಕಾರ್ಡು, ಕವರು, ಸ್ಟಾಂಪು ವಗೈರೆ ಇಡುವುದಕ್ಕೆ ಜೇಲ ಇರುತ್ತದೆ. ಮೇಲ್ಗಡೆ ಮುಚ್ಚುವುದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್‌ಸಲ್ ಇಟ್ಟಿದೆ. ಕ್ರಯ ಪ್ರತಿ 1ಕ್ಕೆ 8 ಆಣೆ.

ನಂ. 5. ಆಫೀಸರ್‌ಸ್ ಹ್ಯಾಂಡ್ ಡೈರಿ 1—0—0.

ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಳುವವರಿಗೆ ಇದು ಸಕಾಲವಾಗಿದೆ.

ಕೂಡಲೇ ಬರೆದು ತರಿಸಿಕೊಳ್ಳಿರಿ

N. B:—1. ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ತರಿಸಿಕೊಂಡರೆ 1 ಡೈರಿಯನ್ನು ಬಹುಮಾನವಾಗಿ ಕೊಡುತ್ತೇವೆ. 2. ವಿ.ಪಿ. ಮೂಲಕ ತರಿಸಿಕೊಳ್ಳುವವರು ಪೋಸ್ಟು ಚಾರ್ಜು ಮತ್ತು ವಿ.ಪಿ. ಕಮಿಶನ್ ಸಹ ಬೇರೆ ಕೊಡಬೇಕು. 3. ಹೆಚ್ಚು ವಿಷಯ ತಿಳಿಯಲಪೇಕ್ಷಿಸುವವರು ರಿಪ್ಲೈ ಕಾರ್ಡನ್ನಾಗಲಿ ಅರ್ಧಾಣೆ ಪೋಸ್ಟು ಲೇಬಲ್ ಆಗಲಿ ಮುಂಗಡ ಕಳುಹಿಸಬೇಕು. 4. ಎಷ್ಟು ಜಾಸ್ತಿ ಪ್ರತಿಗಳನ್ನು ತರಿಸಿಕೊಳ್ಳುವರೋ ಅಷ್ಟು ಪೋಸ್ಟು ಚಾರ್ಜು ಕಮ್ಮಿ ಆಗುವದು. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಆಫೀಸರ್‍ಸ್ ಪ್ಯಾನಿಸೀ ಹ್ಯಾಂಡ್ ಡೈರಿ ಎಂಬುವದು ಹಸನಾದ ಕಾಗದದಿಂದಲೂ ಮತ್ತು ಒಳ್ಳೇ ಕ್ಯಾಲಿಕ್‌ನಿಂದಲೂ ಸಹಾ ತಯಾರುಮಾಡಿರುತ್ತದೆ.

ಮೆತ್ತೆಗಳು, ಮತ್ತು ಮೇಜಿನ ಚೌಕಗಳು, ವಗೈರೆಯವುಗಳ ಮೇಲೆ ಚಿತ್ರವಿಚಿತ್ರವಾದ ಕಸೂತಿ ಕೆಲಸವನ್ನು ಮಾಡಲು ಅನುಕೂಲವಾದ "ಕೈ ಮೆಷಿನ್"ಗಳು, ನಮೂನೆಗಳು ಮತ್ತು ಇದಕ್ಕೆ ಅನುಕೂಲವಾದ ರೇಶ್ಮೆ ಮತ್ತು ಉಲನ್‌ದಾರಗಳು, ಸೂಜಿಗಳು, ಕತ್ತರಿಗಳು, ಚೌಕಟ್ಟುಗಳು ವಗೈರೆ ವಿಶಿಷ್ಟ ಸಾಮಾನುಗಳು, ಸೈಜುವಾರಿ ಕಸೂತಿ ಕಾರ್ಡುಗಳು ಕಲ್ಕತ್ತೆಯ ಕ್ಯಾಟಲಾಗ್ ಕ್ರಯಕ್ಕೆ ಇಲ್ಲಿ ದೊರೆಯುತ್ತವೆ.

ಎಲ್. ಎ. ಫೋರುವಾಲ್ ಕಂಪೆನಿ.

ಬೆಂಗಳೂರು ಸಿಟಿ.

ವಿಕ್ರಯಕ್ಕೆ ಸಿದ್ಧವಾಗಿರುವುದು

ಶ್ರೀ ಚಿಕ್ಕುಪಾಧ್ಯಾಯರಿಂದ

ವಿರಚಿತವಾದ

"ಶ್ರೀ ಶುಕಸಪ್ತತಿ"

(ಡಮ್ಮಿ ಅಷ್ಟಪುಟ — ಒಟ್ಟು ಪುಟಗಳು ೫೬೦).

ಈ ಗ್ರಂಥವು ಈಗ ಮೂರನೇ ಸಲ ಮುದ್ರಣದಲ್ಲಿ ಪೂರ್ವ ಪ್ರತಿಯಲ್ಲಿದ್ದಂತೆ ಯಾವ ಲೋಪವೂ ಇಲ್ಲದೆ ನೂತನವಾಗಿ ಪರಿಷ್ಕರಿಸಿ ಪ್ರಕಟಿಸಲ್ಪಟ್ಟಿದೆ.

ಮೇಲು ಪ್ರತಿ ೧ಕ್ಕೆ ಕ್ರಯ ರೂ. ೨—೦—೦

ಉತ್ತಮ ಪ್ರತಿ ,, ರೂ. ೩—೦—೦

ಮುಖ್ಯವಾಗಿ ನಮ್ಮ ದೇಶದಲ್ಲಿ ಕನ್ನಡ ಭಾಷೆಯನ್ನು ಬಲ್ಲ ಪ್ರತಿಯೊಬ್ಬ ಗೃಹಸ್ಥರ ಮನೆಯಲ್ಲಿಯೂ, ಗೃಹಪತಿಗಳು ತಮ್ಮ ಕುಟುಂಬದಲ್ಲಿ ಹೆಂಗಸರು, ಗಂಡಸರು, ಪ್ರಾಯಸ್ಥರು, ಮುದುಕರು, ಹುಡುಗರು, ಹುಡುಗಿಯರು ವೇದಸಮ್ಮತವಾದ ಮತಾಚಾರಗಳನ್ನೂ, ಧರ್ಮಗಳನ್ನೂ, ಸಂಪ್ರದಾಯಗಳನ್ನೂ, ತಿಳಿದುಕೊಂಡು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಸಂತೋಷವನ್ನು ಅನುಭವಿಸುತ್ತಾ ಆಸ್ತಿಕರಾಗಿರಬೇಕೆಂದು ಅಪೇಕ್ಷೆ ಇದ್ದರೆ ಈ ಪುಸ್ತಕವನ್ನು ಅವಶ್ಯಕವಾಗಿ ತೆಗದುಕೊಡಬೇಕು.

ಭಾಷ್ಯಂ. ರಾಮಾಚಾರ್ಯ,

೪೫. ಆಸ್ಪತ್ರಿ ರೋಡ್,

ಬೆಂಗಳೂರು ಶಹರು.

———o———

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಶಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಬಲ್ಲೆನು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ; ಸರ್ವರೂ ಇದನ್ನು ಉಪಯೋಗಿಸ ಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು: ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನೂ ಡುತ್ತದೆ. ಇದುಮನೋಹರವಾಧವುಳಗಂಧ್ಯಕೊ ಸುದಾವದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತು ಉತ್ತಮೋತ್ತಮವಾದುದು. ೭ ಔನ್‌ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೇನ್, ಎಲ್. ಎಮ್. ಎಸ್.,

216 ಕಾರನ್‌ವಾಲಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಫೋರುವಾಲ್ ಎಂಡ್ ಕೊ,

ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು;—ಮ॥ ರಾ॥ ರಾ॥ ಸಿ. ಆರ್. ಕಾಮತರು,

ಉಲನ್ ಮಾರ್ಟ, ಮಂಗಳೂರು

ತೃತೀಯ ಗೌಡಸಾರಸ್ವತ ಪರಿಷದ.

ಮಂಗಳೂರಲ್ಲಿ ನೆರದ ೨ನೇ ಪರಿಷದದಲ್ಲಿ ಠರಾವಾದ ಪ್ರಕಾರದ ೩ನೇ ಪರಿಷದವು ಗೋವಾ ಪ್ರಾಂತ್ಯದ ಮಾಡಗಾಂನಲ್ಲಿ ಇದೇ ಬರುವ ದಶಂಬರ ತಾ. ೨೩ಕ್ಕೆ ಜರಗುವದು. ಕಳದ ತಿಂಗಳ ತಾ. ೨೩ಲ್ಲು ಪಣಜಿ ಎಂಬಲ್ಲಿಯ ಗೋಮಾಂತಕದ ಪ್ರಮುಖ ಗೌಡಸಾರಸ್ವತರು ಸಭೆ ಕೂಡಿ ಸ್ವಾಗತ ಕಮಿಟಿಯನ್ನು ಸ್ಥಾಪಿಸಿರುವರು. ಸ್ವಾಗತ ಕಮಿಟಿಯ ಅಧ್ಯಕ್ಷಸ್ಥಾನವನ್ನು ಪ್ರಸಿದ್ಧ ಲೋಕಮಾನ್ಯ ಮತ್ತು ರಾಜಮಾನ್ಯ ಗೃಹಸ್ಥ ಶ್ರೀಮಂತ ವಿಷ್ಣುಬಾಬ್ ದೆಫೆಯವರಿಗೂ ಮತ್ತು ಉಪಾಧ್ಯಕ್ಷ ಸ್ಥಾನವನ್ನು ಗೋಮಾಂತಕದ ಕುಂಡೈ ಎಂಬಲ್ಲಿಯ ಶ್ರೀಮಂತ ಗೃಹಸ್ತ ಸಾಂತುಬಾಬ್ ಶೆಣ್ವಾಯವರಿಗೂ ಅರಿಸಿಕೊಟ್ಟಿರುವರು. ಪರಿಷದದ ಅಧ್ಯಕ್ಷಸ್ಥಾನವನ್ನು ಅಲಂಕರಿಸುವರೆ ಕೈವಲ್ಯ ಮಠಾದೀಶ ಶ್ರೀಮತ್ ಪೂರ್ಣಾನಂದ ಸರಸ್ವತೀ ಸ್ವಾಮಿಯವರಿಗೂ ಶ್ರೀಮತ್ ಇಂದಿರಾಕಾಂತ ತೀರ್ಥರವರಿಗೂ ವಿನಂತಿಮಾಡಿರುವರು.

ಪರಿಷದದ ಇತರ ವಿವರಕ್ಕೆ ಆಮಂತ್ರಣ ಸಭೆಯ ಕಾರ್ಯದರ್ಶಿಗಳಾದ ದತ್ತಾತ್ರಯ ಪಾಂಡುರಂಗನಾಯಕ, ದಲಾಲ್ Margao (Goa) ಈ ವಿಳಾಸಕ್ಕೆ ಬರದರೆ ಎಲ್ಲಾ ವಿವರವೂ ತಿಳಿಸಲಾದೀತು.

ದತ್ತಾತ್ರಯ ಪಾಂಡುರಂಗನಾಯಕ,

ದಲಾಲ್,

ಕಾರ್ಯದರ್ಶಿ.

———o———

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 25ನೇ ನವಂಬರ 1910.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕ್ರೈಸ್ತಧರ್ಮ ಪ್ರಸರಣೆಯ ಕೆಲವು ಸಾಧನಗಳು.

ಈ ಜಿಲ್ಲೆಯಲ್ಲಿ ಕ್ರೈಸ್ತಧರ್ಮ ಪ್ರಸರಣೆಯ ಸಾಧನಗಳು ಪ್ರಾರಂಭಿಸಲ್ಪಟ್ಟು ಹಲವು ವರುಷಗಳಾದವು. ಈ ಸಾಧನಗಳೆಲ್ಲವುಗಳ ವಿಷಯವಾಗಿ ಕುಲಂಕುಷ ಲೇಖಗಳನ್ನು ಬರಿಯುವುದಾದರೆ ಒಂದೆರಡು ಲೇಖಗಳಲ್ಲಿ ಈ ವಿಷಯವು ಬರೆದು ತೀರದು. ವಿದ್ಯಾಶಾಲೆಗಳನ್ನೂ ಕೈಗಾರಿಕೆ ಕಾರಖಾನೆಗಳನ್ನೂ ಅನಾಥಾಶ್ರಮ ಆಸ್ಪತ್ರೆ ಮುಂತಾದವುಗಳನ್ನೂ ಮತಾಂತರ ಹೊಂದಿದವರಿಗೆಂತ ಕ್ರೈಸ್ತ ಮಿಶನರಿಗಳು ಸ್ಥಾಪಿಸಿದ್ದರೂ ಜಿಲ್ಲೆಯ ಜನರು ಈ ಸಂಸ್ಥೆಗಳಿಂದ ಧಾರಾಳ ಪ್ರಯೋಜನವನ್ನು ಪಡದಿರುವರು. ಕ್ರೈಸ್ತ ಮತಸಿದ್ಧಾಂತಗಳನ್ನು ಜನರು ಚನ್ನಾಗಿ ತಿಳಕೊಳ್ಳಬೇಕಾದರೆ ಅದಕ್ಕೆ ತಕ್ಕದಾದ ವಿದ್ಯಾಪ್ರಸರಣೆಯು ಅಗತ್ಯವೆಂತ ತಿಳಕೊಂಡು ಶಾಲೆಗಳನ್ನು ಸ್ಥಾಪಿಸಿದರೂ ಮಿಶನರಿಗಳ ಔದಾರ್ಯದಿಂದಲೋ ಅಥವಾ ನಿವಾಸಿಕರಲ್ಲಿ ಸರಕಾರಿ ಹುದ್ದೆಗಳನ್ನು ಪಡಿಯಬೇಕೆಂಬುವ ಆತುರತೆಯಿದ್ದು ಅದಕ್ಕೆ ಯುಕ್ತವಾದ ಅಂಗ್ಲೇಯ ವಿದ್ಯಾಭ್ಯಾಸವನ್ನು ಪಡಿಯಬೇಕೆಂಬ ಲವಲವಿಕೆಯಿಂದಲೋ ಕ್ರೈಸ್ತರಲ್ಲದ ನಿವಾಸಿಕರಲ್ಲಿ ಅಂಗ್ಲ ವಿದ್ಯಾಭ್ಯಾಸ ಪ್ರಸರಣೆಯು ಮಿಶನರಿ ಶಾಲೆಗಳ ಮುಖಾಂತರ ಸಾಧಿಸಿದಂತಾಯಿತು. ವಿದ್ಯಾಶಾಲೆಗಳ ಮುಖಾಂತರ ಮತಾಂತರಗೊಳಿಸುವ ಮಿಶನರಿಗಳ ಉದ್ದಿಶ್ಯವು ಸಾಕಷ್ಟು ನೆರವೇರಿರುವುದೆಂತ ತೋರಿಬರುವುದಿಲ್ಲ. ಯಾಕಂದರೆ ಮಿಶನ್ ಶಾಲೆಗಳಲ್ಲಿ ಪಡದ ಮೂಲ ವಿದ್ಯೆಯು ಹಲವರಲ್ಲಿ ವಿಕಾಸಹೊಂದಿ ತಂತಮ್ಮ ಮತಗಳ ವಿಶೇಷತ್ವವೇ ಈ ವಿದ್ಯೆಯ ಬಲದಿಂದ ಇವರಲ್ಲಿ ಇನ್ನಷ್ಟು ಚನ್ನಾಗಿ ನಾಟಿರುವುದು. ವಿದ್ಯಾವಂತ ಮೇಲು ಜಾತಿಯವರು ಕ್ರೈಸ್ತಮತವನ್ನು ಹೀಗೆ ತಿರಸ್ಕರಿಸುತ್ತಿರುವಾಗ ಕೀಳು ಜಾತಿಯವರಲ್ಲಿ ಹಲವರನ್ನು ಮತಾಂತರಗೊಳಿಸಲಿಕ್ಕೆ ಕ್ರೈಸ್ತ ಮಿಶನರಿಗಳಿಗೆ ಸಾಧ್ಯವಾಯಿತು. ನಮ್ಮ ಜಿಲ್ಲೆಯಲ್ಲಿ ಈ ರೀತಿ ಸಾವಿರಾರು ಮಂದಿ ಭಾರತೀಯರು ಕೂಡಿರುವ ಕ್ರೈಸ್ತ ಸಭೆಗಳು ಸ್ಥಾಪಿಸಲ್ಪಟ್ಟಿರುವವು.

ಕ್ರೈಸ್ತ ಮತಬೋಧೆಯು ಹೀಗೆ ಮತಾಂತರ ಹೊಂದಿದವರಲ್ಲಿ ಚನ್ನಾಗಿ ಇರಗೊಡಿಸುವಂತೆಯೂ ಕ್ರೈಸ್ತರಲ್ಲದ ಇತರರನ್ನು ತಮ್ಮ ಮತಾವಲಂಬಿಗಳಾಗಿ ಮಾಡುವ ಬಗ್ಗೆಯೂ ಈಗಲೂ ಸಹ ಮಿಶನರಿಗಳ ಕಡೆಯಿಂದ ನಡಿಸೋಣಾಗುವ ಸಾಧನಗಳು ಕಡಿಮೆಯಾಗಲಿಲ್ಲ. ವಿದ್ಯಾಶಾಲೆಗಳೂ ಕೈಗಾರಿಕೆಗಳ ಆಲಯಗಳೂ ಮಿಶನ್ ವ್ಯಾಪಾರ ಭಂಡಸಾಲೆ ಮುಂತಾದವುಗಳೂ ಈ ಪರವಾಗಿ ಎಂದಿನಂತೆ ಕೆಲಸ ನಡಿಸುತ್ತಿರುವವು. ಆದರೆ ಮತಪುಸ್ತಕ, ಪತ್ರ ಮೊದಲಾದವುಗಳ ಪ್ರಕಟಣೆಗಳೇ ಇವೆಲ್ಲವುಗಳಿಗಿಂತ ವಿಶೇಷವಾದವುಗಳು. ಈ ಸಂದರ್ಭದಲ್ಲಿ ಕ್ರೈಸ್ತ ಮಿಶನರಿಗಳ ಮತಪರವಾದ ಪ್ರಕಟಣೆಗಳ ವಿಷಯ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇವೆ.

ಈ ಕಾಲವು ನವನಾಗರೀಕತೆಯ ಇಪತ್ತನೆಯ ಶತಮಾನದಾಗಿರುವುದು. ಭೂಲೋಕದ ಎಲ್ಲಾ ಕಡೆಗಳಲ್ಲಿರುವ ವಿವಿಧ ಜನಾಂಗದವರೆಲ್ಲರಿಗೂ ರೈಲ್ವೆ ಹೊಗೆ ಜಹಜು ಮೊದಲಾದ ಸೌಕರ್ಯಗಳಿದ್ದು ಪರಸ್ಪರ ಒಡನಾಡುವ ಅವಶ್ಯಕತೆಯು ಬಹಳವಾಗಿರುವುದರಿಂದ ಮತ ವೈಷಮ್ಯಗಳನ್ನು ಸಾಧಿಸಿ ಜನರಲ್ಲಿ ಪರಸ್ಪರ ವಿರೋಧ ಭಾವವನ್ನುಂಟುಮಾಡುವುದು ಯಾರಿಗೂ ಸಲ್ಲದು. ಅದರಲ್ಲಿಯೂ ಭರತಖಂಡದಲ್ಲಿ ಜನಾಂಗ ಐಕ್ಯದ ಮೊಳಕೆಯು ಕಾಣುತ್ತಿರುವುದೆಂತ ಭಾರತೀಯರಲ್ಲದ ಪಾಶ್ಚಾತ್ಯ ವಿದ್ಯಾವಂತರೂ ಪಾಶ್ಚಾತ್ಯ ಕ್ರೈಸ್ತ ಮಿಶನರಿಗಳೂ ಆಗಿಂದಾಗ್ಯೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಅಂಥಾ ಕಾಲದಲ್ಲಿ ಮತ ವೈಷಮ್ಯಕ್ಕೆ ಎಡೆ ಇರದೆಂದು ಬೇರೆ ಸೂಚಿಸಬೇಕೇ? ಮತ ವೈಷಮ್ಯದಿಂದ ಮತಾಂತರವನ್ನು ಗೊಳಿಸುವುದು ಸಾಧ್ಯವಲ್ಲ. ಪರಸ್ಪರ ಮೈತ್ರಿಯೂ ಮನ್ನಣೆಯೂ ಇಲ್ಲದೆ ಹಿಂದೂ ಮತ್ತು ಕ್ರೈಸ್ತರೊಳಗೆ ಎಂಥಾ ಅಭಿವೃದ್ಧಿಯೂ ಸಾಗದೆಂದು ಒಬ್ಬ ಪ್ರಖ್ಯಾತ ಮಿಶನರಿಗಳು ಅಭಿಪ್ರಾಯಪಟ್ಟಿರುವರು. ನಮ್ಮಲ್ಲಿ ಕ್ರೈಸ್ತ ಮಿಶನರಿಗಳು ಇತರರಲ್ಲಿ ಮನ್ನಣೆಯನ್ನು ಯಾವ ರೀತಿ ತೊರುವರೆಂಬದೂ, ಮೈತ್ರಿಯನ್ನು ಹ್ಯಾಗೆ ಫಳಿಸುತ್ತಿರುವರೆಂಬದನ್ನೂ ಇವರು ಆಗಿಂದಾಗ್ಯೆ ತಮ್ಮ ಪತ್ರಗಳಲ್ಲಿ ಪ್ರಕಟಿಸುತ್ತಿರುವ ಪರಮತವಿಚಾರಗಳಿಂದ ತಿಳಕೊಳ್ಳಬಹುದು. ಹಿಂದುಸ್ಥಾನದಲ್ಲಿಯೂ ಅಂಗ್ಲಾಳ ಮೊದಲಾದ ವಿದೇಶಗಳಲ್ಲಿಯೂ ಮಿಶನರಿ ಕನ್ಫರೆನ್ಸುಗಳೆಂಬ ಮಹಾಸಭೆಗಳು ಸೇರಿಕೊಂಡು ಹಿಂದುಸ್ಥಾನದ ಪ್ರಕೃತ ಸ್ಥಿತಿಗೆ ಗಮನಕೊಟ್ಟು ತಾವು ಯಾವ ರೀತಿ ವರ್ತಿಸಬೇಕೆಂಬದನ್ನು ಪರ್ಯಾಲೋಚಿಸುತ್ತಿರುವರು. ಕ್ರೈಸ್ತಸ್ನಾನವನ್ನು ಹೊಂದಿದ ಬಳಿಕ ಕ್ರೈಸ್ತನೊಬ್ಬನು ತನ್ನ ವರ್ತನೆಯಿಂದಲೂ ಮನಃಶುದ್ಧಿಯಿಂದಲೂ ಇತರರಿಂದ ಅನುಸರಣಾಯೋಗ್ಯನಾಗಿರುವೆನೆಂದು ಕಾರ್ಯತಃ ತೋರಿದರೆನೇ ಕ್ರೈಸ್ತ ಸ್ನಾನದ ಪರಿಶುದ್ಧತ್ವವು ಜನರಿಗೆ ತಿಳಿಯುವುದಲ್ಲದೆ ಅನ್ಯಥಾ ನಡದ್ದಲ್ಲಿ ಕ್ರೈಸ್ತ ಮತ ಪ್ರಸರಣೆಗೆ ಹಾನಿಯುಂಟಾಗುವುದೆಂದು ಈ ಮಹಾ ಸಭೆಗಳೊಂದರಲ್ಲಿ ಕ್ರೈಸ್ತ ಮಿಶನರಿಗಳೊಬ್ಬರು ವಾದಿಸಿರುವರು. ಇಂಥಾ ಸಭಾ ವೃತ್ತಾಂತಗಳನ್ನು ನಮ್ಮತ್ತಕಡೆಯ ಮಿಶನರಿಗಳೂ ಸಹ ತಿಳಿಯುವುದುಪಯುಕ್ತ.

ಇಲ್ಲಿಯ ಮಿಶನರಿಗಳ ಪತ್ರಗಳಲ್ಲಿ ಆಗಿಂದಾಗ್ಯೆ ಪ್ರಕಟಿಸೋಣಾಗುವ ಪರಮತ, ಮುಖ್ಯವಾಗಿ ಹಿಂದೂ ಮತನಿಂದಾ ಮತ್ತು ದೂಷಣೆಯ ಲೇಖಗಳು ಎಂಥವುಗಳೆಂಬುದು ಸಾಧಾರಣವಾಗಿ ಎಲ್ಲರಿಗೂ ತಿಳಿದಿರುವ ವಿಷಯವಾಗಿರುವುದು. ನಿಂದೆಯಿಂದ ವಿರೋಧತ್ವವು ಉಂಟಾಗುವುದಲ್ಲದೆ ಇತರ ಯಾವ ಕಾರ್ಯವೂ ನೆರವೇರಲಾಗದು. ಮಿಶನರಿಗಳ ನಿಂದೆಗೆ ಹಿಂದುಗಳು ಮನಸೋತು ಕ್ರೈಸ್ತಮತವನ್ನವಲಂಬಿಸಿ ಹಿಂದೂಮತಕ್ಕೆ ಈ ಮೂಲಕ ಅಪಾಯ ಉಂಟಾಗುವುದೆಂಬ ಭೀತಿಯು ಹಿಂದುಗಳಲ್ಲಿ ನೈಸರ್ಗಿಕವಾಗಿಲ್ಲದಿರುವುದರಿಂದ ಹಿಂದುಗಳಲ್ಲ್ಯಾರೂ ಇಂತಹ ನಿಂದೆಗೆ ಗಮನಕೊಡಲಾರರು. ಆದರೂ ಮತಭೇದ ಒಂದರ ಹೊರತು ಮಿಕ್ಕ ಎಲ್ಲಾ ಸುಖದುಃಖಗಳನ್ನು ನಮ್ಮೊಟ್ಟಿಗೆ ಅನುಭವಿಸಬೇಕಾದ ನಮ್ಮ ದೇಶಬಾಂಧವರಾದ ಭಾರತೀಯರಲ್ಲಿ ಹಲವರು ಈ ಮಿಶನರಿಗಳ ಕೈಕೆಳಗಿದ್ದು ಮಿಶನರಿಗಳಿಂದ ಸಾಧಿಸೋಣಾದ ವೈಷಮ್ಯವು ಇವರನ್ನು ಭಾರತೀಯ ಇತೀ ಸಮಾಜದಿಂದ ವಿಂಗಡಿಸುವುದು. ಇದೊಂದು ಕಾರಣದಿಂದಲೇ ಮಿಶನರಿಗಳ ಈ ನಿಂದಾ ಲೇಖಗಳಿಗೆ ಗಮನಕೊಡಬೇಕಾಗಿದೆ. ಪರರ ಒಳ್ಳಿತವನ್ನು ಅಲ್ಲದಿದ್ದರೂ ತಮ್ಮ ವೃದ್ಧಿಯನ್ನಾದರೂ ಸಾಧಿಸುವ ಸಾಧನೆಗಳು ಅಗತ್ಯವಾದವುಗಳು. ಆದರೆ ಪರರ ಕೇಡನ್ನೂ ತನ್ನ ಕೇಡನ್ನೂ ಸಾಧಿಸುವ ಸಾಧನಗಳಿಂದ ಏನು ಪ್ರಯೋಜನ?

ಇನ್ನೊಂದು ಸೂಚನೆಯನ್ನು ಹೇಳಿ ಈ ಲೇಖವನ್ನು ಇಲ್ಲಿಗೆ ಮುಗಿಸುವೆವು. ಮಿಶನ್ ಕಾರ್ಖಾನೆಗಳಲ್ಲಿ ಕೆಲಸ ಗೈಯ್ಯುವವರು ಮತ್ತು ಮಿಶನ್ ಸಭೆಯಲ್ಲಿ ಮಾನ್ಯರಾದ ಕೆಲವು ಗೃಹಸ್ತರು ಮಿಶನರಿಗಳಲ್ಲಿ ತಮಗಿರುವ ಅಸಂತುಷ್ಟಿಯನ್ನು ಸೂಚಿಸಿ ಹಲವು ಪತ್ರಗಳನ್ನು ನಮಗೆ ಬರದಿರುವರು. ಆದರೆ ಈ ಪತ್ರವ್ಯವಹಾರವನ್ನು ಪತ್ರದಲ್ಲಿ ಪ್ರಕಟಿಸುವ ಬದಲಾಗಿ ಇಂಥಾ ಅಸಂತುಷ್ಟಿಗೆ ಕಾರಣಗಳಿರುವವೋ, ಇರುವುವಾದರೆ ಅಂಥವುಗಳನ್ನು ನೀಗುವುದು ಹ್ಯಾಗೆಂಬದಾಗಿ ಪರ್ಯಾಲೋಚಿಸುವುದು ಯುಕ್ತವೆಂಬ ಸೂಚನೆಯನ್ನು ಹೇಳುವುದೇ ತಕ್ಕದೆಂದು ಭಾವಿಸಿ ಅಂಥಾ ಪತ್ರವ್ಯವಹಾರಗಳನ್ನು ಪ್ರಕಟಿಸಲಿಲ್ಲ.

ಮಹಾರಾಣೀ ಗೃಹಶೀಲೆ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಬಿ. ಆನಂದ ರಾವ್ ಇವರಿಂದ.

೧೪.

ಗೃಹಶೀಲೆಯು ಯಾರೋ ಒಬ್ಬ ನರರಾಕ್ಷಸಿಯೇ ಸರಿ. ತನ್ನ ಉದರದಲ್ಲಿ ಜನ್ಮಿ
ಸಿದ ಚಿರಂಜೀವಿಗಳನ್ನು ವಧೆಮಾಡಲೊಪ್ಪಿ ಕಠಿಣ ಹೃದಯಳೆನಿಸಿ, ನಿರ್ಘೃಣತೆಗೆ ಪ್ರಥ
ಮ ದೃಷ್ಟಾಂತಳಾದ ಇವಳು ನಾರಿಯಲ್ಲ, ಮಾರಿ! ಎಂದು ಕೆಲವು ವಾಚಕರು ಗೃಹಿ
ಸಬಹುದು. ಆದರೆ ಚಂದ್ರಶೇಖರನು ಹಾಗೆ ಎಣಿಸಲಿಲ್ಲ. ಗೃಹಶೀಲೆಗೆ ತನ್ನ ಮಕ್ಕಳ
ಮೇಲೆ ಇದ್ದ ಪ್ರೀತಿಯು ಎಷ್ಟು ಅಗಾಧವಾಗಿತ್ತೆಂದು ಆತನಿಗೆ ಪೂರ್ಣವಾಗಿ ಗೊತ್ತಿತ್ತು.
ಆದರೆ ಆತನು ಇನ್ನಾದರೂ, ಸುಮ್ಮನಿದ್ದನು? ತನ್ನಲ್ಲಿರುವ ಅವಳ ಶ್ರದ್ಧಾಭಕ್ತಿಯು
ಕಡಿಮೆಯಾಗಿದೆಯೋ ಎಂದು ತಿಳಿಯುವ ಉದ್ದಿಶ್ಯ ಬಾರಿಬಾರಿಗೂ ಅಕಸ್ಮಾತ್ತಾಗಿ
ಎಂಬಂತೆ ಮಕ್ಕಳ ಹೆಸರನ್ನು ಎತ್ತಿ ಪತ್ನಿಯನ್ನು ವೃಥಾ ನೋಯಿಸುತ್ತಿದ್ದನು. ಆದರೆ
ಅವಳಲ್ಲಿ ಕಿಂಚಿತ್ತಾದರೂ ಕುಂದನ್ನು ಕಂಡುಹಿಡಿಯಲಿಕ್ಕಾಗದೆ ಅವಳ ಪತಿಭಕ್ತಿಯನ್ನೂ
ಸುಗುಣಗಳನ್ನೂ ತನ್ನಲ್ಲಿಯೇ ಶ್ಲಾಘಿಸುತ್ತಿದ್ದನು.

ಮಹಾರಾಜ ಚಂದ್ರಶೇಖರನು ನಿಜವಾಗಿ ತನ್ನ ಶಿಶುದ್ವಯಗಳನ್ನು ವಧಿಸಿದನೆಂದು
ಪ್ರಜಾಜನರು ನಂಬಿದರು. ಇವನೆಂತಹ ರಾಕ್ಷಸನೋ ಎಂದು ಹೇಳಿ ಕೋಪೋದ್ರೇಕ
ದಿಂದ—"ನರಾಧಮನು! ಕೊಲೆಗಾರನು! ಘಾತಕನು!—ಎಂದು ಅನೇಕರೊದರು
ತ್ತಿದ್ದರು. ಕೆಲವರು ಇವನಂತಹ ನಿರ್ದಯನೂ ನೃಶಂಸನೂ ಈ ಭೂಲೋಕದಲ್ಲಿನ್ನು
ಯಾರೂ ಇಲ್ಲವೆಂದು ಮಹಾರಾಜನನ್ನು ಕುರಿತು ನಿಂದಾವಾದಗಳನ್ನು ಆಡುತ್ತಿದ್ದರು.
ಬೇರೆ ಕೆಲವರು—ಉತ್ತರಾಧಿಕಾರಿಯಾದ ನಮ್ಮ ಯುವರಾಜನನ್ನು ವಧಿಸಿದ ಈ ನರಾ
ಧಮನನ್ನು ಈಗಲೇ ತಳ್ಳಿಹಾಕುವೆವೆಂದು ದಂಗೆಯೆಬ್ಬಿಸುವ ಸಂಭವದಲ್ಲಿದ್ದರು. ಚಂದ್ರ
ಶೇಖರನು ಇದನ್ನೆಲ್ಲ ಬೇಹುಗಾರರ ಪರಿಮುಖ ತಿಳಿದನು. ಆದರೆ ತನ್ನ ಪತ್ನಿಯ
ನ್ನಿನ್ನೂ ಪರೀಕ್ಷಿಸುವ ಉದ್ದಿಶ್ಯದಿಂದ ಹಿಂಜರಿಯಲಿಲ್ಲ.

೧೫

ಇತ್ತಲಾಗೆ ಶ್ರೀ ದಕ್ಷಿಣಕಾಶಿಯಲ್ಲಿ ಕಾಲಕ್ರಮೇಣ ಕೃಷ್ಣವರ್ಮ ರಾಜನ ಪುತ್ರ
ನಾದ ವಿದ್ಯಾಚಂದ್ರನಿಗೆ ಅಷ್ಟದಶ ವರುಷ ಪ್ರಾಯವು ತುಂಬಿತು. ಆತನು ಸಕಲ
ಕಲಾಶಾಸ್ತ್ರಗಳಲ್ಲಿಯೂ ನಿಪುಣನಾಗಿ ತನ್ನ ಸೌಂದರ್ಯದ ತೇಜಸ್ಸನ್ನು ಅಷ್ಟದಿಕ್ಕುಗ
ಳಲ್ಲಿಯೂ ಪಸರಿಸುತ್ತಿದ್ದನು.

ಚಂದ್ರಶೇಖರನ ಕುಮಾರಿಯಾದ ಅಹಲ್ಯೆಯು ಪಂಚದಶ ವರುಷ ವಯಸ್ಕಳಾ
ದಳು. ಬಾಲಕ ಸೀತಾರಾಮನಿಗೆ ಎಂಟು ವರುಷ ಪ್ರಾಯವಾಯಿತು.

ಅಹಲ್ಯೆಯ ಮತ್ತು ವಿದ್ಯಾಚಂದ್ರನ ಕರಪಲ್ಲವಗಳನ್ನು ಸೇರಿಸಿ, ಒಂದೇ ಕುಲವೃ
ಕ್ಷದ ವಿಭಾಗವಾದ ಶಾಖಾದ್ವಯಗಳ ತಳಿರುಗಳನ್ನು ಉಪರಿ ಅಂಟಿಸಬೇಕೆಂಬುದೇ
ಪ್ರಿಯಂವದೆಯ ಮಹತ್ಕಾಂಕ್ಷೆಯಾಗಿತ್ತು. ಬಾಲ್ಯದಂದಿನಿಂದ ತನ್ನ ಮಗಳ ಹಾಗೆಯೇ
ಪೋಷಿಸಿ ಬಂದ ಭಗಿನಿಯ ಕೈಯಲ್ಲೇ ತನ್ನ ಜಾತೆಯ ಭವಿಷತ್ಸುಖವನ್ನು ಅರ್ಪಿಸುವ
ದು ಚಂದ್ರಶೇಖರನ ಮಹದಭಿಲಾಷೆಯಾಗಿತ್ತು. ಈ ವಿಷಯ ಕೃಷ್ಣವರ್ಮ ಚಂದ್ರಶೇ
ಖರರೊಳಗೆ ಹಿಂದೆ ಕೆಲವು ಕಾಗದಪತ್ರಗಳು ಸಹ ನಡೆದಿದ್ದವು.

ಒಂದು ದಿವಸ ಪ್ರದೋಷಕಾಲದಲ್ಲಿ ಕೃಷ್ಣವರ್ಮರಾಜನೂ ಆತನ ಧರ್ಮಪತ್ನಿ
ಯಾದ ಪ್ರಿಯಂವದೆಯೂ ಆಯಾಸ ಪರಿಹಾರ ಮಾಡಿಕೊಳ್ಳುವ ಸಲುವಾಗಿ ನದೀತೀರ
ದಲ್ಲಿ ಪುಷ್ಪೋದ್ಯಾನದಲ್ಲಿರುವ ಚಂದನಲತಾಗೃಹಕ್ಕೆ ವಾಯು ಸೇವನೆಗಾಗಿ ಹೋದ
ವರು ಚಿರಂಜೀವಿಗಳಾದ ಅಹಲ್ಯಾಸೀತಾರಾಮರ ಬಾಲಲೀಲೆಗಳನ್ನು ನೋಡಿ ವಿನೋ
ದಿಸುತ್ತಲಿದ್ದರು.

ಸಂಧ್ಯಾಕಾಲದ ಸುವರ್ಣಮಯವಾದ ಸೂರ್ಯಕಿರಣವು ಕಲ್ಪವೃಕ್ಷಗಳ ಕೊನೆ
ಗಳಲ್ಲಿ ನಲಿದಾಡಿ, "ಪಿಳಿಪಿಳಿ" ರಾಗದಿಂದ ಗೀತವಾಡುವ ಚಂಚಲ ಗುವನೆಯಾದ ಸುರ
ನದಿ ಕುಮಾರಧಾರಿಯ ವಕ್ಷಸ್ಥಳದಲ್ಲಿ ಸರಸವಾಡುತ್ತಿತ್ತು. ಪವಿತ್ರಳಾದ ಆ ಕುಮಾ
ರಗಿರಿಸುತೆಯ ಜೀವನಲಹರಿಯು ತರಂಗಭಂಗದಿಂದ ಬಿದ್ದೇಳುತ ಸಮಸ್ತ ಜನರಿಗೂ
ನೇತ್ರಾನಂದವನ್ನುಂಟುಮಾಡುತ್ತಿತ್ತು. ತಂಪಾದ ಮಂದಾನಿಲವು ಪ್ರಿಯತಮಳ ಪ್ರಥ
ಮಾಲಿಂಗನದಂತೆ ರೋಮಾಂಚವನ್ನುಂಟುಮಾಡುತ್ತಿತ್ತು.

ಕೃಷ್ಣವರ್ಮನು ಸ್ಫಟಿಕದ ಹಾಗೆ ಬಿಳುಪಾದ ಶಿಲಾಸನದ ಮೇಲೆ ವಿಶ್ರಮಿಸಿ
ಕೊಂಡಿದ್ದನು. ಆತನ ಕಾಲಡಿಯಲ್ಲಿ ತ್ರಿಭುವನ ಸುಂದರಿಯಾಗಿ ಮನಮೋಹಿನಿ
ಯಾಗಿದ್ದ ರಾಜರಾಜೇಶ್ವರಿ ಪ್ರಿಯಂವದೆಯು ಕುಳಿತಿದ್ದಳು. ಶೃಂಗಾರಮಯವಾದ
"ಮೇಘದೂತ"ವನ್ನು ಪಠನಮಾಡುತ್ತ ಸಮೀಪವಿರುವ ಮಣಿಶಿಲಾತಲದಲ್ಲಿ ಕುಳಿ
ತಿದ್ದ ಯುವರಾಜ ವಿದ್ಯಾಚಂದ್ರನು ಪುಸ್ತಕವನ್ನು ಮುಚ್ಚಿಟ್ಟು, ಶ್ರೀ ಕುಮಾರಧಾರಿಯ
ನಿರ್ಮಲವಾದ ಜಲಪ್ರವಾಹದಲ್ಲಿ ಈಸಾಡುವ ಕುತೂಹಲದಿಂದ ನದೀತಟಪತ್ತ ಕಡೆಗೆ
ಹೋದನು. ಅಹಲ್ಯಾ ಸೀತಾರಾಮರು ಸುಗಂಧದ ಬಡಿಗೆಗಳಿಂದ ಕೋಲಾಟವಾಡು
ತ್ತಿದ್ದರು. ಬಾಲಕರ ಕೋಲಾಟದ ತಾಳಕ್ಕೆ ಸರಿಯಾಗಿ ಶುಕಪಿಕಾದಿ ಪಕ್ಷಿಜಾತಿಗಳು
ಗುಲ್ಮರಾಶಿಯೊಳಗಿಂದ ಲಲಿತವಾಗಿ ಚಿಲಿಪಿಲಿಗುಟ್ಟುತ್ತಲಿದ್ದವು. ಹಸುರುಕಪ್ಪಾದ ಪರ್ಣ
ಪೂರಿತವಾದ ತರುಲತೆಗಳು ಪಕ್ಷಿಗಳ ಲಲಿತಗೀತವನ್ನು ಶ್ಲಾಘಿಸಿ ಅತ್ಯಾನಂದದಿಂದ
ತಲೆದೂಗುತ್ತಿದ್ದವು.

ಕಮಲಿನೀ ಪುತ್ರನಾದ ಸೂರ್ಯದೇವನು ದೇಶಾಂತರಕ್ಕೆ ಹೊರಡಲು, ಸಮೀಪ
ವಿರುವ ಕ್ರೀಡಾಸರೋವರದಲ್ಲಿನ ಇತರ ಕಮಲಗಳಿಗನುಸರಿಸಿತೋ ಎಂಬಂತೆ ಪ್ರಿಯಂ
ವದೆಯ ಮುಖಾರವಿಂದವು ಸ್ವಲ್ಪ ಕಂದಿಹೋಗಿತ್ತು. ಅವಳ ಭ್ರೂಭೃಂಗವು ಚಿಂತಾ
ಚಿಹ್ನೆಯನ್ನು ವಹಿಸಿತ್ತು. ತುಸ ಹೊತ್ತು ಮೌನಳಾಗಿದ್ದು, ಅನಂತರ ನಿಟ್ಟುಸಿರಿಟ್ಟು
ಕೃಷ್ಣವರ್ಮನೊಡನೆ:—"ಪ್ರಾಣನಾಥ! ನಮ್ಮಗ್ರಜನ ಪತ್ರವು ಇನ್ನೂ ಏತಕ್ಕೆ ಬರ
ಲಿಲ್ಲವೆಂದು ನನ್ನ ಮನಸ್ಸಿಗೆ ಶಂಕೆಯುಂಟಾಗುವುದು. ಪ್ರಾಣಾಧಿಕಳಾದ ಅತ್ತಿಗೆ
ಗೃಹಶೀಲೆಗೆ ಸ್ವಸ್ಥವಿಲ್ಲವೋ ಅಥವಾ ಬೇರೆ ಯಾವ ತರದ ವಿಪತ್ತು ಬಂದೊದಗಿದೆಯೋ
ಎಂದು ನನ್ನ ಮನಸ್ಸಿಗೆ ಕಳವಳವುಂಟಾಗುವುದು. ಏವಂಚ ಬಾಲಕರಿಬ್ಬರೂ ಹಸ್ತ
ಸಂಗಮ ಮಾಡಿ ಅವರಿಬ್ಬರ ಸೌಖ್ಯಾನಂದವನ್ನು ಈ ನಯನಗಳಿಂದೀಕ್ಷಿಸುವ ಯೋಗ್ಯತೆ
ಯು ನನ್ನಲಿಲ್ಲವೆಂದು ತೋರುತ್ತದೆ." ಎಂದಳು.

ಕೃಷ್ಣವರ್ಮನು:—"ಪ್ರಾಣಪ್ರೀಯಳೇ! ಈ ವಿಷಯದಲ್ಲಿ ನೀನು ಸಂದೇಹ ಪಡ
ಬೇಡ. ಕಳೆದ ಶ್ರಾವಣ ಬಹುಳದಲ್ಲಿ ನಾನು ರಾಜಕಾರ್ಯದ ಸಲುವಾಗಿ ಮಂಗಲಾ
ಪುರಕ್ಕೆ ಹೋದಾಗ ನಿನ್ನ ಭ್ರಾತೃನು ತಾನಾಗಿಯೇ ಅಹಲ್ಯಾವಿದ್ಯಾಚಂದ್ರರ ವಿವಾಹದ
ಪ್ರಸ್ತಾಪ ಮಾಡಿದ್ದನು. ಲಗ್ನವನ್ನು ನಿಶ್ಚಯಿಸಿ ಸಚಿವನನ್ನು ಕರೆಕಳುಹಿಸುವೆನೆಂದು
ಸಹ ಹೇಳುತ್ತಿದ್ದನು." ಎಂದನು.

ಈ ಸಮಯದಲ್ಲಿ ಹಠಾತ್ತಾಗಿ ಕಿಂಕರನೊಬ್ಬನು ಹತ್ತಿರ ಬಂದು ಅಭಿವಂದಿಸಿ
ಮಂಗಲಾಪುರದಿಂದ ದೂತನು ತಂದಿದ್ದೊಂದು ಪತ್ರವನ್ನು ಕೃಷ್ಣವರ್ಮರಾಜನು ವಿಶ್ರ
ಮಿಸಿಕೊಂಡಿರುವ ಶಿಲಾಸನದ ಸಮೀಪವಿರುವ ಪೊಂದಟ್ಟೆಯಲ್ಲಿಟ್ಟನು.

ವಿಳಾಸವನ್ನು ನೋಡಿದ ಮಾತ್ರದಿಂದಲೇ ತನ್ನ ಅಗ್ರಜನ ಹಸ್ತಾಕ್ಷರವೆಂದು ಅಲ್ಲೇ
ಕುಳಿತಿರುವ ಪ್ರಿಯಂವದೆಗೆ ತಿಳಿಯಿತು. ಅವಳು ಉತಾವಳಿಯಿಂದ ಪತ್ರವನ್ನು ತೆಗೆದು
ಓದಿನೋಡಿದಳು.

ಮಂಗಲಾಪುರ

ಫಾಲ್ಗುಣ ಶು. ೪.

ಪ್ರಿಯ ಸಹೋದರಿಯಾದ ಸೌ॥ ಪ್ರಿಯಂವದೆಗೆ ಬರೆದ ಲೇಖನವು ಅದಾಗಿ—
ಉಭಯಕ್ಷೇಮೋಪರಿತರುವಾಯ ನಮ್ಮ ಚಿ॥ ಬಾಲಕರಿಬ್ಬರ ದೇಹಾರೋಗ್ಯದ ಮತು
ವಿದ್ಯಾಭ್ಯಾಸದ ವಿಷಯ ನೀನು ಅತಿ ಜಾಗ್ರತೆ ತೆಗೆದುಕೊಳ್ಳುವಿ ಎಂದು ನನಗೆ ಮೊದ
ಲೇ ಗೊತ್ತಿತ್ತು. ಹಾಗೂ ನಿಮ್ಮಿಬ್ಬರ ಉಪಕಾರಕ್ಕೆ ನಿನಗೂ ನಿನ್ನ ಪ್ರಾಣವಲ್ಲಭ
ನಿಗೂ ಬಹಳ ಕೃತಜ್ಞನಾಗಿರುವೆನು. ನಮ್ಮ ಚಿ॥ ಅಹಲ್ಯೆಯು ಪರಿಣಯೋಚಿತ ವಯ
ಸ್ಸಿನವಳಾದಳು. ಹೀಗಾಗಿ ಅವಳ ವಿವಾಹದ ವಿಷಯದಲ್ಲಿ ಇನ್ನೂ ವಿಳಂಬಮಾಡುವು
ದುಚಿತವಲ್ಲ. ಫಾಲ್ಗುಣ ಬಹುಳ ಸಪ್ತಮಿ ದಿವಾ ಘಟಿ ೫ಕ್ಕೆ ಸಲುವ ಮಕರ ಲಗ್ನ
ದಲ್ಲಿ ಪ್ರಿಯ ಜಾತೆಯನ್ನು ಚಿ॥ ವಿದ್ಯಾಚಂದ್ರನಿಗೆ ಧಾರಾದತ್ತ ಮಾಡುವುದಾಗಿ ಸಂಕಲ್ಪಿ
ಸಿಯದೆ. ಆದುದರಿಂದ ನೀವೆಲ್ಲರೂ ಸಪರಿವಾರದೊಡನೆ ಕೂಡಲೇ ಬರುವುದು.
ಪಾಲಕಿ ಛತ್ರಚಾಮರ ಸವಾರರೊಡನೆ ನಿಮ್ಮೆಲ್ಲರನ್ನೂ ಕರೆಯಲು ಸಚಿವನು ನಾಡದು
ಗುರುವಾರ ದಿವಸ ಇಲ್ಲಿಂದ ಹೊರಡುವನು.

ಪ್ರಿಯ ಭಾವಯ್ಯನವರಿಗೆ ನನ್ನ ದಂಡವತ್ಪ್ರಣಾಮಗಳನ್ನೂ, ಚಿರಂಜೀವಿಗಳಿಗೆ
ಮತ್ತು ಬಾಲಕ ವಿದ್ಯಾಚಂದ್ರನಿಗೆ ನನ್ನ ಆಶೀರ್ವಾದಗಳನ್ನೂ ತಿಳಿಸಬೇಕು.

ಚಂದ್ರಶೇಖರ.

ಸಶೇಷ.

ಎಂದು ಪತ್ರದಲ್ಲಿತ್ತು.

ಕಣ್ಣು.

ಕಣ್ಣು ಮನುಷ್ಯನ ಶರೀರದಲ್ಲಿ ಬಹೂ ಆಶ್ಚರ್ಯಕರವಾದ ಒಂದು ಇಂದ್ರಿಯು.
ಕಣ್ಣುಗಳು ಮನುಷ್ಯರಿಗೆ ದೇವರಿಂದ ಕೊಡಲ್ಪಟ್ಟಂಥಾ ಒಂದು ಮಹಾ ಉಡಿಗೆರೆ
ಯಾಗಿವೆ. ನಮಗೆ ಕಣ್ಣುಗಳು ಇಲ್ಲದಿದ್ದರೆ ಲೋಕದಲ್ಲಿ ಯಾವ ಸಂತೋಷವಾದರೂ
ಇದ್ದೀತೇ? ಇದು ಬಹಳ ಸೂಕ್ಷ್ಮವಾದ ಇಂದ್ರಿಯವಾಗಿರುವುದರಿಂದ ಬಹೂ ಜಾಗ್ರತೆ
ಯಿಂದ ಕಾಪಾಡುವುದು ನಮ್ಮ ಹಂಗು. ಕಣ್ಣುಗಳು ನಾನಾ ಕಾರಣಗಳಿಂದ ಹಾಳಾ
ಗುವುದುಂಟು. ತಲೆಯಲ್ಲಿ, ಹೊಟ್ಟೆಯಲ್ಲಿ, ರಕ್ತದಲ್ಲಿರುವ ಕಾವೇ ಕಣ್ಣನ್ನು ಕೆಡಿಸು
ವಂಥಾದ್ದಾಗಿದೆ. ತಲೆಯ ಉಷ್ಣವನ್ನು ತಲೆಗೆ ಜಳಕ ಮಾಡಿ ಕ್ರಮವಾಗಿ ಎಣ್ಣೆ ಹಾಕಿ
ಕೊಳ್ಳುವುದರಿಂದ ಸರಿಪಡಿಸಿಕೊಳ್ಳಬಹುದು. ಇದಕ್ಕೆ ಶುದ್ಧವಾದಂಥಾ ತೆಂಗಿನಕಾಯಿ
ಎಣ್ಣೆಯೇ ಒಳ್ಳೇದು. ಸೂರ್ಯನ ಬಿಸಲಿಗೆ ಪಾದರಕ್ಷೆ ಇಲ್ಲದೆ ನಡಿಯುವದು ಕಣ್ಣಿಗೆ
ಬಹಳ ಬೇಸರವನ್ನುಂಟುಮಾಡುವುದು. ವಿರೇಚನ ಔಷಧಿಯನ್ನು ಕೊಟ್ಟು ಹೊಟ್ಟೆಯ
ಕಾವನ್ನು ಆಗ್ಯಾಗ್ಯೆ ಶುದ್ಧೀಕರಿಸಿಕೊಳ್ಳಬಹುದು. ಮೆಣಸು, ಲವಂಗ, ಒಳ್ಳೆಮೆಣಸು

ಮೊದಲಾದ ಉಷ್ಣಕಾರಕ ಪದಾರ್ಥಗಳನ್ನು ಹೆಚ್ಚಾಗಿ ಆಹಾರದೊಟ್ಟಿಗೆ ತಕ್ಕೊ
ಳ್ಳಲೇ ಬಾರದು. ಇದರ ಬದಲಿಗೆ ತುಪ್ಪ ಮತ್ತು ಸಕ್ಕರೆ ತಕ್ಕೊಂಡರೆ ಇದು ದೇಹ
ವನ್ನು ಯಾವಾಗಲೂ ತಂಪಾದ ಸ್ಥಿತಿಯಲ್ಲಿಡುವುದು. ಮೇಹದಿಂದುಂಟಾಗುವ ಸುಖ
ರೋಗಗಳು ರಕ್ತವನ್ನು ವಿಷಮಯವಾಗಿ ಮಾಡಿ ದೇಹದ ಉಷ್ಣವನ್ನು ಹೆಚ್ಚಿಸಿ ಕಣ್ಣನ್ನು
ಕೆಡಿಸುತ್ತವೆ. ಈ ಸಂಬಂಧದಿಂದ ಕಣ್ಣು ಕೆಟ್ಟ ಪಕ್ಷಕ್ಕೆ ವೈದ್ಯರ ಅನುಮತಿ ಮೇರೆಗೆ
ಶೈತೋಪಚಾರ ಮಾಡುವುದಲ್ಲದೆ ಆದಷ್ಟು ಮಟ್ಟಿಗೆ ನಿಷ್ಕಳಂಕರಾಗಿ ನಡೆಯ ಪ್ರಯತ್ನ
ಮಾಡತಕ್ಕದ್ದು.

ಕಣ್ಣು ಕೆಡಲು ದೇಹದ ಅಶಕ್ತಿಯೇ ಮತ್ತೊಂದು ಕಾರಣವಾಗಿದೆ. ಅಶಕ್ತ
ನಿಗೆ ಕಣ್ಣು ಬಲಹೀನವಾದ ಪಕ್ಷಕ್ಕೆ ಶುದ್ಧವಾದ ಗಾಳಿ ಇರುವಲ್ಲಿ ಚೆನ್ನಾಗಿ ಅಂಗಸಾಧನೆ
ಮಾಡುವುದೂ ಒಳ್ಳೇ ಬಲಕಾರಿ ಆಹಾರಗಳನ್ನು ತಿನ್ನುವುದೂ ಇವೇ ಮುಖ್ಯ ಔಷಧ
ವಾಗಿವೆ.

ನಮ್ಮಲ್ಲಿ ವಿದ್ಯಾರ್ಥಿಗಳ ಕಣ್ಣು ಕೆಡುವುದು ಬಹಳ ಹೆಚ್ಚು. ಆದ್ದರಿಂದ ವಿದ್ಯಾ
ರ್ಥಿಗಳಿಗೆ ಈ ಸಂಬಂಧವಾಗಿ ಕೆಲವು ಸೂಚನೆಗಳನ್ನು ಕೊಡುವುದು ಅವಶ್ಯ. ಬಿಸಲ
ಲ್ಲಾಗಲೀ ಚಿಮಿನಿ ಇಲ್ಲದ ದೀಪದ ಬೆಳಕಿಗಾಗಲೀ ಓದಬಾರದೆಂಬದೇ ಮೊದಲನೇ
ಸೂಚನೆ. ಬೆನ್ನಿನ ಮೇಲೆ ಮಲಗಿಕೊಂಡು ಓದುವದರಿಂದ ದೀಪದ ಬೆಳಕು ಓದುವ
ಪುಸ್ತಕದ ಮೇಲೆ ಬಿದ್ದು ಆ ಪ್ರಕಾಶವು ನೆಟ್ಟಗೆ ಕಣ್ಣಿಗೆ ಪ್ರತಿಬಿಂಬಿಸುವುದರಿಂದಲೂ
ದೃಷ್ಟಿ ಮಂದವಾಗುತ್ತದೆ. ಕುರ್ಚಿಯ ಮೇಲೆ ನೆಟ್ಟಗೆ ಕೂತು ಪುಸ್ತಕವನ್ನೂ ದೀಪ
ವನ್ನೂ ಎದುರಿಗೆ ಮೇಜಿಯ ಮೇಲಿಟ್ಟು ಓದುವದೇ ಉತ್ತಮ.

ಕಣ್ಣನ್ನು ಹೆಚ್ಚು ಸಮಯದ ವರೆಗೆ ಪುಸ್ತಕ ಓದುವದರಲ್ಲಿಯೂ ಬರಿಯುವದ
ರಲ್ಲಿಯೂ ಪ್ರಯೋಗಿಸುವದರಿಂದ ಕಣ್ಣು ಕೆಡುವುದು ನಿಶ್ಚಯ. ಹಾಗೆ ಮಾಡ
ಬಾರದೆಂಬದೇ ಎರಡನೇ ಸೂಚನೆ. ಸ್ವಲ್ಪ ಹೊತ್ತು ಓದಿದನಂತರ ಅಥವಾ ಬರದ
ನಂತರ ದೃಷ್ಟಿಯನ್ನು ಇತರ ವಸ್ತುವಿನ ಮೇಲೆ ತಿರುಗಿಸಿ ಕಣ್ಣಿಗೆ ವಿಶ್ರಾಂತಿ ಕೊಡು
ವದು ಅವಶ್ಯ. ಸದಾ ಮನೆಯೊಳಗೆಯೇ ಇರದೆ ಹೊರಗೆ ದಿನಾಲೂ ತಿರುಗಾಡ
ಹೋಗಬೇಕೆಂಬದೇ ಮೂರನೇ ಸೂಚನೆಯಾಗಿದೆ. ನಾಲ್ಕು ಗೋಡೆಗಳಿಂದ ಸುತ್ತ
ಲ್ಪಟ್ಟ ಮನೆಯೊಳಗೆ ಅಥವಾ ಹಳ್ಳಿಯೊಳಗೆ ಸದಾ ವಾಸಿಸುವವರಿಗಿಂತಲೂ ದೊಡ್ಡ
ಪಟ್ಟಣಗಳಲ್ಲಿ, ಮೈದಾನು ಗುಡ್ಡ ಸ್ಥಳಗಳಲ್ಲಿ ವಾಸಿಸುವವರ ಕಣ್ಣು ಬಹೂ ಶುಭ್ರವಾಗಿದೆ.
ಮೈದಾನುಗಳಲ್ಲಿಯೂ ಹಸುರಾದ ಹುಲ್ಲುಗಾವಲು ಇರುವಂಥಾ ಸ್ಥಳಗಳಲ್ಲಿಯೂ ತಿರು
ಗಾಡುವುದರಿಂದ ಕಣ್ಣಿಗೆ ಮನೋಹರವಾದ ಉತ್ತಮ ಆಹಾರ ಸಿಕ್ಕಿದಂತೆ ಆಗುವದು.
ಅತೀರೇಕವಾಗಿ ಓದಿದರಿಂದ ಕಣ್ಣು ಬಹಳ ಆಯಾಸ ಪಟ್ಟರೆ ಸ್ವಲ್ಪ ಬಿಸಿನೀರಲ್ಲಿ ತುಸ
ಉಪ್ಪು ಕದಡಿ ಕಣ್ಣನ್ನು ತೊಳೆದುಕೊಳ್ಳುವದು ಉತ್ತಮವಾಗಿದೆ. ಒಬ್ಬನ ಕಣ್ಣು
ಪೂರ್ಣ ಕೆಟ್ಟುಹೋಗಿದ್ದ ಪಕ್ಷಕ್ಕೆ ಕೂಡಲೇ ದೃಷ್ಟಿಚಕ್ರವನ್ನು ಉಪಯೋಗಿಸತಕ್ಕದ್ದು.
ಕೆಟ್ಟ ಕಣ್ಣನ್ನು ಸುರಕ್ಷಿತವಾಗಿ ಇಡಲು ಇದೇ ಉತ್ತಮ ಮಾರ್ಗವಾಗಿದೆ. ಬಹಳ
ವ್ಯಾಕುಲತೆ, ಅಳುವದು, ಸಿಟ್ಟು, ಮೋಹ ಮೊದಲಾದವುಗಳಿಂದ ಕಣ್ಣು ಕೆಡುತ್ತದೆಂಬ
ದಕ್ಕೆ ಸಂಶಯವಿಲ್ಲ.

ಟೆನ್ನಿಸ್, ಫೂಟ್‌ಬೋಲ್ ಮೊದಲಾದ ಚೆಂಡಾಟಗಳು ಕಣ್ಣಿಗೆ ಉತ್ತಮ ವ್ಯಾ
ಯಾಮವಾಗಿವೆ. ಕ್ರಿಕೆಟ್, ಹೊಕ್ಕೆ, ಮೊದಲಾದವುಗಳು ಕೂಡಾ ಒಳ್ಳೇದೇ ಸೈ.
ಈ ಆಟಗಳು ಮನಸ್ಸಿನ ಮತ್ತು ಹೃದಯದ ವ್ಯಾಕುಲತೆಗಳನ್ನು ಕಿತ್ತುಹಾಕಿ ಮನ
ಸ್ಸನ್ನೂ ಹೃದಯವನ್ನೂ ಬಹೂ ವಿಶ್ರಾಂತಿಯಲ್ಲಿಡುತ್ತವೆ. ಈ ತರದ ವಿಶ್ರಾಂತಿಯೇ
ಕಣ್ಣಿಗೆ ಅವಶ್ಯವಾಗಿ ಬೇಕು.

ಬೇಟೆಯಾಡುವದು ಕೂಡಾ ಕಣ್ಣಿನ ಅನುದರ್ಶನವನ್ನು ವೃದ್ಧಿಪಡಿಸುತ್ತದೆ.
ದೊಡ್ಡ ಕೋಣೆಯಲ್ಲಿ ಅಡ್ಡಾಡಿ ಕೋಣೆಯ ಉಭಯ ಪಾರ್ಶ್ವದಲ್ಲಿಯೂ ಇರುವ
ವಸ್ತುಗಳನ್ನು ನೋಡಿ ಜ್ಞಾಪಕದಲ್ಲಿಟ್ಟುಕೊಳ್ಳುವದೂ ಈ ಕ್ರಮವನ್ನೇ ಹೊರಗೆ ಅಡ್ಡಾಡು
ವಾಗ ಅನುಸರಿಸುವದೂ ಬಹು ಉತ್ತಮ. ಮಾತ್ರವಲ್ಲದೆ ಅಡ್ಡಾಡಿ ಹಿಂತಿರುಗಿದ ಮೇಲೆ
ತಾನು ಯಾವ ಯಾವ ವಸ್ತುಗಳನ್ನು ನೋಡಿದೆನೆಂಬದಾಗಿ ತಿರಿಗಿ ಜ್ಞಾಪಕಕ್ಕೆ ತಂದು
ಕೊಳ್ಳುವುದರಿಂದ ಅನುಕರಣಶಕ್ತಿಯೂ ಜ್ಞಾಪಕಶಕ್ತಿಯೂ ಹೆಚ್ಚುವದು. ಹೀಗೆ
ದೃಷ್ಟಿಯು ಬಲವನ್ನು ಹೊಂದುವದು.

ಕಣ್ಣುಗಳು ಬಣ್ಣದಲ್ಲಿ ನಾನಾ ವಿಧಗಳಾಗಿರುವವು. ಕಪ್ಪು ಕಣ್ಣು ಬಹು
ಚಂದ ಎಂಬದಾಗಿ ನಮ್ಮಲ್ಲಿ ವಾಡಿಕೆಯಾದ ಮಾತಷ್ಟೆ. ಕಪ್ಪು ಕಣ್ಣುಳ್ಳವರು ಆರೋಗ್ಯ
ಶಾಲಿಗಳೂ, ದೃಢಚಿತ್ತವುಳ್ಳವರೂ, ಧೈರ್ಯಶಾಲಿಗಳೂ, ಸತ್ವವಂತರೂ, ಮರ್ಯಾ
ದಸ್ಥರೂ ಎಂದು ಡಾಕ್ಟರ್ ಭವನ್ ಎಂಬವರು ಹೇಳುವರು. ನೀಲ ಮಿಶ್ರವಾದ ಕಪ್ಪು
ಕಣ್ಣುಗಳಿಗೆ ಇಂಗ್ಲಾಂಡಿನವರೂ ಅಮೇರಿಕದವರೂ ಬಹಳವಾಗಿ ಮೆಚ್ಚುವರು. ನೀಲ
ಕಣ್ಣುಳ್ಳವರು ಬಹೂ ಬಲಶಾಲಿಗಳೆಂಬ ಮಾತು ವಾಡಿಕೆಯಿದೆ. ಆದರೆ ನೀಲ ಕಣ್ಣು
ಳ್ಳವರು ಕಂದುಬಣ್ಣದಕಣ್ಣುಳ್ಳವರಿಗಿಂತ ಹೆಚ್ಚು ಧೈರ್ಯಶಾಲಿಗಳಲ್ಲ. ಕೆಂಪು
ಕಣ್ಣು ಧೈರ್ಯವನ್ನೂ ಬಲವನ್ನೂ ಸೂಚಿಸುವದು. ದೊಡ್ಡ ಕಣ್ಣು ಲೋಭಿಯ
ಲಕ್ಷಣವನ್ನೂ ಸಣ್ಣ ಕಣ್ಣು ಕೆಟ್ಟದನ್ನು ಮಾಡುವದಕ್ಕೆ ಇರುವ ಆತುರತೆಯನ್ನೂ
ತೋರ್ಪಡಿಸುತ್ತದೆ.

ಕಣ್ಣುಗಳು ಮನುಷ್ಯನ ಗುಣನಡತೆಯನ್ನು ಪ್ರಕಟಮಾಡುವಂಥಾದ್ದಾಗಿವೆ.
ಆದ್ದರಿಂದ ಕಣ್ಣು ಆತ್ಮದ ಕಿಡಿಕಿ ಎಂಬದಾಗಿ ಕರೆಯಲ್ಪಡುತ್ತದೆ. ಒಬ್ಬನ ಮನೆ
ಯಿಂದ ಯಾರು ಹೋಗುತ್ತಾರೆ, ಬರುತ್ತಾರೆ, ಯಾವ ಸಾಮಾನು ಹೋಗುತ್ತದೆ
ಬರುತ್ತದೆಂಬದನ್ನು ಕಿಡಿಕಿಯಲ್ಲಿ ನಿಂತು ಹ್ಯಾಗೆ ತಿಳಕೊಳ್ಳಬಹುದೋ ಹಾಗೆಯೇ ಒಬ್ಬ
ಮನುಷ್ಯನ ಕಣ್ಣನ್ನು ನೋಡಿದ ಮಾತ್ರದಿಂದಲೇ ಅವನು ಅಂಥವನು, ಇಂಥವನು
ಎಂಬದಾಗಿ ಕೂಡಲೇ ಹೇಳಬಹುದು. ಕಣ್ಣುಗಳ ಅಂದದಿಂದ ಮುಖದಲ್ಲಿ ಮನುಷ್ಯನ
ಗುಣಗಳೆಲ್ಲವೂ ವ್ಯಕ್ತವಾಗುವವು.

ಹೆಂಗಸರ ಕಣ್ಣುಗಳ ಆಕರ್ಷಣ ಶಕ್ತಿಯು ಬಹಳ ಹೆಚ್ಚಿನದೆಂದೂ ಅದು ಕ್ಷಣ
ಮಾತ್ರದಲ್ಲಿ ಒಬ್ಬ ಮನುಷ್ಯನನ್ನು ಭೂಮಿಯ ಅಂತ್ಯದಿಂದ ತಮ್ಮ ಕಡೆಗೆ ಎಳೆಯುವ
ದಲ್ಲದೆ ಭೂಮ್ಯಂತ್ಯದ ವರೆಗೆ ದೂಡಿಬಿಡುವಂಥಾದ್ದು ಸಹ ಆಗಿದೆಂದೂ ಅಮೇರಿಕದ
ಪ್ರೊಫೆಸರರೊಬ್ಬರು ಹೇಳುವರು. ಲೆವಲರ್ ಎಂಬ ಅಂಗ್ಲವಿದ್ಯಾ ಪರೀಕ್ಷಕರೊಬ್ಬರು
ತನಗೆ ಏನೂ ಪರಿಚಿತಿಯಿಲ್ಲದ ಒಬ್ಬ ಮನುಷ್ಯನನ್ನು ನೋಡಿದಕೂಡಲೇ ಇವನು ಕೊಲೆ
ಪಾತಕಿ ಎಂದು ಹೇಳಿಬಿಟ್ಟರು. ವಿಚಾರಿಸಿದ್ದಲ್ಲಿ ನಿಜವಾಗಿಯೂ ಈತನು ಲೆವಲರ್
ಹೇಳಿದಂತೆ ಕೊಲೆಪಾತಕಿಯಾಗಿದ್ದನು. ಮನುಷ್ಯರು ಹ್ಯಾಗೆ ತಾವೇ ನಾಲಿಗೆಯಿಂದ
ಮಾತಾಡುತ್ತಾರೋ ಹಾಗೆಯೇ ಕಣ್ಣಿನಿಂದ ಮಾತಾಡಬಹುದೆಂಬ ಮಾತನ್ನು ಯಾರೂ
ಅಲ್ಲಗಳೆಯ ಕೂಡದು.

ಕಣ್ಣು ಮನುಷ್ಯರಲ್ಲಿ ಅರುಹನ್ನು ಸಹ ಹುಟ್ಟಿಸುವಂಥಾ ಒಂದು ಕರಣವಾಗಿರು
ವುದು. ನಾವು ಕಣ್ಣಿನಿಂದ ಪ್ರಕೃತಿಯ ನಾನಾ ವಸ್ತುಗಳ ಜ್ಞಾನವನ್ನು ಪಡಿಯು
ತ್ತೇವೆ. ನಾನಾ ವಸ್ತುಗಳ ಪ್ರತಿಬಿಂಬವು ಕಣ್ಣಿನ ಮೂಲಕ ಮನಸ್ಸಿಗೆ ಹೋಗಿ ಅಲ್ಲಿ
ಅದು ಸ್ಥಿರವಾಗಿ ನಿಲ್ಲುತ್ತದಾದ್ದರಿಂದ ಕಣ್ಣಿಗೆ ಛಾಯ ಚಿತ್ರಕ ಯಂತ್ರ ಎಂತಲೂ ಹೇಳ
ಬಹುದು. ಕಣ್ಣು ಆಯಾ ವಸ್ತುಗಳನ್ನು ನೋಡದಿದ್ದ ಪಕ್ಷಕ್ಕೆ ಮನುಷ್ಯರಿಗೆ ಊ
ಹನಾ ಶಕ್ತಿಯೇ ಇರುತ್ತಿದ್ದಿಲ್ಲ. ಒಬ್ಬನು ತನ್ನ ಕಣ್ಣನ್ನು ಕೆಟ್ಟದ್ದಕ್ಕೆ ಪ್ರಯೋಗಿಸಿದರೆ
ನಿಜವಾಗಿ ಅವನ ಹೃದಯವೂ ಶರೀರವೂ ಕೆಟ್ಟುಹೋಗುವದು. ಆದ್ದರಿಂದ ಪ್ರತಿ
ಒಬ್ಬನು ದೇವರಿಂದ ತಮಗೆ ಸಿಕ್ಕಿದ ಕಣ್ಣುಗಳನ್ನು ಒಳ್ಳೆ ಕೆಲಸಗಳಿಗೆ ಪ್ರಯೋಗಿಸಿ
ಶುದ್ಧ ಹೃದಯವುಳ್ಳವನಾಗಿ ಬದುಕಿದರೆ ಅಂಥವನು ನಿಜವಾಗಿ ಇಹದಲ್ಲೂ ಪರದಲ್ಲೂ
ಸುಖವನ್ನು ಪಡಿಯುವನೆಂಬದು ನಿಶ್ಚಯ.

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಸ್ವದೇಶಾಭಿಮಾನಿ ಪತ್ರಕರ್ತರೇ,

ಪಶುಗಳು ವಿಸರ್ಜಿಸುವ ಮಲಮೂತ್ರವನ್ನು ಸರಿಯಾಗಿ ಕಾಪಾಡುವದರ ಕುರಿತು
ಬರಕೊಳ್ಳುತ್ತೇನಾಗಿ ಈ ಮೊದಲು ಒಂದು ಪತ್ರದಲ್ಲಿ ನಾನು ಸೂಚಿಸಿದ್ದೆ. ಅದನ್ನು
ಈಗ ಬರಕೊಳ್ಳುತ್ತೇನೆ. ಹಾಗೆ ನಮ್ಮ ಜಿಲ್ಲೆಯ ಬೇಸಾಯಗಾರರು ಮಲಮೂತ್ರ
ವನ್ನು ಸರಿಯಾಗಿ ಸುರಕ್ಷಿತ ಪಡಿಸುವಂತೆ ಈ ಕೆಳಗಿನ ಸೂಚನೆಗಳನ್ನು ಬೇಸಾಯ
ಗಾರರ ಅನುಭವದ ಬಗ್ಗೆ ಬರಕೊಂಡಿದ್ದೇನೆ. ಅದಕ್ಕೆ ತಾವು ತಮ್ಮ ಪತ್ರದಲ್ಲಿ ಎಡೆ
ಕೊಡಬೇಕಾಗಿ ಅಪೇಕ್ಷಿಸುತ್ತೇನೆ.

ಪಶುಗಳ ಮೂತ್ರದಲ್ಲಿ ಸೆಗಣಿಯಲ್ಲಿರುವದಕ್ಕಿಂತ ಜಾಸ್ತಿಯಾಗಿ ಫಲವತ್ತಿನ
ಪದಾರ್ಥಗಳು ಇರುತ್ತವೆ. ಪಶುಗಳನ್ನು ಮೇಯಲಿಕ್ಕೆ ಹೊರಗೆ ಬಿಟ್ಟಾಗ ಅವುಗಳು
ವಿಸರ್ಜಿಸುವ ಮೂತ್ರವು ಯಾವ ಪ್ರಯೋಜನಕ್ಕೂ ಬೀಳದೆ ಹೋಗುತ್ತದೆ. ಹಟ್ಟಿ
ಯಲ್ಲಿ ವಿಸರ್ಜಿಸಿದ ಮೂತ್ರದ ಅಧಿಕಾಂಶವು ಕೂಡಾ ಹಾಳಾಗುತ್ತದೆ. ಹಟ್ಟಿಯಲ್ಲಿ
ವಿಸರ್ಜಿಸಲ್ಪಟ್ಟ ಮೂತ್ರವು ಹಟ್ಟಿಯ ತಳಕ್ಕೇನೇ ಹೀರಿ ಹೋಗಿ ನಷ್ಟವಾಗುತ್ತದೆ.
ಹೆಚ್ಚು ಜಾಗರೂಕತೆಯಿಂದ ಬೇಸಾಯವನ್ನು ನಡಿಸುವವರ ಪೈಕಿ ಅಲ್ಲಲ್ಲಿ ಇರುವ
ಕೆಲವರು ಮಾತ್ರ ಹಟ್ಟಿಯ ತಳದ ಮೇಲ್ಮಣ್ಣನ್ನು ಗೊಬ್ಬರವಾಗಿ ಉಪಯೋಗಿಸುವರೆ
ಆಗ್ಯಾಗ್ಯೆ ಕೆರೆದು ತೆಗದು ಇದರ ಬದಲಿಗೆ ಆ ತಳದ ಮೇಲೆ ಹುಡಿಯಾದ ಒಣಮಣ್ಣನ್ನು
ಚೆಲ್ಲುತ್ತಾ ಬರುತ್ತಾರೆ. ಈ ರೀತಿಯಲ್ಲಿ ಕೆರದ ಮಣ್ಣನ್ನು ತನಸು ಇಲ್ಲದೆ ಬೆಚ್ಚಗೆ

ಇರುವ ಸ್ಥಳದಲ್ಲಿ ಕೂಡಿಸಿಟ್ಟು ಒಂದು ಸಾರಿ ಬೇಸಿಗೆ ಕಾಲ ಅಂತ್ಯವಾಗುವ ಮುಂಚೆ ತನ್ನ ಜಮೀನನ್ನು ಹೂಡುವಾಗ ಅದರಲ್ಲಿ ಸೇರಿಹೋಗುವಂತೆ ಮೇ ತಿಂಗಳಲ್ಲಿಯೂ ಇನ್ನೊಮ್ಮೆ ಅಕ್ಟೋಬರ ತಿಂಗಳ ಆಖೈರಿಗೆ ಗದ್ದೆಯನ್ನು ಸುಗ್ಗಿ ಬೆಳೆ ಬಗ್ಗೆ ಹೂಡುವಾಗ ಇಲ್ಲವೆ ಧಾನ್ಯದ ಬಗ್ಯೆ ಹೂಡುವಾಗ ಬೇಸಾಯಗಾರನು ಚೆಲ್ಲಬಹುದು. ಹೀಗೆ ಮೂತ್ರ ಹೀರಿಕೊಂಡ ಒಣಮಣ್ಣನ್ನು ಗದ್ದೆಯಲ್ಲಿ ಚೆಲ್ಲುವುದು ಒಂದು ಚಲೋ ಕ್ರಮವಾಗಿರುತ್ತದೆ. ಇದನ್ನು ಎಲ್ಲವರೂ ಸರ್ವಸಾಧಾರಣವಾಗಿ ಅನುಸರಿಸುವಂಥಾದ್ದು ಬಹು ಲಾಭಕರವೆಂತ ಹೇಳಬಹುದು.

ಸೆಗಣಿಯನ್ನು ಕೂಡಿಸಿಡುವರೆ ಈಗ ಸಾಧಾರಣವಾಗಿ ಅನುಸರಿಸೋಣಾಗುವ ಕ್ರಮದಲ್ಲಿ ಕುಂದುಕಗಳಿರುತ್ತವೆ. ಈ ಗೊಬ್ಬರವನ್ನು ವಾಡಿಕೆಯಾಗಿ ಹಟ್ಟಿಯ ಹೊರಗೆ ರಾಶಿಮಾಡಿ ಹಾಕುವ ಸಂಬಂಧ ಅದು ಬಿಸಲಿನ ಮತ್ತು ಮಳೆಯ ಹೊಡತಕ್ಕೆ ಗುರಿಪಟ್ಟು ಅದರ ಅಧಿಕಾಂಶವು ನಷ್ಟ ಹೊಂದುತ್ತದೆ. ಮತ್ತು ಸೆಗಣಿಯ ಗೊಬ್ಬರದಿಂದ ಶಿಕ್ಕುವ ಪ್ರಯೋಜನದ ಹೆಚ್ಚಿನ ಅಂಶವು ಮಳೆನೀರಿನ ಪಾಲಾಗಿ ಹೋಗುತ್ತದೆ. ಇಲ್ಲವೆ ವಾಯು ರೂಪಾಂತರ ಹೊಂದಿ ನಿಷ್ಪ್ರಯೋಜನವಾಗುತ್ತದೆ. ಸೆಗಣಿಯನ್ನು ಹೊಂಡದಲ್ಲಿ ಹಾಕಿಟ್ಟು ಬಿಸಿಲು ಮಳೆ ತಾಗದಂತೆ ಒಂದು ಮುಳಿ ಮಾಡನ್ನು ಕಟ್ಟುವುದರಿಂದ ಈ ಎಲ್ಲಾ ನಷ್ಟವನ್ನು ಬಹು ಕಡಿಮೆ ಮಾಡ ಕೂಡುವುದು. ಆದದರಿಂದ ಪ್ರತಿ ದಿನ ಬೆಳಿಗ್ಗೆ ಒಟ್ಟು ಕೂಡಿಸೋಣಾಗುವಂಥಾ ಸೆಗಣಿಯನ್ನು ಆ ಹೊಂಡದಲ್ಲಿ ಹಾಕುತ್ತಾ ಬಂದು ಅದರಲ್ಲಿ ಕೂಡಹಾಕಿದ ಸೆಗಣಿಯನ್ನು ಆಗ್ಗಾಗ್ಗೆ ಒಂದು ಹಾರೆಯಿಂದ ಮಗುಚಿ ಹಾಕಿ ಮೇಲಿನ ಸೆಗಣಿಯು ಕೆಳಕ್ಕೂ ಕೆಳಗಿರುವುದನ್ನು ಮೇಲಕ್ಕೂ ಸೇರುವಂತೆ ಹಾರೆಯಿಂದ ಮಗಚಿಹಾಕಿ ಸಮತಟ್ಟಾಗಿ ಮಾಡಿ ಪಾವಗಳಿಂದ ಚೆನ್ನಾಗಿ ಒತ್ತಿ ಜಗ್ಗಿಸಬೇಕು. ಹೊಂಡದ ನಾಲ್ಕು ಪಕ್ಕಗಳನ್ನು ಮತ್ತು ಅಡಿತಲವನ್ನು ಚೆನ್ನಾಗಿ ಬಡದು ಗಟ್ಟಿಮಾಡುವುದಲ್ಲದೆ ಅದಕ್ಕೆಲ್ಲಾ ಆವೆಮಣ್ಣಿನಿಂದ ಗಾರೆ ತೆಗಿಯಬೇಕು. ಹೀಗೆ ಮಾಡದೆ ಇದ್ದರೆ ಗೊಬ್ಬರದ ತೆಳುಪದಾರ್ಥವನ್ನು ಹೊಂಡದ ಸುತ್ತಲೂ ಇರುವ ಮಣ್ಣು ಎಳಕೊಳ್ಳುತ್ತದೆ. ಹಾಗೆ ಗಾರೆ ತೆಗದರೆ ಗೊಬ್ಬರವು ಹಾಳು ಆಗುವಂಥಾದ್ದು ಕಡಿಮೆ ಆದೀತು. ಈ ರೀತಿಯಲ್ಲಿ ಪಶುಗಳ ಸೆಗಣಿಯನ್ನು ಕೂಡಿಸಿಟ್ಟು ಹಳೆ ಸೆಗಣಿಯು ಕೊಳೆತು ಚಲೋ ಗೊಬ್ಬರವಾಗಿ ಪರಿಣಮಿಸುವಂತೆಯೂ ಅಂಥಾ ಸೆಗಣಿಯನ್ನೇ ಜಮೀನಿಗೆ ಉಪಯೋಗಿಸುವಂತೆ ಕೂಡಾ ಪ್ರತಿ ಬೇಸಾಯಗಾರನು ಎರಡು ಹೊಂಡಗಳನ್ನು ತಯಾರಿಸಿ ಇಡತಕ್ಕದ್ದು.

ನಮ್ಮ ಜಿಲ್ಲೆಯ ಪ್ರತಿ ಬೇಸಾಯಗಾರನ ಮನೆಯಲ್ಲಿ ಕಟ್ಟಿಗೆಯ ಯಾ ದರ್ಲೆಯ ಬೂದಿಯು ದಿನಾಗಲು ತಯಾರಾಗುತ್ತದಾದರಿಂದ ಮೇಲೆ ಹೇಳಿದ ಒಣಮಣ್ಣಿನ ಬದಲಿಗೆ ಈ ಬೂದಿಯನ್ನು ಉಪಯೋಗಿಸಬಹುದು.

ಈ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಬೆಲ್ಲವು ತಯಾರಾಗುತ್ತದೆ. ಇದನ್ನು ತಯಾರಿಸುವರೆ ಅನುಸರಿಸೋಣಾಗುವ ಕ್ರಮದಲ್ಲಿ ಅಗತ್ಯವಿರುವ ಕೆಲವು ಬದಲಾವಣೆಗಳ ಕುರಿತು ಇನ್ನೊಮ್ಮೆ ಬರಕೊಳ್ಳುತ್ತೇನೆ.

ಎಲ್ಲೂರು ಸುಬ್ಬರಾವ್.

೨

ಅಯ್ಯಾ,

ಮರುಮಕ್ಕತಾಯ ಮತ್ತು ಅಳಿಯ ಸಂತಾನ ಕಟ್ಟುಗಳನ್ನು ಆಚರಿಸುವ ಜನರಿಗೆ ಸಂಬಂಧಿಸುವ ವಿಭಾಗ ಮಸೂದೆಯ ನಕಲನ್ನು ಅದರ ಕರ್ತೃರಾದ ಬಹುಮಾನಪಟ್ಟ ಕೃಷ್ಣನ್ನಾಯರವರು ಪ್ರಕಟಿಸಿ ಸುಮಾರು ಎಂಟು ತಿಂಗಳುಗಳಾದವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಳಿಯ ಸಂತಾನ ಕಟ್ಟನ್ನು ಆಚರಿಸುವವರು ಸುಮಾರು ಆರು ತಿಂಗಳುಗಳ ವರೇಗೆ ಅಂಥಾದ್ದೊಂದು ವಿಷಯ ಉಂಟೆಂಬ ಗೋಚರವೇ ಇಲ್ಲದಿರುತ್ತಿದ್ದರು. ಈಗ ಸುಮಾರು ಎರಡು ತಿಂಗಳುಗಳ ಹಿಂದೆ ಮದ್ರಾಸ್ ಸರಕಾರದವರು ಮಸೂದೆಯ ಕುರಿತು ದಕ್ಷಿಣ ಕನ್ನಡದ ಮುಖ್ಯ ಉದ್ಯೋಗಸ್ಥರ ಮತ್ತು ಆ ವಿಷಯ ಅಭಿಪ್ರಾಯ ಕೊಡಲು ಯೋಗ್ಯರಾದ ಮಾನ್ಯ ಗೃಹಸ್ಥರ ಅಭಿಪ್ರಾಯಗಳನ್ನು ಬಯಸಿದ್ದರಿಂದ ಅಲ್ಲಲ್ಲಿ ಸಭೆಗಳಾಗಿ ಮಸೂದೆಯು ಸ್ವಲ್ಪ ಮಟ್ಟಿಗೆ ಜನರ ತಿಳುವಳಿಕೆಗೆ ಬಂದಿರುವದು. ಆದರೆ ವಿಭಾಗ ಮಸೂದೆಯಿಂದಾಗುವ ಬದಲಾವಣೆಗಳ್ಯಾವವೆಂದು ಈಗ ಕೂಡಾ ಅನೇಕರಿಗೆ ಗೊತ್ತಿಲ್ಲ. ಅಳಿಯ ಸಂತಾನ ಕಟ್ಟನ್ನು ತೆಗೆದು ಹಾಕಿ ಮಕ್ಕಳ ಸಂತಾನ ಕಾನೂನು ಮಾಡುತ್ತಾರಂತೆಂದು ಮಾತಾಡಿಕೊಳ್ಳುವದು ಆಗಾಗ್ಯೆ ಕಿವಿಗೆ ಬೀಳುತ್ತಿರುವದು. ಮಸೂದೆಯ ವಿಷಯ ಈ ತೆರದ ಅಜ್ಞಾನವು ಹರಡಿಕೊಂಡಿರುವದು ಬಹು ಶೋಚನೀಯವಾಗಿರುವದು. ಅದಲ್ಲದೆ ಮಸೂದೆಯ 'ತಜವೀಜು'ಗಳನ್ನು ಓದಿ ನೋಡಿದವರು ಕೂಡಾ [illegible] ವಿಷಯಗಳಲ್ಲಿ ತಪ್ಪುಗ್ರಹಿಕೆ ಮಾಡಿಕೊಂಡಿರುವರೆಂದು ತೋರುವದು. ಈ ಸಮಯದಲ್ಲಿ ನಿಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಈ ವಿಷಯದಲ್ಲಿ ಪತ್ರವ್ಯವಹಾರಕ್ಕೆಡೆಗೊಟ್ಟದದರಿಂದ ಬಹು ಜನರ ಕೃತಜ್ಞತೆಗೆ ನೀವು ಪಾತ್ರರಾಗಿರುವಿರಿ. ಮಸೂದೆಯು ಕಾನೂನಾದ ಸಂದರ್ಭದಲ್ಲಿ ಏರ್ಪಾಡಾಗುವ ಬದಲಾವಣೆಗಳ್ಯಾವವೆಂದು ಸೂಚಿಸಿ ಗುಣದೋಷಗಳನ್ನು ಪರೀಕ್ಷಿಸುವ ನಿಮಿತ್ತ ನನಗೆ ಕೊಂಚ ಸ್ಥಳಕೊಡಬೇಕಾಗಿ ಅಪೇಕ್ಷಿಸುತ್ತೇನೆ.

ವಿಭಾಗ ಮಸೂದೆ.

I. ಅಳಿಯ ಸಂತಾನ ಕುಟುಂಬದ ಒಂದು ಕವರಿನ ಪ್ರಾಯಭರಿತರಾದ ಮೆಂಬರರು ಕುಟುಂಬದ ಆಸ್ತಿಯು ಪಾಲಾಗಬೇಕೆಂದು ಬಲತ್ಕರಿಸಬಹುದು.

II. ಮೂಲಸ್ತ್ರೀಯು ಜೀವಂತಳಾಗಿರುವಾಗ ಒಂದು ಕವರಿನವರಿಗೆ ಮಾತ್ರ ಪಾಲಾಗಬೇಕೆಂದು ಬಲತ್ಕರಿಸುವ ಹಕ್ಕು ಇರಕೂಡದು. ಆದರೆ ಕುಟುಂಬದಲ್ಲಿ ಹಲವು ಕವಲುಗಳಿರುತ್ತಾ ಒಂದು ಕವಲಿಗೂ ಮತ್ತು ಬೇರೆ ಕೆಲವು ಕವಲುಗಳಿಗೂ (ಇಡೀ ಕುಟುಂಬದ ಆಸ್ತಿ ಅಲ್ಲದೆ) ಸಮುಷ್ಟಿ ಹಕ್ಕು ಇರುವ ಬೇರೆ ಆಸ್ತಿ ಇದ್ದರೆ ಆ ಆಸ್ತಿಯಲ್ಲಿ ಪಾಲಾಗಬೇಕೆಂದು ಸಮುಷ್ಟಿ ಹಕ್ಕಿರುವ ಒಂದು ಕವಲಿನವರು ಮೂಲಸ್ತ್ರೀ ಇರುವಾಗ ಕೂಡಾ ಬಲತ್ಕರಿಸಬಹುದು.

III. ಒಂದೊಂದು ಕವಲಿಗೆ ಪಾಲು ನಿಯಮಿಸುವಾಗ ಇಡೀ ಕುಟುಂಬದಲ್ಲಿ ಜೀವಂತರಾಗಿರುವವರ ಸಂಖ್ಯೆಯನ್ನು ಎಣಿಸಿ ತಲೆ ಪ್ರಕಾರ ಪಾಲು ಮಾಡಿ ಆಯಾಯ ಕವಲಿಗೆ ಎಷ್ಟು ಸಿಕ್ಕುತ್ತದೆಂದು ನಿರ್ಣಯಿಸಬೇಕು.

IV. ಒಂದು ಕುಟುಂಬದಲ್ಲಿ ಅಥವಾ ಒಂದು ಕವಲಿನಲ್ಲಿ ಗಂಡು ಮೆಂಬರರೇ ಇರುವದಾದರೆ ಅಥವಾ ಗಂಡು ಮೆಂಬರರು ಮತ್ತು ಸಂತತಿಯಾಗದ ಹೆಣ್ಣು ಮೆಂಬರಿರುವದಾದರೆ ಆ ಕುಟುಂಬದ ಅಥವಾ ಆ ಕವಲಿನ ಪ್ರತಿಯೊಬ್ಬ ಮೆಂಬರನು ಪಾಲಾಗಬೇಕೆಂದು ಬಲತ್ಕರಿಸಬಹುದು.

V. ಪಾಲಾಗುವ ಮೊದಲು ಇಡೀ ಕುಟುಂಬದ ಆಸ್ತಿಯು ಯಾವ ನಿಬಂಧನೆಗಳಿಗೆ ಒಳಪಟ್ಟಿತ್ತೋ ಆ ನಿಬಂಧನೆಗಳಿಗೆ ಪ್ರತಿಭಾಗವೂ ಒಳಪಟ್ಟಿರಬೇಕು.

VI. ಮಿತಾಕ್ಷರ ಕುಟುಂಬದ ಯಜಮಾನನಿಗೆ ಎಷ್ಟು ಅಧಿಕಾರವಿರುವದೋ ಅಷ್ಟೇ ಅಧಿಕಾರವು ಅಳಿಯ ಸಂತಾನ ಕುಟುಂಬದ ಯಜಮಾನನಿಗೆ ಇರಬೇಕಲ್ಲದೆ ಹೆಚ್ಚಿನ ಅಧಿಕಾರವಿರಕೂಡದು.

VII. ಯಜಮಾನನು ಆದಾಯ ವೆಚ್ಚಗಳ ವಿಷಯ ಸರಿಯಾದ ಲೆಖ್ಖಪತ್ರಗಳನ್ನಿಡಲಿಕ್ಕೆ ಬದ್ಧನಾಗಿರಬೇಕು.

ಮಸೂದೆಯಿಂದಾಗುವ ಬದಲಾವಣೆಗಳು ಸಂಕ್ಷೇಪವಾಗಿ ಇವೇ.

ಮಸೂದೆಯ ಪ್ರಕಾರ ಮೂಲಸ್ತ್ರೀಯು ಜೀವಂತಳಾಗಿರುವಾಗ ಕೂಡಾ ಆಕೆಯ ಯಾರೊಬ್ಬ ಮಗಳು ತನ್ನ ಮಕ್ಕಳಿಂದ ಕೂಡಿ ಪಾಲು ಕೇಳಬಹುದೆಂದು ಕೆಲವರು ಅಭಿಪ್ರಾಯಪಡುವರು. ಮಸೂದೆಯ 'ತಜವೀಜು'ಗಳನ್ನು ಚನ್ನಾಗಿ ಆಲೋಚಿಸಿದರೆ ಮೂಲಸ್ತ್ರೀಯು ಇರುವಾಗ ಕುಟುಂಬದ ಆಸ್ತಿಯಲ್ಲಿ ಪಾಲು ಕೇಳುವ ಹಕ್ಕು ಯಾರಿಗೂ ಇರುವದಿಲ್ಲವೆಂದು ವ್ಯಕ್ತವಾಗುವದು. ಶಬ್ದಾರ್ಥ ವಿವರಣೆಯಲ್ಲಿ 'ಕವಲು' ಎಂದರೆ ಒಬ್ಬ ಸ್ತ್ರೀ ಮತ್ತು ಆಕೆಯ ಸ್ತ್ರೀಮೂಲಕವಾದ ಸಂತತಿಯೆಂದು ವಿವರಿಸಿರುವದು. ಆದುದರಿಂದ ಮೂಲಸ್ತ್ರೀಯು ಜೀವಂತಳಾಗಿರುವಾಗ ಆಕೆಯಿಂದ ಕೂಡಿದ ಕವಲಿಲ್ಲದೆ ಪಾಲು ಕೇಳುವ ಅಧಿಕಾರವುಳ್ಳ ಬೇರೆ ಕವಲು ಇಲ್ಲ. ಆಕೆಯ ಹೆಣ್ಣು ಮಕ್ಕಳು ಮತ್ತು ಅವರ ಸಂತತಿಯವರು 'ಒಳ ಕವಲು'ಗಳಲ್ಲದೆ 'ಕವಲು'ಗಳಲ್ಲ. ಒಳ ಕವಲುಗಳಿಗೆ ಪಾಲಾಗಬೇಕೆಂದು ಬಲತ್ಕರಿಸುವ ಹಕ್ಕನ್ನು IIನೇ ಕಲಮಿನಲ್ಲಿ ಅಲ್ಲದೆ ಮತ್ತೆಲ್ಲಿಯೂ ಕೊಡುವದಿಲ್ಲ. IIನೇ ಕಲಮು ಇಡೀ ಕುಟುಂಬದ ಆಸ್ತಿಗೆ ಸಂಬಂಧಿಸುವದಿಲ್ಲ.

ಗಂಡು ಮೆಂಬರರಿಗೆ ಕೂಡಾ ಪಾಲು ಕೇಳುವ ಹಕ್ಕಿರುವದೆಂದು ಇನ್ನು ಕೆಲವರು ಅಭಿಪ್ರಾಯಪಡುವರು. ಮಸೂದೆಯು ಹೇಳುವಂತೆ ತಲೆ ಪ್ರಕಾರ ಪಾಲಾಗುವದಾದರೆ ಗಂಡು ಮೆಂಬರರಿಗೂ ಒಂದು ಪಾಲು ಸಿಕ್ಕುವದೆಂಬದು ನಿಜ. ಆದರೆ ಆ ಪಾಲು ಅವರ ಕವಲಿಗೆ ಸೇರುವದಲ್ಲದೆ ಅವರಿಗೆ ಪ್ರತ್ಯೇಕ ಸಿಕ್ಕಲಾರದು. ಯಾವದೊಂದು ಕವಲಿನ ಪ್ರಾಯ ಭರಿತರಾದ ಎಲ್ಲಾ ಮೆಂಬರರು ಕೂಡಿ ಪಾಲು ಕೇಳಬೇಕಲ್ಲದೆ ಒಬ್ಬ ಗಂಡು ಮೆಂಬರನು ಕೇಳಿದರೆ ಪಾಲು ಸಿಕ್ಕಲಾರದು. IVನೇ ಕಲಮಿನಲ್ಲಿ ಮಾತ್ರ ಗಂಡು ಮೆಂಬರನಾಗಲಿ ಹೆಣ್ಣು ಮೆಂಬರಳಾಗಲಿ ಒಬ್ಬರೇ ಪಾಲು ಕೇಳಬಹುದು. ಮುಂದಕ್ಕೆ ಸಂತತಿಯಾಗುವ ಸಂಭವ ಇಲ್ಲದ್ದರಿಂದ ಆ ವಿಲೆವಾರಿ ಸಹಜವು.

ಅಳಿಯ ಸಂತಾನ ಕುಟುಂಬಗಳಲ್ಲಿ ಈಗ ನಡೆಯುತ್ತಿರುವ ಲೋಕಪ್ರಶಸ್ತವಾದ ಹಾವಳಿಗಳನ್ನರಿತವರೆಲ್ಲರು ಈ ಮಿತವಾದ ಬದಲಾವಣೆಗಳನ್ನು ಮನಃಪೂರ್ವಕವಾಗಿ ಒಪ್ಪಿಕೊಳ್ಳಬೇಕಿತ್ತು. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಬಂಟರಲ್ಲಿ ಈ ಸಲುವಾಗಿ ಮೂರು ಪಕ್ಷಗಳಾಗಿವೆ. ಮಸೂದೆಯಿಂದಾಗಬಹುದಾದ ಶುಭಾಶುಭಗಳನ್ನು ಪರೀಕ್ಷಿಸುವ ಶ್ರಮ ತೆಕ್ಕೊಳ್ಳದೆ ಪೂರ್ವಜರಿಂದಲೂ ನಡೆದು ಬಂದ ಕಟ್ಟಳೆಯಲ್ಲಿ ಯಾವ ಸಂದರ್ಭದಲ್ಲಿಯೂ ಬದಲಾವಣೆಗಳೇ ಆಗಕೂಡದೆಂದು ಪಟ್ಟು ಹಿಡಿಯುವ ಪಕ್ಷವೊಂದು. ಮಸೂದೆಯನ್ನು ಮೇಲ್ಮೇಲೆ ವಿಚಾರಿಸಿ ಮಸೂದೆಯು ಕಾನೂನಾದರೆ ದೊಡ್ಡ ದೊಡ್ಡ ಆಸ್ತಿಗಳೆಲ್ಲಾ ಚೂರುಚೂರುಗಳಾಗಿ ಪರಾಧೀನವಾಗುವವು. ಬಂಟರ ಜಾತಿಗೆ ಹೇಳಲಶಕ್ಯವಾದ ಹಾನಿಯುಂಟಾಗುವದು. ನಮಗದರ ಗೊಡವೆ ಬೇಡವೆಂದು ಹೇಳುವ ಪಕ್ಷ ಇನ್ನೊಂದು. ಮಸೂದೆಯ ಗುಣದೋಷಗಳನ್ನು ಪರೀಕ್ಷಿಸಿ ಅದರಲ್ಲಿ ಕೆಲವು ತಿದ್ದುಪಾಟುಗಳಾದರೆ ಶ್ರೇಯಸ್ಕರವಾಗುವದೆಂದು ಸಾಧಿಸುವ ಪಕ್ಷ ಮತ್ತೊಂದು.—

(ಮುಂದೆ ಸಾಗುವದು.)

ಪುತ್ತೂರು.

ಕಟ್ಟಿಗೆಯ ವಡದಾಟ. ತಾ. 23—11—10.

ದಕ್ಷಿಣ ಕನ್ನಡಾ ಜಿಲ್ಲೆಯ ಪೈಕಿ ಉಪ್ಪಿನಂಗಡಿ ತಾಲೂಕು ಎಂಬದು ವಿಪರೀತ ಕಾಡುಗಳಿಂದ ತುಂಬಿದ್ದೆಂದು ಪ್ರಖ್ಯಾತಿ ಹೊಂದಿದೆ. ಮುನ್ಸಿಫ್ ಕೋರ್ಟು, ಡಿವಿಜನಲ್ ಆಫೀಸು, ತಾಲೂಕು ಆಫೀಸು, ರಿಜಿಸ್ಟ್ರೇಶನ್ ಆಫೀಸು, ಸ್ಟೇಶನರಿ ಮೇಜಿಸ್ಟ್ರೇಟ ಕೋರ್ಟು ಮುಂತಾದ ಸರಕಾರಿ ಆಫೀಸುಗಳಿಂದಲೂ ಸರಕಾರಿ ಉದ್ಯೋಗಸ್ತರಿಂದಲೂ ಕೋರ್ಟು ವಕೀಲರಿಂದಲೂ ತುಂಬಿರುವ ಪುತ್ತೂರು ಟೌನಿನಲ್ಲಿ ಈ ವರುಷ ಮಳೆಗಾಲದಿಂದ ಈ ವರೇಗೆ ಅನೇಕರಿಗೆ ಉರಿಸುವರೆ ಕಟ್ಟಿಗೆ ಶಿಕ್ಕದೆ ಹೆಚ್ಚಿನ ಗಲಾಟೆ ಬಿದ್ದಿರುತ್ತದೆ. ಈ ನಮ್ಮ ಶಹರಿಗೆ ಕಟ್ಟಿಗೆಯು ಗಾಡಿ ಮೇಲೆ ಮತ್ತು ತಲೆಹೊರೆಯ ಮೇಲೆ ತರಬೇಕು ಹೊರತು ಬೇರೇನೂ ಉಪಾಯವಿಲ್ಲ. ಈ ವರುಷ ಬೇಸಿಗೆ ತಿಂಗಳ ಮೊದಲೆ ಮಳೆ ತೊಡಗಿದ್ದರಿಂದಲೂ ಕಾಡುರಸ್ತೆಗಳು ಹಾಳಾದ್ದರಿಂದಲೂ ಗಾಡಿಗಳ ಚಲಾವಣೆಯು ನಿಂತದ್ದರಿಂದಲೂ ಪೇಟೆಗೆ ಕಟ್ಟಿಗೆ ತರುವ ಹೊಲೆಯರಿಗೆ ಸಾಗುವಳಿ ಕೆಲಸವು ಫಕ್ಕನೆ ತೊಡಗಿದ್ದರಿಂದಲೂ ಕಟ್ಟಿಗೆ ವಹಿವಾಟವು ನಿಂತಿತ್ತು. ಸಾಗುವಳಿ ಕೆಲಸ ಆಖೈರ ಆದಾಗ್ಯೂ ಕೆಲವು ದಫೆ ಮಳೆ ಎಡೆಬಿಡದೆ ಬಂದದ್ದರಿಂದ ಪುತ್ತೂರು ಟೌನಿನಿಂದ ೬ ಮೈಲು ದೂರ ಇರುವ ಪುತ್ತೂರು ಟೌನಿನ ನಿವಾಸಿಕರಿಗೆ ಬೇಕಾದ ಕಟ್ಟಿಗೆ ಉಪಯೋಗಕ್ಕೆ ಬಿಟ್ಟಿರುವ "ಮರಕೂರ" ಎಂಬ ಕಾಡಿಗೆ ಹೋಗಿಬರಲಿಕ್ಕೆ ಕಾಲುನಡೆಯಿಂದಾಗಲಿ, ಗಾಡಿಯಿಂದಾಗಲಿ ಸಾಧ್ಯವಿಲ್ಲ. ಮರಕೂರ ಕಾಡಿಗೂ ಟೌನಿಗೂ ಮಧ್ಯ ಇರುವ ಬೆದ್ರಹಳ್ಳ ವ ಚಿಕ್ಕಳ ಎಂಬ ಹಳ್ಳಗಳಲ್ಲಿ ನೀರು ತುಂಬಿ ದಾಟುವುದು ಅಸಾಧ್ಯವಾಗಿರುವುದು. ಈ ವಿನಹ ಪುತ್ತೂರು ಟೌನಿಗೆ ವ್ಯಾಪಾರಸ್ತರು ಕಟ್ಟಿಗೆಯನ್ನು ಕಡದು ವಹಿವಾಟ ಮಾಡ್ಯಾರಂದರೆ ತಾಲೂಕು ಆಫೀಸಿನಲ್ಲಿ ಪರ್ಮಿಟು ಸಹಾ ಅಂಥವರಿಗೆ ನಿರಾಕರಿಸಲ್ಪಡುವದು. ಯಾವಾತನಿಗೆ ಕಟ್ಟಿಗೆ ಅಶ್ಯವಿರುವದೋ ಅಂಥವನೆ ಪರ್ಮಿಟು ಅಪೇಕ್ಷಿಸಿ ಅರ್ಜಿಕೊಡಬೇಕೆನ್ನುವರು. ಈ ರೀತಿ ಸಹ ಶೀಘ್ರ ಪರ್ಮಿಟು ಶಿಕ್ಕುವುದಿಲ್ಲ. ಪರ್ಮಿಟು ಅರ್ಜಿ ಗ್ರಾಮಉದ್ಯೋಗಸ್ತರ ಬಳಿಯಲ್ಲಿ ತನಖಿ ಬಗ್ಯೆ ಕಳುಹಿಸಲ್ಪಟ್ಟು ಅದಕ್ಕೆ ಹಿಂತಿರುಗಲಿಕ್ಕೆ ಕನಿಷ್ಟಪಕ್ಷಕ್ಕೆ ೩೦ ದಿವಸಗಳಾದರೂ ಬೇಕು. ಅಂಥಾ ಅರ್ಜಿಗಳಲ್ಲಿ ಒಮ್ಮೆಯೇ ೫ ಗಾಡಿಗೆ ಪರ್ಮಿಟು ಅಪೇಕ್ಷಿಸಿದರೆ ಒಂದು ಯಾ ೨ ಗಾಡಿ ಕಟ್ಟಿಗೆ ಕಡಿಯಲಿಕ್ಕೆ ಮಾತ್ರ ಪರ್ಮಿಟು ಶಿಕ್ಕುವದು. ಕಟ್ಟಿಗೆಯ ವಹಿವಾಟ ನಡಿಸಲಿಕ್ಕೆ ಒಬ್ಬ ವ್ಯಾಪಾರಸ್ತನಷ್ಟು ಇತರ ಪರ್ಮಿಟುದಾರರಿಗೆ ಎಷ್ಟು ಮಾತ್ರವೂ ಸಾಧ್ಯವಾದ ಕೆಲಸವಲ್ಲ. ಈ ಸಂಗತಿಗಳು ಎಲ್ಲಾ ಈಗ ೪ ತಿಂಗಳ ಈಚೆ ಹೆಚ್ಚಾಗಿ ಜನರ ತಿಳುವಳಿಕೆಗೆ ಬಂದಿರುವುದಾದರೂ ಈ ಬಗ್ಯೆ ನಿವೃತ್ತಿ ಹೊಂದುವರೆ ಯಾರೂ ಪ್ರಯತ್ನಿಸಿದಂತೆ ತೊರುವುದಿಲ್ಲ. ಸರಕಾರಿ ಡಿಪೊ ಇಡಲಿಕ್ಕೆ ಅರ್ಜಿಗಳು ಮಾಡೋಣಾಗುವವಾಗಿ ಕೇಳುತ್ತೇನೆ. ಖಾಸಗಿ ಕಟ್ಟಿಗೆ ವ್ಯಾಪಾರವು ಇದರಿಂದ ತೀರುವುದಾದರೂ ಗಾಡಿ ಕಟ್ಟಿಗೆಯು 'ಬಂಡಾಟ'ವೆಂತ ಹೇಳಿ ಕಟ್ಟಿಗೆಯನ್ನು ಕ್ರಯಕ್ಕೆ ಪಡಕೊಂಡು ಕ್ರಯವನ್ನು ವ್ಯಾಪಾರಸ್ತರಿಗೆ ಕೊಡುವರೆ ಬಹಳವಾಗಿ ದಣಿಸುವ ದುರಭ್ಯಾಸವು ಇದರಿಂದ ನಿಲ್ಲುವುದು.

P. F.

ಸುಳ್ಯ ನಿವಾಸಿಕರ ಕಡೆಯಿಂದ ಅಲ್ಲಿಯ ಗೃಹಸ್ಥರ ಸಹಿಯುಳ್ಳ ಒಂದು ಪತ್ರವನ್ನು ಈ ಕೆಳಗೆ ಪ್ರಕಟಿಸಿರುತ್ತೇವೆ.

೩

ಸದ್ವಿನ್ನುತ ಕರ್ಣಾಟಕ ಸ್ವದೇಶಾಭಿಮಾನಿ ಪತ್ರಾಧಿಪರೇ—ಸುಳ್ಯ ಮಾಗಣೆಯ ನಿವಾಸಿಕರ ನಮಸ್ಕಾರ. ತಮ್ಮ ಪತ್ರಿಕೆಯಲ್ಲಿ, ಸುಳ್ಯ ಆಸ್ಪತ್ರೆಗೆ ಒಂದು ಕಂಪೌಂಡರರ ಇಸಂ ಮೊಕ್ರೂರು ಮಾಡದೆ ಇರುವ ಸಮ್ಮಂಧ ನಮಗೆ ಬಂದಿರುವ ಕಷ್ಟಗಳನ್ನು ಎಲ್ಲವರ ಜಾಹೀರಾತಿಗೆ ತರುವ ಕುತೂಹಲವಿರುವದರಿಂದ ಕೊಂಚ ಸ್ಥಳ ದಯಪಾಲಿಸಬೇಕಾಗಿ ಪ್ರಾರ್ಥಿಸುವೆವು.

ನಮ್ಮ ಈ ವೈದ್ಯಭವನವು ಕೆಲವು ಕಾಲಗಳಿಂದ ಏರ್ಪಟ್ಟಿದ್ದರೂ ರೋಗಿಗಳಿಗೆ ತಕ್ಕ ಔಷಧಿ ದೊರೆಯದೆ ಇದ್ದದ್ದರಿಂದ ಜನೋಪಕಾರಕ್ಕೆ ಬೀಳಲಿಲ್ಲ. ಈಗ ಶುಮಾರು ೩ ತಿಂಗಳಿಂದ ಈಚೆಗೆ ವರ್ಗವಾಗಿ ಬಂದಿರುವ ಸಬ್ ಅಸಿಸ್ಟಾಂಟ್ ಸರ್ಜನರಾದ ಮ. ರಾ. ರಾ. ಎಮ್. ಸುಬ್ರಾಯರವರು ಈ ಸುಳ್ಯ ಆಸ್ಪತ್ರೆಗೆ ಬಂದ ನಂತರ ರೋಗಿಗಳಿಗೆ ತಕ್ಕ ಔಷಧಿ ದೊರಿತು ಗುಣ ಹೊಂದುವ ಕಾರಣ ಆಸ್ಪತ್ರೆ ಔಷಧಿಯಲ್ಲಿ ಹೆಚ್ಚಿನ ವಿಶ್ವಾಸ ಇಟ್ಟು ಶುಮಾರು ೧೮ ಮೈಲುಗಳಿಂದ ದಿವಸಕ್ಕೆ ನೂರಾರು ಜನರಂತೆ ಬಂದು ತಮ್ಮ ರೋಗಗಳ ಬಗ್ಯೆ ಚಿಕಿತ್ಸೆ ಹೊಂದುತ್ತಾರೆ.

ಹೀಗಿರುತ್ತ ಸದರಿ ವೈದ್ಯಉದ್ಯೋಗಸ್ತರಿಗೆ ರೋಗಿಗಳನ್ನು ಪರೀಕ್ಷಿಸಲಿಕ್ಕೂ ಔಷಧಿಗಳನ್ನು ಮಿಶ್ರಮಾಡಿಕೊಡಲಿಕ್ಕೂ ಸಮಯ ಸಾಲದೆ ಇರುವದರಿಂದ ಔಷಧಿ ಬಗ್ಯೆ ಬಡುವ ನೂರಾರು ರೋಗಿಗಳು ತಕ್ಕ ಸಮಯಗಳಲ್ಲಿ ತಮಗೆ ಔಷಧಿ ದೊರೆಯದೆ ಬೆಳಿಗ್ಗಿನಿಂದ ಸಾಯಂಕಾಲದ ವರೇಗೆ ಕಾದು ಇದ್ದು ನಂತರ ದೂರದಲ್ಲಿರುವ ತಮ ತಮ್ಮ ಮನೆಗಳಿಗೆ ಹೋಗಿ ತಲ್ಪುವರೆ ಸಮಯ ಸಾಲದೆ ಬಹಳ ತರದ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ.

ಹೀಗಿರುವದರಿಂದ ರೋಗಿಗಳನ್ನು ತಕ್ಕ ರೀತಿಯಿಂದ ಡಕ್ಟ್ರರು ಚಿಕಿತ್ಸೆ ಹೊಂದಿಸುವರಾದರೂ ರೋಗಿಗಳಾದ ನಮ್ಮ ದುರ್ದಶೆಯಿಂದ ಕಂಪೌಂಡರರಿಲ್ಲದೆ ಪೂರ್ಣ ಪ್ರಯೋಜನ ಹೊಂದಲಿಕ್ಕಾಗದೆ ಬಹಳ ಕಷ್ಟಗಳಿಗೆ ಗುರಿಯಾಗುತ್ತೇವೆ. ಆದಕಾರಣ ಜಾಹೀರುಮಾಡಿಕೊಳ್ಳುವದೇನಂದರೆ:—

ಈ ಸುಳ್ಯ ವೈದ್ಯಶಾಲೆಯಲ್ಲಿ ಹೆಚ್ಚಿನ ಕಷ್ಟಗಳನ್ನು ಅನುಭವಿಸುವ ನಮ್ಮ ಮೇಲಿನ ಹಾಲು ಹವಾಲೆಗಳನ್ನು ದಯಾಳುಗಳಾಗಿರುವ ಸರಕಾರದವರು ತಿಳಕೊಂಡು ಒಂದು ಕಂಪೌಂಡರರ ಇಸಂನ್ನು ಮೊಕ್ರೂರು ಮಾಡಿಸುವಂತೆ ಹುಕುಂ ದಯಪಾಲಿಸಬೇಕಾಗಿ ಪ್ರಾರ್ಥಿಸುತ್ತೇವೆ.

ವಿದೇಶ ವೃತ್ತಾಂತ.

ಜೋರ್ಜ ಮಹಾರಾಜರವರ ಪಟ್ಟಾಭಿಷೇಕ ದರ್ಬಾರಿಗೆ ಹೋಗ ಮನಸ್ಸುಳ್ಳ ಶ್ರೀಮಂತ ಶ್ರೀಮಂತೆಯರು ಬರುವ ಜನವರಿ ೧ನೇ ತಾರೀಕಿನೊಳಗೆ ಬರಕೊಂಡ ಪಕ್ಷಕ್ಕೆ ದರ್ಬಾರಿಗೆ ಹೋಗ ಅರಸರ ಅಪ್ಪಣೆ ಸಿಕ್ಕುವುದು ಎಂಬದಾಗಿ ಲಂಡನ್ ಗಜೇಟಿನಲ್ಲಿ ಪ್ರಕಟಿಸಿರುವರು.

ಡಿಲ್ಲಿ ದರ್ಬಾರಿಗೆ ಮಹಾರಾಜರು ತಾವೇ ಖುದ್ದ ಹಾಜರಿರುವರೆಂಬದಾಗಿ ಹಲವು ವರ್ತಮಾನ ಪತ್ರಿಕೆಗಳು ಹೇಳುವವು. ಹೀಗಾದ ಪಕ್ಷಕ್ಕೆ ನಮ್ಮ ಭಾರತೀಯರ ಸಂತೋಷಕ್ಕೆ ಎಣೆ ಇರದು.

ಜೋರ್ಜ ಮಹಾರಾಜರವರು ನಮ್ಮ ಹಿಂದೂಸ್ಥಾನಕ್ಕೆ ಹೊಸತಾಗಿ ವೈಸರಾಯರಾಗಿ ನೇಮಿಸಲ್ಪಟ್ಟ ಹಾರ್ಡಿಂಜ ಧೊರೆಗಳವರಿಗೆ "ನೀವು ಈ ಹಿಂದೂಸ್ಥಾನವನ್ನು ವಿಶೇಷವಾದ ಈ ಸಂದರ್ಭದಲ್ಲಿ ಆಳಲು ಹೋದದ್ದಕ್ಕೆ ಮಹಾ ಸಂತೋಷ ಪಡುತ್ತೇನೆ" ಎಂಬ ಅರ್ಥಗರ್ಭಿತವಾದ ಒಂದು ವಂದನಾ ಪತ್ರವನ್ನು ತಂತೀ ಮೂಲಕ ಕಳುಹಿಸಿರುವರು.

ಆಫ್ರಿಕದ ಟ್ರಾನ್ಸವಾಲಿನಲ್ಲಿರುವ ಭಾರತೀಯರು ಕಷ್ಟವು ಯಥಾ ಸ್ಥಿತಿಯಲ್ಲಿರುವದೆಂತಲೂ ಗಡಿಪಾರು ಮಾಡಲ್ಪಟ್ಟ ಭಾರತೀಯರು ಮಿತಿ ಇಲ್ಲದ ಖರ್ಚು ಮಾಡಿ ಪುನಃ ಬಂದು ಇಳಿದ ಕೂಡಲೇ ಕೈದು ಮಾಡಲ್ಪಟ್ಟಿರುವರೆಂತಲೂ ಇದಕ್ಕೆ ತಡೆಕಟ್ಟುವ ಅವರ ಹೆಂಡರುಗಳನ್ನು ಪರದೇಶದಿಂದ ಬಂದು ವಸ್ತಿಮಾಡಿದವರು ಎಂಬ ತಕ್ಸೀರಿನಿಂದ ಸರಕಾರದವರು ವ್ಯವಹರಣೆಗೆ ಗುರಿ ಮಾಡುತ್ತಿರುವುದರಿಂದಲೂ ಅವರು ಬಹಳ ಕಷ್ಟ ಸ್ಥಿತಿಯಲ್ಲಿದ್ದು ಯಾವ ನಸ್ಥರು ಕೂಡ ಕೆಲಸದಿಂದ ಬರತರಫು ಮಾಡಲ್ಪಟ್ಟು ಕುಟುಂಬ ಸಂರಕ್ಷಣೆ ಬಗ್ಯೆ ಚಿಕ್ಕಾಸಾದರೂ ಇಲ್ಲದವರಾಗಿರುವದರಿಂದ ಭಾರತೀಯರಾದ ನಾವು ಅವರ ದುಃಖದಲ್ಲಿ ಪಾಲುಗಾರರಾಗಿ ಅವರ ಸಂರಕ್ಷಣಾ ಬಗ್ಯೆ ಹಣ

ಸಂಗ್ರಹ ಮಾಡಿ ಪ್ರತಿ ಒಬ್ಬನು ತನ್ನಿಂದಾಷ್ಟು ಸಹಾಯ ಮಾಡಬೇಕೆಂದೂ ದಕ್ಷಿಣಆಫ್ರಿಕ ಭಾರತೀಯ ಸಹಾಯಕ ಮಂಡಳಿಯ ಜ್ಯೊಂಟ್ ಸೆಕ್ರಿಟರಿಗಳಾದ ಜಿ. ಎ. ನಾಟೇಸನ್ ಎಂಬವರು ವಿಜ್ಞಾಪಿಸಿಕೊಂಡಿರುತ್ತಾರೆ.

ಜಾಪಾನ್ ರಾಜ್ಯದವರು ಎರಡು ಮಿಲಿಯದ ಐನೂರು ಪೌಂಡು ಖರ್ಚು ತಗಲುವ ೨೭,೦೦೦ ಟನ್ ಭಾರವನ್ನು ಹೊರಬಹುದಾದಂಥಾ ಡ್ರೆಡ್‌ನೋಟ್ ಎಂಬ ಮಹಾ ಯುದ್ಧ ನಾವೆಯನ್ನು ಇಂಗ್ಲಾಂಡಿನ ಕಂಪೆನಿಯೊಂದಕ್ಕೆ ಕಂಟ್ರಾಕ್ಟಿಗೆ ಕೊಟ್ಟು ಕಟ್ಟಿಸುತ್ತಿರುವರು.

ಹಿಂದೂಸ್ಥಾನದ ಸೆಕ್ರಿಟರಿಗಳಾಗಿ ಹೊಸತಾಗಿ ನೇಮಿಸಲ್ಪಟ್ಟಂಥಾ ಕ್ರ್ಯೂ ಪ್ರಭುಗಳವರೂ ಹೊಸ ವೈಸರಾಯರಾಗಿರುವ ಹಾರ್ಡಿಂಜ್ ಪ್ರಭುಗಳವರೂ ಸಹಪಾಠಿಗಳಾಗಿರುವರಲ್ಲದೆ ಆ ಕಾಲದಂದಿನಿಂದ ಉತ್ತಮ ಸ್ನೇಹಿತರೂ ಆಗಿರುವರು. ಉಭಯತರೂ ಒಂದೇ ಕಾಲದಲ್ಲಿ ಒಂದೇ ಸ್ಥಳಕ್ಕೆ ರಾಜ ಪ್ರತಿನಿಧಿಗಳಾಗಿ ಆರಿಸಲ್ಪಟ್ಟದ್ದು ಅವರ ಬಾಲ್ಯದ ಸ್ನೇಹವು ಇನ್ನಷ್ಟು ಹೆಚ್ಚುವದಕ್ಕೆ ಕಾರಣವಾಯಿತಲ್ಲದೆ ಪ್ರಜಾ ಪಾಲನೆಯನ್ನು ಕೂಡ ಉತ್ತಮ ರೀತಿಯಲ್ಲಿ ಐಕ್ಯದಿಂದ ನಡಿಸುವರೆ ಮಾರ್ಗವಾಯಿತೆಂದು ಹೇಳಬೇಕು.

ಬ್ಯಾರಿಷ್ಟರ್ ಪರೀಕ್ಷೆಯಲ್ಲಿ ಬಾಬು ಕೃಷ್ಣ ಘೋಷ್ ಎಂಬವರು ಪ್ರಥಮ ಸ್ಥಾನವನ್ನು ಪಡೆದದ್ದರಿಂದ ಅವರಿಗೆ ೫೦ ಪೌಂಡು ಇನಾಂ ದೊರೆಯಿತು.

ಬ್ರಿಟಿಷ್ ಸಾಮ್ರಾಜ್ಯಕ್ಕೆ ಈಗ ೭೦೦,೦೦೦,೦೦೦ ಪೌಂಡು ಸಾಲವಿರುವದು. ಗತ ವರ್ಷಗಳಲ್ಲಿ ಉಂಟಾದ ಮಹಾ ಯುದ್ಧಗಳೇ ಈ ಸಾಲಕ್ಕೆ ಕಾರಣವಾಗಿವೆ.

ಪೋರ್ಚುಗಲ್ ರಾಜರವರ ಮನೆತನದ ಸಾಲವನ್ನು ತೀರಿಸಿ ವರ್ಷಾವಧಿ ಒಂದಕ್ಕೆ ಮ್ಯಾನುವೆಲ್ ರಾಜರವರಿಗೆ ೨೦,೦೦೦ ಪೌಂಡೂ, ರಾಣಿಮರಿಯಪಿಯರವರಿಗೆ ೧೨,೦೦೦ ಪೌಂಡೂ ಕೊಡಲು ಹೊಸ ಗವರ್ನಮೆಂಟಿನವರು ಒಪ್ಪಿಕೊಂಡಿರುವರು.

ಲೋಕ ಪ್ರಖ್ಯಾತಪಟ್ಟ ಕೌಂಟ್‌ಲಿಯೊ ಟೋಲ್‌ಸ್ಟೊಯಿ ಎಂಬ ಮಹನೀಯರು ತಾರೀಕು೨೦ರಲ್ಲು ಪರವನ್ನೈದಿದರು. ಇವರು ತನ್ನ ಕಡೇ ಗಳಿಗೆಯಲ್ಲಿ ಸುತ್ತಮುತ್ತ ನಿಂತಿದ್ದ ಬಂಧು ಬಳಗದವರಿಗೆ ಲೋಕದಲ್ಲಿ ಸಾವಿರಾರು ಮಿಲಿಯ ಜನರು ತನ್ನ ಹಾಗೆಯೇ ಮರಣದ ಹಾಸಿಗೆಯಲ್ಲಿರುವದರಿಂದ ಸುತ್ತಲೂ ನಿಂತು ತನಗಾಗಿ ಗೋಳಾಡುವದು ಅವಶ್ಯವಿಲ್ಲವೆಂದು ಹೇಳಿದರು. ಇವರ ಮರಣದಿಂದ ಲೋಕದ ಜನಾಂಗಗಳೆಲ್ಲಾ ಶೋಕ ಪಡುತ್ತಿರುವವು.

ಉತ್ತರ ಹಿಂದೂಸ್ಥಾನ.

ಹಿಂದೂಸ್ಥಾನದ ಹೊಸ ವೈಸರಾಯರಾಗಿರುವ ಹಾರ್ಡಿಂಜ್ ಪ್ರಭುಗಳವರು ತನ್ನ ಪರಿವಾರ ಸಮೇತ ತಾರೀಕು ೧೮ರಲ್ಲು ಮುಂಬಯಿ ಬಂದರದಲ್ಲಿ ಹಡಗದಿಂದಿಳಿದರು. ಬಹುಮಾನಾರ್ಥವಾಗಿ ೩೧ ತೋಪುಗಳು ಹಾರಿಸಲಾದವಲ್ಲದೆ ಮುಂಬಯಿ ಮುನಿಸಿಪಾಲಿಟಿಯವರು ಪ್ರಜೆಗಳಿಗೆ ಒಂದು ಮಾನ ಪತ್ರವನ್ನು ಅರ್ಪಿಸಿದರು. ಇದಕ್ಕೆ ಉತ್ತರವಾಗಿ ಪ್ರಭುಗಳು ಉಪಕಾರ ಸ್ಮರಣೆ ಹೇಳಿ ಹಿಂದೂಸ್ಥಾನದಲ್ಲಿ ಕಾರುಬಾರು ನಡಿಸಿದ ತನ್ನ ಅಜ್ಜಯ್ಯನವರ ವಿಷಯ ಪ್ರಸ್ಥಾಪಿಸಿ ಅವರ ಕಾಲದಲ್ಲಿ ಭಾರತೀಯನೊಬ್ಬನಿಗೆ ಡಿಪ್ಯುಟಿ ಮೆಜಿಸ್ಟ್ರೇಟ್ ಹುದ್ದೆ ಮಾತ್ರವೇ ಸಿಕ್ಕಿದ ಪಕ್ಷಕ್ಕೆ ಅದಕ್ಕಿಂತ ದೊಡ್ಡ ರಿಯಾಯತಿಯು ಸರಕಾರದಿಂದ ತಮಗೆ ಸಿಕ್ಕಲಿಕ್ಕಿಲ್ಲ ಎಂದು ಭಾರತೀಯರು ಹಿಗ್ಗಿಕೊಳ್ಳುವ ಕಾಲವಾಗಿತ್ತೆಂತಲೂ ಈಗಿನ ಕಾಲವು ಬಹಳವಾಗಿ ಮಾರ್ಪಟ್ಟಿರುವದೆಂದೂ ಸೂಚಿಸಿದರು. ಹಿಂದೂಸ್ಥಾನವನ್ನು ಬಿಟ್ಟು ತೆರಳಲಿಕ್ಕಿರುವ ಮಿಂಟೋ ಪ್ರಭುಗಳ ಆಡಳಿತೆಯ ಸೂತ್ರಗಳಿಗನುಗುಣವಾಗಿಯೇ ನಡಿಯುವೆನೆಂದು ಹೇಳಿದರು.

ಅದಲ್ಲದೆ ನೂರ ಎರಡು ವರುಷಗಳ ಹಿಂದೆ ಸೀಲೋನಿನ ಕರಾವಳಿಯಲ್ಲಿ ಪ್ರೆಂಚರಿಗೂ ಇಂಗ್ಲೀಷರಿಗೂ ನಡದ ಮಹಾ ಯುದ್ಧದಲ್ಲಿ ಶೂರತನದಿಂದ ೩ ದಿವಸಗಳ ವರೆಗೆ ಕಾದಾಡಿ ಮಡಿದು ಹೋದ ತನ್ನ ಚಿಕ್ಕಪ್ಪ ಕೆಪ್ಟನ್ ಜೋರ್ಜ ಹಾರ್ಡಿಂಗ್ ಎಂಬವರ ಸ್ಮರಣಾರ್ಥಕ ಲಿಪಿಯು ಈ ಮುಂಬಯಿ ಪ್ರಧಾನ ದೇವ ಮಂದಿರದಲ್ಲಿ ಇರುವದರಿಂದ ಈ ಪಟ್ಟಣಕ್ಕೂ ತನಗೂ ಪೂರ್ವಕಾಲದಿಂದಲೇ ಸಂಬಂಧವಿದೆ ಎಂದು ಅಪ್ಪಣೆಕೊಟ್ಟರು.

ಬಳಿಕ ನಮ್ಮ ಜೋರ್ಜ್ ಚಕ್ರವರ್ತಿಯವರು ಬರುವ ವರ್ಷ ಜೂನ್ ತಿಂಗಳ ಕಿರೀಟಧಾರಣ ಮಹೋತ್ಸವನ್ನು ತೀರಿಸಿ ೧೯೧೨ನೇ ಇಸವಿಯ ಡಿಲ್ಲಿ ಕಿರೀಟ ಧಾರಣಾ ಮಹೋತ್ಸವಕ್ಕೆ ಪರಿವಾರ ಸಮೇತ ಚಿತ್ತೈಸುವರೆಂಬ ತಂತೀ ವಾರ್ತೆಯು ತಾನು ಬಂದಿಳಿದ ಕ್ಷಣದಲ್ಲಿಯೇ ಕೇಳಿದೆನೆಂದೂ ಈ ವಿಷಯವನ್ನು ಸರಕಾರದ ಕಡೆಯಿಂದ ದೃಢಪಡಿಸಲು ಯಾವ ಆಧಾರವೂ ತತ್ಕಾಲದಲ್ಲಿ ಇಲ್ಲವಾದರೂ ಭಾರತೀಯರಾದ ನೀವೂ ತಾನೂ ರಾಜಾಗಮನವು ನೆರವೇರುವಂತೆ ಕೋರಿ ಇಷ್ಟರ ತನಕ ಯಾವ ಮಹಾರಾಜರಿಗಾದರೂ ಸಲ್ಲದ ಮರ್ಯಾದೆಯು ಈ ನಮ್ಮ ರಾಜರಿಗೆ ನಮ್ಮಿಂದ ಸಲ್ಲುವ ಹಾಗೆ ಆಗುವದು ಎಂಬದಾಗಿ ನಂಬುವಾ ಎಂದು ಹೇಳಿ ತನ್ನ ಮತ್ತು ಪತ್ನಿಯ ಕಡೆಯಿಂದ ಮುನಿಸಿಪಾಲಿಟಿಯವರಿಗೆ ವಂದನೋಕ್ತಿಯನ್ನು ಹೇಳಿದರು.

ಅದೇ ದಿನ ಹಿಂದೂಸ್ಥಾನದ ಮುಸುಲ್ಮಾನ ಮಂಡಳಿಯೂ ದೇಶೀಯ ವ್ಯಾಪಾರ ಸಭೆಯೂ ಪ್ರಭುಗಳವರಿಗೆ ಮಾನಪತ್ರಗಳನ್ನು ಅರ್ಪಿಸಿದರು. ಎಲ್ಲರಿಗೂ ಸಮರ್ಪಕವಾದ ಉತ್ತರವನ್ನು ಹೇಳಿ ತಾರೀಕು ೧೯ರಲ್ಲು ಆಗ್ಗಾಡಿ ಹತ್ತಿ ಕಲ್ಕತ್ತೆಗೆ ತೆರಳಿದರು.

ಭರತಂಖಡಕ್ಕೆ ಪಾದವಿಟ್ಟ ಕೂಡಲೇ ಮಿಂಟೋ ಪ್ರಭುಗಳವರ ರಾಜ್ಯ ಕಾರ್ಯನಿರ್ವಾಹದ ರೀತಿಯನ್ನೇ ಅನುಸರಿಸುವೆನೆಂದು ಅಪ್ಪಣೆ ಕೊಡಿಸಿದ ಮಾತು ಭಾರತೀಯರೆಲ್ಲರಿಗೆ ಮಹಾ ಸಂತೋಷವೇ ಸೈ.

ಮಾರ್ಸೆಲಿಸ್ ಬಂದರದಿಂದ ಹೊರಟ ಬಹುಮಾನಪಟ್ಟ ಆಗಖಾನರವರು ದಶಂಬರ ಅಂತ್ಯದೊಳಗೆ ರಂಗೂನನ್ನು ಸಂದರ್ಶಿಸುವರಂತೆ.

ತಾರೀಕು ೧೮ಲ್ಲು ಕಲ್ಕತ್ತಾ ಕ್ಲಬ್ಬಿನವರು ಹಿಂದೂಸ್ಥಾನವನ್ನು ಅಗಲಲಿಕ್ಕಿರುವ ಮಿಂಟೋ ಪ್ರಭುಗಳವರನ್ನೂ ಅವರ ಪತ್ನಿಯವರನ್ನೂ ಔತಣಕ್ಕೋಸ್ಕರ ಆಮಂತ್ರಿಸಿದ್ದರು. ಆ ಸಂದರ್ಭದಲ್ಲಿ ವೈಸರಾಯ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿದ್ದ ಬಹುಮಾನಪಟ್ಟ ಎಸ್. ಪಿ. ಸಿನ್ಹರವರು ಪ್ರಭುಗಳಿಗೆ ಯುಕ್ತ ಭಾಷಣದಲ್ಲಿ ವಂದನೋಕ್ತಿಗಳನ್ನು ಸೂಚಿಸುವವರಾದರು. ಕಲ್ಕತ್ತ ಕ್ಲಬ್ಬಿನಲ್ಲಿ ಭಾರತೀಯರಲ್ಲಿ ಈ ಮರ್ಯಾದೆ ದೊರೆತವರಲ್ಲಿ ಇವರೇ ಮೊದಲನೇಯವರು.

ಬಹುಮಾನಪಟ್ಟ ಸಿನ್ಹರವರು ಪ್ರಥಮತಾ ತನ್ನ ಸ್ವವಿಷಯವನ್ನು ಕುರಿತು ಮಾತಾಡಿ—ತಾನು ಕಾರ್ಯನಿರ್ವಾಹಕ ಸಭೆಯ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಕಾರಣಗಳನ್ನು ಜನರು ನಾನಾವಿಧದಲ್ಲಿ ಟೀಕಿಸಿರುವರೆಂತ ಹೇಳಿದರು. ಆಂಗ್ಲೇಯರೇ ಹೆಚ್ಚಾಗಿರುವ ಕೌನ್ಸಿಲಿನಲ್ಲಿ ಕೌನ್ಸಿಲಿನ ಅಂತರ್ಭಾವವು ತನಗೆ ತೋರ್ಪಡಿಸದಿದ್ದದ್ದೇ ಈ ರಾಜಿನಾಮೆಯ ಕಾರಣವೆಂತ ಕೆಲವರು ಭಾವಿಸಿರುವರು. ಇನ್ನು ಕೆಲವರು ಕೌನ್ಸಿಲಿನ ಮೆಂಬರನಾಗಿಯೇ ಭಾರತೀಯನಿರುವದು ಯುಕ್ತವಲ್ಲವೆಂತ ತನ್ನವರೇ ತನ್ನನ್ನು ಪ್ರೇರೇಪಿಸಿದ್ದರಿಂದ ತಾನು ರಾಜಿನಾಮೆ ಕೊಟ್ಟೆನೆಂದು ಊಹಿಸಿದರು. ಆದರೆ ಈ ಭಾವನೆಗಳೂ ಊಹನೆಗಳೂ ಎಂದೂ ನಿಜವಾಗಿರುವದಿಲ್ಲ. ತಾನು ಕೆಲಸಕ್ಕೆ ರಾಜಿನಾಮೆ ಕೊಡಬಾರದೆಂಬದಾಗಿ ಭಾರತೀಯರೂ ಜೊತೆಕೆಲಸದವರಾದ ಆಂಗ್ಲೆಯರೂ ಬಹುತರವಾಗಿ ಅಪೇಕ್ಷಿಸಿದ್ದರು. ತನಗೆ ಕಾರ್ಯನಿರ್ವಾಹಕ ಸಭೆಯಲ್ಲಿ ಯಾವ ತರದ ಅಸಂತೃಪ್ತಿಯಾದರೂ ಆಗಲಿಲ್ಲ. ಆದರೆ ತಾನು ತನ್ನ ಸ್ವಕಾರ್ಯದ ನಿಮಿತ್ತವಾಗಿಯೇ ಆ ಮಹಾ ಉದ್ಯೋಗಕ್ಕೆ ರಾಜಿ ಕೊಡಬೇಕಾಯಿತೆಂದರು. ತರುವಾಯ ಮಿಂಟೋ ಪ್ರಭುಗಳವರ ರಾಜಭಾರಕ್ರಮ, ಈ ಕ್ರಮಗಳಿಂದುಂಟಾದ ಫಲಗಳನ್ನು ಕುರಿತು ಮಾತಾಡಿದಲ್ಲದೆ ಪ್ರಭುಗಳವರನ್ನೂ ಅವರ ಪತ್ನಿಯವರನ್ನೂ ಬಹು ವಿಧವಾಗಿ ಕೊಂಡಾಡಿ ತನ್ನ ಭಾಷಣವನ್ನು ಮುಗಿಸಿದರು.

ರಂಗೂನಿನ ಡಾಲ್ ಹೌಸಿ ಪಾರ್ಕಿನಲ್ಲಿ ಭಾರತೀಯನೊಬ್ಬನ ಶಿರವಿಲ್ಲದ ಶವವು ಅಲ್ಲಿಟ್ಟದ್ದ ಬೇಂಚಿಯ ಅಡಿಯೊಂದರಲ್ಲಿ ಬಿದ್ದಿತ್ತು. ಶವದಲ್ಲಿ ಘಾಯಗಳೇನೂ ಕಾಣುವದಿಲ್ಲ. ಶಿರ ವಿಲ್ಲದ್ದರಿಂದ ಈತನ ಗುರುತು ಹಿಡಿಯುವದು ಕಷ್ಟವಾಗಿ ಯಾರಿಂದ ಈ ಕೊಲೆಯು ನಡಿಸಲ್ಪಟ್ಟತ್ತೆಂದೂ ತಿಳಿದು ಬರಲಿಲ್ಲ.

ಕಲಿಕತ್ತೆಯಲ್ಲಿ ನೇಪಾಳದ ರಾಜಕುಮಾರಿ ಬೂಬಾನ್ ಎಂಬವರು ತನ್ನ ತಂದೆ ಮತ್ತು ಅತ್ತೆಯ ಸಮೇತ ಮಿಂಟೋ ಪ್ರಭುಗಳವರ ಪುಣ್ಯಸ್ತ್ರೀಯವರಿಗೆ ಬೇಟಿ ಕೊಟ್ಟರಲ್ಲದೆ ಮಿಂಟೋ ಇಂಡಿಯನ್ ನರ್ಸಿಂಗ್ ಎಂಬ ದಾದಿಯರ ಸಂಘಕ್ಕೆ ಹತ್ತು ಸಾವಿರ ರೂಪಾಯಿ ವಂತಿಗೆ ಕೊಟ್ಟರು.

ಬಂಗಾಳದ ಲೆಫ್ಟಿನೆಂಟ್ ಗವರ್ನರರ ಕಾರ್ಯ ನಿರ್ವಾಹಕ ಸಭೆಗೆ ಭಾರತೀಯರಲ್ಲಿ ಹುಗ್ಲಿ ಜಿಲ್ಲೆಯ ಸೆರಂಪೂರಿನ ರಾಯ್ ಬಹದೂರ್ ಕಿಶೋರಿಲಾಲ್ ಗೋಸ್ವಾಮಿ ಎಂಬವರು ನಿಯಮಿಸಲ್ಪಟ್ಟಿರುವರು.

ಕಲ್ಕತ್ತದ ಟೌನ್ ಹೋಲಿನಲ್ಲಿ ಮಿಂಟೋ ಪ್ರಭುಗಳನ್ನು ಸತ್ಕರಿಸುತ್ತಿರುವಾಗ ಅಕ್ರೋಯಿ ಕುಮಾರ್ ಘೋಶ್ ಎಂಬ ೧೮ ವರುಷದ ಬಂಗಾಳಿ ಯುವಕನೊಬ್ಬನನ್ನು ಗುಮಾನಿನ ಮೇಲೆ ಗುಪ್ತ ಪೋಲೀಸ್ ಇನ್ಸ್‌ಪೆಕ್ಟರರು ಹಿಡಿದು, II ಡಿಸ್ತ್ರಿಕ್ಟ್ ಮೆಜಿಸ್ಟ್ರೇಟರರ ಮುಂದೆ ತಂದಿದ್ದರು. ಈ ಯುವಕನು ಆ ಸ್ಥಳದಲ್ಲಿ ಸಂಶಯಕರವಾಗಿ ಬಂದುನಿಂತ ಉದ್ದಿಶ್ಯವನ್ನು ಪರಿಪೂರ್ಣವಾಗಿ ವ್ಯಕ್ತಪಡಿಸದೆ ಹೋದದರಿಂದ ಮೆಜಿಸ್ಟ್ರೇಟರವರಲ್ಲಿ ಸದರಿ ಯುವಕನಿಗೆ ೧೦ ರೂಪಾಯಿ ಜುಲುಮಾನೆಯೂ ಒಂದು ವಾರದ ಸಜೆಯೂ ವಿಧಿಸಿರುವರು.

ತಾರೀಕು ೧೨ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲಿ ೭೩೦೫ ಮಂದಿಗೆ ಪ್ಲೇಗ ಬೇನೆಯು ಸೋಂಕಿತು. ಅದರಲ್ಲಿ ೫೩೫೫ ಜನರು ಪರವನ್ನೈದಿದರು. ಇದರಲ್ಲಿ ಮುಂಬಾಯಿ ಸಂಸ್ಥಾನದಲ್ಲಿ ೧,೦೨೪ ಮದ್ರಾಸು ಸಂಸ್ಥಾನದಲ್ಲಿ ೨೮೨ ಬಂಗಾಳದಲ್ಲಿ ೨೦೦ ಆಶ್ರಿತ ಸಂಸ್ಥಾನಗಳಲ್ಲಿ ೧೦೨೨ ಪಂಜಾಬಿನಲ್ಲಿ ೮೫ ಬರ್ಮದಲ್ಲಿ ೩೩ ಮಧ್ಯ ಹಿಂದೂಸ್ಥಾನದಲ್ಲಿ ೧೫೮ ಮರಣಗಳಾದವು ಎಂಬದಾಗಿಯೂ ಬಲುಚಿಸ್ಥಾನದಲ್ಲಿ ಪ್ಲೇಗ ಬೇನೆಯ ಮರಣವೇ ಇಲ್ಲ ಎಂಬದಾಗಿಯೂ ತಿಳಿದು ಬರುತ್ತದೆ.

ಮೊರಾಟ್ ಜಿಲ್ಲೆಯ ಗುರುಮುಕ್ತೇಶ್ವರ ಎಂಬ ಸ್ಥಳದಲ್ಲಿ ಮಹಾ ಕಾರ್ತಿಕ ಏಕಾದಶಿ ದಿನದ ರಾತ್ರಿಯಲ್ಲಿ ಗಂಗಾನದಿಯು ಥಕ್ಕನೇ ಉಕ್ಕಿ ಬಂದು ಬಹು ಮಂದಿ ಯಾತ್ರಿಕರನ್ನು ಅವರ ಮಣ್ಣಿನಮನೆ, ಗುಡಿಸಲುಗಳ ಸಮೇತ ತನ್ನ ಪಾಲಾಗಿ ಮಾಡಿತು.

ಹಿಂದೂ ಯುವಕರ ಕೈಗಾರಿಕೆ ವಿದ್ಯಾಭಿವೃದ್ಧಿಯನ್ನು ಮಾಡುವ ಬಗ್ಗೆ ಪಂಜಾಬಿನಲ್ಲಿ ಒಂದು ಸಂಘವು ಏರ್ಪಟ್ಟಿರುವುದು. ಇವರು ಯೋಗ್ಯತೆಯುಳ್ಳ ವಿದ್ಯಾರ್ಥಿಗಳನ್ನು ಕಲಾ ವಿದ್ಯೆಯನ್ನು ಪಡೆಯುವ ಬಗ್ಯೆ ಇಂಗ್ಲಾಂಡಿಗೂ ಅಮೇರಿಖ, ಜಾಪಾನ್ ಮೊದಲಾದ ವಿದೇಶಗಳಿಗೂ ಕಳುಹಿಸಿ ಕೊಡುವರು. ಯೂರೋಪು ಅಮೇರಿಕಕ್ಕೆ ಹೋಗುವವರಿಗೆ ತಿಂಗಳು ಒಂದಕ್ಕೆ ೧೨೦ ರೂಪಾಯಿ ಪ್ರಕಾರವೂ ಜಾಪಾನ್ ಮೊದಲಾದ ದೇಶಕ್ಕೆ ಹೋಗುವವರಿಗೆ ತಿಂಗಳು ಒಂದಕ್ಕೆ ೬೦ ರೂಪಾಯಿಗಳನ್ನು ದಾರಿ ಖರ್ಚು ಸಮೇತ ವೇತನ ಕೊಡುವರೆಯೂ ನಿಷ್ಕರ್ಶ ಮಾಡಿರುವರು. ಈ ಸಂಘದ ಮೆಂಬರರಾಗ ಇಚ್ಛೈಸುವವರು ವರ್ಷ ಒಂದಕ್ಕೆ ಬರೇ ಒಂದು ರೂಪಾಯಿ ಮಾತ್ರವೇ ವಂತಿಗೆ ಕೊಟ್ಟು ಸಂಘದ ಮೆಂಬರರಾಗಬಹುದೆಂಬದಾಗಿ ಜನರಲ್ ಸೆಕ್ರಿಟರಿಗಳಾಗಿರುವ ಬ್ಯಾರಿಷ್ಟರ್ ಡೂನಿಚಂದಾ ಎಂಬವರು ಪ್ರಕಟಿಸಿರುವರು.

ಮೊದಲೇ ಪ್ರಕಟಿಸಿದ್ದ ಮೇರೆಗೆ ಹಾರ್ಡಿಂಜ್ ಪ್ರಭುಗಳವರು ತಾರೀಕು ೨೧ಕ್ಕೆ ಹೌರ ಸ್ಟೇಶನಿಗೆ ಮುಟ್ಟಿ ಮಿಂಟೋ ಪ್ರಭುಗಳು ಮುಂತಾದ ಮುಖ್ಯಾಧಿಕಾರಿಗಳೂ ಊರ ಪ್ರಮುಖರೂ ಸತ್ಕಾರ ಪೂರ್ವಕವಾಗಿ ಇವರನ್ನು ಇದಿರುಗೊಂಡರು. ತಾರೀಕು ೨೩ರಲ್ಲು ತನ್ನ ಕಾರ್ಯನಿರ್ವಾಹಕ ಸಭೆಯ ಮೆಂಬರರು ಮೊದಲಾದ ಅಧಿಕಾರಿಗಳ ಸಮೇತ ಗವರ್ನಮೆಂಟ್ ಹೌಸಿಗೆ ಚಿತ್ತೈಸಿ, ಹೋಮ್ ಸೆಕ್ರಿಟಿರಿಯವರು ಪ್ರಭುಗಳ ನೇಮಕದ ರಾಜಶಾಸನವನ್ನು ಓದಿದ ನಂತರ ಕ್ರಮಪ್ರಕಾರವಾಗಿ ಸಿಂಹಾಸನಾರೂಢರಾದರು. ಅದೇ ದಿನ ಗವರ್ನಮೆಂಟ್ ಹೌಸಿನಲ್ಲಿ ಪ್ರಭುಗಳವರಿಗೂ ಪರಿವಾರದವರಿಗೂ ಭಾರಿಔತನ ಇತ್ತು. ಪ್ರಭುಗಳವರು ಸಿಂಹಾಸನವನ್ನೇರಿದ ಗೌರವಾರ್ಥವಾಗಿ ಅಂದೇ ಮದ್ರಾಸ್ ಕೋಟೆಯಲ್ಲಿ ೩೧ ಫಿರಂಗಿಗಳು ಹಾರಿಸಲಾಯಿತು.

ತಾರೀಕು ೨೩ರಲ್ಲು ಮಿಂಟೋ ಪ್ರಭುಗಳವರೂ ಅವರ ಪತ್ನಿಯವರೂ ಕಲಿಕತ್ತೆಯಿಂದ ಹೊರಟಿರುವರು.

ಡರಾಂ ಪುರಕ್ಕೆ ೧॥ ಮೈಲು ದೂರದಲ್ಲಿ ಕಳೆದ ಬುಧವಾರ ಘೋರವಾದ ಕೊಲೆಪಾತಕವು ನಡೆಯಿತು. ಒಬ್ಬ ಮುದುಕನೂ, ೨೦ ವರುಷದ ಯೌವನಸ್ಥನೂ ೧೮೨ ರೂಪಾಯಿ ಹಿಡಕೊಂಡು ದನಕರುಗಳನ್ನು ಕೊಂಡುಕೊಳ್ಳುವ ಬಗ್ಯೆ ಅಲ್ಲಿಯ ಸಂತೆಗೆ ಬಂದಿದ್ದರು. ಯಾರೋ ಘಾತಕರು ಇಬ್ಬರನ್ನೂ ಕೊಂದು ಬಿಟ್ಟರು. ಶುಕ್ರವಾರದ ವರೆಗೆ ಯಾರಿಗೂ ಈ ಸಂಗತಿಯು ತಿಳಿದು ಬಾರದಿದ್ದರೂ ಕಡೇಗೆ ಸ್ಥಳೀಕ ಪೋಲೀಸಿನವರಿಗೆ ಗೊತ್ತಾಗಿ ಕೊಲೆಯಾದ ಸ್ಥಳಕ್ಕೆ ಹೋಗಿ ಎರಡು ಹೆಣಗಳನ್ನೂ ಆಸ್ಪತ್ರಿಗೆ ಪರೀಕ್ಷಾರ್ಥವಾಗಿ ತಂದಿರುವರಲ್ಲದೆ ಎರಡು ದಿವಸಗಳ ನಂತರ ಗುಮಾನಿನ ಮೇಲೆ ನಾಲ್ಕು ಜನರನ್ನು ಹಿಡಿದಿರುವರು. ಇವರಲ್ಲಿದ್ದ ಮುಸುಲ್ಮಾನನೊಬ್ಬನು ನಡದ ಸಮಾಚಾರವನ್ನು ಸತ್ಯವಾಗಿ ಹೇಳಿದ್ದರಿಂದ ಮಾಪಿ ಸಾಕ್ಷಿಗಾರನಾಗಿ ಮಾಡಿರುವರು.

ದಕ್ಷಿಣ ಹಿಂದೂಸ್ಥಾನ.

ಮದ್ರಾಸು ಗವರ್ನರ್ ದೊರೆಗಳವರು ಹಾರ್ಡಿಂಜ್ ಪ್ರಭುಗಳವರಿಗೆ ತಾವು ಕ್ಷೇಮಿಗಳಾಗಿ ಹಿಂದೂಸ್ಥಾನಕ್ಕೆ ಬಂದದಕ್ಕೆ ತಮ್ಮ ಹರ್ಷೋಕ್ತಿಗಳನ್ನು ಸ್ವೀಕರಿಸಬೇಕೆಂದೂ, ಪ್ರತಿ ಒಂದು ಕೆಲಸದಲ್ಲಿ ಕಾರ್ಯಸಿದ್ಧಿಯನ್ನು ಹೊಂದಬೇಕೆಂದೂ ಸರಕಾರದ ಕಡೆಯಿಂದಲೂ ಸಂಸ್ಥಾನದ ಜನಸಮುದಾಯ ಪರವಾಗಿಯೂ ಶುಭವಾರ್ತೆ ಕಳುಹಿಸಿಕೊಟ್ಟಿರುವರು. ಇದಕ್ಕೆ ಉತ್ತರವಾಗಿ ಹಾರ್ಡಿಂಜ್ ಪ್ರಭುಗಳವರು ನನ್ನ ಉತ್ತರೋತ್ತರ ಅಭಿವೃದ್ಧಿಯನ್ನೂ ಕ್ಷೇಮವನ್ನೂ ಅಪೇಕ್ಷಿಸಿದ ನಿಮಗೂ ಮದ್ರಾಸ್ ಸಂಸ್ಥಾನದ ಜನಸಮುದಾಯಕ್ಕೂ ನನ್ನ ಮನಃಪೂರ್ವಕವಾದ ಉಪಕಾರಸ್ಮರಣೆ ಎಂಬದಾಗಿ ಮದ್ರಾಸ್‌ಗವರ್ನರರಿಗೆ ತಂತೀ ವಾರ್ತೆ ಬಿಟ್ಟಿರುತ್ತಾರೆ.

ಗತ ವರುಷದಲ್ಲಿ ಮೈಸೂರಲ್ಲಿ ೧೬,೪೦೨ ಜನರಿಗೆ ಮಾತ್ರವೇ ಕೋವಿ ಲೈಸನ್ಸುಗಳು ಕೊಡೋಣಾದವು.

ಮದ್ರಾಸ್ ಗವರ್ನರರಾದ ಸರ್ ಆರ್ಥರ್ ಲೋಲೆಯವರ ಅವಧಿ ತೀರಿದ ನಂತರ ಸರ್ ಲೋರೆನ್ಸ್ ಜೆನ್ಕಿನ್ಸ್ ಎಂಬವರು ಮದ್ರಾಸು ಗವರ್ನರರಾಗಿ ನೇಮಿಸಲ್ಪಡುವರು ಎಂಬ ವಾರ್ತೆಗೆ ಸರಕಾರದ ಕಡೆಯಿಂದ ದೃಢಪಡಿಸಲಿಕ್ಕೆ ಯಾವ ಆಧಾರವೂ ಇಲ್ಲವೆಂಬದಾಗಿ ತಿಳಿದುಬರುತ್ತದೆ.

ಕೊಯಮುತ್ತೂರಿನ ಹಳ್ಳಿ ಟಪ್ಪಾಲ್‌ಪ್ಯಾದೆಯೊಬ್ಬನು ಮನಿಯಾರ್ಡರಿನ ಹಣವನ್ನು ಸ್ವಪ್ರಯೋಗ ಮಾಡಿಬಿಟ್ಟದ್ದರಿಂದ ಸೆಶ್ಯನ್ ಜಡ್ಜರು ಆತನಿಗೆ ಒಂದು ವರುಷ ಕಠಿಣಕಾಮಗಿರಿಯನ್ನೂ ೪೫ ರೂಪಾಯಿ ೪ ಆಣೆ ಜುಲುಮಾನೆಯನ್ನೂ ವಿಧಿಸಿದರು. ಈ ಪ್ಯಾದೆಯು ೨೬ ವರುಷಗಳಿಂದ ಇದೇ ಇಲಾಖೆಯಲ್ಲಿ ಕೆಲಸ ನೋಡಿದವನಾಗಿದ್ದೂ ಗೃಹಕೃತ್ಯದ ರಗಳೆಯಿಂದ ಈ ಅಪರಾಧ ಮಾಡಿದನೆಂದೂ ಅನೇಕಾವೃತ್ತಿ ಈತನು ಅನೇಕರ ಕಾಗದಗಳನ್ನು ಮುಟ್ಟಿಸಲಿಲ್ಲವೆಂದೂ ಈ ಕಾಗದಗಳಲ್ಲಿ ಮೂರು ರಿಜಿಸ್ತ್ರಿ ಕಾಗದಗಳಾಗಿದ್ದವೆಂದೂ ಪ್ಯಾದೆಗೆ ವಾರಕ್ಕೆ ಎರಡಾವೃತ್ತಿ ಸುಮಾರು ೧೨೦ ಮೈಲು ದೂರ ಸಂಚರಿಸುವಷ್ಟು ಸ್ಥಳಗಳು ಇದ್ದದ್ದೇ ಇದಕ್ಕೆ ಕಾರಣವೆಂದೂ ಜಡ್ಜರು ತೀರ್ಪು ಕೊಟ್ಟರು. ನಮ್ಮ ಜಿಲ್ಲೆಯ ಗ್ರಾಮ ಟಪ್ಪಾಲು ಪ್ಯಾದೆಗಳಿಂದ ನಿರಕ್ಷರ ಕುಕ್ಷಿಗಳಾದ ಹಳ್ಳಿ ಜನರಿಗೆ ಇಂಥಾ ಮೋಸಗಳು ಲಭಿಸುವುದಿಲ್ಲ ಎಂದು ಹೇಳಬಹುದೇ?

ಮದ್ರಾಸಿನ ದಕ್ಷಿಣ ಕರಾವಳಿಯಲ್ಲಿ ಬಿರುಗಾಳಿ ಮಳೆ ಉಂಟಾಗುವ ಸಂಭವವಿದೆ ಎಂದೂ ಮದ್ರಾಸಿನಿಂದ ಟುಟಿಕೊರಿನಿನ ವರೆಗೆ ಇರುವ ಎಲ್ಲಾ ಬಂದರುಗಳ ಆಫೀಸರುಗಳಿಗೆ ಈ ಸಂಬಂಧವಾಗಿ ಎಚ್ಚರಿಕೆ ಕೊಡಬೇಕೆಂದೂ ಮದ್ರಾಸಿನ ಪೋರ್ಟು ಆಫೀಸರರಿಗೆ ತಾರೀಕು ೨೧ರಲ್ಲು ಕಲ್ಕತ್ತೆಯಿಂದ ತಂತೀ ವಾರ್ತೆ ಬಂದಿರುವದು.

ಬೆಂಗಳೂರಲ್ಲಿ ತಾರೀಕು ೨೨ರಲ್ಲು ಮೈಸೂರು ಕಾರ್ಯನಿರ್ವಾಹಕ ಸಭೆಯು ಕೂಡಿತು. ಇದರಲ್ಲಿ ಹಲವು ಕಾನೂನುಗಳ ಜಾರಿಯ ವಿಷಯ ಚರ್ಚಿಸಲಾಯಿತು. ಮುಖ್ಯವಾಗಿ ಹಳ್ಳಿ ಜನರಲ್ಲಿ ಸಹಕಾರ ಸಹಯತ್ನಗಳನ್ನು ಪ್ರೋತ್ಸಾಹಿಸುವ "ಟೇಂಕ್ ಪಂಚಾಯತ್ ಬಿಲ್" ಎಂಬದನ್ನು ಮಂಜೂರು ಮಾಡಿರುವರು. ಅದಲ್ಲದೆ ಬೀಡಿ ಮೊದಲಾದ ಮಾದಕ ಪದಾರ್ಥಗಳನ್ನು ಸೇದುವದು ಬಾಲಕರಲ್ಲಿ ಕೂಡಾ ಹೆಚ್ಚು ವೃದ್ಧಿಗೆ ಬಂದು ದೇಶದ ಉನ್ನತಿಯೇ ಹಾಳಾಗುವ ಹಾಗೆ ಇರುವುದರಿಂದ ೧೬ ವರುಷದ ಕೆಳಗಿನ ಬಾಲಕ ಬಾಲಕಿಯರು ಬೀಡಿ ವಗೈರೆ ಸೇದುವದನ್ನು ಪೋಲೀಸಿನವರು ಕಂಡಕೂಡಲೇ ಹಿಡಿದು ಹೆತ್ತವರಿಗೆ ಯಾ ಶಾಲಾ ಗುರುಗಳಿಗೆ ಒಪ್ಪಿಸಬೇಕೆಂದೂ ಇಂಥಾ ಬಾಲಕ ಬಾಲಕಿಯರು ಮೂರು ತಿಂಗಳೊಳಗೆ ಪುನಃ ಈ ದುರಾಭ್ಯಾಸದಲ್ಲಿ ಹಿಡಿಯಲ್ಪಟ್ಟರೆ ಅಂಥವರನ್ನು ಮೇಜಿಸ್ಟ್ರೇಟರ ಬಳಿಗೆ ವೈದು ಒಂದು ರುಪಾಯಿ ಜುರುಮಾನೆ ಇಲ್ಲವೆ ಕೆಲವು ಚಡಿ ಕೊಡಿಸಬೇಕೆಂದೂ ಇರುವ ಕಾನೂನು ಮಸೂದೆಯು ಸ್ವೀಕರಿಸಲ್ಪಟ್ಟಿತಲ್ಲದೆ ಬೀಡಿ, ಚುರುಟು ಸೇದುವದನ್ನು ಕಟ್ಟಾನಿಟ್ಟು ಮಾಡಿಯದೆಂಬ ಸೈನ್ ಬೋರ್ಡುಗಳನ್ನು ತೂಗಾಡಿಸಬೇಕೆಂದೂ ನಿಷ್ಕರ್ಷೆ ಮಾಡಲಾಯಿತು. ಇಂಥಾ ಬೀಲನ್ನು ನಮ್ಮ ಮದ್ರಾಸು ಸಂಸ್ಥಾನದಲ್ಲಿ ಜಾರಿಗೆ ತರುವುದು ಚೆಲೋದಲ್ಲವೇ?

ದಕ್ಷಿಣ ಕನ್ನಡ.

NOTICE.

Wanted for the New English School, Kumta, a B. A. (Bombay or Madras) on Rs. 40 per month & an Undergraduate either F. A., I. E. or P. E. on Rs. 25 per month. Kanarites will be preferred.

Apply sharp with testimonials to

New English School, Kumta. 5th. Nov. 1910. } Superintendent.

ನೋಟೀಸು.

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ:—

ಠಾಕರ ವಲ್ಲಭಜಿ ಶಿವಜಿ ಎಂಡ್ ಕಂಪೆನಿ ಎಂಬ ಹೆಸರಿನಿಂದ ಈ ವರೆಗೆ ಮಂಗಳೂರು ಶಾಹರಿನಲ್ಲಿ ವೈವಾಟನ್ನು ನಡಿಸುವ ಫರ್ಮು ಇದೇ ನವಂಬರ ತಾ. ೨ರಿಂದ ಠಾಕರ ವಲ್ಲಭಜಿ ಶಿವಜಿ ಎಂಬ ಹೆಸರಿನಿಂದ ವೈವಾಟನ್ನು ನಡಿಸುವದು. ಸದರಿ ಫರ್ಮಿನ ದೇಣೆದಾರರು ಸದರಿ ಠಾಕರ ವಲ್ಲಭಜಿ ಶಿವಜಿಯವರ ಮಂಗಳೂರು ಏಜಂಟರಾದ ಲಾಲಜಿ ಕಲ್ಯಾಣ್ಜಿಯವರ ಕೈಯ ಹಣವನ್ನು ಪಾವತಿ ಮಾಡಿದ್ದಲ್ಲಿ ಮುಂಚಿನ ಕಂಪೆನಿಗೆ ಸಂದಾಯ ಮಾಡಿದಂತೆ ಎಣಿಸೋಣಾದೀತು.

Thakar Vallabhji Shivji.

ನೋಟೀಸು.

ಕುಂದಾಪುರ ತಾಲೂಕು ಬೀಜಾಡಿ ಗ್ರಾಮದ ಹೊದ್ರಾಳಿ ಕೃಷ್ಣ ಭಟ್ಟನ ಮಗಳು ಪದ್ಮಾವತಿಯು ತನ್ನ ತಂದೆಗೆ ಬರತಕ್ಕ ಡಿಕ್ರಿ ಸಾಲ ವಸೂಲಿ ಬಗ್ಯೆ ಸರ್ಟಿಫಿಕೇಟು ಅಪೇಕ್ಷಿಸಿ ಕುಂದಾಪುರ ಡಿ. ಮು. ಕೋರ್ಟಿನಲ್ಲಿ ಕೊಟ್ಟ ಒ. ಪಿ. ನಂಬ್ರ 86/1910ನೇ ಅರ್ಜಿ ಬರುವ ದಶಂಬರ ತಾ. 13/10ಕ್ಕೆ ತನ್ಕಿಗೆ ಇಟ್ಟಿದೆ. ಆಕ್ಷೇಪ ಇದ್ದವರು ಜಾಹೀರು ಮಾಡಬಹುದು.

ತಾ. 22--11--10. ಕುಂದಾಪುರ. } **N. Subbannya,** *Pleader.*

ಸ್ವೀಕಾರ. ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀಮಚ್ಛಙ್ಕರ ಭಗವತ್ಪಾದರವರಿಂದ ವಿರಚಿತಮಾದ ವಿವೇಕ ಚೂಡಾಮಣಿ ಎಂಬ ಮೋಕ್ಷಗ್ರಂಥವು—ಮೈಸೂರು ಚೀಫ್ ಕೋರ್ಟಿನಲ್ಲಿರುವ ಟ್ರಾನ್ಸ್‌ಲೇಟರ್ ಕೃಷ್ಣ ಶಾಸ್ತ್ರಿಗಳವರಿಂದ ತಾತ್ಪರ್ಯ ಮತ್ತು ವಿಶೇಷಾರ್ಥಗಳೊಡನೆ ಬರಿಯಲ್ಪಟ್ಟು ಬ್ರ. ಶ್ರೀ. ಶಙ್ಕರ ಶಾಸ್ತ್ರಿಗಳವರಿಂದಲೂ ಶ್ರೀ ಸಹಜಾನನ್ದ ಸ್ವಾಮಿಗಳವರಿಂದಲೂ ಮತ್ತು ಇನ್ನೊಬ್ಬ ಪಂಡಿತರಿಂದಲೂ ಚನ್ನಾಗಿ ಪರಿಷ್ಕರಿಸಲ್ಪಟ್ಟಿದೆ. ಕ್ರಯ ೧೦ ಆಣೆ.

ಮಂಗಳೂರು ಬಲ್ಮಟದಲ್ಲಿರುವ ಮೆ. ಜೋರ್ಜ್ ಹೆರ್ಬರ್ಟರವರು ಕಳುಹಿಸಿರುವ ಕ್ರಿಸ್ತಮಸ್ ಮತ್ತು ಹೊಸ ವರುಷದ ಕಾರ್ಡುಗಳು. ಈ ಕಾರ್ಡುಗಳು ಜರ್ಮನಿಯಲ್ಲಿ ತಯ್ಯಾರಿಸಲ್ಪಟ್ಟು ನೋಡಲಿಕ್ಕೆ ಬಹಳ ರಮಣೀಯವಾದವುಗಳೂ ನವೀನ ಮಾದರಿಯವುಗಳೂ ಆಗಿರುವವು. ದೊಡ್ಡ ಪೋಸ್ಟ್‌ಕಾರ್ಡುಗಳಷ್ಟೆ ಪರಿಮಾಣವುಳ್ಳವುಗಳಾಗಿ ಟಪ್ಪಾಲಿನ ಮೂಲಕ ಕಳುಹಿಸಿಕೊಡುವರೆ ಸಹಾ ಅನುಕೂಲವಾಗಿರುವವು. ಈ ಕಾರ್ಡುಗಳನ್ನು ಬಹಳ ಅಗ್ಗವಾದ ದರಗಳಲ್ಲಿ ಜೋರ್ಜ್ ಹರ್ಬರ್ಟರವರು ವಿಕ್ರಯಿಸುತ್ತಿರುವರು.

ಬಾತ್ಮೀದಾರರಿಗೆ ನೋಟೀಸು. ದೇಶಾಭಿಮಾನಿ R. V. S.-ಬಾತ್ಮಿಗೆ ಪೂರ್ಣ ವಿಳಾಸ ಕೂಡಿರುವ ದಸ್ಕತು ಇಲ್ಲದೆ ಇದ್ದದ್ದರಿಂದ ಪ್ರಕಟಿಸಲಿಲ್ಲ. ಕರೋಪಾಡಿಯಿಂದ ಬಂದಿರುವ ವರ್ತಮಾನ ಸಂಗ್ರಹಕ್ಕೆ ದಸ್ಕತು ಇಲ್ಲದ್ದರಿಂದ ಪ್ರಕಟಿಸಲಿಲ್ಲ. ಅಳಿಯಸಂತಾನದ ಅಳಿಯ—ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆವು.

ಮಂಗಳೂರು ಕಳೆದ ಒಂದು ಸಂಚಿಕೆಯಲ್ಲಿ ಪ್ರಸ್ತಾಪಿಸಿದ ಹಂದೆಯವರ ಮೊಕದಮೆಯು ಇದೆ ಬರುವ 1911ನೇ ಇಸವಿ ಜನವರಿ ತಿಂಗಳಲ್ಲಿ ಇಟ್ಟಿರುವರು. ಇದರಲ್ಲಿ ಮೆಡಿಕಲ್ ಆಫೀಸರರ ೬ ತಿಂಗಳ ಸರ್ಟಿಫಿಕೇಟು ಪಡಕೊಂಡ ಸದರಿ ಹಂದೆಯವರ ವಿಚಾರಣೆಯನ್ನು ಮಾತ್ರ ಬಾಕಿ ಇಟ್ಟು ಬಾಕಿ ಮುದ್ದೈಯಾಲೆರ ವಿಚಾರಣೆಯು ನಡಿಸಲಾಗುವದು.

ಗೋವೆಯಲ್ಲಿ ಸಮಾಧಿ ಹೊಂದಿದ ರೋಮನ್ ಕೆಥೊಲಿಕ್ ಸೈಂಟ್ ಪ್ರೆನ್ಸಿಸ್ ಗ್ಸೆವಿಯರ್ಸ್ ಎಂಬ ಒಬ್ಬ ದೇವಭಕ್ತರ ಶವವನ್ನು ಮೇಲಕ್ಕೆ ತೆಗದು ನೋಡುವ ಸಂಭ್ರಮೋತ್ಸವಕ್ಕೆ ಹೋಗುವ ಯಾತ್ರಸ್ಥರಿಗೆ ಈಹೊತ್ತಿನಿಂದ ಬರುವ ತಿಂಗಳ ತಾ. ೨೮ನೇ ವರೇಗೆ ಮುಂಬಯಿ ಸ್ಟೀಮ್ ನೆವಿಗೇಷನ್ ಕಂಪೆನಿಯವರು ಹೋಗಿ ಬರುವ ಟಿಕೇಟಿನ ದರವನ್ನು ರೂಪಾಯಿ ೫ಕ್ಕೆ ತಗ್ಗಿಸಿರುವರು. ಇದರಲ್ಲಿ ಮರ್ಮಗೋವಾದಿಂದ ಪಂಜಿಂಗೆ ಹೋಗಿ ಬರುವ ಖರ್ಚು ಸಹಾ ಕೂಡಿರುವದು.

ಕಳದ ತಾ. ೧೯ನೇ ಶನಿವಾರ ದಿನ ಇಲ್ಲಿಯ ಗವರ್ನಮೆಂಟ್ ಕೊಲೇಜು, ಕೆನರಾ ಹ್ಯಾಸ್ಕೂಲ್, ಮಿಶನ್ ಹ್ಯಾಸ್ಕೂಲ್ ಈ ಮೂರು ಶಾಲೆಗಳ ವಿದ್ಯಾರ್ಥಿಗಳೊಳಗೆ ನಡದ 'ಸೀನಿಯರ್ ಇಂಟರ್‌ಸ್ಕೂಲ್ ಜಮ್ನಾನ್' ಎಂಬ ಕುಸ್ತ್ಯಾಟದಲ್ಲಿ ಮಿಶ್ಯನ್ ಹ್ಯಾಸ್ಕೂಲಿನ ವಿದ್ಯಾರ್ಥಿಗಳು ಬಹುಮಾನದ ಬೆಳ್ಳಿ ಪಾತ್ರೆಯನ್ನು ಪಡಕೊಳ್ಳುವವರಾದರು.

ಲೇಂಡ್ ರಿಕಾರ್ಡ್ ಸುಪರಿಂಟೆಂಡೆಂಟರಾದ ಮ॥ ರಾ॥ ರಾ॥ ಸುಂದರಮ್ ಆಯ್ಯರರವರು ೧೪ ಜನ ಲೇಂಡ್ ರಿಕಾರ್ಡ್ಸ್ ಇನ್ಸ್‌ಪೆಕ್ಟರರವರನ್ನು ತರಬೇತುಮಾಡಿ ಮೊನ್ನೆ ದಿನ ಇಲ್ಲಿಂದ ತೆರಳುವವರಾದರು.

ಇಲ್ಲಿಯ ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರಾದ ಮ॥ರಾ॥ರಾ॥ ಪಿ. ನಾರಾಯಣ ಮೆನನ್‌ರವರು ನಿನ್ನೆ ದಿನ ಧರ್ಮಸ್ಥಳ ಅತ್ತಕಡೆ ಸರ್ಕೀಟು ಬೆಳಸುವವರಾದರು. ಒಂದೆರಡು ದಿವಸ ಅಲ್ಲಿಯೇ ಉಳಕೊಂಡು ತದನಂತರ ಪುಂಜಾಲಕಟ್ಟೆ ಬಂಟ್ವಾಳಕ್ಕಾಗಿ ಬರುವ ದಶಂಬ್ರ ತಾ. ೧ಕ್ಕೆ ಹಿಂತಿರುಗಿ ಬರುವರು.

೩ ವರುಷದ ಮೊದಲು ಕಡೆಶ್ವಾಲ್ಯ ದೇವಸ್ಥಾನಕ್ಕೆ ಕೇಡಿ ಮಂಜುನಾಥ ವಗೈರೆರು ಚಿನ್ನಾಭರಣ ವಗೈರೆಯನ್ನು ಕನ್ನ ಹೊಡೆದು ಕಳವು ಮಾಡಿದವರ ಪೈಕಿ ಕೇಡಿ ಅಂತೋನಿ ಪಿಂಟೊ ಪರಾರಿ ಆದ. ಈ ಪ್ರಸಿದ್ಧ ತಪ್ಪುಗಾರನನ್ನು ಇಲ್ಲಿಯ ಟೌನ್ ಸ್ಟೇಶನ್ ಪೋಲೀಸು ಕೊನಿಸ್ಟೇಬಲ್, ಎಫ್. ಮಚ್ಚಾದೊ ಮತ್ತು ಕೊನಿಸ್ಟೇಬಲ್ ಲೂವಿಸ್ ಪಿಂಟೊ, ಇವರು ಬೊಂಬಾಯಿ ಹೈಲಸ್ ಮೋಟರ್ಕಾರ್ ಕಂಪೆನಿಯಲ್ಲಿ ಕೈದು ಮಾಡಿ ಇಲ್ಲಿ ತಾ. ೨೧-೧೧-೧೦ಕ್ಕೆ ತಂದಿರುತ್ತಾರೆ. ಮಂಗಳೂರು ತಾಲೂಕು ಸ್ಟೇಶನೆರಿ ಸಬ್ ಮೇಜಿಸ್ಟ್ರೇಟರವರು ತಾರೀಕು ೬-೧೨-೧೦ರ ವರೇಗೆ ಈತನನ್ನು ರಿಮಾಂಡಿನಲ್ಲಿಡಿಸಿರುವರು.

ನಿನ್ನೆ ದಿನ ಡಿಸ್ಟ್ರಿಕ್ಟ್ ಬೋರ್ಡ್ ಮಿಟಿಂಗ್ ನೆರದಿತ್ತು. ಲೋಕಲ್‌ಫಂಡ್ ಸಬ್ ಅಸಿಸ್ಟಾಂಟ್ ಸರ್ಜನುಗಳು ತಮ್ಮ ಸಂಬಳ ಮತ್ತು ಇತರ 'ಚಾರ್ಜು ಎಲ್ಲೊಯನ್ಸುಗಳನ್ನು' ಸರಕಾರಿ ಸಿವಿಲ್ ಸಬ್ ಅಸಿಸ್ಟಾಂಟುಗಳ ತರಗತಿಗೆನೇ ಹೆಚ್ಚಿಸಬೇಕೆಂಬದಾಗಿ ಬರಕೊಂಡ ವಿಜ್ಞಾಪನೆಗಳು ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರರ ಶಿಫಾರಸು ಹೊಂದಿ ಸಭೆಯ ಮುಂದೆ ಇಡೋಣಾಗಿದ್ದವು. ಬೋರ್ಡಿನವರು ಲೋಕಲ್‌ಫಂಡ್ ಸಬ್ ಅಸಿಸ್ಟಾಂಟ್ ಸರ್ಜನ್‌ಗಳ ಸಂಬಳವನ್ನು ಸರಕಾರಿ ಸಿವಿಲ್ ಅಸಿಸ್ಟಾಂಟ್‌ಗಳ ಸಂಬಳದ ತರಗತಿಗೆನೇ ಹೆಚ್ಚಿಸಬೇಕೆಂತ ನಿರ್ಣಯಿಸಿದರು. ಆದರೆ ಈ ನಿರ್ಣಯವು ಮದ್ರಾಸು ಸರಕಾರದವರ ಮಂಜೂರಾತಿಗೆ ಒಳಪಟ್ಟಿರುತ್ತದೆ. 'ಚಾರ್ಜೆ ಎಲ್ಲೊಯನ್ಸ್' ಮಾತ್ರ ಹೆಚ್ಚಿಸಲಿಲ್ಲ. ಅದು ಎಂದಿನಂತೆಯೇ ಇರುವುದು.

ಮುನಿಸಿಪಲ್ ಆಸ್ಪತ್ರೆಗಳಿಗೂ ಲೋಕಲ್‌ಫಂಡ್ ಆಸ್ಪತ್ರೆಗಳಿಗೂ ವೈದ್ಯ ಉದ್ಯೋಗಸ್ಥರಾಗಿ ಸರಕಾರಿ ಆಫೀಸರರನ್ನು ನೇಮಿಸುವ ಬದಲಿಗೆ ಆಯಾ ಊರುಗಳಲ್ಲಿ ಖಾಸಗಿಯಲ್ಲಿ ವೈದ್ಯ ವೃತ್ತಿಯನ್ನು ಮಾಡಿಕೊಂಡಿರುವ ಡಾಕ್ಟಾರರುಗಳನ್ನು ನೇಮಿಸಬಹುದೆಂಬ ಒಂದು ಸರಕಾರಿ ಹುಕುಂ ಇತ್ತಲಾಗೆ ಪ್ರಕಟಿಸಲ್ಪಟ್ಟಿತ್ತು. ಒಂದು ಸರ್ತಿ ಖಾಸಗಿ ಡಾಕ್ಟಾರರುಗಳನ್ನು ಈ ಕೆಲಸಗಳಿಗೆ ನೇಮಿಸಿ ನಂತರದಲ್ಲಿ ವೈದ್ಯ ಆಫೀಸರರ ಅಗತ್ಯವಿದ್ದರೆ ಖಾಸಗಿ ಡಾಕ್ಟಾರರುಗಳನ್ನೇ ನೇಮಿಸಬೇಕಲ್ಲದೆ ಸರಕಾರ ಕಡೆಯಿಂದ ಮುನಿಸಿಪಾಲಿಟಿಗಳಿಗೂ ಡಿಸ್ಟ್ರಿಕ್ಟ್ ಬೋರ್ಡಿನವರಿಗೂ ವೈದ್ಯ ಉದ್ಯೋಗಸ್ಥರು ಸಿಕ್ಕಲಿಕ್ಕಿಲ್ಲವೆಂಬ ಷರಾ ಸಹ ಈ ಸರಕಾರಿ ಹುಕುಮಿನಲ್ಲಿತ್ತು. ಈ ವಿಷಯವು ನಮ್ಮ ಡಿಸ್ಟ್ರಿಕ್ಟ್ ಬೋರ್ಡು ಸಭೆಯವರ ಮುಂದೆ ತರಲ್ಪಟ್ಟು ಸರಕಾರಿ ವೈದ್ಯ ಉದ್ಯೋಗಸ್ಥರನ್ನೇ ನೇಮಿಸುವ ಈ ವರೆಗೆ ಜ್ಯಾರಿಯಲ್ಲಿರುವ ವಾಡಿಕೆಯನ್ನನುಸರಿಸುವುದೇ ಒಳ್ಳೇದೆಂತಲೂ ನವೀನ ವಿಧಾನವು ತಮಗೆ ಸಲ್ಲದೆಂದೂ ಬೋರ್ಡಿನವರು ನಿರ್ಣಯಿಸಿರುತ್ತಾರೆ.

ನಾಳೆ ತಾ. ೨೬ಕ್ಕೆ ಕೆನರಾ ಹ್ಯಾಸ್ಕೂಲಿನಲ್ಲಿ ವಿದ್ಯಾರ್ಥಿಗಳಿಗೆ ಇನಾಮು ಹಂಚೋಣವು ಜಿಲ್ಲಾ ಕಲೆಕ್ಟರ್ ಮೆ॥ ಆರ್. ಎ. ಗ್ರೇಹೆಮ್ ದೊರೆಗಳವರ ಅಧ್ಯಕ್ಷತೆಯಲ್ಲಿ ನೆರವೇರಲಿಕ್ಕಿರುವುದು.

ಕಳದ ವಾರ ಮುನಿಸಿಪಾಲಿಟಿಯಲ್ಲಿ ಒಂದು ಪ್ಲೇಗು ಮರಣ ಮಾತ್ರವಿತ್ತು.

ಪುತ್ತೂರು. ಇಲ್ಲಿಯ ಡಿವಿಜನ್ ಡಿಪ್ಯುಟಿ ಕಲೆಕ್ಟರವರ ಆಫೀಸಿನಲ್ಲಿ ಇದೇ ತಾ. ೨೧ನೇ ದಿವಸ ಗ್ರಾಮ ಉದ್ಯೋಗಸ್ಥರ ಪರೀಕ್ಷೆಯು ಇಲ್ಲಿಯ ಸ್ಟೇಶನರಿ ಮೇಜಿಸ್ಟ್ರೇಟರಾದ ಮ. ರಾ. ರಾ. ಟಿ. ಭವಾನಿಶಂಕರ ರಾಯರವರ ಮೇಲ್ವಿಚಾರಣದಲ್ಲಿ ನಡೆಯಿತು. ಪಟೇಲ ಶ್ಯಾನಭೋಗ ಪರೀಕ್ಷೆಗೆ ೩೧ ಜನ ಉಮೆದ್ವಾರರು ಹಾಜರಾಗಿದ್ದರು.

ಕುಳಗುಂದದಲ್ಲಿ ಘಟ್ಟದಿಂದ ಜಾನುವಾರು ಧಾರಾಳವಾಗಿ ಇಳದದ್ದಾಗಿ ತಿಳಿದುಬರುವದು. ಜಾನುವಾರು ತರಲಿಕ್ಕಾಗಿ ಅನೇಕ ಜನರು ಹೋಗಿ ಬರಲಿಕ್ಕೆ ಆರಂಭಿಸಿದ್ದಾರೆ.

ಬಂಟ್ವಾಳ. ಇದೇ ಕಳದ ತಾ. ೨೦ಕ್ಕೆ ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರ ಧೊರೆಗಳವರ ಸವಾರಿಯು ಇತ್ತ ಕಡೆ ಚಿತ್ತೈಸಿತ್ತು. ಇವರ ಆಗತ ಸ್ವಾಗತವು ಬಹಳ ಸಂಭ್ರಮದಿಂದ ಜರಗಿತು. ದಾರಿಯಲ್ಲೆಲ್ಲಾ ಮಕರ ತೋರಣಗಳೂ, ಡಿಪ್ಯುಟಿ ತಹಶಿಲ್‌ದಾರರ ಕಚೇರಿಯನ್ನು ತಿರಿಗಿ ಇಲ್ಲಿಗೆನೇ ತರಿಸಿ ಕೊಡಬೇಕೆಂಬ ಬರಹವುಳ್ಳ ಪಠಗಳೂ ಮೇಲ್ನಡೆ ನೇತಾಡುತಿದ್ದವು. ಈ ದಿನ ಬೆಳಿಗ್ಯೆ ಊರಿನ ಸದ್‌ಗೃಹಸ್ತರೆಲ್ಲರೂ ಒಟ್ಟು ಕೂಡಿ ಡಿಪ್ಯುಟಿ ತಹಸಿಲ್‌ದಾರರ ಕಚೇರಿಯನ್ನು ತೆಗದದ್ದರಿಂದ ಉಂಟಾಗುವ ಸಂಕಷ್ಟಗಳು ಜಿಲ್ಲಾಧಿಪರ ಕೂಡೆ ಮನವಿ ಮಾಡಿಕೊಂಡಲ್ಲಿ ನಿವಾರಣೆ ಯಾಗಬಹುದೆಂಬ ಕೋರಿಕೆಯಿಂದ ಶ್ರೀ ವೆಂಕಟರಮಣ ದೇವಸ್ಥಾನದ ಬಳಿ ಕಾದಿದ್ದು ವಾದ್ಯ ಘೋಷದಿಂದ ಬಂಗ್ಲೆಯ ವರೇಗೆ ಅವರನ್ನು ಹಿಂಬಾಲಿಸಿ ಅಲ್ಲಿ ತಮ್ಮ ಅರಿಕೆಗಳನ್ನೂ ಗವರ್ನರ್ ದೊರೆಗಳವರ ಸನ್ನಿಧಿಗೆ ಎರಡನೇ ಸಲ ಮಾಡಿದ ವಿಜ್ಞಾಪಣಾ ಪತ್ರವನ್ನೂ ಸಹಾ ಮುಂದಿಡುವವರಾದರು. ಮಾರಣೇ ದಿನ ಬೆಳಿಗ್ಯೆ ತಮ್ಮ ಸಿಕಾರಿ ಮುಗಿಸಿ ಇಲ್ಲಿಯ ಬಿ. ಜಿ. ಎಮ್. ಸೆಕಂಡರಿ ಶಾಲೆಯನ್ನು ಸಂದರ್ಶಿಸಿ ಅಲ್ಲಿಂದ ಹೊಸತಾಗಿ ಏರ್ಪಡಿಸಿದ್ದ ಹಿಂದೂ ಎಲಿಮೆಂಟರಿ ಶಾಲೆಗೆ ಹೋಗಿ ಶಾಲೆ ಕಟ್ಟೋಣವು ವಿದ್ಯಾರ್ಥಿಗಳ ಆರೋಗ್ಯಕ್ಕೆ ಬಹಳ ಒಳ್ಳೆ ಸ್ಥಳವೆಂಬದಾಗಿಯೂ, ವಿದ್ಯಾರ್ಥಿಗಳ ಸಂಖ್ಯೆಯು ಸಾಕಷ್ಟು ಇರುವದಾಗಿಯೂ ಉಪಾಧ್ಯಾಯರುಗಳು ಹೆಚ್ಚಿನ ಪರಿಶ್ರಮ ಪಡುವರಾಗಿಯು ಸೂಚಿಸಿ ಬಹಳ ಸಂತೋಷಪಡುವವರಾದರು. ಧೊರೆಗಳು ತಾ. 22ಕ್ಕೆ ಮಂಗಳೂರು ಅತ್ತ ಕಡೆ ಹೊರಟು ಹೋಗಿರುತ್ತಾರೆ.

ಇಲ್ಲಿ ಮೂರು ನಾಲ್ಕು ದಿವಸಗಳಿಂದೀಚೆಗೆ ಬಿಜಾಪುರದಲ್ಲಿ ಕ್ಷಾಮೋಪದ್ರವದ ದೆಶೆಯಿಂದ ಸುಮಾರು ೫೦ ಜನರ ಒಂದು ಪಂಗಡವು ಬಂದು ಪ್ರತಿ ಮನೆಯು ಬಾಗಲಿಗೆ ಹೋಗಿ ಬಿಕ್ಷೆ ಬೇಡುತ್ತಲಿರುತ್ತದೆ. ರಾತ್ರಿ ಕಾಲದಲ್ಲಿ ಅವರು ಪೋಲಿಸಿನವರ ರಖವಾಲೆಯಲ್ಲಿರುವರಂತೆ.

ಲಾಭ! ಹೊಸ ಪುಸ್ತಕ!!

ಸಚಿತ್ರಕಲಾತರಂಗ 1ನೇ ಭಾಗ

8 ಅಧ್ಯಾಯಗಳಿವೆ. ಈ ಪತ್ರಿಕೆಯ ಚಂದಾದಾರರಿಗೂ, ಸ್ಕೂಲ್ಮಾಸ್ತರರಿಗೂ, ಮತ್ತು ವಿದ್ಯಾರ್ಥಿಗಳಿಗೆ ರೂ. 8-0-0ಕ್ಕೆ ದೊರೆಯುವುದು. ಇತರರಿಗೆ ರೂ.0-10-0.

ಎಂ. ಟಿ. ವಲ್ಲಭ ಐಯಂಗಾರ್, ಬೀರೂರು.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಕೊಳೂರು ಮಸ್ಕತಿ ಅಕ್ಕಿ	5-10—0
ಗುಡ್ಡು ಮಸ್ಕತಿ ,, ...	4-12—0
ಮಸ್ಕತಿ ದುಯಂ ,, ...	4—8—0
ವಕ್ಲು ಸುಗ್ಗಿ ,, ...	4-11—0
ಹೊಸ ಗುಡ್ಡು ,, ...	4—0—0
ಮಸ್ಕತಿ ಬೆಳ್ತಿಗೆ ,, ...	5—0—0
ರಂಗೂನ್ ಬೆಳ್ತಿಗೆ ಗೋಣಿ	8—0—0
ಹುರುಳಿ ಗೋಣಿ ೧ ಮುಡಿ 2ರ ...	4-12—0
ಉಪ್ಪು ಗೋಣಿ ೧ರ	3—7—0
ಖೊಬ್ರಿ ಖಂಡಿ ೧ರ	110—0—0
ಖೊಬ್ರಿ ಎಣ್ಣೆ ಮಣ	7—8—0
ಕಾಫಿ ಖಂಡಿ ೧ರ	220—0—0
ಕಾಳು ಮೆಣಸು ಖಂಡಿ	125—0—0
ಬಿಳಿ ಗೋಟು ಅಡಿಕೆ	84—0—0
ಕರಿ ಗೋಟು	60—0—0

ದಯವಿಟ್ಟು ಓದಿರಿ ! ಸೌಖ್ಯವನ್ನು ಹೊಂದಿರಿ !

ಕಾಮ ಶಾಸ್ತ್ರ.

ಉಚಿತವಾಗಿ ಕಳುಹಿಸಲ್ಪಡುವುದು! ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವದು. ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವು! ಆಯುರಾರೋಗ್ಯಸಂಪದಗಳುಂಟಾಗುವವು!!

ಆತಂಕ ನಿಗ್ರಹ ಮಾತ್ರೆ.

ಊಟವಾದ ಬಳಿಕ ಹಗಲಿರುಳೂ ಸೇವಿಸಬೇಕಾದದ್ದು! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು:—

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ಪ್ರಾಣಾಧಾರಗಳಿಂದ ಅಂಗಗಳನ್ನು ಬಲಪಡಿಸುವದು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು. ೩೨ ಮಾತ್ರೆಗಳಿರುವ ಡಬ್ಬಿ ೧ಕ್ಕೆ ರೂ. ೧—೦—೦.

ಆತಂಕನಿಗ್ರಹ ಔಷಧಾಲಯ, ೨೨ ಬ್ರಾಡ್ವೇ ಮದರಾಸು. — ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜೀ.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. 2—8—0 ಮಾತ್ರ. ರೂ. 2—8—0 ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

"ರಾಸ್ಕೋಪ್ ಸಿಸ್ಟಂ ಪೇಟೆಂಟ್ ಲೀವರ್ ಜ್ಯುವೆಲ್ಡ್" ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರಹವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. 3-8-0 ರೂ. 4-8-0. ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಎರಡು (೨) ವರುಷಗಳು ಗ್ಯಾರೆಂಟು.

ಕ್ರಯ ರೂ. 2-8-0 ವಿ. ಪಿ. ಚಾರ್ಜು ರೂ. 0-4-0.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ 0-8-0 ವಿ. ಪಿ. ಚಾರ್ಜು 0-4-0.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ, ಸಾಹುಕಾರ ಪೇಟೆ, ಮದ್ರಾಸು.

ಶ್ರೀ

ಶ್ರೀ ಶಿವಗಂಗಾ ಮಠದ ಶ್ರೀ "ಶಾರದಾ" ಮಾಸಪತ್ರಿಕೆ

ವಾರ್ಷಿಕ ಚಂದಾ 2—0—0 ಹಾಸಲು ಸಹಿತ

ಜನರು ಶ್ರೀ ಶಾರದಾನುಗ್ರಹಕ್ಕೆ ಪಾತ್ರರಾಗಿ ಅದರಿಂದ ಉಂಟಾಗುವ ಜ್ಞಾನ ಸುಖವನ್ನು ಅನುಭವಿಸಬೇಕಾಗಿದ್ದರೆ ಶ್ರೀ "ಶಾರದಾ" ಮಾಸಪತ್ರಿಕೆಯನ್ನು ಸೇವಿಸಬೇಕು.

ಉಪನಿಷತ್ತುಗಳ ಸಾರ, ಧರ್ಮಶಾಸ್ತ್ರದ ರಹಸ್ಯ (ಧರ್ಮಸಿಂಧು-353 ವಿಷಯ), ಶ್ರೀ ಶಂಕರಾಚಾರ್ಯರ ಕಾಲ ಮತ್ತು ಚರಿತ್ರ, ಧರ್ಮನೀತಿಗಳ ಉಲ್ಲಾಸ, ಸಟೀಕ ಸ್ತೋತ್ರಾವಳಿ, ಸರಸವಾದ ಉಪನ್ಯಾಸ, ನ್ಯಾಯಗಳ ವಿಮರ್ಶೆ, ವಿವಿಧ ಸಿದ್ಧಾಂತ ವಿವರಣ, ವಿಚಿತ್ರ ಚಾಟು ಶ್ಲೋಕಗಳು, ಸನಾತನಧರ್ಮ ನೀತಿಗಳ ಸೋಪಾನ ಈ ಮುಂತಾದುವುಗಳು ಇದರಲ್ಲಿ ಪ್ರಕಾಶವಾಗುತ್ತಲಿವೆ.

ಈ ಪತ್ರಿಕೆಯು ದೊರೆಯುವ ಸ್ಥಳ. (ಪತ್ರೆ)

ದೊಡ್ಡಬೆಲೆ ನಾರಾಯಣ ಶಾಸ್ತ್ರಿ.

ಶ್ರೀ "ಶಾರದಾ" ಆಫೀಸು ಬೆಂಗಳೂರು ಸಿಟಿ.

ಉತ್ತಮವಾದ ಮೈಸೂರು ಸುಗಂಧ ದ್ರವ್ಯಗಳು.

ಅಂಬರ್ ಊದಬತ್ತಿ ಸೇ. ೧ಕ್ಕೆ	೬—೦—೦	A ಅರಗಜ ತೊ. ೧ಕ್ಕೆ	೨—೦—೦
ಕಸ್ತೂರಿ ಬತ್ತಿ . ಡಿ.	೩—೦—೦	B. ಅರಗಜ ಡಿ.	೧—೦—೦
ಪುಣಗು ಬತ್ತಿ ಡಿ.	೧—೮—೦	ಕಸ್ತೂರಿ ಬಿಲ್ಲೆ ಡಿ.	೨—೦—೦
ಗುಲಾಬಿ ಬತ್ತಿ ಡಿ.	೧—೪—೦	ಪುಣಗು ಬಿಲ್ಲೆ	೧—೦—೦
A ಪನ್ನೀರ್ ಬತ್ತಿ ಡಿ.	೦--೧೨—೦	ಕೇಸರಿ ಬಿಲ್ಲೆ	೦—೮—೦
B ಪನ್ನೀರ್ ಬತ್ತಿ ಡಿ.	೦--೧೦—೦	ಮನೋರಂಜನ ತೈಲ ಶೀಸೆ ೧ಕ್ಕೆ	೦—೮—೦
ಮಸಾಲಾ ಬತ್ತಿ ಡಿ.	೦—೬—೦	ತಾಂಬೂಲ ರತ್ನ ಡಿ.	೦—೪—೦

ಇವುಗಳಲ್ಲದೆ ಎಲ್ಲಾ ತರಹದ ಅತ್ತರ್, ನಾಶಿಕ ಚೂರ್ಣ, ಟೂತ್ ಪೌಡರ್ ಫಿಕ್ಸಾ, ಮೊದಲಾದವುಗಳು ಬಿಕರಿಗೆ ಸಿದ್ಧವಾಗಿವೆ. ಎನ್. ಎಮ್. ಸುಬ್ಬರಾವ್, ತೇರ್‌ಬೀದಿ, ಮಂಗಳೂರು.

1911ನೇ ವರ್ಷದ ಪಾಕೆಟ್ ಡ್ಯಾರಿ.

ಬೇಗ ತರಿಸಿಕೊಳ್ಳಿ! ನಿದಾನ ಮಾಡಿದರೆ ಶಿಗಲಾರದು!!

ಪ್ರತಿಯೊಬ್ಬ ಮನುಷ್ಯನಿಗೂ ಲೆಕ್ಕವೇ ಪ್ರಾಣಾಧಾರವಾದದ್ದು. ಇಂಥಾ ಲೆಕ್ಕವನ್ನು ನಮ್ಮ ಜೇಬಿನಲ್ಲಿಡಲು ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇಇರಬೇಕಾದ ಪುಸ್ತಕವು. ಬಹಳ ಸುಲಭಕ್ರಯ. ಟಪ್ಪಾಲ್ ಖರ್ಚುಗಳು ಬೇರೆ ಬೀಳುತ್ತೆ.

ಎ. ನಂ॥ ಡೈರಿ ಸಾದಾ ೧ಕ್ಕೆ ೩ಆಣೆ, ಬಿ. ನಂ॥ ಡೈರಿ ಮುಚ್ಚಳ ಮತ್ತು ಪೆನ್‌ಸಲ್ ಸಹಿತ ೧ಕ್ಕೆ ೫ಆಣೆ. ಸಿ. ನಂ॥ ಡೈರಿ ದೊಡ್ಡದು ೧ಕ್ಕೆ ೬ಆಣೆ. ಡಿ. ನಂ॥ ಡೈರಿ ಮುಚ್ಚಳ ಮತ್ತು ಪೆನ್‌ಸಿಲ್ ಸಹಿತ ೧ಕ್ಕೆ ೮ಆಣೆ. ೧೦ ಡೈರಿಗಳನ್ನು ಒಂದೇ ಸಲ ತರಿಸಿಕೊಂಡರೆ ಒಂದು ಡೈರಿ ಇನಾಂ. ವ್ಯಾಪಾರಸ್ಥರಿಗೆ ಸರಿಯಾದ ಕಮಿಶನ್ ಶಿಕ್ಕುತ್ತೆಮತ್ತು ನಮ್ಮಲ್ಲಿ ಕನ್ನಡ ತೆಲಗು, ಸಂಸ್ಕೃತ ಪುಸ್ತಕಗಳು ಬಹಳ ಸುಲಭ ದರಕ್ಕೆ ದೊರಿಯುತ್ತದೆ.

ನಮ್ಮ ಕಂಪೆನಿ ಕ್ಯಾಟಲಾಗ್ ಮುಫತ್ತಾಗಿ ದೊರಿಯುತ್ತೆ. ಪರಾಂಬರಿಸಿ ನೋಡಿರಿ.

ಎಮ್ ಪಿ. ಮಲ್ಲಯ್ಯ.

211 ತಾಲೂಕು ಕಚೇರಿ ರಸ್ತೆ, ಬೆಂಗಳೂರು ಸಿಟಿ.

ಒಡೋನಾ.

ಇದು ಆಗಿಂದಾಗ್ಯೆ ಬಾಧಿಸುವ ಹಲ್ಲುನೋವಿನ ದಿವ್ಯ ಔಷಧಿಯಾಗಿದೆ. ಶಸ್ತ್ರಪ್ರಯೋಗ ಮಾಡದೆನೇ ಹಲ್ಲುನೋವು ಖಾತ್ರಿಯಾಗಿ ನಿಲ್ಲುವುದು. ಕೆಲವುಸಾರಿ ದಂತ ವೈದ್ಯರಿಂದ ಸಹ ಸಾಧ್ಯವಾಗದ ಹಲ್ಲುನೋವನ್ನು ಈ ಒಡೋನಾ ಎಂಬದು ಕ್ಷಣಮಾತ್ರದಲ್ಲಿ ಪರಿಹರಿಸುವುದು. ಈ ಭೂಲೋಕದಲ್ಲಿನ ಎಲ್ಲಾ ಹಲ್ಲುನೋವಿನ ಔಷಧಿಗಳಿಗಿಂತ ಇದು ಅತಿ ಉತ್ಕೃಷ್ಟವಾದದ್ದು. ಟಿನ್ ೧ಕ್ಕೆ ಕ್ರಯ ೨ ರೂ.

ಇಂಪೀರಿಯಲ್ ಪೈನ್ ಬಾಮ್.

ಇದರಿಂದ ಸಾಧಾರಣ ತಲೆಶಿಡಿತ ಮೊದಲುಗೊಂಡು ಎಲ್ಲಾ ತರದ ದುಸ್ತರವಾದ ರೋಗಗಳು ಸಹಾ ಗುಣವಾಗುವವು.

ವಾತ, ಸಂಧಿವಾತ, ಹರಿವಾತ, ಪಕ್ಷವಾತ, ಉಬ್ಬಸ, ಸೊಂಟೆನೋವು, ಗಂಟುನೋವು, ಶೀತ, ಕೆಮ್ಮು, ಉಳುಕು, ನೆಗಡಿ, ಕಟವಾತ, ಶ್ವಾಸವಾತ, ಕ್ಷಯರೋಗ, ಜಜ್ಜಿದ ಗಾಯ, ಕುತ್ತಿಗೆ ನೋವು, ರಾಜಕುರು ವಗೈರೆ ಎಲ್ಲಾ ತರದ ರೋಗಗಳಿಗೆ ಇದು ಪರಮೌಷಧಿಯಾಗಿರುತ್ತದೆ. ಕ್ರಯ ಬಾಟ್ಲ ೧ರ ೧೦ ಆಣೆ.

ಮದ್ರಾಸ್ ಆಧಿಪತ್ಯಕ್ಕೆ ಸೋಲ್ ಏಜಂಟರು:—

ಮೆಸ್ಸರ್ಸ್ ಕೆ. ವಿಟ್ಠಳ ರಾವ್ ಎಂಡ್ ಕೋ,

ಸರ್ಟಿಫ್ಯಾಡ್ ಕೆಮಿಸ್ಟ್, ಮಂಗಳೂರು, ದ. ಕ.

ಮಂಗಳೂರು

ಚಲೋ ನಶ್ಯಪುಡಿ.

ತೊಲೆ ೧ಕ್ಕೆ ರೂ. ೦—೧—೦. ಸೇರು ೧ಕ್ಕೆ ರೂ. ೧—೪—೦

ಸುಗಂಧ ನಾಸಿಕ ಚೂರ್ಣ ತಲೆಪಾಸಿಗೂ ಸೀತಕ್ಕೂ ಶಿರೋಭಾರಕ್ಕೂ ಒಳ್ಳೇದು ತೊಲೆ ೧ಕ್ಕೆ ೦—೪—೦ ಸೇರು ೧ಕ್ಕೆ ರೂ. ೫—೦—೦.

ಅಪೇಕ್ಷಿಸುವವರಿಗೆ ವಿ. ಪಿ. ಮೂಲಕವೂ ಹಣ ಕಳುಹಿಸಿದವರಿಗೆ ಸೆಂಪಲ್ ಪೋಸ್ಟ್ ಮೂಲಕವೂ ಕಳುಹಿಸಿಕೊಡಬಹುದು.

ಕಾವೂರು ವೆಂಕಟೇಶ ಸುಬ್ರಾಯ ಪೈ,

ಗೋಳಿಕಟ್ಟೆ ಬಜಾರ, ಮಂಗಳೂರು, ದ. ಕ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ [illegible]ನನ್ನುಂಟುಮಾಡುವದು. ತೊಲೆಗೆ ೧ ರೂ.

[illegible] ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾ[illegible]ಯನ್ನು[illegible]ಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳಯಿಸುವದು; ನಾಲಿಗ[illegible]ವನ್ನು ಕೊಡುವದು. ಕಂಠಸ್ವರವನ್ನು ಮಧುರವಾ[illegible]ರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS.

Royal Indian Balm Depot.

ರೋಯಲ್ ಇಂಡಿಯನ್ ಬಾಮ್.



ಪ್ರಖ್ಯಾತಪಟ್ಟ ಯುರೋಪಿಯನ್ ಡಾಕ್ಟರರಿಂದಲೂ, ಇಂಜನಿಯರರಿಂದಲೂ, ಪರೀಕ್ಷಿಸಲ್ಪಟ್ಟದ್ದಾಗಿರುತ್ತದೆ.

ಇದರಿಂದ:—ವಾತ, ಸಂಧಿವಾತ, ತಲೆನೋವು, ತಲೆಶಿಡಿತ, ಉಳುಕು, ಚೇಳುಕಡತ, ಜಖಮು, ಎದೆನೋವು, ಸೊಂಟದ ನೋವು, ಗಂಟಲು ನೋವು, ಆನೆಗಾಲು, ಶೀತ, ಜಜ್ಜಿದ ಘಾಯ, ಲುತಿ ಘಾಯ ಮುಂತಾದ ಎಲ್ಲಾ ತರದ ನೋವುಗಳು ಖಾತ್ರಿಯಿಂದ ನಿಲ್ಲುವದು. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಒಂದೇ ಸಾರಿ ಮೂರು ರೂಪಾಯಿ ಔಷಧ ತರಿಸಿಕೊಂಡರೆ ಒಂದು ಎಲ್ಯುಮಿನಿಯಮ್ ಗ್ಲಾಸು ಇನಾಮಾಗಿ ಕಂಪೆನಿಯಿಂದ ಮಾತ್ರವೇ ಧನಾನಿಸಲ್ಪಡುವದು.

ರೋಯಲ್ ಇಂಡಿಯನ್ ಬಾಂ ಎಲ್ಲಾ ಔಷಧಾಲಯಗಳಲ್ಲಿ ಮಾರಾಟಕ್ಕೆ ದೊರಕುವದು.

ಗಜಕರ್ಣಾದ ಮುಲಾಮು.

ಎಲ್ಲಾ ತರದ ಗಜಕರ್ಣ ತುರಿಕಜ್ಜಿಯ ಮೇಲೆ ದಿವ್ಯ ಔಷಧ. ಮೂರು ಸಾರಿ ಹಾಗಿಸುವದರೊಳಗೆ ಗಜಕರ್ಣ ಹೋಗುವದು. ಇದರಿಂದ ಉರಿಯೂ ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಬಾಟ್ಲಿ ಒಂದರ ೦-೫-೦.

ವಿಳಾಸ— ಮನೋರಾ ಕಂಪೆನಿ, ಗಿರಗಾಂ ಮುಂಬಯಿ.

ಏಜಂಟರು:— ಪೈ ಎಂಡ್ ಸನ್ಸ್ ಮಂಗಳೂರು.
ಬೇಕಲ ವೆಂಕಟ ರಾವ್, ಉಡುಪಿ.
ಬಿ. ನರಸಿಂಹ ಮಲ್ಯ ಪುತ್ತೂರು.
ಬಿ. ಎಸ್. ಮಲ್ಯಾ ರಾಮ ಪ್ರಸಾದ ಔಷಧಾಲಯ. ಬಾರಕೂರು.

ಬೆಳಗಾವ, ಧಾರವಾಡ, ಹುಬ್ಬಳ್ಳಿ, ಸಾಗರ (ಮೈಸೂರು) ಇವುಗಳ ಜಿಲ್ಲೆ ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದೆ.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಧಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0-8-0.

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ ೭—8—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ.

ವಿ. ಪಿ. ಖರ್ಚು ಪ್ರತ್ಯೇಕ. ಟಿ. ಬಾಬುರಾಯರ,
ಆಯುರ್ವೇದಿಕ್ ಔಷಧಾಲಯ, ಗಾಂಧೀಜಿ ರಸ್ತೆ, ಮಂಗಳೂರು, ದ. ಕ.

ನೇತ್ರಬಿಂದು

ಇದು ಕಣ್ಣಿನ ದೃಷ್ಟಿಮಾಂದ್ಯ, ಕಣ್ಣೀರು ಸೋರುವಿಕೆ, ಕಣ್ಣಿನ ಮೂಲೆ ತುರಿಸುವಿಕೆ, ಕೆಂಗಣ್ಣು, ರೆಪ್ಪೆ ಉದುರುವಿಕೆ ಈ ಮೊದಲಾದ ರೋಗಗಳಿಗೆ ಸಿದ್ಧೌಷಧವು. ಕ್ರಯ ಬಾಟ್ಲಿ ೧ರ ರೂ. 0—8—0 ವಿ. ಪಿ. 0—4—0.

ಸಿದ್ಧಲಕ್ಷ್ಮೀವಿಲಾಸ—ಇದು ಒಳ್ಳೇ ರಕ್ತಶುದ್ಧಿ ಮಾಡುತ್ತದೆ. ಕ್ರಯ ಬಾಟ್ಲಿ ೧ರ 0-12-0 ವಿ. ಪಿ. 0—4—0.

ಇದು ವಿನಹ ಇಲ್ಲಿ ಆಸವಗಳೂ, ಅರಿಷ್ಟಗಳೂ, ಘೃತಗಳೂ, ಲೇಹಗಳೂ, ಚೂರ್ಣಗಳೂ, ತೈಲ್ಯಗಳೂ, ಮಾತ್ರೆಗಳೂ, ಭಸ್ಮಗಳೂ ವಗೈರೆ ದೊರೆಯುತ್ತವೆ.

ವಿಳಾಸ— ಧನ್ವಂತರಿ ಆಯುರ್ವೇದಿಕ್ ಔಷಧಾಲಯ,
ಮಂಗಳೂರು.

ಈಗಲೀಗ ಅಚ್ಚಾಗುತ್ತಲಿದ್ದ 'ಆಯುರ್ವೇದ ಚಿಕಿತ್ಸಾಕ್ರಮ' ಎಂಬ ಗ್ರಂಥವು ಇನ್ನು ಸದ್ಯದಲ್ಲಿಯೇ ಪ್ರಕಟವಾಗುವುದೆಂಬದನ್ನು ಸ್ವದೇಶಾಭಿಮಾನಿಯ ವಾಚಕರೆಲ್ಲರೂ

ತಿಳಿಯಬೇಕಾಗಿರುವುದು.

ಕನ್ನಡಭಾಷೆ ಗೊತ್ತಿರುವವರ್ಯಾರಾದರೂ ತನ್ನ ಹೆಸರು ಮತ್ತು ವಿಳಾಸವನ್ನು ಕಳುಹಿಸಿಕೊಟ್ಟಲ್ಲಿ ಟಪ್ಪಾಲು ಹಾಸಲು ಇಲ್ಲದೆ ಸಹಾ ಗ್ರಂಥವನ್ನು ಉಚಿತವಾಗಿ ಪಡಿಯಬಹುದು. ಇಂಗ್ಲೀಷು ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ಕಳುಹಿಸುವಾಗ ತಮ್ಮ ಸ್ನೇಹಿತರ ಯಾ ನೆಂಟರಿಷ್ಟರ ಪೈಕಿ 10 ಜನರ ಹೆಸರು ಮತ್ತು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು.

ಅತೀ ಉತ್ತಮವಾದ ಬ್ಲೂಬ್ಲೇಕ್ ಶಾಯಿಯ ಪುಡಿ.

ಇತರ ಎಲ್ಲಾ ಶಾಯಿಯ ಪುಡಿಗಿಂತಲೂ ಇದು ಬಹಳ ಉತ್ಕೃಷ್ಟವಾದದ್ದು.

ಒಂದು ಪೊಟ್ಲಕ್ಕೆ 4 ಪೈ.

ಈ ಶಾಯಿಯ ಹುಡಿಯನ್ನು ೨ ಔನ್ಸು ನೀರಿನಲ್ಲಿ ಕಲಸಿದೊಡನೆ ಅತೀ ಕಪ್ಪಾದ ಶಾಯಿಯು ದೊರಕುವದು. ಇದರಿಂದ ಬರದರೆ ಲೋಹದ ಪೇನುಗಳಿಗೆ ತುಕ್ಕು ಹಿಡಿಯದು. ಪೇನಿನಲ್ಲಿ ಶಾಯಿಯು ಬಹಳ ಸೊಗಸಾಗಿ ಹರಿಯುವುದು. ಈ ಶಾಯಿಯ ಪುಡಿಯಲ್ಲಿ ಬ್ಲೂಬ್ಲೇಕ್, ಕೆಂಪು, ಪಚ್ಚೆ, ಧೂಮ್ರವರ್ಣ ಇವೇ ಮೊದಲಾದವುಗಳು ಇರುವವು.

ಹಲವು ಪ್ರದರ್ಶನಗಳಲ್ಲಿ ಈ ಶಾಯಿಯ ಪುಡಿಯು ಬೆಳ್ಳಿ ಪದಕಗಳನ್ನೂ, ಯೋಗ್ಯತಾಪತ್ರಗಳನ್ನೂ ಹೊಂದಿಯದೆ.

ಒಂದೇ ಸಾರಿ 100 ಪೊಟ್ಲಗಳಿರುವ ಒಂದು ಕಾರ್ಡಬೋರ್ಡು ಪೆಟ್ಟಿಗೆಯನ್ನು ತರಿಸಿಕೊಂಡರೆ ಟಪ್ಪಾಲು ಹಾಸಲು ವಿನಹಾ ರೂ. ೧—೪—೦.

ಟಿ. ಎಸ್. ಸುಬ್ರಮಣ್ಯಮಂ ಎಂಡ್ ಕೊ.
32 ಆರ್ಮೆನಿಯನ್ ರಸ್ತೆ, ಮದ್ರಾಸು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ತರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಖಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್ ಲವರಚಾಲ, ಮುಂಬಯಿ.

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,

ಮಂಗಳೂರು, ದ. ಕ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ನವೀನ ಶೃಂಗಾರ ಸ್ತ್ರೀ ಶುಕಸಪ್ತತಿ ಕಥೆ.

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಬೇಕಾಗಿ ಅಭಿಲಾಷೆ ಇದ್ದರೆ ಮೇಲ್ಕಂಡ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ. ಕ್ರಯ ಹಾಸಲ್ ಸಹಾ ೧೦ ಆಣೆ.

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪರಮಾಯದ ಊದಬತ್ತಿಗಳು, ಹಸಿಗಂಧ. ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜವಳಿ ಸಹಾ ದೊರಿಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು. ಒಂದಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ. ನಮ್ಮ ಕಂಪೆನಿ ಕೆಟಲಾಗ್ ಮುಪತ್ತಾಗಿ ದೊರೆಯುವದು.

ಟಿ. ಯನ್. ಶ್ರೀನಿವಾಸ ಶೆಟ್ಟಿ, ಬುಕ್‌ಡಿಪೊ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವನ

ಲ್ಯಾಫ್ ಎಶ್ಯೂ ಸೆಕ್ಯೂರಿಟಿ ಕಂಪೆನಿ.

ಲಿಮಿ[illegible]

ಆಫೀಸು: ವಿಶಾಖಪಟ್ಣ[illegible]

ಟ್ರಸ್ಟೀ:— ಮದ್ರಾಸು ಆಫೀಸು

ಸ್ವಲ್ಪ ಅನುಕೂಲತೆಯವರಿಗೂ ಕೇವಲ[illegible]ಗಳು. ಪ್ರಯೋಜನ ಉಳ್ಳದ್ದಾಗಿರುವುದು. [illegible]ವ್ಯವಾಗುವ ಅನೇಕ

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ[illegible]

ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರ[illegible]ಗುಗಳಿಗೆ ಜೀವ ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿ[illegible]ಸ ಬಹುದು. [illegible]ನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜ[illegible]ಮ್ಮದರಗಳ

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತೆಳಕೊಳ್ಳ[illegible] ಯಾಗಿಟ್ಟಿರುವುದು. [illegible]ನಜಾತಿ

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾ[illegible]

ವಿಶೇಷ ಸೂಚನೆ:—ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ[illegible] ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿ[illegible]

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗ[illegible]

ಬಹುಮಾನ! ಬಹುಮಾನ! ಬ[illegible]

THE KALA-NIDHI MANGALORE,

(ಪೊಟ್ಲ 1 ಕ್ಕೆ 3 ಪೈ.)

ಬರುವ ದಶಂಬರ ತಿಂಗಳ ವರೆಗೆ ಮಾತ್ರ. ೪ ರೂಪಾಯಿಗಳ[illegible] ಪೊಟ್ಲಗಳನ್ನು ತೆಗದುಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ[illegible] ಸ್ಕೋಪ್ ಕೀಲೆಸ್ ಘಡಿಯಾರವು.

ಈ ಶಾಯಿಯಿಂದ ಲೋಹದ ಪೇನುಗಳಿಗೆ ತುಕ್ಕು ಹಿಡಿಯದು. ಶಾಯಿಯ ಮೇಲ್ಗಡೆ ಬ[illegible] ನಿಲ್ಲದು. ಬರಿಯುವಾಗ ನೀಲ ಬಣ್ಣದಲ್ಲಿದ್ದು ಆರಿದೊಡನೆ ಅತಿ ಕಪ್ಪಾಗುವದು.

ಬಹುಮಾನಗಳ ವಿವರ. ೪ ಆಣೆಯ ಪೊಟ್ಲಗಳನ್ನು ತಕ್ಕೊಳ್ಳುವವರಿಗೆ ಸುಗಂಧ ದಂತ ಕಾಂತಿ ಚೂರ್ಣದ ಡಬ್ಬಿ ೧; ೮ ಆಣೆಯದನ್ನು ತಕ್ಕೊಂಡವರಿಗೆ ಜೋನ್ ಫೇಬರ್ ಪೆನ್ಸಿಲ್ ಡಜನ್ ೧; ೧ ರೂಪಾಯಿ ಪೊಟ್ಲಗಳನ್ನು ಪಡಕೊಂಡವರಿಗೆ ದೊಡ್ಡವರ ಉತ್ತಮವಾದ ಬನಿಯನ್ ೧; ೨ ರೂಪಾಯಿದ್ದನ್ನು ತರಿಸಿಕೊಳ್ಳುವವರಿಗೆ ಓಫೀಸ್ ನಂ. ೧ ಕಿಸೆ ಛಾಪೆಯ ಪೆಟ್ಟಿಗೆ ೧; ೪ ರೂಪಾಯಿಗಳದ್ದು ತರಿಸಿಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್, ಕೀಲೆಸ್ ಕಿಸೆ ಘಡಿಯಾರವು ಗ್ಲಾಸ್ ಸ್ಪ್ರಿಂಗ್ ಸಹಿತ.

ಬ್ಲೂ ಬ್ಲೇಕ್ ದೊಡ್ಡ ಶಾಯಿಯ ಬಾಟ್ಲಿ ೧ಕ್ಕೆ ಆಣೆ ೮. ಸಣ್ಣದಕ್ಕೆ ಆಣೆ ೪. ಶಾಯಿಯ ಗುಳಿಗೆಗಳೂ ಕಾಗದಗಳೂ ಸಹ ಸಿಕ್ಕುವವು. ಪರಸ್ಥಳದವರಿಗೆ ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:— ಕಲಾನಿಧಿ, ಮಂಗಳೂರು.
ಅಥವಾ ದಿ. ಊಲನ್ ಮಾರ್ಟ್ ನಂಬ್ರ ೧ ಮಂಗಳೂರು (ದ. ಕ)

ಸರ್ವರೂ ಸಂಗ್ರಹಿಸ ಬೇಕಾದ್ದು. ಪ್ರಾಸಾದಿಕ ಗ್ರಂಥ

ಶ್ರೀ ಶಿವಲೀಲಾಮೃತವು.

ಭಾಮಿನಿ ಷಟ್ಪದಿಯಲ್ಲಿ ೧೪ ಅಧ್ಯಾಯಗಳುಳ್ಳದ್ದು. ಇದರಲ್ಲಿ ಜಪಭಸ್ಮ ರುದ್ರಾಕ್ಷಧಾರಣ, ಪ್ರದೋಷ ವ್ರತ, ಶಿವದಿನ, ಗೋಕರ್ಣಮಹಿಮೆ; ವ್ಯಾಧ–ಹರಿಣಿಗಳ ಕಥೆ, ದಾಶಾರ್ಹ, ಮಿತ್ರಸಹ, ಸುಮಿತ್ರೆ, ಮಿಮರ್ಶನ, ಚಂದ್ರಸೇನ, ಸತ್ಯರಥ, ಧರ್ಮಗುಪ್ತ, ಚಿತ್ರವರ್ಮ, ಸಿಮಂತಿನಿ, ಸುಮೇಧ, ಸೋಮವಂತ, ಪಿಂಗಲೆ, ಭದ್ರಾಯು, ಶಾರದೆ, ಭದ್ರಸೇನ, ಕುಕ್ಕುಟ–ಮರ್ಕಟ, ಬಹುಲೆಯಾಖ್ಯಾನಗಳು; ಭಸ್ಮಾಸುರ, ತ್ರಿಪುರ, ತಾರಕರ ಸಂಹಾರ; ದಕ್ಷವಧೆ; ಶಿವಗಿರಿಜೆಯರ ಪಗಡೆಯಾಟ; ಶ್ರಿಯಾಳ ಚರಿತ್ರೆ ಸಹ ವರ್ಣಿಸಿಯದೆ.

ಕ್ರಯ ಪ್ರತಿಯೊಂದಕ್ಕೆ 4 ಆಣೆ. ಅಂಚೆವೆಚ್ಚ 2 ಆಣೆ. ಈ ಮೊದಲು ನಮ್ಮಲ್ಲಿಂದ ಸಾಮಾನು ಪಡಕೊಂಡವರು ಗುರ್ತದೊಡನೆ 4 ಆಣೆ ಸ್ಟಾಂಪು ಕಳುಹಿಸಿದರೆ ಒಂದು ಪ್ರತಿ ಉಚಿತವಾಗಿ ಶಿಕ್ಕುವುದು. ಇದನ್ನು ಪಡಕೊಳ್ಳುವವರಿಗೆ "ಭಕ್ತಿಮಹಿಮೆ" ಪುಸ್ತಕವು ಅರ್ಧ ಕ್ರಯಕ್ಕೆ (6 ಆಣೆ) ದೊರಕುವುದು. ಅಂಚೆವೆಚ್ಚ ಬೇರೆ.

ದಿ. ಊಲನ್ ಮಾರ್ಟ್, ಮಂಗಳೂರು.

POCKET DIARIES

FOR 1911.

1911ನೇ ಇಸವಿಯ ಪೋಕೆಟ್ ಡ್ಯಾರಿಗಳು.

ವಕೀಲರಿಗೂ, ವಕೀಲರ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಅವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು.

ನೋಟು ಬೂಕು ಸ್ಸಾಜು ಕ್ರಯ ರೂ. ೦—೮—೦

ಸಣ್ಣ ಸ್ಸಾಜು ಕ್ರಯ ರೂ. ೦—೪—೦

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಷನ್ ದೊರಕುವದು.

ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಪ್ರೆಸ್,
ಮಂಗಳೂರು ದ. ಕ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತಕಡೆ ಲಕ್ಷ್ಯಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ.)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು.

7 $3'' \times 8\frac{1}{4}''$, $3'' \times 5\frac{1}{4}''$; $8\frac{1}{4}'' \times 6\frac{1}{2}''$, $6\frac{1}{2}'' \times 4''$ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ಗದಾರ ವ ಆಪೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ.

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಸಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ ಮೆನೇಜರ್,
ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಸಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್ ಮಂಗಳೂರು.

Printed & published by V. S. Kamath, at the Mangalore Trading Association's Sharada Press, Mangalore.

Registered No M. 498.

ಸ್ವದೇಶಾಭಿಮಾನಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ವರ್ಷ ೧ಕ್ಕೆ ರೂ. 1-4-0. ಟಪ್ಪಾಲು ಹಾಸಲು ಶೇರಿ ರೂ. 2-1-0.

ಪುಸ್ತಕ 4. ಮಂಗಳೂರು, ತಾರೀಕು 2ನೇ ಶುಕ್ರವಾರ ದಶಂಬರ 1910. ಸಂಚಿಕೆ 48

Amrutanjan Depot Fort Bombay.

ಅಮೃತಾಂಜನ

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು. ಬಾಟ್ಲ ೧ರ ಕಿಮ್ಮತು 8 ಆಣೆ.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

SAFE ★ EFFICACIOUS ★ SURE ★ POWDERS ★ OINTMENTS ★ PILLS ★ WILLIAM & Co. BOMBAY

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

ಗಜಕರ್ಣದ ಮುಲಾಮು.

ಇದನ್ನು ಹಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ಹಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ. 4.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮಿಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ. 1.

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ಹಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳಿಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲ ಒಂದರ ಕಿಮ್ಮತು ರೂ. 1.

ಸುಂದರಿ ತೈಲ.

ಇದನ್ನು ಮೋರೆಗೆ ಹಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲ ಒಂದರ ಕಿಮ್ಮತು 8 ಆಣೆ.

ಖಜ್ಜಿ ಮುಲಾಮು.

ಬಾಟ್ಲ ಒಂದರ ಕಿಮ್ಮತು 3 ಆಣೆ.

ಜುಲಾಬು ಮಾತ್ರೆ.

ಬಾಟ್ಲ ಒಂದರ ಕಿಮ್ಮತು 8 ಆಣೆ.

ವಿಳಾಸ:— ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:— "ಅಮೃತಾಂಜನ", ಮುಂಬಯಿ.

"ಚಮತ್ಕಾರ ಚಿಂತಾಮಣಿ"

ಶಬ್ದ ಚಮತ್ಕಾರ ಅರ್ಥ ಚಮತ್ಕೃತಿಗಳಿಂದೊಡಗೂಡಿ ಮೃದುಮಧುರ ಶೈಲಿಯಿಂದ ಸಹಿತವಾಗಿ, ಧರ್ಮನೀತಿ ಜ್ಞಾನಗಳನ್ನೂ ವಿಶದಪಡಿಸುತ್ತಿರುವ ರಸಭರಿತವಾದ ಈ ಕಥೆಯನ್ನು ಓದತಕ್ಕವರು ರಾಮಾಯಣದಲ್ಲಿನ ಹೆಸರುಗಳನ್ನು ಮಾತ್ರ ಜ್ಞಾಪಿಸಿಕೊಂಡು ಇದರಲ್ಲಿ ಹೊಂದಿಸಿಕೊಂಡರೆ ಮುಂದೆ ಇದರಲ್ಲಿನ ಸವಿಯು ಬೇಗನೆ ಗೊತ್ತಾಗುತ್ತದೆ. ಕ್ರಯ ರೂ. 0—10—0.

"ವಿದ್ಯಾನಂದ' ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ತಿ ಪ್ರಿಂಟಾಗಿ ಸಿದ್ಧವಾಗಿದೆ. ಬೆಲೆ 1—0—0.

ಮುಕುಂದಮಾಲಾ ಸ್ತೋತ್ರ.

ಹೆಚ್ಚು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ. ಬೆಲೆ 0—4—0.

ವಿಳಾಸ:- ಮ್ಯಾನೇಜರ್,

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ.

೧೯೧೧ನೇ ದಿ "ಮಾಡಲ್" ಪಾಕೆಟ್ ಡೈರಿ.

ವಿವರಣೆ.

ನಂ. 1. ಪಂಚಾಂಗಸಹಿತವಾದ ಚಿಕ್ಕ ಸೈಜ್ ಡೈರಿ $3\frac{1}{2}$ ಅಂಗುಲ, ಅಗಲ $4\frac{1}{4}$ ಉದ್ದವಿರುವ 540 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 4ಆಣೆ.

ನಂ. 2. ಡಿಟೊ ಮೇಲ್ಕಂಡ ಚಿಕ್ಕ ಸೈಜ್ ಪ್ಲಾಪ್ ಬೈಂಡು ಮಾಡಿರುವುದು. ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಸ್ಟಾಂಪು ವಗೈರೆ ಇಡುವುದಕ್ಕೆ ಚೀಲವಿದೆ. ಮೇಲಗಡೆ ಮುಚ್ಚುವದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್ಸಲ್ ಇಟ್ಟಿದೆ. ಇದರ ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 3. ಪಂಚಾಂಗಸಹಿತವಾದ ದೊಡ್ಡ ಸೈಜ್ ಡೈರಿ $4\frac{1}{4}$ ಅಂಗುಲ ಅಗಲ 7 ಅಂಗುಲ ಉದ್ದವಿರುವ 490 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 4. ಡಿಟೊ ಮೇಲ್ಕಂಡ ದೊಡ್ಡ ಸೈಜ್. ಪ್ಲಾಪ್ ಬೈಂಡು ಮಾಡಿರುವದು ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಕಾರ್ಡು, ಕವರು, ಸ್ಟಾಂಪು ವಗೈರೆ ಇಡುವುದಕ್ಕೆ ಚೀಲ ಇರುತ್ತದೆ. ಮೇಲ್ಗಡೆ ಮುಚ್ಚುವುದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್ಸಲ್ ಇಟ್ಟಿದೆ. ಕ್ರಯ ಪ್ರತಿ 1ಕ್ಕೆ 8 ಆಣೆ.

ನಂ. 5. ಆಫೀಸರ್ಸ್ ಹ್ಯಾಂಡ್ ಡೈರಿ 1—0—0.

ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಳು ವವರಿಗೆ ಇದು ಸಕಾಲವಾಗಿದೆ.

ಕೂಡಲೇ ಬರೆದು ತರಿಸಿಕೊಳ್ಳಿರಿ

N. B:—1. ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ತರಿಸಿಕೊಂಡರೆ 1 ಡೈರಿಯನ್ನು ಬಹುಮಾನವಾಗಿ ಕೊಡುತ್ತೇವೆ. 2. ವಿ.ಪಿ. ಮೂಲಕ ತರಿಸಿಕೊಳ್ಳುವವರು ಪೋಸ್ಟು ಚಾರ್ಜು ಮತ್ತು ವಿ.ಪಿ. ಕಮಿಶನ್ ಸಹ ಬೇರೆ ಕೊಡಬೇಕು. 3. ಹೆಚ್ಚು ವಿಷಯ ತಿಳಿಯಲಪೇಕ್ಷಿಸುವವರು ರಿಪ್ಲೈ ಕಾರ್ಡನ್ನಾಗಲಿ ಅರ್ಧಾಣೆ ಪೋಸ್ಟು ಲೇಬಲ್ ಆಗಲಿ ಮುಂಗಡ ಕಳುಹಿಸಬೇಕು. 4. ಎಷ್ಟು ಜಾಸ್ತಿ ಪ್ರತಿಗಳನ್ನು ತರಿಸಿಕೊಳ್ಳುವರೋ ಅಷ್ಟು ಪೋಸ್ಟು ಚಾರ್ಜು ಕಮ್ಮಿ ಆಗುವದು. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಆಫೀಸರ್ಸ್ ಪ್ಯಾನಿಸೀ ಹ್ಯಾಂಡ್ ಡೈರಿ ಎಂಬುವದು ಹಸನಾದ ಕಾಗದದಿಂದಲೂ ಮತ್ತು ಒಳ್ಳೇ ಕ್ಯಾಲಿಕ್‌ನಿಂದಲೂ ಸಹಾ ತಯಾರುಮಾಡಿರುತ್ತದೆ.

ಮೆತ್ತೆಗಳು, ಮತ್ತು ಮೇಜಿನ ಚೌಕಗಳು, ವಗೈರೆಯವುಗಳ ಮೇಲೆ ಚಿತ್ರವಿಚಿತ್ರವಾದ ಕಸೂತಿ ಕೆಲಸವನ್ನು ಮಾಡಲು ಅನುಕೂಲವಾದ "ಕೈ ಮೆಷಿನ್"ಗಳು, ನಮೂನೆಗಳು ಮತ್ತು ಇದಕ್ಕೆ ಅನುಕೂಲವಾದ ರೇಶ್ಮೆ ಮತ್ತು ಉಲನ್‌ದಾರಗಳು, ಸೂಜಿಗಳು; ಕತ್ತರಿಗಳು; ಚೌಕಟ್ಟುಗಳು ವಗೈರೆ ವಿಶಿಷ್ಟ ಸಾಮಾನುಗಳು, ಸ್ಟೈಜುವಾರಿ ಕಸೂತಿ ಕಾರ್ಡುಗಳು ಕಲ್ಕತ್ತೆಯ ಕ್ಯಾಟಲಾಗ್ ಕ್ರಯಕ್ಕೆ ಇಲ್ಲಿ ದೊರೆಯುತ್ತವೆ.

ಎಲ್. ಎ. ಪೋರುವಾಲ್ ಕಂಪೆನಿ.

ಬೆಂಗಳೂರು ಸಿಟಿ.

ವಿಕ್ರಯಕ್ಕೆ ಸಿದ್ಧವಾಗಿರುವುದು

ಶ್ರೀ ಚಿಕ್ಕುಪಾಧ್ಯಾಯರಿಂದ

ವಿರಚಿತವಾದ

"ಶ್ರೀ ಶುಕಸಪ್ತತಿ"

(ಡಮ್ಮಿ ಅಷ್ಟಪುಟ—ಒಟ್ಟು ಪುಟಗಳು ೫೬೦).

ಈ ಗ್ರಂಥವು ಈಗ ಮೂರನೇ ಸಲ ಮುದ್ರಣದಲ್ಲಿ ಪೂರ್ವ ಪ್ರತಿಯಲ್ಲಿದ್ದಂತೆ ಯಾವ ಲೋಪವೂ ಇಲ್ಲದೆ ನೂತನವಾಗಿ ಪರಿಷ್ಕರಿಸಿ ಪ್ರಕಟಿಸಲ್ಪಟ್ಟಿದೆ.

ಮೇಲು ಪ್ರತಿ ೧ಕ್ಕೆ ಕ್ರಯ ರೂ. ೨—೦—೦

ಉತ್ತಮ ಪ್ರತಿ „ ರೂ. ೩—೦—೦

ಮುಖ್ಯವಾಗಿ ನಮ್ಮ ದೇಶದಲ್ಲಿ ಕನ್ನಡ ಭಾಷೆಯನ್ನು ಬಲ್ಲ ಪ್ರತಿಯೊಬ್ಬ ಗೃಹಸ್ಥರ ಮನೆಯಲ್ಲಿಯೂ, ಗೃಹಪತಿಗಳು ತಮ್ಮ ಕುಟುಂಬದಲ್ಲಿ ಹೆಂಗಸರು, ಗಂಡಸರು, ಪ್ರಾಯಸ್ಥರು, ಮುದುಕರು, ಹುಡುಗರು. ಹುಡುಗಿಯರು ವೇದಸಮ್ಮತವಾದ ಮತಾಚಾರಗಳನ್ನೂ, ಧರ್ಮಗಳನ್ನೂ, ಸಂಪ್ರದಾಯಗಳನ್ನೂ, ತಿಳಿದುಕೊಂಡು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಸಂತೋಷವನ್ನು ಅನುಭವಿಸುತ್ತಾ ಆಸ್ತಿಕರಾಗಿರಬೇಕೆಂದು ಅಪೇಕ್ಷೆ ಇದ್ದರೆ ಈ ಪುಸ್ತಕವನ್ನು ಅವಶ್ಯಕವಾಗಿ ತೆಗದುಕೊಡಬೇಕು.

ಭಾಷ್ಯಂ. ರಾಮಾಚಾರ್ಯ,

೪೫. ಆಸ್ಪತ್ರಿ ರೋಡ್,

ಬೆಂಗಳೂರು ಶಹರು.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಶಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡುಬಲ್ಲೆನು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ; ಸರ್ವರೂ ಇದನ್ನು ಉಪಯೋಗಿಸ ಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು. ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನೂ ಡುತ್ತದೆ. ಇದುಮನೋಹರವಾದವುಳಗ್ಗಿಕೊ ಸುದಾವದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,

216 ಕಾರನ್‌ವಾಲಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಪೋರುವಾಲ್ ಎಂಡ್ ಕೊ,

ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು;—ಮ। ರಾ। ರಾ। ಸಿ. ಆರ್. ಕಾಮತರು,

ಉಲನ್ ಮಾರ್ಟ್, ಮಂಗಳೂರು

ತೃತೀಯ ಗೌಡಸಾರಸ್ವತ ಪರಿಷದ.

ಮಂಗಳೂರಲ್ಲಿ ನೆರದ ೨ನೇ ಪರಿಷದದಲ್ಲಿ ಠರಾವಾದ ಪ್ರಕಾರದ ೩ನೇ ಪರಿಷದವು ಗೋವಾ ಪ್ರಾಂತ್ಯದ ಮಾಡಗಾಂನಲ್ಲಿ ಇದೇ ಬರುವ ದಶಂಬರ ತಿಂಗಳಲ್ಲಿ ಜರಗುವದು. ಕಳದ ತಿಂಗಳ ತಾ. ೨೩ಲ್ಲು ಪಣಜಿ ಎಂಬಲ್ಲಿಯ ಗೋಮಾಂತಕದ ಪ್ರಮುಖ ಗೌಡಸಾರಸ್ವತರು ಸಭೆ ಕೂಡಿ ಸ್ವಾಗತ ಕಮಿಟಿಯನ್ನು ಸ್ಥಾಪಿಸಿರುವರು. ಸ್ವಾಗತ ಕಮಿಟಿಯ ಅಧ್ಯಕ್ಷಸ್ಥಾನವನ್ನು ಪ್ರಸಿದ್ಧ ಲೋಕಮಾನ್ಯ ಮತ್ತು ರಾಜಮಾನ್ಯ ಗೃಹಸ್ಥ ಶ್ರೀಮಂತ ವಿಷ್ಣುಬಾಬ್ ದೆಂಪೆಯವರಿಗೂ ಮತ್ತು ಉಪಾಧ್ಯಕ್ಷಸ್ಥಾನವನ್ನು ಗೋಮಾಂತಕದ ಕುಂಡೈ ಎಂಬಲ್ಲಿಯ ಶ್ರೀಮಂತ ಗೃಹಸ್ತ ಸಾಂತುಬಾಬ್ ಶೆಣ್ಯಾಯವರಿಗೂ ಅರಿಸಿಕೊಟ್ಟಿರುವರು. ಪರಿಷದದ ಅಧ್ಯಕ್ಷಸ್ಥಾನವನ್ನು ಅಲಂಕರಿಸುವರೆ ಕೈವಲ್ಯ ಮಠಾದೀಶ ಶ್ರೀಮತ್ ಪೂರ್ಣಾನಂದ ಸರಸ್ವತೀ ಸ್ವಾಮಿಯವರಿಗೂ ಗೋಕರ್ಣಮಠದ ಶ್ರೀಮತ್ ಇಂದಿರಾಕಾಂತ ತೀರ್ಥರವರಿಗೂ ವಿನಂತಿಮಾಡಿರುವರು.

ಪರಿಷದದ ಇತರ ವಿವರಕ್ಕೆ ಅಮಂತ್ರಣ ಸಭೆಯ ಕಾರ್ಯದರ್ಶಿಗಳಾದ ದತ್ತಾತ್ರಯ ಪಾಂಡುರಂಗನಾಯಕ, ದಲಾಲ್ Margao (Goa) ಈ ವಿಳಾಸಕ್ಕೆ ಬರದರೆ ಎಲ್ಲಾ ವಿವರವೂ ತಿಳಿಸಲಾದೀತು.

ದತ್ತಾತ್ರಯ ಪಾಂಡುರಂಗನಾಯಕ,

ದಲಾಲ್,

ಕಾರ್ಯದರ್ಶಿ.

—o—

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 2ನೇ ದಶಂಬರ 1910.

ಕೃಷಿ ವೃತ್ತಿ.

ಮೆ. ಕೌಚ್‌ಮೆನ್ ದೊರೆಗಳವರ ಭಾಷಣ.

ಕೂಲಿ ಕೆಲಸವನ್ನು ಗೈಯ್ಯಲು ಅಂಜುವ ನಡುತರಗತಿಯವರು ವೃತ್ತಿ ಇಲ್ಲದೆ ಬಹಳವಾಗಿ ನರಳುತ್ತಿರುವರು. ಅದರಲ್ಲಿಯೂ ಹಳ್ಳಿಗಳಲ್ಲಿರುವ ಈ ತರಗತಿಯವರಿಗೆ ಹೊಟ್ಟೆ ಹೊರಕೊಳ್ಳಲು ಉದ್ಯೋಗ ದೊರಿಯುವುದು ಈಗೀಗ ಅಸಾಧ್ಯವಾಗಿ ಬಂದಿದೆ. ಕೈಗಾರಿಕೆಗಳು ದೇಶದಲ್ಲಿ ಸಾಕಷ್ಟು ಪ್ರಚುರವಾಗದೆ ಇರುವುದರಿಂದಲೂ, ಚಿಲ್ಲರೆ ವ್ಯಾಪಾರ ವೈವಾಟಗಳಲ್ಲಿ ಬಹಳ ಜನರ ಮೇಲಾಟವಿರುವುದರಿಂದಲೂ ಈ ದುರ್ದಶೆಗೆ ಕಾರಣವಾಯಿತೆನ್ನಬೇಕು. ಏನಾದರೂ ವೃತ್ತಿಯನ್ನು ಮಾಡಿಕೊಂಡು ಉದರಪೋಷಣೆಯನ್ನು ಸಾಗಬೇಕೆಂಬ ಕಾಂಕ್ಷೆಯಿಂದ ಹಳ್ಳಿ ನಿವಾಸಿಕರು ಪಟ್ಟಣಗಳನ್ನು ಸೇರಿಕೊಂಡು ಹಳ್ಳಿಗಳು ನಿರ್ಜನ ಪ್ರದೇಶಗಳಾಗುತ್ತಿರುವವು. ಪಟ್ಟಣದಲ್ಲಿ ಒಂದುವೇಳೆ ಉದ್ಯೋಗವು ದೊರಕಿದರೂ ಆರೋಗ್ಯಕರ ರೀತಿಯಲ್ಲಿ ತಮ್ಮ ಜೀವನವನ್ನು ನಡಿಸಲಾರದೆ ಪಟ್ಟಣದ ಮಹಾ ಸಂಕಷ್ಟಗಳಿಗೆ ಕಾಲಕ್ರಮವಾಗಿ ಇವರು ಗುರಿಯಾಗುವುದು ದೇಶದ ಎಲ್ಲಾ ಕಡೆಗಳಲ್ಲಿಯೂ ಅಪರೂಪವಾದ ವಿಷಯವಲ್ಲ. ಹೀಗೆ ಹಳ್ಳಿಗಳನ್ನು ಬಿಟ್ಟು ಪಟ್ಟಣವನ್ನು ಸೇರುವವರಲ್ಲಿ ಚಿಕ್ಕ ಚಿಕ್ಕ ಆಸ್ತಿಗಳುಳ್ಳವರು ಅನೇಕರಿರುವರು. ಇವರು ತಮ್ಮ ಆಸ್ತಿಗಳನ್ನು ಗೇಣಿಗೆ ವಹಿಸಿಕೊಟ್ಟು ಗೇಣಿ ಮೂಲಕ ಅಲ್ಪ ಮುನಾಫೆಯನ್ನು ಪಡಿಯುವರು. ಇಂಥವರು ಕೃಷಿ ವೃತ್ತಿಯನ್ನು ಅನುಸರಿಸಿದ್ದಲ್ಲಿ ತಮ್ಮ ದುರ್ದಶೆಯನ್ನು ಹೋಗಗೊಳಿಸಬಹುದು. ಸರಕಾರದವರೂ ಸಹಾ ಕೃಷಿ ವೃತ್ತಿಯ ಅಭಿವೃದ್ಧಿಗಾಗಿ ಸಾಹಸಪಡುವರಲ್ಲದೆ ಕೃಷಿ ವಿದ್ಯೆಯಲ್ಲಿ ಜನರಿಗೆ ಮೆಚ್ಚಿಕೆಯುಂಟಾಗುವಂತೆ ಸಂದರ್ಭಾನುಸಾರ ಪ್ರಯತ್ನಿಸುತ್ತಿರುತ್ತಾರೆ. ಯುವಕರು ಭೂಸಾಗುವಳಿಯನ್ನು ತಮ್ಮ ವೃತ್ತಿಯಾಗಿ ಅವಲಂಬಿಸುವ ವಿಷಯವಾಗಿ ಮದ್ರಾಸಿನಲ್ಲಿ ವ್ಯವಸಾಯ ಇಲಾಖೆಯ ಡಿರೆಕ್ಟರರಾದ ಮೆ। ಕೌಚ್‌ಮೆನ್ ದೊರೆಗಳವರು ಇತ್ತಲಾಗೆ ಒಂದು ಭಾಷಣವನ್ನು ಮಾಡುವವರಾದರು. ಈ ಭಾಷಣದಲ್ಲಿ ಇವರು ಈಗ ಈ ವೃತ್ತಿಯನ್ನನುಸರಿಸುವವರಿಗೆ ಇರುವ ಫಲಾಫಲಗಳ ಕುರಿತು ಮುಖ್ಯವಾಗಿ ಮಾತಾಡಿದರು.

ಭೂವ್ಯವಸಾಯವು ಎಂದೆಂದಿಗೂ ಮನುಷ್ಯ ಜಾತಿಯಲ್ಲಿ ಬಹುಪಕ್ಷದವರ ವೃತ್ತಿಯಾಗಿರುವುದಲ್ಲದೆ ವ್ಯಾಪಾರ ಕೈಗಾರಿಕೆಗಳು ಬಹಳವಾಗಿ ಇದನ್ನಾಧರಿಸಿರುವವೆಂತ ಅಪ್ಪಣೆಕೊಟ್ಟು ಇಂತಹ ವೃತ್ತಿಗೆ ಪ್ರಕೃತ ಉದ್ಯೋಗಕಾಮಿಗಳಾದ ಯುವಕರು ಯಾವ ರೀತಿ ಗಮನಕೊಡಬೇಕೆಂಬ ವಿಷಯವನ್ನು ವಾದಿಸಿರುವರು. ವೃತ್ತಿಗಳಲ್ಲಿ ಯಾವವು ಅವಲಂಬನಾಯೋಗ್ಯವಾಗಿರುವವೆಂಬದನ್ನು ವಿಚಾರಿಸಿಕೊಳ್ಳುವ ವಿದ್ಯಾರ್ಥಿಗಳಲ್ಲಿ ಎರಡು ತರಗತಿಯವರಿರುವರು. ಶ್ರೀಮಂತರು ಮತ್ತು ಸಾಧಾರಣ ತರಗತಿಯವರು. ಸಾಧಾರಣ ತರಗತಿಯವರೇ ಹೆಚ್ಚಾಗಿರುವುದರಿಂದ ಇವರ ಪರವಾದ ವಿಚಾರವನ್ನೇ ಕುರಿತು ಆರಂಭದಲ್ಲಿ ಪ್ರಸ್ತಾಪಿಸಿರುವರು. ಸಾಧಾರಣ ತರಗತಿಯವರು ಉದ್ಯೋಗವನ್ನು ಪ್ರಾರಂಭಿಸಿದಂದಿನಿಂದ ದುಡಿದು ತಮ್ಮ ಕುಟುಂಬಗಳನ್ನು ರಕ್ಷಿಸಲು ಬೇಕಾದ್ದರಿಂದ ತಾವು ಅನುಸರಿಸುವ ಉದ್ಯೋಗದಿಂದ ತಮಗೆ ಏನು ಸಿಕ್ಕಬಹುದೆಂಬುದನ್ನು ಮೊದಲಾಗ ಪರ್ಯಾಲೋಚಿಸುವರು. ಈ ರೀತಿ ಆಲೋಚಿಸುವುದಾದರೆ ವಕೀಲರ ಮತ್ತು ಡಾಕ್ಟರರ ಸಹಾಯವನ್ನು ಕೇಳಿಬರುವಂತೆ ಜನರು ವ್ಯವಸಾಯ ಶಾಸ್ತ್ರಜ್ಞರ ಸಹಾಯವನ್ನು ಕೇಳಬರುವುದಿಲ್ಲ. ಹೀಗೆ ಸಹಾಯವನ್ನು ಕೇಳುವ ಬದಲಿಗೆ ವ್ಯವಸಾಯ ವಿಷಯದಲ್ಲಿ ತನಗಿರುವ ಮಾಹಿತಿಯಷ್ಟು ಕೊಲೇಜುಗಳಲ್ಲಿ ವ್ಯವಸಾಯ ಶಾಸ್ತ್ರವನ್ನು ಕಲಿತಿರುವವನಿಗೆ ಇಲ್ಲವೆಂಬ ಭಾವನೆ ರೈತನಲ್ಲಿದೆ ಎಂತ ದೊರೆಗಳವರು ಸೂಚಿಸಿದರು. ರೈತನಲ್ಲಿ ಇಂಥಾ ಭಾವನೆ ಇರುವುದಕ್ಕೆ ಕಾರಣವಿದೆ. ಈತನಕ ನಮ್ಮ ವಿದ್ಯಾಭ್ಯಾಸವೆಲ್ಲವೂ ಪುಸ್ತಕ ಮಾಹಿತಿಯದೇ ಆಗಿರುವುದು ವಿನಹ ಕಾರ್ಯಮಾಹಿತಿದ್ದಲ್ಲ. ವ್ಯವಸಾಯ ಕೊಲೇಜಿನಲ್ಲಿ ದೊರಿಯೋಣಾಗುವ ವಿದ್ಯಾಭ್ಯಾಸವು ಕಾರ್ಯಮಾಹಿತಿದು ಎಂತ ಕ್ರಮೇಣ ಆ ಕೊಲೋಜಿನಲ್ಲಿ ಪಾಸಾಗಿ ಬಂದವರು ತೋರ್ಪಡಿಸಿದ್ದಲ್ಲಿ ರೈತರಲ್ಲಿರುವ ಮೇಲಿನ ಈ ಭಾವನೆಯು ಸಹ ಕ್ರಮವಾಗಿ ಮಾಜಿಹೋಗುವದು. ಅಪ್ಪರ ತನಕ ವ್ಯವಸಾಯ ಕೊಲೇಜುಗಳಲ್ಲಿ ವಿದ್ಯಾಭ್ಯಾಸವನ್ನು ಹೊಂದಿದವರು ಸರಕಾರಿ ಅಥವಾ ದೊಡ್ಡ ದೊಡ್ಡ ಜಮೀನುದಾರರ ಚಾಕರಿಯನ್ನು ಹುಡುಕಬೇಕಾಗಿರುವುದು.

ವ್ಯವಸಾಯ ಕೋಲೇಜಿನಲ್ಲಿ ಪಾಸಾದವರಿಗೆ ಪ್ರಕೃತ ಸರಕಾರದಲ್ಲಿ ಎಷ್ಟು ಹುದ್ದೆಗಳು ದೊರಿಯಬಹುದೆಂಬದಾಗಿ ಈ ಸಂದರ್ಭದಲ್ಲಿ ದೊರೆಗಳವರು ಹೇಳಿರುವರು. ರೂ. ೨೫ರಿಂದ ೫೦ರ ತಲಬಿನ ೨೩ ಜನ ವ್ಯವಸಾಯ ಠಾಣ್ಯಗಳ ಮೆನೇಜರರು; ರೂ. ೫೦ರಿಂದ ೧೦೦ ತಲಬಿನ ೯ ಜನ ಎರಡನೇ ತರಗತಿಯ ಮೆನೇಜರರು; ರೂ. ೧೦೦ರಿಂದ ೧೫೦ ಸಂಬಳದ ೬ ಜನ ಒಂದನೇ ತರಗತಿಯ ಮೆನೇಜರರು; ೧೫೦ರಿಂದ ೨೫೦ ಸಂಬಳದ ೬ ಹುದ್ದೆಗಳು; ೫೦ರಿಂದ ೧೫೦ ರೂಪಾಯಿ ಸಂಬಳದ ೯ ಹುದ್ದೆಗಳು; ರೂ. ೨೫೦ರಿಂದ ರೂ. ೪೦೦ರ ಸಂಬಳದ ಎರಡು ಜನ ಅಸಿಸ್ಟಾಂಟ್ ಡಿರೆಕ್ಟರರವರು. ಈ ಎಲ್ಲಾ ಹುದ್ದೆಗಳಿಗೆ ವ್ಯವಸಾಯ ಕೋಲೇಜಿನಿಂದ ಪಾಸಾದವರು ಬೇಕಾಗಿರುವರು. ವ್ಯವಸಾಯ ಇಲಾಖೆಯು ಇನ್ನೂ ಬೆಳಿಯುವ ಸಂದರ್ಭಗಳಿರುವುದರಿಂದ ಇದಕ್ಕಿಂತ ಹೆಚ್ಚಿಗೆ ನೌಕರರು ಈ ಇಲಾಖೆಯಲ್ಲಿ ಬೇಕಾದರೆಂತ ಸಹಾ ಡಿರೆಕ್ಟರರವರು ಹೇಳಿರುತ್ತಾರೆ. ಕೊಯಂಬುತ್ತೂರು ಕೊಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕೊಡೋಣಾಗುವ ತರಬೇತಿಯ ಸ್ವಭಾವವನ್ನು ರೈತರು ಅರಿತ ಮೇಲೆ ಕೋಲೇಜಿನಿಂದ ಪಾಸಾದವರ ಸಹಾಯವನ್ನು ರೈತರು ಹೆಚ್ಚೆಚ್ಚಾಗಿ ಕೇಳುವರೆಂಬ ಕೋರಿಕೆಯು ಸಹಾ ದೊರೆಗಳಲ್ಲಿದೆ. ಈ ರೀತಿ ಕೊಯಂಬುತ್ತೂರು ವ್ಯವಸಾಯ ಕೋಲೇಜಿನಲ್ಲಿ ಕಲಿತು ಪಾಸಾದವರಿಗೆ ಇರುವ ಪ್ರಯೋಜನಗಳನ್ನು ಹೇಳಿ ವ್ಯವಸಾಯ ಕೊಲೇಜಿನಲ್ಲಿ ಹ್ಯಾಗೆ ತರಬೇತಿಯನ್ನು ಹೊಂದಬಹುದೆಂಬದಾಗಿ ಸೂಚಿಸಿದರು. ತರಬೇತಿಯ ಕ್ರಮಗಳನ್ನು ಮೊದಲೊಮ್ಮೆ ಸ್ವದೇಶಾಭಿಮಾನಿಯಲ್ಲಿ ಪ್ರಕಟಿಸಿರುತ್ತೇವೆ.

ವೃತ್ತಿಯ ಫಲಾಫಲಗಳನ್ನು ಅದರಿಂದ ದೊರಿಯತಕ್ಕ ದ್ರವ್ಯಲಾಭದಿಂದ ಮಾತ್ರ ಪರಿಗಣಿಸುವುದು ಉಚಿತವಲ್ಲವೆಂದೂ ದ್ರವ್ಯನಿಮಿತ್ತದಿಂದಲೇ ವೃತ್ತಿಯನ್ನನುಸರಿಸುವಲ್ಲಿ ದೊರಿಯುವ ಫಲಕ್ಕಿಂತಲೂ ಅದರಲ್ಲಿರುವ ಅಭಿರುಚಿ ಯಾ ಪ್ರಯೋಜನತೆಯ ಭಾವನೆಗಳಿಂದ ಅದನ್ನು ಅವಲಂಬಿಸಿದವರಿಗೆ ಫಲಪ್ರಾಪ್ತಿಯು ಅಧಿಕವಾಗಿ ದೊರಿಯುವುದೆಂದೂ ಹೇಳಿದ್ದಲ್ಲದೆ ವೃತ್ತಿಯಿಂದ ತನ್ನ ಆಶೆ ಕಾಂಕ್ಷೆಗಳು ತೃಪ್ತಿಹೊಂದುವ ವಿಚಾರದೊಡನೆ ತಾನು ಇತರರಿಗೆ ಈ ಮೂಲಕ ಎಷ್ಟು ಪ್ರಯೋಜನವನ್ನುಂಟುಮಾಡುವೆನೆಂಬ ಭಾವನೆಗೆ ಸಹಾ ಎಡೆಗೊಡುವುದು ಉಚಿತವೆಂತ ಅಪ್ಪಣೆಗೊಡಿಸಿದರು. ಇಂಥಾ ಭಾವನೆಗಳಿಂದ ಸಾಧಾರಣದ ತರಗತಿಯವರು ಕೃಷಿ ವೃತ್ತಿಯನ್ನವಲಂಬಿಸಲಿಕ್ಕೆ ಹೆಚ್ಚಿನ ಪ್ರೇರೇಪಣೆಯು ಇರುವುದು.

ಶ್ರೀಮಂತರು ಸಾಗುವಳಿ ಅಭ್ಯಾಸವನ್ನು ಮಾಡಿದ್ದರಿಂದ ಒಕ್ಕಲುಗಳಿಗೆ ಗೇಣಿಗೆ ಆಸ್ತಿಗಳನ್ನು ಕೊಡುವ ಬದಲಿಗೆ ತಾವೇ ವಿಚಕ್ಷಣತೆಯಿಂದ ಸಾಗುವಳಿ ನಡಿಸಿ ಅಧಿಕ

ಲಾಭ ಪಡಿಯಬಹುದು. ಇದಕ್ಕೆ ದೃಷ್ಟಾಂತವಾಗಿ ೪೦೦ ರೂಪಾಯಿ ಜಮೀನು ಹುಟ್ಟುವಳಿ ಇರುವವನೊಬ್ಬನು ನವೀನ ಕೃಷಿ ಸಾಧನೆಗಳಿಂದ ತನ್ನ ಹುಟ್ಟನ್ನು ೬೦೦೦ ರೂಪಾಯಿಗಳಿಗೆ ಹೆಚ್ಚಿಸಿರುವನೆಂಬದಾಗಿ ಹೇಳಿದರು. ಹೆಚ್ಚು ಮೇಲಾಟವಿರುವ ವಕೀಲಿ, ಸರಕಾರಿ ಹುದ್ದೆಗಳಿಗೆ ಹೋಗುವ ಬದಲಿಗೆ ಸಂಪನ್ನರೂ ಸಹ ಕೃಷಿ ವೃತ್ತಿ ಈ ವೇಳೆಯಲ್ಲಿ ಅವಲಂಬಿಸುವುಮಿತ್ತಮವೆಂತ ದೊರೆಗಳವರ ಭಾಷಣದಿಂದ ವ್ಯಕ್ತವಾಗುತ್ತದೆ.

ಕೃಷಿವೃತ್ತಿಯು ಹೀಗೆ ದ್ರವ್ಯಾರ್ಜನೆಗೆ ಮಾತ್ರವಲ್ಲ ಆರೋಗ್ಯಕ್ಕೆ ಸಹ ಉತ್ಕೃಷ್ಟವಾದ ವೃತ್ತಿ ಎಂದು ಮೆ| ಕೌಚ್‌ಮೆನ್ ದೊರೆಗಳವರು ರುಜುಪಡಿಸಿರುವರು. ಸರಕಾರಿ ಹುದ್ದೆ ಮೊದಲಾದವುಗಳಲ್ಲಿ ಕೆಲಸಗಳನ್ನು ಹೆಚ್ಚಾಗಿ ಆಫೀಸಿನ ಒಳಗಡೆಯಲ್ಲಿಯೇ ಸಾಯಂಕಾಲ ತನಕವಿದ್ದು ಮಾಡಬೇಕಾದ್ದರಿಂದ ಶುದ್ಧ ಗಾಳಿಯನ್ನು ಆಸ್ವಾದಿಸುವುದಕ್ಕೂ ವ್ಯಾಯಾಮಕ್ಕೂ ಆಸ್ಪದ ದೊರಕದೆ ಅಲ್ಪಾಯುಷ್ಯಿಗಳಾಗಿ ನೌಕರರು ಮೃತಪಡುವುದುಂಟು. ಇಂಥಾ ಸಂದರ್ಭಗಳು ಕೃಷಿ ವೃತ್ತಿಯಲ್ಲಿ ಅಪರೂಪ.

ಭೂಸಾಗುವಳ್ಳಿ ಉದ್ದಿಮೆಯ ಉತ್ಕೃಷ್ಟತೆಯನ್ನು ಬೇರೊಂದು ವಿಧಾನದಲ್ಲಿ ತೋರಿಸಿರುವರು. ಯಾವ ವೃತ್ತಿಯಲ್ಲಿಯಾದರೂ ಒಬ್ಬನ ಮೇಲ್ಮೆ ಎಂದರೆ ಇನ್ನೊಬ್ಬನ ಬಡಪತ್ತಾಗಿರುವುದು. ಆಫೀಸುಗಳಲ್ಲಿ ಒಬ್ಬನಿಗೆ ಬಡ್ತಿ ಸಿಕ್ಕಿತಂದರೆ ಇನ್ನೊಬ್ಬನು ಕಡಿಮೆ ಸಂಬಳದಲ್ಲಿಯೇ ಇರಬೇಕಾಗುವುದು. ವಕೀಲರಲ್ಲಿ ಒಬ್ಬನು ಹೊಸಬನು ಬಂದರೆ ಈತನಿಗೆ ಸಿಕ್ಕುವ ಆದಾಯ ದಾಮಾಷಾಯಿಯಲ್ಲಿ ಇತರರ ಆದಾಯವು ತಗ್ಗುವುದು. ಕೃಷಿವೃತ್ತಿಯಲ್ಲಿಯಾದರೋ ಹಾಗಲ್ಲ. ತನ್ನ ಆಸ್ತಿಯಲ್ಲಿ ಪರಿಶ್ರಮಪಟ್ಟು ಹೆಚ್ಚು ಹುಟ್ಟುವಳಿಯನ್ನು ದುಡಿದರೆ ಇದರಿಂದ ಯಾರಿಗೂ ನಷ್ಟವಿಲ್ಲ.

ಪಾಶ್ಚಾತ್ಯ ದೇಶಗಳಲ್ಲಿ ಕೈಗಾರಿಕೆಗಳಿಂದುಂಟಾದ ಹೀನವಾದ ಸಮಾಜ ಸ್ಥಿತಿಯನ್ನು ವರ್ಣಿಸಿ ಅವುಗಳಿಂದ ತೋರುವ ಅಶುಭಸೂಚಕ ಚಿನ್ಹಗಳಿಂದ ನಾವು ಜಾಗರೂಕರಾಗಿದ್ದು ವ್ಯವಸಾಯ ವೃದ್ಧಿಯನ್ನೇ ಹೆಚ್ಚಾಗಿ ಸಾಧಿಸಬೇಕೆಂದು ಹೇಳಿ ಇನ್ನು ಕೆಲವು ಮಾತುಗಳಿಂದ ತಮ್ಮ ಭಾಷಣವನ್ನು ಮುಕ್ತಾಯಪಡಿಸಿದರು.

ಮಹಾರಾಣಿ ಗೃಹಶೀಲೆ.

ಬಿ. ಆನಂದ ರಾವ್ ಇವರಿಂದ.

(ಕಳದ ಸಂಚಿಕೆಯಿಂದ ಮುಂದರಿಸಿದುದು.)

೧೬

ಇತ್ತಲಾಗೆ ಮಂಗಲಾಪುರದಲ್ಲಿ ಚಂದ್ರಶೇಖರನು ಗೃಹಶೀಲೆಯ ಸುಗುಣಗಳನ್ನಿನ್ನೊಮ್ಮೆ ವರಗಲ್ಲಿಗೆ ಹಾಕುವುದಕ್ಕೊಂದು ನವೀನವಾದ ಉಪಾಯವನ್ನು ಕಂಡುಹಿಡಿದನು. ಹಿಂದಿನ ದುಷ್ಕೃತ್ಯಗಳಿಗೆ ಗೃಹಶೀಲೆಯು ಅರ್ಥಪರಳಾಗಿ ಒಡಂಬಟ್ಟಳೋ ಎಂದು ಸಂಶಯಾಪರನಾಗಿ ಮಹಾರಾಜ ಚಂದ್ರಶೇಖರನು ಅಮಾತ್ಯ ಮೊದಲಾದವರೊಡನೆ ಒಂದು ದಿನ ಒಡ್ಡೋಲಗದಲ್ಲಿರುವಾಗ ಅಕಸ್ಮಾತ್ತಾಗಿ ಗೃಹಶೀಲೆಯನ್ನು ಕರೆತರಲು ಸಚಿವನನ್ನು ಕಳುಹಿಸಿದನು.

ಮಹಾರಾಣಿ ಗೃಹಶೀಲೆಯು ನವರತ್ನ ಖಚಿತವಾದ ಪಾಲಕಿಯಲ್ಲಿ ಕುಳಿತುಕೊಂಡು, ಇಬ್ಬದಿಯಲ್ಲಿಯೂ ಅಶ್ವಾರೂಢರಾಗಿ ಸಶಸ್ತ್ರರಾದ ಅಂಗರಕ್ಷಕರಿಂದಲೂ ಛತ್ರ ಚಾಮರ ಪತಾಕೆಗಳನ್ನು ಹಿಡಿದ ಅನೇಕ ದಾಸದಾಸಿಯರಿಂದಲೂ, ತರತರದ ವಾದ್ಯಗಳನ್ನಾಡುವ ಮೃದಂಗಗಾರರಿಂದಲೂ ಕೂಡಿಕೊಂಡು ಅತಿಸಂಭ್ರಮದಿಂದ ಬಂದು ಸಭಾಮಂಟಪವನ್ನು ಪ್ರವೇಶಿಸಿ ಸಿಂಹಾಸನಾರ್ಧವನ್ನಲಂಕರಿಸಿದಳು. ಅಮಾತ್ಯ ಮೊದಲಾದ ಸಮಸ್ತ ಸಭಾಸದರೂ ಏಕಕಾಲದಲ್ಲಿ ಎದ್ದುನಿಂತು ಮಹಾರಾಣಿಗೆ ಪ್ರಣಾಮವನ್ನು ಮಾಡಿದರು.

ಅನಂತರ ಚಂದ್ರಶೇಖರನು ಗೃಹಶೀಲೆಯ ಮಂದಸ್ಮಿತವಾದ ಮುಖಕಮಲವನ್ನು ನೋಡಿ:—"ಗೃಹಶೀಲೆ! ನಿನ್ನ ಶ್ರದ್ಧಾಭಕ್ತಿಯನ್ನೂ ಪತಿಪರಾಯಣತೆಯನ್ನೂ ಇತರ ಸದ್ಗುಣಗಳನ್ನೂ ನೋಡಿ ನನಗೆ ಪರಮಾನಂದವಾಯಿತು. ನನ್ನ ಈ ಸಿಂಹಾಸನವನ್ನಲಂಕರಿಸುವ ಮಾಣಿಕ್ಯವು ನೀನೇ ಸರಿ. ಆದರೆ ನೋಡು. ರಾಜತ್ವವು ನಿರಂತರ ದುಃಖಕ್ಕೂ ವಿಪತ್ತಿಗೂ ಆಸ್ಪದವಾದುದು. ನನ್ನಂತಹ ರಾಜಪುತ್ರನಿಗೆ ಸ್ವತಂತ್ರತೆಯಿಲ್ಲ. ನನ್ನ ಈ ರಾಜಕೀಯ ಮಹಾಸಭೆಯ ನಿಯಮಗಳಿಗೆ ಅಧೀನನಾಗಿರುವೆನು. ನಾನು ಮಾಡತಕ್ಕ ಕೆಲವು ಕರ್ತವ್ಯಗಳವೆ. ಬಡಕೃಷಿವಲನಿಗಿದ್ದಷ್ಟು ಸ್ವತಂತ್ರತೆಯು ನನಗಿಲ್ಲ. ನೀನು ಸತ್ಕುಲಪ್ರಸೂತಳಲ್ಲವಾದುದರಿಂದ ನಿರಪರಾಧಿಯಾದ ನಿನ್ನನ್ನು ಪರಿತ್ಯಾಗ ಮಾಡಿ ನಾನು ಸುಕುಲೋತ್ಪನ್ನಳಾದೊಬ್ಬ ರಾಜಕುಮಾರಿಯನ್ನು ಪುನರ್ವಿವಾಹ ಮಾಡಿಕೊಳ್ಳಬೇಕೆಂದು ಈ ಸಭಿಕರೆಲ್ಲರೂ ಏಕಚಿತ್ತರಾಗಿ ನನಗೆ ನಿರ್ಬಂಧಪಡಿಸುವರು".—ಎಂದು ಸಭಿಕರು ಕೇಳದಹಾಗೆ ಉಪಾಯದಿಂದ ಗೃಹಶೀಲೆಯೊಡನೆ ಹೇಳಿದನು.

ಅಶ್ರುಜಲದೊಂದೆರಡು ಬಿಂದುಗಳು ಗೃಹಶೀಲೆಯ ಮುಖ ಕಮಲದಿಂದ ಕೆಳಗಿಳಿದು ಅಂತ್ಯದಲ್ಲಿ ಅವಳುಟ್ಟಿದ್ದ ರೇಶ್ಮೆ ಶೀರೆಯ ಸೆರಗಿನಿಂದ ಶೋಷಿಸಲಟ್ಟವು. ತನ್ನ ಶೋಕಾಗ್ನಿಯನ್ನು ಈ ಪರಿಯಲ್ಲಿ ಬಾಷ್ಪವೃಷ್ಟಿಯಿಂದ ನೊಂದಿಸಿ, ಅತಿ ದೈನ್ಯ ಸ್ವರದಿಂದಲೂ, ತನ್ನ ಸ್ವಭಾವಿಕವಾದ ಶಾಂತಿಗುಣದಿಂದಲೂ ಕೇವಲ ವಿಧೇಯಭಾವದಿಂದಲೂ— "ಮಹಾಸ್ವಾಮಿ! ತಮ್ಮ ಪದವಿಯ ಭದ್ರತೆಗಾಗಿ ಅನ್ಯ ಕುಲೀನ ರಾಜಕನ್ನಿಕೆಯನ್ನು ತಾವು ವರಿಸುವುದು ಅತ್ಯವಶ್ಯಕವೆಂತಿದ್ದರೆ, ಹಾಗೇ ಮಾಡುವುದು. ನಾನಾದರೋ ಮುಕ್ತಪುರಕ್ಕೆ ಹಿಂದಿರುಗಿ ಹೋಗುವೆನು. ಪ್ರಾಣೇಶ್ವರ! ನನ್ನ ದಾರಿದ್ರ್ಯಾವಸ್ಥೆಗೂ ತಮ್ಮ ಐಶ್ವರ್ಯಕ್ಕೂ ಎಂದಿಗೂ ಸರಿಬರಲಾರದು. ಅದು ಮಾತ್ರವಲ್ಲ. ತಮ್ಮ ಅರ್ಧಾಂಗಿಯಾಗಲು ಯೋಗ್ಯಳಾದವಳೆಂದು ಸ್ವಪ್ನೇಪಿ ಎಣಿಸಲಿಲ್ಲ. ತಮ್ಮ ದಾಸಿಯಾಗಿರುವ ಯೋಗ್ಯತೆಯು ಸಹ ನನ್ನಲ್ಲಿಲ್ಲ. ಈಶ್ವರನಾಣೆ!! ತಮ್ಮ ಪಾದಕಮಲಗಳಾಣೆ! ಇದುವರೆಗೆ ನಾನು ತಮ್ಮ ದಾಸಿಯಾಗಿದ್ದೆನೆಂತಲೇ ಭಾವಿಸಿಕೊಂಡಿದ್ದೆನು. ಇನ್ನೂ ಲೋಕಾಂತರ ಹೊಂದುವವರೆಗೂ ತಮ್ಮ ಪಾದಸೇವೆಯಲ್ಲೇ ಆಸಕ್ತಳಾಗಿ ಕಾಲಹರಣ ಮಾಡುವೆನು ಈ ಹೊತ್ತಿನವರೇಗೆ ತಾವು ಅಯೋಗ್ಯಳಾದ ನನ್ನನ್ನು ಅತ್ಯಂತ ಆದರದಿಂದಲೂ ಬಹುಮಾನದಿಂದಲೂ ಪ್ರೀತಿಯಿಂದಲೂ ನಡಿಸಿದ ಉಪಕಾರವನ್ನೆಂದಿಗೂ ನನ್ನ ಜೀವಾಂತ್ಯದವರೆಗೂ ಮರೆಯಲಾರೆನು. ಮತ್ತು ತಮಗೂ ತಮ್ಮ ಈ ಸಾಮ್ರಾಜ್ಯಕ್ಕೂ ಇನ್ನೂ ಶ್ರೇಯಸ್ಸೂ ವೃದ್ಧಿಯೂ ಉಂಟಾಗಲೆಂದು ಅವಿನಾಶನೂ ಅನಾದ್ಯಂತನೂ ಮಾಯಾಚಕ್ರಚಾಲಕನೂ ಪೂರ್ಣಬ್ರಹ್ಮಾನಂದ ಸ್ವರೂಪನೂ ಆದ ಭಗವಾನ್ ಶ್ರೀಪರಮೇಶ್ವರನೊಡನೆ ಪ್ರಾರ್ಥಿಸುವೆನು. ಗರೀಬಳಾದ ನಾನಿನ್ನೂ ಹೆಚ್ಚು ಹೇಳಲಶಕ್ತಳು. ಅತಿ ಸಂತೋಷದಿಂದ ಜನ್ಮಸ್ಥಾನಕ್ಕೆ ಹಿಂದಿರುಗಿ ಹೋಗುವೆನು. ತಮ್ಮ ದ್ವಿತೀಯ ಪತ್ನಿಯಾದರೂ ತಮಗೆ ಸೌಖ್ಯವನ್ನು ಕೊಡಲಿ! ಈ ಆಸನವನ್ನೀಗಲೇ ಅವಳಿಗೆ ಬಿಟ್ಟುಕೊಡುವೆನು. ನನ್ನ ಪ್ರಾಣೇಶ್ವರರಾದ ತಾವು ನಾನು ಹೋಗಲೇ ಬೇಕೆಂದೆಂದಿಗೆ ಅಪೇಕ್ಷಿಸಿದಿರೋ ಅಂದಿಗೆ ತಮ್ಮ ಆಜ್ಞೆಯನ್ನು ಶಿರಸಾವಹಿಸಿ ಇಲ್ಲಿಂದ ತೆರಳುವೆನು. ಪ್ರಾಣನಾಥ! ನನ್ನ ಅದೃಷ್ಟದಲ್ಲಿದ್ದ ಹಾಗೇ ಆಯಿತು. ತಮ್ಮ ಮೇಲೆ ಅಲ್ಪ ಸ್ವಲ್ಪವಾದರೂ ದೋಷಾರೋಪಣೆಯನ್ನು ಮಾಡಲಾರೆನು. ನನ್ನ ಪ್ರಾಣವಾಯುವು ಈ ಅಸ್ತಿಪಂಜರದಿಂದ ಹಾರಿಹೋಗುವವರೆಗೂ ನಾನು ತಮಗೆ ನನ್ನ ಹಸ್ತವನ್ನೂ ಹೃದಯವನ್ನೂ ಕೊಟ್ಟೆನೆಂದು ಎಂದೆಂದಿಗೂ ಪಶ್ಚಾತ್ತಾಪ ಪಡೆಯಲಾರೆನು. ತಾವು ನನಗೆ ಉಚಿತಾರ್ಥವಾಗಿ ಕೊಟ್ಟ ಅಮೌಲ್ಯವಾದ ಸಮಸ್ತ ವಸ್ತ್ರಾಭರಣಗಳನ್ನು ತಮ್ಮ ಶಯನಗೃಹದಲ್ಲಿಟ್ಟು ಈ ಕ್ಷಣವೇ ಇಲ್ಲಿಂದ ತೆರಳುವೆನು." ಎಂದು ನುಡಿದು ಮಹಾರಾಜನ ಚರಣಕಮಲಗಳಿಗೆ ದಂಡವತ್ಪ್ರಣಾಮವನ್ನು ಮಾಡಿ ಸಭಾಮಂದಿರದಿಂದ ರಾಜಗೃಹಕ್ಕೆ ಹೊರಟುಹೋದಳು.

ತುಸಹೊತ್ತಿನಲ್ಲೇ ಗೃಹಶೀಲಳು ನಾಲ್ಕೈದು ದಾಸದಾಸಿಗಳೊಡನೆ ಮುಕ್ತಪುರಕ್ಕಭಿಮುಖಳಾಗಿ ರಾಜವೀಥಿಯಿಂದ ನಡೆದು ಹೋದಳು. ಹಿಂದೆ ಸೀತಾದೇವಿಯು ವನವಾಸಕ್ಕೆ ಹೊರಡಲು ಜನರು ಹೇಗೆ ಆಕಾಂತಾಮಣಿಯನ್ನು ಅನುಸರಿಸಿ ಹೋಗಿದ್ದರೋ, ತದ್ರೀತಿಯಲ್ಲಿ ಪೌರಜನರೆಲ್ಲರೂ ದುಃಖವನ್ನು ಸಹಿಸಲಾರದೆ ಕೆಲವರು ಹೃದಯವನ್ನೂ ಕೆಲವರು ಕಪಾಲವನ್ನೂ ಬಡೆದುಕೊಳ್ಳುತ್ತ ಹಾಹಾಕಾರದಿಂದ ರೋದನ ಮಾಡಿ ಗೃಹಶೀಲಳ ಅಡಿದಾವರೆಗಳಿಗೆ ನಮಸ್ಕರಿಸಿದರು. ಸಶೇಷ.

ಕಾಯ ಪುಷ್ಟರಾಗುವದು ಹೇಗೆ?

ನಮ್ಮ ಭರತಖಂಡದಲ್ಲಿ ಸುಮಾರು ಒಂದು ಶತಮಾನಗಳ ಹಿಂದೆ ಬದುಕಿದವರ ದೇಹದಾರ್ಢ್ಯಕ್ಕೂ ಈಗಿನವರ ದೇಹದಾರ್ಢ್ಯಕ್ಕೂ ಬಹಳ ವ್ಯತ್ಯಾಸ ಕಾಣುವದು. ಭೂತ ಕಾಲದಲ್ಲಿ ಬದುಕಿದ ಭಾರತೀಯ ಜನರ ಮೂಲಪಿತೃಗಳು ಕಾಯಪುಷ್ಟರೂ, ಬಲಶಾಲಿಗಳೂ ಆಗಿದ್ದರು ಎಂಬದಾಗಿ ಇತಿಹಾಸಗಳಲ್ಲಿ ಓದದವರು ಬಲುಕಮ್ಮಿ. ನಮ್ಮ ಪಿತೃಗಳು ವಿದ್ಯಾಹೀನರು ಎಂಬದಾಗಿ ಈಗಿನ ನವಸುಧಾರಣೆಯಕಾಲದ ಹಲವರಿಂದ ಧಿಕ್ಕರಿಸಲ್ಪಡುವದಾದರೂ ನಿಜವಾಗಿ ಅವರು ವಿದ್ಯಾಹೀನರಲ್ಲ. ಅವರು ಎಲ್ಲಾ ಶಾಸ್ತ್ರಗಳನ್ನು ಚೆನ್ನಾಗಿ ಅರಿತವರಾಗಿದ್ದು ಚಿಕ್ಕತನದಿಂದಲೇ ತಮ್ಮ ಮಕ್ಕಳಿಗೆ ಗರಡೀಸಾಧಕ, ಕುದುರೇ ಸವಾರಿ, ಧಂದ್ವಯುದ್ಧ ಮೊದಲಾದ ಅಂಗಸಾಧನೆಗಳನ್ನು ಮಾಡಿಸಿದರು. ಆದ್ದರಿಂದಲೇ ನಮ್ಮ ಪೂರ್ವಿಕರು ಗಟ್ಟಿಪುಷ್ಟ್ಯಾಳುಗಳೂ ಧೈರ್ಯಶಾಲಿಗಳೂ ಆಗಿದ್ದರು. ಹಿಂದಿನವರಲ್ಲಿ ಪ್ರತಿ ಒಬ್ಬನಿಗೆ ತಮ್ಮ ಮಕ್ಕಳು ಪರಾಕ್ರಮಿಗಳೆಂಬ ಹೆಸರನ್ನು

ಪಡೆಯಬೇಕೆಂಬ ಇಚ್ಛೆ ಇದ್ದಿತ್ತಲ್ಲದೆ ಈಗಿನವರಂತೆ ತಮ್ಮ ಮಕ್ಕಳು ಬೇಗನೇ ಬಿ. ಎ. ಎಮ್. ಎ. ಮೊದಲಾದ ದೊಡ್ಡ ದೊಡ್ಡ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕೆಂಬ ಇರಾಧೆಯೇ ಇರಲಿಲ್ಲವೆಂದು ಹೇಳಬೇಕು. ಈ ಇರಾದೆ ಒಂದು ಮಾತ್ರವೇ ಈಗಿನವರಲ್ಲಿ ಇರುವದರಿಂದ ಈಗಿನ ಇತಿಹಾಸ ಕರ್ತರು ಈಗಿನ ಯೌವನಸ್ಥರನ್ನು ಗಾಳಿಗೆ ಅಲ್ಲಾಡುವ ತೃಣಗಳು ಎಂದು ಟೀಕಿಸುವಹಾಗಾಯಿತು. ಈಗಿನವರಲ್ಲಿ ಬರೇ ಮೆದುಳು ಮಾತ್ರವೇ ಕೆಲಸವನ್ನು ಮಾಡಿ ವೃದ್ಧಿಯನ್ನು ಹೊಂದಿ, ಪ್ರಕೃತಿಯು ಯಾವ ಸಾಧನವನ್ನಾದರೂ ಮಾಡದೆ ಇರುವದರಿಂದ, ಇಂದ್ರಿಯಗಳೆಲ್ಲವೂ ದಿನೇ ದಿನೇ ಮುರುಟುಕಟ್ಟಿದಂತಾಗಿ, ಸವೆಯುತ್ತಾ ಬಂದು, ಕಡೆಗೆ ನಾನಾ ರೋಗಗಳು ಹುಟ್ಟಿ ಬೇಗನೇ ಸಾಯುತ್ತದೆ.

ಆದ್ದರಿಂದ ಅಂಗಸಾಧನೆಗಳೆಲ್ಲವನ್ನು ಉದಾಸೀನಮಾಡಿಬಿಟ್ಟಂಥಾ ನಾವು ಅಂಗ ಸಾಧನೆಯ ಪ್ರಯೋಜನಗಳನ್ನು ತಿಳಕೊಳ್ಳುವುದು ಅತ್ಯವಶ್ಯ.

ಮನುಷ್ಯರಲ್ಲಿ ಇಚ್ಛಕ ಸ್ನಾಯುಗಳು ಮತ್ತು ಅನೈಚ್ಛಕ ಸ್ನಾಯುಗಳೆಂಬೀ ಎರಡು ವಿಧದ ಸ್ನಾಯುಗಳಿವೆ. ಓಡುವಾಗ, ನಡಿಯುವಾಗ, ಆಡುವಾಗ ಈ ಇಚ್ಛಕ ಸ್ನಾಯುಗಳಿಂದ ಅಂದರೆ ಮಸ್ತಿಕಕ್ಕೆ ತಾಗಿ ಬರುವಸ್ನಾಯುಗಳಿಂದ ನಾವು ಚಲಿಸುತ್ತೇವೆ. ಉಳಿದ ಅನೈಚ್ಛಕ ಸ್ನಾಯುಗಳು ಮಸ್ತಿಕಕ್ಕೆ ತಾಗದೆ ಇದ್ದು ಗುಂಡಿಗೆ ಶ್ವಾಸಕೋಶ ಮೊದಲಾದ ಪ್ರಾಣಧಾರಕ ಇಂದ್ರಿಯಗಳಿಗೆ ತಾಗಿರುವೆಂಥವುಗಳಾಗಿವೆ. ಇವೇ ನಮ್ಮ ದೇಹದ ಬೆಳವಣಿಗೆಗೆ ಅತ್ಯವಶ್ಯವಾಗಿ ಬೇಕಾದ ಸ್ನಾಯುಗಳು. ಹೀಗೆ ಒಟ್ಟಿಗೆ 527 ಸ್ನಾಯುಗಳು ಕೂಡಿ ಇಡೀ ದೇಹದ ಮಾಂಸ ಖಂಡವನ್ನು ರೂಪಿಸುತ್ತವೆ. ಈ ಮಾಂಸ ಖಂಡವೇ ಅಸ್ತಿ ಪಂಜರವನ್ನು ಮುಚ್ಚಿಕೊಂಡು ದೇಹಕ್ಕೆ ಉರುಟಾದ ಆಕಾರವನ್ನು ಕೊಡುತ್ತದೆ. ಈ 527 ಸ್ನಾಯುಗಳೆಲ್ಲಾ ಪೂರ್ಣ ಆರೋಗ್ಯಕರವಾಗಿಯೂ ಬಲವಾಗಿಯೂ ಆಗಿದ್ದರೆ ನಮ್ಮ ದೇಹವು ಸಮಸೂತ್ರ ಸ್ಥಿತಿಯಲ್ಲಿರುವದು, ಅಂದರೆ ಪುಷ್ಟಿಯಾಗಿಯೂ ಬಲವಾಗಿಯೂ ಇರುವದು.

ನಮ್ಮ ಪ್ರತಿ ಒಂದು ಕೃತ್ಯದಲ್ಲಿ ಸ್ನಾಯು ಅಥವಾ ಸ್ನಾಯುಗಳ ಗುಂಪು ಪೇದುಳಿನ ಮೂಲಕವಾಗಿ ಸ್ವಪ್ರಜ್ಞೆಯಿಂದಲಾಗಲೀ ಮರವುಗೊಂಡಾಗಲೀ ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತವೆ. ನೆಗಾಡುವುದು, ಆಡುವುದು, ಹೊರುವುದು ಮೊದಲಾದ ಪ್ರತಿ ಒಂದು ಕೆಲಸಗಳನ್ನು ಸ್ನಾಯು ಪರಿಕ್ರಮಣ ಎಂದು ಹೇಳಬಹುದು. ಕಣ್ಣಿನ ರೆಪ್ಪೆಯು ತನ್ನ ಸ್ವಂತ ಸ್ನಾಯುಗಳಿಂದ ಮುಚ್ಚಲ್ಪಟ್ಟು ನಮಗೆ ಗೋಚರವಾಗದ ರೀತಿಯಲ್ಲಿ ತನ್ನ ಕೆಲಸವನ್ನು ಮಾಡುತ್ತದೆ. ಆದರೆ ಮೇಲೆ ಹೇಳಿದ ಇಚ್ಛಕ ಮತ್ತು ಅನೈಚ್ಛಕ ಸ್ನಾಯುಗಳಿಗೆ ನಾವು ಸಾಧನೆಯನ್ನು ಕೊಡದೆ ಇದ್ದಪಕ್ಷಕ್ಕೆ ಈ ಸ್ನಾಯುಗಳು ಕೂಡಾ ಕಣ್ಣರೆಪ್ಪೆಯ ಸ್ನಾಯುಗಳ ಹಾಗೆಯೇ ನಮಗೆ ಗೋಚರಿಸದೆ ಕೆಲಸಗಳನ್ನು ಮಾಡುವದಾದರೂ ಮಾಡಬೇಕಾದಷ್ಟು ಕೆಲಸಗಳನ್ನು ಮಾಡದಿರುವುದರಿಂದ ಸ್ನಾಯುಗಳೆಲ್ಲಾ ನಿತ್ರಾಣವುಳ್ಳವುಗಳಾಗಿದ್ದು ದೇಹವು ಬಡಕಲಾಗುವುದು. ಆದ್ದರಿಂದ ಮನುಷ್ಯನಿಗೆ ನಿದ್ದೆ, ಆಹಾರ, ವಾಯು ಹೇಗೆ ಅವಶ್ಯವೋ ಹಾಗೆಯೇ ಅಂಗಸಾಧನೆಯು ಅವಶ್ಯವಾಗಿದೆ. ಹೇಗೆ ನಿದ್ದೆ, ವಾಯು, ಆಹಾರ ದೇಹದಲ್ಲಿ ಕಾವನ್ನೂ, ಶಕ್ತಿಯನ್ನೂ, ಹೊಸ ಎಲುಬನ್ನೂ, ಶರೀರದ ನಾಡಿ ಕೂಟಗಳನ್ನೂ ಹುಟ್ಟಿಸುತ್ತದೋ ಹಾಗೆಯೇ ಅಂಗಸಾಧನೆಯು ಇವುಗಳೆಲ್ಲವನ್ನು ವೃದ್ಧಿಸಿ ಸ್ನಾಯುಗಳಲ್ಲಿ ಕೂಡಿಕೆಯಾದ ಕ್ಷಯಾಂಕುರಗಳನ್ನು ಕಿತ್ತಾಕಿ ದೇಹವನ್ನು ಪೂರ್ಣ ಆರೋಗ್ಯ ಸ್ಥಿತಿಯಲ್ಲಿಡುತ್ತದೆ.

ಅಂಗಸಾಧನೆ ಮಾಡದಿದ್ದರೆ ಹೃದಯವು ಬಡಕಲಾಗುವದು. ರಕ್ತಪ್ರಸಾರವು ದುರ್ಬಲವಾಗುವದು, ಶ್ವಾಸಕೋಶಗಳು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡಲಾರವು, ಹೆಚ್ಚುಕಡಿಮೆಯಾಗಿ ದೇಹದ ಪ್ರತಿ ಒಂದು ಭಾಗವು ಪಾಡುಪಡುವದು. ಡಾಕ್ಟರ್ ಸಿ. ವಿಲ್ಸನ್ ಎಂಬವರು "ವ್ಯಾಯಾಮದಿಂದ ಪೇಶಿಗಳು ಫಲೋದಯವನ್ನು ಹೊಂದುವದೇ ಮಾತ್ರವಲ್ಲ; ಅವುಗಳು ಪ್ರವೃತ್ತಿಸಿ, ಹೃದಯದ ರಕ್ತಪ್ರಸಾರವನ್ನು ವೃದ್ಧಿಮಾಡುವದಲ್ಲದೆ ಕ್ರಮಪಡಿಸುವದು; ಗುಂಡಿಗೆಯು ತಾನೇ ಊರ್ಜಸ್ವಲವಾಗಿ ಬಡಿಯುವದು. ಶ್ವಾಸಕೋಶದಲ್ಲಿ ರಕ್ತವು ಹೆಚ್ಚಾಗಿ ಪ್ರಸರಿಸುವದು. ಪ್ರಾಣವಾಯುವು (ಒಕ್ಸಿಜನ್) ಅಧಿಕವಾಗಿ ಶ್ವಾಸಕೋಶದೊಳಗೆ ಹೋಗುವದು. ದೇಹದಲ್ಲಿ ಉಷ್ಣವು ಬಲು ಹೆಚ್ಚಾಗುವದು, ಚರ್ಮ ಮತ್ತು ಇತರ ಇಂದ್ರಿಯಗಳ ಕಫ ಶ್ಲೇಷ್ಮಗಳು ಪ್ರವೃತ್ತಿಸಿ, ಅನಾವಶ್ಯಕ ಉಷ್ಣವೂ, ಅಗ್ನಿವರ್ಧಕ ಪದಾರ್ಥಗಳೂ ನಾಶ ಹೊಂದುವದು. ಹೀಗೆ ಗುಂಡಿಗೆ, ಶ್ವಾಸಕೋಶ, ಚರ್ಮ, ದೇಹದ ಇತರ ಇಂದ್ರಿಯಗಳೂ ಸ್ನಾಯುಗಳ ಚಲನೆಯ ಒತ್ತಾಟದಿಂದ ಬಲು ಹೆಚ್ಚಾಗಿ ಚೆನ್ನಾಗಿ ತಮ್ಮ ಕೆಲಸಗಳನ್ನು ನಡಿಸುವದು. ಮಸ್ತಿಕವೂ, ನರಸಂಸ್ಥ್ಯಯವೂ ಪೌಷ್ಟೀಕವಾಗುವದು. ಜೀರ್ಣಶಕ್ತಿಯೂ ರುತವಾಗುವದು, ದೇಹದ ಯಂತ್ರೋಪಯಂತ್ರಗಳೆಲ್ಲಾ ಕ್ರಿಯಾಶಕ್ತವಾಗುವದು" ಎಂಬದಾಗಿ ಹೇಳುವರು.

ಮನೆಹೊರಗಣ ವ್ಯಾಯಾಮಗಳಲ್ಲಿ ಅಡ್ಡಾಡುವದೇ ಪ್ರಾಮುಖ್ಯವಾದದ್ದು. ಅಡ್ಡಾಡುವಾಗ ಮಾತ್ರ ಸ್ವಲ್ಪ ಬೀಸರ ನಡೆಯಬೇಕು. ಆದರೆ ಹೆಜ್ಜೆ ಇಡುತ್ತಾ, ತೋಳುಗಳನ್ನು ಬೆನ್ನ ಹಿಂದಕ್ಕೆ ಹಾಕಿ, ಕಾಲ ಹೆಜ್ಜೆಯು ಹೇಗೆ ಹಿಂದೆಮುಂದಕ್ಕೆ ಹೋಗುತ್ತದೋ ಹಾಗೆಯೇ ಕೈಗಳನ್ನು ಹಿಂದೆಮುಂದಕ್ಕೆ ಓಲಾಡಿಸುತ್ತಾ ನಡೆಯಬೇಕು. ಈ ವ್ಯಾಯಾಮವು ನರಸಂಸ್ಥ್ಯಯದಲ್ಲಿ ಆಹ್ಲಾದವನ್ನು ಉಂಟುಮಾಡುವದಲ್ಲದೆ ಕ್ಷುದಾಗ್ನಿಯನ್ನೂ ಸ್ವೇದನವನ್ನೂ ಹೆಚ್ಚಿಸುವದು. ದೇಹವು ಏಕರೂಪ ಶೀತೋಷ್ಣ ಸ್ಥಿತಿಯಲ್ಲಿಯೇ ಇದ್ದುಳಿಯುವದು. ಮನಸ್ಸು ನಿರತವಾದಂಥಾ ನೋಟಗಳಲ್ಲಿ ಉತ್ಸಾಹಪಡುವದು. ಶ್ವಾಸಕೋಶಗಳು ಬಲಪಡುವದಲ್ಲದೆ ಅವುಗಳ ಚಲನೆಯು ಸೌಲಭ್ಯವಾಗಿ ನಡಿಯುವುದು. ದೀರ್ಘಕಾಲ ಕೂತು ಉಂಟಾದ ಕಾಲುಗಳ ಮರಕಟ್ಟುವಿಕೆಯು ಸಡಿಲಾಗುವದು. ಸೂತಿಕಾವಾಯು, ಅಕಾರಣವ್ಯಾಕುಲತೆ ಮೊದಲಾದ ರೋಗಗಳು ಹೀಗೆ ನಡೆದು ಅಡ್ಡಾಡುವ ವ್ಯಾಯಾಮದಿಂದ ಹೋಗಿಬಿಡುವವು.

ಈಗಿನ ಕಾಲದಲ್ಲಿ ಜನರಂಜಿತವಾದಂಥಾ ಅಂಗಸಾಧನೆಯು ಬೈಸಿಕಲ್ ಸವಾರಿಯಾಗಿರುತ್ತದೆಂಬದಕ್ಕೆ ಅಡ್ಡಿ ಇಲ್ಲ. ಇದು ಯೌವನಸ್ಥರಿಗೂ ಮಧ್ಯ ಪ್ರಾಯದವರಿಗೂ ಕ್ರಮ ಪ್ರಕಾರವಾಗಿ ಮಾಡಿದರೆ ಮುದುಕರಿಗೂ ಒಳ್ಳೇದೇ ಸೈ. ಮಿತಿಮೀರಿ ಮಾಡಿದರೆ ಮಾತ್ರ ಈ ಚಕ್ರಪರ್ಯಟಣದಲ್ಲಿ ಅನೇಕಾನೇಕ ಕೇಡುಗಳು ಸಂಭವಿಸುವವು. ಜರ್ಮನಿಯ ಡಾಕ್ಟರ್ ಸ್ಕೊಟ್ ಎಂಬವರು ಈ ಚಕ್ರಪರ್ಯಟಣವನ್ನು ಬಹಳ ಜಾಗ್ರತೆಯಿಂದ ಅಭ್ಯಾಸಿಸಿ ಆರೋಗ್ಯ ಶಾಸ್ತ್ರಕ್ಕನುಸಾರವಾಗಿ "ಚಕ್ರಪರ್ಯಟಣವೂ, ಪರ್ವತ ಹತ್ತುವದೂ ಗುಂಡಿಗೆ ಬಡತವನ್ನು ತ್ವರೆಪಡಿಸಿ, ನಾಡಿಯನ್ನು ಚೈತನ್ಯ ಪಡಿಸುತ್ತದೆ" ಎಂಬದಾಗಿ ಹೇಳುವರು. ಇದು ದೇಹದ ಪ್ರತಿ ಒಂದು ಭಾಗಕ್ಕೂ ಸಾಧನೆಯನ್ನು ಕೊಟ್ಟು ನರಸಂಸ್ಥ್ಯಯವನ್ನು ಬಲಪಡಿಸುತ್ತದೆಂಬದಕ್ಕೆ ಸಂಶಯವಿಲ್ಲ.

ಯೌವನಸ್ಥರಿಗೂ, ಗಟ್ಟಿಪುಷ್ಟಿವಂತರಿಗೂ ದೋಣಿ ಒತ್ತುವದು ಒಳ್ಳೇ ವ್ಯಾಯಮವಾಗಿದೆ. ಇದು ಸ್ನಾಯುಗಳನ್ನು ಬಲಪಡಿಸಿ, ಹೆಚ್ಚಿಸಿ ಶ್ವಾಸಕೋಶಗಳು ಯಾವದೊಂದು ತೊಡಕು ಇಲ್ಲದೆ ವಿಕಾಸವನ್ನು ಹೊಂದುವ ಹಾಗೆ ಮಾಡುತ್ತದೆ. ಇಜಾಡುವದನ್ನು ಸಹಾ ಈ ಕಾರಣದಿಂದಲೇ ವ್ಯಾಯಾಮವಾಗಿ ಉಪಯೋಗಿಸಿಕೊಳ್ಳುವದು ಶ್ರೇಯಸ್ಕರ.

ಕ್ರಿಕೆಟಾಟ, ಟೆನ್ನಿಸ್, ಗೊಲ್ಫ ಎಂಬ ಪಶ್ಚಿಮಾತ್ಯ ಆಟಗಳೂ ಸ್ನಾಯುಗಳನ್ನು ಬಲಪಡಿಸುವ ವ್ಯಾಯಾಮವೇ ಸೈ. ಆದರೆ ಕ್ರಮಪ್ರಕಾರದ ವ್ಯಾಯಾಮ ವಿದ್ಯೆ (ತಾಲೀಮು, ಕಸರಾತು) ಬಹಳ ಪ್ರಯೋಜನವುಳ್ಳದ್ದು. ಡಂಬೆಲ್ಸ್ ಎಂಬ ಕರಣದಿಂದ ಮಾಡುವ ಸಾಧನೆಯು ಸ್ನಾಯುಗಳನ್ನು ಬಹಳ ಮಟ್ಟಿಗೆ ಅರಳಿಸಿ ಗಟ್ಟಿಯಾಗ ಮಾಡುತ್ತದೆ. ಇವುಗಳ ಸಾಹಾಯದಿಂದಲೇ ಅನೇಕ ಕೃಶ ಜೀವಿಗಳು ಬಲಶಾಲಿಗಳೂ ಆರೋಗ್ಯವಂತರೂ ಆಗಿದ್ದಾರೆ ಎಂಬದು ಸರ್ವರಿಗೆ ತಿಳಿದೇ ಇದೆ ಮಾತ್ರವಲ್ಲದೆ ಈ ಡಂಬೆಲ್ಸ್ ಸಾಧಕದಿಂದ ಲೋಕಪ್ರಖ್ಯಾತಿ ಪಡೆದ ಅಂಗ್ಲೇಯನಾದ ಸೇಂಡೋ ಮತ್ತು ನಮ್ಮ ಭಾರತೀಯನಾದ ರಾಮ ಮೂರ್ತಿ ಮೊದಲಾದವರ ಹೆಸರನ್ನು ಕೇಳದವರು ಸಿಕ್ಕುವದು ದುರ್ಲಭ.

ಈ ತರದ ವ್ಯಾಯಾಮಗಳೆಲ್ಲವನ್ನು ಭಾರತೀಯರಾದ ನಮ್ಮಲ್ಲಿ ಹೆಚ್ಚಿನವರು ಅಲಕ್ಷಮಾಡುತ್ತಾ ಬಂದದರಿಂದಲೇ ನಮ್ಮವರು ದಿನೇ ದಿನೇ ಅಧೋಗತಿಯನ್ನು ಹೊಂದುತ್ತಾ ಬರುತ್ತಾರೆಂದೂ ನಮ್ಮ ಸುತ್ತಮುತ್ತಲಿರುವ ಆಂಗ್ಲೇಯರು ಅನ್ನವನ್ನಾದರೂ ಬಿಟ್ಟಾರು, ಇಂಥಾ ವ್ಯಾಯಾಮಗಳನ್ನು ಎಂದೂ ಬಿಡದೆ ದಿನಾವಹಿ ಅಭ್ಯಾಸಿಸುತ್ತಾ ಇದ್ದಾರೆ ಎಂದೂ ಹೇಳಿದರೆ ಅತಿಶಯೋಕ್ತಿಯಾಗದು. ವ್ಯಾಯಾಮಗಳನ್ನು ಮಾಡಿದರೆ ಸಾಲದು; ಈ ಸಂಬಂಧವಾಗಿ ಅನುಸರಿಸತಕ್ಕ ಕ್ರಮಗಳೂ ಇರುವುದರಿಂದ ಸ್ವಲ್ಪಮಟ್ಟಿಗೆ ಅವುಗಳನ್ನು ತಿಳಕೊಳ್ಳುವುದೂ ಅವಶ್ಯ.

ಮಾಡುವಂಥಾ ವ್ಯಾಯಾಮವನ್ನು ದಿನಾಲೂ ನಿಯಮಿತ ಕಾಲದಲ್ಲಿ ತಪ್ಪದೆ ಮಾಡಬೇಕು. ನಮ್ಮ ಪ್ರಕೃತಿಯು ಒಂದು ಛಂದಸ್ಸಿನಂತೆ ಇರುವುದರಿಂದ ಕ್ರಮವೇ ಆರೋಗ್ಯದ ಮೂಲವಾಗಿದೆ.

ಎದ್ದ ಕೂಡಲೇ ಅಥವಾ ಊಟದ ಮುಂಚೆ ಯಾ ಊಟ ಆದ ಕೂಡಲೇ ಅಂಗ ಸಾಧನೆ ಮಾಡಲೇ ಬಾರದು. ಆದರೆ ಮಿಂದ ಕೂಡಲೇ ಸಾಧನೆ ಮಾಡುವುದು ಬಹೂ ಹಿತಕರ. ಪ್ರತಿ ದಿನ ಮನೆಯಲ್ಲಿ ಅಂಗಸಾಧನೆ ಮಾಡುವವನೂ ದಿನನಿತ್ಯ ತಣ್ಣೀರಿನ ಜಳಕ ಮಾಡುವವನೂ ದೊಡ್ಡ ಜ್ಞಾನಿ ಎಂದು ಮೆ. ರೋಬರ್ಟ್ಸರು ಹೇಳುವರು.

ಸದಾ ನಿದ್ರಾಲಸ್ಯ, ಮಲಬದ್ಧತೆ, ತಲೆಸಿಡಿತ, ಕಲಿಜೆರೋಗ ಮೊದಲಾದವುಗಳಿಂದ ಪೀಡಿತರಾಗಿರುವವರು ವೈದ್ಯರ ಅಭಿಪ್ರಾಯದ ಮೇರೆಗೆ ಪ್ರತ್ಯೇಕ ತರದ ಸಾಧನೆಗಳನ್ನು ಕೈಕೊಳ್ಳುವುದು ವಿಹಿತ.

ತಣ್ಣೀರಿನ ಸ್ನಾನದೊಡನೆ ಅಂಗಸಾಧನೆ ಮಾಡುವುದು ಬಹೂ ಉತ್ತಮ. ಪ್ರಥ
ಮತಾ ಬಿಸಿನೀರನ್ನು ಮೈಗೆ ಹೊಯ್ದುಕೊಂಡು ಸಾಬೂನು ಹಾಕಿ ಚೆನ್ನಾಗಿ ತೊಳೆಯ
ಬೇಕು. ನಂತರ ತಣ್ಣೀರು ಮೈಮೇಲೆ ಹೊಯ್ದುಕೊಂಡು ಚೆನ್ನಾಗಿ ತಿಕ್ಕಿ ಮಡಿ ವಸ್ತ್ರ
ದಿಂದ ಮೈ ಒರಸಿಕೊಳ್ಳಬೇಕು. ಬಿಸಿ ಮತ್ತು ತಣ್ಣೀರು ಸಮ್ಮಿಳಿತವಾದ ಜಳಕದ
ಪ್ರಯೋಜನವು ನಮ್ಮ ಭಾರತೀಯರಿಗೆ ಅಗದಿಗೊತ್ತಿಲ್ಲ. ಈ ವಿಧದ ಸ್ನಾನವು ದೇಹ
ವನ್ನು ಸದಾ ಬಿಸಿಯಲ್ಲಿರಿಸಿ ಶೀತವು ದೇಹಕ್ಕೆ ತಗಲದ ಹಾಗೆ ಮಾಡುವುದು.

ಅಂಗಸಾಧನೆಯನ್ನು ಮಾಡುವಾಗ ಮುಖ್ಯವಾಗಿ ಶುದ್ಧಗಾಳಿ, ಒಳ್ಳೇ ಬೆಳಕು
ಇರುವಂಥಾ ಸ್ಥಳದಲ್ಲಿ ಮಾತಬೇಕಲ್ಲದೆ ಮೂಗಿನಿಂದ ವಾಯುವನ್ನು ಚೆನ್ನಾಗಿ ಶ್ವಾಸಿಸಿ
ಕೊಂಡು ಬಾಯಿಂದ ಉಚ್ಛ್ವಾಸಿಸಬೇಕು.

ಒಮ್ಮದಂಥಾ ಯಾವ ಆಹಾರವನ್ನು ತಿನ್ನಬಾರದಲ್ಲದೆ ಯಾವಾಗಲೂ ನಿಯ
ಮಿತ ಕಾಲದಲ್ಲಿ ಊಟಮಾಡಬೇಕು.

ಹಸಿದ ಹೊಟ್ಟೆಯಲ್ಲಿ ಎಂದೂ ಕಾಯಕಷ್ಟವಾಗಲೀ ಮಾನಸಿಕ ಕೆಲಸವಾಗಲೀ
ಮಾಡಲೇ ಬಾರದು.

ಹಸಿವೆ ಇಲ್ಲದ ಕಾಲದಲ್ಲಿ ಯಾ ಊಟದ ಕಾಲಗಳ ಮಧ್ಯೆ ಯಾವದನ್ನೂ ತಿನ್ನ
ಬಾರದು. ಹ್ಯಾಗೂ ಒಂದು ಊಟದ ಕಾಲಕ್ಕೂ ಮತ್ತೊಂದು ಊಟದ ಸಮಯಕ್ಕೂ
ಮಧ್ಯೆ ೫ ತಾಸುಗಳಿರಬೇಕು. ರಾತ್ರಿಕಾಲದ ಊಟವನ್ನು ಮಾಡಿ ಹ್ಯಾಗೂ 3 ತಾಸು
ಗಳಾಗುವ ವರೆಗೆ ಮಲಗಲೇ ಬಾರದು.

ಈ ಮೊದಲಾದ ಎಲ್ಲಾ ಸೂತ್ರಗಳನ್ನು ತಕ್ಕಪ್ರಕಾರ ಕೈಕೊಂಡು ಯಾರು ಅಂಗ
ಸಾಧನೆ ಮಾಡುವನೋ ಅವನ್ನು ದೀರ್ಘಾಯುಶ್ಯಿಯಾಗಿಯೂ ಕಾಯಪುಷ್ಟನಾಗಿಯೂ
ಬಾಳುವನೆಂಬದಕ್ಕೆ ಯಾವ ಸಂಶಯವೂ ಇರದು. ಹೀಗೆ ಮಾಡಿದರೆ ಮಾತ್ರವೇ ಭವಿ
ಷ್ಯಕಾಲದ ಸಂತತಿಯಾದರೂ ಏಳಿಗೆಗೆ ಬರುವುದೆಂಬದು ನಿಶ್ಚಯ.

———o———

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

(ಕಳದ ಸಂಚಿಕೆಯಿಂದ ಮುಂದೆ ಸಾಗಿಸಿದ್ದು.)

ಅಳಿಯ ಸಂತಾನದವರ ವಿಭಾಗ ಮಸೂದೆ.

ಪ್ರತಿಯೊಂದು ವಿಷಯದಲ್ಲಿಯೂ ಭಿನ್ನಾಭಿಪ್ರಾಯಗಳಿರುವವೆಂಬದು ಅನುಭ
ವಸಿದ್ಧವು. ಭಿನ್ನಾಭಿಪ್ರಾಯಗಳಿಲ್ಲದಿದ್ದರೆ ಲೌಕಿಕ ವ್ಯವಹಾರವು ನಡೆಯಲಾರವು.
ಹೆತ್ತ ತಾಯಿಯನ್ನು ಹೊಡೆಯ ಬಹುದೋ ಎಂಬದರಲ್ಲಿ ಕೂಡಾ ಭಿನ್ನಾಭಿಪ್ರಾಯಗಳಿ
ರುವವೆಂದು ಮಲೆಯಾಳಿ ಭಾಷೆಯಲ್ಲಿ ಒಂದು ಗಾದೆ ಇರುವದು. ಹಾಗಿರುತ್ತಾ ಇಂಥಾ
ಚರ್ಚಾಸ್ಪದವಾದ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿರುವದು ಆಶ್ಚರ್ಯವಲ್ಲ. ಆದರೆ
ತರ್ಕ ವಿತರ್ಕಗಳಲ್ಲಿ ತನ್ನಭಿಪ್ರಾಯವು ಹೇಗಿದ್ದರೂ ಬೇರೊಬ್ಬನು ಹೇಳುವದು ಸರಿ
ಯೆಂದು ಮನಗಂಡರೆ ಅದಕ್ಕೊಪ್ಪುವದು ವಿವೇಕಿಯ ಧರ್ಮವು. ಸಾಧ್ಯವಿರುವಷ್ಟು
ಹೆಚ್ಚು ಜನ ಸುಖದಾಯಕವಾದ ಏರ್ಪಾಡುಗಳನ್ನು ಮಾಡುವದೇ ನ್ಯಾಯ ನಿಭಂದನೆ
ಗಳ ಉದ್ದಿಶ್ಯವಾದುದರಿಂದ ಸಾರ್ವಜನಿಕ ಪ್ರಯೋಜನವನ್ನು ಆಲೋಚಿಸುವಾಗ
ತನ್ನ ಸ್ವಂತ ಪ್ರಯೋಜನವನ್ನು ಹಿಂದಿಡ ಬೇಕು. ಇದೆಲ್ಲವನ್ನು ಮಸೂದೆಯ ವಿರುದ್ಧ
ಪಕ್ಷದವರು ಮರೆತು ಬಿಟ್ಟದಾಗಿ ತೋರುತ್ತದೆ. ಮಸೂದೆಯು ಹೇಳುವ ಪ್ರಕಾರ
ಪಾಲಾದರೆ ಈಗ ದೊಡ್ಡ ದೊಡ್ಡ ಕುಟುಂಬಗಳ ಯಜಮಾನರಾಗಿರುವವರು ತಮ್ಮ
ಉನ್ನತ ಸ್ಥಿತಿಯಿಂದ ಕೆಳಗಿಳಿಯುವರು. ಅವರ ಆದಾಯವು ಕ್ಷಯವಾಗವುದು.
ಪ್ರತಿಷ್ಠೆಯು ನಷ್ಟವಾಗವುದು. ಪ್ರಖ್ಯಾತಿಯು ಕುಗ್ಗುವುದು. ಹೀಗಾಗುವದೆಂದು
ಗೊತ್ತಿದ್ದುದರಿಂದಲೇ ಹಿರಿಯರು ಮಾಡಿದ ಕಟ್ಟನ್ನು ಅನುಕೂಲವಾದ ಆಧಾರವನ್ನಾಗಿ
ಟ್ಟುಕೊಂಡು ಬದಲಾವಣೆಗಳೇ ಆಗ ಕೂಡದೆಂದು ವಾದಿಸುತ್ತಿರುವರು. ಸ್ವಾರ್ಥಪರ
ರಾದ ಯಜಮಾನರೆ, ನನಗೆ ತನಗೆಂಬ ಹೋರಾಟವ್ಯಾಕೆ? ಸ್ವಾರ್ಥದಲ್ಲಿಯೇ ಮಗ್ನರಾ
ಗಿರುವದನ್ನು ಬಿಟ್ಟು ನೀತಿ ಕಾಪಾಡುವ ಮನಸ್ಸು ಮಾಡಿದರೆ ಈ ಲೋಕದಲ್ಲಿ ಸರ್ವರಿ
ಗೂ ಸಾಕಷ್ಟು ಸುವಸ್ತುಗಳಿರುವವು. ಈ ಲೋಕದ ಮೂರು ದಿವಸದ ಬಾಳ್ವೆಯಲ್ಲಿ ಸುಖ
ಸಂಪಾದನೆಯೇ ಮುಖ್ಯ ಉದ್ದಿಶ್ಯವು. ಬಂಧು ಬಳಗದವರ ಶುಭೋದಯಕ್ಕೆ ತೊಡ
ಕಾಗದಂತೆ ಸ್ವಲ್ಪಮಟ್ಟಿಗಾದರೂ ಸ್ವಾರ್ಥವನ್ನು ತ್ಯಜಿಸಿ ಸ್ವಲ್ಪ ಮಟ್ಟಿಗಾದರೂ ಆತ್ಮ
ಸಂಯಮನ ಮಾಡಿ ನಡಿಯದಿದ್ದರೆ ಸಂಸಾರ ಸುಖವು ದೊರೆಯದೆಂಬದು ನಿಶ್ಚಯವು.
ತನ್ನ ಮೇಲನ್ನೇ ಬಯಸುವ ಮನುಷನ ಜೀವನವು ಎಂದೂ ಸ್ವಾರ್ಥಕವಾದ ಜೀವನ
ವೆಂದೆನ್ನಿಸಿಕೊಳ್ಳದು.

ಫಲಾಫಲಗಳಿಗೆ ಕಣ್ಮುಚ್ಚಿ ಹಿರಿಯರ ಕಟ್ಟಳೆಯನ್ನು ಬಿಡಬಾರದೆಂದು ಯತಾರ್ಥ
ವಾಗಿ ನಂಬುವವರು ಆತ್ಮವಿಪರ್ಯಾಸಿಗಳೆಂದು ತೋರಿಸುವದು ಬಹು ಸುಲಭ. ಪ್ರತಿ
ನಿತ್ಯದ ವ್ಯವಹಾರಗಳಲ್ಲಿ ಹಿರಿಯರ ನಡವಳಿಕೆಯು ತೋರಿಬಾರದಿರುವ ಸಮಯದಲ್ಲಿ
ಈ ವಿಷಯದಲ್ಲಿ ಮಾತ್ರ ಅಂತೆಯೇ ಆಗಬೇಕೆಂದು ಹೇಳುವದ್ಯಾವ ಧರ್ಮ? ನಮ್ಮ ಹಿರಿ
ಯರು ಒಂದು ಮುಡಿ ಅಕ್ಕಿಗೆ ಒಂದು ರೂಪಾಯಿ ಸಿಕ್ಕಿದರೆ ಚಲೋ ಬೆಲೆಯೆಂದು ಭಾವಿಸಿ
ವಿಕ್ರಯಿಸುತ್ತಿದ್ದರು. ನಾವ್ಯಾಕೆ ನಾಲ್ಕು ರೂಪಾಯಿ ಬೆಲೆ ಬಂದರೂ ಇನ್ನೂ ಹೆಚ್ಚು
ಸಿಕ್ಕ ಬೇಕೆಂದು ವಿಕ್ರಯಿಸದೆ ಕೂಡಿಸಿಡುವದು? ಹಿರಿಯರು ತಿರುಪತಿಯಾತ್ರೆಗೆ ಕಾಲು
ನಡೆಯಾಗಿ ಹೋಗಿ ಹಿಂತಿರುಗಿ ಬರುವಾಗ ಆರು ಎಂಟು ತಿಂಗಳುಗಳು ಮುಟ್ಟುತ್ತಿದ್ದವು
ನಾವ್ಯಾಕೆ ಹೊಗೆಭಂಡಿ ಹತ್ತಿ ಪ್ರಯಾಣ ಮಾಡಿ ಏಳು ದಿವಸಗಳಲ್ಲಿಯೇ ಹಿಂತಿರುಗಿ
ಮನೆ ಸೇರುವದು? ಹೀಗೆಯೇ ಸಾವಿರಾರು ಸಂಗತಿಗಳನ್ನು ಸೂಚಿಸ ಬಹುದು.
ಕಾಲೋಚಿತವಾಗಿ ನಾಗರಿಕತೆಯು ಸಮಾಜದ ಸ್ಥಿತಿಯಲ್ಲಿ ಮಾರ್ಪಾಟುಗಳನ್ನುಂಟು
ಮಾಡುವದು. ಆ ಮಾರ್ಪಾಟುಗಳಿಗನುಗುಣವಾಗಿ ನಡೆಯ ಬೇಕಲ್ಲದೆ ನಾನೊಲ್ಲೆ
ನೆಂದರೆ ನೆರೆಯ ಪ್ರವಾಹಕ್ಕೆ ಅಡ್ಡ ನಿಂತಂತಾಗುವುದು. ಪ್ರವಾಹವು ಅಡ್ಡ ನಿಂತವ
ನನ್ನು ಕೊಚ್ಚಿಕೊಂಡು ಹೋಗುವದಲ್ಲದೆ ತಾನಾಗಿ ತಡೆಯಲ್ಪಡದು.

ಇನ್ನು ಎರಡನೇ ವಿರುದ್ಧ ಪಕ್ಷದವರ ಕಾರಣಗಳನ್ನು ಪರೀಕ್ಷಿಸುವಾ:—ದೊಡ್ಡ
ದೊಡ್ಡ ಆಸ್ತಿಗಳು ತುಂಡುಗಳಾಗವು. ವಿಭಾಗವಾದ ಶಾಖೆಗಳು ಅಂಕೆ ಇಲ್ಲದಿರುವ
ದರಿಂದ ಅನಾವ್ರಯ ಮಾಡಿ ಆಸ್ತಿಯನ್ನು ಪರಾಧೀನ ಮಾಡಿ ಕಳಕೊಳ್ಳುವರೆಂಬ ಭಯ
ವು ಅವರನ್ನು ಬಲುವಾಗಿ ಪೀಡಿಸುತ್ತಲಿರುವದೆಂದು ತೋರುವದು. ಯಾರೊಬ್ಬನು
ದ್ರವ್ಯವನ್ನು ಕೂಡಿಸಿಡಲು ಆಸ್ತಿಯನ್ನು ಸಂಪಾದಿಸಲು ಕಾರಣವೇನು. ಅದರಿಂದ
ತನಗೂ ತನ್ನ ಪ್ರೀತಿಪಾತ್ರರಾದವರಿಗೂ ಪ್ರಯೋಜನವುಂಟಾಗಿ ಸುಖದಿಂದ ಜೀವಿಸಿ
ಕೊಂಡಿರಬೇಕೆಂಬುದೇ. ಹಣಕ್ಕಾಗಿ ಹಣವನ್ನು ಕೂಡಿಸಿಟ್ಟು ಅದರ ಪ್ರಯೋಜ
ನವನ್ನು ಹೊಂದದ ಕೃಪಣನನ್ನು ಯಾರೂ ಶ್ಲಾಘಿಸರು. ಈಗ ದೊಡ್ಡ ದೊಡ್ಡ ಆಸ್ತಿ
ಗಳಿರುವದರಿಂದ ಪ್ರಯೋಜನವು ಲಭಿಸುವದು ಯಾರಿಗೆ? ಅಳಿಯ ಸಂತಾನದ ಕಟ್ಟಿನ
ಪ್ರಕಾರ ಕುಟುಂಬದ ಆಸ್ತಿಯಲ್ಲಿ ಕುಟುಂಬದ ಸರ್ವರಿಗೂ ಸಮಷ್ಟಿ ಹಕ್ಕಿರುವದೆಂಬದು
ನಿರ್ವಿವಾದವಾಗಿದೆ. ಆದರೆ ಆಸ್ತಿಯ ಉತ್ಪತ್ತಿಯನ್ನು ಯಜಮಾನನು ಸ್ವೇಚ್ಛೆಯಾಗಿ
ವೆಚ್ಚಮಾಡ ಬಹುದು. ಕುಟುಂಬದವರಿಗೆ ಅನ್ನ ಕೊಡಲಿಕ್ಕೆ ಮಾತ್ರ ಅವನು ಬದ್ಧನು.
ಹೀಗಿರುತ್ತಾ ದೊಡ್ಡ ಆಸ್ತಿಯಿಂದುಟಾಗುವ ಪ್ರಯೋಜನವು ಯಜಮಾನನಿಗಲ್ಲದೆ ಬೇರೆ
ಯವರಿಗೆ ದೊರೆಯದು. ಸಮಷ್ಟಿ ಹಕ್ಕಿನ ಆಸ್ತಿಯ ಪ್ರಯೋಜನವನ್ನು ಒಬ್ಬನೇ
ಹೊಂದುವಾದ್ಯಾವನ್ಯಾಯ? ನನಗೊಂದು ಹಕ್ಕಿರುವದಾದರೆ ಆ ಹಕ್ಕಿನ ಪ್ರಯೋಜನ
ಹೊಂದಲು ಉಪಾಯವಿಲ್ಲವಾದರೆ ಆ ಹಕ್ಕು ಇದ್ದರೇನು ಇಲ್ಲದಿದ್ದರೇನು?

ಪಾಲಾದರೆ ದೊಡ್ಡ ದೊಡ್ಡ ಆಸ್ತಿಗಳು ಕಾಣಲಿಕ್ಕೆ ಸಿಕ್ಕವೆಂದು ಹೇಳುವರು.
ಅಳಿಯ ಸಂತಾನ ಕಟ್ಟು ಮದ್ರಾಸು ಸಂಸ್ಥಾನದ ಪಶ್ಚಿಮ ಕರಾವಳಿಯ ಮೂರು
ನಾಲ್ಕು ಜಿಲ್ಲೆಗಳಲ್ಲಿ ಇದೆ. ನಾಗರೀಕತೆ ಹೊಂದಿದ ಮತ್ತಾವ ಪ್ರದೇಶದಲ್ಲಿಯೂ ಕಂಡು
ಬಾರದು. ಈ ಜಿಲ್ಲೆಗಳಲ್ಲಲ್ಲದೆ ಮತ್ತೆಲ್ಲಿಯೂ ದೊಡ್ಡ ದೊಡ್ಡ ಆಸ್ತಿಗಳೇ ಇಲ್ಲವೋ?
ಈ ಜಿಲ್ಲೆಗಳಲ್ಲಿ ಅಳಿಯ ಸಂತಾನ ಕಟ್ಟನ್ನಾಚರಿಸುವ ಜನರೇ ಬುದ್ಧಿವಂತರು ಬೇರೆಲ್ಲರೂ
ಬುದ್ಧಿ ಶೂನ್ಯರೋ? ನಮ್ಮ ಈ ಜಿಲ್ಲೆಗಳಲ್ಲಿ ಕೂಡಾ ಮಕ್ಕಳ ಸಂತಾನ ಕಟ್ಟನ್ನಾಚರಿಸು
ವ ಜನರಲ್ಲಿ ದೊಡ್ಡ ದೊಡ್ಡ ಆಸ್ತಿಗಳು ಕಂಡು ಬಾರವೊ? ಅನಾವ್ರಯ ಮಾಡಿ ಪರರ
ಪಾಲಾಗುವದೆನ್ನುವರು. ತನ್ನ ಸೊತ್ತನ್ನು ಬಹು ಜತನದಿಂದ ಕಾಪಾಡಿ ಅದನ್ನು ವೃದ್ಧಿ
ಗೊಳಿಸುವ ಪ್ರಯುಕ್ತ ಸ್ಥಿರ ಪ್ರಯತ್ನ ಮಾಡುವದು ಮನುಷ್ಯನ ಸ್ವಭಾವ ಧರ್ಮವು.
ಅವಿಭಕ್ತ ಕುಟುಂಬದಲ್ಲಿ ಕಿರಿ ಮೆಂಬರನು ತಾನು ಸಂಪಾದಿಸಿದ ವಸ್ತುವನ್ನು ಪ್ರೀತಿ
ಪೂರ್ವಕವಾಗಿ ಆದರಿಸುತ್ತಾ ಇಡೀ ಕುಟುಂಬದ ಸೊತ್ತಿನ ವಿಷಯದಲ್ಲಿ ಅಸಡ್ಡೆಯಿಂದಿ
ರುತ್ತಾನೆಂಬದು ಯಜಮಾನರ ಗೋಳಾಟವಾಗಿರುವದು. ಈ ಭಾಗದಲ್ಲಿ ಮಾತ್ರ ಮನು
ಷ್ಯನು ಸ್ವಭಾವ ಧರ್ಮಕ್ಕೆ ವಿರುದ್ಧವಾಗಿ ನಡೆಯುವನೆಂದು ನಾವ್ಯಾಕೆ ಭಾವಿಸಬೇಕು.

ವಿಚಾರ ಹೀನರಾದ ಹೆಂಗಸರು ಕೃತ್ರಿಮೋಪಾಯದ ತಮ್ಮ ಗಂಡಂದಿರ ಬಲೆಗೆ
ಬಿದ್ದು ಅವರ ದುರ್ವ್ಯಸನಗಳಿಗೆ ಸಹಾಯವಾಗುವಂತೆ ತಮ್ಮ ಪಾಲನ್ನು ಪರಾಧೀನ
ಮಾಡುವ ಸಂಭವವುಂಟೆನ್ನುವರು. ಅಳಿಯ ಸಂತಾನ ಕಟ್ಟನ್ನಾಚರಿಸುವ ಪುರುಷರೆಲ್ಲ
ರೂ ತಮ್ಮ ಹೆಂಡತಿ ಮಕ್ಕಳನ್ನು ನಿರಾಧಾರಿಗಳಾಗಿ ಮಾಡಬೇಕೆಂಬ ದೀಕ್ಷೆಯಲ್ಲಿರು
ವದು ಸಿದ್ಧಾಂತವೋ? ಈಗಿನ ನಡತೆ ನೋಡಿದರೆ ಪತ್ನಿ ಪುತ್ರರನ್ನು ಉದ್ಧಾರ ಮಾಡಬೇ
ಕೆಂದು ಪ್ರಯತ್ನಿಸುವರೇ ಹೊರತು ಹಾಳುಮಾಡಬೇಕೆಂದು ಅಪೇಕ್ಷಿಸುವದಿಲ್ಲವೆಂಬದು
ಸರ್ವ ಸಮ್ಮತವಾಗಿದೆ. ಪಾಲಾಗಬೇಕೆಂದು ಅನೇಕರು ಅಪೇಕ್ಷಿಸಲು ಮುಖ್ಯ

ಕಾರಣವೇ ಅದಾಗಿರುವದು. ಯಜಮಾನರು ಕುಟುಂಬದ ಸುರಕ್ಷಣೆಯನ್ನು ಮರೆತು
ಹೆಂಡತಿ ಮಕ್ಕಳನ್ನು ಉದ್ಧರಿಸುವದರಲ್ಲಿಯೇ ನಿರತರಾಗಿರುವರೆಂದು ಕಿರಿ ಮೆಂಬರರ
ಪ್ರಲಾಪವಾಗಿರುವದು.

ಅಂತು, ಪಾಲಾದರೆ ಪಾಲಾದ ಭಾಗಗಳನ್ನು ಪರಾಧೀನ ಮಾಡರೆಂದೂ ಹೆಂಡ
ತಿಗೆ ಬಂದ ಪಾಲನ್ನು ತನ್ನ ದುಂದುತನಕ್ಕೆ ಸಹಕಾರಿಯಾಗಿ ಮಾಡುವ ದುರುಳನಿಲ್ಲವೆಂ
ದೂ ನಾನು ಸಾಧಿಸುವದಿಲ್ಲ. ಇರ ಬಹುದು, ಆದರೆ ಅಂಥವರ ಸಂಖ್ಯೆಯು ಬಹು
ಕಡಿಮೆ. ಯಾವದೊಂದು ಕೆಲಸದಲ್ಲಿ ಹಿತಾಹಿತಗಳಿಲ್ಲದಿರವು. ಹಿತವು ಮಿಗಿಲೋ
ಅಹಿತವು ಮಿಗಿಲೋ ಎಂಬದನ್ನು ವಿಚಾರಿಸಿ ನಾವು ನಡೆಯತಕ್ಕದ್ದು. ಒಂದಾನೊಂದು
ಸಂದರ್ಭದಲ್ಲಿ ಕೆಡಕಾಗುವದೆಂದು ಹೆದರಿ ಕೆಲಸವನ್ನೇ ಮಾಡುವದು ಬಿಟ್ಟು ಬಿಟ್ಟರೆ
ಲೋಕ ರೂಢಿಯು ನಡೆಯದು. ಯಾತವು ಮುರಿದು ಬಿದ್ದು ಜೀವ ನಷ್ಟವಾದೀತೆಂಬ
ಭಯದಿಂದ ಗದ್ದೆಗಳಿಗೆ ಕೈಯಿಂದ ನೀರು ಸೇದುವದಿಲ್ಲ. ಹೊಗೆ ಭಂಡಿಗೇನಾದರೂ
ಅವಾಂತರ ಸಂಭವಿಸೀತೆಂದು ದೂರ ಪ್ರಯಾಣಗಳನ್ನು ಕಾಲು ನಡೆಯಿಂದ ಮಾಡುವ
ದಿಲ್ಲ. ದೋಣಿ ಕವಚಿ ಬಿದ್ದೀತೆಂದು ಹೊಳೆ ದಾಟದಿರುವದಿಲ್ಲ. ಮಹನೀಯರೇ
ನಿಮ್ಮ ಆಧಾರ ಭೂತವಾದ ಕಾರಣಗಳನ್ನು ಇನ್ನೊಮ್ಮೆ ಚೆನ್ನಾಗಿ ಆಲೋಚಿಸಿರಿ.

(ಸಶೇಷ.)

〰〰〰

೨

ಸ್ವಾಮಿ,

ಈ ಉಡುಪಿ ಕ್ಷೇತ್ರವು ಈಗ ಕೆಲವು ವರ್ಷಗಳಿಂದ ವೈದಿಕ ವಿದ್ಯೆಯಲ್ಲಿ ಬಹಳ
ಮಟ್ಟಿಗೆ ಅಭಿವೃದ್ಧಿಯಾಗುತ್ತಾ ಬರುವಂತೆ ತೋರುತ್ತದೆ. ಶ್ರೀಮನ್ಮಧ್ವಸಿದ್ಧಾಂತ
ಪ್ರಬೋಧಿನೀ ಸಂಸ್ಕೃತ ವಿದ್ಯಾಶಾಲೆಯೊಂದನ್ನು ಸ್ಥಾಪಿಸಿದುದರಿಂದ ಈ ಜಿಲ್ಲೆಯ ಬೇರೆ
ಬೇರೆ ಕಡೆಗಳಿಂದ ಕೂಡ ಅನೇಕ ವಿದ್ಯಾರ್ಥಿಗಳು ಬಂದು ವಿದ್ಯಾಭ್ಯಾಸ ಮಾಡುತ್ತಿರು
ವರು. ಈ ವಿದ್ಯಾಶಾಲೆಯು ಅಷ್ಟ ಶ್ರೀಪಾದಂಗಳವರ ಖರ್ಚಿನಿಂದ ನಡಿಯುತ್ತಿರುವ
ದಾದರೂ ಇದರ ಸ್ಥಾಪನೆಗೂ ನಡಿಯುತ್ತಾ ಬರುವದಕ್ಕೂ ಇನ್ನು ಮುಂದಿನ ಅಭಿವೃ
ದ್ಧಿಗೂ ಮುಖ್ಯ ಕಾರಣ ಭೂತರು ಶ್ರೀ ಅದಮಾರು ಶ್ರೀಪಾದಂಗಳವರೇ. ಈ ಶ್ರೀ
ಪಾದಂಗಳವರು ಶ್ರೀಮನ್ಮಧ್ವಸಿದ್ಧಾಂತ ಸಂವರ್ಧಿನೀ ಎಂಬ ಸಭೆಯೊಂದನ್ನು ಏರ್ಪಡಿಸಿ
ಈ ಊರಿನ ಮಾತ್ರವಲ್ಲ ಪರಸ್ಥಳದಿಂದ ಬರುವ ವಿದ್ಯಾರ್ಥಿಗಳನ್ನು ಕೂಡ ಪ್ರತಿ ಮಾಘ
ಮಾಸದಲ್ಲಿ ತರಗತಿ ಕ್ರಮದಿಂದ ಪರೀಕ್ಷೆ ಮಾಡಿಸಿ ಅವರವರ ಯೋಗ್ಯತಾನುಸಾರವಾಗಿ
ಸಂಭಾವನೆಗಳನ್ನು ಕೊಡುತ್ತಿರುವರು. ಇದಲ್ಲದೆ ಇವರ ಪ್ರೋತ್ಸಾಹದಿಂದ ಎಲ್ಲೂರು
ದೇವಸ್ಥಾನದಲ್ಲಿಯೂ, ಕುಂಜಾರದಲ್ಲಿಯೂ, ಪಡುಬಿದ್ರೆಯಲ್ಲಿಯೂ ಸಂಸ್ಕೃತ ಪಾಠ
ಶಾಲೆಗಳು ಏರ್ಪಡಿಸಿರುವವು. ಇನ್ನೂ ಕೆಲವು ದೇವಸ್ಥಾನಗಳಲ್ಲಿ ಇಂಥಾ ಪಾಠಶಾಲೆ
ಗಳನ್ನು ಸ್ಥಾಪಿಸುವದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತಿರುವರಾಗಿ ತಿಳಿದು ಬರುತ್ತದೆ.
ಉದರಂಭರಣಾರ್ಥವಾಗಿ ಲೌಕಿಕ
ಶಾಸ್ತ್ರಾಭ್ಯಾಸವೇನೂ ಮಾಡದೆ ಸಮಯವನ್ನೆಲ್ಲಾ
ವ್ಯಾಪಾರಗಳಲ್ಲಿಯೇ ಕಳೆಯುವವರಿಗೆ ಕೂಡ ಶಾಸ್ತ್ರ ಮರ್ಯಾದೆಗಳು ತಿಳಿದು ತಮ್ಮ
ಮತ ಪ್ರಕ್ರಿಯೆಗಳು ಯಥೋಚಿತವಾಗಿಯಾದರೂ ತಿಳಿಯಬೇಕೆಂತ ಇಲ್ಲಿ ಚಂದ್ರ
ಮೌಳೇಶ್ವರ ದೇವಸ್ಥಾನದಲ್ಲಿ ಪ್ರತಿ ಭಾನುವಾರ ದಿವಸ ಶಾಸ್ತ್ರಗಳ ವಿಷಯದಲ್ಲಿ ಸ್ಥಳಿಕ
ವಿದ್ವಾಂಸರಿಂದ ಕನ್ನಡ ಭಾಷೆಯಲ್ಲಿ ಉಪನ್ಯಾಸಗಳನ್ನು ಮಾಡಿಸುವ ವ್ಯವಸ್ಥೆ ಮಾಡಿರು
ವರು. ತಾವು ಸ್ವಯಂ ವಿದ್ವಾಂಸರಿರುವ ಪ್ರಯುಕ್ತ ಅನೇಕರಿಗೆ ನ್ಯಾಯ ವ್ಯಾಕರಣ
ವೇದಾಂತಾದಿ ಶಾಸ್ತ್ರಗಳನ್ನು ಪಾಠ ಹೇಳುತ್ತಿರುವರು. ಇಲ್ಲಿಗೆ ಯಾತ್ರೆಗಾಗಿ ಬರುವ
ವರಿಗೂ ಪ್ರಯಾಣಿಕರಿಗೂ ವಸತಿಗೆ ಸ್ಥಳವಿಲ್ಲದೆ ಬಹಳ ಕಷ್ಟವಾಗಿದ್ದುದರಿಂದ ಒಂದು
ಚಲೋ ಧರ್ಮಶಾಲೆಯನ್ನು ಕಟ್ಟಿಸಿ ಈ ಕಷ್ಟವನ್ನು ನಿವಾರಣೆಮಾಡಿರುವರು. ಹಾಳು
ಬಿದ್ದಿರುವ ಅನೇಕ ದೇವಸ್ಥಾನಗಳನ್ನು ಈ ಪುಣ್ಯಾತ್ಮರೇ ಜೀರ್ಣೋದ್ಧಾರ ಮಾಡಿಸಿರು
ವರು. ಇವರು ಉಡುಪಿ ಅಷ್ಟ ಶ್ರೀ ಪಾದಂಗಳವರ ಪೈಕಿ ಆಶ್ರಮ ಜ್ಯೇಷ್ಠರೂ ವಿದ್ಯೆ
ಯಲ್ಲಿಯೂ ಜ್ಞಾನದಲ್ಲಿಯೂ ಸಂಪತ್ತಿನಲ್ಲಿಯೂ ಔದಾರ್ಯಾದಿ ಗುಣಗಳಲ್ಲಿಯೂ
ಶ್ರೇಷ್ಠರೂ ಆಗಿರುವರು. ಪರೋಪಕಾರ ಶೀಲರಾದ ಈ ಮಹಾತ್ಮರಿಗೆ ನಮ್ಮ ದಯಾಳು
ಸರಕಾರದವರು ಬರುವ ಕಿರೀಟ ಧಾರಣೋತ್ಸವ ಸಂದರ್ಭದಲ್ಲಿ ಈ ಪ್ರಾಂತ್ಯದ ಜನರ
ಸಂತೋಷಾರ್ಥವಾಗಿ ಇವರ ಗುರುಗಳಾಗಿದ್ದು ಈಗ ಮೋಕ್ಷಾನಂದವನ್ನನುಭವಿಸುತ್ತಿ
ರುವ ಶ್ರೀ ಸೋದೇ ಪಾದಂಗಳವರಿಗೆ ದಯಪಾಲಿಸಿರುವಂತೆ "ಮಹಾ ಮಹೋಪಾ
ಧ್ಯಾಯ" ಎಂಬ ಬಿರುದಾಂಕಿತವನ್ನು ದಯಪಾಲಿಸಿ ಅಶೇಷ ಪ್ರಜೆಗಳ ಪ್ರೀತಿಗೆ ಪಾತ್ರ
ರಾಗಬೇಕಾಗಿ ಅನೇಕರ ಅಪೇಕ್ಷೆ ಇರುತ್ತದೆ. ಈ ವಿಷಯದಲ್ಲಿ ಈ ಜಿಲ್ಲೆಯ ಮುಖ್ಯ
ಅಧಿಕಾರಿಗಳು ತಕ್ಕ ಗಮನವನ್ನು ಕೊಡುವರಾಗಿ ನಂಬುತ್ತೇನೆ.

ಕ್ಷೇತ್ರವಾಸಿ.

〰〰〰

ವಿದೇಶ ವೃತ್ತಾಂತ.

ಶೀರಾಜ್‌ದಲ್ಲಿ ಅಲ್ಲಿಯ ಜನರು ಯೆಹೂದ್ಯರನ್ನು
ಹಿಡಿದು ಬಡಿದು ಕೊಲ್ಲುತ್ತಿರುವರು. ಮಹಮ್ಮದಿಯರ
ಹುಡುಗಿಯೊಬ್ಬಳನ್ನು ಯೆಹೂದ್ಯರು ಹಿಡಿದು ಬಲಿ ಅರ್ಪಿ
ಸಿದ್ಧಾರೆಂಬ ವಾರ್ತೆಯೇ ಈ ಹಿಂಸಾ ಕೃತ್ಯಕ್ಕೆ ಕಾರಣ.

〰〰〰

ಹಿಂದೂಸ್ಥಾನದ ನೇಶನಲ್ ಕೊಂಗ್ರೆಸಿಗೆ ಅಧ್ಯಕ್ಷರಾಗಿ
ಆರಿಸಲ್ಪಟ್ಟು ಹಿಂದೂಸ್ಥಾನಕ್ಕೆ ತೆರಳಲಿಕ್ಕಿರುವ ಸರ್
ಡಬ್ಲ್ಯು. ವೆಡ್ಡರ್ ಬರ್ನ್ ಎಂಬವರಿಗೆ ಲಂಡನಿನಲ್ಲಿ ಕಳದ
ತಿಂಗಳ ತಾರೀಕು ೩೮ರಲ್ಲು ಸ್ವಸ್ತಿ ವಚನವನ್ನು ಹೇಳಲಿಕ್ಕೆ
ಪಾರ್ಲಿಮೆಂಟ ಸಭಾಸದರ ಮೊದಲಾದವರ ಸಭೆ ಕೂಡಿತು.
ಇದರಲ್ಲಿ ಮೆ। ಅಮೀರ ಆಲಿ; ಸರ್ ಪಿರೋಜಿಷಾ ಮೆಥಾ
ಮೊದಲಾದ ಭಾರತೀಯರೂ ಹಾಜರಿದ್ದರು. ಸರ್
ವೆಡ್ಡರ್ ಬರ್ನರವರು ಕೊಂಗ್ರೆಸಿನ ಉಭಯ ಪಕ್ಷದವ
ರಲ್ಲಿ ಮೈತ್ರತ್ವವನ್ನು ಹುಟ್ಟಿಸ ಪ್ರಯತ್ನಿಸುವದೇ ತಾನು
ಹಿಂದೂಸ್ಥಾನಕ್ಕೆ ಹೋಗುವ ಉದ್ದಿಶ್ಯವೆಂದು ಸಭೆಯಲ್ಲಿ
ಸೂಚಿಸಿದರು. ನಂತರ ಮೆ। ಅಮೀರ್ ಆಲಿ ಮತ್ತು
ಸರ್ ಮೆಥಾರವರು ಹಿಂದುಗಳಿಗೂ ಮುಸಲ್ಮಾನರಿಗೂ
ಇರುವ ಭೇದಗಳನ್ನು ಕಳೆದು ಬಿಡುವುದಕ್ಕೆ ಒಂದು ಮೈ
ತ್ರೀ ಸಂಘವನ್ನು ಏರ್ಪಡಿಸುವರೆ ಪ್ರಯತ್ನವಿಡಬೇಕೆಂದು
ವ್ಯಕ್ತಪಡಿಸಿದರು.

〰〰〰

ಆಸ್ಟ್ರೇಲಿಯದ ಮೆಮೊಯ್ಡ್ ಸ್ಟೀಮರಿನಲ್ಲಿ ೪೦೦,೦೦೦
ಪೌಂಡುಗಳ ಚಿನ್ನವೂ ಪಿ. ಎಂಡ್ ಒ. ಕಂಪೆನಿಯ ಅರ
ಬಿಯ ಹಡಗದಲ್ಲಿ ೩೦,೦೦೦ ಪವನುಗಳ ಚಿನ್ನವೂ ಹಿಂದೂ
ಸ್ಥಾನಕ್ಕೆ ರಫ್ತಾಗುವದು.

〰〰〰

ನಮ್ಮ ವ್ಯಾಸರಾಯರಾಗಿರುವ ಹಾರ್ಡಿಂಗ್ ಪ್ರಭು
ಗಳವರು ಹಿಂದೂಸ್ಥಾನಕ್ಕೆ ತೆರಳಿದಾಗ ಅಗ್ಗಾಡಿ ತಪ್ಪಿ
ಹೋಗುವ ಸಂಭವವಿದ್ದದ್ದಲ್ಲದೆ ಪ್ಲೇಟ್‌ಫಾರ್ಮಿನಲ್ಲಿ ತನ್ನ
ಚೀಲದಿಂದ ಹಣ ಕೂಡಾ ಕಳಕೊಳ್ಳುವ ಸಂಭವವಿತ್ತು.
ಅಗ್ಗಾಡಿಯು ಹೊರಡ ೫ ನಿಮಿಷವಿರುವಾಗಲೇ ಪ್ರಭುಗಳ
ವರ ಪತ್ನಿಯವರು—ಇಗೊಳ್ಳಿ! ನಿಮ್ಮ ಚೀಲದಿಂದ ಒಬ್ಬ
ಮುದುಕನು ಹಣವನ್ನು ತೆಗಿಯುತ್ತಿದ್ದನೆಂದು ಹೇಳಿದರು.
ಕೂಡಲೇ ಆ ಕಳ್ಳ ಮುದುಕನು ಹಿಂದೆ ಜಾರಿದನು. ಆ
ದರೆ ಪ್ರಭುಗಳವರು ಜನ ಸಮುದಾಯದಿಂದ ದಾರಿ ಬಿಡಿಸಿ
ಕೊಂಡು ಕಳ್ಳನ ಹಿಂದೆ ಹೋದರೂ ಕೂಡಲೇ ತನ್ನ ಮನ
ಸ್ಸನ್ನು ಬೇರೆ ಮಾಡಿ ಕಳ್ಳನನ್ನು ಬಿಟ್ಟುಬಿಟ್ಟು ಹಿಂದಕ್ಕೆ
ತೆರಳಿದರು. ಕಳ್ಳನು ಪಲಾಯನ ಸೂಕ್ತವನ್ನು ಹಿಡಿದನು.
ಪ್ರಭುಗಳು ಕಳ್ಳನಿಗೆ ಕ್ಷಮಾಪಣೆ ಮಾಡಿದರೆಂಬ ಭಾವನೆ
ಯಿಂದ ಕೂಡಿದ್ದವರಲ್ಲಿ ಯಾರಾದರೂ ಅವನನ್ನು ಹಿಡಿಯ
ಪ್ರಯತ್ನಿಸಲಿಲ್ಲ.

〰〰〰

ಬ್ರಿಟಿಷ್ 'ಎಂಟಿ ಟೊಬೆಕೋ' ಎಂಬ ಹೊಗೆಸೊಪ್ಪಿನ
ಉಪಯೋಗವನ್ನು ವಿರೋಧಿಸುವ ಸಂಘದ ವರ್ಷಾಂತಿಕ
ಸಭೆಯು ಇತ್ತಲಾಗೆ ಜರಗಿತು. ಮೆ. ಡಬ್ಲ್ಯು ಇ.ಎ. ಆಕ್ಸನ್
ಎಂಬವರು ಸಭೆಯ ಅಧ್ಯಕ್ಷರಾಗಿದ್ದರು. ಹೊಗೆಸೊಪ್ಪು ಸೇ
ದದವನು ತನ್ನ ಜೀವಮಾನಕ್ಕೆ ೧೦ ವರುಷಗಳನ್ನು ಹೆಚ್ಚಿಗೆ
ಕೂಡಿಸಿಕೊಳ್ಳುತ್ತಾನೆಂದೂ, ಮಾದಕ ಪದಾರ್ಥ ಮುಟ್ಟ
ದವನು ತನ್ನ ಆಯುಷ್ಯಕ್ಕೆ ೨೦ ವರುಷ ಹೆಚ್ಚಾಗಿ ಕೂಡಿಸಿ
ಕೊಳ್ಳುತ್ತಾನೆಂಬದಾಗಿಯೂ ಇರುವ ಲೋಕ ಪ್ರಖ್ಯಾತ
ರಾದ ತೊಲುಸ್ತಾಯಿಯವರ ಮಾತುಗಳನ್ನು ಸೂಚಿಸಿ
ಈ ದುರಭ್ಯಾಸವನ್ನು ನಿಲ್ಲಿಸುವುದಕ್ಕೆ ಮಾಡಿದ ಭಗೀರಥ
ಪ್ರಯತ್ನಗಳನ್ನು ವಿವರಿಸಿದರು. ನಂತರ ಅಲ್ಲಿ ಕೂಡಿ
ಬಂದಿದ್ದ ಪ್ರಖ್ಯಾತ ಪುರುಷರು ತಮ್ಮ ತಮ್ಮ ಆಲೋಚನೆ
ಗಳನ್ನು ಕೊಟ್ಟು ಮಕ್ಕಳಲ್ಲಿ ಈ ದುರಾಭ್ಯಾಸವನ್ನು ನಿಲ್ಲಿ
ಸುವರೆ ಪ್ರಯತ್ನವಿಡಬೇಕೆಂದೂ ಇದರ ಸೇವನೆಯ ಕೆಡ
ಕನ್ನು ಕುರಿತು ಉತ್ತಮವಾದ ಹಲವು ಪುಸ್ತಕಗಳನ್ನು
ಬರೆಯಬೇಕೆಂದೂ ಮುಖ್ಯವಾಗಿ ಕ್ರೈಸ್ತ ಪಾದ್ರಿಗಳು
ಈ ಅಭ್ಯಾಸವನ್ನು ಪೂರ್ಣವಾಗಿ ತ್ಯಜಿಸಿ, ತಮ್ಮ ಸಭಿಕರಿಗೆ
ಈ ವಿಷಯ ಉತ್ತಮವಾದ ಮಾದರಿಯನ್ನು ತೋರಿಸಬೇ
ಕೆಂದೂ ಅಭಿಪ್ರಾಯಪಟ್ಟರು.

〰〰〰

ಉತ್ತರ ಹಿಂದೂಸ್ಥಾನ.

ಬಂಗಾಳದ ಕಾರ್ಯನಿರ್ವಾಹಕ ಸಭೆಯ ಮೆಂಬರ
ರಾಗಿದ್ದ ಬಹುಮಾನಪಟ್ಟ ಸೈಯದ್ ಆಲಿ ಇಮಾಂ ಸಾಹೇ
ಬರು ವೈಸರಾಯಿ ಕಾರ್ಯನಿರ್ವಾಹಕ ಸಭೆಯ ಮೆಂಬರ
ರಾಗಿ ಆರಿಸಲ್ಪಟ್ಟದ್ದರಿಂದ ಸ್ಟೇಡಿಂಗ್ ಕೌನ್ಸಿಲ್ ಎಂಬ
ಸರಕಾರ ಕಡೆಯ ವಕೀಲರ ಸ್ಥಾನಕ್ಕೆ ಮೆ. ಬಿ. ಮಿತ್ತರ
ವರು ನೇಮಕವಾದರು.

〰〰〰

ಡಿಬ್ರುಗರ್ ಎಂಬಲ್ಲಿಯ ಕಮಿಷನರ್ ಆಫೀಸಿನ
ಶ್ರೀಯುತ ದಿಂಡಿ ರಾಮದತ್ತರವರನ್ನು ಅಲ್ಲಿಯ ಡಿಪ್ಯುಟಿ
ಕಮಿಷನರಾದ ಮೆ. ಮಿಲ್ನೆಯವರು ಒಂದರೆ ಕಾರಣದಿಂದ

ಅವಮಾನತು ಮಾಡಿದ್ದರು. ಆದರೆ ಸದರಿ ಮಿಣ್ಣೆಯವರು ತಾನು ಹೀಗೆ ಅಮಾನತ್ತು ಮಾಡಿದ್ದು ತಪ್ಪೆಂತ ತಿಳಕೊಂಡು ಸ್ಥಳೀಕ ಶಿರಸ್ತೆದಾರ ಮತ್ತು ರೆವಿನ್ಯು ಪೆಸ್ಕಾರರ ಸಮೇತ ದತ್ತರವರನ್ನು ತನ್ನ ಬಂಗ್ಲೆಗೆ ಕರಿಸಿ, ಅಮಾನತ ಹುಕುಮನ್ನು ಮನ್ನಾ ಪಡಿಸಿದ್ದಲ್ಲದೆ ಪರಿಹಾರ ದ್ರವ್ಯವಾಗಿ ೫೦೦ ರೂಪಾಯಿಗಳನ್ನು ದತ್ತರವರಿಗೆ ನೀಡಿದರು. ದತ್ತರವರು ಈ ದ್ರವ್ಯವನ್ನು ಸ್ವೀಕರಿಸಿಕೊಳ್ಳದೆ ಸದರಿ ಕಮಿಷನರವರೇ ಈ ದ್ರವ್ಯವನ್ನು ದರಿದ್ರ ಶಿವಸಮಿತಿ ಮತ್ತು ನಾಮಘೋರು ಎಂಬೀ ಎರಡು ಸಂಸ್ಥೆಗಳಿಗೆ ಕೊಡಬಹುದಾಗಿ ಸೂಚಿಸಿದ ಮೇರೆಗೆ ಕಮಿಷನರವರು ೫೦೦ ರೂಪಾಯಿಯ ಹುಂಡಿಯನ್ನು ಶಿರಸ್ತೆದಾರರ ಹೆಸರಿನಲ್ಲಿ ಬರದು ಕೊಟ್ಟು ಎರಡು ಸಂಸ್ಥೆಗಳಿಗೂ ಈ ಮೊಬಲಗನ್ನು ಸಮಪಾಲಾಗಿ ಹಂಚಿಕೊಡಬೇಕೆಂದು ಹೇಳಿದರು. ದತ್ತರವರನ್ನು ಕಮಿಷನರರು ನಡಿಸಿದ ರೀತಿಯನ್ನು ನೋಡಿ ಊರ ಜನರು ಇವರನ್ನು ಹೊಗಳುತ್ತಿರುವರು. ಸದರಿ ಡಿಪ್ಯುಟಿ ಕಮಿಶನರಾದ ಮಿ. ಮಿಣ್ಣೆಯವರ ಈ ವರ್ತನೆಯು ಎಲ್ಲಾ ಇಲಾಖೆಯ ಮೇಲಾಫೀಸರುಗಳಿಂದ ಅನುಸರಿಸತಕ್ಕದ್ದೇ.

~~~~~~

ಮುಂಬಾಯಿಯ ಬಟಿಯ ಜಾತ್ಯಸ್ಥರಲ್ಲಿ ಈಚೆಗೆ ಸುಮಾರು ಒಂದೆರಡು ತಿಂಗಳ ಹಿಂದೆ ೧೭ ವರ್ಷದ ಅಶ್ವಿನಿಬಾಯಿ ಎಂಬ ವಿಧವೆಗೂ ೫೫ ವರ್ಷ ಪ್ರಾಯದ ಅದೇ ಕುಲದ ಗೃಹಸ್ಥರೊಬ್ಬರಿಗೂ ವಿವಾಹವಾಗಿತ್ತು. ಈ ಸಂಬಂಧವಾಗಿ ಇವರಿಬ್ಬರನ್ನು ಜಾತಿಯಿಂದ ಬಹಿಷ್ಕರಿಸುವ ಬಗ್ಯೆ ತಾರೀಕು ೨೦ನೇ ಆದಿತ್ಯವಾರ ವಿರೋಧ ಪಕ್ಷದವರು ಮಂಜನ್‌ವಾಡಿ ಎಂಬ ಮಂದಿರದಲ್ಲಿ ಸಭೆಕೂಡಿಸಿ ಸದರಿ ಗೃಹಸ್ಥರಿಗೆ ಜಾತಿಯಿಂದ ಬಹಿಷ್ಕಾರ ಇಡಬೇಕೆಂತ ತೀರ್ಪು ಮಾಡಿದರು. ಈ ತೀರ್ಮಾನವು ಆದ ಒಂದು ತಾಸಿನೊಳಗೆ ಗಿರಗಾಂ ವಿಧವಾವಿವಾಹದ ಸಭಾಮಂದಿರದಲ್ಲಿ ಪುನಃ ಮತ್ತೊಂದು ವಿಧವಾವಿವಾಹವು ನಡೆಯಿತು. ಬಹುಮಾನಪಟ್ಟ ಎನ್. ಜಿ. ಚಂದವರ್‌ಕಾರ್ ಈ ಸಂದರ್ಭದಲ್ಲಿ ಕೂಡಿದ ಬಂದಂಥಾ ಮಹಾಸಭೆಗೆ ಯುಕ್ತವಾದ ಭಾಷಣವನ್ನು ಕೊಟ್ಟರು. ಈ ತನಕ ಈ ಭಟಿಯ ಜಾತ್ಯಸ್ಥರಲ್ಲಿ ಒಟ್ಟಿಗೆ ೧೧ ವಿಧವಾ ವಿವಾಹಗಳು ನಡೆದವು.

~~~~~~

ನವಂಬರ ೧೯ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದ ಯುನೈಟೆಡ್ ಪ್ರೊವಿನ್ಸಿನಲ್ಲಿ ೧೯೪೮ ಮಂದಿಯೂ ಮುಂಬಾಯಿಯಲ್ಲಿ ೪೫೭, ಪಂಜಾಬಿನಲ್ಲಿ ೪೪೦, ಸೆಂಟ್ರಲ್ ಪ್ರೊವಿನ್ಸಿನಲ್ಲಿ ೭೪೦, ರಾಜಪುತಾನದಲ್ಲಿ ೬೦೨, ಮದ್ರಾಸು ಆಧಿಪತ್ಯದಲ್ಲಿ ೩೪೭, ಮೈಸೂರಲ್ಲಿ ೪೩೫, ಹೈದರಾಬಾದಿನಲ್ಲಿ ೩೬೧, ಬಂಗಾಳದಲ್ಲಿ ೩೫೪, ಮಧ್ಯ ಹಿಂದೂಸ್ಥಾನದಲ್ಲಿ ೧೩೫, ಬರ್ಮಾದಲ್ಲಿ ೫೧, ಕಾಶ್ಮೀರದಲ್ಲಿ ೮ ಮಂದಿಯು ಪ್ಲೇಗ್ ಬೇನೆಯಿಂದ ಮೃತ ಪಟ್ಟರು. ಅಂದರೆ ಇಡೀ ಹಿಂದೂಸ್ಥಾನದಲ್ಲಿ ಆ ವಾರದಲ್ಲಿ ಒಟ್ಟಿಗೆ ೫೧೦೬ ಮರಣಗಳಾದಂತಾಯಿತು.

~~~~~~

ಹಿಂದೂಸ್ಥಾನದಲ್ಲಿರುವ ಎಲ್ಲಾ ಮತಗಳಲ್ಲಿ ಸಹೋದರ ಭಾವವನ್ನೂ ಐಕ್ಯವನ್ನೂ ಹುಟ್ಟಿಸಿ ಒಬ್ಬರ ಮೇಲೆ ಒಬ್ಬರಿಗೆ ಇರುವ ವೈಮನಸ್ಸನ್ನು ಕಿತ್ತಾಕುವ ಉದ್ದಿಶ್ಯದಿಂದ ಬರುವ ಜನವರಿ ೯, ೧೦, ೧೧ನೇ ತಾರೀಕುಗಳಲ್ಲಿ ಆಗ್ರಾ ಪಟ್ಟಣದಲ್ಲಿ ಸರ್ವ ಮತಗಳ ಪರಿಷದವು ಜರಗುವುದು. ಎಲ್ಲಾ ಮತಗಳ ಪ್ರಮುಖರು ಈ ಪರಿಷದಕ್ಕೆ ಆಮಂತ್ರಿಸಲ್ಪಟ್ಟಿರುವರು.

~~~~~~

ತಾರೀಕು ೨೬ರಲ್ಲು ಹಾರ್ಡಿಂಗ್ ಪ್ರಭುಗಳವರೂ ಕಮೇಂಡರ್ ಇನ್‌ಚೀಫರೂ ಮೈದಾನಿನಲ್ಲಿ ಕುದುರೆ ಸವಾರಿ ಮಾಡುತ್ತಿರುವಾಗ ಹಾರ್ಡಿಂಗ್ ಪ್ರಭುಗಳವರ ಕುದುರೆಯು ಫಕ್ಕನೇ ಬೆಚ್ಚಿ ಬಿದ್ದು ಪ್ರಭುಗಳವರು ಕೆಳಗೆ ಬಿದ್ದರು. ಇವರ ಸಹಾಯಾರ್ಥವಾಗಿ ಸರ್. ಒ. ಮೂರು ಕ್ರೆಗ್ಗರ ಹತ್ತರ ಬಂದರು. ಇವರೂ ಕುದುರೆಯಿಂದ ಬಿದ್ದುಬಿಟ್ಟರು. ದೈವವಶಾತ್ ಇಬ್ಬರಿಗೂ ಅಪಾಯವೇನೂ ಆಗಲಿಲ್ಲ.

~~~~~~

ಮಿಂಟೊ ಪ್ರಭುಗಳವರು ಪರಿವಾರ ಸಮೇತ ತಾರೀಕು ೨೩ನೇ ಸಾಯಂಕಾಲ ಮುಂಬಾಯಿ ಬಂದರಕ್ಕೆ ತಲಪಿದರು. ಮುಂಬಾಯಿ ವ್ಯಾಪಾರ ಮಂಡಳಿಯವರೂ ಮುಂಬಾಯಿ ನಿವಾಸಿಕರೂ ಮುನಿಸಿಪಾಲಿಟಿಯವರೂ ಇಂಡಿಯದ ಮುಸಲ್ಮಾನ ಸಂಘದವರೂ ಲೋರ್ಡುಮಿಂಟೋಗಳವರ ಕಾಲದಲ್ಲಿ ತಮಗೆ ಲಭಿಸಿದ ಉತ್ತರೋತ್ತರ ವೃದ್ಧಿಯನ್ನು ಸೂಚಿಸಿ ಮಾನಪತ್ರಗಳನ್ನು ಅರ್ಪಿಸಿದರು. ಪ್ರಭುಗಳವರು ಎಲ್ಲರಿಗೂ ಸಮಂಜಸವಾದ ಮಾತುಗಳನ್ನು ಹೇಳಿ ಸಕಲರಿಗೂ ಉಪಕಾರಸ್ಮರಣೆ ಹೇಳಿ ಸರಕಾರ ಮಂದಿರಕ್ಕೆ ಹೋಗಿ ಅಲ್ಲಿಂದ ಪುನಃ ತಾರೀಕು ೨೬ಲ್ಲು ಅಪಲ್ಲೋ ಬಂದರಿಗೆ ಹಿಂತಿರುಗಿ ಡಫರಿನ್ ಎಂಬ ಹಡಗ ಹತ್ತಿ ಶೀಮೆಗೆ ತೆರಳಿದರು. ಎಲ್ಲಾ ವರ್ತಮಾನ ಪತ್ರಗಳು ಪ್ರಭುಗಳವರ ವಿಯೋಗದಿಂದ ಪ್ರಜೆಗೆ ಉಂಟಾದ ಶೋಕವನ್ನು ವ್ಯಕ್ತ ಪಡಿಸುತ್ತಿರುವವು.

~~~~~~

ಬಹುಮಾನಪಟ್ಟ ಎನ್. ಜಿ. ಚಂದಾವರಕಾರರವರು ಅಲ್ಲಹಬಾದಿನಲ್ಲಿ ಕ್ರಿಸ್‌ಮಸ್ ಹಬ್ಬದ ಸಮಯ ಜರಗಲಿಕ್ಕಿರುವ ಬ್ರಹ್ಮ ಸಮಾಜದವರ ಮಹಾ ಸಭೆಯ ಅಧ್ಯಕ್ಷರಾಗಲಿಕ್ಕೆ ಒಪ್ಪಿಕೊಂಡಿರುವರು.

~~~~~~

ಅಲ್ಲಹಾಬಾದಿನಲ್ಲಿ ಜರಗಲಿಕ್ಕಿರುವ ನೆಶನಲ್ ಕೊಂಗ್ರೆಸಿಗೆ ಹೆಚ್ಚು ಪ್ರತಿನಿಧಿಗಳು ಬರುವರೆಂಬದಾಗಿ ನಿರೀಕ್ಷಿಸಲ್ಪಟ್ಟದೆ.

~~~~~~

ಸ್ವಲ್ಪ ದಿವಸಗಳ ಹಿಂದೆ ಬಹುಮಾನಪಟ್ಟ ರಾಜಮುಥೊಲಾಲ್ ಬಹದೂರರವರು ಹಿಂದುಸ್ಥಾನದ ನೆಶನಲ್ ಮೆಡಿಕಲ್ ಕೊಲೇಜನ್ನು ಸಂದರ್ಶಿಸಿದರು. ರಾಜ ಬಹದೂರರವರು ಕಾಲೇಜಿನ ಪ್ರತಿ ಒಂದು ಶಾಖೆಯನ್ನು ಲಕ್ಷ್ಯವಿಟ್ಟು ನೋಡಿ ಬಹು ಆಶ್ಚರ್ಯಪಟ್ಟರು. ಕಾಲೇಜಿನ ಆಯುರ್ವೇದಿಕ ಶಾಖೆಯ ವಿದ್ಯಾರ್ಥಿಗಳನ್ನು ತರ್ಬೀತು ಮಾಡುವದೆ ಈಗಿನ ಸುಧಾರಣ ಕ್ರಮಕ್ಕನುಸಾರವಾಗಿ ಮಾಡಿದ ಏರ್ಪಾಡುಗಳನ್ನು ಕಂಡು ಆನಂದಭರಿತರಾದರಲ್ಲದೆ ಆಯುರ್ವೇದಿಕ ಚಿಕಿತ್ಸಾಕ್ರಮವನ್ನು ಶಾಸ್ತ್ರರೀತ್ಯಾ ನಡಿಸುವದೆ ಈ ಏರ್ಪಾಡುಗಳಿಂದ ಉತ್ತಮ ವೈದ್ಯರು ತಯಾರಾಗುವರೆಂತ ಅಭಿಪ್ರಾಯ ಪಟ್ಟರು. ಕಡೇಗೆ ೫೦೦ರೂಪಾಯಿ ಸಹಾ ತಾನು ಈ ಕೊಲೇಜಿಗೆ ದಾನವಾಗಿ ಕೊಡುತ್ತೇನೆಂದು ಹೇಳಿದರು.

~~~~~~

ದಕ್ಷಿಣ ಹಿಂದುಸ್ಥಾನ.

~~~~~~

ಕರ್ನೂಲಿನ ಕ್ಯೊಲಾಕುಂಟಲಾ ಎಂಬ ಗ್ರಾಮದಲ್ಲಿ ಮಹಾ ಘೋರವಾದ ಕೊಲೆಯು ನಡೆಯಿತು. ಈ ಗ್ರಾಮದ ರೈತನೊಬ್ಬನಿಗೆ ಫಕ್ಕನೇ ಭ್ರಾಂತಿ ಹಿಡಿದಂತೆ ತೋರಿಬಂದದರಿಂದ ನೆರೆಹೊರೆಯವರು ಆತನ ಹೆಂಡತಿಯನ್ನೂ ಇಬ್ಬರು ಮಕ್ಕಳನ್ನೂ ಈಕೆಯ ತಾಯಿಮನೆಗೆ ಕಳುಹಿಸಿದ್ದರು. ಆದರೆ ಮಾರಣೇ ದಿನ ತನ್ನ ಗಂಡನು ನೆಟ್ಟಗಿದ್ದಾನೆ ಎಂಬ ವಾರ್ತೆಯ ಮೇಲೆ ಪುನಃ ಗಂಡನ ಮನೆಗೆ ಬಂದಳು. ಗಂಡನ ಭ್ರಾಂತಿ ಎಲ್ಲಾ ಹೋಗಿತ್ತು. ಪೇಟೆಗೆ ಹೋಗಿ ಗೃಹಕೃತ್ಯಕ್ಕೆ ಬೇಕಾದ ಜೀನಸುಗಳನ್ನೂ ಈತನೇ ತಂದನು. ನೆರೆಹೊರೆಯವರೆಲ್ಲಾ ಈತನು ಪೂರ್ಣ ಸ್ವಸ್ಥವಾದನೆಂದು ನಂಬಿದರು. ಆದರೆ ಸೂರ್ಯಾಸ್ತಮಾನಕ್ಕೆ ಫಕ್ಕನೇ ಪುನಃ ಆತನಿಗೆ ಭ್ರಾಂತಿ ಹಿಡಿಯಿತು. ಹೆಂಡತಿಯನ್ನೂ ಮಕ್ಕಳನ್ನೂ ಆಕೆಯ ತಾಯಿಯ ಮನೆಗೆ ಹೋಗಬೇಕೆಂತ ಹೇಳಿದರೂ ಈ ಕಷ್ಟಕಾಲದಲ್ಲಿ ಗಂಡನನ್ನು ಒಬ್ಬನನ್ನೇ ಬಿಟ್ಟುಹೋಗುವದು ಸರಿ ಅಲ್ಲವೆಂತ ಈಕೆಯು ಭಾವಿಸಿ ಮನೆ ಹೊರಗೆ ಹೋಗಲಿಲ್ಲ. ಇವರ ಸಂಬಂಧಿಕನಾದ ಒಬ್ಬ ಹುಡುಗನೂ ಈ ಮನೆಯಲ್ಲಿಯೇ ಇದ್ದನು. ಈಕೆಯ ಗಂಡನು ಅವನನ್ನು ಗದರಿಸಿಬಿಟ್ಟದ್ದರಿಂದ ಹುಡುಗನು ಹೊರಗೆ ಓಡಿಬಿಟ್ಟನು. ಕೂಡಲೇ ಈ ಹುಚ್ಚನು ಮನೆಗೆ ಬಾಗಲು ಹಾಕಿ ಕತ್ತಿ ತಕ್ಕೊಂಡು ಹೆಂಡತಿಯನ್ನು ಚೂರು ಚೂರಾಗಿ ಕತ್ತರಿಸಿದ್ದಲ್ಲದೆ ಎರಡು ವರುಷದ ತನ್ನ ಒಬ್ಬನೇ ಮಗನನ್ನು ಗೋಡೆಗೆ ಬಡಿದು ಕೊಂದನು. ಅನಂತರ ತನ್ನ ಮಗಳ ತಲೆಗೆ ಕೊಟ್ಟ ಒಂದೇ ಪೆಟ್ಟಿನಿಂದ ಆಕೆಯು ಮೂರ್ಛೆ ಹೊಂದಿ ಅಂಗಾತ ಬಿದ್ದಳು. ಆದರೆ ಕೂಡಲೇ ಸಾಯಲಿಲ್ಲ. ಈ ಮಹಾಪಾತಕವನ್ನು ನಡಿಸಿ ಹೊರಗೆ ಬಂದು ಬೊಬ್ಬಿಡುತ್ತಾ ಮನೆ ಮನೆಗೆ ಓಡಲಿಕ್ಕೆ ಪ್ರಾರಂಭಿಸಿದ್ದರಿಂದ ನೆರೆಹೊರೆಯವರೆಲ್ಲಾ ಬಾಗಲುಗಳಿಗೆ ಚಿಲುಕು ಹಾಕಿ ಕೂತರು. ಈ ಘಾತಕನು ಪುನಃ ಒಳಗೆ ಹೋಗಿ ಚಿಲುಕು ಹಾಕಿ ಚೂರಿಯಿಂದ ಸ್ವಘಾತ ಮಾಡ ಪ್ರಯತ್ನಪಟ್ಟನು. ಆದರೆ ಇದು ಕೈಗೂಡಿ ಬರಲಿಲ್ಲವಾದ್ದರಿಂದ ತನ್ನ ಹೆಂಡತಿಯ ಹೆಣದ ಹತ್ತಿರವೇ ಮಲಗಿಕೊಂಡನು. ಈ ವಾರ್ತೆಯನ್ನು ಕೇಳಿ ಆಫೀಸರರು ಅಲ್ಲಿಗೆ ಬಂದು ಮನೆಯ ಬಾಗಲು ಒಡದು ಒಳಗೆ ಹೋಗಿ ಪ್ರಥಮತಾ ಇವನೂ ಸತ್ತಿದ್ದನೆಂತ ಭಾವಿಸಿದರು. ಆದರೆ ಪರೀಕ್ಷಾ ನಂತರ ಘಾತಕನ ನಾಡಿಯು ನೆಟ್ಟಗಿದ್ದದರಿಂದ ಈತನನ್ನು ಹಿಡಿದು ಬಂದೀಖಾನೆಗೆ ವೈದಿರುವರು. ಮೂರ್ಛೆ ಹೊಂದಿ ಬಿದ್ದಂಥಾ ಈತನ ಮಗಳನ್ನು ಆಸ್ಪತ್ರಿಗೆ ವೈದಿದ್ದರು. ಸ್ವಲ್ಪ ಸಮಯದ ನಂತರ ಈಕೆಯು ಸತ್ತುಹೋದಳು. ಒಟ್ಟಿಗೆ ಈ ಒಬ್ಬನಿಂದ ಒಂದೇ ದಿನ ಮೂರು ಕೊಲೆಗಳಾದವು.

~~~~~~

ಈಗ ಸ್ಕೊಟ್‌ಲೇಂಡಿನ ಸೆಕ್ರಿಟರಿಗಳಾಗಿರುವ ಪೆನ್ಟ್‌ಲೇಂಡ್ ಪ್ರಭುಗಳವರು ಸರ್ ಅರ್ಥರ್ ಲೋಲಿಯುವರ ಬದಲಿಗೆ ಮದ್ರಾಸ್ ಸಂಸ್ಥಾನದ ಗವರ್ನರರಾಗಿ ಆರಿಸಲ್ಪಡುವರು ಎಂಬದಾಗಿ ಆಧಾರಪೂರ್ವಕವಾದ ವಾರ್ತೆಯು ಇದೆ ಎಂದೂ, ಇವರು ಶ್ರೀಮಂತರೂ, ಎಲ್ಲಾ ತರದ ರಾಜಭಾರ ಕ್ರಮದ ಮಾಹಿತಿಯುಳ್ಳವರೂ ಆಗಿರುವರಲ್ಲದೆ ಲಿಬರಲ್ ಪಕ್ಷದಲ್ಲಿ ಪ್ರಮುಖ ಮೆಂಬರರಾಗಿರುವರೆಂದೂ ಮಲೆಬಾರ ಪ್ರಾಂತ್ಯದ 'ವೆಸ್ಟ್‌ಕೋಸ್ಟ್ ಸ್ಪೆಕ್ಟೇಟರ್' ಎಂಬ ಪತ್ರದಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ.

~~~~~~

ತಂಜಾವೂರಲ್ಲಿ ನಡೆಯಲಿಕ್ಕಿರುವ ಡಿಸ್ಟ್ರಿಕ್ಟ್ ಕನ್ಫರೆನ್ಸಿಗೆ ಗೂಟಿಯ ಬಹುಮಾನಪಟ್ಟ ಪಿ. ಕೇಶವ ಪಿಳ್ಳೆಯವರು ಅಧ್ಯಕ್ಷಸ್ಥಾನವನ್ನು ವಹಿಸ ಒಪ್ಪಿಕೊಂಡಿರುವರು.

~~~~~~

ಮದ್ರಾಸ್ ಗವರ್ನರಾದ ಲೋಲಿ ಪ್ರಭುಗಳವರು ಸುಮಾರು ೨೨ನೇ ದಶಂಬರಕ್ಕೆ ಊಟಕಮಂಡಿಗೆ ವಿರಾಮಕ್ಕಾಗಿ ಹೋಗುವರಲ್ಲದೆ ಕ್ರಿಸ್‌ಮಸ್ ರಜೆ ತೀರುವ ತನಕ ಅಲ್ಲಿಯೇ ಉಳಕೊಳ್ಳುವರು. ಅವರ ಪತ್ನಿಯವರು ಕ್ರಿಸ್‌ಮಸ್ ಹಬ್ಬಕ್ಕೆ ಕಲ್ಕತ್ತೆಗೆ ಹೋಗುವರು.

~~~~~~

ಕೋಲಾರಿನ ಕ್ಷೌರಿಕನೊಬ್ಬನು ಕೊಳಲೂದುವ ಅಭ್ಯಾಸವನ್ನು ಮಾಡುವುದಕ್ಕೋಸ್ಕರ ಚಿತ್ತೂರಿಗೆ ಹೋಗಿದ್ದವನು ಚಿತ್ತೂರಿಗೆ ೧೯ ಮೈಲು ದೂರದಲ್ಲಿ ಪಾಲ್ಮನೇರ್ ರಸ್ತೆಯಲ್ಲಿ ಒಂದು ಗುಹೆ ಉಂಟೆಂತಲೂ ಆ ಗುಹೆಯಲ್ಲಿ ಒಂದು ದೇವಸ್ಥಾನ ಉಂಟೆಂತಲೂ ಯಾರೋ ಹೇಳಿದನ್ನು ಕೇಳಿ ಪೂರ್ವ ಗಟ್ಟದ ಮೊಗಿಲಿ ಕಣಿವೆಯನ್ನು ದಾಟಿಕೊಂಡು ಆ ದೇವಸ್ಥಾನವನ್ನು ಹುಡುಕುತ್ತಾ ಇಕ್ಕಟ್ಟಾದ ಗುಹೆಗಳ ಮಧ್ಯೆ ಬಹಳ ಕಷ್ಟದಿಂದ ತೆವಳಿಕೊಂಡು ಹೋಗುತ್ತಿರುವಾಗ ಫಕ್ಕನೇ ಬಾಗಿರುವ ಗುಹೆಯೊಂದರ ಮಧ್ಯೆ ಸಿಕ್ಕೊಂಡು ಹಿಂದಕ್ಕೂ ಮುಂದಕ್ಕೂ ಅಲ್ಲಾಡ ಕೂಡದೆ ಅಲ್ಲಿಯೇ ಬಿದ್ದು ಬಿಟ್ಟನು. ಈ ಸಂಗತಿ ಸ್ಥಳೀಕ ಮೇಲಾಫಿಸರರ ತಿಳುವಳಿಕೆಗೆ ಬಂದು ಎಷ್ಟು ಪ್ರಯತ್ನ ಮಾಡಿದರೂ ಅವನನ್ನು ಈ ಕಷ್ಟದಿಂದ ಬಿಡಿಸಲಿಕ್ಕಾಗಲಿಲ್ಲ. ೯ ದಿವಸಗಳ ನಂತರ ತಾನಾಗಿಯೇ ಈತನು ಹೊರಗೆ ಬಂದನು. ಮೈ ಚರ್ಮವೆಲ್ಲಾ ಪೂರ್ಣವಾಗಿ ಹರಿದು ಹೋಗಿ ಮೈ ತುಂಬಾ ಘಾಯಗಳು ಇದವು. ಈ ೯ ದಿವಸಗಳಲ್ಲಿ ಸ್ವಲ್ಪ ನೀರನ್ನು ಮಾತ್ರವೇ ತಕ್ಕೊಂಡು ಜೀವವನ್ನುಳಿಸಿಕೊಂಡನು.

~~~~~~

ಈ ವಾರದಲ್ಲಿ ಮದ್ರಾಸು ನ್ಯಾಯವಿಧಾಯಕ ಸಭೆಯು ಮದ್ರಾಸಿನಲ್ಲಿ ಕೂಡಿತ್ತು. ಇದರ ಸಮಾಚಾರವನ್ನು ಸಂಕ್ಷೇಪವಾಗಿ ಬರುವ ಸಂಚಿಕೆಯಲ್ಲಿ ಪ್ರಕಟಸುವೆವು.

~~~~~~

ದಕ್ಷಿಣ ಕನ್ನಡ.

~~~~~~

ನೋಟೀಸು.

~~~~~~

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ:—

ಠಾಕರ ವಲ್ಲಭಜಿ ಶಿವಜಿ ಎಂಡ್ ಕಂಪೆನಿ ಎಂಬ ಹೆಸರಿನಿಂದ ಈ ವರೆಗೆ ಮಂಗಳೂರು ಶಾಹರಿನಲ್ಲಿ ವೈವಾಟನ್ನು ನಡಿಸುವ ಫರ್ಮು ಇದೇ ನವಂಬರ ತಾ. ೨ರಿಂದ ಠಾಕರ ವಲ್ಲಭಜಿ ಶಿವಜಿ ಎಂಬ ಹೆಸರಿನಿಂದ ವೈವಾಟನ್ನು ನಡಿಸುವದು. ಸದರಿ ಫರ್ಮಿನ ದೆಣೆದಾರರು ಸದರಿ ಠಾಕರ ವಲ್ಲಭಜಿ ಶಿವಜಿಯವರ ಮಂಗಳೂರು ಏಜಂಟರಾದ ಲಾಲಜಿ ಕಲ್ಯಾಣ್ಜಿಯವರ ಕೈಯ ಹಣವನ್ನು ಪಾವತಿ ಮಾಡಿದ್ದಲ್ಲಿ ಮುಂಚಿನ ಕಂಪೆನಿಗೆ ಸಂದಾಯ ಮಾಡಿದಂತೆ ಎಣಿಸೋಣಾದೀತು.

Thakar Vallabhji Shivji.

~~~~~~

ಬಾತ್ಮೀದಾರರಿಗೆ ನೋಟೀಸು:— B. ಮುಲ್ಕಿ:- ಸ್ಥಳದಡಚಣೆಯಿಂದ ಈ ಸಂಚಿಕೆಯಲ್ಲಿ ಪ್ರಕಟಿಸಲಿಲ್ಲ. ಒಂದು ಚಿತ್ರ—ಸಂ. ನ. ನಾ.—ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆವು. ಬಲ್ಮಠ ಕ್ರೈಸ್ತ ಸಭೆಯವರಿಗಾದ ನೀತಿ—ನಿಷ್ಪಕ್ಷಪಾತಿ ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು. ಶ್ರೀ ಕಟೀಲ ದುರ್ಗಾ ಪರಮೇಶ್ವರಿ ಅಮ್ಮನವರ ಭಜಕ—ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ಮ. ರಾ. ರಾ. ಹ್ಯಾಕೋರ್ಟ ವಕೀಲ ಅಮ್ಮೆಂಬಳ ಶ್ರೀನಿವಾಸ ಪೈಗಳವರು ಗೌಡಸಾರಸ್ವತ ಮೂರನೇ ಪರಿಷದಕ್ಕೆ ಹೋಗುವವರ ಅನುಭವಗೋಸ್ಕರ ಕಳುಹಿಸಿರುವ ಲೇಖವು ಪತ್ರವು ಅಚ್ಚಾಗುತ್ತಿರುವಾಗ ಬಂದು ಈ ದಿನ ತಲ್ಪಿದ್ದರಿಂದ ಅದನ್ನು ಈ ಸಂಚಿಕೆಯ ಅಂತ್ಯಭಾಗದಲ್ಲಿ ಪ್ರಕಟಿಸಿರುತ್ತೇವೆ.

ವಿಜ್ಞಾಪನೆ. ಸ್ವದೇಶಾಭಿಮಾನಿಯ ಚಂದಾಹಣ ಬಾಕಿಯನ್ನು ಕೂಡಿಸುವರೆಯೂ ಹೊಸ ಚಂದಾದಾರನ್ನು ಸಂಗ್ರಹಿಸುವದಕ್ಕೂ ಸ್ವದೇಶಾಭಿಮಾನಿ ಆಫೀಸಿನಿಂದ ರಾ. ಬಿ. ವೆಂಕಟರಾಯ ಶೆಣಯಿಯವರನ್ನು ಮಂಜೇಶ್ವರ, ಕುಂಬಳೆ, ಕಾಸರಗೋಡು, ಹೊಸದುರ್ಗದತ್ತಕಡೆ ಕಳುಹಿಸಿರುತ್ತೇವೆ. ಇವರ ಕೂಡೆ ಬಾಕಿ ಚಂದಾಹಣವನ್ನು ವಸೂಲು ಕೊಟ್ಟು ಹೊಸ ಚಂದಾದಾರರನ್ನು ಸಂಗ್ರಹಿಸುವುದರಲ್ಲಿ ಸಹಾಯವನ್ನೀಯಬೇಕಾಗಿ ಆ ಪ್ರಾಂತ್ಯಗಳ ನಮ್ಮ ಚಂದಾದಾರರನ್ನು ವಿಜ್ಞಾಪಿಸಿಕೊಳ್ಳುತ್ತೇವೆ.

ಮಂಗಳೂರು. ನವಂಬರ ತಿಂಗಳಿಗೆ ಮುಂಗೈ ಭತ್ತೆಯು ರೂ. ೨ ಮತ್ತು ರೂ. ೧೮ ಪ್ರಕಾರ ಸೆಂಕ್ಷನ್ ಆಗಿರುವದು.

ಕಲೆಕ್ಟರ್ ದೊರೆಗಳವರು ಇದೇ ತಾ. ೨೦ರಿಂದ ೧೯ರ ವರೆಗೆ ಸರ್ಕೀಟಿನಲ್ಲಿರುವರು. ತಾ. ೨೮ಲ್ಲು ಸುರತ್ಕಲ್, ತಾ. ೩ ಮತ್ತು ೪ಲ್ಲು ಮುಲ್ಕಿ, ತಾ. ೫ಲ್ಲು ಕಾಪು, ತಾ. ೬ ಮತ್ತು ೭ಲ್ಲು ಉಡ್ಪಿ, ತಾ. ೮ ಮತ್ತು ೯ರಲ್ಲು ಬ್ರಹ್ಮಾವರದಲ್ಲಿಯೂ ಮೊಕಾಂ ಮಾಡುವರು. ನಂತರ ಉಡ್ಪಿ ತಾಲೂಕಿನ ಕೆಲವು ಒಳ ಪ್ರಾಂತ್ಯಗಳನ್ನು ಸಂದರ್ಶಿಸಿ ತಾ. ೧೯ಕ್ಕೆ ಮಂಗಳೂರಿಗೆ ಹಿಂತೆರಳುವರು.

ಮಂಗಳೂರು ತಾಲೂಕಿನ ಜಮಾಬಂದಿಯು ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರವರಿಂದ ಜನವರಿ ತಾ. ೨೫ರಿಂದ ೩೦ರ ವರೆಗೆ ಮುಲ್ಕಿಯಲ್ಲಿಯೂ ಫೆಬ್ರವರಿ ತಾ. ೩ರಿಂದ ೧೦ರ ವರೆಗೆ ಬಂಟ್ವಾಳದಲ್ಲಿಯೂ ತಾ. ೧೩ರಿಂದ ೧೮ರ ವರೆಗೆ ಬಜ್ಪೆಯಲ್ಲಿಯೂ ತಾ. ೨೦ರಿಂದ ೨೫ರ ವರೆಗೆ ಮಂಗಳೂರಲ್ಲಿಯೂ ನಡಿಸಲ್ಪಡುವದು.

ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೩ ಪ್ಲೇಗು ಮರಣಗಳೂ ೨ ಸಿಡುಬು ರೋಗದ ಮರಣಗಳೂ ಇದ್ದವು.

ಮುನಿಸಿಪಲ್ ಚೆಯರ್‌ಮೇನರವರು ಲೆಗಿಸ್ಲೇಟಿವ್ ಕೌನ್ಸಲಿನ ಮೀಟಿಂಗ್‌ನ ಬಗ್ಯೆ ಮದ್ರಾಸಿಗೆ ಹೋಗಿರುವದರಿಂದ ಕಳೆದ ತಾ. ೨೫ರ ಲಾಗಾಯಿತು ಅವರ ಚಾರ್ಜನ್ನು ವ್ಯಾಸ ಚೆಯರ್‌ಮೇನರವರು ನೋಡುತ್ತಿರುವರು.

ಈ ತಿಂಗಳ ತಾ. ೪ನೇ ಆದಿತ್ಯವಾರ ಬೆಳಿಗ್ಗೆ ೭ ಗಂಟೆಗೆ ರೈಟ್ ರೆವೆರೆಂಡ್ ಡಾಕ್ಟರ್ ಪಿ. ಪೆರಿನಿಗಳವರಿಗೆ ಹ್ಯೊಗೆಯಲ್ಲಿರುವ ಕಥೋಲಿಕ್ ದೇವ ಮಂದಿರದಲ್ಲಿ ಬಿಶೋಪ್ ಪಟ್ಟಾಭಿಷೇಕವು ಜರಗುವುದು. ಮುಂಬಾಯಿ ಆರ್ಚಿಬಿಶೋಪರೂ, ಪೂನಾ ಮತ್ತು ತಿರುಚಿನಾಪಳ್ಳಿ ಬಿಶೋಪರೂ ಈ ಮಹಾ ಉದ್ಯೋಗವನ್ನು ನಡಿಸುವರು. ಆ ದಿನ ಕಣ್ಣಾನೂರು ಮಿಲಿಟರಿ ಬೇಂಡ್ ವಾದ್ಯವನ್ನು ತರಿಸುವರೆಂಬ ವಾರ್ತೆಯೂ ಇದೆ. ಈ ಸಂಸ್ಕಾರಕ್ಕೆ ತಗಲುವ ಖರ್ಚನ್ನು ಪರಿಹರಿಸುವ ಬಗ್ಯೆ ಸ್ಥಳೀಕ ಕಥೋಲಿಕರು ದೇವಾಲಯದಲ್ಲಿ ೬೦೦ ರಿಜರ್ವ್‌ಡ್ ಸೀಟುಗಳನ್ನು ತಯಾರಿಸುವರಲ್ಲದೆ ಒಂದೊಂದಕ್ಕೆ ೨-೩ ರೂಪಾಯಿ ಟಿಕೇಟ ರುಸುಮನ್ನು ಇಟ್ಟಿರುವರು.

ಪಟ್ಟಾಭಿಷೇಕದ ನಂತರ ಬಿಶೋಪರು ಆರ್ಚಿ ಬಿಶೋಪ ಮೊದಲಾದವರ ಸಮೇತ ಹಂಪನಕಟ್ಟೆ ಮಾರ್ಗವಾಗಿ ಕೊಲೇಜಿಗೆ ಚಿತ್ತೈಸುವರು. ಅಲ್ಲಿ ಇವರೆಲ್ಲರಿಗೆ ದೊಡ್ಡ ಔತಣ ಇರುವದು. ಸಾಯಂಕಾಲ ೭ ಗಂಟೆಗೆ ಕೊಲೇಜಿನಲ್ಲಿಯೇ ಪಟ್ಟಾಭಿಷೇಕದ ಬಹುಮಾನಾರ್ಥವಾಗಿ ಒಂದು ನಾಟಕವು ನಡೆಯುವುದು.

ಮುಂಬಾಯಿ ಆರ್ಚಿ ಬಿಶೋಪರೂ ಪೂನದ ಬಿಶೋಪರೂ ನಿನ್ನೆಯ ಸ್ಟೀಮರಿನಲ್ಲಿ ಇಲ್ಲಿಗೆ ತಲಪಿ ಕೊಡಿಯಾಲ್‌ಬೈಲಿನಲ್ಲಿರುವ ಬಿಶೋಪ ಬಂಗ್ಲೆಯಲ್ಲಿ ಅಥಿತಿಗಳಾಗಿರುವರು. ತಿರುಚಿನಾಪಳ್ಳಿ ಬಿಶೋಪರವರು ಈ ದಿನ ಇಲ್ಲಿಗೆ ಬಂದು ತಲ್ಪಿ ಕೊಲೇಜಿನಲ್ಲಿಯೇ ಉಳಕೊಳ್ಳುವರು.

ತಾರೀಕು ೧೨ರಲ್ಲು ಇಲ್ಲಿಯ ಬಿಶೋಪರು ಪರಿವಾರ ಸಮೇತ ಗೋವೆಗೆ ಸೆಂಟ್ ಪ್ರಾನ್ಸಿಸ್ ಗ್ರೇವಿಯರ್ಸ್ ಎಂಬ ದೇವ ಭಕ್ತರ ಸಮಾಧಿ ಸಂದರ್ಶನಕ್ಕೆ ಸ್ಪೆಶಿಯಲ್ ಸ್ಟೀಮರಿನಲ್ಲಿ ಹೋಗುವರು. ಬಿಶೋಪರ ಸಮೇತ ಡಾಕ್ಟರರೂ ಹೋಗುವುದರಿಂದ ಇವರ ಸ್ಟೀಮರಿನಲ್ಲಿಯೇ ಗೋವೆಗೆ ಹೋಗುವ ಇತರ ಕಥೋಲಿಕರಿಗೆ ಗೋವೆಯಲ್ಲಿ ಕೋರಂಟೈನ್ ಮೊದಲಾದ ಪ್ಲೇಗ್ ನಿಬಂಧನೆಯ ಉಪದ್ರವು ಕಡಿಮೆ ಆದೀತು.

ಬಿಶೋಪರವರು ಗೋವೆಗೆ ಹೋಗುವುದರಿಂದ ಯಾವಾಗಲೂ ದಶಂಬರ ಮಧ್ಯ ಕಾಲದಲ್ಲಿ ನಡಿಯುತ್ತಿದ್ದ ಮಿಲಾಗ್ರಿ ಹಬ್ಬವು ಬರುವ ಜನವರಿ ಮಧ್ಯ ಕಾಲದಲ್ಲಿ ಜರಗುವದು.

ಒಬ್ಬ ಪ್ರೊಟೆಸ್ಟಾಂಟ್ ಕ್ರೈಸ್ತ ಬಾತ್ಮೀದಾರರು ಈ ಕೆಳಗಿನ ಲೇಖವನ್ನು ಪ್ರಕಟಣೆ ಬಗ್ಯೆ ಕಳುಹಿಸಿಕೊಟ್ಟಿರುವರು:—

ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿರುವ ಮಿಶ್ಯನ ಉಪಾಧ್ಯಾಯರು ಬಾಸೆಲಿನಲ್ಲಿರುವ ತಮ್ಮ ಮಿಶ್ಯನ್ ಹೋಮ ಕಮಿಟಿಯವರಿಗೆ ಒಂದು ಬಿನ್ನವತ್ತಳೆಯನ್ನು ಇತ್ತಲಾಗೆ ಸಮರ್ಪಿಸಿರುತ್ತಾರಷ್ಟೆ! ತಮ್ಮ ಸಭೆಗಳನ್ನು ಲೌಕಿಕ ಸ್ಥಿತಿಯಲ್ಲೂ ಏಳಿಗೆಗೆ ತರಲಿಕ್ಕೆ ಎಷ್ಟೋ ಅನುಕೂಲಗಳಿದ್ದಾಗ್ಯೂ ಯೂರೋಪದಿಂದ ಇಲ್ಲಿಗೆ ಬಂದ ಮಿಶನರಿಗಳು ಈ ವಿಷಯದಲ್ಲಿ ಸಭೆಗಳ ಚಿಂತೆ ಮಾಡದ್ದರಿಂದ ಸಭೆಗಳು ಪ್ರಕೃತ ಇತರ ಸಮಾಜಗಳವರಿಗಿಂತ ಹಣ ಕಾಸು ವಿದ್ಯೆ ಮೊದಲಾದ ಸಂಗತಿಗಳಲ್ಲಿ ಕನಿಷ್ಟ ಸ್ಥಿತಿಗಳಲ್ಲಿವೆ ಎಂಬ ಸರ್ವ ಜನರಿಗೆ ಗೊತ್ತಿರುವ ಸಂಗತಿ ಅದರಲ್ಲೂ ಕಂಡು ಬರುತ್ತದೆ. ಈ ಕಾರಣದಿಂದ ಕೆಲ ಶಾಲಾಮೇಲಾಧಿಕಾರಿಗಳು ಮನನೊಂದು ಉಪಾಧ್ಯಾಯರನ್ನು ಬೆದರಿಸುವದರ ಹೊರತು ಆ ಅರ್ಜಿಯನ್ನು ಹಿಂತೆಗೆಯಿಸಬೇಕೆಂಬ ಉದ್ದೇಶದಿಂದ ಅವರಿವರೊಂದಿಗೆ ಮಾತನಾಡಿ ತರತರದ ಪ್ರಯತ್ನ ಮಾಡುತ್ತಿದ್ದಾರಾಗಿ ಕೇಳುತ್ತೇವೆ. ದೇವರಿಗಾಗಲೀ ನಮ್ಮ ಮನಸ್ಸಾಕ್ಷಿಗಾಗಲೀ ವಿರೋಧವಾದ ಪಾಪ ಮಾಡದೆ ತಮ್ಮ ಹಾಲ್ಲವಾಲೆಗಳನ್ನಾದರೂ ಇದ್ದಂತೆ ಮಕ್ಕಳ ಭಾವದಿಂದ ತಾಯಮ್ಮನವರಾದ ಹೋಮಕಮಿಟಿಗೆ ಅರಿಕೆ ಮಾಡಿಕೊಳ್ಳ ಉಪಾಯವಿಲ್ಲವಲ್ಲಾ ಎಂದು ಹಲವರು ಮೂಲುಗುವರು! ದೀರ್ಘಕಾಲ ಪರ್ಯಾಲೋಚಿಸಿ ತಮ್ಮ ದಸ್ಕತು ನಿಶಿಂ ಬರಕೊಟ್ಟ ಮಾತುಗಳನ್ನು ಉದರ ನಿಮಿತ್ತವಾಗಿ ಹೆದರಿ ಹಿಂತೆಗೆಯುವ ಮತಾವಲಂಬಿಗಳು ರೋಮಿಯರ ಬೋಧನೆಗೆ ವಿರೋಧವಾಗಿ ಲುಥರನಂತೆ ಹೇಗೆ ಖಂಡಿಸ್ಯಾರೋ ತಿಳಿಯದು. ನೀತಿಗಾಗಿ ಹೋರಾಡ ಧೈರ್ಯವಿಲ್ಲದ ಹೇಡಿಗಳ ಎರಡನೇ ಮಾತನ್ನು ಅಧಿಕಾರಿಗಳು ಯಾವ ರೀತಿಯಿಂದ ಅಂಗೀಕರಿಸುವರೆಂತ ನೋಡಲಿಕ್ಕಿದೆ.

~~~~~~

ಕಾಸರಗೋಡು. ಇದೇ ತಾ. ೨೫ನೇ ಶುಕ್ರವಾರ ದಿನ ರಾತ್ರಿ ಭಾರಿ ಮಳೆ ಗುಡುಗು ಮಿಂಚು ಇತ್ತು.

ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರ್ ಸಾಹೇಬರು ಇದೇ ಶುಕ್ರವಾರ ದಿನ ಸರ್ಕೀಟಿನ ಮೇಲೆ ಖಚೇರಿ ಶಿಬಂದಿ ಸಮೇತ ಇಲ್ಲಿಗೆ ಚಿತ್ತೈಸಿ ೩ ದಿನಗಳ ತನಕ ಮೊಕ್ಕಾಮು ಮಾಡಿದರು. ಅನೇಕ ಕ್ರಿಮಿನಲ್ ಮೊಖದಮೆಗಳು ತನಖಿ ಮಾಡಿ ಕೆಲವು ಮುಂದರ್ಶಿಡಲಾದವು. ಇಲ್ಲಿಯ ಪೋಲೀಸು ಇನ್ಸ್‌ಪೆಕ್ಟರರು ಚಾರ್ಜು ಮಾಡಿದ ಕೆಲವು ಕೇಡಿಗಳ ಮೊಕದಮೆಗಳ ಪೈಕಿ ಈ ಕಸಬೆಯ ಮಲ್ಕ ಎಂಬ ಒಬ್ಬ ಕೇಡಿಹುಡುಗನಿಗೆ ೧ ವರುಶದ ಕಾರಾಗ್ರಹವಾಸ ವಿಧಿಸಲ್ಪಟ್ಟಿತು. ಮಂಗಳವಾರ ದಿನ ಹೊಸದುರ್ಗ ಮೊಕ್ಕಾಮಿಗೆ ಡಿ। ಕಲೆಕ್ಟರವರ ಸವಾರಿಯು ಹೋಗಿರುವದು.

ಪುತ್ತೂರು. ನಮ್ಮ ಡಿವಿಜನ ಡಿಪ್ಯುಟಿ ಕಲೆಕ್ಟರ ಮ. ರಾ. ರಾ. ಪಿ. ಕುಂಞ್ಞಾಮ್ಯಾನೆ ಸಾಹೇಬ ಬಹದೂರರವರು ವಿಟ್ಲ ಉಪ್ಪಿನಂಗಡಿ ಕಡೆ ಸರ್ಕೀಟು ತೀರಿಸಿ ಕಾಸರಗೋಡಿಗೆ ತಾ. ೨೩ರಲ್ಲು ಹೋಗಿರುವರು.

ಇದೇ ತಿಂಗಳ ತಾ. ೨೩ಲ್ಲು ಪುತ್ತೂರಿಂದ ಮಂಗಳೂರಿಗೆ ಓಡ್ಯಾಡುತ್ತಿರುವ ಹಿಂದೂ ಟ್ರೆನ್ಸಿಟಕಂಪೆನಿಯ ಜಡ್ಕಾ ಗಾಡಿಯು ಕಬ್ಕ ಗ್ರಾಮದ ಮಂಜಲಪಡ್ಪು ಎಂಬಲ್ಲಿಗೆ ತಲಪುವಾಗ ಮುರಿದು ಚೂರುಚೂರಾಗಿ ಅನೇಕ ಪ್ರಯಾಣಿಕರಿಗೆ ಜಕಂ ಆದದ್ದಲ್ಲದೆ ಪುಣಚ ಗ್ರಾಮ ಮಲೆತಡ್ಕ ಶ್ಯಾಮಶಾಸ್ತ್ರಿ ಎಂಬವರು ವಿಶೇಷ ಜಕಂ ಪಡವಿರುವರು. ಜಟ್ಕಾ ಮಾಲಿಕರ ಅತ್ಯಾಶೆಯು ಹೀಗೆ ಅವರ ಗತಿಗೇಡಿನಲ್ಲಿಯೇ ಪರಿಣಮಿಸುವ ಬದಲಿಗೆ ಪ್ರಯಾಣಿಕರು ಜಟ್ಕಾ ಮಾಲಿಕರ ಅತ್ಯಾಶೆಗಾಗಿ ಈ ಗತಿಗೇಡು ಸ್ಥಿತಿಗೆ ಗುರಿಯಾಗುವುದು ಅತ್ಯಾಶ್ಚರ್ಯವಲ್ಲವೇ?

ಇತ್ತಕಡೆ ನವಂಬರ ೨೬ರ ವರೆಗೆ ಮಳೆ ಬಂದುಹೋದ ನಂತರ ಈ ವರೆಗೆ ಮಳೆ ಇಲ್ಲದಿದ್ದರೂ ಸುಗ್ಗಿ ಬೆಳೆಯು ಪೂರಾ ಹುಳಹಿಡಿದು ನಾಶವಾಗಿದೆ.

ಹೊಸದುರ್ಗ. ಈ ವರೇಗೆ ಹೊಸದುರ್ಗ ಸಬ್ ರಿಜಿಸ್ತ್ರಿ ಆಫೀಸಿನ ಸರಹದ್ದಿಗೆ ಒಳಪಟ್ಟ ಕೆಲವು ಗ್ರಾಮ್ಗಳನ್ನು ವಿಂಗಡಿಸಿ ಇವುಗಳ ಪ್ರಯೋಜನಾರ್ಥವಾಗಿ ತಿರ್ಕಪೂರ್ರೆಂಬ ಹಳ್ಳಿಯಲ್ಲಿ ಒಂದು ಹೊಸ ಸಬ್ ರಿಜಿಸ್ತ್ರಾರರ ಆಫೀಸು ಇದೇ ೧೯೧೦ನೆ ಇಸವಿ ದಶಂಬರ ೧ನೇ ತಾರೀಕು ಮೊದಲ್ಗೊಂಡು ಇಡೋಣಾಗುವುದು. ಇದರಿಂದ ಇಲ್ಲಿಯ ಸಬ್ ರಿಜಿಸ್ತ್ರಾರರ ಆಫೀಸಿನವರಿಗೆ ಉಸಿರಾಡಲು ಕೊಂಚ ಎಡೆವಿರುವುದು.

ಇಲ್ಲಿಗೂ ಇಲ್ಲಿಂದ ದಕ್ಷಿಣದಲ್ಲಿ ೪॥ ಮೈಲು ದೂರವಿರುವ ನೀಲೇಶ್ವರ ಊರಿಗೂ ಹೇರಳ ಆಮದು ರಫ್ತು ಇರುತ್ತಾ ಒಂದು ರಸ್ತೆಯು ಇಲ್ಲದೆ ಇರುವುದು ಒಂದು ದುರವಸ್ಥೆಯೇ ಸರಿ. ಒಂದು ಸಲ ಒಂದು ಮಾರ್ಗವನ್ನು ಮಾಡಲು ಯತ್ನಿಸಿ ಒಂದೆರಡು ಮೈಲು ಮಾರ್ಗವನ್ನು ಮಾಡಿ ಕೆಲಸವನ್ನು ಅಲ್ಲಿಯೇ ಬಿಟ್ಟುಬಿಟ್ಟರು. ಬಾಕಿ ಸುಮಾರು ೨॥ ಮೈಲು ಮಾರ್ಗ ಮಾಡಲಿಕ್ಕೆ ಹೇರಳ ಕಷ್ಟವೂ ಖರ್ಚೇನೂ ಇಲ್ಲ. ಯಾವ ಗುಡ್ಡವನ್ನು ತೋಡಲೂ ಅಗತ್ಯವಿಲ್ಲದಿರುತ್ತಾ ಅದನ್ನು ಪೂರೈಸದಿರಲಿಕ್ಕೆ ಕಾರಣವೇನೆಂದು ನಾವರಿಯೆವು.

ಹೊಗೆಭಂಡಿ ಮಾರ್ಗದ ಇತ್ತಟ್ಟಿನಲ್ಲಿಯೂ ಜಾನುವಾರುಗಳಿಗೆ ಮೇವನ್ನು ನೀಡುವ ಗದ್ದೆಗಳಲ್ಲಿ ರೈತರು ತಮ್ಮ ಜಾನುವಾರುಗಳನ್ನು ಮೇಯಲಿಕ್ಕೆ ಬಿಡುವ ಪದ್ಧತಿಯು ಇಲ್ಲಿ ಅತಿ ಪುರಾತನದಿಂದ ನಡೆಯುತ್ತಲಿದೆ. ಆದರೆ ಈ ಜಾನುವಾರುಗಳು ಕಾವಲುಗಾರರಿಲ್ಲದ ಹಲವು ರೈಲ್ವೆ ಗೇಟುಗಳಿಂದ ಲೋಹಮಾರ್ಗದ ಮೇಲೆ ಬೆಳೆಯುವ ಹುಲ್ಲನ್ನು ತಿನ್ನಲು ಹೋಗಿ ರೈಲ್ವೆಯವರ ಕೈಗೆ ಸಿಕ್ಕಿ ಸರ್ಕಾರ ದೊಡ್ಡಿಯಲ್ಲಿ ನಿರ್ಬಂಧಿಸಲ್ಪಟ್ಟ ಮೇಲೆ ಅವುಗಳ ಯಜಮಾನರು ದೊಡ್ಡಿ ಜುಲುಮಾನೆಯನ್ನು ತೆತ್ತು ನಂತರ ಕೋರ್ಟಿನಲ್ಲಿ ಮೇಜಿಸ್ಟ್ರೇಟರು ವಿಧಿಸುವ ಜುಲುಮಾನೆಗೆ ಒಳಗಾಗುವದು ಬಹು ಹಿಂಸೆಕರವಾಗಿರುವುದು. ಈ ರೈಲ್ವೆ ಗೇಟುಗಳು ತನ್ನಷ್ಟಕ್ಕೆ ಮುಚ್ಚಲ್ಪಡುವವೆಂದು ಅನ್ನಿಸಿಕೊಂಡರೂ ಕೆಲವು ತೆರದೇ ಇರುವದರಿಂದ ದನಕರುಗಳು ರೈಲ್ವೆ ಮಾರ್ಗಗಳ ಮೇಲೆ ಹೋಗುವವು. ಅದು ಹ್ಯಾಗೂ ಇರಲಿ, ಒಂದು ತಪ್ಪಿಗೆ ೨ ತರದ ಶಿಕ್ಷೆಗಳು ವಿಧಿಸೋಣಾಗುವದು ಯಾವ ದೇಶದಲ್ಲಿಯೂ, ಯಾವ ಯುಗದಲ್ಲಿಯೂ ಕೇಳಿ ಇಲ್ಲ.

ಎರ್ಮಾಳ. ಇಲ್ಲಿಂದ ಗುಮಾನಿನ ಮೇಲೆ ವೈಯ್ಯಲ್ಪಟ್ಟ ಕಳವು ಆಸಮಿಯ ಪೈಕಿ ಓರ್ವನನ್ನು ಜಾಮೀನಿನ ಮೇಲೆ ಬಿಟ್ಟಿರುವರು. ಕಳವು ಪತ್ತೆಯಾಗುವ ಹಾಗೂ ಪೊಲೀಸಿನವರ ಮೇಹನತ್ತು ಪಡುವ ಹಾಗೂ ಕಂಡು ಬರುವದಿಲ್ಲ. ಒಟ್ಟಾರೆ ಕಾಲಮಹಿಮೆ.

ಕಳೆದ ತಮ್ಮ ಒಂದು ಸಂಚಿಕೆಯಲ್ಲಿ ಆಚಾರಿಯು ಸಿಟ್ಟಿನ ಮೇಲೆ ಪಿರ್ಯಾದು ಉಡುಪಿಯಲ್ಲಿ ಕೊಟ್ಟಿರುವನಾಗಿ ತಿಳಿಸಿರುತ್ತೆ. ಸೆಟ್ಟಿಯು ೧೧ ರೂಪಾಯಿ ಆಚಾರಿಗೆ ದಂಡವೆತ್ತಿ ವ್ಯಾಜ್ಯವನ್ನು ರಾಜಿಮಾಡಿಕೊಂಡಿರುವರು.

ಇಲ್ಲಿಯೇ ಸಮೀಪ ಅಣ್ಣಾರು ಚಡಾವಿನಲ್ಲಿ ತುಂಬಾ ಜನರುಳ್ಳ ಒಂದು ಮಂಗಳೂರ ಟ್ರೆನ್ಸಿಟು ಕಂಪೆನಿಯ ಜಡ್ಕಾ ಭಂಡಿಯು ಬೋರ ಆಗಿ ಬಿದ್ದು ೧೨ ಜನರಿಗೆ ಪೆಟ್ಟು ತಗಲಿದೆ. ಇವರಲ್ಲಿ ಈರ್ವರನ್ನು ಗಾಡಿ ಮೇಲೆ ಉಪ್ಪಿಗೆ ವೈದಿರುವರು. ಓರ್ವನು ಬದುಕುವದು ಕಷ್ಟವಂತೆ. ಜಟ್ಕಾ ಕುದುರೆಗಳ ಮೇಲೆ ಹ್ಯಾಗೂ ಪ್ರೀತಿ ಇಡಲು ಸಾಧ್ಯವಿಲ್ಲ. ಎಳಿಯಲಿಕ್ಕಾಗದೆ ಸತ್ತರೂ ಬಡಪ್ರಾಣಿಯಾದರೂ ಏಳೆಂಟ್ಟು ರೂಪಾಯಿ ನಷ್ಟವಾದೀತು. ಮನುಷ್ಯರ ಬಗೆಯು ಹೀಗೆಯೋ?

ಈ ವರುಷ ವಿಶಾಖಾ ಮಳೆಯು ಬಂದದ್ದರಿಂದ ಸರ್ಪಾದಿ ವಿಷ ಜಂತುಗಳ ಕಾಟವು ಊರಲ್ಲಿ ಹೆಚ್ಚಾಗುತ್ತಲಿದೆ. ಪಡುಬಿದ್ರೆ ಸಮೀಪ ಓರ್ವನು ರಾತ್ರಿ ವೇಳೆ ಬರುವ ಸಮಯ ಒಂದು ಕನ್ನಡಿ ಹಾವು ಕಚ್ಚಿ ಮಾರಣೆ ದಿನವೇ ಮೃತವಾಗಿ ಹೋದನು. ಅಲ್ಲದೆ ಈ ಊರಲ್ಲಿಯ ಒಂದೆರಡು ಜನರು ಅದಕ್ಕೆ ಆಹುತಿಯಾದರು. ಪ್ರಯಾಣಸ್ಥರು ರಾತ್ರಿ ಸಮಯ ಬಲು ಎಚ್ಚರಿಕೆಯಿಂದಿರಬೇಕಾಗಿರುವದು.

ದಕ್ಷಿಣ ಕನ್ನಡ ಜಿಲ್ಲಾ ಶಾಲೆಗಳ ಅಸಿಸ್ಟಾಂಟ್ ಇನ್ಸಪೆಕ್ಟರರಾದ ಮ. ರಾ. ಯು. ರಾಘವೇಂದ್ರ ರಾಯರವರು ತಾ. ೨೯ರಲ್ಲು ಇಲ್ಲಿಯ ಎಲಿಮೆಂಟರಿ ಶಾಲೆಗೆ ಸಂದರ್ಶಣೆ ಬಗ್ಯೆ ಚಿತ್ತೈಸಿ ಶಾಲೆಯು ಸರ್ವ ಸಂಗತಿಗಳಲ್ಲೂ ಉತ್ತಮ ರೀತಿಯಲ್ಲಿದೆ ಎಂದೂ ಶಾಲೆಯ ಕಟ್ಟೋಣ ದೊಡ್ಡದು ಮಾಡುವದು ಅತೀ ಅಗತ್ಯವೆಂದೂ ರಿಮಾರ್ಕು ಪುಸ್ತಕದಲ್ಲಿ ಬರೆದು ಹಿಂತೆರಳಿರುವರು. ಕಟ್ಟೋಣ ದುರುಸ್ತಿಯ ಕುರಿತು ಬೋರ್ಡಿನವರು ಆದಷ್ಟು ಬೇಗನೆ ಮನಸ್ಸು ಕೊಟ್ಟಾರು ಎಂದು ನಂಬುತ್ತೇವೆ.

ಗೌಡಸಾರಸ್ವತ ಬ್ರಾಹ್ಮಣರ ಪರಿಷದ, ಗೋವಾ.

ಇದೇ ತಿಂಗಳ ತಾ. ೨೮, ೨೯ ವ ೩೦ರಲ್ಲು ಗೋವೆಯಲ್ಲಿ ಸೇರುವ ಸದರಿ ಪರಿಷದದ ಮೂರನೇ ಸಭೆಗಾಗಿ ವ ಕುಲದೇವರ ಯಾತ್ರಾರ್ಥವಾಗಿ ಇಲ್ಲಿಂದ ಹೋಗುವವರ ಪ್ರಯಾಣದ ಸೌಲಭ್ಯಕ್ಕಾಗಿ ಮಾಡಿರುವ ಏರ್ಪಾಟುಗಳ ವಿಷಯ ಕೆಲವು ಸಂಗತಿಗಳನ್ನು ತಮ್ಮ ಪತ್ರ ಮುಖಾಂತರ ತಿಳಿಸಬೇಕಾಗಿ ಗೌಡಸಾರಸ್ವತ ಬ್ರಾಹ್ಮಣರಲ್ಲನೇಕರು ಕೂಡಿ ನನಗೆ ಬರದಿರುತ್ತಾರೆ. ಆದ್ದರಿಂದ ದಯಮಾಡಿ ಈ ಕೆಳಗಣ ಸಂಗತಿಗಳನ್ನು ತಮ್ಮ ಪತ್ರದಲ್ಲಿ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಈ ತಿಂಗಳ ತಾ. ೧೦ರ ಒಳಗೆ 'ಕೆನರಾ ಬೆಂಕ್ ಲಿಮಿಟೆಡ್' ಎಂಬ ಬೇಂಕಿನಲ್ಲಿ ೨೧೦೦ (ಎರಡುಸಾವಿರದ ನೂರು) ರೂಪಾಯಿಗಳು ಪ್ರಯಾಣಸ್ಥರು ವಂತಿಗೆ ಕೊಟ್ಟು ಜಮೆಯಾದರೆ ಮಾತ್ರ ಸ್ಟೀಮರಿನ ಒಂದನೇ ಕ್ಲಾಸ್ ಸಂಪೂರ್ಣವಾಗಿ ಮತ್ತು ಮೂರನೇ ಕ್ಲಾಸಿನ ಅರ್ಧಾಂಶ ನಮಗೆ ಪ್ರತ್ಯೇಕಿಸಿ ಸ್ಟೀಮರ್ ಕಂಪೆನಿಯವರು ಕೊಡುವ ಏರ್ಪಾಡು ಮಾಡಬಹುದು.

ಸ್ಟೀಮರ್ ಕಂಪೆನಿಯವರು ಸದ್ಯಾ ತಿಳಿಸಿರುವ ದರವು (ಎಂದರೆ ಜನ ಒಂದಕ್ಕೆ ಹೋಗಿ ಬರುವರೆ ೭ ರೂಪಾಯಿ) ಜಾಸ್ತಿಯಾಯಿತೆಂತ ಹಲವರು ಅಭಿಪ್ರಾಯಪಟ್ಟು ನನ್ನ ಕೂಡೆ ತಿಳಿಸಿರುವದರಿಂದ ಅದರಕ್ಕಿಂತ ಕಡಿಮೆ ದರವನ್ನು ಪಡಕೊಳ್ಳುವ ಪ್ರಯತ್ನವಿಟ್ಟಿದೆ. ಮೇಲ್ಕಾಣಿಸಿದ ದರ ರೂ. ೭ರಲ್ಲಿ ಸ್ಟೀಮರ್ ಪ್ರಯಾಣದ ಖರ್ಚಲ್ಲದೆ ಬೇರೆ ಯಾವ ಖರ್ಚೂ ಅಡಗುವದಿಲ್ಲ.

ಸ್ಟೀಮರಿನ ಒಂದನೇ ಕ್ಲಾಸಿನಲ್ಲಿ ಸ್ಥಳಯಿದ್ದ ಮಟ್ಟಿಗೆ ಹೆಂಗಸರು ವ ಮಕ್ಕಳು ಒಂದನೇ ಕ್ಲಾಸನ್ನು ಉಪಯೋಗಿಸಿಕೊಳ್ಳಬಹುದು.

ಮೇಲ್ಕಂಡ ರೀತಿ ಸ್ಟೀಮರಿನ ಅಂಶವು ಪ್ರತ್ಯೇಕಿಸಿ ಸಿಕ್ಕುವದಾದರೆ ಇಲ್ಲಿಂದ ಅಡಿಗೆಯವರನ್ನು ವದಗಿಸಿಕೊಂಡು ಸ್ಟೀಮರ್ ಮೇಲೆ ಮಕ್ಕಳಿಗೆ ವ ಇತರ ಪ್ರಯಾಣಸ್ಥರಿಗೆ ಊಟ ದೊರಿಯುವ ಏರ್ಪಾಡು ಮಾಡಬಹುದು. ಸದರಿ ಊಟದ ಖರ್ಚನ್ನು ಪ್ರತ್ಯೇಕ ಕೊಡಬೇಕಾಗುವದು.

ಸ್ಟೀಮರು ಪ್ರತ್ಯೇಕಿಸಲು ದೊರಕುವ ಪ್ರಯಾಣಸ್ಥರು ಇಂತಿಷ್ಟೆ ಜನರೆಂದು ಈ ತಿಂಗಳ ತಾ. ೧೦ರ ಒಳಗೆ ಖಂಡಿತ ತಿಳದರೆ ಎಲ್ಲರಿಗೂ ಗೋವೆಯಲ್ಲಿ ಒಂದೇ ಠಿಕಾಣೆಯಲ್ಲಿ ಊಟದ ಏರ್ಪಾಟು ಮಾಡುವರೆ ಪ್ರಯತ್ನಿಸಿ ಸಾಧ್ಯವಾದ್ದಲ್ಲಿ ಈ ಪ್ರಕಾರ ಒಂದೇ ಠಿಕಾಣೆ ಒದಗಿಸಬಹುದು. ಗೋವೆಯಲ್ಲಿ ಬಿಡಾರದ ವ ಊಟದ ಖರ್ಚು ಒಬ್ಬೊಬ್ಬಗೆ ಎಷ್ಟು ಬೀಳುವದೆಂದು ಈಗ ತಿಳಿಸುವರೆ ಸಾಧ್ಯವಿಲ್ಲ. ಎಲ್ಲರೂ ಕೂಡಿ ತಮ್ಮೊಳಗೆ ಒಬ್ಬಿಬ್ಬರನ್ನು ಮೆನೇಜರರಾಗಿ ನೇಮಿಸಿ ಖರ್ಚನ್ನು ಹಂಚಿಕೊಳ್ಳಬಹುದು.

ಮಕ್ಕಳಿಗೆ ಸ್ಟೀಮರ್ ಚಾರ್ಜು ಎಷ್ಟು ಬೀಳುವದೆಂದು ಈಗ ನನ್ನಿಂದ ಖಂಡಿತ ಹೇಳಲಿಕ್ಕಾಗುವದಿಲ್ಲ. ಸ್ಟೀಮರ್ ಆಫೀಸಿನಲ್ಲಿ ವಿಚಾರಿಸಿದರೆ ತಿಳಿಯುವದು.

ಪರಿಷದದ ಸಭಾ ಮಂಟಪದಲ್ಲಿ ಈಕ್ಷಕರಾಗಿ (ನೋಡುವರೆ) ಕೂತುಕೊಳ್ಳುವ ವಿಷಯದಲ್ಲಿ ಈ ಕೆಳಗೆ ಹೆಸರು ಕಾಣಿಸಿದ ಗೃಹಸ್ಥರಿಗೆ ಮುಂದಾಗಿ ತಿಳಿಸಿ ಒಬ್ಬೊಬ್ಬಗೆ ಒಂದು ರೂಪಾಯಿ ಪ್ರಕಾರ ಚಾರ್ಜು ಕೊಟ್ಟಲ್ಲಿ ಹಾಗೆ ಕೂತುಕೊಳ್ಳಬಹುದು. (ಮ॥ ರಾ॥ ದತ್ತಾತ್ರಯ ಪಾಂಡುರಂಗ ನಾಯಕ್ ದಲಾಲ್, ಮಡಗಾಂ ಗೋವಾ)

ಮಂಗಳೂರು,
2--12--10.

ಅಮ್ಮೆಂಬಳ ಶ್ರೀನಿವಾಸ ಪೈ.

ಲಾಭ! ಹೊಸ ಪುಸ್ತಕ!!

ಸಚಿತ್ರಕಲಾತರಂಗ 1ನೇ ಭಾಗ

8 ಅಧ್ಯಾಯಗಳಿವೆ. ಈ ಪತ್ರಿಕೆಯ ಚಂದಾದಾರರಿಗೂ, ಸ್ಕೂಲ್ಮಾಸ್ಟರರಿಗೂ, ಮತ್ತು ವಿದ್ಯಾರ್ಥಿಗಳಿಗೆ ರೂ. 0-8-0ಕ್ಕೆ ದೊರೆಯುವುದು. ಇತರರಿಗೆ ರೂ.0-10-0.

ಎಂ. ಟಿ. ವಲ್ಲಭ ಐಯಂಗಾರ್, ಬೀರೂರು.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಕೂಳೂರು ಮಸ್ಕತಿ ಅಕ್ಕಿ	5-10-0
ಗುಡ್ಡು ಮಸ್ಕತಿ ,, ...	4-12-0
ಮಸ್ಕತಿ ದುಯಂ ,, ...	4-8-0
ವಕ್ಲ ಸುಗ್ಗಿ ,, ...	4-11-0
ಹೊಸ ಗುಡ್ಡು ,, ...	3-12-0
ಹೊಸ ಮಸ್ಕತಿ ಬೆಳ್ತಿಗೆ	4-12-0
ರಂಗೂನ್ ಬೆಳ್ತಿಗೆ ಗೋಣಿ	8-0-0
ಕುರುಳಿ ಗೋಣಿ ೧ ಮುಡಿ 2ರ ...	4-12-0
ಉಪ್ಪು ಗೋಣಿ ೧ರ	3-7-0
ಕೊಬ್ರಿ ಖಂಡಿ ೧ರ	110-0-0
ಕೊಬ್ರಿ ಎಣ್ಣೆ ಮಣ	7-6-0
ಕಾಫಿ ಖಂಡಿ ೧ರ	225-0-0
ಕಾಳು ಮೆಣಸು ಖಂಡಿ	125-0-0
ಬಿಳಿ ಗೋಟು ಅಡಿಕೆ	88-0-0
ಕರಿ ಗೋಟು	65-0-0

ದಯವಿಟ್ಟು ಓದಿರಿ ! ಸೌಖ್ಯವನ್ನು ಹೊಂದಿರಿ !

ಕಾಮಶಾಸ್ತ್ರ.

ಉಚಿತವಾಗಿ ಕಳುಹಿಸಲ್ಪಡುವುದು! ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವದು. ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವು! ಆಯುರಾರೋಗ್ಯಸಂಪದಗಳುಂಟಾಗುವವು!!

ಆತಂಕ ನಿಗ್ರಹ ಮಾತ್ರೆ.

ಊಟವಾದ ಬಳಿಕ ಹಗಲಿರುಳೂ ಸೇವಿಸಬೇಕಾದದ್ದು! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು:—

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ಪ್ರಾಹಾಧಾರಗಳಿಂದ ಅಂಗಗಳನ್ನು ಬಲಪಡಿಸುವದು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು. ೩೨ ಮಾತ್ರೆಗಳಿರುವ ಡಬ್ಬಿ ೧ಕ್ಕೆ ರೂ. ೧-೦-೦.

ಆತಂಕನಿಗ್ರಹ ಔಷಧಾಲಯ, ೨೨ ಬ್ರಾಡ್ವೇ ಮದರಾಸು. — ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಶ್ರೀ

ಶ್ರೀ ಶಿವಗಂಗಾ ಮಠದ ಶ್ರೀ "ಶಾರದಾ" ಮಾಸಪತ್ರಿಕೆ.

ವಾರ್ಷಿಕ ಚಂದಾ 2-0-0 ಹಾಸಲು ಸೇರಿ.

ಜನರು ಶ್ರೀ ಶಾರದಾನುಗ್ರಹಕ್ಕೆ ಪಾತ್ರರಾಗಿ ಅದರಿಂದ ಉಂಟಾಗುವ ಜ್ಞಾನ ಸುಖವನ್ನು ಅನುಭವಿಸಬೇಕಾಗಿದ್ದರೆ ಶ್ರೀ "ಶಾರದಾ" ಮಾಸಪತ್ರಿಕೆಯನ್ನು ಸೇವಿಸಬೇಕು.

ಉಪನಿಷತ್ತುಗಳ ಸಾರ, ಧರ್ಮಶಾಸ್ತ್ರದ ರಹಸ್ಯ (ಧರ್ಮಸಿಂಧು-353 ವಿಷಯ), ಶ್ರೀ ಶಂಕರಾಚಾರ್ಯರ ಕಾಲ। ಮತ್ತು ಚರಿತ್ರ, ಧರ್ಮನೀತಿಗಳ ಉಲ್ಲಾಸ, ಸಟೀಕ ಸ್ತೋತ್ರಾವಳಿ, ಸರಸವಾದ ಉಪನ್ಯಾಸ, ನ್ಯಾಯಗಳ ವಿಮರ್ಶೆ, ವಿವಿಧ ಸಿದ್ಧಾಂತ ವಿವರಣ, ವಿಚಿತ್ರ ಚಾಟು ಶ್ಲೋಕಗಳು, ಸನಾತನಧರ್ಮ ನೀತಿಗಳ ಸೋಪಾನ ಈ ಮುಂತಾದುವುಗಳು ಇದರಲ್ಲಿ ಪ್ರಕಾಶವಾಗುತ್ತಲಿವೆ.

ಈ ಪತ್ರಿಕೆಯು ದೊರೆಯುವ ಸ್ಥಳ. (ಪತ್ತೆ)

ದೊಡ್ಡಬೆಲೆ ನಾರಾಯಣ ಶಾಸ್ತ್ರಿ.
ಶ್ರೀ "ಶಾರದಾ" ಆಫೀಸು ಬೆಂಗಳೂರು ಸಿಟಿ.

1911ನೇ ವರ್ಷದ ಪಾಕೆಟ್ ಡ್ಯಾರಿ.

ಬೇಗ ತರಿಸಿಕೊಳ್ಳಿ! ನಿದಾನ ಮಾಡಿದರೆ ಶಿಗಲಾರದು!!

ಪ್ರತಿಯೊಬ್ಬ ಮನುಷ್ಯನಿಗೂ ಲೆಕ್ಕವೇ ಪ್ರಾಣಾಧಾರವಾದದ್ದು. ಇಂಥಾ ಲೆಕ್ಕವನ್ನು ನಮ್ಮ ಜೇಬಿನಲ್ಲಿಡಲು ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇಇರಬೇಕಾದ ಪುಸ್ತಕವು. ಬಹಳ ಸುಲಭಕ್ರಯ. ಟಪ್ಪಾಲ್ ಖರ್ಚುಗಳು ಬೇರೆ ಬೀಳುತ್ತೆ.

ಎ. ನಂ। ಡ್ಯೆರಿ ಸಾದಾ ೧ಕ್ಕೆ ೩ಆಣೆ, ಬಿ. ನಂ। ಡ್ಯೆರಿ ಮುಚ್ಚಳ ಮತ್ತು ಪೆನ್ಸಲ್ ಸಹಿತ ೧ಕ್ಕೆ ೫ಆಣೆ. ಸಿ. ನಂ। ಡ್ಯೆರಿ ದೊಡ್ಡದು ೧ಕ್ಕೆ ೬ಆಣೆ. ಡಿ. ನಂ। ಡ್ಯೆರಿ ಮುಚ್ಚಳ ಮತ್ತು ಪೆನ್ಸಿಲ್ ಸಹಿತ ೧ಕ್ಕೆ ೮ಆಣೆ. ೧೨ ಡ್ಯೆರಿಗಳನ್ನು ಒಂದೇ ಸಲ ತರಿಸಿಕೊಂಡರೆ ಒಂದು ಡ್ಯೆರಿ ಇನಾಂ. ವ್ಯಾಪಾರಸ್ಥರಿಗೆ ಸರಿಯಾದ ಕಮಿಶನ್ ಶಿಕ್ಕುತ್ತೆ ಮತ್ತು ನಮ್ಮಲ್ಲಿ ಕನ್ನಡ ತೆಲಗು, ಸಂಸ್ಕೃತ ಪುಸ್ತಕಗಳು ಬಹಳ ಸುಲಭ ದರಕ್ಕೆ ದೊರಯುತ್ತದೆ.

ನಮ್ಮ ಕಂಪೆನಿ ಕ್ಯಾಟಲಾಗ್ ಮುಫತ್ತಾಗಿ ದೊರಿಯುತ್ತೆ. ಪರಾಂಬರಿಸಿ ನೋಡಿರಿ.

ಎಮ್ ಪಿ. ಮಲ್ಲಯ್ಯ.
211 ತಾಲೂಕು ಕಚೇರಿ ರಸ್ತೆ, ಬೆಂಗಳೂರು ಸಿಟಿ.

ಮಂಗಳೂರು

ಚಲೋ ನಶ್ಯಪುಡಿ.

ತೊಲೆ ೧ಕ್ಕೆ ರೂ. ೦-೧-೦. ಸೇರು ೧ಕ್ಕೆ ರೂ. ೧-೪-೦

ಸುಗಂಧ ನಾಸಿಕ ಚೂರ್ಣ ತಲೆಪಾಸಿಗೂ ಸೀತಕ್ಕೂ ಶಿರೋಭಾರಕ್ಕೂ ಒಳ್ಳೇದು ತೊಲೆ ೧ಕ್ಕೆ ೦-೪-೦ ಸೇರು ೧ಕ್ಕೆ ರೂ. ೫-೦-೦.

ಅಪೇಕ್ಷಿಸುವವರಿಗೆ ವಿ. ಪಿ. ಮೂಲಕವೂ ಹಣ ಕಳುಹಿಸಿದವರಿಗೆ ಸೆಂಪಲ್ ಪೋಸ್ಟು ಮೂಲಕವೂ ಕಳುಹಿಸಿಕೊಡಬಹುದು.

ಕಾವೂರು ವೆಂಕಟೇಶ ಸುಬ್ರಾಯ ಪೈ,
ಗೋಳಿಕಟ್ಟೆ ಬಜಾರ,
ಮಂಗಳೂರು, ದ. ಕ.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. 2-8-0 ಮಾತ್ರ. ರೂ. 2-8-0 ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

"ರಾಸ್ಕೋಪ್ ಸಿಷ್ಟಂ ಪೇಟಂಟ್ ಲೀವರ್ ಜ್ಯೂವೆಲ್ಡ್" ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರಹವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. 3-8-0 ರೂ. 4-8-0. ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಎರಡು (೨) ವರುಷಗಳು ಗ್ಯಾರೆಂಟು.



ಕ್ರಯ ರೂ. 2-8-0 ವಿ. ಪಿ. ಚಾರ್ಜು ರೂ. 0-4-0.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ 0-8-0 ವಿ. ಪಿ. ಚಾರ್ಜು 0-4-0.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ,
ಸಾಹುಕಾರ ಪೇಟೆ, ಮದ್ರಾಸು.

ಉತ್ತಮವಾದ ಮೈಸೂರು ಸುಗಂಧ ದ್ರವ್ಯಗಳು.

ಅಂಬರ್ ಊದಬತ್ತಿ, ಸೇ. ೧ಕ್ಕೆ	೬-೦-೦		A ಅರಗಜ ತೊ. ೧ಕ್ಕೆ	೨-೦-೦
ಕಸ್ತೂರಿ ಬತ್ತಿ ಡಿ.	೬-೦-೦		B. ಅರಗಜ ಡಿ.	೧-೦-೦
ಪುಣಗು ಬತ್ತಿ ಡಿ.	೧-೮-೦		ಕಸ್ತೂರಿ ಬಿಲ್ಲೆ ಡಿ.	೨-೦-೦
ಗುಲಾಬಿ ಬತ್ತಿ ಡಿ.	೧-೪-೦		ಪುಣಗು ಬಿಲ್ಲೆ	೧-೦-೦
A ಪನ್ನೀರ್ ಬತ್ತಿ ಡಿ.	೦-೧೨-೦		ಕೇಸರಿ ಬಿಲ್ಲೆ	೦-೮-೦
B ಪನ್ನೀರ್ ಬತ್ತಿ ಡಿ.	೦-೧೦-೦		ಮನೋರಂಜನ ತೈಲ ಶೀಸೆ ೧ಕ್ಕೆ	೦-೮-೦
ಮಸಾಲಾ ಬತ್ತಿ ಡಿ.	೦-೬-೦		ತಾಂಬೂಲ ರಶ್ನ ಡಿ.	೦-೪-೦

ಇವುಗಳಲ್ಲದೆ ಎಲ್ಲಾ ತರಹದ ಅತ್ತರ್, ನಾಶಿಕ ಚೂರ್ಣ, ಟೂತ್ ಪೌಡರ್ ಫಿಕ್ಕಾ, ಮೊದಲಾದವುಗಳು ಬಿಕರಿಗೆ ಸಿದ್ಧವಾಗಿವೆ. ಎಸ್. ಎಮ್. ಸುಬ್ಬರಾವ್,
ತೇರ್‌ಬೀದಿ, ಮಂಗಳೂರು.

ಒಡೋನಾ.

ಇದು ಆಗಿಂದಾಗ್ಯೆ ಬಾಧಿಸುವ ಹಲ್ಲುನೋವಿನ ದಿವ್ಯ ಔಷಧಿಯಾಗಿದೆ. ಶಸ್ತ್ರಪ್ರಯೋಗ ಮಾಡದೆನೇ ಹಲ್ಲುನೋವು ಖಾತ್ರಿಯಾಗಿ ನಿಲ್ಲುವುದು. ಕೆಲವುಸಾರಿ ದಂತ ವೈದ್ಯರಿಂದ ಸಹ ಸಾಧ್ಯವಾಗದ ಹಲ್ಲುನೋವನ್ನು ಈ ಒಡೋನಾ ಎಂಬದು ಕ್ಷಣಮಾತ್ರದಲ್ಲ ಪರಿಹರಿಸುವುದು. ಈ ಭೂಲೋಕದಲ್ಲಿನ ಎಲ್ಲಾ ಹಲ್ಲುನೋವಿನ ಔಷಧಿಗಳಿಗಿಂತ ಇದು ಅತಿ ಉತ್ಕೃಷ್ಟವಾದದ್ದು. ಟನ್ ೧ಕ್ಕೆ ಕ್ರಯ ೨ ರೂ.

ಇಂಪೀರಿಯಲ್ ಪ್ಯೆನ್ ಬಾಮ್.

ಇದರಿಂದ ಸಾಧಾರಣ ತಲೆಶಿಡಿತ ಮೊದಲುಗೊಂಡು ಎಲ್ಲಾ ತರದ ದುಸ್ತರವಾದ ರೋಗಗಳು ಸಹಾ ಗುಣವಾಗುವವು.

ವಾತ, ಸಂಧಿವಾತ, ಹರಿವಾತ, ಪಕ್ಷವಾತ, ಉಬ್ಬಸ, ಸೊಂಟನೋವು, ಗಂಟುನೋವು, ಶೀತ, ಕೆಮ್ಮು, ಉಳುಕು, ನೆಗಡಿ, ಕಟವಾತ, ಶ್ವಾಸವಾತ, ಕ್ಷಯರೋಗ, ಜಜ್ಜಿದ ಗಾಯ, ಕುತ್ತಿಗೆ ನೋವು, ರಾಜಕುರು ವಗೈರೆ ಎಲ್ಲಾ ತರದ ರೋಗಗಳಿಗೆ ಇದು ಪರಮೌಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ೧ರ ೧೨ ಆಣೆ.

ಮದ್ರಾಸ್ ಆಧಿಪತ್ಯಕ್ಕೆ ಸೋಲ್ ಏಜಂಟರು:—

ಮೆಸ್ಸರ್ಸ್ ಕೆ. ವಿಟ್ಠಳ ರಾವ್ ಎಂಡ್ ಕೋ,
ಸರ್ಟಿಫ್ಯಾಡ್ ಕೆಮಿಸ್ಟ್, ಮಂಗಳೂರು, ದ. ಕ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿನ್ನು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀನನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಿನ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಪ್ರೋಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:— ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುಲ್ಮುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬಾಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸಪ್ತಾಮೃತಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co, *Ayurvedic Chemists*,
Vepery Post, MADRAS.

MANORA & CO'S

WONDERFUL MEDICINE FOR ALL KINDS OF PAINS.

Try to-day! Dont wait until tomorrow!!

ರೊಯಲ್ ಇಂಡಿಯನ್ ಬಾಮ್.

ಹಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮಲಾಮು! ಇದರ ಉಪಯೋಗದಿಂದ:—ತಲೆನೋವು, ಶಿರೋಭಾರ, ಅರ್ಧಾಂಗವಾಯು, ಸೊಂಟದ ನೋವು, ಗಂಟಲು ನೋವು, ಘಾಯ, ಜಖಮು, ಉಳುಕು, ಶೈತ್ಯ, ಎದೆನೋವು, ಜನಗಾಲು, ಜಿಜ್ಜಿ, ಉತಿಘಾಯ, ಮುದ್ದಣ ಮೊದಲಾದ ಎಲ್ಲಾ ತರದ ವೇದನೆಗಳು ಸಂಪೂರ್ಣವಾಗಿ ಗುಣವಾಗುವವು!! ಸಣ್ಣ ಮಕ್ಕಳ ಎಳೆಯ ದೇಹಕ್ಕಾದರೂ ಭಯವಿಲ್ಲದೆ ಇದನ್ನು ಹಚ್ಚಬಹುದು. "ಬಾಲಗ್ರಹ ಪೀಡನೆಗಳಲ್ಲಿ ಇದು ಅಗ್ರಸ್ಥಾನ ಹೊಂದಿಯದೆ" ಸಾವಿರಾರು ಜನರು ಇದನ್ನು ಉಪಯೋಗಿಸುತ್ತಾರೆ. "ಇದರಿಂದ ಗುಣ ಸಿಕ್ಕುವದಿಲ್ಲವಾದರೆ ಹಣ ತಿರುಗಿ ರವಾನಿಸಿ ಕೊಡುವೆವು. ಎಲ್ಲಾ ಔಷಧಾಲಯಗಳಲ್ಲಿಯೂ, ಕೆಮಿಸ್ಟ್‌ರಲ್ಲಿಯೂ ಸಿಕ್ಕುತ್ತದೆ. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜಾಗ್ರತೆ:— ಇಮಿಟೇಶನ್ (ನಕಲಿ) ಬಾಮ್‌ಗಳನ್ನು ತೆಗೆದುಕೊಳ್ಳಬೇಡಿರಿ.

ವಿಳಾಸ:— ಮನೋರಾ ಕಂಪೆನಿ, ಗಿರಗಾಂ ಮುಂಬಯಿ.
ಏಜಂಟರು:— ಪದ್ಮ ಎಂಡ್ ಸನ್ಸ್ ಮಂಗಳೂರು.
ಬೀಕಲ ವೆಂಕಟ ರಾವ್, ಉಡುಪಿ.
ಬಿ. ನರಸಿಂಹ ಮಲ್ಯ ಪುತ್ತೂರು.
ಬಿ. ದತ್ತ ಬ್ರದರ್ಸ್, ಕುಂದಾಪುರ.
ಬಿ. ಎನ್. ಮಲ್ಯಾ ರಾಮ ಪ್ರಸಾದ ಔಷಧಾಲಯ. ಬಾರಕೂರು.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ ಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಲೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟು ನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0—8—0.

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2—8—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರೆಯಿರಿ.

ವಿ. ಪಿ. ಖರ್ಚು ಪ್ರತ್ಯೇಕ ಟಿ. ಬಾಬುರಾಯರ,
ಆಯುರ್ವೇದಿಕ್ ಔಷಧಾಲಯ, ಗೊಲ್ಲರಕೇರಿ ರಸ್ತೆ, ಮಂಗಳೂರು, ದ. ಕ.

ನೇತ್ರಬಿಂದು

ಇದು ಕಣ್ಣಿನ ದೃಷ್ಟಿಮಾಂದ್ಯ, ಕಣ್ಣೀರು ಸೋರುವಿಕೆ, ಕಣ್ಣಿನ ಮೂಲೆ ತುರಿಸುವಿಕೆ, ಕೆಂಗಣ್ಣು, ರೆಪ್ಪೆ ಉದುರುವಿಕೆ ಈ ಮೊದಲಾದ ರೋಗಗಳಿಗೆ ಸಿದ್ಧೌಷಧವು. ಕ್ರಯ ಬಾಟ್ಲಿ ೧ರ ರೂ. 0—8—0 ವಿ. ಪಿ. 0—4—0.

ಸಿದ್ಧಲಕ್ಷ್ಮೀವಿಲಾಸ— ಇದು ಒಳ್ಳೇ ರಕ್ತಶುದ್ಧಿ ಮಾಡುತ್ತದೆ. ಕ್ರಯ ಬಾಟ್ಲಿ ೧ರ 0-12-0 ವಿ. ಪಿ. 0—4—0.

ಇದು ವಿನಹ ಇನ್ನೂ ಆಸವಗಳೂ, ಅರಿಷ್ಟಗಳೂ, ಘೃತಗಳೂ, ಲೇಹಗಳೂ, ಚೂರ್ಣಗಳೂ, ತೈಲಗಳೂ, ಮಾತ್ರೆಗಳೂ, ಭಸ್ಮಗಳೂ ವಗೈರೆ ದೊರೆಯುತ್ತವೆ.

ವಿಳಾಸ:— ಧನ್ವಂತರಿ ಆಯುರ್ವೇದಿಕ್ ಔಷಧಾಲಯ,
ಮಂಗಳೂರು.

ಈಗಲೀಗ ಅಚ್ಚಾಗುತ್ತಲಿದ್ದ 'ಆಯುರ್ವೇದ ಚಿಕಿತ್ಸಾಕ್ರಮ' ಎಂಬ ಗ್ರಂಥವು ಇನ್ನು ಸದ್ಯದಲ್ಲಿಯೇ ಪ್ರಕಟವಾಗುವುದೆಂಬದನ್ನು ಸ್ವದೇಶಾಭಿಮಾನಿಯ ವಾಚಕರೆಲ್ಲರೂ

ತಿಳಿಯಬೇಕಾಗಿರುವುದು.

ಕನ್ನಡಭಾಷೆ ಗೊತ್ತಿರುವವರ್ಯಾರಾದರೂ ತನ್ನ ಹೆಸರು ಮತ್ತು ವಿಳಾಸವನ್ನು ಕಳುಹಿಸಿಕೊಟ್ಟಲ್ಲಿ ಟಪ್ಪಾಲು ಹಾಸಲು ಇಲ್ಲದೆ ಸಹಾ ಗ್ರಂಥವನ್ನು ಉಚಿತವಾಗಿ ಪಡಿಯಬಹುದು. ಇಂಗ್ಲೀಷು ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ಕಳುಹಿಸುವಾಗ ತಮ್ಮ ಸ್ನೇಹಿತರ ಯಾ ನೆಂಟರಿಷ್ಟರ ಪೈಕಿ 10 ಜನರ ಹೆಸರು ಮತ್ತು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು.

ಅತೀ ಉತ್ತಮವಾದ ಬ್ಲೂಬ್ಲೇಕ್ ಶಾಯಿಯ ಪುಡಿ.

ಇತರ ಎಲ್ಲಾ ಶಾಯಿಯ ಪುಡಿಗಿಂತಲೂ ಇದು ಬಹಳ ಉತ್ಕೃಷ್ಟವಾದದ್ದು.

ಒಂದು ಪೊಟ್ಣಕ್ಕೆ 4 ಪೈ.

ಈ ಶಾಯಿಯ ಹುಡಿಯನ್ನು ೨ ಔನ್ಸು ನೀರಿನಲ್ಲಿ ಕಲಸಿದೊಡನೆ ಅತೀ ಕಪ್ಪಾದ ಶಾಯಿಯು ದೊರಕುವದು. ಇದರಿಂದ ಬರದರೆ ಲೋಹದ ಪೇನುಗಳಿಗೆ ತುಕ್ಕು ಹಿಡಿಯದು. ಪೇನಿನಲ್ಲಿ ಶಾಯಿಯು ಬಹಳ ಸೊಗಸಾಗಿ ಹರಿಯುವುದು. ಈ ಶಾಯಿಯ ಪುಡಿಯಲ್ಲಿ ಬ್ಲೂಬ್ಲೇಕ್, ಕೆಂಪು, ಪಚ್ಚೆ, ಧೂಮ್ರವರ್ಣ ಇವೇ ಮೊದಲಾದವುಗಳು ಇರುವವು.

ಹಲವು ಪ್ರದರ್ಶನಗಳಲ್ಲಿ ಈ ಶಾಯಿಯ ಪುಡಿಯು ಬೆಳ್ಳಿ ಪದಕಗಳನ್ನೂ, ಯೋಗ್ಯತಾಪತ್ರಗಳನ್ನೂ ಹೊಂದಿಯದೆ.

ಒಂದೇ ಸಾರಿ 100 ಪೊಟ್ಣಗಳಿರುವ ಒಂದು ಕಾರ್ಡಬೋರ್ಡು ಪೆಟ್ಟಿಗೆಯನ್ನು ತರಿಸಿಕೊಂಡರೆ ಟಪ್ಪಾಲು ಹಾಸಲು ವಿನಹಾ ರೂ. ೧—೪—೦.

ಟಿ. ಎಸ್. ಸುಬ್ರಮಣ್ಯಮಂ ಎಂಡ್ ಕೊ.
32 ಆರ್ಮೇನಿಯನ್ ರಸ್ತೆ, ಮದ್ರಾಸು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ತರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಖಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್ ಲವರಚಾಲ, ಮುಂಬಯಿ.

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,
ಮಂಗಳೂರು, ದ. ಕ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ನವೀನ ಶೃಂಗಾರ ಸ್ತ್ರೀ ಶುಕಸಪ್ತತಿ ಕಥೆ.

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಬೇಕಾಗಿ ಅಭಿಲಾಷೆ ಇದ್ದರೆ ಮೇಲ್ಕಂಡ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ. ಕ್ರಯ ಹಾಸಲ್ ಸಹಾ ೧೦ ಆಣೆ.

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪರಮಾಯದ ಊದಬತ್ತಿಗಳು, ಹಸಿಗಂಧ, ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜವಳಿ ಸಹಾ ದೊರಿಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು. ಒಂದಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ, ನಮ್ಮ ಕಂಪೆನಿ ಕೆಟಲಾಗ್ ಮುಫತ್ತಾಗಿ ದೊರೆಯುವದು.

ಟಿ. ಯನ್. ಶ್ರೀನಿವಾಸ ಶೆಟ್ಟಿ, ಬುಕ್‌ಡಿಪ್ಪೊ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು. ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ:—ಪ್ರಖ್ಯಾತಿಗೊಂಡ ಶ್ರೀಕೃಷ್ಣ ಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗಳೂರು, ದ. ಕನ್ನಡ.

ಬಹುಮಾನ! ಬಹುಮಾನ! ಬಹುಮಾನ!

THE KALA-NIDHI MANGALORE,

(ಪೊಟ್ಣ 1 ಕ್ಕೆ 3 ಪೈ.)

ಬರುವ ದಶಂಬರ ತಿಂಗಳ ವರೆಗೆ ಮಾತ್ರ. ೪ ರೂಪಾಯಿಗಳ ಶಾಯಿ ಪೊಟ್ಣಗಳನ್ನು ತೆಗದುಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಘಡಿಯಾರವು.

ಈ ಶಾಯಿಯಿಂದ ಲೋಹದ ಪೇನುಗಳಿಗೆ ತುಕ್ಕು ಹಿಡಿಯದು. ಶಾಯಿಯ ಮೇಲ್ಗಡೆ ಬೂಜು ನಿಲ್ಲದು. ಬರಿಯುವಾಗ ನೀಲ ಬಣ್ಣದಲ್ಲಿದ್ದು ಆರಿದೊಡನೆ ಅತಿ ಕಪ್ಪಾಗುವದು.

ಬಹುಮಾನಗಳ ವಿವರ. ೪ ಆಣೆಯ ಪೊಟ್ಣಗಳನ್ನು ತಕ್ಕೊಳ್ಳುವವರಿಗೆ ಸುಗಂಧ ದಂತ ಕಾಂತಿ ಚೂರ್ಣದ ಡಬ್ಬಿ ೧; ೮ ಆಣೆಯದನ್ನು ತಕ್ಕೊಂಡವರಿಗೆ ಜೋನ್ ಫೇಬರ್ ಪೆನ್ಸಿಲ್ ಡಜನ್ ೧; ೧ ರೂಪಾಯಿ ಪೊಟ್ಣಗಳನ್ನು ಪಡಕೊಂಡವರಿಗೆ ದೊಡ್ಡವರ ಉತ್ತಮವಾದ ಬನಿಯನ್ ೧; ೨ ರೂಪಾಯಿದ್ದನ್ನು ತರಿಸಿಕೊಳ್ಳುವವರಿಗೆ ಓಫೀಸ್ ನಂ. ೧ ಕಿಸೆ ಛಾಪೆಯ ಪೆಟ್ಟಿಗೆ ೧; ೪ ರೂಪಾಯಿಗಳದ್ದು ತರಿಸಿಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್, ಕೀಲೆಸ್ ಕಿಸೆ ಘಡಿಯಾರವು ಗ್ಲಾಸ್ ಸ್ಪ್ರಿಂಗ್ ಸಹಿತ.

ಬ್ಲೂ ಬ್ಲೇಕ್ ದೊಡ್ಡ ಶಾಯಿಯ ಬಾಟ್ಲಿ ೧ಕ್ಕೆ ಆಣೆ ೮. ಸಣ್ಣದಕ್ಕೆ ಆಣೆ ೪. ಶಾಯಿಯ ಗುಳಿಗೆಗಳೂ ಕಾಗದಗಳೂ ಸಹ ಸಿಕ್ಕುವವು. ಪರಸ್ಥಳದವರಿಗೆ ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:— ಕಲಾನಿಧಿ, ಮಂಗಳೂರು.
ಅಥವಾ ದಿ. ಊಲನ್ ಮಾರ್ಟ್ ನಂಬ್ರ ೧ ಮಂಗಳೂರು (ದ. ಕ)

ಸರ್ವರೂ ಸಂಗ್ರಹಿಸ ಬೇಕಾದ್ದು. ಪ್ರಾಸಾದಿಕ ಗ್ರಂಥ

ಶ್ರೀ ಶಿವಲೀಲಾಮೃತವು.

ಭಾಮಿನಿ ಷಟ್ಪದಿಯಲ್ಲಿ ೧೪ ಅಧ್ಯಾಯಗಳುಳ್ಳದ್ದು. ಇದರಲ್ಲಿ ಜಪಭಸ್ಮ ರುದ್ರಾಕ್ಷಧಾರಣ, ಪ್ರದೋಷ ವ್ರತ, ಶಿವದಿನ, ಗೋಕರ್ಣಮಹಿಮೆ; ವ್ಯಾಧ—ಹರಿಣಿಗಳ ಕಥೆ, ದಾಶಾರ್ಹ, ಮಿತ್ರಸಹ, ಸುಮಿತ್ರೆ, ವಿಮರ್ಶನ, ಚಂದ್ರಸೇನ, ಸತ್ಯರಥ, ಧರ್ಮಗುಪ್ತ, ಚಿತ್ರವರ್ಮ, ಸಿಮಂತಿನಿ, ಸುಮೇಧ, ಸೋಮವಂತ, ಪಿಂಗಲೆ, ಭದ್ರಾಯು, ಶಾರದೆ, ಭದ್ರಸೇನ, ಕುಕ್ಕುಟ—ಮರ್ಕಟ, ಬಹುಲೆಯಾಖ್ಯಾನಗಳು; ಭಸ್ಮಾಸುರ, ತ್ರಿಪುರ, ತಾರಕರ ಸಂಹಾರ; ದಕ್ಷವಧೆ; ಶಿವಗಿರಿಜೆಯರ ಪಗಡೆಯಾಟ; ಶ್ರಿಯಾಳ ಚರಿತ್ರೆ ಸಹ ವರ್ಣಿಸಿಯದೆ.

ಕ್ರಯ ಪ್ರತಿಯೊಂದಕ್ಕೆ 4 ಆಣೆ. ಅಂಚೆವೆಚ್ಚ 2 ಆಣೆ. ಈ ಮೊದಲು ನಮ್ಮಲ್ಲಿಂದ ಸಾಮಾನು ಪಡಕೊಂಡವರು ಗುರ್ತದೊಡನೆ 4 ಆಣೆ ಸ್ಟಾಂಪು ಕಳುಹಿಸಿದರೆ ಒಂದು ಪ್ರತಿ ಉಚಿತವಾಗಿ ಸಿಕ್ಕುವುದು. ಇದನ್ನು ಪಡಕೊಳ್ಳುವವರಿಗೆ "ಭಕ್ತಿಮಹಿಮೆ" ಪುಸ್ತಕವು ಅರ್ಧ ಕ್ರಯಕ್ಕೆ (6 ಆಣೆ) ದೊರಕುವುದು. ಅಂಚೆವೆಚ್ಚ ಬೇರೆ.

ದಿ. ಊಲನ್ ಮಾರ್ಟ್, ಮಂಗಳೂರು.

POCKET DIARIES

FOR 1911.

1911ನೇ ಇಸವಿಯ ಪೋಕೆಟ್ ಡ್ಯಾರಿಗಳು.

ವಕೀಲರಿಗೂ, ವಕೀಲರ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಅವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು.

ನೋಟು ಬೂಕು ಸ್ಯಾಜು ಕ್ರಯ ರೂ. ೦—೮—೦

ಸಣ್ಣ ಸ್ಯಾಜು ಕ್ರಯ ರೂ. ೦—೪—೦

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಷನ್ ದೊರಕುವದು.

ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಪ್ರೆಸ್,
ಮಂಗಳೂರು ದ. ಕ.

ಲೆಕ್ಕದ ಪುಸ್ತಕಗಳನ್ನು ತರಿಸಕೊಳ್ಳುವಾಗ ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ.)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಶಾನೆಗಳಿದ್ದು ಗೆರೆಗಳುಳ್ಳವುಗಳು.

3″ × 8¼″, 3″ × 5¼″, 8¼″ × 6½″, 6½″ × 4″ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ಗದಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೆಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ.

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯವಿಟ್ಟು ಬರಕೊಳ್ಳಿ. ಮೆನೇಜರ್,
ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಶಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:— ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಮಂಗಳೂರು.

Printed & published by V. S. Kamath, at the Mangalore Trading Association's Sharada Press, Mangalore.

Registered No M. 498.

ಸ್ವದೇಶಾಭಿಮಾನಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರ್ಷ ೧ಕ್ಕೆ ರೂ. 1-4-0. ಟಪ್ಪಾಲು ಹಾಸಲು ಸೇರಿ ರೂ. 2-1-0.

ಪುಸ್ತಕ 4. ಮಂಗಳೂರು, ತಾರೀಕು 9ನೇ ಶುಕ್ರವಾರ ದಶಂಬರ 1910. ಸಂಚಿಕೆ 49

Amrutanjan Depot Fort Bombay.

ಅಮೃತಾಂಜನ

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರದ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು. ಬಾಟ್ಲಿ ೧ರ ಕಿಮ್ಮತು 8 ಆಣೆ.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲ ಒಂದರ ಕಿಮ್ಮತು ರೂ. 1.

ಖಜ್ಜಿ ಮುಲಾಮು.

ಬಾಟ್ಲ ಒಂದರ ಕಿಮ್ಮತು 3 ಆಣೆ.

ಗಜಕರ್ಣದ ಮುಲಾಮು.

ಕಿಮ್ಮತು ಅರು ಆಣೆ. ಈ ನಮೂನೆ ಡಬ್ಬಿ.

SAFE EFFICACIOUS SURE WILLIAM & Co BOMBAY PILLS OINTMENTS POWDERS

ಕಿಮ್ಮತು ಅರು ಆಣೆ. ಈ ನಮೂನೆ ಡಬ್ಬಿ.

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ. ೧೨ ಡಬ್ಬಿ ರೂ. 4.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮಿಯಿನ ಕೋಕೊ, ಲೆಸಿತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೩೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ. 1.

ಸುಂದರಿ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲ ಒಂದರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆ.

ಬಾಟ್ಲ ಒಂದರ ಕಿಮ್ಮತು 8 ಆಣೆ.

ವಿಳಾಸ:—ಅಮೃತಾಂಜನ ಡಿಪೊ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ", ಮುಂಬಯಿ.

"ಚಮತ್ಕಾರ ಚಿಂತಾಮಣಿ"

ಶಬ್ದ ಚಮತ್ಕಾರ ಅರ್ಥ ಚಮತ್ಕೃತಿಗಳಿಂದೊಡಗೂಡಿ ಮೃದುಮಧುರ ಶೈಲಿಯಿಂದ ಸಹಿತವಾಗಿ, ಧರ್ಮನೀತಿ ಜ್ಞಾನಗಳನ್ನೂ ವಿಶದಪಡಿಸುತ್ತಿರುವ ರಸಭರಿತವಾದ ಈ ಕಥೆಯನ್ನು ಓದತಕ್ಕವರು ರಾಮಾಯಣದಲ್ಲಿನ ಹೆಸರುಗಳನ್ನು ಮಾತ್ರ ಜ್ಞಾಪಿಸಿಕೊಂಡು ಇದರಲ್ಲಿ ಹೊಂದಿಸಿಕೊಂಡರೆ ಮುಂದೆ ಇದರಲ್ಲಿನ ಸವಿಯು ಬೇಗನೆ ಗೊತ್ತಾಗುತ್ತದೆ. ಕ್ರಯ ರೂ. 0—10—0.

"ವಿದ್ಯಾನಂದ' ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ತಿ ಪ್ರಿಂಟಾಗಿ ಸಿದ್ಧವಾಗಿದೆ. ಬೆಲೆ 1—0—0.

ಮುಕುಂದಮಾಲಾ ಸ್ತೋತ್ರ.

ಹೆಚ್ಚು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯವಾರ್ಥ, ತಾತ್ಪರ್ಯ ಸಹಾ ಇರುತ್ತದೆ. ಬೆಲೆ 0—4—0.

ವಿಳಾಸ:- ಮ್ಯಾನೇಜರ್,

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ.

೧೯೧೧ನೇ ದಿ "ಮಾಡಲ್" ಪಾಕೆಟ್ ಡೈರಿ.

ವಿವರಣೆ.

ನಂ. 1. ಪಂಚಾಂಗಸಹಿತವಾದ ಚಿಕ್ಕ ಸೈಜ್ ಡೈರಿ $3\frac{1}{2}$ ಅಂಗುಲ, ಅಗಲ $4\frac{1}{4}$ ಉದ್ದವಿರುವ 540 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 4ಆಣೆ.

ನಂ. 2. ಡಿಟೊ ಮೇಲ್ಕಂಡ ಚಿಕ್ಕ ಸೈಜ್ ಪ್ಲಾಪ್ ಬೈಂಡು ಮಾಡಿರುವುದು. ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಸ್ಟಾಂಪು ವಗೈರೆ ಇಡುವುದಕ್ಕೆ ಚೀಲವಿದೆ. ಮೇಲಗಡೆ ಮುಚ್ಚುವದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್ಸಲ್ ಇಟ್ಟಿದೆ. ಇದರ ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 3. ಪಂಚಾಂಗಸಹಿತವಾದ ದೊಡ್ಡ ಸೈಜ್ ಡೈರಿ $4\frac{1}{4}$ ಅಂಗುಲ ಅಗಲ 7 ಅಂಗುಲ ಉದ್ದವಿರುವ 490 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 4. ಡಿಟೊ ಮೇಲ್ಕಂಡ ದೊಡ್ಡ ಸೈಜ್. ಪ್ಲಾಪ್ ಬೈಂಡು ಮಾಡಿರುವದು ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಕಾರ್ಡು, ಕವರು, ಸ್ಟಾಂಪು ವಗೈರೆ ಇಡುವುದಕ್ಕೆ ಚೀಲ ಇರುತ್ತದೆ. ಮೇಲ್ಗಡೆ ಮುಚ್ಚುವುದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್ಸಲ್ ಇಟ್ಟಿದೆ. ಕ್ರಯ ಪ್ರತಿ 1ಕ್ಕೆ 8 ಆಣೆ.

ನಂ. 5. ಆಫೀಸರ್ಸ್ ಹ್ಯಾಂಡ್ ಡೈರಿ 1—0—0.

ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಳುವವರಿಗೆ ಇದು ಸಕಾಲವಾಗಿದೆ.

ಕೂಡಲೇ ಬರೆದು ತರಿಸಿಕೊಳ್ಳಿರಿ

N. B:—1. ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ತರಿಸಿಕೊಂಡರೆ 1 ಡೈರಿಯನ್ನು ಬಹುಮಾನವಾಗಿ ಕೊಡುತ್ತೇವೆ. 2. ವಿ.ಪಿ. ಮೂಲಕ ತರಿಸಿಕೊಳ್ಳುವವರು ಪೋಸ್ಟು ಚಾರ್ಜು ಮತ್ತು ವಿ.ಪಿ. ಕಮಿಶನ್ ಸಹ ಬೇರೆ ಕೊಡಬೇಕು. 3. ಹೆಚ್ಚು ವಿಷಯ ತಿಳಿಯಲಪೇಕ್ಷಿಸುವವರು ರಿಪ್ಲೈ ಕಾರ್ಡನ್ನಾಗಲಿ ಅರ್ಧಾಣೆ ಪೋಸ್ಟು ಲೇಬಲ್ ಆಗಲಿ ಮುಂಗಡ ಕಳುಹಿಸಬೇಕು. 4. ಎಷ್ಟು ಜಾಸ್ತಿ ಪ್ರತಿಗಳನ್ನು ತರಿಸಿಕೊಳ್ಳುವರೋ ಅಷ್ಟು ಪೋಸ್ಟು ಚಾರ್ಜು ಕಮ್ಮಿ ಆಗುವದು. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಆಫೀಸರ್ಸ್ ಪ್ಯಾನಿಸೀ ಹ್ಯಾಂಡ್ ಡೈರಿ ಎಂಬುವದು ಹಸನಾದ ಕಾಗದದಿಂದಲೂ ಮತ್ತು ಒಳ್ಳೇ ಕ್ಯಾಲಿಕ್‌ನಿಂದಲೂ ಸಹಾ ತಯಾರುಮಾಡಿರುತ್ತದೆ.

ಮೆತ್ತೆಗಳು, ಮತ್ತು ಮೇಜಿನ ಚೌಕಗಳು, ವಗೈರೆಯವುಗಳ ಮೇಲೆ ಚಿತ್ರವಿಚಿತ್ರವಾದ ಕಸೂತಿ ಕೆಲಸವನ್ನು ಮಾಡಲು ಅನುಕೂಲವಾದ "ಕೈ ಮೆಷಿನ್"ಗಳು, ನಮೂನೆಗಳು ಮತ್ತು ಇದಕ್ಕೆ ಅನುಕೂಲವಾದ ರೇಶ್ಮೆ ಮತ್ತು ಉಲನ್‌ದಾರಗಳು, ಸೂಜಿಗಳು, ಕತ್ತರಿಗಳು, ಚೌಕಟ್ಟುಗಳು ವಗೈರೆ ವಿಶಿಷ್ಟ ಸಾಮಾನುಗಳು, ಸೈಜುವಾರಿ ಕಸೂತಿ ಕಾರ್ಡುಗಳು ಕಲ್ಕತ್ತೆಯ ಕ್ಯಾಟಲಾಗ್ ಕ್ರಯಕ್ಕೆ ಇಲ್ಲಿ ದೊರೆಯುತ್ತವೆ.

ಎಲ್. ಎ. ಫೋರುವಾಲ್ ಕಂಪೆನಿ.

ಬೆಂಗಳೂರು ಸಿಟಿ.

ವಿಕ್ರಯಕ್ಕೆ ಸಿದ್ಧವಾಗಿರುವುದು

ಶ್ರೀ ಚಿಕ್ಕುಪಾಧ್ಯಾಯರಿಂದ

ವಿರಚಿತವಾದ

"ಶ್ರೀ ಶುಕಸಪ್ತತಿ"

(ಡಮ್ಮಿ ಅಷ್ಟಪುಟ — ಒಟ್ಟು ಪುಟಗಳು ೫೬೦).

ಈ ಗ್ರಂಥವು ಈಗ ಮೂರನೇ ಸಲ ಮುದ್ರಣದಲ್ಲಿ ಪೂರ್ವ ಪ್ರತಿಯಲ್ಲಿದ್ದಂತೆ ಯಾವ ಲೋಪವೂ ಇಲ್ಲದೆ ನೂತನವಾಗಿ ಪರಿಷ್ಕರಿಸಿ ಪ್ರಕಟಿಸಲ್ಪಟ್ಟಿದೆ.

ಮೇಲು ಪ್ರತಿ ೧ಕ್ಕೆ ಕ್ರಯ ರೂ. ೨—೦—೦

ಉತ್ತಮ ಪ್ರತಿ ,, ರೂ. ೩—೦—೦

ಮುಖ್ಯವಾಗಿ ನಮ್ಮ ದೇಶದಲ್ಲಿ ಕನ್ನಡ ಭಾಷೆಯನ್ನು ಬಲ್ಲ ಪ್ರತಿಯೊಬ್ಬ ಗೃಹಸ್ಥರ ಮನೆಯಲ್ಲಿಯೂ, ಗೃಹಪತಿಗಳು ತಮ್ಮ ಕುಟುಂಬದಲ್ಲಿ ಹೆಂಗಸರು, ಗಂಡಸರು, ಪ್ರಾಯಸ್ಥರು, ಮುದುಕರು, ಹುಡುಗರು, ಹುಡುಗಿಯರು ವೇದಸಮ್ಮತವಾದ ಮತಾಚಾರಗಳನ್ನೂ, ಧರ್ಮಗಳನ್ನೂ, ಸಂಪ್ರದಾಯಗಳನ್ನೂ, ತಿಳಿದುಕೊಂಡು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಸಂತೋಷವನ್ನು ಅನುಭವಿಸುತ್ತಾ ಆಸ್ತಿಕರಾಗಿರಬೇಕೆಂದು ಅಪೇಕ್ಷೆ ಇದ್ದರೆ ಈ ಪುಸ್ತಕವನ್ನು ಅವಶ್ಯಕವಾಗಿ ತೆಗದುಕೊಡಬೇಕು.

ಭಾಷ್ಯಂ. ರಾಮಾಚಾರ್ಯ,

೪೫. ಆಸ್ಪತ್ರಿ ರೋಡ್,

ಬೆಂಗಳೂರು ಶಹರು.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಶಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡುಬಲ್ಲೆನು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ; ಸರ್ವರೂ ಇದನ್ನು ಉಪಯೋಗಿಸ ಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು. ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಡುತ್ತದೆ. ಇದುಮನೋಹರವಾಧವುಳಗ್ಗಂಕೂ ಸುದಾವದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೇನ್, ಎಲ್. ಎಮ್. ಎಸ್.,

216 ಕಾರನ್‌ವಾಲಿಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಫೋರುವಾಲ್ ಎಂಡ್ ಕೊ,

ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು:—ಮ। ರಾ। ರಾ। ಸಿ. ಆರ್. ಕಾಮತರು,

ಉಲನ್ ಮಾರ್ಟ್, ಮಂಗಳೂರು

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 9ನೇ ದಶಂಬರ 1910.

ಕಳೆದ ತಿಂಗಳಲ್ಲಿ ಕೂಡಿದ ಮದ್ರಾಸು ನ್ಯಾಯನಿರ್ಮಾಣ ಸಭೆಯು.

ಕಳೆದ ನವಂಬರ ತಿಂಗಳ ತಾ ೨೫ರಲ್ಲಿ ಗವರ್ನರ ದೊರೆಗಳವರ ಅಧ್ಯಕ್ಷತೆಯಲ್ಲಿ ಮದ್ರಾಸು ನ್ಯಾಯನಿರ್ಮಾಣ ಸಭೆಯು ಕೂಡಿತು. ಸಭೆಯಲ್ಲಿ ಇಡೀ ಸಂಸ್ಥಾನದ ವ ಆಯಾ ಪ್ರಾಂತ್ಯಗಳ ಪರವಾಗಿ ಪ್ರಜಾಕಡೆಯ ಮೆಂಬರರುಗಳಿಂದ ಹೆಚ್ಚು ಕಡಿಮೆ ೧೭೦ ಪ್ರಶ್ನೆಗಳು ಕೇಳಲ್ಪಟ್ಟವಲ್ಲದೆ ಹಲವು ನಿರ್ಣಯಗಳನ್ನು ಸಭೆಯಲ್ಲಿ ಮಂಜೂರು ಮಾಡಲ್ಪಡುವರೆ ಸಹ ಪ್ರಯತ್ನ ನಡಿಯಿತು. ಮೇಲಿನ ಪ್ರಶ್ನೆಗಳ ಉತ್ತರಗಳೂ ಸಭೆಯ ಮುಂದೆ ತಂದ ನಿರ್ಣಯಗಳ ಫಲವೂ ಬಹಳ ಮಟ್ಟಿಗೆ ಪ್ರಜೆಗಳನ್ನು ನಿರಾಶೆಗೆ ಗುರಿಪಡಿಸಿರುವುದಲ್ಲದೆ ಪ್ರಜೆಗಳಿಗೋಸ್ಕರ ಸಾಹಸಪಡುತ್ತಿರುವ ಮುಂದಾಳುಗಳಲ್ಲಿ ಕಾರ್ಯಾಸಕ್ತಿಯನ್ನು ತಗ್ಗಿಸುವಂತಿವೆ. ಆದರೆ ಈ ಪ್ರಶ್ನೆಗಳ ವ ನಿರ್ಣಯಗಳ ಫಲದಿಂದ ಆಯಾ ವಿಷಯಗಳಲ್ಲಿ ಸರಕಾರದವರ ಭಾವವು ತೋರಿಬರುವುದರಿಂದ ನಮ್ಮ ಜಿಲ್ಲೆಯ ಪರವಾಗಿಯೂ ಇಡೀ ಸಂಸ್ಥಾನದ ಪರವಾಗಿಯೂ ಇರುವ ಕೆಲವು ವಿಷಯಗಳನ್ನು ಪರಿಶೀಲಿಸಿರುತ್ತೇವೆ.

ಹೊಸ ಸೆಟ್ಲ್‌ಮೆಂಟ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಜಮೀನುಗಳ ಮೇಲೆ ಹೆಚ್ಚಿಸೋಣಾದ ತೀರ್ವೆಯನ್ನು ಧನಿ ಯಾ ವಕ್ಕಲು ಕೊಡಬೇಕೆಂಬುವುದನ್ನು ನಿರ್ಣಯಿಸುವರೆ ಬೇಕಾದ ಕಾನೂನು ಏರ್ಪಡಿಸೋಣಾಗುವುದೋ ಎಂಬ ಪ್ರಶ್ನೆಗೆ ಸರಕಾರ ಕಡೆಯಿಂದ ಈ ಬಗ್ಯೆ ಕಾನೂನು ಅಗತ್ಯವಿಲ್ಲವೆಂಬ ಉತ್ತರವು ದೊರಿಯೋಣಾಯಿತು. ಬಹುಮಾನಪಟ್ಟ ಮದ್ರಾಸು ಹ್ಯಾ ಕೋರ್ಟ ಜಡ್ಜರವರು ಈ ವಿಷಯದಲ್ಲಿ ಕೊಟ್ಟ ತೀರ್ಮಾನದಲ್ಲಿ ಮೂಲಗೇಣಿ ಆಸ್ತಿಗಳಲ್ಲಿ ಹೆಚ್ಚಿಸಿದ ತೀರ್ವೆಯನ್ನು ಧನಿಯು ಕೊಡಬೇಕಾಗಿ ಬಂದುದ್ದರಿಂದ ಈ ಸಂಕಷ್ಟದಿಂದ ಆಸ್ತಿಯ ಧನಿಯನ್ನು ರಕ್ಷಿಸುವರೆ ತಕ್ಕದಾದ ಕಾನೂನು ಮಾಡುವುದು ಅಗತ್ಯವೆಂತ ಸೂಚಿಸಿರುವರಾದರೂ ಸರಕಾರದವರಿಗೆ ಇಂಥಾ ಸೂಚನೆಯ ಯುಕ್ತತೆಯು ವ್ಯಕ್ತವಾಗದಿರುವುದನ್ನು ನೋಡಿ ತುಂಬಾ ವ್ಯಸನಪಡಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿರುವ ಪೋಲೀಸು ಸ್ಟೇಶನುಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಶ್ನೆಯು ಸಹಾ ಕೇಳಲ್ಪಟ್ಟಿತೆಂತ ತೋರಿಬರುವುದು. ಸರಕಾರದವರಿಗೆ ಸ್ಟೇಶನುಗಳನ್ನು ಹೆಚ್ಚಿಸುವ ಅವಶ್ಯಕತೆಯು ಪ್ರಕೃತ ತೋರಿಬರುವುದಿಲ್ಲವಾದರೂ ಆಯಾ ಪೊಲೀಸು ಠಾಣ್ಯಗಳ ಚಕಬಂದಿಯನ್ನು ಜನರಿಗೆ ಅನುಕೂಲವಾದ ರೀತಿಯಲ್ಲಿ ಮಾರ್ಪಡಿಸುವುದು ಅತ್ಯಗತ್ಯವಾಗಿರುವುದು. ಪ್ರಕೃತ ಆಯಾ ಚಕಬಂದಿಗಳನ್ನು ಏರ್ಪಡಿಸಿದುಕ್ರಮದಿಂದ ಪೋಲೀಸು ಉದ್ಯೋಗಸ್ಥರಿಗೆ ಕಳವು ಮೊದಲಾದವುಗಳು ನಡದ—ಸ್ಥಳಗಳು ದೂರವಿರುವ ಕಾರಣ ಅಂಥಾ—ಸ್ಥಳಗಳಿಗೆ ಹೋಗಿ ಇವುಗಳನ್ನು ಪತ್ತೇ ಮಾಡುವುದು ದುರ್ಲಭವಾಗುವುದು. ಇದರಿಂದ ಕೆಲವು ಅಪರಾಧಗಳು ಪತ್ತೆಯಾಗದೆ ಹೋಗುವುದೂ ಸಹಾ ಉಂಟು. ಉಪ್ಪಿನಂಗಡಿ ತಾಲೂಕಿನಲ್ಲಿ ಕಾಡು ಮೃಗಗಳಿಂದ ಪೈರಿಗುಂಟಾಗುವ ನಷ್ಟದ ವಿಷಯ ವಿಚಾರಣೆಯು ಅಗತ್ಯವಿಲ್ಲವೆಂದೂ ಅಂಥಾ ನಷ್ಟವುಂಟಾದ್ದಲ್ಲಿ ತೀರ್ವೆ ಮಾಫಿ ಬಗ್ಯೆ ಮೊದಲಾಗಿ ಕಲೆಕ್ಟರರುಗಳಿಗೆ ಅರ್ಜಿಮಾಡಬೇಕೆಂದೂ ಅಪ್ಪಣೆ ಕೊಟ್ಟಿರುತ್ತಾರೆ. ಆನೆಗಳ ಸಿಖಾರಿಯನ್ನು ಉಪ್ಪಿನಂಗಡಿ ತಾಲೂಕಿನಲ್ಲಿ ಮಾಡಿಸುವುದು ಅಗತ್ಯವಲ್ಲವೆಂತ ಸರಕಾರದವರ ಅಭಿಪ್ರಾಯ. ಭತ್ತದ ಸಸಿಗಳಿಗೆ ಹಿಡಿಯುವ ಬಂಬುಚ್ಚು ಹುಳುವು ದಕ್ಷಿಣ ಕನ್ನಡಕ್ಕೆ ವಿಶೇಷವಾದದ್ದಲ್ಲವೆಂತಲೂ ಸುರಕ್ಷಿತ ಕಾಡುಗಳ ಸಾಮೀಪ್ಯವು ಈ ಹುಳುಗಳ ಬೆಳವಣಿಕೆಗೆ ಆಸ್ಪದಕೊಡುವುದಿಲ್ಲವೆಂತಲೂ ಅಜ್ಞಾಪಿಸಿರುತ್ತಾರೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾಡುಹಿಂಸ್ರಜಂತುಗಳಿಂದ ಮನುಷ್ಯರಿಗೂ ಜಾನುವಾರುಗಳಿಗೂ ಉಂಟಾಗುತ್ತಿರುವ ಅಪಾಯಗಳನ್ನು ಕಡಿಮೆ ಮಾಡುವರೆ ಯಾ ಅವುಗಳನ್ನು ಹೋಗಲಾಡಿಸುವರೆ ತಕ್ಕ ಏರ್ಪಾಡನ್ನು ಸರಕಾರದವರು ಮಾಡುವರಾಗಿ ತಿಳಿಸಿರುವರು. ಈ ಏರ್ಪಾಡುಗಳು ಯಾವವಾಗಿರುವುದೆಂಬುದನ್ನು ನಿರೀಕ್ಷಿಸುತ್ತಲಿದ್ದೇವೆ.

ಇಡೀ ಮದ್ರಾಸು ಸಂಸ್ಥಾನದ ಪರವಾಗಿ ದೇವಸ್ಥಾನಗಳ ಕಮ್ಮಿಟಿ ಮೆಂಬರರನ್ನು ಆರಿಸುವ ಕ್ರಮದಲ್ಲಿ ಕೆಲವು ಮಾರ್ಪಾಟಗಳನ್ನು ಮಾಡುವರೆ ಒಂದು ಕಮಿಟಿಯನ್ನು ಏರ್ಪಡಿಸುವುದು ಉಪಯುಕ್ತವೆಂತ ಸೂಚಿಸೋಣಾಯಿತು. ಈ ಕ್ರಮಗಳಲ್ಲಿ ಮಾರ್ಪಾಟಗಳನ್ನು ಮಾಡುವ ಅವಶ್ಯಕತೆಯು ಸರಕಾರದವರಿಗೆ ತೋರಿಬರಲಿಲ್ಲ. ಕಮಿಟಿ ಮೆಂಬರರನ್ನು ಆರಿಸಿದ ಮೇಲೆ ಜೀವಾವಧಿ ತನಕ ಇವರ ಮೆಂಬರುತನದವಧಿಯು ಇರುತ್ತದೆ. ಕಮಿಟಿ ಮೆಂಬರರು ಅಥವಾ ಇವರ ಕೈಕೆಳಗಿರುವ ಮೊಕ್ತೇಸರರು ತಪ್ಪಿ ನಡದರೆ ಸಮರ್ಪಕವಾದ ರೀತಿಯಲ್ಲಿ ಇವರನ್ನು ವಿಚಾರಿಸುವುದು ಪ್ರಕೃತವಿರುವ ಕಾನೂನಿನ ಪ್ರಕಾರ ಅಸಾಧ್ಯವಾಗಿರುವುದರಿಂದ ಈ ಕುಂದುಕವನ್ನು ಹೋಗಗೋಳಿಸುವರೆ ಸರಕಾರದವರನ್ನು ವಿಜ್ಞಾಪಿಸಿಕೊಂಡಿತ್ತು. ದೇವಸ್ಥಾನ ಮೊದಲಾದ ಮತಸಂಮ್ಮಂಧವಾದ ಸಂಸ್ಥೆಗಳಲ್ಲಿ ಪ್ರಕೃತ ನಡಿಯುವ ದ್ರವ್ಯದುರುಪಯೋಗ ಮೊದಲಾದವುಗಳನ್ನು ನಿಲ್ಲಿಸಿ ಅವುಗಳ ಆಡಳಿತೆಯು ಸಮಗ್ರವಾದ ರೀತಿಯಲ್ಲಿ ನಡಿಯುವಂತೆ ಆಸ್ಪದ ಕೊಡುವ ಕಾನೂನು ಮಸೂದೆಯನ್ನು ಸರ್. ಏಸ್. ಸುಬ್ರಮಣ್ಯಯ್ಯರರವರು ಅಧ್ಯಕ್ಷರಾಗಿರುವ ಧರ್ಮರಕ್ಷಣ ಸಭೆಯವರು ಸರಕಾರದವರ ಮುಂದೆ ನ್ಯಾಯವಿಧಾಯಕ ಸಭೆಯಲ್ಲಿ ತರಬೇಕೆಂದಿರುವರು. ಕಮಿಟಿ ಮೆಂಬರರ ಆರಿಸುವಿಕೆಯಲ್ಲಿ ಮಾರ್ಪಾಟವು ಅಗತ್ಯವಿಲ್ಲವೆಂತ ತೋರಿದವರು ಈ ಹೊಸ ಕಾನೂನು ಮಸೂದೆಯನ್ನು ಯಾವ ರೀತಿ ಸ್ವೀಕರಿಸುವರೋ?

ತೀರ್ವೆ ಮಾಫಿಯಾಗತಕ್ಕ ಅಥವಾ ಕೊಡೋಣಾದ ತೀರ್ವೆಯನ್ನು ಬೆಳೆ ಇಲ್ಲದ ಕಾರಣಗಳಿಂದ ತಿರುಗಿ ಕೊಡೋಣಾಗುವ ಸಂಗತಿಗಳಲ್ಲಿ ಸಮ್ಮಂಧಪಟ್ಟ ರೈತರು ಈ ಬಗ್ಯೆ ಮೊದಲಾಗಿಯೇ ಸರಕಾರಕ್ಕೆ ಮನವಿ ಮಾಡಕೊಳ್ಳಬೇಕೆನ್ನುವ ಕ್ರಮವೊಂದಿರುವುದು. ಈ ಕ್ರಮವನ್ನನುಸರಿಸಿ ರೈತನಿಗೆ ನಿವೃತ್ತಿ ದೊರಕುವುದು ಬಹಳ ಶ್ರಮಸಾಧ್ಯವಾದ್ದರಿಂದ ರೆವಿನ್ಯು ಅಧಿಕಾರಿಗಳು ತೃಪ್ತಿ ಹೊಂದಿದ್ದಲ್ಲಿ ಈ ಮನವಿ ವಿನಹಾ ರೈತನಿಗೆ ನಿವೃತ್ತಿ ಕೊಡೋಣಾಗ ಬಹುದೆಂಬ ನಿರ್ಣಯವು ಸಭೆಯ ಮುಂದಿಡೋಣಾಗಿತ್ತು. ಆದರೆ ಇದು ಸಭೆಯವರಿಂದ ಸ್ವೀಕರಿಸೋಣಾಗಲಿಲ್ಲ. ಬೆಳೆ ನಷ್ಟ ಹೊಂದಿದವರಿಗೆ ನಿವೃತ್ತಿಯು ದೊರಿಯಬೇಕೆಂಬುದು ಸರಕಾರದವರ ಮನೋಗತವಾಗಿರುತ್ತಾ ರೈತರ ಅನುಕೂಲತೆ ಬಗ್ಯೆ ಈ ಏರ್ಪಾಡನ್ನು ಮಾಡಿದಲ್ಲಿ ಸರಕಾರಕ್ಕೆ ನಷ್ಟ ಇದ್ದಿಲ್ಲ ಮತ್ತು ನಿರಕ್ಷರ ಕುಕ್ಷಿಗಳಾದ ರೈತರು ಸರಕಾರಕ್ಕೆ ಈ ವಿಷಯದಲ್ಲಿ ಬಹಳ ಕೃತಜ್ಞರಾಗುವದಿತ್ತು. ನಿವೃತ್ತಿಯು ಅಕ್ಷರ ರಹಿತರಾದ ರೈತರಿಗೆ ಅಲ್ಪ ವೇತನವುಳ್ಳ ಗ್ರಾಮ ನೌಕರರ ಮುಖಾಂತರ ಅನುಕೂಲವಾಗಿ ದೊರಿಯುವಂತೆ ಮೊದಲಾಗಿ ಮನವಿಯು ಅಗತ್ಯವೆಂತ ಎದುರು ಕಡೆಯವರು ವಾದಿಸಿದರೂ ಗ್ರಾಮ ನೌಕರರ ಕೈಗಳಿಂದ ನಿವೃತ್ತಿಯು ಸರಿಯಾಗಿ ಪಾವತಿಯಾಗದಿರುವ ಸಂಭವಗಳು ಪ್ರಕೃತ ಬಹಳ ಕಡಿಮೆಯಾಗಿರುವವು. ಹಲವು ಜನ ಯಜಮಾನರುಗಳ ಕೈಕೆಳಗೆ ಕೆಲಸ ಗೈಯ್ಯುವ ಗ್ರಾಮನೌಕರನು ಈಗೀಗೆ ಈ ವಿಷಯಗಳಲ್ಲಿ ಬಹಳ ಜಾಗರೂಕನಾಗಿರುವನು.

ಮದ್ರಾಸಿನಲ್ಲಿರುವ ಸರಕಾರದ ಮುಖ್ಯ ಆಫೀಸನ್ನು ಬಹಳ ಸಮಯದ ವರೆಗೆ ಪರ್ವತ ಪ್ರದೇಶಗಳಾದ ಉದಕಮಂಡಲ ಮೊದಲಾದ ಮೊಕ್ಕಾಮುಗಳಲ್ಲಿ ಮಾಡಿದ್ದರಿಂದ ಸರಕಾರದವರಿಗೆ ಪ್ರಜಾಸಂಪರ್ಕವು ಕಡಿಮೆಯಾಗುವುದಲ್ಲದೆ ಈ ಬಗ್ಯೆ ಸರಕಾರಕ್ಕೆ ವೃಥಾ ಹೆಚ್ಚಾದ ಖರ್ಚು ಸಹಾ ಆಗುವುದರಿಂದ ಮೂರು ತಿಂಗಳುಗಳಿಗಿಂತ ಹೆಚ್ಚು ಸಮಯಕ್ಕೆ ಸರಕಾರದವರು ಇಂತಹ ಸ್ಥಳಗಳಲ್ಲಿರುವುದನುಚಿತವೆಂಬ ನಿರ್ಣಯವು ಸಭೆಯ ಮುಂದೆ ತರೋಣಾಯಿತು. ಇದು ಸಹ ಸಭೆಯಲ್ಲಿ ಮಂಜೂರಾಗಲಿಲ್ಲ.

ಸುರಕ್ಷಿತ ಕಾಡುಗಳ ನಿಬಂಧನೆಗಳಿಂದ ಪ್ರಜೆಗಳಿಗೆ ಉಂಟಾಗುವ ಆಪತ್ತುಗಳನ್ನು ಪರಿಶೋಧಿಸಿ ಸರಕಾರ ಆಡಳಿತೆಗೆ ಕುಂದುಂಟಾಗದಂತೆಯೂ ಆಪತ್ತುಗಳಿಗೆ ತಕ್ಕ ನಿವಾರಣೆ ದೊರಕುವಂತೆಯೂ ಬೇಕಾದ ಮಾರ್ಪಾಟಗಳನ್ನು ಸೂಚಿಸಲಿಕ್ಕೆ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ವಿಜ್ಞಾಪನೆ ಇತ್ತು; ಆದರೆ ಇದೂ ಸಹ ಸರಕಾರದ ಕಡೆಯಿಂದ ಸಭೆಯಲ್ಲಿ ಮನ್ನಿಸಲ್ಪಡಲಿಲ್ಲ.

ಇತರ ಪ್ರಶ್ನೋತ್ತರಗಳ ವಿಷಯ ಇನ್ನೊಂದು ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ಘನಹೊಂದಿದ ಬಿಷೊಪ್ ಫಾದರ್ ಪಿರೆನಿ ಪ್ರಭುಗಳವರ ದೀಕ್ಷಾ ಉತ್ಸವವು.

ನಾವು ಈ ಮೊದಲು ಪ್ರಕಟಿಸಿರುವಂತೆ ಈ ಉತ್ಸವವು ಕಳೆದ ಆದಿತ್ಯವಾರ ದಿನ ಜರಗಿತು. ಇಂಥಾ ಉತ್ಸವವು ಮಂಗಳೂರಲ್ಲಿ ಜರಗಿದ್ದು ಇದು ಎರಡನೇ ಸರ್ತಿಯಾಗಿರುತ್ತದೆ. ಬಿಷೋಪ್ ಪಗಾನಿಯವರ ಪಟ್ಟವು ಇಲ್ಲಿ ಮೊದಲನೇದು. ಸರ್ವರ ಅಭಿಮತವಿದ್ದಂತೆ ಫಾದರ್ ಪಿರೆನಿಗಳವರನ್ನು ಈ ಪದವಿಗೆ ಆರಿಸಿದ್ದಕ್ಕೆ ಸಂತೋಷಪಡುತ್ತೇವೆ. ಪಿರೆನಿ ಪ್ರಭುಗಳಿಗೆ ಈಗ ಪ್ರಾಯವು 43 ವರುಷವಾಗಿರುತ್ತದೆ. ಅಂದರೆ

ಈ ವಯಸ್ಸಿನಲ್ಲಿ ಈ ಪದವಿಗೆ ಇಲ್ಲಿ ಇವರ ಮೊದಲು ಯಾರೂ ಆರಿಸಲ್ಪಡಲಿಲ್ಲ. ಇದಕ್ಕಿಂತ ಹೆಚ್ಚು ಪ್ರಾಯಭೂತರಾದವರೇ ಬಿಶೋಪರಾಗಿ ನೇಮಿಸಲ್ಪಡುತ್ತಿದ್ದರು. ಸೆಂಟ್ ಅಲೋಸಿಯಸ್ ಕೋಲೇಜಿಗೆ ಇವರು ಪ್ರಥಮತಾ ಚರಿತ್ರ ಮತ್ತು 'ಫಿಸಿಯೊಲೊಜಿ' ಯಾ ಪ್ರಾಣಿಗುಣ ಶಾಸ್ತ್ರ ಪಂಡಿತರಾಗಿ ಬಂದು ತಮ್ಮ ಸಾಮರ್ಥ್ಯದಿಂದಲೂ, ವಿವೇಕದಿಂದಲೂ ಉದಾರಮತಿಯಿಂದಲೂ ಕೋಲೇಜಿನ ಪ್ರಿನ್ಸ್‌ಪಾಲ್ ಮತ್ತು ರೆಕ್ಟರ ಪದವಿಯನ್ನು ಪಡದರು. ಇವರ ಆಡಳಿತೆಯಲ್ಲಿ ಪಡದಷ್ಟು ಉನ್ನತಿಯನ್ನು ಕೋಲೇಜು ಇತರ ಯಾರ ಆಡಳಿತೆಯಲ್ಲಿಯೂ ಪಡಿಯಲಿಲ್ಲ. ಇವರ ಕಾಲದಲ್ಲಿ ಕೋಲೇಜಿನ ವಿದ್ಯಾರ್ಥಿಗಳ ಸಂಖ್ಯೆಯು ಒಂದು ಸಾವಿರಕ್ಕಿಂತ ಹೆಚ್ಚಾಯಿತು. ಸಾವಿರಾರು ರೂಪಾಯಿಗಳ ಖರ್ಚು ಮುಟ್ಟಿರುವ ಕಟ್ಟೋಣಗಳು ಕೋಲೇಜಿನ ಬಗ್ಗೆ ಕಟ್ಟಿಸಲ್ಪಟ್ಟವು. ಕೆಥೋಲಿಕ್ ಮತ್ತು ಇತರ ಜಾತಿಯ ಬಡ ವಿದ್ಯಾರ್ಥಿಗಳಿಗೆ ಸಂಬಳ ರಿಯಾಯತಿ ಮೊದಲಾದವು ದೊರಕಿ ವಿದ್ಯಾಭ್ಯಾಸವನ್ನು ಮಾಡಲು ಸಾಧ್ಯವಾಯಿತು. ಔದಾರ್ಯದಿಂದ ಕೋಲೇಜನ್ನು ನಡಿಸಿದ ಖ್ಯಾತಿಯು ಹಬ್ಬಿ ಘನಹೊಂದಿದ ಫಾದರ್ ಕೆವಿದಿನಿ ಪ್ರಭುಗಳು ಮೃತಪಟ್ಟೊಡನೆಯೇ ಫಾದರ್ ಪಿರೆನಿ ಪ್ರಭುಗಳನ್ನು ಬಿಶೋಪರನ್ನಾಗಿ ಆರಿಸುವ ಕಾಂಕ್ಷೆಯು ಈ ಖ್ಯಾತಿಯಿಂದ ಕೆಥೋಲಿಕರೆಲ್ಲರಲ್ಲಿಯೂ ಉಂಟಾಯಿತು. ಸುದೈವವಶಾತ್ ಈ ಕಾಂಕ್ಷೆಯು ನೆರವೇರಿತು.

ಆದಿತ್ಯವಾರ ದಿನ ಇಲ್ಲಿಯ ರೋಮಿಯ ಕ್ರೈಸ್ತರ ಹಿರೇ ದೇವಾಲಯವಾದ ಹೊಯಿಗೆಯಲ್ಲಿರುವ ದೇವಮಂದಿರದಲ್ಲಿ ಮುಂಬಯಿ ಆರ್ಚ ಬಿಶೋಪರವರು ಪಿರೇನಿ ಪ್ರಭುಗಳವರ ಬಿಶೋಪ ಪ್ರತಿಷ್ಠಾವ್ರತವನ್ನು ನೆರವೇರಿಸಿಕೊಟ್ಟರು. ಹೆಚ್ಚು ಕಡಿಮೆ ಎರಡು ಯಾ ಮೂರು ಸಾವಿರ ಜನರು ಈ ಸಂದರ್ಭದಲ್ಲಿ ಹಾಜರಿದ್ದರು. ದೀಕ್ಷೆಯು ತೀರಿದ ನಂತರ ಕೆಥೋಲಿಕ ವೈದಿಕರ ಪರವಾಗಿ ಅತ್ಯಂತ ಘನಹೊಂದಿದ ಪೇಜಾವರ ದೇವಾಲಯದ ಗುರುಗಳಾದ ಫಾದರ್ ಬೆಜಿಲ್ ಬರಾಟೊರವರು ಬಿನ್ನಹಪತ್ರವನ್ನು ನವೀನ ಬಿಶೊಪರಾದ ಫಾದರ್ ಪಿರೆನಿ ಪ್ರಭುಗಳಿಗೆ ಅರ್ಪಿಸಿದರು. ಬೆಳಿಗ್ಯೆ 11 ಘಂಟೆಗೆ ಆರ್ಚ ಬಿಶೋಪ ವ ಎರಡು ಜನ ಬಿಶೋಪರೊಡನೆ ಹೊಸ ಬಿಶೋಪರವರು ಕೋಲೇಜಿಗೆ ಚಿತ್ತೈಸಿದರು. 12 ಘಂಟೆಗೆ ಜಿಲ್ಲೆಯ ಎಲ್ಲಾ ವೈದಿಕಮಂಡಳಿಯೊಂದಿಗೆ ಔತಣವಾಗಿ 4 ಘಂಟೆಗೆ ಇವರೆಲ್ಲರ ಭಾವಚಿತ್ರವು ತೆಗಿಯಲ್ಪಟ್ಟಿತು. ಬಿಶೋಪರವರ ಬಹುಮಾನಾರ್ಥವಾಗಿ ಕೋಲೇಜಿನಲ್ಲಿ ಸೋಮವಾರ ದಿನ ಒಂದು ನಾಟಕವನ್ನು ಆಡಿ ತೋರಿಸಿದರು. ಈ ಸಂದರ್ಭದಲ್ಲಿ ಕೆಥೋಲಿಕ ಸಮುದಾಯದ ಪರವಾಗಿ ಗವರ್ನಮೆಂಟ್ ಪ್ಲೀಡರ್ ಮೆ| ಎ. ಜೆ. ಲೋಬರವರೂ, ಕೋಲೋಜು ವಿದ್ಯಾರ್ಥಿಗಳ ಪರವಾಗಿ ಬಿ. ಎ. ಕ್ಲಾಸಿನ ಮೆ| ಎಜಿಬಿಯಸ್. ರೊಡ್ರಿಬಿಯಸ್‌ರವರೂ ಬಿನ್ನಹ ಪತ್ರಗಳನ್ನು ಅರ್ಪಿಸಿದರು. ಕೊಲೇಜಿನಲ್ಲಾದ ನಾಟಕಕ್ಕೂ ಹೊಯಿಗೆ ದೇವಾಲಯದಲ್ಲಾದ ದೀಕ್ಷಾ ಉತ್ಸವಕ್ಕೂ ಜನರು ಹೆಚ್ಚಾಗಿ ಬರಲಿಲ್ಲವೆಂಬದಾಗಿ ನಾವು ತಿಳಿಯುತ್ತೇವೆ. ಟಿಕೇಟುಗಳ ಕ್ರಮವನ್ನು ಇಟ್ಟದ್ದೇ ಇದಕ್ಕೆ ಕಾರಣವೆಂತಲೂ ಪರಊರುಗಳಲ್ಲಿರುವವರು ಸ್ಥಳಸಂಕೋಚವಾಗಿ ತಮಗೆ ಟಿಕೇಟುಗಳು ದೊರಕುವುದಿಲ್ಲವಾದರೆ ತಾವು ಮಂಗಳೂರ ತನಕ ಹೋದ ಶ್ರಮವು ವ್ಯರ್ಥವಾದೀತೆಂಬ ಅನುಮಾನದಿಂದ ಹೆಚ್ಚು ಜನರು ಬಾರದಿರಲು ಕಾರಣವಾಯಿತೆಂಬದಾಗಿಯೂ ತಿಳಿಯುತ್ತೇವೆ. ಇಲ್ಲದಿದ್ದರೆ ಹೆಚ್ಚು ಕಡಿಮೆ ೮೦,೦೦೦ ಜನಸಂಖ್ಯೆಯುಳ್ಳ ರೋಮಿಯ ಕ್ರೈಸ್ತರಲ್ಲಿ ಬರಿಯ ಎರಡು ಯಾ ಮೂರು ಸಾವಿರ ಜನರು ಮಾತ್ರ ಈ ಅಪರೂಪ ಮಹಾ ದೊಡ್ಡ ಸಮಾರಂಭಕ್ಕೆ ಹಾಜರಾಗಲು ಕಾರಣವೇನು?

ನವೀನ ಬಿಶೋಪರಾದ ಪಿರೇನಿ ಪ್ರಭುಗಳು ಧೀರ್ಘಕಾಲ ಬಾಳಿ ತಮ್ಮ ಪಾಲನೆಯಲ್ಲಿರುವ ಸಮುದಾಯದವರ ಇಹಪರ ವೃದ್ಧಿಯನ್ನು ಸಾಧಿಸಲು ಸಮರ್ಥರಾಗಲೆಂದು ಬಯಸುತ್ತೇವೆ. ಫಾದರ್ ಪಿರೇನಿ ಪ್ರಭುಗಳ ಮುಂದಿರುವ ಕೆಲವು ಕೃತ್ಯವ್ಯಗಳ ವಿಷಯ ಇನ್ನೊಂದು ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ಮಹಾರಾಣಿ ಗೃಹಶೀಲೆ.

(ಕಳದ ಸಂಚಿಕೆಯಿಂದ ಮುಂದರಿಸದುದು)

ಬಿ. ಆನಂದ ರಾವ್ ಇವರಿಂದ.

೧೭.

ಮಾರನೇ ದಿನ ಪ್ರಭಾತದಲ್ಲಿ ಗೃಹಶೀಲಳು ಮುಕ್ತಪುರಕ್ಕೆ ಬಂದು ಮನೆಯ ಬಾಗಿಲಲ್ಲಿ ನಿಂತಿದ್ದ ತಂದೆಯ ಅಡಿಗೆರಗಿದಳು.

ಗೃಹಶೀಲಾ ಪರಿತ್ಯಾಗದ ವೃತ್ತಾಂತವನ್ನು ಕೇಳಿದಕ್ಷಣವೇ ವೃದ್ಧ ರಾಮದಾಸನು "ಹಾ! ಜಾತೆ! ನಿನ್ನ ವಿನಾಶವನ್ನು ನಾನು ಹೇಗೆ ನೋಡಲಿ! ಹರ ಹರಾ!" ಎಂದು ರೋದನ ಮಾಡಿ ಬುಡ ಕಳಚಿದ ಮರದ ಹಾಗೆ ಧರಣಿಯ ಮೇಲೆ ಮೂರ್ಛಿತನಾಗಿ ಬಿದ್ದನು. ಗೃಹಶೀಲಳ ಶೈತ್ಯೋಪಚಾರದಿಂದ ಆತನಿಗೆ ತುಸ ಹೊತ್ತಿನಲ್ಲೇ ಚೈತನ್ಯ ಉಂಟಾಯಿತು. ನಾಗ ಕಳುಹಿಸಲಿಕ್ಕೆ ಹೋದ ಕಿಂಕರರು ಕಣ್ಣೀರನ್ನು ಸುರಿಸುತ್ತ ರಾಮದಾಸನನ್ನೆತ್ತಿಕೊಂಡು ಮನೆಯೊಳಗೆ ಹೋದರು.

ಈ ದುರ್ಘಟನೆಯು ಕಾಲಕ್ರಮೇಣ ಸಂಭವಿಸದೇ ಇರದೆಂದು ವೃದ್ಧ ರಾಮದಾಸನಿಗೆ ಮೊದಲೇ ಸಂದೇಹವಿತ್ತು. ಆತನು ಅಧೋಮುಖನಾಗಿ ಗದ್ಗದ ಸ್ವರದಿಂದ:— "ಹಾ ಮಗುವೆ! ನಿರ್ದಯನೂ ಕಠಿಣ ಹೃದಯನೂ ಆದ ರಾಜನು ನಿರಪರಾಧಿಯಾದ ನಿನ್ನನ್ನು ತ್ಯಜಿಸಿದನೇ! ಸರ್ವನಾಶವಾಯಿತೇ! ಚಂಚಲಳಾದ ಲಕ್ಷ್ಮಿಯು ಇಷ್ಟು ದಿವಸ ನಿನ್ನ ತೊಡೆಗಳ ಮೇಲೆ ನಲಿದಿದ್ದು, ಈ ಹೊತ್ತು ಬಿಟ್ಟು ಹೋದಳೇ! ಪತಿಯೇ ದೈವವೆಂದು ಭಾವಿಸಿ ಸದಾ ಪತಿಪ್ರಾಣಳಾದ ನಿನಗೆ ಇಂತಹ ದುರ್ಘಟನೆಯು ಪ್ರಾಪ್ತವಾಯಿತೇ! ಶಿವ ಶಿವಾ! ದ್ವಾದಶ ಸಂವತ್ಸರಗಳ ಹಿಂದೆ ನಿನಗೆ ಲಗ್ನವಿಧಿಯಾದ ದಿವಸ ಆ ರಾಜನು ತೋರಿಸಿದ ಕುತೂಹಲತೆಯೂ, ಆತನ ಮೃದು ನುಡಿಯೂ, ಆ ಕರುಣಾ ಕಟಾಕ್ಷವೂ ಇನ್ನೂ ಸ್ಮರಣೆಗೆ ಬರುವದಲ್ಲ! ಇದೆಂತಹ ಪತನ! ಪತಿಯು ಸತಿಯ ಮೇಲೆ ಲಗ್ನದ ಮೇಲೆ ತೋರಿಸುವ ಪ್ರೀತಿಯ ತೇಜಸ್ಸು ಸಮಯಾಂತರ ಕಳೆಗುಂದುವುದೆಂಬ ನುಡಿಯು ಸ್ವತಃ ಸಿದ್ಧವಾಯಿತು. ಹಾ! ವತ್ಸಳೇ! ಅಯ್ಯೋ! ವಿಧಿಯ ವಿಲಾಸವೇ! ಶಿಶುದ್ವಯಗಳ ವಿರಹವು ಸಾಲದಾಗಿತ್ತೇ! ಪತಿವಿಯೋಗವನ್ನು ಸಹ ವಿಧಾತನು ನಿನ್ನ ಹಣೆಯಲ್ಲಿ ಬರೆದಿದ್ದನೇ! ಅಹಾ! ನಿರ್ಭಾಗ್ಯನಾದ ರಾಮದಾಸನೇ! ಸರ್ವ ಗುಣನಿಧಿಯಾದ ಈ ನಿನ್ನ ಬಾಲಕಿಯ ಪತನವನ್ನು ನೋಡುವುದಕ್ಕಾಗಿಯೇ ಮೃತಪ್ರಾಯನಾಗಿದ್ದ ನೀನಿನ್ನೂ ಬದುಕಿರುವಿಯಾ! ನಾನಿನ್ನು ಬದುಕಿ ಫಲವೇನು? ದುಃಖವನ್ನು ಸಹಿಸಲಾರೆನು. ಅಗ್ನಿ ಪ್ರವೇಶ ಮಾಡಿ ನನ್ನ ಸಂತಾಪವನ್ನು ಹೋಗಲಾಡಿಸಿಕೊಳ್ಳುವೆನು." ಎಂದು ಹೇಳಿ ಅಗ್ನಿ ಗೃಹಕ್ಕೆ ಹೋಗುವೆನೆಂದು ಎದ್ದೇಳಲು ಶಕ್ತಿಗುಂದಿ ಕಾಲುಜಾರಿ ಭೂತಲಪತಿತನಾದನು.

ಆಗ ಗೃಹಶೀಲೆಯು ತಾತನನ್ನು ಹಿಡಿದೆತ್ತಿ ಪೀಠದಲ್ಲಿ ಕುಳ್ಳಿರಿಸಿ:—"ಜನಕನೇ! ಅದೃಷ್ಟದಲ್ಲಿದ್ದ ಹಾಗೆ ನಡೆದುದಕ್ಕೆ ಶೋಕಪಟ್ಟು ಪ್ರಯೋಜನವಿಲ್ಲ. ನಾನು ಜನ್ಮಾಂತರದಲ್ಲಿ ಮಾಡಿದ ಪಾತಕಗಳ ಫಲವನ್ನು ಈಗ ಅನುಭವಿಸುವೆನು. ಪೂರ್ವ ಜನ್ಮದಲ್ಲಿ ನಾನು ದಂಪತಿ ಶಿಶುವಿಯೋಗವನ್ನು ಮಾಡಿದ್ದೆನು. ಇದಕ್ಕೆ ಸಂದೇಹವಿಲ್ಲ. ಕರ್ಮ ಫಲವು ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರನ್ನು ಸಹ ಹಿಂಬಾಲಿಸಿತು. ರಾಜಾಧಿರಾಜರಾದ ನಳ, ಹರಿಶ್ಚಂದ್ರ ಮೊದಲಾದವರನ್ನು ಮಹಾ ಸಂಕಟದಲ್ಲಿ ಕೆಡವಿತು. ಎಷ್ಟು ಭಗೀರಥ ಪ್ರಯತ್ನಗಳನ್ನು ಮಾಡಿದರೂ, ಎಂತಹ ಭೀಮ ಪರಾಕ್ರಮಿಯಾದರೂ, ಘೋರವಾದ ತಪಶ್ಚರಣೆಯಿಂದ ಲಕ್ಷ್ಮಿಯನ್ನು ವಶೀಕರಿಸಿದರೂ, ಸರಸ್ವತಿಯನ್ನು ಜಯಸಿದರೂ, ಎಷ್ಟು ಮಂತ್ರ ಪುನಶ್ಚರಣೆ ಮಾಡಿದರೂ ಹಣೆಯಲ್ಲಿ ಬರೆದ ಬರಹವನ್ನು ಮೀರುವುದು ಅಸಾಧ್ಯವು. ತಾತನೇ! ನೀನು ಹೇಳಿದಂತೆ ಲಕ್ಷ್ಮಿಯು ಚಂಚಲಳೆಂಬುದು ನಿಜವೇ ಸರಿ. ಆದರೆ ಈ ಸಂಸಾರದಲ್ಲಿ ಸಕಲವೂ ಅಸ್ಥಿರವಾದುದು. ವೃದ್ಧಿಕ್ಷಯ, ಸುಖದುಃಖ, ಉನ್ನತ ಪತನ, ಜನನ ಮರಣ—ಇವುಗಳು ಅಭೇದ್ಯವಾಗಿ ಒಂದನ್ನೊಂದು ಅನುಸರಿಸುವುವು. ಆದುದರಿಂದ ನೀನು ಧೈರ್ಯವನ್ನವಲಂಬಿಸಿ ಶೋಕವನ್ನಡಗಿಸಿಕೊಂಡು ಸ್ಥಿರಚಿತ್ತನಾಗಬೇಕು. ಮಹಾರಾಜರ ಅಪರಾಧವೇನು? ಕೇವಲ ಶ್ರೀಮಂತರ ಕೋಪಕ್ಕೆ ಭಯಪಟ್ಟು ರಾಜ ಕಾರ್ಯವನ್ನು ನಿರ್ವಹಿಸಿರುವರು. ಪ್ರೇಮಪಾಶಪರವಶನಾದ ನಿನಗೆ ರಾಜ ಕಾರ್ಯದ ಗೌರವವು ತಿಳಿಯದು. ಮಹಾರಾಜರು ಕರುಣಾಸಾಗರರವಲ್ಲವೇ! ಜನ್ಮ ಜನ್ಮದಲ್ಲಿಯೂ ಅವರೇ ನನಗೆ ಪತಿಯಾಗಲಿ ಎಂದು ಕಮಲಾಸನನೂ ಸರಸ್ವತಿ ಪತಿಯೂ ಆದ ನಾಲ್ಮೊಗನೊಡನೆ ಬೇಡಿಕೊಳ್ಳುವೆನು" ಎಂದಳು.

೧೮

ಇತ್ತಲಾಗೆ ಮಂಗಲಾಪುರದಲ್ಲಿ ನಗರವೆಲ್ಲವನ್ನೂ ಅಲಂಕರಿಸುವ ಹಾಗೆ ಮಹಾರಾಜನು ಆಜ್ಞಾಪಿಸಿದನು. ರಾಜಮಂದಿರವೆಲ್ಲ ಉತ್ಸವ ಪೂರ್ಣವಾಯಿತು.

ಮಹಾರಾಜ ಚಂದ್ರಶೇಖರನು ನಿಷ್ಕಾರಣವಾಗಿ ತನ್ನ ಬಾಲಕರನ್ನು ವಧಿಸಿ ಧರ್ಮ ಪತ್ನಿಯೂ ಸುಶೀಲಳೂ ಆದ ಗೃಹಶೀಲಳನ್ನು ಅರಮನೆಯಿಂದೋಡಿಸಿ, ತಾನು ಪುನರ್ವಿವಾಹ ಮಾಡಿಕೊಳ್ಳುವನಂತೆ. ಮನೆಯಲ್ಲಿದ್ದ ಸುರಧೇನುವನ್ನು ಹೊರಡಿಸಿ, ಕಾಡಿನಿಂದ ಬಡ ಹಸುವನ್ನು ತರುವಂತಾಯಿತು. ಬಾಗಿಲಲ್ಲಿದ್ದ ಸುರಪಾರಿಜಾತ ವೃಕ್ಷವನ್ನು ಕಿತ್ತು ಗಿಲಗಿಂಚೇ ಗಿಡವನ್ನು ನಡುವಂತಾಯಿತು. ಊರಿನ ಕೆಲವು ಪಾಪಿಗಳು ಹೇಳಿದರೆಂದು ಮನೆವೋರಿಯನ್ನು ಬಲಿಗೊಡುವರೇ? ಎಂದು ಅನೇಕ ವಿಧವಾಗಿ ಪೌರಜನರು ವ್ಯಾಕುಲ ಪಟ್ಟರು.

ಶ್ರೀ ದಕ್ಷಿಣ ಕಾಶಿಯಿಂದ ದಿಬ್ಬಣವು ಮಂಗಲಾಪುರಕ್ಕೆ ಬಂತು. ಪ್ರಿಯಂವದೆಗೂ ಕೃಷ್ಣವರ್ಮನಿಗೂ ಚಂದ್ರಶೇಖರನು ಅತ್ಯಾದರದಿಂದ ಸತ್ಕರಿಸಿ ನವರತ್ನಖಚಿತವಾದ ಪೀಠವನ್ನು ಕೊಟ್ಟನು. ರಾಜಕುಮಾರಿ ಅಹಲ್ಯಾಬಾಯಿಯು ಶ್ಯಾಮಲ ವರ್ಣವುಳ್ಳ ಸುವರ್ಣದಂಚಿನದುಕೂಲವನ್ನುಟ್ಟು ತನ್ನ ಲಾವಣ್ಯಮಯವಾದ ಕೋಮಲಾಂಗವನ್ನು ಪ್ರಕಾಶಿಸುವ ಚಿನ್ನಾಭರಣಗಳಿಂದ ಶೃಂಗರಿಸಿಕೊಂಡಿದ್ದಳು. ಬಾಲಕ ಯುವರಾಜನಾದ ಸೀತಾರಾಮನು ತನ್ನ ಅಂಸಯುಗ್ಮಗಳಲ್ಲಿ ಕರ್ಪುರದ ಹಾಗೆ ಸ್ವಚ್ಛವಾದ ಶಾಲುವೆಯನ್ನು ಧರಿಸಿಕೊಂಡು ಅಹಲ್ಯೆಯ ವಾಮ ಪಾರ್ಶ್ವದಲ್ಲಿ ಕುಳಿತು ವಿಸ್ಮಯಾಪರನಾಗಿ ಅತ್ತಿತ್ತ ನೋಡುತ್ತಲ್ಲಿದ್ದನು. ವಿದ್ಯಾಚಂದ್ರನು ಮಂಗಳ ಸ್ನಾನವನ್ನು ಮಾಡಿ ಪೀತಾಂಬರವನ್ನುಟ್ಟು ಕಂಠದಲ್ಲಿ ಜೀವನ್ಮಾಲಾಸರವನ್ನು ಧರಿಸಿ ಅಹಲ್ಯೆಯ ದಕ್ಷಿಣ ಪಾರ್ಶ್ವದಲ್ಲಿ ಪಂಚವರ್ಣಗಳಿಂದ ಅಲಂಕೃತವಾದ ರತ್ನಗಂಬಳಿಯ ಮೇಲೆ ಕುಳಿತಿದ್ದನು.

(ಸಶೇಷ)

ಸ್ವೇಚ್ಛಾವ್ಯಾಯಾಮಿಯ ಟೀಕೆಗಳು.

ಹಜೂರು ಕಚೇರಿಯಲ್ಲಿ ಪೆನ್ಶನ್ ಪಾವತಿಗಳು.

ಮೊದಲು ಪೆನ್ಶನುದಾರರ ವೇತನಗಳು ಆವಾವ ತಿಂಗಳ ೩ನೇ ತಾರೀಕಿನ ಮುಂಚೆ ದೊರಕುವದು ವಾಡಿಕೆಯಾಗಿರಲಿಲ್ಲ. ಇತ್ತಲಾಗೆ ತಿಂಗಳ ಮೊದಲನೆಯ ತಾರೀಕಿನ ದಿನವೇ ಬರುವ ವ್ಯಕ್ತಿಗಳಿಗೆಲ್ಲ ಪಾವತಿ ಶಿಕ್ಕುತ್ತದೆ. ತಂತಮ್ಮ ಪೆನ್‌ಶನ್ ಸರ್ಟಿಫೀಕೇಟುಗಳನ್ನು ಖಜಾನಾ ಚಾರ್ಜು ಡಿಪ್ಯುಟಿ ಕಲೆಕ್ಟರರ ಮುಂದೆ ತಕ್ಕೊಂಡು ಹೋದರೆ ಸದಯಹೃದಯರಾದ ಈಗಿನ ಖಜಾನಾ ಉದ್ಯೋಗಸ್ತರು ಕ್ಷಣ ತಾಮಸ ಮಾಡದೆ ಸಮ್ಮಂಧ ಪಟ್ಟ ಗುಮಾಸ್ತನನ್ನು ಕರಿಸಿ ಲೆಖ್ಖದಲ್ಲಿ ಅವಶ್ಯವಿರುವ ಖತಾಯಿತಿ ಮಾಡಿಸಿ ಪೆನ್ಶನು ಸರ್ಟಿಫಿಕೇಟುಗಳನ್ನು ಕೂಡಲೆ ಆಯಾಯ ಪೆನ್ಶನುದಾರರಿಗೆ ಕೊಟ್ಟುಬಿಡುತ್ತಾರೆ. ಖಜಾನಜಿಯರ ಬಳಿಗೆ ಹಣ ಪಡಿಯಲು ಹೋದರೆ ಪುಣ್ಯಾತ್ಮರಾದ ಆ ಉದ್ಯೋಗಸ್ತರು ಬಹು ಮರ್ಯಾದೆಯಿಂದ ಪೆನ್ಶನ್‌ದಾರರನ್ನು ಕುಡ್ರಿಸಿ ಪಾವತಿ ಬೂಕಿನಲ್ಲಿ ಅವರವರ ದಸ್ಕತುಗಳನ್ನು ಪಡಕೊಳ್ಳುವದಕ್ಕೆ ತನ್ನ ಗುಮಾಸ್ತರಿಗೆ ಆಜ್ಞೆ ಕೊಡುತ್ತಾರೆ. ಅಂಥ ಆಜ್ಞೆಗಳನ್ನು ಗುಮಾಸ್ತರು ತಾಮಸವಿಲ್ಲದೆ ನೆರವೇರಿಸುವರು. ಪರಂತು ಬೇಂಕಿನಿಂದ ಹಣ ತರಲು ದಯಮಾಡಿರುವ ಸರಾಫ ಮೆಹರಬಾನರು ತಮ್ಮ ಸುಂದರವಾದ ಮುಖವನ್ನು ಎಂದು ತೋರಿಸುವರೋ ಎಂಬ ಪ್ರಶ್ನೆಯನ್ನು ಕಾದು ಕಾದು ಸಾಕಾದ ಪೆನ್ಶನುದಾರರು ನಿಟ್ಟುಸುರುಬಿಟ್ಟು ಕ್ಷಣೆಕ್ಷಣೆ ಕೇಳುತ್ತಾರೆ. ಯಾಕಂದರೆ ೧ ಘಂಟೆಗೆ ಬಂದು ಕೂಡುವ ಪೆನ್ಶನುದಾರರು ನಾಲ್ಕು ಘಂಟೆ ವರೆಗೆ ಕಾದುಕೂತರೂ ಸರಾಫ ಸಾಹೇಬರ ಬರುವಿಕೆಯು ಜರಗುವದಿಲ್ಲ. ಹಾಗೂ ಹೀಗೂ ರಥಾರೂಢರಾಗಿ ಬಂದಂಥ ವ್ಯಕ್ತಿಗಳು ಜಟ್ಕಾಬಂಡಿಯವನಿಗೆ ದ್ವಿಗುಣ ಪ್ರತಿಫಲ ಕೊಡಬೇಕಾಗುತ್ತದೆಂಬ ಹೆದರಿಕೆಯಿಂದ ಚಾಂಚಲ್ಯ ಮನಸ್ಕರಾಗುವರು. ಪರಂತು ಆ ದಿವಸವೇ ಪಾವತಿ ಹೊಂದದೆ ನಿರ್ವಾಹವಿಲ್ಲವಾದುದರಿಂದ ಮೆಲ್ಲಗೆ ಹರಿಹರ ನಾಮಸ್ಮರಣೆ ಗೈಯುತ್ತಾ ಆಕಳಿಸಿಕೊಂಡು ತಗಣೆಗಳ ಕಾಟದಿಂದ ಎಚ್ಚರಿಗೆ ಪಡದವರಾಗಿ ಗೋಣು ಎತ್ತಿ ಬಾಗಲ ಕಡೆ ನಿರೀಕ್ಷಿಸುತ್ತಾ ಸ್ಯಾಬರು ಕಾಣುವದಿಲ್ಲವಷ್ಟೇ ಎಂದು ಕರಕರೆ ಪಡುವರು. ದೇವರು ಕೊಟ್ಟರೂ ಪೂಜಾರಿ ಬಿಡ ಎಂಬಂತೆ ಒಂದಲ್ಲವೊಂದು ವಿಡ್ಗೂರ ಉಂಟೇ ಉಂಟು ಎಂಬ ತತ್ವಜ್ಞಾನವನ್ನು ತಮಗೆ ತಾವೇ ಬೋಧಿಸಿಕೊಂಡು ಭಗ್ನಮನೋರಥರಂತೆ ಕೂತಿಗುವಾಗ ಕಟ್ಟಕಡೆಗೆ ಸ್ಯಾಬರ ಮುದ್ದು ಮುಖವು ಪ್ಯಾದೆಯ ತಲೆಯ ಮೇಲೆ ಹಣದ ಗಂಟೂ ಕಂಗೊಳಿಸುವ ಶುಭ ಚಿನ್ಹೆಗಳು ಬಲಕಣ್ಣು ಸ್ಫುರಣವಾಗುವದರ ಮೂಲಕ ಬಯಲಾಗುತ್ತವೆ. ಸ್ಯಾಬರೇ! ಇದೇನು ಇಷ್ಟು ತಾಮಸ. ಈ ಸದ್ಗೃಹಸ್ತರು ಅಗ್ಗಿನಿಂದ ಕಾದಿದ್ದಾರಲ್ಲ ಎಂದು ಅಸಂತೋಷ ಪ್ರದರ್ಶಕ ವಾಕ್ಯಗಳನ್ನು ಖಜಾನ್‌ಜಿಯವರು ನುಡಿದರೆ, ರಾಯರೇ! ನಾನೇನು ಮಾಡಲಿ ಕಾದು ಕಾದು ಬಸ್ ಬಸ್ ಆಯಿತು; ಬೇಂಕಿನವರು ಹಣವೇ ಕೊಡುವದಿಲ್ಲ. ಈಗ ಅರೆವಾಸಿ ಕೊಟ್ಟರು. ನಾನೇನು ರಶಿ ತಕ್ಕೊಳ್ಳಲೇ ಎಂದು ಬೆವರು ವರಸಿಕೊಳ್ಳುತ್ತಾ ಸರಾಫರು ಉದಹರಿಸುವಾಗ ಅವರ ಮಾತಿನಿಂದ ಕನಿಕರ ಹುಟ್ಟುವುದು. ಬೇಂಕಿಗೆ ಹೋಗಿ ವಿಚಾರಮಾಡುವ ಸ್ವತಂತ್ರ ಖಜಾನಜಿಯವರಿಗೆ ಇಲ್ಲ. ಹೀಗಾಗಿ ಈ ತರದ ತೊಂದರೆಯು ಬಹಿರಂಗವಾಗುವದಿಲ್ಲ. ಆದಕಾರಣ ದಯಾಳುವಾದ ಖಜಾನ ಡಿಪ್ಯುಟಿ ಕಲೆಕ್ಟರವರು ಈ ಕುರಿತು ಚನ್ನಾಗಿ ಪರಿಶೋಧನೆಯಿಂದ ಸರಾಫರ ಮಾತು ನಂಬಬಹುದಾದ್ದೋ ಹ್ಯಾಗೆಂಬ ಪರಿಶೀಲನವನ್ನು ಮಾಡುವದು ಸತ್ಕರ್ತವ್ಯವೆಂದು ಸೂಚಿಸುವುದು ಸೂಕ್ತವಲ್ಲವೇ! ಬೇಂಕಿನಲ್ಲಿ ಅನಾವಶ್ಯಕ ಸಮಯ ಹಾಳು ಆಗುವದಾದರೆ ಇದೊಂದು ನಿವಾರಣೆಗೆ ಯೋಗ್ಯವಾದ ವೈಪರಿತ್ಯವೆಂಬದು ಯಾರೂ ನಿರಾಕರಿಸಕೂಡದು.

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಗೌಡಸಾರಸ್ವತ ಬ್ರಾಹ್ಮಣ ಪರಿಷದ.

ಸ್ವದೇಶಾಭಿಮಾನಿ ಪತ್ರಕರ್ತರೇ,

ತಮ್ಮ ನವಂಬರ ತಾರೀಕು 25ನೇ ಪತ್ರಿಕೆಯಲ್ಲಿ ತೃತಿಯ ಗೌಡ ಸಾರಸ್ವತ ಪರಿಷದವೆಂಬ ಸದರಿನ ಕೆಳಗೆ ಮಂಗಳೂರು ಗೌಡಸಾರಸ್ವತ ಪರಿಷದದ 3ನೇ ಸಭೆ ದಶಂಬರ ತಿಂಗಳಲ್ಲಿ ಗೋವಾ ಪ್ರಾಂತ್ಯದ ಮಾಡಗಾಂವಿನಲ್ಲಿ ಸೇರುವದೆಂತಲೂ ಪರಿಷದದ ಅಧ್ಯಕ್ಷಸ್ಥಾನವನ್ನು ಅಲಂಕರಿಸುವರೇ ಕೈವಲ್ಯ ಮಠಾಧೀಶ ಶ್ರೀಮತ್ ಪೂರ್ಣಾನಂದ ಸರಸ್ವತಿ ಸ್ವಾಮಿ.ಯವರಿಗೂ, ಶ್ರೀಮತ್ ಇಂದಿರಾಕಾಂತ ತೀರ್ಥರವರಿಗೂ, ವಿನಂತಿ ಮಾಡಿರುವದಾಗಿ ನಮೂದಿಸಿರುವದು ನೋಡಿ ಆನಂದವಾಯಿತು.

ಆದರೆ ಮಂಗಳೂರಲ್ಲಿ ನಡದ 2ನೇ ಪರಿಷದದಲ್ಲಿ ಶ್ರೀಕೈವಲ್ಯ ಮಠ, ಶ್ರೀ ಕಾಶೀ ಮಠ ಮತ್ತು ಶ್ರೀ ಗೋಕರ್ಣಮಠ, ಈ ಮೇರೆಗೆ 3 ಮಠದ ಶಿಷ್ಯಮಂಡಲಿಯವರ ಬಗ್ಯೆ, ಈ ಪರಿಷದ ಸ್ಥಾಪನೆ ಮಾಡಿದ್ದೆಂಬ ಅರ್ಥಗರ್ಭಿತವಾದ ನಿಯಮಗಳು ಮಾಡಿರುವದಾಗಿ ಆಗಾಗ್ಯೆ ಪರಿಷದದ ವಿಷಯವಾಗಿ ಸ್ವಜನರಲ್ಲಿ ನಡಿಯುವ ವಿವಾದಗಳಿಂದ ತಿಳಿಯಬರುತ್ತಿತ್ತು.

ಈ ಪ್ರಕಾರ ನಿಯಮಗಳಿರುವದಾದ ಪಕ್ಷಕ್ಕೆ, ಯಾವ ಮಠದ ಶಿಷ್ಯಮಂಡಲಿಯರಿಗೆ ಸಭೆಗೆ ಬರಲು ಅವಕಾಶವಿದೆಯೋ ಆ ಮಠದ ಅಧಿಪತಿಗಳಾದ ಶ್ರೀ ಕಾಶಿ ಮಠಾಧೀಶರವರಿಗೆ ವಿನಂತಿ ಮಾಡದಿರುವ ಕಾರಣವೇನೋ ತಿಳಿಯಲಿಲ್ಲ. ಅವರು ಈಗಿನ ಸಭೆ ನಡಿಯುವ ಸ್ಥಳಕ್ಕೆ, ದೂರ ಫಾಸಲೆಯಲ್ಲಿದ್ದಾರೆಂಬ ಕಾರಣವೇ ಆಗಿದ್ದರೆ, ಶ್ರೀ ಕೈವಲ್ಯ ಮಠಾಧೀಶರೂ ದೂರ ಫಾಸಲೆಯಾದ ನಾಶಿಕದಲ್ಲಿರುವರೆಂಬ ವರ್ತಮಾನ ಇದೆ. ಅಥವಾ ಶ್ರೀ ಕಾಶಿ ಮಠಾಧೀಶರು ಇರುವದಕ್ಕಿಂತಲೂ, ನಾಶಿಕ ಸಮೀಪವೆಂದು ಎಣಿಸಿದರೆ, ದಶಂಬರ ತಾ. 28ರ ವರೇಗೆ ಸಮಯವಿರುವದರಿಂದ ಹಾಗೂ ಎಣಿಸಲಿಕ್ಕೆ ಸಾಧ್ಯವಿಲ್ಲ.

ದೂರವೆಂಬದೊಂದೇ ಕಾರಣವಾಗಿದ್ದರೆ, ಪ್ರಥಮ ಸಭೆ ನಡಿಯುವ ಸಮಯ, ಶ್ರೀ ಕಾಶಿ ಮಠಾಧೀಶರು ಮಂಜೇಶ್ವರದಲ್ಲಿದ್ದಾಗ್ಯೆ ಸಮೀಪವಾಗಿರಲಿಲ್ಲವೇ? ಆಗ್ಯೆ ಆದರೂ ವಿನಂತಿಮಾಡಬಹುದಾಗಿತ್ತಲ್ಲವೇ? ಹಾಗೆ ಕಾಶಿ ಮಠಾಧೀಶರಿಗೆ ವಿನಂತಿ ಮಾಡಕೂಡದೆಂಬ ತಾತ್ಪರ್ಯವಿಲ್ಲವೆಂತಾದರೆ ಕಾಶಿ ಮಠಾದೀಶರಿಗೆ ವಿನಂತಿಮಾಡುವದರಿಂದ ವಂದುವೇಳೆ ದೂರವಿದ್ದರೂ ಅವಕಾಶವಿರುವ ಕಾರಣ, ಈ ಸಭೆಗೆ ದಯಮಾಡಿಸದೇ ಇರಲಾರೆಂತಲೊ? ಯಾವ ಕಾರಣದಿಂದ ಮಾಡದೇ ಬಿಟ್ಟಿರುವರೆಂಬದು ತಿಳಿಯುವದಿಲ್ಲ.

ಬಂದಾರೆಂಬ ಕಾರಣದಿಂದಲೇ ವಿನಂತಿ ಮಾಡದೆ ಬಿಟ್ಟದ್ದಾದರೆ ಶ್ರೀ ಗೋಕರ್ಣ ಮತ್ತು ಶ್ರೀ ಕೈವಲ್ಯ ಮಠಾಧೀಶರು ಬರಲಾರರೆಂದು ತಿಳದೇನೆ ವಿನಂತಿ ಮಾಡಿದರೋ ಹ್ಯಾಗೆ?

ವಂದುವೇಳೆ ಇವರು ವಿನಂತಿಯನ್ನು 3 ಮಠಕ್ಕೂ ಮಾಡಿದ್ದಾದರೆ, ಆಗ್ಯೆ ಆ ಪೈಕಿ ಯಾರಾದರು 2 ಮಠದವರು ಬರಲು ಒಪ್ಪಿದರೆ ಅಗ್ರಾಸನಾಧಿಪತ್ಯ ಕೊಡುವದರಲ್ಲಿ ತೊಂದರೆ ಸಂಭವಿಸಬಹುದೆಂದು ಎಣಿಸಿ 1 ಮಠವನ್ನು ಬಿಟ್ಟಿರಬಹುದಲ್ಲವೇ?

ಹಾಗೂ ಇನ್ನೊಂದು ಸಂಶಯಬರುತ್ತದೆ. ಈಗ ವಿನಂತಿ ಮಾಡಿರುವ 2 ಮಠಾಧೀಶರೂ ಒಪ್ಪಿದರೆ ಆಗ್ಯೆ ಯಾವ ರೀತಿ ನಡಿಸುವರು? ಯಾ ಆ ಪೈಕಿ ಯಾರಾದರೊಬ್ಬರು ಅಂಗೀಕರಿಸಲಾರರೆಂಬ ನಂಬಿಕೆ ಏನಾದರು ತೋರಿಬಂದು ಈ ವಿನಂತಿ ಮಾಡಿದ್ದಾರೆಯೇ ಹ್ಯಾಗೆ?

ಹಾಗಿದ್ದರೆ ಬರಬಹುದೆಂಬ ನಂಬಿಕೆ ತೋರಿಬರುವ ಒಂದೇ ಮಠಾಧೀಶರಿಗೆ ಯಾಕೆ ವಿನಂತಿ ಮಾಡಬಾರದಾಗಿತ್ತು?

ಅಥವಾ ಈ ಕಾರಣಗಳಲ್ಲದೇ ಇನ್ಯಾವದಾದರೂ ಕಾರಣಗಳಿಂದ ಶ್ರೀ ಕಾಶಿ ಮಠಕ್ಕೆ ವಿನಂತಿಪತ್ರ ಬರಕೊಳ್ಳದೇ ಬಿಟ್ಟಿದ್ದಾರೆಯೊ ಯಾ ಜ್ಞಾಪಕವಿಲ್ಲದೇ ಬಿಟ್ಟಿದ್ದಾರೆಯೋ ತಿಳಿಯೆನು.

ಯಾವ್ಯಾವ ಊರನಲ್ಲಿರತಕ್ಕ ಸ್ವಜನರಿಗೆಲ್ಲಾ ಮರಿಯದೇ ಆಮಂತ್ರಣಗಳು ಹೋಗುವಾಗ್ಯೆ ಪ್ರಖ್ಯಾತವಾಗಿರುವ ಮಠವೇ ಜ್ಞಾಪಕಕ್ಕೆ ಬಾರದಿರುವದು ಆಶ್ಚರ್ಯ.

ಇದರಿಂದ ಆ ಮಠದ ಶಿಷ್ಯಮಂಡಲಿಯವರು ಖೇದಪಡಲು ಕಾರಣವಾಗಿದೆ.

ಶ್ರೀ. ಕಾಶಿ ಮಠದ ಶಿಷ್ಯ.

[ಈ ಸಂಚಿಕೆಯ ಅಂತ್ಯಭಾಗದಲ್ಲಿ ಪ್ರಕಟಿಸಿರುವ ಮ| ರಾ| ರಾ| ಹೈಕೋರ್ಟ ವಕೀಲ ಅಮ್ಮೆಂಬಳ ಶ್ರೀನಿವಾಸ ಪೈಗಳವರ ವಿಜ್ಞಾಪನೆಯನ್ನು ಓದಿನೋಡಿದ್ದಲ್ಲಿ ಶ್ರೀ ಕಾಶೀ ಮಠಾಧೀಶರಿಗೆ ಸಹಾ ವಿನಂತಿ ಪತ್ರವನ್ನು ಆಮಂತ್ರಣ ಸಭೆಯವರು ಕಳುಹಿಸಿರುವರಾಗಿ ತಿಳಿಯಬಹುದು. ಸಂಪಾದಕ.]

ಗೌಡಸಾರಸ್ವತ ಪರಿಷದ.

ಅಯ್ಯಾ ಪತ್ರಕರ್ತರೇ,

ಇದೇ ದಶಂಬರ ತಿಂಗಳ ಅಂತ್ಯದಲ್ಲಿ ಶ್ರೀ ಗೋವಾ ಕ್ಷೇತ್ರದಲ್ಲಿ ಒಂದು ಗೌಡಸಾರಸ್ವತ ಬ್ರಾಹ್ಮಣರ ಮಹಾ ಪರಿಷದವು ನೆರೆಯುವುದೆಂತ ನಮ್ಮೆಲ್ಲರಿಗೂ ಆಮಂತ್ರಣ ಪತ್ರವು ಬಂದದೆ.

ಈ ಮಹಾ ಪರಿಷದದ ವಿಷಯವಾಗಿ ನಮ್ಮ ಸಾರಸ್ವತ ಭ್ರಾತೃ ಭಗಿನಿಯರು ದಯವಿಟ್ಟು ಪರಾಂಬರಿಸುವ ಬಗ್ಗೆ ಕೆಲವು ಮಾತುಗಳನ್ನಾಡುವೆನು. ನಮ್ಮೆಲ್ಲರ ಮೂಲಸ್ಥಾನವು ಉತ್ತರ ಹಿಂದುಸ್ಥಾನವು. ನಮ್ಮ ಪೂರ್ವಜರು ಹಿಂದೆ ಸರಸ್ವತಿ ನದೀತೀರದಲ್ಲಿದ್ದು ಕಡೆಗೆ ತುರುಕರ ಕಾಟವನ್ನು ಸಹಿಸಲಾರದೆಯೂ ಇತರ ಹಲವು ಕಾರಣಗಳಿಂದಲೂ ದಕ್ಷಿಣಕ್ಕೆ ಬಂದರೆಂಬುದು ಪುರಾಣ ಪ್ರಸಿದ್ಧವಾಗಿದೆ. ಉತ್ತರದಿಂದ ಕೆಳಗಿಳಿದು ಪ್ರಥಮತ ಗೋವಾ ಕ್ಷೇತ್ರದಲ್ಲಿ ವಾಸಿಸಿದೆವು. ಅಲ್ಲಿ ಪೋರ್ತುಗೀಸರು ಸಹ ಧರ್ಮಛಲಮಾಡಿದ್ದರಿಂದ ನಾಲ್ಕು ದಿಕ್ಕುಗಳಲ್ಲಿಯೂ ಪಸರಿಸುವುದು ಅವಶ್ಯಕವಾಯಿತು. ಕೆಲವರು ಕನ್ನಡಾ ಜಿಲ್ಲೆಯಲ್ಲಿ ಬಂದಿಳಿದರು. ಕೆಲವರು ಮುಂಬಾಯಿ ಅತ್ತಕಡೆಗೆ ನಡೆದರು. ಕೆಲವರು ಗೋಪ್ಯದಲ್ಲಿ ಸ್ವಧರ್ಮಾಚರಣೆ ಮಾಡಿ ಗೋವೆಯಲ್ಲೇ ನಿಂತರು.

ಇತ್ತಲಾಗೆ ನಮ್ಮ ಕುಲವೃಕ್ಷದ ಶಾಖೆಗಳು ವಂಗದೇಶ, ಮಧ್ಯದೇಶ, ಬರೋದೆ, ದಕ್ಷಿಣಹಿಂದುಸ್ಥಾನ ಮತ್ತು ಸಿಂಹಲದ್ವೀಪಕ್ಕೆ ಸಹ ಉದರಪೋಷಣೆಯ ನಿಮಿತ್ತ ಬಹು ತರದ ವೃತ್ತಿಗಳನ್ನಾಚರಿಸಿ ಹೋಗಲು ಪ್ರಾರಂಭಿಸಿದ್ಧಾರೆ. ಆದರೆ ನಮ್ಮವರು ಲೋಕದಲ್ಲಿ ಅಭಿಮಾನವನ್ನೂ ಯಶಸ್ಸನ್ನೂ ಪಡೆಯುವ ಮಹದಭಿಲಾಷೆಯಿಂದ ಎಂತಹ ದೂರ ದೇಶಕ್ಕೆ ಹೋದರೂ ಸ್ವಧರ್ಮವನ್ನು ಬಿಡದೆ ಸಮಯಾನುಕೂಲವಾಗಿ ದೇಶಕಾಲ ಪದ್ಧತಿಯನ್ನು ಅನುಸರಿಸಿ ಬಂದಿರುವರು. ಹೀಗೆ ದೇಶಕಾಲಕ್ಕನುಸಾರವಾಗಿ ಅನುಸರಿಸುವುದು ಅತ್ಯಂತ ಶ್ರೇಯಸ್ಕರವೇ ಸರಿ. ಅನಾದಿಕಾಲದಿಂದಲೂ ನಾವು ಈ ರೀತಿ ನಡೆದು ಬಂದಿರುತ್ತೇವೆ ಎಂಬುದು ಸ್ವತಃಸಿದ್ಧವು. ಯಾವ ಉತ್ತರ ಪ್ರದೇಶದಿಂದ ನಾವು ಕೆಳಗಿಳಿದು ಬಂದಿರುವೆವೋ ಆ ಮೂಲಸ್ಥಾನದಲ್ಲಿ ಈಗ ವಾಸಿಸಿರುವ ನಮ್ಮ ಬಂಧುಬಾಂಧವರ ಮತ್ತು ನಮ್ಮ ಆಚಾರವಿಚಾರಗಳಿಗೆ ತಿಲಾಂಶವಾದರೂ ಸಾಮ್ಯವಿಲ್ಲ. ದೇಶಕಾಲಕ್ಕನುಸಾರವಾಗಿ ನಮ್ಮ ಆಚಾರವಿಚಾರಗಳು ಸಹ ಪಲ್ಲಟವಾಗಿಯವೆ. ಹೀಗಿರಲು ನಮ್ಮ ಖಾಸಾ ಪಿತೃಪ್ರಪಿತಾಮಹರು ನಡೆದಿರುವಂತೆಯೇ ನಾವು ಈಗ ನಡೆಯಬೇಕೆಂದರೆ ಅದು ಸರ್ವ ವಿಧದಿಂದಲೂ ಅಸಾಧ್ಯವು. ಈಗ ಅನೇಕರು ನಮ್ಮ ಈಗಿನವರ ಜನ್ಮಸ್ಥಾನವಾದ ಕನ್ನಡಾ ಜಿಲ್ಲೆಯನ್ನು ಬಿಟ್ಟು ವಿಲಾಯತಿ, ಜಾಪಾನ್ ಮೊದಲಾದ ದೇಶಗಳಿಗೆ ವಿದ್ಯಾಭಿವೃದ್ಧಿಗೋಸ್ಕರ ಹೋಗಿ ನವನಾಗರಿಕತೆಯ ಪವಿತ್ರವಾದ ಪ್ರವಾಹದ ತೀರ್ಥೋದಕವನ್ನು ಸಂಪ್ರೋಕ್ಷಣೆ ಮಾಡಿಕೊಳ್ಳುತ್ತಾರೆ. ನಮ್ಮ ಊಟ, ಉಡಿಗೆತೊಡಿಗೆ, ಔಷಧೋಪಚಾರ, ಲಗ್ನಸಾಂಪ್ರದಾಯ ಮೊದಲಾದ ಸರ್ವ ಸಂಗತಿಗಳೂ ಯಾವ ದೇಶಕ್ಕೆ ನಮ್ಮವರು ಹೋಗಿದ್ಧಾರೋ ಆ ದೇಶಪದ್ಧತಿಗನುಸಾರವಾಗಿ ಪಲ್ಲಟವಾಗುತ್ತ ಬಂದವೆ. ದೂರವೇಕೆ? ನಮ್ಮ ಕನ್ನಡಾ ಜಿಲ್ಲೆಯ ಸಾರಸ್ವತರಲ್ಲಿ ಕೆಲವರು ಕೊರೊಮಂಡಲ ಪ್ರಾಂತ್ಯಕ್ಕೂ ಕೆಲವರು ಮೈಸೂರು ಸಂಸ್ಥಾನಕ್ಕೂ ಹೋಗಿದ್ದರು. ಈಗ ಅವರ ಮಕ್ಕಳುಮರಿಗಳು ಕೆಲವರು ಅರವು ಭಾಷೆಯನ್ನೂ ಕೆಲವರು ಕನ್ನಡ ಭಾಷೆಯನ್ನೂ ಮಾತೃ ಭಾಷೆಯಾಗಿ ಮಾತನಾಡುವರು. ಮರಾಠಿ ಭಾಷೆಯು ಅವರಿಗೆ ಏನೆಂದು ಗೊತ್ತಿಲ್ಲ.

ಹೀಗೆ ವ್ಯವಹಾರಿಕ ಕಾರಣಗಳ ನಿಮಿತ್ತ ದೇಶದಲ್ಲಿ ಅತ್ತಿತ್ತ ಪಸರಿಸಿದ ಒಂದೇ ವೃಕ್ಷದ ಸಮಸ್ತ ಶಾಖೆಗಳ ತಳಿರುಗಳನ್ನು ಉಪರಿ ಅಂಟಿಸಬಾರದೇ? ಖಾಸಾ ಬಂಧು ಬಾಂಧವರಾದ ನಾವು ಪುನಃ ಅನ್ನೋದಕ ವ್ಯವಹಾರ ಮಾಡಬಾರದೇ? ಗೋವೆಯಲ್ಲಿಯಾಗಲೀ ಇತರ ಕಡೆಗಳಲ್ಲಾಗಲೀ ಮಂಗಳೂರಲ್ಲಾಗಲೀ ಕುತ್ಸಿತ ಕಾರಣಗಳಿಂದ ಜಗಳಮಾಡಿ ವಿಭಕ್ತರಾದ ಬಂಧುಬಾಂಧವರು ತಮ್ಮೊಳಗಿನ ಮನಃಕ್ಲೇಶಗಳನ್ನು ವಿನಾಶಮಾಡಿ ಏಕಮತ್ಯದಿಂದಿರಬಾರದೇ? ಒಂದೇ ತಾಯಿತಂದೆಗಳ ಮಕ್ಕಳಾದ ನಾವು ಅಲ್ಪ ಕಾರಣಗಳಿಂದ ಕಾದಾಡಿ ನಮ್ಮೊಳಗೆ ದ್ವೇಶ ಬೆಳಸುವುದಕ್ಕಿಂತಲೂ ವಿವೇಕದಿಂದ ನಮ್ಮ ಹಿಂದಿನ ಕಾರ್ಯಗಳಿಗೋಸ್ಕರ ಅನುತಾಪ ಪಟ್ಟು ಒಟ್ಟುಗೂಡಿ ಪರಸ್ಪರ ಕಂಠಾಲಿಂಗನ ಮಾಡಬಾರದೇ? ಅತ್ತಿತ್ತ ಜಾರಿ ಹರಿಯುವ ಚಿಕ್ಕ ಚಿಕ್ಕ ಕಾಲುವೆಗಳನ್ನು ಪುನಸ್ಸಂಗಮ ಮಾಡಿದರೆ ಆ ಸಂಗಮ ಜಲಪ್ರವಾಹವು ಎಷ್ಟು ಗಾಂಭೀರ್ಯವಾಗಿ ತೋರುವುದು! ಅಲ್ಪ ಜನಸಂಖ್ಯೆಯಿಂದ ನಮ್ಮ ಶಾಖೆಗಳನ್ನು ಏಕೀಕರಣ ಮಾಡಿ ಒಬ್ಬರಿಗೊಬ್ಬರು ತನುಮನಧನದಿಂದ ಮತ್ತು ಸ್ವಾಭಿಮಾನದಿಂದ ಇರುವುದು ಎಷ್ಟು ಶ್ರೇಯಸ್ಕರವು!

ಬೇರೆ ಬೇರೆ ಮತಾನುಯಾಯಿಗಳಾದರೂ ದ್ರಾವಿಡ ಸರ್ವ ಬ್ರಾಹ್ಮಣರಲ್ಲಿ ರೋಟಿ ಬೇಟಿ ವ್ಯವಹಾರವಿಲ್ಲವೇ? ನಾವು ಮಾತ್ರ ಏತಕ್ಕೆ ಹಿಂಜರಿಯಬೇಕು?

ಏಕತರ್ಫಿ ದೃಷ್ಟಿಯಿಂದ ನೋಡದೆ ನ್ಯಾಯದಿಂದ ವಾಗ್ವಾದ ಮಾಡಿದರೆ ನಮ್ಮ ಸಾರಸ್ವತ ಶಾಖೆಗಳಲ್ಲಿ ಎಲ್ಲವರೂ ಸರಿಸಮಾನರು. ನಮ್ಮ ಪೈಕಿ ಒಬ್ಬರು ಹೀನರು ಒಬ್ಬರು ಶ್ರೇಷ್ಟರೆಂಬುದು ಪೂರ್ಣ ಮಿಥ್ಯವು. ವಿದ್ಯೆ ಮತ್ತು ಸಂಪತ್ತು ಇತ್ಯಾದಿಗಳಲ್ಲಿ ಪ್ರಬಲರಾದವರು ವಿದ್ಯಾಹೀನರಾದ ಇತರರನ್ನು ಹೀನರೆಂದು ಹೇಳತೊಡಗಿದರು. ಅಷ್ಟೇ; ಈ ಇಪ್ಪತ್ತನೇ ಶತಾಬ್ದದ ನವನಾಗರಿಕತೆಯಲ್ಲಿ ಸುಧಾರಿಸಿದ ನಾವು ಸಂಪತ್ತಿನ ಮತ್ತು ವಿದ್ಯೆಯ ಗರ್ವದಿಂದ ಇತರರಿಗೆ ತುಚ್ಛೀಕರಿಸಬಾರದೆಂದು ನಮ್ಮಲ್ಲಿ ವಿವೇಕ ಹುಟ್ಟಲು ಹಿಂದಿನ ಅಲ್ಪ ಮನಃಕ್ಲೇಶಗಳನ್ನು ಮರೆತು ಬಾಂಧವರೆಲ್ಲರೂ ಪ್ರೇಮದಿಂದ ಕೂಡಿರುವುದು ರಾಜಕೀಯ ಕಾರಣಗಳಿಂದ ಸಹ ಯೋಗ್ಯವಲ್ಲವೇ?

"ಬಿ. ಹರ್ಷರಾಯಂ."

———o———

ಗೌಡಸಾರಸ್ವತ ಪರಿಷದ.

ಒಂದು ಸೂಚನೆ.

ಸ್ವದೇಶಾಭಿಮಾನಿ ಪತ್ರಕರ್ತರ ಸನ್ನಿಧಾನಕ್ಕೆ,

ಸ್ವಾಮಿ,

ಇದೇ ತಿಂಗಳಲ್ಲಿ ನೆರೆಯಲಿಕ್ಕಿರುವ ಗೌಡಸಾರಸ್ವತ ವೃಂದಕ್ಕೆ ಎರಡು ಸೂಚನೆಗಳನ್ನು ಅದಬಿನಿಂದ ಅರಿಕೆಮಾಡಿಕೊಳ್ಳಲು ತಮ್ಮ ಪತ್ರದಲ್ಲಿ ಎಡೆಯನ್ನಪೇಕ್ಷಿಸುವೆನು. ಅದೆಂತೆನೆ:—

ಸರ್ವ ಅಭಿವೃದ್ಧಿಗೂ ಶಿಕ್ಷಣವೇ ಮೂಲವೆಂಬದೂ ವಿದ್ಯಾವಿಹೀನರು ಪಶುಪ್ರಾಯರೆಂಬದೂ ಪ್ರತ್ಯಕ್ಷ ದಿನೇ ದಿನೇ ವ್ಯಕ್ತವಾಗುವದು. ಇದಲ್ಲದೆ ಪಾಂಡಿತ್ಯವು, ಸಾರಸ್ವತರೆಂದು ಹೇಳಿಕೊಳ್ಳಿಸುವವರ ಬಿರುದಾಗಿರತಕ್ಕದ್ದು. ಆದರೆ ಪ್ರಕೃತ ಶಿಕ್ಷಣಕ್ಕೆ ಕೆಲವು ಗುರುತರ ಅಭ್ಯಂತರಗಳಿವೆ. ಸಂಸ್ಕೃತ ವೇದಶಾಸ್ತ್ರಾಧ್ಯಯನಕ್ಕೆ ಲೌಕಿಕರಲ್ಲಿ (ರೂ. ಆ. ಪೈ.) ಬೆಲೆ ಇಲ್ಲದೆ ಆ ವಿದ್ಯೆಯು ದೀನ ದೆಶೆಯನ್ನು ಹೊಂದಿದೆ. ಹಣ ವಿದ್ಯಾಭ್ಯಾಸಕ್ಕೆ ಇತ್ತಲಾಗಿನ ನಿಬಂಧನೆಗಳಿಗೆ ತಕ್ಕಂತೆ ಬೆಲೆ ಏರಿ ಸಾಮಾನ್ಯ ತರಗತಿಯವರಿಗೆ ಉಚ್ಚ ಶಿಕ್ಷಣವು ಕೈ ನಿಲುಕದು. ಸಂಪನ್ನರ ಮಕ್ಕಳಲ್ಲಿ ಕೆಲವರು ವಿದ್ಯೆಯನ್ನು ಅಲಕ್ಷಿಸುವರು. ಕೆಲವರನ್ನು ವಿದ್ಯೆ ಅಲಕ್ಷಿಸುವದು. ಆದಕಾರಣ ಯೋಗ್ಯ ವಿದ್ಯಾರ್ಥಿಗಳಿಗೆ ಐಹಿಕ ಆಮುಷ್ಮಿಕ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಬರುವ ಪರಿಷದದಲ್ಲಿ ಒಂದು ಸಹಾಯಕ ನಿಧಿಯನ್ನೇರ್ಪಡಿಸುವದು ಅವಶ್ಯವೆಂದು ನನ್ನದೊಂದು ಬಿನ್ನಹ.

ವಿದ್ಯೆಗೆ ಇನ್ನೊಂದು ಪ್ರಬಲ ಪ್ರತಿಬಂಧಕವು ಬಾಲವಿವಾಹ. ಚಿಕ್ಕ ಪ್ರಾಯದಲ್ಲಿ ಹುಡುಗರಿಗೆ ವಿವಾಹವಾಯಿತೆಂದರೆ ಅವರ ಮನಸ್ಸು ಪಾಲಾಗಿ ಬುದ್ಧಿಯು ವಿದ್ಯೆಯಲ್ಲೇ ಮಗ್ನವಾಗದು. ಇದಲ್ಲದೆ ಚಿಕ್ಕ ಪ್ರಾಯದ ತರುಣ ಮಕ್ಕಳಲ್ಲಿ ದೇಹ ದಾರ್ಢ್ಯವು ಎಲ್ಲಿಂದ ಇದ್ದೀತು? ಇಂಥವರು ಲೋಕ ವ್ಯವಹಾರದ ಜೀವನ ಕಲಹದಲ್ಲಿ ಹ್ಯಾಗೆ ಮೇಲಕ್ಕೆ ಬಂದಾರು? ಒಂದು ವೇಳೆ ವಿದ್ಯಪಾರಂಗತರಾದರೆ ವೃತ್ತಿಗೆ ಕೈ ಹಾಕುವಾಗಲೇ ಮಕ್ಕಳು ಮರಿಗಳ ಹೊರೆ ಬೆನ್ನಲ್ಲೇ ಇವೆ. ನಾಲ್ಕು ಕಾಸು ದುಡಿಯುವಾಗ ನಾಲ್ಕು ದುಡ್ಡು ಖರ್ಚಿಗೆ ಸಾಲದು. ಇದು ಕ್ರಮೇಣ ಸಮಾಜವು ಕೃಷವಾಗುವ ಚಿನ್ಹವೆಂದು ತೋರುವದು. ಆದ್ದರಿಂದ ಪ್ರೌಢ ವಿವಾಹವು ಸದ್ಯ ಬಹು ಪಕ್ಷಕ್ಕೆ ಅಸಹ್ಯವಾದರೂ ರಜೋದರ್ಶನಕ್ಕೆ ಮುಂಚೆ ಕನ್ಯೆಯನ್ನು ವಾಗ್ದತ್ತ ಮಾಡಬೇಕೆಂದೂ ಯಥಾ ವಿವಾಹವನ್ನು ತದನಂತರ ಮಾಡಿದರೂ ದೋಷವಿಲ್ಲವೆಂದೂ ಕಟ್ಟುಮಾಡಿದರೆ ಸಮಾಜಕ್ಕೆ ಉತ್ತರೋತ್ತರ ಲಾಭವುಂಟಾಗುವದೆಂದೂ ಬಾಲವಿಧವೆಯರ ಸಂಖ್ಯೆಯೂ ಅದರಿಂದ ಹುಟ್ಟುವ ಚಿಂತಾ ಪರಂಪರೆಯೂ ಅನಾವಶ್ಯಕವಾಗಿ ಹೆಚ್ಚಾಗದಂತಾಗುವದೆಂದೂ ನನ ದೀನ ಕೋರಿಕೆಯಾಗಿದೆ.

ತಮ್ಮ ವಿಧೇಯ,

ಸೇವಕ.

ಮುಲ್ಕಿ, ತಾ. 28—11—10.

ಗೌಡ ಸಾರಸ್ವತ ಬ್ರಾಹ್ಮಣ ಪರಿಷದ.

ಮಾನ್ಯವರ ಪತ್ರಸಂಪಾದಕ ಮಹಾಶಯರೇ,

ಗೌಡಸಾರಸ್ವತ ಬ್ರಾಹ್ಮಣ ಪರಿಷದದ ಮೂಲ ಆಲೋಚನೆಯನ್ನು ಅಭಿಮಂತ್ರಿಸಿ ಊರಿಂದೂರಿಗೆ ಹೋಗಿ ಅದರ ಉದ್ದಿಶ್ಯೋಪಯೋಗಗಳನ್ನು ೧೯೦೭ನೇ ಇಸವಿ ಲಾಗಾಯಿತು ೧೯೧೦ನೇ ವರಿವಿಗೂ ತಿಳಿಯಹೇಳಿ ಪರಿಷದವನ್ನು ಸ್ಥಾಪಿಸುವದರಲ್ಲಿ ಶ್ರಮಪಟ್ಟ ಪ್ರಮುಖರಲ್ಲಿ ಒಬ್ಬರಾದ ನಮ್ಮ ಕ್ಷೇತ್ರದ ಮುಂದಾಳುಗಳಾದ ರಾ. ಬಂಗ್ಲೆಕಾರರು ಪ್ರಾಯಶಃ ಎರಡು ವರುಷಗಳಾರಭ್ಯ ಪರಿಷದಗಳ ವಿಷಯ ತಮ್ಮ ಮನೋಗತವನ್ನು ಬಹಿರಂಗವಾಗಿ ವ್ಯಕ್ತಪಡಿಸದಿರುವರು. ಇದೇ ತಿಂಗಳಲ್ಲಿ ಗೋಮಂತಕದಲ್ಲಿ ನೆರೆದು ಬರುವ ಸಂಯುಕ್ತ ವ ವಿಭಕ್ತ ಪರಿಷದಗಳ ವಿಜ್ಞಾಪನಾ ವ ಆಮಂತ್ರಣ ಪತ್ರಗಳು ಇಲ್ಲಿ ಈಗೀಗಲೇ ಪ್ರಸರಿಸಲ್ಪಡುತ್ತಿವೆ. ಈ ಸಂದರ್ಭದಲ್ಲಿ ಉಭಯ ಪರಿಷದಗಳ ಆಗಮನ ಪತ್ರಗಳನ್ನು ನಾವು ಸರಿಯಾಗಿ ಗ್ರಹಿಸುವಂತೆ ರಾ. ಬಂಗ್ಲೆಕಾರರು ಈ ಪರಿಷದಗಳ ವಿಷಯ ಯಾವ ರೀತಿ ಅಭಿಪ್ರಾಯ ಪಡುವರೆಂಬದು ತಿಳಿಯುವುದು ಅವಶ್ಯಕವಾದದ್ದರಿಂದ ತಮ್ಮ ಅಮೂಲ್ಯ ಪತ್ರಿಕೆಯ ಮುಖಾಂತರ ಅವರ ಅಭಿಪ್ರಾಯವನ್ನು ಶೀಘ್ರದಲ್ಲಿಯೇ ನಿರೀಕ್ಷಿಸುತ್ತಿರುವ, ತಮ್ಮ ವ ಸಮಾಜದ ಹಿತಚಿಂತಕ.,

B.

ಕಟಿಲ ದೇವಸ್ಥಾನದ ಸಂಪ್ರೋಕ್ಷಣೆ.

ಸ್ವದೇಶಾಭಿಮಾನಿ ಪತ್ರಿಕಾಕರ್ತರೇ, ನಿಮ್ಮ ನವಂಬರ ತಾ. 18ನೇ ಸಂಚಿಕೆಯ 7ನೇ ಪುಟದಲ್ಲಿ ತೋರುವ ಸಂಪ್ರೋಕ್ಷಣೆ ವಿಷಯದ ಬಾತಮಿ ಕುರಿತು ನನ್ನದೊಂದು ಮಾತಿಗೆ ಎಡೆಗೊಟ್ಟು ಪ್ರಕಟಿಸುವಂತೆ ಪ್ರಾರ್ಥಿಸುತ್ತೇನೆ.

ಶ್ರೀ ಕಟಿಲ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಅಂಬಲವು ದೇವರ ಗರ್ಭಗ್ರಹಕ್ಕೆ ಸಂಪರ್ಕವಾಗಿರುವುದರಿಂದ ತತ್ ಪೂರ್ವದ ಲಾಗಾಯಿತು ಅಂಬಲಕ್ಕೆ ಆಗಮ ಶಾಸ್ತ್ರರೀತ್ಯಾ ಬಿಲ್ಲವರು ಬರುವ ಪದ್ಧತಿ ಇಲ್ಲ. ಹೀಗಿರುತ್ತಾ ಮಂಗಳೂರಿನಿಂದ ದೇವರ ಸನ್ನಿಧಿಗೆ ಬಂದಿರುವ ಒಬ್ಬ ಬಿಲ್ಲವನು ಒಳಗಿನ ಅಂಬಲಕ್ಕೆ ಬಂದ ನಂತರ ಆತನ ಜಾತಿಯನ್ನು ತಿಳದು ಅನಿರ್ವಾಹವಾದ ಪ್ರಾಯಶ್ಚಿತ್ತಗಳಿಗೆ ಖರ್ಚು ಹೆಚ್ಚಿಗೆ ಬೇಕೆಂದು ಗೊತ್ತಿದ್ದರೂ ಆಡಳಿತೆದಾರರು ರೂಪಾಯಿ 100ಕ್ಕೆ ಆತನಿಂದ ಜವಾಬ್ದಾರಿ ಪಡದು ಕಳುಹಿಸಿದರು. ಆ ದಿನ ಪೂಜೆ ಆಗಬೇಕಾದರೆ ಪ್ರಾಯಶ್ಚಿತ್ತ ರೂಪವಾಗಿ ಸವತ್ಸಗೋದಾನ, ಸಪ್ತಶುದ್ಧಿ, ನವಕಪ್ರದಾನ ಮಾಡಿರುವದರ ಬಗ್ಯೆ ರೂಪಾಯಿ 20 ಖರ್ಚು ಆಗಿರುತ್ತದೆ. ಅನಂತರ ಪ್ರತಿ ದಿವಸವೂ ಪ್ರಾಯಶ್ಚಿತ್ತಗಳನ್ನು ಮಾಡಿ ಪೂಜೆ ಮಾಡಿರುವದಲ್ಲದೆ ಸದರಿ ದೇವಸ್ಥಾನದಲ್ಲಿ ಮಾಮೂಲು ಪ್ರಕಾರ ಆಗತಕ್ಕ ರಂಗಪೂಜಾದಿಗಳು ಬಾಕಿಯಿಟ್ಟು ಇದೇ ಕಳದ ತಾ. 24, 25, 26, ಈ ಮೂರು ದಿವಸಗಳಲ್ಲಿ ಶುಮಾರು ರೂಪಾಯಿ 175 ಮಿಕ್ಕಿ ಖರ್ಚು ತಗಲುವ ಆಗಮ ಶಾಸ್ತ್ರ ಪ್ರಕಾರ ಪ್ರಾಸಾದ ಶುದ್ಧಿ ಮೊದಲಾದ ಬ್ರಹ್ಮಕಲಶ ಬ್ರಾಹ್ಮಣ ಸಂತರ್ಪಣೆ ಮಹೋತ್ಸವ ಮೊದಲಾದವುಗಳನ್ನು ನಡಿಸಿರುತ್ತಾರೆ.

ಅಷ್ಟೆಲ್ಲ ಖರ್ಚು ತಗಲಿದರೂ ಅವನ ಹಾಲ್‌ಹವಾಲೆಯನ್ನೂ ಬಡಸ್ಥಿತಿಯನ್ನೂ ಕೇಳಿ ರೂಪಾಯಿ 75 ಮಾತ್ರ ಪಡಕೊಂಡು ಬಾಕಿ ಐವಜು ಮಾಫಿ ಬಿಟ್ಟು ಮಿಕ್ಕುಳಿದ ಖರ್ಚನ್ನು ಶ್ರೀ ದೇವರ ಭಂಡಾರದಿಂದಲೇ ಮಾಡಿ ಸದರಿ ಕೆಲಸಗಳನ್ನು ಪೂರೈಸಿರುತ್ತಾರೆ.

ಈ ವಿಷಯಗಳಲ್ಲಿ ಬಾತಮಿದಾರರು ಬರದ 14 ಆಣೆ ಯಾ $1\frac{1}{4}$ ರೂಪಾಯಿ ಖರ್ಚಿನಿಂದ ಮಾಡುವ ಶುದ್ಧೀಕರಣವನ್ನು ಕೇಳಿ ಆಶ್ಚರ್ಯಪಡುತ್ತೇನೆ. ಈ ಪ್ರಕಾರದ ಶುದ್ಧೀಕರಣಗಳನ್ನು ನಡಿಸುವ ಬ್ರಾಹ್ಮಣರ 'ನಮ್ಮ ದೇವಸ್ಥಾನ' ಎಂಬದು ಯಾವುದು ಮತ್ತು ಆ ದೇವಸ್ಥಾನದ ಅಂಬಲಕ್ಕೆ ಬಿಲ್ಲವನು ಬಂದರೆ ಯಾವ ಶುದ್ಧೀಕರಣಕ್ಕೆ ಯಾವ ಶಾಸ್ತ್ರೋಕ್ತ ಪ್ರಕಾರ ಅಷ್ಟು ಚಿಲ್ಲರೆ ಖರ್ಚು ತಗಲುವದೆಂಬದನ್ನು ಪತ್ರಿಕಾ ಮೂಲಕ ತಿಳಿಸಿದ್ದಲ್ಲಿ ಸಂತೋಷವಿತ್ತು. ಇನ್ನು ಮುಂದೆ ಬಹಳ ಸುಲಭೋಪಾಯದ ಶುದ್ಧೀಕರಣ ಮಾಡುವ ಯತ್ನವು ಎಲ್ಲರಿಗೂ ತತ್‌ಮೂಲಕ ತಿಳಿಯುವುದರಿಂದ ಲೋಕೋಪಕಾರವಾಗುತ್ತಿತ್ತು.

ಶ್ರೀ ಕಟಿಲ ದುರ್ಗಾ ಪರಮೇಶ್ವರಿ ಅಮ್ಮನವರ ಭಜಕ.

ಅಳಿಯ ಸಂತಾನದವರ ವಿಭಾಗ ಮಸೂದೆ.

(ಕಳದ ಸಂಚಿಕೆಯಿಂದ ಮುಂದೆ ಸಾಗಿಸಿದ್ದು.)

ಕಡೆಗೆ ಮಸೂದೆಯನ್ನು ಆದರಿಸುವ ಪಕ್ಷದವರ ಬಗೆಯನ್ನು ಶೋಧಿಸೋಣ. ಅವರು ಹೇಳುವದೇನಂದರೆ: ನಿರಂಕುಶ ಪ್ರಭುವು ಶಾಸ್ತ್ರೋಕ್ತಿಗಳನ್ನೂ ನ್ಯಾಯ ನಿಬಂಧನೆಗಳನ್ನೂ ಗಾಳಿಗೆಬಿಟ್ಟು ಪ್ರಜೆಗಳ ಹಿತವನ್ನೆಣಿಸದೆ ಮನಬಂದಂತೆ ಹೇಗೆ ತನ್ನ ರಾಜ್ಯವನ್ನು ಆಳುತ್ತಿರುವನೋ ಹಾಗೆಯೇ ಅಳಿಯಸಂತಾನ ಕುಟುಂಬದ ಯಜಮಾನನು ತನ್ನ ಕರ್ತವ್ಯವನ್ನು ಮರೆತು ಚಪಲಚಿತ್ತನಾಗಿ ಕಿರಿಮೆಂಬರರನ್ನು ಆಳುತ್ತಿರುವನು. ಮುಂದಾಗಿ ತನ್ನ ಹೆಂಡತಿ ಮಕ್ಕಳು ನಂತರ ತನ್ನ ಒಡಹುಟ್ಟುಗಳು ಆತನ ಪ್ರೀತಿಪಾತ್ರರಾಗುವರಲ್ಲದೆ ಮಿಕ್ಕುಳಿದವರನ್ನು ಕಣ್ಣೆತ್ತಿ ನೋಡನು. ಆಸ್ತಿಯಿಂದ ಎಷ್ಟು ಉತ್ಪತ್ತಿಯು ಹುಟ್ಟಿದರೂ ಕುಟುಂಬದವರಿಗೆ ಬರೇ ಅನ್ನವನ್ನು ಮಾತ್ರ ಕೊಟ್ಟು ಮಿಕ್ಕುಳಿದದ್ದನ್ನು ಯಜಮಾನನು ಹೇಗೆ ವೆಚ್ಚ ಮಾಡಿದರೂ ಮಾಡಬಹುದು. ಒಂದುವೇಳೆ ಯಜಮಾನನು ಕೈಲಾಗದವನಾದ ಪಕ್ಷದಲ್ಲಿ ಬಲತ್ಕಾರವುಳ್ಳ ಕೆಲವು ಮೆಂಬರರು ಮಾತ್ರ ಆಸ್ತಿಯ ಹುಟ್ಟುವಳಿಯನ್ನು ಅಪಹರಿಸಿ ತಿನ್ನುವರು. ಉಳಿದವರು ಮಿಣಿ ಮಿಣಿ ನೋಡುತ್ತಾ ಗುರುಗುಮ್ಮನಿರಬೇಕಾಗುವದು. ಆ ದೆಶೆಯಿಂದ ಮನೆಯಲ್ಲಿ ತಂತಮ್ಮೊಳಗೆ ಮನಃಕ್ಲೇಶವೂ ಕಲಹಗಳೂ ತಲೆದೋರಿ ತಾವು ತಾವು ಹೊಡೆದಾಡಿಕೊಂಡು ಕೋರ್ಟು ಕಚೇರಿಗಳಲ್ಲಿ ಅನೇಕ ವ್ಯವಹರಣೆಗಳು ನಡೆದು ಹೇರಳ ಹಣ ವೃಥಾವ್ಯಯವಾಗುವದು. ಮನೆಯಲ್ಲಿ ಸುಖವೆಂಬದು ಮಾಯವಾದಂತಾಗುವದು. ತನಗೆ ಯಾರು ಯಾವಾಗ ವಿಷಪ್ರಯೋಗ ಮಾಡುತ್ತಾರೋ ಎಂಬ ಸಂಶಯದಿಂದ ಯಜಮಾನನು ಆಹಾರ ಪಾನಾದಿಗಳನ್ನು ನಿರ್ಭೀತನಾಗಿ ಪರಿಗ್ರಹಿಸಲಾರನು. ಎಲ್ಲಿ ತನ್ನನ್ನು ಹೊಡೆಯುವದಕ್ಕೆ ಅಣಿಗೊಳಿಸಿರುವರೋ ಎಂದು ಭಯಗ್ರಸ್ತನಾಗಿ ಮನಬಂದಲ್ಲಿ ಹೋಗಲಂಜುವನು. ಸಮುಷ್ಟಿ ಹಕ್ಕಿನ ಆಸ್ತಿಯ ಉತ್ಪತ್ತಿಯ ಅಧಿಕಾಂಶವನ್ನು ಒಬ್ಬನೇ ಉಪಯೋಗಿಸಿಕೊಳ್ಳುವನೆಂದು ಕಿರಿಮೆಂಬರರು ಮನಸ್ಸಿನಲ್ಲಿ ಕುದಿಯುತ್ತಾ ನಮಗಿಲ್ಲದಿದ್ದದ್ದು ಅವನಿಗ್ಯಾಕೆ ಸಿಕ್ಕಬೇಕೆಂದು ಆಸ್ತಿಗೆ ತಮ್ಮಿಂದಾಗುವಷ್ಟು ಕೆಡಕನ್ನುಂಟುಮಾಡುವ ಹಂಚಿಕೆಗಳನ್ನು ಹುಡುಕ ತೊಡಗುವರು. ಮನೆಯ ಕೆಲಸಗಳಿಗೆ ಮನಸ್ಸು ಕೊಡದೆ ಏನೊಂದು ವೃತ್ತಿಯಿಲ್ಲದೆ ಮೈಗಳ್ಳರಾಗಿ ಅಲೆದಾಡುತ್ತಾ ದುರ್ವ್ಯಸನಗಳಿಗೆ ಪಕ್ಕಾಗಿ ತಮ್ಮ ಬಾಳ್ವೆಗಳನ್ನು ಕೆಡಿಸಿಕೊಳ್ಳುವರು. ಈ ಅಪಹಾಸ್ಯಕರವಾದ ಸ್ಥಿತಿಯು ಈ ವರೇಗೆ ನಡೆದು ಬಂದದ್ದು ಸಾಕು. ಇನ್ನಾದರೂ ಇದನ್ನು ಸಮಾಪ್ತಿಗೊಳಿಸಬೇಕು.

ಕುಟುಂಬದ ಪ್ರತಿಯೊಂದು ಶಾಖೆಗೆ ಪಾಲು ಕೇಳುವ ಹಕ್ಕನ್ನು ಕೊಟ್ಟರೆ ತಮಗೆ ಸಿಕ್ಕಿದ ಪಾಲಿನ ಹಾನಿ ವೃದ್ಧಿಯು ತಮ್ಮನ್ನೇ ಬಾಧಿಸುವದರಿಂದ ಪಾಲಾದ ಶಾಖೆಗಳಿಗೆ ತಂತಮ್ಮ ಪಾಲನ್ನು ವೃದ್ಧಿಗೊಳಿಸುವ ಕಾಂಕ್ಷೆಯು ಹುಟ್ಟದಿರದು. ಶಾಖೆಗಳೊಳಗೆ ನಾನು ಮೇಲು ತಾನು ಮೇಲೆಂಬ ಸ್ಪರ್ಧೆಯು ಜನಿಸಿ, ಚಟುವಟಿಕೆ, ಉದ್ಯಮ, ದೀರ್ಘ ಪ್ರಯತ್ನ ಮಿತವ್ರಯ ಮೊದಲಾದ ಸುಗುಣಗಳಿಗೆಡೆಯಾಗಿ ಮೊದಲು ನಾಲ್ಕೈದು ಬಹು ದೊಡ್ಡ ಆಸ್ತಿಗಳಿದ್ದಲ್ಲಿ ಹತ್ತಿಪ್ಪತ್ತು ದೊಡ್ಡ ದೊಡ್ಡ ಆಸ್ತಿಗಳಾಗದಿರವು. ಈಗ ದೊಡ್ಡ ಆಸ್ತಿಯುಳ್ಳವರು ಸ್ವಲ್ಪಮಾತ್ರ ಮನೆಗೆ ಸಾಗುವಳಿ ಮಾಡುತ್ತಾ ಹೆಚ್ಚಿನ ಅಂಶವನ್ನು ಗೇಣಿಗೆ ಕೊಡುವರು. ವಕ್ಲುಗಳು ಬಹುಪಕ್ಷದಲ್ಲಿ ಭಂಡವಾಳವಿಲ್ಲದ ಬಡವರಾದ್ದರಿಂದ ಗದ್ದೆಗಳು ಚೆನ್ನಾಗಿ ಫಲಿಸುವಂತೆ ಗೊಬ್ಬರ ಮುಂತಾದ್ದನ್ನು ಸಿದ್ಧಗೊಳಿಸಲಾಸ್ಪದವಿಲ್ಲದೆ ಬೆಳೆಯು ಸಮೃದ್ಧಿಯಾಗದು. ಅವರು ನಿದ್ರಾಹಾರವಿಲ್ಲದೆ ಅಹೋರಾತ್ರೆ ಕಾಯಕಷ್ಟದಿಂದ ಕೂಡಿಸಿಟ್ಟ ಇಡೀ ವರುಷದ ಉತ್ಪತ್ತಿಯನ್ನು ಧನಿಗೆ ಗೇಣಿಕೊಟ್ಟು ಸದಾ ದರಿದ್ರಾವಸ್ಥೆಯಲ್ಲಿರುವರು. ಅದಲ್ಲದೆ ಹಾಗೂ ಗೇಣಿಗೆ ಭರ್ತಿಯಾಗದಿದ್ದರೆ ತಮ್ಮ ಎತ್ತುಕೋಣ ಮುಂತಾದ ಬೇಸಾಯ ಸಾಮುಗ್ರಿಗಳನ್ನು ವಿಕ್ರಯಿಸಿ ಧನಿಗೆ ಕೊಟ್ಟು ನಿರಾಧಾರಿಗಳಾಗಿ ಘಟ್ಟಹತ್ತುವರು. ಬೇರೆ ವಕ್ಲು ಹುಡುಕಬೇಕಾಗುವದು. ಹೀಗೆ ಭೂಮಿಯು ಬೇಗ ಬೇಗ ಕೈಬದಲಾಗುವದರಿಂದ ವಕ್ಲುಗಳೂ ವ್ಯವಸಾಯವೂ ಬಹು ನಿಕೃಷ್ಟ ಸ್ಥಿತಿಯಲ್ಲಿರುವವು. ಪಾಲಾದರೆ ಅವರವರ ಪಾಲನ್ನು ಅವರವರು ಸಾಗುವಳಿ ಮಾಡಲಿಕ್ಕೆಡೆಯಾಗಿ ವ್ಯವಸಾಯವು ಶೋಭಿಸಿ ಸಂಪತ್ತು ಹೆಚ್ಚುವದು. ಈಗ ವಕ್ಲುಗಳಾಗಿರುವವರಿಗೆ ಆ ಸಾಗುವಳಿ ಸಂಬಂಧವಾದ ಕೆಲಸಗಳು ದೊರೆತು ಅವರ ಸ್ಥಿತಿಯೂ ಕೆಡದಂತಾಗುವದು.

ಮಸೂದೆಯ ವಿಷಯ ಅಧಿಕಾರಿಗಳು ಹೆಚ್ಚಾಗಿ ಯಜಮಾನರನ್ನೇ ಕೇಳಿದ್ದು ಕೇವಲ ಅನುಚಿತವು. ತನಗೆ ಕೆಡಕನ್ನುಂಟುಮಾಡುವ ಬದಲಾವಣೆಯನ್ನು ಸಂಸಾರ ಪಾಶಬದ್ಧನಾದ ಮನುಷ್ಯನು ಎಂದೂ ಪ್ರೋತ್ಸಾಹಿಸನು. ಮಸೂದೆಯಿಂದ ಲಾಭವಿರುವ ಕಿರಿಮೆಂಬರರನ್ನು ಗಣನೆಗೆ ತಾರದಿದ್ದದ್ದು ತೀರಾ ಅನ್ಯಾಯವು. ಹೀಗೆ ಮಾಡಿದುದರಿಂದ ಮಸೂದೆಯನ್ನು ಆದರಿಸುವವರನೇಕರಿರುವರೆಂಬದು ಸರಕಾರದವರಿಗೆ ತಿಳಿಯದಿರಲು ಕಾರಣವಾಯಿತು. ಬಾಯಿ ತೆರೆಯಲಿಕ್ಕಾಸ್ಪದವಿಲ್ಲದೆ ಮನಸ್ಸಿನಲ್ಲಿ ತಪ್ಪಿಸುತ್ತಿರುವ ಮಸೂದೆಯ ಪಕ್ಷದವರ ಸಂಖ್ಯೆಯು ವಿರುದ್ಧಪಕ್ಷಕ್ಕಿಂತ ಅತ್ಯಧಿಕವಾಗಿದೆಂದು ಹೇಳಬೇಕಾದ್ದಿಲ್ಲ. ಆದರೆ ಮಸೂದೆಯು ಇದ್ದಂತೆ ಕಾನೂನಾಗುವದಕ್ಕೆ ಅವರು ಕೂಡಾ ಆಕ್ಷೇಪಿಸುವರು. ಅದರಲ್ಲಿ ಒಂದೆರಡು ತಿದ್ದುಪಾಟುಗಳಾಗಬೇಕೆನ್ನುವರು. ಅವ್ಯಾವವಂದರೆ:—

1. ಮಸೂದೆಯ IIIನೇ ಕಲಮಿನಲ್ಲಿ ಕಾಣಿಸಿದ ಪ್ರಕಾರ ಪಾಲಾಗುವ ಸಂದರ್ಭದಲ್ಲಿ ತಲೆ ಪ್ರಕಾರ ಪಾಲನ್ನೆಣಿಸಬೇಕು. ನಮ್ಮ ಜಿಲ್ಲೆಯಲ್ಲಿ ಎಲ್ಲರ ಒಪ್ಪಿಗೆ

ಯಿಂದ ಪಾಲಾಗುವದಾದರೆ ಬುಡ ಪ್ರಕಾರ ಪಾಲನ್ನೆಣಿಸುವ ಸಂಪ್ರದಾಯವಾಗಿರುವದು. ತಲೆ ಪ್ರಕಾರ ಒಳ್ಳೆಯದೆಂದು ಒಬ್ಬನೂ ಬುಡಪ್ರಕಾರ ಒಳ್ಳೆಯದೆಂದು ಇನ್ನೊಬ್ಬನೂ ಸಾಧಿಸಬಹುದು. ಉಭಯ ಕಡೆಗೂ ಒಳ್ಳೇ ಕಾರಣಗಳಿರುವವು. ಆದರೆ ವಾಡಿಕೆಯಲ್ಲಿ ಫಕ್ಕನೇ ಹಿಂದೆ ತಿಳಿಯದ ಬದಲಾವಣೆಗಳಾದರೆ ಜನರು ತಲ್ಲಣಗೊಳ್ಳುವರು. ಆದುದರಿಂದ ಬುಡಪ್ರಕಾರವೇ ಪಾಲನ್ನೆಣಿಸಬೇಕು.

2. ಗಂಡು ಮತ್ತು ಹೆಣ್ಣು ಮಕ್ಕಳಿದ್ದ ತಾಯಿಯು ಸತ್ತ ನಂತರ ಆ ಮಕ್ಕಳು ಪಾಲುಮಾಡಿಕೊಳ್ಳ ಬಹುದೆಂದು ಮಸೂದೆಯಿಂದ ತಿಳಿದುಬರುತ್ತದೆ. ಹೆಚ್ಚಾಗಿ ಒಂದೇ ತಾಯಿಯ ಮಕ್ಕಳಲ್ಲಿ ಅಂತಃ ಕಲಹಗಳುಂಟಾಗವು. ಯಜಮಾನನು ತನ್ನ ಒಡಹುಟ್ಟುಗಳನ್ನು ಏಕರೀತಿಯಾಗಿ ಪಕ್ಷಪಾತವಿಲ್ಲದೆ ನಡೆಯಿಸುವನೆಂದು ನಾವು ಭಾವಿಸಬೇಕು. ಅದಲ್ಲದೆ ಹೀಗೆ ಪಾಲು ಮಾತಬಿಟ್ಟರೆ ಆಸ್ತಿಗಳು ಬಹುಬೇಗನೇ ಚಿಕ್ಕ ಚಿಕ್ಕ ತುಂಡುಗಳಾಗುವವು. ಆದುದರಿಂದ ಮೂಲ ಸ್ತ್ರೀಯ ಗಂಡು ಮಕ್ಕಳು ಜೀವಂತರಾಗಿರುವವರೇಗೆ ಹೆಣ್ಣು ಮಕ್ಕಳಿಗೆ ಪಾಲು ಕೇಳುವ ಹಕ್ಕು ಇರಕೂಡದು. ಒಂದು ವೇಳೆ ಅವರು ಕೂಡಿ ನಡೆಯದಿದ್ದರೆ ಆಸ್ತಿಯ ವರುಷಾವಧಿಯ ಹುಟ್ಟುವಳಿಯನ್ನು ಅವರೊಳಗೆ ಸರಿಯಾಗಿ ಪಾಲುಮಾಡಿಕೊಳ್ಳಬೇಕು.

ಈ ತಿದ್ದುಪಡಿಗಳಿಂದ ಮಸೂದೆಯು ಕಾನೂನಾದರೆ ಅಳಿಯ ಸಂತಾನ ಕುಟುಂಬದ ವ್ಯತಿಕ್ರಮಗಳೆಲ್ಲವೂ ಅದೃಶ್ಯವಾಗಿ ಸುಕ್ಷೇಮವಾಗುವದೆಂಬದು ವಾಸ್ತವಿಕವು. ಅಲ್ಪಸ್ವಲ್ಪ ವ್ಯತಾಸಗಳನ್ನು ಮರೆತು ಬಹುಪಕ್ಷದವರಂತೆ ಒಪ್ಪಿಕೊಳ್ಳುವದು ಕಾರ್ಯಧುರಂಧರರ ಲಕ್ಷಣವು. ಈ ಅಪೂರ್ವವಾದ ಸಂದರ್ಭವನ್ನು ಹೋಗಲಾಡಿಸಿಕೊಂಡರೆ ಮುಂದೇನಾಗುವದೋ ತಿಳಿಯದು. ಆದುದರಿಂದ ದಕ್ಷಿಣಕನ್ನಡ ಜಿಲೆಯ ಮಟ್ಟಿಗಾದರೂ ಮಸೂದೆಯಲ್ಲಿ ಈ ಎರಡು ತಿದ್ದುಪಾಟುಗಳಾದರೆ ಅನೇಕರಿಗೆ ಸಮ್ಮತಿಯುಂಟೆಂದು ಯುಕ್ತಾಧಿಕಾರಿಗಳಿಗೆ ಬಿನ್ನವತ್ತಲೆಯನ್ನು ಬರೆದುಕೊಳ್ಳಬೇಕಾಗಿ ನಮ್ಮಲ್ಲಿ ಕೆಲವರು ಆಲೋಚಿಸಿರುವರು. ನಾವು ಏನೂ ಮಾಡದೆ ಅಸಡ್ಡೆಯಿಂದಿದ್ದರೆ ನ್ಯಾಯನಿರ್ಮಾಣ ಸಭೆಯವರು ಮಸೂದೆಯನ್ನು ಆದರಿಸುವವರಿಲ್ಲವೆಂದು ತಿಳಿದು ಅದನ್ನು ತೆಗದುಹಾಕಲೂ ಬಹುದು. ಮಸೂದೆಯಿಂದ ಹೆಚ್ಚಿನ ಪ್ರಯೋಜನವಾದೀತೆಂದು ತಿಳಿದು ಅದನ್ನು ಇದ್ದಂತೆ 'ಪಾಸ್' ಮಾಡಲೂ ಬಹುದು. ಆದುದರಿಂಧ ಮೇಲೆ ಹೇಳಿದ ತಿದ್ದುಪಾಟುಗಳಿಗೊಪ್ಪುವವರು ಸ್ವದೇಶಾಭಿಮಾನಿಯ ಪತ್ರಿಕಾರ್ತರು ನೋಡಿ ಈ ಬಾತ್ಮಿದಾರರಿಗೆ ತಲಪಿಸುವದೆಂದಾಗಲಿ ಶೀಘ್ರದಲ್ಲಿ ಬರೆದು ಸೂಚಿಸಬೇಕು. ಬಂಟ

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

ಕ್ರಮ ನಂಬ್ರ 430/1910

ಮಾರ್ಟಿನ್ ಕುತ್ತಿಂಞ ಕೂಡಾ 3 ಜನರು . . . . . . ವಾದಿಯರು.

ಮತ್ತು

ಜೂಜೆ ಮಿಂಗೇಲ್ ಸೋಜಾ ಕೂಡಾ 10 ಜನರು . . . ಪ್ರತಿವಾದಿಯರು.

ಇವರೊಳಗೆ.

ಸರ್ವ ಜನರಿಗೆ ತಿಳಿಯಪಡಿಸುವದೇನಂದರೆ:—

ಮೇರಮಜ್ಜು ಗ್ರಾಮದ ಜೇಸುಮೇರಿ ಜುಜಿ ಇಗರ್ಜಿಯ 1909ನೇ ಇಸವಿಯಲ್ಲಿ ಆಡಳ್ತೆ ನೋಡಿದ ಕಾರ್ಯವಹಿಗಳ ಮೇಲೂ, 1910ನೇ ಇಸವಿಯಲ್ಲಿ ಆಡಳ್ತೆ ನೋಡುವ ಕಾರ್ಯವಹಿಗಳ ಮೇಲೂ ಸದ್ರಿ ಇಗರ್ಜಿಯ ಅಧಿಕಾರರ ಮೇಲೆ ಸಹಾ ಸದರಿ ಇಗರ್ಜಿಯು ಮತ್ತು ಅದಕ್ಕೆ ಸಮ್ಮಂಧಪಟ್ಟ ಎಲ್ಲಾ ಸ್ಥಿರಚರಸೊತ್ತುಗಳು ಮತ್ತು ಹಣಗಳು ದೇವರ ಪೂಜೆ ಸರಿಯಾಗಿ ನಡಿಯುವಂತೆ ರೋಮನ್ ಕೆಥೋಲಿಕ ಮತದ ಪೆಂಶ್ಯನರವರ (ಹತ್ತು ಜನರ) ಪ್ರಯೋಜನಕ್ಕೋಸ್ಕರ ನೇಮಿಸಿದ ಟ್ರಸ್ಟಿ ಯಾನೆ ಉಂಬಳಿಯಾಗಿರುತ್ತದೆಂದು ಡಿಕ್ಲೇರೇಶನ್ ಕೇಳಿಯೂ; 1909ನೇ ಇಸವಿಯ ಬಾಬ್ತು ಇಗರ್ಜಿಯ ಲೆಕ್ಕಗಳನ್ನು ಸದರಿ ಇಗರ್ಜಿಯ ಜೂಂತ ಸಭೆಯ ಮುಂದೆ ಹಾಜರು ಪಡಿಸಿದಾಗ್ಯೆ ಸದರಿ ಸಭೆಯವರು ಸರಿಯಾಗಿವೆ ಎಂತ ಒಪ್ಪಿ ಮಂಜೂರು ಮಾಡಿದ್ದಾರೆಂಬ ಹಾಗೆ ಜೂಂತ ಪುಸ್ತಕದಲ್ಲಿ ಬರದಿಟ್ಟ 1-1-1910ನೆ ಮತ್ತು 10-8-1910ನೆ ತಾರೀಕಿನ ಪ್ರೊಸಿಡಿಂಗ್ಸುಗಳು ನ್ಯಾಯವಾದ್ದಲ್ಲ ಮತ್ತು ಸಿಂಧು ಆಗತಕ್ಕದ್ದಲ್ಲವೆಂದು ಡಿಕ್ಲೇರೇಶನ್ ಆಗಬೇಕಾಗಿಯೂ; ಇಗರ್ಜಿಗೆ ಸಮಂಧಪಟ್ಟ ಎಲ್ಲಾ ಆಸ್ತಿಯ ಮತು ಪ್ರತಿವಾದಿರ ಸ್ವಾಧೀನಕ್ಕೆ ಬಂದ ಯಾ ಅವರು ಇಷ್ಟರ ವರೇಗೆ ವಸೂಲು ಮಾಡಿದ ಹಣಗಳ ಸರಿಯಾದ ಲೆಖ್ಖವನ್ನು ಪ್ರತಿವಾದಿರ್ಭು ಕೊಡತಕ್ಕದೆಂದು ಹುಕುಂ ಆಗಬೇಕಾಗಿಯೂ; ಪ್ರತಿವಾದಿರು ವಸೂಲು ಮಾಡದೆ ಇದ್ದ ಯಾ ಇಗರ್ಜಿಗೋಸ್ಕರ ಸರಿಯಾಗಿ ಉಪಯೋಗಿಸದೆ ಇದ್ದ ಇಗರ್ಜಿಯ ಫಂಡಿಗೆ ಬರಬೇಕಾದ ಹಣಗಳನ್ನು ಪ್ರತಿವಾದಿರು ಯಾ ಅವರ ಪೈಕಿ ಯಾರು ಜವಾಬ್ದಾರರೆಂತ ಕೋರ್ಟಿನವರು ಇತ್ಯರ್ಥಿಸುತ್ತಾರೋ ಅಂತವರು ಕೋರ್ಟಿನವರು ವಿಧಿಸಬಹುದಾದ ಶರ್ತಗಳಿಗೆ ಅನುಸಾರವಾಗಿ ಇಗರ್ಜಿಗೋಸ್ಕರ ವಾದಿರ ವಶವಸೂಲುಕೊಡಬೇಕೆಂದು ಹುಕುಂ ಆಗಬೇಕಾಗಿಯೂ, ಮಾರ್ಟಿನ್ ಕುಂತಿಂಞ ಕೂಡಾ 3 ಜನರು ತಮ್ಮ ಬಗ್ಯೊ ಸದರಿ ಇಗರ್ಜಿಯಲ್ಲಿ ಮತ್ತು ಅದರ ಆಸ್ತಿಗಳಲ್ಲಿ ಸಮ್ಮಂಧ ಉಳ್ಳ ಉಮಜೂರು ಪೆರಿಶಿನ ಭೇರೆ ಅನೇಕ ಪೆರಿಶ್ಯನವರ ಬಗ್ಯೊ ವ್ಯಾಜ್ಯ ದಾಕ್ಲು ಮಾಡಿರುತ್ತಾರೆ.

ಆದುದರಿಂದ ಸದರಿ ಇಗರ್ಜಿಯಲ್ಲಿ ಸಮ್ಮಂಧಪಟ್ಟವರು ಸದರಿ ವ್ಯಾಜ್ಯವನ್ನು ಉಮಜೂರು ಪೆರಿಶನ ರೋಮನ್ ಕೆಥೋಲಿಕ ಮತದ ಹತ್ತು ಸಮಸ್ತರ ಕಡೆಯಿಂದ ಮೇಲಿನ 3 ಜನ ವಾದಿರು ನಡಿಸುವ ವಿಷಯದಲ್ಲಿ ಆಕ್ಷೇಪ ಉಳ್ಳವರು ವ ಸದ್ರಿ ವ್ಯಾಜ್ಯದಲ್ಲಿ ಕಕ್ಷಿಯಾಗಿ ಶೇರಬೇಕೆಂತ ಅಪೇಕ್ಷೆಯುಳ್ಳವರು ಇದೇ ಬರುವ 1911ನೇ ಇಸವಿ ಜನವರಿ ತಾರೀಕು 6ರ ವಳಗೆ ಕೋರ್ಟಿಗೆ ಜಾಹೀರು ಮಾಡಿಕೊಳ್ಳತಕ್ಕದ್ದು.

B. V. Krishna Rau,

District Munsiff.

ವಿದೇಶ ವೃತ್ತಾಂತ.

ಜಾರ್ಜ ಸಾರ್ವಭೌಮರ ಪಟ್ಟಾಭಿಷೇಕವು ಬರುವ ಜೂನ್ ತಿಂಗಳ ೨೨ನೇ ತಾರೀಕಿನಲ್ಲಿ ವೆಸ್ಟ್ ಮಿನಿಸ್ಟರ್ ಅರಮನೆಯ ಮಂದಿರದಲ್ಲಿ ಜರಗುವುದೆಂದು ಪ್ರಕಟಿಸಲ್ಪಟ್ಟಿರುವರು.

ಮಿಂಟೋ ಪ್ರಭುಗಳವರು ಹಿಂದೂಸ್ಥಾನದಲ್ಲಿ ಮಾಡಿದ ಮಹಾ ಉದ್ಯೋಗದ ಉಪಕಾರಾರ್ಥವಾಗಿ ಲಂಡನಿನಲ್ಲಿ ಫ್ರಿಡಮ್ ಒಫ್ ದಿ ಸಿಟಿ ಒಫ್ ಲಂಡನ್ ಎಂಬ ಬಹುಮಾನವನ್ನು ಕೊಡುವರೆ ಲಂಡನಿನ ಪಟ್ಟಣ ನಿವಾಸಿಕರು ಆಲೋಚಿಸಿರುವರು.

ಉತ್ತರ ಹಿಂದೂಸ್ಥಾನ.

ಇದೇ ತಿಂಗಳ ಅಂತ್ಯಕ್ಕೆ ಅಲ್ಲಹಾಬಾದಿನಲ್ಲಿ (ಪ್ರಯಾಗ) ನೆರೆಯುವ ಸೊಶಿಯಲ್ ಕೊನ್ಫರೆನ್ಸ್ ಯಾನೆ ಸಂಘಸುಧಾರಕರ ಮಹಾ ಸಭೆಗೆ ರಾಜಾರಾಮಪಾಲರವರೂ ಏಕೇಶ್ವರವಾದಿಗಳ ಮಹಾಸಭೆಗೆ ಮುಂಬಾಯಿ ಹ್ಯಾಕೋರ್ಟ ಜಡ್ಜ ಬಹುಮಾನಪಟ್ಟ ಸರ್. ನಾರಾಯಣ ಚಂದಾವರಕಾರರೂ ಅಧ್ಯಕ್ಷರಾಗಲಿಕ್ಕೆ ಅನುಮತಿಸಿದ್ಧಾರೆ.

ಸಾಮ್ರಾಜಿಕ ನ್ಯಾಯವಿಧಾಯಕ ಸಭೆಯ ಸಮಾಗಮನವು ಬರುವ ಜನವರಿ ೩ಕ್ಕೆ ಕಲ್ಕತ್ತೆಯಲ್ಲಿ ಜರಗುವುದು.

ಕಳದ ತಿಂಗಳ ತಾ. ೩೦ರಲ್ಲು ಬಾಲ್ಲಿಗಾಟದ ಫಲಾದ ಎಂಬ ಸಣಬಿನ ಕಾರಖಾನೆಗೆ ಅಕಸ್ಮತ್ತಾಗಿ ಬೆಂಕಿ ಬಿದ್ದು ಮಾಲೀಕರಿಗೆ ಸುಮಾರು ೨೦,೦೦೦ರೂಪಾಯಿಯ ಸಣಬು ನಷ್ಟವಾಯಿತು.

ಜಾರ್ಜ ಸಾರ್ವಭೌಮರು ಹಿಂದೂಸ್ಥಾನಕ್ಕೆ ಬರುವ ಸಂಭವ ಇರುವುದರಿಂದ ಬರುವ ವರುಷ ಲಂಡನಿನಲ್ಲಿ ಜರಗುವ ಅವರ ಕಿರೀಟಧಾರಣೋತ್ಸವಕ್ಕೆ ಭಾರತೀಯ ರಾಜರುಗಳಲ್ಲಿ ಬರೇ ಕೊಂಚ ಮಂದಿ ಮಾತ್ರವೇ ಲಂಡನಿಗೆ ಹೋಗುವರೆಂತ ತಿಳಿದು ಬಂದಿದೆ.

ನಿರ್ಗತಿಕರಾದ ಯೂರೋಪಿಯಾನರಿಗೆ ಸೆಲ್ವೇಶನ್ ಆರ್ಮಿಯವರು ಮುಂಬಾಯಿಯಲ್ಲಿ ಒಂದು ಕೈಗಾರಿಕೆ ಶಾಲೆಯನ್ನು ಸ್ಥಾಪಿಸಿರುವರು. ಇದನ್ನು ಇದೇ ತಿಂಗಳ ತಾರೀಕು ೧೮ರಲ್ಲು ಮುಂಬಾಯಿ ಗವರ್ನರರಾದ ಸರ್. ಜೋರ್ಜ್ ಕ್ಲಾಕರವರು ಪ್ರತಿಷ್ಠೆ ಮಾಡಿದರು.

ಭಾರತೀಯ ಸೇಂಡೊ ಎಂದು ಕರೆಯಲ್ಪಡುವ ರಾಮಮೂರ್ತಿಯವರು ಸರ್. ಜೋರ್ಜ್ ರೂಸ್ ಕೆಪ್ಪೆಲ್ ಎಂಬವರ ಸಮಕ್ಷಮದಲ್ಲಿ ೧೭ ಅಶ್ವ ಬಲವುಳ್ಳಂಥಾ ಓಡುವ ಮೋಟರ್ ಬಂಡಿಯನ್ನು ಫಕ್ಕನೇ ಹಿಡಿದು ನಿಲ್ಲಿಸಿಬಿಟ್ಟರೆಂತಲೂ ಒಬ್ಬ ಭಾರತೀಯ ಸಾಹುಕಾರರು ರಾಮಮೂರ್ತಿಯವರಿಗೆ ಈ ಸಮ್ಮಂಧವಾಗಿ ಒಂದು ಚಿನ್ನದ ಬಿಲ್ಲೆಯನ್ನು ಸರ್. ಜೋರ್ಜ್ ರೂಸು ಕೆಪ್ಪೆಲ್ಲರವರ ಕೈಯಲ್ಲಿ ಕೊಟ್ಟು ಉಡಿಗೆರೆ ಮಾಡಿಸಿದರೆಂತಲೂ ಪೇಶಾವರದ ತಂತೀ ವಾರ್ತೆಯಿಂದ ತಿಳಿದು ಬರುತ್ತದೆ.

ಲಾಲಾಲಾಜಪತರಾಯರವರು ಲಾಹೋರಿಗೆ ಹೋಗಿರುವರಾದರೂ ಅಲ್ಲಿ ಜರಗಿದ ಆರ್ಯಸಮಾಜದ

ಷಾರ್ಷಿಕ ಉತ್ಸವಕ್ಕೆ ಹೋಗಲಿಲ್ಲವೆಂದೂ, ಈ ಸಮಾಜದ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿರುವರೆಂತಲೂ ತಿಳಿದು ಬರುತ್ತದೆ. ಆದರೆ ರಾಜಿನಾಮೆಯು ಇನ್ನೂ ಸ್ವೀಕರಿಸಲ್ಪಡಲಿಲ್ಲ.

ವಿಶ್ವಾಸಘಾತಕ ಎಂಬ ತಕ್ಷೀರಿನ ಮೇಲೆ ಚಾರ್ಜು ಮಾಡಲ್ಪಟ್ಟು ತರಕೇಶ್ವರ್ ಪೋಲೀಸು ಸ್ಟೇಶನಿನಲ್ಲಿ ಬಂಧಿಸಲ್ಪಟ್ಟ ಬಂದಿವಾನನೊಬ್ಬನು ತನ್ನ ಹೊದ್ದುಕೊಂಡಿದ್ದ ದುಪ್ಪಟಿಯಿಂದ ಕುತ್ತಿಗೆಗೆ ನೇಣಹಾಕಿ ಸ್ವಘಾತ ಮಾಡಿಕೊಂಡಿರುವನು.

ಕೇನಿಂಗ್ ಟೌನಿನ ರೈಲ್ವೆಸ್ಟೇಶನಿನಲ್ಲಿ ದುರುಸ್ತು ಆಗುತ್ತಿದ್ದಂಥಾ ಎರಡು ಗೋಡೆಗಳೂ, ಕಮಾನೂ ಕುಶಿದುಬಿದ್ದು ಕೆಲಸದ ಮೇಲೆ ಇದ್ದ ಅಸಿಸ್ಟಾಂಟ ಸ್ಟೇಶನ್ ಮಾಸ್ತರರು ನಜ್ಜುಗುಜ್ಜಾಗಿ ಮರಣ ಹೊಂದಿರುವರಲ್ಲದೆ ಹಲವು ಕೂಲಿಗಾರರೂ ಮೇಸ್ತ್ರಿಗಳೂ ಬಹಳ ಜಕಂ ಹೊಂದಿ ಸ್ಥಳೀಕ ಆಸ್ಪತ್ರಿಯಲ್ಲಿ ಚಿಕಿತ್ಸೆ ಹೊಂದುತ್ತಿರುವರು. ಈ ಅವಗಡವು ನಡೆಯುವುದಕ್ಕೆ ನಾಲ್ಕು ನಿಮಿಷ ಮುಂಚಿತವಾಗಿ ಮಾತ್ರವೇ ೫೦೦ ಪ್ರಯಾಣಿಕರು ತುಂಬಿದ ಅಗ್ಗಾಡಿಯೊಂದು ಈ ಸ್ಟೇಶನಿಂದ ಹೊರಟಿತ್ತಷ್ಟೆ. ಈ ಬಂಡಿಯು ಹೊರಡಲಿಕ್ಕೆ ಸ್ವಲ್ಪ ತಾಮಸವಾಗುತ್ತಿದ್ದ ಪಕ್ಷಕ್ಕೆ ಸದರಿ ಬಂಡಿಯಲ್ಲಿದ್ದ ೫೦೦ ಮಂದಿಯೂ ಸತ್ತುಹೋಗುತ್ತಿದ್ದರೆಂಬದಕ್ಕೆ ಸಂಶಯವಿಲ್ಲ. ಮರಣ ಹೊಂದಿದ ಸ್ಟೇಶನ್ ಮಾಸ್ತರನು ಬಂಡಿಯು ಹೊರಟ ಕೂಡಲೇ ತನ್ನ ಆ ದಿನದ ಲೆಕ್ಕತೀರಿಸಲು ಮೇಜಿಯ ಮೇಲೆ ಕೂತಿದ್ದಾಗಲೇ ಈ ಅಪತ್ತು ಸಂಭವಿಸಿತು. ಅವನ ಹೆಣವು ಸುಮಾರು ನಾಲ್ಕು ಟನ್ ಗಚ್ಚಿಯಿಂದ ಮುಚ್ಚಲ್ಪಟ್ಟಿತಲ್ಲದೆ ಅವನ ಬೆನ್ನು ಎರಡು ತುಂಡಾಗಿ ಬಿದ್ದಿತು. ಕುತ್ತಿಗೆಯೂ ಮುರಿದಿತ್ತು. ಅವನು ಲೆಕ್ಕಿಸುತ್ತಿದ್ದ ಹಣವೂ ಮಣ್ಣಿನ ಅಡಿಯಲ್ಲಿ ಸಿಕ್ಕಿತು.

ತಾರೀಕು ೨ರಲ್ಲು ಹೊಸ ವೈಸರಾಯರಾಗಿರುವ ಹಾರ್ಡಿಂಗ್ ಪ್ರಭುಗಳವರಿಗೆ ಇಂಪೀರಿಯಲ್ ಲೀಗ್ ಎಂಬ ಸಂಘದ ಪರವಾಗಿ ಬರ್ಡವಾನ ಮಹಾರಾಜರವರೂ, ಬ್ರಿಟಿಷ್ ಇಂಡಿಯನ್ ಎಶೋಸಿಯೇಶನ್ ಎಂಬ ಸಂಘದ ಪರವಾಗಿ ರಾಜಪಿಯಾರಿ ಮೊಹನ್ ಮುಖರ್ಜೀ ಎಂಬವರೂ ವಂದನಾಪತ್ರಿಕೆಗಳನ್ನು ಕೊಟ್ಟರು. ಎರಡು ಸಂಘಗಳವರಿಗೂ ಪ್ರಭುಗಳು ಯುಕ್ತವಾದಂಥಾ ಉತ್ತರವನ್ನಿತ್ತರು.

ನವಂಬರ ೨೬ಕ್ಕೆ ಅಂತ್ಯವಾಗುವ ವಾರಕ್ಕೆ ಇಡೀ ಹಿಂದೂಸ್ಥಾನದಲ್ಲಿ ೯೫೨೧ ಮಂದಿಗೆ ಪ್ಲೇಗು ಬೇನೆಯುತಾಗಿ ೭,೧೫೩ಮಂದಿಯು ಸತ್ತಿರುವರು. ಅಂದರೆ:— ಮುಂಬಾಯಿಯಲ್ಲಿ ೧,೦೫೫; ಮದ್ರಾಸಿನಲ್ಲಿ ೪೩೧; ಯುನೈಟೆಡ್ ಪ್ರೊವಿನ್ಸಿನಲ್ಲಿ ೨೩೨; ಪಂಜಾಬಿನಲ್ಲಿ ೭೯೨; ಬರ್ಮಾದಲ್ಲಿ ೬೭; ಮಧ್ಯ ಹಿಂದೂಸ್ಥಾನದಲ್ಲಿ ೨೧೪; ರಾಜಪುತಾನದಲ್ಲಿ ೫೧ ಮರಣಗಳಾದಂತಾಯಿತು.

ದಕ್ಷಿಣ ಹಿಂದುಸ್ಥಾನ.

ಇಂಗ್ಲಾಂಡಿಗಿಂತಲೂ ಹಿಂದುಸ್ಥಾನದಲ್ಲಿ ಕ್ಷಯರೋಗವು ಪ್ರಬಲವಾಗುತ್ತ ಬರುತ್ತದೆಂಬದನ್ನು ನಮ್ಮ ಮದ್ರಾಸು ಸರಕಾರದವರು ಖಾತ್ರಿಮಾಡಿಕೊಂಡು, ನಮ್ಮ ಸಂಸ್ಥಾನದಲ್ಲಿ ಈ ರೋಗಕ್ಕೆ ತಡೆ ಕಟ್ಟುವರೆಯೂ, ಸಂಸ್ಥಾನದಲ್ಲಿಯೇ ಒಂದೆರಡು ಕ್ಷಯರೋಗಿಗಳ ಭಿತ್ತಿಯನ್ನು ಕಟ್ಟುವರೆಯೂ ಸರ್ಜನ್ ಜನರಲ್ ಮೊದಲಾದವರು ಕೂಡಿದ ಒಂದು ಕಮಿಟಿಯು ಸರಕಾರದವರಿಂದ ಏರ್ಪಡಿಸಲ್ಪಟ್ಟಿರುವುದು.

ಇಂಥಾ ಕ್ಷಯರೋಗ ಭಿತ್ತಿಗಳಿಗೆ ಕೊಯಮುತ್ತೂರು ಡಿಂಡಿಗಲ್, ಅಥವಾ ಕಡಪಾ ಜಿಲ್ಲೆಯ ಮದನಪಳ್ಳಿ ಎಂಬೀ ಸ್ಥಳಗಳು ಯೋಗ್ಯವಾದದ್ದೆಂದೂ, ಸುಮಾರು ೧೦೦ ಯಾ ೧೫೦ ಕ್ಷಯರೋಗಿಗಳಿಗೆ ಸ್ಥಳ ಸಾಕಾಗುವಂಥಾಬಂದೊಂದು ಭಿತ್ತಿಗಳನ್ನು ಕಟ್ಟಿಸುವುದು ವಿಹಿತವಲ್ಲದೆ ಪ್ರತಿ ಒಂದು ಜಿಲ್ಲೆಯಆಸ್ಪತ್ರಿಗಳಲ್ಲಿ೧೦ ಕ್ಷಯರೋಗಿಗಳಿಗೆ ಸಾಕಾಗುವಂಥಾ ಒಂದೊಂದು ವಾರ್ಡುಗಳನ್ನು ಕಟ್ಟಿಸಬೇಕೆಂದೂ ಒಟ್ಟಾರೆ ಈ ಎಲ್ಲಾ ಕೆಲಸಗಳಿಗೆ ೩ ಲಕ್ಷಕ್ಕಿಂತಲೂ ಹೆಚ್ಚಿಗೆ ಹಣ ಬೇಕಾದೀತೆಂತಲೂ ಈ ಕಮಿಟಿಯವರು ಸರಕಾರಕ್ಕೆ ಸೂಚಿಸಿರುವರು.

ಈ ಕಮಿಟಿಯವರ ಸೂಚನೆ ಮೇರೆಗೆ ಸರಕಾರದವರಿಗೆ ೧೦೦-೧೫೦ ಕ್ಷಯರೋಗಿಗಳಿಗೆ ಬೇಕಾದಷ್ಟು ದೊಡ್ಡ ಭಿತ್ತಿಯನ್ನು ಈಗಲೇ ಕಟ್ಟಿಸುವದು ಕಷ್ಟವಾಗುವುದರಿಂದ ೫೦ ಕ್ಷಯರೋಗಿಗಳಿಗೆ ಮಾತ್ರವೇ ಬೇಕಾದ ಒಂದು ಭಿತ್ತಿಯನ್ನು ಕೊಯಮುತ್ತೂರಿನಲ್ಲಿ ಕಟ್ಟಿಸುವರೆ ಸರಕಾರದವರು ಆಲೋಚಿಸಿರುವರು. ಮತ್ತು ಮದನಪಳ್ಳಿಯಲ್ಲಿ ಮಿಶ್ಯನಿನವರು ಕ್ಷಯರೋಗಿಗಳ ಭಿತ್ತಿಗೆ ಎಷ್ಟರ ಮಟ್ಟಿಗೆ ಈ ಕೆಲಸವನ್ನು ಸಾಧಿಸಿರುವರು, ಜಾತಿ ವಿಜಾತಿ ನೋಡದೆ ಕ್ಷಯರೋಗಿಗಳಿಗೆ ಈ ಭಿತ್ತಿಯಲ್ಲಿ ಆಶ್ರಮ ಕೊಡುವರೋ ಎಂಬಿತ್ಯಾದಿ ಸಂಗತಿಗಳನ್ನು ಸರ್ಜನ್ ಜನರಲರವರು ಖುದ್ದು ವಿಚಾರಿಸಿ, ಮದನಪಳ್ಳಿಯ ಮಿಶ್ಯನರಿಗಳು ಕೈಕೊಂಡ ಕೆಲಸವು ಯೋಗ್ಯತರವಾಗಿದೆಂದು ರಿಪೋರ್ಟು ಮಾಡಿದರೆ ಸರಕಾರದವರು ಯೋಗ್ಯವಾದ ಗ್ರೇಂಟನ್ನು ಮಿಶ್ಯನಿಗೆ ಕೊಡ ಬಹುದೆಂದೂ, ಈ ಸಂಬಂಧಕ್ಕೆ ಬೇಕಾದ ಖರ್ಚು ಪ್ರೊವಿನ್ಸಿಯಲ್ ಫಂಡಿನಿಂದ ಸಲ್ಲತಕ್ಕದ್ದೆಂದೂ ಸರಕಾರದವರು ನಿಷ್ಕರ್ಷಿಸಿರುವರಲ್ಲದೆ ಎಡ್ವರ್ಡ್ ಮಹಾರಾಜರ ಸ್ಮರಣಾರ್ಥಕ ಫಂಡಿನಿಂದ ಇದಕ್ಕಾಗಿ ಸಹಾಯ ಕೇಳುವುದು ಉಚಿತವೆಂದು ಸರ್ಜನ್ ಜನರಲರವರಿಗೆ ಸೂಚಿಸಿರುವರು.

ಇದೇ ತಿಂಗಳ ತಾರೀಕು ೩ರಲ್ಲು ಕೋಕನಾಡದಲ್ಲಿ ಬ್ರಾಹ್ಮಣ ಕುಲದ ೧೭ ವರುಷದ ವಿಧವೆಗೂ ಅದೇ ಕುಲದ ೨೭ ವರುಷದ ಯುವಕನಿಗೂ ವಿಧವಾ ವಿವಾಹವು ನಡೆಯಿತು. ಪಟ್ಟಣ ವಾಸಿಗಳಲ್ಲಿ ಅನೇಕ ಸಂಭಾವಿತ ಗೃಹಸ್ಥರು ಈ ಸಂದರ್ಭದಲ್ಲಿ ಹಾಜರಿದ್ದರಲ್ಲದೆ ರಾಮಚಂದ್ರಪುರದ ರಾಜರವರು ಸ್ವತಃ ಹಾಜರಿದ್ದು ವಧೂವರರಿಗೆ ಚಲೋ ಇನಾಮುಗಳನ್ನು ಕೊಟ್ಟರು.

ಕಲಿಕೋಟೆಯ ಫರೋಕು ಎಂಬಲ್ಲಿಯ ಬಡಿಗೆ ಕೆಲಸದವನೊಬ್ಬನು ನೀಲಗಿರಿಯ ಗಡಲೂರು ಎಂಬಲ್ಲಿಗೆ ಕೆಲಸಕ್ಕೆ ಹೋಗಿದ್ದವನು ಅಲ್ಲಿಯೇ ಒಬ್ಬ ಹುಡುಗಿಯನ್ನು ಮದುವೆಯಾಗಿದ್ದನು. ಆದರೆ ೫ ವರುಷಗಳ ಹಿಂದೆ ತನ್ನ ಹೆಂಡತಿಯ ಮೇಲೆ ಏನೋ ಸಂಶಯಪಟ್ಟು ಅವಳನ್ನೂ ಅವಳ ತಾಯಿಯನ್ನೂ ಕೊಂದು ತಲೆತಪ್ಪಿಸಿಕೊಂಡಿದ್ದನು. ಇಷ್ಟರ ತನಕವೂ ಅಡಗಿಕೊಂಡಿದ್ದವನನ್ನು ಮೆನ್ನಜರಿಯ ಸಬ್‌ಇನ್ಸ್‌ಪೆಕ್ಟರರಾದ ಮೆ। ಕೆ. ಮಾಧವ ಮೆನನರವರು ಕಳದ ರವಿವಾರ ಬಡಗರಾ ಎಂಬಲ್ಲಿ ಹಿಡಿದಿರುವರು.

ದಕ್ಷಿಣ ಕನ್ನಡ.

ಮಂಗಳೂರು. ಡಿಸ್ಟ್ರಿಕ್ಟ್ ಕೋರ್ಟ್ ಹೆಡ್ ರೈಟರ್ ಮೆ। ಉಳ್ಳಾಲ ನರ್ಶಿಂಗ ರಾಯರ ಮಗ ಇಂಗ್ಲಾಂಡಿನಲ್ಲಿ ಇಂಜಿನಿಯರಿಂಗ್ ಕಲಿತು ಎ. ಎಮ್. ಐ. ಸಿ. ಇ. ಎಂಬ ಬಿರುದು ಸಂಪಾದಿಸಿ ಬಂದ ಸಂಜೀವ ರಾಯರಿಗೆ ಗುಂಟೂರಿನಲ್ಲಿ ಅಸಿಸ್ಟಾಂಟ ಇಂಜಿನಿಯರ್ ಉದ್ಯೋಗ ನೇಮಕವಾಗಿದೆ. ತಲಬು ರೂ. ೨೫೦.

ಬರ್ಮಾ ದೇಶದ ಮೌಲಮಿನ್ ಪಟ್ಟಣದಲ್ಲಿ ಇರುವ ಫೋರೆಸ್ಟ್ ಹೆಡ್ ಕ್ಲಾರ್ಕ ಅಪ್ಪಾಸ್ವಾಮಿ ನ್ಯಾಡು ಎಂಬವರು ಅಲ್ಲಿಯ ಹಿಂದೂ ನಿವಾಸಿಕರಿಂದಲೂ ಕೆಲವು ಬ್ರಹ್ಮಿ ಗೃಹಸ್ಥರಿಂದಲೂ ವಂತಿಗೆ ವಸೂಲು ಮಾಡಿ ಮಂಗಳೂರು ಪೀಡಿತ ಜನಸಹಾಯಕ ಸಂಘದ ಸೆಕ್ರೆಟರಿ ರಂಗರಾಯರಿಗೆ ಕಳುಹಿಸಿದ್ಧಾರೆ. ಕಳದ ನವಂಬರ ತಾರೀಕು ೧೩ಲ್ಲು ಅಂದಮಾನ ದ್ವೀಪದ ಪೋರ್ಟಬ್ಲೇರ್ ಎಂಬ ಪಟ್ಟಣದಲ್ಲಿ ರಾವ್ ಸಾಹೇಬ ಯನ್. ಸದಾಶಿವಪಿಳ್ಳೆ ಎಂಬವರು ಅಲ್ಲಿ ನಿವಾಸಮಾಡಿರುವ ಭಾರತೀಯರ ಸಭೆಕೂಡಿಸಿ ಸಭಾಸದರಿಂದ ಮಂಗಳೂರು ಪೀಡಿತ ಜನಸಹಾಯಕ ಸಂಘದ ಬಗ್ಯೆ ಹಣ ಸಂಗ್ರಹಿಸಿದ್ಧಾರೆಂತಲೂ ಆ ಸಭೆಯಲ್ಲಿ ಡಿಸ್ತ್ರಿಕ್ಟ ಆಪೀಸರ್ ಖಾನ್ ಬಹದೂರ್ ಅಸೀಕ ಆಲಿಖಾನ್ ಎಂಬವರು ಅಧ್ಯಕ್ಷರಾಗಿದ್ದರೆಂತಲೂ ಪಂಚಮರ ಉದ್ಧರಣೆಗೋಸ್ಕರ ಮಂಗಳೂರಲ್ಲಿ ಸ್ಥಾಪಿಸಿದ ಈ ಸಂಘದ ಉದ್ದೇಶವು ಶ್ಲಾಘನೀಯವಾದದ್ದೆಂತ ಕೆಲವು ಗೃಹಸ್ಥರು ಭಾಷಣ ಮಾಡಿದರೆಂತಲೂ ಮದ್ರಾಸು ಮೈಲ್ ವರ್ತಮಾನ ಪತ್ರದಿಂದ ತೋರುತ್ತದೆ.

ಕಳದ ವಾರ ಮುನಿಸಿಪಾಲಿಟಿಯಲ್ಲಿ ೪ ಪ್ಲೇಗ ಮರಣಗಳೊ ೨ ಸಿಡುಬು ರೋಗದ ಮರಣಗಳೂ ಇದ್ದವು.

ಬೋಳೂರು ಹಿಂದೂ ಸ್ಮಶಾನದಲ್ಲಿ ಒಂದು ಹೊಸ ಭಾವಿ ತೋಡಿಸಬೇಕಾಗಿ ಮುನಿಸಿಪಲ್ ಚೇಯರ್‌ಮೇನರವರಿಗೆ ಅರ್ಜಿ ಬರಕೊಂಡ ಮೇರೆಗೆ ಭಾವಿಯನ್ನು ತೋಡಿಸುವರೆ ಸೆಂಕ್ಷನ್ ಆಗಿಯದೆ.

ಖಾನೆಶುಮಾರಿ ಬಾಬಿನಲ್ಲಿ ಅಗತ್ಯವಿರುವ ಮಾಹೀತಿಯನ್ನು ಕೊಡುವರೆ ಸೆನ್ಸೆಸ್ ಸುಪರಿಂಟೆಂಡೆಂಟ್‌ಧೊರೆಗಳು ಇದೇ ಬರುವ ೧೭ನೇ ತಾರೀಕಿಗೆ ಇಲ್ಲಿಗೆ ಬರುವರೆಂತೆ.

ಡಿವಿಜನಲ್ ಆಫೀಸರರವರು ಖಾನೆಶುಮಾರಿ ಕ್ಲಾಸನ್ನು ತೆರಿಯುವರೆ ಇದೇ ಬರುವ ತಾ. ೧೫ರಲ್ಲು ಬಂಟ್ವಾಳಕ್ಕೆ ತೆರಳುವರು.

ಬರುವ ಕ್ರಿಸ್ತಮಸ್ ಹಬ್ಬದ ಸಮ್ಮಂಧ ರೈಲ್ವೇ ರಿಟರ್ನ್ ಟಿಕೇಟು ಪಡಕೊಳ್ಳುವ ಪ್ರಯಾಣಸ್ಥರಿಗೆ ಚಾರ್ಜಿನ ಕಾಲು ಅಂಶವನ್ನು ಕಡಿಮೆ ಮಾಡಿರುತ್ತಾರೆ. ಟಿಕೇಟುಗಳು ಬರುವ ತಾ. ೧೫ರಿಂದ ೩೧ರ ವರೆಗೆ ದೊರಿಯುವದಲ್ಲದೆ ಸದರಿ ಟಿಕೇಟಿನ ಉಪಯೋಗವನ್ನು ಜನವರಿ ೧೫ನೇ ತಾರೀಕಿನ ವರೆಗೆ ಮಾಡಬಹುದಾಗಿರುತ್ತದೆ.

ಬೋಳಾರ. ಇಲ್ಲಿ ಹಸುಗಳನ್ನು ಮೇವಿಗೆ ಬಿಡುವುದೇ ಬಹಳ ಕಷ್ಟವಾಗಿರುತ್ತದೆ. ಮೇವಿಗೆ ಹೋದ ಹಸುಗಳನ್ನು ಕಸಾಬರು ವೈಯ್ಯುವರೆ ಸಂಚರಿಸುತ್ತಾರೆ. ಇಂಥಾ ಶಹರುಗಳಲ್ಲಿ ಕೂಡಾ ಈ ರೀತಿ ಆಗುವದು ಬಹಳ ಆಶ್ಚರ್ಯ. ಇದಕ್ಕೆ ಸರಕಾರದವರು ತಕ್ಕ ನಿಗಾವಣೆಯನ್ನು ಇಡದಿದ್ದರೆ ಬಡವರು ಹಸುಗಳನ್ನು ಸಾಕುವದು ಬಹಳ ಕಷ್ಟವಾಗಿರುತ್ತದೆ.

ಟಿಪ್ಪಾಲ ಇಲಾಖೆಯವರು ಇಲ್ಲಿಯ ಬ್ರೆಂಚ್ ಪೋಸ್ಟ್ ಆಫೀಸಿನಿಂದಲೇ ಕಾಗದ ಬಟ್ವಾಡೆಯನ್ನು ಮಾಡಿಸುವದರಿಂದ ಎಲ್ಲರಿಗೂ ತಕ್ಕ ಸಮಯದಲ್ಲಿ ಕಾಗದ ಪತ್ರಗಳು ದೊರಿಯುತ್ತಲಿವೆ.

ಕಾಸರಗೋಡು. ಪುತ್ತೂರ ಡಿಸ್ತ್ರಿಕ್ಟ ಮುನ್ಸಿಫ್ ಮ. ರಾ. ಕೆ. ಅಪ್ಪಾಜಿರಾಯರವರು ತನ್ನ ಧರ್ಮಪತ್ನಿಯ ಖಸ್ತು ಕಾಹಿಲೆ ಸಮ್ಮಂಧ ಹವಾ ಬದಲಾಯಿಸುವ ಗೋಸ್ಕರವೂ ಇಲ್ಲಿಯ ವೈದ್ಯ ಉದ್ಯೋಗಸ್ಥರಿಂದ ಚಿಕಿತ್ಸೆ ಮಾಡುವಗೋಸ್ಕರವೂ ಇಲ್ಲಿಗೆ ಸುಮಾರು ಒಂದು ತಿಂಗಳ ಮೊದಲು ರೋಗಿಯಾದ ಪತ್ನಿ ಸಮೇತ ಬಂದು ಮ. ರಾ. ಚಂ। ಗಣಪಯ್ಯನವರ ಕೋಟೆಯಲ್ಲಿರುವ ಬಂಗ್ಲೆಯಲ್ಲಿ ವಸ್ತಿ ಮಾಡಿಕೊಂಡಿದ್ದರು. ದುರ್ದೈವವಶಾತ್ ಔಷಧೋಪಚಾರಗಳು ಫಲಿಸದೆ ಇದೇ ಕಳದ ನವಂಬರ ತಾ. ೨೬ನೇ ರಾತ್ರಿ ಇವರ ಪತ್ನಿಯರು ಪರವನ್ನೈದಿದರೆಂಬದು ತಿಳಿಸಲು ವಿಷಾದಿಸುತ್ತೇನೆ.

ಮಳೆಯು ಪೂರ್ಣವಾಗಿ ಬಿಟ್ಟು ಹೋಯಿತು, ಛಳಿಯೂ ಮೂಡಣ ಘಾಳಿಯೂ ಪ್ರಬಲವಾಗಿ ಬೀಸುತ್ತದೆ. ಜಾನುವಾರುಗಳ ರೋಗವು ಇನ್ನೂ ಶಾಂತವಾಗಿಲ್ಲ. ಅಲ್ಲಲ್ಲಿ ಬಲಿಷ್ಟ ಗೋವುಗಳೇ ದಿನಕ್ಕೆ ಒಂದೆರಡು ಸಾಯುತ್ತಲಿದೆ. ಸರಕಾರಿ ಕಡೆಯಿಂದ ಬಂದ ವೈದ್ಯ ಉದ್ಯೋಗಸ್ಥರ ಔಷಧಗಳೇನೂ ಫಲಿಸಲಿಲ್ಲವಾಗಿ ಕೇಳುತ್ತೇನೆ. ಕಾಲಕ್ಕೆ ಯಾರೂ ಹೊಣೆ ಇಲ್ಲವೆಂಬುವದೇ ಸಿದ್ಧಾಂತವಾಯಿತು.

ಪುತ್ತೂರು. ಇಲ್ಲಿಯ ಹುಡುಗಿಯರ ಶಾಲೆಯು ಸ್ಕೂಲ್ ಅಸಿಸ್ಟಾಂಟ ಇನ್ಸಪೆಕ್ಟ್ರಸ್ ಮಿಸೆಸ್ ಜುಫ್ ಧೊರೆಸಾನಿಯವರು ತಾ.೩ಲ್ಲು ಇಲ್ಲಿಗೆ ತಲ್ಪಿ ತಾ. ೫ರ ಲಾಗಾಯಿತು ಹುಡುಗಿಯರ ಪರೀಕ್ಷೆ ನಡಿಸುತ್ತಿರುವರು.

ನಮ್ಮ ಡಿ. ಡಿಪ್ಯುಟಿ ಕಲೆಕ್ಟರ ಪಿ. ಕುಂಞ್ಞ್ಯಾನೆ ಸಾಹೇಬ ಬಹದೂರರವರು ತಾ. ೩೦ಕ್ಕೆ ಇಲ್ಲಿ ತಲ್ಪಿ ತಾ. ೩ಲು ಪಂಜಮಾರ್ಗವಾಗಿ ಸುಬ್ರಹ್ಮಣ್ಯಕ್ಕೆ ಹೋಗಿರುವರು.

ಉಡುಪಿ. ಇಲ್ಲಿಯ ಪಂಚಮರ ಶಾಲೆಯು ಹುಡುಗರು (34 ಮಂದಿ) ಓದಿ ಬರಿಯುವದಕ್ಕೆ ತಕ್ಕಷ್ಟು ಕಲಿತಿರುವರಲ್ಲದೆ ಅವರು ಹಾಡುವ ಕೆಲವು ಹಾಡುಗಳೂ ಆಡುವ ಕೋಲಾಟವೂ ಸಂತೋಷವನ್ನು ಹುಟ್ಟಿಸುತ್ತದೆ.

ಈ ತಾರೀಕು ೬ಲ್ಲು ಜಿಲ್ಲಾ ಕಲೆಕ್ಟರ್ ದೊರೆಗಳವರು ದಯಮಾಡಿದರು. ಅವರನ್ನು ಪೌರ ಜನರೆಲ್ಲರು ಎದುರುಗೊಂಡು ಮಹಾ ಬಿರುದಾವಳಿಗಳಿಂದ ಬಂಗ್ಲೆಗೆ ಕರಕೊಂಡು ಹೋದರು. ಅದೇ ಸಾಯಂಕಾಲ ಊರಿನ ದೊಡ್ಡ ಗೃಹಸ್ಥರಿಗೆಲ್ಲ ತಮ್ಮ ಬಂಗ್ಲೆಯಲ್ಲಿ ಭೇಟಿ ಕೊಟ್ಟರು.

ಈ ಪಟ್ಟಣಕ್ಕೆ ಇಲ್ಲಿಯ ಅಜ್ಜರ ಕಾಡನ್ನು ಕಡಿಸುತ್ತಿರುವುದರಿಂದ ಕಾಡಿನಲ್ಲಿರುತ್ತಿದ್ದ ದೊಡ್ಡ ಹುಲಿಯೊಂದು ಕಲೆಕ್ಟರ ದೊರೆಗಳವರು ಇಲ್ಲಿಗೆ ದಯಮಾಡಿಸಿದ ದಿವಸವೇ ಮಧ್ಯಾನ್ಹ ೧೨ ಘಂಟೆಗೆ ಮಠ ಬೀದಿಯಲ್ಲಿರುವ ವ್ಯಾಸರಾಯ ಮಠದ ಉಪ್ಪರಿಗೆಯನ್ನು ಬಂದು ಸೇರಿಕೊಂಡಿತು. ಕಲೆಕ್ಟರ ದೊರೆಗಳವರು ಸುಮಾರು ೩ ಗಂಟೆಗೆ ಇಲ್ಲಿಗೆ ಬಂದು ಕೋವಿಯಿಂದ ಹೊಡದು ಇದನ್ನು ಕೊಂದು ಬಿಟ್ಟರು. ಶ್ರೀಕೃಷ್ಣ ಮಠದ ಪಟ್ಟದಾನೆಯು ಅದೇ ದಿನ ಮೃತಪಟ್ಟಿತು.

ಪ್ರಸಿದ್ಧ ಗವ್ಯಾ ಮೈಸೂರು ರಾಮದಾಸರು ಇಲ್ಲಿಗೆ ಬಂದು ಶ್ರೀಕೃಷ್ಣ ಮಠದಲ್ಲಿಯೂ ಶ್ರೀ ಅದಮಾರು ಮಠದಲ್ಲಿಯೂ ಹಂಕಥಾ ಸತ್ಕಾಲಕ್ಷೇಪ ಮಾಡಿ ಜನರನೆಲ್ಲ ಅತ್ಯಾನಂದಗೊಳಿಸಿದರು.

ಗೌಡಸಾರಸ್ವತ ಬ್ರಾಹ್ಮಣ ಪರಿಷದ. ಮಡಗಾಂದಲ್ಲಿ ಕೂಡುವ ತೃತೀಯ ಮಂಗಳೂರು ಗೌಡಸಾರಸ್ವತ ಪರಿಷದದ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರೆ ಮಾಜಿ ಡಿಸ್ಟ್ರಿಕ್ಟ ಜಡ್ಜ್, ಮ| ರಾ| ರಾ| ದಿವಾನ್ ಬಹದೂರ್ ಅ. ವೆಂಕಟರಮಣ ಪೈಗಳವರು ಸಮ್ಮತಿಸಿರುವರು. ಆದರೆ ಪ್ರಕೃತ ದಿವಾನ್ ಬಹದೂರರವರ ಆರೋಗ್ಯವು ದುರ್ಬಲ ಸ್ಥಿತಿಯಲ್ಲಿರುವುದರಿಂದ ಈ ತಿಂಗಳ ಅಂತ್ಯಭಾಗದಲ್ಲಿ ಪರಸ್ಥಳ ಪ್ರಯಾಣಕ್ಕೆ ತಕ್ಕ ಆರೋಗ್ಯವಿದ್ದರೆ ಮಾತ್ರ ಪೈಗಳವರು ಗೋವೆಗೆ ತೆರಳುವರಾಗಿ ತಿಳಿಯುತ್ತೇವೆ. ಮಂಗಳೂರು ಪಟ್ಟಣದಿಂದ ಈ ಸರ್ತಿಯ ಪರಿಷದಕ್ಕೆ ಸುಮಾರು ೧೦೦ ಜನರು ಹೋಗುವ ಸಂಭವ ಏದೆ. ಮ| ರಾ| ರಾ| ವರ್ಕಾಡಿ ರಾಮರಾವ್ ಡಿಪ್ಯುಟಿ ಕಲೆಕ್ಟರ್, ಮ| ರಾ| ಸಾವುಕಾರ್ ನರಸಿಂಗ ಮರ್ತುಭಂಡಾರಕಾರ್, ಮ| ರಾ| ಅಡಿಗೆ ಶ್ರೀನಿವಾಸರಾವ್ ವಕೀಲ್, ಮ| ರಾ| ಸಾವುಕಾರ ಮಣೇಲ ವೆಂಕಟರಾಯ ನಾಯಿಕ್, ಮ| ರಾ| ಕೆ. ಪಿ. ರಾಮರಾವ್ ಹ್ಯಾಕೋರ್ಟ ವಕೀಲ್, ಮ| ರಾ| ಸಾವುಕಾರ ನರ್ಸ ಪೈ, ಮ| ರಾ| ಸಾವುಕಾರ ಕಾಸರಗೋಡು ರಾಮಗಣೇಶ ಕಾಮತ್, ಮ| ರಾ| ವಕೀಲ ರಂಗಪ್ಪ ಭಂಡಾರಿ, ಮ| ರಾ| ಗಣೇಶ ಶ್ರೀನಿವಾಸ ಪೈ, ಮ| ರಾ| ಸಾವುಕಾರ ಉಳ್ಳಾಲ ನಾರಾಯಣ ಕಿಣಿ, ಮ| ರಾ| ಸಾವುಕಾರ ಚರ್ಡಪ್ಪ ಮಲ್ಯ, ಮ| ರಾ| ಸಾವುಕಾರ ಉಳ್ಳಾಲ ಸುಬ್ರಾಯ ನಾಯಕ್, ಮ| ರಾ| ಮಂಗಳೂರು ವೆಂಕಟರಾವ್ ಹಜೂರ್ ಶಿರಸ್ತೆದಾರ್, ಮ| ರಾ| ಉಳ್ಳಾಲ ಸರ್ವೋತ್ತಮ ಕಿಣಿ, ಮ| ರಾ| ಮಂಜೇಶ್ವರ ಮುಕುಂದ ರಾವ್ ಡಿಸ್ಟ್ರಿಕ್ಟ ರಿಜಿಸ್ಟ್ರಾರ್, ಮ| ರಾ| ಪಾಂಗಾಳ ಗೋಪಾಳ ನಾಯಕ್ ಸಕ್ರಿಟರಿ ಕೆನರಾ ಬೇಂಕ್ ಮೊದಲಾದವರು ಗೋವೆಗೆ ಹೋಗುವರೆ ನಿರ್ಣಯಿಸಿದ ಗೃಹಸ್ಥರಲ್ಲಿ ಕೆಲವರಾಗಿರುವರು. ಉಡಿಪಿ ಕುಂದಾಪುರ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ತೀರ್ಥಹಳ್ಳಿ, ಶ್ರೀಂಗೇರಿ ಮೊದಲಾದ ಸ್ಥಳಗಳಿಂದ ಪ್ರನಿನಿಧಿಗಳು ವ ಪ್ರೇಕ್ಷಕರು ಬರುವರೆಂಬದಾಗಿ ಪತ್ರಗಳು ಬಂದಿವೆ. ಇತರ ಪ್ರಾಂತ್ಯಗಳಿಂದ ಪ್ರೇಕ್ಷಕ ಯಾ ಪ್ರತಿನಿಧಿಗಳನ್ನು ಶೀಘ್ರದಲ್ಲಿಯೇ ನಿರೀಕ್ಷಿಸುತ್ತಿರುವರು.

ಗೋವೆಯ ನವೀನ ಸರಕಾರದ ಗವರ್ನರ ದೊರೆಗಳವರೂ ಪರಿಷದಕ್ಕೆ ಬರುವರೆಂಬ ತಮ್ಮ ಮನೋಗತವನ್ನು ತಿಳಿಸಿರುವರಾಗಿ ಕೇಳುತ್ತೇವೆ.

ಶ್ರೀ ಗೋಕರ್ಣ ಮಠಾಧೀಶರು ಪರಿಷತ್ತಿನ ಪರವಾಗಿ ತಮಗಿರುವ ಸಹಾನುಭೂತಿಯನ್ನು ಪ್ರದರ್ಶಿಸಿ ಮಡಗಾಂನಲ್ಲಿ ಕೂಡುವ ಮೂರನೇ ಮಂಗಳೂರು ಗೌಡಸಾರಸ್ವತ ಬ್ರಾಹ್ಮಣ ಪರಿಷದಕ್ಕೆ ಉತ್ತರೋತ್ತರ ಅಭಿವೃದ್ಧಿ ಉಂಟಾಗಲೆಂಬ ಆಶೀರ್ವಚನಗಳನ್ನು ಬೆರೆನ್ ಧೆಂಪೆಯವರಿಗೆ ಬರೆದು ಕಳುಹಿಸಿರುವರು.

ಮಾಸ್ಗಂ ಪರಿಷದಕ್ಕೆ ಪ್ರತಿನಿಧಿಗಳನ್ನು ಆರಿಸುವರೆ ಮದ್ರಾಸಿನಲ್ಲಿ ಗೌಡಸಾರಸ್ವತ ಸಭೆಯು ಹ್ಯಾ ಕೋರ್ಟ್ ವಕೀಲ್ ಕೆ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಕೂಡಿತು. ಪ್ರತಿನಿಧಿಗಳನ್ನು ಸಭೆಯವರು ಆರಿಸಿದ್ದಲ್ಲದೆ ಸ್ವಜಾತ್ಯಸ್ಥರಲ್ಲಿ ಒಬ್ಬ ವಿದ್ಯಾರ್ಥಿಯಾದರೂ ವಿಲಾಯತಿಗೆ ಹೋಗಿ ಐ. ಸಿ. ಎಸ್. ವ ಇತರ ವಿದೇಶಗಳಿಗೆ ಹೋಗಿ ಕಲಾಶಾಸ್ತ್ರ ಪರೀಕ್ಷೆಗಳಿಗೆ ಕಲಿಯುವ ಬಗ್ಗೆ ೧೦,೦೦೦ ರೂಪಾಯಿಗಳು ಹುಟ್ಟು ಬರುವ ಒಂದು ವಿಧ್ಯಾರ್ಥಿವೇತನದ ಫಂಡನ್ನು ಏರ್ಪಡಿಸಬೇಕೆನ್ನುವ ನಿರ್ಣಯವನ್ನು ಪರಿಷತ್ತಿನ ಮುಂದಿಡಬೇಕಾಗಿ ನಿರ್ಣಯಿಸಿರುವರು.

ಶ್ರೀ ವಿರೋಧಿಕೃತ್ ನಾಮ ಸಂವತ್ಸರದ ಮಂಜಿಂಬಾದ್ ಸಿದ್ಧಾಂತ ಪಂಚಾಂಗವು. ಅರಕೆರೆ ವಿದ್ಯಾವರ್ಧಿನಿ ಜ್ಯೋತಿಷಾಲಯದ ಪ್ರಸಿದ್ಧ ಪಯ್ಯನ್ನೂರು ಸಿದ್ಧಾಂತಿ ಪಿ. ಕೆ. ರಾಮಶಾಸ್ತ್ರಿಗಳವರಿಂದ ಸೂರ್ಯಸಿದ್ಧಾಂತದ ಪ್ರಕಾರ ಸರಿಯಾಗಿ ಗುಣಿಸಿ ಪರಿಶೋಧಿಸಲ್ಪಟ್ಟಿರುವುದು. ನಮ್ಮ ಊರು ಪಂಚಾಂಗಳಿಗಿಂತ ಪರಿಮಾಣದಲ್ಲಿ ಇಮ್ಮಡಿಯಾಗಿದ್ದು ಅನೇಕ ಉಪಯುಕ್ತ ವಿಷಯಗಳನ್ನು ಒಳಕೊಂಡಿರುವುದು. ಗಣಿತ ಜ್ಯೋತಿಷಜ್ಞಾನವಿಲ್ಲದವರು ಸಹಾ ಇದರಿಂದ ಉಪಯೋಗಪಡುವಂತೆ ಈ ಪಂಚಾಗದಲ್ಲಿ ಹಲವು ವಿಷಯಗಳು ಸಂಗ್ರಹಿಸಲ್ಪಟ್ಟಿರುವವು. ಕ್ರಯ ಪ್ರತಿಯೊಂದಕ್ಕೆ ನಾಲ್ಕಾಣೆ. ಬೇಕಾದವರು ಶಾಸ್ತ್ರಿಗಳವರ ಅರೆಕೆರೆ ಹಾಸನ್ ಡಿಸ್ಟ್ರಿಕ್ಟ ಸಕಲಾಸಪುರ ಪೋಸ್ಟ್ ಈ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ತೃತೀಯ ಮಂಗಳೂರು ಗೌಡಸಾರಸ್ವತ ಬ್ರಾಹ್ಮಣ ಪರಿಷದ (ಮಡಗಾಂ).

ಸ್ವದೇಶಾಭಿಮಾನಿಯ ಕಳದ ಸಂಚಿಕೆಯಲ್ಲಿ ನನ್ನ ದಸ್ಕತುನಿಶಿ ಪ್ರಕಟಿಸಲ್ಪಟ್ಟ ವಿಜ್ಞಾಪನೆಯಿಂದ ಪರಿಷದಕ್ಕೆ ಪ್ರತಿನಿಧಿಗಳಾಗಿಯೂ ಯಾ ಪ್ರೇಕ್ಷಕರಾಗಿಯೂ ಹೋಗುವವರು ಗೋವೆಯಲ್ಲಿ ಊಟ ಬಿಡಾರಗಳ ಖರ್ಚನ್ನು ತಾವೇ ನೋಡಿಕೊಳ್ಳಬೇಕಾಗುವುದೆಂಬ ತಪ್ಪು ಗ್ರಹಿಕೆಯು ಹಲವರಲ್ಲಿ ಉಂಟಾಗಿರುವುದೆಂತ ಕಾಣುತ್ತದೆ. ಪರಿಷದದ ಸಭಾಕಾರ್ಯಗಳು ಪ್ರಾರಂಭಿಸಿ ಮುಗಿಯುವ ತನಕ ವ ಪರಿಷದಕ್ಕೆ ಬಂದಿರುವ ಪ್ರತಿನಿಧಿಗಳು ಮತ್ತು ಪ್ರೇಕ್ಷಕರು ಮಾಡಗಾಂವಿಂದ ಹೊರಡುವ ತನಕ ಸರ್ವರ ಊಟ ಬಿಡಾರಗಳ ಖರ್ಚನ್ನು ಮಾಡಗ್ಗಾಂ ಪರಿಷದದ ಆಮಂತ್ರಣ ಸಭೆಯವರೇ ವಹಿಸಿಕೊಳ್ಳುವರೆಂದು ಕಳದ ಹಪ್ತೆಯಲ್ಲಿ ಆಮಂತ್ರಣ ಸಭೆಯವರು ತಂತೀ ಮೂಲಕ ತಿಳಿಸಿರುತ್ತಾರೆ.

ಈ ಸರ್ತಿ ಜರಗುವ ಪರಿಷದದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರೆಯೂ ಅಥವಾ ಪರಿಷದದ ಉತ್ತರೋತ್ತರ ಅಭಿವೃದ್ಧಿಗಾಗಿ ಆಶೀರ್ವಚನಗಳನ್ನು ಬಯಸಿಯೂ ಶ್ರೀ ಕಾಶಿ ಮಠದ ಶ್ರೀಮತ್ ವರದೇಂದ್ರ ತೀರ್ಥಸ್ವಾಮಿ ಶ್ರೀ ಪಾದಂಗಳವರಿಗೆ ವಿನಂತಿ ಪತ್ರ ಮೊದಲಾದವುಗಳು ಕಳುಹಿಸಲ್ಪಡಲಿಲ್ಲವೆಂಬ ಆಧಾರವಿಲ್ಲದ ಸಮಾಚಾರವು ಅಲ್ಲಲ್ಲಿ ಹಬ್ಬಿರುವುದಾಗಿ ತಿಳಿಯುತ್ತೇನೆ. ಆದರೆ ಮುಂಬಯಿಯಲ್ಲಿ ಪ್ರಕಟಿಸಲ್ಪಡುವ ಮುಂಬಯಿ ವೃತ್ತ ಎಂಬ ಪತ್ರಿಕೆಯ ಈ ತಿಂಗಳ ೪ನೇ ತಾರೀಕಿನ ಸಂಚಿಕೆಯಲ್ಲಿ ಪರಿಷದದ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವುದಕ್ಕೆ ಗೌಡಸಾರಸ್ವತ ಬ್ರಾಹ್ಮಣ ಮಂಡಳಿಯ ಮೂರು ಮಠಾಧೀಶರನ್ನು ವಿಜ್ಞಾಪಿಸಿಕೊಂಡಿರುತ್ತಾರೆಂತ ಗೋವೆಯಿಂದ ಒಬ್ಬ ಬಾತ್ಮೀದಾರರು ಪರಿಷದದ ತಯ್ಯಾರಿ ವಿಷಯವಾಗಿ ಬರದಿರುವ ಲೇಖದಿಂದ ತಿಳಿದು ಬರುತ್ತದೆ. ಅದಲ್ಲದೆ ಪರಿಷದದ ಮಂಟಪದಲ್ಲಿಡುವರೆ ಈಗಿನ ಕಾಶೀಮಠಾಧೀಶ ಶ್ರೀ ವರದೇಂದ್ರತೀರ್ಥಸ್ವಾಮಿಗಳವರ ಭಾವಚಿತ್ರವನ್ನು ಕಳುಹಿಸಿಕೊಡಬೇಕೆಂತ ನನಗೆ ಗೋವೆಯ ಆಮಂತ್ರಣ ಸಭೆಯವರು ಬರದಿರುವರು.

ತಾ. 9—12—10 **A. Srinivasa Pai.**

ಕೀರ್ತಿಶೇಷ ಅಮ್ಮೆಂಬಳ ಸುಬ್ರಾಪೈಗಳವರ ಮೆಮೋರಿಲ್ ಫಂಡಿವ ವಂತಿಗೆ ವಸೂಲಿ ವಿವರ:—

ಕಳದ ತಿಂಗಳ 18ನೇ ತಾರೀಕಿನ ವರೇಗೆ ವಸೂಲಾದ ಜುಮ್ಲಾ ಮೊಬಲಗು	6146—8—0
ಮ|ರಾ| ಮಂಗಳೂರ ಸಾವಕಾರ ರಂಗವೆಂಕಟೇಶ ಪೈ	101—0—0
,, ಹೊಸದುರ್ಗ ಶ್ರೀನಿವಾಸ ಕಮ್ತಿಯರು (ಕಾಸರಗೋಡು ವಕೀಲ) (ಅಂಶ)	25—0—0
,, ಅರ್ಕಳ ಶ್ರೀನಿವಾಸರಾವ್ (ಅಂಶ)	5—0—0
,, ರಾಮಗಣೇಶ ಕಮ್ತಿ ವ ಸಹೋದರರು (ಅಂಶ)	50—0—0
,, ಮಿಜಾರ ವೆಂಕಟ್ರಮಣ ಪೈಗಳು ವ ಸಹೋದರರು	105—0—0
ಜುಮ್ಲಾ	6432—8—0

K. P. Rama Rau.
8-12-1910. *for Secretary*

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಕೂಳೂರು ಮಸ್ಕತಿ ಅಕ್ಕಿ ಹೊಸ ...	4—7—0
ಗುಡ್ಡು ಮಸ್ಕತಿ ,, ,, ...	4—3—0
ಮಸ್ಕತಿ ದುಯಂ ,, ,, ...	4—0—0
ಹೊಸ ಗುಡ್ಡು ,, ...	3-11—0
ಹೊಸ ಮಸ್ಕತಿ ಬೆಳ್ತಿಗೆ	4—8—0
ರಂಗೂನ್ ಬೆಳ್ತಿಗೆ ಗೋಣಿ	8—0—0
ಹುರುಳಿ ಗೋಣಿ ೧ ಮುಡಿ 2ರ ...	4-12—0
ಉಪ್ಪು ಗೋಣಿ ೧ರ	3—7—0
ಕೊಬ್ರಿ ಖಂಡಿ ೧ರ	114—0—0
ಕೊಬ್ರಿ ಎಣ್ಣೆ ಮಣ	7—4—0
ಕಾಫಿ ಖಂಡಿ ೧ರ	225—0—0
ಕಾಳು ಮೆಣಸು ಖಂಡಿ	125—0—0
ಬಿಳಿ ಗೋಟು ಅಡಿಕೆ	88—0—0
ಕರಿ ಗೋಟು	62—0—0

ದಯವಿಟ್ಟು ಓದಿರಿ ! ಸೌಖ್ಯವನ್ನು ಹೊಂದಿರಿ !

ಕಾಮ ಶಾಸ್ತ್ರ.

ಉಚಿತವಾಗಿ ಕಳುಹಿಸಲ್ಪಡುವುದು! ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವದು. ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವು! ಆಯುರಾರೋಗ್ಯಸಂಪದಗಳುಂಟಾಗುವವು!!

ಆತಂಕ ನಿಗ್ರಹ ಮಾತ್ರೆ.

ಊಟವಾದ ಬಳಿಕ ಹಗಲಿರುಳೂ ಸೇವಿಸಬೇಕಾದದ್ದು ! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು:—

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ಪ್ರಾಣಾಧಾರಗಳಿಂದ ಅಂಗಗಳನ್ನು ಬಲಪಡಿಸುವದು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು. ೩೨ ಮಾತ್ರೆಗಳಿರುವ ಡಬ್ಬಿ ೧ಕ್ಕೆ ರೂ. ೧—೦—೦.

ಆತಂಕನಿಗ್ರಹ ಔಷಧಾಲಯ, ೨೨ ಬ್ರಾಡ್ವೇ ಮದರಾಸು. — ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಶ್ರೀ

ಶ್ರೀ ಶಿವಗಂಗಾ ಮಠದ ಶ್ರೀ “ಶಾರದಾ” ಮಾಸಪತ್ರಿಕೆ.

ವಾರ್ಷಿಕ ಚಂದಾ 2—0—0 ಹಾಸಲು ಸೇರಿ.

ಜನರು ಶ್ರೀ ಶಾರದಾನುಗ್ರಹಕ್ಕೆ ಪಾತ್ರರಾಗಿ ಅದರಿಂದ ಉಂಟಾಗುವ ಜ್ಞಾನಸುಖವನ್ನು ಅನುಭವಿಸಬೇಕಾಗಿದ್ದರೆ ಶ್ರೀ “ಶಾರದಾ” ಮಾಸಪತ್ರಿಕೆಯನ್ನು ಸೇವಿಸಬೇಕು.

ಉಪನಿಷತ್ತುಗಳ ಸಾರ, ಧರ್ಮಶಾಸ್ತ್ರದ ರಹಸ್ಯ (ಧರ್ಮಸಿಂಧು-353 ವಿಷಯ), ಶ್ರೀ ಶಂಕರಾಚಾರ್ಯರ ಕಾಲ ಮತ್ತು ಚರಿತ್ರ, ಧರ್ಮನೀತಿಗಳ ಉಲ್ಲಾಸ, ಸಟೀಕ ಸ್ತೋತ್ರಾವಳಿ, ಸರಸವಾದ ಉಪನ್ಯಾಸ, ನ್ಯಾಯಗಳ ವಿಮರ್ಶೆ, ವಿವಿಧ ಸಿದ್ಧಾಂತ ವಿವರಣ, ವಿಚಿತ್ರ ಚಾಟು ಶ್ಲೋಕಗಳು, ಸನಾತನಧರ್ಮ ನೀತಿಗಳ ಸೋಪಾನ ಈ ಮುಂತಾದುವುಗಳು ಇದರಲ್ಲಿ ಪ್ರಕಾಶವಾಗುತ್ತಲಿವೆ.

ಈ ಪತ್ರಿಕೆಯು ದೊರೆಯುವ ಸ್ಥಳ. (ಪತ್ತೆ)

ದೊಡ್ಡಬೆಲೆ ನಾರಾಯಣ ಶಾಸ್ತ್ರಿ.

ಶ್ರೀ “ಶಾರದಾ” ಆಫೀಸು ಬೆಂಗಳೂರು ಸಿಟಿ.

1911ನೇ ವರ್ಷದ ಪಾಕೆಟ್ ಡ್ಯಾರಿ.

ಬೇಗ ತರಿಸಿಕೊಳ್ಳಿ! ನಿದಾನ ಮಾಡಿದರೆ ಶಿಗಲಾರದು!!

ಪ್ರತಿಯೊಬ್ಬ ಮನುಷ್ಯನಿಗೂ ಲೆಕ್ಕವೇ ಪ್ರಾಣಾಧಾರವಾದದ್ದು. ಇಂಥಾ ಲೆಕ್ಕವನ್ನು ನಮ್ಮ ಜೇಬಿನಲ್ಲಿಡಲು ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇಇರಬೇಕಾದ ಪುಸ್ತಕವು. ಬಹಳ ಸುಲಭಕ್ರಯ. ಟಪ್ಪಾಲ್ ಖರ್ಚುಗಳು ಬೇರೆ ಬೀಳುತ್ತೆ.

ಎ. ನಂ| ಡೈರಿ ಸಾದಾ ೧ಕ್ಕೆ ೩ಆಣೆ, ಬಿ. ನಂ| ಡೈರಿ ಮುಚ್ಚಳ ಮತ್ತು ಪೆನ್‌ಸಲ್ ಸಹಿತ ೧ಕ್ಕೆ ೫ಆಣೆ. ಸಿ. ನಂ| ಡೈರಿ ದೊಡ್ಡದು ೧ಕ್ಕೆ ೬ಆಣೆ. ಡಿ. ನಂ| ಡೈರಿ ಮುಚ್ಚಳ ಮತ್ತು ಪೆನ್‌ಸಿಲ್ ಸಹಿತ ೧ಕ್ಕೆ ೮ಆಣೆ. ೧೦ ಡೈರಿಗಳನ್ನು ಒಂದೇ ಸಲ ತರಿಸಿಕೊಂಡರೆ ಒಂದು ಡೈರಿ ಇನಾಂ. ವ್ಯಾಪಾರಸ್ಥರಿಗೆ ಸರಿಯಾದ ಕಮಿಶನ್ ಶಿಕ್ಕುತ್ತೆಮತ್ತು ನಮ್ಮಲ್ಲಿ ಕನ್ನಡ ತೆಲಗು, ಸಂಸ್ಕೃತ ಪುಸ್ತಕಗಳು ಬಹಳ ಸುಲಭ ದರಕ್ಕೆ ದೊರಿಯುತ್ತದೆ.

ನಮ್ಮ ಕಂಪೆನಿ ಕ್ಯಾಟಲಾಗ್ ಮುಫತ್ತಾಗಿ ದೊರಿಯುತ್ತೆ. ಪರಾಂಬರಿಸಿ ನೋಡಿರಿ.

ಎಮ್ ಪಿ. ಮಲ್ಲಯ್ಯ.

211 ತಾಲೂಕು ಕಚೇರಿ ರಸ್ತೆ ಬೆಂಗಳೂರು ಸಿಟಿ.

ಮಂಗಳೂರು

ಚಲೋ ನಶ್ಯಪುಡಿ.

ತೊಲೆ ೧ಕ್ಕೆ ರೂ. ೦—೧—೦. ಸೇರು ೧ಕ್ಕೆ ರೂ. ೧—೪—೦

ಸುಗಂಧ ನಾಸಿಕ ಚೂರ್ಣ ತಲೆಪಾಸಿಗೂ ಸೀತಕ್ಕೂ ಶಿರೋಭಾರಕ್ಕೂ ಒಳ್ಳೇದು ತೊಲೆ ೧ಕ್ಕೆ ೦—೪—೦ ಸೇರು ೧ಕ್ಕೆ ರೂ. ೫—೦—೦.

ಅಪೇಕ್ಷಿಸುವವರಿಗೆ ವಿ. ಪಿ. ಮೂಲಕವೂ ಹಣ ಕಳುಹಿಸಿದವರಿಗೆ ಸೆಂಪಲ್ ಪೋಸ್ಟ ಮೂಲಕವೂ ಕಳುಹಿಸಿಕೊಡಬಹುದು.

ಕಾವೂರು ವೆಂಕಟೇಶ ಸುಬ್ರಾಯ ಪೈ,

ಗೋಳಿಕಟ್ಟೆ ಬಜಾರ, ಮಂಗಳೂರು, ದ. ಕ.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. 2—8—0 ಮಾತ್ರ. ರೂ. 2—8—0 ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

“ರಾಸ್ಕೋಪ್ ಸಿಷ್ಟಂ ಪೇಟೆಂಟ್ ಲೀವರ್ ಜ್ಯೂವೆಲ್ಡ್” ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರಹವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. 3-8-0 ರೂ. 4-8-0. ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಎರಡು (೨) ವರುಷಗಳು ಗ್ಯಾರೆಂಟು.

ಕ್ರಯ ರೂ. 2-8-0 ವಿ. ಪಿ. ಚಾರ್ಜು ರೂ. 0-4-0.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ 0-8-0 ವಿ. ಪಿ. ಚಾರ್ಜು 0-4-0.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ, ಸಾಹುಕಾರ ಪೇಟೆ, ಮದ್ರಾಸು.

ಉತ್ತಮವಾದ ಮೈಸೂರು ಸುಗಂಧ ದ್ರವ್ಯಗಳು.

ಅಂಬರ್ ಊದಬತ್ತಿ ಸೇ. ೧ಕ್ಕೆ	೬—೦—೦	A ಅರಗಜ ತೊ. ೧ಕ್ಕೆ	೨—೦—೦
ಕಸ್ತೂರಿ ಬತ್ತಿ ಡಿ.	೩—೦—೦	B. ಅರಗಜ ಡಿ.	೧—೦—೦
ಪುಣಗು ಬತ್ತಿ ಡಿ.	೧—೮—೦	ಕಸ್ತೂರಿ ಬಿಲ್ಲೆ ಡಿ.	೨—೦—೦
ಗುಲಾಬಿ ಬತ್ತಿ ಡಿ.	೧—೪—೦	ಪುಣಗು ಬಿಲ್ಲೆ	೧—೦—೦
A ಪನ್ನೀರ್ ಬತ್ತಿ ಡಿ.	೦—೧೨—೦	ಕೇಸರಿ ಬಿಲ್ಲೆ	೦—೮—೦
B ಪನ್ನೀರ್ ಬತ್ತಿ ಡಿ.	೦—೧೦—೦	ಮನೋರಂಜನ ತೈಲ ಶೀಸೆ ೧ಕ್ಕೆ	೦—೮—೦
ಮಸಾಲಾ ಬತ್ತಿ ಡಿ.	೦—೬—೦	ತಾಂಬೂಲ ರತ್ನ ಡಿ.	೦—೪—೦

ಇವುಗಳಲ್ಲದೆ ಎಲ್ಲಾ ತರಹದ ಅತ್ತರ್, ನಾಶಿಕ ಚೂರ್ಣ, ಟೂತ್ ಪೌಡರ್ ಫಿತ್ತಾ, ಮೊದಲಾದವುಗಳು ಬಿಕರಿಗೆ ಸಿದ್ಧವಾಗಿವೆ. ಎಸ್. ಎಮ್. ಸುಬ್ಬರಾವ್, ತೇರ್‌ಬೀದಿ, ಮಂಗಳೂರು.

ನಮ್ಮ ಏಜಂಟರು:— ಎಸ್. ಜಿ. ಶಂಕ್ರಪ್ಪ ಕಂಪೆನಿ, ನಾಲೂರು, ತೀರ್ಥಹಳ್ಳಿ. ಎಲ್ಲೂರು ನಾರಾಯಣ ರಾವ್, ಧರ್ಮಸ್ಥಳ.

ಒಡೋನಾ.

ಇದು ಆಗಿಂದಾಗ್ಯೆ ಬಾಧಿಸುವ ಹಲ್ಲುನೋವಿನ ದಿವ್ಯ ಔಷಧಿಯಾಗಿದೆ. ಶಸ್ತ್ರಪ್ರಯೋಗ ಮಾಡದೆನೇ ಹಲ್ಲುನೋವು ಖಾತ್ರಿಯಾಗಿ ನಿಲ್ಲುವುದು. ಕೆಲವುಸಾರಿ ದಂತ ವೈದ್ಯರಿಂದ ಸಹ ಸಾಧ್ಯವಾಗದ ಹಲ್ಲುನೋವನ್ನು ಈ ಒಡೋನಾ ಎಂಬದು ಕ್ಷಣಮಾತ್ರದಲ್ಲಿ ಪರಿಹರಿಸುವುದು. ಈ ಭೂಲೋಕದಲ್ಲಿನ ಎಲ್ಲಾ ಹಲ್ಲುನೋವಿನ ಔಷಧಿಗಳಿಗಿಂತ ಇದು ಅತಿ ಉತ್ಕೃಷ್ಟವಾದದ್ದು. ಟಿನ್ ೧ಕ್ಕೆ ಕ್ರಯ ೨ ರೂ.

ಇಂಪೀರಿಯಲ್ ಪೈನ್ ಬಾಮ್.

ಇದರಿಂದ ಸಾಧಾರಣ ತಲೆಶಿಡಿತ ಮೊದಲುಗೊಂಡು ಎಲ್ಲಾ ತರದ ದುಸ್ತರವಾದ ರೋಗಗಳು ಸಹಾ ಗುಣವಾಗುವವು.

ವಾತ, ಸಂಧಿವಾತ, ಹರಿವಾತ, ಪಕ್ಷವಾತ, ಉಬ್ಬಸ, ಸೊಂಟನೋವು, ಗಂಟುನೋವು, ಶೀತ, ಕೆಮ್ಮು, ಉಳುಕು, ನೆಗಡಿ, ಕಟವಾತ, ಶ್ವಾಸವಾತ, ಕ್ಷಯರೋಗ, ಜಜ್ಜಿದ ಗಾಯ, ಕುತ್ತಿಗೆ ನೋವು, ರಾಜಕುರು ವಗೈರೆ ಎಲ್ಲಾ ತರದ ರೋಗಗಳಿಗೆ ಇದು ಪರಮೌಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ೧ರ ೧೨ ಆಣೆ.

ಮದ್ರಾಸ್ ಆಧಿಪತ್ಯಕ್ಕೆ ಸೋಲ್ ಏಜಂಟರು:—

ಮೆಸ್ಸರ್ಸ್ ಕೆ. ವಿಟ್ಠಳ ರಾವ್ ಎಂಡ್ ಕೋ.,

ಸರ್ಟಿಫ್ಯಾಡ್ ಕೆಮಿಸ್ಟ್, ಮಂಗಳೂರು, ದ. ಕ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹವ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜವ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS.

MANORA & CO'S

WONDERFUL MEDICINE FOR ALL KINDS OF PAINS.

Try to-day! Dont wait until tomorrow!!

ರೊಯಲ್ ಇಂಡಿಯನ್ ಬಾಮ್.

ಹಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು! ಇದರ ಉಪಯೋಗದಿಂದ:—ತಲೆನೋವು, ಶಿರೋಭಾರ, ಅರ್ಧಾಂಗವಾಯು, ಸೊಂಟದ ನೋವು, ಗಂಟಲು ನೋವು, ಘಾಯ, ಜಖಮು, ಉಳುಕು, ಶೈತ್ಯ, ಎದೆನೋವು, ಆನೆಗಾಲು, ಖಜ್ಜಿ, ಲುತಿಘಾಯ, ಮುದ್ದಣ ಮೊದಲಾದ ಎಲ್ಲಾ ತರದ ವೇದನೆಗಳು ಸಂಪೂರ್ಣವಾಗಿ ಗುಣವಾಗುವವು!! ಸಣ್ಣ ಮಕ್ಕಳ ಎಳೆಯ ದೇಹಕ್ಕಾದರೂ ಭಯವಿಲ್ಲದೆ ಇದನ್ನು ಹಚ್ಚಬಹುದು. "ಬಾಲಗ್ರಹ ಪೀಡನೆಗಳಲ್ಲಿ ಇದು ಅಗ್ರಸ್ಥಾನ ಹೊಂದಿಯದೆ" ಸಾವಿರಾರು ಜನರು ಇದನ್ನು ಉಪಯೋಗಿಸುತ್ತಾರೆ. "ಇದರಿಂದ ಗುಣ ಶಿಕ್ಕುವದಿಲ್ಲವಾದರೆ ಹಣ ತಿರುಗಿ ರವಾನಿಸಿ ಕೊಡುವೆವು. ಎಲ್ಲಾ ಔಷಧಾಲಯಗಳಲ್ಲಿಯೂ, ಕೆಮಿಸ್ಟರಲ್ಲಿಯೂ ಶಿಕ್ಕುತ್ತದೆ. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜಾಗ್ರತೆ:—ಇಮಿಟೇಶನ್ (ಠಕಾರಿ) ಬಾಮ್‌ಗಳನ್ನು ತೆಗದುಕೊಳ್ಳಬೇಡಿರಿ.

ವಿಳಾಸ:— ಮನೋರಾ ಕಂಪೆನಿ, ಗಿರಗಾಂ ಮುಂಬಯಿ.
ಏಜಂಟರು:— ಪರ್ಲ ಎಂಡ್ ಸನ್ಸ್ ಮಂಗಳೂರು.
ಬೇಕಲ ವೆಂಕಟ ರಾವ್, ಉಡುಪಿ.
ಜಿ. ನರಸಿಂಹ ಮಲ್ಯ ಪುತ್ತೂರು.
ಬಿ. ದತ್ತ್ ಬ್ರದರ್ಸ್, ಕುಂದಾಪುರ.
ಬಿ. ಎನ್. ಮಲ್ಯಾ ರಾಮ ಪ್ರಸಾದ ಔಷಧಾಲಯ. ಬಾರಕೂರು.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು. ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0–8–0.
ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2—8—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರಿಯಿರಿ.
ವಿ. ಪಿ. ಖರ್ಚು ಪ್ರತ್ಯೇಕ. ಟಿ. ಬಾಬುರಾಯರ,
ಆಯುರ್ವೇದಿಕ್ ಔಷಧಾಲಯ, ಗೊಲ್ಲರಕೇರಿ ರಸ್ತೆ, ಮಂಗಳೂರು, ದ. ಕ.

ನೇತ್ರಬಿಂದು

ಇದು ಕಣ್ಣಿನ ದೃಷ್ಟಿಮಾಂದ್ಯ, ಕಣ್ಣೀರು ಸೋರುವಿಕೆ, ಕಣ್ಣಿನ ಮೂಲೆ ತುರಿಸುವಿಕೆ, ಕೆಂಗಣ್ಣು, ರೆಪ್ಪೆ ಉದುರುವಿಕೆ ಈ ಮೊದಲಾದ ರೋಗಗಳಿಗೆ ಸಿದ್ಧೌಷಧವು. ಕ್ರಯ ಬಾಟ್ಲಿ ೧ರ ರೂ. 0—8—0 ವಿ. ಪಿ. 0—4—0.

ಸಿದ್ಧಲಕ್ಷ್ಮೀವಿಲಾಸ—ಇದು ಒಳ್ಳೇ ರಕ್ತಶುದ್ಧಿ ಮಾಡುತ್ತದೆ. ಕ್ರಯ ಬಾಟ್ಲಿ ೧ರ 0-12-0 ವಿ. ಪಿ. 0—4—0.

ಇದು ವಿನಹ ಇಲ್ಲಿ ಆಸವಗಳೂ, ಅರಿಷ್ಟಗಳೂ, ಘೃತಗಳೂ, ಲೇಹಗಳೂ, ಚೂರ್ಣಗಳೂ, ತೈಲ್ಯಗಳೂ, ಮಾತ್ರೆಗಳೂ, ಭಸ್ಮಗಳೂ ವಗೈರೆ ದೊರೆಯುತ್ತವೆ.

ವಿಳಾಸ:— ಧನ್ವಂತರಿ ಆಯುರ್ವೇದಿಕ್ ಔಷಧಾಲಯ,
ಮಂಗಳೂರು.

ಈಗಲೀಗ ಅಚ್ಚಾಗುತ್ತಲಿದ್ದ "ಆಯುರ್ವೇದ ಚಿಕಿತ್ಸಾ..." ಎಂಬ ಗ್ರಂಥವು ಇನ್ನು ಸದ್ಯದಲ್ಲಿಯೇ ಪ್ರಕಟವಾಗು...ಬದನ್ನು ಸ್ವದೇಶಾಭಿಮಾನಿಯ ವಾಚಕರೆಲ್ಲರೂ

ತಿಳಿಯಬೇಕಾಗಿರುವುದು.

ಕನ್ನಡಭಾಷೆ ಗೊತ್ತಿರುವವರ್ಯಾರಾದರೂ ತನ್ನ ಹೆಸರು ಮತ್ತು ವಿಳಾಸವನ್ನು ಕಳುಹಿಸಿಕೊಟ್ಟಲ್ಲಿ ಟಪ್ಪಾಲು ಹಾಸಲು ಇಲ್ಲದೆ ಸಹಾ ಗ್ರಂಥವನ್ನು ಉಚಿತವಾಗಿ ಪಡಿಯೆಬಹುದು. ಇಂಗ್ಲೀಷು ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ಕಳುಹಿಸುವಾಗ ತಮ್ಮ ಸ್ನೇಹಿತರ ಯಾ ನೆಂಟರಿಷ್ಟರ ಪೈಕಿ 10 ಜನರ ಹೆಸರು ಮತ್ತು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು.

ಅತೀ ಉತ್ತಮವಾದ ಬ್ಲೂಬ್ಲೇಕ್ ಶಾಯಿಯ ಪುಡಿ.

ಇತರ ಎಲ್ಲಾ ಶಾಯಿಯ ಪುಡಿಗಿಂತಲೂ ಇದು ಬಹಳ ಉತ್ಕೃಷ್ಟವಾದದ್ದು.

ಒಂದು ಪೊಟ್ಲಕ್ಕೆ 4 ಪೈ.

ಈ ಶಾಯಿಯ ಹುಡಿಯನ್ನು ೨ ಔನ್ಸು ನೀರಿನಲ್ಲಿ ಕಲಸಿದೊಡನೆ ಅತೀ ಕಪ್ಪಾದ ...ಯಿ ದೊರಕುವದು. ಇದರಿಂದ ಬರದರೆ ಲೋಹದ ಪೇನುಗಳಿಗೆ ತುಕ್ಕು ಹಿ...ಯದು. ಪೇನಿನಲ್ಲಿ ಶಾಯಿಯು ಬಹಳ ಸೊಗಸಾಗಿ ಹರಿಯುವುದು. ಈ ಶಾಯಿಯ ಪುಡಿಯಲ್ಲಿ ಬ್ಲೂಬ್ಲೇಕ್, ಕೆಂಪು, ಪಚ್ಚೆ, ಧೂಮ್ರವರ್ಣ ಇವೇ ಮೊದಲಾದವುಗಳು ಇರುವವು.

ಹಲವು ಪ್ರದರ್ಶನಗಳಲ್ಲಿ ಈ ಶಾಯಿಯ ಪುಡಿಯು ಬೆಳ್ಳಿ ಪದಕಗಳನ್ನೂ, ಯೋಗ್ಯತಾಪತ್ರಗಳನ್ನೂ ಹೊಂದಿಯದೆ.

ಒಂದೇ ಸಾರಿ 100 ಪೊಟ್ಲಗಳಿರುವ ಒಂದು ಕಾರ್ಡಬೋರ್ಡು ಪೆಟ್ಟಿಗೆಯನ್ನು ...ರಿಸಿಕೊಂಡರೆ ಟಪ್ಪಾಲು ಹಾಸಲು ವಿನಹಾ ರೂ. ೧—೪—೦.

ಟಿ. ಎಸ್. ಸುಬ್ರಮಣ್ಯಮಂ ಎಂಡ್ ಕೊ.
32 ಆರ್ಮೆನಿಯನ್ ರಸ್ತೆ, ಮದ್ರಾಸು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ...ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ತರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರು... ಎಲ್ಲಾ ತರದ ಸಾಮಾನುಗಳನ್ನು ಖಮಿಶನ ಮೂಲಕ ರವಾನಿಸುತ್ತೇವೆ. ವಿಶೇ...ಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್ ಲವರಚಾಲ, ಮುಂಬಯಿ.

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,

ಮಂಗಳೂರು, ದ. ಕ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ; ಒಯಲ್‌ಮೆನ್ ಸ್ಟೋರ್ಸ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ನವೀನ ಶೃಂಗಾರ ಸ್ತ್ರೀ ಶುಕಸಪ್ತತಿ ಕಥೆ.

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಬೇಕಾಗಿ ...ಭಿಲಾಷೆ ಇದ್ದರೆ ಮೇಲ್ಕಂಡ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ. ಕ್ರಯ ...ಾಸಲ್ ಸಹಾ ೧೦ ಆಣೆ.

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪರಮಾಯದ ...ಊದಬತ್ತಿಗಳು, ಹಸಿಗಂಧ. ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜವಳಿ ಸಹಾ ...ರಿಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ...ನಿಗೆ ರವಾನೆ ಮಾಡುವೆವು. ಒಂದಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ. ...ತ್ತೆ ಕಂಪೆನಿ ಕೆಟಲಾಗ್ ಮುಪತ್ತಾಗಿ ದೊರೆಯುವದು.

ಟಿ. ಯನ್. ಶ್ರೀನಿವಾಸ ಶೆಟ್ಟಿ, ಬುಕ್‌ಡಿಪೊ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು. ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ...ತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ:—ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗಳೂರು, ದ. ಕನ್ನಡ.

ಬಹುಮಾನ! ಬಹುಮಾನ! ಬಹುಮಾನ!

THE KALA-NIDHI MANGALORE,

(ಪೊಟ್ಲ 1 ಕ್ಕೆ 3 ಪೈ.)

ಬರುವ ದಶಂಬರ ತಿಂಗಳ ವರೆಗೆ ಮಾತ್ರ. ೪ ರೂಪಾಯಿಗಳ ಶಾಯಿ ಪೊಟ್ಲಗಳನ್ನು ತೆಗದುಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಘಡಿಯಾರವು.

ಈ ಶಾಯಿಯಿಂದ ಲೋಹದ ಪೇನುಗಳಿಗೆ ತುಕ್ಕು ಹಿಡಿಯದು. ಶಾಯಿಯ ಮೇಲ್ಗಡೆ ಬೂಜು ನಿಲ್ಲದು. ಬರಿಯುವಾಗ ನೀಲ ಬಣ್ಣದಲ್ಲಿದ್ದು ಆರಿದೊಡನೆ ಅತಿ ಕಪ್ಪಾಗುವದು.

ಬಹುಮಾನಗಳ ವಿವರ. ೪ ಆಣೆಯ ಪೊಟ್ಲಗಳನ್ನು ತಕ್ಕೊಳ್ಳುವವರಿಗೆ ಸುಗಂಧ ದಂತ ಕಾಂತಿ ಚೂರ್ಣದ ಡಬ್ಬಿ ೧; ೮ ಆಣೆಯದನ್ನು ತಕ್ಕೊಂಡವರಿಗೆ ಜೋನ್ ಫೇಬರ್ ಪೆನ್ಸಿಲ್ ಡಜನ್ ೧; ೧ ರೂಪಾಯಿ ಪೊಟ್ಲಗಳನ್ನು ಪಡಕೊಂಡವರಿಗೆ ದೊಡ್ಡವರ ಉತ್ತಮವಾದ ಬನಿಯನ್ ೧; ೨ ರೂಪಾಯಿದ್ದನ್ನು ತರಿಸಿಕೊಳ್ಳುವವರಿಗೆ ಓಫೀಸ್ ನಂ. ೧ ಕಿಸೆ ಛಾಪೆಯ ಪೆಟ್ಟಿಗೆ ೧; ೪ ರೂಪಾಯಿಗಳದ್ದು ತರಿಸಿಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್, ಕೀಲೆಸ್ ಕಿಸೆ ಘಡಿಯಾರವು ಗ್ಲಾಸ್ ಸ್ಪ್ರಿಂಗ್ ಸಹಿತ.

ಬ್ಲೂ ಬ್ಲೇಕ್ ದೊಡ್ಡ ಶಾಯಿಯ ಬಾಟ್ಲಿ ೧ಕ್ಕೆ ಆಣೆ ೮. ಸಣ್ಣದಕ್ಕೆ ಆಣೆ ೪. ಶಾಯಿಯ ಗುಳಿಗೆಗಳೂ ಕಾಗದಗಳೂ ಸಹ ಸಿಕ್ಕುವವು. ಪರಸ್ಥಳದವರಿಗೆ ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:— ಕಲಾನಿಧಿ, ಮಂಗಳೂರು.
ಅಥವಾ ದಿ. ಊಲನ್ ಮಾರ್ಟ್ ನಂಬ್ರ ೧ ಮಂಗಳೂರು (ದ. ಕ.)

ಸರ್ವರೂ ಸಂಗ್ರಹಿಸ ಬೇಕಾದ್ದು, ಪ್ರಾಸಾದಿಕ ಗ್ರಂಥ

ಶ್ರೀ ಶಿವಲೀಲಾಮೃತವು.

ಭಾಮಿನಿ ಷಟ್ಪದಿಯಲ್ಲಿ ೧೪ ಅಧ್ಯಾಯಗಳುಳ್ಳದ್ದು. ಇದರಲ್ಲಿ ಜಪಭಸ್ಮ ರುದ್ರಾಕ್ಷಧಾರಣ, ಪ್ರದೋಷ ವ್ರತ, ಶಿವದಿನ. ಗೋಕರ್ಣಮಹಿಮೆ; ವ್ಯಾಧ–ಹರಿಣಿಗಳ ಕಥೆ, ದಾಶಾರ್ಹ, ಮಿತ್ರಸಹ, ಸುಮಿತ್ರೆ, ವಿಮರ್ಶನ, ಚಂದ್ರಸೇನ, ಸತ್ಯರಥ, ಧರ್ಮಗುಪ್ತ, ಚಿತ್ರವರ್ಮ, ಸಿಮಂತಿನಿ, ಸುಮೇಧ, ಸೋಮವಂತ, ಪಿಂಗಲೆ, ಭದ್ರಾಯು, ಶಾರದೆ, ಭದ್ರಸೇನ, ಕುಕ್ಕುಟ–ಮರ್ಕಟ, ಬಹುಲೆಯಾಖ್ಯಾನಗಳು; ಭಸ್ಮಾಸುರ, ತ್ರಿಪುರ, ತಾರಕರ ಸಂಹಾರ; ದಕ್ಷವಧೆ; ಶಿವಗಿರಿಜೆಯರ ಪಗಡೆಯಾಟ; ಶ್ರಿಯಾಳ ಚರಿತ್ರೆ ಸಹ ವರ್ಣಿಸಿಯದೆ.

ಕ್ರಯ ಪ್ರತಿಯೊಂದಕ್ಕೆ 4 ಆಣೆ. ಅಂಚೆವೆಚ್ಚ 2 ಆಣೆ. ಈ ಮೊದಲು ನಮ್ಮಲ್ಲಿಂದ ಸಾಮಾನು ಪಡಕೊಂಡವರು ಗುರ್ತದೊಡನೆ 4 ಆಣೆ ಸ್ಟಾಂಪು ಕಳುಹಿಸಿದರೆ ಒಂದು ಪ್ರತಿ ಉಚಿತವಾಗಿ ಶಿಕ್ಕುವುದು. ಇದನ್ನು ಪಡಕೊಳ್ಳುವವರಿಗೆ "ಭಕ್ತಿಮಹಿಮೆ" ಪುಸ್ತಕವು ಅರ್ಧ ಕ್ರಯಕ್ಕೆ (6 ಆಣೆ) ದೊರಕುವುದು. ಅಂಚೆವೆಚ್ಚ ಬೇರೆ.

ದಿ. ಊಲನ್ ಮಾರ್ಟ್, ಮಂಗಳೂರು.

POCKET DIARIES

FOR 1911.

1911ನೇ ಇಸವಿಯ ಪೋಕೆಟ್ ಡ್ಯಾರಿಗಳು.

ವಕೀಲರಿಗೂ, ವಕೀಲರ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಅವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು.

ನೋಟು ಬೂಕು ಸ್ಯಾಜು ಕ್ರಯ ರೂ. ೦—೮—೦

ಸಣ್ಣ ಸ್ಯಾಜು ಕ್ರಯ ರೂ. ೦—೪—೦

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಷನ್ ದೊರಕುವದು.

ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಪ್ರೆಸ್,
ಮಂಗಳೂರು ದ. ಕ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತಕಡೆ ಲಕ್ಷ್ಯಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ.)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು.

3″ × 8¼″, 3″ × 5¼″; 8¼″ × 6½″, 6½″ × 4″ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕದಾರ ವ ಆಫೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ.

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ. ಮೆನೇಜರ್,
ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—

ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಮಂಗಳೂರು.

Printed & published by V. S. Kamath, at the Mangalore Trading Association's Sharada Press, Mangalore.

Registered No M. 498.

ಸ್ವದೇಶಾಭಿಮಾನಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:— ವರ್ಷ ೧ಕ್ಕೆ ರೂ. 1-4-0. ಟಪ್ಪಾಲು ಹಾಸಲು ಶೇರಿ ರೂ. 2-1-0.

ಪುಸ್ತಕ 4. ಮಂಗಳೂರು, ತಾರೀಕು 16ನೇ ಶುಕ್ರವಾರ ದಶಂಬರ 1910. ಸಂಚಿಕೆ 50

Amrutanjan Depot Fort Bombay.

ಅಮೃತಾಂಜನ.

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು. ಬಾಟ್ಲಿ ೧ರ ಕಿಮ್ಮತು 8 ಆಣೆ.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ಕೇಶವರ್ಧಿನಿ ಎಣ್ಣೆ.

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳಿಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲಿ ಒಂದರ ಕಿಮ್ಮತು ರೂ. 1.

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

SAFE ★ EFFICACIOUS ★ SURE
WILLIAM & Co
BOMBAY
PILLS ★ OINTMENTS ★ POWDERS

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ. 4.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ. 1.

ಸುಂದರಿ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ.

ವಿಳಾಸ:— ಅಮೃತಾಂಜನ ಡಿಪೋ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:— "ಅಮೃತಾಂಜನ", ಮುಂಬಯಿ.

"ಚಮತ್ಕಾರ ಚಿಂತಾಮಣಿ"

ಶಬ್ದ ಚಮತ್ಕಾರ ಅರ್ಥ ಚಮತ್ಕೃತಿಗಳಿಂದೊಡಗೂಡಿ ಮೃದುಮಧುರ ಶೈಲಿಯಿಂದ ಸಹಿತವಾಗಿ, ಧರ್ಮನೀತಿ ಜ್ಞಾನಗಳನ್ನೂ ವಿಶದಪಡಿಸುತ್ತಿರುವ ರಸಭರಿತವಾದ. ಈ ಕಥೆಯನ್ನು ಓದತಕ್ಕವರು ರಾಮಾಯಣದಲ್ಲಿನ ಹೆಸರುಗಳನ್ನು ಮಾತ್ರ ಜ್ಞಾಪಿಸಿಕೊಂಡು ಇದರಲ್ಲಿ ಹೊಂದಿಸಿಕೊಂಡರೆ ಮುಂದೆ ಇದರಲ್ಲಿನ ಸವಿಯು ಬೇಗನೆ ಗೊತ್ತಾಗುತ್ತದೆ. ಕ್ರಯ ರೂ. 0-10-0.

"ವಿದ್ಯಾನಂದ' ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ತಿ ಪ್ರಿಂಟಾಗಿ ಸಿದ್ಧವಾಗಿದೆ. ಬೆಲೆ 1-0-0.

ಮುಕುಂದಮಾಲಾ ಸ್ತೋತ್ರ.

ಹೆಚ್ಚು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ. ಬೆಲೆ 0-4-0.

ವಿಳಾಸ:- ಮ್ಯಾನೇಜರ್,

ವಿದ್ಯಾನಂದ ಆಫೀಸು,

ಚಿಕ್ಕಪೇಟೆ ಬೆಂಗಳೂರು ಸಿಟಿ.

೧೯೧೧ನೇ ದಿ "ಮಾಡಲ್" ಪಾಕೆಟ್ ಡೈರಿ.

ವಿವರಣೆ.

ನಂ. 1. ಪಂಚಾಂಗಸಹಿತವಾದ ಚಿಕ್ಕ ಸೈಜ್ ಡೈರಿ $3\frac{1}{2}$ ಅಂಗುಲ, ಅಗಲ $4\frac{3}{4}$ ಉದ್ದವಿರುವ 540 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 4ಆಣೆ.

ನಂ. 2. ಡಿಟೊ ಮೇಲ್ಕಂಡ ಚಿಕ್ಕ ಸೈಜ್ ಪ್ಲಾಪ್ ಬೈಂಡು ಮಾಡಿರುವುದು. ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಸ್ಟಾಂಪು ವಗೈರೆ ಇಡುವುದಕ್ಕೆ ಚೀಲವಿದೆ. ಮೇಲಗಡೆ ಮುಚ್ಚುವದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್‌ಸಲ್ ಇಟ್ಟಿದೆ. ಇದರ ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 3. ಪಂಚಾಂಗಸಹಿತವಾದ ದೊಡ್ಡ ಸೈಜ್ ಡೈರಿ $4\frac{3}{4}$ ಅಂಗುಲ ಅಗಲ 7 ಅಂಗುಲ ಉದ್ದವಿರುವ 490 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 4. ಡಿಟೊ ಮೇಲ್ಕಂಡ ದೊಡ್ಡ ಸೈಜ್. ಪ್ಲಾಪ್ ಬೈಂಡು ಮಾಡಿರುವದು ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಕಾರ್ಡು, ಕವರು, ಸ್ಟಾಂಪು ವಗೈರೆ ಇಡುವುದಕ್ಕೆ ಚೀಲ ಇರುತ್ತದೆ. ಮೇಲ್ಗಡೆ ಮುಚ್ಚುವುದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್‌ಸಲ್ ಇಟ್ಟಿದೆ. ಕ್ರಯ ಪ್ರತಿ 1ಕ್ಕೆ 8 ಆಣೆ.

ನಂ. 5. ಆಫೀಸರ್ಸ್ ಹ್ಯಾಂಡ್ ಡೈರಿ 1-0-0.

ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಇದು ಸಕಾಲವಾಗಿದೆ.

ಕೂಡಲೇ ಬರೆದು ತರಿಸಿಕೊಳ್ಳಿರಿ

N. B:-1. ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ತರಿಸಿಕೊಂಡರೆ 1 ಡೈರಿಯನ್ನು ಬಹುಮಾನವಾಗಿ ಕೊಡುತ್ತೇವೆ. 2. ವಿ.ಪಿ. ಮೂಲಕ ತರಿಸಿಕೊಳ್ಳುವವರು ಪೋಸ್ಟು ಚಾರ್ಜು ಮತ್ತು ವಿ.ಪಿ. ಕಮಿಶನ್ ಸಹ ಬೇರೆ ಕೊಡಬೇಕು. 3. ಹೆಚ್ಚು ವಿಷಯ ತಿಳಿಯಲಪೇಕ್ಷಿಸುವವರು ರಿಪ್ಲೈ ಕಾರ್ಡನ್ನಾಗಲಿ ಅರ್ಧಾಣೆ ಪೋಸ್ಟು ಲೇಬಲ್ ಆಗಲಿ ಮುಂಗಡ ಕಳುಹಿಸಬೇಕು. 4. ಎಷ್ಟು ಜಾಸ್ತಿ ಪ್ರತಿಗಳನ್ನು ತರಿಸಿಕೊಳ್ಳುವರೋ ಅಷ್ಟು ಪೋಸ್ಟು ಚಾರ್ಜು ಕಮ್ಮಿ ಆಗುವದು. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಆಫೀಸರ್ಸ್ ಪ್ಯಾನಿಸೀ ಹ್ಯಾಂಡ್ ಡೈರಿ ಎಂಬುವದು ಹಸನಾದ ಕಾಗದದಿಂದಲೂ ಮತ್ತು ಒಳ್ಳೇ ಕ್ಯಾಲಿಕ್‌ನಿಂದಲೂ ಸಹಾ ತಯಾರುಮಾಡಿರುತ್ತದೆ.

ಮೆತ್ತೆಗಳು, ಮತ್ತು ಮೇಜಿನ ಚೌಕಗಳು, ವಗೈರೆಯವುಗಳ ಮೇಲೆ ಚಿತ್ರವಿಚಿತ್ರವಾದ ಕಸೂತಿ ಕೆಲಸವನ್ನು ಮಾಡಲು ಅನುಕೂಲವಾದ "ಕೈ ಮೆಷಿನ್"ಗಳು, ನಮೂನೆಗಳು ಮತ್ತು ಇದಕ್ಕೆ ಅನುಕೂಲವಾದ ರೇಶ್ಮೆ ಮತ್ತು ಉಲನ್‌ದಾರಗಳು, ಸೂಜಿಗಳು, ಕತ್ತರಿಗಳು, ಚೌಕಟ್ಟುಗಳು ವಗೈರೆ ವಿಶಿಷ್ಟ ಸಾಮಾನುಗಳು, ಸೈಜುವಾರಿ ಕಸೂತಿ ಕಾರ್ಡುಗಳು ಕಲ್ಕತ್ತೆಯ ಕ್ಯಾಟಲಾಗ್ ಕ್ರಯಕ್ಕೆ ಇಲ್ಲಿ ದೊರೆಯುತ್ತವೆ.

ಎಲ್. ಎ. ಫೋರುವಾಲ್ ಕಂಪೆನಿ.

ಬೆಂಗಳೂರು ಸಿಟಿ.

ವಿಕ್ರಯಕ್ಕೆ ಸಿದ್ಧವಾಗಿರುವುದು

ಶ್ರೀ ಚಿಕ್ಕುಪಾಧ್ಯಾಯರಿಂದ

ವಿರಚಿತವಾದ

"ಶ್ರೀ ಶುಕಸಪ್ತತಿ"

(ಡಮ್ಮಿ ಅಷ್ಟಪುಟ - ಒಟ್ಟು ಪುಟಗಳು ೫೬೦).

ಈ ಗ್ರಂಥವು ಈಗ ಮೂರನೇ ಸಲ ಮುದ್ರಣದಲ್ಲಿ ಪೂರ್ವ ಪ್ರತಿಯಲ್ಲಿದ್ದಂತೆ ಯಾವ ಲೋಪವೂ ಇಲ್ಲದೆ ನೂತನವಾಗಿ ಪರಿಷ್ಕರಿಸಿ ಪ್ರಕಟಿಸಲ್ಪಟ್ಟಿದೆ.

ಮೇಲು ಪ್ರತಿ ೧ಕ್ಕೆ ಕ್ರಯ ರೂ. ೨-೦-೦

ಉತ್ತಮ ಪ್ರತಿ ,, ರೂ. ೩-೦-೦

ಮುಖ್ಯವಾಗಿ ನಮ್ಮ ದೇಶದಲ್ಲಿ ಕನ್ನಡ ಭಾಷೆಯನ್ನು ಬಲ್ಲ ಪ್ರತಿಯೊಬ್ಬ ಗೃಹಸ್ಥರ ಮನೆಯಲ್ಲಿಯೂ, ಗೃಹಪತಿಗಳು ತಮ್ಮ ಕುಟುಂಬದಲ್ಲಿ ಹೆಂಗಸರು, ಗಂಡಸರು, ಪ್ರಾಯಸ್ಥರು, ಮುದುಕರು, ಹುಡುಗರು. ಹುಡುಗಿಯರು ವೇದಸಮ್ಮತವಾದ ಮತಾಚಾರಗಳನ್ನೂ, ಧರ್ಮಗಳನ್ನೂ, ಸಂಪ್ರದಾಯಗಳನ್ನೂ, ತಿಳಿದುಕೊಂಡು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಸಂತೋಷವನ್ನು ಅನುಭವಿಸುತ್ತಾ ಆಸ್ತಿಕರಾಗಿರಬೇಕೆಂದು ಅಪೇಕ್ಷೆ ಇದ್ದರೆ ಈ ಪುಸ್ತಕವನ್ನು ಅವಶ್ಯಕವಾಗಿ ತೆಗದುಕೊಡಬೇಕು.

ಭಾಷ್ಯಂ. ರಾಮಾಚಾರ್ಯ,

೪೫. ಆಸ್ಪತ್ರಿ ರೋಡ್,

ಬೆಂಗಳೂರು ಶಹರು.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು-ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಶಿಂಗ್ ಮಹಾರಾಣಿಯವರು-ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು-ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು-ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡಬಲ್ಲೆನು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು-ನಾನು ಉಪಯೋಗಿಸಿದ್ದೇನೆ; ಸರ್ವರೂ ಇದನ್ನು ಉಪಯೋಗಿಸ ಬಹುದು.

ಕುಂತಳ ಕೌಮುದಿ ತೈಲ-ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು. ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳೆಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಡುತ್ತದೆ. ಇದುಮನೋಹರವಾದ ಸುಗಂಧವುಳ್ಳದ್ದಾಗಿ ಸುದಾವದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತು ಉತ್ತಮೋತ್ತಮವಾದುದು. ೭ ಔನ್‌ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,

216 ಕಾರನ್‌ವಾಲಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:-"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:-ಎಲ್. ಎ. ಫೋರುವಾಲ್ ಎಂಡ್ ಕೊ,

ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು;-ಮ| ರಾ| ರಾ| ಸಿ. ಆರ್. ಕಾಮತರು,

ಉಲನ್ ಮಾರ್ಟ್, ಮಂಗಳೂರು

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 16ನೇ ದಶಂಬರ 1910.

ಪತಿತ ಜನೋದ್ಧರಣ.

ಈ ವಿಷಯವು ನಮ್ಮ ಜಿಲ್ಲೆಗೆ ಹೊಸತಲ್ಲ. ಕೆಲವು ವರುಷಗಳಿಂದೀಚೆಗೆ ಈ ಜಿಲ್ಲೆಯಲ್ಲಿ ಪತಿತರಾದ ಪಂಚಮರನ್ನು ಉದ್ಧರಿಸುವ ಪ್ರಯತ್ನಗಳು ನಡಿಯುತ್ತಿರುವವು. ಮಂಗಳೂರ ವಕೀಲ ರಾ. ಕುದ್ಮೂಲ ರಂಗರಾಯರ ಈ ವಿಷಯವಾದ ಸಾಹಸ ಮತ್ತು ಪ್ರಯತ್ನ ಬಾಹುಳ್ಯಕ್ಕೆ ನಮ್ಮ ಜಿಲ್ಲೆಯಲ್ಲಿ ಹಲವರು ಇನ್ನೂ ತಕ್ಕ ಗಮನಕೊಡಬೇಕಾಗಿದ್ದರೂ ಅವರಿಂದ ಸ್ಥಾಪಿಸಲ್ಪಟ್ಟ ಪಂಚಮರ ಶಾಲೆ ಮೊದಲಾದವುಗಳ ಪರಿಚಿತಿಯಿಲ್ಲದವರು ನಮ್ಮಲ್ಲಿ ಕಡಿಮೆ. ಮಂಗಳೂರಲ್ಲಿ ಈ ಒಂದು ಶಾಲೆ ಅಲ್ಲದೆ ಮುಲ್ಕಿ, ಉಡುಪಿ ಮೊದಲಾದ ಕಡೆಗಳಲ್ಲಿ ಸಹಾ ಪಂಚಮರ ಬಗ್ಯೆ ವಿದ್ಯಾಶಾಲೆಗಳು ಸ್ಥಾಪಿಸೋಣಾಗಿರುವವು. ಪಂಚಮರಲ್ಲದೆ ಈ ಜಿಲ್ಲೆಯಲ್ಲಿ ಪತಿತರ ಇನ್ನೂ ಹಲವು ಜಾತಿಗಳಿವೆ. ಇವರ ವೃದ್ಧಿಯನ್ನು ಸಾಧಿಸಲು ಸಹ ವಿಶೇಷ ಪ್ರಯತ್ನಗಳು ಬೇಕಾಗಿರುವವು. ಇಂಥಾ ಸಾಹಸ ಪ್ರಯತ್ನಗಳು ನಮ್ಮಲ್ಲಿ ಪ್ರೇರೇಪಿಸಲ್ಪಡುವಂತೆ ದೇಶದ ಇತರ ಕಡೆಗಳಲ್ಲಿ ಸಹಾ ಈ ಬಗ್ಯೆ ನಡಿಯುವ ಪ್ರಯತ್ನಗಳನ್ನು ತಿಳಕೊಳ್ಳುವುದುಪಯುಕ್ತ.

ಮದ್ರಾಸು ಪತಿತ ಜನೋದ್ಧರಣೆ ಸಂಘದವರ ಪ್ರಥಮ ವಾರ್ಷಿಕ ಸಭೆಯು ಮದ್ರಾಸಿನಲ್ಲಿ ಇತ್ತಲಾಗೆ ಜರಗಿತು. ಗವರ್ನರ ಧೊರೆಗಳವರ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ಬಹುಮಾನಪಟ್ಟ ಮಿ. ಎಮ್. ಹೆವಿಕ್ ಸಿ. ಐ. ಇ. ಧೊರೆಗಳವರು ಸಭೆಯ ಅಧ್ಯಕ್ಷರಾಗಿದ್ದರಲ್ಲದೆ ಬಹುಮಾನಪಟ್ಟ ಬೋಬಿಲಿಯ ಮಹಾರಾಜರವರೂ ಹ್ಯಾಕೋರ್ಟ ಜಡ್ಜರುಗಳಾದ ಬಹುಮಾನಪಟ್ಟ ಕೃಷ್ಣಸ್ವಾಮಿ ಅಯ್ಯರ್ ಬಹುಮಾನಪಟ್ಟ ಶಂಕರನ್ನಾಯರರೂ ಇನ್ನು ಅನೇಕ ಪ್ರಮುಖ ಗೃಹಸ್ಥರೂ ಸಭೆಗೆ ದಯಮಾಡಿಸಿದ್ದರು. ಸಂಘದ ಕೆಲಸದ ವರದಿಯನ್ನು ಕಾರ್ಯದರ್ಶಿಗಳು ಓದಿ ಹೇಳಿದ ನಂತರ ಬಹುಮಾನಪಟ್ಟ ಹ್ಯಾಕೋರ್ಟ್ ಜಡ್ಜರಾದ ಕೃಷ್ಣಸ್ವಾಮಿ ಅಯ್ಯರರವರು ಪತಿತ ಜನೋದ್ಧರಣೆಯ ವಿಷಯದಲ್ಲಿ ಮೇಲು ಜಾತಿಯವರು ಹಿಂದೂ ಮತ ಸಿದ್ಧಾಂತಗಳ ಪ್ರಕಾರ ತೋರಬೇಕಾಗಿರುವ ಭಾವ ಮೊದಲಾದವುಗಳನ್ನು ಪ್ರಸ್ತಾಪಿಸಿ ಭಾಷಣ ಮಾಡಿದರು. ಪೂರ್ವಾಚಾರ ಪದ್ಧತಿಯ ಬ್ರಾಹ್ಮಣರೂ ಪ್ರಮುಖ ಹಿಂದುವೂ ಆಗಿರುವ ಅಯ್ಯರರವರು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವು ಹಿಂದೂಗಳನೇಕರಲ್ಲಿ ಮಾನ್ಯವಾಗದಿರಲಾರದು.

ಪತಿತರನ್ನು ಮೇಲು ಜಾತಿಯವರು ಮುಟ್ಟಕೂಡದೆಂಬ ಭಾವನೆಯ ಕಾರಣವನ್ನು ಅಯ್ಯರರವರು ಪ್ರಥಮದಲ್ಲಿ ಶೋಧಿಸಿರುವರು. ಪೂರ್ವ ಜನ್ಮದ ಕರ್ಮ ಫಲಕ್ಕನುಗುಣವಾಗಿ ಮಾನವರು ಒಂದೇ ಸಮವಾದ ಪದವಿಯಲ್ಲಿ ಜನಿಸದೆ ಸ್ಥಿತ್ಯಂತರ ಉಳ್ಳವರಾಗಿ ಜನನಕ್ಕೆ ಬರುವರು. ನೀಚಕರ್ಮ ಫಲದಿಂದ ನೀಚನಾಗಿ ಜನಿಸುವನು. ಈ ಕರ್ಮಸಿದ್ಧಾಂತದ ವಿಚಾರವನ್ನು ಮೀರೆ ತಪ್ಪಿ ಮಾಡುವುದರಿಂದ ಕರ್ಮ ಹೀನರಾದ ಪತಿತರನ್ನು ಮುಟ್ಟಲು ಸಹ ಮೇಲು ಜಾತಿಯವರು ಹೇಸುವರು. ಕರ್ಮಫಲಸೂತ್ರಗಳನ್ನು ಯಾವ ರೀತಿ ಪರಿಗ್ರಹಿಸಿದರೂ ನೀಚಕರ್ಮ ಫಲಗಳನ್ನನುಭವಿಸುವವರನ್ನು ಮತ್ತಷ್ಟು ನೀಚಸ್ಥಿತಿಗೆ ಒತ್ತಿಡಬೇಕೆಂತ ಅರ್ಥವಾಗುವುದಿಲ್ಲ. ನೀಚರನ್ನು ಅರ್ಥವಿಲ್ಲದ ಸಮಾಜ ಕಟ್ಟಳೆಗಳಿಂದ ಸದಾ ಬಂಧಿಸಬೇಕೆಂತ ಎಂದೂ ಈ ಸಿದ್ಧಾಂತದ ಉದ್ದಿಶ್ಯವಲ್ಲ. ತಮ್ಮ ಸಂಚಿತ ಕರ್ಮ ಫಲದಿಂದ ದುಃಖ ದಾರಿದ್ರ್ಯವನ್ನನುಭವಿಸುವ ಪತಿತರನ್ನು ಮೇಲು ಜಾತಿಯವರು ಬಾಧಿಸುವುದು ಎಂದೂ ಉಚಿತವಲ್ಲವೆಂತ ಕೃಷ್ಣಸ್ವಾಮಿ ಅಯ್ಯರರವರು ವಾದಿಸಿದರು.

ಮಲೀನರೂ ಕುಡಿಕರೂ ಮತಿಭ್ರಂಶರೂ ಆದ ಪತಿತರ ಕೂಡೆ ಸಂಪರ್ಕ ಮೊದಲಾದವುಗಳನ್ನು ಬೆಳೆಸಿದರೆ ಕುಲೀನರು ಸಹ ಅವರ ಕೆಡಕು ಭಾವನೆಗಳಿಂದ ಕೆಟ್ಟು ಹೋಗುವರೆಂಬ ಅಂಜಿಕೆಯಿಂದ ಪತಿತರು ಮೇಲು ತರಗತಿಯವರಲ್ಲಿ ಸ್ಪರ್ಶಾಹೀನರಾದರೆಂದು ತಿಳಿಯಪಡಿಸಿದರು. ಆದರೆ ಪತಿತರನ್ನು ಉಚ್ಚಸ್ಥಿತಿಗೆ ತರಲು ಪ್ರಯತ್ನಿಸಿದ್ದರಿಂದ ಕುಲೀನತ್ವವು ಸಮಾಜದಲ್ಲಿ ಇನ್ನಷ್ಟು ಶೋಭೆ ಹೊಂದುವುದಲ್ಲದೆ ಈ ಪ್ರಯತ್ನಗಳಿಂದ ಎಂದೂ ಸಮಾಜವು ಭ್ರಷ್ಟವಾಗದು. ಇಂದೇ ಪತಿತರೊಂದಿಗೆ ಕೂಡಿಕೊಂಡು ಸಹ ಪಂಕ್ತಿ ಭೋಜನಗಳನ್ನೂ ಸಂಪರ್ಕ ಸಮ್ಮಂಧಗಳನ್ನೂ ಮಾಡಬೇಕೆಂದು ಕೃಷ್ಣಸ್ವಾಮಿಯವರನ್ನುವುದಲ್ಲ. ಪತಿತರು ಕುಲೀನರಾದ ಮೇಲೆಯೇ ಇದರ ವಿಚಾರ ಹೊರತು ಆ ತನಕ ನಮ್ಮಂತೆಯೇ ಮನುಷ್ಯ ಪ್ರಾಣಿಗಳಾಗಿರುವ ಪತಿತರನ್ನು ಮೇಲಕ್ಕೆ ತರಲು ಸಾಧಿಸಬೇಕೆನ್ನುವರು. ನಮ್ಮಂತೆಯೇ ಅವರಿಗೂ ಸಹ ಇರುವ ಹಕ್ಕು ಸಮ್ಮಂಧಗಳನ್ನು ಅವರನುಭವಿಸುವಂತೆ ಮಾಡತಕ್ಕದ್ದು ವಿನಹ ಸಮಾಜ ನಿರ್ಬಂಧಗಳಿಂದ ಈ ಹಕ್ಕು ಸಮ್ಮಂಧಗಳಿಗೆ ಅವರನ್ನು ಬಾಹೀರರನ್ನಾಗಿ ಮಾಡಕೂಡದು. ಇದರಿಂದ ಸಮಾಜವು ಕೃಶವಾಗುವುದು.

ಹಿಂದೂಗಳೆಂದು ಕರೆಯಲ್ಪಡುವ ಪತಿತರಿಗೆ ಹಿಂದೂ ಮತಾನುಯಾಯಿಗಳಾದ ಇತರರು ಹಿಂದೂ ಮತ ಸಂಪ್ರದಾಯಗಳನ್ನು ಪೂರ್ಣವಾಗಿ ಆಚರಿಸಲು ಬಿಡರೆಂಬುವ ದೂಷಣೆಯು ಆಗಿಂದಾಗ್ಯೆ ಕೇಳಿಸುವುದು. ಆದರೆ ಹಿಂದೂಮತ ಚರಿತ್ರವನ್ನು ತಿಳಿದವರಿಗೆ ಈ ದೂಷಣೆಯು ಆಧಾರವಿಲ್ಲದೆಂದು ತೃಪ್ತಿಯಾಗುವುದು. ಬುದ್ಧ, ರಾಮಾನುಜ, ಚೈತನ್ಯ ಮೊದಲಾದ ಅವತಾರ ಪುರುಷರು ಆಗಿಂದಾಗ್ಯೆ ಜನ್ಮವೆತ್ತಿ ಜಾತಿಭೇದ ವಿಪರ್ಯಗಳನ್ನು ಮಾಜುವ ತಮ್ಮ ವರ್ತನೆಗಳಿಂದ ಸರ್ವರೂ ಸಮಾನರೆಂಬ ತತ್ವವನ್ನು ತಮ್ಮ ಜೀವಿತಗಳಲ್ಲಿ ತೋರ್ಪಡಿಸಿರುವರೆಂದು ಹೇಳಿ ಶ್ರೀ ಶಂಕರಾಚಾರ್ಯರವರಿಗೆ ಕಾಶೀ ಕ್ಷೇತ್ರಕ್ಕೆ ಹೋಗುತ್ತಿದ್ದಾಗ ಆದ ಚಾಂಡಾಲ ಭೇಟಿಯ ವಿವರವನ್ನು ಹೇಳುವವರಾದರು. ಶಂಕರಾಚಾರ್ಯರವರು ಹಾದಿಯಲ್ಲಿ ನಡಕೊಂಡು ಹೋಗುತ್ತಿದ್ದಾಗ ಅವರನ್ನು ಒಬ್ಬ ಚಾಂಡಾಲನು ಎದುರ್ಗೊಂಡನು. ಶಂಕರಾಚಾರ್ಯರು ಚಾಂಡಾಲನನ್ನು ಹಾದಿಯ ಬದಿಯಲ್ಲಿರಲಿಕ್ಕೆ ಆಜ್ಞಾಪಿಸಿದೊಡನೆಯೇ ಚಾಂಡಾಲನು-ಸ್ವಾಮಿ, ನೀವು ಜನ್ಮವೆತ್ತಿರುವ ಭೂಮಿಯಲ್ಲಿಯೇ ನಾನು ಉದ್ಭವಿಸಿರುವೆನು. ನಮ್ಮಿಬ್ಬರ ರಕ್ತ ಮಾಂಸ ಮೊದಲಾದವುಗಳು ಭೇದವಿಲ್ಲದ್ದಾಗಿರುವವು. ನಿಮ್ಮ ಹಾಗೆ ಆತ್ಮವೂ ನನಗಿರುವುದು, ನನ್ನನ್ನು ಯಾಕೆ ಬೀದಿ ಬದಿಗೆ ಸಾರಲು ಹೇಳುವಿರಿ-ಎಂದೆಂದ ಕೂಡಲೇ ಶಂಕರಾಚಾರ್ಯರು ಮನನೊಂದು-ಚಾಂಡಾಲನಾಗಲಿ, ಬ್ರಾಹ್ಮಣನಾಗಲಿ ನೀನು ನನ್ನ ಗುರುವಾಗಿರುವಿ ಎಂತ ಚಾಂಡಾಲನಿಗೆ ದಂಡವತ್ ಪ್ರಣಾಮವನ್ನು ಮಾಡಿದರು. ರಾಮಾನುಜ ಭಕ್ತ ಶ್ರೇಷ್ಠನಾದ ನಂದ ಮೊದಲಾದವರ ವೃತ್ತಾಂತವನ್ನು ಹೇಳಿ ಹಿಂದೂ ಧರ್ಮವು ಎಂದೂ ಪತಿತರನ್ನು ಸಮಾಜ ಬಾಹೀರರನ್ನಾಗಿ ಮಾಡದೆಂದು ಸಮರ್ಪಕವಾದ ರೀತಿಯಲ್ಲಿ ರುಜು ಪಡಿಸಿದರು. ಶಂಕರಾಚಾರ್ಯರ ಈ ಸಮಾನತ್ವದ ಭಾವನೆಯು ಈಗಿನ ಕಾಲದಲ್ಲಿ ಸಂಪನ್ನ ಮಠಾಧೀಶರಾದ ಯತಿವರ್ಯರುಗಳಿಂದ ಸಹ ಕಲ್ಪಿಸತಕ್ಕದ್ದಾಗಿರುವುದರಿಂದ ಲೌಕಿಕರು ಮಾತ್ರವಲ್ಲ ಮಠಾಧಿಪತಿಗಳೂ ಸಹ ಪತಿತ ಜನೋದ್ಧರಣೆಯಲ್ಲಿ ಸಹಕಾರಿಗಳಾಗುವುದು ಅತ್ಯಗತ್ಯ.

ನಂತರದಲ್ಲಿ ಪ್ರಕೃತ ಪತಿತರ ಸಮಾಜ ಸ್ಥಿತಿಯು ಹ್ಯಾಗಿರುವುದೆಂಬುದನ್ನು ವರ್ಣಿಸಿ ಸ್ವಾಮಿ ವಿವೇಕಾನಂದ ಸ್ವಾಮಿಯವರು ಅಪ್ಪಣೆ ಕೊಡಿಸಿದಂತೆ ವಿದ್ಯೆಯ ಮೂಲಕವೇ ಈ ದೀನರನ್ನು ಉದ್ಧರಿಸಬೇಕೆಂಬದಾಗಿ ಅಪ್ಪಣೆ ಕೊಡಿಸಿದರು.

ಕೃಷ್ಣಸ್ವಾಮಿ ಅಯ್ಯರರವರು ತಮ್ಮ ಭಾಷಣವನ್ನು ಮುಗಿಸಿದ ನಂತರ ಸಭೆಯಲ್ಲಿ ಹಾಜರಿದ್ದ ಭಾರತ ಸೇವಾಸಂಘದ ಮೆಂಬರರಾದ ರಾ. ವಿ. ಯಸ್. ಶ್ರೀನಿವಾಸ ಶಾಸ್ತ್ರಿಗಳವರು ಮುಂಬಯಿ, ಪೂನಾ, ಯುನ್ಯಾಟೆಡ್ ಪ್ರೊವಿನ್ಸೆಸ್, ಪಂಜಾಬ, ಪೂರ್ವ ಬಂಗಾಳ ಮೊದಲಾದ ಪ್ರಾಂತ್ಯಗಳಲ್ಲಿ ಪತಿತರ ಉದ್ಧರಣೆಯು ಹ್ಯಾಗೆ ಸಾಗುತ್ತಿರುವುದೆಂಬದನ್ನು ಸಭಿಕರಿಗೆ ತಿಳಿಯಹೇಳಿದರು.

ಹೀಗೆ ದೇಶದಲ್ಲೆಲ್ಲಾ ಈ ಚಳವಳವು ಹಬ್ಬಿರುವುದು. ಕಾರ್ಯಸಾಧನೆಯು ನಿರಂತರವಾಗಿ ನಡಿಯುವಂತೆಬೇಕಾದ ವ್ಯವಸ್ಥಾ ಏರ್ಪಾಡುಗಳೂ ಈ ದೀನರ ಬಗ್ಯೆ ಸಾಹಸಪಡುವ ದೇಶಾಭಿಮಾನಿಗಳೂ ಬೇಕಾಗಿರುವರು. ನಮ್ಮ ಜಿಲ್ಲೆಯಲ್ಲಿ ಸಹಾ ಕೆಲವು ಪಂಚಮರ ಶಾಲೆಗಳು ಸ್ಥಾಪಿಸಲ್ಪಟ್ಟಿರುವವೆಂತ ಈ ಮೊದಲೇ ಪ್ರಸ್ತಾಪಿಸಿದೆವು. ಆದರೆ ಈ ಎಲ್ಲಾ ಶಾಲೆಗಳಲ್ಲಿ ಕೆಲಸವು ಅಭ್ಯಂತರವಿಲ್ಲದೆಯೂ ಏಕರೀತಿಯಲ್ಲಿಯೂ ನಡಿಯುವಂತೆ ಎಲ್ಲವೂ ಒಂದೇ ಸಂಘದ ಶಾಖೆಯಿಂದ ನಡಿಸಲ್ಪಡುವುದುತ್ತಮ. ಜಿಲ್ಲಾ ಜನರು ಈ ವಿಷಯಕ್ಕೆ ತಕ್ಕ ಗಮನಕೊಟ್ಟು ಈ ಬಗ್ಯೆ ಬೇಕಾದ ಅನುಕೂಲತೆಗಳನ್ನು ಸಂಗ್ರಹಿಸಿ ಶಂಕರ, ಚೈತನ್ಯ, ರಾಮಾನುಜ ಮೊದಲಾದ ಮಹಾಪುರುಷರ ವಂಶಜರೂ ಯತಾರ್ಥ ಹಿಂದೂಗಳೂ ಎಂತ ಹೆಸರುವಾಸಿಯಾಗಬೇಕೆಂಬ ನಮ್ಮ ದೀನ ವಿಜ್ಞಾಪನೆ.

ಕಾರ್ಯರೂಪುಗೊಳ್ಳುವ ಸಹಾನುಭೂತಿಯು.

ಜೋರ್ಜ ಚಕ್ರವರ್ತಿಗಳು ಪ್ರಿನ್ಸ್ ಒಫ್ ವೇಲ್ಸರಾಗಿ ಈ ದೇಶವನ್ನು ಸಂದರ್ಶಿಸಿ ಲಂಡನ್ ನಗರದಲ್ಲಿ ಹಿಂದುಸ್ಥಾನದ ಪರವಾಗಿ ಮಾತಾಡಿದಾಗ ಭಾರತೀಯ ಪ್ರಜೆಗಳನ್ನಾಳಲು ಪ್ರಜಾಸಹಾನುಭೂತಿಯೇ ಅಗತ್ಯವಾಗಿದೆಂದು ಸೂಚಿಸಿ ಕೆಲವು ವರುಷಗಳಾದವು. ಮೋರ್ಲೆ ಮತ್ತು ಮಿಂಟೋ ಪ್ರಭುಗಳ ಆಡಳಿತೆಯಲ್ಲಿ ಚಕ್ರವರ್ತಿಯವರ ಈ

ಭಾವನೆಯು ಪ್ರಸನ್ನಪಡಿಸುವ ಸಾಹಸವು ಉಭಯ ಪ್ರಭುವರ್ಯರುಗಳಿಂದಲೂ ಬಹಳ ಮಟ್ಟಿಗೆ ಮಾಡಿದ್ದಾಯಿತು ಶ್ರೇಷ್ಠ ಅಧಿಕಾರಿಗಳಾಗಿದ್ದ ಇವರಿಬ್ಬರೂ ತಮ್ಮ ಪದವಿಗಳನ್ನು ಇತ್ತಲಾಗೆ ಬಿಟ್ಟುಕೊಡುತ್ತಿದ್ದಾಗ ಚಕ್ರವರ್ತಿಗಳು ತಮ್ಮ ಪರಿವಾರ ಸಹಿತ ಹಿಂದುಸ್ಥಾನವನ್ನು ಸಂದರ್ಶಿಸಲು ಇಚ್ಛಿಸಿರುವರೆಂಬ ವರ್ತಮಾನವನ್ನು ಕೇಳಿ ಸಾರ್ವಭೌಮರ ಸಹಾನುಭೂತಿಯು ಕಾರ್ಯರೂಪುಗೊಳ್ಳುವ ಸಂಭವವು ಪ್ರಾಪ್ತಿಸುವುದೆಂಬ ಕೋರಿಕೆಯು ಪ್ರಜಾಜನರಲ್ಲಿ ಹುಟ್ಟಿರುವುದು.

ರಾಜರವರನ್ನು ಪ್ರತ್ಯಕ್ಷ ನೋಡುವ ಕುತೂಹಲವು ಜನರಲ್ಲಿ ಉಂಟಾಗಿರುತ್ತದೆ. ಪ್ರಜೆಗಳ ಸುಖದುಃಖಗಳನ್ನು ಸಾರ್ವಭೌಮರು ಕಣ್ಣಾರೆ ಪರಾಂಬರಿಸಿಕೊಳ್ಳಲು ಶಕ್ತರಾಗುವರು. ಸ್ವತಹ ಪ್ರಜಾ ಸಂಕಷ್ಟಗಳಿಗೆ ನಿಗಾ ಕೊಡಲು ಸಂದರ್ಭವು ದೊರಕುವುದು. ರಾಜದರ್ಶನದಿಂದ ತಮ್ಮ ಅರಿಷ್ಟಗಳು ನಿವಾರಣೆಯಾದವೆಂಬೀ ಭಾವದಿಂದ ಈ ಸಂದರ್ಭವನ್ನು ಸಾವಿರಾರು ಪ್ರಜಾಜನರು ಎದುರು ನೋಡುತ್ತಿರುವರು.

ಬ್ರಿಟಿಷ ಸಾರ್ವಭೌಮರು ತಮ್ಮ ಅಭೀಷ್ಟವಿದ್ದಂತೆ ವರ್ತಿಸಲಿಕ್ಕೆ ರಾಜ್ಯಕಾರ್ಯಭಾರವೆಲ್ಲವೂ ಬಹಳಮಟ್ಟಿಗೆ ಪಾರ್ಲಿಮೆಂಟ್ ಸಭೆಗಳ ಅಂಕೆಯಲ್ಲಿರುವುದಾದರೂ ಹಿಂದೂಸ್ಥಾನವನ್ನು ಚಕ್ರವರ್ತಿಯವರು ಸಂದರ್ಶಿಸುವ ಈ ಅಪರೂಪ ಸಂದರ್ಭದಲ್ಲಿ ಬ್ರಿಟಿಷ ಮಹಾಜನರೂ ಸಹ ಚಕ್ರವರ್ತಿಯವರು ವ್ಯಕ್ತಪಡಿಸಿರುವ ಹಿಂದೂಸ್ಥಾನದ ಸಹಾನುಭೂತಿಯನ್ನು ಕಾರ್ಯರೂಪುಗೊಳಿಸುವುದರಲ್ಲಿ ಪ್ರೇರೇಪಕರಾಗುವರಾಗಿ ನಂಬಿಕೆ ಇದೆ. ಸಾರ್ವಭೌಮರ ಸಂದರ್ಶಣೆಯಿಂದ ಇನ್ನೂ ಕೆಲವು ಒಳಿತಗಳು ದೇಶಕ್ಕೆ ಪ್ರಾಪ್ತವಾಗುವವು. ಬ್ರಿಟಿಷ ಸಾಮ್ರಾಜ್ಯದ ಇತರ ಪ್ರಜೆಗಳಂತೆಯೇ ಭಾರತೀಯರೂ ಸಹ ಚಕ್ರವರ್ತಿಗಳ ಪರಿಗಣನೆಯಲ್ಲಿ ಸಮತುಲ್ಯರಾಗಿರುವರೆಂಬದು ಚಕ್ರವರ್ತಿಗಳ ಈ ಸಂದರ್ಶಣೆಯಿಂದ ಕಾರ್ಯತಃ ಸಾಮ್ರಾಜ್ಯದ ಇತರ ಎಲ್ಲಾ ಕಡೆಗಳಲ್ಲಿಯೂ ವ್ಯಕ್ತವಾಗುವುದು. ಭಾರತೀಯರ ಪ್ರಜಾ ಗೌರವವನ್ನು ಚಕ್ರವರ್ತಿಗಳು ಮನ್ನಿಸುವುದರಿಂದ ಚಕ್ರವರ್ತಿಗಳ ಬಗ್ಯೆ ನಮ್ಮನ್ನಾಳುವ ಅಧಿಕಾರಿ ವರ್ಗಗಳಲ್ಲಿ ಸಹ ಪ್ರಜೆಗಳ ಕಡೆ ಇದೇ ಭಾವನೆಯು ಉಂಟಾಗಲು ಅವಕಾಶ ದೊರಕುವುದು. ಹಿಂದೂಸ್ಥಾನದ ಪ್ರಜೆಗಳಿಗೂ ಬ್ರಿಟಿಷ ಸಾಮ್ರಾಜ್ಯದ ಇತರ ಕಡೆಗಳ ಪ್ರಜೆಗಳಿಗೂ ಇರುವ ಭೇದಗಳನ್ನೆಲ್ಲಾ ಮಾಜಲು ಅವಕಾಶ ಕೊಟ್ಟು ಸರ್ವ ಸಾಮ್ರಾಜ್ಯದ ಐಕ್ಯಕ್ಕೆ ಕಾರಣವಾದ ಸಾರ್ವಭೌಮಕತನವನ್ನು ವಹಿಸಿಕೊಂಡಿರುವ ಮಹಾ ಪುರುಷರ ಪ್ರತ್ಯಕ್ಷ ದರ್ಶನವು ಈ ಏಕೀಭಾವವನ್ನು ಇನ್ನಷ್ಟು ಬಲಪಡಿಸುವುದಲ್ಲದೆ ಪ್ರಜೆಗಳಲ್ಲಿ ಸಹ ರಾಜನಿಷ್ಟೆಯು ಮತ್ತಷ್ಟು ಅಧಿಕವಾಗಲಿಕ್ಕೆ ಎಡೆಕೊಡುವುದು. ಬಹು ಫಲದಾಯಕವಾಗಬಹುದಾದ ಈ ರಾಜದರ್ಶನವನ್ನು ಭಾರತೀಯ ಪ್ರಜೆಗಳೆಲ್ಲರೂ ಆನಂದದಿಂದ ಎದುರು ನೋಡುತ್ತಿರುವರು.

ಆಯುರ್ವೇಧ ಚಿಕಿತ್ಸಾ ಕ್ರಮವು.

ಹಿಂದಿನ ಒಂದು ಸಂಚಿಕೆಯಲ್ಲಿ ಹಕೀಮರ ಮತ್ತು ವೈದ್ಯರ ಸಭೆಯು ರಾಮಪುರದ ನವಾಬರ ಅಧ್ಯಕ್ಷತೆಯಲ್ಲಿ ನೆರವೇರುವದೆಂತ ಪ್ರಕಟಿಸಲ್ಪಟ್ಟಿತ್ತು. ಯುನಾನಿ ಮತ್ತು ಆಯುರ್ವೇದ ಚಿಕಿತ್ಸೆಗಳನ್ನು ಪುನರುಜ್ಜೀವಿಸುವುದೇ ಈ ಮಹಾ ಸಭೆಯ ಉದ್ದಿಶ್ಯವಾಗಿರುವದು. ಕಳದ ತಿಂಗಳ ತಾ. ೨೬ರಲ್ಲಿ ಈ ಮಹಾ ಸಭೆಯು ಡಿಲ್ಲಿಯಲ್ಲಿ ಕೂಡಿತು. ಸಭೆಯು ರಾಮಪುರದ ನವಾಬರ ಖರ್ಚಿನಿಂದಲೇ ಏರ್ಪಡಿಸಲ್ಪಟ್ಟಿತ್ತಾದರೂ ನವಾಬರವರಿಗೆ ಕೆಲವು ಅನನುಕೂಲತೆಗಳಿಂದ ಸಭೆಯಲ್ಲಿ ಹಾಜರಿರಲಿಕ್ಕೆ ಅಸಾಧ್ಯವಾದ್ದರಿಂದ ನವಾಬರಿಂದ ತಯಾರಿಸಲ್ಪಟ್ಟ ಅಧ್ಯಕ್ಷ ಭಾಷಣವನ್ನು ಸಭೆಯಲ್ಲಿ ಸಹೇಷಪುರದ ರಾಜಾಕಿಷನ್ ಕುಮಾರ್ ಎಂಬವರು ಓದಿದರು. ನವಾಬರಂಥಾ ಸಂಪನ್ನ ದೇಶಾಭಿಮಾನಿಗಳು ಭಾರತೀಯರ ಪುರಾತನ ಪ್ರಸಿದ್ಧ ಚಿಕಿತ್ಸಾ ಕ್ರಮಗಳನ್ನು ಪುನರುಜ್ಜೀವಿಸಲು ಸಾಹಸಪಡುವುದು ತೃಪ್ತಿಕರವಾಗಿರುವುದು. ಬಹಳ ಕಾಲದಿಂದ ದೀನಸ್ಥಿತಿಯಲ್ಲಿ ಬಿದ್ದಿರುವ ಈ ಚಿಕಿತ್ಸಾ ವಿಧಾನಗಳನ್ನು ಈಗಿನ ಅಂಗ್ಲ ವೈದ್ಯಶಾಸ್ತ್ರರಿತ್ಯಾ ಹವಣಿಸಿಕೊಂಡು ಬರಬೇಕಾದರೆ ಲಕ್ಷಾಂತರ ಧನವಲ್ಲದೆ ಈ ಬಗ್ಯೆ ತಮ್ಮ ಜೀವಿತಗಳನ್ನು ಅರ್ಪಿಸುವ ಪಂಡಿತರನೇಕರು ಬೇಕಾಗುವರು. ರಾಮಪುರದ ನವಾಬರು, ಮೈಸೂರು ಮಹಾರಾಜರವರು ಈ ವಿಷಯಕ್ಕೆ ತಕ್ಕಮಟ್ಟಿನ ಗಮನ ಕೊಟ್ಟಿರುವರು. ಇತರ ಆಶ್ರಿತ ಅರಸರೂ ಇಂಡಿಯಾ ಸರಕಾರದವರೂ ಸಹ ಇದಕ್ಕೆ ತಕ್ಕ ಪ್ರೋತ್ಸಾಹ ಕೊಟ್ಟ ವಿನಹ ಆಯುರ್ವೇದ ಪುನರುಜ್ಜೀವನವು ಸಮನಾಗಿ ಸಾಗದು.

ಮಹಾ ಸಭೆಯಲ್ಲಿ ಹಲವು ನಿರ್ಣಯಗಳನ್ನು ಮಂಜೂರು ಮಾಡಿರುವರು. ಹಕೀಮರು ಮತ್ತು ವೈದ್ಯರು ಕೂಡಿಕೊಂಡು ಯುನಾನಿ ಮತ್ತು ಆಯುರ್ವೇದ ಪಾಠಶಾಲೆಗಳ ಉಪಯೋಗಗಳ ಬಗ್ಯೆ ಸ್ವದೇಶದಲ್ಲಿಯೇ ಬೆಳಿಯೋಣಾಗುವ ಗಿಡಮೂಲಿಕೆಗಳ ಕುರಿತು ಪುಸ್ತಕಗಳನ್ನು ರಚಿಸುವುದು; ಈಗಿನ ಶಸ್ತ್ರಪ್ರಯೋಗ ವಿದ್ಯೆ ಮೊದಲಾದವುಗಳನ್ನು ಈ ಪಾಠ ಶಾಲೆಗಳಲ್ಲಿ ಕಲಿಸುವುದು; ತರುಣರು ತಮ್ಮ ಅವಿವೇಕತನದಿಂದ ದೇಹಧಾರ್ಢ್ಯವನ್ನು ನಷ್ಟಗೊಳಿಸದಂತೆ ಅವರಿಗೆ ಉಪಯುಕ್ತವಾದ ಹಿತವಾದವನ್ನು ಕೂಡಿರುವ ಚಿಕ್ಕ ಗ್ರಂಥಗಳನ್ನು ಪ್ರಕಟಿಸುವುದು; ಆಯಾ ಮುನಿಸಿಪಲ್ ಪಟ್ಟಣಗಳಲ್ಲಿ ಜನರುಪಯೋಗಕ್ಕೆಂತ ತಯ್ಯಾರಿಸಲ್ಪಡುವ ಯುನಾನಿ ಮತ್ತು ಆಯುರ್ವೇದ ಔಷಧಿಗಳ ಪರಿಶೋಧನೆಯ ಬಗ್ಯೆ ಯುನಾನಿ ಮತ್ತು ಆಯುರ್ವೇದ ಚಿಕಿತ್ಸಾ ಕ್ರಮಗಳನ್ನು ಶಾಸ್ತ್ರ ರೀತಿಯಲ್ಲಿ ಅಭ್ಯಾಸಿಸಿದ ಪಂಡಿತರನ್ನು ನೇಮಿಸಬೇಕೆಂತಲೂ ಯುನಾನಿ ಮತ್ತು ಆಯುರ್ವೇದ ಕ್ರಮಗಳಲ್ಲಿಯೇ ಚಿಕಿತ್ಸೆಯನ್ನು ಹೊಂದಬೇಕೆಂದಿರುವ ನಿವಾಸಿಕರ ಪ್ರಯೋಜನಾರ್ಥವಾಗಿ ಒಬ್ಬ ಹಕೀಮನನ್ನೂ ವೈದ್ಯನನ್ನೂ ಆಯಾ ಮುನಿಸಿಪಾಲಿಟಿಯವರು ನೇಮಕಮಾಡಬೇಕೆಂತಲೂ ಇಂಡಿಯಾ ಗವರ್ನಮೆಂಟಿನವರನ್ನು ವಿಜ್ಞಾಪಿಸಿಕೊಳ್ಳುವುದು; ಜನರುಪಯೋಗಕ್ಕಾಗಿ ಪ್ರಜಾ ಸಹಾಯದಿಂದ ಅಲ್ಲಲ್ಲಿ ಧರ್ಮಾಸ್ಪತ್ರೆಗಳನ್ನು ಸ್ಥಾಪಿಸುವುದು; ಪ್ಲೇಗ ಮತ್ತು ಕ್ಷಯರೋಗಗಳ ಶೋಧನೆ; ಎಲ್ಲಾ ಯುನಾನಿ ಮತ್ತು ಆಯುರ್ವೇದ ಔಷಧಿಗಳನ್ನು ಒಂದೇ ಪ್ರಕಾರವಾದ ಮೊದಲಾಗಿಯೇ ಗುಣನಿರ್ಣಯಗಳಿಂದ ನಿಯಮಿಸಲ್ಪಡುವ ಸಿದ್ಧಾಂತಗಳಿಗನುಗುಣವಾಗಿ ತಯ್ಯಾರಿಸುವುದು; 'ಮೆಡಿಕಲ್ ರಿಜಿಸ್ಟ್ರೇಶನ್ ಆಕ್ಟೆ'ಂಬ ಕಾನೂನು ಮಸೂದೆಯನ್ನು ಮುಂಬಯಿ ಮೆಡಿಕಲ್ ಎಸೋಶಿಯೇಶನಿನವರು ಸೂಚಿಸಿದಂತೆ ಜ್ಯಾರಿಗೆ ತರಕೂಡದೆಂದು ಮುಂಬಯಿ ಸರಕಾರಕ್ಕೆ ಜಾಹೀರು ಮಾಡಿಕೊಳ್ಳುವುದು; ಲಕ್ಷ್ಮೀಪುರದಲ್ಲಿರುವ ಅಂಗ್ಲವೈದ್ಯ ವಿದ್ಯಾನಿಲಯದಲ್ಲಿ ಆಯುರ್ವೇದ ಮತ್ತು ಯುನಾನಿ ಚಿಕಿತ್ಸೆ ಕುರಿತೂ ಸಹ ವಿದ್ಯಾರ್ಥಿಗಳಿಗೆ ಪಾಠಗಳನ್ನು ಕಲಿಸುವ ನಿಯಮಗಳನ್ನು ಇಡಬೇಕೆಂದು ಸರಕಾರದವರಿಗೆ ಸೂಚಿಸುವುದು ಮೊದಲಾದ ಕೆಲವು ನಿರ್ಣಯಗಳನ್ನು ಸಭೆಯಲ್ಲಿ ವಾದಿಸಿ ಮಂಜೂರು ಮಾಡಿದ್ದಲ್ಲದೆ ಯುನಾನಿ ಮತ್ತು ಆಯುರ್ವೇದ ಪಾಠಶಾಲೆಗಳನ್ನು ಕಾಲೇಜುಗಳನ್ನಾಗಿ ಮಾಡಲಿಕ್ಕೆ ಚಂದಾಪಣಗಳನ್ನು ಸಭಾಸದರಿಂದ ಕೂಡಿಸಿದರು.

ಆಯಾ ಪಟ್ಟಣಗಳಲ್ಲಿ ಮನಸ್ವಿಯಾದ ರೀತಿಯಲ್ಲಿ ತಯ್ಯಾರಿಸಲ್ಪಡುವ ಔಷಧಿಗಳನ್ನು ಪರೀಕ್ಷಿಸಬೇಕೆಂಬುವ ನಿರ್ಣಯವು ಸ್ತುತ್ಯವಾಗಿರುವುದು. ಈ ಏರ್ಪಾಡಿನಿಂದ ಗಿಡಮೂಲಿಕೆಗಳ ಗುಣ ಜ್ಞಾನ ರಹಿತರಾದ 'ಅಣಲೆಕಾಯಿ ವೈದ್ಯರ ಕಾಟದಿಂದ' ಜನರನ್ನು ಉಳಿಸಿದಂತಾಗುತ್ತದೆ. ಸರಕಾರದವರು ಮುನಿಸಿಪಾಲಿಟಿ ಮೊದಲಾದವುಗಳ ಮುಖಾಂತರ ಇಂತಹ ಔಷಧಿಗಳನ್ನು ಪರೀಕ್ಷಿಸುವ ಏರ್ಪಾಡನ್ನು ಮಾಡುವುದುತ್ತಮ. ಎಲ್ಲಾ ಆಯುರ್ವೇದ ಯಾ ಯುನಾನಿ ವೈದ್ಯ ಉಪಯೋಗದ ಬಗ್ಯೆ ಔಷಧಗಳನ್ನು ಸರ್ವಸಾಮಾನ್ಯವಾದ ರೀತಿಗಳಲ್ಲಿ ತಯ್ಯಾರಸಿಡುವ ಔಷಧ ಸಂಗ್ರಹಾಲಯಗಳು ವೈದ್ಯ ಪ್ರವೃತ್ತಿಯನ್ನು ನಡಿಸುವವರಿಗೆ ಬಹಳ ಸಹಾಯಕವಾಗುವದರಿಂದ ಸಭೆಯವರು ಮಾಡಿದ ನಿರ್ಣಯಗಳಲ್ಲಿ ಯುನಾನಿ ಮತ್ತು ಆಯುರ್ವೇದ ಔಷಧಗಳನ್ನೆಲ್ಲಾ ಒಂದೇ ಪ್ರಕಾರವಾದ ಮೊದಲಾಗಿಯೇ ಗುಣನಿರ್ಣಯಗಳಿಂದ ನಿಯಮಿಸಲ್ಪಡುವ ವಿಧಾನಗಳಲ್ಲಿ ತಯ್ಯಾರಿಸಿ ಸಂಗ್ರಹಿಸುವ ನಿರ್ಣಯವು ಆಯುರ್ವೇದ ವಿದ್ಯೆಗೂ ಈ ವಿದ್ಯೆಯನ್ನು ಕಲಿತು ವೃತ್ತಿಯಲ್ಲಿರುವ ವೈದ್ಯರಿಗೂ ದಿಟವಾದ ಲೇಸನ್ನುಂಟುಮಾಡುವುದು.

ಮಹಾರಾಣಿ ಗೃಹಶೀಲೆ.

(ಕಳದ ಸಂಚಿಕೆಯಿಂದ ಮುಂದರಿಸಿದುದು)

ಬಿ. ಆನಂದ ರಾವ್ ಇವರಿಂದ.

ಮುಕ್ತ ಪುರದಿಂದ ಗೃಹಶೀಲೆಯು ಸಹ ಮಹಾ ರಾಜನ ವಿವಾಹೋತ್ಸವನ್ನು ನೋಡಲು ಬಂದಿದ್ದಳು. ರಾಜಾಜ್ಞೆಯ ಪ್ರಕಾರ ಗೃಹಶೀಲೆಯು ಬಡ ನಾರುಡೆಯನ್ನುಟ್ಟುಕೊಂಡು ವಿವಾಹಮಂಟಪವನ್ನು ಪ್ರವೇಶಿಸಿದಳು. ನಕ್ಷತ್ರಗಳಿಂದೆಸೆವ ಗಗನಮಂಡಲದಲ್ಲಿ ಚಂದ್ರೋದಯವಾದಂತೆ ಸೌಂದರ್ಯವಾಗಿದ್ದ ಆ ರೂಪರಾಶಿಯ ತೇಜಸ್ಸು ಸುತ್ತಮುತ್ತಲೂ ಪಸರಿಸಿತು. ಆ ಸುರಸುಂದರಿಯಾದ ಪತಿವ್ರತಾ ಶಿರೋಮಣಿಯನ್ನು ಕಂಡ ಕೂಡಲೇ ಸಭ್ಯಸ್ತರಾದ ಜನರೆಲ್ಲರೂ ಹಠಾತ್ತಾಗಿ ಏಕಕಾಲದಲ್ಲಿ ಎದ್ದುನಿಂತು ಅಭಿವಂದಿಸಿದರು. ಪ್ರಿಯಂವದೆಯು ಅತ್ತಿಗೆ ಗೃಹಶೀಲಳ ಮುಖಚಂದ್ರಗ್ರಹಣವನ್ನೂ ಅವಳ ಪತನವನ್ನೂ ಈಕ್ಷಿಸಿ ಶೋಕವನ್ನು ಅಡಗಿಸಲಿಕ್ಕೆ ಸಮರ್ಥಳಾಗದೆ ಕಂಣೀರು ಸುರಿಸುತ್ತಲಿದ್ದಳು.

ಚಂದ್ರಶೇಖರನು ಗೃಹಶೀಲಳನ್ನು ಸಂಬೋಧಿಸಿ:—"ನೀನು ಈ ಚಿಕ್ಕ ಸುಂದರಿಯಾದ ಲಲನಾಮಣಿಯನ್ನು ನೋಡಿದೆಯಾ?" ಎಂದು ಹೇಳಿ ಕುಮಾರಿ ಅಹಲ್ಯೆಯನ್ನು ತೋರಿಸಿದನು.

ಆಗ ಗೃಹಶೀಲಳು:—"ಮಹಾ ಸ್ವಾಮಿ! ಈಶ್ವರಸಾಕ್ಷಿಯಾಗಿ ನಾನು ಇಂತಹ ಸೌಂದರ್ಯಮೂರ್ತಿಯಾದ ಮನಮೋಹಿನಿಸ್ವರೂಪವನ್ನು ಎಂದೆಂದಿಗೂ ನೋಡಿದ್ದು ನೆನಪಿಲ್ಲ. ಆದರೂ ಅವಳ ಕೋಮಲವಾದ ಮುಖಕಮಲವನ್ನೀಕ್ಷಿಸಿದರೆ, ಎಲ್ಲಿಯೋ ಈ ಮೊದಲು ನೋಡಿದ ಹಾಗೆ ಕಾಣುತ್ತದೆ; ಮತ್ತು ನನ್ನ ಈ ಎದೆಯು ಗಡಗಡನೆ ನಡುಗುತ್ತದೆ. ತಮಗೆ ಈ ವಿವಾಹದಿಂದ ಮಂಗಳವಾಗಲಿ! ಆದರೆ ನನ್ನದೊಂದು ಪ್ರಾರ್ಥನೆಯುಂಟು. ಈ ಚಿಕ್ಕ ಕೋಮಲಾಂಗಿಯು ಸುಕುಲೋತ್ಪನ್ನಳು. ಪಾಪಿಷ್ಠೆಯಾದ ನನ್ನ ಹಾಗೆ ಕಷ್ಟವನ್ನು ಪಡಲಶಕ್ತಳು. ಆದುದರಿಂದ ಅವಳನ್ನು ತಾವು ಸದಾಕಾಲವೂ ಕರುಣಾಕಟಾಕ್ಷದಿಂದಲೇ ಈಕ್ಷಿಸಬೇಕು" ಎಂದಳು.

ಚಂದ್ರಶೇಖರನಿಗೆ ತನ್ನ ಅಂತರ್ಯವನ್ನಿನ್ನೂ ಆಚ್ಛಾದಿಸುವುದು ಅಸಾಧ್ಯವಾಯಿತು. ಬಾಷ್ಪಜಲವು ಅವಿರಳಧಾರೆಯಾಗಿ ಸುರಿಯಲು, ಮಹಾರಾಜನು ಗೃಹಶೀಲಳ ಸಮಿಪ ಹೋಗಿ ಅವಳ ಕರದ್ವಯಗಳನ್ನು ತನ್ನ ಹಸ್ತದಲ್ಲಿರಿಸಿಕೊಂಡು ಗದ್ಗದಸ್ವರದಿಂದ:—"ಪ್ರಾಣೇಶ್ವರಿ! ಸುಂದರಸ್ವರೂಪಳೇ! ಸಮಸ್ತ ನಾರಿಗಳಿಗೂ ಪ್ರಥಮ ದೃಷ್ಟಾಂತಳಾದ ನಿನಗೆ ಕಪಟಾಚರಣೆಯಿಂದ ಅನ್ಯಾಯವಾಗಿ ಇದುವರೆಗೆ ಮೋಸಗೊಳಿಸಿದ ನನ್ನ ಸರ್ವಾಪರಾಧವನ್ನು ಕ್ಷಮಿಸು. ಅಯ್ಯೋ! ಶಿವಶಿವಾ! ಪರೀಕ್ಷಾರ್ಥವಾಗಿ ಪತಿವ್ರತಾಶಿರೋಮಣಿಯನ್ನು ನಿಷ್ಕಾರಣವಾಗಿ ದಣಿಸಿದೆನಲ್ಲ! ಹಾ! ಪರಮೇಶ್ವರ! ನಿರಾಪರಾಧಿಯಾದ ಕಾಂತಾಮಣಿಯೊಡನೆ ನಿರರ್ಥಕವಾಗಿ ಇದುವರೆಗೂ ಕುಟಿಲತ್ವವನ್ನು ಮಾಡಿದ ಈ ಮಿಥ್ಯಾವಾದಿಯ ಮಹತ್ಪಾಪವನ್ನು ಕ್ಷಮಿಸು" ಎಂದು ಹೇಳುತ್ತ ತನ್ನ ಪ್ರಾಣಪ್ರಿಯಳ ಕಂಠಾಲಿಂಗನವನ್ನು ಮಾಡಿ ಅವಳ ಸುಧಾಮಯವಾದ ಚೆಂದುಟಿಗಳನ್ನು ಚುಂಬಿಸಿದನು.

ಗೃಹಶೀಲಳು ಅತ್ಯಾಶ್ಚರ್ಯದಿಂದ ಬೆದರಿ ಹಿಂಜರಿದಳು.

ಚಂದ್ರಶೇಖರನು ಗಳದಶ್ರುಜಲನಾಗಿ ಪುನಃ—"ನನ್ನ ಅಧಿದೇವತೆಯೇ! ನನ್ನ ಪ್ರಾಣಪತ್ನಿಯು ನೀನೇ ಆಗಿರುವಿ. ನನ್ನ ಹೃದಯಮಂದಿರದಲ್ಲಿರುವ ನಿನ್ನ ಸುರಸುಂದರವಾದ ರೂಪರಾಶಿಯ ಸ್ವರೂಪವು ರವಷ್ಟಾದರೂ ಕಳೆಗುಂದದೆ ಮೊದಲಿನಗಿಂತ ಇಮ್ಮಡಿಯಾಗಿ ಪ್ರಜ್ವಲಿಸುತ್ತಿರುವುದು. ಪೂರ್ಣ ಗೃಹಶೀಲಾಮಯಯಾದ ಈ ಹೃದಯದಲ್ಲಿ ಮತ್ತೊಬ್ಬಳಿಗೆ ಸ್ಥಳವಿಲ್ಲ. ನಿನ್ನಲ್ಲೇ ಅನುರಕ್ತವಾಗಿರುವ ನನ್ನ ಈ ಮನಸ್ಸು ನನ್ನ ಜೀವಕಳೆಯಿರುವ ವರೆಗೂ ಹಿಂದಿರುಗಿ ಅನ್ಯಸ್ತ್ರೀಯಳಲ್ಲಿ ಅನುರಾಗಿಸದು. ಅದುದರಿಂದ ನಿನ್ನನ್ನು ತ್ಯಜಿಸಿ ಮತ್ತೊಬ್ಬಳನ್ನು ಪಾಣಿಗ್ರಹಣ ಮಾಡಿಕೊಳ್ಳುವೆನೆಂದು ಸ್ವಪ್ನೇಪಿ ಎಣಿಸಬೇಡ. ರಾಜಕೀಯ ಕಾರಣವೆಂಬುದು ಪೂರ್ಣ ಮಿಥ್ಯವು. ಈ ಬಾಲಚಂದ್ರ ಮುಖಿಯು ನಿನ್ನ ಸ್ವಂತ ಕನ್ನಿಕೆಯಾದ ಅಹಲ್ಯೆಯು. ಚಂದ್ರರೇಖೆಯು ಸಮುದ್ರದಲ್ಲಲ್ಲದೆ ಇನ್ನೆಲ್ಲಿ ತಾನೇ ಹುಟ್ಟುವುದು? ಅವಳ ಹತ್ತಿರವೇ ನಿನ್ನನ್ನೇ ಈಕ್ಷಿಸುತ್ತ ನಿಂತಿರುವ ಬಾಲಕನು ನಿನ್ನ ಸ್ವಂತ ಸತ್ಪುತ್ರನು. ಯುವರಾಜನಾದ ಸೀತಾರಾಮನು. ನಾನು ಲೋಕಾಂತರವನ್ನೈದಿದನಂತರ ಈ ಮಂಗಲಾಪುರ ಸಿಂಹಾಸನವನ್ನು ಪೂರ್ಣ ಗೌರವದಿಂದ ಅಲಂಕರಿಸುವನು. ನನ್ನ ಸ್ವಂತ ಅವಯವಗಳ ಹಾಗಿರುವ ಈ ಬಾಲಕರಿರ್ವರನ್ನು ವಧೆ ಮಾಡಿಸುವೆನೆ? ನಿನ್ನ ದೃಢತ್ವವನ್ನೂ ಪತಿಪರಾಯಣತೆಯನ್ನೂ ಪರೀಕ್ಷಿಸುವ ಸಲುವಾಗಿ ನಾನಿವರನ್ನು ಪ್ರಿಯ ಭಗಿನಿ ಪ್ರಿಯಂವದೆಯಲ್ಲಿಗೆ ಬಹು ಜಾಗ್ರತೆಯಿಂದಲೂ ಗೋಪ್ಯದಿಂದಲೂ ಕಳುಹಿಸಿದ್ದೆನು. ಅವಳು ಅತ್ಯಧಿಕವಾದ ಪುತ್ರವಾತ್ಸಲ್ಯದಿಂದ ಚಿರಂಜೀವಿಗಳ ಲಾಲನೆಪಾಲನೆಗಳನ್ನು ಮಾಡಿದಳು. ಅಹಲ್ಯೆಯ ದಕ್ಷಿಣಪಾರ್ಶ್ವದಲ್ಲಿ ಭದ್ರಾಸ್ತರಣದ ಮೇಲೆ ಕುಳಿತಿರುವ ಯುವಕನು ಪ್ರಿಯ ಸಹೋದರಿಯ ಪುತ್ರನಾದ ವಿದ್ಯಾಚಂದ್ರನು. ಬಾಲಕಿ ಅಹಲ್ಯೆಯು ಪರಿಣಯೋಚಿತ ವಯಸ್ಸಿನವಳಾದುದರಿಂದ ಅವಳ ಪಾಣಿಪಲ್ಲವವನ್ನು ಚಿ॥ ವಿದ್ಯಾಚಂದ್ರನ ಕೈಯಲ್ಲಿ ಸಮರ್ಪಿಸಲು ನಿಶ್ಚಯಿಸಿರುವೆನು. ಈ ಬಾಲಕರಿರ್ವರ ವಿವಾಹ ಮಂಗಳೋತ್ಸವಕ್ಕಾಗಿಯೇ ಈ ನಮ್ಮ ರಾಜಮಂದಿರವು ಅಲಂಕರಿಸಲ್ಪಟ್ಟಿರುವುದು." ಎಂದು ಹೇಳಿ ಚಂದ್ರಶೇಖರನು ಪತ್ನಿಯ ಅಮೃತಮಯವಾದ ಅಧರವನ್ನು ಪುನಃ ಚುಂಬನ ಮಾಡಿದನು.

ಸಶೇಷ.

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಗೌಡಸಾರಸ್ವತ ಬ್ರಾಹ್ಮಣ ಪರಿಷದಗಳು.

ಕಲ್ಲಿಕೋಟೆ, ತಾ. 8—11—10.

ಪತ್ರಕರ್ತರೇ,

ಈಗ ಸದ್ಯ ಗೋವೆಯಲ್ಲಿ ಜರಗುವ ಪರಿಷದವನ್ನು ಕುರಿತು ಈ ಕೆಳಗಣ ಪ್ರಸ್ತಾಪಗಳನ್ನು ಪ್ರಕಟಿಸುವಿರಾಗಿ ಕೋರುತ್ತೇನೆ:—

ಯಾವದೊಂದು ಪರಿಷದಕ್ಕೆ ಕಾರಣಗಳಾಗಿರುವ ಸಂಗತಿಗಳು ಆಯಾ ಸಮಾಜದ ಸುಧಾರಣೆಗಳೇ ಎಂದು ಸರ್ವರಿಗೂ ತಿಳಿದಿರುತ್ತದೆ. ಅಂತೆಯೇ ಗೌಡಸಾರಸ್ವತ ಸಮಾಜದ ಪರಿಷದವು ಗೌಡಸಾರಸ್ವತ ಸುಧಾರಣೆಯನ್ನು ಬಯಸುವವರ ಸಂಘವೆಂಬುದು ನಿಸ್ಸಂಶಯವಾದ ಸಂಗತಿ. ಯಾವ ಸುಧಾರಣೆಯಾದರೂ ಮನ, ಧನ, ಸ್ವಾರ್ಥ ತ್ಯಾಗಗಳಿಲ್ಲದೆ ಎಲ್ಲಿಯೂ ಎಂದೂ ನೆರವೇರಲಿಲ್ಲವೆಂಬುದು ಒಂದೊಂದು ಜನಾಂಗದ, ಮತದ ಅಥವಾ ಸಂಘದ ಚರಿತ್ರದಿಂದ ಸ್ವಷ್ಟವಾಗುತ್ತದೆ. ಸುಧಾರಣೆಯೆಂದರೆ ಪ್ರಕೃತ ಸ್ಥಿತಿಯನ್ನು ಮಾರ್ಪಡಿಸುವುದು, ಇಂತಹ ಮಾರ್ಪಾಟವು ನಮ್ಮ ಸಂಘದಲ್ಲಿ ಅಗತ್ಯವೋ? ಅಗತ್ಯವಿಲ್ಲದ್ದಲ್ಲಿ ಪರಿಷದದ ಅಗತ್ಯವು ಇದ್ದಿಲ್ಲ.

ಈಗ ಸುಧಾರಣೆಯನ್ನು ಕುರಿತು ಹಲವು ಭಿನ್ನಾಭಿಪ್ರಾಯಗಳಿದ್ದು ಪರಿಷದದ ಪೂರ್ವ ಉದ್ದಿಶ್ಯವಾದ ಸಮಾಜದ ಅಭಿವೃದ್ಧಿಗೆ ವಿಕಲ್ಪವುಂಟಾಗುವ ಸಂಗತಿಯು ಒದಗಿರುವುದಾಗಿ ಸಂಘದಲ್ಲಿ ಸೌಮ್ಯ ಮತ್ತು ವಿಪರೀತ ಪಕ್ಷಗಳಾಗಿರುವುದರಿಂದ ಶ್ರುತವಾಗುತ್ತದೆ. ಈ ಎರಡು ಪಕ್ಷದವರೂ ಸಂಘದ ಹಿತೈಷಿಗಳೆನ್ನುವುದರಲ್ಲಿ ಭಿನ್ನಾಭಿಪ್ರಾಯವಿರಲಾರದು. ಸಂಘದ ವೃದ್ಧಿಯನ್ನು ಅಭಿಲಾಶಿಸುವ ಮಟ್ಟಿಗೆ ವಿಪರೀತ ಪಕ್ಷವಿರಲಾಗದು; ಉಪಾಯ, ಸಾಧನೆಗಳನ್ನು ಕುರಿತು ಮಾತ್ರ ವಿರೋಧಪಕ್ಷವಿರುವುದು. ಈ ಮಟ್ಟಿಗೆ ಸೌಮ್ಯ ಪಕ್ಷದವರು ವಿಪರೀತ ಪಕ್ಷದವರ ಅಭಿಪ್ರಾಯಗಳು ಏನಾಗಿವೆ ಎಂಬುದನ್ನು ಕುಲಾಂಕುಶ ವಿಚಾರಿಸಿ ತಮಗೆ ವಿವಾದಾಸ್ಪದಗಳಾಗಿರುವ ವಿಷಯಗಳಲ್ಲೊಂದೊಂದನ್ನು ವ್ಯಕ್ತಪಡಿಸಿ ಆಯಾ ವಿಷಯವನ್ನು ಕೈಕೊಳ್ಳುವುದರಿಂದ ಯಾವ ತರದ ನಷ್ಟಕ್ಕೆ ಅಥವಾ ಲಭ್ಯಕ್ಕೆ ಆಸ್ಪದವುಂಟಾಗುವುದೆಂದೂ ಅದನ್ನು ನಿರಾಕರಿಸಿರುವುದರಿಂದ ಯಾವ ಲಾಭ ಸಂಪಾದನೆಯು ಕೈಗೂಡದೆ ಇರುವುದೆಂದೂ ಪರ್ಯಾಲೋಚಿಸಿದರೆ ಅನುಚಿತವೆಂದು ಪ್ರಕೃತಕ್ಕೆ ತೋರುವ ಸುಧಾರಣಾ ವಿಷಯಗಳಲ್ಲಿ ಹಲವು ಹಾಗೆ ತೋರದೆ ಇರಬಹುದು. ಹೀಗಿರುವಲ್ಲಿ ಪರಿಷದವನ್ನು ಸಂದರ್ಶಿಸುವ ಮಹನೀಯರು ಸಮಾಜದ ಹಿತೈಷಣೆಯು ಪರಿಷದದ ಮುಖ್ಯ ಕಾರ್ಯವೆಂಬುದನ್ನು ದೃಷ್ಟಿಯಲ್ಲಿಟ್ಟು ಅಭಿಪ್ರಾಯ ಭಿನ್ನತೆಯಿಂದ ಸಮಾಜದ ಸುಧಾರಣೆಯ ಪರ್ಯಾಲೋಚನೆಯನ್ನು ಮರೆಯಲ್ಲಿ ಹಾಕದಂತೆ ಉಭಯ ಪಕ್ಷದವರೂ ಐಕ್ಯಮತ್ಯದಿಂದ ಅವಶ್ಯವೆನ್ನುವ ವಿಷಯಗಳನ್ನು ಒಗ್ಗಟ್ಟಾಗಿ ಏರ್ಪಡಿಸುವ ಸಾಧನೆಯನ್ನು ಕೈಕೊಳ್ಳುವುದು ಅತ್ಯಗತ್ಯ: ಹ್ಯಾಗೆಂದರೆ ಸಂಘದ ವಿದ್ಯಾಭಿವೃದ್ಧಿಯನ್ನು ಇತ್ತಟ್ಟಿನವರೂ ಬಯಸುವರು; ಈ ಮಟ್ಟಿಗಿರುವ ಸಾಧನೆಗಳನ್ನು ಯಾಕೆ ಉಭಯ ಪಕ್ಷದವರೂ ಒಗ್ಗಟ್ಟಾಗಿ ಕೈಕೊಳ್ಳಲಾಗದು. ಯಾವ ಕಾರ್ಯವನ್ನು ಕೈಕೊಳ್ಳುವುದರಲ್ಲಿ ವ್ಯತ್ಯಾಸವಾದ ಅಭಿಪ್ರಾಯಗಳಿರುವುವೊ ಆ ಕಾರ್ಯಗಳನ್ನು ಆಯಾ ಪಕ್ಷದವರು ಅವರವರಿಗೆ ಮೆಚ್ಚಿತಾಗುವಂತೆ ನೆರವೇರಿಸಲಿ. ಎಂತೂ ಸಮಾಜದ ಲಾಭಾಭಿವೃದ್ಧಿಯು ಕೈಗೂಡಬೇಕು. ಅಭಿಪ್ರಾಯ ಭೇದದಿಂದ ಬಂಧುತ್ವವು ದೂರವಾಗದಿರಲಿ. ಉಭಯ ಪಕ್ಷದವರ ಐಕ್ಯಮತ್ಯ ಸಂಪಾದನೆಯು ಸಮಾಜಿಕರ ಕಾರ್ಯಗಳಲ್ಲಿ ಪ್ರಮುಖತೆಯನ್ನು ಹೊಂದುವದು ಅತ್ಯಗತ್ಯವೆಂಬುದು ನಿಸ್ಸಂಧೇಹವಾದ ಸಂಗತಿ.

Kini Prabhu.

ಗೌಡ ಸಾರಸ್ವತ ಪರಿಷದಗಳು.

ತಾ. 12-12-1910.

ಅಯ್ಯಾ ಎಡಿಟರರೇ,

ಇದೇ ತಿಂಗಳ ತಾ. 9ನೇ ಶುಕ್ರವಾರದ ಸ್ವದೇಶಾಭಿಮಾನಿಯಲ್ಲಿ "ಬಿ. ಹರ್ಷರಾಯ"ರು ಒರೆದ ಲೇಖನವನ್ನು ನೋಡಿ ಅತ್ಯಾನಂದವಾಯಿತು. ಹರ್ಷರಾಯರು ಸೂಚಿಸುವ ಎಲ್ಲಾ ವಿಷಯಗಳಲ್ಲಿ ಸಹ ಸಾರಸ್ವತ ಸರ್ವ ಸದ್ಗೃಹಸ್ಥರು ತಮ್ಮ ಒಪ್ಪಿತವನ್ನು ಕೊಟ್ಟು ತಲೆದೂಗದೇ ಇರಲಾರರೆಂದು ಭಾವಿಸುವೆನು. ನನ್ನ ಅಂತರ್ಯದಲ್ಲಿ ಹರ್ಷರಾಯರ ಸೂಚನೆಗಳೆಲ್ಲವೂ ಪೂರ್ಣವಾಗಿ ವಿಹಿತವಾದವುಗಳೆಂದು ಮನಃಪೂರ್ವಕವಾಗಿ ನಂಬುವೆನ್ನು.

ಬಂಗಾಳ ವಿಭಾಗದ ವಿಷಯ ಬಂಗಾಳ ದೇಶಸ್ಥರು ಈಗಲೂ ಕಾದಾಡುವದನ್ನು ನಾವು ಕೇಳುವೆವು. ಅವರು ಕಾದಾಡುವುದೇಕೆ? ವಿಭಾಗದ ದುಷ್ಫಲಗಳು ಅವರಿಗೆ ಪೂರ್ಣವಾಗಿ ಗೊತ್ತಿವೆ. ನಮ್ಮ ಕನ್ನಡಾ ಜಿಲ್ಲೆಯು ಹಿಂದೆ ಒಂದೇ ಆಗಿದ್ದು ತನ್ಮಧ್ಯ ಅದನ್ನು ಸರಕಾರದವರು ಎರಡು ಜಿಲ್ಲೆಗಳಾಗಿ ಮಾಡಿ ಉತ್ತರಭಾಗವನ್ನು ಮುಂಬಾಯಿ ಅಧಿಪತ್ಯಕ್ಕೊಪ್ಪಿಸಿದರು. ಈಗ ನಮಗೆ ಉತ್ತರಕನ್ನಡವೆಂದರೆ ಎಷ್ಟು ದೂರವೆಂದು ತೋರುವುದು! ಆ ಜನರೇ ಪ್ರತ್ಯೇಕ ನಾವು ಪ್ರತ್ಯೇಕವೆಂದು ತಿಳಕೊಳ್ಳುವ ಸಂಭವ ಸಹ ಉಂಟು. ಒಂದೇ ಮತಾನುಯಾಯಿಗಳಾದರೂ ಒಂದೇ ಒಳಶಾಖೆಗೊಪ್ಪಿದವರಾದರೂ ಭಾಷೆ ಸಹ ಸ್ವಲ್ಪ ಸ್ವಲ್ಪ ತಬ್ದೀಲು ಆಗಿಯದೆ.

ಕೊಂಗ್ರೆಸಿನಲ್ಲಿ ಎರಡು ತಂಡಗಳಾಗಿಯವೆ. ಇದರ ದುಷ್ಫಲಗಳು ನಮ್ಮ ಗೋಚರಕ್ಕೆ ಬಂದಿರಲು, ನಮ್ಮ ಸಾರಸ್ವತ ಪರಿಷದದಲ್ಲಿ ಸಹ ದ್ವಿಭಾಗವಾಗಬೇಕೇ?

ಆದುದರಿಂದ, ಸರ್ವ ಸಾರಸ್ವತ ಬಾಂಧವರು (ಚಿತ್ರಾಪುರ, ಕಾಶಿ, ಕೌಳಿ, ಗೋಕರ್ಣ ಮಠಾನುಯಾಯಿಗಳು) ಸಹ ಪ್ರೇಮದಿಂದ ಒಟ್ಟುಗೂಡಿ ಏಕೋಭಾವದಿಂದಲೂ ಏಕೋಮನದಿಂದಲೂ ಸಭೆಗೂಡಿ ನಮ್ಮ ಶಾಖಾ ಚತುಷ್ಟಗಳನ್ನು ವಿದ್ಯೆಯಲ್ಲಿಯೂ ಧನದಲ್ಲಿಯೂ ಉಚ್ಚಸ್ಥಿತಿಗೆ ತರಲು ಆಲೋಚಿಸಿದರೆ ಎಷ್ಟು ಚಲೋದಾದೀತು! ದ್ರಾವಿಡ ಸರ್ವಶಾಖೆಗಳಲ್ಲಿ ಲಗ್ನಸಾಂಪ್ರದಾಯವಿಲ್ಲದಿದ್ದರೂ ಸಹಪಂಕ್ತಿಭೋಜನವಿದ್ದು ಏಕಮತ್ಯದಿಂದಿರುವರೆಂಬುದು ನಿಜ. ಆದರೆ ನಮ್ಮ ಗೌಡಬ್ರಾಹ್ಮಣರಲ್ಲಿ ಅದು ಸಹ ಇಲ್ಲವಲ್ಲ! ನಾವು ಎಂತಹ ಅಧಮ ಸ್ಥಿತಿಗೆ ಬಂದಿಳಿದಿರುವೆವೋ ಎಂದು ಊಹಿಸಲಾರೆನು. ಹೀಗಿರಲು ಇನ್ನಾದರೂ ನಮ್ಮವರಿಗೆ ಸುಜ್ಞಾನ ಹುಟ್ಟಿ ಅನ್ಯೋನ್ಯ ಪ್ರೀತಿಯಿಂದಿದ್ದು ನಮ್ಮೊಳಗೆ ಹರ್ಷರಾಯರು ಹೇಳುವ ಹಾಗೆ "ರೋಟಿ ಬೇಟಿ" ವ್ಯವಹಾರವನ್ನು ಅಭ್ಯಾಸಮಾಡಿ ಚಾಲ್ತಿಗೆ ತರುವುದು ಯೋಗ್ಯವೇ ಸರಿ. ಸನ್ಮಾರ್ಗ ಹತ್ತಲಿಕ್ಕೆ ಎಂದಿಗೂ ವಿಳಂಬವೆಂದನ್ನಲಾಗದು.

ಆದುದರಿಂದ ನಾವು ಸರ್ವರೂ ಒಂದೇ ಸಂಯುಕ್ತ ಮಹಾ ಪರಿಷದದಲ್ಲಿ ಸೇರಿ ಅದನ್ನೇ ಉತ್ತೇಜನ ಮಾಡುವುದು ಯುಕ್ತವಲ್ಲವೇ? ಸಂಯುಕ್ತ ಪರಿಷದದಲ್ಲಿ ಪ್ರೇರೇಪಿಸಿದ ಪ್ರಸಂಗಗಳಲ್ಲಿ ಆಕ್ಷೇಪಕರವಾದುವುಗಳಿದ್ದರೆ ಅಂತಹವುಗಳನ್ನು ತ್ಯಜಿಸಿ ನಮ್ಮ ಶಾಖಾಚತುಷ್ಟಗಳಿಗೆ ಯೋಗ್ಯವಾದವುಗಳನ್ನು ಮಾತ್ರ ಮೇಲ್ತಂದು ಸರ್ವರೂ ಏಕಮತ್ಯದಿಂದಿರಲಿ!

"ಶ್ರೀ ಕೃಷ್ಣದಾಸ"

~~~~~~~~

ಮುಲ್ಕಿ, ತಾ. 13—11—10.

ಮಹಾರಾಜೇಶ್ರಿ ಸ್ವದೇಶಾಭಿಮಾನಿ ಎಡಿಟರವರಿಗೆ.

ಅಯ್ಯಾ,

ನಮ್ಮ ಈ ಮುಲ್ಕಿ ಊರಲ್ಲಿಯ ಕೆಲವು ಗೌಡಸಾರಸ್ವತರೆಂದೆನ್ನಿಸಿಕೊಳ್ಳುವವರಿಗೂ ಸಾರಸ್ವತರಿಗೂ ಪಂಕ್ತಿ ಭೋಜನವಾಯಿತೆಂಬ ವರ್ತಮಾನ ತಿಳಿದು—ಹಾಗೆ ತಾವು ಮಾಡಿದ್ದೆವೆಂಬ ಬರಹಮೂಲಕ ಒಪ್ಪಿಗೆ ಕೊಡುತ್ತಿರೋ ಎಂಬದನ್ನು ನಾನು ಈ ಪೈಕಿ ಕೆಲವರ ಹತ್ತರ ಇಕ್ಕಟ್ಟಿನವರಿಗೂ ಅಪೇಕ್ಷಿಸಿದ್ದಲ್ಲಿ ಕೊಡಲು ಒಪ್ಪುವದಿಲ್ಲ. ಹಾಗೆ ನಿರಾಕರಿಸುವದರ ಕಾರಣ ಏನೆಂಬದು ತಿಳಿಯುವದಿಲ್ಲ. ತಾವು ಸಹ ಪಂಗ್ತಿ ಭೋಜನಮಾಡಿದ್ದೆಂತ ಹೇಳುವದು ಹೆಗ್ಗಳಿಕೆಗೆ ಮಾತ್ರವಾಗಿರುತ್ತದೆಂಬದು ಇದರಿಂದ ಸ್ಪಷ್ಟವಾಗುತ್ತದೆ. ಅದು ನಿಜವಾದ ಪಕ್ಷಕ್ಕೆ ತಮ್ಮ ಪತ್ರದಲ್ಲಿ ಇತ್ತಟ್ಟಿನವರು ತಮ್ಮ ಹೆಸರುಗಳನ್ನು ಪ್ರಕಟಿಸಿದರೆ ಅವರಿಗೆ ಕೃತಜ್ಞನಾಗುವೆನು.

ಸ್ವಜಾತ್ಯಭಿಮಾನಿ.

~~~~~~~~

ಅಳಿಯಸಂತಾನದ ಇನ್ನೊಬ್ಬ ಕಿರಿಯ ಮೆಂಬರನು.

~~~~~~~~

ಆಯ್ಯಾ ಪತ್ರಕರ್ತರೇ,

ನಿಮ್ಮ ಇದೇ 1910ನೇ ಇಸವಿಯ 30ನೇ ಸಂಚಿಕೆಯ ಸ್ವದೇಶಾಭಿಮಾನಿ ಎಂಬ ಪತ್ರಿಕೆಯಲ್ಲಿ ಪ್ರಕಟಿಸೋಣಾದ ಯಜಮಾನನಿಂದ ಪೀಡಿಸಲ್ಪಟ್ಟ ದೌರ್ಭಾಗ್ಯದ ಕಿರಿಯ ಮೆಂಬರನು ಯಾರಾಗಿರಬಹುದೆಂದು ಬಹಳ ದಿವಸಗಳಾರಭ್ಯ ಬಹು ಶ್ರದ್ಧೆಯಿಂದ ವಿಚಾರಿಸತೊಡಗಿದೆನು. ಆ ಮುಂಚರನಾದ ಕಿರಿಯ ಮೆಂಬರನ ಪದಹತಿಯ ಚಿನ್ಹಗಳನ್ನು ಪರಿಶೋಧಿಸುತ್ತಾ ನಾನು ಹಿಂಬಾಲಿಸುವೆನು. ಬೇಸಿಗೆಯ ಬಿಸಿಲೊಳ್ ನಲಿಯುವ ಮರೀಚಿಯಂತೆ ಆತನ ಹೆಜ್ಜೆಗಳು ಕಂಡೂ ಕಾಣದಂತೆ ಮಾಯವಾಗುವವು.

ನಾನು ಕೂಡಾ ಈ ಜಿಲ್ಲೆಯಲ್ಲಿ ಅಳಿಯಸಂತಾನವನ್ನು ಆಚರಿಸುವ ಬಂಟ ಜಾತಿಯ ಒಬ್ಬ ಕಿರಿಯ ಮೆಂಬರನಾಗಿರುತ್ತೇನೆ. ಈ ಜಿಲ್ಲೆಯ ಉತ್ತರಪಾರ್ಶ್ವಕ್ಕಿರುವ ಉಡುಪಿ ಕುಂದಾಪುರ ತಾಲೂಕುಗಳಲ್ಲಿ ವಾಸಿಸುವ ಜನರ ವಿಷಯ ನಾನಧಿಕ ಅರಿತವನಲ್ಲ. ಆದರೆ ಈ ನಿಮ್ಮ ಪತ್ರದ ಕಿರಿಯ ಮೆಂಬರನು ಈ ಎರಡು ತಾಲೂಕುಗಳಿಗೆ ಸಮ್ಮಂಧಪಟ್ಟವನಲ್ಲವೆಂದು ಆತನ ಪತ್ರಭಾವದಿಂದ ಖಚಿತವಾಗುತ್ತದೆ. ಹ್ಯಾಗೆಂದರೆ ಆ ಕಿರಿಯ ಮೆಂಬರನು ತಾನು ಬೆಳಿಗ್ಯೆ ತಂಗಳ ಉಂಡು 7. 8 ಗಂಟೆಗೆ ಪ್ರಯಾಣ ಬೆಳಸಿರಬಹುದೆಂದು ಊಹಿಸುವ. ಆತನು ಮಂಗಳೂರಿಗೆ ಪರಾನ್ನ 3 ಘಂಟೆ ಸಮಯಕ್ಕೆ ತಪ್ಪಿದ್ದರಿಂದ, ಅವನ ಕಾಲ್ನಡೆಯ ಪ್ರಯಾಣವು ಸುಮಾರು 7. 8 ಘಂಟೆಗಳ ದಾರಿಯಾಗಿರಬಹುದೆಂದು ಸ್ಪಷ್ಟವಾಗುತ್ತದೆ. ಈ ಕಾರಣದಿಂದಲೂ ಆತನಿಗೆ ಮಂಗ್ಳೂರಿಗೆ ಹೋಗಬೇಕಾದರೆ 2. 3 ಕಡವುಗಳು ಮಾತ್ರವೇ ದಾಟಲಿಕ್ಕಿರುತ್ತವೆಂಬ ಆಧಾರದಿಂದಲೂ, ನನಗೆ ಹೆಚ್ಚು ಪರಿಚಯವಿಲ್ಲದ ಆ ಎರಡು ತಾಲೂಕುಗಳ ನಿವಾಸಿಯು ಆ ಕಿರಿಯ ಮೆಂಬರನಲ್ಲವೆಂಬದಕ್ಕೆ ನಿರ್ವಿವಾದವೇ. ಮಂಗಳೂರು ಉಪ್ಪಿನಂಗಡಿ ಅಥವಾ ಇತ್ತಲಾಗೆ ಮಂಗಳೂರು ತಾಲೂಕಿನಿಂದ ವಿಭಾಗಿಸಲ್ಪಟ್ಟ ಮೂಡಬಿದ್ರೆ, ಈ ತಾಲೂಕುಗಳಲ್ಲಿರುವ ಅಳಿಯಸಂತಾನವನ್ನು ಆಚರಿಸುವ ಘನ ಕುಟುಂಬಗಳನ್ನು ನಾನು ಚನ್ನಾಗಿ ಬಲ್ಲೆನು. ಆದರೆ ತಂದೆ ಮಕ್ಕಳಿಗೆ ಕೂಡಾ 215 ಕೋಳಿಗಳಿರುವ ಮತ್ತು ಯಜಮಾನನು ತನ್ನ ಕುಟುಂಬಿಕರಿಗೆ ನಿತ್ಯಕಟ್ಲೆ ಭೋಜನಪಡಿಯನ್ನು ಅಳತೆ ಮಾಡಿಕೊಡುವ ಸಂಪ್ರದಾಯವುಳ್ಳ ಮನೆಗಳನ್ನು ಈ 3 ತಾಲೂಕುಗಳಲ್ಲಿ ಒಂದಾದರೂ ನಾನರಿಯೆ. ಮೇಲ್ಗಡೆ ಹೇಳಿದ 3 ತಾಲೂಕುಗಳ ನಿವಾಸಿಯು ಆತನಲ್ಲವೆಂಬದು ಖಚಿತವಾಗುತ್ತದೆ. ಪರಂತು ನಿಮ್ಮ ಪತ್ರದಲ್ಲಿ ತೋರಿಸದಷ್ಟು ಅಲ್ಲವಾದರೂ, ಕೊಂಚಮಟ್ಟಿಗೆ ಕೋಳಿಗಳ ಬಳುವಳಿಕೆ ಇರುವ ಕುಟುಂಬಗಳು ಕಾಸರಗೋಡು ತಾಲೂಕಿನಲ್ಲಿ 2 ಮಾತ್ರವೇ ಇರುತ್ತವೆ. ಅವುಗಳ ಪೈಕಿ ಒಂದು ಕುಟುಂಬದ ಯಜಮಾನನಿಗೆ ಮಕ್ಕಳೇ ಇಲ್ಲ. ಇನ್ನೊಂದು ಕುಟುಂಬದ ಯಜಮಾನನಿಗೆ 50 ಕೋರ್ಜಿ ಮುನಾಫೆಯ ಆಸ್ತಿಯೂ, 3 ಜನ ಗಂಡುಮಕ್ಕಳೂ ಇರುವುದಿಲ್ಲ. ಈ ಎರಡು ಕುಟುಂಬಗಳ ಯಜಮಾನರುಗಳು ತಮ್ಮ ಕುಟುಂಬಿಕರನ್ನು ತ್ರಿಕರಣಪೂರ್ವಕವಾಗಿ ಪ್ರೀತಿಯಿಂದ ಪೋಷಿಸುತ್ತಾರೆಂಬದು ಸರ್ವಸಮ್ಮತವಾಗಿದೆ. ಇನ್ನೂ ಅನೇಕ ಕಾರಣಗಳಿಂದ ಕೂಡಾ ಆ ಕಿರಿಯ ಮೆಂಬರನು ಈ 2 ಘನ ಕುಟುಂಬಗಳಿಗೆ ಸಮ್ಮಂಧಪಟ್ಟವನಲ್ಲವೆಂದು ರುಜುಪಡಿಸುತ್ತದೆ. ಹಾಗಾದರೆ ಈ ಪರದೆಯೊಳಗಿಂದ ಮಾತಾಡುವ ಆ ಕಿರಿಯ ಮೆಂಬರನು ಯಾರಾಗಿರಬಹುದು?

ಇವನು ಅಳಿಯಸಂತಾನವನ್ನು ಆಚರಿಸುವ ಬಂಟಜಾತಿಯ ಒಬ್ಬ ಕಿರಿಯ ಮೆಂಬರನೆಂದು ಹೇಳುತ್ತಾನೆ. ಆದರೆ ಇವನು ತನ್ನ ಸ್ವಜಾತಿಯ ನಿರಾಧಾರವಾದ ದೂಷಣೆಗಳನ್ನು ಇಂಥಾ ಬಹಿರಂಗವಾದ ಪತ್ರದಲ್ಲಿ ಪ್ರಕಟಿಸಿದ್ದರಿಂದಲೂ, ಇನ್ನೂ ಅನೇಕ ವಿದ್ಯಮಾನಗಳ ಆಧಾರದಿಂದಲೂ ಕುಲಾಂಕುಶ ವಿಚಾರಿಸಿದರೆ, ಆ ಕಿರಿಯ ಮೆಂಬರನು ತನ್ನ ಯಜಮಾನನಿಗೆ ಅವಿಧೇಯನೂ ದೋಷಕಾರಕನೂ ಆಗಿದ್ದನೆಂಬದಕ್ಕೆ ಅನುಮಾನವಿಲ್ಲ. ಆ ಯುವ್ವನಸ್ಥನು ಬುದ್ಧಿ ಚಮತ್ಕಾರಿಯೂ ವಿದ್ಯಾವಂತನೂ ಆಗಿರಬಹುದೆಂದು ಆತನು ಬರೆದ ಪತ್ರಭಾವದಿಂದ ಪೂರ್ಣ ವ್ಯಕ್ತವಾಗುತ್ತದೆ. ಆತನ ಚಿಕ್ಕ ವಯಸ್ಸಿನಲ್ಲಿಯೇ ಅವನ ತಂದೆಯು ಕಾಲವಾದನೆಂದು ಹೇಳುತ್ತಾನೆ. ಹಾಗಾದರೆ ರಸ ತಿನ್ನುವ ಆ ಕ್ರೂರ ಸ್ವಭಾವದ ಮಾವನ ಮನೆಯಲ್ಲಿ, ಕಸ ತಿನ್ನುವ ಆ ಕಿರಿಯ ಮೆಂಬರನಿಗೆ ಅಷ್ಟು ಹೆಚ್ಚು ವಿದ್ಯಾಭ್ಯಾಸವನ್ನು ಯಾರು ಉಪದೇಶಿಸಿರಬಹುದೆಂದು ವಾಚಕರೇ ತೀರ್ಮಾನ ವಿಧಿಸಲಿ. ಆತನು ತನ್ನ ವಿದ್ಯಾ ಪ್ರವೀಣತೆಯನ್ನೂ ಅಮೌಲ್ಯವಾದ ಸಮಯವನ್ನೂ ಇಂಥಾ ನಿರಾಧಾರವಾದ ಆಕೃತಿಗಳಲ್ಲಿ ಉಪಯೋಗಿಸುವದರ ಬದಲಾಗಿ ಸುಕಾರ್ಯಗಳಲ್ಲಿಯೂ ಸುಕೃತಿಗಳಲ್ಲಿಯೂ ವಿನಿಯೋಗಿಸುತ್ತಿದ್ದರೆ ಆತನು ಇನ್ನಷ್ಟು ಹೆಚ್ಚಿನ ಯಶಸ್ಸಿಗೆ ಬರುತಿದ್ದಾನೆಂಬದಕ್ಕೆ ಸಂದೇಹವಿಲ್ಲ. ಆತನು ನಿರುದ್ಯೋಗಿಯಾಗಿರಬಹುದಾದ ಕಾರಣ ಕಾಲಗತಿಗನುಸಾರವಾಗಿ ಗುಣದೋಷಗಳನ್ನು ವಿಚಾರಿಸದೆ ವೃಥಾ ಕಲ್ಪನಾಕಥೆಗಳನ್ನುಂಟುಮಾಡಿ ಬರದಿರಬಹುದೆಂದು ನಾನು ಅಭಿಪ್ರಾಯ ಪಡುತ್ತೇನೆ,

ಸಕೇಪ.

~~~~~~~~

ಕಳದ ತಿಂಗಳಲ್ಲಿ ಕೂಡಿದ ಮದ್ರಾಸು ನ್ಯಾಯನಿರ್ಮಾಣ ಸಭೆಯಲ್ಲ್ಯಾದ ಕೆಲವು ಪ್ರಶ್ನೋತ್ತರಗಳು.

———o———

ಉಪಾಧ್ಯಾಯರುಗಳಿಗೋಸ್ಕರ ಒಂದು ಪ್ರೊವಿಡೆಂಟ ಫಂಡನ್ನು ಏರ್ಪಡಿಸುವ ಆಲೋಚನೆ ಇರುವುದೋ? ಖಾಸಗಿ ಶಾಲೆಗಳ ಉಪಾಧ್ಯಾಯರ ಸಹಾಯಾರ್ಥವಾಗಿ ಸ್ಥಾಪಿಸಲ್ಪಟ್ಟ ಪ್ರೊವಿಡೆಂಟ್ ಫಂಡುಗಳಿಗೆ ಸಹಾಯ ದೊರಕಬಹುದೋ ಎಂಬ ಪ್ರಶ್ನೆಗಳು ಕಳದ ನ್ಯಾಯನಿರ್ಮಾಣ ಸಭೆಯಲ್ಲಿ ಕೇಳಲ್ಪಟ್ಟವು. ಬಹುಮಾನಪಟ್ಟ ಮೆ. ಸ್ಟೋನ್ ಧೊರೆಗಳವರು ಉಪಾಧ್ಯಾಯರುಗಳ ಬಗ್ಯೆ ಒಂದು ಪ್ರೊವಿಡೆಂಟ್ ಫಂಡಿನ ಏರ್ಪಾಡು ಮಸೂದೆಯನ್ನು ಅಂಗೀಕಾರದ ಬಗ್ಯೆ ಸರಕಾರದ ಮುಂದೆ ಇಟ್ಟಿದ್ದರಾದರೂ ಸರಕಾರದ ಅನನುಕೂಲತೆಗಳಿಂದ ಈ ಮಸೂದೆ ಜ್ಯಾರಿಗೆ ತರಲಿಕ್ಕುಪಾಯವಿಲ್ಲವೆಂತ ತಿಳಿಸೋಣಾಯಿತಲ್ಲದೆ ಖಾಸಗಿ ಶಾಲೆಯ ಮೆನೇಜರರುಗಳಿಂದ ಸ್ಥಾಪಿಸಲ್ಪಟ್ಟ ಈ ಫಂಡಗಳಿಗೆ ಸಹಾಯ ಮಾಡುವುದು ಉಚಿತವಲ್ಲವೆಂಬ ಅಭಿಪ್ರಾಯವೂ ಸಹ ದೊರಕಿತು. ಆದರೆ ಸರಕಾರದ ಮುಂದೆ ತರೋಣಾಗುವ ಖಾಸಗಿ ಶಾಲೆಗಳಲ್ಲಿ ಸ್ಥಾಪಿಸಲ್ಪಟ್ಟ ಪ್ರೊವಿಡೆಂಟ್ ಫಂಡುಗಳ ವಿಷಯವು ಆಲೋಚಿಸಲ್ಪಡುವದೆಂಬದಾಗಿ ತಿಳಿಸಿರುವರು.

ಎಳೆಪ್ರಾಯದ ಹುಡುಗ ಹುಡುಗಿಯರಲ್ಲಿ ಹೊಗೆಸೊಪ್ಪು ಸರಾಯಿ ಮತ್ತು ಅಫೀಮು ಮೊದಲಾದ ಮಾದಕ ಪದಾರ್ಥಗಳ ಉಪಯೋಗವನ್ನು ನಿರ್ಬಂಧಿಸತಕ್ಕ ಕಾನೂನನ್ನು ಏರ್ಪಡಿಸುವುದುತ್ತಮವೆಂತ ಪ್ರಜಾ ಕಡೆಯಿಂದ ಸೂಚಿಸಲ್ಪಟ್ಟಿತ್ತು. ಸರಾಯಿ ಅಫೀಮು ಮೊದಲಾದ ಮಾದಕ ಪದಾರ್ಥಗಳನ್ನು ೧೪ ವರ್ಷಕ್ಕಿಂತ ಕಡಿಮೆ ಪ್ರಾಯದವರಿಗೆ ವಿಕ್ರಯಿಸಕೂಡದೆಂಬ ನಿರ್ಬಂಧವಿರುವುದೆಂದೂ ಬೀಡಿ ಮೊದಲಾದವುಗಳನ್ನು ಸೇದುವುದನ್ನು ನಿರ್ಬಂಧಿಸುವರೆ ಕಾನೂನು ಅಗತ್ಯವಿಲ್ಲವೆಂದೂ ಸರಕಾರದವರು ಉತ್ತರಕೊಟ್ಟರು.

ಸರಕಾರದ ಕಡೆಯಿಂದ ೧೯ ಮಾದರಿ ಸೆಕಂಡರಿ ಶಾಲೆಗಳನ್ನು ಸ್ಥಾಪಿಸಬೇಕೆನ್ನುವ ಏರ್ಪಾಡು ಎಷ್ಟರಮಟ್ಟಿಗೆ ಜ್ಯಾರಿಯಾಗಿರುವುದು, ಈ ಮಾದರಿ ಶಾಲೆಗಳನ್ನು ಮಿಶನ್ ವ ಖಾಸಗಿ ಜನರಿಂದ ಸ್ಥಾಪಿಸಲ್ಪಟ್ಟ ಶಾಲೆಗಳಲ್ಲಿರುವ ಪ್ರಾಂತ್ಯಗಳಲ್ಲಿ ಸ್ಥಾಪಿಸುವುದನುಚಿತವೆಂತ ವಿಜ್ಞಾಪಿಸಲ್ಪಟ್ಟಿತ್ತು. ಈ ಏರ್ಪಾಡು ಪ್ರಕೃತ ಇಂಡಿಯಾ ಸರಕಾರದವರ ಮುಂದಿರುವುದೆಂದೂ ಈ ಏರ್ಪಾಡಿನಿಂದ ಖಾಸಗಿ ವ ಮಿಶ್ಯನ್ ಶಾಲೆಗಳಿಗೆ ಅಪಾಯ ಬಾರದೆಂದೂ ಅಪ್ಪಣೆ ಕೊಡಿಸಿದರು.

ಮಾಗಣೆ ಶ್ಯಾನುಭಾಗರುಗಳಿಗೆ ಒಂದು ನಿಯಮಿತ ವಿಸ್ತೀರ್ಣಕ್ಕೆ ಮೀರಿದ ಪ್ರಯಾಣದ ಬಗ್ಯೆ ಭತ್ತೆಯನ್ನೂ ಕೆಲಸದವಧಿಯ ನಂತರ ಪೆನ್ಶನನ್ನೂ ಕೊಡುವ ಏರ್ಪಾಡನ್ನು ಮಾಡಬೇಕೆಂದು ಪ್ರಜಾ ಕಡೆಯಿಂದ ಕೇಳಿದ್ದಾಯಿತು. ಆದರೆ ಇಂಥಾ ಏರ್ಪಾಡುಗಳನ್ನು ಮಾಡುವುದು ಸರಕಾರದವರಿಗೆ ಯುಕ್ತ ತೋರಲಿಲ್ಲ.

ಮುನ್ಸೀಫ ಕೋರ್ಟು, ಪೋಲೀಸು ಆಫೀಸು, ತಾಲೂಕು ಕಚೇರಿ, ಡಿಪ್ಯುಟಿ ತಹಸೀಲದಾರರ ಕಚೇರಿ, ಸ್ಟೇಶನರಿ ಸಬ್ ಮೆಜಿಸ್ಟ್ರೇಟರ ಆಫೀಸು ಈ ಆಫೀಸುಗಳಲ್ಲಿ ಕೆಲಸ ಮಾಡುವ ೧೫ ರೂ. ತಲಬಿನ ಗುಮಾಸ್ತರುಗಳಿಗೆ ೨೦ ರೂಪಾಯಿ ತಲಬನ್ನು ಮಾಡುವ ಏರ್ಪಾಡು ಸರಕಾರದವರ ಪರ್ಯಾಲೋಚನೆಯಲ್ಲಿರುವುದೋ ಎಂಬ ಪ್ರಶ್ನೆಗೆ ಮುನ್ಸೀಫ ಕೋರ್ಟು ಮತ್ತು ಪೋಲೀಸು ಆಫೀಸುಗಳಲ್ಲಿ ಇವರ ತಲಬು ಈ ಮೊದಲೇ ೨೦ಕ್ಕೆ ಹೆಚ್ಚಿಸಿರುವುದೆಂದೂ ಬಾಕಿ ಉಳಿದ ಗುಮಾಸ್ತರುಗಳ ವೇತನವನ್ನು ಹೆಚ್ಚಿಸುವ ಸಬಬನ್ನು ಸರಕಾರದವರು ಪರ್ಯಾಲೋಚಿಸುವರಂತೆಯೂ ಉತ್ತರವು ದೊರಕಿರುವುದು.

~~~~~~~~

ವಿದೇಶ ವೃತ್ತಾಂತ.

~~~~~~~~

ಸ್ಪಾನಿಯದ ಮಧ್ಯಭಾಗದಲ್ಲಿಯೂ ದಕ್ಷಿಣಾಂತ್ಯದಲ್ಲಿಯೂ ಭಾರೀ ನೆರೆಬಂದು ಅನೇಕ ಹಳ್ಳಿಗಳು ನೆರೆಯಿಂದ ಮುಳುಗಿ ಗಂಡಾಂತರ ಸ್ಥಿತಿಯಲ್ಲಿವೆ ಮಾತ್ರವಲ್ಲದೆ ಅಗ್ಗಾಡಿ ನಡಿಸುವದೂ ಕಷ್ಟವಾಗಿದೆ. ಜಿಬ್ರಾಲ್ಟರಿನಲ್ಲಿ ಬಿರುಗಾಳಿಯ ಕುರುಹು ಕಾಣುತ್ತದೆ.

~~~~~~~~

ಇಂಗ್ಲಾಂಡಿನಲ್ಲಿ ಪ್ರಜಾ ಪ್ರತಿನಿಧಿಗಳನ್ನು ಆರಿಸಿಕೊಳ್ಳುವ ಸಂದರ್ಭದಲ್ಲಿ ಭಾರತೀಯ ಒಬ್ಬ ಮೆಂಬರನಾದರೂ ಪಾರ್ಲಿಮೆಂಟ್ ಸಭೆಯ ಮೆಂಬರುತನದ ಉಮೇದ್ವಾರರಾಗುವರೆಂಬದಾಗಿ ಇಂಡಿಯಾ ಎಂಬ ಪತ್ರಿಕೆಯಿಂದ ತಿಳಿಯುತ್ತೇವೆ.

~~~~~~~~

ದಕ್ಷಿಣ ಅಪ್ರಿಕದಲ್ಲಿ ಭಾರತೀಯರನ್ನು ನಡಿಸುವ ಕ್ರೂರ ವಿಧಾನಗಳಲ್ಲಿ ಯಾವ ತರದ ಬದಲಾವಣೆಗಳಾದರೂ ಇಷ್ಟರ ತನಕ ಆಗಲಿಲ್ಲವೆಂದು ತಿಳಿಯುತ್ತೇವೆ.

~~~~~~~~

ಪಾರ್ಲಿಮೆಂಟ್ ಸಭಾ ಚುನಾವಣೆಯ ಮೆಂಬರರ ಸಂಖ್ಯೆಯು ತಾರೀಕು 12 ರ ವರೇಗೆ ಈ ರೀತಿಯಾಗಿರುವದು:—ಕನ್‌ಸರ್‌ವೇಟಿವ್ ಪಕ್ಷದ ಪ್ರತಿನಿಧಿಗಳು 228; ಉದಾರ ಪಕ್ಷದ ಪ್ರತಿನಿಧಿಗಳು 189; ಕೂಲಿಯಾಳುಗಳ ಪ್ರತಿನಿಧಿಗಳು 35; ನೇಶನಲಿಷ್ಟ್ ಪಕ್ಷದ ಪ್ರತಿನಿಧಿಗಳು 36.

~~~~~~~~

ಮಿಂಟೋ ಪ್ರಭುಗಳು ಪರಿವಾರ ಸಮೇತ ತಾರೀಕು 12 ನೇ ಸಾಯಂಕಾಲ 5. 50 ಘಂಟೆಗೆ ಲಂಡನ್ ಪಟ್ಟಣಕ್ಕೆ ಮುಟ್ಟಿದರು. ಸರ್ ಆರ್ಥರ್ ಬಿಗ್ಗೆಯವರು ಜೋರ್ಜ ಸಾರ್ವಭೌಮರ ಬಗ್ಯೆ ಇವರನ್ನು ಆಗತಸ್ವಾಗತ ಮಾಡ ಅಲ್ಲಿಗೆ ಬಂದದಲ್ಲದೆ ಮೋರ್ಲೆ ಪ್ರಭುಗಳವರೂ ಕ್ರೂ ಪ್ರಭುಗಳೂ, ಇಂಡಿಯ ಕೌನ್ಸಿಲನ ಮೆಂಬರರೆಲ್ಲರೂ, ಇಂಡಿಯ ಆಫೀಸಿನ ಆಫೀಸರರಲ್ಲಿ ಹಲವರೂ, ರೋಬರ್ಟ್ ಪ್ರಭು ಮೊದಲಾದ ಹಲವು ಮಂದಿ ಪ್ರಭುಗಳೂ ಅಲ್ಲಿಗೆ ಚಿತ್ತೈಸಿದ್ದರು. ಮಿಂಟೋ ಪ್ರಭುಗಳವರು ಇವರೆಲ್ಲರನ್ನು ಎದುರ್ಗೊಂಡನಂತರ ಪತ್ನಿ ಸಮೇತ ತನ್ನ ನಿಯಮಿತವಾದ ಬಂಗ್ಲೆಗೆ ಹೋಗಿ ಉಳಕೊಂಡರು.

~~~~~~~~

ಉತ್ತರ ಹಿಂದೂಸ್ಥಾನ.

~~~~~~~~

ಹಿಂದೂಸ್ಥಾನದವರಲ್ಲಿ ಡಾಕ್ಟರ್ ಬೆನಗಲ್ ರಾಘವೇಂದ್ರ ರಾಯರವರ ಮಗ ಮೆ. ಬಿ. ಎನ್. ರಾವ್ ಎಂಬವರೊಬ್ಬರೇ ಕಳದ ಸಾರಿಯ ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿ ತೇರ್ಗಡೆ ಪಟ್ಟಿರುವರು. ಇವರು ದಕ್ಷಿಣ ಕನ್ನಡದವರು. ಮದ್ರಾಸು ಯುನಿವರ್ಸಿಟಿಯಲ್ಲಿಯೂ ಕೊಲೇಜಿನಲ್ಲಿಯೂ ಚಿನ್ನದ ಪದಕಗಳನ್ನು ಪಡದವರಾಗಿ ಸರಕಾರದಿಂದ ವೇತನವನ್ನು ಹೊಂದಿ ಕೇಂಬ್ರಿಜ್ ಕೊಲೇಜಿಗೆ ಹೋಗಿ ಸೇರಿದರು. ಅಲ್ಲಿಯೂ ಬಹುಮಾನಗಳನ್ನು ಹೊಂದಿಕೊಂಡು ಕಳದ ಸಾರಿಯ ಇಂಡಿಯನ್ ಸಿವಿಲ್ ಸರ್ವಿಸಿನ ಪರೀಕ್ಷೆಯಲ್ಲಿ ಪಾರಂಗತರಾಗಿ ಇವರ ಅಪೇಕ್ಷೆಯ ಮೇರೆಗೆ ಕಲ್ಕತ್ತೆಯ ಸಮೀಪ ಉದ್ಯೋಗಕ್ಕೆ ನೇಮಿಸಲ್ಪಟ್ಟಿರುವರು.

~~~~~~~~

ತಾರೀಕು ೧೦ರಲ್ಲು ಮುಂಬಾಯಿಯಲ್ಲಿ ೪೦ ವರ್ಷ ಪ್ರಾಯದ ಮುಸಲ್ಮಾನನೊಬ್ಬನು ಮನಃಶಾಂತಿ ಇಲ್ಲದವನಂತೆ ಅತ್ತಿತ್ತ ಓಡ್ಯಾಡಿ ಮೂರು ಜನರನ್ನು ಕೊಂದನಲ್ಲದೆ ಐವರನ್ನು ಘಾಯಪಡಿಸಿದನು.

~~~~~~~~

ಈ ತಿಂಗಳ ತಾ. ೯ಕ್ಕೆ ಅಂತ್ಯವಾಗುವ ವಾರದಲ್ಲಿ ಇದರ ಗತವಾರಕ್ಕಿಂತ ೮೭೭ ಹೆಚ್ಚು ಮಂದಿಯು ಇಡೀ ಹಿಂದೂಸ್ಥಾನದಲ್ಲಿ ಪ್ಲೇಗ ಬೇನೆಯಿಂದ ಸತ್ತರು. ಈ ಪೈಕಿ ಮುಂಬಾಯಿಯಲ್ಲಿ 978; ಮದ್ರಾಸಿನಲ್ಲಿ 407; ಬಂಗಾಳದಲ್ಲಿ 458; ಯೂನ್ಯಾಟೆಡ್ ಪ್ರೊವಿನ್ಸಿನಲ್ಲಿ 2253; ಪಂಜಾಬಿನಲ್ಲಿ 1170; ಮತ್ತು ಬರ್ಮದಲ್ಲಿ 108 ಮಂದಿಯು ಪ್ಲೇಗ ಬೇನೆಯಿಂದ ಸತ್ತಂತಾಯಿತು.

~~~~~~~~

ಎಡ್ವಾರ್ಡ್ ಮಹಾರಾಜರ ಸ್ಮರಣಾರ್ಥಕ ಫಂಡಿಗೆ ಇಡೀ ಹಿಂದುಸ್ಥಾನದಲ್ಲಿ ದಶಂಬರ 3ನೇ ತಾರೀಕಿನ ತನಕ ಮೂರು ಲಕ್ಷದ ಎಪ್ಪತ್ತೊಂದು ಸಾವಿರ ರೂಪಾಯಿ ಜಮೆಯಾಯಿತು.

~~~~~~~~

ಇಡೀ ಹಿಂದುಸ್ಥಾನದಲ್ಲಿ 1908—1909 ನೇ ಇಸವಿಗಳಲ್ಲಿ 72, 800, 536 ಎಕ್ರೆ ಭೂಮಿಯಲ್ಲಿ ಅಕ್ಕಿ ಮತ್ತು ರಾಗಿಯೂ; 11, 264, 421 ಎಕ್ರೆಗಳಲ್ಲಿ ಇತರ ಧಾನ್ಯಗಳೂ ಸಾಗುವಳಿ ಆಗಿರುವದು. 1906-1907 ಇಸವಿಗಳಲ್ಲಿ ಅಕ್ಕಿ ರಾಗಿಯು 75, 980, 682 ಎಕ್ರೆಗಳಲ್ಲಿಯೂ ಇತರ ಧಾನ್ಯಗಳು 6, 816, 816 ಎಕ್ರೆಗಳಲ್ಲಿಯೂ, ಸಾಗುವಳಿ ಆಗಿತ್ತು. ಅಂದರೆ ಕಳದ ವರ್ಷದಲ್ಲಿ ಅಕ್ಕಿ ಸಾಗುವಳಿ ಕಮ್ಮಿ ಆಯಿತು. ಇತರ ಧಾನ್ಯಗಳ ಕೃಷಿಯು ಹೆಚ್ಚಾಯಿತು ಎಂದು ಹೇಳ ಬೇಕು. ಇದಲ್ಲದೆ ಎಣ್ಣೆ ತೆಗೆಯಬಹುದಾದ ಬೀಜಗಳ ಮತ್ತು ಗೋಧಿಯ ಸಾಗುವಳಿಯೂ ಕಳದ ವರ್ಷದಲ್ಲಿ ಹೆಚ್ಚಾಯಿತು. ಕಾಫಿ, ಹೊಗೆಸೊಪ್ಪು ಅಫೀಮು ಮೊದಲಾದ ಪದಾರ್ಥಗಳ ಸಾಗುವಳಿಯು ತಗ್ಗಿತು ಎಂತ ತಿಳಿದುಬರುತ್ತದೆ. ಒಟ್ಟಾರೆ ಇಡೀ ಹಿಂದುಸ್ಥಾನದಲ್ಲಿ ಸರ್ವೆ ಮಾಡಿದ 623 ಮಿಲಿಯ ಎಕ್ರೆ ಭೂಮಿಯಲ್ಲಿ 218 ಮಿಲಿಯ ಎಕ್ರೆಯು ಸಾಗುವಳಿ ಆಗುತ್ತಲಿದೆ; ಉಳಿದ ಭೂಮಿಯು ಸಾಗುವಳಿ ಆಗುವದಿಲ್ಲವೆಂತ ಕೃಷಿ ಇಲಾಖೆಯ ವರದಿಯಿಂದ ತಿಳಿಯಬಹುದು.

~~~~~~~~

ತನ್ನ ಅಗಲುವಿಕೆಯ ಕಾಲದಲ್ಲಿ ಕಲ್ಕತ್ತ ಪಟ್ಣವಾಸಿಗಳು ಮಾಡಿದ ಸ್ವಸ್ಥಿವಚನವನ್ನೂ, ಅವರು ಪಟ್ಟಣದ ಬೀದಿಗಳನ್ನು ಶೃಂಗರಿಸಪಟ್ಟಂಥ ಶ್ರದ್ಧೆಯನ್ನೂ ತಾನೂ ತನ್ನ ಪತ್ನಿಯವರೂ ಬಹಳವಾಗಿ ಮನ್ನಣೆ ಮಾಡಿರುವೆವಲ್ಲದೆ, ಅದಕ್ಕಾಗಿ ಅನಿರ್ವಚನೀಯ ಉಪಕಾರ ಹೇಳುತ್ತೇವೆಂದೂ; ಕಡೇ ಸಾರಿ ಮಾಡಿದವಂದನೋಕ್ತಿಯನ್ನು ತಾವು ಎಂದೂ ಮರೆಯಲಿಕ್ಕಿಲ್ಲವೆಂದೂ ಮಿಂಟೋ ಪ್ರಭುಗಳು ಕಲ್ಕತ್ತೆಯ ಷೆರೀಫರಾದ ಮೆ. ಡೌಡಿಂಗರವರಿಗೆ ಕಳದ ತಿಂಗಳ ತಾರೀಕು 3 ರಲ್ಲು ಢಫರಿನ್ ಹಡಗದಿಂದ ಪತ್ರ ಬರೆದಿರುವರಲ್ಲದೆ ಈ ಸಂಗತಿಯನ್ನು ಪಟ್ಟಣಿಗರಿಗೆ ತಿಳಿಸಬೇಕೆಂದೂ ಮೆ. ಡೌಡಿಂಗರನ್ನು ಬಿನ್ನೈಸಿರುವರು.

~~~~~~~~

ಕಲ್ಕತ್ತೆಯಲ್ಲಿ ಹಿಂದೂ ಮುಸಲ್ಮಾನರೊಳಗೆ ನಡೆದ ಕಲಹವು.

~~~~~~~~

ಮುಸಲ್ಮಾನರು ತಮ್ಮ ಬಕ್ರೀದ್ ಹಬ್ಬದಲ್ಲಿ ಗೋಹತ್ಯ ಮಾಡುವುದುಂಟಷ್ಟೆ. ಈ ಸಂಬಂಧ ಕಲ್ಕತ್ತೆಯಲ್ಲಿ ಮುಸಲ್ಮಾನರಿಗೂ ಹಿಂದುಗಳಿಗೂ ಕೆಲವು ದಿನಗಳಿಂದ ಚರ್ಚೆಯು ನಡೆಯುತ್ತಲಿತ್ತು. ಕಡೇಗೆ ತಾರೀಕು ೮ನೇ ಸಾಯಂಕಾಲ ಹಿಂದೂ ಗೃಹಸ್ಥರಲ್ಲಿ ಪ್ರಮುಖರು, ಮುಸಲ್ಮಾನರು ಬಕ್ರೀದ್ ಹಬ್ಬದ ದಿನ ಗೋಹತ್ಯ ಮಾಡಲೇ ಬಾರದೆಂಬದಾಗಿ ತಿಳಿಸಿದರು. ಆದರೆ ಮುಸಲ್ಮಾನರು ಈ ಮಾತನ್ನು ಕೇಳದೆ ಹೋದದರಿಂದ ಮಾರ್ವಾರಿಗಳೆಲ್ಲಾ ಬಾರಾ ಬಜಾರಿನಲ್ಲಿರುವ ತಮ್ಮ ಅಂಗಡಿಗಳನ್ನು ಮುಚ್ಚಿ ನೂರಾರು ಮಂದಿ ಗುಂಪುಗುಂಪು ಕಟ್ಟಿಕೊಂಡು ಮುಸಲ್ಮಾನರ ಕೇರಿಗಳಲ್ಲಿ ತಿರುಗಾಡ ಹತ್ತಿದರಲ್ಲದೆ ಹಿಂದೂ
~~~~~~~~

ಮನೇ ಮಾಲಿಕರು ತಮ್ಮ ಮುಸಲ್ಮಾನ ಒಕ್ಕಲುಗಳು ಕೂಡಾ ಅಂಗಡಿ ಮನೆಗಳನ್ನು ಮುಚ್ಚಿ ಬಿಡಬೇಕೆಂದು ಅಪ್ಪಣೆ ಮಾಡಿದರು. ಈ ಮಾತನ್ನು ಮುಸಲ್ಮಾನರು ತಿರಸ್ಕರಿಸಿದ್ದರಿಂದ ಹಿಂದುಗಳು ಮುಸಲ್ಮಾನರ ಅಂಗಡಿಗಳನ್ನು ಲೂಟಿ ಮಾಡಿ, ಸಿಕ್ಕಿಸಿಕ್ಕಿದ ಮಹಮದ್ದೀಯರ ಮೇಲೆ ಬಿದ್ದು ಕೈಯಲ್ಲಿದ್ದ ದೊಣ್ಣೆಗಳಿಂದ ಕೊಡ ಹತ್ತಿದರು. ಮುಸಲ್ಮಾನರು ಹೀಗೆ ಪೆಟ್ಟು ತಿಂದವರಾಗಿ ಪೋಲೀಸಿಗೆ ವರದಿ ಕೊಟ್ಟದ್ದರಿಂದ ಪೋಲೀಸ್ ಕಮಿಶನರವರು ಅಶ್ವಾರೂಢರಾದ, ಆಯುಧಪಾಣಿಗಳಾದ ಪೋಲೀಸಿನವರನ್ನು ಈ ಗೊಂದಲ ನಡೆಯುವ ಸ್ಥಳಕ್ಕೆ ಕಳುಹಿಸಿಕೊಟ್ಟದ್ದರಿಂದ ಉಮ್ರಾತೊಲಾ ಎಂಬ ಮುಸಲ್ಮಾನ ಮಶೀದಿಯ ಸಮೀಪ ಆಗಲಿಕ್ಕಿದ್ದ ಮಾರಾಮಾರಿಯು ಸದ್ಯಾ ನಿಂತಿತು.

ತಾರೀಕು ೯:—ಈ ದಿನ ವಿಶೇಷ ಗದ್ದಲವೇನೂ ನಡೆಯಲಿಲ್ಲ. ಪೋಲೀಸಿನವರು ಅತ್ತಿತ್ತ ತಿರುಗಾಡುತ್ತಲೇ ಇದ್ದರು. ಗೋವಧೆ ನಿರೋಧಕ ಪಹಿಗಳನ್ನು ಹಂಚಕೂಡದೆಂತಲೂ, ನಿತ್ಯಾನಂದ ಸ್ವಾಮಿಯವರು ಈ ವಿಷಯವಾದ ಭಾಷಣ ಕೊಡಕೂಡದೆಂತಲೂ, ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು ಅಜ್ಞಾಪಿಸಿದರು.

ತಾರೀಕು ೧೦:—ಈ ದಿನ ಬೆಳಿಗ್ಯೆ ಗದ್ದಲವು ತುಸ ತಮ್ಮಣೆಯಾಗಿ ಕೆಲವು ಮಾರ್ವಾರಿಗಳ ಅಂಗಡಿಗಳು ತೆರೆಯಲ್ಪಟ್ಟರೂ ಸಾಯಂಕಾಲ ಗೊಂದಲವು ವಿಪರೀತವಾಯಿತು. ಬಾರಾ ಬಜಾರಿನಲ್ಲಿ ಕೆಲ ಮಂದಿ ಮಾರ್ವಾರಿಗಳಿಗೂ, ಪಟಾಣರಿಗೂ ಜಗಳ ಎದ್ದು ಮಾರ್ವಾರಿಗಳು ಕಲ್ಲಿನ ರಾಶಿಯನ್ನು ತಮ್ಮ ಮಾಳಿಗೆಗಳಿಂದ ಮಳೆಯಂತೆ ಸುರಿಯ ಹತ್ತಿದರು. ಬಹು ಮಂದಿ ಪಟಾಣರು ಇದರಿಂದ ಘಾಯಗಳನ್ನು ಪಟ್ಟರು. ಈ ವಾರ್ತೆಯು ಪಟ್ಣದಲ್ಲಿ ಹಬ್ಬಿದ್ದರಿಂದ ಸುಮಾರು ೧೦೦ ಮಂದಿ ಪಟಾಣರು ದೊಣ್ಣೆಗಳನ್ನು ಹಿಡಕೊಂಡವರಾಗಿ ಆ ಸ್ಥಳಕ್ಕೆ ಬಂದು ಅಷ್ಟ ದಿಕ್ಕುಗಳಿಂದಲೂ ಬೀಳುವ ಕಲ್ಮಳೆಯಂತಿರುವ ಇಟ್ಟಿಗೆ ತುಂಡುಗಳ ಪೆಟ್ಟನ್ನು ತಡೆಯಲಾರದೆ ಹಿಂದುಗಳಿಗೆ ಬೈಯಲೂ, ಸಿಕ್ಕಿದವರಿಗೆ ಹೊಡೆಯಲೂ ಪ್ರಾರಂಭಿಸಿದರು. ಸ್ಥಳೀಕ ಪೋಲೀಸಿನವರಿಂದ ಈ ಗೊಂದಲವನ್ನು ನಿಲ್ಲಿಸಕೂಡದ್ದರಿಂದ ಇನ್ಸ್‌ಪೆಕ್ಟರ್ ಫೆರೋದ್ದೀನರು ಸೆಂಟ್ರಲ್ ಸ್ಟೇಶನಿದಿಂದ ಸಹಾಯಕ್ಕೆ ಯೂರೋಪಿಯಾನ್ ಮತ್ತು ದೇಶೀಯ ಪೋಲೀಸಿನವರನ್ನು ಕೂಡ್ಲೇ ಕರಿಸಿಕೊಂಡರು. ಅಷ್ಟರಲ್ಲಿ ನಾಲ್ಕು ಪಟಾಣರು ಅಪಾಯಕರವಾದ ಘಾಯಗಳನ್ನು ಪಡೆದಿದ್ದರಲ್ಲದೆ ಅನೇಕ ಮುಸಲ್ಮಾನರೂ ಹಿಂದುಗಳೂ ಘಾಯ ಹೊಂದಿದ್ದರು. ಈ ಮಧ್ಯೆ ಸೂರ್ಯಾಸ್ತಮಾನವಾದ್ದರಿಂದ ಮಹಮದ್ದೀಯರು ಹಿಂದುಗಳಿಗೆ ಮುಯ್ಯಿಗೆ ಮುಯ್ಯಿ ತೀರಿಸುವ ಗಳಿಗೆ ಇದೇ ಎಂದರಿತು ಟ್ರೇಮ್ ಬಂಡಿಗಳಲ್ಲಿ ಹೋಗುವ ಹಿಂದುಗಳ ಮೇಲೆ ಬಿದ್ದು ಹಿಂಸೆ ಪಡಿಸಿದರು. ಕತ್ತಲೆ ಕವಿದಿದ್ದದ್ದರಿಂದ ಪೋಲೀಸಿನವರು ಅತ್ತಿತ್ತ ಓಡಬೇಕಾಯಿತಲ್ಲದೆ ದಂಗೆಗಾರರಲ್ಲಿ ಯಾರನ್ನೂ ಹಿಡಿಯಲು ಸಾಧ್ಯವಾಗಲಿಲ್ಲ.

ಬಾರಾ ಬಜಾರಿನಲ್ಲಿ ಆದ ಗೊಂದಲದಲ್ಲಿ ಸುಮಾರು ೧೦೦ ಮಂದಿಯು ಘಾಯಪಟ್ಟರು. ಇದಾಗಿ ಸ್ವಲ್ಪ ಸಮಯದ ನಂತರ ಲೆಪ್ಟನೆಂಟ್ ಗವರ್ನರರು ಆ ಸ್ಥಳಕ್ಕೆ ಚಿತ್ತೈಸಿ ಮಾರ್ವಾರಿಗಳ ಕೂಡಾ ಮಾತಾಡಿ, ಅಂಗಡಿಗಳನ್ನು ತೆರೆಯಬೇಕೆಂದು ಹೇಳಿದಲ್ಲದೆ ಮಾರ್ವಾರಿಗಳ ಸಂಕಷ್ಟವನ್ನು ಚಿತ್ತಕ್ಕೆ ತಂದುಕೊಳ್ಳುವೆನೆಂದು ಅಪ್ಪಣೆವಿತ್ತರು. ಆದರೆ ಗೋವಧೆಯ ವಿಷಯ ಲೆಪ್ಟನೆಂಟ್ ಗವರ್ನರರು ಮಾರ್ವಾರಿಗಳಿಗೆ ಗುಣವಾಗಿ ತೀರಿಸಿದರು ಎಂಬ ಸುಳ್ಳು ವಾರ್ತೆಯು ಹಬ್ಬಿದ್ದರಿಂದ ಕಾಬೂಲಿಗಳು ಬಹೂ ಶಿಟ್ಟುಗೊಂಡವರಾಗಿ ಸಿಕ್ಕಿಸಿಕ್ಕಿದ ಮಾರ್ವಾರಿಗಳನ್ನು ದೊಣ್ಣೆಗಳಿಂದ ಬಡೆಯಹತ್ತಿದರು. ಮಾರ್ವಾರಿಗಳು ಬೇರೆ ಜನರ ಪೇಟೆಗಳಲ್ಲಿ ನುಗ್ಗಿ ಅಡಗಿಕೊಳ್ಳಬೇಕಾಯಿತು. ಕಾಬೂಲಿಗಳು ದೊಣ್ಣೆಗಳಿಂದ ಮಾರ್ವಾರಿಗಳ ಅಂಗಡಿ ಬಾಗಲುಗಳನ್ನು ಹೊಡದು ಲೂಟಿ ಮಾಡಿದಲ್ಲದೆ ಅಂಗಡಿ ಮಾಲೀಕರ ತಲೆಗಳನ್ನು ಬಡೆದುಬಿಟ್ಟರು. ಪೋಲೀಸಿನವರು ಈ ಸ್ಥಳಕ್ಕೆ ಬರುವದರೊಳಗೆ ಕಾಬೂಲಿಗಳು ಎರಡು ಪೇಶ್ವಾರಿಗಳ ಅಂಗಡಿಗಳನ್ನೂ ಬಡದು, ಅದರ ಮಾಲಿಕರನ್ನು ಕೊಂದುಬಿಟ್ಟಿದ್ದರು. ಈ ದಿನ ೮ ಟ್ರಾಮು ಬಂಡಿಗಳನ್ನು ಮುಸಲ್ಮಾನರು ಹಾಳುಮಾಡಿದರು. ಸುಮಾರು ೧೦೦ಕ್ಕಿಂತ ಹೆಚ್ಚು ಜನರು ಗಾಯಪಟ್ಟರು. ಕೆಲವರು ಆಸ್ಪತ್ರಿಯಲ್ಲಿರುವರು. ಪೋಲೀಸಿನವರಿಂದ ಯಾರನ್ನೂ ಕೈದು ಮಾಡಲಿಕ್ಕಾಗಲಿಲ್ಲ.

ಇದಲ್ಲದೆ ಈ ದಿನ ೧೦ ಜನರು ಮರಣಪಟ್ಟರೆಂದೂ ಒಬ್ಬ ಮುಸಲ್ಮಾನನು ಟ್ರೇಮ್ ಹತ್ತಿ ಒಬ್ಬ ಹಿಂದು ಗೃಹಸ್ಥನನ್ನು ಚೂರುಚೂರಾಗಿ ಕಡಿದು ಬಿಟ್ಟನೆಂದೂ ಎಂಪಯರ್ ಎಂಬ ಪತ್ರಿಕೆಯಿಂದ ತಿಳಿದುಬರುತ್ತದೆ.

ತಾರೀಕು ೧೧:—ಬಾರಾ ಬಜಾರಿನಲ್ಲಿ ಉಂಟಾದ ಗೊಂದಲವು ಹ್ಯಾಗೂ ಆಯುಧಪಾಣಿಗಳಾದ ಪೋಲೀಸಿನವರ ಸಹಾಯದಿಂದ ಸದ್ಯಾ ನಿಂತಿತು. ಆದರೆ ನಿನ್ನೆಯ ಗೊಂದಲದಲ್ಲಿ ಗಾಯಪಟ್ಟವರೆಷ್ಟು ಮಂದಿ ಎಂದು ಹೇಳುವದು ಅಸಾಧ್ಯ. ಆಸ್ಪತ್ರಿಗೆ ವೈದವರಲ್ಲಿ ಒಬ್ಬನು ಸತ್ತಿರುವನು. ೩೦, ೪೦ ಮಂದಿಯು ಆಸ್ಪತ್ರಿಗಳಲ್ಲಿ ಶೈತ್ಯೋಪಚಾರ ಹೊಂದುತ್ತಿರುವರು. ಇನ್ನು ಲೆಕ್ಕವಿಲ್ಲದಷ್ಟು ಜನರು ರಕ್ತ ಸುರಿಸುತ್ತಲಿದ್ದು ತಮ್ಮತಮ್ಮ ಮನೆಗಳಲ್ಲಿಯೇ ಬಿದ್ದುಕೊಂಡಿರುವರು. ಮೆಡಿಕಲ್ ಕೊಲೇಜಿನಲ್ಲಿ ಶೈತ್ಯೋಪಚಾರ ಹೊಂದುತ್ತಿರುವವರು ಹೆಚ್ಚು ಕಡಿಮೆ ಪಟಾಣರೇ ಆಗಿರುವರು. ಮಾರ್ವಾರಿಗಳು ೧೦ ದಿವಸಗಳ ತನಕ ತಮ್ಮ ಅಂಗಡಿಗಳನ್ನೂ ಮನೆಗಳನ್ನೂ ಮುಚ್ಚಬೇಕೆಂದು ಮೇಲಾಫೀಸರರು ಹುಕುಂ ಕೊಟ್ಟಿರುವರಂತೆ.

ತಾರೀಕು ೧೨:—ಹಿಂದು ಮತ್ತು ಮಹಮ್ಮದೀ ಪ್ರಮುಖರು ಮುರ್ಶಿದಾಬಾದ್ ನವಾಬರಲ್ಲಿ ಕೂಡಿಬಂದು, ಗೋವಧೆಯ ವಿಷಯ ಚರ್ಚಿಸಿ, ಈ ಸಾರಿ ಬಕ್ರೀದ್ ಹಬ್ಬದಲ್ಲಿ ಮುಸಲ್ಮಾನರು ಗೋಹತ್ಯ ಮಾಡಬಹುದೆಂಬದಾಗಿ ಹಿಂದುಗಳು ಒಪ್ಪಿಗೆ ಕೊಟ್ಟದಲ್ಲದೆ ಇನ್ನುಮುಂದಕ್ಕೆ ಈ ಸಂಬಂಧದಲ್ಲಿ ಇಂಥಾ ಕಲಹಗಳು ಆಗದಹಾಗೆ ಕೂಟಗಳನ್ನು ನಡಿಸಿ ಸರಿಪಡಿಸಿಕೊಳ್ಳಬೇಕೆಂಬದಾಗಿ ಈ ಸಭೆಯಲ್ಲಿ ತೀರ್ಮಾನವಾಯಿತು.

ಬಾರಾ ಬಜಾರಿನಲ್ಲಿ ದಂಗೆಯು ನಿಂತಿತ್ತಾದರೂ ಅಂಗಡಿಗಳು ಅಲ್ಲಲ್ಲಿ ಲೂಟಿ ಆಗುತ್ತಲಿವೆ. ಈ ಸಂಬಂಧವಾಗಿ ೩ ಮಾರ್ವಾರಿಗಳನ್ನೂ ೪ ಕಾಬೂಲಿಗಳನ್ನೂ ಕೈದು ಮಾಡಿರುವರು. ಮೆಡೀಕಲ್ ಕೊಲೇಜಿನಲ್ಲಿ ಈಗ ೫೪ ಮಂದಿ ಶೈತ್ಯೋಪಚಾರ ಹೊಂದುತ್ತಿರುವರೆಂದೂ ಇದು ತಿರಿಗಿ ಹೊಸತಾಗಿ ಘಾಯಪಟ್ಟ ೧೧ ಜನರು ಬಂದು ಶೇರಿರುವರೆಂದೂ ತಿಳಿದುಬರುತ್ತದೆ. ತಲೆ ಇಲ್ಲದ, ಮುಂಡ ಇಲ್ಲದ ಮಾರ್ವಾರಿ ಮತ್ತು ಮುಹಮ್ಮದೀಯರ ಹೆಣಗಳು ಹೆರಿಸನ್ ರೋಡ್ ಮುಂತಾದ ಸ್ಥಳಗಳಲ್ಲಿ ಕಾಣ ಸಿಕ್ಕುತ್ತವೆ. ಲೆಪ್ಟನೆಂಟ್ ಗವರ್ನರ್ ಮೊದಲಾದ ಆಫೀಸರರು ಆ ಸ್ಥಳಗಳಲ್ಲಿಯೇ ಇರುವರು.

ತಾರೀಕು ೧೩:—ಬಾರಾ ಬಜಾರಿನಲ್ಲಿಯ ಗೊಂದಲವೆಲ್ಲಾ ನಿಂತಿದೆ. ಲೆಪ್ಟನೆಂಟ್ ಗವರ್ನರರು ದೊಂಬಿಯಾದ ಸ್ಥಳಗಳನ್ನು ಸಂದರ್ಶಿಸಿ, ಅಂಗಡಿಗಳನ್ನು ತೆರೆಯಬೇಕೆಂದು ಸಾಹುಕಾರರಿಗೆ ಅಪ್ಪಣೆವಿತ್ತರು. ಕೊಂಚ ಅಂಗಡಿಗಳು ಮಾತ್ರವೇ ತೆರೆಯಲ್ಪಟ್ಟವು. ಹೆರಿಸನ್ ರೋಡ್ ಮುಂತಾದ ಸ್ಥಳಗಳಲ್ಲಿರುವ ಅಂಗಡಿಗಳನ್ನು ತೆರೆಯಿಸುವ ಹಾಗೆ ಗವರ್ನರರು ಪೋಲೀಸಿನವರಿಗೆ ಹುಕುಂ ಕೊಟ್ಟದ್ದರಿಂದ ಅಲ್ಲಿಯೂ ಅಂಗಡಿಗಳು ತೆರೆಯಲ್ಪಟ್ಟವು. ವ್ಯಾಪಾರವು ಸರಾಗವಾಗಿ ನಡೆಯುತ್ತಲಿದೆ.

ಇಂದು ಮಧ್ಯಾಹ್ನದ ಮೇಲೆ ಪೋಲೀಸಿನವರು ೮ ಜನ ಹಿಂದೂ ಗೃಹಸ್ಥರನ್ನು ದಂಗೆಗಾರರು ಎಂಬ ತಕ್ಸೀರಿನ ಮೇಲೆ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಮುಂದೆ, ಹಾಜರ್ ಪಡಿಸಿರುವರು. ಇವರಲ್ಲಿ ಪ್ರತಿ ಒಬ್ಬನಿಗೆ ೫೦೦ ರುಪಾಯಿ ಜಾಮೀನಿನ ಮೇಲೆ ಬಿಟ್ಟು ನಂಬ್ರವನ್ನು ತಾರೀಕು ೨೦-೩ಕ್ಕೆ ಬಾಕಿ ಇಟ್ಟದೆ.

ತಾರೀಕು ೧೩ರಲ್ಲು ಏನೊಂದೂ ಉಪದ್ರವಿಲ್ಲದೆ ಬಕ್ರೀದ್ ಹಬ್ಬವು ಕಲ್ಕತ್ತೆಯಲ್ಲಿ ಆಚರಿಸಲ್ಪಟ್ಟಿತು. ಐದು ದನಗಳು ಈ ಸಂಬಂಧವಾಗಿ ಮುಹಮ್ಮದೀಯರಿಂದ ಅರ್ಪಿಸಲ್ಪಟ್ಟವು. ಮುಸಲ್ಮಾನರ ಮಶೀದಿಗಳಲ್ಲಿ ಅವರ ಭಜನೆಯು ತೀರುವ ತನಕ ಪೋಲೀಸಿನವರೂ ಆಫೀಸರರೂ ಅಲ್ಲಲ್ಲಿ ರೋಂದು ಮಾಡುತ್ತಾ ಇದ್ದರು. ಆದರೆ ಯಾವ ತೊಂದರೆಯೂ ಇಲ್ಲದೆ ಹಬ್ಬವು ಆಚರಿಸಲ್ಪಟ್ಟಿತ್ತಲ್ಲದೆ ಹಬ್ಬ ತೀರಿದನಂತರವೂ ಯಾವ ತರದ ಗೊಂದಲವೂ ಇರಲಿಲ್ಲ.

ಕಲ್ಕತ್ತ ಹೈ ಕೋರ್ಟಿನ ಜಡ್ಜರಾದ ಮಿ. ಲಾಲ್ ಮೊಹನ್‌ದಾಸ್ ಎಂಬವರು ಪೆನ್ಶನು ಪಡದಿರುವ ಕಾರಣ ಇವರ ಬದಲಿಗೆ ಮಿ. ನಲನಿ ರಂಜನ್ ಚಟರ್ಜಿ ಎಂಬವರನ್ನು ಹೈ ಕೋರ್ಟಿನ ಜಡ್ಜರನ್ನಾಗಿ ನೇಮಿಸಿರುವರು.

ಮಕ್ಕಳ ಮರಣವು ಹೆಚ್ಚಾಗುವರೆ ಕಾರಣ ಯಾವದೆಂಬದನ್ನು ಕಂಡುಹಿಡಿದು ಮಕ್ಕಳ ಮರಣಗಳು ಕಡಿಮೆಯಾಗುವಂತೆ ಯಾವ ಏರ್ಪಾಡುಗಳನ್ನು ಮಾಡಬೇಕೆಂಬ ವಿಷಯವನ್ನು ಚರ್ಚಿಸುವಕೆ ಒಂದು ಸಭೆಯು ಬರುವ ಸಪ್ಟಂಬರ ತಿಂಗಳಲ್ಲಿ ಬರ್ಲಿನ್ ನಗರದಲ್ಲಿ ಕೂಡುವುದು ಎಂಬದಾಗಿ ಇಂಡಿಯಾ ಗಜೀಟಿನಲ್ಲಿ ಪ್ರಕಟಿಸಲ್ಪಟ್ಟಿರುವುದು.

ದಕ್ಷಿಣ ಹಿಂದುಸ್ಥಾನ.

ಬೆಂಗಳೂರಲ್ಲಿ ಜೇಮ್ಸ್ ಡೇಲ್ ಎಂಬ ಕಂಪೆನಿಯ ಏಲಂ ರೂಮು ತಾರೀಕು ೯ರಲ್ಲು ಸುಮಾರು ೧೦ ಗಂಟೆ ರಾತ್ರಿಗೆ ಸುಟ್ಟುಹೋಯಿತು. ಕೋಣೆ ತುಂಬಾ ಇದ್ದಂಥಾ ಕ್ರಿಸ್ತ್‌ಮಸ್ ಸಾಮಾನುಗಳೆಲ್ಲಾ ಬೆಂಕಿಯ ಪಾಲಾದವು. ಸುತ್ತಮುತ್ತಲಿನ ಜನರು ಪಟ್ಟಂಥಾ ಪ್ರಯತ್ನಗಳೆಲ್ಲಾ ನಿಷ್ಫಲವಾಯಿತು. ಒಟ್ಟಾರೆ ಈ ದಿನ ಕಂಪೆನಿಗೆ ಸುಮಾರು ೨೦,೦೦೦ ರುಪಾಯಿಯ ಮಾಲು ನಷ್ಟವಾಯಿತು. ಸಿಗರೆಟ್ ಸೇದಿ ನೊಂದಿಸದೆ ಕ್ರಿಸ್ತ್‌ಮಸ್ ಆಟದ ಸಾಮಾನುಗಳ ಮಧ್ಯೆ ಹಾಕಿದ್ದೇ ಈ ಬೆಂಕಿಗೆ ಕಾರಣ ಎಂಬದಾಗಿ ಕೆಲವರು ಊಹಿಸುತ್ತಾರೆ.

ಬೆಂಗಳೂರಲ್ಲಿ ಸಿಟಿ ಪೋಲೀಸಿನವರು ಕೆಲವು ದಿವಸಗಳ ಹಿಂದೆ ಮೈದೀನ್ ಹಾಜಿ ಎಂಬ ಮಾಪಿಳ್ಳೆಯನ್ನು

ಕಳ್ಳನೆಂಬ ಅನುಮಾನದ ಮೇಲೆ ಹಿಡಿದಿರುವರು. ಅವನ ಕೈಯಲ್ಲಿ ರಿವೋಲ್ವರಿನ ೧೦೦ ಕಾಟ್ರಿಜಿಗಳು ಇತ್ತು ಮಾತ್ರವಲ್ಲದೆ ಐದು ಪವನುಗಳೂ ೧೦ ರೂಪಾಯಿಗಳೂ ಇದ್ದವು. ಆದರೆ ರಿವೋಲ್ವರಿಗೆ ಲೈಸನ್ಸ್ ಮಾತ್ರ ಇರಲಿಲ್ಲ. ಇವನು ರಮಾಂಡಿನಲ್ಲಿರುವಾಗ ಯಾವ ಸಾಹಿತ್ಯವೂ ಇಲ್ಲದೆ ಪೋಲೀಸ್ ಸ್ಟೇಶನಿನ ಗೋಡೆಯ ಇಟ್ಟಿಗೆಯನ್ನು ಜಾರಿಸಿ, ತಪ್ಪಿಸ ಪ್ರಯತ್ನ ಮಾಡಿದನು. ಈ ತಪ್ಪಿಗಾಗಿ ೮ರಲ್ಲು ಸಿಟಿ ಮೆಜಿಸ್ಟ್ರೇಟರವರು ಈತನಿಗೆ ೩ ತಿಂಗಳ ಕಠಿಣ ಕಾರಾಗೃಹವನ್ನೂ ೨೦ ರುಪೈ ಜುಲುಮಾನೆಯನ್ನೂ ವಿಧಿಸಿದಲ್ಲದೆ, ಲೈಸೆನ್ಸ್ ವಿನಹಾ ರಿವೋಲ್ವರನ್ನು ಉಪಯೋಗಿಸಿದಕ್ಕಾಗಿ ಮೂರು ತಿಂಗಳ ಸಾಧಾರಣ ಸಜೆಯನ್ನೂ ೨೦ ರುಪೈ ಜುಲುಮಾನೆಯನ್ನೂ ವಿಧಿಸಿದರು. ಎರಡು ಪಕ್ಷದಲ್ಲಿಯೂ ಜುಲುಮಾನೆ ಕೊಡ ತಪ್ಪಿದ ಪಕ್ಷಕ್ಕೆ ಎರಡೆರಡು ತಿಂಗಳ ಹೆಚ್ಚಿನ ಕಾರಾಗೃಹವನ್ನು ಅನುಭವಿಸತಕ್ಕದೆಂದು ಮೆಜಿಸ್ಟ್ರೇಟರವರು ತೀರ್ಮಾನಿಸಿದರು. ಮೈದೀನ್ ಹಾಜಿ ಎಂಬವನಂತಿರುವ ಕೈದಿಯು ಮಲೆಬಾರಿನಿಂದ ಕಾಣೆಯಾಗಿರುವನೆಂತ ಅಂದೇ ತಲಚೇರಿ ಮೆಜಿಸ್ಟ್ರೇಟರಿಂದ ತಂತೀ ಬಂದಿರುವುದು. ಈತನನ್ನು ಹಿಡಿದವರಿಗೆ ಮದ್ರಾಸು ಗವರ್ನಮೆಂಟಿನವರು ರೂ. ೫೦೦ ಇನಾಮು ಕೊಡುವರು.

ಜರ್ಮನ್ ಯುವರಾಜರವರು ತಾರೀಕು ೧೭ರಲ್ಲು ಹೈದರಾಬಾದಿಗೆ ಚಿತ್ತೈಸಿ ಫಾಲಕ್‌ನಾಮ ಎಂಬ ಅರಮನೆಯಲ್ಲಿ ಉಳಕೊಳ್ಳುವರು. ತಾರೀಕು ೧೮ರಲ್ಲು ನೈಜಾಮ್ ಮಹಾರಾಜರವರು ಇವರಿಗೆ ಬೇಟಿ ಕೊಡುವರು. ಅಂದೇ ಬೆಳಿಗ್ಯೆ ಚಿರತೆ ಮತು ಕಪ್ಪು ಮೊಲದ ಬೇಟೆಯನ್ನಾಡಿ ಸಾಯಂಕಾಲ ಗೋಲ್ಕೊಂಡ ಮತ್ತು ಮಿರ್ ಆಲಮ್ ಎಂಬೀ ಸ್ಥಳಗಳನ್ನು ಸಂದರ್ಶಿಸುವರು. ತಾರೀಕು ೧೯ರಲ್ಲು ಹುಲಿಯ ಬೇಟೆಯು ಇರುವದಲ್ಲದೆ ಹೈದರಾಬಾದಿನ ಮೈದಾನಿನಲ್ಲಿ ಆಟವೂ ಆಗುವದು. ೨೦ನೇ ಸಾಯಂಕಾಲ ನೈಜಾಮರವರು ಇವರನ್ನು ಊಟಕ್ಕೆ ಆಮಂತ್ರಿಸುವರು: ೨೧ನೇ ತಾರೀಕು ಬೆಳಿಗ್ಯೆ ಜರ್ಮನ್ ಯುವರಾಜರು ಹೈದರಾಬಾದನ್ನು ಬಿಟ್ಟು ತೆರಳುವರು.

ಮದ್ರಾಸ್ ಗವರ್ನರರಾದ ಸರ್ ಆರ್ಥರ್ ಲೋಲಿಯವರು ತಾರೀಕು ೫ರಲ್ಲು ಪ್ಲೇಗು ಬಾಧೆ ತಗಲಿರುವ ಸೇಲಂ ಪಟ್ಟಣಕ್ಕೆ ಚಿತ್ತೈಸಿದ್ದರು. ಇವರ ಬರೋಣವು ಬಹು ಗುಪ್ತತರವಾಗಿದ್ದದರಿಂದ ಊರ ಜನರೆಲ್ಲರೂ ಪ್ರಥಮತಃ ಇವರು ಸರ್ಜನ್ ಜನರಲ್, ಸರಕಾರ ಕಡೆಯ ಸೆಕ್ರಟರಿ, ಇಲ್ಲವೆ ಪ್ಲೇಗ ಕಮಿಶನರ್ ಎಂಬದಾಗಿ ಭಾವಿಸಿದರು. ಗವರ್ನರರು ಪ್ಲೇಗ ಆಸ್ಪತ್ರಿಗೆ ಚಿತ್ತೈಸಿ ಅಲ್ಲಿಯ ರೋಗಿಗಳ ಆರೈಕೆ ಕ್ರಮಗಳ ವಿಶಯ ವಿಚಾರ ನಡಿಸಿ ಮದ್ರಾಸಿಗೆ ತೆರಳಿದರು.

ದಿವಾಳಿಯಾದ ಮೆಸ್ಸರ್ಸ್ ಅರ್ಬಟ್‌ನೋಟ್ ಕಂಪೆನಿಯ ಸಾಲಿಗರಿಗೆ ರೂಪಾಯಿಯಲ್ಲಿ 5 ಪೈಯಂತೆ ಕೊಡಬಹುದೆಂಬದಾಗಿಯೂ ಈ ಮೂರನೇ ಸರ್ತಿ ಕೊಡೋಣಾಗುವ ಹಣವನ್ನು ಕ್ರಿಸ್ಟ್‌ಮಸ್ ಹಬ್ಬದ ಒಳಗೆ ಲೆಕ್ಕಿಸಿ, ಜನವರಿ ಆರಂಭದಲ್ಲಿ ಹಂಚಲಾದೀತೆಂಬದಾಗಿಯೂ ಇಂಗ್ಲಾಂಡಿನ ಮೊಕ್ತೇಸರರಿಂದ ಆಫಿಸಲ್ ಎಸೈನಿಯವರಿಗೆ ತಂತೀ ಬಂದಿರುವದು.

ಬಹುಮಾನಪಟ್ಟ ಮಿ. ಎಮ್. ಹಮ್ಮಿಕರವರು ಕಳೆದ ಆದಿತ್ಯವಾರ ಸಾಯಂಕಾಲ ಮೋಟರ್ ಬಂಡಿಯಲ್ಲಿ ಸವಾರಿ ಮಾಡುತ್ತಿರುವಾಗ ಅಕಸ್ಮತ್ತಾಗಿ ಮೋಟರ್ ಬಂಡಿಯಿಂದ ಹಿಂದಕ್ಕೆ ಬಿದ್ದು ಅವರ ಮಣಿಗಂಟಿಗೆ ಚೆನ್ನಾಗಿ ಪೆಟ್ಟಾಗಿರುವುದಲ್ಲದೆ ಎರಡು ಕಡೆಯಲ್ಲಿ ಮುರಿದಿರುವುದು.

ಮೈಸೂರು ರೆಸಿಡಂಟರಾದ ಬಹುಮಾನಪಟ್ಟ ಹ್ಯೂಡಾಲೆಯವರು ವೈಸರಾಯರಿಗೆ ಬೇಟಿ ಕೊಡುವ ಬಗ್ಯೆ ಕಳೆದ ಆದಿತ್ಯವಾರ ರಾತ್ರಿ ಕಲ್ಕತ್ತೆಗೆ ತೆರಳಿರುವರು.

ತಾರೀಕು ೧೩ರಲ್ಲು ರಂಗೂನಿನಲ್ಲಿಯೂ ಅದರ ಪ್ರಾಂತ್ಯಗಳಲ್ಲಿಯೂ ಬಕ್ರೀದ್ ಹಬ್ಬವು ಏನೊಂದೂ ರಗಳೆ ಇಲ್ಲದೆ ಆಚರಿಸಲ್ಪಟ್ಟಿತು. ಆದರೆ ಸಿರಿಯಾ ಎಂಬ ಹಳ್ಳಿಯಲ್ಲಿ ಬೆಳಿಗ್ಯೆ ೯ ಗಂಟೆಗೆ ಹಿಂದುಗಳಿಗೂ ಮಹಮ್ಮದೀಯರಿಗೂ ಜಟಾಪಟಿಯಾಗಿ ಹಿಂದುಗಳು ದೊಡ್ಡ ಗುಂಪು ಕೂಡಿಕೊಂಡು ಮುಹಮ್ಮದೀಯರನ್ನೂ ಅವರ ಪೇಟೆಗಳನ್ನೂ ನಾಶ ಮಾಡ ತೊಡಗಿದರು. ಪೋಲೀಸ್ ಸುಪರಿಂಟೆಂಡೆಂಟ್ ಪೋಲೀಸ್ ಸಹಾಯ ಸಮೇತ ಅಲ್ಲಿಗೆ ಹೋಗಿ ಆ ದೊಡ್ಡ ಗುಂಪನ್ನು ಚದರಿಸ ನೋಡಿದರು. ಆದರೆ ಹಿಂದುಗಳು ಕಲ್ಲುಗಳಿಂದಲೂ ಕೋಲುಗಳಿಂದಲೂ ಸಿಕ್ಕಿಸಿಕ್ಕಿದವರಿಗೆ ಕೊಡಹತ್ತಿದರು. ಒಂದು ಕಲ್ಲು ಅಸಿಸ್ಟಾಂತ ಸುಪರಿಂಟೆಂಡೆಂಟರಾದ ಮಿ. ಶೋಮ್ಸನರವರ ಮೊಣಗಂಟಿಗೆ ಬಿದ್ದದರಿಂದ ಇವರು ಗಾಯಪಟ್ಟರು. ಪೋಲೀಸಿನವರ ಮಾತನ್ನು ದಂಗೆಗಾರರು ತಿರಸ್ಕರಿಸಿಬಿಟ್ಟದ್ದರಿಂದ ಕಡೇಗೆ ಪೋಲೀಸಿನವರು ಕೋವಿಗಳನ್ನು ಹಾರಿಸಿ ೩ ಮಂದಿಯನ್ನು ಕೊಂದರು. ಕೆಲವರನ್ನು ಗಾಯಪಡಿಸಿದರು. ಇದಾದಮೇಲೆ ದಂಗೆಗಾರರ ಗುಂಪು ಅಲ್ಲಲ್ಲಿ ಮೆಲ್ಲನೆ ಚದರಿಬಿಟ್ಟಿತು. ನಂತರ ಗೊಂದಲವೇನೂ ನಡೆಯಲಿಲ್ಲ.

ದಕ್ಷಿಣ ಕನ್ನಡ.

ನೋಟೀಸು.

ಈ ಕೆಳಗೆ ದಸ್ಕತು ಮಾಡಿರುವವರು ತಿಳಿಯ ಪಡಿಸುವದೇನಂದರೆ:—

ರೂಪಾಯಿ ೧೦. ಮೌಲ್ಯದ ಮದ್ರಾಸ ಕರೆನ್ಸ ನೋಟಿನ ನಂಬ್ರ $\frac{B.\ B}{85}$ 01722ನೇ ಇನ್ನೊಂದು ತುಂಡು ಗೈರವಿಲೆಯಾಗಿ ಆದರ ಬದಲಾಗಿ ಅಷ್ಟೆ ಮೌಲ್ಯದ ನಂಬ್ರ $\frac{B\ B}{79}$ 25772ನೇ ತುಂಡು ನನಗೆ ಸಿಕ್ಕಿರುತ್ತದೆ. ಸದರಿ ನಂಬ್ರದ ಇನ್ನೊಂದು ತುಂಡು ಶಿಕ್ಕಿದವರು ಅದನ್ನು ನನಗೆ ಕಳುಹಿಸಿದ್ದಲ್ಲಿ ಅವರ ನಂಬ್ರದ ತುಂಡನ್ನು ಕಳುಹಿಸಿ ಕೊಡಲಾದೀತು.

ಯನ್. ತಿರ್ಮಲ್ ರಾವ್,

ಮಂಗಳೂರು.

ಕೊಡಿಯಾಲಬೈಲ್ ಹಕೀಮ್ ಸೇಕ ಅಬ್ದುಲ್ಲಾ ಸಾಹೇಬರ ಪ್ರಕಟಣೆ.

ಈ ವರ್ಷ ಮಂಗಳೂರು ಮುನಿಸಿಪಾಲಿಟಿಯೊಳಗೆ ಸನ್ನಿಪಾತ ಜ್ವರದಿಂದ ಸುಮಾರು ೪೨ ರೋಗಿಗಳನ್ನು ಗುಣಪಡಿಸಿರುವೆನು. ಮಕ್ಕಳ ಚಿಕಿತ್ಸೆಯು ಚನ್ನಾಗಿ ಗೊತ್ತಿರುವುದು. ಎಲ್ಲಾ ತರದ ರೋಗಗಳನ್ನು ಊರ ಮದ್ದಿನಿಂದಲೇ ಬಹಳ ಬಹಳ ಶುಲಭವಾದ ಚಿಕಿತ್ಸೆಪ್ರಯೋಗದಿಂದ ಗುಣಪಡಿಸಿರುತ್ತದೆ. ಪರೀಕ್ಷಿಸಿದ್ದಲ್ಲಿ ಸಮಾಧಾನವಾದೀತು.

ತೃತೀಯ ಗೌಡ ಸಾರಸ್ವತ ಬ್ರಾಹ್ಮಣ ಪರಿಷದ.

ಮಡ್ಗಾಂನಲ್ಲಿ ಕೂಡುವ ಈ ಪರಿಷದಕ್ಕೆ ಮಂಗಳೂರಿನಿಂದ ಕೆಲವು ಜನರು ಇದೇ ಬರುವ ತಾ. ೨೨ನೇ ಗುರುವಾರ ದಿನವೂ ಮತ್ತು ಕೆಲವರು ತಾ. ೨೬ನೇ ಸೋಮವಾರ ದಿನವೂ ಹೊರಡುವರು. ಒಳಪ್ರಾಂತ್ಯಗಳಿಂದ ಪರಿಷದಕ್ಕೆ ಹೋಗುವವರು ಈ ದಿವಸಗಳ ಬೆಳಿಗ್ಯೆಯೇ ಮಂಗಳೂರಿಗೆ ಬಂದು ತಲ್ಪಬೇಕಾಗಿರುತ್ತದೆ.

ಇಲ್ಲಿಂದ ಹ್ಯಾಕೋರ್ಟಿನ ವಕೀಲ ಮ. ರಾ. ರಾ. ಅಮ್ಮೆಂಬಳ ಶ್ರೀನಿವಾಸ ಪೈಗಳವರು ಪರಿಷದದ ಆಮಂತ್ರಣಸಭೆಯ ಕಾರ್ಯದರ್ಶಿಗಳಿಗೆ ಪರಿಷದಕ್ಕೆ ಪ್ರತಿನಿಧಿಗಳು ಪ್ರೇಕ್ಷಕರು ಅಥವಾ ಯಾತ್ರಿಕರಾಗಿ ಬರುವ ಹೆಂಗಸು ಮಕ್ಕಳಿಗೆ ಸಹಾ ಯಾವ ವಿಧದ ಅನುಕೂಲತೆಗಳು ಮಾಡಿರುವರೆಂಬುದನ್ನು ತಿಳಿಯುವರೆ ಬರದಿದ್ದರು, ಪ್ರೇಕ್ಷಕ ಪ್ರತಿನಿಧಿಗಳಿಗೂ ವ ಯಾತ್ರಸ್ಥರಾಗಿ ಬರುವವರಿಗೂ ಯಾವ ಅನನುಕೂಲತೆಗಳಾದರೂ ಉಂಟಾಗದಂತೆ ಏರ್ಪಾಡು ಮಾಡಿರುವರಾಗಿ ತಿಳಿಯುತ್ತೇವೆ. ಹಾಲು ಮೊಸರು ಮೊದಲಾದವುಗಳು ಗೋವೆ ಪ್ರಾಂತ್ಯಗಳಲ್ಲಿ ಕಡಿಮೆಯಾಗಿರುವುದರಿಂದ ಇವುಗಳ ಸರಬರಾಯಿಯು ಧಾರಾಳವಾಗಿ ಇತರ ಪ್ರಾಂತ್ಯಗಳಿಂದ ಸಿಕ್ಕುವಂತೆ ಏರ್ಪಾಡು ಮಾಡಿರುವರು. ಹೆಂಗಸರುಮಕ್ಕಳಿಗೆ ಉಳಕೊಳ್ಳಲು ಬೇಕಾದ ಮನೆಗಳು ಬೇಕಾದಷ್ಟು ಸಿದ್ಧವಾಗಿರುವವು. ಗೋವೆಯಲ್ಲಿರುವ ಸಾರಸ್ವತ ಕುಲ ದೇವಾಲಯಗಳೆಲ್ಲವುಗಳನ್ನು ಸಾವಧಾನದಿಂದ ಸಂದರ್ಶಿಸುವರೆ ಒಂದು ಹಪ್ತೆ ಸಮಯಗಿಂತ ಹೆಚ್ಚು ಸಮಯವು ಬೇಕಾಗಿಲ್ಲವೆಂಬದಾಗಿಯೂ ಸಹ ಪರಿಷದದ ಆಮಂತ್ರಣಸಭೆಯ ಕಾರ್ಯದರ್ಶಿಗಳು ತಿಳಿಸಿರುತ್ತಾರೆ. ದಕ್ಷಿಣಕನ್ನಡ ಜಿಲ್ಲೆಯಿಂದ ಬಹಳ ಮಂದಿ ಈ ಸರ್ತಿಯ ಪರಿಷದಕ್ಕೆ ಬರಬೇಕೆನ್ನುವ ಕಾಂಕ್ಷೆಯಿಂದಲೂ ಬರುವರೆನ್ನುವ ಕೋರಿಕೆಯಿಂದಲೂ ಮಡ್ಗಾಂ ಪರಿಷದದ ಆಮಂತ್ರಣ ಸಭೆಯವರು ಅತಿಥಿಗಳ ಸತ್ಕಾರದ ಬಗ್ಯೆ ಬೇಕಾದಷ್ಟು ಸೌಕರ್ಯಗಳನ್ನು ಒದಗಿಸಿಕೊಂಡಿರುವರು. ನಮ್ಮ ಜಿಲ್ಲೆಯವರು ಇವರನ್ನು ನಿರಾಶೆಗೊಳಿಸದಂತೆ ಮಡ್ಗಾಂ ಪರಿಷದಕ್ಕೆ ಬಹು ಮಂದಿ ಹೋಗಿ ಸಭಾಕಾರ್ಯಗಳನ್ನು ಅಂದದಿಂದ ನೆರವೇರಿಸಿಕೊಟ್ಟು ಸ್ವಜಾತಿ ಅಭಿವೃದ್ಧಿ ಪ್ರಯತ್ನಗಳಲ್ಲಿ ಸಹಕಾರಿಗಳಾಗಬೇಕೆಂಬದಾಗಿ ವಿಜ್ಞಾಪಿಸಲ್ಪಟ್ಟಿರುತ್ತದೆ.

ಮಂಗಳೂರು. ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೧ ಪ್ಲೇಗ ಮರಣವೂ ೧ ಸಿಡುಬು ರೋಗದ ಮರಣವೂ ಇತ್ತು. ಈ ವಾರದಲ್ಲಿ ಪ್ಲೇಗಿನ ಗಡಬಡಿಯು ಸ್ವಲ್ಪ ಇರುತ್ತದೆ. ಇಷ್ಟರ ತನಕ ೧೦ ಜನರಿಗೆ ಪ್ಲೇಗ ಬೇನೆ ತಗಲಿ ೪ ಜನರು ಮರಣಪಟ್ಟರಂತೆ.

ಕೊಡಿಯಾಲಬೈಲಿನಲ್ಲಿ ರಾ. ಮುನ್ಸಿಫ್ ಜೂಜಿಲೋಬರ ಮನೆಯ ಸಮೀಪ ಇರುವ ಪೊಲಿಸ್ ಕೊನ್ಸ್ಟೇಬಲ್ ಕಾಮಿಲ್ ಮೊರಸರ ಶುಮಾರು ೧೨ ವರ್ಷ ಪ್ರಾಯದ ಮಗಳು ಭಾವಿಯಿಂದ ನೀರು ತೆಗಿಯುವಾಗ ಮರದ ಅಡ್ಡವು ಮುರಿದು ಹುಡುಗಿಯು ಭಾವಿಗೆ ಬಿದ್ದು ಪ್ರಾಣ ಕಳಕೊಂಡಳು.

ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರವರು ಬೆಳ್ತಂಗಡಿ ಅತ್ತಕಡೆ ಸರ್ಕಿಟಿನಲ್ಲಿ ಇರುವರು. ತಾ. ೧೮ಕ್ಕೆ ಇಲ್ಲಿಗೆ ಬರುವರು.

ತಾಲೂಕು ತಹಸೀಲದಾರರವರು ಮುಲ್ಕಿ ಸರ್ಕಿಟಿನಲ್ಲಿರುವರು.

ಸರ್ಕಿಟಿನಲ್ಲಿರುವ ಡಿಸ್ಟ್ರಿಕ್ಟ ಕಲೆಕ್ಟರ ಧೊರೆಗಳವರು ತಾ. ೧೯ಕ್ಕೆ ಇಲ್ಲಿಗೆ ತಲಪುವರು.

ಮಂಗಳೂರು ಡಿವಿಜನಿನ ಬಗ್ಯೆ ಸೆನ್ಸಸ್ ಸುಪರಿಂಟೆಂಡೆಂಟರ ಆಫೀಸು ಬರುವ ತಾ. ೧೯ಕ್ಕೆ ತೆರಿಯಲ್ಪಡುವದು.

ಸೆಂಟ್ ಫ್ರಾಂಸಿಸ್ಕ ಗ್ರೇವಿಯರ್ಸ್ ಎಂಬರ ಸಮಾಧಿ ಸಂದರ್ಶನಕ್ಕೆ ಹೋದ ಇಲ್ಲಿಯ ಶುಮಾರು೫೦೦ ಜನ ರೋಮನ್ ಕೆಥೋಲಿಕರು ಸಂದರ್ಶನ ತೀರಿಸಿ ನಿನ್ನೆ ದಿವಸದ ಸ್ಪೆಶ್ಯಲ್ ಸ್ಟೀಮರಿನಲ್ಲಿ ಇಲ್ಲಿಗೆ ಬಂದು ತಲಪಿರುವರು.

ಇದೇ ಬರುವ ತಾ. ೧೮ನೇ ಆದಿತ್ಯವಾರ ಅಪರಾನ್ಹ ಘಂಟೆ ೨ಕ್ಕೆ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಬಂಟರ ಯಾನೆ ನಾಡವರ ಸಂಘದ ವರ್ಷಾವಧಿ ಸಭೆಯು ಜರಗುವದು.

ಇಲ್ಲಿಯ ವೆಬಸ್ಟರ್ ಮಾರ್ಕೆಟಿನಲ್ಲಿ ಪ್ಲೇಗಿನ ಇಲಿಗಳು ಬಿದ್ದ ಸಮ್ಮಂಧ ಮಾರ್ಕೆಟ್ ವ್ಯಾಪಾರವನ್ನು ಪೋಲಿಸು ಮೈದಾನಿಗೆ ವೈದಿರುವರು.

ಶಾಲಾ ಇನ್ಸಪೆಕ್ಟ್ರಸ್ ಮಿಸ್. ಅರ್ನೋಲ್ಡು ಎಂಬವರು ತಾರೀಕು ೧೩-೧೪ರಲ್ಲು ಇಲ್ಲಿಯ ಬಲ್ಮಠ ಬಿ. ಜಿಯಮ್. ಗರ್ಲ್ಸ್ ಟ್ರೈನಿಂಗ್ ಶಾಲಾ ಮಕ್ಕಳನ್ನು ಪರೀಕ್ಷಿಸಿದ್ದಲ್ಲದೆ ಈ ದಿನ ಅಲ್ಲಿಯೇ ಕೆಲಮಂದಿ ಉಪಾಧ್ಯಾಯಿನಿಯರಿಗೆ ಪ್ರೇಕ್ಟಿಕಲ್ ಪರೀಕ್ಷೆ ಮಾಡುತ್ತಿರುವರು.

ಭೋಳಾರ. ಇಲ್ಲಿ ಹಂಚಿನ ಕಾರ್ಖಾನೆಗಳಲ್ಲಿ ಎತ್ತು ಕೋಣಗಳನ್ನು ಗಾಣಕ್ಕೆ ಕಟ್ಟುವ ವಾಡಿಕೆ ಇರುತ್ತದಷ್ಟೆ. ಅವುಗಳನ್ನು ಕೆಲಸ ಪೂರೈಸಿದ ಮೇಲೆ ಕಾವಲಿಲ್ಲದೆ ಬೀದಿಯಲ್ಲಿ ಬಿಡುವ ಪದ್ಧತಿಯು ಹೇರಳವಾಗಿದೆ. ಈ ಕ್ರಮ ಜನಸ್ತೋಮ ಹೆಚ್ಚಿರುವಲ್ಲಿ ಅತಿ ಅಪಾಯಕರವಾಗಿರುವದಲ್ಲದೆ ಎತ್ತುಗಳ ಬರೋಣವನ್ನು ಹೆಂಗಸರು ವ ಮಕ್ಕಳು ಕಾಣುತ್ತಲೇ ದಿಗಿಲುಬಿದ್ದು ಓಡಿ ಭೀತಿಪಡುತ್ತಿರುವರು. ಆದ್ದರಿಂದ ಬೀದಿಗೆ ಎತ್ತುಗಳನ್ನು ಬಿಡುವ ಸಮಯದಲ್ಲಿ ಕಾವಲುಗಾರರು ಅಗತ್ಯವೆಂತ ಅವುಗಳ ಮಾಲಿಕರು ತಿಳಕೊಳ್ಳಲಿ.

ನವಂಬರ ತಿಂಗಳ ಸೆಶನ್ಸು ಕ್ರಿಮಿನಲ್ ಮೊಕದಮೆಗಳ ತನಖಿಯು ಜಿಲ್ಲಾ ಜಡ್ಜರುಗಳಿಂದ ತಾ. ೬ರಲ್ಲಿ ಪ್ರಾರಂಭಿಸಲ್ಪಟ್ಟಿತು. ಕಾಸರಗೋಡು ಸಬ್ ಮೆಜಿಸ್ಟ್ರೇಟರಿಂದ ಕಮಿಟು ಮಾಡಲ್ಪಟ್ಟ ಮೊಕದಮೆಯು ಪ್ರಥಮ ತನಖಿ ಮಾಡಲ್ಪಟ್ಟಿತು. ಅಪರಾಧಿಗಳು ೫ ಜನ ಮಾಪಿಳ್ಳೆಗಳಾಗಿದ್ದರು. ಒಂದನೇ ಮತ್ತು ಎರಡನೇ ಅಪರಾಧಿಗಳು ಮೈದಿನ್ ಕುಟ್ಟಿ ಎಂಬವನ ಕೂಡೆ ಜಗಳಾಡಿ ಆತನನ್ನು ಚೂರಿಯಿಂದ ತಿವಿದು ಕೊಂದರು. ೩ರಿಂದ ೫ನೇ ಅಪರಾಧಿಗಳು ಈ ಕೊಲೆಯನ್ನು ಉತ್ತೇಜಿಸಿದವರಾಗಿ ಚಾರ್ಜು ಮಾಡಲ್ಪಟ್ಟರು. ೩ನೇಯಿಂದ ೫ನೇ ವರೇಗಿನ ಕೈದಿಗಳು ಅಪರಾಧಿಗಳಲ್ಲವೆಂದೂ ೧ನೇ ಮತ್ತು ೨ನೇ ಕೈದಿಗಳು ಇಂಡಿಯನ್ ಪೆನೆಲ್ ಕೋಡಿನ ೩೦೪ನೇ ಪ್ರಕರಣಕ್ಕೊಳಗಾದ ಶಿಕ್ಷೆಗೆ ಗುರಿಯಾಗುವರೆಂದೂ ಯಸ್ಸೆಸರರು ಅಭಿಪ್ರಾಯಪಟ್ಟರು. ಆದರೆ ಜಡ್ಜರವರು ಯಸ್ಸೆಸರ ಅಭಿಪ್ರಾಯ ಪಡದ್ದರಿಂದ ೧ನೇ ೨ನೇ ಕೈದಿಗಳನ್ನು ಜೀವಾಂತ ಟಾಪು ಶಿಕ್ಷೆಗೂ ಉಳಿದವರನ್ನು ೫ ವರುಷಗಳ ಕಠಿಣ ಶಿಕ್ಷೆಗೂ ಒಳಪಡಿಸಿ ತೀರ್ಮಾನ ಕೊಟ್ಟಿರುವರು.

ಎರಡನೇ ಮೊಕದಮೆಯು ಬಹಳ ವಿಶೇಷವಾದದ್ದಾಗಿರುವುದು. ಇದರಲ್ಲಿ ಮುದ್ದೈಗಳು ಕೊಂಡೆ ಮೊನಪ್ಪ ಸೆಟ್ರಿ ಮಗ ನಾಗರಾಜ ಸೆಟ್ರುಗಳಾಗಿರುವರು. ಮೊಕದಮೆಯ ವಿಚಾರಣೆಯು ಪೂರ್ಣ ಮುಗಿಯಲಿಲ್ಲ. ಈ ಮೊಕದಮೆಯ ವಿವರವನ್ನು ಇನ್ನೊಂದು ಸಂಚಿಕೆಯಲ್ಲಿ ಪ್ರಕಟಿಸುವೆವು.

ಕ್ರಿಸ್ಟ್‌ಮಸ್ ರಜಾ ದಿನಗಳನಂತರ ಇಲ್ಲಿಗೆ ಆಕ್ಟಿಂಗ್ ಡಿಸ್ಟ್ರಿಕ್ಟು ಜಡ್ಜರಾಗಿ ಮೇ. ಎ. ಎಡಿಂಗ್‌ಟನ್ ಎಂಬವರು ನೇಮಕ ಪಡುವರಂತೆ.

ಇದೇ ಕಳದ ಹಪ್ತೆಯ ೯ನೇ ತಾರೀಕಿನಲ್ಲಿ ಬಂದ್ರದಲ್ಲಿ ಸತ್ತ ಹೊಲೆಯನ ಶವವು ಭಜನ ತಾಳ ವಗ್ಯೆರೆ ಬಾರಿಸುತ್ತಾ ಹಜೂರು ಕಚೇರಿಯಿಂದ ಮಂಗಳದೇವಿ ರಸ್ತೆಗಾಗಿ ಸ್ಮಶಾನಕ್ಕೆ ಕೊಂಡುಹೋಗುವಾಗ್ಯೆ ಮಾರ್ನಮಿಕಟ್ಟೆ ಹತ್ತರ ಹೆಣ ಕೆಳಗೆ ಬಿದ್ದು ಕಟ್ಟಿದ ಚಟ್ಟದ ಬಿದುರು ತಾಗಿ ಒಬ್ಬ ಹೊಲೆಯನ ಕಣ್ಣು ಜಖಮಾಯಿತಂತೆ.

ಕೆಲವು ದಿವಸದ ಹಿಂದೆ ಸೋಮೇಶ್ವರದಲ್ಲಿ ಅಂಗಡಿಗೆ ಹೋದ ೧೪ ವರುಷ ಪ್ರಾಯದ ಹುಡುಗಿ ರೈಲುಮಾರ್ಗವಾಗಿ ಬರುವಾಗ್ಯೆ ಪಕ್ಕನೆ ಲೋಕಾಲು ಬಂಡಿ ಬಂದದರಿಂದ ಅದರ ಅಡಿಯಲ್ಲಿ ಬಿದ್ದು ಪ್ರಾಣಗತವಾದಳು. ಅವಳ ಶವವು ೩ ಘಂಟೆ ಪರಿಯಂತ್ರ ರೈಲುಮಾರ್ಗದಲ್ಲಿ ಬಿದ್ದಿತ್ತಂತೆ.

ಪಾವಂಜೆ ಕಡವಿನ ಮುಸಾಪರಿ ಕಟ್ಟೋಣದಲ್ಲಿ ಆಗುವ ಜುಗಾರಾಟವು ಮೊನ್ನೆ ದಿನ ವಿಪರೀತವಾಗಿ ಜಟ್ಕದ ಮಳಿಯಾಳಿ ಆನರು ಒಬ್ಬ ಮಾಪಿಳೆಯವನಿಗೆ ಚನ್ನಾಗಿ ಹೊಡದು ಅವನ ಅಂಡವನ್ನು ವತ್ತಿ ಹಿಡಿದದ್ದರಿಂದ ಬೊಬ್ಬೆಯಾಯಿತು. ಈಚೆಕರೆಯಲ್ಲಿರುವ ಗುತ್ತೆದಾರನೂ ಪ್ರಯಾಣಿಕರೂ ಬಂದು ಬಿಡಸಿ ಮಾಪಿಳೆಯ ಪ್ರಾಣವನ್ನು ಉಳಿಸಿ ಅವನನ್ನು ಆಸ್ಪತ್ರಿಗೆ ಕಳುಹಿಸಿಕೊಟ್ಟಿರುವರಂತೆ.

ಹೊಸದುರ್ಗ. ಬೆಳ್ಳಿಹಾಜಿಯು ಚೋರ ಪಡೆಯ ಅನೇಕ ಚೋರರನ್ನು ಪೋಲಿಸ್ ಸಬ್ ಇನ್ಸ್‌ಪೆಕ್ಟರ ಚಮ್ನಾಡರು ಹಿಡಿದು ಶಿಕ್ಷೆಗೆ ಗುರಿ ಮಾಡಿದರೆಂಬ ವರ್ತಮಾನವು ವಾಚಕರಿಗೆ ತಿಳಿದಿರಬಹುದಷ್ಟೆ. ಈ ಪಡೆಯ ಹಿರಿಯನಾದ ಬೆಳ್ಳಿಹಾಜಿಯು, ತನ್ನನ್ನು ಹಿಡಿಯಲು ಕಂಕಣಬದ್ಧರಾದ ಚಮ್ನಾಡರ ಕೈ ವಶವಾಗದಂತೆ ಮೈಸೂರ ದೇಶದಲ್ಲಿ ಸೇರಿಕೊಂಡನು. ಆದರೆ ಸದರೀ ಚೋರನು ಮೈಸೂರದೇಶದಲ್ಲಿ ಹಿಡಿಯಲ್ಪಟ್ಟನು. ಈಗ ಈ ಪಡೆಯು ಪೂರ್ಣ ಅಣಗಿಸಲ್ಪಟ್ಟಿತೆನ್ನ ಬಹುದು.

ಕೆಲವು ಕಾಲದಿಂದ ಪೋಲಿಸಿನವರ ಪ್ರಯತ್ನಗಳನ್ನು ಸೋಲಿಸಿ ಕನ್ನ ಕಳವು ಮಾಡಿ ಜೀವನ ಗೆಯ್ಯುವ ಸೊಲಿಮಾನೆ ಎಂಬ ಚೋರನನ್ನು ಪುಂಜಾಲಕಟ್ಟೆ ಕಜೆಕಾರ ಗ್ರಾಮದ ಕಾಡು ಮೃಗಗಳ ನಿವಾಸವಾಗಿರುವ ಘೋರಾರಣ್ಯದಲ್ಲಿ ನಡುರಾತ್ರಿ ಬಿದಿರುಗಳ ಮೆಳೆಯಲ್ಲಿ ಸದರೀ ಚಮ್ನಾಡರು ಹಿಡಿದಿರುವರು. ಈ ಬ ವರ್ತಮಾನವು ಸರ್ವ ಜನರಿಗೆ ಚಿಂತೆಯನ್ನು ಹೋಗಲಾಡಿಸುವದು. ದೀಪ ವ ಬೇರೆ ಯಾವ ಬೆಳಕು ಇಲ್ಲದೆ ಕಾಡಿನಲ್ಲಿ ರಾತ್ರೆ ಹೊತ್ತು ತಿರುಗಾಡಿ ಕೆಲವು ದಿವಸಗಳ ವರೇಗೆ ಗುಣವಾಗಲಾರದ ಗಾಯಗಳನ್ನು ಪಡೆದಿರುವರು. ತಾನು ಜನರಿಗೊಂದು ಉಪಕಾರವನ್ನು ಮಾಡಿದೆನೆಂಬ ಮನಸ್ಸೇ ಈ ಘಾಯಗಳಿಗೆ ಔಷಧಿ ಆಗಿರುವದು.

ಜನರ ಹಿತವನ್ನು ಬಯಸಿ ಮಾಡುವ ಸಾಹಸಗಳಲ್ಲಿ ದೇವರು ಇವರಿಗೆ ಸಹಾಯ ಮಾಡುವನೆಂಬದೇ ನಮ್ಮ ನಂಬಿಕೆಯಾಗಿರುತ್ತದೆ.

ತಾಲೂಕು ಮುಖ್ಯ ಪಟ್ಟವಾಗಿರುವ ಕಾಸರಗೋಡಿನಲ್ಲಿ ಸೆಕಂಡರಿ ಶಾಲೆ ಇಲ್ಲದಿರುವದರಿಂದ ಅಂಥಾದ್ದೊಂದು ಶಾಲೆಯನ್ನು ಇಡುವರೆ ಮಿಶ್ಯನಿನವರಿಗೆ ಊರ ಜನರು ಮನವಿ ಮಾಡಿಕೊಂಡಿದ್ದಾರೆಂದೂ ಈಗ ಹೊಸದುರ್ಗದಲ್ಲಿ ನಡೆಯುವ ಮಿಶ್ಯನ್ ಸೆಕಂಡರಿ ಶಾಲೆಯನ್ನು ಕಾಸರಗೋಡಿಗೆ ಒಯ್ಯುವರೆಂದೂ ವರ್ತಮಾನವಿದೆ.

ಶುಮಾರು 20 ವರ್ಷಗಳ ಹಿಂದೆ ಕಾಸರಗೋಡು ಕಸಬೆಯಲ್ಲಿ ನಡೆಯುತ್ತಿದ್ದ ಮಿಶ್ಯನ್ ಪ್ರೈಮರಿ ಶಾಲೆಯು ಊರ ಜನರಿಗೆ ಅಹಿತವಾಗಿ ಕಂಡು ಬಂದದ್ದರಿಂದ ಮುಚ್ಚಲ್ಪಟ್ಟಿತ್ತು. ನಂತರ ಅಲ್ಲಿ ನಡೆಯುತ್ತಿದ್ದ ಬೋರ್ಡು ಸೆಕಂಡರಿ ಶಾಲೆಯನ್ನು ಮಿಶ್ಯನ್‌ನವರಿಗೆ ಕೊಡುವದು ಉತ್ತಮ ಎಂಬ ವರ್ತಮಾನವು ಊರ ಜನರ ಕಿವಿಗೆ ಬಿದ್ದು ಹೆಚ್ಚು ವಿರೋದ ಗೌಜಿಯನ್ನು ಉಂಟು ಮಾಡಿತು. ಹೊಸದುರ್ಗದವರು ಮಿಶ್ಯನ್ ಶಾಲೆಯ ಕಡೆಗೆ ಹೆಚ್ಚಿನ ಕ್ರತಜ್ಞಾ ಭಾವವನ್ನು ತೋರಿಸುತ್ತಾ ಬಂದು ಮಿಶನ್ ಧೊರೆಗಳಿಂದ ಆಗ್ಗಾಗ್ಗೆ ತಮಗೆ ಉಂಟಾದ ಉಪಕಾರವನ್ನು ಬಹುಮಾನದಿಂದ ತೋರಿಸುತ್ತಾ ಇರುವರು. ಈ ಸಂಗತಿಗಳನ್ನು ವಿಚಾರಿಸಿ ಮಿಶನಿನವರು ಹೊಸದುರ್ಗದಲ್ಲಿ ನಡೆಯುತ್ತಿರುವ ಸೆಕಂಡರಿ ಶಾಲೆಯನ್ನು ಕಾಸರಗೋಡಿಗೆ ವಯ್ಯುವರೆ ಆಲೋಚಿಸಿರುವರೇನೋ ತಿಳಿಯದು.

ಈ ಊರ ಬೀದಿಗಳಲ್ಲಿ ಅಲೆದಾಡುವ ಭೀಕರ ಎತ್ತುಗಳ ದೆಸೆಯಿಂದ ಹುಡುಗರು ಮಕ್ಕಳು ಅತ್ತಿತ್ತ ನಡೆಯುವದು ಅಪಾಯವಾಗುತ್ತಾ ಬರುತ್ತಲಿದೆ. ಕಳದ ಶನಿವಾರ ದಿನ ರಾಜಮಾರ್ಗದಲ್ಲಿ ಒಬ್ಬ ಮುದುಕನ ಹುಡುಗನಿಗೆ ಬಂದು ಎತ್ತು ಕೊಂಬಿನಿಂದ ತಿವಿದದ್ದಲ್ಲದೆ ಒಬ್ಬ ಯೌವನಸ್ಥನಿಗೆ ಹಾಯಲು ಅನುವಾಯಿತು. ಇದನ್ನು ನಿಲ್ಲಿಸಲು ಯಾವ ಉಪಾಯವಿಲ್ಲವೇ?

ಲಾಭ! ಹೊಸ ಪುಸ್ತಕ!!

ಸಚಿತ್ರ ಕಲಾತರಂಗ 1ನೇ ಭಾಗ

8 ಅಧ್ಯಾಯಗಳಿವೆ. ಈ ಪತ್ರಿಕೆಯ ಚಂದಾದಾರರಿಗೂ, ಸ್ಕೂಲ್ಮಾಸ್ಟರರಿಗೂ, ಮತ್ತು ವಿದ್ಯಾರ್ಥಿಗಳಿಗೆ ರೂ. 0-8-0ಕ್ಕೆ ದೊರೆಯುವುದು. ಇತರರಿಗೆ ರೂ.0-10-0

ಎಂ. ಟಿ. ವಲ್ಲಭ ಐಯಂಗಾರ್, ಬೀರೂರು.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಹೊಸ ಕೂಳೂರು ಮಸ್ಕತಿ ಅಕ್ಕಿ ...	4—7—0
,, ಗುಡ್ಡು ಮಸ್ಕತಿ	4—3—0
,, ಮಸ್ಕತಿ ದುಯಂ	4—0—0
,, ಹೊಸ ಗುಡ್ಡು ,, ...	3-11—0
,, ಮಸ್ಕತಿ ಬೆಳ್ತಿಗೆ ,, ...	4—8—0
ರಂಗೂನ್ ಬೆಳ್ತಿಗೆ ಗೋಣಿ	8—0—0
ಹುರುಳಿ ಗೋಣಿ ೧ ಮುಡಿ 2ರ ...	4-12—0
ಉಪ್ಪು ಗೋಣಿ ೧ರ	3—7—0
ಕೊಬ್ರಿ ಖಂಡಿ ೧ರ	...114—0—0
ಕೊಬ್ರಿ ಎಣ್ಣೆ ಮಣ	7—0—0
ಕಾಫಿ ಖಂಡಿ ೧ರ	...225—0—0
ಕಾಳು ಮೆಣಸು ಖಂಡಿ	...125—0—0
ಬಿಳಿ ಗೋಟು ಅಡಿಕೆ	88—0—0
ಕರಿ ಗೋಟು	62—0—0

ದಯವಿಟ್ಟು ಓದಿರಿ ! ಸೌಖ್ಯವನ್ನು ಹೊಂದಿರಿ !

ಕಾಮಶಾಸ್ತ್ರ.

ಉಚಿತವಾಗಿ ಕಳುಹಿಸಲ್ಪಡುವುದು! ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವದು. ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವು! ಆಯುರಾರೋಗ್ಯಸಂಪದಗಳುಂಟಾಗುವವು!!

ಆತಂಕ ನಿಗ್ರಹ ಮಾತ್ರೆ.

ಊಟವಾದ ಬಳಿಕ ಹಗಲಿರುಳೂ ಸೇವಿಸಬೇಕಾದದ್ದು! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು:—

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ಪ್ರಾಣಾಧಾರಗಳಿಂದ ಅಂಗಗಳನ್ನು ಬಲಪಡಿಸುವದು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು. ೩೨ ಮಾತ್ರೆಗಳಿರುವ ಡಬ್ಬಿ ೧ಕ್ಕೆ ರೂ. ೧—೦—೦.

ಆತಂಕನಿಗ್ರಹ ಔಷಧಾಲಯ, ೨೨ ಬ್ರಾಡ್ವೇ ಮದರಾಸು. — ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಶ್ರೀ

ಶ್ರೀ ಶಿವಗಂಗಾ ಮಠದ ಶ್ರೀ "ಶಾರದಾ" ಮಾಸಪತ್ರಿಕೆ.

ವಾರ್ಷಿಕ ಚಂದಾ 2—0—0 ಹಾಸಲು ಸೇರಿ.

ಜನರು ಶ್ರೀ ಶಾರದಾನುಗ್ರಹಕ್ಕೆ ಪಾತ್ರರಾಗಿ ಅದರಿಂದ ಉಂಟಾಗುವ ಜ್ಞಾನ ಸುಖವನ್ನು ಅನುಭವಿಸಬೇಕಾಗಿದ್ದರೆ ಶ್ರೀ "ಶಾರದಾ" ಮಾಸಪತ್ರಿಕೆಯನ್ನು ಸೇವಿಸಬೇಕು.

ಉಪನಿಷತ್ತುಗಳ ಸಾರ, ಧರ್ಮಶಾಸ್ತ್ರದ ರಹಸ್ಯ (ಧರ್ಮಸಿಂಧು-353 ವಿಷಯ), ಶ್ರೀ ಶಂಕರಾಚಾರ್ಯರ ಕಾಲ ಮತ್ತು ಚರಿತ್ರ, ಧರ್ಮನೀತಿಗಳ ಉಲ್ಲಾಸ, ಸಟೀಕ ಸ್ತೋತ್ರಾವಳಿ, ಸರಸವಾದ ಉಪನ್ಯಾಸ, ನ್ಯಾಯಗಳ ವಿಮರ್ಶೆ, ವಿವಿಧ ಸಿದ್ಧಾಂತ ವಿವರಣ, ವಿಚಿತ್ರ ಚಾಟು ಶ್ಲೋಕಗಳು, ಸನಾತನಧರ್ಮ ನೀತಿಗಳ ಸೋಪಾನ ಈ ಮುಂತಾದುವುಗಳು ಇದರಲ್ಲಿ ಪ್ರಕಾಶವಾಗುತ್ತವೆ.

ಈ ಪತ್ರಿಕೆಯು ದೊರೆಯುವ ಸ್ಥಳ. (ಪತ್ತೆ)

ದೊಡ್ಡಬೆಲೆ ನಾರಾಯಣ ಶಾಸ್ತ್ರಿ.

ಶ್ರೀ "ಶಾರದಾ" ಆಫೀಸು ಬೆಂಗಳೂರು ಸಿಟಿ.

1911ನೇ ವರ್ಷದ ಪಾಕೆಟ್ ಡೈರಿ.

ಬೇಗ ತರಿಸಿಕೊಳ್ಳಿ! ನಿದಾನ ಮಾಡಿದರೆ ಸಿಗಲಾರದು!!

ಪ್ರತಿಯೊಬ್ಬ ಮನುಷ್ಯನಿಗೂ ಲೆಕ್ಕವೇ ಪ್ರಾಣಾಧಾರವಾದದ್ದು. ಇಂಥಾ ಲೆಕ್ಕವನ್ನು ನಮ್ಮ ಜೇಬಿನಲ್ಲಿಡಲು ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇ ಇರಬೇಕಾದ ಪುಸ್ತಕವು. ಬಹಳ ಸುಲಭಕ್ರಯ. ಟಪ್ಪಾಲ್ ಖರ್ಚುಗಳು ಬೇರೆ ಬೀಳುತ್ತೆ.

ಎ. ನಂ। ಡೈರಿ ಸಾದಾ ೧ಕ್ಕೆ ೩ಅಣೆ, ಬಿ. ನಂ। ಡೈರಿ ಮುಚ್ಚಳ ಮತ್ತು ಪೆನ್‌ಸಲ್ ಸಹಿತ ೧ಕ್ಕೆ ೫ಅಣೆ. ಸಿ. ನಂ। ಡೈರಿ ದೊಡ್ಡದು ೧ಕ್ಕೆ ೬ಅಣೆ. ಡಿ. ನಂ। ಡೈರಿ ಮುಚ್ಚಳ ಮತ್ತು ಪೆನ್‌ಸಿಲ್ ಸಹಿತ ೧ಕ್ಕೆ ೮ಅಣೆ. ೧೨ ಡೈರಿಗಳನ್ನು ಒಂದೇ ಸಲ ತರಿಸಿಕೊಂಡರೆ ಒಂದು ಡೈರಿ ಇನಾಂ. ವ್ಯಾಪಾರಸ್ಥರಿಗೆ ಸರಿಯಾದ ಕಮಿಶನ್ ಸಿಕ್ಕುತ್ತೆ ಮತ್ತು ನಮ್ಮಲ್ಲಿ ಕನ್ನಡ ತೆಲಗು, ಸಂಸ್ಕೃತ ಪುಸ್ತಕಗಳು ಬಹಳ ಸುಲಭ ದರಕ್ಕೆ ದೊರಿಯುತ್ತದೆ.

ನಮ್ಮ ಕಂಪೆನಿ ಕ್ಯಾಟಲಾಗ್ ಮುಫತ್ತಾಗಿ ದೊರಿಯುತ್ತೆ. ಪರಾಂಬರಿಸಿ ನೋಡಿರಿ.

ಎಮ್. ಪಿ. ಮಲ್ಲಯ್ಯ.

211 ತಾಲೂಕು ಕಚೇರಿ ರಸ್ತೆ ಬೆಂಗಳೂರು ಸಿಟಿ.

ಮಂಗಳೂರು

ಚಲೋ ನಶ್ಯಪುಡಿ.

ತೊಲೆ ೧ಕ್ಕೆ ರೂ. ೦—೧—೦. ಸೇರು ೧ಕ್ಕೆ ರೂ. ೧—೪—೦

ಸುಗಂಧ ನಾಸಿಕ ಚೂರ್ಣ ತಲೆಪಾಸಿಗೂ ಸೀತಕ್ಕೂ ಶಿರೋಭಾರಕ್ಕೂ ಒಳ್ಳೇದು ತೊಲೆ ೧ಕ್ಕೆ ೦—೪—೦ ಸೇರು ೧ಕ್ಕೆ ರೂ. ೫—೦—೦.

ಅಪೇಕ್ಷಿಸುವವರಿಗೆ ವಿ. ಪಿ. ಮೂಲಕವೂ ಹಣ ಕಳುಹಿಸಿದವರಿಗೆ ಸೆಂಪಲ್ ಪೋಸ್ಟು ಮೂಲಕವೂ ಕಳುಹಿಸಿಕೊಡಬಹುದು.

ಕಾವೂರು ವೆಂಕಟೇಶ ಸುಬ್ರಾಯ ಪೈ,

ಗೋಳಿಕಟ್ಟೆ ಬಜಾರ, ಮಂಗಳೂರು, ದ. ಕ.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. 2—8—0 ಮಾತ್ರ. ರೂ. 2—8—0 ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

"ರಾಸ್ಕೋಪ್ ಸಿಷ್ಟಂ ಪೇಟೆಂಟ್ ಲೀವರ್ ಜ್ಯುವೆಲ್ಡ್" ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರಹವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. 3-8-0 ರೂ. 4-8-0. ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಎರಡು (೨) ವರುಷಗಳು ಗ್ಯಾರೆಂಟು.

ಕ್ರಯ ರೂ. 2-8-0 ವಿ. ಪಿ. ಚಾರ್ಜು ರೂ. 0-4-0.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ 0-8-0 ವಿ. ಪಿ. ಚಾರ್ಜು 0-4-0.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ,

ಸಾಹುಕಾರ ಪೇಟೆ, ಮದ್ರಾಸು.

ಉತ್ತಮವಾದ ಮೈಸೂರು ಸುಗಂಧ ದ್ರವ್ಯಗಳು.

ಅಂಬರ್ ಊದಬತ್ತಿ ಸೇ. ೧ಕ್ಕೆ		೬—೦—೦	A ಅರಗಜ ತೊ. ೧ಕ್ಕೆ	೩—೦—೦
ಕಸ್ತೂರಿ ಬತ್ತಿ	ಡಿ.	೩—೦—೦	B. ಅರಗಜ ಡಿ.	೧—೦—೦
ಪುನಗು ಬತ್ತಿ	ಡಿ.	೧—೮—೦	ಕಸ್ತೂರಿ ಬಿಲ್ಲೆ ಡಿ.	೩—೦—೦
ಗುಲಾಬಿ ಬತ್ತಿ	ಡಿ.	೧—೪—೦	ಪುನಗು ಬಿಲ್ಲೆ	೧—೦—೦
A ಪನ್ನೀರ್ ಬತ್ತಿ	ಡಿ.	೦—೧೨—೦	ಕೇಸರಿ ಬಿಲ್ಲೆ	೦—೮—೦
B ಪನ್ನೀರ್ ಬತ್ತಿ	ಡಿ.	೦—೧೦—೦	ಮನೋರಂಜನ ತೈಲ ಶೀಸೆ ೧ಕ್ಕೆ	೦—೮—೦
ಮುಸಾಲಾ ಬತ್ತಿ	ಡಿ.	೦—೬—೦	ತಾಂಬೂಲ ರಕ್ಷ ಡಿ.	೦—೪—೦

ಇವುಗಳಲ್ಲದೆ ಎಲ್ಲಾ ತರಹದ ಅತ್ತರ್, ನಾಶಿಕ ಚೂರ್ಣ, ಟೂತ್ ಪೌಡರ್ ಫಿತ್ಕಾ, ಮೊದಲಾದವುಗಳು ಬಿಕರಿಗೆ ಸಿದ್ಧವಾಗಿವೆ. ಎನ್. ಎಮ್. ಸುಬ್ಬರಾವ್, ತೇರ್‌ಬೀದಿ, ಮಂಗಳೂರು.

ನಮ್ಮ ಏಜಂಟರು:— ಎನ್. ಜಿ. ಶಂಕ್ರಪ್ಪ ಕಂಪೆನಿ, ನಾಲೂರು, ತೀರ್ಥಹಳ್ಳಿ.

ಎಲ್ಲೂರು ನಾರಾಯಣ ರಾವ್, ಧರ್ಮಸ್ಥಳ.

ಒಡೋನಾ.

ಇದು ಆಗಿಂದಾಗ್ಯೆ ಬಾಧಿಸುವ ಹಲ್ಲುನೋವಿನ ದಿವ್ಯ ಔಷಧಿಯಾಗಿದೆ. ಶಸ್ತ್ರಪ್ರಯೋಗ ಮಾಡದೆನೇ ಹಲ್ಲುನೋವು ಖಾತ್ರಿಯಾಗಿ ನಿಲ್ಲುವುದು. ಕೆಲವುಸಾರಿ ದಂತ ವೈದ್ಯರಿಂದ ಸಹ ಸಾಧ್ಯವಾಗದ ಹಲ್ಲುನೋವನ್ನು ಈ ಒಡೋನಾ ಎಂಬದು ಕ್ಷಣಮಾತ್ರದಲ್ಲಿ ಪರಿಹರಿಸುವುದು. ಈ ಭೂಲೋಕದಲ್ಲಿನ ಎಲ್ಲಾ ಹಲ್ಲುನೋವಿನ ಔಷಧಿಗಳಿಗಿಂತ ಇದು ಅತಿ ಉತ್ಕೃಷ್ಟವಾದದ್ದು. ಟಿನ್ ೧ಕ್ಕೆ ಕ್ರಯ ೨ ರೂ.

ಇಂಪೀರಿಯಲ್ ಪೈನ್ ಬಾಮ್.

ಇದರಿಂದ ಸಾಧಾರಣ ತಲೆಶಿಡಿತ ಮೊದಲುಗೊಂಡು ಎಲ್ಲಾ ತರದ ದುಸ್ತರವಾದ ರೋಗಗಳು ಸಹಾ ಗುಣವಾಗುವವು.

ವಾತ, ಸಂಧಿವಾತ, ಹರಿವಾತ, ಪಕ್ಷವಾತ, ಉಬ್ಬಸ, ಸೊಂಟನೋವು, ಗಂಟುನೋವು, ಶೀತ, ಕೆಮ್ಮು, ಉಳುಕು, ನೆಗಡಿ, ಕಟವಾತ, ಶ್ವಾಸವಾತ, ಕ್ಷಯರೋಗ, ಜಜ್ಜಿದ ಗಾಯ, ಕುತ್ತಿಗೆ ನೋವು, ರಾಜಕುರು ವಗ್ಯೆರೆ ಎಲ್ಲಾ ತರದ ರೋಗಗಳಿಗೆ ಇದು ಪರಮೌಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ೧ರ ೧೦ ಆಣೆ.

ಮದ್ರಾಸ್ ಆಧಿಪತ್ಯಕ್ಕೆ ಸೋಲ್ ಏಜಂಟರು:—

ಮೆಸ್ಸರ್ಸ್ ಕೆ. ವಿಟ್ಠಳ ರಾವ್ ಎಂಡ್ ಕೋ,

ಸರ್ಟಿಫ್ಯಾಡ್ ಕೆಮಿಸ್ಟ್, ಮಂಗಳೂರು, ದ. ಕ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co, *Ayurvedic Chemists,*
Vepery Post, MADRAS.

MANORA & CO'S

WONDERFUL MEDICINE FOR ALL KINDS OF PAINS.

Try to-day! ☞......Dont wait until tomorrow!!

ರೊಯಲ್ ಇಂಡಿಯನ್ ಬಾಮ್.

ಹಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು! ಇದರ ಉಪಯೋಗದಿಂದ:—ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಸೊಂಟದ ನೋವು, ಗಂಟಲುನೋವು, ಘಾಯ, ಜಖಮು, ಉಳುಕು, ಶೈತ್ಯ, ಎದೆನೋವು, ಒನೆಗಾಲು, ಖಜ್ಜಿ, ಉತಿಘಾಯ, ಮುದ್ದಣ ಮೊದಲಾದ ಎಲ್ಲಾ ತರದ ವೇದನೆಗಳು ಸಂಪೂರ್ಣವಾಗಿ ಗುಣವಾಗುವವು!! ಸಣ್ಣ ಮಕ್ಕಳ ಎಳೆಯ ದೇಹಕ್ಕಾದರೂ ಭಯವಿಲ್ಲದೆ ಇದನ್ನು ಹಚ್ಚಬಹುದು. "ಬಾಲಗ್ರಹ ಪೀಡನೆಗಳಲ್ಲಿ ಇದು ಅಗ್ರಸ್ಥಾನ ಹೊಂದಿಯದೆ" ಸಾವಿರಾರು ಜನರು ಇದನ್ನು ಉಪಯೋಗಿಸುತ್ತಾರೆ. "ಇದರಿಂದ ಗುಣ ಶಿಕ್ಕುವದಿಲ್ಲವಾದರೆ ಹಣ ತಿರುಗಿ ರವಾನಿಸಿ ಕೊಡುವೆವು. ಎಲ್ಲಾ ಔಷಧಾಲಯಗಳಲ್ಲಿಯೂ, ಕೆಮಿಸ್ಟರಲ್ಲಿಯೂ ಶಿಕ್ಕುತ್ತದೆ. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜಾಗ್ರತೆ:—ಇಮಿಟೇಶನ್ (ನಕಾರಿ) ಬಾಮ್‌ಗಳನ್ನು ತೆಗೆದುಕೊಳ್ಳಬೇಡಿರಿ.

ವಿಳಾಸ:— ಮನೋರಾ ಕಂಪೆನಿ, ಗಿರಗಾಂ ಮುಂಬಯಿ.

ಅಥವಾ ಈ ಕೆಳಗಿನ ಔಷಧಾಲಯಗಳಲ್ಲಿ ಶಿಕ್ಕುವದು.

ಪರ್ಲ ಎಂಡ್ ಸನ್ಸ್ ಮಂಗಳೂರು.
ಬೇಕಲ ವೆಂಕಟ ರಾವ್, ಉಡುಪಿ.
ಬಿ. ನರಸಿಂಹ ಮಲ್ಯ ಪುತ್ತೂರು.
ಬಿ. ದತ್ತ ಬ್ರದರ್ಸ್, ಕುಂದಾಪುರ.
ಬಿ. ಎನ್. ಮಲ್ಯಾ ರಾಮ ಪ್ರಸಾದ ಔಷಧಾಲಯ. ಬಾರಕೂರು.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕಣ್ಣಿ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು. ಗಂಟ್ಲುನೋವು. ಜಖಮ್, ಉಳುಕು, ಘಾಯಗಳು, ಪಕ ವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0-8-0.

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2—8—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರಿಯಿರಿ.

ವಿ. ಪಿ. ಖರ್ಚು ಪ್ರತ್ಯೇಕ. ಟಿ. ಬಾಬುರಾಯರ,
ಆಯುರ್ವೇದಿಕ್ ಔಷಧಾಲಯ, ಗೊಲ್ಲರಕೇರಿ ರಸ್ತೆ, ಮಂಗಳೂರು, ದ. ಕ.

ನೇತ್ರಬಿಂದು

ಇದು ಕಣ್ಣಿನ ದೃಷ್ಟಿಮಾಂದ್ಯ, ಕಣ್ಣೀರು ಸೋರುವಿಕೆ, ಕಣ್ಣಿನ ಮೂಲೆ ತುರಿಸುವಿಕೆ, ಕೆಂಗಣ್ಣು, ರೆಪ್ಪೆ ಉದುರುವಿಕೆ ಈ ಮೊದಲಾದ ರೋಗಗಳಿಗೆ ಸಿದ್ಧೌಷಧವು. ಕ್ರಯ ಬಾಟ್ಲಿ ೧ರ ರೂ. 0—8—0 ವಿ. ಪಿ. 0—4—0.

ಸಿದ್ಧಲಕ್ಷ್ಮೀವಿಲಾಸ—ಇದು ಒಳ್ಳೇ ರಕ್ತಶುದ್ಧಿ ಮಾಡುತ್ತದೆ. ಕ್ರಯ ಬಾಟ್ಲಿ ೧ರ 0-12-0 ವಿ. ಪಿ. 0—4—0.

ಇದು ವಿನಹ ಇಲ್ಲಿ ಆಸವಗಳೂ, ಅರಿಷ್ಟಗಳೂ, ಘೃತಗಳೂ, ಲೇಹಗಳೂ, ಚೂರ್ಣಗಳೂ, ತೈಲ್ಯಗಳೂ, ಮಾತ್ರೆಗಳೂ, ಭಸ್ಮಗಳೂ ವಗೈರೆ ದೊರೆಯುತ್ತವೆ.

ವಿಳಾಸ:— ಧನ್ವಂತರಿ ಆಯುರ್ವೇದಿಕ್ ಔಷಧಾಲಯ,
ಮಂಗಳೂರು.

ಸ್ವದೇಶಾಭಿಮಾನಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರ್ಷ ೧ಕ್ಕೆ ರೂ. 1-4-0. ಟಪ್ಪಾಲು ಹಾಸಲು ಶೇರಿ ರೂ. 2-1-0.

ಪುಸ್ತಕ 4. ಮಂಗಳೂರು, ತಾರೀಕು 23ನೇ ಶುಕ್ರವಾರ ದಶಂಬರ 1910. ಸಂಚಿಕೆ 51

Amrutanjan Depot Fort Bombay.

ಅಮೃತಾಂಜನ

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು. ಬಾಟ್ಲಿ ೧ರ ಕಿಮ್ಮತು 8 ಆಣೆ.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲಿ ಒಂದರ ಕಿಮ್ಮತು ರೂ. 1.

ಖಜ್ಜಿ ಮುಲಾಮು.

ಬಾಟ್ಲಿ ಒಂದರ ಕಿಮ್ಮತು 3 ಆಣೆ.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ. 4.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ. 1.

ಸುಂದರಿ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆ.

ಬಾಟ್ಲಿ ಒಂದರ ಕಿಮ್ಮತು 8 ಆಣೆ.

ವಿಳಾಸ:—ಅಮೃತಾಂಜನ ಡಿಪೊ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ", ಮುಂಬಯಿ

ಈಗಲೀಗ ಅಚ್ಚಾಗುತ್ತಲಿದ್ದ 'ಆಯುರ್ವೇದ ಚಿಕಿತ್ಸಾಕ್ರಮ' ಎಂಬ ಗ್ರಂಥವು ಇನ್ನು ಸದ್ಯದಲ್ಲಿಯೇ ಪ್ರಕಟವಾಗುವುದೆಂಬದನ್ನು ಸ್ವದೇಶಾಭಿಮಾನಿಯ ವಾಚಕರೆಲ್ಲರೂ

ತಿಳಿಯಬೇಕಾಗಿರುವುದು.

ಕನ್ನಡಭಾಷೆ ಗೊತ್ತಿರುವವರ್‍ಯಾರಾದರೂ ತನ್ನ ಹೆಸರು ಮತ್ತು ವಿಳಾಸವನ್ನು ಕಳುಹಿಸಿಕೊಟ್ಟಲ್ಲಿ ಟಪ್ಪಾಲು ಹಾಸಲು ಇಲ್ಲದೆ ಸಹಾ ಗ್ರಂಥವನ್ನು ಉಚಿತವಾಗಿ ಪಡಿಯಬಹುದು. ಇಂಗ್ಲೀಷು ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ಕಳುಹಿಸುವಾಗ ತಮ್ಮ ಸ್ನೇಹಿತರ ಯಾ ನೆಂಟರಿಷ್ಟರ ಪೈಕಿ 10 ಜನರ ಹೆಸರು ಮತ್ತು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು.

ಅತೀ ಉತ್ತಮವಾದ ಬ್ಲೂಬ್ಲೇಕ್ ಶಾಯಿಯ ಪುಡಿ.

ಇತರ ಎಲ್ಲಾ ಶಾಯಿಯ ಪುಡಿಗಿಂತಲೂ ಇದು ಬಹಳ ಉತ್ಕೃಷ್ಟವಾದದ್ದು.

ಒಂದು ಪೊಟ್ಣಕ್ಕೆ 4 ಪೈ.

ಈ ಶಾಯಿಯ ಹುಡಿಯನ್ನು ೨ ಔನ್ಸು ನೀರಿನಲ್ಲಿ ಕಲಸಿದೊಡನೆ ಅತೀ ಕಪ್ಪಾದ ಶಾಯಿಯು ದೊರಕುವದು. ಇದರಿಂದ ಬರದರೆ ಲೋಹದ ಪೇನುಗಳಿಗೆ ತುಕ್ಕು ಹಿಡಿಯದು. ಪೇನಿನಲ್ಲಿ ಶಾಯಿಯು ಬಹಳ ಸೊಗಸಾಗಿ ಹರಿಯುವುದು. ಈ ಶಾಯಿಯ ಪುಡಿಯಲ್ಲಿ ಬ್ಲೂಬ್ಲೇಕ್, ಕೆಂಪು, ಪಚ್ಚೆ, ಧೂಮ್ರವರ್ಣ ಇವೇ ಮೊದಲಾದವುಗಳು ಇರುವವು.

ಹಲವು ಪ್ರದರ್ಶನಗಳಲ್ಲಿ ಈ ಶಾಯಿಯ ಪುಡಿಯು ಬೆಳ್ಳಿ ಪದಕಗಳನ್ನೂ, ಯೋಗ್ಯತಾಪತ್ರಗಳನ್ನೂ ಹೊಂದಿಯದೆ.

ಒಂದೇ ಸಾರಿ 100 ಪೊಟ್ಣಗಳಿರುವ ಒಂದು ಕಾರ್ಡಬೋರ್ಡು ಪೆಟ್ಟಿಗೆಯನ್ನು ತರಿಸಿಕೊಂಡರೆ ಟಪ್ಪಾಲು ಹಾಸಲು ವಿನಹಾ ರೂ. ೧—೪—೦.

ಟಿ. ಎಸ್. ಸುಬ್ರಮಣ್ಯಮಂ ಎಂಡ್ ಕೊ.
32 ಆರ್ಮೆನಿಯನ್ ರಸ್ತೆ, ಮದ್ರಾಸು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ತರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಖಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್ ಲವರಚಾಲ, ಮುಂಬಯಿ.

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,
ಮಂಗಳೂರು, ದ. ಕ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೊರ್ಸ ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ನವೀನ ಶೃಂಗಾರ ಸ್ತ್ರೀ ಶುಕಸಪ್ತತಿ ಕಥೆ.

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಬೇಕಾಗಿ ಅಭಿಲಾಷೆ ಇದ್ದರೆ ಮೇಲ್ಕಂಡ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ. ಕ್ರಯ ಹಾಸಲ್ ಸಹಾ ೧೦ ಆಣೆ.

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪರಮಾಯದ ಊದಬತ್ತಿಗಳು, ಹಸಿಗಂಧ. ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜವಳಿ ಸಹಾ ದೊರಿಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು. ಒಂದಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ. ನಮ್ಮ ಕಂಪೆನಿ ಕೆಟಲಾಗ್ ಮುಫತ್ತಾಗಿ ದೊರೆಯುವದು.

ಟಿ. ಯನ್. ಶ್ರೀನಿವಾಸ ಶೆಟ್ಟಿ, ಬುಕ್‌ಡಿಪೊ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ:—ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗಳೂರು, ದ. ಕನ್ನಡ.

ಬಹುಮಾನ! ಬಹುಮಾನ! ಬಹುಮಾನ!

THE KALA-NIDHI MANGALORE,

(ಪೊಟ್ಣ 1ಕ್ಕೆ 3 ಪೈ.)

ಬರುವ ದಶಂಬರ ತಿಂಗಳ ವರೆಗೆ ಮಾತ್ರ. ೪ ರೂಪಾಯಿಗಳ ಶಾಯಿ ಪೊಟ್ಣಗಳನ್ನು ತೆಗದುಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಘಡಿಯಾರವು.

ಈ ಶಾಯಿಯಿಂದ ಲೋಹದ ಪೇನುಗಳಿಗೆ ತುಕ್ಕು ಹಿಡಿಯದು. ಶಾಯಿಯ ಮೇಲ್ಗಡೆ ಬೂಜು ನಿಲ್ಲದು. ಬರಿಯುವಾಗ ನೀಲ ಬಣ್ಣದಲ್ಲಿದ್ದು ಆರಿದೊಡನೆ ಅತಿ ಕಪ್ಪಾಗುವದು.

ಬಹುಮಾನಗಳ ವಿವರ. ೪ ಆಣೆಯ ಪೊಟ್ಣಗಳನ್ನು ತಕ್ಕೊಳ್ಳುವವರಿಗೆ ಸುಗಂಧ ದಂತ ಕಾಂತಿ ಚೂರ್ಣದ ಡಬ್ಬಿ ೧; ೮ ಆಣೆಯುದನ್ನು ತಕ್ಕೊಂಡವರಿಗೆ ಜೋನ್ ಫೇಬರ್ ಪೆನ್ಸಿಲ್ ಡಜನ್ ೧; ೧ ರೂಪಾಯಿ ಪೊಟ್ಣಗಳನ್ನು ಪಡಕೊಂಡವರಿಗೆ ದೊಡ್ಡವರ ಉತ್ತಮವಾದ ಬನಿಯನ್ ೧; ೨ ರೂಪಾಯಿದ್ದನ್ನು ತರಿಸಿಕೊಳ್ಳುವವರಿಗೆ ಓಫೀಸ್ ನಂ. ೧ ಕಿಸೆ ಛಾಪೆಯ ಪೆಟ್ಟಿಗೆ ೧; ೪ ರೂಪಾಯಿಗಳದ್ದು ತರಿಸಿಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್, ಕೀಲೆಸ್ ಕಿಸೆ ಘಡಿಯಾರವು ಗ್ಲಾಸ್ ಸ್ಪ್ರಿಂಗ್ ಸಹಿತ.

ಬ್ಲೂ ಬ್ಲೇಕ್ ದೊಡ್ಡ ಶಾಯಿಯ ಬಾಟ್ಲಿ ೧ಕ್ಕೆ ಆಣೆ ೮. ಸಣ್ಣದಕ್ಕೆ ಆಣೆ ೪. ಶಾಯಿಯ ಗುಳಿಗೆಗಳೂ ಕಾಗದಗಳೂ ಸಹ ಸಿಕ್ಕುವವು. ಪರಸ್ಥಳದವರಿಗೆ ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:— ಕಲಾನಿಧಿ, ಮಂಗಳೂರು.
ಅಥವಾ ದಿ. ಊಲನ್ ಮಾರ್ಟ್ ನಂಬ್ರ ೧ ಮಂಗಳೂರು (ದ. ಕ.)

ಜನವರಿ ಅಂತ್ಯದ ವರೆಗೆ.

ಒಳ್ಳೇ ಸಮಯ! ಸುಲಭ ಕ್ರಯ!!

ನಂಬ್ರ 1ನೇ ಜಂಟ್ಸ್, ಲಿವರ್ ವಾಚು 1ಕ್ಕೆ ಕ್ರಯ ... ... 3—4—0.
ನಂಬ್ರ 2ನೇ ಲೇಡಿಸ್ ಚಿಕ್ಕ ಸ್ವಾಚು ,, ,, ... 5—0—0
ನಂಬ್ರ 3ನೇ ಜಂಟ್ಸ್ ಗೋಲ್ಡ ಗಿಲ್ಟ್ ಲಿವರ್, ಕೀವ್ಯಾಂಡಿಂಗ್ ವಾಚು 1ಕ್ಕೆ 7—0—0.

ಇವು ಸಾಮಾನ್ಯ ಪ್ರಮಾಣಪರಿವರ್ತನ ಉಳ್ಳವುಗಳಾಗಿ 10 ವರುಷಗಳ ವರೆಗೆ ಉತ್ತಮ ರೀತಿಯಲ್ಲಿ ನಡೆಯುವವು. ಇವು ನೂತನವಾದ ಹೊಸ ನಮೂನೆ ಮುಚ್ಚಳ ಉಳ್ಳವುಗಳಾಗಿ, ಸರಿಯಾದ ಕಾಲವನ್ನು ತೋರಿಸುತ್ತಿರುವದು. ಪ್ರತಿ ವಾಚಿನ ಸಂಗಡ ಸರಪಣಿ ಸ್ಪ್ರಿಂಗ್ ಮತ್ತು ಗ್ಲಾಸ್ ಇರುವದು.

ನಮ್ಮಲ್ಲಿ ಸ್ವಲ್ಪ ವಾಚುಗಳೇ ಇರುವದರಿಂದ ಬೇಗನೇ ಆರ್‌ಡರ್ ಮಾಡಿರಿ.

ಸಿ. ರಘುನಾಥ ಕಾಮತ್,
ಬೋಳಾರ, ಮಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 23ನೇ ದಶಂಬರ 1910.

ಮದ್ರಾಸು ಸರಕಾರವೂ ಕೈಗಾರಿಕೆ ಅಭಿವೃದ್ಧಿಯೂ.

ಮದ್ರಾಸು ಸಂಸ್ಥಾನದ ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸಲು ಬೇಕಾದ ಏರ್ಪಾಡುಗಳನ್ನು ಪರ್ಯಾಲೋಚಿಸುವುದಕ್ಕೆ ೧೯೦೮ನೇ ವರುಷದಲ್ಲಿ ಗವರ್ನರ ದೊರೆಗಳವರ ಅಧ್ಯಕ್ಷತೆಯಲ್ಲಿ ಸಂಸ್ಥಾನದ ಪ್ರಜಾ ಮುಖಂಡರ ಮತ್ತು ಶ್ರೇಷ್ಟ ಅಧಿಕಾರಿಗಳ ಸಭೆಯೊಂದು ಕೂಡಿತ್ತೆಂಬುದು ವಾಚಕರಿಗೆ ಗೊತ್ತಿರಲಿಕ್ಕೆ ಸಾಕು. ಆ ಸಭೆಯಲ್ಲಿ ಮಂಜೂರಾದ ಕೆಲವು ನಿರ್ಣಯಗಳ ಜ್ಯಾರಿ ಬಗ್ಯೆ ಸ್ಟೇಟ್ ಸೆಕ್ರಿಟರಿಗಳವರ ಅನುಮತಿಯನ್ನು ಪಡಿಯಲಿಕ್ಕೆ ಈ ನಿರ್ಣಯಗಳು ಸ್ಟೇಟ್ ಸೆಕ್ರಿಟರಿಗಳ ಮುಂದೆ ಇಡೋಣಾಗಿದ್ದವು. ಇಷ್ಟರ ತನಕ ಈ ನಿರ್ಣಯಗಳ ವಿಷಯ ಸ್ಟೇಟ್ ಸೆಕ್ರಿಟರಿಗಳು ಯಾವ ರೀತಿ ಅಪ್ಪಣೆಯನ್ನು ಕೊಟ್ಟಿರುವರೆಂಬುದು ಸರಕಾರದವರಿಂದ ತಿಳಸೋಣಾಗಲಿಲ್ಲವಾದ್ದರಿಂದ ಕಳದ ನ್ಯಾಯನಿರ್ಮಾಣ ಸಭೆಯಲ್ಲಿ ಬಹುಮಾನಪಟ್ಟ ರಾ. ಟಿ. ವಿ. ಶೇಷಗಿರಿ ಅಯ್ಯರರವರು ಈ ಕುರಿತು ಪ್ರಶ್ನೆಯನ್ನು ಸರಕಾರದವರೊಂದಿಗೆ ಕೇಳದರು. ಸ್ಟೇಟ್ ಸೆಕ್ರಿಟರಿಗಳವರಿಗೂ ಮದ್ರಾಸು ವ ಇಂಡಿಯ ಸರಕಾರಗಳಿಗೂ ಈ ವಿಷಯ ನಡದ ಪತ್ರವ್ಯವಹಾರವು ಇತ್ತಲಾಗೆ ಪ್ರಕಟಿಸಲ್ಪಟ್ಟಿರುವುದು. ಸರಕಾರದವರು ಕೈಗಾರಿಕೆ ಅಭಿವೃದ್ಧಿ ಸಾಧನೆಗಳಲ್ಲಿ ಯಾವ ರೀತಿ ವರ್ತಿಸಬೇಕೆಂಬುದು ಸಹಾ ಸ್ಟೇಟ್ ಸೆಕ್ರಿಟರಿಗಳವರಿಂದ ಇದರಲ್ಲಿ ಸೂಚಿಸಲ್ಪಟ್ಟಿರುತ್ತದೆ.

ಸಂಸ್ಥಾನದ ಕೈಗಾರಿಕೆ ಅಭಿವೃದ್ಧಿಯನ್ನು ಸಮಗ್ರವಾಗಿ ಸಾಧಿಸಲು ಕೈಗಾರಿಕೆ ಇಲಾಖೆಯನ್ನು ಇತರ ವಿದ್ಯಾಭ್ಯಾಸ ಇಲಾಖೆಗಳಿಂದ ವಿಂಗಡಿಸಿ ಈ ಇಲಾಖೆ ಬಗ್ಯೆ ಸ್ವತಂತ್ರರಾದ ಒಬ್ಬ ಕಲಾವಿದ್ಯಾ ವಿಶಾರದರನ್ನು ನೇಮಿಸಿ ಸರಕಾರ ಕಡೆಯಿಂದ ಪ್ರಜೆಗಳಿಗೆ ಮಾದರಿಗಾಗಿ ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂತಲೂ ತಕ್ಕದಾದಂಥಾ ಕಲಾಶಿಕ್ಷಣವನ್ನು ಕೊಡಲಿಕ್ಕೆ ಕಲಾಶಾಲೆಗಳನ್ನು ಏರ್ಪಡಿಸಬೇಕೆಂತಲೂ ಮದ್ರಾಸು ಸರಕಾರದವರು ೧೯೦೫ನೇ ಇಸವಿಯಲ್ಲಿ ಇಂಡಿಯಾ ಸರಕಾರದವರಿಗೆ ಬರಕೊಂಡಿದ್ದರು. ಇಂಡಿಯಾ ಸರಕಾರದವರು ಮದ್ರಾಸು ಸರಕಾರದವರ ಈ ಸೂಚನೆಗಳು ಉಪಯುಕ್ತವಾದವುಗಳೆಂತ ಇವನ್ನೆಲ್ಲಾ ಆದರಿಸಿ ಈ ಸೂಚನೆಗಳನ್ನು ಅಂಗೀಕಾರದ ಬಗ್ಯೆ ಸ್ಟೇಟ್ ಸೆಕ್ರಿಟರಿಗಳ ಮುಂದಿಟ್ಟರು. ಸರಕಾರ ಕಡೆಯಿಂದ ನವೀನ ಕೈಗಾರಿಕೆ ಕಾರ್ಖಾನೆಗಳನ್ನು ಸ್ಥಾಪಿಸಿದ್ದರಿಂದ ಜನರಿಗೆ ಹೆಚ್ಚಿನ ಪ್ರಯೋಜನ ಉಂಟಾಗುವುದೆಂಬದರಲ್ಲಿ ಮೋರ್ಲೆ ಪ್ರಭುಗಳಿಗೆ ವಿಶ್ವಾಸವಿಲ್ಲದೆ ಹೋದರೂ ಪರೀಕ್ಷಾರ್ಥ ಐದು ವರುಷಗಳ ವರೆಗೆ ಕೈಗಾರಿಕೆ ಇಲಾಖೆ ಡಿರೆಕ್ಟರರ ನೇಮಕಕ್ಕೆ ಅಪ್ಪಣೆಯು ದೊರೆಯಿತು. ಈ ಡಿರೆಕ್ಟರರವರ ಸಹಾಯದಿಂದ ಮದ್ರಾಸು ಸರಕಾರದವರಿಗೆ ಎಲುಮಿನಿಯಮ್ ಎಂಬ ಲೋಹದಿಂದ ಪಾತ್ರ ಮೊದಲಾದವುಗಳನ್ನೂ ಕ್ರೋಮ್ ಎಂಬುವುದರಿಂದ ಚರ್ಮವನ್ನು ಹದ ಮಾಡಿ ಚರ್ಮದ ಒಡವೆಗಳನ್ನೂ ತಯ್ಯಾರಿಸುವ ಕೈಗಾರಿಕೆಗಳನ್ನು ಈ ಸಂಸ್ಥಾನದಲ್ಲಿ ರೂಢಿಗೆ ತರಲು ಸಾಧ್ಯವಾಯಿತಲ್ಲದೆ ಕೈ ಮಗ್ಗಗಳ ಸ್ಥಿತಿಯನ್ನು ಸಹಾ ಒಳ್ಳಿತಾಗಿ ಮಾಡಲು ಉಪಾಯವಾಯಿತು. ಈ ಅಭಿವೃದ್ಧಿಯನ್ನು ನೋಡಿ ಮದ್ರಾಸು ಸರಕಾರದವರಿಗೆ ಕೈಗಾರಿಕೆಗಳ ವಿಷಯ ಇನ್ನಷ್ಟು ಮನಸ್ಸು ಕೊಡಲು ಕಾರಣವಾಯಿತು. ೧೯೦೮ನೇ ವರುಷಧಲ್ಲಿ ಔದ್ಯೋಗಿಕ ಪರಿಷತ್ತನ್ನು ಉದಕಮಂಡಲದಲ್ಲಿ ಏರ್ಪಡಿಸಿ ಆ ಪರಿಷತ್ತಿನಲ್ಲಿ ಮಂಜೂರಾದ ನಿರ್ಣಯಗಳನ್ನು ಇನ್ನೊಮ್ಮೆ ಇಂಡಿಯಾ ಗವರ್ನಮೆಂಟಿನವರ ಮುಖಾಂತರ ಮೋರ್ಲೆ ಪ್ರಭುಗಳ ಮುಂದಿಡಿಸಿದರು. ರೂ. ೧೫೦೦-೨೦೦೦ ತಲಬಿನ ಒಬ್ಬ ಕೈಗಾರಿಕೆ ಇಲಾಖೆಯ ಡಿರೆಕ್ಟರ್, ನೂಲು ವಸ್ತ್ರ ಮೊದಲಾದವುಗಳನ್ನು ರಂಗಾಯಿಸುವ ಮಾಹೀತಿದಾರರೊಬ್ಬರು ಕೈ ಮಗ್ಗ ಮತ್ತು ಚರ್ಮದ ಕಾರ್ಖಾನೆಗಳ ಮಾಹಿತಿದಾರರಿನ್ನೊಬ್ಬರು, ಈ ಮೇರೆಗೆ ಮೂರು ಜನ ಆಫೀಸರರು ಈ ಇಲಾಖೆಗೆ ನೇಮಿಸಲ್ಪಡಬೇಕೆಂತಲೂ ಮಾದರಿ ಕಾರ್ಖಾನೆಗಳನ್ನು ಸರಕಾರದವರು ಸ್ಥಾಪಿಸಬೇಕಲ್ಲದೆ ಕಲಾಶಾಲಾ ಕಾಲೇಜು ಮೊದಲಾದವುಗಳನ್ನು ಸಂಸ್ಥಾನದಲ್ಲಿ ಹೆಚ್ಚಾಗಿ ಏರ್ಪಡಿಸಿ ಕರಕೌಶಲ್ಯ ವಿದ್ಯೆಯು ಜನರಲ್ಲಿ ಪಸರುವಂತೆ ಮಾಡಬೇಕೆಂತಲೂ ಮದ್ರಾಸು ಸರಕಾರದವರ ವಿಜ್ಞಾಪನೆಯಾಗಿತ್ತು. ಇಂಡಿಯಾ ಸರಕಾರದವರು ಈ ವಿಜ್ಞಾಪನೆಯನ್ನು ಅಂಗೀಕರಿಸಿ ವಿಜ್ಞಾಪನೆಯಲ್ಲಿ ನಮೂದಿಸೋಣಾದ ಏರ್ಪಾಡುಗಳೆಲ್ಲವು ಅಗತ್ಯವೆಂತ ಶಿಫಾರಸು ಮಾಡಿದ್ದರು. ಆದರೆ ಮೋರ್ಲೆ ಪ್ರಭುಗಳಿಗೆ ಈ ಸರ್ತಿ ಸಹಾ ಈ ವಿಜ್ಞಾಪನೆಯನ್ನು ಇದ್ದಂತೆ ಅಂಗೀಕರಿಸುವುದು ಯುಕ್ತ ತೋರಲಿಲ್ಲ. ಮದ್ರಾಸು ಸರಕಾರದವರಿಗೆ ಬೇಕಾದ ಕಲಾ ಶಾಸ್ತ್ರ ಪಂಡಿತರನ್ನು ಒದಗಿಸಿಕೊಳ್ಳುವರೆ ಪ್ರಭುಗಳು ತಮ್ಮ ಸಮ್ಮತಿಯನ್ನು ಕೊಟ್ಟಿರುವರು. ಮಾದರಿ ಕಾರ್ಖಾನೆಗಳನ್ನು ಸ್ಥಾಪಿಸುವುದು ಯುಕ್ತವಲ್ಲ. ಇದರಕ್ಕಿಂತ ಕಾರ್ಖಾನೆಗಳಿಗೆ ಬೇಕಾದ ಹಣವನ್ನು ಕಲಾಶಿಕ್ಷಣ ಪಸರಣೆಗೆ ವಿನಿಯೋಗಿಸುವುದುತ್ತಮ. ಪ್ರಕೃತ ಯೂರೋಪಿಯ ದೇಶಗಳಲ್ಲಿ ಪ್ರಯೋಗದಲ್ಲಿರುವ ಕೈಗಾರಿಕೆಗಳ ನವಿನ ವಿಧಾನ ಮತ್ತು ಉಪಕರಣಗಳ ಮಾಹಿತಿಯನ್ನು ಜನರಲ್ಲಿ ಉಂಟುಮಾಡುವುದಕ್ಕೆ ಬೇಕಾದ ಹಣವನ್ನು ವೆಚ್ಚಮಾಡಬೇಕಲ್ಲದೆ ಇದಕ್ಕಿಂತ ಹೆಚ್ಚಾದ ಸಾಹಸವನ್ನು ಮಾಡುವುದು ಸರಕಾರದವರಿಗೆ ಯುಕ್ತವಲ್ಲ. ಸರಕಾರಿ ಕಾರ್ಖಾನೆಗಳಿಂದ ಜನರ ಖಾಸಗಿ ಕಾರ್ಖಾನೆಗಳಿಗೆ ನಷ್ಟವುಂಟಾಗುವುದೆಂತ ಸಹಾ ಮೋರ್ಲೆ ಪ್ರಭುಗಳು ಅಭಿಪ್ರಾಯಪಟ್ಟು ಇವುಗಳಿಂದ ಉಂಟಾಗುವ ಪ್ರಯೋಜನಕ್ಕಿಂತ ಹೆಚ್ಚಾದ ದ್ರವ್ಯ ವೆಚ್ಚವು ನಿರರ್ಥಕವಾಗಿ ಬೇಕಾಗುವುದೆಂತ ಸೂಚಿಸಿರುವರು.

ಸರಕಾರಿ ಕಾರ್ಖಾನೆಗಳಿಗೆ ಖಾಸಗಿ ಕಾರ್ಖಾನೆಗಳಿಗಿಂತ ಖರ್ಚು ಹೆಚ್ಚು ತಗಲುವುದೆಂಬುವುದು ನಿಜ. ಆದರೆ ಈ ಬಗ್ಯೆ ತಕ್ಕ ಮೇಲ್ವಿಚಾರವಿಟ್ಟು ಅನಾವಶ್ಯಕ ಖರ್ಚನ್ನು ಉಳಿಸಬಹುದು. ಕಲಾಶಾಲೆ ಕಾಲೇಜುಗಳೊಂದಿಗೆ ಮಾದರಿ ಕಾರ್ಖಾನೆಗಳು ಸಹಾ ಅಗತ್ಯ. ಕಲಾಶಾಲೆಗಳಲ್ಲಿ ಕಲಿತ ವಿದ್ಯೆಯನ್ನು ದೃಢೀ ಪಡಿಸುವುದಕೆ ಬೇರೆ ಸಾಧನ ಇಲ್ಲಿ ಇರದು. ದೊಡ್ಡ ದೊಡ್ಡ ಕಾರ್ಖಾನೆಗಳ ಲಾಭ ಮಾಹಿತಿ ಮತ್ತು ಅವುಗಳ ವ್ಯವಸ್ಥಾ ಮಾಹಿತಿ ಇಲ್ಲದ ದೇಶೀಯರು ತಮ್ಮ ಬಂಡವಾಳವನ್ನು ಕೈಗಾರಿಕೆಗಳಲ್ಲಿ ವಿನಿಯೋಗಿಸುವರೆ ಅಂಜುವರು. ಪಾಶ್ಚಾತ್ಯ ದೇಶಗಳಿಗೆ ಹೋಗಿ ದೊಡ್ಡ ದೊಡ್ಡ ಕೈಗಾರಿಗೆ ಕಾರ್ಖಾನೆಗಳನ್ನು ನೋಡುವರೆ ಅನುಕೂಲತೆಯು ಬಹಳ ಸ್ವಲ್ಪ ಜನರಿಗೆ ಮಾತ್ರ ನಮ್ಮಲ್ಲಿ ಇರುವುದು. ಈ ವಿದ್ಯಮಾನಗಳಲ್ಲಿ ಪಾಶ್ಚಾತ್ಯ ದೇಶದ ಮಾದರಿ ಕಾರ್ಖಾನೆಗಳನ್ನು ಇಲ್ಲಿ ಸರಕಾರದವರು ಪ್ರಥಮದಲ್ಲಿ ಸ್ಥಾಪಿಸಿ ಜನರನ್ನು ಈ ವಿಷಯದಲ್ಲಿ ಉದ್ಯುಕ್ತರನ್ನಾಗಿ ಮಾಡುವುದು ಸರಕಾರದವರ ಹಂಗಾಗಿತ್ತು. ಅಲ್ಲಹಾಬಾದಿನಲ್ಲಿ ಈ ತಿಂಗಳಲ್ಲಿಯೇ ಕೂಡಲಿಕ್ಕಿರುವ ಔದ್ಯೋಗಿಕ ಪರಿಷತ್ತಿನಲ್ಲಿ ಮದ್ರಾಸು ಸರಕಾರದ ಮೇಲಿನ ವಿಜ್ಞಾಪನೆಯನ್ನು ಜ್ಯಾರಿಗೆ ತರಬೇಕೆಂದು ಸ್ಟೇಟ್ ಸೆಕ್ರಿಟರಿಗಳಿಗೆ ಜಾಹೀರು ಮಾಡಿಕೊಳ್ಳುವ ನಿರ್ಣಯವನ್ನು ಪರ್ಯಾಲೋಚಿಸುವರಾಗಿ ತಿಳಿಯುತ್ತೇವೆ. ಹ್ಯಾಗೂ ಮದ್ರಾಸು ಸಂಸ್ಥಾನದ ಕೈಗಾರಿಕೆ ಅಭಿವೃದ್ಧಿಯು ಹೀಗೆ ಬಹಳಮಟ್ಟಿಗೆ ವಿಧಿವಶವೇ ಇರುವುದು.

ಬರುವ ಕೊಂಗ್ರೆಸ್ ಅಧ್ಯಕ್ಷರಾದ ಸರ್. ಡಬ್ಲೂ ವೆಡ್ಡರ್ಬರ್ನರವರು.

ಕೊಂಗ್ರೆಸ್ ಸಭೆಯ ವ ರಾಷ್ಟ್ರಿಯ ಪ್ರಗತಿಯ ಈ ಪ್ರಕೃತ ಸಂಧಿಯಲ್ಲಿ ಸರ್. ವಿಲ್ಲಿಯಮ್ ವೆಡ್ಡರ್ಬರ್ನರಿಗಿಂತ ಯೋಗ್ಯ ಗೃಹಸ್ಥರು ಆ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಲಿಕ್ಕೆ ದೊರಕರು. ಇತ್ತಲಿತ್ತ ಅಂಗ್ಲೋ-ಇಂಡಿಯನ ಭಾರತೀಯರೊಳಗೆ ಪರಸ್ಪರ ಅವಿಶ್ವಾಸ ಬೆಳದದೆ. ಬ್ರಿಟಿಷನಾಗಿ ಹುಟ್ಟಿ ಬೆಳದು ಅಂಗ್ಲೋ-ಇಂಡಿಯನರೊಳಗೊಬ್ಬನಾಗಿ ಇಲ್ಲಿ ೨೭ ವರ್ಷ ಭಾರತೀಯರೊಡನೆ ಸಹಾನುಭೂತಿಯಿಂದ ನಡೆದು ಅವರ ಸ್ವಭಾವ ಯೋಗ್ಯತೆ, ಬಯಕೆಗಳನ್ನು ಚನ್ನಾಗಿ ಅರಿತ ಈ ಗೃಹಸ್ಥರು ಇಂಗ್ಲೀಷ ವ ಅಂಗ್ಲೋ ಇಂಡಿಯನ ಮತ್ತು ಭಾರತೀಯ ಸಮಾಜಗಳನ್ನು ಒಡಂಬಡಿಸಲು ತಕ್ಕವರು. ರಿಫಾರ್ಮು ರೆಗ್ಯುಲೇಶನ್ ವಗ್ಯೆರೆ ಸಂಬಂಧದಲ್ಲಿ ಹಿಂದೂ ಮುಸಲ್ಮಾನರೊಳಗೆ ವೈಷಮ್ಯಕ್ಕೆ ಆಸ್ಪದವಾಗಿದೆ. ಭಾರತೀಯ ಜನಾಂಗದ ಬಗ್ಯೆ ತನು ಮನ ಧನವನ್ನು ನಿವೇದಿಸಿದ ಇತ್ತಂಡಗಳನ್ನು ಸಮದೃಷ್ಟಿಯಿಂದ ನೋಡುವ ಮನುಷ್ಯರೊಬ್ಬರು ಹಿಂದು ಮಹಮ್ಮದೀಯರೊಳು ಐಕಮತ್ಯ ಹುಟ್ಟಿಸಲಿಕ್ಕೆ ಅವಶ್ಯಕ. ಸರ್ ವಿಲ್ಲಿಯಮರು ಅಂತಹ ಮನುಷ್ಯರು. ಹಿಂದೂ ಮಹಮ್ಮದೀಯರ ಐಕ್ಯವನ್ನು ತನ್ನ ಉದ್ದಿಶ್ಯವಾಗಿಟ್ಟು ಹೋಗುತ್ತೇನೆಂದು ತನ್ನನ್ನು ಕಳುಹಿಸಿಕೊಡ ನೆರದ ಸಭೆಗೆ ಇವರು ಹೇಳದರು. ಆ ಸಭೆಗೆ ಇಂಗ್ಲಾಂಡಿನಲ್ಲಿ ಈಗ ಇರುವ ಹಿಂದೂ ಮಹಮ್ಮದೀಯ ಮುಂದಾಳುಗಳು ಸರ್ ವಿಲ್ಲಿಯಮರ ಗೌರವಾರ್ಥ ಹಾಜರಿದ್ದರು. ಉಭಯ ವಿಭಾಗ ಜೋಡಣೆಗೆ ಹೆಚ್ಚು ಪ್ರಯತ್ನಪಡುವ ಮತ್ತು ಆ ಕುರಿತು ದೀರ್ಘಕಾಲ ಆಲೋಚಿಸಿರುವ ಮಿ. ಗೋಖಲೆಯವರು ಈ ಸಾರಿ ಸರ್ ವಿಲ್ಲಿಯಮರು ಇಲ್ಲಿ ಇರುವಷ್ಟು ಕಾಲ ಅವರ ಖಾಸಗಿ ಸೆಕ್ರಿಟರಿಯಾಗುವದರಿಂದ ಆ ಪ್ರಯತ್ನಗಳು ಫಲಿಸುವ ಕೋರಿಕೆಯದೆ. ಈ ದೇಶದ ಜನರ ಕಡೆಗೆ ಸರ್ ವಿಲ್ಲಿಯಮರಿಗಿಂತ ಹೆಚ್ಚು ಪ್ರೀತಿ ತೋರಿಸುವ ಯಾ ಸ್ವಾರ್ಥತ್ಯಾಗ ಮಾಡುವ ಇಂಗ್ಲೀಷ ಗೃಹಸ್ಥರು ಇಲ್ಲವೆನ್ನಬಹುದು. ತನ್ನ ೭೨ನೇ ವಯಸ್ಸಿನಲ್ಲಿ ಇವರು ನಮಗೋಸ್ಕರ ಹಿಂದೂಸ್ಥಾನಕ್ಕೆ ಕೊಂಗ್ರೆಸ್ ಅಧ್ಯಕ್ಷರಾಗಿ ತಿರಿಗಿ ಬರ ಸಮ್ಮತಿಸಿದ್ದೇ ಇದಕ್ಕೆ ಪ್ರಮಾಣವಾಗಿದೆ.

ಸರ್ ವಿಲ್ಲಿಯಮರು ೧೮೩೮ನೇ ಇಸವಿ ಮಾರ್ಚಿ ೨೫ರಲ್ಲಿ ಸ್ಕೋಟ್ಲಾಂಡಿನ ಮುಖ್ಯ ಪಟ್ಟಣವಾದ ಎಡಿನ್ಬರೋ ನಗರದಲ್ಲಿ ಬಹುಕಾಲದಿಂದ ಹೆಸರುವಾಸಿಯಾದ ದೊಡ್ಡ ಮನೆತನದಲ್ಲಿ ಜನಿಸಿದರು. ಇವರ ಹಿರಿಯರು ಒಂದು ಶತಮಾನದಿಂದೀಚೆ ಇಂಡಿಯನ್ ಸಿವಿಲ್ ಸರ್ವಿಸಿನಲ್ಲಿದ್ದ ಕಾರಣ ಇವರಿಗೆ ಹಿಂದುದೇಶದಲ್ಲಿಯೂ ಅದರ ಜನರಲ್ಲಿಯೂ ತಾತ್ಪರ್ಯ ಹುಟ್ಟಲಿಕ್ಕೆ ಕಾರಣವಾಯಿತು. ಸರ್ ಹೆನ್ರಿ ಕೊಟ್ಟನ್ನರ ಕುಟುಂಬವೂ ಹೀಗೆಯೇ ಅನೇಕ ಕಾಲದಿಂದ ಪರಂಪರೆಯಾಗಿ ಸಿವಿಲ್ ಸರ್ವಿಸಿನಲ್ಲಿದೆ. ಸರ್ ವಿಲ್ಲಿಯಮರು ೧೮೬೦ರಲ್ಲಿ ಬೊಂಬ್ಯಾ ಇಲಾಖೆಯನ್ನು ಸೇರಿ ಅಲ್ಲಿ ಕಮಿಶನರ್ ಗವರ್ನಮೆಂಟ್ ಸೆಕ್ರೆಟರಿ ವಗೈರೆ ಹುದ್ದೆಗಳನ್ನು ನೋಡಿ ಕಡೆಗೆ ಹ್ಯಾಕೋರ್ಟ ಜಡ್ಜರಾದರು. ಗವರ್ನಮೆಂಟ್ ಸೆಕ್ರೆಟರಿಯಾಗಿದ್ದಾಗ ದೇಶೀಯ ರಾಜಕುಮಾರರ ಬಗ್ಯೆ ರಾಜಕೋಟೆಯಲ್ಲಿ ರಾಜಕುಮಾರ ಕೋಲೇಜನ್ನು ಸ್ಥಾಪಿಸಿದರು. ಇವರು, ಭಾರತೀಯರು ದೇಶೀಯ ರಾಜರ ಆಶ್ರಯದಲ್ಲಿ ಸುಖವಾಗಿ ಬಾಳುವರೆಂಬ ಅಭಿಮತವುಳ್ಳವರಾದ್ದರಿಂದ ಅಂತಹ ರಾಜಗಳ ಅಸ್ತಿವಾರವನ್ನು ಬಲಪಡಿಸುವರೆ ಪ್ರಯತ್ನಿಸಿದರು.

ಸರ್ ವಿಲ್ಲಿಯಮರು ಮುಖ್ಯವಾಗಿ ರೈತರ ಹಿತಚಿಂತಕರಾಗಿದ್ದರು. ಈ ದೇಶದ ರೈತನ ಸಂಕಷ್ಟಗಳ ಮೂರು ಮುಖ್ಯ ಕಾರಣಗಳು ಯಾವವಂದರೆ (೧) ಯಾವದೊಂದು ಕಾನೂನಿಗೆ ಒಳಪಡದ ರೆವಿನ್ಯೂ ಸೆಟ್ಲ್ಮೆಂಟುಗಳು. (೨) ಸಾಲದ ಬಡ್ಡಿ. (೩) ವ್ಯಾಜ್ಯಗಳ ಖರ್ಚು. ಇವುಗಳಿಗೆ ಅವರು ಕಲ್ಪಿಸಿದ ನಿವೃತ್ತಿಗಳು:-(೧) ದಬ್ಬಣದ ಕೆಲವು ಹಳ್ಳಿಗಳಲ್ಲಿ ಪರಕ್ಷಾರ್ಥ ಕಾಯಂ ತೀರ್ವೆಯನ್ನು ವಿಧಿಸುವದು. (೨) ಎಗ್ರಿಕಲ್ಚರಲ್ ಬ್ಯಾಂಕುಗಳ ಮೂಲಕ ರೈತನನ್ನು ಬಡ್ಡಿಗಾರನ ಬಾಯಿಯಿಂದ ತಪ್ಪಿಸುವದು (೩) ಲವಾದ್ ಯಾ ಪಂಚಾಯತ ಕೋರ್ಟುಗಳನ್ನು ಸ್ಥಿರಗೊಳಿಸಿ ಕೋರ್ಟು ಖರ್ಚು ವ ಕೋರ್ಟು ತೊಂದರೆಗಳನ್ನು ನಿವಾರಿಸುವದು. ಈ ಮೂರು ಉಪಾಯಗಳಿಗೆ ಅನೇಕ ವಿದ್ಯಾವಂತ ವ ಸಂಭಾವಿತ ಗೃಹಸ್ಥರ ಬೆಂಬಲವಿದ್ದರೂ ಕೊನೆಗೆ ಸ್ಟೇಟ್ ಸೆಕ್ರೆಟರಿಗಳಿಗೆ ಅಥವಾ ವರಿಷ್ಟ ಸರಕಾರಕ್ಕೆ ಸಂತೋಷದೆ ಅವು ಫಲಿಸಲಿಲ್ಲ. ಈಗಲೀಗ ಸರಕಾರದವರು ವಿಲ್ಲೇಜ ಕೋರ್ಟು, ಕೋಒಪರೇಟಿವ್ ಸೊಸ್ಯಾಟಿ (ಪರಸ್ಪರ ಸಹಾಯಕ ಸಂಘ) ಗಳನ್ನು ಸ್ಥಾಪಿಸಿ ಉತ್ಸಾಹಿಸುವದನ್ನು ನೋಡಿದರೆ ಸರ್ ವಿಲ್ಲಿಯಮರ ವಿವೇಕವು ವ್ಯಕ್ತವಾಗುವದು. ಇವರು ಸ್ತ್ರೀ ಶಿಕ್ಷಣಕ್ಕೆ ಉತ್ತೇಜನಕೊಟ್ಟು ಅಲ್ಲಲ್ಲಿ ಬಾಲಿಕಾ ಪಾಠಶಾಲೆಗಳನ್ನು ಸ್ಥಾಪಿಸಿ ಸಹಾಯಕರಾದದ್ದಲ್ಲದೆ ತಾನೇ ಈ ಬಗ್ಯೆ 10 ಸಾವಿರ ರೂಪಾಯ ವಂತಿಗೆ ಹಾಕಿದ್ದರು.

೧೮೮೫ರಲ್ಲಿ ಮಿ. ಹ್ಯೂಮ್ ಮತ್ತು ಬೊನ್ನರ್ಜಿಯವರೊಡನೆ ಸರ್ ವಿಲ್ಲಿಯಮರು ಕೊಂಗ್ರೆಸ್ಸನ್ನು ಸ್ಥಾಪಿಸಿದರು. ಆಗ್ಯೆ ವೈಸರಾಯಿ ಮುಂತಾಗಿ ಎಲ್ಲಾ ಉದ್ಯೋಗಸ್ಥರಿಗೂ ಕೊಂಗ್ರೆಸ್ ಸಭೆಯಲ್ಲಿ ವಿಶ್ವಾಸವಿತ್ತು. ಸರ್ ವಿಲ್ಲಿಯಮರಂತಹ ಗೃಹಸ್ಥರು, ಅಂದರೆ ಸಿವಿಲ್ ಸರ್ವಿಸಿನಲ್ಲಿ ತಮ್ಮ ಸಾಮರ್ಥ್ಯ ಪ್ರಮಾಣಿಕತೆಗಳನ್ನು ತೋರಿಸಿ ಉಚ್ಚಸ್ಥಾನವನ್ನು ಪಡದು ಎಲ್ಲಾ ಪಕ್ಷಗಳ ಮನ್ನಣೆಗೆ ಪಾತ್ರರಾದ ಆಂಗ್ಲೇಯ ಗೃಹಸ್ಥರು ಈ ಸಂಸ್ಥೆಯಲ್ಲಿ ವಿಶ್ವಾಸವಿಟ್ಟರೆ ಕೊಂಗ್ರೆಸ್ ಸಭೆಗೂ ಆಂಗ್ಲೋ ಇಂಡಿಯನ ಸಮಾಜಕ್ಕೂ ಈಗ ಇರುವ ವೈಷಮ್ಯವು ಮಾಜಬಹುದು.

೧೮೮೭ರಲ್ಲಿ ಇವರು ಪೆನ್ಶನ್ ಪಡೆಯುವಾಗ ಬೊಂಬಾಯಿ ಗವರ್ನರವರು ಇವರ ಗುಣಗಣಗಳನ್ನು ಶ್ಲಾಘಿಸಿ ಇವರು ಭಾರತೀಯರ ಅಭಿವೃದ್ಧಿಗೆ ಮಾಡಿದ ಸ್ಥಿರಪ್ರಯತ್ನಗಳಿಂದ ಜನರ ಪ್ರೀತಿಯನ್ನೂ ಕೃತಜ್ಞತೆಯನ್ನೂ ಘಳಿಸಿರುವರಾಗಿ ನಂಬುತ್ತೇನೆಂದು ಅಪ್ಪಣೆ ಕೊಡಿಸಿದರು. ಬೊಂಬಾಯಿ ನಿವಾಸಿಕರು ಕೃತಜ್ಞತಾ ಚಿನ್ಹವಾಗಿ ವಂತಿಗೆ ಹಾಕಿ ೬೦೦೦ ಪವನು ಖರ್ಚು ತಗಲುವ ಇವರ ಒಂದು ಪ್ರತಿಬಿಂಬವನ್ನು ಮಾಡಿಸಿದ್ದಲ್ಲದೆ ಇವರ ಹೆಸರಲ್ಲಿ ಆ ಸಂಸ್ಥಾನದ ರಾಷ್ಟ್ರೀಯ ಅಭಿವೃದ್ಧಿಗಾಗಿ ಒಂದು ಫಂಡನ್ನು ಏರ್ಪಡಿಸಿದರು. ಸರ್ ವಿಲ್ಲಿಯಮರು ಸ್ವತಹಾ ಭಾರತೀಯರ ಸಲುವಾಗಿ ಒಂದು ಲಕ್ಷ ರೂಪಾಯಿಗೆ ಮೀರಿ ವೆಚ್ಚಮಾಡಿರುವರೆಂದು ತಿಳಿದುಬರುತ್ತದೆ.

ಇವರು ಇಂಗ್ಲಾಂಡಿಗೆ ತೆರಳಿದ ಮೇಲೂ ಹಿಂದೂ ದೇಶವನ್ನು ಮರೆಯದೆ ಇನ್ನೂ ದೇಶೀಯರ ಬಗ್ಯೆ ಪೇಚಾಡುವರು. ಇಂಡ್ಯದ ರಾಜ್ಯಸೂತ್ರವು ಪಾರ್ಲಿಮೆಂಟಿನ ಕೈಯ್ಯಲ್ಲಿದೆ. ಪಾರ್ಲಿಮೆಂಟಿನ ಸಭೆಯು ಬ್ರಿಟಿಷ ಜನಾಂಗವನ್ನು ಆಧರಿಸಿದೆ. ಆದ್ದರಿಂದ ಪಾರ್ಲಿಮೆಂಟು ಸಭೆಗೆ ಮತ್ತು ಬ್ರಿಟಿಷ ಜನಾಂಗಕ್ಕೆ ನಮ್ಮ ಹಾಲುಹವಾಲುಗಳನ್ನು ವಿವರಿಸಿ ಅವರ ಮುಖಾಂತರ ಕಾರ್ಯ ಕೈಗೂಡಿಸಬೇಕೆಂಬದು ಸರ್ ವಿಲ್ಲಿಯಮರ ಸಾಧನೆಯಾಗಿದೆ. ಈ ಬಗ್ಯೆ ಹಿಂದುಸ್ಥಾನದ ಹಿತವನ್ನು ಬಯಸಿ ಈ ದೇಶದ ಸರ್ವ ಮಾಹಿತಿಯನ್ನು ಪಡೆಯ ಸಿದ್ಧವಿರುವ ೧೫೦ ಪಾರ್ಲಿಮೆಂಟ್ ಮೆಂಬರದೊಂದು ಕಮಿಟಿಯನ್ನು ಏರ್ಪಡಿಸಿರುವರು. ಬ್ರಿಟಿಷ ಜನಾಂಗಕ್ಕೆ ಹಿಂದೂ ದೇಶದ ನಿಜವಾದ ಸ್ಥಿತಿಯನ್ನು ತಿಳಿಯಗೊಡಿಸಲು "ಇಂಡಿಯಾ" ಎಂಬ ವಾರಪತ್ರವನ್ನು ಸ್ಥಾಪಿಸಿರುವರು.

ಈ ಮಹಾನುಭಾವರು ಮೊದಲನೇ ಸಾರಿ ಕೊಂಗ್ರೆಸ್ ಅಧ್ಯಕ್ಷರಾಗಿ ೧೮೮೯ನೇ ಇಸವಿಯಲ್ಲಿ ಇಂಗ್ಲಾಂಡಿನಿಂದ ಬಂದಾಗ್ಯೆ ಮಾಡಿದ ಭಾಷಣದ ಒಂದು ವಾಕ್ಯದ ತಾತ್ಪರ್ಯವನ್ನು ಹೇಳಿ ಇವರ ಚರಿತ್ರ ಸಾರಾಂಶವನ್ನು ಮುಗಿಸುವೆವು.

"ನಾನು ನಿಮ್ಮೊಡನೆ ೨೫ ವರ್ಷವಿದ್ದೆನು. ಆ ಕಾಲದಲ್ಲಿ ಭಾರತೀಯರ ನಿರ್ದಯೆ ಏನೆಂದು ಕಾಣಲಿಲ್ಲ. ಆ ಕಾಲದಲ್ಲಿ ಭಾರತೀಯರ ನೌಕರಿಯಲ್ಲಿದ್ದು ಅವರ ಉಪ್ಪನ್ನು ಉಂಡಿದ್ದೇನೆ. ನನ್ನ ಉಳಿದ ಜೀವನಾಂಶವನ್ನು ಸಹ ನನ್ನಲ್ಲಿ ಶಕ್ತಿ ಇರುವ ಪರ್ಯಂತ ಅವರ ಚಾಕರಿಯಲ್ಲೇ ಕಳೆಯಬೇಕೆಂದು ಆಶಿಸಿರುವೆನು".

ಮಹಾರಾಣಿ ಗೃಹಶೀಲೆ.

ಕಳೆದ ಸಂಚಿಕೆಯಿಂದ ಮುಂದರಿಸಿದುದು.

ಬಿ. ಆನಂದ ರಾವ್ ಇವರಿಂದ.

ಮಹಾರಾಜನು ತಿಳಿಸಿದ ಅನಿರೀಕ್ಷಿತವಾದ ಮತ್ತು ಆಕಸ್ಮಿತವಾದ ಶುಭವಾರ್ತೆಯ ಶ್ರವಣ ಮಾತ್ರದಿಂದಲೇ ಗೃಹಶೀಲೆಯು ಆನಂದಾಶ್ರುಜಲ ಸಮುದ್ರದಲ್ಲಿ ಮುಳುಗಿ ಹೋಗಿ ಸ್ಮೃತಿ ತಪ್ಪಿ ತೀರಕ್ಕೆ ತೇಲಿ ಬಂದು ಮೂರ್ಛಿತಳಾಗಿ ಬಿದ್ದಳು. ಮಹಾರಾಜನು ಮುಖದ ಮೇಲೆ ಜಲಸಂಪ್ರೋಕ್ಷಣೆ ಮಾಡಲು ತುಸ ಹೊತ್ತಿನಲ್ಲೇ ಅವಳಿಗೆ ಚೈತನ್ಯವುಂಟಾಯಿತು. ಆದರೆ ಕೆಲವು ನಿಮಿಷ ಅವಕ್ಕಾಗಿ ಚಲಿಸಲಿಕ್ಕೆ ಶಕ್ತಿಯಿಲ್ಲದೆ ಕೃತಜ್ಞತಾ ದೃಷ್ಟಿಯಿಂದ ಪತಿಯನ್ನೇ ಆಲೋಚಿಸುತ್ತ ಮಲಗಿದಳು.

ಅಹಲ್ಯಾ ಸೀತಾರಾಮರು ಸರ್ವ ಚರಿತ್ರೆಯನ್ನು ಪ್ರಿಯಂವದೆಯಿಂದ ತಿಳಿದವರಾಗಿ ಜನನಿಯ ಪಾದ ಕಮಲಗಳಿಗೆ ನಮಸ್ಕರಿಸಿ, ಅವಳ ಸಮೀಪ ಬಂದು ಕುಳಿತರು.

ಸ್ವಲ್ಪ ಹೊತ್ತಿನಲೇ ಗೃಹಶೀಲಳಿಗೆ ಪೂರ್ಣ ಚಲನಾ ಶಕ್ತಿ ಬರಲು, ಅವಳು ಬಾಲಕರೀರ್ವರನ್ನೂ ಚುಂಬಿಸಿ ತನ್ನ ಹೃದಯಕ್ಕೆ ತಬ್ಬಿಕೊಂಡು:—"ಶ್ರೀ ಕೃಷ್ಣ! ಅಕ್ಷತ ಶರೀರಾದ ಈ ನನ್ನ ಚಿರಂಜೀವಿಗಳ ಮುಖವನ್ನು ನೋಡಿದ ಕಾರಣ ಕೃತಾರ್ಥೆಯಾದೆನು. ಬಾಲಕರೇ! ಕಂದನೇ! ವತ್ಸಳೇ! ನಿಮ್ಮಿಬ್ಬರಿಗೆ ಯಾವ ಅವಸ್ಥೆಯು ಸಂಭವಿಸಿತೋ ಎಂದು ಅಹೋ ರಾತ್ರಿ ನಿದ್ರೆಗೆಟ್ಟು ಯೋಚನೆ ಪಟ್ಟು ಎಲ್ಲಿಯಾದರೂ ಒಂದು ತಡವೆ ಹಠತ್ತಾಗಿ ನಿದ್ರೆ ಬಿದ್ದರೆ ದುಸ್ವಪ್ನಗಳನ್ನು ಕಂಡು ಬೆದರಿ ಗೋಳಿಟ್ಟ ನಿಮ್ಮ ಈ ಗರ್ಭಧಾರಿಣಿಯು ಧನ್ಯಳಾದಳು. ಕರುಣಾಸಾಗರರಾದ ಆರ್ಯರು ನಿಮ್ಮ ತಂದೆಯವರೆಂದು ನಿಮಗೆ ಗೊತ್ತಿರ ಬಹುದು. ನಿಮ್ಮನ್ನು ಬಹಳ ಜಾಗ್ರತೆಯಿಂದಲೂ ಪ್ರೀತಿಯಿಂದಲೂ ಸಂರಕ್ಷಣೆ ಮಾಡಿದರು. ಮಾತ್ರವಲ್ಲ, ಒಮ್ಮೆ ನನ್ನನ್ನು ಸಹ ಅಪಮೃತ್ಯುವಿನಿಂದ ತಪ್ಪಿಸಿದ್ದರು. ಅವರ ಅಡಿದಾವರೆಗಳಿಗೆರಗಿರಿ!" ಎಂದು ಹೇಳಿ ಅತಿರೇಕ ಆನಂದಾಶ್ರುಗಳನ್ನು ಸುರಿಸಿದಳು. ಅವಳ ಸರ್ವಾಂಗವೂ ಗಂಗಾತೀರ್ಥದಿಂದ ಅಭಿಕ್ತವಾದಂತೆ ಶೀತಳವಾಗಿ ರೋಮಾಂಚಿತವಾಯಿತು.

ಆಗ ಚಂದ್ರಶೇಖರನು ಗೃಹಶೀಲೆಯ ಅಶ್ರುಧಾರೆಗಳನ್ನು ತನ್ನ ರೇಶ್ಮೆಯ ಕೈ ಬಟ್ಟೆಯಿಂದೊರಸುತ್ತ:—"ಕಾಮಕಲ್ಪವಲ್ಲರಿ! ದೀರ್ಘಕಾಲದ ವರೆಗೆ ಕಪಟಾಚರಣೆ ಮಾಡಿ ಮಿಥ್ಯವನ್ನಾಡಿದ ಮಹತ್ಪಾಪದ ನಿಮಿತ್ತದಿಂದ ಪರಲೋಕಬಾಹಿರನಾದ ನನ್ನ ಸರ್ವಪರಾಧವನ್ನೂ ಕ್ಷಮಿಸು. ಎಂತಹ ಪ್ರಾಯಶ್ಚಿತ್ತವನ್ನು ಮಾಡಿ ಈ ಪಾಪವನ್ನು ನಿವಾರಣೆ ಮಾಡುವುದೋ ಕಾಣೆನು. ಮನಮೋಹಿನಿ! ನೀನು ಮೊನ್ನೆ ದಿವಸ ನಿನ್ನ ಜನ್ಮಸ್ಥಾನಕ್ಕೆ ಹೋದಂದಿನಿಂದ ನಾನು ಪ್ರತಿ ಉಶ್ವಾಸ ನಿಶ್ವಾಸಗಳಲ್ಲಿಯೂ ಪ್ರಾಣವಾಯುವು ಹಾರಿ ಹೋಗುವುದೋ ಎಂಬಂತೆ ವ್ಯಥೆ ಪಟ್ಟೆನು. ಜಾನಕೀ ಗರ್ಭಧಾರಿಣಿಯಾದ ಈ ಭೂ ದೇವಿ ವಿಶ್ವಂಭರೆಯೇ ಇದಕ್ಕೆ ಸಾಕ್ಷಿ. ನಿನ್ನ ಮುಖ ಚಂದ್ರನಿಲ್ಲದ ನಮ್ಮ ಈ ರಾಜಮಂದಿರವು ಈ ಹೊತ್ತಿನ ವರೆಗೆ ಅಂಧಕಾರಮಯವಾಗಿ ತೋರಿತು. ಪ್ರಾಣೇಶ್ವರಿ! ಕ್ಷಣ ಮಾತ್ರವಾದರೂ ನಿನ್ನ ವಿರಹವನ್ನು ತಾಳಲಾರೆನು. ಶೇಷಶಯನನಾಗಿ ಸದಾ ಕ್ಷೀರ ಸಮುದ್ರವಾಸಿಯಾಗಿದ್ದರೂ ನಾರಾಯಣನಿಗೆ ಪಕ್ಷಸ್ಥಳದಲ್ಲಿ ಲಕ್ಷ್ಮಿಯಿಲ್ಲದಿದ್ದರೆ ಸೌಖ್ಯವುಂಟೇ? ನನ್ನ ಪೂರ್ವ ಜನ್ಮದ ಪುಣ್ಯದ ಫಲದಿಂದಲೇ ನಾನು ನಿನ್ನಂತಹ ಭಾರ್ಯಾರತ್ನವನ್ನು ಪಡೆದೆನು. ಜನ್ಮ ಜನ್ಮದಲ್ಲಿಯೂ ಇಂತಹ ಸುಖವು ನನಗೆ ಪ್ರಾಪ್ತವಾಗಲಿಯೆಂದು ಮಾತ್ರವೇ ಕುಲದೇವನೂ, ಸರ್ವತಂತ್ರ ಸ್ವತಂತ್ರನೂ ಆದ ಶ್ರೀ ಮಂಗೇಶ ಮಹಾರುದ್ರನೊಡನೆ ನಾನು ಅನನ್ಯಭಾವದಿಂದ ಬೇಡಿಕೊಳ್ಳುವೆನು." ಎಂದು ಹೇಳಿ, ಪತ್ನಿಯನ್ನು ಮೃದು ಮಧುರ ನುಡಿಗಳಿಂದ ಸಂತೈಸಿ, ಅವಳ ಶಿರವನ್ನು ತನ್ನ ಹೃದಯದ ಮೇಲಿರಿಸಿಕೊಂಡನು. ಆಗ ಗೃಹಶೀಲಳ ಆ ಸೌಂದರ್ಯಮಯವಾದ ಕೋಮಲಾಂಗವು ಮಾಧವೀಲತೆಯು ಮಲಯಾನಿಲಸ್ಪರ್ಶನದಿಂದ ತೂಗಾಡುವ ಹಾಗೆ ಸ್ವಲ್ಪ ಸ್ವಲ್ಪ ಕಂಪಿತವಾಗುತಿತ್ತು.

ಈ ಆನಂದ ಸಮಯದಲ್ಲಿ ಸಂಧ್ಯಾಕಾಲವಾಗಲು ತ್ರಿಕಾಲ ಸೂಚನೆಯನ್ನು ಕೊಡುವ ವಂಧಿಮಾಗಧರು ವೀಣೆಯನ್ನು ಬಾರಿಸುತ್ತ:—

ಆಡುಗೆ ವೃದ್ಧಿಯುಮೆಂದುಂ |
ಪಾಡುಗೆ ತವ ವಿಖ್ಯಾತಿಯನೆಲ್ಲರ್ ಪ್ರಜೆಗಳ್ ||
ಬಾಡುಗೆ ನಿನ್ನಯ ರಿಪುಗಳ್ |
ಮಾಡುಗೆ ಸರ್ವರ್ಗೆ ಸೌಖ್ಯಮಂ ಭುವನೇಶಂ ||

ಎಂದು ಮಹಾರಾಜನ ಸ್ತುತಿಪಾಠ ಮಾಡಿ ಗೀತವಾಡಿದರು.

ಅನಂತರ ಚಂದ್ರಶೇಖರನು ಪತ್ನಿ ಬಾಲಕ ನೆಂಟರಿಷ್ಟರೊಡನೆ ಅಂತಃಪುರಕ್ಕೆ ತೆರಳಿದನು. ಮರುದಿನವೇ ಅಹಲ್ಯಾವಿದ್ಯಾಚಂದ್ರರಿಗೆ ಬಹಳ ಸಮಾರೋಹದಿಂದ ವಿವಾಹವಾಗಿ ಏಳು ದಿವಸಗಳ ಪರಿಯಂತರವೂ ರಾಜಮಂದಿರವು ಉತ್ಸವಪೂರ್ಣವಾಯಿತು.

ಗೃಹಶೀಲೆಯನ್ನು ಪುನಹ ಮಹಾರಾಜನು ಪರಿಗ್ರಹಿಸಿದನೆಂಬ ವಾರ್ತೆಯು ವಾಯುವೇಗದಿಂದ ಅಷ್ಟದಿಕ್ಕುಗಳಿಗೂ ಹಬ್ಬಿತು. ಸರ್ವತ್ರವೂ ಆನಂದಮಯವಾಯಿತು.

ಸಮಾಪ್ತಿ.

ಹಸಿ ಶುಂಠಿಯನ್ನು ಶುದ್ಧಿ ಮಾಡಿ ಒಣಗಿಸಿಟ್ಟುಕೊಳ್ಳುವ ವಿಧಾನ.

ಬೊಂಬಾಯಾಧಿಪತ್ಯದಲ್ಲಿ ಅಸಿಸ್ಟೆಂಟ ವನಸ್ಪತಿ ನೀತಿಶಾಸ್ತ್ರಜ್ಞರಾದ ಮೆ|| ಜಿ. ಬಿ. ಪಟ್ಟವರ್ಧನ್ ಎಂಬುವರು ಹಸಿ ಶುಂಠಿಯನ್ನು ಶುದ್ಧಿ ಮಾಡಿಕೊಳ್ಳುವ ವಿಷಯದಲ್ಲಿ ಕೆಳಗೆ ಕಂಡರೀತಿ ಬರೆದಿರುತ್ತಾರೆ.

ಹಸಿ ಶುಂಠಿಯನ್ನು ಶುದ್ಧಿ ಮಾಡಿಕೊಳ್ಳುವದರಿಂದ ಪ್ರಯೋಜನ:—ಹಸಿ ಶುಂಠಿಯನ್ನು ಕೆಲವು ದಿನಗಳ ವರಿಗೂ ಸುಮ್ಮನೇ ಇಟ್ಟಲ್ಲಿ ಅದು ನಾರು ಬಿಟ್ಟುಕೊಂಡು ಒಣಗಿ ಹೋಗಿ ಔಷದಕ್ಕೆ ಉಪಯೋಗವಿಲ್ಲದೆ ಹೋಗುತ್ತದೆ. ಆದರೆ ಅದನ್ನು ಮಾತ್ರ ಮುಂದೆ ವಿವರಿಸುವ ರೀತಿಯಲ್ಲಿ ಉಪಚರಿಸಿ ಇಟ್ಟುಕೊಂಡಲ್ಲಿ ವರುಷಗಟ್ಲೆಯಾದರೂ ಕೆಡುವದಿಲ್ಲ. ವ್ಯಾಪಾರ ಮುಂತಾದ ಕಾರ್ಯಗಳಿಗೋಸುಗ ಅದನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವದೂ ಸುಲಭವಾಗುತ್ತದೆ. ಹಸಿ ಶುಂಠಿಗೆ ಮಾಡತಕ್ಕ ಉಪಚಾರವು -ನೀರಿನಲ್ಲಿ ತೊಳೆಯುವದು, ಸುಣ್ಣದಲ್ಲಿ ನೆನೆಸುವದು, ಗಂಧಕದ ಹೊಗೆಯನ್ನು ಕೊಡವದು ಈ ಮೂರು ಕ್ರಮಗಳನ್ನು ಒಡಗೊಂಡಿರುವದು.

ಹೊಗೆಯ ಕೊಠಡಿ:—ಹೊಗೆಯ ಕೊಠಡಿಯು ೧೨ ಅಡಿ ಉದ್ದ, ಅಷ್ಟೇ ಅಗಲ ಮತ್ತು ಎತ್ತರಉಳ್ಳದ್ದಾಗಿ ಅದರಲ್ಲಿ ಮೂರುಮೂರಡಿ ಎತ್ತರವುಳ್ಳ ಮೂರು ಹಂತಗಳನ್ನು ಬಿದಿರಿನ ದಬ್ಬೆಗಳಿಂದ ತಯಾರುಮಾಡಿಸಿಟ್ಟುಕೊಳ್ಳಬೇಕು. ಹಂತಗಳ ಮೇಲೆ ೯ ಅಂಗುಲ ವಿಶಾಲವುಳ್ಳ ಗುಂಡಾಗಿರುವ ಪುಟ್ಟಿಗಳನ್ನು ಒಂದರ ಪಕ್ಕದಲ್ಲೊಂದಾಗಲಿ, ಒಂದರ ಮೇಲೊಂದಾಗಲಿ ಇಟ್ಟಿರಬೇಕು. ಕೊಠಡಿಗೆ ಒಂದೇ ಬಾಗಲಿಟ್ಟು ಒಂದು ಕಡೆಯ ಗೋಡೆಯೊಳಕ್ಕೆ ಸೇರಿದಹಾಗೆ ಒಲೆಯೊಂದನ್ನು ಕಟ್ಟಿಸಿರಬೇಕು. ಒಲೆಯು ನೆಲದ ಮಟ್ಟಕ್ಕೆ ಸರಿಯಾಗಿ ಗೋಡೆಯಲ್ಲಿ ಮಾಡಿದ ಗೂಡಿನಂತೆ ಇದ್ದುಕೊಂಡು ಕೊಠಡಿಯ ಹೊರಗಿನಿಂದ ಉರಿಹಾಕುವಂತೆ ಇರಬೇಕು. ಈ ಒಲೆಯಲ್ಲಿ ಉರಿಹಾಕಿದಾಗ ಕಟ್ಟಿಗೆಯಿಂದಾಗುವ ಹೊಗೆಯು ಕೊಂಚವಾದರೂ ಕೊಠಡಿಯೊಳಕ್ಕೆ ಪ್ರವೇಶಿಸ ಕೂಡದು. ಒಲೆಯ ಗೂಡು ೨ ಅಡಿ ಅಗಲ ಅಷ್ಟೇ ಎತ್ತರವಿದ್ದರೆ ಸಾಕು. ಒಲೆಯು ಕೊಂಚಮಟ್ಟಿಗೆ ಕೊಠಡಿಯೊಳಭಾಗಕ್ಕೆ ಚಾಚಿಕೊಂಡಿರಬೇಕು. ಈ ಚಾಚಿಕೊಂಡಿರುವ ಭಾಗದ ಮೇಲೆ ಒಂದು ಕಬ್ಬಿಣದ ಪೆಟ್ಟಿಗೆಯನ್ನು ಇಟ್ಟಿರತಕ್ಕದ್ದು. ಈ ಪೆಟ್ಟಿಗೆಯು ಹೊರಕ್ಕೆ ಕಾಣಿಸುವದಿಲ್ಲ. ಹೊರಗಿನಿಂದ ಗೋಡೆ ಯೊಳಗಿನ ಒಲೆಯಲ್ಲಿ ಬೆಂಕಿಯನ್ನು ಹೊತ್ತಿಸಿದಲ್ಲಿ ಪೆಟ್ಟಿಗೆಯು ಕಾದು ಅದರಲ್ಲಿರುವ ಗಂಧಕದ ಪುಡಿ ಹತ್ತಿಕೊಂಡು ಕೊಠಡಿಯಲ್ಲೆಲ್ಲಾ ಹೊಗೆತುಂಬಿಕೊಳ್ಳುವದು. ಕೊಠಡಿಯ ಮೇಲ್ಛಾವಣಿಯ ಬಿದರಿನ ದಬ್ಬೆಗಳಿಂದ ತಡಿಕೆಯಹಾಗೆ ಕಟ್ಟಲ್ಪಟ್ಟು ಅದರ ಮೇಲೆ ಹಸಿ ಮಣ್ಣನ್ನು ದಪ್ಪವಾಗಿ ಸವರಿ ಹೆಂಚುಗಳನ್ನು ಕಚ್ಚಿಸಿದ್ದಾಗಿರಬೇಕು. ಹಾಗ್ಯೂ ಛಾವಣಿಯಲ್ಲಿ ರಂಧ್ರಗಳಿರಕೂಡದು. ಕೊಠಡಿಯೊಳಗಿಣ ಗಾಳಿಯು ಛಾವಣಿಯ ಮುಖಾಂತರವಾಗಿ ಹೊರಕ್ಕೆ ಹೋಗದ ಹಾಗೆ ಇರಬೇಕು.

ನೀರಿನ ತೊಟ್ಟಿಗಳು:—ನೀರಿನ ತೊಟ್ಟಿಗಳು ಕಲ್ಲಿನಿಂದ ಕಟ್ಟಲ್ಪಟ್ಟು ೬ ಅಡಿ ಉದ್ದ, ಅಷ್ಟೇ ಅಗಲ ಎತ್ತರವುಳ್ಳವುಗಳಾಗಿರ ಬೇಕು. ತೊಟ್ಟಿಗಳ ಒಳಭಾಗವೆಲ್ಲಾ ಸಿಮೆಂಟಿನಿಂದ ಗಾರೆಮಾಡಿರ ಬೇಕು.

ಸುಣ್ಣದ ತೊಟ್ಟಿಗಳು:—ಸುಣ್ಣದ ತೊಟ್ಟಿಗಳೂ ಕೂಡಾ ನೀರಿನ ತೊಟ್ಟಿಗಳಷ್ಟೆ ದೊಡ್ಡವುಗಳಾಗಿರ ತಕ್ಕದ್ದು.

ಹೊಗೆ ಮಾಡುವ ಕ್ರಮ:– ಹಸಿ ಶುಂಠಿ ಹೊಸದಾಗಿರುವಾಗಲೇ ಅದನ್ನು ನೀರಿ ತೊಟ್ಟಿಗಳಲ್ಲಿ ಹಾಕಿ ೨-೩ ಜನರು ಅವುಗಳೊಳಕ್ಕೆ ಇಳಿದು ಶುಂಠಿಯನ್ನು ಚನ್ನಾಗಿ ತುಳಿಯಬೇಕು. ಇದರಿಂದ ಶುಂಠಿಗೆ ಹತ್ತಿರುವ ಮಣ್ಣೆಲ್ಲಾ ನೀರಿನಲ್ಲಿ ಕರಗಿಹೋಗುವದು; ಶುಂಠಿಯ ಮೇಲಿನ ಹೊಟ್ಟೆಲ್ಲಾ ಉಜ್ಜಿಹೋಗಿ ಅದು ಚರ್ಮರಹಿತವಾದದ್ದಾಗುವದು. ಹೀಗೆ ಮಾಡಿದ್ದಾದ ಮೇಲೆ ನೀರಿನ ತೊಟ್ಟಿಯಲ್ಲಿರುವ ಶುಂಠಿಯನ್ನೆಲ್ಲಾ ಸುಣ್ಣದ ನೀರಿರುವ ತೊಟ್ಟಿಗೆ ಒಯ್ಯಬೇಕು. ಸುಣ್ಣದನೀರು ಸಾಧಾರಣವಾಗಿ ಮನೆಗಳ ಗೋಡೆಗಳಿಗೆ ಬಳಿಯುವದಕ್ಕಾಗಿ ಮಾಡಿಟ್ಟು ಕೊಳ್ಳುವಷ್ಟು ಮಂದವಾಗಿದ್ದರೆ ಸಾಕು.

ಸುಣ್ಣದ ತೊಟ್ಟಿಯಲ್ಲಿ ಶುಂಠಿಯನ್ನೆಲ್ಲಾ ಕೊಂಚ ಹೊತ್ತು ನೆನೆಹಾಕಿದ್ದು ಒಂದೆರಡು ಸಾರಿ ಕಟ್ಟಿಗೆಯಿಂದ ಚನ್ನಾಗಿ ತಿರವಿ ಹಾಕಬೇಕು. ಇದರಿಂದ ಸುಣ್ಣವು ಶುಂಠಿಯಲ್ಲೆಲ್ಲಾ ಚನ್ನಾಗಿ ಪ್ರವೇಶಿಸುತ್ತದೆ. ಆ ಮೇಲೆ ಸುಣ್ಣದ ತೊಟ್ಟಿಯಿಂದ ಶುಂಠಿಯನ್ನು ಹಿಂದೆ ವಿವರಿಸಿದ ೯ ಅಥವಾ ೧೦ ಅಂಗುಲ ಅಗಲವುಳ್ಳ ಗುಂಡಾಗಿರುವ ಪುಟ್ಟಿಗಳಲ್ಲಿ ತುಂಬಿಕೊಂಡು ಕೊಠಡಿಯೊಳಗನ ಹಂತಗಳ ಮೇಲೆ ಇಡಬೇಕು. ಮೇಲೆ ವಿವರಿಸಿದಂಥಾ ಒಂದು ಕೊಠಡಿಯಲ್ಲಿ ಸಾಧಾರಣವಾಗಿ ೩೦೦ ಪುಟ್ಟಿಗಳು ಹಿಡಿಯುತ್ತವೆ. ಒಂದೊಂದು ಪುಟ್ಟಿಯಲ್ಲಿ ಸಾಧಾರಣವಾಗಿ ೫ಪೌಂಡಿನಷ್ಟು ಶುಂಠಿಯನ್ನು (ಪೌಂಡು ಒಂದಕ್ಕೆ ೪೦ ರೂ. ತೂಕ) ತುಂಬಬಹುದು. ಶುಂಠಿಯನ್ನು ಹಂತಗಳ ಮೇಲೆಕ್ಕೆ ಸಾಗಿಸಿದ ಕೂಡಲೇ ಒಲೆಯಮೇಲಿನ ಕಬ್ಬಿಣದ ಪೆಟ್ಟಿಗೆಯುಲ್ಲಿ ೭ ಪೌಂಡಿನಷ್ಟು ಗಂಧಕದ ಪುಡಿಯನ್ನು ಹಾಕಿ ಕೊಠಡಿಯ ಬಾಗಿಲನ್ನು ಮುಚ್ಚಿ ಹೊರಗಿನಿಂದ ಒಲೆಯಲ್ಲಿ ಬೆಂಕಿಯನ್ನು ಹೊತ್ತಿಸ ಬೇಕು. ಶುಂಠಿಯು ಹೀಗೆ ೪ ಗಂಟೆಗಳ ಕಾಲ ಗಂಧಕದ ಹೊಗೆಯಲ್ಲಿದ್ದ ನಂತರ ಬಾಗಲನ್ನು ತೆರೆದು ಸ್ವಲ್ಪ ಕಾಲ ಸುಮ್ಮನೆ ಇದ್ದಲ್ಲಿ ಶುಂಠಿಯಿಂದ ಹೀರಲ್ಪಡದ ಅಲ್ಪಸ್ವಲ್ಪ ಗಂಧಕದ ಹೊಗೆಯೆಲ್ಲಾ ಹೊರಕ್ಕೆ ಬಂದು ಗಾಳಿಯಲ್ಲಿ ಸೇರಿಹೋಗುವದು. ಆ ಮೇಲೆ ಒಳಗಿರುವ ಪುಟ್ಟಿಗಳನ್ನೆಲ್ಲಾ ಹೊರಕ್ಕೆ ತಂದು ಶುಂಠಿಯನ್ನು ಬಿಸಲಲ್ಲಿ ಹರಡಬೇಕು. ಇದೇ ರೀತಿಯಾಗಿ ಎರಡನೆ ದಿನವೂ ಮೂರನೆ ದಿನವೂ ಶುಂಠಿಯನ್ನು ಮೊದಲು ಸುಣ್ಣದಲ್ಲಿ ಚನಾಗಿ ನೆನಿಸಿ ಆ ಮೇಲೆ ಅದನ್ನು ಕೊಠಡಿಯಲ್ಲಿ ಗಂಧಕದ ಹೊಗೆಗೆ ಇಡಬೇಕು. ಎರಡನೆ ದಿನ ೮ ಪೌಂಡು ಗಂಧಕವನ್ನೂ ಮೂರನೆ ದಿನ ೯ ಪೌಂಡು ಗಂಧಕವನ್ನೂ ಉಪಯೋಗಿಸತಕ್ಕದ್ದು. ಎರಡನೆ ದಿನ ೧೨ ಗಂಟೆಗಳ ಕಾಲವೂ ಮೂರನೆ ದಿನ ೭ ಗಂಟೆಗಳ ಕಾಲವೂ ಹೊಗೆಯನ್ನು ಕೊಡಬೇಕು. ಪ್ರತಿ ದಿನವೂ ಗಂಧಕದ ಹೊಗೆಯನ್ನು ಕೊಡುವದಕ್ಕೆ ಮುಂಚೆ ಶುಂಠಿಯನ್ನು ಬಿಸಲಲ್ಲಿ ಒಣಗಿಸುವದನ್ನು ಮರೆಯ ಕೂಡದು. ಮೊದಲನೆ ಸಾರಿ ಹೊಗೆ ಕೊಡುವ ಮುಂಚೆ ಶುಂಠಿಯನ್ನು ಚನ್ನಾಗಿ ಸುಣ್ಣದಲ್ಲಿ ನೆನಸದೆ ಇದ್ದಲ್ಲಿ ಅದರ ರಖಂ ಕಮ್ಮಿ ಬೀಳುತ್ತೆ. ಗಂಧಕವು ಮಣ ಒಂದಕ್ಕೆ ೪೦ ರೂಪಾಯಿನಂತೆ ಶಿಕ್ಕುತ್ತೆ. ೭೦೦ ಪೌಂಡು ಹಸಿ ಶುಂಠಿಯನ್ನು ಮೇಲ್ಕಂಡ ರೀತಿಯಲ್ಲಿ ಚಿಕಿತ್ಸೆ ಮಾಡುವದಕ್ಕೆ ಸುಮಾರು ರೂ. ೪—೮—೦ ಹಿಡಿಯುತ್ತೆ.

ಎಚ್ಚರಿಕೆ:-ಗಂಧಕದ ಹೊಗೆಯೆಲ್ಲಾ ಹೊರಗಿನ ಗಾಳಿಯಲ್ಲಿ ಬೆರತುಹೋಗುವ ವರೆಗೂ ಕೊಠಡಿಯೊಳಕ್ಕೆ ಯಾರೂ ಪ್ರವೇಶಿಸಕೂಡದು. ಏಕಂದರೆ, ಗಂಧಕದ ಹೊಗೆಯು ವಿಷವಾಗಿ ಪರಿಣಮಿಸಿ, ಹೋದವರನ್ನು ಉಸುರುಕಟ್ಟಿ ಕೊಲ್ಲುವದು.

ಕೊಠಡಿಯೊಳಗೆ ಕೆಲಸ ಮಾಡುವ ಆಳುಗಳು ಗಂಧಕದ ಹೊಗೆಯಿಂದಲೂ ಸುಣ್ಣದಿಂದಲೂ ಚರ್ಮಕ್ಕೆ ಯಾವ ಕೆಡಕೂ ಆಗದ ಹಾಗೆ ಮೈಗೆಲ್ಲಾ ಕೊಬ್ಬರಿ ಎಣ್ಣೆಯನ್ನು ಬಳಿದುಕೊಳ್ಳಬೇಕು.

ಕಿ. ವ್ಯ. ಗ.

ಪತ್ರವ್ಯವಹಾರ.

(ಬಾತ್ಮಿದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಅಳಿಯ ಸಂತಾನದ ಇನ್ನೊಬ್ಬ ಕಿರಿಯ ಮೆಂಬರನು.

ಕಳೆದ ಸಂಚಿಕೆಯಿಂದ ಮುಂದರಿಸುದುದು.

ಇದು ವರೆಗೆ ಅಳಿಯ ಸಂತಾನದ ಆಸ್ತಿಗಳನ್ನು ಖರೀದಿ ಮಾಡಲಿಚ್ಛೆಯುಳ್ಳ ಗಿರಾಕಿಗಳು ತಮ್ಮ ಹೃದಯವನ್ನು ಕೆಲವು ಸಂಗತಿಗಳ ಮಟ್ಟಿಗೆ ಕಲ್ಲು ಸಮಾನ ಮಾಡಬೇಕಾಗಿತ್ತು. ಬಹುಮಾನ ಪಟ್ಟ ಮ. ರಾ. ರಾ. ಕೃಷ್ಣನ್ನಾಯರರವರಿಂದ ಬಹು ನೂತನವಾಗಿ ತಯಾರಿಸೋಣಾದ ವಿಭಾಗ ಪತ್ರದ ಮಸೂದೆಯು ಅಂಥಾ ಆಸ್ತಿಗಳನ್ನು ಖರೀದು ಮಾಡಲುಳ್ಳ ಗಿರಾಕಿಗಳಿಗೆ ನಿರಾತಂಕವಾದ ಆಸ್ಪದವನ್ನು ಕೊಡುವುದಲ್ಲದೆ

ಹಿರಿಯರು ಬಹು ಪುರಾತನದಿಂದ ಅರ್ಜಿಸಿಟ್ಟ ಆಸ್ತಿಗಳನ್ನು ಮನಸ್ಸೋಇಚ್ಛೆಯಾಗಿ ಕಿರಿಯರು ತಮ್ಮೊಳಗೆ ಪಾಲು ಮಾಡಿಕೊಂಡು ವಿಕ್ರಯಿಸಲಿಕ್ಕೆ ಉತ್ತೇಜನಕೊಡುತ್ತದೆ. ಆ ವಿಭಾಗ ಬೀಲಿನ ಪರವಾಗಿ ಮಾತಾಡುವ ಅಳಿಯ ಸಂತಾನದ ಕಿರಿಯ ಮೆಂಬರರು ವಿಚಾರಹೀನರೆಂದೂ, ಆತ್ಮ ಶತ್ರುಗಳೆಂದೂ, ಭಾವಿಸತಕ್ಕದ್ದು. ಒಮ್ಮೆ ಅಳಿಯ ಸಂತಾನದ ಆಸ್ತಿಗಳು ಪಾಲು ಪಂಕ್ತಿಗಳಾಗಿ ಚದರಿಹೋದರೆ, ಕಸಬರಿಕೆಯ ಕಟ್ಟನ್ನು ಬಿಚ್ಚಿ ಕಡ್ಡಿಗಳನ್ನು ಚದರಿದಂತೆ ದಿಕ್ಕಾಪಾಲಾಗಿ ಹೋಗುವುದು. ಹಿರಿಯರು ನಟ್ಟ ಆಲದ ಮರದ ಸಾಮತಿಯನ್ನು ತೆಗೆದುಕೊಂಡು ಕೆಲವರು ಇದಕ್ಕೆ ಅಡ್ಡಾಡುವರು. ಹಿರಿಯರು ಘಳಿಸಿಟ್ಟ ಆಸ್ತಿಯ ಪ್ರಯೋಜನವನ್ನು ಹೊಂದುವ ಕಿರಿಯರು, ಅಂಥಾ ಹಿರಿಯರು ನಿಯಮಿಸಿಟ್ಟ ಪದ್ಧತಿಗಳನ್ನು ಅನುಸರಿಸಿ ನಡೆಯುವದು ಧರ್ಮವಲ್ಲವೋ?

ನಾನು ಕೂಡಾ ಜಂಟಿ ಮತದ ಒಬ್ಬ ಕಿರಿಯ ಮೆಂಬರನೆಂದು ಮೇಲೆ ಹೇಳಿರುತ್ತೇನೆ. ನನ್ನ ತಂದೆಯವರು ಜೀವಂತರಾಗಿರುವಾಗಲೇ, ಅವರ ಅನುಮತಿ ಮೇರೆಗೆ ದಯಾಳುವಾದ ನನ್ನ ಮಾವನು ತನ್ನ ಸ್ವಂತ ಖರ್ಚಿನಿಂದ ನನಗೆ ವಿದ್ಯಾಭ್ಯಾಸ ಮಾಡಿಸಿದರು. ಇವರು ತನ್ನ ಕುಟುಂಬಿಕರನ್ನು ಮಕ್ಕಳು ಮರಿಗಳಿಗಿಂತ ಹೆಚ್ಚಾಗಿ ಪ್ರೀತಿ ಪೂರ್ವಕ ಪೋಷಣೆ ನಡಿಸುತ್ತಿದ್ದರು. ಈ ರೀತಿಯಿಂದ ನಿಜ ಕುಟುಂಬಿಕರನ್ನು ಯಾವ ತರದ ಕಷ್ಟಗಳಿಗೂ ಗುರಿಪಡಿಸದೆ, ಅವರವರ ಇಷ್ಟಾನುಸಾರ ಉಡಿಗೆ ತೊಡಿಗೆಗಳನ್ನೂ ಅನ್ನಾಹಾರಗಳನ್ನೂ ಒದಗಿಸಿ ಕೊಡುವುವರಲ್ಲಿ ಹೆಚ್ಚಿನ ಕೀರ್ತಿಯನ್ನು ಸಂಪಾದಿಸಿದ ಪುಣ್ಯಾತ್ಮರಾದ ಯಜಮಾನರುಗಳು ಈ ಕಾಸರಗೋಡು ತಾಲೂಕಿನಲ್ಲಿ ಹಲವು ಮಂದಿ ಇರುವರು. ಇವರು ತಮ್ಮ ಅಳಿಯಂದಿರ ಯಾ ಕುಟುಂಬಿಕರ ಅನುಮತಿಯಿಂದ ಕುಟುಂಬದ ಎಲ್ಲಾ ಕಾರ್ಯ ನಿರ್ವಾಹಗಳನ್ನು ಸುದಾರಿಸುವುದರಲ್ಲಿ ಹೆಚ್ಚಿನ ಗೌರತೆಯನ್ನು ಹೊಂದಿರುತ್ತಾರೆ. ಕುರುಡರು ದರ್ಪಣವನ್ನು ದೂಷಿಸುವಂತೆ, ಕುಟುಂಬದ ಕೆಲವು ಅವಿವೇಕಿಗಳಾದ ಕಿರಿಯ ಮೆಂಬರರು ತಮ್ಮ ಹಿರಿಯರನ್ನು ದೂರುವ ಪದ್ಧತಿಯುಂಟು. ಶ್ರೀ ಗಂಧದ ಕಾಡಿನಲ್ಲಿ ಒಂದೆರಡು ಕಾಸರಕನ ಮರಗಳು ಬೆಳೆಯುವಂತೆ, ಇಂಥಾ ಕುಟುಂಬಗಳಲ್ಲಿ ಅವಿವೇಕಿಗಳಾದ ಯಜಮಾನರುಗಳು ಇರಲಾರರೆಂದು ನಾನು ಖಂಡಿತವಾಗಿ ಹೇಳಲಾರೆ. ಇಂಥಾ ಅಪರೂಪವಾದ ಸಂಗತಿಗಳನ್ನು ನಾವು ಇಲ್ಲಿ ವಿಂಗಡಿಸುವುದು ಅಗತ್ಯವಿಲ್ಲ.

ಅಳಿಯ ಸಂತಾನ ಕಟ್ಟು ಆಚರಿಸುವ ಈ ಜನಾಂಗದವರಲ್ಲಿ ಒಬ್ಬ ವಿದ್ಯಾವಂತನಿದ್ದರೆ ಸಾವಿರಾರು ವಿದ್ಯಾವಿಹೀನರಿರುವರು. ಆ ವಿದ್ಯಾವಂತರು ತಮ್ಮ ಸ್ವಪ್ರಯೋಜನವನ್ನು ಬಯಸಿ ವಿದ್ಯಾಹೀನರಾದ ತನ್ನ ಜಾತಿಯ ಆಶ್ರಿತರಿಗೂ ಸ್ನೇಹಿತರಿಗೂ ಆ ವಿಭಾಗ ಪತ್ರದ ಅವಗುಣಗಳನ್ನು ಮರೆಪಡಿಸಿ, ಭೂತಕನ್ನಡಿಯಲ್ಲಿ ಕಸ್ತಿಯನ್ನು ಪರ್ವತ ಮಾಡಿ ತೋರಿಸುವಂತೆ ಈ ವಿಭಾಗ ಮಸೂದೆಯ ಕಿಂಚಿತ ಗುಣಗಳನ್ನು ಮಾತ್ರ ಪರ್ವತದಂತೆ ಮಾಡಿ ವಿವರಿಸುವರು. ಅನೇಕ ವಿದ್ಯಾವಂತರಿಗೆ ಕೂಡಾ ಆ ನವೀನ ವಿಭಾಗ ಪತ್ರದ ನಿಜವಾದ ಅಭಿಪ್ರಾಯವು ಮನವರಿಕೆಯಾಗಲಿಲ್ಲವೆಂದು ನಾನು ಇತ್ತಲಾಗೆ ತಿಳಿದೆನು. ಆ ಬೀಲಿನ ಮಸೂದೆಯು ಹಿತಕರವಾದ ಪಾಲೆಂದು ಅವರು ಅಭಿಪ್ರಾಯ ಪಟ್ಟು, ಆ ಮಸೂದೆಯನ್ನು ಪೂರಾ ಒಪ್ಪಿ, ತಾವು ದಸ್ಕತು ನಿಶಿ ಕಬೂಲು ಕೊಟ್ಟಿರುತ್ತಾರೆ. ಈ ವಿಭಾಗಪತ್ರದ ಮಸೂದೆಯನ್ನು ಚನ್ನಾಗಿ ಪರಿಶೋಧಿಸಿದ ಮ|ರಾ|ರಾ| ಹೈಕೊರ್ಟು ವಕೀಲ್ ಬಿ. ಮಹಾಬಲ ಹೆಗ್ಗಡೆಯವರು, ಇತ್ತಲಾಗೆ ಆ ಪತ್ರದ ತಾತ್ಪರ್ಯವನ್ನು ವಿಚಾರಮಾಡದೆ ಒಪ್ಪಿಗೆಕೊಟ್ಟ ವಿದ್ಯಾವಂತರ ಪೈಕಿ ಕೆಲವರಿಗೆ ಕೂಲಂಕಷವಿವರಿಸಿ ಹೇಳಲು ಆ ಬೀಲಿನ ಮುಖ್ಯ ಉದ್ದೇಶವು ಮಂಡೆ ಪಾಲೆಂದು ಸ್ಪಷ್ಟವಾಯಿತು. ಆ ವಿದ್ಯಾವಂತರು ತಾವು ಪೂರ್ಣ ವಿಚಾರಿಸದೆ ಕೊಟ್ಟ ಆ ಒಪ್ಪಿಗೆಯ ವಿಷಯವಾಗಿ ಈಗ ಬಹಳ ಪಶ್ಚಾತಾಪ ಪಡುತ್ತಾರೆ. ಪರಂತು ಒಬ್ಬ ವಿದ್ಯಾವಂತನ ಸಲುವಾಗಿ ಮಾತಾಡಿದರೆ, ಸಾವಿರಾರು ವಿದ್ಯಾವಿಹೀನರ ಮನಸ್ಸನ್ನು ನೋಯಿಸಬೇಕಾಗುವದು. ಈ ಜನಾಂಗದವರಲ್ಲಿ ಇನ್ನೂ ನಾಗರೀಕತೆಗೆ ಬಾರದೆ, ಈ ವಿಭಾಗ ಪತ್ರದ ಗೊಡವೆಯನ್ನರಿಯದ ಜನರು ಬಹು ಮಂದಿ ಇರುವರು. ಇಂಥಾ ಮೂಢ ಭಾವದ ಅವಸ್ಥೆಯಲ್ಲಿರುವ ಈ ಜನಾಂಗದವರು ಆ ಬೀಲಿನ ಫಲಿತಾರ್ಥವನ್ನು ಅಂಗೀಕರಿಸಲಿಕ್ಕೆ ತಾವು ಎಂದೂ ತಯಾರಾಗಿರದ ಸಮಯದಲ್ಲಿಯೂ, ಈ ಜನಾಂಗದ ಸ್ತ್ರೀಯರ ಮೇಲೆ ತಮ್ಮ ಭರ್ತಾರರಿಗೆ ಯಾವದೊಂದು ತರದ ಸ್ವತಂತ್ರ ನಡಿಸಲಿಕ್ಕೆ ಕೋರ್ಟಿನವರು ಅಧಿಕಾರ ಕೊಡದೆ ಇರುವ ಸಂದರ್ಭದಲ್ಲಿಯೂ, ಪ್ರಜೆಗಳ ಹಿತಚಿಂತಕರಾದ ಸರಕಾರದವರು ಆ ವಿಭಾಗ ಬೀಲನ್ನು ಒಮ್ಮೆಯೇ ಅಕಸ್ಮತ್ತಾಗಿ ಜಾರಿಗೆ ತಂದರೆ, ಲೋಕಕ್ಕೆ (ಈ ಜನಾಂಗದವರಿಗೆ) ಎಷ್ಟು ಸಂಕಷ್ಟಕರವಾದ ಅವಸ್ಥೆಯನ್ನುಂಟು ಮಾಡೀತೆಂದು ಪ್ರಜೆಗಳ ಹಿತಚಿಂತಕರೇ ಅಭಿಪ್ರಾಯ ಪಡಲಿ.

ಅಳಿಯ ಸಂತಾನದಲ್ಲಿ ಪಾಲಾಗ ಕೂಡದೆಂಬದೂ, ಯಜಮಾನನು ರಸತಿನ್ನುವಾಗ್ಯೆ ಕಿರಿಯರನ್ನು ಕಸತಿನ್ನಿಸಬೇಕೆಂಬದೂ, ನನ್ನ ಅಭಿಪ್ರಾಯವಲ್ಲ. ಯಾವ ವಿಧದಿಂದಲಾದರೂ ಅಳಿಯ ಸಂತಾನದ ಆಸ್ತಿಗಳು ಒಮ್ಮೆ ಪಾಲಾಗಿ ಹೋದರೆ, ಮಂಗನ ಕೈಯಲ್ಲಿ ಸಿಕ್ಕಿದ ಮಾಣಿಕ್ಯದಂತೆ, ಅವುಗಳೆಲ್ಲಾ ಅಲ್ಪ ಸ್ವಲ್ಪ ಸಮಯದೊಳಗೆ ಕಸಬರಿಕೆಯ ಕಡ್ಡಿಗಳೋಪಾದಿ ದಿಕ್ಕಾಪಾಲಾಗಿ ನಾಶಹೊಂದೀತೆಂಬ ಭೀತಿಯಿಂದಲೂ, ಒಮ್ಮೆ ಈ ಜಿಲ್ಲೆಯಲ್ಲಿ ಪ್ರಬಲರೆನ್ನಿಸಿಕೊಂಡಿದ್ದ ಜನಾಂಗದವರು ಅಬಲರಾಗುವ ಸಂಭವ ಬಂದೊದಗೀತೆಂಬ ಶಂಖೆಯಿಂದಲೂ, ನಾನು ಈ ರೀತಿ ಬರಿಯಲು ಕಾರಣವಾಯಿತು. ಪರಂತು ನನ್ನ ಅಲ್ಪ ಮತಿಗೆ ತೋರಿದ ಮತ್ತು ಅನೇಕ ವಿದ್ಯಾವಂತರಿಂದಲೂ ಇತರರಿಂದಲೂ ಅನುಮೋದಿಸೋಣಾದ, ಒಂದು ಅಭಿಪ್ರಾಯವನ್ನು ಈ ಕೆಳಗೆ ವಿವರಿಸುತ್ತೇನೆ. ಸರ್ವಸಮ್ಮತವಾದರೆ ಅಂಗೀಕರಿಸಿಕೊಳ್ಳುವದು.

ಸಕೇಷ.

ಬಲ್ಮಠ ಸಭೆಗಾದ ನೀತಿ.

ಕಳದ ತಿಂಗಳಲ್ಲಿ ಬಲ್ಮಠ ಮಿಶನ್ ಹಬ್ಬದ ದಿನ ಹೊನ್ನಾವರದ ಮಿಶ್ಯನೆರಿಯಾದ ಲುತ್ಸು ಎಂಬವರಿಗೂ ಬಲ್ಮಠ ಸಭೆಗೂ ಆದ ಕಲಹದಲ್ಲಿ ಇಲ್ಲಿಯ ಸೀನಿಯರ್ ಮಿಶ್ಯನೆರಿಯು ಈ ಮಧ್ಯೆ ಪ್ರವೇಶಿಸಿ ನ್ಯಾಯ ಮಾಡಿ ಕೊಡುತ್ತೇನೆಂದು ಹೇಳಿದರೂ ಕಟ್ಟ ಕಡೆಗೆ ಈ ನ್ಯಾಯವನ್ನು ಸೀನಿಯರ್ ಮಿಶ್ಯನೆರಿಯು ಬಲ್ಮಠ ಹಿರೀ ಕೂಟಕ್ಕೆ ಹಾಕಿದರಂತೆ. ಹಿರೀ ಕೂಟದವರು ಈ ನ್ಯಾಯವನ್ನು ವಿಮರ್ಶಿಸಿ, ಹೊನ್ನಾವರದ ಮಿಶ್ಯನೆರಿಯು ಹದತಪ್ಪಿ ಸಭೆಯವರನ್ನು ಹೀಯಾಳಿಸಿ ಮಾತಾಡಿದ ಸಂಗತಿಯು ದೊಡ್ಡದಲ್ಲವೆಂಬದಾಗಿ ಭಾವಿಸಿ ಹೊನ್ನಾವರದ ಮಿಶ್ಯನೆರಿಯು ತಾನು ಮಿಶ್ಯನ್ ಹಬ್ಬದ ದಿನ ಮಾತಾಡಿದ ಮಾತಿನಲ್ಲಿ ಸಭೆಯವರಿಗೆ ನೋವು ಆದೀತೆಂತ ತಿಳಕೊಂಡು ಪಶ್ಚಾತ್ತಾಪ ಪಟ್ಟಾರು— ಆದರೆ ಸಭೆಯವರಲ್ಲಿ ಕೆಲವರು ಈ ಸಂಗತಿಯಲ್ಲಿ ಗುಲ್ಲುಮಾಡಿ ಅಯೋಗ್ಯವಾಗಿ ನಡಕೊಂಡರು ಎಂಬಿತ್ಯಾದಿ ನಿರ್ಣಯವನ್ನು ಮಾಡಿ ಮಾರಣೇ ಆದಿತ್ಯವಾರ ಇದನ್ನು ಬಲ್ಮಠ ಸಭಾ ಮಿಶ್ಯನೆರಿಯು ಸಭೆಗೆ ಓದಿ ಹೇಳಿದರು.

ಈ ನಿರ್ಣಯದ ವಿಷಯ ಒಂದೆರಡು ಮಾತುಗಳನ್ನು ಹೇಳ ಅಪ್ಪಣೆಯಾಗಲಿ:—

ಸಭೆಯವರು ಈ ನಿರ್ಣಯವನ್ನು ಕೇಳಿ ಸಭಾ ಹಿರಿಯರ ಮೇಲೆ ಬಹಳವಾಗಿ ಮನನೊಂದಿರುವರು. ಆದರೆ ಮನನೊಂದು ಕೊಳ್ಳಲು ಕಾರಣವಿಲ್ಲ ಎಂಬದಾಗಿ ನನ್ನ ಅಭಿಪ್ರಾಯ. ಯಾಕಂದರೆ 75 ವರ್ಷಗಳ ಹಿಂದೆ ಪ್ರಥಮತಾ ಇಲ್ಲಿಗೆ ಬಂದಿಳಿದ ಮಿಶ್ಯನೆರಿಗಳು ಹಲವರನ್ನು ಕ್ರೈಸ್ತರಾಗಿ ಮಾಡಿ ತಮ್ಮ ಮತ ಪ್ರಸರಣೆಯ ಕರಣಗಳಾಗಿ ಅವರನ್ನು ಉಪಯೋಗಿಸಿಕೊಳ್ಳುವ ಬಗ್ಯೆ ಹಲವು ಶಾಲೆಗಳನ್ನು ಸ್ಥಾಪಿಸಿ, ಮತಾವಲಂಬಿಗಳಿಗೆ, ಪಂತೋಜಿ, ವೈದೀಕರಿಗೆ ಬೇಕಾದಷ್ಟೇ ವಿದ್ಯೆಯನ್ನು ಕೊಟ್ಟರು. ಆದರೆ ಈ ಕಳದ 75 ವರ್ಷಗಳ ಮಧ್ಯೆ ಲೋಕದಲ್ಲಿ ನಾನಾ ಮಾರ್ಪಾಟಗಳಾಗಿ ದೇಶವೂ ನಾನಾ ಜನಾಂಗವೂ ದಿನೇ ದಿನೇ ಅಭಿವೃದ್ಧಿಗೆ ಬರುತ್ತಾ ಈ ಕಾಲದಲ್ಲಿ ಇಲ್ಲಿಯ ಬಾಸೆಲ್ ಮಿಶ್ಯನ್ ಸಭೆಯಲ್ಲಿ ಸಭಾಸಂಖ್ಯೆಯು ಮಾತ್ರ ಹೆಚ್ಚಾಯಿತಲ್ಲದೆ ವಿದ್ಯೆ ಮೊದಲಾದ ಲೌಕೀಕ ವ್ಯವಹಾರಗಳಲ್ಲಿ ಸಭೆಯು ಯಥಾ ಸ್ಥಿತಿಯಲ್ಲಿಯೇ ಉಳಿದು, ಸಭೆಯವರಲ್ಲಿ ಅನೇಕರು ಅವರ ಕಾರಖಾನೆಯ ಕೂಲಿಯಾಳುಗಳಾಗಿಯೂ, ಇನ್ನು ಹಲವರು ಪಂತೋಜಿ ವೈದಿಕ ವೃತ್ತಿಯನ್ನು ಮಾಡಿ ಅವರ ಕೈಳಗಿನ ಸೇವಕರಾಗಿಯೇ ಇದ್ದುಳಿದರು. ಯಾವನಾದರೂ ಸ್ವತಂತ್ರನಿಲ್ಲ. ಸರ್ವರ ಅನ್ನದ ಮಡಿಕೆಯು ಅವರ ಕೈಯಲ್ಲಿಯೇ ಇದೆ. ಈ ಸ್ಥಿತಿಯಲ್ಲಿರುವ ಸಮಾಜದಲ್ಲಿ ಹಿರಿಯರನ್ನು ಆರಿಸಿ ಕೊಂಡರೆ ನ್ಯಾಯವು ಯಾರ ಪಾಲಿಗೆ ಬಿದ್ದೀತು? ಅನ್ಯಾಯವು ಎತ್ತ ವಾಲೀತು ಎಂಬುದನ್ನು ವಾಚಕರೇ ತೀರ್ಮಾನಿಸಲಿ.

ಸಭೆಯವರು ಗುಲ್ಲು ಮಾಡದೆ ನ್ಯಾಯವನ್ನು ಕೂಡಲೇ ಹಿರಿಯರ ಕೂಟಕ್ಕಾಗಲೀ ಮಿಶ್ಯನೆರಿಗಾಗಲೀ ತಿಳಿಸಬೇಕಿತ್ತು. ಗುಲ್ಲು ಮಾಡಿದ್ದರಿಂದ ಸಭೆಯವರು ಅಯೋಗ್ಯವಾಗಿ ನಡಕೊಂಡಂತಾಯಿತು ಎಂದು ಹೇಳಬಹುದು. ಆದರೆ ಹಿರೀ ಕೂಟಕ್ಕೆ ಬಿದ್ದಂಥಾ ಹಲವು ವ್ಯಾಜಗಳ ಫಲಿತಾಂಶವು ಈ ಮೊದಲೇ ಸಭೆಯವರಿಗೆ ತಿಳಿದಿದ್ದರಿಂದ ಸಭೆಯವರಲ್ಲಿ ಅನೇಕರಿಗೆ ಹಿರೀ ಕೂಟದ ಮೇಲೆ ನಾಕುಶಿ ಹುಟ್ಟಿ ಈ ನ್ಯಾಯವನ್ನು ಹಿರೀ ಕೂಟಕ್ಕೆ ಹಾಕಲು ಮನಸ್ಸಿರಲಿಲ್ಲ. ಆ ದಿನ ಕೂಡಿ ಬಂದ ಜನರು ಒಂದೆರಡು ಸಾವಿರಕ್ಕೂ ಮಿಕ್ಕಿದ್ದರಿಂದ ಅವರ ಬರಿಯ ಮಾತುಗಳನ್ನು ಗುಲ್ಲೆಂತ ಭಾವಿಸಿದರು. ಹೀಗಿರುವುದರಿಂದ ಸಭೆಯವರು ಅಯೋಗ್ಯವಾಗಿ ನಡಕೊಳ್ಳಲಿಲ್ಲ ಎಂಬದಾಗಿ ಖಾತ್ರಿಯಾಗುತ್ತದೆ.

ಆ ದಿನ ನೆರದ ಸಾವಿರಾರು ಸಭಿಕರ ಮಾತುಗಳಿಗೆ ಕ್ರೈಸ್ತ ಗುರುಗಳಾಗಿರುವ ಮಿಶ್ಯನರಿಯೇ ಕಾರಣಾವಾಗಿದ್ದದ್ದರಿಂದ ಗುಲ್ಲಿನ ತಪ್ಪನ್ನು ಸಭಿಕರ ಮೇಲೆ ಹೊರಿಸುವದು ಯಾವ ನ್ಯಾಯ! ವೈದಿಕ ಅಧಿಕಾರ ಶ್ರೇಷ್ಠರ ಇಂಥಾ ವರ್ತನೆಯೇ ಸಭೆಯಲ್ಲಿ ಪ್ರಕೃತ ಇರುವ ಅಸಮಾಧಾನಕ್ಕೂ ಅತೃಪ್ತಿಗೂ ಕಾರಣವಾಗಿರುತ್ತದೆ. ಇಂಥಾ ರೀತಿ ನ್ಯಾಯ ತೀರಿಸಿದರೆ ಫಲವು ಅನ್ಯಥಾ ಆಗುವುದು ಹೇಗೆ?

ಆದ್ದರಿಂದ ಸಭಾನಾಯಕರು ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರಾಗಿ ಸಕಲ ಕಾರ್ಯಗಳನ್ನು ನೀತಿಯಾಗಿ ಮಾಡುವವರಾಗಬೇಕೆಂಬುದೇ ನನ್ನ ಬಿನ್ನಹ.

ನಿಷ್ಪಕ್ಷಪಾತಿ.

ಮಾನ್ಯವರಪತ್ರಾಧೀಶರೇ, ಮುಲ್ಕಿ, 12. 12. 10.

ಈಗಲೇ ಹಸ್ತಗತವಾದ ಸಂಚಿಕೆಯಲ್ಲಿ ಗೋವೆಯಲ್ಲಿ ಜರಗಲಿಕ್ಕಿರುವ ಸಂಯುಕ್ತ ವಿಭಕ್ತಗಳೆಂಬ ಪರಿಷದಗಳ ಕುರಿತು ನನ್ನ ಅಭಿಪ್ರಾಯವನ್ನು ಅಪೇಕ್ಷಿಸಿ B ಮಹಾಶಯರು ಬರೆದು ಇದ್ದುದರಿಂದ ಈ ಕೆಳಗಿನ ನನ್ನ ಅಭಿಪ್ರಾಯಗಳನ್ನು ದಯವಿಟ್ಟು ಪ್ರಕಟಿಸುವದಾಗಿ ನನ್ನ ನಂಬಿಕೆ.

1903 ನೇಯಿಂದ 1907 ನೇ ವರೇಗೆ ಪರಿಷದದ ಉದ್ದಿಶ್ಯದ ಕುರಿತು ಊರು ಪರ ಊರುಗಳಲ್ಲಿ ನನ್ನ ಅಲ್ಪ ಸೇವೆಯನ್ನು ನಾನು ಮಾಡಿದ್ದೆನಾಗಿ B ಮಹಾಶಯರು ಹೇಳಿದರೂ ಪ್ರಥಮ ಪರಿಷದದಲ್ಲಿ ಸ್ವಾಗತ ಮಂಡಲಿಯ ಅಧ್ಯಕ್ಷರಿಂದ ಪರಿಷದದ ಉತ್ಪಾದಕರೂ ಸಹಾಯಕರೂ ಎಂದು ಉದ್ಘೋಶಿಸಲ್ಪಟ್ಟ ಸಹಸ್ರಾಂಕ ಉದಾರಿಗಳೂ ಅಪರಿಮಿತ ಐಶ್ವರ್ಯವಂತರೂ ಆದ ಮೂವರು ಮಾನ್ಯವರ ಮಹನೀಯರಲ್ಲಿ ಪ್ರಥಮ ಸ್ಥಾನೀಯರಾದ ಮೈಸೂರಿನ ಲಕ್ಷಾದೀಶರಾದ ಶ್ರಿಯುತ್ ನಗರದ ನರಶಿಂಹಯ್ಯನವರು ಈ ಪರಿಷದದ ಭವಿಷದ್ಫಲಾಫಲಗಳನ್ನು ಸಮಾಲೋಚಿಸಿ ಅದರ ಉತ್ಪಾದಕತ್ವವನ್ನು ಕೈಗೊಂಡವರಾಗಿದ್ದು ದ್ವಿತೀಯ ಪರಿಷದದಲ್ಲಿ ಬೆಳಗಾಂ ಅತ್ತಕಡೆಯವರು ತೃತಿಯ ಪರಿಷದವನ್ನು ಆಮಂತ್ರಿಸಿ ಸರ್ವ ಸಮ್ಮತದಿಂದ ಆ ಆಮಂತ್ರಣವು ಸ್ವೀಕರಿಸಲ್ಪಟ್ಟು ಕಳದ ಬೆಳಗಾಂ ಪರಿಷದದಲ್ಲಿಯೂ ಆ ಪ್ರಥಮೋತ್ಪಾದಕ ಮಹಾನುಭಾವರೆ ಮುಂದಳಾಗಿ ಯೋಗ್ಯ ರೀತಿಯಲ್ಲಿ ಸನ್ಮಾನಿಸಲ್ಪಟ್ಟು ಅಲ್ಲಿ ಜರಗಿದ ರೋಟಿ ಬೇಟಿ ವ್ಯವಹಾರೋಪಚಾರಗಳಲ್ಲಿ ಸಮ್ಮಿಲಿತರಾಗಿ ಸಂಯುಕ್ತತೆಯ ಪ್ರಥಮ ಕಿರಣಗಳನ್ನು ಪ್ರಸರಿಸಿ ಪ್ರಕೃತವೂ ಮುಂದಕ್ಕೂ ಆ ಉದ್ದೀಶ್ಯಗಳೇ ನೆರವೇರಿಸಲು ಸಕಲ ವಿಧಗಳಲ್ಲಿಯೂ ಪರಿಶ್ರಮವ್ರತಬದ್ಧರಾಗಿರುತ್ತಾ "ಯದ್ಯದಾಚರತಿ ಶ್ರೇಷ್ಠ : ತತ್‌ತದೇವೇತರೋಜನಾ :" ಎಂಬ ಗೀತೋಕ್ತಿಯಂತೆ ಶ್ರೇಷ್ಠರನ್ನು ಅನುವರ್ತಿಸುವದು ಇತರರ ಕರ್ತವ್ಯವಾಗಿರಲು ಅಂತವರಶೀಲತಾ ಯೋಗ್ಯತೆಯನ್ನು ಉದ್ಘೋಶಿಸಿದ ನಾವೇ ಪ್ರತಿಭಟಿಸುವುದಾದರೆ ಸ್ವಾರ್ಥತೆಯಿಂದ ಸ್ವ ಉದ್ದಿಶ್ಯಕ್ಕಾಗಿ ಮಾತ್ರ ಅವರನ್ನು ಹೊಗಳಿದಂತೆಯೂ "ಹಮ್‌ಕಿಯೇ ಸೋಕ್ಯಾದಾ" ಎಂಬಂತೆ ನಡದು ನಾವು ಮುಕ್ತ ಕಂಠದಿಂದ ಮಾಡಿದ ಶ್ಲಾಘನೆಯನ್ನು ನಮ್ಮ ನಡತೆಯಿಂದಲೇ ಅಳಿಸಿ ಬಿಟ್ಟು ಲೋಕದ ಎದುರಿಗೆ ಆತ್ಮದ ಘನಸಾಕ್ಷಿಗೆ ವಂಚಕರಾಗಿ ಬರೇವಾಗ್ವಿಜೃಂಭಕರೆಂದಾದೇವೆಂಬದೇ ನನ್ನ ಮತವು. ಸಮಾಜದ ಹಿತ ಚಿಂತಕರೆಲ್ಲರೂ ಅನ್ಯಥಾ ಚಿಂತಿಸರೆಂದು ನನ್ನ ದೃಡ ನಂಬಿಕೆ.

ಬಂಗ್ಲೆಕಾರ್.

ವಿದೇಶ ವೃತ್ತಾಂತ.

ಲೋಕದಲ್ಲಿ ನಡೆಯುತ್ತಿರುವ ಯುದ್ಧ ಸನ್ನಾಹಗಳನ್ನು ತಮ್ಮಣಿಸಲು ಪ್ರಯತ್ನಪಡುವ ಬೋರ್ಡು ಮೊಕ್ತೇಸರರಿಗೆ ಕೋಟ್ಯಾಧಿಪರಾದ ಮೆ. ಅಂಡ್ರು ಕಾರ್ನೇಜಿಯವರು ಹತ್ತು ಮಿಲಿಯ ಡೋಲರನ್ನು ಉಚಿತವಾಗಿ ಕೊಟ್ಟಿರುವರು.

೧೯೧೧ನೇ ಇಸವಿಯಲ್ಲಿ ಜರಗಲಿಕ್ಕಿರುವ ಡಿಲ್ಲಿ ದರ್ಬಾರಿಗೆ ಸನ್ನಾಹ ಮಾಡುವ ಬಗ್ಯೆ ಡಿಲ್ಲಿಯಲ್ಲಿ ಒಂದು ಸೆಂಟ್ರಲ್ ಕಮಿಟಿಯು ಏರ್ಪಡುವದು. ಈ ಕಮಿಟಿಗೆ ಯುನೈಟೆಡ್ ಪ್ರೊವಿನ್ಸಿನ ಲೆಪ್ಟನೆಂಟ್ ಗವರ್ನರರಾಗಿರುವ ಸರ್ ಜೋನ್ ಹ್ಯುವೆಟರವರು ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟದ್ದರಿಂದ ವಸಂತ ಕಾಲದ ಪ್ರಾರಂಭದಲ್ಲಿಯೇ ಇವರು ಹಂಗಾಮಿಯಾಗಿ ಈ ಉದ್ಯೋಗದಿಂದ ನಿವೃತರಾಗುವರೆಂದು ವಿದೇಶಿ ಆಫೀಸು ವರದಿಯಿಂದ ತಿಳಿದು ಬರುತ್ತದೆ.

ಮೊಹರಮ್ ಹಬ್ಬದ ದೆಶೆಯಿಂದ ಡಿಲ್ಲಿ ದರ್ಭಾರಿನ ತಾರೀಕು ಬದಲಾಯಿಸುವರು.

ಮಿಂಟೋ ಪ್ರಭುಗಳವರನ್ನೂ ಪತ್ನಿಯರನ್ನೂ ತಾರೀಕು ೧೫ರಲ್ಲು ಜೋರ್ಜ್ ಸಾರ್ವಭೌಮರು ಬಕ್ಕಿಂಗ್ಹಾಂ ಅರಮನೆಗೆ ಭೋಜನಕ್ಕೆ ಆಮಂತ್ರಿಸಿದ್ದರು. ಅಂದೇ ಮಿಂಟೊ ಪ್ರಭುಗಳವರಿಗೆ ಚಕ್ರವರ್ತಿಯವರು ನೈಟ್‌ಆಫ್ ಗಾರ್ಟರ್ ಎಂಬಂಥಾ ಬಿರುದು ಕೊಟ್ಟಿರುವರು.

ಇಂಗ್ಲಾಂಡಿನಲ್ಲಿ ಮೂರು ವಾರಗಳಿಂದ ಎಡೆಬಿಡದೆ ಗಾಳಿಮಳೆ ಬರುತ್ತಿರುವುದರಿಂದ ಟೇಮ್ಸು ನದಿಯಲ್ಲಿ ನೆರೆ ತುಂಬಿ ಸುತ್ತಮುತ್ತಲಿನ ಕಾಲಿವೆಗಳೂ ರಾಜ ರಸ್ತೆಗಳೂ ಹಾಳಾಗಿ ಅಗ್ಗಾಡಿ ನಡೆಯಿಸುವದು ಕೂಡಾ ಕಷ್ಟವಾಗಿದೆ.

ಟ್ರಾನ್ಸವಾಲಿನ ನೇಟಲ್ ರೈಲ್ವೆಯಲ್ಲಿ ೩೦೦೦ ಭಾರತೀಯರು ಗೇಯುತ್ತಿರುವುದರಿಂದ ಇವರೆಲ್ಲರನ್ನು ಕೂಡಲೆ ಕೆಲಸದಿಂದ ಬರತರಪು ಮಾಡಿ ಬಿಡುವದು ಕಷ್ಟತರ; ಆದರೆ ಹೊಸಬರನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳಲಿಕ್ಕಿಲ್ಲ ಎಂಬದಾಗಿ ಮೆ. ಸೇನರ್ ಎಂಬವರು ಹೇಳುವರು.

ಉತ್ತರ ಹಿಂದೂಸ್ಥಾನ.

ಕಳದ ಬಕ್ರೀದ್ ಹಬ್ಬದ ದಿನ ಕಲ್ಕತ್ತೆಯಲ್ಲಿ ಹಾಸ್ಯಾಸ್ಪದವಾದ ಒಂದು ಸಂಗತಿಯು ನಡೆಯಿತು. ಒಬ್ಬ ಮಾರ್ವಾರಿಯು ಎರಡು ದನಗಳನ್ನು ಸರಕಾರದ ಮಂದಿರದ ಕಡೆಗೆ ಹೊಡಕೊಂಡು ಹೋಗುತ್ತಾ ಇದ್ದನು. ಇವನನ್ನು ಪೋಲೀಸ್ ಇನ್ಸ್‌ಪೆಕ್ಟರರು ತಡೆದು ವಿಚಾರಿಸಿದರು. ಆಗಲವನು ತಮ್ಮನ್ನು ಕೊಲ್ಲಲಿಕ್ಕಿರುವಂಥಾ ಮನುಷ್ಯರ ಕತ್ತಿಗಳಿಂದ ಬಿಡಿಸಬೇಕೆಂದು ವೈಸರಾಯ ಪ್ರಭುಗಳಿಗೆ ಮೊರೆ ಇಡುತ್ತಿರುವಂಥಾ ಈ ಚಂದವಾದ ಮೂಗ ಪಶುಗಳ ವಿಷಯವಾಗಿ ವೇದ್ಯವರಿಸಲು ತಾನು ವೈಸರಾಯ ಪ್ರಭುಗಳಿಗೆ ಬೇಟಿ ಕೊಡ ಹೋಗುವೆನೆಂದು ಉತ್ತರವಿತ್ತನು. ಇನ್ಸ್‌ಪೆಕ್ಟರರು ಈ ಕುಚೋದ್ಯಗಾರನನ್ನು ಅಲ್ಲಿಂದಲೇ ಹಿಂದಕ್ಕೆ ಓಡಿಸಿಬಿಟ್ಟರು.

ಹಿಂದುಗಳಿಗೂ ಮಹಮ್ಮದೀಯರಿಗೂ ಉಂಟಾದ ಕಲಹದಲ್ಲಿ ಸೀಲ್ಡಾ ರೈಲ್ವೇ ಸ್ಟೇಶನಿನ ಹಿಂದೂ ಪೋಲೀಸ್ ಕನಿಸ್ಟೇಬಲರು ಮಹಮ್ಮದೀ ಮಶೀದಿಗಳಲ್ಲಿ ಹಬ್ಬವು ಆಚರಿಸಲ್ಪಡುವಾಗ ನಿಷ್ಕಾರಣವಾಗಿ ಮಹಮ್ಮದೀಯರನ್ನು ತೊಂದರೆಗೊಳಿಸಿದರೆಂಬ ತಕ್ಸೀರಿನ ಮೇಲೆ ೩೧ ಮಂದಿ ಕನಿಸ್ಟೇಬಲರನ್ನು ಅಮಾನತು ಮಾಡಿದ್ದರು. ಆದರೆ ತಾರೀಕು ೧೭ರಲ್ಲು ರೈಲ್ವೆ ಪೋಲೀಸ್ ಸುಪರಿಂಟೆಂಡೆಂಟರು ಈ ೩೧ ಮಂದಿಯನ್ನು ಕೆಲಸದಿಂದ ಬರತರಪು ಮಾಡಿಬಿಟ್ಟರು.

ಸರ್. ಡಬ್ಲ್ಯು. ವೆಡ್ಡರ್ ಬರ್ನರವರು ತಾರೀಕು ೧೭ರಲ್ಲು ಮುಂಬಾಯಿ ಬಂದರಕ್ಕೆ ಬಂದು ತಲಪಿದರು. ಬಹುಮಾನಪಟ್ಟ ಸರ್. ಜಸ್ಟಿಸ್. ಚಂದಾವರ್‌ಕಾರ್ ಬಹುಮಾನಪಟ್ಟ ಜಿ. ಕೆ. ಗೋಖಲೆ ಮೊದಲಾದ ಗೃಹಸ್ಥರುಗಳು ಬಂದರದಲ್ಲಿ ಇವರನ್ನು ಆಗತ ಸ್ವಾಗತ ಮಾಡಿದರು. ಮುಂಬಯಿಯಲ್ಲಿ ತನಗೆ ಬೇಟಿಕೊಟ್ಟ ಕೆಲವು ಗೃಹಸ್ಥರಿಗೆ ವೆಡ್ಡರ್ ಬರ್ನರು ಮನೋರಂಜಕವಾದಂಥಾ ಕೆಲವು ಮಾತುಗಳನ್ನು ಹೇಳಿದರು:—ಹಿಂದೂಸ್ಥಾನದಲ್ಲಿ ಆಯಾ ಕುಲಗಳವರು ತಮ್ಮತಮ್ಮೊಳಗೆ ಸ್ನೇಹ ಭಾವವನ್ನು ಬೆಳಿಸಿಕೊಂಡು ಸ್ಥೂಲವಾದಂಥಾ ಅಭ್ಯುದಯವನ್ನು ಹೊಂದುವದಕ್ಕೆ ಇದೇ ತಕ್ಕ ಸಮಯ; ಎಲ್ಲಾ ಜಾತಿ ಮತಸ್ಥರಲ್ಲಿ ಒಬ್ಬರ ಮೇಲೊಬ್ಬರಿಗೆ ಇರುವಂಥಾ ವೈಮನಸ್ಸು ಹೋಗಬಿಟ್ಟು ಒಗ್ಗಟ್ಟಾದರೆ ಎಲ್ಲರೂ ಒಟ್ಟಿಗೆ ಸ್ನೇಹ ಭಾವದಲ್ಲಿಯೇ ಇದ್ದು ಮೇಲ್ಮೆಯನ್ನು ಹೊಂದಬಹುದು; ಆಯಾ ಜಾತಿ ಮತಸ್ಥರಲ್ಲಿರುವಂಥಾ ತೋರಮಟ್ಟಿನ ವಿಡ್ಡೂರಗಳನ್ನು ಹೋಗಲಾಡಿಸಿ ಅವರಿವರೊಳಗೆ ಐಕ್ಯವನ್ನು ಹುಟ್ಟಿಸಿ ದೇಶವೂ ದೇಶದ ಜನರೂ ಅಭ್ಯುದಯವನ್ನು ಹೊಂದಿ ಉಚ್ಛಸ್ಥಾನವನ್ನು ಪಡೆಯಬೇಕೆಂಬದೇ ತನ್ನ ಕೋರಿಕೆ; ಸರಕಾರ ಉದ್ಯೋಗಸ್ಥರೂ ಉದ್ಯೋಗಸ್ಥರಲ್ಲದ ಪ್ರಜೆಯೂ ಕೂಡಿಕೊಂಡು ಕೆಲಸಗಳನ್ನು ಆರಾಮಕರವಾಗಿ ನಡಿಸುವದಿಲ್ಲ ಮಾತ್ರವಲ್ಲದೆ ಮಹಮ್ಮದೀಯರೂ ಹಿಂದುಗಳೂ ಮೈತ್ರೀ ಭಾವದಲ್ಲಿ ಇಲ್ಲವೆಂಬದನ್ನು ತಿಳಿಯುವದು ಬಹಳ ದುಖಃದ ಸಂಗತಿ ಎಂಬದಾಗಿ ಸರ್ ವೆಡ್ಡರ್ ಬರ್ನರು ಅಪ್ಪಣೆ ವಿತ್ತರು.

ಮಹಮದ್ದೀಯರೊಳಗೂ ಹಿಂದುಗಳೊಳಗೂ ಇರುವ ವಿಡ್ಡೂರಗಳನ್ನು ಹೋಗಲಾಡಿಸುವರೆ ಮುಂಬಾಯಿಯಲ್ಲಿ ಒಂದು ಸಭೆಯನ್ನು ಜರಗಿಸಬೇಕೆಂಬ ಪ್ರರೋಹಣೆಯ ವಿಷಯವಾಗಿ ಸರ್. ವಿಲ್ಲಿಯಮ್ ವೆಡ್ಡರ್ ಬರ್ನರು:— ಈ ಕೂಟವು ಕೂಡಾ ಐಕ್ಯವನ್ನು ಹುಟ್ಟಿಸಿ, ಅದನ್ನು ಬೆಳಿಸಿ ಸಧಾವತಿ ಪಡುವವಂಥಾಗಿದೆ. ಇಂಥಾ ಸಭೆಯನ್ನು ಜರಗಿಸಬೇಕೆಂಬದು ಮುಸಲ್ಮಾನ ಸಂಘದ ಪ್ರಮುಖರ ಆಲೋಚನೆ. ಎಲ್ಲಾ ಕುಲಗಳಲ್ಲಿ ಹರಡಿಕೊಂಡಿರುವ ಭೇದಾಭೇದಗಳನ್ನು ತೆಗೆದು ಹಾಕಿ ಸರ್ವರೂ ಒಗ್ಗಟ್ಟಾಗಿ ದೇಶವನ್ನೂ ದೇಶದ ಜನರನ್ನೂ ಉತ್ತರೋತ್ತರ ವೃದ್ಧಿಗೆ ತರಲು ಐಕ್ಯದಿಂದ ಕೆಲಸ ಮಾಡಬೇಕೆಂಬದೇ ಇಂಡಿಯನ್ ನೇಶನಲ್ ಕೊಂಗ್ರೆಸಿನ ಮುಖ್ಯ ಗುರಿಯಾಗಿರುವುದರಿಂದ ಮಹಮ್ಮದೀಯರು ಕೂಡಾ ಈ ನೇಶನಲ್ ಕೊಂಗ್ರೆಸನ್ನು ಅವಲಂಬಿಸಿ ನಡಿಯಬೇಕಾಗಿ ಹೇಳಿದರು.

ಬಳಿಕ ಹಿಂದುಸ್ಥಾನದ ಈಗಿನ ಕಾಲ ಸ್ಥಿತಿಗೂ ಸುಮಾರು ೨೦ ವರುಷಗಳ ಹಿಂದಿನ ಸ್ಥಿತಿಗೂ ಇರುವ ವ್ಯತ್ಯಾಸವನ್ನು ತೋರಿಸಿಕೊಟ್ಟು ಜರಗಲಿಕ್ಕಿರುವ ನೇಶನಲ್ ಕೊಂಗ್ರೆಸಿನ ಪ್ರಯೋಜನವನ್ನು ಕುರಿತು ಕೂಡಿ ಬಂದವರಿಗೆ ವ್ಯಕ್ತ ಪಡಿಸಿದರು.

ಅಲ್ಲಹಾಬಾದಿನಲ್ಲಿ ಏರ್ಪಡಿಸಿರುವ ವಸ್ತು ಪ್ರದರ್ಶನವನ್ನು ಬಡವರು ಕೂಡಾ ನೋಡಲಿಕ್ಕಾಗುವ ಹಾಗೆ ಪ್ರತಿ ಬುಧವಾರ ಪ್ರವೇಶ ಹಾಸಲನ್ನು ನಾಲ್ಕಾಣೆಗೆ ತಗ್ಗಿಸಿರುವರು. ಪ್ರದರ್ಶನದ ಕಾಲದಲ್ಲಿ ಕಲ್ಕತ್ತೆಯ ಮಿಸ್

ಫ್ಲೋರ್‌ಜ್ಯಾನ್ ಎಂಬ ಗಾಯನಗಾರ್ತಿಯು ಹಲವು ವಿಚಿತ್ರ ತರದ ಗಾಯನಗಳನ್ನು ಹಾಡುವಳು.

ಮುಂಬಯಿಯಲ್ಲಿರುವ ಕುಷ್ಟರೋಗಿಗಳ ಭಿತ್ತಿಯ ಡಾಕ್ಟಾರ್ ರಾಶ್ಚಿದ್ ಎಂಬವರು ಪ್ರೊಫೆಸರ್ ಡಿಯೋತ್ಸರರ "ನೇಸ್ಟಿನ್" ಎಂಬ ಔಷಧವನ್ನು ಉಪಯೋಗಿಸಿ ಒಬ್ಬ ಯೂರೋಪಿಯನ್ ಕುಷ್ಟರೋಗಿಯನ್ನು ಪೂರ್ಣ ಸ್ವಸ್ಥಮಾಡಿರುವರೆಂದು ತಿಳಿದುಬರುತ್ತದೆ.

ಅಲ್ಲಹಾಬಾದ್ ವಸ್ತುಪ್ರದರ್ಶನಕ್ಕೆ ತಂದಿರುವ ಎರೋಪೆನ್ ಎಂಬ ವಾಯುನಾವೆಯಲ್ಲಿ ಹಾರ್ಯಾಡುವ ಬಗ್ಯೆ ಈಗಲೇ ಅಲ್ಲಿ ತಕ್ಕ ಏರ್ಪಾಡು ಆಗಿರುವದಲ್ಲದೆ ತಾ. ೧೮ರಲ್ಲು ಪಿಕ್‌ವೇಟ್ ಎಂಬಾತನು ಇದರಲ್ಲಿ ಕೂತು ಗಂಗಾ ಮತ್ತು ಯಮುನಾ ನದಿಗಳನ್ನು ದಾಟಿ, ಅಲ್ಲಹಾಬಾದ್ ಕೋಟೆಯನ್ನು ಸುತ್ತುತ್ತಾ ಏನೊಂದು ತೊಂದರೆ ಇಲ್ಲದೆ ಬಂದಿಳಿದನು.

ಅಹಮ್ಮದಾಬಾದಿನ ಬೋಂಬ ಕೇಸಿನಲ್ಲಿ ಸೆಶನ್ಸ್ ಜಡ್ಜರು ಎಸ್ಸೆಸರವರ ಅಭಿಪ್ರಾಯ ಕೇಳಿದಲ್ಲಿ ಇವರೂ ಅಪಾದಿತರು ಶಿಕ್ಷೆಗೆ ಯೋಗ್ಯರು ಎಂದು ಅಭಿಪ್ರಾಯ ಪಟ್ಟಿದ್ದರಿಂದ ಈ ನಂಬ್ರದಲ್ಲಿ ಸಿಕ್ಕೊಂಡಿದ್ದ ಮೊದಲನೇ ಅಪಾದಿತನಿಗೆ ಏಳು ವರುಷ ಕಠಿಣ ಕಾಮಗಿರಿ ಮತ್ತು ಸಾವಿರ ರೂಪಾಯಿ ಜುಲುಮಾನೆ, ಜುಲುಮಾನೆ ಕೊಡ ತಪ್ಪಿದರೆ ಒಂದು ವರುಷ ಹೆಚ್ಚಿನ ಸಜಾ ಅನುಭವಿಸಬೇಕೆಂದು ತೀರ್ಮಾನಿಸಿದಲ್ಲದೆ ಉಳಿದ ಇಬ್ಬರಲ್ಲಿ ಪ್ರತಿ ಒಬ್ಬನಿಗೆ ಮೂರು ಮೂರು ವರುಷಗಳ ಕಠೀಣ ಸಜಾ ಎಂಬದಾಗಿ ತೀರ್ಮಾನಮಾಡಿದರು.

ಕಲ್ಕತ್ತಾ ಯುನಿವರ್ಸಿಟಿ ಸೆನೇಟಿನವರು ತಾರೀಕು ೧೭ರಲ್ಲು ಜರ್ಮನ್ ಯುವರಾಜರವರಿಗೆ ಡಾಕ್ಟರ್ ಇನ್ ಫೆಕಲ್ಟಿ ಆಫ್ ಲೋ ಎಂಬಂಥಾ ಬಿರುದಾಂಕಿತವನ್ನು ದಯಪಾಲಿಸಿರುವರು.

ಪತಿತ ಜನರನ್ನು ಉದ್ಧರಿಸುವ ಬಗ್ಗೆಯೂ ಕ್ರೈಸ್ತ ಮಹಮ್ಮದಿ ಮತಕ್ಕೆ ಮತಾಂತರಗೊಂಡಂಥಾ ಹಿಂದೂಗಳನ್ನು ಪುನಃ ಹಿಂದು ಮತಕ್ಕೆ ಸೇರಿಸಲೂ "ಭಾರತೀಯ ಶುದ್ಧೀ ಸಭಾ" ಎಂಬ ಒಂದು ಸಂಘವು ಏರ್ಪಟ್ಟಿರುತ್ತದೆ. ಕ್ರಿಸ್ಟ್‌ಮಸ್ ಹಪ್ತೆಯಲ್ಲಿ ಈ ಸಭೆಯು ಅಲ್ಲಾಹಬಾದಿನಲ್ಲಿ ಕೂಡುವದು. ಕಲ್ಕತ್ತಾ ಹೈಕೋರ್ಟಿನ ಮಾಜಿ ಜಡ್ಜರಾದ ಶಾರದಾ ಚರಣ ಮಿತ್ರರವರು ಈ ಸಭೆಯ ಪ್ರೆಸಿಡೆಂಟರಾಗಲು ಒಪ್ಪಿಕೊಂಡಿರುವರು.

ಸರ್ ವಿಲ್ಲಿಯಂ ವೆಡ್ಡರ್ ಬರ್ನರವರು ಈ ದಿನ ರಾತ್ರಿ ನೇಶನಲ್ ಕೊಂಗ್ರೆಸಿಗೆ ಹೋಗುವ ಮುಂಬಾಯಿ ಪ್ರತಿನಿಧಿಗಳ ದೊಡ್ಡ ಗುಂಪಿನೊಡನೆ ಅಲ್ಲಹಬಾದಿಗೆ ತೆರಳುವರು.

ಮಾರ್ವಾರಿಗಳು ತಮ್ಮೊಳಗೆ ಪ್ರತಿನಿಧಿಗಳನ್ನು ಆರಿಸಿಕೊಂಡು ಬಕ್ರೀದ್ ಹಬ್ಬದ ದಿನ ತಮಗುಂಟಾದ ತೊಂದರೆಗಳನ್ನು ಬಂಗಾಳದ ಲೆಪ್ಪಿನೆಂಟ ಗವರ್ನರರಿಗೆ ಹೇಳಿಕೊಂಡಿರುವರು. ಇನ್ನು ಮುಂದಕ್ಕೆ ಇಂಥಾ ತೊಂದರೆಗಳು ಬಂದೊದಗದ ಹಾಗೆ ತಕ್ಕ ಏರ್ಪಾಡನ್ನು ಆಲೋಚಿಸುವರೆ ಯುರೋಪಿಯನರೂ, ಹಿಂದುಗಳೂ, ಮಹಮ್ಮದೀಯರೂ ಕೂಡಿದ ಒಂದು ಸಭೆಯನ್ನು ಲೆಪ್ಟನೆಂಟ್ ಗವರ್ನರರವರು ಬೇಗನೇ ಜರಗಿಸುವರು ಎಂಬದಾಗಿ ತಿಳಿದುಬರುತ್ತದೆ.

ಅಲ್ಲಹಾಬಾದಿನಲ್ಲಿ ಬಕ್ರೀದ್‌ಹಬ್ಬವು ಆಚರಿಸಲ್ಪಡುವಾಗ ದಾರಾಗಂಜ್ ಎಂಬಲ್ಲಿ ಸುಮಾರು ಎರಡು ಸಾವಿರ ಹಿಂದುಗಳು ಮುಸಲ್ಮಾನರನ್ನು ಮುತ್ತಿಗೆ ಹಾಕಿದರು. ಆದರೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಇತರ ಆಫೀಸರರ ಸಮೇತ ಆ ಸ್ಥಳಕ್ಕೆ ಹೋಗಿ, ಒಂದು ಪಂಚಾಯತಿಗೆ ಸಭೆಯನ್ನು ಕೂಡಿಸಿ, ಮಹಮದೀಯರು ಏಕಾಂತವಾದ ಸ್ಥಳಕ್ಕೆ ದನಗಳನ್ನು ಕೊಂಡೊಯ್ದು ಅಲ್ಲಿಯೇ ಅದನ್ನು ಅರ್ಪಿಸಬೇಕೆಂದು ತೀರ್ಮಾನಿಸಿದರು. ಆದರೆ ಹಿಂದುಗಳು ಇದಕ್ಕೆ ಒಪ್ಪದೆ ದೊಣ್ಣೆಗಳನ್ನು ಹಿಡಕೊಂಡು ಅಷ್ಟದಿಕ್ಕುಗಳಿಂದಲೂ ಓಡಿ ಬಂದರು. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಈ ಗುಂಪನ್ನು ಚದರ ಅಪ್ಪಣೆಕೊಟ್ಟರೂ ಈ ಗುಂಪಿನವರು ಇವರ ಅಪ್ಪಣೆಯನ್ನು ತಿರಸ್ಕರಿಸಿದ್ದರಿಂದ ಹತ್ತು ಹಿಂದುಗಳನ್ನು ಕೈದು ಮಾಡಿಸಿದರು. ಗೊಂದಲವು ನಿಂತಿತು. ಅಂದೇ ಇಬ್ಬರು ಮುಸಲ್ಮಾನರನ್ನು ಕೂಡಾ ಕೈದುಮಾಡಿರುವರು.

ದಕ್ಷಿಣ ಹಿಂದುಸ್ಥಾನ.

ಶಾದಿರಾಮ್ ಎಂಬ ಪಂಜಾಬಿಯೊಬ್ಬನು ಹಲವು ವರ್ತಮಾನ ಪತ್ರಿಕೆಗಳನ್ನು ಮಾತ್ರವಲ್ಲದೆ ಹಣ ಸಂಬಂಧವಾಗಿ ಹಲವು ಜನರನ್ನೂ ಮೋಸಗೊಳಿಸಿದ ಮೊಕದ್ದಮೆ ಮದ್ರಾಸು ಚೀಫ್ ಪ್ರೆಸಿಡೆನ್ಸಿ ಕೋರ್ಟಿನಲ್ಲಿ ತನಖಿಯಾಗುತ್ತಲಿದೆ. ಈತನಿಂದ ವಂಚಿಸಲ್ಪಟ್ಟವರಲ್ಲಿ ಮದ್ರಾಸಿನ ಗೋವಿಂದರಾವ್ ಎಂಬವರು ಒಬ್ಬರು. ಶಾದಿರಾಮ್ ಎಂಬವನು ಬೇರೆ ಇಬ್ಬರ ಕೂಡೆ ಲುದಿಯಾನ ಎಂಬಲ್ಲಿ ಒಂದು ಸಣ್ಣ ಕಟ್ಟೋಣವನ್ನು ಬಾಡಿಗೆಗೆ ಮಾಡಿಕೊಂಡು ತಮ್ಮ ಅಂಗಡಿಗೆ "ಎ. ಎ. ಲಾಲ್ ಬ್ರದರ್ಸ್" ಎಂಬ ಹೆಸರಿಟ್ಟು, ತಾವು ಸಾಹುಕಾರರು, ಕಮಿಶನ್ ಏಜಂಟರು, ಸಾಮಾನುಗಳನ್ನು ಆಮದು ರಫ್ತು ಮಾಡುವವರು, ಎಂಬಿತ್ಯಾದಿ ಸಂಗತಿಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿ ತಮ್ಮಲ್ಲಿ ಹಣವನ್ನು ಠೇಣಾವತಿ ಇಡಬಹುದೆಂಬದಾಗಿಯೂ ಠೇಣಾವತಿ ಇಟ್ಟವರಿಗೆ ಒಳ್ಳೇ ಲಾಭವು ದೊರಕುವುದೆಂಬದಾಗಿಯೂ ಈ ಕಂಪೆನಿಯಲ್ಲಿ ೩೫ರಿಂದ ೨೫೦ ರೂಪಾಯಿ ಸಂಬಳದ ಇನ್ಸಪೆಕ್ಟರ್, ಏಜಂಟ್ ಮೊದಲಾದ ನೌಕರರನ್ನು ನೇಮಿಸುವೆವೆಂದೂ ೫೦-೧೦೦೦ ರೂಪಾಯಿಗಳನ್ನು ಇದರಲ್ಲಿ ಠೇಣಾವತಿ ಇಟ್ಟ ಕೂಡಲೇ ಇಂಥವರಿಗೆ ಸಂಬಳವು ದೊರಕುವುದೆಂಬಿತ್ಯಾದಿ ಸಂಗತಿಗಳನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ಅನೇಕರು ಈ ಕಂಪೆನಿಯಲ್ಲಿ ಪಾಲುಗಾರರಾಗಿ ಹಣವನ್ನು ಠೇಣಾವತಿ ಇಟ್ಟಿದ್ದರು.

ಹೀಗೆ ಮದ್ರಾಸಿನ ಗೋವಿಂದ ರಾವ್ ಎಂಬವರೂ ತಮಿಳು ಬಾಷೆಯ ಒಂದು ಪತ್ರಿಕೆಯಲ್ಲಿ ಈ ಲಾಲ್ ಬ್ರದರ್ಸ್ ಕಂಪೆನಿಯ ಪ್ರಕಟನೆಯನ್ನು ನೋಡಿ ಸ್ವದೇಶಿ ಸ್ಟೋರು ಕೂಡಾ ಇವರಲ್ಲಿ ಉಂಟೆಂದು ತಿಳಿದು ೭೦೦ ರೂಪಾಯಿಗಳನ್ನು ಕಳುಹಿಸಿದ್ದರು. ಆದರೆ ಯಾವ ಸಾಮಾನುಗಳಾಗಲೀ ಇವರಿಗೆ ಬಾರದ್ದರಿಂದ ಗೋವಿಂದರಾಯರು ಇದರ ವಿಷಯ ತನಖಿ ನಡಿಸಿ ಮೋಸವನ್ನು ತಿಳಕೊಂಡು ಈ ಸಂಗತಿಯನ್ನು ಕ್ರಿಮಿನಲ್ ಇನ್‌ವೆಸ್ಟಿಗೇಶನ್ ಡಿಪಾರ್ಟ್‌ಮೆಂಟಿಗೆ ತಿಳಿಸಿದರು. ಈ ಡಿಪಾರ್ಟ್‌ಮೆಂಟಿನವರು ಈ ವಿಷಯ ಪತ್ತೆಮಾಡಿ ಶಾದಿರಾಮನ ಸಮೇತ ಬೇರೆ ಇಬ್ಬರು ಪಾಲುಗಾರರನ್ನೂ ಹಿಡಿದರು. ಆದರೆ ಬೇರೆ ಇಬ್ಬರು ಬರ್ಮದಲ್ಲಿ ತಲೆ ತಪ್ಪಿಸಿಕೊಂಡದ್ದರಿಂದ ಶಾದಿರಾಮನನ್ನು ಕೈದುಮಾಡಿ ಮದ್ರಾಸಿಗೆ ತಂದಿರುತ್ತಾರೆ. ಮೊಕದ್ದಮೆಯು ತನಖಿಯಲ್ಲಿದೆ.

ಮದ್ರಾಸ್ ಗವರ್ನರರ ನ್ಯಾಯನಿರ್ಮಾಣ ಸಭೆಯು ಬರುವ ವರ್ಷದ ಪೆಬ್ರವರಿ ತಿಂಗಳ ೨೧ನೇ ತಾರೀಕು ಮಧ್ಯಾನ್ಹ ೧೨ ಗಂಟೆಗೆ ಮದ್ರಾಸ್ ಸರಕಾರ ಮಂದಿರದಲ್ಲಿ ಕೂಡಿಬರುವುದು.

ತಾರೀಕು ೧೩ರಲ್ಲು. ರಂಗೂನಿನ ಸಿರಿಯಾನಿನಲ್ಲಿ ಮುಸಲ್ಮಾನರಿಗೂ ಹಿಂದುಗಳಿಗೂ ಉಂಟಾದ ಕಲಹವು ಪೊಲೀಸ್ ಸಹಾಯದಿಂದ ನಿಲ್ಲಿಸಲ್ಪಟ್ಟರೂ ಅಂದೇ ಕಾಮರೆಸ್ಟ್ ಎಂಬಲ್ಲಿ ಬಹು ಮಂದಿ ಹಿಂದುಗಳೂ ಮುಹಮ್ಮದೀಯರೂ ಒಂದು ಭತ್ತದ ಗದ್ದೆಯಲ್ಲಿ ಗುಂಪುಕೂಡಿ ಕಾದಾಡ ಪ್ರಾರಂಭಿಸಿದರು. ಎರಡು ಪಕ್ಷದಲ್ಲಿಯೂ ಕೈಕಾಲು ಕುತ್ತಿಗೆ ಮುರಿದವರಾಗಿ ಬಹು ಮಂದಿ ಬಿದ್ದರು. ಆದರೆ ಪೊಲೀಸ್ ಸುಪರಿಂಟೆಂಡೆಟರು ಕೂಡಲೇ ಆ ಸ್ಥಳಕ್ಕೆ ಓಡಿ, ಪೊಲೀಸ್ ಸಹಾಯದಿಂದ ಗೊಂದಲವನ್ನು ನಿಲ್ಲಿಸಿದರು.

"ಶಾರದಾ ಗಾಯನ ಸಮಾಜ" ಎಂಬಂಥಾ ಒಂದು ಗಾಯನ ವಿದ್ಯಾಭಿವೃದ್ಧಿಯನ್ನು ಸಾಧಿಸುವ ಸಂಘವು ಈಚೆಗೆ ಮದ್ರಾಸಿನ ಮೈಲಾಪುರದಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ಸಂಘವವರು ಇತಿಹಾಸ ಮೊದಲಾದವುಗಳಿಂದ ಹಿಂದೂ ಗಾಯನ ವಿದ್ಯೆಯನ್ನು ಸಂಗ್ರಹಿಸಿಕೊಂಡು ಅವುಗಳಿಗೆ ಸಂಖ್ಯಾಲೇಖನ ಪದ್ಧತಿಗನುಸಾರವಾಗಿ ಸರಿಗೊಳಿಸಿ ಪ್ರಖ್ಯಾತಿಪಟ್ಟಂಥಾ ಗಾಯಕರಿಂದ ಉತ್ತಮ ಗಾಯನಗಳನ್ನು ಮಾಡಿಸುವರು. ಬಹುಮಾನಪಟ್ಟ ಸರ್. ಎಸ್. ಸುಬ್ರಮಣಯ್ಯರ್. ಕೆ. ಸಿ. ಐ. ಇ. ಯವರು ಈ ಸಭೆಯ ಪ್ರೆಸಿಡೆಂಟರಾಗಿರುವರಲ್ಲದೆ ಬಹುಮಾನಪಟ್ಟ ಜಸ್ಟಿಸ್‌ಕೃಷ್ಣಸ್ವಾಮಿ ಐಯರ್ ಮೊದಲಾದ ಪ್ರಖ್ಯಾತಪಟ್ಟ ಗೃಹಸ್ಥರುಗಳೇ ಈ ಸಭೆಯ ಮೆಂಬರಾಗಿರುವರು.

ಮಿಂಟೋ ಪ್ರಭುಗಳವರ ಜ್ಞಾಪಕಾರ್ಥವಾಗಿ ಬೆಂಗಳೂರಲ್ಲಿ ಕಟ್ಟಿಸುವ ನೇತ್ರ ರೋಗ ಚಿಕಿತ್ಸಾ ಆಸ್ಪತ್ರಿಗೆ ತಾರೀಕು ೧೮ರಲ್ಲು ಮೈಸೂರು ಮಹಾರಾಜರವರು ಬುನಾದಿ ಕಲ್ಲನ್ನು ಇಟ್ಟರು. ಈ ಸಂದರ್ಭದಲ್ಲಿ ಮೈಸೂರು ಮಹಾರಾಜರವರು:—ಎಲ್ಲಾ ಕಾಲಗಳಲ್ಲಿ ನೆನವರಿಕೆ ಮಾಡಬಹುದಾದಂಥಾ, ಜ್ಞಾನಭರಿತನೂ, ಹಿಂದೂಸ್ಥಾನದ ಪ್ರಜೆಗಳೆಲ್ಲರ ನಿಜ ಸ್ನೇಹಿತನೂ ಆಗಿದ್ದ ಮಿಂಟೋ ಪ್ರಭುಗಳ ಜ್ಞಾಪಕಾರ್ಥವಾಗಿ ಕಟ್ಟಿಸುವ ಈ ಕಟ್ಟಡವು ನಿರಂತರವಾಗಿ ಬಾಳಿ ಫಲದಾಯಕವಾಗಿ ನೆರವೇರಲಿ ಎಂಬದೇ ತನ್ನ ಅಪೇಕ್ಷೆಯಾಗಿದೆ ಎಂದು ಹೇಳಿದರು.

ಕೊಕನಾಡದ ರಾಜಮಹೇಂದ್ರಿಯಲ್ಲಿ ಈಚೆಗೆ ಕೊಲ್ಲಲ್ಪಟ್ಟ ವೀರಸ್ವಾಮಿ ಪಿಳ್ಳೆಯ ನಂಬ್ರದಲ್ಲಿ ಪೊಲೀಸಿನವರು ಲಕ್ಷ್ಮಣಾಚಾರಿ ಎಂಬ ಅಡಿಗೆಭಟ್ಟನನ್ನು ಹಿಡಿದಿರುವದಲ್ಲದೆ ತಾರೀಕು ೧೫ರಲ್ಲು ಬೇರೆ ಮೂರು ಜನರನ್ನು ಕೈದುಮಾಡಿದರು. ಕೈದು ಮಾಡಲ್ಪಟ್ಟವರಲ್ಲಿ ಹನುಮಯ್ಯ ಎಂಬವನು ತನ್ನನ್ನೂ ಇತರ ಬಂದಿವಾನರನ್ನೂ ಪೊಲೀಸಿನವರು ಬಹಳವಾಗಿ ಪೀಡಿಸುವುದರಿಂದ ಸ್ಥಳೀಕ ಪೊಲೀಸ್ ಸ್ಟೇಶನಿನಿಂದ ತಮ್ಮನ್ನು ಸಬ್ ಜೈಲಿಗೆ ವಯ್ಯ ಬೇಕೆಂದು ವಕೀಲರ ಮೂಲಕ ಮೆಜಿಸ್ಟ್ರೇಟರನ್ನು ಕೇಳಿಕೊಂಡನು. ಆದರೆ ಮೆಜಿಸ್ಟ್ರೇಟರಿಂದ ಆ ದಿನವೇ ಹುಕುಂ ಸಿಕ್ಕದ್ದರಿಂದ ಆ ರಾತ್ರಿ ಇವರೆಲ್ಲರೂ ಪೊಲೀಸ್ ಸ್ಟೇಶನಿನಲ್ಲಿಯೇ ಉಳಿಯ ಬೇಕಾಯಿತು. ೧೬ನೇ ತಾರೀಕು ಬೆಳಗಾತ ಏಳುವಾಗ ಈ ಮೂರು ಕೈದಿಗಳ ಪೈಕಿ ಪಿ. ಸುಬ್ರಾಯ್ಯ ಎಂಬಾತನು ಸತ್ತಿದ್ದನು. ೧೬ನೇ ತಾರೀಕಿನಲ್ಲಿ ಉಳಿದ ಬಂದಿವಾನರನ್ನು ಮೆಜಿಸ್ಟ್ರೇಟರು ಸಬ್ ಜೈಲಿಗೆ ತರಲು ಹುಕುಂ

ಕೊಟ್ಟರು. ಪೊಲೀಸ್ ಸ್ಟೇಶನಿನವರು ಸತ್ತಂಥಾ ಕೈದಿಯು ಸಾಧಾರಣ ತರದಲ್ಲಿಯೇ ಸತ್ತನು ಎಂಬದಾಗಿ ತಾ. ೧೬ರಲ್ಲು ರಿಪೋರ್ಟು ಮಾಡಿದರು. ಆದರೆ ತಾರೀಕು ೧೬ರಲ್ಲು ಸ್ಥಳೀಕ ಸರ್ಜನರು ಹೆಣವನ್ನು ಪರೀಕ್ಷಿಸಿ ಈತನು ಕಠೀಣ ತರದ ಪೀಡೆಯಿಂದ ಸತ್ತನೆಂದೂ ಮಗ್ಗುಲಿನ ಎಲುಬು ಮುರಿದದೆಂದೂ ಅಭಿಪ್ರಾಯ ಕೊಟ್ಟಿರುವರಂತೆ.

ತಾರೀಕು ೧೬ಲ್ಲು ಪೊಲೀಸ್ ಸುಪರಿಂಟೆಂಡೆಂಟರವರೂ ಸ್ಥಳೀಕ ಮೇಜಿಸ್ಟ್ರೇಟರೂ ಪಟ್ಟಣದಲ್ಲಿ ಗೈಹಾಜರು ಆಗಿದ್ದರಿಂದ ಮರಣಹೊಂದಿದ ಕೈದಿಯ ತಾಯಿಯು ಕಲೆಕ್ಟರ್ ದೊರೆಗಳವರಿಗೆ ತಂತೀ ವಾರ್ತೆಯ ಮೂಲಕ ಈ ಸಂಗತಿಯನ್ನು ತಿಳಿಸಿದಳು. ಕಲೆಕ್ಟರವರು ಕೋಕನಾಡದಿಂದ ಡಿಪ್ಯುಟಿ ಕಲೆಕ್ಟರರವರನ್ನು ರಾಜಮಹೇಂದ್ರಿಗೆ ತನಖಿ ಬಗ್ಯೆ ಕಳುಹಿಸಿಕೊಟ್ಟಿರುವರು. ತನಖಿಯು ನಡಿಯುತ್ತಲಿದೆ.

ಜರ್ಮನ್ ಯುವರಾಜರವರು ತಾರೀಕು ೧೬ರಲ್ಲು ಹೈದರಬಾದಿಗೆ ಮುಟ್ಟಿದರು. ನೈಜಾಮರೂ ಪರಿವಾರದವರೂ, ಬ್ರಿಟಿಷ್ ರೆಸಿಡೆಂಟರೂ ಇವರನ್ನು ಸನ್ಮಾನ ಪೂರ್ವಕವಾಗಿ ಸತ್ಕರಿಸಿದರು. ಯುವರಾಜರ ಬಹುಮಾನಾರ್ಥವಾಗಿ ನೈಜಾಮರು ಸ್ಟೇಟಿನಲ್ಲಿ ೭೧ ತೋಪುಗಳು ಹಾರಿಸಲಾದವು. ಯುವರಾಜರವರು ನೈಜಾಮು ಮಹಾರಾಜರ ಮತ್ತು ರೆಸಿಡೆಂಟ ಮೊದಲಾದ ಸರಕಾರ ಹುದ್ದೆದಾರರ ಕೂಡಾ ಪಾಲ್ಕನೋಮ ಅರಮನೆಗೆ ಹೋಗಿ ಉಳಕೊಂಡರು. ತಾರೀಕು ೧೮ಲ್ಲು ಯುವರಾಜರು ಚಿರತೆ ಮತ್ತು ಮೊಲ ಇತ್ಯಾದಿಗಳನ್ನು ಬೇಟೆಯಾಡ ಹೋದರು. ಆ ದಿನದ ಬೆಳಗಿನ ಊಟವನ್ನು ಅಡವಿಯಲ್ಲೇ ಮಾಡಿದರು. ಮಧ್ಯಾನ್ಹದನಂತರ ಗೊಲ್ಕಂಡ ಮೊದಲಾದ ಪ್ರಖ್ಯಾತ ಸ್ಥಳಗಳನ್ನು ಸಂದರ್ಶಿಸ ಹೋಗಿ ಅಲ್ಲಿಯ ಕೋಟೆಗಳನ್ನು ನೋಡಿ ಬಹಳ ಸಂತೋಷ ಪಟ್ಟರು.

ದಕ್ಷಿಣ ಕನ್ನಡ.

ಮಂಗಳೂರು. ಹೆಡ್‌ಕ್ವಾಟರ್ಸ್ ಡಿಪ್ಯುಟಿ ಕಲೆಕ್ಟರ್ ಮ। ರಾ। ರಾ। ಪಿ. ನಾರಾಯಣ ಮೆನನರು ಮದ್ರಾಸ್ ಟೌನ್ ಡಿಪ್ಯುಟಿ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು. ಇಲ್ಲಿ ಹೆಡ್‌ಕ್ವಾಟರ್ಸ್ ಡಿಪ್ಯುಟಿ ಕಲೆಕ್ಟರರಾಗಿ ಮೆ. ಚಂತನ್ ಎಂಬವರು ಮೊಕ್ರೂರು ಮಾಡಲ್ಪಟ್ಟಿರುವರು.

ಹಜೂರ್ ಶಿರಸ್ತೆದಾರರಾದ ಮ। ರಾ। ರಾ। ಎಮ್. ವೆಂಕಟರಾಯರಿಗೆ ೨೪ ದಿವಸಗಳ ಪ್ರಿವಿಲೆಜ್ ರಜೆಯು ಸೆಂಕ್ಶನ್ ಆಗಿರುವದರಿಂದ ಅವರ ಕೆಲಸಕ್ಕೆ ಮೆ। ಎ. ಎಂ. ಫೆರ್ನಾಂಡಿಸರವರು ಆಕ್ಟಿಂಗ್ ಮೊಕ್ರೂರು ಆಗಿರುವರು.

ಮುಲ್ಕಿ ಸ್ಟೇಶನ್ ಹೆಡ್ ಕನ್ಸ್‌ಟೇಬಲರು ಒಬ್ಬರನ್ನು ಅಕ್ರಮವಾಗಿ ಕೈದುಮಾಡಿದ್ದರಿಂದ ಸದರಿಯವರಿಗೆ ೬೦ ರೂಪಾಯಿ ಜುರುಮಾನೆಯನ್ನು ಹೆಡ್‌ಕ್ವಾಟರ್ಸ್ ಡಿಪ್ಯುಟಿ ಕಲೆಕ್ಟರವರು ವಿಧಿಸಿರುವರು.

ಕ್ರಿಸ್ತಮಸ್ ಹಬ್ಬದ ಸಮ್ಮಂದ ಡಿಸ್ಟ್ರಿಕ್ಟ್ ವ ಮುನ್ಸಿಫ್ ಕೋರ್ಟು ವಗೈರೆ ಸರಕಾರಿ ಖಚೇರಿಗಳಿಗೆ ಈ ತಿಂಗಳ ತಾ. ೨೩ರಿಂದ ಜನವರಿ ತಾ. ೨ರ ವರೆಗೆ ರಜಾ ಇರುವದು.

ಧರ್ಮಸ್ಥಳ ಅತ್ತಕಡೆಗೆ ಹೋಗಿ ಪ್ರಕೃತ ಪಾಣೆ ಮಂಗಳೂರಲ್ಲಿ ಇರುವ ಪಿ. ಎ. ಸರ್ಕಸ್ ಕಂಪೆನಿಯವರು ನಾಳೆ ಇಲ್ಲಿಗೆ ಬಂದು ತಾ. ೨೫ನೇ ದಿವಸ ತಮ್ಮ ಶುರುವಿನ ಆಟವನ್ನು ತೋರಿಸುವರಂತೆ.

ಕೂಡ್ಲು ಗ್ರಾಮದ ವೆಂಕಮ್ಮ ಎಂಬವಳೊಬ್ಬಳು ತನ್ನ ಗಂಡನನ್ನು ಕೊಂದದ್ದರಿಂದ ಸದರಿಯವಳನ್ನು ಕಾಸರಗೋಡು ಸ್ಟೇಶನರಿ ಮೆಜಿಸ್ಟ್ರೇಟರ ಮುಂದೆ ಚಾರ್ಜಿ ಮಾಡಿ ಸ್ಟೇಶನರಿ ಮೆಜಿಸ್ಟ್ರೇಟರು ಪ್ರಾರಂಭ ತನಕಿಯಿಂದ ಅವಳನ್ನು ಬಿಡುಗಡೆ ಮಾಡಿದ್ದರು. ಸದರಿ ಮೊಕದಮೆಯನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರವರು ಕಳದ ತಾ. ೨೧ರಲ್ಲು ಪುನರ್ವಿಮರ್ಶಿಸಿ ಅವಳನ್ನು ಸೆಶನ್ಸ್ ಕೋರ್ಟಿಗೆ ಕಮಿಟ್ ಮಾಡಿರುವರು.

ಇದೇ ತಿಂಗಳ ತಾ. ೨೮, ೨೯, ೩೦ರಲ್ಲು ಮಧ್ರಾಂನಲ್ಲಿ ಜರಗುವ ಗೌಡಸಾರಸ್ವತ ಪರಿಷದಕ್ಕಾಗಿಯೂ ಕುಲದೇವತಾ ದರ್ಶನಕ್ಕಾಗಿಯೂ ಮಂಗಳೂರು, ಕಾಸರಗೋಡು, ಕುಂಬಳೆ, ಹೊಸದುರ್ಗ, ಬಂಟ್ವಾಳ ವಗೈರೆ ಪ್ರಾಂತ್ಯಗಳಿಂದ ಸುಮಾರು ೧೫೦ ಜನರು ನಿನ್ನೆ ದಿವಸದ ಸ್ಟೀಮರಿನಲ್ಲಿ ಹೊರಟಿರುವರು. ಇನ್ನು ಕೆಲವು ಮಂದಿ ಗೃಹಸ್ಥರು ಬರುವ ಸೋಮವಾರದ ಸ್ಟೀಮರಿನಲ್ಲಿ ಹೊರಡುವರು.

ಮೈದಾನಿನ ಸರಕಾರಿ ಕಟ್ಟಿಗೆ ಡಿಪೋ ಜನವರಿ ೧ರಲಾಗಾಯಿತು ರಾ। ಮುಂಡ್ಕೂರ ಗಣಪತಿ ಕುಡ್ವರು ವಹಿಸಿಕೊಳ್ಳುವರು.

ಕಳದ ವಾರ ಮುನಿಸಿಪಾಲಿಟಿಯಲ್ಲಿ ೮ ಪ್ಲೇಗು ಮರಣಗಳು ಇದ್ದವು.

ಬೋಳಾರ. ಇಲ್ಲಿ ಯೆಮ್ಮೆಕೆರೆಯ ಬಳಿ ಒಂದು ಲಾಟಾನು ಕಂಭವು ಇದ್ದರೂ ಅತೀ ಕತ್ತಲೆ ರಾತ್ರಿಗಳಲ್ಲಿ ಸಹಾ ಇದನ್ನು ಉರಿಸುವದೇ ಇಲ್ಲ. ಕೆರೆ ವ ದೊಡ್ಡ ಖಣಿವೆಗಳು ಮಾರ್ಗದ ಸಮಿಪ ಇರುವದರಿಂದ ರಾತ್ರಿ ಸಮಯ ಈ ಮಾರ್ಗವಾಗಿ ಹೋಗುವವರಿಗೆ ಬಹಳ ಪ್ರಯಾಸವಾಗುವದರಿಂದ ಅಧಿಕಾರಿಗಳು ಇದಕ್ಕೆ ತಕ್ಕ ಗಮನಕೊಟ್ಟರೆ ಮಾರ್ಗಸ್ಥರಿಗೆ ಬಹಳ ಅನುಕೂಲವಾಗುವದು.

ಅಂದಮಾನ ದ್ವೀಪದ ಪೋರ್ಟ್‌ಬ್ಲೆರ್ ಪಟ್ಟಣದಿಂದ ರಾವ್ ಸಾಹೇಬ್ ಸದಾಶಿವ ಪಿಳ್ಳಿಯವರು ಮಂಗಳೂರಲ್ಲಿ ಪಂಚಮರ ಬಗ್ಯೆ ಸ್ಥಾಪಿಸಿದ ಪೀಡಿತ ಜನಸಹಾಯಕ ಸಂಘದ ಬಗ್ಯೆ ರೂಪಾಯಿ ೭೮೭ ದಾನವಾಗಿ ಕಳುಹಿಸಿದ್ದಾರೆ.

ಮಧುರೆ, ಗುಡಿವಾಡಾ, ಕುಂಭಕೋಣ, ನೆಲ್ಲೂರು, ಪೆರಿಯಾಕುಲಂ, ಬೆಂಗಳೂರು, ಮೊದಲಾದ ಊರುಗಳ ತಿಯೋಸೊಫಿಕಲ್ ಸೊಸ್ಯಾಟಿಯುವರು ಸಹ ಸದರಿ ಪೀಡಿತ ಜನಸಹಾಯಕ ಸಂಘದ ಬಗ್ಯೆ ಧನ ಸಹಾಯ ಕಳುಹಿಸಿದ್ದಾರೆ.

೮ನೇ ಸರ್ಕಲಿನ ಶಾಲಾ ಇನ್ಸ್‌ಪೆಕ್ಟರರಾದ ಮೆ। ಪಿ. ಪಿ. ಬ್ರೈತ್‌ವೆಟ್ ದೊರೆಗಳವರು ರಜೆಮೇಲೆ ಹೋಗುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾಗಿರುವ ಯು. ರಾಘುವೆಂದ್ರ ರಾಯರವರು ೮ನೇ ಸರ್ಕಲಿನ ಶಾಲೆಗಳ ಇನ್ಸ್‌ಪೆಕ್ಟರರ ಚಾರ್ಜನ್ನು ಸಹ ನೋಡುವರು.

ಮೊದಲು ಇಲ್ಲಿ ಡಿಸ್ಟ್ರಿಕ್ಟ್ ಜಡ್ಜರಾಗಿದ್ದ ಮೆ। ಎಚ್. ಒ. ಡಿ. ಹಾರ್ಡಿಂಗ್ ದೊರೆಗಳವರು ಕೊಯಂಬುತ್ತೂರಿನಿಂದ ಸೇಲಮಿಗೆ ವರ್ಗಾಯಿಸಲ್ಪಟ್ಟಿರುವರು.

ಡಿಸ್ಟ್ರಿಕ್ಟ್ ಕೋರ್ಟು ಕ್ಲಾರ್ಕ್ ರಾ. ಪಣಂಬೂರು ಶಂಕರನಾರಾಯಣ ರಾಯರೂ ಸದರಿ ಕೋರ್ಟಿನ ರಿಕಾರ್ಡ್‌ಕೀಪರ್ ರಾ. ನಗರ ವೆಂಕಪ್ಪ ನ್ಯಾಕರೂ ಮಂಗಳೂರು ಡಿವಿಜನ್ ರೆವಿನ್ಯೂ ಇನ್ಸ್‌ಪೆಕ್ಟರ್ ರಾ. ಸುಲ್ತಾನ ಮ್ಯೊದಿನ್ ಸಾಹೇಬರೂ ಹ್ಯಾಯರ್‌ಗ್ರೇಡ್ ಟ್ರಾನ್ಸ್‌ಲೇಶನ್ ಟೆಸ್ಟ್ ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟಿರುವರು.

ಕಾರ್ಕಳ ಡಿಪ್ಯುಟಿ ತಹಶಿಲ್‌ದಾರರ ಆಫೀಸಿನ ಹೆಡ್ ಕ್ಲಾರ್ಕ್ ರಾ. ಹೆಮ್ಮಾಡಿ ರಾಮರಾಯರೂ ಬ್ರಹ್ಮಾವರ ಡಿವಿಜನ್ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರ್ ರಾ. ಗಂಗೊಳ್ಳಿ ಶ್ರೀನಿವಾಸ ಶ್ಯಾನಭಾಗರೂ ಟ್ರಾನ್ಸ್‌ಲೇಶನ್ ಲೋವರ್ ಟೆಸ್ಟ್ ಪರೀಕ್ಷೆಯಲ್ಲಿ ತೇರ್ಗಡೆಪಟ್ಟಿರುವರು.

ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸಿನ ಆಕ್ಟಿಂಗ್ ಎಕೌಂಟಾಂಟರಾಗಿರುವ ರಾ. ಮಂಕಿ ಸದಾಶಿವರಾಯರೂ ಕಲೆಕ್ಟರ್ ಆಫೀಸಿನ ಬರ್ತ್ ಎಂಡ್ ಡೆತ್ ರಿಜಿಸ್ತ್ರಿ ಕ್ಲಾರ್ಕರಾಗಿರುವ ರಾ. ವಿಕ್ಟರ್ ಸಾಲ್ಡಾಂಞಾರೂ ಕಾರ್ಕಳ ಸಬ್ ರಿಜಿಸ್ತ್ರಾರರಾಗಿರುವ ಉಡಿಪಿ ರಂಗಪ್ಪ ಪಡಿಯಾರರೂ ಗವರ್ನಮೆಂಟ್ ಕೋಲೇಜಿನ ಮೂರನೇ ಅಸಿಸ್ಟಾಂಟರಾಗಿರುವ ರಾ. ಕೆ. ಎಸ್. ರಾಮಚಂದ್ರನ್‌ರವರೂ ಎಕೌಂಟ್ ಟೆಸ್ಟ್ ಹ್ಯಾಯರ್ ಪರೀಕ್ಷೆಯಲ್ಲಿ ತೇರ್ಗಡೆಪಟ್ಟಿರುವರು.

ಪ್ರಿಸಿಸ್ ರೈಟಿಂಗ್ ಟೆಸ್ಟ್ ಪರೀಕ್ಷೆಯಲ್ಲಿ ರಾ. ಬಂಟ್ವಾಳ ಮಾಧವ ರಾಯರು ತೇರ್ಗಡೆಪಟ್ಟಿರುವರು.

ಕಳದ ಸಂಚಿಕೆಯಲ್ಲಿ ಪ್ರಸ್ತಾಪಿಸಿದ ಕೊಂಡೆ ಮೋನಪ್ಪ ಶೆಟ್ರ ಮಗ ರಾ. ನಾಗರಾಜ ಶೆಟ್ರುಗಳವರು ಮುದ್ದೆಗಳಾಗಿರುವ ಸೆಶನ್ಸ್ ಕ್ರಿಮಿನಲ್ ಮೊಕದಮೆಯ ವೃತ್ತಾಂತವು ಈ ರೀತಿಯಾಗಿರುತ್ತದೆ. ಕಳದ ಮಾರ್ಚಿ ತಿಂಗಳಲ್ಲಿ ಒಂದು ರಾತ್ರೆ ತಮ್ಮ ಒಕ್ಕಲುಗಳ ಮೇಲೆ ಬಂಟ್ವಾಳ ಡಿಪ್ಯುಟಿ ತಹಸೀಲದಾರರ ಆಫೀಸಿನಲ್ಲಿ ಫಿರ್ಯಾದು ನಡಿಸಲಿಕ್ಕೆ ಹೋದ ಸೆಟ್ರು ಹಿಂತಿರುಗಿ ತಮ್ಮ ಊರಿಗೆ ಬರುತ್ತಿದ್ದರು. ನಾಗರಾಜ ಸೆಟ್ರವರು ಹತ್ತಿಕೊಂಡು ಬರುತ್ತಿದ್ದ ಗಾಡಿಯೊಂದಿಗೆ ಅವರ ನಾಲ್ಕು ಜನ ವಕ್ಕಲುಗಳು ಸಹಾ ನಡದು ಬರುತ್ತಿದ್ದರು. ರಾಯಿ ಎಂಬಲ್ಲಿ ಇವರ ಗಾಡಿ ತಲ್ಪಿದೊಡನೆ ಇವರ ವಕ್ಕಲುಗಳು ನೀರು ಕುಡಿಯಲಿಕ್ಕೆ ಹತ್ತರವಿರುವ ಒಂದು ಅಂಗಡಿಗೆ ಹೋದರು. ಗಾಡಿಯು ಸ್ವಲ್ಪ ದೂರ ಮುಂದರಿಸಿ ಹೋಗುವಷ್ಟರೊಳಗೆ ಅಂತೋನಿ ಶ್ಯಾನಭಾಗ ಎಂಬವನ ಗಾಡಿಯು ಈ ಗಾಡಿಗೆ ಎದುರಾಗಿ ಬಂತು. ಅಂತೋನಿಶ್ಯಾನುಭಾಗನು ನಾಗರಾಜ ಶೆಟ್ರ ಗಾಡಿಯು ಮುಂದೆ ಹೋಗದಂತೆ ತಡದನು. ಎರಡು ಗಾಡಿಗಳನ್ನು ಹೊಡೆಯುವವರೊಳಗೆ ಜಗಳವೆದ್ದು ಉಂಟಾದ ಗುಲ್ಲಿನಿಂದ ಗಾಡಿಯಲ್ಲಿ ಮಲಗಿದ್ದ ನಾಗರಾಜ ಶೆಟ್ರಿಗೆ ಎಚ್ಚರವಾಯಿತು. ನಾಗರಾಜ ಶೆಟ್ರ ಗಾಡಿಯ ಹೋರಿಗಳು ಈ ಗದ್ದಲದಿಂದ ಹೆದರಿ ಗಾಡಿಯು ಬೀಳುವಂತೆ ಒಂದು ಇಳಿಜಾರಾದ ಸ್ಥಳಕ್ಕೆ ಗಾಡಿಯನ್ನು ವೈದದ್ದನ್ನು ನೋಡಿ ಗಾಡಿಯನ್ನು ಹಿಡಿದು ಬಂಟ್ವಾಳ ಅತ್ತ ಕಡೆ ತಿರುಗಿಸುವಂತೆ ನಾಗರಾಜ ಶೆಟ್ರು ತನ್ನ ಆಳುಗಳನ್ನು ಕರೆದು ಹೇಳಿದರು. ಇಷ್ಟರಲ್ಲಿ ಶೇಕಬ್ಯಾರಿ ಎಂಬವನು ಈ ಸ್ಥಳಕ್ಕೆ ಬಂದು ಗಾಡಿಯನ್ನು ತಿರುಗಿಸಲು ಬಿಡದೆ ಅಂತೋನಿ ಶ್ಯಾನುಭಾಗನೊಂದಿಗೆ ಶೆಟ್ರ ಜನರನ್ನು ಹೊಡೆಯುವರೆ ಪ್ರಾರಂಭಿಸಿದನು. ಗಣಪತಿ ಬಾಳಿಗಾ ಮತ್ತು ಅಪ್ಪು ಮಿನೆಜಸ್ ಎಂಬವರು ಈ ತನ್ಮಧ್ಯ ಮೇಲೆ ಹೆಸರು ಕಾಣಿಸಿದ ಮುದ್ದೆಯಾಲೆಗಳನ್ನು ಕೂಡಿಕೊಂಡು ಜಗಳವು ಇನ್ನಷ್ಟು ಕಠಿಣವಾಯಿತು. ಮುದ್ದೆಯಾಲೆಗಳಿಂದ ನಾಗರಾಜ ಶೆಟ್ರು ಇರುವ ಗಾಡಿಯು ಗಣಪತಿ ಬಾಳಿಗನ ಅಂಗಡಿ ಹತ್ತರ ವಯ್ಯಲ್ಪಟ್ಟಿತು. ಈ ಜಗಳದಲ್ಲಿ ತಬ್ರ ಶೆಟ್ಟಿ ಎಂಬವನು ಬೀಸಿದ ಚೂರಿಯು ಅಂತೋನಿ ಶ್ಯಾನುಭಾಗನಿಗೆ ತಾಗಿ ಆತನು ಘಾಯಪಟ್ಟನು. ನಾರಾಯಣ ಶೆಟ್ರು ಆಳುಗಳು ಇಷ್ಟರಲ್ಲಿ ಓಡಿಹೋಗಿ ಅಲ್ಲಿಯ ಹತ್ತರವಿರುವ ಮನೆಯೊಂದರಲ್ಲಿ ಬೆಳಿಗ್ಯೆಯಾಗುವ ತನಕ ಕಾದುಕೊಂಡಿದ್ದರು.

ಗಾಡಿಯಲ್ಲಿದ್ದ ನಾಗರಾಜ ಸೆಟ್ರನ್ನು ಹೊರಗೆ ಎಳದು ಗಣಪತಿ ಬಾಳಿಗನ ಅಂಗಡಿಗೆ ತಕ್ಕೊಂಡು ಹೋಗಿ ಅಲ್ಲಿ ಅವರನ್ನು ಚನ್ನಾಗಿ ಒದೆದು ದವಡೆಗೆ ಪೆಟ್ಟುಕೊಟ್ಟರು. ಇಷ್ಟರಲ್ಲಿ ಗಾಯಪಟ್ಟ ಅಂತೋನಿ ಶ್ಯಾನುಬಾಗನ ತಂದೆ ಕಿಸ್ತು ಶ್ಯಾನುಭಾಗನೆಂಬವನು ಕೆಲವು ಜನರೊಂದಿಗೆ ಅಲ್ಲಿಗೆ ಬಂದು ತನ್ನ ಮಗನನ್ನು ನಾಗರಾಜ ಸೆಟ್ರ ಜನರು ಘಾಯಪಡಿಸಿದ್ದರಿಂದ ನಾರಾಯಣ ಸೆಟ್ರನ್ನು ಚೂರು ಚೂರಾಗಿ ಕಡಿದು ಬಿಸಾಡುವೆನೆಂದು ಗದರಿಸಿದನು. ಆದರೆ ರಾಮ ಮೇಲಾಂಟನೆಂಬ ಇನ್ನೊಬ್ಬ ಮುದ್ದೈಯಾಲೆಯ್ಯು ಮುದ್ದೈ ಕಡೆಯಿಂದ ಇವರನ್ನು ಸಮಜಾಯಿಸಿದರೂ ಒಂದನೇ ಮುದ್ದೈಯಾಲೆ ಮಾತನ್ನನುಸರಿಸಿ ಶೇಕ ಬ್ಯಾರಿಯು ನಾಗರಾಜ ಶೆಟ್ರಗೆ ಅಂಗಿಯನ್ನು ತೆಗಿಯಲಿಕ್ಕೆ ಹೇಳಿ ಅಂಗಿಯ ಕಿಶೆಯಲ್ಲಿದ್ದ ೮ ರೂಪಾಯಿಗಳನ್ನೂ ಕೆಲವು ಚಿಕ್ಕ ನಾಣ್ಯಗಳನ್ನೂ ಬಗಲಿಗೆ ಹೊಡದನು. ಪ್ರಾಣವನ್ನುಳಿಸಬೇಕಾದರೆ ೫೦೦ರೂಪಾಯಿಗಳನ್ನು ಕೊಡಬೇಕೆಂತ ಅಂತೋನಿ ಶ್ಯಾನುಭಾಗನು ಮೊದಲಾದವರು ಶೆಟ್ರನ್ನು ಕೇಳಿದರು. ಆದರೆ ಶೆಟ್ರ ಹತ್ತಿರ ನಗದಿ ಹಣ ಇಲ್ಲದ್ದರಿಂದ ಪಂಚಾಯತಿಯಿಂದ ೩೫೦ಕ್ಕೆ ಕೈ ಕಾಗದವನು ಮಾಡಿ ಈ ಹಣದ ವಸೂಲಿ ಬಗ್ಯೆ ಸೆಟ್ರರೊಡನೆ ಶೇಕ್‌ಬ್ಯಾರಿಯು ತಿರುವೈಲ್ ಎಂಬಲ್ಲಿಗೆ ಹೋದನು. ತಿರುವೈಲನ್ನು ಮುಟ್ಟಿದೊಡನೆ ಸೆಟ್ರು ಹಣ ಕೊಡಲಿಕ್ಕೆ ನಿರಾಕರಿಸಿ ಪೆಟ್ಟು ತಿಂದ ತನ್ನ ಜನರನ್ನು ಸರ್ಟಿಫೀಕೇಟು ಬಗ್ಯೆ ಬಂಟ್ವಾಳಿಗೆ ಕಳುಹಿಸಿ ಸಬ್ ಮೇಜಿಸ್ಟ್ರೇಟರಲ್ಲಿ ಫಿರ್ಯಾದು ದಾಖಲು ಮಾಡಿದರು. ಈ ಮೊಕದಮೆಯ ವೃತ್ತಾಂತದ ಈ ಸಾರಾಂಶವು ವ್ಯವಹರಣೆಯನ್ನು ನಡಿಸತಕ್ಕವರ ಕಡೆಯಿಂದ ಸಂಗ್ರಹಿಸಲ್ಪಟ್ಟದ್ದಾಗಿರುತ್ತದೆ.

ಬಾತ್ಮೀದಾರರಿಗೆ ನೋಟೀಸು. ನಿಷ್ಪಕ್ಷಪಾತಿ, V. Babu Rao, ಕ್ಷೇತ್ರವಾಸಿ—ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

ವಿಜ್ಞಾಪನೆ. ಸ್ವದೇಶಾಭಿಮಾನಿ ಚಂದಾಬಾಕಿಯನ್ನು ವಸೂಲು ಮಾಡಲಿಕ್ಕೂ ಹೊಸ ಚಂದಾದಾರರನ್ನು ಸಂಗ್ರಹಿಸಲಿಕ್ಕೂ ರಾ. ಬಿ. ವೆಂಕಟರಾಯ ಶೆಣಾಯಿಯವರು ಗಂಗೊಳ್ಳಿ ಕುಂದಾಪುರ ಉಡುಪಿ ಮುಲ್ಕಿ ಮೊದಲಾದ ಪ್ರಾಂತ್ಯಗಳಿಗೆ ಹೋಗಿರುವರು. ಚಂದಾದಾರರು ತಮ್ಮ ಬಾಕಿ ಚಂದಾಹಣವನ್ನು ವಸೂಲು ಕೊಡುವುದಲ್ಲದ ಹೊಸ ಚಂದಾದಾರರನ್ನು ಸಂಗ್ರಹಿಸುವರೆ ಸಹಾಯ ಮಾಡಬೇಕಾಗಿ ಅಪೇಕ್ಷಿಸುತ್ತೇವೆ.

ಕಾಸರಗೋಡು. ಇದೇ ತಿಂಗಳ ತಾ. ೧೩ನೇ ಮಂಗಳವಾರ ದಿವಸ ಮಹಮ್ಮದೀಯರ ಬಕ್ರಿದ್ ಹಬ್ಬವು ಬಹಳ ಸಂಭ್ರಮದಿಂದ ಇಲ್ಲಿ ಆಚರಿಸಲ್ಪಟ್ಟಿತು. ಈ ಸಂದರ್ಭದಲ್ಲಿ ಇಲ್ಲಿಗೆ ನೇಯಿಗೆ ಕೆಲಸಕ್ಕೆಂತ ಬಂದಿದ್ದ ಇಬ್ಬರು ಕ್ರೈಸ್ತ ಮತಸ್ಥರು ಮಹಮ್ಮದೀಯ ಮತವನ್ನವಲಂಬಿಸಿದ್ದರಿಂದ ಇವರಿಬ್ಬರು ಮತ ಸಂಸ್ಕಾರ ಹೊಂದಿದ ಮೆರವಣಿಗೆಯು ಇಂಗ್ಲೀಷ್ ಬ್ಯಾಂಡ್ ಮೊದಲಾದ ಸಂಭ್ರಮಗಳಿದ್ದು ಬಹಳ ವಿಜ್ರಂಭಣೆಯಿಂದಾಯಿತು. ಇದೇ ದಿವಸ ಇಲ್ಲಿಯ ನೆರೆಗ್ರಾಮದಲ್ಲಿ ಕೆಲವು ಮಾಪಿಳ್ಳೆ ಯುವಕರು ಹಬ್ಬದ ಸಂತೋಷವನ್ನು ತೋರ್ಪಡಿಸುವ ಉದ್ದಿಶ್ಯ ಸಿಡಿಮದ್ದಿನ ಗರನಾಳುಗಳನ್ನು ತಯ್ಯಾರಿಸುತ್ತಿರುವಾಗ ಅದರಲ್ಲಿ ಒಂದು ಗರನಾಳು ಒಡದು ಆರು ಜನರಿಗೆ ತಾಗಿ ಅವರಲ್ಲಿ ಇಬ್ಬರು ಕೂಡಲೇ ಮೃತಪಟ್ಟರಂತೆ. ಇನ್ನು ಘಾಯಪಟ್ಟ ನಾಲ್ಕು ಜನರು ಆಸ್ಪತ್ರಿಗೆ ಒಯ್ಯಲ್ಪಟ್ಟು ಅಲ್ಲಿಯ ಚಿಕಿತ್ಸೆಯಿಂದ ಗುಣಹೊಂದಲಶಕ್ತರಾಗಿ ಮರುದಿನ ಮೃತಪಟ್ಟಿರುವರೆಂಬ ವರ್ತಮಾನವಿರುವುದು.

ಹತ್ತು ದಿವಸಗಳ ರಜೆಯ್ಮ ಮೇಲೆ ಹೋಗಿದ್ದ ಇಲ್ಲಿಯ ವೈದ್ಯ ಉದ್ಯೋಗಸ್ಥರು ತಾ. ೩೦ನೇಗೆ ವಾಪಸು ಬಂದು ಚಾರ್ಜು ವಹಿಸಿಕೊಂಡಿರುವರು.

ತಾ. ೧೬ನೇಗೆ ಇತ್ತಕಡೆ ಬಂದಿರುವ ಡಿವಿಜನ್ ಡಿಪ್ಯುಟಿ ಕಲೆಕ್ಟರರವರು ಹೊಸದುರ್ಗ ಅತ್ತಕಡೆ ಸರ್ಕಿಟ್ ಬೆಳಸಿ ತಾ. ೨೦ಕ್ಕೆ ಹಿಂತಿರುಗಿ ಇಲ್ಲಿಗೆ ಬಂದಿದ್ದರು.

ಪುತ್ತೂರು ತಾಲೂಕು ಬೋರ್ಡು ಸಭೆಯು ಈ ತಿಂಗಳ ತಾ. ೨೨ರಲ್ಲಿ ಇಲ್ಲಿ ನೆರದಿತ್ತು.

ಇಲ್ಲಿ ಸೆಕಂಡರಿ ಶಾಲೆಯನ್ನು ಕಟ್ಟಿಸಲಿಕ್ಕೆ ಬಾಸೆಲ್ ಮಿಶನ್ ಶಾಲಾ ಇನ್ಸ್‌ಪೆಕ್ಟರವರು ಸ್ಥಳ ನೋಡಿ ಹೋಗಿರುವರೆಂಮೂ ಶಾಲಾ ಕಟ್ಟೋಣ ಕೆಲಸವು ಇನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲ್ಪಡುವುದಾಗಿಯೂ ತಿಳಿಯುತ್ತೇವೆ.

ಗೋಮಂತಕದಲ್ಲಿ ಕೂಡುವ ತೃತೀಯ ಗೌಡ ಸಾರಸ್ವತ ಪರಿಷತ್ತಿಗೆ ಇಲ್ಲಿಂದ ೧೦ ಜನ ಗೃಹಸ್ಥರು ಪ್ರತಿನಿಧಿಗಳಾಗಿ ಹೋಗಿರುವರು.

ಪುತ್ತೂರು. ಇಲ್ಲಿಯ ಹುಡುಗಿಯರ ಶಾಲೆ ಪರೀಕ್ಷೆ ಬಗ್ಯೆ ಇನ್ಸಪೆಕ್ಟ್ರಸ್ ಲಿಂಚ್ ದೊರೆಸಾನಿಯವರು ಇಲ್ಲಿಗೆ ತಲ್ಪಿ ಪರೀಕ್ಷೆ ತೀರಿಸಿ ವಾಪಸು ಹೋಗಿರುವರು.

ನರಿಮೊಗ್ರು ರಿಜರ್ವಿನಲ್ಲಿ ಫೊರೆಸ್ಟ ಇಲಾಖೆಯುವರು ಮಸಿ ತಯಾರಿಸುವ ಕೆಲಸ ಆರಂಭಿಸಿಯದೆ.

ಉಪ್ರಂಗಡಿ ತಾಲೂಕಿನವರುಷಾವದಿ ಜಮಾ ಬಂದಿಯು ೧೯೧೧ನೇ ಇಸವಿ ತಾ. ೯ರಿಂದ ೧೪ರ ವರೆಗೆ ಸುಳ್ಯ, ೧೮ರಿಂದ ೨೪ರ ವರೆಗೆ ಪುತ್ತೂರು, ಫೆಬ್ರವರಿ ತಾ. ೧ರಿಂದ ೪ ಮತ್ತು ೬ರಿಂದ ೮ರ ವರೆಗೆ ಉಪ್ರಂಗಡಿ ಮೊಕ್ಕಾಮಿನಲ್ಲಿಯೂ ಜಿಲ್ಲಾ ಕಲೆಕ್ಟರ್ ಧೊರೆಗಳವರಿಂದ ಮಾಡುವರೆ ನಿಶ್ಚಯಿಸಲ್ಪಟ್ಟಿರುವದು.

ಪರಮೇಶ್ವರ ಆಶೀರ್ವಂತ ಸರ್ಕಸು ಕಂಪೆನಿಯವರು ಇಲ್ಲಿಗೆ ಬಂದು ಕೆಲವು ಆಟಗಳನ್ನು ಆಡಿ ವಿಟ್ಲಕ್ಕೆ ಹೋಗಿರುವರು.

ಫೊರೆಸ್ಟ ಕನ್ಸರವೇಟರ ಮೆ. ಲೋಜ ಧೊರೆಗಳು ವ ಡಿಸ್ಟ್ರಿಕ್ಟ ಫೊರೆಸ್ಟ ಆಫೀಸರರು ಇಲ್ಲಿ ತಲ್ಪಿ ಕಾಸರಗೋಡಿಗೆ ಹೋದರು.

ವಿವಿಧ ವಿಷಯಗಳು.

ಜಾಪಾನಿನಲ್ಲಿ ಮಕ್ಕಳ ಜನ್ಮದಿನವನ್ನು ನಾವು ಇಲ್ಲಿ ಆಚರಿಸುವಂತೆ ಅವರವರ ಜನ್ಮದಿನವೇ ಆಚರಿಸದೆ ಪ್ರತಿ ವರುಷದ ಮಾರ್ಚಿ ತಿಂಗಳಲ್ಲಿ ಬಾಲಕಿಯರೆಲ್ಲರ ಜನ್ಮದಿನವನ್ನೂ, ಮೇ ತಿಂಗಳಲ್ಲಿ ಬಾಲಕರ ಜನ್ಮದಿನವನ್ನೂ ಆಚರಿಸುವ ವಾಡಿಕೆ ಇರುವದು.

ಸಾಧಾರಣವಾಗಿ ಹೆಚ್ಚಿಗೆ ಆದರೆ ಪ್ರತಿ ಒಬ್ಬ ಮನುಷ್ಯನು ೧೫೦ ಪೌಂಡು ಭಾರವಿರುವನು. ಆದರೆ ಈಚೆಗೆ ೪೦ ವರುಷ ಪ್ರಾಯದಲ್ಲಿ ಮರಣಪಟ್ಟ ದಾನಿಯೇಲ್ ಲಂಬರ್ಟ್ ಎಂಬವನು ೭೩೯ ಪೌಂಡು ಭಾರ ಇದ್ದನು. ಅವನ ಶರೀರದ ಸುತ್ತಳತೆಯು ೯ ಅಡಿ, ೬ ಅಂಗುಲವಾಗಿಯೂ ಅವನ ಕಾಲಿನ ಸುತ್ತಳತೆಯು ೩ ಅಡಿ, ೧ ಅಂಗುಲವಾಗಿಯೂ ಇತ್ತು.

NOTICE.

ಉಡುಪಿ ತಾಲೂಕು ಮಣೂರು ಗ್ರಾಮದಲ್ಲಿರುವ ಕೃಷ್ಣ ಹೆಬ್ಬಾರನು ತನ್ನ ಸಹೋದರ ಮೃತಪಟ್ಟ ವಾಸ್ತೇವ ಹೆಬ್ಬಾರಗೆ ಬರತಕ್ಕ ಸಾಲ ವಸೂಲಿ ಬಗ್ಯೆ ವಾರಿಸಿ ಸರ್ಟಿಫಿಕೇಟ್ ಆಪೇಕ್ಷಿಸಿ ಕುಂದಾಪುರ ಡಿ| ಮು| ಕೋರ್ಟಿನಲ್ಲಿ ಕೊಟ್ಟ ಓ. ಪಿ. ನಂಬ್ರ $\frac{91}{10}$ನೇ ಅರ್ಜಿಯು ಬರುವ 1911ನೇ ಇಸವಿ ಜನವರಿ ತಾ. 5ಕ್ಕೆ ಕೆಳಗೆ ಇಟ್ಟದೆ ಆಕ್ಷೇಪ ಇದ್ದವರು ಜಾಹಿರು ಮಾಡಬಹುದು.

ತಾ. 20. 12. 10.
ಕುಂದಾಪುರ.

N. Subbannaya.
Pleader for Petitioner

ನೋಟೀಸು.

ಈ ಕೆಳಗೆ ದಸ್ಕತು ಮಾಡಿರುವವರು ತಿಳಿಯ ಪಡಿಸುವದೇನಂದರೆ:—

ರೂಪಾಯಿ ೧೦ ಮೌಲ್ಯದ ಮದ್ರಾಸ ಕರೆನ್ಸಿ ನೋಟಿನ ನಂಬ್ರ $\frac{B.\ B.}{85}$ 01722ನೇ ಇನ್ನೊಂದು ತುಂಡು ಗೈರವಿಲೆಯಾಗಿ ಅದರ ಬದಲಾಗಿ ಅಷ್ಟೆ ಮೌಲ್ಯದ ನಂಬ್ರ $\frac{B.\ B.}{79}$ 25772ನೇ ತುಂಡು ನನಗೆ ಶಿಕ್ಕಿರುತ್ತದೆ. ಸದರಿ ನಂಬ್ರದ ಇನ್ನೊಂದು ತುಂಡು ಶಿಕ್ಕಿದವರು ಅದನ್ನು ನನಗೆ ಕಳುಹಿಸಿದ್ದಲ್ಲಿ ಅವರ ನಂಬ್ರದ ತುಂಡನ್ನು ಕಳುಹಿಸಿ ಕೊಡಲಾದೀತು.

ಯನ್. ತಿರ್ಮಲ್ ರಾವ್,
ಮಂಗಳೂರು.

ಹೊಸ ಪುಸ್ತಕ!!

ಲಾಭ!

ಸಚಿತ್ರಕಲಾತರಂಗ 1ನೇ ಭಾಗ

8 ಅಧ್ಯಾಯಗಳಿವೆ. ಈ ಪತ್ರಿಕೆಯ ಚಂದಾದಾರರಿಗೂ, ಸ್ಕೂಲ್ಮಾಸ್ಟರರಿಗೂ, ಮತ್ತು ವಿದ್ಯಾರ್ಥಿಗಳಿಗೆ ರೂ. 0-8-0ಕ್ಕೆ ದೊರೆಯುವುದು. ಇತರರಿಗೆ ರೂ.0-10-0.

ಎಂ. ಟಿ. ವಲ್ಲಭ ಐಯಂಗಾರ್, ಬೀರೂರು.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಹೊಸ ಕೂಳೂರು ಮಸ್ಕತಿ ಅಕ್ಕಿ ...	4—7—0
,, ಗುಡ್ಡು ಮಸ್ಕತಿ	4—3—0
,, ಮಸ್ಕತಿ ದುಯಂ	4—0—0
,, ಹೊಸ ಗುಡ್ಡು ,, ...	3-11—0
,, ಮಸ್ಕತಿ ಬೆಳ್ತಿಗೆ ,, ...	4—8—0
ರಂಗೂನ್ ಬೆಳ್ತಿಗೆ ಗೋಣಿ	8—0—0
ಹುರುಳಿ ಗೋಣಿ ೧ ಮುಡಿ 2ರ ...	4-12—0
ಉಪ್ಪು ಗೋಣಿ ೧ರ	3—7—0
ಕೊಬ್ರಿ ಖಂಡಿ ೧ರ	105—0—0
ಕೊಬ್ರಿ ಎಣ್ಣೆ ಮಣ	7—2—0
ಕಾಫಿ ಖಂಡಿ ೧ರ	225—0—0
ಕಾಳು ಮೆಣಸು ಖಂಡಿ	125—0—0
ಬಿಳಿ ಗೋಟು ಅಡಿಕೆ	88—0—0
ಕರಿ ಗೋಟು	62—0—0

ದಯವಿಟ್ಟು ಓದಿರಿ ! ಸೌಖ್ಯವನ್ನ ಹೊಂದಿರಿ !

ಕಾಮಶಾಸ್ತ್ರ.

ಉಚಿತವಾಗಿ ಕಳುಹಿಸಲ್ಪಡುವುದು! ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವದು. ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವು! ಆಯುರಾರೋಗ್ಯಸಂಪದಗಳುಂಟಾಗುವವು!!

ಆತಂಕ ನಿಗ್ರಹ ಮಾತ್ರೆ.

ಊಟವಾದ ಬಳಿಕ ಹಗಲಿರುಳೂ ಸೇವಿಸಬೇಕಾದದ್ದು! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು:—

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ಪ್ರಾಣಾಧಾರಗಳಿಂದ ಅಂಗಗಳನ್ನು ಬಲಪಡಿಸುವದು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು. ೩೨ ಮಾತ್ರೆಗಳಿರುವ ಡಬ್ಬಿ ೧ಕ್ಕೆ ರೂ. ೧—೦—೦.

ಆತಂಕನಿಗ್ರಹ ಔಷಧಾಲಯ
೨೨ ಬ್ರಾಡ್ವೇ ಮದರಾಸು.

ವೈದ್ಯ ಶಾಸ್ತ್ರಿ,
ಮಣಿಶಂಕರ ಗೋವಿಂದಜಿ.

ಶ್ರೀ

ಶ್ರೀ ಶಿವಗಂಗಾ ಮಠದ ಶ್ರೀ "ಶಾರದಾ" ಮಾಸಪತ್ರಿಕೆ.

ವಾರ್ಷಿಕ ಚಂದಾ 2—0—0 ಹಾಸಲು ಸೇರಿ.

ಜನರು ಶ್ರೀ ಶಾರದಾನುಗ್ರಹಕ್ಕೆ ಪಾತ್ರರಾಗಿ ಅದರಿಂದ ಉಂಟಾಗುವ ಜ್ಞಾನ ಸುಖವನ್ನು ಅನುಭವಿಸಬೇಕಾಗಿದ್ದರೆ ಶ್ರೀ "ಶಾರದಾ" ಮಾಸಪತ್ರಿಕೆಯನ್ನು ಸೇವಿಸಬೇಕು.

ಉಪನಿಷತ್ತುಗಳ ಸಾರ, ಧರ್ಮಶಾಸ್ತ್ರದ ರಹಸ್ಯ (ಧರ್ಮಸಿಂಧು-353 ವಿಷಯ), ಶ್ರೀ ಶಂಕರಾಚಾರ್ಯರ ಕಾಲಾ ಮತ್ತು ಚರಿತ್ರ, ಧರ್ಮನೀತಿಗಳ ಉಲ್ಲಾಸ, ಸಟೀಕ ಸ್ತೋತ್ರಾವಳಿ, ಸರಸವಾದ ಉಪನ್ಯಾಸ, ನ್ಯಾಯಗಳ ವಿಮರ್ಶೆ, ವಿವಿಧ ಸಿದ್ಧಾಂತ ವಿವರಣ, ವಿಚಿತ್ರ ಚಾಟು ಶ್ಲೋಕಗಳು, ಸನಾತನಧರ್ಮ ನೀತಿಗಳ ಸೋಪಾನ ಈ ಮುಂತಾದುವುಗಳು ಇದರಲ್ಲಿ ಪ್ರಕಾಶವಾಗುತ್ತಲಿವೆ.

ಈ ಪತ್ರಿಕೆಯು ದೊರೆಯುವ ಸ್ಥಳ. (ಪತ್ರೆ)

ದೊಡ್ಡಬೆಲೆ ನಾರಾಯಣ ಶಾಸ್ತ್ರಿ.
ಶ್ರೀ "ಶಾರದಾ" ಆಫೀಸು ಬೆಂಗಳೂರು ಸಿಟಿ.

1911ನೇ ವರ್ಷದ ಪಾಕೆಟ್ ಡ್ಯಾರಿ.

ಬೇಗ ತರಿಸಿಕೊಳ್ಳಿ! ನಿದಾವ ಮಾಡಿದರೆ ಶಿಗಲಾರದು!!

ಪ್ರತಿಯೊಬ್ಬ ಮನುಷ್ಯನಿಗೂ ಲೆಕ್ಕವೇ ಪ್ರಾಣಾಧಾರವಾದದ್ದು. ಇಂಥಾ ಲೆಕ್ಕವನ್ನು ನಮ್ಮ ಜೇಬಿನಲ್ಲಿಡಲು ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇಇರಬೇಕಾದ ಪುಸ್ತಕವು. ಬಹಳ ಸುಲಭಕ್ರಯ. ಟಪ್ಪಾಲ್ ಖರ್ಚುಗಳು ಬೇರೆ ಬೀಳುತ್ತೆ.

ಎ. ನಂ| ಡೈರಿ ಸಾದಾ ೧ಕ್ಕೆ ೩ಆಣೆ, ಬಿ. ನಂ| ಡೈರಿ ಮುಚ್ಚಳ ಮತ್ತು ಪೆನ್‌ಸಲ್ ಸಹಿತ ೧ಕ್ಕೆ ೫ಆಣೆ. ಸಿ. ನಂ| ಡೈರಿ ದೊಡ್ಡದು ೧ಕ್ಕೆ ೬ಆಣೆ. ಡಿ. ನಂ| ಡೈರಿ ಮುಚ್ಚಳ ಮತ್ತು ಪೆನ್‌ಸಿಲ್ ಸಹಿತ ೧ಕ್ಕೆ ೮ಆಣೆ. ೧೨ ಡೈರಿಗಳನ್ನು ಒಂದೇ ಸಲ ತರಿಸಿಕೊಂಡರೆ ಒಂದು ಡೈರಿ ಇನಾಂ. ವ್ಯಾಪಾರಸ್ಥರಿಗೆ ಸರಿಯಾದ ಕಮಿಶನ್ ಶಿಕ್ಕುತ್ತೆ ಮತ್ತು ನಮ್ಮಲ್ಲಿ ಕನ್ನಡ ತೆಲಗು, ಸಂಸ್ಕೃತ ಪುಸ್ತಕಗಳು ಬಹಳ ಸುಲಭ ದರಕ್ಕೆ ದೊರಿಯುತ್ತಗೆ.

ನಮ್ಮ ಕಂಪೆನಿ ಕ್ಯಾಟಲಾಗ್ ಮುಫತ್ತಾಗಿ ದೊರಿಯುತ್ತೆ. ಪರಾಂಬರಿಸಿ ನೋಡಿರಿ.

ಎಮ್ ಪಿ. ಮಲ್ಲಯ್ಯ.
211 ತಾಲೂಕು ಕಚೇರಿ ರಸ್ತೆ ಬೆಂಗಳೂರು ಸಿಟಿ.

ಮಂಗಳೂರು

ಚಲೋ ನಶ್ಯಪುಡಿ.

ತೊಲೆ ೧ಕ್ಕೆ ರೂ. ೦—೧—೦. ಸೇರು ೧ಕ್ಕೆ ರೂ. ೧—೪—೦

ಸುಗಂಧ ನಾಸಿಕ ಚೂರ್ಣ ತಲೆಪಾಸಿಗೂ ಸೀತಕ್ಕೂ ಶಿರೋಭಾರಕ್ಕೂ ಒಳ್ಳೇದು ತೊಲೆ ೧ಕ್ಕೆ ೦—೪—೦ ಸೇರು ೧ಕ್ಕೆ ರೂ. ೫—೦—೦.

ಅಪೇಕ್ಷಿಸುವವರಿಗೆ ವಿ. ಪಿ. ಮೂಲಕವೂ ಹಣ ಕಳುಹಿಸಿದವರಿಗೆ ಸೆಂಪಲ್ ಪೋಸ್ಟ ಮೂಲಕವೂ ಕಳುಹಿಸಿಕೊಡಬಹುದು.

ಕಾವೂರು ವೆಂಕಟೇಶ ಸುಬ್ರಾಯ ಪೈ,
ಗೋಳಿಕಟ್ಟೆ ಬಜಾರ,
ಮಂಗಳೂರು, ದ. ಕ.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. 2—8—0 ಮಾತ್ರ. ರೂ. 2—8—0 ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

"ರಾಸ್ಕೋಪ್ ಸಿಷ್ಟಂ ಪೇಟೆಂಟ್ ಲೀವರ್ ಜ್ಯೂವೆಲ್ಡ್" ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರಹವಾಗಿ

ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. 3-8-0 ರೂ. 4-8-0. ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಎರಡು (೨) ವರುಷಗಳು ಗ್ಯಾರೆಂಟು.

ಕ್ರಯ ರೂ. 2-8-0 ವಿ. ಪಿ. ಚಾರ್ಜು ರೂ. 0-4-0.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ 0-8-0 ವಿ. ಪಿ. ಚಾರ್ಜು 0-4-0.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ,
ಸಾಹುಕಾರ ಪೇಟೆ, ಮದ್ರಾಸು.

ಉತ್ತಮವಾದ ಮೈಸೂರು ಸುಗಂಧ ದ್ರವ್ಯಗಳು.

ಅಂಬರ್ ಊದಬತ್ತಿ ಸೇ. ೧ಕ್ಕೆ	೬—೦—೦	A ಅರಗಜ ತೊ. ೧ಕ್ಕೆ		೨—೦—೦
ಕಸ್ತೂರಿ ಬತ್ತಿ ಡಿ.	೩—೦—೦	B. ಅರಗಜ ಡಿ.		೧—೦—೦
ಪುಣುಗು ಬತ್ತಿ ಡಿ.	೧—೮—೦	ಕಸ್ತೂರಿ ಬಿಲ್ಲೆ ಡಿ.		೨—೦—೦
ಗುಲಾಬಿ ಬತ್ತಿ ಡಿ.	೧—೪—೦	ಪುಣುಗು ಬಿಲ್ಲೆ		೧—೦—೦
A ಪನ್ನೀರ್ ಬತ್ತಿ ಡಿ.	೦—೧೨—೦	ಕೇಸರಿ ಬಿಲ್ಲೆ		೦—೮—೦
B ಪನ್ನೀರ್ ಬತ್ತಿ ಡಿ.	೦—೧೦—೦	ಮನೋರಂಜನ ತೈಲ ಶೀಸೆ ೧ಕ್ಕೆ		೦—೮—೦
ಮಸಾಲಾ ಬತ್ತಿ ಡಿ.	೦—೬—೦	ತಾಂಬೂಲ ರತ್ನ	ಡಿ.	೦—೪—೦

ಇವುಗಳಲ್ಲದೆ ಎಲ್ಲಾ ತರಹದ ಅತ್ತರ್, ನಾಶಿಕ ಚೂರ್ಣ, ಟೂತ್ ಪೌಡರ್ ಫಿತ್ತಾ, ಮೊದಲಾದವುಗಳು ಬಿಕರಿಗೆ ಸಿದ್ಧವಾಗಿವೆ. ಎನ್. ಎಮ್. ಸುಬ್ಬರಾವ್,
ತೇರ್‌ಬೀದಿ, ಮಂಗಳೂರು.

ನಮ್ಮ ಏಜಂಟರು:— ಎನ್. ಜಿ. ಶಂಕ್ರಪ್ಪ ಕಂಪೆನಿ, ನಾಲೂರು, ತೀರ್ಥಹಳ್ಳಿ.
ಎಲ್ಲೂರು ನಾರಾಯಣ ರಾವ್, ಧರ್ಮಸ್ಥಳ.

ಒಡೋನಾ.

ಇದು ಆಗಿಂದಾಗ್ಯೆ ಬಾಧಿಸುವ ಹಲ್ಲುನೋವಿನ ದಿವ್ಯ ಔಷಧಿಯಾಗಿದೆ. ಶಸ್ತ್ರಪ್ರಯೋಗ ಮಾಡದೆನೇ ಹಲ್ಲುನೋವು ಖಾತ್ರಿಯಾಗಿ ನಿಲ್ಲುವುದು. ಕೆಲವುಸಾರಿ ದಂತ ವೈದ್ಯರಿಂದ ಸಹ ಸಾಧ್ಯವಾಗದ ಹಲ್ಲುನೋವನ್ನು ಈ ಒಡೋನಾ ಎಂಬದು ಕ್ಷಣಮಾತ್ರದಲ್ಲಿ ಪರಿಹರಿಸುವುದು. ಈ ಭೂಲೋಕದಲ್ಲಿನ ಎಲ್ಲಾ ಹಲ್ಲುನೋವಿನ ಔಷಧಿಗಳಿಗಿಂತ ಇದು ಅತಿ ಉತ್ಕೃಷ್ಟವಾದದ್ದು. ಟಿನ್ ೧ಕ್ಕೆ ಕ್ರಯ ೨ ರೂ.

ಇಂಪೀರಿಯಲ್ ಪೈನ್ ಬಾಮ್.

ಇದರಿಂದ ಸಾಧಾರಣ ತಲೆಶಿಡಿತ ಮೊದಲುಗೊಂಡು ಎಲ್ಲಾ ತರದ ದುಸ್ತರವಾದ ರೋಗಗಳು ಸಹಾ ಗುಣವಾಗುವವು.

ವಾತ, ಸಂಧಿವಾತ, ಹರಿವಾತ, ಪಕ್ಷವಾತ, ಉಬ್ಬಸ, ಸೊಂಟನೋವು, ಗಂಟುನೋವು, ಶೀತ, ಕೆಮ್ಮು, ಉಳುಕು, ನೆಗಡಿ, ಕಟವಾತ, ಶ್ವಾಸವಾತ, ಕ್ಷಯರೋಗ, ಜಜ್ಜಿದ ಗಾಯ, ಕುತ್ತಿಗೆ ನೋವು, ರಾಜಕುರು ವಗೈರೆ ಎಲ್ಲಾ ತರದ ರೋಗಗಳಿಗೆ ಇದು ಪರಮೌಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ೧ರ ೧೨ ಆಣೆ.

ಮದ್ರಾಸ್ ಆಧಿಪತ್ಯಕ್ಕೆ ಸೋಲ್ ಏಜಂಟರು:—

ಮೆಸ್ಸರ್ಸ್ ಕೆ. ವಿಟ್ಠಳ ರಾವ್ ಎಂಡ್ ಕೋ,
ಸರ್ಟಿಫ್ಯಾಡ್ ಕೆಮಿಸ್ಟ್, ಮಂಗಳೂರು, ದ. ಕ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು: ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು: ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು, ಮದರಾಸು.

B. M. Nath & Co., *Ayurvedic Chemists*,
Vepery Post, MADRAS.

MANORA & CO'S

WONDERFUL MEDICINE FOR ALL KINDS OF PAINS.

Try to-day ! ☞......Dont wait until tomorrow !!

ರೊಯಲ್ ಇಂಡಿಯನ್ ಬಾಮ್.

ಹಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ವೇದನಾಹಾರಿ ಮುಲಾಮು! ಇದರ ಉಪಯೋಗದಿಂದ:—ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಸೊಂಟದ ನೋವು, ಗಂಟಲುನೋವು, ಘಾಯ, ಜಖಮು, ಉಳುಕು, ಶೈತ್ಯ, ಎದೆನೋವು, ಆನೆಗಾಲು, ಖಜ್ಜಿ, ಲುತಿಘಾಯ, ಮುದ್ದಣ ಮೊದಲಾದ ಎಲ್ಲಾ ತರದ ವೇದನೆಗಳು ಸಂಪೂರ್ಣವಾಗಿ ಗುಣವಾಗುವವು!! ಸಣ್ಣ ಮಕ್ಕಳ ಎಳೆಯ ದೇಹಕ್ಕಾದರೂ ಭಯವಿಲ್ಲದೆ ಇದನ್ನು ಹಚ್ಚಬಹುದು. "ಬಾಲಗ್ರಹ ಪೀಡನೆಗಳಲ್ಲಿ ಇದು ಅಗ್ರಸ್ಥಾನ ಹೊಂದಿಯದೆ" ಸಾವಿರಾರು ಜನರು ಇದನ್ನು ಉಪಯೋಗಿಸುತ್ತಾರೆ. "ಇದರಿಂದ ಗುಣ ಶಿಕ್ಕುವದಿಲ್ಲವಾದರೆ ಹಣ ತಿರುಗಿ ರವಾನಿಸಿ ಕೊಡುವೆವು. ಎಲ್ಲಾ ಔಷಧಾಲಯಗಳಲ್ಲಿಯೂ, ಕೆಮಿಸ್ಟ್‌ರಲ್ಲಿಯೂ ಶಿಕ್ಕುತ್ತದೆ. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜಾಗ್ರತೆ:—ಇಮಿಟೇಶನ್ (ಠಕಾರಿ) ಬಾಮ್‌ಗಳನ್ನು ತೆಗದುಕೊಳ್ಳಬೇಡಿರಿ.

ವಿಳಾಸ:— ಮನೋರಾ ಕಂಪೆನಿ, ಗಿರಗಾಂ ಮುಂಬಯಿ.

ಅಥವಾ ಈ ಕೆಳಗಿನ ಔಷಧಾಲಯಗಳಲ್ಲಿ ಶಿಕ್ಕುವದು.

ಪರ್ಲ ಎಂಡ್ ಸನ್ಸ್ ಮಂಗಳೂರು.
ಬೇಕಲ ವೆಂಕಟ ರಾವ್, ಉಡುಪಿ.
ಬಿ. ನರಸಿಂಹ ಮಲ್ಯ ಪುತ್ತೂರು.
ಬಿ. ದತ್ತ ಬ್ರದರ್ಸ್, ಕುಂದಾಪುರ.
ಬಿ. ಎನ್. ಮಲ್ಯಾ ರಾಮ ಪ್ರಸಾದ ಔಷಧಾಲಯ. ಬಾರಕೂರು.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು. ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0-8-0.

ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2—8—0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರಿಯಿರಿ.

ವಿ. ಪಿ. ಖರ್ಚು ಪ್ರತ್ಯೇಕ. ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು, ದ. ಕ.

ನೇತ್ರಬಿಂದು

ಇದು ಕಣ್ಣಿನ ದೃಷ್ಟಿಮಾಂದ್ಯ, ಕಣ್ಣೀರು ಸೋರುವಿಕೆ, ಕಣ್ಣಿನ ಮೂಲೆ ತುರಿಸುವಿಕೆ, ಕೆಂಗಣ್ಣು, ರೆಪ್ಪೆ ಉದುರುವಿಕೆ ಈ ಮೊದಲಾದ ರೋಗಗಳಿಗೆ ಸಿದ್ಧೌಷಧವು. ಕ್ರಯ ಬಾಟ್ಲಿ ೧ರ ರೂ. 0—8—0 ವಿ. ಪಿ. 0—4—0.

ಸಿದ್ಧಲಕ್ಷ್ಮೀವಿಲಾಸ—ಇದು ಒಳ್ಳೇ ರಕ್ತಶುದ್ಧಿ ಮಾಡುತ್ತದೆ. ಕ್ರಯ ಬಾಟ್ಲಿ ೧ರ 0-12-0 ವಿ. ಪಿ. 0—4—0.

ಇದು ವಿನಹ ಇಲ್ಲಿ ಆಸವಗಳೂ, ಅರಿಷ್ಟಗಳೂ, ಘೃತಗಳೂ, ಲೇಹಗಳೂ, ಚೂರ್ಣಗಳೂ, ತೈಲ್ಯಗಳೂ, ಮಾತ್ರೆಗಳೂ, ಭಸ್ಮಗಳೂ ವಗೈರೆ ದೊರೆಯುತ್ತವೆ.

ವಿಳಾಸ:— ಧನ್ವಂತರಿ ಆಯುರ್ವೇದಿಕ್ ಔಷಧಾಲಯ,
ಮಂಗಳೂರು.

"ಚಮತ್ಕಾರ ಚಿಂತಾಮಣಿ"

ಶಬ್ದ ಚಮತ್ಕಾರ ಅರ್ಥ ಚಮತ್ಕೃತಿಗಳಿಂದೊಡಗೂಡಿ ಮೃದುಮಧುರ ಶೈಲಿಯಿಂದ ಸಹಿತವಾಗಿ, ಧರ್ಮನೀತಿ ಜ್ಞಾನಗಳನ್ನೂ ವಿಶದಪಡಿಸುತ್ತಿರುವ ರಸಭರಿತವದ ಈ ಕಥೆಯನ್ನು ಓದತಕ್ಕವರು ರಾಮಾಯಣದಲ್ಲಿನ ಹೆಸರುಗಳನ್ನು ಮಾತ್ರ ಜ್ಞಾಪಿಸಿಕೊಂಡು ಇದರಲ್ಲಿ ಹೊಂದಿಸಿಕೊಂಡರೆ ಮುಂದೆ ಇದರಲ್ಲಿನ ಸವಿಯು ಬೇಗನೆ ಗೊತ್ತಾಗುತ್ತದೆ. ಕ್ರಯ ರೂ. 0—10—0.

"ವಿದ್ಯಾನಂದ' ಗ್ರಂಥಮಾಲಾ.

ಮಹಾ ಕವಿ ಕಾಳಿದಾಸಕೃತ

"ರಘುವಂಶ ಮಹಾಕಾವ್ಯ"

ತಾನಾಗಿಯೇ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ತಿ ಪ್ರಿಂಟಾಗಿ ಸಿದ್ಧವಾಗಿದೆ. ಬೆಲೆ 1—0—0.

ಮುಕುಂದಮಾಲಾ ಸ್ತೋತ್ರ.

ಹೆಚ್ಚು ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹಾ ಇರುತ್ತದೆ. ಬೆಲೆ 0—4—0.

ವಿಳಾಸ:— ಮ್ಯಾನೇಜರ್,
ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

೧೯೧೧ನೇ ದಿ "ಮೊಡಲ್" ಪಾಕೆಟ್ ಡೈರಿ.

ವಿವರಣೆ.

ನಂ. 1. ಪಂಚಾಂಗಸಹಿತವಾದ ಚಿಕ್ಕ ಸೈಜ್ ಡೈರಿ 3½ ಅಂಗುಲ, ಅಗಲ 4¼ ಉದ್ದವಿರುವ 540 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 4ಆಣೆ.

ನಂ. 2. ಡಿಟೊ ಮೇಲ್ಕಂಡ ಚಿಕ್ಕ ಸೈಜ್ ಪ್ಲಾಪ್ ಬೈಂಡು ಮಾಡಿರುವುದು. ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಸ್ಟಾಂಪು ವಗೈರೆ ಇಡುವುದಕ್ಕೆ ಚೀಲವಿದೆ. ಮೇಲಗಡೆ ಮುಚ್ಚುವದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯಬಾಳುವ ಪೆನ್‌ಸಲ್ ಇಟ್ಟಿದೆ. ಇದರ ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 3. ಪಂಚಾಂಗಸಹಿತವಾದ ದೊಡ್ಡ ಸೈಜ್ ಡೈರಿ 4¾ ಅಂಗುಲ ಅಗಲ 7 ಅಂಗುಲ ಉದ್ದವಿರುವ 490 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 4. ಡಿಟೊ ಮೇಲ್ಕಂಡ ದೊಡ್ಡ ಸೈಜ್. ಪ್ಲಾಪ್ ಬೈಂಡು ಮಾಡಿರುವದು ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಕಾರ್ಡು, ಕವರು, ಸ್ಟಾಂಪು ವಗೈರೆ ಇಡುವುದಕ್ಕೆ ಚೀಲ ಇರುತ್ತದೆ. ಮೇಲ್ಗಡೆ ಮುಚ್ಚುವುದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್‌ಸಲ್ ಇಟ್ಟಿದೆ. ಕ್ರಯ ಪ್ರತಿ 1ಕ್ಕೆ 8 ಆಣೆ.

ನಂ. 5. ಆಫೀಸರ್ಸ್ ಹ್ಯಾಂಡ್ ಡೈರಿ 1—0—0.

ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಇದು ಸಕಾಲವಾಗಿದೆ.

ಕೂಡಲೇ ಬರೆದು ತರಿಸಿಕೊಳ್ಳಿರಿ

N. B:—1. ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ತರಿಸಿಕೊಂಡರೆ 1 ಡೈರಿಯನ್ನು ಬಹುಮಾನವಾಗಿ ಕೊಡುತ್ತೇವೆ. 2. ವಿ.ಪಿ. ಮೂಲಕ ತರಿಸಿಕೊಳ್ಳುವವರು ಪೋಸ್ಟು ಚಾರ್ಜು ಮತ್ತು ವಿ.ಪಿ. ಕಮಿಶನ್ ಸಹ ಬೇರೆ ಕೊಡಬೇಕು. 3. ಹೆಚ್ಚು ವಿಷಯ ತಿಳಿಯಲಪೇಕ್ಷಿಸುವವರು ರಿಪ್ಲೈ ಕಾರ್ಡನ್ನಾಗಲಿ ಅರ್ಧಾಣೆ ಪೋಸ್ಟು ಲೇಬಲ್ ಆಗಲಿ ಮುಂಗಡ ಕಳುಹಿಸಬೇಕು. 4. ಎಷ್ಟು ಜಾಸ್ತಿ ಪ್ರತಿಗಳನ್ನು ತರಿಸಿಕೊಳ್ಳುವರೋ ಅಷ್ಟು ಪೋಸ್ಟು ಚಾರ್ಜು ಕಮ್ಮಿ ಆಗುವದು. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಆಫೀಸರ್ಸ್ ಪ್ಯಾನಿಸೀ ಹ್ಯಾಂಡ್ ಡೈರಿ ಎಂಬುವದು ಹಸನಾದ ಕಾಗದದಿಂದಲೂ ಮತ್ತು ಒಳ್ಳೇ ಕ್ಯಾಲಿಕ್‌ನಿಂದಲೂ ಸಹಾ ತಯಾರುಮಾಡಿರುತ್ತದೆ.

ಮೆತ್ತೆಗಳು, ಮತ್ತು ಮೇಜಿನ ಚೌಕಗಳು, ವಗೈರೆಯವುಗಳ ಮೇಲೆ ಚಿತ್ರವಿಚಿತ್ರವಾದ ಕಸೂತಿ ಕೆಲಸವನ್ನು ಮಾಡಲು ಅನುಕೂಲವಾದ "ಕೈ ಮೆಷಿನ್"ಗಳು, ನಮೂನೆಗಳು ಮತ್ತು ಇದಕ್ಕೆ ಅನುಕೂಲವಾದ ರೇಶ್ಮೆ ಮತ್ತು ಉಲನ್‌ದಾರಗಳು, ಸೂಜಿಗಳು, ಕತ್ತರಿಗಳು, ಚೌಕಟ್ಟುಗಳು ವಗೈರೆ ವಿಶಿಷ್ಟ ಸಾಮಾನುಗಳು, ಸೈಜುವಾರಿ ಕಸೂತಿ ಕಾರ್ಡುಗಳು ಕಲ್ಕತ್ತೆಯ ಕ್ಯಾಟಲಾಗ್ ಕ್ರಯಕ್ಕೆ ಇಲ್ಲಿ ದೊರೆಯುತ್ತವೆ.

ಎಲ್. ಎ. ಫೋರುವಾಲ್ ಕಂಪೆನಿ.
ಬೆಂಗಳೂರು ಸಿಟಿ.

ವಿಕ್ರಯಕ್ಕೆ ಸಿದ್ಧವಾಗಿರುವುದು.

ಶ್ರೀ ಚಿಕ್ಕುಪಾಧ್ಯಾಯರಿಂದ

ವಿರಚಿತವಾದ

"ಶ್ರೀ ಶುಕಸಪ್ತತಿ"

(ಡೆಮ್ಮಿ ಅಷ್ಟಪುಟ— ಒಟ್ಟು ಪುಟಗಳು ೫೬೦).

ಈ ಗ್ರಂಥವು ಈಗ ಮೂರನೇ ಸಲ ಮುದ್ರಣದಲ್ಲಿ ಪೂರ್ವ ಪ್ರತಿಯಲ್ಲಿದ್ದಂತೆ ಯಾವ ಲೋಪವೂ ಇಲ್ಲದೆ ನೂತನವಾಗಿ ಪರಿಷ್ಕರಿಸಿ ಪ್ರಕಟಿಸಲ್ಪಟ್ಟಿದೆ.

ಮೇಲು ಪ್ರತಿ ೧ಕ್ಕೆ ಕ್ರಯ ರೂ. ೨—೦—೦

ಉತ್ತಮ ಪ್ರತಿ „ ರೂ. ೩—೦—೦

ಮುಖ್ಯವಾಗಿ ನಮ್ಮ ದೇಶದಲ್ಲಿ ಕನ್ನಡ ಭಾಷೆಯನ್ನು ಬಲ್ಲ ಪ್ರತಿಯೊಬ್ಬ ಗೃಹಸ್ಥರ ಮನೆಯಲ್ಲಿಯೂ, ಗೃಹಪತಿಗಳು ತಮ್ಮ ಕುಟುಂಬದಲ್ಲಿ ಹೆಂಗಸರು, ಗಂಡಸರು, ಪ್ರಾಯಸ್ಥರು, ಮುದುಕರು, ಹುಡುಗರು. ಹುಡುಗಿಯರು ವೇದಸಮ್ಮತವಾದ ಮತಾಚಾರಗಳನ್ನೂ, ಧರ್ಮಗಳನ್ನೂ, ಸಂಪ್ರದಾಯಗಳನ್ನೂ, ತಿಳಿದುಕೊಂಡು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಸಂತೋಷವನ್ನು ಅನುಭವಿಸುತ್ತಾ ಆಸ್ತಿಕರಾಗಿರಬೇಕೆಂದು ಅಪೇಕ್ಷೆ ಇದ್ದರೆ ಈ ಪುಸ್ತಕವನ್ನು ಅವಶ್ಯಕವಾಗಿ ತೆಗದುಕೊಡಬೇಕು.

ಭಾಷ್ಯಂ. ರಾಮಾಚಾರ್ಯ,
೪೫. ಆಸ್ಪತ್ರಿ ರೋಡ್,
ಬೆಂಗಳೂರು ಶಹರು.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಶಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹದ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡುಬಲ್ಲೆನು.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ; ಸರ್ವರೂ ಇದನ್ನು ಉಪಯೋಗಿಸ ಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತೋಪಯುಕ್ತವಾದದ್ದು. ಇದರಲ್ಲಿ ಅತ್ಯಾಶ್ಚರ್ಯಕರವಾಗಿ ಕೂದಲನ್ನು ಬೆಳೆಸುವ ಗುಣಗಳಿರುವದಲ್ಲದೆ ಇದು ಮೆದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಕೊಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರಿಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,
216 ಕಾರನ್‌ವಾಲಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಫೋರುವಾಲ್ ಎಂಡ್ ಕೊ,
ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು;—ಮ|ರಾ|ರಾ| ಸಿ. ಆರ್, ಕಾಮತರು,
ಉಲನ್ ಮಾರ್ಟ್, ಮಂಗಳೂರು.

POCKET DIARIES

FOR 1911.

1911ನೇ ಇಸವಿಯ ಪೊಕೆಟ್ ಡ್ಯಾರಿಗಳು.

ವಕೀಲರಿಗೂ, ವಕೀಲರ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಆವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು.

ನೋಟು ಬೂಕು ಸ್ಯಾಜು ಕ್ರಯ ರೂ. ೦—೮—೦

ಸಣ್ಣ ಸ್ಯಾಜು ಕ್ರಯ ರೂ. ೦—೪—೦

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಷನ್ ದೊರಕುವದು.

ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಪ್ರೆಸ್,
ಮಂಗಳೂರು ದ. ಕ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತಕಡೆ ಲಕ್ಷಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್‌ಕವರ್	ಹಾಫ್‌ಬೈಂಡ್	ಫುಲ್‌ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ.)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು.

3″ × 8¼″, 3″ × 5¼″; 8¼″ × 6½″, 6½″ × 4″ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ಗದಾರ ವ ಆಪೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫುಲ್‌ಸ್ಕೇಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ.

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸ್ಯಾಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಬಿಕರಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ. ಮೆನೇಜರ್,
ಶಾರದಾ ಮುದ್ರಾಲಯ, ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟು ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ ಪುಸ್ತಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇಕಾದ ಸ್ಯಾಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ವ ರಿಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸೊಗಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:— ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ ಮಂಗಳೂರು.

Printed & published by V, S, Kamath, at the Mangalore Trading Association's Sharada Press, Mangalore.

Registered No. M. 498.

ಸ್ವದೇಶಾಭಿಮಾನಿ

ಪ್ರತಿಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರ್ಷಕ್ಕೆ ರೂ. 1-4-0. ಟಪ್ಪಾಲು ಹಾಸಲುಸೇರಿ ರೂ. 2-1-0.

ಪುಸ್ತಕ 4. ಮಂಗಳೂರು, ತಾರೀಕು 30ನೇ ಶುಕ್ರವಾರ ದಶಂಬರ 1910. ಸಂಚಿಕೆ 52

Amrutanjan Depot Fort Bombay.

ಅಮೃತಾಂಜನ

Trade Mark Registered.

ಹಿಂದುಸ್ಥಾನದ ವನಸ್ಪತಿಗಳಿಂದ ತಯ್ಯಾರಿಸಲ್ಪಟ್ಟ ಬೇನೆಹಾರಿ ಮುಲಾಮು. ಇದರಿಂದ ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಸೊಂಟದನೋವು, ಗಂಟ್ಲು ನೋವು, ಜಖಮು, ಉಳುಕು, ಘಾಯ, ಶೀತ, ಈ ಎಲ್ಲಾ ತರದ ನೋವುಗಳು ಪೂರ್ಣವಾಗಿ ಗುಣವಾಗುವದು. ಇದು ಸಣ್ಣ ಮಗುವಿನ ಎಳೇ ದೇಹಕ್ಕಾದರೂ ಭಯವಿರಹಿತವಾಗಿ ಹಚ್ಚಬಹುದು. ನಾಗಪುರ ಮೆಹತ್ ಪ್ರದರ್ಶನದಲ್ಲಿ ಈ ಅಮೃತಾಂಜನಕ್ಕೆ ಒಂದು ಬಹುಮಾನ ಪದಕವು ಸಿಕ್ಕಿರುತ್ತದೆ. ಅಮೃತಾಂಜನವು ಎಂಟಾಣೆ ದರದಲ್ಲಿ ಎಲ್ಲಾ ಔಷಧಾಲಯದಲ್ಲಿಯೂ ಸ್ಟೋರುಗಳಲ್ಲಿಯೂ ಶಿಕ್ಕುವದು. ಬಾಟ್ಲ ೧ರ ಕಿಮ್ಮತು 8 ಆಣೆ.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಬೆಳ್ಳಗಾಗುತ್ತವೆ. ಬಾಯಿಗೆ ಬರುವ ಕೆಟ್ಟ ವಾಸನೆಯನ್ನು ಹೋಗಲಾಡಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ. ಈ ಮಂಜನವನ್ನು ಒಂದು ಸಾರಿ ಪರೀಕ್ಷಿಸಿ ನೋಡಿದಲ್ಲಿ ಇದರ ಗುಣವು ತಿಳಿದುಬರುವದು. ಡಬ್ಬಿ ೧ರ ಕಿಮ್ಮತು ೨ ಆಣೆ.

ಕೇಶವರ್ಧಿನಿ ಎಣ್ಣೆ

ಇದನ್ನು ಕೂದಲುಗಳಿಗೆ ತಾಗಿಸುವದರಿಂದ ಕೂದಲುಗಳು ಕಪ್ಪಾಗಿಯೂ ಉದ್ದವಾಗಿಯೂ ಬೆಳೆಯುವವು. ಇದಕ್ಕೆ ಮನೋಹರವಾದ ಪರಿಮಳವು ಸಹ ಇದೆ. ಬಾಟ್ಲ ಒಂದರ ಕಿಮ್ಮತು ರೂ. 1.

ಖಜ್ಜಿ ಮುಲಾಮು.

ಬಾಟ್ಲ ಒಂದರ ಕಿಮ್ಮತು 3 ಆಣೆ.

ಗಜಕರ್ಣದ ಮುಲಾಮು.

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

ಕಿಮ್ಮತು ಆರು ಆಣೆ. ಈ ನಮೂನೆ ಡಬ್ಬಿ.

ಗಜಕರ್ಣದ ಮುಲಾಮು.

ಇದನ್ನು ತಾಗಿಸುವದರಿಂದ ಎಲ್ಲಾ ತರದ ಖಜ್ಜಿಯು ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ, ಒಂದು ಸಾರಿ ಪರೀಕ್ಷಿಸಿದಲ್ಲಿ ತಿಳಿದುಬರುವದು. ಮೂರುಸಾರಿ ತಾಗಿಸುವದರೊಳಗೆ ಗಜಕರ್ಣವು ಹೋಗುವದು. ಡಬ್ಬಿ ೧ರ ಕಿಮ್ಮತು 6 ಆಣೆ ೧೨ ಡಬ್ಬಿ ರೂ. 4.

ವಜ್ರಗುಟಿಕೆ.

ರಕ್ತಶುದ್ಧಿ ಧಾತುಪುಷ್ಟಿ ಸ್ವಪ್ನೇಂದ್ರಿಯ ಆಗುವದು ನಿಲ್ಲಿಸುತ್ತದೆ. ನಿಪುಣವಂತರಿಗೆ ಶಕ್ತಿ ಕೊಡುತ್ತದೆ, ರಕ್ತ ಶುದ್ಧವಾಗಿ ದೇಹದಲ್ಲಿ ಆರೋಗ್ಯ ಕೊಡುತ್ತದೆ. ಇದರಲ್ಲಿ ಡೆಮೆಯಿಸ ಕೊಕೊ, ಲೆಸೆತಿನ್ ಎಂಬ ಧಾತು ಪುಷ್ಟಿ ಔಷಧಗಳಿವೆ. ೨೦ ಗುಟಿಕೆಗಳ ಡಬ್ಬಿ ೧ರ ಕಿಮ್ಮತು ರೂ. 1.

ಸುಂದರಿ ತೈಲ.

ಇದನ್ನು ಮೋರೆಗೆ ತಾಗಿಸುವದರಿಂದ ಮುದ್ದಣಗಳೂ ಕಪ್ಪು ಕಲೆಗಳೂ ಹೋಗಿ ಮೃದುವಾದ ಮತ್ತು ಮನೋಹರವಾದ ಕಾಂತಿಯು ಬರುವದು. ಬಾಟ್ಲ ಒಂದರ ಕಿಮ್ಮತು 8 ಆಣೆ.

ಜುಲಾಬು ಮಾತ್ರೆ.

ಬಾಟ್ಲ ಒಂದರ ಕಿಮ್ಮತು 8 ಆಣೆ.

ವಿಳಾಸ:—ಅಮೃತಾಂಜನ ಡಿಪೊ, ಫೋರ್ಟು, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—"ಅಮೃತಾಂಜನ", ಮುಂಬಯಿ

ಈಗಲೀಗ ಅಚ್ಚಾಗುತ್ತಲಿದ್ದ 'ಆಯುರ್ವೇದ ಚಿಕಿತ್ಸಾ ಕ್ರಮ' ಎಂಬ ಗ್ರಂಥವು ಇನ್ನು ಸದ್ಯದಲ್ಲಿಯೇ ಪ್ರಕಟವಾಗುವುದೆಂಬದನ್ನು ಸ್ವದೇಶಾಭಿಮಾನಿಯ ವಾಚಕರೆಲ್ಲರೂ

ತಿಳಿಯಬೇಕಾಗಿರುವುದು.

ಕನ್ನಡಭಾಷೆ ಗೊತ್ತಿರುವವರ್‍ಯಾರಾದರೂ ತನ್ನ ಹೆಸರು ಮತ್ತು ವಿಳಾಸವನ್ನು ಕಳುಹಿಸಿಕೊಟ್ಟಲ್ಲಿ ಟಪ್ಪಾಲು ಹಾಸಲು ಇಲ್ಲದೆ ಸಹಾ ಗ್ರಂಥವನ್ನು ಉಚಿತವಾಗಿ ಪಡಿಯಬಹುದು. ಇಂಗ್ಲೀಷು ಭಾಷೆಯಲ್ಲಿ ಹೆಸರು ಮತ್ತು ವಿಳಾಸವನ್ನು ಕಳುಹಿಸುವಾಗ ತಮ್ಮ ಸ್ನೇಹಿತರ ಯಾ ನೆಂಟರಿಷ್ಟರ ಪೈಕಿ 10 ಜನರ ಹೆಸರು ಮತ್ತು ವಿಳಾಸಗಳನ್ನು ಬರೆದು ಕಳುಹಿಸತಕ್ಕದ್ದು.

ಅತೀ ಉತ್ತಮವಾದ ಬ್ಲೂಬ್ಲೇಕ್ ಶಾಯಿಯ ಪುಡಿ.

ಇತರ ಎಲ್ಲಾ ಶಾಯಿಯ ಪುಡಿಗಿಂತಲೂ ಇದು ಬಹಳ ಉತ್ಕೃಷ್ಟವಾದದ್ದು.

ಒಂದು ಪೊಟ್ಣಕ್ಕೆ 4 ಪೈ.

ಈ ಶಾಯಿಯ ಹುಡಿಯನ್ನು ೨ ಔನ್ಸು ನೀರಿನಲ್ಲಿ ಕಲಸಿದೊಡನೆ ಅತೀ ಕಪ್ಪಾದ ಶಾಯಿಯು ದೊರಕುವದು. ಇದರಿಂದ ಬರದರೆ ಲೋಹದ ಪೇನುಗಳಿಗೆ ತುಕ್ಕು ಹಿಡಿಯದು. ಪೇನಿನಲ್ಲಿ ಶಾಯಿಯು ಬಹಳ ಸೊಗಸಾಗಿ ಹರಿಯುವುದು. ಈ ಶಾಯಿಯ ಪುಡಿಯಲ್ಲಿ ಬ್ಲೂಬ್ಲೇಕ್, ಕೆಂಪು, ಪಚ್ಚೆ, ಧೂಮ್ರವರ್ಣ ಇವೇ ಮೊದಲಾದವುಗಳು ಇರುವವು.

ಹಲವು ಪ್ರದರ್ಶನಗಳಲ್ಲಿ ಈ ಶಾಯಿಯ ಪುಡಿಯು ಬೆಳ್ಳಿ ಪದಕಗಳನ್ನೂ, ಯೋಗ್ಯತಾಪತ್ರಗಳನ್ನೂ ಹೊಂದಿಯದೆ.

ಒಂದೇ ಸಾರಿ 100 ಪೊಟ್ಣಗಳಿರುವ ಒಂದು ಕಾರ್ಡಬೋರ್ಡು ಪೆಟ್ಟಿಗೆಯನ್ನು ತರಿಸಿಕೊಂಡರೆ ಟಪ್ಪಾಲು ಹಾಸಲು ವಿನಹಾ ರೂ. ೧—೪—೦.

ಟಿ. ಎಸ್. ಸುಬ್ರಮಣ್ಯಮಂ ಎಂಡ್ ಕೊ.
32 ಆರ್ಮೆನಿಯನ್ ರಸ್ತೆ, ಮದ್ರಾಸು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣಕನ್ನಡದ ಎಲ್ಲಾ ವ್ಯಾಪಾರಸ್ತರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಖಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್ ಲವರಚಾಲ, ಮುಂಬಯಿ.

ಕವಿ ಎಂಡ್ ಸನ್ಸ್ ಜನರಲ್ ಮರ್ಚಂಟ್ಸ್,

ಮಂಗಳೂರು, ದ. ಕ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ ಮುಂತಾದ ಅನೇಕ ಸಾಮಾನುಗಳೂ ವಿಲಾಯುತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು, ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

ನವೀನ ಶೃಂಗಾರ ಸ್ತ್ರೀ ಶುಕಸಪ್ತತಿ ಕಥೆ.

ನೀವು? ಶೃಂಗಾರ ಮತ್ತು ಚಮತ್ಕಾರವಾಗಿರುವ ಕಥೆಯನ್ನು ಓದಬೇಕಾಗಿ ಅಭಿಲಾಷೆ ಇದ್ದರೆ ಮೇಲ್ಕಂಡ ಕಥೆಗೆ ಸಮಾನವಾದ ಕಥೆ ಯಾವದೂ ಇಲ್ಲ. ಕ್ರಯ ಹಾಸಲ್ ಸಹಾ ೧೦ ಆಣೆ.

ಮತ್ತು ನಮ್ಮಲ್ಲಿ ಕನ್ನಡ, ತೆಲುಗು, ಸಂಸ್ಕೃತ ಪುಸ್ತಕಗಳು ಪಠಮಾಯದ ಊದಬತ್ತಿಗಳು, ಹಸಿಗಂಧ. ಹಸಿ ಬಿಲ್ಲೆಗಳು, ಪನ್ನೀರು, ತರಹೆವಾರಿ, ಜವಳಿ ಸಹಾ ದೊರಿಯುವದು ಅಲ್ಲದೆ, ಇತರ ಯಾವ ಪದಾರ್ಥಗಳು ಬೇಕಾದರೂ ನಂಬಿಕೆಯಿಂದ ಕಮಿಷನಿಗೆ ರವಾನೆ ಮಾಡುವೆವು. ಒಂದಾವರ್ತಿ ತರಿಸಿ ನೋಡಿದರೆ ಗೊತ್ತಾಗುತ್ತೆ. ನಮ್ಮ ಕಂಪೆನಿ ಕೆಟಲಾಗ್ ಮುಪತ್ತಾಗಿ ದೊರೆಯುವದು.

ಟಿ. ಯನ್. ಶ್ರೀನಿವಾಸ ಶೆಟ್ಟಿ, ಬುಕ್‌ಡಿಪೋ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನು ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಶೇವಹಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿಶೇಷ ಸೂಚನೆ:—ಪ್ರಖ್ಯಾತಿಗೊಂಡ ಶ್ರೀಕೃಷ್ಣಬ್ರದರ್ಸರವರ ನಾನಾ ತರದ ದೃಷ್ಟಿ ಚಕ್ರಗಳನ್ನು ಅಲ್ಪ ಮೊಬಲಗಿನಿಂದ. ದೃಷ್ಟಿಗಳನ್ನು ಪರೀಕ್ಷಿಸಿ ತರಿಸಿಕೊಡಲಾದೀತು.

ಎಲ್ಲೂರು ರಾಮರಾವ್, ಜನರಲ್ ಏಜಂಟ್, ಮಂಗಳೂರು, ದ. ಕನ್ನಡ.

ಬಹುಮಾನ! ಬಹುಮಾನ! ಬಹುಮಾನ!

THE KALA-NIDHI MANGALORE,

(ಪೊಟ್ಣ 1ಕ್ಕೆ 3 ಪೈ.)

ಬರುವ ದಶಂಬರ ತಿಂಗಳ ವರೆಗೆ ಮಾತ್ರ. ೪ ರೂಪಾಯಿಗಳ ಶಾಯಿ ಪೊಟ್ಣಗಳನ್ನು ತೆಗದುಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್ ಕೀಲೆಸ್ ಘಡಿಯಾರವು.

ಈ ಶಾಯಿಯಿಂದ ಲೋಹದ ಪೇನುಗಳಿಗೆ ತುಕ್ಕು ಹಿಡಿಯದು. ಶಾಯಿಯ ಮೇಲ್ಗಡೆ ಬೂಜು ಸಿಲ್ಲದು. ಬರಿಯುವಾಗ ನೀಲ ಬಣ್ಣದಲ್ಲಿದ್ದು ಆರಿದೊಡನೆ ಅತಿ ಕಪ್ಪಾಗುವದು.

ಬಹುಮಾನಗಳ ವಿವರ. ೪ ಆಣೆಯ ಪೊಟ್ಣಗಳನ್ನು ತಕ್ಕೊಳ್ಳುವವರಿಗೆ ಸುಗಂಧ ದಂತಕಾಂತಿ ಚೂರ್ಣದ ಡಬ್ಬಿ ೧; ೮ ಆಣೆಯದನ್ನು ತಕ್ಕೊಂಡವರಿಗೆ ಜೋನ್ ಫೇಬರ್ ಪೆನ್ಸಿಲ್ ಡಜನ್ ೧; ೧ ರೂಪಾಯಿ ಪೊಟ್ಣಗಳನ್ನು ಪಡಕೊಂಡವರಿಗೆ ದೊಡ್ಡವರ ಉತ್ತಮವಾದ ಬನಿಯನ್ ೧; ೨ ರೂಪಾಯಿದ್ದನ್ನು ತರಿಸಿಕೊಳ್ಳುವವರಿಗೆ ಓಫೀಸ್ ನಂ. ೧ ಕಿಸೆ ಛಾಪೆಯ ಪೆಟ್ಟಿಗೆ ೧; ೪ ರೂಪಾಯಿಗಳದ್ದು ತರಿಸಿಕೊಳ್ಳುವವರಿಗೆ ಓಪನ್ ಫೇಸ್ ನಿಕ್ಕಲ್ ಸಿಲ್ವರ್ ರಾಸ್ಕೋಪ್, ಕೀಲೆಸ್ ಕಿಸೆ ಘಡಿಯಾರವು ಗ್ಲಾಸ್ ಸ್ಪ್ರಿಂಗ್ ಸಹಿತ.

ಬ್ಲೂ ಬ್ಲೇಕ್ ದೊಡ್ಡ ಶಾಯಿಯ ಬಾಟ್ಲಿ ೧ಕ್ಕೆ ಆಣೆ ೮. ಸಣ್ಣದಕ್ಕೆ ಆಣೆ ೪. ಶಾಯಿಯ ಗುಳಿಗೆಗಳೂ ಕಾಗದಗಳೂ ಸಹ ಸಿಕ್ಕುವವು. ಪರಸ್ಥಳದವರಿಗೆ ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:— ಕಲಾನಿಧಿ, ಮಂಗಳೂರು.
ಅಥವಾ ದಿ. ಊಲನ್ ಮಾರ್ಟ್ ನಂಬ್ರ ೧ ಮಂಗಳೂರು (ದ. ಕ)

ಜನವರಿ ಅಂತ್ಯದ ವರೆಗೆ.

ಒಳ್ಳೇ ಸಮಯ! ಸುಲಭ ಕ್ರಯ!!

ನಂಬ್ರ 1ನೇ ಜಂಟ್ಸ್, ಲಿವರ್ ವಾಚು 1ಕ್ಕೆ ಕ್ರಯ ... ... 3—4—0.
ನಂಬ್ರ 2ನೇ ಲೇಡಿಸ್ ಚಿಕ್ಕ ಸ್ಯಾಜು ,, , ... 5—0—0
ನಂಬ್ರ 3ನೇ ಜಂಟ್ಸ್ ಗೋಲ್ಡ ಗಿಲ್ಟ್ ಲಿವರ್, ಕೀವ್ಯಾಂಡಿಂಗ್ ವಾಚು 1ಕ್ಕೆ 7—0—0.

ಇವು ಸಾಮಾನ್ಯ ಪ್ರಮಾಣಪರಿವರ್ತನ ಉಳ್ಳವುಗಳಾಗಿ 10 ವರುಷಗಳ ವರೆಗೆ ಉತ್ತಮ ರೀತಿಯಲ್ಲಿ ನಡೆಯುವವು. ಇವು ನೂತನವಾದ ಹೊಸ ನಮೂನೆ ಮುಚ್ಚಳ ಉಳ್ಳವುಗಳಾಗಿ, ಸರಿಯಾದ ಕಾಲವನ್ನು ತೋರಿಸುತ್ತಿರುವದು. ಪ್ರತಿ ವಾಚಿನ ಸಂಗಡ ಸರಪಣಿ ಸ್ಪ್ರಿಂಗ್ ಮತ್ತು ಗ್ಲಾಸ್ ಇರುವದು.

ನಮ್ಮಲ್ಲಿ ಸ್ವಲ್ಪ ವಾಚುಗಳೇ ಇರುವದರಿಂದ ಬೇಗನೇ ಆರ್ಡರ್ ಮಾಡಿರಿ.

ಸಿ. ರಘುನಾಥ ಕಾಮತ್,
ಬೋಳಾರ, ಮಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 30ನೇ ದಶಂಬರ 1910.

ರಾಷ್ಟ್ರೀಯ ಸಭೆಯ ಅಧ್ಯಕ್ಷರ ಭಾಷಣ.

ಈ ಸರ್ತಿ ಕೊಂಗ್ರೆಸು ಯಾ ರಾಷ್ಟ್ರೀಯ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ಮಹನೀಯರ ಪರಿಚಿತಿಯನ್ನು ಹಿಂದಿನ ಸಂಚಿಕೆಯಲ್ಲಿ ತಿಳಿಸಿರುವೆವು. "ಕೊಂಗ್ರೆಸ್ ಸಭೆಯ ವ ರಾಷ್ಟ್ರೀಯ ಪ್ರಗತಿಯ ಈ ಪ್ರಕೃತ ಸಂಧಿಯಲ್ಲಿ ಸರ್ ವಿಲ್ಲಿಯಮ್ ವೆಡರ್ಬರ್ನರಿಗಿಂತ ಯೋಗ್ಯ ಗೃಹಸ್ಥರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಲಿಕ್ಕೆ ದೊರಕರು" ಎಂಬ ನಮ್ಮ ಹೇಳಿಕೆಯನ್ನು ತಮ್ಮ ಈ ಸರ್ತಿಯ ಭಾಷಣದಿಂದ ಸಹ ಸಂಪೂರ್ಣವಾಗಿ ಸಮರ್ಥಿಸಿರುವರು.

ಮಿಲಿಯ ಕಟ್ಟಳೆಯಲ್ಲಿರುವ ಭಾರತೀಯ ಪ್ರಜೆಗಳ ದೀನ ದೆಶೆಯನ್ನು ಹೋಗಗೊಳಿಸುವ ಪ್ರಯತ್ನವನ್ನು ಕಳದ ೨೫ ವರುಷಗಳಿಂದ ಕೊಂಗ್ರೆಸು ಸಭೆಯವರು ಕೈಕೊಂಡಿರುವರು. ಕಳದ ಇಪ್ಪತ್ತು ವರುಷಗಳಲ್ಲಿ ಮಾಡಿದ ಈ ಪ್ರಯತ್ನಗಳಲ್ಲಿ ಫಲಕಾಂಕ್ಷೆಯನ್ನು ಸಹ ಇರಗೊಡಿಸುವುದು ಅಸಾಧ್ಯವೆಂತ ಭಾರತೀಯರಿಗೆ ತೋಚಿತು. ಸಹನಾತೀತವಾದ ಬೇನೆಗಳನ್ನು ಬಡ ಹಿಂದೂಸ್ಥಾನದ ನಿವಾಸಿಕರು ಅನುಭವಿಸಿದರು. ಯುದ್ಧಯಾತನೆ, ಮಾರಿರೋಗ, ಕ್ಷಾಮ, ಭೂಕಂಪ ಮತ್ತು ತುಫಾನುಗಳು ಮೊದಲಾದ ಅರಿಷ್ಟಗಳ ಫಲವು ನಮಗೆ ಸಾಕಷ್ಟು ಪ್ರಾಪ್ತವಾಗಿದೆ. ಬೆಂದು ಬಸವಳಿದು ಆಶಾಭಂಗ ಪ್ರಾಪ್ತಿಯು ಸಮೀಪಿಸಿತು. ಆದರೆ ಈಚೆಗೆ, ಇಷ್ಟೆಲ್ಲಾ ಆದ. ನಂತರದಲ್ಲಿ ಈ ಪ್ರಯತ್ನಗಳ ಫಲಕಾಂಕ್ಷೆಯ ಮೊಳಕೆಯು ತೋರಿರುವುದು. ಈಗಲೀಗ ಕ್ರಮವಾದ, ನಿರಂತರ, ಸುವ್ಯವಸ್ಥಿತ ಕಾರ್ಯಸಾಧನೆಯು ಅಗತ್ಯ. ನೆರವೇರಿಸಲಿಕ್ಕಿರುವ ಕಷ್ಟತರ ಕಾರ್ಯವು ಅನೇಕವಾಗಿದೆ. ಈ ಕಾರ್ಯ ಪ್ರಯತ್ನಗಳ ಫಲವು ಮಹತ್ತರವಾಗಿರುವುದು. ಕಾರ್ಯಸಾಧನೆಯಲ್ಲಿ ಉದ್ಯುಕ್ತರಾಗುವಾ. ಸುಪ್ರಯತ್ನಗಳಲ್ಲಿ ಕೋರಿಕೆ, ಸರ್ವರಲ್ಲಿಯೂ ಸಾಮಭಾವ, ಸಹಯತ್ನ, ಈ ಮೂರು ಮಾತುಗಳು ನಮ್ಮ ಮುಂದಿನ ಎಲ್ಲಾ. ಸಾಧನಗಳಲ್ಲಿ ಮೂಲಮಂತ್ರಗಳಾಗಿರಬೇಕೆಂದು ಸರ್ ವಿಲಿಯಮರವರು ತಮ್ಮ ಭಾಷಣ ಪ್ರಾರಂಭದಲ್ಲಿ ಅಪ್ಪಣೆಯಿತ್ತರು.

ನಮಗೆ ಕೋರಿಕೆಯು ಯಾವ ರೀತಿ ಪ್ರಾಪ್ತಿಸಿತು, ಸಾಮಭಾವವು ಸರ್ವರಲ್ಲಿಯೂ ಇರಬೇಕಾದ ಅವಶ್ಯಕತೆ ಏನು, ಸಹಯತ್ನವು ಹ್ಯಾಗೆ—ಎಂಬೀ ವಿಷಯಗಳ ಕುರಿತು ಸರ್ ವಿಲ್ಲಿಯಮರವರು ಹ್ಯಾಗೆ ಆಜ್ಞಾಪಿಸಿರುವರು?

ಗತಿಸಿದ ಎಡ್ವರ್ಡ್ ಚಕ್ರವರ್ತಿಗಳವರು ಇತ್ತಲಾಗೆ ಜುಬುಲೀ ಸಮಾರಂಭದಲ್ಲಿ ಹಿಂದುಸ್ಥಾನದ ಆಶ್ರಿತ ಅರಸರಿಗೂ ಪ್ರಜೆಗಳಿಗೂ ದಯಪಾಲಿಸಿದ ನಿರೂಪಣೆಯು ನಮ್ಮ ಕೋರಿಕೆಯ ಕಾರಣವಾಗಿರುವುದು. ಈ ನಿರೂಪಣೆಯಿಂದ ವಿಕ್ಟೋರಿಯಾ ಮಹಾರಾಣಿಯವರು ೧೮೫೮ರಲ್ಲಿ ಕೊಟ್ಟ ಜಾಹೀರುನಾಮೆಯನ್ನು ದೃಢೀಪಡಿಸಿದ್ದಲ್ಲದೆ ಜನಾಂಗಭೇದವು ಕ್ರಮವಾಗಿ ಪರಿತ್ಯಜಿಸಲ್ಪಟ್ಟು ದೊಡ್ಡ ದೊಡ್ಡ ಉದ್ಯೋಗಗಳು ಭಾರತೀಯರಿಗೆ ಕೊಡೋಣಾಗುವವೆಂದೂ, ರಾಜ್ಯದ ಆಡಳಿತೆಯ ಸಂಸ್ಥೆಗಳಲ್ಲಿ ಪ್ರಜಾನಿಯುಕ್ತತೆಯು ಹೆಚ್ಚಿಸಲ್ಪಡುವದೆಂದೂ ಭಾರತೀಯ ಪ್ರಜಾಜನರ ಇತರ ನ್ಯಾಯವಾದ ಕೋರಿಕೆಗಳು ಮನ್ನಿಸಲ್ಪಡುವವೆಂದೂ ಜನರಿಗ ಭರವಸೆ ದೊರಕಿತು. ಸ್ಟೇಟ್ ಸೆಕ್ರಿಟರಿ, ವ್ಯಾಸರಾಯಿ, ಮತ್ತು ಆಯಾ ಸಂಸ್ಥಾನಿಕ ಗವರ್ನರ ದೊರೆಗಳವರ ಕಾರ್ಯನಿರ್ವಾಹ ಸಭೆಗಳ ಮೆಂಬರುತನವು ಭಾರತೀಯರಿಗೆ ಕೊಡೋಣಾಗಿಯೂ, ನ್ಯಾಯನಿರ್ಮಾಣ ಸಭೆಗಳಲ್ಲಿ ಪ್ರಜಾನಿಯುಕ್ತತೆಯನ್ನು ಹೆಚ್ಚಿಸಿಯೂ ಮೋರ್ಲೆ ಮತ್ತು ಮಿಂಟೊ ಪ್ರಭುಗಳವರು ತಮ್ಮ ಆಡಳಿತೆಯಲ್ಲಿ ರಾಜನಿರೂಪಣೆಯ ವಾಗ್ದತ್ತಗಳನ್ನು ಬಹಳ ಮಟ್ಟಿಗೆ ನೆರವೇರಿಸಿಕೊಟ್ಟರು. ರಾಜ್ಯದಾಡಳಿತೆಯಲ್ಲಿ ಪ್ರಜಾನಿಯುಕ್ತತೆಯನ್ನು ಹೆಚ್ಚಿಸುವ ಸಮಯವು ಬಂದೊದಗಿರುವುದೆಂಬ ಮಿಂಟೊ ಪ್ರಭುಗಳು ಹಿಂದುಸ್ಥಾನವನ್ನು ಬಿಟ್ಟುಹೋಗುವ ಸಮಯದಲ್ಲಿ ಮಾಡಿದ ಭಾಷಣದ ಮುಖ್ಯ ಸಾರಾಂಶವೂ, ಮಿಂಟೊ ಮತ್ತು ಮೋರ್ಲೆ ಪ್ರಭುಗಳವರು ಮಾಡಿದ ರಾಜ್ಯಭಾರ ಮಾರ್ಪಾಟಗಳನ್ನು ತಾನು ಇನ್ನಷ್ಟು ವೃದ್ಧಿಗೆ ತರಲು ಸಾಧಿಸುವೆನೆಂತಲೂ ವಿವಿಧ ಜಾತಿ ಜನಾಂಗ ಭೇದವುಳ್ಳ ಪ್ರಜೆಗಳಲ್ಲಿ ಸಮ ಭಾವವು ಇರುವಂತೆ ಪ್ರಯತ್ನಿಸುವೆನೆಂತಲೂ ಈಗಿನ ವ್ಯಾಸ್‌ರಾಯಿಗಳ ಪ್ರಭುಗಳು ಇತ್ತ-ಅಭಯವೂ ಇನ್ನು ಮುಂದಿನ ಆಶೆಕೋರಿಕೆಗಳಿಗೆ ಸಹಾ ಆಸ್ಪದ ಕೊಟ್ಟಿರುವವು.

ಹಾರ್ಡಿಂಗ್ ಪ್ರಭುಗಳು ಜನಾಂಗ ಭೇದವಿರುವ ಪ್ರಜೆಗಳಲ್ಲಿ ಸಮಭಾವನೆಯನು ರೂಢಮೂಲವಾಗಿರಿಸಲಿಕ್ಕೆ ಪ್ರಯತ್ನಪಡುವೆನೆಂದು ಅಪ್ಪಣೆ ಕೊಟ್ಟಿರುವಾಗ ಇದ್ದು ಉಳಿಯುವ ಪ್ರಜಾಕಾರ್ಯಸಿದ್ಧಿಗೆ ಅವಶ್ಯಕವಾದ ಈ ವಿಷಯದಲ್ಲಿ ನಮ್ಮ ಹಂಗೇನೆಂಬುದನ್ನು ವಿಚಾರಿಸಬೇಕಾಗಿದೆ. ದೇಶದ ರಾಷ್ಟ್ರೀಯ ಸಾಮಾಜಿಕ ಸಾಂಪತ್ತಿಕ ಅಭಿವೃದ್ಧಿಗೆ ಸರ್ವರಿಂದಲೂ ಭಾರೀ ಸಹಕಾರ ಯತ್ನಗಳು ಬೇಕಾಗಿರುವವು. ಜಾತಿ, ಕುಲ ಜನಾಂಗ ಭೇದಗಳನ್ನು ಲೆಕ್ಕಿಸದೆ ತ್ಯಾಗಶೀಲತೆಯಿಂದ ಕೆಲಸ ಗೈಯ್ಯುವ ಕಾರ್ಯಧುರಂಧರರ ಸ್ತೋಮವು ಮಾತೃ ಸೇವೆಗೆ ಅಗತ್ಯವಾಗಿರುವುದು. ಸರ್ವತ್ರ ಸಹಕಾರವು ಇದೆಲ್ಲವುಗಳಿಗೆ ಅಗತ್ಯ. ಪ್ರಜೆಗಳಲ್ಲಿ ಸಮಭಾವನೆ ಮೈತ್ರಿ ಮೊದಲಾದ್ದು ಇಲ್ಲದಿದ್ದರೆ ಇದೆಲ್ಲವು ಹ್ಯಾಗೆ ಸಾಧ್ಯ? ಪರಸ್ಪರ ವೈರಕ್ಕೆ ಕಾರಣವಾದ ಗತಗೋಷ್ಠಿಯನ್ನು ಪೂರ್ಣವಾಗಿ ಮರೆತುಬಿಟ್ಟು ವಿವಾದಾಸ್ಪದವಾದ ವಾದಗಳನ್ನು ಬೆಳಸದೆ ದೇಶ ಸೇವೆ ಗೈಯ್ಯುವವರಲ್ಲಿ ರೀತಿ ಭೇದವಿದ್ದರೂ ಅವರೆಲ್ಲರೂ ದೇಶವತ್ಸಲರೆಂಬ ಉದಾರ ಭಾವನೆಗೆ ಅವಕಾಶಕೊಟ್ಟು ನಡಿಯಬೇಕೆಂಬದಾಗಿ ಸರ್ ವಿಲ್ಲಿಯಮರವರು ಸಭಿಕರನ್ನು ವಿಜ್ಞಾಪಿಸಿಕೊಂಡರು. ಪರಸ್ಪರ ವೈತ್ರಿ ಯಾ ಸಮಭಾವವು (೧) ಯುರೋಪಿಯ ಸರಕಾರಿ ಅಧಿಕಾರಸ್ಥರು ಮತ್ತು ಭಾರತೀಯ ವಿದ್ಯಾವಂತರೊಳಗೂ (೨) ಹಿಂದೂ ಮತ್ತು ಮಹಮ್ಮದೀಯರೊಳಗೂ (೩) ಸೌಮ್ಯ ಮತ್ತು ತೀಕ್ಷ್ಣ ರಾಷ್ಟ್ರೀಯ ಪಕ್ಷದವರೊಳಗೂ ಇರಬೇಕೆಂಬದಾಗಿ ಸೂಚಿಸಿರುವರು.

ಯುರೋಪಿಯ ಸರಕಾರಿ ಅಧಿಕಾರಸ್ಥರು ಮತ್ತು ಭಾರತೀಯ ವಿದ್ಯಾವಂತರೊಳಗಿರುವ ವೈಮನಸ್ಸನ್ನು ಹ್ಯಾಗೆ ಕಳೆದುಬಿಡಬಹುದೆಂಬುದನ್ನು ಪ್ರಥಮದಲ್ಲಿ ಸರ್ ವಿಲ್ಲಿಯಮರವರು ಸೂಚಿಸಿರುವರು. ಸುಮಾರು ೨೫ ವರುಷಗಳ ಮೊದಲು ೧೮೮೬ರಲ್ಲಿ ಎರಡನೇ ಕೊಂಗ್ರೆಸು ಸಭೆಯು ದಾದಾಭಾಯಿ ನವರೋಜಿಯವರ ಅಧ್ಯಕ್ಷತೆಯಲ್ಲಿ ನೆರದಾಗ ನವರೋಜಿಯವರು ಅಗ್ಯೆ ಕೊಟ್ಟ ಭಾಷಣದಲ್ಲಿ ಬ್ರಿಟಿಷ ಅಧಿಕಾರಸ್ಥರ ಕಡೆ ತೋರ್ಪಡುವ ಪ್ರಜಾ ಮೈತ್ರಿಭಾವನೆಯನ್ನು ತಿಳಿಯ ಹೇಳಿ ಈ ಭಾವನೆಯು ಸರಕಾರದ ರಾಜ್ಯ ಆಡಳತೆಯ ತಂತ್ರವು ಮಾರ್ಪಟ್ಟಂತೆ ಮಾರ್ಪಟ್ಟಿರುವುದೆಂಬದಾಗಿ ಹೇಳಿದರು. ಆದರೆ ಮೋರ್ಲೆ ಮತ್ತು ಮಿಂಟೋಪ್ರಭುಗಳು ಮಾಡಿದ ರಾಜ್ಯಭಾರ ಮಾರ್ಪಾಟಕ್ರಮಗಳಿಂದ ಸರಕಾರಿ ಯುರೋಪಿಯ ಆಫೀಸೆರರು ಮತ್ತು ವಿದ್ಯಾವಂತ ಪ್ರಜೆಗಳೊಳಗಿರುವ ವೈಮನಸ್ಸು ಬಹಳ ಮಟ್ಟಿಗೆ ಮಾಜುವರೆ ಆಸ್ಪದವಾಯಿತು. ಸರಕಾರದವರಿಂದ ಕೊಡೋಣಾದ ಇಂಥಾ ರಿಯಾಯತಿಗಳು ಪೂರ್ಣ ಫಲಿಸಬೇಕಾದರೆ ಸರ್ ವಿಲ್ಲಿಯಮರವರು ಅಧಿಕಾರಿಗಳಿಗೂ ದೇಶೀಯ ಪತ್ರಕರ್ತರಿಗೂ ಒಂದು ವಿಜ್ಞಾಪನೆಯನ್ನು ಮಾಡಿರುವರು. ಸರಕಾರದವರು ಪ್ರಜೆಗಳಿಗೆ ರಾಜ್ಯದಾಡಳಿತೆಯಲ್ಲಿ ದಯಪಾಲಿಸಿದ ಪ್ರಜಾನಿಯುಕ್ತ ಸಂಸ್ಥೆಗಳ ಮಾರ್ಪಾಟಗಳನ್ನು ಅಧಿಕಾರಸ್ಥರು ಆದರದಿಂದ ಸ್ವೀಕರಿಸಿಕೊಂಡು ಉದಾರಮತಿಯಿಂದ ಅವುಗಳ ಜ್ಯಾರಿ ನಡಿಸಿ ತಮ್ಮ ಅಧಿಕಾರಕ್ಕೊಳಗಾಗಿರುವ ಪ್ರಾಂತ್ಯಗಳ ಪ್ರತಿ ಜಿಲ್ಲೆ ತಾಲೂಕು ಗ್ರಾಮಗಳಲ್ಲಿ ಸಹಾ ಈ ಮಾರ್ಪಾಟಗಳಿಗನುಗುಣವಾದ ಬದಲಾವಣೆಗಳನ್ನು ಮಾಡಿ ಪ್ರಜೆಗಳಲ್ಲಿ ರಾಜ್ಯದಾಡಳಿತೆಯ ಮಾಹಿತಿಯು ಉಂಟಾಗುವಂತೆ ಸಹಾಯಕರಾಗಬೇಕು. ಅದಲ್ಲದೆ ಇತ್ತಲಾಗೆ ಜ್ಯಾರಿಗೆ ಬಂದ ಕಠಿಣ ಶಾಸನಗಳನ್ನು ವಜಾ ಮಾಡಿ ದೇಶದಲ್ಲಿ ಶಾಂತತೆಯನ್ನು ಬರಮಾಡುವುದುತ್ತಮ. ಅಥವಾ ಪ್ರಜಾ ಸ್ವಾತಂತ್ರವನ್ನು ನಿರ್ಬಂಧಿಸುವ ಈ ಶಾಸನಗಳಿಂದ ದೊರಕುವ ಅಧಿಕಾರದ ಜ್ಯಾರಿಯನ್ನು ಸರಕಾರಿ ಕಾರ್ಯನಿರ್ವಾಹಕ ಆಫೀಸರರುಗಳು ಸಾಧ್ಯವಾದ ಮಟ್ಟಿಗೆ ಬಿಟ್ಟುಬಿಡುವುದು ಕ್ಷೇಮಕರ. ಅಂದರೆ ಒಮ್ಮೆ ತಪ್ಪಿ ನಡೆದೆನೆಂತ ತಪ್ಪಿತಸ್ಥನಿಗೆ ತಿಳಿದರೆ ಕಾಯಿದೆಶೀರ ರೀತಿಯಲ್ಲಿ ಮುಂದಕ್ಕೆ ನಡಿಯುವಂತೆ ಆತಗೆ ಅವಕಾಶಕೊಟ್ಟು ಈ ಕಾನೂನುಗಳ ಜ್ಯಾರಿಯನ್ನು ಪ್ರಜಾ ಸಹಾನುಭೂತಿಯಿಂದ ಆಲೋಚಿಸತಕ್ಕದ್ದು. ದೇಶೀಯ ಪತ್ರಕರ್ತರು ಸಹ ಸರಕಾರದ ಆಡಳಿತೆಯ ಅಡಚಣೆಗಳಿಗೆ ಗಮನಕೊಟ್ಟು ಅಧಿಕಾರಸ್ಥರಲ್ಲಿ ತಾಳ್ಮೆಗೆ ಆಸ್ಪದವನ್ನು ಕೊಡುತ್ತ ಸರಕಾರದವರಿಗೆ ಭೀತಿಗೂ ಸಂಶಯಕ್ಕೂ ಕಾರಣಕೊಡದೆ ತಮ್ಮ ಪತ್ರಗಳನ್ನು ನಡಿಸುತ್ತಿರಬೇಕು. ಇದರಿಂದ ಉಭಯ ಕಡೆಯವರಲ್ಲಿಯೂ ಶಾಂತತೆಗೂ ಪರಸ್ಪರ ಸ್ನೇಹಭಾವಕ್ಕೂ ಎಡೆ ದೊರಕುವುದು.

ಕಾಲವು ಮಾರ್ಪಾಟ ಹೊಂದಿರುವುದರಿಂದ ಈ ಮೊದಲು ವರ್ತಿಸಿದ ರೀತಿಯಲ್ಲಿಯೇ ವರ್ತಿಸುವುದು ಕಲೆಕ್ಟರಿ ಹುದ್ದೆ ಮೊದಲಾದ್ದನ್ನು ಪಡಿಯುವ ಸಿವಿಲ್ ಸರ್ವಿ

ಸಿನವರಿಗೆ ಉಚಿತವಲ್ಲ. ರಾಜ್ಯ ಕಾರ್ಯನಿರ್ವಾಹಕಗಳ ಮಾಹಿತಿಯೂ ಜ್ಞಾನವೂ ಭಾರತೀಯರಿಗೆ ಲಭಿಸಿರುವುದರಿಂದ ಅವರನ್ನು ಸಹಾ ಅಂದವಾದ ರೀತಿಯಲ್ಲಿ ರಾಜ್ಯ ಕಾರ್ಯನಿರ್ವಾಹಕಗಳಲ್ಲಿ ಸಹಕಾರಿಗಳನ್ನಾಗಿ ಮಾಡಿಕೊಳ್ಳುವುದು ಲೇಸು. ಈ ರೀತಿ ಹಿತವಾದವನ್ನು ಸಿವಿಲ್ ಸರ್ವಿಸಿನವರಿಗೆ ಹೇಳಿ ಭಾರತೀಯರ ಪುನರುಜ್ಜೀವನವನ್ನು ಎದುರು ನೋಡಿದ ಎಲ್ಫಿನ್‌ಸ್ಟನ್, ಮೆಕೊಮ್, ಮನ್ರೊ, ಮೆಕೊಲೆ ಮೊದಲಾದ ಹಿಂದುಸ್ಥಾನದಲ್ಲಿ ಅಧಿಕಾರ ನಡಿಸಿದ ಆಂಗ್ಲೇಯ ಮಹನೀಯರ ಅನುಸರಣೀಯವಾದ ವರ್ತನವನ್ನು ಸಿವಿಲ್ ಸರ್ವಿಸ್ ಹುದ್ದೆದಾರರಿಗೆ ತೋರಿಕೊಟ್ಟರು.

ಹಿಂದೂ ಮಹಮ್ಮದೀಯರೊಳಗೆ ಅನ್ಯೋನ್ಯವನ್ನುಂಟುಮಾಡುವ ವಿಷಯವನ್ನು ಕುರಿತು ಸರ್ ವಿಲ್ಲಿಯಮರವರು ನಂತರದಲ್ಲಿ ಪ್ರಸ್ತಾಪಿಸಿದರು. ದೇಶವತ್ಸಲರಲ್ಲಿರುವ ಜನಾಂಗ, ಜಾತಿ, ವರ್ಣಭೇದಗಳಿಂದುಂಟಾಗುವ ವೈಮನಸ್ಯನ್ನು ಕಳದುಬಿಡುವಂತೆ ಮಾಡುವದು ಕೊಂಗ್ರೆಸು ಸಭೆಯು ಉದ್ದಿಶ್ಯಗಳಲ್ಲಿ ಒಂದಾದ್ದರಿಂದ ದೇಶೀಯನಲ್ಲದಿದ್ದರೂ ಕೊಂಗ್ರೆಸ ಸಭೆಯು ಅಧ್ಯಕ್ಷಸ್ಥಾನದಿಂದ ಈ ಕುರಿತು ಪ್ರಸ್ತಾಪಿಸುವರೆ ಉದ್ದೇಶಿಸಿರುವೆನೆಂದು ಸರ್ ವಿಲ್ಲಿಯಮರವರು ಹೇಳಿದರು. ಸರ್ ಫೆರೋಜಷಹಾ ಮೇಥಾ, ಬಹುಮಾನಪಟ್ಟ ಅಮೀರ್ ಆಲಿ, ಮತ್ತು ಆಗಾಖಾನರವರು ಎರಡು ಮತಸ್ಥರ ಒಂದು ಮಹಾ ಸಭೆಯನ್ನು ಈ ಉದ್ದಿಶ್ಯದ ಬಗ್ಯೆ ಏರ್ಪಡಿಸುವುದುಪಯುಕ್ತವೆಂತ ಅಭಿಪ್ರಾಯಪಟ್ಟದ್ದರಿಂದ ದೇಶದ ಆಯಾ ಕಡೆಗಳಲ್ಲಿರುವ ಉಭಯ ಜಾತಿಯ ಮುಖಂಡರವರಿಗೆ ಬರದಿರುವೆನೆಂದು ಹೇಳಿ ಈ ಮೊದಲು ಕೊಂಗ್ರೆಸು ಸಭೆಯ ಅಧ್ಯಕ್ಷಸ್ಥಾನವನ್ನು ಪಡದ ಗತಿಸಿದ ಹ್ಯಾಕೋರ್ಟು ಜಡ್ಜ ತಯಾಬ್ಜಿ, ಮತ್ತು ಮೆ। ಸಯಾನಿಯವರು ರಾಷ್ಟ್ರೀಯ ವಿಷಯಗಳಲ್ಲಿ ಮಹಮ್ಮದೀಯರೂ ಹಿಂದುಗಳೂ ಐಕ್ಯದಿಂದ ನಡಿಯುವುದು ಅವಶ್ಯಕವೆಂಬ ಅಭಿಪ್ರಾಯಗಳನ್ನು ಸಭೆಯವರಿಗೆ ವ್ಯಕ್ತಪಡಿಸಿದ್ದರು. ಟ್ರಾನ್ಸವಾಲ ಮೊದಲಾದ ದಕ್ಷಿಣ ಆಫ್ರಿಕದ ಪ್ರಾಂತ್ಯಗಳಲ್ಲಿ ಹಿಂದುಗಳೂ ಮಹಮ್ಮದೀಯರೂ ಒಗ್ಗಟ್ಟಿನಿಂದ ತನ್ನ ದೀನದೆಸೆಯನ್ನು ನೀಗುವರೆ ಪ್ರಯತ್ನಿಸುವುದನ್ನೂ ಅವರು ತಮ್ಮ ಸಾಧನೆಯಲ್ಲಿ ಜಯಶೀಲರಾಗುವ ಸಂಭವವನ್ನೂ ದೃಷ್ಟಾಂತವಾಗಿ ಹೇಳಿ ಹಿಂದುಸ್ಥಾನದಲ್ಲಿ ಸಹಾ ಉಭಯ-ಮತಸ್ಥರೂ ಆ ರೀತಿ ವರ್ತಿಸಿದರೆ ಪ್ರಜೆಗಳಲ್ಲಿ ವಿದ್ಯಾಭಿವೃದ್ಧಿ ಮೊದಲಾದವುಗಳು ಶೀಘ್ರದಲ್ಲಿಯೇ ಕೈಗೂಡುವವೆಂದೂ ರಾಷ್ಟ್ರೀಯ ಪ್ರಗತಿಯು ಇನ್ನಷ್ಟು ಪ್ರಬಲವಾಗುವುದೆಂದೂ ಅಪ್ಪಣೆವಿತ್ತರು.

ಸರ್ ವಿಲ್ಲಿಯಮರವರು, ಕೊಂಗ್ರೆಸು ಸಭೆಯಲ್ಲಿ ೧೯೦೭ನೇ ವರುಷದ ನಂತರ ಉಂಟಾದ ಉಭಯ ತಂಡದವರಲ್ಲಿಯೂ ಐಕ್ಯವು ಉಂಟಾಗುವಂತೆ ಕೊಟ್ಟ ಬುದ್ಧಿವಾದವು ಯುಕ್ತಿಯುಕ್ತವಾಗಿರುವುದು. ಕಾಯಿದೇರ ರೀತಿಗಳಲ್ಲಿಯೇ ವರ್ತಿಸುವುದು ರಾಷ್ಟ್ರೀಯ ಸಭೆಯು ಸ್ಥಾಪಿಸಲ್ಪಟ್ಟ ಅಂದಿನಿಂದ ಅದರ ಉದ್ದಿಶ್ಯವಾಗಿರುವುದು. ೨೦ ವರುಷಗಳಿಂದ ಸರಕಾರದ ಮುಂದಿರಿಸಿದ ಪ್ರಜೆಗಳ ವಿಜ್ಞಾಪನೆಗಳಿಗೆ ಸರಕಾರದ ಅಭಾವವೇ ಪ್ರಾಪ್ತಿಸಿದ್ದರಿಂದ ನಿರಾಶೆಪಟ್ಟು ಕೆಲವರು ಕೊಂಗ್ರೆಸು ಸಭೆಯನ್ನು ಬಿಟ್ಟುಬಿಟ್ಟರು. ರಾಷ್ಟ್ರೀಯ ವಿಷಯಗಳಲ್ಲಿ ತೀಕ್ಷ್ಣ ಪಕ್ಷವೆಂಬುದು ಇವರಿಂದ ಉಂಟಾಯಿತು. ಆದರೆ ಫಲವೇನು? ತೀಕ್ಷ್ಣ ಪಕ್ಷದವರ ಸಾಧನೆಗಳು ಯಾ ರೀತಿಯ ಪರಿಣಾಮವನ್ನು ದೇಶಕ್ಕೆ ಬರಮಾಡಿರುವವು? ಇವರ ವಿಪರೀತ ಸಾಧನೆಗಳಿಂದ ಭಾರತೀಯರ ಪರವಾಗಿ ಅಂಗ್ಲಾಳದವರಲ್ಲಿರುವ ಸಹಾನುಭೂತಿಯು ಕುಂದಲು ಆಸ್ಪದವಾಯಿತು. ರಾಜದ್ರೋಹ ವರ್ತಮಾನಪತ್ರ ಮುದ್ರಣಾಲಯಗಳ ಕಠಿಣ ಶಾಸನಗಳು ಮೊಳೆತವು. ರಾಜದ್ರೋಹ ಮೊಕದ್ದಮೆಗಳು ದೇಶದಲ್ಲಿ ಹೆಚ್ಚಿದವು. ಗಡಿಪಾರು ಮಾಡುವ ಕಾನೂನಿನ ಜ್ಯಾರಿಯು ಸಹಾ ನಡಿಯಿತೆಂದು ಟೀಕಿಸಿ ಸೌಮ್ಯ ಪಕ್ಷದವರ ಸ್ಥಿರ ಪ್ರಯತ್ನಗಳಿಂದ ನ್ಯಾಯನಿರ್ಮಾಣ ಸಭೆಗಳ ಮಾಪಾರ್ಟ ಮೊದಲಾದವು ದೇಶಕ್ಕೆ ಲಭಿಸಿರುವವೆಂತ ಸರ್ ವಿಲ್ಲಿಯಮರವರು ಅಭಿಪ್ರಾಯಪಟ್ಟರು. ಅಂಗ್ಲಾಳದಲ್ಲಿಯಾಗಲಿ ಹಿಂದುಸ್ಥಾನದಲ್ಲ್ಯಾಗಲಿ ರಾಷ್ಟ್ರೀಯ ಅಭಿವೃದ್ಧಿಯನ್ನು ಸಾಧಿಸುವ ಮತ್ತೊಂದು ಸಂಸ್ಥೆಯು ಭಾರತೀಯರಿಗೆ ಇಲ್ಲದಿರುವುದರಿಂದ ಸಹಾ, ಕಳದ ೨೫ ವರುಷಗಳಿಂದ ನಡದು ಬಂದ ಈ ಸಭೆಗೆ ಸರ್ವರೂ ಕೂಡಿ ಐಕ್ಯದಿಂದ ರಾಷ್ಟ್ರದ ಅಭಿವೃದ್ಧಿಯನ್ನು ಕೈಕೊಳ್ಳಬೇಕೆಂದು ವಿಜ್ಞಾಪಿಸಿದರು. ತೀಕ್ಷ್ಣ ಪಕ್ಷದವರ ಹೊರತು ಕೊಂಗ್ರೆಸು ಸಭೆಗೆ ಕೂಡಿದ್ದರೂ ಅದರ ಕಾರ್ಯಗಳಲ್ಲಿ ಆಸಕ್ತರಾಗದೆ ತಟಸ್ಥರಾಗಿರುವ ಮತ್ತೊಂದು ತಂಡವು ಇರುವುದು. ಸೂರತಿನಲ್ಲಿ ಕೊಂಗ್ರೆಸು ಸಭೆಗೆ ಸಂಭವಿಸಿದ ಅಪದೆಸೆಯ ನಂತರ ಸೌಮ್ಯ ಪಕ್ಷದ ಮುಖಂಡರಲ್ಲಿ ಕೆಲವರು ಕನ್ವೆಷನ್ ಸಭೆಯಲ್ಲಿ ಮಾಡಿದ ಸಭಾನಿಯಮಗಳ ಅವಶ್ಯಕತೆಯು ಈ ಪಕ್ಷದವರಿಗೆ ತೋಚದು. ಇಂಥವರು ಸಭಾಕಾರ್ಯಗಳಲ್ಲಿ ಮುಂಚಿನಂತೆ ಆಸಕ್ತಿಯನ್ನು ತೋರುವಂತೆ ಕೊಂಗ್ರೆಸು ಸಭೆಯ ಮುಖ್ಯ ಉದ್ದಿಶ್ಯಗಳು ಮಾರ್ಪಡದಂತೆ ಬೇಕಾದ ಬದಲಾವಣೆಗಳನ್ನು ಈ ನಿಯಮಗಳಲ್ಲಿ ಮಾಡಲುಬಹುದು. ರಾಷ್ಟ್ರೀಯ ಸಭೆಯು ಎಲ್ಲಾ ತಂಡದವರನ್ನು ಒಟ್ಟು ಕೂಡಿಸುವಂತೆ ಕಾರಣಯುಕ್ತವಾದ ಯಾವ ಸಾಧನಗಳನ್ನಾದರೂ ಮಾಡಲೇ ಬೇಕು. ಯಾಕಂದರೆ ಈ ತಂಡಗಳಿಂದ ಉಂಟಾಗುವ ಕೆಡಕು ಬಹಳವಾಗಿದೆಂದು ಸೂಚಿಸಿದರು.

ಈ ರೀತಿ ಐಕ್ಯದ ಸೂತ್ರಗಳು ಸರ್ವರಿಂದ ಮನ್ನಿಸಲ್ಪಟ್ಟರೆ ಕೊಂಗ್ರೆಸು ಸಭೆಯ ಸಹಯತ್ನಗಳನ್ನು ಯಾವ ರೀತಿ ಮಾಡಬೇಕು? (1) ಪ್ರಜಾಭಿಪ್ರಾಯಗಳನ್ನು ಏಕೀಕರಿಸಿ ಅವುಗಳನ್ನು ಬಲವತ್ತಾಗಿ ಮಾಡಿ ಬೇಕಾದ ಸಾಧನೆಗಳನ್ನು ಹಿಂದುಸ್ಥಾನದಲ್ಲಿ ಸಾಧಿಸುವುದೂ, (2) ರಾಜ್ಯದಾಡಳಿತೆಯಲ್ಲಿ ಬೇಕಾದ ಮಾರ್ಪಾಟಗಳನ್ನು ಮಾಡಬೇಕೆಂದು ಸರಕಾರದವರಿಗೆ ಸೂಚಿಸುವುದೂ, (3) ಅಂಗ್ಲಾಳದ ಜನರಲ್ಲಿ ಭಾರತೀಯ ವಿಷಯಗಳಲ್ಲಿ ಅನುರಾಗವುಂಟಾಗುವಂತೆ ಬೇಕಾದ ಪ್ರಯತ್ನಗಳನ್ನು ಮಾಡುವುದೂ ಕೊಂಗ್ರೆಸು ಸಭೆಯ ಈ ವರೆಗಿನ ಕಾರ್ಯಸಾಧನಗಳಾಗಿದ್ದವು. ನ್ಯಾಯನಿರ್ಮಾಣ ಸಭೆಗಳ ಮಾರ್ಪಾಟಗಳಿಂದಲೂ ಭಾರತೀಯರನ್ನು ಗವರ್ನರ ದೊರೆಗಳವರ ಕಾರ್ಯನಿರ್ವಾಹಕ ಸಭೆಗೆ ನೇಮಿಸಿದ್ದರಿಂದಲೂ ಪ್ರಥಮ ಸಾಧನೆಗೆ ದೊರಕುವ ಸಂಭವಗಳು ಅಧಿಕವಾಗಿವೆ. ಆದರೆ ನ್ಯಾಯನಿರ್ಮಾಣ ಸಭೆಗಳ ಪ್ರಜಾಕಡೆಯ ಮೆಂಬರರು ಕೂಡಿಕೊಂಡು ತಮಗೆ ತೋಚುವ ಮಾರ್ಪಾಟಗಳನ್ನು ಸರಕಾರದವರಿಗೆ ಸೂಚಿಸುವುದಲ್ಲದೆ ಅಂಥಾ ಮಾರ್ಪಾಟಗಳು ಕೊಡೋಣಾಗುವ ವರೆಗೆ ಐಕ್ಯದಿಂದ ಕಳಕಳಿಸುವುದು ಒಳ್ಳೆದೆಂದು ಸೂಚಿಸಿರುವರು. ಎರಡನೇ ಸಾಧನ ಕ್ರಮಗಳಲ್ಲಿ—ಕೆಲವು ಕೊಂಗ್ರೆಸು ಸಭೆಯ ಪ್ರತಿನಿಧಿಗಳು ಕೂಡಿಕೊಂಡು ತಮ್ಮ ಸಭಾ ನಿರ್ಣಯಗಳನ್ನೂ ತಾವು ರಾಜ್ಯಭಾರ ಕ್ರಮದಲ್ಲಿ ಅಪೇಕ್ಷಿಸುವ ಬದಲಾವಣೆಗಳನ್ನೂ ಒಂದು ಮಾನಪತ್ರ ಮುಖೇನ ವ್ಯಾಸರಾಯಿ ಪ್ರಭುಗಳೊಂದಿಗೆ ಸ್ವತಹಾ ಜಾಹೀರುಮಾಡಿಕೊಳ್ಳುವುದುತ್ತಮವೆಂತ ಸರ್ ವಿಲ್ಲಿಯಮರವರ ಅಭಿಪ್ರಾಯ. ಮೂರನೇ ಸಾಧನಕ್ಕೆ ಅಂದರೆ ಅಂಗ್ಲಾಳದಲ್ಲಿ ಭಾರತೀಯರ ಪರವಾಗಿ ಉಂಟುಮಾಡಬೇಕಾಗುವ ಅನುರಾಗದ ಕುರಿತು ಭಾರತೀಯರು ಇಷ್ಟರತನಕ ಈ ವಿಷಯಕ್ಕೆ ತಕ್ಕ ಗಮನಕೊಡಲಿಲ್ಲವೆಂಬದಾಗಿ ಅಜ್ಞಾಪಿಸಿದರು. ಹಿಂದುಸ್ಥಾನದ ಆಡಳಿತೆಯು ಬ್ರಿಟಿಷ ಪಾರ್ಲಿಮೆಂಟ ಸಭೆಗೊಳಗಾಗಿರುವುದರಿಂದ ಅಂಥಾ ಪಾರ್ಲಿಮೆಂಟ ಸಭೆಗೆ ಮೆಂಬರರನ್ನು ಚುನಾಯಿಸುವ ಬ್ರಿಟಿಷ ಜನರಲ್ಲಿ ಭಾರತೀಯರ ಪರವಾದ ಮಾಹಿತಿಯನ್ನುಂಟುಮಾಡುವುದು ಅತ್ಯಗತ್ಯ. ಈ ಬಗ್ಯೆ ಭಾರತೀಯ ಪ್ರಮುಖರು ಅಂಗ್ಲಾಳಕ್ಕೆ ಆಗಿಂದಾಗ್ಯೆ ಬಂದು ಭಾಷಣ ಮೊದಲಾದವುಗಳಿಂದ ತಮ್ಮ ಉದ್ದಿಶ್ಯಗಳನ್ನು ಕೈಕೊಳ್ಳಬೇಕೆಂದು ಸೂಚಿಸಿರುತ್ತಾರೆ.

ಸ್ವಾವಲಂಬನದ ನವಚೈತನ್ಯವು ಭರತಖಂಡದಲ್ಲಿ ಜನಿಸಿರುವುದು. ಇದು ಒಳ್ಳೆದೆ ಸೈ. ಆದರೆ ಇದರಿಂದ ಅನ್ಯದೇಶಸ್ಥರ ಮೇಲೆ ವೈಮನಸ್ಯುಂಟಾಗದಂತೆ ಜಾಗರೂಕರಾಗಿರಬೇಕು. ಸ್ವಾತಂತ್ರ ಪ್ರಿಯರಾದ ಲೋಕದ ಜನರೊಂದಿಗೆ ಮುಖ್ಯವಾಗಿ ಬ್ರಿಟಿಷರೊಂದಿಗೆ ಭ್ರಾತೃಭಾವಕ್ಕೆ ಕುಂದುಂಟಾಗದಂತೆ ವರ್ತಿಸಿರಿ. ಬ್ರಿಟಿಷರೊಂದಿಗೆ ಸ್ನೇಹಭಾವದಲ್ಲಿ ವರ್ತಿಸುವ ಅವಶ್ಯಕತೆಯನ್ನು ತೋರಿಸಿಕೊಟ್ಟು ಕ್ರಮೇಣ ಬ್ರಿಟಿಷ್ ಸಾಮ್ರಾಜ್ಯಕ್ಕೆ ಒಳಪಟ್ಟ ಸ್ವತಂತ್ರ ಸರಕಾರವು ಹಿಂದೂಸ್ಥಾನಕ್ಕೆ ಪ್ರಾಪ್ತಿಸುವುದೆಂಬದಾಗಿ ಸೂಚಿಸಿ ತಮ್ಮ ಭಾಷಣವನ್ನು ಮುಕ್ತಾಯಪಡಿಸಿದರು.

ಬ್ರಹ್ಮಚರ್ಯ ಮತ್ತು ಸನ್ಯಾಸ.

ದ್ವಿಜಾತಿಯಲ್ಲಿ ಹುಟ್ಟುವ ಪುರುಷರಿಗೆ ಎಂಟು ವರುಷ ನಂತರ ಬ್ರಹ್ಮಚರ್ಯಾಶ್ರಮ ಪ್ರವೇಶವೂ, ಸ್ತ್ರೀಯರಿಗೆ ಎಂಟು ವರುಷ ಪರ್ಯಂತ ಬ್ರಹ್ಮಚರ್ಯಾಶ್ರಮ ವಾಸವೂ ಆಗಬೇಕೆಂದು ಭರತ ಜನಾಂಗಕ್ಕೆ ನ್ಯಾಯದಾತರಾದ ಮನು ಮೊದಲಾದವರಿಂದ ವಿಧಾಯಿಸಲ್ಪಟ್ಟಿರುವುದು. ಯಾವಾಗ ವಿವಾಹವು ನಡೆದು ಪತಿಪತ್ನಿಯರಿಗೆ ಪರಸ್ಪರ ಪ್ರೇಮ ಉಂಟಾಗುವದೋ ಅಂದೇ ಬ್ರಹ್ಮಚರ್ಯಕ್ಕೆ ಭಂಗ ಒದಗುವದೆಂದು ಭಾವಿಸಿ ಹೀಗೆ ಮಾಡಿರಬಹುದು.

ಬ್ರಹ್ಮಚರ್ಯಾಶ್ರಮಿಗಳೂ, ಸನ್ಯಾಸಾಶ್ರಮಿಗಳೂ ವಿಧಾಯಕ ಮಾಡಲ್ಪಟ್ಟಿರುವ ಕೆಲವು ಬಲವತ್ತರವಾದ ನಿಬಂಧನೆಗಳಿಗೆ ಒಳಗಾಗಿರಬೇಕು. ತಮ್ಮ ನಡೆನುಡಿಗಳಲ್ಲಿಯೂ ನಿಯಮಾನುಸಾರವಾಗಿಯೇ ನಡಿಯಬೇಕು. ಈ ಆಶ್ರಮವಾಸ ಮುಖ್ಯಾಭಿಪ್ರಾಯವು:—ಸ್ತ್ರೀ ಅಥವಾ ಪುರುಷ ಜಾತಿಯಲ್ಲಿ ಸ್ವಭಾವ ಜನ್ಯವಾಗಿರುವ ಮೋಹ ವಿಕಾರವು ಉಂಟಾಗಬಾರದೆಂದೂ, ಮನವು ಒತ್ತಡೆಯಲ್ಲಿ ಸ್ಥಿರವಾಗಿ ನಿಲ್ಲಬೇಕೆಂದೂ ಕಾರ್ಯಸಾಧನೆಗೆ ಕಾರಣವಾದ ಪ್ರಯತ್ನ ಶಬ್ದವು ಪಾಠವಾಗಬೇಕೆಂದೂ, ಇರುವದೆಂದು ತೋರುವುದು. ಯಾರು ತಮ್ಮ ಇಂದ್ರಿಯಗಳಿಗೆ ದಾಸರಾಗದೆ ಷಡಿಂದ್ರಿಯಗಳನ್ನು ತಮ್ಮ ಚಾಕರರನ್ನಾಗಿ ಮಾಡಿಕೊಂಡು ಅವುಗಳಿಂದ ಮನದಣಿಯೆ ಕಾರ್ಯಗಳನ್ನು ಮಾಡಿಸಿಕೊಳ್ಳುವರೊ ಅವರೇ ಬ್ರಹ್ಮಚಾರಿಗಳು, ಸನ್ಯಾಸಿಗಳು. ಬ್ರಹ್ಮಚಾರಿಗೂ ಸನ್ಯಾಸಿಗೂ ಮುಖ್ಯವಾಗಿ ಇರಬೇಕಾದುದೇ ಇದು. ಸಕಲ ಮತಾಚಾರ್ಯರುಗಳ ಬೋಧನೆಯ ಸಾರವೇ ಇದು. ಬುದ್ಧಿಯನ್ನು ಪ್ರಾಪಂಚಿಕ ವ್ಯಾಪಾರಗಳಿಂದ ದೂರವಾಗಿಡುವುದೇ, ವಿದ್ಯಾಭ್ಯಾಸ ಅಥವಾ ದೇವತಾ ಪ್ರಾರ್ಥನೆಗಳಲ್ಲಿ ಆಸಕ್ತರಾಗಿರುವುದೇ, ಈ ಆಶ್ರಮಿಗಳ ಕರ್ತವ್ಯ ಕರ್ಮವಾಗಿರುವುದು. ಆದುದರಿಂದಲೇ ಬ್ರಹ್ಮಚರ್ಯಾಶ್ರಮವಾಸವಾದನಂತರ ಸನ್ಯಾಸಾಶ್ರಮವಾಸವು ಶ್ರೇಷ್ಠವೆಂದು ಹೇಳುವರು. ಆದರೆ ಕೆಲವು ಮತಾಚಾರ್ಯರುಗಳು ಸ್ವಲ್ಪ ಸಂಸಾರ ಸುಖವನ್ನನುಭವಿಸಿ ಸನ್ಯಾಸಾಶ್ರಮವನ್ನು ಸ್ವೀಕರಿಸಬೇಕೆನ್ನುವರು. ಇದರ ಚರ್ಚೆಯು ನಮಗೇಕೆ? ಮುಖ್ಯ

ನೈಜವಾದ ಬ್ರಹ್ಮಚರ್ಯವು ಚೆನ್ನಾಗಿ ಅಭ್ಯಾಸವಾಗುವವರಿವಿಗೂ ಸನ್ಯಾಸವು ಸಿದ್ಧಿಸಲಾರದು.

ಮನವನ್ನು ದೈವದ ಕಡೆಗೆ ತಿರುಗಿಸುವುದು ಅಥವಾ ಪರಮಾತ್ಮನಲ್ಲಿ ಮಿಳಿತವಾಗಿ ಮಾಡುವುದು ಸರ್ವಾಂತರ್ಯಾಮಿಯಾದ ಪರಮಾತ್ಮನನ್ನು ರೂಪದಿಂದಾಗಲೀ ವಿರೂಪದಿಂದಾಗಲೀ ಪೂಜಿಸಿ ಪಡೆವುದು ಸಾಧ್ಯ. ರೂಪಾಂತರವನ್ನಿಟ್ಟು ಪೂಜಿಸುವದು, ಆ ರೂಪಾಂತರ್ಗತ ದೇವನೇ ಶ್ರೇಷ್ಠನೆಂದು ಭಾವಿಸುವರಲ್ಲದೆ, ತದ್ರೂಪಾಂತರ್ಗತ ಪರಮಾತ್ಮನಿಗೆ ಪ್ರಾಣಾರ್ಪಣೆಯನ್ನು ಮಾಡಲು ಸಹ ಸಿದ್ಧರಾಗಿರುವರು. ಆದುದರಿಂದ ಅವರು ಪರಮಾತ್ಮನಲ್ಲಿ ಏಕೀ ಭಾವವನ್ನು ಹೊಂದುವರಲ್ಲದೆ ಪರಮ ಪದವನ್ನೂ ಹೊಂದುವರು. ಪರಮಾತ್ಮನನ್ನು ನಿರಾಕಾರವೆಂದು ಭಾವಿಸಿ ಭಜಿಸುವವರೂ ಪರಮಾತ್ಮನಲ್ಲಿ ಸೇರಿ ಒಂದಾಗುವರಲ್ಲದೆ ಪರಮ ಪದವನ್ನೂ ಹೊಂದುವರು. ಆದರೆ ಇದು ಕಷ್ಟಸಾಧ್ಯ. ಈರ್ವರೂ ತಮ್ಮ ತಮ್ಮ ಭಕ್ತಿಗೆ ತಕ್ಕಂತೆ ಸುಖ ಪಡುವರೆಂದೆನ್ನುವದರಲ್ಲಿ ಸಂದೇಹವಿಲ್ಲ. ಭಕ್ತಿಯೇ ಮುಖ್ಯವಾದುದು. ಭಕ್ತಿರಹಿತನಾದವನು ಬಹಿರಾಡಂಬರಕ್ಕಾಗಿ ಭಗವಂತನನ್ನೂ ಭಜಿಸಿದರೆ ಪಾಪ ಕೃತ್ಯ ಮಾಡಿದಂತಾಗುವದಲ್ಲದೆ ಬೇರೆಯಿಲ್ಲ.

ಯಾರೇ ಆಗಲಿ ಪ್ರಾಪಂಚಿಕ ಪ್ರಾರಬ್ಧ ಯೋಚನೆಗಳಿಂದ ಪಾರಗೊಂಡ ಹೊರತು ಭಕ್ತರೆಂದೆನಿಸಿಕೊಳ್ಳಲಾರರು. ಆದುದರಿಂದ ಭಕ್ತನ ಬುದ್ಧಿಯು ಇಹ ವ್ಯಾಪಾರಗಳಿಂದ ಬಹು ದೂರವಾಗಿರಬೇಕು. ದೈವಭಕ್ತನು ಸಂಸಾರವನ್ನೂ ಲೆಕ್ಕಿಸನು. ಗೆಳೆಯನನ್ನಾಗಲಿ ಬಂಧುವನ್ನಾಗಲಿ ಲಕ್ಷಿಸನು. ಯಾವ ಶತ್ರುವೂ ಅವನ ಬುದ್ಧಿಯನ್ನು ಬಂಧಿಸಲಾರನು. ಯಾವ ಮಿತ್ರನೂ ಅವನ ಬುದ್ಧಿಯನ್ನು ಅನ್ಯ ಮಾರ್ಗಗಾಮಿಯನ್ನಾಗಿ ಮಾಡಲಾರನು. ಅವನಿಗೆ ದೈವದ ಚಿಂತೆಯೇ ಚಿಂತೆ. ಪೂರ್ಣವಾಗಿಯೂ ದೈವಭಕ್ತನಾದವನ ದೃಷ್ಟಿಪಥಕ್ಕೆ ಬೀಳುವ ಚರಾಚರ ವಸ್ತುಗಳೆಲ್ಲವೂ ದೇವರೇ.

ಈ ವಿಧವಾದ ಸಂಪೂರ್ಣ ಜ್ಞಾನವನ್ನೂ ಸಂಪಾದಿಸಿದ ಅನಂತರವಲ್ಲವೆ ಜ್ಞಾನಿಯಾಗುವುದು? ಯೋಗಿಯಾಗುವುದು? ಇಂತಹ ಸರ್ವಸಂಗತ್ಯಾಗಿಯಲ್ಲವೆ ಸನ್ಯಾಸಿ ಎನಿಸಿಕೊಳುವುದು? ಇಂತಹ ಸನ್ಯಾಸಿಯ ಕಾರ್ಯವಲ್ಲವೆ ಲೋಕವನ್ನು ಸರಿಯಾದ ಮಾರ್ಗದಲ್ಲಿಡುವುದು?

ಭಕ್ತನಾಗಲು ಬಹು ಕಷ್ಟಪಡಬೇಕು! ಭಕ್ತಿಸಾಧನೆಗೆ ಅತಿ ಮುಖ್ಯವಾಗಿ ಬೇಕಾದುದು ಧೃಡನಂಬಿಕೆ. ಸುಪ್ರಸಿದ್ಧರಾದ "ಕನಕ, ಕಬೀರ. ರಾಮ, ಪುರಂಧರ, ವೆಂಕಟರಮಣ ದಾಸರುಗಳು" ಪರಮಾತ್ಮನಿಗೆ ಭಕ್ತರಾಗಿ ಅಸಾಧ್ಯ ಕಾರ್ಯಗಳನ್ನು ಸಾಧ್ಯವಾದವುಗಳನ್ನಾಗಿ ಮಾಡಿ ಇಹದಲ್ಲಿ ಆ ಚಂದ್ರಾರ್ಕವಾದ ಕೀರ್ತಿಯನ್ನು ಪಡೆದು ಪರದಲ್ಲಿ ಪರಮ ಪದವನ್ನೂ ಪಡೆದರೆಂಬುವದರಲ್ಲಿ ಸಂಶಯವೇನು? ಜ್ಞಾನ ಸಂಪಾದನೆಯಿಂದ ದೇವರ ಅನುಗ್ರಹಕ್ಕೆ ಪಾತ್ರರಾಗುವದು ಕಷ್ಟ! ಕರ್ಮಯೋಗದಿಂದಲೂ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗುವದು ಕಷ್ಟ! ಆದರೆ ಭಕ್ತಿಯೋಗದಿಂದ ಅದು ಸುಲಭವೆನ್ನಬಹುದು. ಆದುದರಿಂದಲೇ ಹಿರಿಯರು ಭಕ್ತಿಯೋಗವೇ ಶ್ರೇಷ್ಠವಾದುದೆಂದು ಹೇಳಿರುವರು.

ಶಿವಾಜಿ ಮಹಾರಾಜರ ಗುರುವಾದ ರಾಮದಾಸ ಸ್ವಾಮಿಗೆ ಹುಟ್ಟಿದ ಮೊದಲ್ಗೊಂಡು ಸಂಸಾರದಲ್ಲಿ ಇಷ್ಟವಿರಲಿಲ್ಲ. ಆದರೆ ಅವನ ತಾಯಿ ತಂದೆಗಳು ಅವನನ್ನು ಸಂಸಾರ ಸಾಗರದಲ್ಲಿ ಹಾಕಬೇಕೆಂದು ಬಹು ಪ್ರಯತ್ನಪಟ್ಟರು. ವಿವಾಹವು ನಿಶ್ಚಯಿಲ್ಪಟ್ಟಿತು. ಮಂಗಳ ಸೂತ್ರವನ್ನು ಕಟ್ಟುವ ವೇಳೆಗೆ ಸರಿಯಾಗಿ ಓಡಿಹೋಗಿಬಿಟ್ಟನು. ವನಾಂತರದಲ್ಲಿ ತಪಸ್ಸನ್ನು ಮಾಡಿ ಶ್ರತ್ರಾಣ ದೇವರನ್ನು ಪ್ರತ್ಯಕ್ಷ ಮಾಡಿಕೊಂಡು ಸಾವಿರಾರು ಮಹಾ ಕಾರ್ಯಗಳನ್ನು ಜರಗಿಸಿದನು. ಇದು ಬ್ರಹ್ಮಚರ್ಯದ ಶಕ್ತಿಯಲ್ಲವೆ? ಧೃಡಸಂಕಲ್ಪದ ಶಕ್ತಿಯಲ್ಲವೆ?

ದಾಸಾಗ್ರೇಸರರೂ, ಭವದ್ಭಕ್ತರೂ ಆದ ಕನಕದಾಸರು ಬಹು ದೂರದಿಂದ ದೇವರ ದರ್ಶನಕ್ಕಾಗಿ ದಯಮಾಡಿದರು. ಆದರೆ ಆ ಯಾತ್ರಸ್ಥಳದಲ್ಲಿದ್ದ ಬ್ರಾಹ್ಮಣರು ಅವರನ್ನು ಒಳಕ್ಕೆ ಬಿಡಲಿಲ್ಲ.* ಆಗ ಅವರು ಹೊರಪ್ರಾಕಾರದಲ್ಲಿ ದೇವರನ್ನು ಪ್ರಾರ್ಥಿಸುತ್ತ ನಿಂತರು. ದೇವರು ಅವರ ಭಕ್ತಿಗೆ ಮೆಚ್ಚಿ ಅಲ್ಲೇ ಅವರಿಗೆ ದರ್ಶನ ಕೊಟ್ಟರು. ತನ್ನ ಭಕ್ತರ ಮಹಿಮೆಯನ್ನು ತಾನೊಬ್ಬನೇ ಬಲ್ಲನು ಹೊರತು ಇತರರು ಅರಿಯರು. ಇಂತಹ ಭಕ್ತರಲ್ಲವೆ ಜ್ಞಾನಿಗಳೆನಿಸಿಕೊಳ್ಳುವರು? ಇಂತಹರಲ್ಲವೆ ಬ್ರಹ್ಮಚಾರಿಗಳು? ಇಂತವರನ್ನು ಯತಿಗಳೆಂದು ಅನ್ನುವದರಲ್ಲಿ ಸಂಶಯವೇನು?

ಪಾಠಕ ಮಹಾಶಯರೇ!

ಭಕ್ತಿ ಜ್ಞಾನ ವೈರಾಗ್ಯಗಳಿಗೆ ತೌರೂರಾಗಿದ್ದ ನಮ್ಮ ಭಾರತ ಮಾತೆಯ ಉದರದಲ್ಲಿ ಎಂತೆಂತಹ ಮಹನೀಯರು ಜನಿಸಿದ್ದರು? ನಾವಿನ್ನೂ ಸಾವಿರ ವರ್ಷ ಕಷ್ಟಪಟ್ಟು ಸ್ವಾಮಿಭಕ್ತಾಗ್ರಗಣಿಯೂ, ಜಿತೇಂದ್ರಿಯನೂ ಆದ ಹನುಮನಂತಹ ಬ್ರಹ್ಮಚಾರಿಯನ್ನಾಗಲಿ, ಬ್ರಹ್ಮಜ್ಞಾನಿಯಾದಂಥಾ ವ್ಯಾಸನಂತಹ ಯತಿಯನ್ನಾಗಲೀ ನೋಡಬಲ್ಲೆವೆ? ಈಗ ಇರುವ ಯತಿಗಳ, ಬ್ರಹ್ಮಚಾರಿಗಳ ಸಮುದಾಯದಲ್ಲಿ ಒಬ್ಬ ನಿಜವಾದ ಬ್ರಹ್ಮಚಾರಿಯನ್ನಾಗಲೀ ಒಬ್ಬ ನಿಜವಾದ ಯತಿಯನ್ನಾಗಲೀ ಕಾಣಬಲ್ಲೆವೆ? ಇಂದು ಆ ಮಹಿಮೆಯು ಎಲ್ಲಿ ಹೋಯಿತು? ಎಲ್ಲಿಯೂ ಹೋಗಿಲ್ಲವು. ಬೂದಿ ಮುಚ್ಚಿದ ಕೆಂಡದಂತೆ ಇರುವುದು, ಬೂದಿಯನ್ನು ಊದಿ ಪ್ರಜ್ವಲ ಮಾಡುವರಾರು? ಸದ್ಗುರು! ಹಾ! ಅಂತಹ ಸದ್ಗುರುವೇ ಇಲ್ಲ. ಗುರುಗಳೆಂದು ಹೇಳಿಸಿಕೊಳ್ಳುವ ಯತಿಗಳಾದರೋ ಒಬ್ಬ ಶಿಷ್ಯನ ಬ್ರಹ್ಮಚರ್ಯ ವಿಷಯವನ್ನಾದರೂ ವಿಚಾರಿಸುವರೆ? ಶಿಷ್ಯರು ಮಾತಾಪಿತ್ರು ಶ್ರಾದ್ಧವನ್ನಾದರೂ ಆಚರಿಸುವರೆಂಬದನ್ನಾದರೂ ವಿಚಾರಿಸುವರೆ? ಮಠಕ್ಕೆ ಸೇರತಕ್ಕ ಗುರುದಕ್ಷಿಣೆಯು ತಪ್ಪಿದರೆ ಮಾತ್ರ ವಿಚಾರಿಸುವಂತೆ ತೋರುವದು. ಗುರುಗಳೆಂದು ಹೇಳಿಸಿಕೊಳ್ಳುವ ಮಹನೀಯರು ಶಿಷ್ಯರ ಹೃದಯದಲ್ಲಿ ತುಂಬಿರುವ ಗಾಡಾಂಧಕಾರವೆಂಬ ಅಜ್ಞಾನದಲ್ಲಿ ತಿಲಾಂಶವನ್ನಾದರೂ ತೆಗೆದಿರುವರೆ? ಅನ್ಯ ದೇಶೀಯರಾದ ಯೂರೋಪ್ಯರು ಪರದೇಶವಾದ ನಮ್ಮ ದೇಶಕ್ಕೆ ಬಂದು ತಮ್ಮ ಮತವನ್ನು ಹೇಗೆ ಪ್ರಚುರಪಡಿಸುತ್ತಲಿರುವರೆಂಬುದನ್ನು ಒಂದು ತಡವೆಯಾದರೂ ಚಿಂತಿಸಿರುವರೆ? ನಮ್ಮ ಬಾಲಕ ಬಾಲಕಿಯರು ವಿದ್ಯಾಭ್ಯಾಸದ ಮಹಿಮಾತಿಶಯದಿಂದ ಯಾವ ಫಲ ಹೊಂದುವರೆಂಬುದನ್ನು ಧ್ಯಾನಿಸಿರುವರೆ? ವಾಚಕರೆ! ಕೋಪಿಸಿಕೊಳ್ಳಬೇಡಿರಿ? ಅನ್ಯದೇಶೀಯರು ಸಂಘಗಳನ್ನು ಸ್ಥಾಪಿಸಿಕೊಂಡು ಅದರ ಮೂಲಕ ಅನ್ಯದೇಶಗಳಿಗೆ ಉಪದೇಶಿಗಳನ್ನು ಕಳುಹಿಸಿ ಮತಪ್ರಸಾರಣೆಯನ್ನು ಮಾಡುವಂತೆ,—ನಮ್ಮ ಗುರುಗಳೂ ಮಠಗಳಲ್ಲಿ ಸಂಘವನ್ನು ಮಾಡಿಕೊಂಡು ತಮ್ಮ ಶಿಷ್ಯರು ಇರುವ ಕಡೆಗಳಿಗೆಲ್ಲಾ ಉಪದೇಶಕರನ್ನು ಏಕೆ ಕಳುಹಿಸಬಾರದು? ದೇಶಾಭ್ಯುದಯಕ್ಕೆ ಪತ್ರಿಕೆಗಳು ಹೇಗೆ ಅನುಕೂಲವೊ ಹಾಗೆಯೇ ಪ್ರಸಾರಣೆಗೂ ಪತ್ರಿಕೆಯು ಅನುಕೂಲವಷ್ಟೆ!! ತಮ್ಮ ತಮ್ಮ ಮತಪ್ರಸಾರಣೆಗಾಗಿ ಮಠಗಳಿಂದ ಒಂದೊಂದು ಪತ್ರಿಕೆಯನ್ನೇಕೆ ಹೊರಡಿಸಬಾರದು? ಕೆಲವು ಮಠಾಧಿಕಾರಿಗಳು ಮೇಲೆ ಸೂಚಿಸಿದ ಕಾರ್ಯವನ್ನು ಮಾಡ ತೊಡಗಿರುವುದು ಸ್ತೋತ್ರಾರ್ಹವಾದುದೆಂಬುದರಲ್ಲಿ ಸಂಶಯವಿಲ್ಲವು. ನಮ್ಮ ದೇಶವ್ಯಾವುದು? ನಮ್ಮ ಕುಲವ್ಯಾವುದು? ನಮ್ಮ ಪೂರ್ವಿಕರು ಹೇಗಿದ್ದರು? ನಮ್ಮ ಗತಿಯೇನು? ನಾವು ಪ್ರತಿನಿತ್ಯವೂ ವಶಿಷ್ಟ, ವಿಶ್ವಾಮಿತ್ರ, ವಾಮದೇವ ವಂಶೋತ್ಪನರೆಂದು ಏಕೆ ಹೇಳಿಕೊಳ್ಳುವೆವು? ಕೋಪಿಸಿಕೊಳ್ಳಬೇಡಿರಿ. ಧ್ಯಾನಿಸಿರಿ! ಧ್ಯಾನಿಸಿರಿ!

"ಹನುಮಾನ್."

*ಈಗಲೂ ಕನಕನ ಬಾಗಿಲೆಂದು ಒಂದು ಬಾಗಲಿರುತ್ತದು. ಯಾತ್ರಾರ್ಥಿಗಳಾಗಿ ಹೋದವರು ಮೊದಲು ಆ ಬಾಗಿಲಿನಲ್ಲಿ ದೇವದರ್ಶನ ತೆಗೆದುಕೊಂಡು ಅನಂತರ ಸರಿಯಾದ ಬಾಗಿಲಿಂದ ಒಳಹೊಗುವರು.

ಒಂದು ಚಿತ್ರ.

ಪ್ರಚಂಡ ಮಾರ್ತಾಂಡ ಮಂಡಲದಿಂದ ಎಸೆಯುವ ಕಿರಣಗಳ ತಾಪವನ್ನು ಲೇಶವಾದರೂ ಗಣ್ಯಕ್ಕೆ ತಾರದಂತೆ ಆಮ್ರ, ಬಕುಲ, ಚಂಪಕ ಮೊದಲಾದ ತಪೋವನ ವೃಕ್ಷಗಳು ತಮ್ಮ ಶಾಖಾಕರಗಳಿಂದ ಪರಸ್ಪರ ಆಲಿಂಗನ ಸುಖವನ್ನು ಅನುಭವಿಸುತ್ತಲಿದ್ದುವು. ವೃಕ್ಷ ಶ್ರೇಣಿಯ ನಡುವೆ ಶುದ್ಧ ಸ್ಫಟಿಕಮಯವಾದ ಒಂದು ವೇದಿಕೆಯು ಇದ್ದಿತು. ಈ ಪಾದಪ ಸಮೂಹದ ಹಿಂದಿನ ಭಾಗದಲ್ಲಿ ಒಂದು ವಿಶಾಲವಾದ ಬೈಲು ಪ್ರದೇಶವು. ಇಲ್ಲಿ ತಪೋವನವಾಸಿಗಳಾದುದರಿಂದ ನಿರ್ಭೀತಗಳಾದ ಬಾಲಹರಿಣಿಗಳು ಅತ್ತಿತ್ತ ಓಡ್ಯಾಡುತಲಿದ್ದುವು. ಆಶ್ರಮದ ಗೋವುಗಳಾದರೆ, ಸೂರ್ಯನಾರಾಯಣನ ಪ್ರಖರ ತಾಪವನ್ನು ಸಹಿಸಲಾರದೆ ವೃಕ್ಷರಾಜಿಯ ಶೀತಲ ಛಾಯೆಯಲ್ಲಿ ಬಿದ್ದುಕೊಂಡು ವಿಶ್ರಾಂತಿಯನ್ನು ಪಡೆಯುತ್ತಿದ್ದುವು. ತಪೋವನದ ಲತಿಕಾಕುಂಜದ ಹಿಂಬದಿಯಲ್ಲಿ ಅತೀ ರಮಣೀಯವಾದ ಒಂದು ಸರೋವರವು ದೃಷ್ಟಿಗೋಚರವಾಗುತ್ತಿತ್ತು. ಜಲಾಶಯದ ತಟದಲ್ಲಿ ಒಂದೆರಡು ಶಿಲಾಖಂಡಗಳು ಬಿದ್ದಿದ್ದುವು. ಸ್ಫಟಿಕ ನಿರ್ಮಲ ಜಲದಲ್ಲಿ ಪ್ರತಿಬಿಂಬಿತವಾದ ಗಗನ ಮಂಡಲವು, ಆ ಚಿಕ್ಕ ಸರೋವರದಲ್ಲಿ ತನ್ನ ಅನಂತತೆಯನ್ನು ಬಲತ್ಕಾರದಿಂದ ತುರುಬಿಡುವಂತೆ ಕಾಣಿಸುತಲಿತ್ತು. ಅಲಲ್ಲಿ ವಿಹಂಗಮಗಳ ಶ್ರುತಿಮಧುರವಾದ ಸ್ವರವು ಕೇಳಿಸುತಲಿತ್ತು. ಪ್ರಚಂಡ ಆತಪ ತಪ್ತವಾದ ಸಮಸ್ತ ವಿಶ್ವವು ವ್ಯಾಕುಲ ಚಿತ್ತದಿಂದ ಸಂಧ್ಯಾಶಾಂತಿಯ ಆಗಮನವನ್ನು ನಿರೀಕ್ಷಿಸುತಲಿತ್ತು.

ಈ ಸಮಯದಲ್ಲಿ ತಪೋವನದಲ್ಲಿ ಅತ್ತಿತ್ತ ಶಾಂತಿಯ ಸಾಮ್ರಾಜ್ಯವಿದ್ದಿತು. ಆದರೆ ಅದು ಬಹಳ ಹೊತ್ತು ನಿಲ್ಲುವಂತಿರಲಿಲ್ಲ. ಸ್ವಲ್ಪ ಸಮಯದಲ್ಲೇ, ಆ ವಿಟಪರಾಜಿಯ ಮಧ್ಯದಿಂದ ತನ್ನ ಕೋಮಲ ಹಸ್ತಗಳಲ್ಲಿ ಒಂದು ಶಿಶುವನ್ನು ಹಿಡಿದುಕೊಂಡು ನಿಂತಿದ್ದ ಒಬ್ಬ ತರುಣಿಯು ದೃಷ್ಟಿಗೋಚರವಾದಳು. ರಮಣಿಯ ಸಮೀಪದಲ್ಲಿ ಅಪ್ರತಿಮ ತೇಜಃಪುಂಜನಾದ ಒಬ್ಬ ಯುವಾಪುರುಷನು ನಿಂತಿದ್ದನು. ಅವರಿಬ್ಬರೂ ಮೆಲ್ಲಮೆಲ್ಲನೆ ಆ ಸ್ಫಟಿಕ ವೇದಿಕೆಯ ಕಡೆಗೇನೇ ಕಾಲಿಡುತ್ತಿದ್ದರು. ಆ ಯುವತಿಯ ಗಮನವು—ವೃಕ್ಷ ಸಮೂಹದ ಮಧ್ಯದಿಂದ ಮಂದಮಂದವಾಗಿ ಹರಿಯುವ ಲಾವಣ್ಯ ತಟನಿಯಂತೆ ಮೋಹಕವಾಗಿತ್ತು. ಅವಳು ಅಸಾಧಾರಣ ಸುರಸ್ತ್ರೀಯಾಗಿರಬೇಕೆಂದು ಸಹಜವಾಗಿ ವಿಮರ್ಶಿಸಬಹುದು. ನಿಜವಾಗಿಯೂ ಅವಳು ಮೃತ್ಯುಲೋಕದಲ್ಲಿ ಜನಿಸಿದವಳಲ್ಲ! ಆ ಕಲ್ಪತರೂ ಮಂಜರಿಯು ಸ್ವರ್ಲೋಕವಾಸಿಯಾದ ಅಪ್ಸರ ವೃಂದದ ಶಿರೋ

ಅತ್ತನು. ಅವಳ ಕರದ್ವಯಗಳಲ್ಲಿ ವಿಶ್ರಮಿಸುತ್ತಿದ್ದ ಶಿಶುವಿನ ಆಕೃತಿಯು ನವಪಲ್ಲವಿತಲತಿಕೆಯಂತೆ ಕೋಮಲವಾಗಿದ್ದಿತು. ತನ್ನ ಮಾತೆಯ ಅನುಪಮ ಸೌಂದರ್ಯಾತಿಶಯವನ್ನು—ಅದೇಕೆ ಸಮಗ್ರ ವಿಶ್ವವನ್ನು ನಾಚಿಸುವಂತೆ ಅತೀ ರಮಣೀಯವಾದ ಮೃದುಲ ಸ್ಮಿತವು ಆ ಬಾಲವದನದಲ್ಲಿ ವಿರಾಜಿಸಿತು.

ಸುರತರುಣಿಯು ಸ್ಫಟಿಕ ವೇದಿಕೆಯ ಸಮೀಪಕ್ಕೆ ಬಂದು ಮುಟ್ಟಿದಳು. ಗ್ರೀವಾಭಂಗ ಮಾಡಿ ಒಂದು ಸಲ ಯುವಕನ ಕಡೆಗೆ ಅಪಾಂಗಾವಲೋಕನ ಮಾಡಿದಳು. ಪುನಃ ತನ್ನ ದೃಷ್ಟಿಯನ್ನು ತಿರುಗಿಸಿ ವೇದಿಕೆಯನ್ನು ಹತ್ತಿದಳು. ತರುಣಿಯ ಪಾದವಿನ್ಯಾಸ ಮಾತ್ರದಿಂದ ಆ ಸ್ಫಟಿಕ ಶಿಲೆಯು ಅಪೂರ್ವ ಕಾಂತಿಯನ್ನು ಹೊಂದಿತು! ಸುರಸುಂದರಿಯನ್ನು ನೋಡಿ, ಚಂಡ ಕಿರಣನ ತಾಪದ ಭರದಿಂದ ಸಂತಪ್ತಳಾದ ವನದೇವಿಯು ವಿಶ್ರಾಂತಿಯನ್ನು ಅಪೇಕ್ಷಿಸಿ ಲತಾಗೃಹವನ್ನು ಪ್ರವೇಶಿಸಿದಳೆಂದು ರಸಿಕರು ಅನುಮಾನಿಸಬಹುದು. ಇದ್ದಕ್ಕಿದ್ದ ಹಾಗೆ ಗೀರ್ವಾಣ ತರುಣಿಯು ಅಲ್ಲಿಯೇ ಕೂತುಬಿಟ್ಟಳು. ಯುವಾಪುರುಷನೂ ಅವಳ ಸಮೀಪದಲ್ಲೇ ಇದ್ದನು, ಮಸ್ತಕದ ಪಿಂಗಲ ಜಟೆಯಿಂದಲೂ, ವಿಮಲ ಸ್ಮಶ್ರುಗಳಿಂದಲೂ ತರುಣನ ಆಕೃತಿಯು ಗಂಭೀರವಾಗಿದ್ದಿತು. ನೇತ್ರಯುಗ್ಮವು ತೀವ್ರ-ಕಾಯವು ಸುಂದರ—ಈ ದಿನ ಆ ಪ್ರಶಾಂತ ತಪೋವನದ ಕಡೆಗೆ ಯುವಕನು ಅಪೂರ್ವ ದೃಷ್ಟಿಯಿಂದ ನೋಡುತಲಿದ್ದನು. ಅವನಿಗೆ ಸುಕುಮಾರಿಯ ಹಂಸಗತಿಯಲ್ಲಿಯೂ, ವಿಲಾಸ ಚೇಷ್ಟೆಯಲ್ಲಿಯೂ ಬ್ರಹ್ಮಾನಂದಕ್ಕಿಂತಲೂ ಅಧಿಕ ಆನಂದವಾದಂತೆ ತೋರಿತು.

ಆ ಪ್ರೇಮಯುಗ್ಮವು ಸ್ಫಟಿಕ ವೇದಿಯ ಮೇಲೆ ಸುಖಾಸೀನವಾಯಿತು. ಸೃಷ್ಟಿದೇವತೆಯ ಮೋಹನ—ಸ್ವರ್ಗೀಯ ಬಾಲಿಕೆಯು—ಈ ನಾಟವನ್ನೀಕ್ಷಿಸುತ್ತ ಮಂದಸ್ಮಿತಮಾಡಿತು. ಆ ಬಾಲಹೃದಯವಾದರೆ ಕೇವಲ ನಿರ್ಮಲತೆಯ ಆನಂದ ಭವನವಾಗಿದ್ದಿತು.

"ನಿಜವಾಗಿಯೂ ಈ ಬಾಲಿಕೆಯ ಅವತಾರದಿಂದ ನನ್ನ ಸುಖದ ಪರಮಾವಧಿಯಾಯಿತು." ತರುಣಿಯು ತರುಣನ ಕಡೆಗೆ ಹಾಸ್ಯ ಮುಖದಿಂದ ನೋಡಿ ಮಾತನಾಡಿದಳು.

ಕಿಂಕಿಣಿ ಧ್ವನಿಯಿಂದ ಯುವಕನ ಕರ್ಣಗಳು ತುಂಬಿದವು. ತನ್ನ ಕಟಾಕ್ಷಗಳಿಂದ ಯುವತಿಯ ಲಾವಣ್ಯ ಪಾನಮಾಡುತ್ತ, "ಪ್ರಿಯೇ! ಈ ಬಾಲಿಕೆಯು ನಮ್ಮ ಪ್ರೇಮ ಗ್ರಂಥಿಯು-ನಮ್ಮ ಆತ್ಮದ ನವೀನ ಅವತಾರವೇ ಅಲ್ಲದೆ ಬೇರೇನು?" ಎಂದನು. ಯೌವ್ವನಸ್ಥನ ಮುಖ ಕಮಲದಲ್ಲಿ ಶೀತಲ ಜಲ ಕಣಗಳಿಂದ ತುಂಬಿದ ಮಂದವಾಯು ಲಹರಿಯ ಪ್ರಹಾರವಾಯಿತು. ವೃಕ್ಷಗಳಿಂದ ಜೀರ್ಣಪರ್ಣಗಳು ಸರಸರನೆ ಕೆಳಗಿಳಿದವು. ಶಾಖಾಹಸ್ತಗಳಿಂದ ತರುಲತೆಗಳ ದೃಢಾಲಿಂಗನದ ಪುನರಾವೃತ್ತಿಯಾಯಿತು.

"ಶುದ್ಧ ಪ್ರೇಮದ ಫಲವು ಅತೀ ಮಧುರವಾಗಿರುವುದು! ಶಿಶುವೆಂದರೆ ನಮ್ಮ ಅಬಲೆಯರ ಜೀವನವೇ ಸರಿ! ನನ್ನ ಪ್ರಾಣದ ಆಧಾರ ಈ ಬಾಲಿಕೆಯೇ!"

ಸ್ವರ್ಗೀಯ ಸಂಗೀತವು ಪುನಃ ಸ್ತಬ್ಧವಾಯಿತು.

"ಪ್ರಿಯೇ! ನಿಜವಾಗಿ ಹೇಳಲೆ? ಮಹೇಂದ್ರನ ನಂದನ ವನದಲ್ಲಿ ಕೂಡ ಈ ತರದ ಮಧುರ ಫಲವು ದುರ್ಲಭವೇ!" ಎಂದು ಮುನಿಯು ನುಡಿದನು.

ತರುಣನ ಈ ಶಬ್ದಗಳಿಂದ ವಿಲಕ್ಷಣ ಪರಿಣಾಮವಾಯಿತು. ಮೇನಕೆಯ ವದನ ಮಂಡಲದ ಮಧುರ ಸ್ಮಿತವು ಕುಂದಿತು. ಅದಕ್ಕೆ ಪ್ರತಿಯಾಗಿ ಕೃಷ್ಣಛಾಯೆಯು ಪಸರಿಸಿತು. ಅವಳಿಗೆ ನಂದನ ವನದ ಸ್ಮರಣೆಯಾಯಿತು. ನೇತ್ರಗಳಿಂದ ಪಟಪಟನೇ ಅಶ್ರು ಬಂದು ಮೌಕ್ತಿಕಗಳು ಸುರಿದವು.

"ಸುಂದರಿ!—ಇದೇನು? ಇದೇನು ಹೀಗೆ—?" ತರುಣನಿಗೆ ಅತ್ತಿತ್ತ ದಾರುಣ ಅಂಧಕಾರವಾಗಿ ತೋರಿತು.

ರಮಣಿಯ ಬಾಯಿಂದ ಶಬ್ದ ಹೊರಡುವದಿಲ್ಲ! ಅವಳ ತೊಡೆಯಲ್ಲಿ ವಿಶ್ರಮಿಸುವ ನಿರ್ದೋಷ ಬಾಲಿಕೆಯ ರಮ್ಯ ಲಲಾಟತಟದಲ್ಲಿ ಅಶ್ರು ಬಿಂದು ಪತನದಿಂದ ಆ ಮುಖಮಂಡಲವು ಮಲಿನವಾಯಿತು! ಮೇನಕೆಯ ಹೃದಯ ಸಾಗರವು ಶೋಕ ಲಹರಿಯಿಂದ ಉಕ್ಕಿ ಉಕ್ಕಿ ಬಂದಿತು!

"ಪ್ರಿಯೇ! ಇದೇನು? ನೀನು ಫಕ್ಕನೆ ಈ ರೀತಿ!—" ಮೇನಕೆಯ ನೇತ್ರಗಳಿತ ಬಾಷ್ಪಪ್ರವಾಹವು ಏಕಪ್ರಕಾರವಾಗಿ ಹರಿಯತ್ತಲಿತ್ತು.

"ನನ್ನ ಪ್ರೇಮ ಪುತ್ತಳಿಯನ್ನು ಇಲ್ಲಿಯೇ ತೊರೆದು ಹೋಗಬೇಕಾಯಿತು—" ಶೋಕಾತಿಶಯದಿಂದ ಅಪ್ಸರೆಯ ಮಧುರ ಕಂಠ ಸ್ವರವು ಸದ್ಗದಿತವಾಗಿ ಅರ್ಧದಲ್ಲೇ ನಿಂತಿತ್ತು. ಶೋಕ ಸಮುದ್ರಕ್ಕೆ ಭರತ ಪ್ರಾಪ್ತಿಯಾಯಿತು. ಬಾಲಿಕೆಯು ಕೂಡ ಅಳಲಾರಂಭಿಸಿದಳು.

"ಮೇನಕೆ! ಹೃದಯೇಶ್ವರಿ! ಈ ಹೊತ್ತು ನಿನ್ನ ಜಂಪ್ತೆಯು ಈ ಕಠೋರ ಶಬ್ದಗಳನ್ನು ಹೇಗೆ ಉಚ್ಚರಿಸಿತು? ನಿನ್ನ ಭಾವಾರ್ಥವು ಇನ್ನೂ ನನಗೆ ತಿಳಿಯಲಿಲ್ಲ."

(ಮುಂದೆ ಸಾಗುವುದು.)

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ).

ಸ್ವೇಚ್ಛಾವ್ಯಾಯಾಮಿಯ ಟೀಕೆಗಳು.

ಮೀಸೆ ಬೆಳೆಸಿದರೆ ಗೌಡನಾದಾನೇ?

ಎಂಬ ಭಾವಗರ್ಭಿತವಾದ ನಾಣ್ಣುಡಿಯು ಈಗ ನಾನು ಪ್ರಸ್ತಾಪಿಸುವ ವಿಷಯಕ್ಕೆ ಸಾಧುವಾದದ್ದು. ಇಡೀ ಜಿಲ್ಲೆಯನ್ನಾಳುವ ಕಲೆಕ್ಟರ ದೊರೆಗಳ ಅಧಿಕಾರಕ್ಕೆ ಸಮತುಲ್ಯವಾದ ಸ್ವತಂತ್ರವುಳ್ಳವರೆನ್ನಿಸಿಕೊಳ್ಳುವ ಡಿಪ್ಯುಟಿ ಕಲೆಕ್ಟರ ಪದವಿಗೆ ಯೋಗ್ಯವಾಗುವ ಹಾಗಿನ ದೊಡ್ಡ ಪರೀಕ್ಷೆಗಳನ್ನು ತೇರಿದ ವಿದ್ಯಾವಂತರು ಸಹ ಖಜಾನೆಯ ಲೆಖ್ಖ ಮುಂತಾದ ನಡಿವಳಿಕೆಯನ್ನು ಸ್ವತಹಾ ಕಲಿತು ಅನುಭವ ಮಾಡಿಕೊಳ್ಳಲು ಖಜಾನಾ ಚಾರ್ಜು ಡಿಪ್ಯುಟಿ ಕಲೆಕ್ಟರರ ಕೈಕೆಳಗೆ ನಿಯಮಿತ ಕಾಲ ಕೆಲಸಮಾಡಿ ಯೋಗ್ಯರೆನ್ನಿಸಿಕೊಂಡ ವಿನಾ ಅವರಿಗೆ ಖಜಾನಾ ಉದ್ಯೋಗವು ಕೊಡೋಣಾಗುವದಿಲ್ಲ. ಇಂಥ ಶಿಕ್ಷಣದ ಸದುದ್ದೇಶವನ್ನು ವಾದಪರಿಮುಖ ನಿರ್ಧರಿಸುವದು ಸರ್ವಥಾ ಅಗತ್ಯವಲ್ಲ. ಪರಂತು ಒಂದು ಇಡೀ ತಾಲೂಕಿನ ಆಡಳಿತೆಯನ್ನು ನಡಿಸಲು ನೇಮಕವಾಗುವ ತಹಶಿಲ್‌ದಾರರು ತಾಲೂಕ್ ಖಜಾನೆಯ ಲೆಕ್ಕದ ಅನುಭವವನ್ನು ಡಿಪ್ಯುಟಿ ಕಲೆಕ್ಟರರಂತೆ ಮಾಡಿಕೊಳ್ಳುವ ಮೊದಲು ಅವರನ್ನು ಅಂಥ ಉದ್ಯೋಗಗಳಿಗೆ ನೇಮಿಸುವದು ಸರಿಯಲ್ಲವೆಂಬದು ಗವರ್ನಮೆಂಟಿನವರಿಗೆ ಪರಿಗಣನೀಯವಾಗಿ ಇದುವರೆಗೂ ತೋಚದೆ ಹೋದಲವಕಾಶವಾದದ್ದು ಹೇಗೆಂದು ನಿರ್ಣಯಿಸಲು ಸಾಧ್ಯವಲ್ಲ. ಇತಲಾಗೆ ನಮ್ಮ ಜಿಲ್ಲೆಯ ಒಂದು ತಾಲೂಕ್ ಖಜಾನೆಯ ಹೆಡ್ ಎಕೌಂಟಾಂಟರ ಮಂದೆಬುದ್ಧಿ ಅಥವಾ ಅಯೋಗ್ಯತೆಯ ದೆಸೆಯಿಂದ ವಂಚನಾಸ್ಪದವಾದ ಅಶ್ರದ್ಧೆ ನಡದು ಹಿಂದಿನ ಕಲೆಕ್ಟರವರ ಕಾಲದಲ್ಲಿ ಸಮ್ಮಂಧಪಟ್ಟ ತಪ್ಪುಗಾರರ ಮೇಲೆ ವ್ಯವಹರಣೆ ನಡದು ಯಥಾ ಯೋಗ್ಯವಾದ ಅವಕರಣಕ್ಕೆ ತಹಶೀಲುದಾರರು ಕೂಡಾ ಒಳಗಾದರೆಂಬದು ಹೊರಗೆ ಬೀಳದ ಗುಟ್ಟೆನ್ನಲಾಗದು. ಇತ್ತಲಾಗೆ ಜಿಲ್ಲೆಯ ತಾಲೂಕು ಆಫೀಸುಗಳೊಂದರಲ್ಲಿ ಮತ್ತೊಂದು ಗಲಿಬಿಲಿಯು ಎದ್ದು ತಾಟಕಿಯ ಮುಂದೆ ವಿಶ್ವಾಮಿತ್ರ ಮುನೀಶ್ವರರು ಕಂಪನಪರಿಮುಖ ತಮ್ಮ ಧೈರ್ಯದ ಮಿತನನ್ನು ತೋರ್ಪಡಿಸಿದ ರೀತಿಯಲ್ಲಿ ತಹಶಿಲ್‌ದಾರರು ರಾಮಾ ಹೆದರಬೇಡೆಂದು ಭಯದಿಂದಲೋ ಧೈರ್ಯಾತಿಶಯದಿಂದಲೋ ನಡುಗುವ ಹಾಗೆ ನಟಿಸುವರೆಂಬ ವದಂತಿಯು ಅಲ್ಲಲ್ಲಿ ಹಬ್ಬುತ್ತಾ ಇದೆ. ಇದು ವಾಸ್ತವ್ಯವಾದ ಪಕ್ಷದಲ್ಲಿ ತಮ್ಮ ಮುಂದೆ ಬರುವ ದೊಡ್ಡ ದೊಡ್ಡ ಕಾಗದಗಳಲ್ಲಿ ಇರುವ ಅಂಕೆಗಳ ಅಂದಚಂದವನ್ನಾದರೂ ತಮ್ಮ ಕಣ್ಣಿನಿಂದಲೆ ನೋಡದೆ ಹೆಡ್ ಎಕೌಂಟಾಂಟರ ದಸ್ಕತು ಮಾತ್ರ ಲೆಖ್ಖದ ಬುಡದಲ್ಲಿ ಸ್ಪಷ್ಟವಾಗಿ ತೋರುವದೊ ಎಂಬ ಜಾಗ್ರತೆಯನ್ನು ತಕ್ಕೊಂಡು ಗೊಮಟೆ ಗಣೇಶ್ ಪಿತ್ತಲ್ಕೆದರ್‌ವಾಜಾ ಎಂಬ ವಿಧಿಯನ್ನು ತಹಶೀಲ್‌ದಾರರು ಕೈಕೊಳ್ಳುವದೇ ವಾಡಿಕೆಯಾದ ನಡವಳಿಕೆ ಎಂಬ ಊಹೆಯು ಹುಟ್ಟುವದು ಸಹಜವೇ ಸರಿ. ಇಂಥ ಅಶ್ರದ್ಧೆಯನ್ನು ಪ್ರದರ್ಶಿಸುವ ಉದ್ಯೋಗಸ್ತರು ಇಹಪರಗಳಲ್ಲಿಯೂ ಅಪರಾಧಿಗಳಾಗುವರೆಂಬದು ಸಂದೇಹಾಸ್ಪದವಾದ ಮಾತಲ್ಲ.

ಬೇಟಾ ಜುಮ್ಮಾಜುಮ್ಮಾರೇ ಆಗಲಾರೆ ||
ಆಗಲಾ ತಂಬಾಕು ಲಾ ಲಾ ಲೋಟಾಪಾನೀ
ತಿನೋ ಚಾರೋ ಮಿಲ್ಕೊ ಕರೆ ಹುಕ್ಕಿಕಾ ಮೇಜ್ವಾನಿ ||
ಬೇಟಾ ಜುಮ್ಮಜುಮ್ಮಾರೇ

ಈ ಪದ್ಯದಿಂದ ತೋರುವ ವಿಧಾನವನ್ನು ಮೇಲ್‌ಪಂಗ್ತಿಯಾಗಿ ಇಟ್ಟುಕೊಂಡು ರಾಜಕಚೇರಿಯಲ್ಲಿ ಅಮರುವ ಜನರು ರಾಜಕಾರ್ಯಕ್ಕೆ ಸರ್ವಥಾ ಯೋಗ್ಯರಲ್ಲವೆಂದು ಒಪ್ಪಲು ಯಾರೂ ನಿರಾಕರಿಸಲಾರರು. ಆದರೆ ನಮ್ಮ ದೇಶದಲ್ಲಿ ಒಂದೊಂದು ಸಾರಿ ಮೋಡವೂ ಮಳೆಯೂ ಅಧಿಕವಾಗಿ ಸೂರ್ಯನ ಕಿರಣಗಳು ಮಂದವಾಗುವ ಕಾಲವು ಒದಗಿದಾಗ ಯದ್ಭಾವಿತದ್ಭವಿಷ್ಯತಿ ಎಂಬ ಅವಸ್ಥೆಯು ಜರಗುತ್ತದೆ.

ಅಳಿಯ ಸಂತಾನದ ಇನ್ನೊಬ್ಬ ಕಿರಿಯ ಮೆಂಬರನು.

ಕಳೆದ ಸಂಚಿಕೆಯಿಂದ ಮುಂದರಿಸುದುದು.

ಅನೇಕ ಕವರುಗಳಿರುವ ಒಂದು ಅಳಿಯಸಂತಾನದ ಕುಟುಂಬದಲ್ಲಿ ಪ್ರಕೃತ ರೂಢಿ ಇರುವ ಪ್ರಕಾರ ಹಿರಿಯನಾದವನೇ ಆಸ್ತಿಯ ಕುದ್ರಲೆದಾರನಾಗಿ ಆಡಳಿತೆ ನಡಿಸುವ ಯಜಮಾನನಾಗಿರುವನು. ಆ ಯಜಮಾನನು ಆಸ್ತಿಗಳು ಹುಟ್ಟುವಳಿಯಿಂದ

ಆಸ್ತಿಗೆ ಇರಬಹುದಾದ ಸಾಲದ ಬಡ್ಡಿಯನ್ನು ಯಾ ಕುಟುಂಬಿಕರ ಒಪ್ಪಿಗೆ ಮೇರೆಗೆ ಸಾಲದ ಅಸ್ಲು ಹಣ ಪಾವತಿ ಮಾಡುವ ಉದ್ದಿಶ್ಯ ಕೆಲವು ಐವಜನ್ನು ಪ್ರತ್ಯೇಕ ತೆಗದಿಟ್ಟು, ಬಾಕಿ ಉಳಿದ ಹುಟ್ಟುವಳಿಯ ಆಸ್ತಿಯನ್ನು ಕುಟುಂಬದಲ್ಲಿ ಎಷ್ಟು ಕವರುಗಳಿರುವವೋ ಅದಕ್ಕಿಂತ ಒಂದು ಹೆಚ್ಚು ಪಾಲು ಮಾಡತಕ್ಕದ್ದು. ಈ ಮೇರೆಗೆ ಪಾಲು ಮಾಡಿಕೊಂಡ ಆಸ್ತಿಗಳಲ್ಲಿ ಯಜಮಾನನು ತನಗೂ ತನ್ನ ಕವರಿನವರಿಗೂ ಎರಡು ಪಾಲು ಇಟ್ಟುಕೊಂಡು, ಕುಟುಂಬದ ಇತರ ಕವರಿನವರಿಗೆ ಒಂದೊಂದು ಪಾಲು ಕೊಟ್ಟು ಪ್ರತ್ಯೇಕ ಬಿಟ್ಟು ಬಿಡಬೇಕು. ಕುಟುಂಬದ ಆಸ್ತಿಯ ಸಾಲವು ತೀರ್ಮಾನವಾದ ಕೂಡಲೇ ಆ ಸಾಲದ ತೀರ್ಮಾನಕ್ಕಿಟ್ಟ ಹುಟ್ಟುವಳಿಯನ್ನು ಯಜಮಾನನು ತಾನು ಜೀವಂತನಾಗಿರುವ ವರೆಗೆ ಮಾತ್ರ ತಾನೇ ಹೊಂದತಕ್ಕದ್ದು. ಈ ಪ್ರಕಾರ ಪಾಲು ಪಡಕೊಂಡ ಕವರಿನವರು ಪ್ರತ್ಯಪ್ರತ್ಯೇಕ ಮನವಾರ್ತೆ ಮಾಡಿ ಸ್ವಂತ ಸಾಗುವಳಿ ನಡಿಸಿ, ತಮ್ಮ ಕಾಯಕಷ್ಟದ ಗೌರವವನ್ನು ತೋರಿಸುವದು ಉತ್ತಮ. ಆಯಾಯ ಕವರಿನಲ್ಲಿ ಒಳಕವರುಗಳಿದ್ದರೆ ಅಂಥಾ ಒಳಕವರಿನವರು ತಮಗೆ ಪಾಲು ಕೊಡಬೇಕೆಂದು ತಮ್ಮ ಕವರಿನ ಯಜಮಾನನ ಕೂಡೆ ಕೇಳಿದರೆ, ಮೇಲೆ ಹೇಳಿದ ರೀತಿ ತಮ್ಮ ಕವರಿಗೆ ಬಂದ ಪಾಲಿನ ಆಸ್ತಿಯಿಂದ ತಾನು ಎರಡು ಪಾಲು ಇಟ್ಟುಕೊಂಡು ಬಾಕಿ ಕವರಿನವರಿಗೆ ಒಂದೊಂದು ಪಾಲು ಕೊಡತಕ್ಕದ್ದು. ಹೆಂಗಸರಲ್ಲಿ ಹಿರಿಯರಾದವರು ಯಜಮಾನಿಕೆಗೆ ಬಂದಾಗ್ಯೆ ಸಹ ಇದೇ ರೀತಿ ನಡಕೊಳ್ಳತಕ್ಕದ್ದು. ಕವರು ಪಾಲು ಪಡಕೊಂಡ ತಾವಾಯಿಯವರು ತಮ್ಮ ಕವರಿನವರ ಶುಭಶೋಭನಾದಿಗಳನ್ನು ಯಾ ಇತರ ಕಾರ್ಯಗಳನ್ನು ತಮ್ಮ ಸ್ವಂತ ಖರ್ಚಿನಿಂದಲೇ ತರವಾಡು ಮನೆಯಲ್ಲಿ ನಡಿಸುವಾಗ್ಯೆ ಯಜಮಾನರು ಆತಂಕಿಸಕೂಡದು. ಒಂದು ಕವರಿನವರು ಪೂರಾ ನಾಶವಾಗಿ ಹೋದರೆ, ಆ ಕವರಿಗಿದ್ದ ಆಸ್ತಿಯನ್ನು ಮೇಲೆ ಹೇಳಿದಂತೆ ಪಾಲು ಮಾಡಿಕೊಂಡು ಇಡೀ ಕುಟುಂಬದ ಯಜಮಾನನು ಯಾ ಯಜಮಾನಳು ತಾನು ಎರಡು ಪಾಲು ಇಟ್ಟುಕೊಂಡು ಬಾಕಿ ಉಳಿದ ಆಸ್ತಿಯನ್ನು ಇತರ ಎಲ್ಲಾ ಕವರಿನವರಿಗೂ ಸರಸ ನಿರಸ ಸರಿಯಾಗಿ ಹಂಚಿಕೊಡತಕ್ಕದ್ದು. ಇಡೀ ಕುಟುಂಬದ ಯಜಮಾನನು(ಳು) ಮೃತವಾಗಿಯಾಗಲೀ ಯಾ ಇತರ ಕಾರಣಗಳಿಂದಾಗಲೀ ಆತನ (ಆಕೆಯ) ಆಡಳಿತೆ ರದ್ದಾದರೆ, ಇತರ ಎಲ್ಲಾ ಕವರಿನವರಲ್ಲಿ ಪ್ರಾಯಸ್ಥ ಹಿರಿಯನು ಯಾ ಹಿರಿಯಳು ಯಜಮಾನರಾಗಿ ಆಡಳಿತೆಗೆ ಬರುವಾಗ್ಯೆ, ಮೊದಲು ಆಡಳಿತೆ ನಡಿಸುತ್ತಿದ್ದ ಯಜಮಾನರು ಯಾ ಅವರ ಕವರಿನವರು ತರವಾಡು ಮನೆಯನ್ನು ಅನಂತರ ಬರುವ ಯಜಮಾನರಿಗೆ ಬಿಟ್ಟುಕೊಡತಕ್ಕದ್ದು. ತರವಾಡು ಮನೆಯು ಯಾರ ಪಾಲಿಗೂ ಸೇರದೆ ಕುಟುಂಬದ ಎಲ್ಲಾ ಕವರಿನವರಿಗೂ ಸಮುಷ್ಟಿಯಾದ ಹಕ್ಕುಳ್ಳದ್ದಾಗಿರತಕ್ಕದ್ದು. ಈ ಪ್ರಕಾರ ಪಾಲು ಪಡಕೊಂಡ ಯಜಮಾನನು ತಾನು ಆರ್ಜಿಸಿದ ಆಸ್ತಿಯನ್ನು ತನ್ನ ಇಚ್ಛಾನುಸಾರ ಮಾಡುವಾಗ್ಯೆ ಯಾರೊಬ್ಬರು ಆತಂಕಿಸಕೂಡದು. ಆ ಪ್ರಕಾರ ತಾನು ಆರ್ಜಿಸಿದ ಆಸ್ತಿಯನ್ನು ಏನೊಂದು ವಿಲೆವಾರಿ ಮಾಡದೆ ಯಜಮಾನರಾದವರು ಮೃತವಾದರೆ ಆತನು ಅರ್ಜಿಸಿದ ಆಸ್ತಿಗಳೆಲ್ಲಾ ಅತನ ಯಾ ಆಕೆಯ ಕವರಿಗೆ ಹೋಗತಕ್ಕದ್ದು. ಕುಟುಂಬದ ಯಾವ ಕವರಿನವರಿಗಾದರೂ ಇಡೀ ಕುಟುಂಬದ ಆಸ್ತಿಯಿಂದ ತಮ್ಮ ಕವರಿಗೆ ಬಂದ ಆಸ್ತಿಯನ್ನು ಸಾಲ ವಗೈರೆ ಪರಾಧೀನಗಳಿಗೆ ಗುರಿಪಡಿಸಕೂಡದು. ಕುಟುಂಬದ ಪ್ರಯೋಜನಾರ್ಥವಾಗಿ ಯಜಮಾನರಿಗೆ ಸಾಲ ಮಾಡುವ ಅಗತ್ಯ ಬಿದ್ದಾಗ್ಯೆ, ಆ ಕುಟುಂಬದ ಎಲ್ಲಾ ಕವರಿನ ಪ್ರಾಯಸ್ಥ ಮೆಂಬರರಲ್ಲಿ ಹೆಚ್ಚಿನ ಪಕ್ಷದವರು ಆ ಹೊಣೆಪತ್ರಕ್ಕೆ (ಸಾಲದ ಭದ್ರತೆಗೆ) ಶೇರತಕ್ಕದ್ದೆಂಬ ಇವೇ ಮೊದಲಾದ ಅಳಿಯಸಂತಾನದ ಕಟ್ಟಿನ ಬಂಧನಗಳಿಗೆ ಆಧೀನರಾಗಿರತಕ್ಕದ್ದು. ಈ ರೀತಿ ಮಾಡುವದರಿಂದ ಅಳಿಯಸಂತಾನದ ಆಸ್ತಿಯನ್ನು ತಕ್ಕಮಟ್ಟಿಗೆ ಇದ್ದ ರೀತಿಯಲ್ಲಿಯೇ ಇರಗೊಳಿಸಬಹುದೆಂದು ನಾನು ಅಭಿಪ್ರಾಯ ಪಡುತ್ತೇನೆ. ಇದರ ಮುಖ್ಯ ಸಾರಾಂಶವು ಕವರಿನ ಜೀವನಾಂಶವೆಂದಾಗುತ್ತದೆ.

ಅಳಿಯಸಂತಾನ ಅಳಿಯ.

ಸ್ವದೇಶಾಭಿಮಾನಿ ಪತ್ರಾಧಿಪರೇ,

ನಿಮ್ಮ ದಶಂಬರ ತಾ. 9ನೇ ಸಂಚಿಕೆಯ 7ನೇ ಪುಟದಲ್ಲಿ ಶ್ರೀ ಕಟಿಲ ದುರ್ಗಾಪರಮೇಶ್ವರಿ ಅಮ್ಮನವರ ಭಜಕರು ಕೇಳಿದ ಪ್ರಶ್ನೆಯನ್ನು ಕುರಿತು ಬರೆಯುವ ಈ ಕೆಳಗಿನ ಉತ್ತರವನ್ನು ಛಾಪಿಸಲು ಎಡೆಗೊಡಬೇಕಾಗಿ ಪ್ರಾರ್ಥಿಸುತ್ತೇನೆ.

ಬಿಲ್ಲವನು ಕಟಿಲ ದೇವಸ್ಥಾನದ ಅಂಬಲಕ್ಕೆ ಪ್ರವೇಶಿಸಿದ ಕಾರಣ, ಶುಮಾರು 175 ರೂಪಾಯಿ ಖರ್ಚಿನಿಂದ ಪುಣ್ಯಾಹವ ಕರ್ಮಗಳನ್ನು ಆಚರಿಸಿತೆಂಬ ವಿವರವನ್ನು ಕೇಳಿ ತದ್ವಿಷಯ ನನಗೆ ವಿಶೇಷ ಚರ್ಚಿಸಲಿಕ್ಕೆ ಕಾರಣವಿಲ್ಲದಿದ್ದರೂ ಕೆಲವು ವಿಷಯಗಳ ಕುರಿತು ಚರ್ಚಿಸದಿರಲಿಕ್ಕೆ ಉಪಾಯವಿಲ್ಲದ್ದರಿಂದ ಈ ದಕ್ಷಿಣ ಕನ್ನಡ ಜಿಲ್ಲಾ ಬ್ರಾಹ್ಮಣಾಚಾರವನ್ನು ಕುರಿತು ಶಾಸ್ತ್ರನ್ಯಾಯ ಪ್ರಕಾರ ವಿವರಿಸುವೆನು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬ್ರಾಹ್ಮಣಾಚಾರವು ಕೇರಳಾಚಾರಕ್ಕೂ ಬ್ರಹ್ಮಸೃಷ್ಟಿಯಲ್ಲಿರುವ ವಿದೇಶಾಚಾರಕ್ಕೂ ಕೇವಲ ವಿರುದ್ಧವಾಗಿ ಕಾಣುತ್ತದೆ. ಶ್ರೀ ಶಂಕರಾಚಾರ್ಯ ಸಂಕಲ್ಪವಾಗಿರುವ ಚತುಷಷ್ಠಿ ಕೇರಳ ಅನಾಚಾರ ಧರ್ಮಗಳಲ್ಲಿ ಬ್ರಾಹ್ಮಣರು ಸಂಕೀರ್ಣವರ್ಣಗಳಾಗಿರುವ ಕೆಲವು ಜಾತಿಯವರನ್ನು ದೂರಮಾಡಿರುವರೆಂಬದು ಈಗಲೂ ಕಂಡುಬರುತ್ತದೆ. ಆದರೆ ಈ ಮಾರೀಕರಣವು ಬಿಲ್ಲವರೆಂಬ ಒಂದು ಜಾತಿಗೆ ಮಾತ್ರವಲ್ಲ. ಬಿಲ್ಲವರು, ಮೊಗೇರರು, ಕಮ್ಮಾರರು, ಅಕ್ಕಸಾಲಿಗರು, ಬಡಗಿಯರು, ಕಂಚಿಕಾರರು ಮುಂತಾದವರನ್ನು ಸಹಾ ಬ್ರಾಹ್ಮಣರ ದೇವಾಲಯಕ್ಕೆ ಬರಲಿಕ್ಕೆ ಕೂಡದೆಂಬ ಅನಾಚಾರ ಧರ್ಮ ಸ್ಥಾಪನೆಯು ಈಗಲೂ ಕಂಡುಬರುತ್ತದೆ. ಆದರೆ ಕೇರಳವನ್ನು ಬಿಟ್ಟು ಇತರ ದೇಶಗಳಲ್ಲಿ ಈ ಪದ್ಧತಿಯು ಕಾಣುವದಿಲ್ಲವೆಂಬದು ಈ ಕೇರಳಕ್ಕೆ ಸಮೀಪಿಸಿರುವ ಗೋಕರ್ಣ ಕ್ಷೇತ್ರದ ಆಚರಣೆಯನ್ನು ನೋಡಿದರೆ ವಾಚಕರಿಗೆ ಸುಲಭವಾಗಿ ತಿಳಿದೀತು. ಅಲ್ಲಿಯ ಆಚಾರವು—ಬಿಲ್ಲವರಿಗೆ ಗರ್ಭಗೃಹದ ಒಳಗೆ ಮಾತ್ರ ಪ್ರವೇಶ ವಿರೋಧವಲ್ಲದೆ ದೇವಸ್ಥಾನಕ್ಕೆ ಹೋಗಲಿಕ್ಕಾಗಲೀ, ಕೋಟಿತೀರ್ಥ ಸ್ನಾನಕ್ಕಾಗಲೀ, ಬ್ರಾಹ್ಮಣರ ಗೃಹಪ್ರವೇಶಕ್ಕಾಗಲೀ ಯಾವ ನಿರ್ಬಂಧವೂ ಇಲ್ಲವೆಂಬದಾಗಿ ನಾನು ನಿಷ್ಪಕ್ಷವಾಗಿ ಹೇಳುವೆನು. ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಚರಿಸುವ ಧರ್ಮವನ್ನು ನೋಡಿದರೆ ಮೇಲೆ ವಿವರಿಸಿದ ಉಭಯ ಸ್ಥಳಾಚಾರಗಳಿಗೂ ವಿರೋಧವಾಗಿ ಕಾಣುತ್ತದೆ. ಇದು ಯಾವ ಶಾಸ್ತ್ರ ನ್ಯಾಯವೋ? ಯಾವ ದೇಶಾಚಾರ ಪದ್ಧತಿಯೋ? ಯಾವ ಮತ್ಸರವೋ? ಎಂಬದು ತಿಳಿದುಬರುವದಿಲ್ಲ.

ಬಿಲ್ಲವರಿಗೆ ಸಮಾನ ವರ್ಣಗಳಾಗಿರುವ ಮೇಲೆ ವಿವರಿಸಿದ ಸಂಕೀರ್ಣ ಜಾತಿಗಳು ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣ ದೇವಾಲಯಗಳಲ್ಲಿ ಪ್ರವೇಶಿಸಿದರೆ ಪುಣ್ಯಾಹವ ಕರ್ಮಗಳನ್ನು ಆಚರಿಸದೆ ಇರುವ ಕಾರಣವು ಏನೆಂಬದು ನನಗೆ ತರ್ಕಿಸಲಿಕ್ಕೆ ಕಾರಣವಾಗಿರುತ್ತದೆ. ಈ ದಕ್ಷಿಣ ಕನ್ನಡ ಜಿಲ್ಲೆಯು ಕೇರಳವೇ ಹೊರ್ತು ವಿದೇಶವಲ್ಲವೆಂಬದು ತದ್ದೇಶವಾಸಿಗಳಾದ ಬ್ರಾಹ್ಮಣರಿಗೆ ವಿದಿತವಾಗದಿರುವದರಿಂದ ನಾನು ಆಶ್ಚರ್ಯಪಡುತ್ತೇನೆ. ಅವರವರ ಜನ್ಮಭೂಮಿಯ ಆಚರಣೆಯು ಅವರವರಿಗೆ ತಿಳಿಯದಿರುವ ಕಾರಣಕ್ಕೆ ನಾನು ಆಶ್ಚರ್ಯಪಡುವದು ಅಯೋಗ್ಯವಾಗಿ ಕಾಣುವದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಗೆ ತುಳು ದೇಶವೆಂಬ ಪೂರ್ವಿಕ ನಾಮವಿರುತ್ತದೆ. ಆದರೆ ತುಳು, ಮಲೆಯಾಳ ಎಂಬ ಎರಡು ಭಾಷೆಗಳ ವರ್ಣಾಕ್ಷರಗಳನ್ನು ನೋಡುವಾಗ್ಯೆ ಏಕರೀತಿಯಾಗಿಯೂ ಬೇರೆ ಕೆಲವು ಆಚಾರಗಳನ್ನು ಪರಿಯಾಲೋಚಿಸುವಾಗ್ಯೆ ಸಹಾ ಕೇರಳಾಚಾರಕ್ಕೆ ವಿರುದ್ಧವಾಗಿ ವಿಶೇಷ ಯಾವದೂ ಕಂಡುಬರುವದಿಲ್ಲ.

ಮೇಲೆ ವಿವರಿಸಿದ ಜಾತಿ ವಿವರವನ್ನು ಕುರಿತು ಕೆಲವು ಶಾಸ್ತ್ರಾಧಾರಗಳನ್ನು ಇಲ್ಲಿ ವಿವರಿಸುವೆನು.

ಶ್ಲೋಕ|| ರಜಕಶ್ಚರ್ಮಕಾರಶ್ಚ ನಟೋ ಬುರುಡ ಏವಚ |
ಕೈವರ್ತಭೇದ ಬಿಲ್ವಾಶ್ಚ ಸ್ವರ್ಣಕಾರಸ್ತು ಸೌಚಿಕಃ ||
ಕಾರುಕೋಲೋಹಕಾರಶ್ಚ ಶಿಲಾಭೇದೀಚನಾಪಿತಃ |
ತಚ್ಚಕಸ್ತಿಲಯಂತ್ರೀಚ ಶ್ವಾನಶ್ಚಕ್ರೀ ತಥಾ ಧ್ವಜೀ ||
ಏತೇ ಷೋಡಶಧಾಃಪ್ರೋಕ್ತಾ ಚಂಡಾಲಾಗ್ರಾಮವಾಸಿನಾ ||

ಶ್ಲೋಕ|| ಶೌಂಡಿಕತಚ್ಚಕಾದ್ಯಾಯೋ ಪರೇಲವಣಕೃಮ್ಮುಖಾಃ |
ಚಂಡಾಲ ಶಬ್ದವಾಚ್ಯಾಸ್ತೇ ವಿಜ್ಞೇಯಾ ಇತಿ ಜ್ಯೋತಿಷೇ ಉಕ್ತಂ ||

ಶ್ಲೋಕ|| ಆ ಚಂಡಾಲಸ್ತು ಸಂಕೀರ್ಣಾ ಅಮ್ಮಷ್ಟ ಕರಣಾದಯಾ |

ಮತ್ತು ವೈದ್ಯನಾಥ ದೀಕ್ಷೆ, ವಿಜ್ಞಾನೇಶ್ವರಿ ಮುಂತಾದ ಗ್ರಂಥಗಳಲ್ಲಿ ಸಹಾ ಮೇಲೆ ಬರದ ಪ್ರಮಾಣ ವಚನಕ್ಕೆ ಅನುಕೂಲವಾಗಿ ವಿವರಿಸಿದ್ದನ್ನು ಕುರಿತು ಆ ಗ್ರಂಥಗಳನ್ನು ಪರಿಶೋಧಿಸಿದರೆ ಸುಲಭವಾಗಿ ಕಂಡುಬರುವದು. ಹೀಗಿರುತ್ತಾ ಶ್ರೀ ಕಟಿಲ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನಕ್ಕೆ ಮೊಗೇರರ ಸಂಗಡ ಅವರ ಹೇಳಿಕೆ ಪ್ರಕಾರ ಪ್ರವೇಶಿಸಿದ ಬಿಲ್ಲವನೊಬ್ಬನಿಂದಲೇ ಪ್ರಾಯಶ್ಚಿತ್ತಕ್ಕಾಗಿ ಹಣ ವಸೂಲು ಮಾಡಿದ ಸಂಗತಿಯನ್ನು ಕುರಿತು, ಶಾಸ್ತ್ರನ್ಯಾಯ ಪ್ರಕಾರ ಮಾಡಿದ್ದಾದರೆ ಮತ್ಸ್ಯಘಾತಕರಾದ ಮೊಗೇರರಿಂದಲೂ ಪ್ರಾಯಶ್ಚಿತ್ತ ತೆಗದುಕೊಳ್ಳದಿರಲಿಕ್ಕೆ ಕಾರಣವೇನೆಂಬದು ನನಗೆ ತಿಳಿಯದು.

ಈ ವಿಷಯದಲ್ಲಿ ನನಗೆ ವಿಷದವಾಗಿ ತಿಳಿಸಲಿಕ್ಕೆ ನಮ್ಮ ಶ್ರೀ ದುರ್ಗಾಪರಮೇಶ್ವರಿಯಮ್ಮನವರ ಭಜಕರು ತಮ್ಮ ಪತ್ರಮೂಲಕ ಉತ್ತರಕೊಡುವರೆಂಬದಾಗಿ ಅಪೇಕ್ಷಿಸುವೆನು.

ಪುಣ್ಯಾಹವ ಕರ್ಮದ ಖರ್ಚಿನ ಆಕ್ಷೇಪದ ಕುರಿತು ಮುಂದಿನ ಸಂಚಿಕೆಯಲ್ಲಿ ವಿವರವಾಗಿ ತಿಳಿಸುವೆನು.

ನಿಷ್ಪಕ್ಷಪಾತಿ.

ವಿದೇಶ ವೃತ್ತಾಂತ.

ಚೀನ ದೇಶದ ನೌಕಾವಳಿಯವರು ೨೬೦೦ ಟನ್ ಭಾರ ಹಿಡಿಯಬಹುದಾಗುವ "ಕ್ರೂಶ್ಯರ್" ಎಂಬ ಒಂದು ಯುದ್ಧನಾವೆಯನ್ನು ಕಟ್ಟಿಸುವರೆ ನ್ಯೂಯೋರ್ಕಿನ ಹಡಗು ಕಟ್ಟುವ ಕಂಪೆನಿಯೊಂದಕ್ಕೆ ಕಂಟ್ರಾಕ್ಟಿಗೆ ಕೊಟ್ಟಿರುವರು.

ಜರ್ಮನಿಯಲ್ಲಿ ಹಿಡಿಯಲ್ಪಟ್ಟಂಥಾ ಕೆಪ್ಟನ್ ಟ್ರೆಂಚ್ ಮತ್ತು ಲೆಪ್ಟನೆಂಟ್ ಬ್ರ್ಯಾಂಡನ್ ಎಂಬ ಇಬ್ಬರು ಇಂಗ್ಲಿಂಷ್ ಗೂಢಾಚಾರರ ತನಖಿಯು ತಾರೀಕು ೨೨-೨೩ರಲ್ಲು ಜರ್ಮನಿಯ ಲಿಪ್ಸಿಗ್ ಕೋರ್ಟಿನಲ್ಲಿ ನಡೆಯಿತು. ತಾವು ಜರ್ಮನಿಯ ಉತ್ತರ ಪ್ರದೇಶದ ಆಯಾ ಸ್ಥಳಗಳನ್ನು ಸಂದರ್ಶಿಸಿ ಆಯಾ ಸ್ಥಳಗಳಲ್ಲಿರುವ ದೇಶದ ರಕ್ಷಣಾರ್ಥವಾದ ಕೋಟೆ ಮೊದಲಾದವುಗಳ ಚಿತ್ರಗಳನ್ನು ತೆಗೆಯುತ್ತಾ ಅವುಗಳ ವರ್ತಮಾನಗಳನ್ನು ಸಂಗ್ರಹಿಸುತ್ತಾ ಇದ್ದದ್ದು ಹೌದು ಎಂಬದಾಗಿ ಈ ಇಬ್ಬರೂ ಒಪ್ಪಿಕೊಂಡರು. ಆದರೆ ಈ ಸಮಾಚಾರವೆಲ್ಲವನ್ನು ತಮ್ಮಿಬ್ಬರಗೋಸ್ಕರ ಅಲ್ಲದೆ ಮೂರನೇಯವನೊಬ್ಬನಿಗೆ ತಿಳಿಸುವ ಬಗ್ಯೆ ತಾವು ಸಂಗ್ರಹಿಸಿದಲ್ಲ ಎಂಬದಾಗಿ ವಾದಿಸಿದರು. ಇವರು ಸಂಗ್ರಹಿಸಿದ್ದಂಥಾ ವಿವರವೆಲ್ಲವು ಯುದ್ಧ ಸಮಯದಲ್ಲಲ್ಲದೆ ಬೇರೆ ಯಾವ ಸಂದರ್ಭದಲ್ಲಿಯಾದರೂ ಪ್ರಯೋಜನಕಾರಿಯಲ್ಲ ಎಂಬದು ನಿಸ್ಸಂಶಯವೆಂತ ಕೋರ್ಟಿನವರು ಅಭಿಪ್ರಾಯ ಪಟ್ಟು ಈ ಇಂಗ್ಲಿಷ್ ಗೂಡಾಚಾರರಬ್ಬರಿಗೂ ನಾಲ್ಕು ನಾಲ್ಕು ವರ್ಷದ ಕೋಟೆಯ ಸಜೆಯುನ್ನು ವಿಧಿಸಿರುವರು.

ಅಮೇರಿಕದ ಕೋಟ್ಯಾಧಿಪರಾದ ಮೆ. ರೊಕ್‌ಫೆಲ್ಲರರವರು ಚಿಕಾಗೋ ಯುನಿವರ್ಸಿಟಿಗೆ ಎರಡು ಮಿಲಿಯ ಪವನುಗಳನ್ನು ಉಚಿತವಾಗಿ ಕೊಟ್ಟಿರುವರು. ಒಟ್ಟಿಗೆ ಇವರು ಕೊಟ್ಟಂಥಾ ವಂತಿಗೆ ೭ ಮಿಲಿಯ ಪವನುಗಳಾಗುತ್ತದೆ.

ಪ್ರಕೃತ ಹಿಂದೂಸ್ಥಾನದಲ್ಲಿ ಬೆಳದಿರುವ ಅಸಂತೃಪ್ತಿಯನ್ನು ಕುರಿತು ಮೆ. ಬೆಪಿನ್‌ಚಂದ್ರಪಾಲರವರು ಇಂಗ್ಲಾಂಡಿನ ಕೆಕ್ಸಟನ್ ಮಂದಿರದಲ್ಲಿ ಎರಡು ಭಾಷಣಗಳನ್ನು ಕೊಟ್ಟರು. ಹಿಂದೂಸ್ಥಾನದ ರಾಷ್ಟ್ರೀಯ ತೀಕ್ಷ್ಣ ಪಕ್ಷದವರ ಬಲತ್ಕಾರ ಮತ್ತು ಜುಲುಮಿನ ಅನುಸರಣೆಯನ್ನು ತಾನೆಂದೂ ಒಲ್ಲೆನೆಂದು ಹೇಳಿದ್ದಲ್ಲದೆ ಮೋರ್ಲೆ ಪ್ರಭುಗಳು ತಮ್ಮ ಆಡಳಿತೆಯಲ್ಲಿ ತೋರ್ಪಡಿಸಿದ ರಿಯಾಯತಿಯೊಂದಿಗೆ ಕಠಿಣ ಶಾಸನಗಳ ಜ್ಯಾರಿ ನಡಿಸಿದ್ದು ಅನುಚಿತವೆಂತ ವಾದಿಸಿದರು. ಕೂಡದ ಸಭೆಯಲ್ಲಿ ಭಾರತೀಯ ವಿದ್ಯಾರ್ಥಿಗಳೂ ಮೆಸರ್ಸ್ ಮೆಕರ್ನೆಸ್, ಲುಪ್ಟನ್ ಪಾರ್ಲಿಮೆಂಟಿನ ಮೆಂಬರರಾದ ಬ್ಯಾಲ್ಸ್ ಮೊದಲಾದ ಆಂಗ್ಲೇಯರೂ ಹಾಜರಿದ್ದರು.

ಪದಚ್ಯುತರಾದ ಮಾನುವೇಲ್ ರಾಜರವರು ಬರುವ ವರ್ಷ ಒಕ್ಸ್‌ಫೋರ್ಡು ಸರ್ವ ವಿದ್ಯಾನಿಲಯವನ್ನು ಸಂದರ್ಶಿಸುವರೆಂದೂ ಆಯಾ ರಾಜಾಡಳಿತೆ ಕ್ರಮಗಳನ್ನು ತಿಳಕೊಳ್ಳುವ ಬಗ್ಯೆ ದಕ್ಷಿಣ ಅಫ್ರಿಕ ಮೊದಲಾದ ಬ್ರಿಟಿಷ್ ವಸಾಹತಿಗಳನ್ನೆಲ್ಲಾ ಸುತ್ತಿಕೊಂಡು ಬರುವರೆಂದೂ ತಿಳಿದು ಬರುತ್ತದೆ.

ಕಲ್ಕತ್ತಾ ಸಿಟಿ ಕೊಲೇಜಿನ ಮುಖ್ಯ ಉಪಾಧ್ಯಾಯರಾದ ಹೇರಂಬ ಚಂದ್ರಮಿತ್ರರವರು ಇದೇ ತಿಂಗಳ ತಾರೀಕು ೨೩ರಲ್ಲು ಹಿಂದೂಸ್ಥಾನದ ಸೆಕ್ರಿಟರಿಗಳಾಗಿರುವ ಕ್ರೂ ಪ್ರಭುಗಳವರ ಭೇಟಿಯನ್ನು ಅಂಗ್ಲಾಳದಲ್ಲಿ ಪಡದರು.

ಉತ್ತರ ಹಿಂದೂಸ್ಥಾನ.

ಎಮ್. ಎ. ಪರೀಕ್ಷೆ ಈ ಮೊದಲೇ ಉತ್ತೀರ್ಣರಾಗಿದ್ದ ಮಿಸ್ ಬಿ. ಎ. ಇಂಜಿನೀರ್ ಎಂಬ ಪಾರ್ಶಿ ಸ್ತ್ರೀಯು ಮುಂಬಾಯಿ ಯುನಿವರ್ಸಿಟಿಯಲ್ಲಿ ಎಲ್. ಎಲ್. ಬಿ. ಎಂಬ ವಕೀಲಿ ಪರೀಕ್ಷೆಯಲ್ಲಿ ಪಾಸಾಗಿರುವಳು. ವಕಾಲತು ಸಂಬಂಧವಾಗಿ ಮುಂಬಯಿ ಪ್ರಾಂತ್ಯದಲ್ಲಿ ಎಲ್. ಎಲ್. ಬಿ. ಡಿಗ್ರಿಯನ್ನು ಹೊಂದಿದವಳು ಇವಳೊಬ್ಬಳೇ. ಮಿಸ್ ಕೊರ್ನೇಲಿಯ ಸೊರಾಬ್ಜಿ ಎಂಬ ಇನ್ನೊಬ್ಬ ಪಾರ್ಶಿ ಸ್ತ್ರೀಯು ಇವಳಿಗಿಂತ ಮೊದಲೇ ವಕಾಲತು ಪರೀಕ್ಷೆ ಪಾಸಾಗಿ ಕಲ್ಕತ್ತೆಯಲ್ಲಿ ವ್ಯವಹರಿಸುತ್ತಿರುವಳು. ಹೀಗೆ ವಕಾಲತು ಪರೀಕ್ಷೆಯಲ್ಲಿ ಪಾಸಾದ ಇಬ್ಬರು ಪಾರ್ಶಿ ಸ್ತ್ರೀಯರು ಮಾತ್ರವೇ ಇಡೀ ಹಿಂದುಸ್ಥಾನದಲ್ಲಿರುತ್ತಾರೆ.

ಸರ್ ವಿಲ್ಲಿಯಂ ವೆಡ್ಡರ್ಬರ್ನರವರಿಗೆ ಮುಂಬಾಯಿಯ ರಿಫನ್ ಕ್ಲಬ್ಬಿನ ಮೆಂಬರರು ಕಳದ ತಾರೀಕು ೨೧ನೇ ಬುಧವಾರ ದಿನ ಔತಣಕ್ಕೆ ಆಮಂತ್ರಿಸಿದ್ದರು. ಎಲ್ಲಾ ಜಾತಿ ಮತಸ್ಥ ಆಯಾ ಗೃಹಸ್ಥರು ಈ ಔತಣಕ್ಕೆ ಅತಿಥಿಗಳಾಗಿ ಕರೆಯಲ್ಪಟ್ಟಿದ್ದರಲ್ಲದೆ ಮುಂಬಾಯಿ ಹ್ಯಾಕೋರ್ಟು ಜಡ್ಜರು ನ್ಯಾಯವಿಧಾಯಕ ಸಭೆಯ ಮೆಂಬರುಗಳು ಕೆಲವು ಸರಕಾರಿ ಹುದ್ದೆದಾರರುಗಳೂ ಈ ಔತಣಕ್ಕೆ ದಯ ಮಾಡಿದ್ದರು.

ಜರ್ಮನ್ ಸರಕಾರದ ಪರವಾಗಿ ಹಿಂದುಸ್ತಾನದ ಆಡಳಿತೆ ಕ್ರಮಗಳನ್ನು ಪರೀಕ್ಷಿಸುವ ಜರ್ಮನ್ ಸಿವಿಲ್ ಆಫಿಸರರಾದ ಡಾಕ್ಟಾರ್ ಬುಡ್ಡಿಂಗ್ ಎಂಬವರು ಕಳದ ವಾರದಲ್ಲಿ ಬರ್ಮದತ್ತ ಕಡೆ ಹೋಗಿರುವರು.

ಇದೇ ತಿಂಗಳ ತಾರೀಕು ೧೭ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದುಸ್ಥಾನದಲ್ಲಿ ೮೫೯೯ ಮಂದಿ ಪ್ಲೇಗಿನಿಂದ ಸತ್ತರು. ಅಂದರೆ ಮುಂಬಾಯಿಯಲ್ಲಿ ೯೩೧; ಮದ್ರಾಸಿನಲ್ಲಿ ೩೪೨; ಬಂಗಾಳದಲ್ಲಿ ೭೨೪; ಯುನೈಟೆಡ್ ಪ್ರೊವಿನ್ಸಿನಲ್ಲಿ ೨೫೫೨; ಪಂಜಾಬಿನಲ್ಲಿ ೧೦೧೧; ಬರ್ಮದಲ್ಲಿ ೧೪೦ ಮರಣಗಳಾಯಿತು.

ಹಿಂದು ಮತ್ತು ಮಹಮ್ಮದಿಯರೊಳಗೆ ಅನ್ಯೋನ್ಯವನ್ನುಂಟು ಮಾಡಲು ಪ್ರಯತ್ನಿಸುವ ಸಭೆಯು ಇದೇ ತಿಂಗಳ ತಾರೀಕು ೩೧ರಲ್ಲು ಅಲ್ಲಹಾಬಾದಿನಲ್ಲಿ ಜರಗುವದು. ಆಘಾಖಾನರವರೂ, ಸರ್. ವಿಲ್ಲಿಯಂ ವೆಡ್ಡರ್ಬರ್ನರವರೂ ಸಭೆಯಲ್ಲಿ ಹಾಜರಿದ್ದು ಸಭಾ ಕಾರ್ಯಗಳನ್ನು ನಡಿಸುವರು.

ತಾರೀಕು ೨೫ನೇ ಪ್ರಾತಃಕಾಲ ಸರ್ ವೆಡ್ಡರ್ಬರ್ನರವರು ಅಲ್ಲಹಾಬಾದಿಗೆ ತಲಪಿದರು. ಕೊಂಗ್ರೆಸಿನ ಸ್ವಾಗತ ಕಮಿಟಿಯ ಪ್ರೆಸಿಡೆಂಟರಾದ ಪಂಡಿತ್ ಸುಂದರ್ ಲಾಲ್, ಸೆಕ್ರಿಟರಿ ಮೊದಲಾದವರೂ, ಕೊಂಗ್ರೆಸಿಗೆ ಬಂದಿದ್ದ ಆಯಾ ಸ್ಥಳಗಳ ಪ್ರತಿನಿಧಿಗಳೂ ಸರ್ ವೆಡ್ಡರ್‌ಬರ್ನರವರನ್ನು ಬಹಳ ಸಾಭಿಮಾನದಿಂದ ಉಪಚರಿಸಿದರು. ಸರ್ ವಿಲ್ಲಿಯಮರಿಗೆ ಪುಷ್ಪಮಾಲೆಯನ್ನು ಹಾಕಿ, ವಂದೇ ಮಾತರಂ, ಭಾರತ ಮಾತೆಗೆ ಜೈ ಜೈ ಎಂಬ ಜಯಘೋಷದಿಂದ ಮೋಟೋರ್ ಗಾಡಿಯಲ್ಲಿ ಸರ್ ವಿಲ್ಲಿಯಮರನ್ನು ಪಟ್ಟಣಕ್ಕೆ ಕರಕೊಂಡು ಹೋದರು. ಭಾರತೀಯ ಹೆಂಗಸರು ಕೂಡಾ ತಮ್ಮ ಉಪ್ಪರಿಗೆಗಳಿಂದ ಪುಷ್ಪದಳಗಳ ವೃಷ್ಟಿಯನ್ನು ಸರ್ ವಿಲ್ಲಿಯಮರ ಮೇಲೆ ಗರೆದರು. ಸುಮಾರು ೨ ಮೈಲು ದೂರದ ವರೆಗೆ ಪಟ್ಟಣವು ಮಕರ ತೋರಣಗಳಿಂದ ಶೃಂಗರಿಸಲ್ಪಟ್ಟಿತ್ತು.

'ಸಿಡಿಯಸ್ ಮೀಟಿಂಗ್ ಆಕ್ಟೆಂಬ' ಪ್ರಜಾ ಸಭೆಗಳನ್ನು ನಿರ್ಬಂಧಿಸುವ ರಾಜ ದ್ರೋಹಪರವಾದ ಕಾನೂನಿನ ಜಾರಿಯನ್ನು ಮುಂಬಾಯಿ ಸಂಸ್ಥಾನದಲ್ಲಿ ಮನ್ನಾಪಡಿಸಿರುವರು.

ಯುನೈಟೆಡ್ ಪ್ರೊವಿನ್ಸುಗಳ ಲೆಪ್ಟನೆಂಟ ಗವರ್ನರರಾದ ಸರ್ ಜೆ. ಹ್ಯೂವೆಟರವರು ಕೊಂಗ್ರೆಸ್ ಮೊದಲಾದ ರಾಷ್ಟ್ರೀಯ ಸಭೆಗಳು ಕೂಡುವ ವಾರದಲ್ಲಿ ಅಲ್ಲಹಾಬಾದಿನಿಂದ ಗೈರ್ಹಾಜರಾಗಿರುವರು. ಪ್ರಜೆಗಳಿಂದ ರಾಷ್ಟ್ರೀಯ ಸಭೆಗೆ ಆರಿಸಲ್ಪಟ್ಟ ಪ್ರಜಾ ಪ್ರತಿನಿಧಿಗಳೂ, ಮನ್ನೀಯರೂ ಮಾತ್ರವಲ್ಲದೆ ಹಿಂದೂಸ್ಥಾನದಲ್ಲಿ ಸಿವಿಲ್ ಸರ್ವಿಸ್ ನೋಡುತ್ತಿದ್ದ ಹೆಸರುವಾಸಿಯಾದ ಸರ್ ವೆಡ್ಡರ್ಬರ್ನರರವರೂ ಕೊಂಗ್ರೆಸಿನ ಪ್ರೆಸಿಡೆಂಟರಾಗಿ ಅಲ್ಲಹಾಬಾದಿಗೆ ಬಂದಿಳಿದಿರುವಾಗ ಲೆಪ್ಟನೆಂಟ್ ಗವರ್ನರರು ತನ್ನ ಮುಖ್ಯ ಪುರವನ್ನು ಬಿಟ್ಟು ಹೋಗಕೂಡದಿತ್ತು. ಅಲ್ಲಹಾಬಾದಿನಲ್ಲಿಯೇ ಇದ್ದುಕೊಂಡು ಸರ್ ವಿಲ್ಲಿಯಮರನ್ನು ಸರಕಾರ ಮಂದಿರಕ್ಕೆ ಅಥಿತಿಯಾಗಿ ಆಮಂತ್ರಿಸಬೇಕಿತ್ತೆಂದು "ಲೀಡರ್" ಎಂಬ ಅಲ್ಲಹಾಬಾದಿನ ವರ್ತಮಾನ ಪತ್ರವು ಟೀಕಿಸುವದು.

ಭಾರತೇಯ ಸ್ತ್ರೀಯರ ಸಭೆಯು ತಾರೀಕು ೨೪ರಲ್ಲು ವಿಜಯನಗರದ ಮುಯಿರ್ ಸೆಂಟ್ರಲ್ ಕೊಲೇಜಿನಲ್ಲಿ ಜರಗಿತು. ವಿಜಯನಗರದ ರಾಣಿಯವರು ಈ ಸಭೆಯ ಅಧ್ಯಕ್ಷರಾಗಿದ್ದರು.

ನಾಸಿಕದರಾಜದ್ರೋಹಪಿತೂರಿ ಮೊಕದ್ದಮೆಯು ತಾರೀಕು ೨೪ರಲ್ಲು ಮುಂಬಾಯಿ ಹೈ ಕೋರ್ಟಿನಲ್ಲಿ ಅಂತ್ಯವಾಗಿ ವಿನಾಯಕ ದಾಮೋದರ ಸವಾರ್‌ಕರಗೆ ಮರಣಾಂತ ಟಾಪೂ, ಕೇಶವ ಚಂದಾವರಕರಗೆ ೧೫ ವರ್ಷಗಳ ಟಾಪೂ ವಿಧಿಸಲಾಯಿತು. ಮತ್ತು ಗೋಪಾಲ್ ಕೆ. ಪಟಾಕಾರ್ ಕೃಷ್ಣಾಜಿ, ಗೋಪಾಲ್ ಖರೆ, ತ್ರಿಯಂಬಕ ಜಿ. ಮಾರುತ, ಇವರಲ್ಲಿ ಪ್ರತಿ ಒಬ್ಬನಿಗೆ ೧೦ ವರ್ಷಗಳ ಕಠಿಣ ಕಾರಾಗೃಹವೂ; ವೆಂಕಟೇಶ್ ಕೆ. ನಾಗಪುರಕಾರರಿಗೆ ೭ ವರ್ಷ, ವಿಷ್ಣು ಮಹಾದೇವ ಭಾಯಿ, ಪುರುಷೋತ್ತಮ ಎಲ್. ದಂಡೇಕಾರ್; ದಾಮೋದರ ಎಮ್. ಚಂದಾರ್ತೆ ಸುತರಾಮಡಿಫೋರ್ ಗೋಪಾಲ್ ಮತ್ತು ಗೋವಿಂದ ಡಾರಪ್, ಒಬ್ಬೊಬ್ಬನಿಗೆ ಐದೈದು ವರ್ಷ; ಶ್ರೀಧರ, ವಿ. ಲಿಧ್ಯೆ, ರಂಗನಾಥ ವಿ. ಭಾರ್ಭಿ, ದಾಮೋದರ ಸಿ. ಪೆರಾಂಜಪೆ, ವಾಮನ್ ಪಲಾಂದೆ, ಒಬ್ಬೊಬ್ಬನಿಗೆ ನಾಲ್ಕು ನಾಲ್ಕು ವರ್ಷ; ಎ. ವಿಷ್ಣು ಗೊಂತಾಗ್ ಮತ್ತು ವಿಶ್ವಾಸ ಬಲವಂತದಪ್ರೆ ಇವರಿಗೆ ಮೂರು ಮೂರು ವರ್ಷ; ವಿನಾಯಕ್ ಜಿ. ತೆಕ್ಕೆ, ಬಲವತ್ ಆರ್ ಬಾರ್ವೆ, ಸುಖಬಾಮ್ ಆರ್. ಕಾಶಿಖರ್ ಒಬ್ಬೊಬ್ಬನಿಗೆ ಎರಡೆರಡು ವರ್ಷ. ನಾರಾಯಣ ದಾಮೋದರ್ ಸವರ್‌ಕಾರ್‌ರಿಗೆ ಆರು ವರ್ಷ; ವಿನಾಯಕ ಎನ್. ಮನೋಹರ, ಗಂಗಾರಾಮ ರೂಪ್ಕಿ, ರಂಗನಾಥ ಸಿ. ಅಂಬಾದ್‌ಕರ, ಒಬ್ಬೊಬ್ಬನಿಗೆ ಆರಾರು ತಿಂಗಳ ಕಠಿಣ ಸಜೆ ಎಂಬದಾಗಿ ಮುಂಬಾಯಿ ಹೈ ಕೋರ್ಟಿನಲ್ಲಿ ತೀರ್ಪಾಯಿತು. ಈ ಮೊಕದಮೆಯಲ್ಲಿ ಸಿಕ್ಕೊಂಡಿ ಕೆ. ಗಾಡಂಜಿ, ಎಚ್. ಕೆ. ತಾತ್ರೆ, ಎಸ್. ಪಿ. ಮುಹಾನ್, ಆರ್. ಬಿ. ಕೇತೆ, ಎಮ್. ಪಿ ಮೊಗೆ, ಕೆ. ಜಿ. ಪಾಂಜಿಪೆ, ಟಿ. ವಿ. ಯೋಗಿ, ಜಿ. ಎಸ್. ಬಾಪತ್, ಎಂಬವನ್ನು ಹೈ ಕೋರ್ಟಿನವರು ಖುಲಾಸು ಮಾಡಿರುವರು.

ಹಿಂದೂ ಮುಸಲ್ಮಾನರು ಸಭೆಕೂಡುವ ವಿಷಯವನ್ನು ತಿಳಿಯ ಹೇಳಲಿಕ್ಕೆಸರ್ ವಿಲ್ಲಿಯಮ್ ವೆಡರ್ಬರ್ನರವರು ತಾ. ೨೫ರ ರಾತ್ರೆಅಲ್ಲಹಾಬಾದಿನಲ್ಲಿ ಒಂದು ಸಭೆ ಕೂಡಿಸಿದರು. ಮುಸ್ಲಾನರ ಕೂಡೆ ಅನ್ಯೋನ್ಯವನ್ನುಂಟು ಮಾಡುವ ಸಭೆಯ ಅಗತ್ಯವೆಂತ ಹಿಂದೂಗಳ ಭಾವನೆ ಇರುವುದು. ಆದರೆ ಸರಕಾರದ ಆಡಳಿತೆಯ ವಿಚಾರದಲ್ಲಿ ಯಾವ ಜಾತಿಯವರಿಗಾದರೂ ಒಂದರಕ್ಕಿಂತ ಇನ್ನೊಂದಕ್ಕೆ ಮೇಲಾದ ಹಕ್ಕು ಸ್ವಾತಂತ್ರ್ಯಗಳು ಇರಕೂಡದೆಂತ ಹಿಂದೂಗಳು ಅಭಿಪ್ರಾಯ ಪಡುವರು.

ಈ ಸರ್ತಿ ಕೂಡಿದ ಕೊಂಗ್ರೆಸು ಸಭೆಗೆ ೫೦೦ರಕ್ಕಿಂತ ಹೆಚ್ಚು ಪ್ರತಿನಿಧಿಗಳೂ ಅನೇಕ ಜನ ಪ್ರೇಕ್ಷಕರೂ ಬಂದಿದ್ದರು. ಮುಂಬಯಿಯಿಂದ ೧೩೨, ಮದ್ರಾಸಿನಿಂದ ೧೫೦, ಮತ್ತು ಬಂಗಾಳದಿದ ೯೨, ಈ ರೀತಿ ಪ್ರತಿನಿಧಿಗಳು ಬಂದಿದ್ದರು. ಕೀರ್ತಿಶೇಷ ಎಡ್ವರ್ಡ ಚಕ್ರವರ್ತಿಗಳವರ ಮರಣಕ್ಕೋಸ್ಕರ ತಮ್ಮ ವಿಷಾದವನ್ನು ಪ್ರದರ್ಶಿಸಿಯೂ ಜೋರ್ಜ ಚಕ್ರವರ್ತಿಗಳವರಿಗೆ ತಮ್ಮ ರಾಜಭಕ್ತಿಯನ್ನೂ, ಚಕ್ರವರ್ತಿಗಳು ಹಿಂದುಸ್ಥಾನಕ್ಕೆ ಬರುವರೆಂಬುದಕ್ಕೆ ತಮ್ಮ ಸಂತೋಷವನ್ನೂ ತೋರಿ ನಿರ್ಣಯಗಳು ಸಭೆಯಲ್ಲಿ ಅಧ್ಯಕ್ಷರಿಂದಲೇ ಮುದಿಡಲ್ಪಟ್ಟು ಸರ್ವಮತವಾದ ಮೇಲೆ ಇತರ ಸಭಾಕಾರ್ಯಕ್ಕೆ ಪ್ರಾರಂಭವಾಯಿತು. ಹೊಸ ವ್ಯಾಸರಾಯಿಗಳಾಗಿ ಬಂದ ಹಾರ್ಡಿಂಗ ಪ್ರಭುಗಳವರಿಗೆ ಸ್ವಾಗತವನ್ನು ಸೂಚಿಸುವ ಮತ್ತು ಭಾರತೀಯ ಪ್ರಜಾವೃದ್ಧಿ ಸಾಧನೆಯಲ್ಲಿ ಪ್ರಭುಗಳೊಡನೆ ಸಹಕಾರಿಗಳಾಗುವವೆಂದು ಹೇಳುವ ನಿರ್ಣಯವು ಸಭೆಯಲ್ಲಿ ಮಂಜೂರಾಯಿತು. ಕೊಂಗ್ರೆಸಿ ಸಭೆಯ ಅಧ್ಯಕ್ಷರು ಮತ್ತು ಮಾಜಿ ಅಧ್ಯಕ್ಷರು ಇತರ ಕೆಲವು ಸಭಾನಾಯಕರೂ ಕೂಡಿಕೊಂಡು ರಾಷ್ಟ್ರಿಯ ಸಭೆಯ ಪರವಾಗಿ ಒಂದು ಮಾನಪತ್ರವನ್ನು ಹಾರ್ಡಿಂಗ್ ಪ್ರಭುಗಳಿಗೆ ಈಯುಬೇಕೆಂದು ನಿರ್ಣಯಿಸಲ್ಪಟ್ಟಿದ್ದಲ್ಲದೆ ಈ ಮಾನಪತ್ರವನ್ನು ತಯ್ಯಾರಿಸಲಿಕ್ಕೆ ಸಹಾ ಒಂದು ಕಮಿಟಯನ್ನು ಏರ್ಪಡಿಸಿರುವರು. ನ್ಯಾಯ ನಿರ್ಮಾಣ ಸಭೆಗಳ ನೂಪಾರ್ಟ, ವ್ಯಾಸರಾಯಿ ಪ್ರಭುಗಳ ಕಾರ್ಯನಿರ್ವಾಹಕ ಸಭೆಯ ಮೆಂಬರುತನ, ಯುನ್ಯಾಟೆಡ್ ಪ್ರೊವಿನ್ಸುಗಳ ಲೆಪ್ಟನೆಂಟ ಗವರ್ನರರಿಗೆ ಕಾರ್ಯನಿರ್ವಾಹ ಸಭೆಯ ಅವಶ್ಯಕತೆ, ಬ್ರಿಟಿಷ ವಸಾಹತಿಗಳಲ್ಲಿ ಭಾರತೀಯರ ಕುರಿತು, ಸ್ವದೇಶಿ ಚಳವಳ, ವಂಗವಿಭಜನೆ ಮೊದಲಾದ ನಿರ್ಣಯಗಳು ತಾರೀಕು ೨೭ರಲ್ಲಿ ಸಭೆಯ ಮುಂದಿಡಲಿಕ್ಕೆ ಬಾಕಿಯಲ್ಲಿದ್ದವು.

ತಾ. ೨೭ರಲ್ಲಿ ನಡದ ಕೊಂಗ್ರೆಸು ಸಭೆಯ ವೃತ್ತಾಂತವು ಈ ದಿನ ತಲ್ಪಿರುವುದು. ವ್ಯಾಸರಾಯ ಪ್ರಭುಗಳಿಗೆ ರಾಷ್ಟ್ರೀಯ ಸಭೆಯ ಪ್ರತಿನಿಧಿಗಳು ಹೋಗಿ ಭೇಟಿ ಕೊಡುವ ನಿರ್ಣಯವನ್ನು ಸಭೆಯ ಮುಂದಿಡುವಾಗ ಸರ್ ವಿಲಿಯೆಮರವರು ಮಾಡಿದ ಭಾಷಣದಿಂದ ವ್ಯಾಸರಾಯಿಗಳು ಸಹ ಕೊಂಗ್ರೆಸು ಸಭೆಯ ಪ್ರತಿನಿಧಿಗಳ ಭೇಟಿಗೆ ಸಂತೋಷದಿಂದ ಸಮ್ಮತಿಸಿರುವರೆಂಬದಾಗಿ ತಿಳಿಯ ಪಡಿಸಿದರು.

ವ್ಯಾಸರಾಯಿ ಪ್ರಭುಗಳ ಕಾರ್ಯ ನಿರ್ವಾಹ ಸಭೆಯ 'ಲೊ' ಯಾ ಕಾನೂನು ಇಲಾಖೆಯ ಮೆಂಬರರಾಗಿ ಬ್ಯಾರಿಷ್ಟರಿ ಪರೀಕ್ಷೆಯನ್ನು ಪಾಸಾದವರನ್ನು ನಿಯಮಿಸುವ ಕ್ರಮ ಇರುವುದು. ಎಡ್ವೊಕೇಟ್ಸ್ ಹ್ಯಾ ಕೋರ್ಟು ವಕೀಲ ಮತ್ತು ಎಟೊರ್ನಿಗಳನ್ನು ಸಹ ಈ ಹುದ್ದೆಗೆ ನಿಯಮಿಸುವಂತೆ ಈ ಕ್ರಮದ ಬದಲಾವಣೆಯಾಗಬೇಕೆಂಬುವ ನಿರ್ಣಯವು ಬಹುಮಾನಪಟ್ಟ ಮೆ। ಸಚ್ಚಿದಾನಂದ ಸಿಂಹರವರಿಂದ ಸಭೆಯ ಮುಂದಿಡಲಾಯಿತು. ಈ ನಿರ್ಣಯವು ಮಂಜೂರು ಮಾಡಲ್ಪಡುವಾಗ ವ್ಯಾಸರಾಯಿ ಪ್ರಭುಗಳ ಕಾರ್ಯನಿರ್ವಾಹ ಸಭೆಯ ಕಾನೂನು ಇಲಾಖೆಯ ಮೆಂಬರರಾಗಿದ್ದ ಮೆ. ಎಸ್. ಸಿ. ಸಿಂಹರವರು ಕೊಂಗ್ರೆಸು ಸಭೆಗೆ ಬರುವರಾದರು. ಕೌನ್ಸಿಲ ಮಾರ್ಪಾಟಗಳ ನಿರ್ಣಯದ ಹೊರತು ನಾವು ಈ ಮೊದಲು ಸೂಚಿಸಿದಂತೆ ಬಾಕಿ ಎಲ್ಲ ನಿರ್ಣಯಗಳು ಮಂಜೂರು ಮಾಡಲ್ಪಟ್ಟವು. ತಾ. ೨೮ರಲ್ಲಿ ಒಟ್ಟಿಗೆ ೬೫೯ ಜನ ಪ್ರತಿನಿಧಿಗಳೂ ೨೦೦೦ಕ್ಕಿಂತ ಹೆಚ್ಚು ಜನ ಪ್ರೇಕ್ಷಕರೂ ಬಂದಿದ್ದರಾಗಿ ತಿಳಿಯುತ್ತೇವೆ.

ಈ ತಿಂಗಳ ತಾ. ೨೭ರಲ್ಲಿ ಮಹಮ್ಮದೀಯರ ವಿದ್ಯಾ ಪರಿಷತ್ತು ನಾಗಪುರದಲ್ಲಿ ಕೂಡಿತು. ಮೆ, ಅಬ್ದುಲ್ಲಾ ಇಬು ಯುಸೊಫಲ್ಲಿ ಎಂಬವರು ಈ ಸಭೆಯ ಅಧ್ಯಕ್ಷರಾಗಿದ್ದರು. ವಿದ್ಯಾ ಇಲಾಖೆಯ ಡಿರೆಕ್ಟರರು ಮೊದಲಾದ ಯುರೋಪಿಯರೂ, ಪಾರ್ಸಿಗಳೂ ಹಿಂದುಗಳೂ ಸಹ ಈ ಸಭೆಗೆ ದಯಮಾಡಿಸಿದ್ದರು.

ಅಲ್ಲಹಾಬಾದಿನಲ್ಲಿ ಜರಗಿರುವ ವಸ್ತುಪ್ರದರ್ಶನವನ್ನು ಸಂದರ್ಶಿಸುವರೆ ಸಾವಿರಾರು ಜನರು ಹೋಗುತ್ತಿರುವರು. ಕಳದ ಸೋಮವಾರ ದಿನ ೨೧,೦೦೦ ಜನರು ಈ ಪ್ರದರ್ಶನವನ್ನು ನೋಡುವವರಾದರು. ಪ್ರದರ್ಶನ ಮಂಟಪದಲ್ಲಿ ಲಾಹೋರಿನ ಗಾಮಾ ಎಂಬ ಪೈಲ್‌ವಾನನಿಗೂ ಗರ್ಜನ್ ವಾಲದ ರಹೀಮ್ ಎಂಬವನಿಗೂ ಬಾಹು ಯುದ್ಧವಾಯಿತು. ಗಾಮನೇ ಇದರಲ್ಲಿ ಜಯಶೀಲನಾಗಿರುವನು. ಈ ಹೋರಾಟವನ್ನು ನೋಡಲಿಕ್ಕೆ ೧೦,೦೦೦ಕ್ಕಿಂತ ಹೆಚ್ಚು ಜನರು ಪ್ರದರ್ಶನ ಮಂಟಪಕ್ಕೆ ಬಂದಿದ್ದರು.

ತಾರೀಕು ೨೬ರಲ್ಲು ಬ್ರಹ್ಮ ಸಮಾಜದ ಸಭೆಯು ಅಲ್ಲಹಬಾದಿನಲ್ಲಿ ಜರಗಿತು. ಬಂಗಾಳ, ಮುಂಬಾಯಿ, ಮದ್ರಾಸ್ ಮೊದಲಾದ ಸಂಸ್ಥಾನಗಳ ಪ್ರತಿನಿಧಿಗಳು ಈ ಸಭೆಗೆ ಹಾಜರಿದ್ದರು.

ಜರಗಲಿಕ್ಕಿರುವ ಹಿಂದು ಮತ್ತು ಮುಸಲ್ಮಾನರ ಸಭೆಯ ಸಂಗತಿಗಳನ್ನು ಇತ್ಯರ್ಥಪಡಿಸಿಕೊಳ್ಳುವದು ಹೇಗೆ ಎಂಬದನ್ನು ಆಲೋಚಿಸುವ ಬಗ್ಯೆ ತಾರೀಕು ೨೬ನೇ ಸಾಯಂಕಾಲ ಅಲ್ಲಹಬಾದಿನಲ್ಲಿ ಒಂದು ಸಭೆಯು ಕೂಡಿತು. ಮೆ. ಸುರೇಂದ್ರನಾಥ ಬೆನರ್ಜಿಯವರು ಈ ಸಭೆಯ ಅಧ್ಯರಾಗಿದ್ದರು. ಮುಸಲ್ಮಾನ ಮತ್ತು ಹಿಂದುಗಳೊಳಗೆ ಐಕ್ಯವನ್ನು ಹುಟ್ಟಿಸಬೇಕೆಂಬ ಆಲೋಚನೆಗೆ ಕೂಡಿಬಂದ ಸಭಿಕರೆಲ್ಲರೂ ತಮ್ಮ ತಮ್ಮ ಒಪ್ಪಿಗೆಯನ್ನು ಕೊಟ್ಟರು. ಈ ಸಮ್ಮಂಧವಾಗಿ ಎರಡು ಪಕ್ಷದವರೂ ಕೂಡಿದ ಪ್ರತಿನಿಧಿಗಳ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬದಾಗಿ ಆ ದಿನದ ಸಭೆಯಲ್ಲಿ ನಿರ್ಣಯಿಸಲಾಯಿತು.

ದಕ್ಷಿಣ ಹಿಂದುಸ್ಥಾನ.

ಮದ್ರಾಸ್ ಆಧಿಪತ್ಯದ ಗವರ್ನರರಾದ ಸರ್. ಆರ್ಥರ್ ಲೋಲೆ ಪ್ರಭುಗಳವರು ಪರಿವಾರದ ಸಮೇತ ತಾರೀಕು ೨೨ನೇ ಸಾಯಂಕಾಲ ಊಟಕಮಂಡಿಗೆ ಹೊರಟು ಹೋಗಿರುವರು. ಕ್ರಿಸ್‌ಮಸ್ ರಜಾಕಾಲವನ್ನು ಅಲ್ಲಿಯೇ ಕಳೆಯುವರು.

ಯುರೋಪಿಯನರಂತೆ ತೋರುತ್ತಿದ್ದ ತೆಕ್ಕೆ ಎಂಬ ಹೆಸರಿನ ಪಾರ್ಸಿಯನೊಬ್ಬನು ಚೀನದಿಂದ ಬಂದು ತಾರೀಕು ೨೬ರಲ್ಲು ಟುಟಿಕೊರಿನಿನಲ್ಲಿ ಇಳಿದನು. ಮದ್ರಾಸ್ ಡಿಟೆಕ್ಟಿವ್ ಇನ್‌ವೆಸ್ಟಿಗೇಶನ್ ಇಲಾಖೆಯ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ಪ್ರಾಗರ್ ಮತ್ತು ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ಕಾಲಿಮುಲ್ಲರು ಇವನ ಮೇಲೆ ಸಂಶಯಪಟ್ಟು ಇವನ ಗಂಟು ಮೂಟೆಗಳನ್ನೆಲ್ಲಾ ಬಹು ಜಾಗ್ರತೆಯಿಂದ ಪರೀಕ್ಷಿಸಲು ವಿಚಿತ್ರ ತರದ ಅಡಿಯುಳ್ಳ ಒಂದು ಪೆಟ್ಟಿಗೆಯಲ್ಲಿ ಜೋಡು ನಳಿಗೆಯ ಎರಡು ರೈಪಲ್ ಕೋವಿಗಳು ದೊರಕ್ಕಿದ್ದರಿಂದ ಈತನನ್ನು ಕೈದು ಮಾಡಿರುವರು.

ನಾಲ್ಕು ಮಂದಿ ಮುಸಲ್ಮಾನರು ವೆಲ್ಲೂರಿನ ಗುಡಯಾಟಂ ಎಂಬಲ್ಲಿಯ ಸಬ್ ಮೆಜಿಸ್ಟ್ರೇಟರ ಮನೆಯಲ್ಲಿ ಕಳವು ಮಾಡಿದ್ದರೆಂಬ ತಕ್ಸೀರಿನ ಮೇಲೆ ಅಲ್ಲಿಯ ಜ್ಯೊಂಟ್ ಮೆಜಿಸ್ಟ್ರೇಟರು ಒಬ್ಬೊಬ್ಬನಿಗೆ ೧೮ ತಿಂಗಳ ಕಠಿಣ ಕಾರಗೃಹವನ್ನು ವಿಧಿಸಿದ್ದರು. ಆದರೆ ಅಪರಾಧಿಗಳು ಉತ್ತರ ಆರ್ಕಾಡಿನ ಸೆಶ್ಯನ್ ಜಡ್ಜರಲ್ಲಿ ಅಪೀಲು ಮಾಡಿಕೊಂಡಲ್ಲಿ:—ಸಬ್ ಮೆಜಿಸ್ಟ್ರೇಟರ ಮನೆಯನ್ನು ಲೂಟಿ ಮಾಡಿದ್ದಾರೆಂಬ ಸಂಗತಿಯು ಅನುಮಾನಕರ ಎಂಬದಾಗಿ ಜಡ್ಜರು ಅಭಿಪ್ರಾಯಪಟ್ಟು ಇವರ ಇನ್ನು ಮುಂದಿನ ಉತ್ತಮ ನಡತೆಗಾಗಿ ಭದ್ರತೆ ಪತ್ರವನ್ನು ತಕ್ಕೊಂಡು ಅಪರಾಧಿಗಳನ್ನು ಖುಲಾಸು ಮಾಡಿದರು.

ಆರ್ಕಾಡಿನ ಪ್ರಿನ್ಸರವರು ಅಲ್ಲಹಬಾದಿನಲ್ಲಿ ಜರಗಲಿಕ್ಕಿರುವ ಹಿಂದು ಮತ್ತು ಮುಸಲ್ಮಾನ ಸಭೆಗೆ ಹಾಜರಾಗುವದಕ್ಕಾಗಿ ತಾರೀಕು ೨೭ರಲ್ಲು ಅಲ್ಲಹಬಾದಿಗೆ ತೆರಳಿರುವರು.

ಉತ್ತರ ಮಲಬಾರಿನಲ್ಲಿ ಒಂದು ಕೊಲಿ ನಂಬ್ರದಲ್ಲಿ ಸಿಕ್ಕೊಂಡಿದ್ದ ವಿಲೆಯಾನ್ ಯಾನೆ ಕಮ್ಮಿ ವ್ಯೊದಿನ್ ಕುಟ್ಟಿ ಎಂಬ ದರೋಡೆಗಾರನು ಕಳದ ನವಂಬರ ತಿಂಗಳಲ್ಲಿ ತಲೆ ತಪ್ಪಿಸಿಕೊಂಡಿದ್ದನು. ಇವನಂತೆಯೇ ಕಾಣುವ ಒಬ್ಬನನ್ನು ತಾರೀಕು ೨೭ರಲ್ಲು ರಂಗೂನಿನ ಪೋಲೀಸಿನವರು ಕೈದು ಮಾಡಿದರು. ಸ್ಥಳೀಕ ಮೆಜಿಸ್ಟ್ರೇಟರವರು ಎರಡು ಸಾವಿರ ರೂಪಾಯಿ ಜಾಮೀನಿನ ಮೇಲೆ ಈತನನ್ನು ಬಿಟ್ಟಿರುವರಲ್ಲದೆ ಇವನ ಗುರುತು ಹಿಡಿಯುವ ಬಗ್ಯೆ ಬರಬೇಕೆಂದು ಉತ್ತರ ಮಲಬಾರಿನ ಪೋಲೀಸ್ ಇಲಾಖೆಯವರಿಗೆ ತಂತೀ ಬಿಟ್ಟಿರುವರು.

ದಕ್ಷಿಣ ಹಿಂದುಸ್ಥಾನದ ಶಾಲಾ ಉಪಾಧ್ಯಾಯರ ಸಂಘದ ವಾರ್ಷಿಕ ವಿದ್ಯಾ ಸಭೆಯು ಈ ತಿಂಗಳ ತಾರೀಕು ೨೨ರಲ್ಲಿ ಮದ್ರಾಸಿನ ಹಿಂದೂ ಹ್ಯಾಸ್ಕೂಲಿನಲ್ಲಿ ಕೂಡಿತು. ಮೆ. ಕೆ. ಬಿ. ರಾಮನಾಥ ಅಯ್ಯರ್ ಎಮ್. ಎ. ಬಿ. ಎಲ್ ಎಲ್. ಟಿಯವರು ಸಭಾಧ್ಯಕ್ಷರಾಗಿದ್ದರು. ಮದುರಾ, ತಿರುಚಿನಾಪಳ್ಳಿ, ತಿರುಪತಿ, ತಿರುವೆಲ್ಲೂರು, ವೆಂಕಟಗಿರಿ ಮತ್ತು ನಂದ್ಯಾಲ ಮೊದಲಾದ ಪ್ರಾಂತ್ಯಗಳಿಂದ ಅನೇಕ ಜನ ಉಪಾಧ್ಯಾಯರು ಸಭೆಗೆ ಪ್ರತಿನಿಧಿಗಳಾಗಿ ಬಂದಿದ್ದರು. ವಿದ್ಯಾರ್ಥಿಗಳ ಶಿಕ್ಷಣ ಪರವಾದ ಹಲವು ವಿಷಯಗಳು ಈ ಸಭೆಯಲ್ಲಿ ಪ್ರಸ್ತಾಪಿಸಲ್ಪಟ್ಟವು. ಇವುಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವೆವು.

'ಥಿಯೊಸಫಿಕಲ್ ಕನ್ವೆಶನ್' ಎಂಬ ಬ್ರಹ್ಮಜ್ಞಾನ ಸಂಘದವರ ವಾರ್ಷಿಕ ಸಭೆಯು ಮದ್ರಾಸು ಅದ್ಯಾರದಲ್ಲಿ ತಾ. ೨೬ರಿಂದ ಕೂಡಲು ಪ್ರಾರಂಭಿಸಿರುವುದು.

ಮೈಸೂರಿನಲ್ಲಿ ಹಿಂದೂ ಮುಸಲ್ಮಾನರೊಳಗಿರುವ ಮೈತ್ರಿಯು ಈ ಕೆಳಗಿನ ಸಮಾಚಾರದಿಂದ ರುಜುವಾಗುವುದು. ಶೃಂಗೇರಿ ಮಠದ ಶ್ರೀ ಸ್ವಾಮಿಗಳವರು ಕೋಲಾರಿಗೆ ಬಂದು ತಲ್ಪಿದಾಗ ಅಲ್ಲಿಯ ಮಹಮ್ಮದೀಯರು ಇವರನ್ನು ಬಹಳ ಸಂಭ್ರಮದಿಂದ ಸತ್ಕರಿಸಿದರು. ಸ್ವಾಮಿಗಳವರು ಇವರ ಸತ್ಕಾರದಿಂದ ಬಹಳ ಸಂತೋಷಗೊಂಡು ಮಹಮ್ಮದೀಯರಲ್ಲಿ ಹಲವರನ್ನು ಇನ್ನೊಮ್ಮೆ ಸಂದರ್ಶಿಸಲು ಸಂತೋಷಪಡುನೆಂಬದಾಗಿ ಸೂಚಿಸಿದರು. ಈ ಸೂಚನೆ ಮೇರೆಗೆ ಕೆಲವು ಮಹಮ್ಮದೀಯ ಪ್ರತಿನಿಧಿಗಳು ಸರ್ ಖಾಜಿ ಖಾದರ್ ಹುಸೆನ್ ಸೆರೀಫ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಸ್ವಾಮಿಗಳವರ ಭೇಟಿಯನ್ನು ತಿರಿಗೊಮ್ಮೆ ಮಾಡಿದರು. ಮಹಮ್ಮದೀಯರು ಈ ಸಂದರ್ಭದಲ್ಲಿ ಸ್ವಾಮಿಗಳವರಿಗೆ ಒಂದು ಬಿನ್ನಹಪತ್ರವನ್ನು ಬಹುಮಾನಾರ್ಥವಾಗಿ ಅರ್ಪಿಸಿದರು. ಶ್ರೀ ಸ್ವಾಮಿಗಳವರು ಇದನ್ನು ಆದರದಿಂದ ಸ್ವೀಕರಿಸಿ ಎಲ್ಲಾ ಮತಗಳ ಏಕೋದ್ದಿಶ್ಯವನ್ನು ಅವರಿಗೆ ತಿಳಿಯ ಹೇಳಿ ತಾವು ಹುಟ್ಟಿ ಬೆಳದ ಮತಧರ್ಮದಲ್ಲಿಯೇ ಇರುವಿದು ಶ್ರೇಯಸ್ಕರವೆಂತ ಅಪ್ಪಣೆ ಕೊಟ್ಟದ್ದಲ್ಲದೆ ಸರ್ ಖಾಜಿಯವರಿಗೆ ಒಂದು 'ಖಿಲಾತ್'ನ್ನು ಉಡುಗಿರೆಯಾಗಿ ಕೊಟ್ಟರು.

ದಕ್ಷಿಣ ಕನ್ನಡ.

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ೩ ಪ್ಲೇಗು ಮರಣಗಳೂ ೩ ಶಿಡುಬುರೋಗದ ಮರಣಗಳೂ ಇದ್ದವು.

ಇಲ್ಲಿಯ ಮಾಜಿ ಕಲೆಕ್ಟರರಾದ ಜೊನ್ ಸ್ಟರಕ್ ದೊರೆಗಳವರು ನಿನ್ನೆ ದಿನ ಆಗ್ಗಾಡಿಯಲ್ಲಿ ಇತ್ತಕಡೆ ಬಂದಿರುತ್ತಾರೆ.

ಕೆಲವು ತಿಂಗಳ ಹಿಂದೆ ಇಲ್ಲಿಂದ ಕಲ್ಲಿಕೋಟೆಗೆ ಆಕ್ಟಿಂಗ್ ಡಿಪ್ಯುಟಿಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟ ಮ.ರಾ. ಎಂ. ಪಾಂಡುರಂಗ ಕಿಣಿಯವರು ಮಂಗಳೂರು ಮುನಿಸಿಪಾಲಿಟಿಗೆ ಹೊಸ ರಸ್ತೆಗಳ ಬಗ್ಯೆ ಬೇಕಾದ ಸ್ಥಳವನ್ನು ಪಡಕೊಳ್ಳುವರೆ (ಲೆಂಡ್ ಎಕ್ವಿಜಿಶನ್) ಸ್ಪೆಶ್ಯಲ್ ಡ್ಯೂಟಿ ಡಿಪ್ಯುಟಿ ಕಲೆಕ್ಟರರಾಗಿ ನೇಮಕ ಪಟ್ಟಿರುತ್ತಾರೆ. ಆದರೆ ಅವರು ಪ್ರಕೃತ ಕುದುರೆ ಸವಾರಿ ಪರಿಕ್ಷೆಗೆ ಹೋಗಿರುವದರಿಂದ ಪರಿಕ್ಷೆ ಮುಗಿದ ನಂತರ ಇಲ್ಲಿಗೆ ಬರುವರಾಗಿ ವದಂತಿ ಉಂಟು.

ಇದೇ ಕಳದ ತಾ. ೨೬ಕ್ಕೆ ಸುಮಾರು ೩ ಗಂಟೆ ಹೊತ್ತಿಗೆ ಇಲ್ಲಿಯ ಪೋಲೀಸು ಮೈದಾನಿನಲ್ಲಿ ಪೋಲೀಸು ಜವಾನರ ವರುಷಾವಧಿ ಪಂಥದಾಟವು ಜರಗಿತು. ಕುದುರೆ ಸವಾರರ ಪೈಕಿ ಸಬ್ ಇನ್ಸ್‌ಪೆಕ್ಟರ ರಾ. ಮಾಹಿಮ್ ಚಮನಾಡರು ಉಚ್ಚಸ್ಥಾನವನ್ನು ಪಡಕೊಂಡು ರೂಪಾಯಿ ೧೦ ಇನಾಮು ಪಡಕೊಳ್ಳುವರಾದರು. ಇತ್ತಲಾಗೆ ಸಬ್ ಇನ್ಸ್‌ಪೆಕ್ಟರ್ ಕೆಲಸದಲ್ಲಿ ತರಬೇತು ಹೊಂದಿ ಬಂದಿರುವ ರಾ. ಕೆ. ಸುಂದರರಾವರವರು ಹೆಂಡ್ರಡ್ ಯಾರ್ಡ್ಸ್ ರೇಸ್ ಪೋರ್ ಹಂಡ್ರಡ್ ಪೋರ್ಟಿ ಯಾಡ್ಸ್ ರೇಸ್ ಮತ್ತು ತ್ರಿಲೆಗ್ಗಡ್ ರೇಸ್ ಎಂಬೀ ಮೂರು ಆಟಗಳಲ್ಲಿಯೂ ರೂಪಾಯಿ. ೧೮-೮-೦ನ್ನು ಇನಾಮಾಗಿ ಪಡಕೊಂಡರು. ಇನಾಮು ಹಂಚೋಣವು ಇಲ್ಲಿ ಸುಪರಿಂಟೆಂಡೆಂಟರಾದ ಲೊವ್‌ಲಕ್ ದೊರೆಗಳವರ ಪತ್ನಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕಳದ ಸೋಮವಾರ ದಿನ ಇಲ್ಲಿಗೆ ತಲ್ಪುವ ಮುಂಬಯಿ ಸ್ಟೀಮ್ ನೆವಿಗೇಶನ್ ಕಂಪೆನಿಯವರ ಸ್ಟೀಮರು ಕ್ಲಪ್ತ ಸಮಯದಲ್ಲಿ ತಲ್ಪದೆ ಮರು ದಿನ ಬಂದು ತಲ್ಪಿದ್ದರಿಂದ ಗೋವೆಗೆ ಸಂಯುಕ್ತ ಮತ್ತು ಮಾಡ್ರಾಂ ಗೌಡ ಸಾರ ಸ್ವತ ಪರಿಷದಗಳಿಗಾಗಿ ಹೋಗುವವರಿಗೆ ಬಹಳ ಅನನುಕೂಲವಾಯಿತು. ಮಾಡ್ರಾಂ ಪರಿಷದಕ್ಕೆ ಹೋಗುವರೆ ಮಲೆಬಾರಿನಿಂದ ಬಂದಿದ್ದ ಕೆಲವು ಜನ ಪ್ರತಿನಿಧಿಗಳು ಹಿಂತಿರುಗಿ ಹೋಗಿರುವರು. ಈ ಅನನುಕೂಲತೆಯಿಂದ ಪರಿಷದಕ್ಕೆ ಹೋಗುವರೆ ನಿಶ್ಚಯಿಸಿದ್ದ ಇಲ್ಲಿಯವರು ಸಹಾ ಹೋಗದಿರುವದಕ್ಕೆ ಕಾರಣವಾಯಿತು.

ವಿವಿಧ ವಿಷಯಗಳು.

ಅತ್ತಿತ್ತ ವಯ್ಯಲಿಕ್ಕಾಗುವ ವಿಧಾನದಲ್ಲಿ ವಸ್ತುಪ್ರದರ್ಶನಗಳನ್ನು ಯೂರೋಪಖಂಡದ ಪೂರ್ವಪ್ರಾಂತ್ಯಗಳಲ್ಲಿ ಏರ್ಪಡಿಸುತ್ತಿರುವರು. ಗ್ರೇಕ ದೇಶದಲ್ಲಿಯ ಉತ್ಪತ್ತಿಯನ್ನೂ ಅಲ್ಲಿ ತಯಾರಾಗುತ್ತಿರುವ ಕೈಗಾರಿಕೆ ಸಾಮಗ್ರಿಗಳನ್ನೂ ಕೆನಿಯಾ, ಅಲಕ್ಸಂದ್ರಿಯಾ, ಪೋರ್ಟ್‌ಸೆಡ್, ಮಾರ್ಸಿನಾ ಡಾರ್ಡನೆಲ್ಸ್ ಕೊನ್ಸಟೆಂಟಿನೋಪಲ್ ಮೊದಲಾದ ಊರುಗಳಲ್ಲಿ ಪ್ರದರ್ಶಿಸುವರೆ ಒಂದು ಚಲಿಸುವ ವಸ್ತುಪ್ರದರ್ಶನವನ್ನು ಏರ್ಪಡಿಸುವರು.

ಭೂಲೋಕದಲ್ಲಿರುವ ಯುನಿವರ್ಸಿಟಿಯ ಸರ್ವ ವಿದ್ಯಾನಿಲಯಗಳ ಕುರಿತು ಈ ಕೆಳಗಿನ ವೃತ್ತಾಂತವು ಒಂದು ಜರ್ಮನ್ ಮಾಸಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವುದು. ಜರ್ಮನಿಯಲ್ಲಿ ೪೦,೦೦೦ ವಿದ್ಯಾರ್ಥಿಗಳಿರುವ ೨೧ ಸರ್ವವಿದ್ಯಾನಿಲಯಗಳೂ, ಫ್ರಾನ್ಸ ದೇಶದಲ್ಲಿ ೩೨,೦೦೦ ವಿದ್ಯಾರ್ಥಿಗಳಿರುವ ೧೬ ಸರ್ವವಿದ್ಯಾನಿಲಯಗಳೂ ಇರುವವು. ಅಂಗ್ಲಾಳದಲ್ಲಿ ೧೫ ಯುನಿವರ್ಸಿಟಿಗಳಲ್ಲಿ ೨೫,೦೦೦ ವಿದ್ಯಾರ್ಥಿಗಳೂ ಔಸ್ಟ್ರಿಯಾ ಹಂಗೇರಿಯಲ್ಲಿ ೧೧ ಸರ್ವವಿದ್ಯಾನಿಲಯಗಳಲ್ಲಿ ೩೦ ವಿದ್ಯಾರ್ಥಿಗಳೂ ಇರುತ್ತಾರೆ. ಇಟೇಲಿಯಲ್ಲಿ ೨೧ ಯುನಿವರ್ಸಿಟಿಗಳಿದ್ದರೂ ವಿದ್ಯಾರ್ಥಿಗಳು ೨೪,೦೦೦ ಮಾತ್ರವಿರುತ್ತಾರೆ. ರುಶ್ಯದ ೯ ಸರ್ವವಿದ್ಯಾನಿಲಯಗಳಲ್ಲಿ ೨೩,೦೦೦, ಸ್ಪೈನಿನ ೯ರಲ್ಲಿ ೧೨,೦೦೦, ಸ್ವಿಜರ್‌ಲೆಂಡಿನ ೭ರಲ್ಲಿ ೬೫೦೦, ಬೆಲ್ಜಮ್‌ದೇಶದ ೪ರಲ್ಲಿ ೫೦೦೦, ಈ ರೀತಿ ವಿದ್ಯಾರ್ಥಿಗಳಿರುವರು.

'ಎಕ್ಸೀಮಾ' ಎಂಬ ಮಕ್ಕಳ ಕೈಕಾಲುಗಳಲ್ಲಿ ಆಗುವ ತುರಿಸುವ ಖಜ್ಜಿಗೆ ಇತ್ತಲಾಗೆ ನವೀನವಾದ ಒಂದು ಚಿಕಿತ್ಸೆಯನ್ನು ಕಂಡುಹಿಡಿದಿರುವರು. ಮಕ್ಕಳಿಗೆ ಕೊಡೋಣಾಗುವ ಆಹಾರದಿಂದ ಕ್ರಮೇಣ ಉಪ್ಪನ್ನು ಕಡಿಮೆ ಮಾಡುತ್ತಾ ಬಂದು ಮೊಸರಿನಲ್ಲಿ ಇರಬಹುದಾದ ಉಪ್ಪಿನಷ್ಟು ಉಪ್ಪನ್ನು ಮಾತ್ರ ಮಕ್ಕಳಿಗೆ ಕೊಡುವಂತೆ ಮಾಡುವರು. ಈ ವಿಧಾನದಲ್ಲಿ ಮಕ್ಕಳ ಆಹಾರವನ್ನು ಬದಲಾಯಿಸಿದ್ದರಿಂದ ೪ ಯಾ ೬ ವಾರಗಳಲ್ಲಿ ಖಜ್ಜಿಯು ಪೂರ್ಣವಾಗಿ ವಾಸವಾಗಿರುವುದಾಗಿ ತಿಳಿದು ಬರುತ್ತದೆ. ಇದರಿಂದ ಮಕ್ಕಳನ್ನು ಹೆಚ್ಚು ಉಪ್ಪು ಕೊಟ್ಟು ಸಾಕಿದ್ದರಿಂದ ಖಜ್ಜಿಯು ಉಂಟಾಗುವುದೆಂತ ನಿರ್ಧರಿಸಿರುವರಲ್ಲದೆ ದೊಡ್ಡವರಲ್ಲಿ ಸಹಾ ಖಜ್ಜಿಗೆ ಕಾರಣವು ಉಪ್ಪನ್ನು ಹೆಚ್ಚಾಗಿ ತಿನ್ನುವುದೇ ಎಂತ ನಿರ್ಣಯಿಸಿರುವರು.

ಎದೆ ಗುಂಡಿಯ ಬಡಿತ ಮೊದಲಾದ್ದನ್ನು ಪರೀಕ್ಷಿಸುವರೆ ಡಾಕ್ಟಾರರುಗಳು 'ಸ್ಟೆತಸ್‌ಕೋಪ್' ಎಂಬ ಚಿಕ್ಕ ಯಂತ್ರವನ್ನು ಉಪಯೋಗಿಸುವರು. ಟೆಲಿಫುನ್ ತಂತೀಗಳ ಮೂಲಕ ಶ್ವಾಸಕೋಶ ಎದೆಗುಂಡಿ ಮೊದಲಾದವುಗಳ ಪರೀಕ್ಷೆಯನ್ನು ಮಾಡುವ ನೂತನ ವಿಧಾನದ ಒಂದು ಸ್ಟೆತಸ್‌ಕೋಪ್ ಇತ್ತಲಾಗೆ ಶೋಧಿಸಿರುತ್ತಾರಂತೆ.

ಹಿಂದುಸ್ಥಾನದಲ್ಲಿ ದಿನ ಒಂದಕ್ಕೆ ಮಾತ್ರವೇ ೨೮,೦೦೦ ಜನರು ಸಾಯುತ್ತಿರುವರು. ಅಂದರೆ ನಿಮಿಷ ಒಂದಕ್ಕೆ ಸುಮಾರು ೧೯ ಮಂದಿಯಂತೆ ಸತ್ತಹಾಗಾಯಿತು.

ಕಾಲಹರಣಕ್ಕಾಗಿ ನಮ್ಮ ದೇಶಿಯರಲ್ಲಿ ಇಸ್ಪೇಟು ಆಟವು ವಾಡಿಕೆಯಲ್ಲಿರುವಂತೆ ಜಾಪಾಯಲ್ಲಿ 'ಅಕ್ಷರ ಮಾಲೆಗಳ ಆಟ' ಎಂಬದು ವಾಡಿಕೆಯಲ್ಲಿರುವದಂತೆ. ಈ ಆಟವು ಬಾಲಕರಲ್ಲಿ ಪ್ರಬಲವಾಗಿದೆ. ಇಸ್ಪೇಟಿನಲ್ಲಿರುವ ಕಾಗದ ರಟ್ಟೆಗಳಲ್ಲಿ ಜಾಪಾನೀಯ ಭಾಷೆಯ ಕೆಲವು ಸಾಮತಿಗಳನ್ನೂ ಕೆಲವು ರಟ್ಟೆಗಳಲ್ಲಿ ಸಾರುತಿಯನ್ನು ಪ್ರದರ್ಶನಗೊಳಿಸುವ ಚಿತ್ರಗಳನ್ನೂ ಬರೆದಿರುವಂತೆ. ಆಟಗಳನ್ನ ಆಡುವವರು ವಲಯಾಕಾರವಾಗಿ ಕುಳಿತು ಇಸ್ಪೇಟುಗಳನ್ನು ಹಂಚಿಕೊಂಡು ಒಬ್ಬೊಬ್ಬನು ಒಂದು ಇಸ್ಪೇಟಿನಲ್ಲಿರುವ ಸಾಮತಿಯನ್ನು ಓದುತ್ತಾ ಇರಲು ವಿವರಿಸುವ ಚಿತ್ರಪಟವನ್ನು ಕೈಯಿಂದ ಕೆಳಕ್ಕೆ ಹಾಕುವನು. ಈ ರೀತಿಯಲ್ಲಿ ಕೊನೆಗೆ ಯಾರ ಕೈಯಲ್ಲಿ ಇಸ್ಪೇಟು ಉಳಿಯುವದೋ ಅವನು ಸೋತಂತೆ ಆಗುವನು. ವಿ. ಕೆ.

ನೋಟೀಸು.

ಈ ಕೆಳಗೆ ದಸ್ಕತು ಮಾಡಿರುವವನು ತಿಳಿಯ ಪಡಿಸುವದೇನಂದರೆ:—

ರೂಪಾಯಿ ೧೦ ಮೌಲ್ಯದ ಮದ್ರಾಸ ಕರೆನ್ಸಿ ನೋಟಿನ ನಂಬ್ರ $\frac{B.\ B}{85}$ 01722ನೇ ಇನ್ನೊಂದು ತುಂಡು ಸ್ಥೈರವಿಲೆಯಾಗಿ ಅದರ ಬದಲಾಗಿ ಅಷ್ಟೆ ಮೌಲ್ಯದ ನಂಬ್ರ $\frac{B.\ B}{79}$ 25772ನೇ ತುಂಡು ನನಗೆ ಶಿಕ್ಕಿರುತ್ತದೆ. ಸದರಿ ನಂಬ್ರದ ಇನ್ನೊಂದು ತುಂಡು ಶಿಕ್ಕಿದವರು ಅದನ್ನ ನನಗೆ ಕಳುಹಿಸಿದ್ದಲ್ಲಿ ಅವರ ನಂಬ್ರದ ತುಂಡನ್ನು ಕಳುಹಿಸಿ ಕೊಡಲಾದೀತು.

ಯನ್. ತಿರ್ಮಲ್‌ರಾವ್,
ಮಂಗಳೂರು.

ಲಾಭ! ಹೊಸ ಪುಸ್ತಕ!!

ಸಚಿತ್ರ ಕಲಾತರಂಗ ೧ನೇ ಭಾಗ

8 ಅಧ್ಯಾಯಗಳಿವೆ. ಈ ಪತ್ರಿಕೆಯ ಚಂದಾದಾರರಿಗೂ, ಸ್ಕೂಲ್ಮಾಸ್ತರರಿಗೂ, ಮತ್ತು ವಿದ್ಯಾರ್ಥಿಗಳಿಗೆ ರೂ. 0-8-0ಕ್ಕೆ ದೊರೆಯುವುದು. ಇತರರಿಗೆ ರೂ.0-10-0.

ಎಂ. ಟಿ. ವಲ್ಲಭ ಐಯಂಗಾರ, ಬೀರೂರು.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಹೊಸ ಕೊಳೂರು ಮಸ್ಕತಿ ಅಕ್ಕಿ ...	4—7—0
„ ಗುಡ್ಡು ಮಸ್ಕತಿ	4—4—0
„ ಮಸ್ಕತಿ ದುಯಂ	4—0—0
„ ಹೊಸ ಗುಡ್ಡು „	3-11—0
„ ಮಸ್ಕತಿ ಬೆಳ್ತಿಗೆ „	4—8—0
ರಂಗೂನ್ ಬೆಳ್ತಿಗೆ ಗೋಣಿ	8—0—0
ಹುರುಳಿ ಗೋಣಿ ೧ ಮುಡಿ 2ರ ...	4-12—0
ಉಪ್ಪು ಗೋಣಿ ೧ರ	3—3—0
ಕೊಬ್ರಿ ಖಂಡಿ ೧ರ	105—0—0
ಕೊಬ್ರಿ ಎಣ್ಣೆ ಮಣ	7—3—0
ಕಾಫಿ ಖಂಡಿ ೧ರ	105—0—0
ಕಾಳು ಮೆಣಸು ಖಂಡಿ	125—0—0
ಬಿಳಿ ಗೋಟು ಅಡಿಕೆ	85—0—0
ಕರಿ ಗೋಟು	62—0—0

ದಯವಿಟ್ಟು ಓದಿರಿ ! ಸೌಖ್ಯವನ್ನು ಹೊಂದಿರಿ !

ಕಾಮಶಾಸ್ತ್ರ.

ಉಚಿತವಾಗಿ ಕಳುಹಿಸಲ್ಪಡುವುದು! ಕನ್ನಡದಲ್ಲಿ ಈ ಪುಸ್ತಕವು ಅಚ್ಚಾಗುತ್ತಾ ಇರುವದು. ಇದನ್ನೋದುವದರಿಂದ ದೇಹ ಮನಸ್ಸಂಬಂಧಗಳಾದ ಸಕಲ ಬಾಧೆಗಳೂ ಪರಿಹಾರವಾಗುವವು! ಆಯುರಾರೋಗ್ಯಸಂಪದಗಳುಂಟಾಗುವವು!!

ಆತಂಕ ನಿಗ್ರಹ ಮಾತ್ರೆ.

ಊಟವಾದ ಬಳಿಕ ಹಗಲಿರುಳೂ ಸೇವಿಸಬೇಕಾದದ್ದು! ಆರೋಗ್ಯಶಾಲಿಗಳಿಗೂ ರೋಗ ಪೀಡಿತರಿಗೂ ಉಪಯುಕ್ತವಾದದ್ದು.

ಈ ಮಾತ್ರೆಗಳು:—

(೧) ಜೀರ್ಣಕೋಶ ಸಂಬಂಧವಾದ ವ್ಯಾಧಿಗಳನ್ನೆಲ್ಲಾ ಪರಿಹರಿಸುವದು. (೨) ನರಗಳನ್ನು ದೃಢಪಡಿಸುವದು. (೩) ಜ್ಞಾಪಕ ಶಕ್ತಿಯನ್ನು ವೃದ್ಧಿಗೊಳಿಸುವದು. (೪) ಮೆದುಳನ್ನು ಸರಿಪಡಿಸುವದು. (೫) ಶಕ್ತಿಯನ್ನುಂಟುಮಾಡುವದು. (೬) ಪ್ರಾಣಾಧಾರಗಳಿಂದ ಅಂಗಗಳನ್ನು ಬಲಪಡಿಸುವದು. (೭) ನಷ್ಟವಾದ ಶಕ್ತಿಯನ್ನು ಮತ್ತೆ ವೃದ್ಧಿಗೊಳಿಸುವದು. ೩೨ ಮಾತ್ರೆಗಳಿರುವ ಡಬ್ಬಿ ೧ಕ್ಕೆ ರೂ. ೧—೦—೦.

ಆತಂಕನಿಗ್ರಹ ಔಷಧಾಲಯ
೨೨ ಬ್ರಾಡ್ವೇ ಮದರಾಸು.

ವೈದ್ಯ ಶಾಸ್ತ್ರಿ,
ಮಣಿಶಂಕರ ಗೋವಿಂದಜಿ.

ಶ್ರೀ

ಶ್ರೀ ಶಿವಗಂಗಾ ಮಠದ ಶ್ರೀ "ಶಾರದಾ" ಮಾಸಪತ್ರಿಕೆ.

ವಾರ್ಷಿಕ ಚಂದಾ 2—0—0 ಹಾಸಲು ಸೇರಿ.

ಜನರು ಶ್ರೀ ಶಾರದಾನುಗ್ರಹಕ್ಕೆ ಪಾತ್ರರಾಗಿ ಅದರಿಂದ ಉಂಟಾಗುವ ಜ್ಞಾನಸುಖವನ್ನು ಅನುಭವಿಸಬೇಕಾಗಿದ್ದರೆ ಶ್ರೀ "ಶಾರದಾ" ಮಾಸಪತ್ರಿಕೆಯನ್ನು ಸೇವಿಸಬೇಕು.

ಉಪನಿಷತ್ತುಗಳ ಸಾರ, ಧರ್ಮಶಾಸ್ತ್ರದ ರಹಸ್ಯ (ಧರ್ಮಸಿಂಧು-353 ವಿಷಯ), ಶ್ರೀ ಶಂಕರಾಚಾರ್ಯರ ಕಾಲ ಮತ್ತು ಚರಿತ್ರ, ಧರ್ಮನೀತಿಗಳ ಉಲ್ಲಾಸ, ಸಟೀಕ ಸ್ತೋತ್ರಾವಳಿ, ಸರಸವಾದ ಉಪನ್ಯಾಸ, ನ್ಯಾಯಗಳ ವಿಮರ್ಶೆ, ವಿವಿಧ ಸಿದ್ಧಾಂತ ವಿವರಣ, ವಿಚಿತ್ರ ಚಾಟು ಶ್ಲೋಕಗಳು, ಸನಾತನಧರ್ಮ ನೀತಿಗಳ ಸೋಪಾನ ಈ ಮುಂತಾದುವುಗಳು ಇದರಲ್ಲಿ ಪ್ರಕಾಶವಾಗುತ್ತಿವೆ.

ಈ ಪತ್ರಿಕೆಯು ದೊರೆಯುವ ಸ್ಥಳ. (ಪತ್ರೆ)

ದೊಡ್ಡಬೆಲೆ ನಾರಾಯಣ ಶಾಸ್ತ್ರಿ.
ಶ್ರೀ "ಶಾರದಾ" ಆಫೀಸು ಬೆಂಗಳೂರು ಸಿಟಿ.

1911ನೇ ವರ್ಷದ ಪಾಕೆಟ್ ಡ್ಯಾರಿ.

ಬೇಗ ತರಿಸಿಕೊಳ್ಳಿ! ನಿದಾವ ಮಾಡಿದರೆ ಶಿಗಲಾರದು!!

ಪ್ರತಿಯೊಬ್ಬ ಮನುಷ್ಯನಿಗೂ ಲೆಕ್ಕವೇ ಪ್ರಾಣಾಧಾರವಾದದ್ದು. ಇಂಥಾ ಲೆಕ್ಕವನ್ನು ನಮ್ಮ ಜೇಬಿನಲ್ಲಿಡಲು ಪ್ರತಿಯೊಬ್ಬ ಮನುಷ್ಯನಿಗೂ ಇದ್ದೇ ಇರಬೇಕಾದ ಪುಸ್ತಕವು. ಬಹಳ ಸುಲಭಕ್ರಯ. ಟಪ್ಪಾಲ್ ಖರ್ಚುಗಳು ಬೇರೆ ಬೀಳುತ್ತೆ.

ಎ. ನಂ। ಡೈರಿ ಸಾದಾ ೧ಕ್ಕೆ ೩ಆಣೆ, ಬಿ. ನಂ। ಡೈರಿ ಮುಚ್ಚಳ ಮತ್ತು ಪೆನ್‌ಸಿಲ್ ಸಹಿತ ೧ಕ್ಕೆ ೫ಆಣೆ. ಸಿ. ನಂ। ಡೈರಿ ದೊಡ್ಡದು ೧ಕ್ಕೆ ೬ಆಣೆ. ಡಿ. ನಂ। ಡೈರಿ ಮುಚ್ಚಳ ಮತ್ತು ಪೆನ್‌ಸಿಲ್ ಸಹಿತ ೧ಕ್ಕೆ ೮ಆಣೆ. ೧೨ ಡೈರಿಗಳನ್ನು ಒಂದೇ ಸಲ ತರಿಸಿಕೊಂಡರೆ ಒಂದು ಡೈರಿ ಇನಾಂ. ವ್ಯಾಪಾರಸ್ಥರಿಗೆ ಸರಿಯಾದ ಕಮಿಶನ್ ಶಿಕ್ಕುತ್ತೆ ಮತ್ತು ನಮ್ಮಲ್ಲಿ ಕನ್ನಡ ತೆಲಗು, ಸಂಸ್ಕೃತ ಪುಸ್ತಕಗಳು ಬಹಳ ಸುಲಭ ದರಕ್ಕೆ ದೊರಿಯುತ್ತದೆ.

ನಮ್ಮ ಕಂಪೆನಿ ಕ್ಯಾಟಲಾಗ್ ಮುಫತ್ತಾಗಿ ದೊರಿಯುತ್ತೆ. ಪರಾಂಬರಿಸಿ ನೋಡಿರಿ.

ಎಮ್ ಪಿ. ಮಲ್ಲಯ್ಯ.
211 ತಾಲೂಕು ಕಛೇರಿ ರಸ್ತೆ ಬೆಂಗಳೂರು ಸಿಟಿ.

ಮಂಗಳೂರು

ಚಲೋ ನಶ್ಯ ಪುಡಿ.

ತೊಲೆ ೧ಕ್ಕೆ ರೂ. ೦—೧—೦. ಸೇರು ೧ಕ್ಕೆ ರೂ. ೧—೪—೦

ಸುಗಂಧ ನಾಸಿಕ ಚೂರ್ಣ ತಲೆಪಾಸಿಗೂ ಸೀತಕ್ಕೂ ಶಿರೋಭಾರಕ್ಕೂ ಒಳ್ಳೇದು ತೊಲೆ ೧ಕ್ಕೆ ೦—೪—೦ ಸೇರು ೧ಕ್ಕೆ ರೂ. ೫—೦—೦.

ಅಪೇಕ್ಷಿಸುವವರಿಗೆ ವಿ. ಪಿ. ಮೂಲಕವೂ ಹಣ ಕಳುಹಿಸಿದವರಿಗೆ ಸೆಂಪಲ್ ಪೋಸ್ಟ್ ಮೂಲಕವೂ ಕಳುಹಿಸಿಕೊಡಬಹುದು.

ಕಾವೂರು ವೆಂಕಟೇಶ ಸುಬ್ರಾಯ ಪೈ,
ಗೋಳಿಕಟ್ಟೆ ಬಜಾರ,
ಮಂಗಳೂರು, ದ. ಕ.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಕ್ಕೆ ದೊರೆಯಲಾರದು.

ಒಳ್ಳೇ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ರೂ. 2—8—0 ಮಾತ್ರ. ರೂ. 2—8—0 ಮಾತ್ರ.

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

"ರಾಸ್ಕೋಪ್ ಸಿಷ್ಟಂ ಪೇಟೆಂಟ್ ಲೀವರ್ ಜ್ಯೂವೆಲ್ಡ್" ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರಹವಾಗಿ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇದೆ. ಇದರಲ್ಲಿ ಕೆಂಪುಗಳು ಸಹಾ ಕೆತ್ತಿ ಇರುತ್ತವೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದ್ದವುಗಳನ್ನು ರೂ. 3-8-0 ರೂ. 4-8-0. ಈ ಪ್ರಕಾರ ಹೆಚ್ಚಿನ ಕ್ರಯಗಳಿಗೆ ವಿಕ್ರಯಿಸುವರು. ಮೋಸ ಹೋಗಬೇಡಿರಿ. ನಮ್ಮಲ್ಲಿ ತರಿಸಿಕೊಂಡರೆ ತಮಗೆ ತೃಪ್ತಿಕರವಾಗಿರುವುದು. ಎರಡು (೨) ವರುಷಗಳು ಗ್ಯಾರೆಂಟಿ.

ಕ್ರಯ ರೂ. 2-8-0 ವಿ. ಪಿ. ಚಾರ್ಜು ರೂ. 0-4-0.

ಘಡಿಯಾರದ ಸರಪಣಿ. ಎಂದೆಂದಿಗೂ ಕಪ್ಪಾಗದಂತೆಯೂ ನೋಡುವದಕ್ಕೆ ಬಹಳ ಅಲಂಕಾರವಾಗಿಯೂ ಇರುವದು. ಕ್ರಯ 0-8-0 ವಿ. ಪಿ. ಚಾರ್ಜು 0-4-0.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡು ಕಂಪೆನಿ,
ಸಾಹುಕಾರ ಪೇಟೆ, ಮದ್ರಾಸು.

ಉತ್ತುಮವಾದ ಮೈಸೂರು ಸುಗಂಧ ದ್ರವ್ಯಗಳು.

ಅಂಬರ್ ಊದಬತ್ತಿ ಸೇ. ೧ಕ್ಕೆ		೬—೦—೦	A ಅರಗಜ ತೊ. ೧ಕ್ಕೆ।	೨—೦—೦
ಕಸ್ತೂರಿ ಬತ್ತಿ	ಡಿ.	೬—೦—೦	B. ಅರಗಜ ಡಿ.	೧—೦—೦
ಪುಣಗು ಬತ್ತಿ	ಡಿ.	೧—೮—೦	ಕಸ್ತೂರಿ ಬಿಲ್ಲೆ ಡಿ.	೨—೦—೦
ಗುಲಾಬಿ ಬತ್ತಿ	ಡಿ.	೧—೪—೦	ಪುಣಗು ಬಿಲ್ಲೆ	೧—೦—೦
A ಪನ್ನೀರ್ ಬತ್ತಿ	ಡಿ.	೦—೧೨—೦	ಕೇಸರಿ ಬಿಲ್ಲೆ	೦—೮—೦
B ಪನ್ನೀರ್ ಬತ್ತಿ	ಡಿ.	೦—೧೦—೦	ಮನೋರಂಜನ ತೈಲ ಶೀಸೆ ೧ಕ್ಕೆ	೦—೮—೦
ಮಸಾಲಾ ಬತ್ತಿ	ಡಿ.	೦—೬—೦	ತಾಂಬೂಲ ರತ್ನ ಡಿ.	೦—೪—೦

ಇವುಗಳಲ್ಲದೆ ಎಲ್ಲಾ ತರಹದ ಅತ್ತರ್, ನಾಶಿಕ ಚೂರ್ಣ, ಟೂತ್ ಪೌಡರ್ ಫಿತ್ತಾ, ಮೊದಲಾದವುಗಳು ಬಿಕರಿಗೆ ಸಿದ್ಧವಾಗಿವೆ. ಎಸ್. ಎಮ್. ಸುಬ್ಬರಾವ್,
ತೇರ್‌ಬೀದಿ, ಮಂಗಳೂರು.

ನಮ್ಮ ಏಜಂಟರು:— ಎಸ್. ಜಿ. ಶಂಕ್ರಪ್ಪ ಕಂಪೆನಿ, ನಾಲೂರು, ತೀರ್ಥಹಳ್ಳಿ.
ಎಲ್ಲೂರು ನಾರಾಯಣ ರಾವ್, ಧರ್ಮಸ್ಥಳ.

ಒಡೋನಾ.

ಇದು ಆಗಿಂದಾಗ್ಯೆ ಬಾಧಿಸುವ ಹಲ್ಲುನೋವಿನ ದಿವ್ಯ ಔಷಧಿಯಾಗಿದೆ. ಶಸ್ತ್ರಪ್ರಯೋಗ ಮಾಡದೆನೇ ಹಲ್ಲುನೋವು ಖಾತ್ರಿಯಾಗಿ ನಿಲ್ಲುವುದು. ಕೆಲವುಸಾರಿ ದಂತ ವೈದ್ಯರಿಂದ ಸಹ ಸಾಧ್ಯವಾಗದ ಹಲ್ಲುನೋವನ್ನು ಈ ಒಡೋನಾ ಎಂಬದು ಕ್ಷಣಮಾತ್ರದಲ್ಲಿ ಪರಿಹರಿಸುವುದು. ಈ ಭೂಲೋಕದಲ್ಲಿನ ಎಲ್ಲಾ ಹಲ್ಲುನೋವಿನ ಔಷಧಿಗಳಿಗಿಂತ ಇದು ಅತಿ ಉತ್ಕೃಷ್ಟವಾದದ್ದು. ಟಿನ್ ೧ಕ್ಕೆ ಕ್ರಯ ೨ ರೂ.

ಇಂಪೀರಿಯಲ್ ಪೈನ್ ಬಾಮ್.

ಇದರಿಂದ ಸಾಧಾರಣ ತಲೆಶಿಡಿತ ಮೊದಲುಗೊಂಡು ಎಲ್ಲಾ ತರದ ದುಸ್ತರವಾದ ರೋಗಗಳು ಸಹಾ ಗುಣವಾಗುವವು.

ವಾತ, ಸಂಧಿವಾತ, ಹರಿವಾತ, ಪಕ್ಷವಾತ, ಉಬ್ಬಸ, ಸೊಂಟನೋವು, ಗಂಟುನೋವು, ಶೀತ, ಕೆಮ್ಮು, ಉಳುಕು, ನೆಗಡಿ, ಕಟವಾತ, ಶ್ವಾಸವಾತ, ಕ್ಷಯರೋಗ, ಜಜ್ಜಿದ ಗಾಯ, ಕುತ್ತಿಗೆ ನೋವು, ರಾಜಕುರು ವಗೈರೆ ಎಲ್ಲಾ ತರದ ರೋಗಗಳಿಗೆ ಇದು ಪರಮೌಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ೧ರ ೧೦ ಆಣೆ.

ಮದ್ರಾಸ್ ಆಧಿಪತ್ಯಕ್ಕೆ ಸೋಲ್ ಏಜಂಟರು:—

ಮೆಸ್ಸರ್ಸ್ ಕೆ. ವಿಟ್ಠಳ ರಾವ್ ಎಂಡ್ ಕೋ,
ಸರ್ಟಿಫೈಡ್ ಕೆಮಿಸ್ಟ್, ಮಂಗಳೂರು, ದ. ಕ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವುದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟುಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವುದು. ರಾತಲಿಗೆ ೨ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವುದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವುದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ದೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕಸ್ತ್ರ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists*,
Vepery Post, MADRAS.

MANORA & CO'S
WONDERFUL MEDICINE FOR ALL KINDS OF PAINS.
Try to-day! ☞......Dont wait until tomorrow!!

ರೊಯಲ್ ಇಂಡಿಯನ್ ಬಾಮ್.

ಹಿಂದೂಸ್ಥಾನದ ವನಸ್ಪತಿಗಳಿಂದ ತಯಾರಿಸಲ್ಪಟ್ಟ ವೇದನಾದಾರಿ ಮಲಾಮು! ಇದರ ಉಪಯೋಗದಿಂದ:—ತಲೆನೋವು, ಶಿರೋಭಾರ, ಅರ್ಧಾಂಗವಾಯು, ವಾತ, ಸಂಧಿವಾತ, ಸೊಂಟದ ನೋವು, ಗಂಟಲುನೋವು, ಘಾಯ, ಜಖಮು, ಉಳುಕು, ಶೈತ್ಯ, ಎದೆನೋವು, ಆನೆಗಾಲು, ಬಿಜ್ಜ, ಲುತಿಘಾಯ, ಮುದ್ದಣ ಮೊದಲಾದ ಎಲ್ಲಾ ತರದ ವೇದನೆಗಳು ಸಂಪೂರ್ಣವಾಗಿ ಗುಣವಾಗುವವು!! ಸಣ್ಣ ಮಕ್ಕಳ ಎಳೆಯ ದೇಹಕ್ಕಾದರೂ ಭಯವಿಲ್ಲದೆ ಇದನ್ನು ಹಚ್ಚಬಹುದು. "ಬಾಲಗ್ರಹಪೀಡನೆಗಳಲ್ಲಿ ಇದು ಅಗ್ರಸ್ಥಾನ ಹೊಂದಿಯದೆ" ಸಾವಿರಾರು ಜನರು ಇದನ್ನು ಉಪಯೋಗಿಸುತ್ತಾರೆ. "ಇದರಿಂದ ಗುಣ ಶಿಕ್ಕುವದಿಲ್ಲವಾದರೆ ಪಣ ತಿರುಗಿ ರವಾನಿಸಿ ಕೊಡುವೆವು. ಎಲ್ಲಾ ಔಷಧಾಲಯಗಳಲ್ಲಿಯೂ, ಕೆಮಿಸ್ಟ್ರರಲ್ಲಿಯೂ ಶಿಕ್ಕುತ್ತದೆ. ಬಾಟ್ಲಿ ಒಂದರ ಕಿಮ್ಮತು 8 ಆಣೆ.

ಜಾಗ್ರತೆ:—ಇಮಿಟೇಶನ್ (ಲಕಾರಿ) ಬಾಮ್‌ಗಳನ್ನು ತೆಗೆದುಕೊಳ್ಳಬೇಡಿರಿ.

ವಿಳಾಸ:— ಮನೋರಾ ಕಂಪೆನಿ, ಗಿರಗಾಂ ಮುಂಬಯಿ.

ಅಥವಾ ಈ ಕೆಳಗಿನ ಔಷಧಾಲಯಗಳಲ್ಲಿ ಶಿಕ್ಕುವದು.
ಪ್ರಿನ್ಸ್ ಎಂಡ್ ಸನ್ಸ್ ಮಂಗಳೂರು.
ಬೇಕಲ ವೆಂಕಟ ರಾವ್, ಉಡುಪಿ.
ಬಿ. ನರಸಿಂಹ ಮಲ್ಯ ಪುತ್ತೂರು.
ಬಿ. ದತ್ತ ಬ್ರದರ್ಸ್, ಕುಂದಾಪುರ.
ಬಿ. ಎಸ್. ಮಲ್ಯಾ ರಾಮ ಪ್ರಸಾದ ಔಷಧಾಲಯ. ಬಾರಕೂರು.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒಕ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟುನೋವು, ಜಖಮ್, ಉಳುಕು, ಘಾಯುಗಳು, ಪಕ್ಷವಾತ, ಬೆನ್ನುನೋವು, ಕೈಕಾಲುಗಳಲ್ಲಿ ಆಗುವ ಎಲ್ಲಾ ತರದ ನೋವುಗಳು ಸಂಶಯವಿಲ್ಲದೆ ನಿಲ್ಲುವವು. ಡಬ್ಬಿ ೧ರ ಕ್ರಯ 0-8-0. ಆರು ಬಾಟ್ಲಿಗಳನ್ನು ಒಂದೇ ಸಾರಿ ತರಿಸಿಕೊಂಡರೆ 2-8-0.

ಇನ್ನೂ ಅನೇಕ ಔಷಧಗಳು ಇರುವದರಿಂದ ಬೇಕಾದವರು ಕೆಟಲಾಗಿಗೆ ಬರಿಯಿರಿ.

ವಿ. ಪಿ. ಖರ್ಚು ಪ್ರತ್ಯೇಕ. ವಿಳಾಸ:—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು, ದ. ಕ.

ನೇತ್ರಬಿಂದು

ಇದು ಕಣ್ಣಿನ ದೃಷ್ಟಿಮಾಂದ್ಯ, ಕಣ್ಣೀರು ಸೋರುವಿಕೆ, ಕಣ್ಣಿನ ಮೂಲೆ ತುರಿಸುವಿಕೆ, ಕೆಂಗಣ್ಣು, ರೆಪ್ಪೆ ಉದುರುವಿಕೆ ಈ ಮೊದಲಾದ ರೋಗಗಳಿಗೆ ಸಿದ್ಧೌಷಧವು. ಕ್ರಯ ಬಾಟ್ಲಿ ೧ರ ರೂ. 0—8—0 ವಿ. ಪಿ. 0—4—0.

ಸಿದ್ಧಲಕ್ಷ್ಮೀವಿಲಾಸ—ಇದು ಒಳ್ಳೇ ರಕ್ತಶುದ್ಧಿ ಮಾಡುತ್ತದೆ. ಕ್ರಯ ಬಾಟ್ಲಿ ೧ರ 0-12-0 ವಿ. ಪಿ. 0—4—0.

ಇದು ವಿನಹ ಇಲ್ಲಿ ಆಸವಗಳೂ, ಅರಿಷ್ಟಗಳೂ, ಘೃತಗಳೂ, ಲೇಹಗಳೂ, ಚೂರ್ಣಗಳೂ, ತೈಲ್ಯಗಳೂ, ಮಾತ್ರೆಗಳೂ, ಭಸ್ಮಗಳೂ ವಗೈರೆ ದೊರೆಯುತ್ತವೆ.

ವಿಳಾಸ:— ಧನ್ವಂತರಿ ಆಯುರ್ವೇದಿಕ್ ಔಷಧಾಲಯ,
ಮಂಗಳೂರು.

"ಚಮತ್ಕಾರ ಚಿಂತಾಮಣಿ"

ಶಬ್ದ ಚಮತ್ಕಾರ ಅರ್ಥ ಚಮತ್ಕೃತಿಗಳಿಂದೊಡಗೂಡಿ ಮೃದುಮಧುರ ಶೈಲಿಯಿಂದ ಸಹಿತವಾಗಿ, ಧರ್ಮನೀತಿ ಜ್ಞಾನಗಳನ್ನೂ ವಿಶದಪಡಿಸುತ್ತಿರುವ ರಸಭರಿತವ ದ ಈ ಕಥೆಯನ್ನೊದತಕ್ಕವರು ರಾಮಾಯಣದಲ್ಲಿನ ಹೆಸರುಗಳನ್ನು ಮಾತ್ರ ಜ್ಞಾಪಿಸಿಕೊಂಡು ಇಲ್ಲಿ ಹೊಂದಿಸಿಕೊಂಡರೆ ಮುಂದೆ ಇದರಲ್ಲಿನ ಸವಿಯು ಬೇಗನೆ ಗೊತ್ತಾಗುತ್ತದೆ. ಕ್ರಯ ರೂ. 0—10—0.

"ವಿದ್ಯಾನಂದ' ಗ್ರಂಥಮಾಲಾ.

ಮಹಾಕವಿ ಕಾಳಿದಾಸಕೃತ
"ರಘುವಂಶ ಮಹಾಕಾವ್ಯ"

ತಾನಾಗಿ (ಸ್ವತಃ) ಸಂಸ್ಕೃತವನ್ನು ಕಲಿತುಕೊಳ್ಳುವವರಿಗೂ ಸಂಸ್ಕೃತ ವಿದ್ಯಾರ್ಥಿಗಳಿಗೂ ಉಪಯುಕ್ತವಾಗಿರುವಂತೆ ಶ್ಲೋಕ, ಪದ, ಶಬ್ದ, ಅನ್ವಯ, ಅರ್ಥ, ಆಕಾಂಕ್ಷೆ, ವಿಗ್ರಹ, ಧಾತು ರೂಪ, ಧಾತ್ವರ್ಥ, ವ್ಯಾಕರಣ ವಿಷಯ, ವಿಶೇಷ ನಿಯಮಗಳು ಇವುಗಳೊಂದಿಗೆ ಮೊದಲನೆ ಸರ್ಗ ಪ್ರಿಂಟಾಗಿ ಸಿದ್ಧವಾದೆ. ಬೆಲೆ 1—0—0.

ಮುಕುಂದಮಾಲಾ ಸ್ತೋತ್ರ.

ಹಟ್ಟಿ ಪಾಠಗಳೊಂದಿಗೆ ಪ್ರತಿ ಪದ ಅರ್ಥ, ಅನ್ವಯಾರ್ಥ, ತಾತ್ಪರ್ಯ ಸಹ ಇರುತ್ತದೆ. ಬೆಲೆ 0—4—0.

ವಿಳಾಸ:— ಮ್ಯಾನೇಜರ್,
ವಿದ್ಯಾನಂದ ಆಫೀಸು,
ಚಿಕ್ಕಪೇಟೆ ಬೆಂಗಳೂರು ಸಿಟಿ.

೧೯೧೧ನೇ ದಿ "ಮಾಡಲ್" ಪಾಕೆಟ್ ಡೈರಿ.

ವಿವರಣೆ.

ನಂ. 1. ಪಂಚಾಂಗಸಹಿತವಾದ ಚಿಕ್ಕ ಸೈಜ್ ಡೈರಿ 3 ಅಂಗುಲ, ಅಗಲ 4½ ಉದ್ದವಿರುವ 540 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 4ಆಣೆ.

ನಂ. 2. ಡಿಟೊ ಮೇಲ್ಮಂಡ ಚಿಕ್ಕ ಸೈಜ್ ಪ್ಲಾಪ್ ಬೈಂಡು ಮಾಡಿರುವುದು. ಅಂದರೆ ಒಂದುಪಕ್ಕದಲ್ಲಿ ನೋಟು, ರಶೀದಿ, ಸ್ಟಾಂಪು ವಗೈರೆ ಇಡುವುದಕ್ಕೆ ಜೇಬವಿದೆ. ಮೇಲಗಡೆ ಮುಚ್ಚುವದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್ಸಿಲ್ ಇಟ್ಟಿದೆ. ಇದರ ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 3. ಪಂಚಾಂಗಸಹಿತವಾದ ದೊಡ್ಡ ಸೈಜ್ ಡೈರಿ 4½ ಅಂಗುಲ ಅಗಲ 7 ಅಂಗುಲ ಉದ್ದವಿರುವ 490 ಪುಟವುಳ್ಳದ್ದು. ಕ್ರಯ ಪ್ರತಿ 1ಕ್ಕೆ 6ಆಣೆ.

ನಂ. 4. ಡಿಟೊ ಮೇಲ್ಮಂಡ ದೊಡ್ಡ ಸೈಜ್. ಪ್ಲಾಪ್ ಬೈಂಡು ಮಾಡಿರುವದು ಅಂದರೆ ಒಂದು ಪಕ್ಕದಲ್ಲಿ ನೋಟು, ರಶೀದಿ, ಕಾರ್ಡು, ಕವರು, ಸ್ಟಾಂಪು ವಗೈರೆ ಇಡುವುದಕ್ಕೆ ಜೇಬ ಇರುತ್ತದೆ. ಮೇಲ್ಗಡೆ ಮುಚ್ಚುವುದಕ್ಕೆ ಮುಚ್ಚಳ ಹಾಕಿದೆ. ಒಂದಾಣೆ ಕ್ರಯ ಬಾಳುವ ಪೆನ್ಸಲ್ ಇಟ್ಟಿದೆ. ಕ್ರಯ ಪ್ರತಿ 1ಕ್ಕೆ 8 ಆಣೆ.

ನಂ. 5. ಆಫೀಸರ್ಸ್ ಹ್ಯಾಂಡ್ ಡೈರಿ 1—0—0.

ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಇದು ಸಕಾಲವಾಗಿದೆ.

ಕೂಡಲೇ ಬರೆದು ತರಿಸಿಕೊಳ್ಳಿರಿ

N. B:—1. ಒಂದೇ ನಮೂನೆಯಲ್ಲಿ 12 ಡೈರಿಗಳನ್ನು ತರಿಸಿಕೊಂಡರೆ 1ರ ರಿಯನ್ನು ಬಹುಮಾನವಾಗಿ ಕೊಡುತ್ತೇವೆ. 2. ವಿ.ಪಿ. ಮೂಲಕ ತರಿಸಿಕೊಳ್ಳುವವರು ಪೋಸ್ಟು ಚಾರ್ಜು ಮತ್ತು ವಿ.ಪಿ. ಕಮಿಶನ್ ಸಹ ಬೇರೆ ಕೊಡಬೇಕು. 3. ಹೆಚ್ಚು ವಿಷಯ ತಿಳಿಯಲಪೇಕ್ಷಿಸುವವರು ರಿಪ್ಲೈ ಕಾರ್ಡನ್ನಾಗಲಿ ಅರ್ಧಾಣೆ ಪೋಸ್ಟು ಲೇಬಲನ್ನಾಗಲಿ ಮುಂಗಡ ಕಳುಹಿಸಬೇಕು. 4. ಎಷ್ಟು ಜಾಸ್ತಿ ಪ್ರತಿಗಳನ್ನು ತರಿಸಿಕೊಳ್ಳುವರೋ ಅಷ್ಟು ಪೋಸ್ಟುಚಾರ್ಜು ಕಮ್ಮಿ ಆಗುವದು. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಆಫೀಸರ್ಸ್ ಪ್ಯಾನಿಸೀ ಹ್ಯಾಂಡ್ ಡೈರಿ ಎಂಬುವ ಹಸನಾದ ಕಾಗದದಿಂದಲೂ ಮತ್ತು ಒಳ್ಳೇ ಕ್ಯಾಲಿಕೊನಿಂದಲೂ ಸಹಾ ತಯಾರುಮಾಡಿರುತ್ತದೆ.

ಮೆತ್ತೆಗಳು, ಮತ್ತು ಮೇಜಿನ ಚೌಕಗಳು, ವಗೈರೆಯವುಗಳ ಮೇಲೆ ಚಿತ್ರವಿಚಿತ್ರವಾದ ಕಸೂತಿ ಕೆಲಸವನ್ನು ಮಾಡಲು ಅನುಕೂಲವಾದ "ಕೈ ಮೆಷಿನ್"ಗಳು, ನಾನಾ ನೆಗಳು ಮತ್ತು ಇದಕ್ಕೆ ಅನುಕೂಲವಾದ ರೇಶ್ಮೆ ಮತ್ತು ಉಲನ್‌ದಾರಗಳು, ಸೂಜಿಗಳು, ಕತ್ತರಿಗಳು, ಚೌಕಟ್ಟುಗಳು ವಗೈರೆ ವಿಶಿಷ್ಟ ಸಾಮಾನುಗಳು, ಸ್ಟೈಜುವಾರಿ ಕಸೂತಿ ಕರ್ಮಗಳು ಕಲ್ಪತ್ತೆಯ ಕಾಟಲಾಗ್ ಕ್ರಯಕ್ಕೆ ಇಲ್ಲಿ ದೊರೆಯುತ್ತವೆ.

ಎಲ್. ಎ. ಬೋರುವಾಲ್ ಕಂಪೆನಿ,
ಬೆಂಗಳೂರು ಸಿಟಿ.

ವಿಕ್ರಯಕ್ಕೆ ಸಿದ್ಧವಾಗಿರುವುದು.

ಶ್ರೀ ಚಿಕ್ಕುಪಾಧ್ಯಾಯರಿಂದ
ವಿರಚಿತವಾದ

"ಶ್ರೀ ಶುಕಸಪ್ತತಿ"

(ಡಮ್ಮಿ ಅಷ್ಟಪುಟ—ಒಟ್ಟು ಪುಟಗಳು ೫೬೦).

ಈ ಗ್ರಂಥವು ಈಗ ಮೂರನೇ ಸಲ ಮುದ್ರಣದಲ್ಲಿ ಪೂರ್ವ ಪ್ರತಿಯಲ್ಲಿದ್ದಂತೆ ಯಾವ ದೋಷವೂ ಇಲ್ಲದೆ ನೂತನವಾಗಿ ಪರಿಷ್ಕರಿಸಿ ಪ್ರಕಟಿಸಲ್ಪಟ್ಟಿದೆ.

ಮೇಲು ಪ್ರತಿ ೧ಕ್ಕೆ ಕ್ರಯ ರೂ. ೨—೦—೦
ಉತ್ತಮ ಪ್ರತಿ „ ರೂ. ೩—೦—೦

ವಿಶೇಷವಾಗಿ ನಮ್ಮ ದೇಶದಲ್ಲಿ ಕನ್ನಡ ಭಾಷೆಯನ್ನು ಬಲ್ಲ ಪ್ರತಿಯೊಬ್ಬ ಗೃಹಸ್ಥರ ಮನೆಯಲ್ಲಿಯೂ, ಗೃಹಪತಿಗಳು ತಮ್ಮ ಕುಟುಂಬದಲ್ಲಿ ಹೆಂಗಸರು, ಗಂಡಸರು, ಪ್ರಾಯದವರು, ಮುದುಕರು, ಹುಡುಗರು, ಹುಡುಗಿಯರು ವೇದಸಮ್ಮತವಾದ ಮತಾಚಾರಗಳನ್ನೂ, ಧರ್ಮಗಳನ್ನೂ, ಸಂಪ್ರದಾಯಗಳನ್ನೂ, ತಿಳಿದುಕೊಂಡು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಸಂತೋಷವನ್ನು ಅನುಭವಿಸುತ್ತಾ ಆಸ್ತಿಕರಾಗಿರಬೇಕೆಂದು ಅಪೇಕ್ಷೆ ಇದ್ದರೆ ಈ ಪುಸ್ತಕವನ್ನು ಅವಶ್ಯಕವಾಗಿ ತೆಗೆದುಕೊಡಬೇಕು.

ಭಾಷ್ಯಂ. ರಾಮಾಚಾರ್ಯ,
೪೫. ಆಸ್ಪತ್ರೆ ರೋಡ್,
ಬೆಂಗಳೂರು ಶಹರು.

ಕುಂತಳ ಕೌಮುದಿ ತೈಲ.

ಕುಚ್‌ಬಿಹಾರದ ಮಹಾರಾಣಿಯವರು—ಅವರು ಉಪಯೋಗಿಸಿದ ಕೇಶವರ್ಧನ ತೈಲಗಳಲ್ಲೆಲ್ಲಾ ಇದೇ ಅತ್ಯುತ್ತಮವಾದುದು.

ಮೈಮೆನ್‌ಶಿಂಗ್ ಮಹಾರಾಣಿಯವರು—ಅವರು ಇದನ್ನು ಪ್ರತಿನಿತ್ಯವೂ ಉಪಯೋಗಿಸುತ್ತಾರೆ.

ಹಧ್ವಾ ಮಹಾರಾಣಿಯವರು—ಇದನ್ನು ಅವರ ಮಕ್ಕಳು ಉಪಯೋಗಿಸುತ್ತಾರೆ.

ಶ್ರೀ ಬಾಲಗಂಗಾಧರ ತಿಲಕರವರು—ಇದು ಅನೇಕ ವೈದ್ಯಗುಣವುಳ್ಳ ತೈಲವೆಂದು ಶಿಫಾರಸು ಮಾಡುತ್ತಾರೆ.

ಶ್ರೀ ಸುರೇಂದ್ರನಾಥ ಬಾನರ್ಜಿಯವರು—ನಾನು ಉಪಯೋಗಿಸಿದ್ದೇನೆ; ಸರ್ವರೂ ಇದನ್ನು ಉಪಯೋಗಿಸಬಹುದು.

ಕುಂತಳ ಕೌಮುದಿ ತೈಲ—ಪ್ರತಿನಿತ್ಯವೂ ಸ್ನಾನ ಮಾಡುವುದಕ್ಕೂ ತಲೆಬಾಚಿಕೊಳ್ಳುವದಕ್ಕೂ ಅತ್ಯಂತ ಉಪಯುಕ್ತವಾದದ್ದು. ಇದರಲ್ಲಿ ಆಶ್ಚರ್ಯಕರವಾಗಿ ಕೂದಲನ್ನು ಬೆಳಸುವ ಗುಣಗಳಿರುವದಲ್ಲದೆ ಇದು ಮಿದುಳಿಗೆ ತಂಪನ್ನೂ ಮನಸ್ಸಿಗೆ ಆಹ್ಲಾದವನ್ನೂ ಉಂಟುಮಾಡುತ್ತದೆ. ಇದು ಮನೋಹರವಾದ ಸುಗಂಧವುಳ್ಳದಾದುದರಿಂದ ಉಪಯೋಗಿಸುವವರಿಗೆ ಹರ್ಷವನ್ನುಂಟುಮಾಡುವುದು. ಇದುವರೆಗೆ ಮಾರಾಟಕ್ಕೆ ಬಂದಿರುವ ತೈಲಗಳಲ್ಲೆಲ್ಲಾ ಇದೇ ಅತ್ಯಂತ ಸುಲಭ ಕ್ರಯವುಳ್ಳ ಮತ್ತು ಉತ್ತಮೋತ್ತಮವಾದುದು. ೭ ಔನ್ಸುಗಳುಳ್ಳ ಸೀಸೆ ಒಂದಕ್ಕೆ ೧೨ ಆಣೆಗಳು.

ಕವಿರಾಜ ಆರ್. ಸಿ. ಸೆನ್, ಎಲ್. ಎಮ್. ಎಸ್.,
216 ಕಾರನ್‌ವಾಲಿಸ್ ಬೀದಿ. ಕಲ್ಕತ್ತಾ.

ಟೆಲಿಗ್ರಾಫ್ ವಿಳಾಸ:—"ಕೌಮುದಿ"

ಮೈಸೂರು ದೇಶಕ್ಕೆ ಏಜಂಟರು:—ಎಲ್. ಎ. ಬೋರುವಾಲ್ ಎಂಡ್ ಕೊ,
ಚಿಕ್ಕಪೇಟೆ, ಬೆಂಗಳೂರು.

ಮಂಗಳೂರಿಗೆ ಏಜಂಟರು:—ಮು। ರಾ। ರಾ। ಸಿ. ಆರ್. ಕಾಮತರು,
ಉಲನ್ ಮಾರ್ಕೆಟ್, ಮಂಗಳೂರು.

POCKET DIARIES
FOR 1911.
1911ನೇ ಇಸವಿಯ ಪೋಕೆಟ್ ಡ್ಯಾರಿಗಳು.

ವಕೀಲರಿಗೂ, ವಕೀಲರ ಗುಮಾಸ್ತರಿಗೂ ಉಪಯುಕ್ತವಾಗಿದ್ದು ಇತರ ಎಲ್ಲಾ ವ್ಯವಹಾರಿಗಳಿಗೆ ಅವಶ್ಯಕವಾಗಿರುವ ವಿಷಯಗಳನ್ನೂ ಒಳಕೊಂಡಿರುವವು.

ನೋಟು ಬೂಕು ಸೈಜು ಕ್ರಯ ರೂ. ೦—೮—೦

ಸಣ್ಣ ಸೈಜು ಕ್ರಯ ರೂ. ೦—೪—೦

ಹೆಚ್ಚು ಪ್ರತಿಗಳನ್ನು ತಕ್ಕೊಳ್ಳುವ ವ್ಯಾಪಾರಸ್ಥರಿಗೆ ವ ಇತರರಿಗೆ ಒಳ್ಳೇ ಕಮಿಷನ್ ದೊರಕುವದು.

ಅಪೇಕ್ಷಕರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಪ್ರೆಸ್,
ಮಂಗಳೂರು ದ.ಕ.

ಲೆಕ್ಕದ ಪುಸ್ತಕಗಳನ್ನು ತರಿಸಿಕೊಳ್ಳುವಾಗ ಇತ್ತ ಕಡೆ ಲಕ್ಷ್ಯ ಕೊಡಿ!

ಲೆಕ್ಕದ ಪುಸ್ತಕಗಳು.

ಸ್ಟಿಫ್ ಕವರ್	ಹಾಫ್ ಬೈಂಡ್	ಫುಲ್ ಬೈಂಡ್
(ಪಕ್ಕೆಗೆ ಮಾರ್ಬಲ್ ಬೆನ್ನಿಗೆ ಕೆಲಿಕೊ.)	(ಪಕ್ಕೆಗೆ ಮಾರ್ಬಲ್ ಬೆನ್ನು ವ ಮೂಲೆಗಳಿಗೆ ಚರ್ಮ.)	(ಪೂರ್ಣ ಚರ್ಮ.)

ಈ ಮೂರು ವಿಧವಾಗಿ ಜಮಾ ಖರ್ಚಿನ ರಿಖಾನೆಗಳಿದ್ದು ಗೆರೆಗಳುಳ್ಳವುಗಳು.

$3'' \times 8\frac{1}{4}''$, $3'' \times 5\frac{1}{4}''$; $8\frac{1}{4}'' \times 6\frac{1}{2}''$, $6\frac{1}{2}'' \times 4''$ ಪರಿಮಾಣದಲ್ಲಿದ್ದು ಸಾವುಕಾರ, ಅಂಗಡಿಗಾರ, ವರ್ತಕದಾರ ವ ಆಪೀಸರರುಗಳಿಗೆ ಬೇಕಾದ ನಮೂನೆಯಲ್ಲಿ ತಯ್ಯಾರಿಸಲ್ಪಟ್ಟಿರುವವು.

ಉಪಯೋಗಕ್ಕೆ ಖಾತ್ರಿಯಾಗಿದ್ದು

ಬಹಳ ಸಮಯದ ವರೇಗೆ ಹಾಳಾಗದ ಫೂಲ್ಸ್‌ಕ್ಯಾಪ್ ಕಾಗದದಿಂದಲೇ ತಯ್ಯಾರಿಸಲ್ಪಟ್ಟಿರುತ್ತವೆ.

ಇದೇ ಕಾಗದದ ಗೀಟು ಇಲ್ಲದ ಮೇಲಿನ ಎಲ್ಲಾ ಸೈಜುಗಳಲ್ಲಿ ಖಾಲಿ ಪುಸ್ತಕಗಳು ಸಹಾ ತಯ್ಯಾರಿರುವವು.

ಲೆಕ್ಕದ ಪುಸ್ತಕಗಳನ್ನು ಖರಿದಿ ಮಾಡುವ

ಸಾಹುಕಾರರಿಗೆ ಬೇಕಾದ ಮಾಹಿತಿ:—

ಮೇಲೆ ನಮೂದಿಸಿದ ಪುಸ್ತಕಗಳೆಲ್ಲವುಗಳನ್ನು ನಾವು ಇತ್ತಲಾಗೆ ತರಿಸಿದ ಉತ್ಕೃಷ್ಟವಾದ ಮಾರ್ಬಲ್, ಚರ್ಮ, ಕೆಲಿಕೊ ಮೊದಲಾದವುಗಳಿಂದ ಗಿರಾಕಿಗಳಿಗೆ ಬೇಕಾದ ರೀತಿಯಲ್ಲಿ ರಖಂ ದರಗಳಲ್ಲಿ ತಯ್ಯಾರಿಸಿಕೊಡುವೆವು.

ನಮ್ಮ ದರಗಳಿಗೆ ದಯಮಾಡಿ ಬರಕೊಳ್ಳಿ. ಮೆನೇಜರ್,
ಶಾರದಾ ಮುದ್ರಾಲಯ ಮಂಗಳೂರು.

ಶಾರದಾ ಛಾಪಖಾನೆ

ಕೋರ್ಟಿನ ಫೋರ್ಮು, ವಿವಾಹ ಪತ್ರಿಕೆ, ಸಾಹುಕಾರರ ಬಿಲ್ಲುಬುಕಗಳು ಯಾ ಇತರ ನಮೂನೆಯ ಫೋರ್ಮುಗಳು.

ಸಂಸ್ಕೃತ ಇಂಗ್ಲಿಷ್ ಕನ್ನಡ ಪುಸ್ತಕಗಳನ್ನು ಬೇರೆ ಬೇರೆ ಸೈಜುಗಳಲ್ಲಿ ಅಚ್ಚು ಹಾಕುವುದು.

ಪುಸ್ತಕ ಬ್ಯಾಂಡು ವ ಲೆಕ್ಕಾಚಾರಕ್ಕೆ ಬೇಕಾದ ಶಿರ್ನಾಮೆಗಳು ಖಾನೆಗಳಿದ್ದು 'ರೂಲಿಂಗ್' ಯಾ ಗೀಟು ಹಾಕುವುದು.

ಇವೆಲ್ಲ ಕೆಲಸಗಳು ಅಗ್ಗವಾದ ದರದಿಂದ ಸಸಾಗಿ ಮಾಡಲ್ಪಡುವವು.

ಪತ್ರಗಳನ್ನು ಬರಿಯುವ ವಿಳಾಸ:—
ಮ್ಯಾನೇಜರ್,
ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಮಂಗಳೂರು.

Printed & published by V. S. Kamath, at the Mangalore Trading Association's Sharada Press, Mangalore.

ಸ್ವದೇಶಾಭಿಮಾನಿ

ಮಂಗಳೂರು. ಶುಕ್ರವಾರ ತಾರೀಕು 5ನೇ ಜನವರಿ 1912.

ಕಲ್ಕತ್ತೆಯ ಕೊಂಗ್ರೆಸು ಮಹಾಸಭೆ.

ಇಂಡಿಯನ್ ನೇಶನಲ್ ಕೊಂಗ್ರೆಸ್ ಯಾ ರಾಷ್ಟ್ರೀಯ ಸಭೆಯ ಮುಖ್ಯ ಉದ್ದಿಶ್ಯಗಳು ಯಾವವೆಂದರೆ:—(1) ಭಾರತೀಯರನ್ನು ಏಕೀಕರಿಸಿ ಒಂದು ಜನಾಂಗವನ್ನಾಗಿ ಮಾಡುವದು. (2) ರಾಜ್ಯಭಾರದ ಸ್ಥಿತಿಯನ್ನು ಪರಿಗಣಿಸಿ ಅದರಲ್ಲಿ ತೋರುವ ಕುಂದುಕೊರತೆಗಳನ್ನು ಸರಕಾರಕ್ಕೆ ಅರಿಕೆಮಾಡಿ ಸರಿಪಡಿಸ ನೋಡುವದು. (3) ಜನರಿಗೆ ಅವರ ರಾಷ್ಟ್ರೀಯ ಹಕ್ಕು ಸ್ವಾತಂತ್ರ್ಯ ವ ಜವಾಬ್ದಾರಿಗಳನ್ನು ವಿವರಿಸಿ ದೇಶದ ರಾಜಕೀಯ ಅಭಿವೃದ್ಧಿಗೆ ಕೈಕೊಟ್ಟು ಜನರನ್ನು ಕ್ರಮೇಣ ಸ್ವರಾಜ್ಯಪದಕ್ಕೆ ಅರ್ಹರನ್ನಾಗಿ ಮಾಡುವದು. ಕೊಂಗ್ರೆಸು ಸಭೆಯು ವರ್ಷಕ್ಕೊಮ್ಮೆ ಕೂಡುವದಾದರೂ ಆ ಸಭೆಯಲ್ಲಿ ಭರತಖಂಡದ ನಾಲ್ಕು ಕಡೆಗಳಿಂದಲೂ ವಿವಿಧ ಕುಲಗೋತ್ರಜರೂ ವಿವಿಧ ಮತಾಭಿಮಾನಿಗಳೂ ವಿವಿಧ ಭಾಷೆಗಳನ್ನಾಡುವವರೂ ಒಂದಾಗಿ ಒಂದೇ ಉದ್ದಿಶ್ಯದಿಂದ ಪ್ರವರ್ತಿಸುವದರಿಂದ ತಮ್ಮ ಒಳಭೇದಗಳಿಗಿಂತಲೂ ರಾಷ್ಟ್ರೀಯ ಐಕ್ಯವು ಹೆಚ್ಚಿನದು, ರತ್ನಮಾಲೆಯ ವಿವಿಧ ರತ್ನಗಳನ್ನು ಒಂದೊಂದಾಗಿ ಪೋಣಿಸುವ ರೇಶ್ಮೆಯ ಹಗ್ಗದಂತೆ ತಮ್ಮೆಲ್ಲರಲ್ಲಿ ಜನ್ಮಭೂಮಿಯೆಂಬ ಮಾತೃವಾತ್ಸಲ್ಯವು ಬಂಧು ಸ್ನೇಹವನ್ನು ಹುಟ್ಟಿಸಿ ಸರ್ವರನ್ನು ಏಕೀಕರಿಸುವದೆಂಬ ವಿಷಯವು ಪ್ರತ್ಯಕ್ಷ ಪ್ರಮಾಣಿಸಲ್ಪಡುವದು. ರಾಜ್ಯಭಾರ ಕ್ರಮವನ್ನು ತಿದ್ದುವ ಸ್ವತಂತ್ರವಾಗಲೀ ರಾಜ್ಯಕಾರ್ಯದಲ್ಲಿ ಪ್ರವೇಶವಾಗಲೀ ಕೊಂಗ್ರೆಸು ಸಭೆಗೆ ಇಲ್ಲದಿದ್ದರೂ ಈ ಸಭೆಯ ವರ್ತನ (ಪ್ರೊಸಿಡಿಂಗ್ಸ್) ದ ಮೂಲಕ ಸರಕಾರಕ್ಕೆ ಪ್ರಜಾಭಿಪ್ರಾಯವು ಯಾವ ರೀತಿಯಿದೆ ಎಂದು ತಿಳಿದು ಬರುವುದರಿಂದಲೂ ವಿವೇಕಿಯಾದ ಯಾವ ರಾಜ್ಯಭಾರವೂ ಪ್ರಜಾಭಿಮತವನ್ನು ಆದಷ್ಟು ಮಟ್ಟಿಗೆ ಅನುಸರಿಸುವದರಿಂದಲೂ ಕೊಂಗ್ರೆಸು ಸಭೆಯು ರಾಜ್ಯಾಧಿಕಾರಿಗಳಿಗೆ ಒಂದು ವಿಧದಲ್ಲಿ ಮಾರ್ಗದರ್ಶಿಯಾಗುವದು. ಯಾಕಂದರೆ ಕೊಂಗ್ರೆಸ್ ಸಭಾಸದರನ್ನು ಪ್ರಜೆಗಳು ಆರಿಸದಿದ್ದರೂ ಸಭಾಸದರು ಪ್ರಜಾ ಜನರ ಪೈಕಿ ವಿದ್ಯಾಬುದ್ಧಿ ವಿವೇಕ ಸಂಪನ್ನರೂ ರಾಜಕಾರ್ಯ ವಿಶಾರದರೂ ಆಗಿರುವದರಿಂದ ಅವರನ್ನು ನಿಜವಾದ ಪ್ರಜಾ ಪ್ರತಿನಿಧಿಗಳೆಂದು ಕರೆಯಬಹುದು. ನಮ್ಮ ಅಭಿವೃದ್ಧಿಗೆ ಸರಕಾರದಿಂದ ಯಾವ ತರದ ಸಹಾಯ ಬೇಕೆಂಬ ವಿಷಯವು ಈ ರಾಷ್ಟ್ರೀಯ ಸಭೆಯಲ್ಲಿ ಚರ್ಚಿಸಲ್ಪಡುವುದರಿಂದಲೂ ತಮ್ಮ ಅಂತಿಮ ಲಕ್ಷವಾದ ಸ್ವರಾಜ್ಯವೆಂಬ ಆದರ್ಶವು ಕಣ್ಮರೆಯಾಗದಂತೆ ಅದನ್ನು ಕಾಲಕಾಲಕ್ಕೆ ಜನರ ಮುಂದಿಡುವದರಿಂದಲೂ ಈ ಮಹಾಸಭೆಯು ಜನರ ಪ್ರಯತ್ನಗಳು ಯಾವ ದಿಕ್ಕನ್ನನುಸರಿಸಬೇಕೆಂದು ತೋರಿಸಿಕೊಟ್ಟು ಪ್ರಜೆಗಳಿಗೂ ಮಾರ್ಗದರ್ಶಿಯಾಗುವದು.

ಈ ಸಾರಿ ಕೊಂಗ್ರೆಸು ಸಭೆಯು ಕಲ್ಕತ್ತೆಯಲ್ಲಿ ಕೂಡಿದ್ದು ಉಚಿತ ಸಂದರ್ಭವೆನ್ನಬೇಕು. ಆರು ವರುಷಗಳ ವರೆಗೆ ಅನೇಕ ಸಂಕಷ್ಟಗಳನ್ನನುಭವಿಸಿದನಂತರ ವಂಗವಿಭಜನೆಯು ರದ್ದಾಗಿ ಬಂಗಾಳವು ಮುಂಚಿನಂತೆ ಈ ವರ್ಷ ಒಂದಾಯಿತು. ಬಂಗಾಳ ಸಂಸ್ಥಾನವು ಮೊದಲನೇ ಸಾರಿ ಒಬ್ಬ ಗವರ್ನರರ ಕೈಕೆಳಗಿಡಲ್ಪಟ್ಟಿದೆ. ಕಲ್ಕತ್ತೆಯು ಭರತಖಂಡದ ರಾಜಧಾನಿಯನ್ನಿಸುವ ಕಡೇ ಕಾಲವೂ ಇದೇ. ಬಂಗಾಳ ಸಂಸ್ಥಾನವು ಇನ್ನೊಮ್ಮೆ ಒಂದಾಯಿತು. ಬಂಗಾಳಿಗಳ ಮಹಾ ಸಂಕಷ್ಟವು ಪರಿಹಾರವಾಯಿತೆಂಬ ಆನಂದವು ಆಮಂತ್ರಣ ಸಭೆಯ ಅಧ್ಯಕ್ಷರಾದ ಬಹುಮಾನವಂತ ಬಾಬುಉಪೇಂದ್ರನಾಥಬಾಸುರವರ ಭಾಷಣದಲ್ಲಿ ವ್ಯಕ್ತವಾಗುವದು. ಈ ಆನಂದವನ್ನಿತ್ತ ಸಾರ್ವಭೌಮ ಜೋರ್ಜ ಚಕ್ರವರ್ತಿಗಳನ್ನೂ ಚಕ್ರವರ್ತಿನಿಯವರನ್ನೂ ಸ್ಟೇಟ್ ಸೆಕ್ರಿಟರಿಗಳಾದ ಕ್ರ್ಯೂಪ್ರಭುಗಳನ್ನೂ ವೈಸರಾಯಿಯವರನ್ನೂ ಬಾಸುರವರು ಹರಸಿದರು. ತಮ್ಮ ಜನಾಂಗದ ಅದೃಷ್ಟವು ಕ್ರೂ ಪ್ರಭುಗಳ ಕೈಯಲ್ಲಿದೆಯೆಂದೂ ೩೦೦ ಮಿಲಿಯ ಭಾರತೀಯರ ಭವಿಷ್ಯವನ್ನು ನಿರ್ಧರಿಸುವ ಸ್ವಾತಂತ್ರ್ಯ ಅವರಿಗೆ ಸೇರಿದೆಯೆಂದೂ ಅವರು ಟೀಕಿಸಿದ್ದು ವಾಸ್ತವಿಕವೇ. ಇಷ್ಟು ಜವಾಬ್ದಾರಿಯುಳ್ಳ ಅಧಿಕಾರಿಯು ಹಿಂದೂಸ್ಥಾನವನ್ನೂ ಅದರ ಜನರನ್ನೂ ಒಮ್ಮೆಯಾದರೂ ಕಣ್ಣಾರೆ ಕಾಣುವದು ಅವಶ್ಯಕವೆಂದೂ ಆಗ್ಯೆ ಇಂಡಿಯಾ ಸರಕಾರದವರ ರಾಜ್ಯಭಾರ ಕ್ರಮವನ್ನು ಸ್ವಾನುಭವ ಮೂಲಕ ತಿದ್ದಲನು[illegible]ಲವಾಗುವದೆಂದೂ ಯಾರೂ ಒಪ್ಪದಿರರು. ಈ ಬಾರಿ ಏನೋ ಚಕ್ರವರ್ತಿಗಳ ಆಗಮ[illegible] ಸಂದರ್ಭದಲ್ಲಿ ಸ್ಟೇಟ್ ಸೆಕ್ರಿಟರಿಗಳು ಇಲ್ಲಿಗೆ ದಯಮಾಡಿದರು. ಆದರೆ ಇನ್ನು ಮ[illegible]ದೆ ಆ ಹುದ್ದೆಯನ್ನು ವಹಿಸಿದ ಪ್ರತಿಯೊಬ್ಬ ಗೃಹಸ್ಥರೂ ಒಮ್ಮೆ ಹಿಂದೂಸ್ಥಾನವನ್ನು ಕಾ[illegible]ಬೇಕೆಂಬ ಕಟ್ಟಳೆ ಇಡುವದು ಉಪಯುಕ್ತವೆಂದು ನಮಗೆ ತೋರುವದು.

ಲೋಕದ ಇತರ ಜನಾಂಗಗಳಂತೆ ಎಂದಾದರೂ ನಾವೂ ಒಂದು ಜನಾಂಗವಾಗುವೆವು. ಸಾವಿರಾರು ಒಳಭೇದಗಳಿಂದ ವಿಭಾಗಿಸಲ್ಪಟ್ಟ ಭಾರತೀಯರು ರಾಜಕೀಯ ಏಕೋದ್ದೇಶ ಪ್ರೇರಿತರಾಗಿ ಏಕೀಭವಿಸುವದು ಸಂಭಾವ್ಯವೇ ಎಂಬ ಯೋಚನೆಯು ದೇಶಬಂಧುಗಳೆಲ್ಲರನ್ನು ಆಕುಲಿಸುವದು. ಶ್ರೀಯುತ ಬಾಸುರವರು ಈ ವಿಷಯವನ್ನು ಕೂಲಂಕಷವಾಗಿ ತರ್ಕಿಸಿ ಭಾರತೀಯ ಜನಾಂಗವೆಂಬದು ಕಾಲಕ್ರಮದಲ್ಲಿ ಜನಿಸದಿರದೆಂದೂ ಭರತಖಂಡವೆಂಬದು ಭೂಗೋಲಶಾಸ್ತ್ರಜ್ಞ ಕಲ್ಪಿತ ನಾಮ ಮಾತ್ರವಲ್ಲವೆಂದೂ ವಿಷದ ಪಡಿಸಿರುವರು. ಪಿಕ್ಟರು, ಗೇಲರು, ಅಂಗ್ಲೋ ಸೆಕ್ಸನರು, ಸೆಲ್ಟರು ಮೊದಲಾದ ಭಿನ್ನ ಕುಲಗಳು ಕೂಡಿ ಬ್ರಿಟಿಷ ಜನಾಂಗವಾಗಿದೆ. ಇಂಡಿಯಾದ ಕುಲಗಳು ಇವರಿಗಿಂತ ವಿಭಿನ್ನರಲ್ಲ. ಸ್ವಿಟ್ಸರ್ಲೆಂಡದ ಜಿಲ್ಲೆಗಳ ಜನರು ಭಾರತೀಯರಂತೆ ಭಿನ್ನ ಭಾಷೆಗಳನ್ನಾಡುವವರು ಒಂದಾಗಿರುವರು. ಇಂಗ್ಲಾಂಡು ಫ್ರಾನ್ಸು ಮೊದಲಾದ ಯುರೋಪಿಯ ದೇಶಗಳಲ್ಲಿ ಕೆಥೊಲಿಕ್ ಪ್ರೊತೆಸ್ತಾಂತರೊಳಗಣ ಮತ ವೈರದಿಂದುಂಟಾದ ರಕ್ತಪಾತವು ಹಿಂದೂಸ್ಥಾನದಲ್ಲಿ ಎಂದೂ ಆಗಲಿಲ್ಲ. ಆದರೂ ಆ ದೇಶಗಳ ಜನರು ಆ ವೈಷಮ್ಯಗಳನ್ನು ಹಿಂದಿಟ್ಟು ಜನಾಂಗಗಳಾಗಿ ಬೆರತಿರುವರು. ಇದಲ್ಲದೆ ದಕ್ಷಿಣ ಆಫ್ರಿಕದಲ್ಲಿ ಹಿಂದು ಮುಸಲ್ಮಾನ ಪಾರ್ಸಿಗಳೆಲ್ಲರು ಎಷ್ಟು ಒಕ್ಕಟ್ಟಿನಿಂದ ನಡಿಯುವರೆಂಬದನ[illegible] ಕಂಡರೆ ಭಾರತೀಯ ಜನಾಂಗವೆಂಬದು ಅಸಂಭಾವ್ಯವಲ್ಲವೆಂದು ವ್ಯಕ್ತವಾಗುವದು.

ದೇಶದ ರಾಜಧಾನಿಯನ್ನು ಕಲ್ಕತ್ತೆಯಿಂದ ಡಿಲ್ಲಿಗೆ ವೈದದ್ದರಿಂದ ಇಂಡಿಯಾ ಸರಕಾರಕ್ಕೂ ಬಾಧಕವಿದೆ ಎಂದು ಶ್ರೀಯುತ ಬಾಸುರವರು ವಾದಿಸುವರು. ಯಾಕಂದರೆ ಕಲ್ಕತ್ತೆಯಲ್ಲಿ ಪ್ರಜಾಭಿಮತವನ್ನು ಕಂಡು ಹಿಡಿಯುವ ಅನುಕೂಲವು ಸರಕಾರಕ್ಕೆ ಇದೆ. ಡಿಲ್ಲಿಯಲ್ಲಿ ಅಂತಹ ರಾಜ ನೀತಿಜ್ಞರೂ ವಿದ್ವಾಂಸರೂ ಆದ ಪ್ರಜಾ ಸಮುದಾಯವಿಲ್ಲ. ಈ ವಾದವನ್ನು ಸಭಾಧ್ಯಕ್ಷರು ಖಂಡಿಸಿರುವರು. ಅವರು ಹೇಳುವಂತೆ ಡಿಲ್ಲಿಯು ರಾಜಧಾನಿಯಾದನಂತರ ಸಹಜವಾಗಿ ಅಲ್ಲಿ ದೇಶದ ವಿವಿಧ ಪ್ರಾಂತ್ಯಗಳಿಂದ ವಿದ್ವಾಂಸರೂ ರಾಜನೀತಿ ವಿಶಾರದರೂ ಬಂದು ಸೇರುವರು. ಸಂಪತ್ತು, ವಿದ್ಯೆ ಪಸರಿಸುವದು. ಕಲ್ಕತ್ತೆಯು ವಿದ್ಯೆ, ವ್ಯಾಪಾರ, ಸಂಪತ್ತುಗಳ ನೆಲೆಮನೆಯಾಗಿರುತ್ತಾ ಆ ಪಟ್ಟಣವು ವಿಶೇಷತ್ವವನ್ನು ಕಳಕೊಳ್ಳದು.

ಸಭಾಧ್ಯಕ್ಷರು ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಪರೀಕ್ಷಿಸಿ ಸರಕಾರದವರು ರಾಜನೀತಿಯನ್ನು ಯಾವ ರೀತಿ ವ್ಯವಸ್ಥೆ ಪಡಿಸಿದರೆ ಶುಭಪರಿಣಾಮವಾಗುವದೆಂದು ವಿವರಿಸಿದರು. ಪ್ರಕೃತ ಪ್ರಭುತ್ವದ ಅಧಿಕಾಂಶವನ್ನು ಅನುಭೋಗಿಸುವ ಅಂಗ್ಲೋ ಇಂಡಿಯನ ಅಧಿಕಾರಿ ವರ್ಗದ ಸಹಾನುಭವರಹಿತ ವರ್ತನವೇ ಪ್ರಜೆಗಳ ಸಂಕಷ್ಟ ಪರಂಪರೆಯ ಮೂಲ ಕಾರಣವೆಂದು ಇವರ ಅಭಿಮತವಾಗಿದೆ. ಪ್ರಜಾ ಹಿತಕರವಾದ ಕಾನೂನುಗಳನ್ನು ಏರ್ಪಡಿಸುವಾಗ ಇವರು ಎದುರು ಬರುವರು. ಇವರ ವಿರೋಧವನ್ನು ಗಣಿಸದೆ ರಿಪ್ಪನ್ ಪ್ರಭುಗಳಂತಹ ವೈಸರಾಯರು ಒಂದು ವೇಳೆ ಅಂತಹ ಕಾಯಿದೆಗಳನ್ನು ಆಚರಣೆಗೆ ತಂದರೂ ಅದರ ಉದ್ದಿಶ್ಯವನ್ನೇ ನಿಷ್ಫಲ ಮಾಡಲಿಕ್ಕೆ ಪ್ರಯತ್ನ ಪಡುವರು ಎಂಬ ವಿಷಯಗಳನ್ನು ಇವರು ದೃಷ್ಟಾಂತ ಪೂರ್ವಕ ಪ್ರಮಾಣಿಸಿದರು. ದೇಶದ ವಿದ್ಯಾವಂತ ಪ್ರಜಾ ವರ್ಗದಲ್ಲಿ ಇವರು ತೋರುವ ಅವಿಶ್ವಾಸವು ಈ ಮನೋಭಾವದ ಚಿನ್ಹೆಯಾಗಿದೆ. ಈ ಅವಿಶ್ವಾಸ ಪ್ರೇರಿತರಾಗಿಯೇ ಇತ್ತಲಾಗೆ ಪ್ರೆಸ್ ಆಕ್ಟನ್ನು ಸಿಡಿಶಿಯಸ್ ಮೀಟಿಂಗ್ ಆಕ್ಟ (ರಾಜದ್ರೋಹ ಕೂಟಗಳ ಆಕ್ಟು) ನ್ನೂ ಏರ್ಪಡಿಸಿದರು. ಇಂಡಿಯನ್ ಕೌನ್ಸಿಲ್ ಆಕ್ಟು ಪ್ರಕಾರ ಭಾರತೀಯರಿಗೆ ರಾಜ್ಯಭಾರದಲ್ಲಿ ಯತಾರ್ಥವಾದ ಪಾಲು ದೊರಕಬೇಕಿತ್ತು. ಆದರೆ ಅದನ್ನು ಜ್ಯಾರಿಗೆ ತರಲಿಕ್ಕೆ ಇವರು ಮಾಡಿದ ನಿಬಂಧನೆಗಳು ಆ ಆಕ್ಟಿನ ಉದ್ದಿಶ್ಯಕ್ಕೆ ಹಾನಿಕರವಾಗಿದೆ. ಈ ನಿಬಂಧನೆಗಳ ಪ್ರಕಾರ ವಿದ್ಯೆ ಸಾಮರ್ಥ್ಯಗಳನ್ನು ಬಿಟ್ಟು ಮಹಮ್ಮದೀಯರು, ಜಮೀನುದಾರರು ಮೊದಲಾದ ಭೇದಗಳನ್ನು ಅನುಸರಿಸಿ ಪ್ರತಿನಿಧಿಗಳನ್ನು ಆರಿಸಬೇಕಾಗುವದರಿಂದ ಪ್ರಜಾ ಮುಖಂಡರಿಗೆ ಸ್ಥಾನ ದೊರಕುವದೆಂಬ ನಿಶ್ಚಯವಿಲ್ಲ. ಇದಲ್ಲದೆ ಮಹಮ್ಮದೀಯರಿಗೆ ಸಾಮಾನ್ಯ ಚುನಾವಣೆಯಲ್ಲಿಯೂ ತಮ್ಮ ಪ್ರತ್ಯೇಕ ಚುನಾವಣೆಯಲ್ಲಿಯೂ ಪಾಲು ಇದ್ದು ಅವರಿಗೆ ಖಂಡಿತ ಪಕ್ಷಪಾತವಾಗುವದು. ಸ್ಥಳೀಕ ಸರಕಾರದ ನ್ಯಾಯವಿಧಾಯಕ ಸಭೆಗಳಲ್ಲಿ ಖಾಸಗಿ ಪ್ರತಿನಿಧಿಗಳು ಬಹುಪಕ್ಷವಾಗಿರಬೇಕೆಂದು ವಿಧಿಸಿದರು. ಕಾರ್ಯತಃ ಬಹುಪಕ್ಷವು ಸರಕಾರದ ಪಕ್ಷಪಾತಿಗಳದ್ದೆ ಆಗುವಂತೆ ವಾಸ್ತವಿಕಸ್ಥಿತಿಯದೆ.

ಪ್ರೆಸ್ ಆಕ್ಟಿನ ನಿಮಿತ್ತ ಪತ್ರಕರ್ತರು ತಾವು ಯತಾರ್ಥವಾಗಿ ಹೇಳಿದ ಮಾತಿಗೆ ವಿಪರೀತಾರ್ಥ ಕಲ್ಪಿಸ್ಯಾರೋ ಎಂದು ಹೆದರಬೇಕಾಗಿದೆ. ಮೀಟಿಂಗು ಆಕ್ಟು ಇದೇ ಸ್ವಭಾವದ್ದು. ನ್ಯಾಯವಿಧಾಯಕ ಸಭೆಯಲ್ಲಿ ಸಹಾ ಪ್ರಜಾಪ್ರತಿನಿಧಿಗಳಲ್ಲಿ ಅತ್ಯುತ್ತಮರು ಸೇರುವದು ಕಷ್ಟಸಾಧ್ಯ. ಇದರ ಪರಿಣಾಮವೇನಂದರೆ ರಾಜಕೀಯ ವಿಷಯದಲ್ಲಿ ಭಾರತೀಯರ ಅಭಿಮತವನ್ನು ಬ್ರಿಟಿಷ ಜನರು ಅರಿಯುವದು ಕಷ್ಟವಾಗುವದು. ಪರಂತು ನಮ್ಮ ಸರಕಾರವೂ ಬ್ರಿಟಿಷ ಜನರಿಗೆ ಜವಾಬ್ದಾರರಾಗಿರುವದರಿಂದ ಅವರಿಗೆ ಭಾರತೀಯ ಪ್ರಜಾ ಮತವು ತಿಳಿಯುವದು ಅವಶ್ಯಕ. ಆದ್ದರಿಂದ ಸದ್ಯಾ ವಂಗವಿಭಜನೆ ವಜಾ ಮಾಡಿದ ನಿಮಿತ್ತ ಸಂಸ್ಥಾನದ ಮೇರೆಗಳನ್ನು ಬದಲಾಯಿಸುವ ಸಂದರ್ಭದಲ್ಲಿ ಸರಕಾರದವರು ಕೌನ್ಸಿಲು ನಿಬಂಧನೆಗಳನ್ನು ಪುನರಾಲೋಚಿಸಿ ತಿದ್ದುವದು ಯುಕ್ತವಾಗಿದೆ. ಅಂಗ್ಲೋ ಇಂಡಿಯನರಂತಹ ಸಮರ್ಥರಾದ, ಪ್ರಮಾಣಿಕರಾದ, ಕಾರ್ಯಧುರಂಧರರಾದ, ಕರ್ತವ್ಯಪರರಾದ ಅಧಿಕಾರ ವರ್ಗವು ಸಿಕ್ಕುವದು ದುರ್ಲಭ. ಅವರಲ್ಲಿ ಸ್ವಲ್ಪ ಹೆಚ್ಚಿನ ಸಹಾನುಭೂತಿ ಮಾತ್ರ ಇದ್ದಲ್ಲಿ ಇತ್ತಂಡಕ್ಕೂ ಶುಭವಾಗುವದು. ಯಾಕಂದರೆ ನಮ್ಮ ಉತ್ತರೋತ್ತರ ಅಭಿವೃದ್ಧಿಯು ಬ್ರಿಟಿಷರ ಆಶ್ರಯದಲ್ಲೇ ಕೈಗೂಡತಕ್ಕದ್ದು, ಇಂಡಿಯಾದ ರಾಜ್ಯಭಾರದಲ್ಲಿ ಹೆಚ್ಚಿನ ಸಹಾನುಭವವು ಅವಶ್ಯಕವೆಂದು ಜೋರ್ಜ ಸಾರ್ವಭೌಮರೇ ತಾನು ಯುವರಾಜರಾಗಿರುವಾಗ ಅಪ್ಪಣೆ ಕೊಡಿಸಿರುವದರಿಂದ ಇದರ ನಿಜತ್ವವನ್ನು ಅಂಗ್ಲೋ ಇಂಡಿಯನರು ಮನಸ್ಸಿಗೆ ತರುವರೆಂದೂ ಇದು ಬರೇ ವಿರೋಧ ಪಕ್ಷದ ಉದ್ಗಾರವೆಂದು ಧಿಕ್ಕರಿಸಲಿಕ್ಕಿಲ್ಲವೆಂದೂ ಕೋರಬೇಕು. ಅವರೊಳಗೆ ದಯಾಭಾವದಿಂದ ಜನರೊಡನೆ ಬೆರತು ನಡದವರ ಹೆಸರನ್ನು ಪ್ರಜೆಗಳು ಇನ್ನೂ ಕೃತಜ್ಞತೆಯಿಂದ ಸ್ಮರಿಸುವರು.

ನಮಗೆ ನಿಜವಾದ ಸಂಕಷ್ಟಗಳಿದ್ದಲ್ಲಿ ಅವನ್ನು ನಿವಾರಿಸಲಿಕ್ಕೆ ಸರಕಾರದವರು ಸಿದ್ಧವಿದ್ದಾರೆಂಬದು ವಂಗ ಸಂಯೋಜನದಿಂದ ತಿಳಿಯಬಹುದು. ಆದರೆ ಸರಕಾರದ ಈ ಶಾಸನದಿಂದಲೇ ವ್ಯಕ್ತವಾಗುವ ಇಂತಹ ಸಂಗತಿಗಳು ಯಾವವೆಂದರೆ–ನಾವು ನಮ್ಮ ಸಂಕಷ್ಟ ನಿವಾರಿಸಲ್ಪಡುವ ಪರ್ಯಂತರ ಹಟಹಿಡಿದು ಕಾಯಿದೆಶೀರ ರೀತಿಯಿಂದ ಪ್ರಯತ್ನಿಸಬೇಕು. ವರ್ಷಕ್ಕೊಮ್ಮೆ ಕೊಂಗ್ರೆಸಿನಲ್ಲಿ ನಿರ್ಣಯ ಮಂಜೂರು ಮಾಡಿ ತೃಪ್ತರಾಗದ ಬಂಗಾಳಿಗಳು ನಿರಂತರ ಆರು ವರ್ಷ ಕಳಕಳ ನಡಿಸಿದರು. ಮತ್ತು ನಮ್ಮ ಅರಿಕೆಗಳನ್ನು ಸಕಾರಣವಾದ ಸಬಬುಗಳಿಂದ ಸರಕಾರಕ್ಕೆ ನಿವೇದಿಸಿ ಅವರ ಮನಸ್ಸಿಗೆ ಖಚಿತವಾಗುವಂತೆ ವಿಷದಪಡಿಸಬೇಕು, ಬರೇ ಪ್ರಾರ್ಥನೆಗಳಿಂದ ಪ್ರಯೋಜನವಿಲ್ಲ; ಪ್ರಮಾಣಗಳು ಬೇಕು. ಇದನ್ನು ಚನ್ನಾಗಿ ತಿಳಿದ ಬಹುಮಾನವಂತ ಗೋಖಲೆಯವರು ಈ ಉದ್ದಿಶ್ಯ ಭಾರತ ಸೇವಾಸಂಘವನ್ನು ಸ್ಥಾಪಿಸಿರುವರು. ಕೊಂಗ್ರೆಸು ಸಭೆಯಲ್ಲಿಯೂ ಅದರ ಉದ್ದಿಶ್ಯಗಳಲ್ಲಿಯೂ ವಾತ್ಸಲ್ಯವುಳ್ಳವರು ಇಂತಹ ಸಂಘವನ್ನು ಧನಸಹಾಯ ಯಾ ತನುಸಹಾಯದಿಂದ ಪುಷ್ಟೀಕರಿಸುವದು ಅವಶ್ಯಕ.

ಗತಿಸಿದ ಬಹುಮಾನಪಟ್ಟ ಕೃಷ್ಣಸ್ವಾಮಿ ಅಯ್ಯರವರು.

ಮದ್ರಾಸು ಗವರ್ನರ ದೊರೆಗಳವರ ಕಾರ್ಯಾಲೋಚನೆ ಸಭೆಯ ದೇಶೀಯ ಮೆಂಬರರಾಗಿ ಹನ್ನೊಂದು ತಿಂಗಳ ಮೊದಲು ನೇಮಕಪಟ್ಟ ಕೃಷ್ಣಸ್ವಾಮಿ ಅಯ್ಯರವರು ಕಳದ ತಾ. 28ನೇ ಗುರುವಾರ ಮುಂಜಾನೆ 5 ಘಂಟೆಗೆ ಪರವನ್ನೈದಿದರೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ. ಡಿಲ್ಲಿಯ ದರ್ಬಾರ ಸಂದರ್ಭದಲ್ಲಿ ಚಕ್ರವರ್ತಿ ಚಕ್ರವರ್ತಿನಿಯರಿಗೆ ಸ್ವತಹ ಮನ್ನಣೆಯನ್ನು ಮಾಡಲು ಡಿಲ್ಲಿಗೆ ಹೋಗಿದ್ದರೂ ದರ್ಬಾರ ದಿನಕ್ಕೆ ಎರಡು ದಿವಸಗಳ ಮುಂಚಿತವಾಗಿಯೇ ಪ್ರಾರಂಭಿಸಿದ ದೇಹಾಲಸ್ಯದ ದೆಸೆಯಿಂದ ಕೃಷ್ಣಸ್ವಾಮಿ ಅಯ್ಯರವರು ಡಿಲ್ಲಿಯನ್ನು ಬಿಟ್ಟು ಮದ್ರಾಸಿಗೆ ತೆರಳಬೇಕಾಯಿತು, ದೇಹದಲ್ಲಾದ ಒಂದು ಕುರುವಿನಿಂದ ಅಲ್ಪಸ್ವಲ್ಪ ಜ್ವರ ಮಾತ್ರ ಪ್ರಾರಂಭದಲ್ಲಿದ್ದದರಿಂದ ಈ ಅಸ್ವಸ್ಥವು ಇಂಥಾ ಅತಿ ವಿಷಾದಕರ ಪರಿಣಾಮವನ್ನು ಹೊಂದಲಿಕ್ಕೆ ಸಾಕೆಂಬದಾಗಿ ಯಾರೂ ತಿಳಿಯಲಿಲ್ಲ. ಕುರುವನ್ನು ಗುಣಪಡಿಸಲಿಕ್ಕೆ ಶಸ್ತ್ರಪ್ರಯೋಗವು ಅಗತ್ಯವೆಂತ ಕಂಡುಬಂದು ಆ ರೀತಿ ಚಿಕಿತ್ಸೆಯು ನಡಿಸಲ್ಪಟ್ಟಿತು. ಆದರೆ ಈ ಸಾದನೆಯೆಲ್ಲವು ನಿರರ್ಥಕವಾಗಿ ಕೃಷ್ಣಸ್ವಾಮಿ ಅಯ್ಯರವರು ಗುರುವಾರ ಮುಂಜಾನೆ 5 ಘಂಟೆಗೆ ತಮ್ಮ 49ನೇ ವರುಷದಲ್ಲಿ ದೈವಾಧೀನರಾದರು.

ಕೃಷ್ಣಸ್ವಾಮಿ ಅಯ್ಯರವರ ತಂದೆ ರಾ। ವೆಂಕಟರಮಣಯ್ಯರೆಂಬವರು ಶಾವು ಮೃತಪಡುವ ಕಾಲದಲ್ಲಿ ಡಿಸ್ಟ್ರಿಕ್ ಮುನ್ಸಿಫರಾಗಿದ್ದರು. ಮದ್ರಾಸಿನ ಪ್ರೆಸಿಡೆನ್ಸಿ ಕೋಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ 1883ನೇ ಇಸವಿಯಲ್ಲಿ ಬಿ.ಎ.,ಬಿ.ಎಲ್. ಪರೀಕ್ಷೆ ಪಾಸಾಗಿ 1885ನೇ ಯಿಂದ ಮದ್ರಾಸು ಹ್ಯಾಕೋರ್ಟಿನಲ್ಲಿ ವ್ಯವಹರಿಸಲು ಪ್ರಾರಂಭಿಸಿದರು. ಕ್ರಮೇಣ ಕೃಷ್ಣಸ್ವಾಮಿ ಅಯ್ಯರವರು ತಮ್ಮ ಜಾಣ್ಮೆಯಿಂದ ವಾಕ್ಪಟುತ್ವ ಮೊದಲಾದ ಗುಣಗಳಿಂದ ವಕೀಲರಲ್ಲಿ ಉಚ್ಚ ಸ್ಥಾನವನ್ನು ಪಡದರು. ಮದ್ರಾಸು ಸರ್ವ ವಿದ್ಯಾನಿಲಯದ ಫಲ್ಲೊ ಎಂಬ ಮೆಂಬರುತನವನ್ನು ಇವರು ಹೊಂದಿದ್ದರಲ್ಲದೆ ವಿದ್ಯಾಸಮ್ಮಂಧವಾದ ಸಿನೇಟ್ ಮತ್ತು ಸಿಂಡಿಕೇಟ್ ಸಭೆಗಳ ಮೆಂಬರರಾಗಿದ್ದರು. ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರುತನವು ಮದ್ರಾಸು ವಿಶ್ವವಿದ್ಯಾನಿಲಯದ ಪರವಾಗಿ ಇವರಿಗೆ ದೊರಕಿತ್ತು. ಹೀಗೆ ಇವರ ಗುಣಾತಿಶಯಗಳನ್ನು ನ್ಯಾಯವಿಧಾಯಕ ಸಭೆಯಲ್ಲಿ ಪರಿಶೀಲಿಸುವ ಸಂದರ್ಭವು ಸರಕಾರದವರಿಗೆ ದೊರಕಿತು. ಹೆಚ್ಚುಕಡಿಮೆ ಎರಡು ವರುಷಗಳ ಮುಂಚೆ ಮದ್ರಾಸು ಹ್ಯಾಕೋರ್ಟಿನ ಜಡ್ಜರಾಗಿ ನೇಮಿಸಲ್ಪಟ್ಟು ಬೊಬಿಲಿಯ ಮಹಾರಾಜರವರು ಗವರ್ನರ ದೊರೆಗಳ ಕಾರ್ಯಾಲೋಚನೆಯ ಸಭೆಯ ಮೆಂಬರುತನಕ್ಕೆ ರಾಜಿನಾಮೆಯನ್ನು ಕೊಟ್ಟಾಗ ಕೃಷ್ಣಸ್ವಾಮಿ ಅಯ್ಯರರವರು ದೇಶೀಯರಿಗೆ ಸರಕಾರದಲ್ಲಿ ದೊರೆಯಲು ಸಾಧ್ಯವಾದ ಅತ್ಯುನ್ನತ ಪದವಿಗೆ ನೇಮಿಸಲ್ಪಟ್ಟರು.

ಭಾರತೀಯ ಅಗ್ರಗಣ್ಯ ಮಹನೀಯರಲ್ಲೊಬ್ಬರಾದ ಈ ಸ್ವರ್ಗಸ್ಥ ಸತ್ಪುರುಷರ ಉದಾದ ಸತ್ಕಾರ್ಯಗಳಿಂದ ಕೃಷ್ಣಸ್ವಾಮಿ ಅಯ್ಯರವರಲ್ಲಿದ್ದ ದೇಶಾಭಿಮಾನವು ಯಾವ ತರದ್ದೆಂತ ತಿಳಿಯಲು ಬಹುದು. ಸಂಸ್ಕೃತ ಕೋಲೇಜು ಮೈಲಾಪುರದಲ್ಲಿರುವ ಆಯುರ್ವೇದ ಶಾಲೆ, ರಾನಡೆ ಪುಸ್ತಕ ಭಂಡಾರ, ಮೊದಲಾದವು ಮದ್ರಾಸಿನಲ್ಲಿ ಇವರಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಗಳಾಗಿರುವವು. ಸನಾತನಧರ್ಮ ಶ್ರದ್ಧೆಯು ಇವರಲ್ಲಿ ವಿಶೇಷವಾಗಿದ್ದು ಇನ್ನು ಸ್ಥಾಪಿಸಲಿಕ್ಕಿರುವ ಹಿಂದೂ ವಿಶ್ವವಿದ್ಯಾಲಯಕ್ಕೆ ಸಾವಿರಗಟ್ಲೆ ಹಣಸಹಾಯವನ್ನು ಕೊಟ್ಟಿರುವರು. ವೃದ್ಧಾಪ್ಯವು ಪ್ರಾಪ್ತಿಸುವ ಮೊದಲೇ ದೇಶಕ್ಷೇಮವನ್ನು ಇನ್ನೂ ವಿಶೇಷವಾದ ರೀತಿಯಲ್ಲಿ ಸಾಧಿಸತಕ್ಕ ತಮ್ಮ ನಡು ಪ್ರಾಯದಲ್ಲಿಯೇ ಮೃತಪಟ್ಟ ಕೃಷ್ಣಸ್ವಾಮಿ ಅಯ್ಯರವರ ವಿಷಾದಕರ ಮರಣದಿಂದ ದೇಶಭಾಂದವರೆಲ್ಲರಿಗೆ ಸಹಾನಾತೀತವಾದ ದುಃಖವೂ ನಷ್ಟವೂ ಉಂಟಾಗಿರುವುದು. ಸರಕಾರದವರು ಶ್ರದ್ಧಾವಂತ ನೌಕರರೊಬ್ಬರನ್ನು ಕಳಕೊಂಡಿರುವರು. ಕೃಷ್ಣಸ್ವಾಮಿ ಅಯ್ಯರವರ ದುಃಖಿತ ಕುಟುಂಬದೊಡನೆ ನಾವೂ ಸಹತಾಪಪಡುವೆವು.

ಬಾಲಿಕಾ ನೀತಿಮಾಲಿಕೆ

ಕುಸುಮ ಷಟ್ಪದಿ.

(ಕಳದ ಸಂಚಿಕೆಯಿಂದ ಮುಂದುವರಿದುದು.)

ಆಚಾರವಂ ತೊರೆದ ।
ನಾಚಾರದಲ್ಲಿರುತ ।
ಶೌಚಗಳನುಳಿದು ಹೇಸಿಗೆಗೊಳ್ಳುತಾ ।
ನಾಚಿಕೆಯ ಬಿಟ್ಟಿರ್ಪ ।
ನೀಚರಂ ಮೆಚ್ಚುವುದೆ ।
ಯೋಚಿಸಿಯೆ ವರ್ತಿಪುದು ಸನ್ಮಾರ್ಗದೆ ॥ ೧೩ ॥
ಚಿಕ್ಕಂದೆ ಪೋಷಕರು ।
ಮಕ್ಕಳಿಗೆ ನೀತಿಗಳ ।
ನಕ್ಕರೆಯೊಳರುಹಿ ತಪ್ಪನು ತಿದ್ದುತಾ ॥
ಸಿಕ್ಕದವೊಲಪಯಶಕೆ ।
ಕಕ್ಕುಲಿತೆಗೊಳ್ಳದಿರೆ ।
ದಕ್ಕುವುದು ಸತ್ಕೀರ್ತಿ ಸೊಗಮಪ್ಪುದು ॥ ೧೪
ತಾಯಿ ಕಲಿಸಿದ ಬುದ್ಧಿ ।
ಸಾಯುವನ್ನ ಮೆನುತ್ತೆ ।
ನ್ಯಾಯದಿಂ ಪೇಳುವುದು ಲೋಕವೆಲ್ಲ ॥
ಹೇಯಬುದ್ಧಿಯ ಬಿಡಿಸಿ ।
ನೋಯನುಡಿಯದೆ ಪಿರಿಯ ।
ರಾಯದಿಂತಿರ್ದುವುದು ಬಾಲೆಯರನು ॥ ೧೫ ॥
ಮನೆಗೆ ತಂದುದರರ್ಧ ।
ಮನೆಮಾರಿ ಚಿರುತಿಂಡಿ ।
ಯನೆಕೊಂಡು ತಿನ್ನುತಂ ಹೆಮ್ಮೆಯಿಂದೆ ।
ಮನೆವಾರ್ತೆಯಂ ಮರೆದು ।
ಜನರ ಕಲಹಕೆ ನಡೆವ ।
ವನಿತೆಸಾವನಿತೆ ಮಕ್ಕಳ ಶತ್ರುವು ॥ ೧೬ ॥
ಉದಯದೊಳಗೆದ್ದು ತಾಂ ।
ಪದುಮನಾಭನ ನೆನೆದು ।
ಮುದದೆ ಕೈಕಾಲ್ಮೊಗಂಗಳನೆ ತೊಳೆದು ।
ಕೆದರಿರ್ದ ಕುರುಳುಸಂ ।
ಮದದಿ ನೇವರಿಸಿ ತಿಲ ।
ಕದವಟ್ಟು ಕುಂಕುಮವನಿಟ್ಟು ಪಣೆಗೆ ॥ ೧೭ ॥
ವಂದಿಸುತೆ ನಿಮ್ಮ ತಾ ।
ಯ್ತಂದೆಗಳ, ಬಳಿಕ ನಡೆ ।
ತಂದು ಶಾಲೆಗೆ ಪಾಠಗಳನೋಡುತಾ ॥
ಸಂದೆಗಂಗಳನು ಗುರು ।
ವಿಂದೆ ತಿಳಿಯುತೆ ಸದಾ ।
ನಂದದಿಂದಿರೆ ಚಿಂತೆಗೆಡೆಯಿಲ್ಲವು ॥ ॥ ೧೮ ॥
ಬರಿದೆಕಾಲವ ಕಳೆಯ ।
ದಿರು ದುರುಳೆಯರ ಸೇರ ।
ದಿರು ಪರರ ದೋಷಗಳ ಲೆಕ್ಕಿಸದಿರು ॥
ಪೆರನಿಂದೆಗೆಯ್ಯದಿರು ।
ಪರಧೊಡವೆಗೆಳಸದಿರು ।
ನೆರಮನೆಯ ಸುದ್ದಿಗಳನಾಲಿಸದಿರು ॥ ॥ ೧೯ ॥
ಓದು ಬರಹವ ಕಲ್ತು ।
ಭೇದ ಬುದ್ಧಿಯನಿಡದೆ ।
ಸಾದರದೆ ಸಮವಾಗಿ ತಿಳಿದೆಲ್ಲರ ॥
ಹಾದಿ ಜಗಳವ ನುಳಿದು ।
ವಾದಗಳವರ್ಜಿಸುತ ।
ಶೋಧ ದೃಷ್ಟಿಯಿನಿರ್ದು ಬಾಳು ಮಗುವೇ ॥ ೨೦ ॥
ಒಳತಾಗಿ ಯಕ್ಷರಂ ।
ಗಳ ಬರೆವುದನು ಕಲ್ತು ।
ತಿಳಿದು ಲೆಕ್ಕಗಳ ಲೋಕದ ಚರಿತೆಯ,
ಹೊಲಿಗೆಯಂ ಮೇಣ್‍ಹಸ್ತ,
ಕಲೆಗಳಂ ಪಾಕಂಗ ।
ಳೊಳ ಮರ್ಮಗಳ ತಿಳಿದು ನಡೆದುಕೊಳ್ಳು ॥ ೨೧ ॥
ಕಿವಿಗಮೃತರಸವಸುರಿ ।
ಸುವವೊಲೋದುವುದಕಲಿ ।
ವಿವರಗಳನರ್ಥ ಭೇದಗಳ ಗ್ರಹಿಸು ॥
ಸವಿಯ ಸುಗ್ಗಿಯನು ಬೀ ।
ರುವ ಹಾಡುಗಳ ಕಲ್ತು ।
ತಲೆ ಚತುರೆಯೆನಿಸವ್ವ ಬಾಲ್ಯದೊಳಗೆ ॥ ॥ ೨೨ ॥
ಓರಣವ ಕಲ್ತು ಮನೆ,
ಸಾರಿಸಿಯೆ ರಂಗವಲಿ ।
ಚಾರುತರ ಮನೆ ಸಮೆದು ಕಸ ಮುಡುಗಿಸಿ ॥
ಸ್ವೈರಿಸುತೆ ಧರೆಯಂತೆ ।
ಪೋರುವಿಡಿಯದೆ ಮನೆಯು ।
ಕಾರಿಯಂಗಳಲಿ ಬೇಸರವ ಮಾಣು ॥ ॥ ೨೩ ॥
ಮಿತದನ್ನಪಾನಗಳ ।
ಮಿತದವೆಚ್ಚಂಗಳನು ।
ಮಿತದ ಭಾಷೆಗಳನೀಂಕಲಿಯ ಬೇಕು ।
ಅತಿಯಾಗೆ ಕೆಡುತಿಹುದು ।
ಹಿತವಾಗಿ ನೀಂಕಾಲ ।
ಗತಿಯರಿತು ನಡೆಯಲ್ಕೆ ಸತಿಯೆನಿಸುವೆ ॥ ॥ ೨೪ ॥

(ಮುಂದುರಿಯುವುದು.)

ಕೆ. ರಾಮಸ್ವಾಮ್ಯೆಂಗಾರ್.

ಪೇಷ್ವೆ ನಾರಾಯಣ ರಾವ್.

೧

ಸ್ವಾರ್ಥಪರತೆಯ ಪ್ರೇರಣೆಯಿಂದ ಮನುಷ್ಯನು ಮಾಡಿದ ಘೋರ ಕೃತ್ಯಗಳಲ್ಲಿ ಪೇಷ್ವೆ ನಾರಾಯಣ ರಾವಿನ ವಧೆಯು ಹೆಚ್ಚು ದುಃಖಕರವಾದುದು. ಕಡು ಶೋಚನೀಯವಾದ ಈ ಸ್ವಪ್ರಯೋಜನ ಪರತೆಯು ಬಾಲಕನೂ, ನಿರಪರಾಧಿಯೂ ಆದ ಮಹಾರಾಷ್ಟ್ರ ಪ್ರಭುವಿನ ಘೋರ ಮರಣಕ್ಕೆ, ಕಾರಣವಾದುದು ಮಾತ್ರವಲ್ಲದೆ ದಿಗಂತ ವಿಶ್ರಾಂತ ಯಶೋಪರಿಪೂರ್ಣನಾದ ಛತ್ರಪತಿ ಶಿವಾಜಿಯಿಂದ ನೆಡಲ್ಪಟ್ಟು ಕಾಲಕ್ರಮವಾಗಿ ಅಭಿವೃದ್ಧಿ ಹೊಂದಿ ನಾಲ್ಕನೆಯ ಪೇಷ್ವೆ ಮಾಧವ ರಾವ್ ಕಾಲದಲ್ಲಿ ಫಲ ಪುಷ್ಪ ಸಂಶೋಭಿತವಾಗಿದ್ದ ಮಹಾರಾಷ್ಟ್ರ ಶಕ್ತಿಪುರಸ್ಸರವಾದ ಸ್ವರಾಜ್ಯ ಕಲ್ಪತರುವಿನ ನಿರ್ಮೂಲಕ್ಕೆ ಕಾರಣವಾಯಿತು.

ಹದಿನೇಳನೆಯ ಶತಮಾನದಲ್ಲಿ ಅಂಕುರಿಸಿ, ಹದಿನೆಂಟನೆಯ ಶತಮಾನಕ್ಕೆ ಸ್ವಲ್ಪ ಹೆಚ್ಚು ಕಡಿಮೆ ಇಂಡಿಯಾ ದೇಶದಲ್ಲೆಲ್ಲಾ ವ್ಯಾಪಿಸಿದ್ದ ಮಹಾರಾಷ್ಟ್ರಾಧಿಪತ್ಯವು ಮಾಧವ ರಾವ್ ಪೇಷ್ವೆಯು ಮೃತಿಹೊಂದಿದಾಗ ೧೭೭೨ರಲ್ಲಿ ಉನ್ನತ ಸ್ಥಿತಿಯಲ್ಲಿದ್ದಿತು.

ತರುವಾಯ ಒಂದು ಸಂವತ್ಸರದೊಳಗಾಗಿಯೇ ಮಹಾರಾಷ್ಟ್ರರು ಕಾರಣವಿಲ್ಲದೆ ನಾರಾಯಣರಾವನ್ನು ವಧಿಸಿದರು. ಆಗಿನಿಂದಲೂ ಮಹಾರಾಷ್ಟ್ರರ ಶಕ್ತಿಯು ಪ್ರತ್ಯಕ್ಷವಾಗಿ ಕ್ಷೀಣಿಸಲಾರಂಭಿಸಿತು. ಈ ವಧೆಯಿಂದ ಮಹಾರಾಷ್ಟ್ರ ಪದವಿಯ ಪರಂಪರೆಯು ವಿವಾದಗ್ರಸ್ತವಾಯಿತು. ಪುಣೆಯಲ್ಲಿನ ರಾಷ್ಟ್ರೀಯ ಉದ್ಯೋಗದ ಅಂತಃಕಲಹಗಳು ಪ್ರಬಲವಾದುವು. ಮಹಾರಾಷ್ಟ್ರ ನಾಯಕರಲ್ಲಿ ವೈಷಮ್ಯ ಹುಟ್ಟಿ ಒಬ್ಬರೊಡನೆ ಇನ್ನೊಬ್ಬರು ಕಲಹ ಮಾಡುವುದು ಸಂಭವಿಸಿ ಅವರ ಪ್ರಭು ಶಕ್ತಿಯು ೩೦ ಸಂವತ್ಸರಗಳ ಕಾಲದಲ್ಲಿ ಅವರನ್ನು ಬಿಟ್ಟು ಹೋಯಿತು. ೧೮೧೭ನೇ ಇಸವಿಯಲ್ಲಿ ಜರುಗಿದ ನಾಲ್ಕನೇ ಮಹಾರಾಷ್ಟ್ರ ಯುದ್ಧದ ಕಾಲಕ್ಕೆ ಮಹಾರಾಷ್ಟ್ರರು ತಮ್ಮ ಸ್ವಾಧೀನದಲ್ಲಿದ್ದ ದೇಶದ ಅನೇಕ ಭಾಗಗಳನ್ನು ಹೋಗಲಾಡಿಸಿಕೊಂಡು, ಮಿಕ್ಕ ಭಾಗಗಳ ನಾಮ ಮಾತ್ರ ಆಧಿಪತ್ಯವುಳ್ಳವರಾದರು. ಒಂದು ಶತಮಾನಕ್ಕೆ ಪೂರ್ವ ಈ ಖಂಡವನ್ನು ಏಕಚ್ಛತ್ರವಾಗಿ ಪರಿಪಾಲಿಸಲು ಉದ್ಯಮಿಸಿದ ಮಹಾರಾಷ್ಟ್ರ ಸಾಮ್ರಾಜ್ಯದಲ್ಲಿ ಈಗ ಗಾಯಕವಾರ್ ಧೊರೆಗಳಿಂದ ಪಾಲಿಸಲ್ಪಡುವ, ಬರೋಡಾ, ಸಿಂಧಿಯಾ ದೊರೆಯಿಂದ ಆಳಲ್ಪಡುವ ಗ್ವಾಲಿಯರ್, ಹೋಲ್ಕರನಿಂದ ಅಧಿಷ್ಠಿತವಾದ ಇಂದೂರು ಸಂಸ್ಥಾನಗಳು, ಮಾತ್ತ ಅವಶಿಷ್ಟವಾಗಿರುವವು. ಇವುಗಳಲ್ಲದೆ ದಖನ್‌ನಿನಲ್ಲಿ ಕೊಲ್ಲಾಪುರವೂ, ಸಿಂಧೂರ್ ಎಂಬ ಚಿಕ್ಕ ಸಂಸ್ಥಾನಗಳೆರಡು ಮಾತ್ರವಿರುವುವು. ಪೇಷ್ವೆ ನಾರಾಯಣ ರಾಯನನ್ನು ವಧಿಸಿದ ನಂತರ ಮಹಾರಾಷ್ಟ್ರ ರಾಜ್ಯಕ್ಕೆ ಅಲಂಕಾರವಾಗಿ ನಿಷ್ಕಲ್ಮಷಚಾರಿತ್ರನೂ, ನಿರ್ಭಯ ಪ್ರವರ್ತಕನೂ ಆಗಿದ್ದ ರಾಮ ಶಾಸ್ತ್ರಿ ಎಂಬ ಮಹಾನುಭಾವನಿತ್ತ ಶಾಪವು ತಪ್ಪದೆ ತಟ್ಟಿತು. ರಘುನಾಥರಾವ್ ಸಂಗಡ "ನೀನು ಪುನೀತನಾಗಿ ಜೀವಿಸುವುದು ಅಸಾಧ್ಯವು. ನೀನಾಗಲೀ ನಿನ್ನ ರಾಜಧಾನಿಯಾಗಲಿ ಅಭಿವೃದ್ಧಿ ಹೊಂದುವುದಿಲ್ಲ" ಎಂದು ಹೇಳಿದನು. ಈ ವಾಕ್ಯಗಳು ಸ್ವಲ್ಪ ಕಾಲದಲ್ಲಿ ವಾಸ್ತವವಾಗಿ ಯಾವ ರೀತಿಯಾಗಿ ಪರಿಣಮಿಸಿದುವೋ ಅದನ್ನು ಶೋಕಪರ್ಯವಸಾನವಾದ ಮಹಾರಾಷ್ಟ್ರೇತಿಹಾಸದಿಂದ ಮುಂದೆ ತಿಳಿದುಕೊಳ್ಳಬಹುದು. ಪಾಠಶಾಲೆಗಳಲ್ಲಿ ಪಠನೀಯಗ್ರಂಥಗಳಾಗಿ ನಿಯಮಿಸಲ್ಪಟ್ಟು ನಮಗೆ ಸಾಮಾನ್ಯವಾಗಿ ಲಭಿಸುವ ಚರಿತ್ರೆಗಳಲ್ಲಿಯೂ, ಆ ವಿಷಯಗಳನ್ನು ತಿಳಿಸುವುದಕ್ಕೋಸ್ಕರ ಪ್ರದರ್ಶಿಸಲ್ಪಡುವ ದೃಶ್ಯ ಪ್ರಬಂಧಗಳಲ್ಲಿಯೂ ಈ ನಾರಾಯಣ ರಾವಿನ ವಧೆಗೆ ವಾಸ್ತವವಾದ ಹೇತುವಾಗಲಿ, ಅದರ ಕಾರಣ ಕರ್ತರನ್ನಾಗಲಿ, ರಾಷ್ಟ್ರೀಯ ಉದ್ಯೋಗಿಗಳಿಗೂ ಕಾರಣನಾದ ರಘುನಾಥ ರಾವಿಗೂ, ಇರುವ ಇದರ ಭಾಧ್ಯತೆಯ ಪರಿಮಿತಿಯಾಗಲಿ ಅದರಿಂದುಂಟಾದ ಫಲಗಳನ್ನಾಗಲೀ ತಿಳಿಸಿರುವುದಿಲ್ಲ. ಆನಂದ ಬಾಯಿಗೆ ಇದ್ದ ಅಧಿಕಾರ ಕಾಂಕ್ಷೆಯಿಂದ ಆಕೆಯು ನಾರಾಯಣ ರಾಯನಲ್ಲಿ ಈರ್ಷ್ಯೆಯನ್ನು ಹೊಂದಿ ವರುಷ ಕಾಲದಲ್ಲಿ ಹೈದರಾಲಿಯ ಸಂಗಡ ಯುದ್ಧಕ್ಕೆ ಹೊರಡುವುದು ಉಚಿತವೆಂದು ರಘುನಾಥ ರಾವ್ ಹೇಳಿದ ಆಲೋಚನೆಗೆ ತಿಳಿದು ತಿಳಿಯದೆ, ನಾರಾಯಣರಾವ್, ಸಭಾಮಧ್ಯದಲ್ಲಿ ಸ್ವಲ್ಪ ವಿರೋಧವಾಗಿ ಹೇಳುವ ಮಾತನ್ನು ಸಾಕುಮಾಡಿ, ಆತನ ವಧಾವಿಧಾನವನ್ನು ಮಾಡಿದಳೆಂದೂ, ಈ ಕಾರ್ಯಾನುಕೂಲಕ್ಕಾಗಿ ಪ್ರಭುವಾದ ತನ್ನ ಗಂಡನನ್ನು ಗುರಿಮಾಡಿ ರಾಜಭಕ್ತಿಯುಳ್ಳವನೂ, ವಿಮರ್ಶನಾಜ್ಞಾನವಿಲ್ಲದ ಪ್ರಬಲೋದ್ರೇಕ ಸ್ವಭಾವವುಳ್ಳವನೂ ಆದ ಸುಮೆರ ಸಿಂಗನೆಂಬ ಸೇವಕನಿಂದ ಈ ಕೆಲಸವನ್ನು ರಹಸ್ಯವಾಗಿ ನಡಿಸಿದಳೆಂದೂ, ಸಾಮಾನ್ಯವಾಗಿ ತಿಳಿದು ಬಂದಿರುತ್ತದೆ. ಈ ಕಥೆಯಲ್ಲಿ ಬಹಳ ಅಸಂದರ್ಭಗಳಿರುವಿಕೆಯು ಅದನ್ನು ಕೇಳಿದವರಿಗೆ ತೋಚದೆ ಇರುವದಿಲ್ಲ. ಮಹಾರಾಷ್ಟ್ರ ಕಾರ್ಯಾಲೋಚನೆಯ ಸಭೆಯಲ್ಲಿ ಪ್ರಸಂಗ ವಶಾತ್ ಉಂಟಾದ ಈ ಅಭಿಪ್ರಾಯ ಭೇದವು ಇಂತಹ ಘೋರ ಹಿಂಸೆಗೆ ಕಾರಣವಾದುದೂ, ರಘುನಾಥ ರಾವಿಗೆ ಈ ಮೋಸವು ತಿಳಿಯದೆಯೇ ಆನಂದಾಬಾಯಿಯಾಗಲಿ, ಇತರರಾಗಲಿ ಅದನ್ನು ನೆರವೇರಿಸಿದರೆಂಬುದೂ, ನಿಜವಾಗಿಯೂ ರಾಜಭಕ್ತಿಯುಳ್ಳವನಾಗಿದ್ದ ಸುಮೆರಸಿಂಗನಂತಹ ಶೂರನು ಕೇವಲ ಒಬ್ಬ ಸ್ತ್ರೀಯ ಪ್ರೇರಣೆಯಿಂದ ತನ್ನ ಪ್ರಭುವನ್ನು ಕೊಲ್ಲುವುದಕ್ಕೆ ಅಂಗೀಕರಿಸುವುದೂ, ಈ ಸುಮೆರಸಿಂಗುವು ರಘುನಾಥ ರಾವು ಕೈಬರಹದ ಸುಳ್ಳು ಪತ್ರದಿಂದ ಮೋಸ ಹೋಗಿ ಕೊನೆಗೆ ರಘುನಾಥ ರಾಯನಿಂದ ತಡೆಯಲ್ಪಟಾಗ್ಯೂ ತನ್ನ ಘೋರವಾದ ಪ್ರಯತ್ನವನ್ನು ಮಾನಸಿಕ ಮಾಡದಿದ್ದುದೂ, ಶೂರಾಗ್ರೇಸರರೂ ವಿಶ್ವಾಸಪಾತ್ರರೂ ಆದ ರಾಜಭಟರಿಂದ ಚೆನ್ನಾಗಿ ರಕ್ಷಿಸಲ್ಪಟ್ಟ ಪೇಷ್ವೆಯವರ ಅಂತಃಪುರಸೌಧವನ್ನು ರಕ್ಷಕ ಭಟರಿಗೂ ತಿಳಿಯದಂತೆ ಸುಮೆರಸಿಂಗ್ ಪ್ರವೇಶಿಸಿದುದೂ, ಮೊದಲಾದ ಅನೇಕ ವಿಷಯಗಳು ಅಸಂದರ್ಭಗಳೂ, ಅವಿಶ್ವಾಸನೀಯಗಳೂ ಎಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಆ ಕಾಲದ ಮಹಾರಾಷ್ಟ್ರರ ಚರಿತ್ರೆಯನ್ನು ಚೆನ್ನಾಗಿ ಓದಿದವರಿಗೆ ಈ ಕಥೆಯಲ್ಲಿ ಇನ್ನೂ ಹೆಚ್ಚಾದ ಅಸಂದರ್ಭಗಳು ಕಂಡು ಬರುವುವು. ಮಹಾರಾಷ್ಟ್ರ "ಬಖೈರು" ಎಂಬ ಗ್ರಂಥದಿಂದಲೂ, ಗ್ರಾಂಟ್‌ಡಫ್ ಬರೆದ ಪ್ರಶಸ್ತವಾದ ಮಹಾರಾಷ್ಟ್ರೇತಿಹಾಸ ಸಂಪುಟಗಳಿಂದಲೂ ಈಚೆಗೆ ಹೊರಪಟ್ಟ ಸಮಕಾಲೀನಗಳಾದ ಕೆಲವು ಸಾಧನ ಪತ್ರಗಳಿಂದಲೂ ವಾಸ್ತವವಾದ ವೃತ್ತಾಂತವು ನಮಗೆ ತಿಳಿಯ ಬರುತ್ತದೆ. ಈ ವರೆಗೆ ದೊರಕಿದ ಲೇಖನ ಪ್ರಮಾಣಗಳು ಆ ವಧೆಯು ಜರುಗಿದ ಕಾಲದ್ದಾದುದರಿಂದಲೂ ಅವುಗಳ ಚರಿತ್ರಕಾರರು ನಿಷ್ಪಕ್ಷಪಾತ ಬುದ್ಧಿಯಿಂದ ಪರೀಕ್ಷಿಸಿ ವಿಮರ್ಶೆ ಮಾಡಿ, ಅವು ವಿಶ್ವಾಸಪಾತ್ರವಾದುವುಗಳೆಂದು ಗೊತ್ತು ಮಾಡಿರುವುದರಿಂದಲೂ, ಅವುಗಳ ಯಾಥಾರ್ಥ್ಯವನ್ನು ನಾವು ಅಂಗೀಕರಿಸಿರುತ್ತೇವೆ. ಪೂರ್ವೋಕ್ತ ಸಾಧನಗಳಿಂದ ಗ್ರಹಿಸಲ್ಪಡುವ ಕಥೆಯನ್ನು ಸಂಗ್ರಹರೂಪದಿಂದ ಮುಂದೆ ತಿಳಿಸುವೆವು. ಈ ವೃತ್ತಾಂತವನ್ನು ತಿಳಿಯಲು ಪ್ರಾರಂಭಿಸುವುದಕ್ಕೆ ಮೊದಲು ನಾರಾಯಣರಾವ್ ಪೇಷ್ವೆಯ ಪದವಿಯನ್ನು ಹೊಂದುವುದಕ್ಕೆ ಮೊದಲು ಮಹಾರಾಷ್ಟ್ರ ದೇಶವು ಎಂತಹ ಸ್ಥಿತಿಯಲ್ಲಿದ್ದಿತು, ಎಂಬುದನ್ನು ಸಂಕ್ಷೇಪವಾಗಿ ತಿಳಿಸದಿದ್ದ ಪಕ್ಷದಲ್ಲಿ ಕಥಾ ಸಂದರ್ಭವು ಚೆನ್ನಾಗಿ ಬೋಧೆಯಾಗಲಾರದು. ಆದಕಾರಣ ಈ ಉಪಾಖ್ಯಾನವನ್ನು ಮಹಾರಾಷ್ಟ್ರೇತಿಹಾಸ ಲಘು ಸಂಗ್ರಹದಿಂದ ಆರಂಭಿಸುವೆವು.

ಎಂ. ಟಿ. ವಲ್ಲಭಯ್ಯಂಗಾರ್.

ಮುಂದುವರಿಯುವುದು.

ಎಲ್ಲರೂ ತಿಳಿಯತಕ್ಕ ಸಂಗತಿ. ಸುಲಭದಲ್ಲಿ ಬೆಲ್ಲ ದೊರೆಯುವ ವಿಧಾನ.

ಕಬ್ಬು ಸಾಗುವಳಿ ಮಾಡಿ, ಅದರಿಂದ ಬೆಲ್ಲ ಮಾಡಿ ಮಾರುವ ರೈತರಿಗೆ ಇದಕ್ಕಿಂತ ಹೆಚ್ಚಿನ ಲಾಭಕರವಾದ ಸಂಗತಿಯು ಒಂದೂ ಇಲ್ಲ. ನಮ್ಮ ಜಿಲ್ಲೆಯಲ್ಲಿ ಬೆಲ್ಲ ಮಾಡುವ ಕ್ರಮದಿಂದ ರೈತರಿಗೆ ಅನೇಕ ತರದ ನಷ್ಟಗಳು ಆಗುತ್ತಿವೆ. ಸಣ್ಣ ಸಣ್ಣ ಪಾತ್ರಗಳಲ್ಲಿ ಒಂದೊಂದು ಕೊಡ ಕಬ್ಬಿನ ನೀರನ್ನು ಕುದಿಸಿ ಬೆಲ್ಲ ಮಾಡುವದರಿಂದ ಹೆಚ್ಚಿನ ಕಟ್ಟಿಗೆಯು ಬೇಕಾಗುವದು. ಅದಲ್ಲದೆ ಒಲೆಯಲ್ಲಿ ಬೆಂಕಿಯ ಕಾವು ಚದರಿ ಹೋಗುವದರಿಂದ ಹೆಚ್ಚಿನ ಉರಿಯು ಪ್ರಯೋಜನವಿಲ್ಲದೆ ಹೋಗುವದು. ಹೊಳೆ ಕಿನಾರೆಯಲ್ಲಿ ಕಟ್ಟಿಗೆಯು ದೊರೆಯುವದು ದುರ್ಲಭವಾದ ಕಾರಣ ಬೆಲ್ಲ ಮಾಡಲಿಕ್ಕೆ ಹೆಚ್ಚಿನ ತೊಂದರೆಯುಂಟಾಗುತ್ತದೆ. 'ಒಂದು ಖಂಡಿ ಬೆಲ್ಲವಾಗಬೇಕಾದರೆ ಸಾಧಾರಣ ನಾಲ್ಕು ರೂಪಾಯಿ ಕಟ್ಟಿಗೆ ಬೇಕಾಗುತ್ತದೆ. ಅದಲ್ಲದೆ ಸಣ್ಣ ಸಣ್ಣ ಪಾತ್ರಗಳಲ್ಲಿ ಬೆಲ್ಲ ಕುದಿಸುವ ಕಾರಣ ಹಲವು ಹೆಂಗಸರು ಒಲೆಯ ಸಮೀಪವಿರಬೇಕಾಗುತ್ತದೆ. ಕಬ್ಬಿಣದ ಗಾಣವನ್ನು ಉಪಯೋಗಿಸುವದರಿಂದ ಕಬ್ಬಿನ ಕೊಜಂಟಿಯು ಪುಡಿಪುಡಿಯಾಗುತ್ತದೆ ಮತ್ತು ಇಂಥಾ ಕೊಜಂಟಿಯಿಂದ ಸಣ್ಣ ಸಣ್ಣ ಒಲೆಗಳಲ್ಲಿ ಬೆಂಕಿ ಉರಿಸಲಿಕ್ಕೆ ಆಗುವದಿಲ್ಲವೆಂಬದಾಗಿ ರೈತರು ಹೇಳುವರು. ಇದು ನಿಜವೇ ಸರಿ. ಕಬ್ಬಿಣದ ಗಾಣದ ಕೊಜಂಟಿಯನ್ನು ಉಪಯೋಗಿಸಬೇಕಾದರೆ ಹೊಸ ನೂತನವಾದ ಒಲೆಗಳು ಅವಶ್ಯವಾಗಿರುತ್ತದೆ. ಇಂಥಾ ನೂತನವಾದ ಒಲೆಗಳನ್ನು ಮಂಗಳೂರು ತಾಲೂಕು ಬಂಗ್ರ ಕುಳೂರು ಗ್ರಾಮದಲ್ಲಿ ಮಾಡಿರುತ್ತದೆ. ಈ ಒಲೆಗಳಲ್ಲಿ ಕಬ್ಬಿನ ನೀರನ್ನು ಕುದಿಸಿ ಬೆಲ್ಲ ಮಾಡಲಿಕ್ಕೆ ಹೆಚ್ಚಿಗೆ ಕಟ್ಟಿಗೆಯು ಅವಶ್ಯವಿಲ್ಲ. ಕೊಜಂಟಿಯಿಂದಲೂ ಬೇರೆ ಕಬ್ಬಿನ ಕಸದಿಂದಲೂ ಬೆಲ್ಲ ಮಾಡಲಿಕ್ಕೆ ಆಗುತ್ತದೆ. ಅನೇಕ ಸಣ್ಣ ಸಣ್ಣ ಒಲೆಗಳನ್ನು ಮಾಡಿ ಚಿಕ್ಕ ಚಿಕ್ಕ ಪಾತ್ರಗಳಿಂದ ಹಲವು ಹೆಂಗಸರು ಪ್ರಯಾಸಪಟ್ಟು ಬೆಲ್ಲ ಮಾಡುವದರ ಬದಲಿಗೆ ಸುಲಭವಾದ ಒಂದೇ ಒಲೆಯಲ್ಲಿ ದೊಡ್ಡದಾದ ಒಂದು ಪಾತ್ರೆಯನ್ನು ಇಟ್ಟು ಇಬ್ಬರಿಂದಲೇ ಬೆಲ್ಲ ಮಾಡಲಿಕ್ಕೆ ಆಗುತ್ತದೆ. ಈ ದೊಡ್ಡದಾದ ಪಾತ್ರದಿಂದ ಒಮ್ಮೆಗೆ ಐದು ಮಣ ಬೆಲ್ಲ ಮಾಡಲಿಕ್ಕಾಗುತ್ತದೆ. ಈ ಕಬ್ಬಿಣದ ತಗಡಿನ ಪಾತ್ರವನ್ನು ಹಂಪನ್‌ಕಟ್ಟೆಯಲ್ಲಿ ದಾಸ ಮಾಬೆನ್‌ರವರು ಸಾಧಾರಣ ೨೦ ರೂಪಾಯಿಗೆ ಬಹು ಅಚ್ಚು ಕಟ್ಟಿನಿಂದ ಮಾಡಿ ಕೊಡುವರು. ಈ ನೂತನವಾದ ಒಲೆಗಳಲ್ಲಿ ಬೆಲ್ಲ ಮಾಡುವದರಿಂದ ರೈತರಿಗೆ ಖಂಡಿಯ ಮೇಲೆ ಸಾಧಾರಣ ಎಂಟು ವ ಹತ್ತು ರೂಪಾಯಿ ಖರ್ಚು ಉಳಿಯುವದು. ಕಬ್ಬಿಣದ ಗಾಣವನ್ನು ಉಪಯೋಗಿಸುವದರಿಂದ ಕೊಜಂಟಿಯಲ್ಲಿ ಹೆಚ್ಚಿನ ನೀರು ನಿಲ್ಲುವದಿಲ್ಲ. ಮತ್ತು ಖಂಡಿಯಲ್ಲಿ ಮೂರು ನಾಲ್ಕು ಮಣ ಬೆಲ್ಲಕ್ಕೆ ಗುಣ ಉಂಟು. ಮರದ ಗಾಣದಲ್ಲಿ ಹಾಕಿದ ಕೊಜಂಟಿಯನ್ನು ಕಬ್ಬಿಣದ ಗಾಣದಲ್ಲಿ ಪುನಹ ಇಟ್ಟರೆ ನೀರು ಬರುವದು. ಒಳ್ಳೇ ತರದ ಕಬ್ಬಿಣದ ಗಾಣಗಳು ಮದ್ರಾಸಿನ ಬರ್ನ್ ಕಂಪೆನಿಯಲ್ಲಿ (Burn & Co., Madras.) ಸಾಧಾರಣ ೭೦ ರೂಪಾಯಿಗಳಿಗೆ ದೊರೆಯುವದು. ಈ ಜಿಲ್ಲೆಯಲ್ಲಿ ಸಾಧಾರಣ ಸಾವಿರ ಎಕ್ರೆಗಳು ಕಬ್ಬಿನ ಸಾಗುವಳಿಯಲ್ಲಿರಬಹುದು. ಎಕ್ರೆ ಒಂದಕ್ಕೆ ೧೦ ಖಂಡಿ ಬೆಲ್ಲದ ಪ್ರಕಾರ ೧೦,೦೦೦ ಖಂಡಿ ಬೆಲ್ಲವಾಗಲಿಕ್ಕೆ ಸಾಕು. ಖಂಡಿಯಲ್ಲಿ ೧೦ ರೂಪಾಯಿಯು ಹೆಚ್ಚಿನ ಮುನಾಫೆಯಾದರೆ ಸಾಧಾರಣ ಒಂದು ಲಕ್ಷ ರೂಪಾಯಿಯ ಆದಾಯವು ತೋರುವದು. ವರುಷಂಪ್ರತಿ ಇಂಥಾ ಲಾಭವು ರೈತರಿಗೆ ಆದ ಪಕ್ಷದಲ್ಲಿ ಈ ಜಿಲ್ಲೆಯಲ್ಲಿ ಕಬ್ಬಿನ ಸಾಗುವಳಿಯು ಮುಂದರಿಯುವದು. ಅದಲ್ಲದೆ ಬಡ ರೈತರ ಸ್ಥಿತಿಯು ಊರ್ಜಿತಕ್ಕೆ ಬರಲಿಕ್ಕೆ ಸಾಕು. ಬಂಗ್ರ ಕುಳೂರಿನಲ್ಲಿ ಮೋರೀಷಿಯಸ್ ಕಬ್ಬು ನಟ್ಟಿರುತ್ತಾರೆ. ಇದರ ಸಿಪ್ಪೆಯು ಗಟ್ಟಿಯಾದ ಕಾರಣ ನರಿಗಳು ಇದಕ್ಕೆ ಹೆಚ್ಚಿನ ನಷ್ಟವನ್ನು ಉಂಟುಮಾಡುವದಿಲ್ಲ. ಈ ಕಬ್ಬಿನ ಬೆಲ್ಲವು ಬಹು ರುಚಿಕರವಾಗಿಯೂ, ಮಧುರವಾಗಿಯೂ, ತಿನ್ನುವ ಪದಾರ್ಥಗಳಿಗೆ ಹಾಕಲಿಕ್ಕೆ ಹಿತಕರವಾಗಿಯೂ ಇರುತ್ತದೆ. ಊರಿನ ಕಬ್ಬಿನ ಬೆಲ್ಲಕ್ಕಿಂತ ಇದಕ್ಕೆ ಸ್ವಲ್ಪ ಹೆಚ್ಚಿನ ಕ್ರಯವು ಕೊಡಬಹುದು. ಈ ಕಬ್ಬನ್ನು ನಡುವದರಿಂದ ಈ ಜಿಲ್ಲೆಗೆ ಹೆಚ್ಚಿನ ಪ್ರಯೋಜನವು ದೊರೆಯಬಹುದು. ಆದುದರಿಂದ ಕಬ್ಬು ಸಾಗುವಳಿ ಮಾಡುವ ಎಲ್ಲಾ ರೈತರು ಈ ಕಬ್ಬನ್ನು ತಮ್ಮ ಗದ್ದೆಗಳಲ್ಲಿ ಸ್ವಲ್ಪ ಸ್ವಲ್ಪ ನಡುವದುತ್ತಮ. ಈ ಕಬ್ಬಿನ ಬೀಜ ಬೇಕೆಂದಿರುವವರಿಗೆ ಬಂಗ್ರ ಕುಳೂರಿನ ಮೊಡ್ತಿನ್ ಮತ್ತು ಲೊರೆನ್ಸ್ ಸೋಜರಲ್ಲಿ ದೊರೆಯುವದು, ಕೂಡಲೇ ತರಿಸಿಕೊಳ್ಳಬೇಕು. ಹೊಸ ನಮೂನೆಯ ಒಲೆಯನ್ನು ನೋಡಬೇಕೆಂದಿರುವವರು ಸದರಿ ಲೋರೆನ್ಸ್ ಸೋಜರಲ್ಲಿ ಹೋದಲ್ಲಿ ನೋಡಬಹುದು. ಇವರು ನನ್ನ ಮಾತಿನ ಮೇಲೆ ನಂಬಿಕೆ ಇಟ್ಟು ಈ ಕೆಲಸವನ್ನು ಕೈಕೊಂಡು ಕೊನೆಗಾಣಿಸಿದ್ದಕ್ಕೆ ನಾನು ತುಂಬಾ ಸಂತೋಷಪಡುತ್ತೇನೆ. ಅದಲ್ಲದೆ ಆ ಹಳ್ಳಿಯಲ್ಲಿ ಅನೇಕರು ಈ ಹೊಸ ಬೆಲ್ಲ ಮಾಡುವ ವಿಧಾನಕ್ಕೆ ಮೆಚ್ಚಿ ತಾವು ಕೂಡಾ ಹಾಗೆಯೇ ಮಾಡಲಿಕ್ಕೆ ಪ್ರಯತ್ನಿಸುವದನ್ನು ಕಾಣುವರೆ ಬಹು ಸಂತೋಷವೇ ಸರಿ. ಈ ಪ್ರಯೋಜನಕರವಾದ ಸಂಗತಿಗೆ ಎಲ್ಲರೂ ಗಮನಕೊಟ್ಟು ಆದಷ್ಟು ಬೇಗನೆ ಈ ನೂತನವಾದ ಕ್ರಮವು ಈ ಜಿಲ್ಲೆಯಲ್ಲಿ ಹಬ್ಬುವಂತೆ ಮಾಡುವದು ಅವಶ್ಯ. ಈ ವಿಷಯದಲ್ಲಿ ಬೇಕಾದ ಅನುಭವವನ್ನೂ ಸಹಾಯವನ್ನೂ ಕೊಡಲಿಕ್ಕೆ ಸಂತೋಷಪಡುವ,

ಕೊಡಿಯಾಳ ಗುತ್ತು ತಿಮ್ಮಪ್ಪ ಆಳ್ವ.
Licentiate in Agriculture.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.)

ಅಯ್ಯಾ, ಪತ್ರಕರ್ತರೇ,

ಮಂಜೇಶ್ವರದಲ್ಲಿರುವ ಶ್ರೀ ಮದನಂತೇಶ್ವರ ದೇವಸ್ಥಾನವು ಕೊಚ್ಚಿಯಿಂದ ಗೋವೆ ವರೆಗೆ ಪಸರಿಸಿ ಇರುವ ಸಮಸ್ತ ಗೌಡ ಸಾರಸ್ವತ ಬ್ರಾಹ್ಮಣರ ಅಧಿಕಾರಕ್ಕೆ ಒಳಗಾಗಿರುತ್ತದೆಂಬದನ್ನು ನಾವೆಲ್ಲವರೂ ಕೇಳಿ ಬಲ್ಲೆವು. * * * * *
* * * * * * * * * * * * * * * * *
* * * * * * * * * * ಇದರಲ್ಲಿ ಸ್ವಜಾತಿಯವರೆಲ್ಲರಿಗೆ ಹಕ್ಕು ಉಂಟೋ ಅಥವಾ ಇಲ್ಲವೋ ಎಂಬದನ್ನು ಖಂಡಿತವಾಗಿ ನಿಷ್ಕರ್ಷೆ ಮಾಡುವ ಬಗ್ಯೆ ಭಜಕರಲ್ಲಿ ಕೆಲವರು ಮುಂದಾಗಿ ಕೋರ್ಟಿನಲ್ಲಿ ದಾವೆಯನ್ನು ತರುವರೆಂಬದನ್ನು ಈ ಜಿಲ್ಲೆಯ ನಮ್ಮ ಜಾತಿ ಬಾಂಧವರೆಲ್ಲವರೂ ಇಷ್ಟರೊಳಗೆ ತಿಳಿದಿರುವರೆಂದು ಊಹಿಸುತ್ತೇನೆ. ಈ ಬಾಬಿನಲ್ಲಿ ಕೋರ್ಟಿನಿಂದ ಕಮಿಶನರರು ನೇಮಕವಾಗಿ ಅವರು ಮಾಡುವ ಇನ್‌ವೆಂಟರಿಯ ಕೆಲಸವು ನಿನ್ನೆ ಮುಗಿಯಿತು.

ಆದರೆ ದಾವೆ ನಡೆದರೆ ಎರಡು ಕಡೆಯವರಿಂದಲೂ ಹೇರಳವಾದ ಹಣವು ದುರ್ವ್ಯಯವಾಗುವ ಸಂಭವ ಉಂಟೆಂಬದನ್ನು ನಮ್ಮ ಊರಿನ ತಾಯಿ ಪೇಟೆಯವರಾದ ಮಂಗಳೂರಿನ ಕೆಲವು ಮಹಾನುಭಾವರು ಒಟ್ಟು ಕೂಡಿ ಒಂದೆರಡು ದಿವಸಗಳ ಹಿಂದೆ ಸದರಿ ಮಂಗಳೂರಿನ ಕೆನರಾ ಹ್ಯಾಸ್ಕೂಲಿನಲ್ಲಿ ಸಭೆಕೂಡಿ ಅಲ್ಲಿ ಹನ್ನೆರಡು ಮಂದಿ ಮಹಾನುಭಾವರು ಮೆಂಬರರಾಗಿ ಚುನಾಯಿಸಲ್ಪಟ್ಟು ಸದರಿಯವರು ಮೊನ್ನೆ ಇಲ್ಲಿಗೆ ಬಂದು ದೇವಸ್ಥಾನದಲ್ಲಿ ಕೂಡಿದರು. ರಾಜಿಯಾಗುವದರಿಂದ ಇತ್ತಂಡಕ್ಕೂ ಶುಭವೇ ಸರಿ; ಆದರೆ ಇಂಥಾ ರಾಜಿಯ ಪ್ರಸ್ತಾಪಗಳು ಇದಕ್ಕೆ ಮುಂಚೆ ನೂರಾರು ಸಾರಿ ಆಗಿ ಹೋಗಿ, ಬೆಟ್ಟವು ಇಲಿಯನ್ನು ಹೆತ್ತಿತು ಎಂಬ ಗಾದೆಯ ಮಾತು ನಮ್ಮ ಎಲ್ಲವರ ಅನುಭವಕ್ಕೆ ಬಂದಿರುತ್ತದೆ. ಈ ಸಾರಿಯಾದರೂ ಹಾಗೆ ಆಗದೆ ನೀತಿ ಇರುವಂತೆ ತೀರ್ಮಾನವಾಗಿ ಇನ್ನಾದರೂ ಈ ದೇವಸ್ಥಾನವು ನಮ್ಮ ಜಾತಿಯ ಸಕಲ ಗೃಹಸ್ಥರ ಅಧಿಕಾರಕ್ಕೆ ಒಳಪಟ್ಟದ್ದೆಂದೂ, ಒಬ್ಬರಿಬ್ಬರ ಮನೆಯ ಹಕ್ಕಿನದಲ್ಲವೆಂದೂ—ಆಗಲಿ ಎಂದು ಹಾರೈಸುತ್ತೇನೆ. ನಿನ್ನೆ ಕೂಡಿದ ಈ ಸಭೆಯವರ ಪ್ರೊಸಿಡಿಂಗ್ಸಿನಲ್ಲಿ ಒಂದು ದೊಡ್ಡ ಮಿಸ್ಟೇಕ (Mistake) ಆಗಿದೆ; ಅದೇನಂದರೆ—ಇನ್ನು ಮುಂದೆ ಇವರ ಎರಡನೇ ಮೀಟಿಂಗು ಮಂಗಳೂರಿನ ಕೆನರಾ ಹ್ಯಾಸ್ಕೂಲಿನಲ್ಲಿ ಇದೇ ತಿಂಗಳ ೧೩-೧೪ನೇ ತಾರೀಕುಗಳಲ್ಲಿ ಜರಗಬೇಕೆಂದು ಇವರು ನಿರ್ಣಯಿಸಿದ್ದು ದೊಡ್ಡ ಅನ್ಯಾಯವು; ಯಾಕಂದರೆ ಯಾರಿಗಾದರೂ ಕರೆಯಲ್ಪಡದೆ ಅಲ್ಲಿ ಹೋಗಲಿಕ್ಕೆ ಅಧಿಕಾರವಿಲ್ಲವಾದರಿಂದ ಈ ಸಭೆಯು ಒಂದು ಗುಪ್ತ ಸಭೆ ಎಂತಲೇ ನಾವು ಭಾವಿಸ ಬೇಕಾಗುತ್ತದೆ. ಹಾಗೆ ಮಾಡದೆ ಮಂಜೇಶ್ವರ ದೇವಸ್ಥಾನದಲ್ಲಿಯೇ ಇವರು ಸಭೆ ಮಾಡಿದರೆ ಸಭೆಯ ಕಾರ್ಯಗಳು ಎಲ್ಲವರಿಗೆ ಗೊತ್ತಾಗುತ್ತವೆ. ಮತ್ತು ಅಂಥಾ ಕಾರ್ಯಗಳಲ್ಲಿ ಯಾರಾದರೂ ಸಂಶಯ ಪಡಲಿಕ್ಕೆ ಕಾರಣವಾಗುವದಿಲ್ಲ.

ಆದ್ದರಿಂದ ಈ ಸಭೆಯವರು ನಾಡದು ಕೂಡುವದು ಮಂಜೇಶ್ವರ ದೇವಸ್ಥಾನದಲ್ಲಿ ಸೇರುವದು ಮಾತ್ರ ನೀತಿ ಎಂತಲೂ ಬೇರೆ ಯಾವ ಕಡೆಯಲ್ಲಿಯಾದರೂ ಸೇರುವದು ನೀತಿಯಲ್ಲವೆಂತಲೂ ನನ್ನದೊಂದು ದೀನಭಾವದ ಸೂಚನೆಯಾಗಿರುತ್ತದೆ. ಇದನ್ನು ಸದರಿ ಸಭೆಯ ಮೆಂಬರರೆಲ್ಲವರು ಮನಸ್ಸಿಗೆ ತಂದುಕೊಳ್ಳಬೇಕೆಂತ ಅಪೇಕ್ಷಿಸುತ್ತೇನೆ.

ಮಂಜೇಶ್ವರ.
ತಾ. 3—1—1912.

ಮಂಜೇಶ್ವರ ನಿವಾಸಿ.

[ಮೇಲಿನ ಈ ಪತ್ರದಲ್ಲಿ ಪ್ರಸ್ತಾಪಿಸಲ್ಪಟ್ಟ ಮಂಗಳೂರಿನ ಗೃಹಸ್ಥರು ಮಂಗಳೂರಿನ ಯಾ ಇತರ ಕಡೆಗಳಲ್ಲಿಯ ಜಾತಿವರ್ಗದಿಂದ ಆರಿಸಲ್ಪಟ್ಟ ಪ್ರತಿನಿಧಿಗಳಾಗಿ ಮಂಜೇಶ್ವರ ದೇವಸ್ಥಾನಕ್ಕೆ ಹೋದದ್ದಲ್ಲವೆಂತಲೂ ಆ ದೇವಸ್ಥಾನದಲ್ಲಿ ಉಂಟಾದ ವಿವಾದವನ್ನು ತೀರ್ಮಾನಿಸುವ ಕೋರಿಕೆಯಿಂದ ಅಲ್ಲಿಗೆ ತಾವಾಗಿಯೇ ಹೋಗಿದ್ದರೆಂಬುದಾಗಿಯೂ ತಿಳಿಯುತ್ತೇವೆ. ಆದಕಾರಣ ಇವರ ಸಭೆಯು ದೇವಸ್ಥಾನದಲ್ಲಿಯೇ ಕೂಡಬೇಕೆಂದು ಹೇಳಲು ಕಾರಣವಿಲ್ಲ. ಈ ವಿಷಯದಲ್ಲಿ ರಾ. ಬಂಗ್ರಮಂಜೇಶ್ವರ ಶ್ರೀನಿವಾಸ ಕಮ್ತಿ ಮತ್ತಿನ್ನಿಬ್ಬರ ಸಹಿನಿಶಿ ಬಂದ ಪತ್ರವನ್ನು ಪ್ರಕಟಿಸುವುದು ಪ್ರಕೃತ ಸಂದರ್ಭದಲ್ಲಿ ಉಚಿತವಲ್ಲವೆಂತ ನಾವು ಅಭಿಪ್ರಾಯ ಪಡುತ್ತೇವೆ. *Editor.*]

ವಿದೇಶ ವೃತ್ತಾಂತ.

ರುಷ್ಯಾ ಸರಕಾರದ ಶರ್ತದ ಪ್ರಕಾರ ಪರ್ಶಿಯಾ ಸರಕಾರದವರು ಮೆ। ಶುಸ್ತರರವರನ್ನು ಕೆಲಸದಿಂದ ಬರತರಫುಮಾಡಿರುವರು.

ಕಳದ ವಾರ ರುಷ್ಯಾನರು ಟ್ರೆಬಿಜಿನಲ್ಲಿ ಪರ್ಶಿಯಾನರನ್ನು ಅಮಾನುಷ ರೀತಿಯಿಂದ ಕೊಲ್ಲಲಿಲ್ಲವೆಂದೂ ರುಷ್ಯಾನರು ಪರ್ಶಿಯಾನರ ಹೆಂಗಸು ಮಕ್ಕಳಿಗೆ ಕರುಣೆ ತೋರಿಸಿದ್ದರೆಂದೂ ಟೆಬ್ರಿಜಿನ ಕೌನ್ಸೆಲ್ಲರು ಪ್ರಕಟಿಸಿರುವರಲ್ಲದೆ ಈ ಕದನದಲ್ಲಿ ರುಷ್ಯಾನರಲ್ಲಿ ೧೦೦ ಮಂದಿ ಮಡಿದಿರುವರೆಂದೂ ಪರ್ಶಿಯಾನರಲ್ಲಿ ಹೆಚ್ಚು ಜನ ಸಾಯಲಿಲ್ಲವೆಂದೂ ಹೇಳುವರು.

ಬ್ರಿಟಿಷ್ ಕೌನ್ಸೆಲ್ಲರಾದ ಮೆ। ಸ್ಮಾರ್ಟರವರು ಬುಶ್ಯರಿನಿಂದ ಶಿರಾಜಿಗೆ ಪ್ರಯಾಣ ಮಾಡುತ್ತಿರುವಾಗ ಕೆಜರಾನ್ ಎಂಬಲ್ಲಿ ಪರ್ಶಿಯಾನರ ಪಹರೆಯವರು ಇವರ ಮೇಲೆ ಬಿದ್ದದರಿಂದ ಉಭಯತರಿಗೂ ಕಠಿಣ ಕದನ ನಡೆಯಿತು. ಈ ಕದನದಲ್ಲಿ ಕೌನ್ಸೆಲ್ಲರ ಸಂಗಡವಿದ್ದ ಸೈನೀಕರಲ್ಲಿ ಒಬ್ಬನು ಕೊಲ್ಲಲ್ಪಟ್ಟನು. ೩ ಜನರಿಗೆ ಘಾಯವಾಯಿತಲ್ಲದೆ ಕೌನ್ಸೆಲ್ಲರಿಗೂ ತೊಡೆಯಲ್ಲಿ ಪೆಟ್ಟಾಗಿಯದೆ.

ಚೀನದಲ್ಲಿ ಸರಕಾರದವರಿಗೂ ದಂಗೆಗಾರರಿಗೂ ಒಪ್ಪಂದವಾಗುವ ಸಂದರ್ಭದಲ್ಲಿ ಶಾಂಘಾಯಿಯಲ್ಲಿ ಮಹಾಸಭೆ ಕೂಡಿಯದೆ. ಈ ಸಂಬಂಧ ಪ್ರಜಾಪಕ್ಷದ ಪ್ರಮುಖನಾದ ಸನ್. ಯಾಟ್ ಸೆನ್‌ರವರು ಶಾಂಘಾಯಿಗೆ ಬಂದಿರುವರು. ಈ ಸಭೆಯವರು ಪ್ರಜಾಧಿಪತ್ಯವನ್ನು ಸ್ಥಾಪಿಸುವುದು ಉತ್ತಮವೆಂದು ನಿಷ್ಕರ್ಷಿಸಿ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಚಕ್ರವರ್ತಿಯವರನ್ನು ಕೇಳಿಕೊಂಡಿದ್ದಾರೆ. ಆದರೆ ಸರಕಾರ ಕಡೆಯ ಯುಆನ್. ಶಿ ಕಾಯಿರವರು ಒಪ್ಪಿಗೆ ಕೊಡಕೂಡದೆಂಬದಾಗಿ ಚಕ್ರವರ್ತಿಯವರಿಗೆ ಬುದ್ಧಿವಾದವನ್ನಿತ್ತಿರುವದೆಂಬದಾಗಿ ತಿಳಿದು ಬರುತ್ತದೆ.

ಶಾಂಘಾಯಿ ಸಭೆಯ ಸೂಚನೆಯ ವಿಷಯವಾಗಿ ಆಲೋಚಿಸುವರೆ ಚೀನದ ಡೌಗರ್ ಚಕ್ರವರ್ತಿನಿಯವರು ಯುಆನ್ ಶಿ ಕಾಯಿರವರನ್ನು ಕರೆಯಿಸಿರುವರು.

ಪ್ರಜಾ ಕಡೆಯ ಡಾಕ್ಟರ್ ಸನ್. ಎಟ್. ಸೆನ್‌ರವರು ಶಾಂಘಾಯಿಗೆ ಹೋಗಿರುವುದರಿಂದ ಸರಕಾರ ಕಡೆಯವರಿಗೆ ಕಂಪನ ಹಿಡಿದದೆ. ಸನ್. ಎಟ್ ಸೆನ್‌ರವರ್ರೇ ಪ್ರಜಾದಿಪತ್ಯದ ಪ್ರೆಸಿಡೆಂಟರಾಗಿ ಆರಿಸಲ್ಪಡುವರು. ರಾಜವಂಶದ ಮಾಂಚುಸುಗಳು ಶರಣಾಗತರಾಗದ ಪಕ್ಷಕ್ಕೆ ಪುನಃ ಯುದ್ಧ ಪ್ರಾರಂಭವಾಗುವುದು.

ಡೌಗರ್ ಚಕ್ರವರ್ತಿನಿಯವರೂ, ಯುಆನ್. ಶಿ ಕಾಯಿರವರೂ ಮಾಂಚು ಪ್ರಿನ್ಸರವರೂ ಒಟ್ಟುಕೂಡಿ ಶಾಂಘಾಯಿ ಸಭೆಯ ಸೂಚನೆಯ ವಿಶಯವಾಗಿ ಆಲೋಚಿಸಿ ಶಾಂಘಾಯಿ ಸಭೆಯವರು ನಿಷ್ಕರ್ಷಿಸಿದ ಯಾವ ತರದ ಸರಕಾರಕ್ಕೂ ತಾವು ಒಪ್ಪಿಕೊಳ್ಳುವೆವೆಂದು ತಿಳಿಸಿರುವರು.

ನಾನ್‌ಕಿಂಗಿನಲ್ಲಿ ಸನ್ ಎಟ್ ಸೆನರವರು ಚೀನದ ಪ್ರಜಾಧಿಪತ್ಯದ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರು.

ಶಾಂಘಾಯಿಯಲ್ಲಿ ಕೂಡಿದ ಸಭೆಯವರು ಪ್ರಜಾ ಕಡೆಯವರಿಗೂ ಸರಕಾರದವರಿಗೂ ಸಮಾಧಾನವಾಗಿ ದೇಶದಲ್ಲಿ ತಕ್ಕ ವ್ಯವಸ್ಥೆ ಉಂಟಾಗ ಬೇಕಾದರೆ ಒಂದು ರಾಷ್ಟ್ರೀಯ ಸಭೆಯು ಕೂಡಬೇಕೆಂದೂ ಪ್ರತಿ ಒಂದು ಆಧಿಪತ್ಯದಿಂದ ಮೂರು ಮೂರು ಪ್ರತಿನಿಧಿಗಳು ಈ ಸಭೆಗೆ ಹಾಜರಿದ್ದು ತಮ್ಮ ಅಭಿಪ್ರಾಯಗಳನ್ನು ಓಟುಮೂಲಕ ಕೊಡಬೇಕೆಂದೂ ನಿಷ್ಕರ್ಷಿಸಿರುವರು. ಈ ಪ್ರತಿನಿಧಿಗಳಲ್ಲಿ ಅರ್ಧಾಂಶವನ್ನು ಪ್ರಜಾಧಿಪತ್ಯದವರೂ ಅರ್ಧಾಂಶವನ್ನು ಮಂಚೂ ಸರಕಾರದವರೂ ಕರೆಯಿಸುವರು.

ಕಳದ ತಾ. ೨೫ನೇ ಬೆಳಿಗ್ಯೆ ಕೆಲವು ಸಾವಿರ ತುರ್ಕರು ಬೆಂಗಾಜಿಗೆ ಮುಂದರಿದರು. ಆದರೆ ಜಯ ಹೊಂದದೆ ಸಾಯಂಕಾಲ ಮರುಭೂಮಿಗೆ ಹಿಂದೆರಳಿದರು. ಈ ಕದನದಲ್ಲಿ ತುರ್ಕರಲ್ಲಿ ೫೦೦ ಮಂದಿ ಮಡಿದರು.

ತಾ. ೨೬ರಲ್ಲು ಡೆರ್ನದ ಬಳಿಯಲ್ಲಿ ಪಟ್ಟಣಕ್ಕೆ ನೀರುಗಳನ್ನು ಒದಗಿಸಿ ಕೊಡುವ ಯಂತ್ರಗಳನ್ನು ಸರಿಪಡಿಸುತ್ತಿದ್ದ ಇಂಜಿನಿಯರುಗಳನ್ನು ಇಟಾಲಿಯರು ಎದುರಿಸಿದರು. ಕೂಡ್ಲೇ ತುರ್ಕರ ಒಂದು ದೊಡ್ಡ ಸೈನ್ಯವು ಇಟಾಲಿಯರ ಮೇಲೆ ಗುಂಡಿನ ಮಳೆಯನ್ನು ಗರೆಯಲಾರಂಭಿಸಿತು. ಉಭಯತರಿಗೂ ಕಠಿಣ ಕದನವಾಗಿ ಇಟಾಲಿಯರು ಹಿಮ್ಮೆಟ್ಟಲ್ಪಟ್ಟರು. ಇಟಾಲಿಯರಲ್ಲಿ ಮೂರು ಮಂದಿ ಮಡಿದರು ೭೭ ಮಂದಿಗೆ ಘಾಯವಾಯಿತು.

ಟೆಬ್ರಿಜನ್ನು ರುಷ್ಯಾನರು ಈಗ ಪೂರ್ಣವಶಮಾಡಿಕೊಂಡಿದ್ದಾರೆ. ಟೆಬ್ರಿಜಿನಲ್ಲಿ ಈಗ ರುಷ್ಯಾನರ ೫೦೦೦ ಸೈನ್ಯವಿದೆ. ರೆಷ್ಟಿನಲ್ಲಿಯೂ ರುಷ್ಯಕೊಸಾಕರ ಎರಡು ದೊಡ್ಡ ಸೈನ್ಯವಿದೆ. ಕಾಸ್ಪಿಯಾನಿನಿಂದ ರುಷ್ಯರ ಮೂರು ಯುದ್ಧ ಹಡಗಗಳು ಎಂಜಲಿಗೆ ಕಳುಹಿಸಲ್ಪಡುವವು.

ಚೀನದಲ್ಲಿ ೪೦೦೦ ರಾಜ ಕಂಟಕರು ಹಾಂಕೋ ಪಟ್ಟದ ಮೇಲೆ ಬಿದ್ದು ಯುದ್ಧಮಾಡುತ್ತಿದ್ದಾರೆ. ಶಾಂಘಾಯಿ ಕನ್ಫರೆನ್ಸಿನಲ್ಲಿ ನಿಜವಾಗಿ ಪ್ರಜಾಧಿಪತ್ಯವು ಸ್ಥಾಪಿಸಲ್ಪಡುತ್ತದೆಂಬದಾಗಿ ನಂಬಿದ್ದ ಮಂಚು ಸರಕಾರದವರು ಈ ರಾಜಕಂಟಕರು ಪುನಃ ಯುದ್ಧಮಾಡ ತೊಡಗಿದ್ದರಿಂದ ಶಾಂಘಾಯಿ ಸಭೆಯ ಬಲವು ಮುರಿಯಿತೆಂಬ ಭಾವನೆಯಿಂದ ಹರ್ಷಿತರಾಗಿದ್ದಾರೆ.

ಪ್ರೆಂಚ್ ಗೂಢಾಚಾರ್ಯನೆಂದು ಶಿಕ್ಷೆವಿಧಿಸಲ್ಪಟ್ಟು ಜರ್ಮನಿಯ ಕೋಟೆಯಲ್ಲಿ ಬಂಧಿಸಲ್ಪಟ್ಟಿದ್ದ ಕೆಪ್ಟನ್ ಲಕ್ಸ್ ಎಂಬವರು ಕೋಟೆಯಿಂದ ತಪ್ಪಿಸಿಕೊಂಡು ಸ್ವಿಜರ್ ಲೇಂಡಿನ ಮಾರ್ಗವಾಗಿ ಪಾರಿಸಿಗೆ ಬಂದು ತಲಪಿರುವರು.

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಮೆ। ಕೀರ್ ಹಾರ್ಡಿಯವರು ರಾಜಕೀಯ ಕೈದಿಯಲ್ಲಿ ಯಾರ್‍ಯಾರೆಲ್ಲಾ ಬಿಡಿಸಲ್ಪಡುವರೆಂಬದಾಗಿ ಹಿಂದೂಸ್ಥಾನದ ಉಪಸೆಕ್ರೆಟರಿಯವರನ್ನು ಕೇಳಿದರು. ಉಪಸೆಕ್ರೆಟರಿಯವರು ರಾಜಕೀಯ ಕೈದಿಗಳಲ್ಲಿ ಬಿಡಲ್ಪಡುವವರ ಹೆಸರನ್ನು ಹೇಳಲಿಲ್ಲ. ಆದರೆ ಇಂಥಾ ೨೭೦ ಕೈದಿಗಳಲ್ಲಿ ೧೮೩ ಮಂದಿಗೆ ಬಿಡುಗಡೆ ಯಾ ಶಿಕ್ಷಾವಧಿಯು ಕಮ್ಮಿ ಮಾಡಲ್ಪಡುವುದು ಎಂಬ ಸಂತೋಷಕರವಾದ ಉತ್ತರ ಕೊಟ್ಟರು. ಮೆ। ಕೀರ್ ಹಾರ್ಡಿಯವರು ಪುನಃ ಬಿಡುಗಡೆಯಾಗುವವರಲ್ಲಿ ಮೆ। ತಿಲಕರವರು ಶೇರಿರುವರೋ ಎಂಬ ಪ್ರಶ್ನೆಮಾಡಲು ಉಪಸೆಕ್ರೆಟರಿಯವರು ಇದನ್ನು ಹೇಳಲು ನಿರಾಕರಿಸಿದರು. ತಿಲಕರವರಿಗೆ ಈ ಸಾರಿ ಹ್ಯಾಗೂ ಬಿಡುಗಡೆಯಾಗುವುದೆಂಬ ವರ್ತಮಾನವು ಇಂಗ್ಲಾಂಡಿನಲ್ಲಿದೆ.

ಉತ್ತರ ಹಿಂದುಸ್ಥಾನ.

ಕಳದ ತಿಂಗಳ ತಾ. ೨೩ನೆಗೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ೮,೬೪೩ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೭,೧೮೯ ಮಂದಿ ಮೃತಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟಂದರೆ:—ಮುಂಬಾಯಿ ೧,೮೮೭; ಮದ್ರಾಸ್ ೨೩೧; ಬಂಗಾಳ ೩೯; ಸಂಯುಕ್ತ ಸಂಸ್ಥಾನ ೧,೯೩೩; ಪಂಜಾಬು ೩೭; ಬರ್ಮ ೪೧; ಮಧ್ಯ ಸಂಸ್ಥಾನ ೮೩೦; ಮೈಸೂರು ೩೧೭; ಹೈದರಾಬಾದ್ ೧,೫೦೪; ರಜಪುತಾನ ೪೪ ಮರಣಗಳಾದವು.

ಬಿಹಾರಿಗೆ ಸರ್ ಚಾರ್ಲ್ಸ್ ಬೈಲಿರವರು ಲೆಫ್ಟನೆಂಟ್ ಗವರ್ನರರಾಗಿ ನೇಮಿಸಲ್ಪಟ್ಟಿದ್ದರು. ಆದರೆ ಇವರು ಇದನ್ನು ಸ್ವೀಕರಿಸುವದಿಲ್ಲವೆಂಬದಾಗಿ ಆಯಾ ಪತ್ರಗಳಲ್ಲಿ ಪ್ರಕಟವಾಗಿತ್ತು. ಈ ಮಾತಿಗೆ ಆಧಾರವಿಲ್ಲವೆಂಬದಾಗಿ 'ಇಂಗ್ಲಿಷ್ ಮೇನ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿಯದೆ.

ಸಂಯುಕ್ತ ಬಂಗಾಳದ ಗವರ್ನರರಾಗಿ ಸರ್ ಕೃಷ್ಣ ಗುಪ್ತರವರು ನೇಮಿಸಲ್ಪಡುವರೆಂಬದಾಗಿ 'ಡೈಲಿ ಮೈಲ್' ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿತ್ತು. ಈ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ ವಾರ್ತೆಯ ವಿಶಯ ತನಗೆ ಏನೊಂದೂ ಗೊತ್ತಿಲ್ಲವೆಂಬದಾಗಿ ಸರ್ ಕೃಷ್ಣ ಗುಪ್ತರವರು ಹೇಳುವರು.

ಕಲ್ಕತ್ತೆಯಲ್ಲಿ ತಾ. ೨೭ರಲ್ಲು ಏಕೇಶ್ವರ ವಾದಿಗಳ ರಾಷ್ಟ್ರೀಯ ಸಭೆಯು ಕಲ್ಕತ್ತೆಯ ಸಿಟಿ ಕಾಲೇಜಿನ ಸಭಾಸದನದಲ್ಲಿ ಕೂಡಿ ಬಂತು. ಕಳದ ಸಂಚಿಕೆಯಲ್ಲಿ ತಿಳಿಸಿದಂತೆ ಮೆ। ಉ. ರಘುನಾಥಯ್ಯನವರು ಈ ಸಭೆಯಲ್ಲಿ ಅಧ್ಯಕ್ಷರಾಗಿದ್ದು ಅರ್ಥಗರ್ಭಿತವಾದ ಚಲೋ ಭಾಷಣ ಮಾಡಿದರು.

ತಾ. ೨೯ರಲ್ಲು ಇಂಡಸ್ಟ್ರಿಯಲ್ ಕನ್ಫರೆನ್ಸ್ ಎಂಬ ಸಾಂಪತ್ತಿಕಭಿವೃದ್ಧಿಯ ಔದ್ಯೋಗಿಕ ಸಭೆಯು ಕಲ್ಕತ್ತೆಯಲ್ಲಿ ಕೂಡಿತು. ಈ ಸಭೆಗೆ ಬಹುಮಾನಪಟ್ಟ ಮೆ। ದಾದಬಾಯಿರವರು ಅಧ್ಯಕ್ಷರಾಗಿದ್ದರು. ಸಾಂಪತ್ತಿಕ ಅಭಿವೃದ್ಧಿಯನ್ನು ಸಾಧಿಸುವ ಸಂಬಂಧವಾಗಿ ಸುಮಾರು ೨೪ ಜನರು ಆಯಾ ವಿಶಯಗಳ ಮೇಲೆ ಪ್ರಬಂಧಗಳನ್ನು ಬರೆದು ಈ ಸಭೆಯ ಮುಂದಿಟ್ಟರು.

ತಾ. ೨೯ನೇ ಮದ್ಯಾನ್ಹ ಸೋಶ್ಯಲ್ ಕನ್ಫರೆನ್ಸ್ ಎಂಬ ಸಾಮಾಜಿಕ ಸಭೆಯು ರಾಷ್ಟ್ರೀಯ ಸಭೆಯ ಹಂದರದಲ್ಲಿ ಕೂಡಿತು. ಈ ಸಭೆಗೆ ಮೆ। ಎ. ಚೌದುರಿಯವರು ಅಧ್ಯಕ್ಷರಾಗಿದ್ದು ಬಾಲವಿವಾಹದಿಂದುಂಟಾಗುವ ಕೇಡು, ಪತಿತ ಜನರನ್ನು ಉದ್ಧರಿಸುವದು, ಸ್ತ್ರೀ ವಿದ್ಯಾಭ್ಯಾಸವನ್ನು ಕುರಿತು ಭಾಷಣ ಮಾಡಿದರಲ್ಲದೆ ಮೆ। ಬಾಸುರವರ ವಿವಾಹ ಮಸೂದೆ ಮತ್ತು ಮೆ। ಗೋಖಲೆಯವರ ಉಚಿತ ಪ್ರಾಥಮರಿ ವಿದ್ಯಾಭ್ಯಾಸ ಮಸೂದೆಗಳನ್ನು ಅನುಮೋದಿಸಿ ಮಾತಾಡಿದರು. ಇವರ ಭಾಷಣದಂತರ ಮೆ। ಬಾಸುರವರ ವಿವಾಹ ಮಸೂದೆಯ ಪ್ರಸ್ತಾಪ ನಡೆದು ಈ ಮಸೂದೆಗೆ ಹೃತ್ಪೂರ್ವಕವಾದ ಒಪ್ಪಿಗೆ ಕೊಡಬೇಕೆಂಬದಾಗಿ ಒಬ್ಬರು ಸೂಚಿಸಿದರು. ಇದು ಅನುಮೋದಿಸಲ್ಪಟ್ಟದ್ದರಿಂದ ಕೂಡ್ಲೇ ಸಭೆಯಲ್ಲಿ ಗಲಿಬಿಲಿ ಉಂಟಾಗಿ ಪಂಜಾಬಿನ ಮೆ। ರಾಮ್ಭಜ ದತ್ತ್ ಚೌದುರಿಯವರು ಮೆ। ಬಾಸುರವರ

ವಿವಾಹ ಮಸೂದೆಯನ್ನು ವಿರೋಧಿಸಿ ಮಾತಾಡಿ ಆಸನದಲ್ಲಿ ಕೂತೊಡನೆಯೇ ಪಂಜಾಬಿನ ಆರ್ಯಸಮಾಜದ ಗೋವರ್ಧನ ದಾಸರವರು ಎದ್ದು ನಿಂತು ರಾಮ್ಜಿಯವರು ತಮ್ಮ ಸಮಾಜದ ಪರವಾಗಿ ಮಾತಾಡುವವರಲ್ಲವೆಂದು ಹೇಳಿ ಬಾಸುರವರ ಮಸೂದೆಯನ್ನು ಅನುಮೋದಿಸಿದರು. ರಾಮುಜಿಯವರು ಬಹಳ ಶಿಟ್ಟುಗೊಂಡವರಾಗಿ "ಇಲ್ಲ ಇಲ್ಲ" ಎಂದು ಕೂಗಿದರು. ಹೀಗೆ ಸಭೆಯಲ್ಲಿ ಬಹಳ ಗುಲ್ಲೆಬ್ಬಿತು. ಹ್ಯಾಗೂ ಬಹಳ ಕಷ್ಟದಿಂದ ಪುನಃ ಗುಲ್ಲು ನಿಂತಿತು. ನಂತರ ಬಹುಮಾನಪಟ್ಟ ಮುದ್‌ಹೋಲ್ಕರವರು ವಿವಾಹ ಮಸೂದೆಯನ್ನು ಅನುಮೋದಿಸಿ ಭಾಷಣ ಕೊಟ್ಟು ತನ್ನ ಭಾಷಣದ ಮಧ್ಯೆ ಬಂಗಾಳಿ ಹುಡುಗಿಯನ್ನು ವಿವಾಹವಾದ ಪಂಜಾಬಿ ಗೃಹಸ್ಥರು ಈ ಮಸೂದೆಯನ್ನು ಹ್ಯಾಗೆ ವಿರೋಧಿಸ ಬಹುದೆಂಬದು ತನ್ನ ಗ್ರಹಿಕೆಗೆ ಬರುವದಿಲ್ಲವೆಂದು ಹೇಳಿದರು. ಕೂಡ್ಲೇ ರಾಮ್ಜಿಯವರು ಎದ್ದು ನಿಂತು ಬಹಳ ಗದ್ದಲದಿಂದ ಮಾತಾಡ ತೊಡಗಿದರು. ಆದರೆ ಪ್ರೆಸಿಡೆಂಟರು ಮಾತಾಡ ಕೂಡದೆಂದು ಅಪ್ಪಣೆ ಕೊಟ್ಟದ್ದರಿಂದ ಗದ್ದಲವು ನಿಂತಿತು.

ವಂಗವಿಭಜನೆಯನ್ನು ರದ್ದು ಮಾಡಿ ಹೊಸ ಆಧಿಪತ್ಯವನ್ನು ಸ್ಥಾಪಿಸುವದನ್ನು ಪರ್ಯಾಲೋಚಿಸುವರೆ ಮಹಮ್ಮದೀಯರು ಡಕ್ಕದಲ್ಲಿ ಸಭೆಕೂಡಿದರು. ಈ ಸಭೆಗೆ ಡಕ್ಕದ ನವಾಬರವರೂ ಹಾಜರಿದ್ದರು. ನಬಾಬ್ ಕೆರಾಜ ಮಹಮ್ಮದ್ ಯುಸಫರವರು ಸಭಾ ಅಧ್ಯಕ್ಷರಾಗಿದ್ದರು. ಈ ಸಭೆಯಲ್ಲಿ ಬಂಗಾಳ ವಿಭಜನೆಯನ್ನು ರದ್ದು ಮಾಡಿದ್ದರಿಂದ ಮಹಮ್ಮದೀಯರಿಗುಂಟಾದ ವಿಷಾದವನ್ನು ತೋರ್ಪಡಿಸಿದರು. ಆದರೆ ಚಕ್ರವರ್ತಿಯವರು ಖುದ್ದಾಗಿ ಈ ಸಂಗತಿಯನ್ನು ಪ್ರಕಟಿಸಿದ್ದರಿಂದ ಈ ಮಾರ್ಪಾಟವನ್ನು ವಿರೋಧಿಸುವರೆ ಕೈಹಾಕ ಕೂಡದೆಂದು ಸಭೆಯಲ್ಲಿ ನಿಷ್ಕರ್ಷಿಸಲಾಯಿತು. ವಂಗವಿಭಜನೆಯು ರದ್ದಾದ್ದರಿಂದ ತಮ್ಮ ಹಕ್ಕು ಸ್ವಾತಂತ್ರ್ಯಗಳು ಸುರಕ್ಷಿತವಾಗಿ ಉಳಿಯುವ ಬಗೆ ಹೇಗೆಂಬದನ್ನು ಕುರಿತು ಎರಡು ಬಂಗಾಳಗಳಮಹಮ್ಮದೀಯ ಪ್ರತಿನಿಧಿಗಳು ಕೂಡಿಕೊಂಡು ಗವರ್ನರ್ ಜನರಲರವರ ಕೂಡೆ ಬಿನ್ನವಿಸುವದು, ಮಹಮ್ಮದೀಯರ ಉತ್ತರೋತ್ತರಭಿವೃದ್ಧಿಯನ್ನು ಶಾಶ್ವಿತಗೊಳಿಸುವರೆ ಕಲ್ಕತ್ತೆಯಲ್ಲಿ ಒಂದು ಸಂಘವನ್ನು ಸ್ಥಾಪಿಸಿ ಬಂಗಾಳದ ಇತರ ಜಿಲ್ಲೆಗಳಲ್ಲಿ ಶಾಖಾ ಸಂಘಗಳನ್ನು ಸ್ಥಾಪಿಸುವದೆಂಬಿತ್ಯಾದಿ ಮಸೂದೆಗಳು ಈ ಸಭೆಯ ಮುಂದಿಡಲ್ಪಟ್ಟು ಅನುಮೋದಿಸಲಾಯಿತು.

ತಾ. ೩೦ರಲ್ಲು ಚಕ್ರವರ್ತಿಯವರು ಕಲ್ಕತ್ತೆಗೆ ಬಂದು ತಲಪಿ ವೈಸರಾಯರವರಿಂದ ಸ್ವಾಗತ ಮಾಡಲ್ಪಟ್ಟರು. ಅಲ್ಲಿಂದ ಪರಿವಾರ ಸಮೇತ ಕಲ್ಕತ್ತೆಯ ಸ್ವಾಗತ ಮಂಟಪಕ್ಕೆ ಚಿತ್ತೈಸಿ ಸಿಂಹಾಸನಗಳಲ್ಲಿ ಕುಳಿತನಂತರ ಬಂಗಾಳ ಕಾರ್ಯನಿರ್ವಾಹಕ ಸಭೆಯ ಮೆಂಬರರು, ಕೂಚ್‌ಬಿಹಾರಿನ ಮಹಾರಾಜರು, ಚೋಟನಾಗಪುರದ ರಾಜರು ಮತ್ತು ಬಂಗಾಳದ ಇತರ ಪ್ರಮುಖ ಗೃಹಸ್ಥರು ಚಕ್ರವರ್ತಿಯವರಿಗೆ ಒಬ್ಬೊಬ್ಬರಾಗಿ ಸ್ಮನಾನಿಸಿದರು. ಕಡೆಗೆ ಕಲ್ಕತ್ತೆ ಮುನ್ಸಿಪಾಲಿಟಿಯ ಚೇಯರ್‌ಮೇನರವರು ವಿಜ್ಞಾಪನ ಪತ್ರವನ್ನು ಓದಿದರು. ಚಕ್ರವರ್ತಿಯವರು ಹೃತ್ಪೂರ್ವಕವಾದ ಕಾಲೋಚಿತ ಉತ್ತರವನ್ನು ಕೊಟ್ಟರು. ಬಳಿಕ ಅಲ್ಲಿಂದ ಮಹಾ ಸಂಭ್ರಮದಿಂದ ಮೆರವಣಿಗೆ ಹೊರಟು ರೆಡ್‌ರೋಡ್ ಎಂಬ ರಸ್ತೆಗೆ ಬರುತ್ತಲೇ ಅಲ್ಲಿಯ ಮೈದಾನಿನಲ್ಲಿ ಮಹಾ ಜನಸಂದಣಿಯೂ ೨೦,೦೦೦ ಶಾಲಾ ಹುಡುಗರೂ ಕೂಡಿದ್ದು ಚಕ್ರವರ್ತಿಯವರಿಗೆ ಸ್ಮನಾನಿಸಿದರು. ಅಲ್ಲಿಂದ ಮುಂದರಿದು ಸರಕಾರ ಮಂದಿರಕ್ಕೆ ಚಿತ್ತೈಸಿದರು. ಅಲ್ಲಿ ಮುಖ್ಯ ಸೇನಾಪತಿಯಾದ ಸರ್. ಒ ಮೂರು ಕ್ರೇಯರವರು ವೈಸರಾಯ ಕಾರ್ಯನಿರ್ವಾಹಕ ಸಭೆಯ ಮೆಂಬರರು ಹ್ಯಾಕೋರ್ಟಿನ ಜಡ್ಜರುಗಳು ಚಕ್ರವರ್ತಿಯವರ ಭೇಟಿತಕ್ಕೊಂಡರು. ಚಕ್ರವರ್ತಿಯವರು ಕಲ್ಕತ್ತೆಯ ಸರಕಾರ ಮಂದಿರದಲ್ಲಿಯೇ ಜನವರಿ ೮ನೇ ತಾರೀಕಿನ ವರೆಗೆ ಉಳಕೊಂಡು ಆಯಾ ಕಾರ್ಯಗಳನ್ನು ನೋಡ ಚಿತ್ತೈಸುವರು.

ತಾ. ೩೧ನೇ ಸಾಯಂಕಾಲ ಚಕ್ರವರ್ತಿ ಚಕ್ರವರ್ತಿನಿಯವರು ವೈಸರಾಯರವರನ್ನು ಕೂಡಿಕೊಂಡು ಕಲ್ಕತ್ತೆಯ ಪಶು ವಿಜ್ಞಾನಾಲಯಕ್ಕೆ ಚಿತ್ತೈಸಿದರು. ಅದರ ಸುಪರಿಂಟೆಂಡೆಂಟರಾದ ಮೆ|| ಬಾಸುರವರು ಚಕ್ರವರ್ತಿಯವರನ್ನು ಎದುರ್ಗೊಂಡು ಆಲಯವನ್ನೆಲ್ಲಾ ತೋರಿಸಿದರು. ಚಕ್ರವರ್ತಿಯವರು ಅದರಲ್ಲಿದ್ದ ಎಲ್ಲಾ ಪ್ರಾಣಿಗಳನ್ನು ನೋಡಿ ಸಂತೋಷಭರಿತರಾದರಲ್ಲದೆ ಅಲ್ಲಿದ್ದ ಸಿಂಹ ಮತ್ತು ಹುಲಿಗಳ ಮರಿಗಳನ್ನೂ ಹಾವುಗಳನ್ನೂ ನೋಡಿ ಅತ್ಯಾನಂದಪಟ್ಟರು.

ತಾ. ೩೧ರಲ್ಲು ಚಕ್ರತಿಯವರು ಪರಿವಾರ ಸಹಿತ ಕಲ್ಕತ್ತೆಯ ಸೆಂಟ್ ಪೌಲನ ದೇವಾಲಯಕ್ಕೆ ಹೋಗಿ ದೇವರಾಧನೆಗೆ ಹಾಜರಾದರು. ಎಲ್ಲಾ ಕ್ರೈಸ್ತರ ದೇವಾಲಯಗಳಲ್ಲಿ ಆ ದಿನ ರಾಜರ ಆಯುರಾರೋಗ್ಯವನ್ನು ಬಯಸಿ ಪ್ರಾರ್ಥಿಸಲಾಯಿತಲ್ಲದೆ ಹಿಂದೂ ದೇವಸ್ಥಾನಗಳಲ್ಲಿಯೂ ಸಂಕೀರ್ತನೆಗಳೂ ರಾಜಭಕ್ತಿಪರವಾದ ಆಯಾ ಭಾಷಣಗಳೂ ಕೊಡೋಣಾದವು.

ತಾ. ೩೧ನೇ ರಾತ್ರಿ ಕಲ್ಕತ್ತೆಯ ಸರಕಾರ ಮಂದಿರದಲ್ಲಿ ರಾಜೌತಣವು ನಡೆಯಿತು. ಇದಕ್ಕೆ ಚಕ್ರವರ್ತಿ ಚಕ್ರವರ್ತಿನಿಯವರೂ. ವೈಸರಾಯರವರೂ ಸ್ಟೇಟ್ ಸೆಕ್ರೆಟರಿಯವರೂ, ಚಕ್ರವರ್ತಿಯವರೊಡನೆ ಬಂದಿದ್ದ ರಾಜಮನೆತನದವರೂ, ಬಂಗಾಳದ ಲೆಪ್ಟನೆಂಟ್ ಗವರ್ನರರೂ ಗ್ವಾಲಿಯೋರಿನ ಮಹಾರಾಜರವರೂ ಇನ್ನು ಜಡ್ಜರವರೂ, ಬಿಶೋಪರವರು ಮೊದಲಾದ ದೊಡ್ಡ ದೊಡ್ಡ ಮನುಷ್ಯರು ಹಾಜರಿದ್ದರು.

ತಾ. ೧ರಲ್ಲು ಚಕ್ರವರ್ತಿಯವರು ಸರಕಾರ ಮಂದಿರದಿಂದ ಕುದುರೆ ಪಂದ್ಯ, ಪೋಲೋ ಆಟಗಳನ್ನು ನೋಡಲು ದಯಪಾಲಿಸಿದರು. ತಾ. ೨ರಲ್ಲು ಸೈನ್ಯದ ಕವಾತನ್ನು ನೋಡಿ ಸಂತೋಷ ಪಟ್ಟರು.

ಮುಂಬಾಯಿಯಲ್ಲಿ ಮೊಹರಾಮ್ ಹಬ್ಬದಲ್ಲಿ ಯಾವಾಗಲೂ ಲೂಟಿ ಆಗುತ್ತಿದ್ದದರಿಂದ ಈ ಸಾರಿ ಪೋಲೀಸ್ ಕಮಿಷನವರು ಒಂದು ಹೊಸ ಕಾಯಿದೆಯನ್ನು ಜಾರಿಗೆ ತಂದಿದ್ದರು. ಇದರಿಂದ ಮಹಮ್ಮದೀಯರ ಕೆಳ ತರಗತಿಯವರು ನಿರಾಶೆ ಪಟ್ಟವರಾಗಿ ಈ ಸಾರಿ ಮುಂಬಾಯಿಯಲ್ಲಿ ತಾಬೂತುಗಳನ್ನು ಕಟ್ಟಲೇ ಇಲ್ಲ.

ಮುಂಬಾಯಿಯ ಮಧುಪಾನ ನಿವಾರಣಾ ಸಂಘಗಳ ಕೆಲಸಗಳನ್ನು ಕುರಿತು ಅಬ್ಕಾರಿ ಕಮಿಷ್ನರಾದ ಬಹುಮಾನಪಟ್ಟ ಮೆ|| ಕ್ವಿನ್ನರವರು ತನ್ನ ವರ್ಷಾಂತಿಕ ವರದಿಯಲ್ಲಿ ಈ ರೀತಿ ಬರದಿರುವರು:—ಮಧುಪಾನ ನಿವಾರಣಾ ಸಂಘದವರು ಮಧುಪಾನದ ಕೇಡನ್ನು ಅತಿ ವರ್ಣನೆಯಿಂದ ಬರೆದು ದೊಡ್ಡ ದೊಡ್ಡ ಪ್ರಸಿದ್ಧಿ ಪತ್ರಗಳನ್ನು ಪಟ್ಟಣದ ಆಯಾ ಭಾಗಗಳಲ್ಲಿ ಹಚ್ಚುತ್ತಿರುವರು. ಹೊಸ ಶೇಂದಿ ಅಂಗಡಿಗಳನ್ನು ಸ್ಥಾಪಿಸುವವರನ್ನು ಎದುರಿಸುತ್ತಾ ಈಗ ಇರುವ ಅಂಗಡಿಗಳನ್ನು ಮುಚ್ಚಬೇಕೆಂದು ಸಾಧಿಸುತ್ತಾ ಇರುವರು. ಆದರೆ ಮುಂಬಾಯಿ ಪಟ್ಟಣದ ಯಾವ ಜಾತಿಯವರಲ್ಲಿಯಾಗಲೀ ಈ ವರುಷ ಕುಡಿಕರ ಸಂಖ್ಯೆ ಕಮ್ಮಿಯಾಗಲಿಲ್ಲ ಎಂಬದಾಗಿ ಬರದಿರುವರು.

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯು ಫೆಬ್ರವರಿ ೧೪ರ ವರೆಗೆ ಕೂಡುವದಿಲ್ಲವಾದ್ದರಿಂದ ಸಂಯುಕ್ತ ಬಂಗಾಳದ ಮತ್ತು ಬಿಹಾರ್ ಒರಿಸ್ಸ ಆಧಿಪತ್ಯಗಳ ಆಡಳಿತೆ ಸಂಬಂಧವಾದ ಬದಲಾವಣೆಯು ಮೇ ತಿಂಗಳ ವರೆಗೆ ಪೂರೈಸಲಿಕ್ಕಿಲ್ಲ ಎಂಬದಾಗಿ ತಿಳಿದುಬರುತ್ತದೆ.

ಡಿಲ್ಲಿಯನ್ನು ಹೊಸ ಪ್ರಧಾನ ಪಟ್ಟಣವನ್ನಾಗಿ ಸ್ಥಾಪಿಸುವುದರಿಂದ ಅಲ್ಲಿ ೫೦೦೦ಸರಕಾರಿ ಹುದ್ದೆದಾರರು, ಕ್ಲಾರ್ಕರು ಮೊದಲಾದವರಿಗೆ ಬೇಕಾದಷ್ಟು ಸ್ಥಳವನ್ನು ಪ್ರತ್ಯೇಕಿಸಿಡಬೇಕಾಗುವದು.

ಜೋರ್ಜಚಕ್ರವರ್ತಿಯವರು ನೇಪಾಲಿನ ಪ್ರಯಾಣದಲ್ಲಿ ೩೯ ಹುಲಿಗಳನ್ನೂ ೧೮ ಖಡ್ಗ ಮೃಗಳನ್ನೂ ಕೊಂದಿರುವರು. ಇದರಲ್ಲಿ ೨೧ ಹುಲಿಗಳನ್ನು ಚಕ್ರವರ್ತಿಯವರೇ ಕೊಂದ್ದದ್ದಾಗಿರುತ್ತದೆ.

ಹಿಂದೂ ಯುನಿವರ್ಸಿಟಿ ಸಂಬಂಧವಾದ ಸಂಘವು ರಿಜಿಸ್ತ್ರಿ ಮಾಡಲ್ಪಟ್ಟಿತು. ಈ ಸಂಘದ ಮುಖ್ಯ ಕಾರ್ಯಾಲಯವು ಅಲ್ಲಹಾಬಾದಿನಲ್ಲಿರುವುದು. ಬಹುಮಾನಪಟ್ಟ ರಾಯಿಬಹುದ್ದೂರ್ ಡಾಕ್ಟರ್ ಸುಂದರ್ ಲಾಲ್. ಸಿ. ಐ. ಇ. ರವರು ಇದರ ಕಾರ್ಯದರ್ಶಿಯಾಗಿರುವರು. ಬೆನಾರಸಿನಲ್ಲಿ ಸಂಘದ ಒಂದು ಶಾಖಾಕಾರ್ಯಾಲಯವು ತೆರೆಯಲ್ಪಟ್ಟಿರುತ್ತದಲ್ಲದೆ ಆಯಾಸ್ಥಳಗಳಲ್ಲಿ ಸ್ಥಳೀಕ ಕಮಿಟಿಗಳೂ ಸ್ಥಾಪಿಸಲ್ಪಟ್ಟಿರುವವು.

ತಾ. ೨೯ರಲ್ಲು ಕಲ್ಕತೆಯ ಸಭಾಸದನದಲ್ಲಿ ಮಧ್ಯಪಾನ ನಿವಾರಣಾ ಸಂಘದವರ ಎಂಟನೇ ಸಭೆಯು ಕೂಡಿತು. ಈ ಸಭೆಗೆ ಹಿಂದೂಸ್ಥಾನದ ಎಲ್ಲಾ ಭಾಗಗಳಿಂದ ಪ್ರತಿನಿಧಿಗಳು ಬಂದಿದ್ದರು. ಮೆ|| ಆರ್ ವೆಂಕಟ್ರಮಣ ನ್ಯಾಡುರವರು ಅಧ್ಯಕ್ಷರಾಗಿದ್ದರು. ಕುಡಿಕತನದ ಅಭಿವೃದ್ಧಿಗೆ ತಡೆಕಟ್ಟುವರೆ ಸರಕಾರದವರು ಕೂಡಾ ಪ್ರಯತ್ನಪಡುವ ಹಾಗೆ ಅವರನ್ನು ಕೇಳಿಕೊಳ್ಳಬೇಕು, ಮದುಪಾನದ ಕೆಡಕುಗಳನ್ನು ಕುರಿತು ಹಿಂದೂಸ್ಥಾನದ ಶಾಲೆಗಳಲ್ಲಿ ಪ್ರತ್ಯೇಕ ಪಾಠಗಳನ್ನು ಕೊಡುವರೆ ಏರ್ಪಾಡು ಮಾಡಬೇಕೆಂಬಿತ್ಯಾದಿ ಮಸೂದೆಗಳು ಈ ಸಭೆಯ ಮುಂದಿಡಲ್ಪಟ್ಟು ಅನುಮೋದಿಸಲಾಯಿತು.

ದಕ್ಷಿಣ ಹಿಂದುಸ್ಥಾನ.

ಸನ್ ೧೯೧೨ನೇ ಇಸವಿ ಜನವರಿ ಮಾಹೆ ೨೯ರ ಲಾಗಾಯ್ತು ಫೆಬ್ರವರಿ ೫ನೇ ತಾರೀಕಿನ ವರೆಗೂ ಕೊಚ್ಚಿ ಸಂಸ್ಥಾನಕ್ಕೆ ರಾಜಧಾನಿಯಾದ ತಿರಚೂರಿನಲ್ಲಿ ಒಂದು ವ್ಯವಸಾಯಕ ಮತ್ತು ಕೈಗಾರಿಕೆಯ ವಸ್ತುಗಳ ಪ್ರದರ್ಶನವೂ ಮತ್ತು ಒಂದು ಜಾನುವಾರುಗಳ ಪ್ರದರ್ಶನವೂ ನಡಿಯತಕ್ಕದ್ದೆಂದು ಗೊತ್ತು ಮಾಡಲ್ಪಟ್ಟಿದೆ. ಪ್ರದರ್ಶನಕ್ಕೆ ಬರತಕ್ಕವುಗಳಲ್ಲಿ ಶ್ರೇಷ್ಠವಾದವುಗಳಿಗೆ ಬಹುಮಾನ ಕೊಡುವದಕ್ಕಾಗಿ ೧,೨೫೦ ರೂಪಾಯಿಗಳು ವಿನಿಯೋಗಿಸಲ್ಪಡುವುವು. ಕೊಚ್ಚಿ ಸಂಸ್ಥಾನದಿಂದಲೂ ಮತ್ತು ಹೊರಗಿನಿಂದಲೂ ಪ್ರದರ್ಶನಕ್ಕೆ ಪದಾರ್ಥಗಳನ್ನು ಕಳುಹಿಸಬಹುದೆಂದು ಸರ್ಕಾರದವರು ಅಪ್ಪಣೆ ಮಾಡಿದ್ದಾರೆ.

ಎಷ್ ದೊರೆಗಳ ಕೊಲೆ ಮೊಕದಮೆಯ ತನಖಿಯು ತಾ. ೨೯ರಿಂದ ಪುನಃ ಪ್ರಾರಂಭವಾಗಿಯದೆ.

ತಾ. ೨೮ನೇ ಬೆಳಿಗ್ಗೆ ೫ ಗಂಟೆಗೆ ಬಹುಮಾನಪಟ್ಟ ವಿ. ಕೃಷ್ಣಸ್ವಾಮಿ ಐಯ್ಯರರವರು ಪರವಸ್ಯೆದಿದರು. ಅಂದೇ ೧೦ ಗಂಟೆಗೆ ಮದ್ರಾಸ್ ಗವರ್ನರರವರು ಖಾಸಗಿ ಸೆಕ್ರಟರಿ ಮೊದಲಾದವರೊಡನೆ ಇವರ ಬಂಗ್ಲೆಗೆ ಹೋಗಿ ತಮ್ಮ ಸಹತಾಪವನ್ನು ಮೃತರ ಕುಟುಂಬದವರಿಗೆ ತೋರ್ಪಡಿಸಿದರು. ೧೦॥ ಗಂಟೆಗೆ ಇವರ ಶವಸಂಸ್ಕಾರವು ನಡೆಯಿತು. ಶವಸಂಸ್ಕಾರಕ್ಕೆ ಮದ್ರಾಸಿನ ಎಲ್ಲಾ ದೇಶೀಯ ವಿದೇಶಿಯ ದೊಡ್ಡ ಹುದ್ದೆದಾರರೂ ಪ್ರಮುಖ ಗೃಹಸ್ಥರೂ ಹಾಜರಿದ್ದರು. ಮದ್ಯಾನ್ಹ ೧೨ ಗಂಟೆಗೆ ಮದ್ರಾಸ್ ಹ್ಯಾಕೋರ್ಟಿನ ಚೀಪ್ ಜಸ್ಟಿಸರರೂ ಇತರ ಜಡ್ಜರುಗಳೂ ವಕೀಲರುಗಳೂ ಕೃಷ್ಣಸ್ವಾಮಿ ಐಯ್ಯರರ ಮರಣದಿಂದುಂಟಾದ ಶೋಕವನ್ನು ತೋರ್ಪಡಿಸುವರೆ ಹ್ಯಾಕೋರ್ಟಿನಲ್ಲಿ ಸಭೆ ಕೂಡಿದರು. ಈ ಸಭೆಯಲ್ಲಿ ಎಡ್ವೋಕೆಟ್ ಜನರಲವರೂ ಸರಕಾರ ಕಡೆಯ ವಕೀಲರಾದ ಮೆ|| ಸಿ. ಎಪ್, ನೇಪಿಯರರೂ, ಚೀಫ್ ಜಸ್ಟಿಸರರೂ ಕೃಷ್ಣಸ್ವಾಮಿ ಅಯ್ಯರರ ಗುಣಾತಿಶಯಗಳನ್ನೂ ಬುದ್ಧಿ ಚಾತುರ್ಯಗಳನ್ನೂ ಇವರ ಮರಣದಿಂದ ದೇಶಕ್ಕುಂಟಾದ ನಷ್ಟವನ್ನೂ ಕುರಿತು ಮಾತಾಡಿದರಲ್ಲದೆ ಮೃತರ ಕುಟುಂಬಕ್ಕೆ ಸಹತಾಪ ವಚನವನ್ನು ಕಳುಹಿಸಿ ಕೊಡುವರೆ ನಿಷ್ಕರ್ಷಿಸಿದರು. ಜ್ಞಾಪಕಾರ್ಥವಾಗಿ ಹ್ಯಾಕೋರ್ಟು ಆ ದಿನ ಮುಚ್ಚಲ್ಪಟ್ಟಿತು.

ಡಿಲ್ಲಿ ದರ್ಬಾರಿನ ಕಾಲದಲ್ಲಿ ತಿರುಚಿನಾಪಳ್ಳಿಯಲ್ಲಿ ನಡೆದ ಧರ್ಮ ಕಾರ್ಯಗಳಲ್ಲಿ ಒಂದನ್ನು ಎಲ್ಲಾ ಕಡೆಯ ದೇವಸ್ಥಾನಗಳ ಆಡಳಿತೆದಾರರು ಗಮನಿಸತಕ್ಕಂಥಾದ್ದಾಗಿದೆ. ತಿರುಚಿನಾಪಳ್ಳಿ ದೇವಸ್ಥಾನದ ಆಡಳಿತೆದಾರರರೊಬ್ಬರು ದರ್ಬಾರಿನ ಜ್ಞಾಪಕಾರ್ಥವಾಗಿ ತಿರುಚಿನಾಪಳ್ಳಿಯ ಕೆಲವು ಹಳ್ಳಿಗಳಲ್ಲಿ ಉಚಿತ ಪ್ರ್ಯಾಮರಿ ಶಾಲೆಗಳನ್ನು ಸ್ಥಾಪಿಸಿದರು. ಈ ಶಾಲೆಗಳನ್ನು ನಡಿಸಿಕೊಂಡು ಬರಲಿಕ್ಕೆ ಬೇಕಾದ ದ್ರವ್ಯ ಸಹಾಯವು ದೇವಸ್ಥಾನದ ಬಂಡವಾಳದಿಂದ ಕೊಡಲ್ಪಡುವದು. ಅಂದರೆ ದೇವಸ್ಥಾನದ ಆಸ್ತಿಗೆ ಸೇರಿದ ಬಂಜರು ಭೂಮಿಗಳನ್ನು ಕೃಷಿಮಾಡುವ ಏರ್ಪಾಡುಗಳನ್ನು ಮಾಡಿ ಇದರಿಂದ ಬಂದ ಹುಟ್ಟು ಈ ಪ್ರ್ಯಾಮರಿ ಶಾಲೆಗಳ ಖರ್ಚಿಗಾಗಿ ಪ್ರಯೋಗಿಸಲ್ಪಡುವದು. ನಮ್ಮ ದೇಶದಲ್ಲಿ ನೂರಾರು ದೇವಸ್ಥಾನಗಳೂ ಅದಕ್ಕೆ ಸೇರಿದ ಬಂಜರು ಭೂಮಿಗಳೂ ಯಥೇಷ್ಟವಾಗಿದೆ. ಆದ್ದರಿಂದ ಈ ದೇವಸ್ಥಾನಗಳ ಆಡಳಿತೆದಾರರು ಕೂಡಾ ತುಸ ಸ್ವಾರ್ಥತ್ಯಾಗವನ್ನು ಮಾಡಿ ವಿದ್ಯೆ ಇಲ್ಲದಿರುವ ಬಹು ಮಂದಿಯ ಮೇಲೆ ಸಹತಾಪ ಪಟ್ಟು ಮೇಲಿನ ಉದಾಹರಣೆಯಂತೆಯೇ ನಡೆದು ಪ್ರ್ಯಾಮರಿ ವಿದ್ಯಾಭ್ಯಾಸಕ್ಕಾಗಿ ಉಚಿತ ಶಾಲೆಗಳನ್ನು ತೆರೆಯುವುದಾದರೆ ದೇಶಕ್ಕೆ ಎಂಥಾ ಅಭ್ಯುದಯ ಉಂಟಾಗುವದು ?.

ಮದ್ರಾಸ್ ಸಂಸ್ಥಾನದ ಗವರ್ನರರಾಗಿರುವ ಸರ್ ತೋಮಾಸ್ ಕಾರ್ಮಿಖಯೇಲರವರು ವಿಕ್ಟೋರಿಯದ ಗವರ್ನರರಾಗಿರುವ ಕಾಲದಲ್ಲಿ ನಡಿಸಿದ ಉತ್ತಮ ಆಡಳಿತೆಗಾಗಿ ಅವರಿಗೆ ಶ್ರೀಮಂತತ್ವ (Peerage) ಎಂಬ ಪದವಿಯು ದೊರಕಿರುವದು.

ಜೋಲರ್‌ಪೇಟೆ ರೈಲ್ವೇ ಸ್ಟೇಶನಿಗೆ ೫ ಮೈಲು ದೂರದಲ್ಲಿರುವ ತಿರ್ಪತ್ತೂರು ಎಂಬಲ್ಲಿ ಮೊಹರಾಮು ಹಬ್ಬದ ದಿವಸ ಹಿಂದುಗಳಿಗೂ ಮಹಮ್ಮದೀಯರಿಗೂ ಕಠಿಣ ಕದನವಾಗುವ ಸಂಭವವಿತ್ತು. ಆದರೆ ಮೆಜಿಸ್ಟ್ರೇಟರು ಕೂಡಲೇ ಜೋಲರ್ ಪೇಟೆಯಿಂದ ರೈಲ್ವೆ ವಲಂಟಿಯರ್ ಸೈನೀಕರನ್ನು ತರಿಸಿದ್ದರಿಂದ ದಂಗೆಯು ಪ್ರಾರಂಭವಾಗಲಿಲ್ಲ. ಸಾಯಂಕಾಲ ವೆಲ್ಲೂರಿನಿಂದಲೂ ಪೋಲೀಸ್ ಸೈನ್ಯವು ಬಂತು.

ದಕ್ಷಿಣ ಕನ್ನಡ.

ಪ್ರಕಟಣೆ.

ಎಸ್. ಐ. ರೈಲ್ವೇ ಕಂಪೆನಿಯವರಿಂದ .ರೈಲ್ವೇ ಸ್ಟೇಶನುಗಳಲ್ಲಿ ಪ್ರಕಟಿಸಲ್ಪಟ್ಟ ದರ ಮತ್ತು ಶರ್ತಗಳಿಗನುಸಾರವಾಗಿ ಮಂಗಳೂರಿಗೆ ಆಯಾ ಸ್ಟೇಶನುಗಳಲ್ಲಿ ಅಗ್ಗವಾಗಿ ರಿಟರ್ನ್ ಟಿಕೇಟುಗಳು ಕೊಡಲ್ಪಡುವವು.

(ದಸ್ಕತು) ಎ. ಕೊಕ್ರೆಪ್ಟ್,
ಡಿಸ್ಟ್ರಿಕ್ಟ್ ಟ್ರೆಪಿಕ್ ಸುಪರಿಂಟೆಂಡೆಂಟ್.

ನೋಟೀಸು.

॥ ಶ್ರೀ ಮಜ್ಜಗದ್ಗುರು ಮಹಾ ಸಂಸ್ಥಾನ ॥ ಶ್ರೀಂಗೇರಿ ಶ್ರೀಮಠದ ಆಚಾರವಿಚಾರಣಾಧಿಕಾರಸ್ಥಾವದಿಂದ:—

ಉಡ್ಪಿ ತಾಲೂಕು ಕಸಬಾದಲ್ಲಿರುವ ರಘುರಾಮಪ್ಪನವರ ಮಗ ಕೆ. ನಾರಾಯಣ ರಾಯರಿಗೆ ಅಪ್ಪಣೆ ಕೊಡಿಸುವುದೇನಂದರೆ:—

ಉಡುಪಿ ತಾಲೂಕಿನಲ್ಲಿರುವ ಶ್ರೀ ಶ್ರಿಂಗೇರಿ ಜಗದ್ಗುರು ಮಹಾ ಸಂಸ್ಥಾನದ ಶಿಷ್ಯ ಮಂಡಲಿಯಿಂದ ಪ್ರತಿ ವರುಷದಲ್ಲಿಯೂ ಶ್ರಿ ಶಾರದಾ, ಚಂದ್ರ ಮೌಳೇಶ್ವರ ಮುಂತಾದ ದೇವತಾ ಸೇವಾ ದ್ರವ್ಯಗಳನ್ನು ವಸೂಲು ಮಾಡಿ ಕಳುಹಿಸುತ್ತಾ ಬರುವದಕ್ಕೂ ಮತ್ತು ಆಯಾ ಶಿಷ್ಯವರ್ಗದವರಿಂದ ಬರತಕ್ಕ ವರ್ಣಾಶ್ರಮಧರ್ಮ ಸಂಬಂಧವಾದ ಅರ್ಜಿಗಳನ್ನು ತೆಗೆದುಕೊಂಡು ಉಭಯ ಕಕ್ಷಿಗಾರರು ಮತ್ತು ಆ ಜಾತಿ ಜನರಲ್ಲಿ ಪ್ರಮುಖರಾದ ಮೂರು ಜನರಿಗೆ ಕಡಿಮೆಯಾಗದ ಪಂಚಾಯಿತರ ಸಮಕ್ಷಮ ಕ್ರಮವಾದ ವಿಚಾರ ನಡಿಸಿ ರಿಕಾರ್ಡು ಮಾಡಿ ನಿಮ್ಮ ಅಭಿಪ್ರಾಯ ನಿಶ್ರಿ ಇಲ್ಲಿಗೆ ರವಾನಿಸಿ ಇಲ್ಲಿಂದ ಅಪ್ಪಣೆ ಕೊಡಿಸುವ ಫೈಸಲಿನಂತೆ ಜಾರೀಲಿ ತರುವದಕ್ಕೂ ಸಹಾ ಈ ಲಾಗಾಯಿತು ೧೯೧೨ನೇ ಡಿಶಂಬರ್ ಆಖೈರ್ ವರಿಗೆ ನಿಮಗೆ ಅಧಿಕಾರ ಕೊಡಲ್ಪಟ್ಟಿರುತ್ತೆ ಈ ಅಧಿಕಾರ ಪತ್ರಿಕೆಯನ್ನು ಇದಕ್ಕೆ ಲಗ್ತಿಸಿ ಕೊಟ್ಟಿರುವ ಮೆಮೊವನ್ನು ಸಹಾ ಆ ತಾಲೂಕಿನ ಸಮಸ್ತ ಶಿಷ್ಯ ಜನರಿಗೂ ತಿಳಿಯ ಪಡಿಸಿ ಇದರಂತೆ ಜಾರೀಲಿ ತರತಕ್ಕದ್ದು.

(ಅಸಲಿಗೆ ಸರಿಯಾದ ನಕಲು)

(ದಸ್ಕತು) ಆ್ಯ. ರಾಮೇಶ್ವರ ಶಾಸ್ತ್ರಿ,
ಆಚಾರವಿಚಾರಾಧಿಕಾರಿ.

ಮಂಗಳೂರು. ಕಳದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೬ ವಾಂತಿಭೇದಿ ಮರಣಗಳಾದವು.

ಇಲ್ಲಿ ಅಸಿಸ್ಟಾಂಟ ಸರ್ಜನರಾಗಿದ್ದ ಮೆ|| ವಿ. ವರ್ಗೀಸರರವರು ತಲಚೇರಿಯ ಸಿವಿಲ್ ಸರ್ಜನರಾಗಿ ನೇಮಿಸಲ್ಪಟ್ಟದ್ದರಿಂದ ಇವರ ಬದಲಿಗೆ ಮೆ|| ರಾಮನ್ ನಾಯರರವರು ನಿನ್ನೆ ದಿನ ಇಲ್ಲಿಗೆ ಬಂದು ಚಾರ್ಜುತಕ್ಕೊಂಡಿರುವರು.

ತಾ. ೧ನೇ ಸಾಯಂಕಾಲ ಮೆ|| ವರ್ಗೀಸರವರನ್ನು ಇಲ್ಲಿಯ ಕೆಥೊಲಿಕ ಕ್ಲಬ್ಬಿನವರು ಆಮಂತ್ರಿಸಿ ಬಹಳ ವಿಜೃಂಭಣೆಯಿಂದ ಉಪಚರಿಸಿದರು.

ರಜೆಯ ಮೇಲಿದ್ದ ಜಿಲ್ಲಾ ಕಲೆಕ್ಟರರಾದ ಮೆ|| ಗ್ರೇಹಂ ದೊರೆಗಳು ನಿನ್ನೆ ದಿನ ಚಿತ್ತೈಸಿರುವರು. ಆಕ್ಟಿಗ್ ಕಲೆಕ್ಟರರಾಗಿದ್ದ ಮೆ|| ಡೊಯಿಗ್ ದೊರೆಗಳು ಮಲಬಾರ ಜಿಲ್ಲೆಗೆ ವರ್ಗಾಯಿಸಲ್ಪಟ್ಟಿರುವರು.

ಮೆ|| ಮೆಕ್ವಿನ್ ದೊರೆಗಳು ಕುಂದಾಪುರ ಡಿವಿಜನಿನ ಚಾರ್ಜು ತಕ್ಕೊಂಡಿರುವರು.

ಇಲ್ಲಿಯ ರಿಜಿಸ್ಟ್ರಾರರಾಗಿರುವ ಮೆ: ಜೆ. ಚಂದ್ರನ್‌ರವರು ಕಳದ ತಾ. ೩ರಿಂದ ೧ ತಿಂಗಳ ರಜಾ ಪಡಕೊಂಡಿರುವುದರಿಂದ ಮ. ರಾ. ರಾ. ಮಂಗಳೂರು ನಾರಾಯಣ ರಾಯರು ಅವರ ಬದಲಿಗೆ ನೇಮಕ ಪಟ್ಟಿರುವರು.

ಇಲ್ಲಿಂದ ಸೋಮೇಶ್ವರಕ್ಕೆ ಹೋಗಿದ್ದ ಪೋಸ್ಟುರನ್ನರ್ ನಾರಾಯಣ ಎಂಬವನೊಬ್ಬನು ಪ್ಲೇಗಿನಿಂದ ಮೃತಪಟ್ಟಿರುವನು.

ಮಂಗಳೂರು ತಾಲೂಕು ಹೆಜಮಾಡಿ ಗ್ರಾಮದಲ್ಲಿ ವಾಂತಿಭೇದಿ ರೋಗವು ಬಹಳ ವಿಶೇಷವಾಗಿರುತ್ತದೆ. ಕಳದ ದಶಂಬರ ತಾ. ೨೨ರಿಂದ ಜನವರಿ ತಾ. ೩ರ ವರೆಗೆ ೮೧ ಜನರಿಗೆ ಸೋಂಕಿ ೩೫ ಜನರು ಮೃತಪಟ್ಟಿರುತ್ತಾರೆ.

ಮೂಡ ಬಿದ್ರೆ ತಾಲೂಕಿನ ಮುಖ್ಯ ಪಟ್ಟಣವನ್ನಾಗಿ ಕಾರ್ಕಾಳವನ್ನೇ ಮಾಡುವರೆ ಸರಕಾರದಿಂದ ಹುಕುಂ ಬಂದಿರುವುದರಿಂದ ಇನ್ನು ಸದ್ಯದಲ್ಲಿ ಮೂಡಬಿದ್ರೆಯ ತಾಲೂಕು ಕಚೇರಿಯು ಕಾರ್ಕಾಳಕ್ಕೆ ವೈಯೋಣಾಗುವದು.

ಮಂಜೇಶ್ವರದಲ್ಲಿಯ ಶ್ರೀಮದನಂತೇಶ್ವರ ದೇವಸ್ಥಾನದ ಭಜಕರಲ್ಲಿ ಕೆಲವರು ದೇವಸ್ಥಾನದ ಜೊರಸೊತ್ತು ಮೊದಲಾದವುಗಳಇನ್ವೆಂಟ್ರಿ ಆಗಬೇಕೆಂದು ಇಲ್ಲಿಯ ಜಿಲ್ಲಾ ಕೋರ್ಟಿನಲ್ಲಿ ದಾಕಲುಮಾಡಿದ ಅರ್ಜಿ ಪ್ರಕಾರ ಇನ್ವೆಂಟ್ರಿ ಕಳದ ವಾರದಲ್ಲಿ ಮಾಡಲ್ಪಟ್ಟು ಈ ಬಗ್ಗೆ ಕಮಿಶನರಾಗಿ ನೇಮಕಪಟ್ಟ ಮದ್ರಾಸುಬೇಂಕಿನ ಕೇಶ್‌ಕೀಪರ್ ಮ|| ರಾ|| ಬ. ನಾರಾಯಣ ಪೈಗಳವರು ಈ ವಿಷಯ ರಿಪೋರ್ಟು ಸಹ ಬರೆದು ಕೋರ್ಟು ಅಧಿಕಾರ ಸ್ಥಾನಕ್ಕೆ ಹಾಜರು ಪಡಿಸಿರುವರಾಗಿ ತಿಳಿಯುತ್ತೇವೆ.

ಸಂಯುಕ್ತ ಮತ್ತು ಕೌಳಿ ಗೌಡಸಾರಸ್ವತ್ ಪರಿಷದಗಳ ವೃತ್ತಾಂತವು ಇನ್ನೂ ನಮಗೆ ದೊರಕದಿದ್ದದ್ದರಿಂದ ಇವುಗಳ ವಿಷಯ ಏನೊಂದು ಯತಾರ್ಥವಾದ ಸಮಾಚಾರವನ್ನು ತಿಳಿಸಲಶಕ್ಯರಾಗಿರುವೆವು.

ಇದೇ ಕಳದ ಪುಷ್ಯ ಶು. ೩ಯು ಶುಕ್ರವಾರ ತಾ. ೨೨ನೇ ದಶಂಬರ ಸಾಯಂಕಾಲ ಶುಮಾರು ೭ ಗಂಟೆ ಸಮಯಕ್ಕೆ ಸಮನಾಗಿ ಸಮುದ್ರ ಕರೆಯಿಂದ ಶೀದಾ ನದಿಯನ್ನು ದಾಟಿ ಭೂಮಿಯಿಂದ ಸಾಧಾರಣ ೧೦೦-೧೫೦ ಅಡಿ ಎತ್ತರದಲ್ಲಿ ಒಂದು ಪ್ರಜ್ವಲಿಸುತ್ತಿರುವ ನಕ್ಷತ್ರವು ಕಂಡಿರುತ್ತದೆ. ಸದರಿ ನಕ್ಷತ್ರವು ಮುಂದಕಡೆ ಬಿಳೀದಾಗಿ ವಜ್ರದಂತೆ ಚಮಕಿಸುತ್ತಿತ್ತು. ಅದರ ಹಿಂದಗಡೆ ಬೆಂಕಿಯ ಜ್ವಾಲೆಯಂತೆ ವ ಅದರ ಹಿಂದಗಡೆ ಸುಮಾರು ೫-೬ ಅಡಿ ಉದ್ದ ಇದ್ದು ಚಂದ್ರಜ್ಯೋತಿಯಂತೆ ಕಾಣುತ್ತಿರುವ ಬಾಲದೋಪಾದಿಯಲ್ಲಿ ಇದುವ ನಕ್ಷತ್ರವು ನದಿಯ ಮೇಲ್ಗಡೆ ಅಂತರಿಕ್ಷದಿಂದ ದಾಟಿ ಮಾರ್ಗದ ಬದಿಯಲ್ಲಿರುವ ಕಟ್ಟೋಣಗಳ ವರೆಗೆ ಬಂದದ್ದು ನಾವು ಸರ್ವರೂ ನೋಡಿರುತ್ತೇವೆ. ನಂತರ ಅದೃಶ್ಯವಾಗಿರುತ್ತದೆ ಎಂಬದಾಗಿ ಒಬ್ಬ ಬಾತ್ಮೀದಾರರು ಬರದಿರುವರು.

ಬಾತ್ಮೀದಾರರಿಗೆ ನೋಟೀಸು:—'ರಾಜಾಪುರಿಗಳು' ಮ. ರಾ. ರಾ. ಎಲ್ಲೂರ್ ಸುಬ್ಬರಾವ್, ರಾ. ಮುಲ್ಕಿ ಶ್ರೀನಿವಾಸಯ್ಯ—ಇವೆಲ್ಲವನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆವು.

ಉಡುಪಿ. ಸ್ವದೇಶಾಭಿಮಾನಿ ಪತ್ರಿಕೆಯನ್ನು ಅತಿ ಕುತೂಹಲದಿಂದ ಓದುತ್ತಿರುವವರನೇಕರು ಅದರ ಕಳೆದ ೨೯ನೇ ತಾರೀಕಿನ ಸಂಚಿಕೆಯು ಕ್ಲುಪ್ತ ದಿವಸಕ್ಕೆ ತಲಪದೆ ಒಂದು ದಿವಸ ಸಾವಕಾಶವಾದದರಿಂದ ಭಗ್ನಾಶರಾದರು. ಇನ್ನು ಮುಂದೆ ಹೀಗಾಗಲಾರದಾಗಿ ಅನೇಕರು ಅಪೇಕ್ಷಿಸುತ್ತಾರೆ.

ಕಳೆದ ಕಿರೀಟಧಾರಣೆಯ ಸಂದರ್ಭದಲ್ಲಿ ಬಹುಮಾನದ ಶಿಫಾರಸು ಪತ್ರವನ್ನು ಪಡದವರಲ್ಲಿ ಕೆಲವರು ಅದಕ್ಕೆ ಅರ್ಹರಲ್ಲವೆಂತಲೂ, ಇದಕ್ಕಿಂತಲೂ ಹೆಚ್ಚಿನ ಬಹುಮಾನ ಪಡಕೊಳ್ಳಲಿಕ್ಕೆ ಯೋಗ್ಯರಾದ ಕೆಲವರನ್ನು ಈ ಪಟ್ಟಿಯಲ್ಲಿ ಸೇರಿಸಿದ್ದು ಗೌರವ ಹಾನಿಯೆಂತಲೂ, ನಿಜವಾಗಿಯೂ ಆ ಬಹುಮಾನವನ್ನು ಪಡೆಯುವದಕ್ಕೆ ಯೋಗ್ಯರಾಗಿದ್ದವರನ್ನು ಅದರಲ್ಲಿ ಸೇರಿಸದೆ ಇದ್ದದ್ದು ಅನ್ಯಾಯವಾಯಿತೆಂತಲೂ ಉದಾಹರಣೆಗಾಗಿ:—ಆಗ್ಯಾಗ್ಯೆ ಸಂಭವಿಸಿರುವ ಅನೇಕ ತರದ ಗಂಡಾಂತರಗಳನ್ನು ಸಹಿಸಿಕೊಂಡು ಪ್ರಯಾಣಸ್ಥರಿಗೆ ಜಟ್ಕಾ ಬಂಡಿಗಳನ್ನಿಟ್ಟು ಬಹು ಸೌಕರ್ಯವನ್ನು ಕಲ್ಪಿಸಿ, ಅನೇಕ ಸಂದರ್ಭಗಳಲ್ಲಿ ತಮ್ಮ ಔದಾರ್ಯವನ್ನು ತೋರಿಸುತ್ತಿರುವ ಮ. ರಾ. ಬೆಳ್ಳೆ ಸುಬ್ಬಯ್ಯ ಶೆಟ್ರನ್ನೂ, ಪರೋಪಕಾರಾರ್ಥವಾಗಿ ತನ್ನ ತನುಮನಧನವನ್ನು ಸಂಪೂರ್ಣವಾಗಿ ಸಮರ್ಪಿಸುತ್ತಿರುವ ಇಲ್ಲಿಯ ಹ್ಯಾಸ್ಕೂಲಿನ ಉಪಾಧ್ಯಾಯರಾದ ಮ. ರಾ. ಪಿ. ರಾಮಚಂದ್ರರಾಯರನ್ನೂ ಹೀಗೆಯೇ ಇನ್ನು ಕೆಲವರನ್ನು—ಈ ಪಟ್ಟಿಯಲ್ಲಿ ಸೇರಿಸದೆ ಇದ್ದದ್ದು ಅನ್ಯಾಯವಾಯಿತೆಂತಲೂ ಇಲ್ಲಿ ಅನೇಕರು ಆಡಿಕೊಳ್ಳುತ್ತಾರೆ.

ರಾಜಸೂಯ ಯಾಗದಲ್ಲಿ ದೀಕ್ಷಿತನಾದ ಧರ್ಮರಾಯನು ಎಷ್ಟು ತ್ಯಾಗಿಯಾಗಿದ್ದನೋ ಅಷ್ಟೇ ಔದಾರ್ಯದಿಂದಲೂ ವಿತರಣೆಯಿಂದಲೂ ಶ್ರೀ ಕೃಷ್ಣಾಪುರ ಶ್ರೀ ಪಾದಂಗಳವರು ತಮ್ಮ ಪರ್ಯಾಯವನ್ನು ನಡಿಸಿದರೆಂದರೆ ಅತಿಶಯೋಕ್ತಿಯಾಗಲಾರದು. ವಿದ್ಯಾರ್ಥಿಗಳೂ ವಿದ್ವಾಂಸರೂ ಕ್ಷೇತ್ರವಾಸಿಗಳೂ ಭೋಜನ ಸಾಲೆಯ ಅನ್ನದಿಂದಲೇ ಜೀವಿಸಿಕೊಂಡಿರುವ ಬಹುಮಂದಿ ಬಡವರೂ ನೌಕರರೂ ಇನ್ನು ಅನೇಕರೂ ಇವರ ಪರ್ಯಾಯ ಕಾಲವು ಇನ್ನು ಸ್ವಲ್ಪ ದಿವಸ ಮಾತ್ರ ಉಳಿಯಿತಲ್ಲ ಎಂತ ಬಹು ವ್ಯಸನದಲ್ಲಿದ್ದಾರೆ.

ಛಳಿ ಸ್ವಲ್ಪ ಪ್ರಾರಂಭವಾಗಿಯದೆ. ಚಿಕ್ಕಮ್ಮ (ಕೋರ ದೊಡ್ಡಮ್ಮ (ಕೋಟಳೆ) ರೋಗಗಳು ಅಲ್ಲಲ್ಲಿ ಪ್ರಾರಂಭವಾಗಿದೆ. ಚಿಕ್ಕ ಚಿಕ್ಕ ಕಳವುಗಳು ನಡಿಯುವುದಕ್ಕೂ ಸುರುವಾಗಿಯದೆ.

ಪುತ್ತೂರು. ನಮ್ಮ ಇಲ್ಲಿಯ ಅಸಿಸ್ಟಾಂಟ ಸರ್ಜನ್ ಮ. ರಾ. ರಾ. ಕೆ. ರಾಮಕಾಮತರವರು ಇವರ ಚಾರ್ಜನ್ನು ತಾ. ೧೫ಲ್ಲು ಡಾಕ್ಟರ ಕೃಷ್ಣರಾಯರಿಗೆ ಕೊಟ್ಟು ಹೋಗಿರುವರು.

೫ ವರುಷದಿಂದ ಇಲ್ಲಿಯ ರೋಮನ್ ಕೆಥೋಲಿಕ್ ಇಗರ್ಜಿಯ ಗರುಗಳಾದ ರೆವೆರೆಂಡ್ ಫಾದರ್ ಫೆರ್ನಾಂದಿಸರವರಿಗೆ ಉಡ್ಪಿಗೆ ವರ್ಗವಾಗಿ ಇವರ ಬದಲಿಗೆ ಉಡ್ಪಿಯಿಂದ ರೆವೆರೆಂಡ್ ಪಿ. ಸೋಜರವರು ತಾ. ೩೦ಕ್ಕೆ ಇಲ್ಲಿಗೆ ತಲಪಿರುವರು. ರೆವೆರೆಂಡ್ ಫೆರ್ನಾಂದಿಸರವರು ತಾ. ೩೧ಕ್ಕೆ ಇಲ್ಲಿಂದ ಹೊರಟು ಹೋಗಿರುವರು.

ಇದೇ ಕಳದ ದಶಂಬರ ತಾ. ೩೦ಲ್ಲು ಪುತ್ತಿಗೆ ಮಠದ ಸ್ವಾಮಿಗಳವರು ಇಲ್ಲಿಗೆ ಚಿತ್ತೈಸಿದವರು ಇಲ್ಲಿಯ ವಕೀಲ ಮ. ರಾ. ರಾ. ವೆಂಕಟ ಕೃಷ್ಣರಾಯರಲ್ಲಿ ಬಿಡಾರವಿದ್ದು ತಾ. ೩೧ಕ್ಕೆ ಹಿಂದೆ ಹೋಗಿರುವರು.

ಜೈನ ಮಠದ ಘಟ್ಟದ ಮೇಲಿನ ಬಾಂಬುಚ ಮಠದ ಶ್ರೀ ದೇವೇಂದ್ರ ಕೀರ್ತಿ ಬಟ್ಟಾರಿಕ ಪಟ್ಟಾಚಾರ್ಯವರ್ಯ ಸ್ವಾಮಿಗಳವರು ಇದೇ ತಾ. ೧ಲ್ಲು ಬೆಳಗ್ಯೆ ೧೦ ಘಂಟೆಗೆ ಪಟ್ಟದ ಆನೆ, ಜೋಡು ಕುದುರೆ ಪರಿವಾರದೊಡನೆ ಬೇಂಡ್ ವಾದ್ಯದಿಂದ ಪಲ್ಲಂಕಿಯಲ್ಲಿ ಕೂತು ಸ್ಟೇಶನಿನ ಬಳಿಯಿಂದ ಮಾರ್ಕೆಟ ಬಳಿಗಾಗಿ ಇಗರ್ಜಿ ರಸ್ತೆಯಿಂದ ಮೆರವಣಿಗೆಯಿಂದ ಇಲ್ಲಿಯ ಬಸ್ತಿಗೆ ಚಿತ್ತೈಸಿದರು. ಇವರು ತಾ. ೨ಲ್ಲು ನರಿಮೊಗ್ರಿಗೆ ಹೋಗಿರುವರು. ಅಲ್ಲಿಂದ ಹಿಂತಿರಳಿ ಪುತ್ತೂರಿಗೆ ಬಂದು ಉಪ್ಪಿಂಗಡಿಗಾಗಿ ಕೆಣಿಯುರು ಪುದುಬೆಟ್ಟು, ಬೆಳ್ತಂಗಡಿ, ಧರ್ಮಸ್ಥಳಕ್ಕೆ ಹೋಗಿ ಬಂಗಾಡಿ, ವೇಣೂರ, ಕಾರ್ಕಳಕ್ಕಾಗಿ ಹಿಂತೆಂಳುವರಂತೆ.

ಉಪ್ಪಿನಂಗಡಿ ತಾಲೂಕಿನ ವರುಷಾವಧಿ ಜಮಾಬಂದಿಯು ಇದೇ ಜನವರಿ ತಾ. ೧೮ರಿಂದ ೨೭ರ ವರೆಗೆ ವಿಟ್ಲ, ಫೆಬ್ರವರಿ ತಾ. ೩ರಿಂದ ೯ರ ವರೆಗೆ ಪುತ್ತೂರು, ಫೆಬ್ರವರಿ ತಾ. ೧೨ರಿಂದ ೧೮ರ ವರೆಗೆ ಉಪ್ಪಿನಂಗಡಿ ತಾ. ೨೨ರಿಂದ ೨೮ರವರೆಗೆ ಸುಳ್ಯ ಮೊಕ್ಕಾಂಮಿನಲ್ಲಿಯೂ ನಮ್ಮ ಡಿವಿಜನ್ ಆಪೀಸರರಿಂದ ನಡಿಸೋಣಾಗುವರು.

ವಿವಿಧ ವಿಷಯಗಳು.

ಅಡಿಗೆಗೆ ಹುಣಸೇ ಹಣ್ಣನ್ನು ಉಪಯೋಗಿಸುವದು ಬಹಳ ಅನಾರೋಗ್ಯಕರವಾಗಿದೆ. ಇದಕ್ಕೆ ಬದಲಾಗಿ ನಿಂಬೇ ಹುಳಿಯನ್ನು ಉಪಯೋಗಿಸುವದು ಬಹಳ ಒಳ್ಳೇದು. ಬೊಂಬಾಯಿ ಪ್ರಾಂತ್ಯದಲ್ಲಿ ಈಗ್ಯೆ ಹುಣಸೇ ಹಣ್ಣಿಗೆ ಬದಲಾಗಿ ನಿಂಬೇ ಹಣ್ಣನ್ನೇ ಉಪಯೋಗಿಸುತ್ತಿರುವರು. ಅಲ್ಲದೆ ಇಂಡಿಯಾ ದೇಶದ ಅನೇಕ ಜಮೀನುಗಳು ನಿಂಬೆಹಣ್ಣನ್ನು ಯಥೇಚ್ಛವಾಗಿ ಬೆಳೆಯಲು ತಕ್ಕವುಗಳಾಗಿವೆ. ಮತ್ತು ನಿಂಬೆ ಹಣ್ಣಿನ ಹುಳಿಯಿಂದ ಒಂದು ತರದ ಉಪ್ಪನ್ನು ತಯಾರಿಸಿ ಬಹಳ ಲಾಭಕರವಾದ ಖರೀದಿಗೆ ಮಾರಬಹುದು. ಸಿಸಲೀ ದ್ವೀಪದಲ್ಲಿ ನಿಂಬೆ ಗಿಡವನ್ನು ಬೆಳೆಯತಕ್ಕ ಜಮೀನುಗಳು ಬಹಳ ಶ್ರೇಷ್ಟವಾದುವುಗಳೆಂದು ಭಾವಿಸಲ್ಪಟ್ಟಿವೆ, ಮತ್ತು ಅಲ್ಲಿ ಸಾವಿರಾರು ಜನರಿಗೆ ನಿಂಬೆ ಹಣ್ಣನ್ನು ಬೆಳೆಯುವದೇ ಸುಖವಾದ ಮತ್ತು ಗೌರವವಾದ ಜೀವನೋಪಾಯವಾಗಿದೆ. ನಮ್ಮ ದೇಶದಲ್ಲೂ ನಿಂಬೆ ಹಣ್ಣನ್ನು ಬೆಳೆಯಿಸಿ ಅನೇಕರು ಇದರಂತೆಯೇ ಹೆಚ್ಚು ಲಾಭವನ್ನು ಸಂಪಾದಿಸಬಹುದು.

ಗಿಲಾವಿನ (ಎನೆಮೆಲ್) ಪಾತ್ರೆಗಳನ್ನು ಅಡಿಗೆ ಬಗ್ಯೆ ಉಪಯೋಗಿಸಿಕೊಳ್ಳುವುದೂ ಬಟ್ಲುಗಳಾಗಿ ಊಟಕ್ಕೆ ಉಪಯೋಗಿಸಿಕೊಳ್ಳುವುದೂ ಆರೋಗ್ಯಕ್ಕೆ ಬಾಧಕಕರವೆಂತಲೂ, ಹೊಟ್ಟೆನೋವು, ಕರಳುಗಳ ಕ್ಷಯ ಮೊದಲಾದ ವ್ಯಾಧಿಗಳನ್ನು ಉಂಟುಮಾಡುತ್ತದೆಂತಲೂ ವಿಲಾಯತಿ ವೈದ್ಯರು ತಿಳಕೊಳ್ಳುತ್ತಾರೆ.

ಲೆಸೆಸ್ಟರ್ ಎಂಬಲ್ಲಿ ಜರಗಿದ ಕ್ಷಯರೋಗದ ವಸ್ತು ಪ್ರದರ್ಶನದಲ್ಲಿ ಮಿ। ರಾಮ್ಸೆ ಮೆಕ್‌ಡೊನಾಲ್ಡರವರು:—ಕ್ಷಯರೋಗವು ವಂಶ ಪರಂಪರೆಯಾಗಿ ಬರುವ ರೋಗವಲ್ಲವೆಂದೂ ಸನ್ನಿವೇಶ, ಅಜಾಗ್ರತೆ, ಇವೇ ಕ್ಷಯರೋಗದ ಅಸ್ತಿವಾರವಾಗಿದೆಂದೂ, ಹೊರಗೆ ಗಾಳಿಗೆ ಅಡ್ಡಾಡುವದೇ ಇದಕ್ಕೆ ಪರಮೌಷಧವೆಂದೂ ಹೇಳಿರುವರು.

ನೋರ್ವೆಯಲ್ಲಿ ಒಬ್ಬನು ಒಂದು ಮರವನ್ನು ಕಡಿಯಬೇಕಾದರೆ ಅದರ ಬದಲಿಗೆ ಮೂರು ಹೊಸ ಸಸಿಗಳನ್ನು ನೆಡಬೇಕೆಂಬ ಕಾನೂನು ಜಾರಿಯಲ್ಲಿದೆ.

ಜಾಪಾನಿನಲ್ಲಿ ೨೦೦ ಅಡಿ ಉದ್ದವುಳ್ಳ ಒಂದು ತಿಮಿಂಗಿಲವು ಸಿಕ್ಕಿರುವದು. ಅದರ ವಸಡಿನ ಎಲುಬು ೨೫ ಅಡಿ ಉದ್ದವಾಗಿಯೂ ಅದರ ಅಸ್ತಿಪಂಜರವು ೫೫ ಟನ್ ಭಾರವಾಗಿಯೂ ಇತ್ತು. ಆದನ್ನು ವೈಯಲಿಕ್ಕೆ ಮೂರು ಜಾಪಾನ್ ಹಡಗಗಳು ಬೇಕಾಯಿತು. ನ್ಯೂಯೊರ್ಕಿನ ವಿಚಿತ್ರ ವಸ್ತುಪ್ರದರ್ಶನಾಲಯದವರು ಇದನ್ನು ಕೊಂಡುಕೊಂಡಿರುವರು. ಅದನ್ನು ಸಾಗಿಸುವ ಖರ್ಚು ೧೦೦೦ ಪವನುಗಳಾಯಿತು.

ಮಾಂಸಾಹಾರವನ್ನು ತ್ಯಜಿಸಿ ದವಸಗಳು ಹಣ್ಣು ಕಾಯಿಪಲ್ಯಗಳು ಮೊದಲಾದವುಗಳನ್ನು ಆಹಾರವಾಗಿ ಉಪಯೋಗಿಸಬೇಕೆಂದು ಈಗಿನ ಕಾಲದ ದೊಡ್ಡ ದೊಡ್ಡ ಶಾಸ್ತ್ರಜ್ಞರೆಲ್ಲರೂ ಸಾರಿ ಹೇಳುತ್ತಿರುವರು. ಹಣ್ಣುಗಳನ್ನು ಸೇವಿಸುವದರಿಂದ ನಮಗೆ ಬಹಳ ನಿರ್ಮಲವಾದ ನೀರು ಶಿಕ್ಕಿದಂತಾಗುವದು. ಕಾಯಿಗಳಲ್ಲಿ ಶೇಕಡ ೫೦ ರಷ್ಟು, ಕಲ್ಲಂಗಿರಿ ಹಣ್ಣಿನಲ್ಲಿ ೯೦ರಷ್ಟು ನಿರ್ಮಲವಾದ ನೀರು ದೊರೆಯುವದು. ಕಿತ್ತಲೆ ಮತ್ತು ನಿಂಬೆ ಹಣ್ಣುಗಳನ್ನು ಸೇವಿಸಿದ್ದಲ್ಲಿ ಶರೀರದ ಆರೋಗ್ಯಕ್ಕೆ ಅವಶ್ಯಕವಾದ ಉಪ್ಪುಗಳೂ ಮತ್ತು ಹುಳಿಯೂ ಶರೀರದಲ್ಲಿ ಸೇರುವುವು. ಅನಾನ ಹಲಸಿನ ಹಣ್ಣೂ ಜೀರ್ಣ ಶಕ್ತಿಯನ್ನು ಹೆಚ್ಚಿಸುವಂತೆ ಮತ್ಯಾವ ವಿಧವಾದ ಹಣ್ಣು ಹೆಚ್ಚಿಸಲಾರದು. ಶೀತದಿಂದ ಬರಬಹುದಾದ ಗಂಟಲುನೋವು ಮತ್ತು ಮಲೇರಿಯಾ ಜ್ವರಕ್ಕೆ ಅನಾನ ಹಲಸಿನ ಹಣ್ಣು ಬಹಳ ಶ್ರೇಷ್ಟವಾದ ಔಷಧಿಯಾಗುವುದು. ಖರ್ಜೂರ ಮತ್ತು ಬಾಳೆ ಹಣ್ಣುಗಳಲ್ಲಿ ಶರೀರ ಪೋಶಣೆಗೆ ಬೇಕಾಗುವ ಸಾಮಗ್ರಿಗಳೆಲ್ಲವೂ ಇರುವುವು. ಶೇಬಿನ ಹಣ್ಣಿನಲ್ಲಿರುವ ಉಪ್ಪುಗಳು ಮತ್ತು ಹುಳಿಗಳು ಶರೀರದ ರಕ್ತವನ್ನು ಶುದ್ಧಿ ಮಾಡುವುವು. ಇಷ್ಟು ಗುಣಗಳುಳ್ಳ ಹಣ್ಣು ಮತ್ತು ಕಾಯಿಪಲ್ಯಗಳೇ ಇಂಡಿಯಾ ದೇಶೀಯರ ಆಹಾರವಾಗಿದೆ. ಆದಾಗ್ಯೂ ಈಚೆಗೆ ನಮ್ಮ ರೈತರು ಹಣ್ಣುಗಳನ್ನು ಹೇರಳವಾಗಿ ಬೆಳೆಯತಕ್ಕ ವಿಷಯದಲ್ಲಿ ಉತ್ಸಾಹವಿಲ್ಲದವರಾಗಿರುವದು ಬಹಳ ಶೋಚನೀಯವಾದದ್ದೇ ಸರಿ. ನಮ್ಮ ಹಣವಂತರನೇಕರು ತಮ್ಮ ಪೂರ್ವಿಕರ ಆಹಾರ ಪದಾರ್ಥಗಳನ್ನು ತ್ಯಜಿಸಿ ಮಾಂಸಾಹಾರಿಗಳಾಗುತ್ತಿರುವದು ಇದಕ್ಕೆ ಸ್ವಲ್ಪ ಮಟ್ಟಿಗೆ ಕಾರಣವಾಗಿರಬಹುದು.

ನಾಯಿಕೆಮ್ಮಿನ ಮಕ್ಕಳನ್ನು ಕತ್ತೆಯ ಅಡಿಯಿಂದ ಮೂರಾವರ್ತಿ ದಾಟಿಸುವ ಪದ್ಧತಿಯು ಇಂಗ್ಲೀಷರ ಗ್ರಾಮಿಕರಲ್ಲಿ ವಾಡಿಕೆ ಇದೆ. ಹೀಗೆ ದಾಟಿಸುವುದರಿಂದ ನಾಯಿಕೆಮ್ಮು ಹೋಗುವದಂತೆ.

ಜೀನಸುಗಳ ಧಾರಣೆ, ಮಂಗಳೂರು. (ರ೩೦)

ಹೊಸ ಮಸ್ಕತಿ ಅಕ್ಕಿ	4-14—0
ಹೊಸ ಗುಡ್ಡು ಮಸ್ಕತಿ...	4-13—0
ಹೊಸ ಮಸ್ಕತಿ ದುಯಂ...	4-12—0
ಹೊಸ ಗುಡ್ಡು ,, ...	4—8—6
ಮಸ್ಕತಿ ಬೆಳ್ತಿಗೆ ,, ...	5—4—0
ರಂಗೂನ್ ಬೆಳ್ತಿಗೆ ಗೋಣಿ	10—8—0
ಹುರುಳಿ ಗೋಣಿ ೧, ಮುಡಿ 2ರ ...	6—4—0
ಉಪ್ಪು ಗೋಣಿ ೧ರ	3—4—0
ಕೊಬ್ರಿ ಖಂಡಿ ೧ರ	100-0—0
ಕೊಬ್ರಿ ಎಣ್ಣೆ ಮಣ	7—4—0
ಕಾಫಿ ಖಂಡಿ ೧ರ	295—0—0
ಕಾಳು ಮೆಣಸು ಖಂಡಿ...	178-12—0
ಹೊಸ ಬಿಳಿ ಗೋಟು ಅಡಿಕೆ	70—0—0
ಕರಿ ಗೋಟು	55—0—0

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆ ಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೇ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**

Leading Silk Manufacturers, Benares City.

1912ನೇ ಇಸವಿಯ

ಪೌರ್ವಾಲ್ ಪೊಕೆಟ್ ಡೈರಿಗಳು.

1912ನೇ ಇಸವಿಯ ಡೈರಿಗಳು ತಯಾರಾಗಿರುತ್ತವೆ. ನಂಬರು 1, 0-4-0. ನಂಬರು 2, ಮುಚ್ಚಳ ಮತ್ತು ಪೆನ್‌ಸಲ್ ಸಹಿತ 0-6-0. ಎಲ್ಲರಿಗೂ ಬೇಕಾದ ವಿಷಯಗಳು ಇದರಲ್ಲಿ ಅಡಗಿರುತ್ತವೆ. ವಟ್ಟಿಗೆ 1 ಡಜನ್ ಡೈರಿಗಳನ್ನು ತೆಗದುಕೊಳ್ಳುವವರಿಗೆ 2 ಡೈರಿಗಳನ್ನು ಬಹುಮಾನವಾಗಿ ಕೊಡುತ್ತೇವೆ. ಸ್ವಲ್ಪವೇ ಕೋಪಿಗಳು ಉಳದಿರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ನಮ್ಮ ಡೈರಿಗಳನ್ನು ತರಿಸಿಕೊಳ್ಳುವವರಿಗೆಲ್ಲಾ 1912ನೇ ಇಸವಿಯ ಕೆಲಂಡರುಗಳನ್ನು ಕಳುಹಿಸಿಕೊಡುತ್ತೇವೆ. ಪೋಸ್ಟ ಮುಖಾಂತರ ವಿ. ಪಿ. ತರಿಸಿಕೊಳ್ಳ ತಕ್ಕವರು ಡಜನ್ 1ಕ್ಕೆ 1ರೂಪಾಯಿ ಅಡ್ವಾನ್ಸ್ ಕಳುಹಿಸಿಕೊಡಬೇಕು

ಈ ಮೇಲ್ಕಂಡ ಡೈರಿಗಳು ಮಂಗಳೂರು ಊಲನ್ ಮಾರ್ಟಿನಲ್ಲಿ ದೊರೆಯುತ್ತವೆ.

ಎಲ್. ಎ. ಪೌರ್ವಾಲ್ ಅಂಡ್ ಕೋ,

ಬೆಂಗಳೂರು ಸಿಟಿ.

ನೂತನ ವಿಚಿತ್ರ

ದಂತ ಚಿತ್ರಗಳು.

ಆನೆಯ ಶುದ್ಧ ದಾಡೆಯಿಂದಲೇ ಅತಿ ವಿಲಾಸದಿಂದ ತಯಾರಿಸಿರುವ, ದೇವ, ದೇವಕಿಯರ (God & Goddess) ಗೊಂಬೆಗಳು ಈಗಲೇ ತರಿಸಿರುವೆವು. ಇವುಗಳು ಗಡಿಯಾರ ಸರಪಣಿ, ಹಾರ ಮೊದಲಾದ ಕಂಠಾಭರಣಗಳ ನಡುವೆ, ಬಲು ಭೂಷಣವಾಗಿಯೂ ಪೂಜೆಗೆ ಅತ್ಯಂತ ಅರ್ಹವಾದವುಗಳಾಗಿಯೂ ಇರುತ್ತವೆ. ಬೆಲೆಯು ರೂಪಾಯಿ ೧ರಿಂದ ೪ರ ವರೆಗೆ. ಆಯಾಯ ಚಿತ್ರಗಳ ನಮೂನೆ ಮತ್ತು ಪರಿಮಾಣದ ಮೇಲೆ ಹೊಂದಿರುತ್ತದೆ.

ನಮ್ಮ ಸುಗಂದ ದ್ರವ್ಯಗಳಿಗೆ ಆರ್ಡರು ಕೊಡುತ್ತಿರುವ ವೇಳೆಯಾದರೂ, ಮಾದರಿಗಾಗಿ ಒಂದೊಂದು ಚಿತ್ರಗಳನ್ನು ತರಿಸಿ ನೋಡಿರಿ.

ನಮ್ಮ ಏಜಂಟರು:— ವಿಳಾಸ:—

ಮ. ಟ. ಸುಬ್ಬಣ್ಣ ಭಟ್ಟರು, ಹೆಡ್ ಮಾಸ್ತರ್, ಮಿತ್ತನಡ್ಕ, ಉಪ್ಪಿನಂಗಡಿ ತಾಲೂಕು.

ಎನ್. ಎಂ. ಸುಬ್ರಾವ್, "ಸುಗಂಧವಿಲಾಸ" ಮಂಗಳೂರು

ಪುಷ್ಕಳವಾದ ಕೂದಲು.

ಪ್ರಾಚೀನ ಕಾಲದಿಂದಲೂ ಕವಿಗಳು ಸ್ತ್ರೀಯರ ಕೂದಲಿನ ವಿಲಾಸವನ್ನು ಹೊಗಳಿದ್ದಾರೆ; ಅದು ನಿಜವಾಗಿಯೂ ಮನಸ್ಸನ್ನು ಸೆಳೆಯುವಂಥಾದ್ದೇ ಸರಿ. ಅವರ ಕೂದಲು ಕೊರತೆಯಾಗಲು ಕಾರಣವೇ ಇಲ್ಲ.

ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ. ಅದು ಬೋಳು ತಲೆಯಲ್ಲಿ ಕೂದಲು ಬೆಳಸುವುದು. ಇದರ ಸ್ವಭಾವವು ಕೂದಲಿನ ಬೇರನ್ನು ತನಿಮಾಡಿ ಬೆಳಸುವುದಾಗಿದೆ; ತಲೆಯಲ್ಲಿ ತಂಪನ್ನುಂಟುಮಾಡುವುದು. ಕಾಮಿನಿಯಾ ಎಣ್ಣೆಯು ಕೂದಲನ್ನು ಸುಕುಮಾರವಾಗಿ ಪೋಷಣೆ ಮಾಡುತ್ತದೆ. ಅದು ಬಹು ಸುಗಂಧಮಯವಾದ ಮನೋಹರವಾದ ಎಣ್ಣೆ. ಕಾಮಿನಿಯಾ ಎಣ್ಣೆ ಕೂದಲನ್ನು ಸ್ವಭಾವಯುಕ್ತವಾಗಿಯೂ ಕೋಮಲವಾಗಿಯೂ ಪುಷ್ಕಳವಾಗಿಯೂ ಜಾಗ್ರತೆಯಾಗಿಯೂ ಬೆಳೆಯಮಾಡುತ್ತದೆ. ಅದು ಕೂದಲು ಉದುರಿಹೋಗುವುದನ್ನು ತಡೆಮಾಡುತ್ತದೆ. ಇದೆಲ್ಲಾ ಖಂಡಿತವಾದ ಮತ್ತು ಅತ್ಯಂತ ತೃಪ್ತಿಕರವಾದ ಫಲಗಳಾಗಿವೆ.

ವಾರಕ್ಕೆ ಎರಡು ಮೂರು ಸಲ ಈ ಎಣ್ಣೆಯನ್ನು ಹಚ್ಚಿ ಮೃದುವಾಗಿ ತಿಕ್ಕುತ್ತಿದ್ದರೆ ಬೋಳಾಗಿರುದ ಭಾಗದ ಕೂದಲು ಬೇರು ತಂಪಾಗಿ ತನಿಯಾಗಿ ಬಹು ಸೊಂಪಾಗಿ ಬೆಳೆಯುವುದಲ್ಲದೆ ಎಲ್ಲಾ ತರದ ನವೆಯನ್ನೂ ಹೋಗಲಾಡಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಬೇರುಗಳಿಗೆ ತನಿಯಿಲ್ಲದೆ ಕೂದಲು ಉದುರಿ ಹೋಗುವುದು. ಕಾಮಿನಿಯಾ ಎಣ್ಣೆಯೇ ಅದಕ್ಕೆ ಆಗತ್ಯವೂ ಅನುಕೂಲವೂ ಆದ ಆಹಾರ; ಇದನ್ನು ಉಪಯೋಗಿಸಿ ನೋಡಿರಿ.

ಕ್ರಯದ ದರಗಳು:—1 ಸೀಸೆಗೆ ರೂ. 1; ವಿ. ಪಿ. ಚಾರ್ಜು ಬೇರೆ 4 ಆಣೆ.

ವಿಳಾಸ:—ಏಜಂಟರು, ದಿ. ಊಲನ್ ಮಾರ್ಟ್; ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಳು ಕಜ್ಜಿ, ಅಜೀರ್ಣತೆ, ಮಲಬದ್ಧತೆ ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0 ಮೂರು ಬಾಟ್ಲಿಗಳಿಗೆ 2—0—0. 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕಾರಕ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

—ಬಾಟ್ಲಿಗೆ ೧ ರೂ. ೪ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಒಳಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು ರೂ.	0—4—0
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	,, 1—4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ	,, 0—4—0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	,, 0—8—0

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹವ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಛರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸಪ್ವೀರಾಂಜವ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists*,
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾ-ಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ
(ವಿದ್ಯುಚ್ಛಕ್ತಿಯ ಬೇನಿಹಾರಿ ಮುಲಾಮು.)
EST. 1898.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜಿ, ಸುಟ್ಟ ಘಾಯ, ಮೇಹ ಹುಣ್ಣು, ಕೈಕಾಲ್ಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನ ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಶಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷದಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟೆ ರವಾನಿಸುವೆವು.

ವಿಳಾಸ:—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡಾ,

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನ್ನೂ, ಛಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್ಸ್,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ.

ನಮ್ಮ ದೇಖಾವೆ ಕೋಣೆಯು ನಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವ್ಹಿಸ್ಲರ್ ಸ್ಟೂಡಿಯೊ (**Whistler Studio**) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ನಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ,
ಮಂಗಳೂರು, ದ. ಕ.

ದಿ ನೇಶನಲ್ ಜೀವವಿಮೆ ಮತ್ತು ಬೆಂಕಿಂಗ್ ಸಂಘವನ್ನೇ ವಿಮೆದಾರರು ಏತಕ್ಕಾಗಿ ಆಯ್ದುಕೊಳ್ಳಬೇಕು?

ಈ ಕೆಳಗೆ ನಮೂದಿಸಿರುವ ಕಾರಣಗಳ ಸಲುವಾಗಿ ತಾನೇ—

1. ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.
2. ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.
3. ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.
4. ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.
5. ಪೊಲಿಸಿಗಳು ಈ ಹಿಂದೂಸ್ಥಾನದ ಜೀವನ ವೃತ್ತಿಗೆ ಅನುಕೂಲವಾಗುವಂತೆ ಸರಿಗೈಯಲ್ಪಟ್ಟಿವೆ.
6. ಪೊಲಿಸಿಗಳು ಮೂರು ವರುಷಗಳಿಗೆ ಬಾಳಿದ ಬಳಿಕ ವಂಚನೆಯಿಂದ ಹೊರತು ಬೇರೆ ಯಾವ ಕಾರಣದಿಂದಲೂ ನಿರ್ವಿವಾದ ಹಕ್ಕುಳ್ಳವುಗಳಾಗಿವೆ.
7. ಪೊಲಿಸಿಗಳನ್ನು ಕುರಿತು ಯಾವಾತನಿಗಾದರೂ ವಿರೋಧವಾಗಿ ನುಡಿಯಲು ಅಧಿಕಾರವಿಲ್ಲವು; ಮತ್ತು ಭೂಲೋಕದ ಯಾವ ಭಾಗದಲ್ಲಿದ್ದವನಾದರೂ ಇವನ್ನು ಪಡೆದುಕೊಳ್ಳಬಹುದು.
8. ಉದಾರವಾದ ಪೊಲಿಸಿಗಳು—
9. 'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.
10. ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,

POCKET DIARIES FOR 1912.

1912ನೇ ಇಸವಿಯ ಪೋಕೆಟ್ ಡೈರಿಗಳು.

ನೋಟುಬೂಕು ಸೈಜು (ದೊಡ್ಡ ಸೈಜು) ರೂ.	0—8—0.
„ „ ಮುಚ್ಚಳವ ಪಾಕೀಟು ಸಮೇತ	0—10—0.
ಸಣ್ಣ ಸ್ಯಾಜು ಡೈರಿ ೧ಕ್ಕೆ ರೂ.	0—4—0.
„ „ ಮುಚ್ಚಳವ ಪಾಕೀಟು ಸಮೇತ	0—6—0.

ಹೆಚ್ಚಿನ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಧಾರಾಳ ಕಮಿಶನ್ ಕೊಡಲಾಗುವದು. ಅಪೇಕ್ಷರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಲಿ.

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು, ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡ್ಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿಯೂ ದೊರಕುತ್ತವೆ.

ವಿಕಟಪ್ರತಾಪ

ಎಂಬ

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ.

ವಾಗ್ದಾನ:— ಅದಮರಿಂದ ಉತ್ತಮರಿಗುಂಟಾಗುವ ತಾಪ, ಸಜ್ಜನರಲ್ಲಿ ವಿಪ್ರಲಾಪ, ಅನಾಥರ ವಿಲಾಪ, ಸೋಮಾರಿಗಳ ಪ್ರಲಾಪ, ಕಾಮಿನಿಯರ ಸಲ್ಲಾಪ, ರಸಿಕರ ಆಲಾಪ, ಜಾರರ ಅಪಲಾಪ, ಮಾನಿನಿಗಳ ಕೋಪ, ಈ ಕಲಾಪಗಳ ಬಿತ್ತರಗಳಿಂದೊಪ್ಪಿರುವುದು ನಮ್ಮ ವಿಕಟಪ್ರತಾಪ.

ವಾರ್ಷಿಕಚಂದಾ:— ಸ್ಥಳ ಮತ್ತು ಪರಸ್ಥಳದವರಿಗೆ ಅಂಚೆಯವೆಚ್ಚ ಸೇರಿ ೧೫ ಆಣೆ. ವಿ. ಪಿ. ಮೂಲಕ ರೂ. ೧—೦—೦.

ಈ ಪತ್ರಿಕೆಗೆ ಈಲಾಗಾಯಿತು ಒಂದು ವರ್ಷ ಚಂದಾದಾರರಾಗುವವರಿಗೆ ೮ ಆಣೆ ಬೆಲೆ ಬಾಳುವ "(೧) ಅಸತೀಪ್ರೀತಿಪ್ರಹಸನಂ, (೨) ಒಬ್ಬ ಸಿಪಾಯಿಯ ಸಾಹಸಗಳು (೩) ವಿಕಟಸಂಬಂಧಂ "ಎಂಬುವ ಮೂರು ರಸವತ್ತಾದ ಪುಸ್ತಕಗಳು ಬಹುಮಾನವಾಗಿ ಕಳುಹಿಸಲ್ಪಡುವವು.

ನಮ್ಮ ವಿಳಾಸ:—ವಿಕಟಪ್ರತಾಪ ಅಫೀಸು,
ಕುಪ್ಪಂ ಪೋಸ್ಟು (ಉತ್ತರಾರ್ಕಾಡು.

ಬಿಕರಿಗೆ ಸಿದ್ಧವಾಗಿದೆ. ಶಿವಸಾಯುಜ್ಯಕ್ಕೆ ಸುಲಭ ಸೋಪಾನ. ಹೊಸ ಗ್ರಂಥ.

ಶ್ರೀ ಶಿವಗೀತಾ

ಆಕಾರ:— ಕ್ರೌನ್ ಅಷ್ಟಪುಠ ೨೮೦ ಪುಠಗಳು. (ಎರಡನೇ ಮುದ್ರಣ)

ಭಾಷ್ಯಂ ತಿರುಮಲಾಚಾರ್ಯ

ಪ್ರಣೀತ ಕನ್ನಡ ಟೀಕಾಸಹಿತವಾಗಿ

ಪಂಡಿತರಿಂದ ಪರಿಶೋಧಿಸಲ್ಪಟ್ಟು ಪ್ರಕಟಿಸಲ್ಪಟ್ಟಿದೆ.

೧ನೇ ಜಾತಿ ಪ್ರತಿ ಒಂದಕ್ಕೆ ಕ್ರಯ ಆಣೆ ೧೨. ೨ನೇ ಜಾತಿ ಪ್ರತಿ ೧ಕ್ಕೆ ಆಣೆ ೮.

ಟಪ್ಪಾಲುವೆಚ್ಚ ಬೇರೆಯಾಗಿ ಕೊಡಬೇಕಾಗಿರುವುದು.

ಇದು ಪದ್ಮ ಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದಕ್ಕೆ ಬಾಲಾನಂದಿನೀ ಎಂಬ ಪ್ರೌಢವಾದ ವ್ಯಾಖ್ಯಾನಕ್ಕನುಸಾರವಾಗಿ ಟೀಕು ಬರದಿರುವುದು. ಈ ಶಿವಗೀತಾಶಾಸ್ತ್ರವನ್ನು ಪಾರಾಯಣಮಾಡಲು ಎಲ್ಲರೂ ಅಧಿಕಾರಿಗಳಾಗಿರುತ್ತಾರೆ.

"ಏವಂ ಮಯಾ ಸಮಾಸೇನ ಶಿವಗೀತಾ ಸಮೀರಿತಾ ॥
ಏತಾಂ ಯಃ ಪ್ರಜಪೇನಿತ್ಯಂ ಶೃಣುಯಾದ್ವಾಸ ಮಾಹಿತಃ ।
ಏಕಾಗ್ರಚಿತ್ತೋೀಯೋಮರ್ತ್ಯಃ ತಸ್ಯಮುಕ್ತಿಃ ಕರೇಸ್ಥಿತಃ ॥

ಎಂದರೆ ಹೀಗೆ ಶಿವಗೀತೆಯನ್ನು ಸಂಗ್ರಹವಾಗಿ ನಿನಗೆ ಹೇಳಿದೆನು. ಯಾವನು ಇದನ್ನು ಓದುತ್ತಾನೋ, ಕೇಳುತ್ತಾನೋ, ಯಾವನು ಇದನ್ನು ಏಕಾಗ್ರಚಿತ್ತನಾಗಿ ಪಾರಾಯಣ ಮಾಡುತ್ತಾನೋ ಅವನಿಗೆ ಮುಕ್ತಿಯು ಅಂಗೈಯಲ್ಲಿದೆಯೆಂಬದಾಗಿ ಶ್ರೀಶಿವಗೀತಾ ಶಾಸ್ತ್ರದ ಮಹಿಮೆಯು ಆ ಗ್ರಂಥದಲ್ಲಿ ಹೇಳಲ್ಪಟ್ಟಿರುವುದಾಗಿ ಈ ವಿಷಯದಲ್ಲಿ ಹೆಚ್ಚಾಗಿ ಹೇಳಬೇಕಾದುದು ಯಾವುದೂ ಇರುವುದಿಲ್ಲ.

ಮುಖ್ಯವಾಗಿ ಇದು ಶ್ರೀರಾಮದೇವರಿಗೆ ಅಗಸ್ತ್ಯೋಪದೇಶದಿಂದ ಪರಮ ಶಿವನ ಪ್ರಸಾದವುಂಟಾಗಿ ಲೋಕನಾಥನಾದ ಮಹಾದೇವನು ದರ್ಶನಕೊಟ್ಟು ಸಾಕ್ಷಾತ್ತಾಗಿ ಪಾಶುಪತಾಸ್ತ್ರದಾನವನ್ನು ಮಾಡಿದಾಗ ಉಪದೇಶಿಸಿದ ಮೋಕ್ಷ ಶಾಸ್ತ್ರವಾಗಿರುತ್ತಿದೆ. ಪರಮ ಕಾರುಣಿಕನಾದ ಭಕ್ತವತ್ಸಲನಾದ ಪಾರ್ವತೀಪತಿಯಾದ ಜಗದ್ಗುರುವಾದ ಸದಾಶಿವನಲ್ಲಿ ತ್ರಿಕರಣ ಶುದ್ಧವಾಗಿ ಭಕ್ತಿಯನ್ನು ಮಾಡಿ ಅವನ ಕಟಾಕ್ಷವನ್ನಪೇಕ್ಷಿಸುವ ಸಮಸ್ತ ಆಸ್ತಿಕ ಮಹಾಜನರೂ ಖಂಡಿತವಾಗಿ ತಪ್ಪದೇ ಈ ಗ್ರಂಥವನ್ನು ತೆಗೆದು ಓದಿ ಮನನ ಮಾಡಬೇಕು.

ಇದು ಶ್ರೀಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿವುದು. ಅಷ್ಟುಮಾತ್ರವೇ ಅಲ್ಲ; ಮುದ್ರಣ ಮೊದಲಾದ ಎಲ್ಲಾ ವಿಷಯದಲ್ಲೂ ಬಹಳ ತೃಪ್ತಿಕರವಾಗಿರುವಂತೆ ಮಾಡಿದೆ.

ವಿಳಾಸ:— ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಓಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ತರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಸೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20–6–0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,

ಚೀಫ್ ಏಜಂಟ್ಸ್:—ಮಲಿಬಾರ ಮತ್ತು ದಕ್ಷಿಣ ಕನ್ನಡ.

ಸುಮತಿ ಗ್ರಂಥಮಾಲೆ ೩.

ಬೆಕೋಜಿ.

ಮುಂತಾದ ಕಥೆಗಳು. ಅನೇಕ ಚಿತ್ರಗಳಿಂದ ಕೂಡಿದೆ. (೧) ಬೆಕ್ಕೋಜಿಯ ಸಾಹಸ (೨) ಭೀತರಾಜನ ಶಾಪ ವಿಮೋಚನೆ (೩) ವಿಚಿತ್ರವಾದ ಟೀ ಪಾತ್ರೆ, (೪) ಮೂರು ಕಣ್ಣುಗಳ ಜಗಳ—ಎಂಬೀ ಕಥೆಗಳು ಇಂಗ್ಲಿಷಿನಿಂದ ಬಲು ಸುಲಭವಾದ ಕನ್ನಡಕ್ಕೆ ತರ್ಜುಮೆಮಾಡಲ್ಪಟ್ಟಿವೆ. ಮಕ್ಕಳನ್ನು ನಗಿಸಿ ನಗಿಸಿ ನೀತಿಗಳನ್ನು ಹೇಳಿಕೊಡುತ್ತವೆ. ಪ್ರತಿ ಒಬ್ಬ ಬಾಲಕನೂ ಬಾಲಕಿಯೂ ಇದನ್ನು ಓದಲೇ ಬೇಕು.

ಬೆಲೆ: ೩ ಆಣೆ—ಸುಮತಿಯ ಚಂದಾದಾರರಿಗೆ ೨ ಆಣೆ.

ಸುಮತಿ ಗ್ರಂಥಮಾಲೆ ೦.

ಕನಕಾಲುಕಾ.

ಅಥವಾ ಕಮಲಿನೀ ಚರಿತಂ

ಪ್ರಸಿದ್ಧ ಆಂಗ್ಲೇಯ ಕವಿಯಾದ ಲಾರ್ಡ್‌ಟೆನ್ನಿಸನ್‌ನಿಂದ ವಿರಚಿತವಾದ ಮತ್ತು ಮದ್ರಾಸ್ ಯುನಿವರ್ಸಿಟಿಯ ಬಿ. ಎ ಪರೀಕ್ಷೆಗೆ ಪಾಠಪುಸ್ತಕವಾಗಿ ಇಡಲ್ಪಟ್ಟಿದ್ದ "ದಿ ಕಪ್" ಎಂಬ ಪ್ರಖ್ಯಾತ ನಾಟಕವನ್ನು ಅವಲಂಬಿಸಿ ವಿರಚಿತವಾಗಿದೆ. ಸುಂದರ ತರವಾದ ಚಿತ್ರಗಳಿಂದ ಅಲಂಕರಿಸಲ್ಪಟ್ಟಿದೆ. ನೀತಿಬೋಧಕವಾಗಿರುವದಲ್ಲದೆ ಮನೋರಂಜಕವಾಗಿದೆ. ಇದುವರೆಗೂ ಕನ್ನಡದಲ್ಲಿ ಇಂತಹ ನಾಟಕವನ್ನು ಯಾರೂ ಬರೆದಿಲ್ಲ. ಪದ್ಯಗದ್ಯಗಳು ಸುಲಭವಾದ ಹೊಸಕನ್ನಡದಲ್ಲಿ ಬರೆಯಲ್ಪಟ್ಟಿವೆ. ಯುವಕರಿಗೂ ಯುವತಿಯರಿಗೂ ಅತ್ಯುಪಯೋಗಿ. ಬೆಲೆ: ೬ ಆಣೆ, ಚಂದಾದಾರರಿಗೆ ೪ ಆಣೆ.

ಸುಮತಿ ಗ್ರಂಥಮಾಲೆ ೧.

ಮೈಸೂರಿನ ದಿವಾನರಾಗಿದ್ದ ಪ್ರಸಿದ್ಧ ರಾಜ್ಯತಂತ್ರ ನಿಪುಣರಾದ

ರಂಗಾಚಾರ್ಲು ಸಿ. ಐ. ಇ.

ಯವರ ಜೀವನ ಚರಿತ್ರೆ.

ಯಂ. ವೆಂಕಟಕೃಷ್ಣಯ್ಯನವರಿಂದಲೂ ರಾಯ್‌ಬಹದ್ದೂರ್ ಅಂಬಿಲ್ ನರಸಿಂಹಯ್ಯಂಗಾರ್ಯರಿಂದಲೂ ಬರೆಯಲ್ಪಟ್ಟ ಪೀಠಿಕೆಗಳೊಡನೆ, ಸುಂದರವಾದ ಭಾವಚಿತ್ರದ ಸಹಿತ (ಪುಟ ೧೦೦)

ಮೈಸೂರಿನ ಈಗಿನ ದಿವಾನರಾದ ಮ|| ಟಿ. ಆನಂದ ರಾವ್, ಬಿ. ಎ., ಸಿ. ಐ. ಇ ಯವರು ಈ ಪುಸ್ತಕವು "ಬಹಳ ಸ್ವಾರಸ್ಯ"ವಾಗಿದೆ ಯೆಂದು ಹೇಳಿರುವರಲ್ಲದೆ ಅನೇಕ ಪ್ರತಿಗಳನ್ನು ಕೊಂಡುಕೊಂಡಿರುವರು. ಶೈಲಿಯು ಬಲು ಸುಲಭವಾಗಿದೆ. ಪ್ರತಿಯೊಬ್ಬ ದೇಶಾಭಿಮಾನಿಗೂ ಅತ್ಯಂತ ಅವಶ್ಯಕವಾದ ಪುಸ್ತಕ. ರಾಜಕೀಯ ಮತ್ತು ಸಂಪತ್ಸಂಬಂಧವಾದ ಅನೇಕಾಂಶಗಳನ್ನೊಳಗೊಂಡಿದೆ.

ಬೆಲೆ: ಚಂದಾದಾರರಿಗೆ 4 ಆಣೆ. ಇತರರಿಗೆ 6 ಆಣೆ.

ವಿಳಾಸ:—ಮ್ಯಾನೇಜರ್

ಸುಮತಿ ಗ್ರಂಥಮಾಲಾ, ಬೆಂಗಳೂರು ಸಿಟಿ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸೃಗ್ಧರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆಪ್ರಿಯಾಲಾಸವವೆಂಬಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1–8–0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು ದ. ಕ.

[illegible]

Registered No M. 498.

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6.- ಸಂಚಿಕೆ 2.

ಮಂಗಳೂರು ತಾ. 12ನೇ ಶುಕ್ರವಾರ ಜನವರಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳುಕಡಿತ, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಫರ್ಸ್ಟ್ ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ ಮತ್ತು ಮೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ಎಂಡ್. ಎಸ್. ಎಂಡ್. ಜೆ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೇಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ:—ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ ಎಸ್ಟೇಟು, ಕೊಡಗು:—ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ್ ವಾಂಡ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—ನಿಮ್ಮಿಂದ ಪಡಕೊಂಡ ಅಮೃತಾಂಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.

ಅಮೃತಾಂಜನ ಚರ್ಚಿತವಾದ ರೋಮದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಪಶೆಯೂ ಬಾರದಂತೆ ನೋಡಿಕೊಂಡು, ಪಶೆ ಇಲ್ಲದ ಸ್ಥಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. ಎಮ್. ಎಂಡ್. ಎಸ್., ಮುಂಬಯಿ, ಬರಿಯುವದೇನಂದರೆ:—ನಿಮ್ಮ ಅಮೃತಾಂಜನವನ್ನು ನಾನು ವಾತಕ್ಕೂ ಸಂಧಿವಾತಕ್ಕೂ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿದ್ದಲ್ಲಿ ಬಹಳ ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ ತಿಳಿಸುತ್ತೇನೆ.

ಜಾಗ್ರತೆ:—ಈಗ ಅಮೃತಾಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಲ್ಪಟ್ಟಿರುತ್ತದೆ.

ವಿಳಾಸ:— ಅಮೃತಾಂಜನ ಡಿಪ್ಪೊ,

109 ಫ್ರೆಯರ್ ರೋಡ್, ಫೋರ್ಟ್ ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—ಅಮೃತಾಂಜನ, ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ರಕ್ತವೃದ್ಧಿ, ಬಾಟ್ಲಿ 1ಕ್ಕೆ 1ರೂಪಾಯಿ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೊಲೆರಾ ಮಾತ್ರೆ.

ಕೊಲೆರಾ, ವಾಂತಿಭೇದಿಗಳ ಮೇಲೆ ಬಹಳ ಉತ್ತಮ ಔಷಧ. ಕ್ರಯ 6ಆಣೆ.

ನೇತ್ರಾಂಜನ.

ಮಂದದೃಷ್ಟಿಯನ್ನೂ ಕಣ್ಣುನೋವನ್ನೂ ಗುಣಪಡಿಸುವದು. ಕ್ರಯ 4ಆಣೆ.

ಕೇಶವರ್ಧಿನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

ಜುಲಾಬು ಮಾತ್ರೆ 8 ಆಣೆ; ಪ್ರಮೇಹಮಿಶ್ರಣ 1ರೂಪಾಯಿ; ಕಫಹಾರಿ 1 ರೂಪಾಯಿ 4 ಆಣೆ; ಕಫನಾಶಕ ಚೂರ್ಣ 8 ಆಣೆ; ಜಂತುವಾತಹಾರಿ 8 ಆಣೆ.

ವಿಳಾಸ:—

ವಿಲಿಯಂ ಮತ್ತು ಕಂಪೆನಿ,

109 ಫ್ರೆಯರ್ ರೋಡ್,

ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—

ಅಮೃತಾಂಜನ, ಮುಂಬಯಿ.

RYMOND'S INDIAN INK.

ಅತ್ಯುತ್ತಮವಾದ ನೀಲಿಕಪ್ಪುಶಾಯಿಯ ಪೊಟ್ಟಣಗಳು ನೂರಕ್ಕೆ 0—8—0 ಬರುವ ತಿಂಗಳ ಆಖೈರ್ ವಳಗೆ ಕೊಂಡುಕೊಳ್ಳುವವರಿಗೆ ಮಾತ್ರ ಆಣೆ 0—6—0 ಟಪ್ಪಾಲ್ ಚಾರ್ಜು ಆಣೆ 0—3—0.

ನೀಲಿಕಪ್ಪು, ಕೆಂಪು, ಹಸರು, ಊದಾ ಬಣ್ಣದ ಶಾಯಿ 24 ಗುಳಿಗೆಗಳ ಡಬ್ಬಿಗೆ 0-2-6. 24 ಹಾಳೆಗಳ ಕಟ್ಟಿಗೆ 0-2-6. ರಖಂ ಗಿರಾಕಿಗಳಿಗೆ ಒಳ್ಳೇ ಕಮಿಶನ್ ಕೊಡಲಾದೀತು. ಏಜಂಟರು ಬೇಕು.

ರಾಯ್ಮಂಡ್ ಎ. ಮಿನೇಜಸ್.
ಪುತ್ತೂರು, ದ. ಕ.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು.

ಆತಂಕ ನಿಗ್ರಹ
ಗುಳಿಗೆಗಳು.

30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ತಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತ ರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ 22 ಬ್ರಾಡ್ವೇ ಮದರಾಸು. } ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.
ಮತ್ತು ಜಾಮ್ ನಗರ ಕಾಠ್ಯಾವಾರ್.

ವಿಂಟರ್ ಕಂಪೆನಿಯವರ
"ಆಯೊಡ್ಯಾಡ್ ಸರ್ಸಪರೆಲ್ಲಾ"

ಪ್ರಸಿದ್ಧವಾದ ಡಾಕ್ಟರುಗಳಿಂದ ಪರೀಕ್ಷಿಸಲ್ಪಟ್ಟದೆ.

"ಈ ಔಷಧಿಯನ್ನು ಹಲವು ರೋಗಿಗಳ ಮೇಲೆ ಉಪಯೋಗಿಸಿ ಖಾತ್ರಿಯಾದ ನಂತರ ತಮ್ಮ ಮುಂದೆ ಇಟ್ಟಿರುತ್ತೇವೆ."

"ಸಾವಿರಾರು ಜನರು ಗುಣಹೊಂದಿರುತ್ತಾರೆ" ಮುಖ್ಯವಾಗಿ ಈ ರೋಗಗಳ ಮೇಲೆ ತಯಾರಿಸಲ್ಪಟ್ಟಿದ್ದಾಗಿರುತ್ತದೆ.

ರಕ್ತ ಕೆಡುವದರಿಂದ ಉಂಟಾಗುವ ಭಯಂಕರ ರೋಗಗಳು, ಪ್ರಮೇಹ, ಮೇಹ, ಸಿಪಲಿಸ್ ಕೈಕಾಲುಗಳ ಸಂದು ಹಿಡಿಯುವದು ಖಜ್ಜಿ ಕಪ್ಪು ಕಲೆಗಳು ಇವುಗಳ ಮೇಲೆ ಎಷ್ಟು ಔಷಧಿ ತೆಗದುಕೊಂಡಾಗ್ಯೂ ರೋಗವು ಸಂಪೂರ್ಣವಾಗ ನಿಲ್ಲಲಾರದು. ಇದರ ಸೇವನೆಯಿಂದ ಎಂಥಾ ಕಠಿಣ ರೋಗವಾದರೂ ನಾಶವಾಗುವದಲ್ಲದೆ ಮೈಯೊಳಗಿನ ಅಶಕ್ತತೆಯು ಹೋಗಿ ರಕ್ತ ವೃದ್ಧಿಯೂ ಆಗಿ ಧಾತು ಪುಷ್ಟಿಯಾಗುವದು. ಇದು ಹೆಂಗಸರಿಗೂ, ಗಂಡಸರಿಗೂ, ಬಹಳ ಉಪಯೋಗ ಉಳ್ಳದ್ದಾಗಿರುತ್ತದೆ. ಬಾಟ್ಲೆ ಒಂದರ ಕಿಮ್ಮತು ರೂ. 1—0—0. ಪೋಸ್ಟು ಖರ್ಚು 0—4—0.

ವಿಂಟರ್ ಮತ್ತು ಕಂಪೆನಿ.

ಸೋಲ್ ಏಜಂಟರು:—

ಕೆ. ಗೋಪಾಲ ರಾವ್,
ನಂಬ್ರ 3 ಕಂಟ್ರಾಕ್ಟರ್ ಬಿಲ್ಡಿಂಗ್.
ಗಿರಗಾಂ, ಮುಂಬಯಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ
ಲೈಫ್ ಎಶ್ಯೂರೆನ್ಸ್ ಕಂಪೆನಿ.
ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.



ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು, ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿ ಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ, ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿ ಮಾಡಲ್ಪಡುವದು.

ಎಲ್ಲೂರು ರಾಮ ರಾವ್,
ಜನರಲ್ ಏಜಂಟ್,
ಬ್ರಿಟೋ ಬಿಲ್ಡಿಂಗ್ಸ್
ಮಂಗಳೂರು, ದ. ಕನ್ನಡ.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ್ಕ, ಮುಂಬಯಿ.

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co BENARES CITY

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟು ಅಲ್ಲವೋ ಹಾಗಾದರೆ ಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರಿ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೪ ಮುಖದಿಂದ ೩ ಮುಖದ ವಳಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಘಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,
ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—S. U. Narayanacharya & Co.
Leading Silk Manufacturers, Benares City.

1912ನೇ ಇಸವಿಯ
ಪೌರ್ವಾಲ್ ಪೊಕೆಟ್ ಡೈರಿಗಳು.

1912ನೇ ಇಸವಿಯ ಡೈರಿಗಳು ತಯಾರಾಗಿರುತ್ತವೆ. ನಂಬರು 1, 0—4—0.

ನಂಬರು 2, ಮುಚ್ಚಳ ಮತ್ತು ಪೆನ್‌ಸಲ್ ಸಹಿತ 0—6—0. ಎಲ್ಲರಿಗೂ ಬೇಕಾದ ವಿಷಯಗಳು ಇದರಲ್ಲಿ ಅಡಗಿರುತ್ತವೆ. ವಟ್ಟಿಗೆ 1 ಡಜನ್ ಡೈರಿಗಳನ್ನು ತೆಗದುಕೊಳ್ಳುವವರಿಗೆ 2 ಡೈರಿಗಳನ್ನು ಬಹುಮಾನವಾಗಿ ಕೊಡುತ್ತೇವೆ. ಸ್ವಲ್ಪವೇ ಕೋಪಿಗಳು ಉಳದಿರುವದರಿಂದ ಜಾಗ್ರತೆಯಾಗಿ ತರಿಶಿಕೊಳ್ಳಬೇಕು. ನಮ್ಮ ಡೈರಿಗಳನ್ನು ತರಿಶಿಕೊಳ್ಳುವವರಿಗೆಲ್ಲಾ 1912ನೇ ಇಸವಿಯ ಕೆಲಂಡರುಗಳನ್ನು ಕಳುಹಿಸಿಕೊಡುತ್ತೇವೆ. ಪೋಸ್ಟ ಮುಖಾಂತರ ವಿ. ಪಿ. ತರಿಸಿಕೊಳ್ಳ ತಕ್ಕವರು ಡಜನ್ 1ಕ್ಕೆ 1ರೂಪಾಯಿ ಅಡ್ವಾನ್ಸ ಕಳುಹಿಸಿಕೊಡಬೇಕು

ಈ ಮೇಲ್ಕಂಡ ಡೈರಿಗಳು ಮಂಗಳೂರು ಊಲನ್ ಮಾರ್ಟನಲ್ಲಿ ದೊರಿಯುತ್ತವೆ.

ಎಲ್. ಎ. ಪೌರ್ವಾಲ್ ಅಂಡ್ ಕೋ,
ಬೆಂಗಳೂರು ಸಿಟಿ.

ನೂತನ ವಿಚಿತ್ರ
ದಂತ ಚಿತ್ರಗಳು.

ಆನೆಯ ಶುದ್ಧ ದಾಡೆಯಿಂದಲೇ ಅತಿ ವಿಲಾಸದಿಂದ ತಯಾರಿಸಿರುವ, ದೇವ, ದೇವಕಿಯರ (God & Goddess) ಗೊಂಬೆಗಳು ಈಗಲೇ ತರಿಸಿರುವೆವು. ಇವುಗಳು ಗಡಿಯಾರ ಸರಪಣಿ, ಹಾರ ಮೊದಲಾದ ಕಂಠಾಭರಣಗಳ ನಡುವೆ, ಬಲು ಭೂಷಣವಾಗಿಯೂ ಪೂಜೆಗೆ ಅತ್ಯಂತ ಅರ್ಹವಾದವುಗಳಾಗಿಯೂ ಇರುತ್ತವೆ. ಬೆಲೆಯು ರೂಪಾಯಿ ೧ರಿಂದ ೪೮ ವರೆಗೆ. ಆಯಾಯ ಚಿತ್ರಗಳ ನಮೂನೆ ಮತ್ತು ಪರಿಮಾಣದ ಮೇಲೆ ಹೊಂದಿರುತ್ತದೆ.

ನಮ್ಮ ಸುಗಂಧ ದ್ರವ್ಯಗಳಿಗೆ ಆರ್ಡರು ಕೊಡುತ್ತಿರುವ ವೇಳೆಯಾದರೂ, ಮಾದರಿಗಾಗಿ ಒಂದೊಂದು ಚಿತ್ರಗಳನ್ನು ತರಿಸಿ ನೋಡಿರಿ.

ನಮ್ಮ ಏಜಂಟರು:— ವಿಳಾಸ:—

ಮ. ಟ. ಸುಬ್ಬಣ್ಣ ಭಟ್ಟರು, ಹೆಡ್ ಮಾಸ್ತರ್, ಮಿತ್ತನಡ್ಕ, ಉಪ್ಪಿನಂಗಡಿ ತಾಲೂಕು. } ಎನ್. ಎಂ. ಸುಬ್ರಾವ್, "ಸುಗಂಧವಿಲಾಸ" ಮಂಗಳೂರು

ಪುಷ್ಕಳವಾದ ಕೂದಲು.

ಪ್ರಾಚೀನ ಕಾಲದಿಂದಲೂ ಕವಿಗಳು ಸ್ತ್ರೀಯರ ಕೂದಲಿನ ವಿಕಾಸವನ್ನು ಹೊಗಳಿದ್ದಾರೆ; ಅದು ನಿಜವಾಗಿಯೂ ಮನಸ್ಸನ್ನು ಸೆಳೆಯುವಂಥಾದ್ದೇ ಸರಿ. ಅವರ ಕೂದಲು ಕೊರತೆಯಾಗಲು ಕಾರಣವೇ ಇಲ್ಲ.

ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ. ಅದು ಬೋಳು ತಲೆಯಲ್ಲಿ ಕೂದಲು ಬೆಳಸುವುದು. ಇದರ ಸ್ವಭಾವವು ಕೂದಲಿನ ಬೇರನ್ನು ತನಿಮಾಡಿ ಬೆಳಸುವುದಾಗಿದೆ; ತಲೆಯಲ್ಲಿ ತಂಪನ್ನುಂಟುಮಾಡುವುದು. ಕಾಮಿನಿಯಾ ಎಣ್ಣೆಯು ಕೂದಲನ್ನು ಸುಕುಮಾರವಾಗಿ ಪೋಷಣೆ ಮಾಡುತ್ತದೆ. ಅದು ಬಹು ಸುಗಂಧಮಯವಾದ ಮನೋಹರವಾದ ಎಣ್ಣೆ. ಕಾಮಿನಿಯಾ ಎಣ್ಣೆ ಕೂದಲನ್ನು ಸ್ವಭಾವಯುಕ್ತವಾಗಿಯೂ ಕೋಮಲವಾಗಿಯೂ ಪುಷ್ಕಳವಾಗಿಯೂ ಜಾಗ್ರತೆಯಾಗಿಯೂ ಬೆಳೆಯಮಾಡುತ್ತದೆ. ಅದು ಕೂದಲು ಉದುರಿಹೋಗುವುದನ್ನು ತಡೆಮಾಡುತ್ತದೆ. ಇದೆಲ್ಲಾ ಖಂಡಿತವಾದ ಮತ್ತು ಅತ್ಯಂತ ತೃಪ್ತಿಕರವಾದ ಫಲಗಳಾಗಿವೆ.

ವಾರಕ್ಕೆ ಎರಡು ಮೂರು ಸಲ ಈ ಎಣ್ಣೆಯನ್ನು ಹಚ್ಚಿ ಮೃದುವಾಗಿ ತಿಕ್ಕುತ್ತಿದ್ದರೆ ಬೋಳಾಗಿರುದ ಭಾಗದ ಕೂದಲು ಬೇರು ತಂಪಾಗಿ ತನಿಯಾಗಿ ಬಹು ಸೊಂಪಾಗಿ ಬೆಳೆಯುವುದಲ್ಲದೆ ಎಲ್ಲಾ ತರದ ನವೆಯನ್ನೂ ಹೋಗಲಾಡಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಬೇರುಗಳಿಗೆ ತನಿಯಿಲ್ಲದೆ ಕೂದಲು ಉದುರಿ ಹೋಗುವದು ಕಾಮಿನಿಯಾ ಎಣ್ಣೆಯೇ ಅದಕ್ಕೆ ಅಗತ್ಯವೂ ಅನುಕೂಲವೂ ಆದ ಆಹಾರ; ಇದನ್ನು ಉಪಯೋಗಿಸಿ ನೋಡಿರಿ.

ಕ್ರಯದ ದರಗಳು:— 1 ಸೀಸೆಗೆ ರೂ. 1; ವಿ. ಪಿ. ಚಾರ್ಜು ಬೇರೆ 4 ಆಣೆ.

ವಿಳಾಸ:— ಏಜಂಟರು, ದಿ. ಊಲನ್ ಮಾರ್ಟ್; ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಳು ಕಜ್ಜಿ, ಅಜೀರ್ಣತೆ, ಮಲಬದ್ಧತೆ ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0 ಮೂರು ಬಾಟ್ಲಿಗಳಿಗೆ 2—0—0. 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕಾರಕ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಒಳಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು	ರೂ. 0—4—0
ಸರ್ಸಪರಿಲಾ:— ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ 1—4—0
ದಂತ ಚೂರ್ಣ:— ಹಲ್ಲುಗಳು ಘಟ್ಟಿಯಾಗುತ್ತವೆ	„ 0—4—0
ರೊಯಲ್ ಇಂಡಿಯನ್ ಬಾಂ:— ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	„ 0—8—0

ವಿಳಾಸ:— ಗಣೇಶ ರಾಮಚಂದ್ರ ...

ಓದುಗರಿಗೆ ಸಿದ್ಧವಾಗಿದೆ. ಶಿವಸಾಯುಜ್ಯಕ್ಕೆ ಸುಲಭಸೋಪಾನ. ಹೊಸ ಗ್ರಂಥ.

ಶ್ರೀ ಶಿವಗೀತಾ

ಆಕಾರ:—ಕ್ರೌನ್ ಅಷ್ಟಪುಠ ೨೧೦ ಪುಠಗಳು. (ಎರಡನೇ ಮುದ್ರಣ)

ಭಾಷ್ಯಾಂ ತಿರುಮಲಾಚಾರ್ಯ

ಪ್ರಣೀತ ಕನ್ನಡ ಟೀಕಾಸಹಿತವಾಗಿ

ಪಂಡಿತರಿಂದ ಪರಿಶೋಧಿಸಲ್ಪಟ್ಟು ಪ್ರಕಟಿಸಲ್ಪಟ್ಟಿದೆ.

೧ನೇ ಜಾತಿ ಪ್ರತಿ ಒಂದಕ್ಕೆ ಕ್ರಯ ಆಣೆ ೧೨. ೨ನೇ ಜಾತಿ ಪ್ರತಿ ೧ಕ್ಕೆ ಆಣೆ ೮.

ಟಪ್ಪಾಲುವೆಚ್ಚ ಬೇರೆಯಾಗಿ ಕೊಡಬೇಕಾಗಿರುವುದು.

ಇದು ಪದ್ಮ ಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದಕ್ಕೆ ಬಾಲಾನಂದಿನೀ ಎಂಬ ಪ್ರೌಢವಾದ ವ್ಯಾಖ್ಯಾನಕ್ಕನುಸಾರವಾಗಿ ಟೀಕು ಬರದಿರುವುದು. ಈ ಶಿವಗೀತಾಶಾಸ್ತ್ರವನ್ನು ಪಾರಾಯಣಮಾಡಲು ಎಲ್ಲರೂ ಅಧಿಕಾರಿಗಳಾಗಿರುತ್ತಾರೆ.

"ಏವಂ ಮಯಾ ಸಮಾಸೇನ ಶಿವಗೀತಾ ಸಮೀರಿತಾ ||
ಏತಾಂ ಯಃ ಪ್ರಜಪೇನಿತ್ಯಂ ಶೃಣುಯಾದ್ವಾಸ ಮಾಹಿತಃ |
ಏಕಾಗ್ರಚಿತ್ತೋಯೋಮರ್ತ್ಯಃ ತಸ್ಯಮುಕ್ತಿಃ ಕರೇಸ್ಥಿತಃ ||

ಎಂದರೆ ಹೀಗೆ ಶಿವಗೀತೆಯನ್ನು ಸಂಗ್ರಹವಾಗಿ ನಿನಗೆ ಹೇಳಿದೆನು. ಯಾವನು ಇದನ್ನು ಓದುತ್ತಾನೋ, ಕೇಳುತ್ತಾನೋ, ಯಾವನು ಇದನ್ನು ಏಕಾಗ್ರಚಿತ್ತನಾಗಿ ಪಾರಾಯಣ ಮಾಡುತ್ತಾನೋ ಅವನಿಗೆ ಮುಕ್ತಿಯು ಅಂಗೈಯಲ್ಲಿದೆಯೆಂಬದಾಗಿ ಶ್ರೀಶಿವಗೀತಾ ಶಾಸ್ತ್ರದ ಮಹಿಮೆಯು ಆ ಗ್ರಂಥದಲ್ಲಿ ಹೇಳಲ್ಪಟ್ಟಿರುವುದಾಗಿ ಈ ವಿಷಯದಲ್ಲಿ ಹೆಚ್ಚಾಗಿ ಹೇಳಬೇಕಾದುದು ಯಾವುದೂ ಇರುವುದಿಲ್ಲ.

ಮುಖ್ಯವಾಗಿ ಇದು ಶ್ರೀರಾಮದೇವರಿಗೆ ಅಗಸ್ತ್ಯೋಪದೇಶದಿಂದ ಪರಮ ಶಿವಗಿ ಪ್ರಸಾದವುಂಟಾಗಿ ಲೋಕನಾಥನಾದ ಮಹಾದೇವನು ದರ್ಶನಕೊಟ್ಟು ಸಾಕ್ಷಾತ್ತಾಗಿ ಪಾಶುಪತಾಸ್ತ್ರದಾನವನ್ನು ಮಾಡಿದಾಗ ಉಪದೇಶಿಸಿದ ಮೋಕ್ಷ ಶಾಸ್ತ್ರವಾಗಿರುತ್ತಿದೆ. ಪರಮ ಕಾರುಣಿಕನಾದ ಭಕ್ತವತ್ಸಲನಾದ ಪಾರ್ವತೀಪತಿಯಾದ ಜಗದ್ಗುರುವಾದ ಸದಾಶಿವನಲ್ಲಿ ತ್ರಿಕರಣ ಶುದ್ಧವಾಗಿ ಭಕ್ತಿಯನ್ನು ಮಾಡಿ ಅವನ ಕಟಾಕ್ಷವನ್ನಪೇಕ್ಷಿಸುವ ಸಮಸ್ತ ಆಸ್ತಿಕ ಮಹಾಜನರೂ ಖಂಡಿತವಾಗಿ ಇಷ್ಟದೇ ಈ ಗ್ರಂಥವನ್ನು ತೆಗೆದು ಓದಿ ಮನನ ಮಾಡಬೇಕು.

ಇದು ಶ್ರೀಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿವುದು. ಅಷ್ಟುಮಾತ್ರವೇ ಅಲ್ಲ; ಮುದ್ರಣ ಮೊದಲಾದ ಎಲ್ಲಾ ವಿಷಯದಲ್ಲೂ ಬಹಳ ತೃಪ್ತಿಕರವಾಗಿರುವಂತೆ ಮಾಡಿದೆ.

ವಿಳಾಸ:— ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸ್ವದೇಶಿ ಲ್ರೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು--ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)--ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20--6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,

ಚೀಫ್ ಏಜಂಟ್ಸ್:—ಮಲಿಬಾರ ಮತ್ತು ದಕ್ಷಿಣ ಕನ್ನಡ.

ಸುಮತಿ ಗ್ರಂಥಮಾಲೆ ೩.

ಬೆಕ್ಕೋಜಿ.

ಮುಂತಾದ ಕಥೆಗಳು. ಅನೇಕ ಚಿತ್ರಗಳಿಂದ ಕೂಡಿದೆ. (೧) ಬೆಕ್ಕೋಜಿಯ ಸಾಹಸ (೨) ಭೇತ ರಾಜನ ಶಾಪ ವಿಮೋಚನೆ (೩) ವಿಚಿತ್ರವಾದ ಟೀ ಪಾತ್ರೆ, (೪) ಮೂರು ಕಣ್ಣುಗಳ ಜಗಳ—ಎಂಬೀ ಕಥೆಗಳು ಇಂಗ್ಲಿಷಿನಿಂದ ಬಲು ಸುಲಭವಾದ ಕನ್ನಡಕ್ಕೆ ತರ್ಜುಮೆಮಾಡಲ್ಪಟ್ಟಿವೆ. ಮಕ್ಕಳನ್ನು ನಗಿಸಿ ನಗಿಸಿ ನೀತಿಗಳನ್ನು ಹೇಳಿಕೊಡುತ್ತವೆ. ಪ್ರತಿ ಒಬ್ಬ ಬಾಲಕನೂ ಬಾಲಕಿಯೂ ಇದನ್ನು ಓದಲೇ ಬೇಕು.

ಬೆಲೆ: ೩ ಆಣೆ—ಸುಮತಿಯ ಚಂದಾದಾರರಿಗೆ ೨ ಆಣೆ.

ಸುಮತಿ ಗ್ರಂಥಮಾಲೆ ೨.

ಕನಕಾಲುಕಾ.

ಅಥವಾ ಕಮಲಿನೀ ಚರಿತಂ

ಪ್ರಸಿದ್ಧ ಆಂಗ್ಲೇಯ ಕವಿಯಾದ ಲಾರ್ಡ್‌ಟೆನ್ನಿಸನ್‌ನಿಂದ ವಿರಚಿತವಾದ ಮತ್ತು ಮದ್ರಾಸ್ ಯುನಿವರ್ಸಿಟಿಯ ಬಿ. ಎ ಪರೀಕ್ಷೆಗೆ ಪಾಠಪುಸ್ತಕವಾಗಿ ಇಡಲ್ಪಟ್ಟಿದ್ದ "ದಿ ಕಪ್" ಎಂಬ ಪ್ರಖ್ಯಾತ ನಾಟಕವನ್ನು ಅವಲಂಬಿಸಿ ವಿರಚಿತವಾಗಿದೆ. ಸುಂದರ ತರವಾದ ಚಿತ್ರಗಳಿಂದ ಅಲಂಕರಿಸಲ್ಪಟ್ಟಿದೆ. ನೀತಿಬೋಧಕವಾಗಿರುವದಲ್ಲದೆ ಮನೋರಂಜಕವಾಗಿದೆ. ಇದುವರೆಗೂ ಕನ್ನಡದಲ್ಲಿ ಇಂತಹ ನಾಟಕವನ್ನು ಯಾರೂ ಬರೆದಿಲ್ಲ. ಪದ್ಯಗದ್ಯಗಳು ಸುಲಭವಾದ ಹೊಸಕನ್ನಡದಲ್ಲಿ ಬರೆಯಲ್ಪಟ್ಟಿವೆ. ಯುವಕರಿಗೂ ಯುವತಿಯರಿಗೂ ಅತ್ಯುಪಯೋಗಿ. ಬೆಲೆ: ೬ ಆಣೆ. ಚಂದಾದಾರರಿಗೆ ೪ ಆಣೆ.

ಸುಮತಿ ಗ್ರಂಥಮಾಲೆ ೧

ಮೈಸೂರಿನ ದಿವಾನರಾಗಿದ್ದ ಪ್ರಸಿದ್ಧ ರಾಜ್ಯತಂತ್ರ ನಿಪುಣರಾದ

ರಂಗಾಚಾರ್ಲು ಸಿ. ಐ. ಇ.

ಯವರ ಜೀವನ ಚರಿತ್ರೆ.

ಯಂ. ವೆಂಕಟಕೃಷ್ಣಯ್ಯನವರಿಂದಲೂ ರಾಯ್‌ಬಹದ್ದೂರ್ ಅಂಬಿಲ್ ನರಸಿಂಹಯ್ಯಂಗಾರ್ಯರಿಂದಲೂ ಬರೆಯಲ್ಪಟ್ಟ ಪೀಠಿಕೆಗಳೊಡನೆ, ಸುಂದರವಾದ ಭಾವಚಿತ್ರದ ಸಹಿತ (ಪುಟ ೧೦೦)

ಮೈಸೂರಿನ ಈಗಿನ ದಿವಾನರಾದ ಮ| ಟಿ. ಆನಂದ ರಾವ್, ಬಿ. ಎ., ಸಿ. ಐ. ಇ. ಯವರು ಈ ಪುಸ್ತಕವು "ಬಹಳ ಸ್ವಾರಸ್ಯ"ವಾಗಿದೆ ಯೆಂದು ಹೇಳಿರುವರಲ್ಲದೆ ಅನೇಕ ಪ್ರತಿಗಳನ್ನು ಕೊಂಡುಕೊಂಡಿರುವರು. ಶೈಲಿಯು ಬಲು ಶುಲಭವಾಗಿದೆ. ಪ್ರತಿಯೊಬ್ಬ ದೇಶಾಭಿಮಾನಿಗೂ ಅತ್ಯಂತ ಅವಶ್ಯಕವಾದ ಪುಸ್ತಕ. ರಾಜಕೀಯ ಮತ್ತು ಸಂಪತ್ಸಂಬಂಧವಾದ ಅನೇಕಾಂಶಗಳನ್ನೊಳಗೊಂಡಿದೆ.

ಬೆಲೆ: ಚಂದಾದಾರರಿಗೆ 4 ಆಣೆ. ಇತರರಿಗೆ 6 ಆಣೆ.

ವಿಳಾಸ:—ಮ್ಯಾನೇಜರ್

ಸುಮತಿ ಗ್ರಂಥಮಾಲಾ, ಬೆಂಗಳೂರು ಸಿಟಿ.

ಯವ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ವರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನು ವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯವ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು ದ. ಕ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 12ನೇ ಜನವರಿ 1912.

ಕಲ್ಕತ್ತೆಯಲ್ಲಿ ಕೂಡಿದ ಔದ್ಯೋಗಿಕ ಪರಿಷದವು.

ಕಳದ ಏಳು ವರುಷಗಳಿಂದ ರಾಷ್ಟ್ರೀಯ ಮಹಾಸಭೆಯೊಂದಿಗೆ ದೇಶದ ಸಾಂಪತ್ತಿಕ ಅಭಿವೃದ್ಧಿಯನ್ನು ಸಾಧಿಸಲುದ್ದೇಶಿಸಿರುವ ಔದ್ಯೋಗಿಕ ಪರಿಷದವು ಕೂಡುತ್ತಿರುವುದು. ವೃತ್ತಿಗಳನ್ನು ಕಲ್ಪಿಸಿಕೊಂಡು ದುಡಿಯುವ ಸಾಮರ್ಥ್ಯವೂ ಸಂಭವಗಳೂ ಇಲ್ಲದೆ ದೀನಸ್ಥಿತಿಯಲ್ಲಿರುವ ಅಸಂಖ್ಯಾತ ಪ್ರಜಾಜನರನ್ನು ಚೇತರಿಸುವ ಬಗೆಯು ಯಾವುದೆಂಬುದು ಈ ಸಭೆಯಲ್ಲಿ ಪರ್ಯಾಲೋಚಿಸಲ್ಪಡುವುದು. ಕೈಗಾರಿಕೆಗಳ ಅಭಿವೃದ್ಧಿಯಿಂದ ಉದ್ದಿಮೆಗಳನ್ನು ಹೆಚ್ಚಿಸಿ ತಮ್ಮ ದಾರಿದ್ರ್ಯವನ್ನು ಕಳಕೊಳ್ಳಲು ಸಾಧ್ಯವೆಂಬುದು ಪ್ರಜಾಸಾಮಾನ್ಯರು ಚನ್ನಾಗಿ ತಿಳಿದಿರುವರು. ಆದರೆ ಈ ಸಾಧನೆಗೆ ತಕ್ಕಂತೆ ಪ್ರಯತ್ನಗಳು ಔದ್ಯೋಗಿಕ ಪರಿಷದಗಳಂಥಹ ಮಹಾಸಭೆಗಳಲ್ಲಿ ನಿರ್ಣಯಿಸಲ್ಪಟ್ಟು ಬೇಕಾದ ಕಾರ್ಯಸಾಧನೋಪಾಯಗಳು ದೇಶದ ಎಲ್ಲಾ ಕಡೆಗಳಲ್ಲಿಯೂ ನಡಿಯಬೇಕಾಗಿವೆ.

ತಮ್ಮ ದೀನದೆಸೆಯಿಂದ ಬೇಸತ್ತಿರುವ ಪ್ರಜಾಜನರಲ್ಲಿ ಈ ಮಹಾಸಭೆಗಳ ತತ್ಕಾಲಿಕ ಕಾರ್ಯಲಾಭ ನಿರೀಕ್ಷಣೆಯು ಅತಿರೇಕವಾಗಿರುವುದರಿಂದಲೂ ಈ ಮಹಾಸಭೆಗಳು ಜನರ ಈ ನಿರೀಕ್ಷಣೆಯನ್ನು ತೃಪ್ತಿಗೊಳಿಸುವುದು ಕಷ್ಟಸಾಧ್ಯವಾಗಿರುವುದರಿಂದಲೂ ಇಂಥಾ ಪರಿಷದಗಳ ವಿಶೇಷತ್ವವನ್ನು ಸಾಮಾನ್ಯರು ತಿಳಿಯಲಾರದೆ ಸಭಾನಿರ್ಣಯಗಳ ಕಾರ್ಯಚಟುವಟಿಕೆಯಲ್ಲಿ ಶ್ರದ್ಧೆಯು ಪ್ರಜಾಜನರಿಗೆ ಕಡಿಮೆಯಾಗುತ್ತ ಬರುತ್ತಿರುವುದು. ಪ್ರಜಾವರ್ಗಗಳ ಈ ರೀತಿಯ ಅಭಾವದ ಹೊರತು ಸರಕಾರದವರಿಂದ ಈ ಸಭಾಭಿಪ್ರಾಯಗಳಿಗೆ ತಕ್ಕದಾದ ಅಂಗೀಕಾರವು ದೊರಿಯದಿರುವ ಮತ್ತೊಂದು ವಿದ್ಯಾಮಾನವು ಈ ಸಭೆಗಳ ಚಟುವಟಿಕೆಗೆ ವಿಶೇಷವಾದ ಪ್ರತಿಬಂಧಕವಾಗಿದೆ. ಇಂಥಾ ವಿದ್ಯಾಮಾನಗಳಲ್ಲಿ ಪ್ರಜಾಗ್ರೇಸರರು ಪರಿಷದಗಳನ್ನು ನೆರವೇರಿಸಬೇಕಾಗಿರುವುದರಿಂದ ಪ್ರಜಾಸಾಮಾನ್ಯರಿಂದ ಈ ಸಭೆಗಳಿಗೆ ಬೇಕಾದ ಸಹಕಾರವು ದೊರಿಯದಿದ್ದರೆ ಅದೊಂದು ಆಶ್ಚರ್ಯವಲ್ಲ. ಆದರೆ ತಮ್ಮ ಸುಸಾಧನೆಗಳಲ್ಲಿ ವಿಶ್ವಾಸವುಳ್ಳ ಪ್ರಜಾಮಹನೀಯರು ಸಭೆಕೂಡಿ ನಡಿಸಿದ ಪ್ರಯತ್ನಗಳನ್ನೂ ದೇಶಭಾಂದವರ ಅನುಸರಣೆ ಬಗ್ಗೆ ಅಪ್ಪಣೆ ಕೊಡಿಸಿದ ಬುದ್ಧಿವಾದವನ್ನೂ ಈ ಸಭಾ ಉದ್ದಿಶ್ಯಗಳು ನೆರವೇರುವ ತನಕ ಪದೇ ಪದೇ ತಿಳಿಯ ಹೇಳುವುದು ಕರ್ತವ್ಯವಾಗಿರುವುದು.

ಔದ್ಯೋಗಿಕ ಪರಿಷದದ ಅಧ್ಯಕ್ಷರಾದ ಬಹುಮಾನಪಟ್ಟ ಮೆ| ದಾದಾಭಾಯಿಯವರು ಮಾಡಿದ ಭಾಷಣವು ಸರಕಾರದವರಿಗೂ ಪ್ರಜಾಜನರಿಗೂ ಉಪಯುಕ್ತವಾದ ಹಲವು ಸೂಚನೆಗಳಿಂದ ಕೂಡಿರುವುದು. ಸಾಹಸ, ಕಾರ್ಯದುರಂಧರತೆ ಶೂನ್ಯರಾಗಿ ತಮಗೆ ಪ್ರತಿನಿತ್ಯವೂ ಬೇಕಾಗಿರುವ ಸಾಮಾಗ್ರಿಗಳ ಬಗ್ಗೆ ಅನ್ಯದೇಶಗಳನ್ನಾದರಿಸಿಕೊಂಡಿದ್ದು ನಿಕೃಷ್ಟ ವಿದ್ಯಮಾನಗಳಲ್ಲಿ ತನ್ನು ಜೀವಿತವನ್ನು ಸಾಗುವ ಜನರು ರಾಷ್ಟ್ರೀಯ ಹಕ್ಕು ಬಾಧ್ಯತೆಗಳಿಗೆ ಅರ್ಹರಾಗದಿರುವುದು ಆಶ್ಚರ್ಯವಲ್ಲ. ವ್ಯಾಪಾರ ಉದ್ದಿಮೆಗಳಲ್ಲಿ ಅತಂತ್ರರಾಗಿರುವವರಿಗೆ ರಾಜಕೀಯ ವಿಷಯಗಳಲ್ಲಿ ದಾಸ್ಯವು ನೈಸರ್ಗಿಕವಾಗಿ ಪ್ರಾಪ್ತಿಸುವುದೆಂದು ಮೆ| ಎಮ್. ಬಿ. ದಾದಾಭಾಯಿಯವರು ಹೇಳಿದ ಮಾತುಗಳಿಗೆ ಪೂರ್ವಕಾಲಗಳಲ್ಲಿ ಕೈಗಾರಿಕೆಗಳಿಗೆ ಹೆಸರುವಾಸಿಯಾಗಿದ್ದು ಅವುಗಳು ನಾಶವಾಗಿ ಹೋದ ಬಳಿಕ ದೀನದೆಸೆಯನ್ನು ಹೊಂದಿರುವ ನಮ್ಮ ದೇಶದ ಸ್ಥಿತಿಯೇ ನಿದರ್ಶನವಾಗಿರುವುದು. ಸಂಪತ್ತು ನೆಲೆಗೊಂಡಿರದ ರಾಷ್ಟ್ರಗಳ ಪ್ರಜೆಗಳಿಗೆ ಗೌರವವನ್ನುಳಿಸಿಕೊಳ್ಳುವುದು ಕಷ್ಟಸಾಧ್ಯವಾದ್ದರಿಂದ ಸರ್ವಶಕ್ತಿ ಲಕ್ಷಣಗಳಿಂದ ಕೂಡಿಕೊಂಡಿರುವ ಸಂಪತ್ತನ್ನು ದೇಶದಲ್ಲಿ ನೆಲೆಗೊಳಿಸುವ ಬಗ್ಗೆ ಕೈಗಾರಿಕೆಗಳ ಮೇಲ್ಮೆಯನ್ನು ದೇಶಾಭಿಮಾನಿಗಳೆಲ್ಲರೂ ಸಾಧಿಸತಕ್ಕದ್ದೆಂದು ಮೆ| ದಾದಾಭಾಯಿಯವರು ವಿಜ್ಞಾಪಿಸಿಕೊಂಡಿರುವರು. ಕೈಗಾರಿಕೆಗಳ ಅಭಿವೃದ್ಧಿ ವಿಷಯಗಳಾದರೋ ಸರಕಾರದವರಿಗೂ ಪ್ರಜೆಗಳಿಗೂ ಏಕರೀತಿ ಪ್ರಯೋಜನವುಳ್ಳವುಗಳಾದ್ದರಿಂದ ಸರಕಾರದವರಿಂದ ಈ ಪರವಾದ ಚಟುವಟಿಕೆಯು ಪ್ರೋತ್ಸಾಹಿಸಲ್ಪಟ್ಟು ಪ್ರಜೆಗಳಿಂದ ಇದು ಬೆಳವಣಿಕೆಯನ್ನು ಹೊಂದಬೇಕಾಗಿರುವುದೆಂದು ಮೆ| ದಾದಾಭಾಯಿಯವರು ಸೂಚಿಸಿ ದೇಶದಲ್ಲಿಯ ಅಸಮಾಧಾನಕ್ಕೆ ಮುಖ್ಯ ಕಾರಣವು ಪ್ರಜೆಗಳು ವೃತ್ತಿಹೀನತೆಯಿಂದ ಬಳಲುತ್ತಿರುವುದೇ ಎಂದು ಟೀಕಿಸಿರುವರು. ಕೈಗಾರಿಕೆಗಳಿಂದ ಜನರಿಗೆ ಉದ್ಯೋಗಗಳನ್ನು ಕಲ್ಪಿಸಿ ಕೊಟ್ಟು ಅವರ ಹಸಿವನ್ನು ತುಷ್ಟಿಗೊಳಿಸುವುದರ ಮೂಲಕ ಈ ಅಸಮಾಧಾನವು ಅದೃಶ್ಯವಾಗುವುದು.

ಕೈಗಾರಿಕೆಗಳ ಸ್ಥಾಪನೆ ಮತ್ತು ಬೆಳವಣಿಕೆಗೆ, ಸಾಹಸ, ಭಂಡವಾಳ, ಕೆಲಸ ಜಾಣ್ಮೆ ಮತ್ತು, ದೇಶದಲ್ಲಿ ತಯ್ಯಾರಿಸಲ್ಪಟ್ಟ ಒಡವೆಗಳನ್ನು ಕೊಂಡುಕೊಳ್ಳುವ ಬಗ್ಗೆ ಬೇಕಾದ ಗಿರಾಕಿ, ಇವುಗಳು ಮುಖ್ಯವಾಗಿ ಬೇಕಾಗಿರುವವು. ಕೈಗಾರಿಕೆಗಳ ಸ್ಥಾಪನೆಗಳು ಲಾಭಕರವಾಗಿ ಪರಿಣಮಿಸಿದ್ದಲ್ಲಿ ಈ ಬಗ್ಗೆ ಬೇಕಾದ ಸಾಹಸವು ಜನರಲ್ಲಿ ತನ್ನಷ್ಟಕ್ಕೆನೇ ಮೂಡುವುದೆಂದು ವಾದಿಸಿ ಮೆ| ದಾದಾಭಾಯಿಯವರು ಹಿಂದುಸ್ಥಾನದಲ್ಲಿ ಕೈಗಾರಿಕೆಗಳಿಗೆ ಬೇಕಾದ ಭಂಡವಾಳವು ದೊರಕಿಸಿಕೊಳ್ಳುವುದರಲ್ಲಿರುವ ಅಡಚಣೆಗಳ ಕುರಿತು ಪ್ರಸ್ತಾಪಿಸಿರುವರು. ಹಿಂದುಸ್ಥಾನದಲ್ಲಿ ದ್ರವ್ಯಸಂಗ್ರಹವು ವಿಶೇಷವಾಗಿರುವುದೆಂಬ ಸಿದ್ಧಾಂತವನ್ನು ಇವರು ಅಲ್ಲಗಳೆದಿರುವರಲ್ಲದೆ ಜನಸಾಮಾನ್ಯರಿಗೆ ದ್ರವ್ಯವನ್ನು ಕೂಡಿಸಿಡಲು ಆಸ್ಪದ ಸಹ ಇರುವದಿಲ್ಲವೆಂತ ರುಜುಪಡಿಸಿರುವರು. ಆಗಿಂದಾಗ್ಯೆ ಬರಗಾಲವು ಪ್ರಾಪ್ತಿಸುವುದೂ ಇದಕ್ಕೆ ಸಾವಿರಾರು ಜನರು ತುತ್ತಾಗುವುದೂ ಕ್ಷಾಮಕಾಲವನ್ನು ಎದುರಾಡುವಷ್ಟು ದ್ರವ್ಯಾನುಕೂಲತೆಯು ಜನರಲ್ಲಿರದೆಂಬುದನ್ನು ಸೂಚಿಸುವುದು. ಗದ್ದೆ ಬೇಸಾಯ ಮೊದಲಾದ ವೃತ್ತಿಗಳನ್ನು ಸ್ವತಹ ಮಾಡುತ್ತಿರುವ ಜನಸಂಖ್ಯೆಯ ಅಧಿಕಾಂಶವಾಗಿರುವ ರೈತರು ಸಹ ಹಣದಡಚಣೆಯಿಂದ ಸರಾಫರ ದುರಾಭಿಲಾಷೆಗೆ ತುತ್ತಾಗದಂತೆ ಸರಕಾರದವರ ಪ್ರೋತ್ಸಾಹದಿಂದ ಹಳ್ಳಿ ಪ್ರಾಂತ್ಯಗಳಲ್ಲಿ ಈಗೀಗ ಸ್ಥಾಪಿಸಲ್ಪಡುತ್ತಿರುವ ಪರಸ್ಪರ ದ್ರವ್ಯಸಹಾಯಕ ಸಂಘಗಳು ಜನರ ಬಡ ಸ್ಥಿತಿಯನ್ನು ಸೂಚಿಸುವ ಇನ್ನೊಂದು ದೃಷ್ಟಾಂತವಾಗಿದೆ. ಒಂದುವೇಳೆ ನಡುತರಗತಿಯವರಾದ ಕೆಲವರಲ್ಲಿ ತಮ್ಮ ಆಪದ್ಧನವಾಗಿ ಅಲ್ಪಸ್ವಲ್ಪ ಹಣವಿರಬಹುದೆಂದು ವಾದಿಸಿದರೂ ತಮ್ಮ ಸರ್ವಸ್ವವಾದ ಈ ಆಪದ್ಧನವನ್ನು ಕೈಗಾರಿಕೆಗಳ ಭಂಡವಾಳವಾಗಿ ಈಗಿನ ಕೈಗಾರಿಕೆಗಳ ವಿದ್ಯಮಾನಗಳಲ್ಲಿ ವಿನಿಯೋಗಿಸುವುದು ತಕ್ಕದ್ದಲ್ಲ.

ದ್ರವ್ಯವನ್ನು ಕೂಡಿಸಿಡಲಿಕ್ಕೆ ಜನರಿಗಿರುವ ಅನನುಕೂಲತೆಗಳಿಗೆ ಸಹ ಅಧ್ಯಕ್ಷರಾದ ದಾದಾಭಾಯಿಯವರು ತಮ್ಮ ಭಾಷಣದಲ್ಲಿ ಲಕ್ಷ್ಯಕೊಟ್ಟಿರುವರು. ಹಿಂದೂಸ್ಥಾನದ ದ್ರವ್ಯಸಂಚಯಕ್ಕೆ ಮೂಲಕಾರಣವಾದ ಭೂಸಾಗುವಳಿಯ ಕೈಗಾರಿಕೆಯ ಮೇಲಿರುವ ಭೂಕಂದಾಯದ ತೆರಿಗೆಯು ಬಹಳ ಹೆಚ್ಚಾಗಿರುವುದರಿಂದಲೂ ಆಗಿಂದಾಗ್ಯೆ ಕಂದಾಯವು ಏರಿಸಲ್ಪಡುವ ಸಂಭವವು ಸೆಟ್ಲಮೆಂಟುಗಳಲ್ಲಿದ್ದು ಜನರಿಗೆ ತಕ್ಕ ರೀತಿಯಲ್ಲಿ ಕೃಷಿಕೆಲಸಗಳಲ್ಲಿ ಶ್ರಮೆಪಡುವರೆ ಇರುವ ಅಂಜಿಕೆಯಿಂದಲೂ ಸಾಗುವಳಿ ಮೂಲಕ ಕಂದಾಯವನ್ನೂ ಧನಿಗಳ ಗೇಣಿಗಳನ್ನೂ ಕೊಟ್ಟು ಭೂಸಾಗುವಳಿದಾರರಲ್ಲಿ ಉಳಿಯುವ ಸಿಲುಕು ಸರಿಯಾಗಿ ಹೊಟ್ಟೆ ಹೊರಕೊಳ್ಳಲು ಸಹಾ ಸಾಲದು. ಒಂದುವೇಳೆ ವರ್ಗದಾರರೆನ್ನಿಸಿಕೊಳ್ಳುವ ಕೆಲವರಲ್ಲಿ ಹಣ ಉಳಿಯುವ ಸಂಭವಗಳಿದ್ದರೂ ಹಿಂದೂ ಮತ್ತು ಮಹಮ್ಮದೀಯ ಸಮಾಜಗಳಲ್ಲಿ ಜ್ಯಾರಿಯಲ್ಲಿರುವ ಕಾನೂನುಗಳಿಂದ ಇಂಥಾ ದ್ರವ್ಯ ಸಂಚಯವು ಅಧಿಕವಾಗುವ ಮೊದಲೇ ಇದು ನೂರಾರು ಪಾಲುಗಳಾಗಿ ವಿಭಾಗಿಸಲ್ಪಟ್ಟು ಸಂಗ್ರಹವಾಗಿ ಯಾವುದರಲ್ಲಿಯೂ ವಿನಿಯೋಗಿಸಲ್ಪಡಲು ದೊರಕದು. ಹೀಗ್ಯೆ ದೇಶದಲ್ಲಿಯೇ ಒದಗಬಹುದಾದಂಥಾ ಬಂಡವಾಳವು ಕೈಗಾರಿಕೆಗಳನ್ನುದ್ಧರಿಸಲು ಸಾಲದು. ರೈಲ್ವೆ ನೀರಾವರಿ ಕೆಲಸ ಮೊದಲಾದವುಗಳಿಗೆ ಬೇಕಾದಂತೆ ಸಾಲವನ್ನು ಅಂಗ್ಲಾಳದಲ್ಲಿ ಪಡಕೊಳ್ಳುವ ಸರಕಾರದವರು ಹಿಂದುಸ್ಥಾನದ ಕೈಗಾರಿಕೆಗಳ ಬಗ್ಯೆ ಸಹ ಹೀಗೆ ಸಾಲಗಳನ್ನು ನಿರ್ಮಿಸಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕಾಗಿರುವುದೆಂತ ದಾದಾಭಾಯಿಯವರು ಚರ್ಚಿಸಿರುತ್ತಾರೆ. ವಿದೇಶಿ ಭಂಡವಾಳದ ಸಹಾಯವು ಸಾಲವಾಗಿ ಬೇಕಾಗಿರುವುದಲ್ಲದೆ ಕೈಗಾರಿಕೆ ಕಾರ್ಖಾನೆಗಳ ಪ್ರಯೋಜನವು ವಿದೇಶಸ್ಥರಿಗೆ ಶಿಕ್ಕುವಂತೆ ಅವರಿಂದಲೇ ಕೈಗಾರಿಕೆ ಕಾರ್ಖಾನೆಗಳು ಇಲ್ಲಿ ಸ್ಥಾಪಿಸಲ್ಪಡಬೇಕೆಂಬುವುದು ದಾದಾಭಾಯಿಯವರ ಅಭಿಪ್ರಾಯವಲ್ಲ. ಇದಲ್ಲದೆ ಅನ್ಯ ದೇಶಸ್ಥರೂ ಇಲ್ಲಿ ಬಂದು ಸ್ಥಾಪಿಸುವ ಕಾರ್ಖಾನೆಗಳ ಭಂಡವಾಳಗಳಲ್ಲಿ ಸಹ ಕೆಲವು ಹಿಸೆಗಳನ್ನು ಪಡಕೊಳ್ಳುವ ಸ್ವಾತಂತ್ರವು ದೇಶೀಯರಿಗಿರಬೇಕೆಂತ ಬಹುಮಾನಪಟ್ಟ ದಾದಾಭಾಯಿಯವರ ಅಭಿಪ್ರಾಯವಿರುವುದು.

ವಿದೇಶಿಯ ಭಂಡವಾಳದ ಅವಶ್ಯಕತೆಯು ಹೀಗಿರುವುದೆಂದು ಸೂಚಿಸುವಾಗ ನಡುತರಗತಿಯವರಲ್ಲದ ಪ್ರಜಾವರ್ಗಕ್ಕೆ ಸೇರಿರುವ ಜಮೀನುದಾರರು ಮೊದಲಾದವರು ತಾವು ಶೇಖರಿಸಿ ಇಟ್ಟಿರುವ ದ್ರವ್ಯವನ್ನು ಕೈಗಾರಿಕೆಗಳ ಬಗ್ಯೆ ವಿನಿಯೋಗಿಸ

ಬೇಕೆಂದು ಹೇಳಿರುವರು. ಲಕ್ಷಕಟ್ಟಳೆಯ ದ್ರವ್ಯಸಂಗ್ರಹವಿರುವ ದೇವಸ್ಥಾನ, ಗುರು ಮಠಗಳು ಸಹ ತಮ್ಮ ದ್ರವ್ಯವನ್ನು ಬಚ್ಚಿಡುವ ಅಥವಾ ಜನರಿಗೆ ಸಾರ್ಥಕವಲ್ಲದ ರೀತಿ ಗಳಲ್ಲಿ ವಿನಿಯೋಗಿಸುವ ಬದಲಿಗೆ ದೇಶದ ಉದ್ಧರಣೆಗೆ ತಮ್ಮ ದ್ರವ್ಯ ಸಂಚಯಗಳನ್ನು ವಿನಿಯೋಗಿಸಬೇಕೆಂತ ಆಜ್ಞಾಪಿಸಿರುವರು. ಆದರೆ ಇಂಥಾ ಸಂಪನ್ನರು ಕೈಗಾರಿಕೆ ಗಳಿಗೆ ತಮ್ಮಷ್ಟಕ್ಕನೇ ಲಕ್ಷ್ಯಕೊಡರೆಂಬುದನ್ನು ದಾದಾಭಾಯಿಯವರು ತಿಳಕೊಂಡು ಇಂಥವರನ್ನು ದೇಶಾಭ್ಯುದಯದ ಈ ಸತ್ಕಾರ್ಯಗಳಲ್ಲಿ ಕೈಹಚ್ಚುವಂತೆ ಪ್ರೇರೇಪಿಸ ಬೇಕಾಗಿ ಸರಕಾರದವರಿಗೆ ಸಹ ಒಂದುಪಯುಕ್ತ ಸೂಚನೆಯನ್ನು ಕೊಟ್ಟಿರುವರು. ಕೈಗಾರಿಕೆಗಳಲ್ಲಿ ಕೈಹಚ್ಚಿರುವಂಥವರಿಗೆ ಸರಕಾರದವರು ಬಿರುದು ವೊದಲಾದವು ಗಳನ್ನು ಕೊಡುವುದೇ ಈ ಸೂಚನೆಯಾಗಿರುವುದು.

ಮೆ: ದಾದಾಭಾಯಿಯವರ ಭಾಷಣವು ಇನ್ನು ಅನೇಕ ಸೂಚನೆಗಳಿಂದ ಕೂಡಿ ರುವುದು. ಬೇಂಕುಗಳ ಸ್ಥಾಪನೆ, ಪಾರಂಪರ್ಯವಾಗಿ ಬಂದಿರುವ ಕರಕೌಶಲ್ಯ ಮಾ ಹಿತಿಯನ್ನು ಈಗಿನ ಶಿಕ್ಷಣದಿಂದ ತಿದ್ದುವುದು, ಇಂಥಾ ಶಿಕ್ಷಣ ಬಗ್ಯೆ ಉಚಿತ ಮತ್ತು ಕ್ರಮೇಣ ಖಡ್ಡಾಯ ಪ್ರ್ಯಾಮರಿ ವಿದ್ಯಾಭ್ಯಾಸ, ಪ್ರಜಾಸಹಾಕಾರ, ಕೂಲಿ ಕೆಲಸ ಗಾರರ ಸರಬರಾಯಿ ಈ ಮೊದಲಾದ ವಿಷಯುಗಳನ್ನು ಸಮಾಗ್ರವಾಗಿ ದಾದಾಭಾಯಿ ಯವರು ಭಾಷಣದಲ್ಲಿ ಚರ್ಚಿಸಿರುತ್ತಾರೆ. ಹಿಂದೂಸ್ಥಾನದ ಕೈಗಾರಿಕೆಗಳ ಪೋ ಷಣಾರ್ಥವಾಗಿ ದೇಶಕ್ಕೆ ವಿದೇಶಗಳಿಂದ ರಪ್ತಾಗುವ ವಸ್ತುಗಳ ಮೇಲೆ ಪ್ರತಿಕೂಲ ಸುಂಕಗಳನ್ನು ಕೆಲವು ಕಾಲದ ವರೆಗೆ ವಿಧಿಸಬೇಕೆಂದು ಅನ್ನುವರಲ್ಲದೆ ಇಂಥಾ ತೆರಿಗೆ ಯು ಏರ್ಪಾಡು ಬ್ರಿಟಿಷ ಕಾರ್ಖಾನೆಗಳ ಪ್ರತಿನಿಧಿಗಳೇ ಹೆಚ್ಚಾಗಿರುವ ಬ್ರಿಟಿಷ ಪಾರ್ಲಿ ಮೆಂಟಿಗೆ ಅಧೀನವಾಗಿರುವ ಇಂಡಿಯಾ ಸರಕಾರದವರಿಂದ ಕೊಡೋಣಾಗಲಿಕ್ಕಿಲ್ಲ ವೆಂತ ಸಹ ಸೂಚಿಸಿರುತ್ತಾರೆ. ಸಾಂಪತ್ತಿಕ ವಿಷಯುಗಳಲ್ಲಿ ಇಂಡಿಯಾ ಸರಕಾರದವ ರಿಗೆ ಬ್ರಿಟಿಷ ಪಾರ್ಲಿಮೆಂಟ್ ಸಭೆಯಿಂದ ಸಂಪೂರ್ಣವಾದ ಸ್ವತಂತ್ರವು ಸಿಕ್ಕಬೇಕೆಂದೂ ಈ ವಿಷಯದಲ್ಲಿ ಬ್ರಿಟಿಷ ಪ್ರಜಾಭಿಪ್ರಾಯವು ಕ್ರಮೇಣ ಭಾರತೀಯರ ಪರವಾಗಿ ಮಾ ರ್ಪಡುತ್ತಿರುವುದೆಂದೂ ಕೋರಿರುವರು. ಕೈಗಾರಿಕೆಗಳ ಅಭಿವೃದ್ಧಿಗೆ ಹಿಂದೂಸ್ಥಾನ ದಲ್ಲಿರುವ ಕೆಲವು ಸಾಮಾಜಿಕ ಅಭ್ಯಂತರಗಳ ವಿಷಯ ಪ್ರಸ್ತಾಪಿಸಿ ಬಹುಮಾನಪಟ್ಟ ದಾದಾಭಾಯಿಯವರು ತಮ್ಮ ಭಾಷಣವನ್ನು ಮುಗಿಸಿರುವರು.

ಮಾವಿನ ಮರಗಳು ಹು ಬಿಡುವ ಕಾಲದಲ್ಲಿ ಗಮನ ಕೊಡತಕ್ಕ ಅತ್ಯುಪಯುಕ್ತವಾದ ವಿಷಯುವು.

ಮಾವಿನ ಮರದ ಹುವ್ವುಗಳು ಉದುರಿಹೋಗಿ, ಮರದಿಂದ ಸೊನೆಯು ಸುರಿ ಯುವದಕ್ಕೆ ಬೆಳಗಿನ ಹೊತ್ತು ಸುರಿಯುವ ಹಿಮವೇ ಕಾರಣವೆಂದು ಕೆಲವರು ತಿಳಿದು ಕೊಂಡಿರುವರು. ಆದರೆ ಇದು ತಪ್ಪು ತಿಳುವಳಿಕೆಯಾಗಿದೆ. ಒಂದು ಜಾತಿಯ ಹುಳ ಗಳು ಮಾವಿನ ಮರಗಳಲ್ಲಿ ಹವ್ವು ಬಿಡುವಾಗ್ಯೆ ಮರಕ್ಕೆ ಮುತ್ತಿದ ಮರದ ರಸವನ್ನೆ ಲ್ಲಾ ಹೀರಿ ಕುಡಿದು ಅಂಟಾಗಿಯೂ ಮತ್ತು ಗಟ್ಟಿಯಾಗಿಯೂ ಇರುವ ಒಂದು ರಸ ವನ್ನು ಮಲರೂಪವಾಗಿ ವಿಸರ್ಜನೆ ಮಾಡುವುವು. ಈ ರಸವು ಹುವ್ವುಗಳ ಮೇಲೂ ಮ ತ್ತು ಮರದ ಮೇಲೂ ಹರಡಿಕೊಂಡು ಮರಕ್ಕೆ ಗಚ್ಚಿ ಎಣ್ಣೆಯನ್ನು ಬಳಿದಂತೆ ಕಾಣು ವುದು. ಇದರಿಂದ ಮರದಲ್ಲಿ ಮುಂದೆ ಹುವ್ವು ಬಿಡುವುದು ನಿಂತುಹೋಗುವುದಲ್ಲದೆ ಬಿಟ್ಟಿರತಕ್ಕ ಹುವ್ವುಗಳೂ ಒಣಗಿ ಹೋಗುವುವು. ದೊಡ್ಡದಾಗಿ ಮಳೆಯಾದರೆ ಮರವು ತೊಳೆಯಲ್ಪಡುವುದು.ಇಲ್ಲದಿದ್ದರೆ ನಿರ್ಮಲವಾದ ನೀರಿನೊಡನೆ ಸಾಬೂನನ್ನೂ ನೀರಿನ ೧೦೦ನೇ ಒಂದು ಭಾಗದಷ್ಟು ಶೀಮೆ ಎಣ್ಣೆಯನ್ನೂ ಮಿಶ್ರಮಾಡಿ ಅದನ್ನು ಮರಕ್ಕೆ ಪಿಚ ಕಾರಿಯಿಂದ ಹೊಡದರೆ ಹುಳಗಳು ನಾಶವಾಗುವವು. ಮಾವಿನ ಮರಗಳಲಿ ಹುವ್ವು ಬಿಡುವುದಕ್ಕೆ ಸ್ವಲ್ಪ ಕಾಲಕ್ಕೆ ಮುಂಚೆ ೨ ಸೇರು ಸುಟ್ಟ ಸುಣ್ಣ ಮತ್ತು ೨ ಸೇರು ಮೈಲುತುತ್ತವನ್ನು ೪ ಬಿಂದಿಗೆ ನೀರಿನಲ್ಲಿ ಬೆರಸಿ ಆ ನೀರನ್ನು ।ಮರಕ್ಕೆ ಎರಚಿದರೆ ಈ ಹುಳಗಳು ಮರದ ತಂಟೆಗೆ ಬರುವುದು ಕಡಿಮೆ.

ರೆ. ಗೆ.

ಬಾಲಿಕಾ ನೀತಿಮಾಲಿಕೆ

ಕುಸುಮ ಷಟ್ಪದಿ.

(ಕಳದ ಸಂಚಿಕೆಯಿಂದ ಮುಂದುವರಿದುದು.)

ಆಲಸ್ಯಮಂ ಬಿಟ್ಟು ।
ಕಾಲಕಾಲದೆ ನಿನ್ನ ।
ಶೀಲಗಳ ಕಾಯ್ವಂತೆ ಕೆಲಸಗೆಯ್ದು ॥
ಬಾಲೆಯೊಳ್ಳಿದಳೆನುತೆ ।
ಯಿೂ ಲೋಕದೊಳ್ ಜನವ ।
ಪಾಲಿಸಾ ತಂಗಿ ಸೌಭಾಗ್ಯ ಪಡೆವೆ ॥ ೨೫ ॥
ಚಂಡಿ ಹಿಡಿಯದಿರು ನೀಂ ।
ಭಂಡ ಮಾತುಗಳನು ।
ದ್ದಂಡತನದಿಂದಾಡಿ ಬೈಸಿಕೊಂಡು ॥
ಕೊಂಡೆಯವ ಕೇಳುತ್ತ ।
ಪುಂಡತನದಿಂದಿರಲು ।
ಕಂಡ ಜನರೆಲ್ಲ ನಿಂದಿಪರು ಮಗಳೆ ॥ ೨೬ ॥
ಮುಂದಾಗಬೇಡ ನೀ ।
ನೆಂದಿಗುಂ ಪೋಷಕರ ।
ಪಿಂದಿರ್ದು ಪೇಳಿದುದಕಿದುರಾಡದೆ ॥
ನಿಂದೆಗಳಿಗಂಜುತ್ತೆ ।
ಕುಂದುಗಳಿಗೆದೆಗೆಡದೆ ।
ಬಂಧುಗಳ ಪ್ರೀತಿಯಂಗಳಿಸು ಬಾಲೇ ॥ ೨೭ ॥
ಅರಿಸಿನವ ಕುಂಕುಮವ ।
ಧರೆಯಲ್ಲಿ ಚೆಲ್ಲದಿರು ।
ಪಿರಿದುಂಡು, ದುಂದಾಗಿ ನಡೆಯಬೇಡ ॥
ವರಮೂಲ್ಯ ಭೂಷಣಾಂ ।
ಬರಗಳನು ಜತನದಿಂ ।
ದಿರಿಸಿ ರಕ್ಷಿಸುತಪ್ಪೆ।ಕಳೆದುಕೊಂಬೆ ॥ ೨೮ ॥
ಗರತಿಯಾದ ಬಳಿಕ್ಕ ।
ತೆರಳಿ ತನ್ನಯ ಪತಿಯ ।
ವರಸದನಕಲ್ಲಿ ಸನ್ಮಾನದಿಂದ ।
ಇರುತಲೊಳ್ಳಿದಳೆನುತ ।
ನರರಿಂದನುತಿಪಡೆದು ।
ವರಕೀರ್ತಿಯಂ ಗಳಿಸಬೇಕು ತಂಗೀ ॥ ೨೯ ॥
ತೌರುಮನೆಯಲ್ಲಿ ತಾ ।
ನೀ ರೀತಿಯಲ್ಲಿರ್ದ ।
ಗೌರವ ಸುಖಂಗಳಲ್ಲಿಯುಮಂತೆಯೆ ॥
ತೋರಬೇಕೆನಗೆಂದ್ದು ।
ಪೋರು ವಿಡಿಯದೆ ಪತಿಯ ।
ಸಾರಹೃದಯವನರಿತು ವರ್ತಿಸುವುದು ॥ ೩೦ ॥
ಅತ್ತೆಮಾವಂದಿರೇ ।
ಪೆತ್ತವರೆನುತ್ತರಿದು ।
ಚಿತ್ತ ಶುದ್ಧಿಯೊಳವರ ಸೇವೆಗೆಯ್ದು ॥
ಉತ್ತಮಳಿವಳ್ಗೊಸೆಯೆ ।
ನುತ್ತ ಪೊಗಳ್ತೆಯನಾಂತು ।
ಕೆತ್ತಿಗರತೆರದಿಂದ ನಡೆದುಕೊಳ್ಳಾ ॥ ೩೧ ॥
ಪರದೋಷಗಳ ಕಂಡು ।
ಕುರುಡಿಯಿಂದದೆ ನಡೆಯ ।
ಪರನಿಂದೆ ಕೇಳ್ವಲ್ಲಿ ಕಿವುಡಿಯೆನಿಸಾ ॥
ಪರರೊಡವೆಯಂ ವಿಷದ ।
ತೆರದಿಂದ ಕಳೆ ನೀನು ।
ಪರಪುರುಷರಂ ತಂದೆಯಂತೆ ನೋಡು ॥ ೩೨ ॥
ಓರಗಿತ್ತಿಯರಲ್ಲಿ ।
ತೋರು ಪ್ರೀತಿಯ ಪರರ ।
ನೋರೆಗಣ್ಣಿಂ ನೋಡಬೇಡ ಮಗಳೆ ॥
ಧಾರಿಣಿಯ ತೆರದಿ ನೀಂ ।
ಸೈರಿಸುತಲೆಲ್ಲವನು ।
ಮಿೂರದಿರು ಪತಿಯಾಣತಿಯನೆಂದಿಗುಂ ॥ ೩೩ ॥
ಪತಿಯೆ ದೈವಂ ಗುರುವು ।
ಪತಿಯೆ ರಾಜಂ ವ್ರತವು ।

ಪತಿಯೆ ಸರ್ವಮೆನುತ್ತೆ ತಿಳಿದು ನೀನು ॥
ಹಿತೆಯೆನಿಸಿ ಭರ್ತನನು ।
ಮತಿಯಿಂದೆ ವರ್ತಿಸಲು ।
ಕ್ಷಿತಿಯಲ್ಲಿ ಹದಿಬದೆಯೆನುತ್ತೆ ಮೆರೆವೆ ॥ ೩೪ ॥
ಮಗಳೇ ನನಂದೆಯರ ।
ತೆಗಳದೊಳ್ನುಡಿಗಳಿಂ ।
ಬಗೆಗೆ ನೋವಾಗದಂದದೆ ವರ್ತಿಸ್ ॥
ಪಗೆಗೊಳದೆ ಸಖಿಯರಲಿ ।
ನಗೆಯ ನಣಗಿಸಿ ನಡೆದು ।
ಸುಗುಣವತಿ ಯಿವಳೆಂದು ಪೆಸರವಡೆನೀಂ ॥ ೩೫ ॥
ಬರಿದೆ ಕುಳ್ಳಿರಬೇಡ ।
ಕರುಬದಿರು ಪರರ ಸಿರಿ ।
ಗೆರಡಬಗೆಯದಿರುಂಡ ಮನೆಗೆ ನೀನು ॥
ಸಿರಿಯಲ್ಲಿ ಗರ್ವಿಸದಿ ।
ರುರು ಭೂಷಣವ ಬಯಸಿ ।
ಕೊರಗಿಸದಿರಾಣ್ಮನಂತಣೆವಿಂದಿರು ॥ ೩೬ ॥
ಪರರ ನೀಂಬೈಯದಿರು ।
ಪರರ ಬೈಗಳ್ಗೆ ನೀಂ ।
ಮರಳಿ ಜಗಳಕೆ ಪೋಗಬೇಡ ಸಹಿಸು ॥
ದುರುಳೆಯರ ಸೇರದಿರು ।
ದುರಿತಕ್ಕೆ ಬೆದರು, ದು ।
ಶ್ಚರಿತಕ್ಕೆ ಮನವೀಯಬೇಡ ತಂಗೀ ॥ ೩೭ ॥
ಕಳವ ಕಲಿಯಲ್ವೇಡ ।
ಪೊಲೆಯ ಬೆರಸಲು ಬೇಡ ।
ಸುಳಿದು ಹೊಂಚಿನ ಮಾತು ಕೇಳಬೇಡ ॥
ಅಳಲಿಸದಿರಾರ್ತರಂ ।
ತೊಳಲದಿರು ಮನೆಮನೆಗೆ ।
ಖಳರ ಕಂಡರೆ ತೊಲಗು ಸಣಿಹದಿಂದೆ ॥ ೩೮ ॥

ಮುಂದುವರಿಯುವುದು.

ಪೇಷ್ವೆ ನಾರಾಯಣ ರಾವ್.

(ಕಳದ ಸಂಚಿಕೆಯಿಂದ ಮುಂದರಿಸಿದುದು.)

೧

ಹದಿನೆಂಟನೆಯ ಶತಮಾನವು ನವೀನ ಭಾರತೇತಿಹಾಸದಲ್ಲಿ ರಾಷ್ಟ್ರನಿರ್ಮಾಣ ಯುಗವಾಗಿದ್ದಿತು. ಆ ಕಾಲದಲ್ಲಿ ಮೊಗಲರ ಸಾಮ್ರಾಜ್ಯವು ಖಿಲವಾಯಿತು. ಬ್ರಿಟಿಷರ ಆಧಿಪತ್ಯವು ಈ ದೇಶದಲ್ಲಿ ಸುಸ್ಥಿರವಾಗಿ ನಾಟಿಕೊಂಡಿತು. ಮಹಮ್ಮದಿ ಯರ ದಂಡಯಾತ್ರಾ ಪ್ರವಾಹವನ್ನು ಹಿಂದಕ್ಕೆ ಕಳುಹಿಸುವದಕ್ಕೆ ಹಿಂದುಗಳಿಂದ ಮಾಡ ಲ್ಪಟ್ಟ ಪ್ರಯತ್ನಗಳಲ್ಲಿ ಸಫಲವಾದ ಪ್ರಯತ್ನವೊಂದು ಈ ಶತಾಬ್ದದಲ್ಲಿಯೇ ಜರು ಗಿತು. ಈ ಪ್ರಯತ್ನವು ರಾಜಪುತ್ರರಿಂದಾಗಲಿ ಹಿಂದೂಸ್ಥಾನವನ್ನು ಅಲಂಕರಿಸಿದ್ದ ಕ್ಷತ್ರಿಯ ಜಾತಿಯವರಿಂದಲಾಗಲೀ ಶಸ್ತ್ರೋಪಜೀವಿಗಳಿಂದಾಗಲಿ ಮಾಡಲ್ಪಡಲಿಲ್ಲವು. ದಖನ್ ದೇಶದಲ್ಲಿ ವಾಸಮಾಡುತ್ತಿದ್ದ ಕೆಲವರು ಕೃಷೀವಲರು ಈ ಕಾರ್ಯವನ್ನು ನಿರ್ವಹಿಸಿದರು. ಇವರೇ ಮೊದಲು ಶಿವಾಜಿಯಿಂದ ಯೋಧರಾಗಿ ಮಾಡಲ್ಪಟ್ಟ ಮಹಾ ರಾಷ್ಟ್ರರು. ಬೊಂಬಾಯಿ ನಗರಕ್ಕೆ ಪೂರ್ವ ದಿಕ್ಕಿನಲ್ಲಿರುವ ಪಶ್ಚಿಮ ಪರ್ವತ ಪ್ರಾಂತ್ಯವೇ ಇವರಿಗೆ ಜನ್ಮಸ್ಥಾನವು. ಶಿವಾಜಿಯ ಕೌಶಲ್ಯಗಳಿಗೂ ವ್ಯೂಹರಚನಾನೈಪುಣ್ಯಕ್ಕೂ ಸ್ಥಾನವಾಗಿ ವ್ಯಾಪಿಸಿರುವ ಗಿರಿದುರ್ಗಗಳು ಆ ಪ್ರದೇಶದಲ್ಲಿಯೇ ಇರುವುವು. ಸಾಹ ಸಿಗಳೂ ದೃಢಕಾಯರೂ ಆದ ಆತನ ಸೈನಿಕರ ಸಂಚಾರ ಭೂಮಿಗಳಾದ ಪರ್ವತಗಳು ಇಲ್ಲಿಯೇ ಇವೆ. ಆತನ ದೂರ ದೇಶ ದಂಡಯಾತ್ರೆಗಳಿಗೆ ಉಪಯುಕ್ತಗಳಾದ ಬಲಿಷ್ಠ ವಾದ ಅಶ್ವಗಳಿಗೆ ಆಕರಗಳಾದ ನದೀ ತೀರಗಳೂ ಆ ದೇಶದಲ್ಲಿಯೇ ಇವೆ. ಬಾಲ್ಯ ದಲ್ಲಿ ಆತನಿಗೆ ವಾಸಸ್ಥಳವೂ ತರುವಾಯ ಪೇಶ್ವೆಗಳಿಗೆ ರಾಜಧಾನಿಯೂ ಆದ ಪುನಾ ಪಟ್ಟಣವು ಅಲ್ಲಿಯೇ ಇದೆ. ಶಿವಾಜಿಯ ವಂಶಸ್ಥರಿಗೆ ಮೊದಲು ರಾಜಧಾನಿಯಾಗಿ ಕೊನೆಗೆ ಅವರ ಕಾರ್ಯಾಗೃಹವಾದ ಸಾತಾರಾ ಪಟ್ಟಣವು ಆ ಪ್ರಾಂತದಲ್ಲಿಯೇ ಇರುವುದು. ಮಹಮ್ಮದೀಯರಿಂದ 1312ನೇ ಸಂವತ್ಸರದಲ್ಲಿ ಪರಾಜಿತರಾದ ಯಾದವ ರಿಗೆ ರಾಜಧಾನಿಯಾಗಿದ್ದ ದೇವಗಿರಿಯು ಅಲ್ಲಿಯದೇ. ಶಿವಾಜಿಯ ತಾಯಿಯು ಈ ಯಾ ದವರ ವಂಶಸ್ಥಳೆಂದು ತಿಳಿಯ ಬರುತ್ತದೆ. ಮಹಾರಾಷ್ಟ್ರರ ಜನ್ಮಭೂಮಿಯಾದ ಈ ಪಶ್ಚಿ ಮ ದೇಶವು ಶಿವಾಜಿಯು ಅವತರಿಸುವ ಕಾಲದಲ್ಲಿ ಅಹಮದ್‌ನಗರ ಬಿಜಾಪುರಗಳೆಂಬ ಎರಡು ಮಹಮ್ಮದೀಯ ಸಂಸ್ಥಾನದವರಿಂದ ಆಕ್ರಮಿಸಲ್ಪಟ್ಟು ಅವರ ಪರಿಪಾಲನೆಯ ಲ್ಲಿಯೇ ಇದ್ದಿತು. ಆ ಮಹಮ್ಮದೀಯ ಪ್ರಭುಗಳು ತಮ್ಮ ಪಾಲನೆಯಲ್ಲಿದ್ದ ಹಿಂದೂ ಪ್ರಜೆಗಳಲ್ಲಿ ಅನುರಾಗ ಮತ್ತು ಸಹಿಷ್ಣುತೆಯುಳ್ಳವರಾಗಿ ಅವರನ್ನು ತಮ್ಮ ರಾಷ್ಟ್ರೀಯೋ ದ್ಯೋಗಿಗಳಲ್ಲಿ ಅಂದರೆ ಮುಖ್ಯವಾಗಿ ಉನ್ನತ ಪದವಿಗಳಿಗೆ ನೇಮಿಸುತ್ತಿದ್ದರು. ಈ ಎರಡು ರಾಜ್ಯಗಳಲ್ಲಿಯೂ ಮಹಮ್ಮದೀಯ ಪ್ರಭುಗಳಿಗೆನೇ ಸೇನಾನಾಯಕರಲ್ಲಿ ಒಬ್ಬ ನಾಗಿದ್ದ ಶಿವಾಜಿಯ ತಂದೆಯು ಹೆಚ್ಚು ಪ್ರಖ್ಯಾತನಾದನು.

ಈ ಸಣ್ಣ ಸಣ್ಣ ಮಹಮ್ಮದೀಯ ರಾಜ್ಯಗಳ ಸ್ವಾತಂತ್ರ್ಯವನ್ನು ಅಪಹರಿಸುವುದಕ್ಕೆ ಮೊಗಲ ಚಕ್ರವರ್ತಿಗಳು ಸೈನ್ಯಗಳನ್ನು ಅವರ ಮೇಲೆ ಕಳುಹಿಸಿ ದಕ್ಷಿಣ ದೇಶದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುವಂತೆ ಮಾಡತೊಡಗಿದರು. ಶಿವಾಜಿಗೆ ಇದು ಒಳ್ಳೆಯ್ಕ ಅನುಕೂಲ್ಯವುಂಟಾಯಿತು. ಶಿವಾಜಿಯು 1627ರಲ್ಲಿ ಅಹಮದ್ ನಗರ ರಾಜ್ಯದ ಒಂದಾನೊಂದು ಗಿರಿದುರ್ಗದಲ್ಲಿ ಹಬ್ಬಿದನು. ಆ ಸಮಯದಲ್ಲಿ ಈತನ ತಂದೆಯು ಕರ್ನಾಟಕ ದೇಶದ ಕೆಲವು ಭಾಗಗಳನ್ನು ಜಯಿಸಿ ಬಿಜಾಪುರ ಸಂಸ್ಥಾನಕ್ಕೆ ನೂತನ ರಾಷ್ಟ್ರವನ್ನು ಸಂಪಾದಿಸುತ್ತಿರುವಾಗ ಶಿಶುವು ತನ್ನ ತಂದೆಯ ಜಹಗೀರಿನಲ್ಲಿ ಪುನಾ ಪಟ್ಟ ಣದಲ್ಲಿ ಬೆಳದನು. ಪ್ರತ್ಯಕ್ಷವಾಗಿ ಪರಿಕ್ಷೀಣತೆಯನ್ನು ಹೊಂದುತ್ತಿದ್ದ ಸ್ಥಾನಿಕ ಮಹ ಮ್ಮದೀಯ ಪ್ರಭುತ್ವದವರ ದೌರ್ಬಲ್ಯಕ್ಕೆ ಅವಕಾಶವನ್ನುಂಟುಮಾಡಿ ಒಳ್ಳೇ ಹಿಂದೂ ರಾಜ್ಯವೊಂದನ್ನು ಸ್ಥಾಪಿಸಬೇಕೆಂದು ಶಿವಾಜಿಯು ಆಕಾಂಕ್ಷಿಯಾಗಿದ್ದನು. ಪರ್ವತ ನಿವಾಸಿಗಳ ಸೈನ್ಯವನ್ನು ಕಟ್ಟಿಕೊಂಡು ಒಂದು ದುರ್ಗವಾದ ಮೇಲೆ ಮತ್ತೊಂದು ದುರ್ಗವನ್ನು ಆಕ್ರಮಿಸಿಕೊಳ್ಳುತ್ತಾ 1659ನೆಯ ಸಂವತ್ಸರದಲ್ಲಿ ಬಿಜಾಪುರದ ಸೈನ್ಯ ವನ್ನು ಎದುರಿಸುವಷ್ಟು ಶಕ್ತಿಯುಳ್ಳವನಾಗಿ ಅವರ ಸೇನಾನಾಯಕನಾದ ಅಫಜಲ್ ಖಾನ್‌ನನ್ನು ಕೊನೆಗಾಣಿಸಿಡನು. 1664ನೇ ಸಂವತ್ಸರದಲ್ಲಿ ಉತ್ತರದಲ್ಲಿಯ ಗುಜ ರಾತ್ ದೇಶವನ್ನು ಗೆದ್ದು ಸಂಪನ್ನವಾದ ಸೂರತ್ ಪಟ್ಟಣವನ್ನು ಕೊಳ್ಳೇ ಹೊಡೆದನು. ಇದಕ್ಕೆ ಚಕ್ರವರ್ತಿಯು ಕುಪಿತನಾಗಿ ಶಿವಾಜಿಯನ್ನು ಅಡಗಿಸುವುದಕ್ಕೆ ಹೆಚ್ಚಾದ ಸೈನ್ಯ ವನ್ನು ಕಳುಹಿಸಿದನು. ಶಿವಾಜಿಯು ಅವರ ಸಂಗಡ ಹೆಚ್ಚು ಧೈರ್ಯದಿಂದ ಹೋರಾಡಿ ಬಹಳ ಕಡೆ ಜಯಶೀಲನಾದರೂ ಯಾವಾಗಲೂ ಅವರ ಸಂಗಡ ವೈರವುಳ್ಳವನಾಗಿರು ವುದಕ್ಕೆ ಇಷ್ಟವಿಲ್ಲದೆ ಚಕ್ರವರ್ತಿಯೊಡನೆ ಸಂಧಿಮಾಡಿಕೊಂಡನು. 1666ರಲ್ಲಿ ಚಕ್ರ ವರ್ತಿಯನ್ನು ಸಂದರ್ಶಿಸಿ ತನ್ನ ಪ್ರಭುಭಕ್ತಿಯನ್ನು ಅರ್ಪಿಸುವುದಕ್ಕೆ ಈತನು ದೆಹಲಿ ಪಟ್ಟಣಕ್ಕೆ ಹೋದನು. ಅಲ್ಲಿ ಚಕ್ರವರ್ತಿಯಿಂದ ಸನ್ಮಾನ ಹೊಂದದೆ ತಿರಸ್ಕೃತನಾಗಿ ಕೊನೆಗೆ ಸೆರೆಶಾಲೆಯಲ್ಲಿಡಲ್ಪಟ್ಟನು. ಆದರೆ ಶಿವಾಜಿಯು ಶೀಘ್ರವಾಗಿ ತಪ್ಪಿಸಿಕೊಂ ಡು ಬಂದು ದಕ್ಷಿಣ ದೇಶದಲ್ಲಿ ದಖನ್ ರಾಜ್ಯವನ್ನು ಸೇರಿ ತನ್ನ ಪ್ರಭುತ್ವವನ್ನು ಪುನಃ ಸ್ಥಾಪಿಸಿಕೊಂಡನು. 1674ನೇ ಸಂವತ್ಸರದಲ್ಲಿ ರಾಜನಾಮವನ್ನು ಧರಿಸಿ, ರಾಜಲಾಂ ಛನಗಳನ್ನು ಸ್ವೀಕರಿಸಿ ಮಹಾ ವೈಭವದೊಡನೆ ರಾಯಘರ್ ಕೋಟೆಯಲ್ಲಿ ಪಟ್ಟಾಭಿ ಷಿಕ್ತನಾದನು. ತರುವಾಯ ಮೈಸೂರು ದೇಶದಲ್ಲಿ ತನ್ನ ತಂದೆಯು ಸಂಪಾದಿಸಿದ ಜಹಗೀರುಗಳನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ದಂಡೆತ್ತಿ ಹೋಗಿ ಅದನ್ನು ವಶಪಡಿಸಿ ಕೊಂಡು ತಂಜಾವೂರನ್ನು ತನ್ನ ಸೋದರನಿಗಿತ್ತನು. ಶಿವಾಜಿಯು ರಾಯಘರ್ ದು ರ್ಗದಲ್ಲಿ 1680ರಲ್ಲಿ ಮೃತಿ ಹೊಂದಿದನು.

ಶಿವಾಜಿಯು ನೂತನ ಹಿಂದೂ ರಾಜ್ಯವನ್ನು ಸ್ಥಾಪಿಸಿದ್ದಲ್ಲದೆ ನೂತನ ಜಾತಿ (Nation) ಯನ್ನೂ ಕೂಡ ಉಂಟುಮಾಡಿದನು. ಈ ಸಂಗತಿಯ ಯಥಾರ್ಥವು ಆತನ ಮರಣಾನಂತರದ ದಖನ್ ದೇಶದ ಚರಿತ್ರೆಯಿಂದ ಸ್ಪಷ್ಟವಾಗುತ್ತದೆ. ಮೃತ ತಲ್ಪಗಳಾದ ಬಿಜಾಪುರ, ಗೋಲ್ಕೊಂಡ, ರಾಜ್ಯಗಳನ್ನು ನಿಶ್ಶೇಷವಾಗಿ ನಾಶಪಡಿಸು ವುದಕ್ಕಾಗಿಯೂ ಮಹಾರಾಷ್ಟ್ರದ ಕಲ್ಲೋಲವನ್ನು ಅಣಗಿಸುವುದಕ್ಕಾಗಿಯೂ ಚಕ್ರ ವರ್ತಿಯು ತಾನೇ ಸ್ವತಃ ದಖನ್‌ಗೆ ಹೊರಟನು. ಮೊದಲನೆಯ ಕೆಲಸವನ್ನು ಆತನು ಸುಲಭವಾಗಿ ನೆರವೇರಿಸಿದನು. ಎರಡನೆಯ ಪ್ರಯತ್ನಕ್ಕೆ ಇಪ್ಪತ್ತು ಸಂವತ್ಸರಗಳನ್ನು ವ್ಯರ್ಥವಾಗಿ ವಿನಿಯೋಗಿಸಿ ವಿಫಲ ಮನೋರಥನಾದನು. ಶಿವಾಜಿಯ ಕುಮಾರ ನಾದ ಸಾಂಬಾಜಿಯು ತನ್ನ ತಂದೆಗೆ ತಕ್ಕಂತಹ ಮಗನಲ್ಲವು. ಆತನು ಔರಂಗಜೇಬನ ಕೈಗೆ ಸಿಕ್ಕಿ ಚಿತ್ರವಧೆಗೆ ಗುರಿಯಾದನು. ಆತನ ಮಗನಾದ ಸಾಹುವನ್ನು ಮಾತ್ರ ಚಕ್ರವರ್ತಿಯ ಪ್ರಾಣದೊಂದಿಗೆ ರಕ್ಷಿಸಿದನು. ಅನಂತರ ಮಹಾರಾಷ್ಟ್ರರು ಶಿವಾಜಿ ಯ ಚಿಕ್ಕ ಮಗನಾದ ರಾಜಾರಾಮನಿಗೆ ಪಟ್ಟವನ್ನು ಕಟ್ಟಿ ಆತನನ್ನು ಕರ್ನಾಟಕ

ದೇಶದ ಜಿಂಜಿ ಎಂಬ ಪಟ್ಟಣದಲ್ಲಿ ಭದ್ರವಾಗಿಟ್ಟು ತಾವು ಯುದ್ಧಮಾಡಿ ಚಕ್ರವರ್ತಿಯ ದೊಡ್ಡ ಸೈನ್ಯವನ್ನು ಅಡಗಿಸಿದರು. ಔರಂಗಜೇಬನು ಮೃತಿ ಹೊಂದಿದ ನಂತರ 1707 ರಲ್ಲಿ ಸಾಹುವು ಸೆರೆಮನೆಯಿಂದ ಬಿಡಲ್ಪಟ್ಟನು. ಅನಂತರ ಮಹಾರಾಷ್ಟ್ರರು ಆತನನ್ನು ಶಿವಾಜಿಯ ಸ್ಥಾನದಲ್ಲಿಟ್ಟು ರಾಜಾರಾಮನಿಗೆ ಕೊಲ್ಹಾಪುರ ಸಂಸ್ಥಾನವನ್ನು ಕೊಟ್ಟರು. ಸಾಹುವು 1707ರಿಂದ 1748ರ ವರೆಗೆ ರಾಜ್ಯವನ್ನಾಳಿದನು. ರಾಜ್ಯಭಾರವನ್ನು ನಡಿಸುವುದರಲ್ಲಿ ಆಸಕ್ತನಾಗದೆ ತನ್ನ ಪ್ರಭುತ್ವ ವಿಧಿಗಳನ್ನು ತನ್ನ ಮಂತ್ರಿಗಳಿಗೆ ವಹಿಸಿದನು. ಅಂತಹ ನಾಮ ಮಾತ್ರಾಧಿಕಾರಿಯಾದ ಸಾಹುವಿನ ಮಂತ್ರಿಗಳು ತಮ್ಮ ಸ್ವಾತಂತ್ರ್ಯವನ್ನು ಸ್ಥಿರಪಡಿಸಿಕೊಂಡು ವಂಶಕ್ರಮಾನುಗತಪಾಲನಾಧಿಕಾರವನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡರು. ಈ ಸ್ವತಂತ್ರಮಂತ್ರಿಗಳಿಗೆ ಪೇಷ್ವೆಗಳೆಂದು ಹೆಸರು. ಈ ಪೇಷ್ವಾ ಸಂತತಿಯಲ್ಲಿ ಬಾಲಾಜಿವಿಶ್ವನಾಥನೇ ಮೊದಲನೆಯವನು. ಆತನು ಕೊಂಕಣ ದೇಶದ ಬ್ರಾಹ್ಮಣನು. ಆತನು ಸಾಹುವಿನ ಆಧಿಪತ್ಯವನ್ನು ಸ್ಥಿರಪಡಿಸಿ ಮಹಾರಾಷ್ಟ್ರ ನಾಯಕರ ಸಮುಯುವನ್ನು ಸ್ಥಾಪಿಸಿದನು. 1720ನೇಯ ಸಂವತ್ಸರದಲ್ಲಿ ಈತನು ಮೃತಿ ಹೊಂದುವುದಕ್ಕೆ ಪೂರ್ವದಲ್ಲಿ (King Makers) "ರಾಜನಿರ್ಮಾಣಕರು" ಎಂದು ಈ ಚರಿತ್ರೆಯಲ್ಲಿ ಹೆಸರು ಹೊಂದಿದ ಇಬ್ಬರು ಸೈಯದರ ಸಂಗಡಲೂ ಸೌಖ್ಯವನ್ನು ಸಂಪಾದಿಸಿಕೊಂಡು ಮೊಗಲರ ರಾಜಧಾನಿಯಾದ ದೆಹಲೀ ಪಟ್ಟಣದ ಮೇಲೆ ತನ್ನ ಸೈನ್ಯವನ್ನು ನಡಿಸಿದನು. ದಖನ್ ದೇಶದ ಹುಟ್ಟುವಳಿಯಲ್ಲಿ ನಾಲ್ಕನೇ ಒಂದು ಭಾಗವಾದ ಚೌತ್ ಎಂಬದನ್ನು ವಸೂಲ್ ಮಾಡುವ ಅಧಿಕಾರವು ಮಹಾರಾಷ್ಟ್ರಾಧಿಪತಿಗೆ ಇರುವಂತೆ ಪಾದ್‌ಷಹಾನನ್ನು ಒಡಂಬಡಿಸಿದನು. ಮತು ಮೊಗಲು ಚಕ್ರವರ್ತಿಯು ಶಿವಾಜಿಯಿಂದ ಸ್ಥಾಪಿತವಾದ ಸ್ವರಾಜ್ಯಾಧಿಕಾರವನ್ನು ಅಂಗೀಕರಿಸುವಂತೆ ಮಾಡಿದನು.

(ಮುಂದುವರಿಯುವುದು.)

ಸೋಯಾಬೀನ್ ಎಂಬ ಸೋಯಾ ಅವರೆಕಾಳು ಯಾನೆ ಶೀಮೆ ಬಟಾಣಿ.

ಸೋಯಾ ಅವರೆ ಕಾಳಿನ ಕುರಿತು ಮೈಸೂರು ರೆವಿನ್ಯೂ ಮತ್ತು ವ್ಯವಸಾಯ ಗಜೇಟಿನಲ್ಲಿ ಬರದಂಥಾದ್ದು ಓದಿನೋಡಿ ಅದು ನಮ್ಮ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಬೆಳಿಸಿದರೆ ಆಗಬಹುದು ಎಂತ ಹೆಚ್ಚು ಆಶೆಪಟ್ಟು ನಮೂನೆ ಬಗ್ಗೆ ಹೋದ ವರುಷ ಸ್ವಲ್ಪ ಬೀಜವನ್ನು ತರಿಸಿ ಈ ಎಸ್ಟೇಟಿನ ಒಂದು ಗದ್ದೆಯಲ್ಲಿ ಬೇಸಿಗೆಕಾಲದಲ್ಲಿ ಬಿತ್ತಿಸಿದೆ. ಅದಕ್ಕೆ ನೀರು ಸಹಾ ಹಾಕಿಸಿ ಗಿಡಗಳನ್ನು ಬೆಳಿಸಿದೆ. ಅವು ಬಲಿತಾಗಿ ಬೆಳೆದು ಕೋಡುಗಳನ್ನು ಬಿಟ್ಟವು. ಆದದರಿಂದ ನಮ್ಮ ಊರಲ್ಲಿ ಇದು ಬೆಳೆಯಲಿಕ್ಕೆ ಸಾಕು ಎಂತ ಗ್ರಹಿಸಿ ಹೆಚ್ಚು ಬೀಜವನ್ನು ತರಿಸುವ ತಜವೀಜು ಮಾಡಿ ನಾಗಪುರ ಅತ್ತ ಕಡೆಯಿಂದ ಒಂದು ರಾತ್ಲು ಇದರ ಬೀಜವನ್ನು ಈ ವರುಷ ತರಿಸಿದೆ.

ಒಂದು ಮಜಲು ಗದ್ದೆಯಲ್ಲಿ ಎಣೇಲು ಬೆಳೆ ಕಟಾವಾದನಂತರ ಸುಗ್ಗಿ ನೇಜಿ ಬಗ್ಯೆ ಬೀಜ ಬಿತ್ತಿತ್ತು. ಆ ನೇಜಿಯನ್ನು ತೆಗೆದ ನಂತರ ಆ ಗದ್ದೆಯ ಒಂದು ಅಂಶವನ್ನು ಹೂಡಿಸಿ ಬೂದಿಯನ್ನು ಹಾಕಿಸಿ ಶುಮಾರು ½ ರಾತ್ಲು ಬೀಜವನ್ನು ಬಿತ್ತಿಸಿದ್ದೇನೆ. ೪ ದಿವಸಗಳಲ್ಲಿ ಬೀಜಕ್ಕೆ ಮೊಳಿಕೆ ಬಂದು ಎರಡೆರಡು ಎಲೆಗಳು ಕಾಣಬರುತ್ತಿದ್ದವು. ಈಗ ೩-೪ ಎಲೆಗಳು ಕಾಣಬರುತ್ತವೆ. ಈಗ ಛಳಿಯು ಹೆಚ್ಚುತ್ತಾ ಬಂದರೆ ಗಿಡಗಳು ಒಳ್ಳೆತಾಗಿ ಬೆಳೆದಾವು ಎಂತ ಕಾಣುತ್ತದೆ. ಬಾಕಿ ಉಳಿದ ಬೀಜದ ಅಂಶವನ್ನು ಸುಗ್ಗಿ ಬೆಳೆ ಕಟಾವಾದನಂತರ ಪಳೆ ಇರುವ ಬೈಲು ಗದ್ದೆಯಲ್ಲಿ ಬಿತ್ತಬೇಕೆಂತ ಮಾಡಿದ್ದೇನೆ.

ಈ ಅವರೆ ಕಾಳು ತದ್ದಿಗಿಣದ ಹಾಗೆ ಇರುತ್ತದೆ. ನಾವು ಉದ್ದು ಹೆಸರು ವಗೈರೆ ಬೈಲು ಗದ್ದೆಗಳಲ್ಲಿ ಬಿತ್ತುವುದರ ಬದಲಿಗೆ ಈ ಕಾಳನ್ನು ಬಿತ್ತಿದರೆ ಅವುಗಳಷ್ಟೇ ಪ್ರಯೋಜನವು ಗದ್ದೆಗೆ ಶಿಗುತ್ತದಲ್ಲದೆ ನಮಗೂ ಹೆಚ್ಚು ಪ್ರಯೋಜನ ದೊರಕಲಿಕ್ಕೆ ಸಂಶಯವಿಲ್ಲ. ಮೇಲೆ ಹೇಳಿದ ಗಜೇಟಿನಲ್ಲಿ ಇದು ಬಗೆಬಗೆಯ ಉಪಯೋಗಕ್ಕೆ ಬೀಳುತ್ತದಾಗಿ ಬರೆದಿರುವ ಅಂಶವನ್ನು ಇದರ ಕೆಳಗೆ ನಿಮ್ಮ ಪತ್ರದ ವಾಚಕರ ತಿಳುವಳಿಕೆ ಬಗ್ಯೆ ಬರಕೊಳ್ಳುತ್ತೇನೆ.

ಈ ಅವರೆಯು ಅನೇಕ ಕೆಲಸಗಳಿಗೆ ಉಪಯೋಗಿಸಲ್ಪಡುತ್ತದೆ. ಇದನ್ನು ಅಲಸಂದಿ ಕಡಲೆ ಮೊದಲಾದ ಕಾಳುಗಳಂತೆ ಬೇಯಿಸಿ ಊಟ ಮಾಡಬಹುದು. ಇದು ತಿನ್ನಲಿಕ್ಕೆ ಬಹಳ ರುಚಿಯಾಗಿರುತ್ತದೆ. ಇದರ ಎಣ್ಣೆ ಅಡಿಗೆಗಳಲ್ಲಿಯೂ ದೀಪಗಳಿಗೂ ಉಪಯೋಗಿಸಲ್ಪಡುತ್ತದೆ. ಸಾಬೂನು ತಯಾರಿಯಲ್ಲಿಯೂ ಬಣ್ಣದ ಕೆಲಸದಲ್ಲಿಯೂ ಇದು ಉಪಯೋಗವಾಗುತ್ತದೆ. ಇದರಲ್ಲಿ ಶೇಕಡಾ ೧೦ರಿಂದ ೧೫ ಪಾಲು ಸ್ವಚ್ಛವಾದ ಎಣ್ಣೆ ದೊರಕುತ್ತದೆ. ಹಿಂಡಿಯು ಜಮೀನುಗಳಿಗೆ ಸಾರವತ್ತಾದ ಗೊಬ್ಬರವಾಗುತ್ತದೆ. ಇದಕ್ಕೆ ಗಿರಾಕಿಯು ದಿನೇ ದಿನೇ ವಿಶೇಷವಾಗಿ ಹೆಚ್ಚುತ್ತಿರುವುದು. ಅದಲ್ಲದೆ ದನಗಳಿಗೂ ಒಳ್ಳೇ ಪುಷ್ಟಿಕರವಾದ ಆಹಾರವಾಗಿಯೂ ಇರುವುದು. ಹಿಂಡಿಯಲ್ಲಿ ಶೇಕಡಾ ೪೦ರಿಂದ ೪೫ ಪಾಲು ಜನ್ಯಾಂಶವು ಇರುತ್ತದೆ. ಕರಾವು ಆಕಳುಗಳಿಗೆ ಇದನ್ನು ತಿನ್ನಿಸಿದರೆ ಅವುಗಳಲ್ಲಿ ಹಾಲು ಹೆಚ್ಚುತ್ತದೆ. ಇದು ಹತ್ತಿ ಹಿಂಡಿಗಿಂತಲೂ ಮೇಲಾದ ಆಹಾರ. ಕಾಳಿನಿಂದ ಹಿಟ್ಟು ಮಾಡಿ ಬಿಸ್ಕುಟು ರೊಟ್ಟಿ ವಗೈರೆ ಪದಾರ್ಥಗಳನ್ನು ಮಾಡುತ್ತಾರೆ ಮತ್ತು ಹಿಟ್ಟನ್ನು ದನಗಳಿಗೂ ತಿನ್ನಿಸುವುದುಂಟು. ಕಾಳನು ಹುರಿದು ಪುಡಿಮಾಡಿ ಕಾಫಿ ಮಾಡಿ ಕುಡಿಯಲೂ ಬಹುದು. ಸ್ವಿಡ್ಜರ್ಲೆಂಡು ಮತ್ತು ಅಮೇರಿಕಾ ದೇಶಗಳಲ್ಲಿ ಸ್ವಾಭಾವಿಕ ಕಾಫಿಗೆ ಬದಲಾಗಿ ಸೋಯಾ ಅವರೆ ಕಾಫಿಯ ಸೇವನೆಯೇ ಹೆಚ್ಚುತ್ತಿದೆ. ಇದರಲ್ಲಿ ಶರ್ಕರಾಂಶವು ಇಲ್ಲದಿರುವುದರಿಂದ ಬಹುಮೂತ್ರ ಜಾಡ್ಯದಿಂದ ನರಳುವವರಿಗೆ ಇದನ್ನು ಆಹಾರವಾಗಿ ಕೊಡಬಹುದು. ಜಾಪಾನಿಯರು ಇದರಿಂದ ಹಾಲನ್ನು ತಯಾರಿಸಿ ಘನಿಯಾಗಿ ಮಾಡಿ ಟಿನ್ನ್‌ಗಳಲ್ಲಿ "Condensed milk" ಹಾಗೆ ತುಂಬಿಡುತ್ತಾರೆ. ಅಲ್ಲದೆ ಹಾಲಿನಿಂದ ಬೆಣ್ಣೆಯನ್ನು ತೆಗೆಯುವುದುಂಟು.

ಈ ನಮ್ಮ ಜಿಲ್ಲೆಯಲ್ಲಿ ಬೇಸಾಯಗಾರರು ಈ ಸೋಯಾ ಅವರೆ ಕಾಳನ್ನು ಬೆಳಿಸಿದರೆ ಗೋದಿಯನ್ನು ಕೊಂಡುಕೊಳ್ಳುವ ಅಗತ್ಯವಿರಲಿಕ್ಕಿಲ್ಲವೆಂದು ಮೇಲಿನ ಅಂಶದಿಂದ ವೇದ್ಯವಾದೀತು. ಇದೂ ಅಲ್ಲದೆ ನಮ್ಮ ಗದ್ದೆಗಳಿಗೆ ಒಳ್ಳೇ ಈಟು ತಯಾರಿಸಿ ಕೊಟ್ಟ ಹಾಗೂ ಆದೀತು. ಪರಂತು ಇದರ ಗಿಡಗಳನ್ನು ಬಾಕಿ ಧಾನ್ಯದ ಗಿಡಗಳ ಹಾಗೆ ಬುಡ ಸಮೇತ ಎಳೆದು ತೆಗೆಯುವುದರ ಬದಲಿಗೆ ಬುಡ ವ ಬೇರುಗಳು ಮಣ್ಣಿನಲ್ಲಿ ಇರುವಂತೆ ಕತ್ತಿಯಿಂದ ಭತ್ತದ ಪೈರು ಕಟಾವ ಮಾಡುವ ಹಾಗೆ ಕಟಾವ ಮಾಡಿದರೆ ಗದ್ದೆಗಳಿಗೆ ಇದರ ಸಾಗುವಳಿಯಿಂದ ಹೆಚ್ಚು ಪ್ರಯೋಜನ ಉಂಟಾದೀತೆಂಬದಕ್ಕೆ ಏನೂ ಸಂಶಯವಿಲ್ಲ.

Iron Cowpeas ಎಂಬ ತದಿಗಿಣದ ಬೆಳೆಯ ಕುರಿತು ಹಿಂದಿನಿಂದ ಬರಕೊಳ್ಳುತ್ತೇನೆ

ಕಲಾಯಿ ಎಸ್ಟೇಟು.
29--12--11.

ಎಲ್ಲೂರು ಸುಬ್ಬರಾವ್.

ಮೊರೀಷಿಯಸ್ ಕಬ್ಬಿನ ಬೀಜ.

ಮೊರೀಷಿಯಸ್ ಕಬ್ಬಿನ ಬೀಜ ಬೇಕೆಂದಿರುವವರು ಮಲಬಾರಿನ ತಳಿಪರಂಬ ಫಾರ್ಮಿನ ಮೆನೇಜರರಿಗೆ ಬರಕೊಂಡಲ್ಲಿ ಉತ್ತಮವಾದ ಬೀಜವನ್ನು ಸಾವಿರಕ್ಕೆ ಮೂರು ರೂಪಾಯಿ ದರದಲ್ಲಿ ಕೊಡುವರು. ಮತ್ತು ರೈಲಿನಲ್ಲಿ ಹಾಕಿ ಕಳುಹಿಸುವ ವಿಲೆವಾರಿ ಮಾಡುವರು. ರೈಲು ಚಾರ್ಜು ಸಾವಿರಕ್ಕೆ ಒಂದು ರೂಪಾಯಿ ಆಗಲಿಕ್ಕೆ ಸಾಕು. ಹೆಚ್ಚಿಗೆ ಸಮಯ ತೆಗೆಯದೆ ಕೂಡಲೇ ತರಿಸಿಕೊಳ್ಳುವದು ಉತ್ತಮ. ಈ ಕಬ್ಬಿನ ಸಾಗುವಳಿಯಿಂದ ಹೆಚ್ಚಿಗೆ ನಫೆ ಉಂಟು.

ಕೊಡಿಯಾಲಗುತ್ತು ತಿಮ್ಮಯ್ಯ ಆಳ್ವ.
Licentiate in Agriculture.

ನೋಟೀಸು.

ಬಿ. ಎಸ್. ಎ. ಸ್ಯಾಕಲುಗಳು.

ಈಚೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ವ್ಯಾಪಾರಸ್ಥರು ತಮ್ಮನ್ನು ತಾವೇ ಮದ್ರಾಸ್ ಎಡಿಸನ್ ಕಂಪೆನಿ ಏಜಂಟರುಗಳೆಂದು ಕರೆಯಿಸಿಕೊಂಡು ಬಿ. ಎಸ್. ಎ. ಸ್ಯಾಕಲಿನ ಕೆಲವು ಸಾಮಾನುಗಳನ್ನು ಜೋಡಿಸಿದ ಸ್ಯಾಕಲುಗಳನ್ನು ನಿಜವಾದ ಬಿ. ಎಸ್. ಎ. ಸ್ಯಾಕಲುಗಳೆಂದು ಮಾರುತ್ತಿದ್ದಾರೆ. ಆದ್ದರಿಂದ ಸ್ಯಾಕಲುಗಳನ್ನು ಕೊಂಡುಕೊಳ್ಳಲಿಚ್ಛೈಸುವವರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ:—ಮಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಎಡಿಸನ್ ಕಂಪೆನಿಯ ಏಜಂಟರುಗಳು ದಿ ಮಂಗಳೂರು ಟ್ರೇಡಿಂಗ್ ಎಶೋಸಿಯೇಷನಿವವರಲ್ಲದೆ ಮತ್ತೊಬ್ಬರಲ್ಲ. ಇವರಲ್ಲಿ ಮಾತ್ರವೇ ಮೇಲೆ ಕಾಣಿಸಿರುವ ಕ್ರೂಜೆಯ ಆಕಾರದ ಕೋವಿಗಳ 'ಟ್ರೇಡ್‌ಮಾರ್ಕ್' ಇರುವ ಬಿ. ಎಸ್. ಎ. ಸ್ಯಾಕಲುಗಳು ದೊರಕುವವು. ಈ ಟ್ರೇಡ್‌ಮಾರ್ಕಿರುವ ಸ್ಯಾಕಲುಗಳೇ ನಿಜವಾದ ಬಿ. ಎಸ್. ಎ. ಸ್ಯಾಕಲುಗಳಾಗಿವೆ.

3—1—1912.

ADDISON & Co.

ವಿದೇಶ ವೃತ್ತಾಂತ.

ಟಬ್ರಿಜಿನಲ್ಲಿ ಪರ್ಶಿಯಾನರಿಗೂ ರುಷ್ಯಾನರಿಗೂ ಈಚೆಗೆ ಉಂಟಾದ ಯುದ್ಧಕ್ಕೆ ಕಾರಣರೆಂಬ ಅನುಮಾನದ ಮೇಲೆ ರುಷ್ಯಾ ಸರಕಾರದವರು ಟಬ್ರಿಜಿನಲ್ಲಿಯ ಪರ್ಶಿಯಾನರಲ್ಲಿ ೮ ಜನರನ್ನು ಸಂಹರಿಸಿದರು. ರುಷ್ಯಾನರ ಎರಡು ಸೈನ್ಯವು ಕೆಜಿವಿನಿಂದ ರೆಷ್ಟ್ ಎಂಬಲ್ಲಿಗೆ ಹೊರಟಿರುವರು. ಪರ್ಶಿಯದ ದಕ್ಷಿಣ ಪ್ರಾಂತ್ಯದಲ್ಲಿ ಇನ್ನೂ ಗಲಿಬಿಲಿ ಇದೆ. ರುಷ್ಯಾನರು ಪುನಃ ನಾಲ್ಕು ಪರ್ಶಿಯಾನರನ್ನು ಪಾಶಿಗೆ ಹಾಕಿದರು. ರುಷ್ಯಾನರ ಮೇಲೆ ಗುಂಡು ಹಾರಿಸಿದ ನಾಲ್ಕು ಮನೆಗಳನ್ನು ಕೆಡವಿ ಮೂವರನ್ನು ಗುಂಡಿನ ಬಾಯಿಗೆ ಕಟ್ಟಿದರು.

ಟ್ರಿಪೋಲಿ ಯುದ್ಧ ಸಂಬಂಧವಾಗಿ ತುರ್ಕರಿಗೂ ಇಟಾಲಿಯರಿಗೂ ಬೇಗನೇ ಸಂಧಾನವಾಗುವ ಸಂಭವವಿದೆ ಎಂಬದಾಗಿ ಸೆಲೋನಿಕಿಯದ ಬಾತ್ಮೀದಾರರೊಬ್ಬರು ತಿಳಿಸುವರು.

ಪರ್ಶಿಯದ ಟ್ರೆಜರರ್ ಜನರಲರಾಗಿದ್ದ ಶುಸ್ತರರ ಬದಲಿಗೆ ಮೆ| ಎಮ್. ಮೊರ್ನ್ಯಾರ್ಡ್‌ರವರನ್ನು ನೇಮಿಸಬೇಕೆಂಬದಾಗಿ ರುಷ್ಯಾ ಸರಕಾರದವರ ಅಪೇಕ್ಷೆಯಾಗಿದೆ. ಆದರೆ ಪರ್ಶಿಯಾ ಮಂತ್ರಿ ಸಭೆಯವರಿಗೆ ಇವರನ್ನು ನೇಮಿಸುವುದರಲ್ಲಿ ಸಂತೋಷವಿಲ್ಲದಿರುವುದರಿಂದ ಈ ಕೆಲಸಕ್ಕೆ ತಕ್ಕ ವಿದೇಶಿ ಹುದ್ದೆದಾರರು ಸಿಕ್ಕುವ ವರೆಗೆ ಮೂರು ಮಂದಿ ಪರ್ಶಿಯಾನರು ಕೂಡಿರುವ ಒಂದು ಕಮಿಷನ್ ನೇಮಿಸುವದು ವಿಹಿತವೆಂದು ಆಲೋಚಿಸಿದ್ದಾರೆ. ಬ್ರಿಟಿಷ್ ಕೌನ್ಸೆಲ್ ಸ್ಮಾರ್ಟರವರೂ ಅವರ ಕೂಡೆ ಇದ್ದ ಸೈನೀಕರೂ ತಾ· ೫ಲ್ಲು ಶಿರಾಜಿಗೆ ತಲಪಿರುತ್ತಾರೆ.

ಚೀನದ ಶಾಂಘಾಯಿಯಲ್ಲಿ ಕೂಡಿದ್ದ ಸಂಧಾನ ಸಭೆಗೆ ಸರಕಾರ್ರ ಕಡೆಯಿಂದ ಪ್ರತಿನಿಧಿಯಾಗಿ ಹೋಗಿದ್ದ ತಾಂಗ್ ಶೋಯಿರವರು ರಾಜಿಕೊಟ್ಟಿರುತ್ತಾರೆ. ಸಂಧಾನವಾಗುವುದು ಉತ್ತಮವೆಂಬದಾಗಿ ಇವರು ಕೊಟ್ಟ ಆಲೋಚನೆಯನ್ನು ಸರಕಾರ ಕಡೆಯವರು ನಿರಾಕರಿಸಿದ್ದೇ ಇವರ ರಾಜಿನಾಮೆಗೆ ಕಾರಣವಂತೆ. ಇವರು ರಾಜಿ ಕೊಟ್ಟದ್ದರಿಂದ ಇನ್ನು ಮುಂದಕ್ಕೆ ಶಾಂಘಾಯಿ ಸಭೆಯು ಕೂಡುವದು ನಿಶ್ಚಯವಿಲ್ಲ.

ಪ್ರಜಾಧಿಪತ್ಯದ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟ ಸನ್ ಎಟ್‌ಸೆನ್‌ರವರು ಶಾಂಘಾಯಿಂದ ನಾನ್‌ಕಿಂಗ್‌ಗೆ ಹೋಗಿರುವರು. ಸರಕಾರ ಕಡೆಯ ಯುಆನ್ ಶಿಕಾಯಿರವರು ಇವರಿಗೆ ಒಂದು ಕಾಗದ ಬರೆದು ಹೆಚ್ಚಿನ ಜನರ ಅಪೇಕ್ಷೆಯಿಂದ ಪ್ರಜಾಧಿಪತ್ಯ ಸರಕಾರದ ಪ್ರೆಸಿಡೆಂಟರಾಗಲು ನೀವು ಒಪ್ಪಿದ್ದರಿಂದ ತುಂಬಾ ಕೃತಜ್ಞನಾಗಿದ್ದೇನೆಂದು ತಿಳಿಸಿರುವರು.

ಚೀನದ ಟ್ವಯಿನಾಫ್ ಎಂಬಲ್ಲಿಯ ಇಟಾಲಿಯರ ಸೆಕ್ರಟರಿಯವರು ಪೆಕಿಂಗಿಗೆ ಬಂದು ಅಲ್ಲಿಯ ಸ್ಥಿತಿಯು ಬಹಳ ಗಲಿಬಿಲಿಯಲ್ಲಿದೆಂತಲೂ ೩೦ ಇಟಾಲಿ ಪಾದ್ರಿಗಳಿಗೆ ಅವಘಡ ಸಂಭವಿಸುವ ಸಂದರ್ಭವಿದೆ ಎಂತಲೂ ತಿಳಿಸಿದ್ದರಿಂದ ಬ್ರಿಟಿಷ್ ಮತ್ತು ಇಟಲಿ ಮಂತ್ರಿಗಳು ಅಲ್ಲಿಗೆ ಕೂಡ್ಲೇ ಸೈನ್ಯವನ್ನು ಕಳುಹಿಸಬೇಕೆಂದು ಸರಕಾರ ಕಡೆಯ ಯುಆನ್ ಶಿಕಾಯಿರವರನ್ನು ಕೇಳಿಕೊಂಡಿರುವರು.

ಪ್ರಜಾಧಿಪತ್ಯದ ಸರಕಾರದವರು ಒಂದು ದೊಡ್ಡ ಆಜ್ಞಾಪತ್ರಿಕೆಯನ್ನು ಹೊರಡಿಸಿ ಮಾಂಚು ಸರಕಾರದ ಕಡೆಗೆ ತಮಗಿರುವ ಮನಃ ಕ್ಲೇಶಗಳನ್ನು ತಿಳಿಯ ಪಡಿಸಿದ್ದಾರಲ್ಲದೆ ದಂಗೆಯುಂಟಾಗುವ ಮೊದಲು ಮಾಂಚು ಸರಕಾರದವರು ವಿದೇಶಿ ಸರಕಾರಗಳೊಡನೆ ಮಾಡಿಕೊಂಡಿದ್ದ ಒಪ್ಪಂದ, ಸಾಲ ಇತ್ಯಾದಿಗಳನ್ನೆಲ್ಲಾ ತಾವೂ ಗೌರವಿಸುತ್ತೇವೆಂದೂ ದೇಶದಲ್ಲೆಲ್ಲಾ ತಕ್ಕ ಕಾಯಿದೆ ಕಾನೂನುಗಳನ್ನೂ ತಕ್ಕ ಕ್ರಮವನ್ನೂ ಏರ್ಪಡಿಸುವದೇ ಪ್ರಜಾಧಿಪತ್ಯ ಸರಕಾರದ ಉದ್ದೇಶವೆಂದೂ ತಿಳಿಯಪಡಿಸಿದ್ದಾರೆ.

ಟ್ರೀಪೋಲಿಯಲ್ಲಿ ಇಟಾಲಿಯರು ಹೊರಗೆ ಸಂಕಟ್ಟುವ ಕೆಲಸದಲ್ಲಿರುವಾಗ ತುರ್ಕರ ಒಂದು ದೊಡ್ಡ ಸೈನ್ಯವು ಇವರ ಮೇಲೆ ಬಿತ್ತು. ಮೂರು ತಾಸುಗಳ ವರೆಗೆ ಹೊರಾಡಿದನಂತರ ತುರ್ಕರು ಹಿಮ್ಮೆಟ್ಟಲ್ಪಟ್ಟರು. ಇಟಾಲಿಯರೆಲ್ಲಿ ೨೧ ಮಂದಿ ಘಾಯ ಪಟ್ಟಿರುವರು.

ಚೀನದ ಹಾಂಕೋ ಪಟ್ಟಣವನ್ನು ಸರಕಾರ ಕಡೆಯ ಸೈನೀಕರು ಬಿಟ್ಟುಹೋಗಿರುವರು. ಶಾಂಘಾಯಿಯಲ್ಲಿ ಸಂಧಾನ ಸಭೆಯು ಈಗ ಕೂಡುವದಿಲ್ಲ. ಸರಕಾರ ಕಡೆಯವರಿಗೆ ತಮ್ಮ ಸೈನ್ಯವನ್ನು ದಕ್ಷಿಣ ಪ್ರಾಂತ್ಯಕ್ಕೆ ಕಳುಹಿಸಿ ಜಯಹೊಂದಲು ಹಣದಡಚಣಿಯಿಂದ ತೊಂದರೆಯೊದ್ದರಿಂದ ಇನ್ನು ದಂಗೆಗಾರರು ಉತ್ತರ ಪ್ರಾಂತ್ಯಗಳಿಗೆ ಮುಂದರಿಸುವಾಗ ಅವರ ಕೂಡೆ ಕಾದಾಡಿ ಜಯಹೊಂದಬಹುದೆಂಬ ಭರವಸೆಯಲ್ಲಿದ್ದಾರೆ.

ಗ್ರೇಟ್ ಬ್ರಿಟಾನಿನ ಸಂದರ್‌ಲೇಂಡ್ ಎಂಬಲ್ಲಿ ಹಡಗ ಕೆಲಸದವರು ಮುಷ್ಕರ ಹಿಡಿದಿರುವರು. ಅರ್ಗೆಂಟೈಲ್ ರೈಲ್ವೇ ಕೆಲಸದವರೂ ಮುಷ್ಕರ ಹಿಡಿದಿರುವರು.

ಪರ್ಶಿಯಾ ಸರಕಾರದ ಅಪ್ಪಣೆಯ ಪ್ರಕಾರ ನಾಲ್ಕು ಪರ್ಶಿಯಾನರು ಕೂಡಿದ ಒಂದು ಕಮಿಷನ್ ಮತ್ತು ಬೆಲ್ಜಾಮಿನ ಕಸ್ಟಮ್ ಡೈರೆಕ್ಟರಾದ ಮೆ| ಮೊರ್ನ್ಯಾಡರವರು ಮೆ| ಶುಸ್ತರದಿಂದ ಚಾರ್ಜು ತಕ್ಕೊಂಡಿರುತ್ತಾರೆ. ಮೆ| ಮೊರ್ನ್ಯಾಡರವರು ಹಂಗಾಮಿಯಾಗಿ ಸ್ಥಳೀಕ ಟ್ರೆಜರರ್ ಜನರಲ್ ಕೆಲಸವನ್ನು ಮಾಡುವರು.

ರುಷ್ಯಾನರು ಟಿಬ್ರಿಜಿನಲ್ಲಿ ಪರ್ಶಿಯಾನರ ಪಿಡಾಯಿ ಸೈನ್ಯದ ಮುಖ್ಯಾಧಿಪತಿಯನ್ನೂ ಆದರ ಲೆಪ್ಟನೆಂಟನನ್ನೂ ಎರಡು ಪತ್ರ ಸಂಪಾದಕರನ್ನೂ ವಧೆಮಾಡಿರುವರು.

ಉತ್ತರ ಹಿಂದುಸ್ಥಾನ.

ಕಳದ ತಿಂಗಳ ತಾ. ೩೦ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದುಸ್ಥಾನದಲ್ಲಿ ೯,೯೩೭ ನುಂದಿಗೆ ಪ್ಲೇಗ ಬೇನೆಯು ಸೋಂಕಿ ೭,೯೦೩ ಮಂದಿ ಮೃತಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟಂದರೆ:—ಮುಂಬಾಯಿ ೧೮೧೬; ಮದ್ರಾಸ್ ೩೬೨; ಬಂಗಾಳ ೯೪೭; ಸಂಯುಕ್ತಸಂಸ್ಥಾನ ೧೭೯೮; ಪಂಜಾಬು ೧೪೧; ಬರ್ಮ ೩೧; ಮಧ್ಯಸಂಸ್ಥಾನ ೩೧೨; ಮೈಸೂರು ೯೯; ಹೈದರಾಬಾದ್ ೧೩೭೮; ರಜಪುತಾನ ೫೦ ಮರಣಗಳಾದವು.

ಶ್ರೇಷ್ಠ ನ್ಯಾಯವಿಧಾಯಕ ಸಭೆಯ ಮೆಂಬರರಾಗಿದ್ದು ಮೃತಪಟ್ಟ ಸರ್ದಾರ್ ಪ್ರತಾಪಸಿಂಘ್‌ರವರ ಬದಲಿಗೆ ಮೈನ್ ಮಹಮ್ಮದ್ ಶಾಫಿರವರು ನೇಮಿಸಲ್ಪಟ್ಟಿರುವರು.

ಆಲ್ ಇಂಡಿಯ ಮುಸಲ್ಮಾನ ಸಂಘದ ಉಪಾಧ್ಯಕ್ಷರಾಗಿರುವ ಮೆ|ಅಬ್ದುಲ್ ಅಜೀಜ್‌ರವರು ಟ್ರಿಪೊಲಿ ಯುದ್ಧದಲ್ಲಿ ಮಡಿದ ತುರ್ಕ ಮತ್ತು ಅರಬಿಯರ ಸೈನೀಕರ ಹೆಂಡತಿ ಮಕ್ಕಳಿಗೆ ಸಹಾಯಮಾಡುವುದಕ್ಕಾಗಿ ಸ್ಥಾಪಿಸಲ್ಪಟ್ಟಿರುವ ರೆಡ್‌ಕ್ರಿಸೆಂಟ್ ಸಂಘಕ್ಕೆ ಹಣಕೂಡಿಸುವ ಉದ್ದೇಶದಿಂದ ರಂಗೂನಿಗೆ ಹೋಗಿರುವರು.

ಡಕ್ಕದ ನವಾಬರವರು ಅಸ್ವಸ್ಥದಲ್ಲಿರುವರು. ಇವರಿಗುಂಟಾದ ಬಾವನ್ನು ವೈದ್ಯರು ಶಸ್ತ್ರಪ್ರಯೋಗ ಮಾಡಿಕ್ಕೊದಿರುವರು.

ತಾ. ೩ರಲ್ಲು ಮುಂಬಾಯಿಯ ಬೌಲೇಶ್ವರ್ ಎಂಬಲ್ಲಿ ಒಂದು ಮನೆಯು ಸುಟ್ಟೋಯಿತು. ಈ ಮನೆಯ ಮುಚ್ಚಿದ ಕೋಣೆಯನ್ನು ಒಡೆಯಲು ಅದರೊಳಗೆ ನರ್ಬದಾ ಬಾಯಿ ಎಂಬ ಒಬ್ಬ ಹಿಂದು ಹೆಂಗಸು ಬೆಂಕಿಯಿಂದ ಸುಟ್ಟೋಗಿದ್ದಳು. ಇವಳ ದೇಹದ ಸಮೀಪ ಶೀಮೆ ಎಣ್ಣೆಯ ಒಂದು ಬಟ್ಟಲೂ, ಬೆಂಕಿ ಕಡ್ಡಿಯ ಪೆಟ್ಟಿಗೆಯೂ ಇತ್ತು. ಕೆಲವು ಸಮಯದ ಹಿಂದೆ ಇವಳಿಗೆ ಸ್ವಲ್ಪ ಚಿತ್ತಭ್ರಮೆಯುಂಟಾಗಿದ್ದರಿಂದ ಆಕೆಯ ಗಂಡನು ಅವಳನ್ನು ಪ್ರತ್ಯೇಕ ಕೋಣೆಯಲ್ಲಿ ಹಾಕಿ ಮಗುವನ್ನು ಪ್ರತ್ಯೇಕ ಪೋಷಿಸುತ್ತಿದ್ದನು. ಆದರೆ ಇವಳು ಸ್ವಘಾತ ಮಾಡಿಕೊಂಡ ದಿನ ಬೆಳಿಗ್ಯೆ ಆಕೆಗೆ ಮಗುವನ್ನು ನೋಡ ಅಪ್ಪಣೆ ಸಿಕ್ಕಿತು. ಅವಳು ಕೂಡ್ಲೇ ಮಗುವಿಗೆ ಅಫೀಮು ಮಾತ್ರೆ ಕೊಟ್ಟುಬಿಟ್ಟದ್ದರಿಂದ ಮಗುವಿಗೆ ಕಠಿಣ ಅಸ್ವಸ್ಥ ಶುರುವಾಯಿತು. ಮನೆಮಂದಿಯೆಲ್ಲಾ ಮಗುವಿನ ಶೈತ್ಯೋಪಚಾರದಲ್ಲಿಯೇ ನಿರತರಾಗಿರುವಾಗ ಇವಳು ಕೋಣೆಯಲ್ಲಿ ತನ್ನನ್ನು ಬೆಂಕಿಯಿಂದ ಸುಟ್ಟುಕೊಂಡು ಸ್ವಘಾತಮಾಡಿಕೊಂಡಳು. ಮಗುವು ಆಸ್ಪತ್ರಿಯಲ್ಲಿದೆ.

ತಾ. ೩ನೇ ರಾತ್ರಿಗೆ ಕಲ್ಕತ್ತೆಯ ಸರಕಾರ ಮಂದಿರದ ಮುಂಭಾಗದಲ್ಲಿರುವ ಮೈದಾನಿನಲ್ಲಿ ಬಾಣ ಬಿರುಸು ಸುಡಲಾಯಿತು. ಸುಮಾರು ಅರ್ಧಮಿಲಿಯ ಜನರು ಇದನ್ನು ನೋಡುವುದಕ್ಕಾಗಿ ಕೂಡಿದ್ದರು.

ತಾ. ೪ರಲ್ಲು ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಕಲ್ಕತ್ತೆಯ ಟೊಲೆಗಂಜಿಯಲ್ಲಿ ಏರ್ಪಡಿಸಿದ್ದ ಕುದುರೆಗಳ ಪ್ರದರ್ಶನವನ್ನು ನೋಡಿ ಅತ್ಯಾನಂದ ಪಟ್ಟರಲ್ಲದೆ ಅಲ್ಲಿ ನಡೆದ ಕುದುರೆ ಪಂದ್ಯವನ್ನು ನೋಡಿ ಈ ಪಂದ್ಯಕ್ಕೆ ಪ್ರತಿ ವರ್ಷವೂ ತನ್ನ ಲೆಕ್ಕದಲ್ಲಿ ನೂರು ಪವನು ಕ್ರಯಬಾಳುವ ಒಂದು ಗಿಂದಲನ್ನು ಇನಾಮಾಗಿ ಕೊಡುತ್ತೇನೆಂದು ಅಭಯವಿತ್ತರು.

ತಾ. ೫ರಲ್ಲು ಚಕ್ರವರ್ತಿಯವರು ದೇವರಾರಾಧನೆಗೆ ಚಿತ್ತೈಯಿಸಿ ನಂತರ ಬೆರಕ್‌ಪುರದ ಉದ್ಯಾನವನವನ್ನು ನೋಡ ಚಿತ್ತೈಯಿಸಿದರು. ತಾ. ೬ನೇ ರಾತ್ರಿಯಲ್ಲಿ ಚಕ್ರವರ್ತಿಯವರನ್ನು ವೈಸರಾಯರವರು ನಾಟ್ಯಕ್ಕೆ ಆಮಂತ್ರಿಸಿದರು. ವೈಸರಾಯರವರು ಚಕ್ರವರ್ತಿನಿಯವರೊಡನೆಯೂ ಚಕ್ರವರ್ತಿಯವರು ವೈಸರಾಯರ ಪತ್ನಿಯವರೊಡನೆಯೂ ನಾಟ್ಯವಾಡಿದರು.

ತಾ. ೫ರಲ್ಲು ನಡೆದ ವಿನೋದಾಟಗಳನ್ನು ನೋಡಿಕೊಂಡು ಚಕ್ರವರ್ತಿಯವರು ಹೊರಟ ಕೂಡ್ಲೇ ಜನರ ಮಹಾಗುಂಪು ಚಕ್ರವರ್ತಿಯವರು ಕೂತಿದ್ದ ಸಿಂಹಾಸನದ ಬಳಿಗೆ ಬಂದು ತಲೆಯನ್ನು ಬಗ್ಗಿಸಿ ಅವರು ಕಾಲಿಟ್ಟಿದ್ದ ನೆಲವನ್ನು ಮುದ್ದಿಟ್ಟರು.

ಅಂದೇ ಕಲ್ಕತ್ತೆಯಲ್ಲಿ ಆಯಾ ಹುದ್ದೆದಾರರಿಗೂ ಕೆಲವು ದೇಶೀಯ ರಾಜರುಗಳಿಗೂ ಚಕ್ರವರ್ತಿಯವರಿಂದ ಬಿರುದುಗಳು ಕೊಡೋಣಾಯಿತು.

ಬಳಿಕ ಇನ್ಸ್‌ಪೆಕ್ಟರರು ಈ ಜಿಲ್ಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ವಿಸ್ತರಿಸುವದಕ್ಕೆ ಅವಕಾಶವಿದೆ ಎಂದೂ ವಿದ್ಯಾ ಇಲಾಖೆಯುವರು ಈ ನ್ಯೂನತೆಯನ್ನು ಹೋಗಲಾಡಿಸಲು ಉದ್ಯುಕ್ತರಾಗಿರುವರೆಂದೂ ತಿಳಿಸಿ ಜಿಲ್ಲೆಯೊಳಗಣ ಇಲಾಖೆಯ ಉದ್ಯೋಗಸ್ಥರು ಯಾವ್ಯಾವ ಹಳ್ಳಿಯಲ್ಲಿ ಶಾಲೆಗಳ ಅಗತ್ಯವಿದೆಂಬದನ್ನು ಲಕ್ಷದಲ್ಲಿಡತಕ್ಕದೆಂದೂ ಅಸಿಸ್ಟಾಂಟ ಇನ್ಸ್‌ಪೆಕ್ಟರರು ಸಬ್ ಅಸಿಸ್ಟಾಂಟರ ಜೊತೆಯಲ್ಲಿ ವಿದ್ಯಾಭಿವೃದ್ಧಿಗಾಗಿ ಮಾಡುತ್ತಲಿರುವ ಪ್ರಯತ್ನಗಳನ್ನು ನೋಡಿ ತನಗೆ ತುಂಬಾ ಸಂತೋಷವಾಯಿತೆಂದೂ ಸೂಪರ್‌ವ್ಯಾಸರರಿಗೆಲ್ಲಾ ಇವರು ಈ ಸಂದರ್ಭದಲ್ಲಿ ಕೊಡಲಿಕ್ಕಿರುವ ಸೂಚನೆಗಳನ್ನು ಕೇಳುವದಕ್ಕೆ ತನಗೆ ಕುತೂಹಲವಿದ್ದರೂ ತನಗೆ ಮಲಬಾರ್ ಸಭೆಗೆ ಹೋಗಬೇಕಾದ್ದರಿಂದ ಅವಕಾಶವಿಲ್ಲದಕ್ಕೆ ಬೇಸರಪಡುತ್ತೇನೆಂದೂ ಹೇಳಿದರು.

೯ನೇ ತಾರೀಕಿನ ಮಧ್ಯಾಹ್ನ ಮ. ರಾ. ಪಂಜೆ ಮಂಗೇಶರಾಯರು ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆಯಲ್ಲಿ ಸ್ವಲ್ಪ ಭಾಗವನ್ನು ಪಠಗಳನ್ನು ತೋರಿಸಿ ವಿವರಿಸಿದರು; ಹಳ್ಳಿಯ ಶಾಲೆಗಳಲ್ಲಿ ಉಪಾಧ್ಯಾಯರಿಗೆ ಜಿಲ್ಲೆಯ ಇತಿಹಾಸ ಜ್ಞಾನವು ಇಷ್ಟೇ ಇರಬೇಕೆಂಬ ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಬುಧವಾರ ದಿನ ಬೆಳಿಗ್ಯೆ ಇನ್ಸ್‌ಪೆಕ್ಟರರು ಕನ್ನಾನೂರಿಗೆ ಹಿಂತೆರಳಿದರು. ಇದುವರೆಗೆ ಜ್ಯಾರಿಯಲ್ಲಿದ್ದ ಪಾಠ ಪಟ್ಟಿಯಲ್ಲಿ ಉಪಾಧ್ಯಾಯರಿಗಿರಬಹುದಾದ ಬಲಹೀನತೆಯನ್ನು ಹೋಗಲಾಡಿಸಲು ಬದಲಾವಣೆಗಳು ಅವಶ್ಯ ಉಂಟೋ ಇಲ್ಲವೋ ಎಂಬೀ ವಿಷಯವಾಗಿ ಚರ್ಚೆ ನಡಿಯುತ್ತಲಿದೆ. ಸಭೆಯು ಬಹುಶ್ಯಾ ಶನಿವಾರ ದಿವಸದ ವರೆಗೆ ನಡೆಯುವ ಹಾಗಿದೆ. ಮಾತಿನ ನಡುವೆ ಮಿಠಾಯಿ ಎಂಬಂತೆ ನೆರೆದಿದ್ದವರಿಗೆಲ್ಲಾ ಅಸಿಸ್ಟಾಂಟ್ ಇನ್ಸ್‌ಪೆಕ್ಟರರ ಸ್ವಂತ ಖರ್ಚಿನಿಂದ ಕ್ರಮವಾಗಿ ಮೂರು ಗಂಟೆಗೆ ಕ್ಷಾಫಿ ಫಲಹಾರವನ್ನು ಉತ್ತಮ ರೀತಿಯಿಂದ ಏರ್ಪಡಿಸಿದ್ದನ್ನು ಈ ಸಂದರ್ಭದಲ್ಲಿ ಕೊಂಡಾಡುವದು ವಾಸ್ತವಿಕವಾಗಿದೆ.

ಇಲ್ಲಿಯ ಟೌನ್ ಮೆಜಿಸ್ಟ್ರೇಟರಿಂದ ಸೆಶ್ಯನಿಗೆ ಕಮಿಟ್ ಮಾಡಲ್ಪಟ್ಟ ಬಲತ್ಕಾರಸಂಭೋಗ ಮೊಕದಮೆಯು ತಾ. ೩ರಲ್ಲು ತನಖಿಗೆ ಪ್ರಾರಂಭವಾಯಿತು. ಈ ಮೊಕದಮೆಯಲ್ಲಿ ಬುಡಾನ್ ಬ್ಯಾರಿ ಎಂಬ ಒಬ್ಬ ಯುವಕನು ಕಳದ ಸಪ್ಟಂಬರ ತಾ. ೨೭ರಲ್ಲು ಇಲ್ಲಿಯ ಲೈಟ್‌ಹೌಸ್ ಗುಡ್ಡದಲ್ಲಿ ಪಂಚಮ ಜಾತಿಯ ತುಕ್ರು ಎಂಬ ಹೆಂಗಸಿನ ಕೂಡೆ ಬಲತ್ಕಾರದಿಂದಸಂಭೋಗ ಮಾಡಲಿಚ್ಛೈಸಿ ಆಕೆಯನ್ನು ನೆಲದಮೇಲೆ ಮುಗಚಿಹಾಕಿ ಆಕೆಯ ವಸ್ತ್ರವನ್ನು ಎತ್ತಿ ಹಟಭೋಗ ಮಾಡಲು ಪ್ರಯತ್ನಿಸಿದ್ದಾಗಿರುತ್ತದೆ. ಜಡ್ಜರು ಇ. ಪಿ. ಕೋಡಿನ ೩೭೬. ೫೧೧ನೇ ಸೆಕ್ಷನಿನ ಪ್ರಕಾರ ಆತನಿಗೆ ೩೦ರೂಪಾಯಿ ಜುರುಮಾನೆ ವಿಧಿಸಿದರು.

ಇಲ್ಲಿಯ ಸಬ್‌ಜಡ್ಜರಾದ ಮೆ| ಟಿ. ಎಂ. ರಾಮಕೃಷ್ಣ ಅಯ್ಯರರವರು ಮಾಯಾವರಮ್ ಎಂಬಲ್ಲಿಗೂ ಮೆ. ಡಿ. ರಾಘವೇಂದ್ರರಾವ್ ಪಂತುಲರವರು ಇಲ್ಲಿಯ ಸಬ್‌ಕೋರ್ಟಿಗೂ ವರ್ಗಾಯಿಸಲ್ಪಟ್ಟಿರುವರು.

ಕೊರಸ್ಪಂಡೆನ್ಸ್ ಸೆಕ್ಷನಿನ ಆಕ್ಟಿಂಗ್ III ಕ್ಲಾರ್ಕರಾಗಿದ್ದ ಮ. ರಾ. ಎಮ್. ರಾಘವೇಂದ್ರ ರಾವು ಬಿ. ಎ. ರವರು II ಕ್ಲಾರ್ಕರಾಗಿಯೂ IV ಕ್ಲಾರ್ಕರಾಗಿದ್ದ ಮ. ರಾ. ಶಿವರಾಯರು III ಕ್ಲಾರ್ಕರಾಗಿಯೂ ಎಲ್. ಎಪ್. ಒಡಿಟ್ ಮತ್ತು ಎಕೌಂಟ್ ಸಿಬಂದಿಯ ಹೆಡ್‌ಎಕೌಂಟಾಂಟರಾಗಿದ್ದಮ. ರಾ. ವಿ. ವೆಂಕಟರಾಯರು IV ಕ್ಲಾರ್ಕರಾಗಿಯೂ ಕೊರಸ್ಪಡೆಂಟ್ ಸೆಕ್ಷನಿನ VI ಕ್ಲಾರ್ಕರಾಗಿದ್ದ ಮ. ರಾ. ಎ. ರಾಮರಾಯರು ಎಲ್. ಎಪ್. ಒಡಿಟ್ ಮತ್ತು ಎಕೌಂಟ್ ಸಿಬಂದಿಯ ಆಕ್ಟಿಂಗ್ ಹೆಡ್‌ಎಕೌಂಟೆಂಟರಾಗಿಯೂ I ಹಜೂರು ಅಬ್ಕಾರಿ ಕ್ಲಾರ್ಕರಾಗಿದ್ದ ಮ. ರಾ. ಬಿ. ಸುಬ್ಬರಾಯರು ಕರಸ್ಪಂಡೆನ್ಸ್ ಸೆಕ್ಷನಿನ 6ನೇ ಕ್ಲಾರ್ಕರಾಗಿಯೂ 2ನೇ ಹಜೂರು ಅಬ್ಕಾರಿ ಕ್ಲಾರ್ಕರಾಗಿದ್ದ ರಾ. ಬಿ. ಗಣಪತಿರಾಯರು 1ನೇ ಹಜೂರು ಅಬ್ಕಾರಿ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು.

ಇಲ್ಲಿಯ ತಹಶೀಲದಾರ ರಾ. ಎಕ್ಕಾರ ರಾಮಕೃಷ್ಣಯ್ಯನವರು ತನ್ನ ೨ ತಿಂಗಳ ರಜೆಯನ್ನು ತಾ. ೧೫ರಿಂದ ಉಪಯೋಗಿಸಿಕೊಳ್ಳುವದರಿಂದ ಅವರ ಚಾರ್ಜನ್ನು ಮೆ. ಪಿ. ಎಮ್. ಫೆರ್ನಾಂದಿಸರವರು ವಹಿಸುವರು.

ರಾ. ಬಡಾಕೆರೆ ರಾಮರಾವ್, ಶಿಬ್ರೂರ ರಾಮ ಕೃಷ್ಣ ಕಾಮತ್, ಕಾಸ್ರಗೋಡು ಶ್ರೀನಿವಾಸ ಇವರು ಟ್ರಾನ್ಸಲೇಶನ್ ಲೋವರ್ ಗ್ರೇಡಿನಲ್ಲಿ ಪಾಸಾಗಿರುವರು.

ಮ. ರಾ. ರಾ. ಎಂ. ವೆಂಕಟ ಭಂಡಾರಕ್ಕಾರ್, ರಗಡೆ ಶಿವರಾವ್, ತೋನ್ಸೆ ಮಂಗೇಶರಾವ್, ಕೆ. ರಾಮವರ್ಮ ರಾಜ, ಸುಜೀರ ನರ್ಶಿಂಗ ನ್ಯಾಕ, ಗಂಗೊಳ್ಳಿ ದತ್ತಾತ್ರಯ, ಜೋನ್ ಅಂತೊನಿ ಸಲ್ಡಾಂಞ, ಬಿ. ಆನಂದಬಾಳಿಗ ಇವರು ಎಕೌಂಟ್‌ಟೆಕ್ಸ್ಟಿನ ಹಾಯ್ಯರ್ ಗ್ರೇಡಿನಲ್ಲಿಯೂ ರಾ. ಕಾಸ್ರಗೋಡ ಶ್ರೀನಿವಾಸ ಬಿ. ಎ. ಕೃಷ್ಣರಾವ್ ಎಂ. ನಾಗರಾಜ, ಕಾರ್ಕಳ ಸ್ಕೂರ ಪ್ರಭು, ಕೊಲ್ಲಾಪುರ ರಾಮಚಂದ್ರ ರಾವ್, ಸಿಪ್ರಿನ್ ಪ್ಯಾಸ, ಲೋವರ್ ಗ್ರೇಡಿನ I ತರಗತಿಯಲ್ಲಿಯೂ ಎ. ಗೋವಿಂದ ಶೆಣ್ಯಾ, ಹಿರೆಬೆಟ್ಟು ಪಾಂಡು ರಂಗರಾವ್, ಕಾರ್ಕಳ ಸುಬ್ಬರಾವ್, ಎ. ರಾಮಚಂದ್ರ ರಾವ್, ಪೇಜಾವರ ರಾಮಕೃಷ್ಣ ರಾವ್, ಸುಜೀರ ಗೋಪಾಲರಾವ್, ದೇರೆಬೈಲ್ ನಾರಾಯಣ ಇವರು ಲೋವರ ಗ್ರೇಡಿನ ೨ನೇ ತರಗತಿಯಲ್ಲಿಯೂ ಪಾಸಾಗಿರುವರು.

ಮ. ರಾ. ರಾ. ಸುಜೀರ ಗೋಪಾಲರಾವ್ ಮಂಜೇಶ್ವರ ರಾಘವೇಂದ್ರರಾವ್, ಸುಜೀರ ನಾರಾಯಣನ್ಯಾಕ, ಮಾರ್ಸೆಲ ಲೋಬೋ, ಕಾರ್ಕಳ ಸಂಜೀವರಾವ್, ಬಂಟ್ವಾಳ ರಾಮಪ್ಪೈ ಇವರು ಕ್ರಿಮಿನಲ್ ಜ್ಯುಡಿಶ್ಯಲ್ ಹ್ಯಾಯರ್ ಗ್ರೇಡಿನಲ್ಲಿಯೂ ಶೇಕಅಬ್ದುಲ್ ಖಾದಿರ್ ಎಂಬವರು ಲೋವರ ಗ್ರೇಡಿನಲ್ಲಿಯೂ ಪಾಸಾಗಿರುವರು. ಪ್ರಿಸಿಸ್ ರ್‍ಯಾಟಿಂಗಿನಲ್ಲಿ ಮಂಗಳೂರು ರಾಮಚಂದ್ರ ಎಂಬವರು ಪಾಸಾಗಿರುವರು.

ಮ. ರಾ. ರಾ. ಗಂಗೊಳ್ಳಿ ದತ್ತಾತ್ರಿಯ, ಜೋನ್ ಅಂತೋನಿ ಸಾಲ್ಡಾಂಞ್ಞ, ಬಂಟ್ವಾಳ ಆನಂದಬಾಳಿಗ, ಕಾರ್ಕಳ ಕೇಶವ ಕುಡ್ವ, ಅಲ್ಬರ್ಟ ಲಿಯೊ ಪಿಂಟೊ, ಮುಲ್ಕಿ ಸುಬ್ಬರಾವ್ ಇವರು ರೆವೆನ್ಯು ಟೆಕ್ಸ್ಟಿನ ಹಾಯ್ಯರ್ ಗ್ರೇಡಿನಲ್ಲಿ ಪಾಸಾಗಿರುವರು.

ಉಡುಪಿ. ಕಳದ ಬುಧವಾರ ಕೊಸ್ಮೊಪೊಲಿಟನ್ ಕಂಪೆನಿಯವರು ತಮ್ಮ ಜಟ್ಕಗಳನ್ನೂ ಕುದುರೆಗಳನ್ನೂ ಇತರ ಸಾಮಾನುಗಳನ್ನೂ ಹಿಂದೂ ಟ್ರಾನ್ಸಿಟ್ ಕಂಪೆನಿಯವರಿಗೆ ಕ್ರಯಕ್ಕೆ ಕೊಟ್ಟರಂತೆ. ಗುರುವಾರದಿಂದ ಜಟ್ಕದ ಫೀಸೂ ಏರಿರುತ್ತದೆ. ಸದ್ಯದಲ್ಲಿಯೇ ಇನ್ನೊಂದು ಜಟ್ಕ ಕಂಪೆನಿಯಾಗುತ್ತದಂತೆ. ಇಷ್ಟರ ವರೇಗೆ ಹಿಂದೂ ಟ್ರೇನ್ಸಿಟ್ ಕಂಪೆನಿಯ ಜೊತೆಯಿಂದ ಉಂಟಾದ ಕಂಪೆನಿಗಳ ಗತಿ ನೋಡುವಾಗ್ಯೆ ಇನ್ನು ಆಗಲಿಕ್ಕಿರುವ ಕಂಪೆನಿಯು ಎಷ್ಟು ಕಾಲ ಬಾಳುವುದೆಂಬದು ಪರಮಾತ್ಮನೇ ಬಲ್ಲ. ಫೀಸು ಏರಿದರಿಂದ ಈಗ ಬಡ ಪ್ರಯಾಣಸ್ಥರಿಗೂ ಯಾತ್ರಿಕರಿಗೂ ಬಹಳ ಕಷ್ಟವೆಂತಲೇ ಹೇಳಬೇಕಾಗಿದೆ.

ಇದೇ ತಿಂಗಳ ತಾರೀಕು ೧೧ನೇ ಬುಧವಾರ ಚಿತ್ರಾಪುರ ಮಠಾಧೀಶರು ಬರುತ್ತಾರಂತೆ.

ರಾಮೇಶ್ವರ ಯಾತ್ರೆಗೆ ಹೋಗಿದ್ದ ಅದಮಾರುಮಠದ ಪಾರುಪತ್ಯಗಾರರಾದ ಬಿ. ವಾಸಾಚಾರ್ಯರು ಇದೇ ತಾ. ೭ರಲ್ಲು ಈರೋಡಿನಲ್ಲಿ ಸ್ವರ್ಗಸ್ಥರಾದರೆಂಬದನ್ನು ತಿಳಿದು ಅನೇಕರು ಅತಿ ಖೇದಪಡುತ್ತಾರೆ. ಇವರು ತಮ್ಮ ಮಠವನ್ನು ಊರ್ಜಿತ ಸ್ಥಿತಿಯಲ್ಲಿ ಇರಿಸಿದ್ದರಲ್ಲದೆ ವಿದ್ಯಾಭಿವೃದ್ಧಿಗಾಗಿ ಬಹಳ ಸಾಹಸ ಪಡುತ್ತಿದ್ದರು. ಇವರ ನಿರ್ಯಾಣದಿಂದ ಅದಮಾರುಮಠಕ್ಕೆ ಮಾತ್ರವಲ್ಲ; ಉಡ್ಪಿ ಕ್ಷೇತ್ರಕ್ಕೆನೇ ನಷ್ಟವಾಯಿತೆಂತ ಹೇಳಬಹುದು.

ಈಗ ಸುಮಾರು ೪ ವರ್ಷಗಳಿಂದ ಸಂಚಾರದಲ್ಲಿರುವ ಇದೇ ತಾ. ೧೮ಕ್ಕೆ ಪರ್ಯಾಯ ಕೂತುಕೊಳ್ಳುವ, ಶ್ರೀ ಪುತ್ತಿಗೆ ಮಠದ ಶ್ರೀ ಪಾದಂಗಳವರು ಕಳೆದ ಬುಧವಾರ ದಿವಸ ಬಹು ವಿಜ್ರಂಭಣೆಯಿಂದ ಈ ಪಟ್ಟಣ ಪ್ರವೇಶ ಮಾಡುವವರಾದರು. ಇವರು ಮಹಾ ಭೂತದಯಾಪಶ್ಚಾತಾಪ ಉಳ್ಳವರಾದ್ದರಿಂದ ಇವರ ಆಗಮನವನ್ನು ಆಬಾಲವೃದ್ಧರು ಹಾರೈಸುತ್ತಿದ್ದರು.

Notice.

In the Court of the District Judge of South Malabar.

INSOLVENCY PETITION No. 10 OF 1910.

Notice is hereby given that the creditors of 1. Muhamad Akram Abdulkader Saheb 2. Alli Saheb 3. Da Bappu Abdulkader Saheb 4. Simsuddin Saheb who have been adjudged insolvents in the above petition are to prove their debts on or before 31st March 1912 in the District Court under Section 24 of the Provincial Insolvency Act.

Dated 14th day of December 1911.

Hirjee Visram, Receiver.

ದಕ್ಷಿಣ ಮಲಬಾರ್ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

ದಿವಾಳಿ ಅರ್ಜಿ ನಂಬ್ರ $\frac{10}{1910}$

ಮೇಲೆ ಹೆಸರು ಕಾಣಿಸಿರುವ ಈ ದಿವಾಳಿ ಅರ್ಜಿಯಲ್ಲಿ ಮಹಮ್ಮದ್ ಅಕ್‌ರಾಮ್ ಅಬ್ದುಲಖಾದರ ಸಾಹೇಬ್ 2. ಅಲ್ಲಿಸಾಹೇಬ್, 3. ದಾ ಬಾಪು ಅಬ್ದುಲಖಾದರಸಾಹೇಬ್, 4. ಶಮ್ಸುದ್ದೀನ್ ಸಾಹೇಬ್ ಈ ನಾಲ್ವರು ಇನ್ಸೊಲ್ವೆಂಟ್ ಎಂತ ತೀರ್ಮಾನಿಸಲ್ಪಟ್ಟಿರುವುದರಿಂದ ಪ್ರೊವಿನ್ಸಲ್ ಇನ್‌ಸೊಲ್ವೆನ್ಸಿ ಆಕ್ಟಿನ ೨೪ನೇ ಸೆಕ್ಷನಿನ ಪ್ರಕಾರ ೧೯೧೨ನೇ ಇಸವಿ ಮಾರ್ಚಿ ೩೧ನೇ ತಾರೀಕಿನೊಳಗೆ ಜಿಲ್ಲಾ ಕೋರ್ಟಿನಲ್ಲಿ ತಮ್ಮ ಸಾಲಗಳನ್ನು ರುಜು ಪಡಿಸಲಿಕ್ಕಿರುತ್ತಾರೆಂಬದಾಗಿ ಈ ಮೂಲಕ ಈ ನಾಲ್ಕು ಜನರ ಲೇಣೇದಾರರೆಲ್ಲರಿಗೆ ತಿಳಿಸಲ್ಪಟ್ಟಿರುವುದು.

ತಾ. 14ನೇ ದಶಂಬರ 1911. ಹಿರ್ಜಿ, ವಿಸ್ರಾಮ, ರಿಸೀವರ್.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಹೊಸ ಮಸ್ಕತಿ ಅಕ್ಕಿ	4-14—0
ಹೊಸ ಗುಡ್ಡು ಮಸ್ಕತಿ...	4-10—0
ಹೊಸ ಮಸ್ಕತಿ ದುಯಂ...	4-7—0
ಹೊಸ ಗುಡ್ಡು ,, ...	4—5—0
ಮಸ್ಕತಿ ಬೆಳ್ತಿಗೆ ,, ...	5—2—0
ರಂಗೂನ್ ಬೆಳ್ತಿಗೆ ಗೋಣಿ	9—8—0
ಹುರುಳಿ ಗೋಣಿ ೧, ಮುಡಿ 2ರ ...	6—8—0
ಉಪ್ಪು ಗೋಣಿ ೧ರ	3—4—0
ಕೊಬ್ರಿ ಖಂಡಿ ೧ರ	102-0—0
ಕೊಬ್ರಿ ಎಣ್ಣೆ ಮಣ	7—2—0
ಕಾಫಿ ಖಂಡಿ ೧ರ	285—0—0
ಕಾಳು ಮೆಣಸು ಖಂಡಿ	175—0—0
ಹೊಸ ಬಿಳಿ ಗೋಟು ಅಡಿಕೆ	80—0—0
ಕರಿ ಗೋಟು	60—0—0
ಯಾಲದ ಕಾಯಿ ಮಣ ೧ರ	40—0—0
ಗೇರುಬೀಜ ಮುಡಿ ೧ರ...	2-7—0
ರಾಮಪತ್ರೆ ಮಣ ೧ರ	8-10—0
ಶೀಗೆಕಾಯಿ ಖಂಡಿ ೧ರ	31—0—0
ಕಾಸ್ರಿಕಿನ ಬೀಜ ಖಂಡಿ ೧ರ	20—8—0

ಸ್ವದೇಶಾಭಿಮಾನಿ.

1912ನೇ ಇಸವಿಯ ಕೆಲೆಂಡರ್.

1912	ಜನವರಿ.						1912	ಫೆಬ್ರವರಿ.						1912	ಮಾರ್ಚಿ.					
ಆದಿತ್ಯ.	...	7	14	21	28	...	ಆದಿತ್ಯ.	...	4	11	18	25	...	ಆದಿತ್ಯ.	...	3	10	17	24	31
ಸೋಮ.	1	8	15	22	29	...	ಸೋಮ.	...	5	12	19	26	...	ಸೋಮ.	...	4	11	18	25	...
ಮಂಗಳ.	2	9	16	23	30	...	ಮಂಗಳ.	...	6	13	20	27	...	ಮಂಗಳ.	...	5	12	19	26	...
ಬುಧ.	3	10	17	24	31	...	ಬುಧ.	...	7	14	21	28	...	ಬುಧ.	...	6	13	20	27	...
ಗುರು.	4	11	18	25	...	...	ಗುರು.	1	8	15	22	29	...	ಗುರು.	...	7	14	21	28	...
ಶುಕ್ರ.	5	12	19	26	...	...	ಶುಕ್ರ.	2	9	16	23	...	...	ಶುಕ್ರ.	1	8	15	22	29	...
ಶನಿ.	6	13	20	27	...	...	ಶನಿ.	3	10	17	24	..	...	ಶನಿ.	2	9	16	23	30	...

1912	ಎಪ್ರಿಲ್.						1912	ಮೇ.						1912	ಜೂನ್.					
ಆದಿತ್ಯ.	...	7	14	21	28	...	ಆದಿತ್ಯ.	...	5	12	19	26	...	ಆದಿತ್ಯ.	...	2	9	16	23	30
ಸೋಮ.	1	8	15	22	29	...	ಸೋಮ	...	6	13	20	27	...	ಸೋಮ.	...	3	10	17	24	...
ಮಂಗಳ.	2	9	16	23	30	...	ಮಂಗಳ.	...	7	14	21	28	...	ಮಂಗಳ.	...	4	11	18	25	...
ಬುಧ.	3	10	17	24	...	...	ಬುಧ.	1	8	15	22	29	...	ಬುಧ.	...	5	12	19	26	...
ಗುರು.	4	11	18	25	...	...	ಗುರು.	2	9	16	23	30	...	ಗುರು.	...	6	13	20	27	...
ಶುಕ್ರ.	5	12	19	26	...	...	ಶುಕ್ರ.	3	10	17	24	31	...	ಶುಕ್ರ.	...	7	14	21	28	...
ಶನಿ.	6	13	20	27	...	...	ಶನಿ.	4	11	18	25	...	...	ಶನಿ.	1	8	15	22	29	...

1912	ಜುಲಾಯಿ.						1912	ಅಗೋಸ್ತು.						1912	ಸಪ್ತಂಬರ.					
ಆದಿತ್ಯ.	...	7	14	21	28	...	ಆದಿತ್ಯ.	...	4	11	18	25	...	ಆದಿತ್ಯ.	1	8	15	22	29	...
ಸೋಮ.	1	8	15	22	29	...	ಸೋಮ	...	5	12	19	26	...	ಸೋಮ.	2	9	16	23	30	...
ಮಂಗಳ.	2	9	16	23	30	...	ಮಂಗಳ.	...	6	13	20	27	...	ಮಂಗಳ.	3	10	17	24	...	...
ಬುಧ.	3	10	17	24	31	...	ಬುಧ.	...	7	14	21	28	...	ಬುಧ.	4	11	18	25	...	...
ಗುರು.	4	11	18	25	...	...	ಗುರು.	1	8	15	22	29	...	ಗುರು.	5	12	19	26	...	...
ಶುಕ್ರ.	5	12	19	26	...	...	ಶುಕ್ರ.	2	9	16	23	30	...	ಶುಕ್ರ.	6	13	20	27	...	...
ಶನಿ.	6	13	20	27	...	...	ಶನಿ.	3	10	17	24	31	...	ಶನಿ.	7	14	21	28	...	...

1912	ಅಕ್ಟೋಬರ.						1912	ನವಂಬರ.						1912	ದಶಂಬರ.					
ಆದಿತ್ಯ.	...	6	13	20	27	...	ಆದಿತ್ಯ.	...	3	10	17	24	...	ಆದಿತ್ಯ.	1	8	15	22	29	...
ಸೋಮ.	...	7	14	21	28	...	ಸೋಮ	...	4	11	18	25	...	ಸೋಮ.	2	9	16	23	30	...
ಮಂಗಳ.	1	8	15	22	29	...	ಮಂಗಳ.	...	5	12	19	26	...	ಮಂಗಳ.	3	10	17	24	31	...
ಬುಧ.	2	9	16	23	30	...	ಬುಧ.	...	6	13	20	27	...	ಬುಧ.	4	11	18	25	...	...
ಗುರು.	3	10	17	24	31	...	ಗುರು.	...	7	14	21	28	...	ಗುರು.	5	12	19	26	...	...
ಶುಕ್ರ.	4	11	18	25	...	...	ಶುಕ್ರ.	1	8	15	22	29	...	ಶುಕ್ರ.	6	13	20	27	...	...
ಶನಿ.	5	12	19	26	...	...	ಶನಿ.	2	9	16	23	30	...	ಶನಿ.	7	14	21	28	...	...

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನ್ನೂ, ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್ಸ,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯು ನಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವ್ಹಿಸ್ಲರ್ ಸ್ಟೂಡಿಯೊ (**Whistler Studio**) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ನಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ,
ಮಂಗಳೂರು, ದ. ಕ.

ದಿ ನೇಶನಲ್ ಜೀವವಿಮೆ ಮತ್ತು ಬೆಂಕಿಂಗ್ ಸಂಘವನ್ನೇ ವಿಮೆದಾರರು ಏತಕ್ಕಾಗಿ ಆಯ್ದುಕೊಳ್ಳಬೇಕು?

ಈ ಕೆಳಗೆ ನಮೂದಿಸಿರುವ ಕಾರಣಗಳ ಸಲುವಾಗಿ ತಾನೇ—

1. ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.
2. ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.
3. ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.
4. ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.
5. ಪೊಲಿಸಿಗಳು ಈ ಹಿಂದೂಸ್ಥಾನದ ಜೀವನ ವೃತ್ತಿಗೆ ಅನುಕೂಲವಾಗುವಂತೆ ಸರಿಗೈಯಲ್ಪಟ್ಟಿವೆ.
6. ಪೊಲಿಸಿಗಳು ಮೂರು ವರುಷಗಳಿಗೆ ಬಾಳಿದ ಬಳಿಕ ವಂಚನೆಯಿಂದ ಹೊರತು ಬೇರೆ ಯಾವ ಕಾರಣದಿಂದಲೂ ನಿರ್ವಿವಾದ ಹಕ್ಕುಳ್ಳವುಗಳಾಗಿವೆ.
7. ಪೊಲಿಸಿಗಳನ್ನು ಕುರಿತು ಯಾವಾತನಿಗಾದರೂ ವಿರೋಧವಾಗಿ ನುಡಿಯಲು ಅಧಿಕಾರವಿಲ್ಲವು; ಮತ್ತು ಭೂಲೋಕದ ಯಾವ ಭಾಗದಲ್ಲಿದ್ದವನಾದರೂ ಇವನ್ನು ಪಡೆದುಕೊಳ್ಳಬಹುದು.
8. ಉದಾರವಾದ ಪೊಲಿಸಿಗಳು—
9. 'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.
10. ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

1912ನೇ ಇಸವಿಯ ಪೋಕೆಟ್ ಡೈರಿಗಳು.

ನೋಟುಬೂಕು ಸೈಜು (ದೊಡ್ಡ ಸೈಜು) ರೂ. 0–8–0.
" ,,ಮುಚ್ಚಳವ ಪಾಕೀಟು ಸಮೇತ 0–10–0.
ಸಣ್ಣ ಸ್ಯಾಜು ಡೈರಿ ೧ಕ್ಕೆ ರೂ. 0–4–0.
" ,,ಮುಚ್ಚಳವ ಪಾಕೀಟು ಸಮೇತ 0–6–0.

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು, ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡ್ಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿಯೂ ದೊರಕುತ್ತವೆ.

ವಿಕಟಪ್ರತಾಪ

ಎಂಬ

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ.

ವಾಗ್ದಾನ:— ಅದಮರಿಂದ ಉತ್ತಮರಿಗುಂಟಾಗುವ ತಾಪ, ಸಜ್ಜನರಲ್ಲಿ ವಿಪ್ರಲಾಪ, ಅನಾಥರ ವಿಲಾಪ, ಸೋಮಾರಿಗಳ ಪ್ರಲಾಪ, ಕಾಮಿನಿಯರ ಸಲ್ಲಾಪ, ರಸಿಕರ ಆಲಾಪ, ಜಾರರ ಅಪಲಾಪ, ಮಾನಿನಿಗಳ ಕೋಪ, ಈ ಕಲಾಪಗಳ ಚಿತ್ತರಗಳಿಂದೊಪ್ಪಿರುವುದು ನಮ್ಮ ವಿಕಟಪ್ರತಾಪ.

ವಾರ್ಷಿಕಚಂದಾ:— ಸ್ಥಳ ಮತ್ತು ಪರಸ್ಥಳದವರಿಗೆ ಅಂಚೆಯವೆಚ್ಚ ಸೇರಿ ೧೫ ಆಣೆ. ವಿ. ಪಿ. ಮೂಲಕ ರೂ. ೧—೦—೦.

ಈ ಪತ್ರಿಕೆಗೆ ಈಲಾಗಾಯಿತು ಒಂದು ವರ್ಷ ಚಂದಾದಾರರಾಗುವವರಿಗೆ ೮ ಆಣೆ ಬೆಲೆ ಬಾಳುವ "(೧) ಅಸತೀಪ್ರೀತಿಪ್ರಹಸನಂ, (೨) ಒಬ್ಬ ಸಿಪಾಯಿಯ ಸಾಹಸಗಳು (೩) ವಿಕಟಸಂಬಂಧಂ "ಎಂಬುವ ಮೂರು ರಸವತ್ತಾದ ಪುಸ್ತಕಗಳು ಬಹುಮಾನವಾಗಿ ಕಳುಹಿಸಲ್ಪಡುವುವು.

ನಮ್ಮ ವಿಳಾಸ:—ವಿಕಟಪ್ರತಾಪ ಆಫೀಸು,
ಕುಪ್ಪಂ ಪೋಸ್ಟು (ಉತ್ತರಾರ್ಕಾಡು.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ 0–14–0 ವಿ. ಪಿ. ಮೂಲಕ 1–1–0. 2000 ಹಾಳೆಗಳಿಗೆ 8–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0–15–0 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲು ಚಾರ್ಜು ವಿನಹಾ).

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post. Grant Road, B

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನ್ನೂ, ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್ಸ್,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೋಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯು ನಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವ್ಹಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ನಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ,
ಮಂಗಳೂರು, ದ. ಕ.

ದಿ ನೇಶನಲ್ ಜೀವವಿಮೆ ಮತ್ತು ಬೆಂಕಿಂಗ್ ಸಂಘವನ್ನೇ ವಿಮೆದಾರರು ಏತಕ್ಕಾಗಿ ಆಯ್ದುಕೊಳ್ಳಬೇಕು?

ಈ ಕೆಳಗೆ ನಮೂದಿಸಿರುವ ಕಾರಣಗಳ ಸಲುವಾಗಿ ತಾನೇ—

1. ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.
2. ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.
3. ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.
4. ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.
5. ಪೋಲಿಸಿಗಳು ಈ ಹಿಂದೂಸ್ಥಾನದ ಜೀವನ ವೃತ್ತಿಗೆ ಅನುಕೂಲವಾಗುವಂತೆ ಸರಿಗೈಯಲ್ಪಟ್ಟಿವೆ.
6. ಪೋಲಿಸಿಗಳು ಮೂರು ವರುಷಗಳಿಗೆ ಬಾಳಿದ ಬಳಿಕ ವಂಚನೆಯಿಂದ ಹೊರತು ಬೇರೆ ಯಾವ ಕಾರಣದಿಂದಲೂ ನಿರ್ವಿವಾದ ಹಕ್ಕುಳ್ಳವುಗಳಾಗಿವೆ.
7. ಪೋಲಿಸಿಗಳನ್ನು ಕುರಿತು ಯಾವಾತನಿಗಾದರೂ ವಿರೋಧವಾಗಿ ನುಡಿಯಲು ಅಧಿಕಾರವಿಲ್ಲವು; ಮತ್ತು ಭೂಲೋಕದ ಯಾವ ಭಾಗದಲ್ಲಿದ್ದವನಾದರೂ ಇವನ್ನು ಪಡೆದುಕೊಳ್ಳಬಹುದು.
8. ಉದಾರವಾದ ಪೋಲಿಸಿಗಳು—
9. 'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.
10. ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

1912ನೇ ಇಸವಿಯ ಪೋಕೆಟ್ ಡೈರಿಗಳು.

ನೋಟುಬೂಕು ಸೈಜು (ದೊಡ್ಡ ಸೈಜು) ರೂ.	0—8—0.
,, ,,ಮುಚ್ಚಳವ ಪಾಕೀಟು ಸಮೇತ	0-10—0.
ಸಣ್ಣ ಸೈಜು ಡೈರಿ ೧ಕ್ಕೆ ರೂ.	0—4—0.
,, ,,ಮುಚ್ಚಳವ ಪಾಕೀಟು ಸಮೇತ	0—6—0.

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು, ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡ್ಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿಯೂ ದೊರಕುತ್ತವೆ.

ವಿಕಟಪ್ರತಾಪ

ಎಂಬ

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ.

ವಾಗ್ದಾನ:— ಅದಮರಿಂದ ಉತ್ತಮರಿಗುಂಟಾಗುವ ತಾಪ, ಸಜ್ಜನರಲ್ಲಿ ವಿಪ್ರಲಾಪ, ಅನಾಥರ ವಿಲಾಪ, ಸೋಮಾರಿಗಳ ಪ್ರಲಾಪ, ಕಾಮಿನಿಯರ ಸಲ್ಲಾಪ, ರಸಿಕರ ಆಲಾಪ, ಜಾರರ ಅಪಲಾಪ, ಮಾನಿನಿಗಳ ಕೋಪ, ಈ ಕಲಾಪಗಳ ಚಿತ್ತರಗಳಿಂದೊಪ್ಪಿರುವುದು ನಮ್ಮ ವಿಕಟಪ್ರತಾಪ.

ವಾರ್ಷಿಕಚಂದಾ:— ಸ್ಥಳ ಮತ್ತು ಪರಸ್ಥಳದವರಿಗೆ ಅಂಚೆಯವೆಚ್ಚ ಸೇರಿ ೧೫ ಆಣೆ. ವಿ. ಪಿ. ಮೂಲಕ ರೂ. ೧—೦—೦.

ಈ ಪತ್ರಿಕೆಗೆ ಈಲಾಗಾಯಿತು ಒಂದು ವರ್ಷ ಚಂದಾದಾರರಾಗುವವರಿಗೆ ೮ ಆಣೆ ಬೆಲೆ ಬಾಳುವ "(೧) ಅಸತೀಪ್ರೀತಿಪ್ರಹಸನಂ, (೨) ಒಬ್ಬ ಸಿಪಾಯಿಯ ಸಾಹಸಗಳು (೩) ವಿಕಟಸಂಬಂಧಂ "ಎಂಬುವ ಮೂರು ರಸವತ್ತಾದ ಪುಸ್ತಕಗಳು ಬಹುಮಾನವಾಗಿ ಕಳುಹಿಸಲ್ಪಡುವುವು.

ನಮ್ಮ ವಿಳಾಸ:—ವಿಕಟಪ್ರತಾಪ ಆಫೀಸು,
ಕುಪ್ಪಂ ಪೋಸ್ಟು (ಉತ್ತರಾರ್ಕಾಡು.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ $\frac{1}{2}$ ಪೈಸೆ. 200 ಹಾಳೆಗಳಿಗೆ 0—14—0 ವಿ. ಪಿ. ಮೂಲಕ 1—1—0. 2000 ಹಾಳೆಗಳಿಗೆ 8—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ).

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, B[illegible]

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲಾ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲಾ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ
(ವಿದ್ಯುಚ್ಛಕ್ತಿಯ ಬೇನಿಹಾರಿ
ಮುಲಾಮು.)
EST. 1898.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆಸ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜಿ, ಸುಟ್ಟ ಘಾಯ, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಶಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ;—ಪರಿಮಳಾಂಜನ ಡಿಪ್ಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಗೆಗಳ ವರೆಗೆ ಬೇಕಾಗುವವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷದಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ:—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡಾ.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರ ಲಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲಕ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ಸೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಸಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸ್ಥಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೋಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers.

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ಶೀರೆಗಳು ತಯಾರಾಗುತ್ತವೆ. ನಾಜೂಕು ರೇಶ್ಮೆ ಶೀರೆಗಳೂ, ಜೋಡು ಎಲವಸ್ತ್ರಗಳೂ, ಉತ್ತಮವಾದ ವೇಷ್ಟಿಗಳೂ ನಮ್ಮ ಸ್ವತಃ ಮೇಲ್ತನ್ನಿಕೆಯಲ್ಲಿಯೇ ನೇಯಿಸುತ್ತಿದ್ದೇವೆ.

ಕ್ರಯ ಕಮ್ಮಿ! ಬೇಗನೆ ಕೊಂಡುಕೊಳ್ಳಿರಿ!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯತಿ ಮಾಡಲಾಗುವುದು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ.

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಪ್ರತಿ ಒಂದು ಮನೆಯಲ್ಲಿಯೂ ಅತ್ಯವಶ್ಯವಾಗಿ ಇರಬೇಕಾದ್ದು.

ಗ್ರೆಮೆ ಫೊನು (Gramophone) ಎಂಬ ಮಾತಾಡುವ ರಾಗದ ಪೆಟ್ಟಿಗೆಗಳು ನಮ್ಮಲ್ಲಿ ದೊರಕುವವು. (ಕನ್ನಡ, ತಮಿಳು, ಮಲೆಯಾಳ, ಹಿಂದುಸ್ಥಾನಿ, ಇಂಗ್ಲಿಷ್ ಭಾಷೆಯ ಉತ್ಕೃಷ್ಟವಾದ ಗಾಯನದ ರಿಕಾರ್ಡುಗಳನ್ನು ತರಿಸಿಟ್ಟಿರುವೆವು.

ಎಲ್ಲೆಲ್ಲಿಯೂ ಕೀರ್ತಿ ಪಡೆದ ಕೊಯಂಬುತ್ತೂರು ತಾಯಿಯ ಸಂಗೀತ ರಿಕಾರ್ಡುಗಳು ಬೇಕಾದವರು ಬೇಗನೇ ಬರಕೊಳ್ಳಿರಿ!

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೋಲೇಜಿನ ಎದುರು.
ಮಂಗಳೂರು

ಸಂತೋಷಕರವಾದ ಪ್ರಕಟಣೆ.

ಬರುವ ಜನವರಿ ತಿಂಗಳು ಆಖೈರು ವರೇಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ. (3) ನಾಜೂಕಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ. (5) ಮೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಪೌಂಟನ್‌ಪೆನ್. (10) ಮಕ್ಕಳ ತಮಾಷಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಷಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:— ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಅಚ್ಚವಾದ ಕೇಶ ತೈಲ.

ನಿಮಗೆ ಅಂಗಡಿಗಳಲ್ಲಿ ನೂರಾರು ವಿಧದ ಕೇಶ ತೈಲಗಳು ದೊರೆಯಬಹುದು. ಆದರೆ ಅವುಗಳಲ್ಲಿ ಶೇಕಡಾ 99ರಂತೆ ನಿಷ್ಪ್ರಯೋಜನವೆಂಬದು ಖಾತ್ರಿ.

ನಿಮ್ಮ ಕೇಶ ಗುಚ್ಛವು ಸದಾ ತಂಪಾಗಿಯೂ ಸುಖಪ್ರದವಾಗಿಯೂ ಇದ್ದುಳಿಯಬೇಕೆಂಬದು ನಿಮ್ಮ ಮನೋಗತವಾಗಿದೆಯೋ? ನಮ್ಮ 'ಲಿಲ್ಲಿಬ್ಲೂಮ್' ಎಂಬ ಕೇಶ ತೈಲವನ್ನು ಮಾತ್ರ ಕೊಂಡುಕೊಳ್ಳಿ! ಈ ಎಣ್ಣೆಗೆ ಸರಿ ಬೀಳುವ ಇತರ ಯಾವ ಎಣ್ಣೆಯನ್ನಾದರೂ ಪೇಟೆಯಲ್ಲಿ ಪಡೆಯಲಾರಿರಿ.

ದಯಮಾಡಿ 'ಲಲ್ಲಿಬ್ಲೂಮ್' ಎಂಬ ಹೆಸರು ನಿಮ್ಮ ಜ್ಞಾಪಕದಲ್ಲಿರಲಿ.

ಕ್ರಯ ಬಾಟ್ಲಿ 1ಕ್ಕೆ 0-12-0. ವಿ. ಪಿ. ಸಮೇತ 1—3—0 ಮಾತ್ರ.

FAIR HEALTH CHEMICAL Co.
Hoogly, Bengal

ಏಜಂಟರು;—ದಿ. ಊಲನ್ ಮಾರ್ಟ್,
ಮಂಗಳೂರು ದ. ಕ.

ಶ್ರೀ ಶಿವಗಂಗಾಮಠದ

ಶ್ರೀ "ಶಾರದಾ" ಮಾಸ ಪತ್ರಿಕೆ.

ಚಂದಾ (ವರ್ಗಣಿ) ರೂ. ೨—೦—೦

(ಶ್ರೀ ಶೃಂಗೇರಿ ಮಠದವರಿಂದಲೂ, ಮೈಸೂರು ಸರಕಾರದವರಿಂದಲೂ ಪೋಷಿಸಲ್ಪಡುತಲಿದೆ)

ಇದರಲ್ಲಿ:—

(೧) „ದಶೋಪನಿಷತ್ತು"ಗಳಿಗೂ ಕನ್ನಡ ಕಥಾರೂಪವಾದ ತಾತ್ಪರ್ಯ

(೨) „ಶ್ರೀ ಶಂಕರಾಚಾರ್ಯ ಚರಿತ್ರಕಾಲವಿಚಾರ"

(೩) „ಕನ್ನಡ ಭಾಷಾಮಯಧರ್ಮಸಿಂಧುಸಾರ" (೩೫೩ ವಿಷಯಗಳಿವೆ)

(೪) „ಸಂಧ್ಯಾವಂದನೆಯ ಅರ್ಥ ವಿಚಾರ" (ಬಹುಯುಕ್ತಿ ಪ್ರಮಾಣಗಳಿಂದೊಡಗೂಡಿದೆ)

(೫) „ಬಾಲಕರ ಭಂಡಾರ" (ನೀತಿ ಕಥೆಗಳು, ನೀತಿಶ್ಲೋಕಗಳು, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯೆ, ಒಗಟು, ನ್ಯಾಯ ಮುಂತಾದವುಗಳು)

(೬) „ಕುಮಾರ ಸಂಭವ ಕಾವ್ಯ" ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ ವಿಗ್ರಹ, ದಾತುರೂಪ, ಧಾತ್ವರ್ಥ, ವಿಶೇಷಾಂಶಗಳೊಂದಿಗೆ.

(೧೨-೮-೧೯೧೧)ರಲ್ಲಿ ಆರಂಭವಾಗಿ ನಡೆಯುತ್ತಲಿದೆ.

ಚಂದಾ (ವರ್ಗಣಿ)ದಾರರಿಗೆ ಹಿಂದಿನ ಸಂಚಿಕೆಗಳೆಲ್ಲ ದೊರೆಯುತ್ತವೆ.

ವಿಲಾಸ (ಪತ್ರ) ದೊಡ್ಡಬೆಲೆ, ನಾರಾಯಣ ಶಾಸ್ತ್ರಿ.

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು. ಬಿಡಬೇಡಿರಿ!!!

೧ನೇದು ರೂ. 2—8—0 ಮಾತ್ರ! ೨ನೇದು ರೂ. 3—8—0 ಮಾತ್ರ!! ೩ನೇದು ರೂ. 6—0—0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪ್‌ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರೆಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂಥಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2—8—0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ, ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು. ಕ್ರಯ ರೂ. 2—8—0. ವಿ. ಪಿ. ಪಿ. ಚಾರ್ಜು 0-4-0.

2. ರೈಲ್ವೆ ರೆಗ್ಯುಲೇಟರ್ ಲೀವರ್ ಜುವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪ್ ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಚಕ್ರಗಳಲ್ಲಿಯೂ ಕೆಂಪು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸುಡೋಮು ಸಹಾ ಇರುತ್ತವೆ. ಕ್ರಯ ರೂ. 3—8—0. ವಿ. ಪಿ. ಪಿ. ಚಾರ್ಜು ಆಣೆ 4.

3. ಲೇಡೀಸ್ ಸಿಲ್ವರ್ ವಾಚ್.

ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು, ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು. ಕ್ರಯ ರೂ. 6. ವಿ. ಪಿ. ಆ. 6.

ಅಮ್ರೋರಾ ಸಿಲ್ವರು ಗಡಿಯಾರದ ಸರಪಣಿ. ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ ಶುದ್ಧವಾಗಿಯೂ ಇರುತ್ತದೆ. ಕ್ರಯ ರೂ. ೦—8—೦. ವಿ. ಪಿ. ಪಿ. ಚಾರ್ಜು ಆಣೆ 4.

ಬಹುಮಾನ—ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು. ಟಪ್ಪಾಲ್ ಚಾರ್ಜು ಇನಾಮು:—ಒಂದೇ ನಮೂನೆಯಲ್ಲಿ 6 ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ.ಪಿ. ಪಿ. ಚಾರ್ಜು ಇಲ್ಲದಂತೆ ಕಳುಹಿಸುವೆವು. ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ರೂ. 1 ನ್ನು ಮನಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 8 ಆ. ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:— ಟಿ. ಸಿ ನಾಗಲಿಂಗಪ್ಪ ಅಂಡ್ ಕಂಪೆನಿ,
ನಂಬ್ರ ೨೦ ಶಿಂಗಣ್ಣನ್ ಬೀದಿ, ಮದರಾಸು.

"ಬೆಸ್ಟ್ ಲ್ಯಾಟ್ಸ್"
ಎಂಬ
ಗ್ಯಾಸ್ ದೀಪಗಳು


ಕ್ರಯ ರೂ. 16.


ಕ್ರಯ ರೂ. 20.

ಕ್ರಯ ರೂ. 16

ಕೆರೊಸಿನ್ ಎಣ್ಣೆಯ ದೀಪಗಳಂತೆ ಹೊಗೆಯಿಂದ ಪ್ರಕಾಶವು ಮೊಬ್ಬಾಗದೆ ಘಾಳಿಯ ಶಳವಿನಿಂದ ನೊಂದಿ ಹೋಗದಂಥವುಗಳು. ಈ ದೀಪಗಳನ್ನುರಿಸಲು ಕೆರೊಸಿನ ಎಣ್ಣೆಯ ದೀಪಗಳಷ್ಟೇ ಖರ್ಚು ತಗಲುವುದು.

ದೇವಾಲಯ ವಾಚಕ ಮಂದಿರ ವ್ಯಾಪಾರದ ಅಂಗಡಿ ಭಂಡಸಾಲೆಗಳಿಗೆ ದೀಪದ ಪ್ರಕಾಶದ ಶೋಭೆಯು ಅಧಿಕವಾಗಿ ಬೇಕಾದ ಎಲ್ಲಾ ಕಡೆಗಳಲ್ಲಿ ಅತ್ಯುಪಯುಕ್ತವಾದವು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಮೆಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದ. ಕ.

Printed & published by V. S. Kamath, at the Mangalore Trading Association's Sharada Press, Mangalore

Registered No M. 498.

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 3.

ಮಂಗಳೂರು ತಾ. 19ನೇ ಶುಕ್ರವಾರ ಜನವರಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳುಕಡಿತ, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಫರ್ಸ್ಟ್ ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ ಮತ್ತು ಮೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ಎಂಡ್. ಎಸ್. ಎಂಡ್. ಜಿ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೇಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ:—ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ ಎಸ್ಟೇಟು, ಕೊಡಗು:—ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ್ ವಾಂದ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—ನಿಮ್ಮಿಂದ ಪಡಕೊಂಡ ಅಮೃತಾಂಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.

ಅಮೃತಾಂಜನ ಚರ್ಚಿತವಾದ ರೋಮದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಶಳಿಯೂ ಬಾರದಂತೆ ನೋಡಿಕೊಂಡು, ಶಳಿ ಇಲ್ಲದ ಸ್ಥಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. ಎಮ್. ಎಂಡ್. ಎಸ್., ಮುಂಬಯಿ, ಬರಿಯುವದೇನಂದರೆ:—ನಿಮ್ಮ ಅಮೃತಾಂಜನವನ್ನು ನಾನು ವಾತಕ್ಕೂ ಸಂಧಿವಾತಕ್ಕೂ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿದ್ದಲ್ಲಿ ಬಹಳ ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ ತಿಳಿಸುತ್ತೇನೆ.

ಜಾಗ್ರತೆ:--ಈಗ ಅಮೃತಾಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಲ್ಪಟ್ಟಿರುತ್ತದೆ.

ವಿಳಾಸ:— ಅಮೃತಾಂಜನ ಡಿಪೋ,
109 ಫ್ರೇಯರ್ ರೋಡ್, ಫೋರ್ಟ್ ಮುಂಬಯಿ.
ಟೆಲಿಗ್ರಾಫ್ ಎಡ್ರೆಸು:—ಅಮೃತಾಂಜನ, ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ರಕ್ತವೃದ್ಧಿ, ಬಾಟ್ಲಿ 1ಕ್ಕೆ 1ರೂಪಾಯಿ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೊಲೆರಾ ಮಾತ್ರೆ.

ಕೋಲೆರಾ, ವಾಂತಿಭೇದಿಗಳ ಮೇಲೆ ಬಹಳ ಉತ್ತಮ ಔಷಧ. ಕ್ರಯ 6ಆಣೆ.

ನೇತ್ರಾಂಜನ.

ಮಂದದೃಷ್ಟಿಯನ್ನೂ ಕಣ್ಣುನೋವನ್ನೂ ಗುಣಪಡಿಸುವದು. ಕ್ರಯ 4ಆಣೆ.

ಕೇಶವರ್ಧನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

ಜುಲಾಬು ಮಾತ್ರೆ 8 ಆಣೆ; ಪ್ರಮೇಹಮಿಶ್ರಣ 1ರೂಪಾಯಿ; ಕಫಹಾರಿ 1 ರೂಪಾಯಿ 4 ಆಣೆ; ಕಫನಾಶಕ ಚೂರ್ಣ 8 ಆಣೆ; ಜಂತುವಾತಹಾರಿ 8 ಆಣೆ.

ವಿಳಾಸ:—
ವಿಲಿಯಂ ಮತ್ತು ಕಂಪೆನಿ,
109 ಫ್ರೇಯರ್ ರೋಡ್,
ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—
ಅಮೃತಾಂಜನ, ಮುಂಬಯಿ.

RYMOND'S INDIAN INK.

ಅತ್ಯುತ್ತಮವಾದ ನೀಲಿಕಪ್ಪುಶಾಯಿಯ ಪೊಟ್ಟಣಗಳು ನೂರಕ್ಕೆ 0—8—0 ಬರುವ ತಿಂಗಳ ಆಖೈರ್ ವಳಗೆ ಕೊಂಡುಕೊಳ್ಳುವವರಿಗೆ ಮಾತ್ರ ಆಣೆ 0—6—0 ಟಪ್ಪಾಲ್ ಚಾರ್ಜು ಆಣೆ 0—3—0.

ನೀಲಿಕಪ್ಪು, ಕೆಂಪು, ಹಸರು, ಊದಾ ಬಣ್ಣದ ಶಾಯಿ 24 ಗುಳಿಗೆಗಳ ಡಬ್ಬಿಗೆ 0-2-6. 24 ಹಾಳೆಗಳ ಕಟ್ಟಿಗೆ 0-2-6. ರಖಂ ಗಿರಾಕಿಗಳಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಏಜಂಟರು ಬೇಕು.

ರಾಯ್ಮಂಡ್ ಎ. ಮಿನೇಜಸ್.

ಪುತ್ತೂರು, ದ. ಕ.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು.

ಆತಂಕ ನಿಗ್ರಹ

ಗುಳಿಗೆಗಳು.

30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ತಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—„ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ, 22 ಬ್ರಾಡ್ವೇ ಮದರಾಸು. } ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಮತ್ತು ಜಾಮ್ ನಗರ ಕಾತ್ಯಾವಾರ್.

ವಿಂಟರ್ ಕಂಪೆನಿಯವರ

"ಆಯೊಡ್ಯಾಡ್ ಸರ್ಸಪರಿಲ್ಲಾ"

ಪ್ರಸಿದ್ಧವಾದ ಡಾಕ್ಟರುಗಳಿಂದ ಪರೀಕ್ಷಿಸಲ್ಪಟ್ಟಿದೆ.

"ಈ ಔಷಧಿಯನ್ನು ಹಲವು ರೋಗಿಗಳ ಮೇಲೆ ಉಪಯೋಗಿಸಿ ಖಾತ್ರಿಯಾದ ನಂತರ ತಮ್ಮ ಮುಂದೆ ಇಟ್ಟಿರುತ್ತೇವೆ."

"ಸಾವಿರಾರು ಜನರು ಗುಣಹೊಂದಿರುತ್ತಾರೆ" ಮುಖ್ಯವಾಗಿ ಈ ರೋಗಗಳ ಮೇಲೆ ತಯಾರಿಸಲ್ಪಟ್ಟದ್ದಾಗಿರುತ್ತದೆ.

ರಕ್ತ ಕೆಡುವದರಿಂದ ಉಂಟಾಗುವ ಭಯಂಕರ ರೋಗಗಳು, ಪ್ರಮೇಹ, ಮೇಹ, ಸಿಫಲಿನ್ ಕೈಕಾಲುಗಳ ಸಂದು ಹಿಡಿಯುವದು ಖಜ್ಜಿ ಕಪ್ಪು ಕಲೆಗಳು ಇವುಗಳ ಮೇಲೆ ಎಮ್ಮ ಔಷಧಿ ತೆಗದುಕೊಂಡಾಗ್ಯೂ ರೋಗವು ಸಂಪೂರ್ಣವಾಗಿ ನಿಲ್ಲಲಾರದು. ಇದರ ಸೇವನೆಯಿಂದ ಎಂಥಾ ಕಠಿಣ ರೋಗವಾದರೂ ನಾಶವಾಗುವದಲ್ಲದೆ ಮೈಯೊಳಗಿನ ಅಶಕ್ತತೆಯು ಹೋಗಿ ರಕ್ತವೃದ್ಧಿಯೂ ಆಗಿ ಧಾತು ಪುಷ್ಟಿಯಾಗುವದು. ಇದು ಹೆಂಗಸರಿಗೂ, ಗಂಡಸರಿಗೂ, ಬಹಳ ಉಪಯೋಗ ಉಳ್ಳದ್ದಾಗಿರುತ್ತದೆ. ಬಾಟ್ಲಿ ಒಂದರ ಕಿಮ್ಮತು ರೂ. 1—0—0. ಪೋಸ್ಟು ಖರ್ಚು 0—4—0.

ವಿಂಟರ್ ಮತ್ತು ಕಂಪೆನಿ.

ಸೋಲ್ ಏಜಂಟರು:—

ಕೆ. ಗೋಪಾಲ ರಾವ್,

ನಂಬ್ರ 3 ಕಂಟ್ರಾಕ್ಟರ್ ಬಿಲ್ಡಿಂಗ್.

ಗಿರಗಾಂ, ಮುಂಬಯಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.



ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು, ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿ ಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿ ಮಾಡಲ್ಪಡುವದು.

ಎಲ್ಲೂರು ರಾಮ ರಾವ್,

ಜನರಲ್ ಏಜಂಟ್,

ಬ್ರಿಟೋ ಬಿಲ್ಡಿಂಗ್ಸ್

ಮಂಗಳೂರು, ದ. ಕನ್ನಡ.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,

ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY

೧. ತಾವು ಏತ್ಕವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆ ಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗ್ರಮನಿಸಿರಿ. ಇದೇ ಕಾಶೀಕ್ಷೇತ್ರದಲ್ಲಿ ತಯೊರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮಿರದ ಶಾಲುಗಳೂ, ರುದ್ರಾಕ್ಷಿ ಇದು ೧೪ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಟಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಟಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**

Leading Silk Manufacturers, Benares City.

1912ನೇ ಇಸವಿಯ

ಪೌರ್‍ವಾಲ್ ಪೊಕೆಟ್ ಡೈರಿಗಳು.

1912ನೇ ಇಸವಿಯ ಡೈರಿಗಳು ತಯಾರಾಗಿರುತ್ತವೆ. ನಂಬರು 1, 0—4—0.

ನಂಬರು 2, ಮುಚ್ಚಳ ಮತ್ತು ಪೆನ್‌ಸಲ್ ಸಹಿತ 0—6—0. ಎಲ್ಲರಿಗೂ ಬೇಕಾದ ವಿಷಯಗಳು ಇದರಲ್ಲಿ ಅಡಗಿರುತ್ತವೆ. ವಟ್ಟಿಗೆ 1 ಡಜನ್ ಡೈರಿಗಳನ್ನು ತೆಗದುಕೊಳ್ಳುವವರಿಗೆ 2 ಡೈರಿಗಳನ್ನು ಬಹುಮಾನವಾಗಿ ಕೊಡುತ್ತೇವೆ. ಸ್ವಲ್ಪವೇ ಕೋಪಿಗಳು ಉಳದಿರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ನಮ್ಮ ಡೈರಿಗಳನ್ನು ತರಿಸಿಕೊಳ್ಳುವವರಿಗೆಲ್ಲಾ 1912ನೇ ಇಸವಿಯ ಕೆಲಂಡರುಗಳನ್ನು ಕಳುಹಿಸಿಕೊಡುತ್ತೇವೆ. ಪೋಸ್ಟ ಮುಖಾಂತರ ವಿ. ಪಿ. ತರಿಸಿಕೊಳ್ಳ ತಕ್ಕವರು ಡಜನ್ 1ಕ್ಕೆ 1ರೂಪಾಯಿ ಅಡ್ವಾನ್ಸ್ ಕಳುಹಿಸಿಕೊಡಬೇಕು

ಈ ಮೇಲ್ಕಂಡ ಡೈರಿಗಳು ಮಂಗಳೂರು ಊಲನ್ ಮಾರ್ಟಿನಲ್ಲಿ ದೊರಿಯುತ್ತವೆ.

ಎಲ್. ಎ. ಪೌರ್‍ವಾಲ್ ಅಂಡ್ ಕೋ,

ಬೆಂಗಳೂರು ಸಿಟಿ.

ನೂತನ ವಿಚಿತ್ರ

ದಂತ ಚಿತ್ರಗಳು.

ಆನೆಯ ಶುದ್ಧ ದಾಡೆಯಿಂದಲೇ ಅತಿ ವಿಲಾಸದಿಂದ ತಯಾರಿಸಿರುವ, ದೇವ, ದೇವಕಿಯರ (God & Goddess) ಗೊಂಬೆಗಳು ಈಗಲೇ ತರಿಸಿರುವೆವು. ಇವುಗಳು ಗಡಿಯಾರ ಸರಪಣಿ, ಹಾರ ಮೊದಲಾದ ಕಂಠಾಭರಣಗಳ ನಡುವೆ, ಬಲು ಭೂಷಣವಾಗಿಯೂ ಪೂಜೆಗೆ ಅತ್ಯಂತ ಅರ್ಹವಾದವುಗಳಾಗಿಯೂ ಇರುತ್ತವೆ. ಬೆಲೆಯು ರೂಪಾಯಿ ೧ರಿಂದ ೪ರ ವರೆಗೆ. ಆಯಾಯ ಚಿತ್ರಗಳ ನಮೂನೆ ಮತ್ತು ಪರಿಮಾಣದ ಮೇಲೆ ಹೊಂದಿರುತ್ತದೆ.

ನಮ್ಮ ಸುಗಂದ ದ್ರವ್ಯಗಳಿಗೆ ಆರ್ಡರು ಕೊಡುತ್ತಿರುವ ವೇಳೆಯಾದರೂ, ಮಾದರಿಗಾಗಿ ಒಂದೊಂದು ಚಿತ್ರಗಳನ್ನು ತರಿಸಿ ನೋಡಿರಿ.

ನಮ್ಮ ಏಜಂಟರು:— ಮ. ಟಿ. ಸುಬ್ಬಣ್ಣ ಭಟ್ಟರು, ಹೆಡ್ ಮಾಸ್ತರ್, ಮಿತ್ತನಡ್ಕ, ಉಪ್ಪಿನಂಗಡಿ ತಾಲೂಕು.

ವಿಳಾಸ:— ಎನ್. ಎಂ. ಸುಬ್ರಾವ್, "ಸುಗಂಧವಿಲಾಸ" ಮಂಗಳೂರು.

ಪುಷ್ಕಳವಾದ ಕೂದಲು.

ಪ್ರಾಚೀನ ಕಾಲದಿಂದಲೂ ಕವಿಗಳು ಸ್ತ್ರೀಯರ ಕೂದಲಿನ ವಿಕಾಸವನ್ನು ಹೊಗಳಿದ್ದಾರೆ; ಅದು ನಿಜವಾಗಿಯೂ ಮನಸ್ಸನ್ನು ಸೆಳೆಯುವಂಥಾದ್ದೇ ಸರಿ. ಅವರ ಕೂದಲು ಕೊರತೆಯಾಗಲು ಕಾರಣವೇ ಇಲ್ಲ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ. ಅದು ಬೋಳು ತಲೆಯಲ್ಲಿ ಕೂದಲು ಬೆಳಸುವುದು. ಇದರ ಸ್ವಭಾವವು ಕೂದಲಿನ ಬೇರನ್ನು ತನಿಮಾಡಿ ಬೆಳಸುವುದಾಗಿದೆ; ತಲೆಯಲ್ಲಿ ತಂಪನ್ನುಂಟುಮಾಡುವುದು. ಕಾಮಿನಿಯಾ ಎಣ್ಣೆಯು ಕೂದಲನ್ನು ಸುಕುಮಾರವಾಗಿ ಪೋಷಣೆ ಮಾಡುತ್ತದೆ. ಅದು ಬಹು ಸುಗಂಧಮಯವಾದ ಮನೋಹರವಾದ ಎಣ್ಣೆ. ಕಾಮಿನಿಯಾ ಎಣ್ಣೆ ಕೂದಲನ್ನು ಸ್ವಭಾವಯುಕ್ತವಾಗಿಯೂ ಕೋಮಲವಾಗಿಯೂ ಪುಷ್ಕಳವಾಗಿಯೂ ಜಾಗ್ರತೆಯಾಗಿಯೂ ಬೆಳೆಯಮಾಡುತ್ತದೆ. ಅದು ಕೂದಲು ಉದುರಿಹೋಗುವುದನ್ನು ತಡೆಮಾಡುತ್ತದೆ. ಇದೆಲ್ಲಾ ಖಂಡಿತವಾದ ಮತ್ತು ಅತ್ಯಂತ ತೃಪ್ತಿಕರವಾದ ಫಲಗಳಾಗಿವೆ.

!! ವಾರಕ್ಕೆ ಎರಡು ಮೂರು ಸಲ ಈ ಎಣ್ಣೆಯನ್ನು ಹಚ್ಚಿ ಮೃದುವಾಗಿ ತಿಕ್ಕುತ್ತಿದ್ದರೆ ಬೋಳಾಗಿರುದ ಭಾಗದ ಕೂದಲು ಬೇರು ತಂಪಾಗಿ ತನಿಯಾಗಿ ಬಹು ಸೊಂಪಾಗಿ ಬೆಳೆಯುವುದಲ್ಲದೆ ಎಲ್ಲಾ ತರದ ನವೆಯನ್ನೂ ಹೋಗಲಾಡಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಬೇರುಗಳಿಗೆ ತನಿಯಿಲ್ಲದೆ ಕೂದಲು ಉದುರಿ ಹೋಗುವುದು. ಕಾಮಿನಿಯಾ ಎಣ್ಣೆಯೇ ಅದಕ್ಕೆ ಅಗತ್ಯವೂ ಅನುಕೂಲವೂ ಆದ ಆಹಾರ; ಇದನ್ನು ಉಪಯೋಗಿಸಿ ನೋಡಿರಿ.

ಕ್ರಯದ ದರಗಳು:—I ಸೀಸೆಗೆ ರೂ. I; ವಿ. ಪಿ. ಚಾರ್ಜು ಬೇರೆ 4 ಆಣೆ.

ವಿಳಾಸ:—ಏಜಂಟರು, ದಿ. ಊಲನ್ ಮಾರ್ಟ್; ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂರು ಕಜ್ಜಿ, ಅಜೀರ್ಣತೆ, ಮಲಬದ್ಧತೆ ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0 ಮೂರು ಬಾಟ್ಲಿಗಳಿಗೆ 2—0—0. 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕಾರಕ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ I—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಒಳಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು	ರೂ. 0—4—0
ಸರ್ಸಪರಿಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ I—4—0
ದಂತ ಚೂರ್ಣ:—ಹಲ್ಲುಗಳು ಭದ್ರವಾಗುತ್ತವೆ	„ 0—4—0
ರೋಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	„ 0—8—0

ವಿಕರಿಗೆ ಸಿದ್ಧವಾಗಿದೆ. ಶಿವಸಾಯುಜ್ಯಕ್ಕೆ ಸುಲಭ ಸೋಪಾನ. ಹೊಸ ಗ್ರಂಥ.

ಶ್ರೀ ಶಿವಗೀತಾ

ಆಕಾರ:—ಕ್ರೌನ್ ಅಷ್ಟಪುಟ ೨೪೦ ಪುಟಗಳು. (ಎರಡನೇ ಮುದ್ರಣ)

ಭಾಷ್ಯಂ ತಿರುಮಲಾಚಾರ್ಯ

ಪ್ರಣೀತ ಕನ್ನಡ ಟೀಕಾಸಹಿತವಾಗಿ

ಪಂಡಿತರಿಂದ ಪರಿಶೋಧಿಸಲ್ಪಟ್ಟು ಪ್ರಕಟಿಸಲ್ಪಟ್ಟಿದೆ.

೧ನೇ ಜಾತಿ ಪ್ರತಿ ಒಂದಕ್ಕೆ ಕ್ರಯ ಆಣೆ ೧೨. ೨ನೇ ಜಾತಿ ಪ್ರತಿ ೧ಕ್ಕೆ ಆಣೆ ೮.

ಟಪ್ಪಾಲುವೆಚ್ಚ ಬೇರೆಯಾಗಿ ಕೊಡಬೇಕಾಗಿರುವುದು.

ಇದು ಪದ್ಮ ಪುರಾಣೋಕ್ತವಾದ ಬ್ರಹ್ಮವಿದ್ಯಾಪ್ರತಿಪಾದಕವಾದ ಉಪನಿಷದ್ರತ್ನವು. ಇದಕ್ಕೆ ಬಾಲಾನಂದಿನೀ ಎಂಬ ಪ್ರೌಢವಾದ ವ್ಯಾಖ್ಯಾನಕ್ಕನುಸಾರವಾಗಿ ಟೀಕು ಬರದಿರುವುದು. ಈ ಶಿವಗೀತಾಶಾಸ್ತ್ರವನ್ನು ಪಾರಾಯಣಮಾಡಲು ಎಲ್ಲರೂ ಅಧಿಕಾರಿಗಳಾಗಿರುತ್ತಾರೆ.

"ಏವಂ ಮಯಾ ಸಮಾಸೇನ ಶಿವಗೀತಾ ಸಮೀರಿತಾ ||
ಏತಾಂ ಯಃ ಪ್ರಜಪೇನಿತ್ಯಂ ಶೃಣುಯಾದ್ವಾಸ ಮಾಹಿತಃ |
ಏಕಾಗ್ರಚಿತ್ತೋಯೋಮರ್ತ್ಯಃ ತಸ್ಯಮುಕ್ತಿಃ ಕರೇಸ್ಥಿತಃ ||

ಎಂದರೆ ಹೀಗೆ ಶಿವಗೀತೆಯನ್ನು ಸಂಗ್ರಹವಾಗಿ ನಿನಗೆ ಹೇಳಿದೆನು. ಯಾವನು ಇದನ್ನು ಓದುತ್ತಾನೋ, ಕೇಳುತ್ತಾನೋ, ಯಾವನು ಇದನ್ನು ಏಕಾಗ್ರಚಿತ್ತನಾಗಿ ಪಾರಾಯಣ ಮಾಡುತ್ತಾನೋ ಅವನಿಗೆ ಮುಕ್ತಿಯು ಅಂಗೈಯಲ್ಲಿದೆಯೆಂಬದಾಗಿ ಶ್ರೀಶಿವಗೀತಾ ಶಾಸ್ತ್ರದ ಮಹಿಮೆಯು ಆ ಗ್ರಂಥದಲ್ಲಿ ಹೇಳಲ್ಪಟ್ಟಿರುವುದಾಗಿ ಈ ವಿಷಯದಲ್ಲಿ ಹೆಚ್ಚಾಗಿ ಹೇಳಬೇಕಾದುದು ಯಾವುದೂ ಇರುವುದಿಲ್ಲ.

ಮುಖ್ಯವಾಗಿ ಇದು ಶ್ರೀರಾಮದೇವರಿಗೆ ಅಗಸ್ತ್ಯೋಪದೇಶದಿಂದ ಪರಮ ಶಿವಗಿ ಪ್ರಸಾದವುಂಟಾಗಿ ಲೋಕನಾಥನಾದ ಮಹಾದೇವನು ದರ್ಶನಕೊಟ್ಟು ಸಾಕ್ಷಾತ್ತಾಗಿ ಪಾಶುಪತಾಸ್ತ್ರದಾನವನ್ನು ಮಾಡಿದಾಗ ಉಪದೇಶಿಸಿದ ಮೋಕ್ಷ ಶಾಸ್ತ್ರವಾಗಿರುತ್ತಿದೆ. ಪರಮ ಕಾರುಣಿಕನಾದ ಭಕ್ತವತ್ಸಲನಾದ ಪಾರ್ವತೀಪತಿಯಾದ ಜಗದ್ಗುರುವಾದ ಸದಾಶಿವನಲ್ಲಿ ತ್ರಿಕರಣ ಶುದ್ಧವಾಗಿ ಭಕ್ತಿಯನ್ನು ಮಾಡಿ ಅವನ ಕಟಾಕ್ಷವನ್ನಪೇಕ್ಷಿಸುವ ಸಮಸ್ತ ಆಸ್ತಿಕ ಮಹಾಜನರೂ ಖಂಡಿತವಾಗಿ ತಪ್ಪದೇ ಈ ಗ್ರಂಥವನ್ನು ತೆಗೆದು ಓದಿ ಮನನ ಮಾಡಬೇಕು.

ಇದು ಶ್ರೀಭಗವದ್ಗೀತೆಯಂತೆ ಪಾರಾಯಣಾರ್ಹವಾದ ಗ್ರಂಥವು. ಗೀತೆಯ ಚರಮೋಪದೇಶವು ಇದರಲ್ಲಿವುದು. ಅಷ್ಟುಮಾತ್ರವೇ ಅಲ್ಲ; ಮುದ್ರಣ ಮೊದಲಾದ ಎಲ್ಲಾ ವಿಷಯದಲ್ಲೂ ಬಹಳ ತೃಪ್ತಿಕರವಾಗಿರುವಂತೆ ಮಾಡಿದೆ.

ವಿಳಾಸ:— ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸ್ವದೇಶಿಲೈಫ್ಎಶ್ಯುರೆನ್ಸ್‌ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮುಲ್ದಾಸರವರು. (ಜೆ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20–6–0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಬ್ಬಿಕಾರ ಬ್ರದರ್ಸ್, ಉಡುಪಿ,

ಚೀಫ್ ಏಜಂಟ್ಸ್:— ಮಲಬಾರ ಮತ್ತು ದಕ್ಷಿಣ ಕನ್ನಡ,

ಸುಮತಿ ಗ್ರಂಥಮಾಲೆ ೩.

ಬೆಕ್ಕೋಜಿ.

ಮುಂತಾದ ಕಥೆಗಳು. ಅನೇಕ ಚಿತ್ರಗಳಿಂದ ಕೂಡಿದೆ. (೧) ಬೆಕ್ಕೋಜಿಯ ಸಾಹಸ (೨) ಭೇತ ರಾಜನ ಶಾಪ ವಿಮೋಚನೆ (೩) ವಿಚಿತ್ರವಾದ ಟೀ ಪಾತ್ರೆ, (೪) ಮೂಗು ಕಣ್ಣುಗಳ ಜಗಳ—ಎಂಬೀ ಕಥೆಗಳು ಇಂಗ್ಲಿಷಿನಿಂದ ಬಲು ಸುಲಭವಾದ ಕನ್ನಡಕ್ಕೆ ತರ್ಜುಮೆಮಾಡಲ್ಪಟ್ಟಿವೆ. ಮಕ್ಕಳನ್ನು ನಗಿಸಿ ನಗಿಸಿ ನೀತಿಗಳನ್ನು ಹೇಳಿಕೊಡುತ್ತವೆ. ಪ್ರತಿ ಒಬ್ಬ ಬಾಲಕನೂ ಬಾಲಕಿಯೂ ಇದನ್ನು ಓದಲೇ ಬೇಕು.

ಬೆಲೆ: ೩ ಆಣೆ—ಸುಮತಿಯ ಚಂದಾದಾರರಿಗೆ ೨ ಆಣೆ.

ಸುಮತಿ ಗ್ರಂಥಮಾಲೆ ೨.

ಕನಕಾಲುಕಾ.

ಅಥವಾ ಕಮಲಿನೀ ಚರಿತ್ರಂ

ಪ್ರಸಿದ್ಧ ಆಂಗ್ಲೇಯ ಕವಿಯಾದ ಲಾರ್ಡ್ ಟೆನ್ನಿಸನ್‌ನಿಂದ ವಿರಚಿತವಾದ ಮತ್ತು ಮದ್ರಾಸ್ ಯುನಿವರ್ಸಿಟಿಯ ಬಿ. ಎ ಪರೀಕ್ಷೆಗೆ ಪಾಠಪುಸ್ತಕವಾಗಿ ಇಡಲ್ಪಟ್ಟಿದ್ದ "ದಿ ಕಪ್" ಎಂಬ ಪ್ರಖ್ಯಾತ ನಾಟಕವನ್ನು ಅವಲಂಬಿಸಿ ವಿರಚಿತವಾಗಿದೆ. ಸುಂದರ ತರಹಾದ ಚಿತ್ರಗಳಿಂದ ಅಲಂಕರಿಸಲ್ಪಟ್ಟಿದೆ. ನೀತಿಬೋಧಕವಾಗಿರುವದಲ್ಲದೆ ಮನೋರಂಜಕವಾಗಿದೆ. ಇದುವರೆಗೂ ಕನ್ನಡದಲ್ಲಿ ಇಂತಹ ನಾಟಕವನ್ನು ಯಾರೂ ಬರೆದಿಲ್ಲ. ಪದ್ಯಗದ್ಯಗಳು ಸುಲಭವಾದ ಹೊಸಕನ್ನಡದಲ್ಲಿ ಬರೆಯಲ್ಪಟ್ಟಿವೆ. ಯುವಕರಿಗೂ ಯುವತಿಯರಿಗೂ ಅತ್ಯುಪಯೋಗಿ. ಬೆಲೆ: ೬ ಆಣೆ, ಚಂದಾದಾರರಿಗೆ ೪ ಆಣೆ.

ಸುಮತಿ ಗ್ರಂಥಮಾಲೆ ೧

ಮೈಸೂರಿನ ದಿವಾನರಾಗಿದ್ದ ಪ್ರಸಿದ್ಧ ರಾಜ್ಯತಂತ್ರ ನಿಪುಣರಾದ

ರಂಗಾಚಾರ್ಲು ಸಿ. ಐ. ಇ.

ಯವರ ಜೀವನ ಚರಿತ್ರೆ.

ಯಂ. ವೆಂಕಟಕೃಷ್ಣಯ್ಯನವರಿಂದಲೂ ರಾಯ್‌ಬಹದ್ದೂರ್ ಅಂಬಿಲ್ ನರಸಿಂಹಯ್ಯಂಗಾರ್ಯರಿಂದಲೂ ಬರೆಯಲ್ಪಟ್ಟ ಪೀಠಿಕೆಗಳೊಡನೆ, ಸುಂದರವಾದ ಭಾವಚಿತ್ರದ ಸಹಿತ (ಪುಟ ೧೦೯)

ಮೈಸೂರಿನ ಈಗಿನ ದಿವಾನರಾದ ಮ| ಟಿ. ಆನಂದ ರಾವ್, ಬಿ. ಎ., ಸಿ. ಐ. ಇ. ಯವರು ಈ ಪುಸ್ತಕವು "ಬಹಳ ಸ್ವಾರಸ್ಯ"ವಾಗಿದೆ ಯೆಂದು ಹೇಳಿರುವರಲ್ಲದೆ ಅನೇಕ ಪ್ರತಿಗಳನ್ನು ಕೊಂಡುಕೊಂಡಿರುವರು. ಶೈಲಿಯು ಬಲು ಸುಲಭವಾಗಿದೆ. ಪ್ರತಿಯೊಬ್ಬ ದೇಶಾಭಿಮಾನಿಗೂ ಅತ್ಯಂತ ಅವಶ್ಯಕವಾದ ಪುಸ್ತಕ. ರಾಜಕೀಯ ಮತ್ತು ಸಂಪತ್ಸಂಬಂಧವಾದ ಅನೇಕಾಂಶಗಳನ್ನೊಳಗೊಂಡಿದೆ.

ಬೆಲೆ: ಚಂದಾದಾರರಿಗೆ 4 ಆಣೆ. ಇತರರಿಗೆ 6 ಆಣೆ.

ವಿಳಾಸ:—ಮ್ಯಾನೇಜರ್

ಸುಮತಿ ಗ್ರಂಥಮಾಲಾ, ಬೆಂಗಳೂರು ಸಿಟಿ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ರಂಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ ಬಾಟ್ಲಿಗೆ ರೂ. 1–8–0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು ದ. ಕ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 19ನೇ ಜನವರಿ 1912.

ಕಲ್ಕತ್ತೆಯಲ್ಲಿ ಜರಗಿದ ಏಕೇಶ್ವರವಾದಿಗಳ ರಾಷ್ಟ್ರೀಯ ಸಭೆಯು.

———o———

ಕಳದ ಬ್ರಹ್ಮೊ ಪರಿಷದದ ಅದ್ಯಕ್ಷರಾಗಿದ್ದ ನಮ್ಮ ಮಾನ್ಯ ನಗರ ನಿವಾಸಿ ಮ. ರಾ. ರಾ. ಉಳ್ಳಾಳ ರಘುನಾಥಯ್ಯನವರು ತಮ್ಮ ಭಾಷಣದಲ್ಲಿ ಬ್ರಹ್ಮ ಸಮಾಜದ ಭೂತ ಭವಿಷ್ಯಗಳನ್ನೂ ಜನಾಂಗದ ಪ್ರಗತಿಗೆ ಧರ್ಮವು ಎಷ್ಟು ಅವಶ್ಯವೆಂಬದನ್ನೂ ವಿವರವಾಗಿ ವರ್ಣಿಸಿದರು. ಈ ಸದ್ಗೃಹಸ್ಥರ ನಿಷ್ಕಪಟ ಭಾವವೂ ಅಕೃತ್ರಿಮ ಭಕ್ತಿ ವಿಶ್ವಾಸಗಳೂ, ಜರಾ, ವಿಯೋಗ, ಮತ್ತು ಲೋಕದ ಪರಿಹಾಸಗಳಿಗೆ ಬೆದರದ ಶಾಂತಚಿತ್ತವೂ ಪರಾರ್ಥಪರತೆಯೂ ಅವರ ಭಾಷಣದಲ್ಲಿ ವ್ಯಾಪಿಸಿವೆ. ಅವರ ಕೆಲವು ಅಭಿಮತಗಳನ್ನು ಮುಖ್ಯವಾಗಿ ಬ್ರಹ್ಮ ಧರ್ಮಾಭಿವೃದ್ಧಿಯ ಅಭ್ಯಂತರಗಳನ್ನು ಕುರಿತು ಅವರು ಆಡಿದ ಮಾತುಗಳನ್ನು ನಾವು ಪೂರ್ಣ ಒಪ್ಪದಿರಬಹುದು. ಆದರೆ ಅವರ ಯಥಾರ್ಥತೆಯು ಎಲ್ಲರು ಮನ್ನಿಸತಕ್ಕದ್ದಾಗಿದೆ.

ಅಧ್ಯಕ್ಷರು ಹೇಳುವಂತೆ ಯಾವ ಸುಧಾರಣೆಯಾದರೂ ನಿರಂತರವಾಗಿ ಬಾಳಬೇಕಾದರೆ ಅದಕ್ಕೆ ಧರ್ಮವನ್ನು ಅಸ್ಥಿವಾರವಾಗಿಡಬೇಕು; ಸ್ವಾರ್ಥವನ್ನಲ್ಲ. ಒಂದು ಜನಾಂಗದ ಮಹತ್ವವು ಜನರಲ್ಲಿರುವ ಸುಗುಣಗಳ ಮೇಲೆ ಹೊಂದಿರುವದು. ಧರ್ಮವು ಸರ್ವಗುಣಗಣಕ್ಕೆ ಅಸ್ಥಿವಾರ ಪ್ರಾಯವಾಗಿದೆ. ಬರೇ ಶುಷ್ಕ ಆಚಾರಗಳಲ್ಲಿ ಅಲ್ಲ; ಸದ್ವರ್ತನದಲ್ಲಿ ವ್ಯಕ್ತವಾಗುವ ಭಕ್ತಿಯೇ ಈ ಧರ್ಮದ ಅಂತರಾತ್ಮವು. ಆದಕಾರಣ ಭಾರತೀಯ ಜನಾಂಗದ ಅಭ್ಯುದಯವನ್ನು ಇಚ್ಛಿಸುವವನು ಧರ್ಮ ಸಂಸ್ಥಾಪನೆಯ ಮುಖಾಂತರವೇ ತನ್ನ ಉದ್ದಿಶ್ಯವನ್ನು ನೆರವೇರಿಸಶಕ್ತನಾಗುವನು. ಈ ವಿಷಯವನ್ನು ಅಂದರೆ ದೇಶೋನ್ನತಿಗೆ ಅವಶ್ಯಕರವಾದ ಧರ್ಮದ ವಿಶೇಷತ್ವವನ್ನು ಹಿಂದುಗಳು ಪೂರ್ವದಲ್ಲಿ ಅರಿತು ದ್ವಿಜರಿಗೆ ಬಾಲ್ಯದಲ್ಲಿಯೇ ಉಪನಯನಸಂಸ್ಕಾರವನ್ನು ನಿಯಮಿಸಿ ಮನುಷ್ಯ ಸ್ವಭಾವವು ಮೃದುವಾಗಿರುವ ಕಾಲದಲ್ಲಿ ಅದಕ್ಕೆ ಕಡಿವಾಣ ಹಾಕಿ ಸನ್ಮಾರ್ಗದಲ್ಲಿ ವರ್ತಿಸುವ ಏರ್ಪಾಡು ನಡಿಸಿದರು. ಪವಿತ್ರವಾದ ಪುನರ್ಜನ್ಮ ವಿಧಿಯ ಅರ್ಥವು ಮಾಜಿ ಅದರ ಉದ್ದಿಶ್ಯವು ವಿಫಲವಾದ ವಿಷಯವು ಅತಿ ಶೋಚನೀಯವಾಗಿದೆ.

ಈ ವಿಷಾದಕರ ಪರಿಣಾಮಕ್ಕೆ ಅಧ್ಯಕ್ಷರು ಕೊಡುವ ಕಾರಣವು ಯುಕ್ತವಾದದ್ದು. ಶಾಸ್ತ್ರಾಧ್ಯಯನವನ್ನು ದ್ವಿಜೇತರರಿಗೆ ನಿಷೇಧಿಸಿದ್ದರಿಂದ ಧರ್ಮಗ್ಲಾನಿಗೆ ಆಸ್ಪದವಾಯಿತೆಂದು ಅವರು ಅಭಿಪ್ರಾಯಪಡುವರು. ಜಾತಿಭೇದವಿಲ್ಲದೆ ಪ್ರತಿಯೊಬ್ಬನಲ್ಲಿಯೂ ಒಂದು ಆತ್ಮವನ್ನೂ ಆತ್ಮಿಕ ವಿಮೋಚನೆಯ ಆಕಾಂಕ್ಷೆಯನ್ನೂ ಪರಮೇಶ್ವರನು ನೆಟ್ಟಿರುವದರಿಂದ ಆಪಾರಲೌಕಿಕ ಜ್ಞಾನ ಭಂಡಾರಕ್ಕೆ ಎಲ್ಲರೂ ಭಾಗಿಗಳೆಂಬದು ಸ್ಪಷ್ಟವಾಗುವದು. ಇದಲ್ಲದೆ ಶಾಸ್ತ್ರಜ್ಞಾನವನ್ನು ಸರ್ವರಿಗೂ ತೆರದಿಟ್ಟಲ್ಲಿ ಕಾರಣಾಂತರದಿಂದ ಒಂದು ವರ್ಗಕ್ಕೆ ಈ ವಿಷಯಗಳಲ್ಲಿ ಅಸಡ್ಡೆ ಹುಟ್ಟಿದರೂ ಇನ್ನೊಂದು ವರ್ಗದವರು ಆ ದಿವ್ಯ ಜ್ಯೋತಿಯನ್ನು ಕಾಪಾಡ ಮಾರ್ಗವಾಗುವದು. ಇಂಗ್ಲಿಷ ಜನರು ಯಾರ ಧರ್ಮಶಾಸ್ತ್ರಗಳಲ್ಲಿಯಾದರೂ ಉನ್ನತ ವಿಚಾರಗಳನ್ನು ಕಂಡರೆ ಆ ಗ್ರಂಥವನ್ನು ತಮ್ಮ ಭಾಷೆಯಲ್ಲಿ ಪರಿವರ್ತಿಸಿ ತನ್ಮೂಲಕ ಅವನ್ನು ಇಂಗ್ಲಿಷು ಬಲ್ಲವರೆಲ್ಲರ ಕೈಗೆ ನಿಲುಕಿಸುವರು; ಇಂಗ್ಲಿಷ ಗ್ರಂಥ ಭಂಡಾರವನ್ನು ವೃದ್ಧಿಗೊಳಿಸುವರು. ಉಚಿತ ಎಲಿಮೆಂಟರಿ ವಿದ್ಯಾಭ್ಯಾಸ ಕಾನೂನನ್ನು ಏರ್ಪಾಡಿಸಲೆತ್ನೈಸುವ ಮಿ. ಗೋಖಲೆಯವರ ಪ್ರಯತ್ನವು ಜಾತಿಕುಲಭೇದವಿಲ್ಲದೆ ಸರ್ವರ ಜ್ಞಾನಚಕ್ಷುವನ್ನು ತೆರೆಯಬೇಕೆಂಬ ಕಾಂಕ್ಷೆಯಿಂದ ಪ್ರೇರಿತವಾಗಿದೆ. ಶಾಸ್ತ್ರ ಜ್ಞಾನಕ್ಕೆ ಸರ್ವರೂ ಸಮಭಾಗಿಗಳೆಂಬ ವಿಷಯವನ್ನು ಬುದ್ಧನಿಂದ ಬ್ರಹ್ಮಸಮಾಜ ಸ್ಥಾಪಕನಾದ ರಾಜಾ ರಾಮಮೋಹನರ್‍ಯಾಯ ವರೆಗೂ ಆಗ್ಯಾಗ್ಯೆ ಹುಟ್ಟಿದ ಮಹಾ ಪುರುಷರು ಬೋಧಿಸಿರುವರು.

ರಾಮ ಮೋಹನ ರ್‍ಯಾಯವರು ಸಾರಿದ ಮುಖ್ಯ ತತ್ವಗಳನ್ನು ಅಧ್ಯಕ್ಷರು ಅಪ್ಪಣೆ ಕೊಡಿಸಿರುವರು. ಪರಮಾತ್ಮನು ಸರ್ವಾಂತರ್ಯಾಮಿಯು, ನಮ್ಮ ಮೊರೆಯನ್ನು ಕೇಳಲು ನಮ್ಮ ಪಕ್ಕದಲ್ಲೇ ಇರುವನು: ಈ ವಿಶ್ವಾಸದಿಂದಲೂ ಯಥಾರ್ಥವಾದ ಶ್ರದ್ಧೆಯಿಂದಲೂ ಭಜಿಸುವವರಿಗೆ ಜಾತಿಕುಲ ಭೇದವಿಲ್ಲದೆ ಪ್ರಸನ್ನನಾಗುವನು. ಒಬ್ಬನಿಗೆ ಮೋಕ್ಷ ಮಾರ್ಗ ದೊರಕಲಿಕ್ಕೆ ಇತರರ ಮಧ್ಯಸ್ಥಿಕೆಯು ಅವಶ್ಯವಿಲ್ಲ. ಪರಮೇಶ್ವರನು ತಾನೇ ಅವನ ಹೃದಯವನ್ನು ಬೆಳಗುವನು. ಬಾಹ್ಯಾಚಾರ ವಿಧಿಗಳಿಂದ ಜ್ಞಾನೋದಯವಾಗದು. ಅವು ನಮ್ಮ ಮನಸ್ಸನ್ನು ಇತರ ಕಡೆಗೆ ಆಕರ್ಷಿಸುವದರಿಂದ ಬ್ರಹ್ಮಜ್ಞಾನಕ್ಕೆ ಅಭ್ಯಂತರಗಳೇ ಆಗಿವೆ ಹೊರತು ಸಹಾಯಗಳಲ್ಲ. ಪರೋಪಕಾರ ಜೀವನ ಪರಾರ್ಥಪರತೆಗಳೇ ಪರಮೇಶ್ವರನಿಗೆ ಪ್ರಿಯಕರ ಸೇವೆಯಾಗಿವೆ. ಪ್ರೇಮ ಭಕ್ತಿಯಿಂದ ಭಕ್ತವತ್ಸಲನು ವಶವಾಗುವನು. ಮಾನವ ಜ್ಞಾನವು ಪರಸಾಧನೆಗೆ ಮಾರ್ಗವಾಗಿದೆ. ಈ ಜನ್ಮದಲ್ಲಿ ನಾವು ಅನುಭವಿಸುವ ಸುಖದುಃಖಗಳು ಜೀವನವು ಕ್ಷಣ ಭಂಗುರವೆಂಬದನ್ನು ನಮಗೆ ತೋರಲಿಕ್ಕೆ ಬರುವವು. ಮೇಲೆ ಹೇಳಿದ ಧರ್ಮ ತತ್ವಗಳನ್ನು ವಿಶ್ವಾಸ, ಪ್ರೇಮ, ಪರೋಪಕಾರವೆಂಬ ಮೂರು ಶಬ್ದಗಳಲ್ಲಿ ಅಧ್ಯಕ್ಷರು ಚುಟುಕಾಗಿ ಸಂಗ್ರಹಿಸಿದರು.

ಬ್ರಹ್ಮಸಮಾಜವು ಇಷ್ಟುತನಕ ಪೂರೈಸಿದ ಕಾರ್ಯವೇನೆಂಬ ವಿಷಯವನ್ನು ಅಧ್ಯಕ್ಷರು ನಂತರ ತರ್ಕಿಸಿದರು. ತಾವು ಮಾಡಿದ ಪೇಚಾಟಕ್ಕೆ ತಕ್ಕ ಫಲವು ಎಷ್ಟು ಮಾತ್ರಕ್ಕೂ ದೊರಕಲಿಲ್ಲವೆಂದು ಇವರ ಭಾಷಣದಿಂದ ವ್ಯಕ್ತವಾಗುವದು. ದೇಶದ ಜಾತಿಭೇದ ಮತ್ಸರಗಳು ಇದಕ್ಕೆ ಕಾರಣವೆನ್ನುವರು. ಅನೇಕರಿಗೆ ಬ್ರಹ್ಮ ಸಮಾಜದ ತತ್ವಗಳು ಮನಸ್ಸಿಗೆ ಸರಿಕಂಡರೂ ಅವನ್ನು ಅಂಗೀಕರಿಸಿ ನಡಿಯುವಷ್ಟು ಮನೋದಾರ್ಢ್ಯವಿಲ್ಲದಿರುವದು ಇನ್ನೊಂದು ಕಾರಣ. ಆದರೂ ಈ ಕಂಟಕಗಳಿಂದ ಮನಗುಂದದೆ ರಾ. ರಘುನಾಥಯ್ಯನವರು ಭವಿಷ್ಯದಲ್ಲಿ ವಿಶ್ವಾಸವಿಟ್ಟಿರುವರು.

ದೇಶವು ಬ್ರಿಟಿಷ ಅಧಿಕಾರಕ್ಕೊಳಪಟ್ಟಂದಿನಿಂದ ಮೂಢ ಗ್ರಹಿಕೆಗಳೂ ಪರಜಾತಿ ವೈರವೂ ಕಡಿಮೆಯಾಗಿವೆ. ರೈಲ್ವೆ, ಸ್ಟೀಮರು, ವರ್ತಮಾನ ಪತ್ರಗಳು, ಇಂಗ್ಲಿಷು ಶಿಕ್ಷಣ ಇವೇ ಮೊದಲಾದವುಗಳ ಮೂಲಕ ದೇಶದ ಬೇರೆ ಬೇರೆ ಭಾಗಗಳ ಜನರಲ್ಲಿ ಸಂಪರ್ಕ ಬೆಳದು ಸಹಾನುಭೂತಿ ಸ್ನೇಹಗಳು ಹುಟ್ಟಿರುವವು. ಕ್ರಮೇಣ ಜಾತಿ ನಿರ್ಬಂಧಗಳು, ನಿಷ್ಪ್ರಯೋಜಕವಾದ ಮತ್ತು ಹಾನಿಕರವಾದ ಅನೇಕ ಕಟ್ಟಳೆಗಳು ಅದೃಶ್ಯವಾಗುತ್ತ ಬರುವವು. ಇದಲ್ಲದೆ ಜರ್ಮನಿ, ಅಮೇರಿಕಾ, ಇಂಗ್ಲಾಂಡು ದೇಶಗಳಲ್ಲಿ ನೆರದ ಲೋಕದ ಜನಾಂಗದ ಪ್ರತಿನಿಧಿಗಳ ಸಭೆಗಳು ಈ ಅನ್ಯೋನ್ಯ ಕಾಂಕ್ಷೆಯು ಎಲ್ಲಾ ಕಡೆಗಳಲ್ಲಿ ಹರಡಿದೆ ಎಂಬದಕ್ಕೆ ಕುರುಹು ಆಗಿವೆ. ತಮ್ಮ ಧರ್ಮ ಪ್ರಸರಣೆಗೆ ಅನುಕೂಲವಾದ ಈ ಶುಭಕರವಾದ ಕಾಲಚಿನ್ಹೆಯಿಂದ ತಾವು ಉತ್ತೇಜಿತರಾಗಬೇಕೆಂದು ಅಧ್ಯಕ್ಷರು ಅಪ್ಪಣೆ ಕೊಡಿಸಿದರು. ವಿಶೇಷವಾದ ಶ್ರದ್ಧೆಯಿಂದಲೂ ಆಸಕ್ತಿಯಿಂದಲೂ ಧರ್ಮ ಪ್ರಸಾರದಲ್ಲಿ ಉದ್ಯುಕ್ತರಾಗಬೇಕೆಂದೂ ಆಗ್ಯೆ ಜಯ ದೊರಕುವದೆಂದೂ ಸೂಚಿಸಿದರು. ಎಲ್ಲಾ ಕಾರ್ಯಗಳಲ್ಲಿ—ಮುಖ್ಯವಾಗಿ ಧರ್ಮ ಸಂಸ್ಥಾಪನಾ ಕಾರ್ಯದಲ್ಲಿ ಶ್ರದ್ಧೆಯೇ ಜಯಸಾಧನ.

ದೇಶದಲ್ಲಿ ವ್ಯಾಪಿಸಿದ ಜಾತಿಭೇದಗಳನ್ನು ಮತಭೇದಗಳನ್ನು ಜೋಡಿಸಲಿಕ್ಕಾಗಿ ಬ್ರಹ್ಮ ಸಮಾಜವು ಏರ್ಪಟ್ಟಿತು. ಪರಿಣಾಮದಲ್ಲಿ ಇದರಿಂದ ದೇಶದಲ್ಲಿ ಒಂದು ಮತವೂ ಒಂದು ಜಾತಿಯೂ ಹೆಚ್ಚಿತು. ಮಾತ್ರವಲ್ಲ ಬ್ರಹ್ಮಸಮಾಜದಲ್ಲಿಯೇ ಒಳಭೇದಗಳಾಗಿವೆ. ತಮ್ಮ ಸಮಾಜದ ಉಪಭೇದಗಳನ್ನು ಮಾಜಿ ತಾವು ಒಂದಾಗಿ ಪರರಿಗೆ ಬೋಧಿಸುವ ಐಕ್ಯಕ್ಕೆ ದೃಷ್ಟಾಂತವಾಗಿ ನಿಲ್ಲಬೇಕೆಂದು ಅಧ್ಯಕ್ಷರು ಸಭೆಯನ್ನು ಕೇಳಿಕೊಂಡರು. ಯಾಕಂದರೆ "ಒತ್ತಟ್ಟಾದರೆ ಬಾಳುವೆವು ಇತ್ತಂಡವಾದರೆ ಬೀಳುವೆವು."

ಬ್ರಹ್ಮ ಸಮಾಜವು ಸ್ಥಾಪಿಸಲ್ಪಡುವ ಮುಂಚೆ ಹಿಂದೂ ಧರ್ಮವು ಕ್ಷೀಣ ದೆಶೆಯನ್ನೈದಿತ್ತು. ಯುವಕರು ಕೊಲೇಜುಗಳಲ್ಲಿ ಇಂಗ್ಲಿಷ ವಿದ್ಯಾಭ್ಯಾಸದೊಡನೆ ಆಗ್ಯೆ ಯುರೋಪದಲ್ಲಿ ಹರಡಿದ್ದ ನಾಸ್ತಿಕ ಮತಗಳನ್ನು ಕಲಿತರು. ಆಗ್ಯೆ ರಾಮಮೋಹನ ರ್‍ಯಾ ಎದುರು ಬಂದು ಜನರಲ್ಲಿ ಭಕ್ತಿ ವಿಶ್ವಾಸಗಳನ್ನು ಉದ್ದೀಪಿಸಿದರು. ನಾಸ್ತಿಕರಲ್ಲದವರು ಸ್ವಧರ್ಮ ಮಹತ್ವವನ್ನು ತಿಳಿಯದೆ ಕ್ರೈಸ್ತ ಮತವನ್ನು ಹೆಚ್ಚೆಚ್ಚಾಗಿ ಅವಲಂಬಿಸುತ್ತಿದ್ದರು. ಬ್ರಹ್ಮ ಸಮಾಜವು ಇದಕ್ಕೆ ತಡೆಕಟ್ಟಿತು. ರಾಮಮೋಹನ ರ್‍ಯಾ, ಕೇಶವ ಚಂದ್ರಸೇನ, ದೇವೇಂದ್ರನಾಥ ಠಾಗೋರ ಮುಂತಾದ ಮಹಾತ್ಮರು ಎದ್ದು ಹೊಸದೊಂದು ಧರ್ಮ ಬೋಧಿಸಿದೊಡನೆ ಹಿಂದೂ ಧರ್ಮಾಭಿಮಾನಿಗಳು ನಿದ್ದೆ ತಿಳಿದು ತಮ್ಮ ಶಾಸ್ತ್ರವನ್ನು ಓದ ತೊಡಗಿದರು. ಸನಾತನ ಧರ್ಮಕ್ಕೆ ಚಿಗುರು ಹುಟ್ಟಿತು. ಹಿಂದೂ ಮತಾನುಯಾಯಿಗಳನ್ನು ನಾಸ್ತಿಕ್ಯದಿಂದಲೂ ಪರಧರ್ಮಗಳಿಂದಲೂ ರಕ್ಷಿಸಿ ಹಿಂದೂ ಮತಾಧ್ಯಯನಕ್ಕೆ ಉತ್ತೇಜನಕೊಟ್ಟು ಬ್ರಹ್ಮ ಸಮಾಜವು ಮಹದುಪಕಾರವನ್ನೆಸಗಿತು. ಸಮಾಜದೊಳಗೆ ಇದ್ದವರನ್ನು ಗಣಿಸಿ ಅಲ್ಲ ಹೊರಗೆ ಇರುವವರಲ್ಲಿ ಎಷ್ಟು ಮಂದಿಗಳನ್ನು ಬ್ರಹ್ಮ ಸಮಾಜವು ಮಾನಸಾಂತರ ಗೊಳಿಸಿತು ಎಂಬದನ್ನು ಸಹ ನೋಡಿ ಅದರ ವರ್ಚಸ್ಸವನ್ನು ಎಣಿಸಬೇಕು. ಆದಕಾರಣ ತಾವು ಇಷ್ಟರ ವರೆಗೆ ಮಾಡಿದ ಕಾರ್ಯವನ್ನು ಎಣಿಸಿ ಬ್ರಹ್ಮ ಸಮಾಜದವರು ಸಂತುಷ್ಟಪಡ ಕಾರಣವದೆ. ಆದರೆ ಈ ಕಾರ್ಯವು ಚನ್ನಾಗಿ ಸಾಗಬೇಕಾದರೆ ಅಧ್ಯಕ್ಷರು ಅಪ್ಪಣೆಕೊಡಿಸಿದಂತೆ ನಿರಂತರ ಶ್ರದ್ಧೆಯು ಅತ್ಯವಶ್ಯಕ.

———o———

ಸಾರ್ವಭೌಮರ ಆಗಮನದ ಫಲಗಳು.

ಪ್ರಜಾವತ್ಸಲ ಜೋರ್ಜ ಸಾರ್ವಭೌಮರ ಆಗಮನದಿಂದ ಹಿಂದೂ ದೇಶಕ್ಕೆ ದೊರಕಿದ ಫಲಗಳು ಅನೇಕವಾಗಿವೆ. ಇವಲ್ಲಿ ಕೆಲವನ್ನು ಮಾತ್ರವೇ ಕುರಿತು ಇಲ್ಲಿ ಪ್ರಸ್ತಾಪಿಸುವೆವು. ವಂಗವಿಭಾಗದನಂತರ ದೇಶದ ಶಾಂತಿಭಂಗ ಸುರುವಾಯಿತೆಂದೂ ಆಗ್ಯೆ ಕೆಲವು ಯುವಕರು ಭ್ರಾಂತರಾಗಿ ಮಾಡಿದ ಅಪರಾಧಗಳಿಂದ ದಿಗಿಲುಪಟ್ಟು ಇಡೀ ದೇಶದಲ್ಲಿ ರಾಜದ್ರೋಹವು ಹಬ್ಬಿತೆಂದು ಅಧಿಕಾರಿಗಳು ಅನುಮಾನಿಸಿ ದೇಶೀಯರಲ್ಲಿ ವಿಶ್ವಾಸವಿಡದೆ ಹೋದರೆಂದೂ ಇದರ ನಿಮಿತ್ತ ನಿರಪರಾಧಿ ಪ್ರಜೆಗಳು ಸಹ ಹೆಚ್ಚಿನ ಚಿಂತೆಯನ್ನೂ ಸಂಕಷ್ಟಗಳನ್ನೂ ಅನುಭವಿಸಬೇಕಾಯಿತೆಂದೂ ವಾಚಕರು ತಿಳಿದಿರುವರು. ವಂಗವಿಭಾಗವನ್ನು ವಜಾ ಮಾಡಿಸಲಿಕ್ಕೆ ತಾವು ಮಾಡಿದ ಕಾಯಿದೆಶೀರ ಚಳವಳವು ವ್ಯರ್ಥವಾದದ್ದನ್ನು ಕಂಡು ಪ್ರಜೆಗಳು ಅಧಿಕಾರಿಗಳಲ್ಲಿ ವಿಶ್ವಾಸವನ್ನು ಕಳಕೊಳ್ಳ ತೊಡಗಿದರು. ಈ ಪರಸ್ಪರ ಅವಿಶ್ವಾಸದ ನಿಮಿತ್ತ ತಪ್ಪು ಗ್ರಹಿಕೆಯು ಬೆಳದು ಅತ್ಯುಕ್ತಿಗಳು ಹುಟ್ಟಿ ಹಿಂದೂ ದೇಶದಲ್ಲಿ ರಾಜದ್ರೋಹ ತುಂಬಿತೆಂದು ಇಂಗ್ಲಿಷರು ನೆನಸಲಿಕ್ಕೆ ಸಹಾ ಇಂಬಾಯಿತು. ಸಾರ್ವಭೌಮರು ಉದಾರಮತಿಯಿಂದ ವಂಗವಿಭಜನೆಯನ್ನು ರದ್ದುಮಾಡಿ ಜನರಿಗೆ ಬ್ರಿಟಿಷರ ನ್ಯಾಯಶೀಲತೆಯಲ್ಲಿಯೂ ಕಾಯಿದೆಶೀರ ಚಳವಳದಲ್ಲಿಯೂ ಇರುವ ವಿಶ್ವಾಸವನ್ನು ಊರ್ಜಿತವಿಟ್ಟರು. ಚಕ್ರವರ್ತಿಯವರೇ ಪ್ರಜೆಗಳು ರಾಜಭಕ್ತಿ ಪರಾಯಣರು, ಕೃತಜ್ಞ ಶೀಲರು, ಎಂಬದಾಗಿ ಕಂಠೋಕ್ತವಾಗಿ ತಮ್ಮ ಭಾಷಣಗಳಲ್ಲಿ ಅಪ್ಪಣೆ ಕೊಡಿಸಿದ್ದರಿಂದ ಭಾರತೀಯರು ರಾಜನಿಷ್ಠರೆಂಬದನ್ನು ಸ್ಥಾಪಿಸಿದರು.

ಮಹಾ ಪ್ರಭುಗಳ ಕರುಣಾರಸಭರಿತವಾದ ಮಾತುಗಳಿಂದಲೂ ಸರ್ವ ಜನಹಿತಕಾರಿಗಳಾದ ವರದಾನಗಳಿಂದಲೂ ತುಷ್ಟರಾದ ಜನರಿಗೆ ಚಕ್ರವರ್ತಿಯಲ್ಲಿಯೂ ಚಕ್ರಾಧಿಪತ್ಯದಲ್ಲಿಯೂ ನಿಷ್ಠಾಗೌರವಗಳು ಇಮ್ಮಡಿಸಿದವು. ಭಿನ್ನಕುಲ ಮತಗಳಿಂದ ಬದ್ಧರಾದ ಭಾರತೀಯರಿಗೆ ಒಗ್ಗಟ್ಟಿನಲ್ಲಿ ವರ್ತಿಸಲಿಕ್ಕೆ ಪಟ್ಟಾಭಿಷೇಕವೆಂಬ ದುರ್ಲಭ ಮಹಾ ಸಂದರ್ಭ ದೊರಕಿದ್ದರಿಂದ ಏಕಮತ್ಯಕ್ಕೆ ಸಹಾಯವಾಯಿತು.

ಅತಿ ತೀಕ್ಷ್ಣ ವಿಚಾರವಂತರಾದ ಚಕ್ರವರ್ತಿಗಳು ಪ್ರೇಮದಿಂದ ಪ್ರಜೆಗಳ ಬಳಿ ಬಿಜಯಂಗೈದದರಿಂದ ಜನರ ಸ್ಥಿತಿಗಳನ್ನೂ ಕುಂದುಕೊರತೆಗಳನ್ನೂ ಕಣ್ಣಾರೆ ಕಂಡಂತಾಯಿತು. ಬ್ರಿಟಿಷ ರಾಜ್ಯಭಾರ ಪದ್ಧತಿಯು ಪ್ರಜಾಸತ್ತಾತ್ಮಕವಾಗಿದ್ದರೂ ಜೋರ್ಜ ಸಾರ್ವಭೌಮರಂತಹ ಪ್ರತಿಭಾವಂತ ಮಹಾ ಪುರುಷರಿಗೆ ತಮ್ಮ ಶಕ್ತಿಗೆ ಸಹಜವಾದ ಪ್ರಾಬಲ್ಯವಿದ್ದೇ ಇರುವದು. ಆದ್ದರಿಂದ ಭಾರತೀಯ ಮಹಾ ಹಿತಚಿಂತಕರಾದ ಚಕ್ರವರ್ತಿಗಳ ಮಧ್ಯಸ್ಥಿಕೆಯಿಂದ ನಮ್ಮ ಉತ್ತರೋತ್ತರ ಅಭಿವೃದ್ಧಿಗೆ ಸಹಕಾರಿಯಾಗುವದು. ಚಕ್ರವರ್ತಿಗಳು ಭಾಷಣಗಳಲ್ಲಿ ವ್ಯಾಪಿಸುವ ಹೃದಯಂಗಮವಾದ ಕರುಣಾರಸವನ್ನು ನೋಡಿದರೆ ಇವು ದರ್ಬಾರುಗಳ ವಿಜ್ರಂಭಣೆಗಿಂತಲೂ ಎಷ್ಟೋ ಹೆಚ್ಚಾಗಿ ರಾಜನಿಷ್ಠಜನಕವಾಗಿವೆಂದು ಒಬ್ಬ ಮಾನ್ಯ ಪತ್ರಕರ್ತರು ಟೀಕಿಸುವರು. ಮಹಾ ಪ್ರಭುಗಳ ಭಾಷಣಗಳು ಪ್ರಜೆಗಳನ್ನುದ್ದೇಶಿಸಿ ಮಾಡಿದವುಗಳಾದ್ದರಿಂದ ಅವುಗಳ ಭಾವವನ್ನು ಇಂಗ್ಲೀಷು ತಿಳಿಯದ ಪ್ರಜಾಸಾಮಾನ್ಯರು ಗ್ರಹಿಸಬೇಕೆಂಬ ಇಚ್ಛೆಯಿಂದ ಎರಡು ಭಾಷಣಗಳನ್ನು ಇಲ್ಲಿ ಪರಿವರ್ತಿಸಿರುವೆವು. ಮೂಲದ ಸ್ವಾದುಮಾಧುರ್ಯಗಳನ್ನು ಅನೂನವಾಗಿ ಕನ್ನಡದಲ್ಲಿ ತರಲಶಕ್ತರೆಂದು ವಿಷಾದಿಸುತ್ತೇವೆ.

ಕಲ್ಕತ್ತೆಯಲ್ಲಿ ವಿಶ್ವವಿದ್ಯಾಕಲಾಶಾಲೆಯ ಬಹುಮಾನ ಪತ್ರಕ್ಕೆ ಜೋರ್ಜ ಸಾರ್ವಭೌಮರುಅಪ್ಪಣೆ ಕೊಡಿಸಿದ ಉತ್ತರವು.

ಆರು ವರುಷಕ್ಕೆ ಮುಂಚೆ ನನಗೆ ಕಲ್ಕತ್ತೆ ಸಕಲ ಕಲಾನಿಲಯದವರು ಗೌರವಾರ್ಹವಾದ "ಡಾಕ್ಟರ್ ಆಫ್ ಲಾ" ಎಂಬ ನಾಮಾಂಕಿತವನ್ನು ಇತ್ತ ಸಂದರ್ಭವು ಸ್ಮರಣೆಗೆ ಬಂದು ಹರ್ಷವಾಗುವದು. ಭಾರತೀಯರ ಉಚ್ಚ ಶಿಕ್ಷಣದಲ್ಲಿ ನನಗಿರುವ ಗಾಢವಾದ ಮತ್ತು ಮನಃಪೂರ್ವಕವಾದ ಕಾಂಕ್ಷೆಯನ್ನು ತೋರುವ ಸಂದರ್ಭವು ಇಂದೊದಗಿದ್ದಕ್ಕೆ ಸಂತೋಷಿಸುವೆನು. ಹಿಂದುಸ್ಥಾನದ ಭವಿಷ್ಯದಭ್ಯುದಯಕ್ಕೆ ಅಸ್ತಿವಾರದಂತಿರುವ ಯುರೋಪಿಯ ಭಾರತೀಯ ವಿದ್ಯಾ ಸಮ್ಮೇಲನದಲ್ಲಿ ಭಾರತೀಯ ಸಕಲ ಕಲಾನಿಲಯಗಳು ನೆರವಾಗುವರೆಂದು ಎದುರು ನೋಡುತ್ತೇನೆ. ಶಿಕ್ಷಣದ ಪ್ರಮಾಣವನ್ನು ಏರಿಸಿ ಅದರ ವ್ಯಾಪ್ತಿಯನ್ನು ವಿಸ್ತರಿಸಲಿಕ್ಕೆ ಆ ನಿಲಯಗಳು ಆಗಿಂದಾಗ್ಯೆ ಮಾಡಿದ ಏರ್ಪಾಡುಗಳನ್ನು ಸಹಾನುಭೂತಿಯಿಂದ ಕಾದು ನೋಡಿದ್ದೇನೆ.

ಇನ್ನು ಮಾಡಬೇಕಾದ ಕಾರ್ಯಗಳು ಅನೇಕವಾಗಿವೆ. ವಿದ್ಯಾಶಾಸ್ತ್ರದ ಮತ್ತು ಕಲಾಶಾಸ್ತ್ರದ ಪ್ರತಿಯೊಂದು ಪ್ರಾಮುಖ್ಯ ಭಾಗವನ್ನು ಕಲಿಸುವದಕ್ಕೆ ಅಧ್ಯಾಪಕರು ಇದ್ದ ವಿನಹಾ ಮತ್ತು ನವೀನ ವಿಷಯ ಪರಿಶೋಧನೆಗಳಿಗೆ ಯಥೇಷ್ಟ ಅನುಕೂಲತೆಗಳನ್ನು ಒದಗಿಸಿದ ವಿನಹಾ ಯಾವ ಸಕಲ ಕಲಾನಿಲಯವೂ ಈ ಕಾಲದಲ್ಲಿ ಸಂಪೂರ್ಣ ಸಂಸ್ಥೆಯನ್ನಿಸದು. ನೀವು ಪ್ರಾಚೀನ ವಿದ್ಯೆಯನ್ನು ರಕ್ಷಿಸಲೂ ಅದೇ ಸಮಯದಲ್ಲಿ ಪಾಶ್ಚಾತ್ಯ ಶಾಸ್ತ್ರಗಳನ್ನು ಮುಂದಕ್ಕೆ ತರಲೂ ಬೇಕಾಗಿದೆ. ಯಾವದರ ಹೊರತು ವಿದ್ಯೆಗೆ ಮೌಲ್ಯವಿಲ್ಲವೋ ಆ ಸುಗುಣಗಳನ್ನು ನೀವು (ವಿದ್ಯಾರ್ಥಿಗಳಲ್ಲಿ) ನೆಲೆಗೊಳ್ಳಿಸಲೂ ಬೇಕು. ತಮ್ಮ ಮಹತ್ಕಾರ್ಯ ಭಾರವನ್ನು ತಾವು ತಿಳದಿದ್ದೇವೆಂದು ನೀವು ಹೇಳುವಿರಿ. ನಿಮ್ಮ ಮುಂದಿರುವ ಕಾರ್ಯದಲ್ಲಿ ನಿಮಗೆ ಜಯವಾಗಲೆಂದು ಪ್ರಾರ್ಥಿಸುವೆನು. ನಿಮ್ಮ ಆದರ್ಶಗಳು ಉಚ್ಚವಾಗಿರಲಿ, ಅವನ್ನು ಕೈಗೂಡಿಸಲಿಕ್ಕೆ ನೀವು ಮಾಡುವ ಪ್ರಯತ್ನಗಳು ನಿರಂತರವಾಗಿರಲಿ, ಆಗ್ಯೆ ಈಶ್ವರ ಕೃಪೆಯಿಂದ ನೀವು ಜೈಸುವಿರೇ ಸೈ. ಆರು ವರುಷಕ್ಕೆ ಮುಂಚೆ ನಾನು ಅಂಗ್ಲಾಳದಿಂದ ಹಿಂದೂಸ್ಥಾನಕ್ಕೆ "ಸಹಾನುಭೂತಿ"ಯ ಹೊಸಗೆಯನ್ನು ಕಳುಹಿಸಿದೆನು. ಈ ದಿನ ಹಿಂದೂಸ್ಥಾನದಲ್ಲಿ ಹಿಂದೂಸ್ಥಾನಕ್ಕೆ "ಕೋರಿಕೆ" ಎಂಬ ಮಾರ್ಗದರ್ಶಕ ವಚನವನ್ನೀಯುತ್ತೇನೆ. ದೇಶದ ಎಲ್ಲೆಡೆಯುಲ್ಲಿಯೂ ಹೊಸ ಚೇತನದ ಚಿನ್ಹೆಗಳು ನನಗೆ ಗೋಚರಿಸುವವು. ಉಚ್ಚವಾದ ಮತ್ತು ಉತ್ಕೃಷ್ಟತರವಾದ ವಿದ್ಯೆಯಿಂದ ನಿಮ್ಮಲ್ಲಿ ಇನ್ನೂ ಉತ್ಕೃಷ್ಟವಾದ ಮತ್ತು ಉಚ್ಚವಾದ ಕೋರಿಕೆಗಳು ನೆಲಸುವವು. ಹಿಂದೂಸ್ಥಾನದಲ್ಲಿ ವಿದ್ಯೆಯನ್ನು ವಿಸ್ತರಿಸಿ ಪರಿಷ್ಕರಿಸಲಿಕ್ಕೆ ನಮ್ಮ ಗವರ್ನರ ಜನರಲರು ಧಾರಾಳ ದ್ರವ್ಯ ವಿನಿಯೋಗಿಸುವರೆಂದು ನಮ್ಮ ಆಜ್ಞೆ ಪ್ರಕಾರ ಡಿಲ್ಲಿಯಲ್ಲಿ ಪ್ರಕಟ ಪಡಿಸಲಾಯಿತು. ಈ ದೇಶದಲ್ಲಿ ಶಾಲೆಗಳೂ ಕೊಲೇಜಿಗಳೂ ನಿಬಿಡವಾಗಿ ಸ್ಥಾಪಿಸಲ್ಪಡಬೇಕೆಂದೂ ಅಲ್ಲಿಂದ ಶಿಕ್ಷಿತರಾಗಿ ಹೋಗುವ ಯುವಕರು ರಾಜನಿಷ್ಠ, ಉಪಯುಕ್ತ ಮತ್ತು ಪೌರುಷವಂತ ನಾಗರಿಕರಾಗಿ ಬೆಳೆಯಬೇಕೆಂದೂ ಇವರು ಉದ್ಯೋಗ ವ್ಯವಸಾಯ ಮೊದಲಾದ ಎಲ್ಲಾ ವೃತ್ತಿಗಳಲ್ಲಿ ಇತರ ದೇಶೀಯರ ಸಮಾನಸ್ಕಂಧರೆನ್ನಿಸಬೇಕೆಂದೂ ನನ್ನ ಇಚ್ಛೆಯಾಗಿದೆ. ವಿದ್ಯೆಯ ತೇಜದಿಂದ ನನ್ನ ಭಾರತೀಯ ಪ್ರಜೆಗಳ ಮನೆಗಳು ಬೆಳಗಬೇಕೆಂದೂ ಅವರ ಜೀವನದ ಪೇಚಾಟವು ವಿದ್ಯೆಯ ವರ್ಚಸ್ಸದಿಂದ ಮಧುರವಾಗಬೇಕೆಂದೂ ಆ ವಿದ್ಯಾ ಬಲದಿಂದ ದೊರಕುವ ಉದಾತ್ತ ಕಲ್ಪನೆಗಳೂ ಸೌಖ್ಯವೂ ಆರೋಗ್ಯವೂ ಅವರದಾಗಬೇಕೆಂದೂ ಸಹಾ ನನ್ನ ಇಚ್ಛೆಯಾಗಿದೆ. ಈ ನನ್ನ ಇಚ್ಛೆಯು ವಿದ್ಯಾಪ್ರಸರಣೆಯ ಮೂಲಕ ಕೈಗೂಡತಕ್ಕದ್ದಾಗಿದೆ ಮತ್ತು ಭಾರತೀಯ ಶಿಕ್ಷಣ ವಿಷಯವು ಎಂದಿಗೂ ನನ್ನ ಮನಸ್ಸನ್ನು ಅಂಟಿರುವದು. ನನಗೂ ನನ್ನ ಮನೆತನಕ್ಕೂ ನೀವು ನಿಷ್ಠೆಯಿಂದ ಬದ್ಧರಾಗಿದ್ದೀರೆಂದೂ ಹಿಂದೂಸ್ಥಾನಕ್ಕೂ ಬ್ರಿಟಿಷ ದೇಶಕ್ಕೂ ಇರುವ ಐಕ್ಯದ ಬಂಧಗಳನ್ನು ಬಲಗೊಳಿಸಲಿಚ್ಛಿಸುವಿರೆಂದೂ ಬ್ರಿಟಿಷ ಆಳಿಕೆಯಲ್ಲಿ ನೀವು ಅನುಭವಿಸುವ ಲಾಭಗಳ ಮೌಲ್ಯ ವಿಶೇಷವನ್ನು ತಿಳಿದಿರುವಿರೆಂದೂ ನನಗೆ ಕೊಟ್ಟ ಭರವಸೆಯಿಂದ ಹರ್ಷಿತನಾದೆನು. ನಿಮ್ಮ ನಿಷ್ಠಾಪರವಾದ ವಿಧೇಯ ಶೀಲಗರ್ಭಿತವಾದ ವಿಜ್ಞಾಪನೆಯಿಂದ ಉಪಕೃತನಾಗಿರುವೆನು.

ಮುಂಬಾಯಿಯಲ್ಲಿ ಚಕ್ರವರ್ತಿಯವರು ಒಪ್ಪಿಸಿದ ಸ್ವಸ್ತಿವಚನವು.

ಮುಂಬಾಯಿ ಸಂಸ್ಥಾನದ ಜನರ ಕಡೆಯಿಂದ ನೀವು ಅರ್ಪಿಸಿದ ಸ್ವಸ್ತಿವಚನದ ವಿಜ್ಞಾಪನಾಪತ್ರದಲ್ಲಿ ಗರ್ಭಿತವಾದ ದಯಾಪೂರಿತ ಮತ್ತು ಉದಾರ ವಚನಗಳಿಗೆ ಮಹಾರಾಜ್ಞಿಯೂ ನಾನೂ ಕೃತಜ್ಞರಾಗಿರುವೆವು. ಕಳದ ಐದು ವಾರಗಳಲ್ಲಿ ನಮ್ಮ ಸವಾರಿ ಚಿತ್ತೈಸಿದ ಪ್ರತಿ ಸ್ಥಾನದಲ್ಲಿ ಪ್ರದರ್ಶಿಸಲ್ಪಟ್ಟ ಉಜ್ವಲರಾಜನಿಷ್ಠೆಗೆ ನಾವು ನಿಮ್ಮ ಪಟ್ಟಣಕ್ಕೆ ತಲ್ಪಿದೊಡನೆ ನಿಮ್ಮಿಂದಾದ ಮನಃಪೂರ್ವಕ ಸ್ವಾಗತವು ಪ್ರಸ್ತಾವನೆಯಾಗಿತ್ತು. ಈಗ ವಿಯೋಗ ಕಾಲದಲ್ಲಿ ನೀವು ನಿವೇದಿಸಿದ ಹೃದಯಾಂಗಮವಾದ ಸ್ವಸ್ತಿ ಜಯವಚನಗಳೂ ಆಶೀರ್ವಾದಗಳೂ ನಮ್ಮಲ್ಲಿ ಏಕಕಾಲದಲ್ಲಿ ಪರಿತೋಷವನ್ನೂ ಪರಿತಾಪವನ್ನೂ ಹುಟ್ಟಿಸಿವೆ.

ಈ ನಮ್ಮ ಆಗಮನದಿಂದ ಹಿಂದುಸ್ಥಾನಕ್ಕೆ ದೊರಕುವ ಲಾಭಗಳ ಕುರಿತು ನೀವು ಮುಂತೋರುವ ಕೋರಿಕೆಗಳನ್ನು ನೋಡಿದರೆ ನಮ್ಮ ಹೃದಯದ ವಾಂಛಿತವು ಕೈಗೂಡಿದ್ದಕ್ಕೆ ಪರಮೇಶ್ವರನಿಗೆ ಇನ್ನಷ್ಟು ಕೃತಜ್ಞರಾಗಿರುವೆವು. ಹಿಂದುಸ್ಥಾನದ ನನ್ನ ವಿಶ್ವಾಸಿ ಪ್ರಜೆಗಳ ಬಳಿ ಇನ್ನೊಮ್ಮೆ ಬಂದದಕ್ಕೆ ನಾನು ಅತ್ಯಂತ ಸಂತೋಷಯುಕ್ತನಾಗಿದ್ದೇನೆ. ನಮಗೆ ಬೋಧೆಯಾದ ಪ್ರಕಾರ ಜನರು ತಮ್ಮ ಅಂತರ್ಯವನ್ನು ಹೊಕ್ಕು ಹೊರಹೊಮ್ಮುವ ಅಕೃತ್ರಿಮ ಪ್ರೇಮ ಭಕ್ತಿಗಳಿಂದ ನಮ್ಮ ಮತ್ತು ಮಹಾರಾಜ್ಞಿಯ ಮನಸ್ಸನ್ನು ಕರಗಿಸಿದ ಬಗೆಯು ಅವರ್ಣನೀಯವಾಗಿದೆ. ಕಳದ ಆನಂದಕರ ವಾರಗಳಲ್ಲಿ ನಮ್ಮ ಒಂದೇ ಒಂದು ಚಿಂತೆಯ ಕಾರಣವು ನಮಗೆ ಔದಾರ್ಯದಿಂದ ಆತಿಥ್ಯವಿತ್ತು ಆಮಂತ್ರಿಸಿದ ಹಲವು ದೇಶೀಯ ಸಾವಂತರ ರಾಜ್ಯಗಳನ್ನೂ ಪ್ರಾಚೀನವಾದ ಮದ್ರಾಸು ಸಂಸ್ಥಾನವನ್ನೂ ಸಂದರ್ಶಿಸಲಿಕ್ಕಾಗಲೀ ಈ ದೇಶದಲ್ಲಿ ಹೆಚ್ಚು ತಡೆಯಲಿಕ್ಕಾಗಲೀ ಅಸಾಧ್ಯವಾಯಿತೆಂಬ ಯೋಚನೆಯೊಂದೇ. ವಿಚಾರಪೂರಿತ ಜಾಗರೂಕತೆಯಿಂದಲೂ ಪ್ರೀತಿಪೂರ್ವಕ ಆದರದಿಂದಲೂ ಪ್ರೇರಿತರಾದ ಜನರು ಎಷ್ಟು ತರದ

ಆನಂದಗಳನ್ನು ನಿರ್ಮಿಸಬಹುದೋ ಅವೆಲ್ಲವನ್ನು ಪಡೆದ ಅನುಭವವು ಇಲ್ಲಿಂದ ತೆರಳಲು ಯಾವಜ್ಜೀವ ನಮ್ಮ ಸ್ಮರಣೆಯಲ್ಲಿರುವದು. ನಾವು ಇಲ್ಲಿಗೆ ಬೆಳಸಿದ ಪ್ರಯಾಣವು ಪರಮೇಶ್ವರನ ಕೃಪೆಯಿಂದ ಈ ಮಹಾ ಭೂಖಂಡದ ಪ್ರಜಾ ಸಮುದಾಯಕ್ಕೆ ಫಲದಾಯಕವಾಗಲೆಂದು ನಾವು ಆಸಕ್ತಿಯಿಂದ ಕೋರುತ್ತೇವೆ. ಎಂದೆಂದಿಗೂ ಅವರ ಹಿತವೂ ಕಲ್ಯಾಣವೂ ನನ್ನ ಮನಸ್ಸಿಗೆ ಭೂಮಂಡಲದ ಇತರ ಪ್ರಾಂತ್ಯಗಳಲ್ಲಿರುವ ನನ್ನ ಅಯುತಾಯುತ ಪ್ರಜೆಗಳ ಹಿತಾಭ್ಯುದಯಗಳಷ್ಟೇ ಪ್ರಿಯವೂ ಸಮೀಪವೂ ಆಗಿರುವದು. ನಮಗೆ ಸರ್ವತ್ರ ಅರ್ಪಿಸಲ್ಪಟ್ಟ ವಿಶ್ವಾಸ ಪುರಸ್ಸರವಾದ ಸ್ವಾಗತಕ್ಕೆ ಯಾವತ್ತು ವರ್ಗಗಳೂ ಮತಗಳೂ ಕೂಡಿದ್ದನ್ನು ವಿಚಾರಮಾಡಿ ನೋಡಿದರೆ ನನ್ನ ಮನಸ್ಸಿಗೆ ನಿಸ್ಸೀಮವಾದ ತೃಪ್ತಿಯಾಗುವದು. ಅವರು ಇನ್ನು ಮುಂದೆ ಖಾಸಗಿಯಲ್ಲಿಯೂ ರಾಷ್ಟ್ರೀಯ ಜೀವನದಲ್ಲಿಯೂ ವರ್ತಿಸುವಾಗ ತಮ್ಮ ದಿನಚರ್ಯೆಗಳಲ್ಲಿ ಅದೇ ಐಕ್ಯವನ್ನೂ ಸಮ್ಮೇಳನವನ್ನೂ ತೋರಲಸಾಧ್ಯವೇ? ಇದು ಕೈಗೂಡಿದ್ದಲ್ಲಿ ಈ ಫಲವನ್ನು ಭರತಖಂಡಕ್ಕೆ ನಾವು ಮಾಡಿದ ಪ್ರಯಾಣದ ಶುಭಪರಿಣಾಮವೆಂದು ನಿಜವಾಗಿ ಎಣಿಸುವೆವು. ನಾವು ಇಲ್ಲಿಗೆ ತಲ್ಪಿದಾಗಲೂ ಇಲ್ಲಿಂದ ತೆರಳುವಾಗಲೂ ನಮ್ಮನ್ನು ಹೃತ್ಪೂರ್ವಕವಾಗಿ ಅಭಿವಂದಿಸಿದ ಬೊಂಬಾಯಿ ಪ್ರತಿನಿಧಿಗಳಾದ ನಿಮ್ಮ ಭಾರತೀಯ ಸಾಮ್ರಾಜ್ಯಕ್ಕೆ ಈ ಕೆಳಗಣ ನಮ್ಮ ಪ್ರೀತಿಪುರಸ್ಸರವಾದ ಸ್ವಸ್ತಿವಚನವನ್ನು ಒಪ್ಪಿಸುತ್ತೇನೆ.

ಹಿಂದುಸ್ಥಾನದ ಸುಖವನ್ನು ಹೆಚ್ಚಿಸುವದಕ್ಕೂ ಅದರಲ್ಲಿ ಶಾಂತಿ ಅಭ್ಯುದಯಗಳನ್ನು ನೆಲೆಗೊಳ್ಳಿಸಲಿಕ್ಕೂ ನಾವು ಮಾಡುವ ಮನಃಪೂರ್ತಿಯಾದ ಪ್ರಯತ್ನಗಳಲ್ಲಿ ಸರ್ವತ್ರಾಣಿಯಾದ ಪರಮೇಶ್ವರನು ನನಗೂ ನನ್ನ ಉತ್ತರಾಧಿಕಾರಿಗಳಿಗೂ ನೆರವಾಗಲಿ.

ಲೋಕ ಪ್ರಖ್ಯಾತವಾದ ಪ್ರೊಫೆಸರ್ ಛತ್ರೆಯವರ ನ್ಯೂ ಇಂಡಿಯನ್ ಸರ್ಕಸ್.

೧೯೦೭ನೇ ಇಸವಿಯಲ್ಲಿ ನಮ್ಮ ಪಟ್ಟಣಕ್ಕೆ ಬಂದು ತಮ್ಮ ವಿಚಿತ್ರವಾದ ಕಸರತ್ತುಗಳನ್ನು ತೋರಿಸಿ ನೋಟಕರನ್ನು ಸಂತೋಷಗೊಳಿಸಿದ ಪ್ರೊಫೆಸರ್ ಛತ್ರೆಯವರ ನ್ಯೂ ಇಂಡಿಯನ್ ಸರ್ಕಸ್ ಈಗ ತಾನೇ ಪುನಹಾ ಇಲ್ಲಿಗೆ ಬಂದಿರುವದು. ಇವರಲ್ಲಿರುವ ಸಿಫಾರಸು ಪತ್ರಗಳಿಂದ ಈ ಸರ್ಕಸು ಈ ಸಾರಿ ಬಹಳ ಅಭಿವೃದ್ಧಿಯನ್ನು ಹೊಂದಿದೆ ಎಂಬದಾಗಿ ತಿಳಿಯಬರುತ್ತದೆ. ಪ್ರೊಫೆಸರ್ ಛತ್ರೆಯವರು ತನ್ನ ಬಳಿಯಲ್ಲಿರುವ ವಿವಿಧ ಜಾತಿಯ ದೇಶೀಯ ಮಂಡಲಿಯೊಡನೆ ಜಾತಿಕಟ್ಟಳೆಗಳಿಗೆ ಯಾವದೊಂದೂ ಬಾಧಕ ಬಾರದಂತೆ ಸಮುದ್ರ ಪ್ರಯಾಣ ಮಾಡಿ ಚೀನ, ಜಾಪಾನ್, ಪಿಲಿಪ್ಪೈನ್, ಜಾವಾ ದೇಶಗಳಿಗೂ, ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೂ ಪ್ರಯಾಣ ಬೆಳೆಯಿಸಿ ತಮ್ಮ ವಿಚಿತ್ರ ಆಟಗಳನ್ನು ತೋರಿಸಿ ಜಗದ್ವಿಖ್ಯಾತ ಕೀರ್ತಿಪಡೆದಿರುವರು. ಇವರು ತಿರಿಗಿ ಪರರಾಜ್ಯಗಳಿಗೆ ಎರಡನೇ ಪ್ರಯಾಣವನ್ನು ಮಾಡಲಿಕ್ಕಿರುವದರಿಂದ ಇವರಿಗೆ ಸ್ವದೇಶಸ್ಥರಿಂದ ಹೆಚ್ಚಿನ ಪ್ರೋತ್ಸಾಹವು ಅವಶ್ಯವಾಗಿರುವುದು.

ನಮ್ಮ ಭಾರತೀಯರಿಂದಲೇ ನಡಿಸಲ್ಪಡುವ ಈ ದೇಶೀಯ ಸರ್ಕಸಿಗೆ ನಮ್ಮ ಮಂಗಳೂರ ಪಟ್ಟಣಿಗರು ಕೂಡಾ ಉದಾರಾಶ್ರಯವನ್ನು ಕೊಡದಿರಲಾರರೆಂದು ನಂಬುತ್ತೇವೆ.

ಮಹಾರಾಷ್ಟ್ರ ಸ್ತ್ರೀಯರೂ ಹುಡುಗಿಯರೂ ಈ ಸರ್ಕಸಿನಲ್ಲಿದ್ದು ಕುದುರೆ ಸವಾರಿ ಮೊದಲಾದ ಚಮತ್ಕಾರಿಕವಾದ ವಿಂದೆವಿನೋದಗಳನ್ನು ತೋರಿಸುವರೆಂದು ತಿಳಿಯುತ್ತೇವೆ. ಸಿಂಹ, ಹುಲಿಗಳೊಡನೆ ಆಡುವ ಮಹಾರಾಷ್ಟ್ರ ಹೆಂಗಸರು ಈ ಸರ್ಕಸಿನಲ್ಲಿ ಮಾತ್ರವೇ ಇರುವರು.

ಈ ದಿನದ ರಾತ್ರಿಯಲ್ಲಿ ಇವರು ತಮ್ಮ ವಿಚಿತ್ರವಾದ ಕಸರತ್ತುಗಳನ್ನು ತೋರಿಸುವದಕ್ಕೆ ಪ್ರಾರಂಭಿಸುವರು.

ಬಾಲಿಕಾ ನೀತಿಮಾಲಿಕೆ

ಕುಸುಮ ಷಟ್ಪದಿ.

(ಕಳದ ಸಂಚಿಕೆಯಿಂದ ಮುಂದುವರಿದುದು.)

ಮುಚ್ಚಿರ್ದ ಮುತ್ತಿನವೊ |
ಲೆಚ್ಚರವ ತಪ್ಪದಿರು |
ಹುಚ್ಚಳಂದದೆ ಗಳಹದಿರು ಸುಮ್ಮನೆ |
ಹೆಚ್ಚಿಗಾಶಿಸಿ ದುಂದು |
ವೆಚ್ಚಗಳ ಮಾಡಿಸದೆ |
ಮೆಚ್ಚುಗೆಯ ಪಡೆ ನಿನ್ನ ಪಿರಿಯರಿಂದ ‖ ‖ ೪೯ ‖

ಪತಿಸೇವೆಯೊಳ್ದಾಸಿ |
ಹಿತ ಬೋಧೆಯಲಿ ಮಂತ್ರಿ |
ಚತುರತೆಯೊಳಗೆ ವಾಣಿ, ರತಿಯು ರೂಪಿಂ ‖
ಹಿತ ಭೋಜ್ಯದಲಿ ಮಾತೆ |
ಕ್ಷಿತಿ ಸೈರಣೆಯೊಳೆನಿಸೆ |
ಸತಿಗುತ್ತಮದ ಕೀರ್ತಿ ಬರ್ಪುದಲ್ತೆ ‖ ‖ ೫೦ ‖

ಹರೆಯ ಷುದುತಿರ ಮಲ್ತು |
ವರಸುತರ ಪಡೆದ ಮೇ |
ಲುರುವ ಕೌಮಾರವೆನಿಸುವುದವಸ್ಥೆ ‖
ತರುಣಿಯರ್ಮಕ್ಕಳನೆ |
ಪೆರುವುದರಿದಲ್ತವರ |
ನೆರೆರಕ್ಷಿಸುವ ಭಾರಪಿರಿದೆನಿಪುದು ‖ ‖ ೫೧ ‖

ಶಿಶುಗಳನು ಪಡೆದು ಪೋ |
ಷಿಸು ವೊಡಾರೋಗ್ಯ ಶಾ |
ಸ್ತ್ರ ಸಮುದಯ ಪರಿಚಯಂ ತಿಳಿದಿರ್ಪುದು ‖
ಹಸನಾಗಿ ದಿನದೆ ಮಿ |
ಯಿಸುತೆ ಪಾಲುಣಿಸುಗಳ |
ಹಸಿವರಿದು ಕೊಡುತಿರಲ್ವೇಕು ತಾಯಿ ‖ ‖ ೫೨ ‖

ಬರಿಯ ಮೈಯೊಳ್ ಶಿಶುವ |
ನಿರಿಸಲಾಗದು ಶಾಖ |
ವಿರುವ ವಸ್ತ್ರಂಗಳಂ ಧರಿಸಬೇಕು ‖
ನೆರೆಯ ಪಥ್ಯದ ವಸ್ತು |
ತೊರೆದೊಳ್ಳೆ ಯುಣಿಸುಗಳ |
ಸರಿಯಾಗಿ ಭುಜಿಸುವುದು ತಾಯ್ವಿರೆಂದುಂ ‖ ‖ ೫೩ ‖

ಪಸಿವೆಂದು ಪೇಳದಾ |
ಯಸವೆಂದು ತಿಳಿಸದಾ |
ಶಿಶುವು ನಿದ್ದೆಎನುತ್ತೆ ಪೇಳಲರಿದು ‖
ರಸೆಯಲ್ಲಿ ಶಿಶುವ ಪೋ |
ಷಿಸುವರೆಚ್ಚರದಿಂದ |
ಹಸನಾಗಿ ಸಲಹುವುದು ಬಾಲಕರನು ‖ ‖ ೫೪ ‖

ಸೆದ್ದು ಮಾಡುವರು ನೆರೆ |
ಮುದ್ದು ಮಾತಾಡುವರು |
ಬಿದ್ದು ಹುಡಿಯಲ್ಲಿ ಹೊರಳಾಡುತಿಹರು ‖
ಎದ್ದೆದ್ದು ಬೀಳುವರು |
ಗುದ್ದಾಡಿ ಕೊಳುತಿಹರು |
ಗದ್ದರಿಸದವಕೆ ಸೈರಿಸಿಕೊಂಡಿರು ‖ ‖ ೫೫ ‖

ನಿನ್ನ ನಡೆನುಡಿಗಳಲಿ |
ಭಿನ್ನವಿಲ್ಲದೆ ತೋರ್ಪು |
ದನ್ನೆಯಕೆಮನವಿಡದೆ ನಡೆಯುತಿಹುದು ‖
ರನ್ನ ದಂದದೆ ಘನತೆ |
ಯನ್ನು ಕಾಪಾಡುತಿರೆ |
ಸನ್ಮತೆಯೆನಿಪ್ಪೆ ಜನರಿಂದೆ ತಂಗಿ ‖ ‖ ೫೬ ‖

ಇನಿನುಡಿಗಳಿಂಬಾಲ |
ರನುತಿರ್ದಿ ಸನ್ಮಾರ್ಗ |
ವನು ಕಲಿಸಬೇಕು ಕೋಪಿಸ ಬಾರದು ‖
ತನುವ ನಿರ್ಮಲವಿರಿಸಿ |
ಮನದೆ ದುರ್ಯೋಚನೆಗ |
ಳನುಗೊಳ್ಳದಂದದಲಿ ನಡೆದುಕೊಳ್ಳು ‖ ‖ ೫೭ ‖

ಅತಿಥಿಗಳನಾದರಿಸು |
ಪತಿಭಕ್ತಿ ತಪ್ಪದಿರು |
ಸತತಮುಂ ಸಂತಸದೆ ಕೆಲಸಮಾಡು ‖
ಹಿತವಾಕ್ಯವಾಡುತಿರು |
ಕೃತಕ ಕಪಟಗಳನುಳಿ |
ಧೃತಿಯ ಕೆಡದಿರು ಪಾತಕಕ್ಕೆ ಬೆದರು ‖ ‖ ೫೮ ‖

(ಸಶೇಷ.)

ಪೇಷ್ವೆ ನಾರಾಯಣ ರಾವ್.

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

ಆ ಬಾಲಾಜೀ ವಿಶ್ವನಾಥನ ತರುವಾಯ ಬಂದ ಅಧಿಕಾರಿಗಳಲ್ಲಿ ೧೭೨೦ರಿಂದ ೧೭೪೦ರ ವರೆಗೆ ಆಳಿದ ಒಂದನೇ ಬಾಜೀರಾಯನೂ, ೧೭೪೦ರಿಂದ ೧೭೬೧ರ ವರೆಗೆ ಆಳಿದ ಬಾಳಾಜೀರಾಯನೂ ತಮ್ಮ ಪೂರ್ವಾಧಿಕಾರಿಯ ಸಾಮರ್ಥ್ಯವನ್ನೂ, ರಾಜನೀತಿಯನ್ನೂ ಅನುಕರಿಸಿದರು. ಅವರ ಕಾಲಗಳಲ್ಲಿ ಮಹಾರಾಷ್ಟ್ರರು ಗುಜರಾತ್, ಮಾಳ್ವ, ಬೀರಾರು, ಗೊಂಡ್ವಾನಾ, ಒರಿಸ್ಸಾ ಈ ದೇಶಗಳನ್ನು ಜಯಿಸಿದರು. ಸಾಲ್ಸೆಟ್ ಬೆಸ್ಸಿನ್ ಪಟ್ಟಣಗಳಿಂದ ಪೋರ್ಟುಗೀಸರನ್ನು ಓಡಿಸಿದರು. ದಕ್ಷಿಣಕ್ಕೆ ಕರ್ಣಾಟಕ, ಉತ್ತರಕ್ಕೆ ವಂಗಪಾಂಚಾಲ ದೇಶಗಳ ವರೆಗೆ ದಂಡಯಾತ್ರೆ ಮಾಡಿದರು. ಈ ಪೇಷ್ವೆಯವರ ಸೇನಾನಾಯಕರಾಗಿಯೇ ಸಿಂಧಿಯಾ, ಹೋಲ್ಕರ್ ಸಂಸ್ಥಾನಾಧಿಪತಿಗಳು ಮೊಟ್ಟಮೊದಲು ಪ್ರಸಿದ್ಧಿಗೆ ಬಂದರು. ಕ್ಷೀಣದೆಶೆಯಲ್ಲಿದ್ದ ಮೊಗಲ ರಾಜ್ಯವನ್ನು ಮಹಾರಾಷ್ಟ್ರರು ನಿಸ್ಸಾರಗೊಳಿಸಿದರು ಎನ್ನುವಷ್ಟರಲ್ಲಿಯೇ ಮೊಗಲಾಯರುಗಳಿಗಿಂತ ಶೂರರಾದ ಮತ್ತೊಂದು ಮಹಮ್ಮದೀಯ ಜಾತಿಯವರ ಸಂಗಡ ಅವರಿಗೆ ಯುದ್ಧ ಪ್ರಾಪ್ತವಾಯಿತು. ಆಗ ಪಂಜಾಬು ದೇಶದಲ್ಲಿ ನಿರಂಕುಶ ಪ್ರಭುವಾಗಿದ್ದ ಅಹಮದ್‌ಷಾ, ದುರಾನಿಯು ತನ್ನ ಅಫ್ಘಾನ್ ಸೈನ್ಯಕ್ಕೆ ರೋಹಿಲರನ್ನೂ, ಅಯೋಧ್ಯೆಯ ನವಾಬನ ಸೈನಿಕರನ್ನೂ ಸೇರಿಸಿಕೊಂಡು ಸಂಯುಕ್ತ ಮಹಾರಾಷ್ಟ್ರ ದೇಶದ ಮೇಲೆ ದಂಡೆತ್ತಿ ಬಂದು ಅವರ ಸಂಗಡ ಪಾಣಿಪತ್ ಸಮೀಪದಲ್ಲಿ ೧೭೬೧ನೇ ವರ್ಷದಲ್ಲಿ ಕಾದಿ ಸಂಪೂರ್ಣ ಜಯ ಹೊಂದಿದನು. ಆ ಯುದ್ಧದಲ್ಲಿ ಪೇಷ್ವೆ ಬಾಳಾಜಿರಾಯನ ಮಗ ವಿಶ್ವಾಸರಾವು ಮೃತನಾದನು. ಆ ದುಃಖದಿಂದ ಪೇಷ್ವೆಯೂ ಮರಣ ಹೊಂದಿದನು. ಅದು ವರೆಗೆ ಒಕ್ಕಟ್ಟಾಗಿದ್ದ ಮಹಾರಾಷ್ಟ್ರ ನಾಯಕರು ಐಕ್ಯಮತ್ಯವು ಚದರಿ ಹೋಗಿ ಆಗಿನಿಂದ ಪ್ರತಿ ಸಂಸ್ಥಾನಾಧಿಪತಿಯೂ ತನ್ನ ಅಧಿಕಾರವನ್ನು ಹೆಚ್ಚಿಸುವುದಕ್ಕೆ ಪ್ರತ್ಯೇಕವಾಗಿ ಪ್ರಯತ್ನಿಸಲಾರಂಭಿಸಿದರು. ಬಾಲಾಜೀಬಾಜಿರಾಯನ ಮರಣಾನಂತರ ಮಾಧವ ರಾವ್ ನಾಲ್ಕನೆಯ ಪೇಷ್ವೆಯಾದನು. ಈ ಮಾಧವ ರಾವೇ ನಮ್ಮ ಕಥಾನಾಯಕನಾದ ನಾರಾಯಣ ರಾವಿನ ಅಣ್ಣ ಮಾಧವ ರಾಯನು. ಇವನು ಪೇಷ್ವೆಯ ಅಧಿಕಾರ ವಹಿಸುವಾಗ್ಗೆ ಸಣ್ಣ ವಯಸ್ಕನಾಗಿದ್ದನು. ಆದುದರಿಂದ ಆತನ ಚಿಕ್ಕಪ್ಪನಾದ ರಘುನಾಥ ರಾವ್ ಶಾಸಕನಾಗಿದ್ದನು. ಸ್ವಲ್ಪ ಕಾಲದಲ್ಲಿಯೇ ಕೆಲವು ಕಾರಣಗಳಿಂದ ಅನುಮಾನಿಸಿ ಮಾಧವ ರಾವು ರಘುನಾಥ ರಾಯನಿಂದ ಅಧಿಕಾರವನ್ನು ತೊಲಗಿಸಿ ತಾನೇ ಪ್ರಭುತ್ವವನ್ನು ಸ್ವೀಕರಿಸಿ ಅವನನ್ನು ಸೆರೆಯಲ್ಲಿಡಿಸಿದನು. ಹೀಗೆ ರಘುನಾಥರಾವ್ ಏಳು ವರುಷಗಳ ತನಕ ಸೆರೆಯಲ್ಲಿದ್ದು ತರುವಾಯ ಮಾಧವ ರಾಯನಿಂದಲೇ ಬಿಡುಗಡೆ ಮಾಡಲ್ಪಟ್ಟನು. ಮಾಧವ ರಾವ್ ಕಾಲದಲ್ಲಿ ಮಹಾರಾಷ್ಟ್ರರ ಶಕ್ತಿಯು ಚೆನ್ನಾಗಿ ವಿಜೃಂಭಿಸಿತು. ಈತನು ಕರ್ಣಾಟಕ ದೇಶದ ಮೇಲೆ ದಂಡೆತ್ತಿ ಹೋಗಿ, ಹೈದರಾಲಿಯೊಡನೆ ಯುದ್ಧವಾಡಿದನು. ಹೈದರಾಲಿಯು ಪರಾಜಿತನಾಗಿ ಮಹಾರಾಷ್ಟ್ರರಿಗೆ ದೊಡ್ಡ ದೇಶವನ್ನೂ ೩೦ ಲಕ್ಷ ರೂಪಾಯಿಗಳನ್ನೂ ಕೊಟ್ಟನು. ೧೭೭೧ರಲ್ಲಿ ಮಹಾರಾಷ್ಟ್ರ ಸೈನ್ಯವು ಚಂಬಲ್ ನದಿಯನ್ನು ದಾಟಿ ರಾಜಪುತ್ರರನ್ನೂ ಜಾಟರನ್ನೂ ವಶಪಡಿಸಿಕೊಂಡು ಅವರು ಕಪ್ಪ ಕೊಡುವಂತೆ ಒಡಂಬಡಿಸಿತು. ಸಿಂಧಿಯನು ದೊಡ್ಡ ಸೈನ್ಯದಿಂದ ರೋಹಿಲ್ ಖಂಡವನ್ನು ಜಯಿಸಿದನು. ನಾಮಮಾತ್ರಾಧಿಕಾರಿಯಾಗಿ ದೇಹಲಿ ಸಿಂಹಾಸನವನ್ನಲಂಕರಿಸಿದ ೨ನೇ ಷಹಾಲಂ ಎಂಬ ಮೊಗಲ ಚಕ್ರವರ್ತಿಯು ಇಂಗ್ಲೀಷರ ಆಶ್ರಯವನ್ನು ಬಿಟ್ಟು ಮಹಾರಾಷ್ಟ್ರ ಪ್ರಭುತ್ವದವರ ರಕ್ಷಣೆಯನ್ನಪೇಕ್ಷಿಸಿದನು. ಇದರಿಂದ ಈ ಮೊಗಲ ಚಕ್ರವರ್ತಿಯ ಪೂರ್ವಾರ್ಜಿತ ಲಕ್ಷ್ಮಿಯು ಈಗ ಮಹಾರಾಷ್ಟ್ರರನ್ನಾಶ್ರಯಿಸಿದಳು.

೧೭೭೨ರಲ್ಲಿ ಮಾಧವ ರಾಯನು ತೀರಿ ಹೋದನು. ಇದೇ ನಮ್ಮ ಕಥಾನಾಯಕನು ರಾಜ್ಯಾಭಿಷಿಕ್ತನಾಗುವುದಕ್ಕೆ ಮುಂಚಿನ ಮಹಾರಾಷ್ಟ್ರ ಸಾಮ್ರಾಜ್ಯ ಸ್ಥಿತಿ. ಮಾಧವ ರಾವು ಮರಣ ಹೊಂದಿದ ಕಾಲದಲ್ಲಿ ಆತನು ತನ್ನ ಮಂತ್ರಿಗಳಾದ ನಾನಾ ಫರ್ಣವೀಸ್ ಸಖಾರಾಮು ಭಾವ್ ಮೊದಲಾದವರನ್ನು ತನ್ನ ಮಂಚದ ಸಮೀಪಕ್ಕೆ ಕರೆದು ೧೭ ವರುಷ ವಯಸ್ಸುಳ್ಳ ತನ್ನ ಕನಿಷ್ಠ ಸೋದರನಾದ ನಾರಾಯಣ ರಾವಿನ ಕೈಯನ್ನು ಅವರ ಕೈಯಲ್ಲಿಟ್ಟು ಕಾಪಾಡಬೇಕೆಂದು ಹೇಳಿ ಒಪ್ಪಿಸಿದನು. ಪೇಷ್ವೆಗಳಲ್ಲಿ ಬುದ್ಧಿವಂತನೂ ರಾಜನೀತಿ ನಿಪುಣನೂ ಆದ ಮಾಧವರಾವ್ ಹೇಳಿ ಹೋದ ಹಿತವಾಕ್ಯವನ್ನು ಅವರು ಗಮನಿಸಿ, ಅವರಿಗೆ ಒಪ್ಪಿಸಲ್ಪಟ್ಟ ನಿಕ್ಷೇಪವನ್ನು ಅವರು ಕಾಪಾಡಿದ್ದರೆ ತರುವಾಯದ ಮಹಾರಾಷ್ಟ್ರ ಚರಿತ್ರೆಯು ಬಹುಶಃ ಭಾರತ ವರುಷದ ಇತಿಹಾಸವು ಈಗ ನಡೆದಂತಲ್ಲದೆ ಇನ್ನೊಂದು ವಿಧವಾಗಿ ಇರುತ್ತಿದ್ದಿತು. ದೈವವು ಅನ್ಯಥಾ ನಡಿಸಿತು. ಮಾಧವರಾವ್ ತನ್ನ ಮರಣ ಶಾಸನದಲ್ಲಿ ರಘುನಾಥ ರಾವಿಗೆ ಸಂವತ್ಸರ [illegible] ಲಕ್ಷ ರೂಪಾಯಿ [illegible]ವಾನವಿರುವ ಜಹಗೀರನ್ನು ಕೊಟ್ಟುದಲ್ಲದೆ ಮಹಾರಾಷ್ಟ್ರ ರಾಜ್ಯದ ಬೊಕ್ಕಸದಿಂದ ಬೇಕಾದಾಗಲೆಲ್ಲಾ ಧನವನ್ನು ತೆಗೆದುಕೊಳ್ಳಬಹುದೆಂದು ಏರ್ಪಾಡು ಮಾಡಿದ್ದನು. ಇಷ್ಟರಿಂದಲೇ ರಘುನಾಥರಾವಿನ ಆಶೆ ತೀರಲಿಲ್ಲಾ. ತನ್ನ ಅಣ್ಣನಾದ ಮಾಧವ ರಾವ್ ಪೇಷ್ವೆಯ ಉತ್ತರ ಕ್ರಿಯೆಗಳು ಮುಗಿದ ಮೇಲೆ ಸಾತಾರಾ ಪಟ್ಟಣಕ್ಕೆ ಹೋಗಿ ಅಲ್ಲಿ ಸಾತಾರಾ ಸಿಂಹಾಸನದಲ್ಲಿದ್ದ ರಾಮರಾಜನಿಂದ ನಾರಾಯಣ ರಾವ್ ಅಭಿಷಿಕ್ತನಾದನು. ನಾರಾಯಣರಾವಿಗೆ ಸಖಾರಾಮುಭಾವು ಮೋರೋ ಬಾಬುರಾವು ಬಾಲಾಜಿ ಜನಾರ್ದನನೆಂದು ಪ್ರಸಿದ್ಧಿ ಹೊಂದಿದ ನಾನಾ ಫರ್ಣವೀಸು ಬುಲ್ವಾಬಾಪುರಂಧರ ಎಂಬವರು ಮಂತ್ರಿಗಳಾಗಿದ್ದರು. ಮತ್ತೆ ನಾರಾಯಣ ರಾವು ಪಟ್ಟಾಭಿಷಿಕ್ತನಾದಾಗ ರಘುನಾಥ ರಾವು "ನಾಯಿಬ್" ಎಂಬ ಬಿರುದಿನಿಂದ ನಾರಾಯಣ ರಾಯನ ಕಡೆ ಅಧಿಕಾರ ನಡಿಸುತ್ತಿರಬೇಕೆಂದು ಏರ್ಪಾಡಾಯಿತು. ಮಾಧವ ರಾವ್ ಮರಣ ಹೊಂದಿದ ನಂತರ ಕೆಲವು ದಿನಗಳ ವರೆಗೆ ಆತನು ಹೇಳಿದ್ದ ರೀತಿಯಿಂದಲೇ ನಡೆಯಿತು. ಆದರೂ ಅದು ಬಹು ಕಾಲ ನಿಲ್ಲಲಿಲ್ಲ. ಮಂತ್ರಿಗಳಲ್ಲಿ ಅನ್ಯೋನ್ಯ ವೈಷಮ್ಯವುಂಟಾಗಿ ರಾಷ್ಟ್ರದಲ್ಲಿ ಕಕ್ಷಿಗಳು ಪ್ರಬಲವಾದುವು.

(ಮುಂದುವರಿಯುವುದು)

ಅಧಿಕಾರವನ್ನಿತ್ತವನ್ಯಾರು.

ನಾವು ಹುಟ್ಟುವಾಗ ಯಾವದೊಂದು ಅಧಿಕಾರವನ್ನು ಪಡೆದು ಕೊಂಡವರಾಗಿ ಈಚೆಗೆ ಬರಲಿಲ್ಲ; ಸಾಯುವಾಗ ಯಾವದೊಂದು ಅಧಿಕಾರವನ್ನು ಹಿಡಿದು ಕೊಂಡವರಾಗಿ ಆಚೆಗೆ ತೆರಳುವದಿಲ್ಲ. ತನ್ಮಧ್ಯೆ ನಮಗಿರುವ ಅಧಿಕಾರವು ನಂನಮ್ಮ ಜೀವದ ಪರಿಕ್ಷಾರ್ಥವಾಗಿ ಪರಮಾತ್ಮನಿಂದ ಕೊಡಲ್ಪಟ್ಟಿದೆ. ಕೊಡಲ್ಪಟ್ಟ ಅಧಿಕಾರವನ್ನು ನಮ್ಮ ಆಜ್ಞಾಧಾರಕರ ಮತ್ತು ನೆರೆಹೊರೆಯುವರ ಮೇಲಿಗಾಗಿ ಉಪಯೋಗಿಸಿಕೊಂಡರೆ ಬಾಳುವೆವು. ಅಧಿಕಾರವನ್ನು ಅವರ ಕೇಡಿಗ್ಹಾಗಿ ಬಳಸಿದರೆ ಬೀಳುವೆವು. 'ಕೊಡಲ್ಪಟ್ಟದ್ದು' ಯಾವ ಗಳಿಗೆಯಲ್ಲಾದರೂ ತೆಗೆಯಲ್ಪಡಬಹುದು. "ನಿನ್ನ ಮನೆವಾರ್ತೆಯ ಲೆಕ್ಕವನ್ನು ಒಪ್ಪಿಸು" ಎಂತ ಭಗವಾಜ್ಞೆಯಾಗುವಾಗ ನಾವು ಕಂಗೆಡದ ಹಾಗೆ ಅಧಿಕಾರವನ್ನು ನಮ್ಮವರ ಪ್ರೀತ್ಯರ್ಥವಾಗಿ ಬಳಸಿಕೊಳ್ಳುವಾ. "ಅವರ ಏಳಿಗೆಯೇ ನಮ್ಮ ಸೌಭಾಗ್ಯ ಅವರ ಕೃತಜ್ಞತೆಯೇ ನಮ್ಮ ಪ್ರತಿಫಲ" ಎಂತ ನಮ್ಮ ಕೀರ್ತಿಶೇಷ ಮಹಾರಾಣಿಯವರು ಈ ದೇಶಾಧಿಕಾರವನ್ನು ವಹಿಸಿಕೊಂಡಾಗ ನುಡಿದ ಮಹಾವಾಕ್ಯವೇ ಈ ಭರತಖಂಡದಲ್ಲಿರುವ ರಾಜ್ಯಾಧಿಕಾರಿಗಳ ಮತ್ತು ಮತಾಧಿಕಾರಿಗಳ ಪ್ರಣವ ಜಪವಾಗಿರಲಿ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಕಾಲ ಕೆಟ್ಟಿತೋ--ನಾನು ಕೆಟ್ಟೆನೋ.

ಕಳೆದ ಶನಿವಾರ ದಿನ—ತಿರುಗಾಡುತ್ತಾ ಹೋದೆನು. ರಾಮೇಶ್ವರಕ್ಕೆ ಹೋದರೂ ಶನೀಶ್ವರ ಬಿಡ ಎಂಬಂತಾಯಿತು. ಅಹಾ! ಹಂಪನಕಟ್ಟೆ ಸಮೀಪಿಸುತ್ತಲೇ ದಿ ರಿಸ್ಟೋರೆಂಟ್, ದಿ ರಾಜಾ ಹೊಟೇಲ್, ಹೊಟೇಲ್ ಹೊಟೇಲ್ ಎಂಬ ದೊಡ್ಡಕ್ಷರಗಳ ಸಾಲುಗಳನ್ನು ನೋಡಿ ಒಡನೆ ಬಾಯಾರಿದು ಒಂದುಪ್ಪರಿಗೆಯ ಮೇಲೇರಿದೆನು. ಆಶ್ಚರ್ಯ! ಆಶ್ಚರ್ಯ!! ದೊಡ್ಡ ದೊಡ್ಡ ಮುಂಡಾಸಿನ ಗಲ್ಲಮೀಸೆಯ ಕೆಲವು ಮಹನೀಯರುಗಳು ಉಪ್ಪರಿಗೆಯ ಮೂಲೆಮೂಲೆ ಕೂತು "ಬಾಯಿ, ಬೋಯಿ" ಎಂದು ಕೂಗುತ್ತಿದ್ದರು. ಕೆಲವರು ಮುಳ್ಳು, ಸೌಟುಗಳಿಂದ ಏನನ್ನೋ ಕೊಯ್ಯುತ್ತಿದ್ದರು. ದಿಗ್ಭ್ರಮೆಗೊಂಡು ನಾನೊಂದು ಮೂಲೆ ನಿಂತುಬಿಟ್ಟೆ. 'ಗುಡ್‌ಲಕ್' ಎಂಬ ಪದಗಳನ್ನು ಕೇಳಿ ಕೇಳಿ ನನ್ನ ಕಿವಿ ಮೊಂಡಾಯಿತು. ತಲೆ ಒಳಹಾಕಿ ಹಣಕುವಷ್ಟರಲ್ಲಿ ಒಬ್ಬ ಮಹನೀಯರು ನನ್ನನ್ನು ದೃಷ್ಟಿಸಿ ಬಿಟ್ಟರು. 'ಓ ಮಾಯಿ ಫ್ರೆಂಡ್' ಎಂದ್ಹೇಳಿ ಕುರ್ಶಿಯನ್ನೆಳೆದು ಕಾಲ ಕೆಳಗೆ ಇಟ್ಟು—ಮತ್ತೇನೋ ಹೇಳಿದರು. ನಾನು ಇಂಗ್ಲಿಷ್ ಬಲ್ಲವನಲ್ಲ, ಅಚ್ಚ ಕನ್ನಡ ಅರಿತವನಲ್ಲ, ಮರೆತು ಬಿಟ್ಟೆನು, ನನಗೆ ಮರವು ಹೆಚ್ಚು. ಅವರಿಗೆ ಮಾತು ಹೆಚ್ಚು. ತುಸ ತಡೆದು 'ಬಾಯಿ, ಬಾಯಿ,' ಎಂದು ಕರೆಯಲಾರಂಭಿಸಿದರು. ಅಯ್ಯಯ್ಯೋ—ನನ್ನ ಬಾಯಿ ಎಂದು ಒದರುವಷ್ಟರಲ್ಲಿ 'ಕಟ್ಲೇಸ್ ಸೇರ್' ಎಂಬ ಪದವು ಕೇಳಿಸಿತು. ಹೆದರಿ ಬಿಟ್ಟೆನು. 'ಕಟ್' ಎಂದರೆ ಕಡಿ ಎಂಬರ್ಥ ಇದೆಂದು ನಮ್ಮ ಬಜಾರ್ ಸ್ಕೂಲಿನ ಮಾಸ್ತರರು ಕಲಿಸಿದ್ದು ಜ್ಞಾಪಕಕ್ಕೆ ಬಂದೇ ಬಂತು. ಎದೆಯು ಹಾರಲಾರಂಭಿಸಿತು. ಮೈಬೆವರಿ ನೀರಾಯಿತು. ನಾಡಿ ಬಡಿಯಲಾರಂಭಿಸಿತು. ಕಣ್ಣು ತಿರುಗಿಸಿ ನೋಡಲು ಮೇಜಿಯ ಮೇಲೆ ಒಂದು ಪ್ಲೇಟ್—ಪ್ಲೇಟ್ ತುಂಬಾ ಕಟ್ಲೇಸುಗಳಂತೆ. ಅದರ ಮೇಲೆ ಒಂದು [illegible] ಒಂದು ಮುಳ್ಳಂತೆ. ನಾನು ಇವುಗಳನ್ನೆಲ್ಲಾ ಈ

ತನಕ ನೋಡ್ಯರಿಯೆ. ಚೂರಿ ಕಡಿಯಲಿಕ್ಕಂತೆ--ಮುಳ್ಳು ಚುಚ್ಚಲಿಕ್ಕಂತೆ. ಶನಿವಾರ ಶನಿ ಹಿಡಿದಂತಾಯಿತು. ಕಟ್ಲೇಸ್ ತಿನ್ನಿಸಿ ಬಿಟ್ಟರು. ನಂತರ ಗುಡ್‌ಲಕ್ ಎಂದ್ಹೇಳಿ ಏನೋ ಒಂದು ಕುಡಿಯ ಕೊಟ್ಟರು. ತಲೆ ತಿರುಗಲಾರಂಭಿಸಿತು. ಉಪ್ಪರಿಗೆಯ ಮೇಲೆಯೋ—ಕೆಳಗೆಯೋ—

ಅಹಾ! ಬೀದಿ ಬಳಿಸುವ ಕೆಲಸ ತಪ್ಪಿ ।
ಬೀದಿಕಾಲಿವೆ ಶಯ್ಯೆಯಾಗಿ ।
ಹಾದಿ ಹೋಕರು ಎಳೆದು ನಿಲಿಸಲು ।
ಹಾದಿ ಕಾಣದೆ ಬಿದ್ದನು ॥ ಎಂಬೀ ಮುಟ್ಟನ್ನು ಯಾರೋ

ಹಾಡಿದ್ದು ನನ್ನ ಕಿವಿಗೆ ಬಿತ್ತು. ಹ್ಯಾಗೂ ಹೊರಳಾಡುತ್ತಾ ಹಂಪನಕಟ್ಟೆಯ ಮೂರು ಲಾಂದರು ಸ್ತಂಭದ ಬಳಿ ಬರುತ್ತಲೇ ದಿಕ್ಕು ತೋರದು. ನಾನೊಬ್ಬನೇ—ಯಾರೋ ಎಳೆದುಕೊಂಡು ಮನೆ ಸೇರಿಸಿದರು. ನನ್ನ ಸತಿಯ ಸವಿನುಡಿ ಬಿರುನುಡಿಯ ಹಾಗೆ ಕೇಳಿಸಿತು. ಮಕ್ಕಳ ಇಂಪು ಗಾಯನವು ಗೂಗೆಯ ಸ್ವರವಾಯಿತು. ಅಹಾ! ಏನು ಹೇಳಲಿ!! ಕಾಲ ಕೆಟ್ಟಿತು, ಕಾಗೆ ರಾಗಿ ತಿನ್ತು-ನಾನು ಕಟ್ಲೇಸ್ ತಿಂದೆ-ಗುಡುಲಕ್ಕಿನ ಮಹಿಮೆ ಬೇಡ್‌ಲಕ್ ಆಯಿತು. ಹೆಂಡತಿಗೆ ಆಶ್ಚರ್ಯ-ಕರಕರೆ; ಮಕ್ಕಳಿಗೆ ಚೇಷ್ಟೆ. ಬೆಳಿಗ್ಗೆ ಎದ್ದು ಹೆಂಡತಿ ಮಕ್ಕಳ ಕಿಲಿಕಿಲಿ ನೋಟವನ್ನು ನೋಡಿ ನಾಚಿಕೆಗೊಂಡು ಶನಿವಾರ ದಿವಸವನ್ನೇ ಶಪಿಸ ತೊಡಗಿದೆ. ಪತ್ರ ಸಂಪಾದಕರೇ, ಪತ್ರವು ಬೆಳೆದು ಬಿಟ್ಟಿತು. ಇಷ್ಟರಲ್ಲಿ ಮುಗಿಸುವೆನು—ಸ್ವಾಮಿ, ನೀವೆಂದೂ ಹೊಟೇಲಿಗೆ ಹೋಗಬೇಡಿ, ಬೀರ ಕುಡಿಯಬೇಡಿ-ಸ್ನೇಹಿತರನ್ನು ಸೇರಬೇಡಿ-ಕುಡುಕರನ್ನು ನಂಬಬೇಡಿ. ಒಮ್ಮೆ ಹೊಟೇಲಿಗೆ ಹೋದರೆ—

ಬಿಡಿಸಲಾಗದು ವೈರಿನಾಶೆಯ ಗೂಳಿಯಂ ।
ಬಿಡಿಸಲಾಗದು ಪಾರದಾರಿಕ ಮರ್ತ್ಯನಂ ।
ಬಿಡಿಸಲಾಗದು ತಾಂ ಸ್ವಭಾವಜ ದೋಷವಂ ॥ ಎಂಬ

ಮಾತು ನಿಮಗೂ ತಟ್ಟುವದು.

ಅಹಾ! ಕಾಲದ ಮಹಿಮೆಯೇ, ಕುಡಿಯದಂಥವರು ಕುಡಿಯ ಪ್ರಾರಂಭಿಸಿದರು. ವನಸ್ಪತಿಹಾರಿಗಳು ಮಾಂಸಹಾರಿಗಳಾದರು. ಕಾಲ ಕೆಟ್ಟಿತೋ, ನಾನೇ ಕೆಟ್ಟೆನೋ? ವಾಚಕರೇ ತೀರ್ಮಾನಿಸಲಿ.

ಅಪೀಕಲಾಟಿ.

ವಿದೇಶ ವೃತ್ತಾಂತ

ಅಮೇರಿಕದ ನ್ಯೂಯೊರ್ಕ್ ಪಟ್ಟಣದಲ್ಲಿರುವ ಎಕ್ವಿಟಿಬಲ್ ಲ್ಯಾಪ್ ಎಸ್ಯೂರೆನ್ಸ್ ಸೊಸ್ಯಾಟಿ ಎಂಬ ಜೀವ ವಿಮೆಯ ಸಂಘದ ಕಚ್ಚೋಣಿಕ್ಕೆ ಬೆಂಕಿ ಬಿದ್ದು ಮಹಾ ನಷ್ಟವುಂಟಾಯಿತು. ಈ ಕಚ್ಚೋಣದ ಕೋಣೆಯಲ್ಲಿದ್ದ ಸಂಘದ ಕೆಲವು ಮಿಲಿಯ ಭದ್ರತೆಯ ಪತ್ರಗಳೂ ಕಚ್ಚೋಣದ ಕಂದಾಯವಾಗಿ ಸರಕಾರಕ್ಕೆ ಕೊಡಲಿಕ್ಕಿದ ೧೭ ಮಿಲಿಯ ಪವನುಗಳೂ ಸುಟ್ಟುಹೋಯಿತು. ಒಟ್ಟಿನ ನಷ್ಟ ೩೬ ಮಿಲಿಯ ಪವನುಗಳೆಂಬದಾಗಿ ಅಂದಾಜಾಗಿಯದೆ. ಬೆಂಕಿಯು ೨೦ ಮೈಲುಗಳ ವರೆಗೆ ಕಾಣುತಿತ್ತು. ಪುಸ್ತಕಗಳನ್ನು ಉಳಿಸಬೇಕೆಂಬದಾಗಿ ಪ್ರಯತ್ನಪಟ್ಟ ಕಂಪೆನಿಯ ಪ್ರೆಸಿಡೆಂಟರು ಬೆಂಕಿ ತಾಗಿ ಮೋದಂಡ ಸ್ಥಿತಿಯಲ್ಲಿರುವರು. ಕೆಲವು ಮಂದಿ ಮೃತಪಟ್ಟರು. ಕಂಪೆನಿಯ ಪತ್ರವ್ಯವಹಾರಗಳ ದ್ವಿಪ್ರತಿಗಳಿರುವುದರಿಂದ ಏನೊಂದು ಅಡ್ಡಿಯಿಲ್ಲದೆ ಮುಂದಕ್ಕೂ ಕೆಲಸ ನಡಿಸಬಹುದೆಂದು ಕಂಪೆನಿಯವರು ಪ್ರಕಟಿಸಿರುತ್ತಾರೆ.

ಇಂಗ್ಲಾಂಡಿನಲ್ಲಿ ಬೆಪ್ಟಿಷ್ಟ ಮಿಶ್ಯನರಿ ರಿಚ್ಸನ್ ಎಂಬ ಪಾದ್ರಿಯು ಮಿಸ್ ಎವಿಸ್ ಲಿನ್ನೆಲ್ ಎಂಬವಳನ್ನು ಒಂದರೆ ಕಾರಣದಿಂದ ಖೂನಿ ಮಾಡಿದ್ದನು. ಈ ಮೊಕದಮೆಯು ತನಖಿಯಾಗಿ ಈ ಪಾದ್ರಿಗೆ ದೇಹಾಂತ ಶಿಕ್ಷೆಯು ವಿಧಿಸಲ್ಪಟ್ಟಿತು.

ಚಕ್ರವರ್ತಿಯವರು ಪ್ರಧಾನ ಮಂತ್ರಿಯಾದ ಅಸ್ಕಿತ್ ಪ್ರಭುಗಳಿಗೆ ತಂತೀ ಬಿಟ್ಟು ಹಿಂದೂಸ್ಥಾನದ ಎಲ್ಲಾ ಜಾತಿ ಕುಲಗಳವರು ಏನೊಂದೂ ಭೇದವಿಲ್ಲದೆ ತನ್ನನ್ನೂ ಚಕ್ರವರ್ತಿನಿಯವರನ್ನೂ ಭಕ್ತಿ ವಾತ್ಸಲ್ಯದಿಂದ ಸ್ವಾಗತ ಮಾಡಿಕೊಂಡು ತಮ್ಮ ರಾಜ ಭಕ್ತಿಯನ್ನೂ ಪ್ರೀತಿಯನ್ನೂ ವಿವಿಧ ತರವಾಗಿ ತೋರ್ಪಡಿಸಿದರು. ತನ್ನ ಮತ್ತು ಶೀಮೆಯಲ್ಲಿರುವ ತನ್ನ ಜನರೊಳಗಿನ ಪರಸ್ಪರ ಪ್ರೀತಿವಿಶ್ವಾಸದಿಂದ ತನ್ನ ಹೃತ್ಪೂರ್ವಕವಾದ ಬಯಕೆಯು ನೆರವೇರುವರೆ ಅನುಕೂಲವಾದ್ದರಿಂದ ತುಂಬಾ ಸಂತೋಷ ಪಡುತ್ತೇನೆ. ಅದಲ್ಲದೆ ತಾನು ಹಿಂದೂಸ್ಥಾನಕ್ಕೆ ಚಿತ್ತೈಸಿದ್ದರಿಂದ ಹಿಂದೂಸ್ಥಾನಕ್ಕೆ ಮತ್ತು ಸಾಮ್ರಾಜ್ಯಕ್ಕೆ ಎಂದೆಂದಿಗೂ ಇದ್ದುಳಿಯುವ ಮೇಲ್ಮೆಯು ಉಂಟಾದೀತೆಂಬದು ಕಾರ್ಯಾನುರೂಪ ಪ್ರಾಮಾಣಿಸಲ್ಪಟ್ಟಿತೆ ಈ ಪಯಣದಿಂದುಂಟಾದ ಸಂತೋಷವು ತನಗೆ ಇನ್ನಷ್ಟು ಅಧಿಕವಾಗುವದೆಂದು ತಿಳಿಸಿರುವರು.

ಜರ್ಮನಿಯಲ್ಲಿ ೧೦೫ ವರ್ಷ ಪ್ರಾಯದ ಒಬ್ಬ ಹೆಂಗಸಿರುವಳು. ಅವಳು ಉದ್ಧವಾಗಿಯೂ ಬಹಳ ಕೋಮಲ ಶರೀರವುಳ್ಳವಳಾಗಿಯೂ ಇರುವಳು. ಅವಳ ಬೆನ್ನು ಬಗ್ಗಿ ಹೋಗಿಯದೆ. ಮುಖವು ನೆರಿಕಟ್ಟಿಯದೆ. ಕಣ್ಣು ಕಾಣುವದಿಲ್ಲ, ಕಿವಿ ಕೇಳ್ಪುವದಿಲ್ಲ, ಕೂದಲು ಪೂರಾ ನರೆತದೆ. ಅವಳ ಹಿರೇ ಮಗನಿಗೆ ಈಗ ೮೫ ವರ್ಷ ಪ್ರಾಯ, ಇವಳಿಗೆ ವಿವಾಹವಾಗಿ ೯೦ ವರ್ಷವಾಯಿತು. ೪೫ ವರ್ಷದಿಂದ ವಿಧವೆಯಾಗಿದ್ದಾಳೆ. ಅವಳ ವಂಶಸ್ಥರು ಈಗ ಒಟ್ಟಿಗೆ ೨೦೦ ಮಂದಿ ಇದ್ದಾರೆ.

ಲೋಕದಲ್ಲಿ ಕೋಟ್ಯಾಧಿಪರಾದ ಹೆಂಗಸರಲ್ಲಿ ರೋಚೆಸ್ಟರಿನ ಮಿಸಿಸ್ ಎಡ್ವರ್ಡ್. ಎಚ್. ಹೆಂಮೇನ್ ಎಂಬ ವಿಧವೆಯು ಎರಡನೇ ಸ್ಥಾನವನ್ನು ಪಡೆದಿರುವಳು. ಇವಳಿಗೆ ದಿನ ಒಂದಕ್ಕೆ ೪೪ ಪವನುಗಳ ಹುಟ್ಟುವಳಿ ಇದೆ. ಈಗ ಇವಳಿಗೆ ೬೦ ವರ್ಷ ಪ್ರಾಯ. ಅರ್ವತ್ತೇ ಶಬ್ದಗಳಿರುವ ಒಂದು ವಿಲ್‌ನಾಮೆಯನ್ನು ಈಗಲೇ ಬರೆದಿಟ್ಟಿರುತ್ತಾಳೆ.

ಗ್ರೇಟ್ ಬ್ರಿಟಾನಿನಲ್ಲಿ ಕೆಲಸಗಾರರು ಮುಷ್ಕರ ಹಿಡಿಯುವರೆ ಹವಣಿಸುತ್ತಿದ್ದಾರೆ. ಎರಡು ಹಪ್ತೆಗಳಲ್ಲಿ ರೈಲು ಗಾಡಿಗಳೂ, ಮೂರು ಹಪ್ತೆಗಳಲ್ಲಿ ವಿದ್ಯುಚ್ಛಕ್ತಿಯ ತಯಾರಿ ಕೆಲಸವೂ ಒಂದು ತಿಂಗಳಲ್ಲಿ ಎಲ್ಲಾ ಕಾರಖಾನೆಗಳೂ ಗಿರಣಿಗಳೂ ಕೆಲಸದವರಿಲ್ಲದೆ ನಿಂತು ಹೋಗುವದೆಂದು ವಾರ್ತೆ ಇದೆ. ಕೆಲಸಗಾರರ ಮುಷ್ಕರವು ಪ್ರಾರಂಭವಾಗಿಯದೆ. ಇಂಗ್ಲಾಂಡಿನ ಉತ್ತರ ಮತ್ತು ಮಧ್ಯಪ್ರಾಂತ್ಯದಲ್ಲಿ ಈಗಲೇ ಕಲ್ಲಿದ್ದಲಿಗೆ ಕ್ರಯವೇರಿಯದೆ. ಮಾರ್ಚಿ ತಿಂಗಳಲ್ಲಿ ಮುಷ್ಕರಗಾರರು ಪೂರಾ ಕೆಲಸ ನಿಲ್ಲಿಸುವರೆ ನಿಷ್ಕರ್ಷಿಸಿದ್ದಾರೆ. ತನ್ಮಧ್ಯೆ ಆಯಾ ಗೃಹಸ್ಥರು ಸಮಾಧಾನ ಮಾಡುವ ವಿಲೆವಾರಿ ಮಾಡುತ್ತಿದ್ದಾರೆ.

ಟ್ರಿಪೋಲಿಯಲ್ಲಿ ಇಟಾಲಿಯರ ಮೂರು ಯುದ್ಧ ನಾವೆಗಳು ತುರ್ಕರ ಏಳು ಯುದ್ಧ ನಾವೆಗಳೊಡನೆ ಯುದ್ಧ ಮಾಡಿ ೬ ಯುದ್ಧ ನಾವೆಗಳನ್ನು ಹಾಳುಮಾಡಿ ಒಂದನ್ನು ಹಿಡಕೊಂಡಿತು. ಈ ಯುದ್ಧವು ೩ ತಾಸುಗಳ ವರೆಗೆ ನಡೆಯಿತು. ತುರ್ಕರು ಈ ಕದನದಲ್ಲಿ ಪೂರ್ಣವಾಗಿ ಸೋಥಿರುವರು.

ರುಷ್ಯರು ಮೊಂಗೋಲಿಯಕ್ಕೆ ತಮ್ಮ ಸೈನ್ಯವನ್ನು ಕಳುಹಿಸಿದ್ದಾರೆಂಬ ವಾರ್ತೆಯು ನಿಜವಲ್ಲವೆಂಬದಾಗಿ ರುಷ್ಯಾ ಸರಕಾರದವರು ತಿಳಿಯ ಪಡಿಸಿದ್ದಾರೆ.

ಹೊವು ಎಂಬಲ್ಲಿ ಚೀನಸರಕಾರ ಕಡೆಯ ಸೈನೀಕರು ಸೋಥೋದರು. ಪ್ರಬಾಧಿಪತ್ಯ ಸರಕಾರದ ಸೈನೀಕರು ಈಗ ಪೆಕಿಂಗಿನೆಕಡೆಗೆ ಮುಂದರಿಸುತ್ತಿದ್ದಾರೆ.

ಚೀನದ ಪೆಕಿಂಗ್ ಪಟ್ಟಣದಿಂದ ಸಮುದ್ರದ ವರೆಗೆ ಇರುವ ರೈಲ್ವೇಗಳನ್ನು ಕಾಯುವದಕ್ಕಾಗಿ ಅಮೇರಿಕ ಸರಕಾರದವರು ೫೦೦ ಸೈನೀಕರನ್ನು ಕಳುಹಿಸಿ ಕೊಟ್ಟಿರುತ್ತಾರೆ. ಮೊಂಗೋಲಿಯದ ಆಜುಬಾಜಿನಲ್ಲಿ ಅಲೆದಾಡುತ್ತಿರುವ ಚೀನಿಯರನ್ನು ಓಡಿಸುವದಕ್ಕಾಗಿ ರುಷ್ಯರು ಮೊಂಗೋಲಿಯಕ್ಕೆ ತಮ್ಮ ಸೈನ್ಯವನ್ನು ಕಳುಹಿಸಿರುವರು. ಈ ಚೀನಿಯರು ಮಂಚೂರಿಯಕ್ಕೆ ಗಡಿಪಾರು ಮಾಡಲ್ಪಡುವರು. ಕೆಲವು ನೂರು ಚೀನಿಯರು ಮೊಂಗೋಲಿಯದ ಹುದ್ದೆದಾರರ ಮೇಲೆ ಬಿದ್ದಿರುವದರಿಂದ ಅವರು ರುಷ್ಯರ ಸಹಾಯ ಕೇಳಿಕೊಂಡಿರುವರು.

ರುಷ್ಯಾ ಸರಕಾರದವರು ಚೀನ ಸರಕಾರದವರಿಗೆ ಪತ್ರ ಬರೆದು ಮೊಂಗೋಲಿಯದಲ್ಲಿ ಕೂಡ್ಲೇ ತಕ್ಕ ವ್ಯವಸ್ಥೆಯನ್ನು ಏರ್ಪಡಿಸ ಬೇಕೆಂಬದಾಗಿ ಕೇಳಿಕೊಂಡಿದ್ದಾರೆ. ಮೊಂಗೋಲಿಯವನ್ನು ತಾವು ವಶಮಾಡಿಕೊಳ್ಳುವ ಇರಾದೆಯಲ್ಲಿಲ್ಲವೆಂದೂ ಚೀನ ಸರಕಾರದವರು ಮೊಂಗೋಲಿಯದಲ್ಲಿ ತಕ್ಕ ವ್ಯವಸ್ಥೆಯನ್ನು ಮಾಡದಿರುವುದರಿಂದ ಅಲ್ಲಿಯ ಪ್ರಜೆಯವರು ಚೀನ ಸರಕಾರದವರಿಗೆ ಎದುರು ನಿಲ್ಲುವರೆ ನಿಷ್ಕರ್ಷಿಸಿ ತಮ್ಮ ಸಹಾಯ ಕೇಳಿರುವುದರಿಂದ ಉಭಯತರೊಳಗೆ ಸಮಾಧಾನವನ್ನುಂಟುಮಾಡಿ ತಕ್ಕ ಏರ್ಪಾಡನ್ನು ಮಾಡಬೇಕೆಂಬದೇ ತಮ್ಮ ಉದ್ದೇಶವೆಂದೂ ತಿಳಿಸಿರುವರು.

ಚೀನದ ತುರ್ಕಿಸ್ಥಾನದ ಕುಲ್ಜ ಎಂಬ ಪಟ್ಟಣದಲ್ಲಿ ದಂಗೆಗಾರರು ೪೦೦ ಮಾಂಚುಗಳನ್ನು ಕೊಂದು ಪ್ರಜಾಧಿಪತ್ಯವನ್ನು ಸಾರಿದ್ದಾರೆ.

ಪರ್ಶಿಯದಲ್ಲಿ ಟ್ರೆಜರರ್ ಜನರಲಾಗಿ ನೇಮಿಸಲ್ಪಟ್ಟ ಮೆ। ಮೊರ್ನಾಡರ ಕಮಿಷನಿನ ಮೆಂಬರರು ರಾಜಿ ಕೊಟ್ಟಿರುವರು. ಇನ್ನು ಮುಂದಕ್ಕೆ ಟ್ರೆಜರಿ ಸಂಬಂಧವಾದ ಎಲ್ಲಾ ಪತ್ರವ್ಯವಹಾರಗಳೂ ಹುಕುಮುಗಳೂ ಮೊರ್ನಾಡರ ದಸ್ಕತ್ತಿನಿಂದಲೇ ಕಳುಹಿಸಲ್ಪಡುವವು. ಆದರೆ ಮೊರ್ನಾಡರ ನೇಮಕವು ಖಾಯಂ ಅಲ್ಲ ಎಂಬದಾಗಿ ತಿಳಿದು ಬರುತ್ತದೆ.

ಮಾಜಿ ಟ್ರೆಜರರ್ ಜನರಲರಾದ ಮೆ। ಶುಸ್ತರರು ಪರ್ಶಿಯವನ್ನು ಬಿಟ್ಟು ಯೂರೋಪಿಗೆ ಹೋಗಿರುವರು. ಮೆ। ಮೊರ್ನಾಡರ ಕಮಿಶನ್ ಟ್ರೆಜರಿ ಆಡಳಿತೆಯನ್ನು ನಡಿಸುವರೆ ಯೋಗ್ಯವಾದದ್ದಲ್ಲ ಎಂಬದಾಗಿ ತಿಳಿಸಿರುವರು.

ಮೂರು ವರ್ಷದಿಂದ ೧೨ ವರ್ಷದ ಕೆಳಗಿನ ಪ್ರಾಯದ ಮಕ್ಕಳಿಗೆ ಅರ್ಧಚಾರ್ಜು ಮಾಡಲಾದೀತು. ಪ್ರತಿ ಒಂದು ಸಂಗ್ತಿಯಲ್ಲಿ ಆಣೆಯ ಅಂಶಕ್ಕೆ ಒಂದಾಣೆ ಎಂತಲೇ ಲೆಕ್ಕಿಸಲಾದೀತು.

ಈ ರಿಟರ್ನ್ ಟಿಕೇಟುಗಳು ಇದೇ ತಿಂಗಳ ತಾ. ೧ರಿಂದ ೧೦ನೇ ತಾರೀಕಿನ ವರೆಗೆ (೨ ತಾರೀಕುಗಳೂ ಕೂಡಿ) ಕೊಡೋಣಾದೀತು. ಮತ್ತು ಹಿಂದೆರಳುವ ಪ್ರಯಾಣವು ಜನವರಿ ತಾ. ೩೧ನೇ ದಿವಸ ಮಧ್ಯರಾತ್ರಿಯೊಳಗೆ ಅಂತ್ಯವಾಗ ಬೇಕು.

೧೯೧೨ನೇ ಇಸವಿ ಜನವರಿ ೧೦ನೇ ತಾರೀಕಿನಿಂದ ೨ ತಿಂಗಳವರೆಗೆ ಉಡ್ಪಿಯಲ್ಲಿ ಒಂದು ಹಂಗಾಮಿ ಬುಕ್ಕಿಂಗ್ ಆಫೀಸ್ ತೆರೆಯಲಾದೀತಲ್ಲದೆ ಈ ರೀಯಾತಿಯಲ್ಲಿ ಟಕೇಟು ಪಡಕೊಳ್ಳುವ ಪ್ರಯಾಣಸ್ಥರು ಉಪಯೋಗಿಸಿಕೊಳ್ಳುವ ಬಗ್ಗ್ಯೆ ಮಂಗಳೂರಿನಲ್ಲಿ ಒಂದು ವಿಶ್ರಾಂತಿಗೃಹವು ತೆರೆಯೋಣಾಗುವದು.

(Sd) T. G. McCloughin,
Genl. Traffic Manager.

ಮಂಗಳೂರು ತಾಲೂಕು ಬೋಳಾರ ಹಳೆಕೋಟೆ ಶ್ರೀ ಮಾರ್ಯಮ್ಮ ದೇವಸ್ಥಾನದಲ್ಲಿ ಆಗತಕ್ಕ ಮಹಾಪೂಜೆಯು ಇದೇ ೧೯೧೨ನೇ ಇಸವಿ ಮಾರ್ಚಿ ತಾ. ೫ಕ್ಕೆ ಜರಗುವದು. ಸದರಿ ದೇವಸ್ಥಾನ ಕಡೆಯಿಂದ ಶ್ರೀ ದೇವನಾಮಾಂಕಿತದ ನಿಶಾನಿಯೂ ಮತ್ತು ಮುದ್ರೆ ಉಳ್ಳಂಥಾ ಒಂದು ಪತ್ರ ಸಹಿತ ಕೆಲವು ಮಂದಿಗಳು ಪೂರ್ವ ಪದ್ಧತಿ ಪ್ರಕಾರ ಸಂಚಣೆಗಾಗಿ ಕಳುಹಿಸಲ್ಪಡುವರು. ಆದ್ದರಿಂದ ಮಹಾನೀಯರಾದ ಸರ್ವ ಜನರು ಸದರಿ ಕುರುಹುಗಳನ್ನು ನೋಡಿ ಸದರಿಯವರಿಂದ ಪ್ರಸಾದ ಪಡಕೊಂಡು ಕಾಣಿಕೆ ಮಾತ್ರ ಕೊಡೋಣಾಗ ಬೇಕಾಗಿಯೂ ಮತ್ತು ಹರಿಕೆ ವ ಪರಿಕೆಗಳಿಗೆ ಸಂಬಂಧಪಟ್ಟ ಕಾಣಿಕೆಗಳನ್ನು ಯಾರೊಡನೆಯೂ ಕೊಡದೆ ಶ್ರೀ ದೇವಸ್ಥಾನಕ್ಕೆ ಬಂದು ಒಪ್ಪಿಸಿ ದೇವಿ ಪ್ರಸಾದ ಸ್ವೀಕರಿಸಬೇಕಾಗಿ ನಮ್ರತೆಯಿಂದ ಪ್ರಾರ್ಥಿಸುತ್ತೇನೆ.

ಆಡಳ್ತೆ ಮೊಕ್ತೇಸರ್, ಪರಮೇಶ್ವರ ನ್ಯಾಕ.

ಕೆಲವು ಸಮಯ ನನ್ನ ಕೆಳಗೆ ಸಬ್ ಏಜಂಟ ಆಗಿ ವಿಮೆ ಸಂಘಕ್ಕೆ ಕೆಲಸಮಾಡುತ್ತಿದ್ದ ಬೈಲಂಗಡಿ ಲಕ್ಷ್ಮಣ ರಾಯರು ಕಂಪೆನಿಯ ಬಾಬ್ತು ಕೆಲವು ಮೊಬಲಗನ್ನು ವಂಚಿಸಿದರಿಂದ ಇದರ ಮೊದಲೇ ಸಬ್ ಏಜನ್ಸಿಯನ್ನು ತಪ್ಪಿಸಿರುತ್ತೇನೆ. ಆದ್ದರಿಂದ ಅವರ ಕೂಡೆ ನಮ್ಮ ವಿಮೇದಾರರಾಗಲೀ ಅಥವಾ ನನ್ನ ಕೂಡೆ ಲೇವಾದೇವಿ ಇದ್ದ ಇತರರಾಗಲೀ ಹಣವನ್ನು ವಸೂಲು ಕೊಟ್ಟರೆ ನಾನು ಜವಾಬ್ದಾರನಾಗಲಿಕ್ಕಿಲ್ಲ. **Y. Rama Rau.**

WANTED.

Wanted two Matrics or qualified School-finals or men of higher qualifications to serve as teachers in the Ganapathy Secondary School, Mangalore.

Apply to the Head Master of the school.

ನೋಟೀಸು. ಬರುವ ತಾ. ೨೬ನೇ ಶುಕ್ರವಾರ ರಥಸಪ್ತಮಿ ದಿವಸ ಸ್ವದೇಶಾಭಿಮಾನಿ ಆಫೀಸಿಗೆ ರಜೆ ಇರುವುದರಿಂದ ಶುಕ್ರವಾರದ ಸಂಚಿಕೆಯು ಶನಿವಾರ ಪ್ರಕಟಿಸಲ್ಪಡುವದು.

ಸ್ವೀಕಾರ:—ಮ॥ ರಾ॥ ಪ್ಲೀಡರ್ ಎಂ. ಎಸ್. ನಂಜಪ್ಪನವರಿಂದ ರಚಿಸಲ್ಪಟ್ಟ ಜನಗಳ ನಿತ್ಯಾಚರಣೆಗೆ ಸಂಬಂಧಪಟ್ಟ ಲೌಕಿಕ ವ್ಯವಹಾರಗಳು ಅಂದರೆ ಸಿವಿಲ್ ಮತ್ತು ಕ್ರಿಮಿನಲ್ ವಿಷಯಗಳನ್ನು ಸಂಕ್ಷೇಪವಾಗಿ ಒಳಕೊಂಡಿರುವ ನ್ಯಾಯ ದರ್ಪಣ ಎಂಬ ಪುಸ್ತಕವನ್ನು ವಂದನಾಪೂರ್ವಕ ಸ್ವೀಕರಿಸಿರುವೆವು. ಈ ಪುಸ್ತಕದ ವಿಷಯ ನಮ್ಮ ಅಭಿಪ್ರಾಯಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆವು.

ಮಂಗಳೂರು. ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೩ ಪ್ಲೇಗ್ ಮರಣಗಳೂ ೧೭ ವಾಂತಿಭೇದಿ ಮರಣಗಳೂ ಆದವು.

ಸಾರಸ್ವತ ಬ್ರಾಹ್ಮಣರ ಗುರುಗಳಾದ ಚಿತ್ರಾಪುರ ಮಠದ ಶ್ರೀಮತ್ ಪಾಂಡುರಂಗಾಶ್ರಮ ಶ್ರೀ ಪಾದಂಗಳವರು ನಾಳೆ ಸಾಯಂಕಾಲ ಇಲ್ಲಿಗೆ ಬಂದು ತಲಪುವರು.

ಕಳೆದ ವಾರ ಇಲ್ಲಿಯ ಬಲ್ಮಠದಲ್ಲಿ ಮೆ॥ ಶೀಬರ್ ದೊರೆಗಳ ಬಂಗ್ಲೆಯನ್ನು ಒಳನುಗ್ಗಿ ಯಾರೋ ಅವರ ಅಂಗಿಯನ್ನೂ ಒಂದು ಕಿಶೆಗಡಿಯಾರವನ್ನೂ ಎತ್ತಿಹಾಕಿದರಂತೆ. ಅಂದೇ ರಾತ್ರಿ ಮೆ॥ ಸಿ. ಪಿ. ವರ್ಗೀಸರವರ ಮನೆಯಿಂದಲೂ ಒಂದು ಕುರ್ಶಿ ಕಳವಾಗಿಯದಲ್ಲದೆ ಬಲ್ಮಠದೊಳಗೆ ಈಚೀಚೆಗೆ ಕೆಲವು ಮನೆಗಳಿಂದ ಗಡಿಯಾರಗಳೂ, ಶೀರೆಗಳೂ, ತಾಂಬ್ರದ ಸಾಮಾನುಗಳೂ ಕಳವಾಗಿ ಹೋಗಿರುವುದೆಂದು ಕೇಳುತ್ತೇವೆ. ರಾತ್ರಿ ರೋಂದು ಪೋಲೀಸಿನವರು ಈ ವಿಷಯ ನಿಗಾ ಕೊಡುವುದು ವಿಹಿತವು.

ಕಳೆದ ವಾರ ಇಲ್ಲಿಂದ ಕನ್ನಾನೂರತ್ತ ಕಡೆ ತೆರಳಿದ ಪರಶುರಾಮರಾವ್ ಸರ್ಕಸ್ ಕಂಪೆನಿಯ ಆನೆಯ ಮಾವುತನು ಏನೋ ಕಾರಣದಿಂದ ಅಗ್ಗಾಡಿಯಿಂದ ಕೆಳಗೆ ಬಿದ್ದು ಹೋಗಿದ್ದನು. ಈ ಸಂಗತಿಯು ಸರ್ಕಸ್ ಕಂಪೆನಿಯವರಿಗೆ ಕನ್ನಾನೂರಿಗೆ ತಲಪುವ ವರೆಗೆ ಗೊತ್ತಿಗೆ ಬರಲಿಲ್ಲ. ನಂತರ ಈತನನ್ನು ಹುಡುಕ್ಯಾಡಲು ಈತನ ಹೆಣವು ಕನ್ನಾನೂರಿಗೆ ಏಳು ಮೈಲು ಈಚೆ ದೂರದಲ್ಲಿ ಸಿಕ್ಕಿತು. ಈತನು ಹ್ಯಾಗೆ ಟ್ರೈನಿನಿಂದ ಬಿದ್ದು ಹೋದನೆಂಬದಾಗಿ ತಿಳಿದು ಬರಲಿಲ್ಲ.

ಮ॥ ರಾ॥ ಎ. ಗೋವಿಂದ ಶೆಣೊಯಿ, ಕಳಿಕೋಟೆ ಕೃಷ್ಣರಾವ್, ಬಿ. ವಿ. ಕೃಷ್ಣರಾವ್, ಕುಂದಾಪುರ ಪುತ್ತು ಭಂಡಾರಿ, ಎ. ಟಿ. ತಿಮ್ಮಯ ಪೂಂಜ, ಉಳ್ಳಾಲ ನರಶಿಂಹ ಕಿಣಿ, ರಗಡೆ ವಾಸುದೇವ ರಾವ್, ಅತ್ತೂರು ಅಣ್ಣಪ್ಪಯ್ಯ ಪ್ರಭು, ಸೋಮನಾಥ ಉಳಿಯ ಕೃಷ್ಣ ಇವರು ರೆವಿನ್ಯು ಟೆಸ್ಟ್ ಲೋವರ್ ಗ್ರೇಡಿನಲ್ಲಿ ಪಾಸಾಗಿರುವರು.

ಡಾಕ್ಟರ್ ಬೆನೆಗಲ್ ರಾಘವೇಂದ್ರ ರಾಯರ ಮಗ ಬರ್ಡವಾನ್ ಅಶಿಷ್ಟಾಂಟ ಕಲೆಕ್ಟರ್ ಬೆನೆಗಲ್ ನರ್ಶಿಂಗ ರಾಯರು ಮಿಸ್ ಡೈಸಿ ಲುಯಿಸಾ ಸ್ಟೈಲ್ಸ್ ಆರ್ಜಂಟ ಎಂಬ ಕುಮಾರಿಯನ್ನು ಮುಂಬಯಿಯಲ್ಲಿ ಹ್ಯಾಕೋರ್ಟ ಜಡ್ಜಸರ್ ನಾರಾಯಣ ಗಣೇಶ ಚಂದಾವರಕಾರರ ವಾಸಸ್ಥಾನದಲ್ಲಿ ವಿವಾಹ ಮಾಡಿಕೊಂಡರು.

ಕಳೆದ ಶನಿವಾರ ದಿವಸ ರಾತ್ರೆ ಮೈಸೂರು ರತ್ನಾವಳಿ ನಾಟಕ ಕಂಪೆನಿಯ ಪ್ರೊಪ್ರ್ಯಾಟರರ ಸುಮಾರು ಒಂದು ಸಾವಿರ ರೂಪಾಯಿ ಕ್ರಯಬಾಳುವ ಚಿನ್ನದ ಸರಪಣಿಗಳು ವಗೈರೆ ಕಳವಾಗಿ ಹೋಗಿರುವದಾಗಿ ಕೇಳುತ್ತೇವೆ.

ಬಿಲ್ಲವರು ಕೊಡಿಯಾಲಬೈಲಿನಲ್ಲಿ ನವೀನವಾಗಿ ಕಟ್ಟಿಸಿರುವ ಶ್ರೀ ಶಿವದೇವಸ್ಥಾನದಲ್ಲಿ ಪ್ರತಿಷ್ಠೆ ಮಾಡುವ ಬಗ್ಗೆ ತರಿಸಿದ ಲಿಂಗವನ್ನು ನಿನ್ನೆ ದಿವಸ ಆನೆ, ಬೇಂಡ್ ವಾದ್ಯಗಳಿಂದ ಕೂಡಿರುವ ಮೆರವಣಿಗೆಯಿಂದ ದೇವಸ್ಥಾನಕ್ಕೆ ವೈದಿರುವರು.

ಹೊಸದುರ್ಗ. ಇಲ್ಲಿ ಕೆಲವರು ಆನೆಗಡ್ಡೆಯೆಂಬ ಕಾಡು ಅರಸಿನವನ್ನು ತಂದು ಬೇಯಿಸಿ ಒಣಗಿಸಿ ಕೊಚ್ಚಿಗೆ ಕಳುಹಿಸುತ್ತಾರೆ. ಅಲ್ಲಿ ಒಳ್ಳೇ ಕ್ರಯ ದೊರೆಯುತ್ತದಂತೆ.

ಆದಿಯಾಂಪುರ. ಇಲ್ಲಿಯ ಕೆಲವು ಮಳಿಯಾಳಿ ಕ್ಷೌರಿಕರಲ್ಲಿಗೆ ಕೆಲವು ಬಿಲ್ಲವರು ಬಂದು ದೊಂಬಿ ನಡಿಸಿದಲ್ಲಿ ಹೆಂಗಸರಿಗೆ ವಗೈರೆ ಖೂನಿ ಆದ್ದಾಗಿ ಹೊಸದುರ್ಗ ಮೆಜಿಸ್ಟ್ರೇಟರ ಮುಂದೆ ಆದ ಪಿರ್ಯಾದಿ ಮೊಕದಮೆಯಲ್ಲಿ ಮೆಜಿಸ್ಟ್ರೇಟರವರು ತನ್ಖಿ ನಡಿಸಿ ೧ನೇ ಮುದ್ದೈಯಾಲೆಗೆ ೧೫ ರೂ ಜುಲುಮಾನೆ ವಿಧಿಸಿ ಬಾಕಿ ಮುದ್ದೈಯಾಲೇರ ಖುಲಾಸಪಡಿಸಿದರು.

ಶ್ರೈ. ಇಲ್ಲಿಯ ಶೇಂದಿ ಅಂಗಡಿಯಲ್ಲಿ ಇಬ್ಬರು ಮಣಿಯರೊಳಗೆ ಜಗಳವಾಗಿ ಒಬ್ಬನು ಮತ್ತೊಬ್ಬನಿಗೆ ಇರಿದು ಖೂನಿಮಾಡಿದನೆಂತ ಹೊಸದುರ್ಗ ಮೆಜಿಸ್ಟ್ರೇಟದಾಖಲಾದ ಮೊಕದಮೆಯಲ್ಲಿ ಮುದ್ದೈಯಾಲೆಗೆ ೩ಳು ಕಠಿಣ ಸಜಾವಿಧಿಸಲ್ಪಟ್ಟಿತು.

ವಿವಿಧ ವಿಷಯಗಳು.

ಕುಂಬ ಪಾನವನ್ನು ಸೇವಿಸತಕ್ಕವರು ದಿನೇ ದಿನೇ ಹೆಚ್ಚುತ್ತಿರುವರು. ಇದುವರಿವಿಗೆ ಕೆಲವರು ಕಾಪಿಯ ಪುಡಿಯೊಡನೆ ಶಿಕರಿ (Chicory) ಎಂಬ ಕಾಳಿನುಯನ್ನು ಮಿಶ್ರಮಾಡಿ ಮಾರುವ ಪದ್ಧತಿಯು ಇತ್ತು. ನರೆ ಈಚಿಗೆ ಕಾಫಿಯ ಉತ್ಪತ್ತಿಯು ರೋಗಾದಿಗಳಿಂ ಕಡಿಮೆಯಾಗುತ್ತಿರುವುದರಿಂದಲೂ, ಇಲ್ಲಿನ ಉತ್ಪತ್ತಿ ಹೆಚ್ಚು ಭಾಗವು ಹೊರದೇಶಕ್ಕೆ ರಫ್ತಾಗುತ್ತಿರುವರಿಣ ಇಲ್ಲಿ ಕಾಫಿಯ ಧಾರಣೆಯು ಬಹಳ ಏರಿ ಹೋಗಿದರಿಂದಲೂ ಅನೇಕ ವರ್ತಕರು ಕಾಫಿ ಪುಡಿಯೊಡನೆ ಹೋದ ಅಕ್ಕಿಯ ಪುಡಿ ಮತ್ತು ಶೀಗೇಕಾಯಿಪುಡಿಯನ್ನೂ ಬೆರಸಿ ಮಾರಿ ಜನರಿಗೆ ಮೋಸ ಮಾಡುವರು. ಮದರಾಸಿನಲ್ಲಿ ಅನೇಕ ಕಾಫಿ ಕ್ಲಬ್ಬುಗಳಿ ರೀತಿ ಮಿಶ್ರ ಮಾಡಲ್ಪಟ್ಟ ಪುಡಿಯನ್ನು ಉಪಯೆಸಿ ಕಾಫಿಯನ್ನು ತಯಾರು ಮಾಡುತ್ತಿರುವದು ಸರಕಾರದವರ ತಿಳುವಳಿಕೆಗೆ ಬಂದಿರುವುದರಿಂದ ಅಲ್ಲಿನ ಆಫೀಸರವರು ಇಂಥಾ ಮಿಶ್ರಮಾಡಲ್ಪಟ್ಟ ಕಾಫಿಯು ಜನಗಳ ಆರೋಗ್ಯಕ್ಕೆ ಕುಂದುಕವನ್ನೇನಾದರೂ ಉಂಟುಮಾಡುವುದೇ ಎಂಬುದನ್ನೂ ಮತ್ತು ಕಾಫಿಪುಡಿಯನ್ನು ಮಾರುತ್ತಿರತಕ್ಕವರು ಶುದ್ಧವಾದ ಪುಡಿಯನ್ನು ಮಾರುತ್ತಯೋ ಇಲ್ಲವೇ ಎಂಬುದನ್ನೂ ಅಜಮಾಯಿಸಿ ಮಾಡುತ್ತಿರೆ.

ಜೀನಗಳ ಧಾರಣೆ, ಮಂಗಳೂರು. (ರಖಂ)

ಹೊಸ ಮತಿ ಅಕ್ಕಿ	5—0—0
ಹೊಸ ಗ್ರು. ಮಸ್ಕತಿ...	4-10—0
ಹೊಸ ಮತಿ ದುಯಂ...	4-10—0
ಹೊಸ ಗ್ರು ,, ...	4—6—0
ಮಸ್ಕತಿ ಬೆ ,, ...	5—2—0
ರಂಗೂನ್ ಕ್ಕಿಗೆ ಗೋಣಿ	10-0—0
ಹುರುಳಿ ಗೋಣಿ ೧, ಮುಡಿ 2ರ ...	6—8—0
ಉಪ್ಪು ಗೋಣಿ ೧ರ	3—4—0
ಕೊಬ್ರಿ ಖಂ ೧ರ	105-0—0
ಕೊಬ್ರಿ ಎಣ್ಣೆ ಮಣ	7—3—0
ಕಾಫಿ ಖಂ೧ರ	280—0—0
ಕಾಳು ಮೆಸು ಖಂಡಿ	180—0—0
ಹೊಸ ಬಿಳಿಗೋಟು ಅಡಿಕೆ	78—0—0
ಕರಿ ಗೋಲು	58—0—0
ಯಾಲದ ಕಾಯಿ ಮಣ ೧ರ	43—0—0
ಗೇರುಬೀಜ ಮುಡಿ ೧ರ...	2—8—0
ರಾಮಪತ್ರೆ ಮಣ ೧ರ	8-12—0
ಶೀಗೆಕಾಯಿ ಖಂಡಿ ೧ರ	30—0—0
ಕಾಸ್ರಕಿನ ಬೀಜ ಖಂಡಿ ೧ರ	21—8—0
ಯಾಲದ ಬೀಜ ಮಣ ೧ರ	50—0—0
ದಾಲಚೀನಿ ಚಕ್ಕೆ ಮಣ ೧ರ	2-10—0
ಅಂಟಕಾಳ ಕಾಯಿ ಮುಡಿ ೧ರ	1—6—0
ಅಣಲೆ ಕಾಯಿ ಖಂಡಿ ೧ರ	12—0—0

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನ್ನೂ, ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

× ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು. ×

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯು ನಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

× ಮದ್ರಾಸಿನಲ್ಲಿ ಹೆಸರುವಾಸಿಯಾದ ವ್ಹಿಸ್ಲರ್ ಸ್ಟೂಡಿಯೊ (**Whistler Studio**) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು. ×

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ಒಕ್ಕೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ,
ಮಂಗಳೂರು, ದ. ಕ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.

ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.

ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

1912ನೇ ಇಸವಿಯ ಪ್ರೊಕೆಟ್ ಡೈರಿಗಳು.

ನೋಟುಬೂಕು ಸೈಜು (ದೊಡ್ಡ ಸೈಜು) ರೂ.	0—8—0.
,, ,,ಮುಚ್ಚಳ ವ ಪಾಕೀಟು ಸಮೇತ	0-10—0.
ಸಣ್ಣ ಸ್ಯಾಜು ಡೈರಿ ೧ಕ್ಕೆ ರೂ.	0—4—0.
,, ,,ಮುಚ್ಚಳ ವ ಪಾಕೀಟು ಸಮೇತ	0—6—0.

ಮ್ಯಾನೇಜರ್,
ಶಾರದಾ ಛಾಪಖಾನೆ,
ಮಂಗಳೂರು, ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡ್ಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿಯೂ ದೊರಕುತ್ತವೆ.

ವಿಕಟಪ್ರತಾಪ

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ.

ವಾಗ್ದಾನ:— ಅದಮರಿಂದ ಉತ್ತಮರಿಗುಂಟಾಗುವ ತಾಪ, ಸಜ್ಜನರಲ್ಲಿ ವಿಪ್ರಲಾಪ, ಅನಾಥರ ವಿಲಾಪ, ಸೋಮಾರಿಗಳ ಪ್ರಲಾಪ, ಕಾಮಿನಿಯರ ಸಲ್ಲಾಪ, ರಸಿಕರ ಆಲಾಪ, ಜಾರರ ಅಪಲಾಪ, ಮಾನಿನಿಗಳ ಕೋಪ, ಈ ಕಲಾಪಗಳ ಬಿತ್ತರಗಳಿಂದೊಪ್ಪಿರುವುದು ನಮ್ಮ ವಿಕಟಪ್ರತಾಪ.

ವಾರ್ಷಿಕಚಂದಾ:— ಸ್ಥಳ ಮತ್ತು ಪರಸ್ಥಳದವರಿಗೆ ಅಂಚೆಯವೆಚ್ಚ ಸೇರಿ ೧೫ ಆಣೆ. ವಿ. ಪಿ. ಮೂಲಕ ರೂ. ೧—೦—೦.

ಈ ಪತ್ರಿಕೆಗೆ ಈಲಾಗಾಯಿತು ಒಂದು ವರ್ಷ ಚಂದಾದಾರರಾಗುವವರಿಗೆ ೮ ಆಣೆ ಬೆಲೆ ಬಾಳುವ "(೧) ಅಸತೀಪ್ರೀತಿಪ್ರಹಸನಂ, (೨) ಒಬ್ಬ ಸಿಪಾಯಿಯ ಸಾಹಸಗಳು (೩) ವಿಕಟಸಂಬಂಧಂ "ಎಂಬುವ ಮೂರು ರಸವತ್ತಾದ ಪುಸ್ತುಕಗಳು ಬಹುಮಾನವಾಗಿ ಕಳುಹಿಸಲ್ಪಡುವುವು.

ನಮ್ಮ ವಿಳಾಸ:—ವಿಕಟಪ್ರತಾಪ ಆಫೀಸು,
ಕುಪ್ಪಂ ಪೋಸ್ಟು (ಉತ್ತರಾರ್ಕಾಡು,

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳಗಳಿಗೆ 0—14—0 ವಿ. ಪಿ. ಮೂಲಕ 1—1—0. 2000 ಹಾಳೆಗಳಿಗೆ 8—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರೆ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ).

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂಡಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೇಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ
(ವಿದ್ಯುಚ್ಛಕ್ತಿಯ ಬೇನಿಹಾರಿ
ಮುಲಾಮು.)
EST. 1898.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜಿ, ಸುಟ್ಟ ಘಾಯ, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ ೦—8—೦. ಆರು ಡಬ್ಬಿಗಳಿಗೆ ೨—8—೦. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಶಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ;—ಪರಿಮಳಾಂಜನ ಡಿಪ್ಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ (ಸತ್ಯಮೇವಜಯತೆ) ಸ್ವದೇಶಿ

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ್ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವುವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟೆ ರವಾನಿಸುವೆವು.

ವಿಳಾಸ:—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರ ಲಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲಕ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ಧಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸ್ಥಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗ ಶಾಂತಿಮಾಡಲ್ಪಟ್ಟು, ಯುಕ್ತವಾದ ಜೇನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers.

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ಶೀರೆಗಳು ತಯಾರಾಗುತ್ತವೆ. ನಾಜೂಕು ರೇಶ್ಮೆ ಶೀರೆಗಳೂ, ಜೋಡು ಎಲವಸ್ತ್ರಗಳೂ, ಉತ್ತಮವಾದ ವೇಷ್ಟಿಗಳೂ ನಮ್ಮ ಸ್ವತಃ ಮೇಲ್ತನ್ನಿಕೆಯಲ್ಲಿಯೇ ನೇಯಿಸುತ್ತಿದ್ದೇವೆ.

ಕ್ರಯ ಕಮ್ಮಿ! ಬೇಗನೆ ಕೊಂಡುಕೊಳ್ಳಿರಿ!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯತಿ ಮಾಡಲಾಗುವುದು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ.

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಪ್ರತಿ ಒಂದು ಮನೆಯಲ್ಲಿಯೂ ಅತ್ಯವಶ್ಯವಾಗಿ ಇರಬೇಕಾದ್ದು:

ಗ್ರೆಮೆ ಫೊನು (Gramophone) ಎಂಬ ಮಾತಾಡುವ ರಾಗದ ಪೆಟ್ಟಿಗೆಗಳು ನಮ್ಮಲ್ಲಿ ದೊರಕುವವು. (ಕನ್ನಡ, ತಮಿಳು, ಮಲೆಯಾಳ, ಹಿಂದುಸ್ಥಾನಿ, ಇಂಗ್ಲಿಷ್ ಭಾಷೆಯ ಉತ್ಕೃಷ್ಟವಾದ ಗಾಯನದ ರಿಕಾರ್ಡುಗಳನ್ನು ತರಿಸಿಟ್ಟಿರುವೆವು.

ಎಲ್ಲೆಲ್ಲಿಯೂ ಕೀರ್ತಿ ಪಡೆದ ಕೊಯಂಬುತ್ತೂರು ತಾಯಿಯ ಸಂಗೀತ ರಿಕಾರ್ಡುಗಳು ಬೇಕಾದವರು ಬೇಗನೇ ಬರಕೊಳ್ಳಿರಿ!

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು.
ಮಂಗಳೂರು

ಸಂತೋಷಕರವಾದ ಪ್ರಕಟಣೆ.

ಬರುವ ಜನವರಿ ತಿಂಗಳು ಆಖೈರು ವರೇಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖಿ. (3) ನಾಜೂಕವಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಮೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಪೌಂಟನ್‌ಪೆನ್. (10) ಮಕ್ಕಳ ತಮಾಷಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಶಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಅಚ್ಚವಾದ ಕೇಶ ತೈಲ.

ನಿಮಗೆ ಅಂಗಡಿಗಳಲ್ಲಿ ನೂರಾರು ವಿಧದ ಕೇಶ ತೈಲಗಳು ದೊರೆಯಬಹುದು. ಆದರೆ ಅವುಗಳಲ್ಲಿ ಶೇಕಡಾ 99ರಂತೆ ನಿಷ್ಪ್ರಯೋಜನವೆಂಬದು ಖಾತ್ರಿ.

ನಿಮ್ಮ ಕೇಶ ಗುಚ್ಛವು ಸದಾ ತಂಪಾಗಿಯೂ ಸುಖಪ್ರದವಾಗಿಯೂ ಇದ್ದುಳಿಯಬೇಕೆಂಬದು ನಿಮ್ಮ ಮನೋಗತವಾಗಿದೆಯೋ? ನಮ್ಮ 'ಲಿಲ್ಲಿಬ್ಲೂಮ್' ಎಂಬ ಕೇಶ ತೈಲವನ್ನು ಮಾತ್ರ ಕೊಂಡುಕೊಳ್ಳಿ! ಈ ಎಣ್ಣೆಗೆ ಸರಿ ಬೀಳುವ ಇತರ ಯಾವ ಎಣ್ಣೆಯನ್ನಾದರೂ ಪೇಟೆಯಲ್ಲಿ ಪಡೆಯಲಾರಿರಿ.

ದಯಮಾಡಿ 'ಲಲ್ಲಿಬ್ಲೂಮ್' ಎಂಬ ಹೆಸರು ನಿಮ್ಮ ಜ್ಞಾಪಕದಲ್ಲಿರಲಿ.

ಕ್ರಯ ಬಾಟ್ಲಿ 1ಕ್ಕೆ 0–12–0. ವಿ. ಪಿ. ಸಮೇತ 1—3—0 ಮಾತ್ರ.

FAIR HEALTH CHEMICAL Co.
Hoogly, Bengal

ಏಜಂಟರು;—ದಿ. ಊಲನ್ ಮಾರ್ಟ್,
ಮಂಗಳೂರು ದ. ಕ.

ಶ್ರೀ ಶಿವಗಂಗಾಮಠದ

ಶ್ರೀ "ಶಾರದಾ" ಮಾಸ ಪತ್ರಿಕೆ.

ಚಂದಾ (ವರ್ಗಣಿ) ರೂ. ೨—೦—೦

(ಶ್ರೀ ಶ್ರಂಗೇರಿ ಮಠದವರಿಂದಲೂ, ಮೈಸೂರು ಸರಕಾರದವರಿಂದಲೂ ಪೋಷಿಸಲ್ಪಡುತಲಿದೆ)

ಇದರಲ್ಲಿ:—

(೧) "ದಶೋಪನಿಷತ್ತು"ಗಳಿಗೂ ಕನ್ನಡ ಕಥಾರೂಪವಾದ ತಾತ್ಪರ್ಯ
(೨) "ಶ್ರೀ ಶಂಕರಾಚಾರ್ಯ ಚರಿತ್ರಕಾಲವಿಚಾರ"
(೩) "ಕನ್ನಡ ಭಾಷಾಮಯಧರ್ಮಸಿಂಧುಸಾರ" (೩೫೩ ವಿಷಯಗಳಿವೆ)
(೪) "ಸಂಧ್ಯಾವಂದನೆಯ ಅರ್ಥ ವಿಚಾರ" (ಬಹುಯುಕ್ತಿ ಪ್ರಮಾಣಗಳಿಂದೊಡಗೂಡಿದ)
(೫) "ಬಾಲಕರ ಭಂಡಾರ" (ನೀತಿ ಕಥೆಗಳು, ನೀತಿಶ್ಲೋಕಗಳು, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯೆ, ಒಗಟೆ, ನ್ಯಾಯ ಮುಂತಾದವುಗಳು)
(೬) "ಕುಮಾರ ಸಂಭವ ಕಾವ್ಯ" ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ ವಿಗ್ರಹ, ಧಾತುರೂಪ, ಧಾತ್ವರ್ಥ, ವಿಶೇಷಾಂಶಗಳೊಂದಿಗೆ.

(೧೨-೮-೧೯೧೦)ರಲ್ಲಿ ಆರಂಭವಾಗಿ ನಡೆಯುತ್ತಲಿದೆ.

ಚಂದಾ (ವರ್ಗಣಿ)ದಾರರಿಗೆ ಹಿಂದಿನ ಸಂಚಿಕೆಗಳೆಲ್ಲ ದೊರೆಯುತ್ತವೆ.

ವಿಲಾಸ (ಪತ್ರೆ) ದೊಡ್ಡಬೆಲೆ, ನಾರಾಯಣ ಶಾಸ್ತ್ರಿ

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು. ಬಿಡಬೇಡಿರಿ!!!

೧ನೇದು ರೂ. 2—8—0 ಮಾತ್ರ! ೨ನೇದು ರೂ. 3—8—0 ಮಾತ್ರ!! ೩ನೇದು ರೂ. 6—0—0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪ್‌ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರೆಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂಥಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸು ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2—8—0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗಬೇಡಿರಿ, ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು. ಕ್ರಯ ರೂ. 2—8—0. ವಿ. ಪಿ. ಪಿ. ಚಾರ್ಜು 0-4-0.

2. ರೈಲ್ವೆ ರೆಗ್ಯುಲೇಟರ್ ಲೀವರ್ ಜುವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪ್ ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಚಕ್ರಗಳಲ್ಲಿಯೂ ಕೆಂಪು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸುಡೋಮು ಸಹಾ ಇರುತ್ತವೆ. ಕ್ರಯ ರೂ. 3—8—0. ವಿ. ಪಿ. ಪಿ. ಚಾರ್ಜು ಆಣೆ 4.

3. ಲೇಡೀಸ್ ಸಿಲ್ವರ್ ವಾಚ್.

ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು, ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು. ಕ್ರಯ ರೂ. 6. ವಿ. ಪಿ. ಆ. 6.

ಅಮ್ಮೋರಾ ಸಿಲ್ವರು ಗಡಿಯಾರದ ಸರಪಣಿ. ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ ಶುದ್ಧವಾಗಿಯೂ ಇರುತ್ತದೆ. ಕ್ರಯ ರೂ. ೦—8—೦. ವಿ. ಪಿ. ಪಿ. ಚಾರ್ಜು ಆಣೆ 4.

ಬಹುಮಾನ—ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು. ಟಪ್ಪಾಲ್ ಚಾರ್ಜ ಇನಾಮು:—ಒಂದೇ ನಮೂನೆಯಲ್ಲಿ 6 ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ.ಪಿ. ಪಿ. ಚಾರ್ಜು ಇಲ್ಲವಂತೆ ಕಳುಹಿಸುವೆವು. ಸೂಚನೆ:—ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ರೂ. 1 ನ್ನು ಮನಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 8 ಆ. ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:— ಟಿ. ಸಿ ನಾಗಲಿಂಗಪ್ಪ ಅಂಡ್ ಕಂಪೆನಿ,
ನಂಬ್ರ ೩೦ ಶಿಂಗಣ್ಣನ್ ಬೀದಿ, ಮದರಾಸು.

"ಬೆಸ್ಟ್ ಲ್ಯಾಂಪ್ಸ್"

ಎಂಬ

ಗ್ಯಾಸ್ ದೀಪಗಳು

ಕ್ರಯ ರೂ. 16.

ಕೆರೆಸಿನ್ ಎಣ್ಣೆಯ ದೀಪಗಳಂತೆ ಹೊಗೆಯಿಂದ ಪ್ರಕಾಶವು ಮೊಬ್ಬಾಗದೆ ಘಾಳಿಯ ಶಳವಿನಿಂದ ನೊಂದಿ ಹೋಗದಂಥವುಗಳು. ಈ ದೀಪಗಳನ್ನುರಿಸಲು ಕೆರೆಸಿನ ಎಣ್ಣೆಯ ದೀಪಗಳಷ್ಟೇ ಖರ್ಚು ತಗಲುವುದು.



ಕ್ರಯ ರೂ. 20.

ದೇವಾಲಯ ವಾಚಕ ಮಂದಿರ ವ್ಯಾಪಾರದ ಅಂಗಡಿ ಭಂಡಸಾಲೆಗಳಿಗೆ ದೀಪದ ಪ್ರಕಾಶದ ಶೋಭೆಯು ಅಧಿಕವಾಗಿ ಬೇಕಾದ ಎಲ್ಲಾ ಕಡೆಗಳಲ್ಲಿ ಅತ್ಯುಪಯುಕ್ತವಾದವು.

ಕ್ರಯ ರೂ. 16

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಮಂಗಳೂರು ಟ್ರೇಡಿಂಗ್ ಎಸ್ಸೋಶಿಯೇಶನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದ. ಕ.

Printed & published by V. S. Kamath at the Mangalore Trading Association's Sharada Press, Mangalore.

Registered No M. 498.

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ



ಪುಸ್ತಕ 6. ಸಂಚಿಕೆ 4.

ಮಂಗಳೂರು ತಾ. 27ನೇ ಶನಿವಾರ
ಜನವರಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳುಕಡಿತ, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಫಸ್ಟ್ ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ, ಮತ್ತು ಮೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ಎಂಡ್. ಎಸ್. ಎಂಡ್. ಜಿ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೇಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ:—ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ ಎಸ್ಟೇಟು, ಕೊಡಗು:—ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ್ ಬಾಂದ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—ನಿಮ್ಮಿಂದ ಪಡಕೊಂಡ ಅಮೃತಾಂಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.

ಅಮೃತಾಂಜನ ಚರ್ಚಿತವಾದ ಲೋಮದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಪಶೆಯೂ ಬಾರದಂತೆ ನೋಡಿಕೊಂಡು, ಪಶೆ ಇಲ್ಲದ ಸ್ಥಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. ಎಮ್. ಎಂಡ್. ಎಸ್., ಮುಂಬಯಿ, ಬರಿಯುವದೇನಂದರೆ:—ನಿಮ್ಮ ಅಮೃತಾಂಜನವನ್ನು ನಾನು ವಾತಕ್ಕೂ ಸಂಧಿವಾತಕ್ಕೂ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿದ್ದಲ್ಲಿ ಬಹಳ ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ ತಿಳಿಸುತ್ತೇನೆ.

ಜಾಗ್ರತೆ:—ಈಗ ಅಮೃತಾಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಲ್ಪಟ್ಟಿರುತ್ತದೆ.

ವಿಳಾಸ:— ಅಮೃತಾಂಜನ ಡಿಪೊ,
109 ಫ್ರೆಯರ್ ರೋಡ್, ಫೋರ್ಟ ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ರಕ್ತವೃದ್ಧಿ, ಬಾಟ್ಲಿ 1ಕ್ಕೆ 1ರೂಪಾಯಿ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೊಲೆರಾ ಮಾತ್ರೆ.

ಕೋಲೆರಾ, ವಾಂತಿಭೇದಿಗಳ ಮೇಲೆ ಬಹಳ ಉತ್ತಮ ಔಷಧ. ಕ್ರಯ 6ಆಣೆ.

ನೇತ್ರಾಂಜನ.

ಮಂದದೃಷ್ಟಿಯನ್ನೂ ಕಣ್ಣುನೋವನ್ನೂ ಗುಣಪಡಿಸುವದು. ಕ್ರಯ 4ಆಣೆ.

ಕೇಶವರ್ಧಿನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

ಜುಲಾಬು ಮಾತ್ರೆ 8 ಆಣೆ; ಪ್ರಮೇಹಮಿಶ್ರಣ 1ರೂಪಾಯಿ; ಕಫಹಾರಿ 1 ರೂಪಾಯಿ 4 ಆಣೆ; ಕಫನಾಶಕ ಚೂರ್ಣ 8 ಆಣೆ; ಜಂತುವಾತಹಾರಿ 8 ಆಣೆ.

ವಿಳಾಸ:—
ವಿಲಿಯಂ ಮತ್ತು ಕಂಪೆನಿ,
109 ಫ್ರೆಯರ್ ರೋಡ್,
ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—
ಅಮೃತಾಂಜನ, ಮುಂಬಯಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.

ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.

ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು,

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,

ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,

ಮಂಗಳೂರು, ದ. ಕ.

ಸ್ವದೇಶಿ ಲ್ಯಾಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20–6–0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಹಿಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,

ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

ವಂದೇಮಾತರಂ.

ಪ್ರಸಿದ್ಧವಾದ ಈ ಸಂಸ್ಕೃತ ಗೀತ, ಅದರ ಅರ್ಥ, ಉತ್ಪತ್ತಿ, ಚರಿತ್ರೆಗಳೂ ಅದರ ಮೂಲ ಕರ್ತರಾದ ಬಂಕಿಂ ಚಂದ್ರಚಟ್ಟೋಪಾಧ್ಯಾಯರ ಜೀವನ ಚರಿತ್ರೆಯೂ, ದೇಶಾಭಿಮಾನದ ನಿಜ ಸ್ವರೂಪವೂ ವಿವರಿಸಲ್ಪಟ್ಟಿವೆ. ಶೈಲಿಯು ಗಂಭೀರವಾಗಿದೆ. ಬೆಲೆ ಒಂದೇ ಆಣೆ.

ಸ್ವದೇಶಿ.

ಈ ಸಣ್ಣ ಪುಸ್ತಕದಲ್ಲಿ ದೇಶಾಭಿಮಾನದ ಅವಶ್ಯಕತೆಯೂ, ದೇಶಾಭಿಮಾನಿಗಳ ಕರ್ತವ್ಯಗಳೂ, ಭಾರತೀಯರ ಐಹಿಕ ಮತ್ತು ಪಾರತ್ರಿಕ ಸುಖಗಳಿಗೆ ಮುಖ್ಯವಾದ ದಶವಿಧ ಧರ್ಮಗಳೂ ಸಕಾರಣವಾಗಿ ಉದಾಹರಣಪೂರ್ವಕವಾಗಿ ಸುಲಭ ರೀತಿಯಲ್ಲಿ ವಿವರಿಸಲ್ಪಟ್ಟಿವೆ. ಬೆಲೆ ಒಂದೂವರೆ ಆಣೆ ಮಾತ್ರ.

ರಾಜಾರಾಮಮೋಹನ ರಾಯ್

ಸ್ವದೇಶ ಭಕ್ತರಲ್ಲಿ ಮೊತ್ತಮೊದಲನೆಯವನೂ, ಈಗಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ಪ್ರಸಂಗಗಳಿಗೆ ಪ್ರಾರಂಭಿಸಿದವನೂ, ಬ್ರಹ್ಮಸಮಾಜ ಸ್ಥಾಪಕನೂ, ನವೀನ ಭರತಖಂಡದ ತಂದೆಯೂ ಆದ ಮಹಾ ಪುರುಷನ ಜೀವನ ಚರಿತ್ರೆ ಸಚಿತ್ರ ಅನೇಕ ವಿದ್ವಾಂಸರಿಂದ ಮೆಚ್ಚಲ್ಪಟ್ಟಿದೆ. ಬೆಲೆ ಒಂದೇ ಆಣೆ.

ಹರಿಭಕ್ತಿಸಾರ.

ಬಾಲಕ ಬಾಲಕಿಯರ ಬಾಯಿ ಪಾಠಕ್ಕೆ ಅನುಕೂಲವಾಗಿ ಭಕ್ತಿ ರಸಭರಿತವಾಗಿರುವ ಪದ್ಯ ಕಾವ್ಯದ ಶುದ್ಧ ಪ್ರತಿ ಗ್ರಂಥಕರ್ತರಾದ ಶ್ರೀ ಕನಕದಾಸರ ಚರಿತ್ರೆಯ ಸಹಿತ. ಬೆಲೆ ಒಂದೇ ಆಣೆ.

ವೇದವೇದಾಂತ ಗ್ರಂಥಾವಳಿ.

ಬೆಲೆ ಒಂದೂವರೆ ಆಣೆ.

ವಿಳಾಸ:—ಮ್ಯಾನೇಜರ್,

"ಸುಮತಿ ಗ್ರಂಥಮಾಲಾ" ಆಫೀಸು

ಬೆಂಗಳೂರು ಸಿಟಿ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸೃಗ್ವರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನು ವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವು ಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1–8–0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು ದ. ಕ.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ. 1–0–0 ವಿ. ಪಿ. ಮೂಲಕ 1–3–0. 2000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0–15–0. 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,

ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

1912ನೇ ... ಡೈರಿಗಳು

ನೋಟುಬೂಕು ಸೈಜು (ದೊಡ್ಡ ಸೈಜು) ರೂ. ...
,, ,,ಮುಚ್ಚಳವ ಪಾಕೀಟು ಸಮೇತ 0–1...
ಸಣ್ಣ ಸೈಜು ಡೈರಿ ೧ಕ್ಕೆ ರೂ. 0–4–0.
,, ,,ಮುಚ್ಚಳವ ಪಾಕೀಟು ಸಮೇತ 0–6–0.

ಮ್ಯಾನೇಜರ್,

ಶಾರದಾ ಛಾಪಖಾನೆ,

ಮಂಗಳೂರು, ದ. ಕನ್ನಡ.

ಮೇಲ್ಕಂಡ ಡ್ಯಾರಿಗಳು ಉಡ್ಪಿಯಲ್ಲಿ ಸಾವಕಾರ ಮುಲ್ಕಿ ಶ್ರೀನಿವಾಸ ಕುಡ್ವರಲ್ಲಿಯೂ ದೊರಕುತ್ತವೆ.

ವಿಕಟಪ್ರತಾಪ

ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆ.

ವಾಗ್ದಾನ:— ಅದಮರಿಂದ ಉತ್ತಮರಿಗುಂಟಾಗುವ ತಾಪ, ಸಜ್ಜನರಲ್ಲಿ ವಿಪ್ರಲಾಪ, ಅನಾಥರ ವಿಲಾಪ, ಸೋಮಾರಿಗಳ ಪ್ರಲಾಪ, ಕಾಮಿನಿಯರ ಸಲ್ಲಾಪ, ರಸಿಕರ ಆಲಾಪ, ಜಾರರ ಅಪಲಾಪ, ಮಾನಿನಿಗಳ ಕೋಪ, ಈ ಕಲಾಪಗಳ ಬಿತ್ತರಗಳಿಂದೊಪ್ಪಿರುವುದು ನಮ್ಮ ವಿಕಟಪ್ರತಾಪ.

ವಾರ್ಷಿಕಚಂದಾ:— ಸ್ಥಳ ಮತ್ತು ಪರಸ್ಥಳದವರಿಗೆ ಅಂಚೆಯವೆಚ್ಚ ಸೇರಿ ೧೫ ಆಣೆ. ವಿ. ಪಿ. ಮೂಲಕ ರೂ. ೧–೦–೦.

ಈ ಪತ್ರಿಕೆಗೆ ಈಲಾಗಾಯಿತು ಒಂದು ವರ್ಷ ಚಂದಾದಾರರಾಗುವವರಿಗೆ ೮ ಆಣೆ ಬೆಲೆ ಬಾಳುವ "(೧) ಅಸತೀಪ್ರೀತಿಪ್ರಹಸನಂ, (೨) ಒಬ್ಬ ಸಿಪಾಯಿಯ ಸಾಹಸಗಳು (೩) ವಿಕಟಸಂಬಂಧಂ "ಎಂಬುವ ಮೂರು ರಸವತ್ತಾದ ಪುಸ್ತಕಗಳು ಬಹುಮಾನವಾಗಿ ಕಳುಹಿಸಲ್ಪಡುವುವು.

ನಮ್ಮ ವಿಳಾಸ:—ವಿಕಟಪ್ರತಾಪ ಆಫೀಸು,

ಕುಪ್ಪಂ ಪೋಸ್ಟು (ಉತ್ತರಾರ್ಕಾಡು

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನ್ನೂ, ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವ್ಹಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ಪಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,

ಹಂಪನಕಟ್ಟಾ, ಮಂಗಳೂರು ದ. ಕ.

ಸರಕಾರ

ಅನುಭವಸಿದ್ಧವಾದ ವನೌಷಧಗಳು.

೧. [illegible]ತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿ[illegible] ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಅಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨-ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನು ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಅಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಅಣೆ.

[illegible]ಗಳಬೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊ[illegible]

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಅಣೆ. ೩ ಬಾಟ್ಲಿಗೆ ೧ ರೂ. ೬ ಅಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ಇರುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಅಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಅಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ [illegible] ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುಡಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ
(ವಿದ್ಯುಚ್ಛಕ್ತಿಯ ಜೇನಿಹಾರಿ ಮುಲಾಮು.)
EST. 1898.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯುಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜಿ, ಸುಟ್ಟ ಘಾಯು, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ ೦—8—೦. ಆರು ಡಬ್ಬಿಗಳಿಗೆ 2—8—೦. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನು ಅನೇಕ ಔಷಧಗಳೂ, ಶಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರಿತ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ [illegible] ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಜೇರೆ. ಅನು[illegible] ಪತ್ರಿಕೆಯನ್ನು ಔಷಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವ ಸಾಮಾನಿನ ಕ್ಯಾಟಲಾಗ್ ಪುಕಟೆ ರವಾನಿಸುವೆವು.

ವಿಳಾಸ:—
ವೈದ್ಯ. ಜಿ. ಎಲ್. ಜೋಶಿ ಮತ್ತು ಕಂಪೆನಿ,

ಸ್ವದೇಶಾಭಿಮಾನಿ

☞ ಮಂಗಳೂರು, ಶನಿವಾರ ತಾರೀಕು 27ನೇ ಜನವರಿ 1912. ☜

ಭಾರತೀಯ ರಾಜಭಕ್ತಿ.

ಇಂಗ್ಲಿಷ ಅಧಿಕಾರದಲ್ಲಿ ನಡೆಯುವ ಕೆಲವು ಕೃತ್ಯಗಳ ವಿಷಯದಲ್ಲಿಯಾಗಲಿ ಇಂಗ್ಲಿಷ ರಾಜ್ಯಭಾರದ ಕೆಲವು ಲಕ್ಷಣಗಳ ವಿಷಯದಲ್ಲಿಯಾಗಲಿ ಭಾರತೀಯರಲ್ಲಿ ಅಸಂತುಷ್ಟಿಯಿದ್ದರೂ ಅವರ ರಾಜಭಕ್ತಿಯು ಅಗಾಧವೂ ಮನಃಪೂರ್ವಕವೂ ಆಗಿದೆ. ಅಣ್ಣರನ್ನು ಮಾನಿಸುವದು ಅವರಿಗೆ ಆನಂದಕರಕಾರ್ಯ, ವಿಶೇಷತಃ ಭಾರತೀಯರಲ್ಲಿ ರಾಜನಿಷ್ಠೆಯು ಅನಾದಿಯಿಂದ ನಡೆದು ಬಂದ ಕಟ್ಟಳೆಯ ಬಲದಿಂದ ಸ್ವಭಾವ ಸಹಜವಾದ ಗುಣವಾಗಿ ಪರಿಣಮಿಸಿಯದೆ.——ಈ ಮಾತುಗಳು ಭಾರತೀಯ ರಾಜಭಕ್ತಿಯ ಕುರಿತು ಇಂಗ್ಲಿಷ ಪತ್ರಕರ್ತರು ಮಾಡುವ ಟೀಕೆಯ ಸಾರವಾಗಿದೆ. ಇದಕ್ಕೆ ಅವರು ಕೊಡುವ ಕಾರಣವೇನಂದರೆ:——ಭಾರತೀಯರು ಪೂರ್ವದಿಂದ ಮೂರ್ತಿಮಂತ ರಾಜನನ್ನು ಅಲ್ಲದೆ ರಾಜ್ಯ ಪದ್ಧತಿ ಅಥವಾ ರಾಜ್ಯಘಟವನ್ನು ಪೂಜಿಸಿ ಬಂದವರಲ್ಲ. ಆದಕಾರಣ ಅವರಿಗೆ ಚಕ್ರವರ್ತಿ ವಿನಹಾ ಇಂಡಿಯದ ರಾಜ್ಯಭಾರ ಕ್ರಮದ ಕಲ್ಪನೆಯು ಮನಸ್ಸಿಗೆ ಸೇರದು. ಈ ತತ್ವದ ಮೇಲೆ ಅವರಲ್ಲನೇಕರು ಸ್ಥಾಪಿಸ ನೋಡುವ ವಾದವೇನಂದರೆ.——ಭಾರತೀಯರಿಗೆ ರಾಜ್ಯ ಘಟ (Constitution) ಗಳ ಅನುಭವವೇ ಇಲ್ಲ. ಅವರು ಅಬಾಧಿತ ರಾಜ್ಯಭಾರ ಕ್ರಮ (Absolute Monarchy) ದಲ್ಲಿ ಬೆಳದವರು, ಆದ್ದರಿಂದ ಅವರಿಗೆ ತಕ್ಕ ಸರಕಾರವು ಸ್ವರಾಜ್ಯಪದ್ಧತಿಯಲ್ಲ; ನಿಸ್ಸೀಮ ಪ್ರಭುತ್ವವೇ. ಈ ವಾದವನ್ನು ಖಂಡಿಸುವದು ನಮ್ಮ ಪ್ರಕೃತ ಕರ್ತವ್ಯವಲ್ಲ. ಇಲ್ಲಿ ನಾವು ಭಾರತೀಯ ಮತ್ತು ಪಾಶ್ಚಾತ್ಯ ರಾಜಭಕ್ತಿ ಭಾವಗಳ ನೆಲೆಗಳನ್ನು ಶೋಧಿಸಿ ಅವುಗಳನ್ನು ಹೋಲಿಸ ಯತ್ನಿಸುವೆವು.

ಈ ಸಂದರ್ಭದಲ್ಲಿ ನಾವು ಜ್ಞಾಪಕಕ್ಕೆ ತರಬೇಕಾದ ಸಂಗತಿಯೇನಂದರೆ:—ಭಾರತೀಯರ ಜೀವನದ ಸರ್ವ ವ್ಯಾಪಾರಗಳಲ್ಲಿಯೂ ಪಾರಮಾರ್ಥಿಕ ತತ್ವವು ವ್ಯಾಪಿಸಿದೆ. "ಶ್ರೀ ಗಣಾಧಿಪತಯೆನಮಃ" ಎಂದು ಅವರು ಓದು ಕಲಿಯುವರು. ಅವರೊಳಗೆ ವಿವಾಹವು ಜೀವನ ಸೌಖ್ಯಕ್ಕಾಗಿ ಏರ್ಪಡಿಸಿದ ಮತ್ತು ಜೀವನಾಂತ್ಯದಲ್ಲಿ ಅಥವಾ ಇಚ್ಛೆ ಇದ್ದಾಗ ಅಂತ್ಯವಾಗುವ ವಧೂವರರ ಜೋಡಣೆಯಲ್ಲ. ಆ ಆಶ್ರಮವು ಸಮಾಜ ಹಿತಕ್ಕಾಗಿ ಪ್ರಜೋತ್ಪಾದನವನ್ನು ಮಾಡಲಿಕ್ಕೆ ಕೈಕೊಳ್ಳುವಂಥಾದ್ದಾಗಿದೆ. ವಿವಾಹ ಬಂಧವು ಮರಣದಲ್ಲಿ ಸಹ ಅಂತ್ಯವಾಗುವದಿಲ್ಲ. ಸಂತಾನದ ಬಯಕೆಯು ಪುತ್ರಹೀನನಿಗೆ ಪರಗತಿ ಇಲ್ಲವೆಂಬ ಕಾರಣದಿಂದಾಗಿದೆ. ಶಾಸ್ತ್ರ, ವಧು, ಪುತ್ರರುಗಳಂತೆಯೇ ರಾಜ್ಯಾಧಿಕಾರಸ್ಥಾನವನ್ನು ಈಶ್ವರನು ಪ್ರಜೆಗಳ ಪರಮಪುರುಷಾರ್ಥಕ್ಕೆ ಸಹಾಯಕವಾಗಿ ಕಲ್ಪಿಸಿದನು ಎಂದು ಹಿಂದುಗಳು ನಂಬುವರು. ಪಾಶ್ಚಾತ್ಯರೊಳಗೆ ಇಹವೇ ಇವುಗಳಿಗೆ ಮೇರೆಯಾಗಿದೆ. ಇವು ಐಹಿಕ ಸೌಖ್ಯಕ್ಕೆ ಬೇಕಾದ ಅನುಕೂಲಗಳು, ಉಭಯ ಜನಾಂಗಗಳ ಋಣದ ಕಲ್ಪನೆಗಳು ಇನ್ನೊಂದು ದೃಷ್ಟಾಂತವಾಗಿದೆ. ಒಬ್ಬನು ನಿರಾಧಾರಿಯೆಂದು ಅಧಿಕಾರಿಗಳು ನಿಶ್ಚಯಿಸಿದರೆ ಅವನು ವಿಮುಕ್ತನಾದನೆಂದು ಪಾಶ್ಚಾತ್ಯರೆಣಿಸುವರು. ಹಿಂದೂಗಳಲ್ಲಿ ಋಣದ ಬಾಧೆಯು ಜನ್ಮಾಂತರದಲ್ಲಿಯೂ ಬಿಡದು. ಆದ್ದರಿಂದ ಕರ್ತವ್ಯಪರನಾದ ಪುತ್ರನು ತಂದೆಯನ್ನು ಸಾಲಗಳಿಂದ ಫಾರುಮಾಡುವನು.

ಈ ಸರ್ವ ಜಗತ್ತನ್ನು ಈಶ್ವರನು ಧರ್ಮವೆಂಬ ಸೂತ್ರದಿಂದ ನಡಿಸುವನು. ಧರ್ಮ ಪರಿಪಾಲನಾರ್ಥವಾಗಿ ರಾಜನನ್ನು ನಿರ್ಮಿಸಿದನು. ಧರ್ಮ ಪರಾಯಣನಾದ ರಾಜನು ಭೂಮಿಯಲ್ಲಿ ದೇವರ ಪ್ರತಿನಿಧಿಯಾಗಿರುವನು. ತನ್ನ ಅನುಷ್ಠಾನದಿಂದಲೂ ಶಾಸನಗಳಿಂದಲೂ ರಾಜನು ಪ್ರಜಾವರ್ಗಗಳೂ ಅಧಿಕಾರಿಗಳೂ ತಮ್ಮ ತಮ್ಮ ಧರ್ಮದಲ್ಲಿ ನಿರತರಾಗುವಂತೆ ಮಾಡಬೇಕು. ರಾಜಾ ಪ್ರತ್ಯಕ್ಷ ದೇವತಾ ಎಂಬ ವಾಕ್ಯದ ಭಾವವು ಇಷ್ಟೇ. ಇದೇ ಹಿಂದೂಗಳ ರಾಷ್ಟ್ರೀಯ ಕಲ್ಪನೆ.

ಪಾಶ್ಚಾತ್ಯರ ರಾಷ್ಟ್ರೀಯ ಕಲ್ಪನೆಯನ್ನು ವಿಚಾರಿಸುವಾ. ಅವರ ಜೀವನವು ಲೌಕಿಕ ವ್ಯವಹಾರಪರವಾದದ್ದು. ಪಾರಮಾರ್ಥಿಕ ಸಿದ್ಧಾಂತಗಳಿಗೆ ಅದರಲ್ಲಿ ಬಹುಶಾ ಎಡೆಯೇ ಇಲ್ಲ. ಅವರ ರಾಷ್ಟ್ರೀಯ ಭಕ್ತಿಯ ಅಸ್ತಿವಾರವು ಸಾರಾಂಶವಾಗಿ ಈ ತರವಾಗಿದೆ:——ತಮ್ಮನ್ನು ಪಾಲಿಸುವ ಒಬ್ಬ ಒಡೆಯನಿಲ್ಲದಿದ್ದರೆ ತಾವು ತಮ್ಮೊಳಗೆ ಕಡದಾಡಿ ಸರ್ವ ನಾಶವಾಗುವದೆಂದು ಪೂರ್ವಜರು ತಿಳಿದು ತಮ್ಮ ಪೈಕಿ ಒಬ್ಬನನ್ನು ರಾಜನನ್ನಾಗಿ ನೇಮಿಸಿದರು. ಪ್ರಜೆಗಳಿಂದ ನೇಮಿಸಲ್ಪಟ್ಟ ಅರಸನು ಪ್ರಜೆಗಳಿಗೆ ಅಂದರೆ ಅವರ ಪ್ರತಿನಿಧಿ ಸಭೆಗೆ ಜವಾಬ್ದಾರನಾಗಿರಬೇಕು. ಅರಸನೂ ಪ್ರಜೆಗಳೂ ರಾಷ್ಟ್ರಾಭಿವೃದ್ಧಿಗೆ ಪೇಚಾಡ ಬೇಕು. ಪ್ರಶ್ಯಾ ದೇಶದ ಅರಸನಾದ ಫ್ರೆಡರಿಕ್ ಮಹಾ ಪ್ರಭುವು ತಾನು ರಾಷ್ಟ್ರದ ಪ್ರಥಮ ಸೇವಕನೆಂದು ಹೇಳುತ್ತಿದ್ದನು. ಈ ಪ್ರಥಮ ಸೇವಕನು ಪ್ರಜೆಗಳ ಇಚ್ಛೆಗನುಸಾರವಾಗಿ ರಾಜ್ಯಭಾರವನ್ನು ಸಾಗಿಸಬೇಕು. ಯಾಕಂದರೆ ಅವನು ಅವರ ಮನೋನಿರ್ಣಯಗಳನ್ನು ಆಚರಣೆಗೆ ತರಲಿಕ್ಕೆ ನೇಮಿಸಲ್ಪಟ್ಟವನು. ಹಿಂದೂ ರಾಜನಾದರೆ ದೈವ ಸಂಕಲ್ಪವನ್ನು ನೆರವೇರಿಸಲಿಕ್ಕೆ ನೇಮಿಸಲ್ಪಟ್ಟವನು. ಪಾಶ್ಚಾತ್ಯ ಅರಸುತನವು ಪ್ರಜಾಹಿತಕ್ಕಾಗಿ ಏರ್ಪಟ್ಟ ಉದ್ಯೋಗ. ಹಿಂದುಗಳಲ್ಲಿ ಅದು 'ದೈವಕೃತ ಸಂಸ್ಥೆ. ಆದಕಾರಣ ಹಿಂದುಗಳ ರಾಜಕಲ್ಪನೆಗಿರುವ ಗೌರವ ಗಾಂಭೀರ್ಯಗಳು ಪಾಶ್ಚಾತ್ಯರಲ್ಲಿ ದುರ್ಲಭ.

ಪಾಶ್ಚಾತ್ಯ ಪೌರ್ವಾತ್ಯಸಿದ್ಧಾಂತಗಳ ಮಹಾಭೇದವು ಅವೆರಡರ ಪರಿಣಾಮದಲಿ ಸ್ಪಷ್ಟವಾಗುವದು. ಪಾಶ್ಚಾತ್ಯರ ಸಿದ್ಧಾಂತ ಪ್ರಕಾರ ಅರಸನು ಪ್ರಜಾಸೇವಕನಾಗಿರುತ್ತಾ ಅವನು ಪ್ರಜೆಗಳಿಗೆ ಪ್ರತಿಕೂಲವಾಗಿ ನಡೆದರೆ ಅವನನ್ನು ತಳ್ಳಬಹುದು. ಒಂದು ವೇಳೆ ಅರಸುತನವೇ ಸಮಾಜಕ್ಕೆ ಅಹಿತಕರವೆಂದು ಕಂಡರೆ ಪ್ರಜೆಗಳು (ತಾವು ನಿರ್ಮಿಸಿದ) ಆ ಹುದ್ದೆಯನ್ನೇ ಸಮಾಪ್ತಿ ಪಡಿಸಿ ಪ್ರಜಾನಿಯುಕ್ತ ರಾಜ್ಯಪದ್ಧತಿಯನ್ನು (Republic) ಸ್ಥಾಪಿಸಬಹುದು. ಈ ಕಾರಣದಿಂದ ಪಾಶ್ಚಾತ್ಯರಲ್ಲಿ ರಾಷ್ಟ್ರ ಘಟನಾಂತರಗಳು (Revolutions) ಕಷ್ಟಸಾಧ್ಯವಲ್ಲ. ಪೂರ್ವ ಸಂಪ್ರದಾಯ ಪ್ರಿಯರಾದ ಇಂಗ್ಲಿಷರೇ ಹದಿನೇಳನೇ ಶತಮಾನದಲ್ಲಿ ರಾಜಪದವಿಯನ್ನೇ ತೆಗೆದುಹಾಕಿ ಪ್ರಜಾಧಿಕಾರ (Commonwealth) ವನ್ನು ಕೆಲವು ಕಾಲಕ್ಕೆ ಸ್ಥಾಪಿಸಿದರು. ಒಬ್ಬ ಅರಸನನ್ನು ವಧಿಸಿದರು. ಇನ್ನೊಬ್ಬನನ್ನು ಪದಚ್ಯುತನಾಗಿ ಮಾಡಿದರು.

ಈ ಸಿದ್ಧಾಂತಗಳ ಇನ್ನೊಂದು ಫಲವು ಪ್ರಜೆಗಳು ಹೊಂದುವ ಸರಾಗ ರಾಷ್ಟ್ರೀಯ ಶಿಕ್ಷಣ. ಪ್ರಜೆಗಳು ಅಧಿಕಾರಗಳೆಂತಾದ ಮೇಲೆ ಆ ಅಧಿಕಾರವನ್ನು ನೆಟ್ಟಗೆ ನಡಿಸುವ ಕಾರ್ಯವನ್ನು ಅವರು ಶ್ರದ್ಧೆಯಿಂದ ಕಲಿಯಬೇಕಾಗುವದು. ಆಯಾ ರಾಷ್ಟ್ರೀಯ ಸಂಸ್ಥೆಗಳನ್ನು ಪರಿಶೋಧಿಸಿ ಸಮಯಾನುಸಾರ ಮಾರ್ಪಡಿಸಬೇಕಾಗುವದು. ಹೀಗೆ ಪಾಶ್ಚಾತ್ಯರಲ್ಲಿ ರಾಷ್ಟ್ರೀಯ ಶಿಕ್ಷಣವೂ ಸಹಕಾರ ಭಾವವೂ ರಾಷ್ಟ್ರೀಯ ಸಂಸ್ಥೆಗಳೂ, ರಾಜನೀತಿ ಶಾಸ್ತ್ರವೂ ಉನ್ನತಿಯನ್ನೈದಿರುವವು.

ಹಿಂದುಗಳಲ್ಲಿ ಗೌರವವು ರಾಜಪದಕ್ಕೆ ಸಲ್ಲುವದು. ಪಾಶ್ಚಾತ್ಯರಲ್ಲಿ ಅದು ರಾಜನ ಸ್ವಕೀಯ ಗುಣವನ್ನು ಹೊಂದಿರುವದು. ರಾಜಸ್ಥಾನವನ್ನು ಅಲಂಕರಿಸುವ ಯಾವನನ್ನೂ ಹಿಂದೂಗಳು ಮಾನಿಸುವಲ್ಲಿ ಪಾಶ್ಚಾತ್ಯರು ಪ್ರಜಾಹಿತವಿಮುಖನಾದ ಅರಸನನ್ನು ನಿಂದಿಸಲಿಕ್ಕೆ ಹಿಂಜರಿಯರು. ಕೀರ್ತಿಶೇಷ ವಿಕ್ಟೋರಿಯಾ ಮಹಾರಾಣಿಯ ಪೂರ್ವಾಧಿಕಾರಿಗಳಾದ ಜೋರ್ಜರ ಕಾಲದಲ್ಲಿ ರಾಜಪದವಿಯು ಅಪದೆಸೆಗೆ ಗುರಿಯಾಗಲು ಅನೇಕ ಜನರು ರಾಜಸ್ಥಾನವನ್ನೇ ಕೆಡವಿ ಪ್ರಜಾನಿಯುಕ್ತ ರಾಷ್ಟ್ರ ಪದ್ಧತಿಯನ್ನು ಸ್ಥಾಪಿಸುವ ಸಂಕಲ್ಪ ಮಾಡಿದರು. ಆದರೆ ಆ ಪ್ರಜಾಮಾತೆಯು ತನ್ನ ಬುದ್ಧಿಬಲದಿಂದಲೂ ಗುಣಗೌರವದಿಂದಲೂ ಪ್ರಜೆಗಳ ಹೃದಯವನ್ನು ಸೂರೆಗೊಂಡಳು. ಮಹಾರಾಣಿಯ ಪುತ್ರನು ಆ ಮೇಲು ಪಂಙ್ಕ್ತಿಯನ್ನನುಸರಿಸಿದ್ದರಿಂದ ರಾಜಪದವಿಯು ಹೆಚ್ಚೆಚ್ಚಾಗಿ ಲೋಕರಂಜಿತವಾಗಿ ಈ ಆಕೆಯ ಪೌತ್ರ ಜೋರ್ಜ ಸಾರ್ವಭೌಮರು ಬ್ರಿಟಿಷರ ನಿಸ್ಸೀಮ ಪ್ರೀತಿಪಾತ್ರರಾಗಿರುವರು.

ಪಾಶ್ಚಾತ್ಯರ ವ ಭಾರತೀಯರ ಭಿನ್ನ ರಾಷ್ಟ್ರೀಯ ಕಲ್ಪನೆಗಳ ಫಲವು ಇನ್ನೊಂದು ವಿಧದಲ್ಲಿ ವ್ಯಕ್ತವಾಗುವದೆಂದು ನಮಗೆ ತೋರುವದು. ಪಾಶ್ಚಾತ್ಯರ ಸರ್ವ ಚಟುವಟಿಕೆಯ ಗುರಿಯು ರಾಷ್ಟ್ರವೇ ಆಗಿರುವದರಿಂದ ಹೊಸ ವಸಾಹತಿಗಳ ಸ್ಥಾಪನೆಯ ಮೂಲಕವಾಗಲಿ ಪರರಾಜ ಪರಾಜಯದಿಂದಲಾಗಲಿ ಸ್ವರಾಜ್ಯವನ್ನು ವಿಸ್ತರಿಸುವದು ಅವರು ಶ್ರೇಯಸ್ಕರವೆಂದೆಣಿಸುವರು. ಹಿಂದೂಗಳ ರಾಷ್ಟ್ರೀಯ ಆದರ್ಶವು ಧರ್ಮ ಸಂಸ್ಥಾಪನೆಯಾಗಿರುತ್ತಾ ಈ ಉದ್ದಿಶ್ಯವನ್ನು ನೆರವೇರಿಸಲಿಕ್ಕೆ ಪರದೇಶ ವಶೀಕರಣವು ಅನಾವಶ್ಯಕ. ಅಶೋಕನು ಪರರಾಜ್ಯಕ್ಕೆ ಬುದ್ಧ ಸನ್ಯಾಸಿಗಳನ್ನು ಕಳುಹಿಸಿದ್ದು ಧರ್ಮವನ್ನು ಸಾರಲಿಕ್ಕಲ್ಲದೆ ರಾಜ್ಯಾಪಹರಣಕಲ್ಲ.

ಇತರ ಅನೇಕ ಸಂಗತಿಗಳಲ್ಲಿ ಇರುವಂತೆ ರಾಷ್ಟ್ರೀಯ ಕಲ್ಪನೆಗಳಲ್ಲಿ ಪೌರ್ವಾತ್ಯ ಪಾಶ್ಚಾತ್ಯ ಭಾವನೆಗಳಿಗೆ ಪ್ರಕೃತ ಕಾಲದಲ್ಲಿ ಸಂಘಟನೆಯಾಗಿದೆ. ಪಾಶ್ಚಾತ್ಯರು ಪ್ರಯತ್ನ ಪುರಸ್ಸರವಾಗಿ ಏರ್ಪಡಿಸಿದ ರಾಜಕೀಯ ಸಂಸ್ಥೆಗಳನ್ನೂ ರಾಜನೀತಿ ಶಾಸ್ತ್ರವನ್ನೂ ನಾವು ಅಂಗೀಕರಿಸಲು ಪೇಚಾಡುತ್ತಿರುವಾಗ ನಮ್ಮ ರಾಜನಿಷ್ಠಾಭಾವದ ಅಗಾ

ಥವೂ ಅಚಲವೂ ಆದ ಅಸ್ತಿವಾರವನ್ನು ಜಾಗರೂಕತೆಯಿಂದ ಕಾಪಾಡಬೇಕು. ರಾಷ್ಟ್ರೀಯ ಜೀವನದಲ್ಲಿ ಭಾರತೀಯರಿಗೆ ಪಿತಾಮಹನಂತಿರುವ ಮಿ. ದಾದಾಭಾಯಿ ನವರೋಜಿಯವರು ಎತ್ತಿ ಹಿಡಿದ ಆದರ್ಶವನ್ನು—ಅಂದರೆ ಬ್ರಿಟಿಷ ಸಾಮ್ರಾಜ್ಯದೊಳಗಿದ್ದು ಸ್ವರಾಜ್ಯಪದವನ್ನು—ನಾವು ಸಂಪಾದಿಸಿದರೆ ನಮ್ಮ ಪೂರ್ವಜರ ರಾಷ್ಟ್ರೀಯ ಕಲ್ಪನೆಯೂ ಪಾಶ್ಚಾತ್ಯರ ರಾಷ್ಟ್ರೀಯ ಸಿದ್ಧಾಂತವೂ ಸಂಯೋಜಿಸಲ್ಪಡುವವು. ಬ್ರಿಟಿಷ ಪ್ರತಿನಿಧಿ ಸಂಸ್ಥೆಗಳ ಮೂಲಕ ನಾವು ಪಾಶ್ಚಾತ್ಯ ಸುಧಾರಣೆಯ ಫಲವನ್ನು ಅನುಭವಿಸುವೆವು. ಅದೇ ಸಮಯ ನಾವು ಬ್ರಿಟಿಷ ಚಕ್ರಾಧಿಪತ್ಯದೊಳಗೆ ಜೀವಿಸುವದರಿಂದ ಜೋರ್ಜ ಸಾರ್ವಭೌಮರಂತಹ ಲೋಕ ಪ್ರಿಯ ಅಣ್ಮರ ದೆಶೆಯಿಂದ ನಮ್ಮ ಸ್ವಭಾವ ಸಹಜವಾದ ರಾಜಭಕ್ತಿಯು ಬಲವಾದ ಬೇರು ಬಿಡುವದು.

———o———

ದನಕರುಗಳ ಪೋಷಣಾ

———o———

ದನಗಳಿಗೆ ಮೇವು ಕೊಡುವುದು, ನೀರು ಕುಡಿಸುವುದು ಮತ್ತು ರೋಗ ಬಂದ ಕಾಲದಲ್ಲಿ ಸರಿಯಾಗಿ ಎಚ್ಚರಿಕೆಯಿಂದ ಉಪಚಾರ ಮಾಡುವುದು ಇವೇ ಮೊದಲಾದ ವಿಷಯಗಳಲ್ಲಿ ಅವುಗಳ ಮಾಲೀಕರು ಸರಿಯಾದ ಮುತವರ್ಜಿಯನ್ನು ವಹಿಸಿ ಅವುಗಳನ್ನು ಪೋಷಣೆ ಮಾಡದಿರುವ ಕಾರಣ ವರ್ಷಂಪ್ರತಿಯಲ್ಲೂ ಅನೇಕ ದನಗಳು ಸಾಯುವುವು. ಇದಕ್ಕೆ ಕೆಲವು ಸಂದರ್ಭಗಳಲ್ಲಿ ದನಗಳ ಮಾಲೀಕರ ಅನಾದರಣೆ ಅಥವಾ ಸೋಮಾರಿತನವೂ ಮತ್ತೆ ಕೆಲವು ಸಂದರ್ಭಗಳಲ್ಲಿ ದನಗಳ ಪೋಷಣೆಯ ವಿಷಯದಲ್ಲಿ ಸಾಕಾದಷ್ಟು ತಿಳುವಳಿಕೆಯಿಲ್ಲದಿರುವುದೂ ಕಾರಣವಾಗಿರುತ್ತದೆ. ಆದರೆ ವ್ಯವಸಾಯವೇ ಜೀವಾಧಾರವಾಗಿರುವ ನಮ್ಮ ಇಂಡಿಯಾ ದೇಶದಲ್ಲಿ ದನಕರುಗಳು ಆರೋಗ್ಯವಾಗಿರುವಂತೆ ನೋಡಿಕೊಳ್ಳಬೇಕೆಂಬುಧನ್ನು ಒತ್ತಿ ಹೇಳಬೇಕಾದ ಅವಶ್ಯಕವಿಲ್ಲ. ಆದ್ದರಿಂದ ಪ್ರತಿ ರೈತನೂ ಕೆಳಗೆ ಹೇಳಲ್ಪಡುವ ರೀತಿಯಲ್ಲಿ ತನ್ನ ದನಕರುಗಳನ್ನು ಕಾಪಾಡುತ್ತಾ ಬಂದರೆ ದನಗಳು ರೋಗಗಳಿಗೆ ಗುರಿಯಾಗುವದು ಕಡಿಮೆಯಾಗಿ ಅದರಿಂದ ಅವನ ಆರಂಭ ಕಾರ್ಯಗಳಿಗೂ ಬಹಳ ಸಹಾಯವಾಗುವುದರಲ್ಲಿ ಅಭ್ಯಂತರವಿಲ್ಲ.

ಪ್ರತಿ ಗ್ರಾಮದಲ್ಲೂ ಬಹಳ ಎತ್ತರವಾದ ಪ್ರದೇಶದಲ್ಲಿ ಬೇಕಾದಷ್ಟು ಜಾಗವನ್ನು ಸುತ್ತಲೂ ಬೇಲಿ ಅಥವಾ ಗೋಡೆಯನ್ನು ಹಾಕಿ ಬೇರೆ ಮಾಡಬೇಕು. ಆ ಪ್ರಕಾರದೊಳಗೆ ಬಿಸಿಲು ಮತ್ತು ಮಳೆಗೆ ಮರೆಯಾಗಿ ಮೇಲ್ಚಾವಣಿ ಮತ್ತು ಗೋಡೆಗಳುಳ್ಳ ಕೊಟ್ಟಿಗೆಗಳನ್ನು ಕಟ್ಟಬೇಕು. ಕೊಟ್ಟಿಗೆಗೆ ಗಾಳಿ ಮತ್ತು ಬೆಳಕು ಬರಲು ಸರಿಯಾಗಿ ಕಿಟಕಿಗಳನ್ನು ಇಡಬೇಕು. ಪ್ರತಿ ನಿತ್ಯವೂ ಸಗಣಿ, ಕಸ, ಹುಲ್ಲು ಮೊದಲಾದವುಗಳನ್ನು ತೆಗೆದು ಕೊಟ್ಟಿಗೆಯನ್ನು ಚೊಕ್ಕಟವಾಗಿಟ್ಟಿರಬೇಕು.

ಮೇವು ಮತ್ತು ನೀರಿನ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕು. ಹುಳುಹುಪಟೆಗಳು ಸೇರಿಕೊಂಡು ಹುಳಿ ಹಿಡಿದು ಮೊಟಗುಟ್ಟುತ್ತಿರುವ ಕಲಗಚ್ಚನ್ನು ಕುಡಿಸಬಾರದು. ಒಣಗಿದ ಒಳ್ಳೇ ಹುಲ್ಲು, ಮತ್ತು ಹಸಿ ಹುಲ್ಲನ್ನೂ ತಿನ್ನಿಸಿ ನಿರ್ಮಲವಾದ ನೀರನ್ನು ಕುಡಿಸಬೇಕು.

ಗ್ರಾಮಕ್ಕೆ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ರೋಗ ತಗಲಿದ ದನಗಳನ್ನು ಇಟ್ಟು ಉಪಚಾರ ಮಾಡುವುದಕ್ಕೋಸ್ಕರ ಪ್ರತ್ಯೇಕವಾಗಿ ಒಂದು ಕೊಟ್ಟಿಗೆಯನ್ನು ಕಟ್ಟಬೇಕು. ಯಾವುದಾದರೊಂದು ಸೋಂಕು ಜಾಡ್ಯವು ತಲೆದೋರಿದೊಡನೆಯೇ ರೋಗ ತಗಲಿದವುಗಳನ್ನು ಮೇಲ್ಕಂಡ ಕೊಟ್ಟಿಗೆಗಳಲ್ಲಿ ಬೇರೆಯಾಗಿಟ್ಟು ಔಷಧಿಯನ್ನು ಕೊಟ್ಟು ಸರಿಯಾಗಿ ಉಪಚಾರ ಮಾಡಬೇಕು. ಹೀಗೆ ಮಾಡುವುದರಿಂದ ರೋಗವು ಹಬ್ಬಲು ಅವಕಾಶವಾಗುವುದಿಲ್ಲ.

ನೆರೆಹೊರೆಯ ಗ್ರಾಮಗಳಿಂದ ದನ ಅಥವಾ ಕುರಿಗಳನ್ನು ಖರೀದಿಗೆ ತೆಗೆದುಕೊಂಡರೆ ಅವುಗಳನ್ನು ಕೊನೆ ಪಕ್ಷ ಹತ್ತು ದಿನಗಳ ಪರಿಯಂತರವಾದರೂ ಮೇಲ್ಕಂಡ ಕೊಟ್ಟಿಗೆಯಲ್ಲಿಟ್ಟಿದ್ದು ನಂತರ ಗ್ರಾಮದೊಳಗೆ ಇತರ ದನಗಳ ಜೊತೆಯಲ್ಲಿಡಬೇಕು. ಮುಖ್ಯವಾಗಿ ನೆರೆಹೊರೆ ಗ್ರಾಮಗಳಲ್ಲಿ ರೋಗಗಳಿರುವುದಾಗಿ ತಿಳಿಯಬಂದಲ್ಲಿ ಖಂಡಿತವಾಗಿ ಈ ರೀತಿ ಮಾಡಬೇಕು.

ಕಾಯಿಲೆ ದನಗಳ ಕೊಟ್ಟಿಗೆಗೆ ಹುಲ್ಲು ನೀರು ಮೊದಲಾದವುಗಳನ್ನು ಹೊರಗಿನಿಂದ ತೆಗೆದುಕೊಂಡು ಹೋಗಬೇಕು. ಆದರೆ ಅಲ್ಲಿಂದ ಹೊರಕ್ಕೆ ಯಾವ ಪದಾರ್ಥವನ್ನು ತರಕೂಡದು. ಕಡ್ಡಿಯನ್ನೆಲ್ಲಾ ಸುಟ್ಟು ಸಗಣಿಯನ್ನು ಕೊಟ್ಟಿಗೆಯ ಹೊರಗಡೆ ಒಂದು ಗುಂಡಿಯನ್ನು ತೋಡಿ ಅದರೊಳಗೆ ಹಾಕಿ ಗುಂಡಿಯು ಮುಕ್ಕಾಲು ಪಾಲು ತುಂಬಿರುವಾಗ್ಯೆ ಸಗಣಿಯ ಮೇಲೆಲ್ಲಾ ಸುಟ್ಟ ಸುಣ್ಣವನ್ನು ಉದುರಿಸಿ ಗುಂಡಿಯನ್ನು ಒಣಗಿದ ಮಣ್ಣಿನಿಂದ ಮುಚ್ಚಬೇಕು. ಕೊಟ್ಟಿಗೆಯಲ್ಲಿ ತೇಮವಿರುವ ಭಾಗಕ್ಕೆಲ್ಲಾ ಸುಣ್ಣವನ್ನು ಹಾಕಿ ಹತ್ತರದಲ್ಲಿ ಮರಗಳೂ ಮತ್ತು ಮನೆಗಳೂ ಇದ್ದರೆ ಅವುಗಳಿಗೆ ಸುಣ್ಣವನ್ನು ತೊಡಿಯಬೇಕು.

ಕೊಟ್ಟಿಗೆಯ ಬಾಗಿಲಿನಲ್ಲಿ ಸ್ವಲ್ಪ ಬೆಂಕಿಯನ್ನು ಹಾಕಿ ಆಗಾಗ್ಯೆ ಗಂಧಕಪುಡಿಯನ್ನು ಉದುರಿಸಿ ಕೊಟ್ಟಿಗೆಗೆಲ್ಲಾ ಗಂಧಕದ ಹೊಗೆಯನ್ನು ಕೊಡಬೇಕು. ಕಾಯಿಲೆ ದನಗಳ ಕೊಟ್ಟಿಗೆಯ ದಿಕ್ಕಿನಿಂದ ಊರಿನ ಕಡೆಗೆ ಗಾಳಿ ಬೀಸುತ್ತಿದ್ದರೆ ಊಗೂ ಕೊಟ್ಟಿಗೆಗೂ ಮಧ್ಯೆ ಬೆಂಕಿಯನ್ನು ಹಾಕಿದರೆ ಅದರ ಹೊಗೆಯು ರೋಗದ ಸೋಂಕನ್ನು ತೆಗೆದುಕೊಂಡು ಬರುವ ನೊಣ ಮತ್ತು ಸೊಳ್ಳೆಗಳು ಊರಿಗೆ ಬಾರದಂತೆ ಮಾಡುವುದು.

ಅಂಟು ಜಾಡ್ಯದಿಂದ ಸತ್ತ ಪ್ರಾಣಿಗಳನ್ನು, ಚರ್ಮವನ್ನು ಸುಲಿಯುವುದಕ್ಕಾಗಿ ಮಾದಿಗರಿಗೆ ಕೊಡದೆ ಆಳವಾಗಿ ಗುಂಡಿಯನ್ನು ತೋಡಿ ಅದರಲ್ಲಿ ಹೂಳಬೇಕು. ಒಂದು ಪಕ್ಷ ಮಾದಿಗರಿಗೆ ಕೊಟ್ಟರೆ ಊರಿಗೆ ಸುಮಾರು ಎರಡು ಫರ್ಲಾಂಗ್ ದೂರದಲ್ಲಿ ಚರ್ಮವನ್ನು ತೆಗಿಸಿ ನಂತರ ಹೂಳಿಸಿಬಿಡಬೇಕು. ಹೀಗೆ ಮಾಡುವುದರಿಂದ ಕಾಗೆ ಮತ್ತು ಹದ್ದುಗಳು ರೋಗದಿಂದ ಸತ್ತ ದನಗಳ ಮಾಂಸವನ್ನು ಊರಿನೊಳಕ್ಕೆಲ್ಲಾ ತೆಗೆದುಕೊಂಡು ಬಂದು ರೋಗವನ್ನು ಹಬ್ಬಿಸಲು ಅವಕಾಶವಾಗುವುದಿಲ್ಲ.

ಕೆ. ಗೆ.

ಬಾಲಿಕಾ ನೀತಿಮಾಲಿಕೆ

ಕುಸುಮ ಷಟ್ಪದಿ.

(ಕಳದ ಸಂಚಿಕೆಯಿಂದ ಮುಂದುವರಿದುದು.)

———o———

ಮಡದಿಯ ನಡೆಗಳಲಿ ।
ಕಡುದೋಷಗಳನೆಣಿಪ ।
ರೆಡೆಗುಡದಿರಿದಕೆ ನೀನೆಳ್ಚರಿಂದ ॥
ಬಿರು ನುಡಿಯನಾಡದಿರು ।
ಕುಡುಗುತನ ಕಲಿಯದಿರು ।
ಪೊಡವಿಯೊಳಂ ಹದಿಬದೆಯೆನುತ್ತೆ ಮೆರೆವೆ ॥ ॥ ೪೯ ॥
ದೇವದ್ವಿಜ ಗುರುಭಕ್ತಿ ।
ತೀವಿರಲಿನಿನ್ನಲ್ಲಿ ।
ಭಾವ ಶುದ್ಧಿಯೊಳಿನಿಯನಂ ಸೇವಿಸು ॥
ಭಾವಿಸುತಲಾದಾಯ ।
ಕಾವೆಚ್ಚ ಮೀರದವೊ ।
ಲಾವಗಂಮಿತವಾಗಿ ಬಳಸೆಲ್ಲವಂ ॥ ॥ ೫೦ ॥
ಒಡವೆಗಳ ತನ್ನಿ ಮೊ ।
ಳ್ಪಡೆಗಳಂತರಿಸಿಮೆನು ।
ತಡಿಗಡಿಗೆ ಪತಿಯ ಕಾಡಿಸಬೇಡನೀಂ ॥
ಮಡದಿಗೆ ಸುಶೀಲ ಮೇ ।
ತೊಡವದಕೆ ಮೀರಿದೊ ।
ಳ್ತೊಡವೆಗಳದಾವು ಮಿಲ್ಲಬಲೆ ಕೇಳು ॥ ॥ ೫೧ ॥
ಹಬ್ಬ ಹುಣ್ಣಿಮೆ ಮದುವೆ ।
ಯುಬ್ಬರದ ವರ್ಧಂತಿ ।
ನಿಬ್ಬರದೆ ದುಂದಾಗಿ ನಡೆಪುದೆಂದು ॥
ಉಬ್ಬಿನಿಂಯೋಗ್ಯತೆಯ ।
ನೆಬ್ಬಿಸುವ ವೆಚ್ಚದಿಂ ।
ತಬ್ಬಿಬ್ಬುಗೊಳಬೇಡ ಕಡೆಗೆ ಕೆಡುವೆ ॥ ॥ ೫೨ ॥
ದುಡಿದು ತನ್ನಯ ಪತಿಯು ।
ಕಡುಕಷ್ಟ ಪಟ್ಟು ತಂ ।
ದೊಡಮೆಗಳನವನರಿಯದಂತೆ ಮಾರಿ ॥
ಬಡತನಕೆ ಮನೆಯೆನಿಸಿ ।
ಕುಡುಗುತನದಿಂ ನಡೆವ ।
ಮಡದಿಯಿರವಂ ಸುಡುಸುಡೇಕೆ ಜಗದಿ ॥ ॥ ೫೩ ॥
ಮನೆಯ ಕಲಹಗಳ ತುಳಿ ।
ದನುವಿಂದ ಸದ್ಬುದ್ಧಿ ।
ಯನೆ ಕಲಿಸಿ ಕಿರಿಯರಂತಿರ್ವಿಕೊಂಡು ॥
ಧನದಾಸೆಯಿಂದೆ ಪೆರ ।
ರನು ವಂಚಿಪುದನುಳಿದು ।
ಘನತೆಯಂ ರಕ್ಷಿಪಳೆ ಸತಿ ಯೆನಿಪಳು ॥ ॥ ೫೪ ॥

ವ್ರತನಿಯಮಮುಪವಾಸ ।
ತತಿಗಳಂ ಮಾಡುವೊಡೆ ।
ಪತಿಯನುಜ್ಞೆಯ ಪಡೆದುದೃಢಚಿತ್ತದಿ ॥
ಹಿತವಾಗಿ ನಡಿಸಿದೊಡೆ ।
ಗತಿಯಕ್ಕುಮಿದ ನುಳಿದು ।
ಮತಿಗೆ ಬಂದಂತೆಸಗೆನರಕ ಹೇತು ॥ ॥ ೫೫ ॥
ಮಗಳಾಪ್ತೆಯೆಂದು ಸೊಸೆ ।
ಪಗೆಯೆಂದು ತಿಳಿದವರ ।
ಮಿಗಿಲು ಮನ್ನಿಸಿ ಬಾಧಿಸಲು ಸಲ್ಲದು ॥
ಮಗಳು ಪೆರರೊಡವೆ ತಾಂ ।
ಮಗನ ಸತಿ ತನ್ನಯ ಮ ।
ನೆಗೆ ಭೂಷಣಮೆನುತ್ತೆ ಭಾವಿಸುವುದು ॥ ೫೬ ॥
ಚಿಂತೆಯೇ ಮುಪ್ಪು ನೆರೆ ।
ಸಂತೋಷಮೇಹರೆಯ ।
ಪಂತವೇಪಗೆಯು ಪ್ರೀತಿಯೆ ಮಿತ್ರನು ॥
ಕಾಂತನೇಪರದೈವ ।
ವೆಂತ ತಿಳಿವಬಲೆಯರೆ ।
ಸಂತಸದ ಸುಗ್ಗಿಯಿಂಬಾಳುತಿಹರು ॥ ॥ ೫೭ ॥
ಸ್ವಜನರೊಳ್ ದಾಕ್ಷಿಣ್ಯ ।
ಕುಜನರ ಪರಿತ್ಯಾಗ ।
ಯಜಮಾನನೊಳ್ಭಕ್ತಿ ಸೇವಕರೊಳು ॥
ನಿಜವಾದ ವಿಶ್ವಾಸ ।
ಸುಜರೊಳ್ನೇಹಮಿರೆ ।
ತ್ರಿಜಗದೊಳ ಮೊಳ್ಪಿದಳೆನುತ್ತೆ ನೆಗಳ್ವರ್ ॥ ॥ ೫೮ ॥
ಹರಿಕಥೆ ಪುರಾಣಗಳ ।
ಹರುಷದಿಂ ಕೇಳುತ್ತ ।
ಗುರುಹಿರಿಯರಲ್ಲಿ ಭಕ್ತಿಯ ತೋರುತಾ ।
ದುರಿತಕಂಜುತೆ ದೀನ ।
ಪರಿಪೋಷಣೆಯ ಗೆಯ್ವ ।
ತರುಣಿಯರ ಪೊಗಳದವರಾರೊಜಗದೆ ॥ ॥ ೫೯ ॥
ಕಳೆವುದಾಯುಷ್ಯ ಮುರೆ ।
ಬೆಳೆದಪುದು ದುಷ್ಕೃತ್ಯ ।
ಗಳಫಲಂಕೀರ್ತಿನಿಲುವುದು ಧರೆಯೊಳು ॥
ತಿಳಿದು ಕಾಲದಿ ಬರಿದೆ ।
ಕಳೆಯದೆಯೆ ಸತ್ಕಾರ್ಯ ।
ಗಳ ನೆಸಗಿ ಸುಗತಿಯಂ ಪಡೆಯಲಹುದು ॥ ॥ ೬೦ ॥
ಪತಿಯ ತಪ್ಪನುಗಣಿಸ ।
ದತಿಹಿತವ ಬೋಧಿಸುತೆ ।
ಸುತರ ಸೋದರರ ಪ್ರೀತಿಸುತೆ ಮನೆಯ ॥
ಸತತಮಂ ಶುಚಿಯೆನಿಸಿ ।
ಮಿತದನ್ನಪಾನಗಳ ।
ಹಿತಮಾಗಿಸಲಿಸಿ ರಕ್ಷಿಪಳೆಗೃಹಿಣಿ ॥ ॥ ೬೧ ॥
ಕಂಡೊಡನೆ ತಪ್ಪುಗಳ ।
ದಂಡಿಸದೆಬಿಡೆ ಮುಂದೆ ।
ಚಂಡಿತನ ಬೆಳೆದಪುದು ತಿಳಿದು ಮೊದಲೆ ॥
ಕೊಂಡೆಯಕೆಮನಗುಡದೆ ।
ಪುಂಡುತನಗಳ ಬಿಡಿಸಿ ।
ಕೊಂಡಾಡುತೊಳ್ಗುಣವ ತಿದ್ದಿಕೊಳ್ಳೌ ॥ ॥ ೬೨ ॥
ಅನಸೂಯೆ ಸಾವಿತ್ರಿ ।
ಮುನಿಸತಿಸುಕನ್ಯೆ ಮೇಣ್ ।
ವಿನುತ ಗುಣನಿಲಯೆಯಾದಮಯಂತಿಯು ॥
ಜನಕಜೆಯು ಮೊದಲಾದ ।
ವನಿತೆಯರು ಹದಿಬದೆಯ ।
ರೆನಿಪರಿವರಂ ಪೊಗಳ್ವುದನುದಿನದೊಳು ॥ ॥ ೬೩ ॥
ಇಂತು ಸತಿಯರ್ಗೆ ಹಿತ ।
ಮಂತಿಳಿಪ ಬೋಧೆಗಳ ।
ಸಂತತಿಯ ಸಂಗ್ರಹದೆ ಪೇಳ್ದೆನೀಗ ॥
ಕಾಂತೆಯರ್ತಿಳಿದು ಗುಣ ।
ವಂತೆಯರೆನಿಪ್ಪ ಬಗೆ ।
ಯಂತಮ್ಮ ಬುದ್ಧಿಯಿಂ ಚಿಂತಿಸುವುದು ॥ ॥ ೬೪ ॥
ಮಂಗಳಂ ಜಗಕೆ ಶುಭ ।
ಮಂಗಳಂ ಸುಜನರ್ಗೆ ।
ಮಂಗಳಂ ಮೇರಿ ಜಾರ್ಜರಿಗೆ ಸತತಂ ।
ಮಂಗಳಂ ಕೃಷ್ಣನೃಪ ।
ಪುಂಗವಂಗಕ್ಕೆ ಜಯ ।
ಮಂಗಳಂ ಕವಿವರರ್ಗಕ್ಕೆ ನಿಚ್ಚಂ ॥

ಕೆ. ರಾಮಸ್ವಾಮ್ಯೈಯಂಗಾರ್,
ಮಾಗಡಿ.

ಪೇಷ್ವೆ ನರಾಯಣ ರಾವ್.

(ಕಳದ ಸಂಚಿಕೆಯಿಂದ ಮುಂದರಿಸಿದುದು.)

ಇದಕ್ಕೆ ಪ್ರಥಮವಾದ ಪ್ರಬಲ ಕಾರಣವು ಪೇಷ್ವೆಯ ತಾಯಿಯಾದ ಗೋಪಿಕಾಬಾಯಿಗೂ ರಘುನಾಥರಾವಿನ ಹೆಂಡತಿಯಾದ ಆನಂದಾಬಾಯಿಗೂ ಪರಸ್ಪರ ಉಂಟಾದ ಅಸೂಯೆಯೆ. ಗೋಪಿಕಾ ಬಾಯಿಗೆ ರಘುನಾಥ ರಾವಿನಲ್ಲಿ ಹೆಚ್ಚಾದ ವೈಷಮ್ಯ ಉಂಟಾಗಿ ಆತನ ಪರಿಪಾಲನೆಯಲ್ಲಿ ಯಾವಾಗಲೂ ಲೋಪಗಳನ್ನು ಹುಡುಕುತ್ತಾ ಸಾಗಲಿಸದಿರುವುದಕ್ಕೆ ಈಕೆ ಪ್ರಯತ್ನಿಸಿದಳು. ಇದರಿಂದ ರಘುನಾಥರಾವೂ ಆತನಿಗಿಂತ ಹೆಚ್ಚಾಗಿ ಆನಂದಾಬಾಯಿಯೂ ಪೇಷ್ವೆಯಲ್ಲಿ ವೈಮನಸ್ಕರಾದರು. ಇವಳು ಅಧಿಕಾರ ಸಂಪಾದನೆಯಲ್ಲಿ ಅತ್ಯಂತಾಭಿಲಾಷೆಯುಳ್ಳವಳೂ ಅತ್ಯಾಶೆಯುಳ್ಳವಳೂ ಆಗಿ ಪ್ರಬಲವಾದ ಪುರುಷ ಸ್ವಭಾವವುಳ್ಳ ಹೆಂಗಸಾಗಿಯೆ ಇದ್ದಳು. ಆದಕಾರಣ ಈಕೆಗೆ ಆಂಗ್ಲೇಯ ಚರಿತ್ರಕಾರರು ಮಹಾರಾಷ್ಟ್ರ ದೇಶದ "ಲೇಡಿ ಮಾಕ್ಬೆತ್" ಎಂದು ಹೆಸರಿತ್ತರು. ಆ ಲೇಡಿ ಮಾಕ್ಬೆತ್ ಅಧಿಕಾರ ಕಾಂಕ್ಷೆಯಿಂದ ತಮ್ಮ ದೇಶವಾದ ಸ್ಕಾಟ್ಲೆಂಡಿಗೆ ಪ್ರಭುವಾದ ಡಂಕನ್ ಎಂಬ ರಾಜನನ್ನು ತನ್ನ ಮನೆಗೆ ಔತನಕ್ಕೆ ಕರೆದು ಆದರಿಸುತ್ತಿರುವಾಗ ಆತನನ್ನು ತನ್ನ ಗಂಡನಿಂದ ಕೊಲ್ಲಿಸಿದ ಮಹನೀಯಳು. ಆನಂದಾ ಬಾಯಿಯು ಲೇಡಿ ಮಾಕ್ಬೆತ್‌ನ್ನು ಬಹಳ ವಿಧಗಳಲ್ಲಿ ಹೋಲಿದ್ದಳು. ಮಾಧವರಾಯನ ಆಜ್ಞಾನುಸಾರವಾಗಿ ಸಖಾರಾಮುಬಾವುವನ್ನು ಪ್ರಧಾನ ಮಂತ್ರಿಯಾಗಿ ನಿಯಮಿಸಿಕೊಂಡು ಆತನ ಆಲೋಚನೆಗಳ ಪ್ರಕಾರ ನಡೆದುಕೊಳ್ಳದೆ ನಾರಾಯಣರಾವು ಪ್ರತಿ ವಿಷಯದಲ್ಲಿಯೂ ನಾನಾಫರ್ಣವೀಸನ ಆಲೋಚನೆಯನ್ನು ಕೋರುತ್ತಾ ಆತನ ಇಷ್ಟಾನುಸಾರವಾಗಿ ಪ್ರವರ್ತಿಸುತ್ತಿದ್ದನು.

ಇದು ಸಖಾರಾಮುಬಾವಿಗೆ ಸ್ವಲ್ಪವಾದರೂ ಇಷ್ಟವಾಗಿರಲಿಲ್ಲ. ಇದರಿಂದ ಸಖಾರಾಮುಬಾವಿಗೂ, ನಾನಾ ಫರ್ಣವೀಸನಿಗೂ ಮಧ್ಯೆ ಅಸೂಯೆಯೂ ವಿರೋಧವೂ ಉಂಟಾಗಿ ರಾಷ್ಟ್ರದಲ್ಲಿ ಎರಡು ಕಕ್ಷಿಗಳೇರ್ಪಟ್ಟವು. ಸಖಾರಾಮುಬಾವಿಗೂ ನಾನಾ ಫರ್ಣವೀಸನಿಗೂ ಉಂಟಾದ ಅನ್ಯೋನ್ಯ ವಿರೋಧವು ಗೋಪಿಕಾಬಾಯಿಗೂ ರಘುನಾಥರಾಯನಿಗೂ ಉಂಟಾದ ಪರಸ್ಪರ ವೈಷಮ್ಯದಿಂದ ಇನ್ನೂ ವೃದ್ಧಿಹೊಂದಿತು. ಅಮೃತರಾವ್ ಎಂಬ ಚಿಕ್ಕ ಹುಡುಗನನ್ನು ರಘುನಾಥ ರಾಯನು ದತ್ತು ತೆಗೆದುಕೊಳ್ಳುವಂತೆ ತೋರಿ ಬಂದಿತು. ಈ ದತ್ತುವಿಗೆ ಮುಖ್ಯ ಕಾರಣನಾದವನು ನಾಗಪೂರು ಸಂಸ್ಥಾನಾಧಿಪತಿಯಾದ ಮಾಧೋಜಿ ಭೋಂಸ್ಲೆ ರಘುನಾಥರಾಯನು. ಪೇಷ್ವೆಯ ಸಂಪತ್ತನ್ನೂ ಶಕ್ತಿಯನ್ನೂ ಸಾಧಿಸಬೇಕೆಂದು ಉದ್ದೇಶವುಳ್ಳವನಾದುದರಿಂದ ಪೇಷ್ವೆಯ ರಾಜ್ಯವನ್ನಪಹರಿಸಿ ತನ್ನ ವಂಶಸ್ಥರನ್ನು ನಿಲ್ಲಿಸಿಕೊಂಡು ಅವರನ್ನು ಅಲ್ಲಿ ಸ್ಥಾಪಿಸುವುದಕ್ಕೋಸ್ಕರ ದತ್ತು ಮಾಡಿಕೊಂಡನೆಂತಲೂ ಇದಕ್ಕಾತನು ಭೋಂಸ್ಲೆಯಿಂದ ಪ್ರೇರಿಸಲ್ಪಟ್ಟನೆಂತಲೂ ಈ ಗೋಪಿಕಾಬಾಯಿ ತಿಳಿದಳು. ಅಷ್ಟರ ಮೇಲೆ ಎರಡು ಕಕ್ಷಿಗಳಿಂದಲೂ ವಿರೋಧವು ಬಹಿರಂಗವಾಗಿ ಪ್ರಕಟ ಪಡಿಸಲ್ಪಟ್ಟಿತು. ರಘುನಾಥರಾವು ಕೈಯಿಂದ ಅಧಿಕಾರವು ತೆಗೆದುಕೊಳ್ಳಲ್ಪಟ್ಟಿತು. ಆತನು ೧೭೭೩ನೇ ಎಪ್ರಿಲ್ ೧೧ರಲ್ಲಿ ನಾರಾಯಣರಾವು ವಾಸ ಮಾಡುತ್ತಿದ್ದ ಸೌಧದ ಒಂದು ಪಾರ್ಶ್ವದಲ್ಲಿ ಸೆರೆಯಿಡಲ್ಪಟ್ಟನು.

ಇವೆಲ್ಲವನ್ನೂ ಆನಂದಾಬಾಯಿಯು ನೋಡಿ ಸಹಿಸಿಕೊಂಡು ಸುಮ್ಮನಿರುವದು ಹೇಗೆ ತಾನೇ ಸಾಧ್ಯವಾದೀತು. ತನಗೆ ಶತ್ರುವಾದ ಗೋಪಿಕಾಬಾಯಿಯ ಪ್ರಯತ್ನಗಳನ್ನು ಸಾಗದಂತೆ ಮಾಡುವದಕ್ಕೂ ರಘುನಾಥ ರಾವನ್ನು ಶೆರೆಯಿಂದ ಬಿಡಿಸಿ ನಾರಾಯಣ ರಾವಿಗೆ ಬದಲು ಆತನನ್ನು ಪೇಷ್ವೆಯಾಗಿ ಮಾಡುವದಕ್ಕೂ ತನ್ನ ಕೈಯಲ್ಲಾದಷ್ಟು ಪ್ರಯತ್ನ ಮಾಡ ತೊಡಗಿದಳು. ಅಧಿಕಾರಕ್ಕಾಗಿ ಹೋರಾಡುತ್ತಿರುವ ಸ್ವಪ್ರಯೋಜನಪರಾಯಣರಾದ ಈ ಇಬ್ಬರು ಸ್ತ್ರೀಯರ ವಿರೋಧಕ್ಕೆ ನಿರಪರಾಧಿಯೂ, ತರುಣ ವಯಸ್ಕನೂ ಆದ ನಮ್ಮ ಕಥಾ ನಾಯಕನು ಗುರಿಮಾಡಲ್ಪಟ್ಟನು.

ಸಖಾರಾಮುಬಾಪುವು ನಾರಾಯಣರಾಯನಲ್ಲಿ ವೈಮನಸ್ಕನಾಗಿದ್ದುದನ್ನು ಹಿಂದೆಯೇ ತಿಳಿಸಿದ್ದೇವೆ. ಆದುದರಿಂದ ಆತನು ನಾರಾಯಣ ರಾವು ಮೇಲೆ ಜರಗುತ್ತಿದ್ದ ಈ ಕುಮಂತ್ರಗಳಲ್ಲಿ ಪ್ರವೇಶಿಸಿ ನಾರಾಯಣ ರಾವನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿ ರಘುನಾಥರಾವನ್ನು ಸೆರೆಯಿಂದ ಬಿಡಿಸಿ ಆತನನ್ನು ಪೇಷ್ವೆಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದನು. ಪ್ರಾಚೀನರಾದ ಉದ್ಯೋಗಿಗಳಲ್ಲಿ ತ್ರಿಯಂಬಕ ಜೀಮಾಮ ಎಂಬುವನು ಹೊರತು ಉಳಿದವರೆಲ್ಲರೂ ನಾರಾಯಣರಾವಿಗೆ ವಿರೋಧಿಗಳಾಗಿಯೇ ಇದ್ದರು. ನಾರಾಯಣರಾವನ್ನು ಆಶ್ರಯಿಸಿದ ನೂತನೋದ್ಯೋಗಿಗಳೂ ಸಣ್ಣ ವಯಸ್ಸಿನವರೂ ಆದ ಹರಿಫಂತುಫಡಕ್ಕೆ, ನಾನಾಫರ್ಣವೀಸು—ಮೊದಲಾದ ಕೆಲವರು ಮಾತ್ರವೇ ಆತನ ಹಿತವನ್ನು ಬಯಸುವವರಾಗಿದ್ದರು. ನಾರಾಯಣ ರಾವನ್ನು ಇಷ್ಟು ಆಪತ್ತುಗಳು ಆವರಿಸಿದ್ದಾಗ್ಯೂ ಆತನು ಇನ್ನೂ ಸ್ವಲ್ಪ ಯುಕ್ತಾಯುಕ್ತ ವಿವೇಕ ಜ್ಞಾನದಿಂದಲೂ ಎಚ್ಚರಿಕೆಯಿಂದಲೂ ಪ್ರವರ್ತಿಸಿದ್ದರೆ ಆ ಆಪತ್ತುಗಳೆಂಬ ಮೇಘಗಳೆಲ್ಲವೂ ಚದರಿ ಹೋಗುತ್ತಿದ್ದುವು. ಆಗಿನ ಗವರ್ನರ್ ಜನರಲ್ ಆದ ವಾರನ್ ಹೇಸ್ಟಿಂಗ್ಸನ ಹೆಸರಿನಲ್ಲಿ ವಿಲ್ಲಿಯಂ ಟೆಲಿಯರ್ ಎಂಬಾತನು ೧೭೭೩ನೇ ಸಂವತ್ಸರದ ಅಕ್ಟೋಬರ್ ೯ರಲ್ಲಿ ಬರೆದ ಪತ್ರದಲ್ಲಿ ಹೀಗೆ ಬರೆದಿದ್ದಾನೆ—ನಾರಾಯಣ ರಾವಿಗೆ ಸ್ವಲ್ಪವಾದರೂ ದೂರಾಲೋಚನೆಯೂ ಎಚ್ಚರವೂ ಇದ್ದರೆ ಆತನು ಪೇಷ್ವಾ ಪದವಿಯಲ್ಲಿ ಸ್ಥಿರವಾಗಿರುತ್ತಿದ್ದನು. ತನ್ನ ತಾಯಿಯ ಕೃತ್ರಿಮದಿಂದಲೂ ತಾನೇ ಸ್ವಂತವಾಗಿ ತನ್ನ ಆಲೋಚನಪರರನ್ನು ನೇಮಿಸಿಕೊಂಡದ್ದರಿಂದಲೂ ದಿವಾನ್ ಸಖಾರಾಮು ಬಾವುವಿನೊಂದಿಗೆ ಪ್ರಬಲ ವಿರೋಧವನ್ನು ಸಂಪಾದಿಸಿಕೊಂಡನು. ಹೀಗಿದ್ದರೂ ನಾನಾಫರ್ಣವೀಸು ಮೋರೋಜ, ಇವರಿಗೆ ಇದ್ದ ಸಾಮರ್ಥ್ಯವೂ ಪ್ರಜಾವಶೀಕರಣ ಶಕ್ತಿಯೂ ಬಲವಾಗಿದ್ದುದರಿಂದ ಸಖಾರಾಮುಬಾವುವಿನ ವಿರೋಧವು ಆತನನ್ನು ಏನೂ ಮಾಡಲಾರದುದಾಗಿತ್ತು. ಆದರೂ ಆಲೋಚನೆಯೂ ವಿಮರ್ಶನಾ ಶಕ್ತಿಯೂ ಇಲ್ಲದೆ ಕೇವಲ ಭೋಗೇಚ್ಛಾಪರನಾದ ಆತನು ತನ್ನ ಮಂತ್ರಿಗಳಲ್ಲಿ ಯಾರಿಗಾದರೂ ತಕ್ಕ ಹಾಗೆ ಗೌರವ ಕೊಡಲಿಲ್ಲ. ಅವರಲ್ಲಿ ಆತನು ಗರ್ವವನ್ನೂ ನಿರ್ಲಕ್ಷ್ಯವನ್ನೂ ತೋರಿಸುತ್ತಿದುದ್ದರಿಂದಲೇ ಆತನು ಶತ್ರುಗಳ ದೌಷ್ಟ್ಯಕ್ಕೆ ಸಿಕ್ಕಿ ಬಿಳುತ್ತಿದ್ದ ಸಮಯದಲ್ಲಿ ಅವರು ಉದಾಸೀನರಾಗಿ ಸುಮ್ಮನಿದ್ದರು.

ಮುಂದುವರಿಯುವುದು.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಅಕಟ ವಿಕಟ.

ಪತ್ರಸಂಪಾದಕ ಮಹಾಶಯರೇ, ಕಲಿಯುಗದ ಮಹಿಮೆಯನ್ನು ಏನೆಂತ ವರ್ಣಿಸಲಿ. ಆರ್ಕಾಡು ಜಿಲ್ಲೆಯ ಕುಪ್ಪಂನಲ್ಲಿ ವಿಕಟ ಪ್ರತಾಪವು ಜನಿಸಿ (ಜನ್ಮಭೂಮಿ ನಾನರಿಯೆ.) ಪಂಚ ವಾರ್ಷಿಕವು ಕಳೆಯುತ್ತಲೇ ಬೆಂಗಳೂರಲ್ಲಿ ವಿಕಟ ವಿನೋದಿನಿಯು ಜನಿಸಿದಳು. ತನ್ನ ಆರನೇ ವರುಷದಲ್ಲಿ ಸೊಟ್ಟಮುಸಡಿನ ವಿಕಟನನ್ನು ರಂಗಸ್ಥಳಕ್ಕೆ ತಂದಿರುವೆನೆಂದು ವಿಕಟ ಪ್ರತಾಪಳು ಪ್ರಲಾಪಿಸುವಳು. ವಿಕಟ ವಿನೋದಿನಿಯೋ-ಒಬ್ಬರ ಪೋಷಣೆಯಲ್ಲಿಯೇ ಬೆಳೆದವಳಂತೆ. ಸುಜನ ಪಾಲಿನಿ, ಕುಜನ ವಿನಾಶಿನೀ, ರಶಿಕ ಮೋಹರಂಜನೀ, ಅಮಿತ್ರ ಪ್ರಸಂಗ ಭಂಜನಿ, ಮೃದು ಮಧುರ ಹಾಸಿನೀ, ಹಿತವಾದಿನೀ, ಸುಖದಾಯಿನಿ, ವಿಕಟಮಾನಿನಿ ಎಂಬ ತನ್ನ ಸಹಜ ಗುಣಗಣಗಳನ್ನು ಪ್ರತಿ ಮಾಸದಲ್ಲಿಯೂ ತನ್ನ ವಾಗ್ಜಾಲದಿಂದ ವಾಚಕಮಹಾಶಯರಿಗೆ ಪ್ರಮಾಣಿಸುವೆನೆಂದು ಆಲಾಪಿಸುವಳು. ಉಭಯತರೂ ಸಚಿತ್ರ ವಿಚಿತ್ರರಂತೆ. ಅಕಟಕಟಾ! ಇವರ ಸಚಿತ್ರ ವಿಚಿತ್ರಗಳನ್ನು ಕೇಳಿ ನನಗೂ ಒಂದು ಪತ್ರವನ್ನು ಹೊರಡಿಸಬೇಕೆಂಬ ಅಭಿಲಾಷೆ ಉಂಟಾಗಿರುವದು. ನನ್ನ ಪತ್ರಕ್ಕೆ ಅಕಟವಿಕಟ ಎಂಬ ಹೆಸರನ್ನೇ ಇಡಬೇಕೆಂದು ನನ್ನ ಸ್ನೇಹಿತರ ಮಂತ್ರ. ಮಾಡುವುದೇನು? ನಾನು ಒಬ್ಬರ ಪೋಷಣೆಯಲ್ಲಿ ಬೆಳೆದವನಲ್ಲ! ವಾಗ್ಜಾಲವೆಂತೂ ಇಲ್ಲ. ವಾಚಕರ ಹೃದಯವನ್ನು ಹೇಗೆ ಆಕರ್ಷಿಸಿಕೊಳ್ಳಲಿ? ಇದ್ದ ಅಭಿದಾನಗಳೆಲ್ಲಾ ವಿಕಟ ವಿನೋದಿನಿಗೆ ಸೇರಿದ ಮೇಲೆ ನನಗೇನು ಗತಿ!! ಯೋಚಿಸಿ ಯೋಚಿಸಿ ಮೆದುಳು ನೀರಾಯಿತು. ವಾಚಕಮಹಾಶಯರಿಗೆ ಯಾವುದನ್ನು ಕೊಡಲಿ? ಮುಸಡನ್ನೋ—ನನಗೆ ಸೊಟ್ಟ ಮುಸುಡಿಲ್ಲ—ಸೊಟ್ಟ ತಲೆ ಮಾತ್ರವಿದೆ. ಬಾಲ್ಯದಲ್ಲಿ ನನ್ನಜ್ಜಿ ಚೆನ್ನಾಗಿ ಕೆನ್ನೆ ತಟ್ಟಲಿಲ್ಲವಂತೆ! ತಾಯಿ ಅಜ್ಜಿ ಕೂಡೆ ಗೊಣಗುಟ್ಟುತ್ತಿದ್ದದ್ದು ಕೇಳಿಬಲ್ಲೆ. ಅಕಟಕಟಾ! ಬಂತು, ಬಂತು, ನಾನು ವಾಚಕರಿಗೆ ಕೊಡುವ ಅಭಿದಾನವು-'ಕಾಲಕ್ಕೆ ತಕ್ಕ ಕೋಲ.' ನನಗೆ 'ಅಪಿಕಲಾಟಿ' ಎಂಬ ಬಹುಮಾನಬಿರುದು ದೊರಕಿದ ಕಾರಣವೇ ಇದು-ನಿಮಗೆ ಏನಾದರೂ ಬಹುಮಾನ ಪತ್ರಗಳು ಸಿಕ್ಕಬೇಕೆಂಬ ಕಾಂಕ್ಷೆ ಇದೆಯೋ-ಅದೇ ನಿಮ್ಮ ಪ್ರಣವ ಜಪವಾಗಿರಲಿ; ಪಟ್ಟಣಿಗರಲ್ಲಿಯೋ, ಸಮಾಜದಲ್ಲಿಯೋ, ಮುನ್ಸಿಪಾಲ್ ಕೌನ್ಸಿಲುಗಳಲ್ಲಿಯೋ ಮುಖಂಡರಾಗಲು ಕುತೂಹಲ ಪಡುವಿರೋ—ಅದೇ ನಿಮ್ಮ ಆದರ್ಶವಾಗಿರಲಿ.

ಅಹಾ! ಮರೆತುಬಿಟ್ಟೆ, ನಮ್ಮಲ್ಲಿ ಛಾಪಖಾನೆಗಳಿಗೊಂದು ಪತ್ರವು ಹೊರಡುತ್ತದಂತೆ-ಹೊರಡದಿದ್ದರೆ ಉಪಾಯವಿಲ್ಲ. ನನಗೆ ಮಾತ್ರ ಛಾಪಖಾನೆ ಇಲ್ಲ. ನನ್ನ ಅಕಟವಿಕಟನನ್ನು ನಿಮ್ಮಲ್ಲಿ ಛಾಪಿಸಲೋ-'ಗುಟ್ಟಂ ಬಿಟ್ಟಂ ಕೆಟ್ಟಂ'. ಛಾಪಖಾನೆಗೆ ಸ್ಥಳ ಹುಡುಕಿ ಹುಡುಕಿ ಸಾಕಾಯಿತು, ಪ್ಲೇಗ್ ಗಲಾಟೆಯಿಂದ ನಂದಿ ಗುಡ್ಡೆಯಲ್ಲಿಯೂ ಸ್ಥಳ ದೊರಕದೆಂದು ನಮ್ಮ ಪಟ್ಟಣ ತಾತರು ಹೇಳಿದರು. ಇವರ ಕೂಡೆ ಮಾತನ್ನಾಡುವಷ್ಟರಲ್ಲಿ ಛಾಪಖಾನೆ ಎಂಬ ಶಬ್ದ ಕೇಳುತ್ತಲೇ ಆಚೆ ಕೋಣೆಯಿಂದ—ಯಾರೋ—ಒಬ್ಬ ಇನ್ಸ್‌ಪೆಕ್ಟರರಂತೆ—ಅವರ ಹೆಸರು ನಾನರಿಯೆ. ಬಣ್ಣ ನೀಲ; ಪ್ರಾಯ-ಒಂದು ಶತಮಾನ ಸಮೀಪಿಸಿರಲಿಕ್ಕೆ ಸಾಕು, ಕಾಲಿಗೆ ಚೀಲ ತೊಡಿಸಿತ್ತು, ತಲೆ ಬಿಳಿದು, ಮೊಗ ಮಾತ್ರ ಜೊಲ್ಲು ಬೀಳಲಿಲ್ಲ. ಏನು? ಪಾಯಖಾನೆ ಸರಿ ಇಲ್ಲವೋ ಎಂಬದಾಗಿ ಕೇಳಿಬಿಟ್ಟರು. ಮಾಸಕೊಂದಾವರ್ತಿಯಾದರೂ ತೋಟಿಗಳ ಮುಖದರ್ಶನವಾಗದಿದ್ದರೆ ಪಾಯಖಾನೆ ಎಲ್ಲಿ......ಎಂಬು ಮೆಲ್ಲನೆ ಹೇಳಿ ಜಾರಿ ಬಿಟ್ಟೆನು. ಅದಂತಿರಲಿ-ಉಂಡಿಯಾ ಕುಂಡೀ ಬಟ್ಟಾ ಎಂಬದಕ್ಕೆ ಮುಂಡಾಸು ಮೂವತ್ತು ಮೊಳವೆಂತ ಹೇಳಿದ ಹಾಗಾಯಿತು. ಪತ್ರ ಮಹಾಶಯರೇ, ನೀವೇನಾದರೂ ನನ್ನ ಅಕಟವಿಕಟನಿಗೆ ಉದಾರಾಶ್ರಯವನ್ನು ಕೊಡುವಿರೋ? ಅಹಾ! ಕೇಳಿಬಿಟ್ಟೆ-ಕ್ಷಮಿಸಿರಿ. ಬೆಕ್ಕಿನ ವ್ಯಾಜಕ್ಕೆ ವಾನರ ನ್ಯಾಯಾಧೀಶನಾದಂತೆ ಆದೀತು. ದೀಪಿಕಾಶ್ರಯವನ್ನು ಬಯಸಲೋ? ಮಾತಾಭಿಮಾನದಿಂದ ತುಂಬಿ ತುಳುಕುತ್ತಿದೆ. ಕ್ಷೀರ ಬಹು ಒಳ್ಳೇದು, ಮಕ್ಕಳಿಗೆ ಹೆಚ್ಚು ಕೊಟ್ಟಲ್ಲಿ ಅತಿಸಾರ ಉಂಟಾಗುತ್ತೆ. ದೀಪಿಕೆಯ ಬಾಗಲೇ ಮುಚ್ಚಿ ಬಿಡುತ್ತಾರಂತೆ. ರಾತ್ರಿಯೋ—ಹಗಲೋ ನಾನರಿಯೆ. ದೀಪಿಕೆಯ ಬಾಲ್ಯಾವಸ್ಥೆಯಲ್ಲಿ ತಲೆದೋರುತ್ತಿದ್ದ ಹರಟೆಮಲ್ಲರಲ್ಲಿ ಆಶ್ರಯ ಕೇಳಲೋ-ನನ್ನ ಉದರ ದೊಡ್ಡದು-ಅವರ ಮುಂಡಾಸು ದೊಡ್ಡದು. ವಿಕಟಮಲ್ಲರಲ್ಲಿ ಬೇಡಲೋ ಅವರಿಗೆ ಮಹೋದರ ಪ್ರಾಪ್ತಿಸಿಯದಂತೆ. ಅಕಟಕಟಾ! ತಪ್ಪಿದೆ, ಕ್ಷಮಿಸಿರಿ—ಮೈದಾನಿಗೆ ಛತ್ರೆ ಸರ್ಕಸು ಬಂದದೆ. ಮಳೆಗಾಲಕ್ಕೆ ಬರುತ್ತಿದ್ದರೆ ಕೆಲವು ಛತ್ರಗಳು ಮಾರಿ ಹೋಗುತ್ತಿದ್ದವು. ಇದರ ಮೆನೇಜರರು ದೀಕ್ಷಿತರಂತೆ, ನನಗೂ ದೀಕ್ಷಿತನಾಗಲು ಮನಸ್ಸಿದೆ. ಅವರ ದೀಕ್ಷೆಯಿಂದ ನಮ್ಮ ಪಟ್ಟಣದ ಹಣ ಹೋಯಿತು. ನನಗೆ ದೀಕ್ಷೆಯಾಗುವದರಿಂದ ಹಣ ಬರುತ್ತದೋ-ನೋಡಲಿಕ್ಕಿದೆ. ಎಂಟಾಣೆ ಕೈಯಲ್ಲಿ ಹಿಡಕೊಂಡು ಸರ್ಕಸಿಗೆ ಹೊರಟೆನು, ಸರ್ಕಸ್ ಡೇರೆಯ ಸಮೀಪವೇ ಒಂದು ಸಣ್ಣ ಡೇರೆ ಹೊಡದಿತ್ತು; ಜನರು ಗುಂಪು ಕೂಡಿದ್ದರು. ಏನೆಂದು ಕೇಳಲು—ಸರ್ಕಸಿನಲ್ಲಿ ದುಡ್ಡು ಹೋಗುತ್ತದೆ, ಇದರಲ್ಲಿ ದುಡ್ಡು ಬರುತ್ತದೆಂದರು. ಇದ್ದ ಎಂಟಾಣೆ ಒಡ್ಡಿದೆನು. ಚಕ್ರ ತಿರುಗಿಸಿದರು, ಎಂಟಾಣೆ ಕಳಕೊಂಡೆ-ತಲೆ ರುಮಾಲು ಅಡವಿಟ್ಟು ಒಡ್ಡಿದೆ. ಎರಡಾಣೆ ಬಂತು, ಬಂದ ಎರಡಾಣೆ ಇಡಲು ಪೂರಾ ಹೋಯಿತು. ಅಹಾ! ನನ್ನ ಪುಣ್ಯವೇ! ಇದು ಜುಗಾರಲ್ಲವಂತೆ-ಜುಗಾರಿಯ ಓನಾಮವಾಗಿರ ಬಹುದೇನೋ? ಕೆಲವು ಶಾಲಾ ಮಕ್ಕಳು ಈ ಓನಾಮ ಕಲಿತು ಬಿಟ್ಟರು. ಮೈದಾನಿನಲ್ಲಿ ಆಡುವದು ಜುಗಾರಲ್ಲ; ಮನೆಯಲ್ಲಿ ಆಡುವದು ಜುಗಾರಂತೆ. ಇದು 'ರಿಂಗ್ ಪ್ಲೇ' ಅಂತೆ. ಇವರು ತಿರಚೂರಿನವರು-ತಲೆ ಬೋಳು-ನನ್ನ ಚೀಲ ಬೋಳು.

ಮಂಡಿ ಬೋಳಾದವರ | ಕಂಡು ನಂಬಬೇಡ |
ಖಂಡಿತವಪ್ಪ ಪರತತ್ವವುಳ್ಳವರ | ಕಂಡರೇ ನಂಬು, ಸರ್ವಜ್ಞಾ ||

ಸ್ವಾಮಿ, ಈ ಆಟವನ್ನು ಆಡಲಪ್ಪಣೆವಿತ್ತ ಮಹಾಶಯರಿಗೆ ಶುಭಮಸ್ತು! ಹಣ ಒಡ್ಡಿದ ಹೆಡ್ಡಾಳುಗಳಿಗೆ ಅಶುಭಮಸ್ತು!! ನಮ್ಮೂರ ಹಣವು ವ್ಯರ್ಥವಾಗಿ ಪರರ ಪಾಲಾಯಿತು. ಇದಕ್ಕೆ ಜವಾಬ್ದಾರರ್ಯಾರು? ಪತ್ರಸಂಪಾದಕರು. ಆಹಾ! ಇದೇನು ವಿಚಿತ್ರ!! ರಿಂಗ್‌ಪ್ಲೇಯ ಮಾಲೀಕರು ಆದಿತ್ಯವಾರ ಮೈದಾನಿನಿಂದ ಡೇರೆ ಜಾರಿಸಿದ್ದರು. ಮಂಗಳವಾರ ಕ್ಷಿಪ್ರಸನ್ನಿ ಪ್ರಾಪ್ತಿಸಿ ಕೂಡಲೇ ಯಮಪುರ ಸೇರಿದರು. ಬುಧವಾರ ತಿರಚೂರಿನಿಂದ ಅಗ್ಗಾಡಿಯಲ್ಲಿ ಅವರ ಹೆಂಡತಿಮಕ್ಕಳು ಬಂದು ರಾತ್ರಿ ಸಮಾಧಿ ಮಾಡಿದರಂತೆ. ಪಾಪ! ಈ ಊರ ಮಣ್ಣು ಲಭಿಸಿತು. ಜುಗಾರಿ ಓನಾಮವು ಇಲ್ಲಿಯೇ ಅಂತ್ಯವಾಯಿತು. ನಮ್ಮೂರ ಹೋದ ಹಣವು ಇಲ್ಲಿಯವರಿಗೆನೇ ಆಯಿತೇನೋ—ಭಗವಂತನೇ ಬಲ್ಲ.! ಸ್ವಾಮಿ, ಪತ್ರವಿಸ್ತಾರಕ್ಕೆ ಕ್ಷಮೆ ಇರಲಿ. ನಿಮಗೆ ಮಾನ್ಯಂ—ನನಗೆ ಶೂನ್ಯಂ.

ಅಪಿಕಲಾಟಿ.

ಅಯ್ಯಾ,

ಕಳದ ಶನಿವಾರ ತಾರೀಕು ೨೦ನೆ ದಿವಸ ಶಿರಾಲಿ ಚಿತ್ರಾಪುರ ಮಠಾಧಿಪತಿಗಳು ಮಂಗಳೂರಿಗೆ ತಲಪಿರುವರು. ಬಹು ಮಂದಿ ಶಿಷ್ಯ ವರ್ಗದವರು ಬಹಳ ಉತ್ಸಾಹದಿಂದ ಆನೆ, ಮಕರತೋರಣ, ಬೇಂಡುವಾದ್ಯ, ಶಾಲಾ ಹುಡುಗರ ಮೆರವಣಿಗೆ ಇವೇ ಮೊದಲಾದ ಸಂಭ್ರಮಗಳಿಂದೊಡಗೂಡಿ ಶುಮಾರು ಎರಡು ಮೈಲು ದೂರ ಹೋಗಿ ಗುರುಗಳನ್ನು ಎದುರ್ಗೊಂಡು ಪಟ್ಟಣಕ್ಕೆ ಕರತಂದಿರುವರು. ತಾರೀಕು ೨೩ ಮತ್ತು ೨೪ಕ್ಕೆ ಶಿಷ್ಯ ವರ್ಗದವರಿಗೆಲ್ಲ ಸಂಸಾರದೋಷ ನಿರ್ವಾಹಕವಾಗಿ ಪ್ರಾಯಶ್ಚಿತ್ತವಾಯಿತು. ಹೀಗೆಯೇ ಗುರುಗಳು ವಸ್ತಿಇದ್ದ ಊರುಗಳಲ್ಲಿ ಶಿಷ್ಯವರ್ಗದವರಿಗೆಲ್ಲ ಪ್ರಾಯಶ್ಚಿತ್ತ ಕೊಡುತ್ತಾ ಬಂದಿದ್ದಾರಂತೆ. ಮಂಗಳೂರಲ್ಲಿ ಇದು ಚಿತ್ರಾಪುರ ಮಠದ ಶಿಷ್ಯರಿಗೆ ನಾಲ್ಕನೆ ಸಾರಿಯಾದ ಸರ್ವ (general) ಪಾಯಶ್ಚಿತ್ತವೆಂತ ತೋರುತ್ತದೆ. ಶುಮಾರು ೧೭ ವರುಷಗಳ ಇತ್ತಲಾಗೆ ವಿಲಾಯತಿಗೆ ಹೋಗಿ ಬಂದವರ ಸಂಪರ್ಕ ಸಂಸರ್ಗ ದೋಷಗಳಿಗಾಗಿ ಪ್ರಾಯಶ್ಚಿತ್ತವಾಗುತಿತ್ತು. ಈ ವರುಷ ಅದರ ನಡುವೆ ಪರಿಷದವೂ ಶೇರಿತು. ಪ್ರತಿ ಒಂದು ಸಾರಿಯೂ ಪ್ರಾಯಶ್ಚಿತ್ತ ತೆಗೆದುಕೊಳ್ಳುವವರು ದೇವರ ಮುಂದೆಯೂ ಗುರುಗಳ ಮುಂದೆಯೂ ತಾನು ಮಾಡಿದ ಪಾತಕವು ಘರಾಮೋಶಿಯಿಂದ ಅನಿರ್ವಾಹ ಸಂಗತಿಯಲ್ಲಿ ಘಟಿಸಿ ಹೋಯಿತು ಎಂದು ಮನಃಪೂರ್ವಕ ಪಶ್ಚಾತ್ತಾಪದಿಂದ ಇನ್ನು ಮುಂದೆ ಇಂಥಾ ದೋಷಗಳಿಗೆ ಗುರಿಯಾಗುವುದಿಲ್ಲವೆಂದು ನಿರ್ಧಾರ ಮಾಡಿ ಪ್ರಾಯಶ್ಚಿತ್ತ ಪಡೆಯುವರು. ಮೂರು ಬಾರಿ ಇದೇ ಧೃಢ ಮನಸ್ಸಿಂದ ಪ್ರಾಯಶ್ಚಿತ್ತ ಪಡೆದವರು ನಾಲ್ಕನೆ ಸಾರಿಯೂ ಅದೇ ಪಾತಕಕ್ಕೆ ಗುರಿಯಾಗಲು ಹೇಳಲೇನು? ಸಂಸಾರದಲ್ಲಿ ಸತ್ಯವನ್ನಾಡಿ ದಿವಸ ಕಳೆಯುವುದು ಅಸಾಧ್ಯ. ಅಥವಾ ಸಂಸಾರದಲ್ಲಿ ಇಂಥಾ ಸಂಪರ್ಕ ಸಂಸರ್ಗ ದೋಷಗಳನ್ನು ಮಾಡದಿರುವುದು ಈಗಿನ ಕಾಲಮಾನಕ್ಕೆ ಅಸಾಧ್ಯ. ಎಂಬ ಎರಡೇ ಮಾತುಗಳು. ಆದರೆ ಇವುಗಳ ಪೈಕಿ ನಾವು ಯಾವದನ್ನೂ ಆಚರಿಸ ಬಹುದೆಂತ ಯೋಚಿಸುವ. ಸುಳ್ಳಾಡುವುದರಿಂದ ಬ್ರಹ್ಮಹತ್ಯದ ಪಾತಕಕ್ಕೆ ಗುರಿಯಾಗುತ್ತೇವೆಂದು ಶಾಸ್ತ್ರಗಳು ನಿವೇದಿಸುತ್ತವೆ. ಬ್ರಹ್ಮಹತ್ಯ ಪಾತಕಕ್ಕೆ ಯಾರು ತಾನೇ ಮನಃಪೂರ್ವಕ ಗುರಿಯಾಗುವನು? ಹಾಗಾದರೆ ಈ ಪೀಕಲಾಟ ಹೇಗೆ ಉಂಟಾಗುವುದು? ಸಂಸಾರದಲ್ಲಿ ಕಾಯ, ವಾಚ, ಮನಗಳಿಗೆ ಸರಿಯಾಗಿ ನಡದು ಸಂಪರ್ಕ ಸಂಸರ್ಗ ದೋಷಗಳನ್ನು ಮಾಡದಿರುವುದು ಪ್ರಕೃತ ಕಾಲಮಾನಕ್ಕೆ ಅಸಾಧ್ಯವಾದುದರಿಂದಲೇ ಇಂಥಾ ಅಸಾಧ್ಯ ಕಾರ್ಯವನ್ನು ವಹಿಸಿಕೊಂಡು ಅದನ್ನು ನೆರವೇರಿಸದೆ ಇರುವುದಕ್ಕಿಂತಲೂ ಅದನ್ನು ವಹಿಸಿಕೊಳ್ಳದೆ—ಇವು ಈಗಿನ ಕಾಲಮಾನಕ್ಕೆ ಆಚರಿಸಲಶಕ್ಯವಾದವುಗಳು, ಹೀಗೆ ವರ್ತಿಸುವುದು ಸಂಸಾರಿಕರಿಗೆ ಎಂದೆಂದಿಗೂ ಸಾಧ್ಯವಾಗಲಾರದು, ಆದಕಾರಣ ಅವುಗಳನ್ನು ದೋಷವೆಂದೆಣಿಸಬಾರದು—ಎಂದು ಶಿಷ್ಯವರ್ಗದವರು ಏಕಮತದಿಂದ ಗುರುಗಳೊಡನೆ ಅರಿಕೆ ಮಾಡುವುದು ಮೂರು ನಾಲ್ಕಾವರ್ತಿ ಗುರುದೇವರ ಮುಂದೆ ಸುಳ್ಳಾಡುವ ಪಥಕ್ಕೆ ಬರುವುದಕ್ಕಿಂತ ಉಚಿತವಲ್ಲವೇ?

ಲೌಕಿಕ ಮಾರ್ಗದಲ್ಲಿ ಸಂಭವಿಸುವ ಸಂಕಷ್ಟಗಳನ್ನು ಪಾರಮಾರ್ಥಿಕವೇ ಬಲ್ಲ ಗುರುಗಳು ಹೇಗೆ ತಿಳಿಯುವರು? ವಾಚಾನುಭವವಾದರೂ ಶಿಕ್ಕಬಹುದೆಂದರೆ ಗುರುಗಳ ಮನಸ್ಸು ನೋಯಿಸುವುರೋ ಎಂಬ ಶಂಖೆಯಿಂದ ಅಂಜಿ ಸ್ವಕಾರ್ಯ ಧುರಂಧರರಾದ ಕೆಲ.ಪ್ರಮುಖರು ತಮ್ಮ ತಮ್ಮ ಗುರುಭಕ್ತಿಯನ್ನೇ ತೋರಿಸಲೆತ್ನಿಸುವರು. ಸ್ವಕಾರ್ಯ ಘಳಿಸುವುದರಲ್ಲಿ ಫಲವನ್ನೇ ದೃಷ್ಟಿಯಲ್ಲಿಟ್ಟು ಮಾರ್ಗದ ಹಿತಾಹಿತ ಎಣಿಸರು. ಸ್ವಕಾರ್ಯ ನೆರವೇರಿಸಿ ಸ್ವಸ್ಥಚಿತ್ತದಿಂದ ಕೂತುಕೊಳ್ಳುವರು. ಸಮಾಜದ ಅಥವಾ ತನ್ನ ಜಾತಿಯ ಹಿತವನ್ನು ಬಯಸಿ ಚರಿಸುವವರನ್ನು ಹಿಂದಿನಿಂದ ಹೀನೈಸುವರು. ಜಾತಿಯು ಐಕ್ಯವಾಗಿರ ಬೇಕು, ಊರ್ಜಿತವಾಗಿರ ಬೇಕು, ಎಂಬ ವಿಷಯವನ್ನು ಬಿಟ್ಟು ಯಾವುದಾದರೊಂದು ಕಾರಣವನ್ನು ಹಿಡಿದು ಅನಾವಶ್ಯಕ ಬಹಿಷ್ಕಾರವಿಟ್ಟು ಜಾತಿಯನ್ನು ಖಂಡನ ಮಾಡುತ್ತಾ ಬರುವರು. ಈ ವ್ಯವಹಾರದ ಪರಿಣಾಮವೇನೆಂದು ನಾವು ಇಲ್ಲಿ ಹೇಳುವುದು ಅವಶ್ಯವಿಲ್ಲ. ಲೋಕದ ಪ್ರಕೃತ ಸ್ಥಿತಿ ನೋಡಲು ಅಂತರದಲ್ಲಿಯೂ ಬಹಿರಂಗದಲ್ಲಿಯೂ ಜನರು ಏಕರೀತಿ ನಡೆಯಲೆತ್ನಿಸುವ ವರೆಗೆ ಸಮಾಜದ ವರ್ಧನವು ಅಧೋಮುಖವಾಗಿಯೇ ಇರಬೇಕೆಂದು ನಾವು ಎಣಿಸ ಬೇಕಾಗುತ್ತದೆ. [ಎರಡನೆಯ ಭಾಗವು ಲೋಕದಲ್ಲಿ ಪ್ರಕೃತ ಸಾಧಾರಣ ನಡೆಯುವ ಸ್ಥಿತಿಯನ್ನು ನಾವು ಕಂಡಂತೆ ವರ್ಣಿಸುವುದರಿಂದ ಯಾವದಾದರೊಂದು ಜಾತಿಯ ವಿಷಯ ಬರದ್ದಲ್ಲಿ—ಸಕಲ ಸಮಾಜದ ವಿಷಯವಾದ್ದರಿಂದ ಯಾರಾದರೂ ನೋಯಲಿಕ್ಕೆ ಕಾರಣವಿಲ್ಲ.]

ಸತ್ಯವಾದಿ.

ವಿದೇಶ ವೃತ್ತಾಂತ

ಚೀನದ ಶಾಂಘಾಯಿಂದ ರಾಜಕಂಟಕರ ಮೂರು ಯುದ್ಧ ಹಡಗಗಳು ಚೀಫು ಎಂಬಲ್ಲಿಗೆ ಕಳುಹಿಸಲ್ಪಟ್ಟವೆ.

ಹಾರ್ಬಿನ್ ಎಂಬಲ್ಲಿ ಮೊಂಗೋಲಿಯರು ಕಲ್ಗಾರ್ ಎಂಬಲ್ಲಿ ಸ್ವತಂತ್ರಾಧಿಪತ್ಯವನ್ನು ಸಾರಿಸಿ ಹೊಸ ಅಧಿಕಾರಿಗಳನ್ನು ನೇಮಿಸಿದ್ದಾರೆ. ಚೀನಿಯರ ಸೈನ್ಯವೂ ಮೇಲಾಧಿ ಕಾರಿಗಳೂ ಕಲ್ಗಾರ್ ಸ್ಟೇಶನಿನಲ್ಲಿ ರುಷ್ಯರ ಮರೆಹೊಕ್ಕೊಂಡಿರುವರು. ಸಿಯೊನ್‌ಫು ಎಂಬಲ್ಲಿ ಸರಕಾರ ಸೈನ್ಯಕ್ಕೂ ರಾಜಕಂಟಕರಿಗೂ ಯುದ್ಧವೆಸಗಿ ಅನೇಕ ಪಟ್ಟಣಗಳೂ ಸೂರೆಸುಲಿಗೆ ಆದವು. ಹತ್ತು ಸಾವಿರ ಮಾಂಚುಗಳು ಕೊಲ್ಲಲ್ಪಟ್ಟರು. ೧೯ ಇಂಗ್ಲಿಷ್ ಮತ್ತು ೧೩ ಸ್ವೇದಿಶ್ ಮಿಶ್ಯನರಿಗಳೂ ಹೊಂಪುವಿಗೆ ಹಿಂತೆರಳುವರು.

ಸರಕಾರ ಕಡೆಯು ಯುಆನ್‌ಶಿ ಕಾಯಿರವರು ಪೆಕಿಂಗ್ ಅರಮನೆಯಿಂದ ಹೊರಟು ಹೋಗುವಾಗ ಯಾರೋ ಅವರ ಮೇಲೆ ಸಿಡಿಮದ್ದು ಬಿಸಾಡಿದರು. ಇಬ್ಬರು ಪೋಲೀಸಿನವರು ಮೃತಪಟ್ಟರು. ಆದರೆ ಯುಆನ್ ಸಕಾಯಿರವರಿಗೆ ತಾಗಲಿಲ್ಲ. ಸಿಡಿಮದ್ದು ಬಿಸಾಡಿದ ಘಾತುಕನು ಇತರ ನಾಲ್ಕು ಜನರೊಂದಿಗೆ ಚಾ ಹೊಟೇಲಿನಲ್ಲಿ ಕೈದುಮಾಡಲ್ಪಟ್ಟನು. ಸಿಡಿಮದ್ದು ಯುಆನರ ಗಾಡಿಗೆ ೨೦ ಅಡಿ ದೂರದಲ್ಲಿ ಬಿದ್ದದರಿಂದ ಅವರಿಗೆ ಏನೂ ಆಗಲಿಲ್ಲ. ಆದರೆ ಹತ್ತರವಿದ್ದ ಮನೆಗಳೆಲ್ಲಾ ಈ ಸಿಡಿತದಿಂದ ಅದುರಿದವು. ೧೨ ಸೋಲ್ಜರರೂ ೩ ಸಿವಿಲ್ ಹುದ್ದೆದಾರರೂ ಘಾಯಪಟ್ಟಿರುವರು.

ಚೀನ ಸರಕಾರದ ಪ್ರಿನ್ಸರು ಪ್ರಜಾಧಿಪತ್ಯ ಸರಕಾರವನ್ನು ಸ್ಥಾಪಿಸಲು ಒಡಂಬಡಲಿಕ್ಕಿದ್ದಾರೆಂಬದಾಗಿ ಪೆಕಿಂಗಿನಿಂದ ಚೊಂಗ್ ಶಾಯಿರವರಿಗೆ ತಂತೀ ಬಂದಿರುವದು. ಬೇಗನೇ ಉಭಯತರೊಳಗೂ ಒಪ್ಪಂದವಾಗಿ ಸಮಾಧಾನ ನೆಲೆಗೊಳ್ಳಲಿಕ್ಕೆ ಸಾಕು.

ಶೆನ್ಸಿ, ಶಾನಾಗಿ, ಹೊನಾನ್ ಎಂಬ ಪ್ರದೇಶಗಳಲ್ಲಿ ರಾಜಕಂಠಕರು ತುಂಬಿಹೋಗಿದ್ದಾರೆ. ಕಾಯಿದೆ ಕಾನೂನಿಗೆ ವಿರೋಧವಾಗಿ ನಡಿಯುವುದರಲ್ಲಿ ಸರಕಾರ ಕಡೆಯವರಿಗೂ ರಾಜಕಂಟಕರಿಗೂ ಅಲ್ಲಿ ಏನೊಂದೂ ವ್ಯತ್ಯಾಸವಿಲ್ಲ. ಪಟ್ಟಣಗಳೂ ಹಳ್ಳಿಗಳೂ ಹಾಳು ಬಿದ್ದವೆ. ಜನರು ಗುಹೆಗಳಲ್ಲಿಯೂ ಪರ್ವತಗಳಲ್ಲಿಯೂ ಅಡಗಿಕೊಂಡಿರುವರು. ಶಿಯಾನ್‌ಫುವಿನ ಹೆಬ್ಬಾಗಲು ೪ ದಿವಸಗಳಿಂದ ಮುಚ್ಚಲ್ಪಟ್ಟದೆ. ತನ್ಮಧ್ಯೆ ಹತ್ತು ಸಾವಿರ ಮಾಂಚುಗಳು ಕೊಲ್ಲಲ್ಪಟ್ಟರು.

ಮಾರ್ಸೆಲಿಸಿನಿಂದ ಟ್ಯೂನಿಸ್ ಎಂಬಲ್ಲಿಗೆ ಹೋಗುತ್ತಿದ್ದ ಪ್ರಾನ್ಸ್ ದೇಶದ ಕಾರ್ತೇಜ್ ಎಂಬ ಹಡಗವನ್ನು ಇಟಾಲಿಯರು ಹಿಡಿದು ಅದರಲ್ಲಿದ್ದ ಆಕಾಶನಾವೆಯನ್ನು ತಮ್ಮ ವಶ ಮಾಡಿಕೊಂಡಿರುವರು. ಆಕಾಶ ನಾವೆಯು ಟ್ಯೂನಿಸಿನಲ್ಲಿ ಜರಗಲಿಕ್ಕಿರುವ ಆಕಾಶ ನಾವೆಗಳ ಸಭೆಗೆ ಕಳುಹಿಸಲ್ಪಡುವಂಥಾದ್ದಂತೆ. ಆದರೆ ಇಟಾಲಿಯರು ಇದು ತುರ್ಕರಿಗೆ ಕಳುಹಿಸಲ್ಪಡುವಂಥಾದ್ದು ಎಂಬದಾಗಿ ಭಾವಿಸಿ ಹೀಗೆ ಮಾಡಿರುವರು. ತಮ್ಮ ಹಡಗವನ್ನು ಬಿಟ್ಟುಬಿಡಬೇಕೆಂದು ಪ್ರಾನ್ಸ್ ಸರಕಾರದವರು ಇಟಾಲಿಯರನ್ನು ಕೇಳಿರುವರು.

ಕಳದ ಬ್ರಹಸ್ಪತಿವಾರ ಡೆರ್ನದಲ್ಲಿ ಇಟಾಲಿಯರಿಗೂ ತುರ್ಕರಿಗೂ ಕಠಿಣ ಕದನವಾಯಿತು. ಇಟಾಲಿಯರು ೪ ತಾಸುಗಳ ವರೆಗೆ ಹೋರಾಡಿ ಬಲು ಪ್ರಯತ್ನದಿಂದ ತುರ್ಕರ ಕೋಟೆಯನ್ನು ವಶ ಮಾಡಿಕೊಂಡರು. ೭ ತಾಸುಗಳ ವರೆಗೆ ಹೋರಾಡಿದನಂತರ ೩,೦೦೦ ತುರ್ಕರೂ ಅರಬಿಯರೂ ತಮ್ಮವರ ಸತ್ತುಬಿದ್ದ ಹೆಣಗಳನ್ನೂ ಆಯುಧ ಸಾಮಾಗ್ರಿಗಳನ್ನೂ ಬಿಟ್ಟು ಓಡಿಹೋದರು. ಕೆಲವು ಇಟಾಲಿಯರು ಕೊಲ್ಲಲ್ಪಟ್ಟರು.

ಅಂದೇ ಟ್ರೀಪೋಲಿಯಲ್ಲಿಯೂ ಕಠಿಣ ಕದನವಾಯಿತು. ಇಟಾಲಿಯರು ಗರ್ಗಾರೆಸ್ ಎಂಬಲ್ಲಿ ಎರಡು ಕೋಟೆಗಳನ್ನು ಕಟ್ಟುತ್ತಿರುವಾಗ ತುರ್ಕರು ಅವರ ಮೇಲೆ ಬಿದ್ದರು. ಕತ್ತಲೆಯಾಗುವುದರೊಳಗೆ ತುರ್ಕರಿಗೆ ಇಟಾಲಿಯರನ್ನು ಸೋಲಿಸಲಿಕ್ಕಾಗದ್ದರಿಂದ ತಾವಾಗಿಯೇ ಹಿಂತೆ ಹೋದರು. ಈ ಕದನದಲ್ಲಿ ಇಟಾಲಿಯರಲ್ಲಿ ೫೦ ಮಂದಿ ಮಡಿದರು. ಆದರೆ ತುರ್ಕರ ಕಡೆಯಲ್ಲಿ ಅತಿರೇಕ ನಷ್ಟವಾಗಿಯದೆ. ನಂತರ ಇಟಾಲಿಯರ ಯುದ್ಧಹಡಗವು ಜನಾರ ಎಂಬ ತುರ್ಕರ ಕೋಟೆಗೆ ತೋಪು ಹಾರಿಸ ಪ್ರಾರಂಭಿಸಿಯದೆ.

ಕಿಚಿನರ್ ಪ್ರಭುಗಳೂ, ಇಟಾಲಿಯರ ಒಂದು ಹಡಗವೂ, ಪ್ರೆಂಚರ ಒಂದು ಹಡಗವೂ ಜೋರ್ಜ ಸಾರ್ವಭೌಮರವರನ್ನು ಎದುರ್ಗೊಳ್ಳಲು ಮಾಲ್ಟಕ್ಕೆ ಬಂದಿರುವದು.

ತಾ. ೧೭ರಲ್ಲು ಜೋರ್ಜ ಸಾರ್ವಭೌಮರವರ ಹಡಗವು ಸೌಡಾನ್ ಬಂದರಕ್ಕೆ ತಲಪಿತು. ಕಿಚನರ್ ಪ್ರಭುಗಳು ಸಾರ್ವಭೌಮರವರನ್ನು ಸ್ವಾಗತ ಮಾಡಿಕೊಂಡರು. ಹಡಗದಿಂದಿಳಿದ ಕೂಡಲೇ ಅಲ್ಲಿಯ ದೇಶೀಯ ರಾಜರುಗಳೂ ಜನರೂ ಚಕ್ರವರ್ತಿಯವರಿಗೆ ಪಾದಾತರಾದರು. ಅಲ್ಲಿಂದ ಚಕ್ರವರ್ತಿಯವರು ಅಗ್ಗಾಡಿಯಲ್ಲಿ ಕೂತು ಸಿನ್ಕಾಟ್ ಎಂಬಲ್ಲಿಗೆ ಹೋಗಿ ೩,೫೦೦ ಒಂಟೆಗಳ ಸೈನ್ಯಗಳ ಕವಾತನ್ನು ನೋಡಿ ಮನೋಲ್ಲಾಸ ಪಟ್ಟರು. ಸಾಯಂಕಾಲ ಹಡಗಕ್ಕೆ ಹಿಂತಿರುಗಿ ಪ್ರಯಾಣವನ್ನು ಮುಂದರಿಸಿದರು.

ಜಪಾನಿನ ಒಸ್ಕಾರ ಎಂಬಲ್ಲಿ ಮಹಾ ಬೆಂಕಿ ಉಂಟಾಗಿ ೫,೨೬೮ ಮನೆಗಳು ಸುಟ್ಟುಹೋದವು. ಮೂವತ್ತು ಸಾವಿರ ಜನರು ಮನೆಮಾರು ಇಲ್ಲದೆ ನಿರ್ಗತಿಕರಾಗಿರುವರು. ಈ ಬೆಂಕಿಯಿಂದ ಉಂಟಾದ ನಷ್ಟ ಮೂರು ಮಿಲಿಯ ಪವನುಗಳು.

ಇಟಾಲಿಯರು ಹೊಡೆಡ್ಯದಿಂದ ಏಡೆನಿಗೆ ಹೋಗುವ ಬ್ರಿಟಿಷರ ಅಫ್ರಿಕ ಎಂಬ ನಾವೆಯನ್ನು ಪೆರಿಮ್ ಎಂಬಲ್ಲಿ ನಿಲ್ಲಿಸಿ ತನಖಿ ನಡಿಸಿ ಅದರಲ್ಲಿದ್ದ ೧೨ ತುರ್ಕಿ ಹುದ್ದೆದಾರರನ್ನು ಶೆರೆಹಿಡಿದರು.

ತಾ. ೧೮ರಲ್ಲು ೪೦೦ ತುರ್ಕರು ಬೆಂಗಾಜಿಯಲ್ಲಿ ಇಟಾಲಿಯರ ಕೋಟೆಯ ಮೇಲೆ ಬಿದ್ದರು. ಆದರೆ ಹಿಮ್ಮೆಟ್ಟಲ್ಪಟ್ಟರು. ತುರ್ಕರಲ್ಲಿ ೫೯ ಮಂದಿ ಕೊಲ್ಲಲ್ಪಟ್ಟರು.

ಇಟಾಲಿಯರು ಪ್ರೆಂಚರ 'ಮನೊಬ' ಎಂಬ ಮತ್ತೊಂದು ಹಡಗವನ್ನು ಹಿಡಿದು ಅದರಲ್ಲಿದ್ದ ೫೯ ತುರ್ಕರನ್ನು ಶೆರೆಹಿಡಿದರು. ಹಡಗದಲ್ಲಿದ್ದ ತುರ್ಕರನ್ನು ಇಟಾಲಿಯರಿಗೆ ಒಪ್ಪಿಸಿಕೊಡದ್ದರಿಂದ ಅವರು ಹಡಗವನ್ನು ಹಿಡಿದರೆಂಬದಾಗಿ ಹಡಗದ ತಾಂಡೇಲನು ತಿಳಿಸಿರುವನು. ಪ್ರೆಂಚರ ಹಡಗವನ್ನು ಹಿಡಿದದ್ದರಿಂದ ಪ್ರೆಂಚ ಸರಕಾರದವರು ಇಟಾಲಿಯರ ಮೇಲೆ ಶಿಟ್ಟುಗೊಂಡಿರುವರು. ಪ್ರೆಂಚ ಸರಕಾರದಿಂದ ತಮ್ಮ ಹಡಗದ ವಿಷಯವಾಗಿ ತೃಪ್ತಿಕರವಾದ ಉತ್ತರ ಸಿಕ್ಕಿದನಂತರ ಹಡಗಗಳನ್ನು ಬಿಡ ಬೇಕೆಂಬದಾಗಿ ಇಟಾಲಿ ಸರಕಾರದವರು ಹುಕುಂಮಾಡಿದ್ದಾರೆ. ಪ್ರೆಂಚರು ಹಡಗವನ್ನು ಮಾತ್ರವಲ್ಲ; ಹಡಗದಲ್ಲಿದ್ದ ತುರ್ಕ ಪ್ರಯಾಣಿಕರನ್ನೂ ಬಿಡ ಬೇಕೆಂಬದಾಗಿ ಕೇಳಿಕೊಂಡಿರುವರು. ಆದರೆ ಇಟಾಲಿ ಸರ್ಕಾರದವರು ಇದಕ್ಕೆ ಒಡಂಬಡುವದಿಲ್ಲ. ತಾವು ಹಡಗವನ್ನು ಹಿಡಿದ ವ್ಯಾಜವನ್ನು ಹೇಗಿನ ಪಂಚಾಯತಿ ಕೋರ್ಟಿನ ಮುಂದಿಡುವದು ಒಳ್ಳೇದೆಂಬದಾಗಿ ಇಟಾಲಿಯರು ಪ್ರೆಂಚರಿಗೆ ತಿಳಿಸಿದ್ದಾರೆ.

ಕಳದ ಶನಿವಾರ ಇಟಾಲಿಯರು ಗೆರ್ಗಾರೆಸ್ ಕೋಟೆಯನ್ನು ಪುನಃ ವಶಮಾಡಿಕೊಂಡರು. ಕೋಟೆಯ ಐದು ಮೈಲು ದೂರದ ವರೆಗೆ ತುರ್ಕರ ಸುಳುವಾದರೂ ಕಾಣಲಿಲ್ಲ. ಈ ಕದನದಲ್ಲಿ ತುರ್ಕರಲಿ ೧೫೦ ಮಂದಿ ಕೊಲ್ಲಲ್ಪಟ್ಟರೆಂಬದಾಗಿ ಅಂದಾಜಾಗಿಯದೆ.

ಇಟಾಲಿಯರ ಒಂದು ಯುದ್ಧಹಡಗವು ಐಗುಪ್ತ ಸರಹದ್ದಿಗೆ ಸಮೀಪ ಇರುವ ಖನ್ಯೂನಸ್ ಎಂಬ ಕೋಟೆಗೆ ತೋಪು ಹಾರಿಸಲು ಪ್ರಾರಂಭಿಸಿಯದೆಂಬದಾಗಿ ವಾರ್ತೆ ಬಂದದೆ.

ರುಷ್ಯ, ಪ್ರಾನ್ಸ್ ಮತ್ತು ಗ್ರೇಟ್ ಬ್ರಿಟಾನ್ ಸರ್ಕಾರಗಳಿಗೆ ಜರ್ಮನಿಯರ ಕೈಲ್ ಎಂಬ ಸ್ಥಳದ ನಕ್ಷೆ ಇತ್ಯಾದಿಗಳನ್ನು ಒದಗಿಸಿಕೊಡಲು ಪ್ರಯತ್ನ ಪಟ್ಟ ಜರ್ಮನಿಯ ಹೊಲ್ಸ್ಟ ಎಂಬ ಗೂಢಾಚಾರ್ಯನಿಗೆ ನಾಲ್ಕು ವರ್ಷಗಳ ಸಜಾ ವಿಧಿಸಲ್ಪಟ್ಟಿತು.

ಇಂಗ್ಲಾಂಡಿನ ತೇಮ್ಸ್ ಮತ್ತು ಟ್ರೆಂಟ್ ಎಂಬ ನದಿಗಳಲ್ಲಿ ನೆರೆ ಬಂದಿರುವದು.

ಕಳೆದ ವಾರ ಇಂಗ್ಲಾಂಡಿನಲ್ಲಿಯೂ ಸ್ಕೊತಾಲದಲ್ಲಿಯೂ ಭಯಂಕರವಾದ ಹಿಮದ ತುಪಾನು ಎದ್ದು ಬಹಳ ನಷ್ಟಕ್ಕೆ ಕಾರಣವಾಯಿತು. ಅಲ್ಲಲ್ಲಿ ಅಗ್ಗಾಡಿಗಳು ನಡಿಯಲಿಲ್ಲ, ಕೆಲವು ಹಡಗಗಳು ಮುಣುಗಿ ಹೋಗಿ ಪ್ರಾಣನಷ್ಟವೂ ಉಂಟಾಯಿತು.

ಐರ್ಲಾಂಡಿನ ಹೋಮ್ ರೂಲ್ ಬಿಲ್ ಎಂಬ ಸ್ವತಂತ್ರಾಡಳಿತೆಯ ಮಸೂದೆಯು ಜ್ಯಾರಿಗೆ ಬಾರದಂತೆ ಅಲ್‌ಸ್ಟರಿನ ಯುನಿಯನಿಷ್ಟ್ ಪಕ್ಷದವರು ಬಹಳ ಸಾಧನೆ ಮಾಡುತ್ತಿದ್ದಾರೆ. ಈ ಮಸೂದೆಯು ಜ್ಯಾರಿಗೆ ಬಂದರೆ ತಮಗೂ ಸ್ವತಂತ್ರಾಡಳಿತೆಯನ್ನು ಮಾಡಿಕೊಳ್ಳುವೆವೆಂದು ಹೆದರಿಸುತ್ತಾರೆ. ಈ ಮಸೂದೆಯ ಸಂಬಂಧ ಭಾಷಣಗಳನ್ನು ಕೊಡುವ ಲಿಬರಲ್ ಪಕ್ಷದ ರೆಡ್ಮಂಡ್ ಮತ್ತು ಚರ್ಚಿಲ್ ಎಂಬ ಮುಂದಾಳುಗಳು ಬೆಲ್ಫಾಷ್ಟ್ ಎಂಬಲ್ಲಿ ಸಾರ್ವಜನಿಕ ಸಭೆ ಕೂಡಿಸಿ ಭಾಷಣ ಮಾಡಬೇಕೆಂದಿದ್ದಲ್ಲಿ ಯನಿಯನಿಷ್ಟ್ ಪಕ್ಷದವರು ಅದನ್ನು ನಿಲ್ಲಿಸ ಪ್ರಯತ್ನಪಡುತ್ತಿದ್ದಾರೆ. ಇಂಥಾ ಸಭೆಯು ಕೂಡಿ ಬಂದರೆ ಮಹಾ ತೊಂದರೆಗಳುಂಟಾಗಿ ರಕ್ತ ಚೆಲ್ಲುವಿಕೆ ಇತ್ಯಾದಿಗಳಾಗುವವೆಂದು ಅವರು ಹೇಳುತ್ತಿದ್ದಾರೆ. ಬೆಲ್ಫಾಷ್ಟಿನ ಪುರಾಧಿಕಾರಿಯು ಬೆಲ್ಫಸ್ಟ ಪಟ್ಟಣವು ಕೋವಿಮದ್ದು ತುಂಬಿಸಿದ ಉಗ್ರಾಣದಂತಿದೆ. ಇಂಥಾ ಸಭೆ ಕೂಡಿದರೆ ಬೆಂಕಿ ಕಡ್ಡಿಯಿಂದ ಬೆಂಕಿ ಕೊಟ್ಟ ಹಾಗಾದೀತು ಎಂಬದಾಗಿ ಹೇಳುತ್ತಾರೆ. ಆದರೆ ಲಿಬರಲ್ ಪಕ್ಷದವರು ಆಗುವದು ಆಗಲಿ, ಸಭೆ ಕೂಡಲೇ ಬೇಕೆಂತ ಹಟ ಹಿಡಿದಿದ್ದಾರೆ. ಫಲಿತಾಂಶವು ನೋಡಲಿಕ್ಕಿದೆ.

ಚಕ್ರವರ್ತಿಯವರು ಸೂವೇಜಿಗೆ ತಲಪಿದರು. ಕಿಚನರ್ ಪ್ರಭುಗಳು ಸೌಡಾನಿನಿಂದ ಚಕ್ರವರ್ತಿಯವರೊಡನೆ ಪೊರ್ಟು ಸೆಡ್ಡ್ ವರೆಗೆ ಹೋಗಿದ್ದರು. ಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಪೊರ್ಟುಸೆಡ್ಡಿನಲ್ಲಿ ಹಡಗದಿಂದಿಳಿದು ಸುವೇಜ್ ಭೂಸಂಧಿನ ಹುದ್ದೆದಾರರನ್ನು ನೋಡಿಕೊಂಡು ಪುನಃ ಹಡಗಹತ್ತಿ ಪಯಣ ಮುಂದರಿಸಿದರು.

ಚೀನದಲ್ಲಿಯ ಗೊಂದಲದಿಂದ ಅಲ್ಲಿ ಬಹಳ ಬರಗಾಲ ಬಿದ್ದದೆ. ಶಾಂಘಾಯಿಯಲ್ಲಿ ೨॥ ಮಿಲ್ಲಿಯ ಜನರು ಊಟಕಿಲ್ಲದೆ ನಿರ್ಗತಿಕರಾಗಿರುವರೆಂದೂ ಸಹಾಯವು ಅಗತ್ಯವೆಂದೂ ಪೆಕಿಂಗಿನಲ್ಲಿರುವ ವಿದೇಶಿ ಮಿಶ್ಯನ್ ಬೋರ್ಡಿನವರಿಗೆ ತಂತೀ ಬಂದಿರುವದು.

ದಕ್ಷಿಣ ಆಫ್ರೀಕದ ಭಾರತೀಯದಲ್ಲಿ ಅಗ್ರಗಣ್ಯನಾಗಿರುವ ಮೆ॥ ಗಂಧಿಯವರ ವಿಷಯವಾಗಿ ಜೊಹನ್ನೆಸ್‌ಬರ್ಗಿನ ಮೆ॥ ಕೆಲ್ಲರ್‌ಮಾಚರ್ ಎಂಬವರು ಈ ರೀತಿ ಬರದಿರುವರು:—ಮೆ॥ ಗಂಧಿಯವರು ಮಹಾ ಸ್ವಾರ್ಥತ್ಯಾಗಿ, ವಿನಯವಂತರು, ತಾನು ಗಳಿಸಿದ್ದನ್ನೆಲ್ಲಾ ಕಷ್ಟಪಡುತ್ತಿರುವ ಭಾರತೇಯರಿಗಾಗಿ ಪ್ರಯೋಗಿಸಿರುವರು. ಡರ್ಬಾತಿನ ಸಮೀಪವಿದ್ದ ತನ್ನ ನೂರು ಎಕ್ರೆ ಸ್ಥಳವನ್ನು ತನ್ನನ್ನು ತನ್ನ ಸಹೋದರರಾದ ಇತರ ಭಾರತೇಯರನ್ನೂ ಅಮಾನುಷರೀತಿಯಿಂದ ನಡಿಸಿದ ವಸಾಹತಿಗಳ ಒಂದು ಸಂಘಕ್ಕೆ ಬಿಟ್ಟುಕೊಟ್ಟಿರುವರು. ಕೆಟ್ಟದ್ದಕ್ಕೆ ಬದಲಾಗಿ ಒಳ್ಳೆದನ್ನು ಮಾಡುವದಂದರೆ ಇದಲ್ಲವೇ? ಗಂಧಿಯವರ ಕೂಡೆ ಒಂದೇ ಒಂದು ಚಿಕ್ಕಾಸು ಕೂಡಾ ಇಲ್ಲ. ಜೊಹನ್ನೆಸ್ ಬರ್ಗಿನ ಸಮೀಪ ಒಂದು ಸ್ಥಳದಲ್ಲಿದ್ದುಕೊಂಡು ಋಷಿಗಳಂತೆ ನಿಷ್ಕಾಪಟ್ಯರಾಗಿ ಜೀವನ ಮಾಡುವರು. ತನ್ನ ಸ್ವಹಸ್ತದಿಂದಲೆ ಎಲ್ಲಾ ಕೆಲಸಗಳನ್ನು ಮಾಡುವರು. ಇವರಿಗೆ ೨೫ ಭಾರತೇಯ ವಿದ್ಯಾರ್ಥಿಗಳಿರುವ ಒಂದು ಶಾಲೆ ಇದೆ. ಹತ್ತು ಜನರ ಕೆಲಸವನ್ನು ಇವರೊಬ್ಬರೇ ಮಾಡುವರು. ಅಂದರೆ ತಾನೇ ಕೃಷಿ ಕೆಲಸ, ಉಪಾಧ್ಯಾಯನ ವೃತ್ತಿ, ಪೊಚ್ಚೆಗಾರನ ಕೆಲಸ ಇತ್ಯಾದಿಗಳನ್ನೆಲ್ಲಾ ಮಾಡುವರಲ್ಲದೆ ರಾತ್ರಿಯೆಲ್ಲಾ ಅಸ್ವಸ್ಥದಿಂದ ನರಳುತ್ತಿರುವವರ ಬಳಿಗೆ ಹೋಗಿ ಅವರಿಗೆ ಶೈತೋಪಚಾರ ಮಾಡುವ ಕೆಲಸದಲ್ಲಿ ನಿರತರಾಗಿರುವರು. ಬೆಳಿಗ್ಯೆ ಪುನಃ ಏನೊಂದೂ ಆಯಾಸವಿಲ್ಲದೆ ಮುಂಜಾನೆಯಿಂದ ಸಾಯಂಕಾಲದ ವರೆಗೆ ಹಸನ್ಮುಖರಾಗಿ ಕಾಯ ಕಷ್ಟ ಮಾಡುವರು ಎಂಬಿತ್ಯಾದಿ ಇವರ ಗುಣ ಗಣಗಳನ್ನು ಕುರಿತು ಹೊಗಳಿ ಪಶ್ಚಿಮದ ಟೋಲ್ ಸ್ಟಾಯಿ ಎಂಬದಾಗಿ ಕರೆಯಲು ಇವರೇ ಯೋಗ್ಯರು ಎಂದು ಹೇಳಿರುವರು.

ಉತ್ತರ ಹಿಂದುಸ್ಥಾನ.

ಇದೇ ತಿಂಗಳ ೧೩ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ಕಳದ ವಾರಕ್ಕಿಂತಲೂ ೧,೭೯೬ ಪ್ಲೇಗ್ ಮರಣಗಳು ಹೆಚ್ಚಾದವು. ಮುಂಬಾಯಿಯಲ್ಲಿ ೧೮೪ ಮತ್ತು ಬಂಗಾಳದಲ್ಲಿ ೫೦೩ ಹೆಚ್ಚಿಗೆ ಮರಣಗಳಾಯಿತು. ಉಳಿದ ಸಂಸ್ಥಾನಗಳ ಮರಣ ಸಂಖ್ಯೆ ಎಷ್ಟಂದರೆ:—ಮದ್ರಾಸ್ ೪೯೦; ಸಂಯುಕ್ತ ಸಂಸ್ಥಾನ ೩,೨೮೭; ಪಂಜಾಬು ೧೭೦; ಬರ್ಮ ೬೦; ಮಧ್ಯ ಸಂಸ್ಥಾನ ೬೩೬; ಮೈಸೂರು ೩೯೪; ಹೈದರಾಬಾದ್ ೨೨೩೩: ಮಧ್ಯ ಹಿಂದೂಸ್ಥಾನ ೫೭೨.

ಬರೋಡೆಯ ಪ್ರಿನ್ಸೆಸ್ ಇಂದಿರೆಯ ಮತ್ತು ಗ್ವಾಲಿಯೋರ್ ಮಹಾರಾಜರವರ ವಿವಾಹವು ಹಿಂದಕ್ಕಿಡಲಾಯಿತು.

ಗುಜರಾತ್, ಕತ್ಯಾವಾರ್, ಮೊದಲಾದ ಸ್ಥಳಗಳಲ್ಲಿ ಮಳೆಯಾಗದ್ದರಿಂದ ಬರಬಿದ್ದದೆ.

ಬಂಕಿಪುರ ಎಂಬ ಪಟ್ಟಣವು ಹೊಸ ಬಿಹಾರ್ ಆಧಿಪತ್ಯದ ಮುಖ್ಯ ಪಟ್ಟಣವಾಗುವುದು. ಇದಕ್ಕಾಗಿ ೧೯೩೬ ಎಕ್ರೆ ಸ್ಥಳವನ್ನು ಸರಕಾರದವರು ಪಡಕೊಂಡಿರುವರು.

ಬರ್ಮವನ್ನು ಹಿಂದೂಸ್ಥಾನದಿಂದ ಪ್ರತ್ಯೇಕಿಸುವರೆಂಬದಾಗಿ 'ಇಂಗ್ಲಿಷ್ ಮೇನ್' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆದರೆ ಈ ಮಾತಿಗೆ ಆಧಾರವಿಲ್ಲವೆಂಬದಾಗಿ ತಿಳಿದು ಬರುತ್ತದೆ.

ಜೋರ್ಜಚಕ್ರವರ್ತಿಯವರು ನೇಪಾಲಿನ ಪ್ರಧಾನ ಮಂತ್ರಿಯವರಗೆ 'ರೋಯೆಲ್ ವಿಕ್ಟೋರಿಯನ್ ಓರ್ಡರ್' ಎಂಬ ಬಿರುದನ್ನೂ ಅಲ್ಲಿಯ ಮುಖ್ಯ ಸೇನಾಧಿಪತಿಗೆ ಕೆ. ಸಿ. ವಿ. ಒ. ಎಂಬ ಬಿರುದನ್ನೂ ದಯಪಾಲಿಸಿರುವರೆಂದು ಪೊಯನೀಯರ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಶ್ರೇಷ್ಠನ್ಯಾಯವಿಧಾಯಕ ಸಭೆಯ ಮೆಂಬರರಾದ ಸರ್‌ಗ್ಯಾ ಪ್ಲೀಟ್‌ವುಡ್ ವಿಲ್ಸನರು ಹಿಂದೂಸ್ಥಾನದ ಸರಕಾರಕ್ಕೆ ಕಳದ ವರ್ಷದಲ್ಲಿ ಆದ ಆದಾಯ ವೆಚ್ಚಗಳ ವಿವರವನ್ನು ಮಾರ್ಚಿ ೭ನೇ ತಾರೀಕಿನಲ್ಲಿ ಜರಗುವ ಶ್ರೇಷ್ಠನ್ಯಾಯವಿಧಾಯಕ ಸಭೆಯ ಮುಂದಿಡುವರು. ತಾ. ೨೨ರಿಂದ ೨೫ರ ವರೆಗೆ ಬಜೆಟ್ ಮಿಟಿಂಗ್ ನಡೆಯುವದು.

ಮಿರಾಪುರ ಎಂಬಲ್ಲಿ ಕೆಲವು ಹುಡುಗಿಯರು ಕಾಡಿನಲ್ಲಿ ಕಟ್ಟಿಗೆ ಕೂಡಿಸುತ್ತಿರುವಾಗ ಒಬ್ಬ ಮನುಷ್ಯನು ಒಬ್ಬ ಹುಡಿಗಿಯನ್ನು ಹಿಡಿದು ತಾನು ಅಗಿಯುತ್ತಿದ್ದ ಕುಳಿಗೆ ಹಾಕಿ "ಜೈ ಜೈ ಮಹಾವೀರ, ಜೈ ಜೈ ಮಹಾಕಾಳಿ, ಜೈ ಜೈ ವಿಂದ್ಯಾಚಲ, ನಿನಗೆ ನಾನು ಯಜ್ಞಮಾಡುತ್ತೇನೆ" ಎಂದು ಹೇಳಿ ಎರಡು ಕಲ್ಲುಗಳನ್ನು ಎತ್ತಿ ಒಂದನ್ನು ಹುಡುಗಿಯ ತಲೆಗೂ ಮತ್ತೊಂದನ್ನು ಆಕೆಯ ಬೆನ್ನಿಗೂ ಬಿಸಾಡಿ ಮಣ್ಣುಮುಚ್ಚಿದನು. ಈ ವಾರ್ತೆ ಆಕೆಯ ಹೆತ್ತವರಿಗೆ ತಲಪುತ್ತಲೇ ಓಡಿ ಬಂದರು. ಈತನು ಕುಣಿಗೆ ಮಣ್ಣು ಮುಚ್ಚಿ ಕಾಲಿನಿಂದ ಒತ್ತುತ್ತಿದ್ದನು. ಇವರನ್ನು ಕಂಡಾಕ್ಷಣ ಆತನು ಕೈಯಲ್ಲಿ ಒಂದು ಕೋಲು ಹಿಡಕೊಂಡು ಮುಂದಕ್ಕೆ ಬಂದು ಬಹಳ ಘಟ್ಟಿಸ್ವರದಿಂದ ಪುನಃ "ಜೈ ಜೈ ಮಹಾಕಾಳಿ, ಜೈ ಜೈ ಮಹಾವೀರ, ಜೈ ಜೈ ವಿಂದ್ಯಾಚಲಾ ಎಂದು ಕೂಗುತ್ತಾ' ಇದು ನನ್ನ ಪರಿಶುದ್ಧ ಸ್ಥಳ,

ಸಮೀಪ ಬರಕೂಡದು" ಎಂಬದಾಗಿ ಅವರನ್ನು ಹೆದರಿಸಿದನು. ಆದರೆ ಪೋಲೀಸಿನವರು ಆತನನ್ನು ಕೈದುಮಾಡಿದರು. ಪೋಲೀಸಿನವರು ಕೈದುಮಾಡಿದಾಕ್ಷಣ ಹುಚ್ಚನಂತೆ ನಟಿಸಿದನು. ವೈದ್ಯರು ಪರೀಕ್ಷಿಸಿ ಹುಚ್ಚು ಹಿಡಿಯಲಿಲ್ಲ ಎಂಬದಾಗಿ ಅಭಿಪ್ರಾಯ ಪಟ್ಟದ್ದರಿಂದ ಜಡ್ಜರು ಅವನಿಗೆ ದೇಹಾಂತ ಶಿಕ್ಷೆ ವಿಧಿಸಿದರು. ಹ್ಯಾಕೋರ್ಟಿಗೆ ಅಫೀಲ್ ಮಾಡಿಕೊಂಡಲ್ಲಿಯೂ ದೇಹಾಂತ ಶಿಕ್ಷೆಯೇ ಖಾಯಂ ಆಯಿತು.

ರುಷ್ಯಾದೇಶದ ವನ್ನಕ್ರಾಮರ್ ಎಂಬ ಜಟ್ಟಿಯು ಈಗ ಅಲ್ಲಾಹಾಬಾದಿನಲ್ಲಿ ತನ್ನ ಕಸರತ್ತುಗಳನ್ನು ತೋರಿಸುತ್ತಿರುವನು. ಈತನು ಯೂರೋಪು ಖಂಡದಲ್ಲೆಲ್ಲಾ ಪ್ರಖ್ಯಾತಿ ಪಟ್ಟ ಜಟ್ಟಿಯಾಗಿರುತ್ತಾನೆ. ಈತನಿಗೂ ಲಾಹೋರಿನ ಪಿರ್ ಭಾಕ್ಷ ಎಂಬ ಜಟ್ಟಿಗೂ ಸದ್ಯಾ ಪಂದ್ಯಾಟವು ನಡೆಯಲಿಕ್ಕಿದೆ.

ಬಿಕಾನೀರಿನ ಮಹಾರಾಜರು ಸ್ಥಾಪಿಸಲಿಕ್ಕಿರುವ ಹಿಂದೂ ಯುನಿವರ್ಸಿಟಿಗೆ ೪,೩೯,೦೦೦ ರೂಪಾಯಿ ವಂತಿಗೆ ಕೊಟ್ಟಿರುವರು.

ಗ್ವಾಲಿಯೋರ್ ಮಹಾರಾಜರು ಚಕ್ರವರ್ತಿಯವರ ಪ್ರತಿಮೆಯನ್ನೂ ಬಿಕಾನೀರಿನ ಮಹಾರಾಜರು ಚಕ್ರವರ್ತಿನಿಯವರ ಪ್ರತಿಮೆಯನ್ನೂ ಡಿಲ್ಲೀ ಪಟ್ಟಣದಲ್ಲಿ ಮಾಡಿಸಿಡುವರು.

ದಕ್ಷಿಣಾ ಹಿಂದುಸ್ಥಾನ.

ಮದ್ರಾಸ್ ಹ್ಯಾಕೋರ್ಟಿಗೆ ಎರಡು ವರ್ಷಗಳ ಅವಧಿಗೆ ಇಬ್ಬರು ಹೆಚ್ಚಿಗೆ ಜಡ್ಜರುಗಳು ಮೊಕರೂರಾದರು. ಇವರಲ್ಲಿ ಒಬ್ಬರು—ಮದ್ರಾಸಿನ ಸ್ಮಾಲ್‌ಕೋಸೆಸ್ ಕೋರ್ಟಿನ ಚೀಫ್ ಜಡ್ಜರಾಗಿದ್ದ ಮೆ॥ ಬೇಕ್ವೆಲ್ಲರು. ಮತ್ತೊಬ್ಬರು--ಗಂಜಾಮ್ ಜಿಲ್ಲೆಯ ಶೆಶ್ಶನ್ ಜಡ್ಜರಾಗಿದ್ದ ದಿವಾನ್ ಬಹದ್ದೂರ್ ಟಿ. ಸದಾಶಿವ ಐಯ್ಯರ್ ಬಿ. ಎ. ಎಮ್. ಎಲ್. ರವರು.

ಹಿಂದೂಸ್ಥಾನದ ಮುಖ್ಯ ಸೇನಾಧಿಪತಿಯಾದ ಒ. ಮೂರು ಕ್ರೇಯರವರು ಮದ್ರಾಸಿಗೆ ಬರುವರು. ಪೆಬ್ರವರಿ ೩ನೇ ತಾರೀಕಿಗೆ ಮದ್ರಾಸಿನಿಂದ ಸಿಕಂದರಾಬಾದ್ ಕುನ್ನೂರು ಮೊದಲಾದ ಸ್ಥಳಗಳನ್ನು ಸಂದರ್ಶಿಸುವರು.

ಮದ್ರಾಸ್ ಸಂಸ್ಥಾನದಲ್ಲಿ ೧೮೯೧-೯೬ನೇ ವರ್ಷದ ವರೆಗೆ ಗವರ್ನರರಾಗಿದ್ದ ವೆನ್‌ಲಕ್ ಪ್ರಭುಗಳು ಪರವನ್ನೈದಿದರು. ಇವರೇ ಹೊಸ ಬಂಗಾಳಾಧಿಪತ್ಯದ ಗವರ್ನರರಾಗಿ ನೇಮಿಸಲ್ಪಡುವರೆಂದು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು.

ಮದ್ರಾಸ್ ಸಂಸ್ಥಾನದ ಗವರ್ನರರಾಗಿರುವ ಕಾರ್ಮಿಖಯೇಲ್ ಪ್ರಭುಗಳು ಹೊಸ ಸಂಯುಕ್ತ ಬಂಗಾಳಾಧಿಪತ್ಯದ ಗವರ್ನರರಾಗಿ ನೇಮಿಸಲ್ಪಡುವರೆಂಬದಾಗಿ ಕಲ್ಕತ್ತೆಯಿಂದ ತಂತೀ ಬಂದಿರುವುದು. ಕಾರ್ಮಿಖಯೇಲ್ ಪ್ರಭುಗಳು ಮದ್ರಾಸ್ ಸಂಸ್ಥಾನದ ಗವರ್ನರರಾಗಿ ಹೆಚ್ಚು ಸಮಯಗಳು ಕಳೆಯಲಿಲ್ಲವಷ್ಟೆ. ಆದರೆ ಆಳಿಕೆಯ ಪ್ರಾರಂಭದಲ್ಲಿಯೇ ಇವರು ತೋರಿಸಿದ ಸಹಾನುತಾಪ ಮೊದಲಾದ ಸುಗುಣಗಳಿಂದ ಜನರ ಪ್ರೀತಿಯನ್ನು ಗಳಿಸಿಕೊಂಡಿರುವದರಿಂದ ಮದ್ರಾಸ್ ಸಂಸ್ಥಾನನ ಜನರು ಇವರು ಬಂಗಾಳಾಧಿಪತ್ಯದ ಗವರ್ನರರಾಗಿ ನೇಮಿಸಲ್ಪಡುತ್ತಾರೆಂಬ ವಾರ್ತೆಯಿಂದ ಬಹಳ ವಿಷಾದ ಪಡುತ್ತಿದ್ದಾರೆ ಮಾತ್ರವಲ್ಲದೆ ಈ ವಿಷಯ ಚಕ್ರವರ್ತಿಯವರಿಗೂ ಸ್ಟೇಟ್ ಸೆಕ್ರಟರಿಯರಿಗೂ ವಿಜ್ಞಾಪನೆ ಮಾಡಿಕೊಳ್ಳಲು ಮದ್ರಾಸಿನಲ್ಲಿ ಸಾರ್ವಜನಿಕ ಸಭೆಗಳು ಕೂಡುವವು.

ಮೈಸೂರು ಸರಕಾರದವರು ಆಯಾ ಗ್ರಾಮಗಳಲ್ಲಿ ೨೮ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಹುಕುಂಕೊಟ್ಟಿರುವರು. ಈ ಶಾಲೆಗಳಿಗೆ ತಿಂಗಳೊಂದಕ್ಕೆ ೪೧೬ ರೂಪಾಯಿ ಅಂದರೆ ವರ್ಷಕ್ಕೆ ೪೯೯೨ ರೂಪಾಯಿ ಖರ್ಚು ತಗಲುವದು. ಸರಕಾರದವರು ಈ ಖರ್ಚಿಗಾಗಿ ೫೦೦೦ ರೂಪಾಯಿ ಮಂಜೂರು ಮಾಡಿರುತ್ತಾರೆ.

ಕೋಲಾರ್ ಚಿನ್ನದ ಗಣಿಯಲ್ಲಿ ಕೆಲಸಗಾರರು ಮುಷ್ಕರ ಹಿಡಿದು ಲೂಟಿಮಾಡಲು ಪ್ರಾರಂಭಿಸಿದ್ದರಿಂದ ಬೆಂಗಳೂರಿಂದ ೧೦೦ ರಿಸರ್ವ್‌ಪೋಲೀಸಿನವರು ಅಲ್ಲಿಗೆ ಕಳುಹಿಸಲ್ಪಟ್ಟಿರುವರು.

ಕಲ್ಕತ್ತೆಗೆ ಹೋಗಿದ್ದ ಮೈಸೂರಿನ ಯುವರಾಜರು ತಾ. ೨೩ನೇ ಬೆಳಿಗ್ಯೆ ಬೆಂಗಳೂರಿಗೆ ಬಂದು ತಲಪಿದರು.

ದಕ್ಷಿಣಾ ಕನ್ನಡ

ಪ್ರಕಟಣೆ.

ಸೌತ್ ಇಂಡಿಯನ್ ರೈಲ್ವೇ ಕಂಪೆನಿ ಲಿಮಿಟೆಡ್.

ಉಡ್ಪಿಯ ಪ್ರರ್ಯಾಯೋತ್ಸವ.

ಉಡ್ಪಿಯಲ್ಲಿ ಜರಗಲಿಕ್ಕಿರುವ ಪರ್ಯಾಯಉತ್ಸವಕ್ಕೆ ೨ನೇ ಮತ್ತು ೩ನೇ ಕ್ಲಾಸ್ ರೈಲ್ವೇ ರಿಟರ್ನ್ ಟಿಕೇಟುಗಳು ಈ ಕೆಳಗಿನ ದರದಲ್ಲಿ ಮಂಗಳೂರಿಗೆ ಕೊಡಲ್ಪಡುವವು:—೧೦೦--೨೦೦ ಮೈಲುಗಳೊಳಗೆ ದೂರ ಇರುವ ಸ್ಟೇಶನಿನಿಂದ ೨ನೇ ೩ನೇ ಕ್ಲಾಸು ರಿಟರ್ನ್ ಟಿಕೇಟುಗಳಿಗೆ ಒಂದುವರೆ ಟಿಕೇಟಿನ ಚಾರ್ಜೂ, ೨೦೦ ಮೈಲುಗಳಿಗಿಂತ ಹೆಚ್ಚಿಗೆ ದೂರ ಇರುವ ಸ್ಟೇಶನಿನಿಂದ ಹೋಗಲಿಕ್ಕೆ ಬರಲಿಕ್ಕೆ ಬರೇ ಒಂದು ಟಿಕೇಟಿನ ಚಾರ್ಜೂ ಕೊಡಬೇಕಾಗುವದು.

೧೦೦ ಮೈಲುಗಳ ಬಾಡಿಗೆ ಕೊಟ್ಟಲ್ಲಿ ೧೦೦ ಮೈಲುಗಳಿಗಿಂತ ಕಮ್ಮಿ ದೂರದಿಂದ ಪ್ರಯಾಣಮಾಡುವವರಿಗೆ ಮೇಲೆ ಹೇಳಿದ ದರದಲ್ಲಿಯೇ ಟಿಕೇಟುಗಳು ಕೊಡೋಣಾಗುವವು. ೩ನೇ ಕ್ಲಾಸ್ ರಿಟರ್ನ್ ಟಿಕೇಟುಗಳು ಈ ರಿಯಾಯತಿಯಲ್ಲಿ ಬೋಟುಮೈಲ್ ಟ್ರೇನ್ ಯಾ ಮೈಲ್‌ಟ್ರೇನಿಗೆ ಕೊಡೋಣಾಗಲಿಕ್ಕಿಲ್ಲ.

ಮೂರು ವರ್ಷದಿಂದ ೧೨ ವರ್ಷದ ಕೆಳಗಿನ ಪ್ರಾಯದ ಮಕ್ಕಳಿಗೆ ಅರ್ಧಚಾರ್ಜು ಮಾಡಲಾದೀತು. ಪ್ರತಿ ಒಂದು ಸಂಗ್ತಿಯಲ್ಲಿ ಆಣೆಯ ಅಂಶಕ್ಕೆ ಒಂದಾಣೆ ಎಂತಲೇ ಲೆಕ್ಕಿಸಲಾದೀತು.

ಈ ರಿಟರ್ನ್ ಟಿಕೇಟುಗಳು ಇದೇ ತಿಂಗಳ ತಾ. ೧ರಿಂದ ೧೦ನೇ ತಾರೀಕಿನ ವರೆಗೆ (೨ ತಾರೀಕುಗಳೂ ಕೂಡಿ) ಕೊಡೋಣಾದೀತು. ಮತ್ತು ಹಿಂದೆರಳುವ ಪ್ರಯೊಣವು ಜನವರಿ ತಾ. ೩೧ನೇ ದಿವಸ ಮಧ್ಯರಾತ್ರಿಯೊಳಗೆ ಅಂತ್ಯವಾಗ ಬೇಕು.

೧೯೧೨ನೇ ಇಸವಿ ಜನವರಿ ೧೦ನೇ ತಾರೀಕಿನಿಂದ ೨ ತಿಂಗಳವರೆಗೆ ಉಡ್ಪಿಯಲ್ಲಿ ಒಂದು ಹಂಗಾಮಿ ಬುಕ್ಕಿಂಗ್ ಆಫೀಸ್ ತೆರೆಯಲಾದೀತಲ್ಲದೆ ಈ ರೀಯಾತಿಯಲ್ಲಿ ಟಿಕೇಟು ಪಡಕೊಳ್ಳುವ ಪ್ರಯಾಣಸ್ಥರು ಉಪಯೋಗಿಸಿಕೊಳ್ಳುವ ಬಗ್ಗ್ಯೆ ಮಂಗಳೂರಿನಲ್ಲ ಒಂದು ವಿಶ್ರಾಂತಿಗೃಹವು ತೆರೆಯೋಣಾಗುವದು.

(Sd) T. G. McCloughin,
Genl. Traffic Manager.

ಮಂಗಳೂರು ತಾಲೂಕು ಬೋಳಾರ ಹಳೆಕೋಟೆ ಶ್ರೀ ಮಾರ್ಯಮ್ಮ ದೇವಸ್ಥಾನದಲ್ಲಿ ಆಗತಕ್ಕ ಮಹಾಪೂಜೆಯು ಇದೇ ೧೯೧೨ನೇ ಇಸವಿ ಮಾರ್ಚಿ ತಾ. ೫ಕ್ಕೆ ಜರಗುವದು. ಸದರಿ ದೇವಸ್ಥಾನ ಕಡೆಯಿಂದ ಶ್ರೀ ದೇವನಾಮಾಂಕಿತದ ನಿಶಾನಿಯೂ ಮತ್ತು ಮುದ್ರೆ ಉಳ್ಳಂಥಾ ಒಂದು ಪತ್ರ ಸಹಿತ ಕೆಲವು ಮಂದಿಗಳು ಪೂರ್ವ ಪದ್ಧತಿ ಪ್ರಕಾರ ಸಂಚರಣೆಗಾಗಿ ಕಳುಹಿಸಲ್ಪಡುವರು. ಅದ್ದರಿಂದ ಮಹಾನೀಯರಾದ ಸರ್ವ ಜನರು ಸದರಿ ಕುರುಹುಗಳನ್ನು ನೋಡಿ ಸದರಿಯವರಿಂದ ಪ್ರಸಾದ ಪಡಕೊಂಡು ಕಾಣಿಕೆ ಮಾತ್ರ ಕೊಡೋಣಾಗ ಬೇಕಾಗಿಯೂ ಮತ್ತು ಹರಿಕೆ ವ ಹರಿಕೆಗಳಿಗೆ ಸಂಬಂಧಪಟ್ಟ ಕಾಣಿಕೆಗಳನ್ನು ಯಾರೊಡನೆಯೂ ಕೊಡದೆ ಶ್ರೀ ದೇವಸ್ಥಾನಕ್ಕೆ ಬಂದು ಒಪ್ಪಿಸಿ ದೇವಿ ಪ್ರಸಾದ ಸ್ವೀಕರಿಸಬೇಕಾಗಿ ನಮ್ರತೆಯಿಂದ ಪ್ರಾರ್ಥಿಸುತ್ತೇನೆ.

ಆಡಳ್ತೆ ಮೊಕ್ತೇಸರ್, ಪರಮೇಶ್ವರ ನ್ಯಾಕ.

WANTED.

Wanted two Matrics or qualified School-finals or men of higher qualifications to serve as teachers in the Ganapathy Secondary School, Mangalore.

Apply to the Head Master of the school.

ಬಾತ್ಮೀದಾರರಿಗೆ ನೋಟೀಸು:—ಹೆಸರು ವಿಳಾಸ ವಿಲ್ಲದ ಬಾತ್ಮಿಗಳಿಗೆ ನಿಗಾ ಕೊಡಲಾರೆವು. 'ಬಂಟ್ವಾಳ—ಸ್ವದೇಶಾಭಿಮಾನಿ' ಬರುವ ಸಂಚಿಕೆಯಲ್ಲಿ ಪ್ರಕಟಿಸುವೆವು

ಮಂಗಳೂರು. ಕಳದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೫ ಪ್ಲೇಗು ಮರಣಗಳಿದ್ದವು.

ಬೆಳ್ತಂಗಡಿಯಿಂದ ೪ ದಿವಸ ಮುಂಚೆ ಗೂಡಿನಲ್ಲಿ ಹಿಡಿದು ತಂದು ಇಲ್ಲಿಯ ಮಾರ್ಕೆಟ್ ಬಳಿಯಲ್ಲಿ ಇಟ್ಟಿದ್ದ ಹುಲಿಯು ತಾ. ೨೪ನೇ ಬುಧವಾರ ದಿವಸ ಬೆಳಿಗ್ಯೆ ಗೂಡಿನಿಂದ ತಪ್ಪಿಸಿಕೊಂಡು ರಿಜರ್ವ ಇನ್ಸ್‌ಪೆಕ್ಟರ್‌ರವರ ಬಂಗ್ಲೆಯೊಳಗೆ ಹೊಕ್ಕಿತು. ಬಂಗ್ಲೆಯಲ್ಲಿ ಇದ್ದವರೆಲ್ಲರೂ ಹುಲಿಯನ್ನು ನೋಡಿ ಹೊರಗೆ ಓಡಿ ಹೋದರು. ತೊಟ್ಟಿಲಲ್ಲಿ ಒಂದು ಮಗುವು ಮಾತ್ರ ಇತ್ತು. ಈ ಹುಲಿಯು ತೊಟ್ಟಿಲ ಅಡಿಯಲ್ಲಿ ಹೋಗಿ ಕೂತುಕೊಂಡಿತು. ಕೊ. ಸಾಲ್ವದೋರ್ ರೇಗರು ಈ ಮಗುವನ್ನು ಹೊರಗೆ ತಂದು ಹುಲಿಯನ್ನು ಗುಂಡು ಹೊಡದು ಕೊಂದರು. ಆ ಹುಲಿಯ ಉದ್ದವು ೬ ಫೂಟ್ ಆಗಿತ್ತು. ಹುಲಿಯನ್ನು ಕೊಂದವರ ಮತ್ತು ಹುಲಿಯ, ಬಾವ ಚಿತ್ರವು ತೆಗಿಯಲ್ಪಟ್ಟಿತು.

ಮ. ರಾ. ರಾ. ಪಿ. ಎನ್. ಕೃಷ್ಣರಾಯರು ೧ ತಿಂಗಳ ರಜೆ ಪಡದಿರುವದರಿಂದ ಮ. ರಾ. ರಾ. ಟಿ ಭವಾನಿ ಶಂಕರ ರಾಯರು ಕುಂದಾಪುರ ಸಬ್ ಮೆಜಿಸ್ಟ್ರೇಟರಾಗಿ ಮೊಕರೂರಾಗಿರುವರು.

ಕಳದ ತಾ. ೨೨ನೇ ಸೋಮವಾರ ದಿವಸ ಮೆ. ಪಿ. ಕುಂಞಾಯನ್ ಸಾಹೇಬರ ಅಧ್ಯಕ್ಷತೆಯಲ್ಲಿ ಡಿಸ್ಟ್ರಿಕ್ಟ ಬೋರ್ಡು ಮಿಟಿಂಗು ನೆರೆಯಿತು. ಸರಕಾರದವರು ಮಂಜೂರು ಮಾಡಿದರೆ ಡಿಸ್ಟ್ರಿಕ್ಟ ಬೋರ್ಡು ಇಂಜಿನಿಯರರ ಸಂಬಳವು ರೂ. ೫೦೦ರಿಂದ ೬೦೦ಕ್ಕೆ ಹೆಚ್ಚಿಸುವರೆ ಆಲೋಚಿಸಲಾಯಿತು.

ಮಲ್ಪೆಯಲ್ಲಿ ಸಮುದ್ರಕ್ಕೂ ಬಂದರಕ್ಕೂ ಹೆದ್ದಾರಿಯನ್ನು ಕಟ್ಟಿಸುವ ಅರೆವಾಸಿ ಖರ್ಚು ಸುಮಾರು ೫೦೦೦ ರೂಪಾಯಿ ಚಿಲ್ಲರೆ ಹಣವನ್ನು ಕೊಡುವರೆ ಬೋರ್ಡಿನವರು ಮಂಜೂರಾತಿ ಮಾಡಿದರು.

ತಾ. ೨೨ರಲ್ಲು ಮುನ್ಸಿಪಾಲ್ ವೈಸ್ ಚೇಯರ್ ಮೇನರ ಚುನಾವಣೆಯು ನಡೆಯಿತು. ಇವರಲ್ಲಿ ಮೆ. ನೆಲ್ಲಿಕಾಯಿ ವೆಂಕಟರಾಯರೂ ಮೆ. ಎಲ್. ಪಿ. ಪೆರ್ನಾಂದಿಸರವರೂ ಉಮೇದ್ವಾರರಾಗಿದ್ದರು. ಕೌನ್ಸಿಲರರ ೧೮ರಲ್ಲಿ ೧೬ ಮಂದಿ ಓಟು ಕೊಟ್ಟು ಇಬ್ಬರಿಗೂ ಎಂಟೆಂಟು ಓಟುಗಳು ಬಿದ್ದದರಿಂದ ಈ ಚುನಾವಣೆಯನ್ನು ೩೧ನೇ ಜನವರಿಗೆ ಮುಂದರಿಸಿಟ್ಟಿರುವರು.

ಜಿಲ್ಲಾ ಕಲೆಕ್ಟರರಾಗಿರುವ ಮೆ. ಗ್ರೇಹಂ ದೊರೆಗಳು ತಿರುವಂಕೋಡಿನ ರೆಸಿಡೆಂಟರಾಗಿ ನೇಮಿಸಲ್ಪಟ್ಟಿರುವರೆಂದೂ ಇಲ್ಲಿಗೆ ಆಕ್ಟಿಂಗ್ ಕಲೆಕ್ಟರರಾಗಿ ಮೆ. ಡೊಯಿಗ್ ದೊರೆಗಳು ಬರುವರೆಂದೂ ವರ್ತಮಾನವಿರುವುದು.

ಇಲ್ಲಿಯ ಮೆಸ್ಸರ್ಸ್ ಪೆರ್ರಿ ಕಂಪೆನಿಯಲ್ಲಿ ಮೆನೇಜಿಂಗ್ ಏಜಂಟರಾಗಿದ್ದ ಮೆ. ಪಿ. ಸಿ. ಅಬ್ರೆವೊ ಎಂಬವರು ಭಾವಿಯಲ್ಲಿ ಬಿದ್ದು ಆತ್ಮಘಾತಮಾಡಿಕೊಂಡರು.

ಗವರ್ನಮೆಂಟ್ ಪ್ಲೀಡರ್ ಮೆ| ಎ. ಜೆ. ಲೋಬೋರವರ ಪತ್ನಿಯರ ಕಳವಾಗಿ ಹೋದ ಚಿನ್ನದ ಸರವನ್ನು ಅದು ಕಳವಿನ ಸೊತ್ತೆಂದು ತಿಳಿದಿದ್ದರೂ ಕ್ರಯಕ್ಕೆ ನಾರಾಯಣ ಶೆಟ್ಟಿ ಎಂಬವನು ಪಡಕೊಂಡಿದ್ದನೆಂಬ ಸಬಬಿನ ಮೇಲೆ ಇಲ್ಲಿಯ ಡಿಪ್ಯುಟಿ ಮೆಜಿಸ್ಟ್ರೇಟರಿಂದ ರೂ. ೫೦೦ ಜುರವಾನೆ ವಿಧಿಸಲ್ಪಟ್ಟ ಕ್ರಿಮಿನಲ್ ಮೊಕದ್ದಮೆಯ ಅಪೀಲು ತನಖಿಯು ಸೆಶನ್ಸ್ ಜಡ್ಜರಿಂದ ನಡಿಸಲ್ಪಟ್ಟು ಅಪರಾಧಿಯು ತಪ್ಪಿತಸ್ಥನೆಂಬುವ ಅನುಮಾನಕ್ಕೆ ಕಾರಣವಿದ್ದರೂ ಈತನನ್ನು ಶಿಕ್ಷೆಗೆ ಗುರಿಮಾಡುವಷ್ಟು ರುಜುವಾತು ಇಲ್ಲದ್ದರಿಂದ ಡಿಪ್ಯುಟಿ ಮೆಜಿಸ್ಟ್ರೇಟರ ತೀರ್ಮಾನವನ್ನು ಬದಲಾಯಿಸಿ ಜುರುಮಾನೆ ಹಣವನ್ನು ಪರತು ಕೊಡಬೇಕೆಂತ ಅಪ್ಪಣೆಯಾಗಿರುವುದು.

ಇಲ್ಲಿಯ ಗೌಡಸಾರಸ್ವತರ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಬಹಳ ಸಂಭ್ರಮದಿಂದ ನಿನ್ನೆ ದಿನ ನೆರವೇರಿತು. ರಥೋತ್ಸವ ಕಾಲದ ಸಮಾರಾಧನೆಗಳನ್ನು ಈ ದೇವಸ್ಥಾನದ ಮೊಕ್ತೇಸರರು ಬಹಳ ಸಾಂಗವಾಗಿ ನಡಿಸಿದರೆಂಬದನ್ನು ಗೌಡಸಾರಸ್ವತ ಜನಸ್ತೋಮಕ್ಕೆ ತಿಳಿಸಲು ಸಂತೋಷಪಡುತ್ತೇವೆ.

ಈ ದಿನ ರಾತ್ರೆ ಪ್ರೊಫೆಸರ್ ಛತ್ರೆಯವರ ನ್ಯೂ ಇಂಡಿಯನ್ ಸರ್ಕಸ್ ಕಂಪೆನಿಯ ಆಟವು ಮೈದಾನಿನಲ್ಲಿ ಇರುವುದು. ಕಳೆದ ವಾರ ಪ್ರತಿ ರಾತ್ರೆಯ ಆಟಗಳಲ್ಲಿ ಇವರು ಆಡಿ ತೋರಿಸಿದ ಕಸರತ್ತು ಅಂಗಸಾಧನೆ ಮೊದಲಾದವುಗಳು ಇವರ ಕೀರ್ತಿಗೆ ತಕ್ಕಂತೆ ಇದ್ದವು. ಪ್ರತಿ ರಾತ್ರಿಯಲ್ಲಿಯೂ ಪಟ್ಟಣಿಗರೆಲ್ಲರೂ ಉದಾರಾಶ್ರಯವನ್ನು ಈ ಸರ್ಕಸು ಕಂಪೆನಿಯವರಿಗೆ ಕೊಟ್ಟು ಪ್ರೋತ್ಸಾಹಿಸಿರುವರೆಂಬುದನ್ನು ತಿಳಿಯಲು ಸಂತೋಷಪಡುತ್ತೇವೆ.

ಪಣಂಬೂರು ನಾರಾಯಣ ವೈಜಪ್ಪ ಭಂಡಾರಿ ಮತ್ತು ಕಂಪೆನಿ. ಈ ಕಂಪೆನಿಯವರಿಂದ ಮಂಗಳೂರು ರಥ ಬೀದಿಯಲ್ಲಿ ಕಟ್ಟಿಸಲ್ಪಟ್ಟ ನೂತನವಾದ ಕಟ್ಟೋಣಕ್ಕೆ ಕಳೆದ ವಾರದಲ್ಲಿ ಮುಹೂರ್ತವಾಯಿತು. ಆರೇಳು ವರುಷಗಳ ಹಿಂದೆ ವ್ಯಾಪಾರ ವೃತ್ತಿಯ ಕೆಲವು ಮಿತ್ರರು ಕೂಡಿಕೊಂಡು ವಸ್ತ್ರ ವ್ಯಾಪಾರದ ಈ ಕಂಪೆನಿಯನ್ನು ಸ್ಥಾಪಿಸಿದರು. ಬಹಳ ಸೊಗಸಾಗಿ ಅನುಗೊಳಿಸಿದ ಈ ಕಂಪೆನಿಯವರ ನವೀನ ಕಟ್ಟಡವು ಕಂಪೆನಿಯವರ ವ್ಯಾಪಾರದ ಸುಸ್ಥಿತಿಯನ್ನು ಸೂಚಿಸುವ ಹಲವು ದೃಷ್ಟಾಂತಗಳಲ್ಲಿ ಒಂದಾಗಿದೆ. ಸರ್ವರಿಗೂ ಒಂದೇ ದರದಲ್ಲಿ ಸಾಮಾಗ್ರಿಗಳನ್ನು ವಿಕ್ರಯಿಸಿ ವ್ಯಾಪಾರವನ್ನು ನಡಿಸುವುದು ಅಸಾಧ್ಯವೆಂತ ಹಲವು ವ್ಯಾಪಾರಸ್ಥರು ಹೇಳುವ ಮಾತನ್ನು ಈ ಕಂಪೆನಿಯವರು ಅಲ್ಲಗಳೆದಿರುವರು. ಒಂದೇ ದರದ ವಾಡಿಕೆಯನ್ನು ಈ ಕಂಪೆನಿಯವರು ಪ್ರಾರಂಭದಿಂದ ಅನುಸರಿಸಿದ್ದರಿಂದ ಈ ಕಂಪೆನಿಯು ಅಭಿವೃದ್ಧಿಸಲು ಕಾರಣವಾಯಿತೆಂಬುದನ್ನು ಸರ್ವರೂ ತಿಳಿಯ ಬೇಕಾಗಿದೆ. ಕಂಪೆನಿಗೆ ಸೇರಿದ ಮಿತ್ರರೆಲ್ಲರು ಪರಸ್ಪರ ಸಹಕಾರದಿಂದಲೂ ಐಕ್ಯದಿಂದಲೂ ಕಂಪೆನಿಯನ್ನು ನಡಿಸಿದ್ದು ಶ್ಲಾಘ್ಯನೀಯವಾಗಿರುವುದು. ಇಂಥಾ ವರ್ತನವು ಇವರಲ್ಲಿ ದೀರ್ಘಕಾಲವಿರಬೇಕೆಂದೂ ಪರಸ್ಪರ ಸಹಕಾರ ಪ್ರಯತ್ನಗಳ ಸುಫಲವು ಇಂಥಾ ವ್ಯಾಪಾರ ಸಂಸ್ಥೆ ಮೊದಲಾದವುಗಳ ಮೂಲಕ ಸರ್ವತ್ರ ಪ್ರಕಟವಾಗಬೇಕೆಂಬುದೂ ನಮ್ಮ ಅಪೇಕ್ಷೆಯಾಗಿರುವುದು.

ಕುಂಬಳೆ. ಇಲ್ಲಿ "ಬೇಕಲ ಶ್ರೀ ಅಂಬಾ ನಾಟಕ ಕಂಪೆನಿಯವರು" ಇದೇ ತಾ. ೨೨ರಿಂದ ನಾಟಕವಾಡುವರೆ ಪ್ರಾರಂಭಿಸಿರುವದರಿಂದ ಸದ್ಗೃಹಸ್ಥರು ಇವರನ್ನು ಪ್ರೋತ್ಸಾಹಿಸಿ ತಮ್ಮ ಉದಾರಾಶ್ರಯವನ್ನೀಯುವರೆಂತ ನಂಬುತ್ತೇನೆ. ಇವರು ಇನ್ನು ಕೆಲವು ನಾಟಕಗಳಾಡಿದ ನಂತರ ಇಲ್ಲಿಂದ ಶೀದಾ ಪುತ್ತೂರಿಗೆ ಹೊರಡುವರೆಂತ ಕೇಳುತ್ತೇನೆ.

ಇಲ್ಲಿಗೆ ಸಮೀಪ ಆಸಪಾಸೆ ಹಳ್ಳಿಗಳಲ್ಲಿದ್ದ ಕೊಲೆರಾ ಜಾಡ್ಯವು ಈಚೆಗೆ ಶ್ರೀ ದೇವತಾನುಗ್ರಹದಿಂದ ಸ್ವಲ್ಪ ಸಮಾಧಾನವಿರುತ್ತದೆ. ಜಮೀನುದಾರರಾಗಿ ಒಳ್ಳೇ ಧರ್ಮಿಷ್ಠರಾಗಿದ್ದ ರಾ. ಕಂಬಾರು ಮದಾರಿ ಬ್ಯಾರಿಗಳು ಈ ಜಾಡ್ಯದಿಂದ ಮೊನ್ನೆ ದೈವಾಧೀನವಾದ್ದು ತುಂಬಾ ವಿಷಾದಕರವಾಗಿಯದೆ.

ಉಡುಪಿ. ಶ್ರೀ ಪುತ್ತಿಗೆ ಶ್ರೀ ಪಾದಂಗಳವರು ಈ ತಾ. ೧೮ನೇ ಗುರುವಾರ ಬೆಳಿಗ್ಯೆ ೧೦ ಘಂಟೆಗೆ ಸುಮುಹೂರ್ತದಲ್ಲಿ ಪರ್ಯಾಯ ಕೂತುಕೊಂಡರು. ಈ ಮಹೋತ್ಸವಕ್ಕಾಗಿ ಅನೇಕ ಜಿಲ್ಲೆಗಳಿಂದ ಬಹು ದೊಡ್ಡ ಗೃಹಸ್ಥರೂ ಬಂದಿದ್ದರಲ್ಲದೆ ನಮ್ಮ ಜಿಲ್ಲಾ ಕಲ್ಲೆಕ್ಟರ್ ದೊರೆಗಳವರೂ ಪತ್ನಿ ಸಹಿತರಾಗಿಯೂ ಸಬ್‌ಕಲ್ಲೆಕ್ಟರವರು ಪೋಲೀಸ್ ಸುಪರಿಂಟೆಂಡೆಂಟರವರೂ ಮೊದಲಾದ ಈ ಜಿಲ್ಲೆಯ ಮೇಲುದ್ಯೋಗಸ್ಥರನೇಕರು ಜಿಲ್ಲಾ ಸರ್ಜನರೂ ಅವರ ಸಾನಿಯವರೂ ಹಾಜರಿದ್ದರು.

ಮಧ್ವನವಮಿಗೆ ಸರಿಯಾಗಿ ಇಲ್ಲಿಗೆ ಜರಗಲಿಕ್ಕಿರುವ ಶ್ರೀಮನ್ಮಧ್ವಸಿದ್ಧಾಂತ ಸಂವರ್ಧಿನಿ ಸಭೆಯ ಸಭಾ ಸ್ಥಾಪಕರಾದ ಶ್ರೀ ಅದಮಾರು ಶ್ರೀಪಾದಂಗಳವರು ದೂರ ದೇಶದಲ್ಲಿರುವದರಿಂದಲೂ ಅದರ ಗೌರವ ಕಾರ್ಯದರ್ಶಿಗಳು ಇತ್ತಲಾಗೆ ಸ್ವರ್ಗಸ್ಥರಾದದರಿಂದಲೂ ಬರುವ ಜ್ಯೇಷ್ಠ ಶುದ್ಧ ೭ ಆರಂಭಿಸಿ ೯ರ ವರೆಗೆ ಈ ಸಭೆಯು ಯಥಾಪ್ರಕಾರ ನಡಿಯುವದಾಗಿ ಪ್ರಕಟಿಸಿರುತ್ತಾರೆ.

ಉತ್ತರಾಜಿ ಮಠದ ಶ್ರೀ ಪಾದಂಗಳವರು ದೇವರ ಯಾತ್ರೆಗೆ ಆಸನ್ನರಾಗಿರುವದರಿಂದ ಪೂಜ್ಯರಾದ ಸೇತುರಾಮಾಚಾರ್ಯರವರು ತುರ್ಯಾಶ್ರಮವನ್ನು ಸ್ವೀಕರಿಸಿದರೆಂತಲೂ ಇವರು ತನ್ನ ಸುಮಾರು ೨ ಲಕ್ಷ ರೂಪಾಯಿ ಬೆಲೆಯ ವಿಶಿಷ್ಟ ಆಸ್ತಿಯನ್ನು ಮಲಖೇಡದಲ್ಲಿ ಪ್ರತಿ ವರ್ಷ ನಡಿಯುವ ಪರೀಕ್ಷಾ ಸಭೆಯ ಖರ್ಚಿಗಾಗಿ ದಾನಮಾಡಿದರೆಂತಲೂ ವಾರ್ತೆ ಬಂದದೆ. ಇದು ಶ್ಲಾಘ್ಯವೇ.

ಈ ಜಾತ್ರೆಯ ಗಲಾಟೆಯಲ್ಲಿ ಈ ಶಹರದ ಎಲ್ಲಾ ಭಾಗವೂ ನಿರ್ಮಲವಾಗಿರುವಂತೆ ನಮ್ಮ ಮಾನ್ಯ ಡಾಕ್ಟರರವರು ದಿವಸಕ್ಕೆ ಒಂದೆರಡಾವರ್ತಿ ಸಂದುಗೊಂದುಗಳಿಗೆ ಕೂಡಾ ಸ್ವತಃ ಹೋಗಿ ತನಖಿ ನಡಿಸಿರುತ್ತಾರೆ.

ಈ ವರ್ಷ ಇಲ್ಲಿಗೆ ಬಂದೋಬಸ್ತಿಗಾಗಿ ಬಂದಿರುವ ಪೋಲೀಸಿನವರು ಚಿಲ್ಲರೆ ತಕ್ಸೀರುಗಳನ್ನು ತಲಾಶಿಮಾಡುವದರಲ್ಲಿ ಪ್ರಯತ್ನಿಸುವದಕ್ಕಿಂತ ಅವುಗಳು ಸಂಭವಿಸದಂತೆ ಹೆಚ್ಚಿನ ಜಾಗ್ರತೆ ತೆಗದುಕೊಂಡಿರುವಂತೆ ತೋರುತ್ತೆ. ಇದೇ ಅವರ ಮುಖ್ಯ ಕರ್ತವ್ಯವಷ್ಟೆ.

ಹವೆಯು ಬಹಳವಾಗಿ ಕೆಟ್ಟದೆ. ಶೋನ್ಸೆ, ಮಲ್ಪೆ ಮೊದಲಾದ ಪ್ರಾಂತ್ಯಗಳಲ್ಲಿ ಶಿಡುಬೂ, ವಾಂತಿಭೇದಿಯೂ ಸಂಭವಿಸುತ್ತಲಿದೆ. ಎಲ್ಲಾ ಪದಾರ್ಥಗಳ ಧಾರಣೆಯು ಏರಿಯೇ ಇರುವದು. ಎಸ್. ಐ. ರೈಲ್ವೇ ಇಲಾಖೆಯವರು ಈ ಶಹರಕ್ಕೆ ಆಮದು ರಫ್ತಾಗುವ ಜನಸಂಖ್ಯೆ ಗಾಡಿ ಸಾಮಾನು ಮೊದಲಾದವುಗಳ ಅಂದಾಜು ಮಾಡುವದಕ್ಕಾಗಿ ಏರ್ಪಡಿಸಿರುತ್ತಾರೆ. ರೈಲ್ವೇ ಟಿಕೇಟುಗಳು ಇಲ್ಲಿಯೇ ದೊರಕುವಂತೆಯೂ ವ್ಯವಸ್ಥೆ ಮಾಡಿರುತ್ತಾರೆ.

ಇಲ್ಲಿ ಬುಧವಾರ ದಿವಸ ಟಪ್ಪಾಲಿಗೆ ಹಾಕಿದ ಕಾಗದಗಳು ಮಂಗಳೂರಿಗೆ ಶುಕ್ರವಾರ ದಿವಸ ತಲಪಲು ಕಾರಣವೇನೋ ತಿಳಿಯಲಿಲ್ಲ.

ಪುತ್ತೂರು. ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರಿಗೆ ಮೆ| ಸಿ| ಸಲ್ದಾಂಞರವರು ವರ್ಗಾಯಿಸಲ್ಪಟ್ಟು ತಾ. ೨೦ರಲ್ಲು ಚಾರ್ಜು ತಕ್ಕೊಂಡಿರುವರು.

ನಮ್ಮ ಡಿವಿಜನ್ ಡ್ಯೂಪಿಟಿ ಕಲೆಕ್ಟರರವರು ತಾ. ೧೮ರಿಂದ ವಿಟ್ಲ ಮೊಕ್ಕಾಮಿನಲ್ಲಿ ಜಮಾಬಂದಿ ಕೆಲಸ ನಡಿಸುತ್ತಿರುವರು.

ಒಂದರೆ ಕ್ರಿಮಿನಲ್ ಮೊಕದಮೆಯಲ್ಲಿ ಮನೆ ಜಡ್ತಿಯಾಗುವಾಗ ಬೆಳ್ಳಾರೆ ಮಂಜಪ್ಪ ರೈಯವರ ವಶ ಒಂದು ಕೋವಿ ಸಿಕ್ಕಿದ್ದರಿಂದ ಡ್ಯೂಪಿಟಿ ಕಲೆಕ್ಟರರವರು ಇವರಿಗೆ ೨೦ ರೂಪಾಯಿ ಜುರುಮಾನೆ ವಿಧಿಸಿದರು.

ನಮ್ಮ ಪಟ್ಟಣದಲ್ಲಿ ವಾಂತಿಭೇಧಿಯು ತಲೆದೋರಿಯದೆ.

ಕುಂದಾಪುರ:—ಇದೇ ತಿಂಗಳ ತಾರೀಕು ೩ರಲ್ಲು ಇಲ್ಲಿ ಸರಕಾರದವರಿಂದ ಒಂದು ಹುಡುಗಿಯರ ಪ್ರಾಥಮಿಕ ಶಾಲೆಯು ತೆರೆಯೋಣಾಗಿರುವದು. ಈ ಶಾಲೆಗೆ ಮಿಸ್ ಲೂಯಿಸ್ ಮೆನೇಜಸ್ ಎಂಬವರು ಮುಖ್ಯೋಪಧ್ಯಾಯಿನಿಯಾಗಿಯೂ ಮಿಸಿಸ್ ಹೆಲೇನ್ ಸಾಲಿನ್ಸರು ಸಹಾಯಕ ಉಪಾಧ್ಯಾಯಿನಿಯಾಗಿಯೂ ನೇಮಿಸಲ್ಪಟ್ಟಿರುವರು. ಇಲ್ಲಿಯ ಹಿಂದೂ ಹೆಮ್ಮಕ್ಕಳು ಹಿಂದೂ ಶಾಲೆಗೂ, ಕ್ರೈಸ್ತರ ಹೆಮ್ಮಕ್ಕಳು ಕ್ರೈಸ್ತರ ಶಾಲೆಗೂ, ಕಥೋಲಿಕ ಹೆಮ್ಮಕ್ಕಳು ಕಥೋಲಿಕ ಶಾಲೆಗೂ ಹೋಗುತ್ತಿರುವುದರಿಂದ ಈ ಹೊಸ ಶಾಲೆಗೆ ಹೆಚ್ಚಿನ ಮಕ್ಕಳು ಸಿಕ್ಕುವದು ದುರ್ಲಭವೆಂಬಂತೆ ತೋರುತ್ತದೆ.

ಜೀನಸುಗಳ ಧಾರಣೆ, ಮಂಗಳೂರು. (೨೫೦)

ಹೊಸ ಮಸ್ಕತಿ ಅಕ್ಕಿ	5—2—0
ಹೊಸ ಗುಡ್ಡು ಮಸ್ಕತಿ...	4—9—0
ಹೊಸ ಮಸ್ಕತಿ ದುಯಂ...	4-12—0
ಹೊಸ ಗುಡ್ಡು ,, ...	4-10—0
ಮಸ್ಕತಿ ಬೆಳ್ತಿಗೆ ,, ...	5—4—0
ರಂಗೂನ್ ಬೆಳ್ತಿಗೆ ಗೋಣಿ	10-8—0
ಹುರುಳಿ ಗೋಣಿ ೧, ಮುಡಿ 2ರ ...	6-12—0
ಉಪ್ಪು ಗೋಣಿ ೧ರ	3—6—0
ಖೊಬ್ರಿ ಖಂಡಿ ೧ರ	102-0—0
ಖೊಬ್ರಿ ಎಣ್ಣೆ ಮಣ	7—2—0
ಕಾಫಿ ಖಂಡಿ ೧ರ	250—0—0
ಕಾಳು ಮೆಣಸು ಖಂಡಿ	165—0—0
ಹೊಸ ಬಿಳಿ ಗೋಟು ಅಡಿಕೆ	75—0—0
ಕರಿ ಗೋಟು	65—0—0
ಯಾಲದ ಕಾಯಿ ಮಣ ೧ರ	42—0—0
ಗೇರುಬೀಜ ಮುಡಿ ೧ರ...	2—6—0
ರಾಮಪತ್ರೆ ಮಣ ೧ರ	8-12—0
ಶೀಗೆಕಾಯಿ ಖಂಡಿ ೧ರ	35—0—0
ಕಾಸ್ರಕಿನ ಬೀಜ ಖಂಡಿ ೧ರ	20—0—0
ದಾಲಚೀನಿ ಹ್ವ ಮಣ ೧ರ	3—0—0
ಅಂಟವಾಳ ಕ್ಯಾ ಮುಡಿ ೧ರ	1—4—0
ಅಣಿಲೆ ಕಾಯಿ ಖಂಡಿ ೧ರ	12—3—0
ಹೆಸರು	4-13—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—8—0
ಗೋದಿ ಗೋಣಿ ೧ಕ್ಕೆ	11—0—0
ಊರು ಬೆಲ್ಲ ಖಂಡಿ ೧ರ	36—8—0
ಮೊರಿಸ್ ಸಕ್ಕರೆ ಮಣ ೧ರ	3-10—0
ಕಡಲೆ ಗೋಣಿ ೧ರ	7—8—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—4—0
ಖೊಬ್ರಿ ಹಿಂಡಿ ಖಂಡಿ ೧ರ	33—0—0

ಆಲಸ್ಯ ಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು. ಬಿಡಬೇಡಿರಿ!!!

೧ನೇದು ರೂ. 2—8—0 ಮಾತ್ರ! ೨ನೇದು ರೂ. 3—8—0 ಮಾತ್ರ!! ೩ನೇದು ರೂ. 6—0—0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ಧಾರಣೆಗಳಿಗೆ ಬಿಕರಿ.

1. ರಾಸ್ಕೊಪ್‌ಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.

ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರೆಗೂ ಬಾಳಿಕೆ ಬರುವದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರುತ್ತದೆ. ಇದು ಎಂದೆಂದಿಗೂ ಕಪ್ಪಾಗದಂಥಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ. ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಇದರ ಹಿಂಭಾಗದಲ್ಲಿ ಒಳಗಿನ ಗ್ಲಾಸ್ ಡೋಮು ಸಹಾ ಇರುತ್ತದೆ. ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ. 2—8—0 ರೂ. 3-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗ ಬೇಡಿರಿ, ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು. ಕ್ರಯ ರೂ. 2—8—0. ವಿ. ಪಿ. ಪಿ. ಚಾರ್ಜು 0-4-0.

2. ರೈಲ್ವೆ ರೆಗ್ಯುಲೇಟರ್ ಲೀವರ್ ಜುವೆಲ್ಡ್ ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾರವು. ಇದು ರಾಸ್ಕೋಪ್ ವಾಚಿಗಿಂತಲೂ ಹೆಚ್ಚು ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರುತ್ತದೆ. ಇದು ಆಯುಃಪರಿಮಿತಿ ಇರುವದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟದ್ದು. ಇದರ ಚಕ್ರಗಳಲ್ಲಿಯೂ ಕೆಂಪು ಕೆತ್ತಲ್ಪಟ್ಟಿರುತ್ತವೆ. ಒಳಗಿನ ಗ್ಲಾಸುಡೋಮು ಸಹಾ ಇರುತ್ತವೆ. ಕ್ರಯ ರೂ. 3—8—0. ವಿ. ಪಿ. ಪಿ. ಚಾರ್ಜು ಆಣೆ 4.

3. ಲೇಡೀಸ್ ಸಿಲ್ವರ್ ವಾಚ್.

ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿಸಲ್ಪಟ್ಟಿಲ್ಲವು. ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ. ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋಗಿಸಬಹುದು. ಕ್ರಯ ರೂ. 6. ವಿ. ಪಿ. ಆ. 6.

ಅಮ್ರೋರಾ ಸಿಲ್ವರು ಗಡಿಯಾರದ ಸರಪಣಿ. ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆಳ್ಳಿಯಿಂದ ಮಾಡಲ್ಪಟ್ಟದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ ಶುದ್ಧವಾಗಿಯೂ ಇರುತ್ತದೆ. ಕ್ರಯ ರೂ. ೦—8—೦. ವಿ. ಪಿ. ಪಿ. ಚಾರ್ಜು ಆಣೆ 4.

ಬಹುಮಾನ—ನಮ್ಮಲ್ಲಿ ಒಂದೇ ನಮೂನೆಯಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನ ಕಳುಹಿಸುವೆವು. ಟಪ್ಪಾಲ್ ಚಾರ್ಜು ಇನಾಮು:—ಒಂದೇ ನಮೂನೆಯಲ್ಲಿ 6 ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ.ಪಿ. ಪಿ. ಚಾರ್ಜು ಇಲ್ಲದಂತೆ ಕಳುಹಿಸುವೆವು.

ಸೂಚನೆ: ಒಂದು ಡಜನ್ ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ರೂ. 1 ನ್ನು ಮನಿಯಾರ್ಡರು ಮೂಲಕ ಕಳುಹಿಸಬೇಕು. ಆರು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು 8 ಆ. ಪೋಸ್ಟೇಜು ಸ್ಟಾಂಪನ್ನು ಕವರಿನಲ್ಲಿಟ್ಟು ಕಳುಹಿಸಬೇಕು. ಇಲ್ಲದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:— ಟಿ. ಸಿ ನಾಗಲಿಂಗಪ್ಪ ಅಂಡ್ ಕಂಪೆನಿ,
ನಂಬ್ರ ೨೦ ಶಿಂಗಣ್ಣನ್ ಬೀದಿ, ಮದರಾಸು.

"ಬೆಸ್ಟ್ ಲ್ಯಾಟ್ಸ್"
ಎಂಬ
ಗ್ಯಾಸ್ ದೀಪಗಳು



ಕ್ರಯ ರೂ. 16.

ಕೆರೊಸಿನ್ ಎಣ್ಣೆಯ ದೀಪಗಳಂತೆ ಹೊಗೆಯಿಂದ ಪ್ರಕಾಶವು ಮೊಬ್ಬಾಗದೆ ಘಾಳಿಯ ಶಳವಿನಿಂದ ನೊಂದಿ ಹೋಗದಂಥವುಗಳು. ಈ ದೀಪಗಳನ್ನುರಿಸಲು ಕೆರೆಸಿನ ಎಣ್ಣೆಯ ದೀಪಗಳಷ್ಟೇ ಖರ್ಚು ತಗಲುವುದು.



ಕ್ರಯ ರೂ. 20.

ದೇವಾಲಯ ವಾಚಕ ಮಂದಿರ ವ್ಯಾಪಾರದ ಅಂಗಡಿ ಭಂಡಸಾಲೆಗಳಿಗೆ ದೀಪದ ಪ್ರಕಾಶದ ಶೋಭೆಯು ಅಧಿಕವಾಗಿ ಬೇಕಾದ ಎಲ್ಲಾ ಕಡೆಗಳಲ್ಲಿ ಅತ್ಯುಪಯುಕ್ತವಾದವು.



ಕ್ರಯ ರೂ. 16

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯುವುದು.

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್,
ಸ್ಥಾಯಿಕಲ್ ಏಜಂಟ್ಸ್,
ಮಂಗಳೂರು, ದ. ಕ.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೊನ್‌ರವರು.

1911ನೇ ಇಸವಿ ಜೂನ್ ತಾರೀಕು 3ರ ಲಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಸಿ ಮಾಡಲ್ಪಡುವವು. ಸಾಧಾರಣವಾಗಿ ಅಲುಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗ ಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers.

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ಶೀರೆಗಳು ತಯಾರಾಗುತ್ತವೆ. ನಾಜೂಕು ರೇಶ್ಮೆ ಶೀರೆಗಳೂ, ಜೋಡು ಎಲವಸ್ತ್ರಗಳೂ, ಉತ್ತಮವಾದ ವೇಷ್ಟಿಗಳೂ ನಮ್ಮ ಸ್ವತಃ ಮೇಲ್ತನ್ನಿಕೆಯಲ್ಲಿಯೇ ನೇಯಿಸುತ್ತಿದ್ದೇವೆ.

ಕ್ರಯ ಕಮ್ಮಿ! ಬೇಗನೆ ಕೊಂಡುಕೊಳ್ಳಿರಿ!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯತಿ ಮಾಡಲಾಗುವುದು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಪ್ರತಿ ಒಂದು ಮನೆಯಲ್ಲಿಯೂ ಅತ್ಯವಶ್ಯವಾಗಿ ಇರಬೇಕಾದ್ದು.

ಗ್ರಮೆ ಫೋನು (Gramophone) ಎಂಬ ಮಾತಾಡುವ ರಾಗದ ಪೆಟ್ಟಿಗೆಗಳು ನಮ್ಮಲ್ಲಿ ದೊರಕುವವು. (ಕನ್ನಡ, ತಮಿಳು, ಮಲೆಯಾಳ, ಹಿಂದುಸ್ಥಾನಿ, ಇಂಗಿಷ್ ಭಾಷೆಯ ಉತ್ಕೃಷ್ಟವಾದ ಗಾಯನದ ರಿಕಾರ್ಡುಗಳನ್ನು ತರಿಸಿಟ್ಟಿರುವೆವು.

ಎಲ್ಲೆಲ್ಲಿಯೂ ಕೀರ್ತಿ ಪಡೆದ ಕೊಯಂಬುತ್ತೂರು ತಾಯಿಯ ಸಂಗೀತ ರಿಕಾರ್ಡುಗಳು ಬೇಕಾದವರು ಬೇಗನೇ ಬರಕೊಳ್ಳಿರಿ!

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು.

ಸಂತೋಷಕರವಾದ ಪ್ರಕಟಣೆ.

ಬರುವ ಜನವರಿ ತಿಂಗಳು ಆಖ್ಯೆರು ವರೇಗೆ ಮಾತ್ರ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲವಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ವಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದವನ್ನು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಣ್ಯವಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಷೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಶಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಶಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂಬರು 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಅಚ್ಚವಾದ ಕೇಶ ತೈಲ.

ನಿಮಗೆ ಅಂಗಡಿಗಳಲ್ಲಿ ನೂರಾರು ವಿಧದ ಕೇಶ ತೈಲಗಳು ದೊರೆಯಬಹುದು. ಆದರೆ ಅವುಗಳಲ್ಲಿ ಶೇಕಡಾ 99ರಂತೆ ನಿಷ್ಪ್ರಯೋಜನವೆಂಬದು ಖಾತ್ರಿ.

ನಿಮ್ಮ ಕೇಶ ಗುಚ್ಛವು ಸದಾ ತಂಪಾಗಿಯೂ ಸುಖಪ್ರದವಾಗಿಯೂ ಇದ್ದುಳಿಯಬೇಕೆಂಬದು ನಿಮ್ಮ ಮನೋಗತವಾಗಿದೆಯೋ? ನಮ್ಮ 'ಲಿಲ್ಲಿಬ್ಲೂಮ್' ಎಂಬ ಕೇಶ ತೈಲವನ್ನು ಮಾತ್ರ ಕೊಂಡುಕೊಳ್ಳಿ! ಈ ಎಣ್ಣೆಗೆ ಸರಿ ಬೀಳುವ ಇತರ ಯಾವ ಎಣ್ಣೆಯನ್ನಾದರೂ ಪೇಟೆಯಲ್ಲಿ ಪಡೆಯಲಾರಿರಿ.

ದಯಮಾಡಿ 'ಲಿಲ್ಲಿಬ್ಲೂಮ್' ಎಂಬ ಹೆಸರು ನಿಮ್ಮ ಜ್ಞಾಪಕದಲ್ಲಿರಲಿ.

ಕ್ರಯ ಬಾಟ್ಲಿ 1ಕ್ಕೆ 0-12-0. ವಿ. ಪಿ. ಸಮೇತ 1—3—0 ಮಾತ್ರ.

FAIR HEALTH CHEMICAL Co.

Hoogly, Bengal

ಏಜಂಟರು;—ದಿ. ಊಲನ್ ಮಾರ್ಟ್,

ಮಂಗಳೂರು ದ. ಕ.

ಶ್ರೀ ಶಿವಗಂಗಾಮಠದ

ಶ್ರೀ "ಶಾರದಾ" ಮಾಸ ಪತ್ರಿಕೆ.

ಚಂದಾ (ವರ್ಗಣಿ) ರೂ. ೨—೦—೦

(ಶ್ರೀ ಶ್ರಂಗೇರಿ ಮಠದವರಿಂದಲೂ, ಮೈಸೂರು ಸರಕಾರದವರಿಂದಲೂ ಪೋಷಿಸಲ್ಪಡುತಲಿದೆ)

ಇದರಲ್ಲಿ:—

(೧) "ದಶೋಪನಿಷತ್ತು"ಗಳಿಗೂ ಕನ್ನಡ ಕಥಾರೂಪವಾದ ತಾತ್ಪರ್ಯ

(೨) "ಶ್ರೀ ಶಂಕರಾಚಾರ್ಯ ಚರಿತ್ರಕಾಲವಿಚಾರ"

(೩) "ಕನ್ನಡ ಭಾಷಾಮಯಧರ್ಮಸಿಂಧುಸಾರ" (೩೫೩ ವಿಷಯಗಳಿವೆ)

(೪) "ಸಂಧ್ಯಾವಂದನೆಯ ಅರ್ಥ ವಿಚಾರ" (ಬಹುಯುಕ್ತಿ ಪ್ರಮಾಣಗಳಿಂದೊಡಗೂಡಿದೆ)

(೫) "ಬಾಲಕರ ಭಂಡಾರ" (ನೀತಿ ಕಥೆಗಳು, ನೀತಿಶ್ಲೋಕಗಳು, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯೆ, ಒಗಟು, ನ್ಯಾಯ ಮುಂತಾದವುಗಳು)

(೬) "ಕುಮಾರ ಸಂಭವ ಕಾವ್ಯ" ಪದ, ಶಬ್ದ, ಅನ್ವಯ, ಅರ್ಥ, ತಾತ್ಪರ್ಯ, ಆಕಾಂಕ್ಷೆ, ಸಂಗ್ರಹ, ಧಾತುರೂಪ, ಧಾತ್ವರ್ಥ, ವಿಶೇಷಾಂಶಗಳೊಂದಿಗೆ.

(೧೨-೮-೧೯೧೦)ರಲ್ಲಿ ಆರಂಭವಾಗಿ ನಡೆಯುತ್ತಲಿದೆ.

ಚಂದಾ (ವರ್ಗಣಿ)ದಾರರಿಗೆ ಹಿಂದಿನ ಸಂಚಿಕೆಗಳೆಲ್ಲ ದೊರೆಯುತ್ತವೆ.

ವಿಳಾಸ (ಪತ್ರ) ಬೊಡಬೆಲೆ, ನಾರಾಯಣ ಶಾಸ್ತ್ರಿ

RYMOND'S INDIAN INK.

ಅತ್ಯುತ್ತಮವಾದ ನೀಲಿಕಪ್ಪುಶಾಯಿಯ ಪೊಟ್ಟಣಗಳು ನೂರಕ್ಕೆ 0—8—0

ಬರುವ ತಿಂಗಳ ಆಖ್ಯೆರ್ ವಳಗೆ ಕೊಂಡುಕೊಳ್ಳುವವರಿಗೆ ಮಾತ್ರ ಆಣೆ 0—6—0

ಟಪ್ಪಾಲ್ ಚಾರ್ಜು ಆಣೆ 0—3—0.

ನೀಲಿಕಪ್ಪು, ಕೆಂಪು, ಹಸರು, ಊದಾ ಬಣ್ಣದ ಶಾಯಿ 24 ಗುಳಿಗೆಗಳ ಡಬ್ಬಿಗೆ 0-2-6. 24 ಹಾಳೆಗಳ ಕಟ್ಟಿಗೆ 0-2-6. ರಖಂ ಗಿರಾಕಿಗಳಿಗೆ ಒಳ್ಳೇ ಕಮಿಶನ್ ಕೊಡಲಾದೀತು. ಏಜಂಟರು ಬೇಕು.

ರಾಯ್ಮಂಡ್ ಎ. ಮಿನೇಜಸ್.

ಪುತ್ತೂರು, ದ. ಕ.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು.	ಆತಂಕ ನಿಗ್ರಹ **ಗುಳಿಗೆಗಳು.**	30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಬಾಧ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಕಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ 22 ಬ್ರಾಡ್ವೇ ಮದರಾಸು.	}	ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಮತ್ತು ಜಾಮ್ ನಗರ ಕಾಠ್ಯಾವಾರ್.

ಚದುರಂಗದ ಕಾಯಿಗಳು.

ಗಟ್ಟೀ ಬಣ್ಣದಲ್ಲಿ ತಯಾರಾದ 32 ಕಾಯಿಗಳಿರುವ ಸೆಟ್ಟು 1ಕ್ಕೆ ರೂ. 1-0-0

ಕನ್ನಡಿಗರಿಗೆ ಒಳ್ಳೆಯ ಸಮಾಚಾರ!

ಅಪೂರ್ವ ಗ್ರಂಥ! ನೀತಿಬೋಧಕ ಗ್ರಂಥ!! ಅತ್ಯುತ್ತಮ ಗ್ರಂಥ!!!

ಜಗದ್ವಿಖ್ಯಾತರಾದ ಆಂಗ್ಲೇಯ ಮಹಾಕವಿ ಸರ್ ವಾಲ್ಟರ್ ಸ್ಕಾಟ್‌ರವರ ಬ್ಲ್ಯಾಕ್‌ಡ್ವಾರ್ಫ್ (Sir Walter Scott's "Black Dwarf") ಎಂಬ ಕಥೆಯು ಕನ್ನಡಕ್ಕೆ ತರ್ಜುಮೆ ಮಾಡಲ್ಪಟ್ಟು "ಶ್ಯಾಮಕುಬ್ಜ" ಎಂಬ ಅಭಿದಾನದಿಂದ ಮಾರಾಟಕ್ಕೆ ಸಿದ್ಧವಾಗಿದೆ. ಕನ್ನಡ ಭಾಷೆಯಲ್ಲಿ ಉತ್ತಮವಾದ ಆಧುನಿಕ ಶೈಲಿಯನ್ನು ಕಲಿಯಬೇಕೆಂಬ ಇಷ್ಟವುಳ್ಳ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಇದನ್ನೋದುವುದರಿಂದ ಲಾಭ ಉಂಟು. ಕಥೆಯೂ ಬಲು ಸಾರಸ್ಯವಾಗಿದೆ.

ತ್ವರೆ ಮಾಡಿರಿ! ಸ್ವಲ್ಪ ಪ್ರತಿಗಳೇ ಉಳಿದಿವೆ!!

ಬೆಲೆ (136 ಪುಟಗಳು ಡೆಮ್ಮಿ ಅಷ್ಟ ಪತ್ರ) ೮ ಆಣೆ.

ಅಂಚೆ ವೆಚ್ಚ ಬೇರೆ.

ವಿಳಾಸ:—

ಎಚ್. ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.



ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು, ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿ ಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿ ಮಾಡಲ್ಪಡುವದು.

ಎಲ್ಲೂರು ರಾಮ ರಾವ್,

ಜನರಲ್ ಏಜಂಟ್,

ಬ್ರಿಟೋ ಬಿಲ್ಡಿಂಗ್ಸ್

ಮಂಗಳೂರು, ದ. ಕನ್ನಡ.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯೊ ಏನು? ಕಾಶಿಪಟ್ಟೆ ಅಲ್ಲವೊ ಹಾಗಾದರೆ ಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯ ಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಅಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**
Leading Silk Manufacturers, Benares City.

1912ನೇ ಇಸವಿಯ

ಪೌರ್ವಾಲ್ ಪೋಕೆಟ್ ಡೈರಿಗಳು.

1912ನೇ ಇಸವಿಯ ಡೈರಿಗಳು ತಯಾರಾಗಿರುತ್ತವೆ. ನಂಬರು 1, 0—4—0. ನಂಬರು 2, ಮುಚ್ಚಳ ಮತ್ತು ಪೆನ್‌ಸಲ್ ಸಹಿತ 0—6—0. ಎಲ್ಲರಿಗೂ ಬೇಕಾದ ವಿಷಯಗಳು ಇದರಲ್ಲಿ ಅಡಗಿರುತ್ತವೆ. ವಟ್ಟಿಗೆ 1 ಡಜನ್ ಡೈರಿಗಳನ್ನು ತೆಗೆದುಕೊಳ್ಳುವವರಿಗೆ 2 ಡೈರಿಗಳನ್ನು ಬಹುಮಾನವಾಗಿ ಕೊಡುತ್ತೇವೆ. ಸ್ವಲ್ಪವೇ ಕೋಪಿಗಳು ಉಳದಿರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ನಮ್ಮ ಡೈರಿಗಳನ್ನು ತರಿಸಿಕೊಳ್ಳುವವರಿಗೆಲ್ಲಾ 1912ನೇ ಇಸವಿಯ ಕೆಲಂಡರುಗಳನ್ನು ಕಳುಹಿಸಿಕೊಡುತ್ತೇವೆ. ಪೋಸ್ಟ ಮುಖಾಂತರ ವಿ. ಪಿ. ತರಿಸಿಕೊಳ್ಳ ತಕ್ಕವರು ಡಜನ್ 1ಕ್ಕೆ 1ರೂಪಾಯಿ ಅಡ್ವಾನ್ಸ್ ಕಳುಹಿಸಿಕೊಡಬೇಕು

ಈ ಮೇಲ್ಕಂಡ ಡೈರಿಗಳು ಮಂಗಳೂರು ಊಲನ್ ಮಾರ್ಟಿನಲ್ಲಿ ದೊರಿಯುತ್ತವೆ.

ಎಲ್. ಎ. ಪೌರ್ವಾಲ್ ಅಂಡ್ ಕೋ,

ನೂತನ ವಿಚಿತ್ರ

ದಂತ ಚಿತ್ರಗಳು.

ಅನೆಯ ಶುದ್ಧ ದಾಡೆಯಿಂದಲೇ ಅತಿ ವಿಲಾಸದಿಂದ ತಯಾರಿಸಿರುವ, ದೇವ, ದೇವಕಿಯರ (God & Goddess) ಗೊಂಬೆಗಳು ಈಗಲೇ ತರಿಸಿರುವೆವು. ಇವುಗಳು ಗಡಿಯಾರ ಸಂಪಣಿ, ಹಾರ ಮೊದಲಾದ ಕಂಠಾಭರಣಗಳ ನಡುವೆ, ಬಲು ಭೂಷಣವಾಗಿಯೂ ಪೂಜೆಗೆ ಅತ್ಯಂತ ಅರ್ಹವಾದವುಗಳಾಗಿಯೂ ಇರುತ್ತವೆ. ಬೆಲೆಯು ರೂಪಾಯಿ ೧ರಿಂದ ೪೦ ವರೆಗೆ. ಆಯಾಯ ಚಿತ್ರಗಳ ನಮೂನೆ ಮತ್ತು ಪರಿಮಾಣದ ಮೇಲೆ ಹೊಂದಿರುತ್ತದೆ.

ನಮ್ಮ ಸುಗಂಧ ದ್ರವ್ಯಗಳಿಗೆ ಆರ್ಡರು ಕೊಡುತ್ತಿರುವ ವೇಳೆಯಾದರೂ, ಮಾದರಿಗಾಗಿ ಒಂದೊಂದು ಚಿತ್ರಗಳನ್ನು ತರಿಸಿ ನೋಡಿರಿ.

ನಮ್ಮ ಏಜಂಟರು:— ವಿಳಾಸ:—

ಮು. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ಟರ್, ವಿಟ್ಲ,
ಉಪ್ಪಿನಂಗಡಿ ತಾಲೂಕು.

ಎನ್. ಎಂ. ಸುಬ್ರಾಯ್,
"ಸುಗಂಧವಿಲಾಸ"
ಮಂಗಳೂರು

ಪುಷ್ಕಳವಾದ ಕೂದಲು.

ಪ್ರಾಚೀನ ಕಾಲದಿಂದಲೂ ಕವಿಗಳು ಸ್ತ್ರೀಯರ ಕೂದಲಿನ ವಿಕಾಸವನ್ನು ಹೊಗಳಿದ್ದಾರೆ; ಅದು ನಿಜವಾಗಿಯೂ ಮನಸ್ಸನ್ನು ಸೆಳೆಯುವಂಥಾದ್ದೇ ಸರಿ. ಅವರ ಕೂದಲು ಕೊರತೆಯಾಗಲು ಕಾರಣವೇ ಇಲ್ಲ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ. ಬ[illegible] ಬೋಳು ತಲೆಯಲ್ಲಿ ಕೂದಲು ಬೆಳಸುವುದು. ಇದರ ಸ್ವಭಾವ ಕೂದಲಿನ ಬೇರನ್ನು ತನಿವಾಗ ಬೆಳಸುವುದಾಗಿದೆ; ತಲೆಯಲ್ಲಿ ತಂಪನ್ನುಂಟುಮಾಡುವುದು. ಕಾಮಿನಿಯಾ ಎಣ್ಣೆಯು ಕೂದಲನ್ನು ಸುಕುಮಾರವಾಗಿ ಪೋಷಣೆ ಮಾಡುತ್ತದೆ. ಅದು ಬಹು ಸುಗಂಧಮಯವಾದ ಮನೋಹರವಾದ ಎಣ್ಣೆ. ಕಾಮಿನಿಯಾ ಎಣ್ಣೆ ಕೂದಲನ್ನು ಸ್ವಭಾವಯುಕ್ತವಾಗಿಯೂ ಕೋಮಲವಾಗಿಯೂ ಪುಷ್ಕಳವಾಗಿಯೂ ಜಾಗ್ರತೆಯಾಗಿಯೂ ಬೆಳೆಯುವಮಾಡುತ್ತದೆ. ಅದು ಕೂದಲು ಉದುರಿಹೋಗುವುದನ್ನು ತಡೆಮಾಡುತ್ತದೆ. ಇದೆಲ್ಲಾ ಖಂಡಿತವಾದ ಮತ್ತು ಅತ್ಯಂತ ತೃಪ್ತಿಕರವಾದ ಫಲಗಳಾಗಿವೆ.

ವಾರಕ್ಕೆ ಎರಡು ಮೂರು ಸಲ ಈ ಎಣ್ಣೆಯನ್ನು ಹಚ್ಚಿ ಮೃದುವಾಗಿ ತಿಕ್ಕುತ್ತಿದ್ದರೆ ಬೋಳಾಗಿರುವ ಭಾಗದ ಕೂದಲು ಬೇರು ತಂಪಾಗಿ ತನಿಯಾಗಿ ಬಹು ಸೊಂಪಾಗಿ ಬೆಳೆಯುವುದಲ್ಲದೆ ಎಲ್ಲಾ ತರದ ನೋವೆಯನ್ನೂ ಹೋಗಲಾಡಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಬೇರುಗಳಿಗೆ ತನಿಯಿಲ್ಲದೆ ಕೂದಲು ಉದುರಿ ಹೋಗುವುದು. ಕಾಮಿನಿಯಾ ಎಣ್ಣೆಯೇ ಅದಕ್ಕೆ ಆಗತ್ಯವೂ ಅನುಕೂಲವೂ ಆದ ಆಹಾರ; ಇದನ್ನು ಉಪಯೋಗಿಸಿ ನೋಡಿರಿ.

ಕ್ರಯದ ದರಗಳು:—1 ಸೀಸೆಗೆ ರೂ. 1; ವಿ. ಪಿ. ಚಾರ್ಜು ಬೇರೆ 4 ಆಣೆ.

ವಿಳಾಸ:—ಏಜಂಟರು, ದಿ. ಊಲನ್ ಮಾರ್ಟ್; ಮಂಗಳೂರು.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! ಬಾಲಾಮೃತ. ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕು ಕಜ್ಜಿ, ಅಜೀರ್ಣತೆ, ಮಲಬದ್ಧತೆ ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಟಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0 ಮೂರು ಬಾಟ್ಲಿಗಳಿಗೆ 2—0—0. 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕಾರಕ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದಬಂದ ಅಶಕ್ತತೆ, ಒಳಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಕೋಷ್ಠ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದುರೂ.	0—4—0
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ 1—4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ	„ 0—4—0
[illegible]—ತಲೆನೋವು, ವಾತಕ್ಕೆ ಸಂಧಿವಾತಕ್ಕೆ	„ 0—8—0

Registered No M. 498.

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸು ಸೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6 ಸಂಚಿಕೆ 5.

ಮಂಗಳೂರು ತಾ. 2 ನೇ ಶುಕ್ರವಾರ ಫೇಬ್ರುವರಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, [illegible]ನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳು, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ, ಶೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ್, ಎಲ್. ಎಮ್. ಎಂಡ್. ಎಸ್. ಎಂಡ್. ಜೆ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ [illegible]ಕಾರಿ.

ದೆಸಾಯಿ ಸರ್ವೋತ್ತಮ [illegible] ವಕೀಲ:—ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ [illegible]ಡಗು:—ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ಪ್ರೆಸಿಡೆಂಟ್ ವಾಂದ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—ನಿಮ್ಮಿಂದ ಪಡಕೊಂಡ ಅಮೃತಾಂಜನ [illegible]ಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.

ಅಮೃತಾಂಜನ ಚರ್ಚಿತವಾದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಸೆಳೆಯೂ ಬಾರದಂತೆ [illegible] ಸೆಳೆ ಇಲ್ಲದ ಸ್ಥಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. [illegible]ಂಡ್. ಎಸ್., ಮುಂಬಯಿ, ಬರಿಯುವದೇನಂದರೆ:—ನಿಮ್ಮ ಅಮೃತಾಂಜನವನ್ನು ನಾನು ಸಂಧಿವಾತಕ್ಕೂ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿ[illegible] ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ [illegible]

ಜಾಗ್ರತೆ:--ಈಗ [illegible]ಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೆಟ್ಟಲ್ಪಟ್ಟಿರುತ್ತದೆ.

ವಿಳಾಸ:— ಅಮೃತಾಂಜನ ಡಿಪ್ಪೊ,
[illegible]ರ್ ರೋಡ್, ಫೋರ್ಟ, ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ರಕ್ತವೃದ್ಧಿ, ಬಾಟ್ಲಿ 1ಕ್ಕೆ 1ರೂಪಾಯಿ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೊಲೆರಾ ಮಾತ್ರೆ.

ಕೊಲೆರಾ, ವಾಂತಿಭೇದಿಗಳ ಮೇಲೆ ಬಹಳ ಉತ್ತಮ ಔಷಧ. ಕ್ರಯ 6ಆಣೆ.

ನೇತ್ರಾಂಜನ.

ಮಂದದೃಷ್ಟಿಯನ್ನೂ ಕಣ್ಣುನೋವನ್ನೂ ಗುಣಪಡಿಸುವದು. ಕ್ರಯ 4ಆಣೆ.

ಕೇಶವರ್ಧಿನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

ಜುಲಾಬು ಮಾತ್ರೆ 8 ಆಣೆ; ಪ್ರಮೇಹಮಿಶ್ರಣ 1ರೂಪಾಯಿ; ಕಫಹಾರಿ 1 ರೂಪಾಯಿ 4 ಆಣೆ; ಕಫನಾಶಕ ಚೂರ್ಣ 8 ಆಣೆ; ಜಂತುವಾತಹಾರಿ 8 ಆಣೆ.

ವಿಳಾಸ:—

ವಿಲಿಯಂ ಮತ್ತು ಕಂಪೆನಿ,
109 ಫ್ರೆಯರ್ ರೋಡ್,
ಮುಂಬಯಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕೆಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.

ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.

ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆಯಿದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು.

ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,

ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,

ಮಂಗಳೂರು, ದ. ಕ.

ಸ್ವದೇಶಿ ಲ್ಯಾಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮುಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರೀಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20–6–0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಹೆಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚಿಕಾರ ಬ್ರದರ್ಸ್ ಉಡುಪಿ,

ವಂದೇಮಾತರಂ

ಪ್ರಸಿದ್ಧವಾದ ಈ ಸಂಸ್ಕೃತ ಗೀತ, ಅದರ ಅರ್ಥ, ಉತ್ಪತ್ತಿ, ಚಿತ್ರಗಳೂ ಅದರ ಮೂಲ ಕರ್ತರಾದ ಬಂಕಿಂ ಚಂದ್ರಚಟ್ಟೋಪಾಧ್ಯಾಯರ ಜೀವನ ಚರಿತ್ರೆಯೂ, ದೇಶಾಭಿಮಾನದ ನಿಜ ಸ್ವರೂಪವೂ ವಿವರಿಸಲ್ಪಟ್ಟಿವೆ. ಶೈಲಿಯು ಗಂಭೀರವಾಗಿದೆ. ಬೆಲೆ ಒಂದೇ ಆಣೆ.

ಸ್ವದೇಶಿ.

ಈ ಸಣ್ಣ ಪುಸ್ತಕದಲ್ಲಿ ದೇಶಾಭಿಮಾನದ ಅವಶ್ಯಕತೆಯೂ ದೇಶಾಭಿಮಾನಿಗಳ ಕರ್ತವ್ಯಗಳೂ, ಭಾರತೀಯರ ಐಹಿಕ ಮತ್ತು ಪಾರತ್ರಿಕ ಸುಗಳಿಗೆ ಮುಖ್ಯವಾದ ದಶವಿಧ ಧರ್ಮಗಳೂ ಸಕಾರಣವಾಗಿ ಉದಾಹರಣಪೂರ್ವಕವಾದ ಸುಲಭ ರೀತಿಯಲ್ಲಿ ವಿವರಿಸಲ್ಪಟ್ಟಿವೆ. ಬೆಲೆ ಒಂದೂವರೆ ಆಣೆ ಮಾತ್ರ.

ರಾಜಾರಾಮಮೋಹನರಾಯ್

ಸ್ವದೇಶ ಭಕ್ತರಲ್ಲಿ ಮೊತ್ತಮೊದಲನೆಯವನೂ, ಈಗಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ಪ್ರಸಂಗಗಳಿಗೆ ಪ್ರಾರಂಭಿಸಿದವನೂ, ಬ್ರಹ್ಮಸಮಾಜ ಸ್ಥಾಪಕನೂ, ನವೀನ ಭರತಖಂಡದ ತಂದೆಯೂ ಆದ ಮಹಾ ಪುರುಷನ ಜೀವನ ಚರಿತ್ರೆ ಸಚಿತ್ರ ಅನೇಕ ವಿದ್ವಾಂಸರಿಂದ ಮೆಚ್ಚಲ್ಪಟ್ಟಿದೆ. ಬೆಲೆ ಒಂದೇ ಆಣೆ.

ಹರಿಭಕ್ತಿಸಾರ

ಬಾಲಕ ಬಾಲಕಿಯರ ಬಾಯಿ ಪಾಠಕ್ಕೆ ಅನುಕೂಲವಾಗಿ ಭಕ್ತಿ ರಸಭರಿತವಾಗಿರುವ ಪದ್ಯ ಕಾವ್ಯದ ಶುದ್ಧ ಪ್ರತಿ ಗ್ರಂಥಕರ್ತರಾದ ಕನಕದಾಸರ ಚರಿತ್ರೆಯ ಸಹಿತ. ಬೆಲೆ ಒಂದೇ ಆಣೆ.

ವೇದವೇದಾಂತ ಗ್ರಥಾವಳಿ.

ಬೆಲೆ ಒಂದೂವರೆ ಆಣೆ.

ವಿಳಾಸ:—ಮ್ಯಾನೇಜರ್,

"ಸುಮತಿ ಗ್ರಂಥಮಾಲಾ" ಆಫೀಸು

ಬೆಂಗಳೂರು ಸಿಟಿ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದ ಡಿಸ್‌ಪೆನ್ಸರಿ.

ಪ್ರಿಯಾಲಾಸ

ಎಂಬ ಜೀವನೌ

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿ)ವೆಂದೂ ನಿರ್ಧರಿಸಿರುವರು. ರಕ್ತದಾಟಿಕ್ಕಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ಪ್ಲೈತ್, ಪ್ಲೀಹ, ಹೃದಯ ಅಸ್ಸೃಗ್ವರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ...ಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶು... ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ...ಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನ... ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವ... ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನವಾಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನ... ಪ್ರಿಯಾಲಾಸವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕ್ರಿ...ಸವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾ...ಗೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವನ್ನುತರಿಸಿ ಕೆಲವುಸಮಯ ಸೇವನೆಮಾ... ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅ...ವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವನ್ನು ಸೇವಿಸಿ...ಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1–ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವ...ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ. 1–0–0 ವಿ. ಪಿ. ಮೂಲಕ 1–3–0. 2000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0–15–0. 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ,

ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ

ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.



ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನ್ನೂ, ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ಪಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ ಬ್ಯೂರೋ,

ಹಂಪನಕಟ್ಟಾ, ಮಂಗಳೂರು ದ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‍ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‍ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿಯ ಬೇನಿಹಾರಿ ಮುಲಾಮು.)

EST. 1898.



ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜಿ, ಸುಟ್ಟ ಘಾಯ, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0-8-0. ಆರು ಡಬ್ಬಿಗಳಿಗೆ 2-8-0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಶಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ

ವಿಳಾಸ;—ಪರಿಮಳಾಂಜನ ಡಿಪೋ,

ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ. ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ:—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,

ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡಾ.

ಸ್ವದೇಶಾಭಿಮಾನಿ.

☞ ಮಂಗಳೂರು, ಶನಿವಾರ ತಾರೀಕು 2ನೇ ಫೆಬ್ರುವರಿ 1912. ☜

ಮದ್ರಾಸು ಗವರ್ನರ ದೊರೆಗಳವರು.

ನಮ್ಮ ಈ ಸಂಸ್ಥಾನಕ್ಕೆ ಹೊಸ ಗವರ್ನರರಾಗಿ ಶುಮಾರು ಮೂರು ತಿಂಗಳ ಮೊದಲು ಬಂದಿರುವ ಕಾರ್ಮಿಕೆಲ್ ಪ್ರಭುಗಳನ್ನು ನವೀನ ಸಂಸ್ಥಾನವಾಗಿ ಏರ್ಪಡುವ ಬಂಗಾಳಾಧಿಪತ್ಯಕ್ಕೆ ಗವರ್ನರರಾಗಿ ನೇಮಿಸಿರುವರೆಂಬುದನ್ನೂ ಮದ್ರಾಸು ಸಂಸ್ಥಾನಕ್ಕೆ ಕಲೆಕ್ಟರ ಮೊದಲಾದ ಹುದ್ದೆಗಳನ್ನು ನೋಡಿ ಲೆಪ್ಟಿನೆಂಟ್ ಗವರ್ನರರ ಪದವಿಯನ್ನು ಹೊಂದಿಕೊಂಡಿರುವ ಮಹನೀಯರೊಬ್ಬರು ನೇಮಿಸಲ್ಪಡುವ ಸಂಭವವಿರುವದೆಂಬುದನ್ನೂ ವಾಚಕರು ಈ ಮೊದಲೇ ತಿಳಿದಿರಬಹುದು. ಚಕ್ರವರ್ತಿಗಳ ಡಿಲ್ಲಿ ದರ್ಬಾರಿನ ಕಾಲದಲ್ಲಿ ಬಂಗಾಳದ ಜನರ ಮನಸ್ತಾಪವನ್ನು ಶಮನಿಸುವರೆ ವಂಗ ವಿಭಾಗವನ್ನು ರದ್ದು ಪಡಿಸಿ ಬಂಗಾಳವು ಒಂದೇ ದೊಡ್ಡ ಸಂಸ್ಥಾನವಾಗಬೇಕೆಂಬ ವರಪ್ರದಾನವನ್ನು ದಯಪಾಲಿಸಿದರು. ಈ ಬಂಗಾಳ ಸಂಸ್ಥಾನಕ್ಕೆ ಗವರ್ನರರಾಗಿ ಮದ್ರಾಸು ಗವರ್ನರರಾದ ಕಾರ್ಮಿಕೆಲ್ ಪ್ರಭುಗಳು ನೇಮಿಸಲ್ಪಟ್ಟಿರುವರು. ಕಾರ್ಮಿಕೇಲ್ ಪ್ರಭುಗಳು ಮದ್ರಾಸಿಗೆ ಬಂದ ಕೆಲವು ತಿಂಗಳುಗಳಲ್ಲಿಯೇ ಪ್ರಜಾ ಪ್ರೀತಿಗೆ ಎಷ್ಟರಮಟ್ಟಿಗೆ ಪಾತ್ರರಾಗಿರುವರೆಂಬುದನ್ನು ತಿಳಿದರೆ ಇವರನ್ನು ಬಂಗಾಳದ ಗವರ್ನರರಾಗಿ ನೇಮಿಸುವದರಿಂದ ನಮ್ಮ ಸಂಸ್ಥಾನಕ್ಕೆ ಉಂಟಾಗುವ ನಷ್ಟದ ಪರಿಮಿತಿಯನ್ನು ಗೊತ್ತುಮಾಡಿಕೊಳ್ಳಬಹುದು.

ಕಾರ್ಮಿಕೆಲ್ ಪ್ರಭುಗಳು ಮದ್ರಾಸಿಗೆ ಬಂದು ಗವರ್ನರರ ಪದವಿಯನ್ನು ವಹಿಸಿಕೊಂಡಂದಿನಿಂದ ಈ ತನಕವೂ ಪ್ರಜಾಪರಿಚಿತಿಯನ್ನು ತಾವೇ ಸ್ವತಹ ಮಾಡಿಕೊಳ್ಳುವುದರಲ್ಲಿ ನಿರತರಾಗಿರುವರು. ತನ್ನ ಆಧೀನತೆಯಲ್ಲಿರುವ ಆಯಾ ಸರಕಾರಿ ಆಫೀಸು ಪ್ರಜಾಸಂಸ್ಥೆ ಮೊದಲಾದವುಗಳನ್ನು ಸಂದರ್ಶಿಸಿ ಅವುಗಳ ವಿಷಯ ನಡೆಸಿದ ವಿಚಾರದಿಂದ ತಮ್ಮಮುಂದೆ ಬರುವ ಸಕಲ ವಿಷಯಗಳನ್ನೂ ಕೂಲಂಕಷವಾಗಿ ತಿಳಿಯುವ ಆಸಕ್ತಿಯು ಖಾವಂದರಲ್ಲಿದೆಂಬುದಾಗಿ ಸ್ಪಷ್ಟವಾಗುತ್ತದೆ. ದೀನರ ಮತ್ತು ಸಂಕಷ್ಟದಿಂದ ಬಳಲುವ ಪ್ರಜಾವರ್ಗಗಳಿರುವ ವಠಾರಗಳನ್ನು ನೋಡುವ ಬಯಕೆಯು ತನ್ನಲ್ಲಿರುವುದೆಂದು ಸಂದರ್ಭಾನುಸಾರ ಮದ್ರಾಸಿನ ಪ್ರಜಾಮುಖಂಡರೊಡನೆ ಮಾಡಿದ ಸಂಭಾಷಣೆಗಳಲ್ಲಿ ವ್ಯಕ್ತಪಡಿಸಿರುವರಲ್ಲದೆ ಬಂಗಾಳದ ಗವರ್ನರರಾಗಿ ಹೋಗುವ ಸೂಚನೆಯು ಖಾವಂದರವರಿಗೆ ದೊರಕುವ ಮೊದಲು ಪ್ರಜಾಸಾಮಾನ್ಯರೊಡನೆ ತಾನೇ ಸ್ವತಹ ಮಾತನಾಡಲು ಶಕ್ತನಾಗುವಂತೆ ತಮಿಳು ಮತ್ತು ತೆಲುಗು ಭಾಷೆಗಳನ್ನು ಕಲಿಯುವ ಏರ್ಪಾಡನ್ನು ಸಹ ಮಾಡಿದ್ದರೆಂಬದಾಗಿ ತಿಳಿಯುತ್ತೇವೆ. ಕಾರ್ಮಿಕೆಲ್ ಪ್ರಭುಗಳು ಬ್ರಿಟಿಷ್ ಪಾರ್ಲಿಮೆಂಟ ಸಭೆಯ ಉದಾರಪಕ್ಷದವರಾಗಿದ್ದು ಔಸ್ತ್ರಾಲ್ಯದ ಗವರ್ನರರಾಗಿ ಹ್ಯಾಗೆ ಲೋಕಪ್ರಿಯರಾಗಿದ್ದರೆಂಬುದನ್ನು ಹಿಂದೊಮ್ಮೆ ಹೇಳಿರುತ್ತೇವೆ. ಮದ್ರಾಸಿನಲ್ಲಿಯೇ ಪ್ರಭುಗಳನ್ನು ಗವರ್ನರರಾಗಿ ಇರಗೊಡಿಸಬೇಕೆಂದು ಚಕ್ರವರ್ತಿಯರನ್ನು ಪ್ರಾರ್ಥಿಸಲು ಮೊನ್ನೆ ದಿನ ಕೂಡಿದ ಮಹಾ ಸಭೆಯಲ್ಲಿ ಡಾಕ್ಟರ್ ನಾಯರರು ಸೂಚಿಸಿದಂತೆ ಉದಾರ ಸಿದ್ಧಾಂತಗಳನ್ನನುಸರಿಸುವ ಕಾರ್ಮಿಕೆಲ್ ಪ್ರಭುಗಳಂಥವರ ಆಳಿಕೆಯು ಮದ್ರಾಸಿಗೆ ಬಹಳ ಅಗತ್ಯವಾಗಿರುವುದು. ೧೮೮೮ರಿಂದ ಈ ವರೆಗೆ ಬ್ರಿಟಿಷ್ ಪಾರ್ಲಿಮೆಂಟ ಸಭೆಯ ಉದಾರಪಕ್ಷದವರಿಗೆ ಮದ್ರಾಸು ಸಂಸ್ಥಾನಕ್ಕೆ ಗವರ್ನರರನ್ನು ನೇಮಿಸುವ ಸಂದರ್ಭವು ದೊರಕಿರಲಿಲ್ಲ. ಪಾರ್ಲಿಮೆಂಟಿನ ಉದಾರಪಕ್ಷದವರು ಈಗ ಅಧಿಕಾರದಲ್ಲಿದ್ದು ಈ ಉದಾರಪಕ್ಷದವರಿಂದ ಹಿಂದೂಸ್ಥಾನದಲ್ಲಿ ಮಾಡೋಣಾದ ರಾಜ್ಯಭಾರ ಮಾರ್ಪಾಟಗಳ ಸಮರ್ಪಕವಾದ ಜ್ಯಾರಿಯು ಮದ್ರಾಸಿನಲ್ಲಿ ಈ ಪಕ್ಷದವರ ಉದಾರ ಕಲ್ಪನೆಗಳಿಗೆ ತಕ್ಕಂತೆ ನಡದಿರುವುದಿಲ್ಲ. ಆದ್ದರಿಂದ ಕಾರ್ಮಿಕೆಲ್ ಪ್ರಭುಗಳನ್ನು ಪ್ರಜಾಹಿತಕ್ಕಾಗಿ ಮದ್ರಾಸಿನ ಗವರ್ನರರಾಗಿಯೇ ಇರಗೊಡಿಸುವುದು ಅತ್ಯಗತ್ಯ.

ಒಂದು ವೇಳೆ ಪ್ರಜೆಗಳ ಈ ಬಿನ್ನಹವನ್ನು ನಡಿಸಿಕೊಡುವರೆ ಅಸಾಧ್ಯವೆಂತ ತೋರಿದರೂ ಪಾರ್ಲಿಮೆಂಟ್ ಮೊದಲಾದ ಸಭಾಕಾರ್ಯ ಮಾಹಿತಿ ಇದ್ದು ರಾಜನೀತಿ ನಿಪುಣರೂ ಪ್ರಜಾ ಮೈತ್ರಿಭಾವವುಳ್ಳವರೂ ಆದ ಉದಾರ ಕಲ್ಪನೆಗಳುಳ್ಳ ನವೀನ ಗವರ್ನರರೊಬ್ಬರನ್ನೇ ಈ ಸಂಸ್ಥಾನಕ್ಕೆ ಕಳುಹಿಸಿಕೊಡಬೇಕಲ್ಲದೆ ಲೆಪ್ಟಿನೆಂಟ್ ಗವರ್ನರರಾಗಿದ್ದವರನ್ನು ಇಲ್ಲಿಯ ಗವರ್ನರರನ್ನಾಗಿ ಮಾಡಿದರೆ ಜನರಿಗೆ ಸಂತುಷ್ಟಿ ಇರದು. ಈ ರೀತಿ ಸಹ ಮದ್ರಾಸಿನಲ್ಲಿ ಕೂಡಿದ ಮಹಾಜನ ಸಭೆಯವರು ಚಕ್ರವರ್ತಿಗಳನ್ನು ಪ್ರಾರ್ಥಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಚಕ್ರವರ್ತಿಗಳ ಸಂದರ್ಶನೆಯ ಮರ್ಯಾದೆ ಎಂತೂ ನಮ್ಮ ಸಂಸ್ಥಾನಕ್ಕೆ ಪ್ರಾಪ್ತಿಸಲಿಲ್ಲ. ಚಕ್ರವರ್ತಿಗಳ ವರಗಳ ಮೂಲಕ ಇತರ ಸಂಸ್ಥಾನದವರೆಲ್ಲರೂ ಸಂತೋಷಪಡುತ್ತಿರುವಾಗ ನಮ್ಮವರಿಗೆ ಮಾತ್ರ ಇದು ಕಡಮೆಯಾಗದಂತೆ ಈ ವಿಷಯದ ಪ್ರಜಾಪ್ರಾರ್ಥನೆಗೆ ತಕ್ಕದಾದ ನಿಗಾಕೊಡಲ್ಪಡುವುದಾಗಿ ನಂಬಿದ್ದೇವೆ. 'ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸವೆಂಬ' ಭಾಗ್ಯವು ನಮ್ಮದಾಗಿರಕೂಡದು.

ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.

ಈ ಬೇಂಕಿನ ಹಿಶೆದಾರರ ವರ್ಷಾವಧಿ ಸಭೆಯು ತಾ. 28ನೇ ಆದಿತ್ಯವಾರ ಕೆನರಾ ಹ್ಯಾ ಸ್ಕೂಲಿನಲ್ಲಿ ಕೂಡಿತು. ಬೇಂಕಿನ ಆದಾಯ ವೆಚ್ಚಗಳ ಲೆಖ್ಖಪರಿಶೋಧಕರ ರಿಪೋರ್ಟು ಮತ್ತು ಡೈರೆಕ್ಟರುಗಳ ರಿಪೋರ್ಟನ್ನು ಸಹ ಈ ಸಭೆಯಲ್ಲಿ ಮಂಜೂರು ಮಾಡಿದ್ದಲ್ಲದೆ ಹಿಶೆದಾರರಿಗೆ ಸೇಕಡಾ 6ರ ದರದ ಮುನಾಫೆ ಮತ್ತು ಸೇಕಡಾ 2ರ ದರದ ಐಚ್ಛಿಕ ಮುನಾಫೆ ಈ ರೀತಿ ಸೇಕಡಾ 8ರ ಮುನಾಫೆಯನ್ನು ಕೊಡಬೇಕೆಂತ ಸಹ ತೀರ್ಮಾನಿಸಲ್ಪಟ್ಟಿರುವುದು. ಬೇಂಕು ಸ್ಥಾಪಿತವಾದಂದಿನಿಂದ ಸೇಕಡ 6ರಿಂದ 8ರ ವರೇಗಿನ ಮುನಾಫೆಯನ್ನು ಹಿಶೆದಾರರಿಗೆ ಅನುಕೂಲಿಸಿ ಕೊಟ್ಟದ್ದಕ್ಕೆ ಬೇಂಕಿನ ಡೈರೆಕ್ಟರರು ಮೊದಲಾದ ಅಧಿಕಾರಿಗಳೆಲ್ಲರಿಗೆ ಹಿಶೆದಾರರು ಕೃತಜ್ಞರಾಗಿರ ಬೇಕಾಗಿರುತ್ತದೆ.

ಈ ಮೊದಲು ಪ್ರಕಟಿಸಿದಂತೆ ಈ ಬೇಂಕಿನ ಹಿಶೆಗಳೆಲ್ಲವು ಪೂರ್ಣ ವಿಕ್ರಯಿಸಲ್ಪಟ್ಟಿರುತ್ತವೆ. ಹಿಶೆದಾರರಿಗೆ ಪ್ರತಿ ವರುಷದಲ್ಲಿಯೂ ದೊರೆತ ಮುನಾಫೆಯ ದರದಿಂದ ಈ ಬೇಂಕಿನ ಹಿಶೆಗಳಲ್ಲಿ ಹಣ ವಿನಿಯೋಗವು ತುಂಬಾ ಲಾಭಕರವೆಂಬದಾಗಿ ಕಾರ್ಯತಃ ತೋರಿ ಬಂದು ಹಿಶೆಗಳೆಲ್ಲವು ಕೊಂಡುಕೊಳ್ಳಲ್ಪಟ್ಟಿರುವವು. ಬೇಂಕಿನ ಕಳದ ವರುಷದ ಆದಾಯ ವೆಚ್ಚಗಳನ್ನು ಪರಿಶೀಲಿಸಿದರೆ ಬೇಂಕಿನ ಅಭಿವೃದ್ಧಿ ಸ್ಥಿತಿಯು ಮತ್ತಷ್ಟು ವಿಶೇಷವಾಗಿ ತೋರಿಬರುವುದು. 1910ನೇ ವರುಷದ 9 ತಿಂಗಳಲ್ಲಿ ರೂ. 11,929-5-6 ಐನ್ ಮುನಾಫೆಯಾಗಿತ್ತು. 1911ನೇ ವರುಷದಲ್ಲಿ ಇದು ರೂ. 20,644-4-1 ಆಗಿದೆ. ಬೇಂಕಿನ ಸ್ಥಿರತ್ವವನ್ನು ನೆಲೆಗೊಳಿಸುವ ರಿಜರ್ವ್ ಫಂಡು ಎಂಬ ಆಪದ್ಧನದ ದ್ರವ್ಯ ಸಂಚಯವು ರೂ. 17,000ವಾಗಿರುವುದು. ಅಂದರೆ ಕಳೆದ ವರುಷಕ್ಕಿಂತ ಇದು ಇಮ್ಮಡಿಯಾಗಿರುವುದು. ರಿಜರ್ವ್ ಫಂಡೆಂಬ ಬೇಂಕಿನ ಈ ಆಪದ್ಧನಸಂಚಯವನ್ನು ಹೆಚ್ಚಿಸಲು ಡಿರೆಕ್ಟರುಗಳಲ್ಲಿರುವ ಆಸಕ್ತಿಯು ಶ್ಲಾಘ್ಯನೀಯವಾಗಿರುವುದು. ಆಪದ್ಧನವು ಹೆಚ್ಚಾಗಿ ಬಂದಂತೆ ಹಿಶೆಗಳ ಮೌಲ್ಯವು ಏರುತ್ತ ಬರುವುದಲ್ಲದೆ ಬೇಂಕಿನಲ್ಲಿ ಹಣವನ್ನಿಡುವ ಇತರರಿಗೆ ಸಹ ಇದರಿಂದ ಪ್ರೋತ್ಸಾಹ ದೊರಕುವದು. ಫಿಕ್ಸೆಡ್ ಡಿಪೋಜಿಟ್ ಎಂಬ ಬೇಂಕಿನಲ್ಲಿ ಬಡ್ಡಿ ಬಗ್ಗೆ ಇಡೋಣಾದ ಕಾಯಂ ಠೇವಣಾತಿ ಮೊಬಲಗು 303,204-15-6, ಈ ಬೇಂಕಿನ ಸೇವಿಂಗ್ಸ್ ಬೇಂಕಿನ ಠೇವಣಾತಿ ರೂ. 17,946-12-2, ಈ ಮೊಬಲಗುಗಳೂ ಕರೆಂಟ್ ಎಕೌಂಟೆಂಬ ಚಾಲ್ತಿ ಲೆಖ್ಖದಲ್ಲಿ ನಡೆದ ರೂ. 346,086-10-8ರಷ್ಟರ ಹಣ ಚಲಾವಣೆಯೂ ಈ ಬೇಂಕಿನಲ್ಲಿ ಜನರೆಲ್ಲರ ವಿಶ್ವಾಸವು ದಿನೇ ದಿನೇ ಹೆಚ್ಚಾಗುತ್ತಲಿರುವುದೆಂಬುವದನ್ನು ಸೂಚಿಸುತ್ತದೆ.

ಕೆನರಾ ಬೇಂಕಿನವರ ಕಳದ ವರುಷದ ಹಣದ ವೈವಾಟವು ಈ ರೀತಿಯಾಗಿರುವುದು. ಆಭರಣಗಳ ಮೇಲೆ ಕೊಟ್ಟ ಐವಜು ರೂ. 204,576-0-0, ಡಿಮಾಂಡು ನೋಟು, ಪ್ರೊನೋಟು ಮತ್ತು ಬಿಲ್ಸಗಳ ಮೇಲೆ ರೂ. 933,915-0-0, ಸರಕುಗಳ ಅಡಿವಿನ ಮೇಲೆ ರೂ. 26,930-0-0. ಈ ಮೊದಲಾದ ವೈವಾಟಗಳನ್ನು ಬೇಂಕಿನ ಡಿರೆಕ್ಟರರೂ ಸೆಕ್ರಟೆರಿ ಮೊದಲಾದ ಸಿಬಂದಿಯವರೂ ನಡೆಸಿ ಕಳದ ವರುಷದಲ್ಲಿ ಬಡ್ಡಿಯಾಗಿ ರೂ. 36,905-6-1 ಹಿಶೆದಾರರ ಪರವಾಗಿ ಗಳಿಸಿದ್ದಲ್ಲದೆ ಕಾಯಂ ಠೇವಣಾತಿಯವರಿಗೆ ರೂ. 8,354-10-10, ಸೇವಿಂಗ್ಸ್ ಬೇಂಕ್ ಠೇವಣಾತಿಯವರಿಗೆ ಬಡ್ಡಿ ರೂ. 637-1-1, ತೆರಿಗೆ ಮತ್ತು ಕಟ್ಟೋಣ ಬಾಡಿಗೆ ರೂ. 485-13-8, ಬೇಂಕಿನ ರಿಜರ್ವ್ ಫಂಡಿಗೆ ರೂ. 4,300-1-11 ಈ ಮೊದಲಾದ ಮೊಬಲಗುಗಳನ್ನು ಕಳದು ಹಿಶೆದಾರರಿಗೆ ಸೇಕಡಾ 8ರ ದರದ ಮುನಾಫೆಯನ್ನು ಕೊಟ್ಟಿರುವರು. ಈ ಎಲ್ಲಾ ಶ್ರಮ ಯೋಚನೆಗಳಿಗೆ ಪ್ರತಿಫಲವಾಗಿ ಬೇಂಕಿನ ಸಿಬಂದಿಯವರು ರೂ. 1951-8-11ದನ್ನೂ ಡಿರೆಕ್ಟರರು ರೂ. 304-0-0ನ್ನೂ ಆಭರಣ ಪರೀಕ್ಷಕರು ಮೊದಲಾದವರು ರೂ. 715-3-2ನ್ನೂ ಇಡೀ ವರುಷದಲ್ಲಿ ಪಡದಿರುವರಂದರೆ ಬೇಂಕಿನ ಅಧಿಕಾರಿಗಳು ಬೇಂಕಿನ ಕಾರ್ಯಗಳೆಲ್ಲವನ್ನೂ ಮಿತವ್ಯಯದಿಂದ ನಡಿಸುತ್ತಿರುವರೆಂದು ಬೇರೆ ಹೇಳ ಬೇಕೆಂತಿಲ್ಲ.

ಬೇಂಕಿನ ಈ ಎಲ್ಲಾ ವರದಿಯನ್ನು ಮಂಜೂರು ಮಾಡಲು ಕೂಡಿದ ಹಿಶೆದಾರರ ಸಭೆಯ ವೃತ್ತಾಂತವು ಸಹ ಬಹಳ ತೃಪ್ತಿಕರವಾಗಿದೆ. ಬೇಂಕಿನ ಸ್ಥೈರ್ಯವೂ ಮುನಾಫೆಯೂ ಹೆಚ್ಚಾಗುವಂತೆ ಕೆಲವು ವಾದಗಳನ್ನು ನಡಿಸಿ ಹಿಶೆದಾರರು ಸರ್ವಸಮ್ಮತವಾಗಿ ಐಕ್ಯದಿಂದ ಬೇಂಕಿನ ವರಧಿಯನ್ನೂ ಇತರ ನಿರ್ಣಯಗಳನ್ನೂ ಮಂಜೂರು ಮಾಡಿದ್ದಲ್ಲದೆ ಮುಂದಿನ ವರುಷಗಳಿಗೆ ಡಿರೆಕ್ಟರರನ್ನಾರಿಸಿ ತಮ್ಮ ಸಭೆಯನ್ನು ಮುಗಿಸಿದರು. ಡಿರೆಕ್ಟರುಗಳ ಹೆಸರುಗಳನ್ನು ವೃತ್ತಾಂತ ಸಂಗ್ರಹದಲ್ಲಿ ಪ್ರಕಟಿಸಿರುತ್ತೇವೆ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಚರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ
(ವಿದ್ಯುಚ್ಛಕ್ತಿಯ ಬೇನಿಹಾರಿ ಮುಲಾಮು.)
EST. 1898.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕಣ್ಣೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜಿ, ಸುಟ್ಟ ಘಾಯ, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0–8–0. ಆರು ಡಬ್ಬಿಗಳಿಗೆ 2–8–0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಶಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೊತ್ತೇಜಕ, ಮನೋಲ್ಲಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷದಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ ಪುಕಟ ರವಾನಿಸುವೆವು.

ವಿಳಾಸ:—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡಾ.

ಸ್ವದೇಶಾಭಿಮಾನಿ

☞ ಮಂಗಳೂರು, ಶನಿವಾರ ತಾರೀಕು 2ನೇ ಫೆಬ್ರುವರಿ 1912. ☜

ಮದ್ರಾಸು ಗವರ್ನರರ ದೊರೆಗಳವರು.

ನಮ್ಮ ಈ ಸಂಸ್ಥಾನಕ್ಕೆ ಹೊಸ ಗವರ್ನರರಾಗಿ ಶುಮಾರು ಮೂರು ತಿಂಗಳ ಮೊದಲು ಬಂದಿರುವ ಕಾರ್ಮಿಕೆಲ್ ಪ್ರಭುಗಳನ್ನು ನವೀನ ಸಂಸ್ಥಾನವಾಗಿ ಏರ್ಪಡುವ ಬಂಗಾಳಾಧಿಪತ್ಯಕ್ಕೆ ಗವರ್ನರರಾಗಿ ನೇಮಿಸಿರುವರೆಂಬುದನ್ನೂ ಮದ್ರಾಸು ಸಂಸ್ಥಾನಕ್ಕೆ ಕಲೆಕ್ಟರ ಮೊದಲಾದ ಹುದ್ದೆಗಳನ್ನು ನೋಡಿ ಲೆಫ್ಟಿನೆಂಟ್ ಗವರ್ನರರ ಪದವಿಯನ್ನು ಹೊಂದಿಕೊಂಡಿರುವ ಮಹನೀಯರೊಬ್ಬರು ನೇಮಿಸಲ್ಪಡುವ ಸಂಭವವಿರುವದೆಂಬುದನ್ನೂ ವಾಚಕರು ಈ ಮೊದಲೇ ತಿಳಿದಿರಬಹುದು. ಚಕ್ರವರ್ತಿಗಳ ಡಿಲ್ಲಿ ದರ್ಬಾರಿನ ಕಾಲದಲ್ಲಿ ಬಂಗಾಳದ ಜನರ ಮನಸ್ತಾಪವನ್ನು ಶಮನಿಸುವರೆ ವಂಗ ವಿಭಾಗವನ್ನು ರದ್ದು ಪಡಿಸಿ ಬಂಗಾಳವು ಒಂದೇ ದೊಡ್ಡ ಸಂಸ್ಥಾನವಾಗಬೇಕೆಂಬ ವರಪ್ರದಾನವನ್ನು ದಯಪಾಲಿಸಿದರು. ಈ ಬಂಗಾಳ ಸಂಸ್ಥಾನಕ್ಕೆ ಗವರ್ನರರಾಗಿ ಮದ್ರಾಸು ಗವರ್ನರರಾದ ಕಾರ್ಮಿಕೆಲ್ ಪ್ರಭುಗಳು ನೇಮಿಸಲ್ಪಟ್ಟಿರುವರು. ಕಾರ್ಮಿಕೇಲ್ ಪ್ರಭುಗಳು ಮದ್ರಾಸಿಗೆ ಬಂದ ಕೆಲವು ತಿಂಗಳುಗಳಲ್ಲಿಯೇ ಪ್ರಜಾ ಪ್ರೀತಿಗೆ ಎಷ್ಟರಮಟ್ಟಿಗೆ ಪಾತ್ರರಾಗಿರುವರೆಂಬುದನ್ನು ತಿಳಿದರೆ ಇವರನ್ನು ಬಂಗಾಳದ ಗವರ್ನರರಾಗಿ ನೇಮಿಸುವದರಿಂದ ನಮ್ಮ ಸಂಸ್ಥಾನಕ್ಕೆ ಉಂಟಾಗುವ ನಷ್ಟದ ಪರಿಮಿತಿಯನ್ನು ಗೊತ್ತುಮಾಡಿಕೊಳ್ಳಬಹುದು.

ಕಾರ್ಮಿಕೆಲ್ ಪ್ರಭುಗಳು ಮದ್ರಾಸಿಗೆ ಬಂದು ಗವರ್ನರರ ಪದವಿಯನ್ನು ವಹಿಸಿಕೊಂಡಂದಿನಿಂದ ಈ ತನಕವೂ ಪ್ರಜಾಪರಿಚಿತಿಯನ್ನು ತಾವೇ ಸ್ವತಹ ಮಾಡಿಕೊಳ್ಳುವುದರಲ್ಲಿ ನಿರತರಾಗಿರುವರು. ತನ್ನ ಆಧೀನತೆಯಲ್ಲಿರುವ ಆಯಾ ಸರಕಾರಿ ಆಫೀಸು ಪ್ರಜಾಸಂಸ್ಥೆ ಮೊದಲಾದವುಗಳನ್ನು ಸಂದರ್ಶಿಸಿ ಅವುಗಳ ವಿಷಯ ನಡೆಸಿದ ವಿಚಾರದಿಂದ ತಮ್ಮಮುಂದೆ ಬರುವ ಸಕಲ ವಿಷಯಗಳನ್ನೂ ಕೂಲಂಕಷವಾಗಿ ತಿಳಿಯುವ ಆಸಕ್ತಿಯು ಖಾವಂದರಲ್ಲಿದೆಂಬುದಾಗಿ ಸ್ಪಷ್ಟವಾಗುತ್ತದೆ. ದೀನರ ಮತ್ತು ಸಂಕಷ್ಟದಿಂದ ಬಳಲುವ ಪ್ರಜಾವರ್ಗಗಳಿರುವ ವಠಾರಗಳನ್ನು ನೋಡುವ ಬಯಕೆಯು ತನ್ನಲ್ಲಿರುವುದೆಂದು ಸಂದರ್ಭಾನುಸಾರ ಮದ್ರಾಸಿನ ಪ್ರಜಾಮುಖಂಡರೊಡನೆ ಮಾಡಿದ ಸಂಭಾಷಣೆಗಳಲ್ಲಿ ವ್ಯಕ್ತಪಡಿಸಿರುವರಲ್ಲದೆ ಬಂಗಾಳದ ಗವರ್ನರರಾಗಿ ಹೋಗುವ ಸೂಚನೆಯು ಖಾವಂದರವರಿಗೆ ದೊರಕುವ ಮೊದಲು ಪ್ರಜಾಸಾಮಾನ್ಯರೊಡನೆ ತಾನೇ ಸ್ವತಹ ಮಾತನಾಡಲು ಶಕ್ತನಾಗುವಂತೆ ತಮಿಳು ಮತ್ತು ತೆಲುಗು ಭಾಷೆಗಳನ್ನು ಕಲಿಯುವ ಏರ್ಪಾಡನ್ನು ಸಹ ಮಾಡಿದ್ದರೆಂಬದಾಗಿ ತಿಳಿಯುತ್ತೇವೆ. ಕಾರ್ಮಿಕೆಲ್ ಪ್ರಭುಗಳು ಬ್ರಿಟಿಷ್ ಪಾರ್ಲಿಮೆಂಟ ಸಭೆಯ ಉದಾರಪಕ್ಷದವರಾಗಿದ್ದು ಔಸ್ಟ್ರೇಲ್ಯದ ಗವರ್ನರರಾಗಿ ಹ್ಯಾಗೆ ಲೋಕಪ್ರಿಯರಾಗಿದ್ದರೆಂಬುದನ್ನು ಹಿಂದೊಮ್ಮೆ ಹೇಳಿರುತ್ತೇವೆ. ಮದ್ರಾಸಿನಲ್ಲಿಯೇ ಪ್ರಭುಗಳನ್ನು ಗವರ್ನರರಾಗಿ ಇರಗೊಡಿಸಬೇಕೆಂದು ಚಕ್ರವರ್ತಿಯರನ್ನು ಪ್ರಾರ್ಥಿಸಲು ಮೊನ್ನೆ ದಿನ ಕೂಡಿದ ಮಹಾ ಸಭೆಯಲ್ಲಿ ಡಾಕ್ಟರ್ ನಾಯರರು ಸೂಚಿಸಿದಂತೆ ಉದಾರ ಸಿದ್ಧಾಂತಗಳನ್ನನುಸರಿಸುವ ಕಾರ್ಮಿಕೆಲ್ ಪ್ರಭುಗಳಂಥವರ ಆಳಿಕೆಯು ಮದ್ರಾಸಿಗೆ ಬಹಳ ಅಗತ್ಯವಾಗಿರುವುದು. ೧೮೮೬ರಿಂದ ಈ ವರೆಗೆ ಬ್ರಿಟಿಷ್ ಪಾರ್ಲಿಮೆಂಟ ಸಭೆಯ ಉದಾರಪಕ್ಷದವರಿಗೆ ಮದ್ರಾಸು ಸಂಸ್ಥಾನಕ್ಕೆ ಗವರ್ನರರನ್ನು ನೇಮಿಸುವ ಸಂದರ್ಭವು ದೊರಕಿರಲಿಲ್ಲ. ಪಾರ್ಲಿಮೆಂಟಿನ ಉದಾರಪಕ್ಷದವರು ಈಗ ಅಧಿಕಾರದಲ್ಲಿದ್ದು ಈ ಉದಾರಪಕ್ಷದವರಿಂದ ಹಿಂದೂಸ್ಥಾನದಲ್ಲಿ ಮಾಡೋಣಾದ ರಾಜ್ಯಭಾರ ಮಾರ್ಪಾಟಗಳ ಸಮರ್ಪಕವಾದ ಜ್ಯಾರಿಯು ಮದ್ರಾಸಿನಲ್ಲಿ ಈ ಪಕ್ಷದವರ ಉದಾರ ಕಲ್ಪನೆಗಳಿಗೆ ತಕ್ಕಂತೆ ನಡದಿರುವುದಿಲ್ಲ. ಆದ್ದರಿಂದ ಕಾರ್ಮಿಕೆಲ್ ಪ್ರಭುಗಳನ್ನು ಪ್ರಜಾಹಿತಕ್ಕಾಗಿ ಮದ್ರಾಸಿನ ಗವರ್ನರರಾಗಿಯೇ ಇರಗೊಡಿಸುವುದು ಅತ್ಯಗತ್ಯ.

ಒಂದು ವೇಳೆ ಪ್ರಜೆಗಳ ಈ ಬಿನ್ನಹವನ್ನು ನಡಿಸಿಕೊಡುವರೆ ಅಸಾಧ್ಯವೆಂತ ತೋರಿದರೂ ಪಾರ್ಲಿಮೆಂಟ್ ಮೊದಲಾದ ಸಭಾಕಾರ್ಯ ಮಾಹಿತಿ ಇದ್ದು ರಾಜನೀತಿ ನಿಪುಣರೂ ಪ್ರಜಾ ಮೈತ್ರಿಭಾವವುಳ್ಳವರೂ ಆದ ಉದಾರ ಕಲ್ಪನೆಗಳುಳ್ಳ ನವೀನ ಗವರ್ನರರೊಬ್ಬರನ್ನೇ ಈ ಸಂಸ್ಥಾನಕ್ಕೆ ಕಳುಹಿಸಿಕೊಡಬೇಕಲ್ಲದೆ ಲೆಫ್ಟಿನೆಂಟ್ ಗವರ್ನರರಾಗಿದ್ದವರನ್ನು ಇಲ್ಲಿಯ ಗವರ್ನರರನ್ನಾಗಿ ಮಾಡಿದರೆ ಜನರಿಗೆ ಸಂತುಷ್ಟಿ ಇರದು. ಈ ರೀತಿ ಸಹ ಮದ್ರಾಸಿನಲ್ಲಿ ಕೂಡಿದ ಮಹಾಜನ ಸಭೆಯವರು ಚಕ್ರವರ್ತಿಗಳನ್ನು ಪ್ರಾರ್ಥಿಸಬೇಕೆಂದು ನಿಶ್ಚಯಿಸಿರುತ್ತಾರೆ.

ಚಕ್ರವರ್ತಿಗಳ ಸಂದರ್ಶಣೆಯ ಮರ್ಯಾದೆ ಎಂತೂ ನಮ್ಮ ಸಂಸ್ಥಾನಕ್ಕೆ ಪ್ರಾಪ್ತಿಸಲಿಲ್ಲ. ಚಕ್ರವರ್ತಿಗಳ ವರಗಳ ಮೂಲಕ ಇತರ ಸಂಸ್ಥಾನದವರೆಲ್ಲರೂ ಸಂತೋಷಪಡುತ್ತಿರುವಾಗ ನಮ್ಮವರಿಗೆ ಮಾತ್ರ ಇದು ಕಡಮೆಯಾಗದಂತೆ ಈ ವಿಷಯದ ಪ್ರಜಾಪ್ರಾರ್ಥನೆಗೆ ತಕ್ಕದಾದ ನಿಗಾಕೊಡಲ್ಪಡುವುದಾಗಿ ನಂಬಿದ್ದೇವೆ. 'ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸವೆಂಬ' ಭಾಗ್ಯವು ನಮ್ಮದಾಗಿರಕೂಡದು.

ಕೆನರಾ ಬೇಂಕ್ ಲಿಮಿಟೆಡ್, ಮಂಗಳೂರು.

ಈ ಬೇಂಕಿನ ಹಿಶೆದಾರರ ವರ್ಷಾವಧಿ ಸಭೆಯು ತಾ. 28ನೇ ಆದಿತ್ಯವಾರ ಕೆನರಾ ಹ್ಯಾಸ್ಕೂಲಿನಲ್ಲಿ ಕೂಡಿತು. ಬೇಂಕಿನ ಆದಾಯ ವೆಚ್ಚಗಳ ಲೆಖ್ಖಪರಿಶೋಧಕರ ರಿಪೋರ್ಟು ಮತ್ತು ಡೈರೆಕ್ಟರುಗಳ ರಿಪೋರ್ಟನ್ನು ಸಹ ಈ ಸಭೆಯಲ್ಲಿ ಮಂಜೂರು ಮಾಡಿದ್ದಲ್ಲದೆ ಹಿಶೆದಾರರಿಗೆ ಸೇಕಡಾ 6ರ ದರದ ಮುನಾಫೆ ಮತ್ತು ಸೇಕಡಾ 2ರ ದರದ ಐಚ್ಛಿಕ ಮುನಾಫೆ ಈ ರೀತಿ ಸೇಕಡಾ 8ರ ಮುನಾಫೆಯನ್ನು ಕೊಡಬೇಕೆಂತ ಸಹ ತೀರ್ಮಾನಿಸಲ್ಪಟ್ಟಿರುವುದು. ಬೇಂಕು ಸ್ಥಾಪಿತವಾದಂದಿನಿಂದ ಸೇಕಡ 6ರಿಂದ 8ರ ವರೇಗಿನ ಮುನಾಫೆಯನ್ನು ಹಿಶೆದಾರರಿಗೆ ಅನುಕೂಲಿಸಿ ಕೊಟ್ಟದ್ದಕ್ಕೆ ಬೇಂಕಿನ ಡೈರೆಕ್ಟರರು ಮೊದಲಾದ ಅಧಿಕಾರಿಗಳೆಲ್ಲರಿಗೆ ಹಿಶೆದಾರರು ಕೃತಜ್ಞರಾಗಿರ ಬೇಕಾಗಿರುತ್ತದೆ.

ಈ ಮೊದಲು ಪ್ರಕಟಿಸಿದಂತೆ ಈ ಬೇಂಕಿನ ಹಿಶೆಗಳೆಲ್ಲವು ಪೂರ್ಣ ವಿಕ್ರಯಿಸಲ್ಪಟ್ಟಿರುತ್ತವೆ. ಹಿಶೆದಾರರಿಗೆ ಪ್ರತಿ ವರುಷದಲ್ಲಿಯೂ ದೊರೆತ ಮುನಾಫೆಯ ದರದಿಂದ ಈ ಬೇಂಕಿನ ಹಿಶೆಗಳಲ್ಲಿ ಹಣ ವಿನಿಯೋಗವು ತುಂಬಾ ಲಾಭಕರವೆಂಬದಾಗಿ ಕಾರ್ಯತಃ ತೋರಿ ಬಂದು ಹಿಶೆಗಳೆಲ್ಲವು ಕೊಂಡುಕೊಳ್ಳಲ್ಪಟ್ಟಿರುವವು. ಬೇಂಕಿನ ಕಳೆದ ವರುಷದ ಆದಾಯ ವೆಚ್ಚಗಳನ್ನು ಪರಿಶೀಲಿಸಿದರೆ ಬೇಂಕಿನ ಅಭಿವೃದ್ಧಿ ಸ್ಥಿತಿಯು ಮತ್ತಷ್ಟು ವಿಶೇಷವಾಗಿ ತೋರಿಬರುವುದು. 1910ನೇ ವರುಷದ 9 ತಿಂಗಳಲ್ಲಿ ರೂ. 11,929–5–6 ಏನ್ ಮುನಾಫೆಯಾಗಿತ್ತು. 1911ನೇ ವರುಷದಲ್ಲಿ ಇದು ರೂ. 20,644–4–1 ಆಗಿದೆ. ಬೇಂಕಿನ ಸ್ಥಿರತ್ವವನ್ನು ನೆಲೆಗೊಳಿಸುವ ರಿಜರ್ವ್ ಫಂಡು ಎಂಬ ಆಪದ್ಧನದ ದ್ರವ್ಯ ಸಂಚಯವು ರೂ. 17,000ವಾಗಿರುವುದು. ಅಂದರೆ ಕಳೆದ ವರುಷಕ್ಕಿಂತ ಇದು ಇಮ್ಮಡಿಯಾಗಿರುವುದು. ರಿಜರ್ವ್ ಫಂಡೆಂಬ ಬೇಂಕಿನ ಈ ಆಪದ್ಧನಸಂಚಯವನ್ನು ಹೆಚ್ಚಿಸಲು ಡಿರೆಕ್ಟರುಗಳಲ್ಲಿರುವ ಆಸಕ್ತಿಯು ಶ್ಲಾಘ್ಯನೀಯವಾಗಿರುವುದು. ಆಪದ್ಧನವು ಹೆಚ್ಚಾಗಿ ಬಂದಂತೆ ಹಿಶೆಗಳ ಮೌಲ್ಯವು ಏರುತ್ತ ಬರುವುದಲ್ಲದೆ ಬೇಂಕಿನಲ್ಲಿ ಹಣವನ್ನಿಡುವ ಇತರರಿಗೆ ಸಹ ಇದರಿಂದ ಪ್ರೋತ್ಸಾಹ ದೊರಕುವದು. ಫಿಕ್ಸೆಡ್ ಡಿಪೊಜಿಟ್ ಎಂಬ ಬೇಂಕಿನಲ್ಲಿ ಬಡ್ಡಿ ಬಗ್ಗೆ ಇಡೋಣಾದ ಕಾಯಂ ಠೇವಣಾತಿ ಮೊಬಲಗು 303,204–15–6, ಈ ಬೇಂಕಿನ ಸೇವಿಂಗ್ಸ್ ಬೇಂಕಿನ ಠೇವಣಾತಿ ರೂ. 17,946–12–2, ಈ ಮೊಬಲಗುಗಳೂ ಕರೆಂಟ್ ಎಕೌಂಟೆಂಬ ಚಾಲ್ತಿ ಲೆಖ್ಖದಲ್ಲಿ ನಡೆದ ರೂ. 346,086–10–8ರಷ್ಟರ ಹಣ ಚಲಾವಣೆಯೂ ಈ ಬೇಂಕಿನಲ್ಲಿ ಜನರೆಲ್ಲರ ವಿಶ್ವಾಸವು ದಿನೇ ದಿನೇ ಹೆಚ್ಚಾಗುತ್ತಲಿರುವುದೆಂಬುವದನ್ನು ಸೂಚಿಸುತ್ತದೆ.

ಕೆನರಾ ಬೇಂಕಿನವರ ಕಳೆದ ವರುಷದ ಹಣದ ವೈವಾಟವು ಈ ರೀತಿಯಾಗಿರುವುದು. ಆಭರಣಗಳ ಮೇಲೆ ಕೊಟ್ಟ ಐವಜು ರೂ. 204,576–0–0, ಡಿಮಾಂಡು ನೋಟು, ಪ್ರೊನೋಟು ಮತ್ತು ಬಿಲ್ಲುಗಳ ಮೇಲೆ ರೂ. 933,915–0–0, ಸರಕುಗಳ ಅಡಿವಿನ ಮೇಲೆ ರೂ. 26,930–0–0. ಈ ಮೊದಲಾದ ವೈವಾಟಗಳನ್ನು ಬೇಂಕಿನ ಡಿರೆಕ್ಟರರೂ ಸೆಕ್ರಟೆರಿ ಮೊದಲಾದ ಸಿಬಂದಿಯವರೂ ನಡೆಸಿ ಕಳೆದ ವರುಷದಲ್ಲಿ ಬಡ್ಡಿಯಾಗಿ ರೂ. 36,905–6–1 ಹಿಶೆದಾರರ ಪರವಾಗಿ ಗಳಿಸಿದ್ದಲ್ಲದೆ ಕಾಯಂ ಠೇವಣಾತಿಯವರಿಗೆ ರೂ. 8,354–10–10, ಸೇವಿಂಗ್ಸ್ ಬೇಂಕ್ ಠೇವಣಾತಿಯವರಿಗೆ ಬಡ್ಡಿ ರೂ. 637–1–1, ತೆರಿಗೆ ಮತ್ತು ಕಟ್ಟೋಣ ಬಾಡಿಗೆ ರೂ. 485–13–8, ಬೇಂಕಿನ ರಿಜರ್ವ್ ಫಂಡಿಗೆ ರೂ. 4,300–1–11 ಈ ಮೊದಲಾದ ಮೊಬಲಗುಗಳನ್ನು ಕಳೆದು ಹಿಶೆದಾರರಿಗೆ ಸೇಕಡಾ 8ರ ದರದ ಮುನಾಫೆಯನ್ನು ಕೊಟ್ಟಿರುವರು. ಈ ಎಲ್ಲಾ ಶ್ರಮ ಯೋಚನೆಗಳಿಗೆ ಪ್ರತಿಫಲವಾಗಿ ಬೇಂಕಿನ ಸಿಬಂದಿಯವರು ರೂ. 1951–8–11ದನ್ನೂ ಡಿರೆಕ್ಟರರು ರೂ. 304–0–0ನ್ನೂ ಆಭರಣ ಪರೀಕ್ಷಕರು ಮೊದಲಾದವರು ರೂ. 715–3–2ನ್ನೂ ಇಡೀ ವರುಷದಲ್ಲಿ ಪಡದಿರುವರಂದರೆ ಬೇಂಕಿನ ಅಧಿಕಾರಿಗಳು ಬೇಂಕಿನ ಕಾರ್ಯಗಳೆಲ್ಲವನ್ನೂ ಮಿತವ್ಯಯದಿಂದ ನಡಿಸುತ್ತಿರುವರೆಂದು ಬೇರೆ ಹೇಳ ಬೇಕೆಂತಿಲ್ಲ.

ಬೇಂಕಿನ ಈ ಎಲ್ಲಾ ವರದಿಯನ್ನು ಮಂಜೂರು ಮಾಡಲು ಕೂಡಿದ ಹಿಶೆದಾರರ ಸಭೆಯ ವೃತ್ತಾಂತವು ಸಹ ಬಹಳ ತೃಪ್ತಿಕರವಾಗಿದೆ. ಬೇಂಕಿನ ಸ್ಥೈರ್ಯವೂ ಮುನಾಫೆಯೂ ಹೆಚ್ಚಾಗುವಂತೆ ಕೆಲವು ವಾದಗಳನ್ನು ನಡಿಸಿ ಹಿಶೆದಾರರು ಸರ್ವಸಮ್ಮತವಾಗಿ ಐಕ್ಯದಿಂದ ಬೇಂಕಿನ ವರಧಿಯನ್ನೂ ಇತರ ನಿರ್ಣಯಗಳನ್ನೂ ಮಂಜೂರು ಮಾಡಿದ್ದಲ್ಲದೆ ಮುಂದಿನ ವರುಷಗಳಿಗೆ ಡಿರೆಕ್ಟರರನ್ನಾರಿಸಿ ತಮ್ಮ ಸಭೆಯನ್ನು ಮುಗಿಸಿದರು. ಡಿರೆಕ್ಟರುಗಳ ಹೆಸರುಗಳನ್ನು ವೃತ್ತಾಂತ ಸಂಗ್ರಹದಲ್ಲಿ ಪ್ರಕಟಿಸಿರುತ್ತೇವೆ.

ಸಂತೆ ಸ್ಥಳಗಳಲ್ಲಿ ಮಾರುವ ಆಹಾರ ಜೀನಸುಗಳು.

ಮಾರ್ಕೆಟಿಗೆ ಹೋಗಿ ಅಲ್ಲಿರುವ ಕಾಯಿಪಲ್ಯ ಹಣ್ಣುಹಂಪಲು, ಮೀನು ಇತ್ಯಾದಿಗಳನ್ನು ನೋಡು! ತುಂಬಾ ತಂಡತಂಡವಾಗಿ ಮೇಲ್ಮೇಲೆ ಬಿದ್ದದೆ. ಅವುಗಳ ಮೇಲೆ ಏನೊಂದೂ ಮುಚ್ಚಳವಿರುವದಿಲ್ಲ. ಸುತ್ತಲೂ ನುಶಿಗಳೂ ನೊಣಗಳೂ ಗುಂಯಿ–ಗುಂಯಿ ಎಂದು ಹಾರುತ್ತಿವೆ. ಈ ನೊಣಗಳು ಎಲ್ಲಿಂದ? ಸುತ್ತಮುತ್ತಲಿನ ಪಾಯಿಖಾನೆಗಳಿಂದಲೂ ಗೊಬ್ಬರದ ಗುಳಿಗಳಿಂದಲೂ, ಬಚ್ಚಲು ಕೆಸರು ನೀರಿನಿಂದಲೂ ಹಾರಿಬಂದ ಹೊಲಸು ಪ್ರಾಣಿಗಳಲ್ಲವೇ?

ಒಬ್ಬ ಗಿರಾಕಿಯನಂತರ ಮತ್ತೊಬ್ಬನು ಬಂದು ಹಣ್ಣುಗಳನ್ನೋ--ಕಾಯಿಪಲ್ಯವನ್ನೋ ಕೈಯಿಂದ ಎತ್ತಿ ಕೆಳಗಿಟ್ಟು ಮತ್ತೊಂದನ್ನು ಎತ್ತಿ ನೋಡುತ್ತಿರುವನು. ಅವನ ಕೈ ಹ್ಯಾಗಿದೆ? ತುಂಬಾ ಮೈಲಿಗೆಯಾಗಿದೆ. ಕಜ್ಜಿ ಇತ್ಯಾದಿ ರೋಗಗಳಿಂದ ತುಂಬಿದೆ. ಎಂಥಾ ಅಸಂಹ್ಯ!!

ಹೀಗೆ ಈ ವಿಧದಲ್ಲಿ ಸಂತೆ ಸ್ಥಳಗಳಲ್ಲಿ ಮಾರಲ್ಪಡುವ ಆಹಾರ ಜೀನಸುಗಳೆಲ್ಲಾ ತುಂಬಾ ಹೊಲಸಾಗಿದ್ದು ವಿವಿಧ ತರದ ಅಂಟು ರೋಗಗಳ ಅಣುಗಳಿಂದ ಕೂಡಿರುವವು. ಮನೆಗೆ ಕೊಂಡೋಗುವ ಕಾಯಿಪಲ್ಯ ಮೀನು ಇತ್ಯಾದಿಗಳನ್ನು ತೊಳೆಯದೆ ಯಾ ಬೇಯಿಸದೆ ಯಾರೂ ತಿನ್ನಲಾರರು. ಆದರೆ ಬಾಳೆ ಹಣ್ಣು, ದ್ರಾಕ್ಷೆ ಹಣ್ಣು, ಬೇಯಿಸಿದ ಗಡ್ಡೆಗೆಣಸು ಗೇರೆ ಹಣ್ಣು, ಇತ್ಯಾದಿ ಪದಾರ್ಥಗಳನ್ನು ಮನೆಗೆ ಕೊಂಡ್ಹೋದ ಕೂಡಲೇ ಮಗುವು ಓಡಿ ಬಂದು ಅದನ್ನು ಎತ್ತಿ ತಿಂದು ಬಿಡುವದು. ಅದು ಯಾವದನ್ನು ತಿಂದಿತು? ಹಣ್ಣನ್ನೋ-ಅಲ್ಲ. ರೋಗಗಳ ಅಣುಗಳನ್ನಲ್ಲವೇ? ಕೆಲವು ದಿವಸದನಂತರ ಮಗುವಿಗೆ ಅತಿಸಾರ ಪ್ರಾರಂಭವಾಗಿ ದೈವಗತಿಯನ್ನು ಹೊಂದಿತು. ಎಂಥಾ ದುಃಖ! ಮಗುವಿಗೆ ಅತಿಸಾರ ಹೇಗೆ ತೊಡಗಿತು? ತಾನು ತಿಂದ ಆಹಾರದಿಂದಲ್ಲವೇ? ಇಹಮಾನದಲ್ಲಿ ಪ್ರತಿ ಒಬ್ಬನೂ ತಿಳಿದು ತಿಳಿಯದೆ ಭೀಕರವಾದಂಥಾ ವಿಷವನ್ನು ದಿನಾಲೂ ಈ ಸಂತೆ ಸಾಮಾನುಗಳ ಮೂಲಕ ತಿನ್ನುತ್ತಾನೆ. ವರುಷಂಪ್ರತಿ ನೂರಾರು ಮಕ್ಕಳು ಬೇಸಿಗೆ ಕಾಲದಲ್ಲಿ ಅತಿಸಾರ ಇತ್ಯಾದಿ ಅಂಟು ರೋಗಗಳಿಂದ ಸಾಯುತ್ತಿದ್ದಾರೆ. ಕಾರಣವೇನು? ಅತಿರೇಕವಾದ ಉಷ್ಣವೋ? ಅಲ್ಲಲ್ಲ! ಆದರೆ ಕಣ್ಣಿಗೆ ಕಾಣದ ರೋಗದ ಅಣುಗಳಿರುವ ಪದಾರ್ಥಗಳನ್ನು ನಿರ್ದೋಷಿಗಳಾದ ಮಕ್ಕಳಿಗೆ ತಿನ್ನಕೊಡುವದೇ ಕಾರಣವಾಗಿದೆ. ಆದ್ದರಿಂದ ಪ್ರತಿ ಒಬ್ಬನೂ ಮೇಲಿನ ಸಂಗತಿಯನ್ನು ಅವಗಾಹನೆಗೆ ತಂದುಕೊಂಡು ಪೇಟೆಯಿಂದ ತಂದ ಯಾವ ಪದಾರ್ಥಗಳನ್ನಾದರೂ ಬಿಸಿ ನೀರಲ್ಲಿ ತೊಳೆಯದೆ ಯಾ ಬೇಯಿಸದೆ ತಿನ್ನದಿರುವದು ವಿಹಿತವು.

S. A.

ಪೇಷ್ವೆ ನಾರಾಯಣ ರಾವ್.

(ಕಳದ ಸಂಚಿಕೆಯಿಂದ ಮುಂದರಿಸಿದುದು.)

ಗೋಪಿಕಾಬಾಯಿಯು ಸಖಾರಾಮಬಾವುವನ್ನೂ ರಘುನಾಥರಾವನ್ನೂ ಕೊಲ್ಲಿಸುವುದಕ್ಕೆ ಪ್ರಯತ್ನಿಸುತ್ತಿರುವಂತೆ ಮಾದೋಜಿ ಭೊಂಸ್ಲೆಯ ಮೂಲಕ ದಿವಾನ್ ಸಖಾರಾಮುಬಾವುವಿಗೆ ವರ್ತಮಾನ ತಿಳಿದಂತೆ ಹೇಳುತ್ತಾರೆ. ಸಖಾರಾಮುಬಾವುವನ್ನು ದಿವಾನ್ ಪದವಿಯಿಂದ ತೆಗೆದು ಹಾಕೆಂದು ಈಕೆಯು ತನ್ನ ಮಗನಿಗೆ ಆಲೋಚನೆ ಹೇಳಿ ಆ ರೀತಿ ಮಾಡಿಸಿದ ಸಂಗತಿ ವಾಸ್ತವ್ಯ. ಇದು ನಾರಾಯಣರಾಯನ ಸಂಪತ್ತೂ ಮತ್ತು ಪ್ರಾಣವೂ ಹೋಗುವುದಕ್ಕೆ ಉಂಟಾದ ಕಾರಣಗಳಲ್ಲಿ ಮೊಟ್ಟಮೊದಲನೆಯದು. ಆ ದಿನ ಮೊದಲು ನಾರಾಯಣ ರಾವನ್ನು ರಾಜ್ಯ ಪದವಿಯಿಂದ ತೊಲಗಿಸಿ ರಘುನಾಥರಾಯನನ್ನು ಸೆರೆಯಿಂದ ಬಿಡಿಸಿ ಸಿಂಹಾಸನವನ್ನು ಹತ್ತಿಸುವುದಕ್ಕೆ ಸಖಾರಾಮುಬಾವುವೂ ಆತನ ಪಕ್ಷದವರೂ ಪ್ರಯತ್ನಿಸುತ್ತಿದ್ದರು.

ತದನಂತರ ಜರುಗಿದ ವೃತ್ತಾಂತವು ಮಹಾರಾಷ್ಟ್ರ ಭಾಷೆಯಲ್ಲಿರುವ ಪೂರ್ವ ಚರಿತ್ರೆಗಳಲ್ಲಿಯೂ ಗ್ರಾಂಟ್‌ಡಫ್ ಬರೆದ ಚರಿತ್ರೆಯಲ್ಲಿಯೂ ನಾನಾ ವಿಧಗಳಲ್ಲಿ ವಿಸ್ತರಿಸಿ ವರ್ಣಿಸಲ್ಪಟ್ಟಿರುವುದು. ೧೭೭೩ನೇ ಆಗಸ್ಟು ೩೦ನೇ ದಿನ ಉದಯದಲ್ಲಿ ನಾರಾಯಣರಾವು ಪಾರ್ವತೀ ದೇವಿಯ ದೇವಸ್ಥಾನಕ್ಕೆ ಹೋಗಿ ಬರುತ್ತಾ ದಾರಿಯಲ್ಲಿ ರಾಗೋಜಿ ಆಂಗ್ರೆಯನ್ನು ಸಂದರ್ಶಿಸಿ ತಾನು ವಾಸಮಾಡುವ ಶನಿವಾರ ಮಂದಿರವನ್ನು ಸೇರಿದನು. ಮಧ್ಯಾಹ್ನ ಭೋಜನಾನಂತರ ತನ್ನ ಪದ್ಧತಿ ಪ್ರಕಾರ ನಿದ್ರಿಸುವುದಕ್ಕೆ ತನ್ನ ಶಯ್ಯಾಗಾರಕ್ಕೆ ಹೋದನು. ಆ ಅಶುಭ ಲಕ್ಷಣ ಸೂಚಕ ದಿನದಲ್ಲಿ ಪ್ರಾತಃಕಾಲದಲ್ಲೆ ಪೇಷ್ವೆಯ ಸೈನ್ಯಗಳಲ್ಲಿ ಗಲಭೆಯು ಕಂಡು ಬಂದಿತು. ರಾನೋಜಿ ಆಂಗ್ಲೆಯನನ್ನು ನೋಡಿ ಮನೆಗೆ ಹಿಂದಿರುಗುವ ಸಮಯದಲ್ಲಿ ನಾರಾಯಣರಾವು ಈ ಕ್ಷೋಭಾ ಚಿಹ್ನೆಗಳನ್ನು ಕಂಡು ಹಿಡಿದು ಭೋಜನಾತ್ಪೂರ್ವವೆ ಹರಿಫಂತು ಫಡಿಕೆಯನ್ನು ಕರೆಯಿಸಿ ಆ ಸಂಗತಿಯನ್ನು ತಿಳಿಸಿ ಕಲಹ ನಡೆಯದಂತೆ ಅಗತ್ಯವಾದ ಜಾಗರೂಕತೆ ತೆಗೆದುಕೊ ಎಂದು ಆತನಿಗೆ ಹೇಳಿದನು. ದುರ್ಗ್ರಾಹ್ಯವಾದ ದೈವವಿಧಿಯಿಂದ ಹರಿಫಂತನು ವಂಚಿತನಾಗಿ ಆ ಸಂಕ್ಷೋಭಾ ಚಿಹ್ನೆಗಳನ್ನು ಗ್ರಹಿಸಲಾರದೆ ಹೋದನು. ನಾರಾಯಣ ರಾವು ತನ್ನ ಅಂತಃಪುರಕ್ಕೆ ನಿದ್ದೆಮಾಡುವುದಕ್ಕೆ ಹೋಗಿರುವಂತೆ ತಿಳಿದುಕೊಂಡು ರಘುನಾಥರಾಯನ ಆತ್ಮದ್ವಾರನಾದ ತುಳ್ಯಾಪವಾರು ಎಂಬುವನು ಸುಮೇರುಸಿಂಗು ಸುಬೇದಾರನಿಗೂ ಮಹಮ್ಮದ್ ಯಿಸೂಫ್‌ಗೂ ಎಚ್ಚರಿಕೆ ಕೊಟ್ಟನು. ಅವರೆಲ್ಲರೂ ಕಲೆತು ಎರಡು ಸಾವಿರ ಸೈನಿಕರೊಡನೆ ತನಗೆ ಸಂಭವಿಸುವ ಆಪತ್ತನ್ನು ಸ್ವಪ್ನದಲ್ಲಿಯೂ ತಿಳಿಯದೆ ವೈಮರೆದು ಸುಖವಾಗಿ ನಿದ್ರಿಸುತ್ತಿದ್ದ ನಾರಾಯಣ ರಾವು ಮಂದಿರದ ಮೇಲಕ್ಕೆ ಹೋದರು. ಅವರು ಆ ಮಂದಿರವನ್ನು ಮಧ್ಯಾಹ್ನ ೩ ಘಂಟೆಗೆ ಸಮೀಪಿಸಿ ಹೆಚ್ಚಾದ ಕಲಕಲದಿಂದ ಅದನ್ನು ಪ್ರವೇಶಿಸಿದರು. ರಾಜ ಮಂದಿರದ ರಕ್ಷಕ ಭಟರ ಗುಂಪಿಗೆ ನಾಯಕನಾದ ಖಡಕಸಿಂಗನು ರಾಜದ್ರೋಹಿಯಾಗಿ ಶತ್ರುಪಕ್ಷವನ್ನವಲಂಬಿಸಿದನು.

ಆತನ ಸಹಾಯದಿಂದ ರಾಜಮಂದಿರವನ್ನು ಸುಲಭವಾಗಿ ಪ್ರವೇಶಿಸಿ ಅವರು ನಾರಾಯಣರಾವು ನಿದ್ರಿಸುತ್ತಿದ್ದ ಅಂತಸ್ಸೌಧದ ಬಳಿಗೆ ಓಡಿದರು. ಆ ಭಾಗವು ಬುಧಸಿಂಗನೆಂಬ ಜಮಾದಾರನಿಂದ ರಕ್ಷಿಸಲ್ಪಟ್ಟಿತ್ತು. ದುರ್ಮಾರ್ಗರಾದ ತನ್ನ ಸಹಚರರಂತೆ ಈತನು ರಾಜದ್ರೋಹಿಯಾಗದೆ ರಾಜಭಕ್ತಿಯುಳ್ಳವನಾಗಿ ಅವರ ದುರ್ನಯಕ್ಕೆ ಅಡ್ಡಿ ಬಂದು ಅವರನ್ನು ಎದುರಿಸಿ ನಿಂತನು. ಅವರು ಆತನೊಡನೆ ಹೋರಾಡಿ ಅವನನ್ನು ಕೊಂದುಹಾಕಿದರು. ಪೇಷ್ವೆಯ ಸ್ವಪರಿವಾರದಲ್ಲಿ ಒಬ್ಬ ಉದ್ಯೋಗಸ್ಥನಾಗಿದ್ದ ಇಚ್ಛಾರಾಮಪಂತುವು ಈ ಗಡಿಬಿಡಿಯನ್ನು ಕೇಳಿ ಜಾಗ್ರತೆಯಾಗಿ ಅಲ್ಲಿಗೆ ಹೋಗಿ ಈ ಗಲಭೆಗೆ ಕಾರಣವೇನೆಂದು ಅವರನ್ನು ಕೇಳಿದನು. ಆ ದುಷ್ಟರು ಕೇಳದೆ ಅವನ ಮೇಲೆ ಬಿದ್ದರು. ತಕ್ಷಣವೆ ಆತನು ಗೋಶಾಲೆಗೆ ಓಡಿಹೋಗಿ ಒಂದು ಗೋವಿನ ಹಿಂದುಗಡೆ ಅವಿತುಕೊಂಡು ತನ್ನ ಪ್ರಾಣವನ್ನು ಕಾಪಾಡಿಕೊಳ್ಳಲು ಯತ್ನಿಸಿದನು. ಆದರೂ ಅವನ ಪ್ರಾಣವು ದಕ್ಕಲಿಲ್ಲ. ಅವರಲ್ಲಿ ಕೆಲವರು ಅವನ ಬೆನ್ನು ಹತ್ತಿ ಅವನನ್ನೂ ಅವನು ಆಶ್ರಯಿಸಿದ್ದ ಗೋವನ್ನೂ ಕೊಂದು ಎರಡು ತುಂಡುಗಳಾಗಿ ಸೀಳಿದರು. ತಮಗೆ ಅಡ್ಡವಾಗಿ ಬಂದವರನ್ನೆಲ್ಲಾ ಈ ರೀತಿಯಾಗಿ ಸಂಹರಿಸಿ ಆ ಸ್ವಾಮಿದ್ರೋಹಿಗಳು ಪೇಷ್ವೆಯ ಅಂತಃಪುರಕ್ಕೆ ಹೋಗಿ ಸೇರಿದರು. ಅಂತಃಪುರದಲ್ಲಿ ಕಾವಲಿದ್ದ ಆ ಬಾಜೀಪಂತುವು ಪೇಷ್ವೆಯು ನಿದ್ರಿಸುತ್ತಿದ್ದ ಕೊಠಡಿಯ ಬಾಗಿಲುಗಳನ್ನು ಮುಚ್ಚಿ ಅವರು ಒಳಗೆ ಪ್ರವೇಶಿಸದಂತೆ ಮಾಡುವುದಕ್ಕೆ ಪ್ರಯತ್ನಿಸಿದರೂ ಆತನು ಬಾಗಿಲುಗಳನ್ನು ಮುಚ್ಚುವಷ್ಟರಲ್ಲಿ ಅವನನ್ನು ಆ ದುಷ್ಟರು ಹೊಡೆದು ಕೊಂದರು. ಈ ರೀತಿಯಾದ ಗಲಭೆಯಿಂದ ಗಾಬರಿಯಾಗಿ ನಿದ್ರೆಯಿಂದ ಎಚ್ಚತ್ತು ನಾರಾಯಣರಾವು ಭಯಕಂಪಿತನಾಗಿ ಏನು ಮಾಡಲಿಕ್ಕೂ ತೋಚದೆ ಕೊಠಡಿಯ ಸೋಪಾನ ಮಾರ್ಗದಿಂದ ಕೆಳಕ್ಕೆ ಇಳಿದು ಗಣಪತಿ ಮಹಲನ್ನು ಪ್ರವೇಶಿಸಿ ತಪ್ಪಿಸಿಕೊಂಡು ಹೋಗಿ ರಘುನಾಥರಾವು ಇದ್ದ ಕೋಣೆಯಲ್ಲಿ ಪ್ರವೇಶಿಸಿದನು. ರಾಜೋಪದ್ರವಕ್ಕೆ ಮೂಲಕರ್ತೃವಾದ ಸುಮೇರುಸಿಂಗ್ ಆತನ ಬೆನ್ನಟ್ಟಿ ಓಡಿಸಿಕೊಂಡು ಹೋದನು. ಆತನು ತನ್ನ ಚಿಕ್ಕಪ್ಪನಾದ ರಘುನಾಥರಾವನ್ನು ಅತ್ಯಾತುರದಿಂದ ತಬ್ಬಿಕೊಂಡು ಕರುಣೆಯುಂಟಾಗುವಂತೆ ಹೀಗೆ ಹೇಳಿಕೊಂಡನು. "ನನ್ನನ್ನು ಸೆರೆಯಲಿಟ್ಟು ನೀವು ಪೇಷ್ವೆ ಪದವಿಯನ್ನು ಆಕ್ರಮಿಸಿಕೊಂಡು ಪರಿಪಾಲಿಸಿರಿ. ನನ್ನ ಪ್ರಾಣವನ್ನು ಮಾತ್ರ ತೆಗೆಯಿಸಬೇಡಿರಿ. ಈ ಗಲಭೆಯು ನೀವು ಮಾಡಿದ್ದಾಗಿಯೆ ಇರುವುದು. ಆದಾಗ್ಯೂ ಕರುಣೆವಹಿಸಿ ಈ ರಾಜದ್ರೋಹಿಗಳನ್ನು ಸಂಹರಿಸಿ ನನ್ನನ್ನು ಕಾಪಾಡಿರಿ; ನನ್ನನ್ನು ಅನುಗ್ರಹಿಸಿ ರಕ್ಷಿಸಿರಿ". ನಾರಾಯಣರಾಯನ ಈ ದೀನಾಲಾಪಗಳಿಗೆ ರಘುನಾಥರಾಯನ ಮನಸ್ಸು ಕರಗಿತು. ನಾರಾಯಣರಾವುನನ್ನು ಕೊಲ್ಲಬೇಡಿರೆಂದು ತನ್ನ ಸೈನೀಕರೊಡನೆ ಆತನು ಹೇಳಿ, ಅವರನ್ನು ಬೇಡಿಕೊಂಡನು. ಆದರೂ ಆಗ್ಗ್ಯೆ ಆಗಬೇಕಾದ ಕೆಲಸವು ನಡೆದುಹೋಯಿತು. ತುಲ್ಸಾಪವರು ಪೇಷ್ವೆಯ ಪಾದಗಳನ್ನು ಹಿಡಿದುಕೊಂಡು ಅವನನ್ನು ರಘುನಾಥರಾಯನ ಕೈಯಿಂದ ಬಲವಂತವಾಗಿ ಎಳೆದನು. ಸುಮೇರುಸಿಂಗುವೂ ಮಹಮ್ಮದ್ ಇಸೂಫನೂ ತಮ್ಮ ಖಡ್ಗಗಳನ್ನು ದುರ್ದೈವವಾದ ಬಾಲಕನ ಮೇಲೆ ಬೀಸಿದರು. ಇಷ್ಟರಲ್ಲಿ ನಾರಾಯಣರಾವು ಪರಿಚಾರಕರಲ್ಲಿ ಪ್ರಭುವಿಶ್ವಾಸವುಳ್ಳ "ಛಪಾಟಿತಿಲೇಕರು" ಎಂಬವನು ತನ್ನ ಪ್ರಭುವು ಅನಿರ್ದಯ ಹೃದಯರಾದ ರಾಜದ್ರೋಹಿಗಳ ಕೈಗೆ ಸಿಕ್ಕಿಬಿದ್ದು ಸಾಯದಂತೆ ತಾನು ನಿರಾಯುಧನಾಗಿದ್ದರೂ ಅವರ ಕತ್ತಿಯ ಪೆಟ್ಟುಗಳಿಗೆ ಅಡ್ಡ ಬಂದು ಆ ಪೆಟ್ಟುಗಳು ತನ್ನ ಪ್ರಭುವಿಗೆ ತಗಲದಂತೆ ತಾನು ಆತನ ಮೇಲೆ ಬಿದ್ದನು. ಅವರ ಕತ್ತಿಯ ಪೆಟ್ಟುಗಳಿಂದ ತನ್ನ ದೇಹವು ಕತ್ತರಿಸಿ ಹೋಗುತ್ತಿದ್ದರೂ ಆ ಭೃತ್ಯನು ತನ್ನ ಪ್ರಾಣಗಳು ಹೋಗುವ ವರೆಗೂ ತನ್ನ ರಾಜನನ್ನು ಬಿಟ್ಟುಹೋಗಲಿಲ್ಲ. ರಾಜನ ಮೇಲೆ ಪೆಟ್ಟನ್ನೂ ಬೀಳಗೊಳಿಸಲೂ ಇಲ್ಲ. ಭೃತ್ಯನಮೃತ ಕಳೇಬರವನ್ನು ಆ ಕ್ರೂರಿಗಳು ಎಳೆದುಹಾಕಿ ಅಸಹಾಯನಾಗಿ ಬಿದ್ದಿರುವ ನಾರಾಯಣರಾವನ್ನು ಒಂದು ನಿಮಿಷ ಕಾಲದಲ್ಲಿ ಖಂಡಿಸಿ ತುಂಡು ಮಾಡಿದರು. ಈ ರೀತಿಯಲ್ಲಿ ನಾರಾಯಣರಾವು ತನ್ನ ಅರಮನೆಯಲ್ಲಿಯೇ ಹಗಲು ಹೊತ್ತು ವಧಿಸಲ್ಪಟ್ಟನು. ನಾರಾಯಣರಾವನ್ನು ವಧಿಸಿದ ನಂತರ ಕಲಹಿಸಿದ ಆ ಸೈನಿಕರು ರಘೋಬನನ್ನು ಸೆರೆಮನೆಯಿಂದ ಬಿಡಿಸಿ ಸಿಂಹಾಸನಾಧಿಷ್ಠಿತನನ್ನಾಗಿ ಮಾಡಿ ಮುಜರೆ ಮಾಡಿದರು. ಪೇಷ್ವೆಯ ವೃದ್ಧ ಪರಿಚಾರಕನಾದ ಸರೋಜಿನಾಯಕ ಯಸೂದು ಎಂಬವನು ಈ ಘೋರಾನ್ಯಾಯವನ್ನೂ ಸ್ವಾಮಿದ್ರೋಹವನ್ನೂ ನೋಡಿ ಸಹಿಸಲಾರದೆ ತಿರಸ್ಕಾರ ಭಾವದಿಂದ ಇಂತೆಂದನು. "ಪೇಷ್ವೆಯ ವಂಶದಲ್ಲಿ ನೀನು ಜನಿಸಿ ಈ ದಿನ ಮಾಡಿಸಿದ ಘನಕಾರ್ಯದಿಂದ ದೊಡ್ಡ ಕೀರ್ತಿಯನ್ನು ಸಂಪಾದಿಸಿದೆ." ಈ ಸಾಹಸ ವಾಕ್ಯವನ್ನುಚ್ಚರಿಸಿದ್ದಕ್ಕೆ ಅವನು ತಕ್ಷಣವೇ ಕೊಲ್ಲಲ್ಪಟ್ಟನು. ರಾಜಗೃಹದಲ್ಲಿ ಇವೆಲ್ಲವೂ ಜರಗುತ್ತಿದ್ದ ಸಮಯದಲ್ಲಿ ಪುರಜನರು ಏನೋ ಕಲ್ಲೋಲವು ಸಂಭವಿಸಿದೆ ಎಂದು ತಿಳಿದುಕೊಂಡು ಬಹಳ ವ್ಯಾಕುಲ ಹೊಂದಿದರು.

ಅಂಗಡಿಗಳೆಲ್ಲವೂ ಮುಚ್ಚಲ್ಪಟ್ಟವು. ಗಲಿಬಿಲಿಯಿಂದ ಜನಗಳು ಅಲ್ಲಿಗೂ ಇಲ್ಲಿಗೂ ತಿರುಗಲಾರಂಭಿಸಿದರು. ಏನು ನಡಿಯಿತೆಂಬುದು ಅವರಿಗೆ ತಿಳಿಯಲಿಲ್ಲ. ಪುನಃ ಪಟ್ಟಣವೆಲ್ಲವೂ ಶತ್ರು ಸೈನ್ಯದಿಂದ ಮುತ್ತಲ್ಪಟ್ಟಂತೆ ಗಾಬರಿಯಾಗಿದ್ದಿತು. ರಾಜಮಂದಿರದಲ್ಲಿಯೂ ಪಟ್ಟಣದಲ್ಲಿಯೂ ಇಷ್ಟು ವ್ಯಾಕುಲವುಂಟಾಗಿದ್ದರೂ ಮಂತ್ರಿಗಳಲ್ಲಿ ಒಬ್ಬರಾದರೂ ತಮ್ಮ ಮನೆ ಬಿಟ್ಟು ಈ ದೊಂಬಿಗೆ ಕಾರಣವೇನೆಂದು ವಿಚಾರಿಸಿದಂತೆ ಕಾಣಲಿಲ್ಲ. ಇದು ಎಷ್ಟೋ ಆಶ್ಚರ್ಯಕರವಾಗಿರುತ್ತದೆ. ಹರಿಪಂತುಫಡಕೆ, ಸಖಾರಾಮಬಾವು, ಭಾವನರಾವು ಪ್ರತಿನಿಧಿ ಮಲೋಜಿಗಾರ್ಪೂರಿ ಮೊದಲಾದ ಕೆಲವರು ರಾಜಮಂದಿರದ ಬಹಿದ್ವಾರದ ಹೊರಗೆ ಹೋದರು. ಆದರೆ ಅಲ್ಲಿ ಉಂಟಾಗಿದ್ದ ಗಲಭೆಯನ್ನು ನೋಡಿ ಮೆಲ್ಲನೆ ಬುಧವಾರದ ಚಾವಡಿಗೆ ತೆರಳಿದರು. ಮಲೋಜಿಘಾರ್ಪುರಿಯೂ ಭುಜಪ್ಪರಂದರನೂ ಸ್ವಲ್ಪ ಹೊತ್ತಿನ ಮೇಲೆ ಸಾಹಸ ಮಾಡಿ ಗಣೇಶದರ್ವಾಜಾ ಮೂಲಕ ರಾಜಸೌಧವನ್ನು ಪ್ರವೇಶಿಸಿ ದಾದಾಸಾಹೇಬ್ ರಘುನಾಥರಾವನ್ನು ನೋಡಿ ಸಂಭ್ರಮದ ಕಾರಣವನ್ನು ತಿಳಿಯಲಪೇಕ್ಷಿಸಿದರು. ಆತನು ಜರಗಿದ ಸಮಾಚಾರವನ್ನೆಲ್ಲಾ ಸವಿಸ್ತಾರವಾಗಿ ಹೇಳಿದನು. ಈ ಘೋರ ವಾರ್ತೆಯನ್ನು ಕೇಳಿದ ಕೂಡಲೇ ಘಾರ್ಪುರಿಯು ರಘುನಾಥರಾವನ್ನು ತೃಣೀಕರಿಸಿ "ನೀನು ಈ ಮಹಾ ಕಾರ್ಯವನ್ನು ಮಾಡಿಸಿ ಕೀರ್ತಿಯನ್ನು ಬಯಿಸಿದೆಯಾ?" ಎಂದನು.

ಅದಕ್ಕೆ ರಘುನಾಥರಾಯನು ಹೇಳಿದ್ದೇನಂದರೆ "ಕಳೆದುಹೋದುದಕ್ಕೆ ವ್ಯಥೆಪಟ್ಟು ಪ್ರಯೋಜನವೇನು? ಪಟ್ಟಣದಲ್ಲಿ ಇನ್ನು ನೀವು ನನ್ನನ್ನು ಪೇಷ್ವೆಯಾಗಿ ಪ್ರಕಟ ಮಾಡಬಹುದು." ಇದಾದ ನಂತರ ರಾಜಮಂದಿರದಲ್ಲಿ ಕಲಕಲ ಧ್ವನಿಯುಂಟಾಯಿತು. ಆ ನಾರಾಯಣರಾಯನ ಹೆಂಡತಿಯಾದ ಗಂಗಾಬಾಯಿಯೂ ಸಹಗಮನಮಾಡಲು ಯತ್ನಿಸಿದಳು. ಆದರೆ ಆನಂದಾಬಾಯಿಯು ಆಕೆಯನ್ನು ಬಲವಂತವಾಗಿ ಒಂದು ಕೊಠಡಿಯಲ್ಲಿ ಕೂಡಿ ಬಾಗಲಿಗೆ ಬೀಗ ಹಾಕಿದಳು. ಗಲಭೆಯು ಅಡಗಿಹೋದ ನಂತರ ಮಂತ್ರಿಗಳು, ಸರದಾರರು, ರಾಜೋದ್ಯೋಗಿಗಳು ಪುನಃ ಕೋಟೆಯಲ್ಲಿ ಸೇರಿದರು. ದುರದೃಷ್ಟಶಾಲಿಯಾದ ಪೇಷ್ವೆ ನಾರಾಯಣರಾಯನ ಮತ್ತು ಆ ದಿನ ಸಂಹರಿಸಲ್ಪಟ್ಟ ಇತರರ ಕಳೇಬರಗಳು ಆ ದಿನ ಸಾಯಂಕಾಲಕ್ಕೆ ನದೀ ತೀರದಲ್ಲಿರುವ ಲಕ್ಕಿಸೇತುವೆಯ ಸಮೀಪಕ್ಕೆ ತರಿಸಲ್ಪಟ್ಟವು. ತ್ರಯಂಬಕ ಮಾವನು ಸ್ವರ್ಗಸ್ಥನಾದ ಪೇಷ್ವೆಗೆ ಅಗ್ನಿಸಂಸ್ಕಾರ ಮಾಡಿದನು. ಈ ಶೋಚನೀಯವಾದ ವಧೆಗೆ–ಕಾರಣವು ಕಾವಲಿದ್ದ ಸೈನಿಕರ ವೇತನಗಳು ಸಲ್ಲದೆ ನಿಂತು ಬಂದುದರಿಂದ ಅವರಿಗೆ ಆಗ್ರಹವುಂಟಾಗಿ ಅವರು ತಿರುಗಿ ಬಿದ್ದು ಈ ಅಕ್ರಮವನ್ನು ಮಾಡಿದಂತೆ ಜನರಿಗೆ ತಿಳಿಸಲ್ಪಟ್ಟಿತು. ಮತ್ತು ನಾರಾಯಣರಾಯನು ತುಲಯಾಪವಾರನನ್ನು ಬಹಿರಂಗವಾಗಿ ಹೊರಡಿಸಿದನೆಂತಲೂ ಅದಕ್ಕಾತನು ಕುಪಿತನಾಗಿ ಹಗೆ ತೀರಿಸಿಕೊಂಡನೆಂತಲೂ ವದಂತಿ ಹಬ್ಬಿಸಲ್ಪಟ್ಟಿತು. ನಾರಾಯಣರಾವು ಮರಣಹೊಂದಿದ ಹತ್ತನೆಯ ದಿನದಲ್ಲಿ ಆತನ ದಿವಸ, ವಾರ, ಕ್ರಿಯೆಗಳಲ್ಲಿ ಧರ್ಮೋದಕಗಳನ್ನು ಬಿಡುವ ಸಮಯಕ್ಕೆ ನಾನಾಫರ್ನವೀಸ್, ಹರಿಪಂತುಪಡಕೆ ತ್ರಿಯಂಬಕ ಜಿಮಾಮಾ, ಸಖಾರಾಮಬಾವು ಮೊದಲಾದ ಹನ್ನೆರಡು ಜನ ಮಂತ್ರಿಗಳು ನದೀ ತೀರದಲ್ಲಿ ಕರ್ಮ ಜರುಗುತ್ತಿದ್ದ ಪ್ರದೇಶಕ್ಕೆ ಹೋದರು.

ಮುಂದುವರಿಯುವುದು.

ಪರಂಗಿ ಹಣ್ಣಿನ ವ್ಯವಸಾಯ.

(ಪಪ್ಪಾಯಿ, ಬಪ್ಪಂಗಾಯಿ).

ಇಂಡಿಯಾ ದೇಶದ ಶ್ರೇಷ್ಟವಾದ ಹಣ್ಣುಗಳಲ್ಲಿ ಪರಂಗಿ ಹಣ್ಣು ಒಂದಾಗಿದೆ. ಜನರು ಇದನ್ನು ತಿನ್ನುವುದು ದಿನೇ ದಿನೇ ಹೆಚ್ಚುತ್ತಿರುವುದರಿಂದಲೂ ಮತ್ತು ಉಪಯೋಗಕ್ಕೆ ಅವಶ್ಯಕವಾದಷ್ಟು ಹಣ್ಣುಗಳು ಒದಗುತ್ತಿಲ್ಲವಾದ್ದರಿಂದಲೂ ಕಲ್ಕತ್ತಾ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಒಂದೊಂದು ಹಣ್ಣಿಗೆ ಒಂದು ರೂಪಾಯಿ ಬೆಲೆಯನ್ನು ಕೊಡುತ್ತಿರುವರು. ಮುಖ್ಯವಾಗಿ ಇಲ್ಲಿರತಕ್ಕ ಯೂರೋಪು ದೇಶಸ್ಥರು ಈ ಹಣ್ಣನ್ನು ಬಹಳ ಅಕ್ಕರೆಯಿಂದ ತಿನ್ನುತ್ತಾರೆ. ಈ ಹಣ್ಣು ಬಹಳ ಜೀರ್ಣಕಾರಿಯಾಗಿರುವುದು ಮಾವು ಮೊದಲಾದ ಇತರ ಹಣ್ಣುಗಳಂತೆ ದಪ್ಪವಾದ ಓಟೆ ಅಥವಾ ಬೀಜಗಳಿಲ್ಲದೆ, ಹಣ್ಣು ದಪ್ಪವಾಗಿ ಮತ್ತು ಬೀಜಗಳು ಸಣ್ಣವಾಗಿರುವುದೂ ಮತ್ತು ಹಣ್ಣು ಬಹಳ ರಸವತ್ತಾಗಿಯೂ ಮತ್ತು ರುಚಿಯಾಗಿಯೂ ಇರುವುದೇ ಇಲ್ಲಿನ ಯೂರೋಪ್ ದೇಶಸ್ಥರು ಈ ಹಣ್ಣನ್ನು ಇಷ್ಟು ಮೋಹಿಸುವುದಕ್ಕೂ ಮತ್ತು ಕೇಳಿದ ಬೆಲೆಯನ್ನು ಕೊಡುವುದಕ್ಕೆ ಸಿದ್ಧರಾಗಿರುವುದಕ್ಕೂ ಕಾರಣವಾಗಿದೆ. ಅಲ್ಲದೆ ಬಹಳ ಸ್ವಲ್ಪ ಬಂಡವಾಳವಿರತಕ್ಕವರು ಸಹಾ ಈ ಹಣ್ಣನ್ನು ಸುಲಭವಾಗಿ ಬೆಳಯಿಸಿ ಮಾರಿ ತುಂಬಾ ಲಾಭವನ್ನು ಸಂಪಾದಿಸಬಹುದು. ಆದ್ದರಿಂದ ಇದರ ವ್ಯವಸಾಯಕ್ಕೆ ಬಹಳ ಉಪಯೋಗಕರವಾದ ಕೆಲವು ಅಂಶಗಳು ಈ ಕೆಳಗೆ ಸೂಚಿಸಲ್ಪಟ್ಟವೆ.

ಪರಂಗಿ ಗಿಡವು ಬಹಳ ಜಾಗ್ರತೆಯಾಗಿ ಮರವಾಗುತ್ತದೆ. ಒಂದು ಸಾಲಿನ ಬೇಸಿಗೆಯಲ್ಲಿ ನೆಟ್ಟ ಬೀಜವು ಮುಂದಿನ ಸಾಲಿನಲ್ಲಿ ಮರವಾಗಿ ಫಲಕೊಡುವುದು.

ಒಳ್ಳೇ ಜಾತಿಯ ಬೀಜಗಳನ್ನೇ, ಅಗೆದು ಗೊಬ್ಬರ ಹಾಕಿ ಅಚ್ಚುಕಟ್ಟು ಮಾಡಲ್ಪಟ್ಟಿರತಕ್ಕ ಮತ್ತು ನೆರಳಿನಲ್ಲಿರುವ ಮಡಿಗಳಲ್ಲಿ ಒಟ್ಲು ಹೊಯ್ಯಬೇಕು. ಸೊಸಿಗಳು ಸುಮಾರು ೨ ಅಂಗುಲ ಎತ್ತರವಾಗಿರುವಾಗ್ಯೆ ಬಹಳ ಕೋಮಲವಾಗಿರುವುದರಿಂದ ನೀರು ಹೊಯ್ಯುವಾಗ್ಯೆ ಮೇಲಿನಿಂದ ಧಡಧಡನೆ ಸುರಿಯಕೂಡದು. ಮತ್ತು ಮಳೆಯ ಹೊಡತಕ್ಕೆ ಸಿಕ್ಕದಂತೆ ಸೊಸಿಗಳಿಗೆ ಮರೆಮಾಡಬೇಕು. ಸೊಸಿಗಳಲ್ಲಿ ಆರು ಎಲೆಗಳಿರುವಾಗ್ಯೆ ಅವುಗಳನ್ನು ಕಿತ್ತು ಬೇಕಾದ ಕಡೆಗಳಲ್ಲಿ ನೆಡಬೇಕು. ಸ್ಥಳದಿಂದ ಸ್ಥಳಕ್ಕೆ ಕಿತ್ತು ನೆಡುವುದರಿಂದ ಸೊಸಿಗಳಿಗೆ ಘಾಸಿಯಾಗುವ ಕಾರಣ, ಸಾಯಂಕಾಲದ ವೇಳೆಯಲ್ಲೇ ಕಿತ್ತು ನೆಟ್ಟರೆ ಬೆಳಗಿನ ಹೊತ್ತಿಗೆ ಅವುಗಳು ಚೇತರಿಸಿಕೊಳ್ಳುವುವು.

ಸೊಸಿಗಳನ್ನು ನೆಡತಕ್ಕ ಪ್ರದೇಶವನ್ನು ನೆಡುವುದಕ್ಕೆ ಮುಂಚೆಯೆ ಅಗೆದು ಮಟ್ಟಹೊಡೆದು ಬೇಕಾದ ಜಾಗಗಳಲ್ಲಿ ೩ ಅಡಿ ಆಳ ಮತ್ತು ೧ ಅಡಿ ಅಗಲವಾದ ಗುಂಡಿಗಳನ್ನು ಹೊಡಿಯಬೇಕು. ದನವಿನ ಗೊಬ್ಬರ ಮತ್ತು ಮಣ್ಣನ್ನು ಸಮನಾಗಿ ಬೆರಸಿ ಗುಂಡಿಗಳೊಳಕ್ಕೆ ತುಂಬಿರಬೇಕು. ಅನಂತರ ಈ ಗುಂಡಿಗಳಲ್ಲಿ ಸೊಸಿಗಳನ್ನು ನೆಡಬೇಕು. ಮೊದಲು ಮೊದಲು ಕೈಯಿಂದ ನೀರು ಹಾಕತಕ್ಕದ್ದು. ಸೊಸಿಗಳು ಎರಡು ಅಡಿ ಎತ್ತರವಾದ ನಂತರದಲ್ಲಿ ಸಾಧ್ಯವಾದರೆ ಸಣ್ಣ ಸಣ್ಣ ಕಾಲುವೆಗಳನ್ನು ಕಟ್ಟಿ ಅವುಗಳ ಮುಖಾಂತರವಾಗಿ ನೀರು ಹಾಯಿಸಬಹುದು. ಬೇಸಿಗೆಯಲ್ಲಿ ಮೂರು ದಿವಸಗಳಿಗೊಂದಾವರ್ತಿ ನೀರು ಹಾಕಬೇಕು. ಮಳೆಗ್ಗಾಲದಲ್ಲಿ ನೀರು ಹಾಕಬೇಕಾದ ಅವಶ್ಯಕವಿಲ್ಲ. ಗಿಡಗಳು ಬಹಳ ಜಾಗ್ರತೆಯಾಗಿ ಬೆಳೆಯುವುವು. ಗಿಡಗಳು ಡೊಂಕಾಗಿ ಬೆಳೆಯುವುದಾಗಿ ಕಂಡು ಬಂದರೆ ಅವುಗಳಿಗೆ ಬಲವಾದ ಊರೆಗಳನ್ನು ಕೊಡಬೇಕು.

ಅಲ್ಲಿಂದ ಮುಂದೆ ಗಿಡಗಳಿಗೆ ನೀರು ಹಾಕಬೇಕಾದ ಅವಶ್ಯಕವಿಲ್ಲ; ಆದರೆ ಮರದಲ್ಲಿ ಫಲ ಬಿಟ್ಟು ಕಾಯಿಗಳು ದಪ್ಪನಾಗುತ್ತಿರುವಾಗ್ಯೆ ಬಹಳವಾಗಿ ನೀರು ಹಾಕಬೇಕಾಗುವುದು. ಮತ್ತು ಮರದಲ್ಲಿ ಹೂವು ಕಚ್ಚುತ್ತಿರುವಾಗ್ಯೆ ಚನ್ನಾಗಿ ಕೊಳೆತ ಸ್ವಲ್ಪ ದನವಿನ ಗೊಬ್ಬರವನ್ನು ಹಾಕಿದರೆ ಹಣ್ಣು ಬಹಳ ರುಚಿಯಾಗುವುದು. ಕಾಯಿಗಳು ಬಲಿತು ಪಕ್ವವಾಗುತ್ತಿರುವ ಕಾಲದಲ್ಲಿ ನೀರು ಹೊಯ್ಯುವುದನ್ನು ನಿಲ್ಲಿಸಬೇಕು.

ಸಾಮಾನ್ಯವಾಗಿ ಪರಂಗಿ ಹಣ್ಣುಗಳು ಗಾತ್ರದಲ್ಲಿ ಒಂದೇ ಸಮನಾಗಿರುವುದಿಲ್ಲ; ಆದರೆ ದಪ್ಪ ದಪ್ಪನಾದ ಹಣ್ಣುಗಳೇ ಬೇಕಾದರೆ, ಚನ್ನಾಗಿ ಬಲಿಯದ ಮತ್ತು ವಿಕಾರವಾಗಿರತಕ್ಕ ಕಾಯಿಗಳನ್ನೆಲ್ಲಾ ಹರಿತವಾದ ಚಾಕುವಿನಿಂದ ಒಂದೇ ಏಟಿಗೆ ಕತ್ತರಿಸಿ ಹಣ್ಣುಗಳ ಮಧ್ಯೆ ಮಧ್ಯೆ ಜಾಗವನ್ನು ಮಾಡಬೇಕು.

ಹಣ್ಣುಗಳನ್ನು ರೈಲಿನಲ್ಲಿ ಬಹಳ ದೂರ ದೇಶಗಳಿಗೆ ಕಳುಹಿಸಬೇಕಾದರೆ ಚನ್ನಾಗಿ ಬಲಿತು ಆದರೆ ಪಕ್ವವಾಗಿಲ್ಲದಂಥಾವುಗಳನ್ನೇ ಆರಿಸಿ ಕುಯ್ಯಬೇಕು. ಹಣ್ಣುಗಳು ಒಂದಕೊಂದು ತಗಲದಂತೆ ಪ್ರತಿ ಹಣ್ಣನ್ನೂ ಬೇರೆ ಬೇರೆಯಾಗಿ ಕಾಗದಗಳಲ್ಲಿ ಸುತ್ತಿ ಬುಟ್ಟಿಗಳಲ್ಲಿ ಭರ್ತಿ ಮಾಡಬೇಕು. ಕೆಲವರು ಹಣ್ಣುಗಳನ್ನು ಪರಂಗಿ ಎಲೆಗಳಲ್ಲಿ ಸುತ್ತುವರು. ಆದರೆ ಹೀಗೆ ಮಾಡಿದರೆ ಹಣ್ಣುಗಳು ಬಹಳ ಜಾಗ್ರತೆಯಾಗಿ ಪಕ್ವವಾಗುವುವಾದ್ದರಿಂದ ಅವುಗಳನ್ನು ಎಲೆಗಳಲ್ಲಿ ಎಂದಿಗೂ ಸುತ್ತಬಾರದು.

ಪರಂಗಿ ಗಿಡಗಳಲ್ಲಿ ಹೆಣ್ಣು ಮತ್ತು ಗಂಡೆಂಬದಾಗಿ ಎರಡು ಜಾತಿಯುಂಟು. ಇದನ್ನು ಸುಲಭವಾಗಿ ಗೊತ್ತು ಮಾಡಬಹುದು. ಗಂಡು ಮರದಲ್ಲಿ ಸಣ್ಣ ಸಣ್ಣ ಹೂವುಗಳು ಜೊಂಪೆ ಜೊಂಪೆಯಾಗಿ ನೇತಾಡುತ್ತಿರುವುವು. ಹೆಣ್ಣು ಮರಗಳಲ್ಲಿ ಹೂವುಗಳು ಗಿಡಕ್ಕೆ ಅಂಟಿಕೊಂಡಿರುವುವು. ಪರಂಗಿ ತೋಟಗಳಲ್ಲಿ ಅಲ್ಲಲ್ಲಿ ಒಂದೊಂದು ಗಂಡು ಮರವನ್ನು ಬಿಟ್ಟು ಉಳಿದ ಗಂಡು ಮರಗಳನ್ನೆಲ್ಲಾ ಕತ್ತರಿಸಿ ಹಾಕಬೇಕು. ಬಿಡಲ್ಪಟ್ಟ ಒಂದೆರಡು ಗಂಡು ಮರಗಳು ಹೆಣ್ಣು ಮರಗಳಲ್ಲಿ ಜಾಗ್ರತೆಯಾಗಿ ಫಲ ಬಿಡುವಂತೆ ಮಾಡುವುವು. ಈ ಕೆಲಸವು ಕ್ರಿಮಿಗಳಿಂದ ನಡೆಸಲ್ಪಡುತ್ತದೆ.

ಕೆ. ಗೆ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಅಟಕವಿಕಟ.

ಸ್ವಾಮಿ, ಅಭಿಮಾನಿಕರ್ತರೇ, ಸಲಾಂ–ಓಹೋ! ಕ್ಷಮಿಸಿರಿ. ಸಲಾಮನ್ನಲೋ–ಸಲಾಮಿಗೆ ಒಕ್ಕೈ. ಜೇಕ್ಸನ್ ಸಾಹೇಬರು ಓರ್ವಬಾಲಕನಿಗೆ ಒಕ್ಕೈಜುರುಮಾನೆ ವಿಧಿಸಿದ ಕಾರಣವೇ ಇದು. ನಮಸ್ಕಾರವನ್ನಲೋ–ನನಗೆ ಮಾತ್ರ ಈ ಅಭ್ಯಾಸವಿಲ್ಲ. ಮಿಶ್ಯನ್ ಶಾಲೆಯಲ್ಲಿ ಸಲಾಂ ಕಲಿಸಿಬಿಟ್ಟರು. ಮಿಶ್ಯನ್ ಸಾಹೇಬರಿಗೆ ಸಲಾಂ ಮೇಲೆ ಬಹುಪ್ರೀತಿ; ಜೇಕ್ಸನ್ ಸಾಹೇಬರಿಗೆ ಭೀತಿ! ಸಲಾಮಿಗೆ ಜುರುಮಾನೆ ಆದಂದಿನಿಂದ ನನ್ನ ಶಾಲಾ ಮಕ್ಕಳು ಮುಷ್ಕರ ಹಿಡಿದು ಬಿಟ್ಟರು. ಇನ್ಸ್‌ಪೆಕ್ಟರರಿಗೆ ಅರ್ಜಿ ಮಾಡಿದ್ದೇನೆ. ಇನ್ಸ್‌ಪೆಕ್ಟರರು ಲೇಖನಿ ತಿರುಗಿಸಿ––ಶಭಾಸು! ಅರ್ಭಕರೇ––ಶಭಾಸು!! ಸಲಾಮನ್ನಬೇಡಿ––ನಮಸ್ಕಾರವೆಂದ್ಹೇಳಿ! ಸಲಾಂ ಪರದೇಶದ್ದು––ನಮಸ್ಕಾರ ನಮ್ಮೂರಿನದು.

ಸಲಾಮಿಗೆ ಜಾತಿ ಇಲ್ಲ—ನಮಸ್ಕಾರಕ್ಕೆ ಜಾತಿ ಇದೆ ಎಂದು ಊರ್ಧ್ವಧ್ವನಿ ಮಾಡಿದರು. ಜಾತಿ ಎಲ್ಲಿ? ಜಾತಿಗೆ ಜಾತಿ ಹಗೆ; ನಾಯಿಗೆ......ಮರೆತುಬಿಟ್ಟೆ. ಇದು ಕನ್ನಡ ಗಾದೆ ಅಂತೆ. ನಾನು ನಾಡುಕನ್ನಡ ಬಲ್ಲವನಲ್ಲ. ನನ್ನ ಕನ್ನಡ ಕಾಡು ಕನ್ನಡ. ನಾನು ಕಣ್ಣು ಮುಚ್ಚಿದೆ. ಆದರೆ ನಮ್ಮ ಉದಾರ ಗವರ್ನರರು ಈ ಸಲಾಂ ಪ್ರಕರಣಕ್ಕೆ ಕಣ್ಣು ಮುಚ್ಚಲಾರರು. ಅಹಾ! ನಮ್ಮ ಉದಾರ ಗವರ್ನರರು ಬಂಗಾಳಕ್ಕೆ ಹೋಗುವರಂತೆ. ನಮ್ಮೂರಿಗೆ ಬರುವ ಆಶೆ ನಿರಾಶೆ. ಕನ್ನಡನಾಡಿಗೆ ಡಿಲ್ಲಿ ದರ್ಬಾರಿನ ವರಪ್ರದಾನವಾಗಿ ಸಿಕ್ಕಿದ ಫಲವಿದು!

ಸ್ವಾಮಿ, ಮರೆತುಬಿಟ್ಟೆ. ನನಗೆ ಮರವು ಹೆಚ್ಚು. ನಮ್ಮ ಮುನ್ಸಿಪಾಲ್ ಕೌನ್ಸಿಲಿನಲ್ಲಿ ಮೇಲಾಟ. ರತ್ನಾವಳಿ ನಾಟಕದವರಿಗೆ ಕಡೇ ಆಟ. ನನಗೆ ಅಂತಿಮ ನೋಟ! ನಿದ್ದೆ ಬಿಟ್ಟು ಕಣ್ಣು ಕೆಂಪಾಗಿಯದೆ. ಕಳ್ಳು ಕುಡಿದಲ್ಲ! ಮನೆ ಮನೆ ತಿರುಗಾಡಿ! ಉಮೇದ್ವಾರರಲ್ಲಿ ಒಬ್ಬರು ವೈದ್ಯ ಮಹೋಪಕಾರಿಗಳಂತೆ ನನ್ನ ಓಟು ಅವರಿಗೆನೇ ಕೊಡಬೇಕೆಂದು ಒಬ್ಬರ ಮಂತ್ರ. ಒಬ್ಬರೋ—ಇವರಿಗೆ ಮಂತ್ರ ಹೆಚ್ಚು, ನನಗೆ ತಂತ್ರ ಹೆಚ್ಚು—

ಮಂಡೆ ಮಂಡೆಯ ಬಡಕೊಳ್ಳುತ್ತಾ । ನಾವು
ಕಂಡವರ ಮನೆ ಮನೆ ನುಗ್ಗುತ್ತಾ ।

ಹೆಂಡ—

ತಡೆಯಿರಿ! ಹಾಡು ಮರೆತು ಹೋಯಿತು. ಸೊಳ್ಳು ಬರುವದಿಲ್ಲ. ಕಳದ ವಾರದ ಪತ್ರದಲ್ಲಿದೆ ಅಂತೆ. ಪತ್ರ ಹುಡುಕಿ ಹುಡುಕಿ ಸಾಕಾಯಿತು. ಆಲೋಚಿಸಿದೆ, ಬರಲಿಲ್ಲ. ಕಾಲ್ಮೇಲೆ ಕಾಲಿಟ್ಟು ಆಲೋಚಿಸಿದೆ. ಉಮೇದ್ವಾರರ್‍ಯಾರು? ಹಲವರಿರುವರು. ಇವರೆಲ್ಲರಿಗೂ ನನ್ನ ಓಟು ಕೊಟ್ಟು ಬಿಟ್ಟರೆ ಓಟಿನ ಪರಿಣಾಮ ಮೊನ್ನೆಯಂತೆಯೇ ಆಗುವುದು. ಮೇಲಾಟವೆಂದೆನೋ—ಮೇಲಾಟದಿಂದ ಪರಸ್ಪರ ಕಾಟ—ಹೊಳೆ ತನಕ ಓಟ—ದೊರೆತನಕ ದೂರು—ದೊರೆಗಳೋ—ಕಲೆಕ್ಟರ ದೊರೆಗಳು—ತಿರುವಂಕೋಡಿಗೆ ಹೋಗಿಬಿಡುವರು. ನಾನೂ ಜಾರಿಬಿಡುವೆನು. ನನಗೆ ಓಟ್ಯಾಕೆ? ಪ್ರಜಾಹಿತಚಿಂತನೆಯ ಜ್ಞಾನವಿಲ್ಲದ ನನಗೆ ಕೌನ್ಸಿಲು ಯಾಕೆ? ಜ್ಞಾನವಿಲ್ಲದಿದ್ದರೆ ಧನವಾದರೂ ಇರಬೇಕು.

ಜ್ಞಾನವುಳ್ಳವರೊಡಲು । ಭಾನು ಮಂಡಲದಂತೇ ॥
ಜ್ಞಾನವಿಲ್ಲದವರ ಬರಿವಡಲು ಅಗಸರ । ಬಾನಿಯಂತಕ್ಕು, ಸರ್ವಜ್ಞಾ ॥

ಡೊಳ್ಳೊಟ್ಟೆಯೂ ನನಗಿಲ್ಲ—ಹೀಗೆ ಎರಡೂ ಇಲ್ಲ.

ಶುಭವಾರ್ತೆ! ಶುಭವಾರ್ತೆ! ವೈದ್ಯ ಮಹನೀಯರಿಗೆ-ಜಯ-ನಾನಾದರೋ ಇನ್ನು ಗೆದ್ದವರ ಕಡೆ-ನಿಮಗೆ ಬಿದ್ದ ಕಡೆ!

ಸ್ವಾಮಿ, ಪತ್ರ ಬೆಳೆಯಿತು. ಪ್ರಯಾಣಕ್ಕೆ ಹೊತ್ತಾಯಿತು. ಇನ್ನು ಸಿಕ್ಕಿದ ವಾರ್ತೆ ಟಪ್ಪಾಲು ದ್ವಾರಾ ಬರಕೊಳ್ಳುವೆನು. ಪತ್ರಗಳು ಪೂರ್ಣ ಬೇರಿಂಗ್—ತಿಳಿದಿರಲಿ. ಸಲಾಂ—ಅಲ್ಲ.—ಅಲ್ಲಲ್ಲ! ನಮಸ್ಕಾರ.

ಅಪಿಕಲಾಟ.

———o———

ಬಂಟವಾಳ ಆಸ್ಪತ್ರೆಯ ವಿಚಿತ್ರ.

———o———

ಬಂಟವಾಳ ಆಸ್ಪತ್ರೆಯ ಸುವಿಚಿತ್ರವನ್ನು ಏನೆಂದು ಹೇಳಲಿ? ದಯಾಳು ಸರಕಾರದವರು ಸರ್ವ ಜನರಿಗೂ ಪ್ರಯೋಜನ ಉಂಟಾಗುವ ಹಾಗೆ ಹೆಚ್ಚು ಹಣ ಖರ್ಚು ಮಾಡಿ ಈ ಊರಲ್ಲಿ ಒಂದು ಆಸ್ಪತ್ರೆಯನ್ನು ಕಟ್ಟಿಸಿದ್ದಾರೆ. ಕೆಲವು ಕಾಲದ ಹಿಂದೆ ಹಳ್ಳಿಪಳ್ಳಿಗಳಿಂದ ಅನೇಕ ಬಡಬಗ್ಗರು ಔಷಧಕ್ಕೆ ಬಂದು ಪ್ರಯೋಜನ ಹೊಂದುತ್ತಿದ್ದರು ಎಂಬುವುದು ಹ್ಯಾಗೆ ತಿಳಿಯ ಬರುತ್ತದೆಂದರೆ—ಸ್ವರ್ಗಸ್ಥರಾದ ಎಸ್. ಜಿ. ಗೊನ್ಸಾಲವೀಸ್ ಎಂಬವರು ಇಲ್ಲಿ ಡಾಕ್ಟರಾಗಿದ್ದ ಸಮಯದಲ್ಲಿ ಒಬ್ಬ ಕಂಪೌಂಡರರಿಂದ ಕೆಲಸ ಸಾಗದೆ ಹೆಚ್ಚಿಗೆಯಾಗಿ ಇನ್ನೊಬ್ಬ ಕಂಪೌಂಡರರನ್ನು ಇಲ್ಲಿಗೆ ತರಿಸಿದ್ದರು. ಆದರೆ ಆಗಿನ ಸ್ಥಿತಿಗೂ ಈಗಿನ ಸ್ಥಿತಿಗೂ ಹೆಚ್ಚು ಕಡಿಮೆ ಬಂದದೆ. ಇದು ಯಾತರಿಂದ ಎಂತಾ ತೋರ್ರುವುದಿಲ್ಲ. ಯಾವಾಗ ನೋಡಿದರೂ ಕಂಪೌಂಡರ್ ವ ವಾರ್ಡ ಕೂಲಿಯು ಕೆಲಸ ಇಲ್ಲದೆ ಜಗಲಿ ಮೇಲೆ ಬೇಜಾರಕ್ಕೆ ತಿರುಗಾಡುತ್ತಾ ಇರುತ್ತಾರೆ. ಆಸ್ಪತ್ರೆಗೆ ಔಷಧಿಗೆ ಬರುವ ಜನಸಂಖ್ಯೆಯಾದರೋ—ರಾಜಾಮಾರ್ಗವಿಂದ ಬರುವ ಜನಸಂಖ್ಯೆಯು ಸುಮಾರು ೨೦, ೩೦ಕ್ಕೆ ಮೀರಲಿಕ್ಕಿಲ್ಲವೆಂತ ತೋರುತ್ತೆ. ಒಳರೋಗಿಯಾಗಿ ಒಬ್ಬಿಬ್ಬರು ಬಂದರೆ ಅಪರೂಪ. ಇಷ್ಟು ಜನರು ಬಂದರೂ ಆಸ್ಪತ್ರೆಯ ಮದ್ದುಗಳೇನೂ ಖರ್ಚಾಗುವುದಿಲ್ಲ. ದಾಕ್ತಾರವರಿಗೆ ರವಷ್ಟಾದರೂ ಸಮಯ ಸಿಕ್ಕುವುದಿಲ್ಲ. ಯಾವಾಗ್ಯೆ ನೋಡಿದರೂ ಬರಿಯುವುದರಲ್ಲೇ ಇದ್ದಾರೆ. ದಾಕ್ತಾರವರಿಗೆ ಈ ಬರಿಯುವ ಕೆಲಸ ಇದ್ದದರಿಂದ ದೂರ ಹಳ್ಳಿಗಳಿಂದ ಬರುವ ಬಡಬಗ್ಗರು ಕಾದು ಕಾದು ಬೇಸರ ಪಡುತ್ತಿರುವರು. ಮಾರ್ಗ ಗುಡಿಸುವವರು ಬೆಳಿಗ್ಯೆ ೭ ಘಂಟೆಯಿಂದ ಸಾಯಂಕಾಲ ೭ ಘಂಟೆ ವರೆಗೆ ಕೆಲಸ ಮಾಡಿಯೂ ಜರುಮಾನೆ ಕೊಟ್ಟೂ ಊಟಕ್ಕಿಲ್ಲದೆ ಬಹಳ ದಣಿದಿರುವರು. ಇದೀಗ ಮನಸ್ಸುಕೊಟ್ಟು ಕೆಲಸ ಮಾಡುವವರಿಗೆ ಸಿಕ್ಕುವ ಪ್ರತಿಫಲ. ಕರಸಪೊಂಡೆನ್ಸ ಕೆಲಸವು ಹೆಚ್ಚಾಗುತ್ತಾ ಬರುವುದರಿಂದ ಲೋಕಲ್ ಬೋರ್ಡಿನವರು ಈ ಆಸ್ಪತ್ರೆಗೆ ಒಬ್ಬ ಗುಮಾಸ್ತನನ್ನಾದರೂ ನೇಮಿಸಿದ್ದ ಪಕ್ಷಕ್ಕೆ ಬರಿಯುವ ಕೆಲಸದಲ್ಲೆ ಆಸಕ್ತರಾಗಿರುವ ದಾಕ್ತಾರವರ ಮನಸ್ಸು ಬಡ ರೋಗಿಗಳ ಕಡೆಗಾದರೂ ತಿರುಗೀತು. ಈಚೆಗೆ ಊರಲ್ಲಿ ನೇಟಿವ ಪಂಡಿತರ ಸಂಖ್ಯೆಯು ಹೆಚ್ಚಾಗುತ್ತಾ ಬರುತ್ತಿದೆ. ಕಾರಣವೇನೆಂಬದನ್ನು ವಾಚಕರೇ ಆಲೋಚಿಸಲಿ. ವಟ್ಟಾರೆ ಬಡಬಗ್ಗರ ಅದೃಷ್ಟವು ಕೆಟ್ಟದ್ದಾಗಿದೆ. ಇನ್ನಾದರೂ ದಯಾಳು ಸರಕಾರದವರು ತಮ್ಮ ಎಡಗಣ್ಣಿನ ನೋಟವನ್ನಾದರೂ ಈ ಊರ ಜನರ ಕಡೆಗೆ ತಿರುಗಿಸಿದರೆ ಊರಿನ ಆರೋಗ್ಯದ ಸ್ಥಿತಿಯು ಅಭಿವೃದ್ಧಿಯಾದೀತು.

ಬಂಟವಾಳ. "ಸ್ವದೇಶಾಭಿಮಾನಿ."

~~~~~~

ಸ್ವದೇಶಾಭಿಮಾನಿ ಕರ್ತರೇ!

ಪ್ರಖ್ಯಾತ ಛತ್ರಿ ಸರ್ಕಸಿನ ಯಜಮಾನರು ಈ ಮಂಗಳೂರ ಪಟ್ಟಣಕ್ಕೆ ಬಂದು ಎಂಟು ಹತ್ತು ರಾತ್ರಿ ಸರ್ಕಸ್ ಆಟಗಳನ್ನಾಡಿಸಿ ನೋಡಲಿಕ್ಕೆ ಅಪೇಕ್ಷಿತರಾದ ಈ ಪುರನಿವಾಸಿಗಳನ್ನೆಲ್ಲಾ ಸಂತೋಷಪಡಿಸಿ ಕಷ್ಟದಿಂದ ಹಣ ಸಂಪಾದಿಸಿಕೊಂಡು ಕಳದ ಸಪ್ತಾಹದ ಅಂತ್ಯದಲ್ಲಿ ಇಲ್ಲಿಂದ ಸರ್ಕಸ್ ತೆಗೆದುಕೊಂಡು ಹೋದರು. ಇವರ ಧರ್ಮಬುದ್ಧಿಯು ಇವರು ಮಾಡಿದ ಗುಪ್ತದಾನಗಳಲ್ಲಿ ದೀಪ್ತವಾಗಿದೆಂಬದನ್ನು ಕಾಣಬಹುದು. ಅಂದರೆ ಈ ಪಟ್ಟಣ ಬಿಟ್ಟು ಹೋಗುವ ಮುಂಚೆ ಧರ್ಮಸಂಸ್ಥೆಗಳಿಗೆ ಇವರು ಹೆಚ್ಚು ಕಡಿಮೆ ಧನ ಸಹಾಯ ಮಾಡಿದ್ದಾರೆಂತಲೂ ಮುಖ್ಯವಾಗಿ ಈ ಪಟ್ಟಣದ ಮುನ್ಸಿಪಾಲ್ ಆಸ್ಪತ್ರಿಗೆ ನೂರು ರೂಪಾಯಿಯನ್ನು ಉಚಿತವಾಗಿ ಕೊಟ್ಟು ಹೋಗಿದ್ದಾರೆಂತಲೂ ಕೇಳುತ್ತೇನೆ.

ವಿದೇಶಿ ಗುರುಗಳಾದ ಇಟಲಿಯನ್ ಪಾದ್ರಿಯವರು ಈ ಪಟ್ಟಣದಲ್ಲಿ ತಮ ಶಿಷ್ಯ ಕುಲಕ್ಕೂ ಈ ದೇಶದ ಇತರ ಜನಕ್ಕೂ ವಿದ್ಯಾಭಿವೃದ್ಧಿಗೆ ಉಪಾಯವಾಗಿರುವ ಸೆಂಟ್ ಅಲೋಸಿಯಸ್ ಕೊಲೇಜ್ ಕನ್ವೆಂಟ್ ಸ್ಕೂಲ್ ಇತ್ಯಾದಿ ವಿದ್ಯಾ ಶಾಲೆಗಳನ್ನು ಸ್ಥಾಪಿಸಿ ನಡಿಸಿಕೊಂಡು ಬರುವಂಥಾದ್ದು ಜನಜನಿತವಾಗಿರುತ್ತದೆ.

ಹಾಗೆಯೇ ವಿದೇಶಿಗಳಾದ ಜರ್ಮನ್ ಪಾದ್ರಿಯರು ಕನ್ನಡಾ ಜಿಲ್ಲೆಯಲ್ಲಿ ಲೋಕೋಪಕಾರಕ್ಕಾಗಿ ಹ್ಯಾಸ್ಕೂಲುಗಳನ್ನೂ ಇತರ ಶಾಲೆಗಳನ್ನೂ ಸ್ಥಾಪಿಸಿ ನಡಿಸಿಕೊಂಡು ಬರುತ್ತಾರೆ.

ಇವರ ಮೇಲ್‌ಪಂಙ್ತಿಯನ್ನು ನೋಡಿ ಗೌಡಸಾರಸ್ವತ ಬ್ರಾಹ್ಮಣರ ಪೂಜ್ಯ ಗುರುಗಳಾದ ಶ್ರೀ ಭುವನೇಂದ್ರ ತೀರ್ಥಸ್ವಾಮಿಗಳು ಕೆನರಾ ಹ್ಯಾಸ್ಕೂಲಿಗೆ ತಲೆಯೆತ್ತಲಿಕ್ಕೆ ಬೇಕಾದ ಧನ ಸಹಾಯಮಾಡಿದ್ದಾರೆಂಬ ಕೀರ್ತಿಯದೆ.

ಈಗ ಈ ಜಿಲ್ಲೆಗೆ ಚಿತ್ತೈಸಿದ ಶ್ರೀ ಚಿತ್ರಾಪುರ ಸ್ವಾಮಿಗಳು ಆರು ವರುಷಗಳಿಂದ ಬಾರದೆ ಈಗ ಬಂದಿರುತ್ತಾರೆಂಬ ಸಂತೋಷದಿಂದ ಶಿಷ್ಯವರ್ಗವೆಲ್ಲವೂ ಒಡ್ಡಾವಡ್ಡಿಯಿಂದ ಧನಕಾಣಿಕೆಗಳನ್ನು ಮಾಡುತ್ತಾ ಬರುತ್ತಾರೆಂತಲೂ ಹೀಗೆ ಈ ಪಟ್ಟಣದಲ್ಲಿಯೂ ಈ ಜಿಲ್ಲೆಯಲ್ಲಿಯೂ ಸಂಗ್ರಹವಾಗುವ ಕಾಣಿಕೆಯ ಹಣದಿಂದ ಈ ಗುರುಗಳು ಸಹಜ ಉದಾರ ಚರಿತರಾದವರಾಗಿದ್ದದರಿಂದ ತಮ್ಮ ಶಿಷ್ಯವರ್ಗದವರ ವಿದ್ಯಾಭ್ಯುದಯಕ್ಕೆ ತಕ್ಕ ಉತ್ತೇಜನಕೊಡುವರೆ ಮನಸ್ಸುಳ್ಳವರಾಗಿರುತ್ತಾರೆಂತಲೂ ದೀನಸ್ಥಿತಿಯಲ್ಲಿರುವ ಗಣಪತಿ ಶಾಲೆಯು ಇವರ ಕೈ ಪ್ರಸಾದವನ್ನು ಹೊಂದಿ ಉತ್ತಮ ದೆಶೆಗೆ ಬರುವ ಹಾಗೆ ಇದೆಯೆಂತಲೂ ಕೇಳಿ ನಾವು ಸಂತೋಷಪಡುತ್ತೇವೆ. ಇವರ ಧರ್ಮಬುದ್ಧಿಯ ಬೆಳಕು ಉದ್ದೀಪ್ತವಾಗಿ ಶಿಷ್ಯ ಜನರ ಅಜ್ಞಾನಾಂಧಕಾರವಿಮುಕ್ತಿಗೆ ಕಾರಣವೂ ಲೋಕಕ್ಕೆ ಮುಂದೆ ಧರ್ಮ ದಿಗ್ದರ್ಶಕ ಬೆಳಕೂ ಆಗುವ ದಶೆಯಲ್ಲಿ ಅದೆ ಎಂತ ಕೇಳಿ ಸಂತೋಷಪಡುತ್ತೇನೆ.

ತಮ್ಮ ಅತ್ಯಂತ ವಿಧೇಯ ಸೇವಕ,

ತಾರೀಕು 28ನೇ ಜನವರಿ 1912.
ಠಿಕಾಣೆ, ವಿಶ್ವ ಗುಣಾದರ್ಶ. } "ವಿಶ್ವಾವಸು."

———o———

ವಿದೇಶ ವೃತಾಂತ.

~~~~~~

ಮೆ| ಜೋರ್ಜ್ ಗ್ರೀನ್‌ವೂಡೆಂಬವರು ಕಳದ ವರ್ಷ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಮುಂದಿಟ್ಟ ಪಶು ಹಿಂಸನಿವಾರಣಾರ್ಥವಾದ ಮಸೂದೆಯು ಇಂಗ್ಲಾಂಡಿನಲ್ಲಿ ಇತ್ತಲಾಗ್ಯೆ ಕಾನೂನಾಗಿ ಜಾರಿಗೆ ಬಂದಿರುವದು. ಈ ಕಾನೂನು ಪ್ರಕಾರ ಪಳಗಿಸಿದ ಯಾ ಕಾಡು ಮೃಗಗಳಿಗೆ ಹೊಡೆಯಲೂ ಒದೆಯಲೂ, ಅಮಾನುಷರೀತಿಯಿಂದ ನಡಿಸಲೂ, ಮಿತಿಮೀರಿ ಸವಾರಿ ಯಾ ಗಾಡಿ ಸವಾರಿ ಮಾಡಲೂ ಅವುಗಳನ್ನು ಹೆದರಿಸಲೂ ಕೂಡದು. ಈ ಕಾನೂನಿಗೆ ವಿರೋಧವಾಗಿ ನಡಕೊಂಡವರಿಗೆ ೫–೨೫ ಪವನುಗಳ ಜುರುಮಾನೆ ಇಲ್ಲವೆ ೩–೬ ತಿಂಗಳ ಕಠಿಣ ಯಾ ಸಾದಾ ಬಂದಿಖಾನೆಯು ವಿಧಿಸಲಾಗುವುದು.

ಯೋಗ್ಯ ರೀತಿಯಲ್ಲಿ ಪರಿಪಾಲನೆ ಮಾಡದ್ದರಿಂದ ಒಂದು ಪಶುವು ಸಂಕಷ್ಟಪಡುವುದಾದರೆ ಅದರ ಯಜಮಾನನಿಗೆ ೨೫ ಪವನು ಜುರುಮಾನೆ ವಿಧಿಸಲ್ಪಡುವದು. ಇಂಥಾ ಅಸ್ವಸ್ಥದ ಪಶುವನ್ನು ಇಟ್ಟುಕೊಳ್ಳುವುದರಿಂದ ಅದಕ್ಕೆ ಮತ್ತಷ್ಟು ಕಷ್ಟವು ಪ್ರಾಪ್ತಿಸೀತು ಎಂಬದಾಗಿ ಕೋರ್ಟಿನವರು ಅಭಿಪ್ರಾಯಪಟ್ಟರೆ ಅದನ್ನೇ ಕೊಲ್ಲಲು ಅಪ್ಪಣೆಕೊಡಬಹುದು. ಪ್ರಾಣಿಗಳನ್ನು ವಧೆಮಾಡುವಾಗ ೧೬ ವರ್ಷ ಪ್ರಾಯದೊಳಗಿನ ಮಕ್ಕಳನ್ನು ಅಂಥಾ ಸ್ಥಳಕ್ಕೆ ಬರಗೊಡಿಸಕೂಡದು. ಒಂದು ಪಶುವನ್ನು ಮತ್ತೊಂದು ಪಶುವಿನ ಕಣ್ಣೆದುರಿಗೆ ಕೊಲ್ಲಬಾರದು. ಕಶಾಯಿಗಳು ಪಶುವ್ಯಾಪಾರ ಮಾಡಕೂಡದು. ಕೊಲ್ಲಲಿಕ್ಕೆ ಮಾರಲ್ಪಟ್ಟ ಕುದುರೆಗಳನ್ನು ಇತರ ಕೆಲಸಗಳಿಗೆ ಪ್ರಯೋಗಿಸಕೂಡದೆಂಬಿತ್ಯಾದಿ ಕಾನೂನುಗಳು ಜಾರಿಗೆ ಬಂದಿರುವದು.

~~~~~~

ಆಫ್ರೀಕದ ಕೊಂಗೋ ಎಂಬ ದೇಶದಲ್ಲಿ ರಬ್ಬರ್ ಮತ್ತು ದಂತವು ಅತಿರೇಕವಾಗಿ ದೊರೆಯುವುದು. ಅಲ್ಲಿರುವ ಬೆಲ್ಜಿಯಮ್ ಸರಕಾರದವರು ಅಲ್ಲಿಯ ದೇಶೀಯರಿಂದ ಕಂದಾಯವಾಗಿ ದಂತವನ್ನೇ ವಸೂಲು ಮಾಡಿ ಹೆಚ್ಚಿನ ಲಾಭ ಪಡಕೊಂಡಿರುತ್ತಾರೆ. ನಾಲ್ಕು ಶಿಲ್ಲಿಂಗ್ ಅಂದರೆ ಸುಮಾರು ಮೂರು ರೂಪಾಯಿ ಕ್ರಯ ಬಾಳುವ ಒಂದು ಕೋವಿಯನ್ನು ಅಲ್ಲಿಯ ದೇಶೀಯರಿಗೆ ಕೊಟ್ಟಲ್ಲಿ ಅವರು ಅದಕ್ಕೆ ಬದಲಾಗಿ ೨೦೦ ಪವನು ಅಂದರೆ ೩೦೦೦ ರೂಪಾಯಿ ಕ್ರಯ ಬಾಳುವ ದಂತವನ್ನು ಕೊಡುವರು.

~~~~~~

ಜೋರ್ಜಚಕ್ರವರ್ತಿಯವರೂ ಚಕ್ರವರ್ತಿನಿಯವರೂ ಕಳದವಾರ ಮಾಲ್ಟಕ್ಕೆ ತಲಪಿ ಹಡಗದಿಂದಿಳಿದು ಅಲ್ಲಿಯ ಗವರ್ನರರ ಅರಮನೆಯಲ್ಲಿ ತಡೆದರು. ಚಕ್ರವರ್ತಿಯಯವರನ್ನು ನೋಡುವುದಕ್ಕೆ ಜನ ಸಂದಣಿಯು ಕಿಕ್ಕಿರಿದು ನಿಂತು ಧನ್ಯವಾದವನ್ನಿತ್ತರು.

~~~~~~

ಅಮೇರಿಕದ ಚಿಕಾಗೋ ಪಟ್ಟಣದಲ್ಲಿ ಈಚೆಗೆ ವಿದ್ಯುಚ್ಛಕ್ತಿಯ ಮೂಲಕವೇ ಬೆಂಕಿ ಇಲ್ಲದೆ ಅಡಿಗೆ ಮಾಡುವ ವಿದ್ಯೆಯನು ಕಂಡು ಕೊಂಡಿರುವರು. ಕೈಯಲ್ಲಿ ತುಸ ಮಂಜು ಗಡ್ಡೆಯನ್ನು ಇಟ್ಟು ಅದರ ಮೇಲೆ ಬಾಣಲಿಗೆಯನ್ನು ಇಟ್ಟು ಬಿಟ್ಟರೆ ತನಷ್ಟಕ್ಕನೇ ಮೊಟ್ಟೆಸುಡಬಹುದು. ಮತ್ತು ಸದಾ ಒಲೆಯ ಮೇಲೆ ಅಲುಮಿನ್ಯಮ್ ಲೋಹದ ಪಾತ್ರೆಯನ್ನಿಟ್ಟು ವಿದ್ಯುಚ್ಛಕ್ತಿಯ ಸರಿಗೆಯನ್ನಾಗಲೀ ಇತರ ಯಾವ ವಸ್ತುವನ್ನಾದರೂ ಪ್ರಯೋಗಿಸದೆ ರೊಟ್ಟಿ ಬಿಸ್ಕುಟ್ ಸುಡುತ್ತಾರೆ. ಇದಕ್ಕೆ "ವಯರ್‌ಲೆಸ್" ಅಂದರೆ ಸರಿಗೆ ಇಲ್ಲದ ವಿದ್ಯುಚ್ಛಕ್ತಿ ವಿದ್ಯೆ ಎಂದು ಹೆಸರು.

~~~~~~

ಅಮೇರಿಕದ ನ್ಯೂಯೊರ್ಕು ಪಟ್ಟಣದಲ್ಲಿ ೧೨೦೦ ಚದರ ಅಡಿ ಉಳ್ಳ ಒಂದು ಸ್ಥಳಕ್ಕೆ ಒಬ್ಬನು ೧೦ ವರ್ಷಗಳ ಮೊದಲು ೧,೧೫೫,೦೦೦ ರೂಪಾಯಿ ಕೊಟ್ಟು ಕೊಂಡು ಕೊಂಡು ಎರಡು ವರ್ಷಗಳ ಮೇಲೆ ಅದನ್ನು ೧೫ ಲಕ್ಷ ರೂಪಾಯಿಗೆ ಮಾರಿದನು. ಈಗ ಅದೇ ಸ್ಥಳವನ್ನು ಒಂದು ಕಂಪೆನಿಯವರು ೩೦ ಲಕ್ಷ ರೂಪಾಯಿ ಕೊಟ್ಟು ಕೊಂಡು ಕೊಂಡಿದ್ದಾರೆ. ಒಂದು ಚದರ ಅಂಗುಲ ಭೂಮಿಗೆ ಸುಮಾರು ೧೦ ರೂಪಾಯಿ ಕ್ರಯ ಬಿತ್ತು.

~~~~~~

ಜೋರ್ಜಚಕ್ರವರ್ತಿಯವರು ಹಿಂದೂಸ್ಥಾನದ ಪ್ರಯಾಣದಿಂದ ಇಂಗ್ಲಾಂಡಿಗೆ ಮುಟ್ಟಿದ ನಂತರ ಲಂಡನ್ ಪಟ್ಟಣ ಮುನ್ಸಿಪಾಲಿಟಿಯವರು ಚಕ್ರವರ್ತಿ ಚಕ್ರವರ್ತಿನಿಯವರನ್ನು ಔತಣಕ್ಕೆ ಕರೆದು ವಿಜ್ಞಾಪನಾ ಪತ್ರವನ್ನು ಓದಬೇಕೆಂದು ಆಲೋಚಿಸಿರುವರು. ಆದರೆ ಚಕ್ರವರ್ತಿಯವರು ತನಗೆ ಔತಣಕ್ಕೆ ಚಿತ್ತೈಸಲು ಅನನುಕೂಲವೆಂದೂ ವಿಜ್ಞಾಪನಾ ಪತ್ರವನ್ನು ಮಾತ್ರ ಸ್ವೀಕರಿಸುವೆನೆಂದೂ ತಿಳಿಸಿರುವರು.

~~~~~~

ಇಟಲಿಯರು ಪುನಃ ಫ್ರೆಂಚರ ಒಂದು ಹಡಗವನ್ನು ಟ್ಯೂನಿಸಿನ ಬಳಿಯಲ್ಲಿ ಹಿಡಿದಿರುವರು. ಇದರಿಂದ ಫ್ರೆಂಚ ಸರಕಾರದವರು ಬಹಳ ಸಿಟ್ಟಾಗಿರುವರು.

ತಾ. ೨೬ರಲ್ಲು ಟ್ರಿಪೋಲಿಯಲ್ಲಿ ೩೦೦೦ ಅರಬಿಯರು ಇಟಾಲಿಯರ ಮೇಲೆ ಬಿದ್ದರು. ಆದರೆ ಹಿಮ್ಮೆಟ್ಟಲ್ಪಟ್ಟರು. ಇಟಾಲಿಯರಲ್ಲಿ ಇಬ್ಬರು ಮಡಿದರು. ಎಂಟು ಮಂದಿ ಘಾಯಪಟ್ಟಿರುವರು.

ಇಟಾಲಿಯರು ಏಮೆನ್ ಕರಾವಳಿಯನ್ನು ಅಡ್ಡಕಟ್ಟಿದ್ದಾರೆ. ಅಲ್ಲಿರುವ ಬ್ರಿಟಿಷ್ ಕೌನ್ಸೆಲ್ಲರು ಒಂದು ಯುದ್ಧ ಹಡಗವನ್ನು ಕಳುಹಿಸಬೇಕೆಂದು ಕೇಳಿಕೊಂಡಿದ್ದಾರೆ. ಏಮೆನ್ ಪಟ್ಟಣವನ್ನು ಮುತ್ತಿಗೆ ಹಾಕುತ್ತೇವೆಂದು ಇಟಾಲಿಯರು ಹೆದರಿಸುತ್ತಿದ್ದಾರೆ.

~~~~~~

ಚೀನದಲ್ಲಿಯ ಗಲಭೆ ಇನ್ನೂ ನಿಲ್ಲಲಿಲ್ಲ. ಯನ್‌ಶಿಕಾಯಿರವರನ್ನು ವೈರಿಗಳು ಮುತ್ತಿರುವುದರಿಂದ ಅವರ ಸುತ್ತಲೂ ಬಲವಾದ ಮೈಗಾವಲಿ ಸೈನ್ಯವಿದೆ. ಪ್ರಜಾಧಿಪತ್ಯ ಸರಕಾರದವರು ತಮ್ಮ ಬಳಿಯಲ್ಲಿರುವ ಸೈನೀಕರಿಗೆ ಕೊಡಲು ಹಣವಿಲ್ಲದಿರುವುದರಿಂದ ಚೀನದ ಸಾಹುಕಾರರ ಹಡಗ ಕಂಪೆನಿಯವರಿಂದ ತಮಗೆ ಹತ್ತು ಸಾವಿರ ತೇಲ್ ನಾಣ್ಯಗಳನ್ನು ಕೊಡಬೇಕೆಂದೂ ಕೊಡದಿದ್ದರೆ ಹಡಗಗಳನ್ನು ಸ್ವಾಧೀನ ಮಾಡಿಕೊಳ್ಳುವೆವೆಂದೂ ಹೆದರಿಸಿದ್ದಾರೆ. ಯನ್‌ಶಿಕಾರವರ ಕೂಡೆ ಈಗ ೭೦೦೦ ಮಂದಿ ಇರುವರು.

~~~~~~

ಲಿಬರಲ್ ಪಕ್ಷದ ಚರ್ಚಿಲ್‌ರವರು ಬೆಲ್‌ಫಾಸ್ಟಿನ ಅಲ್‌ಸ್ತರಿನ ಸಭಾಸದನದಲ್ಲಿ ಐರ್ಲಾಂಡಿನ ಹೋಮ್‌ರೂಲಿನ ಸಂಬಂಧ ಭಾಷಣಕೊಡಲಿಕ್ಕಿದ್ದಾರೆಂದು ತಿಳಿಸಿದ್ದೇವಷ್ಟೇ. ಆದರೆ ಅಲ್‌ಸ್ತರಿನ ಪ್ರೊಟೆಸ್ಟಾಂಟರು ಇದನ್ನು ಎದುರಿಸುವುದರಿಂದ ಮೆ| ಚರ್ಚಿಲ್‌ರವರು ತಾನು ಅಲ್‌ಸ್ತರಿನ ಲಿಬರಲ್ ಪಕ್ಷದವರಿಗೆ ಮಾತುಕೊಟ್ಟದ್ದರಿಂದ ಹ್ಯಾಗೂ ತನ್ನ ಭಾಷಣವನ್ನು ನಿಲ್ಲಿಸಲಾರೆನೆಂದೂ ಅಲ್‌ಸ್ತರಿನಲ್ಲಿ ಆಗದಿದ್ದರೆ ಇತರ ಕಡೆಯಲ್ಲಿಯಾದರೂ ಭಾಷಣಕೊಡದಿರಲಾರೆನೆಂದೂ ಯೂನಿಯನಿಷ್ಟ್ ಪಕ್ಷದ ಶ್ರೇಷ್ಠರಾದ ಲೆಂಡನ್‌ಡೊರಿ ಪ್ರಭುಗಳಿಗೆ ತಿಳಿಸಿದ್ದಾರೆ. ಲೆಂಡನ್‌ಡರಿ ಪ್ರಭುಗಳು ಬೇರೆ ಕಡೆಯಲ್ಲಿ ಭಾಷಣಕೊಡಬಹುದೆಂದು ಹೇಳಿರುವುದರಿಂದ ಚರ್ಚಿಲರವರು ಫೆಬ್ರುವರಿ ತಾ. ೮ರಲ್ಲು ತನ್ನ ಭಾಷಣವನ್ನು ಬೆಲ್‌ಫಾಸ್ಟಿನ ಫುಟುಬೋಲ್ ಎಂಬ ಚೆಂಡಾಟದ ಸ್ಥಳದಲ್ಲಿ ಕೊಡಲು ನಿಶ್ಚಯಿಸಿದ್ದಾರೆ.

~~~~~~

ಫ್ರೆಂಚರ ಮನೋಬ ಎಂಬ ಹಡಗದಲ್ಲಿ ಹಿಡಿಯಲ್ಪಟ್ಟ ತುರ್ಕರನ್ನು ಇಟಾಲಿಯರು ಬಿಟ್ಟಿದ್ದಾರೆ. ಇವರು ಪುನಃ ಮಾರ್ಸೆಲಿಸಿಗೆ ಪ್ರಯಾಣಮಾಡಿದರು.

~~~~~~

ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿ ಸ್ತ್ರೀಯರು ದೇವಾಲಯಕ್ಕೆ ಹೋಗುವಾಗ ಪುರುಷರಂತೆ ಟೊಪ್ಪಿಗಳನ್ನು ತೆಗೆಯದೆ ಧರಿಸಿಕೊಂಡೇ ಇರುವುದರಿಂದ ಪಾದ್ರಿಗಳ ಮುಖವು ಪುರುಷರಿಗೆ ಕಂಡು ಬರುವುದಿಲ್ಲವಾದ್ದರಿಂದ ಹೆಂಗಸರು ಟೊಪ್ಪಿಗಳನ್ನು ತೆಗೆಯದೆ ಹೋದರೆ ತಾವುಗಳು ದೇವಾಲಯಕ್ಕೆ ಬರುವುದಿಲ್ಲವೆಂದು ಪುರುಷರು ಹಟ ಹಿಡಿದದ್ದರಿಂದ ಸ್ತ್ರೀಯರು ಟೊಪ್ಪಿಗಳನ್ನು ತೆಗೆಯಲು ಒಪ್ಪಿಕೊಂಡಿರುವರು.

~~~~~~

ದಕ್ಷಿಣ ಅಫ್ರೀಕದ ಮೆ| ಇ. ಆರ್. ಬ್ರೈಡಫೀಲ್ಡರೆಂಬವರು ತನ್ನ ಹೊಲದಲ್ಲಿ ಬಿತ್ತಿದ ಬೀಜಗಳನ್ನೂ ಬೆಳೆದ ಪೈರನ್ನೂ ಹಾವಳಿ ಮಾಡುತ್ತಿರುವ ಇಲಿಗಳನ್ನು ಕೊಲ್ಲುವರೆ ಈ ಕೆಳಗಿನ ಉಪಾಯಗಳನ್ನು ಮಾಡಿ ಇಲಿಗಳನ್ನು ಸಹ ಮೂಲ ನಾಶಪಡಿಸಿದರು, ಹ್ಯಾಗಂದರೆ: —ಇಲಿ ಪಾಷಾಣ (ಸಬಳಕಾರ)ವನ್ನುನೀರಿನಲ್ಲಿ ಹಾಕಿ ಉತ್ತಮ ತೀಕ್ಷ್ಣವಾದ ಮಿಶ್ರಣವನ್ನು ತಯಾರುಮಾಡಿ ಕುಂಬಳಕಾಯನ್ನು ಹೆಚ್ಚಿ ಸಣ್ಣ ಸಣ್ಣ ಹೋಳುಮಾಡಿ ಎಲ್ಲಾ ಹೋಳುಗಳನ್ನು ಈ ಮಿಶ್ರನದಲ್ಲಿ ಕಲಸಿಡಬೇಕು. ಬಳಿಕ ಇಲಿಗಳಿದ್ದ ಸ್ಥಳದಲ್ಲಿ ಚೆಲ್ಲಿದರೆ ಇಲಿಗಳು ಅವುಗಳನ್ನು ತಿಂದು ಕೂಡ್ಲೆ ಒದ್ದಾಡಿ ಸಾಯುವವು. ಈ ಮಿಶ್ರಣವು ಮಾತ್ರ ಮಕ್ಕಳ ಯಾ ದನಗಳ ಬಾಯಿಗೆ ಬೀಳದಂತೆ ಜಾಗರೂಕತೆಯಿಂದಿರಬೇಕು. ಇಲಿಗಳಿಗೆ ಕುಂಬಳಕಾಯಿಯ ಮೇಲೆ ಬಹು ಪ್ರೀತಿ ಇರುವುದರಿಂದ ಅವುಗಳನ್ನು ಬೇಗನೇ ತಿಂದು ಬಿಡುವವು.

~~~~~~

ಉತ್ತರ ಹಿಂದುಸ್ಥಾನ.

~~~~~~

ಕಳದ ಇದೇ ಜನವರಿ ತಾ. ೨೦ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ೧೪,೭೪೫ ಮಂದಿಗೆ ಪ್ಲೇಗ ಬೇನೆಯು ತಗಲಿ ೧೨,೦೪೬ ಮಂದಿಯು ಮೃತಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟಂದರೆ:— ಮುಂಬಾಯಿ ೨,೧೪೯; ಮದ್ರಾಸ್ ೧೩೧; ಬಂಗಾಳ ೧,೫೭೨; ಸಂಯುಕ್ತ ಸಂಸ್ಥಾನ ೩,೯೧೯; ಪಂಜಾಬು ೨೪೭, (ಈ ಪೈಕಿ ಡಿಲ್ಲಿಯಲ್ಲಿ ೪ ಮರಣಗಳಾಗಿದ್ದವು) ಬರ್ಮ ೧೦೩; ಮಧ್ಯಸಂಸ್ಥಾನ ೧,೦೯೯; ಮೈಸೂರು ೩೪೯; ಹೈದರಾಬಾದ್ ೧೯೭೪; ಮತ್ತು ಮಧ್ಯ ಇಂಡಿಯ ೨೦೫ ಮರಣಗಳಾದವು.

~~~~~~

ಕಲ್ಕತ್ತೆಯ 'ಇಂಡಿಯನ್ ಎಶೋಷಿಯೇಶನ್' ಎಂಬ ಸಂಘದ ಸೆಕ್ರೆಟರಿಯಾಗಿರುವ ಮೆ| ಸುರೇಂದ್ರನಾಥ ಬೆನರ್ಜಿಯವರು ಹೊಸ ಬಂಗಾಳಾಧಿಪತ್ಯಕ್ಕೆ ಸಿಲ್ಹೇಟ್, ಗೋಲಾಪರ, ಮೇನ್‌ಬಮ್, ಸೋಂತಾಲ್ ಮೊದಲಾದ ಜಿಲ್ಲೆಗಳನ್ನು ಕೂಡಿಸಬೇಕೆಂಬದಾಗಿಯೂ ಬಂಗಾಳ ನ್ಯಾಯವಿಧಾಯಕ ಸಭೆಗೆ ಪ್ರತಿನಿಧಿಗಳನ್ನು ಆರಿಸಿಕೊಳ್ಳುವಾಗ ಆಯಾ ಜಾತಿಯವರಲ್ಲಿ ಪ್ರತಿನಿಧಿಗಳನ್ನು ಆರಿಸಬೇಕೆಂಬ ಕ್ರಮಗಳನ್ನು ರದ್ದುಮಾಡಿ ಜಾತಿನೋಡದೆ ವಿದ್ಯಾವಂತರಾದವರನ್ನೇ ನ್ಯಾಯವಿಧಾಯಕ ಸಭೆಗೆ ಆರಿಸಿಕೊಳ್ಳಬೇಕೆಂಬದಾಗಿಯೂ ಸರಕಾರದವರನ್ನು ಕೇಳಿ ಕೊಂಡಿರುವರು.

~~~~~~

ಬಹುಮಾನಪಟ್ಟ ಸರ್ ಆರ್ಚ್‌ಡೇಲ್ ಅರ್ಲ್ ಕೆ. ಸಿ. ಐ. ಇ ರವರು ಆಸ್ಸಾಮಿನ ಕಮಿಶನರಾಗಿ ನೇಮಿಸಲ್ಪಟ್ಟಿರುವರು. ಇವರು ಸ್ವಲ್ಪ ಕಾಲದ ರಜೇ ಮೇಲೆ ಶೀಮೆಗೆ ತೆರಳುವುದರಿಂದ ಸೆಂಟ್ರಲ್ ಪ್ರೊವಿನ್ಸ್ ಮತ್ತು ಬೀರಾರಿನ ಫಿನೇನ್ಶಿಯಲ್ ಕಮಿಶನರು ಇವರ ಕೆಲಸವನ್ನು ನೋಡುವರು.

~~~~~~

ಹೊಸಪಟ್ಟಣವನ್ನು ಕಟ್ಟಿಸುವುದರಲ್ಲಿ ಬಹೂ ಜಾಣ್ಮೆಯುಳ್ಳ ಒಬ್ಬ ಶಿಲ್ಪಿಶಾಸ್ತ್ರಜ್ಞನನ್ನೂ ಹೆಸರುವಾಸಿಯಾದ ಒಬ್ಬ ಸೆನಿಟರಿ ಇಂಜಿನಿಯರನನ್ನೂ ಹೊಸದಿಲ್ಲಿ ಪಟ್ಟಣವನ್ನು ಕಟ್ಟಿಸುವುದಕ್ಕಾಗಿ ಕಳುಹಿಸಿ ಕೊಡಬೇಕೆಂದೂ ದಿಲ್ಲಿಯ ಎಲ್ಲಾ ಋತುಗಳನ್ನೂ ಪರಿಶೋಧಿಸಲಿಕ್ಕಾಗುವ ಹಾಗೆ ಇವರಿಬ್ಬರು ಮಳೆಗಾಲದ ಮೊದಲು ಅಂದರೆ ಎಪ್ರೀಲ್ ತಿಂಗಳೊಳಗೆ ಹಿಂದೂಸ್ಥಾನಕ್ಕೆ ಬಂದು ತಲಪ ಬೇಕೆಂಬದಾಗಿಯೂ ವ್ಯಾಸರಾಯರವರು ಸ್ಟೇಟ್ ಸೆಕ್ರಟರಿಯವರಿಗೆ ಬರಕೊಂಡಿರುವರು.

ಹಿಂದೂಸ್ಥಾನದಲ್ಲಿ ಟಪ್ಪಾಲು ಮತ್ತು ಟೆಲಿಗ್ರಾಫ್ ಇಲಾಖೆಗಳನ್ನು ಒಟ್ಟುಕೂಡಿಸಬೇಕೆಂಬದಾಗಿ ಸರಕಾರದವರು ಕೆಲವು ವರ್ಷಗಳಿಂದ ಆಲೋಚಿಸಿ ಈ ಎರಡು ಇಲಾಖೆಗಳಿಗೂ ಪರಿಕ್ಷಾರ್ಥವಾಗಿ ಒಬ್ಬಡೈರೆಕ್ಟರ್ ಜನರಲರನ್ನು ನೇಮಿಸ ಬೇಕೆಂಬದಾಗಿ ನಿಷ್ಕರ್ಷಿಸಿರುವರು. ಈ ಎರಡು ಕೆಲಸಗಳಿಗೆ ಒಬ್ಬ ಡೈರೆಕ್ಟರ್ ಜನರಲರನ್ನು ನೇಮಿಸುವದಾದರೆ ಎರಡು ಕೆಲಸಗಳ ಮಾಹಿತಿಯೂ ಒಬ್ಬನಿಗೆನೇ ಗೊತ್ತಿರುವುದು ಅವಶ್ಯ. ಈಗ ಟೆಲೆಗ್ರಾಫ್ ಇಲಾಖೆಯ ಡೈರೆಕ್ಟರ್ ಜನರಲರ ಕೆಲಸವು ಖಾಲಿ ಇದೆ. ಈ ಕೆಲಸವನ್ನು ಬದಲಿನೋಡುತ್ತಿರುವ ಮೆ| ಡೆಮ್ಸ್ಟರ್ ಎಂಬವರು ಎಪ್ರೀಲ್ ತಿಂಗಳ ಮೇಲೆ ರಜೆ ತಕ್ಕೊಳ್ಳುವ ಆಲೋಚನೆಯಲ್ಲಿರುವರು. ಆ ಕಾಲದಲ್ಲಿ ಟಪ್ಪಾಲ್ ಡೈರೆಕ್ಟರ್ ಜನರಲರಾಗಿರುವ ಸರ್ ಛಾರ್ಲ್ಸ್‌ಸ್ಟೂವರ್ಟ್ ವಿಲ್ಸನ್ ಎಂಬವರು ಎರಡು ಇಲಾಖೆಗಳಿಗೂ ಡೈರೆಕ್ಟರ್ ಜನರಲರಾಗಿ ನೇಮಿಸಲ್ಪಡುವರು. ಇವರೊಬ್ಬರೇ ಈ ಎರಡು ಇಲಾಖೆಗಳ ಮೇಲಾಧಿಕಾರಿಯಾಗಿ ಕೆಲವು ಸಮಯದ ವರೆಗೆ ಇದ್ದನಂತರ ಎರಡು ಇಲಾಖೆಗಳನ್ನು ಒಟ್ಟುಕೂಡಿಸುವುದು ಸಾಧ್ಯವೋ ಏನೆಂಬದರ ವರದಿಯನ್ನು ಮಾಡಬೇಕಾಗುವುದಲ್ಲದೆ ಈ ಸಂಬಂಧ ಜನಸಾಮಾನ್ಯರ ಅಭಿಪ್ರಾಯಗಳನ್ನೂ ಸರಕಾರದವರು ಕೇಳಿಕೊಂಡು ಅದಕ್ಕನುಸಾರವಾಗಿ ವರ್ತಿಸುವರು. ಈ ಎರಡು ಇಲಾಖೆಗಳನ್ನು ಒಟ್ಟುಕೂಡಿಸುವುದರಿಂದ ಆಯಾ ಇಲಾಖೆಗಳಲ್ಲಿ ಈಗ ಇದ್ದ ಹುದ್ದೆದಾರರಯಾ ಇತರ ಕೆಲಸದವರ ಸಂಬಳವಾಗಲೀ ಗ್ರೇಡಾಗಲೀ ಕಮ್ಮಿಯಾಗುವ ಸಂದರ್ಭ ಬರಕೂಡದೆಂಬದನ್ನೂ ಎರಡು ಇಲಾಖೆಯ ಯಾವ ಕೆಲಸದವರಿಗೂ ನಷ್ಟವಾಗಕೂಡದೆಂಬ ವಿಷಯವನ್ನು ಮನದಲ್ಲಿಟ್ಟುಕೊಳ್ಳಬೇಕಾಗಿಯೂ ಸರಕಾರದವರು ಮೆ| ವಿಲ್ಸನರಿಗೆ ಸೂಚಿಸುವರು. ಈಗ ಸದ್ಯಾ ಮೆ| ವಿಲ್ಸನರೊಬ್ಬರಿಗೆನೇ ಈ ಎರಡು ಕೆಲಸಗಳು ಕಷ್ಟವಾಗಿ ಕಂಡು ಬಂದೀತಾದ್ದರಿಂದ ಪಂಜಾಬಿನ ಪೋಸ್ಟುಮಾಸ್ಟರ್ ಜನರಲರವರನ್ನು ಇವರಿಗೆ ಸಹಾಯಕ್ಕಾಗಿ ಕೊಡುವರೆ ಸರಕಾರದವರು ನಿಷ್ಕರ್ಷಿಸಿರುವರು.

ಸಂಸ್ಥಾಪಿಸಲಿಕ್ಕಿರುವ ಹಿಂದೂ ವಿಶ್ವವಿದ್ಯಾಲಯದ ಕಮಿಟೆಯ ಪ್ರೆಸಿಡೆಂಟರಾದ ದರ್ಭಂಗ ಮಹಾರಾಜರವರು ಕೂಡಿದ ಒಂದು ಪ್ರತಿನಿಧಿ ಮಂಡಲಿಯು ಅಲ್ಲಾಹಾಬಾದಿನಿಂದ ಬೆನಾರಿಸ್, ಮಿರ್ಜಾಪುರ, ಆಗ್ರ ಮೊದಲಾದ ಪಟ್ಟಣಗಳನ್ನು ಸಂದರ್ಶಿಸುವರೆ ಹೊರಟಿರುವರು. ಇವರು ರಾಜಪುತಾನದ ಆಯಾ ರಾಜರ ಬಳಿಗೂ ಹೋಗುವರಂತೆ.

ಮಲೇರಿಯ ಎಂಬ ಚಳಿಜ್ವರ ನಿವಾರಣಾರ್ಥವಾಗಿ ಖರ್ಚು ಮಾಡುವರೆ ಮುಂಬಾಯಿ ಮುನ್ಸಿಪಾಲಿಟಿಯವರು ೭೫,೦೦೦ ರೂಪಾಯಿ ಮಂಜೂರು ಮಾಡಿರುವರು.

ಕಲ್ಕತ್ತೆಯಲ್ಲಿ ಜೋನ್‌ಕೊವಾನ್ ಎಂಬ ಕ್ರೈಸ್ತ ಸುವಾರ್ತಿಕನೊಬ್ಬನು ಸೂರ್ಯಾಸ್ತಮಾನವಾದ ನಂತರ ಬಹಿರಂಗವಾದ ಸಭೆಗಳನ್ನು ಕೂಡಿಸಬಾರದೆಂಬ ಸರ್ಕಾರ ನಿಬಂಧನೆಯನ್ನು ಉಲ್ಲಂಘಿಸಿ ಕ್ರೈಸ್ತ ಸುವಾರ್ತೆಯನ್ನು ಸಾರಿದ್ದಾನೆಂದೂ ಪೋಲೀಸಿನವರನ್ನು ಎದುರಿಸಿದ್ದಾನೆಂದೂ ಕಲ್ಕತ್ತೆಯ ಪ್ರೆಸಿಡೆನ್ಸಿಕೋರ್ಟಿನಲ್ಲಿ ಪಿರ್ಯಾದಿ ಆಗಿತ್ತು. ಈ ಸುವಾರ್ತಿಕನು ತಾನು ಪೋಲೀಸಿನವರನ್ನು ಎದುರಿಸಲಿಲ್ಲ. ಆದರೆ ಅಸ್ತಮಾನದಲ್ಲಿ ಸುವಾರ್ತೆಯನ್ನು ಸಾರಿದ್ದು ಹೌದು ಎಂದು ಒಪ್ಪಿಕೊಂಡದಲ್ಲದೆ ಇನ್ನು ಮುಂದಕ್ಕೂ ಹಾಗೆಯೇ ಮಾಡುತ್ತಿರುವೆನೆಂದು ವಾಜ್ಮೂಲ ಕೊಟ್ಟನು. ಮೆಜಿಸ್ಟ್ರೇಟರು ಆತನಿಗೆ ಎರಡು ದಿವಸಗಳ ಸಾಧಾರಣ ಸಜೆ ವಿಧಿಸಿದರು.

ಮಾರ್ಚಿ ತಿಂಗಳಲ್ಲಿ ಜರಗಲಿಕ್ಕಿರುವ ಶ್ರೇಷ್ಠ ನ್ಯಾಯ ವಿಧಾಯಕ ಸಭೆಯಲ್ಲಿ ಹಿಂದೂಸ್ಥಾನದ ಕರೆನ್ಸಿ ಸಂಬಂಧವಾದ ಪ್ರಸ್ತಾಪವಿರುವದು. ಹಿಂದೂಸ್ಥಾನದಲ್ಲಿಯೇ ಹತ್ತು ರೂಪಾಯಿಗಳ ಚಿನ್ನದ ನಾಣ್ಯವನ್ನು ಟಂಕ ಹೊಡೆಯಿಸುವ ವಿಲೆವಾರಿ ಮಾಡಬೇಕೆಂಬದಾಗಿ ಸರ್ ವಿ. ಡಿ. ತೆಕರ್ಸೆಯವರೂ ಮೆ| ಆರ್ಮ್‌ಸ್ಟ್ರೋಂಗರವರೂ ಪ್ರಯತ್ನಿಸುತ್ತಿರುವರು.

ಈಚೆಗೆ ಅಲ್ಲಹಾಬಾದಿನ ಬಾಲಮುಕುಂದನೆಂಬ ವೈನ್ ಸಾಹುಕಾರನಿಗೆ ೩೪ ರೂಪಾಯಿಯ ಮನಿಓರ್ಡರ್ ಬಂತು. ಹಣ ಕಳುಹಿಸಿಕೊಟ್ಟವನು ಮನಿಓರ್ಡರ್ ರಶೀದಿಯಲ್ಲದೆ ಪುನಃ ಚೀಟು ಹಚ್ಚಿದ ರಶೀದಿಯನ್ನು ಕಳುಹಿಸಿಕೊಡಬೇಕೆಂಬದಾಗಿ ಕೇಳಿಕೊಂಡನು. ಆದರೆ ಬಾಲಮುಕುಂದನು ಚೀಟು ಹಚ್ಚಿದ ರಶೀದಿಕೊಡಲೊಪ್ಪದ್ದರಿಂದ ಹಣ ಕಳುಹಿಸಿಕೊಟ್ಟವನು ಆತನ ಮೇಲೆ ಪಿರ್ಯಾದಿ ಮಾಡಿದನು. ಕಲೆಕ್ಟರರು ಆತನಿಗೆ ೫೦ ರೂಪಾಯಿ ಜುರುಮಾನೆ ವಿಧಿಸಿದರು. ಬಾಲಮುಕುಂದನು ಹ್ಯಾಕೋರ್ಟಿಗೆ ಅಪೀಲ್‌ಮಾಡಿಕೊಂಡಲ್ಲಿ ಮನಿಓರ್ಡರ್ ರಶೀದಿ ಸಿಕ್ಕಿದ ಮೇಲೆ ಪುನಃ ಪ್ರತ್ಯೇಕ ರಶೀದಿ ಕೊಡುವುದು ಅವಶ್ಯವಿಲ್ಲವೆಂದು ಜಡ್ಜರವರು ಅಭಿಪ್ರಾಯಪಟ್ಟು ಕಲೆಕ್ಟರರ ತೀರ್ಮಾನವನ್ನು ಬದಲಾಯಿಸಿ ೫೦ ರೂಪಾಯಿಯನ್ನು ಪರತು ಕೊಡಿಸಿದರು.

ಗುಜರಾಥ್, ಕತ್ಯಾವಾಡ್, ಕಚ್ಚ್ ಮೊದಲಾದ ಸ್ಥಳಗಳಲ್ಲಿ ಬರ ಬಿದ್ದು ಮೂಗಪಶುಪ್ರಾಣಿಗಳೂ ಮನುಷ್ಯರೂ ಬಹಳ ಕಷ್ಟಪಡುತ್ತಿರುವುದರಿಂದ ಸರ್ವರೂಉದಾರ ಸಹಾಯವನ್ನೀಯಬೇಕೆಂಬದಾಗಿ ಮುಂಬಾಯಿಯ ಗುಜರಾಥಿ ಹಿಂದೂ ಶ್ರೀ ಮಂಡಲ ಎಂಬ ಸಭೆಯ ಸೆಕ್ರಟರಿಯವರಾದ ಯಮುನಾ ಬಾಯಿ ಎಂಬವರು ಬೇಡಿಕೊಂಡಿರುವರು.

ಹಿಂದೂಸ್ಥಾನದ ಖಜಾನಾ ಇಲಾಖೆಗೆ ಭಾರತೀಯರನ್ನು ಸೇರಿಸುವದಕ್ಕಾಗಿ ಕಳೆದ ನವಂಬರ–ದಶಂಬರ ತಿಂಗಳಲ್ಲಿ ಜರಗಿದ ಮೇಲಾಟ ಪರೀಕ್ಷೆಯಲ್ಲಿ ಅಲ್ಲಾಹಾಬಾದಿನ ಸೆಂಟ್ರಲ್ ಕಾಲೇಜಿನ ಮೆ| ಪಿ. ಕೃಷ್ಣವಿಟ್ಟಲ್ ಬಿ. ಎ. ರವರು ೧ನೇ ತರಗತಿಯಲ್ಲಿಯೂ ಮದ್ರಾಸ್ ಕ್ರಿಸ್ಟಿಯನ್ ಕಾಲೇಜಿನ ಮೆ| ಪಿ. ರಘುವೇಂದ್ರ ರಾವ್, ಎಮ್. ಎ. ರವರು೨ನೇ ತರಗತಿಯಲ್ಲಿಯೂ ಪಾಸಾಗಿರುವರು. ಉಭಯತರೂ ಖಜಾನಾ ಇಲಾಖೆಗೆ ನೇಮಿಸಲ್ಪಡುವರು.

ಮುಂಬಾಯಿಯ ಸರ್ ಡೇವಿಡ್ ಸೆಸೂನರವರ ಪ್ರಥಮ ಪುತ್ರಿ ಸುಮಾರು ೩೨ ವರುಷ ಪ್ರಾಯದ ಮಿಸಿಸ್ ರಬ್ಬಿನೆಸಿಮ್ ಎಂಬವರೂ ಮಿಸಿಸ್ ಎ. ಜೆ. ಡೇವಿಡರವರೂ ಮಹಬಲೇಶ್ವರದಲ್ಲಿ ಕುದುರೆ ಗಾಡಿಯಲ್ಲಿ ಸವಾರಿ ಮಾಡುತ್ತಿರುವಾಗ ಕುದುರೆ ಬೆಚ್ಚಿ ಬಿದ್ದು ಇಬ್ಬರೂ ಕೆಳಗೆ ಬಿದ್ದು ಮೂರ್ಛೆ ಹೊಂದಿದರು. ಇಬ್ಬರಿಗೂ ಮರಣಾಂತಿಕ ಪೆಟ್ಟಾಯಿತು. ಈ ವಾರ್ತೆಯು ಮುಂಬಾಯಿಗೆ ಮುಟ್ಟಿದಾಕ್ಷಣ ಅಲ್ಲಿಂದ ಸ್ಪೆಶ್ಯಲ್ ಡಾಕ್ಟರರುಗಳು ಕಳುಹಿಸಲ್ಪಟ್ಟರು. ಇವರು ತಲಪುವಷ್ಟರೊಳಗೆ ಮಿಸಿಸ್ ನೆಸಿಮರವರು ಮೃತಪಟ್ಟಿದ್ದರು. ಅವರ ಹೆಣವನ್ನು ಮಹಾಬಲೇಶ್ವರದಿಂದ ಮುಂಬಾಯಿಗೆ ತಂದಿರುತ್ತಾರೆ. ಮುಂಬಾಯಿಯ ಯೆಹೂದ್ಯರೆಲ್ಲಾ ಈ ಶೋಕಾರ್ಥವಾಗಿ ತಂತಮ್ಮ ಅಂಗಡಿಗಳನ್ನು ಆ ದಿನ ಮುಚ್ಚಿದರು.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಕಾರ್ಯನಿರ್ವಾಹಕ ಸಭೆಗೆ ಮೆ|ರಿಚ್ಮೊಂಡರು ನೇಮಿಸಲ್ಪಡುತ್ತಾರೆಂಬ ವಾರ್ತೆಗೆ ಆಧಾರವಿಲ್ಲವೆಂಬದಾಗಿ ಪ್ರಕಟವಾಗಿದೆ.

ಮದ್ರಾಸ್ ಸಂಸ್ಥಾನದ ಡ್ಯುಪಿಟಿ ತಹಸಿಲದಾರರ ಮತ್ತು ಸಬ್‌ಮೆಜಿಸ್ಟ್ರೇಟರ ಸಂಬಳವನ್ನು ಹೆಚ್ಚಿಸುವರೆ ಸ್ಟೇಟ್ ಸೆಕ್ರಟರಿಯವರು ಸಮ್ಮತಿಕೊಟ್ಟಿರುವರು.

ತಾ. ೨೯ರಲ್ಲು ಹಿಂದೂಸ್ಥಾನದ ಮುಖ್ಯ ಸೇನಾಧಿಪತಿಯಾದ ಸರ್. ಓ. ಮೂರು ಕ್ರೇಯರವರು ಪರಿವಾರ ಸಹಿತ ಸ್ಪೆಶ್ಯಲ್ ಟ್ರೇನಿನಲ್ಲಿ ಸಿಕಂದರಬಾದಿಗೆ ಬಂದಿರುವರು.

ತಾ. ೨೯ರಲ್ಲು ತ್ರಿಚೂರಿನ ವ್ಯವಸಾಯ ವಸ್ತು ಪ್ರದರ್ಶನವು ಅಲ್ಲಿಯ ಬ್ರಿಟಿಷ್ ರೆಸಿಡೆಂಟರಾದ ಮೆ| ಫ್ರೊಬ್ಸ್ ದೊರೆಗಳಿಂದ ತೆರೆಯಲ್ಪಟ್ಟಿತು. ಕಳೆದ ವರ್ಷಕ್ಕಿಂತಲೂ ಈ ವರ್ಷ ಪ್ರದರ್ಶನಕ್ಕೆ ಹೆಚ್ಚು ವಸ್ತುಗಳು ಬಂದಿದ್ದವು. ಈ ವಸ್ತುಪ್ರದರ್ಶನ ಸಮಯದಲ್ಲಿ ಕೈಗಾರಿಗೆ ಮತ್ತು ವ್ಯವಸಾಯ ಸಂಬಂಧವಾದ ಭಾಷಣಗಳು ಆಯಾ ಗೃಹಸ್ಥರಿಂದ ಕೊಡಲ್ಪಡುವವು.

ದಕ್ಷಿಣ ಮಹಾರಾಷ್ಟ್ರ ಜೈವ ಸಭೆಯು:–ದಕ್ಷಿಣ ಮಹಾರಾಷ್ಟ್ರ ಜೈನಸಭೆಯ ೧೪ನೇಯ ವಾರ್ಷಿಕೋತ್ಸವವು ಬರುವ ಫಾಲ್ಗುಣ ಮಾಸದಲ್ಲಿ ತಾರೀಕು ೧ನೇಯ ಮಾರ್ಚಿ ಸನ್ ೧೯೧೨ ಇಸವಿ ಶುಕ್ರವಾರದಿಂದ ಬೆಳಗಾವಿಯಲ್ಲಿ ಪ್ರಾರಂಭವಾಗುವದು. ಆ ಸಮಾರಂಭದ ಮುಖ್ಯ ಅಂಗಗಳು ಯಾವವೆಂದರೆ:–

(೧) ಜೈನ ಪರಿಷತ್ತು, (೨) ಜೈನ ಮಹಿಲಾಪರಿಷತ್ತು, (೩) ಶ್ರೀಯುತ ಚೌಗುಲೆ ವಕೀಲ ಇವರ ನೂತನ ಜಿನಮಂದಿರದ ಪ್ರತಿಷ್ಠಾಮಹೋತ್ಸವ, (೪) ರಥೋತ್ಸವ ಇವೇ ಮೊದಲಾದ ಉತ್ಸವಗಳಿದ್ದು, ಅದರ ಸಲುವಾಗಿ ಉತ್ತರ ಮತ್ತು ದಕ್ಷಿಣ ಹಿಂದೂಸ್ಥಾನಗಳಿಂದ ದೊಡ್ಡ ದೊಡ್ಡ ವಿದ್ವಾಂಸರೂ ಶ್ರೀಮಂತರೂ ಆದ ಜೈನ ಸದ್ಗೃಹಸ್ಥರು ಬರತಕ್ಕವರಿರುವರು.

ಈ ಸಾರಿ ಈ ಸಭೆಯ ಅಧ್ಯಕ್ಷಸ್ಥಾನವನ್ನು ಗ್ವಾಲ್ಹೇರ ಸಂಸ್ಥಾನದೊಳಗಿನ ಮೋರೇನಾ ಗ್ರಾಮದ ನಿವಾಸಿಗಳಾದ ಜೈನ ವಿದ್ವದ್ರತ್ನ ಸ್ಯಾದ್ವಾದವಾರಿಧಿ ಪಂಡಿತ ಗೋಪಾಲದಾಸಜಿ ಬರೈಯಾ ಎಂಬವರು ಸ್ವೀಕರಿಸಲಿಕ್ಕೆ ಒಪ್ಪಿಕೊಂಡಿರುವರು. ಈ ಮಾತನ್ನು ತಮ್ಮೆಲ್ಲರಿಗೆ ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗಿರುತ್ತದೆ. ಆದರಿಂದ ಇದರ ಸಂಬಂಧವಾಗಿ ಪರಿಷತ್ತಿನ ಸ್ವಾಗತ ಕಮೀಟಿಯವರು ತಮ್ಮನ್ನು ಕುರಿತು ವಿನಯಪೂರ್ವಕ ಪ್ರಾರ್ಥಿಸುವದೇನಂದರೆ–ತಾವು ತಮ್ಮ ಇಷ್ಟಮಿತ್ರರೆಲ್ಲರನ್ನು ಒಡಗೊಂಡು ಬೆಳಗಾವಿಯಲ್ಲಿ ಆಗುವ ಈ ಉತ್ಸವಕ್ಕೆ ಅಗತ್ಯವಾಗಿ ಬರಬೇಕಾಗಿ ಆಶಿಸುತ್ತೇವೆ.

ತಾವು ಮುಂಚಿತವಾಗಿ ಅಂದರೆ ತಾರೀಕು ೨೦ನೇ ಫೆಬ್ರುವರಿಯೊಳಗಾಗಿ ನಮಗೆ ತಿಳಿಸಿದಲ್ಲಿ ಸ್ವಾಗತ ಕಮೀಟಿಯವರು ಕೈಲಾದ ಮಟ್ಟಿಗೆ ತಮ್ಮ ಇಳಕೊಳ್ಳುವ ಮೊದಲಾದ ವ್ಯವಸ್ಥೆಯನ್ನು ಮಾಡುವರು. ಈ ಸಂಬಂಧದ ಎಲ್ಲ ಪತ್ರವ್ಯವಹಾರವನ್ನು ಕೆಳಗಿನ ವಿಳಾಸಕ್ಕೆ ಬರೆಯಬೇಕು. ತಿಳಿಯುವದು. ಇಂತೀ ಬಿನ್ನಹ:—

ತಮ ಕೃಪೆಯನ್ನು ಅಪೇಕ್ಷಿಸುವ,

ಸಾವಂತತಪ್ಪ ತವನಪ್ಪಾ ಪತ್ರಾವಳಿ.

ಆನರರಿ ಜನರಲ್ ಸೆಕ್ರೆಟರಿ ಸ್ವಾಗತ ಕಮೀಟಿ,

ಜೈನ ಪರಿಷದ ಬೆಳಗಾವ.

Post SHAHPUR—BELGAUM. S. M. C.

ದಕ್ಷಿಣ ಕನ್ನಡ.

ಮಂಗಳೂರು. ಕಳೆದ ವಾರ ಮುನ್ಸಿಪಾಲಿಟಿಯಲ್ಲಿ ನಾಲ್ಕು ಪ್ಲೇಗ್ ಮರಣಗಳಿದ್ದವು.

ಮಂಗಳೂರು ಕೆನರಾ ಬೇಂಕಿಗೆ ಡೈರೆಕ್ಟರರಾಗಿ ಮ. ರಾ. ರಾ. ನಗರ ದಾಮೋದರ ಶ್ಯಾನುಭಾಗ, ವರ್ಕಾಡಿ ರಾಮರಾವ್, ಅ. ಶ್ರೀನಿವಾಸ ಪೈ, ಕೆ. ಪಿ. ರಾಮರಾವ್ ಮ. ರಂಗಪ್ಪ ಭಂಡಾರಿ, ಮ. ಗಣೇಶ ಶ್ರೀನಿವಾಸ ರೈ, ಸೂಜೀರ ನಾಗಪ್ಪ ನ್ಯಾಕ, ಮ. ಮುಕುಂದ ರಾವ್, ನಗರ ಗಣಪತಿ ರಾವ್, ಮ. ನರಸಿಂಹ ಪ್ರಭು, ಉಳ್ಳಾಲ ವಾಸುದೇವ ಮಲ್ಯ, ಮತ್ತು ವಡೇರಬೆಟ್ಟು ಶ್ರೀನಿವಾಸ ಕಾಮತ್ ಇವರು ಮಂಗಳೂರು ಟೌನಿನ ಡೈರೆಕ್ಟರರಾಗಿಯೂ ದಿವಾನ್ ಬಹದ್ದೂರ್ ಅ. ವೆಂಕಟ್ರಮಣ ಪೈ ಕೆ. ಪಿ. ಅಚ್ಚುತ್ರಯ್ಯ, ಮ. ವೈಕುಂಟ ಭಕ್ತ, ಕಾರ್ಕಳ ಸುಬ್ರಾಯ ಕಾಮತ್, ನಗರ ನರಸಿಂಹಯ್ಯ, ಮ. ಕೃಷ್ಣ ಭಂಡಾರಿ, ಹಾರಾಡಿ ವಾಸುದೇವ ಪೈ, ಮ. ನಾರಾಯಣ ಕಾಮತ್ ಮ. ನರಸಿಂಹ ನ್ಯಾಕ, ಪಾಂಗಾಳ ನಾಗಪ್ಪ ನ್ಯಾಕ, ಪಾಂಗಾಳ ವೈಕುಂಟ ನ್ಯಾಕ, ಜವುಳಿ ವಾಸುದೇವ ರಾವ್ ಇವರು ಇತರ ಸ್ಥಳಗಳ ಡೈರೆಕ್ಟರರಾಗಿಯೂ ಜನವರಿ ತಾ. ೨೮ರಲ್ಲು ಓಟಿನ ಮೂಲಕ ಆರಿಸಲ್ಪಟ್ಟಿರುವರು.

ಮಲಬಾರ್ ಜಿಲ್ಲೆಯ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾದ ಮೆ. ಯು. ರಾಘವೇಂದ್ರ ರಾಯರವರು ಮೂರು ತಿಂಗಳ ಪ್ರಿವೆಲೆಜ್ ರಜೆ ಪಡಕೊಂಡಿರುವರು.

ಉಡುಪಿ ರೇಂಜಿನ ಶಾಲಾ ಸಬ್ ಅಸಿಸ್ಟಾಂಟರಾದ ಮೆ| ಕೆ. ಎನ್. ವಿಶ್ವೇಶ್ವರ ರಾಯರು ಒಂದು ತಿಂಗಳು ಎಂಟು ದಿವಸಗಳ ರಜೆ ತಕ್ಕೊಂಡಿರುವುದರಿಂದ ಇಲ್ಲಿಯ ಶಾಲಾ ಸೂಪರ್‌ವ್ಯಾಸರರಾದ ಮೆ| ಯು. ಮಂಗೇಶ ರಾವ್ ಬಿ. ಎ. ಎಲ್. ಟಿ. ಯವರು ಉಡುಪಿ ರೇಂಜಿಗೆ ಹಂಗಾಮಿ ಸಬ್ ಅಸಿಸ್ಟಾಂಟರಾಗಿ ನೇಮಿಸಲ್ಪಟ್ಟಿರುವರು.

ವೆಸ್ಟರ್ನ್ ಸರ್ಕಲಿನ ಹುಡುಗಿಯರ ಶಾಲೆಯ ಅಸಿಸ್ಟಾಂಟ್ ಇನ್ಸ್‌ಪೆಕ್ಟೆಸರಾದ ಮಿಸ್ ಮೇರಿ ಅನ್ನಿ ಜೂಫರವರು ಎರಡು ತಿಂಗಳ ಪ್ರಿವೆಲೆಜ್ ರಜೆ ಪಡಕೊಂಡಿರುವರು.

ಇದೇ ಕಳೆದ ಜನವರಿ ತಿಂಗಳ ತಾ. ೨೪ರಲ್ಲು ಸಾಯಂಕಾಲ ೪ ಗಂಟೆಗೆ ಸೆಂಟ್ ಅಲೋಶಿಯಸ್ ಕಾಲೇಜಿನ ಸುಮಾರು ೧೨ ವರುಷ ಪ್ರಾಯದ ವಿದ್ಯಾರ್ಥಿಯು ಇತರ ವಿದ್ಯಾರ್ಥಿಗಳೊಟ್ಟಿಗೆ ಆಡಿಕೊಂಡು ಬರುವಾಗ್ಗೆ ಕೋರ್ಟಿನ ಕೆಳಗಿನ ಹೊಸ ಮಾರ್ಗದ ಬದಿಗೆ ಇರುವ ಸಿಳಿಕಿನ ಉತ್ತರ ಪಾರ್ಶ್ವಕ್ಕೆ ಹುಡುಗನ ಬರಿಯುವ ಲೇಖನಿಗಳ ಡಬ್ಬಿಯು ಬಿತ್ತು. ಹುಡುಗನು ಅದನ್ನು ಹೆಕ್ಕಲಿಕ್ಕೆ ಹೋದಾಗ ಅಕಸ್ಮತ್ತಾಗಿ ಕಾಲು ಜಾರಿ ಹೊರಳಾಡಿ ಗುಡ್ಡದ ಬುಡಕ್ಕೆ ಬಿದ್ದು ತಲೆಗೆ ಬಹಳ ಜಖಮಾಯಿತು. ಹುಡುಗನನ್ನು ಕೂಡಲೇ ಕಂಕನಾಡಿ ಆಸ್ಪತ್ರಿಗೆ ಕೊಂಡು ಹೋಗಿರುವರು.

ಕುಂದಾಪುರ ತಾಲೂಕಿನ ಜಮಾಬಂದಿಯು ಆಕ್ಟಿಂಗ್ ಜಿಲ್ಲಾ ಕಲೆಕ್ಟರರಾದ ಮೆ. ಡ್ಯೂಗ್ ದೊರೆಗಳವರಿಂದ ತಾ. ೧೨ರಿಂದ ೧೫ ವಂಡ್ಸೆ, ೧೯ರಿಂದ ೨೧ ಬೈಂದೂರು, ೨೬ರಿಂದ ೨೯ ಕುಂದಾಪುರ ಈ ಮೊಕಾಮುಗಳಲ್ಲಿ ನಡಿಯುವುದಾಗಿ ನಿಶ್ಚಯಿಸಲ್ಪಟ್ಟಿರುತ್ತದೆ.

ರಾ. ಸುಜೀರ ಗೋಪಾಲರಾವ್‌ರವರು ಸುಳ್ಯದ ಕಾಯಂ ರೆವಿನ್ಯು ಇನ್ಸಪೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ. ರಾ. ಪಿ. ಶಂಕರನ್ಯಾಕರಿಗೆ ರೂ. ೩೦ರ ತಲಬಿನ ಕೆಲಸವು ಕೊಡಲ್ಪಟ್ಟಿರುವುದು.

ಇಲ್ಲಿಯ ಮುನ್ಸಿಪಲ್ ಕೌನ್ಸಿಲಿನ ವೈಸ್‌ಚೇಯರ್ಮೇನರಾಗಿ ಮೆ. ಡಾಕ್ಟರ್ ಎಲ್. ಪಿ. ಫೆರ್ನಾಂದಿಸರವರು ಆರಿಸಲ್ಪಟ್ಟಿರುವರು. ಮ, ರಾ. ರಾ. ನೆಲ್ಲಿಕಾಯಿ ವೆಂಕಟರಾಯರಿಗೆ ೭ ಓಟುಗಳೂ ಡಾಕ್ಟರ್ ಫೆರ್ನಾಂದೀಸರಿಗೆ ೧೦ ಓಟುಗಳೂ ದೊರಕಿರುವವು.

ಇಲ್ಲಿಯ ಕಾಯಂ ಕಲೆಕ್ಟರರಾದ ಮೆ. ಗ್ರೆಹೆಮ್ ದೊರೆಗಳವರು ತಿರುವಾಂಕೋಡು ಮತ್ತು ಕೊಚ್ಚಿ ಸಂಸ್ಥಾನಗಳ ಆಕ್ಟಿಂಗ್ ರೆಸಿಡೆಂಟರಾಗಿ ನೇಮಿಸಲ್ಪಟ್ಟಿರುವುದರಿಂದ ಮೆ. ಡೂಯಿಗ್ ದೊರೆಗಳವರು ಇಲ್ಲಿಯ ಆಕ್ಟಿಂಗ್ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುತ್ತಾರೆ. ಈ ತಿಂಗಳ ತಾ. ೫ರಲ್ಲಿ ಡ್ಯೂಗ್ ದೊರೆಗಳಿಗೆ ಚಾರ್ಜು ವಹಿಸಿಕೊಟ್ಟು ತಾ. ೬ನೇ ಮುಂಜಾನೆ ಗ್ರೇಹೆಮ್ ದೊರೆಗಳವರು ಇಲ್ಲಿಂದ ತೆರಳುವರಾಗಿ ತಿಳಿಯುತ್ತೇವೆ. ತಾ, ೩ರಲ್ಲಿ ಕಲೆಕ್ಟರರ ಆಫೀಸಿನ ಹುದ್ದೆದಾರರೊಡನೆ ಗ್ರೇಹೆಮ್ ದೊರೆಗಳ ಭಾವ ಚಿತ್ರವು ತೆಗಿಯಲ್ಪಡುವುದು.

ಜನವರಿ ತಿಂಗಳ ಮಂಗಾಯಿ ಭತ್ತೆಯು ಸರಕಾರದವರಿಂದ ಕೊಡೋಣಾಗುವುದು.

ಕರ್ನಮ್ ಉಮೇದ್ವಾರರ ಕ್ಲಾಸುಗಳು ತಾರೀಕು ೧೯–೨–೧೨ರಿಂದ ೩೧–೩–೧೨ರ ವರೆಗೆ ಕಾರ್ಕಳದಲ್ಲಿಯೂ ತಾ. ೧–೪–೧೨ರಿಂದ ತಾ. ೧೨–೫–೧೨ರ ವರೆಗೆ ಮಂಗಳೂರಲ್ಲಿಯೂ ಇರುವವು. ಮೂಡಬಿದ್ರೆ ಮತ್ತು ಉಡುಪಿ ಉಮೇದ್ವಾರರಿಗೆ ಕಾರ್ಕಳದಲ್ಲಿಯೂ ಮಿಕ್ಕುಳಿದ ತಾಲೂಕುಗಳ ಉಮೇದ್ವಾರರಿಗೆ ಮಂಗಳೂರಿನ ಕ್ಲಾಸುಗಳಲ್ಲಿಯೂ ಪ್ರವೇಶ ದೊರಕುವುದು.

ಟೌನ್ ಮೆಜಿಸ್ಟ್ರೇಟರಿಂದ ಸೆಶ್ಶನಿಗೆ ಕಮಿಟ್ ಮಾಡಲ್ಪಟ್ಟ ಬಾಳ ದಕಾಯತಿ ಮೊಕದಮೆಯು ಕಳೆದ ಶನಿವಾರ ಅಂತ್ಯವಾಯಿತು. ಜೂರಿಯರು ಎಲ್ಲಾ ಆಪಾದಿತರೂ ತಪ್ಪಿತಸ್ಥರಲ್ಲವೆಂದು ಅಭಿಪ್ರಾಯಪಟ್ಟದ್ದರಿಂದ ಜಡ್ಜರವರು ಎಲ್ಲರನ್ನೂ ಖುಲಾಸುಪಡಿಸಿದರು.

ಪುತ್ತೂರು ಸಬ್ ಮೆಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಮೊಕದಮೆಯ ತನಖಿಯು ಸೋಮವಾರ ಪ್ರಾರಂಭವಾಯಿತು. ಈ ಮೊಕದಮೆಯಲ್ಲಿ ಬಳ್ಳಾರೆ ಗ್ರಾಮದ ಜೋಗಿ ಮತ್ತು ಮುದರ ಎಂಬ ಇಬ್ಬರು ಹೊಲೆಯರು ಐತ ಎಂಬವನನ್ನು ಕೊಂದಿರುತ್ತಾರೆಂಬದಾಗಿ ಆಪಾದಿಸಲ್ಪಟ್ಟಿದ್ದರು. ಎಸೆಸ್ಸರುಗಳು ಆಪಾದಿತರು ಜಖಂ ಪಡಿಸಿದ ತಕ್ಷೀರಿನ ಮೇಲೆ ತಪ್ಪಿತಸ್ಥರಾಗಿರುತ್ತಾರೆಂಬದಾಗಿ ಅಭಿಪ್ರಾಯ ಕೊಟ್ಟಿರುವರು. ಜಡ್ಜರವರು ತೀರ್ಮಾನವನ್ನು ಬಾಕಿ ಇಟ್ಟಿರುವರು

ತಾ. ೨೬ರಲ್ಲು ಮದ್ಯಾನ್ಹ ಮೂರು ಗಂಟೆಗೆ ಕಾಯಿಪಲ್ಯ ತರಲಿಕ್ಕೆ ಸೇಡಿಗುಡ್ಡೆಗೆ ಹೋದ ಸುಮಾರು ೬೦ ವರುಷ ಪ್ರಾಯದ ಕಥೋಲಿಕ ಮತದ ಮುದುಕಿಯೊಬ್ಬಳು ಕಾಯಿಪಲ್ಯ ಹಿಡಕೊಂಡು ಹಿಂದೆ ಬರುವಾಗ ತಹಸೀಲುದಾರರ ಮನೆಯ ಎದುರುಗಡೆ ಮಾರ್ಗದಲ್ಲಿ ಫಕ್ಕನೇ ಬಿದ್ದು ಮೃತಪಟ್ಟಳು.

ಇಲ್ಲಿಯ ಬಲ್ಮಠದ ಒಳ ಹೋಗುವ ಮಾಮೂಲು ರಸ್ತೆಗೆ ಜರ್ಮನ್ ಮಿಶ್ಶನೆರಿಗಳು ಗೇಟು ಹಾಕಿಸುವ ವಿಲೆವಾರಿ ಮಾಡಿರುವುದರಿಂದ ಮಾಜಿ ಮೆಜಿಸ್ಟ್ರೇಟರಾದ ಮೆ| ಟಿ. ರೋಬರ್ಟ್ಸರವರು ಗೇಟು ಹಾಕಿಸದ ಹಾಗೆ ತತ್ಕಾಲಿಕ ಇಂಜಂಕ್ಷನ್ ತೆಗೆಯಿಸಿರುತ್ತಾರೆಂದು ಕೇಳುತ್ತೇವೆ.

ಸುಲಭದಲ್ಲಿ ಬೆಲ್ಲ ಮಾಡುವ ಕಬ್ಬಿಣದ ಗಾಣದ ಯಂತ್ರ ಸಾಹಿತ್ಯಗಳೆಲ್ಲಾ ಮದ್ರಾಸಿನ ಸಾಮವೇಲ್ ಎಂಡ್ ಕೋ ಎಂಬ ಕಂಪೆನಿಯಲ್ಲಿಯೂ ದೊರೆಯುವುದು.

ಒಬ್ಬ ಬಾತ್ಮೀದಾರರಿಂದ:—ಕೊಡಿಯಾಲಬೈಲು ನವೀನ ದೇವಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಶ್ರೀ ಶಿವಭಕ್ತಿ ಯೋಗ ಪ್ರಾರ್ಥನೆ ಸಂಘದ ಪ್ರಥಮ ವಾರ್ಷಿಕೋತ್ಸವವು ಇದೇ ಕಳೆದ ಜನವರಿ ತಾರೀಕು ೨೮ನೇ ಆದಿತ್ಯವಾರ ಬಹಳ ವಿಜೃಂಭಣೆಯಿಂದ ನಡೆಯಿತು. ಸುಮಾರು ೫೦೦ ಜನ ಸಭಿಕರು ನೆರದಿದ್ದರು. ಪ್ರಥಮತ ದೇವತಾಪ್ರಾರ್ಥನೆ ಮಾಡಿ ಸಭಿಕರ ಅನುಮತಿಯಿಂದ ರಾಜಶ್ರೀ ಕೆ. ಲಕ್ಷ್ಮಣನವರಿಗೆ ಅಗ್ರಾಸನವು ಕೊಡಲ್ಪಟ್ಟಿತು. ನಂತರ ತಮ್ಮ ಪೂರ್ವಜರ ಸ್ಥಿತಿಯನ್ನು ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರಿಂದ ಏರ್ಪಡಿಸಲ್ಪಟ್ಟ ಪರಿಷ್ಕಾರ ಪದ್ಧತಿಯನ್ನೂ ವಾರ್ಷಿಕ ವರದಿಯನ್ನೂ ಓದಲಾಯಿತು. ತದನಂತರ ಬಾಲಕರ ಯೋಗ್ಯತಾನುಸಾರವಾಗಿ ಪುಸ್ತಕಗಳ ಬಹುಮಾನವನ್ನು ಸಭಾಧ್ಯಕ್ಷರಿಂದ ಕೊಡಿಸಿ, ಸಂಘದ ಬಾಲಕರಿಂದ ಮಾಡೋಣಾದ ಪ್ರಹಸನಗಳಿಂದ ನೆರವಿದ್ದ ಸಭಿಕರನ್ನು ಹರ್ಷಗೊಳಿಸಿದರು. ಈ ಸಂದರ್ಭದಲ್ಲಿ ಸಭಾಧ್ಯಕ್ಷರು ಈ ಸಂಘವು ಸ್ಥಾಪನೆಯಾಗಿ ಒಂದು ವರುಷ ಮಾತ್ರ ಗತಿಸಿದರೂ ಇಷ್ಟು ಬೇಗನೇ ಇದಕ್ಕೆ ೭೪ ಬಾಲಕರ ಮತ್ತು ತರುಣರ ಸಂಖ್ಯೆಯು ದೊರಕಿದ್ದು ಶ್ಲಾಘನೀಯವೇ ಸರಿ. ಇದಕ್ಕೆ ಈ ಸಂಘದಲ್ಲಿರುವ ಪರಸ್ಪರ ಪ್ರೇಮವೂ, ವಿಶ್ವಾಸವೂ, ಸಾಹಸವೂ, ಒಕ್ಕಟ್ಟೂ, ಸ್ವಾರ್ಥರಹಿತವೂ, ಇವೇ ಕಾರಣ ಎಂಬಿತ್ಯಾದಿ ಹೇಳಿ ಈ ಸಂಘವು ಇನ್ನೂ ಅಭಿವೃದ್ಧಿ ಹೊಂದಬೇಕಾದರೆ ಪ್ರಕೃತ ಏರ್ಪಾಡುಗಳು ಮಾತ್ರ ಸಾಲವು. ಆದಿತ್ಯವಾರವಾಗಲೀ ಅನುಕೂಲವಿದ್ದಲ್ಲಿ ಇತರ ದಿನಗಳಲ್ಲಿ ಕೂಡಾ ಮಕ್ಕಳಿಗೆ ಜ್ಞಾನೋಪದೇಶವನ್ನು ಕೊಡುವರೆ ಒಂದು ಶಾಲೆಯನ್ನೇರ್ಪಡಿಸುವ ಯತ್ನವಿಡತಕ್ಕದ್ದೆಂತಲೂ ವರದಿಯಲ್ಲಿ ಸೂಚಿಸಿದಂತೆ ಒಂದು ಪುಸ್ತಕ ಭಂಡಾರವನ್ನಿಡುವದವಶ್ಯವೆಂತಲೂ ಆ ಸಮ್ಮಂಧ ಪರಸ್ಪರ ಪ್ರೀತಿಯಿಂದ ಎಲ್ಲರೂ ಕೈಲಾದ ಸಹಾಯವನ್ನು ಉತ್ತೇಜನವನ್ನೂ ಕೊಡಬೇಕೆಂತಲೂ ಮುಂತಾದ ಮನೋಹರ ವಾಕ್ಯಗಳಿಂದ ಭಾಷಣ ಕೊಟ್ಟರು.

ಅಧ್ಯಕ್ಷರಿಗೂ ಈ ಉತ್ಸವವನ್ನು ನೆರವೇರಿಸುವರೆ ಧನ ಸಹಾಯವನ್ನೂ ಪುಸ್ತಕಗಳ ಬಹುಮಾನವನ್ನೂ ಕೊಟ್ಟ ಮಾನ್ಯ ಗೃಹಸ್ಥರಿಗೂ ಸಭಿಕರಿಗೂ ಸಂಘದ ಕಡೆಯಿಂದ ಧನ್ಯವಾದವನ್ನಿತ್ತುಪಚರಿಸಿದ ನಂತರ ಸಭೆಯು ಅಗಲಿತು.

ಕಾಸರಗೋಡು. ಸಾರಸ್ವತ ಬ್ರಾಹ್ಮಣರ ಸ್ವಾಮಿಯರು ಶ್ರೀಮತ್ ಪಾಂಡುರಂಗಾಶ್ರಮ ಗುರುಗಳು ನಿನ್ನೆ ಬುಧವಾರ ಸಾಯಂಕಾಲದ ಬಂಡಿಯಲ್ಲಿ ಮಂಗಳೂರಿನಿಂದ ಇಲ್ಲಿಗೆ ಬಂದು ತಲ್ಪಿದರು. ಇವರನ್ನು ಇಲ್ಲಿನ ಗೌಡ ಸಾರಸ್ವತ ಸಾರಸ್ವತ ಬ್ರಾಹ್ಮಣರು ಬಹೂ ಆಡಂಬರದಿಂದ ಸ್ವಾಗತ ಮಾಡಿಕೊಂಡರು. ಹಿಲಾಲು, ತೋರಣ, ಕಲಶ, ದೀಪಾವಳಿಗಳಿಂದ ಪಟ್ಣವು ಅಲಂಕರಿಸಲ್ಪಟ್ಟಿತ್ತು. ಕದನೆ, ಬಿರುಸು, ವಾದ್ಯಘೋಷದಿಂದ ಮೆರವಣಿಗೆಯು ನಡೆಯಿತು. ಇವರನ್ನು ಊರ ನಿವಾಸಿಕರು ೧೦ ದಿವಸ ತನ್ನೊಂದಿಗಿರ ಬೇಡಿಕೊಂಡಲ್ಲಿ ತಾನು ಬಂದಿರುವ ಕಾರ್ಯವನ್ನೂ ತನ್ನ ಆಶ್ರಮಸ್ಥಾನವಾದ ಶೀರಾಲೆಯಿಂದ ಕಲಿ–

ಕೋಟಿಗೆ ರಾ. ರಾ. ಉದ್ಯಾವರ ಭವಾನಿರಾಯರು ಆ ಮಂತ್ರಿಸಿದ್ದ ವಿವರವನ್ನೂ ತಿಳಿಸಿ ತಾನು ಈಗ ಮೂರು ದಿವಸ ಇಲ್ಲಿ ಇರುವೆನೆಂದೂ ಮರಳಿ ಬರುವಾಗ ಕೆಲವು ದಿವಸ ನಿಮ್ಮೊಂದಿಗಿರುವೆನೆಂದೂ ತಿಳಿಸಿದರು.

ಮೆರವಣಿಗೆಯ ಜನಸ್ತೋಮವು ಮಂಗಳೂರಿನಲ್ಲಿ ಇವರು ಬರುವಾಗ ಇದ್ದದಕ್ಕಿಂತಲೂ ಹೆಚ್ಚು ಇತ್ತು.

ಪುತ್ತೂರು. ಕೆಥೊಲಿಕ ಇಗರ್ಜಿಯವರ ವರುಷಾವಧಿಯ ತಿಥುಲಾರ ಹಬ್ಬವು ಜನವರಿ ತಾ. ೨೪ರಲ್ಲು ಬಹಳ ವಿಜೃಂಭಣೆಯಿಂದ ಜರಗಿತು. ಬಂಟ್ವಾಳ ವಿಖಾರರಾದ ರೆವೆರೆಂಡ್ ಫಾದರ್ ಆರೆಂಞರವರೂ ಬರಿಮಾರ ರೆವೆರೆಂಡ ಡೆನಿಸ್ ಲೂವಿಸರವರೂ, ಕರೆಂಗಾರ ರೆ. ಫಾದರ್ ಪುಡ್ತಾದರವರೂ, ಮೊಡ್ನಂಗಿಲ ರೆ. ಫಾದರ್ ಮಸ್ಕರೆಂಞರವರೂ ಮಾಡುತ್ತ್ಯಾರ (ಪುಂಜಾಲ ಕಟ್ಟೆ) ರೆ. ಫಾದರ್ ಮಿನೆಜಸ್ ರವರೂ ಈ ಹಬ್ಬದ ಉತ್ಸವಕ್ಕೆ ಬಂದಿದ್ದರು.

ರೋಮನ್ ಕಥೋಲಿಕರ ಬಿಶೋಪ ಗುರುಸ್ವಾಮಿಯವರು ಇದೇ ಪೆಬ್ರವರಿ ತಾ. ೧೪ಕ್ಕೆ ಕರಿಂಗಾನ ಇಗರ್ಜಿಗೆ ಚಿತ್ತೈಸಿ ಅಲ್ಲಿಂದ ಬರಿಮಾರಕ್ಕೂ ಪುತ್ತೂರಿಗೂ ಚಿತ್ತೈಸುವರಂತೆ.

ನಮ್ಮ ಡಿವಿಜನ ಡಿಪ್ಯುಟಿ ಕಲೆಕ್ಟರವರು ಪೆಬ್ರುವರಿ ತಿಂಗಳಲ್ಲಿ ತಾ. ೧ರಿಂದ ೨ ಕಾಸರಗೋಡು ೩ ಮಂಗಳೂರು, ೪ರಿಂದ ೯ರ ವರೆಗೆ ಪುತ್ತೂರು, ೧೦ರಿಂದ ೧೪ ಉಪ್ಪಿನಂಗಡಿ, ೧೯ ಪುತ್ತೂರು, ೨೦ ಕಾಪು, ೨೧ ಚಾಲ್ಯಾರು, ೨೨ರಿಂದ ೨೪ ಸುಳ್ಯ, ೨೯ ಸಂಪಾಜೆ, ಈ ರೀತಿ ಮೊಕ್ಕಾಂಗಳು ಮಾಡಿ ಸರ್ಕಿಟು ಬೆಳಿಸುವರಂತೆ.

ನಮ್ಮ ಈ ಪುತ್ತೂರಲ್ಲಿ ಅಕ್ಕಿಯ ಧಾರಣೆ ಏರುತ್ತಾ ಬಂದಂದೆ. ಕಟ್ಟಿಗೆಯ ಕ್ರಯವೂ ಬಹಳ ಚಡಾವಾಗುತ್ತಾ ಬರುತ್ತದೆ. ರಿಜರ್ವಿನ ಕಟ್ಟಿಗೆಯಂತೂ ತರುವರೆ ಸರಕಾರಿ ದರದ ಲಾಗವಾಡು ಹೆಚ್ಚಾದರಿಂದ ಅನುಕೂಲವಿಲ್ಲವಂತೆ. ರೆವಿನ್ಯು ಕಾಡಿನಿಂದ ಕಟ್ಟಿಗೆ ಮೊಕೋಪು ಮಾಡಿದ್ದೆ ಇದರ ಕಾರಣವಾಗಿರುವದು.

ಮುಲ್ಕಿ. ಇಲ್ಲಿಯ ಪೋಲೀಸ್ ಸ್ಟೇಶನ್ ಸರಹದ್ದಿನ ಕಲ್ಲಮುಂಡುಕೂರ ಗ್ರಾಮದಲ್ಲಿ ಆದ ಒಂದು ಕಳವಿನ ಮೊಕದಮೆಯಲ್ಲಿ ಮುದ್ದೈಯಾಲೆಯನ್ನು ಪೀಡಿಸಿದ್ದರಾಗಿ ಇಲ್ಲಿಯ ಪೋಲೀಸ್ ಸಬ್ ಇನ್ಸಪೆಕ್ಟರರಿಗೂ ಒಬ್ಬ ಕೊನ್‌ಸ್ಟೆಬಲನಿಗೂ ಕೆಲಸದಿಂದ ಸಸ್‌ಪೆಂಡ್ ಮಾಡಿದ್ದಲ್ಲದೆ ಕಳವಿನ ಮೊಕದಮ್ಮೆಯ ಮದ್ದೈಗೂ ಕೆಲವು ಬಂಟರಿಗೂ ಜಾಮೀನು ಮೇಲೆ ಬಿಟ್ಟಿದ್ದಾರೆ. ಇನ್ನು ಕಳ್ಳರ ದಿವಸ. ಅದಲ್ಲದೆ ಇಲ್ಲಿಯ ಒಬ್ಬ ಹೆಡ್ ಕೊನ್‌ಸ್ಟೆಬಲನು ಒಂದು ಅಕಸ್ಮಿತ ಮರಣದ ತನ್ಕಿಯಲ್ಲಿ ಲಂಚ ತೆಗದುಕೊಂಡಿರುತ್ತಾನೆಂತ ಅವನನ್ನು ಸಹಾ ಸಸ್‌ಪೆಂಡ್ ಮಾಡಿರುತ್ತಾರೆ. ಇಲ್ಲಿಯ ಸ್ಟೆಶನಿನಲ್ಲಿ ಕೆಲವು ಕಾಲದಿಂದ ಇದ್ದು ಜನರಿಗೂ ಅವರಿಗೂ ಜಟಾಪಟಿ ನಡದ ಶ್ರೀನಿವಾಸ ಭಟ್ಟರೆಂಬ ಸಬ್ ಇನ್ಸ್‌ಪೆಕ್ಟರರನ್ನು ಪುನಃ ಇಲ್ಲಿ ನೇಮಿಸುತ್ತಾರಂತೆ.

ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಈ ಮೊದಲಿನಂತೆಯೇ ರಥಸಪ್ತಮಿ ವಗೈರೆ ೩ ದಿವಸಗಳಲ್ಲಿ ಆಗತಕ್ಕ ಸಮಾರಾಧನೆಗಳು ನಡಿಯಲಿಲ್ಲ. ಇಲ್ಲಿ ೨ ಪಕ್ಷಗಳಿರುವದರಿಂದ ಒಂದು ಪಕ್ಷದವರಿಗೆ—ಹಾಲಿನ ಪಾಯಸ—ಚುರುಂಬಿ ಲಡ್ಡು ವಗೈರೆ ಹೋಳಿಗೆ ತಯಾರಿಸಿ ಊಟವಿತ್ತು. ಅಯ್ಯೋ! ಸಂಯುಕ್ತದವರೇ ನಿಮ್ಮ ದುರದೃಷ್ಟ.

ಇಲ್ಲಿಯ ಮಿಶ್ಯನ್ ಶಾಲೆಯ ಮೆನೇಜರ ಬ್ರೈಡೆನ್ ಬಾಕ್ ಧೊರೆಗಳು ವಿಲಾಯತಿಗೆ ಹೋಗುವದರಿಂದ ಅವರ ಸನ್ಮಾನಾರ್ಥವಾಗಿ ಶಾಲೆಯಲ್ಲಿ ಈ ದಿನ ಸಭೆಕೂಡಿತು. ಇಲ್ಲಿಯ ಸಬ್ ರಿಜಸ್ತ್ರಾರವರು ಅಧ್ಯಕ್ಷತೆಯನ್ನು ಸ್ವೀಕರಿಸಿದರು. ಮಾರ್ಚೆಂಟ್ ಅಫ್ ವೆನಿಸ್ ಎಂಬ ಇಗ್ಲಿಷ ನಾಟಕವನ್ನು ಚಿಕ್ಕ ಹುಡುಗರು ಅಂದವಾಗಿ ಆಡಿದರು. ಹೋಗುವ ಮೆನೇಜರರಿಗೆ ಊರಿನವರ ಮತ್ತು ಉಪಾಧ್ಯಾಯರ ಕಡೆಯಿಂದ ಬಹುಮಾನ ಪತ್ರವನ್ನು ಅಂದವಾಗಿ ತಯಾರಿಸಿದ ಬೆಳ್ಳೀ ಹರಿವಾಣದಲ್ಲಿ ಹಾಕಿ ಉಚಿತ ಮಾಡಿದರು. ಮೆ. ಮುಕುಂದರಾಯರು ವಿದ್ಯೆ ವಿಷಯವಾಗಿಯೂ ಉಪಾದ್ಯಾಯರ ಕೆಲಸವು ಅತೀ ಮರ್ಯಾದೆಯುಳ್ಳದ್ದು ಎಂಬೀ ಪ್ರಸ್ತಾಪದ ಮೇಲೆ ಒಂದು ಉಪನ್ಯಾಸವನ್ನು ಮಾಡಿದರು. ಯೋಗ್ಯ ಹುಡುಗರಿಗೆ ಇನಾಂ ಪುಸ್ತಕಗೆಳನ್ನು ಹಂಚೋಣಾದ ಮೇಲೆ ರಾಜಗೀತವನ್ನು ಹಾಡಿ ಮೆನೇಜರರನ್ನು ಸಂಭ್ರಮದಿಂದ ಬೇಂಡ್‌ವಾದ್ಯದೊಡನೆ ಅವರ ಬಂಗ್ಲೆ ವರೆಗೆ ಮೆರವಣಿಗೆಯಿಂದ ಕೊಂಡುಹೋದರು.

ಇಲ್ಲಿಯ ಅಜುಬಾಜ್ ಗ್ರಾಮುಗಳಲ್ಲಿ ವಾಂತಿಭೇದಿ ಹಾವಳಿಯು ಕಡಿಮೆಯಾಗಿದೆ. ಇಲ್ಲಿಯ ಡಾಕ್ತರರೂ ರೆವಿನ್ಯೂ ಇನ್ಸ್‌ಪೆಕ್ಟರರೂ ಈ ವಿಷಯ ಪಟ್ಟ ಪ್ರಯತ್ನಗಳು ಸಫಲವಾದವು.

ಉಡುಪಿ. ಕಳದ ತಿಂಗಳ ತಾ. ೧೨ಕ್ಕೆ ಅಜ್ಜರಕಾಡಿನ ೧೦ ಎಕ್ರೆ ಸ್ಥಳವನ್ನು ೪೦ ತುಂಡುಗಳಾಗಿ (ಸಾಧಾರಣ ಕಾಲು ಎಕ್ರೆ) ಪಟಾಪಟಿಯಾಗಿ ಏಲಂಮಾಡಿರುತ್ತಾರೆ. ಕಾಲು ಎಕ್ರೆಗೆ ಹೆಚ್ಚಿನ ಕ್ರಯವೆಂದರೆ ರೂಪ್ಯಾ ೨೨೦ರಂತೆ ಬಂದಿರುತ್ತದೆ. ಆದರೆ ಕೆಲವು ಪ್ಲೋಟುಗಳಿಗೆ ಬಹಳ ಕಮ್ಮಿ ಕ್ರಯ ಬಂದಿರುತ್ತದಾದ್ದರಿಂದ ಎರಡನೇ ಏಲಂ ಆಗ ಬಹುದೆಂತ ಜನರು ನೆನಸುತ್ತಾರೆ—ಸಾಧಾರಣ ಎಕ್ರೆಗೆ ರೂಪಾಯಿ ೫೦೦ರ ಮೇರೆಗೆ ಬಂದಿರುತ್ತದೆ—ಕ್ರಯ ಹೆಚ್ಚಂತಲೇ ಹೇಳಬೇಕು.

ಡಿವಿಜನಲ್ ಆಫಿಸರರು ಕಳದ ತಿಂಗಳ ತಾ. ೨೨ರಿಂದ ತಾ. ೨೭ರ ವರೆಗೆ ಇಲ್ಲಿಯ ಜಮಾಬಂದಿಯ ಕೆಲಸವನ್ನು ತೀರಿಸಿ ಕಾರ್ಕಳ ಅತ್ತಕಲಿ ಸರ್ಕಿಟಿನ ಮೇಲೆ ಹೋಗಿರುತ್ತಾರೆ.

ವಿವಿಧ ವಿಷಯುಗಳು.

ಬೇವಿನ ಹಿಂಡಿ ಬೇಕಾದಷ್ಟು ಶೇಖರಿಸಿಟ್ಟುಕೊಂಡು ಅದನ್ನು ಬಾಯಿ ಅಗಲವಾದ ಒಂದು ದೊಡ್ಡ ಮಡಿಕೆಯಲಿ ತುಂಬಿ ಆ ಮಡಿಕೆಯ ಬುಡಕ್ಕೆ ಮೂರು ಸಣ್ಣ ತೂತು ಹಾಕಿ ಇಟ್ಟುಕೊಳ್ಳಬೇಕು. ಆ ಮೇಲೆ ಬೇರೊಂದು ಎಣ್ಣೆ ಬಳಸಿದ ಮಡಿಕೆಯನ್ನು ನೆಲದಲ್ಲಿ ಒಂದು ಮೊಳ ಆಳವಾಗಿ ಗುಳಿ ತೋಡಿ ಅದರಲ್ಲಿಟ್ಟು ಅದರ ಮೇಲೆ ಬೇವಿನ ಹಿಂಡಿ ತುಂಬಿ ತೂತುಮಾಡಿರುವ ಮಡಿಕೆಯನ್ನು (ಆ ಮೂರು ತೂತುಗಳು ಕೆಳಗೆ ಇಟ್ಟಿರುವ ಮಡಿಕೆಯ ಬಾಯಿಗೆ ಸರಿಯಾಗಿ ಇರುವಂತೆ) ಇಟ್ಟು ಹಿಂಡಿಯಲ್ಲಿ ಬೆಂಕಿ ಹಾಕಬೇಕು. ಹೀಗೆ ದೀರ್ಘವಾಗಿ ಹಿಂಡಿಯು ಬೆಂದುಹೋದ ಮೇಲೆ ಗುಳಿಯಲ್ಲಿಟ್ಟಿರುವ ಮಡಿಕೆಯನ್ನು ತೆಗೆದು ನೋಡಿದರೆ ಅದರಲ್ಲಿ ತೈಲವು ಇಳಿದು ಇರುವದು. ದನಗಳಿಗೆ (ಕಾಲು ಜ್ವರ) ಕಾಲು ಕೊಳಬಿನ ಸಂದು ಮುಂತಾದವುಗಳಲ್ಲುಂಟಾಗುವ ಹುಣ್ಣು, ನೋವು, ಊದಲು ಮುಂತಾದವುಗಳಿಗೆ ಧಾರಾಳವಾಗಿ ಇದನ್ನು ಸವರುತ್ತಾ ಬಂದರೆ ಹುಳು ಮುಂತಾದವುಗಳೂ ಬಿದ್ದುಹೋಗಿ ಸೌಖ್ಯ ಉಂಟಾಗುವುದು. ಇದೇ ತೈಲವನ್ನು ಬಾಯಿ ಜ್ವರ ಮೊದಲಾದವುಗಳು ಬಂದಾಗ ದನಗಳ ಗಂಟ್ಲುವರೆಗೆ ಸವರುತ್ತಲೂ, ಮೂಗುಗಳಲ್ಲಿ ಕೆಲವು ಬೊಟ್ಟುಗಳನ್ನು ಬಿಡುತ್ತಲೂ ಬಂದರೆ ಸೌಖ್ಯ ಉಂಟಾಗುವುದು. ಹೀಗೆ ಇದನ್ನು ವಿಶ್ವಾಸದೊಡನೆ ಉಪಯೋಗಿಸುತ್ತಾ ಬಂದರೆ ಖಂಡಿತವಾಗಿ ಒಳ್ಳೇ ಫಲ ದೊರೆಯುವದರಲ್ಲಿ ಸಂದೇಹವಿಲ್ಲ.

ಅಮೇರಿಕಾ ದೇಶದ ಸಂಯುಕ್ತ ಸಂಸ್ಥಾನದ ವ್ಯವಸಾಯದ ಇಲಾಖೆಯವರು ಟೆಕ್ಸಾಸ್ ಎಂಬ ಪ್ರಾಂತ್ಯದಲ್ಲಿ ಒಂದು ಕರೆಯುವ ಹಟ್ಟಿಯನ್ನಿಟ್ಟಿರುವರು. ಅದು ಬಹಳ ಉಷ್ಣವಾದ ಮತ್ತು ಬೆಂಗಾಡು ಪ್ರದೇಶವಾಗಿರುವುದರಿಂದ ಅಲ್ಲಿ ಹುಲ್ಲು ಬೆಳೆಯುವುದಿಲ್ಲ. ಆದ್ದರಿಂದ ಅಲ್ಲಿ ಪಾಪಾಸು ಕಳ್ಳಿಯನ್ನು ಬಹಳವಾಗಿ ಬೆಳೆಯಿಸಿ ಅದನ್ನೇ ದನಗಳಿಗೆ ಮೇವಾಗಿ ಹಾಕುವರು. ಈ ಪಾಪಾಸು ಕಳ್ಳಿಯು ನಮ್ಮ ಶೀಮೆಯ ಅನೇಕ ಕಡೆಗಳಲ್ಲಿ ಬೆಳೆಯುವುದು. ಇದನ್ನು ನಮ್ಮ ರೈತರುಗಳು ಸಹಾ ದನಗಳ ಮೇವಿಗಾಗಿ ಉಪಯೋಗಿಸಬಹುದು. ಮುಖ್ಯವಾಗಿ ಮಳೆ ಬೆಳೆಯಿಲ್ಲದ ಕ್ಷಾಮ ಕಾಲದಲ್ಲಿ ಇದು ಬಹಳ ಉಪಯೋಗವಾಗುವುದು. ಇದರಲ್ಲಿ ಮುಳ್ಳುಗಳಿರುವುದರಿಂದ ದನಗಳು ಇದನ್ನು ತಿನ್ನಲು ಹಿಂಜರಿಯುವುವು. ಆದರೆ ಇದರ ಮುಳ್ಳನ್ನು ತೆಗೆದುಹಾಕಲು ಹೊಸಯಂತ್ರವನ್ನು ಕಂಡು ಹಿಡಿದಿರುವರು. ಅಲ್ಲದೆ ಮಳ್ಳುಗಳ ಸಮೇತವಾಗಿ ಇದನ್ನು ತಿರುವಿ ತಿನ್ನಿಸ ಬಹುದು. ರಸಾಯಣ ಶಾಸ್ತ್ರಜ್ಞರು ಇದನ್ನು ಪರೀಕ್ಷೆ ಮಾಡಿ ನೋಡಿದ್ದರಲ್ಲಿ ಇದು ಜೋಳದ ಕಡ್ಡಿಯಷ್ಟು ಪುಷ್ಟಿಕರವಾದ ಮೇವೆಂದು ಗೊತ್ತಾಗಿದೆ; ಆದರೆ ಇದರಲ್ಲಿ ಜೋಳದ ಕಡ್ಡಿಗಿಂತ ನೀರಿನ ಅಂಶವು ಜಾಸ್ತಿಯಾಗಿರುವುದರಿಂದ ಇದನ್ನು ತಿನ್ನುವ ಕರೆಯುವ ಹಸುಗಳಿಗೆ ಸ್ವಲ್ಪ ಹಿಂಡಿಯನ್ನು ಸಹಾ ತಿನ್ನಿಸಬೇಕು. ದನಗಳು ಸಹಾ ಒಂದೆರಡಾವರ್ತಿ ಸ್ವಲ್ಪ ತಿಂದು ಅಭ್ಯಾಸವಾದ ಮೇಲ್ಲೆ ಇದನ್ನು ಬಹಳ ಅಕ್ಕರೆಯಿಂದ ತಿನ್ನುವುವು. ಇದನು ತಿನ್ನುವುದರಿಂದ ಹಸುವಿನ ಹಾಲಿನಲ್ಲಿ ದುರ್ವಾಸನೆ ಏನೂ ಉಂಟಾಗುವುದಿಲ್ಲ.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಹೊಸ ಮಸ್ಕತಿ ಅಕ್ಕಿ	5—3—0
ಹೊಸ ಗುಡ್ಡು ಮಸ್ಕತಿ...	4-11—0
ಹೊಸ ಮಸ್ಕತಿ ದುಯಂ...	4-14—0
ಹೊಸ ಗುಡ್ಡು „	4—8—0
ಮಸ್ಕತಿ ಬೆಳ್ತಿಗೆ „	5—4—0
ರಂಗೂನ್ ಬೆಳ್ತಿಗೆ ಗೋಣಿ	10-8—0
ಹುರುಳಿ ಗೋಣಿ ೧, ಮುಡಿ 2ರ ...	6—8—0
ಉಪ್ಪು ಗೋಣಿ ೧ರ	3—6—0
ಖೊಬ್ರಿ ಖಂಡಿ ೧ರ	96—0—0
ಖೊಬ್ರಿ ಎಣ್ಣೆ ಮಣ	7—2—0
ಕಾಫಿ ಖಂಡಿ ೧ರ	255—0—0
ಕಾಳು ಮೆಣಸು ಖಂಡಿ	170—0—0
ಹೊಸ ಬಿಳಿ ಗೋಟು ಅಡಿಕೆ	78—0—0
ಕರಿ ಗೋಟು	62—0—0
ಯಾಲದ ಕಾಯಿ ಮಣ ೧ರ	40—0—0
ಗೇರುಬೀಜ ಮುಡಿ ೧ರ...	2—6—0
ರಾಮಪತ್ರೆ ಮಣ ೧ರ	8—6—0
ಶೀಗೆಕಾಯಿ ಖಂಡಿ ೧ರ	35—0—0
ಕಾಸ್ರಕಿನ ಬೀಜ ಖಂಡಿ ೧ರ	22—0—0
ದಾಲಚೀನಿ ಹ್ಪು ಮಣ ೧ರ	3—0—0
ಅಂಟವಾಳ ಕಾಯಿ ಮುಡಿ ೧ರ	1—4—0
ಅಣಲೆ ಕಾಯಿ ಖಂಡಿ ೧ರ	12—3—0
ಪಚ್ಚೆಹೆಸರು	4—8—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—8—0
ಗೋದಿ ಗೋಣಿ ೧ಕ್ಕೆ	11—0—0
ಊರು ಬೆಲ್ಲ ಖಂಡಿ ೧ರ	36—8—0
ಮೊರಿಸ್ ಸಕ್ಕರೆ ಮಣ ೧ರ	3-10—0
ಕಡಲೆ ಗೋಣಿ ೧ರ	7—8—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—4—0
ಖೊಬ್ರಿ ಹಿಂಡಿ ಖಂಡಿ ೧ರ	33—0—0

ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯಾಕಲುಗಳನ್ನು ಪಡಿಯಲು ಸಾಧ್ಯವಲ್ಲ.



ಪೊಪ್ಯುಲರ್ ಹಂಬರ್ ಕ್ರಯ ರೂಪಾ 120.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.


ಸಿಂಗರ್ ರೊಯಲ್ ಕ್ರಯ ರೂಪಾಯಿ 115.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಶೋಯೇಷನ್,

ಸ್ಯಾಕಲ್ ಏಜಂಟ್ಸ್,

ಮಂಗಳೂರು ದಕ್ಷಿಣ ಕನ್ನಡ.

ಬೆಸಲ್ಯಾಟ್ಸ್

ಎಂಬ

ಗ್ಯಾಸ್ ದೀಪಗಳು


ಕೆರೆಸಿನ್ ಎಣ್ಣೆ ದೀಪಗಳಂತೆ ಹೊಗೆಯುಂ ದ ಪ್ರಕಾಶವು ಮೆದ್ದಾಗದೆ ಘಾಳಿಯ ... ನಿಂದ ನೊಂದಿ ... ದಂಥವುಗಳು. ... ದೀಪಗಳನ್ನುರಿಸಲು ಕೆರೆಸಿನ ಎಣ್ಣೆಯ ದೀಪಗಳಷ್ಟೇ ಖರ್ಚು ತಗಲುವುವು.



... ಕ್ರಯ ರ್ಯೂ. 20.

... ಯು ಬೇಕೆಂಬ ಇಷ್ಟವುಳ್ಳ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಇದನ್ನೋದುವುದರಿಂ...ಗೆ ಲಾಭ ಉಂಟು. ಕಥೆಯೂ ಬಲು ಸಾರಸ್ಯವಾಗಿದೆ.

ತ್ವರೆ ಮಾಡಿರಿ! ಸ್ವಲ್ಪ ಪ್ರತಿಗಳೇ ಉಳಿದಿವೆ!

ಬೆಲೆ (136 ಪುಟಗಳು ಡೆಮ್ಮಿ ಅಷ್ಟ ಪತ್ರ) ೮ ಆಣೆ.

ಅಂಚೆ ವೆಚ್ಚ ಬೇರೆ.

ವಿಳಾಸ:—

ಎಚ್. ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ಕಾಲದಲ್ಲಿ ಯಾವುದು ತಾನೇ ಸಾಧ್ಯವಲ್ಲ?


ಕ್ರಯ ರೂ. 45.

ಪ್ರಖ್ಯಾತಪಟ್ಟ ಕೊಯಂಬುತ್ತೂರು ತಾಯಿಯ ಗಾಯನವನ್ನೂ, ಉತ್ತರಹಿಂದುಸ್ಥಾನದ ಸುಪ್ರಸಿದ್ಧ ಗಾಯನ ವಿದ್ಯಾವಿಶಾರದರ ಹಾಡುಗಳನ್ನೂ, ಇನ್ನು ಕನ್ನಡ ತಮಿಳು ತೆಲುಗು ಮಲಿಯಾಳ ಮರಾಟಿ ಭಾಷೆಗಳ ಉತ್ಕೃಷ್ಟ ಗವಯಿಗಳ ಪದಗಳನ್ನೂ ಕೇಳಲಿಕ್ಕೆ ಅವರಿದ್ದಲ್ಲಿಗೆ ಹೋಗಬೇಕೆಂತಿಲ್ಲ. ಈ ಕೆಳಗೆ ತೋರುವ ರಾಗದ ಪೆಟ್ಟಿಗೆಯೊಂದನ್ನೂ ಹಾಡುಗಳ ಸ್ವರವೆಲ್ಲವು ಮುದ್ರಿತವಾಗಿರುವ ರಿಕಾರ್ಡುಗಳೆಂಬ ಹಾಳೆಗಳನ್ನು ತಕ್ಕೊಂಡರೆ ನಾವಿದ್ದಲ್ಲಿಯೇ ಶ್ರೇಷ್ಠ ಗವಯಿಗಳ ಗಾನವನ್ನು ಕೇಳಿ ಆಹ್ಲಾದ ಪಡಬಹುದು.

ರಿಕಾರ್ಡು ಒಂದಕ್ಕೆ ಸಾಧಾರಣವಾಗಿ ರೂ. 3—0—0 ಕ್ರಯವಿರುವದು.

ಇವುಗಳು ದೊರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್

ಎಸ್ಸೋಸಿಯೇಶನ್

ಸ್ಯಾಕಲ್ ಏಜಂಟ್ಸ್,

ಮಂಗಳೂರು ದ. ಕ.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರ ಲಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲಕ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗ ಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers.

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ವಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ಶೀರೆಗಳು ತಯಾರಾಗುತ್ತವೆ. ನಾಜೂಕು ರೇಶ್ಮೆ ಶೀರೆಗಳೂ, ಜೋಡು ಎಲವಸ್ತ್ರಗಳೂ, ಉತ್ತಮವಾದ ವೇಷ್ಟಿಗಳೂ ನಮ್ಮ ಸ್ವತಃ ಮೇಲ್ತನ್ನಿಕೆಯಲ್ಲಿಯೇ ನೇಯಿಸುತ್ತಿದ್ದೇವೆ.

ಕ್ರಯ ಕಮ್ಮಿ! ಬೇಗನೆ ಕೊಂಡುಕೊಳ್ಳಿರಿ!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯತಿ ಮಾಡಲಾಗುವುದು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಪ್ರತಿ ಒಂದು ಮನೆಯಲ್ಲಿಯೂ ಅತ್ಯವಶ್ಯವಾಗಿ ಇರಬೇಕಾದ್ದು.

ಗ್ರೆಮೆ ಫೊನು (Gramophone) ಎಂಬ ಮಾತಾಡುವ ರಾಗದ ಪೆಟ್ಟಿಗೆಗಳು ನಮ್ಮಲ್ಲಿ ದೊರಕುವವು. (ಕನ್ನಡ, ತಮಿಳು, ಮಲೆಯಾಳ, ಹಿಂದುಸ್ಥಾನಿ, ಇಂಗಿಷ್ ಭಾಷೆಯ ಉತ್ಕೃಷ್ಟವಾದ ಗಾಯನದ ರಿಕಾರ್ಡುಗಳನ್ನು ತರಿಸಿಟ್ಟಿರುವೆವು.

ಎಲ್ಲೆಲ್ಲಿಯೂ ಕೀರ್ತಿ ಪಡೆದ ಕೊಯಂಬುತ್ತೂರು ತಾಯಿಯ ಸಂಗೀತ ರಿಕಾರ್ಡುಗಳು ಬೇಕಾದವರು ಬೇಗನೇ ಬರಕೊಳ್ಳಿರಿ!

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು

ಮಂಗಳೂರು.

ಸಂತೋಷಕರವಾದ ಪ್ರಕಟಣೆ.

ಸರ್ವರೂ ತರಿಸಿಕೊಂಡು ಸಂತೋಷ ಪಡಿ.

ಬರುವ ಎಪ್ರಿಲ್ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಛಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ವಳಗೆ ಚಕ್ರಗಳ ಮೇಲೆ ಕೆಂಪು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ೫ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಜೂಕವಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಸೆ (5) ಮೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿ... ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಶಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಶಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ.

ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಟಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂಬರು 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಅಚ್ಚಪಾದ ಕೇಶ ತೈಲ.

ನಿಮಗೆ ಅಂಗಡಿಗಳಲ್ಲಿ ನೂರಾರು ವಿಧದ ಕೇಶ ತೈಲಗಳು ದೊರೆಯಬಹುದು. ಆದರೆ ಅವುಗಳಲ್ಲಿ ಶೇಕಡಾ ೯೦ರಂತೆ ನಿಷ್ಪ್ರಯೋಜನವೆಂಬದು ಖಾತ್ರಿ.

ನಿಮ್ಮ ಕೇಶ ಗುಚ್ಛವು ಸದಾ ತಂಪಾಗಿಯೂ ಸುಖಪ್ರದವಾಗಿಯೂ ಇದ್ದು ಹೊಳೆಯಬೇಕೆಂಬದು ನಿಮ್ಮ ಮನೋಗತವಾಗಿದೆಯೋ? ನಮ್ಮ 'ಲಿಲ್ಲಿಬ್ಲೂಮ್' ಎಂಬ ಕೇಶತೈಲವನ್ನು ಮಾತ್ರ ಕೊಂಡುಕೊಳ್ಳಿ! ಈ ಎಣ್ಣೆಗೆ ಸರಿ ಬೀಳುವ ಇತರ ಯಾವ ಎಣ್ಣೆಯನ್ನಾದರೂ ಪೇಟೆಯಲ್ಲಿ ಪಡೆಯಲಾರಿರಿ.

ದಯಮಾಡಿ 'ಲಲ್ಲಿಬ್ಲೂಮ್' ಎಂಬ ಹೆಸರು ನಿಮ್ಮ ಜ್ಞಾಪಕದಲ್ಲಿರಲಿ.

ಕ್ರಯ ಬಾಟ್ಲಿ 1ಕ್ಕೆ 0-12-0. ವಿ. ಪಿ. ಸಮೇತ 1—3—0 ಮಾತ್ರ.

FAIR HEALTH CHEMICAL Co.

Hoogly, Bengal

ಏಜಂಟರು;—ದಿ. ಊಲನ್ ಮಾರ್ಟ್,

ಮಂಗಳೂರು ದ. ಕ.

...ದು ಇರುವದು. ದನಗಳಿಗೆ
...ಳಬಿನ ಸಂದು ಮುಂತಾದವು
...ನೋವು, ಊದಲು ಮುಂತಾ
ಇದನ್ನು ಸವರುತ್ತಾ ಬಂದರೆ
...ಬಿದ್ದು ಹೋಗಿ ಸೌಖ್ಯ ಉಂಟಾ
...ನ್ನು ಬಾಯಿ ಜ್ವರ ಮೊದಲಾದ
...ಗಂಟ್ಲುವರೆಗೆ ಸವರುತ್ತಲೂ,
...ಬೊಟ್ಟುಗಳನ್ನು ಬಿಡುತ್ತಲೂ
...ವುದು. ಹೀಗೆ ಇದನ್ನು ವಿಶ್ವಾ...
...ತ್ತಾ ಬಂದರೆ ಖಂಡಿತವಾಗಿ
...ದಲ್ಲಿ ಸಂದೇಹವಿಲ್ಲ.

ರಾಮಪತ್ರೆ ಮಣ ೧ರ	8—6—0
ಶೀಗೆಕಾಯಿ ಖಂಡಿ ೧ರ	35—0—0
ಕಾಸ್ರಕಿನ ಬೀಜ ಖಂಡಿ ೧ರ	22—0—0
ದಾಲಚೀನಿ ಹೂ ಮಣ ೧ರ	3—0—0
ಅಂಟವಾಳ ಕಾಯಿ ಮುಡಿ ೧ರ	1—4—0
ಅಣಲೆ ಕಾಯಿ ಖಂಡಿ ೧ರ	12—3—0
ಪಚ್ಚೆ ಹೆಸರು	4—8—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—8—0
ಗೋದಿ ಗೋಣಿ ೧ಕ್ಕೆ	11—0—0
ಊರು ಬೆಲ್ಲ ಖಂಡಿ ೧ರ	36—8—0
ಮೊರಿಸ್ ಸಕ್ಕರೆ ಮಣ ೧ರ	3—10—0
ಕಡಲೆ ಗೋಣಿ ೧ರ	7—8—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—4—0
ಕೊಬ್ರಿ ಹಿಂಡಿ ಖಂಡಿ ೧ರ	33—0—0

RYMOND'S INDIAN INK.

ಅತ್ಯುತ್ತಮವಾದ ನೀಲಿಕಪ್ಪುಶಾಯಿಯ ಪೊಟ್ಟಗಳು ನೂರಕ್ಕೆ 0—8—0 ಬರುವ ತಿಂಗಳ ಆಖೈರ್ ವಳಗೆ ಕೊಂಡುಕೊಳ್ಳುವವರಿಗೆ ಮಾತ್ರ ಆಣೆ 0—6—0 ಟಪ್ಪಾಲ್ ಚಾರ್ಜು ಆಣೆ 0—3—0.

ನೀಲಿಕಪ್ಪು, ಕೆಂಪು, ಹಸರು, ಊದಾ ಬಣ್ಣದ ಶಾಯಿ 24 ಗುಳಿಗೆಗಳ ಡಬ್ಬಿಗೆ 0-2-6. 24 ಹಾಳೆಗಳ ಕಟ್ಟಿಗೆ 0-2-6. ರಖಂ ಗಿರಾಕಿಗಳಿಗೆ ಒಳ್ಳೇ ಕಮಿಶನ್ ಕೊಡಲಾದೀತು. ಏಜಂಟರು ಬೇಕು.

ರಾಯ್ಮಂಡ್ ಎ. ಮಿನೇಜಸ್.

ಪುತ್ತೂರು, ದ. ಕ.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು.	ಆತಂಕ ನಿಗ್ರಹ **ಗುಳಿಗೆಗಳು.**	30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ತಾವೌಷಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ, 22 ಬ್ರಾಡ್ವೇ ಮದರಾಸು. } ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಮತ್ತು ಜಾಮ್ ನಗರ ಕಾಠ್ಯಾವಾರ್.

ಚದುರಂಗದ ಕಾಯಿಗಳು.

ಗಟ್ಟೀ ಬಣ್ಣದಲ್ಲಿ ತಯಾರಾದ 32 ಕಾಯಿಗಳಿರುವ ಸೆಟ್ಟು 1ಕ್ಕೆ ರೂ. 1-0-0

ಕನ್ನಡಿಗರಿಗೆ ಒಳ್ಳೆಯ ಸಮಾಚಾರ!

ಅಪೂರ್ವ ಗ್ರಂಥ! ನೀತಿಬೋಧಕ ಗ್ರಂಥ!! ಅತ್ಯುತ್ತಮ ಗ್ರಂಥ!!!

ಜಗದ್ವಿಖ್ಯಾತರಾದ ಆಂಗ್ಲೇಯ ಮಹಾಕವಿ ಸರ್ ವಾಲ್ಟರ್ ಸ್ಕಾಟ್‌ರವರ ಬ್ಲಾಕ್‌ಡ್ವಾರ್ಫ್ (Sir Walter Scott's "Black Dwarf") ಎಂಬ ಕಥೆಯು ಕನ್ನಡಕ್ಕೆ ತರ್ಜುಮೆ ಮಾಡಲ್ಪಟ್ಟು "ಶ್ಯಾಮಕುಬ್ಜ" ಎಂಬ ಅಭಿದಾನದಿಂದ ಮಾರಾಟಕ್ಕೆ ಸಿದ್ಧವಾಗಿದೆ. ಕನ್ನಡ ಭಾಷೆಯಲ್ಲಿ ಉತ್ತಮವಾದ ಆಧುನಿಕ ಶೈಲಿಯನ್ನು ಕಲಿಯಬೇಕೆಂಬ ಇಷ್ಟವುಳ್ಳ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಇದನ್ನೋದುವುದರಿಂದ ಲಾಭ ಉಂಟು. ಕಥೆಯೂ ಬಲು ಸಾರಸ್ಯವಾಗಿದೆ.

ತ್ವರೆ ಮಾಡಿರಿ! ಸ್ವಲ್ಪ ಪ್ರತಿಗಳೇ ಉಳಿದಿವೆ!!

ಬೆಲೆ (136 ಪುಟಗಳು ಡೆಮ್ಮಿ ಅಷ್ಟ ಪತ್ರ) ೮ ಆಣೆ.

ಅಂಚೆ ವೆಚ್ಚ ಬೇರೆ.

ವಿಳಾಸ:—

ಎಚ್. ಎನ್. ರಾವ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಶೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು, ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿ ಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ, ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿ ಮಾಡಲ್ಪಡುವದು.

ಎಲ್ಲೂರು ರಾಮ ರಾವ್,

ಜನರಲ್ ಏಜಂಟ್,

ಬ್ರಿಟೋ ಬಿಲ್ಡಿಂಗ್ಸ್

ಮಂಗಳೂರು, ದ, ಕನ್ನಡ.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,

ಮನೋಹರ ಬಿಲ್ಡಿಂಗ್, ..., ಮುಂಬಯಿ.

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೪ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಚಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕೆಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸು—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—S. U. Narayanacharya & Co.

Leading Silk Manufacturers, Benares City.

1912ನೇ ಇಸವಿಯ

ಪೌರ್ವಾಲ್ ಪೊಕೆಟ್ ಡೈರಿಗಳು.

1912ನೇ ಇಸವಿಯ ಡೈರಿಗಳು ತಯಾರಾಗಿರುತ್ತವೆ. ನಂಬರು 1, 0-4-0.

ನಂಬರು 2, ಮುಚ್ಚಳ ಮತ್ತು ಪೆನ್‍ಸಲ್ ಸಹಿತ 0-6-0. ಎಲ್ಲರಿಗೂ ಬೇಕಾದ ವಿಷಯಗಳು ಇದರಲ್ಲಿ ಅಡಗಿರುತ್ತವೆ. ವಟ್ಟಿಗೆ 1 ಡಜನ್ ಡೈರಿಗಳನ್ನು ತೆಗದುಕೊಳ್ಳುವವರಿಗೆ 2 ಡೈರಿಗಳನ್ನು ಬಹುಮಾನವಾಗಿ ಕೊಡುತ್ತೇವೆ. ಸ್ವಲ್ಪವೇ ಕೋಪಿಗಳು ಉಳದಿರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ನಮ್ಮ ಡೈರಿಗಳನ್ನು ತರಿಸಿಕೊಳ್ಳುವವರಿಗೆಲ್ಲಾ 1912ನೇ ಇಸವಿಯ ಕೆಲಂಡರುಗಳನ್ನು ಕಳುಹಿಸಿಕೊಡುತ್ತೇವೆ. ಪೋಸ್ಟು ಮುಖಾಂತರ ವಿ. ಪಿ. ತರಿಸಿಕೊಳ್ಳ ತಕ್ಕವರು ಡಜನ್ 1ಕ್ಕೆ 1ರೂಪಾಯಿ ಅಡ್ವಾನ್ಸು ಕಳುಹಿಸಿಕೊಡಬೇಕು

ಈ ಮೇಲ್ಕಂಡ ಡೈರಿಗಳು ಮಂಗಳೂರು ಊಲನ್ ಮಾರ್ಟಿನಲ್ಲಿ ದೊರಿಯುತ್ತವೆ.

ಎಲ್. ಎ. ಪೌರ್ವಾಲ್ ಅಂಡ್ ಕೋ,

ಬೆಂಗಳೂರು ಸಿಟಿ

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನ ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12-0-0	A ಅರಗಜ ತೊಲೆ 1ಕ್ಕೆ	2-0-0
ಅಂಬರ್ ಬತ್ತಿ „ „	6-0-0	B ಅರಗಜ „ „	1-0-0
ಕಸ್ತೂರಿ ಬತ್ತಿ „ „	3-0-0	ಕಸ್ತೂರಿ ಬಿಲ್ಲೆ „ „	2-0-0
ಜವಾಜಿ ಬತ್ತಿ „ „	2-0-0	ಜವಾಜಿ ಬಿಲ್ಲೆ „ „	1-0-0
ಪುಣಗಿನ ಬತ್ತಿ „ „	1-8-0	ಕೇಸರಿ ಬಿಲ್ಲೆ „ „	0-8-0
A ಪನ್ನೀರ್ ಬತ್ತಿ „ „	0-12-0	ತಾಂಬೂಲರತ್ನ ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ „ „	0-6-0	ದಶಾಂಗ ಡಬ್ಬಿ 1ಕ್ಕೆ	0-4-0

ನಮ್ಮ ಏಜಂಟರು:— ಮ. ಟಿ. ಸುಬ್ಬಣ್ಣ ಭಟ್ಟರು, ಹೆಡ್ ಮಾಸ್ತರ್, ಮಿತ್ತನಡ್ಕ, ಉಪ್ಪಿನಂಗಡಿ ತಾಲೂಕು.

ವಿಳಾಸ:— ಎನ್. ಎಂ. ಸುಬ್ರಾಯ್, "ಸುಗಂಧವಿಲಾಸ" ಮಂಗಳೂರು

ಪುಷ್ಕಳವಾದ ಕೂದಲು.

ಪ್ರಾಚೀನ ಕಾಲದಿಂದಲೂ ಕವಿಗಳು ಸ್ತ್ರೀಯರ ಕೂದಲಿನ ವಿಕಾಸವನ್ನು ಹೊಗಳಿದ್ದಾರೆ; ಅದು ನಿಜವಾಗಿಯೂ ಮನಸ್ಸನ್ನು ಸೆಳೆಯುವಂಥಾದ್ದೇ ಸರಿ. ಅವರ ಕೂದಲು ಕೊರತೆಯಾಗಲು ಕಾರಣವೇ ಇಲ್ಲ.

ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸಿ, ಅದು ಬೋಳು ತಲೆಯಲ್ಲಿ ಕೂದಲು ಬೆಳಸುವುದು. ಇದರ ಸ್ವಭಾವವು ಕೂದಲಿನ ಬೇರನ್ನು ತನಿಮಾಡಿ ಬೆಳಸುವುದಾಗಿದೆ; ತಲೆಯಲ್ಲಿ ತಂಪನ್ನುಂಟುಮಾಡುವುದು. ಕಾಮಿನಿಯಾ ಎಣ್ಣೆಯು ಕೂದಲನ್ನು ಸುಕುಮಾರವಾಗಿ ಪೋಷಣೆ ಮಾಡುತ್ತದೆ. ಅದು ಬಹು ಸುಗಂಧಮಯವಾದ ಮನೋಹರವಾದ ಎಣ್ಣೆ. ಕಾಮಿನಿಯಾ ಎಣ್ಣೆ ಕೂದಲನ್ನು ಸ್ವಭಾವಯುಕ್ತವಾಗಿಯೂ ಕೋಮಲವಾಗಿಯೂ ಪುಷ್ಕಳವಾಗಿಯೂ ಜಾಗ್ರತೆಯಾಗಿಯೂ ಬೆಳೆಯಮಾಡುತ್ತದೆ. ಅದು ಕೂದಲು ಉದುರಿಹೋಗುವುದನ್ನು ತಡೆಮಾಡುತ್ತದೆ. ಇದೆಲ್ಲಾ ಖಂಡಿತವಾದ ಮತ್ತು ಅತ್ಯಂತ ತೃಪ್ತಿಕರವಾದ ಫಲಗಳಾಗಿವೆ.

ವಾರಕ್ಕೆ ಎರಡು ಮೂರು ಸಲ ಈ ಎಣ್ಣೆಯನ್ನು ಹಚ್ಚಿ ಮೃದುವಾಗಿ ತಿಕ್ಕುತ್ತಿದ್ದರೆ ಬೋಳಾಗಿರುದ ಭಾಗದ ಕೂದಲು ಬೇರು ತಂಪಾಗಿ ತನಿಯಾಗಿ ಬಹು ಸೊಂಪಾಗಿ ಬೆಳೆಯುವುದಲ್ಲದೆ ಎಲ್ಲಾ ತರದ ನವೆಯನ್ನೂ ಹೋಗಲಾಡಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಬೇರುಗಳಿಗೆ ತನಿಯಿಲ್ಲದೆ ಕೂದಲು ಉದುರಿ ಹೋಗುವುದು. ಕಾಮಿನಿಯಾ ಎಣ್ಣೆಯೇ ಅದಕ್ಕೆ ಅಗತ್ಯವೂ ಅನುಕೂಲವೂ ಆದ ಆಹಾರ; ಇದನ್ನು ಉಪಯೋಗಿಸಿ ನೋಡಿರಿ.

ಕ್ರಯದ ದರಗಳು:— 1 ಸೀಸೆಗೆ ರೂ. 1; ವಿ. ಪಿ. ಚಾರ್ಜು ಬೇರೆ 4 ಆಣೆ.

ವಿಳಾಸ:— ಏಜಂಟರು, ದಿ. ಊಲನ್ ಮಾರ್ಟ್; ಮಂಗಳೂರು.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕುಕಜ್ಜಿ, ಅಜೀರ್ಣತೆ, ಮಲಬದ್ಧತೆ ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0-12-0 ಮೂರು ಬಾಟ್ಲಿಗಳಿಗೆ 2-0-0. 12 ಬಾಟ್ಲಿಗಳಿಗೆ 7-0-0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್‍ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕಾರಕ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1-0-0 4 ಬಾಟ್ಲಿಗಳಿಗೆ 3-0-0 12 ಬಾಟ್ಲಿಗಳಿಗೆ 8-0-0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದಬಂದ ಅಶಕ್ತತೆ, ಒಳಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು ರೂ.	0-4-0
ಸರ್ಸಪರೀಲಾ:— ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ 1-4-0
ದಂತ ಚೂರ್ಣ:— ಹಲ್ಲುಗಳು ಘಟ್ಟಿಯಾಗುತ್ತವೆ	„ 0-4-0
ರೊಯಲ್ ಇಂಡಿಯನ್ ಬಾಂ:— ತಲೆನೋವಿಗೆ ವಾತಕ್ಕೆ, ಸಂಧಿವಾತಕ್ಕೆ	„ 0-8-0

Registered No M. 498.

ಚಂದಾನಿರ್ಣಯ:— ವರ್ಷ ೧ಕ್ಕೆ ರೂ. 1-4-0. ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 6.

ಮಂಗಳೂರು ತಾ. 9 ನೇ ಶುಕ್ರವಾರ ಫೇಬ್ರುವರಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳುಕಡಿತ, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಫಸ್ಟ್ ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:— ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ ಮತ್ತು ಮೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ಎಂಡ್. ಎಸ್. ಎಂಡ್. ಜೆ. ಪಿ., ಮುಂಬಯಿ:— ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೇಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ:— ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ ಎಸ್ಟೇಟು, ಕೊಡಗು:— ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ್ ವಾಂದ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:— ನಿಮ್ಮಿಂದ ಪಡಕೊಂಡ ಅಮೃತಾಂಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.

ಅಮೃತಾಂಜನ ಚರ್ಚಿತವಾದ ರೋಮದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಪಶೆಯೂ ಬಾರದಂತೆ ನೋಡಿಕೊಂಡು, ಪಶೆ ಇಲ್ಲದ ಸ್ಥಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. ಎಮ್. ಎಂಡ್. ಎಸ್., ಮುಂಬಯಿ, ಬರಿಯುವದೇನಂದರೆ:— ನಿಮ್ಮ ಅಮೃತಾಂಜನವನ್ನು ನಾನು ವಾತಕ್ಕೂ ಸಂಧಿವಾತಕ್ಕೂ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿದ್ದಲ್ಲಿ ಬಹಳ ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ ತಿಳಿಸುತ್ತೇನೆ.

ಜಾಗ್ರತೆ:—ಈಗ ಅಮೃತಾಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಲ್ಪಟ್ಟಿರುತ್ತದೆ.

ವಿಳಾಸ:— ಅಮೃತಾಂಜನ ಡಿಪೊ., 109 ಫ್ರೈಯರ್ ರೋಡ್, ಫೋರ್ಟ ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:— ಅಮೃತಾಂಜನ, ಮುಂಬಯಿ.

ಸೋಲ್ ಏಜಂಟರು:— ವಿಲಿಯಂ ಕಂಪೆನಿ, ...

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ರಕ್ತವೃದ್ಧಿ, ಬಾಟ್ಲಿ 1ಕ್ಕೆ 1ರೂಪಾಯಿ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೊಲೆರಾ ಮಾತ್ರೆ.

ಕೋಲೆರಾ, ವಾಂತಿಭೇದಿಗಳ ಮೇಲೆ ಬಹಳ ಉತ್ತಮ ಔಷಧ. ಕ್ರಯ 6ಆಣೆ.

ನೇತ್ರಾಂಜನ.

ಮಂದದೃಷ್ಟಿಯನ್ನೂ ಕಣ್ಣುನೋವನ್ನೂ ಗುಣಪಡಿಸುವದು. ಕ್ರಯ 4ಆಣೆ.

ಕೇಶವರ್ಧಿನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

ಜುಲಾಬು ಮಾತ್ರೆ 8 ಆಣೆ; ಪ್ರಮೇಹಮಿಶ್ರಣ 1ರೂಪಾಯಿ; ಕಫಹಾರಿ 1 ರೂಪಾಯಿ 4 ಆಣೆ; ಕಫನಾಶಕ ಚೂರ್ಣ 8 ಆಣೆ; ಜಂತುವಾತಹಾರಿ 8 ಆಣೆ.

ವಿಳಾಸ:— ವಿಲಿಯಂ ಮತ್ತು ಕಂಪೆನಿ, 109 ಫ್ರೈಯರ್ ರೋಡ್, ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:— ಅಮೃತಾಂಜನ, ಮುಂಬಯಿ.

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆಇಲ್ಲಿ ನೋಡಿ. ೨. ಲೋಕದಲ್ಲಿನೆಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರಿ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮಿರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗ್ಯೆರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯ ಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**

Leading Silk Manufacturers, Benares City.

1912ನೇ ಇಸವಿಯ

ಫೌರ್ವಾಲ್ ಪೊಕೆಟ್ ಡೈರಿಗಳು.

1912ನೇ ಇಸವಿಯ ಡೈರಿಗಳು ತಯಾರಾಗಿರುತ್ತವೆ. ನಂಬರು 1, 0—4—0.

ನಂಬರು 2, ಮುಚ್ಚಳ ಮತ್ತು ಪೆನ್‌ಸಲ್ ಸಹಿತ 0—6—0. ಎಲ್ಲರಿಗೂ ಬೇಕಾದ ವಿಷಯಗಳು ಇದರಲ್ಲಿ ಅಡಗಿರುತ್ತವೆ. ವಟ್ಟಿಗೆ 1 ಡಜನ್ ಡೈರಿಗಳನ್ನು ತೆಗದುಕೊಳ್ಳುವವರಿಗೆ 2 ಡೈರಿಗಳನ್ನು ಬಹುಮಾನವಾಗಿ ಕೊಡುತ್ತೇವೆ. ಸ್ವಲ್ಪವೇ ಕೋಪಿಗಳು ಉಳದಿರುವದರಿಂದ ಜಾಗ್ರತೆಯಾಗಿ ತರಿಸಿಕೊಳ್ಳಬೇಕು. ನಮ್ಮ ಡೈರಿಗಳನ್ನು ತರಿಸಿಕೊಳ್ಳುವವರಿಗೆಲ್ಲಾ 1912ನೇ ಇಸವಿಯ ಕೆಲಂಡರುಗಳನ್ನು ಕಳುಹಿಸಿಕೊಡುತ್ತೇವೆ. ಪೋಸ್ಟ ಮುಖಾಂತರ ವಿ. ಪಿ. ತರಿಸಿಕೊಳ್ಳ ತಕ್ಕವರು ಡಜನ್ 1ಕ್ಕೆ 1ರೂಪಾಯಿ ಅಡ್ವಾನ್ಸ್ ಕಳುಹಿಸಿಕೊಡಬೇಕು

ಈ ಮೇಲ್ಕಂಡ ಡೈರಿಗಳು ಮಂಗಳೂರು ಊಲನ್ ಮಾರ್ಟಿನಲ್ಲಿ ದೊರಿಯುತ್ತವೆ.

ಎಲ್. ಎ. ಫೌರ್ವಾಲ್ ಅಂಡ್ ಕೋ,

ಬೆಂಗಳೂರು ಸಿಟಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ ,, ,,	6—0—0	B ಅರಗಜ ,, ,,	1—0—0
ಕಸ್ತೂರಿ ಬತ್ತಿ ,, ,,	3—0—0	ಕಸ್ತೂರಿ ಬಿಲ್ಲೆ ,, ,,	2—0—0
ಜವಾಜಿ ಬತ್ತಿ ,, ,,	2—0—0	ಜವಾಜಿ ಬಿಲ್ಲೆ ,, ,,	1—0—0
ಪುಣಗಿನ ಬತ್ತಿ ,, ,,	1—8—0	ಕೇಸರಿ ಬಿಲ್ಲೆ ,, ,,	0—8—0
A ಪನ್ನೀರ್ ಬತ್ತಿ ,, ,,	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ ,, ,,	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:—

ಮ. ಟ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—

ಎನ್. ಎಂ. ಸುಬ್ರಾವ್,
"ಸುಗಂಧವಿಲಾಸ"
ಮಂಗಳೂರು

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು.

ಆತಂಕ ನಿಗ್ರಹ ಗುಳಿಗೆಗಳು.

30 ವರುಷಗಳಿಂದ ಉಪಯೋಗಿ ಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಯಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ 22 ಬ್ರಾಡ್ವೇ ಮದರಾಸು. } ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಮತ್ತು ಜಾಮ್ ನಗರ ಕಾಠ್ಯಾವಾರ್.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾದದ್ದಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕು ಕಜ್ಜಿ, ಅಜೀರ್ಣತೆ, ಮಲಬದ್ಧತೆ ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0 ಮೂರು ಬಾಟ್ಲಿಗಳಿಗೆ 2—0—0. 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಆಶ್ಚರ್ಯಕಾರಕ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ, ಧಾತು ಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಒಳಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು ರೂ.	0—4—0
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ ,,	1—4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ ,,	0—4—0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ ,,	0—8—0

ವಿಳಾಸ:— ಗಣೇಶ ರಾಮಚಂದ್ರ ಕರ್ಕಿ ಕಂಪೆನಿ, ಗಿರಗಾಂ ಮುಂಬಯಿ.



ಪೊಪ್ಯುಲರ್ ಹಂಬರ್ ಕ್ರಯ ರೂಪಾಯಿ 120.

ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯಾಕಲುಗಳನ್ನು ಪಡಿಯಲು ಸಾಧ್ಯವಲ್ಲ.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಶೋಸಿಯೇಷನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.



ಸಿಂಗರ್ ರೊಯಲ್ ಕ್ರಯ ರೂಪಾಯಿ 115.

ಬೆಸ್ಟ್ ಲ್ಯಾಟ್ಸ್

ಎಂಬ

ಗ್ಯಾಸ್ ದೀಪಗಳು

ಕೆರೆಸಿನ್ ಎಣ್ಣೆಯ ದೀಪಗಳಂತೆ ಹೊಗೆಯಿಂದ ಪ್ರಕಾಶವು ಮೊಬ್ಬಾಗದೆ ಘಾಳಿಯ ಶಳವಿನಿಂದ ನೊಂದಿ ಹೋಗದಂಥವುಗಳು. ಈ ದೀಪಗಳನ್ನುರಿಸಲು ಕೆರೆಸಿನ ಎಣ್ಣೆಯ ದೀಪಗಳಷ್ಟೇ ಖರ್ಚು ತಗಲುವುದು.



ಕ್ರಯ ರೂ. 16. ಕ್ರಯ ರೂ. 20.

ದೇವಾಲಯ ವಾಚಕ ಮಂದಿರ ವ್ಯಾಪಾರದ ಅಂಗಡಿ ಭಂಡಸಾಲೆಗಳಿಗೆ ದೀಪದ ಪ್ರಕಾಶದ ಶೋಭೆಯು ಅಧಿಕವಾಗಿ ಬೇಕಾದ ಎಲ್ಲಾ ಕಡೆಗಳಲ್ಲಿ ಅತ್ಯುಪಯುಕ್ತವಾದವು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಮಂಗಳೂರು ಟ್ರೇಡಿಂಗ್ ಎಸ್ಸೊಶಿಯೇಶನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದ. ಕ.

ಈ ಕಾಲದಲ್ಲಿ ಯಾವುದು ತಾನೇ ಸಾಧ್ಯವಲ್ಲ?



ಕ್ರಯ ರೂ. 45.

ಪ್ರಖ್ಯಾತಪಟ್ಟ ಕೊಯಂಬುತ್ತೂರು ತಾಯಿಯ ಗಾಯನವನ್ನೂ, ಉತ್ತರಹಿಂದುಸ್ಥಾನದ ಸುಪ್ರಸಿದ್ಧ ಗಾಯನ ವಿದ್ಯಾವಿಶಾರದರ ಹಾಡುಗಳನ್ನೂ, ಇನ್ನು ಕನ್ನಡ ತಮಿಳು ತೆಲುಗು ಮಲೆಯಾಳ ಮರಾಟಿ ಭಾಷೆಗಳ ಉತ್ಕೃಷ್ಟ ಗವಯಿಗಳ ಪದಗಳನ್ನೂ ಕೇಳಲಿಕ್ಕೆ ಅವರಿದ್ದಲ್ಲಿಗೆ ಹೋಗಬೇಕೆಂತಿಲ್ಲ. ಈ ಕೆಳಗೆ ತೋರುವ ರಾಗದ ಪೆಟ್ಟಿಗೆಯೊಂದನ್ನೂ ಹಾಡುಗಳ ಸ್ವರವೆಲ್ಲವು ಮುದ್ರಿತವಾಗಿರುವ ರಿಕಾರ್ಡುಗಳೆಂಬ ಹಾಳೆಗಳನ್ನು ತಕ್ಕೊಂಡರೆ ನಾವಿದ್ದಲ್ಲಿಯೇ ಶ್ರೇಷ್ಠ ಗವಯಿಗಳ ಗಾನವನ್ನು ಕೇಳಿ ಆಹ್ಲಾದ ಪಡಬಹುದು.

ರಿಕಾರ್ಡು ಒಂದಕ್ಕೆ ಸಾಧಾರಣವಾಗಿ ರೂ. 3—0—0 ಕ್ರಯವಿರುವದು.

ಇವುಗಳು ದೊರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್
ಎಸ್ಸೋಸಿಯೇಶನ್
ಸ್ಯಾಕಲ್ ಏಜಂಟ್ಸ್,
ಮಂಗಳೂರು ದ. ಕ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.

ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.

ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಆಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,

ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,

ಮಂಗಳೂರು, ದ. ಕ

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜೆ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಆಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂ ಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಹಿಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,

ಚೀಫ್ ಏಜಂಟ್ಸ್:—ಮಲೆಬಾರ ಮತ್ತು ದಕ್ಷಿಣ ಕನ್ನಡ.

ವಂದೇಮಾತರಂ.

ಪ್ರಸಿದ್ಧವಾದ ಈ ಸಂಸ್ಕೃತ ಗೀತ, ಅದರ ಅರ್ಥ, ಉತ್ಪತ್ತಿ, ಚರಿತ್ರೆಗಳೂ ಅದರ ಮೂಲ ಕರ್ತರಾದ ಬಂಕಿಂ ಚಂದ್ರಚಟ್ಟೋಪಾಧ್ಯಾಯರ ಜೀವನ ಚರಿತ್ರೆಯೂ, ದೇಶಾಭಿಮಾನದ ನಿಜ ಸ್ವರೂಪವೂ ವಿವರಿಸಲ್ಪಟ್ಟಿವೆ. ಶೈಲಿಯು ಗಂಭೀರವಾಗಿದೆ. ಬೆಲೆ ಒಂದೇ ಆಣೆ.

ಸ್ವದೇಶಿ.

ಈ ಸಣ್ಣ ಪುಸ್ತಕದಲ್ಲಿ ದೇಶಾಭಿಮಾನದ ಅವಶ್ಯಕತೆಯೂ, ದೇಶಾಭಿಮಾನಿಗಳ ಕರ್ತವ್ಯಗಳೂ, ಭಾರತೀಯರ ಐಹಿಕ ಮತ್ತು ಪಾರತ್ರಿಕ ಸುಖಗಳಿಗೆ ಮುಖ್ಯವಾದ ದಶವಿಧ ಧರ್ಮಗಳೂ ಸಕಾರಣವಾಗಿ ಉದಾಹರಣಪೂರ್ವಕವಾಗಿ ಸುಲಭ ರೀತಿಯಲ್ಲಿ ವಿವರಿಸಲ್ಪಟ್ಟಿವೆ. ಬೆಲೆ ಒಂದೂವರೆ ಆಣೆ ಮಾತ್ರ.

ರಾಜಾ ರಾಮಮೋಹನ ರಾಯ್

ಸ್ವದೇಶ ಭಕ್ತರಲ್ಲಿ ಮೊತ್ತಮೊದಲನೆಯವನೂ, ಈಗಿನ ಸಾಮಾಜಿಕ, ರಾಜಕೀಯ, ಧಾರ್ಮಿಕ ಪ್ರಸಂಗಗಳಿಗೆ ಪ್ರಾರಂಭಿಸಿದವನೂ, ಬ್ರಹ್ಮಸಮಾಜ ಸ್ಥಾಪಕನೂ, ನವೀನ ಭರತಖಂಡದ ತಂದೆಯೂ ಆದ ಮಹಾ ಪುರುಷನ ಜೀವನ ಚರಿತ್ರೆ ಸಚಿತ್ರ ಅನೇಕ ವಿದ್ವಾಂಸರಿಂದ ಮೆಚ್ಚಲ್ಪಟ್ಟದೆ. ಬೆಲೆ ಒಂದೇ ಆಣೆ.

ಹರಿಭಕ್ತಿಸಾರ.

ಬಾಲಕ ಬಾಲಕಿಯರ ಬಾಯಿ ಪಾಠಕ್ಕೆ ಅನುಕೂಲವಾಗಿ ಭಕ್ತಿ ರಸಭರಿತವಾಗಿರುವ ಪದ್ಯ ಕಾವ್ಯದ ಶುದ್ಧ ಪ್ರತಿ ಗ್ರಂಥಕರ್ತರಾದ ಶ್ರೀ ಕನಕದಾಸರ ಚರಿತ್ರೆಯ ಸಹಿತ. ಬೆಲೆ ಒಂದೇ ಆಣೆ.

ವೇದವೇದಾಂತ ಗ್ರಂಥಾವಳಿ.

ಬೆಲೆ ಒಂದೂವರೆ ಆಣೆ.

ವಿಳಾಸ:—ಮ್ಯಾನೇಜರ್,

"ಸುಮತಿ ಗ್ರಂಥಮಾಲಾ" ಆಫೀಸು

ಬೆಂಗಳೂರು ಸಿಟಿ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಆಸ್ಯಗ್ರ್ವರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿ ಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 9ನೇ ಫೆಬ್ರವರಿ 1912.

ಚೀನಾ ದೇಶದ ಪ್ರಜಾಧಿಪತ್ಯವು.

ಆಗಿಂದಾಗ್ಯೆ ನಮ್ಮ ವೃತ್ತಾಂತ ಸಂಗ್ರಹದಲ್ಲಿ ಪ್ರಕಟವಾಗುತ್ತಿರುವ ಚೀನಾ ದೇಶದ ರಾಜಕಲಹಗಳು ಪ್ರಜಾಸತ್ತಾತ್ಮಕ ರಾಜ್ಯಭಾರ ಮಾರ್ಪಾಟದಲ್ಲಿ ಪರಿಣಮಿಸಿಯವೆ. ಸನ್‌ಯತ್‌ಸೇನ್ ಎಂಬ ಪ್ರಜಾಗ್ರೇಸರರು ಪ್ರಜಾಧಿಪತ್ಯದ ಹಂಗಾಮಿ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಚೀನಾ ದೇಶದ ಚಕ್ರವರ್ತಿಯು ಪದಚ್ಯುತನಾಗಿ ಪ್ರಜಾಧಿಪತ್ಯದ ಸರಕಾರದಿಂದ ಮೂರು ಲಕ್ಷ ಟೀಲ ಎಂಬ ನಾಣ್ಯಗಳ ವರ್ಷಾಸನವನ್ನು ಹೊಂದುವನೆಂತ ಗೊತ್ತಾಗಿರುವುದು. ಆದರೆ ನೂತನವಾಗಿ ಸ್ಥಾಪಿಸಲ್ಪಟ್ಟ ಪೌರ್ವಾತ್ಯರ ಈ ಪ್ರಜಾಸತ್ತಾತ್ಮಕ ಸರಕಾರವು ಇಷ್ಟರ ತನಕ ಪಾಶ್ಚಾತ್ಯ ಜನಾಂಗಗಳ ಸರಕಾರಗಳಿಂದ ಅಂಗೀಕಾರವನ್ನು ಹೊಂದಿರುವುದಿಲ್ಲ. ಚೀನಾ ದೇಶದ ಈ ಅಘಟಿತ ರಾಜ್ಯಘಟನೆಯು ಬಾಳುವುದೋ ಏನೆಂಬುವುದನ್ನು ಪ್ರಕೃತ ನಿಶ್ಚಿತವಾಗಿ ಹೇಳಲಸಾಧ್ಯ. ಆದರೆ ನಿರಂಕುಶ ಪ್ರಭುತ್ವಕ್ಕೆ ಇನ್ನು ಎಂದೂ ಚೀನಾ ದೇಶದಲ್ಲಿ ಆಸ್ಪದ ದೊರಕದೆಂಬುದು ನಿಶ್ಚಯ.

ಚೀನಾ ದೇಶದಲ್ಲಿ ಪ್ರಜೆಗಳ ಇಂಥಾ ಕಾಟಕಾಯಿಗಳು ಇಷ್ಟರ ತನಕ ಮೂವತ್ತು ನಡದಿರುವವು. 'ಝೊಂಜೊ' 'ಬೊಂಬತ್ಸು' 'ಕಾನಫಿಶುಯನ್ನ' 'ಸೋರನ' ಎಂಬ ಚೀನಿಯ ರಾಜಕೀಯ ತತ್ವಗಳನ್ನು ಚೀನಾ ದೇಶದ ಆಯಾ ಕಾಲಗಳ ಅರಸುತನವು ಆದರಿಸಿಕೊಂಡಿತ್ತು. 'ಝೊಂಜೊ' ಸಿದ್ಧಾಂತದ ಪ್ರಕಾರ ಈಗ ಅಮೇರಿಕದ ಸಂಯುಕ್ತ ಸಂಸ್ಥಾನಗಳ ರಾಜ್ಯಪರಿಪಾಲನೆಗೆ ಹ್ಯಾಗೆ ಪ್ರಜೆಗಳು ತಮ್ಮೊಳಗಿನವನೊಬ್ಬನನ್ನು ಸರಕಾರದ ಅಧ್ಯಕ್ಷನನ್ನಾಗಿ ಆರಿಸುವರೋ ಹಾಗೆಯೇ ಚೀನಿಯರು ತಮ್ಮರಸನನ್ನು ಆರಿಸಿತೆಗೆಯುವದಿತ್ತು. ಈತನು ಮರಣ ಪರ್ಯಂತರ ತನ್ನಧಿಕಾರವನ್ನು ನಡಿಸುವದಿತ್ತಲ್ಲದೆ ಈತನ ನಂತರ ಪ್ರಜೆಗಳೇ ಈ ಸ್ಥಾನಕ್ಕೆ ಮತ್ತೊಬ್ಬನನ್ನು ಆರಿಸಬೇಕಾಗಿತ್ತು. ಹೀಗೆ ಆರಿಸಲ್ಪಟ್ಟ ಅರಸನು ಪಕ್ಷಪಾತವಿಲ್ಲದೆ ನ್ಯಾಯಶೀಲತೆಯಿಂದ ರಾಜ್ಯಪರಿಪಾಲನೆಯನ್ನು ನಡಿಸದಿದ್ದರೆ ಇಂಥವನನ್ನು ಪ್ರಜೆಗಳು ರಾಜ್ಯಪದವಿಯಿಂದ ತಳ್ಳಿಹಾಕುವದಿತ್ತು. ಈ ಕ್ರಮವು ಆಗಿಂದಾಗ್ಯೆ ರಾಜ್ಯದಲ್ಲಿ ಅನೇಕ ಕಲಹಗಳಿಗೆ ಕಾರಣವಾದ್ದರಿಂದ ಈಯು ಎಂಬವರು ಈ ಸಾಂಪ್ರದಾಯವನ್ನು ಮಾರ್ಪಡಿಸಿ ಅರಸುತನವು ತನ್ನ ಕುಟುಂಬಕ್ಕೆನೇ ಪಾರಂಪರ್ಯವಾಗಿ ದೊರಿಯುವ ಏರ್ಪಾಡು ಮಾಡಿದರು. ಈ ಏರ್ಪಾಡು ಬೊಂಬತ್ಸು ಸಿದ್ಧಾಂತಗಳ ಮೇರೆಗೆ ಆಗಿತ್ತು. ರಾಜನು ಪ್ರತ್ಯಕ್ಷ ದೇವರ ಅವತಾರವೆಂಬ ಕಾನಫಿಶುಯನ್ನ ನೀತಿ ತತ್ವವು ಬೊಂಬತ್ಸು ಸಿದ್ಧಾಂತವನ್ನು ಕ್ರಮೇಣವಾಗಿ ಒಳಗೊಂಡು ರಾಜನು ತಪ್ಪಿ ನಡದರೂ ಆತನ ತಪ್ಪಿತಗಳಿಗೆ ಯಾರೂ ಗಮನಕೊಡಲಾಗಲಿಲ್ಲ. ಕಟ್ಟಕಡೆಗೆ ರಾಜನಿಂದ ಪ್ರಾಪ್ತಿಸುತ್ತಿದ್ದ ಸಂಕಷ್ಟಗಳನ್ನು ತಡಿಯಲಾರದೆ ಮೋಸೀ ಎಂಬ ಚೀನಿಯ ಮಹಾ ಪುರುಷನು ರಾಜನೀತಿಯನ್ನೂ ರಾಜಧರ್ಮವನ್ನೂ ಉಲ್ಲಂಘಿಸಿ ನಡೆಯುವ ರಾಜನನ್ನು ಸಿಂಹಾಸನದಿಂದ ತಳ್ಳಿಹಾಕಬಹುದೆಂತ ಪ್ರತಿಪಾದಿಸಿದನು. ಮೋಸೀಯವರ ಈ ಸಿದ್ಧಾಂತಗಳನ್ನು ಜನರೆಲ್ಲರು ವಿಚಾರಿಸಿಕೊಂಡು ಚೀನಾ ದೇಶದ ಅರಸುತನಕ್ಕೆ ಆಗಿಂದಾಗ್ಯೆ ಬಾಧಕ ಉಂಟಾಗಲು ಕಾರಣವಾಯಿತು. ಚೀನಾ ದೇಶದಲ್ಲಿ ಪದೇಪದೇ ಸಂಭವಿಸುವ ಕಾಟಕಾಯಿಗಳನ್ನು ಪೂರ್ಣವಾಗಿ ಅರಿತುಕೊಳ್ಳಬೇಕಾದರೆ 'ಸೋರನ' ಎಂಬ ಚೀನಾ ದೇಶದಲ್ಲಿರುವ ಇನ್ನೊಂದು ಸಾಂಪ್ರದಾಯವನ್ನು ಸಹ ತಿಳಕೊಳ್ಳಬೇಕು. ಇದರ ಪ್ರಕಾರ ರಾಜ್ಯವು ಅನ್ಯ ಜನಾಂಗಗಳಿಂದ ಆಕ್ರಮಿಸಲ್ಪಟ್ಟರೆ ಅರಸನು ಈ ಬಗ್ಗೆ ಪ್ರಜೆಗಳಲ್ಲಿ ಬೇಕಾದ ಕಳವಳವನ್ನೆಬ್ಬಿಸಿ ಪ್ರಜೆಗಳ ಸಹಾಯದಿಂದ ಅನ್ಯರನ್ನು ದೇಶದಿಂದ ಹೊರಡಿಸಿಬಿಡುವನು. ಹೆಚ್ಚು ಕಡಿಮೆ ಎರಡೂವರೆ ಶತಮಾನಗಳ ಹಿಂದೆ ಮಂಚೂ ಜನರು ಚೀನದಲ್ಲಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುವಾಗ ಚೀನಿಯರು ಸೋರನವನ್ನು ಸಾರಿದರೂ ಪ್ರಯೋಜನವಿಲ್ಲದೆ ಮಂಚೂ ಜನರಿಗೆನೇ ಚೀನಾ ದೇಶವು ದೊರೆಯಿತು. ಮಂಚೂ ಜನರ ದುರ್ನಡತೆಗಳಿಂದ ಪ್ರಕೃತ ಚೀನಿಯರು ಅಸಂತುಷ್ಟರಾಗಿ ಸೋರನವನ್ನು ಸಾರಿರುವುದೇ ಮಂಚೂ ಕುಲದ ಚಕ್ರವರ್ತಿಯನ್ನು ಪದಚ್ಯುತನಾಗಿ ಮಾಡಲು ಕಾರಣವಾಯಿತು.

ಮಂಚುಗಳ ದುರ್ನಡತೆಯಾದರೋ ಬಹಳ ವಿಶೇಷವಾದದ್ದು. ಇವರು ರಾಜಕುಲದವರಾದ್ದರಿಂದ ಇವರನ್ನು ತಕ್ಸೀರುಗಳ ಬಗ್ಗೆ ತನಕಿ ಮಾಡುವ ಕೋರ್ಟುಗಳು ಇತರ ಚೀನಿಯರಿಂದ ಬೇರೆಯಾಗಿರುವವು. ಸರಕಾರದ ದೊಡ್ಡ ದೊಡ್ಡ ಹುದ್ದೆಗಳು ಇವರಿಗಲ್ಲದೆ ಬೇರೆಯವರಿಗೆ ದೊರಕವು. ಚೀನಿಯರ ಮೇಲಿನ ಪೂರ್ಣ ಅಧಿಕಾರವು ಮಂಚುಗಳ ಕೈಯಲ್ಲಿದೆ. ಮಂಚುಗಳು ತಮ್ಮ ಪ್ರಭುತನವನ್ನು ತೋರ್ಪಡಿಸುವುದಕ್ಕೆ ಚೀನಿಯರನ್ನು ಅನೇಕ ಸಲ ಅಪಮಾನಕ್ಕೆ ಗುರಿಪಡಿಸುವುದುಂಟು. ಇಷ್ಟಲ್ಲದೆ ಮಂಚುಗಳಲ್ಲಿ ಪ್ರತಿಯೊಬ್ಬನಿಗೂ ಚೀನಿಯ ಸರಕಾರದಿಂದ ಜೀವನಕ್ಕೆ ಬೇಕಾದುದೆಲ್ಲ ಕೊಡೋಣಾಗುತ್ತದೆ. ಚೀನಿಯರಿಗೆ ಸ್ವಭಾವಿಕವಾಗಿ ಈ ಮಂಚುಗಳ ಮೇಲೆ ದ್ವೇಷವು ಉಂಟಾಗಲು ಕಾರಣವಾಯಿತು. ಚೀನಾ ದೇಶದ ಸರ್ವರಲ್ಲಿಯೂ ಈ ದ್ವೇಷವು ಚನ್ನಾಗಿ ಮೊಳಕೆಗೆ ಬಂದು ಚೀನಿಯರಲ್ಲಿ ಹಲವರು ಮಂಚೂಕುಲದ ಚಕ್ರವರ್ತಿಯನ್ನು ಪದಚ್ಯುತನನ್ನಾಗಿ ಮಾಡಲು ಹಟಹಿಡಿದರು.

ಚೀನಾ ದೇಶದಲ್ಲಿ ಎಲ್ಲ ಪ್ರಾಂತ್ಯಗಳಲ್ಲಿ ಭಾಷೆಯೊಂದೇ ಅಲ್ಲ. ದೇಶದ ಆಯಾ ರಾಜ್ಯಗಳೂ ಸಹ ಪರಸ್ಪರ ಸಮ್ಮಂಧವಿಲ್ಲದೆ ಒಂದರಿಂದಿನ್ನೊಂದು ಪೂರ್ಣ ಸ್ವತಂತ್ರವಾಗಿವೆ. ಹೀಗಿದ್ದರೂ ಮಂಚೂಗಳ ದ್ವೇಷವೂ ಪಾಶ್ಚಾತ್ಯರ ಮತ್ತು ಅಮೇರಿಕದವರ ಸಹವಾಸಗಳಿಂದ ಹುಟ್ಟಿದ ರಾಷ್ಟ್ರೀಯ ಕಲ್ಪನೆಯೂ ಚೀನಿಯರಲ್ಲಿ ಬಹಳ ವಿಕಸಿತವಾಗಿ ಸ್ವಾತಂತ್ರಪ್ರಿಯರಾದ ಸನ್‌ಯತ್‌ಸೇನರಂಥಾ ವೀರಪುರುಷರು ಚೀನದ ದೀನಸ್ಥಿತಿಯನ್ನು ಹೋಗಲಾಡಿಸುವರೆ ಸಾಧಿಸುತ್ತಿರುವರು. ಸನ್‌ಯತ್‌ಸೇನರು ಪಾಶ್ಚಾತ್ಯ ದೇಶಗಳಲ್ಲಿ ಬಹಳ ಸಮಯವಿದ್ದು ಪ್ರಜಾ ಸತ್ತಾತ್ಮಕ ಸರಕಾರಗಳನ್ನು ಚನ್ನಾಗಿ ತಿಳಕೊಂಡವರಾಗಿರುವರಲ್ಲದೆ ಜನರೆಲ್ಲರ ವಿಶ್ವಾಸವೂ ಪ್ರೀತಿಯೂ ಪೂರ್ಣವಾಗಿ ಇವರ ಮೇಲಿರುವುದು. ಇವರೇ ಚೀನದಲ್ಲಿ ಈಗ ಏರ್ಪಟ್ಟಿರುವ ಪ್ರಜಾರಾಜಾಧಿಪತ್ಯದ ಹಂಗಾಮಿ ಅಧ್ಯಕ್ಷರಾಗಿರುತ್ತಾರೆ. ಕೆಲವು ವರುಷಗಳ ಮೊದಲು ಪಾಶ್ಚಾತ್ಯ ಜನಾಂಗಗಳು ತಂತಮ್ಮೊಳಗೆ ಪಾಲುಮಾಡಿಕೊಳ್ಳುವವೆಂತ ನಿರ್ಣಯಿಸಿದ ೪೮ ಕೋಟಿ ಜನಸಂಖ್ಯೆಯುಳ್ಳ ಚೀನಾ ಸಾಮ್ರಾಜ್ಯವು ಈಗಲೀಗ ಪ್ರಜಾಸತ್ತಾತ್ಮಕ ಸರಕಾರವನು ಸ್ಥಾಪಿಸುವ ಪ್ರಯತ್ನದಲ್ಲಿದೆ. ಯನ್‌ಯತ್‌ಸೇನರ ಈ ಸುಪ್ರಯತ್ನಗಳು ನೆರವೇರಿ ಅದ್ಭುತವಾದಂಥಾ ಅತೀ ದೊಡ್ಡ ಪೌರ್ವಾತ್ಯರ ಪ್ರಜಾಧಿಪತ್ಯದ ಸಾಮ್ರಾಜ್ಯವು ಸ್ಥಾಪಿಸಲ್ಪಡಲೆಂತ ಕೋರುತ್ತೇವೆ.

ಬಂಟರ ಯಾ ನಾಡವರ ವಿದ್ಯಾರ್ಥಿ ಸಂಘವೂ ವಿದ್ಯಾರ್ಥಿ ಭವನವೂ.

ತಮ್ಮ ಸ್ವಜಾತಿಯವರಲ್ಲಿ ವಿದ್ಯಾಭಿವೃದ್ಧಿ ಬಗ್ಯೆ ಈ ಜಿಲ್ಲೆಯ ಬಂಟರು ಯಾ ನಾಡವರಿಂದ ಸ್ಥಾಪಿಸಲ್ಪಟ್ಟ ಈ ಎರಡು ವಿದ್ಯಾಸಂಸ್ಥೆಗಳು ಮಂಗಳೂರಿನಲ್ಲಿ ಅಭಿವೃದ್ಧಿ ಸ್ಥಿತಿಯಲ್ಲಿರುವವೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ಕಳದ ವಾರದಲ್ಲಿ ಈ ಎರಡು ಸಂಸ್ಥೆಗಳ ವಾರ್ಷಿಕ ಸಭೆಯು ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರಾದ ರಾ| ವೇಣುಗೋಪಾಳ ಚೆಟ್ಟಿಯವರ ಅಧ್ಯಕ್ಷತೆಯಲ್ಲಿ ಕೂಡಿತು. ಗತ ವರುಷ ನಡದ ಈ ಸಂಸ್ಥೆಗಳ ಕಾರ್ಯ ವೃತ್ತಾಂತದಿಂದ ಈ ವಿದ್ಯಾರ್ಥಿ ಸಂಘದ ಮೆಂಬರರ ಪೈಕಿ ರಾ. ಕೆ. ತಿಮ್ಮಪ್ಪ ಆಳ್ವರವರು ಬಹುಮಾನ ಭಂಗಾರದ ಪದಕವನ್ನು ಪಡೆದು ಕೃಷಿ ವಿದ್ಯೆಯಲ್ಲಿ ಪಾಸಾಗಿರುವರೆಂತಲೂ ರಾ. ಬಿ. ದಾಸ ರೈಗಳವರು ಬಿ. ಎ. ಪರೀಕ್ಷೆ ಪಾಸಾಗಿರುವರೆಂತಲೂ ರಾ. ಪಿ. ಆರ್. ರಂಗನಾಥ ಪೂಂಜರವರು ಇಂಟರ್‌ಮಿಡಿಯೇಟ್ ಪರೀಕ್ಷೆಯಲ್ಲಿ ಒಂದನೇ ತರಗತಿಯಲ್ಲಿ ಪಾಸಾಗಿರುವರೆಂತಲೂ ಕೆ. ಜಗನ್ನಾಥ ಬಳ್ಳಾಲರವರು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟಿರುವರೆಂತಲೂ ತಿಳಿಯಲು ಸಂತೋಷಪಡುತ್ತೇವೆ. ಸಂಘದ ಭವನದ ವಿದ್ಯಾರ್ಥಿಗಳು ಆಗಿಂದಾಗ್ಯೆ ಸಭೆ ಸೇರಿ ತಮ್ಮ ವಿದ್ಯಾರ್ಜನೆಗೆ ಸಹಾಯಕವಾಗುವಂತೆ ವಿದ್ಯಾವಂತ ಗೃಹಸ್ಥರ ಅಧ್ಯಕ್ಷತೆಯಲ್ಲಿ ನಾನಾ ವಿಷಯಗಳ ವಾದಗಳನ್ನು ನಡಿಸಿ ಉಪನ್ಯಾಸಗಳನ್ನು ಓದುವರು. ಕಾರ್ಯಪಟುತ್ವವು ವಿದ್ಯಾರ್ಥಿಗಳಿಗೆ ಲಭಿಸುವಂತೆ ಆಯಾ ವಿಷಯಗಳ ಬರಿಯ ವಾದಗಳೊಂದಿಗೆ ಕಾರ್ಯಸಾಧನ ಕ್ರಮಗಳ ತಕ್ಕ ಏರ್ಪಾಡೂ ಸಹ ಇರಬೇಕೆಂದು ಅಧ್ಯಕ್ಷರಾದ ಜಿಲ್ಲಾ ಜಡ್ಜರವರು ಸೂಚಿಸಿರುವರು. ಈ ಸೂಚನೆಯನ್ನು ಕೈಕೊಂಡರೆ ವಿದ್ಯಾ ಪ್ರಸರಣೆಯ ಫಲಗಳು ಅಶಿಕ್ಷಿತರಿಗೆ ಇನ್ನಷ್ಟು ಚನ್ನಾಗಿ ತೋರಿ ಜನರ ಸಹಾಯವೂ ಸಹಕಾರವೂ ವಿದ್ಯಾಪ್ರಯತ್ನಗಳಲ್ಲಿ ಮತ್ತಷ್ಟು ಹೆಚ್ಚಾಗಿ ದೊರಕುವುದು. ಡಿಲ್ಲಿ ದರ್ಬಾರಿನ ಸ್ಮರಣಾರ್ಥವಾಗಿ ವಿದ್ಯಾರ್ಥಿಭವನದ ಅಂಗಳದಲ್ಲಿ ರಾ| ಕೆ. ತಿಮ್ಮಪ್ಪಾಳ್ವರ ಶ್ರಮದಿಂದ ಒಂದು ಹೂ ತೋಟವು ಅನುಗೊಳಿಸಲ್ಪಟ್ಟಿರುವುದು.

ಭವನ ವಿದ್ಯಾರ್ಥಿಗಳಲ್ಲಿ ಇಬ್ಬರ ಮರಣದಿಂದುಂಟಾದ ವಿಷಾದದಲ್ಲಿ ಸಹಾನುತಾಪ ಪಡುವೆವು.

ವಿದ್ಯಾರ್ಥಿ ಭವನದಲ್ಲಿ ಉಳಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯು ಪ್ರತಿ ವರುಷದಲ್ಲಿಯೂ ಹೆಚ್ಚುತ್ತ ಬರುತ್ತಿರುವುದು. ಗತ ವರುಷದಲ್ಲಿ ೪೬ ಇದ್ದ ಈ ಸಂಖ್ಯೆಯು ಪ್ರಕೃತ ೫೪ ಆಗಿರುತ್ತದೆ. ಸ್ಥಳದಡಚಣೆಯು ಈ ಸಂಘಕ್ಕೆ ಸದ್ಯದಲ್ಲಿ ಬಂದೊದಗುವುದರಿಂದ ಬಂಟರ ಯಾ ನಾಡವರ ಸಂಘದ ಮೆಂಬರರೂ ಸಹಾನುಭೂತಿಯುಳ್ಳವರೂ ಸಹಾಯವಾಗಬೇಕೆಂದು ವಿದ್ಯಾರ್ಥಿಭವನದ ವೃತ್ತಾಂತದಲ್ಲಿ ವಿಜ್ಞಾಪಿಸಿಕೊಂಡಿರುತ್ತದೆ. ನಾಡವರು ವಿದ್ಯಾಪರವಾಗಿರುವ ಅಭಾವವನ್ನು ಬಿಟ್ಟು ಆಸಕ್ತಿಯಿಂದ ಈ ವಿದ್ಯಾಸಂಸ್ಥೆಗೆ ತಕ್ಕುದಾದ ಸಹಾಯವನ್ನೀಯಬೇಕಾಗಿ ನಮ್ಮ ಅಪೇಕ್ಷೆಯಾಗಿದೆ.

ಬಾಲಿಕಾ ಶಿಕ್ಷಣದಲ್ಲಿ ಪಾಕಶಾಸ್ತ್ರ ಮಾಹಿತಿಯ ಅವಶ್ಯಕತೆಯು.

ಭೂಮಿಯ ಮೇಲಿರುವ ಜಂಗಮ ಸ್ಥಾವರ ವಸ್ತುಗಳೆಲ್ಲಾ ತಂತಮ್ಮ ದೇಹ ಪೋಷಣೆಗೆ ತಕ್ಕ ಆಹಾರವಿಲ್ಲದೆ ಬದುಕಲಾರವು. ವನಸ್ಪತಿ ವರ್ಗದ ವಸ್ತುಗಳು ತಮ್ಮ ಬೇರು ಎಲೆಗಳ ಮೂಲಕ ನೀರು ಮತ್ತು ವಾಯುರೂಪದ ಸಸ್ಯಾಹಾರವನ್ನು ಹೀರಿಕೊಳ್ಳುತ್ತವೆ. ಸಸ್ಯಾಹಾರವು ದೊರೆಯದಿದ್ದರೆ ಅವುಗಳು ಬಾಡಿ ಸಾಯುವವು. ತದೋಪಾದಿ ಮನುಷ್ಯರಿಗೂ ತಕ್ಕ ಆಹಾರ ಸಿಕ್ಕದಿದ್ದರೆ ಆತನು ದಿನೇ ದಿನೇ ಕ್ಷಯಿಸುತ್ತಾ ಬಂದು ನಂತರ ಸಾಯುವನಲ್ಲವೇ?. ಮನುಷ್ಯನ ದೇಹಾರೋಗ್ಯವು ಆತನು ತಕ್ಕೊಳ್ಳುವ ಆಹಾರದ ಮೇಲೆ ಹೊಂದಿಕೊಂಡಿರುತ್ತದೆ. ಅಂದರೆ ತಕ್ಕೊಳ್ಳುವ ಆಹಾರವು ದೇಹಪೋಷಣಾಸತ್ವಗಳಿಂದ ಕೂಡಿದ್ದಾಗಿರಬೇಕು. ತಕ್ಕ ಆಹಾರವನ್ನು ಸಿದ್ಧಪಡಿಸುವವನ್ಯಾರು? ಅಡಿಗೆ ಭಟ್ಟನು. ಹಾಗಾದರೆ ಅಡಿಗೆ ಭಟ್ಟನೇ ಮನೆಯಲ್ಲಿ ಶ್ರೇಷ್ಠನೆಂದಾಯಿತು. ಅವನು ತಯಾರಿಸುವ ಆಹಾರದ ಮೇಲೆಯೇ ಇತರರ ಆರೋಗ್ಯವು ಹೊಂದಿಕೊಂಡಿರುತ್ತದೆ. ಅದೇ ದೇಹವನ್ನು ಪುಷ್ಟೀಕರಿಸುತ್ತದೆ. ಒಂದು ಮನೆಯಲ್ಲಿ ತಕ್ಕ ಪಾಕವಿಧಿಯನ್ನು ಅಭ್ಯಸಿಸಿದ ಅಡಿಗೆ ಭಟ್ಟನು ಇದ್ದನೆಂದರೆ ಆ ಮನೆಯವರು ಭಾಗ್ಯಶಾಲಿಗಳೇ ಎಂದ್ಹೇಳಬೇಕು. ಆದರೆ ನಮ್ಮ ಮನೆಗಳಲ್ಲಿರುವ ಅಡಿಗೆ ಭಟ್ಟರೆಂಥವರು? ನಿರಕ್ಷರಕುಕ್ಷಿಗಳು, ಮಲಿನರು, ಅಜಾಗ್ರತೆಯವರು, ಸಂಬಳಕ್ಕೆ ತಕ್ಕ ಕೆಲಸ ಮಾಡುವವರೆಂದರೆ ಹೆಚ್ಚಾದೀತೇ?

ಪ್ರಾಣಿಗಳು ಕೂಡಾ ತಂತಮ್ಮ ದೇಹಪೋಷಣೆಗೆ ಅತ್ಯಗತ್ಯವಾದ ಸೊಪ್ಪುಸದೆಗಳು ಯಾವುವೆಂಬದನ್ನು ಪರೀಕ್ಷಿಸಿ ಅವುಗಳನ್ನೇ ಭಕ್ಷಿಸುವವು. ಹಾಗಾದರೆ ಪ್ರಾಣಿಗಳಿಗಿಂತಲೂ ಶ್ರೇಷ್ಠರಾದ ಮಾನವ ಕುಲದವರು ತಮ್ಮ ದೇಹಪೋಷಣೆಗೆ ತಕ್ಕ ಧಾನ್ಯ, ಹಣ್ಣು, ಕಾಯಿಪಲ್ಯ ಯಾವುದೆಂಬುದನ್ನು ತಿಳಕೊಳ್ಳುವದು ಅವಶ್ಯ. ಇದನ್ನು ಅಡಿಗೆ ಭಟ್ಟರು ಕಲಿಯಬೇಕು. ನಾವು ತಕ್ಕೊಳ್ಳುವ ಆಹಾರವು ರುಚಿಯಾಗಿಯೂ ಬೇಗನೇ ಜೀರ್ಣವಾಗುವಂಥಾದ್ದಾಗಿಯೂ ಇರಬೇಕು. "ಅಡಿಗೆಯ ಗುಣ ಸಾರಿನಲ್ಲಿ ನೋಡು, ಮಡಿಗೆಯ ಗುಣ ಫಲದಲ್ಲಿ ನೋಡು" ಎಂಬ ನಾಣ್ಣುಡಿಯುಂಟಷ್ಟೇ. ಆದ್ದರಿಂದ ಪ್ರತಿ ಒಬ್ಬ ಅಡಿಗೆ ಭಟ್ಟನು ರುಚಿ ಮತ್ತು ಜೀರ್ಣ ಎಂಬ ಶಬ್ದಗಳನ್ನು ತನ್ನ ಜ್ಞಾನತಂತುವಿನಲ್ಲಿಟ್ಟುಕೊಂಡು ಅಡಿಗೆ ಮಾಡುವಾಗ ಆಹಾರ ಪದಾರ್ಥದ ರುಚಿಯೂ ಸತ್ವವೂ ಹೋಗದ ಹಾಗೆ ಜಾಗ್ರತೆ ತಕ್ಕೊಳ್ಳಬೇಕು. ಉದಾಹರಣೆಗಾಗಿ:—ಬಟಾಟೆ, ಅಲಸಂದೆ, ತೊಗರಿ ಇತ್ಯಾದಿಗಳನ್ನು ಬೇಯಿಸುವಾಗ ಮಿತಿಮೀರಿ ನೀರು ಹಾಕಿಬಿಟ್ಟರೆ ಉಳಿಕಿ ನೀರು ಚೆಲ್ಲಬೇಕಾಗುವದು. ಈ ಚೆಲ್ಲುವ ನೀರು ಎಂಥಾದ್ದು? ದೇಹ ಪೋಷಣೆಗೆ ಅಗತ್ಯವಾಗಿ ಬೇಕಾದ ಸತ್ವಕೂಡಿದ ನೀರಲ್ಲವೇ? ಇನ್ನು ಅದಕ್ಕೆ ತಕ್ಕ ರುಚಿ ಬರಬೇಕಾದರೆ ಅತಿರೇಕ ಉಪ್ಪು ಕೂಡಿಸಬೇಕಾಗುವದು. ಸತ್ವ ಕೂಡಿದ ನೀರನ್ನು ಬಿಸಾಡಿದರೆ ಉಳಿದಂಥಾದ್ದು ನಿಸತ್ವವಾದ ಕೊಜಂಟಿ. ಹೀಗೆ ನಾವು ದಿನಾಲೂ ಪಾಕಶಾಸ್ತ್ರವನ್ನರಿಯದ ಅಡಿಗೆಭಟ್ಟರಿಂದ ಆಹಾರವನ್ನಲ್ಲ—ಕೊಜಂಟಿಯನ್ನು ತಿನ್ನುತ್ತೇವೆ. ಇಂಥಾ ನಿರಕ್ಷರಕುಕ್ಷಿಗಳಾದ ಅಡಿಗೆಭಟ್ಟರು ಹೆಚ್ಚಾಗಲಿಕ್ಕೆ ಈಗಿನ ಕಾಲದ ಹೆಂಗಸರು ಅಡಿಗೆಯ ಕೆಲಸವನ್ನು ಉಪೇಕ್ಷೆ ಮಾಡುತ್ತಾ ಬರುವದೇ ಕಾರಣವಾಗಿದೆ. ಅಡಿಗೆ ಶಾಸ್ತ್ರವನ್ನು ಅರಿತಿರುವ ಕೆಲವು ಹೆಂಗಸರು ಮಾತ್ರವೇ ಈಗಿನ ಕಾಲದಲ್ಲಿರುವರು. ಹೆಂಗಸರ ಸರಾಸರಿ ಸಂಖ್ಯೆಯನ್ನು ನೋಡಿದ್ದಾದರೆ ಅಡಿಗೆ ಕೆಲಸವನ್ನು ಊರ್ಜಿತಪಡಿಸಬೇಕೆಂಬ ಮನಸ್ಸಿನ ಹೆಂಗಸರು ಬಹು ಕೊಂಚವೇ ಎಂದ್ಹೇಳಬೇಕಾಗಿದೆ. ಅಮೇರಿಕ ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಪಾಕ ವಿಧಿಯನ್ನು ಕಲಿಸುವ ಹೆಮ್ಮಕ್ಕಳ ಶಾಲೆಗಳೇ ಇರುವವು. ಈ ಹೆಮ್ಮಕ್ಕಳು ಅಂಥಾ ಶಾಲೆಗಳಲ್ಲಿ ಸ್ವಯಂಪಾಕ ಮಾಡಿ ೪—೫ ವರುಷಗಳ ವರೆಗೆ ಆ ಶಾಲೆಯಲ್ಲಿಯೇ ಕಲಿತು ನಂತರ ಒಳ್ಳೇ ಸರ್ಟಿಫಿಕೇಟು ಪಡಕೊಂಡು ಶಾಲೆ ಬಿಟ್ಟು ಗೃಹಸ್ಥಾಶ್ರಮವನ್ನು ಸೇರಿಕೊಂಡು ತನ್ನ ಮತ್ತು ತನ್ನ ಗಂಡನ ಮಕ್ಕಳ ದೇಹ ಪೋಷಣೆ ಇತ್ಯಾದಿಗಳನ್ನು ಸ್ವತಃ ಮಾಡುವರು. ನಮ್ಮಲ್ಲಿಯಾದರೋ—ಹೆಮ್ಮಕ್ಕಳ ಶಾಲೆಗಳೇ ಇಲ್ಲ. ಕೆಲವು ಕಡೆಗಳಲ್ಲಿ ಮಾತ್ರ ಪರದೇಶೀಯ ಮಿಶ್ಯನರಿಗಳು ಸ್ಥಾಪಿಸಿದ ಕೆಲವು ಹೆಮ್ಮಕ್ಕಳ ಶಾಲೆಗಳಿವೆ. ಈ ಶಾಲೆಗಳಲ್ಲಿ ಹೆಮ್ಮಕ್ಕಳಿಗೆ ಪಾಕ ಶಾಸ್ತ್ರ ಕಲಿಸುವ ವಿಧಾನವು ಇಲ್ಲ. ಹೆಮ್ಮಕ್ಕಳು ೧೦—೧೨ ವರುಷ ಪ್ರಾಯಕ್ಕೆ ಬರುವ ವರೆಗೆ ಪುಸ್ತಕದ ಗಿಣಿ ಬಾಯಿಪಾಠದಲ್ಲಿ ಕಾಲ ಕಳೆಯುವರು. ತಾಯಿಯೊಡನೆ ಗೃಹಕೃತ್ಯದ ಅಭ್ಯಾಸ ಮಾಡಿ ದೇಹದಲ್ಲಿ ಕಾಂತಿಯನ್ನೂ ಶಕ್ತಿಯನ್ನೂ ಹೊಂದುವ ಈ ಕಾಲವು ಶಾಲೆಯ ಪುಸ್ತಕಗಳ ಅಭ್ಯಾಸದಲ್ಲಿ ಕಳೆದು ಹೋಗುವುದರಿಂದ ಇವರ ದೇಹವು ಬಡಕಲಾಗಿ ಹೋಗುವದು; ನರಸಂಸ್ಥಾನ್ಯವು ಮುದುರಿಕೊಳ್ಳುವದು. ಇನ್ನು ಕೆಲವು ಸ್ತ್ರೀಯರು ಶಾಲಾ ಮಾಸ್ತರರಾಗಿ ನೇಮಿಸಲ್ಪಡುವರು. ಇದರಿಂದೆ ಬಂದಂಥಾ ಫಲವೇನು? ಅಂಥಾ ಉಪಾಧ್ಯಾಯೆಯು ಶಾಲೆಯಲ್ಲಿ ದಿನವೆಲ್ಲಾ ಮಕ್ಕಳಿಗೆ ಐದರಂಬೆ ಕಲಿಸಿಕೊಡುವುದರಲ್ಲಿ ಕೂಗಿಕೂಗಿ ಸಾಯಂಕಾಲ ಆಯಾಸದಿಂದ ಮನೆಗೆ ಬಂದು ಕುರ್ಶಿ ಮೇಲೆಯೋ—ಸೋಫಾ ಮೇಲೆಯೋ ಬಿದ್ದುಕೊಳ್ಳುವರು. ಅಡಿಗೆಯ ಕೆಲಸದಲ್ಲಿ ತಮ್ಮ ಮುದೀ ತಾಯಿಗೆ ನೆರವಾಗುವ ಬದಲಿಗೆ ತಾಯಿಯೇ ಈ ಹೆಮ್ಮಕ್ಕಳ ಜೋಪಾಸನಮಾಡಬೇಕಾಗುವದು. ಇಂಥಾ ಹೆಮ್ಮಕ್ಕಳ ಶಾಲೆಯಲ್ಲಿ ಗಂಡಸರನ್ನೂ ಉಪಾಧ್ಯಾಯರಾಗಿ ನೇಮಿಸಿರುವುದರಿಂದ ನಮ್ಮ ದೇಶೀಯ ಹೆಂಗಸರಿಗಿರುವ ವಿನಯವು ಹೋಗಿ ವಿಲಾತಿಯ ಹೆಂಗಸರ ಮರ್ಜಿಯೇ ಇವರಿಗೂ ಅಂಟಿರುವದು. ದೈವವಶಾತ್ ಇಂಥವರನ್ನು ಯಾರಾದರೂ ವಿವಾಹವಾದ ಪಕ್ಷಕ್ಕೆ ಒಂದು ದಿನ ತೊತ್ತು ಬಾರದಿದ್ದರೆ ಗಂಡನು ಉಪವಾಸ ಬೀಳಬೇಕಾಗುವದು. ತನ್ನ ಯಾ ಮಕ್ಕಳ ಪೋಷಣೆಯು ಇವಳಿಗೆ ಅನ್ಯಥಾ ತಿಳಿಯದು. ಇಂಥವರಿಂದ ಜನಿಸಿದ ಮಕ್ಕಳು ಬಡಕಲಾಗಿಯೇ ಇದ್ದು ಗಾಳಿಗೆ ಅಲ್ಲಾಡುವ ದಂಟಿನಂತಿರುವರು. ಯಾವಾಗಲೂ ಶೀತ, ವಾತದಿಂದ ನರಳುತ್ತಿರುವರು. ದಿನಾವಹಿ ದಾಕ್ತಾರರ ಅವಶ್ಯತೆಯು ಬೇಕಾಗುವದು. ಇದು ಹೆಮ್ಮಕ್ಕಳ ಶಾಲೆಗಳಲ್ಲಿ ಬರೇ ಪುಸ್ತಕದ ಬದನೆಕಾಯಿಗಳನ್ನು ಕಲಿಸಿಕೊಡುವದರ ಫಲವಲ್ಲವೇ? ಹೆಮ್ಮಕ್ಕಳಿಗೂ ತಕ್ಕ ವ್ಯಾಯಾಮವೂ ನರಸಂಸ್ಥಾನ್ಯಯಕ್ಕೆ ಕೆಲಸವೂ ಅಗತ್ಯವೆಂದು ಬೇರೆ ಹೇಳಬೇಕೇ?. ಆದ್ದರಿಂದ ಇಂಥಾ ಶಾಲೆಗಳಲ್ಲಿ ಪಾಕಶಾಸ್ತ್ರ ವಿಧಿ ಮಕ್ಕಳ ಪೋಷಣೆ ಇತ್ಯಾದಿ ಗೃಹಕೃತ್ಯಕ್ಕೆ ಅವಶ್ಯವಾದ ಮಾಹಿತಿಗಳನ್ನು ಕಲಿಸಿಕೊಟ್ಟರೆ ಹೆಮ್ಮಕ್ಕಳ ಶಾಲೆಗಳ ಉದ್ದೇಶವು ಕೈಗೂಡಿದ ಹಾಗಾಗುವದು.

ದೇಹ ಪೋಷಣೆಗೆ ಅತ್ಯಗತ್ಯವಾಗಿ ಬೇಕಾದ ಸತ್ವಗಳು ಇಲ್ಲದ ಆಹಾರವನ್ನು ತಿನ್ನುವುದರಿಂದ ವಿವಿಧ ತರದ ರೋಗಗಳು ಹುಟ್ಟುವವು. ಪ್ರತಿ ಒಂದು ಪಟ್ಟಣದಲ್ಲಿ ರೋಗಿಗಳಿಗೂ, ಕ್ಷೇಮದಲ್ಲಿರುವವರಿಗೂ ಬೇಕಾಗುವ ಪಾಕ ಮಾಡುವ ವಿಧಾನವನ್ನು ಕಲಿಸುವ ಹೆಮ್ಮಕ್ಕಳ ಶಾಲೆಗಳು ಇರುವದು ಅವಶ್ಯ. ಇಂಥಾ ಹೆಮ್ಮಕ್ಕಳ ಶಾಲೆಗಳನ್ನು ಸ್ಥಾಪಿಸಿದ್ದಾದರೆ ದಾಕ್ತಾರರ ಸಂಖ್ಯೆಯೂ, ಔಷಧಿ ಅಂಗಡಿಗಳ ಬೀಲುಗಳೂ, ಮರಣ ಸಂಖ್ಯೆಯೂ ಕಮ್ಮಿಯಾಗುವದು.

ನಮ್ಮ ಮಂಗಳೂರಲ್ಲಿಯೂ ಸರಕಾರದವರು ಒಂದು ಹೆಮ್ಮಕ್ಕಳ ತರ್ಬೀತು ಶಾಲೆಯನ್ನು ಸ್ಥಾಪಿಸುವರೆಂಬ ವದಂತಿ ಇದೆ. ಈ ಶಾಲೆಯಲ್ಲಾದರೂ ಹೆಮ್ಮಕ್ಕಳಿಗೆ ಇಂಗ್ಲಿಷ್ ಭಾಷೆ ಕಲಿಸಿ ಶಾಲಾ ಉಪಾಧ್ಯಾಯೆಯರಾಗಿ ಮಾಡುವ ಒಂದೇ ಉದ್ದೇಶವನ್ನು ಇಟ್ಟುಕೊಳ್ಳದೆ ಪಾಕಶಾಸ್ತ್ರ ಇತ್ಯಾದಿ ಮನೆವಾರ್ತೆಯ ಕೆಲಸದಲ್ಲಿಯೂ ತರ್ಬೀತು ಮಾಡಿ ಅವರನ್ನು ಗೃಹಸ್ಥಾಶ್ರಮದ ಮಾತೆಯರಾಗಿ ಮಾರ್ಪಡಿಸುವದು ವಿಹಿತವು. ಇಲ್ಲವಾದರೆ ಹೆಮ್ಮಕ್ಕಳಲ್ಲಿ ವಿಲಾಯತಿ ಹೆಂಗಸರ ಮರ್ಜಿಯೇ ದಿನೇ ದಿನೇ ಅಭಿವೃದ್ಧಿಯಾಗಿ ಗೃಹಕೃತ್ಯದ ಕೆಲಸಕ್ಕೆ ಪ್ರತ್ಯೇಕ ವಿದ್ಯಾಹೀನರಾದ ಅಡಿಗೆಭಟ್ಟರನ್ನು ನೇಮಿಸುವ ಅಗತ್ಯವು ಇನ್ನಷ್ಟು ಹೆಚ್ಚಾಗುವದು. ಗೃಹಸ್ಥಾಶ್ರಮವು ಸಂತೋಷಕರವಾಗಿ ಅಲ್ಲ; ದುಃಖಕರವಾಗಿ ಪರಿಣಮಿಸುವದು. ಜನಿಸುವ ಮಕ್ಕಳು ನಿಸ್ತೇಜಕರಾಗುವರು. ದೇಶವು ಅಭ್ಯುದಯವನ್ನು ಹೊಂದದು.

S. A.

ಪೇಷ್ವೇ ನಾರಾಯಣ ರಾವ್.

(ಕಳೆದ ಸಂಚಿಕೆಯಿಂದ ಮುಂದರಿಸಿದುದು.)

ಆಗ ಅವರು ನಾನಾಸಾಹೇಬು ಅಂದರೆ ಬಾಲಾಜೀಬಾಜೀರಾಯನ ಸಂತತಿಯಲ್ಲಿ ಯಾರಾದರೊಬ್ಬರು ಪೇಷ್ವೆಯಾದ ಹೊರತು ತಾವು ರಾಷ್ಟ್ರಿಯ ವ್ಯವಹಾರಗಳಲ್ಲಿ ಸಂಬಂಧಿಸುವುದಿಲ್ಲವೆಂತಲೂ, ರಘೋಬನನ್ನು ಮತ್ತು ಆತನ ಸಂತತಿಯವರನ್ನು ಮನ್ನಿಸಕೂಡದೆಂತಲೂ ನಿಶ್ಚಯಮಾಡಿಕೊಂಡರು. ಈ ಮಂತ್ರಿಗಳು ನದೀ ತೀರದಲ್ಲಿ ಮಾಡಿದ ಈ ಸಭೆಗೆ ಮಹಾರಾಷ್ಟ್ರ ಇತಿಹಾಸದಲ್ಲಿ ಭಾರಾಭಾಯಿಚಿ ಮಸ್ಲಟ್ ಎಂದರೆ ಹನ್ನೆರಡು ಜನ ಸೋದರರ ಕಾರ್ಯಾಲೋಚನೆ ಸಭೆ ಎಂದು ಹೆಸರು.

ನಾರಾಯಣರಾಯನ ಮರಣಾನಂತರ ನಡೆದ ವೃತ್ತಾಂತವು ನಮ್ಮ ಪ್ರಕೃತ ವಿಷಯಕ್ಕೆ ಅನಾವಶ್ಯಕವಾದುದರಿಂದ ಆ ಚರಿತ್ರೆಯನ್ನು ನಾವು ಈ ಸಂದರ್ಭದಲ್ಲಿ ತಿಳಿದುಕೊಳ್ಳಲು ಪ್ರಯತ್ನಿಸೆವು. ತುಲ್ಯಾಪವಾರು, ಸುಮೇರುಸಿಂಗು ಸುಬೇದಾರು, ಮಹಮ್ಮದ್ ಇಸೂಫನೂ ಅವರಿಗೆ ಸಹಾಯಕರಾದ ನಿರ್ಭಾಗ್ಯರೂ ತಮ್ಮ ವಿಷಯದಲ್ಲಿ ನಿರಪರಾಧಿಯಾದ ತಮ್ಮ ಧೊರೆಯನ್ನು ಸಂಹರಿಸಿದ್ದಲ್ಲದೆ ತಾವು ಮಾಡಿದ ರಾಜವಧೆಯಿಂದ ಮಹಾರಾಷ್ಟ್ರ ಸಾಮ್ರಾಜ್ಯವನ್ನು ಕಲ್ಲೋಲ ಸ್ಥಿತಿಗೆ ತಂದು ಮುಂದೆ ಬೇರು ಹರಿಯುತ್ತಿದ್ದ ಭಾರತೀಯ ಸ್ವರಾಜ್ಯ ಪ್ರತಿಷ್ಠಾಪಣೆಯನ್ನು ಪೆಳ್ಳಗಿಸಿಹಾಕಿ ದೇಶಕ್ಕೆ ಅಮಿತವಾದ ಕೇಡನ್ನು ತಂದರು. ದೂರಾಲೋಚನೆಯಿಲ್ಲದೆ ಉದ್ರೇಕಾತಿಶಯದಿಂದ ಒಂದೇ ನಿಮಿಷದಲ್ಲಿ ಅವರು ಮಾಡಿದ ಆ ಘೋರ ಕೃತ್ಯದಿಂದ ಮುಂದೆ ಮುಂದೆ ಅವರ ಜನ್ಮಭೂಮಿಗೂ ಅವರ ದೇಶ ಮಾತೆಗೂ ಎಂತಹ ಮುಪ್ಪು ಸಂಭವಿಸಬಹುದೆಂಬುದನ್ನು ಅವರು ಸ್ವಲ್ಪ ಮಾತ್ರವಾದರೂ ಗ್ರಹಿಸಲಾರದೆ ಹೋದರು. ಮಹಾರಾಷ್ಟ್ರ ಇತಿಹಾಸವನ್ನೋದಿದವರೆಲ್ಲರಿಗೂ ನಾರಾಯಣ ರಾಯನ ಮರಣಾನಂತರ ಉಂಟಾದ ಮಹಾರಾಷ್ಟ್ರ ಯುದ್ಧಗಳೂ ಅದರ ನಿಮಿತ್ತ ಮಹಾರಾಷ್ಟ್ರ ಶಕ್ತಿಕ್ಷೀಣತೆಯೂ ಈ ಪಾಪ ಕಾರ್ಯದ ಫಲವೆಂದು ತೋಚದಿರಲಾರದು.

ಈ ಕಥಾ ವಿಧಾನವನ್ನು ಕುರಿತು ಮೂಲಪತ್ರ (ಅಸಲು ದಸ್ತಾವೇಜು)ಗಳನ್ನು ಪರಿಶೀಲಿಸೋಣ. ನಾರಾಯಣರಾಯನ ಹತ್ಯಕ್ಕೆ ಹೇತುವಾದ ದುರಾಲೋಚನೆಯಲ್ಲಿ ರಘುನಾಥರಾಯನು ಪೂರ್ಣವಾಗಿ ಸೇರಿದ್ದನೆಂಬ ವಿಷಯವು ನಿಸ್ಸಂಶಯವಾದುದು. ಪ್ರಜೆಗಳ ಮನಸ್ಸಿನಲ್ಲಿ ರಘುನಾಥ ರಾವು ನಾರಾಯಣ ರಾಯನ ಕೊಲೆಗೆ ಮೂಲ ಕಾರಣನಾದ ಹಾಗೆ ಸಂದಿಗ್ಧವಾದ ಅನುಮಾನವೊಂದುನಾಟಿಕೊಂಡಿದ್ದರೂ ನಿಷ್ಪಕ್ಷಪಾತ ಬುದ್ಧಿಯುಳ್ಳವನೂ ಋಜುಮನಸ್ಕನೂ ಆದ ರಾಮಶಾಸ್ತ್ರಿಯಂತವನು ಕೂಡ ರಘುನಾಥ ರಾಯನು ಈ ಕಾರ್ಯವನ್ನು ಮಾಡಿದಂತೆ ಸ್ಥಾಪಿಸ ತಕ್ಕ ಸಾಕ್ಷ್ಯವಿಲ್ಲದ್ದರಿಂದ ಆತನು ಭ್ರಾತೃ ಜನ ಅನಂತರ ಆತನನ್ನು ಪೇಷ್ವೆಯ ಪದವಿಯಲ್ಲಿಡಕೂಡದೆಂದು ಅಡ್ಡಿಹೇಳದೆ ಹೋದನು. ಆದರೂ ಧರ್ಮಾಭಿಲಾಷಿಯಾದ ಈ ಶಾಸ್ತ್ರಿಯು ಈ ವಿವರವನ್ನು ಕುರಿತು ಇನ್ನೂ ವಿವರವಾಗಿ ಪರಿಶೀಲಿಸುತ್ತ ಹೋದ ಹಾಗೆಲ್ಲ ರಘುನಾಥರಾಯನ ಮೇಲೆ ತೋರಿಬಂದ ಅನುಮಾನವು ನಿಶ್ಚಿತವಾಗಿ ಆತನು ಈ ಕಾರ್ಯವನ್ನು ಮಾಡಿದಂತೆ ಸಂಶಯಚ್ಛೇದಕಾಧಾರಗಳು ಸಿಕ್ಕಿದುವು. ತಕ್ಷಣವೇ ರಾಮಶಾಸ್ತ್ರಿಯು ರಘುನಾಥ ರಾಯನೊಂದಿಗೆ ಕಲೆತು ಮಾತನಾಡಿದನು. ಇವರ ಪ್ರಸಂಗವನ್ನು ಕುರಿತು ಗ್ರಾಂಟ್ ಡಫ್ ತನ್ನ ಮಹಾರಾಷ್ಟ್ರ ಇತಿಹಾಸದಲ್ಲಿ ಈ ರೀತಿ ಬರದಿರುವನು. ವಧೆ ನಡೆದ ಆರು ವಾರಗಳ ತರುವಾಯ ರಘುನಾಥ ರಾಯನ ಮೇಲೆ ತಕ್ಕ ಸಾಕ್ಷ್ಯವು ಸಿಕ್ಕಿದುದರಿಂದ ಶಾಸ್ತ್ರಿಯು ಅವನ ಸಮೀಪಕ್ಕೆ ಹೋಗಿ ನೀನು ನಾರಾಯಣ ರಾವನ್ನು ವಧಿಸುವುದಕ್ಕೆ ಸುಮೇರುಸಿಂಗುವಿಗೂ ಮಹಮ್ಮದ್ ಇಸೂಫನಿಗೂ ಅಧಿಕಾರವನ್ನು ಕೊಟ್ಟಿದ್ದೆ ಎಂದು ಆತನ ಮೇಲೆ ದೋಷವನ್ನು ಹೊರಿಸಿದನು. ತಾನು ನಾರಾಯಣ ರಾವನ್ನು ಬಂಧಿಸಿರೆಂದು ಲಿಖಿತರೂಪವಾದ ಅನುಜ್ಞೆಯನ್ನಿತ್ತೆನೆಂತಲೂ, ಕೊಲ್ಲುವುದಕ್ಕೆ ತಾನು ಅಪ್ಪಣೆ ಕೊಟ್ಟಿರಲಿಲ್ಲವೆಂತಲೂ ರಘುನಾಥ ರಾವು ಸಮಾಧಾನ ಹೇಳಿದನು. ಈ ಸಮಾಧಾನವು ಪೂರ್ಣವಾಗಿ ನಿಜವಾಗಿರುವಂತೆ ಸರ್ವ ಸಾಧಾರಣವಾಗಿ ಊಹಿಸಲ್ಪಡುವುದು. ಏಕೆಂದರೆ ರಘುನಾಥ ರಾಯನು ಬರೆದ ಅಸಲ್ ಕಾಗದವು ರಾಮಶಾಸ್ತ್ರಿಗೆ ದೊರಕಿದಾಗ ಅದರಲ್ಲಿ ಧುರಾವೇ ಅಂದರೆ ಹಿಡಿದುಕೋ ಎಂಬ ಪದವು ಮರಾವೇ ಅಂದರೆ ಕೊಂದು ಹಾಕು ಎಂದು ತಿದ್ದಲ್ಪಟ್ಟಿತ್ತು. ಈ ಕಾರ್ಯವನ್ನು ಅತಿ ದುಷ್ಟೆಯಾದ ಆನಂದೀಬಾಯಿ ಮಾಡಿದಳೆಂದು ಪ್ರಜೆಗಳು ತಿಳಿಯುತ್ತಾರೆ. ತನ್ನ ಪ್ರಾಣವನ್ನಾದರೂ ತೊರೆದು ಆಪತ್ಕಾಲದಲ್ಲಿ ನಾರಾಯಣರಾಯನ ಪ್ರಾಣವನ್ನು ಸಂರಕ್ಷಿಸುವುದಕ್ಕೆ ಪ್ರಯತ್ನಿಸದೆ ತಟಸ್ಥನಾಗಿ ಸುಮ್ಮನಿದ್ದುದರಿಂದ ರಘುನಾಥ ರಾಯನಿಗೆ ತಿಳಿಯದೆ ಈ ವಧೆ ನಡೆದಿರಲಿಕ್ಕಿಲ್ಲವೆಂಬ ಅನುಮಾನವು ಪ್ರಬಲವಾಗಿದ್ದರೂ ಮಹಾರಾಷ್ಟ್ರ ದೇಶಸ್ಥರು ಒಟ್ಟಿನ ಮೇಲೆ ರಘುನಾಥ ರಾಯನಿಗೆ ತನ್ನ ಅಣ್ಣನ ಮಗನನ್ನು ಕೊಲ್ಲಿಸಬೇಕೆಂಬ ಉದ್ದೇಶವಿರಲಿಲ್ಲವೆಂತಲೂ, ತನ್ನ ಅವಮಾನಕ್ಕೆ ಕುಪಿತನಾಗಿ ತನ್ನ ಹೆಂಡತಿಯ ಅತಿಸಾಹಸಾಲೋಚನೆಯಿಂದ ವಂಚಿಸಲ್ಪಟ್ಟನೆಂತಲೂ ನಂಬುತ್ತಿರುವರು. ಇನ್ನು ತುಲ್ಯಾಪವಾರನೂ ಕೂಡ ಈ ದುರ್ಮಾರ್ಗಗಳ ವೈರ ಸಾಧನದ ಕ್ರೋಧ ಬುದ್ಧಿಯಿಂದ ಈ ಕಾರ್ಯಕ್ಕೆ ಹುರಿಗೊಳಿಸಲ್ಪಟ್ಟನೆಂತಲೇ ನಾರಾಯಣ ರಾಯನ ವಧೆಯಲ್ಲಿ ತನಗೆ ಇಷ್ಟು ಮಾತ್ರವೇ ಸಂಬಂಧವಿದೆ ಎಂದು ಹೇಳಿ ಅದಕ್ಕೇನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ರಘುನಾಥರಾವ್ ರಾಮಶಾಸ್ತ್ರಿಯನ್ನು ಕೇಳಿದನು. ಅದಕ್ಕೆ ಆ ನಿರ್ಭಯ ಹೃದಯನೂ, ಸನ್ಮಾರ್ಗವರ್ತಿಯೂ ಆದ ಶಾಸ್ತ್ರಿಯು ನಿನ್ನ ಪ್ರಾಣವನ್ನು ತ್ಯಜಿಸುವುದೇ ಅದಕ್ಕೆ ಪ್ರಾಯಶ್ಚಿತ್ತವು. ನೀನು ಪುನೀತನಾಗಿ ಜೀವಿಸುವದಸಾಧ್ಯವು. ನಿನಗಾಗಲಿ ನಿನ್ನ ರಾಜ್ಯಕ್ಕಾಗಲೀ ಅಭಿವೃದ್ಧಿಯುಂಟಾಗಲಾರದು. ನೀನು ಈ ಪರಿಪಾಲನಾ ಭಾರವನ್ನು ವಹಿಸಿರುವ ವರೆಗೆ ನಾನು ನಿನ್ನ ಓಲಗವನ್ನು ಅಂಗೀಕರಿಸದೆ ಇರುವುದಲ್ಲದೆ ಈ ಪೂನಾ ಪಟ್ಟಣದಲ್ಲಿ ಕಾಲಿಡಲಾರೆನು ಎಂದು ಹೇಳಿದನು. ರಾಮ ಶಾಸ್ತ್ರಿಯು ತನ್ನ ಮಾತನ್ನು ಸಲ್ಲಿಸಿಕೊಂಡು ವಾಯೊ ಕ್ಷೇತ್ರದ ಸಮೀಪದಲ್ಲಿ ಒಂದು ನಿರ್ಮಾನುಷ ಪ್ರದೇಶಕ್ಕೆ ಹೊರಟು ಹೋದನು. ರಘುನಾಥ ರಾಯನು ಮತ್ತೊಂದು ಸಂದರ್ಭದಲ್ಲಿ ಅಂದರೆ ಎರಡನೇ ಸಲ ತನ್ನ ತಪ್ಪನ್ನು ತಾನೇ ಒಪ್ಪಿಕೊಂಡನು. ಈ ಒಪ್ಪಿಗೆಯು ಇದು ವರೆಗೆ ಪ್ರಚುರವಾದ ಯಾವ ಗ್ರಂಥದಲ್ಲಿಯೂ ಬರೆಯಲ್ಪಟ್ಟಿರುವುದಿಲ್ಲ. ರಘುನಾಥ ರಾಯನು ಈ ವಿಧವಾಗಿ ತನ್ನ ತಪ್ಪನ್ನು ಒಪ್ಪಿಕೊಂಡು ಬರೆದ ಅಸಲು ಲೇಖನವು ಈಚೀಚೆಗೆ ದೊರಕಿತು. ಅದನ್ನು ಈ ಕೆಳಗೆ ಬರೆದಿರುವೆವು. ೧೭೭೩ರಲ್ಲಿ ನಾರಾಯಣ ರಾಯನ ತಾಯಿಯಾದ ಗೋಪಿಕಾಬಾಯಿಯನ್ನು ರಘುನಾಥರಾಯನು ನೋಡಲಪೇಕ್ಷಿಸಿದನು. ಆಕೆಯು ತನ್ನ ಮಗನ ಅನ್ಯಾಯ ಮರಣಕ್ಕೆ ಆತನು ತಕ್ಕ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವ ವರೆಗೂ ಆತನ ಮುಖವನ್ನು ನೋಡವುದಿಲ್ಲವೆಂದು ಹೇಳಿ ಕಳುಹಿಸಿದಳು. ಆ ಸಂದರ್ಭದಲ್ಲಿ ರಘುನಾಥರಾವ್ ಗೋಪಿಕಾಬಾಯಿಗೆ ಇದರದಿ ಕಂಡಂತೆ ಒಂದು ಪತ್ರವನ್ನು ಬರೆದಿರುವನು. ಅದರಲ್ಲಿ ಹೀಗೆ ಬರೆದಿದ್ದಾನೆ—ನನ್ನ ಮನಸ್ಸಿನಲ್ಲಿರುವುದನ್ನೆಲ್ಲಾ ಸ್ಪಷ್ಟವಾಗಿ ಹೇಳಬೇಕೆಂದು ಈಗ ನಿಶ್ಚಯಿಸಿಕೊಂಡಿದ್ದೇನೆ. ಆದುದರಿಂದ ನಾನು ನಿಮ್ಮಲ್ಲಿ ಯಾವುದನ್ನೂ ಮರೆಮಾಚಲಾರೆನು. ಈ ಹತ್ಯವನ್ನು ಮಾಡಿದ ಸಂಶಪ್ತಕರೂ ನಾನೂ ಕೂಡಿ ನಾರಾಯಣ ರಾಯನನ್ನು ಹಿಡಿಯಬೇಕೆಂದು ನಿಶ್ಚಯಮಾಡಿಕೊಂಡೆವು. ಆ ತರುಣದಲ್ಲಿ ಅವರು ನನ್ನೊಡನೆ ಹೀಗೆ ಹೇಳಿದರು. ನಾರಾಯಣ ರಾಯನನ್ನು ಹಿಡಿದುಕೊಳ್ಳುವ ಪ್ರಯತ್ನದಲ್ಲಿ ಜರುಗಲಿಕ್ಕಿರುವ ಗದ್ದಲದಲ್ಲಿ ಆತನು ಸತ್ತು ಹೋದರೆ ನೀವು ನಮ್ಮನ್ನು ನಿಂದಿಸಲಾಗದು. ಹೀಗೆ ಹೇಳಿ ಅವರು ಆ ಹೊಡೆದಾಟದಲ್ಲಿ ಪೇಷ್ವೆಯು ಹತನಾದುದಾದರೆ ಅವರು ಉತ್ತರವಾದಿಗಳಾಗಿ ಎಣಿಸಲ್ಪಡಕೂಡದೆಂದು ನನ್ನಿಂದ ವಾಗ್ದಾನ ಪಡೆದುಕೊಂಡು ಅನಂತರ ಅವರು ಮಾಡಬೇಕೆಂದು ಯೋಚಿಸಿದ ಕೃತ್ಯವನ್ನು ಆರಂಭಿಸಿದರು. ತರುವಾಯ ನಾರಾಯಣ ರಾಯನು ಆಪತ್ಸಮಯದಲ್ಲಿ ಓಡಿ ಬಂದು ನನ್ನನ್ನು ತಬ್ಬಿಕೊಂಡ ಕೂಡಲೇ ನಾನು ಗಾಬರಿ ಬಿದ್ದು ಮುಂದು ತೋರದವನಾದೆನು. ಅವನನ್ನು ರಕ್ಷಿಸಲಿಕ್ಕೆ ನನಗೆ ಕಾಲವಾಗಲಿ ಅವಕಾಶವಾಗಲಿ, ಇಲ್ಲದೆ ಹೋಯಿತು. ನಾನು ಆತನನ್ನು ನನ್ನ ಭುಜದ ಪರಿರಕ್ಷಿತನನ್ನಾಗಿ ಮಾಡಿ ಎರಡು ಕಡೆಗಳಿಂದಲೂ ಬರುತ್ತಿದ್ದ ಕತ್ತಿಯ ಪೆಟ್ಟುಗಳು ಆತನಿಗೆ ತಗಲದಂತೆ ಅಡ್ಡಗಿಸಲು ಪ್ರಯತ್ನಿಸಿದೆನಾದರೂ ಆ ವಧಕರು ಸ್ವಾತ್ಮರಕ್ಷಣೆಗಾಗಿ ಆತನನ್ನು ಹೊಡೆದರು. ಮೊದಲನೆಯ ಪೆಟ್ಟೇ ದುರ್ಭರವಾಗಿತ್ತು. ಅನಂತರ ನಡೆದ ವಿಷಯಗಳೆಲ್ಲವೂ ನಿಮಗೆಲ್ಲರಿಗೂ ತಿಳಿದೇ ಇರುವುವು. ಅದು ಕಾರಣ ಮೊದಲು ಆ ಸಂಶಪ್ತಕರಿಗೂ ನನಗೂ ಜರುಗಿದ ಆಲೋಚನೆಯ ಸಮಯದಲ್ಲಿ ನಾರಾಯಣ ರಾಯನನ್ನು ಹಿಡುದುಕೊಳ್ಳುವುದರಲ್ಲಿ ಪ್ರಮಾದವಶದಿಂದ ಆತನು ಹತನಾದರೆ ಅದಕೆ ಅವರು ನಿಂದಿತರಾಗಲಾರರೆಂದು ನಾನು ಅಂಗೀಕರಿಸಿದ್ದು ಮಾತ್ರವೇ ನನ್ನ ಮೇಲಣ ದೋಷವು. ತದ್ದೋಷ ಪರಿಹಾರಾರ್ಥವಾಗಿ ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾಗಿರುವುದು. ಅಷ್ಟಕ್ಕೆ ಮಾತ್ರ ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳುವೆನು. ಈ ವಧೆಯ ರೀತಿಯನ್ನು ತಿಳಿಸುವ ಸರಿಯಾದ ಎರಡು ಮೂಲಾಧಾರಗಳು ಯಾವುದೆಂದರೆ:—ವಧಾನಂತರ ಮಹಮ್ಮದ್ ಇಸೂಪ ತುಲ್ಯಾಜೇಫವಾರು ಇವರುಗಳಿಂದ ತೆಗೆದುಕೊಳ್ಳಲ್ಪಟ್ಟ ವಾಜ್ಮೂಲವನ್ನು ಕುರಿತು ಅಸಲು ಪತ್ರಗಳಾಗಿರುತ್ತವೆ. ರಾಜದ್ರೋಹದಲ್ಲಿ ಉಳಿದವರಿಗಿಂತ ಈ ಮಹಮ್ಮದ್ ಇಸೂಫನೂ ತುಲ್ಯಾಬೇಫಾರನೂ ಹೆಚ್ಚಾದ ಸಂಬಂಧವನ್ನು ಪಡೆದಿದ್ದ ಮುಖ್ಯಸ್ಥರಾಗಿದ್ದರೆಂದು ಇದು ವರೆಗೆ ನಾವು ತಿಳಿದುಕೊಂಡಿರುವೆವು. ಈ ಮಸಲತ್ತಿನಲ್ಲಿ ಸೇರಿದ್ದ ಉಳಿದವರ ಉದ್ದೇಶವು ನಾರಾಯಣ ರಾಯನನ್ನು ವಧಿಸುವುದಾಗಿರಲಿಲ್ಲ. ಅಂತಹ ಘೋರ ಕೃತ್ಯವನ್ನು ಮಾಡುವುದಕ್ಕೆ ಅಗತ್ಯವಿಲ್ಲದೆ ಹೋದರೂ, ಮೊದಲಿನ ಉದ್ದೇಶವನ್ನು ಅತಿಕ್ರಮಿಸಿ ಈ ಕಾರ್ಯವನ್ನು ಮಾಡುವುದರಲ್ಲಿ ಇವರಿಬ್ಬರೂ ಪ್ರಾಮುಖರು. ಕೊನೆ ಕೊನೆಗೆ ಅವರಿಬ್ಬರೂ ತಮ್ಮ ತಪ್ಪಿತವನ್ನು ಸವಿಸ್ತಾರವಾಗಿ ಒಪ್ಪಿಕೊಂಡರು. ಆಗ ಅವರು ಕೇಳಿದ ಒಪ್ಪಿಗೆಯ ಕೈಫಿಯತ್ತುಗಳು ಈ ಕೆಳಗೆ ಉದಾಹರಿಸಲ್ಪಟ್ಟ ಪತ್ರಗಳಲ್ಲಿ ಅಡಗಿವೆ. "ನಾನು ತಿಳಿಸಬೇಕಾದ ಸಮಾಚಾರವಿದು. ಮಹಮ್ಮದ್ ಇಸೂಫನು ಹಿಡಿದುಕೊಳ್ಳಲ್ಪಟ್ಟು ಇಲ್ಲಿಗೆ ತರಲ್ಪಟ್ಟನು. ಅತನನ್ನು ಬೇಡಿಕೊಂಡು ರಹಸ್ಯವಾಗಿ ಕೇಳಿಯೂ ಶ್ರೀಮಂತ ನಾರಾಯಣನ ಕೊಲೆಯಲ್ಲಿ ಸೇರಿದ್ದವರು ಯಾರೆಂಬುದನ್ನು ತಿಳಿದುಕೊಂಡು ಆ ಸಮಾಚಾರವನ್ನು ನಿನಗೆ ರಹಸ್ಯವಾಗಿ ತಿಳಿಸಬೇಕೆಂದು ನಿನ್ನ ಅಪ್ಪಣೆಯಾಗಿರುತ್ತದೆ. ಕೇಶವ ಪಂತನಿಗೆ ವರ್ತಮಾನವನ್ನು ಕಳುಹಿಸಿ ಕರೆಯಿಸಿಕೊಂಡು ಆತನ ಸಂಗಡ ಮಹಮ್ಮದ್ ಇಸೂಫನ್ನು ಒಳ್ಳೆ ಮಾತುಗಳಿಂದ ವಶಮಾಡಿಕೊಂಡು ಆತನ ಮೂಲಕ ನಿಜ ವರ್ತಮಾನವನ್ನು ತಿಳಿದುಕೊಳ್ಳಬೇಕೆಂದು ಹೇಳಿಸಿದೆನು. ಕೂಡಲೇ ಕೇಶವ ಪಂತನು ಮಹಮ್ಮದ್ ಇಸೂಫನನ್ನು ಕೂಡಿಕೊಂಡು ಕೇಳಿದನು. ಕೇಶವ ಪಂತನು ಮಹಮ್ಮದ್ ಇಸೂಫನನ್ನು ಶಿಕ್ಷಿಸಕೂಡದೆಂದು ಏರ್ಪಾಡು ನಡೆದ ಬಳಿಕ ಮೊದಲನೆಯ ಏರ್ಪಾಡು ರಘುನಾಥರಾಯನನ್ನು ಸೆರೆಯಿಂದ ಬಿಡುಗಡೆ ಮಾಡಿ ನಾರಾಯಣ ರಾಯನನ್ನು ಸೆರೆಯಲ್ಲಿಡುವುದು ಮಾತ್ರವೇ" ಎಂದು ಹೇಳಿದನು. ಮೊಟ್ಟಮೊದಲು ಈ ಕೃತ್ಯವನ್ನು ಆರಂಭಿಸಿದವರು ಶಿವಾಜಿರಾಯನೂ, ಇನ್ನು ಕೆಲವರೂ ಆಗಿದ್ದರೆಂದು ಹೇಳಿದನು. ನಾನಾ ಪರ್ಣವೀಸು, ತ್ರಿಯಂಬಕ ಜೀಮಾಮಾ, ಹರಿಪಂತು ಇವರು ಮಾತ್ರ ಈ ವಿಷಯದಲ್ಲಿ ಏನೂ ಕಾಣರು. ಉಳಿದವರಿಗೆಲ್ಲ ತಿಳಿಯುವುದು. ಶಿವಾಜಿರಾಯನು ವೈರೋ ಒಂದಾದ ಕಡೆಯಿಂದ ೭೦೦ ವಿಕ್ಲಿಗಳ (ಚಿನ್ನದ ನಾಣ್ಯಗಳು)ನ್ನು ತಂದು ನನಗೆ ಕೊಟ್ಟನು. ಒಂದು ಸಂದರ್ಭದಲ್ಲಿ ಸದಾಶಿವರಾವ್‌ಚಂದ್ರನ ಕಡೆಯಿಂದ ೧೫೦೦ ಮೊಹರಿಗಳನ್ನು ತೆಗೆದುಕೊಂಡು ಮಲೋಜಿ ಘೋರ್ಪಡೆಯು ನನ್ನ ಮನೆಗೆ ಬಂದನು. ಆತನು ಹೇಳಿದ ಮಾತುಗಳಿಂದ ದಾದಾ ಸಾಹೇಬನನ್ನು ಸೆರೆಯಿಂದ ಬಿಡಿಸುವುದೇ ಕರ್ತವ್ಯಾಂಶವಾಗಿದ್ದಿತು. ಇತರ ದೊಡ್ಡ ಮನುಷ್ಯರು ಕೂಡಾ ನನ್ನ ಮನೆಗೆ ಬರುತ್ತಿದ್ದರು. ಆನಂದೀಬಾಯಿಯ ಪರಿಚಾರಿಕೆಯರೂ ಬರುತ್ತಿದ್ದರು, ಮೇಲೆ ಹೇಳಿದ ಇಬ್ಬರಿಂದ ನಾನು ಹಣವನ್ನು ತೆಗೆದುಕೊಂಡೆನು. ಇದೇ ಪ್ರಕಾರ ನನಗೆ ಇತರರಿಂದಲೂ ಕೂಡಾ ಹಣ ಬರುತ್ತಿದ್ದಿತು. ಆದರೆ ಆ ಮೊಬಲಗನ್ನು ಕೊಟ್ಟವರು ನನಗೆ ಸ್ವತಃ ತಂದು ಕೊಟ್ಟವರಲ್ಲ. ಅವರನ್ನು ನಾನು ಕಾಣೆನು. ಒಜಾಬಾ ಎಂಬುವನು ನನ್ನ ಹತ್ತಿರಕ್ಕೆ ಬರಲಿಲ್ಲ (ಈ ಒಜಾಬಾ ವಿಷಯದಲ್ಲಿ ಕೇಶವ ಪಂತು ಒತ್ತಿ ಒತ್ತಿ ಕೇಳಿದರೂ, ಬರಲಿಲ್ಲವೆಂಬದಾಗಿ ಹೇಳಿದನು.)

ಮುಂದರಿಯುವುದು.

ಕಾಫಿ ಹೊಟೇಲುಗಳ ಕುಡಿಯುವ ಪಾತ್ರೆಗಳು.

ಸರ್ವಸಾಧಾರಣವಾಗಿ ಹೊಟೇಲುಗಳಲ್ಲಿ ಸರ್ವರಿಗೂ ಒಂದೇ ಪಾತ್ರೆಯಲ್ಲಿ ಅಂದರೆ ಒಬ್ಬನು ತಿಂದ ಯಾ ಕುಡಿದ ನಂತರ ಅದೇ ಪಾತ್ರೆಯನ್ನು ತೊಳದು ಮತ್ತೊಬ್ಬನಿಗೆ ತಿನ್ನಲೂ ಕುಡಿಯಲೂ ಕೊಡುವರು. ಇಂಥಾ ಪಾತ್ರೆಗಳಲ್ಲಿ ಕುಡಿಯುವುದೇ ಆಯಾ ತರದ ರೋಗಗಳು ಪ್ರಬಲವಾಗಲಿಕ್ಕೆ ಮೂಲಕಾರಣವೆಂದು ಈಗೀಗ ವೈದ್ಯರು ಅಭಿಪ್ರಾಯಪಟ್ಟಿರುವರು. ಒಂದು ಹೊಟೇಲಿಗೆ ಹೋಗಿ ಅಲ್ಲಿಯ ಪಾತ್ರೆಗಳ ವೈಲಿಗೆಯನ್ನೂ, ಮುಟ್ಟಿದರೆ ಕೈಗೆ ತಾಗುವ ಅಂಟುದ್ರವವನ್ನೂ ಪರಿಶೀಲಿಸಿ ನೋಡಿದ್ದಾದರೆ ವೈದ್ಯರಿಗೆ ಮಾತ್ರವೇ ಅಲ್ಲ; ನಮಗೂ ಇಂಥಾ ಪಾತ್ರೆಗಳಲ್ಲಿ ಕುಡಿಯುವುದು ಉಚಿತವಲ್ಲ ಎಂಬದಾಗಿ ತೋರಿಬರುವದು. ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯೊರ್ಕ್ ಪಟ್ಟಣದಲ್ಲಿಯೂ ರೋಡೆ ಎಂಬ ದ್ವೀಪದಲ್ಲಿಯೂ ಹೊಟೇಲುಗಳ ಕುಡಿಯುವ ಪಾತ್ರೆಗಳಲ್ಲಿ ಕುಡಿಯಲೇಬಾರದೆಂಬ ನಿಯಮವನ್ನು ಸರಕಾರದವರೇ ಜಾರಿಗೆ ತಂದಿರುವರು. ಅಲ್ಲಿಯ ಹೊಟೇಲುಗಳಲ್ಲಿ ಒಂದು ತರದ ಜಾಪಾನ್ ಕಾಗದದ ಪಾತ್ರೆಯನ್ನು ಪ್ರಯೋಗಿಸುವರು. ಒಬ್ಬನು ಇಂಥಾ ಪಾತ್ರೆಯಲ್ಲಿ ಒಂದು ಸಲ ಕುಡಿದ ಮೇಲೆ ಆ ಪಾತ್ರೆಯನ್ನು ಬಿಸಾಡಿಬಿಡುವರು. ಹೊಟೇಲುಗಳ ಪಾತ್ರೆಗಳಲ್ಲಿ ಕುಡಿಯುವುದು ಬಿಟ್ಟ ನಂತರ ಅಲ್ಲಿ ಮರಣ ಸಂಖ್ಯೆಯು ಕಮ್ಮಿಯಾಯಿತೆಂಬದಾಗಿ ತಿಳಿದು ಬರುತ್ತದೆ. ಕಲ್ಕತ್ತೆಯ ಕೆಲವು ದೊಡ್ಡ ದೊಡ್ಡ ಹೊಟೇಲುಗಳಲ್ಲಿಯೂ ಇದೇ ತರದ ಜಾಪಾನ್ ಕಾಗದವನ್ನು ಪ್ರಯೋಗಿಸ ಪ್ರಾರಂಭಿಸಿರುತ್ತಾರೆ.

ಭೋಜನ ಕಾಲ ವ ಇತರ ಸಂದರ್ಭಗಳಲ್ಲಿ ಬಾಳೆ ಎಲೆಗಳ ದೊನ್ನೆಗಳಲ್ಲಿಯೇ ನೀರು ವೊದಲಾದ್ದನ್ನು ಬ್ರಾಹ್ಮಣರು ಕುಡಿಯುವ ವಾಡಿಕೆಯು ಎಷ್ಟು ಹಿತಕರವೆಂಬದನ್ನು ಈಗ ನಾವು ತಿಳಿಯಬಹುದು. ಈ ದೊನ್ನೆಗಳನ್ನು ಒಂದೇ ಸಲ ಉಪಯೋಗಿಸುವರಲ್ಲದೆ ಇನ್ನೊಮ್ಮೆ ಉಪಯೋಗಿಸರು. ಆದರೆ ಈಗಿನ ನಮ್ಮ 'ಶಿಕ್ಷಣ' ಬಲದಿಂದ ಇಂಥಾ ವಾಡಿಕೆಗಳು ಲೋಪವಾಗಿ ಬರುವುದು ಕ್ಷೇಮಕರವಲ್ಲವೆಂಬುದು ಇದರಿಂದ ವ್ಯಕ್ತವಾಗುವುದು.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಅಕಟವಿಕಟ.

ಪತ್ರ ಸಂಶೋಧಕರೇ! ನನ್ನ ಬೇರಿಂಗ್ ಪತ್ರ–ನಿಮಗೊಂದು ಹೇರಿಂಗ್! ಪಟ್ಟಣ ದೇವಾಲಯ–ಅಲ್ಲಲ್ಲ–ಪಟ್ಟಣ ತಾತಾಲಯದಲ್ಲಿ–ಇನ್ನೂ ತೀರಲಿಲ್ಲ–ಓಟುಗಳ ಕಾಟ–ನದೀ ತೀರದಲ್ಲಿ ಸೊಣಗಳ ಕಾಟ–ನಮ್ಮಲ್ಲಿ ಅತ್ತಿತ್ತ ಎಳೆದಾಟ–ಅಲ್ಲ್ಯರ್ಧ–ಇಲ್ಲ್ಯರ್ಧ–ಒಂಭತ್ತು ಮತ್ತರ್ಧ–ಕಳೆದುಬಿಡಿ ನಾಲ್ಕರ್ಧ–ಫಲವಾಗಿ ನನಗೆ ಹಿಡಿದ ಶನಿಯ ಹದಿನೈದರ್ಧ–ಸರ್ವತ್ರ ಬಾಧೆಯ ಫಲ–ಸ್ಥಳ ಭ್ರಷ್ಟ–ಕೌನ್ಸಿಲು ಭ್ರಷ್ಟ! ಹೇಳಿಬಿಟ್ಟೆ. ಕಂಡದ್ದನ್ನು ಹೇಳಿದರೆ ಹದ್ದಿನಂಥಾ ಮೋರೆ! ಮೋರೆಯನ್ನು ಹುಡುಕಿ ಹುಡುಕಿ ಸಾಕಾಯಿತು. ಎಲ್ಲೆಲ್ಲಿಯೂ ಸಿಡುಮೋರೆಗಳು! ಮುದ್ದು ಮೋರೆಗಳೆಲ್ಲಾ ಮುನ್ಸಿಪಾಲ್ ಕೌನ್ಸಿಲ್ ಚುನಾವಣೆಯಲ್ಲಿ ಕಲಾಸಾಯಿತಂತೆ! ಸಿಡುಮೋರೆ–ಬಿಸಿಬಿಸಿ! ಹಾ–ಹಾ–ಹಾ–ಕಿಲಿಕಿಲಿ ನಕ್ಕುಬಿಟ್ಟೆ. ನಗೆಯೋ–ದಗೆಯೋ–ದಗೆ ಎಂಬುದು ಹಗೆ! ಕೌನ್ಸಿಲು ಕೌನ್ಸಲರ ಹಗೆ–ದೇವಸ್ಥಾನ ದೆವ್ವಗಳ ಹಗೆ!

ಜ್ಯಾತಿಜ್ಯಾತಿಗೆ ವೈರ । ನೀತಿ ಮೂರ್ಖಗೆ ವೈರ ।
ಪಾತಕ ವೈರ ಸುಜನರ್ಗೆ । ಅರಿದವಗ್ಯಾತರ ವೈರ, ಸರ್ವಜ್ಞ ॥

ತಡೆಯಿರಿ! ನನಗೆ ಹಗೆಯವರಿಲ್ಲವೆಂದು ಆಯುಧ ಮರೆತುಬಿಟ್ಟೆ! ಒಲ್ಲಿದವನ ಹಗೇವು ತೆಗೆಯುವ ಹೊತ್ತಿಗೆ ಬಡವನ ಪ್ರಾಣ ಹೋದ ಹಾಗಾಯಿತು. ಲೈಟ್ ಹೌಸ್ ಹಿಲ್–ಲೈಟ್ ಅಂದರೆ ಹಗುರ, ಹೌಸ್ ಅಂದರೆ ಮನೆ, ಹಿಲ್ ಅಂದರೆ ಗುಡ್ಡ ಎಂಬದಾಗಿ ನಮ್ಮ ಹಳೇ ಅಚ್ಚುತ ಮಾಸ್ತರರು ಕಲಿಸಿದ್ದು ನೆನಪಿಗೆ ಬಂತು. ಗುಡ್ಡದ ಕನ್ನಡ ಸಂಧಿ ಹೇಳಲು ನಾನರಿಯೆ–ಅಲ್ಲಿ ಮನೆ ಬೀಳುವಾಗ–ನಮ್ಮ ಮುನ್ಸಿಪಾಲಿಟಿಯವರು ಎರಡು ಒಣ–ಅಲ್ಲಲ್ಲ ತಪ್ಪಿದೆ–ಒಳಕಾಯಿದೆಗಳನ್ನು ಜಾರಿಗೆ ತರಬೇಕೆಂದಿರುವರಂತೆ. ಅತೀ ಹೆಚ್ಚು ಕಟ್ಪೋಣಗಳು ಗುಂಪುಗುಂಪಾಗಿರುವುದನ್ನು ಮನ್ನಾಪಡಿಸುವದು; ಹೊಸತಾಗಿ ಕಟ್ಟಿಸುವ ಮನೆಯು ಬೋಗಟೆದಾರರಿಗೆ ಯಾ ನೆರೆಯ ನಿವಾಸಿಗಳಿಗೆ ಅಸ್ವಸ್ಥವಾಗುವ ಅಪಾಯವನ್ನು ಮಾಡುವುದಾಗಿ ಚೇಯರ್ಮೇನರೂ ಸೆನಿಟರಿ ಆಫೀಸರರೂ ಅಭಿಪ್ರಾಯಪಟ್ಟರೆ ಲೈಸನ್ಸ್ ಕೊಡದಿರುವುದೊಂದು! ಸ್ವಾಮಿ, ನನಗೆ ಚಿಂತೆ ಹಿಡಿದದೆ. ಚಿಂತೆಗೂ ಚಿತೆಗೂ ಒಂದು ಬಿಂಧಾಕ್ಷರ ಮಾತ್ರ ವ್ಯತ್ಯಾಸ. ನಮ್ಮನೆಗೂ ಪಾಯಿಖಾನೆಗೂ ಒಂದು ಗಜ ಮಾತ್ರ ದೂರ! ಕಟ್ಪೋಣಗಳನ್ನು ಮನ್ನಾಪಡಿಸಿದರೂ ಚಿಂತಿಲ್ಲ. ಗುಂಪುಗುಂಪಾಗಿರುವ ಪಾಯಿಖಾನೆಗಳ ಗಂಧಗಾಳಿಯ ಚಿತೆಯಿಂದ ನನ್ನನ್ನು ದೂರಮಾಡಬಾರದು! ಒಂದೊಂದು ತೋಟದಲ್ಲಿ ೩-೪ ಪಾಯಿಖಾನೆಗಳನ್ನಾದರೂ ಕಟ್ಟಿಸಲು ಲೈಸೆನ್ಸ್ ಕೊಡಬೇಕೆಂಬದೇ ನನ್ನ ಗೋಳು!! ಇನ್ನು ಕೌನ್ಸಿಲ್ಲರ ಕೋಲು ಎತ್ತ ತಿರುಗುತ್ತದೋ ನೋಡಬೇಕು.

ಆಹಾ! ಇನ್ನೊಂದು ಒಳಕಾಯಿದೆ–ಚೇಯರ್ಮೇನರ ಬರಹಮೂಲಕ ಅಪ್ಪಣೆ ವಿನಹಾ ಮುನ್ಸಿಪಾಲ್ ಗಡಿಯಲ್ಲಿ ರಾತ್ರೆ ೧೧ ಗಂಟೆಯ ನಂತರ ಟಮುಕಿ, ಕಹಳೆ, ವಾದ್ಯ ಬಡಿಯಕೂಡದಂತೆ. ಇದನ್ನೆಲ್ಲಾ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಿದ್ದಾರಂತೆ. ಜಿಲ್ಲಾ ಗಜೇಟು ನೋಡುವವರ್ಯಾರು? ಗ್ರಾಮ ಉದ್ಯೋಗಸ್ಥರು. ವರ್ತಮಾನ ಪತ್ರ ನೋಡುವವರ್ಯಾರು? ಸರ್ವರು! ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂಬ ಆಲೋಚನೆಯು ನಮ್ಮ ತಾತಾಲಯ ಮಹಾಪಿತರಿಗೆ ಬರಲಿಲ್ಲವೇನೋ? ಗಜೇಟು ಹುಡುಕಿ ತಲೆ ತಿರುಗಿತು. ಪಟೇಲರ ಸವಾರಿ ಕಾದು ಉಗ್ರಾಣಿದೇವರ ದರ್ಶನವಾಯಿತು. ಜಿಲ್ಲಾ ಗಜೇಟು ಎಲ್ಲಿ ಎಂದು ಕೇಳಿದ್ದೇ ಸರಿ–ತಲೆ ಅಲ್ಲಾಡಿಸಿ ಬಿಟ್ಟರು. ಇನ್ನೊಂದು ಸಲ ಕೇಳಿದೆ–ಪಟೇಲರಿಗೆ ಓನಾಮ ಗೊತ್ತಿಲ್ಲವೆಂದರು. ಕೇಳಿ ಕೇಳಿ ನಾಲಿಗೆಯ ಪಸೆ ಆರಿತು. ಸೀಯಾಳ ಕೇಳಿಬಿಟ್ಟೆ–ನಾನು ಸರಕಾರಿ ನೌಕರರಲ್ಲವಂತೆ! ಪಟೇಲರಿಗೆ ಜುಡೀಶ್ಯಲ್ ಮತ್ತು ರೆವಿನ್ಯು ಎರಡು ಕೆಲಸಗಳಿವೆಯಂತೆ. ಕಾಗದ ಮೇಲೆ ಬತ್ತೀ ನೂಕಲಾರದ ಬಂಟ ಸರಕಾರದ ದಳ ನಡಿಸ್ಯಾನೇ? ಎಂದು ಹೇಳಿಬಿಟ್ಟೆ. ಪಟೇಲ ಕೆಲಸ ಮನೆತನದ ಹಕ್ಕಿನಿಂದ ಬಂದದ್ದೆಂದು ಉತ್ತರವಾಯಿತು. ನನ್ನ ಮನೆತನಕ್ಕೆ ಪಟೇಲರ ಹಕ್ಕಿಲ್ಲ. ಉಪಾಧ್ಯಾಯನ ಹಕ್ಕಿದೆ; ಉಪಾಧ್ಯಾಯನಾಗಲು ತರ್ಬೀತು ಶಾಲೆಗೆ ಸೇರಬೇಕಂತೆ! ತರ್ಬೀತು ಶಾಲೆಗೆ ಸೇರಲೋ–ಅಲ್ಲಿ ಮಿಶ್ಯನ್ ಪಂಚಮನು ಶುದ್ಧನಂತೆ–ರಂಗರಾಯರ ಪಂಚಮನು ಅಶುದ್ಧನಂತೆ!

ಶುದ್ಧ ತಾನೆಂದು ಪರರನು ಮುಟ್ಟದವ ಹೊಲೆಯ ।
ಹೊಲೆಯನೆಂದನ್ಯರನು ಕರೆವವನೆ ಹೊಲೆಯ ॥

ಇದು ಶ್ರೀಯುತ ಪೈಗಳವರ ಹಾಡು!

ನಾನು ಮಿಶ್ಯನ್ ಜಾತಿಗೆ ಸೇರಿಬಿಡುತ್ತೇನೆ. ಮಿಶ್ಯನ್ ಉಪಾಧ್ಯಾಯರಿಗೆ ನಾಲ್ಕು ಮಕ್ಕಳಾದೊಡನೆ ವರ್ಷಂಪ್ರತಿ ರೂಪಾಯಿ ಹನ್ನೆರಡು ಮಂಗಾಯಿ ಭತ್ತೆ ಸಿಕ್ಕುವುದೆಂದು ಹೊಸ ಹುಕುಂ ಬಂದದಂತೆ. ಸಿಕ್ಕಿದ್ದು ಮಕ್ಕಳ ಪುಣ್ಯ! ಹೇಳಲೇನು? ಮಿಶ್ಯನ್ ಜಾತಿಯೋ–ರೂಪಾಯಿ–ಪೈಗಳಲ್ಲಿದೆ ಎಂದು ಮಧ್ಯಸ್ಥನ ಹಾಡು! ನಾನೇನೋ ಹಾಡಬೇಕೆಂದಿದ್ದೆನು. ಮನಸ್ಸಿನಿಂದ ಜಾರಿಹೋಯಿತು. ಮನಸ್ಸು ಇದ್ದಲ್ಲಿ ಇರುವುದಿಲ್ಲ. ನಿಂತಲ್ಲಿ ನಿಲ್ಲುವದಿಲ್ಲ. ಆದ್ದರಿಂದಲೇ ಮನವು ಹಾಳು ಹೆಂಗಸಿನಂತಿದೆ ಎಂತ ಕವಿಯು ಹೇಳಿದ್ದಾನೆ.

ಸ್ವಾಮಿ, ನಿಮ್ಮಗೊಡವೆ ನನಗೆ ಬೇಡ–ನಾನು ಊರೇ ಬಿಟ್ಟು ಹೋಗುತ್ತೇನೆ.

ಊರು ಬಿಟ್ಟು ಪರವೂರಿಗೆ ಹೋದರೆ
ಪ್ರಾರಬ್ಧವು ತಾಂ ತಪ್ಪೀತೇ

ಎಂದು ದಾಸನು ನುಡಿದಿದ್ದಾನೆ. ಹುಟ್ಟಿದ ಊರಲ್ಲೇ ಸಾಯಬೇಕು. ಇದ್ದ ಜಾತಿಯಲ್ಲೇ ಉಳಿಯಬೇಕು. ಇದು ನನ್ನ ಮುತ್ತಜ್ಜನ ಮತ–ಇವನ ಮತ ನಂಬದೆ ನಾ ಕೆಟ್ಟೆನು! ಕೆಟ್ಟ ಮೇಲೆ ಬುದ್ಧಿ, ಸತ್ತ ಮೇಲೆ ದುಃಖ! ಅಲೇಕುಂ!! ಅಲ್ಲಲ್ಲ–ನಮಸ್ಕಾರ!.

ಅಪಿಕಲಾಟ.

ಪ್ರಕಟಣೆ.

ಮಂಗಳೂರು ಡಿ. ಮುನ್ಸಿಫ ಕೋರ್ಟಿನಲ್ಲಿ
ಸಂ 1912ನೇ ಇಸವಿ ಸ್ಮಾಲು ನಂಬ್ರ 54.
S. I. A. ನಂಬ್ರ $\frac{11}{12}$

ಯಂ. ಇಬ್ರಾಹಿಮ್ ಇಲಿಯಸ್‌ಸೇಟ್ ಈತನ ಪವರ್ ಅಫ್ ಎಟರ್ನಿ ಜಾನುಮಹಮ್ಮದ್ ಇಲಿಯಸ್, ಮಂಗಳೂರು ಶಹರ್. } ವಾದಿ.

ಮತ್ತು

1. ಬಾವಾದಾದಾಶೇಟ್ . . . . . .
2. ಅಲ್ಲಿಮಹಮ್ಮದ್ ಹಾಜಿಸಕೂರಸೇಟ್ ಜವಳಿ ವ್ಯಾಪಾರಸ್ಥರು ಮಂಗಳೂರು ಶಹರ್. } ಪ್ರತಿವಾದಿರು.

ಮಂಗಳೂರು ಶಹರ ಮೇಮನಮಹಜೇದಿಗೆ ಸಮ್ಮಂಧಪಟ್ಟ ಅಂಗಡಿ ಬಾಬತು ಪ್ರತಿವಾದಿರಿಂದ ಬಹ ಬಾಡಿಗೆ ಅದರ ಮೇಲಣ ಬಡ್ಡಿ ಕೂಡಾ ರೂ. 142-9-0 ಪ್ರತಿವಾದಿರಿಂದ ಬರಮಾಡಿಕೊಳ್ಳುವರೆ ಸದರಿ ಮಹಜೇದಿಯ ಆಡಳಿತೆದಾರ ವಾದಿಯು ಈ ಕೋರ್ಟಿನಲ್ಲಿ ಮೇಲ್ಕಂಡ ವ್ಯಾಜ್ಯ ದಾಖಲು ಮಾಡಿರುತ್ತಾನೆ. ಆ ಕುರಿತು ಆಕ್ಷೇಪ ಉಳ್ಳವರು ಇದೇ ಇಸವಿ ಫೆಬ್ರುವರಿ ತಾ. 22ನೇ ದಿನ ಹಗಲು ಘಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

ನಮ್ಮ ದಸ್ಕತು ವ ಮೊಹರ ನಿಶಿ ಕೊಡೋಣಾದ ತಾ. 3ನೇ ಫೆಬ್ರುವರಿ 1912ನೇ ಇಸವಿ.

(*Sd.*) **B. Krishna Rau,**
District Munsif.

ವಿದೇಶ ವೃತಾಂತ.

ಪೋರ್ಚುಗಲಿನ ಎವೋರ ಎಂಬ ಜಿಲ್ಲೆಯ ಕೆಲಸಗಾರರು ಮುಷ್ಕರ ಹಿಡಿದು ಲೂಟಿಮಾಡಲು ಪ್ರಾರಂಭಿಸಿದ್ದರಿಂದ ಅಲ್ಲಿಯ ಟ್ರಮ್ ಬಂಡಿಗಳು ನಿಲ್ಲಿಸಲ್ಪಟ್ಟವು. ಸೈನೀಕರ ಸಹಾಯದಿಂದ ಮಾತ್ರವೇ ಕೆಲವು ಬಂಡಿಗಳು ನಡಿಸಲ್ಪಟ್ಟವು. ದಂಗೆಗಾರರ ಉಪಟಳವು ಬಹಳ ಮಿತಿಮೀರಿದ್ದರಿಂದ ಸೈನೀಕರು ಸಿಕ್ಕಿ ಸಿಕ್ಕಿದ ದಂಗೆಗಾರರನ್ನು ಹಿಡಿದು ಕೈದು ಮಾಡಿದರು. ಒಟ್ಟಿಗೆ ೧೨೦೦ ಮಂದಿಯು ಕೈದು ಮಾಡಲ್ಪಟ್ಟರು. ದಂಗೆಗಾರರು ಒಬ್ಬ ಅಧಿಕಾರಿಯನ್ನು ಹಿಡಿದು ಕೊಚ್ಚಿ ಕೊಚ್ಚಿ ಹಾಕಿದರು. ಎಲ್ಲಾ ಅಂಗಡಿಗಳು ಮುಚ್ಚಲ್ಪಟ್ಟದೆ ಎಂಬ ವಾರ್ತೆ ಬಂದಿರುವದು.

ಇಂಗ್ಲಾಂಡಿನಲ್ಲಿ ಹೆಚ್ಚಾಗಿ ಹಿಮ ಬಿದ್ದದರಿಂದ ತೇಮ್ಸ್ ನದಿಯಲ್ಲಿ ನೆರೆಬಂದು ಸುಮಾರು೨೦೦ ಎಕ್ರೆ ಸ್ಥಳವು ನೆರೆಯ ಪಾಲಾಗಿರುವದು.

ಏಮೆನಿನ ತುರ್ಕರ ಕೋಟೆಗೆ ಇಟಲಿಯರು ತೋಪು ಹಾರಿಸ ಪ್ರಾರಂಭಿಸಿದ್ದಾರೆ. ಫ್ರೆಂಚರು ನೋಬ ಹಡಗದಲ್ಲಿ ಹಿಡಿಯಲ್ಪಟ್ಟ ೨೨ ತುರ್ಕರು ರೆಡ್ಕ್ರಿಸೆಂಟ್ ಎಂಬ ಸಹಾಯಕ ಸಂಘದ ಉಪಚಾರಕರು ಬದಾಗಿ ತಿಳಿದು ಬಂದದರಿಂದ ಅವರೆಲ್ಲರಿಗೆ ಸಾಪ್ಸ್ ಎಂಬಗೆ ಹೋಗಲು ಇಟಾಲಿಯರು ಅಪ್ಪಣೆ ಕೊಟ್ಟಿದ್ದಾರೆ. ಲನೆಯವನೊಬ್ಬನು ಕಾಯಿಲೆಯಲ್ಲಿರುವುದರಿಂದಲೂ ನೆಯವನು ರೆಡ್ ಕ್ರಿಸೆಂಟಿನ ಉಪಚಾರಕನೆಂಬದಕ್ಕೆ ತಆಧಾರವಿಲ್ಲದ್ದರಿಂದಲೂ ಇವರನ್ನು ಬಿಡಲಿಲ್ಲ.

ಕಳದ ತಾ. ೩೦ರಲ್ಲು ಇಟಾಲಿಯರು ಮೆನಿನ ಬಳಿ ತುರ್ಕರ ಒಂದು ದೋಣಿಯನ್ನು ಹಿಡಿದು ೧೮ ಮಂದಿಯನ್ನು ಸೆರೆ ಹಿಡಿದರು. ತಪ್ಪಿಸಿಕೊಂಡು ೯ ಈಜಾಡುತ್ತಿದ್ದ ಇಬ್ಬರನ್ನು ಕೊಂದರು. ಇಟಾಲಿಯ ಜನವರಿ ೨೪ರಲ್ಲು ಹೋವ ಎಂಬ ಪಟ್ಟಣಕ್ಕೂ ೨೭ರ ಡೆಜ್‌ಬಾನ ಎಂಬ ಪಟ್ಟಣಕ್ಕೂ ತೋಪು ಹಾರಿಸಿ ಅವುಗ್ಳ ವಶಮಾಡಿಕೊಂಡಿರುವರು.

ವಿಮಾನಗಾಮಿಗಳಾದ ಸಿಗ್‌ನೊರ್ ಸ್ಪ ಮತ್ತು ಕೆಪ್ಟನ್ ಮೊಂಟ್ ಎಂಬ ಇಬ್ಬರು ತೋ ಎಂಬಲ್ಲಿ ತುರ್ಕರ ಸೈನ್ಯಪಡೆ ಇರುವ ಸ್ಥಳದ ಮೆದ ಹಾರಿ ತುರ್ಕರ ಮೇಲೆ ಸಿಡಿಮದ್ದುಗಳನ್ನು ಬಿಸಾಡಿ ತುರ್ಕರು ಕೆಳಗಿನಿಂಗ ಇವರ ಮೇಲೆ ಕೋವಿ ಬಿಟ್ಟ ನಾಲ್ಕು ತೋಪುಗಳು ವಿಮಾನಕ್ಕೆ ತಾಗಿ ಕೆಪ್ಟನ್ ಮೆ ಎಂಬವನಿಗೆ ಘಾಯವಾಯಿತು. ಜನವರಿ ೩೦ರಿಂಗಾಜಿಯಲ್ಲಿ ಆದ ಯುದ್ಧದಲ್ಲಿ ಇಟಾಲಿಯರಲ್ಲಿ ೫ ಜನ ಮಡಿದಿರುವರು. ಕಡೆಗೆ ತುರ್ಕರು ಹಿಮ್ಮೆಟ್ಟಿರು. ಟ್ರಿಪೋಲಿ ಯುದ್ಧದಲ್ಲಿ ಇಟಾಲಿಯರಿಗೆ ಈ ಐದುವರೆ ಮಿಲಿಯ ಪವನುಗಳು ಖರ್ಚಾಗಿರುವದು.

ಜನವರಿ ೨೭ರಲ್ಲು ಇಟಾಲಿಯರು ಜ ಎಂಬ ಕೋಟೆಗೆ ೧೫೦೦ ತೋಪು ಹಾರಿಸಿ ಎರಡು ಳನ್ನು ಸುಟ್ಟರಲ್ಲದೆ ಒಂದು ಆಡನ್ನು ಕೊಂದಿರುವರು.

ಐರ್ಲಾಂಡಿನ ಹೋಮ್ ರೂಲ್ ಮಸೂದೆಯ ವಾಗಿ ಲಿಬರಲ್ ಪಕ್ಷದ ಮೆ। ಚರ್ಚಿಲರವರು ಬೆಲ್ಪಾಪ್ಸಿನಲ್ಲಿ ತಾ. ೮ರಲ್ಲು ಭಾಷಣ ಕೊಡಲಿಕ್ಕಿದ್ದಾರೆ. ಈ ದಿನ ಬೆಲ್‌ಪಾಪ್ಸಿನಲ್ಲಿ ಏನಾದಂಗೆ ಡೆನೆಯ ಬಹುದೆಂದು ಊಹಿಸಲ್ಪಟ್ಟಿರುವುದರಿಂ ಬೆಲ್‌ಪಾಪ್ಸಿನ ಕ್ಲಬುಗಳಲ್ಲಿ ಆ ದಿನ ೩೦ ಸಾವಿರ ಆಯುಧಪಾಣಿಗಳಾದ ಜನರಿರುವರು. ಪೆಬ್ರವರಿ ೮ನೇ ದಿನ ಮೆ। ಚರ್ಚಿಲರವರು ಬೆಲ್‌ಪಾಪ್ಸನ್ನು ಹಾದು ಭಾಷಣ ಕೊಡುವ ಸ್ಥಳಕ್ಕೆ ಹೋಗುವಾಗ ಏನಾದರೂ ಗೊಂದಲವು ನಡೆಯದ ಹಾಗೆ ಪೋಲೀಸಿನವರಿಗೆ ಸಹಾಯವಾಗಿ ೫೦೦೦ ಸೈನೀಕರು ಸ್ಪೆಶ್ಯಲ್ ಡ್ಯೂಟಿಯ ಮೇಲೆ ನೇಮಿಸಲ್ಪಟ್ಟಿರುವರು.

ಬ್ರಿಟಿಷ್ ಗೂಢಾಚಾರ್ಯನೆಂದು ಜರ್ಮನಿಯಲ್ಲಿ ಹಿಡಿಯಲ್ಪಟ್ಟ ಮೆ। ಸ್ಟ್ಯೂವರ್ಟ್ ಎಂಬವನಿಗೆ ಮೂರುವರೆ ವರುಷ ಸಜಾ ವಿಧಿಸಲಾಯಿತು. ತೀರ್ಮಾನವು ಕೊಡಲ್ಪಟ್ಟ ಕೂಡಲೇ ಮೆ। ಸ್ಟ್ಯೂವಾರ್ಟರು "ನಾನು ನಿರಾಪರಾಧಿ, ಈ ಸಂಗತಿಯು ಇಂಗ್ಲಾಂಡಿನ ಪ್ರತಿ ಒಬ್ಬನಿಗೆ ತಿಳಿದಿರಬೇಕು" ಎಂದು ಹೇಳಿದರು.

ಕಳದ ಶನಿವಾರ ಜೋರ್ಜ ಚಕ್ರವರ್ತಿಯವರ ಮೆಡಿನಾ ಹಡಗವು ಸ್ಪಿತ್‌ಹೆಡ್ ಎಂಬಲ್ಲಿಗೆ ಮುಟ್ಟಿತು. ಪ್ರಿನ್ಸ್ ಅಫ್ ವೇಲ್ಸರವರೂ, ಅಲೇಕ್ಸಾಂಡ್ರ ರಾಣಿಯವರೂ, ಪ್ರಿನ್ಸೆಸ್ ಕೊನ್ನಾಟರವರೂ ಚಕ್ರವರ್ತಿಯವರನ್ನು ಎದುರ್ಗೊಳ್ಳುವರೆ ಶನಿವಾರ ಸಾಯಂಕಾಲ ಪೋರ್ಟ್ಸ್ಮೌತಿಗೆ ಹೋಗಿರುವರು.

ಜೋರ್ಜ ಚಕ್ರವರ್ತಿ ಚಕ್ರವರ್ತಿನಿಯವರು ಪೋರ್ಟ್ಸ್ಮೌತಿಗೆ ಕ್ಷೇಮವಾಗಿ ಮುಟ್ಟಿದರು. ಪ್ರಿನ್ಸ್ ಅಫ್ ವೇಲ್ಸರವರೂ, ಅಲೆಕ್ಷಂದ್ರ ರಾಣಿಯವರೂ ಹಡಗಕ್ಕೆ ಹೋಗಿ ಊಟ ತೀರಿಸಿ ಒಟ್ಟಿಗೆ ಹಡಗದಿಂದಿಳಿದರು. ಪೋರ್ಟ್ಸ್ಮೌತಿನಲ್ಲಿ ಚಕ್ರವರ್ತಿಯವರಿಗೆ ಒಂದು ಬಹುಮಾನ ಪತ್ರವು ಒಪ್ಪಿಸಲಾಯಿತು. ಚಕ್ರವರ್ತಿಯವರು ಹಿಂದೂಸ್ಥಾನದ ಪ್ರಜೆಗಳ ರಾಜಭಕ್ತಿಯನ್ನು ನೋಡಿ ತಾನು ತುಂಬಾ ಸಂತೋಷ ಪಟ್ಟೆನೆಂದೂ ತಾನು ಹಿಂದೂಸ್ಥಾನಕ್ಕೆ ಮಾಡಿದ ಪ್ರಯಾಣವು ಹಿಂದೂಸ್ಥಾನದ ಪ್ರಜೆಗಳಿಗೆ ಹಿತವೂ ಕಲ್ಯಾಣವೂ ಆಗುವ ಹಾಗೆ ಕೈಗೂಡಬೇಕೆಂದು ಅಪೇಕ್ಷಿಸುತ್ತೇನೆ ಎಂಬದಾಗಿಯೂ ಹೇಳಿದರು.

ಅಲ್ಲಿಂದ ಚಕ್ರವರ್ತಿಯವರು ಪರಿವಾರ ಸಮೇತ ಅಗ್ಗಾಡಿ ಹತ್ತಿ ಲಂಡನಿಗೆ ಹೊರಟರು. ಲಂಡನಿನಲ್ಲಿ ಈಗ ಅಪರಿಮಿತವಾದ ಛಳಿಕಾಲವಾಗಿದ್ದರೂ ಅಲ್ಲಿಯ ಜನರು ರೈಲ್ವೇ ಸ್ಟೇಶನಿನಲ್ಲಿ ಗುಂಪು ಗುಂಪಾಗಿ ಕೂಡಿ ಬಂದಿದ್ದರಲ್ಲದೆ ರಾಜ ಕುಟುಂಬದವರೂ, ಪ್ರಧಾನ ಮಂತ್ರಿಯವರೂ ಪಾರ್ಲಿಮೆಂಟ್ ಸಭಾ ಮಂದಿರದ ಪ್ರಭುಗಳೂ ಬಂದಿದ್ದು ವಿಕ್ಟೋರಿಯ ರೈಲ್ವೇ ಸ್ಟೇಶನಿನಿಂದ ಮೆರವಣಿಗೆ ಹೊರಟು ಬಕ್ಕಿಂಗ್ಹಾಮ್ ಅರಮನೆಗೆ ಹೋದರು. ಅರಮನೆಗೆ ತಲಪಿದ ನಂತರ ಕೂಡಿದ ಜನಸಂದಣಿಯು ಧನ್ಯವಾದವನ್ನಿತ್ತು ಅಗಲಿದರು.

ಚಕ್ರವರ್ತಿಯವರು ದೇವರ ದಯೆಯಿಂದ ಸುಕ್ಷೇಮಿಯಾಗಿ ಈ ಮಹಾ ಪ್ರಯಾಣವನ್ನು ತೀರಿಸಿ ಬಂದದಕ್ಕಾಗಿ ಬಗವಂತನಿಗೆ ಸ್ತೋತ್ರ ಮಾಡುವರೆ ವೆಸ್ಟ್‌ಮಿನಿಸ್ಟರ್ ಮೊದಲಾದ ದೇವಾಲಯಗಳಲ್ಲಿ ದೇವಾರಾಧನೆಗಳು ನಡೆಯಿತು.

ಚೀನ ಸರಕಾರ ಕಡೆಯ ಯು ಅನ್ ಸಿಕಾಯಿರವರೂ ಪ್ರಜಾ ಕಡೆಯ ಸನ್ ಎಟ್ ಸೆನ್‌ರವರೂ ಕೂಡಿಕೊಂಡು ಪ್ರಜಾಧಿಪತ್ಯವನ್ನು ಸ್ಥಾಪಿಸುವರೆಂಬದಾಗಿ ರಾಜಶಾಸನವು ಹೊರಟಿರುವದು. ಇನ್ನು ದಂಗೆ ಇತ್ಯಾದಿಗಳು ನಡಿಯಲಿಕ್ಕಿಲ್ಲ ಎಂದು ತಿಳಿದು ಬರುತ್ತದೆ.

ಉತ್ತರ ಹಿಂದುಸ್ಥಾನ.

ಬಂಗಾಳ ವಿಭಜನೆಯನ್ನು ರದ್ದು ಮಾಡಿದ್ದರಿಂದ ಪಶ್ಚಿಮ ಬಂಗಾಳದ ಮಹಮ್ಮದೀಯರ ಹಕ್ಕು ಸ್ವಾತಂತ್ರಗಳು ಸುರಕ್ಷಿತವಾಗಿ ಉಳಿಯುವ ಬಗೆ ಹೇಗೆಂಬದನ್ನು ಕೇಳುವರೆ ಮಹಮ್ಮದೀಯ ಪ್ರತಿನಿಧಿಗಳು ಕಳದ ತಾ. ೩೧ರಲ್ಲು ವೈಸರಾಯರವರಿಗೆ ಭೇಟಿಕೊಟ್ಟರು. ಈ ಸಂದರ್ಭದಲ್ಲಿ ವೈಸರಾಯರವರು ಹೊಸ ಸಂಸ್ಥಾನದ ಗವರ್ನರರು ಡಕ್ಕಾದಲ್ಲಿದ್ದು ಮಹಮ್ಮದೀಯರ ಮತ್ತು ಪಶ್ಚಿಮ ಬಂಗಾಳದ ಸ್ವಾತಂತ್ರಗಳ ವಿಷಯ ಹೆಚ್ಚಿನ ಜಾಗ್ರತೆ ತಕ್ಕೊಳ್ಳುವರೆಂದೂ ಡಕ್ಕದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವರೆಯೂ ಪಶ್ಚಿಮ ಬಂಗಾಳಕ್ಕೆ ವಿದ್ಯಾಖ್ಯಾತೆ ಸಂಬಂಧವಾಗಿ ಒಬ್ಬ ಸ್ಪೆಶ್ಯಲ್ ಹುದ್ದೆದಾರರನ್ನು ನೇಮಿಸುವರೆಯೂ ಸರಕಾರದವರು ಸ್ಟೇಟ್ ಸೆಕ್ರಟರಿಯವರಿಗೆ ಬರಕೊಳ್ಳಲು ನಿಷ್ಕರ್ಷಿಸಿರುವರೆಂದು ಹೇಳಿದರಲ್ಲದೆ ಹೊಸ ಕಾರ್ಯನಿರ್ವಾಹಕ ಸಭೆಯಲ್ಲಿಯೂ ಮಹಮ್ಮದೀಯರ ಹಕ್ಕು ಸ್ವಾತಂತ್ರವು ಕಾಯಲಾಗುವುದೆಂದೂ ಅಭಯವಿತ್ತರು. ಸರಕಾರಿ ಕೆಲಸಗಳಲ್ಲಿ ಮಹಮ್ಮದೀಯರನ್ನು ಹೆಚ್ಚಾಗಿ ನೇಮಿಸಬೇಕೆಂಬದಾಗಿ ಈ ಪ್ರತಿನಿಧಿಗಳು ಕೇಳಿಕೊಂಡಲ್ಲಿ ವೈಸರಾಯರವರು ಸರಕಾರಿ ಕೆಲಸಗಳಿಗೆ ನೇಮಿಸಲ್ಪಡುವುದು ಸಾಮರ್ಥ್ಯದ ಮೇಲೆ ಹೊಂದಿಕೊಂಡಿರುತ್ತದಾದ್ದರಿಂದ ಇದಕ್ಕೆ ತಾನು ಅಭಯವನ್ನೀಯ ಕೂಡದೆಂದೂ ಮಹಮ್ಮದೀಯರಲ್ಲಿ ಆಯಾ ಕೆಲಸಗಳಿಗೆ ಉತ್ತೀರ್ಣರಾದವರಿದ್ದರೆ ಅವರಿಗೂ ಸರಕಾರಿ ಕೆಲಸ ಕೊಡಲ್ಪಡುವದೆಂದೂ ಹೇಳಿದರು.

ಡಕ್ಕದಲ್ಲಿ ವಿಶ್ವಾವಿದ್ಯಾಲಯವನ್ನು ಸ್ಥಾಪಿಸುವದು ಅನಾವಶ್ಯವೆಂದು ಬಂಗಾಳದ ಆಯಾ ಪತ್ರಿಕೆಗಳು ಪ್ರತಿಪಾದಿಸುತ್ತಲಿವೆ.

ಬೇರಿಷ್ಟರರಾಗಿರುವ ಮೆ. ಸಯ್ಯಾದ್ ಹುಶೇನ್ ಇಮಾಮರವರೂ, ಮೆ. ಅಶುತೋಷ್ ಚೌದುರಿಯವರೂ ಬಂಗಾಳ ಹ್ಯಾಕೋರ್ಟಿನ ಜಡ್ಜರಾಗಿ ನೇಮಿಸಲ್ಪಟ್ಟಿರುವರು.

ಜನವರಿ ತಾ. ೨೭ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ೧೪,೩೮೧ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೧,೯೭೭ ಮಂದಿಯು ಮೃತಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟಂದರೆ:—ಮುಂಬಾಯಿ ೧,೯೭೫; ಮದ್ರಾಸು ೪೧೮; ಬಂಗಾಳ ೧,೭೪೦; ಸಂಯುಕ್ತ ಸಂಸ್ಥಾನ ೪,೦೨೩; ಪಂಜಾಬು ೨೦೦; ಬರ್ಮ ೯೧; ಮಧ್ಯಸಂಸ್ಥಾನ ೧,೩೩೧; ಹೈದರಾಬಾದ್ ೧,೫೭೮; ಮೈಸೂರು ೩೩೦; ಸೆಂಟ್ರಲ್ ಇಂಡಿಯ ೨೬೨ ಮರಣಗಳಾದವು.

ಬಹುಮಾನಪಟ್ಟ ಮೆ। ಸಮ್ಸುದ್ದ್ ಹುದ್ದಾ ಎಂಬವರು ಹೊಸ ಬಂಗಾಳದ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿಯೂ ದರ್ಬಂಗ ಮಹಾರಾಜರವರು ಬಿಹಾರ್, ಚೋಟಾ ನಾಗಪುರ, ಮತ್ತು ಒರಿಸ್ಸಾ ಕೂಡಿದ ಹೊಸ ಸಂಸ್ಥಾನದ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿಯೂ ನೇಮಿಸಲ್ಪಟ್ಟಿರುವರು.

ಬಂಗಾಳದ ವಿದ್ಯಾಖ್ಯಾತೆಯ ಅಸಿಸ್ಟಾಂಟ್ ಡಿರೆಕ್ಟರರಾಗಿರುವ ಮೆ। ಇ. ಎಲ್. ವೆಸ್ಟನ್ ಎಂಬವರು ಕುದುರೆಯಿಂದ ಬಿದ್ದು ಪರವಸ್ಥೆದಿದರು.

ಕಾಫಿ ಹೊಟೇಲುಗಳ ಕುಡಿಯುವ ಪಾತ್ರೆಗಳು.

ಸರ್ವಸಾಧಾರಣವಾಗಿ ಹೊಟೇಲುಗಳಲ್ಲಿ ಸರ್ವರಿಗೂ ಒಂದೇ ಪಾತ್ರೆಯಲ್ಲಿ ಅಂದರೆ ಒಬ್ಬನು ತಿಂದ ಯಾ ಕುಡಿದ ನಂತರ ಅದೇ ಪಾತ್ರೆಯನ್ನು ತೊಳದು ಮತ್ತೊಬ್ಬನಿಗೆ ತಿನ್ನಲೂ ಕುಡಿಯಲೂ ಕೊಡುವರು. ಇಂಥಾ ಪಾತ್ರೆಗಳಲ್ಲಿ ಕುಡಿಯುವುದೇ ಆಯಾ ತರದ ರೋಗಗಳು ಪ್ರಬಲವಾಗಲಿಕ್ಕೆ ಮೂಲಕಾರಣವೆಂದು ಈಗೀಗ ವೈದ್ಯರು ಅಭಿಪ್ರಾಯಪಟ್ಟಿರುವರು. ಒಂದು ಹೊಟೇಲಿಗೆ ಹೋಗಿ ಅಲ್ಲಿಯ ಪಾತ್ರೆಗಳ ಮೈಲಿಗೆಯನ್ನೂ, ಮುಟ್ಟಿದರೆ ಕೈಗೆ ತಾಗುವ ಅಂಟುದ್ರವವನ್ನೂ ಪರಿಶೀಲಿಸಿ ನೋಡಿದ್ದಾದರೆ ವೈದ್ಯರಿಗೆ ಮಾತ್ರವೇ ಅಲ್ಲ; ನಮಗೂ ಇಂಥಾ ಪಾತ್ರೆಗಳಲ್ಲಿ ಕುಡಿಯುವುದು ಉಚಿತವಲ್ಲ ಎಂಬದಾಗಿ ತೋರಿಬರುವದು. ಅಮೇರಿಕದ ಮುಖ್ಯ ಪಟ್ಟಣವಾದ ನ್ಯೂಯೊರ್ಕ್ ಪಟ್ಟಣದಲ್ಲಿಯೂ ರೋದೆ ಎಂಬ ದ್ವೀಪದಲ್ಲಿಯೂ ಹೊಟೇಲುಗಳ ಕುಡಿಯುವ ಪಾತ್ರೆಗಳಲ್ಲಿ ಕುಡಿಯಲೇಬಾರದೆಂಬ ನಿಯಮವನ್ನು ಸರಕಾರದವರೇ ಜಾರಿಗೆ ತಂದಿರುವರು. ಅಲ್ಲಿಯ ಹೊಟೇಲುಗಳಲ್ಲಿ ಒಂದು ತರದ ಜಾಪಾನ್ ಕಾಗದದ ಪಾತ್ರೆಯನ್ನು ಪ್ರಯೋಗಿಸುವರು. ಒಬ್ಬನು ಇಂಥಾ ಪಾತ್ರೆಯಲ್ಲಿ ಒಂದು ಸಲ ಕುಡಿದ ಮೇಲೆ ಆ ಪಾತ್ರೆಯನ್ನು ಬಿಸಾಡಿಬಿಡುವರು. ಹೊಟೇಲುಗಳ ಪಾತ್ರೆಗಳಲ್ಲಿ ಕುಡಿಯುವುದು ಬಿಟ್ಟ ನಂತರ ಅಲ್ಲಿ ಮರಣ ಸಂಖ್ಯೆಯು ಕಮ್ಮಿಯಾಯಿತೆಂಬದಾಗಿ ತಿಳಿದು ಬರುತ್ತದೆ. ಕಲ್ಕತ್ತೆಯ ಕೆಲವು ದೊಡ್ಡ ದೊಡ್ಡ ಹೊಟೇಲುಗಳಲ್ಲಿಯೂ ಇದೇ ತರದ ಜಾಪಾನ್ ಕಾಗದವನ್ನು ಪ್ರಯೋಗಿಸ ಪ್ರಾರಂಭಿಸಿರುತ್ತಾರೆ.

ಭೋಜನ ಕಾಲ ವ ಇತರ ಸಂದರ್ಭಗಳಲ್ಲಿ ಬಾಳೆ ಎಲೆಗಳ ದೊನ್ನೆಗಳಲ್ಲಿಯೇ ನೀರು ವೊದಲಾದ್ದನ್ನು ಬ್ರಾಹ್ಮಣರು ಕುಡಿಯುವ ವಾಡಿಕೆಯು ಎಷ್ಟು ಹಿತಕರವೆಂಬದನ್ನು ಈಗ ನಾವು ತಿಳಿಯಬಹುದು. ಈ ದೊನ್ನೆಗಳನ್ನು ಒಂದೇ ಸಲ ಉಪಯೋಗಿಸುವರಲ್ಲದೆ ಇನ್ನೊಮ್ಮೆ ಉಪಯೋಗಿಸರು. ಆದರೆ ಈಗಿನ ನಮ್ಮ 'ಶಿಕ್ಷಣ' ಬಲದಿಂದ ಇಂಥಾ ವಾಡಿಕೆಗಳು ಲೋಪವಾಗಿ ಬರುವುದು ಕ್ಷೇಮಕರವಲ್ಲವೆಂಬುದು ಇದರಿಂದ ವ್ಯಕ್ತವಾಗುವುದು.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಅಕಟವಿಕಟ.

ಪತ್ರ ಸಂಶೋಧಕರೇ! ನನ್ನ ಬೇರಿಂಗ್ ಪತ್ರ-ನಿಮಗೊಂದು ಹೇರಿಂಗ್! ಪಟ್ಟಣ ದೇವಾಲಯ-ಅಲ್ಲಲ್ಲ-ಪಟ್ಟಣ ತಾತಾಲಯದಲ್ಲಿ-ಇನ್ನೂ ತೀರಲಿಲ್ಲ-ಓಟುಗಳ ಕಾಟ-ನದೀ ತೀರದಲ್ಲಿ ನೊಣಗಳ ಕಾಟ-ನಮ್ಮಲ್ಲಿ ಅತ್ತಿತ್ತ ಎಳೆದಾಟ-ಅಲ್ಲ್ಯರ್ಧ-ಇಲ್ಲ್ಯರ್ಧ-ಒಂಭತ್ತು ಮತ್ತರ್ಧ-ಕಳೆದುಬಿಡಿ ನಾಲ್ಕರ್ಧ-ಫಲವಾಗಿ ನನಗೆ ಹಿಡಿದ ಶನಿಯ ಹದಿನೈದರ್ಧ-ಸರ್ವತ್ರ ಬಾಧೆಯ ಫಲ-ಸ್ಥಳ ಭ್ರಷ್ಟ-ಕೌನ್ಸಿಲು ಭ್ರಷ್ಟ! ಹೇಳಿಬಿಟ್ಟೆ. ಕಂಡದ್ದನ್ನು ಹೇಳಿದರೆ ಹದ್ದಿನಂಥಾ ಮೋರೆ! ಮೋರೆಯನ್ನು ಹುಡುಕಿ ಹುಡುಕಿ ಸಾಕಾಯಿತು. ಎಲ್ಲೆಲ್ಲಿಯೂ ಸಿಡುಮೋರೆಗಳು! ಮುದ್ದು ಮೋರೆಗಳೆಲ್ಲಾ ಮುನ್ಸಿಪಾಲ್ ಕೌನ್ಸಿಲ್ ಚುನಾವಣೆಯಲ್ಲಿ ಕಲಾಸಾಯಿತಂತೆ! ಸಿಡುಮೋರೆ-ಬಿಸಿಬಿಸಿ! ಹಾ-ಹಾ-ಹಾ-ಕಿಲಿಕಿಲಿ ನಕ್ಕುಬಿಟ್ಟೆ. ನಗೆಯೋ-ದಗೆಯೋ-ದಗೆ ಎಂಬುದು ಹಗೆ! ಕೌನ್ಸಿಲು ಕೌನ್ಸಲರ ಹಗೆ-ದೇವಸ್ಥಾನ ದೆವ್ವಗಳ ಹಗೆ!

ಜ್ಞಾತಿಜ್ಞಾತಿಗೆ ವೈರ । ನೀತಿ ಮೂರ್ಖಗೆ ವೈರ ।
ಪಾತಕ ವೈರ ಸುಜನರ್ಗೆ । ಅರಿದವಗ್ಯಾತರ ವೈರ, ಸರ್ವಜ್ಞ ॥

ತಡೆಯಿರಿ! ನನಗೆ ಹಗೆಯವರಿಲ್ಲವೆಂದು ಆಯುಧ ಮರೆತುಬಿಟ್ಟೆ! ಒಲ್ಲಿದವನ ಹಗೇವು ತೆಗೆಯುವ ಹೊತ್ತಿಗೆ ಬಡವನ ಪ್ರಾಣ ಹೋದ ಹಾಗಾಯಿತು. ಲೈಟ್ ಹೌಸ್ ಹಿಲ್-ಲೈಟ್ ಅಂದರೆ ಹಗುರ, ಹೌಸ್ ಅಂದರೆ ಮನೆ, ಹಿಲ್ ಅಂದರೆ ಗುಡ್ಡ ಎಂಬದಾಗಿ ನಮ್ಮ ಹಳೇ ಅಚ್ಯುತ ಮಾಸ್ತರರು ಕಲಿಸಿದ್ದು ನೆನಪಿಗೆ ಬಂತು. ಗುಡ್ಡದ ಕನ್ನಡ ಸಂಧಿ ಹೇಳಲು ನಾನರಿಯೆ-ಅಲ್ಲಿ ಮನೆ ಬೀಳುವಾಗ-ನಮ್ಮ ಮುನ್ಸಿಪಾಲಿಟಿಯವರು ಎರಡು ಒಣ-ಅಲ್ಲಲ್ಲ ತಪ್ಪಿದೆ-ಒಳಕಾಯಿದೆಗಳನ್ನು ಜಾರಿಗೆ ತರಬೇಕೆಂದಿರುವರಂತೆ. ಅತೀ ಹೆಚ್ಚು ಕಟ್ಟೋಣಗಳು ಗುಂಪುಗುಂಪಾಗಿರುವುದನ್ನು ಮನ್ನಾಪಡಿಸುವದು; ಹೊಸತಾಗಿ ಕಟ್ಟಿಸುವ ಮನೆಯು ಬೋಗಟೆದಾರರಿಗೆ ಯಾ ನೆರೆಯ ನಿವಾಸಿಗಳಿಗೆ ಅಸ್ವಸ್ಥವಾಗುವ ಅಪಾಯವನ್ನು ಮಾಡುವುದಾಗಿ ಚೇಯರ್‌ಮೇನರೂ ಸೆನಿಟರಿ ಆಫೀಸರರೂ ಅಭಿಪ್ರಾಯಪಟ್ಟರೆ ಲೈಸನ್ಸ್ ಕೊಡದಿರುವುದೊಂದು! ಸ್ವಾಮಿ, ನನಗೆ ಚಿಂತೆ ಹಿಡಿದದೆ. ಚಿಂತೆಗೂ ಚಿತೆಗೂ ಒಂದು ಬಿಂಧಾಕ್ಷರ ಮಾತ್ರ ವ್ಯತ್ಯಾಸ. ನಮ್ಮನೆಗೂ ಪಾಯಿಖಾನೆಗೂ ಒಂದು ಗಜ ಮಾತ್ರ ದೂರ! ಕಟ್ಟೋಣಗಳನ್ನು ಮನ್ನಾಪಡಿಸಿದರೂ ಚಿಂತಿಲ್ಲ. ಗುಂಪುಗುಂಪಾಗಿರುವ ಪಾಯಿಖಾನೆಗಳ ಗಂಧಗಾಳಿಯ ಚಿತೆಯಿಂದ ನನ್ನನ್ನು ದೂರಮಾಡಬಾರದು! ಒಂದೊಂದು ತೋಟದಲ್ಲಿ ೩-೪ ಪಾಯಿಖಾನೆಗಳನ್ನಾದರೂ ಕಟ್ಟಿಸಲು ಲೈಸನ್ಸ್ ಕೊಡಬೇಕೆಂಬದೇ ನನ್ನ ಗೋಳು!! ಇನ್ನು ಕೌನ್ಸಿಲ್ಲರ ಕೋಲು ಎತ್ತ ತಿರುಗುತ್ತದೋ ನೋಡಬೇಕು.

ಆಹಾ! ಇನ್ನೊಂದು ಒಳಕಾಯಿದೆ-ಚೇಯರ್‌ಮೇನರ ಬರಹಮೂಲಕ ಅಪ್ಪಣೆ ವಿನಹಾ ಮುನ್ಸಿಪಾಲ್ ಗಡಿಯಲ್ಲಿ ರಾತ್ರೆ ೧೧ ಗಂಟೆಯ ನಂತರ ಟಮಕಿ, ಕಹಳೆ, ವಾದ್ಯ ಬಡಿಯಕೂಡದಂತೆ. ಇದನ್ನೆಲ್ಲಾ ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಿದ್ದಾರಂತೆ. ಜಿಲ್ಲಾ ಗಜೇಟು ನೋಡುವವರ್ಯಾರು? ಗ್ರಾಮ ಉದ್ಯೋಗಸ್ಥರು. ವರ್ತಮಾನ ಪತ್ರ ನೋಡುವವರ್ಯಾರು? ಸರ್ವರು! ವರ್ತಮಾನ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂಬ ಆಲೋಚನೆಯು ನಮ್ಮ ತಾತಾಲಯ ಮಹಾಪಿತರಿಗೆ ಬರಲಿಲ್ಲವೇನೋ? ಗಜೇಟು ಹುಡುಕಿ ತಲೆ ತಿರುಗಿತು. ಪಟೇಲರ ಸವಾರಿ ಕಾದು ಉಗ್ರಾಣಿದೇವರ ದರ್ಶನವಾಯಿತು. ಜಿಲ್ಲಾ ಗಜೇಟು ಎಲ್ಲಿ ಎಂದು ಕೇಳಿದ್ದೇ ಸರಿ-ತಲೆ ಅಲ್ಲಾಡಿಸಿ ಬಿಟ್ಟರು. ಇನ್ನೊಂದು ಸಲ ಕೇಳಿದೆ-ಪಟ್ಲೇಲರಿಗೆ ಓನಾಮ ಗೊತ್ತಿಲ್ಲವೆಂದರು. ಕೇಳಿ ಕೇಳಿ ನಾಲಿಗೆಯ ಪಸೆ ಆರಿತು. ಸೀಯಾಳ ಕೇಳಿಬಿಟ್ಟೆ-ನಾನು ಸರಕಾರಿ ನೌಕರರಲ್ಲವಂತೆ! ಪಟೇಲರಿಗೆ ಜುಡೀಶ್ಯಲ್ ಮತ್ತು ರೆವಿನ್ಯು ಎರಡು ಕೆಲಸಗಳಿವೆಯಂತೆ. ಕಾಗದ ಮೇಲೆ ಬತ್ತೀ ನೂಕಲಾರದ ಬಂಟ ಸರಕಾರದ ದಳ ನಡಿಸ್ಯಾನೇ? ಎಂದು ಹೇಳಿಬಿಟ್ಟೆ. ಪಟೇಲ ಕೆಲಸ ಮನೆತನದ ಹಕ್ಕಿನಿಂದ ಬಂದದ್ದೆಂದು ಉತ್ತರವಾಯಿತು. ನನ್ನ ಮನೆತನಕ್ಕೆ ಪಟೇಲರ ಹಕ್ಕಿಲ್ಲ. ಉಪಾಧ್ಯಾಯನ ಹಕ್ಕಿದೆ; ಉಪಾಧ್ಯಾಯನಾಗಲು ತರ್ಬೀತು ಶಾಲೆಗೆ ಸೇರಬೇಕಂತೆ! ತರ್ಬೀತು ಶಾಲೆಗೆ ಸೇರಲೋ-ಅಲ್ಲಿ ಮಿಶ್ಯನ್ ಪಂಚಮನು ಶುದ್ಧನಂತೆ-ರಂಗರಾಯರ ಪಂಚಮನು ಅಶುದ್ಧನಂತೆ!

ಶುದ್ಧ ತಾನೆಂದು ಪರರನು ಮುಟ್ಟದವ ಹೊಲೆಯ ।
ಹೊಲೆಯನೆಂದನ್ಯರನು ಕರೆವವನೆ ಹೊಲೆಯ ॥

ಇದು ಶ್ರೀಯುತ ಪೈಗಳವರ ಹಾಡು!

ನಾನು ಮಿಶ್ಯನ್ ಜಾತಿಗೆ ಸೇರಿಬಿಡುತ್ತೇನೆ. ಮಿಶ್ಯನ್ ಉಪಾಧ್ಯಾಯರಿಗೆ ನಾಲ್ಕು ಮಕ್ಕಳಾದೊಡನೆ ವರ್ಷಂಪ್ರತಿ ರೂಪಾಯಿ ಹನ್ನೆರಡು ಮಂಗಾಯಿ ಭತ್ತೆ ಸಿಕ್ಕುವುದೆಂದು ಹೊಸ ಹುಕುಂ ಬಂದದಂತೆ. ಸಿಕ್ಕಿದ್ದು ಮಕ್ಕಳ ಪುಣ್ಯ! ಹೇಳಲೇನು? ಮಿಶ್ಯನ್ ಜಾತಿಯೋ-ರೂಪಾಯಿ-ಪೈಗಳಲ್ಲಿದೆ ಎಂದು ಮಧ್ಯಸ್ಥನ ಹಾಡು! ನಾನೇನೋ ಹಾಡಬೇಕೆಂದಿದ್ದೆನು. ಮನಸ್ಸಿನಿಂದ ಜಾರಿಹೋಯಿತು. ಮನಸ್ಸು ಇದ್ದಲ್ಲಿ ಇರುವುದಿಲ್ಲ. ನಿಂತಲ್ಲಿ ನಿಲ್ಲುವದಿಲ್ಲ. ಆದ್ದರಿಂದಲೇ ಮನವು ಹಾಳು ಹೆಂಗಸಿನಂತಿದೆ ಎಂತ ಕವಿಯು ಹೇಳಿದ್ದಾನೆ.

ಸ್ವಾಮಿ, ನಿಮ್ಮಗೊಡವೆ ನನಗೆ ಬೇಡ-ನಾನು ಊರೇ ಬಿಟ್ಟು ಹೋಗುತ್ತೇನೆ.

ಊರು ಬಿಟ್ಟು ಪರವೂರಿಗೆ ಹೋದರೆ
ಪ್ರಾರಬ್ಧವು ತಾಂ ತಪ್ಪೀತೇ

ಎಂದು ದಾಸನು ನುಡಿದಿದ್ದಾನೆ. ಹುಟ್ಟಿದ ಊರಲ್ಲೇ ಸಾಯಬೇಕು. ಇದ್ದ ಜಾತಿಯಲ್ಲೇ ಉಳಿಯಬೇಕು. ಇದು ನನ್ನ ಮುತ್ತಜ್ಜನ ಮತ-ಇವನ ಮತ ನಂಬದೆ ನಾ ಕೆಟ್ಟೆನು! ಕೆಟ್ಟ ಮೇಲೆ ಬುದ್ಧಿ, ಸತ್ತ ಮೇಲೆ ದುಃಖ! ಅಲೇಕುಂ!! ಅಲ್ಲಲ್ಲ-ನಮಸ್ಕಾರ!.

ಅಪಿಕಲಾಟ.

ಪ್ರಕಟಣೆ.

ಮಂಗಳೂರು ಡಿ. ಮುನ್ಸಿಫ ಕೋರ್ಟಿನಲ್ಲಿ
ಸಂ 1912ನೇ ಇಸವಿ ಸ್ಮಾಲು ನಂಬ್ರ 54.
S. I. A. ನಂಬ್ರ $\frac{11}{12}$

ಯಂ. ಇಬ್ರಾಹಿಮ್ ಇಲಿಯಸ್‌ಸೇಟ್ ಈತನ ಪವರ್ ಅಫ್ ಎಟರ್ನಿ ಜಾನುಮಹಮ್ಮದ್ ಇಲಿಯಸ್, ಮಂಗಳೂರು ಶಹರ್. } ವಾದಿ.

ಮತ್ತು

1. ಬಾವಾದಾದಾಶೇಟ್ . . . .
2. ಅಲ್ಲಿಮಹಮ್ಮದ್ ಹಾಜಿಸಕೂರಸೇಟ್ ಜವಳಿ ವ್ಯಾಪಾರಸ್ಥರು } ಪ್ರತಿ ವಾದಿರು.

ಮಂಗಳೂರು ಶಹರ್.

ಮಂಗಳೂರು ಶಹರ ಮೇಮನಮಹಜೀದಿಗೆ ಸಮ್ಮಂಧಪಟ್ಟ ಅಂಗಡಿ ಬಾಬತು ಪ್ರತಿವಾದಿರಿಂದ ಬಹ ಬಾಡಿಗೆ ಅದರ ಮೇಲಣ ಬಡ್ಡಿ ಕೂಡಾ ರೂ. 142-9-0 ಪ್ರತಿವಾದಿರಿಂದ ಬರಮಾಡಿಕೊಳ್ಳುವರೆ ಸದರಿ ಮಹಜೀದಿಯ ಆಡಳತೆದಾರ ವಾದಿಯು ಈ ಕೋರ್ಟಿನಲ್ಲಿ ಮೇಲ್ಕಂಡ ವ್ಯಾಜ್ಯ ದಾಖಲು ಮಾಡಿರುತ್ತಾನೆ. ಆ ಕುರಿತು ಆಕ್ಷೇಪ ಉಳ್ಳವರು ಇದೇ ಇಸವಿ ಫೆಬ್ರುವರಿ ತಾ. 22ನೇ ದಿನ ಹಗಲು ಘಂಟೆ 11ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

ನಮ್ಮ ದಸ್ಕತು ವ ಮೊಹರ ನಿಶಿ ಕೊಡೋಹಾದ ತಾ. 3ನೇ ಫೆಬ್ರವರಿ 1912ನೇ ಇಸವಿ.

(*Sd.*) **B. Krishna Rau,**
District Munsif.

ವಿದೇಶ ವೃತಾಂತ.

ಪೋರ್ಚುಗಲಿನ ಎವೋರ ಎಂಬ ಜಿಲ್ಲೆಯ ಕೆಲಸಗಾರರು ಮುಷ್ಕರ ಹಿಡಿದು ಲೂಟಿಮಾಡಲು ಪ್ರಾರಂಭಿಸಿದ್ದರಿಂದ ಅಲ್ಲಿಯ ಟ್ರಿಮ್ ಬಂಡಿಗಳು ನಿಲ್ಲಿಸಲ್ಪಟ್ಟವು. ಸೈನೀಕರ ಸಹಾಯದಿಂದ ಮಾತ್ರವೇ ಕೆಲವು ಬಂಡಿಗಳು ನಡಿಸಲ್ಪಟ್ಟವು. ದಂಗೆಗಾರರ ಉಪಟಳವು ಬಹಳ ಮಿತಿಮೀರಿದ್ದರಿಂದ ಸೈನೀಕರು ಸಿಕ್ಕಿ ಸಿಕ್ಕಿದ ದಂಗೆಗಾರರನ್ನು ಹಿಡಿದು ಕೈದು ಮಾಡಿದರು. ಒಟ್ಟಿಗೆ ೧೬೦೦ ಮಂದಿಯು ಕೈದು ಮಾಡಲ್ಪಟ್ಟರು. ದಂಗೆಗಾರರು ಒಬ್ಬ ಅಧಿಕಾರಿಯನ್ನು ಹಿಡಿದು ಕೊಚ್ಚಿ ಕೊಚ್ಚಿ ಹಾಕಿದರು. ಎಲ್ಲಾ ಅಂಗಡಿಗಳು ಮುಚ್ಚಲ್ಪಟ್ಟದೆ ಎಂಬ ವಾರ್ತೆ ಬಂದಿರುವದು.

ಇಂಗ್ಲಾಂಡಿನಲ್ಲಿ ಹೆಚ್ಚಾಗಿ ಹಿಂ ಬಿದ್ದದರಿಂದ ತೇಮ್ಸ್ ನದಿಯಲ್ಲಿ ನೆರೆಬಂದು ಸುಮಾರು೧೦೦ ಎಕ್ರೆ ಸ್ಥಳವು ನೆರೆಯ ಪಾಲಾಗಿರುವದು.

ಏಮೆನಿನ ತುರ್ಕರ ಕೋಟೆಗೆ ಇಟಲಿಯರು ತೋಪು ಹಾರಿಸ ಪ್ರಾರಂಭಿಸಿದ್ದಾರೆ. ಫ್ರೆಂಚರು ನೋಬ ಹಡಗದಲ್ಲಿ ಹಿಡಿಯಲ್ಪಟ್ಟ ೨೭ ತುರ್ಕರು ರೆಡ್‌ಕ್ರಿಸೆಂಟ್ ಎಂಬ ಸಹಾಯಕ ಸಂಘದ ಉಪಚಾರಕರು ಬದಾಗಿ ತಿಳಿದು ಬಂದದರಿಂದ ಅವರೆಲ್ಲರಿಗೆ ಸಾಪ್ಸ್ ಎಂಬಗೆ ಹೋಗಲು ಇಟಾಲಿಯರು ಅಪ್ಪಣೆ ಕೊಟ್ಟದ್ದಾರೆ. ಲನೆಯವನೊಬ್ಬನು ಕಾಯಿಲೆಯಲ್ಲಿರುವುದರಿಂದಲೂ ನೆಯವನು ರೆಡ್ ಕ್ರಿಸೆಂಟಿನ ಉಪಚಾರಕನೆಂಬದಕ್ಕೆ ತಆಧಾರವಿಲ್ಲದ್ದರಿಂದಲೂ ಇವರನ್ನು ಬಿಡಲಿಲ್ಲ.

ಕಳದ ತಾ. ೩೦ರಲ್ಲು ಇಟಾಲಿಯರುಮೆನಿನ ಬಳಿ ತುರ್ಕರ ಒಂದು ದೋಣಿಯನ್ನು ಹಿಡಿ೧೯೦ ಮಂದಿಯನ್ನು ಶೆರೆ ಹಿಡಿದರು. ತಪ್ಪಿಸಿಕೊಂಡು ೧ ಈಜಾಡುತ್ತಿದ್ದ ಇಬ್ಬರನ್ನು ಕೊಂದರು. ಇಟಾಲಿಯ ಜನವರಿ ೨೪ರಲ್ಲು ಹೋವ ಎಂಬ ಪಟ್ಟಣಕ್ಕೂ ೨೭ರ ಡೆಜ್‌ಬಾನ ಎಂಬ ಪಟ್ಟಣಕ್ಕೂ ತೋಪು ಹಾರಿಸಿ ಅವುಗ್ನ ವಶಮಾಡಿಕೊಂಡಿರುವರು.

ವಿಮಾನಗಾಮಿಗಳಾದ ಸಿಗ್‌ನೊರ್ ... ಮತ್ತು ಕೆಪ್ಟನ್ ಮೊಂಟ್ ಎಂಬ ಇಬ್ಬರು ತೋ: ಎಂಬಲ್ಲಿ ತುರ್ಕರ ಸೈನ್ಯಪಡೆ ಇರುವ ಸ್ಥಳದ ಮೆದ ಹಾರಿ ತುರ್ಕರ ಮೇಲೆ ಸಿಡಿಮದ್ದುಗಳನ್ನು ಬಿಸಾಡಿ ತುರ್ಕರು ಕೆಳಗಿನಿಂಗ ಇವರ ಮೇಲೆ ಕೋವಿ ಬಿಟ್ಟ ನಾಲ್ಕು ತೋಪುಗಳು ವಿಮಾನಕ್ಕೆ ತಾಗಿ ಕೆಪ್ಟನ್ ಮೆ ಎಂಬವನಿಗೆ ಘಾಯವಾಯಿತು. ಜನವರಿ ೩೦ ಗಾಜಿಯಲ್ಲಿ ಆದ ಯುದ್ಧದಲ್ಲಿ ಇಟಾಲಿಯರಲ್ಲಿ ... ಜನ ಮಡಿದಿರುವರು. ಕಡೆಗೆ ತುರ್ಕರು ಹಿಮ್ಮೆಟ್ಟರು. ಟ್ರಿಪೋಲಿ ಯುದ್ಧದಲ್ಲಿ ಇಟಾಲಿಯರಿಗೆ ಈ ಐದುವರೆ ಮಿಲಿಯ ಪವನುಗಳು ಖರ್ಚಾಗಿರುವದು.

ಜನವರಿ ೨೭ರಲ್ಲು ಇಟಾಲಿಯರು ... ಎಂಬ ಕೋಟೆಗೆ ೧೫೦೦ ತೋಪು ಹಾರಿಸಿ ಎರಡು ...ಳನ್ನು ಸುಟ್ಟರಲ್ಲದೆ ಒಂದು ಆಡನ್ನು ಕೊಂದಿರುವರು

ಐರ್ಲಾಂಡಿನ ಹೋಮ್ ರೂಲ್ ಮಸೂದೆಯ ವಾಗಿ ಲಿಬರಲ್ ಪಕ್ಷದ ಮೆ| ಚರ್ಚಿಲರವರು ಬೆಲ್ಪಾಷ್ಟಿನಲ್ಲಿ ...ಲರಲ್ಲು ಭಾಷಣ ಕೊಡಲಿಕ್ಕಿದ್ದಾರೆ... ತಷ್ಟೆ. ಈ ದಿನ ಬೆಲ್‌ಪಾಷ್ಟಿನಲ್ಲಿ ಏನಾದಂಗೆ ...ನೆಯ ಬಹುದೆಂದು ಊಹಿಸಲ್ಪಟ್ಟಿರುವುದರಿಲ್ ಪಾಷ್ಟಿನ ಕ್ಲಬುಗಳಲ್ಲಿ ಆ ದಿನ ೩೦ ಸಾವಿರ ಆಯುಧಪಾಣಿಗಳಾದ ಜನರಿರುವರು. ಫೆಬ್ರುವರಿ ೮ನೇ ದಿನ ಮೆ| ಚರ್ಚಿಲರವರು ಬೆಲ್‌ಪಾಷ್ಟನ್ನು ಹಾದು ಭಾಷಣ ಕೊಡುವ ಸ್ಥಳಕ್ಕೆ ಹೋಗುವಾಗ ಏನಾದರೂ ಗೊಂಡಲವು ನಡೆಯದ ಹಾಗೆ ಪೋಲೀಸಿನವರಿಗೆ ಸಹಾಯವಾಗಿ ೫೦೦೦ ಸೈನೀಕರು ಸ್ಪೆಶ್ಯಲ್ ಡ್ಯೂಟಿಯ ಮೇಲೆ ನೇಮಿಸಲ್ಪಟ್ಟಿರುವರು.

ಬ್ರಿಟಿಷ್ ಗೂಢಾಚಾರ್ಯನೆಂದು ಜರ್ಮನಿಯಲ್ಲಿ ಹಿಡಿಯಲ್ಪಟ್ಟ ಮೆ| ಸ್ಟ್ಯೂವರ್ಟ್ ಎಂಬವನಿಗೆ ಮೂರುವರೆ ವರುಷ ಸಜಾ ವಿಧಿಸಲಾಯಿತು. ತೀರ್ಮಾನವು ಕೊಡಲ್ಪಟ್ಟ ಕೂಡಲೇ ಮೆ| ಸ್ಟ್ಯೂವಾರ್ಟರು "ನಾನು ನಿರಾಪರಾಧಿ, ಈ ಸಂಗತಿಯು ಇಂಗ್ಲಾಂಡಿನ ಪ್ರತಿ ಒಬ್ಬನಿಗೆ ತಿಳಿದಿರಬೇಕು" ಎಂದು ಹೇಳಿದರು.

ಕಳದ ಶನಿವಾರ ಜೋರ್ಜ ಚಕ್ರವರ್ತಿಯವರ ಮೆಡಿನಾ ಹಡಗವು ಸ್ಪಿತ್‌ಹೆಡ್ ಎಂಬಲ್ಲಿಗೆ ಮುಟ್ಟಿತು. ಪ್ರಿನ್ಸ್ ಅಫ್ ವೇಲ್ಸರವರೂ, ಅಲೇಕ್ಷಾಂದ್ರ ರಾಣಿಯವರೂ, ಪ್ರಿನ್ಸೆಸ್ ಕೊನ್ನಾಟರವರೂ ಚಕ್ರವರ್ತಿಯವರನ್ನು ಎದುರ್ಗೊಳ್ಳುವರೆ ಶನಿವಾರ ಸಾಯಂಕಾಲ ಪೋರ್ಟ್ಸ್‌ಮೌತಿಗೆ ಹೋಗಿರುವರು.

ಜೋರ್ಜ ಚಕ್ರವರ್ತಿ ಚಕ್ರವರ್ತಿನಿಯವರು ಪೋರ್ಟ್ಸ್‌ಮೌತಿಗೆ ಕ್ಷೇಮವಾಗಿ ಮುಟ್ಟಿದರು. ಪ್ರಿನ್ಸ್ ಅಫ್ ವೇಲ್ಸರವರೂ, ಅಲೆಕ್ಷಂದ್ರ ರಾಣಿಯವರೂ ಹಡಗಕ್ಕೆ ಹೋಗಿ ಊಟ ತೀರಿಸಿ ಒಟ್ಟಿಗೆ ಹಡಗದಿಂದಿಳಿದರು. ಪೋರ್ಟ್ಸ್‌ಮೌತಿನಲ್ಲಿ ಚಕ್ರವರ್ತಿಯವರಿಗೆ ಒಂದು ಬಹುಮಾನ ಪತ್ರವು ಒಪ್ಪಿಸಲಾಯಿತು. ಚಕ್ರವರ್ತಿಯವರು ಹಿಂದೂಸ್ಥಾನದ ಪ್ರಜೆಗಳ ರಾಜಭಕ್ತಿಯನ್ನು ನೋಡಿ ತಾನು ತುಂಬಾ ಸಂತೋಷ ಪಟ್ಟೆನೆಂದೂ ತಾನು ಹಿಂದೂಸ್ಥಾನಕ್ಕೆ ಮಾಡಿದ ಪ್ರಯಾಣವು ಹಿಂದೂಸ್ಥಾನದ ಪ್ರಜೆಗಳಿಗೆ ಹಿತವೂ ಕಲ್ಯಾಣವೂ ಆಗುವ ಹಾಗೆ ಕೈಗೂಡಬೇಕೆಂದು ಅಪೇಕ್ಷಿಸುತ್ತೇನೆ ಎಂಬದಾಗಿಯೂ ಹೇಳಿದರು.

ಅಲ್ಲಿಂದ ಚಕ್ರವರ್ತಿಯವರು ಪರಿವಾರ ಸಮೇತ ಅಗ್ಗಾಡಿ ಹತ್ತಿ ಲಂಡನಿಗೆ ಹೊರಟರು. ಲಂಡನಿನಲ್ಲಿ ಈಗ ಅಪರಿಮಿತವಾದ ಛಳಿಕಾಲವಾಗಿದ್ದರೂ ಅಲ್ಲಿಯ ಜನರು ರೈಲ್ವೇ ಸ್ಟೇಶನಿನಲ್ಲಿ ಗುಂಪು ಗುಂಪಾಗಿ ಕೂಡಿ ಬಂದಿದ್ದರಲ್ಲದೆ ರಾಜ ಕುಟುಂಬದವರೂ, ಪ್ರಧಾನ ಮಂತ್ರಿಯವರೂ ಪಾರ್ಲಿಮೆಂಟ್ ಸಭಾ ಮಂದಿರದ ಪ್ರಭುಗಳೂ ಬಂದಿದ್ದು ವಿಕ್ಟೋರಿಯ ರೈಲ್ವೇ ಸ್ಟೇಶನಿನಿಂದ ಮೆರವಣಿಗೆ ಹೊರಟು ಬಕ್ಕಿಂಗ್ಹಾಮ್ ಅರಮನೆಗೆ ಹೋದರು. ಅರಮನೆಗೆ ತಲಪಿದ ನಂತರ ಕೂಡಿದ ಜನಸಂದಣಿಯು ಧನ್ಯವಾದವನ್ನಿತ್ತು ಅಗಲಿದರು.

ಚಕ್ರವರ್ತಿಯವರು ದೇವರ ದಯೆಯಿಂದ ಸುಕ್ಷೇಮಿಯಾಗಿ ಈ ಮಹಾ ಪ್ರಯಾಣವನ್ನು ತೀರಿಸಿ ಬಂದದಕ್ಕಾಗಿ ಬಗವಂತನಿಗೆ ಸ್ತೋತ್ರ ಮಾಡುವರೆ ವೆಸ್ಟ್‌ಮಿನಿಸ್ಟರ್ ಮೊದಲಾದ ದೇವಾಲಯಗಳಲ್ಲಿ ದೇವಾರಾಧನೆಗಳು ನಡೆಯಿತು.

ಚೀನ ಸರಕಾರ ಕಡೆಯ ಯು ಅನ್ ಸಿಕಾಯಿರವರೂ ಪ್ರಜಾ ಕಡೆಯ ಸನ್ ಎಟ್ ಸೆನ್‌ರವರೂ ಕೂಡಿಕೊಂಡು ಪ್ರಜಾಧಿಪತ್ಯವನ್ನು ಸ್ಥಾಪಿಸುವರೆಂಬದಾಗಿ ರಾಜಶಾಸನವು ಹೊರಟಿರುವದು. ಇನ್ನು ದಂಗೆ ಇತ್ಯಾದಿಗಳು ನಡಿಯಲಿಕ್ಕಿಲ್ಲ ಎಂದು ತಿಳಿದು ಬರುತ್ತದೆ.

ಉತ್ತರ ಹಿಂದುಸ್ಥಾನ.

ಬಂಗಾಳ ವಿಭಜನೆಯನ್ನು ರದ್ದು ಮಾಡಿದ್ದರಿಂದ ಪಶ್ಚಿಮ ಬಂಗಾಳದ ಮಮ್ಮದೀಯರ ಹಕ್ಕು ಸ್ವಾತಂತ್ರಗಳು ಸುರಕ್ಷಿತವಾಗಿ ಉಳಿಯುವ ಬಗೆ ಹೇಗೆಂಬದನ್ನು ಕೇಳುವರೆ ಮಹಮ್ಮದೀಯ ಪ್ರತಿನಿಧಿಗಳು ಕಳದ ತಾ. ೩೧ರಲ್ಲು ವೈಸರಾಯರವರಿಗೆ ಭೇಟಿಕೊಟ್ಟರು. ಈ ಸಂದರ್ಭದಲ್ಲಿ ವೈಸರಾಯರವರು ಹೊಸ ಸಂಸ್ಥಾನದ ಗವರ್ನರರು ಡಕ್ಕಾದಲ್ಲಿದ್ದು ಮಹಮ್ಮದೀಯರ ಮತ್ತು ಪಶ್ಚಿಮ ಬಂಗಾಳದ ಸ್ವಾತಂತ್ರಗಳ ವಿಷಯ ಹೆಚ್ಚಿನ ಜಾಗ್ರತೆ ತಕ್ಕೊಳ್ಳುವರೆಂದೂ ಡಕ್ಕದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವರೆಯೂ ಪಶ್ಚಿಮ ಬಂಗಾಳಕ್ಕೆ ವಿದ್ಯಾಖ್ಯಾತೆ ಸಂಬಂಧವಾಗಿ ಒಬ್ಬ ಸ್ಪೆಶ್ಯಲ್ ಹುದ್ದೆದಾರರನ್ನು ನೇಮಿಸುವರೆಯೂ ಸರಕಾರದವರು ಸ್ಟೇಟ್ ಸೆಕ್ರಟರಿಯವರಿಗೆ ಬರಕೊಳ್ಳಲು ನಿಷ್ಕರ್ಷಿಸಿರುವರೆಂದು ಹೇಳಿದರಲ್ಲದೆ ಹೊಸ ಕಾರ್ಯನಿರ್ವಾಹಕ ಸಭೆಯಲ್ಲಿಯೂ ಮಹಮ್ಮದೀಯರ ಹಕ್ಕು ಸ್ವಾತಂತ್ರವು ಕಾಯಲಾಗುವುದೆಂದೂ ಅಭಯವಿತ್ತರು. ಸರಕಾರಿ ಕೆಲಸಗಳಲ್ಲಿ ಮಹಮ್ಮದೀಯರನ್ನು ಹೆಚ್ಚಾಗಿ ನೇಮಿಸಬೇಕೆಂಬದಾಗಿ ಈ ಪ್ರತಿನಿಧಿಗಳು ಕೇಳಿಕೊಂಡಲ್ಲಿ ವೈಸರಾಯರವರು ಸರಕಾರಿ ಕೆಲಸಗಳಿಗೆ ನೇಮಿಸಲ್ಪಡುವುದು ಸಾಮರ್ಥ್ಯದ ಮೇಲೆ ಹೊಂದಿಕೊಂಡಿರುತ್ತದಾದ್ದರಿಂದ ಇದಕ್ಕೆ ತಾನು ಅಭಯವನ್ನೀಯ ಕೂಡದೆಂದೂ ಮಹಮ್ಮದೀಯರಲ್ಲಿ ಆಯಾ ಕೆಲಸಗಳಿಗೆ ಉತ್ತೀರ್ಣರಾದವರಿದ್ದರೆ ಅವರಿಗೂ ಸರಕಾರಿ ಕೆಲಸ ಕೊಡಲ್ಪಡುವದೆಂದೂ ಹೇಳಿದರು.

ಡಕ್ಕದಲ್ಲಿ ವಿಶ್ವಾವಿದ್ಯಾಲಯವನ್ನು ಸ್ಥಾಪಿಸುವದು ಅನಾವಶ್ಯವೆಂದು ಬಂಗಾಳದ ಆಯಾ ಪತ್ರಿಕೆಗಳು ಪ್ರತಿಪಾದಿಸುತ್ತಲಿವೆ.

ಬೇರಿಷ್ಟರರಾಗಿರುವ ಮೆ. ಸಯ್ಯಾದ್ ಹುಶೇನ್ ಇಮಾಮರವರೂ, ಮೆ. ಅಶುತೋಷ್ ಚೌದುರಿಯವರೂ ಬಂಗಾಳ ಹ್ಯಾಕೋರ್ಟಿನ ಜಡ್ಜರಾಗಿ ನೇಮಿಸಲ್ಪಟ್ಟಿರುವರು.

ಜನವರಿ ತಾ. ೨೭ಕ್ಕೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ೧೪,೩೮೧ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೧,೯೭೭ ಮಂದಿಯು ಮೃತಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟಂದರೆ:—ಮುಂಬಾಯಿ ೧,೯೭೫; ಮದ್ರಾಸು ೪೧೮; ಬಂಗಾಳ ೧,೭೪೦; ಸಂಯುಕ್ತ ಸಂಸ್ಥಾನ ೪,೦೨೩; ಪಂಜಾಬು ೨೦೦; ಬರ್ಮ ೯೧; ಮಧ್ಯಸಂಸ್ಥಾನ ೧,೩೩೧; ಹೈದರಾಬಾದ್ ೧,೫೭೮; ಮೈಸೂರು ೩೩೦; ಸೆಂಟ್ರಲ್ ಇಂಡಿಯ ೨೬೨ ಮರಣಗಳಾದವು.

ಬಹುಮಾನಪಟ್ಟ ಮೆ| ಸಮ್ಮುದ್ದ್ ಹುದ್ದಾ ಎಂಬವರು ಹೊಸ ಬಂಗಾಳದ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿಯೂ ದರ್ಬಂಗ ಮಹಾರಾಜರವರು ಬಿಹಾರ್, ಚೋಟಾ ನಾಗಪುರ, ಮತ್ತು ಒರಿಸ್ಸಾ ಕೂಡಿದ ಹೊಸ ಸಂಸ್ಥಾನದ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿಯೂ ನೇಮಿಸಲ್ಪಟ್ಟಿರುವರು.

ಬಂಗಾಳದ ವಿದ್ಯಾಖ್ಯಾತೆಯ ಅಸಿಸ್ಟಾಂಟ್ ಡಿರೆಕ್ಟರರಾಗಿರುವ ಮೆ| ಇ. ಎಲ್. ವೆಸ್ಟನ್ ಎಂಬವರು ಕುದುರೆಯಿಂದ ಬಿದ್ದು ಪರವನ್ನೈದಿದರು.

ಮಿಸಿಸ್ ಅನ್ನಿ ಬೀಸೆಂಟ್‌ರವರು ಪುನಃ ಇಂಗ್ಲಾಂಡಿಗೆ ಹೋಗಲು ಮುಂಬಾಯಿಗೆ ಬಂದು ಹಡಗ ಹತ್ತಿದರು.

ಮಿಡ್ನಾಪುರ ಮಾನನಷ್ಟ ಮೊಕದಮೆಯ ಅಪೀಲು ತನಖಿಯಲ್ಲಿ ಪ್ರತಿವಾದಿಯರ ಕಡೆಯ ವಕೀಲರಾದ ಮೆ| ಗಾರ್ತ್ ಎಂಬವರು ಪ್ರತಿವಾದಿಯರಾದ ಮೆ| ವೆಸ್ಟನರಿಗೂ ಇತರ ಇಬ್ಬರು ಪೋಲೀಸ್ ಹುದ್ದೆದಾರರಿಗೂ ಕೆಲಸಕ್ಕೆ ಬಡ್ತಿ ಆಗಿತ್ತು; ಆದರೆ ಜಸ್ಟಿಸ್ ಫ್ಲೆಚ್ಚರರವರ ತೀರ್ಮಾನದನಂತರ ಇವರ ಬಡ್ತಿಯು ರದ್ದು ಪಡಿಸಲಾಯಿತು. ಆದ್ದರಿಂದ ಈ ಮೊಕದಮೆಯ ಅಪೀಲು ತನಖಿಯು ಬೇಗನೇ ಪ್ರಾರಂಭವಾಗುವುದು ಉತ್ತಮವೆಂಬದಾಗಿ ಹ್ಯಾಕೋರ್ಟಿನವರನ್ನು ಕೇಳಿಕೊಂಡಿರುವದರಿಂದ ಈ ಅಪೀಲ್ ತನಖಿಯು ಎಪ್ರೀಲ್ ತಾ. ೧ಂಕ್ಕೆ ಪ್ರಾರಂಭವಾಗುವದು.

ಕಲ್ಕತ್ತೆಯ ಸರ್ ಆರ್. ಲೊಯಿಡ್ ಲಾ ಎಂಬ ಮಹನೀಯರು ಕಲ್ಕತ್ತೆಯ ಯುವಜನಸಮಾಜಕ್ಕೆ ೬೫,೦೦೦ ರೂಪಾಯಿ ದಾನ ಮಾಡಿರುವರು. ಇವರು ಈಚೆಗೆ ಯೂರೋಪಿಯಾನರ ವಿದ್ಯಾಭಿವೃದ್ಧಿಗಾಗಿ ಶಾಲೆಗಳನ್ನು ಸ್ಥಾಪಿಸುವರೆ ಏಳು ಲಕ್ಷ ರೂಪಾಯಿ ದಾನ ಮಾಡಿದ್ದರು.

ಮುಂಬಾಯಿಯ ಪೂನೆ ಮೊದಲಾದ ಸ್ಥಳಗಳಲ್ಲಿ ಪ್ಲೇಗಬೇನೆಯ ಹಾವಳಿಯು ಹೆಚ್ಚಾಗುವಂತೆ ತೋರುತ್ತದೆ. ಪೂನ ಮತ್ತು ಕರ್ಕಿ ಎಂಬ ಸ್ಥಳಗಳಲ್ಲಿ ಹಲವು ಸಾಹುಕಾರರು ತಂತಮ್ಮ ಅಂಗಡಿಗಳನ್ನು ಮುಚ್ಚಿರುವರು.

ವೈಸರಾಯರವರ ಪತ್ನಿಯ ಸಹೋದರರೊಬ್ಬರು ಕಲ್ಕತ್ತೆಯಲ್ಲಿ ಕಾಯಿಲೆಯಲ್ಲಿರುವುದರಿಂದ ವೈಸರಾಯರವರು ಬೆನಾರಿಸ್, ಲಕ್ನೌ ಮೊದಲಾದ ಸ್ಥಳಗಳಿಗೆ ಮಾಡಲಿಕ್ಕಿದ್ದ ಪ್ರಯಾಣವನ್ನು ಮುಂದರಿಸಿಟ್ಟಿರುವರು.

ಹಿಂದೂಸ್ಥಾನ ಸರಕಾರದ ಹೋಮ್ ಡಿಪಾರ್ಟ್‌ಮೆಂಟಿನ ಸೆಕ್ರಟರಿಯಾಗಿರುವ ಸರ್ ಆರ್ಚಿಡೇಲ್ ಅರ್ಲರವರು ಆಸ್ಸಾಮಿನ ಚೀಫ್ ಕಮಿಷನರಾಗಿ ನಿಯಮಿಸಲ್ಪಟ್ಟಿರುವುದರಿಂದ ಇವರ ಸ್ಥಾನಕ್ಕೆ ಬಹುಮಾನಪಟ್ಟ ಮೆ| ಎಚ್. ವೀಲರ್ ಐ. ಸಿ. ಎಸ್. ರವರು ನೇಮಿಸಲ್ಪಡುವರೆಂದು ತಿಳಿದು ಬರುತ್ತದೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಸಂಸ್ಥಾನದ ಗವರ್ನರರಾಗಿರುವ ಕಾರ್ಮಿಕಯೇಲ್ ಪ್ರಭುಗಳವರನ್ನು ಹೊಸ ಬಂಗಾಳ ಸಂಸ್ಥಾನಕ್ಕೆ ಗವರ್ನರರಾಗಿ ನೇಮಿಸದೆ ಮದ್ರಾಸಿನಲ್ಲಿಯೇ ಇರಗೊಡಿಸಬೇಕೆಂದೂ ಒಂದು ವೇಳೆ ಇದು ಅನಾನುಕೂಲವೆಂದು ಕಂಡುಬಂದರೆ ಹಿಂದೂಸ್ಥಾನದಲ್ಲಿ ಸಿವಿಲ್ ಹುದ್ದೆದಾರರಾಗಿದ್ದ ಲೆಪ್ಟನೆಂಟ್ ಗವರ್ನರರ ಸ್ಥಾನದಲ್ಲಿರುವ ಯಾರನ್ನೂ ಮದ್ರಾಸಿಗೆ ಗವರ್ನರರಾಗಿ ನೇಮಿಸದೆ ಶೀಮೆಯಿಂದಲೇ ರಾಜನೀತಿನಿಪುಣರಾದ ಉದಾರ ಪಕ್ಷದವರಲ್ಲಿ ಒಬ್ಬರನ್ನು ಕಳುಹಿಸಿಕೊಡಬೇಕೆಂದೂ ಕಳೆದ ವಾರ ಮದ್ರಾಸಿನಲ್ಲಿ ಈ ಸಂಬಂಧ ಕೂಡಿದ ಸಾರ್ವಜನಿಕ ಸಭೆಯ ಅಧ್ಯಕ್ಷರಾಗಿದ್ದ ದಿವಾನ್ ಬಹದ್ದೂರು ಪಿ. ರಾಜರತ್ನ ಮೊದಲಿಯರವರು ಸ್ಟೇಟ್‌ಸೆಕ್ರಟರಿಯ ಮೂಲಕ ಚಕ್ರವರ್ತಿಯವರಿಗೆ ತಂತೀ ಬಿಟ್ಟಿರುವರು.

ಹಿಂದೂಸ್ಥಾನದ ಮುಖ್ಯ ಸೇನಾಧಿಪತಿಯಾಗಿರುವ ಸರ್ ಒ. ಮೂರು ಕ್ರೀಯರವರು ಸಿಕಂದರಾಬಾದನ್ನು ಸಂದರ್ಶಿಸಿ ತಾ. ೨ರಲ್ಲು ಮದ್ರಾಸಿಗೆ ಬಂದು ತಲಪಿರುವರು.

ಮದ್ರಾಸ್ ಸ್ಮಾಲ್ ಕೋಸೆಸ್ ಕೋರ್ಟಿನ ಚೀಫ್ ಜಡ್ಜರಾದ ಮೆ| ಬೆಕ್‌ವೆಲ್ಲರವರು ಮದ್ರಾಸ್ ಹ್ಯಾಕೋರ್ಟಿನ ಜಡ್ಜರಾಗಿ ನಿಯಮಿಸಲ್ಪಟ್ಟದ್ದರಿಂದ ಇವರ ಬದಲಿಗೆ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಾದ ಮೆ| ಬರ್ಡರವರು ಮೊಕರೂರಾಗುವುರೆಂದು ವಾರ್ತೆ ಇತ್ತು. ಆದರೆ ಸ್ಮಾಲ್ ಕೋಸೆಸ್ ಕೋರ್ಟಿನ ಮೆ| ಕೃಷ್ಣಾನ್ ಎಂಬವರು ಆ ಕೋರ್ಟಿನಲ್ಲಿ ಆರು ವರ್ಷಗಳಿಂದ ಜಡ್ಜರಾಗಿದ್ದರಲ್ಲದೆ ಹಂಗಾಮಿ ಚೀಫ್ ಜಡ್ಜರಾಗಿದ್ದು ಮೆ| ಬರ್ಡರಿಗಿಂತಲೂ ಹೆಚ್ಚಿನ ಯೋಗ್ಯತೆಯುಳ್ಳವರೆಂಬದಾಗಿ ಆಯಾ ಪತ್ರಿಕೆಗಳು ಪ್ರತಿಪಾದಿಸಿದವು. ಆದರೆ ಈಗ ಮೆ| ಕೃಷ್ಣಾನರವರೇ ಸದರಿ ಕೋರ್ಟಿನ ಚೀಫ್ ಜಡ್ಜರಾಗಿ ಮೊಕರೂರಾದರು ಎಂಬದಾಗಿ ತಿಳಿಸಲು ಸಂತೋಷ ಪಡ ಬೇಕಾಗಿದೆ. ಚೀಫ್ ಜಡ್ಜರಾಗಿ ಯೂರೋಪಿಯಾನರೇ ನಿಯಮಿಸಲ್ಪಡಬೇಕೆಂಬ ವಾದಾನುವಾದವು ಇದ್ದದರಿಂದ ಒಂದು ಕಾಲದಲ್ಲಿ ಈ ಕೆಲಸದ ಯೋಗ್ಯತೆ ಪಡದಿದ್ದ ಮಾಜಿ ದಿವಾನ್ ಬಹದ್ದೂರ್ ಸುಬ್ರಮಣ್ಯರವರು ಕೂಡಾ ಈ ಕೆಲಸಕ್ಕೆ ನೇಮಿಸಲ್ಪಡಲಿಲ್ಲ. ಆದರೆ ನಮ್ಮ ಈಗಿನ ಉದಾರ ಗವರ್ನರರಾದ ಕಾರ್ಮಿಕಯೇಲ್ ಪ್ರಭುಗಳ ಆಡಳಿತೆಯು ಜಾತಿ ವಿಜಾತಿ ನೋಡದೆ ಯೋಗ್ಯತೆಯನ್ನು ಆಧರಿಸಿ ಕೆಲಸವನ್ನು ನೇಮಿಸುವಂಥಾದ್ದಾಗಿ ಕಂಡು ಬಂದದ್ದು ಸಂತೋಷವೇ ಸೈ.

ಟ್ರಿಪೋಲಿಯಲ್ಲಿ ಸಂಕಷ್ಟ ಪಡುತ್ತಿರುವ ತುರ್ಕರ ಸಹಾಯಾರ್ಥವಾಗಿ ಮದ್ರಾಸಿನ ಟ್ರಿಪೋಲಿ ರಿಲೀಫ್ ಫಂಡಿನವರು ಈ ತನಕ ೨೧,೧೪೪ ರೂಪಾಯಿ ಕಳುಹಿಸಿ ಕೊಟ್ಟಿರುವರು.

ತಿನ್ನವೆಲ್ಲಿ ಮಾಜಿ ಕಲೆಕ್ಟರರಾದ ಎಷ್. ದೊರೆಗಳ ಕೊಲೆ ಮೊಕದಮೆಯ ತನಖಿಯು ತಾ. ೨ಕ್ಕೆ ಅಂತ್ಯವಾಯಿತು. ಜಡ್ಜರವರು ತೀರ್ಪು ಬಾಕಿ ಇಟ್ಟಿರುವರು. ಮೆ| ಜಸ್ಟಿಸ್ ಐಲಿಂಗರವರು ಬ್ರಹಸ್ಪತಿವಾರದ ತನಕ ಕೋರ್ಟಿಗೆ ಹಾಜರಾಗುವದಿಲ್ಲವೆಂದೂ ಈ ಮಧ್ಯೆ ಎಷ್ ದೊರೆಗಳ ಕೊಲೆ ಮೊಕದಮೆಯ ತೀರ್ಮಾನವನ್ನು ಬರೆಯುವರೆಂದೂ ತಿಳಿದು ಬರುತ್ತದೆ.

ಮದ್ರಾಸ್ ಸಂಸ್ಥಾನದ ಗವರ್ನರರಾಗಿ ಮುಂಬಾಯಿ ಗವರ್ನರರಾದ ಸರ್. ಜೋರ್ಜ್ ಕ್ಲಾರ್ಕರವರು ನಿಯಮಿಸಲ್ಪಡುವರೆಂದೂ ಎಪ್ರೀಲ್ ತಿಂಗಳಲ್ಲಿ ಇವರು ಮದ್ರಾಸಿಗೆ ಹೋಗುವರೆಂದೂ ಮುಂಬಾಯಿಯಲ್ಲಿ ಮಾತಿದೆ. ಆದರೆ ಈ ಮಾತಿಗೆ ಏನೊಂದು ಆಧಾರವಿರುವದಿಲ್ಲ.

ಜರ್ಮನಿಯ ಒಂದು ಜಿಲ್ಲೆಯಲ್ಲಿ ಬೆಂಕಿ ಬಿದ್ದು ೯೫ ಮನೆಗಳು ಸುಟ್ಟುಹೋಯಿತು. ಉಂಟಾದ ನಷ್ಟ ಸುಮಾರು ೪೦,೦೦೦ ರೂಪಾಯಿ ಎಂಬದಾಗಿ ಅಂದಾಜು ಆಗಿಯದೆ.

ಕಳೆದ ವಾರ ಹುಬ್ಬಳಿಯಲ್ಲಿ ಮದ್ರಾಸ್ ಮತ್ತು ಸೌತ್ ಇಂಡಿಯನ್ ರೈಲ್ವೇ ಕಂಪೆನಿಯ ಡ್ರ್ಯಾವರರಾದ ಮೆ| ಡಿ. ಜೋನ್ಸ್ ಎಂಬವರ ಇಬ್ಬರು ಮಕ್ಕಳು ತಮ್ಮ ಚಿಕ್ಕಪ್ಪನಾದ ಗ್ರೈನೊರ್ ಎಂಬವನೊಡನೆ ಶಿಕಾರಿಗೆ ಹೋದರು. ಒಬ್ಬ ಹುಡುಗನಿಗೆ ೧೬ ವರ್ಷ ಪ್ರಾಯ ಮತ್ತೊಬ್ಬನಿಗೆ ೧೦ ವರ್ಷ ಪ್ರಾಯವಿತ್ತು. ಗ್ರೈನೊರನು ೧೬ ವರ್ಷದ ಹುಡುಗನ ಕೈಯಲ್ಲಿ ಕೋವಿ ಕೊಟ್ಟು ತಾನು ಹೊಡೆದ ಯಾವದೋ ಒಂದು ಕೊಳ್ಳೆಯನ್ನು ಹುಡುಕಲು ಹೋದನು. ಈ ಹುಡುಗನು ಚಿಕ್ಕಪ್ಪನ ಗೈರ್ಹಾಜರು ಕಾಲದಲ್ಲಿ ಕೋವಿಗೆ ಮದ್ದು ತುಂಬಿಸಲು ಪ್ರಯತ್ನಿಸಿದನು. ಆದರೆ ಅಕಸ್ಮತ್ತಾಗಿ ಮದ್ದುಹಾರಿ ೧೦ ವರ್ಷದ ತಮ್ಮನ ಮೇಲೆ ಬಿತ್ತು. ಆತನನ್ನು ಒಡನೇ ಹುಬ್ಬಳಿಯ ಅಸ್ಪತ್ರಿಗೆ ವೈದರು. ಅಲ್ಲಿ ಆತನು ಮೃತಪಟ್ಟನು.

ಮದ್ರಾಸ್ ಸಂಸ್ಥಾನದ ಶಾಲೆಗಳಲ್ಲಿ ಧರ್ಮ ಸಂಬಂಧವಾದ ಪಾಠಗಳನ್ನು ಇಡುವದು ಅವಶ್ಯವೋ ಏನೆಂಬದನ್ನು ಕುರಿತು ಆಲೋಚಿಸುವ ಮದ್ರಾಸ್ ಸರಕಾರದವರು ಬಹುಮಾನಪಟ್ಟ ಮೆ| ಜಿ. ಸ್ಟೋನ್, ಬಹುಮಾನಪಟ್ಟ ಜಸ್ಟಿಸ್ ಸುಂದರ ಅಯ್ಯರ್ ಮೊದಲಾದ ಕೆಲವು ಗೃಹಸ್ಥರು ಕೂಡಿದ ಒಂದು ಕಮಿಟಿಯನ್ನು ನೇಮಿಸಿರುವರು.

ಇನ್ನು ಮುಂದಕ್ಕೆ ಲಕೆದೀವುಗಳೆಂಬ ದ್ವೀಪಗಳು ಮದ್ರಾಸ್ ಸಂಸಾನದ ಆಡಳಿತೆಗೆ ಸೇರಿಸಲ್ಪಡುವವೆಂದು ಸರಕಾರದವರು ಕಟಿಸಿರುತ್ತಾರೆ.

ಗುಂಟೂರಿಸೆಶ್ಶನ್ ಜಡ್ಜರಾಗಿರುವ ದಿವಾನ್ ಬಹದ್ದೂರು ಎಮ್ ಮುಂಡಪ್ಪ. ಬಂಗೇರರವರು ಕೆಲಸದಿಂದ ನಿವೃತಗುವುದರಿಂದ ಇವರ ಬದಲಿಗೆ ಉದಕಮಂಡಲಿನ ನಿಗಿರಿಯಲ್ಲಿ ಸಬ್ ಜಡ್ಜರಾಗಿರುವ ಮೆ| ಜಿ. ಪಿ. ಪೆರ್ನಾಂರವರು ಗುಂಟೂರಿನ ಸೆಶ್ಶನ್ ಜಡ್ಜರಾಗಿ ನೇಮಿಸಲ್ಪಡರೆಂಬದಾಗಿ ತಿಳಿದು ಬರುತ್ತದೆ.

ಜನವರಿ. ೭ರಲ್ಲು ಚೆಂಗಲ್ಪಟ್ಟಿನ ಜ್ಯಾಂಟ್ ಮೆಜಿಸ್ಟ್ರೇಟರಾದ ಜಿಕ್ಸನ್ ದೊರೆಗಳವರು ಒಂದು ಮಾನನಷ್ಟ ಮೊಮೆಯಲ್ಲಿ ಮುದ್ದೈಯಾಲೆಗೆ ೨೮ ದಿವಸಗಳ ಸಜಾ ವಿಧಿರು. ಮುದ್ದೈಯಾಲೆ ಕಡೆಯ ವಕೀಲನು ಈ ತೀರ್ಮದ ನಕಲನ್ನು ಕೊಡಬೇಕೆಂದು ಬಾಯಿದರೆಯಾಗಿ ದರು. ಅದಕ್ಕೆ ಬರಹ ಮೂಲಕ ಅರ್ಜಿ ಮಾಡಬೆದು ಹುಕುಂ ಸಿಕ್ಕಿದ್ದರಿಂದ ವಕೀಲರು ಕೂಡಲೇ ಅಬರೆದು ಮೊಕದಮೆಯನ್ನು ರಿವಿಜನ್ ಅಂದರೆ ಪರಿಷ್ಕರ್ಯಾಗಿ ತೀರ್ಮಾನ ನಕಲು ಬೇಕಾಗಿದೆ ಎಂದು ತೋರಿಸಿ. ಈ ಅರ್ಜಿಯನ್ನು ನೋಡಿದ ಕೂಡಲೇ ಮೆ| ಜಿ ಶಿಟ್ಟಿನಿಂದ ಕೆಂಪೇರಿದವರಾಗಿ ಗಟ್ಟಿ ಸ್ವರದಿಂದ "ಇಂಥಾ ಅರ್ಜಿಯನ್ನು ಮಾಡಿದ್ದು ಮರ್ಯಾದೆಯ ಕೆಲಸವಾಗಿದೆ, ಇದು ನಿರ್ಲಜ್ಜೆಯಾಗಿದೆ." ಎಂದಳುತ್ತಾ ಅರ್ಜಿ ಬರೆದ ಕಾಗದವನ್ನು ಕೈಯಿಂದ ಹಿಸಕಿ ಪುನಃ ನನ್ನ ತೀರ್ಮಾನವು ಪರಿಷ್ಕಾರವಾಗಬೇಕ ಹೇಳುವಂಥಾದ್ದು ಅವಮರ್ಯಾದೆ, ನಿರ್ಲಜ್ಜೆಯೆಂದು ಬೆದರಿಸಿದರು. ವಕೀಲರು:—ತೀರ್ಮಾನದ್ದು ಬೇಕಾದರೆ ನಕಲು ಪಡಕೊಳ್ಳುವ ಉದ್ದೇಶವರ್ಣಿಸುವ ಕ್ರಮವಿರುವುದರಿಂದ ತಾನು ಹಾಗೆ ಮಾಡಿದು ಹೇಳಿದರು. ಆದರೆ ಮೆಜಿಸ್ಟ್ರೇಟರು ಬಹಳ ಶಿಟ್ಟಿರಿಂದ ವಕೀಲರು ಪುನಃ ತನ್ನ ಅರ್ಜಿಯಲ್ಲಿ ಏನಾದ್ರೂ ತಪ್ಪಿದ್ದರೆ ಕ್ಷಮಿಸಬೇಕೆಂದು ಕೇಳಿಕೊಂಡರು. ಹೀಗೆ ಕೇಳುವುದರಿಂದ ಮೆ| ಜಿಕ್ಸನರ ಶಿಟ್ಟು ಇಳಿದೀತು ಎಗಿ ವಕೀಲರು ಭಾವಿಸಿದರು. ಆದರೆ ನಿಷ್ಪಯೋಜಿತು. ನಂತರ ಅಲ್ಲಿದ್ದ ಇತರ ವಕೀಲರುಗಳು ಅಂಥ ಇರುವ ಕ್ರಮವನ್ನು ಮೆಜಿಸ್ಟ್ರೇಟರಿಗೆ ಖಚಿತರಿಂದ ಮೆ| ಜಿಕ್ಸನರು ಹಿಸಕಲ್ಪಟ್ಟ ಕಾಗದವನ್ನು ಡು ತೀರ್ಮಾನ ನಕಲು ಕೊಡಬೇಕೆಂದು ಹುಕುಂ ದರೆಂಬದಾಗಿ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಸ್ಕೋತಾಳದ ಪ್ರಕೃತ ಸೆಕ್ರಿಟರಿಯಾಗಿರುವ ಪೆಂಟ್‌ಲೇಂಡ್ ಪ್ರಭುಗಳು ಮದ್ರಾಸಿನ ಗವರ್ನರರಾಗಿ ನೇಮಿಸಲ್ಪಟ್ಟಿರುವರೆಂದೂ ಇವರು ಮಾರ್ಚಿ ಅಂತ್ಯಕ್ಕೆ ಮದ್ರಾಸಿಗೆ ಬಂದು ಕಾರ್ಮಿಕಯೇಲ್ ಪ್ರಭುಗಳಿಂದ ಚಾರ್ಜು ತಕ್ಕೊಳ್ಳುವರೆಂದೂ ತಿಳಿದು ಬರುತ್ತದೆ.

ದಕ್ಷಿಣ ಕನ್ನಡ.

NOTICE.

"Applications are invited from qualified persons for auditing the accounts of the Canara Banking Corporation, Udipi (Ltd.) for the 9 months ending 15th March next. Apply with testimonials stating terms.

Udipi 15th February 1912.

S. Ananda Rau,
Secretary.

ಮಂಗಳೂರು. ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೫ ಪ್ಲೇಗು ಮರಣಗಳಿದ್ದವು.

ಇಲ್ಲಿಯ ಡಿಸ್ಟ್ರಿಕ್ಟ್ ಫೋರೆಷ್ಟ್ ಆಫಿಸರರಾದ ಮೆ| ಡಿ. ಟಿ. ಬೆರಿಯವರು ರಜೆ ಮೇಲಿರುವದರಿಂದ ಉತ್ತರ ಸೇಲಮ್ ಜಿಲ್ಲೆಯ ಫೋರೆಷ್ಟ್ ಆಫೀಸರರಾದ ಮೆ| ಟಿ. ಕ್ಲಿಯರ್ ಎಂಬವರು ಇಲ್ಲಿಯ ಆಕ್ಟಿಂಗ್ ಜಿಲ್ಲಾ ಫೋರೆಷ್ಟ್ ಆಫೀಸರರಾಗಿ ನೇಮಿಸಲ್ಪಟ್ಟಿರುವರು.

ರಜೇ ಮೇಲಿರುವ ಎ. ಎಪ್. ಜಿ. ಮಸ್ಕಾರ್ಡೆಯವರ ರಜೆ ತೀರಿದ ನಂತರ ದಕ್ಷಿಣ ಕನ್ನಡ ಜಿಲ್ಲೆಯ ಆಕ್ಟಿಂಗ್ ಜಿಲ್ಲಾ ಕಲೆಕ್ಟರರಾಗಿ ನೇಮಿಸಲ್ಪಡುವರು. ಈಗ ಇಲ್ಲಿಯ ಆಕ್ಟಿಂಗ್ ಜಿಲ್ಲಾಕಲೆಕ್ಟರರಾಗಿರುವ ಮೆ| ಡೊಯಿಗ್ ದೊರೆಗಳು ಪುನಃ ಮಲಬಾರಿಗೆನೇ ಹೋಗುವರು.

ಜಿಲ್ಲಾ ಕಲೆಕ್ಟರರವರು ತಾ. ೧೧ಕ್ಕೆ ಜಮಾಬಂದಿ ಬಗ್ಗೆ ಕುಂದಾಪುರತ್ತಕಡೆ ಹೋಗುವರು.

ಮ. ರಾ. ಕೋಟೆಕಾರ ಸುಬ್ಬರಾಯರಿಗೆ IIನೇ ಕ್ಲಾಸ್ ಮೆಜಿಸ್ಟ್ರೇಟ್ ಅಧಿಕಾರ ಸಿಕ್ಕಿರುವದು.

ಜಿಲ್ಲಾ ರಿಜಿಸ್ತ್ರಾರರಾದ ಮೆ. ಜಿ. ಚಂದ್ರನರವರಿಗೆ ೧೦ ದಿವಸಗಳ ಹೆಚ್ಚಿಗೆ ರಜೆ ಕೊಡಲ್ಪಟ್ಟಿರುವದು.

ಹೆಡ್ ಕ್ವಾಟರ್ಸ್ ಡ್ಯುಪಿಟಿ ಕಲೆಕ್ಟರರವರು ಜಮಾಬಂದಿ ಬಗ್ಗೆ ಈ ದಿನ ಬಂಟ್ವಾಳಕ್ಕೆ ಹೋಗಿರುವರು.

ಗುಂಟೂರಿನ ಜಿಲ್ಲಾ ಮತ್ತು ಸೆಶ್ಶನ್ ಜಡ್ಜರಾದ ದಿವಾನ್ ಬಹದ್ದೂರು ಎಮ್. ಮುಂಡಪ್ಪ ಬಂಗೇರರು ಇದೇ ತಾ. ೧೮ರಿಂದ ಕೆಲಸದಿಂದ ನಿವೃತರಾಗುವರೆಂದು ತಿಳಿಯುತ್ತೇವೆ.

ಇಲ್ಲಿ ಕೆಲವು ಸಮಯದಿಂದ ನಾಟಕವಾಡುತ್ತಿದ್ದ ಮೈಸೂರು ರತ್ನಾವಳಿ ಕಂಪೆನಿಯವರ ಕಡೇ ಆಟದ ದಿನ ಮ. ರಾ. ನೆಲ್ಲಿಕಾಯಿ ವೆಂಕಟ್ರಾಯರು ಜಿಲ್ಲಾ ಜಡ್ಜರಾದ ಮೆ. ವೇಣುಗೋಪಾಲ್ ಛೆಟ್ಟಿಯವರ ಮೂಲಕ ಒಂದು ಚಿನ್ನದ ಪದಕ ಕೊಡಿಸಿದರು.

ಮಂಗಳೂರು ತಾಲೂಕು ಮೂಡಶೆಡ್ಡೆ ಗ್ರಾಮದಲ್ಲಿ ವಾಂತಿಬೇಧಿ ರೋಗದಿಂದ ಮೃತಪಟ್ಟ ಎರಡು ಹೆಣಗಳನ್ನು ಮೂರು ದಿನಗಳ ವರೆಗೆ ಮೃತರ ಸಂಬಂಧಿಕರಾಗಲೀ ಪಟೇಲರಾಗಲೀ ತೆಗೆಯಿಸುವ ವಿಲೆವಾರಿ ಮಾಡದ್ದರಿಂದ ಸೆನಿಟರಿ ಆಫೀಸರರು ಅಲ್ಲಿಗೆ ಹೋಗಿ ತೋಟಿಗಳಿಂದ ಹೆಣ ತೆಗೆಯಿಸಿದರೆಂತಲೂ ಹೆಣಗಳು ಕೊಳತು ವಿಶೇಷವಾಗಿ ನಾರುತ್ತಿತ್ತೆಂತಲೂ ಕೇಳುತ್ತೇವೆ.

ಕಳೆದ ಸಂಚಿಕೆಯಲ್ಲಿ ತಿಳಿಸಿದ ಪುತ್ತೂರು ಸಬ್ ಮೆಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಖೂನಿ ಮೊಕದಮೆಯಲ್ಲಿ ಎಸ್ಸೆಸರುಗಳು ೧ನೇ ಅಪಾದಿತನಾದ ಜೋಗಿಯು ಕಠಿಣ ಜಖಾಂ ಮಾಡಿದ ತಕ್ಷೀರಿಗೆ ಒಳಗಾಗುತ್ತಾನೆಂದೂ ೨ನೇ ಮುದರನು ಸಾಧಾರಣ ಜಖಾಂ ಮಾಡಿದ ತಕ್ಷೀರಿಗೆ ಒಳಗಾಗುತ್ತಾನೆಂದೂ ಅಭಿಪ್ರಾಯ ಪಟ್ಟಿದ್ದರು. ಜಡ್ಜರವರು ಜೋಗಿಯು ೩೨೬ನೇ ಸೆಕ್ಷನಿನ ಪ್ರಕಾರ ಆಪಾದಿತನೆಂದು ಅಭಿಪ್ರಾಯ ಪಟ್ಟು ಆತನಿಗೆ ೨ ವರುಷಗಳ ಕಠಿಣ ಸಜಾ ವಿಧಿಸಿದರು. ೨ನೇ ಮುದರನನ್ನು ಖುಲಾಸು ಪಡಿದರು.

ಕಾಸರಗೋಡು ಸಬ್ ಮೆಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಖೂನಿ ಮೊಕದಮೆಯ ತನಖಿಯು ಕಳೆದ ಸೋಮವಾರದಿಂದ ಪ್ರಾರಂಭವಾಗಿಯದೆ. ಇದರಲ್ಲಿ ಇಬ್ರಾಯಿನೆ ಎಂಬವನೊಬ್ಬನು ಕುಞ್ಞಾಅಮ್ಮದೆ ಎಂಬವನನ್ನು ಚೂರಿಯಿಂದ ತಿವಿದು ಕೊಂದದ್ದಾಗಿರುತ್ತದೆ.

೧೮೧೦ನೇ ಇಸವಿಯಲ್ಲಿ ಜರ್ಮನ್ ಮಿಶ್ಶನ್ ಇನ್ಸ್‌ಪೆಕ್ಟರ್ ದೊರೆಗಳು ಇಲ್ಲಿಗೆ ಚಿತ್ತೈಸಿದಾಗ ಮಿಶ್ಶನ್ ಉಪಾಧ್ಯಾಯರು ತಮ್ಮ ಹಾಲಾಹವಾಲೆಗಳನ್ನು ಹೇಳಿಕೊಂಡು ಸಂಬಳ ಹೆಚ್ಚಿಸುವ ಹಾಗೆ ದೊರೆಗಳಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಕಳುಸಿಕೊಟ್ಟಿದ್ದರೆಂಬ ಸಂಗತಿಯು ಜ್ಞಾಪಕವಿರಬಹುದಷ್ಟೆ. ಈ ವಿಜ್ಞಾಪನಾ ಪತ್ರಿಕೆಗೆ ಉಪಾಧ್ಯಾಯರಿಗೆ ನಾಲ್ಕು ಮಕ್ಕಳಾದ ನಂತರ ಒಂದೊಂದು ಮಕ್ಕಳಿಗೆ ವರುಷ ಒಂದಕ್ಕೆ ೧೨ ರೂಪಾಯಿ ಪ್ರಕಾರ ಹೆಚ್ಚಿಗೆ ಸಂಬಳ ಕೊಡಲ್ಪಡುವುದೆಂದೂ ಮೆಟ್ರಿಕ್ ಗ್ರೇಡಿನ ಉಪಾಧ್ಯಾಯರಿಗೆ ಕೂಡಾ ಮನೇ ಬಾಡಿಗೆ ಕೊಡಲಾದೀತೆಂದೂ ಉತ್ತರ ಬಂದಿರುವುದೆಂದು ಕೇಳುತ್ತೇವೆ.

ಬಲ್ಮಠಕ್ಕೆ ಹೋಗುವ ದಾರಿಯನ್ನು ಮಿಶ್ಶನೆರಿಗಳು ಮುಚ್ಚಲಿಕ್ಕಿರುವುದರಿಂದ ಮಾಜಿ ಮೆಜಿಸ್ಟ್ರೇಟರಾದ ಮೆ. ಟಿ. ರೋಬಟ್ಸರವರು ಇಂಜಂಕ್ಷನ್ ತೆಗೆಯಿಸಿರುತ್ತಾರೆಂಬದಾಗಿ ತಿಳಿಸಿತ್ತಷ್ಟೆ. ಕಳೆದ ಸೋಮವಾರ ಮುನ್ಸೀಫರು ಖುದ್ದಾಗಿ ಬಲ್ಮಠಕ್ಕೆ ಬಂದು ಸ್ಥಳ ತನಖಿ ನಡಿಸಿ ವ್ಯಾಜ್ಯವು ಇತ್ಯರ್ಥವಾಗುವ ವರೆಗೆ ಬೆಳಿಗ್ಯೆ ೭ ಗಂಟೆಯಿಂದ ಸಾಯಂಕಾಲ ಏಳುವರೆ ಗಂಟೆಯ ವರೆಗೆ ಗೇಟಿಗೆ ಬೀಗ ಹಾಕ ಕೂಡದೆಂದು ಹುಕುಂ ಕೊಟ್ಟಿರುವರೆಂತ ತಿಳಿಯುತ್ತೇವೆ.

ಫಾಲ್ಗುಣ ಶುದ್ಧ ೪ಗೆ ಸರಿಯಾದ ಇದೇ ತಿಂಗಳ ತಾರೀಕು ೨೨ನೇ ಗುರುವಾರ ರಾತ್ರಿಗೆ ಕೊಡಿಯಾಲಬೈಲು ನವೀನ ದೇವಸ್ಥಾನದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿಯವರಿಂದ ಶ್ರೀ ದೇವತಾ ಪ್ರತಿಷ್ಠಾ ಮಹೋತ್ಸವವು ನೆರವೇರಿಸಲ್ಪಡುವದಾಗಿ ಸಂಕಲ್ಪಿಸಿರುವದರಿಂದ ದೇಶಬಾಂಧವರೆಲ್ಲರೂ ಅಲ್ಲಿ ವರೆಗೆ ಚಿತ್ತೈಸಿ ತಾರೀಕು ೨೨ನೇ ಸಾಯಂಕಾಲದಿಂದ ಪ್ರಾರಂಭಿಸಿ ತಾರೀಕು ೨೪ನೇ ಶನಿವಾರದ ವರೇಗೆ ನಡೆಯುವ ಉತ್ಸವಾದಿಗಳನ್ನು ನೆರವೇರಿಸಿ ತಮ್ಮನ್ನು ಪ್ರೋತ್ಸಾಹಪಡಿಸಬೇಕಾಗಿ ದೇವಸ್ಥಾನ ಸಂಸ್ಥಾಪಕರಾದ ಶ್ರೀ ಶಿವಭಕ್ತಿಯೋಗ ಸಂಘದ ಆಡಳಿತೆ ಸಭೆಯವರು ವಿಜ್ಞಾಪಿಸಿಕೊಂಡಿರುವರು.

ಒಬ್ಬ ಬಾತ್ಮೀದಾರರಿಂದ:—ಬೋಳಾರದಲ್ಲಿ ಸ್ಥಾಪಿಸಲ್ಪಟ್ಟ ಸಾಮಾಜಿಕ ಸೇವಾಸದನದ ದ್ವಿತೀಯ ವಾರ್ಷಿಕೋತ್ಸವವು ಕಳೆದ ಆದಿತ್ಯವಾರ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ಉತ್ಸವದ ಬಗ್ಗೆ ಅನೇಕ ಮಾನ್ಯ ಗೃಹಸ್ಥರು ನೆರದಿದ್ದರು. ಈ ಸೇವಾಸದನದ ಪಾಲಕರಾದ ಶಾಬುದ್ದೀನ್ ಸಾಹೇಬರು ಬಹಳ ದಯಶಾಲಿಯಾಗಿಯೂ ಉದಾರಶೀಲರಾಗಿಯೂ ಇದ್ದು ತನ್ನ ಬಳಿಗೆ ಬರುವ ರೋಗಿಗಳನ್ನು ಆದರದಿಂದ ಸತ್ಕರಿಸಿ ಔಷಧೋಪಚಾರ ಮಾಡುವದರಲ್ಲಿ ಜಾತಿಭೇದವನ್ನಾಗಲೀ ಬಡವ ದೊಡ್ಡವನೆಂಬ ತಾರತಮ್ಯವನ್ನಾಗಲೀ ನೋಡದೆ ಎಲ್ಲರನ್ನೂ ಒಂದೇ ಸಮನಾಗಿ ನೋಡಿ ನಡಿಸುತ್ತಾರಲ್ಲದೆ ಯಾರಿಂದಲೂ ಯಾವ ತರದ ಔಷಧ ಮೌಲ್ಯವನ್ನಾಗಲೀ ಉಚಿತವನ್ನಾಗಲೀ ಪಡೆಯದಿರುವ ತ್ಯಾಗಗುಣವನ್ನು ಎಷ್ಟು ಕೊಂಡಾಡಿದರೂ ಅಲ್ಪವೇ. ಈ ಸಂದರ್ಭದಲ್ಲಿ ಓದೋಣಾದ ವಾರ್ಷಿಕ ವರದಿಯಲ್ಲಿ ಕಠಿಣ ತರದ ಕಾಹಿಲೆಯ ರೋಗಿಗಳ ಸಂಖ್ಯೆ ಒಂದೇ ವರುಷದಲ್ಲಿ ೪೨೪೨ ಮತ್ತು ರಿಜಿಸ್ತ್ರಿಗೆ ದಾಖಲು ಮಾಡದಿರುವ ಚಿಲ್ಲರೆ ಸಂಖ್ಯೆ ಇದರ ಎರಡಷ್ಟು ಆದೀತೆಂತ ಸೂಚಿಸಿರುತ್ತಾರೆ. ಸಭಾಧ್ಯಕ್ಷಸ್ಥಾನವನ್ನು ಸ್ವೀಕರಿಸಿದ ಬಪ್ಪು ಮಿಶ್ಶನ್ ಪಾಸ್ತರರಾದ ಮಿಕ್ಕಯ್ಯನವರು ಈ ವಿಷಯದಲ್ಲಿ ನೆರದಿದ್ದ ಸಭಿಕರಿಗೆ ತಾವೂ ತಮ್ಮ ಉದಾರ ಮನಸ್ಸನ್ನು ತೋರ್ಪಡಿಸಿ ತಮ್ಮ ದೇಶಬಾಂಧವರ ಆಪತ್ತಿಗೆ ಅನುಕೂಲದ ಸಹಾಯವನ್ನು ಮಾಡುವರೆ ಉದಾರ ಹಸ್ತವನ್ನು ನೀಡಬೇಕೆಂತಲೂ ಶಾಬುದ್ದೀನ್ ಸಾಹೇಬರು ಧೈರ್ಯಕುಂದದೆ ಇನ್ನೂ ಉತ್ತೇಜನದಿಂದ ತಾನು ಕೈಕೊಂಡ ಕಾರ್ಯವನ್ನು ಸ್ಥಿರಪ್ರಯತ್ನದಿಂದ ನಡಿಸಬೇಕೆಂತಲೂ ಇನ್ನು ಅನೇಕ ಬುದ್ಧಿವಾದದೊಡಗೂಡಿದ ಮಧುರ ವಾಕ್ಯಗಳಿಂದ ಭಾಷಣವನಿತ್ತರು. ಬಪ್ಪು ಮಿಶ್ಶನ್ ಶಾಲೆಯ ಬಾಲಿಕೆಯರು ಸುರಸವಾದ ಗಾಯನಗಳಿಂದ ಸಭೆಯನ್ನು ಸಂತೋಷಗೊಳಿಸಿದರು.

ಕಾಸರಗೋಡು. ಕಳೆದ ಹಪ್ತೆಯಲ್ಲಿ ಮಂಗಳೂರಿಗೆ ಹೋಗಿ ಬಂದಿದ್ದ ಒಬ್ಬ ಜಾಡನು ಮೈಯಲ್ಲಿ ನೆಟ್ಟಗಿಲ್ಲವೆಂದು ಅಸ್ಪತ್ರಿಗೆ ಹೋಗಿ ಮದ್ದು ತೆಗೆದು ಸಾಯಂಕಾಲ ಊಟ ಮಾಡಿ ಕುಡಿದು ಮಲಗಿದನು. ರಾತ್ರಿಯಲ್ಲಿ ಒಂದೆರಡುಸಲ ರಕ್ತ ಕಾರಿ ಬೆಳಗಾಗುವುದರೊಳಗೆ ಮೃತಪಟ್ಟನು. ಇವನು ಕಾಲವಾದುದು ಪ್ಲೇಗು ಮಾರಿಯಿಂದಲೇ ಎಂದು ಸಂಶಯಪಟ್ಟು ಮನೆಯನ್ನು ಬಂದೋಬಸ್ತಿಯಲ್ಲಿ ಶುದ್ಧಮಾಡಿ ಸತ್ಯಾರ್ಥ ಕಂಡು ಹಿಡಿಯಲು ರಕ್ತವನ್ನು ಮದ್ರಾಸಿನ ರಸಾಯನ ಪರೀಕ್ಷಿತ ಶಾಲೆಗೆ ಕಳುಹಿಸಿದರು. ಹಲಬರು ಇವನು ತಾನೇ ಸ್ವಘಾತಮಾಡಿಕೊಂಡಿರುವನೆಂದು ಸಂಶಯ ಪಡುತ್ತಾರೆ.

ಇದೇ ಗುರುವಾರ ಮದ್ಯಾನ್ಹ ಕೊಯಂಬುತ್ತೂರಿನಿಂದ ಬಂದಿದ್ದ ಒಬ್ಬರು ಕಿಂಡರ್ಗಾರ್ಟೆನ್ ಚಮತ್ಕಾರ, ಇಸ್ಪೀಟು ಕೌಶಲ, ಮಾಯಾ ವಿದ್ಯೆ ವಗೈರೆ ಆಟ ತಮಾಶೆಗಳನ್ನು ಆಯಾ ಶಾಲಾ ಹುಡುಗರಿಗೆ ಇಲ್ಲಿಯ ಹುಡುಗಿಯರ ಶಾಲೆಯಲ್ಲಿ ಬಹು ಚಾತುರ್ಯದಿಂದ ತೋರಿಸಿ ಇಂದು ಸಾಯಂಕಾಲ ಮಂಗಳೂರತ್ತಕಡೆ ಪಯಣ ಬೆಳೆಸಿರುವರು.

ಪೋಲೀಸ್ ಸಬ್ ಇನ್ಸ್‌ಪೆಕ್ಟರರಾದಮಹಿಮ್ಮಾ ಚಮ್ನಾಡರವರಿಗೆ ಡಿಲ್ಲಿ ದರ್ಬಾರಿನ ಬಹುಮಾನಾರ್ಥವಾಗಿ ಪದಕವು ಸಿಕ್ಕಿರುವುದರಿಂದ ಇಲ್ಲಿಯ ಅಜಿಜ್ಜಿಯ ಮುಸ್ಲಿಮ್ ಎಜ್ಯುಕೇಶನಲ್ ಎಸೋಷಿಯೇಶನ್ ಎಂಬ ಮುಸಲ್ಮಾನ ಸಂಘದ ಸೆಕ್ರಟರಿಯವರು ಸಂಘದ ಪರವಾಗಿ ಚಕ್ರವರ್ತಿಯವರಿಗೆ ವೈಸರಾಯರವರ ಮೂಲಕ ತಮ್ಮ ಹೃತ್ಪೂರ್ವಕವಾದ ಉಪಕಾರ ಸ್ಮರಣೆಯನ್ನು ತೋರಿಸುವ ಒಂದು ತಂತೀ ಬಿಟ್ಟಿರುವರು.

ಪುತ್ತೂರು. ನಮ್ಮ ಡಿವಿಜನ್ ಡಿಪ್ಯುಟಿ ಕಲೆಕ್ಟರವರು ಇದೇ ತಾ. ೪ಕ್ಕೆ ಇಲ್ಲಿಗೆ ತಲ್ಪಿ ತಾ. ೫ರಿಂದ ಈ

ಮೊಕ್ಕಾಮಿನ ಜಮಾಬಂದಿ ಕೆಲಸ ಆರಂಭಿಸಿರುವರು. ತಾ. ೭ಲ್ಲು ಈ ತಾಲೂಕಿನ ಟೋಲ್‌ಗೇಟ್ ವ ಖಾರಿ ಗುತ್ತೆಗಳೂ ತಾ. ೭ಲ್ಲು ಅಬ್ಕಾರಿ ಶರಾಬ ಗುತ್ತೆಗಳೂ ಗಾಂಜಾ ಅಫೀಮು ಗುತ್ತೆಗಳೂ ಏಲಂ ಮಾಡೋಣಾದವು.

ವಿಟ್ಲ ಮೊಕ್ಕಾಮಿನಲ್ಲಿ ಆದ ಜಮಾಬಂದಿ ಸಮಯ ನಮ್ಮ ತಾಲೂಕು ಹೆಡ್‌ಕ್ಲಾರ್ಕ್ ಮೆ। ಗಂಗೊಳ್ಳಿ ರಾಮರಾಯರ ಕಿಸೆಯಿಂದ ಇಬ್ರಾಯಿನೆ ಎಂಬ ಹುಡುಗನು ರೂಪಾಯಿ ೨೯ ಚಿಲ್ಲರೆ ಇದ್ದ ಪೊಕೆಟ್ ಜಾರಿಸಿದ ಮೊಕದಮೆಯು ಇಲ್ಲಿಯ ಮೇಜಿಸ್ಟ್ರೇಟರಲ್ಲಿ ತನಖಿ ನಡದು ಹುಡುಗನು ಅಪ್ರಾಯಸ್ತನಾದ್ದರಿಂದ ಮೊಕದಮೆಯನ್ನು ಡಿವಿಜನಲ್ ಮೇಜಿಸ್ಟ್ರೇಟ ಕೋರ್ಟಿಗೆ ಕಳುಹಿಸಿರುವರು.

ರೋಮನ್ ಕೆಥೋಲಿಕರ ಬಿಶೋಪ ಗುರುಸ್ವಾಮಿಯವರಾದ ಘನಹೊಂದಿದ ಡಾಕ್ತರ ಪಿ. ಪಿರೆನಿ ಎಸ್. ಜೆ.ರವರು ಬರಿಮಾರ ಇಗರ್ಜಿಯಿಂದ ಹೊರಟು ಇದೇ ತಾ. ೧೨ನೇ ಸಾಯಂಕಾಲ ೭-೩೦ಕ್ಕೆ ಇಲ್ಲಿಗೆ ಪ್ರಥಮ ಸಂದರ್ಶಣೆಯನ್ನು ಮಾಡುವರು. ಇವರ ಆಗಮನದ ಸಮ್ಮಂದ ಇಲ್ಲಿಯ ಗುರುಗಳಾದ ರೆವೆರೆಂಡ್‌ಫಾದರ್ ಪಿ. ಎನ್. ಡಿ. ಸೋಜರವರು ಇಗರ್ಜಿ ಮುಂತಾದ್ದು ಶೃಂಗರಿಸುವ ಏಲೆವಾರಿಯಲ್ಲಿರುವರು.

ಪಂಜ. ಇಲ್ಲಿಯ ಎಲಿಮೆಂಟರಿ ಶಾಲೆಗೆ ಯೋಗ್ಯವಾದ ಕಟ್ಟೋಣವು ಇಲ್ಲದ್ದರಿಂದ ಪುತ್ತೂರು ರೇಂಜ್ ಸೂಪರ್‌ವ್ಯಾಸರರು ಸರ್ಕೀಟಿಗೆ ಬಂದಿದ್ದವರು ಶ್ರಿ ಸದಾಶಿವ ಪಂಚಲಿಂಗೇಶ್ವರ ದೇವಸ್ಥಾನದಲ್ಲಿ ಸಭೆ ಶೇರಿಸಿ ಸುಮಾರು ೧೨೫ ರೂಪಾಯಿ ವಂತಿಗೆ ಕೂಡಿಸಿದರು. ಅದಲ್ಲದೆ ಈ ಕಟ್ಟೋಣಕ್ಕೆ ಬೇಕಾಗಿ ಇನ್ನೂ ಹೆಚ್ಚಿಗೆ ಹಣ ಕೂಡಿಸಬೇಕಾಗಿಯೂ ಹಂಚಿನ ಖರ್ಚನ್ನು ಲೋಕಲ್ ಬೋರ್ಡಿನವರು ಕೊಡುವರೆ ಕೇಳಿಕೊಳ್ಳಬೇಕಾಗಿಯೂ ನಿಶ್ಚಯಿಸಲಾಯಿತು.

ಮುಲ್ಕಿ. ಇಲ್ಲಿಯ ಮಾನಂಪಾಡಿ ಗ್ರಾಮದಲ್ಲಿ ಮೊನ್ನೆ ರಾತ್ರೆ ನಾರ್ಣ ಎಂಬವನೊಬ್ಬ ಹುಚ್ಚನು ಒಬ್ಬ ಬಿಲ್ಲವನ ಬಚ್ಚಲು ಕೊಟ್ಟಿಗೆಗೆ ಹೋಗಿ ಬೆಂಕಿಯನ್ನು ಉರಿಸಲು ಬಚ್ಚಲು ಕೊಟ್ಟಿಗೆಗೆ ಬೆಂಕಿತಾಗಿ ಸುಟ್ಟು ಹೋಗುವಾಗ್ಯೆಮನೆಯವರು ಎದ್ದು ನೊಂದಿಸಿದರು. ಪಟೇಲರು ಪೋಲಿಸ್ ಸ್ಟೇಶನಿಗೆ ರಿಪೋರ್ಟು ಕೊಟ್ಟಲ್ಲಿ ಸಬ್‌ಇನ್ಸಪೆಕ್ಟರರು ಬಂದು ತನಕಿ ನಡಿಸಿ ಹುಚ್ಚನನ್ನು ಬಿಟ್ಟರಂತೆ. ಆಜುಬಾಜುಗ್ರಾಮಗಳ ಮನೆಗಳ ವ್ಹಾಲೀಕರು ಬಹಳ ಘಾಬರಿ ಪಡುತ್ತಿದ್ದಾರೆ.

ಇಲ್ಲಿಯ ನೆರೆಗ್ರಾಮದ ಒಬ್ಬ ಪಟೇಲರು ಮಹಾರಾಜ ಚಕ್ರವರ್ತಿಯವರ ಡಿಲ್ಲಿ ದರ್ಬಾರ ಮಹೋತ್ಸವ ದಿವಸ ಏನೂ ನಡಸಲಿಲ್ಲ ಎಂಬ ವಿಷಯ ಅರ್ಜಿಯಾಗಿ ತನಕಿ ಆಗುತ್ತದಂತೆ. ಇದನ್ನು ಮರೆಪಡಿಸ ಕೆಲವರು ಸಾಹಸ ಮಾಡುತ್ತಾರಂತೆ.

ಉಡುಪಿ. ಶ್ರೀ ಪುತ್ತಿಗೆ ಶ್ರೀ ಪಾದಂಗಳವರ ಪರ್ಯಾಯೋತ್ಸವಕ್ಕಾಗಿ ಶ್ರೀ ಸೋದೆ ಶ್ರೀ ಪಾದಂಗಳವರು, ವೇ. ಮೂ. ಮುಂಡ್ಕೂರು ಕೃಷ್ಣಮುಗೇರಾಯರು, ಮ. ರಾ. ಪಾದೂರು ವೆಂಕಪ್ಪ ಹೆಗ್ಗಡೆಯರು, ಬ್ರಹ್ಮಾವರ ಮೋನಪ್ಪ ಹೆಗ್ಗಡೆಯರು, ಇವರೇ ಮೊದಲಾದ ಮಹನೀಯರು ಅಕ್ಕಿ ಹಸ್ರುವಾಣಿ ಮೊದಲಾದ ಸಾವಿರಾರು ಹೊರೆಗಳನ್ನು ಕೊಟ್ಟು ಸಹಾಯ ಮಾಡಿದರು.

ಕಳದ ತಾ. ೩೦ರಲ್ಲು ಅಪಸ್ಮಾರ ರೋಗಿ ಒಬ್ಬ ಬ್ರಾಹ್ಮಣನು ಮಧ್ವ ಸರೋರದಲ್ಲಿ ಬಿದ್ದು ಸತ್ತು ಹೋದನು. ಈತನು ಬಿದ್ದು ಮುಳುಗುತ್ತಿರುವದನ್ನು ಕೆಲವು ಬ್ರಾಹ್ಮಣರು ನೋಡುತ್ತಿದ್ದರೂ ತೆಗೆಯುವರೆ ಧೈರ್ಯ ಪಡಲಿಲ್ಲವಂತೆ. ಶವವನ್ನು ಕೂಡ ಒಬ್ಬ ಮುಸಲ್ಮಾನರವನು ತೆಗೆದನಂತೆ. ಶಹಬಾಸ್! ಬ್ರಾಹ್ಮಣರೆ-ಹೀಗೆಯೇ ಇರಬೇಕಾದದ್ದು!!

ಮೈಸೂರು ದಿವಾನರಾಗಿದ್ದ ಮಾಜಿ ಸೆರ್ ಕೃಷ್ಣಮೂರ್ತಿಗಳ ಉತ್ತರಾಧಿಕಾರಿಗಳಾಗಿರುವ ಮ. ರಾ. ನರಸಿಂಗರಾಯರು ಶ್ರೀ ಪುತ್ತಿಗೆ ಮಠಕ್ಕೆ ಸುಮಾರು ೮೦೦ ರೂಪಾಯಿ ಬೆಲೆ ಬಾಳುವ ಒಂದು ಚಲೋ ಕುದುರೆಯನ್ನು ಉಚಿತವಾಗಿ ಕಳುಹಿಸಿಕೊಟ್ಟಿರುವರು. ಇವರೇ ಇನ್ನೊಂದು ಚಲೋ ಗಂಡಾನೆಯನ್ನು ಕಳುಹಿಸುವದಕ್ಕೆ ಸಂಕಲ್ಪಿಸಿರುವದಾಗಿ ವಂದತಿ ಇದೆ.

ಇಲ್ಲಿಯ ವಕೀಲರಾದ ಮ. ರಾ. ಕುಬೇರ ಪಾಂಡುರಂಗ ರಾಯರು ಇಂಗ್ಲಿಷು ಬಲ್ಲವರಲ್ಲಿ ಅನೇಕರಿಗೆ ಮದ್ರಾಸ್ ಸ್ಟಾಂಡಾರ್ಡ್ ಎಂಬ ದೈನಂದಿನ ಪತ್ರಿಕೆಯನ್ನು ಓದುವದಕ್ಕೆ ಪ್ರತಿ ದಿವ ಉಚಿತವಾಗಿ ಕಳುಹಿಸುವಂತೆಯೂ, ತಾಲೂಕು ಕಚೇರಿ ಸಮೀಪ ಒಂದು ಕಟ್ಟೋಣವನ್ನು ಬಾಡಿಗೆಗೆ ವಹಿಸಿಕೊಂಡು ಅಲ್ಲಿ ಅನೇಕ ಪುಸ್ತಕಗಳನ್ನು ಸಂಗ್ರಹಿಸಿ ಇಷ್ಟವಿದ್ದವರು ಧರ್ಮಾರ್ಥವಾಗಿ ಓದಿಕೊಳ್ಳುವಂತೆ ವ್ಯವಸ್ಥೆಮಾಡಿರುವದಾಗಿಯೂ ತಿಳಿದು ಬರುತ್ತದೆ. ಇವರ ಈ ಸದ್ಧರ್ಮವು ನಿರಂತರ ನಡಿಯುವಂತೆ ಶ್ರೀ ಕೃಷ್ಣನು ಅನುಗ್ರಹಿಸಲಿ.

ಕುಂದಾಪುರ. ಹಟ್ಟಂಗಡಿ ಎಂಬಲ್ಲಿ ತಾರೀಕು ೫ನೆಗೆ ನಾಲ್ಕರು ಸಹೋದರರು ಕೆಲಸಕ್ಕೆ ಹೋಗಿ ಹಿಂದೆ ಬರುವಾಗ ಕತ್ತಲೆಯಾಗಿತ್ತು. ಅವರು ಗದ್ದೆಯ ಮಧ್ಯದಲ್ಲಿ ಬರುವಾಗ ಫಕ್ಕನೆ ಕೋವಿ ಸುಡಲ್ಪಟ್ಟಿತು. ಅದು ಒಬ್ಬನ ಪಕ್ಕೆಗೆ ತಾಗಿತು, ಕೋವಿ ಸುಟ್ಟವನು ಹಂದಿಯನ್ನು ಹೊಡೆಯ ಗುರಿ ಇಟ್ಟಿದ್ದನು. ಹಂದಿಯೇ ಎಂದು ಕೋವಿ ಹಾರಿಸಿದನಂತರ ಅವನಿಗೆ ಸಂಗತಿ ತಿಳಿದು ಕೋವಿಯನ್ನು ಅಲ್ಲಿಯೇ ಬಿಟ್ಟು ಓಡಿಹೋಗಿರುವನು. ಗುಂಡು ತಾಗಿದವನನ್ನು ಕುಂದಾಪುರಕ್ಕೆ ತಂದು ವಾಜ್ಮೂಲ ತಕ್ಕೊಂಡರು. ತನಗೆ ದ್ವೇಷಿಕರು ಯಾರೂ ಇಲ್ಲವೆಂದನಂತೆ. ಕಡೆಗೆ ಪರವನ್ನೈದಿದನು.

ವಿವಿಧ ವಿಷಯಗಳು.

ಕ್ಷಯ ರೋಗದ ಸಂಬಂಧವಾಗಿ ಪ್ರತಿ ಒಬ್ಬನೂ ತಿಳಿಯಬೇಕಾದ ಕೆಲವು ಸೂಚನೆಗಳು:—1. ಕ್ಷಯ ರೋಗವು ತಕ್ಕ ಕಾಲದಲ್ಲಿ ಶೈತೋಪಚಾರ ಮಾಡಿದರೆ ನಿವಾರಣೆಯಾಗುವಂಥಾದ್ದಾಗಿದೆ. 2. ಕ್ಷಯರೋಗವು ಶುದ್ಧ ಗಾಳಿ, ತಕ್ಕ ಆಹಾರ ಮತ್ತು ತಕ್ಕ ವಿಶ್ರಾಂತಿ ತಕ್ಕೊಳ್ಳುವದರಿಂದ ವಾಸಿಯಾಗುತ್ತದೆ. ಆದರೆ ಕ್ಷಯರೋಗದ ಔಷಧಗಳೆಂದು ಅಂಗಡಿಗಳಲ್ಲಿ ಮಾರಲ್ಪಡುವ ಔಷಧಗಳಿಂದ ಗುಣವಾಗುವದಿಲ್ಲ. 3. ಕ್ಷಯರೋಗಿಗಳಲ್ಲಿ ಒಂದು ತರದ ವಿಷಕರವಾದ ಅಂಟು ಅಣುಗಳಿರುವುದರಿಂದ ಅದು ಅಂಟುರೋಗವಾಗಿದೆ. ಈ ಅಣುಗಳು ಶ್ವಾಸಕೋಶ ಅಥವಾ ಶರೀರದ ಇತರ ಭಾಗಗಳಲ್ಲಿ ತುಂಬಾ ಗಿದ್ದು ಕೆಮ್ಮಿನ ಸಂಗಡ ಹೊರಬೀಳುತ್ತವೆ. ಇಂಥಾ ರೋಗಿಗಳ ಉಗುಳು ಎಲ್ಲಿ ಬೀಳುತ್ತದೋ ಅಲ್ಲಿ ವಿಷಕರವಾದ ಅಣುಗಳು ತುಂಬಿಕೊಂಡು ಗಾಳಿಯನ್ನು ಅಶುದ್ಧವಾಗಿ ಮಾಡುತ್ತವೆ. ಈ ಉಗುಳು ಒಣಗಿದಾಕ್ಷಣ ಧೂಳಾಗಿ ಹಾರಿಹೋಗುತ್ತದೆ. ಆದ್ದರಿಂದ ಪ್ರತಿ ಒಬ್ಬನು ಸಿಕ್ಕಿ ಸಿಕ್ಕಿದಲ್ಲಿ ಉಗುಳದೆ ಇತರರ ಒಳ್ಳಿತನ್ನು ಸಹಾ ಚಿಂತಿಸುವವನಾಗಿರಬೇಕು. 4. ಇಂಥಾ ರೋಗಿಗಳ ಎಂಜಲನ್ನು ಯಾ ಇಂಥವರು ಕಚ್ಚಿದ ಯಾವ ಪದಾರ್ಥವನ್ನಾಗಲೀ ತಿನ್ನಬಾರದು. ಒಬ್ಬರು ಪ್ರಯೋಗಿಸಿದ ಸವುಟು ಯಾ ಪಾತ್ರೆಗಳಲ್ಲಿ ಇತರರು ತಿನ್ನಬಾರದು. ಒಬ್ಬರು ಪ್ರಯೋಗಿಸುವ ಸವುಟು ಇತ್ಯಾದಿಗಳನ್ನು ಪ್ರಯೋಗಿಸಕೂಡದೆಂಬದು ಕ್ಷಯರೋಗದ ಸಂಗತಿಯಲ್ಲಿ ಮಾತ್ರವಲ್ಲ; ಶೀತ, ನೆಗಡಿ, ಜ್ವರ ಇತ್ಯಾದಿ ರೋಗಗಳಲ್ಲಿಯೂ ಪ್ರಯೋಗಿಸಕೂಡದು. 5. ಕ್ಷಯರೋಗಿಗಳು ಕಂಡಕಡೆ ಉಗುಳಿದರೆ ಇತರರಿಗೆ ಕೇಡನ್ನುಂಟು ಮಾಡುವುದು ಮಾತ್ರವಲ್ಲ, ತಮಗೂ ಕೇಡನ್ನು ತಂದುಕೊಳ್ಳುತ್ತಾರೆ. ಯಾವ ಸಂದರ್ಭದಲ್ಲಾದರೂ ಇಂಥವರು ತಮ್ಮ ಉಗುಳನ್ನು ನುಂಗ ಕೂಡದು. 6. ಉಗುಳನ್ನು ತಕ್ಕ ಪಾತ್ರೆಯಲ್ಲಿ ಉಗುಳಿ ಅದು ಒಣಗುವ ಮೊದಲು ಸುಟ್ಟುಹಾಕಬೇಕು. 7. ಪ್ರತಿ ಒಬ್ಬನು ತನ್ನ ದೇಹವನ್ನು ನಿರ್ಮಲವಾಗಿ ಇಟ್ಟುಕೊಂಡು ತಕ್ಕ ಆಹಾರವನ್ನು ಭುಂಜಿಸಿ ಎಲ್ಲಾ ದುರ್ನಡತೆಗಳನ್ನು ತ್ಯಜಿಸಿ ಶಾರೀರಿಕವಾಗಿಯೂ ಆತ್ಮೀಕವಾಗಿಯೂ ಸ್ವಹೃದಯವುಳ್ಳವನಾದರೆ ಕ್ಷಯರೋಗವು ನಿವಾರಣೆಯಾಗುವದು.

ದನಗಳ ಹಟ್ಟಿಯ ಗೋಡೆಗಳನ್ನು ನೀಲ ಬಣ್ಣದಿಂದ ಬಳಿಸಿದರೆ ನುಶಿಗಳ ಕಾಟ ಕಮ್ಮಿಯಾಗುತ್ತದೆ. ವರ್ಷಕ್ಕೊಂದೆರಡಾವರ್ತಿ ಗೋಡೆಗೆ ೧೦ ರಾತ್ಲು ಸುಣ್ಣ, ೫೦ ಗ್ರೈನ್ ಸಮುದ್ರ ನೀಲಬಣ್ಣ ಮತ್ತು ನೀರು ಇವುಗಳನ್ನು ಮಿಶ್ರ ಮಾಡಿ ಗೋಡೆಗೆ ಬಳಿಸುವದು ಒಳ್ಳೇದು ಎಂಬದಾಗಿ ವೈದ್ಯರ ಅಭಿಪ್ರಾಯ.

ಜೀನಸುಗಳ ಧಾರಣೆ, ಮಂಗಳೂರು. (ರ೩೦)

ಹೊಸ ಮಸ್ಕತಿ ಅಕ್ಕಿ	5—3—0
ಹೊಸ ಗುಡ್ಡ್ನ ಮಸ್ಕತಿ...	4-10—0
ಹೊಸ ಮಸ್ಕತಿ ದುಯಂ...	4-12—0
ಹೊಸ ಗುಡ್ಡ್ನ ,, ...	4—6—0
ಮಸ್ಕತಿ ಬೆಳ್ತಿಗೆ ,, ...	5—4—0
ರಂಗೂನ್ ಬೆಳ್ತಿಗೆ ಗೋಣಿ	10-4—0
ಹುರುಳಿ ಗೋಣಿ ೧, ಮುಡಿ 2ರ ...	6—8—0
ಉಪ್ಪು ಗೋಣಿ ೧ರ	3—8—0
ಕೊಬ್ರಿ ಖಂಡಿ ೧ರ	96—0—0
ಕೊಬ್ರಿ ಎಣ್ಣೆ ಮಣ	7—0—0
ಕಾಫಿ ಖಂಡಿ ೧ರ	250—0—0
ಕಾಳು ಮೆಣಸು ಖಂಡಿ	170—0—0
ಹೊಸ ಬಿಳಿ ಗೋಟು ಅಡಿಕೆ	78—0—0
ಕರಿ ಗೋಟು	65—0—0
ಯಾಲದ ಕಾಯಿ ಮಣ ೧ರ	35—0—0
ಗೇರುಬೀಜ ಮುಡಿ ೧ರ...	2—2—0
ರಾಮಪತ್ರೆ ಮಣ ೧ರ...	8—6—0
ಶೀಗೆಕಾಯಿ ಖಂಡಿ ೧ರ	35—0—0
ಕಾಸ್ರಕಿನ ಬೀಜ ಖಂಡಿ ೧ರ	22—0—0
ದಾಲಚೀನಿ ಹ್ಹು ಮಣ ೧ರ	3—0—0
ಅಂಟವಾಳ ಕ್ಕಾ ಮುಡಿ ೧ರ	1—4—0
ಅಣಿಲೆ ಕಾಯಿ ಖಂಡಿ ೧ರ	12—3—0
ಪಚ್ಚೆಹೆಸರು	4-10—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—6—0
ಗೋದಿ ಗೋಣಿ ೧ಕ್ಕೆ	10—8—0
ಊರು ಬೆಲ್ಲ ಖಂಡಿ ೧ರ	36—8—0
ಮೊರಿಸ್ ಸಕ್ಕರೆ ಮಣ ೧ರ	3—11—0
ಕಡಲೆ ಗೋಣಿ ೧ರ	7—8—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—4—0
ಕೊಬ್ರಿ ಹಿಂಡಿ ಖಂಡಿ ೧ರ	33—8—0

ಸಂತೋಷಕರವಾದ ಪ್ರಕಟಣೆ.
ಸರ್ವರೂ ತರಿಸಿಕೊಂಡು ಸಂತೋಷ ಪಡಿ.
ಬರುವ ಎಪ್ರಿಲ್ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.
ರೈಲ್ವೆ ರೆಗ್ಯುಲೇಟರ್ ವಾಚ್.
ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!
ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ವಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಣ್ಯವಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಪೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಶಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಶಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.
ವಿಳಾಸ:—ಟಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಶ್ರೀ ಶಂಕರ ಭಗವತ್ಪಾದಾಚಾರ್ಯ
ವಿರಚಿತ
ವಿವೇಕ ಚೂಡಾಮಣಿ.

ಬ್ರಹ್ಮ ಶ್ರಿ ದೊಡ್ಡಬೆಲೆ ನಾರಾಯಣಶಾಸ್ತ್ರಿಗಳಿಂದ ಬರೆಯಲ್ಪಟ್ಟ ಪ್ರತಿ ಪದ ಟೀಕಾ ತಾತ್ಪರ್ಯ ಸಹಿತವಾದುದು.

ಶ್ರೀ ಶಂಕರಾಚಾರ್ಯರು ಅದ್ವೈತ ಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಸುಲಭವಾಗಿ ಬೋಧಿಸುವುದಕ್ಕಾಗಿ ವಿರಚಿಸಿದ ಮೇಲ್ಕಂಡ ಗ್ರಂಥ ರತ್ನವು ಸುಲಭ ಕನ್ನಡದ ಟೀಕಾತಾತ್ಪರ್ಯಗಳೊಡನೆ ಈಗ ತಾನೆ ಪ್ರಕಟವಾಗಿದೆ.

ಈ ಪುಸ್ತಕವು, ಸಾಧನಕ್ರಮ, ಆತ್ಮಾನಾತ್ಮ ವಿವೇಕ, ಶರೀರ ಸ್ವರೂಪ, ಗುಣತ್ರಯ, ಕೋಶಾವರಣ ವಿಚಾರ, ಗುರು ಶಿಷ್ಯ ಸಂವಾದ, ಬ್ರಹ್ಮೋಪದೇಶ, ಮುಂತಾದ ಎಂಭತ್ತುಮೂರು ಪ್ರಕರಣಗಳನ್ನು ಒಳಕೊಂಡಿದೆ. ವೇದಾಂತ ವಿಷಯಗಳೆಲ್ಲವೂ ಇದರಲ್ಲಿಯೆ ಅಡಕವಾಗಿವೆ. ಇದನ್ನು ಚೆನ್ನಾಗಿ ವ್ಯಾಸಂಗ ಮಾಡಿದವರಿಗೆ ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟ ಸಂಖ್ಯೆ 448 (ಡೆಮ್ಮಿ ಅಷ್ಟ ಪತ್ರ) ಉತ್ತಮವಾದ ಕ್ಯಾಲಿಕೊ ಬೈಂಡು. ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕ.

ಬೆಲೆ ರೂ. ೨—೪—೦.

ಚೆನ್ನ ಪಟ್ಟಣದಲ್ಲಿ ತಯಾರಾದ ಬಣ್ಣದ ಚೆದುರಂಗದ ಕಾಯಿ ಸೆಟ್ಟು 1ಕ್ಕೆ 1—0—0.

ಹೊಸ ಸಮಾಚಾರ.

ಅಪೂರ್ವ ಗ್ರಂಥ! ನೀತಿಬೋಧಕ ಗ್ರಂಥ!! ಅತ್ಯುತ್ತಮ ಗ್ರಂಥ!!!

ಜಗದ್ವಿಖ್ಯಾತರಾದ ಆಂಗ್ಲೇಯ ಮಹಾಕವಿ ಸರ್‌ವಾಲ್ಟರ್ ಸ್ಕಾಟ್‌ರವರ ಬ್ಲ್ಯಾಕ್ ಡ್ವಾರ್ಫ್ (Sir Walter Scott's "Black Dwarf") ಎಂಬ ಕಥೆಯು „ಶ್ಯಾಮಕುಬ್ಜ" ಎಂಬ ಅಭಿದಾನದಿಂದ ಕನ್ನಡಿಸಲ್ಪಟ್ಟು ವಿಕರಿಗೆ ಸಿದ್ಧವಾಗಿದೆ. ಕನ್ನಡ ಭಾಷೆಯಲ್ಲಿ ಉತ್ತಮವಾದ ಆಧುನಿಕ ಶೈಲಿಯನ್ನು ಕಲಿಯಬೇಕೆಂಬ ಇಷ್ಟವುಳ್ಳ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಇದನ್ನೋದುವುದರಿಂದ ಲಾಭವುಂಟು.

ತ್ವರೆ ಮಾಡಿರಿ! ಸ್ವಲ್ಪ ಪ್ರತಿಗಳೇ ಉಳಿದಿವೆ!!

ಬೆಲೆ (೧೩೬ ಪುಟಗಳು ಡೆಮ್ಮಿ ಅಷ್ಟ ಪತ್ರ) ೮ ಆಣೆ ಅಂಚೆ ವೆಚ್ಚ ಬೇರೆ.

ವಿಳಾಸ:—
ಎಚ್. ಎನ್. ರಾವ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ
ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.
ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು.
ಟ್ರಸ್ಟೀ:— ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.



ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು, ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿ ಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ, ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸಿ ಮಾಡಲ್ಪಡುವದು.

ಎಲ್ಲೂರು ರಾಮ ರಾವ್,
ಜನರಲ್ ಏಜಂಟ್,
ಬ್ರಿಟೋ ಬಿಲ್ಡಿಂಗ್ಸ್
ಮಂಗಳೂರು, ದ. ಕನ್ನಡ.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸ ವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಅನಂತವಾಡಿ, ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹವ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುಲ್ಮುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೂ ವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜವ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists*,
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ
(ವಿದ್ಯುಚ್ಛಕ್ತಿಯ ಬೇನಿಹಾರಿ ಮುಲಾಮು.)
EST. 1898.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜಿ, ಸುಟ್ಟ ಘಾಯ, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಶಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ;—ಪರಿಮಳಾಂಜನ ಡಿಪೋ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ. ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟಿ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷದದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ:—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್, ಬನವಾಸಿ, ಜಿಲ್ಲ ಉತ್ತರಕನ್ನಡಾ.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರ ಲಾಗಾಯಿತು ವಿಶೇಷ ಲಕ್ಷಣಗಳ, ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲಕ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳ ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗ ಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲಾ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Actioneers.

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದಶೀರೆಗಳು ತಯಾರಾಗುತ್ತವೆ. ನಾಜೂಕು ರೇಶ್ಮೆ ಶೀರೆಗಳೂ, ಜೋಡು ಎಲವಸ್ತ್ರಗಳೂ, ಉತ್ತಮವಾದ ವೇಷ್ಟಿಗಳೂ ನಮ್ಮ ಸ್ವತಃ ಮೇಲ್ತನ್ನಿಕೆಯಲ್ಲಿಯೇ ನೇಯಿಸುತ್ತಿದ್ದೇವೆ.

ಕ್ರಯ ಕಮ್ಮಿ! ಬೇಗನೆ ಕೊಂಡುಕೊಳ್ಳಿರಿ!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯತಿ ಮಾಡಲಾಗುವುದು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಪ್ರತಿ ಒಂದು ಮನೆಯಲ್ಲಿಯೂ ಅತ್ಯವಶ್ಯವಾಗಿ ಇರಬೇಕಾದ್ದು.

ಗ್ರೆಮೆ ಫೋನು (Gramophone) ಎಂಬ ಮಾತಾಡುವ ರಾಗದ ಪೆಟ್ಟಿಗೆಗಳು ನಮ್ಮಲ್ಲಿ ದೊರಕುವವು. (ಕನ್ನಡ, ತಮಿಳು, ಮಲೆಯಾಳ, ಹಿಂದುಸ್ಥಾನಿ, ಇಂಗ್ಲಿಷ್ ಭಾಷೆಯ ಉತ್ಕೃಷ್ಟವಾದ ಗಾಯನದ ರಿಕಾರ್ಡುಗಳನ್ನು ತರಿಸಿಟ್ಟಿರುವೆವು.

ಎಲ್ಲೆಲ್ಲಿಯೂ ಕೀರ್ತಿ ಪಡೆದ ಕೊಯಂಬುತ್ತೂರು ತಾಯಿಯ ಸಂಗೀತ ರಿಕಾರ್ಡುಗಳು ಬೇಕಾದವರು ಬೇಗನೇ ಬರಕೊಳ್ಳಿರಿ!

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು
ಮಂಗಳೂರು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಸಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಸರ್ವೋತ್ಕೃಷ್ಟವಾದ ಅತ್ತರುಗಳು.

ಇನ್ನು ಮೇಲಾದರೂ ಬಜಾರಿನಲ್ಲಿ ದೊರಕುವ ಹೀನವಾದ ಅತ್ತರುಗಳನ್ನು ಕೊಂಡುಕೊಳ್ಳದಿರಿ. ನಮ್ಮ ಈ ಅತ್ತರುಗಳು ಅತಿಶಯ ಪ್ರಯಾಸ ಪ್ರಯತ್ನಗಳಿಂದ ಸಿದ್ಧ ಮಾಡಲ್ಪಟ್ಟಿವೆ. ಇವುಗಳ ಸುಗಂಧವು ನೂತನವಾಗಿ ಅರಳಿ ಗಮಗಮಿಸುವ ಪುಷ್ಪಗುಚ್ಛದ ಪರಿಮಳವನ್ನು ವಿಶೇಹತಃ ಮಿಂಚುತ್ತದೆ. ಮತ್ತು ಯಾವಾಗಲೂ ಒಂದೇ ಲೆಕ್ಕವಾಗಿರುತ್ತದೆ.

ಕಾಮಿನಿಯಾ ಡೈಜೀ (ರಿಜಿಸ್ಟರ್ಡ್)ಇದು ದೊಡ್ಡ ಮಲ್ಲಿಗೆಯ ಹೂಗಳಿಂದ ಸಂಗ್ರಹಿಸಿದ ಅತ್ತರು. 'ಮಲ್ಲಿಗೆ' ಎಂಬ ಈ ಶಬ್ದವು ಕಿವಿಗೆ ಬೀಳುತ್ತಲೇ ಅದರ ಸುವಾಸನೆಯನ್ನು ಕುರಿತು ಯಾವನೊಬ್ಬನ ಮನಸ್ಸಿನಲ್ಲಿಯಾದರೂ ಕಲ್ಪನೆಯು ಆಗದಿರದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 3-0—0

ಕಾಮಿನಿಯಾ ಸುರಂಗಿ (ರಿಜಿಸ್ಟರ್ಡ್) ಇದು ಬಹಳ ಪರಿಮಳ ಉಳ್ಳದ್ದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 1-4-0 ಅಂಚೆಯ ವೆಚ್ಚ ಬೇರೆ.

ಕಾಮಿನಿಯಾ (ರಿಜಿಸ್ಟರ್ಡ್) ಇದಾದರೂ ವಸಂತಮಾಸದ ಸಂಪಗೆಯ ಹೂಗಳಿಂದ ಸಂಗ್ರಹಿಸಿದುದು. ಇದರ ಸುರಭಿಯು ಅತ್ಯಂತ ಮಧುರವಿದೆ. ಕಾಲು ತೊಲೆಯ ಕುಪ್ಪಿಗೆ ರೂ. 1-8--0 ಅಂಚೆಯ ವೆಚ್ಚ ಬೇರೆ.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.**,
155 Jumma Musid, Market, Bombay.

ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1-3-0; 1000 ಹಾಳೆಗಳಿಗೆ 10-0-0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ. 1-0-0 ವಿ. ಪಿ. ಮೂಲಕ 1-3-0. 2000 ಹಾಳೆಗಳಿಗೆ 10-0-0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0-0-3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0-15-0. 1000 ಪೊಟ್ಟಣಕ್ಕೆ 8-0-0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0-13-0. ವಿ. ಪಿ. ಮೂಲಕ 1-0-0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೈಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1-4-0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,

ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಕ್ಷಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಲ್, ಬೆಳ್ಗಾಂ, ಸೇಲಂ, ನಾರಾಯಣವನಮ್ ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಫ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಸ್ತೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ

ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನ್ನೂ, ಛಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡುಗ,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ.

ನಮ್ಮ ದೇಖಾವೆ ಕೋಣೆಯು ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (**Whistler Studio**) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ನಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,

ಹಂಪನಕಟ್ಟಾ, ಮಂಗಳೂರು ದ.

Registered No. M. 498

ಚಂದಾನಿರ್ಣಯ:—

ವರ್ಷ ೧ಕ್ಕೆ ರೂ. 1-4-0.

ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವು ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.



ಪುಸ್ತಕ 6. ಸಂಚಿಕೆ 7.

ಮಂಗಳೂರು ತಾ. 16ನೇ ಶುಕ್ರವಾರ ಫೆಬ್ರುವರಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿ ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳುಕಡಿತ, ತುರಿಕಜ್ಜಿ ಮುಂತಾದುವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತ್ತು ...ಣೆ.

ಆರ್. ಆರ್. ಗಂಗೊಳ್ಳಿ, ಫಸ್ಟ್ ಕ್ಲಾಸ್ ಸಬ್ ... ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ ಮತ್ತು ಮೂಲವ್ಯಾಧಿಗೆ ಅತೀ ...ರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ... ಎಸ್. ಎಂಡ್. ಜಿ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೇಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ: ...ನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ ಎಸ್ಟೇಟು, ಕೊಡಗು:—ನನ್ನ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ವೈಸ್ ಪ್ರೆಸಿದೆಂತ್ ವ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—ನಿಮ್ಮಿಂದ ಪಡಕೊಂಡ ಅಮೃತಾಂಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.

ಅಮೃತಾಂಜನ ಚರ್ಚಿತವಾದ ರೋಮದ ವಸ್ತ್ರ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಪಶೆಯೂ ಬಾರದಂತೆ ನೋಡಿಕೊಂಡು, ಪಶೆ ಇಲ್ಲ...ಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. ಎಮ್. ಎಂಡ್. ... ಮುಂಬಯಿ, ಬರಿಯುವದೇನಂದರೆ:—ನಿಮ್ಮ ಅಮೃತಾಂಜನವನ್ನು ನಾನು ವಾತಕ್ಕೂ ಸಂಧಿವಾತ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿದ್ದಲ್ಲಿ ಬಹಳ ಗುಣ...ದುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ ತಿಳಿಸುತ್ತೇನೆ.

ಜಾಗ್ರತೆ:--ಈಗ ಅಮೃತಾಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಲ್ಪಟ್ಟಿರುತ್ತದೆ.

ವಿಳಾಸ:— ...ಮೃತಾಂಜನ ಡಿಪೊ.,

109 ಫ್ರೆಯರ್ ರೋಡ್, ಫೋರ್ಟ್ ಮುಂಬಯಿ.

ಟೆಲಿಗ್ರಾಫ್ ...ಸು:—ಅಮೃತಾಂಜನ, ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ರಕ್ತವೃದ್ಧಿ, ಬಾಟ್ಲಿ 1ಕ್ಕೆ 1ರೂಪಾಯಿ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೊಲೆರಾ ಮಾತ್ರೆ.

ಕೊಲೆರಾ, ವಾಂತಿಭೇದಿಗಳ ಮೇಲೆ ಬಹಳ ಉತ್ತಮ ಔಷಧ ಕ್ರಯ 6ಆಣೆ.

ನೇತ್ರಾಂಜನ.

ಮಂದದೃಷ್ಟಿಯನ್ನೂ ಕಣ್ಣುನೋವನ್ನೂ ಗುಣಪಡಿಸುವದು. ಕ್ರಯ 4ಆಣೆ.

ಕೇಶವರ್ಧಿನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

ಜುಲಾಬು ಮಾತ್ರೆ 8 ಆಣೆ; ಪ್ರಮೇಹಮಿಶ್ರಣ 1ರೂಪಾಯಿ; ಕಫಹಾರಿ 1 ರೂಪಾಯಿ 4 ಆಣೆ; ಕಫನಾಶಕ ಚೂರ್ಣ 8 ಆಣೆ; ಜಂತುವಾತಹಾರಿ 8 ಆಣೆ.

ವಿಳಾಸ:—

ವಿಲಿಯಂ ಮತ್ತು ಕಂಪೆನಿ,
109 ಫ್ರೆಯರ್ ರೋಡ್,
ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—

ಅಮೃತಾಂಜನ, ಮುಂಬಯಿ.

ಶ್ರೀ ಶಂಕರ ಭಗವತ್ಪಾದಾಚಾರ್ಯ ವಿರಚಿತ

"ವಿವೇಕ ಚೂಡಾಮಣಿ."

(ಸುಲಭ ಕನ್ನಡ ಪ್ರತಿಪದ ಟೀಕಾ ತಾತ್ಪರ್ಯ ಸಹಿತ.)

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿವೆ. ಇದನ್ನು ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. (ಡೆಮ್ಮಿ ಅಷ್ಟಪತ್ರ) ಬೈಂಡು ಉತ್ತಮವಾದ ಕೆಲಿಕೊ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೨—೪—೦. ಹಾಸಲು ೪ ಆಣೆ.

ಶ್ಯಾಮಕುಬ್ಜ.

ಇದೊಂದು ಹೊಸಕಥೆ. ಕನ್ನಡದಲ್ಲಿ ಇಂಥ ಕಥೆಗಳನ್ನು ಇದುವರೆಗೆ ಯಾರೂ ಬರೆದಿಲ್ಲ. ಅತಿ ಚಮತ್ಕಾರವಾಗಿಯೂ, ಒಳ್ಳೆಯ ನೀತಿಯನ್ನು ಬೋಧಿಸುವುದಾಗಿಯೂ ಇದೆ. ಇದನ್ನು ಓದಲು ಪ್ರಾರಂಭಿಸಿ ಕೈಗೆ ತೆಗೆದುಕೊಂಡರೆ ಮುಗಿಸುವವರೆಗೂ ಕೆಳಗಿಡಲು ಮನಸ್ಸು ಬರುವುದಿಲ್ಲ.

ಓದಿನೋಡಿರಿ! ತ್ವರೆಮಾಡಿರಿ!! ಸ್ವಲ್ಪ ಪ್ರತಿಗಳೇ ಇವೆ!!!

ಬೆಲೆ ೮ ಆಣೆ. ಅಂಚೆವೆಚ್ಚ ಬೇರೆ.

ಕನ್ನಡ ವರ್ಣಮಾಲಾ.

ಅಕ್ಷರಾಭ್ಯಾಸ ಮಾಡಿಸಲು ಅನುಕೂಲಿಸುವಂತೆ ಅ,ಕಾರ ಮೊದಲು ಳ,ಕಾರದ ವರಿವಿಗೆ ಎಲ್ಲಾ ಅಕ್ಷರಗಳನ್ನು ದೊಡ್ಡ ಆಕಾರದಲ್ಲಿ ಅಚ್ಚುಮಾಡಿಸಿರುತ್ತೆ ಗೋಡೆಗೆ ಅಂಟಿಸಲು ಅನುಕೂಲಿಸುವಂತೆಯೂ ಬಾಲಕರಿಗೆ ಜಾಗ್ರತೆ ಅವಗಾಹನೆಯಾಗುವಂತೆಯೂ ಇರುವದು. ಬೆಲೆ ೧ಕ್ಕೆ ೬ ಪೈ, ೨೫ಕ್ಕೆ ೮ ಆಣೆ.

ಟೀಕಾ ತಾತ್ಪರ್ಯ ಸಹಿತ ಮಹಿಮ್ನ ಸ್ತೋತ್ರ	೦—೩—೦.
ಡಿ. ಮುಕುಂದಮಾಲಾ ಸ್ತೋತ್ರ	೦—೪—೦.
ವಚನ ಜ್ಯೋತಿಸ್ಸಂಗ್ರಹ	೦—೪—೦.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—

ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ಧರ್ಮಪ್ರಕಾಸಿತ ಛಾಪಖಾನೆ,
ಮಂಗಳೂರು, ದ. ಕ.

———o———

ವೇದವಾಹಿನೀ.

———o———

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಳಾಸ (ಪತ್ರೆ)☞

ವೇದವಾಹಿನೀ ಆಫೀಸ್,
ಶಂಕರಪುರ,
ಬೆಂಗಳೂರು ಸಿಟಿ.

ಶ್ರೀ ರಾಮಕೃಷ್ಣ ವಿವೇಕಾನಂದ

ವಚನಾಮೃತವು.

ಅಭಿನವ ಭರತಖಂಡದ ಪರಮ ಗುರುಗಳಾಗಿಯೂ, ಭಕ್ತಿ ಜ್ಞಾನ ಯೋಗ ವೈರಾಗ್ಯಗಳಲ್ಲಿ ಅದ್ವಿತೀಯರಾಗಿಯೂ, ವೇದ ವೇದಾಂತ ಮಹಮ್ಮದೀಯ ಮತ್ತು ಕ್ರೈಸ್ತಮತಗಳಲ್ಲಿ ಪಾರಂಗತರಾಗಿಯೂ, ಬ್ರಹ್ಮನಿಷ್ಠರಾಗಿಯೂ, ಆತ್ಮವಿದರಾಗಿಯೂ, ಅವತಾರ ಪುರುಷರಾಗಿಯೂ :ಇದ್ದ ಶ್ರೀ ರಾಮಕೃಷ್ಣ ಪರಮಹಂಸರವರ ಸೂಕ್ತಿ ಮುಕ್ತಾವಲಿಯೂ, ಅವರ ಶಿಷ್ಯರಾಗಿ, ಪ್ರಾಚ್ಯ ಪಾಶ್ಚಾತ್ಯ ವಿದ್ಯೆಗಳಲ್ಲಿ ಪಂಡಿತರಾಗಿ, ಅಮೇರಿಕಾ ಯೂರೋಪ್‌ಖಂಡಗಳಲ್ಲಿ ಸನಾತನಧರ್ಮದ ಉತ್ಕೃಷ್ಟತೆಯನ್ನು ಕುರಿತು ಉತ್ತಮೋಪನ್ಯಾಸ ಮಾಡಿ, ಜಗದ್ಗುರುಗಳಾಗಿ, ಭಾರತೀಯರ ಪ್ರಕೃತ ಧರ್ಮಗಳನ್ನು ತಿಳಿಸಿ, ದೇಶಭಕ್ತಾಗ್ರೇಸರರಾಗಿದ್ದ ಶ್ರೀ ವಿವೇಕಾನಂದ ಸ್ವಾಮಿಗಳವರು ಬರೆದ ಕಾಗದಗಳ ಮತ್ತು ಉಪನ್ಯಾಸಗಳ ಸಾರಾಂಶವೂ ಲಲಿತವಾದ ಹೊಸಗನ್ನಡದಲ್ಲಿ ಬರೆಯಲ್ಪಟ್ಟಿವೆ. ಅದರಲ್ಲಿ ಆಸ್ತಿಕ, ಬ್ರಂಲಕ್ಷಣ, ಮೋಕ್ಷೋಪಾಯ, ಭಕ್ತಿ, ವಿರಕ್ತಿ. ಮತಮತಾಂತರಗಳು ಮುಂತಾದ ಪಾರಮಾರ್ಥಿಕ ವಿಷಯಗಳೂ, ಭಾರತೀಯರ ಸ್ಥಿತಿ, ಕರ್ತವ್ಯ, ಇತರ ಜನಾಂಗಗಳ ನಾಗರಿಕತೆ ಮುಂತಾದ ಲೌಕಿಕ ವಿಷಯಗಳೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಪ್ರತಿಯೊಬ್ಬ ದೇಶಾಭಿಮಾನಿಯೂ, ಮತಾಭಿಮಾನಿಯೂ, ಆಸ್ತಿಕನೂ ಮುಮುಕ್ಷುವೂ ಈ ಗ್ರಂಥದ ಒಂದು ಪ್ರತಿಯನ್ನಾದರೂ ಇಟ್ಟುಕೊಂಡಿರಬೇಕು. ಇದರಲ್ಲಿ ಆ ಸದ್ಗುರುಗಳಿಬ್ಬರ ಸಂಸ್ಕೃತ ಕರ್ಣಾಟಕ ಸ್ತೋತ್ರಗಳೂ ಜೀವನ ಚರಿತ್ರೆಗಳೂ ಭಾವಚಿತ್ರಗಳೂ ಅಡಗಿವೆ. ಸರ್ವರಿಗೂ ಸಂಗ್ರಾಹ್ಯ.—ಬೇಗನೆ ಬರೆಯಿರಿ.

ವಿಳಾಸ:—ಮ್ಯಾನೇಜರ್,
"ಸುಮತಿ ಗ್ರಂಥಮಾಲಾ"ಆಫೀಸು
ಬೆಂಗಳೂರು ಸಿಟಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ „ „	6—0—0	B ಅರಗಜ „ „	1—0—0
ಕಸ್ತೂರಿ ಬತ್ತಿ „ „	3—0—0	ಕಸ್ತೂರಿ ಬಿಲ್ಲೆ„ „	2—0—0
ಜವಾಜಿ ಬತ್ತಿ „ „	2—0—0	ಜವಾಜಿ ಬಿಲ್ಲೆ„ „	1—0—0
ಪುಣಗಿನ ಬತ್ತಿ „ „	1—8—0	ಕೇಸರಿ ಬಿಲ್ಲೆ „ „	0—8—0
A ಪನ್ನೀರ್ ಬತ್ತಿ „ „	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ „ „	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:— ವಿಳಾಸ:—

ಮ. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ಎನ್. ಎಂ. ಸುಬ್ರಾವ್,
"ಸುಗಂಧವಿಲಾಸ"
ಮಂಗಳೂರು

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಅನೇಕ ನಮೂನೆಗಳಲ್ಲಿ (ಅಂದರೆ) ಇಂಗ್ಲೀಷು, ಕನ್ನಡ, ಬಾಳಬಂದು, ಉರುದು, ಅರವ, ತೆಲುಗು ಈ ಎಲ್ಲಾ ಭಾಷೆಗಳಲ್ಲಿಯೂ ರಬ್ಬರು ಮೊಹರು ತಯಾರುಮಾಡುತ್ತೇವೆ. ಬೇಕಾದವರು ಬರದು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ರಬ್ಬರು ಮೊಹರುಗಳ ನಮೂನೆ ನೋಡಬೇಕಾದವರು ನಮ್ಮ ಕಂಪೆನಿಗೆ ಬರದರೆ ಕ್ಯಾಟಲಾಗ್ ರವಾನಿಸುತ್ತೇವೆ. ಇದೂ ಅಲ್ಲದೆ ನಮ್ಮ ಕಂಪೆನಿಯಲ್ಲಿ ತರಹೆವಾರಿ ಫೌಂಟನ್‌ಪೆನ್‌ಗಳೂ ಮತ್ತು ಜರ್ಮನ್ ಅಮೇರಿಕಾ ದೇಶದ ಸುವಾಸನೆಯುಳ್ಳ [illegible]ಂಟ್ಸ್ ಎಂಬ ಹೂವಿನ ಸಾರಗಳು ಮಾಡಲ್ಪಡುತ್ತವೆ.



ಇದರ ಕ್ರಯ[illegible]ಬುದ್ಧಿ 1ಕ್ಕೆ 1—0—0.

ಏಜಂಟುಗಳು ಬೇಕಾಗಿವೆ. [illegible]ಕ ಲಾಭವುಂಟು. ವಿ.ಪಿ. ಚಾರ್ಜು ಅಲ್ಲಾಯಿದೆ.

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೊನ್‌ರವರು.

1911ನೇ ಇಸವಿ ಜೂನ್ ತಾರೀಕು 3ರ ಲಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗ ಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers.

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನ್ನಿಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು
ಮಂಗಳೂರು.

ಫೊಟೊಗ್ರಾಫ್ ಬ್ರೈಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42″ × 25″ ರೂ. 75. ಅರ್ಧ ಸ್ಯಾಜ್ 21″ × 15″ ರೂ. 40. ಬಸ್ಟ್ ಸ್ಯಾಜ್ 18″ × 12″ ರೂ. 20. ಸಣ್ಣ ಸ್ಯಾಜ್ 12″ × 10″ ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೊಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೊಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,
ಆರ್ಟಿಸ್ಟ್, ಕೋರ್ಟ್ ರೋಡ್, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿ[illegible]

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಸಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು .ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಸರ್ವೋತ್ಕೃಷ್ಟವಾದ ಅತ್ತರುಗಳು.

ಇನ್ನು ಮೇಲಾದರೂ ಬಜಾರಿನಲ್ಲಿ ದೊರಕುವ ಹೀನವಾದ ಅತ್ತರುಗಳನ್ನು ಕೊಂಡುಕೊಳ್ಳದಿರಿ. ನಮ್ಮ ಈ ಅತ್ತರುಗಳು ಅತಿಶಯ ಪ್ರಯಾಸ ಪ್ರಯತ್ನಗಳಿಂದ ಸಿದ್ಧ ಮಾಡಲ್ಪಟ್ಟಿವೆ. ಇವುಗಳ ಸುಗಂಧವು ನೂತನವಾಗಿ ಅರಳಿ ಗಮಗಮಿಸುವ ಪುಷ್ಪಗುಚ್ಛದ ಪರಿಮಳವನ್ನು ವಿಶೇಷತಃ ಮಿಂಚುತ್ತದೆ. ಮತ್ತು ಯಾವಾಗಲೂ ಒಂದೇ ಲೆಕ್ಕವಾಗಿರುತ್ತದೆ.

ಕಾಮಿನಿಯಾ ಡೈಜೀ (ರಿಜಿಸ್ಟರ್ಡ್)ಇದು ದೊಡ್ಡ ಮಲ್ಲಿಗೆಯ ಹೂಗಳಿಂದ ಸಂಗ್ರಹಿಸಿದ ಅತ್ತರು. 'ಮಲ್ಲಿಗೆ' ಎಂಬ ಈ ಶಬ್ದವು ಕಿವಿಗೆ ಬೀಳುತ್ತಲೇ ಅದರ ಸುವಾಸನೆಯನ್ನು ಕುರಿತು ಯಾವನೊಬ್ಬನ ಮನಸ್ಸಿನಲ್ಲಿಯಾದರೂ ಕಲ್ಪನೆಯು ಆಗದಿರದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 3-0—0

ಕಾಮಿನಿಯಾ ಸುರಂಗಿ (ರಿಜಿಸ್ಟರ್ಡ್) ;ಇದು ಬಹಳ ಪರಿಮಳ ಉಳ್ಳದ್ದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 1-4-0 ಅಂಚೆಯ ವೆಚ್ಚ ಬೇರೆ.

ಕಾಮಿನಿಯಾ (ರಿಜಿಸ್ಟರ್ಡ್) ಇದಾದರೂ ವಸಂತಮಾಸದ ಸಂಪಗೆಯ ಹೂಗಳಿಂದ ಸಂಗ್ರಹಿಸಿದುದು. ಇದರ ಸುರಭಿಯು ಅತ್ಯಂತ ಮಧುರವಿದೆ. ಕಾಲು ತೊಲೆಯ ಕುಪ್ಪಿಗೆ ರೂ. 1—8-‑0 ಅಂಚೆಯ ವೆಚ್ಚ ಬೇರೆ.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.,**
155 Jumma Musid, Market, Bombay.

ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು



ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯಾಕಲುಗಳನ್ನು ಪಡಿಯಲು ಸಾಧ್ಯವಲ್ಲ.

ಪೊಪ್ಯುಲರ್ ಹಂಬರ್ ಕ್ರಯ ರೂಪಾಯಿ 120.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಶೋಸಿಯೇಷನ್,

ಸ್ಯಾಕಲ್ ಏಜಂಟ್ಸ್,

ಮಂಗಳೂರು, ದಕ್ಷಿಣ ಕನ್ನಡ.



ಸಿಂಗರ್ ರೊಯಲ್ ಕ್ರಯ ರೂಪಾಯಿ 115.

ಬೆಸ್ಟ್ ಲ್ಯಾಟ್ಸ್

ಎಂಬ

ಗ್ಯಾಸ್ ದೀಪಗಳು



ಕೆರೆಸಿನ್ ಎಣ್ಣೆಯ ದೀಪಗಳಂತೆ ಹೊಗೆಯಿಂದ ಪ್ರಕಾಶವು ಮೊಬ್ಬಾಗದೆ ಘಾಳಿಯ ಶಳವಿನಿಂದ ನೊಂದಿ ಹೋಗದಂಥವುಗಳು. ಈ ದೀಪಗಳನ್ನುರಿಸಲು ಕೆರೆಸಿನ ಎಣ್ಣೆಯ ದೀಪಗಳಷ್ಟೇ ಖರ್ಚು ತಗಲುವುದು.



ಕ್ರಯ ರೂ. 16. ಕ್ರಯ ರೂ. 20.

ದೇವಾಲಯ ವಾಚಕ ಮಂದಿರ ವ್ಯಾಪಾರದ ಅಂಗಡಿ ಭಂಡಸಾಲೆಗಳಿಗೆ ದೀಪದ ಪ್ರಕಾಶದ ಶೋಭೆಯು ಅಧಿಕವಾಗಿ ಬೇಕಾದ ಎಲ್ಲಾ ಕಡೆಗಳಲ್ಲಿ ಅತ್ಯುಪಯುಕ್ತವಾದವು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಮಂಗಳೂರು ಟ್ರೇಡಿಂಗ್ ಎಸ್ಸೊಶಿಯೇಶನ್,

ಸ್ಯಾಕಲ್ ಏಜಂಟ್ಸ್,

ಮಂಗಳೂರು, ದ. ಕ.

ಈ ಕಾಲದಲ್ಲಿ ಯಾವುದು ತಾನೇ ಸಾಧ್ಯವಲ್ಲ?



ಕ್ರಯ ರೂ. 45.

ಪ್ರಖ್ಯಾತಪಟ್ಟ ಕೊಯಂಬುತ್ತೂರು ತಾಯಿಯ ಗಾಯನವನ್ನೂ, ಉತ್ತರಹಿಂದುಸ್ಥಾನದ ಸುಪ್ರಸಿದ್ಧ ಗಾಯನ ವಿದ್ಯಾವಿಶಾರದರ ಹಾಡುಗಳನ್ನೂ, ಇನ್ನು ಕನ್ನಡ ತಮಿಳು ತೆಲುಗು ಮಯಾಳ ಮರಾಟಿ ಭಾಷೆಗಳ ಉತ್ಕೃಷ್ಟ ಗವಯಿಗಳ ಪದಗಳನ್ನೂ ಕೇಳಲಿಕ್ಕೆ ಅವರಿದ್ದಲ್ಲಿಗೆ ಹೋಗು ಬೇಕೆಂತಿಲ್ಲ. ಈ ಕೆಳಗೆ ತೋರುವ ರಾಗದ ಪೆಟ್ಟಿಗೆಯೊಂದನ್ನೂ ಹಾಡುಗಳ ಸ್ವರವೆಲ್ಲವು ವಳದ್ರಿತವಾಗಿರುವ ರಿಕಾರ್ಡುಗಳೆಂಬ ಹಾಳೆಗಳನ್ನು ತಕ್ಕೊಂಡರೆ ನಾವಿದ್ದಲ್ಲಿಯೇ ಶ್ರೇಷ್ಠ ಗವಯಿಗಳ ಗಾನವನ್ನು ಕೇಳಿ ಆಹ್ಲಾದ ಪಡಬಹುದು.

ರಿಕಾರ್ಡು ಒಂದಕ್ಕೆ ಸಾಧಾರಣವಾಗಿ ರೂ. 3—0—0 ಕ್ರಯವಿರುವದು.

ಇವುಗಳು ದೊರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್

ಎಸ್ಸೋಸಿಯೇಶನ್

ಸ್ಯಾಕಲ್ ಏಜಂಟ್ಸ್,

ಮಂಗಳೂರು ದ. ಕ.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 16ನೇ ಫೆಬ್ರವರಿ 1912.

ಮದ್ರಾಸು ಸಂಸ್ಥಾನಕ್ಕೆ ಗವರ್ನರರಾಗಿ ನೇಮಕರಾದ ಪೆಂಟಲೆಂಡ್ ಪ್ರಭುಗಳು.

ಮೊನ್ನೆ ಬುಧವಾರ ಪ್ರಕಟವಾದ ತಂತೀ ವರ್ತಮಾನಗಳ ಪ್ರಕಾರ ಮದ್ರಾಸು ಸಂಸ್ಥಾನಕ್ಕೆ ಸ್ಕೋತ್ಲಾಂಡದ ಸೆಕ್ರೆಟರಿಗಳಾದ ಪೆಂಟಲೆಂಡ್ ಪ್ರಭುಗಳೇ ಗವರ್ನರರಾಗಿ ನೇಮಿಸಲ್ಪಟ್ಟಿರುವರು. ಈ ವರ್ತಮಾನವನ್ನು ದೃಢೀಕರಿಸಿ ಇಂಡಿಯಾ ಸರಕಾರದವರಿಗೆ ಸಹ ವರ್ದಿಯು ಅಂಗ್ಲಾಂಡದಿಂದ ಬಂದಿರುವುದು. ಈಗ ಗವರ್ನರರಾಗಿರುವ ಕಾರ್ಮಿಕೆಲ್ ಪ್ರಭುಗಳು ಬಂಗಾಳದ ಗವರ್ನರರಾಗಿ ಹೋಗುವರೆಂಬುವುದಕ್ಕೆ ಇನ್ನು ಸಂದೇಹವಿಲ್ಲ. ಈ ಸಂಸ್ಥಾನದ ಆಡಳಿತೆಯನ್ನು ವಹಿಸಿಕೊಂಡ ಕೆಲವು ತಿಂಗಳುಗಳಲ್ಲಿಯೇ ಪ್ರಜೆಗಳಲ್ಲಿ ವಿಶೇಷ ಅನುರಾಗವನ್ನು ತೋರಿದ ಕಾರ್ಮಿಕೇಲ್ ಪ್ರಭುಗಳು ಈ ಸಂಸ್ಥಾನವನ್ನು ಬಿಡುವುರೆಂಬುದಕ್ಕೆ ವಿಷಾದಪಡಬೇಕಾದರೂ, ಬ್ರಿಟಿಷ ಪಾರ್ಲಿಮೆಂಟಿನ ಉದಾರಪಕ್ಷದವರಾದ ಪೆಂಟ್‌ಲೆಂಡ್ ಪ್ರಭುಗಳು ಈ ಪದವಿಗೆ ನೇಮಿಸಲ್ಪಟ್ಟಿರುವರೆಂಬುದರಿಂದ ಪ್ರಜೆಗಳಿಗೆ ಪೂರ್ಣ ಭಗ್ನಮನೋರಥರಾಗಲಿಕ್ಕೆ ಕಾರಣವಿಲ್ಲ. ಪ್ರಜಾಭಿಪ್ರಾಯಕ್ಕೂ ಅವರ ವಿಜ್ಞಾಪನೆಗಳಿಗೂ ಪೂರ್ಣ ಗಮನಕೊಟ್ಟು ಉದಾರಪಕ್ಷದವರೂ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ವಿಶೇಷ ಮಾಹಿತಿದಾರರೂ ಆದವರೇ ಈ ಸಂಸ್ಥಾನದ ಗವರ್ನರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಬಹುಮಾನಪಟ್ಟ ಜೋನ್ ಸಿಂಕಲೇರ್ ಪೆಂಟಲೆಂಡ್ ಪ್ರಭುಗಳಿಗೆ ಪ್ರಾಯವು ೫೨ ವರುಷವಾಗಿರುವುದು. ಗತಿಸಿದ ಕೆಪ್ಟನ್ ಜೋರ್ಜಸಿಂಕಲೇರ್ ಎಂಬವರ ಜೇಷ್ಠ ಪುತ್ರರು ಇವರಾಗಿರುವರು. 'ಎಡಿನ್‌ಬರ್ಗ್ ಎಕೆಡೆಮಿ' ಎಂಬ ವಿದ್ಯಾಸಂಸ್ಥೆಯಲ್ಲಿ ತನ್ನ ವಿದ್ಯಾಭ್ಯಾಸವನ್ನು ಪಡದು ೧೮೭೯ರಲ್ಲಿ ಸೇನಾವೃತ್ತಿಯನ್ನು ಅವಲಂಬಿಸಿದರು. ಅಫ್ರಿಕದ ಸೌಡಾನ್ ಎಂಬಲ್ಲಿ ದಂಡೆತ್ತಿ ಹೋದಾಗ ಅಲ್ಲಿ ತನ್ನ ಪರಾಕ್ರಮದಿಂದ ಚಿನ್ನದ ಪದಕದ ಬಹುಮಾನವನ್ನು ಪಡದು ನಂತರದಲ್ಲಿ ಐರ್ಲಾಂಡದ ಲೋರ್ಡ ಲೆಫ್ಟಿನೆಂಟರಾಗಿದ್ದ ಎಬರ್ಡೀನಿನ ಪ್ರಭುಗಳ ಸೇನಾನಿಹಸ್ತಕರಾಗಿ ನೇಮಿಸಲ್ಪಟ್ಟರು. ೧೮೮೬ರಲ್ಲಿ ಬ್ರಿಟಿಷ ಪಾರ್ಲಿಮೆಂಟ್ ಸಭೆಗೆ ಉದಾರಪಕ್ಷದ ಉಮೇದ್ವಾರರಾಗಿದ್ದರೂ ಆ ವರುಷ ಪಾರ್ಲಿಮೆಂಟ್ ಮೆಂಬರರಾಗಿ ಇವರು ಆರಿಸಲ್ಪಡಲಿಲ್ಲ. ಕೆಪ್ಟನ್ ಪದವಿಯನ್ನು ಹೊಂದಿ ೧೮೮೭ರಲ್ಲಿ ಸೇನಾವೃತ್ತಿಯನ್ನು ಪೂರ್ಣವಾಗಿ ಬಿಟ್ಟುಬಿಟ್ಟರು. ೧೮೯೨ರಲ್ಲಿ ಡೆಂಬಾರ್ಟನ್‌ಷಾಯರಿನ ಪರವಾಗಿ ಪಾರ್ಲಿಮೆಂಟ್ ಮೆಂಬರರಾಗಿ ಆರಿಸಲ್ಪಟ್ಟು ೧೮೯೫ರ ವರೆಗೆ ಈ ಸಭಾ ಮೆಂಬರರಾಗಿದ್ದರು. ಎಬರ್ಡೀನ್ ಪ್ರಭುಗಳು ಅಮೇರಿಕದ ಕೆನಡಾ ದೇಶದ ಗವರ್ನರ ಜನರಲರಾಗಿ ನೇಮಿಸಲ್ಪಟ್ಟಾಗ ಅವರ ಸೆಕ್ರೆಟರಿಗಳಾಗಿ ಕೆಪ್ಟನ್ ಸಿಂಕ್ಲೆರರವರು ಕೆನಡಾ ದೇಶಕ್ಕೆ ಹೋದರು. ಆದರೆ ಈ ಹುದ್ದೆಯನ್ನು ಅವರು ಬಹಳ ಕಾಲ ನಿರ್ವಹಿಸಲಿಲ್ಲ. ೧೮೯೭ರಲ್ಲಿ ಅಂಗ್ಲಾಂಡಕ್ಕೆ ಬಂದು ಪೋರ್ಫರ್‌ಷಾಯರಿನ ಪ್ರತಿನಿಧಿಗಳಾಗಿ ಪಾರ್ಲಿಮೆಂಟ್ ಸಭೆಯನ್ನು ಸೇರಿದರು. ಈ ಮೆಂಬರುತನವು ಪ್ರಭುಪದವಿಯು ೧೯೦೯ರಲ್ಲಿ ದೊರಿಯುವವರಿಗೆ ಇವರಿಗಿತ್ತು. ಸ್ಕೋತ್ಲಾಂಡದ ಸೆಕ್ರೆಟರಿಗಳಾಗುವ ಮೊದಲು ಗತಿಸಿದ ಅಂಗ್ಲಾಂಡದ ಪ್ರಮುಖ ಮಂತ್ರಿ ಸರ್ ಹೆನ್ರಿ ಕೆಂಪಬೆಲ್‌ಬೆನ್ನರಮೇನರ ಸೆಕ್ರೆಟರಿಗಳಾಗಿ ಪೆಂಟಲೆಂಡ್ ಪ್ರಭುಗಳಿದ್ದರು. ಸ್ಕೋತ್ಲಾಂಡದ ಸೆಕ್ರೆಟರಿಗಳಾಗಿ ಇವರಿಗೆ ೨೦೦೦ ಪವನುಗಳ ತಲಬಿತ್ತು. ಮದ್ರಾಸು ಗವರ್ನರರ ಹುದ್ದೆಯು ಇವರಿಗೆ ಕೊಡೋಣಾದ್ದರಿಂದ ಈ ಸೆಕ್ರೆಟರಿ ಹುದ್ದೆಗೆ ಇವರು ರಾಜೀನಾಮೆ ಕೊಟ್ಟಿರುವರು. ಡಿಲ್ಲಿದರ್ಬಾರಿನ ಸಂದರ್ಭದಲ್ಲಿ ಚಕ್ರವರ್ತಿಯವರಿಂದ ದಯಪಾಲಿಸೋಣಾದ ವರಗಳಲ್ಲಿ ನೂತನವಾಗಿ ಸಂಯೋಗಿಸಲ್ಪಟ್ಟ ಬಂಗಾಳ ಸಂಸ್ಥಾನದ ಏರ್ಪಾಡು ಮೊದಲಾದವುಗಳನ್ನು ಕೂಡಿಕೊಂಡಿರುವ ಮಸೂದೆಯು ಪಾರ್ಲಿಮೆಂಟ್ ಸಭೆಯ ಅಂಗೀಕಾರವನ್ನು ಪಡಿಯುತ್ತಲೇ ಪೆಂಟಲೆಂಡ್ ಪ್ರಭುಗಳು ಮದ್ರಾಸಿಗೆ ಹೊರಟು ಬರುವರು. ಎಪ್ರಿಲ್ ತಿಂಗಳಲ್ಲಿ ಪ್ರಭುಗಳ ಆಗಮನವನ್ನು ಎದುರು ನೋಡುತ್ತಿರುವರು.

ಹ್ಯಾಗೂ ಮದ್ರಾಸಿಗೆ ಬ್ರಿಟಿಷ ಪಾರ್ಲಿಮೆಂಟಿನ ಉದಾರಪಕ್ಷದವರು ಮಾತ್ರವಲ್ಲ, ಬ್ರಿಟಿಷ ಮಂತ್ರಿ ಸಭೆಯ ಮೆಂಬರರಾದ ಪೆಂಟಲೆಂಡ್ ಪ್ರಭುಗಳು ಗವರ್ನರರಾಗಿ ನೇಮಿಸಲ್ಪಟ್ಟಿರುವರು. ಇದರಿಂದ ನಮ್ಮ ಸಂಸ್ಥಾನದ ಪ್ರಜಾಭಿಮತವು ಮನ್ನಿಸಲ್ಪಟ್ಟಿತು ನಿಜ. ಆದರೆ ಮದ್ರಾಸಿಗೆಂತ ನೇಮಕಪಟ್ಟು ಬಂದಿರುವಂಥಾ ಕಾರ್ಮಿಕೆಲ್ ಪ್ರಭುಗಳನ್ನು ಬಂಗಾಳಕ್ಕೆ ವರ್ಗಾಯಿಸುವ ಬದಲಿಗೆ ಪೆಂಟಲೆಂಡ್ ಪ್ರಭುಗಳನ್ನೇ ಬಂಗಾಳದ ಗವರ್ನರರಾಗಿ ನೇಮಿಸುತ್ತಿದ್ದರೆ ಮದ್ರಾಸು ಸಂಸ್ಥಾನವು ಸರಕಾರದ ಲಕ್ಷ್ಯದಲ್ಲಿ ಇತರ ಸಂಸ್ಥಾನಗಳ ಸಮತುಲ್ಯವಾಗಿರುವುದೆಂಬ ಭಾವವು ಪ್ರಜಾಜನರಲ್ಲಿ ಇನ್ನಷ್ಟು ಹೆಚ್ಚಾಗಿ ರೂಢಮೂಲವಾಗುತ್ತಿತ್ತು. ತಕ್ಕದಾದ ಸಮಯೋಚಿತ ಚಳವಳದಿಂದ ಪ್ರಜಾಭಿಪ್ರಾಯವು ಪ್ರಬಲಗೊಂಡದ್ದನ್ನು ನೋಡಿ ಮದ್ರಾಸು ಯಾ ಬಂಗಾಳದ ಗವರ್ನರರ ಪದವಿಯು ಬೇಡ ಎಂತ ಪೆಂಟಲೆಂಡ್ ಪ್ರಭುಗಳು ಹಿಂದೊಮ್ಮೆ ನಿರಾಕರಿಸಿದ್ದರೂ ಅಂಗ್ಲಾಂಡದ ಅಧಿಕಾರ ಶ್ರೇಷ್ಠರು ಪೆಂಟಲೆಂಡ್ ಪ್ರಭುಗಳು ಮದ್ರಾಸಿನ ಗವರ್ನರ ಪದವಿಯನ್ನು ಸ್ವೀಕರಿಸುವಂತೆ ಮಾಡಿದ್ದು ಸಂತೋಷಕರವಾಗಿರುವುದು.

ದಕ್ಷಿಣ ಕನ್ನಡಾ ಜಿಲ್ಲೆಯ ಬಂಟರ ಯಾ ನಾಡವರ ಸಂಘವು.

ಸಮಾಜವು ಅವ್ಯವಸ್ಥಿತ ಸ್ಥಿತಿಯಲ್ಲಿರುವ ಈ ಕಾಲದಲ್ಲಿ ಸಂಘಗಳನ್ನು ಸ್ಥಾಪಿಸಿ ಅವುಗಳನ್ನು ತೃಪ್ತಿಕರವಾದ ರೀತಿಗಳಲ್ಲಿ ನಡೆಸುವುದು ಬಹಳ ಪ್ರಯಾಸ. ಅದರಲ್ಲಿಯೂ ಜನರನ್ನು ಕವಿತುಕೊಂಡಿರುವ ಅಜ್ಞಾನವು ಸಕಲ ಪ್ರಯತ್ನಗಳನ್ನು ಕಷ್ಟಸಾಧ್ಯವಾಗಿ ಮಾಡಿಬಿಡುವುದು. ಇಂಥಾ ವಿದ್ಯಮಾನಗಳಲ್ಲಿ ಶಿಕ್ಷಣದಲ್ಲಿ ಇತರ ಕೆಲವು ಜಾತಿಗಳಿಗಿಂತ ಹಿಂದುಳಿದಿರುವ ಬಂಟರ ಯಾ ನಾಡವರಲ್ಲಿ ವಿದ್ಯೆಯನ್ನು ಪಸರಿ ಈ ಮೂಲಕ ದೇಶಾಭಿವೃದ್ಧಿಯನ್ನು ಸಾಧಿಸುವ ನಾಡವರ ಈ ಪ್ರಯತ್ನಗಳನ್ನು ಸರ್ವರೂ ಪ್ರೋತ್ಸಾಹಿಸತಕ್ಕದ್ದು. ನಾಡವರ ಸಂಘವು ಈ ಉದ್ದಿಶ್ಯದಿಂದ ಸ್ಥಾಪಿಸಲ್ಪಟ್ಟು ಕೆಲವು ವರುಷಗಳಾದವು. ಈ ಸಂಘದ ಮೂಲಕ ದೊರಿಯುವ ಅನುಕೂಲತೆಯಿಂದಲೂ ನಾಡವರಲ್ಲಿ ಕ್ರಮೇಣ ಹೆಚ್ಚೆಚ್ಚಾಗಿ ಬರುವ ವಿದ್ಯಾಭಿರುಚಿಯಿಂದಲೂ ಪ್ರತಿ ವರುಷದಲ್ಲಿಯೂ ಈ ಜಾತಿಯಲ್ಲಿ ವಿದ್ಯಾವಂತರ ಸಂಖ್ಯೆಯು ಹೆಚ್ಚುತ್ತ ಬರುವುದು ಆನಂದಕರವಾಗಿರುವುದು.

ನಾಡವರ ಸಂಘದ ವರುಷಾವಧಿ ಸಭೆಯು ರಾ. ಬಂಬ್ರಾಣ ಚಿಕ್ಕಪ್ಪನ್ಯಾಕರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಸಂಘದ ವಾರ್ಷಿಕ ವರಧಿಯು ಸಭೆಯವರಿಂದ ಮಂಜೂರು ಮಾಡಲ್ಪಟ್ಟಿತು. ವಿದ್ಯಾರ್ಥಿಭವನದ ಸುಪರಿಂಟೆಂಡೆಂಟರಾದ ರಾ. ಕೊಡಿಯಾಲಗುತ್ತು ರಾಮಯ್ಯ ಹೆಗ್ಗಡೆಯವರು ಭವನದ ಆಡಳಿತೆಯನ್ನು ಸಮರ್ಪಕವಾಗಿ ನಡಿಸಿ ವಿದ್ಯಾರ್ಥಿಗಳ ಪ್ರೀತಿಯನ್ನೂ ಸಂಘದ ಕೃತಜ್ಞತೆಯನ್ನೂ ಫಳಿಸಿಕೊಂಡಿರುವರು. ಭವನದಲ್ಲಿ ೫೩ ಜನ ವಿದ್ಯಾರ್ಥಿಗಳಿರುವರು. ಇನ್ನೂ ಅನೇಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಭವನದಲ್ಲಿ ಸ್ಥಳದಡಚಣೆಯಿಂದ ಆಶ್ರಯಕೊಡಲು ಸಾಧ್ಯವಾಗಲಿಲ್ಲ. ಸಂಘಕ್ಕೆ ಈ ವರೆಗೆ ವಾಗ್ದಾನ ಮಾಡಿದ ರೂ. 41,908-8-0ರಲ್ಲಿ ರೂ. 20,629-8-0 ವಸೂಲಾಗಿದೆಂತಲೂ ರೂ. 19,880-3-7 ಖರ್ಚಾಗಿದೆಯೆಂತಲೂ ರೂ. 1,387-5-8 ಸಿಲುಕಿನಲ್ಲಿರುವುದೆಂತಲೂ ತಿಳಿಯುತ್ತೇವೆ. ಈ ಸಿಲುಕಿನಿಂದ ಸಂಘದ ಉದ್ದಿಶ್ಯಗಳನ್ನು ಮುಂದಕ್ಕೆ ಸರಿಯಾಗಿ ನೆರವೇರಿಸುವುದು ದುರ್ಲಭ. ಬಂಟರ ಜಾತಿಯಲ್ಲಿ ಅನೇಕ ದೊಡ್ಡ ವರ್ಗದಾರರಿರುವರು. ವಿದ್ಯಾರ್ಥಿಭವನದಂಥಾ ಸಂಸ್ಥೆಗಳನ್ನು ಒಬ್ಬೊಬ್ಬನೇ ಕಟ್ಟಿಸಿ ನಡಿಸುವ ದ್ರವ್ಯಾನುಕೂಲತೆಯ ಸಂಪನ್ನ ಗೃಹಸ್ಥರು ಕೆಲವರಿರುವರು. ಆದರೆ ವಾಗ್ದಾನ ಮಾಡಿದ ರೂ. 41,908-8-0ರಲ್ಲಿ ಕೆಲವು ವರುಷಗಳಾದರೂ ಇನ್ನೂ ಅರ್ಧಾಂಶ ಹಣವು ಬಾಕಿಯಲ್ಲಿರುವುದೆಂಬುದನ್ನು ತಿಳಿಯುವರೆ ವಿಷಾದಪಡುವೆವು. ಇನ್ನಾದರೂ ಈ ವಾಗ್ದಾನದ ಹಣವನ್ನೂ ಸಂಘಕ್ಕೆ ಬೇಕಾದ ಇನ್ನು ಮುಂದಿನ ಅನುಕೂಲತೆಗಳನ್ನೂ ನಾಡವ ಜಾತಿಯ ಗೃಹಸ್ಥರು ಒದಗಿಸಿಕೊಟ್ಟು ವಿದ್ಯಾಪರವಾಗಿ ತಮ್ಮಲ್ಲಿರುವ ಅಭಾವವನ್ನು ತೊರೆದುಬಿಡುವರೆಂಬ ಕೋರಿಕೆ ಇದೆ. ಮುಂಚಿನ ರೂ. 50ರ ಕೂಡಾ ರಾ| ಅ. ಸಂಕಪ್ಪಪೂಂಜರು ರೂ. 500 ಸಂಘಕ್ಕೆ ಕೊಡುವರೆ ವಾಗ್ದಾನ ಮಾಡಿರುವರು. ವಿದ್ಯಾರ್ಥಿಭವನದ ಬಗ್ಗೆ ಅಸ್ವಸ್ಥದವರ ಕೋಣೆಯನ್ನು ರಾ| ಕೆ. ಕಿಂಞಿಂಣಾಳ್ವರು ತನ್ನ ಹೆಸರಲ್ಲಿ ಕಟ್ಟಿಸುವರೆ ರೂ. 750-0-0ನ್ನು ಕೊಡುವರೆ ವಾಗ್ದಾನಮಾಡಿದ್ದಲ್ಲದೆ ರೂ. 325ನ್ನು ವಸೂಲು ಕೊಟ್ಟಿರುವರೆಂಬುದನ್ನು ಈ ಸಂದರ್ಭದಲ್ಲಿ

ತಿಳಿಸುವರೆ ಸಂತೋಷಪಡುತ್ತೇವೆ. ಆಸ್ಪತ್ರೆದವರ ಕೋಣೆಯ ಕೆಲಸವು ಕೂಡಲೇ ಆರಂಭಿಸಲ್ಪಡಬೇಕೆಂತ ನಿರ್ಣಯಿಸಲ್ಪಟ್ಟಿರುವುದು. ಸ್ವರ್ಗಸ್ಥ ಮಿಜಾರ ಮರಕಡ ಗುತ್ತು ಅಪ್ಪಯಶೆಟ್ರ ಸ್ಮರಣಾರ್ಥವಾಗಿ ವರ್ಷಂಪ್ರತಿ ರೂಪಾಯಿ 50ಕ್ಕೆ ಕಡಮೆಯಾಗದಷ್ಟು ಬಡ್ಡಿ ಬರುವ ಹಾಗೆ ಬೇಕಾದ ಐವಜನ್ನು ಸಂಘಕ್ಕೆ ಕೊಡುವರೆ ಅವರ ವಾರಿಸ್ದಾರರು ಮಹಾಸಭೆಗೆ ತಿಳಿಸಿರುವರು.

ಸಂಘದ ವರದಿಯಲ್ಲಿ ಶ್ಲಾಘ್ಯನೀಯವಾದ ಉದಾರಮತಿಯ ಇನ್ನೊಂದು ವಿಜ್ಞಾಪನೆ ಇರುವುದು. ಹಳ್ಳಿಗಳಲ್ಲೆಲ್ಲಾ ಪ್ರಾಥಮಿಕ ವಿದ್ಯಾಭ್ಯಾಸವು ನಾಡವರ ಹುಡುಗ ಹುಡುಗಿಯರಲ್ಲಿ ಅಭಿವೃದ್ಧಿಯಾಗುವಂತೆ ಪ್ರಮುಖರಾದವರು ತಮ್ಮಿಂದ ಕೊಡುವಷ್ಟುಮಟ್ಟಿಗೆ ಕಟ್ಟೋಣಗಳನ್ನು ಕಟ್ಟಿಸಿಯಾಗಲೀ ಯಾ ಬೇರೆ ವಿಧದಿಂದಾಗಲೀ ಶಾಲೆಗಳನ್ನು ಸ್ಥಾಪಿಸಿ ಅವುಗಳು ಊರ್ಜಿತ ಸ್ಥಿತಿಯಲ್ಲಿ ನಡಿಯುವ ಹಾಗೆ ಪ್ರಯತ್ನ ಪಡಬೇಕಾಗಿ ಸಂಘದವರು ತಮ್ಮ ವರದಿಯಲ್ಲಿ ವಿಜ್ಞಾಪಿಸಿರುವರು. ಹಳ್ಳಿಗಳಲ್ಲಿ ವಿಸ್ತೀರ್ಣವಾದ ಆಸ್ತಿಗಳ ಮಾಲೀಕರು ಬಂಟರಲ್ಲಿ ಹಲವರಿರುವುದರಿಂದ ಈ ಏರ್ಪಾಡು ಇವರಿಗೆ ಶುಲಭಸಾಧ್ಯ. ಕಟ್ಟೋಣ ಇತ್ಯಾದಿಗಳಿಗೆ ಇವರಿಗೆ ಖರ್ಚು ಬಹಳ ತಗಲದು. ಇಂಥಾ ಶಾಲೆಗಳನ್ನು ಸ್ಥಾಪಿಸುವುದರಿಂದ ಬಂಟರಿಗೆ ಮಾತ್ರವಲ್ಲ; ಬಂಟರು ತಮ್ಮಿಂದ ಸ್ಥಾಪಿಸಲ್ಪಡುವ ಈ ಶಾಲೆಗಳಲ್ಲಿ ತಮ್ಮ ಒಕ್ಕಲುಗಳ ಮಕ್ಕಳನ್ನು ಸಹ ಕಲಿಯಬಿಟ್ಟರೆ ಅತಿ ಗರೀಬರಾದ ಅನೇಕ ಜನ ಒಕ್ಕಲುಗಳಿಗೂ ಸಹ ಬಹಳ ಪ್ರಯೋಜನ ದೊರಿಯುವುದು. ತಮಗೆ ದೊರಿಯುವ ವಿದ್ಯಾಬಲದಿಂದ ಒಕ್ಕಲುಗಳು ಕೃಷಿ ವಿದ್ಯಾನಿಪುಣರಾಗಿ ಒಂದು ತೆನೆ ಬೆಳೆಯುವಲ್ಲಿ ಎರಡನ್ನು ಬೆಳಿಸುವಂತೆ ಸಮರ್ಥರಾಗಿ ಧನಿಗಳಿಗೆ ಗೇಣಿಯು ನಿರ್ಬಂಧವಿಲ್ಲದೆ ದೊರಿಯಲೂ ಬಡ ಜನರು ಉದ್ಧಾರವಾಗಲೂ ಮಾರ್ಗದೊರಿಯುವುದು. ಈ ವಿಜ್ಞಾಪನೆಗೆ ಅನುಸಾರವಾದ ಸಾಧನೆಯೇ ಬೇಕಾಗಿರುವುದು.

ವಿವಾಹ ಮೊದಲಾದ ಶುಭಕೆಲಸಗಳ ಸಂದರ್ಭಗಳಲ್ಲಿ ಇಷ್ಟವಿದ್ದಷ್ಟು ದ್ರವ್ಯಸಹಾಯವನ್ನು ಈ ಶುಭಗಳನ್ನು ನಡಿಸುವವರು ಸಂಘದ ಸಹಾಯಾರ್ಥವಾಗಿ ಕೊಡಬೇಕೆಂಬ ಪ್ರಾರ್ಥನೆಯನ್ನು ಮಹಾಸಭೆಯವರು ಮಾಡಿರುವರು.

'ಸ್ವದೇಶಾಭಿಮಾನಿ'ಯ ಕಳದ ದಶಂಬರ 22ನೇ ತಾರೀಕಿನ ಸಂಚಿಕೆಯಲ್ಲಿ ಪ್ರಕಟವಾದ ಕೊಡಿಯಾಲಗುತ್ತು ತಿಮ್ಮಯಾಳ್ವರ 'ಬಂಟರೂ ವಿದ್ಯೆಯೂ' ಎಂಬ ಲೇಖನಕ್ಕೆ ಜಾತಿಯವರೆಲ್ಲರೂ ಗಮನಕೊಡಬೇಕೆಂತ ನಾಡವರ ಮಹಾಸಭೆಯವರು ಸೂಚಿಸಿರುವರು. ರಾ| ಆಳ್ವರವರ ಈ ಲೇಖದಲ್ಲಿ ವ್ಯಕ್ತಪಡಿಸಿರುವ ಸೂಚನೆಗಳಿಗೆ ಬಂಟರ ಯಾ ನಾಡವರ ಸಂಘಸ್ಥಾಪಕರು ಸಹಾ ತಕ್ಕ ನಿಗಾ ಕೊಡಬೇಕಾಗಿರುತ್ತದೆ. ಈಗಿನ ನಾಗರೀಕತೆಯ ಕೆಲವು ಭೀಕರ ದುಷ್ಪರಿಣಾಮಗಳು, ಶಾಲೆಗಳಲ್ಲಿ ಇಂಗ್ಲಿಷು ಮೊದಲಾದ್ದನ್ನು ಓದುಬರಿಯಲು ಕಲಿತ ಕೆಲವರಲ್ಲಿ ತೋರುವುದರಿಂದ ಸಂಘದವರು ತಮ್ಮ ಆರೈಕೆಯಲ್ಲಿ ಶಿಕ್ಷಣ ಹೊಂದುವ ಹುಡುಗರಿಗೆ ನಾಗರೀಕತೆಯ ಈ ಸೋಂಕು ತಗಲದಂತೆ ಜಾಗರೂಕರಾಗಿರಬೇಕು. ಸಂಘದ ಮೂಲಕ ನಾಡವ ಯುವಕರು ತಮ್ಮ ಮನೆಯವರಿಗೂ ಇತರರಿಗೂ ಸಮಾಜಕ್ಕೂ ಪ್ರಯೋಜನಕರ ವ್ಯಕ್ತಿಗಳಾಗುತ್ತ ಬರುವುದರಿಂದ ಇಂದಲ್ಲ ನಾಳೆ ಜಾತಿಯವರದ್ದು ಮಾತ್ರವಲ್ಲ ಸರ್ವ ಸಹಾಯವೂ ಇವರಿಗೆ ದೊರಕುವುದು. ಕಾರ್ಯಾರಂಭದಲ್ಲಿ ಸ್ವಭಾವಿಕವಾಗಿ ಬಂದೊದಗುವ ಕಷ್ಟಗಳಿಗೆ ಅಂಜದೆ ತಮ್ಮ ಸುಪ್ರಯತ್ನಗಳಲ್ಲಿ ವಿಶ್ವಾಸವುಳ್ಳವರಾಗಲಿ. ತಮಗೆ ತಾವು ಸಹಾಯಮಾಡಲು ಯತ್ನಿಸುವವರಿಗೆ ದೇವರ ಸಹಾಯವು ಸದಾ ಇರುವುದು.

ಜೇಡನೂ ನೊಳವೂ.

(ಚೌಪದಿ).

"ಬಾ ನೊಳವೆ, ಬಾ ನೊಳವೆ, ಬಾ ನನ್ನ ಮನೆಗೆ; ||
ಬಾನೊಳಗೆ ಹಾರಿ ಬಲು ದಣುವಾಯ್ತು ನಿನಗೆ. ||
ಈಸೊವ್ಮೆ ಬಾ, ನಮ್ಮ ಹೊಸ ಮನೆಯ ನೋಡು. ||
ಈ ನೂಲಿನಾ ಚಾಪೆಯಲಿ ಬಂದು ಕೂಡು." || || ೧ ||

ಆ ಮಾತಿಗಾ ನೊಳವು "ಎಲೆ ಜೇಡ, ಜೇಡಾ, ||
ಈ ಮನೆಯ ಉಪಚಾರ ಹಾ ಬೇಡ ಬೇಡಾ! ||
ನೀ ಮಾಡಿದಾ ಚಾಪೆ ನನಗೊಂದು ದೂಪೆ. ||
ಈ ಮರದ ತೂತುಮನೆ ಇದೆ; ಅಲ್ಲಿ ಜೋಪೆ" || || ೨ ||

"ಎಲೆ ನೊಳವೆ, ನನ್ನ ತರುಗಾಟವನು ನೋಡು, ||
ತಲೆ ತಿರುಗುತಿದೆ ನಿನಗೆ; ಬಾರೊ ದಯಮಾಡು. ||
ಎಲೆಯ ಹಾಕಿರುವೆ, ನೀನುಂಡು ಸುಖಿಯಾಗು ||
ಮಲಗು ಎಳೆ ಹಾಸಿನಲಿ, ಬಳಿಕೆದ್ದು ಹೋಗು." || || ೩ ||

"ನಿನ್ನಲ್ಲಿ ಉಂಡವನು ಬೇರೆ ಬಾಳುವನೇ? ||
ನಿನ್ನಲ್ಲಿ ಮಲಗಿದವ ಮತ್ತೆ ಏಳುವನೇ? ||
ನಿನ್ನ ಕಥೆಯನು ಹಿರಿಯರಿಂ ಕೇಳಿ ಬಲ್ಲೆ. ||
ನಿನ್ನಲ್ಲಿ ಬರಲೊಲ್ಲೆ; ನಾನು ಬರಲೊಲ್ಲೆ." || || ೪ ||

"ಮರಿ ನೊಳವೆ, ಮರಿ ನೊಳವೆ, ನಮ್ಮೊಳಗೆ ನಂಟು ||
ಇರುವುದೆಂಬುದು ನನಗೆ ಕೇಳಿ ಗೊತ್ತುಂಟು. ||
ಮಿರಮಿರನೆ ಮಿರುಗುವಾ ನೂಲಿಂದ ನೇದು ||
ಅರಿವೆ ಉಡುಗೆರೆ ಕೊಡಲು ನಾನಿರುವೆ ಕಾದು." || || ೫ ||

"ಕಾದುವವ ತಾನರಿವೆ ಎಂಬುದು ಸಹಜವು; ||
ನೇದ ಹೊಸ ಅರಿವೆ ಹೊದೆದರೆ ಸಾವು ನಿಜವು. ||
ಆದರವು ಸಾಕು, ಜೇಡನೆ ಸಾಕೆನುತ್ತಾ.—" ||
ಹಾದಿ ಹಿಡಿದಾ ನೊಳದ ಮರಿ ಹೋದುದೆತ್ತಾ || || ೬ ||

ಇತ್ತ ಜೇಡನು ಬಳಿಕ ತಿರುಗುತಿರುಗುತ್ತಾ, ||
ಕಿತ್ತು ತನ್ನಯ ಮೈಯ ಮಯಣ ಹೊಸೆಯುತ್ತಾ, ||
ಹೊತ್ತು ನೋಡಿತು ನೊಳವ ತಿನ್ನುವೆನೆನುತ್ತಾ, ||
ಮತ್ತೊಮ್ಮೆ ಕೂಗಿದುದು ಬರಿದೆ ಹೊಗಳುತ್ತಾ || || ೭ ||

"ಅರರೆ ನೊಳ ಮರಿ ಬೊಂಬೆ! ಮೈಗಂದ ನಿಂಬೆ! ||
ಹರಿ ನೀಲ ಕಣ್ಗೊಂಬೆ ನೋಡಿ ಸೊಗಗೊಂಬೆ! ||
ಗರಿ ಪಚ್ಚೆಯಲಿ ತುಂಬೆ, ಭಳಿರೆ ಹೊಸತುಂಬೆ! ||
ಸ್ವರವು ಜೇನ್ ಜೇನೆಂಬೆ, ಮಧುರವನಿತೆಂಬೆ!" || || ೮ ||

ಗಾಳಿಯೂದಿದ ಚೆಂಡು ಬಹು ಹಿಗ್ಗುವಂತೆ, ||
ಬೀಳೆ ಕಿವಿಯಲಿ ಮಾತು ನೊಳವುಬ್ಬಿತಂತೆ. ||
ಆಳ ನೋಡದೆ ನೀರಿನಲಿ ಧುಮುಕುವಂತೆ, ||
ಬೋಳು ತಲೆ ನೊಳವು ಬಲೆಯಲಿ ಹಾರಿತಂತೆ. || ೯ ||

ಕಳ್ಳ ಜೇಡನ ಮಾರಿ ಬಳಿಕೊಂದು ಬಾರಿ ||
ಪಿಳ್ಳೆ ನೊಳ ಮೈಯೇರಿ, ಮುಳ್ಳುಗಳನೂರಿ, ||
ಛಳ್ಳೆಂದು ವಿಷಕಾರಿ, ನೆತ್ತರನು ಹೀರಿ, ||
ಕೊಳ್ಳೆ ಹೊಡೆಯಲು ನೊಳವು ಸತ್ತಿತ್ತೈ ಚೀರಿ. || || ೧೦ ||

ಬಲೆ ಹೊಗದ ನೊಳವನ್ನು ಬರಿ ಹೊಗಳಿ ಕೊಂದಾ ||
ಬಲು ಮೋಸದಾ ಜೇಡನಾ ಕಥೆಯಿದೆಂದಾ, ||
ಕೊಲೆಗಾರರಾಡುವ ಮುಖಸ್ತುತಿಗಳಿಂದಾ ||
ಬಲಿಬೀಳ ಬೇಡೆಂಬುದನು ಕಲಿಯೊ ಕಂದಾ. || || ೧೧ ||

ಕವಿಶಿಷ್ಯ.

ಪೇಷ್ವೆ ನಾರಾಯಣ ರಾವ್.

(ಕಳದ ಸಂಚಿಕೆಯಿಂದ ಮುಂದರಿಸಿದುದು.)

ಶಿವರಾಜಿರಾಡಿಯು ನನಗೆ ಎಲ್ಲರ ಹೆಸರುಗಳನ್ನೂ ಹೇಳಿ ಇವರೆಲ್ಲರೂ ಮಸಲತ್ತಿನಲ್ಲಿ ಸೇರಿರುವರೆಂದು ಹೇಳಿದನು. ಅಬ್ಬಾಜಿ ಮಹದೇವನು ಪುನೆಗೆ ಬಂದು ಮರೋಬಾದಾದಾವನ್ನು ನೋಡಿ ಆ ರಾತ್ರಿಯಲ್ಲಿಯೇ ಹಿಂದುರುಗಿ ಹೋದನೆಂದು ಶಿವಾಜಿ ಪಂತನು ನನ್ನೊಂದಿಗೆ ಹೇಳಿದನು. ಮಹಮ್ಮದ್ ಇಸೂಫನು ಹೇಳಿದ್ದು ಇಷ್ಟೆ! ಶ್ರೀಮಂತ್ರನನ್ನು ಕೊಲ್ಲಬೇಕೆಂಬ ಉದ್ದೇಶವು ಯಾರಿಗೂ ಇದ್ದಂತೆ ಕಾಣಿಸಲಿಲ್ಲ. ಆ ಗದ್ದಲದಲ್ಲಿ ಸುಮೇರುಸಿಂಗನು ಆ ಕೆಲಸ ಮಾಡಿದನು. ಹೀಗೆಂದು ಮಹಮ್ಮದ್ ಇಸೂಫನು ಹೇಳಿದ್ದಾನೆ. ಇದಕ್ಕಿಂತ ಹೆಚ್ಚಾಗಿ ಮಹಮ್ಮದ್ ಇಸೂಫನಿಂದ ಸಮಾಚಾರವೇನೂ ತಿಳಿಯ ಬರಲಿಲ್ಲ. ಇನ್ನು ಜಪಿತಜಂಗುವು ರಘುನಾಥ ರಾಯನ ಪಕ್ಷದವನೆಂತಲೂ ಮಹಮ್ಮದ್ ಇಸೂಫ್ ಹೇಳಿದನು. ಆಳುವ ಮಹಾಸ್ವಾಮಿಯವರಿಗೆ ವಿಧಿತವಾಗಲಿಕ್ಕೋಸ್ಕರ ಬರೆದಿದ್ದೇನೆ. ಮಹಮ್ಮದ್ ಇಸೂಫನು ತನ್ನನ್ನು ಕೊಲ್ಲರೆಂತಲೂ ಅಷ್ಟಾಗಿ ಮೇಲೆ ಬಂದರೆ ಯಾವುದೋ ಒಂದು ತರದ ಶಿಕ್ಷೆ ವಿಧಿಸುವರೆಂತಲೂ ನಂಬಿದ್ದನು. ಆದರೆ ಅಂತಹ ದುರ್ಮಾರ್ಗನನ್ನು ಪ್ರಾಣದೊಂದಿಗೆ ಇರಿಸುವುದರಿಂದ ಏನು

ಪ್ರಯೋಜನವಿದ್ದೀತು? ಆತನು ಯಾವ ಕೆಲಸಕ್ಕೆ ಬಂದಾನು? ಆದ್ದರಿಂದ ನಾವು ಆತನನ್ನು ಕೊಂದು ಹಾಕಿದೆವು. ಆತನ ಮರಣದಿಂದ ಪಾಪಿಯೊಬ್ಬನು ಈ ಲೋಕವನ್ನು ಬಿಟ್ಟು ಹೋದನು. ಇದೆ ಸಮಾಚಾರವು. 'ತುಲ್ಯಾಜಿಪವಾರು' ಮುಂದೆ ಹೇಳುವಂತೆ ಕೈಫಿತ್ (ವಾಙ್ಮೂಲ)ವನ್ನು ಕೊಟ್ಟನು. "ನಾನು ಮಹಮ್ಮದ್ ಇಸೂಫನ ಮನೆಗೆ ಹೋಗುತ್ತಿದ್ದೆನು. ತಾನೂ ನನ್ನ ಜತೆಯಲ್ಲಿ ಈ ಮುಸಲತ್ತಿನಲ್ಲಿ ಸೇರಿದ್ದ ಶ್ರೀಮಂತ ರಾಜಾ ಶ್ರೀ ದಾದಾ ಸಾಹೇಬ (ರಘುನಾಥ ರಾವ್)ನನ್ನು ಕೂಡಿಕೊಂಡು ನಾರಾಯಣ ರಾಯನನ್ನು ಸೆರೆಯಲ್ಲಿಟ್ಟು ದಾದಾ ಸಾಹೇಬನನ್ನು ಬಿಡಿಸುವುದರಲ್ಲಿ ನೆರವಾಗಬೇಕೆಂದು ನನ್ನಿಂದ ವಾಗ್ದಾನ ಮಾಡಿಸಿಕೊಂಡನು. ತದನಂತರ ನಾನು ಜೀವನಾಂತರಗಳು ಬಹಳ ಕಷ್ಟವಿರುವುವು, ಈ ಕೃತ್ಯವನ್ನು ನಾನು ಅಂಗೀಕರಿಸಲಾರೆನೆಂದು ಹೇಳಿದೆನು. ಅನಂತರ ಮಹಮ್ಮದ್ ಇಸೂಫನು ನನ್ನನ್ನು ಹಲವು ತರವಾಗಿ ಪ್ರೋತ್ಸಾಹ ಪಡಿಸಿ ರಘುನಾಥ ರಾಯನು ಕೂಡ ಬಾಜೀರಾಯನ ಮಗನೇ ಎಂತಲೂ ಈ ಹತ್ಯದ ಕೃತ್ಯಕ್ಕೆ ಬಹು ಮಂದಿ ಸೇರಿರುತ್ತಾರೆಂತಲೂ ಹೇಳಿದನು. ಅವನು ಹೇಳಿದ ಹೆಸರುಗಳು ಯಾವುವೆಂದರೆ:—ಅಬಾಜೀ ಮಹಾದೇವು, ಶಿರಾಜಿ ರಾವು, ನೂರ್‌ಮಹಮ್ಮದ್, ಸದಾಶಿವ ರಾಮಚಂದ್ರ (ಭಾವನ ರಾವು ಪ್ರತಿನಿಧಿ) ಹುಸ್ಸೇನ್ ಬೇಗು, ದರಗಸಿಂಗು, ಮಹದಾಜಿ ನೀಲಕಂಠನ ಕಡೆ ಗೋವಿಂದ ಗಣೇಶ್, ಸುಖಾರಾಮಹರಿ, ಸುಖರಾಮ ಭಗವಂತು ಮೇಲೂಪರಾಸು, ನರಸಿಂಗ ರಾವು ದೇಶ ಮುಖಿ ಇವರೆಲ್ಲರು ಸೇರಿರುವರೆಂದು ಹೇಳಿದನು. ಸುಖರಾಮ ಭಗವಂತನು ಈ ಮಸಲತ್ತಿನಲ್ಲಿ ಸೇರಿರುವ ಸಂಗತಿಯನ್ನು ಆತನ ಜೋಬ್ದಾರರಿಂದ ರುಜುವಾತು ಮಾಡಿಸುವೆನೆಂದನು. ಶಸ್ತ್ರಪಾಣಿಗಳಾದ ಸೈನಿಕರಲ್ಲಿ ದೊಡ್ಡ ಅಧಿಕಾರಿಗಳೆಲ್ಲರೂ ನಮ್ಮ ಪಕ್ಷದಲ್ಲಿಯೆ ಇರುವಂತೆ ಮಹಮ್ಮದ್ ಇಸೂಫನು ಹೇಳಿದನು. ಅವರ ಹೆಸರುಗಳೆಲ್ಲವೂ ನನಗೆ ತಿಳಿಯವು. ಅದರಲ್ಲಿ ಮೋರೋ ಬಾಬ್‌ರಾವ್ ಒಬ್ಬನು. ಆತನು ಆಗ ಹುಜೂರಿನ ಹತ್ತಿರ ಇರಲಿಲ್ಲ. ಗೋವಿಂದ ರಾವ್ ಗಾಯಕವಾಡೆಯೊಬ್ಬನು. ನೀಲಕಂಠ ರಾಮಚಂದ್ರನು ಮತ್ತೊಬ್ಬನು. ಇವನ ತಾಬೇದಾರರಾದ ಸೈನಿಕರು ಆಗ ರಾಜಮಂದಿರಕ್ಕೆ ಪಹರೆ ಕೊಡುತ್ತಿದ್ದರು. ಅವರಿಗೆ ತಲೆಯೊಂದಕ್ಕೆ ನೂರಾರು ರೂಪಾಯಿಗಳನ್ನು ಕೊಟ್ಟು ಅವರನ್ನು ನಮ್ಮ ಪಕ್ಷಕ್ಕೆ ತಿರುಗಿಸಿಕೊಂಡೆವು. ಮಹಮ್ಮದ್ ಇಸೂಫ್, ಸುಮೇರುಸಿಂಗ್ ಇವರಿಬ್ಬರೂ ಆ ಉದ್ಯೋಗದಲ್ಲಿದ್ದವರೆ! ಆ ಸಮಯದಲ್ಲಿ ಇವರೆಲ್ಲರೂ ಮಸಲತ್ತಿನಲ್ಲಿ ಸೇರಿದ್ದರು. ಈ ಕೃತ್ಯದಂತಹ ಕೃತ್ಯಗಳು ಮಹಾ ಪುರುಷನಾದ ಮಾಧವ ರಾಯನು ಮೃತಿಹೊಂದಿದ ಮೊದಲು ಪ್ರಾರಂಭವಾದುವು. ನಾನು ಅವುಗಳಲ್ಲಿ ಈ ಪೂನಾ ಪಟ್ಟಣದ ಬಂದರಲ್ಲಿ ಮಾತ್ರ ಸೇರಿದೆನು". ಮಹಮ್ಮದ್ ಇಸೂಫನೂ ತುಲ್ಯಾಜೀಪವರನೂ ಕೂಡ ತಮಗಾಗಲಿ ಸಂಶಪ್ತಕರಿಗಾಗಲಿ ಪೇಷ್ವೆಯನ್ನು ಕೊಲ್ಲಬೇಕೆಂಬ ಉದ್ದೇಶವಿರಲಿಲ್ಲವೆಂದು ಹೇಳಿದರು. ಆದರೆ ಅವರು ನಾರಾಯಣರಾಯನನ್ನು ಕೊಲ್ಲಬೇಕೆಂದು ಊಹಿಸಿರಲಿಲ್ಲವೆಂದು ನಂಬುವುದಕ್ಕೆ ಅವಕಾಶವಿಲ್ಲವು. ಮೇಲೆ ಹೇಳಿದ ವಧೆಯ ವರ್ಣನೆಯಿಂದ ನಾರಾಯಣ ರಾಯನನ್ನು ಕತ್ತಿಯಿಂದ ಕೊಂದವರು ಸುಮೇರುಸಿಂಗ್ ತುಲ್ಯಾಜೀಪವಾರು ಮಹಮ್ಮದ್ ಇಸೂಫ್ ಇವರು ಮಾತ್ರವೇ ಎಂದು ತಿಳಿಯ ಬರುವುದು. ಮೃತ್ಯು ನಾರಾಯಣ ರಾಯನು ರಘುನಾಥ ರಾಯನನ್ನು ಮರೆಹೊಕ್ಕನು. ಯಾವನ ನಿರ್ಬಂಧ ವಿಮೋಚನೆಗಾಗಿ ಈ ಕೊಲೆಯ ಆಲೋಚನೆ ಮಾಡಲ್ಪಟ್ಟಿತೋ ಅಂತಹ ರಘುನಾಥ ರಾವ್ ತನ್ನ ಸಹೋದರ ಪುತ್ರನನ್ನು ಕೊಲ್ಲಿಸಬೇಕೆಂಬ ಅಭಿಲಾಷೆಯುಳ್ಳವನಾಗಿರಲಿಲ್ಲ. ನಮಗೆ ತಿಳಿದಿರುವ ಮಟ್ಟಿಗೆ ಯಾವ ಇತಿಹಾಸ ಲೇಖನು ಬರೆದಿರುವ ಗ್ರಂಥದಲ್ಲಿಯೂ ಅವರು ನಾರಾಯಣ ರಾಯನನ್ನು ಆ ನಿಮಿಷದಲ್ಲಿಯೇ ಕೊಲ್ಲುವುದಕ್ಕೆ ತಕ್ಕ ಹೇತುವು ಯಾವುದೂ ಇದ್ದ ಹಾಗೆ ಕಂಡು ಬರುವುದಿಲ್ಲ. ರಘುನಾಥರಾಯನು ಗೋಪಿಕಾಬಾಯಿಗೆ ಬರೆದ ಉತ್ತರದಲ್ಲಿ ಆ ಕೊಲೆಗೆಡುಕರು ಸ್ವಾತ್ಮಸಂರಕ್ಷಣಾರ್ಥವಾಗಿ ಅಂದರೆ ತಮ್ಮ ಪ್ರಾಣಗಳನ್ನು ಕಾಪಾಡಿಕೊಳ್ಳುವುದಕ್ಕೆ ತನ್ನ ಮಾತು ಕೇಳದೆ ನಾರಾಯಣರಾಯನನ್ನು ವಧಿಸಿದರೆಂದು ಬರೆದಿರುವನು. ಯಾವ ಚರಿತ್ರೆಯಲ್ಲಿಯಾಗಲಿ ಈ ಹಂತಕರ ಪ್ರಾಣಕ್ಕೆ ಯಾವುದಾದರೂ ತೊಂದರೆ ಸಂಭವಿಸದಂತೆ ಆಗಲಿ, ಅಂತಹ ತೊಂದರೆಯನ್ನು ಅವರು ಪೇಷ್ವೆಯನ್ನು ಕೊಂದದ್ದರಿಂದ ತಪ್ಪಿಸಿಕೊಂಡಂತೆಯಾಗಲೀ, ಕಂಡು ಬರುವುದಿಲ್ಲ. ತನ್ನ ಪ್ರಾಣ ಭೀತಿಯಿಂದ ರಘುನಾಥ ರಾಯನನ್ನು ಗಟ್ಟಿಯಾಗಿ ಅಪ್ಪಿಕೊಂಡ ನಾರಾಯಣ ರಾವನ್ನು ತುಲ್ಯಾಜೀಪವಾರನು ಕಾಲುಗಳನ್ನು ಹಿಡಿದುಕೊಂಡು ಈಚೆಗೆ ಎಳೆದ ವೇಳೆಯಲ್ಲಿ ನಾರಾಯಣ ರಾಯನ ಪಕ್ಷದಲ್ಲಿ ಈ ಕಲಹಕಾರರನ್ನು ಎದುರಿಸುವುದಕ್ಕೆ ಯಾರೂ ಇಲ್ಲದೆ ಹೋದರು. ಪ್ರಭು ವಿಶ್ವಾಸವನ್ನು ನೆರವೇರಿಸಿದ ಛಪಾಬೇತಿಲೇಕಾರನೆಂಬ ಸೇವಕನು ಕೂಡ ಕೊನೆಕೊನೆಗೆ ಬಂದನು. ಆಗ ಅವನು ಏಕಾಕಿಯೂ, ಅಸಹಾಯನೂ, ನಿರಾಯುಧನೂ ಆಗಿದ್ದುದರಿಂದ ಶತ್ರುಗಳ ಸಂಗಡ ಕಲೆಯಲೊಲ್ಲದೆ ತನ್ನ ಒಡೆಯನನ್ನು ರಕ್ಷಿಸಿಕೊಳ್ಳಲಿಕ್ಕೋಸ್ಕರ ಆತನ ಮೇಲೆ ಬಿದ್ದುದೇ ಹೊರತು ಮತ್ತೇನನ್ನೂ ಮಾಡಲಿಲ್ಲ. ಮತ್ತಾರಿಂದ ಪ್ರಾಣಾಪಾಯವು ಬರುವುದೆಂದು ಹಂತಕರು ಯೋಚಿಸಿರಬಹುದು, ಇದು ಅಸಂಭವವು. ಆದುದರಿಂದ ನಮಗೆ ಲಭಿಸಿದ ಚರಿತ್ರಾಂಶಗಳನ್ನು ಹಿಡಿದು ವಿಚಾರ ಮಾಡಲಾಗಿ ಸುಮೇರು ಸಿಂಗನಿಗೂ, ತುಲ್ಯಾಜೀಪವಾರನಿಗೂ, ಮಹಮ್ಮದ್ ಇಸೂಫನಿಗೂ ನಾರಾಯಣ ರಾಯನನ್ನು ವಧಿಸಬೇಕೆಂಬ ಉದ್ದೇಶವಿರಲಿಲ್ಲವೆಂದು ಹೇಳಲವಕಾಶವಿಲ್ಲವು. ನಿಜವಾಗಿಯೂ ರಘುನಾಥ ರಾಯನಿಗೆ ನಾರಾಯಣ ರಾಯನನ್ನು ಮಾತ್ರ ಕೊಲ್ಲಿಸಬೇಕೆಂಬ ಅಭಿಪ್ರಾಯವಿರಲಿಲ್ಲವೆಂದು ಒಪ್ಪಿಕೊಳ್ಳ ಬಹುದು. ಆದರೆ ಆತನಿಗೆ ಇನ್ನೂ ಸ್ವಲ್ಪ ಸೌಜನ್ಯವೂ, ಮನೋದಾರ್ಢ್ಯವೂ, ಇದ್ದ ಪಕ್ಷದಲ್ಲಿ ಆತನು ಆ ಹತ್ಯವನ್ನು ತಪ್ಪಿಸಬಹುದಾಗಿದ್ದಿತು. ಮತ್ತು ಆನಂದೀಬಾಯಿಗೆ ಗೋಪಿಕಾಬಾಯಿಯ ವಿಷಯದಲ್ಲಿ ಉಂಟಾಗಿದ್ದ ಈರ್ಷ್ಯೆಯಿಂದ ಅಧಿಕಾರಕ್ಕೆ ತನಗೆ ಪ್ರತಿಸ್ಪರ್ಧಿಯಾಗಿದ್ದ ತನ್ನ ಓರಗಿತ್ತಿಯ ಮಗನನ್ನು ಸೆರೆಯಲ್ಲಿಡುವುದು ಮಾತ್ರವಲ್ಲದೆ ಕೊಲ್ಲಿಸುವುದಕ್ಕೆ ಕೂಡಾ ಉದ್ಯುಕ್ತಳಾಗಿದ್ದಳೆಂತಲೂ ಅದಕ್ಕೆ ತಕ್ಕಂತೆ ರಘುನಾಥ ರಾಯನ ಪತ್ರದಲ್ಲಿ "ಧರಾವೇ" ಎಂಬ ಪದವನ್ನು "ಮರಾವೆ" ಎಂಬದಾಗಿ ತಿದ್ದಿದಳೆಂತಲೂ ನಂಬುವುದಕ್ಕೆ ತಕ್ಕ ಆಧಾರಗಳಿರುವುವು. ಸುಮೇರು ಸಿಂಗುವು ತುಲ್ಯಾಪವಾರೂ ಮಹಮ್ಮದ್ ಇಸೂಫನೂ ಇವರನ್ನು ಆಕೆಯು ತನ್ನ ವಶವರ್ತಿಗಳನ್ನಾಗಿ ಮಾಡಿಕೊಂಡು ತನ್ನ ತೀವ್ರವಾದ ವೈರ ಹೆಡ್ಡತನ ಬುದ್ಧಿಗೆ ಸಹಕಾರಿಗಳನ್ನಾಗಿ ಮಾಡಿಕೊಂಡಳೆಂತಲೂ ನಂಬಬೇಕಾಗಿರುವುದು. ಪೇಷ್ವೆಯ ಮೇಲೆ ಈ ಕುಮಂತ್ರವು ಜರುಗುತ್ತಿದ್ದ ಸಂಗತಿಯು ರಾಷ್ಟ್ರಿಯೋದ್ಯೋಗಿಗಳಲ್ಲಿ ಪ್ರಮುಖರೆಲ್ಲರಿಗೂ ಸ್ವಲ್ಪ ಹೆಚ್ಚು ಕಡಿಮೆ ತಿಳಿದ ವಿಷಯವೆ.

(ಮುಂದೆ ಸಾಗುವುದು)

ದಿವಾನ್ ಬಹದ್ದೂರ್ ಮ. ಬಂಗೇರರವರು.

ಗುಂಟೂರಿನ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ ಜಡ್ಜರಾಗಿರುವ ದಿವಾನ್ ಬಹದೂರ್ ಮ. ಬಂಗೇರರವರು ಈಪ್ಪತ್ತೇಳು ವರುಷಗಳ ವರೇಗೆ ಸರಕಾರಿ ಕೆಲಸವನ್ನು ನಿರ್ವಹಿಸಿ ಇದೇ ತಿಂಗಳ ೧೮ನೇ ತಾರೀಕು ಉದ್ಯೋಗದಿಂದ ನಿವೃತ್ತರಾಗುವರು. ತಾನು ಹುಟ್ಟಿ ಬೆಳದ ಮಂಗಳೂರು ಪಟ್ಟಣದಲ್ಲಿ ವಿದ್ಯಾಭ್ಯಾಸವನ್ನು ಆಮೂಲಾಗ್ರವಾಗಿ ತೀರಿಸಿ, ಇಲ್ಲಿ ವಿದ್ಯಾವ್ಯಾಸಂಗದಲ್ಲಿ ವಿಶೇಷ ನೈಪುಣ್ಯತೆಯನ್ನೂ ವಿಚಕ್ಷಣತೆಯನ್ನೂ ಸಂಪಾದಿಸಿ ಮದ್ರಾಸಿಗೆ ಹೋಗಿ ಅಲ್ಲಿ ೧೮೭೭ರಲ್ಲಿ ಪ್ರೆಸಿಡೆನ್ಸಿ ಕೋಲೇಜಿನಲ್ಲಿ ಬಿ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಲೋ ಪರೀಕ್ಷೆಯಲ್ಲಿ ತೇರ್ಗಡೆ ಪಟ್ಟು, ಅಲ್ಲಿ ೧೮೮೦ರಲ್ಲಿ ಲೋ ಸನ್ನದನ್ನು ಪಡಕೊಂಡರು. ಈಗ ಮದ್ರಾಸಿನ ಹೈಕೋರ್ಟು ಜಡ್ಜರಾಗಿರುವ ಮೆ| ಶಂಕರ ನಾಯರವರೂ, ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ ಜಡ್ಜರಾಗಿರುವ ದಿವಾನ್ ಬಹದೂರ್ ಪಾರ್ಥಸಾರಥಿ ಅಯ್ಯಂಗಾರರವರೂ ಇವರೊಟ್ಟಿಗೆ ಪ್ರೆಸಿಡೆನ್ಸಿ ಕೋಲೇಜಿನಲ್ಲಿ ಸಹಪಾಠಿಗಳಾಗಿದ್ದರು. ದಿವಂಗತರಾದ ಕೀರ್ತಿಶೇಷ ದಿವಾನ್ ಬಹದೂರ್ ರಾಮಚಂದ್ರ ರಾವು ಸಾಹೇಬರವರ ಕೈಕೆಳಗೆ ದಿವಾನ್ ಬಹದೂರ್ ಮ. ಬಂಗೇರರವರು ಉಮೇದ್ವಾರರಾಗಿ ಲೋ ಸುಶಿಕ್ಷಣೆಯನ್ನು ಹೊಂದಿ ೧೮೮೦ರಲ್ಲಿ ಮದ್ರಾಸಿನ ಹೈಕೋರ್ಟು ವಕೀಲರಾಗಿ ದಾಖಲ್ ಮಾಡಲ್ಪಟ್ಟರು. ಇವರು ಮಂಗಳೂರಿನಲ್ಲಿ ಇವರ ಕಾಲದಲ್ಲಿ ಪ್ರಸಿದ್ಧಿಪಟ್ಟ ವಕೀಲರಾಗಿದ್ದದ್ದಲ್ಲದೆ ಇವರು ಮುನ್ಸಿಪಲ್ ಕೌನ್ಸಿಲರರ ಮತ್ತು ಪಬ್ಲಿಕ್ ಪ್ರೊಸೆಕ್ಯೂಟರರ ಉದ್ಯೋಗಗಳನ್ನು ಸಹ ವಹಿಸಿಕೊಂಡಿದ್ದರು. ಇವರು ೧೮೮೫ರಲ್ಲಿ ಡಿಸ್ಟ್ರಿಕ್ಟ್ ಮುನ್ಸೀಫರಾಗಿ ನಿಯಮಿಸಲ್ಪಟ್ಟರು. ನಂತರ ಇವರು ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳಲ್ಲಿ ಮುನ್ಸೀಫರಾಗಿ ಅಲ್ಲಿಯ ಡಿಸ್ಟ್ರಿಕ್ಟ್ ಜಡ್ಜರವರ ಪ್ರೀತಿಗೂ ಗೌರವಕ್ಕೂ ಪಾತ್ರರಾಗಿದ್ದರು. ೧೮೮೧ರಲ್ಲಿ ಮಲಬಾರ್ ಮೆರಿಯೆಜ್ ಕಮಿಶನ್ ಎಂಬ ಒಂದು ಹೊಸ ಸೌಂಸ್ಥೆಯನ್ನು ಮದ್ರಾಸು ಗವರ್ನಮೆಂಟಿನವರು ಏರ್ಪಡಿಸಿದರು. ಸ್ವರ್ಗಸ್ಥರಾದ ಕೀರ್ತಿಶೇಷ ಮದ್ರಾಸು ಹೈಕೋರ್ಟು ಜಡ್ಜ ಸರ್ ಟಿ. ಮುತ್ತುಸ್ವಾಮಿ ಅಯ್ಯರವರು ಈ ಕಮಿಶನಿಗೆ ಅಧ್ಯಕ್ಷರಾಗಿ ನಿಯಮಿಸಲ್ಪಟ್ಟರು. ದಿವಾನ್ ಬಹದೂರ್ ಬಂಗೇರರವರು ಮಂಗಳೂರಿನಲ್ಲಿ ಡಿಸ್ಟ್ರಿಕ್ಟ್ ಮುನ್ಸೀಫರಾಗಿರುವಾಗ್ಯೆ ಇವರು ಸಹ ಈ ಕಮಿಶನಿನ ಮೆಂಬರರಾಗಿ ಸರಕಾರದವರಿಂದ ಚುನಾಯಿಸಲ್ಪಟ್ಟರು. ಈ ಕಮಿಶನಿನ ಮೆಂಬರರು ಈ ಬಗ್ಗೆ ಪಟ್ಟ ಕಷ್ಟ ಶ್ರಮೆಗೋಸ್ಕರ ೧೮೯೧ನೇ ಇಸವಿ ಸಪ್ಟಂಬ್ರ ೨೦ರಲ್ಲಿ ಮದ್ರಾಸು ಗವರ್ನಮೆಂಟಿನವರಿಂದ ಪ್ರಕಟಿಸಲ್ಪಟ್ಟ ಹುಕುಮಿಗನುಗುಣವಾಗಿ ಕಮಿಶನಿನ ಮೆಂಬರರಿಗೆ ಸರಕಾರದವರು ಧನ್ಯವಾದವನ್ನು ಸಮರ್ಪಿಸಿದರು. ಮೆ| ಬಂಗೇರರವರು ೧೯೦೩ರಲ್ಲಿ ತಿನ್ನವಲ್ಲಿಯ ಸಬ್‌ಜಡ್ಜರಾಗಿಯೂ ೧೯೦೭ರಲ್ಲಿ ತಿರುಚಿನಾಪಳ್ಳಿಯ ಸಬ್ ಜಡ್ಜರಾಗಿಯೂ ಕೊಯಮುತ್ತೂರಿನ ಅಸಿಸ್ಟಾಂಟ್ ಸೆಶ್ಶನ್ ಜಡ್ಜರಾಗಿಯೂ ನೇಮಿಸಲ್ಪಟ್ಟರು. ಇವರು ೧೯೦೮ರಲ್ಲಿ ಗಂಜಾಮಿನ ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ ಜಡ್ಜರಾಗಿ ನೇಮಕವಾದರು. ಇವರ ಶ್ರದ್ಧಾಪುರಸ್ಸರವಾದ ಮತ್ತು ಮನಃಪೂರ್ವಕವಾದ ಕಾರ್ಯಧುರಂಧರತೆಯನ್ನೂ, ಅನುಪಮವಾದ ಬುದ್ಧಿಚಾತುರ್ಯತನವನ್ನೂ, ಅಶಕ್ಯವಾದ ಕಾರ್ಯಾಸಕ್ತಿಯನ್ನೂ, ಇವರ ದೀರ್ಘಕಾಲದ ಮತ್ತು ನಿಷ್ಕಳಂಕವಾದ ಉದ್ಯೋಗ ನಿರ್ವಾಹಕ ಶಕ್ತಿಯನ್ನೂ ನಮ್ಮ ದಯಾಳುವಾದ ಸರಕಾರದವರು ಚಿತ್ತಕ್ಕೆ ತಂದು ಇವರಿಗೆ ದಿವಾನ್ ಬಹದ್ದೂ

ರೆಂಬ ಅಪೂರ್ವ ಬಿರುದನ್ನು ದಯಪಾಲಿಸಿರುವರು. ಮದ್ರಾಸಿನ ಪ್ರೊವಿನ್ಸಿಯಲ್ ಸರ್ವಿಸಿನ ಮೆಂಬರರಾಗಿ, ಡಿಸ್ಟ್ರಿಕ್ಟ್ ಮತ್ತು ಸೆಶ್ಶನ್ ಜಡ್ಜರವರ ಉಚ್ಚ ಪದವಿಯನ್ನು ಅಲಂಕರಿಸಿದವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರು ಎರಡನೆಯವರೂ, ಸ್ವಜಾತಿ ಗೃಹಸ್ಥರಲ್ಲಿ ಮೊದಲನೇಯವರೂ ಆಗಿರುವರು. ಇವರು ಬಹಳ ನಿಪುಣರಾದ ಮತ್ತು ವಿಶೇಷ ಅನುಭವಸ್ಥರಾದ ಜಡ್ಜರಾಗಿದ್ದರು. ಅವರು ಹೋದಲ್ಲೆಲ್ಲಾ ಎಲ್ಲವರ ಪ್ರೀತಿಗೂ, ಗೌರವಕ್ಕೂ ಮರ್ಯಾದೆಗೂ ಪಾತ್ರರಾಗಿದ್ದರು. ಇವರು ಕಕ್ಷಿಗಾರರೆಲ್ಲರನ್ನೂ ದಯಾಭಾವದಿಂದಲೂ, ಇವರ ಕೈಕೆಳಗಿದ್ದ ಎಲ್ಲಾ ಉದ್ಯೋಗಸ್ತರನ್ನು ತುಂಬಾ ಕೃಪೆಯಿಂದಲೂ, ಆದರಣೆಯಿಂದಲೂ ನಡಿಸುತ್ತಿದ್ದರು. ಇವರ ನಡತೆಯು ಸರ್ವ ವಿಧದಲ್ಲಿಯೂ ಶ್ಲಾಘನೀಯವಾದದ್ದೆಂದು ನಾವು ನಿಸ್ಸಂದೇಹವಾಗಿ ಹೇಳಬಹುದು.

ಇವರ ಮಕ್ಕಳ ಪೈಕಿ ಒಬ್ಬರು ವಿಲಾಯತಿಯಲ್ಲಿ ಡಾಕ್ಟರ್ ಪರೀಕ್ಷೆಗೋಸ್ಕರ ಕಲಿಯುತ್ತಿರುವರು. ಮತ್ತೊಬ್ಬರು ಕಳದ ವರುಷ ಬಿ. ಯಲ್. ಪರೀಕ್ಷೆಯಲ್ಲಿ ಪಾಸಾಗಿ ಈಗ ಎಪ್ರೆಂಟೀಸ್ ಪರೀಕ್ಷೆಗೋಸ್ಕರ ಈಗ ಮದ್ರಾಸಿನಲ್ಲಿ ತರ್ಬೀತನ್ನು ಹೊಂದುತ್ತಿರುವರು. ಈಗ ದಿವಾನ್ ಬಹದೂರ್ ಮ. ಬಂಗೇರರವರು ೫೭ ವರುಷ ವಯಸ್ಸಿನವರಾದರೂ ದೃಢಾಂಗರಾಗಿಯೂ ನಿರೋಗಿಗಳಾಗಿಯೂ ಇರುವರು. ಉದ್ಯೋಗದಿಂದ ಬೇಗನೇ ನಿವೃತ್ತರಾಗಿ ಒಂದೆರಡು ದಿವಸಗಳಲ್ಲಿ ಇಲ್ಲಿಗೆ ಬರುವ ಈ ಮಹನೀಯರಿಗೆ ಕೃಪಾಳುವಾದ ಪರಮಾತ್ಮನು ಉತ್ತರೋತ್ತರ ಶ್ರೇಯಸ್ಸನ್ನೂ, ನಿರಂತರ ಭಾಗ್ಯೋದಯವನ್ನೂ, ಆಯುರಾರೋಗ್ಯ ಸುಖ ಸೌಖ್ಯವನ್ನೂ ದಯಪಾಲಿಸಲೆಂದು ಅವರ ದೇಶಬಾಂಧವರೂ, ಆಪ್ತಮಿತ್ರರೂ, ಹಿತಚಿಂತಕರೂ ಆದ ನಾವು ಅನುದಿನವೂ ಪ್ರಾರ್ಥಿಸುತ್ತೇವೆ.

ಸ್ವಜಾತಿ ಗೃಹಸ್ಥ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಕಂಗಾಲಪುರ ಗೆರಟೆ ಸೂಲಯ್ಯನ ಆಲಾಪನೆ—

—o—

ಪತ್ರಕರ್ತರೇ—ಅಯ್ಯಾ! ಸ್ವಾಮಿ! ಸಲ್ಲ್-ಆಮು! ನಮಸ್ತೇ! ಮಹಾಶ್ರಯ! ಇದೇನು ಆಶ್ಚರ್ಯ! ವಂದೇಮಾ—(ಈ ಪಂಚಾಕ್ಷರಿ ನೋಡಿದ ಕೂಡಲೇ ತಮ್ಮ ಕರುಣಕಟಾಕ್ಷ ನನ್ನ ಪತ್ರದ ಮೇಲೆ ಬಿತ್ತು!) ಶಾಭಾಸ್! ಉಭಯಕ್ಷೇಮ. ತರುವಾಯ ತಮ್ಮ ಅಮೂಲ್ಯವಾದ ಪತ್ರಿಕೆಯ ಸಲುವಾಗಿ ನನಗಾದ ಆನಂದವನ್ನು ಹ್ಯಾಗೆ ತಿಳಿಸಲಿ?

ಎಂತು ಪೊಗಳಲಿ? ನಾ
ನಿಂತು ಪೊಗಳಲ್ಯೊ? ।

ಬೇಡ. ಕೂತುಕೊಂಡು ಪೊಗಳುವೆ-ಅನೇಕ ವರುಷಗಳಿಂದ ದುಃಖಾಸಕ್ತನಾದ ನನಗೆ ತಮ್ಮ ಪತ್ರಿಕೆ ಪರಿಮುಖ ದೊರಕಿದ ಭಾಗ್ಯವೆಂತು ಬಣ್ಣಿಸಲಿ? ನನ್ನ ಸಂತೋಷದಲ್ಲಿ ತಮಗೂ ತಮ್ಮ ಗಣಿತ ಚಂದಾದಾರರಿಗೂ ಅಗಣಿತ ವಾಚಕರಿಗೂ—ಅಪ್ಪಿ ಹಿಡಿದು ನಿಮ್ಮೆಲ್ಲರನ್ನು ಕೂಡಿಸಿ ನಾಟ್ಯವಾಡಬೇಕೆಂಬ ಮನಸ್ಸಿದೆ. ದುಃಖದಲ್ಲಿ ಏಕಾಂತ, ಸುಖದಲ್ಲಿ ಲೋಕಾಂತವೆಂಬ ಪ್ರಸಿದ್ಧ ಗಾದೆ ಇದೆ. ಈ ಗಾದೆ ಪ್ರಸಿದ್ಧವಲ್ಲವಾದರೆ ಅದನ್ನು ಪ್ರಸಿದ್ಧ ಪಡಿಸುವ ಆಶೆಯು ನನ್ನದು—ನಾನೊಂದು ಸುಭಾಷಿತ ಗಾದೆಯಂತ್ರ ಮಾಡಿರುತ್ತೇನೆ. ಇದು ವಾರಕ್ಕೊಮ್ಮೆ ೫೦೦ ಗಾದೆಗಳನ್ನು ಹೊರಪಡಿಸುತ್ತದೆ. ಯಂತ್ರ ನೋಡುವವರು ಮಂತ್ರ ಹೇಳಿ ಹಣ ಕಳುಹಿಸಲಿ! ಛಿ! ನನ್ನ ಗಾದೆಗೋಸ್ಕರ ಹಾದಿಬಿಟ್ಟೆ—ನನ್ನ ಸಹೋದರನಾದ ಅಂದ್ರೆ ಸಹೋದರನಾಗುವ ಹರಟೆಮಲ್ಲನು ಕೆಲವು ಕಾಲದಿಂದ ಕಾಣೆಯಾಗಿದ್ದ, ಆತನು ಇನ್ನೂ ಸಜೀವಿಯಾಗಿ ಸೌಖ್ಯದಲ್ಲಿ ಇರುವದಾಗಿ ತಮ್ಮ ಪತ್ರಿಕೆಯಿಂದ ನನಗೆ ಖಾತ್ರಿಯಾಗಿ ಸುಖವಾಯಿತು. ನಮ್ಮಿಬ್ಬರ ತಾಯಂದಿರು ತಮ್ಮಂದಿಯರು ಅಂದರೆ ನನ್ನ ತಾಯಿ ಸಾಂತಮ್ಮ, ಮಲ್ಲನ ತಾಯಿ ಕಾಂತಮ್ಮ ಇದಲ್ಲದೆ ನನ್ನ ಅಜ್ಜನ ಮೊಮ್ಮಗನ ಸೊಸೆಯು ಮಲ್ಲನ ಸಾಲ ಸಂಮಂದಿಯಂತೆ. ಇದು ಹ್ಯಾಗೂ ಇರಲಿ! ನಾವಿಬ್ಬರೂ ಒಂದೇ ಶಾಲೆಯಲ್ಲಿದ್ದವರು. ನಾವಿಬ್ಬರೂ ಕೊರಡೇಲ ವಿಷ್ಣು ಭಟ್ರ ವಿದ್ಯಾರ್ಥಿಗಳು-ಇವರ ಮತ ವ ಅಭಿಪ್ರಾಯ ಮತ್ತು ಸರ್ವಜ್ಞಣ್ಣನ ಗುರುಗಳ ಮತ ಒಂದೇಯಾಗಿತ್ತು—

ಕಡಿದ ಆಲದ ಬೀಳ್‍ಗಳೆಡೆಯೊಳ್
ಅಡಗಿರುವ ಸುಜ್ಞಾನ ಬೀಜವ
ತೊಡೆಗೆ ಅಂಟಿಸದೆ ಬಪ್ಪುದೆ ಬುದ್ಧಿ ಸರ್ವಜ್ಞಾ? ‖

ನಾವಿಬ್ಬರೂ ಸರ್ವಜ್ಞನಂತೆ ಆಗಬೇಕೆಂಬ ಅಭಿಲಾಷೆಯಿಂದ ಇರುವ ನಮ್ಮ "ಊಷ್ಣ ಭಟ್ರ" ಅಭಿಪ್ರಾಯದ ಫಲವು ನಮಗಿಬ್ಬರಿಗೆ ಸಾಂಗವಾಗಿ ಲೋಪವಿಲ್ಲದೆ ಪ್ರತಿ ದಿನ ಸಿಕ್ಕದ ಸಮ್ಮಂಧ ನಮ್ಮ ಇಬ್ಬರೊಳಗೆ ಬಹಳ ಸ್ನೇಹ ಉಂಟಾಗಿ ಜನರೆಲ್ಲರು—ನಮಗಿಬ್ಬರಿಗೂ ಕಂಠದಲ್ಲಿಯೇ ಜೀವವೆನ್ನುವರು-ಮಲ್ಲನು ಗದ್ಯದಲ್ಲಿ ಭಲೇ, ನಾನು ಪದ್ಯದಲ್ಲಿ ನಿಪುಣ-ನನ್ನ ತಾಯಿ ಮಾತ್ರ ನನ್ನ ಕಾವ್ಯ ನೋಡಿ ಸದ್ಯಕ್ಕೆ ಗದ್ಯಸಾಕು-ಮದ್ಯದಲ್ಲಿ ಪದ್ಯವೆನ್ನುವಳು—ಈ ನಿಂದಾವಾಕ್ಯವನ್ನು ವಂದ್ಯವೆಂದೆಣಿಸಲೇ ಬೇಕು—ಒಮ್ಮೆ ಮಲ್ಲನು ನನ್ನನ್ನು ಕಂಡು ನಕ್ಕು ನಕ್ಕು

ಕಸಬರಿಗೆಯ ಪಿಡಿದೂ ಕೌಪಿನಂ ಧರಿಸಿಕೊಂಡೂ
ನಸನಗುತಲೆ ಬಂದೆಯಾ ಗೆರೆಟೆಸೂಲ್ಯಾ ।
ಕಸಕಸವೆಂಬುದ ವಂದು ಭ್ರಾಂತಿಗಾಗಿ
ಪಸಬೆಯ ಚೀಲದ ಗಂಟೆನು ಬಿಚ್ಚದೀರ್ಪ ಮೂರ್ಖಾ ।

ಎಂದು ಹಾಡಲು ನಾನು ಪ್ರತ್ಯುತ್ತರವಾಗಿ

ಅಂಗಳೆಲ್ಲಾ ಮಣ್ಣು ಮಾಡಿದಿಯಾ? ನೀ ಮಲ್ಲಯ್ಯಾ
ಗಂಗಾಳೆಲ್ಲ ತಾಂಬ್ರ ಮಾಡಿದಿಯಾ?
ಅಂಗಳೆಲ್ಲಾ ಮಣ್ಣು ಮಾಡಿ
ಗಂಗಾಳೆಲ್ಲಾ ತಾಂಬ್ರ ಮಾಡಿ
ತಂಗಳನ್ನಕ್ಕೆ ಘೌಳಿ ಹಾಕಿದಿಯಾ? ನೀ ಮಲ್ಲಯ್ಯಾ

ವೆಂತ ಪಂಥವರಾಳಿ ರಾಗದಲ್ಲಿ ಹಾಡಲು-ನಮ್ಮಿಬ್ಬರ ಮರ್ಮಗಳು ಈ ಪದ್ಯಗಳಲ್ಲಿದ್ದ ಸಮ್ಮಂಧ ಮಲ್ಲನು ಕೋಪಗೊಂಡ—ಅವನ ಕಿಡಿಕಿಡಿ ಮುಂದೆ ನನ್ನ ಕಸಬರಿಗೆ ದಾರಿ ಹಿಡಿಯಿತು. ಕಸವೆಲ್ಲ ಹಾರಿಹೋಯಿತು. ಅಂದಿನಿಂದ ನಮ್ಮ ಸ್ನೇಹ ಅಮವಾಸೆ ಚಂದ್ರನಂತೆ ಬೆಳೆದು ಆತ ನಮ್ಮೂರಿಂದಲೇ ಹೊರಟು ಬಿಟ್ಟನು. ಪಶ್ಚಾತಾಪ ನಿವಾರಣಾರ್ಥ ಆತನ ಪರಾಕ್ರಮದ ಚರಿತ್ರವನ್ನು ಪ್ರಕಟಿಸಿದೆ-"ಮಲ್ಲರಾಯನ ಚರಿತ್ರ, ಕ್ರಯ ೩ರೂ ೮ ಆಣೆ ವೆಲ್ಯುಫೀಬಲ್ ಇಲ್ಲ." ಪುಸ್ತಕಗಳನ್ನು ವೆಲ್ಯುಫೀಬಲ್ ಮಾಡಿ ಕಳುಹಿಸಿ ಕೈಯಲ್ಲಿದ್ದ ಕಾಸು ಮೈಯಲ್ಲಿದ್ದ ಮಾನ ಹೋಯಿತು! ನಮ್ಮೂರಿನ ನಿವಾಸಿಕರನ್ನು ಕೂಡಿಸಿ ಮಲ್ಲಣ್ಣನ ಕೀರ್ತಿಯನ್ನು ಹೊಗಳಿಸಿ ನಾವಿಬ್ಬರೂ ಸ್ನೇಹಿತರಾಗಿರುವದರಿಂದ ನಮ್ಮಲ್ಲಿಯ ಒಂದು ರಸ್ತೆಗೆ ಒಂದು ಕಾಸು ಆದರೂ ಖರ್ಚುಮಾಡದೆ "ಮಲ್ಲಪ್ಪ ನ್ಯಾಕನ ಕೇರಿ" ಎಂತ ನಾಮಧೇಯ ಕೊಡಿಸಿದೆ. ಪ್ರಾಕಿನಲ್ಲಿ ಈ ಸ್ಥಳದಲ್ಲಿ ಗಿಣಿಗಳಿದ್ದವು. ಈಗ ನರಗಿಣಿಗಳು ಮಾತ್ರ. ನರಗಿಣಿಗಳ ಅಂಬೋಣ ತಿಂಬೋಣ ಉಂಬೋಣ ಇತ್ಯಾದಿ ತಮಗೆ ತಿಳಿಸುವದಾದರೆ ತಮ್ಮ ಪತ್ರಿಕೆಯ ಒಂದು ಸಂಚಿಕೆ ಸಾಲದು. ಇನ್ನೊಮ್ಮೆ ಬರಿಯುವೆನು. ತನಧ್ಯ ತಾವು ಹರಟೆಮಲ್ಲನನ್ನು ಕಂಡರೆ ನನ್ನ ನಮಸ್ಕಾರಗಳು ಆತಗೆ ಕೊಟ್ಟು ಆತನನ್ನು ನಾನು ಕ್ಷಮಿಸಿದ್ದೇನೆಂತ ತಿಳಿಸಿರಿ. ಆ ವರೆಗೆ ವಂದೇ ಭ್ರಾತರಂ—

ಭ್ರಾಂತಿ ವಿಲಾಸ
ಪುಷ್ಯ ಬ ೩೦—
ವಿರೋಧಕೃತು—

ತಮ್ಮ ಚಿಂತಕ,
ಗೆರಟೆ ಸೂಲಯ್ಯ.

ತಾಜಾ ಕಲಂ:—ಈ ಕಾಗದ ತಮಗೆ ಬಂದು ಮುಟ್ಟದಿದ್ದರೆ ತಿಳಿಸಿ ಬಿಡಿ ಮುಂದಕ್ಕೆ ತಕ್ಕ ವಿಲೆವಾರಿ ಮಾಡುವ.

ಅಯ್ಯಾ ಪತ್ರಸಂಪಾದಕರೇ,

ಅಪೂರ್ವವಾದ ಸಂಗತಿ! ಎಲ್ಲೆಲ್ಲಿಯೂ ರೂಡಿಗೆ ಬಂದುದು—ಅದಾವುದು? ದಾಸ್ಯ ವಿಕ್ರಯ. ಅದರಲ್ಲೂ ವ್ಯಾದೆ ಕ್ರಯ ಇಲ್ಲದೇ ಬಾಡಿಗೆ!

ಜೀವಿತಾಶನ, ಸಹಾಯದ್ರವ್ಯವಿಲ್ಲದ ಸರಕಾರಿ ಕೆಲಸದ ಪೈಕಿ ಶ್ಯಾನಭಾಗ ಮೊದಲಾದ ಮನೆತನದ ಹಕ್ಕಿನ ಉದ್ಯೋಗ. ಪ್ರಾಯಭರಿತರಿಲ್ಲದಿದ್ದರೆ ಅಪ್ರಾಯಸ್ಥರ ನೇಮಕದ ಬದ್ಲಿ.

ಹಣದ ಆಶೆಯಿಂದ ಇದ್ದ ಉದ್ಯೋಗವನ್ನು ಬಿಟ್ಟು ಬೇರೊಂದು ವ್ಯಾಪ್ತಿ ಸಂಪಾದಿಸಿ ಅಪ್ರಾಯಸ್ಥರ ರಕ್ಷಕನೆಂದು ಮಾಡುವ ಜಟಾಪಟಿ ಏಲಂ. ಹೊಸ ವಿಲೆವಾರಿ ಆಶೆಯಿಂದ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿ ಹಲ್ಲು ಕಿರಿಯುವ ಉಮೇದ್ವಾರರ ಮೇಲಾಟ. ತಿಂಗಳಿಗೆ ಮೂರು ನಾಲ್ಕು ರೂಪಾಯಿ ಅಂದರೆ ಅತಿ ಕಡಿಮೆ. ರೂಪಾಯಿ ಐದು, ಆರು ಸಾಧಾರಣ-ತಕ್ಕ—ಪ್ರತಿಫಲ. ಮೇಲಾಟದಲ್ಲಿ ಜೈಸಿದವರು—ನೋಟು ದಸ್ತೈವಜು ಬರೆದು ಕೊಡುವಿಕೆ, ಜಾಮೀನು ಕೊಡುವಿಕೆ. ಕಡೆಗೆ ಮುನ್ನೂರು ನಾನ್ನೂರು ನಗದಿ ಸುರಿಯುವಿಕೆ.

ಇದ್ದ ದುಡ್ಡು ಇಲ್ಲವೆ ಸಾಲ ಮಾಡಿದ ದುಡ್ಡು ಕಳೆದುಕೊಂಡು ಅಥವಾ ಶಿಕ್ಕಿದ್ದು ಕೊಟ್ಟುಕೊಂಡು ಜೀವನಕ್ಕೆ ಸಾಲದೆ ಗ್ರಾಮದಲ್ಲಿ ಅಲ್ಲದಸಲ್ಲದ ಗುಪ್ತ ತೆಂಗೆಗಳು ಹೊರಿಸುವಿಕೆ. ಸಾಲ ತೆಗೆದುಕೊಳ್ಳುವಿಕೆ, ಮೋಸ ತೋರಿಸುವಿಕೆ. ಅಣ್ಣನನ್ನು ತಮ್ಮನೆಂದು ಬರೆಯುವಿಕೆ. ಹತ್ತು ಹೋಗಿ ಮೂವತ್ತಾಗುವಿಕೆ. ಧನ ಪಿಶಾಚಿಯ ಮಹಾತ್ಮೆಯೆ?

ಪರಮಾಶ್ಚರ್ಯ! ಮಹದನ್ಯಾಯ!
ಮಾನ್ಯ ಸರಕಾರದವರಿಗೂ ಇಂಥಾ ಅಕ್ರಮ ತಿಳಿಯದೆ ಇರಬೇಕೆ?

ಇಂತಿ ಗುಟ್ಟಿನಭಟ್ಟ.

ವಿದೇಶ ವೃತಾಂತ.

ಚೀನದಲ್ಲಿ ದಂಗೆಗಾರರು ಯೂಲು ನದಿಯನ್ನು ದಾಟಿ ಮಕ್ಡೆನಿನಿಂದ ಬಂದ ಸರಕಾರ ಸೈನ್ಯವನ್ನು ಸೋಲಿಸಿದರು. ನಾನ್‍ಕಿಂಗನ್ನು ಪುನಃ ವಶಮಾಡ ಬಂದ ಚಂಗ್‍ಸನರ ಸೈನ್ಯವನ್ನು ದಂಗೆಗಾರರು ಹಿಂದಕ್ಕೆ ಓಡಿಸಿರುವರು.

ಪೋರ್ಚುಗಲ್ ಮತ್ತು ಸ್ಪೈನ್ ದೇಶಗಳಲ್ಲಿ ನೆರೆ ಬಂದು ಸಾವಿರಾರು ಜನರು ನಿರ್ಗತಿಕರಾಗಿರುವರು. ಇಂಥಾ ನೆರೆಯು ೪೦ ವರ್ಷಗಳಿಂದೀಚೆಗೆ ಅಲ್ಲಿ ಬರಲಿಲ್ಲವಂತೆ.

ಐರ್ಲಾಂಡಿನ ಹೋಮ್‍ರೂಲು ಮಸೂದೆಯನ್ನು ಕುರಿತು ಭಾಷಣಕೊಡಲಿಕ್ಕಿದ್ದ ಲಿಬರಲ್ ಪಕ್ಷದ ಮೆ| ಚರ್ಚಿಲರವರು ತಾ. ೮ರಲ್ಲು ಬೆಲ್‍ಫಾಸ್ಟಿನಲ್ಲಿ ಭಾಷಣಕೊಟ್ಟರು. ಇವರು ಭಾಷಣಕೊಡುವಾಗ ದಂಗೆ ಉಂಟಾಗದ ಹಾಗೆ ಸುತ್ತಲೂ ಸೈನೀಕರೂ ಕಾಲಾಳುಗಳೂ ಪೋಲೀಸಿನವರೂ ಕಾಯುತ್ತಿದ್ದರು. ವಿರೋಧ ಪಕ್ಷದವರು 'ಹೋಮ್‍ರೂಲು ಇಲ್ಲ' ಎಂಬದಾಗಿ ಬರದು ತೂಗಾಡಿಸುತ್ತಿದ್ದ ದೊಡ್ಡ ದೊಡ್ಡ ಧ್ವಜಪತಾಕೆಗಳನ್ನು ಹಿಡಿದು ಸುತ್ತಲೂ ನಿಂತಿದ್ದರು. ಆದರೆ ಲೂಟಿ ಇತ್ಯಾದಿ ಮಾಡಲಿಲ್ಲ.

ಪರ್ಶಿಯಾದಲ್ಲಿ ತಕ್ಕ ವ್ಯವಸ್ಥೆಯನ್ನು ಮಾಡುವರೆ ಇಂಗ್ಲಾಂಡ್ ಮತ್ತು ರುಷ್ಯಾ ಸರಕಾರದವರು ಪರ್ಶಿಯಾ ಸರಕಾರದವರಿಗೆ ೨೦೦,೦೦೦ ಪವನು ಮುಂಗಡವಾಗಿ ಕೊಡಲು ನಿಷ್ಕರ್ಷಿಸಿರುವರು. ಪದಚ್ಯುತರಾದ ಶಾಹರವರು ಸದ್ಯಾ ಯೂರೋಪಿಗೆ ಹೋಗುವರೆಂದು ತಿಳಿದು ಬರುತ್ತದೆ.

ಇಂಗ್ಲಾಂಡಿನ ಗೂಢಾಚಾರ್ಯನೆಂದು ಕೈದು ಮಾಡಲ್ಪಟ್ಟ ಜರ್ಮನಿಯ ಹೈನ್ರಿಕ್ ಗ್ರೋಸೆ ಎಂಬವನು ತಪ್ಪಿತಸ್ಥನೆಂದು ತೀರ್ಮಾನವಾಯಿತು. ಈತನು ಪೋರ್ಜರಿ ಮಾಡಿದ ನೋಟನ್ನು ಪ್ರಯೋಗಿಸಿದ್ದಾನೆಂಬ ತಪ್ಪಿಗೆ ಗುರಿಯಾಗಿ ಸಿಂಘಾಪುರದಲ್ಲಿ ೧೮೯೮ನೇ ಇಸವಿಯಲ್ಲಿ ೧೦ ವರ್ಷಗಳ ಸಜಾ ಹೊಂದಿದ್ದನು.

ಲಂಡನ್ ಮುನ್ಸಿಪಾಲಿಟಿಯವರು ಜೋರ್ಜ ಸಾರ್ವಭೌಮರವರಿಗೆ ಒಪ್ಪಿಸಿದ ಬಹುಮಾನ ಪತ್ರಕ್ಕೆ ಉತ್ತರವಾಗಿ ಸಾರ್ವಭೌಮರವರು:—ತಾನು ಹಿಂದೂಸ್ಥಾನದ ಪ್ರಜೆಗಳವರ ಮನಃಪೂರ್ವಕವಾದ ರಾಜಭಕ್ತಿಯನ್ನು ಕಣ್ಣಾರೆ ಕಂಡು ತುಂಬಾ ಸಂತೋಷ ಪಟ್ಟೆನೆಂದೂ ಈ ಪ್ರಯಾಣವು ಹಿಂದೂಸ್ಥಾನದ ಪ್ರಜಾ ಜನರ ಬಳ್ಳಿತಕ್ಕಾಗಿಯೇ ಕೈಗೂಡುವ ಹಾಗೆ ಬಯಸುವವನಾಗಿದ್ದೇನೆಂದೂ ಹೇಳಿದರು.

ಗ್ಲಾಸ್‍ಗೊ ಮೊದಲಾದ ಪಟ್ಟಣಗಳಲ್ಲಿ ನಾವಾಶಯದ ಕೆಲಸಗಾರರು ಮುಷ್ಕರ ಹಿಡಿಯಲು ಪ್ರಾರಂಭಿಸಿದ್ದಾರಲ್ಲದೆ ಪೋಲೀಸಿನವರಿಗೂ ಈ ಕೆಲಸಗಾರರಿಗೂ ಕಠಿಣವಾದ ಕದನವು ನಡೆದಿರುವದು.

ಹಾರ್ವಾಡ್ ಯುನಿವರ್ಸಿಟಿಯಲ್ಲಿ ವಿದ್ಯಾವ್ಯಾಸಂಗವ ಮಾಡುತ್ತಿದ್ದ ಬರೋಡೆಯ ಯುವರಾಜರು ತನ್ನ ಅವಧಿಯನ್ನು ತೀರಿಸಿ ಹಿಂದೂಸ್ಥಾನಕ್ಕೆ ಬರಲು ಹೊರಟಿರುವರು.

ಲಂಡನಿನ ಜನರಲ್‍ಪೋಸ್ಟು ಆಫೀಸಿನಲ್ಲಿ ಒಂದಾಣೆಯ ಟಪ್ಪಾಲ್ ಚೀಟು ಹಚ್ಚಿಸುವರೆ ಒಂದು ಸುಲಭ ಯಂತ್ರವನ್ನು ಕಲ್ಪಿಸಿ ಯಂತ್ರವನ್ನು ಆಫೀಸಿನ ಹೊರಗೆ ಇಟ್ಟಿರುವರು. ಪತ್ರಕ್ಕೆ ಚೀಟು ಹಚ್ಚುವರೆ ಇಚ್ಛೈಸುವವರು ಒಂದಾಣೆಯನ್ನು ಯಂತ್ರದ ಮೇಲಿ ಹಾಕಿ ಲಕೋಟಿ ಇಟ್ಟು ಬಿಟ್ಟರೆ ಲಕೋಟೆಯ ಮೇಲಿ ಒಂದು ಕೆಂಪು ವೃತವೂ "ಲಂಡನ್ ಇ. ಸಿ. ಒಂದು ಪೆನ್ಸ್ ಪೋಸ್ಟು ಚಾರ್ಜು ಕೊಟ್ಟದೆ" ಎಂಬ ಶಬ್ದವೂ ಬರೆಯಲ್ಪಡುವದು.

ಚೀನದ ಸರಕಾರದವರು ಯು ಆನ್ ಸಿಕಾಯಿರವರೂ ಪ್ರಜಾಧಿಪತ್ಯದವರೂ ಒಟ್ಟಾಗಿ ಪ್ರಜಾಧಿಪತ್ಯವನ್ನು ಸ್ಥಾಪಿಸುವ ಆಲೋಚನೆಗೆ ತಾವು ಒಪ್ಪಿದ್ದೇವೆಂದೂ ತಮಗೆ ಇನ್ನು ಮುಂದಕ್ಕೆ ರಾಷ್ಟ್ರಿಯ ಸಂಬಂಧವಾದ ಯಾವ ಅಧಿಕಾರವಿಲ್ಲವೆಂದೂ ರಾಜ ಶಾಸನ ಹೊರಡಿಸಿದ್ದಾರೆ.

ಉತ್ತರ ಹಿಂದುಸ್ಥಾನ.

ಅಮರಾವತಿಯ ಮೆ| ಎಮ್. ವಿ. ಜೋಶಿಯವರ ಪುತ್ರಿ ಮಿಸ್ ಜೋಶಿ ಎಂಬವರು ವೈದ್ಯ ಪರೀಕ್ಷೆಯಲ್ಲಿ ಲಂಡನಿನ ಎಲ್. ಆರ್. ಸಿ. ಪಿ. ಎಸ್. ಡಿಗ್ರಿಯನ್ನು ಪಡಕೊಂಡರು. ಲಂಡನ್ ಡಿಗ್ರಿಯನ್ನು ಪಡದ ಭಾರತೀಯ ಹೆಂಗಸರಲ್ಲಿ ಇವರೇ ಮೊದಲನೆಯವರು.

ಸರಕಾರದವರು ಹಿಂದೂಸ್ಥಾನದ ಟಪ್ಪಾಲು ಮತ್ತು ಟೆಲಗ್ರಾಫ್ ಇಲಾಖೆಗಳನ್ನು ಒಟ್ಟಿಗೆ ಕೂಡಿಸಿ ಮೆ| ಸ್ಟೂವರ್ಟ್ ವಿಲ್ಸರನ್ನು ಮುಖ್ಯ ಹುದ್ದೆದಾರರಾಗಿ ನೇಮಿಸುವರು ಎಂದು ತಿಳಿಸಿತಷ್ಟೆ. ಇವರಿಗೆ ಸಹಾಯಕರಾಗಿ ಈ ಹೊಸ ಇಲಾಖೆಗೆ ಇಬ್ಬರು ಟೆಲಗ್ರಾಫ್ ಆಫೀಸರರು ನೇಮಿಸಲ್ಪಟ್ಟಿರುವರು. ಟೆಲಗ್ರಾಫ್ ಇಲಾಖೆಯ ಕೆಳನೌಕರರು ಈ ಎರಡು ಇಲಾಖೆಗಳನ್ನು ಒಟ್ಟು ಕೂಡಿಸಬಾರದೆಂಬದಾಗಿ ಸರಕಾರದವರಿಗೆ ವಿಜ್ಞಾಪನೆ ಮಾಡಿಕೊಂಡಿದ್ದರು. ಅದಕ್ಕೆ ಸರಕಾರದವರು-ಎರಡು ಇಲಾಖೆಗಳನ್ನು ಒಟ್ಟು ಕೂಡಿಸುವುದರಿಂದ ಟಪ್ಪಾಲು ಮತ್ತು ಟೆಲಗ್ರಾಫ್ ಇಲಾಖೆಯ ಯಾವ ಹುದ್ದೆದಾರನಿಗಾದರೂ ಯಾ ಇತರ ಕೆಲಸದವರಿಗಾದರೂ ನಷ್ಟವಾಗುವದಿಲ್ಲ ಎಂಬ ಖಂಡಿತ ಉತ್ತರ ಕೊಟ್ಟಿದ್ದಾರೆ.

ಮಾಹೀರ್ ಎಂಬಲ್ಲಿಯ ದೇಶೀಯ ರಾಜನನ್ನು ಯಾರೋ ಕೊಂದು ಹಾಕಿದ್ದರಿಂದ ಲೆಪ್ಟನೆಂಟ್ ಕರ್ನೆಲ್ ಎಸ್. ಎಫ್. ಬೈಲಿಯವರು ಸುಟ್ನದಲ್ಲಿ ಸ್ಪೆಶ್ಯಲ್ ಪೊಲೆಟಿಕಲ್ ಏಜಂಟರಾಗಿ ನಿಯಮಿಸಲ್ಪಟ್ಟಿರುವರಲ್ಲದೆ ಆ ಕೊಲೆ ಸಂಬಂಧದಲ್ಲಿ ಸೇರಿದ್ದಾರೆಂಬದಾಗಿ ಅನುಮಾನಿಸಲ್ಪಟ್ಟ ಹಿರಸಿಂಘಜ್, ಬಿ. ಸಿಂಘಜ್. ಟಿಕಾರಾಮ್ ಮತ್ತು ಇತರರನ್ನು ತನಖಿ ನಡಿಸಲು ಪೂರ್ಣ ಅಧಿಕಾರವನ್ನು ಪಡೆದಿರುತ್ತಾರೆ.

ವೈಸರಾಯರವರು ಇಂದು ಕಲ್ಕತ್ತೆಯಿಂದ ಬೆನಾರಸಿಗೆ ಹೊರಟು ಲಕ್ನೌ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ತಾ. ೨೭ರಲ್ಲು ಕಲ್ಕತ್ತೆಗೆ ಹಿಂತೆರಳುವರು. ತಾ. ೨೦ರಲ್ಲು ಲಕ್ನೌ ಪಟ್ಟಣದಲ್ಲಿ ಒಡ್ಡೋಲಗವನ್ನು ನಡಿಸುವರು.

ಬೆಕರ್‍ಗಂಜ್ ಜಿಲ್ಲೆಯ ಬಗ್ವಾ ಎಂಬ ಹಳ್ಳಿಯಲ್ಲಿ ಕೆಲವು ದೇಶೀಯ ಕ್ರೈಸ್ತರು ವಾಸಮಾಡಿರುವರು. ಇತ್ತಲಾಗೆ ಒಬ್ಬ ಡಾಕು ಚುಚ್ಚಿಸುವ ಇನ್ಸ್‍ಪೆಕ್ಟರರು ಕೆಲವು ಪೋಲೀಸಿನವರೊಂದಿಗೆ ಆ ಹಳ್ಳಿಗೆ ಹೋಗಿ ಒಬ್ಬ ಕ್ರೈಸ್ತನಿಗೆ ಡಾಕು ಹಾಕ ಪ್ರಾರಂಭಿಸಲು ಆತನು ಡಾಕಿನ ಇನ್ಸ್‍ಪೆಕ್ಟರನನ್ನು ಎರಡು ತುಂಡಾಗಿ ಕತ್ತರಿಸಿ ಬಿಟ್ಟನು. ಪೋಲೀಸಿನವರು ಪಲಾಯನ ಸೂಕ್ತವನ್ನು ಹಿಡಿದರು. ಮತ್ತೊಬ್ಬ ಡಾಕು ಹಾಕುವವನು ಈ ಸಂಗತಿಯನ್ನು ತಿಳಕೊಳ್ಳಲು ಅದೇ ಗ್ರಾಮಕ್ಕೆ ಹೋಗಲು ಆತನೂ ಕೊಲ್ಲಲ್ಪಟ್ಟನು. ನಂತರ ಆ ಘಾತುಕನು ಸ್ವಘಾತಮಾಡಿ ಕೊಂಡನೆಂಬದಾಗಿ ಡಕ್ಕದ ಒಂದು ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಡಿಲ್ಲಿ ದರ್ಬಾರು ನಡೆದ ದಶಂಬರ ೧೨ನೇ ತಾರೀಕು ಪ್ರತಿ ವರ್ಷವೂ ರಜಾ ದಿವವಾಗಿ ಆಚರಿಸಲ್ಪಟ್ಟು ಶಾಲೆಗಳಲ್ಲಿ ದರ್ಬಾರು ಆಚರಣೆಯನ್ನು ನಡಿಸಬೇಕೆಂಬದಾಗಿ ಹಿಂದೂಸ್ಥಾನದ ಸರಕಾರದವರು ನಿಷ್ಕರ್ಷಿಸಿರುವರು. ದಶಂಬರ ೧೨ನೇ ತಾರೀಕು ಶಾಲಾ ರಜಾ ಕಾಲದಲ್ಲಿ ಬಿದ್ದರೆ ಡಿಲ್ಲೀ ದರ್ಬಾರ್ ಜ್ಞಾಪಕಾರ್ಥವಾಗಿ ಶಾಲಾ ರಜೆಗೆ ಒಂದು ದಿನ ಹೆಚ್ಚಿಗೆ ಕೂಡಿಸ ಬೇಕೆಂಬದಾಗಿಯೂ ಹುಕುಂ ಆಗಿರುವುದು.

ಇದೇ ಪೆಬ್ರವರಿ ೩ನೇ ತಾರೀಕಿಗೆ ಅಂತ್ಯವಾಗುವ ವಾರದಲ್ಲಿ ಇಡೀ ಹಿಂದೂಸ್ಥಾನದಲ್ಲಿ ೧೯,೦೮೭ ಮಂದಿಗೆ ಪ್ಲೇಗ ಬೇನೆಯು ಸೊಂಕಿ ೧೩,೭೪೯ ಮಂದಿಯು ಮೃತಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟಂದರೆ:—ಮುಂಬಾಯಿ ಸಂಸ್ಥಾನ ೧೫೩೬; ಮದ್ರಾಸ್ ೪೪೬; ಬಂಗಾಳ ೨೦೪೯; ಸಂಯುಕ್ತ ಸಂಸ್ಥಾನ ೫೪೬೪; ಪಂಜಾಬು ೪೫೬; ಬರ್ಮ ೯೪; ಮಧ್ಯ ಸಂಸ್ಥಾನ ೧೫೫೯; ಹೈದರಾಬಾದ್ ೧೨೦೫; ಮೈಸೂರು ೩೬೭; ಮತ್ತು ಮಧ್ಯ ಇಂಡಿಯ ೪೦೩೩ ಮರಣಗಳಾಯಿತು.

ಮದ್ರಾಸ್ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳವರು ಹೊಸ ಬಂಗಾಳಾಧಿಪತ್ಯದ ಗವರ್ನರರಾಗಿ ಕಲ್ಕತ್ತೆಗೆ ಹೋಗುವ ಸಂದರ್ಭದಲ್ಲಿ ಕಲ್ಕತ್ತೆಯ ಮುನ್ಸಿಪಾಲಿಟಿಯವರು ಒಂದು ಬಹುಮಾನ ಪತ್ರವನ್ನು ತಯಾರಿಸುವರೆ ಆರು ಜನರು ಕೂಡಿದ ಒಂದು ಕಮಿಟಿಯನ್ನು ಏರ್ಪಡಿಸಿರುವರು.

ಬರೋಡೆಯ ಗಾಯಕವಾಡರು ತನ್ನ ರಾಜ್ಯಕ್ಕೆ ಹೊಸ ದಿವಾನರನ್ನು ಹುಡುಕುತ್ತಿರುವರೆಂದೂ ಈಚೆಗೆ ಮೈಸೂರು ಮಾಜಿ ದಿವಾನರಾದ ಮೆ| ವಿ. ಪಿ. ಮಾಧವರಾಯರನ್ನು ತನ್ನಲ್ಲಿಗೆ ಆಮಂತ್ರಿಸಿ ಬಹಳ ಹೊತ್ತು ಮಾತುಕಥೆ ನಡಿಸುತ್ತಿದ್ದರೆಂದೂ ಟ್ರಿಬ್ಯೂನ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬಂಗಾಳದಲ್ಲಿ ಕಾರ್ಮಿಖಯೆಲ್ ಪ್ರಭುಗಳವರ ಮಿಲಿಟರಿ ಸೆಕ್ರೆಟರಿಯವರಾಗಿ ಮೇಜರ್ ಹ್ಯೂಜ್ ಬೇಟ್‍ಮೇನ್ ಎಂಬವರು ನೇಮಿಸಲ್ಪಡುವರು. ಕಾರ್ಮಿಖಯೆಲ್ ಪ್ರಭುಗಳವರ ಪತ್ನಿಯವರೂ ಮಿಸೆಸ್ ಕಾರ್ಮಿಖಯೆಲ್, ಗವರ್ನರರ ಸೋದರ ಸೊಸೆಂದಿಯರೂ ಗವರ್ನರರೊಂದಿಗೆ ಕಲ್ಕತ್ತೆಗೆ ಹೋಗುವರು. ಮೇಜರ್ ಬೇಟ್‍ಮೇನರವರು ತಾ. ೧೩ರಲ್ಲು ಕಲ್ಕತ್ತೆಯಿಂದ ಮದ್ರಾಸಿಗೆ ಹೊರಟಿರುವರು. ಹಿಂತೆರಳುವಾಗ ಕಾರ್ಮಿಖಯೇಲ್ ಪ್ರಭುಗಳವರಪತ್ನಿಯವರು ಇವರೊಂದಿಗೆ ಕಲ್ಕತ್ತೆಗೆ ಹೋಗಿ ಸ್ವಲ್ಪ ಸಮಯ ವೈಸರಾಯರವರ ಅತಿಥಿಗಳಾಗಿರುವರು. ಕಲ್ಕತ್ತೆಯಲ್ಲಿ ಕಾರ್ಮಿಖಯೇಲ್ ಪ್ರಭುಗಳ ಖಾಸಗಿ ಸೆಕ್ರಟರಿಯು ಯಾರೆಂಬುದು ಇನ್ನೂ ನಿಶ್ಚಯವಾಗಲಿಲ್ಲ.

ಈಚೆಗೆ ಕಲ್ಕತ್ತೆಗೆ ಬಂದು ತಲಪಿದ ಒಂದು ಜರ್ಮನ್ ಹಡಗದ ಮುಖ್ಯ ಹುದ್ದೆದಾರನು ತನ್ನ ಹಡಗವು ನ್ಯೂಯೋರ್ಕು ಪಟ್ಟಣದಿಂದ ಕಲ್ಕತ್ತೆಗೆ ಬರುವಾಗ ಅತ್ಯಾಂತಿಕ

ಸಾಗರದಲ್ಲಿ ಅಲೆದಾಡುತ್ತಿದ್ದ ಎರಡು ದೋಣಿಗಳು ಕಾಣ ಸಿಕ್ಕಿದವು. ಈ ದೋಣಿಯಲ್ಲಿ ೭ ಬ್ರಿಟಿಷ್ ನಾವಿಕರೂ ೧೫ ಚೀನಿಯರೂ ಇದ್ದರು. ಅಮೇರಿಕದ ಚೆಸ್‍ಪೆಕ್ ಎಂಬ ಹಡಗವು ಒಡದು ಹೋದ್ದರಿಂದ ಆ ಹಡಗದಲ್ಲಿದ್ದ ಆಫೀಸರರೂ ಕಲಾಸಿಗಳೂ ಈ ದೋಣಿಯಲ್ಲಿ ಇಳಿದು ೮ ದಿವಸಗಳ ವರೆಗೆ ದೋಣಿಯಲ್ಲಿಯೇ ಇದ್ದು ದಿಕ್ಕು ತೋರದೆ ಸಮುದ್ರದಲ್ಲಿ ಅತ್ತಿತ್ತ ಸಂಚಾರ ಮಾಡುತ್ತಿದ್ದರು. ಒಡದುಹೋದ ಚೆಸ್‍ಪೆಕ್ ಹಡಗದ ಮುಖ್ಯ ಹುದ್ದೆದಾರನೂ ಇತರ ನಾಲ್ವರೂ ಬಹಳವಾಗಿ ಘಾಯಪಟ್ಟಿದ್ದರು. ಇವರನ್ನು ದೋಣಿಯಿಂದ ಎತ್ತಿ ೪ ದಿವಸಗಳ ನಂತರ ಮುಖ್ಯ ಹುದ್ದೆದಾರನು ಮೃತಪಟ್ಟನು. ಸಂರಕ್ಷಿಸಲ್ಪಟ್ಟ ಇತರ ನಾವಿಕರನ್ನು ಜಿಬ್ರಾಲ್ಟರಿನಲ್ಲಿ ಇಳಿಸಿದೆವು. ಚೆಸ್‍ಪೆಕ್ ಹಡಗದ ಎರಡನೇ ಹುದ್ದೆದಾರನೂ ೩೮ ಚೀನಿಯರೂ ಮತ್ತೊಂದು ದೋಣಿಯಲ್ಲಿರುವರು. ಅವರ ಅಂತ್ಯ ಏನಾಯಿತೆಂದು ಇನ್ನೂ ತಿಳಿಯಲಿಲ್ಲ ಎಂಬ ದುಃಖಕರ ವಾರ್ತೆ ತಂದಿರುವರು.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಸರಕಾರದ ನ್ಯಾಯವಿಧಾಯಕ ಸಭೆಯ ಮೆಂಬರರಾಗಿರುವ ಮೆ| ಕೇಸ್ಲ್ – ಸ್ಟುವಾರ್ಟರವರು ರಜೆ ಮೇಲೆ ಶೀಮೆಗೆ ತೆರಳುವುದರಿಂದ ಇವರ ಬದಲಿಗೆ ದಿವಾನ್ ಬಹದ್ದೂರು ಅಧಿನಾರಾಯಣ ಬಿ. ಎ.ರವರು ನ್ಯಾಯವಿಧಾಯಕ ಸಭೆಯ ಮೆಂಬರರಾಗಿ ನಿಯಮಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ. ಮದ್ರಾಸ್ ಗವರ್ನರರಾಗಿದ್ದ ಲೊಲೆ ದೊರೆಗಳ ಕಾಲದಲ್ಲಿ ಹೊಸ ರಾಜ್ಯಭಾರ ಮಾರ್ಪಾಟಗಳು ಆದಂದಿನಿಂದ ಮದ್ರಾಸ್ ಸಂಸ್ಥಾನದ ಕೌನ್ಸಿಲಿನಲ್ಲಿ ಮಾತ್ರ ಹುದ್ದೆದಾರರಲ್ಲದ ಮೆಂಬರರ ಸಂಖ್ಯೆಯು ಕಮ್ಮಿಯಾಗಿದ್ದು ಹುದ್ದೆದಾರರಾದ ಮೆಂಬರರೇ ಹೆಚ್ಚಾಗಿ ನಿಯಮಿಸಲ್ಪಟ್ಟಿದ್ದರು. ಆದರೆ ನಮ್ಮ ಸಂಸ್ಥಾನದ ಈಗಿನ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳು ಅಧಿನಾರಾಯಣಯ್ಯನವರನ್ನು ಕೌನ್ಸಿಲಿಗೆ ನೇಮಿಸಿದ್ದರಿಂದ ಹುದ್ದೆದಾರಲ್ಲದ ಮೆಂಬರರನ್ನು ಹೆಚ್ಚಾಗಿ ಸೇರಿಸುವ ಕುತೂಹಲವು ಇವರಲ್ಲಿ ಇದೆ ಎಂದು ತಿಳಿದು ಸಂತೋಷ ಪಡುತ್ತೇವೆ.

ತಿನ್ನವೆಲ್ಲಿ ಹಿಂದೂ ಕಾಲೇಜಿನಲ್ಲಿ ಕಳೆದ ವಾರ VI ಫೋರ್ಮಿನ ವಿದ್ಯಾರ್ಥಿಗಳು ಕ್ಲಾಸಿನಲ್ಲಿ ಅವಿಧೇಯರಾಗಿ ನಡೆದದ್ದರಿಂದ ಶಾಲಾ ಮುಖ್ಯೋಪಾಧ್ಯಾಯರು ಪ್ರತಿ ಒಬ್ಬ ವಿದ್ಯಾರ್ಥಿಗೆ ಒಂದೊಂದು ರೂಪಾಯಿ ಜುರುಮಾನೆ ವಿಧಿಸಿದರು. ವಿದ್ಯಾರ್ಥಿಗಳೆಲ್ಲರೂ ಒಟ್ಟಾಗಿ ಜುರುಮಾನೆ ಕೊಡಲಾರೆವೆಂದು ಒಂದೆರಡು ದಿನ ಶಾಲೆಗೆ ಬರಲಿಲ್ಲ. ನಂತರ ಕೆಲವು ವಿದ್ಯಾರ್ಥಿಗಳು ಜುರುಮಾನೆ ಕೊಟ್ಟು ಒಳಬಂದರು. ಇದರಿಂದ ಇತರ ವಿದ್ಯಾರ್ಥಿಗಳೂ ಜುರುಮಾನೆ ಕೊಡಬೇಕಾಯಿತು. ನಂತರ ಒಂದು ದಿನ ಶಾಲೆಯ ಪರಿಶೋಧನಾ ಕೋಣೆಯಲ್ಲಿ ಕೆಲಸ ನಡೆಯುತ್ತಿರುವಾಗ ಕೆಲವು ವಿದ್ಯಾರ್ಥಿಗಳು ಸಲ್ಫಾರಿಕ್ ಎಸಿಡ್ ಎಂಬ ದ್ರವವನ್ನು ತೆಗೆದು ಮೊದಲಾಗಿ ಜುರುಮಾನೆ ಕೊಟ್ಟ ವಿದ್ಯಾರ್ಥಿಗಳ ಮೇಲೆ ಚೆಲ್ಲಿದರು. ದೈವವಶಾತ್ ಹುಡುಗರಿಗೆ ಹೆಚ್ಚಿನ ಅಪಾಯವಾಗಲಿಲ್ಲ. ಇದರಿಂದ ಮುಖ್ಯೋಪಧ್ಯಾಯರು ಈ ವಿದ್ಯಾರ್ಥಿಗಳನ್ನು ಶಾಲೆಯಿಂದ ಹೊರವಡಿಸಿರುವರೆಂದು ತಿಳಿಯುತ್ತೇವೆ.

ಮಂಗಳೂರಿನ ಮೆ| ಆಗುಸ್ತಿನ್ ಅಲೆಕ್ಷಂದರ್ ಟೇಲಿಸ್ ಎಂಬವರು ೧೮ ವರ್ಷಗಳಿಂದ ಅಫ್ರೀಕ, ಅರ್ಗೆಂಟಿನ್ ರಿಪಬ್ಲಿಕ್ ಎಂಬೀ ದೇಶಗಳಲ್ಲಿದ್ದು ಪೆಬ್ರವರಿ ತಾ. ೯ಕ್ಕೆ ಪುನಃ ಹಿಂದೂಸ್ಥಾನಕ್ಕೆ ಹಿಂತೆರಳಿ ತೆತುಕುಡಿ ಬಂದರದಲ್ಲಿ ಇಳಿದರು. ಇವರನ್ನು ಕಸ್ಟಮ್ ಅಪೀಸಿನಲ್ಲಿ ಪರಿಶೋಧನೆ ಮಾಡಿದಾಗ ತನ್ನಲ್ಲಿ ಕೋವಿ ಇತ್ಯಾದಿ ಆಯುಧ ಸಾಹಿತ್ಯಗಳೇನೂ ಇಲ್ಲವೆಂದರು. ಆದರೆ ಕಸ್ಟಮ್ ಹುದ್ದೆದಾರರು ಜಡ್ತಿಮಾಡಿದಾಗ ಅವನಲ್ಲಿ ಒಂದು ರಿವೋಲ್ವರ್ ಮತ್ತು ಕೆಲವು ತೋಟೆಗಳು ಸಿಕ್ಕಿದವು. ಈ ಕಾರಣದಿಂದ ತಿನ್ನವೆಲ್ಲಿ ಸೆಶ್ಶನ್ ಜಡ್ಜರು ಆತನಿಗೆ ೪೦ ರೂಪಾಯಿ ಜುರುಮಾನೆ ವಿಧಿಸಿದರು.

ಚೆಂಗಲ್ಪಟ್ಟ್ ಜಿಲ್ಲೆಯ ಆಕ್ಟಿಂಗ್ ಪೋಲೀಸ್ ಸುಪರಿಂಟೆಂಡೆಂಟರಾದ ಮೆ| ಇ. ಎಲ್, ಸಿನ್ನರ್ ಎಂಬವರು ಸೆಂಟ್ ತೋಮಸ್ ಮೌಂಟ್ ಪೋಲೀಸ್ ಸ್ಟೇಶನಿನ ಒಬ್ಬ ಹೆಡ್ ಕನ್‍ಸ್ಟೇಬಲನು ಹಣೆಯಲ್ಲಿ ಬೊಟ್ಟು ಹಾಕಿ ಕೊಂಡದಕ್ಕಾಗಿ ಆತನನ್ನು ನಾಲ್ಕನೇ ಗ್ರೇಡಿಗೆ ತಗ್ಗಿಸಿದರು. ಈ ಸಂಗತಿಯು ಸಮಂಜಸವಾದ್ದಲ್ಲವೆಂಬದಾಗಿ ಆಯಾ ವರ್ತಮಾನ ಪತ್ರಿಕೆಗಳಲ್ಲಿ ಟೀಕಿಸಿತ್ತು. ಮದ್ರಾಸ್ ಸರಕಾರದವರು ಈ ಸಂಗತಿಯನ್ನು ಪರಿಶೀಲಿಸಿ ಹೆಡ್‍ಕನ್‍ಸ್ಟೇಬಲನಿಗೆ ಪುನಃ ಆತನ ಮೊದಲಿನ ಗ್ರೇಡನ್ನೇ ಕೊಟ್ಟಿರುವರು.

ರಾವ್ ಬಹದ್ದೂರ್ ಕೆ. ವಿ. ಲಿಂಗಾಮ್ ಪಿಳ್ಳೆಯವರು ಮದ್ರಾಸ್ ಪ್ರೆಸಿಡೆನ್ಸಿ ಪೋಸ್ಟು ಮಾಸ್ಟರರಾಗಿ ನೇಮಿಸಲ್ಪಟ್ಟಿರುವರು. ಭಾರತೀಯರಲ್ಲಿ ಈ ಹುದ್ದೆಗೆ ನೇಮಿಸಲ್ಪಟ್ಟವರಲ್ಲಿ ಇವರೇ ಮೊದಲನೆಯವರು.

ಮದ್ರಾಸ್ ಗವರ್ನರರಾಗಿ ಪ್ರಕೃತ ಸ್ಕೋತಾಳದ ಸೆಕ್ರಟರಿಯಾಗಿರುವ ಪೆಂಟ್ ಲೇಂಡ್ ಪ್ರಭುಗಳು ನೇಮಿಸಲ್ಪಟ್ಟಿದ್ಧಾರೆಂಬ ವಾರ್ತೆಗೆ ಆಧಾರವಿಲ್ಲವೆಂಬದಾಗಿ ಮದ್ರಾಸ್ ಮೈಲ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆದರೆ ಹಿಂದೂ ಪತ್ರಿಕೆಯು ಅವರು ಮದ್ರಾಸ್ ಗವರ್ನರರಾಗಿ ನೇಮಿಸಲ್ಪಡುವರೆಂಬ ಮಾತಿಗೆ ಹೆಚ್ಚಿನ ಆಧಾರವಿದೆ ಎಂದು ಹೇಳುವದು.

ಬುಧವಾರ ತಾ. ೧೪ರಲ್ಲು ಜರಗುವ ಮದ್ರಾಸ್ ನ್ಯಾಯ ವಿಧಾಯಕ ಸಭೆಯಲ್ಲಿ ಮದ್ರಾಸ್ ಸಂಸ್ಥಾನದಲ್ಲಿ ಸರಾಯ ಮತ್ತು ಸೇಂದಿ ಅಂಗಡಿಗಳ ಸಂಖ್ಯೆಯು ಏರುತ್ತಾ ಹೋಗುವುದರಿಂದ ಇದರಿಂದುಂಟಾಗುವ ಕೇಡನ್ನು ನಿವಾರಿಸುವುದಕ್ಕಾಗಿ ಪ್ರಯತ್ನ ಪಡಬೇಕೆಂಬ ಪ್ರಸ್ತಾಪವನ್ನು ಬಹುಮಾನಪಟ್ಟ ರಾವುಬಹದ್ದೂರು ಪಿ. ಟಿ. ಚೆಟ್ಟಿಯವರು ಇಡುವರು. ಈ ಸಂಬಂಧ ಎಲ್ಲಾ ಸೇಂದಿ ಮತ್ತು ಸರಾಯಿ ಅಂಗಡಿಗಳನ್ನು ರಾತ್ರಿ ೯ ಗಂಟೆಯ ಬದಲಿಗೆ ೮ ಗಂಟೆಗೆ ಮಚ್ಚಬೇಕು; ಈಗ ಅಂಗಡಿಯಲ್ಲಿ ಮಾರುವ ಸರಾಯಿಯ ಬಲವನ್ನು ಎರಡು ಡಿಗ್ರಿಗೆ ತಗ್ಗಿಸಬೇಕು; ಸರಾಯಿ ಮತ್ತು ಸೇಂದಿಯನ್ನು ೧೮ ವರ್ಷದ ಕೆಳಗಿನವರಿಗೆ ಮಾರಕೂಡದು ಎಂಬಿತ್ಯಾದಿ ಕಾನೂನನ್ನು ಜಾರಿಗೆ ತರಬೇಕೆಂಬಿತ್ಯಾದಿ ಸೂಚನೆಗಳನ್ನು ನ್ಯಾಯವಿಧಾಯಕ ಸಭೆಯ ಮುಂದಿಡುವರು. ಇನ್ನು ಸೆಕೆಂಡರಿ ಶಾಲೆ ಸಂಬಂಧ ಗ್ರೇಂಟಿನಲ್ಲಿ ತುಸ ಬದಲಾವಣೆಯನ್ನು ಮಾಡುವ ಪ್ರಸ್ತಾಪವೂ ಶ್ಯಾನುಭೋಗರಿಗೆ ಸಂಬಳವನ್ನು ಹೆಚ್ಚಿಸುವ ಪ್ರಸ್ತಾಪವೂ ನಡಿಯುವದು.

ಮದ್ರಾಸ್ ಕಾರ್ಯನಿರ್ವಾಹಕ ಸಭೆಗೆ ಜಸ್ಟಿಸ್ ಶಂಕರಾನ್ ನಾಯರರು ನೇಮಿಸಲ್ಪಡುವರೆಂಬದಾಗಿ ಬಂಗಾಳಿ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಪಾಲ್‍ಘಾಟ್ ವಿಕ್ಟೋರಿಯ ಕಾಲೇಜಿನ ಮೆ| ಎ. ಟಿ. ರಾಮಾನುಜಾಚಾರ್ಯ ಎಮ್. ಎ. ಎಲ್. ಟಿ. ಯರವರನ್ನು ಮುನ್ಸಿಪಾಲ್ ಚೇಯರ್‍ಮೇನರು ಕೆಲಸದಿಂದ ಬರತರಫು ಮಾಡಿದ ಸಂಬಂಧದಲ್ಲಿ ರಾಮಾನುಜಾಚಾರ್ಯರವರು ೫೫೦೦ ರೂಪಾಯಿಗೆ ಮಾನನಷ್ಟ ಪಿರ್ಯಾದಿ ಮಾಡಿದ್ದರೆಂದು ತಿಳಿಸಿತ್ತಷ್ಟೆ. ಈ ದಾವೆಯ ತನಖಿಯು ಬರುವ ಜುಲಾಯಿ ೧ನೇ ತಾರೀಕಿಗೆ ಪ್ರಾರಂಭವಾಗುವದು.

ಪಾಲ್‍ಘಾಟ್ ಮುನ್ಸಿಪಾಲ್ ಕೌನ್ಸಿಲಿಗೆ ಈ ತನಕ ಒನರರಿ ಚೇಯರ್‍ಮೇನರನ್ನು ಸರಕಾರದವರು ನೇಮಿಸುತ್ತಿದ್ದರು. ಆದರೆ ಈಗ ಸಂಬಳಕೊಟ್ಟು ಚೇಯರ್‍ಮೇನರನ್ನು ನೇಮಿಸುವ ಆಲೋಚನೆಯನ್ನು ಮಾಡಿರುವುದರಿಂದ ಪಾಲ್‍ಘಾಟಿನಲ್ಲಿ ತಾ. ೯ರಲ್ಲು ಇದನ್ನು ವಿರೋಧಿಸುವರೆ ಒಂದು ದೊಡ್ಡ ಸಾರ್ವಜನಿಕ ಸಭೆ ಕೂಡಿ ಸಂಬಳದ ಚೇಯರ್‍ಮೇನರನ್ನು ನೇಮಿಸಕೂಡದೆಂಬ ಜನರ ಅಭಿಪ್ರಾಯವನ್ನು ಗವರ್ನರರಿಗೆ ತಿಳಿಯ ಪಡಿಸುವ ಬಗ್ಗೆ ಒಂದು ಕಮಿಟಿ ನೇಮಿಸಲಾಯಿತು. ಸ್ಥಳೀಕ ಕಂಗ್ರೆಸ್ ಕಮಿಟಿಯ ಸೆಕ್ರಟರಿಯವರಾದ ಮೆ| ಕೆ. ನಟೇಸ ಐಯ್ಯರವರು ೭೦೦ಕ್ಕಿಂತಲೂ ಹೆಚ್ಚು ದಸ್ಕತುಗಳಿರುವ ಒಂದು ವಿಜ್ಞಾಪನಾ ಪತ್ರಿಕೆಯನ್ನು ಗವರ್ನರ್ ಪ್ರಭುಗಳಿಗೆ ಈ ಮೊದಲೇ ಕಳುಹಿಸಿಯದೆಂಬದಾಗಿ ತಿಳಿಯ ಪಡಿಸಿದರು.

ಕಲಿಕೋಟೆಗೆ ಚಿತ್ರಾಪುರ ಮಠದ ಶ್ರೀ ಸ್ವಾಮಿಗಳವರ ಆಗಮನವು. ಕಲಿಕೋಟೆಯ ದತ್ ಮತ್ತು ಕಂಪೆನಿಯ ಪ್ರೊಪ್ರೈಟರರಾದ ಮೆ| ರಾ. ಉದ್ಯಾವರ ಭವಾನಿರಾಯರ ಆಮಂತ್ರಣದಿಂದ ಹಿಂದೂಸ್ಥಾನದಲ್ಲಿರುವ ಸಾವಿರಾರು ಸಾರಸ್ವತ ಬ್ರಾಹ್ಮಣರ ಗುರುಗಳಾದ ಚಿತ್ರಾಪುರ ಮಠದ ಶ್ರೀ ಪರಮಹಂಸ ಶ್ರೀ ಪಾಂಡುರಂಗಾಶ್ರಮ ಸ್ವಾಮಿಗಳವರು ಛತ್ರಚಾಮರಾದಿಗಳೊಡಗೂಡಿ ಮಹಾ ಪರಿವಾರ ಸಹಿತವಾಗಿ ಕಳೆದ ಸೋಮವಾರ ರಾತ್ರಿ ಕಲಿಕೋಟೆಗೆ ಬಂದು ತಲಪಿದರು. ಅಗ್ಗಾಡಿಯು ಬಂದು ತಲಪುವ ಮುಂಚಿತವಾಗಿಯೇ ರೈಲ್ವೇ ನಿಲ್ದಾಣದಲ್ಲಿ ಕಲಿಕೋಟೆಯ ಎಲ್ಲಾ ಸಾರಸ್ವತರೂ ಇತರ ಹಿಂದುಗಳೂ ಕಿಕ್ಕಿರಿದು ನಿಂತಿದ್ದರು. ಆ ರಾತ್ರಿ ಕವಿದುಕೊಂಡಿದ್ದ ಗಾಂಡಾಂಧಕಾರವು ಮೆಸರ್ಸ್ ದತ್ ಕಂಪೆನಿಯವರಿಂದ ಒದಗಿಸಲ್ಪಟ್ಟ ಕಿಟ್‍ಸನ್ ದೀಪದ ಬೆಳಕಿನಿಂದ ನಿವಾರಣೆಯಾಯಿತು. ಅಗ್ಗಾಡಿಯು ತಲಪುತ್ತಲೇ ಬಹುಮಾನಾರ್ಥವಾಗಿ ಇಪ್ಪತ್ತು ಮದ್ದಿನ ತೋಪುಗಳು ಹಾರಿಸಲಾಯಿತ್ತಲ್ಲದೆ ಶ್ರೀ ಸ್ವಾಮಿಗಳವರು ಅಗ್ಗಾಡಿಯಿಂದ ಇಳಿಯುತ್ತಲೇ ಸ್ವಜಾತಿ ಪ್ರಮುಖ ಗೃಹಸ್ಥರು ಅವರನ್ನು ಸ್ವಾಗತಮಾಡಿಕೊಂಡರು. ತುಸ ಹೊತ್ತು ಸ್ವಾಮಿಯವರು ರೈಲ್ವೇ ಕಾಯುವ ಕೋಣೆಯಲ್ಲಿ ವಿಶ್ರಮಿಸಿಕೊಂಡಿದ್ದು ಪೂಜೆ ಮೊದಲಾದವುಗಳನ್ನು ಸ್ವೀಕರಿಸಿ ಹೊರಗೆ ಬರುತ್ತಲೇ ಹೊರಕಾಯುತ್ತಿದ್ದ ಜನಸಂದಣಿಯು ಸ್ವಾಮಿಯವರಿಗೆ ಸಂಭಾವನೆಯನ್ನಿತ್ತರು. ತರುವಾಯ ಸ್ವಾಮಿಯವರು ಮೆಸ್ಸರ್ ದತ್ ಕಂಪೆನಿಯ ಬ್ರೋಅಮ್ ಎಂಬ ಗಾಡಿಯಲ್ಲಿ ಆಸನರಾಗಿ ಮಹಾ ಮೆರವಣಿಗೆಯಲ್ಲಿ ಹೊರಟರು. ಮೆರವಣಿಗೆಯಲ್ಲಿ ಲೈಮ್ ಲೈಟ್, ಕಿಟ್ಸನ್ ಲೈಟ್ ಎಂಬ ದೀಪಗಳೂ ಮುಂದುಗಡೆ ಆನೆಗಳೂ ಇದ್ದು ನೋಟಕರಿಗೆ ಆಹ್ಲಾದವನ್ನುಂಟು ಮಾಡುವುದಾಗಿತ್ತು. ರಾತ್ರಿ ೧೦ ಗಂಟೆಯಾಗಿದ್ದರೂ ಎಲ್ಲಾ ಅಂಗಡಿಗಳೂ ಮನೆಗಳೂ ತೆರದಿದ್ದು ಹಿಂದುಗಳು ಅತ್ಯಾತುರದಿಂದ ಗುಂಪುಕೂಡಿ ಸ್ವಾಮಿಗಳವರ ಆಗಮನವನ್ನು ಎದುರುನೋಡುತ್ತಿದ್ದರು. ಸ್ವಾಮಿಗಳವರು ಉಳಕೊಂಡ ಮೆ| ಭವಾನಿರಾಯರ ಗೃಹವು ಮಕರ ತೋರಣಗಳಿಂದ ಶೃಂಗರಿಸಲ್ಪಟ್ಟಿದ್ದಾಗಿ ಕಂಗೊಳಿಸುತ್ತಿತ್ತು. ಮೆರವಣಿಗೆಯು ಭವಾನಿರಾಯರ ಗೃಹಕ್ಕೆ ತಲಪುತ್ತಲೇ ಸ್ವಾಮಿಗಳವರು ರೇಶ್ಮೆಯಿಂದ ಕಸೂತಿ ತೆಗೆಯಲ್ಪಟ್ಟ ಅಂದವಾದ ಒಂದು ಸಿಂಹಾಸನದಲ್ಲಿ ಆಸನರಾದರು. ಸಿಂಹಾಸನದ ವರೆಗೆ ನೆಲದ ಮೇಲೆ ಹಾಸಿದ್ದ ಜಿನ್ನದ ವಸ್ತ್ರದ ಮೇಲೆ ನಡಕೊಂಡು ಹೋದರು. ನಂತರ ಭವಾನಿರಾಯರು ಸ್ವಾಮಿಗಳವರ ಪಾದ ಪೂಜೆಯನ್ನು ಮಾಡಿದರು. ಬಳಿಕ ಸ್ವಾಮಿಗಳವರ ಶಿಷ್ಯರಲ್ಲಿ ಒಬ್ಬರು ಕೂಡಿದ ಮಹಾ ಜನಸಂದಣಿಗೆ 'ಭಕ್ತಿ' ಎಂಬದನ್ನು ಕುರಿತು ಧರ್ಮವ್ಯಾಖ್ಯಾನ ಮಾಡಿದರು. ಕಲಿಕೋಟೆ ಟೌನ್ ಪೋಲೀಸ್ ಸ್ಟೇಶನಿನವರೂ ಸಾರ್ಜೆಂಟರೂ ಕೂಡಿದ್ದ ಜನರ ಗುಂಪಿನಲ್ಲಿ ಏನಾದರೂ ತೊಂದರೆಗಳುಂಟಾಗದ ಹಾಗೆ ಪ್ರಯತ್ನ ತಕ್ಕೊಂಡಿದ್ದರಲ್ಲದೆ ಡಿಸ್ಟ್ರಿಕ್ಟ್ ಟ್ರೇಪಿಕ್ ಸುಪರಿಂಟೆಂಡೆಂಟರವರಾದ ಮೆ. ಕೊಕ್ರೆಪ್ಪರವರು ಸ್ವಾಮಿಗಳವರ ಆಗಮನವನ್ನು ಕಾಯುತ್ತಿದ್ದ ಹಿಂದೂ ಜನರನ್ನು ಮಾಫಿಯಾಗಿ ರೈಲ್ವೇ ನಿಲ್ದಾಣಕ್ಕೆ ಹೋಗಬಿಟ್ಟು ಸ್ವಾಮಿಗಳ ಮತ್ತು ಅವರ ಶಿಷ್ಯವರ್ಗದವರ ಕೃತಜ್ಞತೆಗೆ ಪಾತ್ರರಾದರು. ಸ್ವಾಮಿಗಳವರ ಆಗಮನಕ್ಕೆ ತಗಲಿದ ಎಲ್ಲಾ ಖರ್ಚನ್ನು ಮೆ| ಭವಾನಿರಾಯರೇ ಮಾಡಿ ತನ್ನ ಭಕ್ತಿ ಶ್ರದ್ಧೆಯನ್ನೂ ತ್ಯಾಗಶೀಲತೆಯನ್ನೂ ತೋರ್ಪಡಿಸಿದರು. ರಾ| ಭವಾನಿರಾಯರು ತಾ. ೭ರಲ್ಲು ವಿಪರಿಮಿತ ಖರ್ಚು ತಗಲುವ ಕನಕಾಭಿಷೇಕವನ್ನು ಮಾಡಿ ಬಹುಮಾನಾರ್ಥವಾಗಿ ಅನೇಕ ಹಿಂದುಗಳಿಗೆ ದಿನಾಲೂ ಭೋಜನ ಕೊಡಿಸಿದರು. ರಾ| ಭವಾನಿ ರಾಯರಿಗೆ ಈ ಸಂಬಂಧ ಸುಮಾರು ೩೦೦೦ ರೂಪಾಯಿ ಖರ್ಚು ತಗಲಿತೆಂದು ತಿಳಿಯುತ್ತೇವೆ. ಒಟ್ಟಾರೆ ಸ್ವಾಮಿಗಳವರ ಸ್ವಾಗತವು ಬಹಳ ವಿಜೃಂಭಣೆಯಿಂದ ನಡಿಯಿತ್ತಲ್ಲದೆ ಇಂಥಾ ಸಂಭಾವನೆಯು ಇಲ್ಲಿ ಗುರುಗಳವರಿಗೆ ಈ ವರೆಗೆ ಕೊಡಲ್ಪಡಲಿಲ್ಲ. ಸ್ವಾಮಿಗಳವರಿಗೆ ಸುಮಾರು ೭೦ ವರುಷ ಪ್ರಾಯವಾದೀತಾದರೂ ಚುರುಕುಳ್ಳವರಾಗಿಯೂ ಅಗಲವಾದ ಹಣೆಯಿದ್ದು ಚಿಚ್ಛಕ್ತಿಯ ಕಣ್ಣುಗಳುಳ್ಳವರಾಗಿಯೂ ಮಹಾತ್ಮ್ಯರಿಗೆ ತಕ್ಕುದಾದ ಗಾಂಭೀರ್ಯವುಳ್ಳವರಾಗಿಯೂ ತೋರುವರು. ಇವರ ಪಾಂಡಿತ್ಯವು ಎಷ್ಟೆಂಬದು ಸರ್ವರಿಗೆ ತಿಳಿದ ಸಂಗತಿಯೇ ಆಗಿದೆ.

ಶ್ರೀ ಸ್ವಾಮಿಗಳವರು ತಾ. ೮ನೇ ಬ್ರಹಸ್ಪತಿವಾರ ತನ್ನ ಪಯಣವನ್ನು ಕಾಸರಗೋಡಿಗೆ ಮುಂದರಿಸಿದರು.

ದಕ್ಷಿಣ ಕನ್ನಡ.

NOTICE.

"Applications are invited from qualified persons for auditing the accounts of the Canara Banking Corporation, Udipi (Ltd.) for the 9 months ending 15th March next. Apply with testimonials stating terms.

Udipi 15th February 1912.

S. Ananda Rau,
Secretary.

ನೋಟೀಸು.

ಮಂಗಳೂರಲ್ಲಿರುವ ವಕೀಲ ರಂಗಪ್ಪ ಭಂಡಾರಿಗಳ ಕ್ಲಾರ್ಕ ಬಂಟ್ವಾಳ ವಿಟ್ಟಪ್ಪ ಕಮ್ತಿಯು ಇದರ ಮೂಲಕ ತಿಳಿಯ ಪಡಿಸುವದೇನಂದರೆ—ಮೃತ ಪಟ್ಟ ದರ್ಜಿ ಗಿರಿಜನ್ಯಾಕನ ವಾರಿಸ್ದಾರರು ದಾಮಾಶ್ಯಾ ಮೇರೆಗೆ ಅವನ ಸಾಲ ಸಂದಾಯದ ಕುರಿತು ಮಸ್ಕೂರೆ ನನಗೆ ಲಿಕ್ವಿಡೆಟರನಾಗಿ ನೇಮಿಸಿ ಕಂಪೋಜೀಶನ್ ಡೀಡ್ ಬರಕೊಟ್ಟಿರುವದರಿಂದ ಸದರಿ ಗಿರಿಜನ್ಯಾಕನ ಲೇಹೆದಾರರು ಅವರವರಿಗೆ ಸಲತಕ್ಕ ಹಣಗಳ ತಪಶೀಲು ವ ದಾಕ್ಲೆ ಸಮೇತ ಇದೇ ಇಸವಿ ಮಾರ್ಚಿ ತಾ. ೫ರ ಒಳಗೆ ನನಗೆ ತಿಳಿಸಿ ಸಮಾಧಾನ ಪಡಿಸತಕ್ಕದ್ದು. ಈ ವರೆಗೆ ಹಾಗೆ ದಾವೆ ಹೇಳಿ ಸಮಾಧಾನ ಪಡಿಸಿದ ಆತನ ಲೇಹೆದಾರರಿಗೆ ಆತನ ಸೊತ್ತುಗಳಿಂದ ವಸೂಲಾದ ಐವಜನ್ನು ದಾಮಾಶ್ಯಾ ಪ್ರಕಾರ ೧೯೧೫ನೇ ಇಸವಿ ಮಾರ್ಚಿ ತಾ. ೧೬ರಲ್ಲು ಹಂಚಿ ಕೊಡೋಣಾಗುವದು. ನಂತರ ದಾವೆ ಹೇಳಿದರೆ ಈ ಲೇಹೆದಾರರ ಸಾಲ ಸಲ್ಲಿಸುಸುವರೆ ನಾನು ಜವಾಬ್ದಾರನಲ್ಲ ತಿಳಿದಿರುವದು.

ಮಂಗಳೂರು. ತಾ. 15 – 2 – 1912.

B. Vittappa Kamath
Liquidator.

ನನ್ನ ಬಾಬ್ತು ಈ ಕೆಳಗೆ ಕಾಣಿಸಿದ ನಂಬ್ರದ ಮುಂಬಾಯಿ ೧೦ ರೂಪಾಯಿ ಬಾಬ್ತು ನೋಟು ೧ರ ಬಲಕೈಯ ತುಂಡು ಒಂದು ಕಳೆದು ಹೋಗಿಯದೆ. ಆದ್ದರಿಂದ ಅದು ಯಾರಿಗಾದರೂ ಸಿಕ್ಕಿದ್ದಲ್ಲಿ ತಂದುಕೊಡುವವರಿಗೆ 0-8-0 ಇನಾಮು ಕೊಡುವರೇ ಸಿದ್ಧನಾಗಿದ್ದೇನೆ.

Bombay. 10. S. A. / 99 51599 / 17-2-6

A. Venkojee Rau.

ಮಂಗಳೂರು. ಕಳೆದ ವಾರ ಮುನ್ಸಿಪಾಲಿಟಿಯಲ್ಲಿ ೭ ಪ್ಲೇಗು ಮರಣಗಳಾದವು.

ಗೋಳಿಕಟ್ಟೆ ವಾರ್ಡಿನ ಮುನ್ಸಿಪಾಲ್ ಕೌನ್ಸಿಲರ ಚುನಾವಣೆಯಲ್ಲಿ ಇಬ್ಬರು ಉಮೇದ್ವಾರರ ಪೈಕಿ ಮ. ರಾ. ವಾಸುದೇವ ಪೈಗಳು ಅರ್ಜಿ ವಾಪಾಸು ಪಡಕೊಂಡದ್ದರಿಂದ ಮ. ರಾ. ರಾ. ಕುಡ್ವಿ ರಘುನಾಥ ಶ್ಯಾನಭೋಗರೊಬ್ಬರೇ ಸದರಿ ವಾರ್ಡಿನ ಉಮೇದ್ವಾರರಾಗಿರುವರು.

ಇದೇ ತಿಂಗಳ ಆಖೈರಿಯೊಳಗೆ ಇಲ್ಲಿಗೆ ಆಕ್ಟಿಂಗ್ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವ ಮೆ. ಮೊಸ್ಕಾರ್ಡಿ ದೊರೆಗಳು ಇಲ್ಲಿಗೆ ಬಂದು ತಲಪುವುದರಿಂದ ಕುಂದಾಪುರತ್ತ ಕಡೆ ಜಮಾಬಂದಿ ಬಗ್ಗೆ ಹೋಗಿದ್ದ ಮೆ. ಡೊಯಿಗ್ ದೊರೆಗಳು ಜಮಾಬಂದಿ ಕೆಲಸವನ್ನು ಸದ್ಯಕ್ಕೆ ಬಾಕಿ ಇಟ್ಟಿರುವರೆಂಬದಾಗಿ ಕೇಳುತ್ತೇವೆ. ಕಲೆಕ್ಟರರೊಡನೆ ಹೋಗಿದ್ದ ಹಜೂರು ಶಿರಸ್ತೆದಾರರು ನಿನ್ನೆ ಸಾಯಂಕಾಲ ಇಲ್ಲಿಗೆ ಬಂದು ತಲಪಿರುವರು.

ಕಲೆಕ್ಟರ ದೊರೆಗಳವರು ವಂಡ್ಸೆ ಮೊಕ್ಕಾಮಿನ ಜಮಾಬಂದಿಯನ್ನು ತೀರಿಸಿ ತಾ. ೧೯ಕ್ಕೆ ಬರುವರಾಗಿಯೂ ಹೊಸ ಕಲೆಕ್ಟರ ದೊರೆಗಳವರು ತಾ. 22ಕ್ಕೆ ಇಲ್ಲಿಗೆ ತಲಪುವರಾಗಿಯೂ ಕೇಳುತ್ತೇವೆ.

ಕ್ರಿಮಿನಲ್ ಜ್ಯುಡಿಶ್ಯಲ್ ಟೆಸ್ಟ ಹ್ಯಾಯರ್ ಗ್ರೇಡ ಪರೀಕ್ಷೆಯಲ್ಲಿ ರಾ. ಮಿಜಾರ ರಾಮಕೃಷ್ಣ ಪೈಗಳವರು ತೇರ್ಗಡೆ ಪಟ್ಟಿರುವರು.

ಕಲೆಕ್ಟರ ಆಫೀಸಿನ ಕ್ಲಾರ್ಕ ಪೆ. ವಿಕ್ಟರ್ ಸಾಲ್ಡಾಂಞರವರು ರೆವಿನ್ಯೂ ಟೆಸ್ಟ ಹ್ಯಾಯರ್ ಗ್ರೇಡಿನಲ್ಲಿ ಪಾಸಾಗಿರುವರು.

ಕಾಸರಗೋಡು ಸಬ್ ಮೆಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಮನೆನುಗ್ಗಿದ ಮೊಕದಮೆಯು ಸೋಮವಾರ ತನಖಿಗೆ ಪ್ರಾರಂಭವಾಗಿರುವುದು. ಇದರಲ್ಲಿ ಸ್ಥಾನಿಕ ರಾಮ, ಅಪ್ಪಯ, ನೇಮು ಸೆಟ್ಟಿ ಎಂಬೀ ಮೂವರು ಕಳೆದ ದಶಂಬರ ತಾ. ೨ರಲ್ಲು ಪಾತುರು ಗ್ರಾಮದ ಅಬ್ಬಕ್ಕೆ ಎಂಬವಳ ಮನೆನುಗ್ಗಿ ಜಿನ್ನಾಭರಣಗಳನ್ನು ಕದ್ದದಾಗಿರುತ್ತದೆ. ಮೊದಲನೇ ಅಪರಾಧಿಯು ಹಳೇ ಅಪರಾಧಿಯಾಗಿರುತ್ತಾನೆ.

ಇಲ್ಲಿಯ ಕೆನರಾ ಬೇಂಕಿನ ಅಧ್ಯಕ್ಷರಾಗಿ ದಿವಾನ್ ಬಹದ್ದೂರು ವೆಂಕಟ್ರಮಣ ಪೈಗಳವರೂ ಖಜಾನ್ಜಿಯವರಾಗಿ ರಾ| ವರ್ಕಾಡಿ ರಾಮರಾಯರೂ ಆರಿಸಲ್ಪಟ್ಟಿರುವರು. ಡಿರೆಕ್ಟರರ ಪೈಕಿ ರಾ| ಮಂಜೇಶ್ವರ ಮುಕುಂದರಾಯರು ರಾಜಿ ಕೊಟ್ಟಿರುವುದರಿಂದ ಇವರ ಬದಲಿಗೆ ರಾ| ಅಮ್ಮೆಂಬಳ ವಾಸುದೇವ ಪೈಗಳವರು ಆರಿಸಲ್ಪಟ್ಟಿರುವರು.

ಕೊಯಮುತ್ತೂರು ಕಡೆಯಿಂದ ಬಂದಿದ್ದ ಒಬ್ಬ ಕಿಂಡರ್ ಗಾರ್ಟೆನ್ ವಿದ್ಯೆ ಮತ್ತು ಇಸ್ಪೀಟ್ ಆಟಗಳ ಚಮತ್ಕಾರ ಬಲ್ಲಂಥಾ ಒಬ್ಬರು ಇಲ್ಲಿಯ ಟ್ರೈನಿಂಗ್ ಶಾಲೆಗಳಲ್ಲಿಯೂ ಇತರ ಶಾಲೆಗಳಲ್ಲಿಯೂ ತನ್ನ ಚಮತ್ಕಾರಗಳನ್ನು ತೋರಿಸುತ್ತಿರುವರು.

ನಾಲ್ಕೈದು ದಿವಸಗಳ ಹಿಂದೆ ರಾ| ಪಾಂಡುರಂಗ ಮಲ್ಯರೆಂಬವರು ಕದ್ರಿ ಗುಡ್ಡೆಗೆ ಸ್ನಾನ ಮಾಡಲಿಕ್ಕೆ ಹೋಗಿದ್ದವರು ತನ್ನ ಅಂಗಿಯನ್ನು ಜಾರಿಸಿ ಕೆರೆಯ ಮೇಲೆ ಇಟ್ಟು ಸ್ನಾನ ಮಾಡುತ್ತಿರುವಾಗ ಯಾರೋ ಅವರ ಐದುವರೆ ರೂಪಾಯಿ ಸಹಿತ ಒಂದು ಪಕೇಟನ್ನೂ ಹದಿನೈದು ರೂಪಾಯಿ ಕ್ರಯದ ಒಂದು ಕಿಶೆಗಡಿಯಾರವನ್ನೂ ಶರ್ಟಿನ ಬೆಳ್ಳಿ ಗುಬ್ಬಿಯನ್ನೂ ಎತ್ತಿ ಹಾಕಿರುವರಂತೆ.

ಇಲ್ಲಿಯ ಬಜಾರ್ ಸ್ಕೂಲಿನ ಹೆಡ್‍ಮಾಸ್ಟರರಾಗಿರುವ ಮೆ| ಕ್ರಿಸ್ತಿಯಾನ್ ಎರ್ನೆಸ್ಟ್ ಎಂಬವರ ತಮ್ಮ ಕೆಪ್ಟನ್ ವಿಲಿಯಂ ಎರ್ನೆಸ್ಟ್ ಎಂಬವರು ಆರು ವರ್ಷಗಳ ಹಿಂದೆ ಸಲ್ವೇಶನ್ ಆರ್ಮಿಯವರಿಂದ ಕೈಗಾರಿಕೆ ಮತ್ತು ಧರ್ಮ ಶಾಸ್ತ್ರವನ್ನು ಕಲಿಯಲಿಕ್ಕೆ ಇಂಗ್ಲಾಂಡಿಗೆ ಕಳುಹಿಸಲ್ಪಟ್ಟಿದ್ದರು. ಇವರು ಇಂಗ್ಲಾಂಡಿನಲ್ಲಿ ಕೈಗಾರಿಕೆಯ ವಿದ್ಯೆಯಲ್ಲಿ ಉತ್ತೀರ್ಣರಾಗಿ ತನ್ನ ಅವಧಿಯನ್ನು ತೀರಿಸಿ ಅಮೇರಿಕ, ಸುಮಾತ್ರ, ಜಾವ ಮೊದಲಾದ ದೇಶಗಳನ್ನು ಸಂದರ್ಶಿಸಿ ಈಗ ಪುನಃ ಹಿಂದೂಸ್ಥಾನಕ್ಕೆ ಬಂದು ಹಿಮಾಲಯದ ಬಳಿಯಲ್ಲಿರುವ ರಾಮಪುರ ಎಂಬಲ್ಲಿ ಸಲ್ವೇಷನ್ ಆರ್ಮಿಯವರಿಂದ ಕೆಲಸಕ್ಕೆ ನೇಮಿಸಲ್ಪಟ್ಟಿರುವರು. ಕಳೆದ ವಾರ ಇಲ್ಲಿಗೆ ಚಿತ್ರೈಸಿ ಅಲ್ಲಲ್ಲಿ ಭಾಷಣಗಳನ್ನು ಕೊಡುತ್ತಲಿದ್ದಾರೆ.

ಒಬ್ಬ ಜೈನ ಬಾತ್ಮೀದಾರರಿಂದ:–ದಕ್ಷಿಣ ಕನ್ನಡ ಜಿಲ್ಲಾ ಜೈನ್‍ಸಭೆಯ ಪ್ರಥಮ ಅಧಿವೇಶನವು ಮ| ರಾ| ಮೂಡಾರು ಅಪ್ಪಾಯಿ ನೇಮಣ್ಣ ಹೆಗ್ಗಡೆಯರು ಜೀರ್ಣೋದ್ಧಾರ ಪೂರ್ವಕ ಮಾಡಿಸಿದ ಶ್ರೀ ನೇಮೀಶ್ವರ ಸ್ವಾಮಿ ಚೈತ್ಯಾಲಯದ ಪಂಚಕ ಕಲ್ಯಾಣೋತ್ಸವದ ಸಮಯ ಕಾರ್ಕಳದಲ್ಲಿ ಜರಗಿತು. ಈ ಸಭೆಗೆ ಹುಮ್ಮಚ್ಚ, ಮೂಡಬಿದ್ರೆ, ಕಾರ್ಕಳ ಮೊದಲಾದ ಮಠಗಳ ಹಲವು ಯತಿಶ್ರೇಷ್ಠರೂ ದಯ ಮಾಡಿಸಿದ್ದರು. ಈ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದ ಧರ್ಮಸ್ಥಳದ ರಾ| ಚಂದಯ್ಯ ಹೆಗ್ಗಡೆಯವರು ಜ್ವರದ ಕಾಯಿಲೆಯಲ್ಲಿದ್ದದರಿಂದ ಸಭೆಗೆ ಹಾಜರಾಗದಿದ್ದರೂ ಈ ಸಂದರ್ಭದಲ್ಲಿ ಆಯಾ ಗೃಹಸ್ಥರು ಕೊಟ್ಟ ಪಾರಮಾರ್ಥಿಕ ಮತ್ತು ಲೌಕಿಕ ವಿಷಯಗಳು ಗರ್ಭಿತವಾದ ಭಾಷಣಗಳು ಸಭಿಕರನ್ನು ಉತ್ತೇಜನಗೊಳಿಸಿತು. ಮುಂಬಾಯಿಯಲ್ಲಿರುವ ಜೈನ್ ಶ್ರಾವಿಕಾಶ್ರಮದಲ್ಲಿ ವಿದ್ಯಾರ್ಥಿನಿಯಾಗಿರುವ ಶ್ರೀ ದೇವಿಯಮ್ಮನವರು ಸ್ತ್ರೀ ವಿದ್ಯಾ ಸಂಬಂಧವಾಗಿ ಕೊಟ್ಟ ಭಾಷಣವು ಸುತ್ಯವಾದದ್ದೇ ಸೈ. ಕೂಡಿದ ಸಭೆಯಲ್ಲಿ ಚೈತಾಲಯಗಳಲ್ಲಿ ನಡಿಯುವ ಉತ್ಸವಗಳ ಸಮಯ ವೇಶ್ಯೆಯರ ನರ್ತನೆಯನ್ನು ಮಾಡಿಸ ಕೂಡದು; ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಜೈನ್ ಸಮಾಜದಲ್ಲಿರುವ ಅಳಿಯ ಸಂತಾನ ಕಟ್ಟಿನಿಂದ ಜೈನ ಸಮಾಜವು ದಿನೇ ದಿನೇ ಅಧೋಗತಿಯನ್ನು ಹೊಂದುತ್ತಿದೆಂಬದಕ್ಕೆ ಅನುಮಾನವಿಲ್ಲವಾದ್ದರಿಂದ ಈ ಪದ್ಧತಿಯಿಂದ ಜೈನರು ವಿಮುಕ್ತವಾಗುವಂತೆ ಯೋಜಿಸುವದು; ಜೈನ ಮಕ್ಕಳಲ್ಲಿ ವಿದ್ಯಾಭಿವೃದ್ಧಿಯನ್ನು ಮಾಡುವರೆ ನಾಲ್ವತ್ತು ಜೈನ ಮಕ್ಕಳು ಸಿಕ್ಕುವಂಥಾ ಸ್ಥಳಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಪ ಬೇಕಾಗಿಯೂ ವಿದ್ಯಾ ಪ್ರಚಾರಣಾ ಸಂಬಂಧ ಮೂಡಬಿದ್ರೆಯಲ್ಲಿ ಸ್ಥಾಪಿಸಿದ ವಿದ್ಯಾಫಂಡಿನಿಂದ ಮಧ್ಯಮ ತರದ ಒಂದು ಶಾಲೆಯನ್ನು ಸ್ಥಾಪಿಸಬೇಕೆಂಬಿತ್ಯಾದಿ ನಿರ್ಣಯಗಳು ಈ ಸಭೆಯು ಮುಂದಿಡಲ್ಪಟ್ಟು ಅನುಮೋದಿಸಲಾಯಿತು.

ಒಬ್ಬ ಬಾತ್ಮೀದಾರರಿಂದ:— ತಮ್ಮ ಕಳದ ಸಂಚಿಕೆಯಲ್ಲಿ ಬಲ್ಮಠ ಗೇಟನ್ನು ಬೆಳಿಗ್ಯೆ ೭ ಗಂಟೆಯಿಂದ ೭|| ಗಂಟೆಯ ವರೆಗೆ ತೆರೆದಿಡಬೇಕೆಂದು ಮುನ್ಸೀಫರು ಹುಕುಂ ಕೊಟ್ಟಿದ್ದಾರೆಂದು ತಿಳಿಸಿತ್ತಷ್ಟೆ. ಆದರೆ ಬುಧವಾರ ಬೆಳಿಗ್ಯೆ ನಾನು ನನ್ನ ಒಬ್ಬ ಸ್ನೇಹಿತನೊಡನೆ ಕಂಕನಾಡಿಗೆ ಹೋಗುತ್ತಿರುವಾಗ್ಯೆ ಆ ಗೇಟು ೧೦ ಗಂಟೆಗೇನೇ ಮುಚ್ಚಲ್ಪಟ್ಟಿದ್ದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಒಂದು ಜಟ್ಕಾ ಬಂಡಿಯು ಗೇಟಿನ ಹೊರಗೆ ನಿಂತಿತ್ತು. ಮುನ್ಸೀಫರು ಕೊಟ್ಟ ಹುಕುಮಿಗೆ ಕಾನೂನು ಕಾಯಿದೆಗಳನ್ನು ಚೆನ್ನಾಗಿ ಅರಿತಿರುವ ಜನರು ಅವಿಧೇಯರಾಗಿ ನಡಿಯುವುದೆಂದರೆ ಪರಮಾಶ್ಚರ್ಯವೇ ಸೈ. ಮೇಲಾಧಿಕಾರಿಗಳು ಈ ವಿಷಯ ತಕ್ಕ ನಿಗಾ ಕೊಡದಿರಲಾರರೆಂದು ನಂಬುತ್ತೇನೆ.

ಬಂಟವಾಳ. ತಾ. ೧೦ನೇ ಫೆಬ್ರವರಿ ಈ ದಿನ ಬೆಳಿಗ್ಯೆ ೮ ಗಂಟೆ ಹೊತ್ತಿಗೆ ಶ್ರೀ ವೆಂಕಟರಮಣ ದೇವಸ್ಥಾನದ ಕಡೆಯಿಂದ ಸ್ಥಾಪಿಸಲ್ಪಟ್ಟ ಸೆಕೆಂಡರಿ ಶಾಲೆಯ ವರುಷಾವಧಿಯ ರಿಪೋರ್ಟು ಓದುವ ವ ವಿದ್ಯಾರ್ಥಿಗಳಿಗೆ ಇನಾಮು ಹಂಚೋಣಾದ ಸಮಾರಂಭಕ್ಕೆ ನೆರೆದ ಸಭೆಗೆ ಆಮಂತ್ರಿತರಾಗಿ ಅಧ್ಯಕ್ಷರಾದ ಶ್ರೀಯುತ ಮಾಜಿ ಸಬ್ ಜಡ್ಜರಾದ ಸುಜೀರ ರಘುನಾಥಯ್ಯನವರು ಬರುತ್ತಲೆ ಪೇಟೆಯವರು ಹೂಮಾಲೆಗಳಿಂದಲೂ ವಾದ್ಯರವಗಳಿಂದಲೂ ಅವರನ್ನು ಇದಿರುಗೊಂಡು ದೇವಸ್ಥಾನಕ್ಕೊಯ್ದು ಅಲ್ಲಿಂದ ಶ್ರೀದೇವ ಪ್ರಸಾದಗಳನ್ನು ಕೊಟ್ಟು ಬಿಡಾರಕ್ಕೆ ಕಳುಹಿಸಿಕೊಟ್ಟರು. ಮಧ್ಯಾನ್ಹ ೪-೩೦ಕ್ಕೆ ಸರಿಯಾಗಿ ಭಂಡಾರ ಬೆಟ್ಟಿನ ವಿದ್ಯಾಲಯದ ಸಭಾಗ್ರಹದಲ್ಲಿ ಸುಮಾರು ೩೫೦ ಸದ್ಗ್ರಹಸ್ಥರು ನೆರೆದು ಬಂದಿದ್ದರು. ಸಮಯಕ್ಕೆ ಸರಿಯಾಗಿ ಅಧ್ಯಕ್ಷರೂ, ಮ.ರಾ.ರಾ. ಶ್ರೀಯುತ ಅಮ್ಮೆಂಬಳ ಶ್ರೀನಿವಾಸ ಪೈಗಳೂ, ರೈ ಬಹದ್ದೂರು ಗೋಪಾಲರಾಯರೂ, ಮಂಗಳೂರು ಕೆನರಾ ಹ್ಯಾಸ್ಕೂಲಿನ ಹೊಸ್ಟೆಲಿನಿಂದ ಸುಪರಿಂಟೆಂಡೆಂಟರೂ ವಿದ್ಯಾರ್ಥಿಯರೂ ಮುಂತಾಗಿಗ್ರಹಪ್ರವೇಶಿಸಿದೊಡನೆ ಅಲ್ಲಿ ಸ್ವಾಗತದ ಪದ್ಯವನ್ನು ೩ ಮಕ್ಕಳು ಹಾಡಿದರು. ಅಲ್ಲಿಂದ ಅಧ್ಯಕ್ಷರು ಪೀಠವನ್ನು ಏರಿದೊಡನೆ ಶಾಲಾ ಮೆನೇಜರರು (ಬಂಟವಾಳ ಶ್ರೀಯುತ ಸರ್ವೋತ್ತಮ ಬಾಳಿಗರು) ಶಾಲೆಯ ವರದಿಯನ್ನು ಓದಿ ಹೇಳಿದರು. ವರದಿಯಲ್ಲಿ ಹೇಗೆ ಕೀರ್ತಿಶೇಷ ಅ. ಸುಬ್ಬರಾಯರಂತಹ ಮಹನೀಯರ ಅಪೇಕ್ಷೆಯಿಂದ ಈ ದೇವಸ್ಥಾನದಿಂದ ರೂ. ೧೨,೦೦೦ ತೆಗೆದಿಡಲ್ಪಟ್ಟು ಅದರ ಬಡ್ಡಿಯಿಂದ ಇಲ್ಲಿಯ ವ ಆಜುಬಾಜಿನ ಹಳ್ಳಿಗಳ ವಿದ್ಯಾರ್ಥಿಗಳಿಗೆ ಹಲವರಿಗೆ ವೇತನಗಳನ್ನು ಕೊಟ್ಟು ವಿದ್ಯಾದಾನ ಮಾಡಲು ಉಪಕ್ರಮವಾಯಿತೆಂದೂ, ಸದ್ಯಕ್ಕೆ ಸೆಕಂಡರಿ ಶಾಲೆಯಲ್ಲಿ ಅಭ್ಯಾಸಿಸುವ ವಿದ್ಯಾರ್ಥಿಗಳಲ್ಲಿ ಶೇಕಡಾ ೭೦ರಂತೆ ಈ ಶಾಲೆಯಲ್ಲಿ ಇರುತ್ತವೆಂತಲೂ ಇಷ್ಟರ ವರೆಗೆ ಫಂಡಿಗೆ ೪೦೦ರೂಪಾಯಷ್ಟು ಖರ್ಚು ತಗಲಿತೆಂದೂ ತಿಳಿದುಬಂತು. ಶಾಲೆಯಲ್ಲಿ ಪ್ರಕೃತಕ್ಕೆ Iನಿಂದ IIIಫೋರ್ಮು ವರಿಗೆ ವರ್ಗಗಳು ಇದ್ದು ಸ್ಕೂಲ್‌ಫೈನಲ್ ವ ಮೆಟ್ರಿಕ್ಯುಲೇಶನ್ ಕಲಿಯುವ ವಿದ್ಯಾರ್ಥಿಗಳಿಗೆ ಬಹು ಅನುಕೂಲವಾಗುವ ರೀತಿಯಲ್ಲಿ ಕಲಿಸುವಿಕೆಯು ಎಫ್. ಎ. ಪಾಸಾಗಿ ಟ್ರೈನಾದ ಒಬ್ಬ, ಮತ್ತು ಮೆಟ್ರಿಕ್ಯುಲೇಶನ್ ಪಾಸಾದ ಇಬ್ಬರು ಉಪಾಧ್ಯಾಯರಿಂದ ನಡಿಸಲ್ಪಡುತ್ತದೆಂದೂ ಇಲ್ಲಿಂದ ಈ ವರೆಗೆ ಪಾಸಾದ ಮಕ್ಕಳನ್ನು ಪರಶಾಲೆಗಳಲ್ಲಿ ಪರೀಕ್ಷೆಯಾಗದೆ ಮುಂದಿನ ಕ್ಲಾಸುಗಳಲ್ಲಿ ಶೇರಿಸಿಕೊಂಡಿದ್ದಾರೆಂತಲೂ ರಿಕೊಗ್ನಿಶನ್ ಇಲ್ಲದೆ ಇದ್ದದರಿಂದ ಯಾವ ಭಾದಕವೂ ಶಾಲೆಗೆ ತಗಲದೆ ಶಾಲಾ ಕೆಲಸವು ಸರಿಯಾಗಿ ನಡೆಯುತ್ತದೆಂದೂ ಸದ್ಯದಲ್ಲಿಯೇ ಹೊಸ ಕಟ್ಟೋಣವೂ ಪುಸ್ತಕ ಭಂಡಾರವೂ ಪ್ರಕೃತಿ ಶಾಸ್ತ್ರಪ್ರದರ್ಶನಾಲಯಗಳೂ ಕಟ್ಟಲ್ಪಡುವವೆಂದೂ ಗೌಡಸಾರಸ್ವತರ ವ ಬಂಟವಾಳ ಸದ್ಗ್ರಹಸ್ಥರ ಸಹಕಾರವು ಈ ಮಹತ್ಕಾರ್ಯದಲ್ಲಿ ಅಗತ್ಯವಿದೆಯೆಂದೂ ತಿಳಿಸಲ್ಪಟ್ಟಿತ್ತು. ನಂತರ ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಹಂಚಿದರು. ಕೊಂಕಣಿ ಭಾಷೆಯಲ್ಲಿ ಚಂದ್ರಹಾಸವೆಂಬ ನಾಟಕವು ಹುಡುಗರಿಂದ ಆಡಲ್ಪಟ್ಟಿತು. ಸಭೆಯಲ್ಲಿ ನೆರೆದ ಜನರಲ್ಲಿ ಹಲವರು ರಿಕೊಗ್ನಿಶನ್ ಎಂಬದು ಸರಕಾರಿ ಸಹಾಯ ಅಪೇಕ್ಷಿಸುವದಲ್ಲದೆ ಮತ್ತಾವ ಪ್ರಯೋಜನಕ್ಕೂ ಅಲ್ಲವೆಂದೂ ನಮ್ಮ ವಿದ್ಯಾಭ್ಯಾಸದ ಕೆಲಸವನ್ನು ನಾವು ಮಾಡುತ್ತ ಸಹಕಾರಿಗಳಾಗಿದ್ದರೆ ಸರಕಾರವು ಸದ್ಯದಲ್ಲಿಯೇ ರಿಕೊಗ್ನ್ಯೈಜ್ ಮಾಡುವುದೆಂದೂ ಮೊದಲಾಗಿ ಅಭಿಪ್ರಾಯವನ್ನು ಹೇಳಿದರು. ನಾಟಕದಲ್ಲಿ ಚಮತ್ಕಾರವಾಗಿ ಆಡಿದ ಹುಡುಗರಿಬ್ಬರಿಗೆ ಅಧ್ಯಕ್ಷರು ತಮ್ಮ ಮನೋಗತದಂತೆ ಬಹುಮಾನಗಳನ್ನು ಹಂಚಿದರು. ನಂತರ ಅಧ್ಯಕ್ಷರು ಈಗಿನ ಮಹಾರಾಜರವರು ವಿದ್ಯೆಗೆ ಪ್ರೋತ್ಸಾಹ ಕೊಡುತ್ತಿರುವ ಕಾರಣ ರಾಜಭಕ್ತಿಯನ್ನು ನಾವು ಶಾಲಾ ಸ್ಥಾಪನೆಗಳ ಮೂಲಕ ಸಲ್ಲಿಸುವುದು ಶ್ಲಾಘ್ಯವೆಂದೂ ಮುಂದಣ ಜನಾಂಗವು ಆ ವಿದ್ಯೆಯ ಕೊರತೆಯನ್ನು ಹೋಗಲಾಡಿಸುವಂತೆ ಸ್ತುತ್ಯಾರ್ಹವಾದ ಈ ಕಾರ್ಯಕ್ಕೆ ಸರ್ವರೂ ಏಕಮನಸ್ಕರಾಗಿ ಸಹಕಾರಿಗಳಾದಲ್ಲಿ ಸರಕಾರದವರ ಯಾವದೊಂದು ರಿಕೊಗ್ನಿಶನ್ ಪರವಾಗಿ ಅಡ್ಡಿ ಬರಲಾರದೆಂದೂ ಮೊದಲಾಗಿಯೂ ಶಾಲಾ ಕೆಲಸವನ್ನು ಹೊಗಳಿಯೂ ವಿದ್ಯಾರ್ಥಿಗಳಿಗೆ ಬದ್ಧಿವಾದವನ್ನು ಹೇಳುತ್ತಲೂ ಭಾಷಣವನ್ನು ಮುಗಿಸುತ್ತ ನಾಟಕ ರಚನೆಯಿಂದ ಭಾಷಾಸೇವೆ ಗೈದ ಶ್ರೀಯುತ ಕೃಷ್ಣಪ್ರಭುಗಳಿಗೆ ಪ್ರೋತ್ಸಾಹಗೊಳಿಸಿ ಸ್ತುತ್ಯಾರ್ಹವಾದ ಈ ಕಾರ್ಯದಲ್ಲಿ ದೇವರು ಅವರಿಗೆ ಸಹಾಯಕನಾಗಲೆಂದು ಪ್ರಾರ್ಥಿಸಿ ಮುಕ್ತಾಯ ಮಾಡಿದರು. ಸಹಾನುಭೂತಿ ತೋರಿಸಿದ ಸಕಲ ಸಭೆಗೆ ವಂದನೆಗಳ ನಂತರ ಕೂಟವು ಮುಗಿಯಿತು.

ಮುಲ್ಕಿ. ಕಳದ ವರುಷ ಇಲ್ಲಿಯ ಕೆಲವು ಗೌಡಸಾರಸ್ವತ ಬ್ರಾಹ್ಮಣರಿಗೂ ಸಾರಸ್ವತ ಬ್ರಾಹ್ಮಣರಿಗೂ ಒಟ್ಟಿಗೆ:ಭೋಜನವಾಗಿತ್ತು. ಈ ಸಂಗತಿ ತಮ್ಮ ಪತ್ರದಲ್ಲಿಯೂ ಪ್ರಕಟಿಸೋಣವಾಗಿತ್ತು. ಆದರೆ ಇತ್ತಲಾಗೆ ಸಾರಸ್ವತರ ಗುರುಗಳಾದ ಚಿತ್ರಾಪುರಮಠದ ಶ್ರೀಪಾದಂಗಳವರ ಸವಾರಿ ಈ ಮುಲ್ಕಿಗೆ ಚಿತ್ತೈಸಿದ್ದಾಗ್ಯೆ ಅವರ ಸ್ವಾಗತದ ಬಗ್ಯೆ ಸಂಯುಕ್ತ ಪರಿಷದಕ್ಕೆ ಹೋದ ತಮ್ಮ ಎತ್ರರೆನ್ನುವ ಗೌಡಸಾರಸ್ವತರನ್ನು ಆಮಂತ್ರಣ ಮಾಡಲಿಲ್ಲ. ಬಾಕಿಯವರನ್ನೂ ಇತರ ಜಾತಿಯ ಬ್ರಾಹ್ಮಣರನ್ನಾದರೂ ಆಮಂತ್ರಣಮಾಡಿದ್ದಾರೆ. ಇದು ಅಲ್ಲದೆ ಕೆಲವು ಸಮಯದ ಮುಂಚೆ ಸಂಯುಕ್ತಕ್ಕೆ ಹೋದವರಲ್ಲಿ ಆದ ಮಂಗಲದ ಔತಣಕ್ಕೆ ಸಾರಸ್ವತರನ್ನು ಆಮಂತ್ರಣ ಮಾಡಿದ್ದಲ್ಲಿ ನೆವನ ಹೇಳಿ ತಪ್ಪಿಸಿ ಬರಲಿಲ್ಲ. ಆದರೆ ಇಂಥವರು ಸಂಯುಕ್ತ ಆಗಬೇಕೆಂದು ಪ್ರತಿಪಾದಿಸುತ್ತಾರೆ. ಸಂಯುಕ್ತ ಪರಿಷದಕ್ಕೆ ತಮ್ಮ ಪ್ರೀತಿಯನ್ನು ತೋರಿಸುತ್ತಾರೆ. ಅಹಾ ಒಳ್ಳೇ ಬೋಧೆ–ಇಂಥವರನ್ನು ಸಂಯುಕ್ತ ಪ್ರಸಾರಕ ಮಿಶನೆರಿಗಳಾಗಿ ಮಾಡಿ ಶಂಕರಾಚಾರ್ಯ ವಿವೇಕಾನಂದ ಇತ್ಯಾದಿ ಮಹಾಸ್ವಾಮಿಗಳಂತೆ ಭರತಖಂಡದ ಎಲ್ಲಾ ಕಡೆಗಳಲ್ಲಿ ಕಳುಹಿಸುವದು ಒಳ್ಳೇದು. ಆದ್ದರಿಂದ ಎರಡೂ ಪರಿಷದಗಳಾಶ್ರಿತ ಮಹಾನುಭಾವರೆ! ಅಯ್ಯೋ ನಿಮಗೆ ಇನ್ನೂ ಬುದ್ಧಿ ಬರಲಿಲ್ಲವೇ. ನಿಮ್ಮ ಕೃಷ್ಣ ಮಹಾಸ್ವಾಮಿಯಂತೆ ಇದ್ದ ಶ್ರೀಯುತ ಕೀರ್ತಿಶೇಷರು ಭವಿಷ್ಯವನ್ನು ತಿಳದು ನಿಜಧ್ಧಾಮವನ್ನು ಐದ ಮೇಲೆ ನಿಮ್ಮ ಸ್ವಾರ್ಥಗಳಿಗೋಸ್ಕರ ಯಾದವರಂತೆ ನಿಮ್ಮೊಳಗೆ ಕಾದಾಡಿ ನಿರ್ಮೂಲವಾಗಬೇಡಿ!

ಇಲ್ಲಿಯ ಒಂದು ನೆರೆ ಗ್ರಾಮದಲ್ಲಿ ಕಂಬಳದ ಕಾಲದಲ್ಲಿ ಕೋಣಗಳು ಓಡಿಸುವ ವಿಷಯ ಬಂಟರಿಗೂ ಜೈನರಿಗೂ ವಿವಾದ ಉಂಟಾಗಿ ಬಂಟರು ತಿರಿಗಿ ಒಂದು ಹೊಸ ಕಂಬಳ ಮಾಡುವದಾಗಿ ವರ್ತಮಾನವಿದೆ. ಇದರ ದೆಶೆಯಿಂದ ಕ್ರಿಮಿನಲ್ ವಗೈರೆ ವ್ಯಹರಣೆಗಳು ನಡಿಯುವ ಸಂಭವವಿದೆಯಂತೆ. ಅಡನಾಡಿ ವಕೀಲರ ಆಲೋಚನೆಗಳಿಂದ ಎಷ್ಟು ಜನರು ಮನೆಮಾರು ಕಳಕೊಳ್ಳುತ್ತಾರೇನೋ?

ಮೆರವಣಿಗೆ.ವಗೈರೆ ವಾದ್ಯದಿಂದ ಕೊಂಡು ಹೋಗುವ ಜನರು ಇಲ್ಲಿಯ ಪೋಲೀಸ್ ಸ್ಟೆಶನಿನ ಎದುರು ವಾದ್ಯ ನಿಲ್ಲಿಸಬೇಕು. ಇತ್ತಲಾಗೆ ಒಂದು ದಿನ ರಾತ್ರೆಯಲ್ಲಿ ಪರಊರಿನವರು ಈ ಅನುಭವ ಗೊತ್ತಿಲ್ಲದೆ ವಾದ್ಯಮಾಡಿ ಹೋಗುವಾಗ ಪೋಲೀಸಿನವರು ನಿಲ್ಲಿಸಿಬಿಟ್ಟರು. ಅವರು ಏನೋ ಕ್ಷಮೆಬೇಡಿದ್ದರಿಂದ ಚಾರ್ಜು ಮಾಡವೆ ಬಿಟ್ಟರಂತೆ. ಹಾಗೆ ಪಬ್ಲಿಕ್ ಆಫೀಸುಗಳ ಎದುರಿನಲ್ಲಿ ವಾದ್ಯಮಾಡಿ ಹೋಗುವದು ಕಾನೂನಿಗೆ ವಿರೋಧವೋ? ಅದಕ್ಕೆ ಯಾವ ಸಮಯವೆಂತ ಉಂಟೊ? ಇಲ್ಲಿಯ ಪೋಸ್ಟು ಆಫೀಸ ವಗೈರೆ ಇತರ ಆಫೀಸುಗಳ ಅಧ್ಯಕ್ಷರು ತಮ್ಮ ಆಫೀಸುಗಳ ಎದುಗಡೆಯಿಂದ ವಾದ್ಯಮಾಡ ಹೋಗುವಾಗ್ಯೆ ನಿಲ್ಲಿಸುವದಿಲ್ಲವಾದ್ದರಿಂದ ಪೋಲೀಸ್ ಸ್ಟೇಶನಿನ ಎದುರು ಮಾತ್ರ ವಾದ್ಯ ನಿಲ್ಲಿಸಬೇಕೆಂತ ಕಾನೂನು ಉಂಟೋ? ಎಂಬ ಸಂಗತಿ ಹಳ್ಳಿಯವರಾದ ನಮಗೆ ತಿಳಿಯದಿರುವದಿಲ್ಲವಾದರಿಂದ ತಮ್ಮ ವಾಚಕರು ಯಾರಾದರೂ ತಿಳಿಯ ಪಡಿಸಿದರೆ ಉಪಕಾರವಾಗುತ್ತಿತ್ತು.

ಕಾರ್ಕಳ ತಾಲೂಕಾಗಿ ಕುಂದಾಪುರ ರೆವಿನ್ಯು ಡಿವಿಜನಿಗೆ . ಕೂಡಿಸುವ ಆಲೋಚನೆಯಿಂದ ಕಲ್ಲಮುಂಡ್ಕೂರ ನಿಡ್ಡೋಡಿ ವಗೈರೆ ಗ್ರಾಮಗಳಲ್ಲಿ ಆಸ್ತಿಗಳಿದ್ದ ಇತ್ತ ಕಡೆಯವರಿಗೆ ತಮ್ಮ ಅರ್ಜಿಗಳನ್ನು ವಗೈರೆ ದಾಕಲು ಮಾಡಲಿಕ್ಕೆ ೮-೧೦ ಮೈಲುಗಳ ಒಳಗೆ ಮಂಗಳೂರಿಗೆ ಹೋಗುವ ಬದಲಾಗಿ ೬೦-೭೦ ಮೈಲು ದೂರ ಕುಂದಾಪುರ ಬೈಂದೂರ ವರೆಗೆ ಹೋಗುವದು ಸಂಕಷ್ಟಕರವೇ ಸರಿ.

ತಮ್ಮ ಮೊದಲಿನ ಸಂಚಿಕೆಯಲ್ಲಿ ಪ್ರಸ್ತಾಪಿಸಿದ ಹುಚ್ಚು ನಾಯ್ನನ್ನು ಸರಕಾರದವರು ಬಂದೋಬಸ್ತು ಮಾಡುವದಾಗಿ ತಿಳದು ಬರುವದರಿಂದ ಈ ಬಗ್ಯೆ ಇಲ್ಲಿಯ ಆಜುಬಾಜು ಜನರು ಉಪಕಾರಸ್ಮರಣೆ ಮಾಡುತ್ತಾರೆ.

ಜೀನಸುಗಳ ಧಾರಣೆ, ಮಂಗಳೂರು. (ರಜಂ)

ಹೊಸ ಮಸ್ಕತಿ ಅಕ್ಕಿ	5—3—0
ಹೊಸ ಗುಡ್ಡು ಮಸ್ಕತಿ...	4-10—0
ಹೊಸ ಮಸ್ಕತಿ ದುಯಂ...	4-12—0
ಹೊಸ ಗುಡ್ಡು ,, ...	4—7—0
ಮಸ್ಕತಿ ಬೆಳ್ತಿಗೆ ,, ...	5—4—0
ಹುರುಳಿ ಗೋಣಿ ೧, ಮುಡಿ 2ರ ...	6—4—0
ಉಪ್ಪು ಗೋಣಿ ೧ರ	3—8—0
ಕೊಬ್ರಿ ಖಂಡಿ ೧ರ	96—0—0
ಕೊಬ್ರಿ ಎಣ್ಣೆ ಮಣ	7—0—0
ಕಾಫಿ ಖಂಡಿ ೧ರ	250—0—0
ಕಾಳು ಮೆಣಸು ಖಂಡಿ	170—0—0
ಹೊಸ ಬಿಳಿ ಗೋಟು ಅಡಿಕೆ	82—0—0
ಕರಿ ಗೋಟು	65—0—0
ಯಾಲದ ಕಾಯಿ ಮಣ ೧ರ	40—0—0
ಗೇರುಬೀಜ ಮುಡಿ ೧ರ...	2—2—0
ರಾಮಪತ್ರೆ ಮಣ ೧ರ...	8—6—0
ಶೀಗೆಕಾಯಿ ಖಂಡಿ ೧ರ	35—0—0
ಕಾಸ್ರಕಿನ ಬೀಜ ಖಂಡಿ ೧ರ	22—0—0
ದಾಲಚೀನಿ ಹೂ ಮಣ ೧ರ	3—0—0
ಅಂಟವಾಳ ಕಾಯಿ ಮುಡಿ ೧ರ	1—4—0
ಅಣಲೆ ಕಾಯಿ ಖಂಡಿ ೧ರ	12—3—0
ಪಚ್ಚೆಹೆಸರು	4-10—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—8—0
ಗೋದಿ ಗೋಣಿ ೧ಕ್ಕೆ	10—8—0
ಊರು ಬೆಲ್ಲ ಖಂಡಿ ೧ರ	36—0—0
ಮೊರಿಸ್ ಸಕ್ಕರೆ ಮಣ ೧ರ	3—12-0
ಕಡಲೆ ಗೋಣಿ ೧ರ	7—8—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—4—0
ಕೊಬ್ರಿ ಹಿಂಡಿ ಖಂಡಿ ೧ರ	33—8—0

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠ ಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ
(ವಿದ್ಯುಚ್ಛಕ್ತಿಯ ಬೇನಿಹಾರಿ ಮುಲಾಮು.)
EST. 1898.



ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜಿ, ಸುಟ್ಟ ಘಾಯ, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ ೦—8—೦. ಆರು ಡಬ್ಬಿಗಳಿಗೆ 2—8—೦. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಶಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ

ವಿಳಾಸ;—ಪರಿಮಳಾಂಜನ ಡಿಪ್ಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ. ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೊತ್ತೇಜಕ, ಮನೋತ್ಸಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವುವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟಿ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟೆ ರವಾನಿಸುವೆವು.

ವಿಳಾಸ:—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡಾ.

ವಿಶೇಷ ಸೂಚನೆಗಳು.

ಅಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯೊವನು? ಕಾಶಿಪಟ್ಟೆ ಅಲ್ಲವೊ ಹಾಗಾದರೆಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮಿರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೇ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು.	ಆತಂಕ ನಿಗ್ರಹ **ಗುಳಿಗೆಗಳು.**	30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯೊತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಯಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—„ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ 22 ಬ್ರಾಡ್ವೇ ಮದರಾಸು. } ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಮತ್ತು ಜಾಮ್ ನಗರ ಕಾಠ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.



ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ. ದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು, ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿ ಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ, ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸಿ ಮಾಡಲ್ಪಡುವದು.

ಎಲ್ಲೂರು ರಾಮ ರಾವ್,

ಜನರಲ್ ಏಜಂಟ್,

ಬ್ರಿಟೋ ಬಿಲ್ಡಿಂಗ್ಸ್

ಮಂಗಳೂರು, ದ. ಕನ್ನಡ.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,

ಮನೋಹರ ಬಿಲ್ಡಿಂಗ್, ಲವರಜಾಲ, ಮುಂಬಯಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.

ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.

ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,

ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,

ಮಂಗಳೂರು, ದ. ಕ.

ಸ್ವದೇಶಿಲ್ಯಾಫ್‌ಎಶ್ಯುರೆನ್ಸ್‌ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿತೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,

ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬಧನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೊ ರಕ್ತಮಿತಿ ಸ್ಥಿತಿ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡೆಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸೃಗ್ಧರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು

ಸಂತೋಷಕರವಾದ ಪ್ರಕಟಣೆ.

ಸರ್ವರೂ ತರಿಸಿಕೊಂಡು ಸಂತೋಷ ಪಡಿ.

ಬರುವ ಎಪ್ರಿಲ್ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಆನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಜೂಕವಾದ ಕರವಸ್ತ್ರ. (4) ಲಿವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಷೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಷಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂಬರು 7 ಕೋಟ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1–0–0 ವಿ. ಪಿ. ಮೂಲಕ 1–3–0. 2000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0–15–0. 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,

ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಂಬಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ

ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನ್ನೂ, ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್ಸ್,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು. ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯು ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ನಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,

ಹಂಪನಕಟ್ಟಾ, ಮಂಗಳೂರು ದ.

Registered No. M. 498

ಚಂದಾನಿರ್ಣಯ:—

ವರ್ಷ ಒಕ್ಕೆ ರೂ. 1-4-0.

ಟಪ್ಪಾಲು ಹಾಸಲು ಸೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 8.

ಮಂಗಳೂರು ತಾ. 23ನೇ ಶುಕ್ರವಾರ ಫೆಬ್ರುವರಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳುಕಡಿತ, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಫಸ್ಟ್ ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ ಮತ್ತು ಮೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ಎಂಡ್. ಎಸ್. ಎಂಡ್. ಜೆ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೇಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ:—ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ ಎಸ್ಟೇಟು, ಕೊಡಗು:—ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ್ ವಾಂದ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—ನಿಮ್ಮಿಂದ ಪಡಕೊಂಡ ಅಮೃತಾಂಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.

ಅಮೃತಾಂಜನ ಚರ್ಚಿತವಾದ ರೋಮದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಚಳಿಯೂ ಬಾರದಂತೆ ನೋಡಿಕೊಂಡು, ಚಳಿ ಇಲ್ಲದ ಸ್ಥಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. ಎಮ್. ಎಂಡ್. ಎಸ್., ಮುಂಬಯಿ, ಬರೆಯುವದೇನಂದರೆ:—ನಿಮ್ಮ ಅಮೃತಾಂಜನವನ್ನು ನಾನು ವಾತಕ್ಕೂ ಸಂಧಿವಾತಕ್ಕೂ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿದ್ದಲ್ಲಿ ಬಹಳ ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ ತಿಳಿಸುತ್ತೇನೆ.

ಜಾಗ್ರತೆ:—ಈಗ ಅಮೃತಾಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಲ್ಪಟ್ಟಿರುತ್ತದೆ.

ವಿಳಾಸ:— ಅಮೃತಾಂಜನ ಡಿಪೊ.,

109 ಫ್ರೆಯರ್ ರೋಡ್, ಫೋರ್ಟ್ ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—ಅಮೃತಾಂಜನ, ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ರಕ್ತವೃದ್ಧಿ, ಬಾಟ್ಲಿ 1ಕ್ಕೆ 1ರೂಪಾಯಿ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೊಲೆರಾ ಮಾತ್ರೆ.

ಕೋಲೆರಾ, ವಾಂತಿಭೇದಿಗಳ ಮೇಲೆ ಬಹಳ ಉತ್ತಮ ಔಷಧ ಕ್ರಯ 6ಆಣೆ.

ನೇತ್ರಾಂಜನ.

ಮಂದದೃಷ್ಟಿಯನ್ನೂ ಕಣ್ಣುನೋವನ್ನೂ ಗುಣಪಡಿಸುವದು. ಕ್ರಯ 4ಆಣೆ.

ಕೇಶವರ್ಧಿನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

ಜುಲಾಬು ಮಾತ್ರೆ 8 ಆಣೆ; ಪ್ರಮೇಹಮಿಶ್ರಣ 1ರೂಪಾಯಿ; ಕಫಹಾರಿ 1 ರೂಪಾಯಿ 4 ಆಣೆ; ಕಫನಾಶಕ ಚೂರ್ಣ 8 ಆಣೆ; ಜಂತುವಾತಹಾರಿ 8 ಆಣೆ.

ವಿಳಾಸ:—

ವಿಲಿಯಂ ಮತ್ತು ಕಂಪೆನಿ,

109 ಫ್ರೆಯರ್ ರೋಡ್,

ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—

ಅಮೃತಾಂಜನ, ಮುಂಬಯಿ.

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟು, ಅಲ್ಲವೊ ಹಾಗಾದರೆ ಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೇ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4 ಸಾದಾ ಕಾರ್ಡುಗಳು, ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆಮ ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,
ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**
Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು.	ಆತಂಕ ನಿಗ್ರಹ **ಗುಳಿಗೆಗಳು.**	30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಬಾಧ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಕಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—„ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ, 22 ಬ್ರಾಡ್ವೇ ಮದರಾಸು. } ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.
ಮತ್ತು ಜಾಮ್ ನಗರ ಕಾಠ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.



ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ, ದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು, ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿ ಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ, ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸಿ ಮಾಡಲ್ಪಡುವದು.

ಎಲ್ಲೂರು ರಾಮ ರಾವ್,
ಜನರಲ್ ಏಜಂಟ್,
ಬ್ರಿಟೋ ಬಿಲ್ಡಿಂಗ್ಸ್
ಮಂಗಳೂರು, ದ. ಕನ್ನಡ.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.
ಕಂಪೆನಿಯ ಮೂಲಧನ ರೂ. 10,00,000.
ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.
ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿ ಲ್ಯಾಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)- ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂ ಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್— ಮಲಬಾರ ಮತ್ತು ದಕ್ಷಿಣ ಕನ್ನಡ.

ಯುವ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಆಸ್ಯಗ್ರಂಥಿಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನು ವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯುವ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.
ಸರ್ವರೂ ತರಿಸಿಕೊಂಡು ಸಂತೋಷ ಪಡಿ.
ಬರುವ ಎಪ್ರಿಲ್ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲಿಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಜೂಕಾದ ಕೆರವಸ್ತ್ರ, (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಶೆ (5) ಸೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟೆನ್‌ಪೆನ್. (10) ಮಕ್ಕಳ ತಮಾಶಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಶಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ...ಸ್ಟ್ರೀಟ್, ಮದ್ರಾಸು.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರ೦ಲಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗ ಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿ ಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನ್ನಿಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು

ಮಂಗಳೂರು.

ಫೊಟೊಗ್ರಾಫ್ ಬ್ಯೆಲ್‌ಪ್ಯೆಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42″ × 25″ ರೂ. 75. ಅರ್ಧ ಸ್ಯಾಜ್ 21″ × 15″ ರೂ. 40. ಬಸ್ಟ್ ಸ್ಯಾಜ್ 18″ × 12″ ರೂ. 20. ಸಣ್ಣ ಸ್ಯಾಜ್ 12″ × 10″ ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗ್ಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೊಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೊಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಸಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1–0–0 ಅಂಚೆಯ ವೆಚ್ಚ 0–4–0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2–10–0 ಅಂಚೆಯ ವೆಚ್ಚ 0–7–0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಸರ್ವೋತ್ಕೃಷ್ಟವಾದ ಅತ್ತರುಗಳು.

ಇನ್ನು ಮೇಲಾದರೂ ಬಜಾರಿನಲ್ಲಿ ದೊರಕುವ ಹೀನವಾದ ಅತ್ತರುಗಳನ್ನು ಕೊಂಡುಕೊಳ್ಳದಿರಿ. ನಮ್ಮ ಈ ಅತ್ತರುಗಳು ಅತಿಶಯ ಪ್ರಯಾಸ ಪ್ರಯತ್ನಗಳಿಂದ ಸಿದ್ಧಮಾಡಲ್ಪಟ್ಟಿವೆ. ಇವುಗಳ ಸುಗಂಧವು ನೂತನವಾಗಿ ಅರಳಿ ಗಮಗಮಿಸುವ ಪುಷ್ಪಗುಚ್ಛದ ಪರಿಮಳವನ್ನು ವಿಶೇಷತಃ ಮಿಂಚುತ್ತದೆ. ಮತ್ತು ಯಾವಾಗಲೂ ಒಂದೇ ಲೆಕ್ಕವಾಗಿರುತ್ತದೆ.

ಕಾಮಿನಿಯಾ ಡೈಜೀ (ರಿಜಿಸ್ಟರ್ಡ್)ಇದು ದೊಡ್ಡ ಮಲ್ಲಿಗೆಯ ಹೂಗಳಿಂದ ಸಂಗ್ರಹಿಸಿದ ಅತ್ತರು. 'ಮಲ್ಲಿಗೆ' ಎಂಬ ಈ ಶಬ್ದವು ಕಿವಿಗೆ ಬೀಳುತ್ತಲೇ ಅದರ ಸುವಾಸನೆಯನ್ನು ಕುರಿತು ಯಾವನೊಬ್ಬನ ಮನಸ್ಸಿನಲ್ಲಿಯಾದರೂ ಕಲ್ಪನೆಯು ಆಗದಿರದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 3-0–0

ಕಾಮಿನಿಯಾ ಸುರಂಗಿ (ರಿಜಿಸ್ಟರ್ಡ್) ಇದು ಬಹಳ ಪರಿಮಳ ಉಳ್ಳದ್ದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 1–4–0 ಅಂಚೆಯ ವೆಚ್ಚ ಬೇರೆ.

ಕಾಮಿನಿಯಾ (ರಿಜಿಸ್ಟರ್ಡ್) ಇದಾದರೂ ವಸಂತಮಾಸದ ಸಂಪಗೆಯ ಹೂಗಳಿಂದ ಸಂಗ್ರಹಿಸಿದುದು. ಇದರ ಸುರಭಿಯು ಅತ್ಯಂತ ಮಧುರವಿದೆ. ಕಾಲು ತೊಲೆಯ ಕುಪ್ಪಿಗೆ ರೂ. 1–8–0 ಅಂಚೆಯ ವೆಚ್ಚ ಬೇರೆ.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.,**

155 Jumma Musid, Market, Bombay.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 23ನೇ ಫೆಬ್ರವರಿ 1912.

ಮದ್ರಾಸು ನ್ಯಾಯನಿರ್ಮಾಣ ಸಭೆಯ ವೃತ್ತಾಂತವು. ಸೆಕಂಡರಿ ಶಾಲೆಗಳಿಗೆ ಮದ್ರಾಸು ಸರಕಾರದವರಿಂದ ಕೊಡೋಣಾಗುವ ದ್ರವ್ಯಸಹಾಯವು.

ಈ ತಿಂಗಳ ತಾ. ೧೮ರಲ್ಲಿ ಮದ್ರಾಸಿನಲ್ಲಿ ಕೂಡಿದ ಈ ಸಂಸ್ಥಾನದ ನ್ಯಾಯನಿರ್ಮಾಣ ಸಭೆಯಲ್ಲಿ ಪ್ರಜಾಕಡೆಯಿಂದ ಸೂಚಿಸೋಣಾದ ನಿರ್ಣಯಗಳಲ್ಲಿ ವಿಶೇಷವಾದದ್ದು ಸೆಕೆಂಡರಿ ಶಾಲೆಗಳಿಗೆ ಸರಕಾರದವರಿಂದ ಕೊಡೋಣಾಗುವ ದ್ರವ್ಯಸಹಾಯದ ಕುರಿತಾಗಿರುವುದು. ಈ ನಿರ್ಣಯವು ಸರಕಾರ ಕಡೆಯ ಮೆಂಬರರಿಂದ ವಿರೋಧಿಸಲ್ಪಟ್ಟರೂ ಸಭೆಯ ಬಹುಪಕ್ಷದವರಿಂದ ಆದರಿಸಲ್ಪಟ್ಟು ಮಂಜೂರಾಯಿತು. ಶಾಲೆಗೆ ವರುಷಾವಧಿಗೆ ತಗಲುವ ಖರ್ಚಿನ ಮೊಬಲಿಗಿನಲ್ಲಿ ವಿದ್ಯಾರ್ಥಿಗಳ ಸಂಬಳವಾಗಿ ಸಿಕ್ಕುವ ಮೊಬಲಿಗಿನಕ್ಕಿಂತ ಮೀರುವ ಅಂಶವು ಶಾಲೆಗಳಿಗೆ ಕೊಡೋಣಾಗುವ ಅತ್ಯಧಿಕವಾದ ಟೀಚಿಂಗ್ ಯಾ ಶಿಕ್ಷಣ ದ್ರವ್ಯಸಹಾಯವಾಗಿರತಕ್ಕದ್ದು; ಶಾಲೆಗಳಿಗೆ ವಿದ್ಯಾರ್ಥಿಗಳ ಸಂಬಳ ಮೂಲಕ ಸಿಕ್ಕುವ ಹುಟ್ಟುವಳಿಯು ಶಾಲಾ ಸಂಬಳವು ಸರಕಾರಿ ಸ್ಟೇಂಡಾರ್ಡ ದರಗಳಲ್ಲಿ ಎಣಿಸಲ್ಪಟ್ಟ ಮೊಬಲಗಿನ ಸೇಕಡಾ ೭೫ರಷ್ಟು ಎಂತ ನಿರ್ಣಯಿಸತಕ್ಕದ್ದು; ಶಾಲೆಗಳಿಗೆ ಅಗತ್ಯವಾದ ಕಟ್ಟಡಗಳಿಗೆ ಅಥವಾ ಇತರ ಮುಂಗಾಣದ ಶಾಲಾ ಕೆಲಸಗಳ ಬಗ್ಯೆ ಶಾಲಾಧಿಕಾರಿಗಳು ಪ್ರತಿ ವರುಷದಲ್ಲಿಯೂ ಸ್ಟೇಂಡಾರ್ಡ ದರಗಳಲ್ಲಿ ಎಣಿಸಲ್ಪಡುವ ವಿದ್ಯಾರ್ಥಿಗಳ ಸಂಬಳದ ಮೊಬಲಗಿನಲ್ಲಿ ಸೇಕಡಾ ೧೫ರಂತೆ ತೆಗದಿಡಲು ಸ್ವತಂತ್ರವಿರತಕ್ಕದ್ದು—ಇದು ಮೇಲೆ ಪ್ರಸ್ತಾಪಿಸಿರುವ ನಿರ್ಣಯದ ತಾತ್ಪರ್ಯವಾಗಿರುವುದು.

ಈ ನಿರ್ಣಯವು ಸಭೆಯಲ್ಲಿ ಮಂಜೂರಾದರೂ ಸರಕಾರದವರು ಇದನ್ನು ಇಷ್ಟವಿದ್ದರೆ ಮಾತ್ರ ಜಾರಿಗೆ ತರಬಹುದು. ಆದರೆ ನ್ಯಾಯವಿಧಾಯಕ ಸಭೆಗಳಲ್ಲಿ ಬಹುಪಕ್ಷವಾಗಿ ಯಾವ ಏರ್ಪಾಡು ಪ್ರಜಾಹಿತಕರವಲ್ಲವೆಂತ ಕಂಡುಬರುವುದೋ ಅಂಥಾದ್ದು ಆಕ್ಷೇಪಕರವಾದ್ದರಿಂದ ಅಂಥಾದ್ದರ ಜಾರಿಯನ್ನು ನಡಿಸುವುದುಚಿತವಲ್ಲವೆಂತ ಕೌನ್ಸಿಲು ಮಾರ್ಪಾಟಗಳ ಕಾಲದಲ್ಲಿ ಸ್ಟೇಟ್ ಸೆಕ್ರೆಟರಿಗಳು ವ್ಯಕ್ತಗೊಳಿಸಿದ ಅಭಿಪ್ರಾಯಗಳಿಂದ ಕಂಡುಬರುತ್ತದೆ. ಸರಕಾರದವರು ಈ ನಿರ್ಣಯವನ್ನು ಮನ್ನಿಸುವುದು ಕರ್ತವ್ಯವೆಂಬುದು ಚಕ್ರವರ್ತಿಗಳು ಕಲ್ಕತ್ತೆ ಸರ್ವ ವಿದ್ಯಾನಿಲಯದವರಿಗೆ ದಯಪಾಲಿಸಿದ ಅಭಯ ವಚನಗಳಿಂದ ಸಹ ತೋರುವುದು. "ಈ ದೇಶದಲ್ಲಿ ಶಾಲೆಗಳೂ ಕೊಲೇಜುಗಳೂ ನಿಬಿಡವಾಗಿ ಸ್ಥಾಪಿಸಲ್ಪಡಬೇಕೆಂಬುವುದು ನನ್ನ ಇಚ್ಛೆಯಾಗಿದೆ. ವಿದ್ಯೆಯ ತೇಜದಿಂದ ನನ್ನ ಭಾರತೀಯ ಪ್ರಜೆಗಳ ಮನೆಗಳು ಬೆಳಗಬೇಕೆಂದೂ ಅವರ ಜೀವನದ ಪೇಚಾಟವು ವಿದ್ಯೆಯ ವರ್ಚಸ್ಸಿನಿಂದ ಮಧುರವಾಗಬೇಕೆಂದೂ ಈ ವಿದ್ಯಾಬಲದಿಂದ ದೊರಕುವ ಉದಾತ್ತ ಕಲ್ಪನೆಗಳೂ ಸೌಖ್ಯವೂ ಆರೋಗ್ಯವೂ ಅವರದಾಗಬೇಕೆಂದೂ ಸಹಾ ನನ್ನ ಇಚ್ಛೆಯಾಗಿದೆ. ಈ ನನ್ನ ಇಚ್ಛೆಯು ವಿದ್ಯಾಪ್ರಸರಣೆಯ ಮೂಲಕ ಕೈಗೂಡತಕ್ಕದ್ದಾಗಿದೆ ಮತ್ತು ಭಾರತೀಯ ಶಿಕ್ಷಣ ವಿಷಯವು ಎಂದಿಗೂ ನನ್ನ ಮನಸ್ಸನ್ನು ಅಂಟಿರುವುದು." ಚಕ್ರವರ್ತಿಗಳ ವಿದ್ಯಾಪ್ರಸರಣೆಯ ಈ ಕೋರಿಕೆಯು ನೆರವೇರಬೇಕಾದರೆ ತಕ್ಕ ಧನಸಹಾಯವು ಶಾಲೆಗಳಿಗೆ ಕೋಡೋಣಾಗಬೇಕು. ಪ್ರಾಥಮಿಕ ವಿದ್ಯಾಪ್ರಸರಣೆಗೆ ಬೇಕಾದ ದ್ರವ್ಯವಿನಿಯೋಗವನ್ನು ಸರಕಾರದವರು ಹೆಚ್ಚೆಚ್ಚಾಗಿ ಮಾಡುವುದರಿಂದ ಸೆಕೆಂಡರಿ ವಿದ್ಯಾಪ್ರಸರಣೆಯನ್ನು ಪ್ರಜೆಗಳಿಗೆನೇ ಬಿಟ್ಟುಬಿಡುವುದುಚಿತವಲ್ಲ. ಹಿಂದೂಸ್ಥಾನದ ಇತರ ಯಾವ ಸಂಸ್ಥಾನಗಳಲ್ಲಾದರೂ ಸರಕಾರದವರು ಮದ್ರಾಸು ಸರಕಾರದವರಿಗಿಂತ ಹೆಚ್ಚಾದ ದ್ರವ್ಯಸಹಾಯವನ್ನು ಮಾಡುತ್ತಿರುವಾಗ ನಮ್ಮ ಸರಕಾರದವರು ಮಾತ್ರ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಇಂಥಾ ಸಹಾಯವನ್ನು ಕಡಿಮೆ ಮಾಡಿಟ್ಟಿರುವುದು ಯುಕ್ತಿಯುಕ್ತವಲ್ಲ. ಯಾಕಂದರೆ ಇತರ ಸಂಸ್ಥಾನಗಳಿಗಿಂತಲೂ ನಾವು ಮಿಕ್ಕಿದವರಲ್ಲ. ಅದಲ್ಲದೆ ಚಕ್ರವರ್ತಿಗಳು ಅಪ್ಪಣೆಕೊಡಿಸಿದಂತೆ ವಿದ್ಯೆಯ ತೇಜದಿಂದ ಭಾರತೀಯ ಪ್ರಜೆಗಳ ಮನೆಗಳು ಬೆಳಗಿ ಅವರ ಜೀವನದ ಪೇಚಾಟವು ಅದರಿಂದ ಮಧುರವಾಗಬೇಕಾದರೆ ಪ್ರಜೆಗಳಲ್ಲಿ ತಕ್ಕ ಕರಕೌಶಲ್ಯಗಳ ಶಿಕ್ಷಣ ಪ್ರಸರಣೆ ಇತ[illegible] ಇದು ಸೆಕೆಂಡರಿ ವಿದ್ಯಾಭ್ಯಾಸವನ್ನು ಕಲಿತ ನಂತರವೇ ಸಾಧ್ಯವಾಗುವುದು ವಿನಹ ಬರಿಯ ಪ್ರಾಥಮಿಕ ವಿದ್ಯಾಬಲದಿಂದ ಕೈವರ್ತಿಸಿಕೊಳ್ಳುವುದು ಅಸಾಧ್ಯ. ಭರತಖಂಡದಲ್ಲಿ ವಿದ್ಯೆಯು ಪ್ರತಿಫಲವಿಲ್ಲದೆನೇ ಕೊಡುವ ಪದ್ಧತಿಯು ಹಿಂದೊಮ್ಮೆ ಪ್ರಬಲವಾಗಿದ್ದು ಜನರಲ್ಲಿ ರೂಢಮೂಲವಾಗಿರುವ ವಿದ್ಯಾಪರವಾದ ಇಂಥಾ ಭಾವನೆಗಳು ಸರಕಾರದವರಿಂದ ವಿದ್ಯಾಪ್ರಸರಣೆ ಬಗ್ಯೆ ಕೊಡೋಣಾಗುವ ದ್ರವ್ಯಸಹಾಯವು ಹೆಚ್ಚೆಚ್ಚಾಗಿ ಕೊಡಲ್ಪಡುವುದರ ಮೂಲಕ ಮನ್ನಿಸಲ್ಪಡಬೇಕಾಗಿವೆ.

ಈ ವಿಷಯವಾದ ಇತರ ಸಂಗತಿಗಳನ್ನೂ ಬೇರೆ ನಿರ್ಣಯಗಳನ್ನೂ ಇನ್ನೊಂದು ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ದಕ್ಷಿಣ ಕನ್ನಡ ಜಿಲ್ಲೆಯ ಜೈನ್ ಸಭೆಯು.

ಇತರ ಹಲವು ಜಾತಿಗಳಂತೆ ಈ ಜಿಲ್ಲೆಯ ಜೈನರೂ ಸಹ ತಮ್ಮ ಸ್ವಜಾತಸ್ಥರ ಮೇಲ್ಮೆಗೆ ಪೇಚಾಡುತ್ತಿರುವುದು ತೃಪ್ತಿಕರವಾಗಿರುವುದು. ಜೀರ್ಣವಾದ ಚೈತ್ಯಾಲಯಗಳನ್ನು ಸರಿಗೊಳಿಸಿ ಪಂಚ ಕಲ್ಯಾಣ ಮೊದಲಾದ ಮಹೋತ್ಸವಗಳನ್ನು ಈ ಜಿಲ್ಲೆಯ ಆಯಾ ಕಡೆಗಳಲ್ಲಿ ಜೈನರಲ್ಲಿ ಸಂಪನ್ನರಾದ ಹಲವು ಗೃಹಸ್ಥರು ಆಗಿಂದಾಗ್ಯೆ ನೆರವೇರಿಸುತ್ತಿರುವರಾದರೂ ಜಿಲ್ಲೆಯ ಜೈನ ಮತಸ್ಥರೆಲ್ಲರು ಏಕಸ್ಥರಾಗಿ ತಮ್ಮ ಸ್ವಜಾತಸ್ಥರ ಅಭಿವೃದ್ಧಿಗೆ ಈ ತನಕ ಪಯತ್ನ ನಡಿಸಿದ್ದು ಬಹಳ ಅಪರೂಪವಾಗಿರುವುದು. ಇತರ ಕೆಲವು ಜಾತಿಗಳಲ್ಲಿರುವಂತೆ ಈ ಮತಸ್ಥರಲ್ಲಿ ಈಗಿನ ಶಿಕ್ಷಣವನ್ನು ಪಡದವರು ಈ ಜಿಲ್ಲೆಯಲ್ಲಿ ಒಬ್ಬಿಬ್ಬರು ಸಹ ಇರುವುದಿಲ್ಲವಾದ್ದರಿಂದ ಶಿಕ್ಷಣದಲ್ಲಿ ಬಹಳವಾಗಿ ಹಿಂದುಳಿದು ಕ್ಷೀಣವಾಗುತ್ತಿರುವ ಈ ಮತಸ್ಥರ ಅಭಿವೃದ್ಧಿಯ ಪ್ರಯತ್ನಗಳು ಮುಂದುವರಿಯುವುದು ಸಹ ಬಹಳ ಪ್ರಯಾಸವಾಗಿ ಬಂದಿದೆ. ಈ ಸಂದರ್ಭದಲ್ಲಿ ನಮ್ಮಲ್ಲಿಯ ಇತರ ಮತಸ್ಥರೂ ಮುಖ್ಯವಾಗಿ ಕನ್ನಡನಾಡಿನ ಇತರ ಕಡೆಗಳಲ್ಲಿಯೂ ಹಿಂದೂಸ್ಥಾನದ ಇತರ ಪ್ರಾಂತ್ಯಗಳಲ್ಲಿಯೂ ಇರುವ ವಿದ್ಯಾವಂತ ಜೈನ ಮತಸ್ಥರೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಷೀಣವಾಗುತ್ತ ಬರುತ್ತಿರುವ ತಮ್ಮ ಬಂಧು ವರ್ಗಕ್ಕೆ ಬೇಕಾದ ಸಹಕಾರವನ್ನು ಕೊಟ್ಟು ದಕ್ಷಿಣ ಕನ್ನಡ ಜೈನ್ ಸಭೆಯು ತನ್ನ ಉದ್ದಿಶ್ಯಗಳನ್ನು ನೆರವೇರಿಸಿ ದೀರ್ಘಕಾಲ ಬಾಳುವಂತೆ ಮಾಡುವುದು ಅತ್ಯಗತ್ಯವಾಗಿದೆ.

ಈ ಸಭೆಯು ಇತ್ತಲಾಗನೇ ಏರ್ಪಡಿಸಲ್ಪಟ್ಟಿರುವುದು. ಇದರ ಪ್ರಥಮ ಅಧಿವೇಶನವು ಕಾರ್ಕಳದಲ್ಲಿ ಇದೇ ತಿಂಗಳ ತಾ. ೬ರಲ್ಲಿ ಜರಗಿತು. ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟ ರಾ. ಧರ್ಮಸ್ಥಳ ಚಂದಯ್ಯ ಹೆಗ್ಗಡೆಯವರಿಗೆ ದೇಹಾಲಸ್ಯದ ಸಮ್ಮಂಧ ಸಭೆಗೆ ಬರಲು ಅನನುಕೂಲವಾದರೂ ಇವರು ಸಭೆಯಲ್ಲಿ ತನ್ನ ಪರವಾಗಿ ಓದಲು ಕಳುಹಿಸಿದ ವ್ಯಾಖ್ಯಾನವು ವೈದಿಕಲೌಕಿಕ ಜಿನಮತಸ್ಥರಿಗೆಲ್ಲಾ ಉಪಯುಕ್ತವಾದ ಪ್ರೇರಣೆಗಳಿಂದಲೂ ವಿಜ್ಞಾಪನೆಗಳಿಂದಲೂ ಕೂಡಿರುತ್ತದೆ. ಹಿಂದೊಂದು ಕಾಲದಲ್ಲಿ ಈ ಜಿಲ್ಲೆಯಲ್ಲಿ ಜೈನರು ಎಂಥಾ ಉಚ್ಚಸ್ಥಿತಿಯಲ್ಲಿದ್ದರೆಂಬದನ್ನು ಚರಿತ್ರಾಧಾರಗಳಿಂದ ಸಂಕ್ಷೇಪವಾಗಿ ವರ್ಣಿಸಿ ಶಿಕ್ಷಣವಿಲ್ಲದೆ ಈಗ ಈ ಪ್ರಾಂತ್ಯದ ಜಿನಸಮುದಾಯದ ಸ್ಥಿತಿಯು ಎಷ್ಟು ಶೋಚನೀಯವಾಗುವುದೆಂಬುದನ್ನು ಸಹ ವಿಸ್ತಾರವಾಗಿ ಸಭಿಕರೆಲ್ಲರಿಗೂ ತಿಳಿಯ ಹೇಳಿರುವರು. ಬೇರೆ ಪ್ರಾಂತ್ಯಗಳಿಂದ ಈ ಜಿಲ್ಲೆಗೆ ಬಂದವರ ಪೈಕಿ ಜೈನರೇ ಪ್ರಥಮ ಪಂಗಡದವರಾಗಿರುವರೆಂದೂ ಕ್ರಿಸ್ತಶಕ ೮ನೇ ಶತಮಾನದಿಂದ ೧೬ನೇ ಶತಮಾನದ ವರೆಗೆ ಈ ಪ್ರಾಂತ್ಯವು ಹೆಚ್ಚುಕಡಿಮೆ ಜೈನರ ಆಡಳಿತೆಯಲ್ಲಿತ್ತೆಂತಲೂ, ಜೈನರ ಪೂರ್ವಜರು ಅನ್ಯದೇಶಗಳ ಕೂಡೆ ಬಹಳ ಪುರಾತನ ಕಾಲದಲ್ಲಿ ಸಮುದ್ರ ಮಾರ್ಗವಾಗಿ ವ್ಯಾಪಾರ ಮೊದಲಾದವುಗಳನ್ನು ನಡಿಸಿದ್ದರೆಂಬದಾಗಿಯೂ ರಾ| ಹೆಗ್ಗಡೆಯವರು ಸಭೆಯವರಿಗೆ ತಿಳಿಸಿದ್ದಲ್ಲದೆ, ೧೮೭೧ನೇ ವರುಷದ ಖಾನೇಷುಮಾರಿ ಲೆಖ್ಖದಲ್ಲಿ ಈ ಜಿಲ್ಲೆಯಲ್ಲಿ ೯೫೮೦ರಿದ್ದ ಜೈನರ ಸಂಖ್ಯೆಯು ೧೯೧೧ನೇ ವರ್ಷದ ಲೆಕ್ಕದಲ್ಲಿ ೭೭೭೮ ಆದದ್ದಕ್ಕೆ ಬಹಳ ವಿಷಾದಪಟ್ಟಿರುವರು. ಹತ್ತು ವರುಷಗಳಲ್ಲಿ ಜಿನಮತಸ್ಥರ ಜನಸಂಖ್ಯೆಯು ಹ್ಯಾಗೆ ಕಡಿಮೆಯಾಯಿತೆಂಬದನ್ನು ಪರಿಶೋಧಿಸಿ ನೋಡುವುದು ಅತ್ಯಗತ್ಯವಾಗಿರುವುದು. ಇಲ್ಲದಿದ್ದರೆ ರಾ. ಚಂದಯ್ಯ ಹೆಗ್ಗಡೆಯವರು ಅಪ್ಪಣೆ ಕೊಡಿಸಿದಂತೆ ಖಾನೆಷುಮಾರಿ ಲೆಕ್ಕದ ದರದಲ್ಲಿಯೇ ಜನನ ಸಂಖ್ಯೆಯು ಕಡಮೆಯಾಗುತ್ತಾ ಬರುವುದಾದರೆ ಮುಂದಕ್ಕೆ ೧೯೭೧ನೇ ವರ್ಷದ ಅಂತ್ಯದಲ್ಲಿ ಜೈನರ ಇರವು ಅಸಾಧ್ಯವಾಗುವುದು. ಹೀಗೆಂದಿಗೂ ಆಗಕೂಡದೆಂಬುದು ನಮ್ಮ ಹೃತ್ಪೂರ್ವಕ ಅಪೇಕ್ಷೆಯಾಗಿರುವುದು. ಜಿನಮತಸ್ಥರ ಪ್ರಕೃತ ಸ್ಥಿತಿಯು ಹೀಗಾದದ್ದು ಹ್ಯಾಗೆಂಬುದಕ್ಕೆ ಹೆಗ್ಗಡೆಯವರು ಕಾರಣಗಳನ್ನು ಕೊಟ್ಟಿರುವರು. ಧರ್ಮಹೀನತೆಯೊಂದಿಗೆ ಶಿಕ್ಷಣವಿಲ್ಲದೆ ಅನರ್ಥಗಳಿಗೆ ಅವಕಾಶ ದೊರಕಿರುವುದು. ಜಿನಧರ್ಮಕ್ಕೆ ವಿರೋಧವಾದ ಅಳಿಯಸಂತಾನದ ಪದ್ಧತಿಯು ಜಿನಸಮಾಜವನ್ನು ಇನ್ನಷ್ಟು ಭೀಕರವಾಗಿ ಪೀಡಿಸುತ್ತಿರುವುದು. "ನಮ್ಮ ಧರ್ಮವು ಅಹಿಂಸಾ ಧರ್ಮವಾಗಿರುತ್ತದೆ. ಈ ಅಹಿಂಸಾ ಧರ್ಮವನ್ನು ಕಡೆಗೆ ನಮ್ಮ ನಮ್ಮ ಸಹೋದರ ಸಹೋದರಿಯರ ವಿಷಯದಲ್ಲಿಯಾದರೂ ಪರಿಪಾಲಿಸಲಿಕೆ

ನಮ್ಮ ಈ ಅಳಿಯ ಸಂತಾನದ ಪದ್ಧತಿಯು ನಮ್ಮನ್ನು ಬಿಡುವುದಿಲ್ಲ. ನಮ್ಮ ಈ ಪದ್ಧತಿಯು ಒಬ್ಬನ ಸಾವು ಮತ್ತೊಬ್ಬನು ಸದಾ ಹಾರೈಸುವಂತೆ ನಮ್ಮನ್ನು ಮಾಡಿಟ್ಟದೆ.... ನಮ್ಮ ನಮ್ಮ ಸಂತಾಪವೇ ನಮ್ಮ ನಾಶದ ವಿಷಯದಲ್ಲಿ ದೊಡ್ಡದಾಗಿದೆಂದು ಪ್ರತಿಯೊಬ್ಬನೂ ಒಪ್ಪತಕ್ಕ ಮಾತಾಗಿದೆ" ರಾ| ಹೆಗ್ಗಡೆಯವರು ಒತ್ತಿ ಹೇಳಿದ ಮಾತುಗಳನ್ನು ಪ್ರತಿ ಜೈನ ಮತಸ್ಥನೂ ಚನ್ನಾಗಿ ಪರ್ಯಾಲೋಚಿಸಬೇಕು. ಹೆಗ್ಗಡೆಯವರ ವ್ಯಾಖ್ಯಾನದಲ್ಲಿ ಈ ಜಿಲ್ಲೆಯರ ಜೈನ ಮತಸ್ಥರ ಪ್ರಕೃತ ಸ್ಥಿತಿಯೆಲ್ಲವೂ ಯತಾರ್ಥವಾಗಿ ವರ್ಣಿಸಲ್ಪಟ್ಟಿರುವುದರಿಂದ ಜೈನ ಮತದ ಪ್ರತಿಯೊಬ್ಬನೂ ಹೆಗ್ಗಡೆಯವರ ಈ ವ್ಯಾಖ್ಯಾನವನ್ನು ಸ್ವಸ್ಥ ಚಿತ್ತದಿಂದ ಓದಿಕೊಂಡು ಮುಂದಿನ ಏಳಿಗೆಗೆ ಯುಕ್ತಿ, ಯುಕ್ತವಾದಂಥಾ ಸಾಧನೆಗಳನ್ನು ಕೈಕೊಳ್ಳುವರೆಂಬದಾಗಿ ಕೋರುತ್ತೇವೆ.

ಅಳಿಯ ಸಂತಾನದ ಕಟ್ಟಿನವರಿಗೆ ವಿಶೇಷವಾದ ಹ್ಯಾಕೋರ್ಟು ತೀರ್ಮಾನವು.

ಅಳಿಯ ಸಂತಾನದ ಕಟ್ಟನ್ನಾಚರಿಸುವ ಮನೆ ಯಜಮಾನರನ್ನು ವಿಶೇಷವಾಗಿ ಬಾಧಿಸುವ ಮದ್ರಾಸು ಹ್ಯಾಕೋರ್ಟು ತೀರ್ಮಾನವು ಹ್ಯಾಕೊರ್ಟು ಜಡ್ಜರಾದ ಬಹುಮಾನಪಟ್ಟ ರಾ| ಸುಂದರಯ್ಯರ್ ಮತ್ತು ಸ್ಪೆನ್ಸರವರಿಂದ ಇತ್ತಲಾಗೆ ಕೋಡೋಣಾಗಿರುವುದು. ಈ ತೀರ್ಮಾನದ ಮುಖ್ಯ ತಾತ್ಪರ್ಯವೇನಂದರೆ:—ಒಂದು ಕುಟುಂಬದ ಮನೆಯಲ್ಲಿ ಸ್ಥಳದಡಚಣೆಯಿಂದ ಅಥವಾ ಕುಟುಂಬದ ಮೆಂಬರರೊಳಗೆ ಸರಿಬೀಳದ ವಿದ್ಯಮಾನಗಳಲ್ಲಿ ಅಥವಾ ಇತರ ಯುಕ್ತವಾದ ಕಾರಣಗಳಿಂದ ಕಿರಿ ಮೆಂಬರರು ಕುಟುಂಬದ ಮನೆಯಲ್ಲಿ ವಾಸಮಾಡದೆ ಬೇರೆ ಕಡೆಗಳಲ್ಲಿ ವಾಸಮಾಡುವ ಸಂದರ್ಭಗಳು ಬಂದೊದಗಿದರೆ ಕಿರಿಯ ಮೆಂಬರರಿಗೆ ಪ್ರತ್ಯೇಕ ಅಶನಾರ್ಥವನ್ನು ಮನೇ ಯಜಮಾನನು ಕೊಡಬೇಕಾಗಿರುವುದು. ಅಂಥಾ ಅಶನಾರ್ಥವು ಯಾವ ದಾಮಾಶಾಯಿ ಮೇರೆಗೆ ಕೊಡೋಣಾಗಬೇಕೆಂಬುದು ಸಹ ಇತ್ಯರ್ಥಿಸಲ್ಪಟ್ಟಿರುವುದು. ಅಶನಾರ್ಥವನ್ನು ನಿರ್ಣಯಿಸುವಾಗ ಮನೆಯಲ್ಲಿ ನಡಿಯತಕ್ಕ ಪಂಚಪರ್ವ ಮೊದಲಾದವುಗಳ ಖರ್ಚನ್ನೂ ಮನೆಗೆ ಸಂಬಂಧಿಸಿದ ಆಸ್ತಿಗಳ ಆಡಳಿತೆಯ ಖರ್ಚನ್ನೂ ಕಳದು ಉಳಿಯ ಬಹುದಾದ ಮುನಾಫೆಯನ್ನು ಕುಟುಂಬದ ಎಲ್ಲಾ ಮೆಂಬರರೊಳಗೆ ಸರಿಯಾಗಿ ಪಾಲುಮಾಡುವ ದಾಮಾಶಾಯಿಯ ಮೇಲೆ ಇಂಥಾ ಅಶನಾರ್ಥವು ಕೊಡೋಣಾಗುವದು.

ಪೇಷ್ವೆ ನಾರಾಯಣ ರಾವ್.

(ಕಳದ ಸಂಚಿಕೆಯಿಂದ ಮುಂದರಿಸಿದುದು.)

ಅವರಲ್ಲಿ ಅನೇಕರು ಇದರಲ್ಲಿ ಸೇರಿದ್ದರೆಂಬುವುದಕ್ಕೆ ಸಂದೇಹವಿಲ್ಲ. ಈ ಸಂಗತಿಗಳು ಮಹಮ್ಮದ್ ಇಸೂಫ್,-ತುಲ್ಯಾಜೀಪವಾರು ಇವರು ಕೊಟ್ಟ ಕೈಫಿಯತ್ತುಗಳಲ್ಲಿ ಸ್ಪಷ್ಟವಾಗುವುವು. ದೊಡ್ಡ ಅಧಿಕಾರಿಗಳು ಯಾರೂ ಆ ಸಮಯದಲ್ಲಿ ಕೋಟೆಯಲ್ಲಿಲ್ಲದಿದ್ದುದೂ, ಗದ್ದಲವುಂಟಾದ ಕೂಡಲೇಯಾದರೂ ಅವರಲ್ಲಿ ಯಾರೂ ಅರಮನೆಗೆ ಹೋಗದಿದ್ದುದೂ ಸಂಶಪ್ತಕರು ನಿರ್ಭಯವಾಗಿ ಹಗಲು ಹೊತ್ತಿನಲ್ಲಿ ಎರಡು ಘಂಟೆ ವೇಳೆಯಲ್ಲಿ ತಮ್ಮ ಸಾಹಸ ಕೃತ್ಯವನ್ನು ನೆರವೇರಿಸಿದ್ದುದೂ ಪ್ರಬಲವಾದ ಅನುಮಾನ ಹೇತುಗಳಾಗಿವೆ. ಹರಿಫಂತುವಿಗೂ ನಾನಾಪರ್ಣವೀಸನಿಗೂ, ತ್ರಯಂಬಕಜಿಮಾವನಿಗೂ ಈ ಸಂಗತಿ ತಿಳಿದಿರಲಿಲ್ಲವೆಂಬುದೂ ಅವರಿಗೆ ಇದರಲ್ಲಿ ಸಂಬಂಧವಿರಲಿಲ್ಲವೆಂಬುದೂ ನಿಶ್ಚಯವು. ಆದರೂ ಅವರು ತಮ್ಮ ವಿಧಾಯಕವನ್ನು ನೆರವೇರಿಸದೆ ಹೋದರೆಂತಲೂ ತಮ್ಮ ಪ್ರಭುವಿಗೆ ಮಹದಾಪತ್ತನ್ನುಂಟುಮಾಡುವುದಕ್ಕೆ ಇಷ್ಟು ಬಹಿರಂಗವಾಗಿ ಜರುಗಿಸಿದ ಇಷ್ಟು ದೊಡ್ಡ ಡೊಂಬಿಯ ಮೂಲವನ್ನು ಕಂಡು ಹಿಡಿದು ಅದನ್ನು ನಾಶಮಾಡಿ ತಮ್ಮ ಪ್ರಭುವನ್ನು ಕಾಪಾಡಲಾರದೆ ಹೋದರೆಂತಲೂ ಇವರಿಗೆ ಉಂಟಾದ ಕಳಂಕವು ನಿಲ್ಲದೆ ವಿಶ್ವಾಸಪಾತ್ರರಾದ ರಾಜನೀತಿಜ್ಞರಿಗೆ ಇರಬೇಕಾದ ಜಾಗರೂಕತೆಯಿಂದ ಎಚ್ಚರವುಳ್ಳವರಾಗಿ ಪ್ರವರ್ತಿಸಿದ್ದರೆ ಈ ಭಾರತ ವರುಷದ ಇತಿಹಾಸವು ಯಾವ ರೀತಿ ಪರಿಣಮಿಸುತ್ತಿತ್ತೋ! ಅವರು ಎಷ್ಟು ಮಟ್ಟಿಗೆ ಕೀರ್ತಿವಂತರಾಗಿರುತ್ತಿದ್ದರೋ ಎಂಬುದನ್ನು ಯಾರು ತಾನೇ ಹೇಳಬಲ್ಲರು.

ಮೇಲೆ ಹೇಳಿದ ವೃತ್ತಾಂತಕ್ಕೂ ಸಾಮಾನ್ಯವಾಗಿ ಪ್ರದರ್ಶಿಸಲ್ಪಡುತ್ತಿರುವ ನಾರಾಯಣ ರಾವ್ ವಧೆ ಎಂಬ ನಾಟಕ ಕಥೆಗೂ ಬಹಳ ಭೇಧವಿರುವಂತೆ ವಿಶದವಾಗುತ್ತಿರುವುದು. ನಾವು ನೋಡುತ್ತಿರುವ ನಾಟಕಗಳಲ್ಲಿ ನಾರಾಯಣ ರಾವು ವಧೆಗೆ ತಕ್ಕ ಕಾರಣಗಳು ಕಂಡುಬರುವುದಿಲ್ಲ. ನಿಷ್ಕಾರಣವಾಗಿ ಅವರು ಈ ಕೃತ್ಯಕ್ಕೆ ಒಳಗಾದರೆಂಬುದು ಸಹಜವಾದುದಲ್ಲ. ಗೋಪಿಕಾಬಾಯಿಯ ದುರಾಲೋಚನೆಯಿಂದಲೂ ವೃದ್ಧ ಮಂತ್ರಿಯಾದ ಸಖಾರಾಮಭಾವನನ್ನು ನಿರ್ಲಕ್ಷ ಮಾಡಿದ್ದರಿಂದಲೂ ನಾರಾಯಣ ರಾಯನು ರಘುನಾಥರಾಯನೊಡನೆಯೂ ಸಖಾರಾಮನೊಡನೆಯೂ ಪ್ರಬಲವಾದ ವೈರವನ್ನು ಸಂಪಾದಿಸಿಕೊಂಡನು. ಕೊನೆಗೆ ರಘುನಾಥ ರಾಯನನ್ನು ಸೆರೆಮನೆಯಲ್ಲಿಡಿಸಿದ್ದುದರಿಂದ ಈ ದ್ವೇಷವು ಬಹಿರಂಗವಾದ ವಿರೋಧವಾಗಿ ಪರಿಣಮಿಸಿ ನಾರಾಯಣ ರಾಯನನ್ನು ಕೊಲ್ಲಿಸುವು[illegible] ರಘುನಾಥರಾಯನನ್ನು ಸೆರೆಯಿಂದ ಬಿಡಿಸುವುದಕ್ಕೂ ಆನಂದಾಬಾಯಿಗೂ ರಘುನಾಥ ರಾಯನ ಪಕ್ಷವನ್ನು ವಹಿಸಿದ್ದ ಸಖಾರಾಮ ಮೊದಲಾದವರಿಗೂ ತಕ್ಕಷ್ಟು ಕ್ರೋಧಕ್ಕೆ ಹೇತುವಾಗಿ ಏರ್ಪಟ್ಟಿತು. ಇದಲ್ಲದೆ ನಾರಾಯಣ ರಾವು ತಾನು ಪಟ್ಟಕ್ಕೆ ಬಂದ ಒಂದು ವರುಷ ಕಾಲದಲ್ಲಿಯೇ ತನ್ನ ಸಹೋದರ ಏರ್ಪಾಡುಗಳನ್ನು ಅತಿಕ್ರಮಿಸಿ ದೂರಾಲೋಚನೆಯೂ ವಿಮರ್ಶಾಜ್ಞಾನವೂ ಇಲ್ಲದೆ ಸಂಚರಿಸುತ್ತಿದ್ದನಲ್ಲದೆ ನೀತಿವರ್ತನೆಯಲ್ಲಿ ಕೂಡಾ ಲೋಪಗಳುಳ್ಳವನಾಗಿ ಮಹಾರಾಷ್ಟ್ರ ಪ್ರಭುಗಳಲ್ಲಿಯೂ ಮಂತ್ರಿಗಳಲ್ಲಿಯೂ ಅಗೌರವವನ್ನು ತೋರಿಸಿ ಅವರ ಪ್ರೇಮಾನುಬಂಧಗಳನ್ನು ಸಡಲಿಸದಿದ್ದರೆ ಆತನಿಗೆ ಆಪತ್ತು ಸಂಭವಿಸುತ್ತಿರಲಿಲ್ಲ. ಏಕೆಂದರೆ—ನಾರಾಯಣ ರಾವು ತನ್ನ ಮಂತ್ರಿಗಳಲ್ಲಿ ಅನುರಾಗವನ್ನು ಸಂಪಾದಿಸಿಕೊಂಡಿದ್ದರೆ, ಆನಂದೀ ಬಾಯಿಯಾಗಲಿ ಸಖಾರಾಮುವಾಗಲಿ ಕುಮಂತ್ರದಿಂದ ಆತನನ್ನು ರಹಸ್ಯವಾಗಿ ಕೊಲ್ಲಿಸುವುದು ಅಸಾಧ್ಯವು. ಅಲ್ಲದೆ ಪೇಷ್ವೆಯ ಹತ್ಯಕ್ಕೆ ಕಾರಣಕರಾದ ಸುಮೇರು ಸಿಂಗು ಮೊದಲಾದವರು ಕೇವಲ ಆನಂದೀ ಬಾಯಿಯಾಜ್ಞೆಯನ್ನೇ ಅನುಸರಿಸಿದ್ದರೆಂದು ಹೇಳುವುದಕ್ಕೂ ಅವಕಾಶವಿಲ್ಲವು. ಪೇಷ್ವೆಯು 1773ನೇ ಅಗಸ್ಟು 30ನೇ ತಾರೀಕಿನಲ್ಲಿ ವಧಿಸಲ್ಪಟ್ಟನು. ಅದಕ್ಕೆ ನಾಲ್ಕು ತಿಂಗಳು 19 ದಿನಗಳ ಹಿಂದೆಯೇ (ಮುಂಚೆಯೇ ನಾರಾಯಣ ರಾಯನಿಂದ ರಘುನಾಥ ರಾಯನು ಸೆರೆಯಲ್ಲಿಡಲ್ಪಟ್ಟನು.) ನಾರಾಯಣ ರಾವೇ ಪೇಷ್ವೆಯ ಅಧಿಕಾರಿಯಾಗಿ ಇದ್ದನು. ಅಂತಹ ಸಂದರ್ಭದಲ್ಲಿ ಆನಂದೀ ಬಾಯಿಯ ಅಪ್ಪಣೆಯು ರಾಜಭಟರಲ್ಲಿ ಹೇಗೆ ವರ್ತಿಸಲ್ಪಡುವುದು? ರಘುನಾಥ ರಾವು ಸೆರೆಮನೆಯಲ್ಲಿದ್ದುದರಿಂದ ಆತನ ಅಪ್ಪಣೆಯನ್ನು ಇವರು ಶಿರಸಾವಹಿಸುವುದಕ್ಕೆ ಅವಕಾಶವೂ ಇಲ್ಲವು. ರಘುನಾಥ ರಾಯನಿಂದ ಕಾಗದ ಬರೆಯಲ್ಪಟ್ಟಂತೆಯೂ, ಅದರಲ್ಲಿ "ಧುರಾವೆ" ಎಂಬ ಮಾತನ್ನು ಆನಂದೀ ಬಾಯಿಯು "ಮರಾವೆ" ಎಂದು ತಿದ್ದಿದಂತೆಯೂ ಹೇಳುವ ಸಂಗತಿ ವಾಸ್ತವ್ಯವಾಗಿರಬಹುದೇ ಹೊರತು ಕೇವಲ ಆಜ್ಞೆಯಿಂದಲೇ ಸುಮೇರುಸಿಂಗು ತುಲ್ಯಾಪವರು ಮೊದಲಾದವರು ರಾಜ ವಧೆಗೆ ಕಾರಣರೆಂಬುವದು ಅನುಚಿತವೂ, ಸ್ವಭಾವವಿರುದ್ಧವೂ ಆಗಿರುತ್ತದೆ. ರಘುನಾಥ ರಾವು ತನಗೇನೂ ಗೊತ್ತಿಲ್ಲವೆಂದೂ, ಅನಂತರ ನಿಂದೆಯಲ್ಲಿ ತಮ್ಮ ಮೇಲೆ ಹೊರಿಸದಂತೆ ಇವರು ಒಂದು ಪತ್ರವನ್ನು ಬರೆಯಿಸಿಕೊಂಡಿರಬಹುದೇ ಹೊರತು, ಅನೇಕ ಮಂದಿ ಮಂತ್ರಿಗಳೂ, ಸೇನಾಪತಿಗಳೂ, ಸೈನಿಕರೂ ಈ ಆಲೋಚನೆಯಲ್ಲಿ ಸೇರದೆ ಹೋಗಿದ್ದರೆ, ಈ ಸಾಹಸ ಕಾರ್ಯವನ್ನು ಇವರು ಮಾಡುತ್ತಿರಲಿಲ್ಲವೆಂಬುದು ನಿಶ್ಚಯವು. ಈ ರೀತಿಯಾದ ಅನೇಕ ಸಂದರ್ಭಗಳು ನಮಗೆ ಪ್ರದರ್ಶಿಸಲ್ಪಡುವ ಕಥೆಯಲ್ಲಿ ಕಂಡು ಬರುತ್ತಿವೆ. ಕಲ್ಪನಾ ಕಥೆಗಿಂತ ಚರಿತ್ರೆಗಳೇ ನಮಗೆ ಹೆಚ್ಚಾದ ನೀತಿಯನ್ನು ಬೋಧಿಸುವುವು. ಇದೇ ಈಗಿನ ಚರಿತ್ರಕಾರರ ಅಭಿಪ್ರಾಯವಾಗಿ ಇರುವುದು. ಹಾಗಾದುದರಿಂದ ನಾವು ನಾರಾಯಣ ರಾವು ಮೊದಲು ಮಾಡಿದ ಲೋಪಗಳನ್ನು ತೋರ್ಪಡಿಸದಿದ್ದರೆ, ಈ ಕಥೆಯಿಂದ ನಾವು ತಿಳಿದುಕೊಳ್ಳ ಬೇಕಾದ ನೀತಿಯು ಸ್ವಲ್ಪವೂ ಕಂಡುಬಾರದು. ನಾರಾಯಣ ರಾಯನ ಗತಿ ನಮ್ಮ ಮನಸ್ಸುಗಳಿಗೆ ಭಾರವಿ ಹೇಳಿರುವ ಈ ನೀತಿವಾಕ್ಯವನ್ನು ಸ್ಮರಣೆಗೆ ತರುತ್ತಿರುವುದು.

ಶ್ಲೋ || ಸಹಸಾವಿದಧೀತನ ಕ್ರೀಯಾಮವಿವೇಕಃ |
ಪರಮಾಪದಾಂಪದಂ | ವೃಣತೇಹಿವಿಮೃಶ್ಯಕಾರಿಣಂ
ಗುಣಲುಬ್ಧಾಃ ಸ್ವಯಮೇವ ಸಂಪದಂ ||

ಸಂಪೂರ್ಣಂ.

ಎಂ. ಟಿ. ವಲ್ಲಭಯ್ಯಂಗಾರ್,
ಮಾಗಡಿ.

ಮೈದಾನ ಸಮಾಜದಲ್ಲಿ.

ಈ ದಿನ ಶಿವರಾತ್ರಿಯಾದ್ದರಿಂದ ಮೈದಾನ ಸಮಾಜದ ಮೆಂಬರರಲ್ಲಿ ಹಲವರು ಬಂದಿರಲಿಲ್ಲ. ಗೋವಿಂದನ್ನಾಕರು ಮೀಸೆಯ ಮೇಲೆ ಕೈಯಾಡಿಸಿ ಎಂದಿನಂತೆ ಮಾತೆತ್ತಿದರು. ಗೋವಿಂದನ್ನಾಕರು ಯಾವಾಗಲು ಸಂಭಾಷಣ ಪೂಜೆಗೆ ಪ್ರಸ್ತಾಪಮಂಟಪವನ್ನು ಕಟ್ಟುವವರು; ಇವರೇ ಸಮಾಜದ ಪಾಟಾಳಿ.

ಗೋವಿಂದನ್ನಾಕ: "ಇದೇ ತಿಂಗಳ ೧೯ನೇ ತಾರೀಕು ಸೋಮವಾರ ಪುತ್ತೂರಲ್ಲಿ ದೊಡ್ಡ ಸಂಭ್ರಮವಿತ್ತು."

"ಪುತ್ತೂರಲ್ಲಿ? ಓಹೋ, ಸರಿ ಸರಿ; ಸ್ವಾರಸ್ವತರ ಸ್ವಾಮಿಯವರ ಸ್ವಾರಿಗೆ ಸ್ವಾಗತದ ಸ್ವಾರಂಭ" ಎಂದು ವೆಂಕಟಪತಿಯು ಪ್ರಾಸಾಕ್ಷರದ ಪದಗಳಿಂದ ಉತ್ತರ ನಿರೀಕ್ಷಣೆ ಮಾಡಿದರು. ವೆಂಕಟಪತಿರಾಯರು ಕೃಷ್ಣ[illegible]ಕ್ರಿಯ ಆಫೀಸಿನಲ್ಲಿ ಕೆಲಸ ಮಾಡಿದವರೊಂದಿಗೆ ಇದ್ದರು. ಆದ್ದರಿಂದಲೇ ಪ್ರಾಸ ಪ್ರೇಮ. ಸ್ವಾರಸ್ವತ, ಸ್ವಾರಂಭ ಎಂದು ಹೇಳುವಾಗಲೂ ಪ್ರಾಸ ಮರ್ಯಾದೆಯನ್ನು ಬಿಡಲೊಲ್ಲರು.

ಇದಕ್ಕೆ ಉತ್ತರವಾಗಿ ಪುತ್ತೂರಿಂದ ಬಂದ ಹೊಸ ಮೈದಾನ ಮೆಂಬರರು "ಅದು ನನಗೆ ಗೊತ್ತಿದೆ. ನಮ್ಮ ಮೋಳಹಳ್ಳಿ ಶಿವರಾಯರಿಗೆ ಆ ದಿನ ದರ್ಬಾರ್ ಸರ್ಟಿಫಿಕೇಟನ್ನು ಬಹಿರಂಗವಾಗಿ ಕೊಟ್ಟರಂತೆ" ಎಂದರು.

'ಬಹಿರಂಗವಾಗಿ ಕೊಟ್ಟರಂತೆ' ಎಂಬೀ ಎರಡು ನುಡಿಗಳು ಮುದುಕಯ್ಯನವರ ಕಿವಿಗೆ ರುಚಿಯಾಗಲಿಲ್ಲ. ಅವರು ಆ ಪುತ್ತೂರಿನ ಹೊಸಬನನ್ನು ಕನ್ನಡಕದೊಳಗಿನ ಕಣ್ಣುಗಳಿಂದ ತೂರಿಕೊಂಡು ನೋಡುತ್ತಾ "ಸರ್ಟಿಫಿಕೇಟ್ ಕೊಡುವದರಲ್ಲಿ ಬೊಬ್ಬೆ ಯಾಕೆ? ೯ ವರ್ಷಗಳ ಹಿಂದೆ ನಮಗೆ ಸರ್ಟಿಫಿಕೇಟ್ ಕೊಟ್ಟಾಗ ಸಭೆಯಿಲ್ಲ, ಸಂತೆ ಇಲ್ಲ. ಈಗ ಚಿಲ್ಲರೆ ಸಂಗತಿಗಳಲ್ಲಿ ಕೂಡ ಈ ಪುತ್ತೂರಿನವರು—

ಮಾತು ಕೊನೆಗಾಣುವಷ್ಟರಲ್ಲಿ ವೆಂಕಟಪತಿಯು "ಗಳಗೆಯ ಗೆಲಸಕ್ಕೆ ಗದ್ದಲ ಗಲಭೆ ಗವುಜಿ, ಗಲಿಬಿಲಿ ಗುಡುಗು" ಎಂದು ಪ್ರಾಸದ ಮಳೆ ಸುರಿದರು.

ಕಚೇರಿಯಿಂದ ಆಗಲೇ ಬಂದ ನಾಗಯ್ಯನವರು ಇದನ್ನೆಲ್ಲಾ ನಿಂತು ಕೇಳುತ್ತಿದ್ದರು. "ಮುದುಕಯ್ಯ, ನಿಮಗೆ ಸರ್ಟಿಫಿಕೇಟು ಸಿಕ್ಕಿದ್ದು ಅಂತರಂಗದಲ್ಲಿ; ಈಗ ಸರ್ಟಿಫಿಕೇಟು ಕೊಡುವದು ಬಹಿರಂಗದಲ್ಲಿ. ಕಳವಿನ ಮ್ಹಾಲು ಕತ್ತಲಲ್ಲಿ, ರತ್ನದ ವ್ಯಾಪಾರ ಹಗಲಿನಲ್ಲಿ" ಎಂದು ಹೇಳಿ ಜೋಡನ್ನು ಸಡಿಲಿಸಿ, ರುಮಾಲನ್ನು ನೆಲದ ಮೇಲೆ ಇಟ್ಟು ಕೂತುಕೊಂಡರು. ಆ ಮಾತಿಗೆ ಪ್ರಾಯ ಹೋದವರು ನಗಾಡಿದರು; ಯುವಕರು ಮೊಗಮೊಗ ನೋಡಿದರು.

ಮುದುಕಯ್ಯನವರಿಗೆ ಕರ್ಜನ್ ದರ್ಬಾರಿನಲ್ಲಿ ಸಿಕ್ಕಿದ ಸರ್ಟಿಫಿಕೇಟು ಸುದ್ದಿಯು ತರುಣ ಮೆಂಬರರಿಗೆ ಗೊತ್ತಿರಲಿಲ್ಲ. ಸರ್ಟಿಫಿಕೇಟ್ ಸಂಪಾದನೆಗೆ ಮುದುಕಯ್ಯನವರು ಹಲವು ಕಾಲ ಒದ್ದಾಡಿದ್ದರು. ಕೊನೆಗೆ ಯಾರೋ ಒಬ್ಬ ಕಲೆಕ್ಟರರು ಇವರ ಮೇಲೆ ಪ್ರಸನ್ನರಾದರು. ಆ ದೊರೆಗಳ ಕಾಲದಲ್ಲಿ ಮುದುಕಯ್ಯನವರೇ ದೊಡ್ಡ ವಕೀಲರು—ಮುಖ್ಯವಾಗಿ ಗಂಡಂದಿರ ಮೇಲೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಮುಂದೆ ಅಶನಾರ್ಥಕ್ಕಾಗಿ ಹೆಂಡಿರು ತರುವ ಮೊಕದಮೆಗಳಲ್ಲಿ ಅವರ ಕಾಲದಲ್ಲಿ ಮುದುಕಯ್ಯನವರು ವಿದ್ಯಾಹೀನವಾಗಿ ಪಶು ಸಮಾನವೆಂದು ತಿಳಿಯಲ್ಪಡುವ ಹಿಂದೂ ಸ್ತ್ರೀಯರ ಜನ್ಮವನ್ನು ಉದ್ಧರಿಸುವದರಲ್ಲಿ ಇವರು ದೊರೆಗೆ ಸಹಾಯವಾಗಿ ಸೊಂಟ ಕಟ್ಟಿದರು. ಕಲೆಕ್ಟರ್ ದೊರೆ ಹಟ್ಟಿನ್, ಇವರು ಮಹಾ ಹಿತವಾದಿಗಳೆಂದು ಮುದುಕಯ್ಯನವರು ಅವರ ಪಾದಪೂಜೆ ಮಾಡುತ್ತಿದ್ದರು. ದೊರೆಗಳು ಕಳದ ದರ್ಬಾರ್ ಕಾಲದಲ್ಲಿ 'ಹಿಂದೂ ಸ್ತ್ರೀಯರನ್ನು ನಾನಾ ವಿಧವಾಗಿ ಮೇಲೆ ಎತ್ತಿದ್ದಕ್ಕಾಗಿ ಮುದುಕಯ್ಯನವರು ಮಾಡಿದ ಪ್ರಜಾನುಕೂಲ ಸೇವೆಗೆ' ಎಂದು ಒಂದು ಸರ್ಟಿಫಿಕೇಟನ್ನು ಮುದುಕಯ್ಯನವರಿಗೆ ತರಿಸಿಕೊಟ್ಟಿದ್ದರು.

ಇದೆಲ್ಲಾ ನಾಗಯ್ಯನವರಿಗೆ ಗೊತ್ತಿತ್ತು. ಆದ್ದರಿಂದಲೇ "ಮುದುಕಯ್ಯಾ, ನಿಮಗೆ ಸರ್ಟಿಫಿಕೇಟ್ ಸಿಕ್ಕಿದ್ದು ಅಂತರಂಗದಲ್ಲಿ" ಎಂದು ಹೇಳಿದರು. ನಗು ನಿಂತ ಕೂಡಲೇ ನಾಗಯ್ಯನವರು "ಆ ಕಾಲದಲ್ಲಿ ಇಂಥಾ ಬಹುಮಾನ ಪತ್ರಗಳು ಚಳಿಗಾಲದ ಆಲದ ಮರದ ಎಲೆಗಳಂತೆ ಧಾರಾಳವಾಗಿ ಉದುರುತ್ತಿದ್ದವು; ಈ ವರ್ಷ ಅವು ಕಸಿಮಾವಿನ ಹೊಸ ಹಣ್ಣುಗಳಂತೆ ಬಹು ಪ್ರಿಯವಾಗಿವೆ," ಎಂದರು. ಎರಡು ನಿಮಿಷ ಯಾರೂ ಮಾತಾಡಲಿಲ್ಲ.

ಸಂಭಾಷಣೆಯ ದಾರವು ತಟ್ಟನೆ ತುಂಡಾಗುವದನ್ನು ಕಂಡು ಸಮಾಜದ ಪಾಟಾಳಿಯು "ಹಾಗೇನೂ ಇಲ್ಲ, ನಮ್ಮ ಜಿಲ್ಲೆಯಲ್ಲಿ ಸರ್ಟಿಫಿಕೇಟಿನ ಬೆಳೆಯು ಈ ವರ್ಷವು ಸಾಕಷ್ಟು ಹುಲುಸಾಗಿದೆ" ಎಂದು ಮಾತಿನ ದಾರಕ್ಕೆ ಗಂಟು ಹಾಕಿದರು.

"ಈ ವರ್ಷ ಯಾರಿಗೆಲ್ಲಾ ಸರ್ಟಿಪ್‌ಕೇಟು ಸಿಕ್ಕಿತು?" ಎಂದು ಮೈನಾತ ಭಟ್ಟರು ಕೇಳಿದರು.

"ಕೆ. ಪಿ. ರಾಮರಾಯರು, ಲಕ್ಷ್ಮಿನಾಥ ಸ್ವಾಮಿಜಿಯರು, ಸುಜೀರ ರಘುನಾಥಯ್ಯನವರು—ಇನ್ನು ರಾಶಿ ಹೆಸರುಗಳು, ಸ್ವದೇಶಾಭಿಮಾನಿಯಲ್ಲಿ ಬಂದಿತ್ತು."

"ಇನ್ಯಾರಿಗೆ ದೊರೆತಿದೆ? ನಕ್ರಾಜೆ ಅಪ್ಪಣ್ಣ ಗೆಡರಿಗೆ ಸಿಕ್ಕಿದೆಯೋ? ಅವರು ಹಲವು ಕಾಲದಿಂದ ಬೋರ್ಡ ಮೆಂಬರರಾಗಿ ಕಲೆಕ್ಟರರ ಸಂಗಡ ಬಹು ಸರ್ತಿ ತಿರುಗಿದ್ದಾರೆ. ನಾಗಯ್ಯ—"ಸರಿ; ಕಲೆಕ್ಟರರು ಮಾತ್ರ ಅವರ ಸಂಗಡ ತಿರುಗಲಿಲ್ಲ."

ಈ ಮಾತಿಗೆ ಎಲ್ಲರೂ ಹೂಂ ಹೂಂ ಎಂದರು.

"ನಮ್ಮ ಸೀಮೆಯ ರಾಯ್ಜಿಗೆ ಹ್ಯಾಗೆ ಸಿಕ್ಕಿತು?"

ನಾಗಯ್ಯ: "ಅದೋ? ರಾಯ್ಜಿಯರು ಎಲ್ಲ ಕೆಲಸಗಳಲ್ಲಿ ತಲೆಹಾಕುತ್ತಾರೆ, ರಸ್ತೆಯಲ್ಲಿ ತಲೆಹಾಕುತ್ತಾರೆ, ಶಾಲೆಯಲ್ಲಿ ತಲೆಹಾಕುತ್ತಾರೆ, ಅಬಕಾರಿಯಲ್ಲಿ ತಲೆಹಾಕುತ್ತಾರೆ—ಆದ್ದರಿಂದಲೇ ಸಿಕ್ಕಿತು."

"ಗೌಡರು ಅವರ ಹಾಗೆಯೇ ಅಲ್ಲವೇ? ಅವರಿಗೆ ಯಾಕೆ ಕೊಡಲಿಲ್ಲ?"

ನಾಗಯ್ಯ: "ನನಗೆ ಗೊತ್ತಿಲ್ಲ. ಅಪ್ಪಣ್ಣ ಸೆಟ್ಟರು ಯಾವಾಗಲು ಮುಂಡಾಸಿನೊಳಗನೇ ತಲೆಯನ್ನು ಬೈತಿಡುತ್ತಾರೆ. ಮುಂಡಾಸಿಲ್ಲದ ಬರಿತಲೆಯನ್ನು ದೊರೆಗಳು ನೋಡುವದಿಲ್ಲ."

ಮುದುಕಯ್ಯ: "ಹಾಗಾದರೆ ಕುಪ್ಪಾಯಿ ಬ್ಯಾರಿಗೆ ಮಲಬಾರದಲ್ಲಿ ಯಾಕೆ ಸಿಕ್ಕಿತು?

ನಾಗಯ್ಯ: "ಬ್ಯಾರಿ ಸಾಲೆಯೆಂದು ಹೇಳಿ ಭೇರಿ ಹೊಡೆದ್ದಕ್ಕೆ."

ರಾಮರಾವ್: "ನಾಗಯ್ಯ, ನಿಮಗ್ಯಾಕೆ ದೊರೆಯಲಿಲ್ಲ?"

ನಾಗಯ್ಯ: "ನಾವು ಈ ರೀತಿ ಮಾತಾಡಬೇಕೆಂತಲೇ ನಮಗೆ ಕೊಡಲಿಲ್ಲ. ಆದ್ದರಿಂದಲೇ ನನ್ನ ತಂದೆಯವರಿಗೆ ೧೮೫೭ರಲ್ಲಿ ಮಹಾರಾಣಿಯವರು ದಯಪಾಲಿಸಿದ ಸರ್ಟಿಫಿಕೇಟನ್ನು ನನ್ನ ಮಗನ ಹೊಸ ಪುಸ್ತಕದ ಬ್ಯಾಂಡಿಗೆ ಎಂದು ನಿನ್ನೆ ಕೊಟ್ಟುಬಿಟ್ಟೆ."

ಎಲ್ಲರೂ ನಕ್ಕುಬಿಟ್ಟರು.

ಮುದುಕಯ್ಯ: "ನಾಗಯ್ಯ, ಮೋಳಹಳ್ಳಿ ಶಿವರಾಯರಿಗೆ ಏತಕ್ಕೆ ಕೊಟ್ಟರು?"

ನಾಗಯ್ಯ: "ಅವರಿಗೆ ಕೊಟ್ಟದ್ದರಲ್ಲಿ ನಮ್ಮ ಆಕ್ಷೇಪವಿಲ್ಲ. ಮೊಳಹಳ್ಳಿ ಶಿವರಾಯರು ಮೊದಲು ಪುತ್ತೂರು ಕ್ಲಬ್ಬಿನ ಪುರೋಹಿತರು, ವರ್ಗದಾರರ ಸಂಘದ ದೀಕ್ಷಿತರು, ದರ್ಬಾರ ದೇವತೆಯ ಭಕ್ತರು. ಜನರ ಪಕ್ಷವಾಗಿ ಮುನ್ಸಿಫರೊಡನೆ ಹತ್ತಾಹತ್ತಿ ಮಾಡಿದವರು; ಹಳ್ಳಿಯವರ ಪರವಾಗಿ ವಿದ್ಯಾ ಇಲಾಖೆಯವರನ್ನು ಎಚ್ಚರಿಸಿದವರು; ಜಂಗ್ಲಿ ಇಲಾಖೆಯ ಕೆಳನೌಕರರ ಕಿವಿ ಹಿಂಡಿಸಿದವರು. ಪುತ್ತೂರು ಕೊಪರೇಟಿವ್ ಕ್ರೆಡಿಟ್ ಸಂಘದ ಮೂಲಸ್ತಂಭ; ಪುತ್ತೂರು ಥಿಯೊಸಫಿ ಕೂಟದ ದ್ವಾರಬಂಧ; ಪುತ್ತೂರು ಜನರ ಕ್ರಿಯಾಕಲಾಪಗಳಿಗೆ ತವರುಮನೆ."

ಮುದುಕಯ್ಯ: "ಇವರಿಗಿಂತ ಹಲವು ದೊಡ್ಡ ಮನುಷ್ಯರು ಪುತ್ತೂರಲ್ಲಿ ಇದ್ದಾರೆ. ಅಂಥವರನ್ನು ಬಿಟ್ಟು ಈ ಪುಟ್ಟ ಹುಡುಗನಿಗೆ ಬಹುಮಾನ ಪತ್ರವಂತೆ."

ನಾಗಯ್ಯ: "ಹಳೆ ಮುಂಡಾಸಿನ ಮುಖಕ್ಕೆ ಮಸಿ ಹಚ್ಚಬೇಕೆಂತಲೇ ಹೊಸ ಟೊಪ್ಪಿಗೆ ಸರ್ಟಿಫೀಕೇಟು. ಅಷ್ಟೇ ಅಲ್ಲ, ಶಿವರಾಯರು ಬೇರೆಯವರಿಗೆ ಸರ್ಟಿಫಿಕೇಟು ಮಾರಲಿಕ್ಕಿಲ್ಲ ಎಂಬ ಭರವಸೆ ಇದ್ದದರಿಂದಲೇ ಅವರಿಗೆ ಅದನ್ನು ಕೊಟ್ಟಿದ್ದಾರೆ."

"ಸರ್ಟಿಫಿಕೇಟ್ ಮಾರುವದಂದರೆ ಏನರ್ಥ?" ಈ ಪ್ರಶ್ನೆಗೆ ಒಂದು ಗಳಿಗೆಯವರೆಗೆ ಯಾರ ಬಾಯಿಂದಲೂ ಉತ್ತರ ಹೊರಡಲಿಲ್ಲ. ಕೊನೆಗೆ ನಾಗಯ್ಯನವರು "ಹಿಂದೆ ನನ್ನ ತಂದೆಯು ಸರ್ಟಿಫಿಕೇಟ್ ಬಲದಿಂದ ೧೦ ಕೋರ್ಜೆ ಅಕ್ಕಿ ಸ್ಥಳವನ್ನು ಮಾಡಿ ಹಾಕಿದರು. ಅವರು ಡಿಪ್ಯುಟಿ ಮೆಜಿಸ್ಟ್ರೇಟರ ಅಂಗಿಯ ಜೇಲಕ್ಕೂ ತನ್ನ ಕೈಗೂ ಗಂಟುಬಿದ್ದಿದೆ ಎಂದು ಕ್ರಿಮಿನಲ್ ಮೊಕದಮೆಗಳಲ್ಲಿ ಸಿಕ್ಕಿಬಿದ್ದ ಹಳ್ಳಿಯ ಜನರಿಗೆ ಈ ಸರ್ಟಿಫಿಕೇಟು ತೋರಿಸಿ ತನಗೆ ಬೇಕಾದ್ದನ್ನು ಪಡೆಯುತ್ತಿದ್ದರು. ಬೋರ್ಡ ಪ್ರೆಸಿಡೆಂಟರ ಕಿವಿಗೂ ತನ್ನ ಬಾಯಿಗೂ ಮುದ್ದಾಟವಿದೆ ಎಂದು ನಂಬಿಸಿ ಚಿಲ್ಲರೆ ಕಂಟ್ರಾಕ್ಟುಗಳಿಂದ ಇಷ್ಟ ಸಾಧಿಸುತ್ತಿದ್ದರು—ಏಕೆ ಎದ್ದಿರಿ? ಹೊತ್ತಾಯಿತೇ?" "ನೀವು ಬಾಯಿಗೆ ಬಂದಂತೆ ಬಗಳುತ್ತೀರಿ. ಈ ಮಾತುಗಳೆಲ್ಲಾ ಪುತ್ತೂರು ವರೆಗೆ ಹೋಗುತ್ತನೆ. ಇವನ್ನು ಕೇಳಿದರೆ ಯಾರು ಏನಂದಾರು?"

ನಾಗಯ್ಯ: "ಸ್ವಾಮಿ, ನಾವು ಯಾರನ್ನೂ ದೂಷಿಸಲಿಲ್ಲ. ದೂಷಿಸಿದರೂ ಮೊಳಹಳ್ಳಿ ಶಿವರಾಯರು ನನ್ನ ಮೇಲೆ ಸಿಟ್ಟಾಗರು."

ಅಷ್ಟರಲ್ಲಿ ಎಲ್ಲರೂ ಎದ್ದರು. ಹಿಂದುಗಡೆಯಿಂದ ಒಬ್ಬನು "ಯಾಕೆ ಸಿಟ್ಟಾಗರು?" ಎಂದನು.

ರಾಮರಾವ್—"ಅವರಲ್ಲಿ ಕೂಡ ನಾಗಯ್ಯನ ಗುಣವಿದೆ. ಕಂಡದ್ದನ್ನು ಹೇಳುವದು, ಹೇಳುವಾಗ ಚುಚ್ಚು ಮಾತಿನಿಂದ ಬೆನ್ನಿಗೆ ಸುಟ್ಟಿಡುವದು, ಆ ಮೊನೆಮಾತಿಗೆ ಮರುಮಾತು ಹೇಳಬರುವುದಿಲ್ಲ.

ನಾಗಯ್ಯ: "ಸರಿ, ಅದನ್ನು ನಾನೂ ಕೇಳಿದ್ದೇನೆ. ಅವರ ಮಾತಿನಿಂದ ನೆತ್ತರು ಸಿಡಿಯುವದಿಲ್ಲ, ಹುಣ್ಣಾಗುವದಿಲ್ಲ, ಗಾಯ ಕೂಡಾ ಆಗುವದಿಲ್ಲ. ಒಂದು ನಿಮಿಷ ಮೈ ಜುಮ್ಮೆನ್ನುತ್ತದೆ, ಮತ್ತೆ ಅವರ ನಗುವಿನಲ್ಲಿ ಅದು ತಾನೇ ಆರಿಹೋಗುತ್ತದೆ.

ಮುಖ್ಯ ಅವರ ಮಾತಿನ ಮಜ್ಜಿಗೆಯಲ್ಲಿ ಹುಳಿ ಕಡಿಮೆ, ಆದ್ದರಿಂದಲೇ ನಾಲಿಗೆಗೆ ಕಾರ ಕಾಗುತ್ತದೆ."

ಈ ಹೊತ್ತಿನ ಮೈದಾನ ಸಮಾಜ ಬರ್ಖಾಸ್ತು ಆಗುವ ಮುಂಚೆ ನನ್ನದೊಂದು ಅರಿಕೆ. ವಯಸ್ಸಿನಲ್ಲಿ ವೃದ್ಧರಾದರೂ ಯೌವನಸ್ಥರಂತೆ ಪ್ರಜಾನುಕೂಲ ಸೇವೆ ಮಾಡಿದ್ದಕ್ಕೆ ಹಲವರಿಗೆ ಹಿಂದೆ ಸರ್ಟಿಫಿಕೇಟು ಸಿಕ್ಕಿದೆ ಎಂದು ಕೇಳುತ್ತೇನೆ. ಮೊಳಹಳ್ಳಿ ಶಿವರಾಯರು ಮಾತ್ರ ಯುವನದಲ್ಲಿ ಇದನ್ನು ಪಡೆದದ್ದಕ್ಕೆ ಮೈದಾನ ಸಮಾಜದ ಪರವಾಗಿ ನನ್ನ ಉತ್ತರೋತ್ತರ ಆಶೀರ್ವಾದ. ಸಮಾಜದ ರೂಲುಗಳಿಗೆ ಅನುಗುಣವಾಗಿ ಯಾರಿಗೂ ರಾಜೀಶ್ರಿ ಮೊದಲಾದ ಬಿರುದುಗಳು ಕೊಡುವ ಸಾಂಪ್ರದಾಯವಿಲ್ಲ.

ಸಭಾಲೇಖಕ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಧರ್ಮಸ್ಥಾಪನೆಗಳು.

ಈ ಜಿಲ್ಲೆಯ ಹಲವು ಕಡೆಗಳಲ್ಲಿ ದೈವದ ಕಲಾಮತಿ (ಜನರನ್ನು ಪೀಡಿಸಿ ದುಡ್ಡು ಸಂಪಾದಿಸುವಂಥಾ ಮಹಾಶಕ್ತಿ) ಉಳ್ಳ ಸಂಸ್ಥೆಗಳೆಂದು ಪ್ರಸಿದ್ಧಿಗೆ ಬಂದ ಸ್ಥಳಗಳು ಅನೇಕ ಇದ್ದು ವರುಷಂಪ್ರತಿ ಆಗುವ ಜಾತ್ರೆ, ನೇಮ (ಭೂತದ ಕೋಲ) ವಗೈರೆ ಕಾಲಗಳಲ್ಲಿ ನೂರಾರು ರೂಪಾಯಿಗಳು ಹರಿಕೆ ಬರುತ್ತಾ ಇದೆ.

ಇಂಥಾ ಸಂಸ್ಥೆಗಳ ಆಡಳಿತೆಯು ಒಬ್ಬೊಬ್ಬರು (ಯಾ ಮೂರು ನಾಲ್ಕು ಮಂದಿ) ಮಹಾನುಭಾವರ ತಾಬೆಯಲ್ಲಿದ್ದು ಅದರ ವಿನಿಯೋಗಗಳು ನಡಿಸಿ ಬರುತ್ತಾರೆ. ಇವುಗಳಲ್ಲಿ ಕೆಲವು ಸರಕಾರದಿಂದ "ತಸ್‌ದೀಕ್" ಎಂಬ ಸಹಾಯದ್ರವ್ಯ ಹೊಂದುವಂಥಾದ್ದಾದರೂ ಅಂಥಾ ಸಂಸ್ಥೆಗಳ ವಿಚಾರವು ಕಮಿಟಿ ಮೆಂಬರರ ತಾಬೆಗೆ ಈ ಮೊದಲೇ ವಹಿಸಿಕೊಟ್ಟ ಮೇರೆಗೆ ಅವರು ನಡಿಸಿ ಬರುವರೆಂಬ ಭರವಸದ ಮೇಲೆ ಅಂಥಾ ಸ್ಥಾಪನೆಗಳ ಆದಾಯ ವೆಚ್ಚಗಳನ್ನು ಸರಕಾರದವರು ನೋಡುವದಿಲ್ಲ. ಕಮಿಟಿ ಮೆಂಬರರೆಂಬವರಲ್ಲಿ ಅನೇಕರಿಗೆ ತಮ್ಮ ಅಧಿಕಾರಕ್ಕೆ ಒಳಪಟ್ಟ ಸ್ಥಾಪನೆಗಳು ಯಾವಯಾವದು, ತಮ್ಮ ಕರ್ತವ್ಯವೇನು ಇತ್ಯಾದಿ ಗೊತ್ತೇ ಇಲ್ಲ ಎಂಬದಾಗಿ ತಿಳಿಯುತ್ತದೆ.

ಪ್ರಸಿದ್ಧಿಗೆ ಬಂದ ಸ್ಥಾಪನೆಗಳಲ್ಲಿ ಹೆಚ್ಚಿನವು ದೇವಸ್ಥಾನಗಳಲ್ಲದ ದೈವ ಸ್ಥಾನ (ಭೂತಸ್ಥಾನ)ಗಳು ಆಗಿರುತ್ತದೆ. ವಿದ್ಯಾಹೀನತೆ ಮೊದಲಾದ ಕಾರಣಗಳಿಂದ ವಿಚಾರಶಕ್ತಿ ಕಮ್ಮಿ ಇರುವ ವ ಪುರಾತನ ಪದ್ಧತಿಯೆಂಬ ಪಾಶಬದ್ಧರಾಗಿರುವವರು ಕೂಡಾ ದೇವರಿಗಿಂತಲೂ ಭೂತಗಳನ್ನು ಬಹಳವಾಗಿ ನಂಬುತ್ತಾರೆ. ಮುಖ್ಯ "ಕಲಿಯುಗದಲ್ಲಿ ದೇವತಾಶಕ್ತಿ (ಸರ್ವತ್ರಾಣಿಯಾದ ಮಹಾ ಪರಿಶುದ್ಧ ದೇವರೊಬ್ಬನು) ಇಲ್ಲವೆಂದೇ ಅನೇಕರು ನಂಬಿ ಸರ್ವ ಶಕ್ತಿಯೂ ಭೂತಗಳೆಂಬ ಪೀಡನೆ ಕೊಡುವ ದೇವತೆಗಳಲ್ಲಿದೆ ಎಂದು ಅವುಗಳನ್ನು ಆರಾಧಿಸುತ್ತಾರೆ. (ಪೀಡನೆ ಕೊಡುವುದೇ ಭೂತಗಳೆಂದು ಪ್ರಬಲವಾಗಿ ನಂಬಿಕೊಂಡಿರುವಿಕೆ) ಅದರಲ್ಲೂ ಶೂದ್ರರೆಂಬ ಅಭಿದಾನ ಧರಿಸಿದವರೆಲ್ಲಾ ಭೂತದ ಹೆಸರು ಎತ್ತಿ ಹೇಳಿದರೆ ಮುಂದಡಿ ಇಡಲಾರದವರಾಗಿದ್ದಾರೆ. ಪ್ರತಿ ಒಂದು ಕಾಹಿಲೆ ಕಸಾರಿಕೆಗಳಲ್ಲಿ, ಕಡೆಗೆ ಗುಡ್ಡೆಗೆ ಮೇವಿನ ಬಗ್ಯೆ ಬಿಟ್ಟ ಜಾನುವಾರನ್ನು ಗೋವಾಳನು ಬಿಟ್ಟು ಬಂದಲ್ಲಿ ಸಹಾ ದೈವದ ಉಪದ್ರವೆಂದು ತಟ್ಟನೆ ಪ್ರಶ್ನೆ ಹೇಳುವ ಮಹನೀಯರ ಬಳಿಗೆ ಹೋಗುವರು. ಪ್ರಶ್ನೆ ಹೇಳಲಿಕ್ಕೆ ಕೆಲವು ಬ್ರಾಹ್ಮಣರೂ ಭೂತ ಕಟ್ಟುವ ಇತ್ಯಾದಿ ಜಾತಿಗಳವರೂ ಚನ್ನಾಗಿ ಕಲಿತುಕೊಂಡಿದ್ದಾರೆ. ಅವರು ಎತ್ತಿ ಹೇಳುವುದೇ ಪ್ರಥಮ ಗ್ರಾಮದೈವದ ಉಪದ್ರ ವ ಬೇರೆ ನೂರಾರಿದೆ. ಇದರ ಸತ್ಯಾಸತ್ಯ ವಿಚಾರ ಹಾಗಿರಲಿ.

ದೈವಗಳ ಕಲಾಮತಿಯೆಂಬ ನೆವನದಿಂದ ಅದರ ಆಡಳಿತೆ ನಡಿಸುವ ಮಹಾನುಭಾವರಿಗೆ ವರುಷ ಒಂದರ ನೂರಾರು ರೂಪಾಯಿಗಳ ಆದಾಯವು ನಿಶ್ಚಯವಾಗಿ ದೊರಕುತ್ತದೆ. ಮುಖ್ಯ ಈ ಆಡಳಿತೆದಾರರ ಪೂರ್ವಜರು ಸಂಪಾದಿಸಿದ ಆಸ್ತಿಗಳಲ್ಲಿ ಶ್ರಮವಿಲ್ಲದೆ ಉತ್ಪತ್ತಿಯಾಗುವ ಸ್ಥಿರ ಆಸ್ತಿ ಇದೊಂದೇ ಎಂದು ಹೇಳಬಹುದು. ಇದರ ಕೃಷಿಯು ದೈವದ ಪಾತ್ರಿ (ದೈವವೇ ತನ್ನಲ್ಲಿ ವಾಸವಾಗಿದೆ ಎಂದು ಧರಿಸಿಕೊಂಡು ಹೇಳುವವ)ಮತ್ತು ಇನ್ನೊಬ್ಬ ದೈವದ ಪ್ರತಿರೂಪವೆಂದು ವಿಕಾರ ರೂಪವನ್ನು ಕಟ್ಟಿಕೊಳ್ಳುವವ—ಇವರಿಬ್ಬರು ಧನಿಯ ಸೇವಕರಾಗಿ ನಡಿಸುವದು ಸಾಲದುದಕ್ಕೆ ದೈವದ ಚೊಚ್ಚಲು ಮಗನಂತೆ ರಂಜಿಸುವ ಎಚಮನುಷ್ಯನು ಪಂಚಾಯತಸ್ಥನಾಗಿ ಬೇಕಾದ ವಿಲೆವಾರಿಗಳು ಮಾಡುತ್ತಾನೆ. ಆಗ ಹೆದರಿ ಬೇಕಾದ ಹಣ ಶೇಖರವಾಗುವುದು. ಹೀಗೆಯೇ ಕೂಡಿದ ಹಣದಲ್ಲಿ ತತ್ಕಾಲಿಕ ಅಲ್ಲಿಯ ಡಂಬದ ಕೆಲಸಗಳಿಗಾಗಿ ವೆಚ್ಚಮಾಡಿ ನೂರಾರು ರೂಪಾಯಿಗಳನ್ನು ತನ್ನ ಉಪಯೋಗಕ್ಕೆ ಗಳಿಸಿಕೊಳ್ಳುತ್ತಾನೆ. ಹರಿಕೆಯು ನಗದಿಯಾಗಿಯೂ, ಪಶುಗಳಾಗಿಯೂ, ಸಾಮಾನುಗಳಾಗಿಯೂ ದೊರಕುವುದು. ಒಂದೇ ಒಂದು ಹಗಲಿರುಳಿನೊಳಗೆ ನೂರಾರು ರೂಪಾಯಿಗಳನ್ನು ಗಂಟುಕಟ್ಟುವ ಮಹಾನುಭಾವರು ದೈವಭಕ್ತಿ ಪರಾಯಣರೆಂತ ಲೋಕಪ್ರಸಿದ್ಧಿಗೆ ಬರುವುದೇ ಪರಮಾಶ್ಚರ್ಯವಲ್ಲವೇ?

ಇದೇ ಮಾದರಿಯಲ್ಲಿ ವರುಷಂಪ್ರತಿ ಸಾವಿರ ರೂಪಾಯಿಗಳಂತೆ ಗಂಟುಕಟ್ಟುವ ಧರ್ಮಸ್ಥಾಪನೆಗಳು ಅಲ್ಲ್ಯಲ್ಲಿ ಕಂಗೊಳಿಸುತ್ತಾ ಇದೆ.

ಭಕ್ತಾದಿಗಳು ಹಣ ಕೊಡುತ್ತಾರೆ ವಿನಹಾ ಅದು ಹೊಂಡಕ್ಕೆ ಬಿತ್ತೋ ದಂಡ ಆಯಿತೋ ಎಂತ ಗ್ರಹಿಸುವುದು ಸಹಾ ಇಲ್ಲ. ಸ್ವಾರ್ಥಜನರು ತಿಂದುಹಾಕುವುದೇ ದೈವಕಲಾಮತಿಯಾಗಿದೆ!

ಈ ತರದ ಕೆಲಸಗಳಿಗಾಗಿಯೇ ಕಲಿಗಾಲದ ಅವಶ್ಯಕತೆ ಉಂಟಾದುದು. ಇಂಥಾ ಅಪೂರ್ವ ಕಾಲಸ್ಥಿತಿಯನ್ನು ಹೋಗಲಾಡಿಸಿದರೆ ದೈವಸ್ಥಾಪನೆಗಳ ಆಡಳಿತೆದಾರರಿಗೆ ಎಷ್ಟೊಂದು ವ್ಯಸನವುಂಟಾಗಲಾರದು.!

ಆದುದರಿಂದಲೇ ವಿದ್ಯೆ ಎಂಬುದು ಗುಟ್ಟಿನ ವಿಷಯವಾಯಿತು. ಶಾಸ್ತ್ರಾದಿಗಳನ್ನು ಶೂದ್ರರು ಕಲಿಯಬಾರದೆಂದಾಯಿತು. ವಿದ್ಯೆ ಕಲಿತ ಅಂತ್ಯಜರಿಗೆ ಶಾಪವಿಯ್ಯುವ ಕಾಲಬಂತು.

ಸ್ವಾರ್ಥಪರರಾದ ಮಹಾನುಭಾವರು ಅಂತ್ಯಜರ ವಿದ್ಯಾಪ್ರಚಾರಕ್ಕೆ ಮನನೊಂದುವರು. ತಮ್ಮಿಂದ ಸಾಧ್ಯವಾದಷ್ಟು ಅನಾನುಕೂಲತೆಗಳನ್ನು ಕಲ್ಪಿಸುವರು.

ಪಾರಮಾರ್ಥಿಕ ವಿಚಾರವನ್ನು ಗ್ರಹಿಸಲಿಕ್ಕಾಗಿ ಈ ಲೇಖನವು ಬರೆಯಲ್ಪಟ್ಟಿದೆ. ದೈವಗಳ ಅಥವಾ ಭೂತಗಳ ಪ್ರತಾಪವಿರುವುದು ನಿಜವೋ ಸುಳ್ಳೋ ನಾನರಿಯೆ. ದೈವಗಳ ಹೆಸರಿನಿಂದ ಸಂಗ್ರಹವಾಗುವ ಧನವೊಂದು ಕಂಡುಬರುತ್ತಾ ಇದೆ. ವಿದ್ಯಾವಂತ ವಿಚಾರವುಳ್ಳ ಮಹನೀಯರು ಈ ಲೇಖನವನ್ನು ವಿಚಾರಿಸುವರೆಂತ ನಂಬುತ್ತೇನೆ.

ಇಂತಿ ವಿಮರ್ಷಾಭಿಲಾಷಿ,

M- Shrinivasiah.

ಅಯ್ಯಾ,

ನಿಮ್ಮ ಇದೇ ತಿಂಗಳ ೧೬ನೇ ಸಂಚಿಕೆಯಲ್ಲಿ ಮುಲ್ಕಿಯ ಬಾತ್ಮೀದಾರರು ಬರೆದ ಕೆಲವು ಸಂಗತಿಗಳು ಯತಾರ್ಥವಾದವುಗಳಲ್ಲ. ಸದರಿ ಬಾತ್ಮಿಯು ಉತ್ತರಕ್ಕೆ ಅರ್ಹವಲ್ಲವೆಂಬದು ಬಹುಶಾ ತೋರಿದರೂ ನಿಮ್ಮ ವಾಚಕರ ಪೈಕಿ ಯೋಗ್ಯರಾಗಿರಬಹುದಾದ ಕೆಲವರು ತಪ್ಪು ಗ್ರಹಿಕೆಯಿಂದ ಏನೇನೋ ಕಲ್ಪಿಸಿಕೊಳ್ಳದಂತೆ ಈ ಕೆಳಗಿನ ಉತ್ತರವನ್ನು ಬರೆದಿರುವೆನು. ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಸ್ಥಳವನ್ನೀಯುವಿರಾಗಿ ನಂಬುತ್ತೇನೆ.

ಕೆಲವು ಸಾರಸ್ವತ ಗೃಹಸ್ಥರು ಗೌಡಸಾರಸ್ವತ ಒಬ್ಬ ಗೃಹಸ್ಥರಲ್ಲಿ ಭೋಜನ ಮಾಡಿದ್ದೆಂಬದು ಕೇವಲ ಆಯಾ ವ್ಯಕ್ತಿಗಳೊಳಗೆ ಇರುತ್ತಿದ್ದ ಪರಸ್ಪರ ಸ್ನೇಹ ಮೂಲಕ ಹೊರತು ಸಾರಸ್ವತ ಸಮಾಜದ ಕಟ್ಟಳೆಗಳಿಗೆ ಅನುಸರಿಸಿ ಅಲ್ಲ. ಮತ್ತು ಈ ಭೋಜನವೆಂಬದು ಸಂಯುಕ್ತ ಪರಿಷದಕ್ಕೆ ಸಮ್ಮಂಧಪಟ್ಟದ್ದೂ ಅಲ್ಲ. ಹಾಗೆ ಭೋಜನಮಾಡಿರಬಹುದಾದ ಗೃಹಸ್ಥರು ಈಗಲೂ ಸಂಯುಕ್ತ (ಏಕೀ) ಯಾ ಬೇಕೀ ಪರಿಷದಗಳನ್ನು ಅನುವರ್ತಿಸಿ ಇರುವವರಲ್ಲ; ವ ಈ ಪರಿಷದಗಳ ಉದ್ದಿಶ್ಯಗಳು ಸಹಾ ಈಗಿನ ಕಾಲಸ್ಥಿತಿಗೆ ಯೋಗ್ಯವಾದವುಗಳೆಂತಲೂ ತಿಳಿಯುವದಿಲ್ಲ.

ಈ ಮಾತುಗಳು ಹೀಗಿರಲಿ. ಶ್ರೀ ಚಿತ್ರಾಪುರ ಮಠಾಧೀಶರು ಮುಲ್ಕಿಗೆ ಚಿತ್ತೈಸಿದ್ದಾಗ್ಯೆ ಸ್ವಾಗತದ ಬಗ್ಯೆ ಸಾರಸ್ವತಾನ್ಯ ಬ್ರಾಹ್ಮಣರನ್ನು ಆಮಂತ್ರಿಸಿದ್ದೆಂಬುದು ನಿಜವಲ್ಲ. ಯಾವ ಜಾತಿಯ ಬ್ರಾಹ್ಮಣರನ್ನಾದರೂ ಆಮಂತ್ರಿಸಿದ್ದು ಇಲ್ಲ. ನವೀನವಾದ "ಪರಿಷದಾಸ್ಪದವಾದ" ಉತ್ಸಾಹದಿಂದ ಈ ಬಾರಿ ಆಮಂತ್ರಿಸುವದು ಅಗತ್ಯವೆಂತ ಕಂಡು ಬರಲಿಲ್ಲ. ಹೀಗಿರುತ್ತಾ ಸ್ವಾಗತಕ್ಕೆ ಬಂದಿದ್ದ ಅನ್ಯಜಾತಿಯ ಗೃಹಸ್ಥರು ಸ್ವೇಚ್ಛೆಯಿಂದಲೂ ಶ್ರೀಯವರ ಮೇಲೆ ಅವರಿಗಿರುವ ಬಹುಮಾನವನ್ನು ವ್ಯಕ್ತಪಡಿಸುವದಕ್ಕೋಸ್ಕರ ಬಂದಿದ್ದರಲ್ಲದೆ ಬೇರೆ ಕಾರಣವಿಲ್ಲ. ವ ಸಂಯುಕ್ತಕ್ಕೆ ಹೋದವರಲ್ಲಿ ಆದದ್ದೆಂಬ ಮಂಗಲ ಔತಣಕ್ಕೆ "ನೆವನಗಳಿಂದ ತಪ್ಪಿಸಿದ್ದೆಂಬದು" ಯತಾರ್ಥವಲ್ಲ. ಸಾರಸ್ವತರು ಭೋಜನ ಪಟುಗಳಲ್ಲಿ ಸ್ವಜಾತಿಯವರಲ್ಲಿ ಸಹಾ ಅನೇಕ ಆಮಂತ್ರಗಳನ್ನು ನಿತ್ಯಶಃ ಅಂಗೀಕರಿಸುವದಿಲ್ಲ. ಆದ್ದರಿಂದ ಸಂಯುಕ್ತ ಆಗಬೇಕೆಂದು ಪ್ರತಿವಾದಿಸತಕ್ಕವರು ಭೋಜನಾಸಕ್ತರೇ ಹೊರತು ಅನ್ಯರು ಆಗ ಕಾರಣವಿಲ್ಲ. ಶಹಬಾಸ್ ಪ್ರಸಿದ್ಧರಾದ ಭಟ್ಕಳ ಅಪ್ಪಯ್ಯ ಸಮರ್ಥರು ವಗೈರೆ ಮಹಾನುಭಾವರು ಈ ಅಲ್ಪ ಸಾರಸ್ವತ ಜಾತಿಯಲ್ಲಿ ಹುಟ್ಟಿರುತ್ತಾರೆಂಬದು ಹೇಳಲು ಅಗತ್ಯವಿಲ್ಲ.

ಸಾರಸ್ವತರಿಗೆ ಈಗಿರುವ ಉಚ್ಚ ಗುಣಗಳೂ ವಿದ್ಯೆಯೂ ಜ್ಞಾನವೂ ಇರುವಷ್ಟುಕಾಲ ಇತರ ಜಾತಿಯವರ ಸಂಯೋಗದಿಂದ ಶಿಕ್ಕಬಹುದಾದ ಫಲಪ್ರಯೋಜನಗಳೇನು? ಹೆಚ್ಚು ಮಾತುಗಳ್ಯಾಕೆ? ಕೆಲವು ಉಪಶಾಖೆಗಳೊಡನೆ ಸಂಯುಕ್ತರಾಗಿ ಅಭಿವೃದ್ಧಿಸುವುದಕ್ಕಿಂತಲೂ ನಿರ್ವಾಣವೇ ಲೇಸಲ್ಲವೇ.

ಕೀರ್ತಿಶೇಷ ಶ್ರೀಯುತರು ಈ ಮುಂಚೆಯೇ ನಿಜದ್ಧಾಮಕ್ಕೆ ಹೋಗಿರುವದರಿಂದ "ಯಾದವರಂತೆ ನಿಮ್ಮೊಳಗೆ ಕಾದಾಡಿ ನಿರ್ಮೂಲವಾಗಬೇಡಿ" ಎಂದು ಉಭಯ ಪರಿಷದದವರಿಗೂ ಸ್ವಾರ್ಥತ್ಯಾಗಿಯಾದ ಬಾತ್ಮೀದಾರರು ಕೊಟ್ಟ ಬೋಧನೆಯನ್ನು ಸೂಜ್ಞರು ಸ್ವಸ್ಥಮನದಿಂದ ಸ್ವೀಕರಿಸುವದು ಉತ್ತಮವೇ ಸರಿ.

ತಮ್ಮ ಕಾಲಡಿಯಲ್ಲಿ ಕೊಳೆಯುವ ಕುಂಬಳಕಾಯಿಯನ್ನು ಮರೆತು ಇತರರ ಕಾಲಡಿಯ ಸಾಸಿವೆ ಕಾಳನ್ನು ಹೆಕ್ಕುವ ನಿಮ್ಮ ಸದ್ಬೋಧಕರಾದ ಬಾತ್ಮೀದಾರರ ಚಾತುರ್ಯವನ್ನೇನು ವರ್ಣಿಸಲಿ!

ಮುಲ್ಕಿ,
ತಾ. 18ನೇ ಫೆಬ್ರವರಿ 1912.

ಸಾರಸ್ವತ.

ಸಂಸ್ಕೃತ ಭಾಷಾಭಿವೃದ್ಧಿಗೆ ಸರಕಾರದವರ ಪ್ರೋತ್ಸಾಹ.

ಇತ್ತಲಾಗೆ ಮದ್ರಾಸ್ ಯುನಿವರ್ಸಿಟಿಯವರು ಸಂಸ್ಕೃತ ಭಾಷಾಭಿವೃದ್ಧಿಗೋಸ್ಕರವಾಗಿ ೨೦ ಸಾವಿರ ರೂಪಾಯಿ ವೆಚ್ಚಮಾಡುವದಾಗಿ ಮಂಜೂರು ಮಾಡಿ ಕೆಲವು ಕ್ರಮಗಳನ್ನು ಜಾರಿಗೆ ತಂದಿರುವರು. ಇದರ ಪ್ರಕಾರ ಆಯಾ ಮಧ್ಯಸ್ಥಳಗಳಲ್ಲಿ ದ್ವೈತ, ವಿಶಿಷ್ಟಾದ್ವೈತ, ಅದ್ವೈತ, ನ್ಯಾಯ, ವ್ಯಾಕರಣ ಮೊದಲಾದವುಗಳ ಅಭ್ಯಾಸಕ್ಕೆ ಕಾಲೇಜುಗಳನ್ನು ಸ್ಥಾಪಿಸುವವರಿಗೆ ಆ ಶಾಲೆಯ ಅರ್ಧಾಂಶ ಖರ್ಚನ್ನು ಸರಕಾರದವರೇ ವಹಿಸಿಕೊಳ್ಳುವರು. ಸಂಸ್ಕೃತ ಅಭ್ಯಾಸವನ್ನು ಎಲಿಮೆಂಟರಿ ಗ್ರೇಡೆಂತಲೂ (೪ ವರ್ಷ) ಎಡ್ವಾನ್ಸ್‌ಡ್ ಗ್ರೇಡೆಂತಲೂ (೬ ವರ್ಷ) ಕೊಲಿಜಿಯೇಟ್ ಗ್ರೇಡೆಂತಲೂ (೪ ವರ್ಷ) ಮೂರು ವಿಭಾಗ ಮಾಡಿ ಪ್ರಥಮ ನಾಲ್ಕು ವರ್ಷದಲ್ಲಿ ಕನ್ನಡ ನಾಲ್ಕನೆಯ ದರ್ಜೆಯವರೆಗಿನ ರೀತಿಯಲ್ಲಿ ಸಾಧಾರಣ ಗ್ರಂಥಗಳನ್ನೂ, ಮಧ್ಯದ ಆರು ವರ್ಷದಲ್ಲಿ ಸ್ಕೂಲ್ ಫ್ಯಾನಲ್ ಇಲ್ಲವೆ ಮೆಟ್ರಿಕ್ಯುಲೇಶನಿನಂತೆ ಪ್ರೌಢ ಗ್ರಂಥಗಳನ್ನೂ ಯಥೋಚಿತ ತರ್ಕ ವ್ಯಾಕರಣಗಳನ್ನೂ, ದೇಶಭಾಷೆಯಲ್ಲಿ ೨-೩-೪ನೆ ಪುಸ್ತಕಗಳು, ರಾಮಾಯಣ, ಭಾರತ ಕಥೆಗಳು, ಭೂಗೋಳ, ಚರಿತ್ರೆ, ಗಣಿತಗಳು, ಇಂಗ್ಲಿಷು ರೀಡರುಗಳು ಸಹ ಅಭ್ಯಾಸ ಮಾಡಬೇಕು. ಈ ರೀತಿ ೧೦ ವರ್ಷಗಳ ಶಿಕ್ಷಣವಾದ ಮೇಲೆ ಹುಡುಗನ ೧೮ನೇ ವಯಸ್ಸಿನಲ್ಲಿ ಶಾಸ್ತ್ರಾಭ್ಯಾಸಕ್ಕೆ ಅಂದರೆ ದ್ವೈತ ಮೊದಲಾದ ಉದ್ಗ್ರಂಥಗಳ ಅಭ್ಯಾಸಕ್ಕೆ ಪ್ರಾರಂಭಿಸಿ ಇವುಗಳನ್ನು ೪ ವರ್ಷಗಳಲ್ಲಿ ಮುಗಿಸಬೇಕು. ಈ ಪ್ರಕಾರ ಅಭ್ಯಾಸ ಮಾಡಿ ಉತ್ತೀರ್ಣರಾದವರಿಗೆ ಬಹುಮಾನದಲ್ಲಿ ಬಿ. ಎ. ಡಿಗ್ರಿಗೆ ಸಮಾನವಾದ ವೇದಾಂತ ಶಿರೋಮಣಿ ಎಂಬ ಬಿರುದನ್ನು ಯುನಿವರ್ಸಿಟಿಯಿಂದಲೇ ಕೊಡುವರು. ಇಂಥವರಿಗೆ ವಿದ್ಯಾಶಾಲೆಗಳಲ್ಲಿ ಮಾತ್ರವಲ್ಲ; ಇತರ ಸರಕಾರಿ ಉದ್ಯೋಗಗಳೂ ದೊರಕುವವಂತೆ.

ಸಂಸ್ಕೃತ ಶಾಲೆಗಳ ಇನ್ಸಪೆಕ್ಟರರಾದ ಮೆ. ಆರ್. ಕೃಷ್ಣಮಾಚಾರ್ಯರ್ ಎಂ. ಎ. ವಿದ್ಯಾನಿಧಿ ಇವರು ಈ ತಾ. ೯ರಲ್ಲು ಉಡುಪಿಗೆ ಬಂದು ತಾ. ೧೦-೧೧-೧೨ ಈ ಮೂರು ದಿವಸ ಇಲ್ಲಿಯ ಶ್ರೀಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ವಿದ್ಯಾಶಾಲೆಯನ್ನು ಸಂದರ್ಶಿಸಿ ವಿದ್ಯಾರ್ಥಿಗಳನ್ನು ಪರೀಕ್ಷಿಸಿ, ಹೊಸ ಕ್ರಮದ ಪ್ರಕಾರ ೬ ತರಗತಿಗಳಾಗಿ ವಿಭಾಗಿಸಿ, ಪಾಠಗಳ ಕ್ರಮ ಮೊದಲಾದವುಗಳನ್ನು ವ್ಯವಸ್ಥೆಪಡಿಸಿದರು. ಮಿಕ್ಕ ಶಾಸ್ತ್ರಗಳಿಗೆ ಈ ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ಕಾಲೇಜುಗಳು ಸ್ಥಾಪಿಸಲ್ಪಟ್ಟವಾಗಿಯೂ ಕೆಲವು ಸ್ಥಾಪಿಸಲ್ಪಡುವದರಲ್ಲಿರುವದಾಗಿಯೂ ಇಲ್ಲಿ ಒಂದು ದ್ವೈತ ವೇದಾಂತ ಕಾಲೇಜನ್ನು ಅಗತ್ಯವಾಗಿ ಸ್ಥಾಪಿಸಬೇಕಾಗಿಯೂ ಈ ತಾ. ೧೧ರಲ್ಲು ಒಂದು ಮಹಾಸಭೆಯನ್ನು ಸೇರಿಸಿ ಈಗ ಇರತಕ್ಕ ಶ್ರೀ ಪಾದಂಗಳವರನ್ನೂ ಇತರ ಮಹಾ ಜನಗಳನ್ನೂ ಕೇಳಿಕೊಂಡಿರುವರು. ಇವರು ಕೊಡುವ ಸೂಚನೆಗಳನ್ನು ಅನುಸರಿಸಿದರೆ ಈ ಉಡುಪಿ ಕ್ಷೇತ್ರವು ಇನ್ನು ೧೦-೧೨ ವರ್ಷಗಳಲ್ಲಿಯಾದರೂ ವಿದ್ಯೆಯಲ್ಲಿ ಪೂರ್ವಸ್ಥಿತಿಯನ್ನು ಹೊಂದದೆ ಇರಲಾರದು. ಇಂಥಾ ವಿದ್ಯಾಶಾಲೆಗಳನ್ನು ಸ್ಥಾಪಿಸಿ ನಡಿಸುವುದಕ್ಕೆ ಇಲ್ಲಿಯ ಶ್ರೀಪಾದಂಗಳವರ ಪೈಕಿ ಹೆಚ್ಚಿನವರಲ್ಲಿ ಒಬ್ಬೊಬ್ಬರೇ ಸಮರ್ಥರಾಗಿರುವರು. ಹೀಗಿರುತ್ತಾ ಎಲ್ಲರೂ ಸೇರಿಯಾದರೂ ಇಲ್ಲಿ ಒಂದು ಪ್ರೌಢ ವಿದ್ಯಾಶಾಲೆಯನ್ನು ಏರ್ಪಡಿಸದಿರುವದು ಎಷ್ಟು ಕೊರತೆ.! ಶ್ರೀ ಕೃಷ್ಣನೇ ಪ್ರೇರೇಪಿಸಬೇಕು. ಈ ಸಂದರ್ಭವನ್ನು ಇತರರೂ ಲಕ್ಷ್ಯಕ್ಕೆ ತಂದು ಈ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಸಂಸ್ಕೃತ ಪಾಠಶಾಲೆಗಳನ್ನು ಸ್ಥಾಪಿಸಿ ದೇವಭಾಷಾಭಿವೃದ್ಧಿಗೆ ಪ್ರಯತ್ನಿಸುವರಾಗಿ ಕೋರುತ್ತೇನೆ.

ಉಡುಪಿ,
19-2-1912.

G.

ವಿದೇಶ ವೃತಾಂತ.

ಹಿಂದೂಸ್ಥಾನದ ಸ್ಟೇಟ್ ಸೆಕ್ರಟರಿಗಳಾದ ಕ್ರ್ಯೂ ಪ್ರಭುಗಳವರು ಈ ಕೆಲಸದ ಮಧ್ಯೆ ಲೋರ್ಡ್ ಪ್ರಿವಿ ಸೀಲ್ ಎಂಬ ಉದ್ಯೋಗಕ್ಕೆ ನೇಮಿಸಲ್ಪಟ್ಟಿರುವರು.

ಟರ್ಕಿಯ ಸುಲ್ತಾನರವರು ಜೋರ್ಜ ಸಾರ್ವಭೌಮರವರಿಗೆ 'ಹನೆದಾನಿ ಆಲಿ ಉಸ್ಮಾನ್' ಎಂಬ ಮಹಾ ಬಿರುದನ್ನು ಕೊಟ್ಟಿರುವರು. ಟರ್ಕಿಯಲ್ಲಿ ಇರುವ ಬಿರುದಾವಳಿಗಳಲ್ಲಿ ಇದೇ ವಿಶೇಷವಾದದ್ದಾಗಿದೆ.

ಕಳದ ವಾರ ಡೆರ್ನದಲ್ಲಿ ಇಟಾಲಿಯರು ಮೂರು ಸಾರಿ ಹಿಮ್ಮೆಟ್ಟಲ್ಪಟ್ಟರು. ತುರ್ಕರು ಜೀವದ ಪರವೆ ಇಲ್ಲದೆ ಕಾದಾಡಿ ಬಹಳ ನಷ್ಟ ಪಟ್ಟರು. ಇಟಾಲಿಯರಲ್ಲಿ ೩ ಮಂದಿ ಮಡಿದರು. ೨೨ ಮಂದಿ ಘಾಯ ಪಟ್ಟರು. ತುರ್ಕರಲ್ಲಿ ೬೦ ಮಂದಿ ಮಡಿದರು.

ಇಂಗ್ಲಾಂಡಿನ ಪ್ರಧಾನ ಮಂತ್ರಿಯಾದ ಅಸ್ಕ್ವಿತ್ ಪ್ರಭುಗಳು ತನ್ನ ಕೆಲಸಕ್ಕೆ ರಾಜಿನಾಮೆ ಕೊಡುವರೆಂದೂ ಇವರ ಬದಲಿಗೆ ಸರ್ ಎಡ್ವರ್ಡ್ ಗ್ರೇಯರವರು ಪ್ರಧಾನ ಮಂತ್ರಿಯಾಗುವರೆಂದೂ ಇಂಗ್ಲಾಂಡಿನಲ್ಲಿ ವಾರ್ತೆ ಇದೆ. ಆದರೆ ಈ ವಾರ್ತೆಗೆ ಆಧಾರವಿಲ್ಲವೆಂದು ಆಯಾ ಪತ್ರಿಕೆಗಳು ಸೂಚಿಸುತ್ತವೆ.

ಪರ್ಶಿಯದ ಕೇಮನ್‌ಶಾ ಎಂಬಲ್ಲಿ ಸಲ್ರಾದ್ ಡೌಲ, ಸರ್ದಾರ್ ಮುಜಾಫರ್ ಜಂಗ್ ಮೊದಲಾದವರು ದಂಗೆ ಎದ್ದಿರುವುದರಿಂದ ಪರ್ಶಿಯಾ ಸರಕಾರದವರು ಅಲ್ಲಿಗೆ ತಮ್ಮ ಸೈನ್ಯವನ್ನು ಕಳುಹಿಸಿದ್ದರು. ಸರಕಾರ ಸೈನ್ಯದವರು ದಂಗೆಗಾರರನ್ನು ಸೋಲಿಸಿದರು. ದಂಗೆಗಾರರ ಮುಖಂಡರಾದ ಸಲ್ರಾದ್ ಡೌಲ, ಮುಜಾಫರ್ ಜಂಗ್ ಮೊದಲಾದವರು ಓಡಿ ಹೋಗಿರುವರು.

ಇಟಾಲಿಯರು ಕೆಂಪು ಸಮುದ್ರವನ್ನು ಅಡ್ಡಗಟ್ಟಿರುವುದರಿಂದ ತುರ್ಕಿ ಸರಕಾರದವರು ಟರ್ಕಿಯಲ್ಲಿರುವ ಇಟಾಲಿಯರ ಎಲ್ಲಾ ಕಾರ್ಖಾನೆಗಳನ್ನೂ ಇನ್ಶೂರೆನ್ಸ್ ಕಂಪೆನಿಗಳನ್ನೂ ಮುಚ್ಚಿಸುವರೆ ಅಪ್ಪಣೆ ಕೊಡ ನಿಷ್ಕರ್ಷಿಸಿರುವರು. ಇದರಿಂದ ಇಟಾಲಿಯರು ಮತ್ತಷ್ಟು ಉರಿಗೊಳ್ಳುವರು. ಇತ್ತಕಡೆ ತುರ್ಕರು ಎಲ್ಲಾ ಇಟಲಿಯರನ್ನು ತಮ್ಮ ದೇಶದಿಂದ ಅಟ್ಟಿ ಬಿಡುವರು.

ಸಿಶಿಲಿ ದ್ವೀಪದಿಂದ ಟ್ರಿಪೋಲಿಗೆ ವೈಯುತ್ತಿದ್ದ ಮೂರು ಅರಬಿಯರನ್ನು ಮಾಲ್ಟದಲ್ಲಿ ಮೇಲಾಫೀಸರರು ಬಿಡುಗಡೆ ಮಾಡಿಸಿದರು.

ಡಿಲ್ಲಿಯಲ್ಲಿ ಹೊಸ ಪಟ್ಟಣವನ್ನು ಕಟ್ಟಿಸುವರೆ ಛಬ್ಬ ಇಂಜಿನಿಯರನ್ನು ಕೊಡಬೇಕೆಂಬದಾಗಿ ಹಿಂದೂಸ್ಥಾನದ ಉಪ ಸೆಕ್ರೆಟರಿಯವರಾದ ಮೆ| ಮೊಂಟೇಗರವರು ಲಿವರ್‌ಪೂಲಿನ ಹೆಲ್ತ್ ಕಮಿಟಿಯವರನ್ನು ಕೇಳಿಕೊಂಡಿದ್ದರು. ಈ ಕಮಿಟಿಯವರು ಮೆ| ಬ್ರೋಡಿ ಎಂಬವರನ್ನು ಸಿಫಾರಸು ಮಾಡಿರುವರು.

ಪ್ರಜಾಧಿಪತ್ಯವನ್ನು ಸ್ಥಾಪಿಸುವುದರಲ್ಲಿ ಮುಂದಾಳಾಗಿದ್ದ ಸನ್ ಎಟ್ ಸೆನ್‌ರವರೂ ಮತ್ತು ಇತರ ಕೆಲವರೂ ರಾಷ್ಟ್ರೀಯ ಪ್ರಜಾಧಿಪತ್ಯ ಸಮಿತಿಯವರಿಗೆ ಎಲ್ಲವನ್ನು ಒಪ್ಪಿಸಿಕೊಟ್ಟು ತಾವು ರಾಜಿ ಕೊಟ್ಟಿರುವರಲ್ಲದೆ ಪ್ರಜಾಧಿಪತ್ಯಕ್ಕೆ ಯುಆನ್ ಸಿಕಾಯಿರವರನ್ನು ಪ್ರೆಸಿಡೆಂಟರಾಗಿ ಆರಿಸ ಬೇಕೆಂದು ಸಿಫಾರಸು ಮಾಡಿರುವರು. ದಂಗೆಗಾರರು ಇನ್ನೂ ಅಲ್ಲಲ್ಲಿ ಲೂಟಿ ಮಾಡಿ ಗೊಂದಲ ನಡಿಸುತ್ತಿದ್ದಾರೆ. ಹಾನ್‌ಕಿಂಗ್ ಪ್ರಜಾಧಿಪತ್ಯದವರಿಂದ ಯುಆನ್ ಸಿಕಾಯಿರವರೇ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು.

ಇದೇ ತಿಂಗಳ ತಾ. ೧೪ರಲ್ಲು ಜೋರ್ಜ ಚಕ್ರವರ್ತಿಯವರು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯನ್ನು ತೆರೆದು ತಾನು ಹಿಂದೂಸ್ಥಾನಕ್ಕೆ ಮಾಡಿದ ಪ್ರಯಾಣದಿಂದುಂಟಾದ ಉಲ್ಲಾಸವನ್ನೂ ಹಿಂದೂಸ್ಥಾನದ ಪ್ರಜಾಜನರ ಸ್ವಾಮಿ ಭಕ್ತಿಯನ್ನು ತಾನು ಸ್ವತಃ ಕಂಡು ಪರಮಾನಂದ ಪಟ್ಟೆನೆಂಬಿತ್ಯಾದಿ ಸಂಗತಿಯನ್ನು ಕುರಿತು ಚಲೋ ಭಾಷಣಕೊಟ್ಟರು. ಈ ಸಂದರ್ಭದಲ್ಲಿ ಯೂನ್ಯನಿಷ್ಟ್ ಪಕ್ಷದ ಬೋನರ್ ಲಾ ಎಂಬವರು ಮಾತಾಡಿ ಚಕ್ರವರ್ತಿಯವರು ಸುಕ್ಷೇಮಿಗಳಾಗಿ ಮಹಾ ಪ್ರಯಾಣವನ್ನು ಮುಗಿಸಿ ಹಿಂದೆ ಬಂದದರಿಂದಲೂ ಹಿಂದೂಸ್ಥಾನದಲ್ಲಿ ಮಾಡಿದ ರಾಷ್ಟ್ರೀಯ ಬದಲಾವಣೆಗಳಿಂದಲೂ ಸಂತೋಷಪಡುತ್ತೇನೆ, ಆದರೆ ಡಿಲ್ಲಿಯನ್ನು ಪ್ರಧಾನ ಪಟ್ಟಣವಾಗಿ ಮಾಡುವುದಕ್ಕೆ ಸರಕಾರದವರು ಅಂದಾಜುಮಾಡಿದಕ್ಕಿಂತಲೂ ಹೆಚ್ಚಿನ ಖರ್ಚಾದೀತೆಂದೂ ಈ ಬದಲಾವಣೆಗಳ ವಿಷಯು ಬಹಳ ಹೇಳಲಿಕ್ಕಿದ್ದರೂ ಚಕ್ರವರ್ತಿಯವರು ಖುದ್ದಾಗಿ ಈ ಸಂಗತಿಯನ್ನು ಮಾಡಿದ್ದರಿಂದ ಈ ವಿಶಯ ಹೆಚ್ಚಾಗಿ ಚರ್ಚೆ ನಡಿಸುವದು ವಿಹಿತವಲ್ಲವೆಂದೂ ಹೇಳಿದರು. ಒಟ್ಟಾರೆ ಈ ಬದಲಾವಣೆಯು

ಸಮವಲ್ಲವೆಂಬದಾಗಿ ಹೇಳಲಿಲ್ಲ. ಆದರೆ ಈ ವಿಶಯ ಬಹಳ ಹೇಳಲಿಕ್ಕಿದೆಂದು ಹೇಳಿದರು. ಈ ಸಭೆಯಲ್ಲಿ ಪ್ರಧಾನ ಮಂತ್ರಿಗಳಾದ ಅಸ್ಕ್ವಿತ್ ಪ್ರಭುಗಳೂ ಯುನ್ಯನಿಷ್ಟ ಪಕ್ಷದ ಲೇನ್ಸ್‌ಡೌನ್ ಪ್ರಭುಗಳೂ ಲಿಬರಲ್ ಪಕ್ಷದ ಕ್ರ್ಯೂ ಪ್ರಭುಗಳು ಮೊದಲಾದವರು ಭಾಷಣ ಮಾಡಿದರು.

ಬುಧವಾರ ದಿನ ಹಿಂದೂಸ್ಥಾನದ ಸ್ಟೇಟ್ ಸೆಕ್ರಟರಿಗಳಾದ ಕ್ರ್ಯೂ ಪ್ರಭುಗಳು ಈಗ ಹಿಂದೂಸ್ಥಾನದ ಹೊಸ ಮಾರ್ಪಾಟಗಳ ಮಸೂದೆಯನ್ನು ಪಾರ್ಲಿಮೆಂಟ್ ಸಭೆಯು ಮುಂದೆ ಇಡುವರು. ಈ ವಿಷಯ ಕರ್ಜನ್ ಪ್ರಭುಗಳು ಪ್ರತ್ಯೇಕ ಚರ್ಜೆ ನಡಿಸುವರು.

ಮೇರಿ ಚಕ್ರವರ್ತಿನಿಯವರು ಹಿಂದೂಸ್ಥಾನದಿಂದ ತಕ್ಕೊಂಡು ಹೋದ ಮೊಗಲಾಯರ, ರಾಜಪುತಾನರ ಮತ್ತು ತೀಬೇತಿಯರ ಕಲಾಕೌಶಲ್ಯಗಳ ಕೆಲವು ವಸ್ತುಗಳನ್ನು ಲಂಡನಿನ ವಿಕ್ಟೋರಿಯ ಮತ್ತು ಅಲ್ಬರ್ಟ್ ಎಂಬ ವಸ್ತು ಪ್ರದರ್ಶನಾ ಶಾಲೆಗೆ ಕೊಟ್ಟಿರುವರು.

ರುಷ್ಯದ ಕೌಕಾಸೆಸ್ ಮತ್ತು ಮಧ್ಯಾಸ್ಯದಲ್ಲಿ ಬರ ಬಿದ್ದು ಜನರು ಬಹಳ ಕಷ್ಟದ ಸ್ಥಿತಿಯಲ್ಲಿರುವರು. ಅದಲ್ಲದೆ ವಿಷಮ ಜ್ವರ ಮೊದಲಾದ ಅಂಟು ರೋಗಗಳು ಹರಡಿಕೊಂಡಿರುವುದರಿಂದಲೂ ಜನರಿಗೆ ಊಟಕಿಲ್ಲದ್ದರಿಂದಲೂ ಅವರು ಆಹಾರಕ್ಕಾಗಿ ತಂತಮ್ಮ ಕುದುರೆ ದನಕರುಗಳನ್ನೆಲ್ಲಾ ಮಾರುತ್ತಿರುವರು.

ಬರಬಿದ್ದ ಒಂದು ಕಡೆಯಲ್ಲಿ ರೈತಾಪಿಜನರು ಐಶ್ವರ್ಯವಂತರ ಮನೆಗೆ ಬೆಂಕಿಕೊಟ್ಟು ಚಪ್ಪಾಳೆ ಹೊಡಿಯುತ್ತಾ ಅವರು ನಮ್ಮ ಹಾಗೆಯೇ ಇರಬೇಕೆಂದು ಬೊಬ್ಬೆ ಮಾಡಿದರು.

ಇಂಗ್ಲಾಂಡಿನ ಗ್ಲಾಸ್‌ಗೋ ಎಂಬಲ್ಲಿ ಪುನಃ ನಾವಾಶಯದ ಕೆಲಸದವರು ಮುಷ್ಕರ ಹಿಡಿದಿರುವರು.

ಚೀನದಲ್ಲಿ ಯು ಆನ್ ಶಿಕಾಯಿರವರು ಪ್ರಜಾಧಿಪತ್ಯದ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುತ್ತಾರಲ್ಲದೆ ಪ್ರಜಾಧಿಪತ್ಯವನ್ನು ಮಂಜೂರು ಮಾಡಬೇಕೆಂಬದಾಗಿ ಶ್ರೇಷ್ಠ ಸರಕಾರಗಳನ್ನು ಕೇಳಿಕೊಂಡಿರುವರು.

ಉತ್ತರ ಹಿಂದುಸ್ಥಾನ.

ಈ ವರ್ಷದ ಬಂಗಾಳ ಪ್ರಾಂತಿಕ ಮಹಾ ಸಭೆಯು ಎಪ್ರೀಲ್ ತಿಂಗಳ ೬–೭ನೇ ತಾರೀಕೆಗಳಲ್ಲಿ ಚಿತಗೊಂಗ್ ಎಂಬಲ್ಲಿ ನಡೆಯುವದು. ಈ ಸಭೆಗೆ ಮೆ| ಸುರೇಂದ್ರನಾಥ ಬೆನರ್ಜಿಯವರು ಅಧ್ಯಕ್ಷರಾಗಿರುವರು.

ವಿದ್ಯಾಭ್ಯಾಸಕ್ಕೆ ವಿನಿಯೋಗಿಸುವರೆ ಡಿಲ್ಲಿ ದರ್ಬಾರಿನಲ್ಲಿ ವರಪ್ರದಾನವಾಗಿ ಸಿಕ್ಕಿದ ೫೦ ಲಕ್ಷ ರೂಪಾಯಿಯಲ್ಲಿ ೧೨ ಲಕ್ಷ ರೂಪಾಯಿ ಮುಂಬಾಯಿ ಸಂಸ್ಥಾನಕ್ಕೆ ದೊರಕಿರುವದು.

ಸಂಯುಕ್ತ ಸಂಸ್ಥಾನದ ಲೆಪ್ಟನೆಂಟ್ ಗವರ್ನರರಾದ ಬಹುಮಾನಪಟ್ಟ ಸರ್ ಜೋನ್ ಹ್ಯುವೆಟರವರು ಬರುವ ಜೂಲಾಯಿ ತಿಂಗಳಲ್ಲಿ ಕೆಲಸದಿಂದ ನಿವೃತರಾಗುವುದರಿಂದ ಅವರ ಬದಲಿಗೆ ಬಹುಮಾನಪಟ್ಟ ಸರ್ ಜೇಮ್ಸ್ ಮೆಸ್ಟನ್ ಕೆ. ಸಿ. ಎಸ್. ಐರವರು ನೊಕರೂರಾಗುವರು.

ಇದೇ ಬರುವ ಮಾರ್ಚಿ ೧ನೇ ತಾರೀಕಿನಿಂದ ಹಿಂದೂಸ್ಥಾನದ ಎಲ್ಲಾ ಟಪ್ಪಾಲು ಆಫೀಸುಗಳಲ್ಲಿ ಜೋರ್ಜಸಾರ್ವಭೌಮರ ಪ್ರತಿಚ್ಛಾಯೆ ಇರುವ ಕಾಲಾಣೆ, ಒಂದು, ಎರಡು, ಮೂರಾಣೆಯ ಚೀಟುಗಳು ಮಾರಲ್ಪಡುವವು. ಅದೇ ತಾರೀಕಿನಲ್ಲಿ ಒಂದಾಣೆಯ ಹೊಸ ಸರ್ವಿಸ್ ಪೋಸ್ಟೇಜ್ ಚೀಟುಗಳೂ ಎಲ್ಲಾ ಖಜಾನೆಯಲ್ಲಿ ದೊರಕುವವು.

ತಾ. ೧೪ರಲ್ಲು ಲಾಹೋರಿನ ನೋರ್ಥ್‌ವೆಸ್ಟ್ ರೈಲ್ವೇ ಕಂಪೆನಿಯ ಶುಮಾರು ೫೦೦೦ ಕೆಲಸಗಾರರು ಮುಷ್ಕರ ಹಿಡಿದರು. ರಜೆ ಇಲ್ಲದಿರುವದು, ಸಂಬಳ ಹೆಚ್ಚಿಸದಿರುವದು, ಮೇಲಾಫೀಸರರು ವಿಧಿಸುವ ಜುರುಮಾನೆ, ಮತ ಸಂಬಂಧವಾದ ಆಚರಣೆಗಳನ್ನು ನಡಿಸಲು ಸಮಯ ಇಲ್ಲದಿರುವದು ಈ ಮೊದಲಾದ ಕಷ್ಟಗಳು ಈ ಕೆಲಸಗಾರರಿಗೆ ಇರುವುದರಿಂದ ಮೇಲಿನ ಕಷ್ಟಗಳನ್ನು ನಿವಾರಣೆ ಮಾಡದೆ ತಾವು ಕೆಲಸಕ್ಕೆ ಬರಲಾರೆವೆಂದು ಹಟಹಿಡಿದರು. ಆದರೆ ರೈಲ್ವೇ ಮೆನೇಜರರು ಕೆಲಸಗಾರರ ಕಷ್ಟಗಳಿಗೆ ತಕ್ಕ ನಿಗಾ ಕೊಡುವೆನೆಂದು ಅವರನ್ನು ಒಡಂಬಡಿಸಿದ್ದರಿಂದ ಪುನಃ ಕೆಲಸಕ್ಕೆ ಹೋಗಿರುವರು. ಬೇಗನೇ ತಮ್ಮ ಕಷ್ಟಗಳು ನಿವಾರಣೆಯಾಗದಿದ್ದ ಪಕ್ಷಕ್ಕೆ ಪುನಃ ಮುಷ್ಕರ ಹಿಡಿಯುವೆವೆಂಬ ಶರ್ತದ ಮೇಲೆ ಕೆಲಸ ಪ್ರಾರಂಭಿಸಿರುವರು.

ಅಲ್ಲಾಹಾಬಾದಿನ ಮುನ್ಸಿಪಾಲ್ ರಸ್ತೆಯಲ್ಲಿ ಒಂದು ದಿನ ರೆವೆರೆಂಟ್ ಬೆನ್‌ಆಲ್ಡ್ ಎಂಬವರು ಕುದುರೆ ಮೇಲೆ ಸವಾರಿಮಾಡುವಾಗ ರಸ್ತೆಯು ನಾದುರುಸ್ತಿಯಾಗಿದ್ದದರಿಂದ ಕುದುರೆಗೆ ಜಖಂ ಆಯಿತು. ಈ ಕಾರಣದಿಂದ ರೆವೆರೆಂಡ್ ಸಾಹೇಬರು ಅಲ್ಲಹಾಬಾದ್ ಸಬ್ ಕೋರ್ಟಿನಲ್ಲಿ ಮುನ್ಸಿಪಾಲಿಟಿಯವರ ಮೇಲೆ ೧೫೦೦೦ ರೂಪಾಯಿಗೆ ದಾವೆ ಮಾಡಿದರು. ಜಡ್ಜರವರು ಮುನ್ಸಿಪಾಲಿಟಿಯವರು ರಸ್ತೆಯನ್ನು ದುರುಸ್ತಿ ಮಾಡದೆ ಇದ್ದ ಕಾರಣ ತಪ್ಪಿತಸ್ಥರಾಗುತ್ತಾರೆಂಬದಾಗಿ ಅಭಿಪ್ರಾಯಪಟ್ಟು ಮುನ್ಸಿಪಾಲಿಟಿಯವರ ಮೇಲೆ ಸಾವಿರ ರೂಪಾಯಿಗೆ ಡಿಕ್ರಿ ಮಾಡಿದರು.

ಹಿಂದೂಸ್ಥಾನದಲ್ಲೆಲ್ಲಾ ಜೋರ್ಜ ಸಾರ್ವಭೌಮರವರ ಜನ್ಮಾಚರಣೆಯು ಬರುವ ಜೂನು ೩ರಲ್ಲು ಆಚರಿಸಲ್ಪಡಬೇಕೆಂದು ಸರಕಾರದವರು ಪ್ರಕಟಿಸಿರುತ್ತಾರೆ.

ಡಕ್ಕದಲ್ಲಿ ಒಂದು ಹೊಸ ಯುನಿವರ್ಸಿಟಿಯನ್ನು ಸ್ಥಾಪಿಸುವದು ಅನಾವಶ್ಯ ಎಂಬದಾಗಿ ವ್ಯಾಸರಾಯರವರಿಗೆ ಹೇಳಿಕೊಳ್ಳುವದಕ್ಕೋಸ್ಕರ ಡಾಕ್ಟರ್ ರಾಷ್ ಬಿಹಾರಿ ಘೋಷ್‌ರವರೂ, ಸುರೇಂದ್ರನಾಥ ಬೆನರ್ಜಿ, ಭೂಪೇಂದ್ರನಾಥ ಬಾಸು ಮೊದಲಾದ ಬಂಗಾಳದ ಪ್ರಮುಖ ಗೃಹಸ್ಥರು ಕೂಡಿದ ಒಂದು ಪ್ರತಿನಿಧಿ ಮಂಡಲಿಯವರು ತಾ. ೧೭ರಲ್ಲು ವ್ಯಾಸರಾಯರವರಿಗೆ ಭೇಟಿಕೊಟ್ಟು ಡಕ್ಕದಲ್ಲಿ ಯುನಿವರ್ಸಿಟಿಯನ್ನು ಸ್ಥಾಪಿಸುವದು ಅನಾವಶ್ಯ ಎಂಬದಾಗಿ ಸೂಚಿಸಿದರು. ವೈಸರಾಯರವರು ಪ್ರತಿನಿಧಿಮಂಡಲಿಯವರಿಗೆ ಚಲೋ ಉತ್ತರವನ್ನು ಕೊಟ್ಟು ಕಲ್ಕತ್ತೆಯಲ್ಲಿ ಒಂದೇ ಯುನಿವರ್ಸಿಟಿ ಇದ್ದು ಅದರಲ್ಲಿಯೇ ಸಾವಿರಾರು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದರಿಂದ ಉಂಟಾಗುವ ದೋಷಗಳನ್ನು ದೃಷ್ಟಾಂತ ಪೂರ್ವಕ ತೋರಿಸಿ ಕೊಟ್ಟು ಡಕ್ಕದಲ್ಲಿ ಹೊಸ ಯುನಿವರ್ಸಿಟಿಯನ್ನು ಸ್ಥಾಪಿಸುವುದರ ಅವಶ್ಯಕತೆಯನ್ನು ಖಾತ್ರಿ ಪಡಿಸಿದರು.

ಕತ್ತಿಯಾವಾಡ ದೇಶದಲ್ಲಿ ತಲಿಜಾ ಎಂಬಲ್ಲಿ ಸ್ವಲ್ಪ ಕಾಲಕ್ಕೆ ಹಿಂದೆ ದಶಶ್ರಿಮಳಿ ಬನಿಯಾ ಜಾತಿಯವರಲ್ಲಿ ಒಂದು ವಿವಾಹವಾಯಿತು. ಲಗ್ನವಾದ ಮರುದಿವಸವೇ ಮದುಮಗನು ಮರಣಹೊಂದಿದನು. ಮದುಮಗಳು ೧೨ ವರುಷ ವಯಸ್ಸಿನ ಕನ್ನಿಕೆಯು. ಸ್ವಜಾತಿ ಗೃಹಸ್ಥರೆಲ್ಲರೂ ಮಹಾ ಸಭೆ ಕೂಡಿಸಿ ಹುಡುಗಿಯ ಬಗ್ಯೆ ಕನಿಕರ ಪಟ್ಟು ಹೋಮ ಮತ್ತು ಸಪ್ತಪದಿ ಆದಾಗ್ಯೂ ವಿವಾಹ ಸಂಪೂರ್ಣವಾಗಲಿಲ್ಲವೆಂತಲೂ, ಆದುದರಿಂದ ಹುಡುಗಿಗೆ ಪುನಹ ವಿವಾಹ ಮಾಡಬಹುದೆಂತಲೂ ನಿರ್ಣಯಿಸಿದರು. ಶಾಸ್ತ್ರವಿಧಿ ಹ್ಯಾಗಿದ್ದಾಗ್ಯೂ ಈ ಮಹಾ ಸಭೆಯವರು ಮಾಡಿದ ನಿರ್ಣಯವು ನ್ಯಾಯವಾದದ್ದೆಂತಲೂ ಬಹಳ ಶ್ಲಾಘನೀಯವಾದುದ್ದೆಂತಲೂ ವರ್ತಮಾನ ಪತ್ರಗಳೆಲ್ಲವೂ ಹೊಗಳುತ್ತವೆ.

ಡಿಲ್ಲಿ ದರ್ಬಾರಿನಲ್ಲಿ ವಿದ್ಯಾಭ್ಯಾಸಕ್ಕಾಗಿ ಪ್ರಯೋಗಿಸುವರೆ ವಾಗ್ದಾನ ಮಾಡಿದ ೫೦ ಲಕ್ಷ ರೂಪಾಯಿಯಲ್ಲಿ ೧೨ ಲಕ್ಷ ರೂಪಾಯಿಯು ಮುಂಬಾಯಿ ಸಂಸ್ಥಾನದ ವಿದ್ಯಾ ಶಾಲೆಗಳಿಗಾಗಿ ಕೊಡಲ್ಪಟ್ಟದೆ ಎಂಬ ವಾರ್ತೆಯು ಸಮವಲ್ಲ ಎಂಬದಾಗಿ ವಿದ್ಯಾಖ್ಯಾತೆಯವರು ಪ್ರಕಟಿಸಿರುವರು.

ದಕ್ಷಿಣ ಹಿಂದೂಸ್ಥಾನ.

ನೆಲ್ಲೂರು ಜಿಲ್ಲೆಯ ಕವಾಳಿ ಎಂಬಲ್ಲಿ ತಾ. ೧೦ರಲ್ಲು ಅಲ್ಲಿಯ ರೆವಿನ್ಯೂ ಇನ್ಸ್‌ಪೆಕ್ಟರರಾದ ಮೆ| ಡೇವಿಡ್ ಬಿ. ಎ. ರವರ ಮನೆಯಲ್ಲಿ ಅವರ ಹೆಂಡತಿಯನ್ನೂ ಅವರ ಮೂರು ಮಕ್ಕಳನ್ನೂ ಅಡಿಗೆ ಭಟ್ಟನು ಕೊಂದಿರುವನು. ತಾ. ೧೧ನೇ ಬೆಳಿಗ್ಯೆ ಮೆ| ಡೇವಿಡರ ಅಡಿಗೆ ಭಟ್ಟನು ೫೦೦ ರೂಪಾಯಿ ಕ್ರಯ ಬಾಳುವ ಚಿನ್ನಾಭರಣಗಳನ್ನು ಒಬ್ಬ ಸರಾಫರ ಅಂಗಡಿಗೆ ತಕ್ಕೊಂಡು ಹೋಗಿ ರೆವಿನ್ಯೂ ಇನ್ಸ್‌ಪೆಕ್ಟರರು ಬಹಳ ಹಣದಡಚಣೆಯಲ್ಲಿರುವುದರಿಂದ ಈ ಚಿನ್ನವನ್ನು ಮಾರಬೇಕೆಂದು ಹೇಳಿದ್ದಾರೆ ಅಂದನು. ಆದರೆ ಸರಾಫನು ತನಗೆ ಈಗ ಬಹಳ ಕೆಲಸವಿರುವುದರಿಂದ ತುಸ ತಡೆದು ಬಾ, ಬರುವಾಗ ನಿನ್ನ ಯಜಮಾನನಿಂದೆಯಾ ಯಜಮಾನಿಯಿಂದ ಒಂದು ಚೀಟು ತಾ ಎಂದು ಹೇಳಿದನು. ಅಡಿಗೆ ಭಟ್ಟನು ನಿಯಮಿತ ಸಮಯಕ್ಕೆ ತಮಿಳ್ ಅಕ್ಷರದಿಂದ ಬರೆದ ಒಂದು ಚೀಟನ್ನು ಹಿಡಕೊಂಡು ಪುನಃ ಶರಾಫರಲ್ಲಿಗೆ ಬಂದು ಚೀಟು ಕೊಟ್ಟನು. ಶರಾಫರು ಅದನ್ನು ನೋಡಿ ಓದಲಿಕ್ಕಾಗದೆ ಈತನ ಮೇಲೆ ಅನುಮಾನಪಟ್ಟು ತಾನೇ ರೆವಿನ್ಯು ಇನ್ಸ್‌ಪೆಕ್ಟರರ ಮನೆಗೆ ಬಂದು ಹಣವನ್ನು ಕೊಡುತ್ತೇನೆಂದು ಹೇಳಿ ಅಡಿಗೆ ಭಟ್ಟನ ಕೂಡೆ ಹೊರಟನು. ಉಭಯತರೂ ಮೆ| ಡೇವಿಡರ ಮನೆಗೆ ಬರುವಾಗ ಬಾಗಲು ಮುಚ್ಚಿತ್ತು. ಶರಾಫನು ಮೂರಾವೃತ್ತಿ ಮೆ|ಡೇವಿಡರನ್ನು ಕರೆದನು. ಆದರೆ ಉತ್ತರ ಬರಲಿಲ್ಲ. ಆಗ ಅಡಿಗೆ ಭಟ್ಟನು ತನ್ನ ಯಜಮಾನನು ಮನೆಯಲ್ಲಿಲ್ಲವೆಂದನು. ಶರಾಫನು ಮೆ| ಡೇವಿಡರ ಹೆಂಡತಿಯನ್ನು ಕರೆದನು. ಆಗಲೂ ಉತ್ತರ ಸಿಕ್ಕಲಿಲ್ಲ. ನಂತರ ಅಡಿಗೆ ಭಟ್ಟನು ಶರಾಫನನ್ನು ಮನೇ ಹಿಂಭಾಗಕ್ಕೆ ಕರೆದುಕೊಂಡು ಹೋಗಿ ಡೇವಿಡರ ಹೆಂಡತಿಯೂ ಮೂರು ಮಕ್ಕಳೂ ಒತ್ತಿ ಒತ್ತಿ ಮಲಗಿದ್ದನ್ನು ತೋರಿಸಿ ಅವರಿಗೆ ನಿದ್ರೆ ಬಂದದೆ, ನನ್ನ ಹತ್ತರ ಹಣಕೊಟ್ಟು ನೀವು ಹೋಗಿ ಅಂದನು. ಶರಾಫನು ಬಹಳ ಹೆದರಿಕೊಂಡು ಹೊರಗೆ ಓಡಿ ಬಂದು ನೆಟ್ಟಗೆ ಮೆಜಿಸ್ಟ್ರೇಟರಲ್ಲಿ ಓಡಿ ಸಂಗತಿಯನ್ನು ತಿಳಿಸಿದನು. ಮೆಜಿಸ್ಟ್ರೇಟರೂ ಪೋಲೀಸಿನವರೂ ಮೆ| ಡೇವಿಡರ ಮನೆಗೆ ಬಂದು ನೋಡಲು ಮೆ| ಡೇವಿಡರ ಹೆಂಡತಿಯ ಮತ್ತು ಮಕ್ಕಳ ಮೇಲೆ ದೊಡ್ಡ ಕಲ್ಲು ಹಾಕಿತ್ತು. ನಾಲ್ಕು ಮಂದಿಯೂ ಸತ್ತಿದ್ದರು. ಅಷ್ಟರಲ್ಲಿ ಅಡಿಗೆ ಭಟ್ಟನು ತಲೆತಪ್ಪಿಸಿಕೊಂಡಿದ್ದನು. ಇವನನ್ನು ಪೋಲಿಸ್ ಸಬ್ ಇನ್‌ಪೆಕ್ಟರರು ರೈಲ್ವೇ ಸ್ಟೇಶನಿನ ಬಳಿಯಲ್ಲಿ ಆಭರಣ

ಸಮೇತ ಹಿಡಿದರು. ಮೆ| ಡೇವಿಡರು ೫ ದಿವಸದ ರಜೆ ಮೇಲೆ ಮದ್ರಾಸಿಗೆ ಹೋಗಿದ್ದರು. ಅವರಿಗೆ ತಂತೀ ಬಿಟ್ಟಿದ್ದರಿಂದ ಕೂಡ್ಲೇ ಬಂದರು. ಡೇವಿಡರ ಹೆಂಡತಿಯು ಒಳ್ಳೇ ವಿದ್ಯಾವಂತೆಯಾಗಿದ್ದು ತನ್ನ ಗಂಡನಂತೆಯೇ ಜನ ಪ್ರೀತಳಾಗಿದ್ದದರಿಂದ ಸ್ಥಳಿಕ ಜನರೆಲ್ಲರೂ ಈ ಕೊಲೆಗಾಗಿ ಬಹಳ ವಿಷಾದ ಪಡುತ್ತಿದ್ದಾರೆ. ಈ ಅಡಿಗೆ ಭಟ್ಟನು ೧೦ ವರ್ಷಗಳಿಂದ ಇವರ ಮನೆಯಲ್ಲಿಯೇ ಕೆಲಸಕ್ಕಿದ್ದವನಲ್ಲದೆ ಡೇವಿಡರ ಹೆಂಡತಿಯವರಿಂದಲೇ ಸಣ್ಣ ಪ್ರಾಯದಿಂದ ಪೋಷಿಸಲ್ಪಟ್ಟವನಂತೆ.

ತಿನ್ನವೆಲ್ಲಿ ಕೆಲೆಕ್ಟರರಾಗಿದ್ದ ಎಷ್ ದೊರೆಗಳ ಕೊಲೆ ಮೊಕದಮೆಯ ತೀರ್ಮಾನವು ತಾ. ೧೫ರಲ್ಲು ಕೊಡಲ್ಪಟ್ಟಿತು. ಈ ಮೊಕದಮೆಯಲ್ಲಿ ಚೀಫ್ ಜಸ್ಟಿಸರೂ, ಜಸ್ಟಿಸ್ ಐಲಿಂಗರವರೂ ಇ. ಪಿ. ಕೋಡಿನ ೧೨೧ನೇ A ಸೆಕ್ಷನ್ ಪ್ರಕಾರ ಆಪಾದಿತರಲ್ಲಿ ೧ನೇ, ೨ನೇ, ೩ನೇ, ೪ನೇ, ೫ನೇ, ೬ನೇ, ೭ನೇ, ೮ನೇ, ೧೪ನೇ ಆಪಾದಿತರು ತಪ್ಪಿತಸ್ಥರೆಂದು ಅಭಿಪ್ರಾಯ ಪಟ್ಟರು. ಆದರೆ ಜಸ್ಟಿಸ್ ಶಂಕರನ್ ನಾಯರರು ೧ನೇ, ೨ನೇ, ೬ನೇ, ೧೪ನೇ, ಆಪಾದಿತರು ಮಾತ್ರ ತಪ್ಪಿತಸ್ಥರೆಂದು ಅಭಿಪ್ರಾಯ ಪಟ್ಟರು. ಕಡೆಗೆ ಚೀಫ್ ಜಸ್ಟಿಸರವರು ೧ನೇ ಆಪಾದಿತನಾದ ನೀಲಕಂಠ ಎಂಬವನಿಗೆ ಏಳು ವರ್ಷಗಳ ಕಠಿಣ ಸಜೆ; ೨ನೇ ಶಂಕರಕೃಷ್ಣ ಅಯ್ಯರ್ ಎಂಬವನಿಗೆ ೪ವರ್ಷ ಕಠಿಣ ಸಜೆ; ೪ನೇ ಮುತ್ತು ಕುಮಾರ ಸ್ವಾಮಿ ಪಿಳ್ಳೆ, ೫ನೇ ಸುಬ್ಬಯ ಪಿಳ್ಳೆ, ೬ನೇ ಜಗನ್ನಾಥ ಐಯ್ಯಂಗಾರ್, ೮ನೇ ಬಾಸು ಪಿಳ್ಳೆ, ೧೪ನೇ ವೆಂಕಟಾಚಲಮ್ ಅಯ್ಯರ್ ಎಂಬವರಿಗೆ ಒಂದೊಂದು ವರ್ಷಗಳ ಸಜೆಯನ್ನೂ ೭ನೇ ಆಪಾದಿತನಾದ ಹರಿಹರ ಐಯ್ಯರನಿಗೆ ಮೂರು ವರ್ಷಗಳ ಸಜೆಯನ್ನೂ ವಿಧಿಸಿ ಉಳಿದವರನ್ನು ಖುಲಾಸುಪಡಿಸಿದರು.

೧೯೧೦—೧೧ನೇ ಇಸವಿಯಲ್ಲಿ ಮದ್ರಾಸ್ ಸಂಸ್ಥಾನದಲ್ಲಿ ಒಟ್ಟಿಗೆ ೨೩,೪೨೫ ಹುಡುಗರ ಪ್ರ್ಯಾಮರಿ ಶಾಲೆಗಳೂ ೯೦೦ ಹುಡಿಗಿಯರ ಪ್ರ್ಯಾಮರಿ ಶಾಲೆಗಳೂ ಇದ್ದವು. ಹುಡುಗ ಹುಡುಗಿಯರ ಶಾಲೆಗಳಲ್ಲಿ ಕಲಿಯುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೧,೨೧೫,೭೨೫ ಆಗಿತ್ತು. ಇದಕ್ಕಾಗಿ ೧೯೧೦-೧೧ನೇ ಇಸವಿಯಲ್ಲಿ ಆದ ಒಟ್ಟು ಖರ್ಚು ೧೨,೭೬೮ ರೂಪಾಯಿ ಎಂದು ತಿಳಿದು ಬರುತ್ತದೆ.

ಮದ್ರಾಸ್ ಸರಕಾರದ ಕಾರ್ಯನಿರ್ವಾಹಕ ಸಭೆಗೆ ಬಹುಮಾನಪಟ್ಟ ಮೆ| ಪಿ. ಎಸ್ ಶಿವಸ್ವಾಮಿ ಅಯ್ಯರ್ ಸಿ. ಐ. ಇ. ರವರು ನೇಮಿಸಲ್ಪಟ್ಟರು. ಇವರು ಈ ತನಕ ಎಡ್ವೋಕೇಟ್ ಜನರಲರಾಗಿದ್ದು ಕಾರ್ಯ ಸಿದ್ಧಿಯನ್ನು ಹೊಂದಿ ಜನಪ್ರೀತರಾಗಿರುತ್ತಾರೆ.

ತಿರುವಾಂಕೋಡು (ತ್ರಾವಣಕುರ) ರಾಜ್ಯದಲ್ಲಿ ಪಂಚಮರ ಜನ ಸಂಖೆ ಬಹು ಹೆಚ್ಚು ಉಂಟು. ಈ ಜನರ ಉದ್ಧರಣೆಯಿಂದ ದೇಶೋನ್ನತಿ ಲಭಿಸುವುದೆಂತ ತಿರುವಾಂಕೋಡು ಸರಕಾರದವರು ಅಭಿಪ್ರಾಯ ಪಟ್ಟು ಇವರ ಉದ್ಧರಣೆ ಕಾರ್ಯಗಳಿಗೆ ವಿಶೇಷ ಮನಸ್ಸು ಕೊಡುತ್ತಾರೆ. ನೇಯತ್ತಾಂಕರ ಸರಕಾರಿ ಶಾಲೆಯಲ್ಲಿ ಪಂಚಮರ ಹುಡುಗರು ಶೇಕಲಿಕ್ಕೆ ಪ್ರಯತ್ನಿಸಿದಾಗ ಆ ಊರಿನ ನಾಯರರು ಒಂದಾಗಿ ಕೂಡದೆಂತ ತಡೆದರು. ಸರಕಾರದವರು ಪೋಲೀಸ್ ಸಹಾಯ ತರಿಸಿ ಪಂಚಮ ಹುಡುಗರನ್ನು ಶಾಲೆಯಲ್ಲಿ ಶೇರುವಂತೆ ಮಾಡಿದರು.

ದಕ್ಷಿಣ ಕನ್ನಡ.

NOTICE.

"Applications are invited from qualified persons for auditing the accounts of the Canara Banking Corporation, Udipi (Ltd.) for the 9 months ending 15th March next. Apply with testimonials stating terms.

Udipi 15th February 1912.

S. Ananda Rau,
Secretary.

ನೋಟಿಸು.

ಪೂಜಾರಿಯಾಗಿ ಕೆಲಸ ಮಾಡಲಿಕ್ಕೆ ಒಬ್ಬ ಗೌಡಸಾರಸ್ವತ ಬ್ರಾಹ್ಮಣನು ಬೇಕಾಗಿರುವನು. ಪೂಜಾವೃತ್ತಿಗೆ ಬೇಕಾದ ಮಂತ್ರ ತಂತ್ರಗಳನ್ನು ಅರಿತವನಾಗಿರ ಬೇಕಲ್ಲದೆ ವೈದೀಕ ವೃತ್ತಿಯವನಾಗಿರ ಕೂಡದು. ಕಲಿತಿರುವಂಥಾ ಶಾಸ್ತ್ರ ಜ್ಞಾನ ಮಾಹಿತಿಯ ಮೇಲೆ ಮಾಸಾಶನವು ನಿರ್ಣಯಿಸಲ್ಪಡುವುದು. ಐದು ವರುಷಗಳ ವ್ಯಾದೆಯ ಬೊಂಡ್ ಯಾನೆ ಖಾತ್ರಿ ಪತ್ರವನ್ನು ಬರಕೊಡಲು ಸಿದ್ಧವಿರುವಂಥವನು ಬೇಕಾಗಿರುವನು.

ಉಮೇದ್ವಾರರಿಂದ ಅರ್ಜಿಗಳು ಪರಿಧಾವಿ ಸಂ|ರದ ಚೈತ್ರ ಶು. ೧೫ರ ವರೇಗೆ ಸ್ವೀಕರಿಸೋಹಾಗುವವು.

C/o The Manager,
Swadeshabhimani.

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ೪ ಪ್ಲೇಗು ಮರಣಗಳುಇದ್ದವು.

ದಕ್ಷಿಣ ಕನಡಾ ಜಿಲ್ಲೆಯಲ್ಲಿ ಎರಂಡಿ ರೇಶ್ಮೆ ಪೈದಾಸ್ತು ಮಾಡುವ ಕ್ರಮವನ್ನು ಸ್ಥಾಪಿಸುವ ಉದ್ದೇಶ ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘದ ಸೆಕ್ರಟೆರಿ ಮೆ| ರಂಗರಾಯರ ಕಡೆಯಿಂದ ಬಂಗಾಳಕ್ಕೆ ತರಬೇತಿ ಹೊಂದಲಿಕ್ಕೆ ಕಳುಹಿಸೋಹಾದ ಬಾಸೆಲ್ ಜರ್ಮನ್ ಮಿಶನಿನ ಉಪದೇಶಿ ಮಿಸ್ತರ್ ಜೆ. ಮೆಲೋತರು ಕಳದ ತಿಂಗಳಲ್ಲಿ ತರಬೇತಿ ಹೊಂದಿ ಮಂಗಳೂರಿಗೆ ವಾಪಸು ಬಂದಿದ್ದರು. ಸದರಿ ಮೇಲೋತರು ನಿರಾಶ್ರಿತಜನ ಸಹಾಯಕ ಸಂಘದ ಕಡೆಯಿಂದ ರೇಶ್ಮೆ ವಿದ್ಯೆಯನ್ನು ಈ ಜಿಲ್ಲೆಯಲ್ಲಿ ಪಸರಿಸುವ ಬದಲಿಗೆ ಬಾಸೆಲ ಮಿಶನಿನವರೇ ಸದರಿ ಕೆಲಸ ನಿರ್ವಹಿಸುವರೆ ಒಪ್ಪಿಕೊಂಡು ಡಿಸ್ಟ್ರಿಕ್ಟ ಬೋರ್ಡಿಗೆ ಮನವಿಮಾಡಿದ ಕಾರಣ ಬೋರ್ಡಿನವರು ಈ ತಿಂಗಳ ೯ನೇ ತಾರೀಕಿನ ಮಿಟಂಗಿನಲ್ಲಿ ಈ ವರುಷಕ್ಕೆ ರೂ. ೯೦೦ ಬಾಸೆಲ ಮಿಶನಿಗೆ ಸಹಾಯಧನವಾಗಿ ಕೊಡಬೇಕಾಗಿ ನಿರ್ಣಯಿಸಿದರು. ಮಂಗಳೂರು, ಉಡುಪಿ ಕಾಸರಗೋಡು ಈ ಮೂರು ಪಟ್ಟಣಗಳಲ್ಲಿ ಎರಂಡಿ ಪೈದಾಸ್ತು ಮಾಡುವ ರಾಣ್ಯಗಳನ್ನು ನಡಿಸುವರೆ ರೂ ೧೨೫೦ ತಗಲುವುದೆಂತ ಜರ್ಮನ್ ಮಿಶನಿನವರು ಅಜಮಾಯಿಶಿ ಮಾಡಿರುವರು. ಈ ಪೈಕಿ ಇವರ ಉಪದೇಶಿಗಳಾದ ಮೆಲೋತರವರಿಗೆ ಕೊಡೋಹಾಗುವ ತಿಂಗಳು ಒಂದರ ರೂಪಾಯಿ ೪೫ರ ತಲಬಿನಲ್ಲಿ ತಿಂಗಳು ಒಂದಕ್ಕೆ ರೂಪಾಯಿ ೨೫ ಮಿಶ್ಯನೆರಿಗಳಿಂದ ಕೊಡೋಹಾಗುವುದು.

ಬಂಗಾಳದಿಂದ ರೇಶ್ಮೆ ವಿದ್ಯೆ ಕಲಿತು ಬಂದ ಜಿ. ಮೆಲೋತರವರು ಕಾಸರಗೋಡು ತಾಲೂಕು ಪಣಿಯಾರ ಗ್ರಾಮದಲ್ಲಿ ಒಂದು ಪಂಚಮ ಶಾಲೆ ಇಡುವಗೋಸ್ಕರವೂ ರೇಶ್ಮೆ ಉಂಟು ಮಾಡುವ ಕ್ರಮ ಪಂಚಮರು ಮೊದಲಾದವರಿಗೆ ಕಲಿಸುವಗೋಸ್ಕರವೂ ಕಟ್ಟೋಣ ಕಟ್ಟಿಸುವುದಕ್ಕೆ ಪ್ರಾರಂಭಿಸಿದ್ದಲ್ಲಿ ಕೆಲವು ನಾಯರರು ಮತ್ತು ಕೋಲಾರಿಗಳು ಒಂದಾಗಿ ಪಂಚಮರಿಗೆ ವಿದ್ಯೆ ಕಲಿಸುವಗೋಸ್ಕರವಾಗಲೀ ಅವರ ಯಾವ ಪ್ರಯೋಜನದಗೋಸ್ಕರವೂ ಆಗಲೀ ಯಾವ ಸಂಸ್ಥೆಯೂ ಇಡಕೂಡದೆಂತ ವಿರೋಧಿಸಿ ಒಬ್ಬ ಕುಡಿಕನಿಗೆ ಮದ್ದತ್ತು ಕೊಟ್ಟು ಸದರಿ ಮೇಲೋತರಿಂದ ಕೆಲಸಕ್ಕೆ ನೇಮಕ ಪಟ್ಟ ಕೇಳುನಾಯರ ಎಂಬವರಿಗೆ ತಕ್ಷೀರು ತರವಾಗಿ ಬೆದರಿಸಿದ ಕಾರಣ ಆ ಕೇಳುನಾಯರರು ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರವರಿಗೆ ನೆಮ್ಮದಿ ಪರಿಪಾಲನೆ ಬಗ್ಯೆ ಅರ್ಜಿಮಾಡಿದ್ದಾರೆ.

ಇಲ್ಲಿಯ ಜಟ್ಕಾ ಗಾಡಿಗಳ ಅತಿ ಜೋರಾದ ಓಡ್ಯಾಟದಿಂದ ನಡಿಯುತ್ತಿರುವ ಅನಾಹುತಗಳು ದಿನೇ ದಿನೇ ಹೆಚ್ಚಾಗುತ್ತಿರುವವು. ನಿನ್ನೆ ಇಲ್ಲಿಯ ಅಸಿಸ್ಟಾಂಟ್ ಸರ್ಜನರು ಕೂತುಕೊಂಡು ಹೋಗುತ್ತಿದ್ದ ಜಟ್ಕಾಗಾಡಿಯು ಓಡಿಸಿದ ರಭಸದಿಂದ ಕೆನರಾ ಹ್ಯಾಸ್ಕೂಲು ಸಮೀಪ ಒಂದು ಮಾರ್ಗದಿಂದ ಇನ್ನೊಂದು ಮಾರ್ಗಕ್ಕೆ ತಿರುಗುವಾಗ್ಯೆ ಇನ್ನೊಂದು ಜಟ್ಕಾ ಗಾಡಿಗೆ ತಗಲಿ ಎರಡು ಗಾಡಿಗಳಲ್ಲಿಯೂ ಕೂತುಕೊಂಡಿದ್ದವರಿಗೆ ಜಖಂ ಆಗಿದೆಂಬದಾಗಿ ತಿಳಿಯುತ್ತೇವೆ. ಈ ಜಖಮಾದ ಅಸಿಸ್ಟಾಂಟ ಸರ್ಜನರ ಹೆಗಲಿನ ಎಲುಬು ಸಹ ಅಲ್ಪಸ್ವಲ್ಪ ಮುರಿದಿರುವುದೆಂಬುದನ್ನು ತಿಳಿಯಲು ವಿಷಾದಪಡುವೆವು. ಇಂಥಾ ಅನಾಹುತಗಳು ಪ್ರತಿನಿತ್ಯವೂ ಎಂಬಂತೆ ಸಂಭವಿಸುತ್ತಿರುವವಾದರೂ ಸಾಮಾನ್ಯರು ಇದರ ನಿವಾರಣೋಪಾಯಗಳನ್ನು ತಿಳಿಯದೆ ಸುಮ್ಮನಿದ್ದು ಸರಕಾರದವರ ಲಕ್ಷ್ಯಕ್ಕೆ ಇವೆಲ್ಲವನ್ನೂ ತರಲಿಕ್ಕೆ ಸಾಧ್ಯವಾಗುವುದಿಲ್ಲ. ಟೌನ್ ಪೋಲೀಸಿನವರು ರಾತ್ರಿ ಹಗಲು ಪಟ್ಟಣದಲ್ಲೆಲ್ಲಾ ಗಸ್ತಿ ತಿರುಗುತ್ತಿರುವರಾದರೂ ತಾವು ಹೀಗೆ ತಿರುಗಾಡಿಕೊಂಡು ಮಾಡತಕ್ಕ ಕರ್ತವ್ಯಗಳೇನೆಂಬುದು ಪೋಲೀಸಿನವರಿಗೆ ಸರಿಯಾಗಿ ತಿಳಿಯದೆ ಇದ್ದ ಕಾರಣ ಗಾಡಿ ಮೊದಲಾದವುಗಳ ಇಂಥಾ ಗಲಾಟೆಯು ಇತ್ತಲಾಗೆ ಹೆಚ್ಚುತ್ತಾ ಗಾಡಿಗಳಲ್ಲಾಗಲಿ ಸ್ಯಾಕಲುಗಳ ಮೇಲಾಗಲಿ ಈ ಪಟ್ಟಣದಲ್ಲಿ ತಿರುಗಾಡುವುದು ಅಪಾಯಕರವಾಗಿ ಕಂಡುಬಂದದೆ. ತಪ್ಪುಗಳನ್ನು ಹ್ಯಾಗೆ ಮಾಡುತ್ತಿರುವರೆಂಬುದನ್ನು ನೋಡುತ್ತಾ ಇದ್ದು ಈ ತಪ್ಪುಗಳ ಮೇಲೆ ಪೋಲೀಸಿನವರು ಮೊಕದಮೆಗಳನ್ನು ಏರ್ಪಡಿಸುವುದಕ್ಕಿಂತ ಅಂಥಾ ತಪ್ಪುಗಳು ಸಂಭವಿಸದಂತೆಯೇ ಜಾಗರೂಕರಾಗುವುದರಿಂದ ಪುರಜನರಿಗೆ ಕ್ಷೇಮವು ಉಂಟಾಗುವುದಲ್ಲದೆ ಮೊಕದಮೆಗಳ ವ್ಯವಹಾರಗಳಿಂದ ಪೋಲೀಸಿನವರಿಗೂ ಮೆಜಿಸ್ಟ್ರೇಟರಿಗೂ ಈ ಮೂಲಕ ವೃಥಾ ನಷ್ಟವಾಗುವಂಥ ಸಮಯವು ಸಹ ಉಳಿಯುವುದು. ಅತ್ತಿತ್ತ ಹೋಗುವಂಥಾ ಗಾಡಿಗಳು ರಸ್ತೆಗಳ ಯಾವ್ಯಾವ ಪಾರ್ಶ್ವಗಳಿಂದ ಹೋಗತಕ್ಕದ್ದೆಂಬುದನ್ನು ಜನರಿಗೆ ಸೂಚಿಸುವಂತೆಯೂ ವ ಅತ್ತಿತ್ತ ಹಾದುಹೋಗುವ ಜನರಿಗೆ ಮಾರ್ಗಗಳು ಕೊಡುವಲ್ಲಿ ಪೋಲೀಸಿನವರು ನಿಂತುಕೊಂಡು ಎಚ್ಚರಿಸುವುದು ಬೀದಿಗಳ ಆಯಾ ಮೂಲೆಗಳಲ್ಲಿರುವ ಬೀಡಿ ಸೋಡಾ ಅಂಗಡಿಗಳಲ್ಲಿ ಬೀಡಿ ಮೊದಲಾದವುಗಳನ್ನು ಸೇದಿ ಬಿದ್ದುಕೊಂಡಿರುವುದಕ್ಕಿಂತ ಲೇಸೆಂಬುದು ಪುರರಕ್ಷರಾದ ಪೋಲೀಸು ಪೌಜಿನವರು ತಿಳಿಯುವುದುತ್ತಮ. ಅದಲ್ಲದೆ ಜಟ್ಕಾ ಗಾಡಿಗಳಿಗೆ ಲೈಸನ್ಸುಗಳನ್ನು ಕೊಡುವಾಗ್ಯೆ ಕುದುರೆಗಳನ್ನು ಆಟೋಪದಲ್ಲಿಡಲು ಸಮರ್ಥರಾದವರಿಗನೇ ನೋಡಿ ಕೊಡಬೇಕೇ ಹೊರತು ೧೩ ಯಾ ೧೪ ವರುಷ ಪ್ರಾಯದ ಹುಡುಗರಿಗೆ ಸಹ ಗಾಡಿ ಲೈಸನ್ಸುಗಳನ್ನು ಕೊಡುವುದುಚಿತವಲ್ಲ. ಸ್ಯಾಕಲುಗಳ ಮೇಲೆ ತಿರುಗಾಡುವವರನ್ನು ಜಟ್ಕಾ ಗಾಡಿ ಹೊಡೆಯುವವರಲ್ಲಿ ಕೆಲವರು ಪುಂಡತನದಿಂದ ಬೇಕೆಂತಲೇ ಸ್ಯಾಕಲು ಬರುವ ಕಡೆಗಳಲ್ಲಿಯೇ ಗಾಡಿಗಳನು ತಿರುಗಿಸಿ ಉಪದ್ರವಿಸುವುದು ನಮಗೆ ಸ್ವತಹ ಅನುಭವಸಿದ್ಧವಾದ ವಿಷಯವಾಗಿದೆ. ಇದೆಲ್ಲಕ್ಕೂ ನಮ್ಮ ಮಾನ್ಯ ಪೋಲೀಸು ಸುಪರಿಂಟೆಂಡೆಂಟರೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ ತಕ್ಕ ನಿಗಾ ಕೊಡುವರೆಂಬುದಾಗಿ ನಂಬಿದ್ದೇವೆ. ಬೆಂಚ್ ಮೆಜಿಸ್ಟ್ರೇಟರುಗಳು ತಮ್ಮೆದುರು ತನಕಿಗೆ ಬರುವ ಇಂಥಾ ಮೊಕದಮೆಗಳಲ್ಲಿ ತಪ್ಪಿ

ತಸ್ಕರನ್ನು ಹೆಚ್ಚಾಗಿ ಬಿಟ್ಟುಬಿಡುವರೆಂಬ ತಪ್ಪು ಭಾವನೆಯು ಏನೋ ಕಾರಣಗಳಿಂದ ಈ ಗಾಡಿ ಹೊಡೆಯುವವರಲ್ಲಿ ನೆಲೆಗೊಂಡಿರುವುದೆಂಬುದಾಗಿ ತಿಳಿಯುತ್ತೇವೆ. ಇಂಥಾ ಭಾವನೆಯು ಆಧಾರವಿಲ್ಲದ್ದೆಂಬುದನ್ನು ತೋರಿಸಿಕೊಡುವುದು ಅತ್ಯಗತ್ಯವಾಗಿರುವುದು.

ಇತ್ತಲಾಗ ನೆರೆದ ಡಿಸ್ಟ್ರಿಕ್ಟ ಬೋರ್ಡ ಮೀಟಿಂಗಿನಲ್ಲಿ ಪಾಣೆಮಂಗಳೂರು ಸಂಕಕ್ಕೆ ಬೋರ್ಡಿನವರಿಂದ ರೂ. ೩೩,೦೦೦ ಸೆಕ್ಷನ್ ಮಾಡಲ್ಪಟ್ಟಿರುತ್ತದೆ. ಲೋಕಲ್ ಬೋರ್ಡುಗಳ ನೌಕರರಿಗೆ ಡಿಲ್ಲಿ ಕರೀಟಧಾರಣೆಯ ಸ್ಮರಣಾರ್ಥವಾಗಿ ಸರಕಾರದ ಇತರ ನೌಕರರಿಗೆ ಕೊಡಲ್ಪಟ್ಟಂತೆ ಅರ್ಧ ತಿಂಗಳ ಸಂಬಳವು ಉಚಿತವಾಗಿ ಕೊಡಬೇಕೆಂತ ಮಾಡಿದ ವಿಜ್ಞಾಪನೆಯು ಬೋರ್ಡಿನವರಿಂದ ಅಂಗೀಕರಿಸೋಣಾಗಲಿಲ್ಲ.

ನಿನ್ನೆ ಇಲ್ಲಿಯ ಆಕ್ಟಿಂಗ್ ಕಲೆಕ್ಟರರಾಗಿ ನೇಮಿಸಲ್ಪಟ್ಟ ಮೆ| ಎ. ಎಫ್. ಜಿ. ಮೊಸ್ಕಾರ್ಡಿ ದೊರೆಗಳವರು ಮೆ| ಡ್ಯೂಗ್ ದೊರೆಗಳವರಿಂದ ಚಾರ್ಜು ವಹಿಸಿಕೊಂಡಿರುವರು. ಈ ತಿಂಗಳ ತಾ. ೨೭ಕ್ಕೆ ಮೊಸ್ಕಾರ್ಡಿ ದೊರೆಗಳು ಕುಂದಾಪುರ ಅತ್ತಕಡೆ ಸರ್ಕೀಟು ಬೆಳಿಸುವರಾಗಿ ಕೇಳುತ್ತೇವೆ.

ಇಲ್ಲಿಯ ಟ್ರೆಜರಿ ಡಿಪ್ಯುಟಿ ಕಲೆಕ್ಟರರಾಗಿರುವ ರಾ| ಟಿ. ವಿ. ಶ್ರೀನಿವಾಸ ಅಯ್ಯಂರವರಿಗೆ ಕೆಲಸದವಧಿಯು ಇನ್ನೊಂದು ವರುಷ ತನಕ ಹೆಚ್ಚಿಸೋಣಾಗಿರುವುದೆಂಬುದಾಗಿ ಕೇಳುತ್ತೇವೆ.

ಕಳದ ಸಂಚಿಕೆಯಲ್ಲಿ ಪ್ರಸ್ತಾಪಿಸಲ್ಪಟ್ಟ ಕಾಸರಗೋಡು ಸಬ್ ಮೆಜಿಸ್ಟ್ರೇಟರವರಿಂದ ಕಮಿಟು ಮಾಡಿದ ಸೆಶನ್ಸ್ ಮೊಕದಮೆಯು ಕಳೆದ ವಾರದಲ್ಲಿ ತೀರಿ ಜೂರಿಯವರು ಕೈದಿಗಳ ಮೇಲೆ ತಪ್ಪು ಸಾಬೀತಾಗುವುದಿಲ್ಲವೆಂಬದಾಗಿ ಹೇಳಿದ ಅಭಿಪ್ರಾಯವನ್ನು ಜಡ್ಜರವರು ಸ್ವೀಕರಿಸಿ ಅಪರಾಧಿಗಳನ್ನು ಖುಲಾಸುಪಡಿಸಿರುವರು.

ಕೊಡಿಯಾಲ ಬೈಲಿನಲ್ಲಿ ಇತ್ತಲಾಗೆ ಸ್ಥಾಪಿಸಲ್ಪಟ್ಟ ಹೊಸ ದೇವಸ್ಥಾನದಲ್ಲಿ ಗುರುವಾರ ತಾ. ೨೨ಕ್ಕೆ ಪ್ರತಿಷ್ಠೋತ್ಸವವೂ ಈ ದಿನ ಬೆಳಿಗ್ಗಿನಿಂದ ಅಭಿಷೇಕ ಮಹಾಪೂಜಾದಿಗಳೂ ನಡಿಯುತ್ತಿರುವವು.

ಫೊಳಲಿ. ಮಂಗಳೂರು ತಾಲೂಕು ಕೊಡಿಯಾಲ ಮಾಗಣೆ ಮಲ್ಲೂರೆಂಬ ಗ್ರಾಮದ ಇಡ್ಮದ ಕೊಟ್ಲು ಹತ್ತರ ಈಗ ಒಂದು ತಿಂಗಳಿಂದ ಕೆಲವು ಭೂತಗಳು ಎದ್ದು ರಾತ್ರಿಯಲ್ಲಿ ಮನೆ ತಿರುಗುವದಲ್ಲದೆ ದಾರಿಯಲ್ಲಿ ಹೋಗುವವರನ್ನು ನೀವು ಯಾರು? ಎಲ್ಲಿ ಹೋಗುತ್ತೀರಿ ಎಂಬಿತ್ಯಾದಿ ಕುಶಲ ಪ್ರಶ್ನೆಗಳನ್ನು ಮಾಡಿ ನೀವು ಹೆದರಬೇಡಿ ಎಂತ ಹೇಳುತ್ತದೆ ಎಂಬ ವಾರ್ತೆ ಕೇಳಿ ಪ್ರಥಮತಾ ನಂಬಲಿಲ್ಲ. ಆದರೆ ಮೊನ್ನೆ ಕಳದ ೧ನೇ ತಾರೀಕಿನಲ್ಲಿ ಕರಿಯಂಗಳ ಪಟೇಲ್ ಸಂಕು ಶೆಟ್ರು ವಗೈರೆ ಕೆಲವರು ರಾತ್ರಿ ೭|| ಗಂಟೆ ಸಮಯಕ್ಕೆ ದೋಣಿಯಿಂದ ಹೋಗುವಾಗ್ಯೆ ಯಾರದು, ಸ್ವಲ್ಪ ನಿಲ್ಲಿರಿ; ಎಂಬಿತ್ಯಾದಿ ಹೇಳಿತಂತೆ. ಇವರಲ್ಲ ಬಹಳವಾಗಿ ಹೆದರಿಕೊಂಡು ಶ್ರಿ ರಾಜರಾಜೇಶ್ವರಿ ದೇವರ ಪ್ರಾಸಾದವನ್ನು ಹಾಕಿ ಕೊಂಡು ನಾವು ನಮ್ಮ ಕೆಲಸದಲ್ಲಿ ಹೋಗುವವರು, ನಮಗೆ ಉಪದ್ರ ಕೊಡಬಾರದು ಎಂತ ಹೇಳಿಕೊಂಡರು. ಕೂಡಲೇ ನೀವು ಹೋಗಿ, ಹೆದರಬೇಡಿ ಎಂತ ಹೇಳಿತು. ಇವರ ದೋಣಿ ಮುಂದೆ ಹೊದ ಕೂಡಲೇ ಎಂದಿನಂತೆ ನೇಮ ನುಡಿಕಟ್ಟುಗಳು ಗಂಟಾರವದೀವಟಿಗೆಗಳು ವಗೈರೆ ಕಂಡು ಬಂತು. ಈ ಸಂಗತಿಯನ್ನು ತನಕಿಮಾಡುವ ಬಗ್ಯೆ ಅಮುನಿಂಜೆ ಗುತ್ತಿನ ಶೀನಪ್ಪ ಹೆಗ್ಗಡೆಯರು ಮೊದಲಾದವರು ಅಲ್ಲಿಗೆ ಹೋಗಿ ಕಣ್ಣಾರೆ ನೋಡಿ ಬಂದಿರುವರು.

ಪುತ್ತೂರು. ಈ ನಮ್ಮ ಟೌನಿನಲ್ಲಿ ಬಹಳ ಕಾಲದಿಂದ ಜುಗಾರಿ ಆಡುತ್ತಿದ್ದ ಏಟ್ಲದ ಮಾಲಿಂಗ ಮೊದಲಾದವರು ಕೊಂಬೊಟ್ಟು ಎಂಬಲ್ಲಿ ಹಗಲು ಘಂಟೆ ೧೧ಕ್ಕೆ ಜುಗಾರಾಡುತ್ತಿರುವಾಗ ತಾ. ೧೮ರಲ್ಲು ಇಲ್ಲಿಯ ಸ್ಟೇಶನ್ ಸಬ್ ಇನ್ಸ್‌ಪೆಕ್ಟರರವರೂ ಹೆಡ್‌ಕನ್‌ಸ್ಟೇಬಲರವರೂ ಅವರನ್ನು ಹಿಡಿಯಲಿಕ್ಕೆ ಹೋದಾಗ್ಯೆ ಮಾಲಿಂಗನ ಶಿವಾಯಿ ಬಾಕಿಯವರು ಓಡಿ ಹೋದರಂತೆ. ಅಲ್ಲಿದ್ದ ಎಲ್ಲವರ ಮೇಲಿಯೂ ಪಿರ್ಯಾದಿ ಆಗಿಯದೆ.

ಚಿತ್ರಾಪುರ ಮಠದ ಶ್ರೀ ಸ್ವಾಮಿಗಳ ಸವಾರಿಯು ತಾ. ೧೫ನೇ ಗುರುವಾರ ಪ್ರದೋಷ ಕಾಲದಲ್ಲಿ ಇಲ್ಲಿಗೆ ದಯಪಾಲಿಸಿದುದರಿಂದ ೩ ದಿವಸಗಳ ವರೆಗೂ ಶ್ರೀ ವೇಣುಗೋಪಾಲ ಮಂದಿರವು ಉತ್ಸವ ಪೂರ್ಣವಾಗಿತ್ತು. ಶ್ರೀ ಸವಾರಿಯು ಇಲ್ಲಿಗೆ ತಲ್ಪಿದ ದಿವಸ ಪಟ್ಟಣವೆಲ್ಲ ಮಾವಿನ ತಳಿರುಗಳ ತೋರಣಗಳಿಂದಲೂ ಕದಳೀ ಸ್ಥಂಭಗಳಿಂದಲೂ ಪೂರ್ಣ ಅಲಂಕೃತವಾಗಿತ್ತು. ಊರಿನ ಸಮಸ್ತ ಸಾರಸ್ವತರೂ ಇತರ ಹಿಂದುಗಳೂ ಒಟ್ಟುಗೂಡಿ ಬಹಳ ಸೌರಂಭದಿಂದ ಶ್ರೀ ಸ್ವಾಮಿಗಳನ್ನು ಮೆರವಣಿಗೆಯಿಂದ ಕರಕೊಂಡು ಸುಸ್ವಾಗತವೆಂದರು. ಪುತ್ತೂರಿನ ನೆರೆಕರೆಯಲ್ಲಿರುವ ಗ್ರಾಮಗಳಿಂದ ಚಿತ್ರಾಪುರ ಮಠದ ಶಿಷ್ಯವರ್ಗದವರು ಪುತ್ತೂರಿಗೆ ಬಂದು ಗುರುಗಳ ಸೇವೆಯನ್ನು ಮಾಡುವುದರಲ್ಲಿ ಆಸಕ್ತರಾಗಿರುವರು. ಒಟ್ಟಾರೆ ಈಗ ಜಮೆ ಆದ ಸಾರಸ್ವತರು ಸ್ಥಳೀಕರೂ ಅನ್ಯರೂ ಕೂಡಿ ಒಂದು ಸಾವಿರದಕ್ಕಿಂತಲೂ ಹೆಚ್ಚು ಆದಾರೇ ಹೊರತು ಕಡಿಮೆಯಾಗಲಿಕ್ಕಿಲ್ಲ. ತಾ. ೧೯ರಲ್ಲು ಶ್ರೀ ಸವಾರಿಯು ಪರಿವಾರ ಸಮೇತ ವಿಟ್ಲಕ್ಕೆ ತೆರಳಿ ಹೋಗುವದು.

ರೋಮನ್ ಕೆಥೋಲಿಕರ ದಕ್ಷಿಣ ಕನ್ನಡದ ರೆವೆರೆಂಡ್ ಬಿಶೋಪ ಧೊರೆಗಳು ಸಹ ತಾ. ೧೫ನೇ ರಾತ್ರಿ ಇಲ್ಲಿಗೆ ಚಿತ್ತೈಸಿದರು. ಸರ್ವ ಕೆಥೋಲಿಕರು ಅನೇಕ ತೋರಣ ಮೊದಲಾದವುಗಳನ್ನು ಕಟ್ಟಿ ಪಟ್ಟಣವೆಲ್ಲವನ್ನೂ ಅಲಂಕರಿಸಿ ತಮ್ಮ ಗುರು ಪ್ರತಿನಿಧಿಗಳಾದ ಬಿಶೋಪ ದೊರೆಗಳನ್ನು ತಮ್ಮ ಇಗರ್ಜಿಗೆ ಕರೆದುಕೊಂಡು ಹೋದರು. ಶನಿವಾರ ದಿವಸ ಮಧ್ಯಾನ್ಹದಲ್ಲಿ ಬಿಶೋಪರು ಇಲ್ಲಿಯ ಗವರ್ನಮೆಂಟು ಹುಡುಗಿಯರ ಶಾಲೆಯನ್ನು ಸಂದರ್ಶಿಸಿ ಬಾಲಕ ಬಾಲಕಿಯರ ವಿನೋದಾಟಗಳನ್ನು ನೋಡಿ ಬಹಳ ಸಂತೋಷಪಟ್ಟರು.

ಮುಲ್ಕಿ. ಹೆಡ್‌ಕ್ವಾರ್ಟರ್ಸ್ ಡ್ಯುಪಿಟಿ ಕಲೆಕ್ಟರರವರು ಜಮಾಬಂದಿ ಬಗ್ಯೆ ಇಲ್ಲಿಗೆ ಬಂದಿರುತ್ತಾರೆ. ನಾಳೆ ಮಂಗಳೂರಿಗೆ ತಾಲೂಕು ಬೋರ್ಡು ಮೀಟಿಂಗಿಗೆ ದಯಮಾಡಿ ನಾಡದು ಹಿಂತೆರಳುವರು. ಬಂಗ್ಲೆ ನಾರಾಯಣ ಕಮ್ತಿರವರ ಮಾನನಷ್ಟ ಮೊಕದಮೆಯು ಈ ದಿನ ಮಧ್ಯಾನ್ಹ ತನಕಿಗೆ ಇಟ್ಟದೆ. ಮೊನ್ನೆ, ನಿನ್ನೆ ಈ ದಿನ ಬೆಳಿಗ್ಯೆ ದೇವಸ್ಥಾನದ ದುರುಪಯೋಗದ ಮೊಕದಮೆಯ ತನಖಿಯಾಯಿತು. ಎಡ್ವೊಕೇಟ್ ರಾಮನಾಥಶ್ಯಾನಭೋಗರು ಈ ಮೊಕದಮೆಯಲ್ಲಿ ವ್ಯವಹರಿಸುವರೆ ಮದ್ರಾಸಿನಿಂದ ಬಂದಿರುತ್ತಾರೆ.

ಇಲ್ಲಿಯ ರೆವಿನ್ಯೂ ಇನ್ಸ್‌ಪೆಕ್ಟರರಾದ ಬಿ. ನರಶಿಂಗರಾಯರಿಗೆ ಬೆಳ್ತಂಗಡಿಗೆ ವರ್ಗವಾಗಿಯದೆ.

ರಾ| ಕೊಡೆತ್ತೂರಗುತ್ತರಾಮಣ್ಣ ಸೆಟ್ರಿಗೆ ತಾ, ೨೩ನೇ ದಿವಸ ಇಲ್ಲಿಯ ಬೋರ್ಡು ಶಾಲೆಯಲ್ಲಿ ಡ್ಯುಪಿಟಿ ಕಲೆಕ್ಟರರು ದರ್ಬಾರು ಪತ್ರಿಕೆ ಒಪ್ಪಿಸುವರು.

ಉಡುಪಿ. ಇಲ್ಲಿಗೆ ೩ ವರುಷಗಳ ಕೆಳಗೆ ದಿಗ್ವಿಜಯಾರ್ಥವಾಗಿ ಬಂದ ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಜ್ಞಾನತೀರ್ಥರು ಕಳದ ತಿಂಗಳ ತಾ. ೩೧ಕ್ಕೆ ರಾಜಮಹೇಂದ್ರಿಯಲ್ಲಿ ವೈಕುಂಠ ವಾಸಿಯಾದರಂತೆ.

ಇಲ್ಲಿ ಅಜ್ಜರಕಾಡಿನ ಪಟಾಪಟಿ ಏಲಂನಲ್ಲಿ ತೆಗೆದುಕೊಂಡ ಸ್ಥಳಗಳಲ್ಲಿ ಭಾವಿ ತೋಡಿದಲ್ಲಿ ನೀರು ಬರುವದಿಲ್ಲವಂತೆ. ತೆಗದುಕೊಂಡವರ ಭಾಗ್ಯವೇ ಸರಿ. ಇಲ್ಲಿ ಅಜ್ಜರಕಾಡಿನಲ್ಲಿ ಪಾರ್ಕ ಮಾಡಬೇಕೆಂದಿರುವ ಆಲೋಚನೆಯನ್ನು ಸದ್ಯಾ ಹಿಂದಕ್ಕೆ ಹಾಕಿರುತ್ತಾರೆ.

ಇಲ್ಲಿಗೆ ಮೈಸೂರಿನ ರತ್ನಾವಳಿ ಥಿಯೆಟ್ರಿಕಲ್ ನಾಟಕ ಕಂಪೆನಿಯವರು ಬಂದಿರುತ್ತಾರೆ. ಇಲ್ಲಿಯ ಜನರು ನಾಟಕ ಕಂಪೆನಿಯವರನ್ನು ಒಳ್ಳೇತಾಗಿ ಪ್ರೋತ್ಸಾಹಿಸುತ್ತಿರುವರು. ರಾ. ರಾ. ಸುಬ್ಬಯ್ಯ ಶೆಟ್ರವರು ಪ್ರಾರಂಭ ನಾಟಕದ ದಿವಸ ಇಬ್ಬರಿಗೆ ಜರಿಪಿತಾಂಬರಗಳನ್ನು ಉಡುಗೆರೆ ಮಾಡಿದರಂತೆ.

ಅದಮಾರು. ಶ್ರೀ ಮದ್ಯಡನೀರ ಮಠದ ಶ್ರಿಪಾದಂಗಳವರ ವಿಷ್ಣು ಮಂಗಲವೆಂಬ ದೇವಸ್ಥಾನದಲ್ಲಿ ಇದೇ ಕುಂಭ ಮಾಸದ ಸಂಕ್ರಮಣಕ್ಕೆ ಧ್ವಜಾರೋಹನವಾಗಿ ಐದು ದಿವಸಗಗಳು ಪರಿಯಂತರ ಉತ್ಸವಗಳು ಬಹಳ ವಿಜೃಂಭಣೆಯಿಂದ ನಡೆಯಿತು. ಈಗಿನ ಶ್ರಿಪಾದಂಗಳವರು ಪಟ್ಟಕ್ಕೆ ಬಂದು ಅಲ್ಪ ಕಾಲವಾದಾಗ್ಯೂ ಬಹಳ ಉದಾರಿಗಳಾದ್ದರಿಂದ ಉತ್ಸವಗಳನ್ನು ಎಷ್ಟೋ ಅಭಿವೃದ್ಧಿಗೆ ತರುತ್ತಾರಲ್ಲದೆ ತಮ್ಮ ಮತದವರನ್ನು ಉನ್ನತ ಸ್ಥಿತಿಗೆ ತರುವ ಉದ್ದೇಶದಿಂದ ಉತ್ಸವದ ಮೂರನೇ ದಿವಸ ಮೆ| ಕಕ್ಕಿಲಾಯರು ಮೊದಲಾದ ಗೃಹಸ್ಥರನ್ನು ಸಭೆಕೂಡಿಸಿ ಶುಭಕಾರ್ಯದಿಗಳಲ್ಲಿ ಮಿತವ್ಯಯವನ್ನು ಮಾಡಿ ವಿದ್ಯಾಸಂಸ್ಥೆಗೆ ಒಳ್ಳೇ ಏರ್ಪಾಡು ಮಾಡಬೇಕೆಂಬ ವಿಷಯವಾಗಿಯೂ ಉಪನ್ಯಾಸಾದಿಗಳನ್ನು ಕೊಡುವರೆ ಇದೇ ಕುಂಭ ಮಾಸ ಹದಿನೈದಕ್ಕೆ ಪುನಃ ಸಭೆಮಾಡಬೇಕಾಗಿಯೂ ಎಲ್ಲಾ ತೌಳವ ಮತಾಭಿಮಾನಿಗಳನ್ನು ಕೇಳಿಕೊಂಡಿರುತ್ತಾರೆ.

ನೋಟೀಸು.

ಸಿದ್ಧವಾಗಿದೆ! ಬೇಗನೇ ತರಿಸಿ ಕೊಳ್ಳಿ!

ಪಂಡಿತ ಮಂಗಳೂರು ನಾರಾಯಣಾಚಾರ್ಯರಿಂದ ಗುಣಿಸಲ್ಪಟ್ಟ

ಪರಿಧಾವಿ ಸಂವತ್ಸರದ ಪಂಚಾಗವು.

ಕ್ರಯ ೦-೩-೦ ಹೆಚ್ಚು ಪ್ರತಿಗಳನ್ನು ಕೊಂಡುಕೊಳ್ಳುವರಿಗೂ ವ್ಯಾಪಾರಸ್ಥರಿಗೂ ಧಾರಳವಾದ ಕಮಿಶನ್ ದೊರಕುವದು.

ವಿಳಾಸ:—

ಪುರುಶೋತ್ತುಮ ನಾರಾಯಣಾಚಾರ್ಯ.

ಬುಕ್ ಡಿಪೊ, ಮಂಗಳೂರು.

ಜೀನಸುಗಳ ಧಾರಣೆ, ಮಂಗಳೂರು. (ರೂಂ)

ಹೊಸ ಮಸ್ಕತಿ ಅಕ್ಕಿ	5—2—0
ಹೊಸ ಗುಡ್ಡು ಮಸ್ಕತಿ...	4-12—0
ಹೊಸ ಮಸ್ಕತಿ ದುಯಂ...	4-12—0
ಹೊಸ ಗುಡ್ಡು ,, ...	4—8—0
ಮಸ್ಕತಿ ಬೆಳ್ತಿಗೆ ,, ...	5—4—0
ಹುರುಳಿ ಗೋಣಿ ೧, ಮುಡಿ 2ರ ...	6—4—0
ಉಪ್ಪು ಗೋಣಿ ೧ರ	3—6—0
ಖೊಬ್ರಿ ಖಂಡಿ ೧ರ	96—0—0
ಖೊಬ್ರಿ ಎಣ್ಣೆ ಮಣ	7—0—0
ಕಾಫಿ ಖಂಡಿ ೧ರ	250—0—0
ಕಾಳು ಮೆಣಸು ಖಂಡಿ	170—0—0
ಹೊಸ ಬಿಳಿ ಗೋಟು ಅಡಿಕೆ	82—0—0
ಕರಿ ಗೋಟು	65—0—0
ಯಾಲದ ಕಾಯಿ ಮಣ ೧ರ	45—0—0
ಗೇರುಬೀಜ ಮುಡಿ ೧ರ...	2—2—0
ರಾಮಪತ್ರೆ ಮಣ ೧ರ...	8—6—0
ಶೀಗೆಕಾಯಿ ಖಂಡಿ ೧ರ	35—0—0
ಕಾಸ್ರಕಿನ ಬೀಜ ಖಂಡಿ ೧ರ	22—0—0
ದಾಲಚೀನಿ ಹ್ಪು ಮಣ ೧ರ	3—0—0
ಅಂಟವಾಳ ಕ್ಯಾ ಮುಡಿ ೧ರ	1—4—0
ಅಣೆತೆ ಕಾಯಿ ಖಂಡಿ ೧ರ	12—3—0
ಪಚ್ಚೆ ಹೆಸರು	4-10—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—8—0
ಗೋಧಿ ಗೋಣಿ ೧ಕ್ಕೆ	10—8—0
ಊರು ಬೆಲ್ಲ ಖಂಡಿ ೧ರ	36—0—0
ಮೊರಿಸ್ ಸಕ್ಕರೆ ಮಣ ೧ರ	3—12—0
ಕಡಲೆ ಗೋಣಿ ೧ರ	7—8—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—2—0
ಖೊಬ್ರಿ ಹಿಂಡಿ ಖಂಡಿ ೧ರ	33—8—0

ಶ್ರೀ ಶಂಕರ ಭಗವತ್ಪಾದಾಚಾರ್ಯ ವಿರಚಿತ

"ವಿವೇಕ ಚೂಡಾಮಣಿ."

(ಸುಲಭ ಕನ್ನಡ ಪ್ರತಿಪದ ಟೀಕಾ ತಾತ್ಪರ್ಯ ಸಹಿತ.)

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿವೆ. ಇದನ್ನು ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. (ಡೆಮ್ಮಿ ಅಷ್ಟಪತ್ರ) ಬೈಂಡು ಉತ್ತಮವಾದ ಕೆಲಿಕೊ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೨—೪—೦. ಹಾಸಲು ೪ ಆಣೆ.

ಶ್ಯಾಮಕುಬ್ಜ.

ಇದೊಂದು ಹೊಸಕಥೆ. ಕನ್ನಡದಲ್ಲಿ ಇಂಥ ಕಥೆಗಳನ್ನು ಇದುವರೆಗೆ ಯಾರೂ ಬರೆದಿಲ್ಲ. ಅತಿ ಚಮತ್ಕಾರವಾಗಿಯೂ, ಒಳ್ಳೆಯ ನೀತಿಯನ್ನು ಬೋಧಿಸುವುದಾಗಿಯೂ ಇದೆ. ಇದನ್ನು ಓದಲು ಪ್ರಾರಂಭಿಸಿ ಕೈಗೆ ತೆಗೆದುಕೊಂಡರೆ ಮುಗಿಸುವವರೆಗೂ ಕೆಳಗಿಡಲು ಮನಸ್ಸು ಬರುವುದಿಲ್ಲ.

ಓದಿನೋಡಿರಿ! ತ್ವರೆಮಾಡಿರಿ!! ಸ್ವಲ್ಪ ಪ್ರತಿಗಳೇ ಇವೆ!!

ಬೆಲೆ ೮ ಆಣೆ. ಅಂಚೆವೆಚ್ಚ ಬೇರೆ.

ಕನ್ನಡ ವರ್ಣಮಾಲಾ.

ಅಕ್ಷರಾಭ್ಯಾಸ ಮಾಡಿಸಲು ಅನುಕೂಲಿಸುವಂತೆ ಅ,ಕಾರ ಮೊದಲು ಳ,ಕಾರದವರಿವಿಗೆ ಎಲ್ಲಾ ಅಕ್ಷರಗಳನ್ನು ದೊಡ್ಡ ಆಕಾರದಲ್ಲಿ ಅಚ್ಚುಮಾಡಿಸಿರುತ್ತೆ ಗೋಡೆಗೆ ಅಂಟಿಸಲು ಅನುಕೂಲಿಸುವಂತೆಯೂ ಬಾಲಕರಿಗೆ ಜಾಗ್ರತೆ ಅವಗಾಹನೆಯಾಗುವಂತೆಯೂ ಇರುವದು. ಬೆಲೆ ೧ಕ್ಕೆ ೬ ಪೈ, ೨೫ಕ್ಕೆ ೮ ಆಣೆ.

ಟೀಕಾ ತಾತ್ಪರ್ಯ ಸಹಿತ ಮಹಿಮ್ನ ಸ್ತೋತ್ರ	೦—೩—೦.
ಡಿ. ಮುಕುಂದಮಾಲಾ ಸ್ತೋತ್ರ	೦—೪—೦.
ವಚನ ಜ್ಯೋತಿಸ್ಸಂಗ್ರಹ	೦—೪—೦.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—

ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಬೆಂಗಳೂರು ಸಿಟಿ.

ಧರ್ಮಪ್ರಕಾಸಿತ ಛಾಪಖಾನೆ,

ಮಂಗಳೂರು, ದ. ಕ.

ವೇದವಾಹಿನೀ.

(ವರ್ಗಣಿ) ೧ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತುಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ!

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಲಾಸ (ಪತ್ತೆ)☞

ವೇದವಾಹಿನೀ ಆಫೀಸ್,

ಶಂಕರಪುರ,

ಶ್ರೀರಾಮಕೃಷ್ಣ ವಿವೇಕಾನಂದ ವಚನಾಮೃತವು.

ಅಭಿನವ ಭರತಖಂಡದ ಪರಮ ಗುರುಗಳಾಗಿಯೂ, ಭಕ್ತಿ ಜ್ಞಾನ ಯೋಗ ವೈರಾಗ್ಯಗಳಲ್ಲಿ ಅದ್ವಿತೀಯರಾಗಿಯೂ, ವೇದ ವೇದಾಂತ ಮಹಮ್ಮದೀಯ ಮತ್ತು ಕ್ರೈಸ್ತಮತಗಳಲ್ಲಿ ಪಾರಂಗತರಾಗಿಯೂ, ಬ್ರಹ್ಮನಿಷ್ಠರಾಗಿಯೂ, ಆತ್ಮವಿದರಾಗಿಯೂ, ಅವತಾರ ಪುರುಷರಾಗಿಯೂ :ಇದ್ದ ಶ್ರೀ ರಾಮಕೃಷ್ಣ ಪರಮಹಂಸರವರ ಸೂಕ್ತಿ ಮುಕ್ತಾವಲಿಯೂ, ಅವರ ಶಿಷ್ಯರಾಗಿ, ಪ್ರಾಚ್ಯ ಪಾಶ್ಚಾತ್ಯ ವಿದ್ಯೆಗಳಲ್ಲಿ ಪಂಡಿತರಾಗಿ, ಅಮೇರಿಕಾ ಯೂರೋಪ್‌ಖಂಡಗಳಲ್ಲಿ ಸನಾತನಧರ್ಮದ ಉತ್ಕೃಷ್ಟತೆಯನ್ನು ಕುರಿತು ಉತ್ತಮೋಪನ್ಯಾಸ ಮಾಡಿ, ಜಗದ್ಗುರುಗಳಾಗಿ, ಭಾರತೀಯರ ಪ್ರಕೃತ ಧರ್ಮಗಳನ್ನು ತಿಳಿಸಿ, ದೇಶಭಕ್ತಾಗ್ರೇಸರರಾಗಿದ್ದ ಶ್ರೀ ವಿವೇಕಾನಂದ ಸ್ವಾಮಿಗಳವರು ಬರೆದ ಕಾಗದಗಳ ಮತ್ತು ಉಪನ್ಯಾಸಗಳ ಸಾರಾಂಶವೂ ಲಲಿತವಾದ ಹೊಸಗನ್ನಡದಲ್ಲಿ ಬರೆಯಲ್ಪಟ್ಟಿವೆ. ಅದರಲ್ಲಿ ಆಸ್ತಿಕ, ಬ್ರಂಲಕ್ಷಣ, ಮೋಕ್ಷೋಪಾಯ, ಭಕ್ತಿ, ವಿರಕ್ತಿ. ಮತಮತಾಂತರಗಳು ಮುಂತಾದ ಪಾರಮಾರ್ಥಿಕ ವಿಷಯಗಳೂ, ಭಾರತೀಯರ ಸ್ಥಿತಿ, ಕರ್ತವ್ಯ, ಇತರ ಜನಾಂಗಗಳ ನಾಗರಿಕತೆ ಮುಂತಾದ ಲೌಕಿಕ ವಿಷಯಗಳೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಪ್ರತಿಯೊಬ್ಬ ದೇಶಾಭಿಮಾನಿಯೂ, ಮತಾಭಿಮಾನಿಯೂ, ಆಸ್ತಿಕನೂ ಮುಮುಕ್ಷುವೂ ಈ ಗ್ರಂಥದ ಒಂದು ಪ್ರತಿಯನ್ನಾದರೂ ಇಟ್ಟುಕೊಂಡಿರಬೇಕು. ಇದರಲ್ಲಿ ಆ ಸದ್ಗುರುಗಳಿಬ್ಬರ ಸಂಸ್ಕೃತ ಕರ್ಣಾಟಕ ಸ್ತೋತ್ರಗಳೂ ಜೀವನ ಚರಿತ್ರೆಗಳೂ ಭಾವಚಿತ್ರಗಳೂ ಅಡಗಿವೆ. ಸರ್ವರಿಗೂ ಸಂಗ್ರಾಹ್ಯ.—ಬೇಗನೆ ಬರೆಯಿರಿ

ವಿಳಾಸ:—ಮ್ಯಾನೇಜರ್,

"ಸುಮತಿ ಗ್ರಂಥಮಾಲಾ"ಆಫೀಸು

ಬೆಂಗಳೂರು ಸಿಟಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ ,, ,,	6—0—0	B ಅರಗಜ ,, ,,	1—0—0
ಕಸ್ತೂರಿ ಬತ್ತಿ ,, ,,	3—0—0	ಕಸ್ತೂರಿ ಬಿಲ್ಲೆ ,, ,,	2—0—0
ಜವಾಜಿ ಬತ್ತಿ ,, ,,	2—0—0	ಜವಾಜಿ ಬಿಲ್ಲೆ ,, ,,	1—0—0
ಪುಣಗಿನ ಬತ್ತಿ ,, ,,	1—8—0	ಕೇಸರಿ ಬಿಲ್ಲೆ ,, ,,	0—8—0
A ಪನ್ನೀರ್ ಬತ್ತಿ ,, ,,	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ ,, ,,	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:—

ಮ. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—

ಎನ್. ಎಂ. ಸುಬ್ರಾವ್,
"ಸುಗಂಧವಿಲಾಸ"
ಮಂಗಳೂರು

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.



ನಮ್ಮಲ್ಲಿ ಅನೇಕ ನಮೂನೆಗಳಲ್ಲಿ (ಅಂದರೆ) ಇಂಗ್ಲೀಷು, ಕನ್ನಡ, ಬಾಳಬಂದು, ಉರುದು, ಅರವ, ತೆಲುಗು ಈ ಎಲ್ಲಾ ಭಾಷೆಗಳಲ್ಲಿಯೂ ರಬ್ಬರು ಮೊಹರು ತಯಾರುಮಾಡುತ್ತೇವೆ. ಬೇಕಾದವರು ಬರದು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ರಬ್ಬರು ಮೊಹರುಗಳ ನಮೂನೆ ನೋಡಬೇಕಾದವರು ನಮ್ಮ ಕಂಪೆನಿಗೆ ಬರದರೆ ಕ್ಯಾಟಲಾಗ್ ರವಾನಿಸುತ್ತೇವೆ. ಇದೂ ಅಲ್ಲದೆ ನಮ್ಮ ಕಂಪೆನಿಯಲ್ಲಿ ತರಹೆವಾರಿ ಫೋಂಟನ್‌ಪೆನ್‌ಗಳೂ ಮತ್ತು ಜರ್ಮನ್ ಅಮೇರಿಕಾ ದೇಶದ ಸುವಾಸನೆಯುಳ್ಳ ಸೆಂಟ್ಸ್ ಎಂಬ ಹೂವಿನ ಸಾರಗಳು ಮಾಡಲ್ಪಡುತ್ತವೆ.

ಇದರ ಕ್ರಯ ಬುಡ್ಡಿ 1ಕ್ಕೆ 1—0—0.

ಏಜಂಟುಗಳು ಬೇಕಾಗಿವೆ. ಅಧಿಕ ಲಾಭವುಂಟು. ವಿ.ಪಿ. ಚಾರ್ಜು ಅಲ್ಲಾಯದ.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

M. D. RANE & Co. INDIA TRADE MARK DECCAN INK

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1—0—0 ವಿ. ಪಿ. ಮೂಲಕ 1—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,

ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ

ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನ್ನೂ, ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್ಸ್,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.
ನಮ್ಮ ದರಗಳು ಬಡಜವರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯು ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮುಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮುಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ವಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.
ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,

Registered No. M. 488

ಚಂದಾನಿರ್ಣಯ:—
ವರ್ಷಾಂಗಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 9.

ಮಂಗಳೂರು ತಾ. 1ನೇ ಶುಕ್ರವಾರ ಮಾರ್ಚಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನುನೋವು, ಚೇಳುಕಡಿತ, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಫರ್ಸ್ಟ್ ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ ಮತ್ತು ಮೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ಎಂಡ್. ಎಸ್. ಎಂಡ್. ಜೆ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೆಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ:—ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾ[illegible] ಎಸ್ಟೇಟು, ಕೊಡಗು:—ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ [illegible]

[illegible]ಡಾಜಾತಿ [illegible]ು, ವೈಸ್ ಪ್ರೆಸಿಡೆಂಟ್ ವಾಂದ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—
[illegible]ಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.
[illegible]ದ ರೋಮದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು.
[illegible]ಡಿಕೊಂಡು, ಪಶಿ ಇಲ್ಲದ ಸ್ಥಳದಲ್ಲಿ ಇರುವದು.
[illegible]. ಎಮ್. ಎಂಡ್. ಎಸ್., ಮುಂಬಯಿ, ಬರಿಯುವದೇನಂದರೆ:—
[illegible] ವಾತಕ್ಕೂ ಸಂಧಿವಾತಕ್ಕೂ, ಜಖಮು, ಗಂಟ್ಲುನೋವು ವಗೈರೆ ಎಲ್ಲಾ
[illegible]ದ್ದಲ್ಲಿ ಬಹಳ ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ
[illegible]ತೀಸುತ್ತೇನೆ.

[illegible] ಅಮೃತಾಂಜನದ ಬಾಟ್ಲಿಯು ಚಲೋದಾದ [illegible]ೇಕ್ ಮಾಡಲ್ಪಟ್ಟರುತ್ತದೆ.

ಅಮೃತಾಂಜನ ಡಿಪೊ.,
109 ಫ್ರೆಯರ್ ರೋಡ್, ಫೋರ್ಟ ಮುಂಬಯಿ.
ಟೆಲಿಗ್ರಾಫ್ ಎಡ್ರೆಸು:—ಅಮೃತಾಂಜನ, ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ರಕ್ತವೃದ್ಧಿ, ಬಾಟ್ಲಿ 1ಕ್ಕೆ 1ರೂಪಾಯಿ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೊಲೆರಾ ಮಾತ್ರೆ.

ಕೊಲೆರಾ, ವಾಂತಿಭೇದಿಗಳ ಮೇಲೆ ಬಹಳ ಉತ್ತಮ ಔಷಧ ಕ್ರಯ 6ಆಣೆ.

ನೇತ್ರಾಂಜನ.

ಮಂದದೃಷ್ಟಿಯನ್ನೂ ಕಣ್ಣುನೋವನ್ನೂ ಗುಣಪಡಿಸುವದು. ಕ್ರಯ 4ಆಣೆ.

ಕೇಶವರ್ಧನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

ಜುಲಾಬು ಮಾತ್ರೆ 8 ಆಣೆ; ಪ್ರಮೇಹಮಿಶ್ರಣ 1ರೂಪಾಯಿ; ಕಫಹಾರಿ 1 ರೂಪಾಯಿ 4 ಆಣೆ; ಕಫನಾಶಕ ಚೂರ್ಣ 8 ಆಣೆ; ಜಂತುವಾತಹಾರಿ 8 ಆಣೆ.

ವಿಳಾಸ:—

ವಿಲಿಯಂ ಮತ್ತು ಕಂಪೆನಿ,
109 ಫ್ರೆಯರ್ ರೋಡ್,
ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—
ಅಮೃತಾಂಜನ, ಮುಂಬಯಿ.

ವಿಶೇಷ ಸೂಚನೆಗಳು.

ಅಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟು ಅಲ್ಲವೊ ಹಾಗಾದರೆ ಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೇ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯ ಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ **ಗುಳಿಗೆಗಳು.**	30 ವರುಷಗಳಿಂದ ಉಪಯೋಗಿ ಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಯಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ
22 ಬ್ರಾಡ್ವೇ ಮತ್ತು 96 ಮೌಂಟ್ ರೋಡ್ ಮದರಾಸು.

ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.
ಮತ್ತು ಜಾಮ್ ಕಾಠ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ— ಮದ್ರಾಸು ಅಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೩೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರ್ಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.



ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು, ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿ ಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸಿ ಮಾಡಲ್ಪಡುವದು.

ಎಲ್ಲೂರು ರಾಮ ರಾವ್,
ಜನರಲ್ ಏಜಂಟ್,
ಬ್ರಿಟೋ ಬಿಲ್ಡಿಂಗ್ಸ್
ಮಂಗಳೂರು, ದ. ಕನ್ನಡ.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯಿತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮಕಾನೇಕಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾ ಅಂಥಾ ...ಮಾಡಲಿಕ್ಕೆ

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳ ...histler ...ತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ...ರಿಂದ ಚಿತ ...ಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾ... ಕೊಡಲಿಕ್ಕೆ ...ದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಜಾಲ, ಮುಂಬಯಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.

ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.

ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜೆ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಓಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ॥ ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)- ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂ ಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ರಂಥಿಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನು ವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವು ಸಮಯ ಸೇವನೆ ಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು.

ಸಂತೋಷಕರವಾದ ಪ್ರಕಟಣೆ.

ಸರ್ವರೂ ತರಿಸಿಕೊಂಡು ಸಂತೋಷ ಪಡಿ.

ಬರುವ ಎಪ್ರಿಲ್ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,

ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಥಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಜೂಕವಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಷೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಥಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಪೌಂಟನ್‌ಪೆನ್. (10) ಮಕ್ಕಳ ತಮಾಷಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಷಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ಶ್ರೀ ಶಂಕರ ಭಗವತ್ಪಾದಾಚಾರ್ಯ ವಿರಚಿತ

"ವಿವೇಕ ಚೂಡಾಮಣಿ."

(ಸುಲಭ ಕನ್ನಡ ಪ್ರತಿಪದ ಟೀಕಾ ತಾತ್ಪರ್ಯ ಸಹಿತ.)

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿವೆ. ಇದನ್ನು ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. (ಡೆಮ್ಮಿ ಅಷ್ಟಪತ್ರ) ಬೈಂಡು ಉತ್ತಮವಾದ ಕೆಲಿಕೊ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೨—೪—೦. ಹಾಸಲು ೪ ಆಣೆ.

ಶ್ಯಾಮಕುಬ್ಜ.

ಇದೊಂದು ಹೊಸಕಥೆ. ಕನ್ನಡದಲ್ಲಿ ಇಂಥ ಕಥೆಗಳನ್ನು ಇದುವರೆಗೆ ಯಾರೂ ಬರೆದಿಲ್ಲ. ಅತಿ ಚಮತ್ಕಾರವಾಗಿಯೂ, ಒಳ್ಳೆಯ ನೀತಿಯನ್ನು ಬೋಧಿಸುವುದಾಗಿಯೂ ಇದೆ. ಇದನ್ನು ಓದಲು ಪ್ರಾರಂಭಿಸಿ ಕೈಗೆ ತೆಗೆದುಕೊಂಡರೆ ಮುಗಿಸುವವರೆಗೂ ಕೆಳಗಿಡಲು ಮನಸ್ಸು ಬರುವುದಿಲ್ಲ.

ಓದಿನೋಡಿರಿ! ತ್ವರೆಮಾಡಿರಿ!! ಸ್ವಲ್ಪ ಪ್ರತಿಗಳೇ ಇವೆ!!

ಬೆಲೆ ೮ ಆಣೆ. ಅಂಚೆವೆಚ್ಚ ಬೇರೆ.

ಕನ್ನಡ ವರ್ಣಮಾಲಾ.

ಅಕ್ಷರಾಭ್ಯಾಸ ಮಾಡಿಸಲು ಅನುಕೂಲಿಸುವಂತೆ ಅ,ಕಾರ ಮೊದಲು ಳ,ಕಾರದವರಿವಿಗೆ ಎಲ್ಲಾ ಅಕ್ಷರಗಳನ್ನು ದೊಡ್ಡ ಆಕಾರದಲ್ಲಿ ಅಚ್ಚುಮಾಡಿಸಿರುತ್ತೆ ಗೋಡೆಗೆ ಅಂಟಿಸಲು ಅನುಕೂಲಿಸುವಂತೆಯೂ ಬಾಲಕರಿಗೆ ಜಾಗ್ರತೆ ಅವಗಾಹನೆಯಾಗುವಂತೆಯೂ ಇರುವದು. ಬೆಲೆ ೧ಕ್ಕೆ ೬ ಪೈ, ೨೫ಕ್ಕೆ ೮ ಆಣೆ.

ಟೀಕಾ ತಾತ್ಪರ್ಯ ಸಹಿತ ಮಹಿಮ್ನ ಸ್ತೋತ್ರ	೦—೩—೦.
ಡಿ. ಮುಕುಂದಮಾಲಾ ಸ್ತೋತ್ರ	೦—೪—೦.
ವಚನ ಜ್ಯೋತಿಸ್ಸಂಗ್ರಹ	೦—೪—೦.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—

ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ಧರ್ಮಪ್ರಕಾಶ ಛಾಪಖಾನೆ,
ಮಂಗಳೂರು, ದ. ಕ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತುಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಲಾಸ (ಪತ್ತೆ) ☞

ವೇದವಾಹಿನೀ ಆಫೀಸ್,
ಶಂಕರಪುರ,

ಶ್ರೀ ರಾಮಕೃಷ್ಣ ವಿವೇಕಾನಂದ

ವಚನಾಮೃತವು.

ಅಭಿನವ ಭರತಖಂಡದ ಪರಮ ಗುರುಗಳಾಗಿಯೂ, ಭಕ್ತಿ ಜ್ಞಾನ ಯೋಗ ವೈರಾಗ್ಯಗಳಲ್ಲಿ ಅದ್ವಿತೀಯರಾಗಿಯೂ, ವೇಧ ವೇದಾಂತ ಮಹಮ್ಮದೀಯ ಮತ್ತು ಕ್ರೈಸ್ತಮತಗಳಲ್ಲಿ ಪಾರಂಗತರಾಗಿಯೂ, ಬ್ರಹ್ಮನಿಷ್ಠರಾಗಿಯೂ, ಆತ್ಮವಿದರಾಗಿಯೂ, ಅವತಾರ ಪುರುಷರಾಗಿಯೂ ಇದ್ದ ಶ್ರೀ ರಾಮಕೃಷ್ಣ ಪರಮಹಂಸರವರ ಸೂಕ್ತಿ ಮುಕ್ತಾವಲಿಯೂ, ಅವರ ಶಿಷ್ಯರಾಗಿ, ಪ್ರಾಚ್ಯ ಪಾಶ್ಚಾತ್ಯ ವಿದ್ಯೆಗಳಲ್ಲಿ ಪಂಡಿತರಾಗಿ, ಅಮೇರಿಕಾ ಯೂರೋಪ್‌ಖಂಡಗಳಲ್ಲಿ ಸನಾತನಧರ್ಮದ ಉತ್ಕೃಷ್ಟತೆಯನ್ನು ಕುರಿತೂ ಉತ್ತಮೋಪನ್ಯಾಸ ಮಾಡಿ, ಜಗದ್ಗುರುಗಳಾಗಿ, ಭಾರತೀಯರ ಪ್ರಕೃತ ಧರ್ಮಗಳನ್ನು ತಿಳಿಸಿ, ದೇಶಭಕ್ತಾಗ್ರೇಸರರಾಗಿದ್ದ ಶ್ರೀ ವಿವೇಕಾನಂದ ಸ್ವಾಮಿಗಳವರು ಬರೆದ ಕಾಗದಗಳ ಮತ್ತು ಉಪನ್ಯಾಸಗಳ ಸಾರಾಂಶವೂ ಲಲಿತವಾದ ಹೊಸಗನ್ನಡದಲ್ಲಿ ಬರೆಯಲ್ಪಟ್ಟಿವೆ. ಅದರಲ್ಲಿ ಆಸ್ತಿಕ, ಬ್ರಹ್ಮಲಕ್ಷಣ, ಮೋಕ್ಷೋಪಾಯ, ಭಕ್ತಿ, ವಿರಕ್ತಿ, ಮತ ಮತಾಂತರಗಳು ಮುಂತಾದ ಪಾರಮಾರ್ಥಿಕ ವಿಷಯಗಳೂ, ಭಾರತೀಯರ ಸ್ಥಿತಿ, ಕರ್ತವ್ಯ, ಇತರ ಜನಾಂಗಗಳ ನಾಗರಿಕತೆ ಮುಂತಾದ ಲೌಕಿಕ ವಿಷಯಗಳೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಪ್ರತಿಯೊಬ್ಬ ದೇಶಾಭಿಮಾನಿಯೂ, ಮತಾಭಿಮಾನಿಯೂ, ಆಸ್ತಿಕನೂ ಮುಮುಕ್ಷುವೂ ಈ ಗ್ರಂಥದ ಒಂದು ಪ್ರತಿಯನ್ನಾದರೂ ಇಟ್ಟುಕೊಂಡಿರಬೇಕು. ಇದರಲ್ಲಿ ಆ ಸದ್ಗುರುಗಳಿಬ್ಬರ ಸಂಸ್ಕೃತ ಕರ್ಣಾಟಕ ಸ್ತೋತ್ರಗಳೂ ಜೀವನ ಚರಿತ್ರೆಗಳೂ ಭಾವಚಿತ್ರಗಳೂ ಅಡಗಿವೆ. ಸರ್ವರಿಗೂ ಸಂಗ್ರಾಹ್ಯ.—ಬೇಗನೆ ಬರೆಯಿರಿ

ವಿಳಾಸ:—ಮ್ಯಾನೇಜರ್,
"ಸುಮತಿ ಗ್ರಂಥಮಾಲಾ" ಆಫೀಸು
ಬೆಂಗಳೂರು ಸಿಟಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯು ಆರೋಗ್ಯಾಭಿವೃದ್ಧಿಗೆ ಆಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ " "	6—0—0	B ಅರಗಜ " "	1—0—0
ಕಸ್ತೂರಿ ಬತ್ತಿ " "	3—0—0	ಕಸ್ತೂರಿ ಬಿಲ್ಲೆ " "	2—0—0
ಜವಾಜಿ ಬತ್ತಿ " "	2—0—0	ಜವಾಜಿ ಬಿಲ್ಲೆ " "	1—0—0
ಪುಣಗಿನ ಬತ್ತಿ " "	1—8—0	ಕೇಸರಿ ಬಿಲ್ಲೆ " "	0—8—0
A ಪನ್ನೀರ್ ಬತ್ತಿ " "	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ " "	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:—
ಮ. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—
ಎನ್. ಎಂ. ಸುಬ್ರಾವ್,
"ಸುಗಂಧವಿಲಾಸ"
ಮಂಗಳೂರು



14 ಕ್ಯಾರ್ಟ್ಸ ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ನಮ್ಮಲ್ಲಿ ಅನೇಕ ನಮೂನೆಗಳಲ್ಲಿ (ಅಂದರೆ) ಇಂಗ್ಲೀಷು, ಕನ್ನಡ, ಬಾಳಬಂದು, ಉರುದು, ಅರವ, ತೆಲುಗು ಈ ಎಲ್ಲಾ ಭಾಷೆಗಳಲ್ಲಿಯೂ ರಬ್ಬರು ಮೊಹರು ತಯಾರುಮಾಡುತ್ತೇವೆ. ಬೇಕಾದವರು ಬರದು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ರಬ್ಬರು ಮೊಹರುಗಳ ನಮೂನೆ ನೋಡಬೇಕಾದವರು ನಮ್ಮ ಕಂಪೆನಿಗೆ ಬರದರೆ ಕ್ಯಾಟಲಾಗ್ ರವಾನಿಸುತ್ತೇವೆ. ಇದೂ ಅಲ್ಲದೆ ನಮ್ಮ ಕಂಪೆನಿಯಲ್ಲಿ ತರಹೆವಾರಿ ಪೌಂಟೆನ್‌ಪೆನ್‌ಗಳೂ ಮತ್ತು ಜರ್ಮನ್ ಅಮೇರಿಕಾ ದೇಶದ ಸುವಾಸನೆಯುಳ್ಳ ಸೆಂಟ್ಸ್ ಎಂಬ ಹೂವ್ವಿನ ಸಾರಗಳು ಮಾರಲ್ಪಡುತ್ತವೆ. ಇದರ ಕ್ರಯ ಬುಡ್ಡಿ 1ಕ್ಕೆ 1—0—0. ವಿ.ಪಿ. ಚಾರ್ಜು ಅಲಾಯಿದ.

ಏಜಂಟುಗಳು ಬೇಕಾಗಿವೆ. ಅಧಿಕ ಲಾಭವುಂಟು.

... ಬೆಂಗಳೂರು ಸಿಟಿ

DEPUTY COMMISSIONER'S OFFICE, CHITALDROOG DISTRICT.
ಚಿತ್ರದುರ್ಗ ಡಿ. ಕೆ. ಕಮಿಷನರ್ ಸಾಹೇಬರವರ ಆಫೀಸು.

ಸ್ವದೇಶಾಭಿಮಾನಿ

☞ ಮಂಗಳೂರು, ಶುಕ್ರವಾರ ತಾರೀಕು 1ನೇ ಮಾರ್ಚ್ 1912. ☜

ಮದ್ರಾಸು ನ್ಯಾಯನಿರ್ಮಾಣ ಸಭೆಯ ವೃತ್ತಾಂತವು.

ದಿನೇ ದಿನೇ ವೃದ್ಧಿಯಾಗುತ್ತಿರುವ ಹೆಂಡ ಸರಾಯಿಗಳ ಪಾಪವನ್ನು ಕಡಮೆಮಾಡುವುದರ ಕುರಿತು. ನ್ಯಾಯನಿರ್ಮಾಣ ಸಭೆಯಲ್ಲಿ ವಾದಿಸಲ್ಪಟ್ಟ ಇನ್ನೊಂದು ವಿಶೇಷವಾದ ನಿರ್ಣಯವು ಹೆಂಡ ಸರಾಯಿಗಳ ಪಾನವನ್ನು ಕಡಮೆಮಾಡುವುದರ ಕುರಿತಾಗಿತ್ತು. ಸೇಂದಿ ಸರಾಯಿಗಳನ್ನು ಕುಡಿಯುವ ಅಭ್ಯಾಸವನ್ನು ಪ್ರಜೆಗಳು ಸಾಧ್ಯವಾದಷ್ಟು ಬಿಟ್ಟುಬಿಡಬೇಕೆಂತ ಸೇಂದಿಸರಾಯಿಗಳ ವಿಕ್ರಿತ ಮೊದಲಾದವುಗಳನ್ನು ಮಿತಪಡಿಸುವರೆ ಸರಕಾರದವರು ಬಹಳ ಪ್ರಯತ್ನಿಸುವರಾದರೂ ಈ ಪ್ರಯತ್ನಗಳು ಚನ್ನಾಗಿ ಫಲಿತವಾದಂತೆ ತೋರಿಬರುವುದಿಲ್ಲ. ಈ ಮಾದಕ ದ್ರವಗಳ ಪಾನವನ್ನು ನಿರ್ಬಂಧಿಸುವಂತೆ ಇವುಗಳ ಮೇಲಣ ತೆರಿಗೆ ಮೊದಲಾದವುಗಳನ್ನು ಹೆಚ್ಚಿಸಿದ್ದರಿಂದ ಮಾತ್ರ ಸೇಂದಿ ಸರಾಯಿಗಳ ಖರ್ಚು ಕಡಮೆಯಾಗಲಿಕ್ಕಿಲ್ಲವೆಂತ ಪ್ರಜಾ ಕಡೆಯ ಮೆಂಬರರು ತಮ್ಮ ವಾದಗಳಲ್ಲಿ ಸರಕಾರದವರಿಗೆ ಸೂಚಿಸಿದರು. ಕಳೆದ ೧೦ ವರುಷಗಳ ಶೇಂದಿ ಸರಾಯಿಗಳ ಖರ್ಚಿನಿಂದ ಪ್ರಜಾಪ್ರತಿನಿಧಿಗಳ ಈ ಮಾತಿಗೆ ಎಷ್ಟರಮಟ್ಟಿನ ಆಧಾರವಿರುವುದೆಂಬುವುದನ್ನು ತಿಳಿಯಬಹುದು. ೧೯೦೧-೦೨ ವರುಷದಲ್ಲಿ ಹೆಚ್ಚು ಕಡಿಮೆ ೮ ಲಕ್ಷ ಗೆಲನುಗಳಷ್ಟು ಸರಾಯಿಯು ಖರ್ಚಾಗಿತ್ತು. ೧೯೦೨-೦೩ನೇ ವರುಷದಲ್ಲಿ ೧,೦೧೧,೭೬೫; ೧೯೦೩-೦೪ನೇ ವರುಷದಲ್ಲಿ ೧,೨೦೭,೨೧೫; ೧೯೦೪-೦೫ನೇ ವರುಷದಲ್ಲಿ ೧,೨೭೨,೦೦೦ಗೆಲನುಗಳಂತೆ ಸರಾಯಿಯ ಖರ್ಚು ಕ್ರಮವಾಗಿ ಹೆಚ್ಚಿತು. ಹೀಗೆ ಕ್ರಮ ಪ್ರಕಾರ ಅಧಿಕವಾಗುತ್ತಿರುವ ಸರಾಯಿಯ ಖರ್ಚು ೧೯೦೫-೦೬ರಲ್ಲಿ ಸ್ವಲ್ಪ ತಗ್ಗಿತು. ಆದರೆ ೧೯೦೬-೦೭ರಲ್ಲಿ ೧,೪೧೦,೦೦೦ ಗೆಲನುಗಳೂ ೧೯೦೭-೦೮ರಲ್ಲಿ ೧,೫೫೬,೦೦೦, ೧೯೦೮-೦೯ರಲ್ಲಿ ೧,೭೦೭,೦೦೦ ಗೆಲನುಗಳಷ್ಟು ಸರಾಯಿಯು ವಿಕ್ರಯಿಸಲ್ಪಟ್ಟಿರುವುದರಿಂದ ಈ ವರುಷಗಳಲ್ಲೆಲ್ಲಾ ಸರಾಯಿಯ ವಿಕ್ರಿತವು ಹೆಚ್ಚಾಗಿದೆಂತ ವ್ಯಕ್ತವಾಗುವುದು. ಈ ನಂತರ ಸರಕಾರದವರು ೧೩೦ರಷ್ಟು ಸರಾಯಿ ವಿಕ್ರಿತದ ಅಂಗಡಿಗಳನ್ನು ತೆಗದುಹಾಕಿದ್ದರಿಂದ ಸರಾಯಿಯ ವಿಕ್ರಿತದಲ್ಲಿ ೧೯,೦೦೦ ಗೆಲನುಗಳು ಕಡಮೆಯಾದವು. ತಿರಿಗೊಮ್ಮೆ ೧೦೦ ಸರಾಯಿ ಅಂಗಡಿಗಳು ತೆಗದುಹಾಕಲ್ಪಟ್ಟವು. ಆದರೆ ಸರಾಯಿ ವಿಕ್ರಿತವು ಕಡಮೆಯಾಗಲಿಲ್ಲ. ೧೯೧೦-೧೧ರಲ್ಲಿ ೨,೯೦೦,೦೦೦; ಚಾಲ್ತಿ ವರುಷದಲ್ಲಿ ೩,೧೬೦,೦೦೦ ಗೆಲನುಗಳಂತೆಯೂ, ಸರಾಯಿಯ ವಿಕ್ರಿತವು ಅಧಿಕವಾಗಿರುತ್ತದೆ. ಸೇಂದಿಯ ಖರ್ಚನ್ನು ಪರಿಶೀಲಿಸಿದ್ದಲ್ಲಿ ಸಹ ಮದುಪಾನದ ದುರ್ವ್ಯಸನವು ಜನರಲ್ಲಿ ಅಧಿಕವಾಗುತ್ತಿರುವೆಂಬುದೇ ಸ್ಪಷ್ಟವಾಗುವುದು. ಇದಲ್ಲದೆ ಮಾದಕ ದ್ರವಗಳ ಮೇಲೆ ಸರಕಾರದವರು ವಿಶೇಷವಾಗಿ ಸುಂಕವನ್ನು ಏರಿಸಿದ್ದರೂ ಈ ತೆರಿಗೆಯಿಂದ ಸರಕಾರಕ್ಕೆ ದೊರಿಯುವ ಹುಟ್ಟುವಳಿಯ ಮೊಬಲಗು ವಿಪರೀತವಾಗಿ ಅಧಿಕವಾಗುತ್ತಿದ್ದರಿಂದ ಜನರಲ್ಲಿ ಈ ದುರಭ್ಯಾಸವು ಹ್ಯಾಗೆ ನಾಟಿಕೊಳ್ಳುತ್ತಿರುವುದೆಂಬುದನ್ನು ಸಹ ಪರಿಗಣಿಸಿಕೊಳ್ಳಬಹುದು. ಮಾದಕ ದ್ರವಗಳ ಮೇಲಣ ತೆರಿಗೆಯ ಮೊಬಲಗು ಬ್ರಿಟಿಷ ಹಿಂದುಸ್ಥಾನದಲ್ಲಿ ನಮ್ಮ ಸಂಸ್ಥಾನದ್ದೇ ಇತರ ಸಂಸ್ಥಾನದವುಗಳಿಗಿಂತ ಹೆಚ್ಚಾಗಿರುತ್ತದೆ. ತೆರಿಗೆಯ ದರವೂ ವಿಕ್ರಿತದ ಅಂಗಡಿಗಳ ಸಂಖ್ಯೆಯೂ ನಮ್ಮ ಸಂಸ್ಥಾನದಲ್ಲಿಯೇ ಅತ್ಯಧಿಕವೆಂತ ತೋರಿಬರುತ್ತದೆ. ೧೯೦೯-೧೦ನೇ ವರುಷಕ್ಕೆ ಅಂತ್ಯವಾಗುವ ಕಳೆದ ಹತ್ತು ವರುಷಗಳಲ್ಲಿ ಬ್ರಿಟಿಷ ಹಿಂದುಸ್ಥಾನದಲ್ಲಿ ಮಾದಕ ದ್ರವಗಳ ಸುಂಕವು ೫||ಯಿಂದ ೯ ಕೋಟಿ ರೂಪಾಯಿಗಳಿಗೆ ಹೆಚ್ಚಿದ್ದು ಸುಂಕದರವೂ ಮಾದಕ ದ್ರವಗಳ ವಿಕ್ರಿತವೂ ಅಧಿಕವಾದ್ದರಿಂದಲೇ ಎಂತ ಸರಕಾರದವರಿಂದ ಪ್ರಕಟಿಸಲ್ಪಟ್ಟ ಈ ವಿಷಯದ ವಿವರದಿಂದಲೇ ವ್ಯಕ್ತವಾಗುತ್ತದೆ. ಆದ್ದರಿಂದ ಮಾದಕ ದ್ರವಗಳ ವಿಕ್ರಿತವು ಅಧಿಕವಾಗುತ್ತಿರುವುದೆಂಬುದನ್ನು ಇದರಿಂದ ಸಹ ಗೊತ್ತುಮಾಡಿಕೊಳ್ಳಬಹುದು. ಮುಂಬಯಿ ಮತ್ತು ಬಂಗಾಳ ಸಂಸ್ಥಾನಗಳ ಈ ತೆರಿಗೆಯು ಬ್ರಿಟಿಷ ಹಿಂದುಸ್ಥಾನದ ಜುಮ್ಲಾ ತೆರಿಗೆಯ ಮೊಬಲಗಿನ ಸೇಕಡಾ ೨೦ರ ಮತ್ತು ೧೫ರಂತೆ ಇರುವಾಗ ನಮ್ಮ ಸಂಸ್ಥಾನದ್ದು ಸೇಕಡಾ ೩೪ರಂತಿದೆ. ಕುಡಿಕತನವು ಪ್ರಜೆಗಳಲ್ಲಿ ಹೀಗೆ ನಮ್ಮ ಸಂಸ್ಥಾನದಲ್ಲಿ ಪ್ರಬಲವಾಗಿ ಹಬ್ಬುತ್ತಿರುವುದು. ಈ ಕುಡಿಕತನದ ಪಿಶಾಚಿಯನ್ನು ಹಿಮ್ಮೆಟ್ಟುವರೆ ಸೇಂದಿ ಸರಾಯಿ ಅಂಗಡಿಗಳನ್ನು ರಾತ್ರೆ ಘಂಟೆ ೯ಕ್ಕೆ ಮುಚ್ಚುವುದಕ್ಕಿಂತ ೮ ಘಂಟೆಗೆ ಮುಚ್ಚಬೇಕೆಂಬುದಾಗಿಯೂ ಪ್ರತಿಯೊಬ್ಬನಿಗೆ ಮಾರಲ್ಪಡುವ ಸೇಂದಿ ಸರಾಯಿಗಳನ್ನು ಮಿತಪಡಿಸಿ ಅವುಗಳಲ್ಲಿಯ ಅಮಲುಕರ ಪದಾರ್ಥಗಳನ್ನು ಕ್ರಮೇಣ ಕಡಮೆಮಾಡಬೇಕೆಂಬುದಾಗಿಯೂ ಇವುಗಳನ್ನು ಕೊಂಡುಕೊಳ್ಳುವವರ ಪ್ರಾಯವನ್ನು ೧೪ರಿಂದ ೧೮ಕ್ಕೆ ಏರಿಸಬೇಕೆಂತಲೂ ಸಂತೆಗಳಲ್ಲಿ ಮತ್ತು ಜಾತ್ರೆ ಕಾಲಗಳಲ್ಲಿ ಇವುಗಳ ವಿಕ್ರಿತವನ್ನು ಕಡಮೆಮಾಡಬೇಕೆಂದೂ ಸೇಂದಿ ಶರಾಬುಗಳ ಅಂಗಡಿಗಳ ಗುತ್ತೆಗಳನ್ನು ಮೂರು ವರುಷಕ್ಕೊಮ್ಮೆ ವಿಕ್ರಯಿಸಬೇಕೆಂಬುದಾಗಿಯೂ ಸೂಚಿಸುವ ನಿರ್ಣಯವು ನ್ಯಾಯನಿರ್ಮಾಣ ಸಭೆಯ ಮುಂದಿಡಲ್ಪಟ್ಟಿತು. ಸರಕಾರದವರ ಸಹಾನುಭೂತಿಯು ಪರಿಪೂರ್ಣವಾಗಿ ಈ ನಿರ್ಣಯದ ಪರವಾಗಿದ್ದರೂ ಸಭೆಯ ಮಂಜೂರಾತಿಯನ್ನು ಇಡಿ ನಿರ್ಣಯವು ಹೊಂದಲಿಲ್ಲ. ಸರಕಾರಿ ಆಫೀಸರಲ್ಲದ ಮೆಂಬರರಲ್ಲಿ ಸಹ ಈ ನಿರ್ಣಯ ವಿಷಯ ಅಭಿಪ್ರಾಯ ಭೇದವು ಇತ್ತು. ಆದರೆ ಸರಾಯಿಯ ಅಮಲನ್ನು ಕಡಮೆ ಮಾಡಬಹುದು ಮತ್ತು ೧೬ ವರುಷಗಳಿಗಿಂತ ಪ್ರಾಯದಲ್ಲಿ ಕಡಮೆಯಾದವರು ಶೇಂದಿ ಶರಾಬುಗಳನ್ನು ಕೊಂಡುಕೊಳ್ಳಕೂಡದೆಂಬ ಈ ನಿರ್ಣಯದ ಅಂಶವು ಸಭೆಯ ಮಂಜೂರಾತಿಯನ್ನು ಹೊಂದಿರುತ್ತದೆ.

ಗ್ರಾಮುಗಳ ಶ್ಯಾಮಭಾಗರ ತಲಬನ್ನು ಹೆಚ್ಚಿಸುವುದು. ಈ ವಿಷಯವಾಗಿ ಸಭೆಯ ಮುಂದಿರಿಸಿದ ನಿರ್ಣಯವು ಸಹ ಮಂಜೂರಾಗದೆ ಹೋಯಿತು. ಶ್ಯಾನುಭಾಗರ ಕನಿಷ್ಟ ಸಂಬಳವು ರೂ. ೧೦ರಕ್ಕಿಂತ ಕಡಮೆಯಾಗಬಾರದೆಂತ ಈ ನಿರ್ಣಯದ ಮುಖ್ಯವಾದವಾಗಿತ್ತು. ಆದರೆ ತಮಗೆ ಸಂಬಳವು ಸಾಲದೆಂಬ ಅತೃಪ್ತಿಯು ಶ್ಯಾನುಭಾಗರಲ್ಲಿಲ್ಲ. ಶ್ಯಾನುಭಾಗನ ಕೆಲಸವನ್ನು ಯಾರೂ ಬಿಡಲೊಲ್ಲರು. ಈ ಗ್ರಾಮ ಉದ್ಯೋಗದ ಬಗ್ಗೆ ಜನರಲ್ಲಿ ಮೇಲಾಟವು ಸಹ ಬಹಳ ಹೆಚ್ಚಿರುವುದು. ಆಯಾ ಜಿಲ್ಲೆಗಳ ಸಿಬಂದಿಗಳ ಪುನರ್ವಿಮರ್ಶೆಯಲ್ಲಿ ಶ್ಯಾನುಭಾಗರುಗಳಿಗೆ ರೂ. ೮ಕ್ಕಿಂತ ಕಡಮೆಯಾಗದ ವೇತನವು ನಿಶ್ಚಯಿಸಲ್ಪಡುವ ಸಂಭವವಿದೆ. ಅದಲ್ಲದೆ ಶ್ಯಾನುಭಾಗರು ಗ್ರಾಮ ಉದ್ಯೋಗದಲ್ಲಿಯೇ ತಮ್ಮ ಕಾಲವನ್ನು ಕಳೆಯಬೇಕೆಂತಿಲ್ಲ. ಅರ್ಜಿ ದಸ್ತಾವೇಜು ಮೊದಲಾದವುಗಳನ್ನು ಬರೆದು ಫೀಸು ಪಡಿಯುವರೆ ಇವರಿಗೆ ಆಕ್ಷೇಪವಿರುವುದಿಲ್ಲ. ಆದರೆ ತಮ್ಮ ಸರಕಾರ ಉದ್ಯೋಗ ಬಲವನ್ನು ಸರಕಾರಿ ಕೆಲಸಗಳಿಗಲ್ಲದೆ ಇತರ ಉದ್ದಿಶ್ಯಗಳಿಗೆ ಉಪಯೋಗಿಸುವುದು ಆಕ್ಷೇಪಕರ. ಈ ಕಾರಣಗಳಿಂದ ಸರಕಾರ ಕಡೆಯಿಂದ ಈ ನಿರ್ಣಯವು ವಿರೋಧಿಸಲ್ಪಟ್ಟಿತು. ಶ್ಯಾನುಭಾಗರ ಕನಿಷ್ಟ ಸಂಬಳವೆಂತೂ ರೂ. ೮ಕ್ಕೆ ಏರುವ ಸಂಭವವಿದೆ. ಇದರೊಂದಿಗೆ ತಮ್ಮ ಗ್ರಾಮ ಕೆಲಸಗಳಿಗಲ್ಲದೆ ಇತರ ಕೆಲಸಗಳ ಬಗ್ಗೆ ಇವರನ್ನು ತಾಲೂಕು ಮತ್ತು ಡಿವಿಜನಲ್ ಆಫೀಸುಗಳಿಗೆ ಬರಮಾಡಿದಾಗ ಭತ್ತೆಯು ಇವರಿಗೆ ಕೊಡೋಣಾಗುವುದರಿಂದ ಈ ವ್ಯಕ್ತಿಗಳಲ್ಲಿ ತೃಪ್ತಿಯು ಉಂಟಾಗಬಹುದೆಂದು ಭಾವಿಸುತ್ತೇವೆ.

ಗವರ್ನಮೆಂಟು ಶಾಲಾ ಕೊಲೇಜುಗಳಲ್ಲಿ ಪಂಡಿತರ ಮತ್ತು ದೇಶಭಾಷೆಗಳನ್ನು ಕಲಿಸುವ ಉಪಾಧ್ಯಾಯರ ವೇತನ ಇತ್ಯಾದಿಗಳನ್ನು ಅನುಕೂಲವಾದ ರೀತಿಯಲ್ಲಿ ಹೆಚ್ಚಿಸಬೇಕೆಂಬ ನಿರ್ಣಯವು ಸಭಿಕರೆಲ್ಲರಿಂದ ಸ್ವೀಕರಿಸಲ್ಪಟ್ಟಿರುವುದು. ಡಿಸ್ಟ್ರಿಕ್ಟ್ ಬೋರ್ಡು ಒಂದಕ್ಕಾದರೂ ಸರಕಾರಿ ಆಫೀಸರರಲ್ಲದವರನ್ನು ಪ್ರೆಸಿಡೆಂಟರಾಗಿ ಆರಿಸುವ ನಿರ್ಣಯವು ಸರಕಾರದವರಿಂದ ಮನ್ನಿಸಲ್ಪಡಲಿಲ್ಲ. ಡಿಸ್ಟ್ರಿಕ್ಟ್ ಬೋರ್ಡು ವ್ಯಾಸ್ ಪ್ರೆಸಿಡೆಂಟರನ್ನು ಸರಕಾರದವರಿಂದ ನೇಮಿಸುವ ಸಂದರ್ಭಗಳಲ್ಲಿ ಅಂಥಾ ನೇಮಕಗಳು ಆಫೀಸರರಲ್ಲದವರಿಗೆ ಕೊಡೋಣಾಗಬಹುದೆಂಬುದನ್ನು ಸಭೆಯವರು ಅಂಗೀಕರಿಸಿರುವರು. ರೆವಿನ್ಯು ಇಲಾಖೆಯಲ್ಲಿ ಕಳೆದ ವರುಷ ನಿರ್ಮಿಸಿದ ರೂ. ೩೫ರ ಗ್ರೇಡುಗಳಿಗೆ ರೂ. ೭೫ದನ್ನಾದರೂ ತಲಬಾಗಿಡಬೇಕೆನ್ನುವ ನಿರ್ಣಯವು ಸಭಿಕರಿಂದ ಅಂಗೀಕರಿಸಲ್ಪಡಲಿಲ್ಲ. ಯಾಕಂದರೆ ರೂ. ೩೫ರ ತಲಬಿನ ಮೇಲೆ ಬಿ. ಎಲ್. ಪಾಸಾದ ಉಮೇದ್ವಾರರು ಸಹ ಸಿಕ್ಕಿರುವರು.

ಸಭೆಯಲ್ಲಿ ವಾದಿಸಲ್ಪಟ್ಟ ಮುಖ್ಯ ನಿರ್ಣಯಗಳು ಈ ಮೇಲಿನದವುಗಳಾಗಿದ್ದವು.

ಅಣ್ಣನ ವಿಲಾಪ.

(ಚೌಪದಿ.)

ಎಲ್ಲಿ ಹೋದನು ತಾಯೆ ಪುಟ್ಟಣ್ಣ ನಮ್ಮಾ? |
ನಿಲ್ಲದವನನು ಹುಡುಕಿ ತರುವೆ ನಾನಮ್ಮಾ ||
ಇಲ್ಲಿಲ್ಲ, ಅಲ್ಲಿಲ್ಲ, ಎಲ್ಲಿಹನು ತಮ್ಮಾ? |
ತಲ್ಲಣಿಸುತಿದೆ, ಮನವು ಹೇಳು ಸೀತಮ್ಮಾ. || ೧ ||

ಹಸೆಯ ಮಗುವದು ಮೊನ್ನೆ ಬಂದವರು ನೋಡಿ, |
ಮಸುಕು ಬಿಳಿ ಕಣ್ಣುಗಳ ಕದಗಳನು ಹೂಡಿ, ||
ಹಸಿ ತುಳುಸಿದಳ ನೀರ ಬಣಬಾಯೊಳೂಡಿ, |
ಬಿಸಿಲು ಕನ್ನಡಿಯನ್ನು ಮಾಡಿನಲಿ ಮಾಡಿ, || ೨ ||

ಶುದ್ಧ ನೀರನು ಮಿಾಸಿ, ಅರಸಿನವ ಪೂಸಿ |
ಗದ್ದೆ ಗೋರುವ ಹಲಗೆ ಮೇಲೆಲೆಯ ಹಾಸಿ, ||
ಮುದ್ದು ಪುಟ್ಟನನುಡಿಗೆಯಿಂದ ಸಿಂಗರಿಸಿ, |
ಸದ್ದಿಲ್ಲದೆಲ್ಲಿಗೊಯ್ದರು ಹೆಗಲೊಳಿರಿಸಿ? || ೩ ||

ಚೆನ್ನಾಗಿ ಸೇಸೆಮಳೆ ಸೂಸುತಿರೆ ಕನ್ನೆ, ।
ನಿನ್ನೊಡನಿರುಳ್ ನಿದ್ದೆಯಲಿ ಕಂಡೆ ನಿನ್ನೆ, ॥
"ಬನ್ನಿ ಬಾ, ಬಾ," ಎಂದು ಮಾಡಿ ಕೈಸನ್ನೆ ।
ನನ್ನಿದುರು ಬಂದು ಹೋದಾ ಪುಟ್ಟನನ್ನೆ ॥ ೪ ॥

ಮಬ್ಬುತೆರೆ ಹಿಂದುಗಡೆ ಜಾರಿದುದು ತಾರೆ; ।
ಹೆಬ್ಬಿಸಿಲನುಗುಳುವಂತಿಹುದು ಹೊತ್ತಾರೆ. ॥
ಉಬ್ಬಸದಿ ಮೊದಲೆ ಪುಟ್ಟನ ಪ್ಯೆಯುತಾರೆ, ।
ಅಬ್ಬೆ, ನಡದಪನೆಂತು? ಬೇಗ ಕರತಾರೆ. ॥ ೫ ॥

ಬಳ್ಳಿವುಯ್ಯಾಲೆಯಲಿ ಗಿಳಿಯೆ ಮರಿ ತೂಗಿ, ।
ಉಳ್ಳಲರ ಜೇನ್ಗುಡಿದು ಮರಿದುಂಬಿ ಕೂಗಿ, ॥
ಬೆಳ್ಳಿನೀರ್ ಬಿಸಿಲಲ್ಲಿ ಮುಳುಗಿದಂತಾಗಿ ।
ಹಳ್ಳಿ ಹಗಲಿರೆ—ಪುಟ್ಟನಾಡುವನೆ ಹೋಗಿ? ॥ ೬ ॥

ತಾಯ್ದನದ ಬಳಿಹೋಗದೀ ಕರುವು ನಿಂದು, ।
ಕಾಯ್ದನವ್ ಕರೆಯುತಿರೆ ನೆನಸಿ ವ್ಬೇ ಯೆಂದು, ॥
ನಾಯ್ದುಬುಡದಿವ್ ಬಿಡದೆ ಮಗುವಿದ್ದೆ, ಸ್ಥಲವಾ, ।
ಬಾಯ್ದೆರೆಯದಡಿಗಡಿಗೆ ಮೂಸುತಿದೆ ನೆಲವಾ ॥ ೭ ॥

ಇವನ ಚಲುವಿನ ಪುಂಜ ಹೋಯ್ತೆ ಮರಿಯಲ್ಲೇ! ।
ಸಪೆಯಿತೇ ಕಾಲವಂಕುರದ ಪರಿಯಲ್ಲೇ! ॥
ಕುವರನಾ ಬಾಳೆ ಕಂದಿತೆ ಕಂದಿನಲೆ!
ಸವಿಬಂದುಗೇನಾಯ್ತೆ ನೆನಸಂಧಿನಲ್ಲೇ! ॥ ೮ ॥

ದೀಪಾವಳಿಯ ದಿನ ಬಲೀಂದ್ರ ಮರನೆಡಿಸಿ, ।
ಕೇಪಳಂಬಲಕಾಯಿ, ಗುಂಡುಸರ ತೊಡಿಸಿ ॥
ಆ ಪೂಜೆಯಾಗುತಿರೆ, ತಮ್ಮನನು ಬಿಟ್ಟು, ।
ಕೈಪರೆ ಹೊಡೆವುದೆಂತು? ಬಾರನೇ ಪುಟ್ಟು? ॥ ೯ ॥

ನರಿಮೊಗರು ಜಾತ್ರೆಯಲಿ ನನ್ನನ್ನು ಕಂಡು, ॥
"ಅರರೆ, ತಮ್ಮನನೇಕೆ ನಾನು ಕರಕೊಂಡು ॥
ಬರಲಿಲ್ಲ?" ಎಂದಾ ಗೆಳೆಯರೆನ್ನ ಕೇಳೆ; ।
ಮರುಮಾತ ನಾನೇನು ಕೊಡಲಮ್ಮ ನಾಳೆ? ॥ ೧೦ ॥

ಒಬ್ಬನೇ ತಿನಿಸುಣಿಸು ನಾಬೇಡಲಾರೆ; ।
ಇಬ್ಬರಿಲ್ಲದೆ ಬರಿದೆ ನಾನಾಡಲಾರೆ. ॥
ತಬ್ಬಿಕೊಂಡೆನ್ನ ನೀನಳುವುದೇನಿಂತು? ।
ಅಬ್ಬೆ, ಅಳದಿರು ಪುಟ್ಟನೆಲ್ಲಿಹನು ನಿಂತು? ॥ ೧೧ ॥

ತಾಯಿ:—ಮುತ್ತಿನಾ ಸರಪಳಿಯೆ! ಮಾತಿನರಗಿಳಿಯೆ! ।
ಯೆತ್ತಹೋದನು ತಮ್ಮನೆಂಬುದನು ತಿಳಿಯೆ ॥
ಇತ್ತವನೆ ಎತ್ತಿದನು ಕೇಳು ಪುತ್ತಳಿಯೆ; ।
ಬಿತ್ತಿದವನೊತ್ತರಿಸಿದನು ತನ್ನ ಬಳಿಯೆ. ॥ ೧೨ ॥

ಮಗುವು ಮುದ್ದಿನ ಸೊಗವು ಅವನಿಲ್ಲ ಬಾರಂ. ।
ಅಗಲಿ ನಮ್ಮನು ಹೋದ ಹೋದ ಬಹುದೂರಂ. ॥
ಜಗದಂಬೆ ತೊಡೆಯಲ್ಲಿ ಲಾಲಿಕೇಳುತ್ತಾ ।
ಸೊಗನಿದ್ದೆಗೊಂಡವನು ಬರುವನೇ ಇತ್ತಾ? ॥ ೧೩ ॥

ಮಗು:—ಈಗಲೇ ಹೊರಡುವೆನು ಕೈ ಬಿಡವು ತಾಯೇ. ।
ಬೇಗ ಅಪ್ಪನು ಬರುವ ಮುನ್ನಮೇ ತಾಯೇ, ॥
ಹೋಗುವೆನು ಹೋಗುವೆನು ಹೊರಹೊರಡು ತಾಯೇ, ।
ಕೂಗದಿರು; ದಾರಿಯನು ತೋರಿಸೌ ತಾಯೇ. ॥ ೧೪ ॥

ತಾಯಿ:—ಜೆಂದು ಕೇಳ್! ದಾರಿಯಲಿ ನಾಪೋಪೆ ಮುಂದೆ; ।
ಬಂದಪನು ಬಳಿಕ ನಿನ್ನಯ ಮುದ್ದು ತಂದೆ; ॥
ಮಂದಿ ಮಕ್ಕಳ ಪಡೆದು ಬಾ ನೀನು ಹಿಂದೆ, ।
ಎಂದವನ ಬಾಯಬಿಗಿದಳು ಮುತ್ತಿನಿಂದೆ, ॥ ೧೫ ॥

ಆರಲಿಲ್ಲವು ತಾಯ ಮನದ ಪರಿತಾಪಮ್; ।
ಆರಿದುದು ಮಾತೆಯಾ ಮನೆಯ ಮಣಿದೀಪಮ್, ।
ಆರಲಿಲ್ಲವು ತಾಯ ಕಂಬನಿಯ ಕೂಪಮ್; ।
ಆರಿದುದು ಸೌಖ್ಯಾಬ್ಧಿ, ಅಯ್ಯಯ್ಯೊ ಪಾಪಂ! ॥ ೧೬ ॥

ಕವಿಶಿಷ್ಯ.

ವ್ಯಾಪಾರ, ಸಲ್ಲಾಪಗಳು.

ತಿರುಮಲರಾವ್—ಏನು ವೆಂಕಟ್ರಮಣಯ್ಯನವರೇ ಅಪರೂಪವಾಗಿ ಬಂದಿರಿ.

ವೆಂಕಟ್ರಮಣಯ್ಯ—ನಾಳೆಗೆ ಒಂದು ಬೇಂಕಿನ ವ್ಯಾದೆ ಇದೆ ಸ್ವಾಮಿ. ಹತ್ತು ಸಾವಿರ ರೂಪಾಯಿ ಆಗಬೇಕು, ಏನಾದರೂ ಕೈಕಡಕ್ಕೆ ಅನುಕೂಲವಿದೆಯೋ ಎಂದು ಬಂದಿರುವೆನು.

ತಿರುಮಲ—ಈ ಹೊತ್ತಿಗೆ ತಾರೀಕು ಎಷ್ಟು ಸ್ವಾಮಿ,

ವೆಂಕಟ್ರ—ಈ ದಿನ ಹತ್ತನೇ ತಾರೀಕು ರಾಯರೆ.

ತಿರುಮಲ--ಒಂದು ಸಾವಿರ ರೂಪಾಯಿ ಬೇಕಾದರೆ ಇದೆ. ಆದರೆ ಹದಿನೈದನೇ ತಾರೀಕಿಗೆ ಎರಡು ಸಾವಿರ ಕೊಡುವದಾದರೆ ಕೊಂಡು ಹೋಗಿರಿ. ನನಗೂ ಒಂದು ವ್ಯಾದೆ ಇದೆ. ಧೈರ್ಯವಿದ್ದರೆ ಕೊಂಡುಹೋಗಿ.

ವೆಂಕಟ್ರ—ಧೈರ್ಯವೇನು ಸ್ವಾಮಿ, ವ್ಯಾಪಾರವೆಲ್ಲ ನಾಲಿಗೆ ವಾಸಿಯಿಂದಲ್ಲವೆ ಸಾಗಬೇಕಾದದ್ದು, ವ್ಯಾಪಾರಿಗಳ ಸಂಗತಿ ತಮಗೆ ಗೊತ್ತಿಲ್ಲವೇನು!

ತಿರುಮಲ—ಏನು ರಾಯರೇ ತಾವು ಮೊನ್ನೆ ನಾಲ್ವತ್ತು ಸಾವಿರಕ್ಕೆ ಬರಿಸಿಕೊಂಡ ಆಸ್ತಿ ಹ್ಯಾಗೆ, ಹುಟ್ಟುವಳಿ ಏನಿರುವದು.

ವೆಂಕಟ್ರ—ಆ ಆಸ್ತಿಯಲ್ಲಿ ಹುಟ್ಟುವಳಿ ಏನು ಶೇಕಡಾ ೩ರ ಬಡ್ಡಿ ಪ್ರಕೃತ ಇದೆ, ಆದರೆ ಸ್ವಲ್ಪ ಕೃತಗಿತ ಮಾಡಿಸಿದರೆ ಒಳ್ಳೇ ಹುಟ್ಟುವಳಿಯಾದೀತು. ನೀರಾಶ್ರಯ ಚೆನ್ನಾಗಿದೆ. ಮಾಡತಕ್ಕದ್ದೇನು-ನಮ್ಮ ಈ ವ್ಯಾಪಾರಕ್ಕೂ ಆ ಕೆಲಸಕ್ಕೂ ಸರಿಬೀಳುವದಿಲ್ಲ ನೋಡಿ.

ತಿರುಮಲ—ನಮಗೆ ವ್ಯಾಪಾರಸ್ಥರಿಗೆ ಇಂಥಾ ಆಸ್ತಿಗಳು ಪ್ರಯೋಜನವಿಲ್ಲ ಸ್ವಾಮಿ. ನಿತ್ಯವೂ ಎಂಟು ಒಂಭತ್ತರ ದರದ ಬಡ್ಡಿಯಲ್ಲಿ ಹಣ ಪಡಕೊಳ್ಳುವ ನಮಗೆ ಶೇಕಡಾ ೩ರ ಬಡ್ಡಿಯಿಂದ ಆಸ್ತಿ ಮಾಡಿದರೆ ಹ್ಯಾಗೆ ಪೂರೈಸೀತು ರಾಯರೆ. ಬೇಂಕಿನಲ್ಲಿ ಎಂಟರ ಕಮ್ಮಿ ಬಡ್ಡಿಯೇ ಇಲ್ಲ; ಸಮಯಾನುಸಾರ ೧೦-೧೨ರ ಬಡ್ಡಿಯೂ ಆಗುವದು. ಮೂರು ತಿಂಗಳ ಬಡ್ಡಿಯು ಮುಂಚೆಯೇ ಕಟಾಫ್ ಆಗುವದು, ವ್ಯಾದೆಗೆ ಹತ್ತು ಹದಿನೈದು ದಿವಸಗಳ ಮುಂಚೆ ಹಣ ತಯಾರಿಸಬೇಕು. ಅಂತು ಇಂತು ಲೆಖ್ಖ ನೋಡಿದರೆ ಶೇಕಡಾ ೧೫-೧೮ರ ಬಡ್ಡಿ ಅಂದಾಜು ಬೀಳುತ್ತದೆ. ಇದೆಲ್ಲಾ ನೋಡಿದರೆ ತಾವು ಆಸ್ತಿ ಮಾಡಿದ್ದು ನನಗೆ ಯೋಗ್ಯವೆಂತ ಕಾಣುವದಿಲ್ಲ. ಬಡ್ಡಿ ಮನೆ ತೆಗಿಯುತ್ತದಲ್ಲವೇ ಸ್ವಾಮಿ.

ವೆಂಕಟ್ರ—ತಮ್ಮ ಮಾತು ವಾಸ್ತವ್ಯ ರಾಯರೇ. ನಾನು ಆಸ್ತಿ ಮಾಡುತಿದ್ದಿಲ್ಲ ಸ್ವಾಮಿ, ಎಲ್ಲಾದರು ಕಡಗಟ್ಟಿನ ವಿಷಯ ಇತರರ ಮುಖಾಂತರ ಪ್ರಸ್ತಾಪಿಸಿದರೆ ಅವರಿಗೆ ಎಷ್ಟು ಆಸ್ತಿ ಇದೆ ಎಂದು ಕೇಳುತ್ತಾರೆ. ಅದಕ್ಕಾಗಿ ಕಳದ ವರುಷ ಈ ಆಸ್ತಿ ಮಾಡಿ ಹಾಕಿದೆ ಸ್ವಾಮಿ. ಒಂದೆರಡು ಸಾವಿರ ರೂಪಾಯಿ ಮಾತ್ರ ನಾನು ಕೊಟ್ಟಿದ್ದೇನೆ. ಬಾಕಿ ಎಲ್ಲಾ ಕಾಣಹೊಗಳಿ ಬರಿಸಿಕೊಂಡದ್ದು, ಬಡ್ಡಿ ಕೊಟ್ಟರೆ ಸಾಕು. ಈ ಒಂದು ಆಸ್ತಿ ಬರಿಸಿದ್ದೇ ಬರಿಸಿದ್ದು. ಹೊರಗಿನಿಂದ ನೂರಾರು ಜನರು ಬಂದು ಕೆಲವು ಹಣವಿದೆ, ಕೆಲವು ತಿಂಗಳಿಗೆ ಇಟ್ಟುಕೊಳ್ಳಬಹುದೋ, ಇಟ್ಟುಕೊಳ್ಳಬಹುದೋ ಎಂತ ತಂದುಹಾಕುತ್ತಾರೆ. ಬೇಂಕಿನಲ್ಲಿ ಐವತ್ತು ಸಾವಿರ ಕ್ರೆಡಿಟ್ಟು ಆಯಿತು. ಎರಡು ಮೂರು ಬೇಂಕುಗಳಲ್ಲಿ ಹೀಗೆ ಐವತ್ತು ಐವತ್ತು ಸಾವಿರದ ಕ್ರೆಡಿಟ್ಟು. ಮುಲ್ತಾನಿಗಳು ಕೆಲಬರು ಬರುತ್ತಲೇ ಇದ್ದಾರೆ. ಒಬ್ಬೊಬ್ಬರಿಂದ ಹತ್ತತ್ತು ಸಾವಿರವೆಂದರೆ ಒಂದು ಲಕ್ಷಕ್ಕೆ ಟಕ್ಕಾರು ಕೊಡಬಹುದಲ್ಲವೇ. ನಾನು ಈ ಆಸ್ತಿ ಮಾಡಿದಂದಿನಿಂದ ಮೂರು ನಾಲ್ಕು ಲಕ್ಷಗಳ ವೈವಾಟ ನಡಿಸುವರೆ ಅನುಕೂಲವಾಗಿಯದೆ. ಬಡ್ಡಿ ನಷ್ಟ ಎರಡು ಮೂರು ಸಾವಿರವಿದ್ದರೂ ವ್ಯಾಪಾರಗಳಲ್ಲಿ ಫಕ್ಕನೆ ಸಿಕ್ಕಿಹೋದರೆ ಏನು ಗುಮಾನು ಸ್ವಾಮಿ. ಮುಖ್ಯ ಯೋಗ್ಯತೆ ಬೇಕು. ಅದೆಲ್ಲಾ ಹೀಗಿದೆ ಸ್ವಾಮಿ (ಎಂತ ಮುಷ್ಟಿ ಕಟ್ಟಿ ತೋರಿಸುವನು).

ತಿರುಮಲ—ನಾನೇನು ತಮ್ಮ ಗುಟ್ಟು ತಿಳಕೊಳ್ಳುವ ಇರಾದೆಯಿಂದ ಮಾತಾಡಿದ್ದೆಂತ ಗ್ರಹಿಸಬೇಡಿ ಸ್ವಾಮಿ, ಹಣ ಕೊಂಡುಹೋಗಿ (ಎಂದು ಹತ್ತುನೋಟುಗಳನ್ನು ತೆಗದು ಕೊಡುವನು.

ವೆಂಕಟ್ರ—ಹದಿನೈದನೇ ತಾರೀಕಿಗೆ ಎರಡು ಸಾವಿರ ಸಾಕಷ್ಟೆ.

ತಿರುಮಲ—ಸಾಕು, ಸಾಕು, ಅನುಕೂಲವಿದ್ದರೆ ಮೂರಾದರೂ ಆಗಬಹುದು.

ವೆಂಕಟ್ರ—ಆಗಬಹುದು, ಹೋ ಮರತೆ. ೨೦ನೇ ತಾರೀಕಿಗೆ ಹತ್ತು ಸಾವಿರಕ್ಕೊಂದು ಬಿಲು ಮಾಡಬೇಕೆಂದಿದ್ದೇನೆ. ತಾವು ಬೇಂಕಿಗೆ ದಯಮಾಡಬೇಕೆಂತಿಲ್ಲ, ಕಾಗದಗಳು ಕಳುಹಿಸುತ್ತೇನೆ, ದಸ್ಕತು ಮಾಡಿದರೆ ಸಾಕು.

ತಿರುಮಲ—ತಾವು ಹಾಗೆ ಬೇಂಕಿನಲ್ಲಿ ಪ್ರಸ್ತಾಪಿಸುವದಿದ್ದರೆ ಹದಿನೈದಕ್ಕೆ ಪ್ರಸ್ತಾಪಿಸಿರಿ. ಐದು ಸಾವಿರ ರೂಪಾಯಿಯ ಸ್ವಲ್ಪ ಅಗತ್ಯವುಂಟು.

ವೆಂಕಟ್ರ—ಬೇಂಕಿನ ಮಾಪಾ ಸಾಹೇಬರಿಗೆ ಏನು ಛಳಿಜ್ವರ ಹಿಡಿಯುವದೋ ಗೊತ್ತಿಲ್ಲ.

ತಿರುಮಲ—ಹೇ-ಡ್ಯಾಮ್! ಹೌದು ಸ್ವಾಮಿ ಬೇಡ, ನಾನು ಆ ಬೇಂಕಿನಲ್ಲಿ ಬೇಕಾದರೆ ಪ್ರಸ್ತಾಪಿಸುವೆನು. ಇಲ್ಲಿ ಹತ್ತೆ ಸಾಕು.

ವೆಂಕಟ--ಆ ಬೇಂಕಿನಲ್ಲಿ ಈಗ ಬೇಡ ಸ್ವಾಮಿ. ಈ ವ್ಯಾದೆಗೆ ಎಲ್ಲಾದರೂ ಅನಾನುಕೂಲವಾದರೆ ಅಲ್ಲಿ ಹೊಂಡ ಮಾಡಬಹುದು ರಾಯರೇ. ದೇವರು ಇದ್ದಾರೆ. ಬೇಂಕಿನವರನ್ನು ಕೈವಶ ಮಾಡುವ ಚಮತ್ಕಾರ ಬಲ್ಲೆ! ಇಪ್ಪತ್ತು ಸಾವಿರಕ್ಕೆ ಪ್ರಸ್ತಾಪ ಮಾಡುತ್ತೇನೆ. ಹದಿನೈದು ಸಾವಿರಕ್ಕಾದರೂ ಪಾಸು ಮಾಡದೆ ಇರಲಿಕ್ಕಿಲ್ಲ. ಒಂದು ವೇಳೆ ಅನುಕೂಲವಿಲ್ಲದಿದ್ದರೆ ಹನ್ನೆರಡಕ್ಕೆ ಪಾಸು ಮಾಡಿದರೂ ಸಾಕು. ಎಂಟು ನಮಗೆ ಸಾಕು. ನಾಲ್ಕು ತಾವು ಪಡಕೊಳ್ಳಿ.

ತಿರುಮಲ—ಒಳ್ಳೇ ಯುಕ್ತಿ ಸ್ವಾಮಿ. ನಿಜ! ಈ ವ್ಯಾದೆಗೆ ಸರಿಯಾಗಿ ಆ ಬೇಂಕಿನಲ್ಲಿ ನೋಡಿಕೊಳ್ಳುವಾ. ಈಗಿನ ದಿವಸಗಳಲ್ಲಿ ಎಷ್ಟು ಆಲೋಚನೆ ಮಾಡಿದರು ಕೂಡಾ ಸಾಲದು. ಒಳ್ಳೇ ಯುಕ್ತಿ, ಹಾಗಾಗಲಿ. ಆದರೆ ನಾನಿನ್ನು ಏನು ಪ್ರಯತ್ನ ಮಾಡುವದಿಲ್ಲ.

ವೆಂಕಟ್ರ—ಬೇಡ ಸ್ವಾಮಿ ತಮ್ಮದೊಂದು ದಸ್ಕತು ಶಿಕ್ಕಿದರೆ ಸಾಕು. ಬಾಕಿ ಎಲ್ಲಾ ನಾನು ಸುದಾರಿಸಿಕೊಳ್ಳುವೆನು. (ಎಂತ ಹೋಗುವನು).

ವಾಚಕರೇ ಈ ವ್ಯಕ್ತಿಗಳ ವಿಷಯ ನನ್ನ ಅನುಭವವನ್ನು ಹೇಳುತ್ತೇನೆ ಕೇಳಿರಿ, ತಿರುಮಲರಾಯರಿಗೆ ಹತ್ತಾರುವತ್ತು ಸಾವಿರ ರೂಪಾಯಿ ಕ್ರಯಬಾಳುವ ಸ್ಥಿರಚರಾಸ್ತಿಗಳಿವೆ. ಈಗ ಡಾಮೋಡಿ ವ್ಯಾಪಾರಗಳಿಂದ ಏನೋ ೯೯೯೯ ರೂಪಾಯಿ ೧೫ ಆಣೆ ೧೨ ಪೈಗೆ ಮಿಕ್ಕಿ ಸಾಲವಿದೆ. ಇನ್ನೊಬ್ಬ ವ್ಯಕ್ತಿಯ ಮೂಲವು ತಿರುಮಲರಾಯರಿಗಿಂತ ಒಂದೆರಡು ಸಾವಿರಕ್ಕೆ ಕಮ್ಮಿಯದೆ. ಆದರೆ ಸಾಲವು ಇವರಿಗಿಂತ ಏಳೆಂಟು ಸಾವಿರ ಜಾಸ್ತಿಯದೆ. ಆದರೆ ಇವರಿಬ್ಬರೂ ಒಳ್ಳೇ ಸ್ಥಿತಿವಂತರೇ ಎಂದು ವ್ಯಾಪಾರಸ್ಥರೆಲ್ಲರು ತಿಳಕೊಂಡಿರುವರು. ಪ್ರತಿ ವರುಷವು ಇವರಿಬ್ಬರಿಗೂ ೨೫-೩೦ ಸಾವಿರ ಮುನಾಫೆ ಇರುವದು. ಅದು ಹ್ಯಾಗೆಂತ ನಿಮಗೆ ಅನುಮಾನಕ್ಕೆ ಕಾರಣ ಉಂಟು. ಅದೇನಂದರೆ-ಮೂಲಕ್ಕಿಂತ ಸಾಲ ಹೆಚ್ಚಿರುವಾಗ್ಯೆ ಈ ಮುನಾಫೆ ಏನಾಯಿತೆಂತ ನೀವೆಲ್ಲರು ಚೋದ್ಯ ಪಡುವಿರಿ; ಸಣ್ಣ ವ್ಯಾಪಾರ, ಮೂರು ತಿಂಗಳ ಹಿಂದೆ ಕೊಚ್ಚಿಯಲ್ಲಿ ಖೊಬ್ರಿ ಎಣ್ಣೆಗೆ ನೂರರ ಧಾರಣೆ ಇದದ್ದು ಒಂದೇ ಡಮ್ಮಿಗೆ ಚಡಾವಾಗಿ ನೂರಅರವತ್ತರ ಧಾರಣೆಯಾಯಿತು. ಆಗ್ಯೆ ಒಂದನೆ ವ್ಯಕ್ತಿಯು ೨ನೆ ವ್ಯಕ್ತಿಯೊಡನೆ ತಾನು ಭುವನ ಜೀವನದಾಸರಲ್ಲಿ ಮಾಡಿದ ಎಣ್ಣೆ ಸಾಟೆಯು ೨೫ ಸಾವಿರ ರೂಪಾಯಿ ಮುನಾಫೆಗೆ ಅವರೇ ಕೇಳುತ್ತಿದ್ದಾರೆ. ನಾನು ಒಪ್ಪಿ ತಂತಿ ಬಿಟ್ಟಿರುತ್ತೇನೆಂತ ಹೇಳಿದರು. ಆಗ್ಯೆ ೨ನೇ ವ್ಯಕ್ತಿಯು ತಾನು ನಿನ್ನೆಯೇ ನನ್ನ ಸಾಟೆ ಕಾಡಾಂಕಂಡಿಯವರಿಗೆ ಮೂವತ್ತು ಸಾವಿರ ಮುನಾಫೆಗೆ ಕೊಟ್ಟು ಸೋತು ಹೋದೆನು. ಅವರು ಹತ್ತು ಸಾವಿರ ಮುನಾಫೆಗೆ ಕೂಡಲೆ ವಾಲ್ಕಾಟಬ್ರದರ್ಸರಿಗೆ ಆ ಸಾಟೆ ಮಾರಿದರಂತೆ ಇತ್ಯಾದಿ ಲಾಭಗಳ ಪ್ರಸ್ತಾಪ ಮಾತನಾಡುವಾಗ್ಯೆ ಅದನ್ನು ಕೇಳಿ ನನಗೆ ಏನೋ ಏನೋ ತೋಚಿತು. ಇಷ್ಟು ವರ್ಷ ವ್ಯಾಪಾರ ಮಾಡಿ ಬಹಳ ಕಷ್ಟದಿಂದ ಜೀವನ ಮಾಡಿ ನಾಲ್ಕೈದು ಸಾವಿರ ರೂಪಾಯಿ ಸಂಪಾದಿಸಬೇಕಾದರೆ ನಾನು ಪಟ್ಟ ಕಷ್ಟಕ್ಕೆ ಮಿತಿಯೇ ಇಲ್ಲ. ಈ ವ್ಯಾಪಾರಕ್ಕೆ ಬೆಂಕಿ ಬೀಳಲಿ. ಈ ಹಂಸರಾಜ ಕಾಡಾಗಂಡಿಯವರ ಗುರುತು ನನಗಿಲ್ಲವೆ ಎಂದು ಶೀದಾ ಕೊಚ್ಚಿಗೆ ಹೋದೆನು. ಹಂಸರಾಜರಲ್ಲಿಗೆ ಹೋಗಿ ಒಂದು ಸಾವಿರ ಗೋಣಿ ರೆಂಗೂನು ಅಕ್ಕಿಗೆ ಸಾಟೆ ಮಾಡಿದೆನು. ಆದರೆ ನನ್ನ ದುರಾದೃಷ್ಟವೇನು ಹೇಳಲಿ. ನಾನು ಸಾಟೆ ಮಾಡಿದ ಮರುದಿನವೇ ಅಕ್ಕಿಗೆ ಗೋಣಿಯಲ್ಲಿ ನಾಲ್ಕಾಣೆ ದರ ಕಮ್ಮಿಯಾಯಿತು. ಹಾಗೆಯೇ ಆ ಸಾಟೆಯು ಮರುದಿವಸ ನೂರು ರೂಪಾಯಿ ನಷ್ಟಕ್ಕೆ ಕೊಟ್ಟು ಹಿಂತಿರುಗಿದೆನು. ಆದರೆ ನಮ್ಮ ವ್ಯಕ್ತಿಗಳ ಸಾಟೆ ವರ್ತಮಾನ ತಿಳಿದ್ದಲ್ಲಿ ಏನೋ ನೂರು ಖಂಡಿ ಖೊಬ್ರಿ ಎಣ್ಣೆ ಸಾಟೆ ಇತ್ತಂತೆ. ಅದರಲ್ಲಿ ಐನೂರು ರೂಪಾಯಿ ಮುನಾಫೆ ಶಿಕ್ಕಿಯದೆ. ನಂತರ ಮಾಡಿದ ಸಾಟೆಯಲ್ಲಿ ಆರುನೂರು ಬೇಕಾದೀತು ಇತ್ಯಾದಿ ನಿಜ ವರ್ತಮಾನವು ನನಗೆ ತಿಳಿಯಿತು. ದೊಡ್ಡವರ ಸುದ್ದಿ. ನಮಗೇಕೆಂದು ನಾನು ಸುಮ್ಮನೆ ಇದ್ದೆ. ಮೊನ್ನೆ ಒಂದು ರಿಕಾರ್ಡು ಬೇಕಾಗಿ ನಾನು ಕೋರ್ಟಿಗೆ ಹೋದಾಗ್ಯೆ ಈ ವ್ಯಕ್ತಿಗಳ ಮತ್ತು ಬೇರೆ ಕೆಲವು ವ್ಯಕ್ತಿಗಳ ದಿವಾಳಿ ಅರ್ಜಿಯು ಮಾರ್ಚಿ ತಾ. ೭ಕ್ಕೆ ತನಕಿ ಇಟ್ಟಿರುತ್ತದೆ. ಆಕ್ಷೇಪವಿರುವವರು ಆ ದಿನ ಬಂದು ತಮ್ಮ ಆಕ್ಷೇಪಣೆ ಕೊಡುವದು ಇತ್ಯಾದಿ ಓದಿ ನೋಡಿ ನನ್ನ ಮನಸ್ಸಿನಲ್ಲಿ ಬಹಳ ಕಳವಳವಾಯಿತು.

ಇಂತಿ ವರ್ತಕ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಉದ್ಯಾವರ ಬೋರ್ಡು ಪ್ರ್ಯಾಮರಿ ಶಾಲೆ.

ಅಯ್ಯಾ,

ಇದೇ ತಿಂಗಳ ೧೪ನೇ ತಾರೀಕಿನ "ಸತ್ಯದೀಪಿಕೆ"ಯಲ್ಲಿ 'ಪ್ರೇಕ್ಷಕ' (observer) ರೆಂಬವರೊಬ್ಬರು ಮಂಜೇಶ್ವರ ಮಿಶನ್ ಶಾಲೆಗೂ ಕಣ್ವತೀರ್ಥದ ಖಾಸಗಿ ಶಾಲೆಗೂ ಮಧ್ಯದಲ್ಲಿ ಉದ್ಯಾವರದಲ್ಲಿ ಹೊಸದಾಗಿ ಒಂದು ಬೋರ್ಡು ಶಾಲೆಯು ಸ್ಥಾಪಿಸಲ್ಪಟ್ಟಿರುವದನ್ನು ಕುರಿತು ತಮ್ಮ ಆಶ್ಚರ್ಯವನ್ನು ತೋರ್ಪಡಿಸಿರುವರು. ವಿದ್ಯೆಯ ಅಭಾವದಿಂದ ಕಳೆಗುಂದಿ ವಿದ್ಯೆಗಾಗಿ ಹಸಿಯುತ್ತಿರುವ ಈ ನಮ್ಮ ಹಿಂದು ದೇಶದಲ್ಲಿ ಶಾಲೆಗಳು ಎಷ್ಟು ಹೆಚ್ಚುತ್ತವೋ ಅಷ್ಟಕ್ಕೆ ನಾವು ಸಂತೋಷಿಸಬೇಕಾದದ್ದು ವಿನೀತ ಸ್ವಭಾವದವರೆಲ್ಲರ ಕರ್ತವ್ಯವು. ಆದರೆ ಇವರೊಬ್ಬರಿಗೆ ಮಾತ್ರ ಏನು ಕಾರಣದಿಂದ ಅಸಮಾಧಾನವು ಪ್ರಾಪ್ತವಾಯಿತೋ!

ಸದರಿ 'ಪ್ರೇಕ್ಷಕ'ರು ಆ ಪತ್ರದಲ್ಲಿ, ಬಾಸೆಲ್ ಮಿಶ್ಯನಿನವರು ಕಳೆದ ೬೦ ವರುಷಗಳಲ್ಲಿ ಪ್ರಾಥಮಿಕ ವಿದ್ಯೆಯನ್ನು ಧರ್ಮಾರ್ಥವಾಗಿಯೂ ಬಹು ಅಗ್ಗವಾಗಿಯೂ ಈ ಸೀಮೆಗಳಲ್ಲಿ ಕೊಡುತ್ತಾ ಬರುತ್ತಿರುವರೆಂದು ಹೇಳಿರುವರು. ಧರ್ಮಾರ್ಥವ್ವಾಗಿ ವಿದ್ಯೆಯನ್ನಾಗಲೀ ಅಥವಾ ಬೇರೆ ಯಾವದನ್ನಾಗಲೀ ಸದುದ್ದೇಶದಿಂದ ಕೊಡುವ ಉದಾರವಂತನಿಗೆ, ನೆರೆಮನೆಯಲ್ಲಿ ಇನ್ನೊಬ್ಬನು ಹಾಗೆಯೇ ಧರ್ಮವನ್ನು ಕೊಡುತ್ತಿದ್ದರೆ ಅಸೂಯೆಯಾಗುವದುಂಟೇ? ಆತನು ಇನ್ನು ಹಿಗ್ಗುವನಲ್ಲವೇ? ತಾನು ಹಾಕಿದ ಮೇಲುಪಂಕ್ತಿಯು ಅನುಸರಿಸಲ್ಪಟ್ಟಿತೆಂದು ಆತನು ಸಂತೋಷಿಸುವನಲ್ಲವೇ? ಹೀಗಿರುವಲ್ಲಿ ಮಿಶ್ಯನಿನವರು ಧರ್ಮಾರ್ಥವಾಗಿ ವಿದ್ಯೆಯನ್ನು ದಾನ ಮಾಡುತ್ತಾರೆಂದಾದರೆ ಸ್ವಲ್ಪ ದೂರದಲ್ಲಿ ಬೇರೊಂದು ಶಾಲೆಯು ಇರುತ್ತದೆಂದು ಅವರು ಗುಣುಗುಟ್ಟುವರೇ? ಹಾಗಾದರೆ, ಧರ್ಮ ಬುದ್ಧಿಯ ಫಲವೇನು?

ಇಷ್ಟೇ ಅಲ್ಲ, ಮಿಶ್ಯನಿನವರು "ಅಗ್ಗವಾಗಿಯೂ" ವಿದ್ಯೆಯನ್ನು ಕೊಡುತ್ತಾರೆಂದು ಈ 'ಪ್ರೇಕ್ಷಕ'ರು ಬರೆಯುತ್ತಾರೆ. ಇಲ್ಲಿಯಾದರೆ ಅಸೂಯೆಗೆ ತುಂಬಾ ಎಡೆಯುಂಟು. ಮಿಶ್ಯನ್ ಶಾಲೆಗೆ ಈ ಹೊಸ ಶಾಲೆಯಿಂದ "ಎಡೆತಡೆಯಾಗಲು" ಬೇಕಾದಷ್ಟು ಕಾರಣವುಂಟು—ಯಾಕಂದರೆ, 'ಅಗ್ಗ'ವೆಂಬದು ಅಂಗಡಿ ವ್ಯಾಪಾರದಲ್ಲಿಯ ವ್ಯಾವಹಾರಿಕ ಶಬ್ದವು! ಇದನ್ನು ಉಪಯೋಗಿಸುವದರಿಂದ ಈ 'ಪ್ರೇಕ್ಷಕ'ರು ಮಿಶ್ಯನಿನವರ ವಿದ್ಯಾದಾನವೆಂಬದನ್ನು ಸಂತೆಯ ವ್ಯಾಪಾರಕ್ಕೆ ಸರಿಹೋಲಿಸಿದಂತಾಯಿತು! ಅಂಗಡಿಗಾರನು ತನ್ನ ಸಮೀಪಬಂಧುವಾದರೂ ತಾನು ಮಾರುವ ಜೀನಸುಗಳ ಬೇರೊಂದು ಅಂಗಡಿಯನ್ನು ನೆರೆಯಲ್ಲಿಯಾಗಲೀ ದೂರದಲ್ಲಿಯಾಗಲೀ ಮಡಗಿಬಿಟ್ಟರೆ ಅದನ್ನು ಸಹಿಸಲೊಲ್ಲನು; ಮತ್ತು ಈ ಅಸೂಯೆಯು ವ್ಯಾಪಾರಕ್ಕೆ ಸಹಜವಾಗಿರುವದರಿಂದ ಜನರಾದರೂ ಆತನನ್ನು ದೂರಲಾರರು. ಆದರೂ ಪೇಟೆಯಲ್ಲಿ ಒಂದೇ ವಿಧದ ಜೀನಸುಗಳ ಅನೇಕ ಅಂಗಡಿಗಳು ಹತ್ತರ ಹತ್ತರದಲ್ಲಿ ಇವೆ. ಗಾಂಜಾ—ಅಫೀಮಿನ ಅಂಗಡಿಗಳು ಮಾತ್ರ ಒಂದೊಂದು ಊರಿನಲ್ಲಿ ಒಂದೊಂದೇ ಎಂಬಂತೆ ಇವೆ; ಯಾಕೆಂದರೆ 'ಲೈಸನು' ಪಡೆಯದೆ ಯಾರೊಬ್ಬನಾದರೂ ಅವನ್ನು ಇಡಕೂಡದು, ಮತ್ತು 'ಲೈಸನು' ಒಬ್ಬನಿಗಿಂತ ಜಾಸ್ತಿಯಾಗಿ ಹೆಚ್ಚು ಮಂದಿಗೆ ದೊರಕದು. ಆದ್ದರಿಂದ ಈ 'ಪ್ರೇಕ್ಷಕ'ರು ಉದ್ಯಾವರದಲ್ಲಿ ಸ್ಥಾಪಿಸಲ್ಪಟ್ಟ ಹೊಸ ಶಾಲೆಯ ದೆಸೆಯಿಂದ ಮಂಜೇಶ್ವರ ಮಿಶ್ಯನ್ ಶಾಲೆಗೆ ತೊಂದರೆಯಾಗಬಹುದಾದ್ದರಿಂದ ಬೋರ್ಡಿನವರು ಅದನ್ನು ತೆಗದು ಹಾಕಬೇಕೆಂದು ಬರೆದಿರುವದರಿಂದ, ಇನ್ನು ಮುಂದೆ ಮಿಶ್ಯನಿನವರಿಗಲ್ಲದೆ, ಮಂಜೇಶ್ವರದಲ್ಲಿ ವಿದ್ಯೆಯನ್ನು ಕಲಿಸಿಕೊಡುವದಕ್ಕೆ ಬೇರೆ ಯಾರಿಗಾದರೂ 'ಲೈಸನು' ಕೊಡಬಾರದೆಂದು ಕೇಳಿಕೊಂಡಂತಾಯಿತು! ಭಲೇ, 'ಪ್ರೇಕ್ಷಕ'ರ ವಿದ್ಯಾಭಿಮಾನವೇ! ಇನ್ನು ವಿದ್ಯೆ ಕಲಿಸಿಕೊಡುವದಕ್ಕಾದರೂ 'ಲೈಸನು' ಆಗಬೇಕೆಂಬ ಇವರ ಔದಾರ್ಯವು ಬಹಳ ಶ್ಲಾಘನೀಯವೇ ಸರಿ! ಮಿಶ್ಯನಿನವರು ಈ 'ಪ್ರೇಕ್ಷಕ'ರಂತೆಯೇ ತಾವೂ ಭಾವಿಸಲೊಲ್ಲರೆಂದು ಎಣಿಸುತ್ತೇನೆ.

ನೂತನವಾಗಿ ಉದ್ಯಾವರದಲ್ಲಿ ಸ್ಥಾಪಿಸಲ್ಪಟ್ಟ ಈ ಶಾಲೆಯು ಮಂಜೇಶ್ವರದ ಮತ್ತು ಕಣ್ವತೀರ್ಥದ ಶಾಲೆಗಳ ನಡುವಿನಲ್ಲಿ ಉಂಟು. ಮಂಜೇಶ್ವರ ಮತ್ತು ಕಣ್ವತೀರ್ಥದ ಶಾಲೆಗಳ ನಡುವೆ ಸುಮಾರು ಎರಡುವರೆ ಮೈಲುಗಳ ಅಂತರವಿರುತ್ತವಾದ್ದರಿಂದ, ವಿದ್ಯೆಯ ವ್ಯಾಸಂಗವು ಹೆಚ್ಚಾಗಿ ಇಲ್ಲದ ಬಡವರಿಗಾಗಿ ಅವರ ಮನೆಗಳಿಗೆ ಆದಷ್ಟು ಸಮೀಪವಾಗಿ ಒಂದು ಶಾಲೆಯು ಇಲ್ಲದಿದ್ದರೆ ಚಿಕ್ಕ ಮಕ್ಕಳು ಬೇಸಗೆಯ ಬಿಸಿಲಿನಲ್ಲಿಯೂ, ಮಳೆಗಾಲದಲ್ಲಿ ಮಳೆಯಲ್ಲಿಯೂ ಬಸವಳಿಯಬೇಕಾಗುತ್ತದೆಂಬದನ್ನು ದಯಾಳುವಾದ ಬೋರ್ಡಿನವರು ಕಂಡು ತಾವಾಗಿಯೇ ಈ ಹೊಸ ಶಾಲೆಯನ್ನು ರೈಲ್ವೇಸ್ಟೇಶನಿನ ಹತ್ತರ ಉದ್ಯಾವರ ಗ್ರಾಮದಲ್ಲಿ ಕೆಲವು ದಿನಗಳ ಈಚೆಗೆ ಸ್ಥಾಪಿಸಿ ಇಲ್ಲಿ ಧರ್ಮಾರ್ಥವಾಗಿಯೇ ವಿದ್ಯೆಯನ್ನು ಎಲ್ಲಾ ಮಕ್ಕಳಿಗೆ ಕೊಡಬೇಕೆಂದು ನಿರ್ಣಯಿಸಿರುವರು. ಇಲ್ಲಿ ವಿದ್ಯೆಯನ್ನು ಅಂಗಡಿ ದವಸಗಳಂತೆ ಮಾರಲೊಲ್ಲರು; ಇಲ್ಲಿ 'ಅಗ್ಗ—ಪ್ರಿಯ'ಗಳೆಂಬ ಪೇಟೆ ಧಾರಣೆಯ ಮಾತುಗಳ ಅಗತ್ಯವಿರಲಾರದು. ಬಡವರ ಮಕ್ಕಳಿಗೆ ಮಳೆ ಬಿಸಿಲುಗಳ ಪೀಡೆಗಳನ್ನು ಅನುಭವಿಸಗೊಡದೆ ಅವರ ಬಾಗಲು

ಗಳ ಬಳಿಗೆ ವಿದ್ಯೆಯನ್ನು ಕೊಂಡೊಯ್ದು ಕೊಡಬೇಕೆಂಬ ಉದ್ದೇಶದಿಂದಲೇ ಈ ಶಾಲೆಯು ಸ್ಥಾಪಿತವಾಗಿರುತ್ತದೆ. ಇದಾದರೂ ಕೆಲವರ ಕಣ್ಣಿಗೆ ಮುಳ್ಳಾಯಿತೇ? ಹ್ಯಾಗೂ ಇರಲಿ, ಈ ಹೊಸ ಶಾಲೆಯು ಉದ್ದೇಶವು ನೇರವೇರಲಿ! ಬೋರ್ಡಿನವರು ಇದನ್ನು ಇನ್ನೂ ದೃಢಪಡಿಸುವಂತೆ ಭಗವಂತನು ಅವರಿಗೆ ಬುದ್ಧಿ ಕೊಡಲಿ! ಮತ್ತು ಆತನು ಇದಕ್ಕೆ ದೀರ್ಘಾಯುಷ್ಯವನ್ನು ಕೊಡಲಿ!.

ಉದ್ಯಾವರ,
ತಾ. 19—2—1912

ಪ್ರತ್ಯಕ್ಷದರ್ಶಿ.

ತಗಣಿಗಳನ್ನು ನಿರ್ಮೂಲ ಮಾಡುವುದು ಹ್ಯಾಗೆ.

ಸ್ವಾಮಿ ಪತ್ರಿಕಾಕರ್ತರೇ! ನಮಸ್ಕಾರ,

ನನ್ನನ್ನು ತಗಣಿಗಳು ಬಹಳ ಕಾಡುತ್ತಿದ್ದದರಿಂದ ಅವುಗಳನ್ನೇ ನಿರ್ಮೂಲ ಮಾಡುವ ವಿಧಾನವ್ಯಾವವೆಂದು ಬಹು ಆತುರದಿಂದ ಹುಡುಕುತ್ತಿದ್ದೆ. ಒಂದು ಆಂಗ್ಲೇಯ ಪತ್ರಿಕೆಯಲ್ಲಿ ಯಾರೋ ಮದ್ದು ಕೊಡುತ್ತಾರೆಂದು ನೋಡಿ ಮದ್ದನ್ನು ತರಿಸ ಪತ್ರ ಬರೆಯ ಬೇಕೆಂದಿರುವುದರೊಳಗೆ ನನ್ನ ಸ್ನೇಹಿತರೊಬ್ಬರು ಇದರ ಕಥೆಯನ್ನು ನನಗೆ ಸಾಂಗವಾಗಿ ತಿಳಿಸಿದರು. ಅವರು ಎರಡು ಮರದ ತುಂಡುಗಳನ್ನೂ, ತಗಣಿಯನ್ನು ಇದರ ಮಧ್ಯದಲ್ಲಿಟ್ಟು ಒತ್ತಿರಿ ಎಂದು ಬರೆದ ಕಾಗದ ತುಂಡನ್ನೂ ಕಳುಹಿಸುತ್ತಾರಂತೆ. ಇದೇ ರೀತಿ ಬಂಟವಾಳದಲ್ಲಿ ಮುಂಜೆಯೊಬ್ಬರು ಮಾಡಿದ್ದರಂತೆ. ಹೀಗೆ ಅನೇಕರು ಈ ಸೋಜಿಗ ತರದ ಮದ್ದನ್ನು ತರಿಸಿ ಹಣವನ್ನು ನೀರಿಗೆ ಹೋಮವಾಗಿಟ್ಟಿದ್ದರಂತೆ. ಆದರೆ ಇತ್ತಲಾಗೆ ನನಗೊಂದು ಇಂಗ್ಲಿಷ್ ಮದ್ದು ಸಿಕ್ಕಿತು. ಅದು ಯಾವದಂದರೆ ೧ ಪಿಂಟ್‌ಪ್ರೂಫ್ ಸ್ಪಿರಿಟ್, ೫ ತೊಲೆ ಕರ್ಪೂರ, ೧೦ ತೊಲೆ ಟರ್ಪೆಂಟೈನ್, ೨॥ ತೊಲೆ ಕೊರೊಸಿವ್ ಸಬ್ಲಿಮೇಟ್ ಇವನ್ನು ನೀರಲ್ಲಿ ಕದಡಿ ಅವು ಇದ್ದಲ್ಲಿ ಹಚ್ಚಬೇಕಂತೆ. ಈ ಮದ್ದನ್ನಾದರೂ ಮಾಡಿ ನೋಡುವಾ ಎಂದು ಪ್ರಯತ್ನಿಸಿದಾಗ ಅವುಗಳಲ್ಲಿ ಕೆಲವು ಮದ್ದುಗಳು ಸಿಕ್ಕಲಿಲ್ಲ. ಸಿಕ್ಕುವ ಮದ್ದುಗಳಿಗೂ ವಿಪರೀತ ಬೆಲೆ. ಹೀಗೆ ನಿರಾಶೆಯಾದೆ. ಕಡೇಗೆ ನನಗೊಂದು ಸುಲಭ ತರದ ಮದ್ದು ಸಿಕ್ಕಿತು. ಅದು ಬರೇ ಕರ್ಪೂರ. ಇದನ್ನು ಒಂದು ಚೀಲದಲ್ಲಿ ಹಾಕಿ ಹಾಸಿಗೆಯ ಮೇಲೆ ಸಮ ಮಧ್ಯದಲ್ಲಿ ತೂಗ ಹಾಕಬೇಕಂತೆ. ಇದನ್ನು ಮಾಡಿ ನಾನು ಈ ರಕ್ತ ಹೀರುವ ಮಾರಿಗಳಿಂದ ಸ್ವಲ್ಪ ಉಪಶಮನ ಹೊಂದಿರುತ್ತೇನೆ.

ಸರ್ವತ್ರದರ್ಶಿ.

ಅಯ್ಯಾ ಪತ್ರಸಂಪಾದಕರೇ,

ಪ್ರಾಚೀನ ಕಾಲದಲ್ಲಿ ಗ್ರೀಕ ದೇಶದಲ್ಲಿ ಇಬ್ಬರು ವಿದ್ವಾಂಸರಿದ್ದರಂತೆ. ಅವರಲ್ಲೊಬ್ಬ ಆಯುಷ್ಯಾಲವೆಲ್ಲಾ ನಗಾಡಿಬಿಟ್ಟ. ಇನ್ನೊಬ್ಬ ಅತ್ತೇ ಸತ್ತ. ಇವರಿಬ್ಬರ ವರ್ತನೆಗಳಿಗೂ ಕಾರಣಗಳಿರುವವು. ಪ್ರಪಂಚದಲ್ಲಿರುವ ಕೆಲವು ಸಂಗತಿಗಳನ್ನು ನೋಡಿದರೆ ವಿಶ್ವಾಮಿತ್ರನಿಗಿಂತ ಬಲವಾದ ಸನ್ಯಾಸಿಗೂ ನಗೆಬಾರದಿರಲಾರದು. ಪ್ರಾಯವಂತರು ವಿದ್ಯಾವಂತರು, ಮಾನಾರ್ಹರು ಇವರನ್ನೆರು ಮಾಡುವ ಕೆಲವು ತಿಳಿಗೇಡಿ ಕಾರ್ಯಗಳನ್ನು ನೋಡಲಾಗಿ ನಗೆ ಬಾರದೆ ಎಂದಿಗೂ ನಿಲ್ಲಲಿಕ್ಕಿಲ್ಲ. ಅದೇ ಈ ರೀತಿಯಲ್ಲಿ ಪ್ರಮುಖ ಪುರುಷರು ಕೂಡಾ ಬುದ್ಧಿಗೇಡಿಗಳಂತೆ ನಡೆದುಕೊಂಡು ಜೀವಾಂತ್ಯದಲ್ಲಿ ಪರಮಾತ್ಮನ ಕೋಪಕ್ಕೆ ಗುರಿಯಾಗಿ ನರಕದಲ್ಲಿ ನರಳುವರು ಎಂಬ ಭಾವವನ್ನು ತೆಗೆದುಕೊಂಡರೆ ಈಗಲೇ ಸರ್ವ ವಿಜ್ರಂಭಣೆಯಿಂದ ಷೋಡಶ ಪ್ರಾಯದ ಕನ್ಯಾರತ್ನವನ್ನು ವಿವಾಹಕಾರ್ಯಕ್ಕೆ ಮಂಟಪಕ್ಕೆ ನಡಿಸುವ ವರನಿಗೆ ಕೂಡಾ ಕಣ್ಣೀರು ಬಾರದಿರಲಾರದು. ಆದರೆ ನಾನು ಕುಶಾಲಿ. ನನಗೆ ದುಃಖವೆಂಬದು ಗೊತ್ತೇ ಇಲ್ಲ. ಎಲ್ಲಾದರೂ ಅಳುವ ಸಂದರ್ಭ ಬಂದರೆ ಅಥವಾ ಅತ್ತ ವಿನಹಾ ಮರ್ಯಾದೆ ಹೋಗುತ್ತದಾದರೆ ಸ್ವಲ್ಪ ರಾ। ತಲಚೇರಿ ಭಿಕ್ಕಪೈಗಳ ಅಂಗಡಿಯ (ಬೇರೆ ಅಂಗಡಿದ್ದು ಆಗಲಿಕ್ಕಿಲ್ಲ) ತೀಕ್ಷ್ಣ ನಶೆಯನ್ನು ಕಣ್ಣಿಗೆ ಪೂಶಿದಲ್ಲಿ ಜಾಡ್ಯದ ನೀರು ಇಳಿದು ಹೋಗಿ ಮರ್ಯಾದೆ ಉಳಿಯುವದು. ಆದ್ದರಿಂದ ನನ್ನಂಥಾ ಕುಶಾಲಿಯು ಹಾಸ್ಯಾಸ್ಪದ ರೀತಿಯಲ್ಲಿ ಪ್ರಪಂಚದ ಗೃಹಸ್ಥರ ವರ್ತನೆಗಳನ್ನು ನೋಡುವದು ಒಳ್ಳೇದು. ಇಂಥಾ ಸಂಗತಿಗಳು ಎಷ್ಟೋ ಇವೆ. ಅವು ನನಗೆ ಕಂಡುಬಂದ ಹಾಗೆ ನಾನು ತಮಗೆ ಅದನ್ನು ಸಮರ್ಪಿಸುತ್ತೇನೆ. ಅವುಗಳಿಗೆ ತಕ್ಕ ಮಾನ್ಯವನ್ನು ಕೊಡುವ ಭಾರವು ತಮ್ಮವಷ್ಟೇ!

ಮೊನ್ನೆ ದಿನ ಏಕಾಕ್ಷಿ ಸೂರಪ್ಪಯ್ಯನ ಮನೆಗೆ ವಂದರೆ ಕೆಲಸ ನಿಮಿತ್ತವಾಗಿ ನಾನು ಹೋಗಿದ್ದೆ. ಅಲ್ಲಿ ಒಬ್ಬ ಬಡಾಯಿ ಕೊಚ್ಚುವ ಗೃಹಸ್ಥ ತನ್ನ ಪ್ರಾಂತ್ಯದ ಮಣ್ಣಿನ ಫಲಧಾರಣಾಶಕ್ತಿಯ ವಿಷಯವಾಗಿ ಎಷ್ಟೊ ದಂಟಿಲ್ಲದ ಕುಂಬಳಕಾಯಿಗಳನ್ನು ಕಡಿಯುತ್ತಿದ್ದ. ನಾನು ಹೇಳುವದು ಪುಸ್ಕಟೆಯೋ ಎಂತ ಸ್ವಲ್ಪ ನೋಡಿ. ಒಂದು ದಿವಸ ಈ ಕಾಲವನ ಪ್ರಾಂತ್ಯದಲ್ಲಿ ಒಂದು ಮಾವಿನ ಮರವನ್ನು ಕಡಿಯಲಿಕ್ಕೆ ಕಾಡಿಗೆ ಹೋದನಂತೆ. ಸಾಧಾರಣ ಹತ್ತು ದಿವಸಗಳ ವರೆಗೆ ಒಂದು ಚುನಾಯಿಸಿ ತೆಗೆದ ಮರವನ್ನು ಕಡಿದಾದನಂತರ ಇನ್ನೆಷ್ಟು ಕಡಿಯಲಿಕ್ಕೆ ಉಂಟಪ್ಪಾ ಕರ್ಮ, ಮರದ ಸುತ್ತು ಹೋಗಿ ಆದರೂ ನೋಡೋಣ ಎಂತ ಹೇಳಿ ನೋಡಲಿಕ್ಕೆ ಹೋದನಂತೆ. ಆದರೆ ಇದಕ್ಕೆ ಸ್ವಲ್ಪ ಹೆಚ್ಚು ಮನಸ್ಸು ಕೊಡಿ—ಇನ್ನೊಂದು ಪಕ್ಕಕ್ಕೆ ಹೋಗಿ ನೋಡಿದ್ದಲ್ಲಿ ಏನಾಶ್ಚರ್ಯ! ಈತನ ತಿಳುವಳಿಕೆಗೆ ಬಾರದೆಯೆ ಇನ್ನೊಬ್ಬ ಮನುಷ್ಯನು ಅತ್ತಲಾಗಿನಿಂದ ಅದೇ ಮರವನ್ನು ಇವನಷ್ಟೆ ದಿವಸ ಕಡದಿದ್ದಾನೆ ಮತ್ತು ಇನ್ನೂ ಕಡಿಯುತ್ತಾನೆ. ಇಷ್ಟು ದಿವಸಗಳಾದರೂ ಇಬ್ಬರೂ ಏಕಕಾಲದಲ್ಲಿ ಕಡಿಯುತ್ತಿದ್ದರಾದರೂ ಒಬ್ಬನ ಕಡಿಯುವಿಕೆಯ ಶಬ್ದವು ಇನ್ನೊಬ್ಬನಿಗೆ ಕೇಳಲೆ ಇಲ್ಲವಂತೆ. ಇದು ನಿಜವಾದೀತೋ? ಅಷ್ಟು ದೊಡ್ಡ ಮರ ಎಲ್ಲಿಯಾದರೂ ಇದ್ದಿತೊ? ಅಲ್ಲ! ತಾವು ಹೇಳಿ. ಇದನ್ನು ಕೇಳಿ ನನಗೆ ಭೀಮಾರೋಷ ಬಂತು. ಆದರೂ ನಾನು ಖುಶಾಲಿಯಾದ್ದರಿಂದ ಶಿಟ್ಟಿಗೆ ಎಡೆಕೊಡದೆ "ಸುಳ್ಳನು ಸುಳ್ಳಡ್ಡೇಹಾಕೊಡು; ಮುಳ್ಳುಗು ಮುಳ್ಳಡ್ಡೇಹಾಕೊಡು" ಎಂತ ನೆನಸಿದೆ. ಮತ್ತು ಆ ಗೃಹಸ್ಥನನ್ನು ನೋಡಿ ಅಯ್ಯಾ ಅದೇನು ಚೋದ್ಯ, ನಮ್ಮ ಪ್ರಾಂತ್ಯದ ವಿಶಯಗಳು ಇನ್ನೂ ಅದ್ಭುತ. ದೃಷ್ಟಾಂತವಾಗಿ ಒಂದು ಹೇಳುತ್ತೇನೆ ಕೇಳಿರಿ. ನಮ್ಮಲ್ಲಿ ಒಂದು ಕೆರೆ ಅದೆ. ಮುಕ್ಕಾಲು ಮೈಲು ಉದ್ದ, ಅರ್ಧ ಮೈಲಿಗಿಂತ ಹೆಚ್ಚು ಅಗಲ. ಇಂಥಾ ಸರೋವರದಂತಿನ ಕೆರೆಯಿಂದ ಮೊನ್ನೆ ಮೊಗೇರ ಮುಂಡನು ಒಂದು ಮೀನು ಹೊರಗೆ ಇಳಿಸಿಬಿಟ್ಟ. ಅದರ ಭಾರ ದಯಮಾಡಿ ಕೇಳಬೇಡಿರಿ. ನಾವು ಅಲ್ಲಿ ತ್ರಾಸು ತಕ್ಕಡಿಗಳನ್ನಿಟ್ಟು ಕುಂಡ್ರಲಿಲ್ಲ. ಆ ಮೀನು ನೀರಿನ ಮೇಲೆ ಬಂದ ಕೂಡಲೇ ಕೆರೆಯ ನೀರು ಹತ್ತಡಿ ಕೆಳಗೆ ಹೋಯಿತು. ಅದರ ಪ್ರಮಾಣಗಳ ವಿಷಯವಾಗಿ ನೀವೇ ಆಲೋಚನೆ ಮಾಡಿಕೊಳ್ಳಿ! ಬಡಾಯಿಯು ಬಾಯಿ ಮುಚ್ಚಿಬಿಟ್ಟ.

ಇತ್ತಲಾಗೆ ಪರಮ ಲೋಭಿ ಶಂಕರಯ್ಯ ತೀರಿಹೋದರಷ್ಟೆ. ಇವರು ಪ್ರಾಣ ಬಿಡುವ ವರೆಗೂ ಪಂಜ ದೂಮನ ದುಸ್ತಿಗಿಂತಲೂ ಒಳ್ಳೆದಾದ ಉಡುಪು ಹಾಕಿಕೊಳ್ಳಲಿಲ್ಲ. ಇವರ ಊರು ಸ್ವಂತ ಉಡುಪಿ, ಅಲ್ಲಿ ನಾನು ಹೋದಾಗ್ಯೆ ಇವರ ಈ ಅಸಹ್ಯ ಬಟ್ಟೆಗಳನ್ನು ನೋಡಿ ಬೆರಗಾಗಿ ಇದೇನು ಶಂಕರಯ್ಯ, ಇಂಥಾ ಬಟ್ಟೆಗಳನ್ನುಹಾಕಿ ಕೊಂಡಿದ್ದೀರಿ ಎಂತ ಪ್ರಶ್ನಿಸಲಾಗಿ ಹಾ! ಇದು ನಮ್ಮ ಊರೇ ಅಲ್ಲವೊ? ಇಲ್ಲಿ ಎಲ್ಲರಿಗೂ ನನ್ನ ಪರಿಚರ್ಯ ಚನ್ನಾಗಿದೆ, ಏನು ಉಟ್ಟುಕೊಂಡರೇನು? ಎಂತ ಉಡಾಪಿ ಮಾತನಾಡಿದರು. ಮೊನ್ನೆ ದಿವಸ ಇವರನ್ನು ಅಕಸ್ಮಾತ್ತಾಗಿ ಮದ್ರಾಸಿನ ಜಾರ್ಜಿ ಟೌನಿನಲ್ಲಿ ನೋಡಿದಾಗ ಅದಕ್ಕಿಂತ ಕಡೇ ದುಸ್ತಿನಲ್ಲಿ ಇವರು ಅಲ್ಲಿ ಅಲೆದಾಡುತ್ತಿದ್ದರು. ಇದೇ ಸಮಯವೆಂತ ಹೇಳಿ "ಶಂಕರಯ್ಯ! ಉಡುಪಿ ತಮ್ಮ ಊರು, ಅಲ್ಲಿ ಸರ್ವರಿಗೂ ತಮ್ಮ ಪರಿಚರ್ಯವಿದ್ದದರಿಂದ ಅಲ್ಲಿ ಯಾವ ಉಡುಪೂ ಆಗುವದು. ಈ ಮದ್ರಾಸು ತಮ್ಮ ರಾಜ್ಯವಲ್ಲವಷ್ಟೇ. ಇಲ್ಲಿಗೆ ಬರುವಾಗ್ಯೆ ಆದರೂ ಯೋಗ್ಯ ಡ್ರೆಸ್ ಹಾಕಿ ಬರಬಹುದಿತ್ತಲ್ಲಾ" ಎಂತ ಹೇಳಲಾಗಿ "ಈಗಿನ ಯೌವನಸ್ಥರಿಗೆ ಬುದ್ಧಿ ಇಲ್ಲ ಎಂಬದಕ್ಕೆ ಏನೂ ಸಂಶಯವಿಲ್ಲ. ಅಯ್ಯೋ! ನಮ್ಮ ಕಾಲದಲ್ಲಿ ಯೌವನಸ್ಥರಿಗೆ ಸಹಾ ಸ್ವಲ್ಪ ಬುದ್ಧಿ ಇತ್ತಲ್ಲಾ! ಮೂಢಾತ್ಮನೆ! ಇದು ಪರರಾಜ್ಯ, ನನ್ನ ಗುರ್ತು ಯಾರಿಗೂ ಇಲ್ಲ. ನಾನು ಏನು ಉಟ್ಟುಕೊಂಡರೇನು? ಅದನ್ನು ನೋಡಿ ವಿಮರ್ಶಿಸುವವರಿಲ್ಲ ಎಂತ ನಿನಗೆ ಗೊತ್ತಿಲ್ಲವೊ? ಅಯ್ಯೋ! ಎಂತ ನನಗೆ ಬುದ್ಧಿ ಕಮ್ಮಿಯಾದ್ದಕ್ಕೆ ಗದರಿಸಿ ನುಸಿಪೀಡಿತರಂತೆ ಏಕದಮ್ ಓಡಿಬಿಟ್ಟರು. ಇವರ ನಮೂನೆ ಹ್ಯಾಗೆ? ಇವರ ಸಂಗತಿಯನ್ನು ಸ್ವಲ್ಪ ಹೇಳಲಿಕ್ಕಿದೆ. ಆದರೆ ಈಗ ಸದ್ಯಕ್ಕೆ ನಮಸ್ಕಾರ. ಸಲಾಮು ಇಲ್ಲ. (ಯಾಕೆಂತ ನಿಮಗೆ ಗೊತ್ತುಂಟು)

ಕುಶಾಲಿ.

ಅಯ್ಯಾ,

ನಿಮ್ಮ ಗತ ಸಂಚಿಕೆಯಲ್ಲಿ ಮುಲ್ಕಿಯ ಒಬ್ಬ ಸಾರಸ್ವತ ಬಾತ್ಮಿದಾರರು ತಾ. ೧೬ನೇ ಸಂಚಿಕೆಯಲ್ಲಿ ಮುಲ್ಕಿ ಬಾತಮಿದಾರರು ಬರೆದ ಸಂಗ್ತಿಗಳು ಕೆಲವು ಯತಾರ್ಥವಾದುವುಗಳಲ್ಲ ಎಂತ ಬರದದ್ದು ನೋಡಿ ವ್ಯಸನವಾಗುತ್ತದೆ. ಆದ್ದರಿಂದ ತಮ್ಮ ಅಮೂಲ್ಯ ಪತ್ರದ ಸ್ಥಳವನ್ನು ದುರುಪಯೋಗಪಡಿಸದೆ ಸಂತೋಷವಾಗಿ ಉತ್ತರಕೊಡುತ್ತೇನೆ. ಸಾರಸ್ವತರೂ ಗೌಡಸಾರಸ್ವತರೂ ಭೋಜನಮಾಡಿದ್ದು ಒಪ್ಪುತ್ತಾರೆ. ಆದರೆ ಸಾರಸ್ವತ ಸಮಾಜದ ಕಟ್ಟಳೆಗಳಿಗೆ ಅನುಸರಿಸಿ ಅಲ್ಲವೆಂದು ವಗೈರೆ ಪ್ರತಿಪಾದಿಸುತ್ತಾರೆ. ಸಮಾಜದ ಕಟ್ಟಳೆಯ ಭೋಜನಕ್ಕೂ ಈ ಭೋಜನಕ್ಕೂ ವ್ಯತ್ಯಾಸವೇನು? ಸಂಯುಕ್ತ ಪರಿಷದಾಶ್ರಿತರಲ್ಲಿ ಆದ ಮಂಗಲದ ಔತಣಕ್ಕೆ ನೆವನದಿಂದ ತಪ್ಪಿಸಿಕೊಂಡದೆಂಬದು ಯತಾರ್ಥವಲ್ಲವೆಂತ ಹೇಳುವದು ಸತ್ಯವೋ? ಚಿತ್ರಾಪುರ ಮಠಾಧೀಶರು ಮುಲ್ಕಿಗೆ ಚಿತ್ತೈಸಿದಾಗ್ಯೆ ಸಂಯುಕ್ತ ಪರಿಷದಾಶ್ರಿತರು ಯಾಕೆ ಅವರ ಭೇಟಿಗೆ ಹೋಗಲಿಲ್ಲ? ಅನ್ಯ ಜಾತಿಯ ಗೃಹಸ್ಥರು ಬಂದಿದ್ದಾಗಿ ತಮ್ಮ ಬಾತ್ಮಿದಾರರು ಒಪ್ಪುವದರಿಂದ ಸಂಯುಕ್ತದವರಿಗೆ ಶ್ರೀ ಗುರುಗಳ ಮೇಲೆ ಅಭಿಮಾನ ಇಲ್ಲವಾಗಿ ತಮ್ಮ ಬಾತ್ಮಿದಾರರೇ ಪ್ರಸಿದ್ಧಪಡಿಸಿದಂತೆ ಆಯಿತು. ಮಹಾನುಭವ ಭಕ್ತರು ಯಾವ ಜಾತಿಯಲ್ಲಿಯೂ ಹುಟ್ಟುತ್ತಾರೆ. ಕನಕದಾಸನು ಬೇಡರಲ್ಲಿ ಜನಿಸಲಿಲ್ಲವೆ? ಕಾಳಿದಾಸನು ಯಾವ ಜಾತಿಯವನು? ನಮ್ಮ ಪಲ್ಲಂಕಿಯನ್ನು ನಾವೇ ಹೊರುವದು ಲೇಸೋ? ಒಳಗೆ ಕೊಳತ್ತು ಹೊರಗೆ ಚಂದ ಬಣ್ಣದಿಂದ ಹೊಳಿಯುವ ಕುಂಬಳ ಕಾಯಿಯಿಂದ ಪ್ರಯೋಜನವೇನೆಂದು ನಾವರಿಯೆ. ತಮ್ಮ ಸಾರಸ್ವತ ಬಾತ್ಮಿದಾರರು ತಮ್ಮ ಹೆಸರು ಕೊಟ್ಟರೆ ನಾನೇ ಅವರಿಗೆ ಬರಿಯುವೆನು.

ತಮ್ಮ ವಿಧೇಯ,
ಗೌಡಸಾರಸ್ವತ.

ವಿದೇಶ ವೃತ್ತಾಂತ.

ಹೌಸ್ಟನ್ ಎಂಬಲ್ಲಿ ಎರಡು ಮಿಲಿಯ ಪವನು ಕ್ರಯಬಾಳುವ ೪೫ ಸಾವಿರ ಹತ್ತೀ ನೂಲಿನ ಕಟ್ಟುಗಳಿಗೆ ಬೆಂಕಿ ತಾಗಿ ಸುಟ್ಟುಹೋಯಿತು.

ಮೆಕ್ಸಿಕೋ ಪಟ್ಟಣದಲ್ಲಿ ಅನಾಯಕತ್ವವು ತಲೆದೋರಿಯದೆ. ಕೆಲವು ಪಟ್ಟಣಗಳು ದಂಗೆಗಾರರ ಕೈಯಲ್ಲಿದೆ. ಸರಕಾರ ಸೈನ್ಯದವರಿಗೂ ದಂಗೆಗಾರರಿಗೂ ಯುದ್ಧವಾಗುತ್ತಿದೆ.

ಹಿಂದೂಸ್ಥಾನದ ರಾಷ್ಟ್ರೀಯ ಬದಲಾವಣೆಗಳ ವಿಷಯವಾಗಿ ಕರ್ಜನ್ ಪ್ರಭುಗಳು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರತ್ಯೇಕ ಚರ್ಚೆ ನಡಿಸಿ ದರಬಾರಿನ ಸಮಯದಲ್ಲಿ ಚಕ್ರವರ್ತಿಯವರಿಂದುಂಟಾದ ಬದಲಾವಣೆಗಳು ಸಮಂಜಸವಾದ್ದಲ್ಲವೆಂಬದಾಗಿ ಖಂಡಿಸಿ ಮಾತಾಡಿದರು. ಇವರು ಈ ಸಂದರ್ಭದಲ್ಲಿ ಚಕ್ರವರ್ತಿಯವರ ಹಿಂದೂಸ್ಥಾನದ ಸಂದರ್ಶನೆಯಿಂದುಂಟಾದ ಮೇಲನ್ನು ತೋರಿಸಿ ಕೊಟ್ಟರೂ ಈ ಬದಲಾವಣೆಗಳನ್ನು ಮಾಡಲು ಸ್ಟೇಟ್ ಸೆಕ್ರಿಟರಿಯವರೂ ವ್ಯಾಸರಾಯರವರೂ ಅನುಸರಿಸಿದ ಮಾರ್ಗವು ಸಮವಲ್ಲವೆಂದೂ ರಾಜಧಾನಿಯ ಮಾರ್ಪಾಟೆ, ವಂಗವಿಭಜನೆಯನ್ನು ರದ್ದುಮಾಡಿದ್ದು ಮೊದಲಾದ ಸಂಗತಿಗಳು ಬುದ್ಧಿವಂತಿಕೆಯಿಂದ ಆಗಲಿಲ್ಲ. ಇದರಿಂದ ಪೂರ್ವ ಬಂಗಾಳದ ಮಹಮ್ಮದೀಯರಿಗೆ ನೋವಾಯಿತು. ರಾಜಧಾನಿ ಬದಲಾವಣೆಯ ದೊಡ್ಡ ಖರ್ಚಿನಿಂದ ತೆರಿಗೆ ಕೊಡುವ ಬಡಜನರಿಗೆ ಕಷ್ಟವಾದೀತು ಎಂಬಿತ್ಯಾದಿ ಸಂಗತಿಗಳನ್ನು ಸಭೆಯ ಮುಂದಿಟ್ಟರು. ಆದರೆ ಸ್ಟೇಟ್ ಸೆಕ್ರಿಟರಿಯವರಾದ ಕ್ರ್ಯೂಪ್ರಭುಗಳು ಕರ್ಜನ್ ಪ್ರಭುಗಳ ಮಾತುಗಳನ್ನು ಖಂಡಿಸಿ ಸಮಾಧಾನತರವಾದ ಉತ್ತರವಿತ್ತರು. ಹಿಂದೂಸ್ಥಾನದ ಬದಲಾವಣೆಗಳ ಸಂದರ್ಭದಲ್ಲಿ ಹೆಚ್ಚು ಕಡಿಮೆ ಎಲ್ಲಾ ಪ್ರಭುಗಳು ಈ ಬದಲಾವಣೆಗಳನ್ನು ಅನುಮೋದಿಸಿ ಮಾತಾಡಿದರು.

ಪಾರ್ಲಿಮೆಂಟ್ ಸಭೆಯಲ್ಲಿ ಮೆ. ಮೆಕ್‌ಕಲ್ಲವ್ ಸ್ಕೊಟ್ ಎಂಬವರು ಮದ್ರಾಸ್ ಸಂಸ್ಥಾನದ ಗಂಜಾಮ್ ಜಿಲ್ಲೆಯನ್ನು ಹೊಸ ಸಂಸ್ಥಾನವಾದ ಬಿಹಾರ್, ಚೋಟನಾಗಪುರ, ಒರಿಸ್ಸಕ್ಕೆ ಸೇರಿಸುವ ವಿಷಯ ಪ್ರಶ್ನಿಸಿದ್ದಲ್ಲಿ ಉಪಸೆಕ್ರಿಟರಿಗಳಾದ ಮೆ. ಮೊಂಟೇಗರವರು ಸಂಸ್ಥಾನಗಳ ಮೇರೆಗಳನ್ನು ನಿಶ್ಚಯಿಸುವದರಲ್ಲಿ ಇಂಡಿಯಾ ಸರಕಾರದವರೂ ಸ್ಟೇಟ್ ಸೆಕ್ರಿಟರಿಯವರೂ ಬಹಳ ಮುಂಜಾಗ್ರತೆ ತಕ್ಕೊಳ್ಳಬೇಕೆಂದಿದ್ದಾರೆ. ಆ ಮೇರೆಗಳ ನಿಶ್ಚಯಿಸುವಿಕೆಯು ಕೂಡಲೇ ಆಗುವಂಥಾದ್ದಲ್ಲ. ಗಂಜಾಮನ್ನು ಹೊಸ ಸಂಸ್ಥಾನಕ್ಕೆ ಸೇರಿಸುವ ತಕ್ಕ ಕಾರಣಗಳಿದ್ದರೆ ಈ ವಿಷಯ ಹಿಂದಕ್ಕೆ ಆಲೋಚಿಸೋಣಾದೀತು. ಯಾಕಂದರೆ ಡಿಲ್ಲಿಯಲ್ಲಿ ತಿಳಿಸೋಣಾದ ಬದಲಾವಣೆಗಳ ಆರಂಭದಲ್ಲಿಯೇ ಒಂದು ಸಂಸ್ಥಾನದ ಜನಸಂಖ್ಯೆಯನ್ನು ಮತ್ತೊಂದು ಸಂಸ್ಥಾನಕ್ಕೆ ಸೇರಿಸುತ್ತಾರೆಂಬದರಿಂದ ಜನರಲ್ಲಿ ಗಲಿಬಿಲಿಯಾಗಕೂಡದು ಎಂಬದಾಗಿ ಉತ್ತರವಿತ್ತರು.

ಇಟಲಿ ಪಾರ್ಲಿಮೆಂಟ್ ಸಭೆಯಲ್ಲಿ ಟ್ರಿಪೋಲಿಯು ಇಟಾಲಿಗೆ ಸೇರಿಯದೆಂಬ ಮಸೂದೆಯು ಇಡಲ್ಪಟ್ಟಿತು. ಪಾರ್ಲಿಮೆಂಟ್‌ಮೆಂಬರರಿಂದ ಈ ಮಸೂದೆಯು ಅನುಮೋದಿಸಲ್ಪಟ್ಟದ್ದರಿಂದ ಇಟಲಿಯಲ್ಲಿ ಆ ದಿನ ಬಹಳ ಸಂತೋಷ ತುಂಬಿತ್ತು. ಜನರು ಆ ದಿನವನ್ನು ಹಬ್ಬವಾಗಿ ಆಚರಿಸಿ ಬಾವಟೆಗಳನ್ನು ಹಿಡಕೊಂಡು ಮೆರವಣಿಗೆ ಹೊರಟು ಪಾರ್ಲಿಮೆಂಟ್ ಮಂದಿರ, ಅರಮನೆ ಮೊದಲಾದ ಸ್ಥಳಗಳನ್ನು ಸುತ್ತಿ ಜಯಘೋಷ ಮಾಡಿದರು.

ಇಟಾಲಿಯರ ಮೂರು ಯುದ್ಧ ಹಡಗಗಳು ಬೆರೌತ್ ಎಂಬ ಪಟ್ಟಣದ ಮೇಲೆ ಗುಂಡು ಹಾರಿಸ ಪ್ರಾರಂಭಿಸಿಯದೆ ಎಂಬದಾಗಿ ಡೈಲಿ ಮೈಲ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಇಟಾಲಿಯರ ಕ್ರೂಶ್ಯರ್ ಎಂಬ ಯುದ್ಧಹಡಗದವರು ಬಂದರದಲ್ಲಿದ್ದ ತುರ್ಕರ ಹಡಗದವರನ್ನು ಶರಣಾಗತರಾಗಬೇಕೆಂದು ಕೇಳಿಕೊಂಡರು. ತುರ್ಕರ ಗವರ್ನರನು ಈ ವಿಷಯ ಉತ್ತರಕೊಡುವ ಮೊದಲು ಇಟಾಲಿಯರು ಬಂದರದಲ್ಲಿದ್ದ ತುರ್ಕರ ಹಡಗಗಳನ್ನು ಮುಣುಗಿಸಿಬಿಟ್ಟರು. ಬಂದರದಲ್ಲಿದ್ದ ಕಟ್ಟೋಣಗಳು ಹಾಳಾಯಿತು. 60 ಮಂದಿ ಮೃತ ಪಟ್ಟರು. ಅಲ್ಲಿದ್ದ ನಿವಾಸಿಗಳು ಹೆದರಿಕೊಂಡು ಲೆಬನೋನಿಗೆ ಓಡಿಹೋಗಿರುವರು. ಬೆರೌತ್ ಕೋಟೆಯಲ್ಲಿದ್ದ ತುರ್ಕರ ಅನವಿಲ್ಲಾ ಎಂಬ ಯುದ್ಧ ಹಡಗವು ಇಟಾಲಿಯರ ಹಡಗದೊಟ್ಟಿಗೆ ಕಾದಾಡಿತು. ಆದರೆ ಅನವಿಲ್ಲಾ ಎಂಬ ಯದ್ಧಹಡಗವು ಸುಟ್ಟು ಹೋಯಿತು. ಮತ್ತೊಂದು ಹಡಗವು ಮುಣುಗಿಸಲ್ಪಟ್ಟಿತು. 15 ಮಂದಿ ಕೊಲ್ಲಲ್ಪಟ್ಟರು. ೧೦೦ ಮಂದಿಗೆ ಘಾಯವಾಯಿತು. ನಂತರ ಇಟಾಲಿಯರ ಯುದ್ಧ ಹಡಗವು ಎಲ್ಲಿಗೋ ಹೋಗಿಬಿಟ್ಟಿತು. ಜನರು ದಿಗಿಲುಬಿದ್ದು ಸರಕಾರದ ಆಯುಧಶಾಲೆಗೆ ಹೊಕ್ಕು ತಾವಾಗಿ ಆಯುಧಪಾಣಿಗಳಾದರು. ಈ ಸಂದರ್ಭದಲ್ಲಿ 30 ಮಂದಿಯು ಕೊಲ್ಲಲ್ಪಟ್ಟರು. (ಈ ಪೈಕಿ ಇಬ್ಬರು ರುಷ್ಯಾನರು.) 50 ಮಂದಿಗೆ ಘಾಯವಾಯಿತು.

ಇಟಾಲಿಯರು ಏಗಿಯನ್ ಸಮುದ್ರವನ್ನು ಅಡ್ಡಕಟ್ಟಿದರೆ ತಾವು ಡರ್ಡನೆಲ್ಸನ್ನು ಅಡ್ಡಕಟ್ಟಿ ಟರ್ಕಿಯಿಂದ ಎಲ್ಲಾ ಇಟಾಲಿಯರನ್ನು ಓಡಿಸಿ ಬಿಡಲು ನಿಷ್ಕರ್ಷಿಸಿದ್ದೇವೆಂಬದಾಗಿ ತುರ್ಕಿಸರಕಾರದವರು ಶ್ರೇಷ್ಠಸರಕಾರಗಳವರಿಗೆ ತಿಳಿಯಪಡಿಸಿದ್ದಾರೆ.

ಇಟಾಲಿಯರು ಬೆರೌತ್ ಎಂಬಲ್ಲಿ ತೋಪು ಹಾರಿಸಿದ್ದರಿಂದ ನೂರಾರು ಜನರು ಸತ್ತು ಹೋಗಿರುವರು. ಕೆಲವು ವ್ಯಾಪಾರ ಸ್ಥಳಗಳು ಹಾಳಾಗಿರುವುದು. ಇಟಾಲಿಯರು ಬೆರೌತಿನಲ್ಲಿ ನಡಿಸಿದ ಈ ಕಾರ್ಯದಿಂದ ಫ್ರೆಂಚರಿಗೂ ಇತರ ಜನಾಂಗಗಳವರಿಗೂ ನಷ್ಟ ಉಂಟಾದ್ದರಿಂದ ಫ್ರೆಂಚರು ಇಟಾಲಿಯರ ಮೇಲೆ ಶಿಟ್ಟುಗೊಂಡಿರುವರು. ಫ್ರೆಂಚರೂ, ಬ್ರಿಟಿಷರೂ ತಂತಮ್ಮ ಯುದ್ಧನಾವೆಗಳನ್ನು ಅಲ್ಲಿಗೆ ಕಳುಹಿಸಿರುವರು.

ದಮಸ್ಕ, ಯೆರೂಸಲೇಮ್, ಅಲೆಪ್ಪೊ ಮೊದಲಾದ ಸ್ಥಳಗಳಲ್ಲಿದ್ದ ಇಟಾಲಿಯರು 15 ದಿವಸಗಳೊಳಗೆ ಪಟ್ಟಣವನ್ನು ಬಿಟ್ಟುಹೋಗಬೇಕೆಂಬ ಹುಕುಂ ಜಾರಿಗೆ ತರಲು ತುರ್ಕೀ ಸರಕಾರದವರು ನಿಷ್ಕರ್ಷಿಸಿರುವರು.

ಚೀನದಲ್ಲಿ ಯುಆನ್ ಸಿಕಾಯಿರವರು ಪ್ರಜಾಧಿಪತ್ಯದ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು. ಪ್ರೊಟಿಸ್ಟಾಂಟ್ ಕ್ರೈಸ್ತರ ಒಂದು ಪ್ರತಿನಿಧಿ ಮಂಡಲಿಯವರು ಯುಆನ್ ಸಿಕಾಯಿರವರಿಗೆ ಭೇಟಿಕೊಟ್ಟಲ್ಲಿ ತಾನು ಎಲ್ಲಾ ಜಾತಿಮತಗಳಿಗೆ ಇರುವ ತೊಂದರೆಗಳನ್ನು ನಿವಾರಣೆ ಮಾಡಲು ನಿಷ್ಕರ್ಷಿಸಿರುವೆನೆಂದು ಉತ್ತರ ಕೊಟ್ಟರು.

ಜರ್ಮನರ ಕೋಟೆಯಲ್ಲಿ ಗೂಢಾಚಾರನೆಂದು ಬಂಧಿಸಲ್ಪಟ್ಟ ಲೆಫ್ಟನೆಂಟ್ ಬ್ರೆಂಡನ್ ಎಂಬವನು ತಾ.22ರಲ್ಲು ಕೋಟೆಯಿಂದ ತಪ್ಪಿಸಿಕೊಳ್ಳಲು ಕಿಡಿಕಿಗೆ ಹಗ್ಗ ಕಟ್ಟಿ ಗೋಡೆಯ ಮೇಲೆ ಏರುತ್ತಿರುವಾಗ ಕಾವಲಿಗಾರನು ನೋಡಿ ಗುಂಡು ಹೊಡೆಯುತ್ತೇನೆಂದು ಹೆದರಿಸಿ ಆತನನ್ನು ಹಿಡಿದನು.

ಉತ್ತರ ಹಿಂದುಸ್ಥಾನ.

ಕೂಚ್ ಬಿಹಾರಿನ ಮಹಾರಾಜರ ಮಗಳು ಮಹಾರಾಜ ಕುಮಾರಿ ಪ್ರತಿಷಾ ಸುಂದರಿ ದೇವಿಯನ್ನು ಇಂಗ್ಲಾಂಡಿನ ಯಲ್. ಹೇನ್ರಿ ಮೆಂದರ್ ಎಂಬವರಿಗೆ ಕೊಟ್ಟು ಬ್ರಹ್ಮ ಸಮಾಜದ ವಿಧಿ ಪ್ರಕಾರ ಕಲ್ಕತ್ತೆಯಲ್ಲಿ ವಿವಾಹವಾಯಿತು. ವಿವಾಹಕ್ಕೆ ಗವರ್ನರರ ಧರ್ಮಪತ್ನಿ ಲೇಡಿ ಹಾರ್ಡಿಂಗ್, ಸ್ವೀಡೆನ್ ರಾಜಕುಮಾರನೂ, ರಾಜಕುಮಾರಿಯೂ, ಬಂಗಾಳದ ಲೆಫ್ಟೆನೆಂಟ ಗವರ್ನರ್ ಧೊರೆಗಳೂ ಹ್ಯಾಕೋರ್ಟ ಚೀಫ್ ಜಸ್ಟಿಸರು ಮೊದಲಾದವರು ಬಂದಿದ್ದರು.

ಗುಜರಾತು ದೇಶದಲ್ಲಿ ಕಠಿಣವಾದ ಬರಗಾಲ ಬಂದ ಕಾರಣ ೫೦೦ ಕುಟುಂಬಗಳಿಗೆ ರಕ್ಷಣೆ ಅಗತ್ಯ ಉಂಟೆಂತ ಸೆಂಟ್ರಲ್ ಫೆಮಿನ್ ಫಂಡಿನ ಜನರಲ್ ಸೆಕ್ರಿಟೆರಿ ಬರೆದ ಸಂಗತಿ ತಿಳಿದು ಪೂಣೆ ಪಟ್ಟಣದಿಂದ ಶ್ರೀಮತಿ ಅಂಗಪೂರ್ಣ ಬಾಲ್ ಆಷೇ, ಯಮುನಾಬಾಯಿ ಭಟ್, ಮತ್ತು ಶೀತಾಬಾಯಿ ದೂಬೇ ಎಂಬ ಮೂವರು ಸ್ತ್ರೀಯರು ರಕ್ಷಣೆ ಕಾರ್ಯನಿರ್ವಹಿಸುವರೆ ಒಪ್ಪಿಕೊಂಡರು. ಮಾಜಿ ಹ್ಯಾಕೋರ್ಟ ಜಡ್ಜರಾದ ಮಹಾದೇವ ಗೋವಿಂದರಾನಡೆಯವರ ವಿಧವೆ ರಾಮಬಾಯಿ ರಾನಡೇಸಾಹಿಬಾ ಸಹ ಈ ಮೂವರೊಡನೆ ಗುಜರಾತಿಗೆ ಹೋಗುತ್ತಾರೆ. ಈ ಉದ್ದೇಶ ರೂ. ೫೮೦೦ ಸೆಂಟ್ರಲ್ ಕಮಿಟಿಯವರು ಇವರಿಗೆ ಕೊಟ್ಟಿದ್ದಾರೆ. ಪೂನೆಯ ಈ ನಾಲ್ಕು ಸ್ತ್ರೀಯರು ಪರಸೇವೆ ಬಗ್ಯೆ ತಾವಾಗಿ ಮುಂದೆ ಬಂದ ಈ ದೃಷ್ಟಾಂತವು ಶ್ಲಾಘನೀಯವಾದದ್ದೂ ಇತರ ಸ್ತ್ರೀಯರು ಅನುಸರಿಸ ತಕ್ಕಂಥಾದ್ದೂ ಆಗಿರುತ್ತದೆಂತ ವರ್ತಮಾನ ಪತ್ರಗಳು ಇವರನ್ನು ಹೊಗಳುತ್ತವೆ.

ಮುಂಬಾಯಿಯ ವ್ಯಾಪಾರ ಸಂಘದ ವರುಷ್ಯಾಂತಿಕ ಸಭೆಯು ತಾ. ೨೧ರಲ್ಲು ಜರಗಿತು. ಈ ಸಭೆಗೆ ಬಹುಮಾನಪಟ್ಟ ಮೆ. ಸಿ. ಎಚ್. ಅರ್ಮಾಸ್ಟ್ರಾಂಗ್ ಎಂಬವರು ಅಧ್ಯಕ್ಷರಾಗಿದ್ದು ಕಾಲೋಚಿತವಾದ ಭಾಷಣ ಕೊಟ್ಟರು. ಈ ಸಂದರ್ಭದಲ್ಲಿ ಅವರು ಡಿಲ್ಲಿ ದರ್ಬಾರ್ ಕಾಲದಲ್ಲಿ ಮಾಡಿದ ಬದಲಾವಣೆಗಳು ಯುಕ್ತವಾದವುಗಳು, ಡಿಲ್ಲಿಯನ್ನು ಮುಖ್ಯ ಪಟ್ಟಣವಾಗಿ ಮಾಡಿದ್ದು ಬಹಳ ಒಳ್ಳೇದಾಯಿತು, ಆದರೆ ಡಿಲ್ಲಿಯು ಎಂದೂ ವ್ಯಾಪಾರದ ಕೇಂದ್ರಸ್ಥಾನವಾಗದು; ರೈಲ್ವೇ ಮೊದಲಾದವುಗಳ ಮೂಲಕ ದವಸಧಾನ್ಯಗಳನ್ನು ಸುಲಭವಾಗಿ ಇತರ ಸ್ಥಳಗಳಿಗೆ ಸಾಗಿಸುವ ಸ್ಥಳವಾಗ ಬಹುದಷ್ಟೆ. ಈ ಬದಲಾವಣೆಯಿಂದ ಮುಂಬಾಯಿಗೂ ಹಿಂದೂಸ್ಥಾನದ ಸರಕಾರಕ್ಕೂ ಸಮೀಪವಾದುದರಿಂದ ಮುಂಬಾಯಿಯ ವ್ಯಾಪಾರದ ಅಭಿವೃದ್ಧಿಯನ್ನು ಚಿಂತಿಸುವರೆ ಬಹಳ ಅನುಕೂಲವಾಯಿತು ಎಂಬಿತ್ಯಾದಿ ಹೇಳಿದರು.

ಇತ್ತಲಾಗೆ ಮಾರ್‌ವಂಚಿ ಮಹಾರಾಜರವರು ಬೇಟೆಗೆ ಹೋಗಿದ್ದಾಗ ಗುಂಡುತಾಗಿ ಅವಗಡ ಸಂಭವಿಸಿತು. ಅದೇ ಬೇನೆಯಿಂದ ಇವರು ತಾ. ೨೨ರಲ್ಲು ಕಲ್ಕತ್ತೆಯಲ್ಲಿ ಪರವಶ್ಯೈದಿದರು.

ಕಲ್ಕತ್ತೆಯ ಮುಸಲ್ಮಾನ ಬೋರ್ಡಿನ ಮೆಂಬರರಾಗಿದ್ದ ಲೆಫ್ಟನೆಂಟ್ ಕರ್ನೆಲ್ ಡಿ. ಸಿ. ಪಿಲೊಟರವರು ರಜೆ ಮೇಲೆ ಶೀಮೆಗೆ ತೆರಳುವುದರಿಂದ ಇವರ ಬದಲಿಗೆ ಸದರಿ ಬೋರ್ಡಿಗೆ ಕಾರ್ಮಿಖಯೇಲ್ ಪ್ರಭುಗಳು ಮೆಂಬರರಾಗಿ ಆರಿಸಲ್ಪಟ್ಟಿರುವರು.

ಹಿಂದೂಸ್ಥಾನದಲ್ಲಿ ಭೌತಿಕ ಮತ್ತು ರಸಾಯನ ಶಾಸ್ತ್ರಗಳನ್ನು ಊರ್ಜಿತ ಸ್ಥಿತಿಗೆ ತರುವುದಕ್ಕೋಸ್ಕರ ಒಂದು ಭಾರ

ತೇಯ ಸಮಿತಿಯನ್ನು ಏರ್ಪಡಿಸಬೇಕೆಂದು ಲಕ್ನೌ ಕಾಲೇಜಿನ ಮೆ| ಪಿ. ಎಸ್. ಮೆಕ್‌ಮೊಹಾನರವರೂ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನ ಮೆ| ಜೆ. ಎಲ್. ಸಿಮ್ಸೋನರವರೂ ಆಲೋಚಿಸಿರುವರಲ್ಲದೆ ಈ ವಿದ್ಯೆಯನ್ನು ಅಭಿವೃದ್ಧಿಗೆ ತರುವುದರಿಂದ ದೇಶಕ್ಕುಂಟಾಗುವ ಅಭ್ಯುದಯವನ್ನೂ ಗ್ರೇಟ್ ಬ್ರಿಟಾನಿನಲ್ಲಿರುವ ಇಂಥಾ ಸಂಘದಿಂದ ಉಂಟಾಗುತ್ತಿರುವ ಪ್ರಯೋಜನಗಳನ್ನೂ ಸೂಚಿಸಿ ಇಲ್ಲಿಯೂ ಈ ಸಂಘವನ್ನು ಏರ್ಪಡಿಸುವರೆ ಸಹಾಯ ಮಾಡಬೇಕೆಂದು ವಿದ್ಯಾವಂತ ಭ್ರಾಂತೇಯರನ್ನು ಕೇಳಿಕೊಂಡಿರುವರು.

~~~~~~

ನೊರ್ಥ್ ವೆಸ್ಟರ್ನ್ ರೈಲ್ವೇ ಕೆಲಸದವರು ಮುಷ್ಕರ ಹಿಡಿದು ಪುನಃ ತಾತ್ಕಾಲಕ್ಕೆ ಕೆಲಸಕ್ಕೆ ಹಾಜರಾಗಿದ್ದಾರೆಂದು ತಿಳಿಸಿತ್ತಷ್ಟೆ. ತಮ್ಮ ಹಾಲಹವಾಲೆಗಳನ್ನು ಮಾರ್ಚಿ ತಾರೀಕು ಒಂದರ ಒಳಗೆ ಇತ್ಯರ್ಥಮಾಡದಿದ್ದರೆ ಪುನಃ ಮುಷ್ಕರ ಹಿಡಿಯುವೆವೆಂದು ಮೇಲಾಫಿಸರರಿಗೆ ತಿಳಿಯಪಡಿಸಿದ್ದಾರೆ.

~~~~~~

ಅಲ್ಲಹಾಬಾದಿನ ಸಿವಿಲ್‌ಸ್ಟೇಶನ್ ವಾರ್ಡಿನ ಮುನ್ಸಿಪಾಲ್ ಕಮಿಷನರ ಚುನಾವಣೆಯಲ್ಲಿ ಈ ವರುಷ ಹ್ಯಾಕೋರ್ಟು ವಕೀಲರಾದ ಪಂಡಿತ್ ಮೋಹನ್ ಲಾಲ್ ನೇರು ಎಂಬವರ ಪತ್ನಿಯವರು ಉಮೇದ್ವಾರರಾಗಿ ನಿಂತಿದ್ದರು.

~~~~~~

ಮುಂಬಾಯಿಯ ಕೋಲೋಬದಲ್ಲಿ ಒಂದರಮೇಲೊಂದು ಸಾವಿರಾರು ಹತ್ತೀ ಮೂಟೆಗಳನ್ನು ಸುಮಾರು ೨೦-೩೦ ಅಡಿ ಎತ್ತರಕ್ಕೆ ಒಟ್ಟು ಹಾಕಿದ್ದರು. ಈ ಹತ್ತಿ ಮೂಟೆಗಳ ಮಧ್ಯೆ ಅಕಸ್ಮತ್ತಾಗಿ ಬೆಂಕಿ ಉಂಟಾಗಿ ಫಕ್ಕನೇ ಎಲ್ಲಾ ಹತ್ತಿ ಅಂದರೆ ೩೦,೦೦೦ ಮೂಟೆಗಳು ಸುಟ್ಟು ಹೋಯಿತು. ಉಂಟಾದ ನಷ್ಟ ನಾಲ್ಕು ಲಕ್ಷ ರೂಪಾಯಿ ಎಂದು ಅಂದಾಜಾಗಿಯದೆ. ಈ ಹತ್ತಿಯು ಪ್ರಿಮಿಜಿ ಹಿರ್ಜಿಖಿಮಿಜಿ ವಿಗ್ರಾಮ್ ಮತ್ತು ಮಿತೂಸಿ ಬುಸಾನ್ ಕೈಸ ಎಂಬ ಒಂದು ಜಾಪಾನ್ ವ್ಯಾಪಾರ ಕಂಪೆನಿಗೆ ಸೇರಿದ್ದಾಗಿದೆ. ಈ ವರುಷ ಹತ್ತೀ ಬೆಳೆಯು ಹಾಳಾದ್ದರಿಂದಲೂ ಇಂಥಾ ದೊಡ್ಡ ನಷ್ಟ ಉಂಟಾದ್ದರಿಂದಲೂ ಹತ್ತಿಗೆ ಬೆಲೆ ಏರಲಿಕ್ಕೆ ಸಾಕೆಂತ ಊಹಿಸಲ್ಪಟ್ಟದೆ.

~~~~~~

ಹಿಂದೂಸ್ಥಾನದ ಮುಖ್ಯ ಸೈನ್ಯಾಧಿಪತಿಯಾಗಿರುವ ಜನರಲ್ ಸರ್. ಒ. ಮೂರ್ ಕ್ರೇಯರವರು ಬೇಗನೇ ಕೆಲಸಕ್ಕೆ ರಾಜಿ ಕೊಡಲಿಕ್ಕಿದ್ಧಾರೆಂದೂ ಇವರ ಬದಲಿಗೆ ಅಲ್ಡರ್‌ಶೊಟ್ ಎಂಬಲ್ಲಿ ಸೇನಾಧಿಪತಿಯಾಗಿದ್ದು ಈ ತಿಂಗಳಾಂತ್ಯದಲ್ಲಿ ಕೆಲಸದಿಂದ ನಿವೃತ್ತರಾಗಲಿಕ್ಕಿರುವ ಲೆಪ್ಟನೆಂಟ್ ಜನರಲ್ ಸರ್ ಹೊರೇಸ್ ಸ್ಮಿತ್ ಡೋರ್ರೈನ್ ಎಂಬವರು ನೇಮಿಸಲ್ಪಡುವರೆಂದೂ ಲಂಡನಿನ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~~~

ಕಲ್ಕತ್ತೆಯಲ್ಲಿ ಜರಗಲಿಕ್ಕಿರುವ ನ್ಯಾಯವಿಧಾಯಕ ಸಭೆಯ ಮುಂದೆ ಬಹುಮಾನಪಟ್ಟ ಮೆ. ಗೋಖಲೆಯವರು ಆಯಾ ಜಿಲ್ಲೆಯ ಕೌನ್ಸಿಲ್ ಆಡಳಿತೆಯು ಜನರಿಗೆ ಸಂಸ್ಪರ್ಶವಾಗುವ ಹಾಗೆ ಮಾಡುವುದು ಏಹಿತವೆಂದೂ ಈ ಬಗ್ಯೆ ಪ್ರತಿ ಒಂದು ಜಿಲ್ಲೆಯಲ್ಲಿ ಕೌನ್ಸಿಲರು ಕೂಡಿದ ಡಿಸ್ಟ್ರಿಕ್ಟ್ ಕೌನ್ಸಿಲನ್ನು ನಿರ್ಮಿಸಿ ಎಲ್ಲಾ ವಿಶೇಷ ಸಂಗತಿಗಳಲ್ಲಿ ಕಲೆಕ್ಟರರು ಈ ಕೌನ್ಸಿಲಿನ ಆಲೋಚನೆಯನ್ನು ಕೇಳಿ ವರ್ತಿಸುವ ಹಾಗೆ ಮಾಡಬೇಕೆಂಬ ಒಂದು ಮಸೂದೆಯನ್ನು ಇಡುವರು. ಕೌನ್ಸಿಲರಲ್ಲಿ ಕೆಲವರನ್ನು ಪ್ರಜಾ ಜನರೇ ಆರಿಸುವದು, ಕೆಲವರನ್ನು ಸರಕಾರದವರು ನೇಮಿಸುವದೆಂಬ ಪ್ರಸ್ತಾಪವೂ ಈ ಮಸೂದೆಯಲ್ಲಿ ಕೂಡಿಯದೆ.

ಹಿಂದೂಸ್ಥಾನದ ಪೋಲೀಸ್ ಆಡಳಿತೆಯನ್ನು ಪರಿಶೀಲಿಸುವರೆಯೂ ಕ್ರಿಮಿನಲ್ ಮೊಕದಮೆಗಳಲ್ಲಿ ಕೈದಿಗಳನ್ನು ಅರಿಕೆ ಮಾಡಿಸುವರೆ ಇರುವ ಕಾಯಿದೆಯನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಉಂಟೋ ಏನೆಂಬದನ್ನು ತಿಳಕೊಳ್ಳುವರೆಯೂ ದೇಶಿಯರೂ ವಿದೇಶಿಯರೂ ಕೂಡಿದ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂಬ ಮಸೂದೆಯನ್ನು ಬಹುಮಾನಪಟ್ಟ ಮೆ. ಬಾಸುರವರೂ, ಹಿಂದೂಸ್ಥಾನದ ಕೂಲಿಯಾಳುಗಳು ಕರಾರು ಬರಿಸಿಕೊಟ್ಟು ಬ್ರಿಟಿಷ್ ವಸಾಹತಿಗಳಿಗೆ ಕೆಲಸಕ್ಕೆ ಹೋಗುವದನ್ನು ಮನ್ನಾ ಪಡಿಸುವ ಕಾನೂನನ್ನು ಜಾರಿಗೆ ತರಬೇಕೆಂಬ ಮಸೂದೆಯನ್ನು ಮೆ. ಗೋಖಲೆಯವರೂ ನ್ಯಾಯವಿಧಾಯಕ ಸಭೆಯ ಮುಂದಿಡುವರು.

~~~~~~

ಅಲ್ಲಹಾಬಾದ್ ಹ್ಯಾಕೋರ್ಟಿನ ಜಸ್ಟಿಸರಾದ ಕರಮಾಥುಸ್ಸೇನ್‌ರವರು ಸ್ತ್ರೀ ವಿದ್ಯಾಭ್ಯಾಸ ವರ್ಧನೆಗಾಗಿ ೧,೮೦,೦೦೦ ರೂಪಾಯಿ ಉಡಿಗೆರೆ ಮಾಡಿರುವರು.

~~~~~~

ಹಿಂದೂಸ್ಥಾನವನ್ನು ಸಂದರ್ಶಿಸಲು ಬಂದಿರುವ ಸ್ವಿಡೆನ್ ರಾಜಕುಮಾರರು ತಾ. ೨೬ರಲ್ಲು ಬೆನಾರಸಿಗೆ ಚಿತ್ತೈಸಿರುವರು.

~~~~~~

ಹಿಂದೂ ಜೋತಿಷ್ಯ ಶಾಸ್ತ್ರದಲ್ಲಿ ನಿಪುಣರಾಗಿದ್ದು ಈ ಸಂಬಂಧ ಕೆಲವು ಗ್ರಂಥಗಳನ್ನು ರಚಿಸಿ ಈಗ ಮುದೀ ಪ್ರಾಯದಲ್ಲಿಯೂ ಬಡತನದಲ್ಲಿಯೂ ಇರುವ ಪಂಡಿತ ವಿಶ್ವಾಂಬರ ಜೋತಿರ್ಷಾರ್ಣ ಎಂಬವರಿಗೆ ತಿಂಗಳು ಒಂದಕ್ಕೆ ೨೫ ರೂಪಾಯಿ ಅಶನಾರ್ಥ ಕೊಡಬೇಕೆಂದು ಸ್ಟೇಟ್ ಸೆಕ್ರಿಟರಿಯವರು ಹುಕುಂ ಮಾಡಿರುತ್ತಾರೆ.

~~~~~~

ದಯಾನಂದ ಎಂಗ್ಲೋ ವೇದಿಕ್ ಮೆಗೆಜಿನ್ ಎಂಬ ಆರ್ಯಾ ಸಮಾಜದ ಮಾಸಿಕ ಗ್ರಂಥದಲ್ಲಿ—ಜೆ. ಪಿ. ಸವಂತ ಎಂಬವರು ಹೇಳುವ ಅಭಿಪ್ರಾಯವೇನಂದರೆ:—ಹೊಲೆಯರ ಸ್ಥಿತಿ ಉದ್ಧರಿಸುವಗೋಸ್ಕರ ಸ್ಥಾಪಿಸೋಣಾದ ನಿರಾಶ್ರಿತ ಜನಸಹಾಯಕ ಸಂಘದವರು ಹೊಲೆಯರನ್ನು ಹಿಂದೂ ಜನರು ಮುಟ್ಟುವ ಹಾಗೆ ಮಾಡಬೇಕೆಂಬದನ್ನು ಲಕ್ಷದಲ್ಲಿಟ್ಟುಕೊಳ್ಳಬೇಕು. ಹೊಲೆಯರು ಬಹಳ ಮಲೀನ ಜನರು ಖರೆ. ಪರಂತು ನಾಯಿ ಬೆಕ್ಕು ಇವುಗಳಿಗಿಂತಲೂ ಇವರು ಸ್ಪರ್ಶಕ್ಕೆ ಅಪಾತ್ರರೆಂತ ನಾವು ತಿಳಕೊಳ್ಳುವುದೂ, ಕ್ರೈಸ್ತ ಯಾ ಮಹಮ್ಮದೀಯರಾಗುತ್ತಲೇ ಅವರು ಸ್ಪರ್ಶಕ್ಕೆ ಪಾತ್ರರೆಂತ ಭಾವಿಸ ನಾವು ಅವರನ್ನು ಮುಟ್ಟುವುದೂ ನಮ್ಮ ಮಹಾ ಮೂರ್ಖತನವು—ಹೊಲೆಯರು ನಮ್ಮ ಸ್ವದೇಶ ಬಂಧುಗಳೆಂತ ನಾವು ಭಾವಿಸಿ ನಾವು ಅವರನ್ನು ಮುಟ್ಟಿದರೆ ಅವರ ಏಳಿಗೆ ಸಾಧ್ಯವಾಗಿ ದೇಶೋನ್ನತಿ ಲಭಿಸುವುದು. ಅವರು ಸ್ಪರ್ಶಕ್ಕೆ ಅಪಾತ್ರರೆಂತ ಭಾವಿಸಿ ನಾವು ನಡಕೊಳ್ಳುವುದು ಅಪಘಾತದ ಕಾರ್ಯವು."

~~~~~~

ಕಲ್ಕತ್ತೆಯಲ್ಲಿ ಜರಗಿದ ಶ್ರೇಷ್ಠನ್ಯಾಯವಿಧಾಯಕ ಸಭೆಯಲ್ಲಿ ಬಹುಮಾನಪಟ್ಟ ಮೆ. ಬಾಸುರವರು ಇಂಡಿಯನ್ ಎಡ್ಯುಕೇಶನಲ್ ಸರ್ವಿಸಿನಲ್ಲಿ ಇರುವ ಹುದ್ದೆದಾರರ ಸಂಖ್ಯೆ ಎಷ್ಟೆಂಬದಾಗಿ ಕೇಳಿದರು. ಇದಕ್ಕೆ ಉತ್ತರವಾಗಿ ಮೆ. ಬಟ್ಲರರವರು ಇಂಥಾ ಹುದ್ದೆದಾರರ ಒಟ್ಟು ಸಂಖ್ಯೆ ೨೧೧; ಈ ಪೈಕಿ ಯುರೋಪಿಯಾನರು ೨೦೮; ಮತ್ತು ಭಾರತೇಯರು ೩; ೧೮೯೬ನೇ ಇಸವಿಯಿಂದ ಈ ಕೆಲಸಕ್ಕೆ ನಿಯಮಿಸಲ್ಪಟ್ಟ ಯುರೋಪಿಯಾನರು ೨೧೦; ಭಾರತೇಯರು ಎರಡು. ೧೮೯೬ನೇ ವರ್ಷದಿಂದ ಇಬ್ಬರು ದೇಶೀಯರು ಮಾತ್ರ ಪ್ರೊವಿನ್ಸಲ್ ವಿದ್ಯಾ ಇಲಾಖೆಯಿಂದ ಇಂಡಿಯನ್ ಎಡ್ಯುಕೇಶನಲ್ ಸರ್ವಿಸಿಗೆ ಬಡ್ತಿಹೊಂದಿರುವರು ಎಂದು ಉತ್ತರವಿತ್ತರು.

~~~~~~

ಕಳದ ಬುಧವಾರ ಲಾಹೋರಿನ ಹೇಕ್ ಖಾನ್ ಎಂಬ ಒಬ್ಬ ಪಟಾನನು ಮಧ್ಯರಾತ್ರಿ ಸ್ಥಳೀಕ ರೆವೆರೆಂಡ್ ಜೆ. ಎ. ವೂಡರವರ ಮನೆಗೆ ಹೊಕ್ಕು ವೂಡರವರ ಪತ್ನಿಯವರ ಮೇಲೆ ಬಿದ್ದನು. ಅವಳು ಎಚ್ಚತ್ತು ಅವನೊಡನೆ ಹೋರಾಡಿ ಸಹಾಯಕ್ಕಾಗಿ ಕೂಗಿದಳು. ಪೋಲೀಸಿನವರು ಘಾತುಕನನ್ನು ಕೈದು ಮಾಡಿದರು. ರೆವೆರೆಂಡ್ ವೂಡರವರು ಆ ರಾತ್ರಿ ಅಲ್ಲಹಾಬಾದಿಗೆ ಹೋಗಿದ್ದರು.

~~~~~~

ತಾ. ೧೯ರಲ್ಲು ಅಲ್ಲಹಾಬಾದಿನಲ್ಲಿ ಹಿಂದೂಸ್ಥಾನದ ಆಯುರ್ವೇದ ವೈದೀಕ ಮಹಾ ಸಭೆಯು ಜರಗಿತು. ಈ ಸಭೆಯಲ್ಲಿ ಮುಂಬಾಯಿ ಸರಕಾರದ ಕೌನ್ಸಿಲಿನ ಮುಂದಿರುವ ಮುಂಬಾಯಿಯ ಮೆಡಿಕಲ್ ರಿಜಿಸ್ಟ್ರೇಶನ್ ಬಿಲ್ ಎಂಬ ಮಸೂದೆಯನ್ನು ಜಾರಿಗೆ ತರುವುದು ನಿಷ್ಪ್ರಯೋಜನ; ಇದು ಸ್ವತಂತ್ರವನ್ನು ಕಳೆದು ಬಿಡುವಂಥಾದ್ದೂ ಈ ತನಕ ಒಳ್ಳೇ ರೀತಿಯಿಂದಲೂ ಸಾಮರ್ಥ್ಯದಿಂದಲೂ ನಡಕೊಂಡು ಬಂದ ಆಯುರ್ವೇದಿಕ್ ಮತ್ತು ಯೂನಾನಿ ವೈದೀಕರ ಗೌರವಕ್ಕೆ ಕುಂದು ತರುವಂಥಾದ್ದಾಗಿಯೂ ಇದೆ. ಇದು ಜಾರಿಗೆ ಬಂದರೆ ಸಮರ್ಥರಾಗಿಯೂ ವಿದ್ಯಾವಂತರಾಗಿಯೂ ಇರುವ ಆಯುರ್ವೇದ ವೈದ್ಯರಿಗೆ ತಮ್ಮ ವೃತ್ತಿಯನ್ನು ನಡಿಸಲು ಕೈಕಟ್ಟಿದಂಥಾಗುವದುದರಿಂದ ಸರಕಾರದವರು ಈ ಮಸೂದೆಯನ್ನು ಕಾನೂನಾಗಿ ಜಾರಿಗೆ ತರಕೂಡದೆಂಬದಾಗಿ ಮುಬಾಯಿ ಗವರ್ನರರಿಗೆ ವಿಜ್ಞಾಪನೆಮಾಡಿಕೊಳ್ಳಬೇಕೆಂಬದಾಗಿ ಆಲೋಚಿಸಲಾಯಿತಲ್ಲದೆ ಮುಂಬಾಯಿ ಸರಕಾರದವರು ಕೆಲವು ಕಾರಣಗಳಿಂದ ಈ ಕಾನೂನ್ನು ಜಾರಿಗೆ ತರಲು ನಿಷ್ಕರ್ಷಿಸಿರುತ್ತಾದ್ದರಿಂದ ಇದರಲ್ಲಿ ಕೆಲವಂಶವನ್ನಾದರೂ ರದ್ದುಪಡಿಸಿ ಆಯುರ್ವೇದ ಮತ್ತು ಯುನಾನಿ ಔಷಧ ಪದ್ಧತಿಗೆ ಹಿತವಾದ ಕೆಲವು ಅಂಶವನ್ನು ಕೂಡಿಸಬೇಕೆಂತಲೂ ಮುಂಬಾಯಿ ವೈದ್ಯ ಶಾಲೆಗಳಲ್ಲಿ ಆಯುರ್ವೇದ ಪದ್ಧತಿಗಳನ್ನು ಕಲಿಸಿಕೊಟ್ಟು ಇದರಲ್ಲಿ ಪಾಸಾದವರಿಗೆ ಡಿಗ್ರಿ ಮೊದಲಾದವುಗಳನ್ನು ಕೊಡುವರೆ ಏರ್ಪಾಡು ಮಾಡಬೇಕೆಂತಲೂ ಈ ವಿಜ್ಞಾಪನಾ ಪತ್ರಿಕೆಯಲ್ಲಿ ಸೂಚಿಸಬೇಕೆಂತ ಕೂಡಿದ ಸಭೆಯಲ್ಲಿ ನಿಷ್ಕರ್ಷಿಸಲಾಯಿತು.

~~~~~~

ಮೃಗ ಪಶ್ವಾದಿಗಳನ್ನು ಕ್ರೂರತ್ವವಾಗಿ ನಡಿಸುವ ಪದ್ಧತಿಯ ನಿವಾರಾಣಾರ್ಥವಾಗಿ ಲಾಹೋರಿನಲ್ಲಿ ಇಂಥಾ ಒಂದು ಉಪಸಂಘವು ಸ್ಥಾಪಿಸಲ್ಪಟ್ಟಿರುವದು.

~~~~~~

ತಾ. ೨೦ರಲ್ಲು ಕರ್ಪುತಾಲದಲ್ಲಿ ರಾಜರಾಮಮೊಹಾನ್ ರಾಯಿಯವರ ಮೊಮ್ಮಗಳೂ ಕರ್ಪುತಾಲ ಮಹಾರಾಜರ ಖಾಸಗಿ ಸೆಕ್ರಟರಿ ಕೆಪ್ಟನ್ ಆರ್. ಆರ್. ಬೆನರ್ಜಿಯವರ ಸಹೋದರಿಯೂ ಆಗಿರುವ ಮಿಸ್ ಸಾರಲಾತದೇವಿಯವರಿಗೂ ಕಾಶ್ಮೀರದ ವೈದ್ಯ ಇಲಾಖೆಯ ಮುಖ್ಯ ಹುದ್ದೆದಾರರಾಗಿರುವ ಡಾಕ್ಟರ್ ಮೋಹನ್‌ಲಾಲ್ ದಿಂಗ ಎಂಬವರಿಗೂ ಸಿಕ್ ಮತದ ವಿಧಿಗನುಸಾರವಾಗಿ ವಿವಾಹ ನಡೆಯಿತು. ವಿವಾಹ ಸಂಸ್ಕಾರಕ್ಕೆ ಕರ್ಪುತಾಲ ಮಹಾರಾಣಿಯವರೂ ಹಾಜರಿದ್ದರಲ್ಲದೆ ಸಾಯಂಕಾಲ ಮಹಾರಾಣಿಯವರು ಮದುಮಕ್ಕಳನ್ನು ಅರಮನೆಗೆ ಆಮಂತ್ರಿಸಿ ಉಪಚರಿಸಿದರು. ಮದುಮಗಳ ಮತ್ತು ಮದುಮಗನ ಜಾತಿಯು ಬೇರೆಬೇರೆಯಾಗಿರುವುದರಿಂದ ಈ ವಿವಾಹದಿಂದ ಎಲ್ಲರಿಗೂ ಆಶ್ಚರ್ಯ ಉಂಟಾಗಿದೆ.

~~~~~~

ಡಿಲ್ಲಿ ದರ್ಬಾರಿನಲ್ಲಿ ವಿದ್ಯಾಭ್ಯಾಸಕ್ಕಾಗಿ ವಾಗ್ದಾನ ಮಾಡಲ್ಪಟ್ಟ ೫೦ ಲಕ್ಷ ರೂಪಾಯಿಯಲ್ಲಿ ೩೦ ಲಕ್ಷ ರೂಪಾಯಿ ಹುಡುಗರ ಪ್ರಾೖಮರಿ ವಿದ್ಯಾಭ್ಯಾಸಕ್ಕಾಗಿಯೂ ೫ ಲಕ್ಷ ರೂಪ್ಯಾ ಹುಡುಗಿಯರ ವಿದ್ಯಾಭ್ಯಾಸಕ್ಕಾಗಿಯೂ, ರೂ. ೫ ಲಕ್ಷ ವಿದ್ಯಾರ್ಥಿಭವನಗಳಿಗಾಗಿಯೂ, ರೂ. ೨ ಲಕ್ಷ ಕಲಾಕೌಶಲ್ಯ ವಿದ್ಯಾಭ್ಯಾಸಕ್ಕಾಗಿಯೂ, ರೂ. ೩ ಲಕ್ಷ ಯುರೋಪಿಯರ ಶಾಲೆಗಳಿಗಾಗಿಯೂ ಹಂಚಲ್ಪಡುವುದೆಂದು ತಿಳಿದು ಬರುತ್ತದೆ. ಇವೆಲ್ಲವನ್ನು ಕಳದು ಉಳಿದ ೫ ಲಕ್ಷ ರೂಪಾಯಿ ಯಾವ ಉದ್ದೇಶಕ್ಕಾಗಿ ಪ್ರಯೋಗಿಸಲ್ಪಡುವುದೆಂದು ತಿಳಿದು ಬರಲಿಲ್ಲ.

~~~~~~

ದಕ್ಷಿಣ ಹಿಂದೂಸ್ಥಾನ.

~~~~~~

ರಾವು ಬಹದ್ದೂರು ಪಿ. ಪಿ. ನ್ಯಾಡುಗುರು ಎಂಬವರು ನೊರ್ಧರ್ನ್‌ರೇಂಜಿನ ಪೋಲೀಸ್ ಡ್ಯುಪಿಟಿ ಕಮಿಷನರಾಗಿಯೂ ರಾವ್ ಸಾಹೇಬ್ ಎಸ್. ಬಿ. ಪಿಳ್ಳೆಯವರು ಅಸಿಸ್ಟಾಂಟ್ ಕಮಿಶನರಾಗಿಯೂ ನೇಮಿಸಲ್ಪಟ್ಟಿರುವರು. ನಮ್ಮ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳು ಭಾರತೇಯರಾದ ಇವರನ್ನು ಈ ದೊಡ್ಡ ಹುದ್ದೆಗೆ ನೇಮಿಸಿ ಪುನಃ ಪ್ರಜಾಜನರ ಹೆಚ್ಚಿನ ಕೃತಜ್ಞತೆಯನ್ನು ಗಳಿಸಿಕೊಂಡರು.

~~~~~~

ತಾ. ೨೧ರಲ್ಲು ಅಂಡರ್ಸನ್ ಸಭಾಸದನದಲ್ಲಿ ಕನ್ನಡ ಎಸೋಪಿಯೇಶನ್ ಎಂಬ ಸಂಘದ ಸಭೆಯು ಕೂಡಿತು. ಈ ಸಭೆಗೆ ಆಯಾ ಕಾಲೇಜುಗಳಿಂದ ನೂರಾರು ವಿದ್ಯಾರ್ಥಿಗಳೂ ಕನ್ನಡವನ್ನರಿತ ಮಾನ್ಯ ಗೃಹಸ್ಥರೂ ಕೂಡಿ ಬಂದಿದ್ದರು. ಸಭೆಗೆ ದಿವಾನ್‌ಬಹದ್ದೂರ್ ಕೆ. ನಾರಾಯಣರಾವ್‌ರವರು ಅಧ್ಯಕ್ಷರಾಗಿದ್ದರು. ಮದ್ರಾಸ್ ಸರಕಾರದ ಟ್ರಾನ್ಸ್‌ಲೇಟರರಾದ ಮೆ| ಬಿ. ರಾಮರಾವ್ ಎಮ್. ಎ. ಎಲ್. ಎಲ್. ಬಿ. ರವರು ಈ ಸಂದರ್ಭದಲ್ಲಿ ಅರ್ಥಗರ್ಭಿತವಾದ ಚಲೋ ಭಾಷಣ ಕೊಟ್ಟು 'ಕರ್ನಾಟಕ' ಎಂಬ ಶಬ್ದದ ಉದ್ಭವವನ್ನು ಕುರಿತು ತಿಳಿಯಪಡಿಸಿದರಲ್ಲದೆ ಕನ್ನಡ ಗ್ರಂಥಗಳನ್ನು ಅಭ್ಯಾಸಿಸುವ ಅವಶ್ಯಕತೆ, ವಿಶ್ವವಿದ್ಯಾ ಕಲಾಶಾಲೆಗಳಲ್ಲಿ ಕನ್ನಡಕ್ಕೆ ಇರುವ ಸ್ಥಾನ, ಕನ್ನಡ ವಿದ್ಯಾರ್ಥಿಗಳಿಗಿರುವ ಕನ್ನಡ ಭಾಷೆಯ ಅಜ್ಞಾನ ಇತ್ಯಾದಿಗಳನ್ನು ಕುರಿತು ಸುಮಾರು ಒಂದು ತಾಸು ತನಕ ಮಾತಾಡಿದರು. ನಂತರ ಸಂಘದ ಕಾರ್ಯದರ್ಶಿಯವರು ಮದ್ರಾಸ್ ಸಂಸ್ಥಾನದಲ್ಲಿ ಇಂಥಾ ಸಂಘಗಳ ಅವಶ್ಯಕತೆ, ಈ ಸಂಘದ ಉದ್ದೇಶ, ಇತರ ಕಾಲೇಜುಗಳ ವಿದ್ಯಾರ್ಥಿಗಳೂ ಈ ಸಂಘಕ್ಕೆ ಸೇರಿಕೊಳ್ಳಬೇಕೆಂಬಿತ್ಯಾದಿ ಪ್ರಸ್ತಾಪವನ್ನು ಸಭೆಯ ಮುಂದಿಟ್ಟರಲ್ಲದೆ ಕನ್ನಡವನ್ನರಿತ ಗೃಹಸ್ಥರು ಈ ಸಂಘಕ್ಕೆ ಸಹಾಯಮಾಡಿ ಒಂದು ಕನ್ನಡ ಪುಸ್ತಕ ಭಂಡಾರವನ್ನು ಏರ್ಪಡಿಸುವರೆಯೂ ಪ್ರತಿ ವರುಷ ಕನ್ನಡ ಪ್ರಬಂಧಗಳ ಮೇಲಾಟವನ್ನು ನಡಿಸುವರೆಯೂ ತಂತಮ್ಮ ಉದ್ಧಾರಾಶ್ರಯಗಳನ್ನೀಯಬೇಕೆಂದು ಸಭಿಕರನ್ನು ವಿಜ್ಞಾಪಿಸಿಕೊಂಡರು.

~~~~~~

ಪ್ರಾಕೃತಿಕ ಶಕ್ತಿಯಲ್ಲಿ ನಾಗರೀಕ ಲೋಕದಲ್ಲೆಲ್ಲಾ ಅಗ್ರಗಣ್ಯನೆಂದೆನ್ನಿಸಿಕೊಂಡಿರುವ ಪ್ರೊಫೆಸರ್ ರಾಮಮೂರ್ತಿಯವರು ತಾ. ೨೦ರಲ್ಲು ಬೆಂಗಳೂರಿಗೆ ಬಂದು ತನ್ನ ಸಾಮರ್ಥ್ಯವನ್ನು ತೋರ್ಪಡಿಸುತ್ತಿರುವರು. ತಾ. ೨೨ರಲ್ಲು ಇವರು ೧೪ ಕುದುರೆ ಶಕ್ತಿಯುಳ್ಳ ಒಂದು ಮೋಟೋರ್ ಬಂಡಿಯನ್ನು ತನ್ನ ಎದೆ ಮೇಲೆ ದಾಟಿಸುತ್ತಿರುವಾಗ ಅಕಸ್ಮತ್ತಾಗಿ ಬಂಡಿಯ ಹಿಂದಿನ ಚಕ್ರವು ಇವರ ಕುತ್ತಿಗೆಯನ್ನು ದಾಟಿ ಹೋಗಲಿಕ್ಕಿತ್ತು. ಆದರೆ ರಥಿಕನು ಕೂಡಲೇ ತಿರುಗಿಸಿ ಬಿಟ್ಟನು. ರಾಮ ಮೂರ್ತಿಯವರಿಗೆ ಕಣ್ಣಿನ ಕೆಳಗಡೆ ಘಾಯವಾಯಿತು. ಈಗ ಪೂರ್ಣ ಸೌಖ್ಯ ಹೊಂದಿರುವರು.

~~~~~~

೧೯೧೧-೧೯೧೨ ವರುಷಗಳಲ್ಲಿ ಅಕ್ಕಿ ಬೆಳೆಯಿಸಲ್ಪಡುವ ಹಳ್ಳಿಗಳಲ್ಲಿ ೫,೯೮೭,೨೦೦ ಎಕ್ರೆ ಸ್ಥಳಗಳಲ್ಲಿ ಮಾತ್ರವೇ ಅಕ್ಕಿ ಬೆಳಿಸಲ್ಪಟ್ಟಿತು. ಈ ಲೆಕ್ಕದ ಪ್ರಕಾರ ಗತ ವರುಷಕ್ಕಿಂತಲೂ ಈ ವರುಷ ಅಕ್ಕಿ ಸಾಗುವಳಿಯ ಸ್ಥಳವು ಕಮ್ಮಿಯಾಗಿ ಕಂಡು ಬರುತ್ತದೆ. ಆದರೆ ಸರಾಸರಿ ಕಳದ ಐದು ವರುಷಕ್ಕಿಂತಲೂ ಈ ವರುಷ ತುಸ ಹೆಚ್ಚು; ಕಳದ ಹತ್ತು ವರುಷಕ್ಕಿಂತ ತುಸ ಕಮ್ಮಿ ಎಂದು ಹೇಳಬಹುದು. ಅನಂತಪುರ, ಕಡಪ್ಪೆ, ದಕ್ಷಿಣ ಆರ್ಕಾಡು, ಉತ್ತರ ಆರ್ಕಾಡು, ತಿರುಚಿನಾಪಳ್ಳಿ ಮೊದಲಾದ ಸ್ಥಳಗಳಲ್ಲಿ ತಕ್ಕ ಕಾಲದಲ್ಲಿ ಮಳೆ ಬಾರದೆ ಇದ್ದದ್ದೂ ನೀರಾವರಿ ಮೂಲಕವೂ ಬೇಕಾದಷ್ಟು ನೀರನ್ನು ಒದಗಿಸಿ ಕೊಡುವರೆ ಅನಾನುಕೂಲವಾದದ್ದೂ ಈ ವರುಷ ಭತ್ತದ ಪೈರು ಕಮ್ಮಿ ಸ್ಥಳಗಳಲ್ಲಿ ಬೆಳಿಯಿಸಲ್ಪಡಲಿಕ್ಕೆ ಕಾರಣ.

~~~~~~

ಕುನ್ನೂರಿನಲ್ಲಿ ಇತ್ತಲಾಗೆ ಒಬ್ಬ ಮಹಮ್ಮದೀ ಹೆಂಗಸನ್ನು ಖೂನಿ ಮಾಡಿದರೆಂಬದಾಗಿ ಪೋಲೀಸ್ ಇನ್ಸ್‌ಪೆಕ್ಟರರಾದ ವಾಲ್ಲೆಸ್‌ರವರು ಇಬ್ಬರು ಕೂಲಿಯವರನ್ನು ಹಿಡಿದಿರುವರು. ಇವರಲ್ಲಿ ಒಬ್ಬನು ಸತ್ಯಾರ್ಥವನ್ನು ಅರಿಕೆ ಮಾಡಿ ತಾನು ಆ ಹೆಂಗಸಿನಿಂದ ಸ್ವಲ್ಪ ಹಣ ಸಾಲ ತಕ್ಕೊಂಡಿದ್ದೆನು; ಆದರೆ ಸಾಲ ತೀರಿಸಲು ಅನಾನುಕೂಲವಾದ್ದರಿಂದ ಕಲ್ಲು ಹೊಡೆದು ಆಕೆಯನ್ನು ಕೊಂದುಬಿಟ್ಟೆನೆಂದು ಅರಿಕೆ ಮಾಡಿರುವನೆಂದು ತಿಳಿದು ಬರುತ್ತದೆ.

~~~~~~

ಮದ್ರಾಸಿನ ಎಡ್ವೊಕೆಟ್ ಜನರಲರಾಗಿ ನೇಮಿಸಲ್ಪಟ್ಟ ಮೆ| ಸಿ. ಎಫ್. ನೇಫಿಯರ್‌ರವರು ತಾ. ೨೬ರಲ್ಲು ಬಹುಮಾನಪಟ್ಟ ಶಿವಸ್ವಾಮಿ ಅಯ್ಯರರವರಿಂದ ಚಾರ್ಜು ತಕ್ಕೊಂಡಿರುವರು.

~~~~~~

ಸೆಂಟ್ರಲ್ ಎಗ್ರಿಕಲ್ಚರಲ್ ಕಮಿಟಿ ಎಂಬ ವ್ಯವಸಾಯ ಸಂಘದ ೨೧ನೇ ವಾರ್ಷಿಕೋತ್ಸವವು ತಾ. ೨೪ರಲ್ಲು ಜರಗಿತು. ಈ ಸಭೆಯಲ್ಲಿ ಸೆಂಟ್ರಲ್ ಮತ್ತು ಡಿಸ್ಟ್ರಿಕ್ಟ್ ವ್ಯವಸಾಯ ಸಂಘಗಳನ್ನು ವ್ಯವಸ್ಥಾಪನೆ ಮಾಡುವ ಬಗೆ ಹೇಗೆಂಬದನ್ನು ಪರ್ಯಾಲೋಚಿಸುವರೆ ಒಂದು ಉಪಸಂಘವು ಏರ್ಪಟ್ಟಿತಲ್ಲದೆ ವ್ಯವಸಾಯದಲ್ಲಿ ಜನರು ಹೆಚ್ಚಿನ ಮನಸ್ಸು ಕೊಟ್ಟು ಅದನ್ನು ಅಭಿವೃದ್ಧಿಗೆ ತರುವ ಹಾಗೆ ಪರಸ್ಪರ ಸಹಾಯಕ ಸಂಘಗಳ ಹಾಗೆ ಇದನ್ನೂ ನಡಿಸುವುದುತ್ತಮವೆಂಬ ಆಲೋಚನೆಯು ಸಭೆಯ ಮುಂದಿಡಲ್ಪಟ್ಟಿತು. ನೇಮಿಸಲ್ಪಟ್ಟ ಈ ಉಪಸಂಘದವರು ಎಲ್ಲವನ್ನು ವಿಚಾರಿಸಿ ವ್ಯವಸಾಯ ಸಂಘಗಳನ್ನು ಅಭಿವೃದ್ಧಿಗೆ ತರುವ ಉಪಾಯಗಳನ್ನು ಸೂಚಿಸುವ ವರದಿಯನ್ನು ಮಾಡಬೇಕಾಗುವದು.

~~~~~~

ಮದ್ರಾಸ್ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳವರು ತಾ. ೨೬ರಲ್ಲು ಮದ್ರಾಸಿನಲ್ಲಿರುವ ಇಂಡಿಯನ್ ಬೇಂಕಿಗೆ ಚಿತ್ತೈಸಿದರು. ಬಹುಮಾನಪಟ್ಟ ಆದಿನಾರಾಯಣಯ್ಯ, ಬಹುಮಾನಪಟ್ಟ ಗೋವಿಂದ ರಾಘವ ಅಯ್ಯರ್ ಮೊದಲಾದ ಬೇಂಕಿನ ಡಿರೆಕ್ಟರರುಗಳು ಪ್ರಭುಗಳವರನ್ನು ಸ್ವಾಗತಮಾಡಿಕೊಂಡು ಬೇಂಕಿನಲ್ಲಿರುವ ಎಲ್ಲಾ ಇಲಾಖೆಗಳನ್ನು ತೋರಿಸಿದರು. ಪ್ರಭುಗಳವರು ಎಲ್ಲವನ್ನು ನೋಡಿಕೊಂಡು ಬಹು ಆನಂದ ಪಟ್ಟರು.

~~~~~~

ಮದ್ರಾಸ್ ಕಾರ್ಯನಿರ್ವಾಹಕ ಸಭೆಗೆ ಹೊಸತಾಗಿ ನೇಮಿಸಲ್ಪಟ್ಟ ಬಹುಮಾನಪಟ್ಟ ಶಿವಸ್ವಾಮಿ ಅಯ್ಯರರವರು ತಾ. ೨೬ರಲ್ಲು ಕ್ರಮಪ್ರಕಾರ ಮರ್ಯಾದಿ ಪೂರ್ವಕವಾಗಿ ಕಾರ್ಯ ನಿರ್ವಾಹಕ ಸಭೆಯನ್ನು ಅಲಂಕರಿಸಿದರು. ಈ ತನಕ ಇವರನ್ನು ನೇಮಕ ಮಾಡಿದ ರಾಜಶಾಸನವು ಬಂದು ತಲಪದ್ದರಿಂದ ಸದ್ಯಾ ಇವರು ಹಂಗಾಮಿ ಮೆಂಬರರಾಗ ನೇಮಿಸಲ್ಪಟ್ಟಿರುವರು.

~~~~~~

ಮೆ| ಪಿ. ಸಿ. ಲೋಬೊರವರು ನೀಲಗಿರಿಯ ಸಬ್ ಜಡ್ಜರಾಗಿ ನೇಮಿಸಲ್ಪಟ್ಟಿರುವರು.

~~~~~~

ಮದ್ರಾಸ್ ಸರಕಾರಿ ವಕೀಲರಾಗಿದ್ದ ಮೆ| ನೇಫಿಯರರ ಬದಲಿಗೆ ಮದ್ರಾಸ್ ಹ್ಯಾಕೋರ್ಟು ವಕೀಲರಾದ ಮೆ| ಜೆ.ಎಲ್. ಲುಜಾರಿಯೋರವರು ಆಕ್ಟಿಂಗ್ ಸರಕಾರಿ ವಕೀಲರಾಗಿ ನೇಮಿಸಲ್ಪಟ್ಟಿರುವರು.

~~~~~~

ದಕ್ಷಿಣ ಕನ್ನಡ.

~~~~~~

ನೋಟಿಸು.

~~~~~~

ಪೂಜಾರಿಯಾಗಿ ಕೆಲಸ ಮಾಡಲಿಕ್ಕೆ ಒಬ್ಬ ಗೌಡಸಾರಸ್ವತ ಬ್ರಾಹ್ಮಣನು ಬೇಕಾಗಿರುವನು. ಪೂಜಾವೃತ್ತಿಗೆ ಬೇಕಾದ ಮಂತ್ರ ತಂತ್ರಗಳನ್ನು ಅರಿತವನಾಗಿರ ಬೇಕಲ್ಲದೆ ವೈದೀಕ ವೃತ್ತಿಯವನಾಗಿರ ಕೂಡದು. ಕಲಿತಿರುವಂಥಾ ಶಾಸ್ತ್ರ ಜ್ಞಾನ ಮಾಹಿತಿಯ ಮೇಲೆ ಮಾಸಾಶನವು ನಿರ್ಣಯಿಸಲ್ಪಡುವುದು. ಐದು ವರುಷಗಳ ವ್ಯಾದೆಯ ಬೊಂಡ್ ಯಾನೆ ಖಾತ್ರಿ ಪತ್ರವನ್ನು ಬರಕೊಡಲು ಸಿದ್ಧವಿರುವಂಥವನು ಬೇಕಾಗಿರುವನು.

ಉಮೇದ್ವಾರರಿಂದ ಅರ್ಜಿಗಳು ಪರಿಧಾವಿ ಸಂ|ರದ ಚೈತ್ರ ಶು. ೧೫ರ ವರೇಗೆ ಸ್ವೀಕರಿಸೋಣಾಗುವವು.

C/o The Manager,
Swadeshabhimani.

~~~~~~

ಪ್ರಕಟಣೆ.

~~~~~~

ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘದ ಹಣ ವಸೂಲಿ ವಗೈರೆ ಕೆಲಸದ ಬಗ್ಯೆ ಒಬ್ಬ ಬಿಲ್ ಕಲ್ಲೆಕ್ಟರ್ ಯಾನೆ ಊಳಿಗಿ ಅಗತ್ಯವಿದ್ದಾನೆ. ತಲಬು ರೂಪಾಯಿ 8 ಕೊಡೋಣಾಗುವುದು. ನೇಮಕ ಹೊಂದುವ ಉಮೇದ್ವಾರನು ಜಾಮಿನು ಬಗ್ಯೆ ರೂಪಾಯಿ 50 ಠೇವಣಾತಿ ಮಾಡಬೇಕಾಗುವುದು. ಈ ಐವಜಿನ ಮೇಲೆ ಶೇಕಡಾ 6ಲ್ಲಿ ಬಡ್ಡಿ ಕೊಡೋಣಾಗುವುದು. ಅಪೇಕ್ಷೆಯುಳ್ಳವರು ಕೆಳಗೆ ದಸ್ಕತು ಮಾಡಿದವರಿಗೆ ಬರಕೊಳ್ಳಬೇಕು.

ಮಂಗಳೂರು, 23-2-1912. ಕುದ್ಮುಲ ರಂಗರಾವ್.

~~~~~~

ವಿಜ್ಞಾಪನೆ.

~~~~~~

ಚಂದಾದಾರರಿಂದ ಚಂದಾಹಣವನ್ನು ವಸೂಲಿ ಮಾಡುವರೆಯೂ ಹೊಸ ಚಂದಾದಾರರನ್ನು ಸಂಗ್ರಹಿಸುವರೆಯೂ 'ಸ್ವದೇಶಾಭಿಮಾನಿ' ಆಫೀಸಿನಿಂದ ರಾ. ಕೆ. ವಾಸುದೇವ ಪೈಯವರನ್ನು ಬಂಟವಾಳ, ಪಾಣೆಮಂಗಳೂರು, ಪುತ್ತೂರು ಉಪ್ಪಿನಂಗಡಿ ಅತ್ತಕಡೆ ಕಳುಹಿಸಿರುವೆವು. ಇವರ ಕೂಡೆ ಚಂದಾದಾರರು ತಮ್ಮ ಮೇಲೆ ಬಾಕಿ ಇರುವ ಚಂದಾಹಣಗಳನ್ನು ವಸೂಲು ಕೊಡುವುದಲ್ಲದೆ ಹೊಸ ಚಂದಾದಾರರನ್ನು ಸಂಗ್ರಹಿಸುವುದರಲ್ಲಿ ಚಂದಾದಾರರೂ ಆಯಾ ಕಡೆಗಳ ಮಹಾ ಜನರೂ ತಮ್ಮ ಸಹಕಾರವನ್ನೀಯಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳುತ್ತೇವೆ.

ಮ್ಯಾನೇಜರ್
ಸ್ವದೇಶಾಭಿಮಾನಿ.

~~~~~~
~~~~~~

ಮಂಗಳೂರು. ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೭ ಪ್ಲೇಗು ಮರಣಗಳಿದ್ದವು.

ಕಾರ್ಕಳವನ್ನು ಮೂಡಬಿದ್ರೆಯ ಮುಖ್ಯ ಪಟ್ಟಣವಾಗಿ ಮಾಡಿದ್ದಾಗಿಯೂ ಮಾರ್ಚಿ ತಾ. ೧ರಿಂದ ಎಲ್ಲಾ ಆಫೀಸುಗಳು ಕಾರ್ಕಳದಲ್ಲಿ ನಡೆಯುವದೆಂದೂ ತಿಳಿಸಿತ್ತಷ್ಟೆ. ಆದರೆ ಮದ್ರಾಸ್ ಸರಕಾರದಿಂದ ಪುನಃ ಹುಕುಂ ಬರುವ ವರೆಗೆ ಆಫೀಸುಗಳನ್ನು ಕಾರ್ಕಳಕ್ಕೆ ವೈಯ್ಯಕೂಡದೆಂತ ಮದ್ರಾಸಿನಿಂದ ತಂತೀ ಬಂದಿರುವದೆಂದು ಕೇಳುತ್ತೇವೆ.

ಇಲ್ಲಿಯ ಸೆಶ್ಶನ್ ಕೋರ್ಟು ಮತ್ತು ಸಬ್ ಕೋರ್ಟು ಬರುವ ಎಪ್ರೀಲ್ ೨೨ನೇ ತಾರೀಕಿನಿಂದ ಜೂನ್ ೨೧ನೇ ತಾರೀಕಿನ ವರೆಗೂ ಮುನ್ಸಿಫ್ ಕೋರ್ಟು ಎಪ್ರಿಲ್ ತಾ. ೨೨ರಿಂದ ಜೂನ್ ೧ರ ವರೆಗೂ ಶೆಕೆ ಕಾಲದ ರಜೆ ಸಮ್ಮಂಧ ಮುಚ್ಚಲ್ಪಡುವದು.

ಇತ್ತಲಾಗೆ ಕೂಡಿದ ಬಂಟರ ಯಾ ನಾಡವರ ವರುಷಾವಧಿ ಸಭೆಯಲ್ಲಿ ಸ್ವಜಾತ್ಯಸ್ಥರಲ್ಲಿ ವಿವಾಹ ಕಾಲಗಳಲ್ಲಿ ಸಂಘಕ್ಕೆ ಯತಾನುಶಕ್ತಿ ದ್ರವ್ಯಸಹಾಯ ಮಾಡಬೇಕೆನ್ನುವ ನಿರ್ಣಯದ ಮೇರೆಗೆ ಕಾಸರಗೋಡು ತಾಲೂಕು ನೆಕ್ರಾಜೆ ಗ್ರಾಮದ ಸರಪಾಡಿ ಸುಬ್ಬಣ್ಣ ಬಂಟರೆಂಬವರು ತಮ್ಮ ವಿವಾಹದ ಸಂತೋಷಾರ್ಥವಾಗಿ ರೂಪಾಯಿ ಒಂದನ್ನು ಈ ಸಂಘದವರಿಗೆ ಅಲ್ಲಿಯ ಪಟೇಲರ ಮುಖಾಂತರ ಕಳುಹಿಸಿರುವರು. ಸುಬ್ಬಣ್ಣ ಬಂಟರವರು ಮೇಲ್ಕಂಡ ನಿರ್ಣಯದ ಪ್ರಥಮ ಜ್ಯಾರಿಯನ್ನು ನಡಿಸಿದಕ್ಕೆ ಸಂಘದವರು ಕೃತಜ್ಞರಾಗಿರುವರಲ್ಲದೆ ಸುಬ್ಬಣ್ಣ ಬಂಟರ ಈ ವರ್ತನೆಯನ್ನು ಬಂಟರಲ್ಲಿ ಇತರರೆಲ್ಲರೂ ಸಹ ಅನುಸರಿಸಬೇಕೆಂತ ನಾಡವರ ಸಂಘದವರ ಕಡೆಯಿಂದ ವಿಜ್ಞಾಪಿಸಿಕೊಳ್ಳೋಣಾಗಿರುತ್ತದೆ.

ಒಬ್ಬ ಬಾತ್ಮೀದಾರರಿಂದ.

ಕಳೆದ ಸಂಚಿಕೆಯಲ್ಲಿ ಪ್ರಕಟಿಸಿದ ಪ್ರಕಾರ ಕೊಡಿಯಾಲಬೈಲಿನಲ್ಲಿ ನವೀನವಾಗಿ ಸ್ಥಾಪಿಸಲ್ಪಟ್ಟ ಶ್ರೀ ಶಿವಕ್ಷೇತ್ರದಲ್ಲಿ ಕಳೆದ ತಾರೀಕು ೨೨ನೇ ಗುರುವಾರ ರಾತ್ರಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿಯವರಿಂದ ಪ್ರತಿಷ್ಠಾಕಾರ್ಯವು ನೆರವೇರಿಸಲ್ಪಟ್ಟಿತು. ಈ ಕ್ಷೇತ್ರದಲ್ಲಿ ವಿಘ್ನೇಶ್ವರ, ಷಣ್ಮುಖ ಮತ್ತು ಅನ್ನಪೂರ್ಣೇಶ್ವರಿ ಮೊದಲಾದ ಉಪದೇವತೆಗಳನ್ನು ಪ್ರತಿಷ್ಠೆ ಮಾಡಲ್ಪಟ್ಟಿರುತ್ತದೆ. ಪ್ರತಿಷ್ಠಾ ಮಹೋತ್ಸವಕ್ಕೆ ಜಿಲ್ಲಾ ಜಡ್ಜರೂ ಡಿಪ್ಯುಟಿ ಕಲೆಕ್ಟರರೂ, ಹೆಚ್ಚು ಕಡಿಮೆ ಎಲ್ಲಾ ಹುದ್ದೆದಾರರೂ, ಇತರ ಅನೇಕ ಮಹನೀಯರೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಜಾತಿಗೃಹಸ್ಥರಲ್ಲದೆ ಬೇರೆ ಹಲವು ಕಡೆಗಳಿಂದ ಅನೇಕ ಜನರೂ ಬಂದಿದ್ದರು. ಈ ಪ್ರತಿಷ್ಠೆಯ ಸಮ್ಮಂಧವಾಗಿ ಗುರುಸ್ವಾಮಿಯವರು ಕಳೆದ ತಾ. ೧೯ನೇ ಸೋಮವಾರ ಮಂಗಳೂರಿಗೆ ಚಿತ್ತೈಸಿ, ದೇವಸ್ಥಾನದ ಕೆಲಸವನ್ನೂ ಮಂಗಳೂರಿನವರ ಉತ್ಸಾಹವನ್ನೂ ಏರ್ಪಾಡುಗಳನ್ನೂ ಕಂಡು ಬಹಳ ಆನಂದಪಟ್ಟರು. ರಾಜಶ್ರೀ ಕುಞ್ಞಪ್ಪ ವೈದ್ಯರವರ ಶಿಕ್ಷಣೆಯಿಂದ ನಡದು ಬರುವ ಶಿವಭಕ್ತಿಯೋಗ ಪ್ರಾರ್ಥನಾ ಸಂಘದ ಮೆಂಬರರೂ ಇತರ ಸಭಿಕರೂ ಕೂಡಿ ಗುರುವಾರ ರಾತ್ರಿ ಗುರುಸ್ವಾಮಿಯವರ ವಸತಿಗೆ ಹೋಗಿ ಸ್ತೋತ್ರಾದಿಗಳಿಂದ ಅವರನ್ನು ಆರಾಧಿಸಿದ ನಂತರ ಬಹಳ ವಿಜೃಂಭಣೆಯಿಂದ ದೇವಸ್ಥಾನಕ್ಕೆ ಕರತಂದರು. ನಂತರ ಪ್ರತಿಷ್ಠಾ ಸಂಭ್ರಮವು ನೆರವೇರಿಸಲಾಯಿತು. ಮಾರಣೆ ದಿನ ಬೆಳಿಗ್ಯೆ ಅಭಿಷೇಕಾದಿ ಪೂಜೆಯೂ, ಸುಮಾರು ೮೦೦೦ಕ್ಕೆ ಕಡಿಮೆಯಾಗದ ಜನರಿಗೆ ಸಮಾರಾಧನೆಯೂ, ರಾತ್ರಿಗೆ ಉತ್ಸವವೂ, ಶನಿವಾರ ಬೆಳಿಗ್ಯೆ ಅಭಿಷೇಕವೂ, ಪೂಜೆಯೂ, ಉತ್ಸವವೂ, ಅವಭೃತ ಸ್ನಾನವೂ ಬಹಳ ಸಂತೋಷದಿಂದ ನಡಿಸಲಾಯಿತು.

ಕುಂಬಳೆ. ಬರುವ ಮಾರ್ಚಿ ತಿಂಗಳ ಪ್ರಾರಂಭದಿಂದ ರೈಲ್ವೆಗಾಡಿಗಳ ಸಮಯವು ಬದಲಾಯಿಸಿ ಹೆಚ್ಚಿಗೆ ಒಂದು ಎಕ್ಸಪ್ರೆಸ್ ಗಾಡಿಯನ್ನಿಡುತ್ತಾರೆಂತಲೂ, ಈಗಿರುವ ಲೋಕಲ್ (ಮಿಕ್ಸೆಡ್) ಗಾಡಿಗಳಿಂದ ಸಾಮಾನು ಗಾಡಿಗಳನ್ನು ಪ್ರತ್ಯೇಕಿಸಿ ಗೂಡ್ಸು ಮತ್ತು ಪಾಸೆಂಜರ್ ಎಂಬ ಗಾಡಿಗಳಾಗಿ ವಿಂಗಡಿಸುವದೆಂತಲೂ, ಮೊಟರ್ (ಶಟಲ್) ಗಾಡಿಗಳನ್ನೇ ತೆಗೆದು ಸಮಯ ತಬ್ದೀಲಿ ಮಾಡುವರೆಂತಲೂ ವಂದತಿ ಇದೆ.

ಮಂಗಳೂರಿನಿಂದ ಹೊಸದುರ್ಗ ವರೆಗೆ ಓಡ್ಯಾಡುವ ಈ ಮೋಟರ್ ರೈಲು ಗಾಡಿಗಳು ವ್ಯಾಪಾರಸ್ಥರಿಗೆ ವ ಹ್ಯಾಸ್ಕೂಲು ಕೋಲೇಜುಗಳಿಗೆ ಹೋಗಿ ಬರುವ ವಿದ್ಯಾರ್ಥಿಗಳಿಗೆ ಸಹಾ ಅನುಕೂಲವಾಗಿಯೂ ಸಮಯವು ತಕ್ಕದ್ದಾಗಿಯೂ ಇದ್ದು ಹೆಚ್ಚಿನ ಪ್ರಯೋಜನವಿರುವ ಈ ಗಾಡಿಯನ್ನು ಕಂಪೆನಿಯವರು ತೆಗೆಯಲಿಕ್ಕಿಲ್ಲಾ ಎಂತ ನಂಬುತ್ತೇವೆ.

ಕಾಸರಗೋಡು. ಎರಂಡಿ ರೇಷ್ಮೆ ಕೆಲಸವನ್ನು ಕಲಿಯಲು ಬಂಗಾಳಕ್ಕೆ ಹೋಗಿ ವಾಪಾಸ್ ಬಂದಿರುವ ಮೆ. ಜೆ. ಮೆಲ್ಲೋತರವರು ಕಳೆದ ೨೫ನೇ ಆದಿತ್ಯವಾರ ಸಾಯಂಕಾಲ ೭ ಘಂಟೆಗೆ ಇಲ್ಲಿಯ ವಿವೇಕಾನಂದ ವಾಚಕ ಮಂದಿರದಲ್ಲಿ ಬಂಗಾಳದ ಜನರ ವಿಷಯವಾಗಿ ತನ್ನ ಮನಸ್ಸಿಗೆ ಬಹಳೇ ನಾಟಿರುವ ಅನೇಕ ಸಂಗತಿಗಳಲ್ಲಿ ಅವರ ಏಳಿಗೆಗೂ ಸುಖಸಂಪತ್ತುಗಳಿಗೂ ಮೂಲಕಾರಣವಾದ ಮೂರು ಮುಖ್ಯ ಸಂಗತಿಗಳ ಮೇಲೆ ಚಲೋದಾದ ಒಂದು ಭಾಷಣ ಕೊಡುವವರಾದರು.

ಟಪ್ಪಾಲ್ ಇಲಾಖೆಯ ಸುಪರಿಂಟೆಂಡೆಂಟ್ ದೊರೆಗಳು ಮೊನ್ನೆ ಇಲ್ಲಿ ಗೆತೆಂಕಲಾಗಿನಿಂದ ಬಂದು ನಿನ್ನೆ ದಿನ ಮೇಲ್ತನಿಕ ವಗ್ಯೆರೆ ತೀರಿಸಿ ಹಿಂತೆರಳಿರುವರು.

ಜುಟ್ಟು ಕತ್ತರಿಸಲ್ಪಟ್ಟ ಬಂಟನ ನಂಬ್ರದಲ್ಲಿ ನಂಬ್ರವು ರದ್ದಾಗಿ ಎದುರುಗಡೆಯ ೭ ಮಂದಿಗೆ ೪ ರೂಪಾಯಿ ಪ್ರತಿಫಲ ಶಿಕ್ಕಿರುತ್ತದೆ.

ಮುಲ್ಕಿ. ಇದೇ ಕಳೆದ ತಾ. ೨೩ನೇ ಶುಕ್ರವಾರ ಹೆಡ್‌ಕ್ವಾರ್ಟರ್ಸ ಡಿಪ್ಯುಟಿ ಕಲೆಕ್ಟರವರು ಮುಲ್ಕಿ ಬೋರ್ಡು ಶಾಲೆಯಲ್ಲಿ ಸಭೆಕೂಡಿಸಿ ಮ. ರಾ. ಕುಡೆತ್ತೂರ ಗುತ್ತು ರಾಮಣ್ಣ ಸೆಟ್ರಿಗೆ ಡಿಲ್ಲಿ ದರ್ಬಾರಿನ ಬಹುಮಾನಪತ್ರವನ್ನು ದಯಪಾಲಿಸಿದರು.

ರಾ. ಬಂಗ್ಲೆಕಾರರ ಫಿರ್ಯಾದಿಗಳು ಮಾರ್ಚಿ ತಾ. ೧೫ಕ್ಕೆ ಮಂಗಳೂರ ಮೊಕ್ಕಾಮಿನಲ್ಲಿ ಮುಂದರಿಸಿಡಲ್ಪಟ್ಟವೆ.

ಉಡುಪಿ. ಇಲ್ಲಿಯ ಶ್ರೀಮಂತರಾದ ಖಾನ್ ಸಾಹೇಬ ಆಬ್ದುಲ್ಲಾ ಹಾಜಿಕಾಸಿಮ್ ಸಾಹೇಬ ಬಹುದ್ದೂರವರು ೯೦೦೦ ರೂಪಾಯಿ ಕ್ರಯಬಾಳುವ ಒಂದು ಮೋಟರ್ ಗಾಡಿಯನ್ನು ತರಿಸಿದ್ದಾರೆ.

ಹೆಡ್ ಅಸಿಸ್ಟಾಂಟ್ ಕಲೆಕ್ಟರ ದೊರೆಗಳವರು ಪೆರ್ಡೂರಲ್ಲಿ ಜಮಾಬಂದಿಯನ್ನು ತೀರಿಸಿ ಇಲ್ಲಿಗೆ ಬಂದಿರುತ್ತಾರೆ.

ತಾ. ೨೬ರಲ್ಲು ರಾತ್ರಿ ನಾಟಕ ಮಂದಿರದಲ್ಲಿ ಇಲ್ಲಿಯ ರಾ. ರಾ. ರಾಮಯ್ಯ ಶೆಟ್ರರವರು ಮ. ರಾ. ವರದಾಚಾರ್ ಇವರಿಗೆ ಒಂದು ಚಿನ್ನದ ಪದಕವನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ.

ಕುಂದಾಪುರ. ಮಂಗಳೂರಿಂದ ಜಮಾಬಂದಿಗೆ ಬಂದಿದ್ದ ಮೆ| ಡ್ಯೊಗ್ ದೊರೆಗಳವರು ಕೋಡಿ ಕೆರೆಯಲ್ಲಿದ್ದ ಎರಡು ಮೊಸಳೆಗಳನ್ನು ಕಳೆದ ತಿಂಗಳ ತಾ. ೧೪ಕ್ಕೆ ಕೊಂದಿರುವರು. ಈ ಕೆರೆಯ ಮೊಸಳೆಗಳನ್ನು ಕೊಂದವರಿಗೆ ರೂ. ೫ ಇನಾಂ ಕೊಡುವೆವೆಂದು ಸರಕಾರದವರು ಈ ಮೊದಲೇ ಪ್ರಕಟಿಸಿರುತ್ತಾರೆ.

ನಮ್ಮ ಜಿಲ್ಲಾ ಕಲೆಕ್ಟರರಾದ ಮೊಸ್ಕಾರ್ಡಿ ದೊರೆಗಳವರು ೨೮ನೇ ಸಾಯಂಕಾಲ ಉಡ್ಪಿಯಿಂದ ಇಲ್ಲಿಗೆ ಬಂದು ಜಮಾಬಂದಿ ಕೆಲಸ ಪ್ರಾರಂಭಿಸಿರುವರು.

ವಿವಿಧ ವಿಷಯಗಳು.

ಸೋಯಾ ಅವರೆಯ ಎಣ್ಣೆಯಿಂದ ರಬ್ಬರಿಗೆ ಸಮಾನವಾದ ಒಂದು ಪದಾರ್ಥವನ್ನು ತಯಾರು ಮಾಡಬಹುದಂತೆ. ಒಬ್ಬ ಜರ್ಮನಿ ದೇಶಸ್ಥನು ಈ ಪದಾರ್ಥದಿಂದ ರಬ್ಬರಿನಿಂದ ಮಾಡಬಹುದಾದ ಪದಾರ್ಥಗಳನ್ನೆಲ್ಲಾ ತಾನು ವಿನಹಾ ಮತ್ಯಾರೂ ಮಾಡಕೂಡದೆಂಬದಾಗಿ ಸರಕಾರದವರಿಂದ ಆಜ್ಞೆಯನ್ನು ಪಡೆದಿದ್ದಾನೆ.

ವಿಜ್ಞಾಪನೆ.

ಈ ಕೆಳಗೆ ದಸ್ಕತು ಮಾಡಿದ ನಾನು ವಗ್ಯೆರೆ ಕೆಲವರು ಖಾಸಗಿಯಲ್ಲಿ ತೆಗಿಯಬೇಕೆಂದಿದ್ದ ಸೋಡ್ತಿ ಬಾಬಿನಲ್ಲಿ ಸ್ನೆಹಿತರೆನ್ನಿಸಿಕೊಂಡಿದ್ದ ನಮ್ಮ ಕೆಲವು ವೈರಿಗಳು ದುರಾಲೋಚನೆಯಿಂದ ಟಿಕೇಟುಗಳನ್ನು ಖುಶಿ ಬಂದ ಹಾಗೆ ಮಾರಾಟ ಮಾಡಿರುವದಾಗಿ ತಿಳಿದು ಬರುವದಲ್ಲದೆ ಸದರಿ ಸೋಡ್ತಿಯು ಕಾನೂನಿಗೆ ವಿರುದ್ಧವೆಂತ ಈಗ ನನ್ನ ತಿಳುವಳಿಕೆಗೆ ಬಂದ ಪ್ರಯುಕ್ತ, ಅಜ್ಞಾನದಿಂದ ಪ್ರಾರಂಭಿಸಿದ ಸೋಡ್ತಿಯು ಮನ್ನಾ ಮಾಡಲ್ಪಟ್ಟಿರುವದರಿಂದ ಟಿಕೇಟುದಾರರು ಟಿಕೇಟು ಮೌಲ್ಯವನ್ನು ಪಡಕೊಂಡು ಟಿಕೇಟನ್ನು ಕೂಡಲೇ ವಾಪಸು ಕೊಡಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ದಕ್ಷಿಣ ಕನಡಾ ಪಡುಬಿದ್ರೆ ಬೀಡು.
ತಾ. 20–2–1912.
ದೇವರಾಜಯ್ಯ.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಹೊಸ ಮಸ್ಕತಿ ಅಕ್ಕಿ	5—3—0
ಹೊಸ ಗುಡ್ಡು ಮಸ್ಕತಿ	4–13—0
ಹೊಸ ಮಸ್ಕತಿ ದುಯಂ	4–13—0
ಹೊಸ ಗುಡ್ಡು ,,	4–10—0
ಮಸ್ಕತಿ ಬೆಳ್ತಿಗೆ ,,	5—6—0
ಹುರುಳಿ ಗೋಣಿ ೧, ಮುಡಿ 2ರ	6—4—0
ಉಪ್ಪು ಗೋಣಿ ೧ರ	3—8—0
ಕೊಬ್ರಿ ಖಂಡಿ ೧ರ	96—0—0
ಕೊಬ್ರಿ ಎಣ್ಣೆ ಮಣ ೧ರ	7—0—0
ಕಾಫಿ ಖಂಡಿ ೧ರ	260—0—0
ಕಾಳು ಮೆಣಸು ಖಂಡಿ	170—0—0
ಹೊಸ ಬಿಳಿ ಗೋಟು ಅಡಿಕೆ	82—0—0
ಕರಿ ಗೋಟು	65—0—0
ಯಾಲದ ಕಾಯಿ ಮಣ ೧ರ	45—0—0
ಗೇರುಬೀಜ ಮುಡಿ ೧ರ	2—2—0
ರಾಮಪತ್ರೆ ಮಣ ೧ರ	8—6—0
ಶೀಗೆಕಾಯಿ ಖಂಡಿ ೧ರ	35—0—0
ಕಾಸ್ರ್ರಕಿನ ಬೀಜ ಖಂಡಿ ೧ರ	22—0—0
ದಾಲಚೀನಿ ಹೂ ಮಣ ೧ರ	3—0—0
ಅಂಟವಾಳ ಕಾಯಿ ಮುಡಿ ೧ರ	1—4—0
ಅಣಿಲೆ ಕಾಯಿ ಖಂಡಿ ೧ರ	12—3—0
ಪಚ್ಚೆ ಹೆಸರು	4–10—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ	9—8—0
ಗೋದಿ ಗೋಣಿ ೧ಕ್ಕೆ	10—8—0
ಊರು ಬೆಲ್ಲ ಖಂಡಿ ೧ರ	35—0—0
ಮೋರಿಸ್ ಸಕ್ಕರೆ ಮಣ ೧ರ	3–13—0
ಕಡಲೆ ಗೋಣಿ ೧ರ	7—8—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—2—0
ಕೊಬ್ರಿ ಹಿಂಡಿ ಖಂಡಿ ೧ರ	32—0—0

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ. 1–0–0 ವಿ. ಪಿ. ಮೂಲಕ 1–3–0. 2000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0–15–0. 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲು ಚಾರ್ಜ ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್ ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಷ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯೆರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನ್ನೂ ಛಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೋಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯು ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (**Whistler Studio**) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ನಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ.

ಸಿದ್ಧೌಷಧ!] **ಹಾರ್ಲೆಮ್ ಆಯ್ಲ್ (Haarlem Oil).** [ಪರೀಕ್ಷಿಸಿ ನೋಡಿ!

ಹಾರ್ಲೆವ್ ಆಯ್ಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭವರು. ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸನೆಯಿಂದ ಎಂಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್, ಮಂಗಳೂರು.

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ. ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು ಟೀಕಾ ತಾತ್ಪರ್ಯ ಶಬ್ದಸಮಾಸ ಸಹಿತವಾದ ೧ನೇ ಪರ್ವ ರಘುವಂಶ ರೂ. ೧—೦—೦ ೨ನೇ ಪರ್ವ ರೂ. ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶಾಮಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ ಸಹಿತವಾಗಿ ಈಗ ತಾನೆ ಪೂರೈಸಿರುತ್ತೆ. ಉತ್ತಮವಾದ ಕ್ಯಾಲಿಕೊ ಬೈಂಡು ರೂ. ೨—೪—೦. ಋಗ್ವೇದ ನಿತ್ಯಕರ್ಮ ೦—೪—೦. ಎಲ್ಲಾ ಪುಸ್ತಕದಪಟ್ಟಿಯೂ ಬೇಕಾದಲ್ಲಿ ಸುಮ್ಮನೇ ಪಡೆಯಬಹುದು.

ಬಿ. ಆದಿನಾರಾಯಣ ಶಾಸ್ತ್ರಿ,

ವಿದ್ಯಾನಂದ ಆಫೀಸ್, ಬೆಂಗಳೂರು ಸಿಟಿ.

ಈ ಕಾಲದಲ್ಲಿ ಯಾವುದು ತಾನೇ ಸಾಧ್ಯವಲ್ಲ?



ಕ್ರಯ ರೂ. 45.

ಪ್ರಖ್ಯಾತಪಟ್ಟ ಕೊಯಂಬುತ್ತೂರು ತಾಯಿಯ ಗಾಯನವನ್ನೂ, ಉತ್ತರಹಿಂದುಸ್ಥಾನದ ಸುಪ್ರಸಿದ್ಧ ಗಾಯನ ವಿದ್ಯಾವಿಶಾರದರ ಹಾಡುಗಳನ್ನೂ, ಇನ್ನು ಕನ್ನಡ ತಮಿಳು ತೆಲುಗು ಮುಯಾಳ ಮರಾಟಿ ಭಾಷೆಗಳ ಉತ್ಕೃಷ್ಟ ಗವಯಿಗಳ ಪದಗಳನ್ನೂ ಕೇಳಲಿಕ್ಕೆ ಅವರಿದ್ದಲ್ಲಿಗೆ ಹೋಗಬೇಕೆಂತಿಲ್ಲ. ಈ ಕೆಳಗೆ ತೋರುವ ರಾಗದ ಪೆಟ್ಟಿಗೆಯೊಂದನ್ನೂ, ಹಾಡುಗಳ ಸ್ವರವೆಲ್ಲವು ವಳದ್ರಿತವಾಗಿರುವ ರಿಕಾರ್ಡುಗಳೆಂಬ ಹಾಳೆಗಳನ್ನು ತಕ್ಕೊಂಡರೆ ನಾವಿದ್ದಲ್ಲಿಯೇ ಶ್ರೇಷ್ಠ ಗವಯಿಗಳ ಗಾನವನ್ನು ಕೇಳಿ ಆಹ್ಲಾದ ಪಡಬಹುದು.

ರಿಕಾರ್ಡು ಒಂದಕ್ಕೆ ಸಾಧಾರಣವಾಗಿ ರೂ. 3—0—0 ಕ್ರಯವಿರುವದು.

ಇವುಗಳು ದೊರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್

ಸ್ಥಾಯಕಲ್ ಎಜಂಟ್ಸ್,

ಮಂಗಳೂರು ದ. ಕ.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರಿಂದಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನ್ನಿಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು

ಮಂಗಳೂರು.

ಫೊಟಗ್ರಾಫ್ ಬ್ಯಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42" × 25" ರೂ. 75. ಅರ್ಧ ಸ್ಯಾಜ್ 21" × 15" ರೂ. 40. ಬಸ್ಟ್ ಸ್ಯಾಜ್ 18" × 12" ರೂ. 20. ಸಣ್ಣ ಸ್ಯಾಜ್ 12" × 10" ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೊಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೊಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,

ಆರ್ಟಿಸ್ಟ್, ಕೂಡ್ಲು ಪೋಸ್ಟು, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಸಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳೂ ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದು ಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಸರ್ವೋತ್ಕೃಷ್ಟವಾದ ಅತ್ತರುಗಳು.

ಇನ್ನು ಮೇಲಾದರೂ ಬಜಾರಿನಲ್ಲಿ ದೊರಕುವ ಹೀನವಾದ ಅತ್ತರುಗಳನ್ನು ಕೊಂಡುಕೊಳ್ಳದಿರಿ. ನಮ್ಮ ಈ ಅತ್ತರುಗಳು ಅತಿಶಯ ಪ್ರಯಾಸ ಪ್ರಯತ್ನಗಳಿಂದ ಸಿದ್ಧ ಮಾಡಲ್ಪಟ್ಟಿವೆ. ಇವುಗಳ ಸುಗಂಧವು ನೂತನವಾಗಿ ಅರಳಿ ಗಮಗಮಿಸುವ ಪುಷ್ಪಗುಚ್ಛದ ಪರಿಮಳವನ್ನು ವಿಶೇಷತಃ ಮಿಂಚುತ್ತದೆ. ಮತ್ತು ಯಾವಾಗಲೂ ಒಂದೇ ಲೆಕ್ಕವಾಗಿರುತ್ತದೆ.

ಕಾಮಿನಿಯಾ ಡೈಜೀ (ರಿಜಿಸ್ಟರ್ಡ್) ಇದು ದೊಡ್ಡ ಮಲ್ಲಿಗೆಯ ಹೂಗಳಿಂದ ಸಂಗ್ರಹಿಸಿದ ಅತ್ತರು. 'ಮಲ್ಲಿಗೆ' ಎಂಬ ಈ ಶಬ್ದವು ಕಿವಿಗೆ ಬೀಳುತ್ತಲೇ ಅದರ ಸುವಾಸನೆಯನ್ನು ಕುರಿತು ಯಾವನೊಬ್ಬನ ಮನಸ್ಸಿನಲ್ಲಿಯಾದರೂ ಕಲ್ಪನೆಯು ಆಗದಿರದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 3-0—0

ಕಾಮಿನಿಯಾ ಸುರಂಗಿ (ರಿಜಿಸ್ಟರ್ಡ್); ಇದು ಬಹಳ ಪರಿಮಳ ಉಳ್ಳದ್ದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 1—4—0 ಅಂಚೆಯ ವೆಚ್ಚ ಬೇರೆ.

ಕಾಮಿನಿಯಾ (ರಿಜಿಸ್ಟರ್ಡ್) ಇದಾದರೂ ವಸಂತಮಾಸದ ಸಂಪಗೆಯ ಹೂಗಳಿಂದ ಸಂಗ್ರಹಿಸಿದುದು. ಇದರ ಸುರಭಿಯು ಅತ್ಯಂತ ಮಧುರವಿದೆ. ಕಾಲು ತೊಲೆಯ ಕುಪ್ಪಿಗೆ ರೂ. 1—8—0 ಅಂಚೆಯ ವೆಚ್ಚ ಬೇರೆ.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳಬಹುದು.

Address—**Anglo Indian Drug & Chemical Co.,**

155 Jumma Musid, Market, Bombay.

ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯೂ ವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ
(ವಿದ್ಯುಚ್ಛಕ್ತಿಯ ಬೇನಿಹಾರಿ
ಮುಲಾಮು.)
EST. 1898.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜ, ಸುಟ್ಟ ಘಾಯ, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಶಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ;—ಪರಿಮಳಾಂಜನ ಡಿಪ್ಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಟ್ಟರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ:—
ವೈದ್ಯ, ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡಾ.

Registered No. M. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 10.

ಮಂಗಳೂರು ತಾ. 8ನೇ ಶುಕ್ರವಾರ ಮಾರ್ಚಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳುಕಡಿತ, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಫರ್ಸ್ಟ್ ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ ಮತ್ತು ಮೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ಎಂಡ್. ಎಸ್. ಎಂಡ್. ಜೆ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೇಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ:—ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ ಎಸ್ಟೇಟು, ಕೊಡಗು:—ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ್ ವಾಂದ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—ನಿಮ್ಮಿಂದ ಪಡಕೊಂಡ ಅಮೃತಾಂಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿಯತ್ತದೆ.

ಅಮೃತಾಂಜನ ಚರ್ಚಿತವಾದ ರೋಮದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಪಶೆಯೂ ಬಾರದಂತೆ ನೋಡಿಕೊಂಡು, ಪಶೆ ಇಲ್ಲದ ಸ್ಥಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. ಎಮ್. ಎಂಡ್. ಎಸ್., ಮುಂಬಯಿ, ಬರಿಯುವದೇನಂದರೆ:—ನಿಮ್ಮ ಅಮೃತಾಂಜನವನ್ನು ನಾನು ವಾತಕ್ಕೂ ಸಂಧಿವಾತಕ್ಕೂ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿದ್ದಲ್ಲಿ ಬಹಳ ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ ತಿಳಿಸುತ್ತೇನೆ.

ಜಾಗ್ರತೆ:--ಈಗ ಅಮೃತಾಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಲ್ಪಟ್ಟಿರುತ್ತದೆ.

ವಿಳಾಸ:— ಅಮೃತಾಂಜನ ಡಿಪ್ಪೊ,
109 ಫ್ರೆಯರ್ ರೋಡ್, ಫೋರ್ಟ್ ಮುಂಬಯಿ.
ಟೆಲಿಗ್ರಾಫ್ ಎಡ್ರೆಸು:—ಅಮೃತಾಂಜನ, ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ವಜ್ರಗುಟಿಕ.

ಧಾತುಪುಷ್ಟಿ, ರಕ್ತಶುದ್ಧಿ, ರಕ್ತವೃದ್ಧಿ, ಬಾಟ್ಲಿ 1ಕ್ಕೆ 1ರೂಪಾಯಿ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೊಲೆರಾ ಮಾತ್ರೆ.

ಕೊಲೆರಾ, ವಾಂತಿಭೇದಿಗಳ ಮೇಲೆ ಬಹಳ ಉತ್ತಮ ಔಷಧ. ಕ್ರಯ 6ಆಣೆ.

ನೇತ್ರಾಂಜನ.

ಮಂದದೃಷ್ಟಿಯನ್ನೂ ಕಣ್ಣುನೋವನ್ನೂ ಗುಣಪಡಿಸುವದು. ಕ್ರಯ 4ಆಣೆ.

ಕೇಶವರ್ಧಿನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

ಜುಲಾಬು ಮಾತ್ರೆ 8 ಆಣೆ; ಪ್ರಮೇಹಮಿಶ್ರಣ 1ರೂಪಾಯಿ; ಕಫಹಾರಿ 1 ರೂಪಾಯಿ 4 ಆಣೆ; ಕಫನಾಶಕ ಚೂರ್ಣ 8 ಆಣೆ; ಜಂತುವಾತಹಾರಿ 8 ಆಣೆ.

ವಿಳಾಸ:—
ವಿಲಿಯಂ ಮತ್ತು ಕಂಪೆನಿ,
109 ಫ್ರೆಯರ್ ರೋಡ್,
ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—
ಅಮೃತಾಂಜನ, ಮುಂಬಯಿ.

[ಸಿದ್ಧೌಷಧ!] **ಹಾರ್ಲೆಮ್ ಆಯಿಲ್ (Haarlem Oil).** [ಪರೀಕ್ಷಿಸಿ ನೋಡಿ!

ಹಾರ್ಲೆಮ್ ಆಯಿಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸೆಯಿಂದ ಎಂಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್, ಮಂಗಳೂರು.

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ. ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು ಟೀಕಾ ತಾತ್ಪರ್ಯ ಶಬ್ದಸಮಾಸ ಸಹಿತವಾದ ೧ನೇ ಪರ್ವ ರಘುವಂಶರೂ. ೧—೦—೦ ೨ನೇ ಪರ್ವರೂ ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶಾಮಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ ಸಹಿತವಾಗಿ ಈಗ ತಾನೆ ಪೂರೈಸಿರುತ್ತೆ. ಉತ್ತಮವಾದ ಕ್ಯಾಲಕೊ ಬೈಂಡು ರೂ. ೨—೪—೦. ಋಗ್ವೇದ ನಿತ್ಯಕರ್ಮ ೦—೪—೦. ಎಲ್ಲಾ ಪುಸ್ತಕದಪಟ್ಟಿಯೂ ಬೇಕಾದಲ್ಲಿ ಸುಮ್ಮನೇ ಪಡೆಯಬಹುದು.

ಬಿ. ಆದಿನಾರಾಯಣ ಶಾಸ್ತ್ರಿ.

ಈ ಕಾಲದಲ್ಲಿ ಯಾವುದು ತಾನೇ ಸಾಧ್ಯವಲ್ಲ?



ಕ್ರಯ ರೂ. 45.

ಪ್ರಖ್ಯಾತಪಟ್ಟ ಕೊಯಂಬುತ್ತೂರು ತಾಯಿಯ ಗಾಯನವನ್ನೂ, ಉತ್ತರಹಿಂದುಸ್ಥಾನದ ಸುಪ್ರಸಿದ್ಧ ಗಾಯನ ವಿದ್ಯಾವಿಶಾರದರ ಹಾಡುಗಳನ್ನೂ, ಇನ್ನು ಕನ್ನಡ ತಮಿಳು ತೆಲುಗು ಮುಯಾಳ ಮರಾಟಿ ಭಾಷೆಗಳ ಉತ್ಕೃಷ್ಟ ಗವಯಿಗಳ ಪದಗಳನ್ನೂ ಕೇಳಲಿಕ್ಕೆ ಅವರಿದ್ದಲ್ಲಿಗೆ ಹೋಗಬೇಕೆಂತಿಲ್ಲ. ಈ ಕೆಳಗೆ ತೋರುವ ರಾಗದ ಪೆಟ್ಟಿಗೆಯೊಂದನ್ನೂ, ಹಾಡುಗಳ ಸ್ವರವೆಲ್ಲವು ಮಳದ್ರಿತವಾಗಿರುವ ರಿಕಾರ್ಡುಗಳೆಂಬ ಹಾಳೆಗಳನ್ನು ತಕ್ಕೊಂಡರೆ ನಾವಿದ್ದಲ್ಲಿಯೇ ಶ್ರೇಷ್ಠ ಗವಯಿಗಳ ಗಾನವನ್ನು ಕೇಳಿ ಆಹ್ಲಾದ ಪಡಬಹುದು.

ರಿಕಾರ್ಡು ಒಂದಕ್ಕೆ ಸಾಧಾರಣವಾಗಿ ರೂ. 3—0—0 ಕ್ರಯವಿರುವದು.

ಇವುಗಳು ದೊರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸ್ಸೋಸಿಯೇಶನ್

ಸ್ಯಾಕಲ್ ಎಜಂಟ್ಸ್.

ಮಂಗಳೂರು ದ. ಕ.

SURGEON DENTIST P. K. R. MENON,

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರಿಂದಾಗಾಯಿತು ವಿಶೇಷ ಲಕ್ಷಣಗಳುಳ್ಳ ಪಂತ್ಯ ಚಿಕಿತ್ಸೆಗಳ ಉಪಯೋಗ ಮೂಲಕ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ಒದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು: ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನ್ನಿಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು

ಮಂಗಳೂರು.

ಫೊಟಗ್ರಾಫ್ ಬ್ಯಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42" × 25" ರೂ. 75. ಅರ್ಧ ಸ್ಯಾಜ್ 21" × 15" ರೂ. 40. ಬಸ್ಟ್ ಸ್ಯಾಜ್ 18" × 12" ರೂ. 20. ಸಣ್ಣ ಸ್ಯಾಜ್ 12" × 10" ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೋಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೋಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,

ಆರ್ಟಿಸ್ಟ್, ಕೂಡ್ಲ್ ಪೋಸ್ಟು, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿದುದು.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಸರ್ವೋತ್ಕೃಷ್ಟವಾದ ಅತ್ತರುಗಳು.

ಇನ್ನು ಮೇಲಾದರೂ ಬಜಾರಿನಲ್ಲಿ ದೊರಕುವ ಹೀನವಾದ ಅತ್ತರುಗಳನ್ನು ಕೊಂಡುಕೊಳ್ಳದಿರಿ. ನಮ್ಮ ಈ ಅತ್ತರುಗಳು ಅತಿಶಯ ಪ್ರಯಾಸ ಪ್ರಯತ್ನಗಳಿಂದ ಸಿದ್ಧ ಮಾಡಲ್ಪಟ್ಟಿವೆ. ಇವುಗಳ ಸುಗಂಧವು ನೂತನವಾಗಿ ಅರಳಿ ಗಮಗಮಿಸುವ ಪುಷ್ಪಗುಚ್ಛದ ಪರಿಮಳವನ್ನು ವಿಶೇಷತಃ ಮಿಂಚುತ್ತದೆ. ಮತ್ತು ಯಾವಾಗಲೂ ಒಂದೇ ಲೆಕ್ಕವಾಗಿರುತ್ತದೆ.

ಕಾಮಿನಿಯಾ ಡೈಜೀ (ರಿಜಿಸ್ಟರ್ಡ್) ಇದು ದೊಡ್ಡ ಮಲ್ಲಿಗೆಯ ಹೂಗಳಿಂದ ಸಂಗ್ರಹಿಸಿದ ಅತ್ತರು. 'ಮಲ್ಲಿಗೆ' ಎಂಬ ಈ ಶಬ್ದವು ಕಿವಿಗೆ ಬೀಳುತ್ತಲೇ ಅದರ ಸುವಾಸನೆಯನ್ನು ಕುರಿತು ಯಾವನೊಬ್ಬನ ಮನಸ್ಸಿನಲ್ಲಿಯಾದರೂ ಕಲ್ಪನೆಯು ಆಗದಿರದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 3—0—0

ಕಾಮಿನಿಯಾ ಸುರಂಗಿ (ರಿಜಿಸ್ಟರ್ಡ್) ಇದು ಬಹಳ ಪರಿಮಳ ಉಳ್ಳದ್ದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 1—4—0 ಅಂಚೆಯ ವೆಚ್ಚ ಬೇರೆ.

ಕಾಮಿನಿಯಾ (ರಿಜಿಸ್ಟರ್ಡ್) ಇದಾದರೂ ವಸಂತಮಾಸದ ಸಂಪಗೆಯ ಹೂಗಳಿಂದ ಸಂಗ್ರಹಿಸಿದುದು. ಇದರ ಸುರಭಿಯು ಅತ್ಯಂತ ಮಧುರವಿದೆ. ಕಾಲು ತೊಲೆಯ ಕುಪ್ಪಿಗೆ ರೂ. 1—8—0 ಅಂಚೆಯ ವೆಚ್ಚ ಬೇರೆ.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.,**

155 Jumma Musid, Market, Bombay.

ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಶ್ರೀ ಶಂಕರ ಭಗವತ್ಪಾದಾಚಾರ್ಯ ವಿರಚಿತ

"ವಿವೇಕ ಚೂಡಾಮಣಿ."

(ಸುಲಭ ಕನ್ನಡ ಪ್ರತಿಪದ ಟೀಕಾ ತಾತ್ಪರ್ಯ ಸಹಿತ.)

ಶ್ರೀ ಶಂಕರಾಚಾರ್ಯರವರು ಅದ್ವೈತಸಿದ್ಧಾಂತದ ಸಾರವನ್ನು ಸಾಮಾನ್ಯರಿಗೆ ಬೋಧಿಸುವುದಕ್ಕಾಗಿ ವಿರಚಿಸಿದ ಈ ಗ್ರಂಥರತ್ನವು ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕವು ಸಾಧನಕ್ರಮ, ಆತ್ಮಾನಾತ್ಮವಿವೇಕ, ಶರೀರಸ್ವರೂಪ, ಗುಣತ್ರಯ, ಗುರುಶಿಷ್ಯಸಂವಾದ, ಬ್ರಹ್ಮೋಪದೇಶ ಮುಂತಾದ ೮೩ ಪ್ರಕರಣಗಳನ್ನು ಒಳಗೊಂಡಿವೆ. ಇದನ್ನು ವ್ಯಾಸಂಗ ಮಾಡಿದವರಿಗೆ ವೇದಾಂತ ವಿಷಯಗಳೆಲ್ಲವೂ ಮನಗಂಡು ಬ್ರಹ್ಮಜ್ಞಾನವು ಹಸ್ತಗತವೆಂದೇ ಹೇಳಬಹುದು. ಒಟ್ಟು ಪುಟಸಂಖ್ಯೆಗಳು ೪೪೮. (ಡೆಮ್ಮಿ ಅಷ್ಟಪತ್ರ) ಬೈಂಡು ಉತ್ತಮವಾದ ಕೆಲಿಕೊ, ಪ್ರತಿಯೊಬ್ಬ ಆಸ್ತಿಕನಿಗೂ ಅತ್ಯಾವಶ್ಯಕವಾದ ಪುಸ್ತಕ. ಬೆಲೆ ರೂ. ೨—೪—೦. ಹಾಸಲು ೪ ಆಣೆ.

ಶ್ಯಾಮಕುಬ್ಜ.

ಇದೊಂದು ಹೊಸಕಥೆ. ಕನ್ನಡದಲ್ಲಿ ಇಂಥ ಕಥೆಗಳನ್ನು ಇದುವರೆಗೆ ಯಾರೂ ಬರೆದಿಲ್ಲ. ಅತಿ ಚಮತ್ಕಾರವಾಗಿಯೂ, ಒಳ್ಳೆಯ ನೀತಿಯನ್ನು ಬೋಧಿಸುವುದಾಗಿಯೂ ಇದೆ. ಇದನ್ನು ಓದಲು ಪ್ರಾರಂಭಿಸಿ ಕೈಗೆ ತೆಗೆದುಕೊಂಡರೆ ಮುಗಿಸುವವರೆಗೂ ಕೆಳಗಿಡಲು ಮನಸ್ಸು ಬರುವುದಿಲ್ಲ.

ಓದಿ ನೋಡಿರಿ! ತ್ವರೆಮಾಡಿರಿ!! ಸ್ವಲ್ಪ ಪ್ರತಿಗಳೇ ಇವೆ!!

ಬೆಲೆ ೮ ಆಣೆ. ಅಂಚೆವೆಚ್ಚ ಬೇರೆ.

ಕನ್ನಡ ವರ್ಣಮಾಲಾ.

ಅಕ್ಷರಾಭ್ಯಾಸ ಮಾಡಿಸಲು ಅನುಕೂಲಿಸುವಂತೆ ಅ,ಕಾರ ಮೊದಲು ಳ,ಕಾರದ ವರಿವಿಗೆ ಎಲ್ಲಾ ಅಕ್ಷರಗಳನ್ನು ದೊಡ್ಡ ಆಕಾರದಲ್ಲಿ ಅಚ್ಚುಮಾಡಿಸಿರುತ್ತೆ ಗೋಡೆಗೆ ಅಂಟಿಸಲು ಅನುಕೂಲಿಸುವಂತೆಯೂ ಬಾಲಕರಿಗೆ ಜಾಗ್ರತೆ ಅವಗಾಹನೆಯಾಗುವಂತೆಯೂ ಇರುವದು. ಬೆಲೆ ೧ಕ್ಕೆ ೬ ಪೈ, ೨೫ಕ್ಕೆ ೮ ಆಣೆ.

ಟೀಕಾ ತಾತ್ಪರ್ಯ ಸಹಿತ ಮಹಿಮ್ನ ಸ್ತೋತ್ರ	೦—೩—೦.
ಡಿ. ಮುಕುಂದಮಾಲಾ ಸ್ತೋತ್ರ	೦—೪—೦.
ವಚನ ಜ್ಯೋತಿಸ್ಸಂಗ್ರಹ	೦—೪—೦.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—

ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ಧರ್ಮಪ್ರಕಾಶ ಛಾಪಖಾನೆ,
ಮಂಗಳೂರು, ದ. ಕ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಳಾಸ (ಪತ್ತೆ)☞

ವೇದವಾಹಿನೀ ಆಫೀಸ್,
ಶಂಕರಪುರ,
ಬೆಂಗಳೂರು ಸಿಟಿ.

ಶ್ರೀ ರಾಮಕೃಷ್ಣ ವಿವೇಕಾನಂದ ವಚನಾಮೃತವು.

ಅಭಿನವ ಭರತಖಂಡದ ಪರಮ ಗುರುಗಳಾಗಿಯೂ, ಭಕ್ತಿ ಜ್ಞಾನ ಯೋಗ ವೈರಾಗ್ಯಗಳಲ್ಲಿ ಅದ್ವಿತೀಯರಾಗಿಯೂ, ವೇದ ವೇದಾಂತ ಮಹಮ್ಮದೀಯ ಮತ್ತು ಕ್ರೈಸ್ತಮತಗಳಲ್ಲಿ ಪಾರಂಗತರಾಗಿಯೂ, ಬ್ರಹ್ಮನಿಷ್ಠರಾಗಿಯೂ, ಆತ್ಮವಿದರಾಗಿಯೂ, ಅವತಾರ ಪುರುಷರಾಗಿಯೂ ಇದ್ದ ಶ್ರೀ ರಾಮಕೃಷ್ಣ ಪರಮಹಂಸರವರ ಸೂಕ್ತಿ ಮುಕ್ತಾವಲಿಯೂ, ಅವರ ಶಿಷ್ಯರಾಗಿ, ಪ್ರಾಚ್ಯ ಪಾಶ್ಚಾತ್ಯ ವಿದ್ಯೆಗಳಲ್ಲಿ ಪಂಡಿತರಾಗಿ, ಅಮೇರಿಕಾ ಯೂರೋಪ್‌ಖಂಡಗಳಲ್ಲಿ ಸನಾತನಧರ್ಮದ ಉತ್ಕೃಷ್ಟತೆಯನ್ನು ಕುರಿತೂ ಉತ್ತಮೋಪನ್ಯಾಸ ಮಾಡಿ, ಜಗದ್ಗುರುಗಳಾಗಿ, ಭಾರತೀಯರ ಪ್ರಕೃತ ಧರ್ಮಗಳನ್ನು ತಿಳಿಸಿ, ದೇಶಭಕ್ತಾಗ್ರೇಸರರಾಗಿದ್ದ ಶ್ರೀ ವಿವೇಕಾನಂದ ಸ್ವಾಮಿಗಳವರು ಬರೆದ ಕಾಗದಗಳ ಮತ್ತು ಉಪನ್ಯಾಸಗಳ ಸಾರಾಂಶವೂ ಲಲಿತವಾದ ಹೊಸಗನ್ನಡದಲ್ಲಿ ಬರೆಯಲ್ಪಟ್ಟವೆ. ಅದರಲ್ಲಿ ಆಸ್ತಿಕ, ಬ್ರಂಲಕ್ಷಣ, ಮೋಕ್ಷೋಪಾಯ, ಭಕ್ತಿ, ವಿರಕ್ತಿ. ಮತ ಮತಾಂತರಗಳು ಮುಂತಾದ ಪಾರಮಾರ್ಥಿಕ ವಿಷಯಗಳೂ, ಭಾರತೀಯರ ಸ್ಥಿತಿ, ಕರ್ತವ್ಯ, ಇತರ ಜನಾಂಗಗಳ ನಾಗರಿಕತೆ ಮುಂತಾದ ಲೌಕಿಕ ವಿಷಯಗಳೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಪ್ರತಿಯೊಬ್ಬ ದೇಶಾಭಿಮಾನಿಯೂ, ಮತಾಭಿಮಾನಿಯೂ, ಆಸ್ತಿಕನೂ ಮುಮುಕ್ಷುವೂ ಈ ಗ್ರಂಥದ ಒಂದು ಪ್ರತಿಯನ್ನಾದರೂ ಇಟ್ಟುಕೊಂಡಿರಬೇಕು. ಇದರಲ್ಲಿ ಆ ಸದ್ಗುರುಗಳಿಬ್ಬರ ಸಂಸ್ಕೃತ ಕರ್ಣಾಟಕ ಸ್ತೋತ್ರಗಳೂ ಜೀವನಚರಿತ್ರೆಗಳೂ ಭಾವಚಿತ್ರಗಳೂ ಅಡಗಿವೆ. ಸರ್ವರಿಗೂ ಸಂಗ್ರಾಹ್ಯ.—ಬೇಗನೆ ಬರೆಯಿರಿ

ವಿಳಾಸ:—ಮ್ಯಾನೇಜರ್,

"ಸುಮತಿ ಗ್ರಂಥಮಾಲಾ"ಆಫೀಸು
ಬೆಂಗಳೂರು ಸಿಟಿ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯು ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ ,, ,,	6—0—0	B ಅರಗಜ ,, ,,	1—0—0
ಕಸ್ತೂರಿ ಬತ್ತಿ ,, ,,	3—0—0	ಕಸ್ತೂರಿ ಬಿಲ್ಲೆ,, ,,	2—0—0
ಜವಾಜಿ ಬತ್ತಿ ,, ,,	2—0—0	ಜವಾಜಿ ಬಿಲ್ಲೆ,, ,,	1—0—0
ಪುಣಗಿನ ಬತ್ತಿ ,, ,,	1—8—0	ಕೇಸರಿ ಬಿಲ್ಲೆ ,, ,,	0—8—0
A ಪನ್ನೀರ್ ಬತ್ತಿ ,, ,,	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ ,, ,,	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:—

ಮ. ಟ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—

ಎನ್. ಎಂ. ಸುಬ್ಬಾರಾವ್,
"ಸುಗಂಧವಿಲಾಸ"
ಮಂಗಳೂರು.



14 ಕ್ಯಾರ್ರು ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ನಮ್ಮಲ್ಲಿ ಅನೇಕ ನಮೂನೆಗಳಲ್ಲಿ (ಅಂದರೆ) ಇಂಗ್ಲೀಷು, ಕನ್ನಡ, ಬಾಳಬಂದು, ಉರುದು, ಅರವ, ತೆಲುಗು ಈ ಎಲ್ಲಾ ಭಾಷೆಗಳಲ್ಲಿಯೂ ರಬ್ಬರು ಮೊಹರು ತಯಾರುಮಾಡುತ್ತೇವೆ. ಬೇಕಾದವರು ಬರದು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ರಬ್ಬರು ಮೊಹರುಗಳ ನಮೂನೆ ನೋಡಬೇಕಾದವರು ನಮ್ಮ ಕಂಪೆನಿಗೆ ಬರದರೆ ಕ್ಯಾಟಲಾಗ್ ರವಾನಿಸುತ್ತೇವೆ. ಇದೂ ಅಲ್ಲದೆ ನಮ್ಮ ಕಂಪೆನಿಯಲ್ಲಿ ತರಹೆವಾರಿ ಫೌಂಟನ್‌ಪೆನ್‌ಗಳೂ ಮತ್ತು ಜರ್ಮನ್ ಅಮೇರಿಕಾ ದೇಶದ ಸುವಾಸನೆಯುಳ್ಳ ಸೆಂಟ್ಸ್ ಎಂಬ ಹೂವ್ವಿನ ಸಾರಗಳು ಮಾರಲ್ಪಡುತ್ತವೆ. ಇದರ ಕ್ರಯ ಬುಡ್ಡಿ 1ಕ್ಕೆ 1—0—0. ವಿ.ಪಿ. ಚಾರ್ಜು ಅಲಾಯಿದ.

ಏಜಂಟುಗಳು ಬೇಕಾಗಿವೆ. ಅಧಿಕ ಲಾಭವುಂಟು.

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

☞ ಮಂಗಳೂರು, ಶುಕ್ರವಾರ ತಾರೀಕು 8ನೇ ಮಾರ್ಚ್ 1912. ☜

ಇಂಡ್ಯಾಸರ್ಕಾರದ ಜಮಾ ಖರ್ಚಿನ ಅಂದಾಜು ಪಟ್ಟಿ.

ಕಳದ ಶುಕ್ರವಾರ ಇಂಡ್ಯಾ ಸರಕಾರದ ಖಜಾನಾ ಮೆಂಬರರಾದ ಸರ್ ಗ್ಯಾಪ್ಲೀಟ್ ವುಡ್ ವಿಲ್ಸನರವರು ವರ್ಷಾವಧಿಯ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನು ಕೌನ್ಸಿಲ ಮುಂದೆ ಇರಿಸಿದರು. ಈ ಪಟ್ಟಿಯಲ್ಲಿ ಈ ಆಫೀಶಿಯಲ್ ವರ್ಷದ ಜಮಾ ಖರ್ಚಿನ ಗೋಶ್ವಾರೆಯೂ ಬರುವ ವರ್ಷದ ಜಮಾ ಖರ್ಚಿನ ಅಂದಾಜುಗಳೂ ಕೊಟ್ಟವೆ. ಹಿಂದುಸ್ಥಾನದ ಕಂದಾಯದಲ್ಲಿ ಭೂತೆರಿಗೆಯು ಮುಖ್ಯವಾದ ಆದಾಯಮೂಲವಾಗಿರುವದರಿಂದಲೂ ಅನಾವೃಷ್ಟಿ ಅತಿವೃಷ್ಟಿಗಳಿಂದ ಈ ತೆರಿಗೆಯು ಬಲುಮಟ್ಟಿಗೆ ಅಸ್ಥಿರ ಸ್ವಭಾವದ್ದಾಗಿರುವದರಿಂದಲೂ ಜಮಾ ಖರ್ಚಿನ ಅಂದಾಜುಗಳನ್ನು ಈ ವಿಷಯಕ್ಕೆ ಲಕ್ಷ ಕೊಟ್ಟು ನಿಶ್ಚಯಿಸಬೇಕಾಗುವದು. ಹಾಗೆ ಕಳದ ಅಗೋಸ್ತು ತಿಂಗಳಲ್ಲಿ ಉತ್ತರ ಹಿಂದುಸ್ಥಾನ ಶೀಮೆಗಳಲ್ಲಿ ಮಳೆಯಾಗದೆ ಕಳದ ೩೪ ವರುಷಗಳಿಂದ ಬಾರದ ತರದ ಕ್ಷಾಮ ಬೀಳುವ ಸಂಭವವಾಯಿತು. ಆದರೆ ಕೆಲವು ಸಮಯದಲ್ಲಿ ದೈವವಶಾತ್ ಒಳ್ಳೇ ಮಳೆ ಗರೆದ್ದರಿಂದ ತೃಪ್ತಿಕರವಾದ ಬೆಳೆಯಾಯಿತು. ಆದರೂ ಈ ಮೊದಲು ನಷ್ಟವಾದ ಬೆಳೆಯ ನಿಮಿತ್ತ ಸರಕಾರಕ್ಕೆ ಕಂದಾಯದಲ್ಲಿ ಮುಂಚೆ ಮಾಡಿದ ಅಂದಾಜಿಗಿಂತ ೯೬೦ ಸಾವಿರ ಪವನು ಕಡಿಮೆಯಾಯಿತು.

ಆದರೆ ಅಫೀಮು ವ ವ್ಯಾಪಾರ ವಹಿವಾಟಗಳ ಮೂಲಕ ಅಂದಾಜಿಗಿಂತ ವಿಶೇಷ ಲಾಭ ದೊರಕಿದೆ. ಆದ್ದರಿಂದ ಕಳದ ವರ್ಷದ ಅಂದಾಜಿಪಟ್ಟಿಯಲ್ಲಿ ೭೮ ಮಿಲ್ಯ ಪವನು ಆದಾಯವೆಣಿಸಿದ್ದರೂ ನಿಜವಾಗಿ ೮೧॥ ಮಿಲ್ಯ ದೊರಕುವ ಹಾಗಿದೆ. ಖರ್ಚು ೭೯ರಿಂದ ೭೮ಕ್ಕೆ ಇಳದ್ದರಿಂದ ೧ಮಿಲ್ಯ ಪವನು ಉಳದದೆ. ಈ ಸಿಲುಕಿನಲ್ಲಿ ೫೬೬ ಸಾವಿರ ಪವನುಗಳನ್ನು ಪ್ರಜಾಹಿತಕರ ಏರ್ಪಾಡುಗಳಲ್ಲಿ ವಿನಿಯೋಗಿಸುವರು. ಹ್ಯಾಗಂದರೆ ೩೩೩ ಸಾವಿರವನ್ನು ಆರೋಗ್ಯಕರ ವ್ಯವಸ್ಥೆಗಳಲ್ಲಿಯೂ ೧೩೩ ಸಾವಿರವನ್ನು ವ್ಯವಸಾಯಿಕ ಅಭಿವೃದ್ಧಿಯಲ್ಲಿಯೂ ೪೦ ಸಾವಿರವನ್ನು ಆರೋಗ್ಯಶಾಸ್ತ್ರ ಶೋಧನೆಯಲ್ಲಿಯೂ ೩೩ ಸಾವಿರವನ್ನು ಉಷ್ಣವಲಯ ಔಷಧಾಲಯ ಸ್ಥಾಪನೆಗೂ ೨೭ ಸಾವಿರವನ್ನು ಬರ್ಮಾ ಮುಂಬಾಯಿ ಪ್ರಾಂತ್ಯಗಳ ಪರಿಶೋಧನಾಲಯಗಳಿಗೋಸ್ಕರವೂ ಉಪಯೋಗಿಸುವರು. ದರ್ಬಾರು ಮಹೋತ್ಸವ ನಿಮಿತ್ತವೂ ವ್ಯಾಪಾರದ ಅಭಿವೃದ್ಧಿ ನಿಮಿತ್ತವೂ ರೈಲ್ವೆ ಚಲಾವಣೆಯೂ ಕಸ್ಟಮ್ಸ್ ವಗೈರೆ ಸುಂಕಗಳ ಮುನಾಫೆಯೂ ಹೆಚ್ಚಿ ಆ ಮುಖಾಂತರ ಸರಕಾರಕ್ಕೆ ಕಳದ ಕಾಲ ೧,೮೦೦,೦೦೦ ಪವನುಗಳು, ಚೀನಾ ದೇಶದಲ್ಲಿ ಅಫೀಮಿಗೆ ಕ್ರಯವೇರಿದ್ದರಿಂದ ಆ ಮೂಲಕ ೧,೬೦೦,೦೦೦ ಪವನುಗಳು ಆದಾಯವಾದವು. ಮೇಲೆ ಕಾಣಿಸಿದ ೩॥ ಮಿಲ್ಯ ಸಿಲುಕಿನಲ್ಲಿ ೫೬೬ ಸಾವಿರ ಈ ಮೊದಲು ವಿವರಿಸಿದ ಪ್ರಕಾರ ವಿನಿಯೋಗಿಸಲ್ಪಟ್ಟು ಉಳದ್ದನ್ನು ದರ್ಬಾರು ವರಗಳ ನಿಮಿತ್ತವೂ ವಂಗ ಸಂಯೋಜನದ ದೆಶೆಯಿಂದ ಬಂಗಾಳ ಅಸ್ಸಾಮು ಸಂಸ್ಥಾನಗಳನ್ನು ವ್ಯವಸ್ಥೆಪಡಿಸುವದರಲ್ಲಿಯೂ ಬರ್ಮಾ ದೇಶದ ಮಾರ್ಗ ಮೊದಲಾದವುಗಳಲ್ಲಿಯೂ ಮದ್ರಾಸು ಮುನಿಸಿಪಾಲಿಟಿಯ ನೀರು ಸರಬರಾಯಿ ಕಷ್ಮಲ ಚರಂಡಿಗಳಲ್ಲಿಯೂ ವೆಚ್ಚ ಮಾಡುವರು.

ಖರ್ಚು ಅಂದಾಜಿಗಿಂತ ೧ ಮಿಲಿಯ ಕಡಿಮೆ ಬಿತ್ತು. ಇದು ಮುಖ್ಯವಾಗಿ ಅಫೀಮು ಇಲಾಖೆಯಲ್ಲಿಯೂ ದರ್ಬಾರು ಉತ್ಸವಗಳಲ್ಲಿಯೂ ಕಾಣಬರುವದು. ಅಫೀಮು ಇಲಾಖೆಯ ಆಡಳಿತೆಯನ್ನು ಜಾಗರೂಕತೆಯಿಂದ ನಡಿಸಿದ್ದರಿಂದಲೂ ಅಫೀಮು ಬೆಳೆಯ ಫಲದಿಂದಲೂ ಸರಕಾರಕ್ಕೆ ೪೪೫ ಸಾವಿರ ಪವನು ಉಳಿಯಿತು. ದರ್ಬಾರು ಉತ್ಸವಗಳಿಗೆ ಇಂಡ್ಯಾ ಸರಕಾರದವರು ಸಿವಿಲ್ ಇಲಾಖೆಯಲ್ಲಿ ೬೩೩ ಸಾವಿರ ಪವನುಗಳನ್ನು ಮಿಲಿಟರಿ ಇಲಾಖೆಯಲ್ಲಿ ೩೩೩ಸಾವಿರ ಪವನುಗಳನ್ನು ಅಂದಾಜು ಮಾಡಿದ್ದರು. ಆದರೆ ನಿಜವಾಗಿ ಸಿವಿಲ್ ಇಲಾಖೆಯಲ್ಲಿ ೫೭೦ ಸಾವಿರವೂ ಮಿಲಿಟರಿ ಇಲಾಖೆಯಲ್ಲಿ ೨೦೭ ಸಾವಿರವೂ ಖರ್ಚಾಗಿವೆ. ಅಗೋಸ್ತು ತಿಂಗಳಲ್ಲಿ ಉತ್ತರ ಹಿಂದುಸ್ಥಾನದ ಪ್ರದೇಶಗಳಲ್ಲಿ ಮಳೆ ಬಾರದ್ದರಿಂದ ಅನಾವೃಷ್ಟಿಯನ್ನು ಹೆದರಿ ದರ್ಬಾರು ಕಾಲದಲ್ಲಿ ನಡೆಯುತಕ್ಕ ಸೈನ್ಯದ ದೇಖಾವೆಗಳನ್ನು ಬಲುಮಟ್ಟಿಗೆ ವಜಾಮಾಡಿದ್ದರಿಂದ ಆ ಶಿರನಾಮೆಯಲ್ಲಿ ಆದಾಯವಾಯಿತು.

ಮೇಲೆ ಸಂಗ್ರಹವಾಗಿ ಹೇಳಿದ ಆದಾಯ ವೆಚ್ಚಗಳು ಈಗ ನಡಿಯುವ ೧೯೧೧—೧೯೧೨ನೇ ಆಫಿಶಿಯಾಲ್ ವರ್ಷಕ್ಕೆ ಸಂಬಂಧಿಸುವವು. ಬರುವ ಏಪ್ರಿಲ್ ೧ನೇ ತಾರೀಕಿನಿಂದ ಸುರುವಾಗುವ ೧೯೧೨—೧೯೧೩ನೇ ವರ್ಷದ ಅಂದಾಜು ಪಟ್ಟಿಯನ್ನು ಸಹಾ ಸರ್ ಗ್ಯಾಪ್ಲೀಟ ವುಡ್ ವಿಲ್ಸನವರು ವಿವರಿಸಿ ಹೇಳಿದರು. ಈ ಪಟ್ಟಿ ಪ್ರಕಾರ ಬರುವ ವರ್ಷ ಸರ್ಕಾರಕ್ಕೆ ೭೯॥ ಮಿಲ್ಯ ಪವನು ಆದಾಯವೂ ೭೮। ಮಿಲ್ಯ ಖರ್ಚೂ ಎಣಿಸೋಣಾಗಿದೆ. ಈ ಪೈಕಿ ಅಫೀಮಿನಿಂದ ೫೪೩ ಲಕ್ಷ ಪವನು ಆದಾಯ ಅಂದಾಜು ಮಾಡಿಯದೆ. ರೇಲ್ವೆ ಕಸ್ಟಮ್ಸಗಳಲ್ಲಿ ೬೦೫ ಮತ್ತು ೧೪೬ ಸಾವಿರ ಪವನು ಕುಂದನ್ನೂ ಉಪ್ಪು ಸುಂಕದಿಂದ ೩೧ ಸಾವಿರ, ಠಸ್ಸೆಯಿಂದ ೭೧ ಸಾವಿರ, ಭೂಕಂದಾಯದಿಂದ ೪೦೩ ಸಾವಿರ ಕಳದ ವರ್ಷಕ್ಕಿಂತ ಹೆಚ್ಚಿಗೆಯನ್ನೂ ಹಿಡಿದಿರುವರು.

ಖರ್ಚಿನಲ್ಲಿ ಕಳದ ವರ್ಷಕ್ಕಿಂತ ೧। ಮಿಲ್ಯ ಪವನು ಹೆಚ್ಚು ತೋರುವದು. ಆಗರೆ ಈ ಖರ್ಚು ಮುಖ್ಯವಾಗಿ ಪ್ರಜೆಗಳ ಆರೋಗ್ಯಕ್ಕೂ ವಿದ್ಯಾಭ್ಯಾಸಕ್ಕೂ ವಿನಿಯೋಗಿಸಲ್ಪಡುವದರಿಂದಲೂ ಸೈನ್ಯದ ಖರ್ಚಿನಲ್ಲಿ ೫೧೧ ಸಾವಿರ ಪವನು ತಗ್ಗಿಸುವದರಿಂದಲೂ ಖರ್ಚಿನ ವಿಷಯ ಜನರು ಗುಣುಗುಟ್ಟುವ ಹಾಗಿಲ್ಲ. ಈ ಎರಡು ವಿಷಯಗಳಿಗೆ ಸರ್ಕಾರದವರು ಹೆಚ್ಚಿಗೆ ಲಕ್ಷಕೊಟ್ಟು ಪ್ರಜೆಗಳ ವಿದ್ಯಾಭ್ಯಾಸ ಆರೋಗ್ಯಗಳ ಬಗ್ಯೆ ಪ್ರಜೆಗಳ ತೆರಿಗೆಯ ಹಣವನ್ನು ವಿನಿಯೋಗಿಸಬೇಕೆಂದು ಮಿ. ಗೋಖಲೆಯವರು ಆಗ್ಯಾಗ್ಯೆ ಸರಕಾರದವರನ್ನು ಕೇಳಿಕೊಳ್ಳುತ್ತಿದ್ದರಷ್ಟೆ. ಸರ್ ಗ್ಯಾಪ್ಲೀಟ ವುಡ್ ವಿಲ್ಸನರಂತಹ ವಿವೇಕಶಾಲಿಗಳು ಇವರ ವಾದವನ್ನು ಮನ್ನಿಸಿ ಇದಕ್ಕನುಗುಣವಾಗಿ ಖರ್ಚನ್ನು ವ್ಯವಸ್ಥೆ ಪಡಿಸಿರುವರು. ನಮ್ಮ ವ್ಯಾಸರಾಯ ಪ್ರಭುಗಳು ಸಹಾ ಪ್ರಜಾಶಿಕ್ಷಣವನ್ನು ಮುಖ್ಯ ಉದ್ದಿಶ್ಯವಾಗಿಟ್ಟಿರುವರೆಂದು ಸರ್ ಗ್ಯಾಪ್ಲೀಟರವರೇ ಅಪ್ಪಣೆಕೊಡಿಸಿದರು. ಮತ್ತು ಲಾರ್ಡ್ ಹಾರ್ಡಿಂಗರವರು ಅಧಿಕಾರವನ್ನು ವಹಿಸಿದೊಡನೆ ಪ್ರಜೆಗಳ ಮೇಲೆ ತೆರಿಗೆಯ ಭಾರವನ್ನು ಹೆಚ್ಚಿಸಕೂಡದೆಂದೂ ಪ್ರಜಾ ವಿದ್ಯಾಭ್ಯಾಸಕ್ಕೆ ಲಕ್ಷ ಕೊಡಬೇಕೆಂದೂ ಸರ್ ಗ್ಯಾಪ್ಲೀಟರವರಿಗೆ ತಿಳಿಸಿದರಂತೆ. ಇಂತಹ ವ್ಯಾಸರಾಯಿ ಪ್ರಭುಗಳ ಮತ್ತು ಫ್ಯಾನೇನ್ಸ್ ಮೆಂಬರರ ಕಾಲದಲ್ಲಿ ಇಂಡಿಯಾ ದೇಶದ ಆಡಳಿತೆಯಲ್ಲಿ ಮೇಲ್ಮೆಯನ್ನು ಎದುರುನೋಡ ಕಾರಣವದೆ.

ಪಶ್ಚಿಮ ಕರಾವಳಿಯಲ್ಲಿ ಶುಂಠಿ ಸಾಗುವಳಿ ಮಾಡುವ ವಿಷಯದ ಟಿಪ್ಪಣಿ.

ಶುಂಠಿ ಸಾಗುವಳಿ ಸಂಬಂದ ಮಾಹಿತಿಗಳನ್ನು ತಿಳಿಸಬೇಕೆಂಬದಾಗಿ ಹಲವರು ನಮಗೆ ಪತ್ರ ಬರೆದು ಕೇಳಿಕೊಂಡಿರುವದರಿಂದ ಮದ್ರಾಸ್ ವ್ಯವಸಾಯ ಇಲಾಖೆಯುವರಿಂದ ಕಳುಹಿಸಲ್ಪಟ್ಟ ಶುಂಠಿ ಸಾಗುವಳಿ ವಿಷಯದ ಟಿಪ್ಪಣಿಯನ್ನು ಈ ಕೆಳಗೆ ಪ್ರಕಟಿಸಿದ್ದೇವೆ.

ಯೆರ್ನಾಡ ಎಂಬ ಊರು ಶುಂಠಿ ಸಾಗುವಳಿಯ ಮುಖ್ಯವಾದ ಪ್ರಾಂತ್ಯವು. ಈ ಸಾಗುವಳಿಯು ಈಗ ಮೆಲ್ಲಮೆಲ್ಲಗೆ ದಕ್ಷಿಣ ಮಲೆಬಾರಿನ ಇತರ ಪಾಂತ್ಯಗಳಿಗೆ ಹಬ್ಬುತ್ತಿರುತ್ತದೆ. ಆದರೂ, ಯಥೇಷ್ಟವಾದ ಹಸಿ ಎಲೆಯು ಹತ್ತರಲೇ ಒದಗಿದ್ದು ವಿಸ್ತೀರ್ಣವಾದ ಯೋಗ್ಯ ಭೂಮಿಗಳಿರುವ ಉತ್ತರ ಮಲೆಬಾರಿನಲ್ಲ್ಯಾಗಲೀ ದಕ್ಷಿಣ ಕನ್ನಡಾ ಜಿಲ್ಲೆಯಲ್ಲ್ಯಾಗಲೀ ಈ ಸಾಗುವಳ್ಳಿಯು ಹೆಚ್ಚುಮಟ್ಟಿಗೆ ವಿಸ್ತರಿಸಿರುವದಿಲ್ಲಾವೆಂಬದು ಚಿಂತನೆಗೆ ಕಾರಣವಾಗಿಯದೆ.

ಈ ಕೆಳಗೆ ಕಾಣಿಸಿರುವ ಕಾರಣಗಳಿಂದ, ಹಸಿ ಎಲೆಯು ಶುಂಠಿ ಸಾಗುವಳ್ಳಿಗೆ ಒಂದು ಮುಖ್ಯವಾದ ಅವಶ್ಯಕತೆಯು—ಈ ಪೈರು ನಿಸ್ಸಂಶಯವಾಗಿ ಬಹಳ ಲಾಭವನ್ನು ಕೊಡುವದು; "ಯೆರ್ನಾಡಿನ ಅರ್ಧ ಭಾಗವು (ಮುರ ಕಲ್ಲು) ಬಂಡೆಯೂ, ಈ ಬಂಡೆಯ ಅರ್ಧ ಭಾಗವು ಭಂಗಾರವೂ" ವೆಂಬ ಮಲೆಯಾಳಿ ಭಾಷೆಯ ಹಳೇಗಾದೆಯು ಮೇಲಿನ ಹೇಳಿಕೆಗೆ ಸಾಕ್ಷ್ಯವಾಗಿರುತ್ತದೆ. ಈ ಪೈರಿನ ಸಾಗುವಳ್ಳಿಯಿಂದ ಅಧಿಕ ಹುಟ್ಟುವಳ್ಳಿಯು ಬರುವದೆಂತ ಮೇಲೆ ಹೇಳಿದ ಗಾದೆಯ ಸಾರಾಂಶವಾಗಿರುತ್ತದೆ. ಸಾಧಾರಣ ತರದ ಬೆಟ್ಟು ಭೂಮಿಗಳಲ್ಲಿ ಅಂದರೆ ಉತ್ತರ ಮಲೆಬಾರಿನ,-ವ-ದಕ್ಷಿಣ ಕನ್ನಡಾ ಜಿಲ್ಲೆಯ ಗುಡ್ಡದ ಪಕ್ಕೆಗಳಲ್ಲಿ, ಈ ಪೈರಿನಿಂದ ೨೦೦-೩೦೦ ರೂಪಾಯಿ ಅಯಿನ ಆದಾಯವನ್ನು ಪಡೆಯ ಬಹುದು. ಈ ಪೈರಿಗೆ ಕಾಡು ಮೃಗಗಳು—ಯಾ—ಹೆಗ್ಗಣಗಳು ಮುಟ್ಟುವದಿಲ್ಲಾ. ಇದು ಈ ಪೈರಿನ ಸಾಗುವಳ್ಳಿಗೆ ಬಹಳ ಅನುಕೂಲವಾದ ಸಂಗತಿಯು.

ಈ ಪೈರಿಗೆ ಯುಕ್ತವಾದ ಮಣ್ಣು—ಶುಂಠಿ ಸಾಗುವಳ್ಳಿಗೆ, ಗರಸುಕಲ್ಲು ಇಲ್ಲದ ನಸುಕೆಂಪು ವರ್ಣದ ಜಿಗಟು ಗೋಡು (clay loam) ಭೂಮಿಯನ್ನು ವಾಡಿಕೆಯಾಗಿ

ಆರಿಸುತ್ತಾರೆ. ಆದರೆ ತಳಿಪರಂಬಾ ಫಾರ್ಮಿನಲ್ಲಿ, ಅಯೋಗ್ಯವೆಂದು ಎನ್ನಿಸಿಕೊಳ್ಳುವ, ವಿಶೇಷವಾಗಿ ಗರಸು ಕಲ್ಲಿನಿಂದ ಕೂಡಿದ ಮುರಕಲ್ಲಿನಿಂದ (Laterite) ಉಂಟಾದ ಕೆಂಪು ಮಣ್ಣುಗಳಲ್ಲಿ ಈ ಪೈರನ್ನು ಬೆಳಸಿದ್ದಲ್ಲಿ ಸಾರ್ಥಕವಾಗಿಯದೆ. ದಕ್ಷಿಣ ಕನ್ನಡಾ ಜಿಲ್ಲೆಯ ಕುಂದಾಪೂರಿನಲ್ಲಿ ಒಂದು ಬೆಳೆಯು ಮರಳುಗೋಡು ಸ್ವಭಾವದ ನೆಲ್ಲುಗದ್ದೆಯಲ್ಲಿ ಸಹಾ, ಈ ಪೈರು ನೆಟ್ಟಗೆ ಬಂದದ್ದನ್ನು ನೋಡಿದ್ದೇವೆ. ಆದದರಿಂದ, ಶುಂಠಿಯ ಸಾಗುವಳಿಯನ್ನು ಒಂದೇ ನಮೂನೆಯ ಭೂಮಿಗೆ ಮಾತ್ರ ನಿಬಂಧಿಸುವದು ಅವಶ್ಯವಿಲ್ಲಾವೆಂತ ತೋರುವದು. ಆದರೆ, ಈ ಪೈರಿಗೆ ಆರಿಸಲ್ಪಟ್ಟ ಭೂಮಿಯು ಆತಂಕವಿಲ್ಲದೆ ನೀರು ಹರದು-ಯಾ ಸೋಸಿ ಹೋಗುವಂಥಾ ಸ್ವಭಾವ ಉಳ್ಳದ್ದಾಗಿರುವದು ಅತೀ ಮುಖ್ಯ ಸಂಗತಿಯು.

ನೆಲವನ್ನು ಹದಗೊಳಿಸುವದು ಮತ್ತು ಬೀಜ ನಡುವದು—ಎರಡು ಕ್ರಮಗಳು ವಾಡಿಕೆಯಲ್ಲಿ ಅವೆ—

(1) ಭೂಮಿಯನ್ನು ಮುಂದಾಗಿ ಉತ್ತು ಬೇಸಿಗೆ ಕಾಲದಲ್ಲೆಲ್ಲಾ ಉಳುತ್ತಾ ಇರುವದು.

(2) ಸಾಮೆ ಪೈರನ್ನು ಕೊಯ್ದ ನಂತರ ಭೂಮಿಯನ್ನು ಬೀಳು ಬಿಟ್ಟು, ಮೊದಲು ಮಳೆಯು ಸುರಿದ ಕೂಡಲೇ 2-ಯಾ-3 ಸಾರಿ ಉತ್ತು ಮೇ- ಜೂನ ತಿಂಗಳಲ್ಲಿ ಬೀಜವನ್ನು ನಡುವದು, ಈ ಎರಡನೇ ಕ್ರಮವನ್ನು ಅಧಿಕ ಪಕ್ಷವಾಗಿ ಅನುಸರಿಸುತ್ತಾರೆ.

ಮೇ ತಿಂಗಳಲ್ಲಿ ಬೀಳುವ ಹನಿಗಳ ಆಧಾರದಿಂದ ಮಡಿಗಳನ್ನೂ ಕಾಲಿವೆಗಳನ್ನೂ ಮಾಡುತ್ತಾರೆ. ಮಡಿಗಳು 2-ಯಾ-3 ಅಡಿ ಅಗಲವಾಗಿಯೂ, ಭೂಮಿಯು ಸಮಮಟ್ಟಾಗಿದ್ದರೆ, 12 ಅಡಿ ಉದ್ದವಾಗಿಯೂ ಇರಬೇಕು. ಮಡಿಗಳ ಉದ್ದಳತೆಯನ್ನು ಭೂಮಿಯ ಇಳಿಜಾರಿನ ಸ್ಥಿತಿಗೆ ಸರಿಯಾಗಿ ಹೆಚ್ಚು ಕಮ್ಮಿ ಮಾಡಬೇಕಾಗುವದು. ಇಳಿಜಾರವು ಹೆಚ್ಚಾಗಿದ್ದರೆ, ಉದ್ದಳತೆಯು ಕಮ್ಮಿ ಮಾಡಬೇಕು. ನಂತರ ಮಡಿಗಳಲ್ಲಿ, ಒಂದು ಅಡಿ ಅಂತರವಾಗಿ ಸಣ್ಣ ಕುಣಿಗಳನ್ನು ಮಾಡಿ, ಈ ಕುಣಿಗಳಲ್ಲಿ, ಚೆನ್ನಾಗಿ ಕೊಳತ ಮತ್ತು ನೆಟ್ಟಗೆ ಒಣಗಿದ ಶಗಣಿ ಮತ್ತು ಬೂದಿಯ ಮಿಶ್ರಿತ ಗೊಬ್ಬರದ ಒಂದು-ಯಾ—ಎರಡು ಹಿಡಿಯನ್ನು ತುಂಬಿಸುತ್ತಾರೆ. ಈ ಗೊಬ್ಬರದ ಮೇಲೆ, 2-ಯಾ-3 ಮೊಳಕೆಗಳಿರುವ ಶುಂಠಿಯ ಬೀಜಗಳನ್ನೂ ಅವುಗಳ ಮೊಳಕೆಗಳನ್ನೂ ಮೇಲಕ್ಕೆ ಮೊಖಮಾಡಿ, ಪ್ರತಿ ಒಂದು ಕುಣಿಯಲ್ಲಿಡುತ್ತಾರೆ. ಮತ್ತು ಈ ಕುಣಿಗಳ ಬದಿಯಿಂದ ಮಣ್ಣನ್ನು ತೆಗದು ಬೀಜವನ್ನು ತೆಳ್ಳಗಾಗಿ ಮುಚ್ಚುತ್ತಾರೆ. ಮೂರು ಭಾಗ ಶಗಣಿ ಗೊಬ್ಬರಕ್ಕೆ ಒಂದು ಭಾಗ ಬೂದಿ ಮಿಶ್ರಮಾಡುವದು ವಾಡಿಕೆಯಾಗಿರುತ್ತದೆ. ಯೆರ್ನಾಡಿನ ಕೆಲವು ಕಡೆಗಳಲ್ಲಿ ಬಹಳ ಸ್ವಲ್ಪ ಬೂದಿಯನ್ನು ಮಿಶ್ರಮಾಡುವದುಂಟು. 15 ಭಂಡಿ ಶಗಣಿ ಗೊಬ್ಬರವೂ 5 ಭಂಡಿ ಬೂದಿಯೂ ಒಂದು ಏಕ್ರೆಗೆ ಸಾಧಾರಣವಾಗಿ ಸರಿಯಾದ ರಾಶಿಯು. ಶಗಣಿ ಗೊಬ್ಬರವನ್ನು ಮುಂಚಿತವಾಗಿ ಚೆನ್ನಾಗಿ ಒಣಗಿಸಿ, ಹುಡಿ ಮಾಡಿಡಬೇಕು. ಅಜಾಗ್ರತೆಯಲ್ಲಿಡಲ್ಪಟ್ಟ ಶಗಣಿ ಗೊಬ್ಬರದಲ್ಲಿ ಕ್ರಿಮಿ ಕೀಟಗಳು ಆಸ್ಪದ ಕೊಳ್ಳುತ್ತವೆ. ಚನ್ನಾಗಿ ಒಣಗಿಸಲ್ಪಟ್ಟ ಗೊಬ್ಬರವು ಅವುಗಳಿಗೆ ಆಸ್ಪದ ಕೊಡುವದಿಲ್ಲ. ಬೀಜ ನಟ್ಟನಂತರ ಎಲ್ಲಾ ಮಡಿಗಳನ್ನು ಹಸಿ ಎಲೆಯಿಂದ ಚನ್ನಾಗಿ ಮುಚ್ಚಬೇಕು. ಕಾಲಿವೆಗಳನ್ನು ಸರಿಪಡಿಸಿ, ಕಾಲಿವೆಗಳಿಂದ ಕೆತ್ತಿದ ಮಣ್ಣನ್ನು ಮಡಿಗಳ ಅಂಚುಗಳಲ್ಲಿ ಹಾಕಿದರೆ ಮಡಿಗಳ ಮೇಲ್ಭಾಗವು ಮಳೇ ನೀರಿಗೆ ಕೊರದು ಹೋಗುವದಿಲ್ಲಾ. ಬೇಗನೆ ಕೊಳತು ಹೋಗುವಂಥಾ ಯಾವ ತರದ ಎಲೆಯನ್ನಾದರೂ ಉಪಯೋಗಿಸಬಹುದು. ಕಾಸರ್ಕ ಮರ, ನಲ್ಲಿಮರ, ಪುಲ್ಲಂಗಿಮರ, ವೆಮ್ಮಾರತು, ಕಂಬೀಪುಳ' ಇವುಗಳ ಎಲೆಯನ್ನು ವಾಡಿಕೆಯಾಗಿ ಆರಿಸುತ್ತಾರೆ. ಕಾಸರ್ಕ ಎಲೆಯು, ತಂಪು ಉಂಟುಮಾಡುವದರಿಂದಲೂ ಪೈರನ್ನು ಕ್ರಿಮಿಕೀಟಗಳಿಂದ ಕಾಪಾಡುವದರಿಂದಲೂ ಅತೀ ಶ್ರೇಷ್ಟವೆಂದೆನ್ನಿಸಿಕೊಳ್ಳುತ್ತದೆ. 30-ಯಾ-35 ದಿವಸಗಳಿಗೊಮ್ಮೆ ಒಟ್ಟಿಗೆ ಮೂರು ಸಾರಿ, ಮಡಿಗಳನ್ನು ಹಸಿ ಎಲೆಯಿಂದ ಮುಚ್ಚಿ ಕಾಲಿವೆಗಳನ್ನು ಸರಿಪಡಿಸಬೇಕು. ಹಸಿ ಎಲೆಯಿಂದ ಮುಚ್ಚುವ ಮುಂಚೆ, ಪ್ರತಿಸಾರಿ, ಮಡಿಯಲ್ಲಿ ಕೈಕಳೆ ತೆಗದು, ಕೊಳಿತು ಹೋಗದ ಹಳೇ ಕಸಕಡ್ಡಿಗಳನ್ನು ತೆಗದು ಬಿಸಾಡಬೇಕು. ಹಸಿ ಎಲೆಯನ್ನು ಮುಚ್ಚುವದರಿಂದ ಕೆಳಗಿನ ಪ್ರಯೋಜನಗಳಿವೆ:—

(1) ಮಳೆಯಿಂದಲೂ, ಬಿಸಿಲಿನಿಂದಲೂ ಮಡಿಗಳನ್ನು ಕಾಪಾಡುತ್ತದೆ.

(2) ಪೈರಿಗೆ ಬೇಕಾದ (ಸಸ್ಯ) ಆಹಾರವನ್ನು ಒದಗಿಸುತ್ತದೆ.

(3) ಮಣ್ಣಿನೊಳಗಿನ ನೀರು ಆಂತಕವಿಲ್ಲದೆ ಸೋಸಿ ಹೋಗುವ ಹಾಗೆ ಸಹಾಯಮಾಡುತ್ತದೆ.

(4) ಅಧಿಕ ಮಳೆಯು ಸುರಿದು, ಭೂಮಿಯನ್ನು ತಂಪುಗೊಳಿಸುವ ಕಾಲದಲ್ಲಿ (ಜುಲ್ಯಾ—ಅಗೋಸ್ತ) ಈ ಎಲೆಯ ಕೊಳೆಯುವಿಕೆಯಿಂದ, ಭೂಮಿಯು ಬೆಚ್ಚಗೆ ಆಗುತ್ತದೆ.

ಹಸಿ ಎಲೆಗಳನ್ನು ಉಪಯೋಗಿಸುವಾಗ್ಯೆ ಕ್ರಿಮಿ ಕೀಟಗಳು ತಗಲಿದ ಎಲೆಗಳನ್ನು ತಿರಸ್ಕರಿಸುವದು ಉತ್ತಮ.

ಮಣ್ಣಿನಿಂದ ನೀರು ಸೋಸಿ ಹೋಗುವಿಕೆಯು—ಎಲ್ಲಾ ಪೈರುಗಳಿಗೆ ನೀರು ಕಟ್ಟುವದು ಎಷ್ಟು ಅವಶ್ಯವೋ ಅಷ್ಟೇ ಮಣ್ಣಿನೊಳಗಿನ ನೀರು ಸೋಸಿ ಹೋಗುವದು ಅಗತ್ಯವು ಎಂಬದು ವ್ಯವಸಾಯದ ಒಂದು ಮೂಲ ಸೂತ್ರವಾಗಿಯದೆ. ಮಣ್ಣಿನೊಳಗಿನ ನೀರು ಸೋಸಿ ಹೋಗುವದು, ಕಂದ ಮೂಲ—ಯಾ—ಗಡ್ಡೆ ಪೈರುಗಳಿಗೆ ಇನ್ನೂ ವಿಶೇಷವಾಗಿ ಅಗತ್ಯವು. ಶುಂಠಿ ಪೈರಿನ ಗದ್ದೆಗಳಲ್ಲಿ ನೀರು ಆತಂಕವಿಲ್ಲದೆ ಹರದು-ಯಾ-ಸೋಸಿ ಹೋಗುವ ಹಾಗೆ ಜಾಗ್ರತೆ ತೆಗದುಕೊಳ್ಳತಕ್ಕದ್ದು. ಸುತ್ತಲಿರುವ ಕಾಲಿವೆಗಳನ್ನು ಯಾವಾಗಲೂ ಸ್ವಚ್ಛ ಸ್ಥಿತಿಯಲ್ಲಿಟ್ಟು, ಮಡಿಗಳಲ್ಲಿ ನೀರು ಕೊಳೆಯದ ಹಾಗೆ ನೋಡಬೇಕು. ಮಡಿಗಳಲ್ಲಿ ನೀರು ಕೊಳೆಯುವದಕ್ಕೆ ಬಿಟ್ಟರೆ ಪೈರಿಗೆ ರೋಗ ತಗಲುವದಲ್ಲದೆ, ಒಳಗೆ ಇರುವ ಗಡ್ಡೆ ಕೊಳತು ಹೋಗಿ, ಸಸಿಗಳು ಸಾಯುತ್ತವೆ.

ಕೊಯಲು (Harvest)—ನವಂಬರ ಅಂತ್ಯದಲ್ಲಿ ಪೈರು ಕೊಯಲಿಗೆ ಸಿದ್ಧವಾಗುವದು. ಈಶಾನ್ಯ ಮಳೆಯು ಹೆಚ್ಚಾಗಿ ಸುರಿದರೆ, ಕೊಯಲಿನ ಕಾಲವು ಸ್ವಲ್ಪ ಮುಂದರಿಸುವದು. ಎಲೆಗಳಲ್ಲೆಲ್ಲಾ ಅರಸಿನ ಬಣ್ಣದ ಬೊಟ್ಟುಗಳು ತೋರಿ, ಎಲೆಗಳ ಅಂಚುಗಳು ಒಣಗಿ ಹೋದ ಕೂಡಲೇ, ಪೈರು ಕೊಯಲಿಗೆ ಸಿದ್ಧವಾಗಿಯದೆ ಎನ್ನಬಹುದು, ಈ ಪೈರನ್ನು ಕೊಯ್ಯುವದು ಬಹಳ ಸುಲಭ. ಮಡಿಗಳನ್ನು ಅಗಿದು, ಗಡ್ಡೆಗಳನ್ನು ಜಾಗ್ರತೆಯಿಂದ ಒಟ್ಟು ಕೂಡಿಸಿ, ಗಡ್ಡೆಗಳಿಗೆ ತಗಲಿ ಇರುವ ಎಲೆಗಳನ್ನು ಬೇರುಗಳನ್ನು ವಿಂಗಡಿಸುವದು. ನೆಟ್ಟಗೆ ಇರುವ ಗಡ್ಡೆಗಳನ್ನು ಬೀಜಕ್ಕೆ ತೆಗದು ಇಡಬೇಕು.

ಶುಂಠಿಯನ್ನು ವಿಕ್ರಯಕ್ಕೆ ತಯಾರಿಸುವದು—ಗಡ್ಡೆಗಳನ್ನು ತೊಳದು ಅವುಗಳ ತೊಗಟನ್ನು ಕಬ್ಬಿನದ-ಯಾ-ಬಿದುರಿನ ಕತ್ತಿಗಳಿಂದ ತೆಗದು, ಕೂಡಲೆ ಚಾಪೆಗಳಲ್ಲಿ ಹಾಸಿ ಒಣಗಿಸಬೇಕು. ಎರ್ನಾಡಿನಲ್ಲಿ ಮಾಡುವ ಹಾಗೆ, ತೊಗಟನ್ನು ಸುಲಿಯುವ ಕೆಲಸವನ್ನು ಗುತ್ತಿಗೆಕೊಟ್ಟು ಮಾಡಿಸುವದು ಒಳ್ಳೇದು. ಒಣಗಲಿಕ್ಕೆ ಹಾಕಿದ ಶುಂಠಿ ಗಡ್ಡೆಗಳನ್ನು ಆಗ್ಯಾಗೆ ಮಗುಚಿ ಹಾಕಬೇಕು; ಆಗ್ಯೆ ಗಡ್ಡೆಗಳು ಪೂರ್ಣ ಒಣಗುವವು. ಸಾಧಾರಣವಾಗಿ ಒಂದು ಹಪ್ತೆ ವರೇಗೆ ಹೀಗೆ ಒಣಗಿಸಿದ ಮೇಲೆ, ಶುಂಠಿಯು ವಿಕ್ರಯಕ್ಕೆ ಸಿದ್ಧವಾಗುವದು. ಈ ಶುಂಠಿಯನ್ನು ಪರ ಬಂದರುಗಳಿಗೆ ಕಳುಹಿಸಲ್ಪಡುವ ಮುಂಚೆ, ಕಲ್ಲಿಕೋಟೆಯಲ್ಲಿರುವ ದೊಡ್ಡ ಸಾಹುಕಾರಿ ಸಂಘಗಳು, ಶುಂಠಿಗೆ ಬಿಳುವು ವರ್ಣವು ಬರುವ ಹಾಗೆ, ಅದನ್ನು ಘುಡಿ (Bleach) ಮಾಡುತ್ತಾರೆ. ಶುಂಠಿಯು ಒಣಗಿದ ಮೇಲೆ, ಶೇಕಡಾ 75ರಿಂದ 80ರ ವರೇಗೆ ತೂಕದಲ್ಲಿ ಲೋಪವಾಗುವದು. ಶ್ರೇಷ್ಟವಾದ ಹೊಸ ಭೂಮಿಗಳಲ್ಲಿ ಉಂಟಾದ ಶುಂಠಿಯ ಸಂಗತಿಯಲ್ಲಿ, ಈ ಲೋಪವು ಕಡಿಮೆ; ಯಾಕಂದರೆ, ಇಂಥಾ ಭೂಮಿಗಳಲ್ಲಿ ಉಂಟಾಗುವ ಶುಂಠಿಯು ಗಟ್ಟಿಯಾಗಿಯೂ ಮಜಭೂತಾಗಿಯೂ ಇರುವದು.

ಬೀಜವರಿ—ಎಕ್ರೆಗೆ 700ರಿಂದ 1,000 ರಾತ್ತು ವರೇಗೆ ಬೀಜ ಬೇಕಾಗುವದು. ಬೀಜವರಿಯ 8ರಿಂದ 30 ಪಾಲಷ್ಟು ಮಾಸುಲು ಯಾನೆ ಹುಟ್ಟುವಳಿ ಆಗುವದು. ದಕ್ಷಿಣ ಮಲೆಬಾರಿನಲ್ಲಿ ಸುವರ್ಣ ಗಡ್ಡೆ, ಮೆಣಸಿನ ಕಾಯಿ, ಅರಸಿನ, ಶಾಮೆ ಎಲೆ ಇವುಗಳನ್ನು ಶುಂಠಿ ಪೈರಿನ ನಡುವೆ ಮಿಶ್ರಮಾಡಿ ಬೆಳಿಸುತ್ತಾರೆ.

ಶುಂಠಿಯ ಬೀಜಕ್ಕೆ ತೆಗದಿಡುವ ಕ್ರಮ—ಗುಡಸಲಿನ—ಯಾ—ಛಾವಡಿಯ ಒಂದು ತಂಪಾದ ಸ್ಥಳವನ್ನು ಆರಿಸಿ, ಅದರಲ್ಲಿ ಒಂದು ಕುಣಿಯನ್ನು ತೋಡಿ ಆ ಕುಣಿಯ ಅಡಿಯಲ್ಲಿ ಸ್ವಲ್ಪ ಹೊಯಿಗೆಯನ್ನು ಆಗಲೀ, ನೆಲ್ಲಿನ ಉಮಿಯಾಗಲೀ, ಅಥವಾ ಇವೆರಡನ್ನೂ ಮಿಶ್ರಿತಮಾಡಿ ಆಗಲೀ, ಹಾಸಿ, ಅದರ ಮೇಲೆ ಗದ್ದೆಯಿಂದ ತೆಗೆದ ಹಾಗೆಯೇ ಶುಂಠಿ ಗಡ್ಡೆಗಳನ್ನು ಇಟ್ಟು, ಕುಣಿಯನ್ನು ಹಲಿಗೆಗಳಿಂದ ಮುಚ್ಚುವದು. ಈ ಹಲಿಗೆಗಳ ಮೇಲೆ ತ್ಯಾವ ಮಣ್ಣನ್ನು ಹಾಕಿ, ಒತ್ತಿ ಬಿಡುವದು. ಶುಂಠಿ ಗಡ್ಡೆಗಳ ಮೇಲ್ಭಾಗಕ್ಕೂ ಹಲಿಗೆಗಳಿಗೂ ಮಧ್ಯ ಸ್ವಲ್ಪ ಖಾಲಿ ಸ್ಥಳ ಬಿಟ್ಟಿರುವದು ಅವಶ್ಯವು. ಶುಮಾರು ಮೇ ತಿಂಗಳಲ್ಲಿ ಶುಂಠಿ ಬೀಜವು ಮೊಳೆಯುವದಕ್ಕೆ ಆರಂಭಿಸುತ್ತದೆ. ಆಗ್ಯೆ ಬೀಜವನ್ನು ತೆಗದು ಒಂದು ಚಪ್ಪರದೊಳಗೆ ಹಾಸಿ ಇಡಬಹುದು. ಅವುಗಳಲ್ಲಿ ಕೊಳತುಹೋದ ಗಡ್ಡೆಗಳನ್ನು ತೆಗದು ಬಿಸಾಡಿ, ನೆಟ್ಟಗಿರುವ ಬೀಜವನ್ನು ಮಾತ್ರ ಇಡಬಹುದು. ನಂತರ ಒಂದೊಂದುರಲ್ಲಿ 2-3 ಮೊಳಕೆಗಳು ಇರುವ ಹಾಗೆ, ತುಂಡುಗಳನ್ನು ಮಾಡಿ, ಬೀಜವನ್ನು ಮೇಲೆ ಹೇಳಲ್ಪಟ್ಟ ಕ್ರಮದ ಮೇರೆಗೆ ಭೂಮಿಯಲ್ಲಿ ನಡಬಹುದು.

ಪೈರುಗಳ ಪರಿವರ್ತನೆ—

ಮೊದಲನೇ ವರ್ಷ—ಶುಂಠಿ: ಮೇಯಿಂದ ದಶಂಬ್ರ ವರೇಗೆ.

ಎರಡನೇ ವರ್ಷ— { ಮೋದಾನನೆಲ್ಲು; ಮೇಯಿಂದ ಅಗೋಸ್ತ, ಸಪ್ತಬಂರ ವರೇಗೆ. ಎಳ್ಳು: ಸಪ್ಟಂಬರ-ನವಂಬರ.

ಮೂರನೇ ವರ್ಷ—ಸಾಮೆ: ಎಪ್ರಿಲ್—ಮೆ—ಜೂನು-ಜುಲ್ಯಾ ವರೇಗೆ ನಂತರ ಒಂದೆರಡು ವರ್ಷಗಳ ವರೇಗೆ ಬೀಳು ಬಿಡುವದು ನಂತರ ತಿರಿಗಿ ಶುಂಠಿ ಪೈರು.

ಈ ಕ್ರಮವನ್ನು ಎರ್ನಾಡ ತಾಲೋಕಿನಲ್ಲಿ ವಾಡಿಕೆಯಾಗಿ ಆಚರಿಸುತ್ತಾರೆ. ಆದರೆ ಈ ಪರಿವರ್ತನೆಯಲ್ಲಿ ನೆಲಗಡಲೆಯ ಪೈರನ್ನು ಒಂದಾಗಿ ಶೇರಿಸಬಹುದು. ತಳಿಪರಂಬ ಪಾರ್ಮಿನಲ್ಲಿ ನೆಲಗಡಲೆ ನಂತರ ಶುಂಠಿಯೂ, ಶುಂಠಿ ನಂತರ ನೆಲಗಡಲೆಯೂ, ಬೆಳಸಿದ್ದಲ್ಲಿ ಎರಡೂ ನೆಟ್ಟಗೆ ಬರುವದಾಗಿ ತೋರಿಯದೆ.

"ನನಗೆ ಬೇಡ ನಿಮ್ಮ ಸ್ವರ್ಗ."

ಘನಗುತ್ರಿ ಪಾದ್ರಿಸಾಹೇಬರು ಮತ್ತು ಶಾಸ್ತ್ರಿ ತಮ್ಮಣ್ಣಾಚಾರ್ಯರು.

ಪಾದ್ರಿಸಾಹೇಬರು—ಸಲಾಮು, ಶಾಸ್ತ್ರಿಗಳೇ.

ಶಾಸ್ತ್ರಿ—ಸಲಾಮು ಸ್ವಾಮಿ. ದಯಮಾಡಿ ಕೂತುಕೊಳ್ಳಿ. ಏನು ಸವಾರಿ ಬರೋಣಾಯಿತು?

ಪಾದ್ರಿ—ಶಾಸ್ತ್ರಿಗಳೇ ನೀವು ನಮ್ಮ ಬ್ಯಾಬಲ್ ಓದುತ್ತೀರೆಂತಲೂ ಕಳದ ಆದಿತ್ಯವಾರ ನಮ್ಮ ದೇವಾಲಯಕ್ಕೆ ಹೋಗಿದ್ದಿರೆಂತಲೂ ಕೇಳಿ ನನಗೆ ಸಂತೋಷವಾಯಿತು. ನೀವು ನಮ್ಮ ಯೇಸುಸ್ವಾಮಿ ಸತ್ಯವಾದಿ ಎಂತ ನಂಬುವದಿಲ್ಲವೊ?

ಶಾಸ್ತ್ರಿ—ಒಹೋ! ಯೇಸು ಸ್ವಾಮಿ ಸತ್ಯವಾದಿ ಎಂಬದಕ್ಕೆ ಏನೂ ಅನುಮಾನವಿಲ್ಲ.

ಪಾದ್ರಿ—ಹಾಗಾದರೆ ನೀವು ನಮ್ಮ ಮತಕ್ಕೆ ಸೇರಬೇಕೂ, ಪರಿಶುದ್ಧ ಸ್ನಾನ ಹೊಂದಬೇಕೂ.

ಶಾಸ್ತ್ರಿ—ಸ್ವಾಮಿೂ, ನಾನು ಕಳದ ಆದಿತ್ಯವಾರ ತಮ್ಮ ದೇವಾಲಯಕ್ಕೆ ಹೋದದ್ದು ಖರೆ. ಅಲ್ಲಿಯ ಪ್ರಸಂಗ ಕೇಳಿ ಕ್ರೈಸ್ತರ ಮತವೂ ಯೇಸುಸ್ವಾಮಿ ಸಾರಿದ ಮತವೂ ಒಂದೇ ಅಲ್ಲ. ಯೇಸು ಸ್ವಾಮಿಯ ಮತವು ತಕ್ಕ ಮಟ್ಟಿಗೆ ನಮ್ಮ ಋಷಿಗಳ ಮತಕ್ಕೆ ಸರಿ ಉಂಟೆಂತ ನನಗೆ ತೋರಿತು. ತಮ್ಮ ಮತದ ಸೂತ್ರಗಳ್ಯಾವವು?

ಪಾದ್ರಿ—ಅಯ್ಯಾ ಕೇಳಿರಿ, ಯೆಹೋವನಾದ ನಮ್ಮ ದೇವರು ಪರಲೋಕದಲ್ಲಿರುವ ನಮ್ಮ ತಂದೆಯಾಗಿದ್ದಾನೆ, ಯೇಸು ಸ್ವಾಮಿಯು ಆತನ ಒಬ್ಬನೇ ಮಗನು. ಆತನು ನರಲೋಕದಲ್ಲಿ ಜನ್ಮಕ್ಕೆ ಬಂದು ನಮ್ಮ ಎಲ್ಲವರ ಪಾಪಕ್ಕೋಸ್ಕರ ಸತ್ತನು. ಸತ್ತ ೩ನೇ ದಿನ ಹೂಳಿಟ್ಟ ಜಾಗದಿಂದ ಎದ್ದು ಶರೀರ ಸಮೇತ ಸ್ವರ್ಗಕ್ಕೆ ಏರಿದನು. ಅಲ್ಲಿ ಆತನು ದೇವರ ಬಲ ದಿಕ್ಕಿನಲ್ಲಿ ಕೂತಿದ್ದಾನೆ. ಆತನನ್ನು ನಾವು ಈ ಲೋಕದಲ್ಲಿ ಒಪ್ಪಿದರೆ ಆತನು ನಮ್ಮನ್ನು ದೇವರ ಮುಂದೆ ಒಪ್ಪುವನು. ಆತನನ್ನು ಅರಿಯೆ ಎಂತ ಹೇಳಿದರೆ ಪರಲೋಕದಿಂದ ನಮ್ಮ ಆತ್ಮವನ್ನು ನರಕಕ್ಕೆ ದೂಡುವರು. ಅಲ್ಲಿ ನಮ್ಮ ಆತ್ಮವು ಗಂಧಕದ ಸರೋವರದಲ್ಲಿ ಅನಂತಕಾಲದವರೆಗೆ ಸುಡಲ್ಪಡುವದು. ಆದುದರಿಂದ ಶಾಸ್ತ್ರಿಗಳೇ, ನೀವು ಪರಿಶುದ್ಧ ಸ್ನಾನ ಹೊಂದಿ ನಮ್ಮ ಮತಕ್ಕೆ ಸೇರಿರಿ. ನಮ್ಮ ಯೇಸು ಸ್ವಾಮಿಯ ಮುಖಾಂತರ ಸ್ವರ್ಗ ಲೋಕದಲ್ಲಿ ನಿಮಗೆ ಸ್ಥಳಸಿಕ್ಕುವುದು.

ಶಾಸ್ತ್ರಿ—ಸ್ವಾಮಿೂ—ನನ್ನ ದೇವರು ನಿರಾಕರನೂ, ಆದ್ಯಂತರಹಿತನೂ, ಆತ್ಮಸ್ವರೂಪಿಯೂ ಆಗಿ ಸರ್ವ ಪ್ರಾಣಿಗಳಲ್ಲಿ ಅಂತರ್ಗತನಾಗಿ ನನ್ನ ಶರೀರದಲ್ಲಿಯೂ ಇದ್ದು, ನನ್ನ ಪ್ರಾಣಕ್ಕೆ ಪ್ರಾಣನಾಗಿ ಪರಲೋಕದಲ್ಲಿರುವಂತೆ ಇಹದಲ್ಲಿಯೂ, ಇಡೀ ವಿಶ್ವದಲ್ಲಿಯೂ ತುಂಬಾ ವ್ಯಾಪಿಸಿ ಇದ್ದಾನೆ.

ನನ್ನ ದೇವರಿಗೆ ಕೋಟಿಕೋಟಿ ಮಕ್ಕಳುಂಟು. ನನಗೆ ೯ ಮಕ್ಕಳುಂಟು. ನಿಮ್ಮ ದೇವರು ಸಂತತಿಯಲ್ಲಿ ಬಹಳ ಬಡವನು.

ನನ್ನ ದೇವರು ಸರ್ವಜ್ಞನು—ಸರ್ವ ಸಾಕ್ಷಿಯಾಗಿದ್ದಾನೆ. ಆದುದರಿಂದ ನನ್ನ ಗುರ್ತ ಆತನಿಗೆ ಯೇಸು ಸ್ವಾಮಿ ಹೇಳಬೇಕೆಂಬ ಅಗತ್ಯವಿಲ್ಲ.

ನನ್ನ ದೇವರು ಪ್ರೀತಿ ಸಾಗರನೂ ದಯಾವಂತನೂ ಕ್ಷಮಾನಿಧಿಯೂ ಆಗಿದ್ದಾನೆ. ಮೂಢನೂ ಮೂರ್ಖನೂ ಆದ ನಾನು ಈ ನರಲೋಕದ ೩ ದಿನದ ಬಾಳುವಿಕೆಯಲ್ಲಿ ಮಾಡುವ ಪಾಪಗಳ ಕಾರಣ ನನ್ನನ್ನು ಗಂಧಕದ ಸರೋವರದಲ್ಲಿ ಹಾಕಿ ಅನಂತಕಾಲದ ವರೇಗೆ ನನ್ನನ್ನು ಸುಡಲಿಕ್ಕಿಲ್ಲ. ಅಬ್ಬಬ್ಬಾ! ನಿಮ್ಮ ದೇವರು ಭಯಂಕರನು! ನನಗೆ ಬೇಡ ಸ್ವಾಮಿೂ, ನನಗೆ ಬೇಡಾ!

ಹೂಳಿಟ್ಟ ಜಾಗದಿಂದ ಎದ್ದು ಶರೀರ ಸಮೇತ ಸ್ವರ್ಗಕ್ಕೆ ಏರಿದನು! ದೇವರ ಬಲಕಡೆಯಲ್ಲಿ ಕೂತಿದ್ದಾನೆ. ಅಹಹಃ ನನಗೆ ನೆಗೆ ಬರುತ್ತದೆ' ಸ್ವಾಮಿೂ, ದಮ್ಮಯ್ಯ ಕ್ಷಮಿಸಿರಿ.

ಪಾದ್ರಿ—ಶಾಸ್ತ್ರಿಗಳೇ, ನಿಮಗೆ ಏನೂ ವಿಶ್ವಾಸವಿಲ್ಲ. ನಮ್ಮ ಶಾಸ್ತ್ರವು ನಿಮ್ಮ ಪುರಾಣಗಳ ಹಾಗೆ ಅಜ್ಜಿ ಕಥೆಗಳಲ್ಲ. ನಿಮ್ಮ ದೇವರಿಗೆ ಹೆಂಡತಿ ಉಂಟು. ಮಕ್ಕಳುಂಟು. ಆತ ತಂಟೆ ಮಾಡುತ್ತಾನೆ. ಕದಿಯುತ್ತಾನೆ, ಹಾದರ ಮಾಡುತ್ತಾನೆ. ಇದೆಲ್ಲ ನಿಮಗೆ ಹಿತಕಾಣುತ್ತದೋ?

ಶಾಸ್ತ್ರಿ—ನಮ್ಮ ಪುರಾಣ ಕಥೆಗಳು ನಿಮ್ಮ ಬ್ಯಾಬಲಿನ ಹಳೇ ಒಡಂಬಡಿಕೆಯಲ್ಲಿ ಹೇಳಿದ ಕಥೆಗಳಷ್ಟು ಅಸಹ್ಯವಾದುವುಗಳಲ್ಲ. ನಮ್ಮ ಪುರಾಣ ಕಥೆಗಳಿಗೆ ಉತ್ತಮವಾದ ಗೂಢಾರ್ಥ ಉಂಟು. ಬೇಕಾದರೆ ನಾನು ವಿವರಿಸಿ ಹೇಳುತ್ತೇನೆ.

ಪಾದ್ರಿ—ಶಾಸ್ತ್ರಿಗಳೇ, ಶಾಸ್ತ್ರದಲ್ಲಿ ಗೂಢಾರ್ಥವಿರಬಾರದು. ಅದು ಕೆಟ್ಟದು. ಮೂಢರಿಗೆ ಸಹ ತಿಳಿಯುವಂತೆ ಸ್ಪಷ್ಟ ಅರ್ಥ ವಿರಬೇಕು, ಅಲ್ಲವೊ?

ಶಾಸ್ತ್ರಿ—ಖರೆ ಸ್ವಾಮಿೂ, ಖರೆ. ಮೊನ್ನೆ ತಮ್ಮ ದೇವಾಲಯದಲ್ಲಿ ಪ್ರಸಂಗ ಮಾಡುವಾಗ—ದೇವರು ಒಬ್ಬನೇ, ಮಗನಾದ ಯೇಸುಸ್ವಾಮಿ ದೇವರೇ ಅವತಾರಿಯಾಗಿ ನರಲೋಕಕ್ಕೆ ಬಂದಿದ್ದನು. ಮಗನೂ, ತಂದೆಯೂ, ಪರಿಶುದ್ಧಾತ್ಮನೂ ಎಂಬ ತ್ರಿಮೂರ್ತಿಗಳು ಒಂದೇ ದೇವರು ಎಂತ ಹೇಳಿದರು. ಇದರ ಅರ್ಥ ನನಗೆ ಆಗುವದಿಲ್ಲ. ಇದು ಅರ್ಥವಾಗುವ ಹಾಗೆ ತಾವು ವಿವರಿಸಿದರೆ ನಾನು ತಮ್ಮ ಮತಕ್ಕೆ ಸೇರುವೆನು.

ಪಾದ್ರಿ—ಅದು ಒಂದು "ಮಿಸ್ತಿರಿ" "ಮಿಸ್ತಿರಿ" ಪಾಪಿಗಳಾದ ನಮಗೆ ಅರ್ಥ ಸರ್ವಥ ತಿಳಿಯದು.

ಶಾಸ್ತ್ರಿ—ನಮ್ಮ ಶಾಸ್ತ್ರದ ಗೂಢಾರ್ಥ ಸುಲಭದಲ್ಲಿ ತಿಳಕೊಳ್ಳಬಹುದು. ನಿಮ್ಮ "ಮಿಸ್ತ್ರಿ" ಸರ್ವಥ ತಿಳಕೊಳ್ಳಲಿಕ್ಕೆ ಸಾಧ್ಯವಿಲ್ಲ! ಸರಿ ಸರಿ, ಇರಲಿ. ನಮ್ಮ ದೇವರಿಗೆ ಹೆಂಡತಿ ಇದ್ದ ಕಾರಣ ಮಗು ಹುಟ್ಟಿತು. ನಿಮ್ಮ ದೇವರಿಗೆ ಹೆಂಡತಿ ಇಲ್ಲದೆ ಮಗನು ಹೇಗೆ ಹುಟ್ಟಿದನು? ಯೇಸುಸ್ವಾಮಿಯು ದೇವರ ಸಮೀಪದಿಂದ ಎದ್ದು ಸ್ನಾನಾದಿ ಅನ್ಹಿಕಕ್ಕೆ ಹೋದಾಗ ಪರಲೋಕಕ್ಕೆ ಹೋದ ಆತ್ಮಗಳ ಗುರ್ತು ದೇವರಿಗೆ ಹೇಳಲಿಕ್ಕೆ ಏನು ವಿಲೆವಾರಿಮಾಡಿದ್ದಾರೆ. ಎರಡು ಸಾವಿರ ವರುಷಗಳಿಂದ ಯೇಸುಸ್ವಾಮಿ ಉಟ್ಟುಕೊಂಡ ವಸ್ತ್ರವು ಹಳೆಯದಾದ ಹಾಗೆ ಯಾವ ಜಾಡಖಾನೆಯಿಂದ ಯಾರು ವಸ್ತ್ರಗಳನ್ನು ಕಳುಹಿಸಿಕೊಟ್ಟರು. ಸ್ವರ್ಗ ಲೋಕದಲ್ಲಿ ಒಂದುಜಾಡಖಾನೆ ಯಾದರೂ ಉಂಟೋ? ಅಥವಾ ಯೇಸುಸ್ವಾಮಿ ದೇವರ ಸಂಗಡ ಬತ್ತಲೆ ಕೂತಿದ್ದಾನೊ? ಇವೆಲ್ಲಾ ತಾವು ನನಗೆ ವಿವರಿಸಿ ಹೇಳಿದರೆ ನಾನು ಕುಟುಂಬ ಸಮೇತ ತಮ್ಮ ಮತಕ್ಕೆ ಸೇರುತ್ತೇನೆ.

ಪಾದ್ರಿ—ಛೀ-ಛೀ-ಛೀ. ನಮ್ಮ ಯೇಸುಸ್ವಾಮಿಗೂ ಆತನ ಮತಕ್ಕೂ ಅಪಹಾಸ್ಯ ಮಾಡುತ್ತೀರೊ?

ಶಾಸ್ತ್ರಿ—ಇಲ್ಲ, ಇಲ್ಲ. ಶ್ರೀಕೃಷ್ಣನು ನಮ್ಮ ಗೀತೆಯಲ್ಲಿ ಹೇಳಿದಂತೆ ಲೋಕದಲ್ಲಿ ಧರ್ಮಗ್ಲಾನಿ ಬಂದಾಗ ಧರ್ಮಸಂಸ್ಥಾಪನೆ ಬಗ್ಯೆ ಅವತಾರಿಯಾಗಿ ಬಂದ ಯೇಸುಸ್ವಾಮಿಗೆ ನಾನು ಸರ್ವಥ ದೂಶಿಸಲಾರೆ. ಆ ಮಹಾ ಋಷಿಯು ಮನುಷ್ಯರ ಆತ್ಮ ರಕ್ಷಣೆ ಬಗ್ಯೆ ಸಾರಿದ ಧರ್ಮವು ತಕ್ಕಮಟ್ಟಿಗೆ ನಮ್ಮ ಪ್ರಾಚೀನ ಕಾಲದ ಋಷಿಗಳ ಮತಕ್ಕೆ ಸರಿಯಾಗಿ ಉಂಟೆಂತ ನಾನು ಮೊದಲೇ ಅರಿಕೆ ಮಾಡಲಿಲ್ಲವೇ?

ಪಾದ್ರಿ—ಹಾಗಾದರೆ ಇಂಥಾ ಚೇಷ್ಟೆ ಮಾತುಗಳು ಏತಕ್ಕೆ ಆಡುವದು?

ಶಾಸ್ತ್ರಿ—ಜಾತ್ರೆಗಳಲ್ಲಿ ಬಹು ಜನರು ಕೂಡಿದಾಗ ತಾವು ನಮ್ಮ ಧರ್ಮವನ್ನು ದೂಶಿಸಿ ಪ್ರಸಂಗ ಮಾಡುತ್ತೀರಿ. ನಮ್ಮ ಮತಗಳನ್ನೂ ಶಾಸ್ತ್ರಗಳನ್ನೂ ಅಪಹಾಸ್ಯ ಮಾಡಿ ದೂಶಿಸಿ ಸಣ್ಣ ಸಣ್ಣ ಪುಸ್ತಕಗಳನ್ನು ಪ್ರಕಟಿಸಿದಿರಿ. ನಮ್ಮ ಮಕ್ಕಳ ಮುಂದೆ ನಮ್ಮ ಶಾಸ್ತ್ರವನ್ನು ತಾವು ದೂಶಿಸಿ ಚರ್ಚೆ ಮಾಡುತ್ತೀರಿ. ಖಾಸಗಿ ಸಂಭಾಷಣೆಯಲ್ಲಿ ನಾನು ಒಂದು ಮಾತು ಹೇಳಿದ್ದಕ್ಕೆ ತಮಗೆ ಇಷ್ಟು ಶಿಟ್ಟು ಬಂತಲ್ಲ! ಸಂಸಾರವೇನೆಂಬದು ತಿಳಿಯದ ನಮ್ಮ ತರುಣರಿಗೆ ಪುಸಲಾಯಿಸಿ ಅವರ ಮನಸ್ಸು ಕೆಡಿಸಿ ಅವರನ್ನು ನಿಮ್ಮ ಕೂಟದಲ್ಲಿ ಸೇರಿಸ್ಕಿಕೊಂಡು ನಮ್ಮ ಕುಟುಂಬದಲ್ಲಿ ದುಖ್ಖವೂ ಕಷ್ಟವೂ ಉಂಟುಮಾಡುತ್ತೀರಲ್ಲ!!

ಪಾದ್ರಿ—ಶಾಸ್ತ್ರಿಗಳೇ ನಿಮ್ಮ ತಲೆಯಲ್ಲಿ ಎಲ್ಲಾ ತಪ್ಪು ಗ್ರಹಿಕೆಗಳುಂಟು, ಸಮಾಧಾನದಲ್ಲಿ ಮಾತನಾಡುವ. ನಾನು ನಾಳೆ ಬರುತ್ತೇನೆ, ಸಲಾಮು.

ದಾಸು ಭಟ್ಟ.

ಹಣ್ಣು ಹಂಪಲುಗಳು.

ನಮ್ಮ ಭರತಖಂಡವು ಫಲವತ್ತಾದ ದೇಶ. ಇದರಲ್ಲಿ ವಿವಿಧ ತರದ ಹಣ್ಣು ಹಂಪಲುಗಳೂ ದವಸ ಧಾನ್ಯಗಳೂ, ಕಾಯಿಪಲ್ಯಗಳೂ ಧಾರಾಳವಾಗಿ ಬೆಳೆಯುತ್ತಿವೆ. ಬೇಕಾದ ಕಾಯಿಪಲ್ಯಗಳು ಸುಲಭವಾಗಿ ದೊರಕುತ್ತವೆ. ನೆಲವನ್ನು ಉಗುರಲ್ಲಿ ಕೊರೆದು ಒಂದು ಬೀಜ ಹಾಕಿದರೆ ಸಹಾ ಆ ಬೀಜವು ಮೊಳಕೆ ಬಂದು ಸಸಿಯಾಗಿ ಕಾಯಿಪಲ್ಯವೋ ಹಣ್ಣೋ ಆಗುವದು. ಕಾಡುಗುಡ್ಡಗಳಿಗೆ ಹೋದರೆ ಅಲ್ಲಿಯೂ ಪೊದೆಗಳಲ್ಲಿ ದೇಹಪೋಷಣಾ ಪದಾರ್ಥಗಳು ಕೂಡಿದ ವಿವಿಧ ತರದ ಚಲೋ ಹಣ್ಣುಗಳು ದೊರಕುವವು. ಆದರೆ ನಮ್ಮ ದೇಶದಲ್ಲಿ ಈ ಹಣ್ಣುಗಳನ್ನು ತಿನ್ನುವ ಜನರು ಕಮ್ಮಿ. ಹಣ್ಣು ಹಂಪಲುಗಳನ್ನು ತಿನ್ನುವುದು ಅತಿ ಭೋಗ ಎಂಬದಾಗಿ ನಮ್ಮ ಜನರ ಭಾವನೆ. ಪಶ್ಚಿ

ಮಾತ್ಯ ದೇಶಗಳವರಲ್ಲಿ ಈ ಭಾವನೆಯು ಇಲ್ಲ. ಅವರು ಭೋಜನ ಕಾಲದಲಿ ಯಥೇಷ್ಟ ಹಣ್ಣು ಹಂಪಲುಗಳನ್ನು ತಿನ್ನುವರು. ನಮ್ಮವರಿಗೆ ಭೋಜನ ಕಾಲದಲ್ಲಿ ಹಣ್ಣು ತಿನ್ನುವ ರೂಢಿ ಇಲ್ಲ. ಒಂದು ವೇಳೆ ಕೆಲವರು ಮನಸ್ಸೋಇಚ್ಛೆ ದಿವಸದ ಎಲ್ಲಾ ಕಾಲಗಳಲ್ಲಿಯೂ ತಿನ್ನುವರು. ಇದರಿಂದ ಪ್ರಯೋಜನವಾಗದು. ತಿನ್ನುವಂಥಾ ಹಣ್ಣುಗಳನ್ನು ಭೋಜನ ಕಾಲದಲ್ಲಿ ತಿನ್ನಬೇಕೆಂಬದಾಗಿ ವೈದ್ಯರ ಅಭಿಪ್ರಾಯ. ನಮ್ಮವರಿಗೆ ಹಣ್ಣುಗಳ ಮೇಲೆ ಹೆಚ್ಚಿನ ಪ್ರೀತಿಯೇ ಇಲ್ಲ. ಯಾವ್ಯಾವ ಹಣ್ಣುಗಳಲ್ಲಿ ಯಾವ್ಯಾವ ತರದ ದೇಹಪೋಷಣಾ ಧಾತುಗಳು ಕೂಡಿಕೊಂಡಿವೆ ಎಂಬದು ಭಾರತೀಯರಲ್ಲಿ ಅನೇಕರರಿಗೆ ಗೊತ್ತಿಲ್ಲದಿರುವದೇ ಇದಕ್ಕೆ ಮುಖ್ಯ ಕಾರಣವು. ಪಾಶ್ಚಿಮಾತ್ಯರ ತೋಟಗಳಲ್ಲಿ ಫಲ ಮರಗಳು ಇದ್ದೇ ಇವೆ. ನಮ್ಮ ದೇಶದಲ್ಲಿ ಇಲ್ಲವೆಂಬದಾಗಿ ಅಲ್ಲ; ಅಲ್ಲಿಗಿಂತಲೂ ನಮ್ಮಲ್ಲಿ ಒಳ್ಳೇ ಹಣ್ಣುಗಳು ಇವೆ. ಆದರೆ ಈ ಹಣ್ಣುಗಳ ಬೆಲೆಯು ನಮ್ಮವರಿಗೆ ಅರಿದಿಲ್ಲ.

ಪಾಶ್ಚಿಮಾತ್ಯ ದೇಶಗಳಲ್ಲಿ ಬೆಳೆಯುವ ಹಣ್ಣುಗಳಲ್ಲಿ ಅತ್ಯುತ್ತಮವಾದ್ದು ಶೀಬೇ ಹಣ್ಣು. ಈ ಹಣ್ಣಿನಲ್ಲಿ ಮೆದುಳಿಗೆ ಶಕ್ತಿವರ್ಧಕವಾದ ಫೊಸ್ಫರಸ್ ಎಂಬ ಸತ್ವವಿದೆಂಬದಾಗಿ ತಿಳಿದು ಈ ಹಣ್ಣನ್ನು ಅಲ್ಲಿಯವರು ಬಹಳವಾಗಿ ಪ್ರೀತಿಸುವರು. ಶೀಬೇ ಹಣ್ಣು ಕೂತಲ್ಲಿ ಕೂತು ಮೆದುಳು ಕೆಲಸಮಾಡುವವರಿಗೆ ಬಹಳ ಪ್ರಯೋಜನವಾದದ್ದು. ಇದು ಜಡಹಿಡಿದ ಇಂಥವರ ಕಲಿಜೆಯನ್ನು ಬಲಪಡಿಸುವದು. ಪ್ರಾಚೀನ ಕಾಲದಲ್ಲಿ ಸ್ಕೇಂಡಿನೇವಿಯ ಎಂಬಲ್ಲಿ ಈ ಹಣ್ಣನ್ನು ದೇವತೆಯ ಆಹಾರವೆಂದು ಕರೆಯುತ್ತಿದ್ದರು. ಪ್ರಾಕೃತಿಕ ಮತ್ತು ಮಾನಸಿಕ ಶಕ್ತಿ ಕುಂದಿದವರಿಗೆ ಇದನ್ನೇ ಮುಖ್ಯೌಷಧವಾಗಿ ಪ್ರಯೋಗಿಸುತ್ತಿದ್ದರು. ಇದನ್ನು ತಿನ್ನುವುದರಿಂದ ದೇಹದಲ್ಲಿ ಕಾಂತಿಯೂ ಶಕ್ತಿಯೂ ಉಂಟಾಗುತ್ತದೆ.

ಎರಡನೇದಾಗಿ ಹೆಸರು ಪಡೆದ ಹಣ್ಣು ಸ್ಟ್ರಾಬೆರಿಸ್ ಎಂಬ ನೆಲಮುಳ್ಳಿ ಹಣ್ಣು. ಇದರಲ್ಲಿ ಕಬ್ಬಿಣ ಸತ್ವವು ಹೆಚ್ಚಾಗಿದ್ದು ಬಹಳ ಉತ್ತಮ ಹಣ್ಣು ಎಂಬದಾಗಿ ಕರೆಯಲ್ಪಡುತ್ತದೆ.

ಬಾಳೆಹಣ್ಣು—ಇದರಲ್ಲಿ ಶೀಬೆ ಹಣ್ಣಿನಂತೆಯೇ ಪೊಸ್ಫರಸ್ ಎಂಬ ತತ್ವವು ಇರುವುದರಿಂದ ಮೆದುಳು ಕೆಲಸದವರಿಗೆ ಇದು ಬಹೂ ಒಳ್ಳೇದು. ವಿಷಜ್ವರದಲ್ಲಿ ರೋಗಿಗಳಿಗೆ ಕದಳಿ ಹಣ್ಣಿಗಿಂತ ಉತ್ತಮ ಆಹಾರವು ಇಲ್ಲ. ಇದನ್ನು ಬೇಯಿಸಿ ಒಣಗಿಸಿ ಕುಟ್ಟಿದ ಪುಡಿಯಿಂದ ಗಂಜಿ ಮಾಡಿಕೊಡಬೇಕು.

ಕಿತ್ತಳೆಹಣ್ಣು—ಇದು ಮಲಬದ್ಧತೆಯಿಂದ ನರಳುತ್ತಿರುವುವರಿಗೆ ಬಹೂ ಉತ್ತಮವಾದ್ದು. ಬೆಳಿಗ್ಗೆ ಎದ್ದಾಕ್ಷಣ ಈ ಹಣ್ಣನ್ನು ತಿಂದು ತುಸ ತಣ್ಣೀರು ಕುಡಿದರೆ ಕ್ರಮವಾಗಿ ಜಾಡ್ಯನಾಗುವದು. ಇದನ್ನು ತಿನ್ನುವುದರಿಂದ ರಕ್ತ ಶುದ್ದಿಯಾಗುವದು.

ಸಣ್ಣ ಸಣ್ಣ ಬೀಜಗಳಿರುವ ಅಂಜೂರ ಜಾತಿಯ ಹಣ್ಣುಗಳೂ ದೇಹಕ್ಕೆ ಬಹಳ ಹಿತವು. ಈ ಹಣ್ಣುಗಳಲ್ಲಿರುವ ಸಕ್ಕರೆಯು ಧಾತುವರ್ಧಕವಾಗಿಯೂ ರಕ್ತ ಶುದ್ಧಿ ಮಾಡುವಂಥಾದಾಗಿಯೂ ಇದೆ.

ದ್ರಾಕ್ಷೆಹಣ್ಣು ಮತ್ತು ನಿಂಬೇಹಣ್ಣಿನಲ್ಲಿಯೂ ರಕ್ತ ಶುದ್ಧಿಮಾಡುವ ಸತ್ವವಿದೆ. ನಿಂಬೇ ಹಣ್ಣು ಉಳುಕು ಮೊದಲಾದ ವಾತರೋಗಗಳಿಗೆ ಬಹೂ ಒಳ್ಳೇದು.

ಹಣ್ಣುಗಳಲ್ಲಿ ಹ್ಯಾಗೆ ದೇಹ ಪೋಷಣೆಗೆ ಬೇಕಾದ ಧಾತುಗಳು ಕೂಡಿವೆಯೋ ಹಾಗೆಯೇ ಕಾಯಿಪಲ್ಯಗಳಲ್ಲಿಯೂ ವಿವಿಧ ತರದ ದೇಹಪೋಷಣಾ ಪದಾರ್ಥಗಳು ಕೂಡಿವೆ. ಮಾಂಸ, ಮೀನು ಇತ್ಯಾದಿಗಳನ್ನು ತಿಂದವರಿಗಿಂತ ಕಾಯಿಪಲ್ಯಗಳನ್ನೇ ತಿಂದವರು ಆರೋಗ್ಯಶಾಲಿಗಳು ಎಂದು ಅನುಭವಸಿದ್ಧಾಂತವಾದ ಮಾತಾಗಿದೆ. ಬಟಾಟೆ, ನೀರುಳ್ಳಿ, ಮೊದಲಾದ ಗಡ್ಡೆಗಳು ಬಹು ಒಳ್ಳೇದು. ಬೂದಿ ಕುಂಬ್ಳಕಾಯಿ, ಸೋರೆಕಾಯಿ, ಬೆಂಡೇಕಾಯಿ, ಹಾಗಲಕಾಯಿ ಮೊದಲಾದ ಕಾಯಿಪಲ್ಯಗಳಲ್ಲಿ ದೇಹಪೋಷಣೆಗೆ ಬೇಕಾದ ಅತ್ಯವಶ್ಯವಾದ ಸತ್ವಗಳು ಕೂಡಿರುವವು. ಈ ಕಾರಣದಿಂದ ಹಣ್ಣುಗಳನ್ನಾಗಲೀ ಕಾಯಿಪಲ್ಯವನ್ನಾಗಲೀ ತುಚ್ಛವಾದ ಆಹಾರವೆಂದು ಭಾವಿಸಿ ಮಾಂಸ ಮೀನು ಇತ್ಯಾದಿ ಆಹಾರಗಳು ಉಚ್ಚವಾದುದೆಂದು ಅವುಗಳ ಪ್ರಯೋಗವನ್ನು ವೃದ್ಧಿಮಾಡುತ್ತಾ ಬರುವುದು ಆರೋಗ್ಯಕ್ಕೆ ಹಿತವಲ್ಲವು.

S. A.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಅಕಟವಿಕಟ.

ಪತ್ರ ಜ್ವಾಲಾಮುಖಿಗಳೇ, ನನ್ನನ್ನೆಲ್ಲಾ ಕೇಳುತ್ತಾರಂತೆ. ನನಗೆ ಶಯನರೋಗ ಪ್ರಾಪ್ತಿಸಲಿಲ್ಲ. ಕರಡಿಯಂತೆ ಮಲಗಿಬಿಟ್ಟಿದ್ದೇನಷ್ಟೆ! ಗೆರಟಿ ಸೂಲಯ್ಯನವರು ನನ್ನನ್ನು ಓಡಿಸಿಬಿಟ್ಟರು. ಅಜ್ವರಕಾಡು ಹೊಕ್ಕೊಂಡೆ. ಅಲ್ಲಿಯ ಗುಹೆಗಳೆಲ್ಲಾ ನರ ಗುಹೆಗಳಾಗಿವೆ. ಅಲ್ಲಿಯ ನರಗುಹೆಗಳಲ್ಲಿ ಇಲಿರೋಗವಿಲ್ಲ. ಕಲಿರೋಗವಿದೆಯಂತೆ. ಅಹಾ! ಮಂಗಳೂರಲ್ಲಿ ಮೂಷಿಕರೋಗ—ನಾಶಕರೋಗ. ಬೋಳಾರದಲ್ಲಿ ಮಾರಿಪೂಜೆ. ಬಟ್ಟರಲ್ಲಿ ಉದರಪೂಜೆ. ಮೂಕಪಶ್ವಾದಿಗಳಿಗೆ ಕತ್ತೀಪೂಜೆ. ಮೂಷಕಗಳಿಗೆ ಪಂಜರಪೂಜೆ. ನನಗೆ ಮಹಾಪೂಜೆ! ಸ್ವಾಮಿ, ನನಗೆ ಹುಚ್ಚಂತೆ! ನಿಮ್ಮ ಪತ್ರಿಕೆಯಲ್ಲಿ ಹೊಟೇಲ್—ಓಯಿಪ್ಪಾ, ಬೇಡ-ಬೇಡ!.........ಕಟ್ಲೆಸ್ ಎಂದು ಹೇಳಿದ್ದಾಗಲಿಲ್ಲವಂತೆ. ಇದರ ಒಳಗುಟ್ಟು ನಾನರಿಯೆ. ನನಗೆ ಹಚ್ಚಡ ಹೊದಿಸುತ್ತಾರಂತೆ, ಹಚ್ಚಡ ಹೊದಿಸಿದರೆ ಹುಚ್ಚು ಹೋದೀತೆ? ನನಗೆ ಔಷಧ ಕೊಡಿಸುತ್ತಾರಂತೆ. ಔಷಧ ಪ್ರಯೋಗದಿಂದ ಹುಚ್ಚು ಹಿಡಿದ ನನಗೆ ಔಷಧ ಯಾಕೆ? ಸ್ವಾಮಿ! ಮರತೆ, ಮರತೆ, ಒಂದೇ ಮಾತು—ಅಜ್ವರಕಾಡು ಸೇರುವ ಮೊದಲಿನ ದಿನದ ನನ್ನ ಕಥನವನ್ನು ಕೇಳಿರಿ! ಗೆರಟಿ ಸೂಲಯ್ಯನವರು—ಸಭಾಲೇಖಕರು—ವರ್ತಕರು—ಖುಶಾಲಿಗಳು-ಇವರೆಲ್ಲರ ಕಾಟದಿಂದ ಓಟ ಪ್ರಾಪ್ತಿಯನ್ನುಲ್ಲಂಘಿಸಿ ಆಟ ಆಡಿಸುತ್ತಿದ್ದೆನು. ಆದರೇನು? ಗುಟ್ಟನ್ನು ಬಿಟ್ಟು ನಾಕೆಟ್ಟೆ—ಸಂಗಾತಿಗಳ ದ್ವೇಷ—ನನ್ನ ಉದ್ದೇಶ—ದ್ವೇಷದಿಂದ ಮಾಟ—ಮಾಟದಿಂದ ಓಟ. ರೈಲು ಹತ್ತಿ ಮುಂಜಾನೆ ಮೈಲ್ ಭಂಡಿ ಮೇಲೆ ಪಯಣ-ರಾತ್ರೆ ಭಂಡಿಯಲ್ಲೇ ಶಯನ! ನಡುರಾತ್ರೆ ಏನೊಂದೋ ಬೊಬ್ಬೆ-ರ್‍ರಾರ್‍ರಾ-ರ್‍ರಾರ್‍ರಾ-ಸ್ಸ್-ಸ್ಸ್-ಸ್ಸ್-ಬೊಬ್ಬೆ ನಿಂತಿತು-ಏಳೆಂಟು ಜನರು ಏಕದಮ್ ಸ್ಟೇಶನ್ ಗೇಟಿನ ಮೇಲೆ ಧಡ್ಡಾಲ ಬಿದ್ದುಬಿಟ್ಟರು. ಅಡ್ಡಡ್ಡ ಬಿದ್ದು ಗಾಡಿಯಿಂದ ಎದ್ದೆದ್ದು ನೋಡಿದೆ-ಒಳ್ಳೇದು—ಚಲೋದು—ಪೂರ್ಣ ಕಗ್ಗತ್ತಲೆ. ಗೇಟಿನ ಸಮೀಪ ಹೊರಕಡೆ, ಮಿಣಿಮಿಣಿ ಲಾಂದ್ರವು ಬೆಳಗುತ್ತಿತ್ತು. ಯಾರಿಗೂ ತಿಳಿಯದಂತೆ ಮೆಲ್ಲನೇ ಗೇಟ್ ಸಮೀಪ ಹೋಗಿ ಗೋಡೆಯ ಅಡ್ಡನಿಂತು ಎಲ್ಲರನ್ನೂ ನೋಡಿದೆ. ಏನು! ಕೌತುಕ—ಸಂಭ್ರಮ-ವಿನೋದ-ಸಂಗಾತಿಗಳ ಕೂಟ—ಇನ್ನೊಂದು ಸಲ ಬೊಬ್ಬಾಟವೇ ಬೊಬ್ಬಾಟ. ಎಲ್ಲರೂ ಅಂಗಿಗಳನ್ನು ತೆಗದು ಬಿಸಾಡಿದರು. ಶಿಖೆ, ಧಾರೀಶಿಖೆ, ಕುಕ್ಕೆಯಲ್ಲಿದ್ದ ಕಪ್ಪು-ತಿಳಿಯಿತೋ-ಟಪ್-ಟಪ್-ಟಪ್-ಎಂಬ ಶಬ್ದ-ತುಸ ನಿಶಬ್ದ—ಪುನಃ-ಎಲ್ಲರೂ ಒಂದೇಸಲ "ಓಲ್ ಸಕಸೆಸ್ ಟು ಸೋಶಿಯಲ್ ರಿಫೋರ್ಮ್" (ಸಂಘ ಸುಧಾರಣೆಗೆ ಜಯವಾಗಲಿ!) ಎಂತ ಒದ್ಧರಿಬಿಟ್ಟರು. ಗುಡ್‌ಲಕ್! ಗುಡ್‌ಲಕ್! ದೊಂಡೆಗಳ ಕೆಳಗಿಳಿದ ಗಳಗಳ ಶಬ್ದ! "ಸೋಶಿಯಲ್ ರಿಫೋರ್ಮ್" ಎಂತ ಮತ್ತೊಮ್ಮೆ ಬೊಬ್ಬೆ. ಟಪ್—ಟಪ್—ಟಪ್—ಇದರ ಆವರ್ತನೆ ಇನ್ನೊಮ್ಮೆಯಾಯಿತು. "ಸೊಸಿಯಲ್ ರಿಫೋರ್ಮ್" ಎಂಬ ಆರ್ಭಟದಿಂದ ಕುತ್ತಿಗೆಯ ಬಲಪಾರ್ಶ್ವದಲ್ಲಿ ಸುತ್ತಿಕೊಂಡಿದ್ದ ಏನೋ ಒಂದನ್ನು ಎಳದು ಫಟ್—ಫಟ್—ಫಟ್ ಎಂತ ಕಡಿದು ಬಿಸಾಡಿದರು. ಬೆಳಿಗ್ಗಿನ ಘಂಟೆ 5 ಹೊಡೆಯಿತು. ಕೂಟವು ಮಾಯಿಕ, ನನಗೆ ಅಪಾಯ, ಅಪಶಕುನ ಪ್ರಾಪ್ತಿ. ದಕ್ಷಿಣದಿಕ್ಕಿನ ಆಶೆ ಬಿಟ್ಟು ಉತ್ತರವನ್ನಪೇಕ್ಷಿಸಿ ಉಡಿಪಿಗೆ ಜಡ್ಕಾ ಹತ್ತುವ ಆಲೋಚನೆಯಾಯಿತು. ಬೆಳಗ್ಗಿನ ಫಲಹಾರ ಬೇಕಲ್ಲಾ. ಹೊಟೇಲಿಗೆ ಹೋದೆ. ರಾತ್ರೆ ಕೂಟದ ನೆನಪಾಯಿತು. ಬಾಯಿಯಿಂದ ನೀರು ಒಸರಿಸಿತು, ನನಗೆ ಕಾಫಿ ಉಷ್ಣ, ಚಾ ಶೀತ! ಬ್ರಿ-ರಾ-ಂ-ಡಿ ಎಂತ ಹೊಟೇಲಿನ ಕಿವಿಯೂದಿದೆ. ಅಯ್ಯಯ್ಯೋ-ನ್ಯಾಯವಿಧಾಯಕ ಸಭೆಯಲ್ಲಿ ಇದಕ್ಕೆ ಬೊಬ್ಬೆ ಬಿದ್ದದೆ. ಇದಕ್ಕಲ್ಲ-ಸರಾಯಿಗೆ-ಇದರ ಡಿಗ್ರಿ ತಗ್ಗಿಸುತ್ತಾರಂತೆ—ಸ್ವಾಮಿ, ನನಗೆ ಮೈ ಬಿಸಿಯಿಲ್ಲ—ಬಲ ತಗ್ಗಿಸುತ್ತಾರಂತೆ—ಬಲ ತಗ್ಗಿಸಿದರೆ ಕುಡಿಯೋದು ಹೆಚ್ಚಾದೀತು. ರಾತ್ರಿ 8 ಗಂಟೆಯನಂತರ ಮಾರಾಟ ಮಾಡ ಕೂಡದಂತೆ, ಓಹೋ! ಕೆಂಪು ಟೊಪ್ಪಿಗೂ ನನ್ನ ಚೀಲಕ್ಕೂ ದಾರ ಎಳೆದು ಬಿಟ್ಟರೆ ರಾತ್ರಿ 12 ಗಂಟೆಗೆ ಅಡ್ಡಿ ಏನು? ಹೊತ್ತಾಯಿತು—ಬೇಗ ಬೇಗ! ಬೇಗ ಕೊಡಿ-ದುಡ್ಡು ಈಸಿಕೊಳ್ಳಿ!—ಅತ್ತಿತ್ತ ನೋಡಿದೆ-ಯಾರೂ ಇಲ್ಲ-ಮೇಲೆ ನೋಡಿದೆ-ಹುಚ್ಚು ಹೆಚ್ಚಿತು—ಅಮವಾಸೆಯೋ—ಹುಣ್ಣಿಮೆಯೋ—ಹಾಡಿಗೆ ಪ್ರಾರಂಭ—

ಖಂಡಿಸಿ ಮಾಂಸದ ಪಲ್ಯವನಾನೀ ।
ಗುಂಡೆನು ಮೀನಿನ ತೊವ್ವೆಯ ಕೂಡಾ ।
ಪಿಂಡವ ತಿಂದೆನು ತುಪ್ಪದ ಜಿಡ್ಡಿಂ ।
ಮಂಡಿಸಿ ನಿಮ್ಮಯ..................... ॥

ಅಕಟಕಟಾ! ತಲೆಮೇಲೆ ಏಟುಬಿತ್ತು. ಹುಚ್ಚು! ಹುಚ್ಚು! ಹುಚ್ಚು ನನಗೊಬ್ಬನಿಗೆನೇ ಅಲ್ಲ!

ತೊಗರಿಬೇಳೆಯ ಬಿಟ್ಟು ಮಾಂಸ ಖಂಡವ ತಿನ್ನದವ ಹುಚ್ಚ ।
ತುಪ್ಪ ಹಾಲನ ಬಿಟ್ಟು ವಿಸ್ಕಿ ಬ್ರಾಂದಿ ಕುಡಿಯದವ ಹುಚ್ಚ ।
ಮುಂಡಸು ಶಾಲನ ಬಿಟ್ಟು ಚಲ್ಲನ ತೊಡಿಯದವ ಹುಚ್ಚ ॥

ಏನೇನೋ ಹಾಡಿದೆ—ಕ್ಷಮಿಸಿರಿ. ಯತಿಶ್ರೇಷ್ಠಗಣಗಳೇನೂ ನಾನರಿಯೆ. ಕಳ್ಳು ಕುಡಿಯೋದು, ಸುಳ್ಳು ಹೇಳೋದು ಈ ಎರಡು ಮಾತ್ರ ನನ್ನ ಹಳೇ ಅರುಹೋದಯ ಮಾಸ್ತರರು ಕಂಠಪಾಠಮಾಡಿಸಿದ್ದು ಜ್ಞಾಪಕವಿದೆ. ಸ್ವಾಮಿ, ಹೋಗಿ ಬಿಡುತ್ತೇನೆ. ಪುತ್ತು ಪ್ರಭು ಓಣಿ—ಅಲ್ಲಲ್ಲ-ಗದ್ದೆಕೇರಿ-ಕೆಸರು ಜಾಸ್ತಿ, ಬಜಾರಿನಲ್ಲಿ ದುರ್ಗಂಧ ಜಾಸ್ತಿ—ಮೂಷಕಗಳಿಗೆ ವ್ಯಾಧಿ ಜಾಸ್ತಿ--ನನಗೆ ಕಂಡದ್ದನ್ನು ಹೇಳುವ ಹುಚ್ಚು ಜಾಸ್ತಿ--ನಮಸ್ಕಾರ-ಇನ್ನೊಮ್ಮೆ ಬರುವೆ.

ಅಪಿಕಲಾಟ.

ವಿದೇಶ ವೃತ್ತಾಂತ.

ಪೆಬ್ರುವರಿ ತಾ. ೨೮ರಲ್ಲು ಮಾರ್ಜೆಬ್ ಎಂಬಲ್ಲಿ ತುರ್ಕರಿಗೂ ಇಟಾಲಿಯರಿಗೂ ನಡೆದ ಯುದ್ಧದಲ್ಲಿ ೫೦೦೦ ತುರ್ಕರೂ ಅರಬಿಯವರೂ ಇದ್ದರು. ತುರ್ಕರಲ್ಲಿ ೫೦೦ ಮಂದಿ ಮಡಿದರು. ಇಟಲಿಯರಲ್ಲಿ ೧೪ ಮಂದಿ ಮಡಿದರು. ೧೦೦ ಮಂದಿಗೆ ಗಾಯವಾಯಿತು ಎಂದು ತಿಳಿದು ಬರುತ್ತದೆ. ಟ್ರಿಪೋಲಿ ಯುದ್ಧ ಪ್ರಾರಂಭವಾದಂದಿನಿಂದ ಇಟಾಲಿಯರಲ್ಲಿ ೫೩೬ ಮಂದಿ ಮಡಿದರು. ೩೨೪ ಮಂದಿ ಕಾಣದೆ ಹೋದರು.

ಕಳದ ಆದಿತ್ಯವಾರ ಡೆರ್ನದಲ್ಲಿ ತುರ್ಕರು ಕಟ್ಟುವ ಕೆಲಸದಲ್ಲಿ ನಿರತರಾಗಿದ್ದ ಇಟಾಲಿಯರ ಮೇಲೆ ಬಿದ್ದರು. ಕೂಡಲೇ ಇಟಾಲಿಯರ ಸೈನ್ಯವು ಅಲ್ಲಿಗೆ ಬಂದದರಿಂದ ಸಾಯಂಕಾಲದ ವರೆಗೆ ಕಠಿಣ ಕದನವಾಗಿ ತುರ್ಕರು ಹಿಮ್ಮೆಟ್ಟಲ್ಪಟ್ಟರು. ತುರ್ಕರ ನಷ್ಟ ಗೊತ್ತಾಗಲಿಲ್ಲ. ಇಟಾಲಿಯರಲ್ಲಿ ೧೧೦ ಮಂದಿ ಮಡಿದರು.

ಚೀನದಲ್ಲಿ ಪ್ರಜಾಧಿಪತ್ಯವು ಸ್ಥಾಪಿಸಲ್ಪಟ್ಟಿತು ಎಂದು ತಿಳಿಸಿತ್ತಷ್ಟೆ. ಆದರೆ ಯುಆನ್ ಸಿಕಾಯಿರವರ ಸೈನ್ಯದ ಸಂಬಳವು ಕೊಡಲ್ಪಡದ್ದರಿಂದ ಸೈನಿಕರಲ್ಲಿ ೨೦೦೦ ಮಂದಿ ದಂಗೆ ಎದ್ದು ಪೆಕಿಂಗಿನಲ್ಲಿ ಸೂರೆಸುಲಿಗೆ ಮಾಡುತ್ತಿದ್ದಾರೆ. ದಂಗೆಗಾರರು ಅಂಗಡಿಗಳಿಗೆ ಗುಂಡು ಹಾರಿಸುತ್ತಾ ಕೆಲವು ಕಡೆಗಳಲ್ಲಿ ಬೆಂಕಿ ಕೊಟ್ಟು ಸುಟ್ಟುಬಿಟ್ಟರು. ಲೂಟಿಗಾರರಲ್ಲಿ ಕೆಲವರು ಹಿಡಿಯಲ್ಪಟ್ಟರು. ರಾಜಭಕ್ತರಲ್ಲಿ ಕೆಲವರು ಬೀದಿಗಳಲ್ಲಿ ರೋಂದುಮಾಡುತ್ತಿರುವರು. ಇಂಥಾ ಗೊಂದಲವುಂಟಾದ್ದಕ್ಕೆ ತಾನು ತುಂಬಾ ವಿಷಾಧಿಸುತ್ತೇನೆಂಬದಾಗಿ ಯುಆನ್ ಸಿಕಾಯಿರವರು ವಿದೇಶಿ ಪ್ರೆಸಿಡೆಂಟರಿಗೆ ಪತ್ರ ಬರದಿರುವರು. ತಾ. ೨ನೇ ಬೆಳಿಗ್ಯೆ ಪೆಕಿಂಗಿನಲ್ಲಿ ಬಹಳ ಭಯಂಕರವಾದ ಲೂಟಿ ನಡೆಯಿತು. ಲೂಟಿಗಾರರು ವೆಸ್ಟ್‌ಸಿಟಿ ಎಂಬಲ್ಲಿಯ ಎಲ್ಲಾ ಅಂಗಡಿಗಳನ್ನು ಲೂಟಿಮಾಡಿ ಕೆಲವನ್ನು ಸುಟ್ಟುಬಿಟ್ಟರು. ಪೆಕಿಂಗಿನ ಧಂಗೆಗಾರರಿಗೆ ಕೆಲವು ಸೋಲ್ಜರರೂ ಸೇರಿಕೊಂಡು ಹಲವು ಪಟ್ಟಣಗಳನ್ನು ಸೂರೆ ಮಾಡಿದರು.

ನಾನ್‌ಕಿಂಗಿನಲ್ಲಿರುವ ಪ್ರಜಾಧಿಪತ್ಯದ ಪ್ರತಿನಿಧಿಗಳು ತಮ್ಮ ಸೈನ್ಯವನ್ನು ಪೆಕಿಂಗಿಗೆ ಕಳುಹಿಸ ಬೇಕೋ ಎಂಬದಾಗಿ ತಂತೀ ಬಿಟ್ಟಿರುವರು. ತಿಯಾನ್‌ಸಿನ್ ಪಟ್ಟಣದಲ್ಲಿ ಕಠಿಣ ತರದ ದಂಗೆ ನಡೆಯಿತು. ಇಡೀ ಬೀದಿ ಸೂರೆಯಾಗಿ ಸುಡಲ್ಪಟ್ಟಿತು. ವಿದೇಶಿ ದಾಕ್ತಾರರೊಬ್ಬರು ಕೊಲ್ಲಲ್ಪಟ್ಟರು.

ಚೀನದ ದಂಗೆಯು ಹೆಚ್ಚಾಗದ ಹಾಗೆ ೩೦೦೦ ವಿದೇಶಿ ಸೈನೀಕರು ಪೆಕಿಂಗಿನಲ್ಲಿ ಮುಂಜಾಗ್ರತೆ ತಕ್ಕೊಳ್ಳುತ್ತಿದ್ದಾರೆ. ಲೂಟಿಗಾರರಲ್ಲಿ ಆರು ಹೆಂಗಸರ ಸಮೇತ ನೂರು ಮಂದಿಗೆ ದೇಹಾಂತ ಶಿಕ್ಷೆ ವಿಧಿಸಲ್ಪಟ್ಟಿತು. ಆದರೆ ಸೋಲ್ಜರರಿಗೆ ಶಿಕ್ಷೆ ವಿಧಿಸಲಿಲ್ಲ. ಸೋಲ್ಜರರ ಮೇಲೆ ಕೈ ಹಾಕಿದರೆ ದಂಗೆಗಾರರೊಟ್ಟಿಗೆ ಸೇರದ ಇತರ ಸೋಲ್ಜರರು ಒಂದು ವೇಳೆ ಸಿಟ್ಟುಗೊಂಡಾರೇನೋ ಎಂಬ ಭಯವು ಅಧಿಕಾರಿಗಳಿಗೆ ಇದೆ. ತನ್ನ ಸ್ನೇಹಿತರಿಗೆ ಸಹಾಯ ಮಾಡುವದಕ್ಕಾಗಿ ಪಟ್ಟಣದೊಳಗೆ ಪ್ರವೇಶಿಸಿದ ಒಬ್ಬ ಜರ್ಮನ್ ಡಾಕ್ಟರನನ್ನು ದಂಗೆಗಾರರು ಗುಂಡು ಹಾಕಿ ಕೊಂದರು. ಪೋರ್ಟ್ ಆರ್ಥರಿನ ೫೦೦೦ ಜಾಪಾನ್ ಸೈನೀಕರು ಚೀನದಲ್ಲಿ ದಂಗೆ ಎದ್ದ ಸ್ಥಳಕ್ಕೆ ಕಳುಹಿಸಲ್ಪಡುವರು. ಆದಿತ್ಯವಾರ ಪುನಃ ಹೊಸ ದಂಗೆಯು ಪ್ರಾರಂಭವಾಗಿಯದೆ.

ಬ್ರಿಟಾನಿನಲ್ಲಿ ಮುಷ್ಕರಗಾರರ ಗೊಂದಲವು ಇನ್ನೂ ಶಮನವಾಗಲಿಲ್ಲ. ಸ್ಕೋತಾಳದ ಕಲ್ಲಿದ್ದಲಿನ ಗಣಿಗಳಲ್ಲಿ ಕೆಲಸಮಾಡುವವರಲ್ಲಿ ಪೂರಾ ಜನರು ಕೆಲಸ ನಿಲ್ಲಿಸಿದ್ದಾರೆ. ಕಲ್ಲಿದ್ದಲ್ಲಿನ ಕೆಲಸಗಾರರನ್ನು ಬಿಟ್ಟು ಇತರ ಕೆಲಸಗಾರರಲ್ಲಿ ೬೦,೦೦೦ ಮಂದಿ ಕೆಲಸ ಬಿಟ್ಟು ವೃಥಾ ಕಾಲಹರಣ ಮಾಡುತ್ತಿರುವರು.

ಉತ್ತರ ಹಿಂದುಸ್ಥಾನ.

ಪೆಬ್ರವರಿ ತಾ. ೨೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲಿ ೧೬,೨೮೮ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೫,೦೪೦ ಮಂದಿ ಮೃತಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟಂದರೆ:—ಸಂಯುಕ್ತ ಸಂಸ್ಥಾನದಲ್ಲಿ ೬೧೬೪; ಬಂಗಾಳ ೩,೩೯೪; ಮುಂಬಾಯಿ ೧,೩೩೩; ಮದ್ರಾಸ್ ೩೧೬; ಪಂಜಾಬು ೬೬೩; ಬರ್ಮ ೧೦೦; ಮಧ್ಯಸಂಸ್ಥಾನ ೧,೪೮೯ ಮರಣಗಳಾದವು.

ಧರ್ಮಪುರದಲ್ಲಿರುವ ಕ್ಷಯರೋಗಿಗಳ ಭಿತ್ತಿಗೆ ಬರೋಡೆಯ ಮಹಾರಾಜರವರು ವಾಗ್ದಾನಮಾಡಿದ ಎರಡನೇ ಕಂತಿನ ೧೦,೦೦೦ ರೂಪಾಯಿಯನ್ನೂ ಕಳುಹಿಸಿ ಕೊಟ್ಟಿರುವರು.

ಲ್ಯಾಲಪುರದ ಮಾಜಿ ಸರಕಾರಿ ವಕೀಲರಾಗಿದ್ದ ಹಕೀಮ್ ಹಮೀನ್‌ಉದ್ದೀನ್ ಎಂಬ ಬೇರಿಷ್ಟರರಿಗೆ ಕಳದ ತಾ. ೨೯ರಲ್ಲು ಲಾಹೋರಿನ ಡಿಸ್ಟ್ರಿಕ್ ಮೆಜಿಸ್ಟ್ರೇಟರು ವಿಶ್ವಾಸಘಾತುಕ ಮತ್ತು ಫೋರ್ಜರಿ ಎಂಬ ಎರಡು ತಕ್ಷೀರಿನ ಮೇಲೆ ಎರಡು ವರುಷಗಳ ಕಠಿಣ ಸಜೆ ಮತ್ತು ಪ್ರತಿ ಒಂದು ತಕ್ಷೀರಿನ ಮೇಲೆ ನೂರುನೂರು ರೂಪಾಯಿ ಜುರುಮಾನೆ ವಿಧಿಸಿದರು.

ಲಾಹೋರಿನಲ್ಲಿ ಇಸಾಕ್‌ಖಾನ್ ಎಂಬ ಪಟಾನನು ರೆವರೆಂಡ್ ವೂಡರವರ ಪತ್ನಿಯವರ ಮೇಲೆ ಬಿದ್ದು ಘಾಯಪಡಿಸಿದನೆಂದು ತಿಳಿಸಿತ್ತಷ್ಟೆ. ಈತನಿಗೆ ತಾ. ೧ರಲ್ಲು ಹನ್ನೆರಡು ವರುಷಗಳ ಕಠಿಣ ಸಜೆ ಈ ಪೈಕಿ ಮೂರು ತಿಂಗಳು ಏಕಾಂತ ಸಜೆ ಮತ್ತು ೧೦೦೦ ರೂಪಾಯಿ ಜರುಮಾನೆ ವಿಧಿಸಲ್ಪಟ್ಟಿತು. ಈತನನ್ನು ಕ್ವೆಟ್ಟ ಎಂಬಲ್ಲಿಯ ರೆವರೆಂಡ್ ಬಾಳ್ ಎಂಬವರು ೧೫ ರೂಪಾಯಿ ವೇತನ ಕೊಟ್ಟು ಸೆಂಟ್ ಜೋನ್ ಶಾಲೆಗೆ ವಿದ್ಯಾಭ್ಯಾಸ ಮಾಡಲು ಕಳುಹಿಸಿದ್ದರು. ಆದರೆ ಈತನು ಈ ಕ್ರೂರ ಕೃತ್ಯವನ್ನು ನಡಿಸಿದನು.

ಬರೋಡೆ ರಾಜ್ಯದ ಜನಸಂಖ್ಯೆಯ ೧೦೦ರಲ್ಲಿ ೧೦ ರಂತೆ ಓದುಬರಹ ಬರುವವರಿದ್ದಾರೆ. ಲಿಂಗಭೇದದ ಪ್ರಕಾರ ನೋಡಿದರೆ ಆರರಲ್ಲಿ ಒಬ್ಬ ಗಂಡಸಿನಂತೆಯೂ ೫೦ರಲ್ಲಿ ಒಬ್ಬ ಹೆಂಗಸಿನಂತೆಯೂ ಓದು ಬರಹ ಬರುವವರಿದ್ದಾರೆ. ಓದುಬರಹ ಬರುವ ೨೦ ವರುಷದ ಮೇಲಿನ ಗಂಡಸರ ಒಟ್ಟು ಸಂಖ್ಯೆ ಸೇಕಡಾ ೬೮ರಂತೆಯೂ ೧೦ ವರುಷದ ಕೆಳಗಿನ ಪ್ರಾಯದವರ ಸಂಖ್ಯೆ ಸೇಕಡಾ ನಾಲ್ಕರಂತೆಯೂ ಇದೆ. ಹಿಂದೂಸ್ಥಾನದಲ್ಲಿ ಬರೋಡ ರಾಜ್ಯದಲ್ಲಿ ಮಾತ್ರವೇ ಪ್ರಾಮರಿ ವಿದ್ಯಾಭ್ಯಾಸವು ಉಚಿತವಾಗಿಯೂ ಕಡ್ಡಾಯವಾಗಿಯೂ ಕೊಡಲ್ಪಡುತ್ತದೆ.

ಕಾತ್ಯವಾಡಿನ ರಾಜರಾದ ಜಾಮ್ ಸಾಹೇಬರು ತನ್ನ ಚಿಕ್ಕ ಸಂಸ್ಥಾನದಲ್ಲಿ ಉಚಿತ ಪ್ರಾಮರಿ ವಿದ್ಯಾಭ್ಯಾಸವನ್ನು ಕೊಡಿಸುವರೆ ಹುಕುಂ ಕೊಟ್ಟಿರುತ್ತಾರೆ. ಈ ಸಂಬಂಧ ಹೊಸ ಪ್ರಾಮರಿ ಶಾಲೆಗಳನ್ನು ಸ್ಥಾಪಿಸುವರೆ ವರುಷಕ್ಕೆ ೨೦೦೦ ರೂಪಾಯಿ ಮಂಜೂರು ಮಾಡಿದ್ದಾರೆ.

೧೯೧೧ನೇ ಇಸವಿಯ ಖಾನೆಶುಮಾರಿ ಲೆಕ್ಕದ ಪ್ರಕಾರ ಹಿಂದೂಸ್ಥಾನದಲ್ಲಿ ೫,೫೦೪ ಏಕೇಶ್ವರ ವಾದಿಗಳು ಯಾ ಬ್ರಹ್ಮ ಸಮಾಜದವರು ಇದ್ದಾರೆಂದು ತಿಳಿದು ಬರುತ್ತದೆ. (೨,೯೩೯ ಗಂಡಸರು; ೨೫೬೫ ಹೆಂಗಸರು.) ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೧೩೧; ಮದ್ರಾಸ್ ಸಂಸ್ಥಾನದಲ್ಲಿ ೩೬೪; ಮಧ್ಯ ಸಂಸ್ಥಾನ ಮತ್ತು ಬೀರಾರ್ ೩೦; ಪಶ್ಚಿಮ ಬಂಗಾಳ ಮತ್ತು ಅಸ್ಸಾಮ್ ೧೨೮೮; ಬರೋಡೆ ೬; ಕೊಚ್ಚಿಯಲ್ಲಿ ೨; ಮೈಸೂರು ೬೫; ಹೈದರಾಬಾದ್ ೩೬; ಹೀಗೆ ಆಯಾ ಸ್ಥಳಗಳಲ್ಲಿ ಬ್ರಹ್ಮಸಮಾಜದವರು ಇರುವರು.

ಮದ್ರಾಸ್ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳು ಇದೇ ಬರುವ ಮೇ ಜೂನು ತಿಂಗಳ ವರೆಗೆ ಮದ್ರಾಸಿನಲ್ಲಿಯೇ ಇದ್ದು ಅನಂತರ ಬಂಗಾಳಕ್ಕೆ ಹೋಗುವರೆಂದು ಪೊಯನಿಯರ್ ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದೆ.

ಬೆನಾರಸಿನ ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಕಳದ ಹತ್ತು ವರ್ಷಗಳಿಂದ ಹೆಡ್‌ಮಾಸ್ತರರು, ಪ್ರೊಪೆಸರರು ಅನಂತರ ಈಗ ಕೆಲವು ವರ್ಷಗಳಿಂದ ಒನರರಿ ಮುಖ್ಯೋಪಧ್ಯಾಯರಾಗಿದ್ದ ಮೆ| ಜಿ. ಎಸ್. ಅರುಂಡೇಲ್‌ರವರು ಎಪ್ರೀಲ್ ತಿಂಗಳ ನಂತರ ರಾಜಿಕೊಡುವರು.

ಇಂಡಿಯಾ ಸರಕಾರದ ಇಲಾಖೆಯ ಹೆಚ್ಚಿನಾಂಶವು ಬರುವ ಜನವರಿ ತಿಂಗಳ ವರೆಗೆ ಸಿಮ್ಲದಲ್ಲಿಯೇ ಇದ್ದು ಅನಂತರ ಡಿಲ್ಲಿಗೆ ಹೋಗುವಹೆಂದು ತಿಳಿದು ಬರುತ್ತದೆ. ಈ ಮಧ್ಯೆ ೯ ತಿಂಗಳಲ್ಲಿ ಡಿಲ್ಲಿಯಲ್ಲಿ ಅವಶ್ಯವಾದ ಆಯಾ ಹಂಗಾಮಿ ಕಟ್ಟೋಣಗಳು ಕಟ್ಟಿಸಲ್ಪಡುವವು.

ಇದೇ ತಾ. ೩ರಲ್ಲು 'ಆಲ್ ಇಂಡಿಯ ಮುಸ್ಲಿಮ್‌ಲೀಗ್' ಎಂಬ ಮುಸಲ್ಮಾನರ ಸಂಘದ ವಾರ್ಷಿಕ ಸಭೆಯು ಕಲ್ಕತ್ತೆಯ ಪಟ್ಟಣ ಸಭಾಸದನದಲ್ಲಿ ಕೂಡಿತು. ಈ ಸಭೆಗೆ ಆಯಾ ಪ್ರಾಂತ್ಯಗಳಿಂದ ಮುಸಲ್ಮಾನ ಪ್ರತಿನಿಧಿಗಳು ಬಂದಿದ್ದದಲ್ಲದೆ ಮುಸಲ್ಮಾನರಲ್ಲದವರಲ್ಲಿ ಬರ್ದವಾನ ಮಹಾರಾಜರು, ಬಹುಮಾನಪಟ್ಟ ಸಿನ್ಹರು ಮತ್ತು ಮೆ| ಪೋಲಕರವರು ಚಿತ್ತೈಸಿದ್ದರು. ಸ್ವಾಗತ ಕಮಿಟಿಯ ಅಧ್ಯಕ್ಷರಾಗಿದ್ದ ಖಾನ್ ಬಹದ್ದೂರ್ ಬುದುದ್ದೀನರವರು ಸ್ವಾಗತ ಭಾಷಣ ಕೊಟ್ಟು ಹಿಂದೂಸ್ಥಾನದಲ್ಲಿ ಹರಡಿಕೊಂಡಿದ್ದ ಅನಾಯಕತ್ವವನ್ನು ಖಂಡಿಸಿ ಇಂಗ್ಲೀಷ್ ಸರಕಾರದವರ ಆಳಿಕೆಯಲ್ಲಿ ಎಲ್ಲಾ ಜಾತಿ ಕುಲದವರು ಒಂದೇಯಾಗಿ ಒಗ್ಗಟ್ಟನಿಂದಿದ್ದು ಭ್ರಾತೃಗಳಂತೆ ವರ್ತಿಸಲು ಏನೇನೂ ಅಡ್ಡಿಸಡ್ಡೆ ಇಲ್ಲವೆಂದೂ ಡಿಲ್ಲಿಯನ್ನು ರಾಜಧಾನಿಯಾಗಿ ಮಾಡಿದ್ದರಿಂದ ಕುಂದಿ ಹೋಗಿದ್ದಂಥಾ ಡಿಲ್ಲಿಯ ಶೋಭೆಯು ಮುಂದಕ್ಕೆ ಪುನಃ ಬೆಳಗುವ ಹಾಗಾಯಿತೆಂದೂ ಡಿಲ್ಲಿ ದರ್ಬಾರಿನಲ್ಲಿ ದೊರಕಿದ ವರಪ್ರಧಾನಗಳಿಂದ ಹಿಂದೂಸ್ಥಾನದ ಭವಿಷ್ಯವು ಧ್ವನಿಧ್ವನಿತವಾಗುತ್ತಲಿದೆಂಬಿತ್ಯಾದಿ ಮಾತುಗಳಿಂದ ಚಲೋ ಭಾಷಣಕೊಟ್ಟರಲ್ಲದೆ ಬಹುಮಾನಪಟ್ಟ ಮೆ| ಗೋಖಲೆಯವರ ಕಡ್ಡಾಯ ಮತ್ತು ಉಚಿತ ಪ್ರಾಮರಿ ವಿದ್ಯಾಭ್ಯಾಸ ಮಸೂದೆಯನ್ನು ಅನುಮೋದಿಸಿ ಮಾತಾಡಿದರು. ಅನಂತರ ಸಭೆಗೆ ಡಕ್ಕದ ನವಾಬ್ ಸರ್ ಸಲಿಮುಲ್ಲ ಬಹದ್ದೂರರವರು ಅಧ್ಯಕ್ಷರಾಗಿ ಆರಿಸಲ್ಪಟ್ಟು

ಜೋರ್ಜ ಚಕ್ರವರ್ತಿಯವರ ಆಗಮನ, ಡಿಲ್ಲಿ ಪಟ್ಟಣವನ್ನು ಮುಖ್ಯ ಪಟ್ಟಣವಾಗಿ ಮಾಡಿದ್ದು, ಬಂಗಾಳ ವಿಭಜನೆಯು ರದ್ದಾಧದ್ದು, ದರ್ಬಾರಿನ ವರಪ್ರದಾನ, ಮೆ। ಗೋಖಲೆಯವರ ಉಚಿತ ಪ್ರ್ಯಾಮರಿ ವಿದ್ಯಾಭ್ಯಾಸ ಮಸೂದೆ, ಇತ್ಯಾದಿ ಪ್ರಸ್ತಾಪಗಳ ವಿಷಯವಾಗಿ ಮಾತಾಡಿ ಇದರಿಂದುಂಟಾದ ಮತ್ತು ಉಂಟಾಗ ಬಹುದಾದ ಒಳ್ಳೆತನ್ನು ತೋರಿಸಿಕೊಟ್ಟರು.

ಬಹುಮಾನಪಟ್ಟ ಆಘಖಾನರವರು ಆಲ್ ಇಂಡಿಯಾ ಮುಸಲ್ಮಾನ ಲೀಗಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು. ಆದರೆ ತಾ. ೩ರಲ್ಲು ಇವರು ಅಧ್ಯಕ್ಷಸ್ಥಾನಕ್ಕೆ ರಾಜಿನಾಮೆ ಕೊಟ್ಟರು.

ಬರೋಡೆ ರಾಜ್ಯದ ನೌಸಾರಿ ಎಂಬಲ್ಲಿ ಈಚೆಗೆ ಬ್ರಿಟಿಷ್ ಸರಕಾರಕ್ಕೆ ವಿರೋಧವಾದ ಸ್ವಾಮಿದ್ರೋಹದಿಂದ ತುಂಬಿದ ಕೆಲವು ಪುಸ್ತಕಗಳು ಸಿಕ್ಕಿದ್ದರಿಂದ ಬರೋಡೆಯ ಗಾಯಕವಾಡರು ಪೆಬ್ರುವರಿ ತಾರೀಕು ೨೭ರಲ್ಲು ತನ್ನ ಸ್ವತಃನಿಶಿ ಇರುವ ಒಂದು ಹುಕುಮನ್ನು ಹೊರಡಿಸಿ ತನ್ನ ರಾಜ್ಯದಲ್ಲಿ ಇಂಥಾ ಪುಸ್ತಕಗಳನ್ನು ಪ್ರಕಟಿಸಿದವನು ಪ್ರತ್ಯೇಕವಾಗಿ ದಂಡಿಸಲ್ಪಡುವನು. ಈ ಪುಸ್ತಕಗಳನ್ನು ಛಾಪಿಸಿದ ಛಾಪಖಾನೆಯನ್ನು ಮುಟ್ಟುಗೋಲು ಪಡಿಸಿದ್ದೇನೆ, ತನ್ನ ರಾಜ್ಯದಲ್ಲಿ ಕೆಲವರು ಬ್ರಿಟಿಷ್ ಸರಕಾರದ ದ್ರೋಹಿಗಳಿಗೆ ಬಹಿರಂಗವಾಗಿಯೂ ಅಂತರಂಗದಲ್ಲಿಯೂ ಸಹಾಯಕರಾಗಿದ್ದರೆಂದು ತಿಳಿದು ತಾನು ತುಂಬಾ ವಿಷಾದ ಪಡುತ್ತೇನೆ. ತನ್ನ ರಾಜ್ಯದಲ್ಲಿ ಬ್ರಿಟಿಷ್ ಸಂಕಾರಕ್ಕೆ ವಿರೋಧವಾಗಿ ಒಳಸಂಚುನಡಿಸುವ ಪ್ರತಿ ಒಬ್ಬನು ಕಠಿಣವಾಗಿ ದಂಡಿಸಲ್ಪಡುವನೆಂಬದು ಪ್ರತಿ ಒಬ್ಬನಿಗೂ ತಿಳಿದಿರಬೇಕು. ದೇಶೀಯ ರಾಜದ ಉತ್ತರೋತ್ತರಭಿವೃದ್ಧಿಯು ಬ್ರಿಟಿಷ್ ಸರಕಾರದ ಮೇಲೆ ಆತುಕೊಂಡಿರುವುದರಿಂದ ಒಂದಕ್ಕೆ ನೋವಾದರೆ ಮತ್ತೊಂದಕ್ಕೆ ನೋವಾದ ಹಾಗಾಯಿತು. ಆದ್ದರಿಂದ ಬ್ರಿಟಿಷ್ ಸರಕಾರಕ್ಕೆ ವಿರೋಧವಾಗಿ ನಡದು ತನ್ನ ಮತ್ತು ಬ್ರಿಟಿಷ್ ಸರಕಾರದ ಸ್ನೇಹವನ್ನು ಹಾಳು ಮಾಡಲಿಕ್ಕೆ ನೋಡುವವರು ಕಠಿಣವಾಗಿ ದಂಡಿಸಲ್ಪಡುವರೆಂಬಿತ್ಯಾದಿ ಆಜ್ಞೆಯು ಕೂಡಿದ ಪತ್ರವನ್ನು ಪ್ರಕಟಿಸಿರುವರು.

ದಕ್ಷಿಣ ಹಿಂದೂಸ್ಥಾನ.

ತಾ. ೨ರಲ್ಲು ರಂಗೂನಿನಲ್ಲಿ ಬೆಂಕಿ ಬಿದ್ದು ಎಂಟು ಸಿಗಿಯುವ ಕಾರ್ಖಾನೆಗಳು, ೪೫ ಮರದ ಡಿಪೋಗಳು ಸುಟ್ಟುಹೋಯಿತು. ರಂಗೂನಿನಲ್ಲಿದ್ದ ಎಲ್ಲಾ ನೀರಿನ ಯಂತ್ರಗಳನ್ನು ಪ್ರಯೋಗಿಸಿದರೂ ಬೆಂಕಿ ನೊಂದಿಸಲು ಸಾಧ್ಯವಾಗಲಿಲ್ಲ. ಮೊದಲಾಗಿ ಒಬ್ಬ ಚೆಟ್ಟಿಯ ಮನೆಯಲ್ಲಿ ಬೆಂಕಿ ಉಂಟಾಗಿ ಫಕ್ಕನೇ ೪೦೦ ಗಜ ವಿಸ್ತೀರ್ಣಕ್ಕೆ ಬೆಂಕಿಯು ಹಬ್ಬಿತು. ಉಂಟಾದ ನಷ್ಟ ಹತ್ತು ಲಕ್ಷ ರೂಪಾಯಿ. ಇಪ್ಪತ್ತು ವರ್ಷಗಳಿಂದೀಚೆಗೆ ರಂಗೂನಿನಲ್ಲಿ ಇಂಥಾ ಬೆಂಕಿ ಉಂಟಾಗಲಿಲ್ಲವಂತೆ.

ಈಚೆಗೆ ಮದ್ರಾಸಿನಲ್ಲಿ ದಿವಾಳಿ ಅರ್ಜಿಯನ್ನು ಕೊಟ್ಟಿದ್ದ ದಿವಾನ್ ಬಹದ್ದೂರ್ ಎಂ. ವೆಂಕಟಸ್ವಾಮಿ ನಾಯಿಡುರವರು ಇದೇ ತಾ. ೧೮ರಲ್ಲು ತಾನು ವಾಸವಾಗಿದ್ದ ಉದ್ಯಾನದಲ್ಲಿರುವ ಕೆರೆಗೆ ಬಿದ್ದು ಆತ್ಮಹತ್ಯ ಮಾಡಿಕೊಂಡರು. ಈ ನಾಯಿಡುರವರು ತಮ್ಮ ಮೇಲೆ ಕೋರ್ಟುಗಳಲ್ಲಿ ನಡೆಯುತ್ತಿರುವ ವಿವಾದಗಳ ಸಂಬಂಧವಾಗಿ ತನ್ನ ಮನಸ್ಸಿಗೆ ಬಹಳ ವ್ಯಾಕುಲವಾದ್ದರಿಂದ ಪ್ರಾಣವನ್ನು ಕಳೆದುಕೊಳ್ಳಬೇಕೆಂಬ ಅಪೇಕ್ಷೆ ಇರುವುದ್ರಾಗಿ ೧೫ ದಿವಸಗಳ ಮೊದಲು ತಮ್ಮ ಕೂಡೆ ಹೇಳಿದ್ದರೆಂದು ನಾಯಿಡುರವರ ವಕೀಲರು ಪೊಲೀಸಿಗೆ ತಿಳಿಸಿದರು.

ಮದ್ರಾಸ್ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳು ತಾ. ೧೮ರಲ್ಲು ಕೊಯಮುತ್ತೂರಿಗೆ ಚಿತ್ತೈಸಿದರು. ಕೊಯಮುತ್ತೂರಲ್ಲಿ ಮುನ್ಸಿಪಾಲ್ ಕೌನ್ಸಿಲಿನ ಪರವಾಗಿಯೂ ಡಿಸ್ಟ್ರಿಕ್ಟ್ ಬೋರ್ಡಿನ ಪರವಾಗಿಯೂ ಬಹುಮಾನ ಪತ್ರಗಳನ್ನು ಬೆಳ್ಳೀ ಕರಡಿಗೆಯಲ್ಲಿ ಮಡಗಿ ಪ್ರಭುಗಳವರಿಗೆ ಒಪ್ಪಿಸಿದರು. ಪ್ರಭುಗಳವರು ಕಾಲೋಚಿತವಾದ ಉತ್ತರಕೊಟ್ಟರು. ಈ ಸಂದರ್ಭದಲ್ಲಿ ಪ್ರಭುಗಳು ತನ್ನ ಬದಲಿಗೆ ಈ ಸಂಸ್ಥಾನಕ್ಕೆ ಬರುವಂಥಾ ಪೆಂಟ್‌ಲೇಂಡ್ ಪ್ರಭುಗಳು ಸಂಸ್ಥಾನದ ಪ್ರತಿ ಒಬ್ಬನಿಗೆ ಸಹಾಯಮಾಡಲು ತನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಥಾವತಿಪಡುವರು. ಇವರು ಬರುವ ತನಕ ಸರ್ ಮುರ್ರೆಹೆಮಿಕರವರು ಹಂಗಾಮಿ ಗವರ್ನರರಾಗಿರುವರು, ಹೆಮಿಕರವರ ರಾಜಭಾರವು ದಯಾಪೂರಿತವಾಗಿರುವದೆಂಬ ನಂಬಿಕೆಯು ತನಗೆ ತುಂಬಾ ಇದೆ ಎಂದು ಹೇಳ ಸಂದರ್ಭ ದೊರಕಿದ್ದಕ್ಕೆ ತಾನು ಸಂತೋಷಪಡುತ್ತೇನೆ, ಒಂದು ದೇಶದ ಜನರಿಗೆ ಅಗತ್ಯವಾಗಿ ಬೇಕಾದ ವಿಷಯಗಳು ಯಾವವೆಂದೂ ಬೇಕಾದ್ದನ್ನೆಲ್ಲಾ ಒದಗಿಸಿ ಕೊಡಲು ಕೆಲವು ಸಾರಿ ಎಷ್ಟು ಕಷ್ಟವಿದೆಂಬದನ್ನೂ ಸರ್ ಹೆಮಿಕರಿಗಿಂತ ಚನ್ನಾಗಿ ಬಲ್ಲವರಿಲ್ಲ, ಮದ್ರಾಸ್ ಸಂಸ್ಥಾನದ ಆಯಾ ಜಿಲ್ಲೆಗಳ ಆರೋಗ್ಯವನ್ನೂ ಏಳಿಗೆಯನ್ನೂ ಚಿಂತಿಸುವರೆ ಇವರಿಗಿಂತ ತಕ್ಕವರಿಲ್ಲವೆಂಬಿತ್ಯಾದಿ ಮಾತುಗಳಿಂದ ಚಳ್ಳೋ ಭಾಷಣ ಕೊಟ್ಟರು. ಅನಂತರ ಸ್ಟೇನ್ಸ್ ಹ್ಯಾಸ್ಕೂಲನ್ನೂ ಸೆಂಟ್ರಲ್ ಬಂದಿಖಾನೆಯನ್ನೂ ಸಂದರ್ಶಿಸಿದರು. ಬಂದಿಖಾನೆಯಲ್ಲಿ ಆಯಾ ಬಂದಿವಾನರು ತಮ್ಮ ಹಾಲಹವಾಲೆಗಳನ್ನು ಪ್ರಭುಗಳವರಿಗೆ ವೇದ್ಯವರಿಸಿದರು. ಒಬ್ಬ ಬಂದಿವಾನನು ತನಗೆ ಹಾಕಿದ ಸಂಕಲೆಯನ್ನು ತೆಗೆಯಿಸಲು ಹುಕುಂ ಕೊಡಬೇಕಾಗಿ ಬೇಡಿಕೊಂಡನು. ಪ್ರಭುಗಳವರು ಬಂದಿಖಾನೆಯ ಸುಪರಿಂಟೆಂಡೆಂಟರವರನ್ನು ವಿಚಾರಿಸಿ ಕೂಡಲೇ ಸಂಕಲೆಯನ್ನು ಕಳಚಿ ಬಿಡಬೇಕೆಂದು ಅಪ್ಪಣೆವಿತ್ತರು. ಅನಂತರ ಪ್ರಭುಗಳು ಬಂದಿಖಾನೆಯ ಬಡಿಗೆ ಕೆಲಸ, ಛಾಪಖಾನೆ ಮೊದಲಾದವುಗಳನ್ನು ನೋಡಿಕೊಂಡು ಬಂದಿವಾನರಿಗೆ ಕೊಡುವ ರಾಗಿ ರೊಟ್ಟಿಯಲ್ಲಿ ಒಂದು ತುಂಡು ರುಚಿ ನೋಡಿ ಇದು ಪುಡ್ಡಿಂಗ್ ಎಂಬ ದೋಸೆಗಿಂತಲೂ ಒಳ್ಳೇದಿದೆ ಎಂದು ಹೇಳಿದರು. ಛಾಪಖಾನೆಯಲ್ಲಿ ತಿನ್ನವೆಲ್ಲಿ ಕಾಲೇಜಿಯಲ್ಲಿ ಪ್ರೊಪೆಸರರಾಗಿದ್ದು ೧೯೦೮ರಲ್ಲಿ ತಿನ್ನವಲ್ಲಿ ದಂಗೆ ಮೊಕದಮೆಯಲ್ಲಿ ಶಿಕ್ಷೆ ವಿಧಿಸಲ್ಪಟ್ಟ ಲೋಗನಾಥ ಅಯ್ಯರರವರನ್ನು ನೋಡಿದರು. ಇವರ ಒಳ್ಳೇ ನಡತೆಯಿಂದ ಬಂದಿಖಾನೆಯ ಶಿಕ್ಷೆಯ ಕಾಲವು ಕಮ್ಮಿಯಾಗುತ್ತಾ ಬಂದಿರುವುದರಿಂದ ಬರುವ ಒಕ್ಟೋಬರ ತಿಂಗಳಲ್ಲಿ ಇವರಿಗೆ ಬಿಡುಗಡೆಯಾಗುವದು ಅಲ್ಲಿಂದ ಮತ್ತೊಂದು ಕೋಣೆಗೆ ಹೋದಾಗ ಶಿಕ್ಷೆ ವಿಧಿಸಲ್ಪಟ್ಟ ಒಬ್ಬ ವಾರ್ಡನನು ಡಿಲ್ಲೀ ಕಿರೀಟ ಧಾರಣೋತ್ಸವ ಕಾಲದಲ್ಲಿ ತನಗೆ ಶಿಕ್ಷೆಯ ಅವಧಿಯು ಕಮ್ಮಿ ಮಾಡಲ್ಪಡಲಿಲ್ಲವೆಂದನು. ಪ್ರಭುಗಳವರು ಸುಪರಿಂಟೆಂಡೆಂಟರವರನ್ನು ವಿಚಾರಿಸಿದಲ್ಲಿ ಈ ಬಂದಿವಾನನು ಪ್ರತ್ಯೇಕವಾದ ಮೂರು ತಕ್ಷೀರಿನ ಮೇಲೆ ಬಂಧಿಸಲ್ಪಟ್ಟಿದ್ದಾನೆ. ಆದ್ದರಿಂದ ಈತನಿಗೆ ಡಿಲ್ಲಿ ದರ್ಬಾರ್ ಕಾಲದಲ್ಲಿ ರಿಯಾಯತಿ ಮಾಡಲಿಲ್ಲವೆಂದರು. ಪ್ರಭುಗಳವರು ಇಂಥಾ ಬಂದಿವಾನರ ಸಂಗತಿಗಳಲ್ಲಿ ಸರಕಾರದವರಿಗೆ ವರದಿ ಮಾಡಬೇಕಿತ್ತೆಂದೂ ಇದ್ದು ಕಾರ್ಯನಿರ್ವಾಹಕ ಕಮಿಟಿಯವರಿಂದ ಆಲೋಚಿಸಲ್ಪಡುವಂಥಾ ವಿಷಯವಾಗಿದೆಂದೂ ಹೇಳಿದರಲ್ಲದೆ ಕೂಡಲೇ ಸರಕಾರದವರಿಗೆ ಈತನ ವಿಷಯ ಬರಕೊಳ್ಳಬೇಕೆಂದು ಅಪ್ಪಣೆವಿತ್ತರು.

ಮದ್ರಾಸ್ ಸಂಸ್ಥಾನದಲ್ಲಿ ಚಳಿ ಯಾ ಮಲೇರಿಯ ಜ್ವರದ ಉದ್ಭವವನ್ನು ಕಂಡು ಹಿಡಿಯುವರೆ ಕೆಪ್ಟನ್ ಜಿ. ಎಚ್. ಹೋರ್ನ್ ಎಮ್. ಬಿ. ಐ. ಎಮ್. ಎಸ್. ರವರು ಮೂರು ವರುಷಗಳ ಅವಧಿಗೆ ನೇಮಿಸಲ್ಪಟ್ಟಿರುವರು.

ಮದ್ರಾಸ್ ಗವರ್ನರರಾದ ಕಾರ್ಮಿಖಯೆಲ್ ಪ್ರಭುಗಳವರು ತಾ. ೨೯ರಲ್ಲು ತಂಜಾವೂರಿಗೆ ಚಿತ್ತೈಸಿದರು. ಅಲ್ಲಿ ತಂಜಾವೂರು ಅರಮನೆಯನ್ನು ಸಂದರ್ಶಿಸಿ ಅರಮನೆಯ ಪುಸ್ತಕ ಭಂಡಾರದಲ್ಲಿರುವ ಸಂಸ್ಕೃತ, ಮರಾಟಿ ಭಾಷೆಯ ಹಸ್ತಲೇಖನಗಳನ್ನು ನೋಡಿ ಸಂತೋಷಪಟ್ಟರು.

ಕಳೆದ ತಾ. ೨೮ರಲ್ಲು ಬರಂಪುರದಲ್ಲಿ ಮುಸಲ್ಮಾನ ಮತ್ತು ಹಿಂದುಗಳೊಳಗೆ ಮರಾಮಾರಿ ನಡೆಯಿತು. ತಾ. ೨೭ರಲ್ಲು ಮಹಮ್ಮದೀಯರ ಮಸೀದಿ ಮಾರ್ಗವಾಗಿ ಹೋಗಲಿಕ್ಕಿದ್ದಂಥಾ ಕಾಳಿ ದೇವತೆಯ ಮೆರವಣಿಗೆಯನ್ನು ಮಹಮ್ಮದೀಯರು ಅಟಕಾಯಿಸಿದ್ದರಿಂದ ಮೆರವಣಿಗೆಯಲ್ಲಿದ್ದ ಜನರ ಗುಂಪು ಶಿಟ್ಟಿನಿಂದ ಮಸೀದಿಯನ್ನು ಹಾಳು ಮಾಡಿ ಅದರಲ್ಲಿದ್ದ ಸಾಮಾನುಗಳನ್ನು ಸುಟ್ಟು ಹಾಕಿದರು. ದೇವಸ್ಥಾನದ ಮೊಕ್ತೇಸರರು ಘಾಯಪಟ್ಟರು. ದಂಗೆಗಾರರು ಮುಂಬಾಯಿ ಸಾಹುಕಾರರ ಅಂಗಡಿಗಳ ಮೇಲೆ ಬಿದ್ದು ಸಾಮಾನುಗಳನ್ನು ಸುಟ್ಟು ಹಾಕಿದರು. ಒಬ್ಬ ಪೋಲೀಸ್ ಇನ್ಸ್‌ಪೆಕ್ಟರನು ಒಬ್ಬ ಬ್ರಾಹ್ಮಣನ ತೊಡೆಗೆ ಕೋವಿ ಹಾರಿಸಿದನು. ದೇವಸ್ಥಾನದ ಮೊಕ್ತೇಸರರು ಮಹಮ್ಮದೀಯರ ಕೈಯಿಂದ ತಪ್ಪಿಸಿಕೊಂಡರು. ಸಬ್ ಕಲೆಕ್ಟರರು ಆ ಸ್ಥಳಕ್ಕೆ ಚಿತ್ತೈಸಿ ದಂಗೆಯನ್ನು ಶಾಂತ ಪಡಿಸಿದರು. ಮಾರಣೇ ದಿವಸ ಕಲೆಕ್ಟರರು ಮಹಮ್ಮದೀಯರ ಮತ್ತು ಹಿಂದುಗಳ ಸಭೆಯನ್ನು ಕೂಡಿಸಿದರು. ಮಹಮ್ಮದೀಯರು ಕಲ್ಕತ್ತೆಯಿಂದ ಯಾಕೊಬ್ ಎಂಬ ಒಬ್ಬ ಬೇರಿಷ್ಟರರನ್ನು ತರಿಸಿದ್ದರು. ಉಭಯತರ ಕಡೆಯಿಂದಲೂ ಆಯಾ ಪ್ರಸ್ತಾಪಗಳು ತನಕಿಯಾದನಂತರ ಹಿಂದುಗಳು ಮಹಮ್ಮದೀಯರಿಗೆ ವಿರೋಧವಾಗಿರುವ ವೇಶಗಳನ್ನು ಹಾಕಕೂಡದು, ಆದರೆ ಮಸೀದಿಯ ಮಾರ್ಗವಾಗಿ ಮೆರವಣಿಗೆ ಹೋಗಬಹುದು. ಮಸೀದಿಯ ಬಳಿಯಲ್ಲಿ ಮಾತ್ರ ವಾದ್ಯ ನಿಲ್ಲಿಸಬೇಕೆಂಬದಾಗಿ ಕಲೆಕ್ಟರರು ತೀರ್ಮಾನ ಕೊಟ್ಟರು.

ದಕ್ಷಿಣ ಮಲಬಾರ ಜಿಲ್ಲೆಯ ವಲವನಾಡ್ ಎಂಬ ತಾಲೂಕಿನಲ್ಲಿ ಮಜ್ಜಿಗೆ ಹುಲ್ಲು ಎಂಬ ಒಂದು ಜಾತಿ ಹುಲ್ಲಿನಿಂದ ಕೆಲವು ದೇಶೀಯ ವರ್ತಕರು ಎಣ್ಣೆಯನ್ನು ತೆಗೆದು ಇತ್ತಲಾಗಿ ೧೧,೦೦೦ ರೂಪಾಯಿ ಕ್ರಯಬಾಳುವ ಎಣ್ಣೆಯನ್ನು ಯೂರೋಪು ಖಂಡಗಳಿಗೆ ಕಳುಹಿಸಿ ಕೊಟ್ಟಿರುವರು. ಈ ಜಾತಿ ಹುಲ್ಲು ವಲವನಾಡ್ ತಾಲೂಕಿನಲ್ಲಿ ವರ್ಷದ ಎಲ್ಲಾ ಋತುವಿನಲ್ಲಿಯೂ ಬೆಳೆಯುತ್ತಿದೆ.

ತಾ. ೪ರಲ್ಲು ಬೆಂಗಳೂರಿನ ಸೊಲ್ಜರರಲ್ಲಿ ಡೇವಿಡ್‌ಸನ್ ಎಂಬವರು ಸುಮಾರು ಒಂದು ಔನ್ಸ್ ಕ್ವಿನಾನ್ ಎಂಬ ಔಷಧವನ್ನು ಕುಡಿದರು. ಹೀಗೆ ಹೆಚ್ಚಿಗೆ ಕ್ವಿನಾನ್ ತಕ್ಕೊಂಡದರಿಂದ ಅವರಿಗೆ ಕೂಡಲೇ ಅಸ್ವಸ್ಥ ಶುರುವಾಗಿ ಗುಂಡಿಗೆ ಒಡದು ಮೃತಪಟ್ಟರು.

ಹಂಗಾಮಿ ಗವರ್ನರರಾಗುವ 'ಸರ್ ಮುರೆ ಹೆಮಿಕರವರು ಮದ್ರಾಸ್ ಕಾರ್ಯನಿರ್ವಾಹಕ ಸಭೆಯ ಮೆಂಬರರಾಗಿದ್ದು ಜನಸಾಮಾನ್ಯರ ಅವಶ್ಯಕತೆಗಳನ್ನು ಚೆನ್ನಾಗಿ ಬಲ್ಲವರಾಗಿರುತ್ತಾರೆ.

ಮೈಸೂರು ಮಹಾರಾಣಿಯ ತಾಯಿಯವರು ತಾ. ೪ರಲ್ಲು ಪರವಸ್ಯೆದಿದರು. ಈ ಸಂಬಂಧ ಮಹಾರಾಜರವರು ಊಟಿಯಿಂದಲೂ ಯುವರಾಜರವರು ಬೆಂಗಳೂರಿಂದಲೂ ರಾಜಧಾನಿಗೆ ಚಿತ್ತೈಸಿರುವರು.

ಕಾರ್ಮಿಖಯೇಲ್ ಪ್ರಭುಗಳು ತಾ. ೫ರಲ್ಲು ಕೊಯಮುತ್ತೂರಿಂದ ಉದಕ ಮಂಡಲಕ್ಕೆ ಚಿತ್ತೈಸಿರುವರು.

ದಕ್ಷಿಣ ಕನ್ನಡ.

ನೋಟಿಸು.

ಪೂಜಾರಿಯಾಗಿ ಕೆಲಸ ಮಾಡಲಿಕ್ಕೆ ಒಬ್ಬ ಗೌಡಸಾರಸ್ವತ ಬ್ರಾಹ್ಮಣನು ಬೇಕಾಗಿರುವನು. ಪೂಜಾವೃತ್ತಿಗೆ ಬೇಕಾದ ಮಂತ್ರ ತಂತ್ರಗಳನ್ನು ಅರಿತವನಾಗಿರ ಬೇಕಲ್ಲದೆ ವೈದೀಕ ವೃತ್ತಿಯವನಾಗಿರ ಕೂಡದು. ಕಲಿತಿರುವಂಥಾ ಶಾಸ್ತ್ರ ಜ್ಞಾನ ಮಾಹಿತಿಯ ಮೇಲೆ ಮಾಸಾಶನವು ನಿರ್ಣಯಿಸಲ್ಪಡುವುದು. ಐದು ವರುಷಗಳ ವ್ಯಾದೆಯ! ಬೊಂಡ್‌ಯಾನೆ ಖಾತ್ರಿ ಪತ್ರವನ್ನು ಬರಕೊಡಲು ಸಿದ್ಧವಿರುವಂಥವನು ಬೇಕಾಗಿರುವನು.

ಉಮೇದ್ವಾರರಿಂದ ಅರ್ಜಿಗಳು ಪರಿಧಾವಿ ಸಂ।ರದ ಚೈತ್ರ ಶು. ೧೫ರ ವರೇಗೆ ಸ್ವೀಕರಿಸೋಣಾಗುವವು.

C/o The Manager,
Swadeshabhimani.

ವಿಜ್ಞಾಪನೆ.

ಚಂದಾದಾರರಿಂದ ಚಂದಾಹಣವನ್ನು ವಸೂಲಿ ಮಾಡುವರೆಯೂ ಹೊಸ ಚಂದಾದಾರರನ್ನು ಸಂಗ್ರಹಿಸುವರೆಯೂ 'ಸ್ವದೇಶಾಭಿಮಾನಿ' ಆಫೀಸಿನಿಂದ ರಾ. ಕೆ. ವಾಸುದೇವ ಪೈಯವರನ್ನು ಬಂಟವಾಳ, ಪಾಣೆಮಂಗಳೂರು, ಪುತ್ತೂರು ಉಪ್ಪಿನಂಗಡಿ ಅತ್ತಕಡೆ ಕಳುಹಿಸಿರುವೆವು. ಇವರ ಕೂಡೆ ಚಂದಾದಾರರರು ತಮ್ಮ ಮೇಲೆ ಬಾಕಿ ಇರುವ ಚಂದಾಹಣಗಳನ್ನು ವಸೂಲಿ ಕೊಡುವುದಲ್ಲದೆ ಹೊಸ ಚಂದಾದಾರರನ್ನು ಸಂಗ್ರಹಿಸುವುದರಲ್ಲಿ ಚಂದಾದಾರರೂ ಆಯಾ ಕಡೆಗಳ ಮಹಾ ಜನರೂ ತಮ್ಮ ಸಹಕಾರವನ್ನೀಯಬೇಕಾಗಿ ಈ ಮೂಲಕ ವಿಜ್ಞಾಪಿಸಿಕೊಳ್ಳುತ್ತೇವೆ.

ಮ್ಯಾನೇಜರ್
ಸ್ವದೇಶಾಭಿಮಾನಿ.

ಈ ಕೆಳಗೆ ದಸ್ಕತು ಮಾಡಿದ ನಾನು ವಗೈರೆ ಕೆಲವರು ಖಾಸಗಿಯಲ್ಲಿ ತೆಗಿಯಬೇಕೆಂದಿದ್ದ ಸೋಡ್ತಿ ಬಾಬಿನಲ್ಲಿ ಸ್ನೆಹಿತರೆನ್ನಿಸಿಕೊಂಡಿದ್ದ ನಮ್ಮ ಕೆಲವು ವೈರಿಗಳು ದುರಾಲೋಚನೆಯಿಂದ ಟಿಕೇಟುಗಳನ್ನು ಖುಶಿ ಬಂದ ಹಾಗೆ ಮಾರಾಟ ಮಾಡಿರುವದಾಗಿ ತಿಳಿದು ಬರುವದಲ್ಲದೆ ಸದರಿ ಸೋಡ್ತಿಯು ಕಾನೂನಿಗೆ ವಿರುದ್ಧವೆಂತ ಈಗ ನನ್ನ ತಿಳುವಳಿಕೆಗೆ ಬಂದ ಪ್ರಯುಕ್ತ ಅಜ್ಞಾನದಿಂದ ಪ್ರಾರಂಭಿಸಿದ ಸೋಡ್ತಿಯು ಮನ್ನಾ ಮಾಡಲ್ಪಟ್ಟಿರುವದರಿಂದ ಟಿಕೇಟುದಾರರು ಟಿಕೇಟು ಮೌಲ್ಯವನ್ನು ಪಡೆಕೊಂಡು ಟಿಕೇಟನ್ನು ಕೂಡಲೇ ವಾಪಸು ಕೊಡಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದ.

ದಕ್ಷಿಣ ಕನ್ನಡಾ ಪಡುಬಿದ್ರೆ ಬೀಡು }
ತಾ. 20—2—1912. } ದೇವರಾಜಯ್ಯ.

ಮಂಗಳೂರು. ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೧೫ ಪ್ಲೇಗ್ ಮರಣಗಳಿದ್ದವು.

ಉಡ್ಪಿಯ ತಾಲೂಕು ತಹಸೀಲದಾರರಾಗಿರುವ ಮೆ। ಎನ್. ಪಿ. ಫೆರ್ನಾಂದೀಸರವರು ಬರುವ ಎಪ್ರಿಲ್ ತಿಂಗಳ ೧ನೇ ತಾರೀಕಿನಿಂದ ಪೆನ್‌ಶನು ಹೊಂದುವುದರಿಂದ ಮ। ರಾ। ರಾ। ಅ. ದೇವಪ್ಪ ಪುಂಜರವರು ರೂ. ೨೫೦ ತಲಬಿನ II ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟಿರುವರು. ಮೆ। ವಿ. ಎಮ್. ಫೆರ್ನಾಂದೀಸರವರು ರೂ. ೨೦೦ರ ತಲಬಿನ ಮೇಲೆ ೩ನೇ ಗ್ರೇಡ್ ತಹಸೀಲದಾರರಾಗಿ ನೇಮಿಸಲ್ಪಟ್ಟು ಉಡುಪಿ ತಾಲೂಕು ತಹಸೀಲದಾರರ ಚಾರ್ಜನ್ನು ವಹಿಸಿಕೊಳ್ಳುವರು. ಲೆಂಡ್ ರಿಕಾರ್ಡು ತಹಸೀಲದಾರರಾದ ರಾ। ಕೆ. ಶ್ರೀನಿವಾಸ ರಾವ್‌ರವರು ರೂ. ೧೭೫ರ ತಲಬಿನ ಮೇಲೆ ೪ನೇ ಗ್ರೆಡ್ ತಹಸೀಲದಾರರಾಗಿಯೂ ಉಡ್ಪಿ ಡಿಪ್ಯುಟಿ ತಹಸೀಲದಾರರಾಗಿರುವ ರಾ। ಡಿ. ಆನಂದ ರಾವ್‌ರವರು ರೂ. ೧೫೦ರ ತಲಬಿನ ಲೆಂಡ್ ರಿಕೊರ್ಡು ತಹಸೀಲದಾರರಾಗಿಯೂ ನೇಮಕ ಪಟ್ಟಿರುತ್ತಾರೆ. ರಾ. ಡಿ. ಆನಂದ ರಾಯರವರ ಸ್ಥಾನಕ್ಕೆ ರಾ। ಎಮ್. ನಾರಾಯಣ ಕಿಣಿಯವರು ಕಾಯಂ ಸಬ್ ಮೇಜಿಸ್ಟ್ರೇಟರಾಗಿ ನೇಮಕ ಹೊಂದಿರುವರು. ರಾ। ಎಮ್. ಗಣೇಶರಾವ್‌ರವರು ರಾ। ನಾರಾಯಣ ಕಿಣಿಯವರ ರೂ. ೫೦ರ ತಲಬಿಗೆ ಮಂಗಳೂರು ಡಿವಿಜನಲ್ ಆಫೀಸಿನ ಹೆಡ್ ಕ್ಲಾರ್ಕರಾಗಿ ನೇಮಕ ಪಟ್ಟಿರುತ್ತಾರೆ.

ಮೆ। ಎಸ್. ಎಸ್. ಸಾಲ್ಡಾನರವರ ಬದಲಿಗೆ ರಾ। ಎಚ್. ಶಂಕರಾಯರು ಸಬ್ ಪ್ರೋಟೆಂ ಡಿಪ್ಯುಟಿ ತಹಸೀಲದಾರರಾಗಿ ನೇಮಿಸಲ್ಪಟ್ಟಿರುತ್ತಾರೆ.

ಎಪ್ರಿಲ್ ತಿಂಗಳ ತಾ. ೧ನೇಯಿಂದ ಪೆನಶನು ಹೊಂದುವ ಮೆ. ಸಿ. ಎಲ್. ಮಸ್ಕರಂಜ್ಞಸ್‌ರವರ ರೂ.೭೦ರ ತಲಬಿನ ಹುದ್ದೆಗೆ ರಾ. ಎಚ್. ಶಂಕರರಾವ್, ರೂ. ೬೦ರ ಹುದ್ದೆಗೆ ರಾ. ಎಸ್. ಬಾಬು ರಾವ್, ರೂ. ೫೦ರ ಹುದ್ದೆಗೆ ರಾ। ರಘುನಾಥ ಭಂಡಾರಿ ರೂ. ೪೦ರದಕ್ಕೆ ರಾ. ವಿ. ವೆಂಕಟ ರಾವ್‌ರವರು ನೇಮಿಸಲ್ಪಟ್ಟಿರುವರು.

ಲೆಂಡ್ ರಿಕಾರ್ಡು ತಹಸೀಲರಾದ ರಾ. ಕೆ. ಶ್ರೀನಿವಾಸರಾಯರು ೬ ಹಪ್ತೆಗಳ ಹಕ್ಕಿನ ರಜೆ ಪಡಿಯುವದರಿಂದ ಉಡುಪಿ ಮೆಜಿಸ್ಟ್ರೇಟ್ ರಾ. ಡಿ. ಆನಂದರಾವ್‌ರವರು ಲೆಂಡ ರಿಕಾರ್ಡು ತಹಸೀಲ್‌ದಾರರ ಆಕ್ಟಿಂಗ್ ಕೆಲಸ ನೋಡುವರು. ರಾ. ಎಸ್. ಬಾಬುರಾವ್‌ರವರು ಆನಂದರಾಯರವರ ಬದಲಿಗೆ ನೇಮಿಸಲ್ಪಟ್ಟಿರುವರು.

ರಾ. ಹೊಸದುರ್ಗ ಡಿಪ್ಯುಟಿ ತಹಸೀಲದಾರರಾಗಿರುವ ಬಿ. ಮಂಜುನಾಥ ಬಾಳಿಗರವರಿಗೆ ಉಡ್ಪಿ ಸಬ್ ಮೆಜಿಸ್ಟ್ರೇರಾಗಿ ವರ್ಗವಾಗಿಯದೆ.

ರಾ. ಮೆಜಿಸ್ಟ್ರೇಟ್ ರಾ. ಟಿ. ಬಿ. ಶಂಕರ ರಾಯರು ರಾ. ಎಚ್. ಶಂಕರ ರಾಯರಿಂದ ಸ್ಟೇಶನರಿ ಮೆಜಿಸ್ಟ್ರೇಟರ ಚಾರ್ಜನ್ನು ವಹಿಸಿಕೊಂಡ ಮೇಲೆ ರಾ. ಎಚ್. ಶಂಕರ ರಾಯರು ಹೊಸದುರ್ಗ ಡಿಪ್ಯುಟಿ ತಹಸೀಲದಾರರ ಚಾರ್ಜನ್ನು ರಾ. ಬಿ ಮಂಜುನಾಥ ಬಾಳಿಗರು ವಹಿಸಿಕೊಳ್ಳುವರು.

ನಿನ್ನೆ ದಿವಸ ಸಾಮಾನು ತುಂಬಿಸಿದ ಒಂದು ಮಂಜಿಯು ಅಳುವೆಯ ಸಮೀಪ ಮುಣಗಿ ಒಡೆದು ಹೋಗಿ ಅದರಲ್ಲಿದ್ದ ಕಲಾಸಿಗಳ ಪೈಕಿ ಇಬ್ಬರು ಸಮುದ್ರಪಾಲಾಗಿರುವರೆಂದು ಕೇಳುತ್ತೇವೆ.

ಜಿಲ್ಲಾ ಸರ್ಜನರಾದ ಕೆಪ್ಟನ್ ರಜಕ್ ದೊರೆಗಳವರು ತಾ. 5ನೇ ಮಂಗಳವಾರ ಉಡ್ಪಿ, ಕುಂದಾಪುರದತ್ತಕಡೆ ಸರ್ಕಿಟಿಗೆ ಹೋಗಿರುವರು.

ತಾ. 4ನೇ ಸೋಮವಾರ ರಾತ್ರಿ ಇಲ್ಲಿಯ ಬಂದರದಲ್ಲಿ ಒಬ್ಬ ರೋಮನ್ ಕಥೋಲಿಕನನ್ನು ಯಾರೋ ಭಯಂಕರ ರೀತಿಯಲ್ಲಿ ಚೂರಿಯಿಂದ ಕಡಿದು ಕೊಂದು ಹಾಕಿರುವರು. ಅನುಮಾನದ ಮೇಲೆ ಪೋಲಿಸಿನವರು ಇಬ್ಬರನ್ನು ಕೈದು ಮಾಡಿರುವರು. ಈ ಕೊಲೆಯು ಕುಡಿಕತನದಿಂದ ಉಂಟಾಯಿತೆಂದು ಕೇಳುತ್ತೇವೆ.

ಇಲ್ಲಿಯ ಬಾಸೆಲ್ ಮಿಶ್ಯನಿನ ಸೀನಿಯರ್ ಮಿಶ್ಯನೆರಿಯಾಗಿರುವ ರೆವರೆಂಡ್ ಶೊಸ್ಸರ್ ದೊರೆಗಳು ಈಚೆಗೆ ಗೋಕರ್ಣ ಜಾತ್ರೆಗೆ ಹೋಗಿದ್ದರು. ಅಲ್ಲಿ ಒಬ್ಬನ ಕೂಡೆ ತನ್ನ ಬ್ಯಾಸಿಕಲನ್ನು ದುರುಸ್ತು ಮಾಡುವರೆ ಕೊಟ್ಟಿರಂತೆ. ಆತನು ಬ್ಯಾಸಿಕಲ್ ಸಮೇತ ಪರಾರಿಯಾಗಿರುವುದರಿಂದ ದೊರೆಗಳು ಬ್ಯಾಸಿಕಲ್ ಕಳಕೊಂಡವರಾಗಿ ಬಹಳ ಪ್ರಯಾಸ ಪಟ್ಟು ಇಲ್ಲಿ[illegible]ದೆ ಬಂದು ತಲಪಿರುವರೆಂದು ತಿಳಿಯುತ್ತೇವೆ.

ಹಿಂದುಸ್ಥಾನದ ಬಾಸೆಲ್ ಮಿಶ್ಯನ್ ಪ್ರೆಸಿಡೆಂಟರೂ ಸತ್ಯದೀಪಿಕೆಯ ಸಂಪಾದಕರೂ ಆಗಿರುವ ರೆವರೆಂಡ್ ಎಚ್. ರಿಷ್ ದೊರೆಗಳು ಬ್ಯಾಬಲ್ ಸೊಸೈಟಿಯವರಿಂದ ಬ್ಯಾಬಲ್ ತಿದ್ದುಪಡಿ ಮಾಡುವ ಕೆಲಸಕ್ಕೆ ನಿಯಮಿಸಲ್ಪಟ್ಟಿರುವದರಿಂದ ಪ್ರೆಸಿಡೆಂಟರ ಕೆಲಸಕ್ಕೆ ರಾಜಿಕೊಟ್ಟಿರುವರೆಂದೂ ಇವರ ಬದಲಿಗೆ ದಕ್ಷಿಣ ಕನ್ನಡಾ ಜಿಲ್ಲಾ ಸೀನಿಯರ್ ಮಿಶ್ಯನೆರಿಗಳಾದ ರೆವರೆಂಡ್ ಶೊಸ್ಸರ್ ದೊರೆಗಳು ಪ್ರೆಸಿಡೆಂಟರಾಗುವರೆಂದೂ ಈ ಬದಲಾವಣೆಗಳಿಂದ ಲೋಕಲ್ ಮಿಶ್ಯನೆರಿಯಾಗಿರುವ ರೆವರೆಂಡ್ ಬೇಕ್ಲೆ ದೊರೆಗಳಿಗೆ ಸೀನಿಯರ್ ಮಿಶ್ಯನೆರಿಯಾಗುವ ಸಂದರ್ಭವು ದೊರಕುವುದೆಂದೂ ಕೇಳುತ್ತೇವೆ.

ಪುತ್ತೂರು ಸಬ್ ಮೇಜಿಸ್ಟ್ರೇಟರಿಂದ ಕಮಿಟು ಮಾಡಲ್ಪಟ್ಟ ಡಕಾಯಿತಿ ಮೊಕದಮೆಯ ತನಖಿಯು ಬರುವ ಸೋಮವಾರದಿಂದ ಪ್ರಾರಂಭವಾಗುವದು.

ಇಲ್ಲಿಯ ನಿರಾಶ್ರಿತ ಜನಸಹಾಯಕ ಸಂಘದ ಮತ್ತು ಗುಜರಾತ ಪ್ರಾಂತ್ಯಗಳ ಕ್ಷಾಮ ನಿವಾರಣೆಯ ಸೆಂಟ್ರಲ್ ಕಮಿಟಿಯವರ ಸಹಾಯಾರ್ಥವಾಗಿ ಇದೇ ತಿಂಗಳ ತಾ. ೧೧ನೇ ಶ್ಯಾಮ ಘಂಟೆ ೫-೩೦ಕ್ಕೆ ಗವರ್ನಮೆಂಟ ಕಾಲೇಜಿನಲ್ಲಿ ರಾ। ಸಿ. ವಿ, ಮೂರ್ತಿಯವರ ಗಾಯನ ಬೈಟಕಕ್ಕೆ ಏರ್ಪಾಡು ಮಾಡಿರುತ್ತದೆ. ಮೂರ್ತಿಯವರು ಗುಜರಾತಿ, ಪರ್ಸಿಯನ್, ಪಾರ್ಸಿ, ಉರ್ದು ಬಂಗಾಳಿ ಹಾಡುಗಳನ್ನು ಬಹಳ ಮಧುರವಾಗಿ ಹಾಡುವರು. ನಾಟಕ ಕಂಪೆನಿಗಳಿಗೂ, ಸರ್ಕಸ್ ಕಂಪೆನಿಗಳಿಗೂ ಬಹಳ ಸಮಯದ ವರೇಗೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟ ಮಹಾಜನರೆಲ್ಲರೂ ಈ ಗಾಯನ ಬೈಟಕದಿಂದ ದೊರಿಯುವ ಚಂದಾಹಣವೆಲ್ಲವೂ ದೇಶ ಸೇವೆಯ ಯಾವ ಉದ್ದಿಶ್ಯಗಳ ಬಗ್ಯೆ ವಿನಿಯೋಗಿಸಲ್ಪಡುವುದೆಂಬುದಕ್ಕೆ ನಿಗಾ ಕೊಟ್ಟು ಈ ಗಾಯನ ಬೈಟಕಕ್ಕೆ ಸಹಾ ಉದಾರಾಶ್ರಯವನ್ನು ಕೊಡಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

ಬೆಳ್ತಂಗಡಿ ಸಬ್ ಮೆಜಿಸ್ಟ್ರೇಟರಿಂದ ಕಮಿಟು ಮಾಡಲ್ಪಟ್ಟ ಕ್ರಿಮಿನಲ್ ಮೊಕದಮೆಯ ತನಖಿಯು ಇಲ್ಲಿಯ ಸೆಶ್ಯನ್ ಕೋರ್ಟಿನಲ್ಲಿ ಕಳೆದ ಸೋಮವಾರ ಪ್ರಾರಂಭವಾಯಿತು. ಗರ್ಭಿಣಿಯಾದ ಕಾವೇರಿ ಎಂಬ ಬ್ರಾಹ್ಮಣ ವಿಧವೆಗೆ ಗರ್ಭ ಪತನವು ಪ್ರಾಪ್ತಿಸುವಂತೆ ಔಷಧಿ ಕೊಟ್ಟಿದ್ದಾನೆಂಬ ಆರೋಪಣೆ ಮೇಲೆ ಪೊಡಿಲ್ಲಾಲ್ ಗ್ರಾಮದ ಶಿವದಾಸನೆಂಬವನು ಪಿನೆಲ್ ಕೋಡಿನ ೩೧೨ನೇ ಪ್ರಕರಣದ ತಪ್ಪಿಗೆ ಗುರಿಮಾಡಲ್ಪಟ್ಟಿದ್ದನು. ಶಿವದಾಸನಿಗೂ ಈ ಬ್ರಾಹ್ಮಣ ವಿಧವೆಗೂ ಪರಸ್ಪರ ಮೈತ್ರಿ ಉಂಟಾಗಿ ಈತನಿಂದ ಆತಗೆ ಗರ್ಭ ಪ್ರಾಪ್ತಿಯು ಉಂಟಾಯಿತು. ಗರ್ಭ

ಪತನಕ್ಕೆ ಔಷಧಿಯು ಕೊಡೋಣವೆಂಬದಾಗಿ ಶಿವದಾಸನು ಈ ವಿಧವೆಯನ್ನು ಕೇಳಿದನು. ಆದರೆ ವಿಧವೆಯು ತನ್ನ ಜಾತಿಯು ಮೊದಲೇ ಕೆಟ್ಟು ಹೋದ್ದರಿಂದ ಇಂಥಾ ಔಷಧಿಯು ಬೇಡವೆಂತ ನಿರಾಕರಿಸಿದಳು. ಏಳು ತಿಂಗಳ ಗರ್ಭಿಣಿಯಾಗುತ್ತಲೇ ಈ ವಿಧವೆಗೆ ಜ್ವರದ ಕಾಹಿಲೆಯು ಸಂಭವಿಸಿತು. ಶಿವದಾಸನು ಈ ಕಾಹಿಲೆ ಕಾಲದಲ್ಲಿ ಕೆಲವು ಮಾತ್ರೆಗಳನ್ನು ಈ ವಿಧವೆಗೆ ಸೇವಿಸುವರೆ ಕೊಟ್ಟನು. ಈ ಮಾತ್ರೆಗಳನ್ನು ಸೇವಿಸಿದನಂತರ ಮೈ ಎಲ್ಲಾ ಉರಿಯುಂಟಾದ್ದನ್ನು ಶಿವದಾಸನು ತಿಳಕೊಂಡ ಮೇಲೆ ತಾನು ಗರ್ಭಪತನಕ್ಕೆ ಔಷಧಿ ಕೊಟ್ಟಿದ್ದೇನೆಂತ ಆಕೆಗೆ ತಿಳಿಸಿದನು. ಮಾರಣೆ ದಿನ ವಿಧವೆಯು ಬಾಣಂತಿಯಾಗಿ ಗಂಡು ಶಿಸುವು ಈಕೆಗೆ ಜನಿಸಿತು. ಮಗುವು ಹುಟ್ಟಿದ ಕೆಲವು ತಾಸುಗಳಲ್ಲಿಯೇ ಮೃತಿ ಹೊಂದಿತು.

ಎಸ್ಸೆಸ್ಸರವರು ಆಪಾದಿತನ ಮೇಲೆ ತಪ್ಪು ಸಾಬೀತಾಗುವದಿಲ್ಲವೆಂಬ ಅಭಿಪ್ರಾಯ್ಯಸಟ್ಟನಲ್ಲದೆ ಜಡ್ಜರು ಸಹಾ ಈ ಅಭಿಪ್ರಾಯವನ್ನೇ ಪಡದವರಾಗಿ ಅಪರಾಧಿಯನ್ನು ಖುಲಾಸುಪಡಿಸಿರುವರು.

ಒಬ್ಬ ಬಾತ್ಮೀದಾರರಿಂದ:—ಇದೇ ತಾ. ೩ನೇ ಆದಿತ್ಯವಾರ ಕೆಪ್ಟನ್ ವಿಲಿಯಂ ಎರ್ನೆಸ್ಟರೆಂಬವರು ಬಲ್ಮಠ ಕ್ರಿಸ್ಟಿಯನ್ ಫ್ರೆಂಡ್-ಇನ್-ನೀಡ್ ಸೊಸ್ಯಾಟಿಯಲ್ಲಿ ಒಂದು ಭಾಷಣಕೊಟ್ಟು ತಾನು ಯೂರೋಪ್ ಖಂಡಗಳಲ್ಲಿ ಸಂಚರಿಸಿದ ಕಾಲದಲ್ಲಿ ಪಡೆದ ಕೆಲವು ಅನುಭವಗಳನ್ನು ಹೇಳಿದರು. ಈ ಸಂದರ್ಭದಲ್ಲಿ ಅವರು ಹೇಳಿದ ಕೆಲವು ಮಾತುಗಳನ್ನು ಬರಿಯುವದು ಅತ್ಯುಪಯುಕ್ತವಾಗಿರುವದು:—ಹಿಂದುಸ್ಥಾನದಿಂದ ಇಂಗ್ಲಾಂಡಿಗೆ ಹೋದ ಭಾರತೀಯರನ್ನು ಅಲ್ಲಿ ರಾಜಕುಲದವರಂತೆ ಭಾವಿಸಿ ಸನ್ಮಾನ ಕೊಡುವರು. ಅಲ್ಲಿ ಗಂಡಸರು ಹೆಂಗಸರಿಗೆ ಮರ್ಯಾದಿ ಕೊಡುವ ಸಾಂಪ್ರದಾಯವಿದ್ದರೂ ಭಾರತೀಯ ಗಂಡಸರಿಗೆ ಅಲ್ಲಿಯ ಹೆಂಗಸರೇ ಮರ್ಯಾದೆ ಕೊಡುವರು. ಅಲ್ಲಿ ಬಹಳ ಬಡವರಿರುವರು. ಭರತಖಂಡದಲ್ಲಿ ಎಂಥಾ ಬಡವರನ್ನಾದರೂ ನೋಡಿದರೆ ಮುಖದಲ್ಲಿ ಒಳ್ಳೇ ಲಕ್ಷಣವು ಕಂಡುಬಂದು ಅಸಂಹ್ಯಕಾಣದು. ಯೂರೋಪಿನ ಬಡವರನ್ನು ನೋಡಲು ಅಸಂಹ್ಯವಾಗುವದು. ಕಣ್ಣಿನಲ್ಲಿ ನೀರು ಬರುವದು. ಕ್ಷೌರ ಮಾಡಲಿಕ್ಕೆ ದುಡ್ಡಿಲ್ಲದೆ, ಉಡಲಿಕ್ಕೆ ವಸ್ತ್ರದ ಚಿಂದಿ ಇಲ್ಲದೆ ಬಹಳ ಸಂಕಷ್ಟದಿಂದ ರಾತ್ರಿ ಹಗಲು ಬೀದಿ ಬೀದಿಯಲ್ಲಿ ಬಿದ್ದುಕೊಂಡು ಆಯಾ ಸೊಸ್ಯಾಟಿಯವರೂ ಸರಕಾರದವರೂ ಹಂಚುವ ಒಂದು ತುಂಡು ರೊಟ್ಟಿಯನ್ನೂ ಹಾಲು ಹಾಕದ ಒಂದು ತಟ್ಟೆ ಚಾವನ್ನೂ ಕುಡಿದು ಕಾಲ ಕಳೆಯುವರು. ನಾವು ಪಾಶ್ಚಿಮಾತ್ಯ ದೇಶದಲ್ಲಿ ಹುಟ್ಟಿದ್ದಕ್ಕೆ ಪರಮಾತ್ಮನನ್ನು ಹೊಗಳಬೇಕು. ಅಂಥಾ ಬಡವರಲ್ಲಿ ಬುದ್ಧಿವಂತರಾದವರನ್ನು ಆಯಾ ಸೊಸ್ಯಾಟಿಗಳವರು ಹಿಡಿದು ಅನಾಥ ಶಾಲೆಗಳಿಗೆ ಹಾಕಿ ವಿದ್ಯೆ ಬುದ್ಧಿ ಕಲಿಸಿ ಹಿಂದೂಸ್ಥಾನಕ್ಕೆ ಯಾ ಇತರ ದೇಶಗಳಿಗೆ ಮಿಶ್ಯನೆರಿಗಳಾಗಿಯೂ ಇಂಥವರಲ್ಲಿ ಕೆಲವರನ್ನು ಸರಕಾರದವರು ರೈಲ್ವೇ, ಟೆಲಿಗ್ರಾಫ್ ಇಲಾಖೆಗಳಿಗೆ ನೌಕರರಾಗಿಯೂ ಕಳುಹಿಸುವರು. ಇಂಥವರು ನಂತರ ಗರ್ವಿಗಳಾಗಿ ವರ್ತಿಸಿ ಭಾರತೀಯರನ್ನು ಪೀಡಿಸಿ 'ಕಪ್ಪು' ಜಾತಿಯವರೆಂದು ಭಾವಿಸುವರಲ್ಲದೆ ಅಲ್ಲಿಯ ಮಾನ್ಯರೂ ಪ್ರಭುವರ್ಗದವರೂ ಎಂದೂ ಭಾರತೀಯರನ್ನು ತುಚ್ಛೀಕರಿಸರು. ವಿಲಾಯತಿಯ ಅನಾಥ ಶಾಲೆಗಳಿಂದ ಎತ್ತಲ್ಪಟ್ಟು ಕಳುಹಿಸಲ್ಪಟ್ಟ ಮಿಶ್ಯನೆರಿಗಳಿಂದ ಎಂದೂ ಭರತಖಂಡವು ಮೇಲ್ಮೆಯನ್ನು ಹೊಂದದು. ಇಂಥವರಿಂದ ಹಿಂದೂಸ್ಥಾನವು ಎಂದೂ ಕ್ರೈಸ್ತ ಖಂಡವಾಗದು ಎಂಬದಾಗಿ ಹೇಳಿದರಲ್ಲದೆ ನಾವು ಇಲ್ಲಿ ಹೊಲೆಯರನ್ನು ಹೀನವೆಂದು ಭಾವಿಸುವದು ಮಹಾ ಅನ್ಯಾಯ. ಇಲ್ಲಿಯ ಹೊಲೆಯರು ಬಹಳ ಶುದ್ಧರು. ನಮ್ಮಲ್ಲಿಯ ಹೊಲೆಯರು ಶೇಂದಿ ಅಂಗಡಿಗಳಲ್ಲಿ ಕುಡಿದರೂ ಗಂಡಸರೂ ಹೆಂಗಸರೂ ಪ್ರತೆಪ್ರತ್ಯೇಕವಾಗಿ ಕುಡಿಯುವರು. ಅಲ್ಲಿಯವರೋ—ಶೇಂದೀ ಅಂಗಡಿಗಳಲ್ಲಿ ಗಂಡಸರೂ ಹೆಂಗಸರೂ ಒಟ್ಟಿಗೆ ಗುಂಪುಗುಂಪಾಗಿ ಕುಡಿದು ಮತ್ತರಾಗಿ ಬಹಳ ಅನ್ಯಾಯಗಳನ್ನು ನಡಿಸುವರು. ಅಂಥವರಿಂದ ಎತ್ತಲ್ಪಟ್ಟು ಕಳಹಿಸಲ್ಪಟ್ಟ ಮಿಶ್ಯನೆರಿಗಳಿಂದ ನಮ್ಮ ಹಿಂದೂಸ್ಥಾನಕ್ಕೆ ಶುಭವಾದೀತು ಎಂಬದಾಗಿ ಭಾವಿಸುವದು ಕೇವಲ ಮೂಢತ್ವವು. ನಾವು ನಮ್ಮ ದೇಶದ ಹೊಲೆಯರನ್ನು ಮೇಲಕ್ಕೆ ತರಲು ಆದಷ್ಟು ಪ್ರಯತ್ನ ಪಡಬೇಕು. ಇದರಿಂದ ದೇಶಕ್ಕೆ ಉತ್ತರೋತ್ತರಭಿವೃದ್ಧಿಯುಂಟಾದೀತೆಂಬದಕ್ಕೆ ಅನುಮಾನವಿಲ್ಲವೆಂಬಿತ್ಯಾದಿ ಮಾತುಗಳಿಂದ ಚಲೋ ಭಾಷಣ ಕೊಟ್ಟರು.

ಕುಂಬಳೆ. ಇಲ್ಲಿಗೆ ಸಮೀಪ ಇಚ್ಲಂಪಾಡಿ ಗ್ರಾಮದಲ್ಲಿ ಕಾಡು ಉತ್ಪತ್ತಿಯನ್ನು ಪಡಕೊಂಡ ಇಲ್ಲಿಯ ರಾ. ಸ. ವಿಟ್ಟಪ್ಪ ಕಮ್ತಿಯವರು ಫೆಬ್ರುವರಿ ತಾ. ೨೫ರಲ್ಲು ಸದರಿ ಗ್ರಾಮದ ಶ್ರಾವಣ ಕೆರೆ ಎಂಬಲ್ಲಿಯ ಹೆಬ್ಬಾರರ ದೇವಸ್ಥಾನದ ಅರ್ಚಕರು ಕಾಡು ಉತ್ಪತ್ತಿಯನ್ನು ಒಳ ಕಂಟ್ರಾಕ್ಟಿಗೆ ಕೇಳಿರುತ್ತಾರಾದ್ದರಿಂದ ತಿಳುಕೊಳ್ಳುವರೆ ಹೋದವರನ್ನು ಅರ್ಚಕರು ಒಳಗೆ ಕರತಂದು ಮಾತನಾಡಿದನಂತರ ಕಮ್ತಿಯವರು ದೇವರಿಗೆ ಕಾಣಿಕೆ ಮಾಡಿ ಪ್ರಸಾದವನ್ನು ಸ್ವೀಕರಿಸಿದರು. ತೀರ್ಥ ಪಡಕೊಳ್ಳಬೇಕಾಗಿ ಅರ್ಚಕರು ಇವರನ್ನು ಕೇಳಿದಲ್ಲಿ ತೆಗದುಕೊಳ್ಳದ ಕಾರಣ ಅರ್ಚಕರು ದೇವಸ್ಥಾನದಲ್ಲಿದ್ದ ಇತರ ಕೆಲವರು ಸಹಾ ಸಿಟ್ಟಾಗಿ ದೇವಸ್ಥಾನಕ್ಕೆ ಪ್ರವೇಶಿಸಿದ್ದಕ್ಕೆ ರೂಪಾಯಿ ೧೨-೦-೦ ಸಂಪ್ರೋಕ್ಷಣೆ ಖರ್ಚು ಕೊಟ್ಟೇ ಹೊರಗೆ ಹೋಗಬೇಕಾಗಿ ಬಲೋದ್ಬಂದಿ ನಡಿಸಿದರೆಂತ ಕಮ್ತಿಯವರು ೭ ಮಂದಿ ಹೆಬ್ಬಾರರುಗಳ ಮೇಲೆ ತಾ. ೨೭ರಲ್ಲು ಕಾಸರಗೋಡು ಸ್ಟೇಶನೆರಿ ಮೇಜಿಸ್ಟ್ರೇಟ ಕೋರ್ಟಿನಲ್ಲಿ ಪಿರ್ಯಾದು ದಾಕಲು ಮಾಡಿರುತ್ತಾರೆಂದು ಕೇಳುತ್ತೇನೆ.

ಹೊಸದುರ್ಗ. ಜಮಾಬಂದಿಗೋಸುಗ ಜಿಲ್ಲಾ ಕಲೆಕ್ಟರ್ ದೊರೆಗಳು ಇದೇ ತಿಂಗಳ ತಾರೀಕು ೧೬ಕ್ಕೆ ಇಲ್ಲಿ ಬರುವರು.

ಇಲ್ಲಿಯ ಸೆಕಂಡರಿ ಶಾಲೆಯ ದಸ್ತೂರಿ ಕೊಡಲಾಸ್ಪದವಿಲ್ಲದ ಬಡ ಹುಡುಗರಿಗೆ ಅನುಕೂಲವಾಗುವಂತೆ ಹೊಸದುರ್ಗ ಸಮೀಪ ಕಾಞಂಗಾಡ ಗ್ರಾಮದಲ್ಲಿ ಒಂದು ಬೋರ್ಡು ಎಲಿಮೆಂಟರಿ ಶಾಲೆ ಹೊಸತಾಗಿ ನಿರ್ಮಾಣವಾಗಿಯದೆ.

ಯರ್ಪಕಟ್ಟೆ. ಬೇಳಾ ಗ್ರಾಮದ ಯರ್ಪಕಟ್ಟೆಯಲ್ಲಿ ನವೀನ ಒಂದು ಬೋರ್ಡು ಶಾಲೆಯನ್ನು ಸ್ಥಾಪಿಸಿರುತ್ತಾರಷ್ಟೆ. ಸ್ಥಳೀಕ ಮಾನ್ಯ ಗೃಹಸ್ಥರೊಬ್ಬರು ಸುಮಾರು ೨೫೫ ರೂಪಾಯಿ ಖರ್ಚು ಮಾಡಿ ಶಾಲೆಯ ಬಗ್ಯೆ ಕಟ್ಟೋಣವನ್ನು ಕಟ್ಟಿಸಿ ತಾಲೂಕು ಬೋರ್ಡಿನವರಿಗೆ ಬಾಡಿಗೆಗೆ ವಹಿಸಿಕೊಟ್ಟಿರುತ್ತಾರೆ. ಸದರಿ ಶಾಲೆಯ ಪ್ರವೇಶ ಮಹೋತ್ಸವು ಸ್ಥಳೀಕ ಮಾನ್ಯ ಗೃಹಸ್ಥರ ಮತ್ತು ನಿವಾಸಿಕರ ಸಹಾಯದಿಂದ ಕಳೆದ ಫೆಬ್ರುವರಿ ತಾ. ೨೬ಕ್ಕೆ ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು.

ಮರುದಿನ ತಾ. ೨೭ಕ್ಕೆ ಶಾಲಾ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ಮ. ರಾ. ರಾ. ಎಂ. ರಘುನಾಥ ರಾಯರವರು ಯರ್ಪಕಟ್ಟೆ ಬೋರ್ಡು ಶಾಲೆಗೆ ಚಿತ್ತೈಸಿ ಶಾಲೆಯ ಕೆಲಸದ ವಿಷಯ ಒಳ್ಳೆ ಅಭಿಪ್ರಾಯ ಪಟ್ಟು ಶಾಲೆಯ ಮುಂದಿನ ಅಭಿವೃದ್ಧಿಗೋಸುಗ ಒಳ್ಳೆ ಸೂಚನೆಗಳನ್ನು ಕೊಡುವವರಾದರು.

ಕುಂದಾಪುರ. ನಮ್ಮ ಡಿವಿಜನಲ್ ಆಫೀಸರರಾದ ಮೆಕ್ವಿನ್ ದೊರೆಗಳವರಿಗೆ ಜ್ವರ ಬರುವದರಿಂದ ೧೦ ದಿನಗಳ ರಜೆಯಲ್ಲಿರುವರು.

ಜಿಲ್ಲಾ ಕಲೆಕ್ಟರ್ ದೊರೆಗಳವರು ಇಲ್ಲಿಯ ಜಮಾಬಂದಿ ಕೆಲಸ ತೀರಿಸಿ ಮೊನ್ನೆ ಸೋಮವಾರ ಮಂಗಳೂರಿಗೆ ಹಿಂತೆರಳಿದರು.

ಪೂನೆಯಿಂದ ಮೂವರು ಪೈಲ್ವಾನರು ಇಲ್ಲಿಗೆ ಬಂದು ಶನಿವಾರ ದಿನ ಕೆಲವು ಕಸರತ್ತುಗಳನ್ನು ಮಾಡಿ ಜನರನ್ನು ಸಂತೋಷ ಪಡಿಸಿದರು. ನೆರೆದಿದ್ದ ಯಫ್. ಕುಲಾಸರವರೂ, ಇಲ್ಲಿಯ ಮುನಶೀಪರೂ ಪೋಲೀಸ್ ಇನ್ಸ್‌ಪೆಕ್ಟರರೂ ವಕೀಲರೂ ಕೂಡಿ ೨೫ ರೂಪಾಯಿ ಇನಾಮು ಕೊಟ್ಟರು.

ಎಡ್ವರ್ಡ್ ಮೆಮೋರಿಯಲ್ ಹೋಲಿನ ಕೆಲಸವು ಬೇಗನೇ ತೀರುವುದೆಂದು ಕಾಣುತ್ತಿದೆ.

ತೀರ್ಥಹಳ್ಳಿ. ಈಗ್ಯೆ ೧೦-೧೨ ದಿವಸಗಳಿಂದಲೂ ಕೊಲೇರಾ ವ್ಯಾಧಿಯು ತಲೆದೋರಿರುತ್ತೆ. ದಯಾಳುಗಳಾದ ಮೆ॥ ಅಮಲ್ದಾರ್ ನರಶಿಂಗರಾಯರವರು ಪ್ರಜಾನೆಮ್ಮದಿಗಾಗಿ ಹೆಚ್ಚಾದ ಶ್ರಮಪಡುತ್ತಲಿದ್ದಾರೆ. ಆದಾಗ್ಯೂ ಈಗಾಗಲೆ ೧೦-೧೨ ಕೇಸುಗಳು ನಡದಂತೆ ವರ್ತಮಾನ ಕೇಳುತ್ತೇನೆ. ಶ್ರೀ ದೇವರು ಪ್ರಜೆಗಳ ಸಂತಾಪವನ್ನು ಹೋಗಲಾಡಿಸಿ ಅಮಲ್ದಾರರವರಿಗೆ ಆಯುರಾರೋಗ್ಯ ಕೀರ್ತಿಯನ್ನುಂಟುಮಾಡಲೆಂದು ಹಾರೈಸುತ್ತೇನೆ.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಹೊಸ ಮಸ್ಕತಿ ಅಕ್ಕಿ	5—4—0
ಹೊಸ ಗುಡ್ಡು ಮಸ್ಕತಿ...	4-11—0
ಹೊಸ ಮಸ್ಕತಿ ದುಯಂ...	4-13—0
ಹೊಸ ಗುಡ್ಡು ,, ...	4-11—0
ಮಸ್ಕತಿ ಬೆಳ್ತಿಗೆ ,, ...	5—7—0
ರಂಗೂನ್ ಬೆಳ್ತಿಗೆ ಗೋಣಿ	9-12—0
ಹುರುಳಿ ಗೋಣಿ ೧, ಮುಡಿ 2ರ ...	6-10—0
ಉಪ್ಪು ಗೋಣಿ ೧ರ	3-10—0
ಖೊಬ್ರಿ ಖಂಡಿ ೧ರ	100-0—0
ಖೊಬ್ರಿ ಎಣ್ಣೆ ಮಣ ೧ರ	6-12—0
ಕಾಫಿ ಖಂಡಿ ೧ರ	260—0—0
ಕಾಳು ಮೆಣಸು ಖಂಡಿ	167—0—0
ಹೊಸ ಬಿಳಿ ಗೋಟು ಅಡಿಕೆ	78—0—0
ಕರಿ ಗೋಟು	66—0—0
ಯಾಲದ ಕಾಯಿ ಮಣ ೧ರ	48—0—0
ಗೇರುಬೀಜ ಮುಡಿ ೧ರ	2—2—0
ರಾಮಪತ್ರೆ ಮಣ ೧ರ	8-10—0
ಶೀಗೆಕಾಯಿ ಖಂಡಿ ೧ರ	34—0—0
ಕಾಸ್ರಕಿನ ಬೀಜ ಖಂಡಿ ೧ರ	20—0—0
ದಾಲಚೀನಿ ಹೂ ಮಣ ೧ರ	3—2—0
ಅಂಟವಾಳ ಕಾಯಿ ಮುಡಿ ೧ರ ...	1—6—0
ಅಣಲೆ ಕಾಯಿ ಖಂಡಿ ೧ರ	12—4—0
ಪಚ್ಚೆಹೆಸರು	4-14—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—6—0
ಗೋದಿ ಗೋಣಿ ೧ಕ್ಕೆ	11—0—0
ಊರು ಬೆಲ್ಲ ಖಂಡಿ ೧ರ	35—0—0
ಮೋರಿಸ್ ಸಕ್ಕರೆ ಮಣ ೧ರ	3—8—0
ಕಡಲೆ ಗೋಣಿ ೧ರ	7-10—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—3—0
ಖೊಬ್ರಿ ಹಿಂಡಿ ಖಂಡಿ ೧ರ	34—0—0

ಎಂ. ಡಿ. ರಾಣೆ ಎಂಡ್ ಕೋ.,
ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ. 1—0—0 ವಿ. ಪಿ. ಮೂಲಕ 1—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

THE CANARA ARTS BUREAU.
ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಪುಗಳನ್ನೂ ಛಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಪುಗಳಿಗೆ ಇತರ ಫೋಟೋಗ್ರಾಪುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೋಗ್ರಾಪುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಪು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ಒಕ್ಕೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ, ಮಂಗಳೂರು ದ. ಕ.

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆ‌ಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೪ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಟಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯ ಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಟಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ ಗುಳಿಗೆಗಳು.	30 ವರುಷಗಳಿಂದ ಉಪಯೋಗಿ ಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಯಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ
22 ಬ್ರಾಡ್ವೇ ಮತ್ತು 96 ವ್ಹಾಂಟ್ ರೋಡ್ ಮದರಾಸು.

ವೈದ್ಯ ಶಾಸ್ತ್ರಿ,
ಮಣಿಶಂಕರ ಗೋವಿಂದಜಿ.
ಮತ್ತು ಜಾಮ್ ಕಾತ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಅಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ವಿಶೇಷ ಮಾಹಿತಿಗೂ ಇತರ ವಿವರಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.



ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು, ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿ ಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ, ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸಿ ಮಾಡಲ್ಪಡುವದು.

ಎಲ್ಲೂರು ರಾಮ ರಾವ್,

ಜನರಲ್ ಏಜಂಟ್,

ಬ್ರಿಟೋ ಬಿಲ್ಡಿಂಗ್ಸ್

ಮಂಗಳೂರು, ದ, ಕನ್ನಡ.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸ್ ವೇರ, ಒಯಲ್‌ಮೆನ್ ಸ್ಟೋರ್ಸ, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

:ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,

ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾವಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. **ಪ್ರಮೇಹರಿಪು ಬಿಂದು.** ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. **ಕಾಮೇಶ್ವರ ಮಾತ್ರೆ.** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. **ಸೂರಣಾವ ಲೇಹ.** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. **ಜಗನ್ಮೋಹನ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. **ಸರಳಭೇದಿ ಮಾತ್ರೆ.** ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. **ವಾಸಾವ ಲೇಹ.** ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. **ಶಾಲ್ಮಲೀ ಪಾಕ.** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. **ವಾತಮುರಾರಿ ಬಾಮ್.** ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ **ಸವ್ವೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. **ಪ್ರಜ್ಞಾ ಸಾರಸ್ವತ ಚೂರ್ಣ.** ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*

Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original BABA BUDAN-GHIRY COFFEE POWDER PROPRIETORS J.S.SOUZA & Co MANGALORE

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,

ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿಯ ಬೇನಿಹಾರಿ ಮುಲಾಮು.)

EST. 1898.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನುನೋವು, ಆನೆ ಕಾಲು, ಖಜ್ಜಿ, ಸುಟ್ಟ ಘಾಯು, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ತಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,

ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬನಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ ಪುಕಟೆ ರವಾನಿಸುವೆವು. ವಿಳಾಸ:—

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.

ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.

ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ಕಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,

ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,

ಮಂಗಳೂರು, ದ. ಕ.

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಓಪರೇಷನ್ ಬೇಂಕ್ ಟಾಟಾ ಹ್ಯಾಡ್ರೋ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜ ಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,

ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

ಯವ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಫುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸೃಗ್ವರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೇಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತಾ ತಯಾರಿಸಿರುವೆವು. ರಕ್ತವನ್ನು ವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವು ಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1–8–0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯವ್. ವಿ. ಶಾಸ್ತ್ರಿ.

ಆಯುರ್ವೇದ ಭೂಷಣ,

ಮಂಗಳೂರು

ಸಂತೋಷಕರವಾದ ಪ್ರಕಟಣೆ.

ಸರ್ವರೂ ತರಿಸಿಕೊಂಡು ಸಂತೋಷ ಪಡಿ.

ಬರುವ ಎಪ್ರಿಲ್ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖಿ (3) ನಾಜೂಕವಾದ ಕೈರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಸೆ (5) ಪೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಶಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಶಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನಂಬರು 7 ಕೋಚ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

Registered No. M. 498

ಚಂದಾನಿರ್ಣಯ:—

ವರ್ಷ ೧ಕ್ಕೆ ರೂ. 1-4-0.

ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 11.

ಮಂಗಳೂರು ತಾ. 15ನೇ ಶುಕ್ರವಾರ ಮಾರ್ಚಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳುಕಡಿತ, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಫಸ್ಟ್ ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ ಮತ್ತು ಮೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ಎಂಡ್. ಎಸ್. ಎಂಡ್. ಜೆ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೇಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ:—ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ ಎಸ್ಟೇಟು, ಕೊಡಗು:—ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ್ ವಾಂದ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—ನಿಮ್ಮಿಂದ ಪಡಕೊಂಡ ಅಮೃತಾಂಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.

ಅಮೃತಾಂಜನ ಚರ್ಚಿತವಾದ ರೋಮದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಹಶೆಯೂ ಬಾರದಂತೆ ನೋಡಿಕೊಂಡು, ಹಶೆ ಇಲ್ಲದ ಸ್ಥಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. ಎಮ್. ಎಂಡ್. ಎಸ್., ಮುಂಬಯಿ, ಬರಿಯುವದೇನಂದರೆ:—ನಿಮ್ಮ ಅಮೃತಾಂಜನವನ್ನು ನಾನು ವಾತಕ್ಕೂ ಸಂಧಿವಾತಕ್ಕೂ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿದ್ದಲ್ಲಿ ಬಹಳ ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ ತಿಳಿಸುತ್ತೇನೆ.

ಜಾಗ್ರತೆ:—ಈಗ ಅಮೃತಾಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಲ್ಪಟ್ಟಿರುತ್ತದೆ.

ವಿಳಾಸ:— ಅಮೃತಾಂಜನ ಡಿಪೋ,

109 ಫ್ರೇಯರ್ ರೋಡ್, ಫೋರ್ಟ್ ಮುಂಬಯಿ.

ಟೆಲಿಗ್ರಾಫ್ ಎಡ್ರೆಸು:—ಅಮೃತಾಂಜನ, ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೇಶವರ್ಧಿನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

AMRUTANJAN DEPOT, BOMBAY.

NOTICE.

Owing to strikes and other causes in Europe Amrutanjan bottles with our special trade mark have not arrived in time. This delay coupled with a very large demand for Amrutanjan induced us for the time to fill the medicine in the ordinary bottles for which we beg the indulgence of our customers. In future Amrutanjan will be supplied in good bottles as before.

BOMBAY, 9th Feb. 1912.

THE PROPRIETOR,
Amrutanjan Depot.

ಅಮೃತಾಂಜನ ಡಿಪೊ, ಮುಂಬಯಿ.

ಪ್ರಕಟಣೆ.

ಯೂರೋಪದಲ್ಲಿ ನಡೆದ ಮುಷ್ಕರಗಳಿಂದಲೂ ಇತರ ಕಾರಣಗಳಿಂದಲೂ ನಮ್ಮ ಟ್ರೇಡ್ ಮಾರ್ಕ್ ಉಳ್ಳ ಪ್ರತ್ಯೇಕ ತರದ ಕರಡಿಗೆಗಳು ತಕ್ಕ ಸಮಯದಲ್ಲಿ ನಮಗೆ ದೊರಕಲಿಲ್ಲ. ಈ ಕಾಲದಲ್ಲಿ ಅಮೃತಾಂಜನಕ್ಕೆ ಬಹಳ ಗಿರಾಕಿ ಬಂದದ್ದರಿಂದ ತತ್ಕಾಲಕ್ಕೆ ಸಾಧಾರಣ ಸೀಸೆಗಳಲ್ಲಿಯೇ ನಮ್ಮ ಔಷಧವನ್ನು ತುಂಬಿಸಬೇಕಾಯಿತು. ಇದಕ್ಕಾಗಿ ನಮ್ಮ ಗಿರಾಕಿಗಳು ಅಸಮಧಾನ ಪಡರು ಎಂಬದಾಗಿ ನಂಬುತ್ತೇವೆ. ಇನ್ನು ಮುಂದಕ್ಕೆ ಅಮೃತಾಂಜನವು ಮೊದಲಿನಂತೆಯೇ ಒಳ್ಳೇ ಸೀಸೆಗಳಲ್ಲಿ ತುಂಬಿಸಿ ಕಳುಹಿಸಲ್ಪಡುವವು.

ದಿ ಪ್ರೊಪ್ರೈಟರ್,

ಬಿ. ವೆಂಕಟಕೃಷ್ಣಪ್ಪ ಬಿ. ಎ., ಇವರಿಂದ ರಚಿತವಾದ ಹೊಸಕನ್ನಡದ ನವೀನ ಪ್ರಬಂಧ (ನಾವಲ್)ಗಳು.

ಶ್ಯಾಮಕುಬ್ಜ.

(Sir Walter Scott's "Black Dwarf")

ಈ ಕಥೆಯನ್ನೋದುವುದರಿಂದ ಭೂತಪಿಶಾಚಿಗಳ ನಿಜಸ್ಥಿತಿಯು ತಿಳಿಯ ಬಂದು ಮೂಢಭಯವು ತೊಲಗುವುದಲ್ಲದೆ ಅನೇಕ ಲೋಕರಹಸ್ಯಗಳೂ ನೀತಿತತ್ವಗಳೂ ತಿಳಿಯಬರುವುವು. ಇದು ಈ ಪ್ರಪಂಚದ ವಿಷಯದಲ್ಲಿ ಜೀಹಾಸೆಗೊಂಡು ವನವಾಸಿಯಾದ ಒಬ್ಬ ಕರೂಪಿಯಾದ ಶ್ರೀಮಂತನ ಕಥೆ. ಇದನ್ನೋದುತೋದುತ ಕಣ್ಣೀರನ್ನು ತಡೆಯುವುದು ಕಷ್ಟವಾಗುವುದು. ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಕ್ಲಿಷ್ಟಪದಗಳ ನಿಘಂಟನ್ನು ಸೇರಿಸಿದೆ.

ಅಂದವಾದ ಮುದ್ರಣ, ಉತ್ತಮವಾದ ಕಾಗದ, ಭದ್ರವಾದ ಬೈಂಡ್, ಕ್ರಯ ೮ ಆಣೆ.

ಮಹಾಲಕ್ಷ್ಮಿ.

ಬಾಲ್ಯವಿವಾಹದಿಂದಲೂ, ನವನಾಗರಿಕರೆನಿಸಿಕೊಂಡ ಕುಡಿಕರ ಸಹವಾಸದಿಂದಲೂ ಆಧುನಿಕ ಯುವಕರಿಗೆ ಸಂಭವಿಸಬಹುದಾದ ಕಷ್ಟನಷ್ಟಗಳು ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. ಮುದ್ದಾದ ಹಸ್ತಪುಸ್ತಕ. ಕ್ರಯ ೨ ಆಣೆ.

ಕನ್ನಡ ವರ್ಣಮಾಲಾ.

ಅಕ್ಷರಾಭ್ಯಾಸ ಮಾಡಿಸಲು ಅನುಕೂಲಿಸುವಂತೆ ಅ,ಕಾರ ಮೊದಲು ಳ,ಕಾರದವರಿವಿಗೆ ಎಲ್ಲಾ ಅಕ್ಷರಗಳನ್ನು ದೊಡ್ಡ ಆಕಾರದಲ್ಲಿ ಅಚ್ಚುಮಾಡಿಸಿರುತ್ತೆ ಗೋಡೆಗೆ ಅಂಟಿಸಲು ಅನುಕೂಲಿಸುವಂತೆಯೂ ಬಾಲಕರಿಗೆ ಜಾಗ್ರತೆ ಅವಗಾಹನೆಯಾಗುವಂತೆಯೂ ಇರುವದು. ಬೆಲೆ ೧ಕ್ಕೆ ೬ ಪೈ, ೨೫ಕ್ಕೆ ೮ ಆಣೆ.

ಟೀಕಾ ತಾತ್ಪರ್ಯ ಸಹಿತ ಮಹಿಮ್ನ ಸ್ತೋತ್ರ	೦—೩—೦.
ಡಿ. ಮುಕುಂದಮಾಲಾ ಸ್ತೋತ್ರ	೦—೪—೦.
ವಚನ ಜ್ಯೋತಿಸ್ಸಂಗ್ರಹ	೦—೪—೦.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—

ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

—o—

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ. ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು ಟೀಕಾ ತಾತ್ಪರ್ಯ ಶಬ್ದಸಮಾಸ ಸಹಿತವಾದ ೧ನೇ ಪರ್ವ ರಘುವಂಶ ರೂ. ೧—೦—೦ ೨ನೇ ಪರ್ವ ರೂ ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶಾಮಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ ಸಹಿತವಾಗಿ ಈಗ ತಾನೆ ಪೂರೈಸಿರುತ್ತೆ. ಉತ್ತಮವಾದ ಕ್ಯಾಲಿಕೊ ಬೈಂಡು ರೂ. ೨—೪—೦. ಋಗ್ವೇದ ನಿತ್ಯಕರ್ಮ ೦—೪—೦. ಎಲ್ಲಾ ಪುಸ್ತಕದಪಟ್ಟಿಯೂ ಬೇಕಾದಲ್ಲಿ ಸುಮ್ಮನೇ ಪಡೆಯಬಹುದು.

ಬಿ. ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್, ಬೆಂಗಳೂರು ಸಿಟಿ.

ಶ್ರೀ ರಾಮಕೃಷ್ಣ ವಿವೇಕಾನಂದ ವಚನಾಮೃತವು.

ಅಭಿನವ ಭರತಖಂಡದ ಪರಮ ಗುರುಗಳಾಗಿಯೂ, ಭಕ್ತಿ ಜ್ಞಾನ ಯೋಗ ವೈರಾಗ್ಯಗಳಲ್ಲಿ ಅದ್ವಿತೀಯರಾಗಿಯೂ, ವೇದ ವೇದಾಂತ ಮಹಮ್ಮದೀಯ ಮತ್ತು ಕ್ರೈಸ್ತಮತಗಳಲ್ಲಿ ಪಾರಂಗತರಾಗಿಯೂ, ಬ್ರಹ್ಮನಿಷ್ಠರಾಗಿಯೂ, ಆತ್ಮವಿದರಾಗಿಯೂ, ಅವತಾರ ಪುರುಷರಾಗಿಯೂ ಇದ್ದ ಶ್ರೀ ರಾಮಕೃಷ್ಣ ಪರಮಹಂಸರವರ ಸೂಕ್ತಿ ಮುಕ್ತಾವಲಿಯೂ, ಅವರ ಶಿಷ್ಯರಾಗಿ, ಪ್ರಾಚ್ಯ ಪಾಶ್ಚಾತ್ಯ ವಿದ್ಯೆಗಳಲ್ಲಿ ಪಂಡಿತರಾಗಿ, ಅಮೇರಿಕಾ ಯೂರೋಪ್‌ಖಂಡಗಳಲ್ಲಿ ಸನಾತನಧರ್ಮದ ಉತ್ಕೃಷ್ಟತೆಯನ್ನು ಕುರಿತೂ ಉತ್ತಮೋಪನ್ಯಾಸ ಮಾಡಿ, ಜಗದ್ಗುರುಗಳಾಗಿ, ಭಾರತೀಯರ ಪ್ರಕೃತ ಧರ್ಮಗಳನ್ನು ತಿಳಿಸಿ, ದೇಶಭಕ್ತಾಗ್ರೇಸರರಾಗಿದ್ದ ಶ್ರೀ ವಿವೇಕಾನಂದ ಸ್ವಾಮಿಗಳವರು ಬರೆದ ಕಾಗದಗಳ ಮತ್ತು ಉಪನ್ಯಾಸಗಳ ಸಾರಾಂಶವೂ ಲಲಿತವಾದ ಹೊಸಗನ್ನಡದಲ್ಲಿ ಬರೆಯಲ್ಪಟ್ಟಿವೆ. ಅದರಲ್ಲಿ ಆಸ್ತಿಕ, ಬ್ರಂಲಕ್ಷಣ, ಮೋಕ್ಷೋಪಾಯ, ಭಕ್ತಿ, ವಿರಕ್ತಿ, ಮತಮತಾಂತರಗಳು ಮುಂತಾದ ಪಾರಮಾರ್ಥಿಕ ವಿಷಯಗಳೂ, ಭಾರತೀಯರ ಸ್ಥಿತಿ, ಕರ್ತವ್ಯ, ಇತರ ಜನಾಂಗಗಳ ನಾಗರಿಕತೆ ಮುಂತಾದ ಲೌಕಿಕ ವಿಷಯಗಳೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಪ್ರತಿಯೊಬ್ಬ ದೇಶಾಭಿಮಾನಿಯೂ, ಮತಾಭಿಮಾನಿಯೂ, ಆಸ್ತಿಕನೂ ಮುಮುಕ್ಷುವೂ ಈ ಗ್ರಂಥದ ಒಂದು ಪ್ರತಿಯನ್ನಾದರೂ ಇಟ್ಟುಕೊಂಡಿರಬೇಕು. ಇದರಲ್ಲಿ ಆ ಸದ್ಗುರುಗಳಿಬ್ಬರ ಸಂಸ್ಕೃತ ಕರ್ಣಾಟಕ ಸ್ತೋತ್ರಗಳೂ ಜೀವನ ಚರಿತ್ರೆಗಳೂ ಭಾವಚಿತ್ರಗಳೂ ಅಡಗಿವೆ. ಸರ್ವರಿಗೂ ಸಂಗ್ರಾಹ್ಯ.—ಬೇಗನೆ ಬರೆಯಿರಿ

ವಿಳಾಸ:—ಮ್ಯಾನೇಜರ್,
"ಸುಮತಿ ಗ್ರಂಥಮಾಲಾ" ಆಫೀಸು
ಬೆಂಗಳೂರು ಸಿಟಿ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಲಾಸ (ಪತ್ತೆ) ☞ ವೇದವಾಹಿನೀ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

14 ಕ್ಯಾರ್ಟ್ಸು ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ನಮ್ಮಲ್ಲಿ ಅನೇಕ ನಮೂನೆಗಳಲ್ಲಿ (ಅಂದರೆ) ಇಂಗ್ಲೀಷು, ಕನ್ನಡ, ಬಾಳಬಂದು, ಉರುದು, ಅರವ, ತೆಲುಗು ಈ ಎಲ್ಲಾ ಭಾಷೆಗಳಲ್ಲಿಯೂ ರಬ್ಬರು ಮೊಹರು ತಯಾರುಮಾಡುತ್ತೇವೆ. ಬೇಕಾದವರು ಬರದು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ರಬ್ಬರು ಮೊಹರುಗಳ ನಮೂನೆ ನೋಡಬೇಕಾದವರು ನಮ್ಮ ಕಂಪೆನಿಗೆ ಬರದರೆ ಕ್ಯಾಟಲಾಗ್ ರವಾನಿಸುತ್ತೇವೆ. ಇದೂ ಅಲ್ಲದೆ ನಮ್ಮ ಕಂಪೆನಿಯಲ್ಲಿ ತರಹೆವಾರಿ ಫೌಂಟೆನ್‌ಪೆನ್‌ಗಳೂ ಮತ್ತು ಜರ್ಮನ್ ಅಮೆರಿಕಾ ದೇಶದ ಸುವಾಸನೆಯುಳ್ಳ ಸೆಂಟ್ಸ್ ಎಂಬ ಹೂವ್ವಿನ ಸಾರಗಳು ಮಾ... ಇದರ ಕ್ರಯ ಬುಡ್ಡಿ 1ಕ್ಕೆ 1—0—0. ವಿ.ಪಿ. ಚಾರ್ಜು ಅಲಾಯಿದೆ.

ಏಜಂಟುಗಳು ಬೇಕಾಗಿವೆ. ಅಧಿಕ ಲಾಭವುಂಟು.

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರಿಂದಲಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲಕ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಸಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗ ಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನ್ಸಿಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು
ಮಂಗಳೂರು.

ಫೊಟೊಗ್ರಾಫ್ ಬ್ಲೈಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42″×25″ ರೂ. 75. ಅರ್ಧ ಸ್ಯಾಜ್ 21″×15″ ರೂ. 40. ಬಸ್ಟ್ ಸ್ಯಾಜ್ 18″×12″ ರೂ. 20. ಸಣ್ಣ ಸ್ಯಾಜ್ 12″×10″ ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೊಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೊಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2-10-0 ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಸರ್ವೋತ್ಕೃಷ್ಟವಾದ ಅತ್ತರುಗಳು.

ಇನ್ನು ಮೇಲಾದರೂ ಬಜಾರಿನಲ್ಲಿ ದೊರಕುವ ಹೀನವಾದ ಅತ್ತರುಗಳನ್ನು ಕೊಂಡುಕೊಳ್ಳದಿರಿ. ನಮ್ಮ ಈ ಅತ್ತರುಗಳು ಅತಿಶಯ ಪ್ರಯಾಸ ಪ್ರಯತ್ನಗಳಿಂದ ಸಿದ್ಧಮಾಡಲ್ಪಟ್ಟಿವೆ. ಇವುಗಳ ಸುಗಂಧವು ನೂತನವಾಗಿ ಅರಳಿ ಗಮಗಮಿಸುವ ಪುಷ್ಪಗುಚ್ಛದ ಪರಿಮಳವನ್ನು ವಿಶೇಷತಃ ಮಿಂಚುತ್ತದೆ. ಮತ್ತು ಯಾವಾಗಲೂ ಒಂದೇ ಲೆಕ್ಕವಾಗಿರುತ್ತದೆ.

ಕಾಮಿನಿಯಾ ಡೈಜೀ (ರಿಜಿಸ್ಟರ್ಡ್)ಇದು ದೊಡ್ಡ ಮಲ್ಲಿಗೆಯ ಹೂಗಳಿಂದ ಸಂಗ್ರಹಿಸಿದ ಅತ್ತರು. 'ಮಲ್ಲಿಗೆ' ಎಂಬ ಈ ಶಬ್ದವು ಕಿವಿಗೆ ಬೀಳುತ್ತಲೇ ಅದರ ಸುವಾಸನೆಯನ್ನು ಕುರಿತು ಯಾವನೊಬ್ಬನ ಮನಸ್ಸಿನಲ್ಲಿಯಾದರೂ ಕಲ್ಪನೆಯು ಆಗದಿರದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 3-0-0

ಕಾಮಿನಿಯಾ ಸುರಂಗಿ (ರಿಜಿಸ್ಟರ್ಡ್) ಇದು ಬಹಳ ಪರಿಮಳ ಉಳ್ಳದ್ದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 1-4-0 ಅಂಚೆಯ ವೆಚ್ಚ ಬೇರೆ.

ಕಾಮಿನಿಯಾ (ರಿಜಿಸ್ಟರ್ಡ್) ಇದಾದರೂ ವಸಂತಮಾಸದ ಸಂಪಗೆಯ ಹೂಗಳಿಂದ ಸಂಗ್ರಹಿಸಿದುದು. ಇದರ ಸುರಭಿಯು ಅತ್ಯಂತ ಮಧುರವಿದೆ. ಕಾಲು ತೊಲೆಯ ಕುಪ್ಪಿಗೆ ರೂ. 1-8-0 ಅಂಚೆಯ ವೆಚ್ಚ ಬೇರೆ.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.,**
155 Jumma Musid, Market, Bombay.

ಸಿದ್ಧೌಷಧ!] **ಹಾರ್ಲೆಮ್ ಆಯ್ಲ್ (Haarlem Oil).** [ಪರೀಕ್ಷಿಸಿ ನೋಡಿ!

ಹಾರ್ಲೆಮ್ ಆಯ್ಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" **(Medicamentum Gracia Probatum)** ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸೆಯಿಂದ ಎಂಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಮರ್ಕೆಂಟೈಲ್ ಮಿಶ್ಶನ್ ಬ್ರಾಂಚ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕುಕಜ್ಜಿ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0. ಮೂರು ಬಾಟ್ಲಿಗಳಿಗೆ 2—0—0 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕರ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ ಧಾತುಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಚಳಿಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್‍ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು ರೂ.	0—4—0
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ 1—4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ.	„ 0—4—0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	„ 0—8—0

ವಿಳಾಸ:—

ಗಣೇಶ ರಾಮಚಂದ್ರ ಕರ್ಕಿ ಕಂಪೆನಿ,

ಗಿರಗಾಂ ಮುಂಬಯಿ.

ಈ ಕಾಲದಲ್ಲಿ ಯಾವುದು ತಾನೇ ಸಾಧ್ಯವಲ್ಲ?

ಕ್ರಯ ರೂ. 45.

ಪ್ರಖ್ಯಾತಪಟ್ಟ ಕೊಯಂಬುತ್ತೂರು ತಾಯಿಯ ಗಾಯನವನ್ನೂ, ಉತ್ತರಹಿಂದುಸ್ಥಾನದ ಸುಪ್ರಸಿದ್ಧ ಗಾಯನ ವಿದ್ಯಾವಿಶಾರದರ ಹಾಡುಗಳನ್ನೂ, ಇನ್ನು ಕನ್ನಡ ತಮಿಳು ತೆಲುಗು ಮುಯೂಳ ಮರಾಟಿ ಭಾಷೆಗಳ ಉತ್ಕೃಷ್ಟ ಗವಯಿಗಳ ಪದಗಳನ್ನೂ ಕೇಳಲಿಕ್ಕೆ ಅವರಿದ್ದಲ್ಲಿಗೆ ಹೋಗಬೇಕೆಂತಿಲ್ಲ. ಈ ಕೆಳಗೆ ತೋರುವ ರಾಗದ ಪೆಟ್ಟಿಗೆಯೊಂದನ್ನೂ ಹಾಡುಗಳ ಸ್ವರವೆಲ್ಲವು ಮುದ್ರಿತವಾಗಿರುವ ರಿಕಾರ್ಡುಗಳೆಂಬ ಹಾಳೆಗಳನ್ನು ತಕ್ಕೊಂಡರೆ ನಾವಿದ್ದಲ್ಲಿಯೇ ಶ್ರೇಷ್ಠ ಗವಯಿಗಳ ಗಾನವನ್ನು ಕೇಳಿ ಆಹ್ಲಾದ ಪಡಬಹುದು.

ರಿಕಾರ್ಡು ಒಂದಕ್ಕೆ ಸಾಧಾರಣವಾಗಿ ರೂ. 3—0—0 ಕ್ರಯವಿರುವದು.

ಇವುಗಳು ದೊರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್

ಎಸ್ಸೋಸಿಯೇಶನ್

ಸ್ಥಾನಿಕಲ್ ಎಜಂಟ್ಸ್,

ಮಂಗಳೂರು ದ. ಕ.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 15ನೇ ಮಾರ್ಚ್ 1912.

ಮದ್ರಾಸು ಸಂಸ್ಥಾನದ ಆದಾಯ ವೆಚ್ಚಗಳು.

ಮದ್ರಾಸು ಸರಕಾರದ ಫಿನೆನ್ಸ್ ಮೆಂಬರರಾದ ಬಹುಮಾನಪಟ್ಟ ಸರ್ ಮರ್‍ರೆ ಹೆಮಿಕರವರು ನ್ಯಾಯನಿರ್ಮಾಣ ಸಭೆಯ ಮುಂದಿಟ್ಟ ಚಾಲ್ತಿ ವರುಷದಲ್ಲಿ ನಡದ ಆದಾಯ ವೆಚ್ಚಗಳಿಂದ ಜುಮ್ಲಾ ಸರಕಾರದ ಹುಟ್ಟುವಳಿಯು ಕಳದ ವರುಷದಲ್ಲಿ ಮಾಡಿದರೂ 649·21 ಲಕ್ಷ ರೂಪಾಯಿಗಳ ಅಂದಾಜಿನಕ್ಕಿಂತ ಮಿಕ್ಕಿರುವುದೆಂತ ತೋರುತ್ತದೆ. 1911-12 ವರುಷದಲ್ಲಿ ಹುಟ್ಟುವಳಿಯು ರೂ. 704·00 ಲಕ್ಷವಾಗಿರುತ್ತದೆ. ಇಂಡಿಯಾ ಸರಕಾರದವರಿಂದ ಚಾಲ್ತಿ ವರುಷದಲ್ಲಿ ಅಂದಾಜಿನಲ್ಲಿ ನಿರೀಕ್ಷಿಸಲ್ಪಡದ ಗ್ರೇಂಟುಗಳು ಕೊಡೋಣಾದ್ದರಿಂದ ಹುಟ್ಟುವಳಿಯ ಮೊಬಲಗು ವಿಶೇಷವಾಗಿ ಹೆಚ್ಚಿದ ಹಾಗೆ ಕಂಡುಬಂತೆಂತ ವಿವರಿಸಲ್ಪಟ್ಟಿರುವುದು. ಇಂಡಿಯಾ ಸರಕಾರದವರು ತಮ್ಮ ಸಿಲುಕಿನಿಂದ ರೂ. 39·50 ಲಕ್ಷವನ್ನು ಚಾಲ್ತಿ ವರುಷದಲ್ಲಿ ಕೊಟ್ಟಿರುವರು. ಅದಲ್ಲದೆ ಡಿಲ್ಲಿ ದರಬಾರಿನ ಸಲುವಾಗಿ ರೂ. 50 ವ ಕಡಿಮೆ ತಲಬಿನ ನೌಕರರಿಗೆ ಅರ್ಧ ತಿಂಗಳ ಸಂಬಳವು ಉಚಿತವಾಗಿ ಕೊಡಲಿಕ್ಕೆ ಪುನಹ ಇಂಡಿಯಾ ಸರಕಾರದಿಂದ ರೂ. 6·58 ಲಕ್ಷವು ಮದ್ರಾಸು ಸರಕಾರಕ್ಕೆ ಕೊಡೋಣಾಗಿರುವುದು. ಜುಮ್ಲಾ ಹುಟ್ಟುವಳಿ ರೂ. 704·00 ಲಕ್ಷ ಮೇಲೆ ಕಾಣಿಸಿದ ಮೊಬಲಗುಗಳನ್ನು ಸೇರಿರುತ್ತದೆ. ಇವುಗಳ ವಿರಹಿತ ಹುಟ್ಟುವಳಿಯು ಅಂದಾಜಿನಕ್ಕಿಂತ ವಿಶೇಷವಾಗಿ ಹೆಚ್ಚಿದ್ದಿಲ್ಲ. ಎಕ್ಸೈಜ್ ಅಂದರೆ ಶೇಂದಿ ಶರಾಬು ಮೊದಲಾದವುಗಳ ಹುಟ್ಟುವಳಿಯು ಅಂದಾಜಿನಕ್ಕಿಂತ ಮಿಕ್ಕಿರುವುದು. ಈ ಮೂಲದಿಂದ ರೂ. 5·50 ಲಕ್ಷ ದೊರಿಯುವದು. ಇಂಡಿಯಾ ಸರಕಾರದವರಿಂದ ಕೊಡೋಣಾದ ಮೇಲೆ ಪ್ರಸ್ತಾಪಿಸಿದ ರೂ. 39·50 ಲಕ್ಷದ ದ್ರವ್ಯಸಹಾಯವು ಈ ಉದ್ದಿಶ್ಯಗಳಿಗಾಗಿರುವುದು;—ಮದ್ರಾಸು ಪಟ್ಟಣದ ಮುನಿಸಿಪಾಲಿಟಿಯವರಿಗೆ ರೂ. 25 ಲಕ್ಷ, ಸಂಸ್ಥಾನದ ಆರೋಗ್ಯ ಏರ್ಪಾಡುಗಳಿಗೆ 9 ಲಕ್ಷ, ವ್ಯವಸಾಯ ವ ಇತರ ಸಂಬಂಧ ಪಟ್ಟ ವಿಷಯಗಳಿಗೆ 6·50 ಲಕ್ಷ ಮುಂದಿನ 1912-13ನೇ ವರುಷದ ಆದಾಯ ವೆಚ್ಚಗಳ ಅಂದಾಜಿನಲ್ಲಿ ಇಂಡಿಯಾ ಸರಕಾರದ ಈ ಗ್ರೇಂಟುಗಳಲ್ಲಿ ರೂ. 12·50 ಲಕ್ಷ ಮದ್ರಾಸು ಮುನಿಸಿಪಾಲಿಟಿಗೂ; 8 ಲಕ್ಷವನ್ನು ಪೂರ್ಣವಾಗಿ ಆರೋಗ್ಯ ಏರ್ಪಾಡುಗಳಿಗೂ 3·50 ಲಕ್ಷವನ್ನು ವ್ಯವಸಾಯ ವ ಇತರ ಸಂಬಂಧಪಟ್ಟ ವಿಷಯಗಳಿಗೂ ಮದ್ರಾಸು ಸರಕಾರದವರು ಒಳಪಡಿಸಿರುವರು. ಸರಕಾರದವರ ಖರ್ಚು ಚಾಲ್ತಿ ವರುಷದಲ್ಲಿ ರೂ. 672·48 ಲಕ್ಷವಾಗುವುದು. ಅಂದರೆ ಇದು ಬಜೇಟಿನಲ್ಲಿ ಮಾಡಿದ ರೂ. 686·77 ಲಕ್ಷದ ಅಂದಾಜಿನಕ್ಕಿಂತ ಕಡಿಮೆಯಾಗಿರುತ್ತದೆ. ಚಾಲ್ತಿ ವರುಷದಲ್ಲಿ ಖರ್ಚು ಆದಾಯಕ್ಕಿಂತ ಮಿಕ್ಕುವುದೆಂತ ಅಂದಾಜು ಮಾಡಲ್ಪಟ್ಟಿತ್ತು. ಇಂಡಿಯಾ ಸರಕಾರದವರಿಂದ ಕೊಡೋಣಾದ ಗ್ರೇಂಟುಗಳ ಖರ್ಚು ಜುಮ್ಲಾ ಖರ್ಚಿನಿಂದ ಹೋಗಲಾಗಿ ರೂ. 22·55 ಲಕ್ಷದ ಸಿಲುಕು ಚಾಲ್ತಿ ವರುಷದಲ್ಲಿ ಉಳಿಯುವುದು. ಮಾದರಿ ಸೆಕೆಂಡರಿ ಶಾಲೆಗಳು ತಾಲೂಕು ಸಿಬಂದಿಯ ಪುನರ್ವಿಮರ್ಶೆ, ಡಿಪ್ಯುಟಿ ತಹಸೀಲ್ದಾರರ ಸಂಬಳ ಹೆಚ್ಚಿಸೋಣ ಮೊದಲಾದವುಗಳಿಗೆ ಬೇಕಾದ ಖರ್ಚಿಗೆ ಚಾಲ್ತಿ ವರುಷದ ಬಜೇಟಿನಲ್ಲಿ ಆಸ್ಪದವಿದ್ದರೂ ಇವುಗಳಿಗೆಲ್ಲ ಶ್ರೇಷ್ಟ ಸರಕಾರದವರ ಮಂಜೂರಾತಿಯು ಈ ವರೇಗೆ ದೊರೆಯದಿದ್ದ ಕಾರಣ ಇವುಗಳ ಬಗ್ಗೆ ಪ್ರತ್ಯೇಕಿಸಿ ತೋರಿಸಿದ ಮೊಬಲಗು ಖರ್ಚಾಗದೆ ಉಳಿಯಿತು. ಖರ್ಚು ಕಡಿಮೆಯಾಗುವರೆ ಈ ಕಾರಣವಲ್ಲದೆ ಮಂಗಾಯಿ ಭತ್ತೆಯನ್ನು ಕಡಮೆ ಮಾಡಿದ್ದರಿಂದ ರೂ. 4½ ಲಕ್ಷ ಸರಕಾರಕ್ಕೆ ಉಳಿಯಿತೆಂತ ಸಹ ತಿಳಿದುಬರುತ್ತದೆ.

1912—13ನೇ ವರುಷದ ಆದಾಯವೆಚ್ಚಗಳ ಅಂದಾಜು ಪಟ್ಟಿಯು ಸಹ ನ್ಯಾಯನಿರ್ಮಾಣ ಸಭೆಯ ಮುಂದೆ ಮೊನ್ನೆ ತಾ. 13ಕ್ಕೆ ಇಡೋಣಾಯಿತು. ಮುಂದಿನ ವರುಷದ ಹುಟ್ಟುವಳಿಯು ರೂ. 692·51 ಲಕ್ಷವೆಂತ ಅಂದಾಜು ಮಾಡಲ್ಪಟ್ಟಿರುತ್ತದೆ. ಚಾಲ್ತಿ ವರುಷದ ತಿದ್ದಿದ ಆದಾಯ ಅಂದಾಜಿನಕ್ಕಿಂತ ಭೂಕಂದಾಯದಿಂದ ಶುಮಾರು 3 ಲಕ್ಷ, ಠಸ್ಸೆ ಮೂಲದಿಂದ 2 ಲಕ್ಷ, ಶೇಂದಿ ಶರಾಬು ಮೊದಲಾದ ಎಕ್ಸೈಜ್ ಇಲಾಖೆಯಿಂದ 9 ಲಕ್ಷ ರೂಪಾಯಿಗಳ ಮೇರೆಗೆ ಹುಟ್ಟುವಳಿಯು ಬರುವ ವರುಷದಲ್ಲಿ ಹೆಚ್ಚಿಗೆ ದೊರಿಯುವುದೆಂತ ಅಂದಾಜು ಮಾಡಲ್ಪಟ್ಟಿರುತ್ತದೆ. ಇಂಡಿಯಾ ಮತ್ತು ಮದ್ರಾಸು ಸಂಸ್ಥಾನಿಕ ಸರಕಾರಗಳ ಲೆಕ್ಕ ಇತ್ಯರ್ಥಗಳಲ್ಲಿ ಪ್ರತಿ ವರುಷವೂ ಸಿಕ್ಕುವಂಥಾ 8 ಲಕ್ಷ ರೂಪಾಯಿಗಳ ಗ್ರೇಂಟು ಮದ್ರಾಸು ಸರಕಾರಕ್ಕೆ ಕೊಡೋಣಾಗಿರುವುದು. ಎಲಿಮೆಂಟರಿ ವಿದ್ಯಾಭ್ಯಾಸ ಪ್ರಸರಣೆ ಬಗ್ಗೆ ಈ ಗ್ರೇಂಟು ಈ ವರುಷದಿಂದಲೇ ಕೊಡಲ್ಪಟ್ಟಿರುವುದು.

1912-13ನೇ ವರುಷದ ಖರ್ಚಿನ ಅಂದಾಜು ಮೇರೆಗೆ ಖರ್ಚು ಆದಾಯಕ್ಕಿಂತ ಮಿಕ್ಕಿರುತ್ತದೆ. ಆದಾಯಕ್ಕೆ ಮಿಕ್ಕಿ 65·01 ಲಕ್ಷ ರೂಪಾಯಿಗಳು ಖರ್ಚಿಗೆ ಬೇಕಾಗುವವು. ವಿದ್ಯಾಭ್ಯಾಸ ಮತ್ತು ಆರೋಗ್ಯ ಏರ್ಪಾಡುಗಳಿಗೆ ರೂ. 5·82 ಲಕ್ಷ, ಹೊಸತಾಗಿ ಏರ್ಪಡಿಸಿದ ಜಿಲ್ಲೆ ತಾಲೂಕು ಮೊದಲಾದವುಗಳ ಕಟ್ಟೋಣಗಳಿಗೆ 8 ಲಕ್ಷ ಇಷ್ಟು ಮೊಬಲಗು ಇಂಡಿಯಾ ಸರಕಾರದವರಿಂದ 1910—11ನೇ ವರುಷದಲ್ಲಿ ಕೊಡೋಣಾದ ಸ್ಪೆಶ್ಯಲ್ ಗ್ರೇಂಟಿನಿಂದ ಖರ್ಚಾಗತಕ್ಕದ್ದು. ಚಾಲ್ತಿ ವರುಷದಲ್ಲಿ ಕೊಡೋಣಾದ ಜುಮ್ಲಾ 15·50 ಲಕ್ಷ ರೂಪಾಯಿಗಳ ಗ್ರೇಂಟುಗಳಲ್ಲಿ 8 ಲಕ್ಷ ರೂಪಾಯಿ ಸಂಸ್ಥಾನದ ಆರೋಗ್ಯ ಏರ್ಪಾಡುಗಳಿಗೆ, 3½ ಲಕ್ಷ ವ್ಯವಸಾಯ ಮತ್ತು ಸಂಬಂಧಪಟ್ಟ ವಿಷಯಗಳಿಗೆ ವಿನಿಯೋಗಿಸಲ್ಪಡಬೇಕಾಗುವುದು. ಮದ್ರಾಸು ಮುನಿಸಿಪಾಲಿಟಿಗೆ ಇಂಡಿಯಾ ಸರಕಾರದಿಂದ ಕೊಡೋಣಾದ 25 ಲಕ್ಷ ರೂಪಾಯಿಗಳ ಗ್ರೇಂಟಿನಲ್ಲಿ 12½ ಲಕ್ಷ ರೂಪಾಯಿಗಳು ಈ ಮುನ್ಸಿಪಾಲಿಟಿಯವರಿಗೆ ಕೊಡಬೇಕಾಗಿರುತ್ತದೆ. ವಿದ್ಯಾಸಂಸ್ಥೆಗಳಿಗೆ, ಲೋಕಲ್‌ಬೋರ್ಡು ಮುನ್ಸಿಪಾಲಿಟಿಗಳಿಗೆ ಮತ್ತು ಇತರ ಇಲಾಖೆಗಳಿಗೆ ಹೆಚ್ಚು ಕಡಿಮೆ 31 ಲಕ್ಷ ರೂಪಾಯಿಗಳ ಖರ್ಚು ವಿಂಗಡಿಸಲ್ಪಟ್ಟಿರುತ್ತದೆ. ಹೀಗೆ ಈ ಮೊದಲು ನಮೂದಿಸೋಣಾದ ಖರ್ಚುಗಳೆಲ್ಲವುಗಳಿಗೆ 1912—13ನೇ ವರುಷ ಬಜೇಟಿನಲ್ಲಿ ಆಸ್ಪದವಿಡಬೇಕಾಗಿರುವುದರಿಂದ ಖರ್ಚು ಆದಾಯಕ್ಕೆ ಮಿಕ್ಕಿರುತ್ತದೆ.

ಭೂಕಂದಾಯದ ಶಿರ್ನಾಮೆಯಲ್ಲಿ ಚಾಲ್ತಿ ವರುಷಕ್ಕಿಂತ ಖರ್ಚು ಶುಮಾರು 15 ಲಕ್ಷದಷ್ಟು ಅಧಿಕವಾಗಿರುತ್ತದೆ. ಪ್ರೊಪ್ರೈಟರಿ ಎಸ್ಟೇಟುಗಳಲ್ಲಿ ಗ್ರಾಮ ಸಿಬಂದಿಯ ಖರ್ಚನ್ನು ವಹಿಸಿಕೊಂಡದ್ದೆ ಈ ಖರ್ಚಿಗೆ ಕಾರಣವಾಗಿರುವುದು. ಆದರೆ ಈ ಖರ್ಚಿಗೆ ಇಂಡಿಯಾ ಸರಕಾರದವರಿಂದ ದ್ರವ್ಯಸಹಾಯವು ದೊರಕುವುದು. ವಿದ್ಯಾಭ್ಯಾಸ ಮತ್ತು ಔಷಧಿ ಇಲಾಖೆಯ ಶಿರ್ನಾಮೆಗಳಲ್ಲಿ ಚಾಲ್ತಿ ವರುಷಕ್ಕಿಂತ ಹೆಚ್ಚಾಗಿ 1912-13ನೇ ವರುಷದಲ್ಲಿ ಶುಮಾರು 25 ಲಕ್ಷ ರೂಪಾಯಿಗಳ ವಿನಿಯೋಗಕ್ಕೆ ಆಸ್ಪದವಿಟ್ಟಿರುವರು. ಎಲಿಮೆಂಟರಿ ಮತ್ತು ಇತರ ವಿದ್ಯಾಭ್ಯಾಸ ಪ್ರಸರಣೆಗೂ ಪ್ರಜಾ ವರ್ಗಗಳ ಕ್ಷೇಮಾರ್ಥವಾಗಿ ಆರೋಗ್ಯ ಏರ್ಪಾಡು ಮೊದಲಾದವುಗಳನ್ನು ಡಿಸ್ಟ್ರಿಕ್ಟ್ ಮತ್ತು ಲೋಕಲ್‌ಬೋರ್ಡಿನವರು ಕೈಕೊಳ್ಳುವಂತೆಯೂ, ಸರಕಾರದ ಸಿಬಂದಿಯ ಹಲವು ಇಲಾಖೆಗಳಲ್ಲಿ ಸಂಬಳವನ್ನು ಏರಿಸುವಂತೆಯೂ ಬೇಕಾದ ದ್ರವ್ಯಸಹಾಯಕ್ಕೆ ಉದಾರ ಆಸ್ಪದವನ್ನಿಟ್ಟಿರುವುದೇ 1912—13ನೇ ವರುಷದ ಬಜೇಟಿನ ವಿಶೇಷ ಲಕ್ಷಣವಾಗಿರುತ್ತದೆ.

ಅಂಗ್ಲಾಳದಲ್ಲಿಯ ಕಲ್ಲಿದ್ದಲಿನ ಗಣಿಗಳ ಕೂಲಿಗಳಿಂದ ಕೆಲಸ ತಿರಸ್ಕಾರವು.

ಪಾಶ್ಚಾತ್ಯ ಮತ್ತು ಅಮೇರಿಕ ದೇಶಗಳ ಸಂಪನ್ನರಾದ ರೊಕಫೆಲ್ಲರ್ ಕಾರ್ನಿಜಿ ಮೊದಲಾದವರು ಮಿಲಿಯಕಟ್ಟಳೆ ಹಣವನ್ನು ಪ್ರಜಾಕ್ಷೇಮಕರ ಏರ್ಪಾಡುಗಳಿಗೆ ದಾನವಿತ್ತಿರುವರು. ಹಂಟ್ಲೆಪಾಮರ್ ಬಿಸ್ಕೆಟ್ ಕಂಪೆನಿಯವರು ಒಂದು ಸರ್ವವಿದ್ಯಾನಿಲಯವನ್ನು ಸ್ಥಾಪಿಸಿರುವರು. ಉದಾರ ಬುದ್ಧಿಯ ಇಂತಹ ಗೃಹಸ್ಥರು ಇರುವಲ್ಲಿ ಕೂಲಿಕೆಲಸದವರು ಕೆಲಸವನ್ನು ನಿರಾಕರಿಸುವ ಕಾರಣವು ಕೆಲಸದವರಿಗೆ ಸಾಕಾದಷ್ಟು ಸಂಬಳವು ಸಿಕ್ಕದಿದ್ದದ್ದೇ ಎಂಬುದು ಸೋಜಿಗವಾಗಿ ಕಂಡುಬರಬಹುದು. ಆದರೆ ಕೈಗಾರಿಕೆಯ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಿ ಇವುಗಳಲ್ಲಿ ಕೆಲಸ ಮಾಡುವ ಸಾವಿರಾರು ಜನರ ಕಷ್ಟಗಳಿಂದ ಕಾರ್ನಿಜಿ ರೊಕ್‌ಫೆಲ್ಲರ್‌ಯಂಥವರು ತಮ್ಮ ಸಂಪನ್ನ ಪದವಿಯನ್ನು ಪಡದರು. ಸಂಪತ್ತಿನ ಸಕಲ ವೈಭವಗಳನ್ನು ಅನುಭವಿಸಿ ತಮ್ಮ ಐಶ್ವರ್ಯದ ಒಂದಿಷ್ಟಂಶವನ್ನು ಹೀಗೆ ವಿನಿಯೋಗಿಸಿ ಪರರ ಹಿತವನ್ನು ಸಾಧಿಸುವುದಕ್ಕಿಂತ ತಮ್ಮ ಕಾರ್ಖಾನೆಗಳಲ್ಲಿಯೇ ಸಂಬಳವು ಸಾಕಾದಷ್ಟು ಸಿಕ್ಕದೆ ದುಃಖದಾರಿದ್ರಗಳಿಗೆ ಬಲಿಬಿದ್ದ ಹಲವು ಕುಟುಂಬಗಳಿಗೆ ಉದಾರ ರೀತಿಯಲ್ಲಿ ಸಂಬಳವು ಕೊಡೋಣಾಗುತ್ತಿದ್ದರೆ ಸಂಕಷ್ಟಗಳನ್ನು ನಿರ್ಮಿಸಿ ಸಂಕಷ್ಟಗಳ ನಿವಾರಣೋಪಾಯಕ್ಕೆ ಹಣ ವೆಚ್ಚಮಾಡುವ ತೊಂದರೆಗಳು ಉಳಿಯುತ್ತಿತ್ತಲ್ಲದೆ ಸಂಪನ್ನರ ಕೂಡೆ ಅಗತ್ಯವಿಲ್ಲದ ದ್ರವ್ಯಸಂಚಯವು ಬಹಳ ವಿಶೇಷವಾಗಿ ಉಳಿಯುತ್ತಿದ್ದಿಲ್ಲವೆಂಬೀ ಕೂಲಿ ಜನರ ಟೀಕೆಯನ್ನು ಕೇಳಿದರೆ ಅಂಥಾ ಸೋಜಿಗಕ್ಕೆ ಎಡೆದೊರಕದು. ಕೈಗಾರಿಕೆ ಕಾರ್ಖಾನೆಗಳನ್ನು ಸ್ಥಾಪಿಸಿದ ಭಂಡವಾಳಿಕರ ಸಂಪತ್ತು ಹೆಚ್ಚೆಚ್ಚಾಗುತ್ತಿರುವಾಗ ಕೂಲಿಯಾಳುಗಳ ಸ್ಥಿತಿಗತಿಯು ಕುಂದುತ್ತ ಬಂದಿರುವುದು. ಈ ಕಾರಣಗಳಿಂದ ಕಾರ್ಖಾನೆ ಕೂಲಿಯಾಳುಗಳು ಕೆಲಸವನ್ನು ಮಾಡಲೊಲ್ಲೆವು ಎಂಬ ತಿರಸ್ಕಾರದ ಹಟಸಾಧನೆಯಿಂದ ಪಾಶ್ಚಾತ್ಯ ದೇಶಗಳಲ್ಲಿ ಅನೇಕ ಅನರ್ಥಗಳು ಈ ಮೂಲಕ ಆಗಿಂದಾಗ್ಯೆ ತಲೆದೋರುತ್ತಿರುವವು.

ಅಂಗ್ಲಾಳದಲ್ಲಿ ಕಲ್ಲಿದ್ದಲಿನ ಗಣಿಗಳಲ್ಲಿ ಕೆಲಸ ಮಾಡುವ ಕೂಲಿಗಳಲ್ಲಿ ಹಲವರು ಕೆಲಸಕ್ಕೆ ಹೋಗದೆ ಭೀಕರವಾದ ಕೆಲಸ ತಿರಸ್ಕಾರ ಸಾಧನೆಯು ಎಲ್ಲ ಕಡೆಗಳಲ್ಲಿ ಹಬ್ಬುವಂತೆ ಪ್ರಯತ್ನ ನಡಿಯುತ್ತಿರುವುದು. ಕೆಲಸಗಾರರು ತಮ್ಮ ಈ ಮನೋಗತವನ್ನು ಸಂಪೂರ್ಣವಾಗಿ ನೆರವೇರಿಸಿದರೆ ಅಂಗ್ಲಾಳಕ್ಕೆ ಮಾತ್ರವಲ್ಲ ಇತರ ಹಲವು ದೇಶಗಳಿಗೆ ಸಹ ವಿಶೇಷವಾದ ನಷ್ಟವು ಉಂಟಾಗದಿರದು. ಕಾರ್ಖಾನೆಗಳಲ್ಲಿಯ ಯಂತ್ರಗಳನ್ನೂ ರೈಲ್ವೆ ಗಾಡಿಗಳನ್ನೂ ಹೊಗೆ ಜಹಜುಗಳನ್ನೂ ಕಲ್ಲಿದ್ದಲು ಪ್ರಿಯವಾಗಿ ಹೋದರೆ

ಅಥವಾ ಸಿಕ್ಕದಿದ್ದರೆ ನಡಿಸುವುದು ಹ್ಯಾಗೆ ಸಾಧ್ಯ? ದವಸು ಧಾನ್ಯ ವ ಇತರ ಸಾಮಾಗ್ರಿಗಳನ್ನು ಒಂದು ಕಡೆಯಿಂದ ಮತ್ತೊಂದು ಪ್ರಾಂತ್ಯಕ್ಕೆ ಒಯ್ಯುವರೆ ಅಸಾಧ್ಯವಾಗಿ ಇವುಗಳ ಬೆಲೆಯು ಏರುವುದು. ಯಂತ್ರ ಮುಖಾಂತರ ನಡಿಯುವ ಎಲ್ಲಾ ಕಾರ್ಖಾನೆಗಳ ಕೂಲಿಯಾಳುಗಳು ಸಹ ವೃತ್ತಿ ಇಲ್ಲದೆ ಸುಮ್ಮನಿರಬೇಕಾಗುವದು. ಪರರಾಜ್ಯದವರು ದಂಡೆತ್ತಿ ಬಂದದ್ದರಿಂದ ಅಂಗ್ಲಾಳಕ್ಕೆ ಎಷ್ಟು ನಷ್ಟ ಉಂಟಾಗ ಬಹುದೋ ಅಷ್ಟೇ ನಷ್ಟವು ಇದರಿಂದ ಉಂಟಾದೀತೆಂಬುದಾಗಿ ಸರ್ವರೂ ಅಂಜಿಕೆಪಡುವರು. ಇದಲ್ಲದೆ ಅಡಿಗೆ ಮಾಡಲಿಕ್ಕೂ ಚಳಿ ನಿವಾರಣಾರ್ಥವಾಗಿಯೂ ಬೇಕಾಗಿರುವ ಕಲ್ಲಿದ್ದಲಿಗೆ ಕ್ರಯವು ವಿಪರೀತವಾದ್ದಲ್ಲಿ ಅನೇಕ ಬಡಬಗ್ಗರು ಹಸಿವು ಮತ್ತು ಚಳಿಯಿಂದ ಸಂಕಟಪಡಬೇಕಾಗಿ ಬಂದೀತು. ಬ್ರಿಟಿಷ್ ದ್ವೀಪಗಳಲ್ಲಿ ಸರಾಸರಿ ಮೇಲೆ 264,433,000 ಟನ್ನುಗಳಷ್ಟು ಇದ್ದಲು ಪ್ರತಿ ವರುಷದಲ್ಲಿಯೂ ಅಗಿದು ತೆಗೆಯಲ್ಪಡುತ್ತದೆ. ಇದರಲ್ಲಿ 62 ಮಿಲಿಯ ಟನ್ನುಗಳು ಇತರ ದೇಶಗಳಿಗೆ ರಫ್ತಾಗುವವು. ಯುರೋಪು ಮತ್ತು ಅಮೇರಿಕದ ಪ್ರಾಂತ್ಯಗಳಿಗೆ ಇಲ್ಲಿಂದಲೇ ಕಲ್ಲಿದ್ದಲು ಹೋಗಬೇಕಾಗಿರುವುದು. ಆದ್ದರಿಂದ ಅಂಗ್ಲಾಳದಲ್ಲಿ ಕಲ್ಲಿದ್ದಲಿನ ಗಣಿಗಳಲ್ಲಿ ಕೂಲಿಗಳು ಕೆಲಸ ಮಾಡಲು ನಿರಾಕರಿಸುವುದರಿಂದ ಬ್ರಿಟಿಷ್ ದ್ವೀಪಗಳಲ್ಲಲ್ಲದೆ ಇತರ ಪ್ರಾಂತ್ಯಗಳಲ್ಲಿ ಸಹ ಆಪತ್ತು ಸಂಭವಿಸಬಹುದು. ಇಂಥಾ ಆಪತ್ತು ಸಂಭವಿಸದಂತೆ ಅಂಗ್ಲಾಳದ ಮಂತ್ರಿಗಳು ಕೂಲಿ ಜನರ ಮತ್ತು ಗಣಿಗಳ ಯಜಮಾನರೊಡನೆ ಸಭೆಸೇರಿ ಉಭಯ ಪಕ್ಷದವರನ್ನು ಸಮಾಧಾನಪಡಿಸಲು ಭಾರೀ ಪ್ರಯತ್ನಗಳನ್ನು ನಡಿಸುತ್ತಿರುವರು.

ಗನಿಗಳಿಂದ ಇದ್ದಲನ್ನು ಅಗೆದು ತೆಗೆಯುವ ಕೆಲಸವು ಬಹಳ ಪ್ರಯಾಸವಾಗಿದೆ. ಸಾವಿರಾರು ಜನರು ಭೂತಳದ ಮೇಲ್ಭಾಗಕ್ಕೆ ಸಹ ಬಾರದೆ ಬಹಳ ವರುಷಗಳ ವರೆಗೆ ಗಣಿಗಳಲ್ಲಿಯೇ ಜೀವಿಸಿಕೊಂಡಿರುವುದುಂಟು. ಗಣಿಗಳಲ್ಲಿ ಆಗಿಂದಾಗ್ಯೆ ಉಂಟಾಗುವ ವಿಷಘಾಳಿಯಿಂದ ಜೀವಗಳನ್ನು ಸಹ ಕಳೆದುಕೊಳ್ಳುವ ಸಂಭವಗಳು ಈ ಗಣಿಗಳ ಕೆಲಸಗಳಲ್ಲಿ ಹೆಚ್ಚಾಗಿವೆ. ಇಂಥಾ ಕೆಲಸಕ್ಕೆ ತಕ್ಕಂತೆ ಮಜೂರಿ ದರವು ಹೆಚ್ಚಾಗಬೇಕು. ಧನಿಕರು ಮತ್ತಷ್ಟು ಧನಿಕರಾಗಿ ಬಡವರ ಬಾಯಿಗೆ ಅಡ್ಡ ಬರುವುದಕ್ಕಿಂತ ಸಾಕಷ್ಟು ಧನವು ತಮಗೆ ದೊರಕಿದ ಮೇಲೆ ಮಜೂರಿ ದರವನ್ನು ಹೆಚ್ಚಿಸಿ ದೀನರ ದುರ್ದಸೆಯನ್ನು ಒಳ್ಳಿತು ಮಾಡುವುದು ಲೇಸು. ಅಂಗ್ಲಾಳದ ಗಣಿ ಕೆಲಸದ ಕೂಲಿಗಳನ್ನೂ ಗಣಿಗಳ ಮಾಲಿಕರನ್ನೂ ಯಾವದೊಂದು ವಿಧದಲ್ಲಿಯಾದರೂ ಸಮ್ಮತಿಪಡಿಸಲಿಕ್ಕೆ ಬ್ರಿಟಿಷ ಮಂತ್ರಿಗಳು ಹೆಚ್ಚಾಗಿ ಪ್ರಯತ್ನಪಡುವುದರಿಂದಲೂ ಕೂಲಿಗಳೂ ಮಾಲಿಕರೂ ಹೆಚ್ಚಿನ ತಾಳ್ಮೆಯನ್ನು ತಾಳಿರುವುದರಿಂದಲೂ ಕಲ್ಲಿದ್ದಲು ಕಡಮೆಯಾಗಿ ಅಂಗ್ಲಾಳಕ್ಕೂ ಭೂಲೋಕದ ಇತರ ಪ್ರಾಂತ್ಯಗಳಿಗೂ ಸಂಭವಿಸುವ ಆಪತ್ತು ತಕ್ಕ ಕಾಲದಲ್ಲಿಯೇ ನಿವಾರಿಸಲ್ಪಡುವುದೆಂತ ಸರ್ವರೂ ಕೋರಿರುತ್ತಾರೆ.

ಕೈಗಾರಿಕೆಗಳನ್ನು ಪಾಶ್ಚಾತ್ಯ ದೇಶಗಳಂತೆಯೇ ಹಿಂದುಸ್ಥಾನದಲ್ಲಿಯೂ ನೆಲೆಗೊಳ್ಳಿಸಲು ಪ್ರಯತ್ನಿಸುವ ಭಾರತೀಯರಿಗೆ ಪಾಶ್ಚಾತ್ಯ ಕೂಲಿಗಳ ಕೆಲಸ ತಿರಸ್ಕಾರದಿಂದ ಕೆಲವು ಉಪಯುಕ್ತ ಸೂಚನೆಗಳು ವ್ಯಕ್ತವಾಗುವವು. ಸಂಪತ್ತಿನ ವೈಭವಗಳನ್ನೇ ಜೀವಿತದ ಮುಖ್ಯ ಆದರ್ಶಗಳಾಗಿಟ್ಟುಕೊಂಡು ಬಡಬಗ್ಗರ ಮೇಲೆ ಕರುಣೆಯಿಲ್ಲದವರಾಗಿ ಸಾಧಿಸುವಂಥಾ ಸಂಪತ್ತು ಸಂಗ್ರಹ ಸಾಧನೆಯಿಂದ ಅರಿಷ್ಟಗಳು ದೇಶಕ್ಕೂ ಪ್ರಜಾವರ್ಗಕ್ಕೂ ಬಂದು ತಗಲುವವು. ಭಾರತೀಯರ ಜೀವನ ಆದರ್ಶಗಳೂ ಸಮಾಜ ವ್ಯವಸ್ಥೆಯೂ ಪಾಶ್ಚಾತ್ಯ ಸಮಾಜಗಳಂತಿರದೆ ಭೇದವುಳ್ಳವುಗಳಾದ್ದರಿಂದ ಇಂಥ ಅರಿಷ್ಟಗಳು ನಮ್ಮಲ್ಲಿ ಫಕ್ಕನೆಯುಂಟಾಗವು. ಆದರೆ ಸಮಾಜ ವ್ಯವಸ್ಥೆಯನ್ನು ತಿದ್ದುವ ಈ ಕಾಲಗಳಲ್ಲಿ ನಾವು ಮುಂಜಾಗ್ರತೆಯುಳ್ಳವರಾಗಿದ್ದು ಅತ್ಯಾಶೆಯು ಸರ್ವರ ಗತಿ ಕೆಡಿಸದಂತೆ ನೋಡಿಕೊಳ್ಳತಕ್ಕದ್ದು.

ಸ್ವದೇಶಾಭಿಮಾನವು.

ಒಬ್ಬ ಲೇಖಕರಿಂದ.

ಜರ್ಮನ ದೇಶದವರು ಸ್ವದೇಶಾಭಿವೃದ್ಧಿಗಾಗಿ ಪ್ರಸಿದ್ಧಪಡಿಸಿದ ಪುಸ್ತಕದಲ್ಲಿ ತೋರುವ ಕೆಲವು ಕಟ್ಟಾಜ್ಞೆಗಳು.

1. ನೀನು ಮಾಡುವ ಎಲ್ಲಾ ಖರ್ಚುಗಳಲ್ಲಿ ನಿನ್ನ ದೇಶದವರ ಲಾಭದ ಸಂಗತಿಯು ನೆನವಂಕೆ ಇಟ್ಟುಕೋ.

2. ಪರದೇಶದಲ್ಲಿ ಉತ್ಪನ್ನವಾದ ಜೀನಸುಗಳನ್ನು ಕೊಂಡುಕೊಳ್ಳುವಾಗ್ಯೆ ನೀನು ಹಾಗೆ ಮಾಡುವ ದೆಶೆಯಿಂದ ನಿನ್ನ ದೇಶವು ಬಡನಾಗುತ್ತದೆಂಬದನ್ನು ಮರೆಯಬೇಡಾ.

3, ನಿನ್ನ ಹಣದಿಂದ ಜರ್ಮನರಲ್ಲದವರಿಗೆ ಸರ್ವಥ ಲಾಭ ಉಂಟಾಗದ ಹಾಗೆ ನೋಡಿಕೋ.

4. ಪರದೇಶದ ತಿನ್ನುವ ವಸ್ತುಗಳನ್ನು ಊಟದ ಬಗ್ಗೆ ಅಥವಾ ಆಹಾರದ ಬಗ್ಗೆ ನಿನಗೆ ಬಳಿಸಲಿಕ್ಕೆ ಸರ್ವಥ ಬಿಡಬೇಡಾ. ಪರದೇಶದ ಯಂತ್ರಗಳನ್ನು ಉಪಯೋಗಿಸಿಕೊಂಡು ಜರ್ಮನ್ ಕಾರಖಾನೆಗಳನ್ನು ಸರ್ವಥ ಭ್ರಷ್ಟ ಮಾಡಬೇಡಾ.

5. ಜರ್ಮನ ಕಾಗದದ ಮೇಲೆ ಜರ್ಮನ ಲೇಖಣಿಯಿಂದ ಬರಿ. ಆಗ್ಯೆ ಜರ್ಮನ ಬ್ಲೊಟಿಂಗ ಕಾಗದ ಮಾತ್ರ ಉಪಯೋಗಿಸಿಕೋ.

6. ಜರ್ಮನ ಗೋದಿ ಹಿಟ್ಟು, ಜರ್ಮನ ಫಲಗಳೂ, ಜರ್ಮನ ಬೀಯರೂ ಮಾತ್ರ ಉಪಯೋಗಿಸಿದರೆ ಜರ್ಮನ ಚೇತನವು ನಿನ್ನ ಶರೀರದಲ್ಲಿ ಬೆಳೆಯುವುದು.

7. ಜರ್ಮನ ಮಾಲ್ಟಕಾಪಿ ನಿನಗೆ ಮೆಚ್ಚದಿದ್ದರೆ ಜರ್ಮನರು ಪರದೇಶಗಳಲ್ಲಿ ಪ್ರವಾಸಕ್ಕೆ ಹೋಗಿ ಅಲ್ಲಿ ಅವರು ಬೆಳಿಸಿದ ಕಾಪಿ ಮಾತ್ರ ಉಪಯೋಗಿಸಿಕೊ.

8. ನೀನು ಉಡಿಗೆ ಬಗ್ಗೆ ಜರ್ಮನ ವಸ್ತ್ರ ಮಾತ್ರ ಉಪಯೋಗಿಸಿಕೊ; ಮತ್ತು ನಿನ್ನ ತಲೆಗೆ ಜರ್ಮನ ಟೊಪ್ಪಿ ಮಾತ್ರ ಉಪಯೋಗಿಸಿಕೊ.

9. ಪರದೇಶದ ವಸ್ತುಗಳು ಉತ್ತಮವಾದವುಗಳೆಂಬ ಶ್ಲಾಘನೆಗೆ ಸರ್ವಥಾ ಕಿವಿಕೊಡಬೇಡಾ. ಈ ವಿಷಯ ಯಾರೂ ಏನು ಹೇಳಿದರೂ ಗಣ್ಯಮಾಡ ಬೇಡಾ. ಜರ್ಮನ್ ಮಾತೃಭೂಮಿಯ ಪುತ್ರರು ಜರ್ಮನಿಯ ಉತ್ಪತ್ತಿ ಮಾತ್ರ ಉತ್ತಮವಾದುದ್ದೆಂತ ದೃಢವಾಗಿ ನಂಬಿಕೊಂಡು ನಡಿಯಬೇಕು.

ಇಂಡಿಯದವರು ತಮ್ಮ ದೇಶದ ಭವಿಷ್ಯವನ್ನು ಪರ್ಯಾಲೋಚಿಸಿ ತಮ್ಮ ದೇಶದ ಕ್ಷೇಮದ ಬಗ್ಯೆ ಮಾಡಿಕೊಳ್ಳಬಹುದಾದ ಕಟ್ಟಾಜ್ಞೆಗಳು.

1. ಪೂರ್ವದ ಮಹತ್ವವನ್ನು ಕಳಕೊಂಡು ಅತೀ ಬಡಸ್ಥಿತಿಗೆ ಇಳಿದು ಬಂದ ನಮ್ಮ ಮಾತೃಭೂಮಿಯಲ್ಲಿ ಪ್ಲೇಗೂ, ಕ್ಷಾಮವೂ, ಮೈಲಗಜ್ಜಿಯೂ ಮೊದಲಾದ ಕಾರಣಗಳಿಂದ ಅಕಾಲ ಮರಣಗಳೂ ಆ ಸಂಬಂದ ದುಖ್ಖವೂ ದರಿದ್ರವೂ ಹೆಚ್ಚುತ್ತಿರುವಾಗ್ಯೆ, ನಿನ್ನ ಸಂಪಾದನೆಯಾಗಲೀ ಹಿರಿಯರ ಸಂಪಾದನೆಯಾಗಲೀ ನಿನ್ನ ಮೋಜಿಗಾರತನಕ್ಕೆ ಖರ್ಚುಮಾಡದೇ ಸ್ವದೇಶದ ಕ್ಷೇಮವನ್ನೇ ಮನಸ್ಸಿನಲ್ಲಿಟ್ಟುಕೊಂಡು ನಿನ್ನ ಎಲ್ಲಾ ಖರ್ಚುಗಳಲ್ಲಿಯೂ ಸ್ವದೇಶದ ಕ್ಷೇಮವನ್ನೂ ಲಾಭವನ್ನೂ ನೋಡು.

2. ನೀನು ಸಹಾ ಹಾಗೆ ಮಾಡುವದರಿಂದ ಮೊದಲೇ ಬಡಸ್ಥಿತಿಗೆ ಬಂದ ನಿನ್ನ ದೇಶವು ಇನ್ನೂ ಹೆಚ್ಚಿಗೆ ಬಡವಾಗುತ್ತದೆಂಬುದನ್ನು ಮರೆಯಬೇಡ. ಬೂಟ್ಸುಗಳೂ, ಸಾಬುನೂ, ವಸ್ತ್ರವೂ, ಗಿಲಾವಿನ ಪಾತ್ರೆಗಳೂ, ಪಿಕ್ಕಾಸೂ, ಹಾರೆಗಳೂ, ಮೊದಲಾದ ವಸ್ತುಗಳನ್ನು ಕೊಂಡುಕೊಳ್ಳುವಾಗ್ಯೆ ಜರ್ಮನರ ಈ ಮಾತು ಮರೆಯ ಬೇಡಾ.

3. ಇಂಡಿಯದ ಹೊರಗೆ ಪರದೇಶದಲ್ಲಿ ಆಗಲೀ ಇಂಡಿಯದಲ್ಲಿ ಆಗಲೀ ಪರದೇಶದ ಜನರಿಗೆ ಕಷ್ಟವೂ ದುಖ್ಖವೂ ಪ್ರಾಪ್ತವಾದರೆ ಕೊಡಿದಮಟ್ಟಿಗೆ ಔದಾರ್ಯದಿಂದ ನಿನ್ನ ಹಣದಿಂದ ಸಹಾಯಮಾಡು. ಈ ಕಾರಣದಿಂದ ನಿನ್ನ ದೇಶವು ಬಡವಾಗುವುದು ಎಂತ ಸರ್ವಥ ತಿಳಕೊಳ್ಳ ಬೇಡಾ.

4. ಬಿಸ್ಕೊಟುಗಳೂ, ಜೇಮೂ, ಪೆಪ್ರಮಿಂಟೂ ವಿದೇಶಿ ಡಬ್ಬಿಗಳಲ್ಲಿ ಬರುವ ವಿವಿಧ ತಿನ್ನುವ ಪದಾರ್ಥಗಳೂ, ಬ್ರಾಂಡೀ ವಿಸ್ಕೀ ವ್ಯಾನೂ, ಮೊದಲಾದ ಪಾನಗಳೂ ನಿನ್ನ ಬಾಯಲ್ಲಿ ಹೊಕ್ಕದ ಹಾಗೆ ಜಾಗ್ರತೆ ನೋಡಿಕೋ. ಯಂತ್ರಗಳನ್ನು ಮಾಡುವ ಯೋಗ್ಯತೆ ನಿನಗಿಲ್ಲ. ನಿನ್ನ ಶರೀರವನ್ನು ವಿದೇಶಿ ಪದಾರ್ಥಗಳನ್ನು ತಿಂದು ಅಥವ ಕುಡಿದು ಬ್ರಷ್ಟಮಾಡಿಕೊಳ್ಳ ಬೇಡ.

5. ಇಂಡಿಯದ ಕಾಗದದ ಮೇಲೆ ಇಂಡಿಯದ ಲೇಖನಿಯಿಂದ ಬರಿ. ಆಗ್ಯೆ ಇಂಡಿಯದ ಬ್ಲೊಟಿಂಗ್ ಕಾಗದ ಮಾತ್ರ ಉಪಯೋಗಿಸಿಕೊ. ಸ್ವದೇಶಿ ಕಾಗದವೂ, ಲೇಖಣಿಗಳೂ, ಬ್ಲೊಟಿಂಗೂ ಸಹಾ ಈಗ ಶಿಕ್ಕುತ್ತವೆ. ಬ್ಲೊಟಿಂಗು ಶಿಕ್ಕದಿದ್ದರೆ ರೇತಿಯಾದರೂ ಉಪಯೋಗಿಸಿಕೊ.

6. ಇಂಡಿಯದ ಅಕ್ಕಿ, ಇಂಡಿಯದ ಗೋದಿ ಮೊದಲಾದ ಧಾನ್ಯಗಳೂ, ಇಂಡಿಯದ ಸಹಸ್ರ ವಿಧದ ಚಲೋ ಫಲಗಳೂ, ಇಂಡಿಯದ ಬೆಲ್ಲವೂ, ಇಂಡಿಯದ ಸಕ್ಕರೆಯೂ ಮಾತ್ರ ಉಪಯೋಗಿಸಿದರೆ ನಿನ್ನ ಶರೀರದಲ್ಲಿ ಭಾರತೀಯ ಚೇತನವೂ ಬೆಳೆಯುವುದು.

7. ಕೊತ್ತಂಬರಿ, ಜೀರಿಗೆ ಮೊದಲಾದವುಗಳ ಕಶಾಯವು ನಿನಗೆ ಮೆಚ್ಚುವದಿಲ್ಲವಾದರೆ ಇಂಡಿಯದವರು ಬೆಳಿಸಿದ ಕಾಪಿ, ಇಂಡಿಯದವರು ಬೆಳಿಸಿದ ಚಾ ಮೊದಲಾದ ಇಂಡಿಯದ ಪದಾರ್ಥಗಳಿಂದಲೇ ನಿನ್ನ ಬಾಯಾರಿಕೆ ನಿವಾರಿಸಲಿಕ್ಕೆ ಪಾನಗಳನ್ನು ಮಾಡಿಕೊ.

8. ಇಂಡಿಯದ ಜಾಡರು ಮಾಡಿದ ವಸ್ತ್ರಗಳನ್ನು ಇಂಡಿಯದ ಮಗ್ಗಗಳಲ್ಲಿ ಇಂಡಿಯದವರು ಮಾಡಿದ ವಸ್ತ್ರಗಳನ್ನು ಮಾತ್ರ ಉಪಯೋಗಿಸಿಕೊ. ನಿನ್ನ ತಲೆಗೆ ಇಂಡಿಯದ ರುಮಾಲು ಇಟ್ಟುಕೊ. ಇದು ನಿನಗೆ ಮೆಚ್ಚುವದಿಲ್ಲವಾದರೆ ಇಂಡಿಯದ ವಸ್ತ್ರದಿಂದ ಮಾಡಿದ ಟೊಪ್ಪಿಯಾದರೂ ಇಟ್ಟುಕೊ.

9. ನೀನು ಸಹ ನ್ಯೂಸ್ ಪೇಪರುಗಳಲ್ಲಿಯೂ ಗಜೇಟುಗಳಲ್ಲಿಯೂ ವಿದೇಶಿಯ ಸಾವಕಾರರು ವಿದೇಶಿ ವಸ್ತುಗಳನ್ನು ಹೊಗಳಿ ಪ್ರಕಟಿಸುವ ಶ್ಲಾಘನೆಯನ್ನು ಸರ್ವಥಾ ಗಣ್ಯಮಾಡ ಬೇಡಾ.

ಇಂಡಿಯದಲ್ಲಿ ಬೆಳೆಯುವ ಮತ್ತು ಇಂಡಿಯದ ಕರಕೌಶಲಾಲಯಗಳಲ್ಲಿ ಪೈದಾಸ್ತು ಮಾಡುವ ವಸ್ತುಗಳೇ ಉತ್ತಮವೂ, ಪರಿಶುದ್ಧವಾದವುಗಳೂ ಎಂಬದನ್ನು ನಮ್ಮ ಮಾತೃಭೂಮಿಯ ಪುತ್ರರಾದ ಸರ್ವಭಾರತೀಯರು ನಂಬಿಕೊಂಡು ನಡೆಯಬೇಕು.

ಪಿತೃಪ್ರೇಮ.

ಕೋಗಿಲೆಗಳ ಮಧುರಾಲಾಪ, ಫಲಭಾರಗಳಿಂದ ನಮ್ರನಾದ ತರುರಾಜಿ, ವಿಕಸಿತ ಕುಸುಮಗಳಿಂದ ಸ್ಥಿತಹಾಸ್ಯಪೂರಿತವಾದ ಲತಾಸಮುದಾಯ, ಸ್ಪಟಿಕ ಸಮಾನ ಜಲದಿಂದ ತುಂಬಿ ಪ್ರಫುಲ್ಲ ಕುಮುದಗಳಿಂದ ಯುಕ್ತವಾದ ಸುಂದರವಾದ ಜಲಾಶಯ, ಭ್ರಮರಗಳ ಮಂಜುಳಗಾನ ರವ, ಶೀತಲ ವಾಯುವಿನ ಸುಮನ ಸುಗಂಧ ಮಿಶ್ರ ಮಂದಗಮನಗಳಿಂದ ಹೃದಯಾನಂದದಾಯಕವಾದ ನಂದನೋದ್ಯಾನ ಸದೃಶವಾದ ಉದ್ಯಾನವನವು ಪರಿಶೋಭಿಸುತ್ತಿತ್ತು. ಮಧ್ಯೆ ಮಧ್ಯೆ ಅಸ್ತಂಗತನಾಗುವ ಪ್ರಭಾಕರನ ಅರುಣ ಕಿರಣಗಳು ಈ ಶೋಭೆಯನ್ನು ವೃದ್ಧಿಗೊಳಿಸುತ್ತಿದ್ದವು. ಭಾವಿ ಉನ್ನತಿಕೆ ಮನು

ಪ್ರದರ್ಶಿಸುವ ಚಿನ್ಹೆಗಳಿಂದ ಯುಕ್ತವಾಗಿ ಸುಂದರಾಂಗನಾದರೂ ಮಲಿನ ವೇಷಧಾರಿಯಾದ ತರುಣನೊಬ್ಬನು ಪ್ರಕೃತಿಯಿಂದ ಸಿದ್ಧಪಡಿಸಿದ ಶುಭ್ರ ಶಿಲಾಸನದ ಮೇಲೆ ಆಸೀನನಾಗಿದ್ದನು. ಆತನ ಹೃದಯಾಕಾಶದಲ್ಲಿ ಗೂಢತರವಾದ ವಿಚಾರ ಪರಂಪರೆಗಳು ಸಮುದ್ರದಲೆಗಳೋಪಾದಿ ಉದ್ಭವಿಸುತ್ತಿದ್ದವು.

ಆ ಭಗ್ನ ಹೃದಯ ತರುಣನೊಂದು ದೀರ್ಘನಿಶ್ವಾಸವನ್ನು ಬಿಟ್ಟು ತನ್ನಷ್ಟಕ್ಕೆನೇ ಗುಣಗುಣಿಸುತ್ತಿದ್ದನು. "ನನ್ನ ಜನ್ಮವು ಇಂಥಾ ಹೀನ ದೆಶೆಯಲ್ಲಿಯೇ ಉದ್ಭವಿಸಿತೇನು? ನಾನು ಕರ್ತವ್ಯ ಪರಾಙ್ಮುಖನಾಗಿ ಇಂದಿನ ವರೆಗೂ ಈ ಸೃಷ್ಟಿದೇವಿಯ ನಿಸರ್ಗಸಿದ್ಧ ಸೌಂದರ್ಯದಲ್ಲಿ ಕ್ರೀಡಿಸಿ ಕಾಲಕ್ರಮಣ ಮಾಡಿದೆನಲ್ಲಾ! ಈ ವನಶ್ರೀಯ ಶೋಭೆ, ಈ ಪೊದೆಗಳಲ್ಲಿರುವ ಕೋಮಲ ವನಲತೆಗಳ ಅಸ್ಪಷ್ಟಕೂಜನ, ಜಲಾಶಯದಲ್ಲಿ ತರಂಗಮಾಲಾಪ್ರದರ್ಶಕ, ದೀರ್ಘ, ಮಂದಸುಗಂಧಿತ ವನಶ್ವಾಸ, ಮಧುಕರಗಳ ಸುವರ್ಣಗಂಟಾರವದಂತೆ ಮೃದುಕಲಾರವ, ಆಲಿಸಿ, ದೃಷ್ಟಿಸಿ ಅವದುಂಬರ ಫಲದೊಳಗಿನ ಕೀಟದಂತೆ ಉದರಪೂರ್ತಿ ಮಾಡಿಕೊಂಡು, ಅಮೌಲ್ಯವಾದ ಮಾನವಜನ್ಮವನ್ನು ವ್ಯರ್ಥವಾಗಿ ಕಳೆಯಬೇಕಲ್ಲಾ? ಆಹಾ! ನಾನು ಯಾರು? ನನ್ನ ಸುತ್ತಲೂ ಸಶಸ್ತ್ರಪಾಣಿ ಪಹರೆ! ಏಕೆ? ನನ್ನ ಕಡೆ ಎಲ್ಲರೂ ಸಕರುಣ ದೃಷ್ಟಿಯಿಂದೀಕ್ಷಿಸುತ್ತಿದ್ದು ಮಾತಾಡುವುದಿಲ್ಲವೇಕೆ? ಉತ್ತುಂಗವೃಕ್ಷಗಳೇ, ಸರಲಹೃದಯಲತೆಗಳೇ, ಉಜ್ವಲ ಪ್ರಕಾಶದಾಯಿಗಳಾದ ರವಿಕಿರಣಗಳೇ, ಹೇಳಿರಿ, ನನ್ನ ಕರ್ಮಕಥೆಯನ್ನು ಹೇಳಿರಿ. ನಾನು ಒಬ್ಬ ಸೃಷ್ಟಿದೇವಿಯ ನಿಸ್ಸೀಮ ಸೇವಕನು. ನಿಮಗೆ ನನ್ನ ಕರುಣೆಯುಂಟಾಗುವುದಿಲ್ಲವಲ್ಲವೇ? ನನ್ನ ಅತ್ಯಮೌಲ್ಯವಾದ ಆಯುಷ್ಯವು ಈ ರೀತಿಯಿಂದ ಕರ್ತವ್ಯಶೂನ್ಯವಾಗಿ ಲಯ ಹೊಂದುವುದಲ್ಲಾ? ಹೇ ಸಹಸ್ರ ರಶ್ಮಿ ಭಗವಾನ್! ನಿನ್ನ ವಿಷದ ಕಿರಣಮಾಲೆಗಳಿಂದ ನನ್ನನ್ನು ದಿಗಂತ ಕೀರ್ತಿಯಿಂದ, ಶೂರವೀರರಿಂದ ಆಕ್ರಮಿಸಲ್ಪಟ್ಟ ನಗರಕ್ಕೆ ಕರದೊಯ್ಯುವುದಿಲ್ಲವೇ? ನೀನು ಈಗ ಅಸ್ತಂಗತನಾಗುತ್ತಿಯಾದರೂ ನನ್ನಿಷ್ಟು ವಿನಂತಿಯನ್ನಾಲಿಸು. ಶಿಶೋದಿಯಾವಂಶಸಂಭೂತನು. ಛೆ! ನೀನು ಕೇಳಲಿಕ್ಕಿಲ್ಲ! ನೀನು ತಿಮಿರಮಯ ನಿಶಾದೇವಿಗೆ ಸಾಮ್ರಾಜ್ಯವನ್ನರ್ಪಿಸಿ ನಪುಂಸಕನಂತೆ ಅಗಾಧ ಜಲರಾಶಿಯಲ್ಲಿ ನಿಮಜ್ಜನ ಮಾಡಿದಿ! ಹಾ ದುರ್ದೈವವೇ? ನಾನು ಅಂಧಕಾರದಲ್ಲಿರಲೇ?"

ಅಂಶುಮಾಲಿಯು ಅಸ್ತಂಗತನಾದನು. ನಿಶಾನಿಟಿಲರಾಗ ಪ್ರಭೆಯು ಧರಣೀದೇವಿಯನ್ನು ಸುಶೋಭಿತ ಮಾಡಿತು. ಸೂರ್ಯ ವಿಕಾಸಿಗಳು ಮಲಿನವಾದವು. ವಿಸ್ತೀರ್ಣ ನೀಲಾಕಾಶದಲ್ಲಿ ಸತೇಜ ನಕ್ಷತ್ರಗಳು ಮಿನುಗಲಾರಂಭಿಸಿದವು. ಅವಿರತವಾದ ತಿಮಿರ ಧಾರೆಯು ಸುರಿಯಲಾರಂಭಿಸಿತು. ಪರಿಚಿತವಾದ ಉದ್ಯಾನವು ತಮಃಪೂರ್ಣವಾಯಿತು. ನಿಶಾಕೀಟಕಗಳ ಕರ್ಣಕಠೋರವಾದ ಹೃದಯಭೇದಿಯಾದ ಕ-ರ-ರ-ವ, ಹಿಂಸ ಜಂತುಗಳ ಚೀತ್ಕಾರ, ಉಲೂಕಗಳ ಘೂಂ-ಘೂಂ ನಿನಾದ, ಶುಷ್ಕ ಪರ್ಣಗಳ ಮೇಲೆ ನಡಿಯುವ ಪ್ರಾಣಿಗಳ ಸರಸರ ರವ, ವಾಯುವಿನ ನಿಸ್ತಬ್ಧತೆ, ಕಜ್ಜಲಮಯ ವೃಕ್ಷಗಳ ಭಯಂಕರ ಛಾಯೆಗಳಿಂದ ರಜನೀ ಸುಂದರಿಯ ಭೀತಿದಾಯಕ ವ್ಯಾಪಾರವು ಯಾರಿಗೆ ತಾನೇ ಹೃದಯಕಂಪನವನ್ನುಂಟುಮಾಡದು? ನಮ್ಮ ಯುವಕನಿಗೆ ಭಯವುಂಟಾಗಲಿಲ್ಲ. ಶೂನ್ಯ ದೃಷ್ಟಿಯಿಂದ ಚತುರ್ದಿಕ್ಕುಗಳನ್ನು ಈಕ್ಷಿಸುತ್ತಿದ್ದನು.

ಇದು ಏನಾಶ್ಚರ್ಯ? ಅಗೋ ನೋಡು? ಶುಭ್ರ ವಸ್ತ್ರವನ್ನು ಪರಿಗ್ರಹಿಸಿದ ಒಂದು ವ್ಯಕ್ತಿಯು ಮಂದಗತಿಯಿಂದ ಈ ತರುಣನ ಕಡೆಗೆ ಬರುತ್ತಿರುವದು! ಇದೊಂದು ಪಿಶಾಚಿಯಲ್ಲವಲ್ಲವೇ? ಅಥವಾ ಯಾರೋ ದೈವ ದುರ್ವಿಲಾಸಿನಿ ವನವಾಸಿನಿಯಲ್ಲವಲ್ಲವೇ? ಒಹೊ! ಎರಡನೇಯ ಕಲ್ಪನೆಯೇ ನಿಜ. ಇವಳು ಕ್ಷಣೇ ಕ್ಷಣೇ ನಿಶ್ವಾಸಗಳನ್ನು ಬಿಡುತ್ತಿರುವಳು. ಮುಕ್ತ ಕೇಶ ರಾಶಿಯು ಮಂದಮಲಯಾನಿಲಯದಿಂದ ಅವಳ ಪೃಷ್ಠಭಾಗದಲ್ಲಿ ಕ್ರೀಡಿಸುತ್ತದೆ. ಜಪಮಾಲೆಯು ಅವಳ ಕರಪಲ್ಲವವನ್ನು ಅಲಂಕರಿಸಿಯದೆ. ವಿಸ್ತೃತವಾದ ನೇತ್ರದ್ವಂದಗಳಿಂದ ದುಃಖಾಶ್ರುಗಳು ಟಪಟಪನೆ ಸುರಿಯುತ್ತಿವೆ. ಇವಳು ನಿರ್ಭಾಗ್ಯಳಾದ ವನವಾಸಿನಿಯಾಗಿರಬೇಕು. ಆಹಾ ದುಃಖಕರ್ದಮಾ! ನೀನು ಕರ್ದಮನೆಂಬುವುದು ನಿಜ. ನಿನ್ನಲ್ಲಿ ಕಮಲೋದ್ಭವ ಶಕ್ತಿ ಇರಲಾರದು. ಸಚ್ಛೀಲ ಮಾನವರನ್ನು ನೀನು ಆಕರ್ಷಿಸುತ್ತೀ! ನೀನು ಅತ್ಯಂತ ನಿಷ್ಠುರನಾಗಿ ಕೃತಘ್ನನಾಗಿರುತ್ತೀ!! ನಿನಗೆ ಸ್ತ್ರಿ, ಪುರುಷ, ಯುವಕ, ಬಾಲಕ, ವೃದ್ಧರೆಂದು ತಿಳಿಯುವದಿಲ್ಲ. ನೀನು ನಿಸ್ಸರ್ಗಸಿದ್ಧನಾದ ಮಾನವದ್ವೇಷ್ಟನಾಗಿರುವೆ. ನಿನಗೆ ಸುಖಿಪ್ರಾಣಿ ಕಂಡರಾಗುವದಿಲ್ಲ. ಎಲೇ ಕರ್ದಮಾ! ಹಾಗೆಯೇ ನೀನು ಜನರನ್ನು ಉದ್ಧರಿಸುತ್ತೀ. ಮಾನವರು ನಿನ್ನ ಅಗಾಧವಾದ ಲೀಲೆಯನ್ನನುಭವಿಸದೆ ಉನ್ನತಿಕೆಯನ್ನು ಹೊಂದಲಾರರು! ನೀನು ಕರ್ತವ್ಯದ ದಿಕ್ಕನ್ನು ತೋರಿಸುವೆ. ಈಶ್ವರೋಪವಾಸನೆಯನ್ನು ಮಾಡಿಸುವೆ. ನಾಸ್ತಿಕನನ್ನು ಆಸ್ತಿಕನನ್ನಾಗ ಮಾಡುವೆ. ನಿನ್ನನ್ನು ಸ್ತುತಿಸಿದ್ದಷ್ಟು ನಿಂದಿಸಿದರೂ ಆಯೋಗ್ಯವಾಗಲಾರದು.

ಯುವಕನು ಚಕಿತದೃಷ್ಟಿಯಿಂದ ಆ ವ್ಯಕ್ತಿಯನ್ನೀಕ್ಷಿಸಿದನು. ಆತನಿಗೆ ಏನೊಂದೂ ಬೋಧೆಯಾಗಲಿಲ್ಲ! ಆ ವ್ಯಕ್ತಿಯು ಹತ್ತಿರ ಹತ್ತಿರ ಬರುತ್ತಲೇ ಈತನ ವ್ಯಾಕುಲತೆಯು ಏರುತ್ತೇರುತ್ತಾ ಬಂತು. ಹತ್ತಿರ ಬಂದ ಕೂಡಲೇ ದುರ್ದೈವಿ ತರುಣನು ಧೈರ್ಯದಿಂದ "ನೀನು ಯಾರು? ನಡಿ. ಮಾನವಿಯೋ ಪಿಶಾಚಿಯೋ?" ಎಂದುಚ್ಚರಿಸಿದನು.

ಪ್ರತ್ಯುತ್ತರವನ್ನೀಯದೆ ಆ ವ್ಯಕ್ತಿಯು ಗಂಭೀರತೆಯಿಂದಲೇ ಈಕ್ಷಿಸುತ್ತಿತ್ತು.

"ಪ್ರತ್ಯಕ್ಷ ಮಾನವಹೃದಯವನ್ನು ಕಂಪಿತ ಮಾಡುವ ಕಾಲಸ್ವರೂಪಿಣಿ ರಾಕ್ಷಸಿಯಾದರೂ, ಈ ಶಿಶೋದಿಯಾವಂಶಸಂಭೂತನಾದ ರಾಜ ಪುತ್ರನು ನಿನ್ನ ಭಯಪ್ರದವಾದ ಆಟಕ್ಕೆ ಅಂಜನು! ನುಡಿ-ನುಡಿ. ಇಂಥಾ ವೇಳೆಯಲ್ಲಿ ಈ ವೇಷಧಾರಿಯಾದ ನೀನು ಯಾರು? ನನ್ನಿಂದ ನಿನಗೆ ಆಗಬೇಕಾದ ಕಾರ್ಯವೇನು?

ಆ ವ್ಯಕ್ತಿಯು ಸ್ತ್ರೀಕಂಠದಿಂದ "ನಿನ್ನ ಅಗತ್ಯವು ನನಗಿದೆ."

ತರುಣನು. "ಹಾಗಾದರೆ ನಿನ್ನ ಕೂಡೆ ನಾನು ಬರಬೇಕೆ?"

"ವಿಶ್ವಾಸವಿದ್ದರೆ ಬರಬಹುದು."

"ನೀನು ಯಾರಾದರೂ ಸರಿ ಸ್ತ್ರೀ ಜಾತಿಗೆ ನಾನು ಅಂಜತಕ್ಕವನಲ್ಲ. ನನ್ನಿಂದ ಅವರು ಅಂಜಬೇಕಾದುದಿಲ್ಲ. ನಡಿ, ನಾನು ಸಿದ್ಧನಾಗಿರುವೆನು."

ಆ ವ್ಯಕ್ತಿಯು ಹಿಂದಿರುಗಿತು. ತರುಣನು ಅದನ್ನು ಧೈರ್ಯಾಂತಃಕರಣದಿಂದ ಹಿಂಬಾಲಿಸಿದನು.

ನಿಶೀಥದ ಪ್ರಥಮ ಝಾಮವು ಪ್ರಾರಂಭಿಸಿತ್ತು. ಇಂದು ಶುಕ್ಲಪಕ್ಷದ ತೃತೀಯೆಯಾದುದರಿಂದ ಚಂದ್ರಬಿಂಬವು ಗಗನದ ಒಂದು ಭಾಗದಲ್ಲಿ ಪ್ರಕಾಶಿಸುತ್ತಿತ್ತು. ಚಂದ್ರವಿಕಾಸಿ ಕುಮುದಗಳು ಪ್ರಫುಲ್ಲಿಸಿ ಮುಗುಳುನಗೆಯಿಂದ ತಾರಾನಾಥನ ಸ್ವಾಗತ ಗೀತಗಳನ್ನು ಮೂಕ ವದನಗಳಿಂದ ಪಾಡುತ್ತಿದ್ದವು.

M. V. L. Prabhu.

ಮುಂದೆ ಸಾಗುವುದು.

ಮದುಪಾನ ಸೇವನೆ.

ಕಳದ ತಿಂಗಳಲ್ಲಿ ಜರಗಿದ ಮದ್ರಾಸ್ ನ್ಯಾಯವಿಧಾಯಕ ಸಭೆಯ ಮುಂದಿಡಲ್ಪಟ್ಟ ಮಸೂದೆಗಳಲ್ಲಿ ದಿನೇ ದಿನೇ ವೃದ್ಧಿಯಾಗುತ್ತಿರುವ ಹೆಂಡ ಸರಾಯಿಗಳ ಪಾನವನ್ನು ಕಡಿಮೆ ಮಾಡಬೇಕೆಂಬ ಪ್ರಸ್ತಾಪವು ಒಂದಾಗಿತ್ತು ಎಂಬದಾಗಿ ಕಳದ ಒಂದು ಸಂಚಿಕೆಯಲ್ಲಿ ತಿಳಿಸಿದ್ದಾಯಿತು. ಈ ಸಭೆಯಲ್ಲಿ ಸಿಕ್ಕಿದ ವೃತಾಂತದ ಪ್ರಕಾರ ಕುಡಿಕತನದ ಪಿಶಾಚಿಯು ಇತರ ಸಂಸ್ಥಾನಗಳಿಗಿಂತಲೂ ನಮ್ಮ ಸಂಸ್ಥಾನದ ಪ್ರಜೆಗಳನ್ನು ಹೆಚ್ಚಿಗೆ ಹಾವಳಿಮಾಡುತ್ತಿದೆ ಎಂಬದಾಗಿ ತಿಳಿಯುವುದು ನಮ್ಮ ಸಂಸ್ಥಾನದವರಿಗೆ ನಾಚಿಕೆಯ ಸಂಗತಿಯಾಗಿದೆ. ಆದ್ದರಿಂದ ಮದುಪಾನ ಪಿಶಾಚಿಯನ್ನು ನಮ್ಮ ಸಂಸ್ಥಾನದಲ್ಲಿ ಆದಷ್ಟು ಮಟ್ಟಿಗೆ ನಿರ್ಮೂಲ ಮಾಡುವರೆ ಧಾವತಿಪಡುವುದು ಪ್ರತಿಯೊಬ್ಬ ದೇಶವತ್ಸಲನ ಹಂಗಾಗಿರುವುದರಿಂದ ಮೊದಲಾಗಿ ಮದುಪಾನದ ಕೇಡನ್ನು ತಿಳಕೊಳ್ಳುವುದು ಅವಶ್ಯವಾಗಿದೆ.

ಒಬ್ಬನು ತನ್ನ ಕಣ್ಣನ್ನು ತೆರೆದು ತುಸ ಜ್ಞಾನತಂತುವನ್ನು ಅರಳಿಸಿದರೆ ಮದುಪಾನ ಸೇವನೆಯು ಸಂತೋಷವನ್ನು ಹೋಗಲಾಡಿಸಿ ಸಂಬಂಧಿಕರ, ಸ್ನೇಹಿತರ, ಪರಿಚಿತರೊಳಗಣ ಪ್ರೀತಿಯನ್ನು ಕುಂದಿಸಿ ಬೇಧಾಬೇಧವನ್ನು ಹುಟ್ಟಿಸುವಂಥಾದ್ದಾಗಿದೆಂದೂ ಅನೇಕಾವರ್ತಿ ಶ್ರೀಮಂತರ ತೇಜೋಭಂಗಮಾಡಿ ಉಚ್ಚಗುಣಗಳಿಂದ ಕೂಡಿದ ಸದ್ಗೃಹಸ್ಥರನ್ನು ಅಧೋಸ್ಥಾನಕ್ಕೆ ತರುವಂಥಾದ್ದಾಗಿದೆ ಎಂದೂ ಖಾತ್ರಿಯಾಗದಿರಲಾರದು.

ನಿಶ್ಚಯವಾಗಿ ಈ ಸೇವನೆಯು ಸಮಾಧಾನ ತುಂಬಿದ ಮನೆಯೊಳಗೆ ಅಸಮಾಧಾನದ ಬೀಜವನ್ನು ಬಿತ್ತುವದು; ಗಂಡಹೆಂಡರೊಳಗೆ ಜಗಳವೆಂಬ ಬೇಲಿಯನ್ನು ಕಟ್ಟುವದು, ಹೆತ್ತವರಿಗೆ ಮಕ್ಕಳ ಮೇಲಿರುವ ಯತಾರ್ಥ ಪ್ರೀತಿಗೆ ಎಡೆತಡೆಯನ್ನು ತಂದುಹಾಕುವದು, ತಂದೆತಾಯಿಗಳು ಮಕ್ಕಳಿಗೆ ಕೊಡಬೇಕಾದ ಶಿಷ್ಟಾಚಾರವನ್ನು ಕೊಡದ ಹಾಗೆ ಅಡ್ಡಿಮಾಡುವದು.

ಇದು ನಮ್ಮ ಪಟ್ಟಣಿಗರನ್ನು ಮಹಾ ಭಯಂಕರವಾದ ಬಂಡುತನಕ್ಕೆ ಮಾರ್ಪಡಿಸಿ ನ್ಯಾಯಸ್ಥಾನದಲ್ಲಿ ತಂದು ನಿಲ್ಲಿಸುವಂಥಾದ್ದಾಗಿದೆ. ನಮ್ಮ ಬಂದಿಖಾನೆಗಳನ್ನು ತುಂಬಿಸುವಂಥಾದ್ದೂ ಮದುಪಾನವೇ. ಇದೇ ಮಹಾಪಾತಕಗಳ ಕೇಂದ್ರಸ್ಥಾನವಾಗಿದೆ. ಗೃಹಸ್ಥಾಶ್ರಮವನ್ನು ಬಡತನಕ್ಕೂ, ಸತೀತ್ವನಾಶಕ್ಕೂ, ದುಃಖಕ್ಕೂ ಎಳೆಯುವಂಥಾದ್ದೂ ಇದೇ. ಹುಚ್ಚರ ಅಸ್ಪತ್ರಿಗಳನ್ನೂ ಅನಾಥಾಶ್ರಮಗಳನ್ನೂ ತುಂಬಿಸುವಂಥಾದ್ದು ಯಾವದು? ಸರಾಯಿ, ಸೇಂದಿ ಅಲ್ಲವೇ!

ಕೆಲವರು ಮದುಪಾನವು ರೋಗವನ್ನು ಗುಣಪಡಿಸುತ್ತದೆ. ಒಂದು ದಿನ ತುಸ ಕುಡಿಯದಿದ್ದರೆ ತಾವು ಸತ್ತೇ ಹೋಗುವೆವೆಂದು ಹೇಳುವರು. ಇದು ತಪ್ಪಾಭಿಪ್ರಾಯವಾಗಿದೆ. ಈಗೀಗ ವೈದ್ಯರು ಮಾದಕ ಪದಾರ್ಥವು ಎಂದೂ ರೋಗಿಗೆ ಕ್ಷೇಮವನ್ನು ಕೊಡಲಾರದು ಎಂಬದಾಗಿ ಖಾತ್ರಿ ಹೊಂದಿರುವರು. ಅದು ರೋಗಿಗಳಿಗೆ ಆರೋಗ್ಯದ ಭಾವನೆಯನ್ನೂ ಬಡತನಕ್ಕೆ ಐಶ್ವರ್ಯದ ಭಾವನೆಯನ್ನು ಮಾತ್ರವೇ ಹುಟ್ಟಿಸುತ್ತದೆ. ಜ್ಞಾಪಕಶಕ್ತಿಯನ್ನು ಕುಂದಿಸಿ ರೋಗದ ಕಾಲದಲ್ಲಿ ಸ್ಮೃತಿ ಇಲ್ಲದ ಹಾಗೆ ಮಾಡುವುದು. ಈ ಶಕ್ತಿಯು ಇದಕ್ಕಿರುವುದರಿಂದ ಮದ್ಯಪಾಯಿಯಾದ ಬಡವನು ಬಡವನಾಗಿದ್ದಾಗ್ಯೂ ತಾನು ಬಡವನೆಂದು ಊಹಿಸನು; ರೋಗಿಯು ಕಠಿಣ ಅಸ್ವಸ್ಥದಲ್ಲಿದ್ದಾಗ್ಯೂ ತಾನು ಕಠಿಣ ಅಸ್ವಸ್ಥದಲ್ಲಿದ್ದೇನೆಂದು ಭಾವಿಸನು.

ಮದುಪಾನವು ಬರೇ ವಿಷ ಮಾತ್ರವೇ ಆಗಿರುವುದಿಲ್ಲ. ಅದು ದೇಹದ ಪ್ರತಿ ಒಂದು ನಾಡಿಕೂಟಗಳನ್ನು ಅಬಲಪಡಿಸುವಂಥಾ ಒಂದು ಪದಾರ್ಥವಾಗಿದೆ. ದೇಹದ ಪ್ರತಿ ಒಂದು ಇಂದ್ರಿಯವನ್ನೂ ರಕ್ತ ಕೂಟಗಳನ್ನೂ ಕ್ಷೀಣಮಾಡಿ ಬಿಡುವುದು. ಕೆಲವು ಸಮಯದ ಹಿಂದೆ ಘಾಯಹೊಂದಿದ ಒಬ್ಬ ಕುಡಿಕನಿಗೆ ವೈದ್ಯರು ಶಸ್ತ್ರಪ್ರಯೋಗ ಮಾಡಬೇಕಾಯಿತು. ಶಸ್ತ್ರಪ್ರಯೋಗ ಮಾಡುವ ಕೋಣೆಗೆ ಈತನನ್ನು ಕರಕೊಂಡು ಹೋದಾಗ ಈತನು ವೈದ್ಯರೇ, ಈ ಶಸ್ತ್ರಪ್ರಯೋಗದಿಂದ ನಾನು ಸತ್ತುಹೋಗುವೆನೇ ಎಂದು ಕೇಳಿದನು. ಅದಕ್ಕೆ ದಾಕ್ತಾರರು—ಶಸ್ತ್ರಪ್ರಯೋಗವು ನಿನ್ನನ್ನು ಕೊಲ್ಲಲಿಕ್ಕಿಲ್ಲ; ಆದರೆ ನೀನು ತಕ್ಕೊಂಡಿದ್ದ ಬೀಯರ್ ನಿನ್ನನ್ನು ಕೊಲ್ಲಬಹುದು ಎಂದು ಹೇಳಿ ಬಹಳ ಜಾಗ್ರತೆಯಿಂದಲೂ ಬುದ್ಧಿವಂತಿಕೆಯಿಂದಲೂ ಶಸ್ತ್ರಪ್ರಯೋಗ ಮಾಡಿದರು. ಆದರೆ ಈತನು ಬೀಯರ್ ಕುಡಿಕನಾಗಿದ್ದುದರಿಂದ ಇವನ ಘಾಯವು ವಾಸಿಯಾಗಲು ಕೇಳದೆ ರಕ್ತವು ವಿಷವಾಗಿ ಪರಿಣಮಿಸಿ, ಕೆಲವು ದಿವಸಗಳಲ್ಲಿಯೇ ಸತ್ತುಹೋದನು. ಅವನ ಮರಣಕ್ಕೆ ಕಾರಣ ಯಾವುದು? ಆತನು ಕುಡಿದಿದ್ದ ಬೀಯರ್ ಅಲ್ಲವೇ?

ಬಡಜನರು ಈಗಲೂ ಸೇಂದಿ ಮತ್ತು ಸರಾಯಿ ದೇಹಪೋಷಣೆಗೆ ಅಗತ್ಯವಾದ ಆಹಾರವೆಂದು ತಿಳಕೊಂಡಿರುವರು. ಆದರೆ ಈ ಪಾನಗಳಲ್ಲಿ ದೇಹಪೋಷಣಾ ಸತ್ವಗಳು ಬರೇ ಕೊಂಚ ಮಾತ್ರವೇ ಇದೆ. ಅವುಗಳಲ್ಲಿ ದೇಹಪೋಷಣಾ ಸತ್ವವಿದೆ ಎಂದು ಅದನ್ನು ಸೇವಿಸುವುದು ಹೆಡ್ಡುತನವಾಗಿದೆ. ಯಾವ ವೈದ್ಯನಾದರೂ ಸರಾಯಿ ಯಾ ಸೇಂದಿಯನ್ನು ಶಕ್ತಿವರ್ಧನಾ ಔಷಧವಾಗಿ ಉಪಯೋಗಿಸ ಹೇಳನು. ಅದು ಎಂದೂ ಶಕ್ತಿಯನ್ನು ಹೆಚ್ಚಿಸದು. ಒಬ್ಬನು ದಿನೇದಿನೇ ಬರೇ ಕೊಂಚ ಮಾದಕ ಪದಾರ್ಥವನ್ನು ಸೇವಿಸುತ್ತಾ ಬಂದರೆ ಆತನ ಶಕ್ತಿಯು ದಿನೇದಿನೇ ಕುಂದುತ್ತದೆ ಎಂಬದಾಗಿ ವೈದ್ಯರು ಪರಿಶೋಧಿಸಿ ತಿಳಕೊಂಡಿರುವರು. ಗರಡೀಸಾಧಕರು ಮದುಪಾನವನ್ನು ಸೇವಿಸುವುದು ಒಳ್ಳೇದಲ್ಲ ಎಂಬದಾಗಿ ಖಾತ್ರಿಹೊಂದಿರುವರು. ತುಸ ಮದುಪಾನ ಸೇವನೆ ಮಾಡುವ ರೈಲ್ವೇ ಇಂಜಿನಿಯರನಾದರೂ ರೈಲ್ವೇ ಗಾಡಿಗಳನ್ನು ಸರಿಯಾಗಿ ನಡಿಸಲಾರನು. ರಣರಂಗದಲ್ಲಿ ಕಾದಾಡುವ ಸಿಪಾಯಿಗಳಾದರೂ ಮದುಪಾನ ಸೇವಿಸುವುದರಿಂದ ಚೆನ್ನಾಗಿ ಕಾದಾಡಲಾರರು. ಆದರೆ ಮದುಪಾನ ಮುಟ್ಟದ ಸಿಪಾಯಿಯಾದರೋ–ಒಳ್ಳೇದಾಗಿ ಗುರಿಹಿಡಿದು ಹೊಡೆಯುವನು. ಯಾವಾಗಲೂ ಅಸ್ವಸ್ಥದಲ್ಲಿ ಬೀಳನು. ಮದುಪಾನ ಸೇವಿಸುವವನಂತೆ ಈತನಿಗೆ ಆಗ್ಯಾಗ್ಗೆ ಶೀತವು ತಗಲದು.

ಮದುಪಾನವು ಕುಡಿಕನ ಕಲಿಜೆಯನ್ನೂ ಶ್ವಾಸಕೋಶವನ್ನೂ ನರಸಂಸ್ಥಾಯವನ್ನೂ ಮೂತ್ರಗುಡ್ಡನ್ನೂ ದಿನೇ ದಿನೇ ಹಾಳುಮಾಡಿ ಕಡೆಗೆ ಅಂಥವನನ್ನು ಬೇಗನೇ ಯಮಪುರಕ್ಕೆ ಅಟ್ಟಿಬಿಡುವುದು. ಮದುಪಾನದಿಂದ ಉಂಟಾಗುವ ಅನಾಹುತಗಳು ಪ್ರತಿ ಒಬ್ಬನಿಗೂ ತಿಳಿದೇ ಇವೆ. ಇದಕ್ಕಾಗಿ ಅಲ್ಲಲ್ಲಿ ಮದುಪಾನ ನಿವಾರಣಾ ಸಂಘಗಳು ಏರ್ಪಟ್ಟಿವೆ. ಆದರೆ ಬರೇ ಸಂಘಗಳನ್ನು ಏರ್ಪಡಿಸಿಕೊಂಡು ಮದುಪಾನ ನಿವಾರಣಾ ಸಂಘಗಳಿವೆ ಎಂಬೆಂದಾಗಿ ಹೇಳಿಸಿಕೊಂಡರೆ ಸಾಲದು. ಈ ಸಂಘಕ್ಕೆ ಸೇರಿದ ಪ್ರತಿ ಒಬ್ಬ ವ್ಯಕ್ತಿಯೂ ಸಂಘಕ್ಕೆ ಸೇರಿದನಂತರ ಎಂದೂ ಕುಡಿಯಬಾರದು. ಸಂಘದ ಮೆಂಬರರಾಗಲೀ ಪೋಷಕರಾಗಲೀ ಮದುಪಾನ ಮುಟ್ಟದವರಾಗಿರಬೇಕಲ್ಲದೆ ಗುಟ್ಟಿನಲ್ಲಾದರೂ ಅದನ್ನು ಸೇವಿಸದೆ ಇತರ ಕುಡಿಕರಿಗೆ ಆದರ್ಶದಂತಿದ್ದು ಆಗ್ಗಾಗ್ಗೆ ಒಟ್ಟುಕೂಡಿಕೊಂಡು ಕುಡಿಕರ ಬಳಿಗೆ ಹೋಗಿ ಕುಡಿಕತನದಿಂದುಂಟಾಗುವ ಅನಾಹುತಗಳನ್ನು ಅಂಥವರಿಗೆ ದೃಷ್ಟಾಂತಪೂರ್ವಕವಾಗಿ ಮೃದುಮಾತಿನಿಂದ ಖಾತ್ರಿಪಡಿಸಬೇಕು. ಯೌವನಸ್ಥರು ಇಂಥಾ ದುರ್ವ್ಯಸನಗಳಿಗೆ ತುತ್ತಾಗದ ಹಾಗೆ ಶಾಲೆಗಳಲ್ಲಿ ಮದುಪಾನದ ಕೆಡಕನ್ನು ಕುರಿತು ಆಯಾ ಪಾಠಗಳನ್ನು ಕೊಡುವದು ವಿಹಿತವು. ಹೀಗೆ ಮಾಡುತ್ತಾ ಬಂದರೆ ಕ್ರಮೇಣ ಮದುಪಾನ ಸೇವನೆಯ ಬಲವು ಕುಂದುವದು.

S. A

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಅಯ್ಯಾ,

ಕಳದ ಸಾರಿಯ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ ಕೆಪ್ಟನ್ ವಿಲ್ಲಿಯಮ್ ಎರ್ನೆಷ್ವರ ಭಾಷಣದ ವರದಿಯ ಕುರಿತು ಒಂದೆರಡು ಮಾತು ಬರೆಯ ಅಪ್ಪಣೆಯಾಗಲಿ. ಕೆಪ್ಟನ್ ಎರ್ನೆಷ್ವರ ಭಾಷಣವನ್ನು ಕೇಳಿದವರಲ್ಲಿ ನಾನೂ ಒಬ್ಬನಾಗಿರುತ್ತೇನೆ. ಅವರ ಅಭಿಪ್ರಾಯವನ್ನು ತಮ್ಮ ಕಳದ ಸಂಚಿಕೆಯ ಬಾತ್ಮೀದಾರರು ತಪ್ಪಾಗಿ ಗ್ರಹಿಸಿರುವರು. ಈ ತಪ್ಪು ಗ್ರಹಿಕೆಗೆ ಕೆಪ್ಟನ್ ಎರ್ನೆಸ್ಟರ ಭಾಷಾ ದೋಷವು ಸ್ವಲ್ಪ ಮಟ್ಟಿಗೆ ಕಾರಣವಾಗಿರಬೇಕು. ಕೆಪ್ಟನ ಎರ್ನೆಷ್ವರು ಲಂಡನ್ ನಗರದಲ್ಲಿಯೂ ಎಡಿನ್‌ಬರೋ ಪಟ್ಟಣದಲ್ಲಿಯೂ 'ಸಲ್ವೇಶನ್ ಆರ್ಮಿ'ಯವರು ಬಡವರೊಳಗೆ ನಡಿಸುವ ಕೆಲಸವನ್ನು ವಿವರಿಸುವಲ್ಲಿ, ಈ ಬಡವರ ಸ್ಥಿತಿಗತಿಯನ್ನೂ ಅವರ ದೀನಾವಸ್ಥೆಯನ್ನೂ ಹೇಳಿ ಇಂಥಾ ಅಲ್ಪ ಜನರನ್ನಾದರೂ 'ಸಲ್ವೇಶನ್ ಆರ್ಮಿ'ಯವರು ಪುನರೂಪಿಸಿ, ಉತ್ತಮರನ್ನಾಗ ಮಾಡಿ, ಅವರಲ್ಲಿ ಯೋಗ್ಯರೆನ್ನಿಸಿಕೊಂಡವರನ್ನು ಬೇರೆ ಬೇರೆ ಕಸಬುಗಳಿಗೂ ಮಿಶ್ಶೆನರಿಗಳ ಪ್ರವೃತ್ತಿಗೂ ತರಬೇತು ಮಾಡುವರು ಎಂಬದಾಗಿ ಸೂಚಿಸಿದರು. ಲಂಡನಿನ ಮತ್ತು ಇತರ ಯುರೋಪ ಖಂಡದ ಪ್ರಖ್ಯಾತ ನಗರಗಳ ಬಡವರ ಸ್ಥಿತಿ ಬಹಳ ತುಚ್ಛೀಕ್ಕಾರವಾದದ್ದು ಮತ್ತು ಕರುಣೆಗೆ ಯೋಗ್ಯವಾದದ್ದು ಎಂಬುವದು ನಿಸ್ಸಂದೇಹವಾದ ಮಾತು. ಇಂಥವರೊಳಗಿಂದ ಅನೇಕರು ನಂತರ ಮಿಶ್ಶೆನರಿಗಳಾಗಿ ಬೇರೆ ಬೇರೆ ಕಡೆಗಳಿಗೆ ಕಳುಹಿಸಲ್ಪಡುತ್ತಾರೆಂಬುವದೂ ವಾಸ್ತವ್ಯವೇ. ಆದರೆ ಎಲ್ಲಾ ಮಿಶ್ಶೆನರಿಗಳು ಈ ವರ್ಗಕ್ಕೆ ಶೇರಿದವರೆಂದು ಹೇಳಿದರೆ ಅದು ಎಷ್ಟಕ್ಕೂ ನಂಬತಕ್ಕ ಮಾತಲ್ಲ. ಮಿಶ್ಶೆನರಿಗಳಲ್ಲಿ ಅನೇಕರು ದೊಡ್ಡ ಮಂತಾನದವರೂ, ವಿಶೇಷ ವಿದ್ಯಾವಂತರೂ, ಇರುತ್ತಾರೆಂಬುವದಕ್ಕೆ ಏನೇನೂ ಸಂಶಯವಿಲ್ಲ. ಇಂಥಾ ಅನೇಕರನ್ನು ನಾನು ಸ್ವತಹಾ ಬಲ್ಲೆನು. ಕೆಪ್ಟನ್ ಎರ್ನೆಷ್ವರು 'ಸಲ್ವೇಶನ್ ಆರ್ಮಿ'ಯವರ ಕೆಲಸವನ್ನು ಕುರಿತು ಮಾತಾಡಿ ಇಂಥಾ ಅಲ್ಪರಿಂದಲೂ ಉತ್ತಮ ಮಿಶ್ಶೆನರಿಗಳು ಶಿಕ್ಕುತ್ತಾರೆಂದು ಹೇಳಿದರಷ್ಟೆ. ಇವರ ಮಾತಿನಿಂದ ಎಲ್ಲಾ ಮಿಶ್ಶೆನರಿಗಳು ಈ ತರದವರೇ ಎಂದು ಅಭಿಪ್ರಾಯಪಡಲು ಕಾರಣವಿಲ್ಲ.

ಮಿಶ್ಶೆನರಿಗಳ ಪೈಕಿ ಅನೇಕರು ಬಡವರಿಂದ ಹೆಕ್ಕಲ್ಪಟ್ಟವರೆಂದು ಹೇಳಿದಾಗ್ಯೂ ಬಡವರಲ್ಲಿ ಬಡವನಾಗಿ ಬದುಕಿದ ಕ್ರಿಸ್ತೇಸುವಿನ ಸೇವಾವೃತ್ತಿಯಲ್ಲಿ ನಿರತರಾಗಿರುವ ಮಿಶ್ಶೆನರಿಗಳಿಗೆ ನಾಚುವರೆ ಕಾರಣವಿಲ್ಲ.

ಈ ತರದ ಮಾರ್ಪಾಟವೇ ಕ್ರೈಸ್ತತ್ವದ ಮಹತ್ವಕ್ಕೆ ಸಾಕ್ಷಿಯಾಗಿರುತ್ತದೆ. ವಿಲಾಯತಿಯ ದೊಡ್ಡ ದೊಡ್ಡ ವೈದೀಕ ಸ್ಥಾನಗಳನ್ನು ಯೋಗ್ಯರೀತಿಯಿಂದ ಅಲಂಕರಿಸಿದವರಲ್ಲಿ ಅನೇಕರು ಬಹು ಬಡವರೂ ಕೀಳು ಸ್ಥಿತಿಯಿಂದ ಎತ್ತಲ್ಪಟ್ಟವರೂ ಆಗಿದ್ದರೆಂಬುವುದು ಚರಿತ್ರೆ ಸಿದ್ಧಾಂತವಾಗಿರುತ್ತದೆ.

ಹಿಂದುಸ್ಥಾನವು ಹಿಂದುಸ್ಥಾನದವರ ಮುಖಾಂತರವೇ ಕ್ರಿಸ್ತನ ವಶವಾಗತಕ್ಕದೆಂಬುವದು ಯೂರೋಪ ಖಂಡದ ಅನೇಕ ದೊಡ್ಡ ವಿದ್ವಾಂಸರ ಮತ್ತು ಮಿಶ್ಶೆನರಿಗಳ ಅಭಿಪ್ರಾಯವಾಗಿರುತ್ತದೆ. ಇಂಥಾ ಕಾಲವು ನಮ್ಮ ದೇಶಕ್ಕೆ ಬೇಗನೇ ಬಂದೀತು. ಆದರೆ ಅಷ್ಟರ ತನಕ ಯುರೋಪಿಯಾನ ಮಿಶ್ಶೆನರಿಗಳ ಸಹಾಯವೂ ದ್ರವ್ಯವೂ ಅತ್ಯವಶ್ಯವೇ.

ಹೀಗಿರುವದರಿಂದ ನಿಮ್ಮ ಬಾತ್ಮೀದಾರರ ವಿವರಣೆಯು ಕೆಪ್ಟನ್ ಎರ್ನೆಸ್ಟರವರ ಸ್ನೇಹಿತರೊಳಗೆ ತಪ್ಪಾಭಿಪ್ರಾಯವನ್ನೂ ಇತರ ಮಿಶ್ಶೆನರಿಗಳೊಳಗೆ ಬೇಸರವನ್ನೂ ಹುಟ್ಟಿಸದಿರಲಿ. ತಮ್ಮ ಬಾತ್ಮೀದಾರರನ್ನು ಪ್ರತಿಭಟಿಸುವ ಇರಾದೆಯಿಂದ ಇದನ್ನು ಬರಿಯದೆ ಅವರ ಪತ್ರದಲ್ಲಿ ಶೇರಿಕೊಂಡ ತಪ್ಪಾಭಿಪ್ರಾಯದಿಂದ ಉಂಟಾದ ಹಾನಿಯನ್ನು ನಿವಾರಿಸುವರೆ ಬರದಿರುತ್ತೇನೆ. ಇದಕ್ಕೆ ಸ್ಥಳಕೊಟ್ಟ ತಮ್ಮ ಉಪಕಾರಕ್ಕೆ ಕೃತಜ್ಞನಾಗಿರುತ್ತೇನೆ.

G. Herbert.

ಹೊಸ ವರ್ಷದ ಕಾರ್ಡುಗಳು.

ಮುಂದೆ ಹುಟ್ಟುವ ಪರಿಧಾವಿ ಸಂವತ್ಸರದ ದಿವಸ ತಮ್ಮ ತಮ್ಮ ಬಂಧುಮಿತ್ರ ವರ್ಗದವರಿಗೆ ಕಳುಹಿಸಿಕೊಡಬಹುದಾದ ಇಂಗ್ಲಿಷು ನಮೂಫೆಯಂತೆ ಕೆಲವು ಕಾರ್ಡುಗಳನ್ನು ಇಂಗ್ಲಿಷಿನಿಂದಲೂ, ಮತ್ತು ಸಂಸ್ಕೃತ ಶ್ಲೋಕಗಳಿಂದಲೂ, ಅಚ್ಚು ಹಾಕಿಸಿ ಮಾರುವದಕ್ಕೆ ಸಿದ್ಧವಾಗಿರುತ್ತೆ. ಸ್ವಲ್ಪ ಕಾರ್ಡುಗಳೇ ಪ್ರಿಂಟುಮಾಡಿಸಿರುವದರಿಂದ ಅಪೇಕ್ಷೆಯುಳ್ಳವರು ಜಾಗ್ರತೆಯಾಗಿ ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ಕಾರ್ಡು ೧ಕ್ಕೆ ಕವರುಗಳ ಸಹಿತ ೧ ಆಣೆ.

ಒಟ್ಟಿಗೆ ತರಿಸಿಕೊಳ್ಳುವವರಿಗೆ ಡಜನ್ ೧ಕ್ಕೆ ೯ ಆಣೆ.

ಎಚ್. ಎನ್. ರಾವ್ ಬ್ರದರ್ಸ್,

ಬೆಂಗಳೂರು ಸಿಟಿ.

ವಿದೇಶ ವೃತ್ತಾಂತ.

ಇಂಗ್ಲೆಂಡ್, ವೇಲ್ಸ್, ಸ್ಕೋತಾಲದಲ್ಲಿ ಕೂಲಿಗಾರರ ಮುಷ್ಕರವು ದಿನೇ ದಿನೇ ಹೆಚ್ಚಾಗುತ್ತಿದೆ. ಇದರಿಂದ ಕಲ್ಲಿದ್ದಲಿನ ಕ್ರಯವು ಬಹಳವಾಗಿ ಸೇಕಡಾ ೩೦ರಂತೆ ಏರಿಯದೆ. ಸರಕಾರದವರು ಮಧ್ಯಸ್ಥಿಕೆಮಾಡಿ ಯಜಮಾನರಿಗೂ ಕೂಲಿಗಾರರಿಗೂ ಉಂಟಾಗಿರುವ ಅಸಮಾಧಾನವನ್ನು ಇತ್ಯರ್ಥ ಪಡಿಸುವರೆ ಪ್ರಯತ್ನಪಡುತ್ತಿದ್ದಾರೆ. ಕೆಲಸಗಾರರು ಕೇಳುವ ಸಂಬಳವನ್ನು ಕೊಡಲು ಅಸಾಧ್ಯವೆಂದು ಗಣಿಗಳ ಮಾಲಿಕರು ಹೇಳುತ್ತಾರೆ. ಈ ಮುಷ್ಕರವು ಬೇಗನೇ ಇತ್ಯರ್ಥವಾಗದಿದ್ದರೆ ಇಂಗ್ಲಾಂಡಿನ ವ್ಯಾಪಾರಾದಿಗಳಿಗೆ ಅಪಾರವಾದ ನಷ್ಟ ಸಂಭವಿಸಲು ಅನುಮಾನವಿಲ್ಲ. ಮುಷ್ಕರಗಾರರು ಅಲ್ಲಲ್ಲಿ ಬಹಳ ಲೂಟಿ ಮಾಡುತ್ತಿದ್ದಾರೆ. ಈ ಕೆಲಸಗಾರರು ಕೂಲಿಗಾರರ ಸಂಘದಲ್ಲಿ ಮೆಂಬರರಾಗಿರುವುದರಿಂದ ಮುಷ್ಕರ ಹಿಡಿದಿರುವ ಈ ಕೂಲಿಗಾರರಿಗೆ ಈ ಸಂಘಗಳವರು ಜೀವನವನ್ನು ಒದಗಿಸಿಕೊಡುವರು. ಆದರೆ ಕಳದ ವರುಷ ರೈಲ್ವೇ ಕೆಲಸದವರ ಮುಷ್ಕರಕ್ಕಿಂತಲೂ ಈ ಮುಷ್ಕರಗಾರರು ಹೆಚ್ಚಾಗಿರುವದರಿಂದ ಸಂಘದವರು ಎಷ್ಟರ ತನಕ ಈ ಮುಷ್ಕರಗಾರರಿಗೆ ಜೀವನವನ್ನು ಒದಗಿಸಿಕೊಡುವರೋ ತಿಳಿಯದು. ಭೂಖಂಡದಲ್ಲೆಲ್ಲಾ ಈ ಮುಷ್ಕರದಿಂದ ಬಹಳ ನಷ್ಟ ಉಂಟಾಗಿಯದೆ. ಸ್ಪಾನಿಯದಿಂದ ಆಮದಾಗುವ ಕಿತ್ತಳೇ ವ್ಯಾಪಾರವು ಇದರಿಂದ ಪೂರ್ಣ ನಿಂತದೆ. ಜರ್ಮನ್, ಫ್ರಾನ್ಸ್, ಬೊಹೇಮಿಯದ ಕಲ್ಲಿದ್ದಲಿನ ಗಣಿ ಕೆಲಸಗಾರರೂ ಮುಷ್ಕರ ಹಿಡಿಯುತ್ತೇವೆಂದು ತಮ್ಮ ಯಜಮಾನರನ್ನು ಹೆದರಿಸಿದ್ದಾರೆ. ಇಂಗ್ಲಾಂಡಿನ ವಾಯುವ್ಯ ದಿಕ್ಕಿನಲ್ಲಿ ಕಲ್ಲಿದ್ದಲ್ಲಿಗೆ ಟನ್ನಿಗೆ ೩೦ ಶಿಲಿಂಗ್ ಕ್ರಯವಾಗಿಯದೆ. ಸ್ವಾನ್‌ಸೀ ಎಂಬ ಜಿಲ್ಲೆಯಲ್ಲಿ ಮುಷ್ಕರಗಾರರ ಉಪಟಳದಿಂದ ಕಲ್ಲಿದ್ದಲಿನ ನೀರು ಹಾಯುವ ಯಂತ್ರಗಳು ಕೆಲಸ ಮಾಡದೆ ನೆರೆ ಬಂದಿರುವದು. ಒಟ್ಟಿಗೆ ಈಗ ಒಂದು ಮಿಲಿಯದ ಆರ್ನೈದು ಸಾವಿರ ಜನರು ಕೆಲಸವಿಲ್ಲದೆ ತಿರುಗಾಡುತ್ತಿರುವರು. ಇದರಿಂದ ಕಲ್ಲಿದ್ದಲು ದೊರಕುವದು ಬಹಳ ಕಷ್ಟವಾಗಿ ಕೆಲವು ಮುಖ್ಯ ಕೈಗಾರಿಕೆ ಕಾರ್ಖಾನೆಗಳು ನಿಲ್ಲಿಸಲ್ಪಟ್ಟಿವೆ. ರೈಲ್ವೇಯಲ್ಲಿಯೂ ವಿದ್ಯುಚ್ಛಕ್ತಿ ಕಾರ್ಖಾನೆಗಳಲ್ಲಿಯೂ ಬೇಕಾದಷ್ಟು ಕಲ್ಲಿದ್ದಲು ದಾಸ್ತಾನವಿಲ್ಲದಿರುವುದರಿಂದ ಹೆದರಿಕೆಗೆ ಕಾರಣವಾಗಿಯದೆ. ಕಲ್ಲಿದ್ದಲು ಕಮ್ಮಿಯಾಗಿರುವುದರಿಂದ ಲಂಡನಿನ ನೋರ್ದುವೆಸ್ಟರ್ನ್ ರೈಲ್ವೇಯವರು ತಮ್ಮ ಅಗ್ಗಾಡಿಯನ್ನು ಈಗ ಹೆಚ್ಚು ಸಾರಿ ಓಡಿಸುವದಿಲ್ಲ. ಇದರಿಂದ ಸಾವಿರಾರು ಕೆಲಸಗಾರರಿಗೆ ಕೆಲಸವಿಲ್ಲ. ಜರ್ಮನಿ, ನೋರ್ವೆ, ಫ್ರಾನ್ಸಿನ ಉಬೆ ಹಡಗಗಳಲ್ಲಿಯೂ ಕಲ್ಲಿದಲು ಕಮ್ಮಿಯಾಗಿ ಹೆದರಿಕೆ ಪ್ರಾರಂಭವಾಗಿಯದೆ. ವ್ಯಾಪಾರ ಸಂಘದ ಬೋರ್ಡಿನವರಿಗೂ ಕೂಲಿಗಾರರ ಸಂಘದವರಿಗೂ ರಾಜಿ ಪಂಚಾಯತಿಗೆಯು ಪುನರಾರಂಭವಾಗಿಯದೆ.

ಇಂಗ್ಲಾಂಡಿನ ಕಲ್ಲಿದ್ದಲಿನ ಗಣಿ ಕೆಲಸಗಾರರಿಗೂ ಯಜಮಾನರಿಗೂ ಸಂಧಾನ ಮಾಡುವರೆ ಸರಕಾರದವರು ಕೈ ಹಚ್ಚಿದ್ದಾರೆ.

ರೈಲ್ವೇ ಕಂಪೆನಿಯವರಿಗೆ ಸಾಕಷ್ಟು ಕಲ್ಲಿದ್ದಲು ಇಲ್ಲದ್ದರಿಂದ ೫೦೦೦ಕ್ಕಿಂತಲೂ ಹೆಚ್ಚಿಗೆ ರೈಲ್ವೇ ಕೆಲಸದವರನ್ನು ಕೆಲಸದಿಂದ ತೆಗೆದು ಬಿಟ್ಟಿದ್ದಾರೆ. ಪ್ರತಿದಿನವೂ ಆಯಾ ಕೆಲಸವು ನಿಲ್ಲುತ್ತಾ ಬರುತ್ತದೆ. ಕಲ್ಲಿದ್ದಲಿನ ಕೆಲಸಗಾರರಲ್ಲಿ ೫೮೦,೦೦೦ ಮಂದಿ ಕೆಲಸವಿಲ್ಲದೆ ಇದ್ದಾರೆ. ಪೋರ್ಟ್ಸ್‌ಮೌತಿನ ಎಡಿಮಿರಲರವರು ಆದಷ್ಟು ಜಾಗ್ರತೆಯಿಂದ ಕಲ್ಲಿದ್ದಲನ್ನು ಪ್ರಯೋಗಿಸಬೇಕೆಂದು ತನ್ನ ನಾವಾಶಯದವರಿಗೆ ಅಪ್ಪಣೆ ಮಾಡಿರುವರು. ಕೆಲವು ದಿವಸಗಳಲ್ಲಿಯೇ ಕೆಲಸ ಇಲ್ಲದಿರುವವರ ಸಂಖ್ಯೆ ಎರಡಷ್ಟು ಆಗುವದು. ಹೀಗಾದರೆ ಅಲ್ಲಿಯ ಬಡ ಜನರಿಗೆ ಬಹಳ ಕಷ್ಟವಾಗುವುದಲ್ಲದೆ ಎಲ್ಲಾ ಕೈಗಾರಿಕೆ ಕಾರ್ಖಾನೆಗಳು ನಿಲ್ಲುವವು.

ಕೂಲಿಗಾರರ ಮುಷ್ಕರದಿಂದ ಪುನಃ ಹಲವು ರೈಲ್ವೆಗಳು ನಡಿಯುವದಿಲ್ಲ. ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ೨೦ಸಾವಿರ ಜರ್ಮನರೂ ಮುಷ್ಕರ ಹಿಡಿದಿರುತ್ತಾರೆ. ಯೊರ್ಕ್‌ಶಯರಿನ ನೇಯುವ ಕಾರ್ಖಾನೆಯ ಕೆಲಸಗಾರರಲ್ಲಿ ೨೦ಸಾವಿರ ಮಂದಿ ಮುಷ್ಕರ ಹಿಡಿದಿರುವರು.

ಚೀನದ ಪೆಕಿಂಗಿನಲ್ಲಿ ಸೋಲ್ಜರರು ಒಳಪ್ರಾಂತ್ಯಗಳಿಗೆ ನುಗ್ಗಿ ಲೂಟಿ ಮಾಡುತ್ತಿದ್ದಾರೆ. ನಾನ್‌ಕಿಂಗಿನ ಸರಕಾರದವರು ಪೆಕಿಂಗಿಗೆ ಹೋಗಿ ಕ್ರಮಪಡಿಸಲು ಪ್ರಯತ್ನಪಡುವರು. ಪೆಕಿಂಗಿನಲ್ಲಿರುವ ಯುನೈಟೆಡ್ ಸ್ಟೇಟಿನ ಮಂತ್ರಿಯವರು ಕೂಡಲೇ ೭೦೦ ಸೈನೀಕರನ್ನು ಕಳುಹಿಸಿಕೊಡಬೇಕೆಂದು ಮೆನಿಲ್ಲಕ್ಕೆ ತಂತೀ ಬಿಟ್ಟಿರುತ್ತಾರೆ. ಜರ್ಮನರ ೧೦೦ ಸೈನೀಕರು ಪೆಕಿಂಗಿಗೆ ಬಂದಿರುವರು. ಮಂಚೂ ಸೈನಿಕರ ದಂಗೆಯು ಹೆಚ್ಚಾಗುತ್ತಿದೆ. ದಂಗೆಗಾರರು ಹುದ್ದೆದಾರರನ್ನು ಕೊಲ್ಲುತ್ತಿದ್ದಾರೆ. ಬೆಂಗ್‌ನೋ ಎಂಬಲ್ಲಿಯ ದಂಗೆಗಾರರು ರೆವರೆಂಡ್ ಡೇ ಎಂಬವರನ್ನು ಗುಂಡು ಹಾಕಿ ಕೊಂದಿರುವರು. ಕುಟಾಂಸ ಎಂಬಲ್ಲಿ ೨೦೦೦ ಸೈನೀಕರು ದಂಗೆ ಎದ್ದು ಯಾಂಗ್‌ಶಾಯಿ ತಗ್ಗಿನಲ್ಲಿ ಲೂಟಿಮಾಡುತ್ತಿದ್ದಾರೆ. ಪೋರ್ಟು ಆರ್ಥರಿನಿಂದ ೮೦೦ ಜಾಪಾನ್ ಸೈನೀಕರು ದಂಗೆ ಎದ್ದ ಟಿಯಾನ್‌ಸ್ಟಿನ್ ಎಂಬಲ್ಲಿಗೆ ಕಳುಹಿಸಲ್ಪಟ್ಟಿದ್ದಾರಲ್ಲದೆ ಪುನಃ ೫೦೦ ಸೈನೀಕರು ಮೆಕ್ಡೆನಿನಿಂದ ಟಿಯಾನ್‌ಸ್ಟಿನ್‌ಗೆ ಬರಲು ಹೊರಟಿದ್ದಾರೆ. ಬ್ರಿಟಿಷ್, ಫ್ರೆಂಚ್, ಅಮೆರಿಕ, ಜರ್ಮನ್, ರುಷ್ಯ ಮತ್ತು ಜಾಪಾನ್ ಬೇಂಕಿನವರು ಯುಆನ್ ಸಿಕಾಯಿರವರಿಗೆ ಸಾಲವಾಗಿ ಮುಂಗಡ ಹಣ ಕೊಡಲು ಒಡಂಬಟ್ಟಿದ್ದಾರೆ. ಅರ್ಧ ಮಿಲಿಯ ಟೇಲ್ಸ್ ಈಗ ಕೊಡಲ್ಪಡುವದು. ಹತ್ತು ದಿವಸಗಳ ನಂತರ ಪುನಃ ಅರ್ಧ ಮಿಲಿಯ ಟೇಲ್ಸ್ ಕೊಡೋಣಾಗುವದು.

ಚೀನದಲ್ಲಿ ಯುಆನ್ ಶಿಕಾಯಿರವರನ್ನು ಎಲ್ಲಾ ಆಧಿಪತ್ಯಗಳ ಪ್ರತಿನಿಧಿಗಳು ಶೇರಿ ಪ್ರಜಾಧಿಪತ್ಯ ಸರಕಾರದ ಪ್ರೆಸಿಡೆಂಟರಾಗಿ ಆರಿಸಿ ಪಟ್ಟಾಕಟ್ಟಿದರು. ಈ ಸಂದರ್ಭದಲ್ಲಿ ಯುಆನ್ ಶಿಕಾಯಿರವರು ಮಿಲಿಟರಿ ಯುನಿಫೋರ್ಮು ಧರಿಸಿದ್ದರು. ಉತ್ಸವವೆಲ್ಲಾ ಬಹಳ ವಿಜೃಂಭಣೆಯಿಂದ ನಡೆಯಿತು. ಯುಆನ್ ಶಿಕಾಯಿರವರು ಪಟ್ಟಾಭಿಷೇಕದ ದಿನ ಅರ್ಥಗರ್ಭಿತವಾದ ಭಾಷಣ ಕೊಟ್ಟು:—"ನಾನು ಪ್ರಜಾಧಿಪತ್ಯದ ಏಳಿಗೆಗಾಗಿಯೂ ದೇಶದ ಮೇಲ್ಮೆಗಾಗಿಯೂ ಆದಷ್ಟು ಧಾವತಿಪಟ್ಟು ಇಲ್ಲಿಯ ಐದು ಜನಾಂಗಗಳನ್ನು ಒಂದೇ ಬಲವುಳ್ಳ ಜನಾಂಗವಾಗಿ ಜೋಡಿಸುವರೆ ಸಾಹಸ ಪಡುವೆನು. ರಾಷ್ಟ್ರೀಯ ಸಭೆಯವರು ಒಬ್ಬ ಕಾಯಂ ಪ್ರೆಸಿಡೆಂಟನನ್ನು ನೇಮಿಸಿದ ಕೂಡಲೇ ನಾನು ರಾಜಿನಾಮೆ ಕೊಡುವೆನು" ಎಂದು ಹೇಳಿದರು.

ನೋರ್ವೆ ದೇಶದ ಕ್ರಿಸ್ಟಾನಿಯದ ಅಮಂಡ್ಸನ್ ಎಂಬವರು ಕಳದ ಸಪ್ಟೆಂಬರ ೨೮ರಲ್ಲು ಎಂಟು ಮಂದಿ ಸಂಗಾತಿಗಳೊಡನೆ ದಕ್ಷಿಣ ಧ್ರುವಕ್ಕೆ ಹೊರಟು ದಕ್ಷಿಣ ಧ್ರುವದಲ್ಲಿ ಒಂದು ಸ್ಥಳವನ್ನು ಕಂಡುಕೊಂಡು ಆ ಸ್ಥಳಕ್ಕೆ ನೊರ್ವೆಯ ಅರಸನ ಹೆಸರನ್ನೂ ಅಲ್ಲಿರುವ ಪರ್ವತ ಶ್ರೇಣಿಗಳಿಗೆ ರಾಣಿಯ ಹೆಸರನ್ನೂ ಕೊಟ್ಟು ಸುಕ್ಷೇಮಿಯಾಗಿ ಹಿಂದೆ ಬಂದಿರುವರು.

ಬ್ರಿಟಿಷ್, ಜರ್ಮನ್, ಫ್ರೆಂಚ್, ಆಸ್ಟ್ರೀಲಿಯ ಮತ್ತು ರುಷ್ಯ ಸರಕಾರದ ಪ್ರತಿನಿಧಿಗಳು ಇಟಾಲಿ ಮಂತ್ರಿಯನ್ನು ವಿದೇಶಿ ಆಫೀಸಿಗೆ ಕರೆಯಿಸಿ ಶ್ರೇಷ್ಟ ಸರಕಾರಗಳವರು ಟ್ರಿಪೋಲಿಯ ಸಂಗತಿಯನ್ನು ಮಧ್ಯಸ್ಥಿಕೆ ಮಾಡಿ ತೀರಿಸುವದಾದರೆ ಇಟಾಲಿ ಸರಕಾರದ ಶರ್ತಗಳೇನು ಎಂಬದಾಗಿ ಕೇಳಿರುವರು. ಮಂತ್ರಿಯವರು ಉತ್ತರವನ್ನು ಬಾಕಿ ಇಟ್ಟಿದ್ದಾರೆ.

ಇಟಾಲಿಯರು ಜಿಡ್ಡ ಮತ್ತು ಯೆಂಬು ಎಂಬ ಬಂದರಗಳನ್ನು ಅಡ್ಡಕಟ್ಟಲಿಕ್ಕಿದ್ದಾರೆಂಬ ವಾರ್ತೆಯು ಹಬ್ಬಿದ್ದರಿಂದ ಹಿಂದೂಸ್ಥಾನದ ಮಹಮ್ಮದೀ ಪ್ರತಿನಿಧಿಗಳು ಇದನ್ನು ವಿರೋಧಿಸಿ ಹಿಂದೂಸ್ಥಾನದ ಸರಕಾರದವರಿಗೆ ವಿಜ್ಞಾಪಣೆ ಮಾಡಿಕೊಂಡಿದ್ದರು. ಇಟಾಲಿಯರು ಜಿಡ್ಡ ಬಂದರಗಳನ್ನು ಮುಚ್ಚಿ ಹಿಂದೂಸ್ಥಾನದ ಮಹಮ್ಮದೀ ಯಾತ್ರಸ್ಥರನ್ನು ಅಟಕಾಯಿಸುತ್ತಾರೆಂಬ ವಾರ್ತೆಗೆ ಯಾವದೊಂದು ಆಧಾರವಿಲ್ಲವೆಂದು ವಿದೇಶಿ ಆಫೀಸಿನವರು ಪ್ರಕಟಿಸಿದ್ದಾರೆ.

ಕಳದ ವಾರ ೩,೦೦೦ ತುರ್ಕರು ಇಟಲಿಯರೊಂದಿಗೆ ಮರ್ಗೆನ್ ಎಂಬಲ್ಲಿ ಕಠಿಣವಾಗಿ ಕಾದಾಡಿದರು. ಆದರೆ ಹಿಮ್ಮೆಟ್ಟಲ್ಪಟ್ಟರು. ತುರ್ಕರಲ್ಲಿ ೪೦೦ ಮಂದಿ ಕೊಲ್ಲಲ್ಪಟ್ಟರು. ಇಟಾಲಿಯರಲ್ಲಿ ಒಬ್ಬನು ಮಡಿದನು. ೫ ಮಂದಿಗೆ ಗಾಯವಾಯಿತು.

ಬ್ರಿಟಿಷ್ ಪಾರ್ಲಿಮೆಂಟ್ ಹಕ್ಕು ಸ್ವತಂತ್ರಗಳಿಗಾಗಿ ಪೇಚಾಡುವ ಇಂಗ್ಲಾಂಡಿನ ಸ್ತ್ರೀಯರ ಉಪಟಳವು ಇನ್ನೂ ನಿಲ್ಲಲಿಲ್ಲ. ಇಂಥವರಲ್ಲಿ ಕೆಲವರು ಅಲ್ಲಲ್ಲಿ ಕಿಟಿಕಿಗಳ ಮೇಲೆ ಕಲ್ಲುಗಳನ್ನು ಎಸೆಯುತ್ತಾ ಲೂಟಿಮಾಡುತ್ತಿರುವರು. ಕೆಲವು ಸ್ತ್ರೀಯರನ್ನು ಕೈದುಮಾಡಿರುತ್ತಾರೆ. ಈ ಪೈಕಿ ಮುಂದಾಳಾಗಿರುವ ಮಿಸ್ ಪಂಕ್ಹರಸ್ಟ್ ಎಂಬ ಸ್ತ್ರೀಯನ್ನು ಪೋಲೀಸಿನವರು ಹುಡುಕ್ಯಾಡುತ್ತಿರುತ್ತಾರೆ. ಆದರೆ ಇವಳು ಎಲ್ಲಿಯೋ ತಲೆತಪ್ಪಿಸಿ ಅಡಗಿಕೂತಿರುವಳು.

ತಂತೀ ಇಲ್ಲದ ಮರ್ಕೋನಿ ಟೆಲಗ್ರಾಪು ಕಂಪೆನಿಯವರ ದರಗಳನ್ನು ಬ್ರಿಟಿಷ್ ಸರಕಾರದವರು ಸ್ವೀಕರಿಸಿರುವದರಿಂದ ಬೇಗನೇ ಇಂಗ್ಲಾಂಡ್, ಸೈಪ್ರಸ್, ಐಗುಪ್ತ, ಆದೆನ್, ಬೆಂಗಳೂರು, ದಕ್ಷಿಣ ಆಫ್ರಿಕ ಮತ್ತು ಸಿಂಘಪೂರಕ್ಕೆ ತಂತೀ ಇಲ್ಲದ ಮರ್ಕೋನಿ ಟೆಲಗ್ರಾಪು ಸಂಬಂಧ ಇಡುವ ಕೆಲಸವು ಪ್ರಾರಂಭವಾಗುವದು.

ಡಬ್ಲಿನಿನ ಟ್ರಿಮ್ ಎಂಬಲ್ಲಿಯ ಕೈಗಾರಿಕೆ ಶಾಲೆಯಲ್ಲಿ ಸಹಾಯಕ ಉಪಾಧ್ಯಾಯರಾಗಿದ್ದ ಮಿ. ಜೋನ್ ಕೆಲ್ಲೆ ಎಂಬವರನ್ನು ಶಾಲಾ ಹುಡುಗರಲ್ಲಿ ಕೆಲವರು ಒಟ್ಟುಕೂಡಿ ಹೊಡೆದು ಕೊಂದುಬಿಟ್ಟರು. ಶಾಲಾ ಹುಡುಗರಲ್ಲಿ ಲಮಂದಿಯನ್ನು ಕೈದು ಮಾಡಿದರು. ಕೈದು ಮಾಡಲ್ಪಟ್ಟವರೆಲ್ಲಾ ೧೭ ವರುಷ ಪ್ರಾಯದ ಕೆಳಗಿನವರು. ಮಿ. ಕೆಲ್ಲೆಯವರಿಗೆ ಪ್ರಥಮತಾ ಒಬ್ಬ ಹುಡುಗನು ಕಸಬರಿಕೆಯಿಂದ ಹೊಡೆದು ಕೆಡವಿದನು. ಕೂಡಲೇ ಇತರರು ಅವರ ಮೇಲೆ ಬಿದ್ದು ಕೋಲಿನಿಂದ ಹೊಡೆದರು. ಶಾಲಾ ಮುಖ್ಯೋಪಾಧ್ಯಾಯರು ದೂರದಿಂದ ಇದನ್ನು ಕಂಡು ಆ ಸ್ಥಳಕ್ಕೆ

ಓಡಿಬರುವಷ್ಟರಲ್ಲಿ ಮಿ. ಕೆಲ್ಲೆಯವರು ಮೂರ್ಛಿತರಾಗಿ ಬಿದ್ದಿದ್ದರು. ಈ ಕೃತ್ಯ ಸಂಭವಿಸಿದ ಸ್ಥಳದಿಂದ ೫೦ ಗಜ ದೂರ ಇರುವ ಆಸ್ಪತ್ರೆಗೆ ಕೂಡಲೇ ಇವರನ್ನು ವೈದರು. ಆದರೆ ದಾರಿಯಲ್ಲೇ ಇವರು ಮೃತಪಟ್ಟರು. ಮಾರನೇ ದಿನ ಕೈದು ಮಾಡಲ್ಪಟ್ಟ ಹುಡುಗರನ್ನು ಮೆಜಿಸ್ಟ್ರೇಟರ ಮುಂದೆ ನಿಲ್ಲಿಸಿದಾಗ ೭ ವರುಷದ ಹುಡುಗನೊಬ್ಬನು ತಾನು ಆ ಅಂಗಳದಲ್ಲಿ ನಿಂತಿದ್ದೆನು. ಅಲ್ಲಿ ಕೆಲವು ಹುಡುಗರು ಕೈಯಲ್ಲಿ ಕಸಬರಿಕೆಗಳನ್ನೂ ಕೋಲನ್ನೂ ಹಿಡಕೊಂಡು ನಿಂತಿದ್ದರು. ಮಿ. ಕೆಲ್ಲೆಯವರು ಆ ಅಂಗಳದಿಂದ ಹಿಂತಿರುವಾಗ ತೋಮಸ್ ರೈಲಿ ಎಂಬವನು ಭಾರವಾದ ಕಸಬರಿಕೆಯಿಂದ ಅವರ ತಲೆಯ ಮೇಲೆ ಒಂದೇಟು ಕೊಟ್ಟನು. ಅವರು ಕೆಳಗೆ ಬಿದ್ದರು. ತಕ್ಷಣವೇ ಇತರ ಹುಡುಗರು ಓಡಿಬಂದು ಕಸಬರಿಕೆಯಿಂದಲೂ ಕೋಲಿನಿಂದಲೂ ಅವರಿಗೆ ಹೊಡೆದರು. ಕೆಲವರು ಮೂರಾವೃತ್ತಿ, ಇನ್ನು ಕೆಲವರು ನಾಲ್ಕಾವೃತ್ತಿ ಅವರಿಗೆ ಹೊಡೆದರು. ಆ ದಿನ ಬೆಳಿಗ್ಗೆ ಮಿ. ಕೆಲ್ಲೆಯವರು ಒದ್ದೆ ಚಂಡನ್ನು ಅಂಗಳದಲ್ಲಿ ಆಡಕೂಡದೆಂಬದಾಗಿ ಹೇಳಿದ್ದೇ ಹುಡುಗರು ಈ ಘೋರ ಕೃತ್ಯವನ್ನು ನಡಿಸಲು ಕಾರಣವೆಂಬದಾಗಿ ವಾಜ್ಮೂಲಕೊಟ್ಟರುವನು. ಮೃತಗೆ ೫೭ ವರುಷ ಪ್ರಾಯ.

ಉತ್ತರ ಹಿಂದುಸ್ಥಾನ.

ಮಿ| ದತ್ತಾತ್ರಿಯ ಲಕ್ಷಣ ಎಂಬವರು ಬಾಲ ಗಂಗಾಧರ ತಿಲಕರವರ ಪ್ರತಿರೂಪು ಇರುವ ಚಿತ್ರಗಳನ್ನು ಮಾರಿದಕ್ಕಾಗಿ ರತ್ನಗಿರಿಯ ಮೆಜಿಸ್ಟ್ರೇಟರವರು ಅವರಿಗೆ ೫೦ ರೂಪಾಯಿ ಜುರುಮಾನೆ ವಿಧಿಸಿದ್ದರು. ಇವರು ಅಪೀಲು ಮಾಡಿಕೊಂಡಲ್ಲಿ ಸೆಶ್ಶನ್ಸ್ ಜಡ್ಜರವರು ಶಿಕ್ಷೆಯನ್ನು ೫ ರೂಪಾಯಿಗೆ ತಗ್ಗಿಸಿದರು. ಮಿ| ದತ್ತಾತ್ರಿಯ ಲಕ್ಷಣರವರು ಪುನಃ ಮುಂಬಾಯಿ ಹ್ಯಾಕೋರ್ಟಿಗೆ ಅಪೀಲು ಮಾಡಿಕೊಂಡಲ್ಲಿ ಬಹುಮಾನಪಟ್ಟ ಸರ್ ಜಸ್ಟಿಸ್ ಚಂದಾವರ್ಕಾರರವರೂ ಜಸ್ಟಿಸ್ ಬೆಚ್ಲರರವರೂ ಅಪೀಲು ತನಖಿ ನಡಿಸಿ ಮೆಜಿಸ್ಟ್ರೇಟರಿಂದಲೂ ಸೆಶ್ಶನ್ ಜಡ್ಜರಿಂದಲೂ ವಿಧಿಸಲ್ಪಟ್ಟ ಶಿಕ್ಷೆಯಿಂದ ಮುದ್ದೆಯಾಳೆಯನ್ನು ವಿಮೋಚನೆ ಮಾಡಿದರು. ಮಿ| ಪಿ. ಎಮ್. ಭಾಗ್ ಎಂಬವರಿಗೂ ತಿಲಕರವರ ಚಿತ್ರ ಮಾರಿದಕ್ಕೆ ರೂ. ೫೦ ಜುರುಮಾನೆ ವಿಧಿಸಲ್ಪಟ್ಟಿತ್ತು. ಮಿ| ಭಾಗರವರನ್ನೂ ಹ್ಯಾಕೋರ್ಟಿನವರು ಶಿಕ್ಷೆಯಿಂದ ವಿಮೋಚನೆ ಮಾಡಿದರು.

ಲ್ಯಾಲಪುರದ ಮಾಜಿ ಸರಕಾರಿ ವಕೀಲರಾದ ಹಕೀಮ್ ಅಮಿನುದ್ದೀನರವರಿಗೆ ಲಾಹೋರಿನ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ೨ ವರುಷಗಳ ಕಠಿಣ ಸಜಾ ವಿಧಿಸಿದರು ಎಂದು ತಿಳಿಸಿತ್ತಷ್ಟೆ. ಅಮಿನುದ್ದೀನರು ಅಪೀಲು ಮಾಡಿಕೊಂಡಿರುವದರಿಂದ ೫೦೦೦ ರೂಪಾಯಿ ಜಾಮೀನಿನ ಮೇಲೆ ಬಿಡಿಸಲ್ಪಟ್ಟರುವರು.

ಜಮಲಪುರದಲ್ಲಿ ರೈಲ್ವೇ ಕಂಟ್ರಾಕ್ಟರರ ಕೈಕೆಳಗೆ ಕೆಲಸ ಮಾಡುತ್ತಿದ್ದ ೫೦೦೦ ಕೂಲಿಯಾಳುಗಳು ಡಿಲ್ಲೀ ದರ್ಬಾರಿನ ಜ್ಞಾಪಕಾರ್ಥವಾಗಿ ತಮಗೂ ಅರ್ಧ ತಿಂಗಳಿನ ಸಂಬಳ ಕೊಡಬೇಕೆಂದು ಕಂಟ್ರಾಕ್ಟರರನ್ನು ಕೇಳಿದರು. ಆದರೆ ಇವರು ಕೊಡದ್ದರಿಂದ ತಾ. ೧೮ರಲ್ಲು ೧೦೦೦ ಕೂಲಿಯಾಳುಗಳು ಕೆಲಸಕ್ಕೆ ಮುಷ್ಕರ ಹಿಡಿದು ಇತರ ಕೆಲಸದವರೂ ಮುಷ್ಕರ ಹಿಡಿಯುವ ಹಾಗೆ ಅವರನ್ನು ಒತ್ತಾಯ ಪಡಿಸುತ್ತಿದ್ದರು. ಪೋಲೀಸಿನವರು ಇದನ್ನು ತಡೆಯಲಿಕ್ಕೆ ಕೈ ಹಚ್ಚಿದ್ದರಿಂದ ಮುಷ್ಕರಗಾರರು ಪೋಲೀಸಿನವರಿಗೆ ಕಲ್ಲುಗಳನ್ನೂ ಇಟ್ಟಿಗೆಯ ಚೂರುಗಳನ್ನೂ ಬಿಸಾಡಿ ಒಬ್ಬ ಸಬ್ ಇನ್ಸ್ಪೆಕ್ಟರನನ್ನೂ ೮ ಪೋಲೀಸಿನವರನ್ನೂ ಘಾಯಪಡಿಸಿದರು. ತನ್ಮಧ್ಯೆ ಇತರ ೬೦೦೦ ಕೆಲಸಗಾರರೂ ಮುಷ್ಕರಗಾರರ ಸಂಗಡ ಸೇರಿಕೊಂಡು ಯೂರೋಪಿಯಾನರ ಮನೆಗಳಿಗೆ ಕಲ್ಲುಗಳನ್ನು ಬಿಸಾಡಿ ಲೂಟಿ ಮಾಡ ಪ್ರಾರಂಭಿಸಿದರು. ಕೂಡಲೇ ಹೆಚ್ಚಿನ ಪೋಲೀಸಿನವರು ಆ ಸ್ಥಳಕ್ಕೆ ಬಂದು ಲೂಟಿಗಾರರಲ್ಲಿ ೪೦ ಮಂದಿಯನ್ನು ಕೈದುಮಾಡಿದರು. ಈಗ ದಂಗೆ ನಿಂತದೆ. ಮುಷ್ಕರಗಾರರು ಬೇಗನೇ ಪುನಃ ಕೆಲಸಕ್ಕೆ ಹಾಜರಾಗುವರು ಎಂದು ತಿಳಿದು ಬರುತ್ತದೆ.

ಮುಂಬಾಯಿಯ ಸೊನವಾಲ ಎಂಬ ಪಾರ್ಶಿ ಬೇರಿಸ್ಟರರು ಒಂದು ಮೊಕದ್ದಮೆಯಲ್ಲಿ ವ್ಯವಹರಿಸದೆ ವ್ಯವಹರಿಸಿದ್ದೇನೆಂದು ಒಬ್ಬರ ಕೈಯಿಂದ ಹಣ ತಕ್ಕೊಂಡಿದ್ದರೆಂಬ ತಕ್ಷೀರಿನ ಮೇಲೆ ಸದಾ ವ್ಯವಹರಿಸಕೂಡದೆಂಬ ಶಿಕ್ಷೆಯನ್ನು ಪಡೆದಿದ್ದರು. ಇವರು ಹ್ಯಾಕೋರ್ಟಿಗೆ ಅಪೀಲು ಮಾಡಿಕೊಂಡಲ್ಲಿ ಜೀವ ಕಾಲವೆಲ್ಲಾ ವ್ಯವಹರಿಸಕೂಡದೆಂಬ ಶಿಕ್ಷೆಯು ವಜಾಮಾಡಲ್ಪಟ್ಟು ಮೂರು ವರುಷದ ವರೆಗೆ ವ್ಯವಹರಿಸಕೂಡದೆಂತಲೂ ಅನಂತರ ವ್ಯವಹರಿಸಲು ಅಪ್ಪಣೆ ಕೇಳಿಕೊಳ್ಳಬಹುದೆಂತಲೂ ಹ್ಯಾಕೋರ್ಟಿನವರು ತೀರ್ಮಾನ ಕೊಟ್ಟರು.

ಇದೇ ತಾ. ೨ನೇ ಮಾರ್ಚಿಗೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೪,೫೧೨ ಪ್ಲೇಗ್ ಮರಣಗಳಾಯಿತು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೯೮೭; ಮದ್ರಾಸ್ ೫೫೦; ಬಂಗಾಳ ೩,೭೪೯; ಸಂಯುಕ್ತ ಸಂಸ್ಥಾನ ೫೬೭೭; ಪಂಜಾಬು ೬೨೫; ಬರ್ಮ ೧೮೯; ಮಧ್ಯ ಸಂಸ್ಥಾನ ೧,೮೫೨; ಮೈಸೂರು ೧೨೬; ಹೈದರಾಬಾದ್ ೫೪೧; ಮಧ್ಯ ಇಂಡಿಯ ೪೮೩; ರಜಪುತಾನ ೫೮; ಕಾಶ್ಮೀರ ೫ ಮರಣಗಳಾಯಿತು.

ಹುಚ್ಚುನಾಯಿ ನರಿಗಳಿಂದ ಕಡಿಸಿಕೊಂಡವರಿಗೆ ಉತ್ತರ ಹಿಂದೂಸ್ಥಾನದಲ್ಲಿ ಕಸೌಲಿ ಪಟ್ಟಣದ ಆಸ್ಪತ್ರೆಯೊಳಗೂ ದಕ್ಷಿಣ ದೇಶದಲ್ಲಿ ಕುನ್ನೂರಿನ ಆಸ್ಪತ್ರೆಯೊಳಗೂ ಚಿಕಿತ್ಸೆ ನಡಿಯುತ್ತಿದೆಯಷ್ಟೆ. ಇನ್ನು ಮುಂದಕ್ಕೆ ಇಂಥಾ ಜನರಿಗೆ ಸುಲಭವಾಗುವಂತೆ ಅದಕ್ಕೆ ಪ್ರತಿಕಾರವಾಗಿ ಡಾಕು ಹಾಕುವ ಹಾಲನ್ನು ಆಯಾ ಸ್ಥಳಗಳಿಗೆ ಕಳುಹಿಸಿಕೊಡುವಂತೆ ಅನುಕೂಲ ಮಾಡಲ್ಪಡುವದೆಂದು ತೋರುತ್ತದೆ. ಬೊಂಬಾಯಿ ಪ್ಲೇಗು ಪರಿಶೋಧನಾನಿಲಯದ ಡಾಕ್ಟರರು ಈ ಚಿಕಿತ್ಸೆಯ ಹಾಲನ್ನು ತಯಾರ್ಮಾಡುವ ವಿಧಾನವನ್ನು ಕಂಡುಹಿಡಿದಿದ್ದಾರೆಂದೂ ಈ ಹಾಲನ್ನು ಭದ್ರಮಾಡಿ ಊರೂರಿಗೆ ಕಳುಹಿಸಲು ಸಾಧ್ಯವಾಗುವದೆಂದೂ ಅದನ್ನು ಹುಚ್ಚು ನಾಯಿ ಕಚ್ಚಿದವರಿಗೆ ಉಪಯೋಗಿಸಿ ಶಿಡುಬು ಹಾಕಿದ ಪಕ್ಷದಲ್ಲಿ ಗುಣವಾಗುವದೆಂದೂ ತಿಳಿದು ಬರುತ್ತದೆ.

ಪೂನಾ ಪಟ್ಟಣದಲ್ಲಿ ವಿದ್ಯಾವಂತರಾದ ದೇಶೀಯ ದೊಡ್ಡ ಮನುಷ್ಯರೂ ಯೂರೋಪ್ಪಿಯನ್ ಸರದಾರರೂ ಸಭೆಸೇರಿ ಹೆಣ್ಣು ಮಕ್ಕಳ ಕಾಯಪುಷ್ಟಿಯು ಚೆನ್ನಾಗಿ ಬೆಳೆಯುವ ವರೆಗೆ ಅಂದರೆ ೧೬ ವರುಷದ ತನಕ ಅವರಿಗೆ ಯಾರೂ ನಿಷೇಕ ಪ್ರಸ್ತ ಮಾಡಕೂಡದೆಂತ ಸರಕಾರದವರು ಹುಕುಂ ಜಾರಿಗೆ ತರುವಂತೆ ಅವರನ್ನು ಕೇಳಿಕೊಳ್ಳಬೇಕೆಂದು ನಿಶ್ಚೈಸಿದರು.

ಇಂಗ್ಲಾಂಡಿನಲ್ಲಿರುವ ಆಯಾ ಗಲಾಟೆಗಳಿಂದ ಡಿಲ್ಲಿ ದರ್ಬಾರಿನ ಸಂಬಂಧವಾದ ಬದಲಾವಣೆಗಳ ನಿಯಮವಿಧಾನಗಳು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಎಪ್ರಿಲ್ ತಿಂಗಳ ತಾ. ೧೮ ಒಳಗೆ ಜಾರಿಗೆ ಬರುವದು ಅಸಾನುಕೂಲ. ಈ ಸಂಬಂಧವಾದ ನಿಯಮವಿಧಾನಗಳು ಪಾರ್ಲಿಮೆಂಟ್ ಸಭೆಯಲ್ಲಿ ಎಪ್ರಿಲ್ ತಿಂಗಳೊಳಗೆ ಮಂಜೂರಾತಿ ಪಡೆಯದಿದ್ದರೂ ಎಪ್ರಿಲ್ ತಿಂಗಳಲ್ಲಿಯೇ ಇಂಡಿಯಾ ಸರಕಾರದವರು ಈ ಬದಲಾವಣೆಗಳನ್ನು ಹಿಂದುಸ್ಥಾನದಲ್ಲಿ ಜಾರಿಗೆ ತರುವರೆಂದು ತಿಳಿದು ಬರುತ್ತದೆ.

೫ನೇ ಶತಮಾನದಲ್ಲಿ ಬದುಕಿದ ಬಂಗಾಳದ ಅರಸನಾದ ಚಂದ್ರಸೇನರವರ ಹೆಸರಿರುವ ಒಂದು ಪುರಾತನ ಲಿಪಿಯು ಈಚೆಗೆ ಬರ್ಡವಾನ ಜಿಲ್ಲೆಯಲ್ಲಿ ಸಿಕ್ಕಿರುವದು.

ದಕ್ಷಿಣಹಿಂದೂಸ್ಥಾನ.

ಕಲಿಕೋಟೆಯ ಮೆಸ್ಸರ್ಸ್ ಅಂಡ್ರು ಕಂಪೆನಿಯಲ್ಲಿ ಸಿಪ್ಪಿಂಗ್ ಕ್ಲಾರ್ಕನಾಗಿದ್ದ ಡಿ. ಕ್ರೂಜ್ ಎಂಬವನು ತಾ. ೩ರಲ್ಲು ಒಬ್ಬ ರೋಮನ್ ಕೆಥೋಲಿಕ್ ದರ್ಜಿಯನ್ನು ಒದೆದು ಕೊಂದಿರುವನೆಂಬದಾಗಿ ಕೈದು ಮಾಡಲ್ಪಟ್ಟರುವನು.

ಮದ್ರಾಸ್ ಗವರ್ನರರಾದ ಕಾರ್ಮೈಖೆಯೆಲ್ ಪ್ರಭುಗಳವರು ಇದೇ ತಾ. ೪ರಲ್ಲು ಬಹುಮಾನಪಟ್ಟ ಸರ್ ಮುರೆಹೆಮಿಕರವರಿಗೆ ಛಾರ್ಜು ಕೊಡುವರು. ಸರ್ ಹೆಮಿಕರವರು ಹೊಸ ಗವರ್ನರರಾದ ಪೆಂಟ್ಲೇಂಡ್ ಪ್ರಭುಗಳವರು ಬರುವ ವರೆಗೆ ಅಂದರೆ ಒಕ್ಟೋಬರ ತಿಂಗಳ ವರೆಗೆ ಮದ್ರಾಸ್ ಸಂಸ್ಥಾನದ ಹಂಗಾಮಿ ಗವರ್ನರಾಗಿರುವರು. ಈ ಬದಲಾವಣೆಯಿಂದ ಬಹುಮಾನಪಟ್ಟ ಮಿ| ಆಟ್ಕಿನ್ಸನರವರು ಕೌನ್ಸಿಲಿನ ಸೀನಿಯರ್ ಮೆಂಬರರಾಗಿಯೂ, ಬಹುಮಾನಪಟ್ಟ ಮಿ| ಪಿ. ಎಸ್. ಶಿವಸ್ವಾಮಿ ಅಯ್ಯರರವರು ೨ನೇ ಮೆಂಬರರಾಗಿಯೂ ಇರುವರು. ಬಹುಮಾನಪಟ್ಟ ಸರ್ ಹಾರೋಲ್ಡು ಸ್ಟೂವರ್ಟರವರು ಹಂಗಾಮಿ ೩ನೇ ಮೆಂಬರರಾಗಿಯೂ ಬಹುಮಾನಪಟ್ಟ ಮಿ| ಕಾರ್ಡ್ಯೂರವರು ಸರಕಾರದ ಹಂಗಾಮಿ ಚೀಫ್ ಸೆಕ್ರೆಟರಿಯಾಗಿಯೂ ನೇಮಿಸಲ್ಪಡುವರು.

ಉದಕಮಂಡಲದಲ್ಲಿದ್ದ ಮದ್ರಾಸ್ ಗವರ್ನರರಾದ ಕಾರ್ಮೈಖೆಯೆಲ್ ಪ್ರಭುಗಳವರು ತಾ. ೧೧ನೇ ಬೆಳಿಗ್ಗೆ ಮದ್ರಾಸಿಗೆ ಬಂದು ತಲಪಿರುವರು.

ಮದ್ರಾಸಿಗೆ ಹೊಸ ಗವರ್ನರರಾಗಿ ಬರುವ ಪೆಂಟ್ಲೇಂಡ್ ಪ್ರಭುಗಳವರಿಗೆ ಏಳು ವರುಷ ಪ್ರಾಯದ ಒಂದು ಹೆಣ್ಣು ಮಗೂ ೫ ವರುಷ ಪ್ರಾಯದ ಒಂದು ಗಂಡು ಮಗೂ ಇದೆ.

ತಾ. ೧೩ನೇ ಬುಧವಾರ ಮದ್ರಾಸ್ ನ್ಯಾಯವಿಧಾಯಕ ಸಭೆಯ ಮುಂದೆ ಬಹುಮಾನಪಟ್ಟ ಸರ್ ಹೆಮಿಕ್ ಮುರೆಯವರು ೧೯೧೨-೧೩ನೇ ವರುಷದ ಪರಿಷ್ಕರಿಸಲ್ಪಟ್ಟ ಫಿನಾನ್ಶಿಯಲ್ ವರದಿಯನ್ನು ಇಡುವದಲ್ಲದೆ ಬಹುಮಾನಪಟ್ಟ ಆಯಾ ಮೆಂಬರರು ಕೆಲವು ಮಸೂದೆಗಳನ್ನು ಸಭೆಯ ಮುಂದಿಡುವರು.

ದಕ್ಷಿಣ ಕನ್ನಡ.

ವಿಜ್ಞಾಪನೆ.

ಈ ಕೆಳಗೆ ದಸ್ಕತು ಮಾಡಿದ ನಾನು ವಗ್ಗೈರೆ ಕೆಲವರು ಖಾಸಗಿಯಲ್ಲಿ ತೆಗಿಯಬೇಕೆಂದಿದ್ದ ಸೋಡ್ತಿ ಬಾಬಿನಲ್ಲಿ ಸ್ನೇಹಿತರೆನ್ನಿಸಿಕೊಂಡಿದ್ದ ನಮ್ಮ ಕೆಲವು ವೈರಿಗಳು ದುರಾಲೋಚನೆಯಿಂದ ಟಿಕೇಟುಗಳನ್ನು ಖುಶಿ ಬಂದ ಹಾಗೆ ಮಾರಾಟ ಮಾಡಿರುವದಾಗಿ ತಿಳಿದು ಬರುವದಲ್ಲದೆ ಸದರಿ ಸೋಡ್ತಿಯು ಕಾನೂನಿಗೆ ವಿರುದ್ಧವೆಂತ ಈಗ ನನ್ನ ತಿಳುವಳಿಕೆಗೆ ಬಂದ ಪ್ರಯುಕ್ತ ಅಜ್ಞಾನದಿಂದ ಪ್ರಾರಂಭಿಸಿದ ಸೋಡ್ತಿಯು ಮನ್ನಾ ಮಾಡಲ್ಪಟ್ಟರುವದರಿಂದ ಟಿಕೇಟುದಾರರು ಟಿಕೇಟು ಮೌಲ್ಯವನ್ನು ಪಡಕೊಂಡು ಟಿಕೇಟನ್ನು ಕೂಡಲೇ ವಾಪಸು ಕೊಡಬೇಕಾಗಿ ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ದಕ್ಷಿಣ ಕನ್ನಡಾ ಪಡುಬಿದ್ರಿ ಬೀಡು.
ತಾ. 20-2-1912. ದೇವರಾಜಯ್ಯ.

ಮನೆ ಮಾರಾಟ.

ಮಂಗಳೂರು ಮುನಿಸಿಪಾಲಿಟಿ ೮ನೇ ವಾರ್ಡು ಗಣಪತಿ ದೇವಸ್ಥಾನದ ರಸ್ತೆಯಲ್ಲಿರುವ, ಗಣಪತಿ ಸೆಕೆಂಡರಿ ಶಾಲೆಗೆ ಉಚಿತವಾಗಿ ಶಿಕ್ಕಿದ ಮತ್ತು ಇತ್ತಲಾಗೆ ಒಳ್ಳೆ ರೀತಿಯಲ್ಲಿ ಈಗಿನ ಸ್ಥಿತಿಗೆ ಬೇಕಾದ ಹಾಗೆ ದುರುಸ್ತಿ ಮಾಡಿಸಲ್ಪಟ್ಟ ಮತ್ತು ಹಾಲಿ ಕೋಟಬ್ರಾಹ್ಮಣರ ಹೊಟೇಲ್ ಇರುವ, ಮುನ್ಸಿಪಲ್ ನಂಬ್ರ ೧೪೫ನೆಯ ದೊಡ್ಡ ಮನೆಯನ್ನು ಅದಕ್ಕೆ ಸಂಬಂಧಪಟ್ಟ ಹಿತ್ತಲು, ಹಟ್ಟಿ ಕೊಟ್ಟಿಗೆಯೊಡನೆ ಮಾರುವದೆಂತ ನಿಶ್ಚಯಿಸಿದೆ.

ಸದರಿ ಮನೆ ಮಾರಾಟದ ವಿಷಯದಲ್ಲಿ ಬೇಕಾದ ಎಲ್ಲಾ ಮಾಹಿತಿಯು ಸದರಿ ಶಾಲೆಯ ಹೆಡ್ ಮಾಸ್ತರ ಹತ್ತರ ಸಿಕ್ಕುವದು.

ಮಂಗಳೂರು. ಮುನ್ಸಿಪಾಲಿಟಿಯಲ್ಲಿ ಕಳೆದವಾರ ೧೩ ಪ್ಲೇಗು ಮರಣಗಳಿದ್ದವು.

ಈ ತಿಂಗಳ ಡಿಸ್ಟ್ರಿಕ್ಟ್ ಬೋರ್ಡ ಮೀಟಿಂಗು ಬರುವ ೨೫ನೇ ತಾರೀಕಿಗೆ ಜರುಗುವದು.

ರಾ. ಬಂಗ್ಲೆ ನಾರಾಯಣ ಕಾಮತರು ರಾ. ಗೋಪಾಲ ಕುಡ್ವರ ವಗೈರೆರ ಮೇಲೆ ದಾಖಲು ಮಾಡಿದ ಮಾನನಷ್ಟದ ಮೊಕದ್ದಮೆಯಲ್ಲಿ ಸಾಕ್ಷಿಗಾರರ ವಿಚಾರಣೆ ಆಗಿ ತಾ. ೨೫ಕ್ಕೆ ಮುಂದರಿಸಿಟ್ಟರುವರು. ದೇವಸ್ಥಾನದ ಮೊಕದ್ದಮೆಯು ತನ್ಖಿಯಾಗುತ್ತಲಿದೆ.

ಬಳ್ಳಾರಿಯಲ್ಲಿ ಟ್ರಜರಿ ಡಿಪ್ಯುಟಿ ಕಲೆಕ್ಟರರಾಗಿರುವ ಮ. ರಾ. ರಾ. ಎಂ. ಪಾಡುರಂಗ ಕಿಣಿಯವರು ೩ ತಿಂಗಳ ರಜೆಯನ್ನು ಪಡದಿರುವರು.

ಮಹಮ್ಮದ ಶಮನಾಡ ಸಾಹೇಬ್ ಬಹದ್ದೂರರವರು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾಗಿ ನೇಮಿಸಲ್ಪಟ್ಟರುವರು.

ಮ. ರಾ. ರಾ. ಉಳ್ಳಾಲ ರಾಮಪ್ಪನವರು ೮ನೇ ಗ್ರೇಡಿನ ಡಿಸ್ಟ್ರಿಕ್ ಮುನ್ಸಿಫರಾಗಿ ನೇಮಕಪಟ್ಟು ಉತ್ತರ ಮಲಬಾರಿನ ಪಯ್ಯೊಳ್ಳಿ ಎಂಬಲ್ಲಿಗೆ ವರ್ಗಾಯಿಸಲ್ಪಟ್ಟರುತ್ತಾರೆ.

ಪುತ್ತೂರು ಸಬ್ ಮೆಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ದಕಾಯತಿ ಮೊಕದ್ದಮೆಯ ತನಖಿಯು ಕಳದ ಸೋಮವಾರದಿಂದ ಪ್ರಾರಂಭವಾಗಿದೆ. ಇದರಲ್ಲಿ ನೂಜಿ ಬೈಲಿನ ಶಂಕರಭಟ್ಟರೆಂಬವರೂ ಇತರ ೧೩ ಮಂದಿಯೂ ಕೂಡಿ ವೆಂಕಟ್ರಮಣಭಟ್ಟ ಎಂಬವರ ಗಾಡಿ ಕೊಟ್ಟಿಗೆಯನ್ನು ಮುರಿಸುವಾಗ ವೆಂಕಟ್ರಮಣ ಭಟ್ಟರು ತನ್ನ ಮಗ ಮತ್ತು ಅಳಿಯನೊಡನೆ ಆ ಸ್ಥಳಕ್ಕೆ ಹೋಗಲು ೧ನೇ ೩-೧೪ನೇ ಅಪಾದಿತರು ಈ ಮೂವರನ್ನೂ ಹಿಡಿದು ಬಂಧಿಸಿದ್ದಾಗಿಯೂ ಈ ಮಧ್ಯೆ ೨ನೇ ಅಪಾದಿತನು ಕೊಟ್ಟಿಗೆಯನ್ನು ಮುರಿಸಿದ್ದಾಗಿಯೂ ಇ. ಪಿ. ಕೋಡಿನ ೪೫೨, ೧೪೮, ೩೯೫ ಪ್ರಕರಣದ ತಪ್ಪಿಗೆ ಗುರಿಮಾಡಲ್ಪಟ್ಟಿದ್ದಾರೆ.

ಇದೇ ತಿಂಗಳ ತಾರೀಕು ೧೦ರಲ್ಲಿ ಗಾಯನ ವಿದ್ಯಾ ಸಮರ್ಥರಾದ ರಾಜೇಶ್ರಿ ಸಿ. ವಿ. ಮೂರುತಿ ಅಯ್ಯಂಗಾರರು ಮಂಗಳೂರ ಗವರ್ನಮೆಂಟ ಕೊಲೇಜಿನ ಸಭಾಸದನದಲ್ಲಿ ಮಂಗಳೂರು ನಿರಾಶ್ರಿತ ಜನ ಸಹಾಯಕ ಸಂಘದ ಸಹಾಯಾರ್ಥವಾಗಿಯೂ, ಗುಜರಾತ ಪ್ರಾಂತ್ಯದಲ್ಲಿಯ ಕ್ಷಾಮ ಪೀಡಿತ ಜನರ ಸಹಾಯಾರ್ಥವಾಗಿಯೂ ಗಾಯನ ಮಾಡಿದರು. ಉರ್ದುಯಮನ್, ಉರ್ದು ನಾಟಕಿ, ಪಾರ್ಶಿ ಮಾಂಡ, ಗುಜರಾತಿ ನಾಟಕಿ, ಉರ್ದು ಸೂರಟ್, ಉರ್ದು ಭೈರವಿ, ಘಜಲ್ ಕಾಫಿ, -ಪಂಜಾಬಿ ದುಮ್ರಿ, ಶ್ಯಾಮ ಬಂಗಾಲಿ ಮೊದಲಾದ ಗಾಯನಗಳನ್ನು ಹಾಡಿದರು. ಬಹು ಮಂದಿ ದೇಶೀಯ ಮತ್ತು ಯುರೋಪಿಯನ್ ಕುಲಸ್ತ್ರೀಯರು ಮತ್ತು ಗೃಹಸ್ಥರು ಬಂದಿದ್ದರು. ಟಿಕೇಟುಗಳಿಂದ ಬಂದ ಹಣವಿನಿಂದ ಮೂರನೇ ಒಂದಂಶ ಗುಜರಾತ್ ಕ್ಷಾಮ ನಿವಾರಣೆ ಫಂಡಿಗೂ, ಬಾಕಿ ಎರಡು ಅಂಶ ಮಂಗಳೂರ ನಿರಾಶ್ರಿತ ಜನ ಸಹಾಯಕ ಫಂಡಿಗೂ ಕೊಡಬೇಕಾಗಿ ಹೇಳಿ ಗಾಯನ ಕೇಳಲಿಕ್ಕೆ ಬಂದ ಕುಲಸ್ತ್ರೀಯರನ್ನೂ ಗೃಹಸ್ಥರನ್ನೂ, ರಾಜೇಶ್ರಿ ಮೂರುತಿಗಳು ವಂದಿಸಿದರು. ರಾ. ಕುದ್ಮುಲ ರಂಗರಾಯರು ಟಿಕೇಟು ಮಾರಾಟ ಮಾಡಿದ ಗೃಹಸ್ಥರಿಂದ ಹಣ ವಸೂಲಿ ಮಾಡಿ ಇಂತಿಷ್ಟೇ ಹಣ ಸಂಪಾದನೆ ಆಯಿತೆಂಬದನ್ನು ಪ್ರಕಟಿಸುತ್ತೇನೆಂತಲೂ ರಾ. ಮೂರುತಿಯವರು ಮಾಡಿದ ಉಪಕಾರದ ಸ್ಮಾರಕವಾಗಿ ಒಂದು ಭಾವಿಗೆ ಮೂರುತಿ ಭಾವಿ ಎಂಬ ಹೆಸರು ಕೊಡೋಣಾಗುವದೆಂತಲೂ ಮೂರುತಿಯವರ ಅಪೇಕ್ಷೆ ಮೇರೆಗೆ ಮೂರನೇ ಒಂದಂಶ ಹಣ ಗುಜರಾತು ಕ್ಷಾಮ ಫಂಡಿಗೆ ರವಾಣೆಸೋಣಾಗುವದೆಂತಲೂ ಸಭೆಗೆ ಹೇಳಿ ಎಲ್ಲರನ್ನೂ ವಂದಿಸಿ ಸಭೆಯನ್ನು ಮುಕ್ತಾಯಪಡಿಸಿದರು.

ಬಂಟರ ಯಾ ನಾಡವರ ಸಂಘಕ್ಕೆ ಸ್ವಜಾತಸ್ಥರು ವಿವಾಹಕಾಲದಲ್ಲಿ ಉಚಿತಕೊಟ್ಟ ಚಂದಾಮೊಬಲಗುಗಳು:—ಈ ಸಂಘಕ್ಕೆ ಕಾಸರಗೋಡು ತಾಲೂಕಿನ ಮ| ರಾ| ಪಳ್ಳ ನಾಗಪ್ಪ ಸೆಟ್ಟರವರೂ ರೂ. ೦-೪-೦; ಅಡೂರು ಪಟೇಲರಾದ ಮ| ರಾ| ಕುಂಞಣ್ಣರೈರವರು ರೂ. ೦-೪-೦ ನ್ನು ತಮ್ಮಲ್ಲಿ ನಡೆದ ವಿವಾಹಕಾರ್ಯದ ಸಂತೋಷಾರ್ಥವಾಗಿ ಬಂಟರ ಯಾ ನಾಡವರ ಸಂಘಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಈ ಇಬ್ಬರು ಗೃಹಸ್ಥರಲ್ಲಿ ಒಬ್ಬರು ಮದುಮಗನ ಕಡೆಯವರೂ ಮತ್ತೊಬ್ಬರು ಮದುಮಗಳ ಕಡೆಯವರೂ ಆಗಿರುತ್ತಾರೆ. ಈ ಉದಾರಗುಣಕ್ಕೆ ಸಂಘದವರು ಈ ಇಬ್ಬರಿಗೂ ಕೃತಜ್ಞತೆಯನ್ನು ಹೇಳುವವರಾಗಿರುತ್ತಾರೆ.

ಬಾಡೂರು. ಕಾಸರಗೋಡು ತಾಲೂಕು ಬಾಡೂರು ಗ್ರಾಮದ ಬಳ್ಳಂಬೆಟ್ಟು ಎಂಬ ಕಾಡಿನಲ್ಲಿದ್ದ ಶುಮಾರು ಅರ್ಧ ಮೈಲು ದೂರದ ವರೆಗೆ ಇರುವ ಒಂದು ಗುಹೆ ಇದೆ. ಆನೆಯನ್ನೂ ಮುಳ್ಳು ಹಂದಿಯನ್ನೂ ಅರಸುತ್ತಾ ಶುಮಾರು ೨೦ ವರುಷ ಪ್ರಾಯದ ಮುದ್ದ ಎಂಬ ಹೊಲೆಯನು ಕಳದ್ಮ ತಿಂಗಳಲ್ಲಿ ಆ ಗುಹೆಯೊಳಗೆ ಹೊಕ್ಕಿದನು. ಹಾಗೆಯೇ ಶುಮಾರು ಕಾಲು ಮೈಲು ವರೆಗೆ ಒಳಹೊಕ್ಕಿದ ನಂತರ ಹೋದ ದಾರಿಯಲ್ಲಿ ವಾಪಾಸು ಬರುವರೆ ದಾರಿ ಶಿಕ್ಕದೆ ಅದರೊಳಗೆ ಇದ್ದ ಮತ್ತೊಂದು ಗುಹೆಯ ದಾರಿಯನ್ನು ಹಿಡಿದು ಸ್ವಲ್ಪ ಮುಂದರಿದು ಅಲ್ಲಿಂದ ಹಿಂದುಮುಂದು ಹೋಗಲಿಕ್ಕೆ ಸಾಧ್ಯವಾಗದೆ ಅಲ್ಲಿಯೇ ಮಲಗಿಕೊಂಡನು. ಆತನ ಕಡೆಯವರು ೩ ದಿವಸಗಳ ವರೆಗೆ ಹುಡುಕಿದಾಗ್ಯೂ ಅವನ ನೆರೆ ತಿಳಿಯದ್ದರಿಂದ ಕಡೆಗೆ ಬಾಡೂರು ಪಟೇಲ್ ಮ. ರಾ. ರಾ. ಬಾಡೂರು ಕುಂಞಣ್ಣ ರೈಗಳು ಅನುಮಾನದ ಮೇಲೆ ಸದರಿ ಗುಹೆಯೊಳಗೆ ಜವಾನರನ್ನು ಹೊಕ್ಕಿಸಿ ಹುಡುಕಿಸಲು ಪ್ರಾಣ ಮಾತ್ರ ಉಳಿದಿದ್ದವನನ್ನು ಹ್ಯಾಗೂ ಎಳೆದು ಹೊರಗೆ ಹಾಕಿದರು. ಅಂಥಾ ಪ್ರಾಣ ಸಂಕಟದ ಎಡೆಯಲ್ಲಿಯೂ ಆ ವ್ಯಧ್ಧನು "ತನ್ನ ಆನೆಗಳಲ್ಲಿ ೫ ಉಳಿದು ಹೋಯಿತಲ್ಲಾ" ಎಂಬ ಮಾತನ್ನು ಆಡಿದನು. ಹೆಚ್ಚು ಮಾತನಾಡುವರೆ ತ್ರಾಣವಿರಲಿಲ್ಲ. ಈತನು ದೈವವಶಾತ್ ಜೀವದಿಂದ ಉಳಿದಿರುವಂಥಾದ್ದು ಹೊರತು ಅಂಥಾ ಕಗ್ಗತ್ತಲೆಯಾಗಿ ಘಾಳಿ ಹೋಗದೆ ಇರುವ ೩ ಅಡಿಗಿಂತಲೂ ಸಪೂರವಾಗಿರುವ ಆ ಗುಹೆಯಲ್ಲಿ ೩ ದಿವಸಗಳ ವರೆಗೆ ಆಹಾರವಿಲ್ಲದೆ ಮಲ್ಲಗಿಕೊಂಡು ಜೀವಂತನಾಗಿದ್ದದ್ದು ನೋಡಿದರೆ "ದೈವ ವಿಚಿತ್ರಾ ಗತಿ" ಎಂಬುವದರಲ್ಲಿ ಸಂದೇಹವೇನಿದೆ.

ಹೊಸದುರ್ಗ. ಕೆಲವು ದಿವಸಗಳ ಹಿಂದೆ ಹೊಸದುರ್ಗ ಶಾಲಾ ಕಟ್ಟೋಣದಲ್ಲಿ ಜರಗಿದ ನಾಟಕದ ದಿವಸ ಕೆಲವು ಮುಕ್ಕವರು ಶುಮಾರು ಅರ್ಧ ತಾಸಿನ ವರೆಗೆ ಕಲ್ಲೆಸೆದು ಹಂಚುಗಳನ್ನು ಪುಡಿ ಮಾಡುತ್ತಿರುವದನ್ನು ಅಲ್ಲಿದ್ದ ೭-೮ ಮಂದಿ ಪೋಲೀಸು ಜವಾನರಿಗೆ ವಿನೋದವಾಗಿ ಕಂಡು ಬಂದು ಮತ್ತಷ್ಟು ಸಂತೋಷವಿಂದ ಕೆಟ್ಟ ಬೈಗಳನ್ನು ಬೈದರು. ಪೇಟೆಯಲ್ಲಿ ಹೆಚ್ಚು ಕಡಿಮೆ ಆರು ತಿಂಗಳೊಳಗೆ ೪ ಅಂಗಡಿಗಳನ್ನು ಕನ್ನಹಾಕಿ ಕಳ್ಳರು ಒಳಗಿನ ಸಾಮಾನುಗಳನ್ನು ಕದ್ದೊಯ್ದರು. ಪೋಲೀಸಿನವರು ಈ ಕಳವುಗಳನ್ನು ಪತ್ತೆ ಮಾಡಲಾರಿಯದೆ ನಷ್ಟಪಟ್ಟ ಅಂಗಡಿ ಮ್ಹಾಲಿಕರ ಫಿರ್ಯಾದಿಗಳೇ ಸುಳ್ಳೆಂದು ಅವುಗಳನ್ನು ತಳ್ಳಿ ಹಾಕಿದರು. ಇನ್ನೊಬ್ಬನ ಮನೆಯಲ್ಲಿ ಕನ್ನ ಕಳವು ನಡದೊಡನೆಯೇ ಪೋಲೀಸು ಅಧಿಕಾರಿಗಳು ಸಮಯ ವಿಳಂಬವಿಲ್ಲದೆ ಫಿರ್ಯಾದುದಾರನ ಮನೆಯನ್ನು ಜಪ್ತಿ ಮಾಡಿ ಅವನ ಸಾಮಾನುಗಳನ್ನು ಅಮಾನತ್ತು ಇಡಿಸಿ ಫಿರ್ಯಾದಿಯು ಸುಳ್ಳೆಂದು ಮಾಡಿ, ಅವನ ಮೇಲೆ ಸುಳ್ಳು ಫಿರ್ಯಾದಿಗೋಸ್ಕರ ಮೊಕದ್ದಮೆಯನ್ನು ನಡಿಸಲು ಆಲೋಚಿಸುವಷ್ಟರಲ್ಲಿ ಪುನಃ ಕಳ್ಳರು ಅವನ ಮನೆಯನ್ನು ಹೊಕ್ಕು ಅವನನ್ನು ವಧಿಸಿ ಪೋಲೀಸಿನವರ ಚಿಂತೆಯನ್ನು ಹೋಗಲಾಡಿಸಿದರು. ಬೇರೆ ಕೆಲವರು ತಮ್ಮಲ್ಲಿ ನಡದ ಚೋರಿಯನ್ನು ಪೋಲೀಸಿನವರ ಭೀತಿಯಿಂದ ಬಯಲು ಮಾಡದೆ ಸುಮ್ಮನಿರುವರು. ಮೇಜಿಸ್ಟ್ರೇಟರ ವಾರಾಂಟು ಮೇರೆಗೆ ಒಬ್ಬ ಮಳೆಯಾಳಿಯನ್ನು ಪೋಲೀಸಿನವರು ೧೦-೧೨ ದಿವಸಗಳ ವರೆಗೆ ಹುಡುಕಿ, ಹಿಡಿಯಲಾರದೆ ಮೇಜಿಸ್ಟ್ರೇಟರ ಮುಂದೆ ತಾನಾಗಿ ಹಾಜರಾಗಲಿಕ್ಕೆ ಬರುವಾಗ್ಯೆ ಕೋರ್ಟಿನ ಸಮೀಪ ಅವನನ್ನು ಹಿಡಿದು ಬಹು ಕೋಪದಿಂದ ಅವನು ತನ್ನೊಟ್ಟಿಗೆ ತಂದ ಜಾಮೀನು ಅಸಾಮಿಯನ್ನು ಹೋಗಲಪೇಕ್ಷಿಸಿದರು. ಆದರೆ ಈಗ ಸಬ್ ಇನ್ಸ್ಪೆಕ್ಟರ ಚಮ್ಮಾರರು ಇಲ್ಲಿಯ ಛಾರ್ಜನ್ನು ವಹಿಸಿಕೊಂಡದ್ದರಿಂದ ಹೆಚ್ಚು ಚಿಂತೆಗೆ ಅವಕಾಶವಿಲ್ಲವೆಂದೆಣಿಸಿ ಜನರು ಅಲ್ಪ ಧೈರ್ಯವನ್ನು ತಾಳಿರುತ್ತಾರೆ.

ಮಿತ್ರನಡ್ಕ. ಡಿಲ್ಲಿ ದರ್ಬಾರಿನ ಜ್ಞಾಪಕಾರ್ಥವಾಗಿ ಕುರ್ಚಿ ಪಳ್ಳದಿಂದ ವಿಟ್ಲಕ್ಕೆ ಹೋಗುವ ರಸ್ತೆಯಿಂದ ಈ ಮಿತ್ತನಡ್ಕಕ್ಕೆ ಒಂದು ರಸ್ತೆಯನ್ನು ಕರೋಪಾಡಿ ಗ್ರಾಮದ ಪಟೇಲ ಗಣಪತಿ ಭಟ್ಟ ಮುಗುಳಿ ರಾಮಕೃಷ್ಣ ಭಟ್ಟ ವಗೈರೆರ ಪ್ರೋತ್ಸಾಹದಿಂದ ತೆರದು ಗಾಡಿ ಚಲಾವಣೆಗೆ ಪ್ರಾರಂಭಿಸಿದ್ದು ಸ್ತೋತ್ರಾರ್ಹವಾಗಿದೆ. ಆದರೆ ಇಲ್ಲೊಂದು ಟಪ್ಪಾಲು ಆಫೀಸು ಇಲ್ಲದಿರುವದರಿಂದ ದಯಾಳು ಸರಕಾರದವರು ಒಂದು ಬ್ರಾಂಚು ಟಪ್ಪಾಲು ಆಫೀಸನ್ನಾದರೂ ತೆರೆದು ಊರ ಜನರ ಕಷ್ಟವನ್ನು ಪರಿಹರಿಸಿಕೊಡುವರೆಂತ ಹಾರೈಸುತ್ತೇವೆ.

ಕೊಳ್ನಾಡು ಪಡ್ನೂರು ಗ್ರಾಮದ ನೂಜಿಬೈಲು ವೆಂಕಟ್ರಮಣ ಭಟ್ಟರ ಗಾಡಿ ಕೊಟ್ಟಿಗೆಯನ್ನು ಮುರಿಸಿದ್ದಕ್ಕಾಗಿ ಸದರಿ ನೂಜಿಬೈಲು ಶಂಕರ ಭಟ್ಟ ವಗೈರೆ ೧೪ ಜನರನ್ನು ಪುತ್ತೂರು ಸ್ಪೇಶನರಿ ಮೆಜಿಸ್ಟ್ರೇಟರು ಸೆಶ್ಶನಿಗೆ ಕಮಿಟು ಮಾಡಿರುವರೆಂತ ಕೇಳುತ್ತೇವೆ.

ಸುಳ್ಯ. ಗೌಡಮತಸ್ಥರ ವರುಷಾವಧಿ ಮಹಾ ಸಭೆಯು ಇದೇ ಮಾರ್ಚಿ ತಾರೀಕು ೨೧ನೇ ಮತ್ತು ೨೨ನೇ ಗುರುವಾರ ಮತ್ತು ಶುಕ್ರವಾರ ಈ ಎರಡು ದಿವಸಗಳಲ್ಲಿ ಕೂಡಾ ಸುಳ್ಯ ಕಸಬೆಯಲ್ಲಿ ಜರುಗುವದು. ಈ ಸಭೆಯ ಮುಖ್ಯ ಅಧ್ಯಕ್ಷರು ಕೊಡಗಿನ ಮಾಜಿ ಪಾರ್ಪತಿದಾರ್ ಮ. ರಾ. ರಾ. ಕುಶಲಪ್ಪ ಗೌಡರಾಗಿರುವರು.

ಉಡುಪಿ. ಕಳದ ತಿಂಗಳ ತಾ. ೨೮ನೇ ರಾತ್ರಿ ಇಲ್ಲಿಯ ತಾಲೂಕು ಕಚೇರಿಯಿಂದ ಶುಮಾರು ಒಂದುವರೆ ಫರ್ಲಂಗ ಪೂರ್ವ ಕಡೆಯ ಒಂದು ನಿರ್ಜನವಾದ ಸ್ಥಳದಲ್ಲಿ ರಾ| ಭೀಮನಕಟ್ಟೆ ರಾಜಾಚಾರ್ಯರ ಹೆಂಡತಿಯ ಹೆಣವು ಬಹಳ ಭಯಂಕರವಾದ ಸ್ಥಿತಿಯಲ್ಲಿ ಬಿದ್ದಿತ್ತು. ಇಂಥಾ ಭಯಂಕರವಾದ ಕೊಲೆಯು ಇಷ್ಟರ ತನಕ ಉಡುಪಿಯಲ್ಲಿ ಆಗಿದ್ದಿಲ್ಲ. ಗುಮಾನಿನ ಮೇಲೆ ಇನ್ಸಪೆಕ್ಟರ್ ರಾ| ರಾಮರಾಯರು ಕೆಲವು ಹೆಂಗಸರನ್ನೂ ಗಂಡಸರನ್ನೂ ಹಿಡಿದಿರುತ್ತಾರೆ.

ಇದೇ ತಿಂಗಳ ತಾ. ೨ಕ್ಕೆ ರಾ| ಸುಜೀರ ಬಾಬುರಾಯರು ರಾ| ಡಿ. ಆನಂದ ರಾಯರಿಂದ ಚಾರ್ಜನ್ನು ವಹಿಸಿಕೊಂಡಿರುತ್ತಾರೆ. ರಾ| ಡಿ. ಆನಂದ ರಾಯರು ಒಂದುವರೆ ತಿಂಗಳ ಮಾತಿಗೆ ಲೇಂಡ ರಿಕಾರ್ಡು ತಹಶಿಲ್‌ದಾರರಾಗಿ ನೇಮಿಸಲ್ಪಟ್ಟಿರುತ್ತಾರೆ. ಇವರಿಗೆ ಈ ಕೆಲಸವು ಕಾಯಂ ಆಗುವುದೆಂದು ಕೇಳಿ ತುಂಬಾ ಸಂತೋಷ ಪಡುತ್ತೇವೆ. ರಾ| ಡಿ. ಆನಂದರಾಯರು ಬಹಳ ದಯಾಪೂರಿತರೂ, ನ್ಯಾಯಶೀಲರೂ, ಜನಪ್ರೀತರೂ, ಆಗಿರುತ್ತಾರೆ.

ರಾ| ವರದಾಚಾರ್ಯರು ಶ್ರೀ ಕೃಷ್ಣದೇವರಿಗೆ ಮಹಾಪೂಜೆಯನ್ನು ಮಾಡಿಸಿದರು. ಶ್ರೀಪಾದಂಗಳವರ ಬಗ್ಯೆ ಶ್ರೀ ಕೃಷ್ಣದೇವರ ಮಠದಲ್ಲಿ ಕಳದ ಶನಿವಾರ ಮತ್ತು ಸೋಮವಾರ ರಾತ್ರಿ ನಾಟಗಳನ್ನಾಡಿ ತೋರಿಸಿದರು. ಶ್ರೀಪಾದಂಗಳವರು ಸೋಮವಾರ ರಾತ್ರಿ ರಾ| ವರದಾಚಾರ್ಯರಿಗೆ ಉಡಿಗೆರೆ ಉಚಿತಗಳನ್ನು ಕೊಟ್ಟು ಪ್ರೋತ್ಸಾಹಿಸಿದರು.

ಈ ವರುಷ ಶ್ರೀ ಕೃಷ್ಣ ದೇವಸ್ಥಾನದ ಹೋಳೀ ಸಮಾರಂಭದಲ್ಲಿ ವೇಶ್ಯೆಯರು ಇಲ್ಲದೆ ಇದ್ದುದ್ದನ್ನು ಕಂಡು ತುಂಬಾ ಸಂತೋಷಪಡುತ್ತೇವೆ. ಈಗಿನ ಶ್ರೀ ಪುತ್ತಿಗೆ ಮಠದ ಶ್ರೀ ಪಾದಂಗಳವರು ಸುಧಾರಣೆ ಮಾಡಿದ್ದು ಈ ವಿಷಯದಲ್ಲಿ ಮಾತ್ರವಲ್ಲ; ಭೋಜನ ಶಾಲೆಯ ವಿಷಯದಲ್ಲಿಯೂ ಒಳ್ಳೇ ಸುಧಾರಣೆ ಮಾಡಿರುತ್ತಾರೆ. ವೃಥಾ ಊಟವನ್ನು ಮಾಡಿ ಏನೊಂದು ಕೆಲಸವನ್ನು ಮಾಡದೆ ಸೋಮಾರಿಗಳಾಗಿರಬಾರದೆಂಬದಾಗಿ ಆಸ್ಪದವಿದ್ದವರಿಗೆ ಊಟ ಹಾಕದೆಯೂ, ಅನಾಥರಾದವರಿಗೆ ಊಟವನ್ನು ಹಾಕಿಸಿ, ಅವರಿಂದ ಶ್ರೀ ದೇವರ ಏನಾದರೊಂದು ಕೆಲಸವನ್ನು ಮಾಡಿಸುತ್ತಾರಂತೆ. ಇದು ಬಹಳ ಶ್ಲಾಘನೀಯವಾದದ್ದೇ ಸರಿ. ಹೀಗೆಯೇ ಎಲ್ಲಾ ದೇವಸ್ಥಾನಗಳಲ್ಲಿ ಸುಧಾರಣೆಯನ್ನು ಮಾಡಿದರೆ ಶ್ರೀ ದೇವರ ಭಂಡಾರವು ಒಳ್ಳೇ ವಿನಿಯೋಗಕ್ಕೇನೇ ಬೀಳುವುದಲ್ಲದೆ ಮುಂದಿನ ಜನಾಂಗವು ಈಗಿನವರ ಹಾಗೆ ಧರ್ಮದ ಊಟವನ್ನು ಮಾಡಿ ಸೋಮಾರಿಗಳಾಗದೆ ಒಳ್ಳೇ ಏಳಿಗೆಗೆ ಬರುವುದೆಂಬುದಕ್ಕೆ ಏನೂ ಸಂದೇಹವಿಲ್ಲ.

ಇದೇ ತಿಂಗಳ ತಾ. 1೮ಕ್ಕೆ ಇಲ್ಲಿಯ ದರಬಾರಿನ ಮಹೋತ್ಸವಗಳಿಗೆ ಖರ್ಚಾಗಿ ಬಾಕಿ ಉಳಿದ ಹಣವನ್ನು ಹೇಗೆ ವಿನಿಯೋಗಿಸಬೇಕೆಂಬ ಕುರಿತು ಆಲೋಚಿಸುವ ಬಗ್ಯೆ ಕಮಿಟಿ ಮೆಂಬರರ ಒಂದು ಸಭೆಯು ಕೂಡುವುದು.

ಕಳದ ಆದಿತ್ಯವಾರ ಸಂಜೆ ಶ್ರೀಚಿತ್ರಾಪುರ ಮಠಾಧೀಶರಾದ ಶ್ರೀಮತ್ ಪಾಂಡುರಂಗ ಆಶ್ರಮಿಗಳವರು ಉಡುಪಿಗೆ ಚಿತ್ತೈಸಿ ಮಂಗಳವಾರ ಕಲ್ಯಾಣಪುರಕ್ಕೆ ಹೋಗಿರುತ್ತಾರೆ.

ವಿವಿಧ ವಿಷಯಗಳು.

ಲಂಡನಿನ ಹೆಲ್ತ್ ಆಫೀಸರರು ತನ್ನ ವರದಿಯಲ್ಲಿ ಮೀನು ತಿನ್ನುವುದರಿಂದ ವಿಷಮಜ್ವರವು ಪ್ರಾಪ್ತಿಸುತ್ತದೆ ಎಂಬದಾಗಿ ಬರದಿರುವರು. ಇವರು ಬಹಳ ಜಾಗ್ರತೆಯಿಂದ ಪರಿಶೋಧಿಸಿ ಪಶ್ಚಿಮ ಲಂಡನಿನಲ್ಲಿ ವಿಷಮಜ್ವರವು ಹೆಚ್ಚಾಗಲಿಕ್ಕೆ ಅಂಗಡಿಗಳಿಂದ ಕೊಂಡುಕೊಂಡ ಸುಟ್ಟ ಮೀನುಗಳೇ ಎಂದು ಹೇಳುವರು.

ವಿದ್ಯಾ ಸಂಬಂಧವಾಗಿ ಸಂಶೋಧನೆ ಮಾಡುವ 'ಲೆಬರೊಟರಿ' ಕೆಲಸದಲ್ಲಿದ್ದ ಒಬ್ಬನಿಗೆ ನಾಯಿಕೆಮ್ಮು (ಕಪ್ಪೆ ಕೆಮ್ಮು) ಉಂಟಾಯಿತು. ಆತನು ಹೈಡ್ರೋಜನ್ ಎಂಬ ಜಲಜನಕ ವಾಯುವನ್ನು ಮಾಡಿ ಒಳಗೆ ಹೀರಿಕೊಂಡನು. ಕೂಡಲೇ ಆತನ ಕೆಮ್ಮು ಗುಣವಾಯಿತು. ನಾಯಿಕೆಮ್ಮು ಇದ್ದ ಆತನ ತಂಗಿಯು ಕೂಡಾ ಈ ವಾಯುವನ್ನೇ ಶ್ವಾಸಿಸಿ ಗುಣ ಹೊಂದಿರುವಳು.

ಕಬ್ಬು ಗುಂಡಿಗೆಯ ಜ್ವರವನ್ನು ವಿಚಿತ್ರ ರೀತಿಯಲ್ಲಿ ಪುಷ್ಟೀಕರಿಸುತ್ತದೆ. ಎದೆಗುಂಡಿಗೆಯ ಯಾವ ತರದ ರೋಗದಲ್ಲಿಯೂ ಕಬ್ಬನ್ನು ತಿನ್ನುವುದರಿಂದ ಅಸಾಧಾರಣವಾದ ಪ್ರಯೋಜನವಾಗುವುದೆಂದು ಡಾಕ್ಟರ್ ಎ. ಗೋಲ್ಡ್‌ಸ್ಟೆನ್ ಎಂಬವರು ಹೇಳುವರು.

ಅನೇಕ ಸ್ಥಳಗಳಲ್ಲಿ ಕಾಕಂಬಿಯನ್ನು ಗೊಬ್ಬರವಾಗಿ ಉಪಯೋಗಿಸುತ್ತಾರೆ, ಎಕರೆಗೆ ೪೦೦ರಿಂದ ೬೦೦ ಗ್ಯಾಲನ್‌ಗಳಷ್ಟು ಹಾಕಬೇಕಾಗುವುದು, (ಗ್ಯಾಲನ್ ಅಂದರೆ ೪ ಶೀಮೆ ಎಣ್ಣೆ ಸೀಸೆ ಹಿಡಿಯುವಷ್ಟಾಗುವುದು.) ಇದನ್ನು ಜಮೀನಿನಲ್ಲಿ ಸುಮ್ಮನೆ ಚಲ್ಲುತ್ತಾರೆ; ಇಲ್ಲವೆ ಕಬ್ಬನ್ನು ನೆಡುವುದಕ್ಕೆ ಸುಮಾರು ಒಂದು ವಾರಕ್ಕೆ ಮುಂಚೆ ನೇಗಿಲಿನ ಗುರುತಿನಲ್ಲಿ ಉದ್ದಕ್ಕೂ ಚಲ್ಲಬೇಕು. ಹೀಗೆ ಕಾಕಂಬಿಯನ್ನು ಗೊಬ್ಬರವಾಗಿ ಹಾಕುವುದರಿಂದ ಕಬ್ಬು ಬಹಳ ಹುಲುಸಾಗಿಯೂ ಮತ್ತು ಒಂದೆರಡು ತಿಂಗಳಿಗೆ ಮೊದಲೆ ನೆಡಲ್ಪಟ್ಟ ಇತರ ಜಮೀನುಗಳ ಕಬ್ಬುಗಳಿಗಿಂತ ಉದ್ದವಾಗಿಯೂ ಬೆಳೆಯುವುವು.

ಕಾನ್‌ಪುರದ ಮುನ್ಸಿಸಿಪಾಲಿಟಿಯವರು ಪಟ್ಟಣದ ಗಲೀಜನ್ನು ಸಾಗಿಸಲು ಇಟ್ಟಿರುವ ಎತ್ತುಗಳಿಗೆ ಹತ್ತಿ ಬೀಜದ ಹಿಂಡಿಯನ್ನು ಆಹಾರವಾಗಿ ಕೊಡುತ್ತಾರೆ. ಮೊದಲು ಅಜಮಾಯಿಷಿ ಸುಮಾರು ೨೦ ರಾಸುಗಳಿಗೆ ಅವಕ್ಕೆ ದಿನಗಟ್ಲೆ ಕೊಡುತ್ತಿದ್ದ ಭತ್ಯದಲ್ಲಿ ಒಂದು ಸೇರು ಹುರುಳಿಗೆ ಬದಲಾಗಿ ಒಂದು ಸೇರು ಹತ್ತಿಯ ಹಿಂಡಿಯು ಕೊಡಲ್ಪಟ್ಟಿತು. ಐದು ವಾರಗಳು ಇದೇ ರೀತಿ ಮಾಡಿ ಹತ್ತಿಯ ಹಿಂಡಿಯನ್ನು ತಿಂದ ರಾಸುಗಳನ್ನು ತೂಕ ಮಾಡಲಾಗಿ ಅವು ಬರೇ ಹುರುಳಿ ಮಾತ್ರವನ್ನೇ ತಿನ್ನುತ್ತಿದ್ದ ರಾಸುಗಳಿಗಿಂತ ಜಾಸ್ತಿ ತೂಗುವುದಾಗಿ ಕಂಡುಬಂದಿತು. ಹೀಗೆ ಮಾಡಿದ್ದರಿಂದ ರಾಸುಗಳು ಬಹಳ ಆರೋಗ್ಯವಾಗಿರುವುವಲ್ಲದೆ ಅವುಗಳಿಗೆ ಹತ್ತಿಯ ಹಿಂಡಿಯನ್ನು ಕೊಡುವುದಕ್ಕೆ ಮೊದಲು ದಿನಕ್ಕೆ ರಾಸು ಒಂದಕ್ಕೆ ೧೦ ಸೇರು ಗೋಧಿಯ ತವುಡನ್ನು ತಿನ್ನಿಸುತ್ತಿದ್ದದ್ದು ತಪ್ಪಿ ಈಗ ದಿನಕ್ಕೆ ೮ ಸೇರೇ ಸಾಕಾಗುವುದಾಗಿ ಗೊತ್ತಾಗಿದೆ.

ಕೆಲವು ಹಣ್ಣು ಮತ್ತು ಹುವ್ವುಗಳ ಸೊಸಿಗಳನ್ನು ನೆಟ್ಟ ಪ್ರಾರಂಭದಲ್ಲಿ ಅವುಗಳ ಮೇಲೆ ಬಿಸಿಲು ಮತ್ತು ಘಾಳಿಗೆ ಮರೆಯಾಗಿ ಇತರ ಸೊಪ್ಪುಗಳನ್ನು ಮುಚ್ಚುತ್ತಾರಷ್ಟೆ. ಹೀಗೆ ಮುಚ್ಚಲ್ಪಟ್ಟ ಸೊಪ್ಪುಗಳು ಭೂಮಿಯಲ್ಲಿ ತೇವವು ಹೆಚ್ಚು ಕಾಲ ನಿಲ್ಲುವಂತೆಯೂ ಮತ್ತು ಕಳೆಗಳು ವಿಶೇಷವಾಗಿ ಬೆಳೆಯದಂತೆಯೂ ಮಾಡುವುವು. ಕಾಲಕ್ರಮೇಣ ಈ ಸೊಪ್ಪುಗಳು ಕೊಳೆತು ಪೈರಿಗೆ ಒಳ್ಳೇ ಗೊಬ್ಬರವಾಗಿ ಪರಿಣಮಿಸುವುವು. ಆದ್ದರಿಂದ ರೈತರು ರಸ್ತೆಗಳ ಪಕ್ಕ, ಬೆಟ್ಟ, ಗುಡ್ಡ ಮತ್ತು ಜಮೀನುಗಳ ಅಕ್ಕಪಕ್ಕದಲ್ಲಿ ಬೆಳೆದಿರುವ ಹುಲ್ಲು, ಸೊಪ್ಪು ಮತ್ತು ಪೊದೆಗಳನ್ನು ನಿಕೃಷ್ಟಮಾಡದೆ ಅವುಗಳನ್ನು ಕತ್ತರಿಸಿ ಜಮೀನುಗಳಿಗೆ ಹಾಕಿ ಕೊಳಿಸಿದರೆ ಅವು ಬಹಳ ಬೆಲೆ ಬಾಳುವ ಗೊಬ್ಬರವಾಗಿ ಅವರಿಗೆ ಬಹಳ ಆದಾಯುವಾಗುವುದು.

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಹೊಸ ಮಸ್ಕತಿ ಅಕ್ಕಿ	5—4—0
ಹೊಸ ಗುಡ್ಡು ಮಸ್ಕತಿ...	4-13—0
ಹೊಸ ಮಸ್ಕತಿ ದುಯಂ...	4-14—0
ಹೊಸ ಗುಡ್ಡು ,, ...	4-11—0
ಮಸ್ಕತಿ ಬೆಳ್ತಿಗೆ ,, ...	5—9—0
ರಂಗೂನ್ ಬೆಳ್ತಿಗೆ ಗೋಣಿ	10—0—0
ಹುರುಳಿ ಗೋಣಿ ೧, ಮುಡಿ 2ರ ...	6—0—0
ಉಪ್ಪು ಗೋಣಿ ೧ರ	3—8—0
ಖೊಬ್ರಿ ಖಂಡಿ ೧ರ	95—0—0
ಖೊಬ್ರಿ ಎಣ್ಣೆ ಮಣ ೧ರ	6-12—0
ಕಾಫಿ ಖಂಡಿ ೧ರ	265-0—0
ಕಾಳು ಮೆಣಸು ಖಂಡಿ	170-0—0
ಹೊಸ ಬಿಳಿ ಗೋಟು ಅಡಿಕೆ	78—0—0
ಕರಿ ಗೋಟು	66—0—0
ಯಾಲದ ಕಾಯಿ ಮಣ ೧ರ	48—0—0
ಗೇರುಬೀಜ ಮುಡಿ ೧ರ	2—2—0
ಶೀಗೆಕಾಯಿ ಖಂಡಿ ೧ರ	30—0—0
ಕಾಸ್ರ್ರಕಿನ ಬೀಜ ಖಂಡಿ ೧ರ	22—0—0
ದಾಲಚೀನಿ ಹೂ ಮಣ ೧ರ	3—2—0
ಅಂಟವಾಳ ಕಾಯಿ ಮುಡಿ ೧ರ ...	1—6—0
ಅಣಿಲೆ ಕಾಯಿ ಖಂಡಿ ೧ರ	12—4—0
ಪಚ್ಚೆ ಹೆಸರು	4-10—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—6—0
ಗೋದಿ ಗೋಣಿ ೧ಕ್ಕೆ	11—0—0
ಊರು ಬೆಲ್ಲ ಖಂಡಿ ೧ರ	35—0—0
ಮೋರಿಸ್ ಸಕ್ಕರೆ ಮಣ ೧ರ	3-11—0
ಕಡಲೆ ಗೋಣಿ ೧ರ	7—6—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—0—0
ಖೊಬ್ರಿ ಹಿಂಡಿ ಖಂಡಿ ೧ರ	31—0—0

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಿಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹವ ದಂತಮಂಜವ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾವ್. ತಲೆ ನೋವು, ಎದೆ ನೋವು, ಸೊಂಟ ನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜವ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿಯ ಬೇನಿಹಾರಿ ಮುಲಾಮು.)

EST. 1898.

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒರ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜಖಮ್, ಉಳುಕು, ಘಾಯಗಳು, ಪಕ್ಷವಾತ, ಬೆನ್ನುನೋವು, ಆನೆ ಕಾಲು, ಖಜ್ಜ, ಸುಟ್ಟ ಘಾಯ, ಮೇಹ ಹುಣ್ಣು, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ೧ರ 0—8—0. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ತಾಯಿಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ;—ಪರಿಮಳಾಂಜನ ಡಿಪ್ಪೋ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಸಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವುವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟೆ ರವಾನಿಸುವೆವು. ವಿಳಾಸ:—

ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.
ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.
ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜೆ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಬ್ಬಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲೆಬಾರ ಮತ್ತು ದಕ್ಷಿಣ ಕನ್ನಡ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸೃಗ್ವರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೇ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೇಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗೆಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನು ವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1–8–0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ: — ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.

ಸರ್ವರೂ ತರಿಸಿಕೊಂಡು ಸಂತೋಷ ಪಡಿ.

ಬರುವ ಮೇ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖಿ (3) ನಾಜೂಕವಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಷೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವ್ವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಶಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಶಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ...

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1–0–0 ವಿ. ಪಿ. ಮೂಲಕ 1–3–0. 2000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0–15–0. 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.
M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನವ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

THE FANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನ್ನೂ ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್ಸು,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೋಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (**Whistler Studio**) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ನಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ, ಮಂಗಳೂರು ದ. ಕ.

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR — S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟು ಅಲ್ಲವೊ ಹಾಗಾದರೆ ಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟ್ಯಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—S. U. Narayanacharya & Co.

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ **ಗುಳಿಗೆಗಳು.**	30 ವರುಷಗಳಿಂದ ಉಪಯೋಗಿ ಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಬಾಧ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಯಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ 22 ಬ್ರಾಡ್ವೇ ಮತ್ತು 96 ಮೌಂಟ್ ರೋಡ್ ಮದರಾಸು. } ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ. ಮತ್ತು ಜಾಮ್ ನಗರ ಕಾಠ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ಹಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯು ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ ,, ,,	6—0—0	B ಅರಗಜ ,, ,,	1—0—0
ಕಸ್ತೂರಿ ಬತ್ತಿ ,, ,,	3—0—0	ಕಸ್ತೂರಿ ಬಿಲ್ಲೆ ,, ,,	2—0—0
ಜವಾಜಿ ಬತ್ತಿ ,, ,,	2—0—0	ಜವಾಜಿ ಬಿಲ್ಲೆ ,, ,,	1—0—0
ಪುಣಗಿನ ಬತ್ತಿ ,, ,,	1—8—0	ಕೇಸರಿ ಬಿಲ್ಲೆ ,, ,,	0—8—0
A ಪನ್ನೀರ್ ಬತ್ತಿ ,, ,,	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ ,, ,,	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:—
ಮ. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—
ಎನ್. ಎಂ. ಸುಬ್ರಾವ್,
"ಸುಗಂಧವಿಲಾಸ"
ಮಂಗಳೂರು.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.,

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,

ಮನೋಹರ ಬಿಲ್ಡಿಂಗ್, ಲವರಜಾಲ, ಮುಂಬಯಿ.

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಸೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 12.

ಮಂಗಳೂರು ತಾ. 22ನೇ ಶುಕ್ರವಾರ ಮಾರ್ಚಿ 1912.

Amrutanjan Depot Fort Bombay.

Trade Mark Registered.

ಅಮೃತಾಂಜನ.

ಇದರ ಉಪಯೋಗದಿಂದ ವಾತ, ಸಂಧಿವಾತ, ಜಖಮು, ಗಾಯ, ಉರಿ, ಶೀತ, ಕೆಮ್ಮು, ಗಂಟ್ಲುನೋವು, ಎದೆನೋವು, ಸೊಂಟದ ನೋವು, ಬೆನ್ನು ನೋವು, ಚೇಳುಕಡಿತ, ತುರಿಕಜ್ಜಿ ಮುಂತಾದವುಗಳು ಪೂರ್ಣವಾಗಿ ಗುಣಹೊಂದುವವು. ಬಾಟ್ಲಿ ಒಂದರ ಕಿಮ್ಮತು 8ಆಣೆ.

ಆರ್. ಆರ್. ಗಂಗೊಳ್ಳಿ, ಫಸ್ಟ್ ಕ್ಲಾಸ್ ಸಬ್ ಜಡ್ಜರು ಬರೆಯುತ್ತಾರೆ:—ನಿಮ್ಮ ಅಮೃತಾಂಜನ ತಲೆನೋವಿಗೆ, ವಾತಕ್ಕೆ ಮತ್ತು ಮೂಲವ್ಯಾಧಿಗೆ ಅತೀ ಗುಣಕಾರಿ.

ದಿನಾನಾಥ ಬಿ. ನಾಯ್ಕ ದಾಂಡೇಕರ್, ಎಲ್. ಎಮ್. ಎಂಡ್. ಎಸ್. ಎಂಡ್. ಜಿ. ಪಿ., ಮುಂಬಯಿ:—ನಿಮ್ಮ ಅಮೃತಾಂಜನ ಬಹಳ ಗುಣಕಾರಿ.

ದೆಸಾಯಿ ಸರ್ವೋತ್ತಮ್, ಹೈಕೋರ್ಟು ವಕೀಲ:—ತಲೆನೋವಿಗೆ ಅಮೃತಾಂಜನವು ಬಹಳ ಉತ್ತಮವಾದದ್ದು.

ಆರ್. ಡಿಸೋಜ, ಕಾಫಿ ಎಸ್ಟೇಟು, ಕೊಡಗು:—ನನ್ನ ಕೂಲಿ ಆಳುಗಳಿಗೆ ನಿಮ್ಮ ಅಮೃತಾಂಜನವು ಬಹಳವಾಗಿ ಗುಣ ಕೊಟ್ಟಿರುತ್ತದೆ.

ರಾಜಾರಾಮ ತುಕಾರಾಮ, ವೈಸ್ ಪ್ರೆಸಿಡೆಂಟ್ ವಾಂದ್ರೆ ಮುನಿಸಿಪಾಲಿಟಿ, ಥಾನಾ ಡಿಸ್ಟ್ರಿಕ್ಟ್:—ನಿಮ್ಮಿಂದ ಪಡಕೊಂಡ ಅಮೃತಾಂಜನವು ನನ್ನ ತಲೆನೋವನ್ನು ಹಚ್ಚಿದ ಮಾತ್ರದಿಂದ ಗುಣ ಮಾಡಿರುತ್ತದೆ.

ಅಮೃತಾಂಜನ ಚರ್ಚಿತವಾದ ರೋಮದ ವಸ್ತ್ರದಿಂದ ರೋಗದ ಭಾಗವನ್ನು ಮುಸುಕಬೇಕು. ಶೀತವೂ ಪಶೆಯೂ ಬಾರದಂತೆ ನೋಡಿಕೊಂಡು, ಪಶೆ ಇಲ್ಲದ ಸ್ಥಳದಲ್ಲಿ ಇರುವದು.

ಪೀಟರ್ ರೊಡ್ರಿಗ್ಸ್, ಎಲ್. ಎಮ್. ಎಂಡ್. ಎಸ್., ಮುಂಬಯಿ, ಬರಿಯುವದೇನಂದರೆ:—ನಿಮ್ಮ ಅಮೃತಾಂಜನವನ್ನು ನಾನು ವಾತಕ್ಕೂ ಸಂಧಿವಾತಕ್ಕೂ ಜಖಮು, ಗಂಟ್ಲುನೋವು ವಗೈರೆ ಎಲ್ಲಾ ತರದ ನೋವಿಗೂ ಉಪಯೋಗಿಸಿದ್ದಲ್ಲಿ ಬಹಳ ಗುಣ ಕಂಡುಬಂದದರಿಂದ ಇದರ ಗುಣಗಳನ್ನು ನನ್ನ ಸರ್ವ ಮಿತ್ರಮಂಡಲಿಯವರಿಗೆ ತಿಳಿಸುತ್ತೇನೆ.

ಜಾಗ್ರತೆ:--ಈಗ ಅಮೃತಾಂಜನದ ಬಾಟ್ಲಿಯು ಚಲೋದಾದ ಟಿನ್ನಿನ ಕರಡಿಗೆಯಲ್ಲಿ ಪೇಕ್ ಮಾಡಲ್ಪಟ್ಟಿರುತ್ತದೆ.

ವಿಳಾಸ:— ಅಮೃತಾಂಜನ ಡಿಪ್ಪೊ.,
109 ಫ್ರೈಯರ್ ರೋಡ್, ಫೋರ್ಟ್ ಮುಂಬಯಿ.
ಟೆಲಿಗ್ರಾಫ್ ಎಡ್ರೆಸು:—ಅಮೃತಾಂಜನ, ಮುಂಬಯಿ.

ಗಜಕರ್ಣದ ಮುಲಾಮು.

ಮೂರು ಸಾರಿ ತಾಗಿಸುವದರೊಳಗೆ ಗಜಕರ್ಣವು ಪೂರ್ಣವಾಗಿ ಹೋಗುವುದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ 1ಕ್ಕೆ 6ಆಣೆ.

ದಂತಮಂಜನ.

ಈ ಮಂಜನದಿಂದ ಹಲ್ಲುಗಳು ಗಟ್ಟಿಯಾಗುತ್ತವೆ. ಇದು ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಮುತ್ತುಗಳಂತೆ ಬೆಳ್ಳಗಾಗುತ್ತವೆ. ಡಬ್ಬಿ 1ಕ್ಕೆ 2ಆಣೆ.

ಸುಂದರಿ ಮುಲಾಮು.

ಇದನ್ನು ಮುಖಕ್ಕೆ ತಾಗಿಸುವದರಿಂದ ಮುಖದಲ್ಲಿರುವ ಮುದ್ದಣಗಳು ಹೋಗಿ ಮುಖವು ಶುಭ್ರವಾಗಿ ಕಂಗೊಳಿಸುವುದು. ಕ್ರಯ 8ಆಣೆ.

ಕೇಶವರ್ಧಿನಿ ತೈಲ.

ಕೂದಲನ್ನು ಕಪ್ಪು ಮಾಡುವದು, ಕೂದಲನ್ನು ನಯ ಮಾಡುವದು, ಅತಿ ಸುವಾಸನೆಯುಳ್ಳದ್ದು, ತಲೆ ಮೆದುಳನ್ನು ತಂಪು ಮಾಡುವದು, ಕೂದಲು ಬೆಳಿಸುತ್ತದೆ. ಬಾಟ್ಲಿ 1ಕ್ಕೆ ಕಿಮ್ಮತು 1ರೂಪಾಯಿ.

AMRUTANJAN DEPOT, BOMBAY.

NOTICE.

Owing to strikes and other causes in Europe Amrutanjan bottles with our special trade mark have not arrived in time. This delay coupled with a very large demand for Amrutanjan induced us for the time to fill the medicine in the ordinary bottles for which we beg the indulgence of our customers. In future Amrutanjan will be supplied in good bottles as before.

BOMBAY, 9th Feb. 1912. } THE PROPRIETOR, Amrutanjan Depot.

ಅಮೃತಾಂಜನ ಡಿಪ್ಪೊ, ಮುಂಬಯಿ.

ಪ್ರಕಟಣೆ.

ಯೂರೋಪದಲ್ಲಿ ನಡೆದ ಮುಷ್ಕರಗಳಿಂದಲೂ ಇತರ ಕಾರಣಗಳಿಂದಲೂ ನಮ್ಮ ಟ್ರೇಡ್ ಮಾರ್ಕ್ ಉಳ್ಳ ಪ್ರತ್ಯೇಕ ತರದ ಕರಡಿಗೆಗಳು ತಕ್ಕ ಸಮಯದಲ್ಲಿ ನಮಗೆ ದೊರಕಲಿಲ್ಲ. ಈ ಕಾಲದಲ್ಲಿ ಅಮೃತಾಂಜನಕ್ಕೆ ಬಹಳ ಗಿರಾಕಿ ಬಂದದ್ದರಿಂದ ತತ್ಕಾಲಕ್ಕೆ ಸಾಧಾರಣ ಸೀಸೆಗಳಲ್ಲಿಯೇ ನಮ್ಮ ಔಷಧವನ್ನು ತುಂಬಿಸಬೇಕಾಯಿತು. ಇದಕ್ಕಾಗಿ ನಮ್ಮ ಗಿರಾಕಿಗಳು ಅಸಮಧಾನ ಪಡರು ಎಂಬದಾಗಿ ನಂಬುತ್ತೇವೆ. ಇನ್ನು ಮುಂದಕ್ಕೆ ಅಮೃತಾಂಜನವು ಮೊದಲಿನಂತೆಯೇ ಒಳ್ಳೇ ಸೀಸೆಗಳಲ್ಲಿ ತುಂಬಿಸಿ ಕಳುಹಿಸಲ್ಪಡುವವು.

ದಿ ಪ್ರೊಪ್ರ್ಯಾಯಟರ್,

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು !!

KASHI VISHWESHWAR S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆ ಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೪ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ **ಗುಳಿಗೆಗಳು.**	30 ವರುಷಗಳಿಂದ ಉಪಯೋಗಿ ಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಯಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—„ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ 22 ಬ್ರಾಡ್ವೇ ಮತ್ತು 96 ಮೌಂಟ್ ರೋಡ್ ಮದರಾಸು. { ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಮತ್ತು ಜಾಮ್ ನಗರ ಕಾಠ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೀವಹಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಡ್ಡಿಂಗ್ಸ್,
ಮಂಗಳೂರು, ದ. ಕನ್ನಡ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಆವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯ್ಯು ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ **ಮೈಸೂರು ಸುಗಂಧ ದ್ರವ್ಯಗಳು** ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ „ „	6—0—0	B ಅರಗಜ „ „	1—0—0
ಕಸ್ತೂರಿ ಬತ್ತಿ „ „	3—0—0	ಕಸ್ತೂರಿ ಬಿಲ್ಲೆ „ „	2—0—0
ಜವಾಜಿ ಬತ್ತಿ „ „	2—0—0	ಜವಾಜಿ ಬಿಲ್ಲೆ „ „	1—0—0
ಪುಣಗಿನ ಬತ್ತಿ „ „	1—8—0	ಕೇಸರಿ ಬಿಲ್ಲೆ „ „	0—8—0
A ಪನ್ನೀರ್ ಬತ್ತಿ „ „	0-12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ „ „	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:—
ಮ. ಟ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—
ಎನ್. ಎಂ. ಸುಬ್ರಾವ್,
"ಸುಗಂಧವಿಲಾಸ"
ಮಂಗಳೂರು.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಜಾಲ, ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾವಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. **ಕಾಮೇಶ್ವರ ಮಾತ್ರೆ.** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. **ಸೂರಣಾವ ಲೇಹ.** ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. **ಜಗನ್ಮೋಹನ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. **ಸರಳಭೇದಿ ಮಾತ್ರೆ.** ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸಪ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜಿ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಗುಣವಾಗದಿದ್ದರೆ ಹಣ ಪರತ.

ಪಿಶಾಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವರಿತ್ತು ತೆಗದುಕೊಂಡರೆ ಕೊಲೆರಾ ಅಥವಾ ಉಖಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ 1ರ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವಾಹಿಕ, ತ್ರಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ ಖಂಡಿತವಾಗಿ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೇ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪ್ಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟಿ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷದದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ:—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.

ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.

ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯುಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯುಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜೆ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜೆ. ಪಿ. ಎಫ್. ಎಸ್. ಎ. ಎ.(ಲಂಡನ್)-ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಟ್ಟಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲೆಬಾರ ಮತ್ತು ದಕ್ಷಿಣ ಕನ್ನಡ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. "ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ಳರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನ್ನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.

ಸರ್ವರೂ ತರಿಸಿಕೊಂಡು ಸಂತೋಷ ಪಡಿ.

ಬರುವ ಮೇ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಜೂಕಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ! (5) ಷೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಷಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 22ನೇ ಮಾರ್ಚ್ 1912.

ಡಿಸ್ತ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಾಲಿಟಿ ಮೊದಲಾದ ಲೋಕಲ್‌ಬೋರ್ಡುಗಳ ಬಡಸ್ಥಿತಿಯು.

ಪ್ರತಿ ಹಳ್ಳಿ ಪಟ್ಟಣಗಳಲ್ಲಿ ಆರೋಗ್ಯ ವಿದ್ಯಾಭ್ಯಾಸಪಾಲನೆಯೂ ಮಾರ್ಗಗಳನ್ನು ಹಾಕಿಸಿ ಅವುಗಳ ದುರುಸ್ತಿ ಮೊದಲಾದ ವಹಿವಾಟ ಸೌಕರ್ಯಗಳೂ ಡಿಸ್ತ್ರಿಕ್ಟ್ ಬೋರ್ಡು ತಾಲೂಕು ಬೋರ್ಡು ಮುನಿಸಿಪಾಲಿಟಿಗಳ ಮೂಲಕ ನೆರವೇರುತ್ತಿರುವವು. ಡಿಸ್ಟ್ರಿಕ್ಟ್ ತಾಲೂಕು ಬೋರ್ಡುಗಳಿಗೆ ಸರಕಾರಕ್ಕೆ ಕೊಡೋಣಾಗುವ ಭೂಕಂದಾಯದ ಪ್ರತಿ ರೂಪಾಯಿ ಒಂದರ ಮೇಲೆ ಸುಮಾರು ಒಂದಾಣೆ ದರದ ತೆರಿಗೆಯೂ ಗೇಟುಗಳ ಮೇಲಿನ ಸುಂಕವೂ ಮುಖ್ಯ ಆದಾಯಮೂಲವಾಗಿರುವುದು. ಆಯಾ ಪಟ್ಟಣ ನಿವಾಸಿಕರ ಮೇಲೆ ಹೊರಿಸೋಣಾಗುವ ವೃತ್ತಿ ತೆರಿಗೆ ಮೊದಲಾದ ಸಾಧ್ಯವಿರುವ ವಿಧಾನಗಳ ತೆರಿಗೆಗಳಿಂದ ಮುನ್ಸಿಪಾಲಿಟಿಗಳ ಹುಟ್ಟುವಳಿಯನ್ನು ಸಂಗ್ರಹಿಸಬೇಕಾಗಿರುವುದು. ಇಂಥಾ ಹುಟ್ಟುವಳಿಗಳಿಂದ ಲೋಕಲ್ ಬೋರ್ಡುಗಳು ತಾವು ಕೈಕೊಂಡಿರುವಂಥಾ ಪ್ರಜಾ ಆರೋಗ್ಯ ವಿದ್ಯೆಮೊದಲಾದವುಗಳ ಏರ್ಪಾಡುಗಳ ಜ್ಯಾರಿಯನ್ನು ನಡಿಸಲಶಕ್ತರೆಂಬುದು ದೇಶದ ಪ್ರಕೃತ ಅನಾರೋಗ್ಯ ಅಜ್ಞಾನಸ್ಥಿತಿಯಿಂದ ಗೊತ್ತುಮಾಡಿಕೊಳ್ಳಬಹುದು. ಪ್ರಜಾಪ್ರತಿನಿಧಿಗಳ ಈ ಸಂಸ್ಥೆಗಳು ತಮ್ಮ ಕರ್ತವ್ಯಗಳನ್ನುಸಮರ್ಪಕವಾಗಿ ನಿರ್ವಹಿಸುವಂತೆ ಇವುಗಳಿಗೆ ಬೇಕಾದ ದ್ರವ್ಯಸಹಾಯವು ಕೊಡೋಣಾಗಬೇಕೆಂದು ಬಹುಮಾನಪಟ್ಟ ಗೋಖಲೆಯವರು ಈ ಪರವಾದ ಒಂದು ನಿರ್ಣಯವನ್ನು ಶ್ರೇಷ್ಟಸರಕಾರದ ನ್ಯಾಯನಿರ್ಮಾಣ ಸಭೆಯ ಮುಂದಿಟ್ಟಿದ್ದರು. ಗೋಖಲೆಯವರು ಈ ನಿರ್ಣಯದ ಕುರಿತು ಮಾಡಿದ ಭಾಷಣದಲ್ಲಿ ಈ ದೇಶದ ಲೋಕಲ್ ಬೋರ್ಡುಗಳ ವೃತ್ತಾಂತವನ್ನು ಸಂಗ್ರಹಿಸಿ ಹೇಳಿರುವರು. ೩೦ ವರುಷಗಳ ಹಿಂದೆ ರಿಪನ್ ಪ್ರಭುಗಳಿಂದ ಈ ಪ್ರಜಾನಿಯುಕ್ತ ಸಂಸ್ಥೆಗಳು ಸ್ಥಾಪಿಸಲ್ಪಡುವಾಗ ಇವುಗಳು ಯಾವ ಸ್ಥಿತಿಯಲ್ಲಿದ್ದವೋ ಅದೇ ಬಾಲ್ಯಾವಸ್ಥೆಯಲ್ಲಿಯೇ ಇನ್ನೂ ಇವು ಇವೆ ಎಂತ ಹೇಳಿ ಸರಕಾರ ಆಡಳಿತೆಗೆ ಎಲ್ಲಾ ಭಾಗಗಳಲ್ಲಿಯೂ ಸರಿಯಾದ ಸಮತಾಳವಿರುವಂತೆ ಈ ಸಂಸ್ಥೆಗಳನ್ನು ಸಹ ತಿದ್ದುವುದು ಅಗತ್ಯವೆಂತ ಸೂಚಿಸಿದರು. ಪ್ರಕೃತ 717 ಮುನಿಸಿಪಾಲಿಟಿಗಳೂ 197 ಡಿಸ್ತ್ರಿಕ್ಟ್ ಬೋರ್ಡುಗಳೂ 517 ತಾಲೂಕು ಬೋರ್ಡು ಮೊದಲಾದ ಸಬ್ ಡಿಸ್ತ್ರಿಕ್ಟ್ ಬೋರ್ಡುಗಳೂ ಹಿಂದೂಸ್ಥಾನದಲ್ಲಿರುವವು. ಮುನಿಸಿಪಾಲಿಟಿಗಳಿರುವ ಪಟ್ಟಣಗಳ ಜನಸಂಖ್ಯೆಯು ಜುಮ್ಲಾ 16 ಮಿಲಿಯವಾಗಿರುವುದು. 210 ಮಿಲಿಯ ಜನಸಂಖ್ಯೆಯು ಡಿಸ್ತ್ರಿಕ್ಟ್ ಮತ್ತು ತಾಲೂಕು ಬೋರ್ಡುಗಳ ಆಡಳಿತೆವಿರುವ ಪ್ರಾಂತ್ಯಗಳಲ್ಲಿರುತ್ತದೆ. ಸಾಧಾರಣ $2\frac{1}{2}$ ಕೋಟಿ ರೂಪಾಯಿ ಹುಟ್ಟುವಳಿ ಇರುವ ಮುಂಬಯಿ, ಕಲ್ಕತ್ತಾ, ಮದ್ರಾಸು, ರಂಗೂನು ಮುನಿಸಿಪಾಲಿಟಿಗಳ ವಿರಹಿತ ಮಿಕ್ಕುಳಿದ 713 ಮುನಿಸಿಪಾಲಿಟಿಗಳಿಗೆ ಸರಾಸರಿ ಮೇಲೆ ರೂ. 55,000 ಆದಾಯವಿರುವುದು. ದೇಶದ ಆಯಾ ಕಡೆಗಳಲ್ಲಿ ಲೋಕಲ್ ಬೋರ್ಡುಗಳಿಗೆ ಇರುವ ಆದಾಯಮೂಲಗಳನ್ನು ವಿವರಿಸಿ ಪಾಶ್ಚಾತ್ಯ ದೇಶಗಳ ನಿವಾಸಿಗಳು ತೆರುವ ದಾಮಾಷಾಯಿಯಲ್ಲಿ ಹಿಂದೂಸ್ಥಾನದ ಪ್ರಜೆಗಳು ತೆರಿಗೆಗಳನ್ನು ತೆತ್ತರೂ ಲೋಕಲ್ ಬೋರ್ಡುಗಳಿಗೆನೇ ದೊರಕುವ ಹುಟ್ಟುವಳಿಯು ಸಾಲದ್ದರಿಂದಲೂ ಸರಕಾರದವರಿಂದ ಬೇಕಾದಂತೆ ದ್ರವ್ಯಸಹಾಯವು ದೊರಿಯದ್ದರಿಂದಲೂ ತಮ್ಮ ಕರ್ತವ್ಯಗಳನ್ನು ಲೋಕಲ್ ಬೋರ್ಡುಗಳಿಂದ ಸರಿಯಾಗಿ ನೆರವೇರಿಸಲಾಗುವುದಿಲ್ಲವೆಂತ ಬಹುಮಾನಪಟ್ಟ ಗೋಖಲೆಯವರು ರುಜುಪಡಿಸಿರುವರು. ಈ ಕಾರಣಗಳಿಂದ ಸ್ವಚ್ಛವಾದ ಕುಡಿಯುವ ನೀರಿನ ಸರಬರಾಯಿಯುಳ್ಳ ಮುನಿಸಿಪಾಲಿಟಿಗಳು ಸೇಕಡಾ 3ರರಂತೆ ಇರುವವು. ಇಷ್ಟು ದೊಡ್ಡ ರಾಷ್ಟ್ರದ ಪ್ರಜೆಗಳ ರೋಗನಿವಾರಣೆಗೆ 2700 ಔಷಧಾಲಯಗಳು ಮಾತ್ರ ಇದ್ದಾವೆ. ಅಜ್ಞಾನದಲ್ಲಿ ಮುಳುಗಿರುವ ಪ್ರಜೆಗಳಲ್ಲಿ ಅನಾರೋಗ್ಯದಿಂದ ಪ್ರತಿ ವರುಷದಲ್ಲಿಯೂ 70 ಯಾ 80 ಮಿಲಿಯ ಜನರು ಸಾಯುತ್ತಿರುವವು. ಮುನಿಸಿಪಾಲಿಟಿಗಳಲ್ಲಿ ತೆರಿಗೆಗಳನ್ನು ಹೆಚ್ಚಿಸಿ ದ್ರವ್ಯಾನುಕೂಲತೆಯನ್ನುಂಟುಮಾಡಿ ಈ ಅಡಚಣೆಗಳು ನಿವಾರಣೆಯಾಗುವುದು ಅಸಾಧ್ಯವೆಂತ ಗೋಖಲೆಯವರು ಅಪ್ಪಣೆಕೊಟ್ಟಿರುವರು. ಮುನಿಸಿಪಾಲಿಟಿಗಳಲ್ಲಿ ತೆರಿಗೆಗಳ ದರವು ಈಗಲೇ ಹೆಚ್ಚಾಗಿರುತ್ತದೆ. ಒಂದು ವೇಳೆ ತೆರಿಗೆಗಳನ್ನು ಹೆಚ್ಚಿಸಲು ಸಾಧ್ಯವಿರುವುದೆಂತ ವಾದಿಸಿದರೂ ಹಾಗೆ ತೆರಿಗೆ ಹೆಚ್ಚಿಸಿ ಸಿಕ್ಕಬಹುದಾದ ಮೊಬಲಗು ಆಯಾ ಪಟ್ಟಣಗಳ ಪ್ರಜಾ ಸಂಕಷ್ಟನಿವಾರಣೆಗೆ ಎಂದೂ ಸಾಲದು. ಉದಾಹರಣೆಯಾಗಿ ನಮ್ಮ ಮಂಗಳೂರು ಮುನಿಸಿಪಾಲಿಟಿಯ ಆರೋಗ್ಯರಕ್ಷಣೆಗೆ ಶುದ್ಧವಾದ ಕುಡಿಯುವ ನೀರಿನ ಸರಬರಾಯಿಯು ಅತ್ಯಗತ್ಯ. ಆದರೆ ಇಂಥಾ ಏರ್ಪಾಡಿಗೆ ಲಕ್ಷಗಟ್ಟಳೆ ಹಣವು ಬೇಕಾದ್ದರಿಂದ ತೆರಿಗೆಗಳನ್ನು ಹೆಚ್ಚಿಸಿದರೂ ಸಹಾ ಬೇಕಾದ ಹಣ ಸಂಗ್ರಹವಾಗದು. ಸರಕಾರದವರ ಸಹಾಯ ವಿನಹ ಇದನ್ನು ನೆರವೇರಿಸುವುದು ಅಸಾಧ್ಯ. ಡಿಸ್ತ್ರಿಕ್ಟ್ ಬೋರ್ಡುಗಳಿಗೆ ಸಾಧಾರಣವಾಗಿ ತೆರಿಗೆಗಳನ್ನು ವಿಧಿಸುವ ಅಧಿಕಾರವಿಲ್ಲ. ಕೃಷಿ ಉದ್ದಿಮೆಯನ್ನೇ ಹೆಚ್ಚಾಗಿ ಅನುಸರಿಸುತ್ತಿದ್ದು ಭೂಕಂದಾಯವನ್ನು ಸರಕಾರದವರಿಗೆ ಕೊಡುತ್ತಿರುವ ಡಿಸ್ತ್ರಿಕ್ಟ್ ಬೋರ್ಡು ಆಡಳಿತೆಗಳೊಳಗಿರುವ ನಿವಾಸಿಕರ ಮೇಲೆ ನವೀನ ತೆರಿಗೆಗಳನ್ನು ಹೊರಿಸಿಯಾದರೂ ಬೇಕಾದ ದ್ರವ್ಯಸಂಗ್ರಹ ದೊರಕಿಸಿಕೊಳ್ಳಲು ಎಡೆಯಿಲ್ಲ. ಇಂಥಾ ಸಂದರ್ಭಗಳಲ್ಲಿ ಸರಕಾರದವರ ಸಹಾಯ ಹೊರತು ಲೋಕಲ್‌ಬೋರ್ಡುಗಳಿಗೆ ಬೇರೇನೂ ಉಪಾಯವಿರುವುದಿಲ್ಲ. ಇಂಗ್ಲಾಂಡು ಫ್ರಾನ್ಸು ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಭೂಕಂದಾಯದ ಅಧಿಕಾಂಶವು ಶ್ರೇಷ್ಟಸರಕಾರದವರಿಂದ ಲೋಕಲ್ ಬೋರ್ಡುಗಳಂಥಹ ಸ್ಥಳೀಕ ಸರಕಾರಗಳಿಗೆ ಕೊಡಲ್ಪಟ್ಟು ಪ್ರಜಾಭಿವೃದ್ಧಿಯ ಏರ್ಪಾಡುಗಳಲ್ಲಿ ವಿನಿಯೋಗಿಲ್ಪಡುವದು. ಫ್ರಾನ್ಸಿನಲ್ಲಿ ಸಹ ಭೂಕಂದಾಯದ ಅರೆವಾಸಿಗಿಂತ ಹೆಚ್ಚು ಶ್ರೇಷ್ಟ ಸರಕಾರದವರಿಂದ ಆಯಾ ಸ್ಥಳೀಕ ಸರಕಾರದವರಿಗೆ ಕೊಡೋಣಾಗುವುದು. ಆದರೆ ಹಿಂದೂಸ್ಥಾನದಲ್ಲಿ ಇದರ ಸೇಕಡಾ 94 ಯಾ 95ರಷ್ಟು ಶ್ರೇಷ್ಟ ಸರಕಾರದವರೇ ಪಡಿಯುವರು.

ಆದರೆ ಬಹುಮಾನಪಟ್ಟ ಗೋಖಲೆಯವರು ಸರಕಾರದವರ ತಮ್ಮ ಹುಟ್ಟುವಳಿಯಲ್ಲಿ ಅಧಿಕಾಂಶವನ್ನು ಲೋಕಲ್ ಬೋರ್ಡಿಗೆ ಕೊಡಬೇಕೆಂತ ವಾದಿಸಲಿಲ್ಲ. ಪ್ರತಿ ವರುಷದಲ್ಲಿಯೂ ಕ್ರಮವಾಗಿ ಲೋಕಲ್ ಬೋರ್ಡುಗಳಿಗೆ ಸರಕಾರದವರಿಂದ ದ್ರವ್ಯಸಹಾಯವು ಹ್ಯಾಗೆ ಸಿಕ್ಕುವಂತೆ ಮಾಡಬಹುದು ಅಥವಾ ನವೀನ ತೆರಿಗೆಗಳಿಗೆ ಉಪಾಯವಿರುವುದೋ ಎಂಬೀ ಮೊದಲಾದ ವಿಷಯಗಳನ್ನು ಪರ್ಯಾಲೋಚಿಸುವರೆ ಒಂದು ಕಮಿಟಿಯನ್ನು ಏರ್ಪಡಿಸಬೇಕೆಂತ ಕೇಳಿಕೊಂಡರು.

ಸರಕಾರದವರು ಲೋಕಲ್ ಬೋರ್ಡುಗಳ ಬಡಸ್ಥಿತಿಯನ್ನು ಒಪ್ಪಿಕೊಂಡಿರುವರಾದರೂ ಗೋಖಲೆಯವರ ನಿರ್ಣಯವನ್ನು ಸ್ವೀಕರಿಸಲಿಲ್ಲ. ಪಾಶ್ಚಾತ್ಯ ದೇಶಗಳ ಸರಕಾರಗಳಿಗೂ ಈ ದೇಶದ ಸರಕಾರಗಳಿಗೂ ಸ್ಥಿತ್ಯಂತರವಿರುವುದರಿಂದ ಅಲ್ಲಿಯ ಉದಾಹರಣೆಗಳು ಇಲ್ಲಿ ವಾದ ಯುಕ್ತವಲ್ಲವೆಂತಾದವು. ಆದರೆ ಬಹುಮಾನಪಟ್ಟ ಗೋಖಲೆಯವರ ನಿರ್ಣಯದ ಲೋಕಲ್ ಬೋರ್ಡುಗಳ ವಿಷಯವು ಸರಕಾರದವರ ಪರ್ಯಾಲೋಚನೆಯಲ್ಲಿರುವುದೆಂತ ಕಂಡುಬಂದದ್ದರಿಂದ ಗೋಖಲೆಯವರು ತಮ್ಮ ನಿರ್ಣಯವನ್ನು ಹಿಂತೆಗದಿರುವರು.

ಗೋಖಲೆಯವರ ಉಚಿತ ಮತ್ತು ಕಡ್ಡಾಯವಾದ ಎಲಿಮೆಂಟರಿ ವಿದ್ಯಾಭ್ಯಾಸದ ಮಸೂದೆಯು.

ವಿದ್ಯಾಪ್ರಸರಣೆ ವಿಷಯ ಚಕ್ರವರ್ತಿಯವರು ಅಭಯವಿತ್ತ ವಚನಗಳಿಂದಲೂ ಈ ಬಗ್ಗೆ ಸರಕಾರದವರಿಂದ ತೋರಿಸೋಣಾದ ಪ್ರೋತ್ಸಾಹದಿಂದಲೂ ಬಹುಮಾನಪಟ್ಟ ಗೋಖಲೆಯವರ ಈ ಕಾನೂನು ಮಸೂದೆಯು ಸರಕಾರದವರಿಂದ ಅಂಗೀಕರಿಸಲ್ಪಡಬಹುದೆಂಬ ಕೋರಿಕೆಯು ಹಲವರಲ್ಲಿತ್ತು. ಆದರೆ ಉಚಿತ ಪ್ರ್ಯಾಮರಿ ವಿದ್ಯಾಭ್ಯಾಸದ ಭಾಗ್ಯವು ನಮಗೆ ಪ್ರಾಪ್ತಿಸಲಿಕ್ಕೆ ಇನ್ನೂ ಸಮಯವು ಬಂದೊದಗದ್ದರಿಂದ ಈ ಮಸೂದೆಯು ಶ್ರೇಷ್ಟ ನ್ಯಾಯನಿರ್ಮಾಣ ಸಭೆಯಲ್ಲಿ ಬಿದ್ದುಹೋಯಿತೆಂಬುದನ್ನು ತಿಳಿಸುವರೆ ವಿಷಾದಪಡುತ್ತೇವೆ. ಈ ವಿಷಯ ವಿಸ್ತಾರವಾಗಿ ಇನ್ನೊಂದು ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು.

ಕಮಲೆ ಮತ್ತು ತಾಯಿಯ ಸಂವಾದ.

ಕಮಲೆ–ಅಮ್ಮಾ, ಮಗುವಿಗೆ ದಿನಾಲೂ ಬಿಸಿ ನೀರು ಸ್ನಾನ ಮಾಡಿಸುವಾಗ ಎಷ್ಟು ಸಮಯದೊಳಗೆ ಸ್ನಾನ ತೀರಿಸಬೇಕು?

ತಾಯಿ–ಮೂರು ಯಾ ಐದು ನಿಮಿಷದೊಳಗೆ ಸ್ನಾನ ಮಾಡಿಸಿ ತೀರಬೇಕು. ಸ್ನಾನದಾಂತ್ಯದ ನೀರು ಸ್ನಾನಾರಂಭದ ನೀರಿನಷ್ಟೇ ಬಿಸಿ ಇರಕೂಡದೆಂಬದನ್ನು ಜ್ಞಾಪಕದಲ್ಲಿಟ್ಟುಕೋ.

ಕಮಲೆ–ಮೊಲೆಯ ಹಾಲು ಕಮ್ಮಿಯಾದರೆ ಪೂರ್ಣವಾಗಿ ಮೊಲೆ ಬಿಡಿಸಬೇಕೋ ಇಲ್ಲವೆ ಇತರ ಆಹಾರದೊಂದಿಗೆ ಮೊಲೆ ಹಾಲನ್ನು ಕೊಡುತ್ತಾ ಬರಬೇಕೋ? ಈ ಸಂಗತಿಯಲ್ಲಿ ಬೇರೆ ಯಾವ ಆಹಾರ ಕೊಡಬಹುದು?

ತಾಯಿ–ಮೊಲೆ ಹಾಲನ್ನು ಪೂರ್ಣ ಬಿಡಿಸುವದಕ್ಕಿಂತ ಮೊಲೆ ಹಾಲಿನೊಂದಿಗೆ ಇತರ ಆಹಾರವನ್ನು ಕೊಡುವುದು ಉತ್ತಮ. ಮಗುವು ಮೊಲೆ ಹಾಲಿನಿಂದ ದೇಹಪೋಷಣಾ ಶಕ್ತಿ ಕೂಡಿದ ಒಳ್ಳೇ ಆಹಾರವನ್ನು ಹೀರಿಕೊಳ್ಳುತ್ತದೆ. ಮೊಲೆ ಹಾಲಿನಲ್ಲಿ ದೊರಕಿದಷ್ಟು ಉತ್ತಮ ಆಹಾರವು ಇತರ ಆಹಾರದಿಂದ ಮಗುವಿಗೆ ಸಿಕ್ಕಲಾರದು. ಮಗುವಿಗೆ ಬೇರೆ ವಿಧದ ಎಂಥಾ ಒಳ್ಳೇ ಆಹಾರ ಒದಗಿದರೂ ತಾಯಿಯ ಮೊಲೆ ಹಾಲು ದೊರಕದೆ ಹೋದರೆ ಅದಕ್ಕೆ ನಿರ್ಭಾಗ್ಯ ಸ್ಥಿತಿಯೇ ಎಂದ್ಹೇಳಬೇಕು. ಮೊಲೆ ಹಾಲಿನೊಂದಿಗೆ ಅಕ್ಕಿಯನ್ನು ಹುರಿದು ಬೀಸಿ ಅದರ ಹಿಟ್ಟನ್ನು ಸಣ್ಣ ಸಣ್ಣ ಪಲ್ಲೆಗಳಾಗಿ ಒಣಗಿಸಿ ನಂತರ ಅದರ ಗಂಜಿಮಾಡಿ ಅದಕ್ಕೆ ಕೆನೆ ತೆಗೆದ ದನದ ಹಾಲು ಬೆರಸಿ ಕೊಡಬಹುದು. ಕೆನೆಯೊಡನೆ ಬಾರ್ಲಿ ನೀರು, ಕೆನೆಯು ಕೂಡೆ ಅಕ್ಕಿ ಗಂಜಿ ಇತ್ಯಾದಿ ಕೊಡಬಹುದು.

ಕಮಲೆ–ಬಾಯಿ ಮುಕ್ಕಳಿಸಕೂಡದಷ್ಟು ಸಣ್ಣ ಪ್ರಾಯದ ಮಕ್ಕಳಿಗೆ ಶೀತವಿಂದ ಗಂಟ್ಲು ನೋವು ಪ್ರಾರಂಭಿಸಿದರೆ ಔಷಧ ಕೊಡುವ ವಿಧಾನ ಹ್ಯಾಗೆ?

ತಾಯಿ–ಮಗೂ, ಒಂದು ಸೀಸದ ಕಡ್ಡಿಗೆ ಯಾ ಇತರ ಸಪುರ ಮತ್ತು ಉರುಟಾದ ಕಡ್ಡಿಗೆ ಹತ್ತಿಯನ್ನು ಸುತ್ತಬೇಕು. ನಂತರ ಬೋರಿಕ್ ಎಸಿಡ್ ಎಂಬ ಔಷಧಕ್ಕೆ ಈ ಕಡ್ಡಿಯನ್ನು ಅದ್ದಿ ಬಹು ಜಾಗ್ರತೆಯಿಂದ ಮಗುವಿನ ಗಂಟ್ಲಿಗೆ ತಾಗಿಸಬೇಕು. ಎರಡು ಮೂರು ತಾಸಿಗೊಂದಾವರ್ತಿ ಗಂಟ್ಲಿಗೆ ಬಿಸಿನೀರಿನ ಶೇಕ ಕೊಡಬೇಕು. ತನ್ಮಧ್ಯೆ ಆಗ್ಗಾಗ್ಯೆ ಗಂಟ್ಲಿಗೆ ಒದ್ದೆ ಯಾ ಬಿಸಿ ಒತ್ತಡ ಇಡಬೇಕು.

ಕಮಲೆ–ಮಗುವನ್ನು ಮೊಲೆ ಬಿಡಿಸಿದಾಗ ಯಾವ ಆಹಾರ ಕೊಡಬೇಕಮ್ಮಾ,

ತಾಯಿ–ಮೊಲೆ ಬಿಡಿಸಿದ ಮಗುವಿಗೆ ದನದ ಹಾಲು, ಕಿತ್ತಳೆ ಹಣ್ಣಿನ ರಸ, ಹುರಿದ ಅಕ್ಕಿಯ ಬಿಸ್ಕುಟು ಬಹಳ ಒಳ್ಳೇದು. ಚೆನ್ನಾಗಿ ಬೇಯಿಸಿದ ಅಕ್ಕಿಯ ಗಂಜಿಯು ಚಿಕ್ಕ ಮಕ್ಕಳಿಗೆ ಚೆಲೋದು. ಪ್ರತಿ ಒಂದು ಸಾರಿಯೂ ಹೊಸತಾಗಿ ತಯಾರಿಸಿದ ಆಹಾರವನ್ನೇ ಕೊಡಬೇಕೆಂಬದನ್ನು ಮರೆಯಬಾರದು. ಆಹಾರದೊಂದಿಗೆ ಕಿತ್ತಳೆ ರಸ ಮತ್ತು ಇತರ ಹಣ್ಣಿನ ರಸವು ಮಕ್ಕಳಿಗೆ ಒಳ್ಳೇದು.

ಕಮಲೆ-ಹಲ್ಲು ಬರುವ ಸಮಯದಲ್ಲಿ ಮಕ್ಕಳಿಗೆ ಕಡಿಯಲಿಕ್ಕೆ ಏನು ಕೊಡಬೇಕು?

ತಾಯಿ–ಹೀರಿಕೊಳ್ಳುವ ಶಕ್ತಿ ಇಲ್ಲದ ಯಾವ ವಸ್ತುವನ್ನೂ ಕೊಡಬಹುದು. ನಯವಾದ ಗಟ್ಟಿ ರಬ್ಬರ್ ಅಥವಾ ರಬ್ಬರಿನ ಉಂಗುರ ಇತ್ಯಾದಿ ಕೊಡಬಹುದು.

ಕಮಲೆ–ಮಗುವಿಗೆ ಎರಡು ವರ್ಷ ಪ್ರಾಯವಾದಾಗ ಉಂಟಾಗುವ ಉದಾನ ವಾಯುವಿಗೆ ಯಾವ ಔಷಧ ಮಾಡಬೇಕು?

ತಾಯಿ–ಉದಾನವಾಯುವು ಜಠರಾಗ್ನಿಯಿಂದ ಉಂಟಾಗುತ್ತದೆ. ಉದರದ ಮೇಲೆ ದಿವಸಕ್ಕೆ ಎರಡು ಮೂರಾವೃತ್ತಿ ಬಿಸಿ ಶೇಕ ಕೊಡಬೇಕು. ರಾತ್ರಿಗೆ ತ್ಯಾವವುಳ್ಳ ದಟ್ಟಿಯನ್ನು ಹೊಟ್ಟೆಗೆ ಕಟ್ಟಬೇಕು. ಮಗುವು ಬೇಗ ಬೇಗನೇ ತನ್ನ ಆಹಾರವನ್ನು ನುಂಗಿಬಿಡದ ಹಾಗೆ ಜಾಗ್ರತೆ ತಕ್ಕೊಳ್ಳಬೇಕು. ಆಹಾರವನ್ನು ಬಗಬಗನೇ ನುಂಗಿಬಿಡುವಾಗ ಹೆಚ್ಚಿನ ವಾಯುವು ಹೊಟ್ಟೆಯೊಳಗೆ ಸೇರಿಕೊಳ್ಳುವದೇ ಉದಾನ ವಾಯುವಿಗೆ ಕಾರಣ. ಉದರವನ್ನು ಮೆಲ್ಲಗೆ ತಿಕ್ಕಬೇಕು. ವಿರೇಚಕವಾದ ಆಹಾರವನ್ನು ಕೊಟ್ಟು ಮಗುವಿಗೆ ಜಾಡಣೆಯಾಗುವ ಹಾಗೆ ನೋಡಬೇಕು. ಜಾಡಣೆಗೆ ಕಿತ್ತಳೇ ರಸ, ಬಿಸಿ ಮಾಡಿದ ಹಾಲು ಒಳ್ಳೇದು.

ಕಮಲೆ–ನಿದ್ದೆಯಲ್ಲಿದ್ದ ಮಗುವನ್ನು ಎಬ್ಬಿಸಿ ಹಾಲುಣ್ಣಿಸಬೇಕೋ?

ತಾಯಿ–ಕೂಡದು. ಮಲಗಿದ್ದ ಮಗುವನ್ನು ಹಾಲುಣ್ಣಿಸುವದಕ್ಕಾಗಲೀ ಸ್ನೇಹಿತರಿಗೆ ಯಾ ಸಂಬಂಧಿಕರಿಗೆ ತೋರಿಸುವುದಕ್ಕಾಗಲೀ ಎಬ್ಬಿಸಲೇ ಬಾರದು. ಒಂದು ತಿಂಗಳಿನೊಳಗಿನ ಮಗುವಿಗೆ ದಿವಸದಲ್ಲಿ ೨೦ ತಾಸು ನಿದ್ರೆ ಅವಶ್ಯ. ಮಗುವಿಗೆ ೬ ತಿಂಗಳ ಪ್ರಾಯವಾದಾಗ ೧೬ ತಾಸುಗಳ ನಿದ್ದೆಯು ಸಾಕು. ಮಗುವಿನ ನಿದ್ರೆ ಹಾಳಾದರೆ ಮೆದುಳಿನ ಶಕ್ತಿಯೂ ನರಸಂಸ್ಥಾಯಯವೂ ಕುಂದಿಹೋಗುವದು. ಅದನ್ನು ಆಗಾಗ್ಗೆ ಎಬ್ಬಿಸುತ್ತಾ ಇದ್ದರೆ ಅದು ಬೆಳಿಯಲಿಕ್ಕಿಲ್ಲ. ಮಗುವಿನ ಬೆಳವಣಿಗೆಯು ನಿದ್ರೆ ಕಾಲದಲ್ಲಿ ಆಗುತ್ತೆ. ಮಗುವು ಚೆನ್ನಾಗಿ ಬೆಳೆಯಬೇಕಾದರೆ ನಿದ್ರೆಯಂತೆಯೇ ವಿಶ್ರಾಂತಿಯೂ ಅಗತ್ಯ. ಅದರ ಕೋಣೆಯು ನಿಶಬ್ದವಾಗಿರಬೇಕು. ಆಗ್ಗಾಗ್ಯೆ ಇತರ ಮಕ್ಕಳುಮರಿಗಳು ಹೋಗಿ ಮಗುವನ್ನು ಎಬ್ಬಿಸುವದೂ ಮಾತಾಡುವದೂ ಅದರ ಕ್ಷೇಮಕ್ಕೆ ಹಾನಿಕರ. ಮಕ್ಕಳು ಅಳುವುದಕ್ಕೂ ಕೂಗುವುದಕ್ಕೂ ಅನೇಕಾವರ್ತಿ ಇದೇ ಕಾರಣ.

ಕಮಲೆ–ಮಗುವಿಗೆ ಬಾಲಗ್ರಹ ಉಂಟಾದರೆ ಮಾಡತಕ್ಕದ್ದೇನು? ಅದರ ಲಕ್ಷಣಗಳ್ಯಾವವು?

ತಾಯಿ–ಬಾಲಚೇಷ್ಟೆಯು ಸಾಧಾರಣವಾಗಿ ೮-೧೦ ತಿಂಗಳ ಮಕ್ಕಳಿಗೆ ಪ್ರಾರಂಭವಾಗುತ್ತೆ. ಒಂದೆರಡು ತಿಂಗಳ ಮಗುವಿಗೂ ಆಗುತ್ತೆ. ಇದಕ್ಕೆ ಅಜೀರ್ಣವೂ ಹೊಟ್ಟೆ ನೋವೂ ಕಾರಣ. ದೊಡ್ಡ ಮಕ್ಕಳಿಗೆ ಹಲ್ಲು ಬರುವ ಕಾಲದಲ್ಲಿ ಹುಳದ ಉಪದ್ರ, ಅಜೀರ್ಣ, ಹೊಟ್ಟೆ ತುಂಬಾ ಅಲ್ಲಸಲ್ಲದ ಪದಾರ್ಥಗಳನ್ನು ತುಂಬಿಸುವದು, ಕೆಮ್ಮು, ನಾಯಿಕೆಮ್ಮು ಇತ್ಯಾದಿ ಕಾರಣಗಳಿಂದ ಬಾಲಗ್ರಹ ಉಂಟಾಗುವದು. ಪ್ರಥಮತಾ ಥಕ್ಕನೇ ಮಗುವು ಕೂಗಿ ಹಲ್ಲು ಕಡಿಯುವುದು, ಕೈಕಾಲುಗಳು ಮುದುರಿಕೊಳ್ಳುವದು, ಕಣ್ಣು ಅಡಿಮೇಲಾಗುವದು, ಮೋರೆ ಬಾಡುವದು, ದೇಹವು ಮರಕಟ್ಟುವದು, ಕೈಕಾಲು ಬಡಿಯುವದು ಈ ಎಲ್ಲಾ ಲಕ್ಷಣಗಳು ತಲೆದೋರಿದರೆ ಇದೇ ಮಕ್ಕಳ ಚೇಷ್ಟೆ ಎಂದು ತಿಳಿಯಬೇಕು. ಶುದ್ಧ ಗಾಳಿಯು ದೊರಕುವ ಹಾಗೆ ನೋಡುವದೂ ಈ ಚೇಷ್ಟೆ ಪ್ರಾರಂಭವಾದ ಕಾರಣವೇನೆಂಬದನ್ನು ತಿಳಕೊಳ್ಳುವದೂ ಮುಖ್ಯ ಸಂಗತಿಯಾಗಿದೆ. ಈ ಲಕ್ಷಣಗಳು ತೋರಿದಾಕ್ಷಣ ಕೂಡಲೇ ಮಗುವಿಗೆ ಹರಳೆಣ್ಣೆ ಕೊಟ್ಟು ಜಾಡಣೆಯಾಗುವ ಹಾಗೆ ನೋಡಬೇಕು. ನಂತರ ಕಂಠದ ವರೆಗೆ ಬಿಸಿ ನೀರಿನ ಸ್ನಾನ ಮಾಡಿಸಬೇಕು. ಸ್ವಲ್ಪ ಸಾಸಿವೆ ಪುಡಿ ನೀರಲ್ಲಿ ಹಾಕುವುದು ಒಳ್ಳೇದು. ಕೂಡಲೇ ಚೇಷ್ಟೆ ನಿಲ್ಲುವದು. ಚೇಷ್ಟೆ ನಿಂತಾಕ್ಷಣ ಮಗುವಿಗೆ ಕಂಬಳಿ ಹೊದ್ದಿಸಿ ಮಲಗಿಸಬೇಕು. ಮಗಳೇ, ಹೊತ್ತಾಯಿತು, ಕಣ್ಣು ಉರಿಯುತ್ತೆ, ನಾಳೆ ಮಾತಾಡುವಾ.

S. A.

ಪಿತೃಪ್ರೇಮ.

(ಕಳದ ಸಂಚಿಕೆಯಿಂದ ಮುಂದರಿದುದು.)

೨

ಸುಧಾಂಶುವಿನ ಕಿರಣ ಪ್ರಕಾಶದಲ್ಲಿ ಆ ವ್ಯಕ್ತಿಯು ಆ ತರುಣನೊಡಗೊಂಡು ತರುಲತೆಗಳಿಂದಾಚ್ಛಾದಿತವಾದ ಒಂದು ಗುಹೆದ್ವಾರದ ಸಾನ್ನಿಧ್ಯವನ್ನೈದಿತು. ಸಾಂಕೇತಿಕ ಶಬ್ದವನ್ನುಚ್ಚರಿಸುತ್ತಲೇ ಗುಹದ್ವಾರವು ತೆರೆಯಲ್ಪಟ್ಟಿತು. ಇಬ್ಬರೂ ಒಳ ಪ್ರವೇಶಿಸಿ ಒಂದು ಪ್ರಶಾಂತವಾದ ದಿವಾನಖಾನೆಯನ್ನು ಸೇರಿದರು. ಆ ವ್ಯಕ್ತಿಯು ಅದೃಶ್ಯವಾಯಿತು. ತೆರದಿದ್ದ ಬಾಗಿಲೂ ಮುಚ್ಚಲ್ಪಟ್ಟಿತು. ಈ ಸಮಯದಲ್ಲಿ ಧೈರ್ಯಶಾಲಿಯಾದ ತರುಣನು ಸಾಶಂಕನಾದನು.

ದಿವಾನಖಾನೆಯಲ್ಲಿ ಪ್ರಶಸ್ತವಾದ ಬೆಳಕಿತ್ತು. ಕಿಂಚಿತ್ ಸಮಯದಲ್ಲಿ ಒಂದು ಗುಪ್ತದ್ವಾರವು ತೆರೆಯಲ್ಪಟ್ಟು ಪೂರ್ವ ಪರಿಚಿತವಾದ ವ್ಯಕ್ತಿಯು ಗೋಚರಿಸಿತು. ಈಗ ಅವಳ ಹಸ್ತದಲ್ಲಿ ಉದ್ದವಾದ ಪತ್ರವೊಂದಿತ್ತು. ಅದನ್ನು ಬರುತ್ತಾ ಬರುತ್ತಾ ಮಡಚಿ ರೇಶ್ಮೆದಾರದಿಂದ ಸುತ್ತಿ "ಅಜಿತಸಿಂಹ! ನಾನುಚ್ಚರಿಸುವುದನ್ನು ಲಕ್ಷ್ಯಕೊಟ್ಟು ಆಲಿಸು. ಇಂದಿಗೆ ನಿನಗೆ ಇಪ್ಪತ್ತು ವರುಷಗಳು ತುಂಬಿದವು. ಇನ್ನು ನೀನು ನಿನ್ನ ನಿಯಮಿತ ಕರ್ತವ್ಯವನ್ನು ನೆರವೇರಿಸತಕ್ಕದ್ದು. ನೀನು ಇಂದು ಸ್ವಾತಂತ್ರನಾಗಿರುತ್ತೀ! ನೀನು ಇನ್ನು ಬಂದಿವಾಸವನ್ನನುಭವಿಸ ಬೇಕಾದುದಿಲ್ಲ. ಆದರೆ ತತ್ಪೂರ್ವ ನೀನು ಒಂದು ಕಾರ್ಯ ಮಾಡು. ಅನಂತರ ನಾನು ಹೇಳುವುದನ್ನೆಲ್ಲಾ ನೀನು ಆಕ್ಷೇಪಿಸದೆ ಕೊನೆಗಾಣಿಸು. ಅದೆಷ್ಟು ಅವಘಡವಾದರೂ ಯೋಚಿಸಬೇಡ."

"ನನ್ನ ಮೇಲೆ ಇಷ್ಟು ಅಧಿಕಾರ ನಡಿಸುವರೆ ನೀನು ಯಾರು?"

"ಆ ಸಂಬಂಧವು ಈ ಪತ್ರವಾಚನದ ಮೇಲೆ ತಿಳಿಯುವುದು. ನಿನ್ನನ್ನು ವಂಚಿಸುವುದಲ್ಲ. ಪ್ರತಿಯೊಂದೂ ಕರ್ತವ್ಯವೆಂದು ನೀನು ಮಾಡಬೇಕು. ಸುಖವಿಲಾಸಗಳಲ್ಲಿ ನಿನಗೆ ಅಭಿರುಚಿಯಿರಕೂಡದು. ನನ್ನ ಮೇಲೆ ಸಂಶಯವಿರಿಸಬೇಡ. ಎಲ್ಲೆಲ್ಲಿಯೂ ನಿನಗೆ ಭಯಂಕರಗಳಾದ ವಿಪತ್ತುಗಳು ಸಂಭವಿಸುವುದರಿಂದ ಜಾಗ್ರತೆಯಲ್ಲಿರು. ಇಲ್ಲಿಯೇ ಕೂತು ಈ ಪತ್ರವನ್ನು ಓದು. ಮನಃಪೂರ್ವಕ ಪತ್ರಿಕೆಯನ್ನು ಸಂಪೂರ್ಣ ವಾಚಿಸಿ ಎದುರಿನ ಕದವನ್ನು ತೆರೆ. ನಾನು ಈಗ ಹೋಗುವೆನು."

ವ್ಯಕ್ತಿಯು ಅದೃಶ್ಯವಾಯಿತು. ಅಜಿತಸಿಂಹನಿಗೆ ಪತ್ರಿಕಾ ವಾಚನದ ಅಪೇಕ್ಷೆಯಾಯಿತು. ಅಲ್ಲಿದ್ದ ಒಂದಾಸನದ ಮೇಲೆ ಕೂತು ವಾಚಿಸಲಾರಂಭಿಸಿದನು.

"ಕ್ಷತ್ರಿಯ ಕುಮಾರ ಶ್ರೇಷ್ಠ ಬಾಲ ಅಜಿತ! ಲೀಲಾವತಿಯು ನಿನ್ನ ಕೈಗೆ ಪತ್ರವನ್ನೀಯುತ್ತಲೇ ನಿನ್ನ ಕೋಮಲವಾದ ಮನಸ್ಸಿಗೆ ಆಶ್ಚರ್ಯವೂ ಸಂಶಯವೂ ಉಂಟಾಗಬಹುದು. ಇಂದಿಗೆ ನಿನ್ನ ಇಪ್ಪತ್ತು ವರುಷಗಳು ತುಂಬಿದವು. ಬಾಲ್ಯದ ಸ್ಮೃತಿಪರವನ್ನವಲೋಕಿಸು. ನನ್ನ ಆ ಸಕರುಣ ದೃಷ್ಟಿಯು ನಿನಗೆ ಬೋಧೆಯಾಗುತ್ತದೇನು? ನಿನ್ನ ಸುಕುಮಾರ ತೇಜಸ್ವಿ ಕಪೋಲಗಳ ಮೇಲೆ ನನ್ನ ದುಃಖಾಶ್ರುಗಳು ಬಿದ್ದವು, ಈಗ ಕಾಣುತ್ತವೆಯೇ? ನನ್ನ ಸೌಭಾಗ್ಯಾಲಂಕರದ ಮೇಲೆ ಮುತ್ತಿಗೆಯನ್ನಿಕ್ಕಿ ನಿನ್ನನ್ನು ಅನಾಥನನ್ನಾಗ ಮಾಡಿದ ಆ ದುಷ್ಟರ ಪ್ರಲಾಪಗಳು ನಿನ್ನ ಹೃದಯದಲ್ಲಿ ದೃಡಲಿಖಿತವಾಗಿವೆಯೇ? ನಿನ್ನ ಜನ್ಮ ವೃತ್ತಾಂತವನ್ನು ಆಲಿಸು."

"ನಿನ್ನ ಪೂಜ್ಯಪಿತನು ಸಂತಾನಾಭಾವದಿಂದ ನಿತ್ಯವೂ ದುಃಖಿಸುತ್ತಿದ್ದನು. ರಮ್ಯವಾದ ವಿವಿಧ ರಾಜೋಪಚಾರಂಗಳು ಯಾವಾಗಲೂ ಆನಂದ ದಾಯಕಗಳಾಗಲಿಲ್ಲ. ಈ ನಿನ್ನ ಜನನಿಯನ್ನು ವರಿಸಿ ಒಂದು ಸಂವತ್ಸರವು ಕಳೆಯಿತು. ನನಗೆ ನನ್ನಭಿಮಾನವು ಕಾಣಿಸುವುದಿಲ್ಲ. ಆದರೆ ನನ್ನ ಸೌಂದರ್ಯವು ಅಪ್ರತಿಮವಾದುದೆಂದು ರಾಜಾಸ್ಥಾನಂಗಳೆಲ್ಲೆಲ್ಲಿಯೂ ಪ್ರಸಿದ್ಧವಾಗಿತ್ತು. ಹೃದಯಸ್ಥಪ್ರೇಮಾಂಕುರದಿಂದ ಬದ್ಧರಾಗಿ ನಾವು ವಿವಾಹಿತರಾದೆವು. ಜನರೀತಿ ಅಥವಾ ಸ್ತ್ರೀ ಸ್ವಭಾವವೆಂತ ಏನಾದರೂ ಹೇಳಿ, ನನ್ನ ಸವತಿಗಳು ನನ್ನನ್ನು ದ್ವೇಷಿಸುತ್ತಿದ್ದರು. ಆದಾಗ್ಯೂ ಅವರ ದುಷ್ಟ ಪ್ರಲಾಪಗಳಿಂದ ನನ್ನ ಪ್ರಾಣೇಶನ ಪ್ರಣಯವು ರತಿತೂಕವೂ ಕುಂದಲಿಲ್ಲ.

"ವಸಂತಋತುವಿನ ಒಂದು ದಿವಸ ಸುಗಂಧಮಿಶ್ರ ಮಂದಮಲಯಾನಿಲಯದ ಆಸ್ವಾದವನ್ನಾಘ್ರಾಣಿಸುತ್ತಾ ನಾವಿಬ್ಬರೂ ಸೌಧಾಗ್ರದ ಮೇಲೆ ಆನಂದದಿಂದ ಸರಸಸಲ್ಲಾಪವಾಡುತ್ತಾ ಕೂತಿದ್ದೆವು. ಪೂರ್ವ ಭಾಗದಿಂದ ತೇಜಸ್ವಿಯಾದ ಕೌಪಿನಧಾರಿಯಾದ ಮುನಿಯೊಬ್ಬನು ಬರುವುದನ್ನು ಕಂಡು ನಮ್ಮಿಬ್ಬರ ಮನಸ್ಸಿನಲ್ಲಿಯೂ ಅವನ ಮೇಲೆ ವಿಲಕ್ಷಣವಾದ ಪೂಜ್ಯ ಭಾವವುಂಟಾಯಿತು. ನನ್ನ ಗೆಳತಿಯಾದ ಲೀಲಾವತಿಯು ಈ ಸಮಿಪವರ್ತಿಯಾಗಿದ್ದಳು. ಅವಳು ನಮ್ಮ ಮನೋಗತವನ್ನು ತಿಳಿದವಳಾಗಿ ಅವನನ್ನು ಸತ್ಕರಿಸಿ ಕರೆದು ತಂದಳು. ಅವನು ಬಂದು ಸುಖಾಸೀನನಾಗಿ ನಮ್ಮಿಬ್ಬರಿಗೂ ಸ್ಮಿತಪೂರ್ವಕ ಆಶೀರ್ವದಿಸಿ "ಹೇ ರಾಜನ್! ನಿನ್ನ ಮನೋವಾಂಛಿತವನ್ನರಿತೆನು· ಆದರೆ ದುಃಖದ ವಿಷಯವೇನಂದರೆ—ಈ ನಿನ್ನ ವಾಂಛಿತವು ಫಲಿಸಿದರೆ ನಿಮ್ಮಿಬ್ಬರಿಗೂ ಅನೇಕ ಕ್ಲೇಶಗಳನುಭವಿಸಬೇಕಾಗುವುದು. ಬಾಲ ಅಜಿತ! ಆ ವಾಕ್ಯಗಳೇ ನನಗೆ ಈಗ ಪ್ರತ್ಯಯವಾಗಿ ತೋರುತ್ತವೆ.

"ಏನೂ ಚಿಂತೆಯಿಲ್ಲ, ನನ್ನ ಮನೋರಥವನ್ನು ಪೂರ್ಣ ಮಾಡಿರಿ." ಎಂದು ನನ್ನ ಹೃದಯೇಶ್ವರರು ಬಿನ್ನವಿಸುತ್ತಲೇ ಅವನು ನೆಲದ ಮೇಲೊಂದು ಚಕ್ರವನ್ನು ಬರೆದು ಲೀಲಾವತಿಯ ಕೈಯಿಂದ ಬೇಕಾದ ಪೂಜಾ ಸಾಹಿತ್ಯಗಳನ್ನು ತರಿಸಿ ಯಥಾ ಸಾಂಗ್ಯವಾಗಿ ಪೂಜಿಸಿ ಅದರ ತೀರ್ಥವನ್ನು ನಮಗಿಬ್ಬರಿಗೂ ಪ್ರಸಾದ ರೂಪವಾಗಿ ಅನುಗ್ರಹಿಸಿ ಸಾವಕಾಶವಾಗಿ ಹೊರಟು ಹೋದನು.

"ಮೂರನೇ ವಸಂತಋತುವಿನಲ್ಲಿ ನಿನ್ನನ್ನು ತೊಡೆಯ ಮೇಲಿರಿಸಿ ಉದ್ಯಾನದಲ್ಲಿ ತೂಗುತ್ತಿರುವ ಉಯ್ಯಾಲೆಯಲ್ಲಿ ಕುಳಿತು ಸಂಧ್ಯಾಕಾಲದ ಶೋಭೆಯನ್ನು ನೋಡುತ್ತಾ ಕುಳಿತಿದ್ದೆನು. ನಿನ್ನ ಪ್ರಿಯ ಪಿತನು ಮಾಧಲೀಕಲಿಕೆಯ ಹಾರವನ್ನು ಕರದಲ್ಲಿ ಪಿಡಿದು ತರುರಾಜಿಯ ಶೋಭೆಯನ್ನೀಕ್ಷಿಸುತ್ತಿದ್ದನು. ಅಹಾ! ಅದೇ ಆ ನಿಮಿಷ ನಾನು ಆಗ್ಗೆ ಸುಖದ ಅತ್ಯುಚ್ಛ ಶಿಖರದಲ್ಲಿ ಆರೂಢಳಾಗಿದ್ದೆನು. ಆಗ್ಗೆ ಸುಖದ ಪರಮಾವಧಿಯಾಯಿತು. ನನ್ನ ಪ್ರೇಮಾಶ್ರುಗಳಿಂದ ತೋಯ್ದ ನಿನ್ನ ಕೆನ್ನೆಗಳನ್ನು ಅತ್ಯಾನಂದದಿಂದ ಚುಂಬಿಸುತ್ತಿದ್ದೆನು. ನೀನು ನಿನ್ನ ಆ ರಕ್ತ ಓಷ್ಠಗಳನ್ನು ಮೆಲ್ಲಗೆ ಅಲ್ಲಾಡುಸುತ್ತಾ ಮೃದು ಕರಪಲ್ಲವಗಳಿಂದ ನನ್ನ ಕಂಠವನ್ನು ಬಿಗಿದು ಹಿಡಿದಿದ್ದ ನೀನು ದ್ರಾಕ್ಷಾವಲ್ಲಿಗೆ ಗೊಂಚಲು ನೇತ ಹಾಗೆ ಕಾಣುತ್ತಿತ್ತು. ಆಹಾ! ಆ ವೇಳೆಗೆ ಸರಿಯಾಗಿ ಹತ್ತು ಮಂದಿ ಭೀಮಕಾಯ ಮಾನವ-ರಾಕ್ಷಸರು ನನ್ನೆದುರು ಬಂದು ನಿಂತರು. ನಾನು ಘಟ್ಟಿಯಾಗಿ ಅರಚಿದೆನು. ನನ್ನ ಆ ಆರ್ತಧ್ವನಿಯನ್ನು ಆಲಿಸಿ ಸಮಿಪವರ್ತಿಯಾದ ಲತಾಮಂಟಪದಿಂದ ನನ್ನ ಪ್ರಿಯ ತಮನು ಓಡಿ ಬಂದನು. ಅವರಿಗೆ ಈ ಅವಸ್ಥೆಯನ್ನು ಕಂಡು ಆಶ್ಚರ್ಯವುಂಟಾಯಿತು. ತನ್ನ ಸದಾ ಸಮರವಿಜಯಿಯಾದ ಅಸಿಲತೆಯನ್ನು ನಗ್ನಮಾಡಿ ಆ ಯಮದೂತರನ್ನುದ್ದೇಶಿಸಿ "ನೀವು ಯಾರಪ್ಪಣೆಯಿಂದ ಉದ್ಯಾನವನ್ನು ಪ್ರವೇಶಿಸಿದಿರಿ?"

"ಆ ಹತ್ತರಲ್ಲಿ ಒಬ್ಬನೂ ಉತ್ತರವನ್ನೀಯದೆ ತಮ್ಮ ವಿಕರಾಲ ಖಡ್ಗಗಳನ್ನು ಝಳಪಿಸುತ್ತಾ ಒಮ್ಮೆಯೇ ನನ್ನ ಪ್ರಾಣೇಶ್ವರನ ಮೇಲೆ ಬಿದ್ದರು. ಈ ಆಕಸ್ಮಿಕ ಪ್ರಕಾರನ್ನೀಕ್ಷಿಸಿ, ನಾನು ಬೊಬ್ಬಿಡುತ್ತಾ ಕಾವಲುಗಾರರನ್ನು ಕೂಗಿದೆನು. ಆದರೆ ಆ ವೇಳೆಯಲ್ಲಿ ಯಾರೂ ಬರಲಿಲ್ಲ. ನಿನ್ನ ಪಿತನು ಶೂರನಾದಾಗ್ಯೂ ಹತ್ತು ಮಂದಿ ಕ್ರೂರ ಭೀಮಕಾಯರ ಮುಂದೆ ಏನು ಮಾಡ ಸಮರ್ಥನು? ನನ್ನ ಹೃದಯವನ್ನು ಶಿಲಾ ರೂಪವಾಗಿ ಮಾಡಿ ನಿನಗೆ ಬರಿಯುತ್ತೇನೆ. ನಿನ್ನ ಪಿತನು ವಿರೋಚಿತವಾದ ಕರ್ಮವನ್ನೆಸಗಿ ಸ್ವರ್ಗಲೋಕವನ್ನೈದಿದನು. ನಾನು ಮೂರ್ಛಿತಳಾಗಿ ಬಿದ್ದಿದ್ದೆನು. ಆ ವೇಳೆಯಲ್ಲಿ ನಿನ್ನ ಸ್ಮೃತಿಯೂ ನನಗಿರಲಿಲ್ಲ.

"ನಾನು ಪ್ರಜ್ಞೆ ಬಂದು ಸುತ್ತಲೂ ನೋಡುವಲ್ಲಿ, ಗಾಯ ಹೊಂದಿದ ಏಳು ಮಂದಿ ಮೈಕಾವಲುಗಾರರನ್ನೂ, ನಿನ್ನನ್ನು ಕಟ್ಟಿಕೊಂಡ ನನ್ನ ಪ್ರಾಣದಾತ್ರಿ ಪ್ರಿಯ ಲೀಲೆಯು ವೇದನೆಯಿಂದ ನರಳುತ್ತಾ ನಿಂತಿರುವುದನ್ನೂ ಕಂಡೆನು.

"ನನಗೆ ಸ್ವರ್ಗಾರೋಹಣ ಮಾಡುವ ಅತ್ಯುತ್ಕಂಠತೆಯುಂಟಾದುದರಿಂದ ಸಂಕ್ಷೇಪವಾಗಿ ಬರೆಯುವೆನು. ವಿಚಾರಾಂತ್ಯದಲ್ಲಿ ನಿನ್ನ ಪಿತನ ಹಿತಶತ್ರುವಾದ ಮಂತ್ರಿ ಅಮರರಾಯನು, ಸವತಿಮತ್ಸರದಿಂದ ಶಿರೋಭ್ರಮಣವುಂಟಾದ ಇತರ ರಾಜ ಪತ್ನ್ಯರುಗಳಿಂದ ಪ್ರೇರಿತನಾಗಿಯೂ, ನನ್ನ ಲಾಲನೆಯಿಂದಲೂ, ರಾಜ್ಯಪ್ರಾಪ್ತಿಯ ಇಚ್ಛೆಯಿಂದಲೂ, ಈ ಅಘೋರ ಅಧಮಕೃತ್ಯವನ್ನೆಸಗಿದನು. ಸ್ವಾಮಿಭಕ್ತರಾದ ಕೆಲವು ಯೋದ್ಧರು ನನ್ನನ್ನೂ ನಿನ್ನನ್ನೂ ಭಯಶೂನ್ಯವಾದ ಒಂದೆಡೆಯಲ್ಲಿರಿಸುವದಕ್ಕಾಗಿ ಯತ್ನಿಸುವುದನ್ನು ಕಂಡು ಯುದ್ಧದಲ್ಲಿ ಪ್ರಯೋಜನವಿಲ್ಲವೆಂದು ಲೀಲಾವತಿಯು ಗುಪ್ತ ಮಾರ್ಗದಿಂದ ಅವರನ್ನೊಡಗೊಂಡು ಪ್ರವೇಶಿಸಿದಳು.

"ನಾನು ಮಾಯಾಮಮತೆಯನ್ನಳಿದು ಲೀಲಾವತಿಯ ವ ಇತರರ ವಿನಂತಿಗೆ ಲಕ್ಷ್ಯಕೊಡದೆ ಸಹಗಮನಮಾಡುವುದೆಂದು ನಿಶ್ಚಯಿಸಿ ಈ ಲೇಖನವನ್ನು ಲಿಖಿಸುವೆನು. ನಿನಗೆ ಇಪ್ಪತ್ತು ವರುಷ ತುಂಬುವ ಮೊದಲು ಈ ಲೇಖನವನ್ನು ಕೊಡದಿರುವುದಕ್ಕೆ ಕಾರಣವೇನಂದರೆ—ನಿನಗೆ ಧನುರ್ವಿದ್ಯೆಯನ್ನು ಕಲಿಸುವುದು ಬಹಳ ಗಂಡಾಂತರವುಳ್ಳದ್ದಾಗಿರುವುದರಿಂದಲೂ, ಕಲಿಯಲಿಕ್ಕೆ ಹೆಚ್ಚಿನ ಸಮಯ ಬೇಕಾಗುವುದರಿಂದಲೂ, ಆ ವರೇಗೆ ನಿನಗೆ ಕಷ್ಟಪಡಲಿಕ್ಕೆ ಸಾಮರ್ಥ್ಯವು ಬರುವುದು. ಚಿಕ್ಕಂದಿನಲ್ಲಿಯೇ ಈ ಜನ್ಮ ಕಥೆಯು ನಿನಗೆ ಜ್ಞಾತವಾದರೆ ವೃಥಾ ದುಃಖಿಸುತ್ತಾ ಇರಬೇಕಾಗುವುದು. ಬಾಲ್ಯತನದಿಂದ ನೀನು ನಡಿಸಬಹುದಾದ ಕೃತ್ಯಗಳು ನಿಷ್ಫಲವಾಗಬಹುದು. ಈಗ ನೀನು ಸರ್ವಕುಶಲನಾಗಿರುತ್ತೀ. ತನ್ನ ವೈರಿಗಳ ನಿಃಪಾತವನ್ನೆಸಗಿ ರಾಜ್ಯವನ್ನು ತಿರುಗಿ ಪಡಿಯುವಿಯೆಂದು ನಂಬುತ್ತೇನೆ. ಯಾವ ಮೋಹಪಾಶದಲ್ಲಿಯೂ ಸಿಲುಕದೆ ಈ ಕಾರ್ಯವನ್ನು ಪೂರ್ಣಗೊಳಿಸು. ನಾವು ನಿನ್ನ ಕೃತ್ಯಗಳನ್ನು ಗಗನ ಸಂಚಾರಿಗಳಾಗಿ ನೋಡುತ್ತಾ ಮಂಗಳವನ್ನು ಕೋರುವೆವು. ಲೀಲಾವತಿಯನ್ನು ನನ್ನ ಸ್ಥಾನದಲ್ಲಿಡು. ಅವಳಿಗೆ ಯಾವ ಅಪಮಾನವನ್ನು ಮಾಡಬೇಡ. ಅವಳು ನಿನ್ನ ಜತೆಯಲ್ಲಿ ರಾಜಾಸ್ಥಾನಕ್ಕೆ ಬರಲಾರಳು. ನೀನೊಬ್ಬನೇ ಹೋಗಬೇಕಾಗುವುದು. ನಿನಗೆ ಇನ್ನು ವಿಶೇಷವೇನು ಹೇಳಲಿ? ಲೀಲೆಯು ನಿನ್ನ ಪೂರ್ಣ ಸಹಾಯ ಕರ್ತೆಯು. ಪ್ರತಿಯೊಂದರಲ್ಲಿಯೂ ನಿನಗೆ ಯಶಸ್ಸುಂಟಾಗಲೆಂದು ಮಂಗಲಾಶೀರ್ವಾದ ಮಾಡುವೆನು.

"ಪೂರೈಸುವೆನು. ನೀನು ಕೃತಕಾರ್ಯನಾಗು. ನನ್ನ ಪ್ರಿಯ ಪತಿಯು ಸ್ವರ್ಗದಲ್ಲಿ ನನ್ನನ್ನೆದುರು ನೋಡುವನು. ನೀನು ಪೂರ್ಣ ಸುಖಿಯಾಗು.

ಇತಿ ಆಶೀರ್ವಾದ.

ವಿಮಲಕುಮಾರಿ.

ಮುಂದೆ ಸಾಗುವುದು.

M. V. L. Prabhu.

"ದೇವರಾಜ್ಯ ಬಂತು."

ಯಾಕೋಬಯ್ಯನೂ ಕುಂಟಾಲ ಬೊಗ್ಗೂ.

(ಒಬ್ಬ ಲೇಖಕರಿಂದ)

———o———

ಯಾಕೋಬಯ್ಯ—ಏನೋ ಬೊಗ್ಗೂ ಎಲ್ಲಿ ಹೋಗುತ್ತಿ? ನಿನ್ನ ಕಂಕುಳಲಿ ಏನು ಅದು?

ಬೊಗ್ಗ—ಸಲಾಂ ಅಯ್ಯಾ; ಇದು ಇತ್ತಲಾಗೆ ಕನ್ನಡ ಭಾಷೆಯಲ್ಲಿ ಮುದ್ರಿಸೋಣಾದ ಯೋಗವಾಶಿಷ್ಟವೆಂಬ ಒಂದು ಚಲೋ ಧರ್ಮ ಬೋಧಕ ಗ್ರಂಥವು.

ಯಾಕೋಬಯ್ಯ—ಒಹೋ—ನಿನ್ನ ತಲೆಗೆ ಮುಟ್ಟಳೆ ಹೋಗಿ ಮದ್ರಾಸಿ ಎಲವಸ್ತ್ರ ಬಂತು. ಎಲವಸ್ತ್ರ ಹೋಗಿ ರುಮಾಲು ಬಂತು. ಕೌಪಿನ ಹೋಗಿ ದೋತ್ರ ಬಂತು. ಕಂಕುಳದಲ್ಲಿ ಸರಾಯಿ ಕುಪ್ಪಿ ಹೋಗಿ ಯೋಗವಾಶಿಷ್ಟ ಗ್ರಂಥ ಬಂತು. ಹೊಲೆಯನ ಕಂಕುಳದಲ್ಲಿ—ಅಹಃ ಕಲಿಯುಗದ ಮಹಿಮೆ!

ಬೊಗ್ಗ—ಏನಯ್ಯಾ ಇದು ವರೇಗೆ ಹಿಂದು ಜನರನ್ನೂ ಹಿಂದು ಮತವನ್ನೂ ದೂರಿ ನಿಮ್ಮ ಮತಕ್ಕೆ ಸೇರಬೇಕಾಗಿ ನನಗೆ ವತ್ತಾಯ ಮಾಡಿದಿರಿ. ನಾನು ತಿರಸ್ಕರಿಸಿದರಿಂದ ಈಗ ಹಿಂದುಗಳಿಗಿಂತಲೂ ಹೆಚ್ಚಿಗೆ ಮತ್ಸರದ ಮಾತುಗಳಾಡುತ್ತೀರಿ!!

ಯಾಕೋಬಯ್ಯ—ಬೊಗ್ಗೂ ಹಾಗೆ ತಿಳಕೊಳ್ಳಬೇಡಾ. ನೀನು ದೇವರಾಜ್ಯ ಸಂಪಾದಿಸಬೇಕೆಂತ ಪೇಚಾಟ ಪಡುವುದು ನೋಡಿ ನಾನು ಕನಿಕರದಿಂದ ಮಾತಾಡುವುದು. ಸುಮ್ಮನೇ ಪೇಚಾಟ ಪಡುತ್ತೀ; ಅಹಃ

ಬೊಗ್ಗ—ಅಯ್ಯಾ, ಹಾಗಾದರೆ ನೀವು ಏನು ಹೇಳುವುದು—ನಾನು ನಿಮ್ಮ ಮತಕ್ಕೆ ಸೇರಬೇಕೇ?

ಯಾಕೋಬಯ್ಯ—ಹೌದು ಹೌದು—ನೀನು ನಿಮ್ಮ ಯೇಸು ಸ್ವಾಮಿಯನ್ನು ಒಪ್ಪಿ, ನಮ್ಮ ದೇವಾಲಯದಲ್ಲಿ ಪರಿಶುದ್ಧ ಸ್ನಾನ ಹೊಂದುತ್ತಲೆ ನಿನಗೆ ದೇವರಾಜ್ಯ ಪ್ರಾಪ್ತವಾಗುತ್ತದೆ. ಲೋಕದಲ್ಲಿ ಅನೇಕ ಮತಗಳುಂಟು. ಅನೇಕ ಧರ್ಮ ಬೋಧಕ ಗ್ರಂಥಗಳುಂಟು. ಪರಂತು ನಿಜ ಮತವು ಕ್ರೈಸ್ತ ಮತವೇ—ಸತ್ಯವೇದವು ನಮ್ಮ ಬ್ಯಾಬಲೇ. ಯಾವ ಮತದಲ್ಲಿಯೂ ಯಾವ ಮತ ಬೋಧಕನು "ದೇವರಾಜ್ಯ ಬಂತು ಇಗೋ ನೋಡಿರಿ ದೇವರಾಜ್ಯ ಬಂತು" ಎಂತ ಹೇಳಿದ್ದಿಲ್ಲ. ನಮ್ಮ ಯೇಸು ಸ್ವಾಮಿ ಮಾತ್ರ ಹೇಳಿರುತ್ತಾನೆ.

ಬೊಗ್ಗ—ಓಹೋ—ಯಾಕೋಬಯ್ಯ ನಿಮ್ಮ ಅಭಿಪ್ರಾಯ ತಪ್ಪು—ಇತರ ಧರ್ಮಬೋಧಕರಂತೆ ಭಕ್ತಶಿಖಾಮಣಿ ಯೇಸು ಸ್ವಾಮಿಯು ದೇವರಾಜ್ಯದ ದಾರಿ ತೋರಿಸಿದವನು "ಬಂತು" ಎಂದರೆ "ಬರಲಿಲ್ಲ" "ಬರಬೇಕಷ್ಟೇ" ಎಂಬ ಅರ್ಥವು.

ಯಾಕೋಬಯ್ಯ— ಹಾಃ ಹಾಃ ಹಾಃ ಶಹಾಬಾಸ್!!

ಬೊಗ್ಗ—ಯಾಕೋಬಯ್ಯ ನೆಗಾಡಬೇಡಿ—ಧರ್ಮ ಸಂಬಂಧವಾದ ಸಂಭಾಷಣೆಯಲ್ಲಿ ನೆಗಾಡಬಾರದು. ಸಿಟ್ಟುಮಾಡಬಾರದು. ಇಗೋ ನೋಡಿ ಅಕ್ಕಿ ಮುಡಿ ಬಂತೊ ಎಂತ ನೀವು ನನ್ನ ಹತ್ತರ ಕೇಳುತ್ತೀರಿ ಎಂತ ತಿಳಕೊಳ್ಳಿ. ಬಂತು ಎಂತ ನಾನು ಹೇಳುತ್ತೇನೆ. ಎಲ್ಲಿ ಉಂಟು ಕಾಣುವದಿಲ್ಲ ಎಂತ ನೀವು ಕೇಳುತ್ತೀರಿ. ಹೊರಗೆ ಇಲ್ಲ ಒಳಗೆ ಉಂಟು ಎಂತ ನಾನು ಹೇಳುತ್ತೇನೆ. ಒಳಗೆ ಎಲ್ಲಿಯೂ ಇಲ್ಲ; ಕಾಣುವದಿಲ್ಲ ಎಂತ ನೀವು ಹೇಳುತ್ತೀರಿ· ಯೆಹೋವನನ್ನು ಪ್ರಾರ್ಥಿಸಿರಿ. ಆಗ್ಯೆ ಬರುವುದು ಎಂತ ನಾನು ಹೇಳುತ್ತೇನೆ. ಹಾಗಾದರೆ ಬಂತು ಎಂಬ ಮಾತಿನ ಅರ್ಥ ಬರಲಿಲ್ಲವೆಂತ ಅಲ್ಲವೇ? ತದ್ರೀತಿ ಯೇಸು ಸ್ವಾಮಿಯು—ದೇವರಾಜ್ಯ ಬಂತೆಂತಲೂ—ಅದು ನಮ್ಮ ಅಂತರ್ಯದಲ್ಲಿ ಉಂಟೆಂತಲೂ—ಕಡೆಗೆ ಕರ್ತನ ಕಡೆಗೆ ಅಭಿಮುಖರಾಗಿ "ಪರಲೋಕದಲ್ಲಿರುವ ನಮ್ಮ ತಂದೆಯೇ ನಿನ್ನ ರಾಜ್ಯವು ಬರಲಿ" ಎಂತ ಬೇಡಿಕೊಳ್ಳಿ ಎಂತಲೂ ಹೇಳಿದ್ದಾನೆ. ಬಂತು ಅಂದರೆ ಬರಲಿಲ್ಲ ಬರಬೇಕಷ್ಟೇ ಎಂಬ ಅರ್ಥವಲ್ಲವೇ?

ಯಾಕೋಬಯ್ಯ—ನಿನ್ನ ಅರ್ಥ ತಪ್ಪು, ಪಾಪಿಷ್ಟರಾದ ನಮಗೆ ಯಾರಿಗೂ ದೇವ ವಾಕ್ಯದ ಅರ್ಥ ಮಾಡಲಿಕ್ಕೆ ತಿಳಿಯದು. ನಮ್ಮ ಪಾದ್ರಿ ಸಾಹೇಬರಿಗೆ ಅರ್ಥ ಚನ್ನಾಗಿ ಗೊತ್ತುಂಟು. ನೀನು ನಮ್ಮ ಸಭೆಗೆ ಬಾ. ಪಾದ್ರಿ ಸಾಹೇಬರು ಅರ್ಥ ವಿವರಿಸಿ ಹೇಳುವರು.

ಬೊಗ್ಗ—ನಿಮ್ಮ ದೇವ ವಾಕ್ಯದ ಗ್ರಂಥದಲ್ಲಿ ಅರ್ಥ ಮಾಡಲಿಕ್ಕೆ ಪ್ರಯಾಸವಾದ ಮಾತುಗಳನ್ನೇ ಭಗವಂತನು ಮಾತನಾಡಿದ್ದಾನೋ? ಅದಿರಲಿ—ಪಾದ್ರಿ ಸಾಹೇಬರ ಅರ್ಥವೇ ನ್ಯಾಯವಾದದ್ದು ಎಂಬದಕ್ಕೆ ಸಾಕ್ಷ್ಯವೇನು?

ಯಾಕೋಬಯ್ಯ–ಪಾದ್ರಿಸಾಹೇಬರಲ್ಲಿ ನನಗಿರುವ ನಂಬಿಕೆಯೇ ನನ್ನ ಸಾಕ್ಷಿ.

ಬೊಗ್ಗ—ಜೈಲಿನಲ್ಲಿರುವ ಸರಕಾರಿ ರಿಕಾರ್ಡ ನನ್ನ ಸಾಕ್ಷಿ.

ಯಾಕೋಬಯ್ಯ—ಹಾಗಾದರೆ ಏನು ಬೊಗ್ಗು?

ಬೊಗ್ಗು—ಕ್ರೈಸ್ತನನ್ನು ಒಪ್ಪಿ ಸ್ನಾನ ಹೊಂದುತ್ತಲೆ ದೇವರಾಜ್ಯ ಪ್ರಾಪ್ತವಾಗುತ್ತದಾದರೆ ದೇವರಾಜ್ಯ ಹೊಂದಿದವರು ಜುಗಾರು, ಕಳ್ಳತನ, ಹಿಂಸೆ, ದಗೆ ಮೊದಲಾದ ತಕ್ಸೀರು ಮಾಡಿ ಜೈಲಿಗೆ ಹೋಗುವರೇ? ನಮ್ಮ ಜಾತಿಯವರು ಈ ಜಿಲ್ಲೆಯಲ್ಲಿ ೨॥ ಲಕ್ಷ ಜನರಿದ್ದಾರೆ. ಕೇವಲ ಬಡವರು, ಕೇವಲ ಅನಾಥರು. ಕ್ರೈಸ್ತ ಮತದವರು ಸಂಖ್ಯೆಯಲ್ಲಿ ನಮಗಿಂತಲೂ ಬಹು ಕಮ್ಮಿ. ಆದರೂ ದಾಮಾಶ್ಯಾ ಮೇಲೆ ನಮ್ಮ ಜಾತಿಯ ಬಂದಿವಾನರಿಗಿಂತಲೂ ಕ್ರೈಸ್ತ ಬಂದಿವಾನರು ಬಹಳ ಹೆಚ್ಚು. ದೇವರಾಜ್ಯವು ಶಿಕ್ಕುವವರಿಗೆ ಶಿಕ್ಕುತ್ತದೆ. ಆದರೆ ಪಾದ್ರಿ ಸಾಹೇಬರು ಕೊಡುವ ಸ್ನಾನದಿಂದ ಎಂತ ನಾನು ನಂಬುವದಿಲ್ಲ.

ಯಾಕೋಬಯ್ಯ—ಛೀ ಹೊಲೆಯಾ-ನೀನು ಏನೂ ಅರಿಯೆ?

ಬೊಗ್ಗು—ಯಾಕೋಬಯ್ಯ ಶಿಟ್ಟು ಮಾಡಬೇಡಿ. ಯೇಸು ಸ್ವಾಮಿಗೆ ಶಿಟ್ಟಿರಲಿಲ್ಲ. ನಿಮಗೆ ಏನು ಬಹಳ ಶಿಟ್ಟು? ನನ್ನ ತಂದೆ ತಾಯಿ ಸಹೋದರರೂ ಸಹೋದರಿಗಳೂ ಸಂಬಂಧಿಕರೂ ಇವರನ್ನೆಲ್ಲಾ ನರಕಕ್ಕೆ ಹೋಗಲಿಕ್ಕೆ ಬಿಟ್ಟು ನಾನು ಮಾತ್ರ ನಿಮ್ಮ ದೇವರಾಜ್ಯಕ್ಕೆ ಹೋದರೆ ನನ್ನಂಥ ಸ್ವಾರ್ಥಿಗೆ ಸ್ವರ್ಗದ ಒಳಗೆ ಹೊಕ್ಕಲಿಕ್ಕೆ ದೇವರು ಬಿಟ್ಟಾನೇ? ನನಗೆ ಅಂತಹ ಸ್ವರ್ಗದಲ್ಲಿ ಸುಖ ಶಿಕ್ಕೀತೇ? ಇನ್ನು ನನಗೆ ನಿಮ್ಮ ಮತಕ್ಕೆ ಬರಬೇಕೆಂತ ಕರಿಯಬೇಡಿ. ಸಲ್ಲಾಂ ಸಲ್ಲಾಂ.

——o——

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ.)

ಅಯ್ಯಾ, ನಾನು ತಾ. ೩ನೇ ಆದಿತ್ಯವಾರ ರೈಲ್ವೇ ಸ್ಟೇಶನಿಗೆ ಹೋಗಿದ್ದೆನು. (ಕುಡಿಯಲಿಕ್ಕೆ ಎಂಬ ತಪ್ಪಾಭಿಪ್ರಾಯ ಉಂಟಾಗಬಾರದು) ಅಲ್ಲಿ ಕೆಪ್ಟನ್ ಎರ್ನೆಷ್ಟರ ಭೇಟಿಯಾಯಿತು. ನಾವಿಬ್ಬರೂ ಸಹಪಾಠಿಗಳು. ಬಾಲ್ಯದ ಸ್ನೇಹದಿಂದ ಕುಶಲ ಪ್ರಶ್ನೆಯನ್ನು ಮಾಡುತ್ತಾ ಹಂಪನಕಟ್ಟೆ ಸಮೀಪಿಸುತ್ತಲೇ ಮಾತಿನ ನಡುವೆ ತಾನು ಈಗಲೇ ಬಲ್ಮಠದಲ್ಲಿ ಒಂದು ಭಾಷಣಕೊಡಲಿಕ್ಕಿದ್ದೇನೆಂದು ಹೇಳಿದರು. ಭಾಷಣಾಪ್ರಿಯನಾದ ನಾನು ಅದನ್ನು ಕೇಳಬೇಕೆಂಬ ಲವಲವಿಕೆಯಿಂದ ಅವರ ಕೂಡೆ ಹೋಗಿ ಹೊರಕೂತು ಭಾಷಣವನ್ನು ಕೇಳಿದೆನು. ಅವರ ಭಾಷಣದಿಂದ ನನ್ನಲ್ಲಿ ಯಾವ 'ತಪ್ಪಾಭಿಪ್ರಾಯವೂ' ಹುಟ್ಟಲಿಲ್ಲ. 'ತಪ್ಪಾಗಿ ಗ್ರಹಿಸಲೂ' ಇಲ್ಲ. ಅವರ ಮಾತುಗಳನ್ನು ಬರದರೆ 'ಹಾನಿ'ಯುಂಟಾದೀತೆಂದು ಊಹಿಸುವರೆ ಕಾರಣವೂ ಇರಲಿಲ್ಲ. ಕೇಳಿದ್ದನ್ನು ಕೇಳಿದ ಹಾಗೆ ಬರದೆನಷ್ಟೆ. ಅವರು ತಮ್ಮ ಭಾಷಣದ ಮಧ್ಯೆ "ಸಲ್ವೇಶನ್ ಆರ್ಮಿ"ಯವರಿಂದ ಕಳುಹಿಸಲ್ಪಡುವ ಮಿಶ್ಯನೆರಿಗಳು ಮಾತ್ರ ಬಡವರೆಂಬದಾಗಿ ಹೇಳುತ್ತಿದ್ದರೆ ನಾನೂ ಹಾಗೆ ಬರೆಯುತ್ತಿದ್ದೆನೆಂಬುದು ನಿಶ್ಚಯ. ಅವರು ಆ ಶಬ್ದವನ್ನು ಬಿಟ್ಟಿದ್ದರೂ ಅವರ ಮಾತಿನಿಂದಲಾಗಲೀ ನನ್ನ ಬಾತ್ಮಿಯಿಂದಲಾಗಲೀ "ಎಲ್ಲಾ ಮಿಶ್ಯನೆರಿಗಳು ಬಡವರಿಂದ ಎತ್ತಲ್ಪಟ್ಟವರು" ಎಂಬ ಅನರ್ಥವುಂಟಾಗಲು ಕಾರಣವಿರಲಿಲ್ಲ; ಯಾಕಂದರೆ ಒಬ್ಬ ಮಿಶ್ಯನೆರಿಯು-ದೇಶೀಯ ಕ್ರೈಸ್ತರನ್ನು ಕುರಿತು "ಇವರು ಅನಾಥರಾಗಿ ದಿಕ್ಕಿಲ್ಲದವರಿಂದ ಎತ್ತಲ್ಪಟ್ಟು ಕ್ರೈಸ್ತಮತವನ್ನವಲಂಬಿಸಿದವರು" ಎಂಬದಾಗಿ ಹೇಳಿದರೆ ಎಲ್ಲಾ ಕ್ರೈಸ್ತರು ಅಂಥವರಿಂದ ಎತ್ತಲ್ಪಟ್ಟವರೆಂದು ಯಾರೂ ಭಾವಿಸಲಿಕ್ಕಿಲ್ಲ. ಈ ಮಾತನ್ನು ನಂಬುವದೂ ಅಸಂಭವ. ಕೆಲವರು—ಮಿಶ್ಯನೆರಿಗಳ ಸುವಾರ್ತೆಯನ್ನು ಕೇಳಿ ಪಿತ್ರಾರ್ಜಿತ ಆಸ್ತಿಯನ್ನು ಧಿಕ್ಕರಿಸಿ ಕ್ರೈಸ್ತಮತವನ್ನವಲಂಬಿಸಿದರಿಂದ ದಿಕ್ಕಿಲ್ಲದವರಾದರು, ಕೆಲವರು ಕ್ರೈಸ್ತಮತವನ್ನವಲಂಬಿಸುವಾಗ ತುಸ ಐಶ್ವರ್ಯವಂತರಾಗಿದ್ದರೂ ಅನಂತರ ವಿವಿಧ ಕಾರಣಗಳಿಂದ ಇದ್ದದನ್ನು ಕಳಕೊಂಡರು, ಇನ್ನು ಕೆಲವರಾದರೋ ಜನ್ಮದಲ್ಲಿಯೇ ಬಡವರು, ಕೆಲವರು ದೊಡ್ಡ ಹುದ್ದೆದಾರರ ಮಕ್ಕಳು ಎಂಬದಾಗಿ ಅನೇಕರಿಗೆ ಗೊತ್ತೇ ಅದೆ. ಆದ್ದರಿಂದ ಕ್ರೈಸ್ತರು "ಅಂಥವರು" ಎಂಬದಾಗಿ ಹೇಳಿದರೆ ಎಲ್ಲರೂ ಅಂಥವರು ಎಂಬದಾಗಿ ಯಾರೂ ಗ್ರಹಿಸಲಿಕ್ಕಿಲ್ಲ. ಹ್ಯಾಗೋ ಹಾಗೆಯೇ 'ಮಿಶ್ಯನೆರಿಗಳು ಬಡವರಿಂದ ಎತ್ತಲ್ಪಟ್ಟವರೆಂದು' ಹೇಳಿದರೆ "ಎಲ್ಲಾ ಮಿಶ್ಯನೆರಿಗಳು ಅಂಥವರೆಂದು" ಯಾರೂ ಗ್ರಹಿಸಲಿಕ್ಕಿಲ್ಲ. ಮಿಶ್ಯನೆರಿಗಳಲ್ಲಿ ಕೆಲವರು ದೊಡ್ಡ ಮಂತಾನದವರಿರುವರೆಂದು ಗೊತ್ತೇ ಇದೆ. ಅದಲ್ಲದೆ ಮಿಶ್ಯನೆರಿಗಳು ಬಡವರಿಂದ ಎತ್ತಲ್ಪಟ್ಟವರೋ ದೊಡ್ಡ ಮಂತಾನದವರೋ ಎಂಬದಾಗಿ ತಿಳಿಯುವದು ಅಸಾಧ್ಯವಲ್ಲ; ಅವರ ದಿನಾವಹಿಯ ವರ್ತನೆಯೇ ಪ್ರತ್ಯಕ್ಷವಾಗಿ ಸಾಕ್ಷಿಕೊಡುತ್ತದಲ್ಲಾ. ಹೀಗಿರುವಾಗ ನನ್ನ ಬಾತ್ಮಿಯಿಂದ ವಾಚಕರಲ್ಲಿ ಹ್ಯಾಗೆ 'ತಪ್ಪಾಭಿಪ್ರಾಯವು' ಹೊಕ್ಕಿತೋ? 'ಹಾನಿ' ಹ್ಯಾಗೆ ಉಂಟಾಯಿತೋ ಯಾರು ತಾನೇ ಬಲ್ಲರು? ಒಂದು ವೇಳೆ ೫೦ ವರುಷಗಳ ಹಿಂದೆ ನಾನು ಆ ಬಾತ್ಮಿಯನ್ನು ಬರೆಯುತ್ತಿದ್ದರೆ ಮಿಶ್ಯನೆರಿಗಳು ಸಾಕ್ಷಾತ್ ದೇವಲೋಕದಿಂದ ಇಳಿದು ಬಂದವರೆಂದು ನಂಬುತ್ತಿದ್ದ ಹಳ್ಳಿ ಜನರಿಗೆ 'ಹಾನಿ'ಯಾಗುತ್ತಿತ್ತೋ ಏನೋ? ಆದರೆ ಭಾರತೀಯರು ಯೂರೋಪು ಖಂಡದ ಭೂಪೃಷ್ಠ ಸ್ವರೂಪವನ್ನು ಕೂಡಾ ಅರಿತಿರುವ ಈ ಕಾಲದಲ್ಲಿ 'ಹಾನಿ' ಉಂಟಾಯಿತೆಂದು ಹೇಳಿದರೆ 'ಹಾನಿ'ಯನ್ನು ಕಲ್ಪಿಸಿಕೊಂಡವರ ಅಲ್ಪ ಮತಿಯೇ ಕಾರಣವಾಗಿರಬೇಕಲ್ಲದೆ ನನ್ನ ಬಾತ್ಮಿಯು ಕಾರಣವಾಗಿರಲಿಕ್ಕಿಲ್ಲ.

ಏನಾದರೂ 'ಹಾನಿ'ಯುಂಟಾಗಬೇಕು, ಇಲ್ಲವೆ ಮಿಶ್ಯನೆರಿಗಳಲ್ಲಿ 'ಬೇಸರ' ಉಂಟಾಗಬೇಕೆಂಬ ಇರಾದೆಯಿಂದ ನಾನು ಆ ಬಾತ್ಮಿಯನ್ನು ಬರೆಯಲಿಲ್ಲ. ಯುರೋಪಖಂಡದ ಬಿಳೀ ಜನರು ಇಲ್ಲಿಯವರನ್ನು ತುಚ್ಛೀಕರಿಸುತ್ತಾರೆ ಎಂಬ ಅಭಿಪ್ರಾಯವು ಜನಸಾಮಾನ್ಯರಲ್ಲಿ ಇದ್ದೇ ಇದೆ. ಈ ಅಭಿಪ್ರಾಯವು ತಪ್ಪು. 'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧ ರಾತ್ರಿ ಕೊಡೆ ಹಿಡಿಸಿಕೊಂಡ' ಎಂಬ ಗಾದೆ ಇದೆಯಷ್ಟೆ. ಈ ಗಾದೆಗನುಸಾರವಾಗಿ ಅಲ್ಪತ್ವದಿಂದ ಮೇಲಕ್ಕೆ ಎತ್ತಲ್ಪಟ್ಟವರು ಮಾತ್ರವೇ ಭಾರತೀಯರನ್ನು ಎಡೆಗಣ್ಣಿಂದ ನೋಡುವರಲ್ಲದೆ ದೊಡ್ಡ ಮನೆತನದವರೆಂದೂ ಭಾರತೀಯರನ್ನು ಅಲ್ಪವೆಂದೆಣಿಸರು. ಅಲ್ಲಿಯ ಅಲ್ಪ ಜನರು ನಮ್ಮನ್ನು ತುಚ್ಛೀಕರಿಸುವದರಿಂದ ಅಲ್ಲಿಯವರೆಲ್ಲರೂ ನಮ್ಮನ್ನು ಹೀನೈಸುತ್ತಾರೆಂಬ ತಪ್ಪಾಭಿಪ್ರಾಯವನ್ನು ಕಳೆದುಬಿಡುವದಕ್ಕೋಸ್ಕರವೇ ಆ ಬಾತ್ಮಿಯನ್ನು ಬರೆದನಲ್ಲದೆ 'ಹಾನಿ' ಯಾ 'ಬೇಸರ'ವನ್ನುಂಟುಮಾಡಬೇಕೆಂಬ ಇರಾದೆಯಿಂದ ಬರೆಯಲಿಲ್ಲ.

ಜಿ. ಹರ್ಬರ್ಟರು ಹೇಳುವಂತೆ ನನ್ನ ಬಾತ್ಮಿಯಿಂದ 'ಉಂಟಾದ ಹಾನಿ'ಗೆ ನನ್ನ ಬಾತ್ಮಿಯಾಗಲೀ ಎರ್ನೆಷ್ಟರವರ ಭಾಷಣವಾಗಲೀ ಕಾರಣವಲ್ಲ, 'ಉಂಟಾದ ಹಾನಿಗೆ' 'ಹಾನಿಯನ್ನು' ಕಲ್ಪಿಸಿಕೊಂಡವರೇ ಕಾರಣವೆಂದು ತಿಳಿಸಿ ಈ ಬಾತ್ಮಿಗೆ ಸ್ಥಳಕೊಟ್ಟ ತಮಗೆ ವಂದಿಸುತ್ತೇನೆ.

ಬಾತ್ಮೀದಾರ.

ಅಯ್ಯಾ ಪತ್ರಕರ್ತೇ,

'ಉದ್ಯಾವರ ಬೋರ್ಡು ಶಾಲೆ'ಯನ್ನು ಕುರಿತು ಇನ್ನೊಂದು ಸಲ ಬರೆಯಬೇಕಾಗಿದೆ. ದಯಮಾಡಿ ಅವಕಾಶವನ್ನು ಕೊಡುವಿರಾ?

'ಸತ್ಯದೀಪಿಕೆ'ಯ ೩೩ನೇ ಸಂಚಿಕೆಯ ೫೬೪ನೇ ಪುಟದಲ್ಲಿ ಉದಯಿಸಿದ 'ಸ್ಥಳೀಕ ವಾರ್ತೆ'ಗೆ 'ಪ್ರೇಕ್ಷಕ' (Observer) ಎಂಬ ಮುದ್ರಿಕೆಯು ಇದ್ದಿತೆಂಬದು ಆ ಸಂಚಿಕೆಯನ್ನು ಈಗ ಮರಳಿ ನೋಡಿದರೆ ತಿಳದೀತು. 'ಪ್ರೇಕ್ಷಕ' ಎಂಬ ಹೆಸರು ಕಾಸರಗೋಡಿನ ಬಾತಮಿದಾರರೊಬ್ಬರು ಮಾತ್ರ ತಾವೇ ಖಾಸಗಿಯಾಗಿ ಆಯ್ದುಕೊಂಡ ಉಪನಾಮವೆಂದಾದರೆ, ಅವರ ಬಾತಮಿಯು ಮುಗಿಯುವ ಗೀಟಿನಲ್ಲಿಯೇ ಅದನ್ನು ಅಚ್ಚು ಹಾಕಬೇಕಾಗಿದ್ದಿತು; ಹಾಗೆ ಮಾಡದೆ, 'ಸ್ಥಳೀಕ ವಾರ್ತೆ'ಯು ಪೂರಾ ಮುಗಿದ ಬಳಿಕ ಪ್ರತ್ಯೇಕ ಒಂದು ಗೀಟಿನಲ್ಲಿ ಅದನ್ನು ಅಚ್ಚು ಹಾಕಿರುವದರಿಂದ, ಆ ಸಮಗ್ರವಾದ 'ಸ್ಥಳೀಕ ವಾರ್ತೆ'ಗೆ 'ಪ್ರೇಕ್ಷಕ'ರನ್ನೇ ಜವಾಬ್ದಾರರಾಗಿ ನಾವು ಭಾವಿಸಿಕೊಂಡದ್ದು ಎಷ್ಟು ಕೂ ನಮ್ಮ ತಪ್ಪಲ್ಲವು. ಆ ವಿಷಯವಾಗಿ ವಾಗ್ವಾದದ ಕೈಫಿಯತ್ತನ್ನು ನಡೆಯಿಸಬೇಕೆಂದಾದರೆ ಅದಕ್ಕೆ 'ದೀಪಿಕೆ'ಯ ಪ್ರಕಾಶಕರಾಗಲಿ ಅಚ್ಚುಗಾರರಾಗಲಿ ಹೊಣೆಯಾಗಿರುವರು—ಎಂದಿಗೂ ನಾವು ಅದಕ್ಕೆ ಹೊಣೆಯಲ್ಲ. ಅದಂತಿರಲಿ. ನಾವು ಈ ಮುಂಚೆ 'ಪ್ರೇಕ್ಷಕ'ರೆಂದು ಕರೆದವರನ್ನು 'ಸತ್ಯದೀಪಿಕೆ'ಯು ತನ್ನ ೩೭ನೇ ಸಂಚಿಕೆಯ ತೊಟ್ಟಿಲಲ್ಲಿ ತೂಗಿ 'ಸತತದರ್ಶಿ' ಎಂಬ ಗಂಭೀರವಾದ ಹೆಸರನ್ನು ಇಕ್ಕಿದ್ದಕ್ಕೆ ಸಲುವಾಗಿ ತಾಯಿಗೂ ಮಗುವಿಗೂ ನಮ್ಮ ಸಂತೋಷವಾದಗಳನ್ನು ಸಮರ್ಪಿಸುತ್ತೇವೆ. ಈ ಹೊಸ ನಾಮಕರಣದ ಸಕ್ಕರೆಯು ಮಾತ್ರ ಈ ತನಕ ನಮಗೆ ಬಂದಿರುವದಿಲ್ಲ, ನೆನಪಿರಲಿ.

ನಮ್ಮ ಮುಂಚಿನ ಪತ್ರವು ದೀರ್ಘವಂತೆ! ಮುಂಚೆ 'ಪ್ರೇಕ್ಷಕ'ರೆಂದು ನಾವು ಸಂಬೋಧಿಸಿರುವ, ಈಗ 'ಸತತದರ್ಶಿ' ಎಂದು ತನ್ನನ್ನೇ ತಾನು ಸಂಬೋಧಿಸಿಕೊಳ್ಳುವ ಮಹಾಶಯರ ಪತ್ರವಾದರೋ ಬಹಳ ಚಿಕ್ಕದೇ ಸರಿ—ಅದನ್ನು ಹುಣಿಸೆ ಎಲೆಯ ಒಂದು ಎಸಳಲ್ಲಿ ಬರೆದು ಮುಗಿಯಿಸ ಬಹುದು! 'ಸ್ವದೇಶಾಭಿಮಾನಿ'ಯಲ್ಲಿ ತೋರಿಬಂದ ನಮ ಪತ್ರವನ್ನು 'ಸತ್ಯದೀಪಿಕೆ'ಯಲ್ಲಿ ತೋರುವ 'ಸತತದರ್ಶಿ'ಯವರ ಪತ್ರದೊಡನೆ, ಪ್ರತಿಪತ್ರದ ಪ್ರತ್ಯುತ್ತರಗಳ ಪರಿಮಾಣವನ್ನು ಹೋಲಿಸಿ ನೋಡಿ ಗೆರೆಗಳ ಸಂಖ್ಯೆಗಳನ್ನು ಚನ್ನಾಗಿ ಮುಂದಾಗಿ ಭಾವಿಸಿಕೊಂಡು ನಿಷ್ಪಕ್ಷಪಾತಿಗಳಾದವರು ಈ ಎರಡು ಪತ್ರಗಳನ್ನು ಅಳೆದು ನೋಡಿ ಅವುಗಳ ಚಚ್ಚೌಕ ಕ್ಷೇತ್ರ ಫಲಗಳನ್ನು ತಾವೇ ಲೆಖ್ಖಮಾಡಿಕೊಳ್ಳಲಿ! ಅಂಗೈ ನೋಡುವುದಕ್ಕೆ ಕನ್ನಡಿ ಬೇಕೇ?

ಉದ್ಯಾವರ ಶಾಲೆಯನ್ನು ಕುರಿತು ಹೆಚ್ಚಾಗಿ ಇಲ್ಲಿ ಪುನಃ ಹೇಳಲು ಅವಶ್ಯವಿಲ್ಲ; ಏಕೆಂದರೆ, ದಯಾಳುವಾದ ಬೋರ್ಡಿನವರೂ ವಿದ್ಯಾಖಾತೆಯವರೂ ತಾವಾಗಿಯೇ ಅಂತಹ ಒಂದು ಶಾಲೆಯು ಆ ಗ್ರಾಮದಲ್ಲಿ ಅಗತ್ಯವಿದೆಯೆಂದು ಕಂಡುಕೊಂಡು ಅದನ್ನು ಸ್ಥಾಪಿಸಿರುವರು. ಇನ್ನು ಮೇಲೆ ಒಣ ಮಾತುಗಳಿಂದ ವಾಚಕರನ್ನು ನಾವೇಕೆ ದಣಿಸಲಿ? ಮಾತ್ಸರ್ಯಕ್ಕೆ ಬುದ್ಧಿ ಮಾತುಗಳಿಂದಾಗಲಿ ನೀತಿಯ ಪ್ರತ್ಯುತ್ತರಗಳಿಂದಾಗಲೀ ಈ ತನಕ ಚಿಕಿತ್ಸೆ ಮಾಡಿದವರು ಇಲ್ಲವೇ ಇಲ್ಲವು!

'ಸತತದರ್ಶಿ' ಮಹಾಶಯರಿಗೆ ನಮ್ಮದೊಂದು ಸ್ನೇಹಭಾವದ ಸೂಚನೆ ಇದೆ. ಅವರು 'ದೀಪಿಕೆಯ' ೩೭ನೇ ಸಂಚಿಕೆಯಲ್ಲಿ ಬರೆದ ತನ್ನ 'ಚಿಕ್ಕ' ಪತ್ರದಲ್ಲಿ ಹೆಚ್ಚು ಕಡಿಮೆ ಒಂಭತ್ತು ಗಾದೆಗಳನ್ನೂ ಉದ್ಗೀರ್ಣಮಾಡಿರುವರು. ಅವರು ಇದೇ ವಿಧದಲಿ ಇನ್ನು ಕೆಲವು ಪತ್ರಗಳನ್ನು ಬರೆದರೆ, ಒಂದು ವರುಷದಲ್ಲಿ ಸುಮಾರು ಒಂದು ಸಾವಿರ ಗಾದೆಗಳನ್ನು ಪಸರಿಸಿಬಿಡಬಲ್ಲರು. ಹಾಗೆಯೇ ಮಾಡಿ ಅವರು ಬೇಗನೇ ಒಂದು ಕನ್ನಡ (ಇತ್ಯಾದಿ) ಭಾಷೆಯ ದೊಡ್ಡದೊಂದು ಗಾದಾ ಮಂಜರಿಯ ಪುಸ್ತಕವನ್ನೇ ಬರದು ಪ್ರಕಟಿಸಬಾರದೇ? ಅವರು ತಮ್ಮ ಈ ತೆರದ ಶ್ರಮದಿಂದ ಕನ್ನಡ ನಾಡೆಲ್ಲವನ್ನು ಹಂಗಿಸಿ ಬಿಡಬಾರದೇ? ಅವರು ರೇಗಿಸದಂತೆ, ನಾವೂ ಒಂದೆರಡು ಗಾದೆಗಳನ್ನು ಇದರಲ್ಲಿ ಸೇರಿಸಿರುವೆವು.

'ಸತತದರ್ಶಿ' ಮಹಾಶಯರೇ, ಅಳಿದ ಊರಲ್ಲಿ ಚಿಕ್ಕಾಸು ಬಾಡಿಗೆ ಕೊಡದೆ ಮನೆಗಳು ದೊರಕುತ್ತವೆಯಂತೆ; ಆದರೆ ಜನರು ತುಂಬಿ ಕಿಕ್ಕಿರುವ ಕಡೆಯಲ್ಲಿ ಅಡಿಯೊಂದಕ್ಕೆ ಸಾವಿರ ಹೊನ್ನು ಬಾಡಿಗೆ ತೆತ್ತರೂ ಎಡೆ ದೊರಕಬಲ್ಲುದೇ! ಇನ್ನೂ ಈ ವಿಶಯದಲ್ಲಿ ಅಲಂ!

ಉದ್ಯಾವರ ಬೋರ್ಡು ಶಾಲೆಯು ಚಿರಾಯುವಾಗಿ ಅದರಲ್ಲಿ ಅನೇಕ ವಿದ್ಯಾರ್ಥಿಗಳು ಯತೇಷ್ಟವಾಗಿ ವಿದ್ಯೆಯನ್ನು ಹೊಂದಿ ವಿದ್ಯೆಯ ಅಗಣಿತ ಲಾಭಗಳನ್ನು ಗಳಿಸಿಕೊಳ್ಳಲಿ ಎಂದು ನಾವು ಸದಾ ದೇವರನ್ನು ಪ್ರಾರ್ಥಿಸಿ, ಈ ಸಂಬಂಧದಲ್ಲಿ ನಾವು ಪತ್ರಗಳನ್ನು ಇನ್ನು ಮುಂದಕ್ಕೆ ಬರೆಯಲೊಲ್ಲೆವೆಂದು ಹೇಳಿ 'ಸತತದರ್ಶಿ' ಮಹಾಶಯರಿಂದ ರಜಾ ಹೊಂದುವೆವು.

ಪತ್ರಕ್ಷದರ್ಶಿ.

—*—*—

ವಿದೇಶ ವೃತ್ತಾಂತ.

ಸಣ್ಣ ಪ್ರಾಯದ ಒಬ್ಬ ಚೀನಾ ಹುಡುಗಿಯ ವಾರ್ತೆಯು ಆಶ್ಚರ್ಯವನ್ನುಂಟುಮಾಡುವುದಾಗಿದೆ. ಈ ಹುಡುಗಿಯು ತನ್ನ ೧೫ನೇ ವಯಸ್ಸಿನಲ್ಲಿ ಷಾಂಗಾಯಿ ಪಟ್ಟಣದಲ್ಲಿದ್ದಾಗ ಮಾಂಚೂ ರಾಜ ವಂಶವು ನಾಶವಾಗುತ್ತದೆಂದು ವಿವರಿಸಿ ಒಂದು ಸಣ್ಣ ವಹಿಯನ್ನು ಪ್ರಕಟಿಸಿದಳು. ಇವಳ ಸಂಗಾತಿಯೊಬ್ಬಳು ಸರಕಾರದವರಿಗೆ ಸಿಕ್ಕಿ ಮರಣ ದಂಡನೆಯನ್ನು ಅನುಭವಿಸಿದಳು. ಕೂಡಲೇ ಈ ಹುಡುಗಿಯು ಅಲ್ಲಿಂದ ತಲೆತಪ್ಪಿಸಿಕೊಂಡು ಜಾಪಾನ್ ರಾಜ್ಯಕ್ಕೆ ಓಡಿಹೋಗಿ ಥಾಂಗ್ ಎಂಬ ಒಬ್ಬ ಚೀನಾ ಯೌವನಸ್ಥನನ್ನು ವರಿಸಿ ವಿವಾಹ ಮಾಡಿಕೊಂಡಳು. ಈಚೆಗೆ ಅವಳು ಅಲ್ಲಿಂದ ಸ್ಕೋತ್‍ಲಾಂಡಕ್ಕೆ ಹೋಗಿ ಅಬರ್ಡೀನ್ ಪಟ್ಟಣದಲ್ಲಿ ವಿದ್ಯಾವ್ಯಾಸಂಗ ಮಾಡಿಕೊಂಡು ಅಲ್ಲಿಂದ ಲಂಡನ್ ನಗರಕ್ಕೆ ಬಂದು ಕಾನೂನುಗಳನ್ನು ಅಭ್ಯಾಸಿಸಿ ಗಟ್ಟಿಗಳೆನ್ನಿಸಿಕೊಂಡು ಈಗ ಅಲ್ಲಿಂದ ಚೀನಾ ರಾಜ್ಯಕ್ಕೆ ಹಿಂದಿರುಗಿ ಪ್ರಯಾಣ ಮಾಡುತ್ತಿದ್ದಾಳೆ. ಅವಳಿಗೆ ಈಗ ೨೨ ವರುಷ ವಯಸ್ಸಾಗಿದೆ. ಈಗಿನ ಚೀನ ಪ್ರಜಾಪ್ರಭುತ್ವದ ಮೊದಲನೇ ಪ್ರೆಸಿಡೆಂಟಾಗಿ ನಿಂತಿರುವ ಯುವಾನ್‍ಶಿಕಾಯಿರವರಿಗೆ ಇವಳು ದಾಯಾದಿಯಾಗಿರುತ್ತಾಳೆ.

ಚೀನ ರಾಜ್ಯದ ಪ್ರಜಾ ಪ್ರಭುತ್ವದವರು ಪಂಚರಂಗಿನ ಹೊಸ ಬಾವಟೆಯನ್ನು ಕಟ್ಟಿರುತ್ತಾರೆ. ಇದರಲ್ಲಿ ಮಂಗೋಲಿಯರು, ಚೀನೆಯವರು, ಮಾಂಚೂ ಜನರು, ಮಹಮ್ಮದೀಯರು, ಟಿಬೇಟಿನವರು ಈ ಐದು ವಂಶಗಳ ಪ್ರಜೆಗಳಿಂದ ಏರ್ಪಟ್ಟಿರುವ ಪ್ರಜಾ ಪ್ರಭುತ್ವವೆಂಬುದನ್ನು ಈ ಪಂಚರಂಗಿನ ಬಾವಟೆಯು ನಿರ್ದೇಶಮಾಡುವುದಾಗಿದೆ.

ಟಾಂಗ್-ಶಾ-ಓಯಿ ಎಂಬವರು ಚೀನ ಪ್ರಜಾಧಿಪತ್ಯದ ಮಂತ್ರಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

ಡಿಲ್ಲಿ ಹೊಸ ಪಟ್ಟಣವನ್ನು ಕಟ್ಟಿಸುವ ವಿಲೆವಾರಿ ಮಾಡುವರೆ ಲಂಡನಿನಿಂದ ಕೆಪ್ಟನ್ ಜೋರ್ಜ್ ಸ್ವಿಂಟನ್ ಎಂಬವರು ಕಳುಹಿಸಲ್ಪಡುವರು.

ಪೆಂಟ್‍ಲೆಂಡ್ ಪ್ರಭುಗಳವರು ಮದ್ರಾಸ್ ಗವರ್ನರರಾಗಿ ನೇಮಿಸಲ್ಪಟ್ಟ ಬಹುಮಾನಾರ್ಥವಾಗಿ ಬ್ರಿಟಿಷ್ ಪಾರ್ಲಿಮೆಂಟಿನ ಸ್ಕೋತ್‍ಲಾಂಡದ ಉದಾರ ಮೆಂಬರರು ಪ್ರಭುಗಳವರನ್ನು ಆಮಂತ್ರಿಸಿ ಒಂದು ತಟ್ಟೆಯನ್ನೂ ಕಾಪಿ ಪಿಂಗಾಣಿಯನ್ನೂ ಉಡಿಗೆರೆ ಮಾಡಿ ಇವರ ಗುಣ ಕಥನವನ್ನು ಹೊಗಳಿ ಮದ್ರಾಸಿನಲ್ಲಿ ತಮ್ಮ ಕಾರ್ಯನಿರ್ವಾಹ ಶಕ್ತಿಯಿಂದ ವಿಶೇಷ ಗೌರವವನ್ನು ಪಡೆಯುವರೆಂದು ಹೇಳಿದರು.

ತಾ. ೧೧ನೇ ದಿನ ಟ್ರಿಪೋಲಿಯಲ್ಲಿ ಇಟಾಲಿಯರು ಕಟ್ಟುತ್ತಿರುವ ಕೋಟೆಯ ಕೆಲಸವನ್ನು ತಡೆಯಲು ತುರ್ಕರು ಮುಂದರಿದು ಇಟಾಲಿಯರ ಮೇಲೆ ಬಿದ್ದರು. ಆದರೆ ಉಭಯತರೊಳಗೆ ಕಠಿಣ ಕದನವಾಗಿ ತುರ್ಕರು ಹಿಮ್ಮೆಟ್ಟಿಸಲ್ಪಟ್ಟರು. ಇಟಲಿಯರಲ್ಲಿ ೧೩ ಮಂದಿ ಮಡಿದರು; ೭೮ ಮಂದಿಗೆ ಘಾಯವಾಯಿತು. ತುರ್ಕರು ಅಪರಿಮಿತ ನಷ್ಟಪಟ್ಟರು.

ಬೆಂಗಾಜಿಯಲ್ಲಿಯೂ ಕಠಿಣ ಕದನವಾಯಿತು. ಇಟಲಿಯರಲ್ಲಿ ೨೬ ಮಂದಿ ಮಡಿದರು. ೬೨ ಮಂದಿ ಗಾಯಪಟ್ಟರು. ತುರ್ಕರಲ್ಲಿಯೂ ಅರಬಿಯರಲ್ಲಿಯೂ ಸಾವಿರಕ್ಕಿಂತ ಹೆಚ್ಚು ಮಂದಿ ಮಡಿದರು.

ವರ್ಜಿನಿಯ ಎಂಬಲ್ಲಿಯ ಸಿಡ್ನೆ ಅಲೆನ್ಸ್ ಎಂಬ ಕೋರ್ಟಿನಲ್ಲಿ ಒಬ್ಬ ಪ್ರಖ್ಯಾತಿಪಟ್ಟ ದರೋಡೆ ಕಳ್ಳನ ಮೊಕದಮೆಯು ತನಖಿಯಾಗುತ್ತಿರುವಾಗ ಕಳ್ಳನ ಸ್ನೇಹಿತರೂ ಸಹೋದರರೂ ಜಡ್ಜರಿಗೂ ಸರಕಾರಿ ವಕೀಲ ಮೊದಲಾದವರಿಗೂ ಗುಂಡು ಹೊಡೆದು ಒಟ್ಟಿಗೆ ೫ ಜನರನ್ನು ಕೊಂದು ೨೩ ಮಂದಿಯನ್ನು ಗಾಯ ಪಡಿಸಿ ಕುದುರೆ ಮೇಲೆ ಹತ್ತಿ ಓಡಿ ಹೋಗಿರುವರು. ಈ ಘಾತುಕರನ್ನು ಹಿಡಿದಿರುತ್ತಾರೆ.

ಇಂಗ್ಲಾಂಡಿನ ಕಲ್ಲಿದ್ದಲು ಗಣಿಗಳ ಕೆಲಸಗಾರರ ಮುಷ್ಕರವು ಇನ್ನೂ ತೀರಲಿಲ್ಲ. ಗಣಿ ಕೆಲಸಗಾರರಲ್ಲಿ ಅಲ್ಲದೆ ಕಬ್ಬಿಣ ಕಾರ್ಖಾನೆಗಳ ಕೆಲಸಗಾರರಲ್ಲಿ ೨೩೬,೦೦೦ ನೇಯುವ ಕೆಲಸಗಾರರಲ್ಲಿ ೮೫,೩೮೦; ರೈಲ್ವೆಯಲ್ಲಿ ೭೭,೦೦೦; ನಾವಾಶಯದಲ್ಲಿ ೭೮,೦೫೦; ಗಡಿಗೆ ಕೆಲಸದವರಲ್ಲಿ ೮೦,೦೦೦; ಮನೆ ಕಟ್ಟುವವರಲ್ಲಿ ೪೯,೭೦೦; ಕಲಾಶಿಗಳಲ್ಲಿ ೪೯,೭೦೦; ಸಣಬು ಕೆಲಸಗಾರರಲ್ಲಿ ೨೫,೦೦೦; ಗೋಟು (Lace) ಕೆಲಸಗಾರರಲ್ಲಿ ೮,೨೦೦; ಮೊನುಗಾರರಲ್ಲಿ ೭೫೦೦; ಇಂಜಿನಿಯರರಲ್ಲಿ ೭೫೦೦; ಮಿಟಾಯಿ ಮಾಡುವವರಲ್ಲಿ ೩೫೦೦; ವ್ಯವಸಾಯ ಸಾಹಿತ್ಯ ಮಾಡುವವರಲ್ಲಿ ೧೭೫೦; ಕುಪ್ಪಿ ಮಾಡುವವರಲ್ಲಿ ೧೫೫೦; ಇನ್ನು ಇತರ ಆಯಾ ಕೆಲಸಗಾರರಲ್ಲಿ ಸುಮಾರು ೬೦,೦೦೦ ಮಂದಿ ಕೆಲಸಕ್ಕೆ ಮುಷ್ಕರ ಹಿಡಿದಿರುತ್ತಾರೆ.

ಈ ಮುಷ್ಕರದಿಂದ ಇಂಗ್ಲಾಂಡಿನ ಗ್ರೇಟ್ ವೆಸ್ಟರ್ನ್ ರೈಲ್ವೆಯವರು ೧೭೦ ರೈಲ್ವೇ ಗಾಡಿಗಳನ್ನೂ ಲಂಡನ್ ನೊರ್ಥ್ ವೆಸ್ಟರ್ನ್ ರೈಲ್ವೆಯವರು ೧೨೫ ಗಾಡಿಗಳನ್ನೂ ಓಡಿಸುವದು ವಜಾಮಾಡಿದ್ದಾರೆ. ಮೆಟ್ರೊಪೊಲಿಟನ್ ಎಂಬ ರೈಲ್ವೆಯವರೂ ತಮ್ಮ ಗಾಡಿಗಳನ್ನು ಸದ್ಯದಲ್ಲಿ ಕಮ್ಮಿ ಮಾಡುತ್ತೇವೆಂದು ಪ್ರಕಟಿಸಿದ್ದಾರೆ.

ಜಪಾನಿನಲ್ಲಿ ಎಲ್ಲಾ ಶಾಲಾ ಹುಡುಗರು ಶಿಂತೊ ದೇವಸ್ಥಾನಕ್ಕೆ ಹೋಗಬೇಕಾಗಿ ಸರಕಾರದವರು ಹುಕುಂ ಕೊಟ್ಟಿದ್ದಾರೆ. ಕ್ರೈಸ್ತ ಮಿಶ್ಯನರಿಗಳು ಸ್ಥಾಪಿಸಿದ ಶಾಲೆ ಹುಡುಗರೂ ಮತ್ತು ಕ್ರೈಸ್ತ ಮತದವರ ಮಕ್ಕಳೂ ಶಿಂತೋ ದೇವಸ್ಥಾನಕ್ಕೆ ಹೋಗುವ ಅಗತ್ಯವಿಲ್ಲವಾಗಿ ರೂಲಿನಲ್ಲಿ ವಿನಾಯತಿ ಮಾಡಲಿಲ್ಲ. ಶಿಂತೋಗೆ ಮರ್ಯಾದೆ ಕೊಡದವರು ಸ್ವದೇಶ ವಾತ್ಸಲ್ಯವಿಲ್ಲದವರೆಂತಲೂ ಸರಕಾರಕ್ಕೆ ಅವಿಧೇಯರೆಂತಲೂ ಅನ್ನಿಸಿಕೊಳ್ಳುತ್ತಾರಾದುದರಿಂದ ಜಪಾನಿನಲ್ಲಿರುವ ಕ್ರೈಸ್ತ ಮಿಶ್ಯನರಿಗಳಲ್ಲಿ ಸ್ವಲ್ಪ ಗಲಿಬಿಲಿಯುಂಟಾಗಿದೆ.

ಒಬ್ಬ ಪಾದ್ರಿ ಸಾಹೇಬರ ಮಗ ಒಲ್ಟರ್ ರೆಡ್‍ಫರ್ನ್ ಎಂಬವರು ಇಂಗ್ಲಾಂಡಿನಲ್ಲಿ ಸೆಂಡ್‍ಬೆಕ್ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದಾರೆ. ಇವರು ಕ್ರಿಸ್ತ ಯೇಸು ದೇವರಲ್ಲ, ಒಬ್ಬ ಮಹಾ ಪುರುಷನಾಗಿದ್ದನೆಂತ ಹೇಳಿ, ಆತನು ದಫನ ಮಾಡಲ್ಪಟ್ಟ ಸ್ಥಳದಿಂದ ಮೂರನೇ ದಿನ ಸ್ವರ್ಗಾರೋಹಣ ಮಾಡಿದನು, ಆತನನ್ನು ತಿರಸ್ಕರಿಸುವ ಆತ್ಮವು ಅನಂತಕಾಲದ ವರೆಗೆ ನರಕಯಾತನೆಯಲ್ಲಿ ಬೀಳುತ್ತದೆ ಎಂಬ ಕ್ರೈಸ್ತ ಮತದವರ ಧರ್ಮ ಸೂತ್ರಗಳನ್ನು ನಂಬುವದಿಲ್ಲವಾದುದರಿಂದ ಅವನನ್ನು ಉಪಾಧ್ಯಾಯ ಕೆಲಸದಿಂದ ತೆಗದು ಹಾಕಬೇಕಾಗಿ ಶಾಲಾ ಸಬ್ ಕಮಿಟಿಯವರು ನಿರ್ಣಯಿಸಿರುವರು.

ಇದೇ ತಾ. ೧೩ರಲ್ಲು ಇಟಲಿ ಅರಸರಾದ ವಿಕ್ಟೋರ್ ಇಮ್ಮಾನುವೇಲರವರು ಹಂಬರ್ಟ ರಾಜರ ಜನ್ಮಾಚರಣೆ ದಿನದ ಉತ್ಸವಕ್ಕೆ ಹಾಜರಾಗಲು ರಾಣಿಯೊಂದಿಗೆ ರಥಾರೂಢರಾಗಿ ಪೆಂಥೊನಿಗೆ ಹೋಗುತ್ತಿರುವಾಗ ಡೆಲ್ಬ ಎಂಬ ಒಬ್ಬ ಯುವಕನು ಇವರ ಮೇಲೆ ಗುರಿ ಇಟ್ಟು ಮೂರಾವೃತ್ತಿ ಗುಂಡು ಹೊಡೆದನು. ಆದರೆ ಈ ಗುಂಡು ರಾಜರಿಗೆ ತಪ್ಪಿ ರಾಜರ ಮೈಗಾವಲಿ ಸೈನ್ಯದ ಅಧಿಪತಿಯಾಗಿದ್ದ ಮೆಜರ್ ಲೇಂಗ್ ಎಂಬವರ ಮೇಲೆ ಬಿದ್ದದರಿಂದ ಕುದುರೆಯಿಂದ ಕೆಳಗೆ ಬಿದ್ದರು. ಕೂಡಲೇ ಇವರನ್ನು ಆಸ್ಪತ್ರಿಗೆ ವೈದರು. ಘಾತುಕನನನ್ನೂ ಕೈದು ಮಾಡಿದರು. ರಾಜರು ಈ ಅವಗಡದಿಂದ ತಪ್ಪಿದಕ್ಕಾಗಿ ಎಲ್ಲರೂ ಬಹಳವಾಗಿ ಸಂತೋಷಿಸಿದರು. ಆಯಾ ರಾಜ್ಯದ ಅರಸರೂ ಶ್ರೀಮಂತರೂ ರಾಜರಿಗೆ ತಂತಮ್ಮ ಅಭಿನಂದನವನ್ನು ತಂತೀ ಮೂಲಕ ಕಳುಹಿಸಿರುತ್ತಾರೆ. ಇವರಿಗೆ ಕಳುಹಿಸಲ್ಪಟ್ಟ ತಂತೀ ವಾರ್ತೆಯಲ್ಲಿ ಜೋರ್ಜ ಸಾರ್ವಭೌಮರವರದು ಮೊದಲನೇದಾಗಿತ್ತು. ಇಮ್ಮಾನುವೇಲ್ ರಾಜರು ಸಾಯಂಕಾಲ ಮೋಟೋರ್ ಬಂಡಿಯಲ್ಲಿ ಕುಳಿತು ಆಸ್ಪತ್ರಿಗೆ ಹೋಗಿ ಮೇಜರ್ ಲೇಂಗರವರನ್ನು ನೋಡಿಕೊಂಡು ಬಂದರು.

ಲಂಡನಿನಲ್ಲಿ ವಕೀಲ ಪರೀಕ್ಷೆಗೆ ಓದುತ್ತಿರುವ ಭಾರತೀಯ ವಿದ್ಯಾರ್ಥಿಯಾದ ನಾಗೇಂದ್ರ ಪುರುಷೋತ್ತಮ ಗಂಧಿ ಎಂಬ ೨೪ ವರ್ಷದ ಯುವಕನೊಬ್ಬನು ಲಂಡನಿನ ಒಂದು ಸಿಗರೇಟ್ ಅಂಗಡಿಯಿಂದ ಒಂದು ಪೆಟ್ಟಿಗೆ ಸಿಗರೇಟ್ ಕದ್ದಿರುವನೆಂಬ ತಕ್ಷೀರಿಗೆ ಗುರಿಯಾಗಿರುವನು. ಈ ವಿದ್ಯಾರ್ಥಿಯು ಅಂಗಡಿಗೆ ಹೋಗಿ ವಿವಿಧ ನಮೂನೆಯ ಸಿಗರೇಟುಗಳನ್ನು ನೋಡಿಕೊಂಡು ಅಂಗಡಿಯಿಂದ ಸುಮಾರು ೬೦ ಗಜ ದೂರ ಹೋದಾಗ ಅಂಗಡಿಯವನಿಗೆ ಒಂದು ಪೆಟ್ಟಿಗೆ ಸಿಗರೇಟ್ ಕಮ್ಮಿಯಾಗಿದೆಂತ ತಿಳಿದು ಬಂದದರಿಂದ ಆತನ ಹಿಂದೆ ಓಡಲು, ಮುದ್ದೈಯಾಲೆಯ ಕೈಯಲ್ಲಿ ಕಳವಾದ ಒಂದು ಪೆಟ್ಟಿಗೆ ಸಿಗರೇಟ್ ಇತ್ತೆಂಬದಾಗಿಯೂ ಕೇಳಿದಾಗ ತಾನು ಅದಕ್ಕೆ ಕ್ರಯ ಕೊಟ್ಟು ತಂದಿದ್ದೇನೆಂತ ಹೇಳಿದನೆಂತಲೂ ಮುದ್ದೈ ಕಡೆಯ ವಾದವಾಗಿರುತ್ತದೆ. ಮುದ್ದೈಯಾಲೆಯು ಅಂಗಡಿಗೆ ಹೋಗಿ ಸಿಗರೇಟ್ ಪೆಟ್ಟಿಗೆ ಕೈಯಲ್ಲಿ ಹಿಡಿಯಲು ಅಂಗಡಿಯ ಮಾಲೀಕನು ಮುಟ್ಟಕೂಡದೆಂದು ಹೇಳಿದ್ದರಿಂದ ತಾನು ಶಿಟ್ಟಿನಿಂದ ಅಲ್ಲಿಯೇ ಸಿಗರೇಟ್ ಪೆಟ್ಟಿಗೆಯನ್ನು ಹಾಕಿ ಹಿಂದೆ ಬರುವಾಗ ಅಂಗಡಿಯವನು ಪೋಲಿಸಿನವನ ಕೂಡೆ ಬಂದು ತನ್ನನ್ನು ಕೈದು ಮಾಡಿಸಿದನೆಂತಲೂ ತಾನು ಅಲ್ಲಿ ಏನೊಂದೂ ವಾಜ್ಮೂಲ ಕೊಡಲಿಲ್ಲವೆಂತಲೂ ಮುದ್ದೈಯಾಲೆ ಕಡೆಯ ವಾದವಾಗಿರುತ್ತದೆ. ಮುದ್ದೈಯಾಲೆಯನ್ನು ೧೦ ಪವನು ಜಾಮೀನಿನ ಮೇಲೆ ಬಿಟ್ಟಿರುವರು.

ಲಂಡನಿನಿಂದ ಮುಂಬಾಯಿಗೆ ಬರುತ್ತಿದ್ದ ಓಶೀನಿಯ ಎಂಬ ಹಡಗವು ಬೀಚೆಹೆಡ್ ಎಂಬ ಸ್ಥಳಕ್ಕೆ ನಾಲ್ಕು ಮೈಲು ದೂರದಲ್ಲಿರುವಾಗ ಪಿಸಾಗ್ವ ಎಂಬ ಹಡಗಕ್ಕೆ ತಾಗಿ ಒಡೆದು ಹೋಯಿತು. ಈ ಹಡಗದಲ್ಲಿ ಒಟ್ಟಿಗೆ ಸುಮಾರು ೫೦೦ ಪ್ರಯಾಣಸ್ಥರಿದ್ದರು. ಓಶೀನಿಯವು ೨೦ ನಿಮಿಷದಲ್ಲಿ ಮುಣುಗಿಹೋಯಿತು. ಪ್ರಯಾಣಸ್ಥರಲ್ಲಿ ಹೆಚ್ಚಿನವರು ರಕ್ಷಿಸಲ್ಪಟ್ಟರು. ಕೆಲವು ಕಲಾಶಿಗಳು ಮುಣುಗಿದರು. ಕಲಾಶಿಗಳಲ್ಲಿ ಕಾಣದೆ ಹೋದವರ ಸಂಖ್ಯೆ ತಿಳಿದು ಬರಲಿಲ್ಲ.

ಚೀನದ ಕಾನ್ಸು ಎಂಬಲ್ಲೇರ್ಪಟ್ಟಿರುವ ಸೇನೆಯು ಸರಕಾರದ ಸೈನ್ಯವನ್ನು ಸೋಲಿಸಿ ಕಲಗಾನ್ ರೈಲ್ವೆಯ ಕಡೆ ಮುಂದರಿಯುತ್ತಿರುವುದು. ಈ ಸೇನೆಯು ಒಳ್ಳೆಯ ಆಯುಧಪಾಣಿಗಳಾದ ೧೦೦೦ ಜನರನ್ನೊಳಗೊಂಡು ಚಕ್ರವರ್ತಿಯನ್ನು ಪುನಃ ಅಧಿಕಾರಕ್ಕೆ ತರುತ್ತೇನೆಂದು ಹೇಳಿಕೊಳ್ಳುತ್ತಿರುವ ಜನರಲ್ ಷೆಂಗ್‌ಯುನ್ ಎಂಬವನ ನಾಯಕತ್ವದಿಂದ ನಡಿಸಲ್ಪಡುತ್ತಿರುವುದು. ಹೊಸ ಅಧ್ಯಕ್ಷನಾದ ಯುಅನ್ ಷಿಕಾಯಿರವರ ರಾಯಭಾರಿಗಳು ಜನರಲ್ ಷೆಂಗ್‌ಯನ್ನನ್ನು ಕಂಡು ಪ್ರಕೃತ ಸ್ಥಿತಿಯನ್ನು ಅವನಿಗೆ ತಿಳಿಯ ಹೇಳಲು ಹೋಗಿರುತ್ತಾರೆ.

~~~~~~

ಲಂಡನ್ ಪಟ್ಟಣದಲ್ಲಿ ೫ ವರ್ಷಗಳಿಂದ ಬಹುಮೂತ್ರ ಮತ್ತು ಇತರ ಕೆಲವು ಅಂಟು ರೋಗಗಳಿಂದ ನರಳುತ್ತಿದ್ದ ಒಬ್ಬ ಯುವತಿಯು ಕುರುಡಿಯೂ ಕಿವುಡಿಯೂ ಆಗಿ ಹೋದಳು. ಇದರಿಂದ ಇವಳು ಬದುಕುವದಿಲ್ಲವೆಂದು ವೈದ್ಯರು ನಿರ್ಧರಿಸಿದರು. ವೈದ್ಯನ ಮಾತಿನ ಮೇರೆಗೆ ಆ ರೋಗಿಯ ತಾಯಿ ಮೊದಲಾದ ಎಲ್ಲಾ ಬಂಧುಗಳು ಆಕೆಯ ಹಾಸಿಗೆ ಸುತ್ತಾ ಕೂತುಕೊಂಡು ಯಾವಾಗ ಪ್ರಾಣ ಹೋಗುತ್ತದೋ ಎಂತ ನಿರೀಕ್ಷಿಸುತ್ತಿರುವಲ್ಲಿ ಹುಡುಗಿಯು ಥಕ್ಕನೇ ಹಾಸಿಗೆಯಿಂದೆದ್ದು ಮುಂದಕ್ಕೆ ನಡೆದುಕೊಂಡು ಬಂದಳು. ಅಂದಿನಿಂದ ಅವಳ ಕಣ್ಣು ಚನ್ನಾಗಿ ಕಾಣಿಸುವುದಲ್ಲದೆ ಕಿವಿಯು ಕೇಳಿ ಪೂರ್ಣ ಸೌಖ್ಯದಿಂದಿರುವಳು. "ನನಗೆ ಒಂದು ಮಹಾ ಪ್ರಕಾಶವು ಕಾಣಿಸಿಕೊಂಡು ಯಾವುದೋ ಎರಡು ಕೈಗಳು ನನ್ನ ಎರಡು ಕೈಗಳನ್ನು ಹಿಡಿದು ನನ್ನ ಕಣ್ಣುಗಳ ಸಮೀಪಕ್ಕೆ ಎತ್ತಿ ನನ್ನನ್ನು ಹಾಸಿಗೆಯಿಂದ ಮೇಲಕ್ಕೆತ್ತಿದುವು. ನಾನು ನೆಟ್ಟಗೆ ಕೂತುಕೊಂಡಾಗ ಎರಡಾವೃತ್ತಿ ನಿನ್ನ ಕಷ್ಟವೆಲ್ಲವೂ ಪರಿಹಾರವಾಗಿರುತ್ತದೆ; ಎದ್ದು ನಡೆ ಎಂದು ಹೇಳಿದ ಹಾಗಾಯಿತು" ಎಂಬದಾಗಿ ಹೇಳುತ್ತಿರುವಳು.

~~~~~~

ಉತ್ತರ ಹಿಂದುಸ್ಥಾನ.

~~~~~~

ಇದೇ ಬರುವ ಎಪ್ರಿಲ್ ೧ನೇ ತಾರೀಕಿನಿಂದ ಹಿಂದೂಸ್ಥಾನದ ಎಲ್ಲಾ ಟಪ್ಪಾಲು ಆಪೀಸುಗಳಲ್ಲಿ ಜೋರ್ಜ ಸಾರ್ವಭೌಮರವರ ಪ್ರತಿಚ್ಛಾಯೆ ಇರುವ ಹೊಸ ಅರ್ಧಾಣೆ ಮತ್ತು ಎರಡು—ಎರಡುವರೆ ಆಣೆಯ ಟಪ್ಪಾಲು ಚೀಟುಗಳು ಮಾರಲ್ಪಡುವವು. ಅದೇ ದಿನ ಕಾಲಾಣೆಯ ಮತ್ತು ಅರ್ಧಾಣೆಯ ಹೊಸ ಸರ್ವಿಸ್ ಚೀಟುಗಳೂ ಎಲ್ಲಾ ಟ್ರೆಜರಿಗಳಲ್ಲಿ ದೊರಕುವದು.

~~~~~~

ಮಿಡ್ನಾಪುರ ಮಾನನಷ್ಟ ಮೊಕದಮೆಯ ಅಪೀಲ್ ತನ್ನಿಯು ಎಪ್ರೀಲ್ ತಾ. ೧೦ನೇಗೆ ಪ್ರಾರಂಭವಾಗುವದು.

~~~~~~

ಡಿಲ್ಲಿ ದರ್ಬಾರ್ ಕಾಲದಲ್ಲಿ ಮಹೋಪಧ್ಯಾಯ ಮತ್ತು ಶ್ಯಾಮ್ಸಲ್ ಉಲ್ಮ ಎಂಬ ಬಿರುದು ಸಿಕ್ಕಿದವರಿಗೆಲ್ಲಾ ಪ್ರತಿ ವರುಷವೂ ೧೦೦ ರೂಪಾಯಿಗಳ ವರುಷಾಶನವು ಪ್ರತಿ ದಶಂಬರ ತಾ. ೧೨ಕ್ಕೆ ಕೊಡೋಣಾಗುವುದೆಂತ ವ್ಯಾಸರಾಯರವರು ಪ್ರಕಟಿಸಿದ್ದಾರೆ.

~~~~~~

ಲಾಹೋರಿನ ಲ್ಯಾಲಪುರದ ಮಾಜಿ ಸರಕಾರಿ ವಕೀಲರಾಗಿದ್ದ ಹಕೀಮ್ ಹಮೀನರಿಗೆ ೨ ವರುಷಗಳ ಕಠಿಣ ಸಜಾ ವಿಧಿಸೋಣಾಯಿತೆಂತ ತಿಳಿಸಿತ್ತಷ್ಟೆ. ಇವರು ಅಪೀಲ್ ಮಾಡಿಕೊಂಡಲ್ಲಿ ಹಕೀಮರ ಮೇಲೆ ತಕ್ಷೀರು ಸಾಬೀತಾಗುವರೆ ತಕ್ಕಷ್ಟು ರುಜುವಾತಿಲ್ಲವೆಂಬದಾಗಿ ಜಡ್ಜರವರು ಅಭಿಪ್ರಾಯ ಪಟ್ಟು ಅವರನ್ನು ಖುಲಾಸು ಪಡಿಸಿದರು.

~~~~~~

ಲಾಹೋರಿನ ಪಂಡಿತ ಶೀತಾರಾಮ ಎಂಬವರನ್ನು ಯಾರೋ ದುಶ್ಕಾನರು ಕೊಂದು ಅವರ ಶಿರವನ್ನು ಎಲ್ಲಿಯೋ ಅಡಗಿಸಿಟ್ಟಿರುವರು. ಘಾತುಕರು ಪತ್ತೆಯಾಗಲಿಲ್ಲ.

~~~~~~

ಲಾಹೋರಿನ ಹಣ ಸಾಲಕೊಡುವವ ಲಜಪತ್ ರಾಯಿ ಎಂಬವರು ಹೋಳಿ ಹಬ್ಬದ ಸಮಯ ತನ್ನ ೧೦ ವರುಷದ ಮೊಮ್ಮಗನೊಡನೆ ಒಂದು ನೆರೆ ಗ್ರಾಮಕ್ಕೆ ಹೋದರು. ಅಲ್ಲಿ ಇವರು ಸರಾಯಿ ಕುಡಿದು ಮತ್ತರಾಗಿದ್ದಾಗ ಯಾರೋ ಘಾತುಕರು ಹುಡುಗನನ್ನು ಮತ್ತೊಂದು ಸ್ಥಳಕ್ಕೆ ವೈದು ಇವರನ್ನು ಕೊಂದು ಮಾರಣೇ ದಿನ ರಾತ್ರಿ ಇವರ ಹೆಣವನ್ನು ಇವರ ಗ್ರಾಮಕ್ಕನೇ ತಂದು ಒಣಗಿದ ಹತ್ತೀ ಪೈರಿನ ಮಧ್ಯೆ ಹಾಕಿ ಬೆಂಕಿ ಕೊಟ್ಟಿರುವರು.

~~~~~~

ಮುಂಬಾಯಿಯ ಬಂದರದಲ್ಲಿ ಡೈನಾಮೆಟ್ ಸಿಡಿದು ಅದನ್ನು ಕಾಯುತ್ತಿದ್ದ ೧೦ ಮಂದಿಯು ಮೇಲಕ್ಕೆ ಹಾರಿಸಲ್ಪಟ್ಟು ಸತ್ತು ಬಿದ್ದರು. ಈ ಸಿಡಿತದಿಂದ ಮುಂಬಾಯಿಯಲ್ಲಿ ಕೆಲವು ಮನೆಗಳ ಕಿಡಿಕಿಗಳು ಒಡೆದವು. ಆಜುಬಾಜಿನಲ್ಲಿದ್ದ ಜನರು ಬಹಳ ಭಯಪಟ್ಟರು.

~~~~~~

ಕಂಗಾರ ಎಂಬ ಜಿಲ್ಲೆಯಲ್ಲಿ ಕೆಲವು ವರ್ಗದಾರರೊಳಗೂ ಒಕ್ಕಲಿಗರೊಳಗೂ ಒಂದು ಕಲಹ ಉಂಟಾದ್ದರಿಂದ ಇವರ ಗ್ರಾಮಕ್ಕೆ ೬೦ ಮೈಲು ದೂರದಲ್ಲಿರುವ ಹಮೀರಪುರದ ಡ್ಯುಪಿಟಿ ಕಮಿಶನರು ಉಭಯತರನ್ನೂ ಕೋರ್ಟಿಗೆ ಹಾಜರಾಗಲು ಅಪ್ಪಣೆವಿತ್ತರು. ಈ ಸಮಯ ಕಠಿಣ ಮಳೆ ಮತ್ತು ಚಳಿಕಾಲವಾಗಿದ್ದದರಿಂದ ಕಕ್ಷಿಗಾರರು ಬಹಳ ಕಷ್ಟದಿಂದ ಹಮೀರಪುರಕ್ಕೆ ಮುಟ್ಟಿದರು. ಡಿ। ಕಮಿಶನರು ಅಲ್ಲಿ ಇವರನ್ನು ವಿಚಾರಿಸದೆ ೧೫ ಮೈಲು ದೂರ ಇರುವ ಇತರ ಎರಡು ಸ್ಥಳಗಳಿಗೆ ಬರಬೇಕೆಂದು ಅಪ್ಪಣೆ ಮಾಡಿದರು. ಬಹಳ ಕಷ್ಟದಿಂದ ಇವರು ಇಲ್ಲಿಗೆ ಮುಟ್ಟುತ್ತಲೇ ಪುನಃ ಅಲ್ಲಿಂದ ೫೦ ಮೈಲು ದೂರದಲ್ಲಿರುವ ಸ್ಥಳದಲ್ಲಿ ಹಾಜರಾಗಬೇಕೆಂದು ಇವರಿಗೆ ಅಪ್ಪಣೆಯಾಯಿತು ಎಂಬದಾಗಿ ಟ್ರಿಬ್ಯೂನ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಇನ್ನೊಂದು ಸಂಗತಿಯಲ್ಲಿ ೬೦ ವರುಷ ಪ್ರಾಯದ ಒಬ್ಬ ಮುದುಕ ಚೌಕಿದಾರನಿಗೆ ಡ್ಯುಪಿಟಿ ಕಮಿಷನರ ಟಪ್ಪಾಲನ್ನು ರಾತ್ರಿಗೆನೇ ಕೊಂಡ್ಹೋಗಬೇಕೆಂದು ಅಪ್ಪಣೆಯಾಯಿತು. ಈತನು ರಾತ್ರಿಗೆ ಹೊರಟು ದಾರಿ ತಪ್ಪಿದನು. ಮರುದಿನ ಕಂಗಾರಕ್ಕೆ ಒಂದು ಮೈಲು ದೂರದಲ್ಲಿದ್ದ ಒಂದು ಹೊಳೆಯಲ್ಲಿ ಇವನ ಹೆಣವು ಸಿಕ್ಕಿತು. ಟಪ್ಪಾಲು ಸಿಕ್ಕಲಿಲ್ಲ. ಈ ಟಪ್ಪಾಲನ್ನು ಹುಡುಕಿ ಕೊಡಬೇಕೆಂತ ಕೆಲವು ಮೀನುಗಾರರಿಗೆ ಅಪ್ಪಣೆಯಾಯಿತು. ಅವರು ಬಹು ಪ್ರಯತ್ನದಿಂದ ಹುಡುಕಿಕೊಟ್ಟರು. ಆದರೆ ಅವರಿಗೆ ಪ್ರತಿಫಲ ದೊರಕಲಿಲ್ಲವೆಂಬದಾಗಿ ಅದೇ ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~~~

ಜೋರ್ಜ ಸಾರ್ವಭೌಮರವರು ಹಿಂದೂಸ್ಥಾನಕ್ಕೆ ಚಿತ್ತೈಸಿದ ಜ್ಞಾಪಕಾರ್ಥವಾಗಿ ಮುಂಬಾಯಿಯ ಅಪಲ್ಲೋ ಬಂದರಿನಲ್ಲಿ ನಿರ್ಮಿಸಲಿಕ್ಕಿರುವ 'ಹಿಂದೂಸ್ಥಾನದ ಹೆಬ್ಬಾಗಲಿ'ಗೆ ಸರ್ ಜಾಕೋಬು ಸೆಸೂನರವರು ೩ ಲಕ್ಷ ರೂಪಾಯಿ ವಂತಿಗೆ ಕೊಟ್ಟಿರುತ್ತಾರೆ.

~~~~~~

ಸಂಸ್ಥಾಪಿಸಲಿಕ್ಕಿರುವ ಆಲಿಗರದ ಮುಸಲ್ಮಾನ ವಿಶ್ವವಿದ್ಯಾ- ಕಲಾ ಶಾಲೆಗೆ ಭೋಪಾಲಿನ ಬೇಗಮರವರು ೧೨೫,೦೦೦ ರೂಪಾಯಿ ವಂತಿಗೆ ಕೊಟ್ಟರು. ಈ ಮೊದಲು ಇದೇ ಉದ್ದೇಶಕ್ಕಾಗಿ ಒಂದು ಲಕ್ಷ ರೂಪಾಯಿ ವಂತಿಗೆ ಕೊಟ್ಟಿದ್ದರು.

~~~~~~

ಹಿಂದೂಸ್ಥಾನದಲ್ಲಿ ಜೋರ್ಜ ಸಾರ್ವಭೌಮರ ಜನ್ಮಾಚರಣೋತ್ಸವವು ಜೂನ್ ೩ನೇ ಸೋಮವಾರ ದಿನ ಆಚರಿಸಲ್ಪಡುವದು.

~~~~~~

ದಕ್ಷಿಣಹಿಂದೂಸ್ಥಾನ.

~~~~~~

ಚೆಂಗಲ್ಪಟ್ಟಿನ ಜ್ಯೊಂಟ್ ಮೆಜಿಸ್ಟ್ರೇಟರಾದ ಮೆ। ಜೆಕ್ಷನರವರು ಸಲಾಮ್ ಮಾಡಿದಕ್ಕಾಗಿ ೭ ವರುಷ ವಯಸ್ಸಿನ ಧನಪಾಲನೆಂಬ ಬಾಲಕನಿಗೆ ೫ ರೂಪಾಯಿ ಜುರುಮಾನೆ ವಿಧಿಸಿದ್ದರಿಂದ ಹುಡುಗನ ತಂದೆಯು ಮದ್ರಾಸ್ ಹ್ಯಾಕೋರ್ಟಿಗೆ ಅಪೀಲು ಮಾಡಿಕೊಂಡಿರುವರು. ಮುದ್ದೈಯು ತಾನೇ ಮೆಜಿಸ್ಟ್ರೇಟರಾಗಿದ್ದು ಮೊಕದಮೆಯನ್ನು ತೀರಿಸಲು ಅರ್ಹರಾಗಿರುವದಿಲ್ಲ. ಒಂದುವೇಳೆ ತನಖಿ ನಡಿಸಬಹುದಾದರೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಅಪ್ಪಣೆ ವಿನಹಾ ಕೂಡದು, ಅದಲ್ಲದೆ ತಕ್ಕ ವಿಚಾರಣೆ ನಡೆಯಲಿಲ್ಲ. ಮೆಜಿಸ್ಟ್ರೇಟರು ತಾನೇ ತನ್ನ ವಾಜ್ಮೂಲವನ್ನು ಬರೆದುಕೊಂಡಿರುವರು. ಮೆ। ಜೆಕ್ಷನರಿಗೆ ಹುಡುಗನು ಸಲಾಂ ಎಂಬದಾಗಿ ಹೇಳಿದ್ದು ಮಾನಭಂಗ ಪಡಿಸುವಂಥಾ ಉದ್ದೇಶದಿಂದಲ್ಲ. ಅದಲ್ಲದೆ ಹುಡುಗನು ೭ ವರುಷ ವಯಸ್ಸಿನ ಕೆಳಗಿನವನಾಗಿರುವುದರಿಂದ ಆತನ ಮೇಲೆ ಇ. ಪಿ. ಕೋಡಿನ ಪ್ರಕರಣಗಳು ಲಗಾವಾಗುವದಿಲ್ಲವೆಂಬಿತ್ಯಾದಿ ಕಾರಣಗಳಿಂದ ಈ ಮೊಕದಮೆಯನ್ನು ಪುನರಾವರ್ತನೆ ಮಾಡಬೇಕೆಂಬದಾಗಿ ಹುಡುಗನ ಕಡೆಯ ವಕೀಲನ ವಾದವಾಗಿರುತ್ತದೆ. ಜಸ್ಟಿಸ್ ಶಂಕರ ನಾಯರರವರು ಈ ಮೊಕದಮೆಯನ್ನು ಪುನರಾವರ್ತಿಸಲು ಒಪ್ಪಿಕೊಂಡಿರುವರು.

~~~~~~

ಇದೇ ಕಳದ ೧೩ನೇ ದಿನ ಕೂಡಿದ ಮದ್ರಾಸ್ ನ್ಯಾಯವಿಧಾಯಕ ಸಭೆಯಲ್ಲಿ ಸೆಟ್ಲ್‌ಮೆಂಟ್ ಇಲಾಖೆಯ ಸ್ಪೆಶ್ಯಲ್ ಆಫೀಸರಾಗಿಯೂ ಅಸಿಸ್ಟಾಂಟ್ ಸ್ಪೆಶ್ಯಲ್ ಆಫೀಸರಾಗಿಯೂ ಭಾರತೀಯರಲ್ಲಿ ಈ ತನಕ ಯಾರೂ ನೇಮಿಸಲ್ಪಡಲಿಲ್ಲವೆಂಬ ಪ್ರಸ್ತಾಪವು ಬಂತು. ಅದಕ್ಕೆ ಮೆ। ಅಟ್ಕಿನ್‌ಸನರವರು ಎಡೆ ಸಿಕ್ಕಿದಾಗ ಒಬ್ಬ ಭಾರತೀಯನನ್ನು ಸ್ಪೆಶ್ಯಲ್ ಸೆಟ್ಲ್‌ಮೆಂಟ್ ಆಫೀಸರಾಗಿಯೂ ಮತ್ತೊಬ್ಬನನ್ನು ಅಸಿಸ್ಟಾಂಟ ಸ್ಪೆಶ್ಯಲ್ ಆಫೀಸರಾಗಿಯೂ ನೇಮಿಸುವರೆ ಮದ್ರಾಸ್ ಸರಕಾರದವರು ಈ ಮೊದಲೇ ಆಲೋಚಿಸಿರುವರೆಂಬದಾಗಿ ಉತ್ತರ ಕೊಟ್ಟರು.

~~~~~~

ಡಿಲ್ಲಿ ದರ್ಬಾರಿನ ವರಪ್ರದಾನವಾಗಿ ಎಲಿಮೆಂಟರಿ ವಿದ್ಯಾಭ್ಯಾಸಕ್ಕಾಗಿ ಸಿಕ್ಕಿದ ೫೦ ಲಕ್ಷ ರೂಪಾಯಿಯಲ್ಲಿ ೮ ಲಕ್ಷ ರೂಪಾಯಿಯು ಮದ್ರಾಸ್ ಸಂಸ್ಥಾನದ ಉಪಯೋಗಾರ್ಥವಾಗಿ ಕೊಡಲ್ಪಟ್ಟಿರುವದು. ಈ ಹಣವನ್ನು ತಕ್ಕ ಪ್ರಕಾರವಾಗಿ ಪ್ರಯೋಗಿಸುವರೆ ಒಳ್ಳೇ ಏರ್ಪಾಡು ಮಾಡುವ ಕೆಲಸಕ್ಕಾಗಿ ಸರಕಾರಿ ಹುದ್ದೆದಾರರೂ, ಹುದ್ದೆದಾರರಲ್ಲದ ಮೆಂಬರರೂ ಕೂಡಿದ ಒಂದು ಕಮಿಟಿಯನ್ನು ನಿಯಮಿಸಬೇಕೆಂಬ ನಿರ್ಣಯವು ಬಹುಮಾನಪಟ್ಟ ರಾಮಚಂದ್ರರಾವ್ ಪಂತ್ಲುರವರಿಂದ ನ್ಯಾಯವಿಧಾಯಕ ಸಭೆಯ ಮುಂದೆ ಇಡಲ್ಪಟ್ಟಿತು. ಬಹುಮಾನಪಟ್ಟ ಸರ್ ಹೆಮಿಕರವರು ಈ ನಿರ್ಣಯಕ್ಕೆ ತಾನು ಒಪ್ಪುತ್ತೇನಾದರೂ ಈ ಉದ್ದೇಶಕ್ಕಾಗಿ ಕಮಿಟಿಯನ್ನು ನೇಮಿಸಿದರೆ ಇನ್ನು ೬ ತಿಂಗಳ ವರೆಗೆ ಈ ೮ ಲಕ್ಷ ರೂಪಾಯಿಯನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುವರೆ ಅಸಾಧ್ಯವಾಗುವದು, ವಿದ್ಯಾಖ್ಯಾತೆಯವರು ಪ್ರ್ಯಾಯಮರಿ ವಿದ್ಯಾಭ್ಯಾಸ ಸಂಬಂಧವಾಗಿ ಏನಾದರೊಂದು ಬದಲಾವಣೆ ಮಾಡಲಿಕ್ಕಿದ್ದರೆ ಯಾ ಅದನ್ನು ಉನ್ನತಿಗೆ ತರಲು ಪ್ರಯತ್ನ ಮಾಡುವಾಗ ಯಾವಾಗಲೂ ಆಯಾ ಡಿಸ್ಟ್ರಿಕ್ಟ್ ಬೋರ್ಡಿನವರ ಮತ್ತು ಮುನ್ಸಿಪಾಲಿಟಿಯವರ ಆಲೋಚನೆ ಕೇಳಿಕೊಳ್ಳುತ್ತಾರೆ. ಆದ್ದರಿಂದ ಈ ಎಂಟು ಲಕ್ಷ ರೂಪಾಯಿಯು ಪ್ರ್ಯಾಯಮರಿ ವಿದ್ಯಾಭ್ಯಾಸದ ಮೇಲ್ಮೆಗಾಗಿಯೇ ಪ್ರಯೋಗಿಸಲ್ಪಡುವುದೆಂಬುದಕ್ಕೆ ಏನೇನೂ ಅನುಮಾನವಿಲ್ಲವಾದ್ದರಿಂದ ಇದಕ್ಕಾಗಿ ಪ್ರತ್ಯೇಕ ಕಮಿಟಿಯನ್ನು ನೇಮಿಸಬೇಕೆಂಬ ನಿರ್ಣಯಕ್ಕೆ ಒಪ್ಪುವದಿಲ್ಲವೆಂದೂ ಈ ೮ ಲಕ್ಷ ರೂಪಾಯಿಯಲ್ಲಿ ೨೦ ದಾಂಶವು ಉಪಾಧ್ಯಾಯರ ಸಂಬಳ ಹೆಚ್ಚಿಸುವರೆಯೂ ಟ್ರೈನಿಂಗ್ ಶಾಲೆಯಲ್ಲಿ ಉಪಾಧ್ಯಾಯ ಕೆಲಸಕ್ಕೆ ತರ್ಬೀತು ಹೊಂದುವ ವಿದ್ಯಾರ್ಥಿಗಳಿಗೆ ಕೊಡುವ ವೇತನವನ್ನು ಹೆಚ್ಚಿಸುವರೆಯೂ ಪ್ರಯೋಗಿಸಲ್ಪಡುವದೆಂದೂ ಹೇಳಿದರು.

~~~~~~

ಕಲಿಕೋಟೆಯ ಸಬ್ ಕಲೆಕ್ಟರರಾದ ಮೆ। ಡ್ಯೊಗ್ ದೊರೆಗಳವರು ಮಿನಿಕೋಯಿ ದ್ವೀಪಕ್ಕೆ ಸರ್ಕಿಟಿಗೆ ಹೋಗಿದ್ದರು. ಅಲ್ಲಿ ದ್ವೀಪದ ೪೦೦ ಜನರು ದೊರೆಗಳವರನ್ನು ಸುತ್ತಿಹಾಕಿ ದ್ವೀಪದ ಅಮೀನನನ್ನು ಕೂಡಲೇ ಬರತರಪು ಮಾಡಬೇಕೆಂತ ಹೆದರಿಸಿದರು. ದೊರೆಗಳವರೂ ಅವರೊಟ್ಟಿಗೆ ಇದ್ದ ಇಂಜಿನಿಯರೂ ನಿರ್ವಾಹವಿಲ್ಲದೆ ಅವರ ಮಾತಿಗೆ ಒಪ್ಪಿ ಒಬ್ಬ ಹೊಸ ಅಮೀನನನ್ನು ನೇಮಿಸಿದರು. ಹೊಸ ಅಮೀನನನ್ನು ನೇಮಿಸಿದರೆ ಮಾತ್ರ ಕಲೆಕ್ಟರವರನ್ನು ದ್ವೀಪದಿಂದ ಹಿಂದೆರಳ ಬಿಡುತ್ತೇವೆಂದರು. ಮಾಜಿ ಅಮೀನನು ಕಲಿಕೋಟೆಗೆ ಬಂದು ತಲಪಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ವರದಿ ಕೊಟ್ಟಿರುತ್ತಾರೆ. ಮಿನಿಕೊಮಿ ದ್ವೀಪವು ಲಕದೀವುಗಳಿಗೆ ಸೇರಿದ ಒಂದು ದ್ವೀಪವಾಗಿದೆ. ಈ ದ್ವೀಪದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ವ್ಯವಹಾರಗಳೆಲ್ಲಾ ಬ್ರಿಟಿಷ್ ಸರಕಾರದಿಂದ ನೇಮಿಸಲ್ಪಟ್ಟ ಒಬ್ಬ ಅಮೀನನಿಂದ ನಡಿಸಲ್ಪಡುತ್ತದೆ. ಈ ಅಮೀನನ ಮೇಲೆ ಆ ದ್ವೀಪದವರು ನಾಕುಶಿ ಪಟ್ಟು ಹೀಗೆ ಮಾಡಿದರೆಂದು ತಿಳಿದುಬರುತ್ತದೆ.

~~~~~~

ವೈದ್ಯ ಇಲಾಖೆಯ ಎಮ್. ಬಿ. ಮತ್ತು ಸಿ. ಎಮ್. ಡಿಗ್ರಿಗಳನ್ನು ಪಡೆಯಲು ಅಭ್ಯಾಸಿಸಲಿಚ್ಛೈಸುವ ಸ್ತ್ರೀಯರಿಗೆ ತಿಂಗಳು ಒಂದಕ್ಕೆ ೨೫ ರೂಪಾಯಿಗಳ ಮೂರು ವೇತನಗಳನ್ನು ಕೊಡುವರೆ ಮದ್ರಾಸ್ ಸರಕಾರದವರು ನಿಷ್ಕರ್ಷಿಸಿರುವರು. ಈ ವೇತನವನ್ನು ಸರಕಾರದವರು ಪ್ರತಿ ವರುಷವೂ ಕೌಂಟೆಸ್ ಢಪರಿನ್ ಫಂಡಿಗೆ ಕೊಡುವರು. ಢಪರಿನ್ ಫಂಡಿನ ಕಮಿಟಿಯವರು ಈ ವೇತನವನ್ನು ವೈದ್ಯ ಇಲಾಖೆಗೆ ಸೇರಲಿಚ್ಛೈಸುವ ಆಯಾ ವಿದ್ಯಾರ್ಥಿನಿಯರಿಗೆ ಕೊಡುವರು. ಇಂಥಾ ವಿದ್ಯಾರ್ಥಿನಿಯರು ಇಂಟರ್ ಮಿಡಿಯೇಟ್ ಪರೀಕ್ಷೆ ತೇರಿದವರು ಇಲ್ಲವೆ ಅದಕ್ಕೆ ಓದುವವರಾಗಿರಬೇಕು. ಒಟ್ಟಿಗೆ ಮದ್ರಾಸ್ ಸರಕಾರದವರು ಈ ಉದ್ದೇಶಕ್ಕಾಗಿ ಪ್ರತಿ ವರುಷ ೧೨,೦೦೦ ರೂಪಾಯಿಯನ್ನು ಡಪರಿನ್ ಫಂಡಿಗೆ ಕೊಡುವರು.

~~~~~~

ದಕ್ಷಿಣ ಕನ್ನಡ.

~~~~~~

ಪ್ರಕಟಣೆ.

~~~~~~

ಏರಂಡಿ ರೇಶ್ಮೆ ಗೂಡುಗಳನ್ನು ಮಾರಾಟ ಮಾಡುವ ಅಪೇಕ್ಷೆಯುಳ್ಳವರು ಗೂಡುಗಳನ್ನು ಮಂಗಳೂರು ಶಹಾರ ಕರಂಗಲಪಾಡಿಯಲ್ಲಿರುವ ನಿರಾಶ್ರಿತ ಜನಸಹಾಯಕ ಸಂಘದ ಮಗ್ಗದ ಕಾರಖಾನೆಗೆ ರವಾನಿಸಿದರೆ ಮಣ ಒಂದಕ್ಕೆ ರೂಪಾಯಿ ೪೦ರಿಂದ ೬೦ರ ವರೆಗೆ ಗೂಡುಗಳ ಯೋಗ್ಯತಾನುಸಾರ ಕ್ರಯ ಕೊಡೋಣಾಗುವದು.

ಗೂಡುಗಳನ್ನು ಮಾರಾಟ ಮಾಡುವರೆ ಸಮ್ಮತವಿಲ್ಲದವರು ಸಂಸ್ಥೆಗೆ ಉಚಿತವಾಗಿಯೂ ಕೊಡಬಹುದು. ಅಂಥಹ ಉಚಿತವನ್ನು ಕೃತಜ್ಞತೆಯಿಂದ ಸ್ವೀಕರಿಸುವೆವು.

ಮಂಗಳೂರು,
20—3—1912.

ಕುದ್ಮುಲ್ ರಂಗರಾವ್,
ಸೆಕ್ರಿಟರಿ.

~~~~~~

ಮನೆ ಮಾರಾಟ.

~~~~~~

ಮಂಗಳೂರು ಮುನಿಸಿಪಾಲಿಟಿ ೪ನೇ ವಾರ್ಡು ಗಣಪತಿ ದೇವಸ್ಥಾನದ ರಸ್ತೆಯಲ್ಲಿರುವ, ಗಣಪತಿ ಸೆಕೆಂಡರಿ ಶಾಲೆಗೆ ಉಚಿತವಾಗಿ ಶಿಕ್ಕಿದ ಮತ್ತು ಇತ್ತಲಾಗೆ ಒಳ್ಳೆ ರೀತಿಯಲ್ಲಿ ಈಗಿನ ಸ್ಥಿತಿಗೆ ಬೇಕಾದ ಹಾಗೆ ದುರುಸ್ತಿ ಮಾಡಿಸಲ್ಪಟ್ಟ ಮತ್ತು ಹಾಲಿ ಕೋಟಬ್ರಾಹ್ಮಣರ ಹೊಟೇಲ್ ಇರುವ, ಮುನ್ಸಿಪಲ್ ನಂಬ್ರ ೧೪೫ನೇಯ ದೊಡ್ಡ ಮನೆಯನ್ನು ಅದಕ್ಕೆ ಸಂಬಂಧಪಟ್ಟ ಹಿತ್ಲು, ಹಟ್ಟಿ ಕೊಟ್ಟಿಗೆಯೊಡನೆ ಮಾರುವದೆಂತ ನಿಶ್ಚಯಿಸಿಯದೆ.

ಸದರಿ ಮನೆ ಮಾರಾಟದ ವಿಷಯದಲ್ಲಿ ಬೇಕಾದ ಎಲ್ಲಾ ಮಾಹಿತಿಯು ಸದರಿ ಶಾಲೆಯ ಹೆಡ್ ಮಾಸ್ತರ ಹತ್ತರ ಸಿಕ್ಕುವದು.

~~~~~~

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ೧೩ ಪ್ಲೇಗು ಮರಣಗಳಿದ್ದವು.

ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರ ಸಂಬಳವನ್ನು ರೂ. ೫೦೦ರಿಂದ ೬೦೦ಕ್ಕೆ ಹೆಚ್ಚಿಸುವರೆ ಗವರ್ನಮೆಂಟಿನವರು ಸೆಂಕ್ಷನ್ ಮಾಡಿರುತ್ತಾರೆ.

ಕಲೆಕ್ಟರ ದೊರೆಗಳವರು ದೊರೆಸಾನಿಯ ಸಮೇತ ಕಳದ ತಾ. ೧೯ನೇ ಮಂಗಳವಾರ ದಿವಸ ಹೊಸದುರ್ಗ ಮೊಕ್ಕಾಮಿನಿಂದ ಇಲ್ಲಿಗೆ ಬಂದಿರುವರು.

ಮ। ರಾ! ರಾ। ಎಕ್ಕಾರ ರಾಮಕೃಷ್ಣಯ್ಯನವರು ತನ್ನ ೨ ತಿಂಗಳು ೮ ದಿನಗಳ ರಜೆ ಗುಜಾರಾಗಿ ಈ ದಿನ ಮೆ. ಎ. ಎಮ್. ಫೆರ್ನಾಂಡಿಸರಿಂದ ಚಾರ್ಜನ್ನು ವಹಿಸಿಕೊಳ್ಳುವರು.

ಕೆ. ಡಿ. ಬಾಪುಞಿಬ್ಯಾರಿಯು ಕಳ್ಳತನದಿಂದಲೇ ಜೀವನ ಮಾಡುತ್ತಾನೆಂಬ ತಕ್ಷೀರಿನ ಮೇಲೆ ಸಬ್ ಇನ್ಸಪೆಕ್ಟರರಾದ ರಾ। ಶಾಂತಾರಾಮರಾಯರು ಹಿಡಿದು ಹೆಡ್ ಕ್ವಾರ್ಟರ್ಸ್ ಮೆಜಿಸ್ಟ್ರೇಟರ ಮುಂದೆ ಹಾಜರು ಪಡಿಸಿದ್ದರು. ಮೆಜಿಸ್ಟ್ರೇಟರು ಆತನಿಗೆ ಒಂದು ವರುಷ ಜಾಮೀನು ಫಿತುವೆ ವಿಧಿಸಿದರು.

ಪಿ. ಡಬ್ಲ್ಯು. ಡಿ. ಸಬ್ ಡಿವಿಜನಲ್ ಆಫೀಸರರ ಉಪಯೋಗಾರ್ಥವಾಗಿ ಹೊಸತಾಗಿ ಕಟ್ಟಿಸಿದ ಆಫೀಸು ಇತ್ತಲಾಗೆ ತೆರೆಯಲ್ಪಟ್ಟಿತು. ಕೆ. ವಾಸುದೇವ ಭಕ್ತರವರು ಓವರ್ಶಿಯರರಾಗಿ ಬಂದಿರುವರು.

ಪೂನಾ ಅತ್ತಕಡೆಯಿಂದ ಬಂದ ಕೆಲವು ಮಂದಿ ಪೈಲ್ವಾನರು ಇಲ್ಲಿಯ ಸೆಂಟ್ ಅಲೋಶಿಯಸ್ ಕಾಲೇಜಿನಲ್ಲಿಯೂ, ಕೆನರಾ ಹ್ಯಾಸ್ಕೂಲಿನಲ್ಲಿಯೂ, ಆಸ್ಪತ್ರಿಯಲ್ಲಿಯೂ ಬಹಳ ಚಮತ್ಕಾರದ ಕಸರತ್ತುಗಳನ್ನು ಆಡಿ ತೋರಿಸುತ್ತಿರುವರು.

ಹೆಡ್ ಕ್ವಾರ್ಟರ್ಸ ಡಿಪ್ಯುಟಿ ಕಲೆಕ್ಟರರವರು ಇದೇ ಬರುವ ತಾ. ೨೫ಕ್ಕೆ ಸುರತಕಲ್ ಉಡ್ಪಿ ಅತ್ತಕಡೆ ಸರ್ಕಿಟು ಬೆಳಸಿ ತಾ. ೩೦ರ ಒಳಗೆ ಹಿಂತಿರುಗುವರಾಗಿ ಕೇಳುತ್ತೇವೆ.

ಮಂಜೇಶ್ವರ ದೇವಸ್ಥಾನದ ಲೆಖ್ಖ ತನ್ನಿಯ ಅರ್ಜಿಯನ್ನು ನಿನ್ನೆ ದಿವಸ ಡಿಸ್ಟ್ರಿಕ್ಟ್ ಜಡ್ಜರವರು ಎಪ್ರಿಲ್ ತಾ. ೧೫ಕ್ಕೆ ಮುಂದರಿಸಿಟ್ಟಿರುವರು.

ಚಿತ್ರಾಪುರ ಮಠದ ಸ್ವಾಮಿಗಳವರು ಪ್ಲೇಗ್ ಜ್ವರ ಮತ್ತು ಇತರ ತರದ ವಿಷಮಜ್ವರಗಳಿಗೆ ಬಹಳ ಗುಣಕಾರಿಯಾಗಿರುವ ಮಾತ್ರೆಗಳನ್ನು ಕಳುಹಿಸಿ ಕೊಟ್ಟಿರುವರು. ಇದು ಒರಿಯಂಟಲ್ ಲ್ಯಾಫ್ ಇನ್ಶೂರೆನ್ಸ್ ಕಂಪೆನಿಯ ಸಬ್ ಏಜಂಟರಾದ ರಾ। ಮುಕ್ಕುಡ ರಾಮರಾಯರ ಬಳಿಯಲ್ಲಿ ಧರ್ಮಾರ್ಥವಾಗಿ ದೊರೆಯುವದು.

೪೨ ವರುಷಗಳ ಹಿಂದೆ ಮಂಗಳೂರಲ್ಲಿ ಬ್ರಹ್ಮಸಮಾಜ ಸ್ಥಾಪಿಸಿದ ಪ್ರತಾಪಚಂದ್ರಮೊಜುಮ್‌ದಾರ್, ಅಮೃತಲಾಲ್ ಬೋಸ್ ಮತ್ತು ಪಂಡಿತ ಗೌರಗೋವಿಂದರಾವ್ ಎಂಬ ಮೂವರು ಬ್ರಹ್ಮ ಧರ್ಮ ಪ್ರಚಾರಕರ ಪೈಕಿ ಗೌರಗೋವಿಂದರಾವ್ ಮೃತವಾದರೆಂತ ತಂತಿ ಬಂದ ಕಾರಣ ಇವರ ಸ್ಮಾರಕವಾಗಿ ಮಂಗಳೂರು ಬ್ರಹ್ಮಸಮಾಜದಲ್ಲಿ ಸಭೆ ನೆರದಿತ್ತು. ಗೌರಗೋವಿಂದರಾವ್ ಬಲಿಷ್ಠ ಸಂಸ್ಕೃತ ಪಂಡಿತರಾಗಿದ್ದು ಕೆಲವು ಪ್ರಸಿದ್ಧ ಸಂಸ್ಕೃತ ಗ್ರಂಥಗಳನ್ನು ಟೀಕು ವ್ಯಾಖ್ಯಾನ ಸಹಿತ ಛಾಪಿಸಿದ್ದರು. ರಾ। ಉಳ್ಳಾಲ ರಘುನಾಥಯ್ಯನವರು ಮತ್ತು ರಾ। ಭಾರದ್ವಾಜ ಶಿವರಾಯರು ಮೃತ ಆಚಾರ್ಯರ ಕುರಿತು ಕಳದ ಆದಿತ್ಯವಾರ ಮಂಗಳೂರು ಬ್ರಹ್ಮಸಮಾಜದಲ್ಲಿ ಭಾಷಣಮಾಡಿದರು.

ಯುಗಾದಿ ದಿನ ಮಧ್ಯಾನ್ಹಕ್ಕೆ ಗದ್ದೆಕೇರಿ ಸಾರಸ್ವತ ಶಾಲೆಯಲ್ಲಿ ನೆರೆದ ಸ್ವಜಾತಿಯ ಕುಲಸ್ತ್ರೀಯರ ಮತ್ತು ಗೃಹಸ್ಥರ ಸಭೆ ಮುಂದೆ ರಾ। ವಕೀಲ್ ಗಂಗೊಳ್ಳಿ ಕೃಷ್ಣರಾಯರು ಬಂಗಾಳ ದೇಶವೂ ಮತ್ತು ಅಲ್ಲಿಯ ಜನರೂ ಎಂಬ ವಿಷಯ ಭಾಷಣ ಮಾಡಿದರು.

ಕಳದ ಸಂಚಿಕೆಯಲ್ಲಿ ತಿಳಿಸಿದ ನೂಜಿ ಬೈಲು ಶಂಕರ ಭಟ್ಟ ವಗೈರೆರ ಮೊಕದಮೆಯಲ್ಲಿ ಜೂರಿಯವರು ಎಲ್ಲಾ ಆಪಾದಿತರು ನಿರಾಪರಾಧಿಗಳೆಂದು ಅಭಿಪ್ರಾಯಪಟ್ಟದ್ದರಿಂದ ಜಡ್ಜರವರು ಎಲ್ಲಾ ಆಪಾದಿತರನ್ನೂ ಖುಲಾಸು ಪಡಿಸಿದರು.

ಮಂಗಳೂರು ಟೌನ್ ಮೆಜಿಸ್ಟ್ರೇಟರಿಂದ ಕಮಿಟು ಮಾಡಲ್ಪಟ್ಟ ಮಲಬಾರಿನ ಕೆ. ಡಿ. ಕುಞ್ಞಿ ಮೊಯಿದಿನ್ ಕುಟ್ಟಿ ಎಂಬವನ ತನಖಿಯು ಸೆಶ್ಯನ್ಸಿನಲ್ಲಿ ಪ್ರಾರಂಭವಾಗಿಯದೆ. ಈ ಕೇಡಿಯು ೧೯೦೮ನೇ ಇಸವಿಯಲ್ಲಿ ತನ್ನ ಕೆಲವು ಜತೆಯವರೊಂದಿಗೆ ಕುಂಬಳೆಯ ಮೈಂದಪ್ಪ ಭಂಡಾರಿಯವರ ಮನೆಯಲ್ಲಿ ದಕಾಯತಿ ಮಾಡಿದನೆಂದು ಆಪಾದಿಸಲ್ಪಟ್ಟಿದ್ದನು. ಈತನ ಜೊತೆಗಾರರಿಗೆ ೧೯೦೮ನೇ ಇಸವಿಯಲ್ಲಿ ಸೆಶ್ಯನ್ಸ್ ಕೋರ್ಟಿನಲ್ಲಿ ಶಿಕ್ಷೆ ವಿಧಿಸೋಣಾಗಿತ್ತು. ಆದರೆ ಈತನು ಪರಾರಿಯಾಗಿ ಈ ತನಕ ತಲೆ ತಪ್ಪಿಸಿಕೊಂಡಿದ್ದವನನ್ನು ಬೆಂಗಳೂರು ಪೋಲೀಸಿನವರು ಹಿಡಿದು ಮಂಗಳೂರಿಗೆ ತಂದರು. ಈಗ ಇವನ ವಿಚಾರಣೆ ನಡಿಯುತ್ತಿದೆ.

ತಿದ್ದುಪಡಿ:—ಕಳದ ಸಂಚಿಕೆಯಲ್ಲಿ ಬಂಟರ ಯಾನಾಡವರ ಸಂಘಕ್ಕೆ ವಿವಾಹ ಕಾಲದಲ್ಲಿ ಉಚಿತ ಕೊಟ್ಟ ಚಂದಾ ಮೊಬಲಗಿನ ಪಟ್ಟಿಯಲ್ಲಿ, ರಾ। ಪಳ್ಳ ನಾಗಪ್ಪ ಸೆಟ್ಟರವರು ರೂ. 0—4—0 ಎಂಬದರ ಬದಲಿಗೆ ರೂ. ರೂ. 4—0—0 ಎಂತಲೂ ಅಡೂರುಪಟೇಲ ರಾ. ಕುಞ್ಞಣ್ಣ ರೈಗಳು ರೂ. 0—4—0 ಎಂಬದರ ಬದಲಿಗೆ ರೂ. 4—0—0 ಎಂತಲೂ ಓದತಕ್ಕದ್ದು.

~~~~~~

ಕಾಸರಗೋಡು. ನಮ್ಮ ಪಟ್ಟಣದಲ್ಲಿ ಮ। ರಾ। ಮೇಲೋತ್ತರವರು ಏರಿ-ಸಿಲ್ಕ್ ಕೈಗಾರಿಕೆಯ ವಿಷಯವಾಗಿ ತಾನು ಪೂಸಕ್ಕೆ ಹೋಗಿ ಅಭ್ಯಾಸಿಸಿದ ಸಕಲ ಸೂತ್ರಗಳೊಂದಿಗೆ ತಾ. ೧೫ನೇ ಮತ್ತು ೧೬ನೇ ದಿವಸಗಳಲ್ಲಿ ಬಹಳ

ಚಲೋದಾದ ಎರಡು ಭಾಷಣಗಳನ್ನು ಕೊಟ್ಟು ಜನರನ್ನು ತೃಪ್ತಿಪಡಿಸಿದರು. ಈಗ ಆ ಕೈಗಾರಿಕೆಗೆ ಬೇಕಾದ ಅವಶ್ಯಕತೆಗಳನ್ನು ಜನರು ಸಿದ್ಧಗೊಳಿಸುವುದಕ್ಕೆ ಅಲ್ಯಲ್ಲಿ ಪ್ರಯತ್ನಿಸುವದರಿಂದ ಇಂಥಾ ವಿಶೇಷವಾದ ಭಾಷಣಗಳು ನಮ್ಮ ಜನಾಂಗದ ಅಭಿವೃದ್ಧಿಗೆ ಎಷ್ಟು ಪ್ರಯೋಜನಕರವಾದದ್ದು ಎಂತ ನಮ್ಮೆಲ್ಲರಿಗೂ ತಿಳಿದುಬರುತ್ತದೆ.

ಪಣಂಬೂರು. ಹೊಸಬೆಟ್ಟು ಗ್ರಾಮದ ಪಟೇಲ ವೆಂಕಟ್ರಾಯರ ಸಹೋದರಿ ದ್ರೌಪದಿ ಎಂಬ ವಿಧವೆಯು ವ್ಯಭಿಚಾರದ ಸಂಬಂಧ ಅದೇ ಗ್ರಾಮದಲ್ಲಿರುವ ಅಸನೆ ಬ್ಯಾರಿ ಮಗ ಪಕಿರ ಬ್ಯಾರಿ ಎಂಬವರನ್ನು ಸೇರಿ ಕಳದ ಪೆಬ್ರವರಿ ತಿಂಗಳಲ್ಲು ಮಹಮ್ಮದಿ ಮತಕ್ಕೆ ಸೇರುವೆನಾಗಿ ಅರ್ಜಿ ಕೊಟ್ಟು ಪ್ರಕೃತ ಅವರ ಮನೆಯಲ್ಲ ವಾಸವಾಗಿರುವಳೆಂತ ಒಬ್ಬ ಬಾತ್ಮೀದಾರರು ತಿಳಿಸಿರುತ್ತಾರೆ.

ವಿವಿಧ ವಿಷಯಗಳು.

ಲಂಡನಿನ ಬಿಶೋಪರವರು ಲಂಡನ್ ಮೊದಲಾದ ದೊಡ್ಡ ಪಟ್ಟಣಗಳಲ್ಲಿ ಮರಣ ಸಂಖ್ಯೆ ಹೆಚ್ಚಾಗುವದರ ಕಾರಣವನ್ನು ಈ ರೀತಿ ಟೀಕಿಸಿರುವರು:—ಕುಡಿಯುವ ಅಭ್ಯಾಸವು ಗಂಡಸರೊಳಗೆ ಕಮ್ಮಿ ಆಗುತ್ತಾ ಬರುವಾಗ ಹೆಂಗಸರೊಳಗೆ ಭೋಜನದ ಮಧ್ಯ ಕುಡಿಯುವ ಚಾಳಿಯು ಅಭಿವೃದ್ಧಿಯಾಗುತ್ತಾ ಬಂತು. ಅನೇಕ ಹೆಂಗಸರಿಗೆ ಊಟದ ಮಧ್ಯೆ ಬ್ರಾಂಡಿ ಇತ್ಯಾದಿ ಮಾದಕ ಪದಾರ್ಥವಿಲ್ಲದೆ ಅನ್ನ ಸೇರದು. ಯೌವ್ವನಸ್ಥೆಯರು ಕೂಡಾ ನರ್ತನದಲ್ಲಿಯೂ ಊಟದಲ್ಲಿಯೂ ಗಂಡಸರಿಗಿಂತ ಹೆಚ್ಚಾಗಿ ಕುಡಿಯುವರೆಂದು ಅನೇಕರು ಬೊಬ್ಬಿಡುತ್ತಿರುವರು. ಇದಲ್ಲದೆ ಈ ನವ ನಾಗರಿಕತನ ಕಾಲದಲ್ಲಿ ಅಕ್ರಮಗಳು ಹೆಚ್ಚಾಗುತ್ತಿವೆ. ಕ್ರಮವಿಲ್ಲದ ಊಟ, ವಿವಿಧ ದುರಾಚಾರ ಪದ್ಧತಿ, ಅನಾರೋಗ್ಯಕರವಾದ ವಿಚಿತ್ರ ತೊಡಿಗೆಗಳು, ಲೋಕಾಚಾರ ಡಂಭ, ಇವುಗಳೆಲ್ಲಾ ದೇಹದ ನರಸಂಸ್ಥಾನ್ಯಯವನ್ನು ಮರಕಟ್ಟಿಸಿ ಜೀರ್ಣಶಕ್ತಿಯನ್ನು ಕುಂದಿಸಿ ವಿವಿಧ ತರದ ರೋಗಗಳನ್ನು ಹುಟ್ಟಿಸಿ ಕಡೆಗೆ ಕೊಂದು ಬಿಡುವದು ಎಂದು ಹೇಳಿರುವರು.

ವಾಶಿಂಗ್ಟನ್ ಎಂಬ ಪಟ್ಟದಲ್ಲಿ ಕ್ಷಯರೋಗ ಇತ್ಯಾದಿ ಅಂಟುರೋಗ ಪೀಡಿತರಿಗೂ, ಕಲಹಗಾರರಿಗೂ ವಿವಾಹವಾಗುವರೆ ಸರಕಾರದಿಂದ ಲೈಸನ್ಸ್ ಕೊಡೋಣಾಗುವದಿಲ್ಲ.

ಸೋಡಾ ನೀರಿನಲ್ಲಿ ಅಂಟುರೋಗಗಳ ಅಣುಗಳು ಶೇರಿಕೊಳ್ಳುತ್ತವೆಂದೂ ಇದನ್ನು ಕುಡಿಯುವುದರಿಂದ ಅನೇಕಾವೃತ್ತಿ ಮಕ್ಕಳು ಆಯಾ ರೋಗಗಳಿಗೆ ತುತ್ತಾಗುವರೆಂತಲೂ ಈಚೆಗೆ ವೈದ್ಯರು ಪರಿಶೋಧಿಸಿ ತಿಳಕೊಂಡಿರುವರು.

ಬಿಳಿಗಾರದ ಪುಡಿಯನ್ನು ತೊಣ್ಣಿಗಿಗಳು ಇರತಕ್ಕ ಸ್ಥಳಗಳಲ್ಲಿ ಎರಚಿದರೆ ಅವುಗಳ ಕಾಟವು ಕಡಿಮೆಯಾಗುವುದು. ಯಾವದಾದರೊಂದು ಪಾಕದೊಡನೆ ಬಿಳಿಗಾರದ ಪುಡಿಯನ್ನು ಬೆರಸಿ ಅದನ್ನು ಸಣ್ಣ ಸಣ್ಣ ತವರದ ತುಕಡಗಳಿಗೆ ಸವರಿ ಗೂಡುಗಳಲ್ಲಿಟ್ಟರೆ ತೊಣ್ಣಿಗಿಗಳು ಆ ಪ್ರದೇಶಕ್ಕೆ ಬರುವುದಿಲ್ಲ.

ಇಂಡಿಯಾ ದೇಶದ ಮುಕ್ಕಾಲು ಪಾಲು ಜಮೀನುಗಳಲ್ಲಿ ನೈಟ್ರಜನ್ (Nitrogen) ವಾಯುವು ಕಡಿಮೆಯಾಗಿಯೂ ಪಾಸ್‌ಪೆಟ್ ಆಫ್ ಲೈಮ್ (Phosphate of Lime) ಎಂಬ ಪದಾರ್ಥವು ಸಾಕಾದಷ್ಟೂ ಇರುವುವು. ಆದರೆ ಮೂಳೆ ಗೊಬ್ಬರದಲ್ಲಿ ಗೊಬ್ಬರಕ್ಕೆ ಕೊಟ್ಟ ಬೆಲೆಗೆ ತಕ್ಕಷ್ಟು ನೈಟ್ರೊಜನ್ ವಾಯುವು ಇಲ್ಲವಾದ ಕಾರಣ ಇಂಡಿಯಾ ದೇಶದ ರೈತರು ಮೂಳೆ ಗೊಬ್ಬರವನ್ನು ಉಪಯೋಗಿಸುವುದು ಕಡಿಮೆ ಎಂದು ಕೆಲವು ಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ. ಅಲ್ಲದೆ ಹೆಸರು, ಉದ್ದು ಮೊದಲಾದ ಧಾನ್ಯಗಳಿಗೆ ಯವಕ್ಷಾರವನ್ನು ಜಾಸ್ತಿಯಾಗಿ ಹೊಂದಿರುವ ಗೊಬ್ಬರದಿಂದ ಉಂಟಾಗುವ ಪ್ರಯೋಜನವು ಮೂಳೆ ಗೊಬ್ಬರದಿಂದ ಉಂಟಾಗುವುದಿಲ್ಲ. ಮತ್ತು ಮೂಳೆ ಗೊಬ್ಬರವು ಗಡ್ಡೆಗೆಣಸುಗಳಿಗೆ ಶ್ರೇಷ್ಟವಾದ ಗೊಬ್ಬರವಾಗಿರುತ್ತದೆ. ಇಂಡಿಯಾ ದೇಶದಲ್ಲಾದರೋ ಗೆಡ್ಡೆಗೆಣಸುಗಳನ್ನು ಹಿಡುವಳೀ ಜಮೀನುಗಳಲ್ಲಿ ಬೆಳೆಯುವುದೇ ಅಪರೂಪ.

ಜಮೀನಿನಲ್ಲಿ ಸಾಕಾದಷ್ಟು ಸುಣ್ಣವಿಲ್ಲದಿದ್ದರೆ ಬೆಳೆಯು ಚನ್ನಾಗಿ ಆಗುವುದಿಲ್ಲ. ಯಾವದಾದರೊಂದು ಜಮೀನಿನಲ್ಲಿ ಸಾಕಾದದಷ್ಟು ಸುಣ್ಣವು ಇರುವುದೋ ಇಲ್ಲವೋ ಎಂಬುವುದನ್ನು ಗೊತ್ತು ಮಾಡಬೇಕಾದರೆ ಆ ಜಮೀನಿನ ಬೇರೆ ಬೇರೆ ಜಾಗಗಳಿಂದ ಒಂದೆರಡು ಗುದ್ದಲಿ ಮಣ್ಣನ್ನು ತೆಗೆದುಕ್ಕೊಂಡು ಅವುಗಳನ್ನು ಒಣಗಿಸಿ ಪುಡಿಪುಡಿ ಮಾಡಿ ಚನ್ನಾಗಿ ಬೆರಸಬೇಕು. ಅನಂತರದಲ್ಲಿ ಒಂದೆರಡು ಹಿಡಿ ಬೆರಸಿದ ಮಣ್ಣನ್ನು ತೆಗೆದುಕ್ಕೊಂಡು ಓಡಿನಲ್ಲಿ ಹಾಕಿ ಬೆಂಕಿಯ ಮೇಲಿರಿಸಿ ಮಣ್ಣನ್ನು ಬೂದಿಮಾಡಬೇಕು. ಬೂದಿಯು ಚನ್ನಾಗಿ ಆರಿದ ತರುವಾಯ ಅದನ್ನು ಒಂದು ಗಾಜಿನ ಬಟ್ಟಲಿನಲ್ಲಿ ಹಾಕಿ ಬೂದಿಯು ಮುಚ್ಚುವಷ್ಟು ನೀರನ್ನು ಹಾಕಿ ಒಂದು ಗಾಜಿನ ಅಥವಾ ಮರದ ಕಡ್ಡಿಯಿಂದ ಚನ್ನಾಗಿ ತೊಳಿಸಬೇಕು. ಅನಂತರದಲ್ಲಿ ಬಟ್ಟಲಿನೊಳಕ್ಕೆ ಸುಮಾರು ೩ ತೊಲೆ ಲವಣ ದ್ರಾವಕ (Muriatic Acid) ವನ್ನು ಸುರಿದು ಪುನಃ ಕಲಕಬೇಕು. ಆಗ್ಯೆ ಜಾಗ್ರತೆಯಾಗಿ ವಿಶೇಷ ನೊರೆ ಬಂದರೆ ಜಮೀನಿನಲ್ಲಿ ಸಾಕಾದಷ್ಟು ಸುಣ್ಣವಿರುವುದೆಂದು ಹೇಳಬಹುದು. ಹಾಗೆ ನೊರೆಯು ಬಾರದಿದ್ದರೆ ಜಮೀನಿನಲ್ಲಿ ಸುಣ್ಣವಿಲ್ಲವೆಂದು ತಿಳಿದು ಅದಕ್ಕೆ ಸುಣ್ಣವನ್ನು ಹಾಕಬೇಕು.

ನಿಯೊಲೊಗೊಸ್ ಎಂಬ ಒಂದು ಪ್ರಖ್ಯಾತ ವರ್ತಮಾನ ಪತ್ರಿಕೆಯಲ್ಲಿ ಸ್ಮಿರ್ನ ಎಂಬಲ್ಲಿ ವಾಂತಿಭೇದಿಗೆ ಟಿಂಚರ್ ಅಪ್ ಅಯೋಡೈನ್ (Tincture of iodine) ಎಂಬ ಔಷಧದ ಕೆಲವು ತಟಕುಗಳನ್ನು ನೀರಿನಲ್ಲಿ ಹಾಕಿ ದಿವಸಕ್ಕೆ ಎರಡು ಮೂರಾವರ್ತಿ ಕೊಟ್ಟದ್ದರಿಂದ ನೂರಕ್ಕೆ ನೂರರಂತೆ ಗುಣ ಕಂಡು ಬಂದದೆ ಎಂಬದಾಗಿ ಪ್ರಕಟವಾಗಿಯದೆ.

ಕಾಹಾನ್ ಎಂಬ ದೇಶದಲ್ಲಿ ಹನ್ನೆರಡು ರಾತ್ಲು ಭಾರವುಳ್ಳ ಒಂದು ನಿಂಬೇಹಣ್ಣು ಬೆಳದಿರುವದು.

ಸ್ವಿಜರ್‌ಲೇಂಡ್ ಎಂಬಲ್ಲಿ ೧೩,೦೦೦ ಜನರು ಗಡಿಯಾರ ಮಾಡುವ ಕೈಗಾರಿಕೆಯನ್ನೂ ೭೫,೦೦೦ ಜನರು, ನೇಯುವ ಕೆಲಸವನ್ನೂ ೧೩೦,೦೦೦ ಜನರು ಇತರ ಕೈಗಾರಿಕೆಯನ್ನೂ ಕೈಕೊಂಡಿರುವರು.

ಲಂಡನಿನಲ್ಲಿ ಒಬ್ಬ ಮನುಷ್ಯನಿಗೆ ಒಂದು ನಾಯಿದೆ. ಇದು ಜನರಿಗೆ ಆಯಾ ಸಾಮಾನುಗಳನ್ನು ತಂದುಕೊಟ್ಟು ವಾರಕ್ಕೆ ೩ ಪವನು ಸಂಪಾದನೆ ಮಾಡುತ್ತದೆ.

ನ್ಯೂಯೋರ್ಕ್ ಪಟ್ಟಣದಲ್ಲಿ ಈಚೆಗೆ ೧೨೦೦ ಚಚೌಕ ಅಡಿಯ ಸ್ಥಳವು ೨೦೦,೦೦೦ ಪವನಿಗೆ ಮಾರಾಟವಾಯಿತು. ಅಂದರೆ ಒಂದು ಚಚೌಕ ಅಂಗುಲಕ್ಕೆ ಒಂದು ಪವನು ಮೂರು ಶಿಲಿಂಗ್ ಕ್ರಯಬಿತ್ತು!

ಮಾರೆ ಅಂಟೋನಿಟೆ ಲೂಯಿಸ್ VI ಎಂಬ ಅರಸರನು ೧೭೮೫ನೇ ಇಸವಿ ಜನವರಿ ತಾ. ೨೮ಲ್ಲು ತನ್ನ ರಾಜ್ಯದಲ್ಲಿ ಉದ್ದದಷ್ಟೇ ಅಗಲವಿರುವ ಕೈವಸ್ತ್ರವನ್ನು ಹಿಡಿಯಬೇಕೆಂದು ಪ್ರಕಟಿಸಿದ್ದನು. ಅಂದಿನಿಂದ ಚಚೌಕ ಕೈವಸ್ತ್ರಗಳ ಪ್ರಯೋಗವು ಜಾರಿಗೆ ಬಂದು ಈಗ ಇಡೀ ಲೋಕದಲ್ಲಿ ಚಚೌಕ ಕೈವಸ್ತ್ರಗಳು ಇವೆ.

ಒಬ್ಬ ವಕೀಕಲನ ಸೈನ್ ಬೋರ್ಡು:—ಲೋಕದಲ್ಲಿ ನಿನಗೆ ವಿವಿಧ ತರದ ಭಂಗಬವನಿಗಳು ಸಂಭವಿಸುವದು, ಎಲ್ಲರೂ ನಿನಗೆ ವಿರೋಧವಾಗಿರುವರು. ನಿನ್ನ ಸ್ನೇಹಿತನು ನಿನಗೆ ಠಕಾಯಿಸುವನು, ನಿನ್ನ ಮಕ್ಕಳು ನಿನ್ನ ವಸ್ತುಗಳನ್ನು ಕದ್ದುಕೊಳ್ಳುವರು, ನಿನ್ನ ಹೆಂಡತಿಯು ನಿನಗೆ ಮೋಸ ಮಾಡುವಳು. ಇಂಥಾ ನೂರಾರು ಆಪತ್ತುಗಳು ನಿನಗೆ ಸಂಭವಿಸಿದರೂ ನೀನು ಏಲಿಹಾವ್‌ಕಿನ್ಸ (ವಕೀಲನ ಹೆಸರು)ನ ಭುಜಗಳ ಮೇಲೆ ಆತುಕೊಂಡರೆ ನಿನಗೆ ಎಂಥಾ ಉಪದ್ರವೂ ತಟ್ಟದು. ಅವನು ಕಾನೂನಿನ ಮೂಲಕ ಪ್ರತಿ ಒಂದು ಸಂದುಗೊಂದುಗಳನ್ನೂ ಅರಿತಿರುತ್ತಾನೆ. ನಿನಗೆ ಯಾರಾದರೂ ಮೋಸ ಮಾಡಿದರೆ ಕೂಡಲೇ ಅವನ ಸಂಗಡ ಬಂದು ಮಾತಾಡು ಎಂಬ ಸೈನ್ ಬೋರ್ಡನ್ನು ಒಬ್ಬ ವಕೀಲನು ತೂಗಾಡಿಸಿರುವನು.

ಜೀನಸುಗಳ ಧಾರಣೆ, ಮಂಗಳೂರು. (ರೂಂ)

ಮಸ್ಕತಿ ಅಕ್ಕಿ	5—4—0—5—5—0
ಗುಡ್ನು ಮಸ್ಕತಿ... ...	4-13—0—4-15—0
ಮಸ್ಕತಿ ದುಯಂ... ...	4-13—0—4-15—0
ಗುಡ್ನು ,, ...	4-10—0—4-11—0
ಮಸ್ಕತಿ ಬೆಳ್ತಿಗೆ ,, ...	5—8—0—5—9—0
ರಂಗೂನ್ ಬೆಳ್ತಿಗೆ ಗೋಣಿ	10—0—0
ಹುರುಳಿ ಗೋಣಿ ೧, ಮುಡಿ 2ರ ...	6—0—0
ಉಪ್ಪು ಗೋಣಿ ೧ರ	3—8—0
ಕೊಬ್ರಿ ಖಂಡಿ ೧ರ	95—0—0
ಕೊಬ್ರಿ ಎಣ್ಣೆ ಮಣ ೧ರ	6-14—0
ಕಾಫಿ ಖಂಡಿ ೧ರ	265—0—0
ಕಾಳು ಮೆಣಸು ಖಂಡಿ	170—0—0-175—0—0
ಬಿಳಿ ಗೋಟು ಅಡಿಕೆ	78—0—0—82—0—0
ಕರಿ ಗೋಟು ...	60—0—0—62—0—0
ಯಾಲದಕಾಯಿ ಮಣ೧ರ	45—0—0—48—0—0
ಗೇರುಬೀಜ ಮುಡಿ ೧ರ	2—2—0
ಶೀಗೆಕಾಯಿ ಖಂಡಿ ೧ರ	30—0—0-32—8—0
ಕಾಸ್ರ ಕಿನ ಬೀಜ ಖಂಡಿ೧ರ	22—0—0-25—0—0
ದಾಲಚೀನಿ ಹ್ವು ಮಣ೧ರ	2—2—0—2-12—0
ಅಂಟವಾಳಕಾಯಿ ಮುಡಿ೧ರ	1—6—0—1—7—0
ಅಣಿಲೆ ಕಾಯಿ ಖಂಡಿ ೧ರ	5—0—0-12—4—0
ಪಚ್ಚೆ ಹೆಸರು	4-10—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—6—0
ಗೋದಿ ಗೋಣಿ ೧ಕ್ಕೆ	10—8—0
ಊರು ಬೆಲ್ಲ ಖಂಡಿ ೧ರ	35—0—0
ಮೋರಿಸ್ ಸಕ್ಕರೆ ಮಣ ೧ರ	3-13—0
ಕಡಲೆ ಗೋಣಿ ೧ರ	7—6—0
ಜಿಮಿಣಿ ಎಣ್ಣೆ ಪೆಟ್ಟಿಗೆ ೧ರ	3—12—0-4—4—0
ಕೊಬ್ರಿ ಹಿಂಡಿ ಖಂಡಿ ೧ರ	31—0—0
ರಾಮಪತ್ರೆ	5—4—0—5—8—0
ರಾಮಗೋಟು	2—0—0

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರಿಂದಲಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲಕ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೊಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದು ನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಷ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನ್ನಿಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೊಲೇಜಿನ ಎದುರು

ಮಂಗಳೂರು.

ಫೊಟೊಗ್ರಾಫ್ ಬ್ಲ್ಯಾಕ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42″ × 25″ ರೂ. 75. ಅರ್ಧ ಸ್ಯಾಜ್ 21″ × 15″ ರೂ. 40. ಬಸ್ಟ್ ಸ್ಯಾಜ್ 18″ × 12″ ರೂ. 20. ಸಣ್ಣ ಸ್ಯಾಜ್ 12″ × 10″ ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗ್ಗೈರೆ ಎಲ್ಲಾ ತರದ ಫೊಟೋಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೋಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಸಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ದರ ಬೆಲೆ ೧ಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2-10-0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಸರ್ವೋತ್ಕೃಷ್ಟವಾದ ಅತ್ತರುಗಳು.

ಇನ್ನು ಮೇಲಾದರೂ ಬಜಾರಿನಲ್ಲಿ ದೊರಕುವ ಹೀನದ ಅತ್ತರುಗಳನ್ನು ಕೊಂಡುಕೊಳ್ಳದಿರಿ. ನಮ್ಮ ಈ ...ರುಗಳು ಅತಿಶಯ ಪ್ರಯಾಸ ಪ್ರಯತ್ನಗಳಿಂದ ಸಿದ್ಧ...ಡಲ್ಪಟ್ಟಿವೆ. ಇವುಗಳ ಸುಗಂಧವು ನೂತನವಾಗಿ ಅರಳಿ...ಗಮಿಸುವ ಪುಷ್ಪಗುಚ್ಛದ ಪರಿಮಳವನ್ನು ವಿಶೇಷತಃ ...ಚುತ್ತದೆ. ಮತ್ತು ಯಾವಾಗಲೂ ಒಂದೇ ಲೆಕ್ಕವಾ...ತ್ತದೆ.

...ಕಾಮಿನಿಯಾ ಡೈಜೀ (ರಿಜಿಸ್ಟರ್ಡ್)ಇದು ದೊಡ್ಡ...ಗೆಯ ಹೂಗಳಿಂದ ಸಂಗ್ರಹಿಸಿದ ಅತ್ತರು. 'ಮಲ್ಲಿಗೆ' ... ಈ ಶಬ್ದವು ಕಿವಿಗೆ ಬೀಳುತ್ತಲೇ ಅದರ ಸುವಾಸನೆ... ಕುರಿತು ಯಾವನೊಬ್ಬನ ಮನಸ್ಸಿನಲ್ಲಿಯಾದರೂ ...ಚು ಆಗದಿರದು. ಕಾಲು ತೊಲೆಯ ಕುಪ್ಪಿಗೆ ...ರೂ. 3-0-0

...ಕಾಮಿನಿಯಾ ಸುರಂಗಿ (ರಿಜಿಸ್ಟರ್ಡ್) ಇದು ಬಹಳ ...ಪ ಉಳ್ಳದ್ದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ...4-0 ಅಂಚೆಯ ವೆಚ್ಚ ಬೇರೆ.

...ಕಾಮಿನಿಯಾ (ರಿಜಿಸ್ಟರ್ಡ್) ಇದಾದರೂ ವಸಂತಮಾಸದ ಸಂಪಗೆಯ ಹೂಗ...ಸಂಗ್ರಹಿಸಿದುದು. ಇದರ ಸುರಭಿಯು ಅತ್ಯಂತ ಮಧುರವಿದೆ. ಕಾಲು ತೊಲೆಯ ಕು...ರೂ. 1-8-0 ಅಂಚೆಯ ವೆಚ್ಚ ಬೇರೆ.

...ಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳ ಬ...

...dress—Anglo Indian Drug & Chemical Co.,

155 Jumma Musjid, Market, Bombay.

ಸಿದ್ಧೌಷಧ!] **ಹಾರ್ಲೆಮ್ ಆಯ್ಲ್ (Haarlem Oil).** [ಪರೀಕ್ಷಿಸಿ ನೋಡಿ!

ಹಾರ್ಲೆಮ್ ಆಯ್ಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುನವರು ಇದಕ್ಕೆ "ದೇವಾನುಮೋದಿತ ಔಷಧ" **(Medicamentum Gracia Probatum)** ಎಂತಲೂನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ ಮೂರೇ ದಿನದ ಚಿಕಿತ್ಸೆಯಿಂದ ಎಂಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೨೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೆಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದ—

ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾಗಿರುತ್ತದೆ. ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕುಕಜ್ಜಿ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇಲ್ಲ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0. ಮೂರು ಬಾಟ್ಲಿಗಳಿಗೆ 2—0 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕರ. ಅನೇಕ ಜನರು ನಿರಾಶೆಯಾದವರು ನಮ್ಮದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1-0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ ಧಾತುಹೋಗುವದು, ಧಾತು ಕಡಿಮೆಯಾಗಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಚಳಿಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆ ಮಲ ಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ ಉತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು ರೂ. 4—0
ಸರ್ಪಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ 4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ. 4—0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ 8—0

ವಿಳಾಸ:—

ಗಣೇಶ ರಾಮಚಂದ್ರ ಕರ್ಕಿ ಕಂ,

ಗಿರಗಾಂಬಯಿ.



ಬೆಸ್ಟ್ ಲ್ಯಾಟ್ಸ್

ಎಂಬ

ಗ್ಯಾಸ್ ದೀಪಗಳು

ಕೆರೆಸಿನ್ ಎಣ್ಣೆಯ ದೀಪಗಳಂತೆ ಹೊಗೆಯಿಂದ ಪ್ರಕಾಶವು ಮೊಬ್ಬಾಗದೆ ಘೌಳಿಯ ಶಳವಿನಿಂದ ನೊಂದಿ ಹೋಗದಂಥವುಗಳು. ಈ ದೀಪಗಳನ್ನುರಿಸಲು ಕೆರೆಸಿನ ಎಣ್ಣೆಯ ದೀಪಗಳಷ್ಟೇ ಖರ್ಚು ತಗಲುವುದು.



ಕ್ರಯ ರೂ. 16. ಕ್ರಯ ರೂ. 20.

ದೇವಾಲಯ ವಾಚಕ ಮಂದಿರ ವ್ಯಾಪಾರದ ಅಂಗಡಿ ಭಂಡಸಾಲೆಗಳಿಗೆ ದೀಪದ ಪ್ರಕಾಶದ ಶೋಭೆಯು ಅಧಿಕವಾಗಿ ಬೇಕಾದ ಎಲ್ಲಾ ಕಡೆಗಳಲ್ಲಿ ಅತ್ಯುಪಯುಕ್ತವಾದವು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಮಂಗಳೂರು ಟ್ರೇಡಿಂಗ್ ಎಸ್ಸೋಶಿಯೇಶನ್,

ಸ್ಥಾನಿಕಲ್ ಏಜಂಟ್ಸ್,

ಮಂಗಳೂರು, ದ. ಕ.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ $\frac{1}{2}$ ಪೈಸೆ. 200 ಹಾಳೆಗಳಿಗೆ ರೂ.1—0—0 ವಿ. ಪಿ. ಮೂಲಕ 1—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,

ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯೆರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ

ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನೂ ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್ಸ್,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೋಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜವರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ.

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ **(Whistler Studio)** ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ವಸ್ತೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,

ಹಂಪನಕಟ್ಟಾ, ಮಂಗಳೂರು ದ. ಕ.

ಬಿ. ವೆಂಕಟಕೃಷ್ಣಪ್ಪ ಬಿ. ಎ., ಇವರಿಂದ ರಚಿತವಾದ ಹೊಸಕನ್ನಡದ
ನವೀನ ಪ್ರಬಂಧ (ನಾವಲ್)ಗಳು.

ಶ್ಯಾಮಕುಬ್ಜ.

(Sir Walter Scott's "Black Dwarf")

ಈ ಕಥೆಯನ್ನೋದುವುದರಿಂದ ಭೂತಪಿಶಾಚಿಗಳ ನಿಜಸ್ಥಿತಿಯು ತಿಳಿಯ ಬಂದು ಮೂಢಭಯವು ತೊಲಗುವುದಲ್ಲದೆ ಅನೇಕ ಲೋಕರಹಸ್ಯಗಳೂ ನೀತಿತತ್ವಗಳೂ ತಿಳಿಯಬರುವುವು. ಇದು ಈ ಪ್ರಪಂಚದ ವಿಷಯದಲ್ಲಿ ಜೀಹಾಸೆಗೊಂಡು ವನವಾಸಿಯಾದ ಒಬ್ಬ ಕರೂಪಿಯಾದ ಶ್ರೀಮಂತನ ಕಥೆ. ಇದನ್ನೋದುತೋದುತ ಕಣ್ಣೀರನ್ನು ತಡೆಯುವುದು ಕಷ್ಟವಾಗುವುದು. ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಕ್ಲಿಷ್ಟಪದಗಳ ನಿಘಂಟನ್ನು ಸೇರಿಸಿದೆ.

ಅಂದವಾದ ಮುದ್ರಣ, ಉತ್ತಮವಾದ ಕಾಗದ, ಭದ್ರವಾದ ಬೈಂಡ್, ಕ್ರಯ ೮ ಆಣೆ.

ಮಹಾಲಕ್ಷ್ಮಿ.

ಬಾಲ್ಯವಿವಾಹದಿಂದಲೂ, ನವನಾಗರಿಕರೆನಿಸಿಕೊಂಡ ಕುಡಿಕರ ಸಹವಾಸದಿಂದಲೂ ಆಧುನಿಕ ಯುವಕರಿಗೆ ಸಂಭವಿಸಬಹುದಾದ ಕಷ್ಟನಷ್ಟಗಳು ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. ಮುದ್ದಾದ ಹಸ್ತಪುಸ್ತಕ. ಕ್ರಯ ೨ ಆಣೆ.

ಕನ್ನಡ ವರ್ಣಮಾಲಾ.

ಅಕ್ಷರಾಭ್ಯಾಸ ಮಾಡಿಸಲು ಅನುಕೂಲಿಸುವಂತೆ ಅ,ಕಾರ ಮೊದಲು ಳ,ಕಾರದ ವರಿವಿಗೆ ಎಲ್ಲಾ ಅಕ್ಷರಗಳನ್ನು ದೊಡ್ಡ ಆಕಾರದಲ್ಲಿ ಅಚ್ಚುಮಾಡಿಸಿರುತ್ತೆ ಗೋಡೆಗೆ ಅಂಟಿಸಲು ಅನುಕೂಲಿಸುವಂತೆಯೂ ಬಾಲಕರಿಗೆ ಜಾಗ್ರತೆ ಅವಗಾಹನೆಯಾಗುವಂತೆಯೂ ಇರುವದು. ಬೆಲೆ ೧ಕ್ಕೆ ೬ ಪೈ, ೨೫ಕ್ಕೆ ೮ ಆಣೆ.

ಟೀಕಾ. ತಾತ್ಪರ್ಯ ಸಹಿತ ಮಹಿಮ್ನ ಸ್ತೋತ್ರ	... ...	೦—೩—೦.
ಡಿ. ಮುಕುಂದಮಾಲಾ ಸ್ತೋತ್ರ	... ...	೦—೪—೦.
ವಚನ ಜ್ಯೋತಿಸ್ಸಂಗ್ರಹ	... ...	೦—೪—೦.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—
ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

—o—

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ. ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು ಟೀಕಾ ತಾತ್ಪರ್ಯ ಶಬ್ದಸಮಾಸ ಸಹಿತವಾದ ೧ನೇ ಪರ್ವ ರಘುವಂಶ ರೂ. ೧—೦—೦ ೨ನೇ ಪರ್ವ ರೂ ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶಾಮಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ ಸಹಿತವಾಗಿ ಈಗ ತಾನೆ ಪೂರೈಸಿರುತ್ತೆ. ಉತ್ತಮವಾದ ಕ್ಯಾಲಿಕೊ ಬೈಂಡು ರೂ. ೨—೪—೦. ಋಗ್ವೇದ ನಿತ್ಯಕರ್ಮ ೦—೪—೦. ಎಲ್ಲಾ ಪುಸ್ತಕದಪಟ್ಟಿಯೂ ಬೇಕಾದಲ್ಲಿ ಸುಮ್ಮನೇ ಪಡೆಯಬಹುದು.

ಬಿ. ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್, ಬೆಂಗಳೂರು ಸಿಟಿ.

ಶ್ರೀ ರಾಮಕೃಷ್ಣ ವಿವೇಕಾನಂದ
ವಚನಾಮೃತವು.

ಅಭಿನವ ಭರತಖಂಡದ ಪರಮ ಗುರುಗಳಾಗಿಯೂ, ಭಕ್ತಿ ಜ್ಞಾನ ಯೋಗ ವೈರಾಗ್ಯಗಳಲ್ಲಿ ಅದ್ವಿತೀಯರಾಗಿಯೂ, ವೇದ ವೇದಾಂತ ಮಹಮ್ಮದೀಯ ಮತ್ತು ಕ್ರೈಸ್ತಮತಗಳಲ್ಲಿ ಪಾರಂಗತರಾಗಿಯೂ, ಬ್ರಹ್ಮನಿಷ್ಠರಾಗಿಯೂ, ಆತ್ಮವಿದರಾಗಿಯೂ, ಅವತಾರ ಪುರುಷರಾಗಿಯೂ ಇದ್ದ ಶ್ರೀ ರಾಮಕೃಷ್ಣ ಪರಮಹಂಸರವರ ಸೂಕ್ತಿ ಮುಕ್ತಾವಲಿಯೂ, ಅವರ ಶಿಷ್ಯರಾಗಿ, ಪ್ರಾಚ್ಯ ಪಾಶ್ಚಾತ್ಯ ವಿದ್ಯೆಗಳಲ್ಲಿ ಪಂಡಿತರಾಗಿ, ಅಮೇರಿಕಾ ಯೂರೋಪ್‌ಖಂಡಗಳಲ್ಲಿ ಸನಾತನಧರ್ಮದ ಉತ್ಕೃಷ್ಟತೆಯನ್ನು ಕುರಿತೂ ಉತ್ತಮೋಪನ್ಯಾಸ ಮಾಡಿ, ಜಗದ್ಗುರುಗಳಾಗಿ, ಭಾರತೀಯರ ಪ್ರಕೃತ ಧರ್ಮಗಳನ್ನು ತಿಳಿಸಿ, ದೇಶಭಕ್ತಾಗ್ರೇಸರರಾಗಿದ್ದ ಶ್ರೀ ವಿವೇಕಾನಂದ ಸ್ವಾಮಿಗಳವರು ಬರೆದ ಕಾಗದಗಳ ಮತ್ತು ಉಪನ್ಯಾಸಗಳ ಸಾರಾಂಶವೂ ಲಲಿತವಾದ ಹೊಸಗನ್ನಡದಲ್ಲಿ ಬರೆಯಲ್ಪಟ್ಟಿವೆ. ಅದರಲ್ಲಿ ಆಸ್ತಿಕ, ಬ್ರಂಲಕ್ಷಣ, ಮೋಕ್ಷೋಪಾಯ, ಭಕ್ತಿ, ವಿರಕ್ತಿ. ಮತ ಮತಾಂತರಗಳು ಮುಂತಾದ ಪಾರಮಾರ್ಥಿಕ ವಿಷಯಗಳೂ, ಭಾರತೀಯರ ಸ್ಥಿತಿ, ಕರ್ತವ್ಯ, ಇತರ ಜನಾಂಗಗಳ ನಾಗರಿಕತೆ ಮುಂತಾದ ಲೌಕಿಕ ವಿಷಯಗಳೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಪ್ರತಿಯೊಬ್ಬ ದೇಶಾಭಿಮಾನಿಯೂ, ಮತಾಭಿಮಾನಿಯೂ; ಆಸ್ತಿಕನೂ ಮುಮುಕ್ಷುವೂ ಈ ಗ್ರಂಥದ ಒಂದು ಪ್ರತಿಯನ್ನಾದರೂ ಇಟ್ಟುಕೊಂಡಿರಬೇಕು. ಇದರಲ್ಲಿ ಆ ಸದ್ಗುರುಗಳಿಬ್ಬರ ಸಂಸ್ಕೃತ ಕರ್ಣಾಟಕ ಸ್ತೋತ್ರಗಳೂ ಜೀವನಚರಿತ್ರೆಗಳೂ ಭಾವಚಿತ್ರಗಳೂ ಅಡಗಿವೆ. ಸರ್ವರಿಗೂ ಸಂಗ್ರಾಹ್ಯ.—ಬೇಗನೆ ಬರೆಯಿರಿ

ವಿಳಾಸ:—ಮ್ಯಾನೇಜರ್,
"ಸುಮತಿ ಗ್ರಂಥಮಾಲಾ" ಆಫೀಸು
ಬೆಂಗಳೂರು ಸಿಟಿ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಲಾಸ (ಪತ್ರೆ) ☞ ವೇದವಾಹಿನೀ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

14 ಕ್ಯಾರ್ರು ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ನಮ್ಮಲ್ಲಿ ಅನೇಕ ನಮೂನೆಗಳಲ್ಲಿ (ಅಂದರೆ) ಇಂಗ್ಲೀಷು, ಕನ್ನಡ, ಬಾಳಬಂದು, ಉರುದು, ಅರವ, ತೆಲುಗು ಈ ಎಲ್ಲಾ ಭಾಷೆಗಳಲ್ಲಿಯೂ ರಬ್ಬರು ಮೊಹರು ತಯಾರುಮಾಡುತ್ತೇವೆ. ಬೇಕಾದವರು ಬರದು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ರಬ್ಬರು ಮೊಹರುಗಳ ನಮೂನೆ ನೋಡಬೇಕಾದವರು ನಮ್ಮ ಕಂಪೆನಿಗೆ ಬರದರೆ ಕ್ಯಾಟಲಾಗ್ ರವಾನಿಸುತ್ತೇವೆ. ಇದೂ ಅಲ್ಲದೆ ನಮ್ಮ ಕಂಪೆನಿಯಲ್ಲಿ ತರಹೆವಾರಿ ಫೌಂಟನ್‌ಪೆನ್‌ಗಳೂ ಮತ್ತು ಜರ್ಮನ್ ಅಮೇರಿಕಾ ದೇಶದ ಸುವಾಸನೆಯುಳ್ಳ ಸೆಂಟ್ಸ್ ಎಂಬ ಹೂವ್ವಿನ ಸಾರಗಳು ಮಾ... ಡುತ್ತೇ
ಇದರ ಕ್ರಯ ಬುಡ್ಡಿ 1ಕ್ಕೆ 1—0—0. ವಿ.ಪಿ. ಚಾರ್ಜು ಅಲಾಯಿದೆ.
ಏಜಂಟುಗಳು ಬೇಕಾಗಿವೆ. ಅಧಿಕ ಲಾಭವುಂಟು.
ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

DEPUTY COMMISSIONER'S OFFICE,
ಚಿತ್ರದುರ್ಗ
ಡಿ. ಹೆ. ಕಮಿಷನರ್
ಸಾಹೇಬರವರ
ಆಫೀಸು.
CHITALDROOG DISTRICT.

Registered No. M. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಸೇರಿ ರೂ. 2-1-0.

ಪ್ರತಿ ಶುಕ್ರವಾರವೂ
ಪ್ರಕಟಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 13.

ಮಂಗಳೂರು ತಾ. 29ನೇ ಶುಕ್ರವಾರ
ಮಾರ್ಚಿ 1912.

Amrutanjan Depot, Bombay.

(Regd.) ಅಮೃತಾಂಜನ. (ರಿಜಿಸ್ಟರ್ಡ್.)

ಅಮೃತಾಂಜನ
ಸರ್ವ ನೋವಿಗೆ
ಸಂಜೀವನ.
ಬಾಟ್ಲಿ ಒಂದರ ರೂ. 0—8—0.

ಅಮೃತಾಂಜನ
ಸರ್ವ ನೋವಿಗೆ.
ಸಿದ್ಧಾಮೃತ.
ಬಾಟ್ಲಿ ಒಂದರ ರೂ. 0—8—0.

ಅಮೃತಾಂಜನ.

ಎಲ್ಲಾ ಔಷಧಾಲಯಗಳಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವದು.

ವಿಜ್ಞಾಪನೆ:—ನಮ್ಮ ಟ್ರೇಡ್‌ಮಾರ್ಕ್ ಉಳ್ಳ ಹೊರಗಿನ ಟನ್ನಿನ ಕರಡಿಗೆಗಳು ವಿಲಾಯತಿಯಿಂದ ಬಾರದೆ ಇರುವದರಿಂದ ಮುಂಚಿನ ಹಾಗೆ ಕಾಗದದಲ್ಲಿ ಪೇಕ್ ಮಾಡಿದ್ದೇವೆ.

ಗಜಕರ್ಣದ ಮುಲಾಮು.

ಎಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ತಾಗಿಸುವದರೊಳಗೆ ನಾಶವಾಗಿ ಹೋಗುವದು.

ಗಜಕರ್ಣದ ಮುಲಾಮು.

ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತು 0—6—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ನೋವು, ಹಲ್ಲುಗಳ ವಾಸನೆ ಇತ್ಯಾದಿಗಳಿಗೆ ರಾಮಬಾಣದಂತಿದೆ.

ದಂತಮಂಜನ.

ಇದರ ಉಪಯೋಗದಿಂದ ಹಲ್ಲುಗಳು ಘಟ್ಟಿಯಾಗುವವು. ಮತ್ತು ಬೆಳ್ಳಗಾಗುವವು ಡಬ್ಬಿ ಒಂದರ ಕಿಮ್ಮತು 0—2—0.

ರಾಜಾರಾಣಿ ನಕ್ಷೆಗಳುಳ್ಳ ಈ ವರ್ಷದ ಸುಂದರವಾದ ಕೆಲೆಂಡರ್ (ತಾರೀಕು ತೋರಿಸುವ ಪಟ್ಟಿ) ಕ್ರಯ 1ರ ವಿ.ಪಿ. ಸಮೇತ 0—4—0.

ಕೇಶವರ್ಧಿನಿ ತೈಲ! ಕೇಶವರ್ಧಿನಿ ತೈಲ!! ಕೇಶವರ್ಧಿನಿ ತೈಲ!!!

ಎಲ್ಲಾ ತೈಲಗಳಿಗಿಂತಲೂ, ಸುವಾಸಿಕವಾಗಿಯೂ, ಮನೋಹರವಾದ ಪರಿಮಳ ಉಳ್ಳದ್ದಾಗಿಯೂ, ಸ್ಪಿರಿಟು ವಗೈರೆ ಇಲ್ಲದೆಯೂ, ತಯಾರಿಸಲ್ಪಟ್ಟದ್ದಾಗಿರುತ್ತದೆ. ಇದರಿಂದ ಕೂದಲುಗಳು ಕಪ್ಪಾಗುವವು, ಉದ್ದವಾಗಿಯೂ ನಯವಾಗಿಯೂ ಬೆಳಿಯುವವು. ಬಾಟ್ಲಿ 1ರ 1-0-0 3ಬಾಟ್ಲಿಗಳಿಗೆ 2-10-0.

ನಮ್ಮ ಔಷಧಗಳು ಮಂಗಳೂರಲ್ಲಿ ಈ ಕೆಳಗಿನ ಕಂಪೆನಿಗಳಲ್ಲಿ ದೊರಕುವದು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್, ಪರ್ಲ ಎಂಡ್ ಸನ್ಸ್, ಇಬ್ರಾಹಿಮ್ ಎಲಿಯಾಸ್, ಆರ್ನೋನ್ ಎಂಡ್ ಐಮನ್.

ಕೆಟಲಾಗು ಅಪೇಕ್ಷಿಸುವವರು ದಯಮಾಡಿ ಬರೆಯಿರಿ.

ಸಿದ್ಧೌಷಧ!] **ಹಾರ್ಲೆಮ್ ಆಯ್ಲ್ (Haarlem Oil).** [ಪರೀಕ್ಷಿಸಿ ನೋಡಿ!

ಹಾರ್ಲೆಮ್ ಆಯ್ಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭವರು ಇವಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಆಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸೆಯಿಂದ ಎಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕುಕಜ್ಜಿ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವವು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಟಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0. ಮೂರು ಬಾಟ್ಲಿಗಳಿಗೆ 2—0—0 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕರ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ ಧಾತುಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಚಳಿಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು ರೂ.	0—4—0
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ 1—4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ.	„ 0—4—0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	„ 0—8—0

ವಿಳಾಸ:—

ಗಣೇಶ ರಾಮಚಂದ್ರ ಕರ್ಕಿ ಕಂಪೆನಿ,
ಗಿರಗಾಂ ಮುಂಬಯಿ.

ಬೆಸ್ಟ್ ಲ್ಯಾಟ್ಸ್

ಎಂಬ

ಗ್ಯಾಸ್ ದೀಪಗಳು



ಕೆರೆಸಿನ್ ಎಣ್ಣೆಯ ದೀಪಗಳಂತೆ ಹೊಗೆಯಿಂ ಪ್ರಕಾಶವು ಮೊಬ್ಬಾಗದೆ ಥಳಿಯ ಶಳವಿನಿಂದ ನೊಂದಿ ಹೋಗದಂಥವುಗಳು. ಈ ದೀಪಗಳನ್ನುರಿಸಲು ಕೆರೆಸಿನ ಎಣ್ಣೆಯ ದೀಪಗಳಷ್ಟೇ ಖರ್ಚು ತಗಲುವುದು.



ಕ್ರಯ ರೂ. 16. ಕ್ರಯ ರೂ. 20.

ದೇವಾಲಯ ವಾಚಕ ಮಂದಿರ ವ್ಯಾಪಾರದ ಅಂಗಡಿ ಭಂಡಸಾಲೆಗಳಿಗೆ ದೀಪದ ಪ್ರಕಾಶದ ಶೋಭೆಯು ಅಧಿಕವಾಗಿ ಬೇಕಾದ ಎಲ್ಲಾ ಕಡೆಗಳಲ್ಲಿ ಅತ್ಯುಪಯುಕ್ತವಾದವು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಮಂಗಳೂರು ಟ್ರೇಡಿಂಗ್ ಎಸ್ಸೋಶಿಯೇಶನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದ. ಕ.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1—0—0 ವಿ. ಪಿ. ಮೂಲಕ 1—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನ್ನೂ, ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೋಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.
ನಮ್ಮ ದರಗಳು ಬಡಜವರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ವಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.
ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,
ಹಂಪನಕಟ್ಟಾ, ಮಂಗಳೂರು ದ. ಕ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.
ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.
ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜೆ.ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬ್ಲಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರ್ಣಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಬ್ಬಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ

ಯುವ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯುವ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.
ಸರ್ವರೂ ತರಿಸಿಕೊಂಡು ಸಂತೋಷ ಪಡಿ.
ಬರುವ ಮೇ ತಿಂಗಳು ಅಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಲೀವರ್ ಕೇಸಿನಿಂದ ತಯಾರಾದದ್ದು. ವಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಜೂಕಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಸೆ (5) ಜೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಪೌಂಟನ್‌ಪೆನ್. (10) ಮಕ್ಕಳ ತಮಾಷೆ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಶಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಟಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 29ನೇ ಮಾರ್ಚ್ 1912.

ಗೋಖಲೆಯವರ ಉಚಿತ ಮತ್ತು ಕಡ್ಡಾಯವಾದ ಎಲಿಮೆಂಟರಿ ವಿದ್ಯಾಭ್ಯಾಸದ ಮಸೂದೆಯು.

ಶ್ರೇಷ್ಠ ನ್ಯಾಯನಿರ್ಮಾಣ ಸಭೆಯಲ್ಲಿ ಪ್ರಜಾಪ್ರತಿನಿಧಿಗಳು ೧೩ ಜನರು ಮಾತ್ರ ಈ ಕಾನೂನು ಮಸೂದೆಯನ್ನು ಆದರಿಸಿದ್ದಾಗ ೩೮ ಜನ ಮೆಂಬರರು ಇದನ್ನು ವಿರೋಧಿಸಿದ್ದರು. ಸರಕಾರಿ ಕಡೆಯವರಲ್ಲದ ಮೆಂಬರರಲ್ಲಿ ಸಹ ಕೆಲವರು ಇದಕ್ಕೆ ತಮ್ಮ ಆದರಣೆಯನ್ನು ಕೊಡಲಿಲ್ಲ. ಸರಕಾರದವರ ಆದರಣೆಯು ಈ ಮಸೂದೆಗೆ ಇಲ್ಲದೆ ಹೋದ್ದರಿಂದ ಮಸೂದೆಯು ಶ್ರೇಷ್ಠ ನ್ಯಾಯನಿರ್ಮಾಣ ಸಭೆಯಲ್ಲಿ ಬಿದ್ದುಹೋಯಿತು.

ಸರಕಾರದವರು ಈ ಮಸೂದೆಯನ್ನು ವಿರೋಧಿಸಿದ್ದರಿಂದ ಎಲಿಮೆಂಟರಿ ವಿದ್ಯಾಪ್ರಸರಣೆಯಲ್ಲಿ ಸರಕಾರದವರಿಗೆ ಅಭಾವವಿರುವುದೆಂತ ತಿಳಿಯಕೂಡದು. ಯಾಕಂದರೆ ಈ ಮಸೂದೆಯ ವಿಷಯ ಗೋಖಲೆಯವರನ್ನು ವಿರೋಧಿಸಿ ಮಾಡಿದ ಭಾಷಣದಲ್ಲಿ ವಿದ್ಯಾಖಾತೆಯ ಮೆಂಬರರಾದ ಬಹುಮಾನಪಟ್ಟ ಬಟ್ಲರವರು ಉಚಿತ ಮತ್ತು ಕಡ್ಡಾಯವಾದ ಎಲಿಮೆಂಟರಿ ವಿದ್ಯಾ ಪ್ರಸರಣೆಯು ಹಿಂದೂಸ್ಥಾನದ ಪ್ರಜಾ ಏಳಿಗೆಗೆ ಅತ್ಯಗತ್ಯವೆಂತ ಹೇಳಿರುವರು. ಆದರೆ ಮಸೂದೆಯನ್ನು ಜ್ಯಾರಿಗೆ ತರುವರೆ ಸಮಯವು ಇದಲ್ಲ. ಲೋಕಲ್ ಬೋರ್ಡುಗಳಲ್ಲಿ ಯಾವುದಾದರೂ ಈ ಬೀಲಿನಲ್ಲಿ ನಮೂದಿಸಿದ ವಿದ್ಯಾಪ್ರಸರಣೆಯ ಅಧಿಕಾರವನ್ನು ಈ ಮೊದಲು ಕೇಳಲಿಲ್ಲ. ಗೋಖಲೆಯವರು ಅಂದಾಜು ಮಾಡಿದ ೪॥ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಈ ಏರ್ಪಾಡಿಗೆ ತಗಲುವುದು. ಪ್ರ್ಯಾಮರಿ ಶಿಕ್ಷಣದ ತರಗತಿಯನ್ನು ಒಳ್ಳಿತಾಗಿ ಮಾಡುವ ಮೊದಲು ಈಗಿನ ಪ್ರ್ಯಾಮರಿ ವಿದ್ಯಾಭ್ಯಾಸವನ್ನು ಇದ್ದಂತೆ ವಿಪರೀತ ಖರ್ಚು ಮುಟ್ಟಿಸಿ ಕಡ್ಡಾಯವಾಗಿ ಮಾಡುವುದು ದೇಶಕ್ಕೆ ಶುಭಕರವಲ್ಲ. ಅನ್ಯ ಯುರೋಪ ದೇಶಗಳ ಸ್ಥಿತಿಯನ್ನು ಹಿಂದೂಸ್ಥಾನದ ಸ್ಥಿತಿಯೊಡನೆ ಸರಿಹೋಲಿಸುವುದು ಸಮವಲ್ಲ. ಯಾಕಂದರೆ ಹಿಂದುಸ್ಥಾನದಲ್ಲಿರುವ ೧೪೦೦ ಜಾತಿ ಒಳಜಾತಿಗಳೂ, ಬೇರೆ ಬೇರೆ ಭಾಷೆಗಳೂ ಆಯಾ ಭಾಷೆಗಳ ೨೦ ವಿಧವಾದ ಬರಹವೂ, ಬಾಲವಿವಾಹ ಪದ್ಧತಿಯೂ, ಸ್ತ್ರೀಯರಿಗೆ ಸಮಾಜ ಸಂಪರ್ಕಕ್ಕಿರುವ ಅಭ್ಯಂತರಗಳೂ, ಯುರೋಪಿಯ ದೇಶಗಳಲ್ಲಿರುವುದಿಲ್ಲ. ಆಯಾ ಸಂಸ್ಥಾನಿಕ ಸರಕಾರಗಳು ಪ್ರ್ಯಾಮರಿ ವಿದ್ಯಾಭಿವೃದ್ಧಿಯ ಪರವಾಗಿದ್ದರೂ ಜನಸಾಮಾನ್ಯರಲ್ಲಿ ಇಂಥಾ ವಿದ್ಯಾಭ್ಯಾಸವು ಕಡ್ಡಾಯವಾಗಿ ಜ್ಯಾರಿಗೆ ತರಬೇಕೆಂಬುವ ಆಶಯವು ಇಲ್ಲದ್ದರಿಂದ ಈ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಜ್ಯಾರಿಗೆ ತಂದರೆ ಇದು ಪ್ರಜೆಗಳಿಗೆ ಪ್ರತಿಕೂಲವಾಗುವದೆಂಬ ಅಭಿಪ್ರಾಯವನ್ನು ವ್ಯಕ್ತಗೊಳಿಸಿ ಗೋಖಲೆಯವರ ಬೀಲಿಗೆ ತಮ್ಮ ಆದರಣೆಯನ್ನು ನಿರಾಕರಿಸಿರುತ್ತಾರೆ. ಎಲಿಮೆಂಟರಿ ವಿದ್ಯಾಭ್ಯಾಸವನ್ನು ಉಚಿತವಾಗಿ ಮಾಡುವ ಸಿದ್ಧಾಂತವು ಈ ಮೊದಲೇ ಸರಕಾರದವರಿಂದ ಸ್ವೀಕರಿಸಲ್ಪಟ್ಟಿರುವುದು. ಎಲಿಮೆಂಟರಿ ಶಾಲೆಗಳ ಶಾಲಾಫೀಸನ್ನು ಕೊಡಲಶಕ್ತರಾದವರೆಲ್ಲರಿಗೂ ಈ ಶಿಕ್ಷಣವು ಉಚಿತವಾಗಿ ಕೊಡಬಹುದೆಂಬದಾಗಿ ಇಂಡಿಯಾ ಸರಕಾರದವರು ಸಂಸ್ಥಾನಿಕ ಸರಕಾರಗಳಿಗೆ ಇತ್ತಲಾಗೆ ತಿಳಿಸಿರುವರು. ಅದಲ್ಲದೆ ಶ್ರೇಷ್ಠ ಸರಕಾರದವರು ಎಲಿಮೆಂಟರಿ ವಿದ್ಯಾಪ್ರಸರಣೆಯ ಸಲುವಾಗಿ ಪ್ರತಿ ವರುಷದಲ್ಲಿಯೂ ಹೆಚ್ಚೆಚ್ಚಾದ ದ್ರವ್ಯಸಹಾಯವನ್ನು ಕೊಡುತ್ತಿರುವರು. ೧೯೦೨ರಲ್ಲಿ ವಿದ್ಯಾಭಿವೃದ್ಧಿ ಬಗ್ಗೆ ಪ್ರತಿ ವರುಷವೂ ದೊರಕುವ ೫೦ ಲಕ್ಷ ರೂಪಾಯಿಗಳ ಗ್ರೇಂಟು ಕೊಡೋಣಾದುದಲ್ಲದೆ ೧೯೦೫ರಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿಯೇ ಪ್ರತಿ ವರುಷವೂ ದೊರಕುವ ರೂ. ೩೫॥ ಲಕ್ಷದ ಗ್ರ್ಯಾಂಟು ಕೊಡೋಣಾಗಿಯದೆ. ಚಕ್ರವರ್ತಿಗಳಿಂದ ಡಿಲ್ಲಿಯಲ್ಲಿ ವಿದ್ಯಾಭಿವೃದ್ಧಿ ಬಗ್ಗೆ ಅಪ್ಪಣೆ ಕೊಡಿಸಿದ ಪ್ರತಿ ವರುಷವೂ ಸಿಕ್ಕುವ ರೂ. ೫೦ ಲಕ್ಷದ ದ್ರವ್ಯಸಹಾಯದಲ್ಲಿ ಹೆಚ್ಚಿನಂಶವು ಎಲಿಮೆಂಟರಿ ವಿದ್ಯಾಪ್ರಸರಣೆ ಬಗ್ಗೆ ವಿನಿಯೋಗಿಸಲ್ಪಡುವುದು. ಜನಸಾಮಾನ್ಯರಲ್ಲಿ ಎಲಿಮೆಂಟರಿ ವಿದ್ಯಾಪ್ರಸರಣೆಗೆ ಬೇಕಾದ ಆಸಕ್ತಿಯನ್ನುಂಟುಮಾಡಿ ವಿದ್ಯಾಭಿವೃದ್ಧಿಗೋಸುಗ ಪೇಚಾಡುತ್ತಿರುವ ಬಹುಮಾನಪಟ್ಟ ಗೋಖಲೆಯವರ ಶ್ರಮವು ಸ್ತುತ್ಯವಾಗಿರುವುದು. ಈ ಮೊದಲಾದ ವಾದಗಳಿಂದ ಸರಕಾರ ಕಡೆಯಿಂದ ಎಲಿಮೆಂಟರಿ ವಿದ್ಯಾಭ್ಯಾಸದ ಈ ಮಸೂದೆಯು ನಿರಾಕರಿಸಲ್ಪಟ್ಟಿತು.

ಈ ಮಸೂದೆಯನ್ನು ಜ್ಯಾರಿಗೆ ತರುವರೆ ಸಮಯವು ಪ್ರಕೃತ ಅನುಕೂಲವಲ್ಲವೆಂಬ ವಾದವನ್ನು ಸಕಾರಣಗಳಿಂದ ಗೋಖಲೆಯವರು ಅಲ್ಲಗಳೆಯುವರು. ಜನಸಾಮಾನ್ಯರಿಗೆ ತಕ್ಕುದಾದ ಶಿಕ್ಷಣವನ್ನು ಕೊಡುವುದು ತಮ್ಮ ಕರ್ತವ್ಯವಾಗಿರುವುದೆಂತ ಸರಕಾರದವರು ಹಲವು ಸಂದರ್ಭಗಳಲ್ಲಿ ಅಪ್ಪಣೆಕೊಡಿಸಿರುವರು. ಹೀಗೆ ಅಪ್ಪಣೆ ಕೊಡಿಸಿದ ಲಾಗಾಯಿತು ಇಂದಿನ ವರೆಗೆ ಅಂದರೆ ಕಳದ ೬೩ ವರುಷಗಳಲ್ಲಿ ತಮ್ಮ ಈ ಕರ್ತವ್ಯವನ್ನು ಸರಕಾರದವರು ಎಷ್ಟರಮಟ್ಟಿಗೆ ನಿರ್ವಹಿಸಿದರೆಂಬುದರ ಗಣನೆಯನ್ನು ಗೋಖಲೆಯವರು ಸರಿಯಾಗಿ ಮಾಡಿರುತ್ತಾರೆ. ೧೯೦೧ನೇ ವರುಷದ ವರೆಗಿನ ಅಂದರೆ ಸರಕಾರದವರ ೫೦ ವರುಷಗಳ ವಿದ್ಯಾಪ್ರಸರಣೆಯ ಪ್ರಯತ್ನದಳಿಂದ ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳ ಸಂಖ್ಯೆಯು ಒಟ್ಟು ಜನಸಂಖ್ಯೆಯ ಸೇಕಡಾ 1⅗ರಂತಿತ್ತು. ಎಲಿಮೆಂಟರಿ ವಿದ್ಯಾಭ್ಯಾಸವು ವಿಶೇಷ ಪ್ರೋತ್ಸಾಹವನ್ನು ಹೊಂದಿದ ಕಳದ ೧೦ ವರುಷಗಳಲ್ಲಿ ಈ ಸಂಖೆಯು ಸೇಕಡಾ 1⅘ರಂತಾಯಿತು. ೧೯೧೧ರಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೊಂದುವ ಹುಡುಗರ ಸಂಖ್ಯೆಯು ೩೨ಲಕ್ಷ, ಹುಡುಗಿಯರ ಸಂಖ್ಯೆಯು ೫ಲಕ್ಷಕ್ಕಿಂತ ಸ್ವಲ್ಪ ಹೆಚ್ಚಾಗಿತ್ತು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದತಕ್ಕ ಸಂಖ್ಯೆಯು ಸರಾಸರಿ ಮೇಲೆ ಒಟ್ಟಿನ ಜನಸಮುದಾಯದ ಸೇಕಡಾ ೧೫ರಂತಿರಬೇಕೆಂಬ ನಿಯಮದ ಪ್ರಕಾರ ಪ್ರಾಥಮಿಕ ಶಿಕ್ಷಣವನ್ನು ಹೊಂದುವ ವಿದ್ಯಾರ್ಥಿಗಳ ಸಂಖ್ಯೆಯ ಲೆಕ್ಕ ನೋಡಿದ್ದಲ್ಲಿ ಈ ಶತಮಾನದ ಆದಿಯಲ್ಲಿ ಅಂದರೆ ೧೯೦೧ರಲ್ಲಿ ಪ್ರಾಥಮಿಕ ವಿದ್ಯೆಯನ್ನು ಹೊಂದತಕ್ಕ ಹುಡುಗರಲ್ಲಿ ಸೇಕಡಾ ೨೭ರಂತೆಯೂ ಹುಡುಗಿಯರಲ್ಲಿ ಸೇಕಡಾ ೪॥ರಂತೆಯೂ ಶಾಲೆಗೆ ಹೋಗುವ ಜನಸಂಖ್ಯೆ ಇರುವುದು. ಕಳದ ವರುಷದ ಇದೇಲೆಕ್ಕವನ್ನು ತಿಂಗೊಮ್ಮೆ ನೋಡಿದ್ದಲ್ಲಿ ಈ ಸಂಖ್ಯೆಗಳ ಸರಾಸರಿಯು ಸೇಕಡಾ ೩೧ ಮತ್ತು ೫॥ರಂತಿರುವುದು. ಈ ಲೆಕ್ಕ ಪ್ರಕಾರ ಕಳದ ೧೦ ವರುಷಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದುವ ಹುಡುಗರು ಪ್ರತಿ ವರುಷಕ್ಕೆ ೭೪೦೦೦ ಪ್ರಕಾರವೂ ಹುಡುಗಿಯರು ೧೭ಸಾವಿರ ಪ್ರಕಾರವೂ ಹೆಚ್ಚುತ್ತಿರುವರು. ಅಂದರೆ ಹಿಂದುಸ್ಥಾನದ ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದತಕ್ಕ ಹುಡುಗಹುಡುಗಿಯರೆಲ್ಲರಿಗೆ ಈ ವಿದ್ಯಾಲಾಭವು ದೊರಿಯಬೇಕಾದರೆ ಹುಡುಗರಿಗೆ ಇನ್ನು ಶುಮಾರು ೧೧೫ ವರುಷಗಳೂ ಹುಡುಗಿಯರಿಗೆ ೬೬೫ ವರುಷಗಳೂ ಬೇಕಾದಾವು. ಇಷ್ಟು ದೀರ್ಘ ಕಾಲದ ಪರ್ಯಂತರ ಪ್ರಜೆಗಳನ್ನು ಅಶಿಕ್ಷಿತರಾಗಿಟ್ಟರೆ ಯಾವ ಆಪತ್ತು ತಾನೆ ಸಂಭವಿಸಲಿಕ್ಕಿಲ್ಲ. ಗೋಖಲೆಯವರು ತಮ್ಮ ಮಸೂದೆಯಲ್ಲಿ ಸೂಚಿಸಿದ ಏರ್ಪಾಡುಗಳನ್ನು ಜ್ಯಾರಿಗೆ ಕ್ರಮೇಣ ತಂದಲ್ಲಿ ಹೆಚ್ಚುಕದಿಮೆ ೨೦ ವರುಷಗಳಲ್ಲಿ ಸರಕಾರದವರ ಪ್ರಜಾ ವಿದ್ಯಾಪ್ರಸರಣೆ ಕರ್ತವ್ಯವು ನೆರವೇರುತ್ತಿತ್ತು. ಈ ಸಂದರ್ಭದಲ್ಲಿ ಪ್ರಕೃತ ಕಾಲವು ಈ ಮಸೂದೆಯನ್ನು ಜ್ಯಾರಿಗೆ ತರಲು ಅನುಕೂಲವಲ್ಲವೋ?

ಜನರಿಗೆ ಕುಡಿಯುವರೆ ಶುದ್ಧವಾದ ನೀರಿನ ಸರಬರಾಯಿಯನ್ನು ಮಾಡಲಾರದಷ್ಟು ಬಡ ಸ್ಥಿತಿಯಲ್ಲಿರುವ ಲೋಕಲ್ ಬೋರ್ಡುಗಳು ಉಚಿತ ಮತ್ತು ಕಡ್ಡಾಯವಾದ ಎಲಿಮೆಂಟರಿ ಶಿಕ್ಷಣದ ಏರ್ಪಾಡಿನ ಪ್ರಸ್ತಾಪವನ್ನು ಮಾಡುವುದು ಹೇಗೆ? ಲೋಕಲ್ ಬೋರ್ಡುಗಳು ಈ ವರೆಗೆ ಕಡ್ಡಾಯ ವಿದ್ಯಾಭ್ಯಾಸ ಪ್ರಸರಣೆ ವಿಷಯ ಸುಮ್ಮನಿದ್ದದ್ದರಿಂದ ಈ ಏರ್ಪಾಡಿನ ಅವಶ್ಯಕತೆಯು ಅವರಿಗಿರುವದಿಲ್ಲವೆಂದು ಹೇಳುವುದು ಯುಕ್ತವಲ್ಲ. ವಿಪರೀತ ಖರ್ಚು ಈ ಏರ್ಪಾಡಿಗೆ ತಗಲುವುದೆಂಬ ಸರಕಾರದವರ ಇನ್ನೊಂದು ಆಕ್ಷೇಪವಿದೆ. ಆದರೆ ಗೋಖಲೆಯವರು ಈ ಬಗ್ಗೆ ನವೀನ ತೆರಿಗೆಗಳನ್ನು ಸಹ ವಿಧಿಸಬಹುದೆಂದು ಸೂಚಿಸಿರುವರಲ್ಲದೆ ಈ ಬಗ್ಗೆ ಕಷ್ಟಮ್ಸ್ ಸುಂಕವನ್ನು ಈಗಿರುವ ಸೇಕಡಾ ೫ರ ದರದಿಂದ ಸೇಕಡಾ ೭ಕ್ಕೆ ಏರಿಸಬಹುದೆಂತ ಸಹ ಸೂಚಿಸಿರುತ್ತಾರೆ. ಸರಕಾರದವರ ಕಡೆಯಿಂದ ಸೂಚಿಸಲ್ಪಟ್ಟಂತೆ ಎಲಿಮೆಂಟರಿ ವಿದ್ಯಾಭ್ಯಾಸದ ತರಗತಿಯು ಒಳ್ಳಿತಾದನಂತರ ಕಡ್ಡಾಯ ವಿದ್ಯಾಭ್ಯಾಸದ ಏರ್ಪಾಡನ್ನು ಪರ್ಯಾಲೋಚಿಸುವುದು ದೇಶದ ಈಗಿನ ಅಜ್ಞಾನದ ಅತಿ ದೀನ ಸ್ಥಿತಿಯಲ್ಲಿ ಉಚಿತವಲ್ಲ. ಲೆಕ್ಕ, ಓದುವುದು, ಬರಿಯುವುದು ಈ ಮೂರನ್ನು ಜನಸಾಮಾನ್ಯರೆಲ್ಲರು ಅರಿತರೆ ಎಲಿಮೆಂಟರಿ ವಿದ್ಯಾಭ್ಯಾಸದ ತರಗತಿಯನ್ನು ಒಳ್ಳಿತು ಮಾಡಲಿಕ್ಕೆ ಪ್ರಜೆಗಳಿಂದ ಸಹಕಾರವು ವಿಶೇಷವಾಗಿ ದೊರಿಯುವುದು. ಇದಲ್ಲದೆ ಎಂಥಾ ಉಚ್ಚಸ್ಥಿತಿಯ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದರೂ ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂಬ ವಶ್ತಾಯವು ಹೆತ್ತವರಿಗಿಲ್ಲದಿದ್ದರೆ ಅಕ್ಷರ ಜ್ಞಾನವಿಲ್ಲದ ಹೆತ್ತವರು ತಾವಾಗಿಯೇ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಿಕೊಡುವುದು ದುರ್ಲಭ. ಆದ್ದರಿಂದ ವಿದ್ಯೆಯು ಶ್ರೇಷ್ಠ ತರಗತಿದ್ದಾದರೂ ಉಚಿತವಾಗಿಯೇ ದೊರತರೆ ಸಾಲದು. ಅದು ಕಡ್ಡಾಯವಾಗಿ ಸಹ ಇರಬೇಕು. ಪಾಶ್ಚಾತ್ಯ ಶಿಕ್ಷಣವನ್ನು ಪಡದಿರುವ ಭಾರತೀಯರಿಗೆ ವಿದ್ಯಾವಿಷಯಗಳಲ್ಲಿ ತಮ್ಮ ದೇಶವನ್ನು ಪಾಶ್ಚಾತ್ಯ ದೇಶಗಳೊಂದಿಗೆ ಸರಿಹೋಲಿಸುವುದನುಚಿತವೆಂತ ಹೇಳಿದರೆ ಯಾರೂ ಒಪ್ಪಲಾರರು. ಪಾಶ್ಚಾತ್ಯ ಶಿಕ್ಷಣವನ್ನು ಹೊಂದಿ ನಮ್ಮ ದೀನಸ್ಥಿತಿಯನ್ನು ತಿಳಿದಿರುವೆವು. ಸಮಾಜ ಅರಿಷ್ಟಗಳು ಯಾವವೆಂಬವು ನಮಗೆ ವ್ಯಕ್ತವಾಗಿರುವವು. ಸ್ತ್ರೀ ಶಿಕ್ಷಣವು ನಮ್ಮ ಏಳಿಗೆಗೆ ಅಗತ್ಯವಾಗಿರುವುದೆಂತ ಗೊತ್ತುಮಾಡಿಕೊಂಡಿರುವೆವು. ಈ ಪರಿಜ್ಞಾನವು ಸಾಮಾನ್ಯರಲ್ಲಿ ಸಹ ಉದಯಿಸುವರೆ ಎಲಿಮೆಂಟರಿ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿಯೂ ಉಚಿತವಾಗಿಯೂ ಜ್ಯಾರಿಗೆ ತರಬೇಕೆಂತ ಈ ಮಸೂದೆಯು ಗೋಖಲೆಯವರಿಂದ ಶ್ರೇಷ್ಠ ಸರಕಾರದ ನ್ಯಾಯನಿರ್ಮಾಣ ಸಭೆಯ ಮುಂದಿಡಲಾಯಿತು.

ಮಸೂದೆಯು ಬಿದ್ದುಹೋದರೂ ಗೋಖಲೆಯವರ ಈ ಪರವಾದ ಪ್ರಯತ್ನಗಳ ಫಲವು ಎಂದೂ ನಿರರ್ಥಕವಾಗಲಾರದು. ಗೋಖಲೆಯವರ ಈ ಪ್ರಯತ್ನಗಳಿಂದ ಉಚಿತ ಮತ್ತು ಕಡ್ಡಾಯವಾದ ಎಲಿಮೆಂಟರಿ ವಿದ್ಯಾಭ್ಯಾಸ ಪ್ರಸರಣೆಯ ವಿಷಯ ಪ್ರಜಾಭಿಪ್ರಾಯವು ಐಕ್ಯಗೊಂಡು ಬಲವತ್ತಾಗಿದೆ. ರಾಷ್ಟ್ರೀಯ ಸಭೆ, ಮುಸಲ್ಮಾನ್ ಲೀಗ್, ಮದ್ರಾಸು ಮೈಲ್, ಇಂಗ್ಲಿಷ ಮನ್ ಮೊದಲಾದ ಆಂಗ್ಲೇಯ ವೃತ್ತಪತ್ರಗಳು, ಲೋಕಲ್ ಬೋರ್ಡುಗಳು, 234 ಆಫೀಸರರಲ್ಲಿ 51 ಯುರೋಪಿಯ ಆಫೀಸರರು, 39 ಭಾರತೀಯ ಆಫೀಸರರು ಈ ಮಸೂದೆಯ ಪರವಾದ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಅದಲ್ಲದೆ ಸರಕಾರದವರು ಸಹ ಪ್ರ್ಯಾಮರಿ ವಿದ್ಯಾಭ್ಯಾಸದ ಪ್ರಸರಣೆಯ ಸಾಧನೆಯು ಇಷ್ಟರತನಕ ಸಾಕಷ್ಟು ಶೀಘ್ರವಾಗಿ ನಡಿಯಲಿಲ್ಲವೆಂತ ಒಪ್ಪಿಕೊಂಡಿರುವುದರಿಂದಲೂ ಈ ವಿದ್ಯಾಭ್ಯಾಸವನ್ನು ಶೀಘ್ರವಾಗಿ ಬೀರುವ ಪ್ರಯತ್ನಗಳ ವಿಷಯ ಪರ್ಯಾಲೋಚನೆ ಸರಕಾರದವರಲ್ಲಿರುವುದರಿಂದಲೂ ಎಲಿಮೆಂಟರಿ ವಿದ್ಯಾಪ್ರಸರಣೆಯ ವಿಷಯ ಪೂರ್ಣ ಆಶಾಭಂಗರಾಗಲಿಕ್ಕೆ ಕಾರಣವಿಲ್ಲ.

ಶ್ರೀಶೃಂಗಗಿರಿ ಸಚ್ಚಿದಾನಂದ ಭಾರತೀ ಸ್ವಾಮಿಗಳವರ ಪರಂಧಾಮವು.

ಈ ತಿಂಗಳ ತಾ. ೨೦ನೇ ಬುಧವಾರ ದಿವಸ ಶ್ರೀ ಶೃಂಗಗಿರಿ ಸ್ವಾಮಿಗಳಾದ ಜಗದ್ಗುರು ಸಚ್ಚಿದಾನಂದ ಭಾರತೀ ಸ್ವಾಮಿಗಳು ಪರವನ್ನೈದಿದರೆಂಬ ದುಃಖಕರ ವಾರ್ತೆಯನ್ನು ತಿಳಿಸಲು ವಿಷಾದಪಡುತ್ತೇವೆ. ಈ ಜಗದ್ಗುರುಗಳ ಸಂಕ್ಷೇಪವಾದ ಜೀವನಚರಿತ್ರೆಯನ್ನು ನಮ್ಮ ಜಿಲ್ಲೆಯಲ್ಲಿರುವ ಜಗದ್ಗುರುಗಳ ಶಿಷ್ಯವರ್ಗದವರೂ ಇತರರೂ ತಿಳಿಯುವಂತೆ ಈ ಕೆಳಗೆ ಛಾಪಿಸಿರುತ್ತೇವೆ.

ಅದ್ವೈತ ಸಿದ್ಧಾಂತ ಪ್ರತಿಷ್ಠಾಪಕರಾದ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿತವಾದ ಗುರುಪೀಠದಲ್ಲಿ ಪರಂಪರಾಗತರಾಗಿ ಗುರುಸ್ಥಾನವನ್ನಲಂಕರಿಸಿದ್ದ ಶ್ರೀ ಶೃಂಗಗಿರಿ ಸಚ್ಚಿದಾನಂದ ಭಾರತೀಸ್ವಾಮಿಯವರು ಕಳೆದ ಪರಿಧಾವಿ ಸಂವತ್ಸರದ ಚೈತ್ರ ಶುದ್ಧ ದ್ವಿತೀಯಾ ಬುಧವಾರದ ದಿವಸ ಎಂದರೆ ೧೯೧೨ನೆಯ ಮಾರ್ಚಿ ತಾ. ೨೦ರಲ್ಲಿ ಪರಂಧಾಮವನ್ನೈದಿದರೆಂಬ ವರ್ತಮಾನವು ಎಲ್ಲರಲ್ಲಿಯೂ ಅತ್ಯಂತ ವಿಷಾದವನ್ನುಂಟುಮಾಡತಕ್ಕದಾಗಿದೆ. ಇವರ ಇಹಲೋಕದ ವ್ಯಾಪಾರ ವೈಮುಖ್ಯದಿಂದ, ಅದ್ವೈತ ಜಗತ್ತಿನ ಮುಖ್ಯವಾದ ಒಂದು ಪಂಡಿತರತ್ನವೇ ಅದೃಶ್ಯವಾದಂತಾಗಿ, ಅದ್ವೈತ ಸಿದ್ಧಾಂತದ ಆಸ್ತಿಕ ಧರ್ಮೋತ್ತೇಜನಕ್ಕೆ ಎಷ್ಟೋ ನ್ಯೂನತೆಯೊದಗುವ ಕಾಲವು ಸನ್ನಿಹಿತವಾಯಿತೆಂದೇ

ಊಹಿಸಬಹುದಾಗಿದೆ. ಏಕೆಂದರೆ, ಶ್ರೀ ಶಂಕರಾಚಾರ್ಯರು ವೈದಿಕ ಧರ್ಮರಕ್ಷಣಾರ್ಥವಾಗಿ ಭರತಖಂಡಕ್ಕೆಲ್ಲಾ ನಾಲ್ಕು ಮಠಗಳನ್ನು ಮಾತ್ರ ಸ್ಥಾಪಿಸಿದ್ದರು. ಅವುಗಳಲ್ಲಿ ಒಂದು ಭರತಖಂಡದ ಪಶ್ಚಿಮಭಾಗವಾದ ದ್ವಾರಕೆಯಲ್ಲಿಯೂ, ಮತ್ತೊಂದು ಪೂರ್ವಭಾಗವಾದ ಜಗನ್ನಾಥ ಕ್ಷೇತ್ರದಲ್ಲಿಯೂ, ಇನ್ನೊಂದು ಉತ್ತರ ಬದರಿಕಾಶ್ರಮದಲ್ಲಿಯೂ ಸ್ಥಾಪಿತವಾಗಿ ದಕ್ಷಿಣ ಹಿಂದುಸ್ಥಾನಕ್ಕೆಲ್ಲಾ ಶೃಂಗಗಿರಿಯೊಂದರಲ್ಲಿಯೇ ಪ್ರಧಾನ ಮಠವೊಂದು ಸ್ಥಾಪಿಸಲ್ಪಟ್ಟಿತು. ತ್ರಿಮತೀಯರ ಶಿಷ್ಯಕೋಟಿಗಿಂತಲೂ ಅದ್ವೈತ ಮತಾನುಯಾಯಿಯಾದ ಶಿಷ್ಯಕೋಟಿಯು ಶೃಂಗಗಿರಿಯ ಗುರುಸ್ಥಾನಕ್ಕೆ ಸೇರಿರುವಷ್ಟು ಹೆಚ್ಚಾಗಿ ಇತರ ಮಠಗಳಿಗೆ ಸೇರಿಲ್ಲ. ಹೀಗಿರುವುದರಿಂದ ದಕ್ಷಿಣ ಹಿಂದೂದೇಶದ ಅದ್ವೈತ ಶಿಷ್ಯಕೋಟಿಗೆಲ್ಲಾ ವೈದಿಕ ಧರ್ಮೋಪದೇಶದಲ್ಲಿ ಬದ್ಧಾಧಿಕಾರಿಗಳಾಗಿದ್ದವರ ಮರಣದಿಂದುಂಟಾದ ನಷ್ಟವು ಅಷ್ಟಿಷ್ಟೆಂದು ಹೇಳಲಾಗುವುದಿಲ್ಲ. ಈ ಶೃಂಗಗಿರಿಯ ಪ್ರಾಶಸ್ತ್ಯವು ಉತ್ತರದೇಶದ ಇತರ ಮೂರು ಮಠಗಳಿಗಿಂತಲೂ ಪ್ರಾಶಸ್ತ್ಯವನ್ನು ಪಡೆದಿರುವುದಕ್ಕೆ ಮತ್ತೊಂದು ಕಾರಣವುಂಟು. ಭಗವತ್ಪಾದರು ಶೃಂಗಗಿರಿಯಲ್ಲಿಯೇ ಬಹುಕಾಲ ವಾಸಿಸಿ, ತಮ್ಮ ಶಿಷ್ಯರಲ್ಲಿ ಅತ್ಯುತ್ತಮ ವಿದ್ವಾಂಸರಾದ ಸುರೇಶ್ವರಾಚಾರ್ಯರನ್ನು ಆ ಮಠದಲ್ಲಿಯೇ ಸ್ಥಾಪಿಸಿದುದರಿಂದ, ಶೃಂಗಗಿರಿಯ ಪೀಠಪ್ರಾಶಸ್ತ್ಯವು ಇತೋಪ್ಯತಿಶಯವಾದುದಾಗಿರುವುದು. ಶೃಂಗಗಿರಿಯಲ್ಲಿ ಮಠವು ಸ್ಥಾಪನೆಯಾಗಿ ಪ್ರಾಯಶಃ ೧೯೦೦ ವರುಷಗಳ ಮೇಲೆಯೇ ಆಗಿರಬಹುದು. ಇದಕ್ಕಿಂತಲೂ ಪ್ರಾಚೀನ ಮಠಸ್ಥಾಪನೆಯು ಮತ್ತಾವುದೂ ಇರಲಾರದು. ಅಲ್ಲಿಂದೀಚೆಗೆ ಪರಂಪರಾಗತರಾಗಿ ಬಂದವರಲ್ಲಿ ಈ ಸ್ವಾಮಿಗಳು ೩೩ನೆಯವರೆಂದು ಕೆಲವರೂ, ೪೧ನೆಯವರೆಂದು ಕೆಲವರೂ ಅಭಿಪ್ರಾಯಪಡುವರು. ಇವರ ಹಿಂದಣವರಾಗಿದ್ದ ಶ್ರೀ ನೃಸಿಂಹ ಭಾರತೀ ಸ್ವಾಮಿಗಳವರು ತಮ್ಮ ಅನಂತರದಲ್ಲಿ ಇಂತಹ ಶ್ರೇಷ್ಠವಾದ ಪೀಠಕ್ಕೆ ಅರ್ಹರಾದವರನ್ನು ಸಿದ್ಧಪಡಿಸಲು ಬಹು ದೂರಾಲೋಚನೆಯನ್ನು ಮಾಡಿದರು. ಏಕೆಂದರೆ, ದಕ್ಷಿಣ ದೇಶದ ಬಹು ಸಂಖ್ಯಾಕವಾದ ಅದ್ವೈತ ಜಗತ್ತಿನ ಗುರುಸ್ಥಾನವನ್ನಲಂಕರಿಸುವುದು ಸಾಮಾನ್ಯವಾದ ಮಾತಲ್ಲ. ಅದಕ್ಕೆ ತಕ್ಕವರನ್ನೇ ಸಿದ್ಧಪಡಿಸಬೇಕಾದುದು ಅವಶ್ಯಕವಾಗಿದ್ದಿತು. ಅದಕ್ಕಾಗಿ ತಪಸ್ವಿಗಳೂ, ಪಂಡಿತವರ್ಯರೂ ಆಗಿದ್ದ ಶ್ರೀ ನೃಸಿಂಹ ಭಾರತೀಸ್ವಾಮಿಗಳವರು ಆ ಕಾಲದಲ್ಲಿದ್ದ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರಲ್ಲಿ ಆಲೋಚಿಸಿ ವಿಚಾರಮಾಡತೊಡಗಿದರು. ಆಗ ಕುಣಿಗಲ ರಾಮಶಾಸ್ತ್ರಿಯವರಿಗೆ ತೇಜಸ್ವಿಯಾದ ಒಬ್ಬ ಪುತ್ರನಿರುವನೆಂಬುದನ್ನು ತಿಳಿದು, ಆ ಬಾಲಕನೇ ಈ ಪೀಠಕ್ಕೆ ಅರ್ಹನೆಂದು ಸಿದ್ಧಾಂತಗೊಳಿಸಿದರು. ಏಕೆಂದರೆ, ಸದರಿ ರಾಮಶಾಸ್ತ್ರಿಗಳ ಶಾಸ್ತ್ರಜ್ಞಾನವೂ, ವೈದಿಕ ಕರ್ಮಾನುಷ್ಠಾನವೂ, ಧರ್ಮಶ್ರದ್ಧೆಯೂ ಮಹಿಮಾತಿಶಯವನ್ನುಂಟುಮಾಡತಕ್ಕುದಾಗಿದ್ದಿತು. ಅಲ್ಲದೆ ಅವರಲ್ಲಿ ಜನಿಸಿದ್ದ ಪುತ್ರರಲ್ಲಿ ಕೊನೆಯ ಮಗನ ಜಾತಕವೂ ಇಂತಹ ಗುರುಸ್ಥಾನಾಧಿಪತ್ಯಕ್ಕೆ ತಕ್ಕವನೆಂದು ಸೂಚಿಸುವಂತಿದ್ದಿತು. ಪೈಂಗಳ ಸಂವತ್ಸರದ ಫಾಲ್ಗುಣ ಬ. ದಶಮಿ ಗುರುವಾರದ ದಿವಸ ಎಂದರೆ ೧೮೫೮ರಲ್ಲಿ ಜನಿಸಿ ರಾಮಶಾಸ್ತ್ರಿಗಳ ಕನಿಷ್ಠಪುತ್ರರಾಗಿಯೂ, ಶಿವಾಭಿಧಾನದಿಂದ ಖ್ಯಾತರಾಗಿಯೂ ಇದ್ದವರೇ ಈಗಣ ಶ್ರೀ ಶೃಂಗಗಿರಿ ಸಚ್ಚಿದಾನಂದಭಾರತೀ ಸ್ವಾಮಿಯವರಾಗಿದ್ದರು. ಇವರು ೧೮೬೬ರಲ್ಲಿ ಶ್ರೀ ನೃಸಿಂಹಭಾರತೀ ಸ್ವಾಮಿಗಳಿಂದ ಶ್ರೀ ಶೃಂಗಗಿರಿ ಅದ್ವೈತ ಜಗದ್ಗುರು ಪೀಠದಲ್ಲಿ ಅಧಿಷ್ಠಿತರಾದರು. ಇವರು ಈ ಸ್ಥಾನವನ್ನಲಂಕರಿಸುವಾಗ ೮ ವರ್ಷ ವಯಸ್ಕರಾಗಿದ್ದರು. ಇವರಿಗೆ ಯೋಗ್ಯವಾದ ಶಾಸ್ತ್ರಾಭ್ಯಾಸವನ್ನು ಮಾಡಿಸಲು ಇವರ ಪೂರ್ವಾಶ್ರಮದ ಜ್ಯೇಷ್ಠ ಭ್ರಾತೃಗಳಾಗಿದ್ದ ಲಕ್ಷ್ಮೀನೃಸಿಂಹ ಶಾಸ್ತ್ರಿಗಳೇ ಬದ್ಧಕಂಕಣರಾದರು. ಲಕ್ಷ್ಮೀನೃಸಿಂಹಶಾಸ್ತ್ರಿಗಳಂತಹ ತರ್ಕವೇದಾಂತ ಪಾರಂಗತರೂ, ವೈದಿಕಕರ್ಮ ಶ್ರದ್ಧಾಳುಗಳೂ ಆ ಕಾಲದಲ್ಲಿ ವಿರಳರಾಗಿದ್ದರು. ಅತುಳ ಮೇಧಾವಿಗಳಾದ ಸ್ವಾಮಿಗಳವರ ಗುರುಪೀಠಾಧಿಷ್ಠಿತೆಗೆ ತಕ್ಕಂತೆ ಅನೇಕ ಶಾಸ್ತ್ರಗಳಲ್ಲಿ ಅದ್ಭುತ ಪಾಂಡಿತ್ಯವನ್ನು ಪಡೆದು ಅದ್ವೈತ ತತ್ವಗಳನ್ನೂ, ಯೋಗರಹಸ್ಯಗಳನ್ನೂ, ಮಠದ ಸಂಪ್ರದಾಯಗಳನ್ನೂ ಚೆನ್ನಾಗಿ ಅರಿತವರಾಗಿ ಸರ್ವರಿಗೂ ಹಿತಕಾರಿಗಳಾಗಿ ಪರಿಣಮಿಸಿದ್ದರು. ಶ್ರೀ ನೃಸಿಂಹಭಾರತೀ ಸ್ವಾಮಿಗಳು ತಮ್ಮ ಕರಕಮಲಸಂಜಾತರಾದ ಶ್ರೀಯವರೊಡನೆ ಪ್ರಭವ ಸಂವತ್ಸರದಲ್ಲಿ ಬೆಂಗಳೂರಿಗೆ ದಯಮಾಡಿಸಿದ್ದು ಪ್ರಮಾಥಿ ಸಂವತ್ಸರದಲ್ಲಿ ಬ್ರಹ್ಮೈಕ್ಯರಾದರು, ಎಂದರೆ ಶ್ರೀಯವರಿಗೆ ೨೧ನೆಯ ವಯಸ್ಸಿನಲ್ಲಿ ಮಠದ ಸರ್ವಾಧಿಕಾರವೂ ತಮ್ಮೊಬ್ಬರ ಭಾಗಕ್ಕೇ ನಿಂತಂತಾಯಿತು. ಅನಂತರ ಶ್ರೀಯವರು ಮನ್ಮಥ ಸಂವತ್ಸರದಲ್ಲಿಯೂ, ಪ್ಲವಂಗ ಸಂವತ್ಸರದಲ್ಲಿಯೂ ಬೆಂಗಳೂರಿಗೆ ದಯಮಾಡಿಸಿದ್ದರು. ಆಗ ಶ್ರೀಮನ್ ಮಹಾರಾಜರವರಿಂದಲೂ, ಮಂತ್ರಿವರ್ಯರಾದ ಮ|| ಶೇಷಾದ್ರಿ ಅಯ್ಯರವರೇ ಮೊದಲಾದವರಿಂದಲೂ ಸನ್ಮಾನಿತರಾಗಿ ಅನ್ಯಮತೀಯರಿಂದಲೂ ಇತರ ಮತೀಯರಿಂದಲೂ ಗೌರವಿಸಲ್ಪಡುತ್ತಿದ್ದರು.

ಶ್ರೀಯವರು ಕಾಲಟೀ ಅಗ್ರಹಾರದಲ್ಲಿ ಶ್ರೀ ಶಂಕರಾಚಾರ್ಯರ ಜನ್ಮಸ್ಥಳವನ್ನು ಶಾಶ್ವತಗೊಳಿಸಿದುದು ಅವರ ಕರ್ತವ್ಯಗಳಲ್ಲಿ ಮುಖ್ಯವಾದುದೆನಿಸಿದೆ. ಇದಕ್ಕೆ ಅನಂತಶಯನದಲ್ಲಿಯೂ, ನಮ್ಮ ದೇಶದಲ್ಲಿಯೂ ದಿವಾನರಾಗಿದ್ದ ಮ|| ಮಾಧವರಾಯರೂ, ನ್ಯಾಯಾಧಿಪತಿಗಳಾಗಿದ್ದ ರಾಮಚಂದ್ರಯ್ಯರೂ ಸಹಾಯಕರಾಗಿ ಶ್ರೀಯವರ ಅನುಗ್ರಹಕ್ಕೆ ಪಾತ್ರರಾದರು. ಸದರಿ ಕಾಲಟಿಯಲ್ಲಿ ಒಂದು ಮಂದಿರವು ಸ್ಥಾಪಿತವಾಗಿ ಅಲ್ಲಿ ಆದಿಶಂಕರಾಚಾರ್ಯರ ಪ್ರತಿಮಾಪ್ರತಿಷ್ಠೆಯು ಕಳೆದ ಸೌಮ್ಯ ಸಂವತ್ಸರದ ಮಾಘಮಾಸದಲ್ಲಿ ವಿಜೃಂಭಣೆಯಿಂದ ಬೆಳೆಯಿತು. ಶ್ರೀಯವರು ತಾವು ನೆರವೇರಿಸಬೇಕಾಗಿದ್ದ ಕೃತ್ಯಗಳಲ್ಲಿ ಬೆಂಗಳೂರಿನ ವಿದ್ಯಾಶಾಲಾ ಸ್ಥಾಪನೆಯು ಎರಡನೆಯದೆನಿಸಿದೆ. ಮಠದ ಗೌರವಕ್ಕೂ ಬೆಂಗಳೂರು ನಗರದ ಪ್ರಜಾಸಂಖ್ಯೆಗೂ ತಕ್ಕಂತೆ ಅಂದವಾದ ಒಂದು ಮಂದಿರವನ್ನು ನಿರ್ಮಿಸಿ ವೇದವೇದಾಂತಾದಿ ಪ್ರೌಢ ವಿದ್ಯೆಯ ಬೋಧನೆಗೆ ಅವಕಾಶವನ್ನು ಕಲ್ಪಿಸಿದರು. ಅವರ ಅಭಿವೃದ್ಧಿಯನ್ನು ನೋಡಿ ಇತೋಪ್ಯತಿಶಯವಾದ ಪ್ರೋತ್ಸಾಹವನ್ನು ಕೊಡಬಹುದಾಗಿದ್ದ ಶ್ರೀಯವರು ಇಷ್ಟು ಅಲ್ಪ ಕಾಲದಲ್ಲಿಯೇ ಎಂದರೆ ತಮ್ಮ ೫೪ನೆಯ ವಯಸ್ಸಿನಲ್ಲಿಯೇ ಪರಮಪದವನ್ನೈದಿದುದು ತದುದ್ದೇಶಕ್ಕೆ ಎಷ್ಟೋ ಭಂಗವೊದಗಿತೆಂದು ಹೇಳಬೇಕಾಗಿದೆ. ಸುಕೃತಿಗಳು ಚಿರಾಯುಗಳಾಗದಿರುವುದು ಮಾನವಲೋಕದ ದುರ್ದಶಾಸೂಚಕವಾಗಿದೆ.

ಶ್ರೀಯವರು ವೈದಿಕಧರ್ಮ ರಕ್ಷಣೆಗಾಗಿ ಗುರುಪೀಠವನ್ನಲಂಕರಿಸಿದವರಾದರೂ ಲೌಕಿಕ ಧರ್ಮದಲ್ಲಿಯೂ ಅವರು ಅನ್ಯಾದೃಶರಾಗಿದ್ದರು. ಇದರಿಂದಲೇ ಶಿಷ್ಯಕೋಟಿಯು ಉಚ್ಛೃಂಖಲ ಪ್ರವರ್ತನೆಗೆ ತಡೆಯಿದ್ದಿತು. ಇವರು ಅಲ್ಲಲ್ಲಿ ಸಂಚಾರ ಮಾಡಿ ಜನರಿಗೆ ಹಿತೋಪದೇಶಗಳ ಮೂಲಕ ವೈದಿಕ ಧರ್ಮವನ್ನು ಆಸ್ತಿಕರಿಗೆ ಬೋಧಿಸುತ್ತಾ ಸರ್ವರಿಂದಲೂ ಪೂಜಾರ್ಹರೆಂದು ಪ್ರಸಿದ್ಧಿಗೊಂಡಿದ್ದರು: ಇಂತಹರ ಮರಣದಿಂದುಂಟಾದ ವ್ಯಸನವು ನಿವಾರಣೆಯಾಗಬೇಕಾದರೆ ಈ ಗುರುಪೀಠಕ್ಕೆ ಇಂತಹ ಮೇಧಾವಿಗಳಾದವರೇ ಪುನಃ ಸ್ಥಾಪಿತರಾಗಬೇಕಾಗಿದೆ.

ಶ್ರೀ ಶೃಂಗಗಿರಿಯ ಮಠಕ್ಕೆ ಅದ್ವೈತ ಮತಾನುಯಾಯಿಗಳಾದ ಬ್ರಾಹ್ಮಣರೂ, ಬ್ರಾಹ್ಮಣೇತರರೂ ಮುಂತಾದವರು ಶಿಷ್ಯರನೇಕರಿರುವರು. ಪ್ರಾಯಶಃ ೬೦೦ ವರ್ಷಗಳ ಹಿಂದೆಯೇ ಅನೇಕ ರಾಜರೂ, ಪಾಳಯಗಾರರೂ, ಶಿಷ್ಯ ಪ್ರಮುಖರೂ ಮುಂತಾದವರು ಮಠಕ್ಕೆ ಅನೇಕವಾಗಿ ಜಹಗೀರಿಗಳನ್ನೂ, ಬಿರುದುಗಳನ್ನೂ, ಧನವನ್ನೂ ಸಹಾಯಮಾಡಿದಂತೆ ತಿಳಿಯಬಂದಿರುವುದು. ಅವು ಬ್ರಿಟಿಷರಿಂದಲೂ ನಮ್ಮ ಮಹಾರಾಜರವರಿಂದಲೂ ಈ ವರೆಗೂ ಕಾಪಾಡಲ್ಪಡುತ್ತಿರುವವು. ಶೃಂಗಗಿರಿಯೆಂಬುದೂ ಮಠಕ್ಕೆ ಜಹಗೀರಾದುದಾಗಿದೆ. ಇದು ೮ ಮೈಲಿ ಉದ್ದವೂ, ೬ ಮೈಲಿ ಅಗಲವೂ ಇರುವುದಲ್ಲದೆ ೧೮೪೪ ಪ್ರಜಾ ಸಂಖ್ಯೆಯನ್ನೂ ವರ್ಷ ೧ಕ್ಕೆ ಪ್ರಾಯಶಃ ೫೦ ಸಾವಿರ ರೂಪಾಯಿ ಉತ್ಪತ್ತಿಯನ್ನೂ ಉಳ್ಳದಾಗಿದೆ. ನಮ್ಮ ಶ್ರೀಮನ್ ಮಹಾರಾಜರವರೂ ಈ ಮಠಕ್ಕೆ ತಕ್ಕ ಮರ್ಯಾದೆಯನ್ನು ಕೊಟ್ಟು ಗೌರವಿಸುತ್ತಿರುವರು. ಇಂತಹ ಪ್ರಬಲವಾದ ಗುರುಪೀಠದಲ್ಲಿ ಯಾರು ಅಧಿಷ್ಠಿತರಾಗುವರೋ ಇನ್ನು ಗೊತ್ತಾಗಿರುವುದಿಲ್ಲ.

ಆರ್. ಶ್ರೀನಿವಾಸರಾವ್.

(ಮೈಸೂರು ಸ್ಟಾರ್)

ಪಿತೃಪ್ರೇಮ.

(ಕಳದ ಸಂಚಿಕೆಯಿಂದ ಮುಂದರಿದುದು.)

ಮಾತೃಪಿತೃ ವಿಹೀನನಾದ ದುರ್ದೈವಿ ಅಜಿತನು ಪತ್ರಿಕಾ ವಾಚನ ಪೂರೈಸಿ ತ್ರಿವಾರ ಪತ್ರಿಕೆಯನ್ನು ಶಿರಸ್ಸಿನಲ್ಲಿಟ್ಟು ನಿಶ್ಚಲಹೃದಯನಾಗಿ ತನ್ನ ಸ್ಥಿತಿಯನ್ನವಲೋಕನ ಮಾಡಿ ಕಾರ್ಯವನ್ನು ನಿಶ್ಚಯಿಸಿದನು. ಲೀಲೆಯು ಹೇಳಿದಂತೆ ಮುಂದುಗಡೆಯ ದ್ವಾರವನ್ನು ತಟ್ಟುತ್ತಲೇ ನಿಸ್ತೇಜ ಲೀಲೆಯು ಒಳಗೆ ಬಂದಳು. ಒಳಪ್ರವೇಶಿಸುತ್ತಲೇ ಕುಮಾರನು ಪ್ರೇಮಭರದಿಂದಲೂ, ನಮ್ರತೆಯಿಂದಲೂ ಅವಳಿಗೆ "ಸಾಷ್ಟಾಂಗ" ಪ್ರಣಾಮವನ್ನೆಸಗಿದಳು. ಆಗ ಅವನನ್ನೆಬ್ಬಿಸಿ ಹೃದಯಕ್ಕೆ ಅಪ್ಪಿಕೊಂಡು "ಬಾಲ ಅಜಿತ! ನಿನಗೆ ನನ್ನ ಗುರುತು ತಿಳಿಯಿತೇ? ಎಂದಳು.

"ತಿಳಿಯಿತು. ನಾನು ನನ್ನ ಕರ್ತವ್ಯವನ್ನು ಜರಗಿಸಲಿಕ್ಕೆ ಸಿದ್ಧನಾಗಿರುವೆನು. ನನ್ನ ಪ್ರಿಯ ಮಾತೆಯ ಆಜ್ಞೆಯನ್ನೀಡೇರಿಸದೆ ನನಗೆ ಸುಖವೂ ವಿಶ್ರಾಂತಿಯೂ ಉಂಟಾಗದು."

"ಬಾಲಕ! ನೀನು ಜಾಣನು! ಎಲ್ಲವನ್ನು ಅರಿತಿರುವಿಯಾದರೂ ನಾನು ಹಿರಿಯಳೆಂಬುವುದಕ್ಕಾಗಿ ನಾಲ್ಕು ಮಾತುಗಳನ್ನುಪದೇಶಿಸುವೆನು. ಮನವೆಂಬದು ಸ್ವಭಾವತಃ ಚಂಚಲವಾದುದು. ವಿಚಾರವಂತನು ಅದನ್ನು ಪ್ರತ್ಯಕ್ಷವಾಗಿಯೂ, ಅಪ್ರತ್ಯಕ್ಷವಾಗಿಯೂ ಬಹಿರ್ಮುಖವಾಗಬಿಡಕೂಡದು. ಪ್ರಾಣಿಯು ಜನ್ಮಕ್ಕೆ ಬಂದ ಮೇಲೆ ಮೃತ್ಯು ಉಂಟೆಂಬುದು ಭಾವಿಸುವುದು. ಅದು ಯಾರಿಂದಲೂ ತಪ್ಪಿಸಲಸಾಧ್ಯವು. ಮಗೂ, ಯಾವ ಸ್ಥಳದಲ್ಲಿ ಮರಣ ಬಂದರೆ ಕೀರ್ತಿ ಲಾಭವಾಗಿ ಮೋಕ್ಷ ಸಿಕ್ಕುವುದೋ ಅಲ್ಲಿಂದ ನಶ್ವರವಾದ ಜೀವನ ಹಿಂದಿರುಗಿಸಿ ಜನ್ಮವನ್ನು ವ್ಯರ್ಥ ಕಳೆಯಬೇಡ. ಸಮರಾಂಗಣದಲ್ಲಿ ಬೆನ್ನು ತೋರಿಸದೆ ಪರಾಕ್ರಮದಿಂದ ಕಾದಾಡಿ ವೀರಶಯ್ಯೆಯ ಮೇಲೆ ಪವಡಿಸುವುದು ವೀರರಿಗೆ ಸರ್ವಮಾನ್ಯವಾದ ಮರಣವು. ತನ್ನ ಅತ್ಯಂತ ಶತ್ರುವಾದರೂ

ಸಂಕಟ ಸಮಯದಲ್ಲಿ ಅವನಿಗೆ ಸಹಾಯ ಮಾಡುವುದು ತಮ್ಮ ಕರ್ತವ್ಯವಾಗಿರುವುದು. ಸಾಹಸ ಕೃತ್ಯಗಳನ್ನು ಮಾಡದೆ ರಾಜಪುತ್ರ ವೀರರು ಜಗದ್ವಂದ್ಯರಾಗುವುದಿಲ್ಲ. ಲಕ್ಷ್ಯದಲ್ಲಿಡು. ನಿನಗೆ ಅನೇಕ ಕೃತ್ಯಗಳನ್ನು ಮಾಡಲಿಕ್ಕಿವೆ. ಇಂದು ರಾತ್ರಿ ಇಲ್ಲಿ ಕಳೆದು ಪ್ರಭಾತಕ್ಕೆ ಉತ್ತರಾಭಿಮುಖನಾಗಿ ನಡೆ. ನಾಳೆಯಿಂದ ನಿನ್ನಾಯುಷ್ಯವು ಮಾರ್ಪಟ್ಟಿತು."

"ನಾನು ನಿನಗೆ ಕೃತಜ್ಞನಾಗಿರುವೆನು. ನೀನು ಮಾಡಿದ ಅತ್ಯಮೌಲ್ಯವಾದ ಉಪದೇಶವನ್ನು ಎಂದೆಂದಿಗೂ ಮರೆಯಲಾರೆನು. ನಿನ್ನ ಕೃಪೆಯು ನನ್ನ ಮೇಲೆ ಸದಾ ಸರ್ವದಾ ಇರಲಿ."

ಮುಂದೆ ಸಾಗುವುದು.

M. V. L. Prabhu.

ಧರ್ಮಸೂತ್ರಗಳು.

ಕ್ರಿಸ್ತ ಯೇಸುವಿನ ಧರ್ಮವು.	ಪಾದ್ರಿ ಸಾಹೇಬರು ಬೋಧಿಸುವ ಕ್ರೈಸ್ತ ಧರ್ಮವು.
1. ನಮ್ಮ ದೇವರಾದ ಭಗವಂತನು ಒಬ್ಬನೇ.	1. ನಮ್ಮ ದೇವರಾದ ಭಗವಂತನು ಒಬ್ಬನಲ್ಲ. ಮೂವರು ಇದ್ದಾರೆ. ದೇವರೂ, ದೇವರ ಮಗನೂ ಮತ್ತು ಪರಿಶುದ್ಧಾತ್ಮವು.
2. ಭಗವಂತನನ್ನೇ ಆರಾಧಿಸಿರಿ. ಆತನ ಹೊರತು ಅನ್ಯ ಯಾರಿಗೂ ಆರಾಧಿಸಬೇಡಿ.	2. ಯೇಸು ನಮ್ಮ ದೇವರೆಂತಲೂ, ಮರಿಯಳನ್ನು ದೇವರ ತಾಯಿ ಎಂತಲೂ ಆರಾಧಿಸಿರಿ.
3. ದೇವರು ಆತ್ಮ ಸ್ವರೂಪಿಯಾಗಿದ್ದಾನೆ.	3. ದೇವರಿಗೆ ಆಕಾರ ಉಂಟು. ಮುಖ ಉಂಟು.
4. ನಿನ್ನ ದೇವರಾದ ಭಗವಂತನನ್ನು ಪೂರ್ಣ ಮನಸ್ಸಿನಿಂದ ಪ್ರೀತಿಸು.	4. ಯೇಸುವನ್ನು ಪೂರ್ಣ ಮನಸ್ಸಿನಿಂದಲೂ, ಪೂರ್ಣ ವಿಶ್ವಾಸದಿಂದಲೂ ಪ್ರೀತಿ ಮಾಡು.
5. ನಿನ್ನ ತಂದೆಯಾದ ದೇವರು ಹೇಗೆ ನಿರ್ದೋಷಿಯಾಗಿದ್ದಾನೋ ಹಾಗೆ ನೀನು ಸಹಾ ನಿರ್ದೋಷಿಯಾಗು.	5. ದೇವರು ನಮಗೆ ನೋಡಲಿಕ್ಕೆ ಸಿಕ್ಕುವದಿಲ್ಲ. ಆದುದರಿಂದ ಭೂಲೋಕದಲ್ಲಿ ಯೇಸು ಹೇಗೆ ನಡಕೊಳ್ಳುತ್ತಿದ್ದನೋ ಹಾಗೆ ನೀವು ನಡಕೊಳ್ಳಿ.
6. ನಿನ್ನ ನೆರೆಯವನನ್ನು ನೀನೆಂತಲೇ ಭಾವಿಸಿ ಪ್ರೀತಿ ಮಾಡು.	6. ನಿನ್ನ ನೆರೆಯವನು ಕ್ರೈಸ್ತ ಮತದವನಾದರೆ ಅವನನ್ನು ಪ್ರೀತಿಸು. ಇಲ್ಲವಾದರೆ ಆತನು ನರಕಕ್ಕೆ ಹೋಗುವವನೆಂತ ತುಚ್ಛೀಕರಿಸು.
7. ಮನುಷ್ಯನು ದೇವರ ಮಗನಾಗಿರುತ್ತಾನೆ.	7. ಒಬ್ಬ ಮನುಷ್ಯನು ಕ್ರೈಸ್ತನಾದರೆ ಆತನು ದೇವರ ಮಗನು. ಇಲ್ಲವಾದರೆ ಸೈತಾನನ ಮಗನಾಗಿರುತ್ತಾನೆ.
8. ಸ್ವರ್ಗಲೋಕವು ನಮ್ಮ ಅಂತರ್ಯದಲ್ಲಿ ಉಂಟು.	8. ಸ್ವರ್ಗಲೋಕವು ಇಗರ್ಜಿಯಲ್ಲಿ ಉಂಟು ಮತ್ತು ಅಲ್ತಾರಿನ ಮೇಲೆ ಉಂಟು.
9. ನನ್ನ ಚಿತ್ತ ಮಾಡಲಿಕ್ಕೆ ನಾನು ಬಂದವನಲ್ಲ. ನನ್ನನ್ನು ಕಳುಹಿಸಿದ ದೇವರ ಚಿತ್ತ ಮಾಡುವುದು ನನ್ನ ಉದ್ದೇಶವಾಗಿರುತ್ತದೆ.	9. ಯೇಸು ತನ್ನ ಚಿತ್ತವನ್ನೇ ಮಾಡಿದನು. ಯಾಕೆಂದರೆ ಆತನೇ ದೇವರಾಗಿರುತ್ತಾನೆ.
10. ಯಾವಾತನು ನನ್ನ ದೇವರ ಚಿತ್ತವನ್ನು ಮಾಡುತ್ತಾನೋ ಆತನು ನನ್ನ ಸಹೋದರನೂ ತಂದೆಯೂ ತಾಯಿಯೂ ಆಗಿರುತ್ತಾನೆ.	10. ಯಾವಾತನು ನಮ್ಮ ಮಾತು ಮನ್ನಿಸಿ ಪರಿಶುದ್ಧಸ್ನಾನ ಹೊಂದಿ ನಮ್ಮ ಕೂಟಕ್ಕೆ ಸೇರುತ್ತಾನೋ ಆತನು ನಮ್ಮ ಸಹೋದರನು. ಇತರರು ನರಕಕ್ಕೆ ಹೋಗುವ ಸೈತಾನನ ಮಕ್ಕಳಾಗಿರುತ್ತಾರೆ.
11. ಧರ್ಮ ಪ್ರಚಾರಕರಿಗೆ ಬುದ್ಧಿ ಮಾತು. ನಿಮಗೆ ಊಟಕ್ಕೆ ಇರಲಿಕ್ಕಿಲ್ಲ, ವಸ್ತ್ರ ಇರಲಿಕ್ಕಿಲ್ಲವೆಂಬ ಚಿಂತೆ ಪಡಬೇಡಿರಿ. ಸರ್ವ ವಿಶ್ವಾಸವೂ ಭಗವಂತನಲ್ಲಿಟ್ಟು ಹೊರಟು ಹೋಗಿರಿ. ಸರ್ವರಕ್ಷಣೆಯು ಆತನಿಂದ ನಿಮಗೆ ಸಿಕ್ಕುವುದು.	11. ಊರಿನಿಂದ ಹೊರಡಬೇಕಾದರೆ ಸಂಬಳವೂ ವಿವಾಹವಾದ ನಂತರ ಮತ್ತು ಮಕ್ಕಳು ಹುಟ್ಟಿದ ನಂತರ ಆಗ್ಗಾಗ್ಗೆ ಬಡ್ತಿಯೂ ಸಿಕ್ಕುವಂತೆಯೂ ಪ್ರಥಮತ ಕರಾರು ಮಾಡಿಕೊಳ್ಳಿ. ಭಕ್ತಿವಂತರು ದಾನವಾಗಿ ಕೊಟ್ಟ ಹಣವಿನಿಂದ ದೊಡ್ಡದೊಡ್ಡ ಬಂಗಲೆಗಳನ್ನು ಕಟ್ಟಿಸಿ ರಾಜಕುಮಾರರಂತೆ ಜೀವಿಸಿರಿ. ಕುದುರೆ ಸಾರೋಟುಗಳಲ್ಲಿ ಕುಳಿತು ಸವಾರಿಮಾಡಿರಿ.
12. ಜನರಿಗೆ ಏನು ಬೋಧಿಸಬೇಕೆಂಬ ಚಿಂತೆ ನಿಮಗೆ ಬೇಡ. ನೀವು ಪ್ರಸಂಗಕ್ಕೆ ನಿಲ್ಲುತ್ತಲೇ ನಿಮಗೆ ಭಗವಂತನು ಕೊಡುವ ಪ್ರೇರಣೆಗೆ ಅನುಗುಣವಾಗಿ ಧರ್ಮವನ್ನು ಸಾರಿರಿ. ನೀವು ಪ್ರಸಂಗಕ್ಕೆ ನಿಲ್ಲುತ್ತಲೇ ದೇವರಿಂದ ನಿಮಗೆ ಪ್ರೇರಣೆ ಸಿಕ್ಕುವುದು.	12. ಧರ್ಮವನ್ನು ಬೋಧಿಸಬೇಕಾದರೆ ಮೊದಲೇ ಸೆಮಿನೆರಿಗೆ ಸೇರಿಕೊಂಡು ತರಬೇತಿ ಹೊಂದಿರಿ. ಅಲ್ಲಿ ನಿಮಗೆ ಕಲಿಸಿದ್ದನ್ನೇ ಜನರಿಗೆ ಸಾರಿರಿ. ನಿಮ್ಮ ಅಂತರ್ಯದಲ್ಲಿ ಬರುವ ಆದೇಶಕ್ಕೆ ಅನುಗುಣವಾಗಿ ನೀವು ಪ್ರಸಂಗಮಾಡಿದರೆ ನಿಮ್ಮನ್ನು ಡಿಸ್‌ಮಿಸ್ ಮಾಡುವೆವು.

ಶಾಸ್ತ್ರಿ ತಮ್ಮಣ್ಣಾಚಾರ್ಯ.

ಸಣ್ಣ ಮಕ್ಕಳ ಅಸ್ವಸ್ಥಾರಂಭದಲ್ಲಿ ಮಾತೆಯರು ಗಮನಕೊಡತಕ್ಕ ವಿಷಯವು.

ವರುಷಂಪ್ರತಿ ಸಾವಿರಾರು ಮಂದಿ ಈ ಇಹವನ್ನಗಲಿ ಪರಯಾತ್ರೆಯನ್ನು ಮಾಡುತ್ತಿರುವರು. ಈ ಪೈಕಿ ಹೆಚ್ಚಿನವರು ಮಕ್ಕಳು. ಒಂಭತ್ತು ತಿಂಗಳು ಮಹಾಕಷ್ಟದಿಂದ ಹೊತ್ತುಕೊಂಡು ಜನಿಸಿದ ಮಗುವು ಒಂದೆರಡು ತಿಂಗಳು ಸಾಕಿ ಸಲಹಿದ ನಂತರ ತಾಯಿತಂದೆಯನ್ನು ಬಿಟ್ಟಗಲುವದಂದರೆ ಹೆತ್ತವರಿಗೆ ತಾಳಕೂಡದಷ್ಟು ದುಃಖವೇ ಸೈ. ಕೆಲವು ಮಕ್ಕಳು ಸೌಖ್ಯವಾಗಿದ್ದು ಸಂತೋಷದಲ್ಲಿರುತ್ತವೆ. ಕೆಲವು ಜ್ವರ, ಶೀತದಿಂದ ನರಳುತ್ತಿರುತ್ತವೆ. ಈ ಜ್ವರ ಶೀತ ತಗಲಲು ಏನಾದರೊಂದು ಕಾರಣವಿರಬೇಕು. ಮಗುವು ಸ್ವಲ್ಪ ನೆಟ್ಟಗಿಲ್ಲವೆಂಬದಾಗಿ ತೋರಿದಾಕ್ಷಣ ನರಸಂಸ್ಥೆಯವನ್ನೂ ದೇಹವನ್ನೂ ಕೆಡಿಸುವಂಥಾ ಏನಾದರೊಂದು ವಿಷ ಪದಾರ್ಥವು ಮಗುವನ್ನು ಕೆಡಿಸ ಪ್ರಾರಂಭಿಸಿಯದೆ ಎಂಬದಾಗಿ ತಿಳಕೊಂಡು ಕೂಡಲೇ ತಕ್ಕ ಶೈತೋಪಚಾರ ಮಾಡುವದು ಮಾತೆಯರ ಮುಖ್ಯ ಕರ್ತವ್ಯವಾಗಿದೆ. ಈ ವಿಷಯ ಕೆಲವು ಮುಖ್ಯ ಸೂತ್ರಗಳನ್ನು ಈ ಕೆಳಗೆ ಕೊಟ್ಟಿರುತ್ತೇನೆ.

ಮಗುವಿವ ದೇಹದ ಶೀತೋಷ್ಣ ಸ್ಥಿತಿಯನ್ನು ತೆಗೆಯುವದು:— ಒಂದು ಮಗುವಿನಲ್ಲಿ ತುಸ ದೇಹಾಲಸ್ಯ ತೋರಿದಾಕ್ಷಣ ಅದರ ವಿಷಯ ಹೆಚ್ಚಿನ ಜಾಗ್ರತೆ ತಕ್ಕೊಳ್ಳಬೇಕು. ಪ್ರತಿ ಒಂದು ಮನೆಯಲ್ಲಿ ಮಗುವಿನ ದೇಹತಾಪವನ್ನು ಪರೀಕ್ಷಿಸುವಂಥಾ ಶೀತೋಷ್ಣಮಾಪಕ ಯಂತ್ರವು ಇರುವುದು ಅವಶ್ಯ. ಮಗುವಿನಲ್ಲಿ ದೇಹಾಲಸ್ಯವು ಕಂಡಾಕ್ಷಣ ಈ ಯಂತ್ರದ ಮೂಲಕ ದೇಹತಾಪವನ್ನು ತಿಳಕೊಳ್ಳುವದೂ ನಾಡಿ ಬಡಿತವನ್ನು ನೋಡುವದೂ ಮುಖ್ಯ ಸಂಗತಿಯಾಗಿದೆ. ಮಗುವಿನ ದೇಹತಾಪವು ಪ್ರಾಯಸ್ಥರಿಗಿಂತ ತುಸ ಹೆಚ್ಚಿಗೆ ಇರುತ್ತದೆ. ಮಕ್ಕಳ ದೇಹತಾಪವು ಸರಾಸರಿ ೯೮.೫-೯೯.೫ ಡಿಗ್ರಿ ಇರುವಾಗ ದೊಡ್ಡವರದು ೯೮-೯೮.೫ ಡಿಗ್ರಿ ಇರುತ್ತದೆ. ದಿವಸಕ್ಕೆ ಮೂರಾವೃತಿ ದೇಹತಾಪವನ್ನು ತೆಗೆಯಬೇಕು. ದೇಹತಾಪವು ಒಂದೆರಡು ದಿವಸಗಳಲ್ಲಿ ೧೦೧ ಡಿಗ್ರಿ ಯಾ ಇದಕ್ಕಿಂತ ಮೇಲೇರಿದ ಕೂಡಲೇ ಕಠಿಣ ಅಸ್ವಸ್ಥದ ಲಕ್ಷಣ ಎಂಬದಾಗಿ ತಿಳಕೊಳ್ಳಬೇಕು.

ಮಗುವಿವ ಉಸುರಾಟ ಮತ್ತು ನಾಡಿ ಬಡದಾಟ:— ಮಗುವಿಗೆ ಹುಟ್ಟಿದಾಕ್ಷಣ ನಿಮಿಷಕ್ಕೆ ೪೦ ಸಾರಿ ಉಸುರಾಟವಿರುತ್ತದೆ. ತಿಂಗಳಾಂತ್ಯದಲ್ಲಿ ೩೦-೩೫ ಸಾರಿ ಉಸುರಾಟವಿದ್ದು ಹೀಗೆ ಕ್ರಮೇಣ ಕಮ್ಮಿಯಾಗುತ್ತಾ ೪-೫ ವರುಷ ಪ್ರಾಯದಲ್ಲಿ ನಿಮಿಷಕ್ಕೆ ೩೦-೨೫ ಸಾರಿ ಉಸುರಾಡುತ್ತದೆ. ೧೪-೧೫ ವರುಷ ವಯಸ್ಸಿನವರು ನಿಮಿಷಕ್ಕೆ ೧೬-೧೮ ಸಾರಿ ಉಸುರಾಡುತ್ತಾರೆ. ಇದೇ ಉಸುರಾಟವು ಪ್ರಾಯಸ್ಥರಿಗೂ ಇರುತ್ತದೆ. ಮಗುವು ಜನಿಸಿದಾಕ್ಷಣ ಅದರ ನಾಡಿಯು ನಿಮಿಷಕ್ಕೆ ೧೨೦-೧೪೦ ಸಾರಿ ಬಡಿಯುತ್ತದೆ. ಒಂದು ವರುಷ ವಯಸ್ಸಿನಲ್ಲಿ ೧೧೦-೧೨೦ ಸಾರಿ ಬಡಿಯುತ್ತದೆ. ಹೀಗೆ ಕ್ರಮೇಣ ಬಡದಾಟವು ಕಮ್ಮಿಯಾಗುತ್ತಾ ಬಂದು ೧೫ನೇ ವಯಸ್ಸಿನಲ್ಲಿ ೮೦-೮೫ ಸಾರಿ ಬಡಿಯುತ್ತದೆ. ಪ್ರಾಯಸ್ಥರಲ್ಲಿ ನಿಮಿಷಕ್ಕೆ ೭೦-೭೫ ಸಾರಿ ನಾಡಿ ಬಡಿಯುತ್ತದೆ. ಉಸುರಾಟವನ್ನೂ ನಾಡಿ ಬಡದಾಟವನ್ನೂ ಸಣ್ಣ ಮಕ್ಕಳಲ್ಲಿ ಲೆಕ್ಕ ಮಾಡುವದು ಬಹಳ ಕಷ್ಟ. ಸಣ್ಣ ಮಕ್ಕಳಲ್ಲಿ ಏನಾದರೂ ಉದ್ವೇಗ ಯಾ ಕೋಪ ಬಂದು ಬಿಟ್ಟರೆ ನಾಡಿಯು ಕ್ರಮ ತಪ್ಪಿ ನಿಮಿಷಕ್ಕೆ ೨೦-೨೫ ಸಾರಿ ಹೆಚ್ಚಿಗೆ ಬಡಿಯುವದು. ಹಾಗೆಯೇ ಉಸುರಾಟವೂ ಹೆಚ್ಚಾಗುವದು. ಆದ್ದರಿಂದ ಮಕ್ಕಳು ಮಲಗಿರುವಾಗ ಮಾತ್ರವೇ ಅದರ ನಾಡಿ ಬಡದಾಟವನ್ನೂ ಉಸುರಾಟವನ್ನೂ ಲೆಕ್ಕಿಸಬೇಕು.

ಗಂಟ್ಲು ಪರೀಕ್ಷೆ:— ದೇಹತಾಪವನ್ನೂ ಉಸುರಾಟ, ನಾಡಿ ಬಡಿದಾಟವನ್ನೂ ನೋಡಿದನಂತರ ಮಗುವಿನ ಗಂಟ್ಲು ಪರೀಕ್ಷಿಸಿ ಅದು ಕೆಂಪಗಿದೆಯೋ, ಬೀಗಿದೆಯೋ, ನಾಲಿಗೆಯಲ್ಲಿ ಅಗ್ರವಿದೆಯೋ, ಎಂಬದಾಗಿ ನೋಡುವದು ಮುಖ್ಯ ಕರ್ತವ್ಯವಾಗಿದೆ. ಗಂಟ್ಲು ನೋವನ್ನು ಅಲಕ್ಷ ಮಾಡುವದರಿಂದಲೇ ನೂರಾರು ಮಕ್ಕಳು ಸಾಯುತ್ತಿರುವರು. ಮಕ್ಕಳನ್ನು ಗಂಟ್ಲು ನೋವಿರುವ ಇತರ ಮಕ್ಕಳೊಡನೆ ಆಡ ಬಿಡುವುದರಿಂದ ಅನೇಕಾವೃತ್ತಿ ಗಂಟ್ಲು ನೋವು ಅಂಟುವದು. ಮಗುವಿನ ದೇಹತಾಪವನ್ನು ತೆಗೆಯುವ ವಿನಹಾ ಈ ಗಂಟ್ಲು ನೋವಿನ ಲಕ್ಷಣಗಳನ್ನು ತಿಳಕೊಳ್ಳುವದು ಕಷ್ಟವಲ್ಲದೆ ಗಂಡಾಂತರ ಉಂಟಾದೀತೆಂದು ಭಾವಿಸುವುದೂ ಅಸಂಭವ.

ಹೊಟ್ಟೆಯ ಪರಿಸ್ಥಿತಿ:— ಗಂಟ್ಲನ್ನು ಪರಿಶೋಧಿಸಿದನಂತರ ಹೊಟ್ಟೆಯ ಅವಸ್ಥೆಯನ್ನೂ ತಿಳಕೊಳ್ಳಬೇಕು. ಅನೇಕ ಯೌವನಸ್ಥರೂ ಮಕ್ಕಳೂ ಹೊಟ್ಟೆಯು ಕೆಡುವುದರಿಂದ ವಿವಿಧ ತರದ ರೋಗಕ್ಕೆ ತುತ್ತಾಗುತ್ತಾರೆ. ಹೊಟ್ಟೆಯನ್ನು ಖಾಲಿ ಮಾಡುವುದರಿಂದ ಜ್ವರ, ತಲೆಶಿಡಿತ, ಬೆನ್ನುನೋವು ಇತ್ಯಾದಿ ನಿವಾರಣೆಯಾಗುವುದು. ಅನೇಕಾವೃತ್ತಿ ಕಠಿಣ ಜ್ವರದಲ್ಲಿ ಹೊಟ್ಟೆಯಲ್ಲಿ ಕೊಳೆತಿರುವ ಆಹಾರಗಳನ್ನು ಜಾಡಣೆ ಮಾಡಿಸುವುದರಿಂದ ಜ್ವರವು ತಗ್ಗುತ್ತಾ ಬರುವದು.

ಮಲಬದ್ಧತೆ; ಹೊಟ್ಟೆಯಲ್ಲಿ ಉಂಡ ಆಹಾರವು ಅಜೀರ್ಣವಾಗದೆ ಇರುವದು, ಈ ಕಾರಣಗಳಿಂದ ಕೆಲವು ಸಾರಿ ಜ್ವರ ಬರುವುದು. ಆದ್ದರಿಂದ ಮಕ್ಕಳ ಮಾತೆಯರು ಮಕ್ಕಳಿಗೆ ಜಾಡಣೆ ಸರಿಯಾಗುತ್ತದೋ ಏನೆಂಬದನ್ನು ನೋಡಿಕೊಳ್ಳತಕ್ಕದ್ದು.

ಅಂಟುರೋಗ:— ಮಕ್ಕಳಲ್ಲಿ ಮೇಲೆ ಹೇಳಿದ ಕುರುಹುಗಳನ್ನು ತಕ್ಕ ಕಾಲದಲ್ಲಿ ಪರಿಶೋಧಿಸಿದ ನಂತರ ವಿಷಜ್ವರ ಇತರ ಅಂಟುರೋಗಗಳು ತಗಲುವ ಸಂಭವವಿದೆಯೋ ಏನೆಂಬದನ್ನು ನೋಡಬೇಕು. ಮಕ್ಕಳು ಅನೇಕಾವೃತ್ತಿ ವಿಷಮ ಜ್ವರದಿಂದ ಪೀಡಿತರಾಗುತ್ತಾರೆ. ನೆರೆಹೊರೆಯಲ್ಲಿ ಇಂಥಾ ರೋಗಗಳು ಇದ್ದರೆ ಮಕ್ಕಳಿಗೆ ಬೇಗನೇ ಅಂಟುವುದು. ಇಲ್ಲವೆ ನೀರಿನ ದೋಷದಿಂದ ಅಂಟುವುದು. ಆದ್ದರಿಂದ ಮಕ್ಕಳಿಗೆ ಯಾವಾಗಲೂ ಕುದಿಸಿದ ನೀರನ್ನು ಕುಡಿಯ ಕೊಡಬೇಕಲ್ಲದೆ ನೆರೆಹೊರೆಯ ಮಕ್ಕಳೊಡನೆ ಆಡಬಿಡಬಾರದು.

ಈ ಮೇಲಿನ ಸೂತ್ರಗಳನ್ನು ಕೈಕೊಂಡು ಕ್ರಮ ಪ್ರಕಾರ ಅಸ್ವಸ್ಥ ಪ್ರಾರಂಭವಾದ ಕೂಡಲೇ ಎಲ್ಲಾ ಲಕ್ಷಣಗಳನ್ನು ತಿಳಕೊಂಡು ಶೈತೋಪಚಾರ ಮಾಡುತ್ತಾ ಬಂದರೆ ಮಕ್ಕಳ ಮರಣ ಸಂಖ್ಯೆಯು ಕಮ್ಮಿಯಾಗುವುದು. ಮಾತೆಯರಿಗೆ ಮಕ್ಕಳನ್ನು ಪೋಷಿಸಲಿಕ್ಕಿರುವ ಕಷ್ಟವು ತಗ್ಗುವದು.

S. A.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲಾ)

ಒಂದು ರೆವಿನ್ಯು ಡಿವಿಜನಲ್ ಆಫೀಸಿನ 'ಸೀನು'.

ಸ್ಥಳ: ಕಚೇರಿಯ ವಿಶಾಲವಾದೊಂದು ಕೋಣೆ. ಮರದ ಗದ್ದಿಗೆಯ ಮೇಲೆ ಕುರ್ಚಿಯ ಎದುರಿರುವ ದೊಡ್ಡ ಮೇಜಿನ ಮೇಲೆ ನಾನಾ ಬಗೆಯ ರಿಕಾರ್ಡುಗಳುಳ್ಳ ಪುಸ್ತಿಗಳು ಮತ್ತು ಲಿಖಾವಟದ ಸಾಮಾನು.

ಸಮಯ: ಆಫೀಸರರು 'ಚೋಟಾ ಹಾಜ್ರಿನಂತರ ಬೆಂಚಿಗೆ ಬರುವ ವೇಳೆ.

ಇತರ ವ್ಯಕ್ತಿಗಳು:-ರುಮಾಲು, ಹೇಟ್, ಕೇಪ್, ಧೋತ್ರ, ಇಜಾರು, ಕಪ್ಪು ಬಿಳಿ ಅಂಗಿಗಳು, ಪಾಸಾಸು ಬೂಟ್ಸು ಮೊದಲಾದವುಗಳನ್ನು ಧರಿಸಿ ಚಿನ್ನದಿಂದ ಕಟ್ಟಲ್ಪಟ್ಟ ದೃಷ್ಟಿ ಚಕ್ರಗಳಿಂದ ಶೋಭಾಯಮಾನವಾದ ಮುಖಕಮಲಗಳುಳ್ಳ ವಕೀಲರು ಆಫೀಸರರ ಗದ್ದಿಗೆಯ ಮೇಜಿನ ಕೆಳಭಾಗದಲ್ಲಿಟ್ಟದ್ದ ಕುರ್ಚಿಗಳನ್ನಲಂಕರಿಸಿದ್ದರು. ಕುರ್ಚಿಗಳು ಸಾಲದ್ದರಿಂದ ಇನ್ನು ಕೆಲವರು ಕುರ್ಚಿಗಳ ಕೈಗಳ ಮೇಲೆ ಆಸೀನರಾಗಿದ್ದರು. ಮತ್ತೆ ಕೆಲವರು ರಿಕಾರ್ಡುಗಳಿಂದ ತುಂಬಿದ ಕೈಯನ್ನು ಮೇಜಿಗೆ ಒತ್ತಿ ಬಗ್ಗಿಕೊಂಡು ಸಂಗಾತಿಗಳ ಕಿವಿಗಳನ್ನು ಚುಚ್ಚುತ್ತಿದ್ದರು. ಬೆಳ್ಳಿ ಬಿಲ್ಲೆಗಳನ್ನು ಧರಿಸಿದ್ದ ಮಹನೀಯ ಕೋರ್ಟು ದಫೇದಾರರು ಕೆಂಪಾದ ಗರ್‍ರಗರ್‍ರನೆ ತಿರುಗುವ ಎಡೆಗಣ್ಣಿನಿಂದ ಕೋರ್ಟು ಹೊರಗಡೆಯಲ್ಲಿರುವ ಜನರನ್ನು ತಲ್ಲಣಗೊಳಿಸುತ್ತಿದ್ದಾಗ ಇವರ ಬಲಗಣ್ಣು ಆಫೀಸರರ ಆಜ್ಞೆ ಏನಿರುವುದೆಂದು ನಮ್ರಭಾವದಿಂದ ಆಫೀಸರರ ಮುಂಡಾಸನ್ನು ದಿಟ್ಟಿಸುತ್ತಿತ್ತು."

ಚೋಟಾ ಹಾಜ್ರಿಯನ್ನು ತೀರಿಸಿ ಗಂಭೀರವಾದ ರೀತಿಯಲ್ಲಿ ಹೆಜ್ಜೆಗಳನ್ನಿಟ್ಟು ಮರದ ಗದ್ದಿಗೆಯನ್ನು ಆಫೀಸರರು ಏರುತ್ತಲೇ ಸರ್ವರೂ ಎದ್ದು ನಿಂತರು. ಆಫೀಸರರು ಆಸೀನರಾದೊಡನೆ ಎಲ್ಲರೂ ಕೂತುಕೊಂಡರು.

ಆಫೀಸರರು: ವಕೀಲ ಶ್ಯಾಮರಾಯರೇ, ಸೋಮಸೆಟ್ಟಿ ದರಕಾಸ್ತು ಅಪೀಲಿನಲ್ಲಿ ನಿಮಗೆ ಹೇಳಲಿಕ್ಕೇನಿರುವುದು! (ಹೀಗೆಂದು ಹೇಳಿ ಗದ್ದಿಗೆಯ ಮೇಲೆ ರಿಕಾರ್ಡನ್ನು ಹಿಡಿದು ನಿಂತುಕೊಂಡಿದ್ದ ಗುಮಾಸ್ತನ ಕೂಡೆ ಆಫೀಸರರು ಏನೋ ಅರ್ಧ ತಾಸು ತನಕ ಮಾತಾಡ ಹತ್ತಿದರು.)

ಶ್ಯಾಮರಾವ್: ಖಾವಂದರೇ, ನನ್ನ ಕಕ್ಷಿಗಾರನು ದರಕಾಸ್ತು ಮೊಕದಮೆಯಲ್ಲಿ ಸಂಬಂಧಪಟ್ಟ ಗುಡ್ಡೆಯ ಅತೀ ಲಗ್ತೀದಾರನಾಗಿರುವನು. ಶ್ಯಾನುಭಾಗರು ಏನೋ ತಪ್ಪು ರಿಕಾರ್ಡು ಮಾಡಿ ತಹಸೀಲದಾರರನ್ನು ಮೋಸಗೊಳಿಸಿರುವರು. ರಿಕಾರ್ಡಿನಲ್ಲಿ ಹಾಜರುಪಡಿಸಿರುವ A ದಾಖ್ಲೆಯು ಈ ಮೋಸವನ್ನು ಚನ್ನಾಗಿ ಬಿಚ್ಚಿ ತೋರಿಸುವದು.

ಇಷ್ಟನ್ನುತ್ತಲೇ ಈ ಮೊಕದಮೆಯ ಎದುರು ವಕೀಲರಾದ ದೇವೇಂದ್ರ ಪ್ರಭುಗಳು ಎದ್ದು ನಿಂತು:—

"ಮಹಾಸ್ವಾಮಿ, ಈ ರೀತಿ ಶ್ಯಾಮರಾಯರನ್ನು ವ್ಯವಹರಿಸಬಿಡುವುದು ನೀತಿಗೂ ಕಾನೂನಿಗೂ ವಿರೋಧ. ರಿಕಾರ್ಡಿನಲ್ಲಿಲ್ಲದ ಸಂಗತಿಗಳನ್ನು ಕೋರ್ಟಿನವರಿಗೆ ಜ್ಯಾಹೀರು ಮಾಡಿಕೊಳ್ಳುವುದು ವಿಹಿತವಲ್ಲ."

(ಇಬ್ಬರು ವಕೀಲರು ಅರ್ಧ ತಾಸು ತನಕ ನಡಿಸಿದ ವಾದಗಳ ವ್ಯವಹರಣೆಯು ಬಹಳ ವಿಸ್ತಾರವಾದ್ದರಿಂದ ಅದನ್ನು ಪೂರ್ಣ ಪ್ರಕಟಿಸಲಿಲ್ಲ.)

ಶಾಮರಾಯರ ಮತ್ತು ದೇವೇಂದ್ರ ಪ್ರಭುಗಳ ವಾದಗಳ ಕೆಲವು ಮಾತುಗಳನ್ನು ಕೇಳಿ ಕೋರ್ಟಿನಲ್ಲಿ ಕೂಡಿದ ವಕೀಲರೂ ಕಕ್ಷಿಗಾರರೂ 'ಭೊ' ಎಂತ ನಗಾಡಿ ಗದ್ದಲ ಮಾಡಿದರು. ಈ ತನಕ ಗುಮಾಸ್ತರೊಡನೆ ಏನೋ ಆಫೀಸು ವಿಷಯ ಮಾತನ್ನಾಡುತ್ತಿದ್ದ ಆಫೀಸರರು ಮುಖ ತಿರುಗಿಸಿ ಎಲ್ಲರನ್ನೂ ದೃಢವಾದ ದೃಷ್ಟಿಯಿಂದ ದಿಟ್ಟಿಸಿ:—

"ಏನಿದು ಗದ್ದಲ! ಇದು ಸರಕಾರಿ ಆಫೀಸೆಂತ ತಿಳದಿರಬೇಕು. ವಕೀಲ ಶ್ಯಾಮರಾವ್, ನಿಮ್ಮ ಮೊಕದ್ದಮೆಯ ಪರ್ಯಾಲೋಚನೆ ಈ ದಿನ ಅರ್ಧ ತಾಸಿನ ತನಕ ಮಾಡಿದೆ. ಇನ್ನು ಸಮಯವಿಲ್ಲ. ಜೇಡಿನಂಗಡಿ ಮೊಕ್ಕಾಮಿನಲ್ಲಿ ಇದರ ಮುಂದಿನ ತನಖಿಯು ಮಾಡೋಣಾಗುವದು. ಈ ತಿಂಗಳ ತಾ. ೨೮ರಲ್ಲಿ ಸಂಬಂಧಪಟ್ಟ ವಕೀಲರೂ ಕಕ್ಷಿಗಾರರೂ ಹಾಜರಾಗ ತಕ್ಕದು."

ಶ್ಯಾಮರಾವ್: ಸ್ವಾಮಿ, ಮೊಕದ್ದಮೆಯು ಬಹಳ ಕಾಲದ್ದು; ಅನೇಕ ಸರ್ತಿ ಮುಂದರಿಸಿಡಲಾಯಿತು. ಕಕ್ಷಿಗಾರರು ಹೇರಳ ನಷ್ಟಕ್ಕೆ ಗುರಿಯಾಗುತ್ತಿರುವರು.

ಆಫೀಸರರು: ಎಲ್ಲಾ ಬಲ್ಲೆ. ಜೇಡಿನಂಗಡಿಯಲ್ಲಿ ಹಾಜರಾಗಿ, ಸಾಕು. ದಫೆದಾರ್ ತಿಮ್ಮಯ್ಯ ಸೆಟ್ಟಿ! ಇನಕಮ್‍ಟೆಕ್ಸ್ ನಂಬ್ರ ೨೨ನೇ ಅಪೀಲುದಾರ ದಾಮರ್ಸಕಮ್ಮಿಯನ್ನು ಕರೆ.

ದಫೆದಾರ: ದಾಮರ್ಸಕಮ್ಮಿ! ದಾಮರ್ಸಕಮ್ಮಿ!! ದಾಮರ್ಸಕಮ್ಮಿ!!! (ಮೂರು ಸಾರಿ ಘಟ್ಟಿ ಸ್ವರದಿಂದ ಕರೆಯುವನು).

ಪುಸ್ತಕಗಳ ಕಟ್ಟನ್ನು ಕಂಕಳೊಳಗೆ ಹಿಡಕೊಂಡು ಖಾವಂದರ ಮುಂದೆ ಬಂದು ದಾಮರ್ಸಕಮ್ಮಿಯು ಎರಡು ಕೈಗಳನ್ನು ಜೋಡಿಸಿ-ಸ್ವಾಮಿ, ವಕೀಲರು ಸಿವಿಲ್ ಕೋ ಕೋರ್ಟಿನಿಂದ ಬರುತ್ತಿರುವರು. ಸ್ವಲ್ಪ ಸಾವಕಾಶ...............

ಆಫೀಸರರು: ಏನು? ಕೋರ್ಟಿನ ಸಮಯ ಹಾಳುಮಾಡಬೇಕೋ-ಹೋಗಿ ಹೋಗಿ ನಡಿ! ಅಪೀಲನ್ನು ತೆಗೆದುಹಾಕಿರುವೆನು.

ದಾಮರ್ಸಕಮ್ಮಿಯು ನಡಗುತ್ತ:—ಖಾವಂದರೇ, ಬಡವ, ಕ್ಷಮಿಸಿರಿ, ಸೂರಪ್ಪನವರು, ವಕೀಲ ಸೂರಪ್ಪನವರು ಈಗಲೆ ಬಂದುಬಿಡುವರು."

ಸೂರಪ್ಪನವರು ಎಂಬ ಶಬ್ದವನ್ನು ಕೇಳಿದೊಡನೆ ಆಫೀಸರರ ಮುಖವು ಸಿಟ್ಟನ್ನು ಬಿಟ್ಟುಬಿಟ್ಟಿತು.

ಆಫೀಸರರು: ಸೂರಪ್ಪನವರು! ಸರಿ!! ವಕೀಲರಿಲ್ಲವೆಂದರೆ ಏನೇನೋ ಗ್ರಹಿಸಿದೆನು. ಸೂರಪ್ಪನವರು ನಿಮ್ಮ ವಕೀಲರೋ! ಒಳ್ಳೇದು. ೫॥ ಘಂಟೆ ತನಕ ಸಮಯ ಕೊಟ್ಟಿರುವೆನು. (ಆಫೀಸಿನಲ್ಲಿ ಕೂತಿದ್ದ ಇನ್ನೊಬ್ಬ ವಕೀಲ ಸರ್ವೋತ್ತಮರಾಯರನ್ನು ಕರೆಯಲಾಯಿತು). ಸರ್ವೋತ್ತಮರಾವ್, ನಿಮ್ಮ ಕ್ರಿಮಿನಲ್ ಮೊಕದ್ದಮೆಯ ಕಡೆ ಹೇರಿಂಗ್ ಪ್ರಾರಂಭಿಸಬಹುದು.

ಸರ್ವೋತ್ತಮರಾಯರು ಎದ್ದು ನಿಂತರು, ಹೇರಿಂಗ್ ಪ್ರಾರಂಭವಾಯಿತು.

ಆಫೀಸರರು ಈ ಹೇರಿಂಗ್ ಸಮಯದಲ್ಲಿ ನಾಲ್ಕು ಜನ ದಫೆದಾರರು ಪುಸ್ತಿ ತುಂಬ ಹಿಡಿದು ತಂದ ರಿಕಾರ್ಡು ಪತ್ರಗಳನ್ನು ಓದಿ ನೋಡುತ್ತ ಸಹಿ ಹಾಕುವರೆ ಪ್ರಾರಂಭಿಸಿದರು.

ವಕೀಲ್ ಶ್ಯಾಮರಾಯರು ಹ್ಯಾಕೋರ್ಟು ವಕೀಲ್ ವಾಸುದೇವರಾಯರ ಕಿವಿಯಲ್ಲಿ "ಏನು, ವಾಸುದೇವ ರಾವ್, ಸರ್ವೋತ್ತಮ ರಾಯರು ಹೇರಿಂಗನ್ನು ಪ್ಯಾಂಟು ಪ್ರಕಾರ ಚಲೋದಾಗಿ ಮಾಡುವರು. ತಪ್ಪು ಈ ಹೇರಿಂಗ್ ಕೇಳಿದರೆ ಅಪರಾಧಿಗಳ ಮೇಲೆ ರುಜುವಾಗುವದಿಲ್ಲ. ಅಪರಾಧಿಗಳ ಬಿಡುಗಡೆ ನಿಶ್ಚಯ."

ವಾಸುದೇವರಾವ್: ಶ್ಯಾಮರಾಯರೇ, ಏನ್ನನುವಿರಿ! ಹೇರಿಂಗ್ ಚಲೋದು ಹೌದು. ಆದರೆ ಇದನ್ನು ಕೇಳುವವರ್ಯಾರು? ಆಫೀಸರರು ಏನೋ ಪತ್ರಗಳನ್ನು ಓದಿಕೊಂಡು ದಸ್ಕತು ಹಾಕುತ್ತಿರುತ್ತಾರೆ. ಹೇರಿಂಗ್ ಇವರಿಗೇನೂ ಕೇಳಿಸದು; ಅಪರಾಧಿಗಳ ಬಿಡುಗಡೆ ಎಲ್ಲಿ, ಆಫೀಸರರಿಗೆ ತಲೆಯೊಂದು, ಕಿವಿಗಳೆರಡು. ಚತುರ್ಮುಖ ಬ್ರಹ್ಮ, ದಶಶಿರನೋ ಅಥವಾ ದಶ ಕಂದರನೋ—ಆಗಿದ್ದ ರಾವಣ ಇವರ ಹಾಗೆ ಹಲವು ತಲೆಗಳು ಮತ್ತು ಹಲವು ಕಿವಿಗಳಿರುತ್ತಿದ್ದರೆ ಒಂದು ಜೋಡು ಕಿವಿಯನ್ನೂ ಒಂದು ತಲೆಯನ್ನೂ ಒಂದು ಕೆಲಸಕ್ಕೆ ವಿನಿಯೋಗಿಸಿ ಮತ್ತೊಂದು ಜೋಡು ಕಿವಿಯಿಂದ ಮತ್ತು ಇನ್ನೊಂದು ತಲೆಯಿಂದ ಬೇರೊಂದು ವಿಷಯ ತಿಳಿಯುವರೆ ಸಾಧ್ಯವಾಗುತ್ತಿತ್ತು. ಇದೆಂದೂ ಈ ಯುಗದಲ್ಲಿ ಸಾಧ್ಯವಲ್ಲ. ಹ್ಯಾಗೂ ಹೇರಿಂಗ್ ಆಯಿತೆಂತ ಆದ ಕೂಡಲೇ ಆಫೀಸರರು ಎರಡು ತಿಂಗಳನಂತರ ತೀರ್ಮಾನ ಕೊಡುವರು. ಆಫೀಸರರಿಗೇನು, ತೀರ್ಪು ಬರೆಯುವ ಭದ್ರವಾದೊಂದು ಉಪಾಯವಿದೆ. ಸರಕಾರದವರ ಕಡೆ, ವಾದಗಳನ್ನುಲ್ಲಂಘಿಸುವರೆ ಅಂಜಿ ತೀರ್ಮಾನಗಳನ್ನು ಬರದರೆ ಅದರಲ್ಲಿ ಯಾರಿಗೇನೂ ಬಾಧಕ ಬಾರದು. ಸಾಕು. ಸಾಕು. ಇಗೊಳ್ಳಿ ಆಫೀಸರರ ಮುಖ ಕೆಂಪೇರಿತು. ಯಾರನ್ನೋ ಕರಿಯಲಿಕ್ಕೆ ಕರೆಕಳುಹಿಸಿರುವರು.

ಇಷ್ಟರಲ್ಲಿ ಕ್ಲಾರ್ಕರೊಬ್ಬರು ಬಂದು ಆಫೀಸರರ ಮುಂದೆ ನಿಂತುಬಿಟ್ಟರು.

ಆಫೀಸರರು: ಒಂದು ಪುಸ್ತಿಯನ್ನು ನೋಡುತ್ತ ಗಡಗಡನೆ ಸಿಟ್ಟಿನಿಂದ:— ಹುಚ್ಚ ದಗಡಿ! ನನ್ನನ್ನು ವಂಚಿಸುವರೆ ಪ್ರಯತ್ನಿಸುವಿಯೋ! ನಡಿ! ನಡಿ! ನಿನ್ನನ್ನು ಅಮಾನತು ಮಾಡಿರುವೆನು. ಕೂಡಲೇ ಚಾರ್ಜು ಬಿಟ್ಟುಕೊಡಬೇಕು. (ತುಸ ಹೊತ್ತಿನ ಮೇಲೆ) ನಿನ್ನನ್ನು ತಾಲೂಕು ಆಫೀಸಿಗೆ ವರ್ಗ ಮಾಡಿದ್ದೇನೆ.

ಆಫೀಸರರ ಸಿಟ್ಟನ್ನು ನೋಡಿ ಸರ್ವೋತ್ತಮರಾಯರ ಹೇರಿಂಗ್ ನಿಂತುಬಿಟ್ಟಿತು. ಆಫೀಸೆಲ್ಲಾ ಸ್ತಬ್ಧವಾಯಿತು. ಈ ಶಿಕ್ಷೆಯನ್ನು ಕೇಳಿ ಕ್ಲಾರ್ಕನು ರಜೆ ಕೇಳಿದನು. ರಜೆ ಕೊಡೋಣಾಗಲಿಲ್ಲ. ದೇವರೇ, ಆಫೀಸರರ ಸಿಟ್ಟೇ-ನಾನು ಸಹ ಹೆದರಿ ಆಫೀಸಿನಿಂದ ಪಲಾಯನ ಮಾಡಿದೆ. ಅನುಕೂಲವಾದರೆ, ಸಾಕಷ್ಟು ಧೈರ್ಯ ತಂದುಕೊಳ್ಳುವರೆ ಸಾಧ್ಯವಾದರೆ ಆಫೀಸಿನ ಇನ್ನೊಂದು ಅಂಕದ ವಿಷಯ ಆಲೋಚಿಸುವೆನು.

ರಗಳೆ ರಂಗ.

ವಿದೇಶ ವೃತ್ತಾಂತ.

ಡಿಲ್ಲಿ ಪಟ್ಟಣವನ್ನು ಕಟ್ಟಿಸಲಿಕ್ಕೆ ಹಿಂದೂಸ್ಥಾನಕ್ಕೆ ಹೊರಟಿರುವ ಕೆಪ್ಟನ್ ಸ್ವಿಂಟನ್‍ರವರಿಗೆ ೫೦೦ ಪವನು; ಮೆ| ಬ್ರೈಡಿಯವರಿಗೆ ೧೭೫೦ ಪವನು; ಮೆ| ಲುಟಿಯನ್ಸರವರಿಗೆ ೧೫೦೦ ಪವನು ಸಂಬಳ ಕೊಡಲ್ಪಡುವುದು. ಈ ಪ್ರಕಾರ ೫ ತಿಂಗಳ ವರೆಗೆ ಸಂಬಳ ಕೊಡೋಣಾಗುವದು.

ಇಂಗ್ಲಾಂಡಿನ ಕಲ್ಲಿದ್ದಲಿನ ಗಣಿಗಳ ಮುಷ್ಕರದಿಂದ ಉಂಟಾದ ನಷ್ಟವನ್ನು ಹೇಳಿ ತೀರದು. ಸರಕಾರದವರು ಕೂಲಿಯಾಳುಗಳಿಗೆ ತಕ್ಕ ಸಂಬಳ ಕೊಡಬೇಕೆಂಬ ಕಾನೂನನ್ನು ಜ್ಯಾರಿಗೆ ತರಬೇಕೆಂದಿರುವರು. ಈ ವಿಷಯ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚೆ ನಡೆಯುತ್ತಲಿದೆ. ಮುಷ್ಕರಗಾರರು ಅಲ್ಲಲ್ಲಿ ಲೂಟಿ ಮಾಡುತ್ತಿದ್ದಾರೆ. ಒಂದೇ ವಾರದಲ್ಲಿ ಒಂದು ರೈಲ್ವೆ ಕಂಪೆನಿಯವರಿಗೆ ೫೭೧,೦೦೦ ಪವನುಗಳ ಹುಟ್ಟುವಳಿ ಕಮ್ಮಿಯಾಗಿರುವದು. ನೊರ್ಥ್ ಈಸ್ಟರ್ನ್ ರೈಲ್ವೆಯವರಿಗೆ ೮೫,೦೦೦ ಪವನು; ಮಿಡ್‍ಲೇಂಡ್ ರೈಲ್ವೆಯವರಿಗೆ ೮೩,೦೦೦ ಪವನು; ನೊರ್ಥ್ ವೆಸ್ಟರ್ನ್ ರೈಲ್ವೆಯವರಿಗೆ ೮೨,೦೦೦ ಪವನುಗಳ ಹುಟ್ಟುವಳಿ ಕಮ್ಮಿಯಾಗಿದೆ. ಕೆಲವು ಪ್ರಶಸ್ತವಾದ ರೈಲ್ವೇ ಕಂಪೆನಿಯವರು ಕಲ್ಲಿದ್ದಲಿನ ಬದಲಿಗೆ ಕಟ್ಟಿಗೆ ಉಪಯೋಗಿಸುವರೆ ಪ್ರಯತ್ನಿಸುತ್ತಿದ್ದಾರೆ.

ಕೆಲವು ಕಡೆಗಳಲ್ಲಿ ಗಣಿ ಕೆಲಸದವರು ಬೇಗನೇ ಕೆಲಸಕ್ಕೆ ಹಾಜರಾಗುವೆವೆಂದು ಅಭಯವನ್ನಿತ್ತಿರುವುದು ಸ್ವಲ್ಪ ಸಂತೋಷಕ್ಕೆ ಕಾರಣವಾಗಿದೆ. ಆದರೆ ಈ ಮುಷ್ಕರವು ಹ್ಯಾಗೂ ಇನ್ನು ೧೫ ದಿವಸಗಳ ವರೆಗೆ ಇರುವುದು. ದೇಶದಲ್ಲಿ ಜನರ ಕಷ್ಟವು ವಿಪರಿಮಿತವಾಗಿದೆ. ಹಸಿವು ಬಾಯಾರಿಕೆಯಿಂದ ಬಳಲುತ್ತಿರುವ ಜನರ ಗುಂಪನ್ನು ನೋಡಿದರೆ ಎಂಥವನಿಗೂ ಅಶ್ರುಧಾರೆ ಇಳಿಯದಿರಲಾರದು. ಇಂಥಾ ಗುಂಪಿನವರ ಅವಸ್ಥೆಯನ್ನು ನೋಡಿ ಕನಿಕರಪಟ್ಟು ಒಬ್ಬ ಮುಖ್ಯ ಕನ್‍ಸ್ಟೇಬಲನು ಸಾವಿರಾರು ಜನರಿಗೆ ಆಹಾರವನ್ನೂ ಚಾವನ್ನೂ ಹಂಚಿರುವನು. ಮುಷ್ಕರ ಹಿಡಿದು ಕೆಲಸವಿಲ್ಲದೆ ಇರುವ ಜನರಿಗೆ ಈ ತನಕ ಕೆಲಸಗಾರರ ಸಂಘದವರು ೮,೧೮,೦೦೦ ಪವನುಗಳನ್ನು ಹಂಚಿರುವರು. ಮುಷ್ಕರದಿಂದ ಊಟಕ್ಕಿಲ್ಲದ ಕಷ್ಟವಲ್ಲದೆ ಕೆಲವು ಜಿಲ್ಲೆಯಲ್ಲಿ ಈಗ ಚಳಿಗಾಲವಾದ್ದರಿಂದ ಜನರ ಕಷ್ಟಕ್ಕೆ ಮಿತಿಯೇ ಇಲ್ಲ. ಬರ್ಸ್‍ಲೆಮ್ ಎಂಬಲ್ಲಿ ಮೂರು ದಿವಸಗಳಲ್ಲಿ ೪೦,೦೦೦ ಮುಂದಿಗೆ ಊಟ ಬಡಿಸಲಾಯಿತು. ವ್ಯಾಪಾರಸ್ಥರು ಖರೀದಿ ಕ್ರಯಕ್ಕನೇ ತಮ್ಮ ಸಾಮಾನುಗಳನ್ನು ಮಾರುತ್ತಿದ್ದಾರೆ.

ಗಣಿ ಕೆಲಸದವರ ಸಂಘದ ಹಣವು ಹೆಚ್ಚು ಕಡಿಮೆ ಮುಗಿಯುತ್ತಾ ಬಂದದೆ. ಇದ್ದ ಹಣವು ಹೆಚ್ಚೆಂದರೆ ಇನ್ನು ಒಂದುವಾರಕ್ಕೆ ಸಾಕಾಗುತ್ತದೋ ಏನೋ? ಇಂಗ್ಲಾಂಡ್ ಮತ್ತು ವೇಲ್ಸಿನ ಒಂಭತ್ತು ಜಿಲ್ಲೆಗಳ ಇಂಥಾ ಸಂಘಗಳಲ್ಲಿ ಈಗ ಎರಡು ಸಂಘಗಳಲ್ಲಿ ಮಾತ್ರ ಸ್ವಲ್ಪ ಹಣವಿದೆ. ದೇಶದಲ್ಲಿ ವರ್ಗದಾರರೂ ಇನ್ನು ಪಟ್ಟಣ ಕೌನ್ಸಿಲಿನವರೂ ಊಟಕ್ಕಿಲ್ಲದೆ ಬಳಲುತ್ತಿರುವ ಜನರಿಗೆ ಆಹಾರವನ್ನೂ ಕಟ್ಟಿಗೆಯನ್ನೂ ಹಂಚುತ್ತಿದ್ದಾರೆ. ದಕ್ಷಿಣ ವೇಲ್ಸಿನ ಸ್ಥಿತಿಯು ಬಹಳ ಕಠಿಣವಾಗಿದೆ. ಮಕ್ಕಳನ್ನು ಸಂರಕ್ಷಿಸುವರೆ ಆಯಾ ಅನಾಥ ಗೃಹಗಳು ಸ್ಥಾಪಿಸಲ್ಪಟ್ಟಿವೆ.

ಈ ಮುಷ್ಕರದಿಂದ ಇಂಗ್ಲಾಂಡ್ ವೇಲ್ಸಿನಲ್ಲಿ ಮಾತ್ರವೇ ನಷ್ಟ ಉಂಟಾಯಿತೆಂತ ನೆನಸಕೂಡದು. ಇಡೀ ಭೂಖಂಡಗಳಿಗೆ ಇದರಿಂದ ನಷ್ಟ ಉಂಟಾಗಿಯದೆ. ಈಗ ಒಟ್ಟಿಗೆ ಎರಡು ಮಿಲಿಯ ಜನರು ಕೆಲಸವಿಲ್ಲದೆಯೂ ೫ ಮಿಲಿಯ ಹೆಂಗಸರುಮಕ್ಕಳು ಊಟಕ್ಕಿಲ್ಲದೆಯೂ ಬಳಲುತ್ತಿರುವರೆಂದು ಅಂದಾಜಾಗಿಯದೆ.

ಇಂಗ್ಲಾಂಡಿನ ಪ್ರಜಾಪ್ರತಿನಿಧಿ ಹಕ್ಕಿಗೆ ಪೇಚಾಡುವ ಹೆಂಗಸರಲ್ಲಿ ಲಂಡನಿನ ಜನರಲ್ ಪೋಸ್ಟು ಆಫೀಸಿಗೆ ಬೆಂಕಿಕೊಡ ಪ್ರಯತ್ನಪಟ್ಟ ಹೆಂಗಸಿಗೆ ೬ ತಿಂಗಳ ಸಜಾ ವಿಧಿಸೋಣಾಯಿತು.

ಜಾಪಾನಿನಿಂದ ಪರದೇಶಗಳಿಗೆ ಕಳುಹಿಸಲ್ಪಡುವ ಅಕ್ಕಿಯ ಮೇಲಿದ್ದ ಸುಂಕವು ಬರುವ ಎಪ್ರೀಲ್ ತಾ. ೧೦ರಿಂದ ವಜಾ ಮಾಡಲ್ಪಡುವುದು.

ಸಾಮೊಸ್ ಎಂಬಲ್ಲಿಯ ಪ್ರಿನ್ಸ್‍ಗವರ್ನರಾಗಿದ್ದ ಕೊಪಾಸಿಸ್ಸ್ ಎಫೆಂಡಿ ಎಂಬವರನ್ನು ಒಬ್ಬ ಗ್ರೀಕನು ಗುಂಡು ಹೊಡೆದು ಕೊಂದು ಬಿಟ್ಟನು.

ಚೀನದ ಪ್ರಜಾಧಿಪತ್ಯ ಸ್ಥಾಪಿಸುವ ಕೆಲಸದಲ್ಲಿ ಮುಂದಾಳಾಗಿದ್ದ ಸೆನ್ ಎಟ್ ಸೆನರನ್ನು ಹಿಡಿದು ಕೊಡುವವರಿಗೆ ೧೦೦,೦೦೦ ಪವನು ಉಡಿಗೆರೆ ಕೊಡುವೆವೆಂದು ಮುಂಚಿನ ಮಾಂಚು ಸರಕಾರದವರು ಪ್ರಕಟಿಸಿದ್ದರೆಂದು ಸೆನ್ ಎಟ್ ಸೆನರವರು ಹೇಳುವರಲ್ಲದೆ ಪ್ರಜಾಧಿಪತ್ಯವನ್ನು ಸ್ಥಾಪಿಸುವ ಕೆಲಸಕ್ಕಾಗಿ ಲೋಕದ ಎಲ್ಲಾ ಕಡೆಯಲ್ಲಿರುವ ಮುಖ್ಯವಾಗಿ ಅಮೇರಿಕದ ಚೀನಿಯರು ತನಗೆ ಧಾರಾಳ ಹಣ ಸಹಾಯಮಾಡಿದರೆಂತಲೂ ಕೆಲವು ಜನರು ತಮಗಿದ್ದವೆಲ್ಲವನ್ನೂ ಈ ಉದ್ದೇಶಕ್ಕಾಗಿ ಬಿಟ್ಟುಕೊಟ್ಟರೆಂತಲೂ ಉದಾಹರಣೆಗಾಗಿ ಪಿಲದೆಲ್ಫಿಯದಲ್ಲಿ ಒಬ್ಬ ಡೋಬಿ ಕೆಲಸದವನು ೨೦ ವರುಷದಿಂದ ಗಳಿಸಿಟ್ಟಿದ್ದ ಪೂರಾ ಹಣವನ್ನು ತನಗೆ ಕೊಟ್ಟುಬಿಟ್ಟನೆಂಬದಾಗಿಯೂ ಬರಿಯುವರು.

ಚೀನದ ಚಂಗ್ ಇಂಗ್ ಎಂಬಲ್ಲಿ ಯಾರೋ ಕಳ್ಳರು ರೆವರೆಂಡ್ ಹಿಕ್ಸ್ ಮತ್ತು ಅವರ ಜೊತೆಗಾರರನ್ನು ಕೊಂದು ಮೆಸ್ಸರ್ಸ್ ಹೊಪ್‍ಮೇನ್ ಮತ್ತು ಸೆಲ್ಮನ್ ಎಂಬವರನ್ನು ಘಾಯಪಡಿಸಿದರು. ಮೃತರು ಅಮೇರಿಕದವರಾಗಿರುತ್ತಾರೆ.

ಚೆಂಟಿಲ್ಲಿ ಎಂಬಲ್ಲಿ ೬ ಮಂದಿ ದರೋಡೆಗಾರರು ಓಡುತ್ತಿರುವ ಒಂದು ಮೋಟೋರು ಭಂಡಿಯನ್ನು ನಿಲ್ಲಿಸಿ ಅದರ ರಥಿಕರನ್ನು ಕೊಂದು ಭಂಡಿಯನ್ನು ಸ್ಥಳೀಕ ಬೇಂಕಿನ ಬಳಿಯಲ್ಲಿ ನಿಲ್ಲಿಸಿದರು. ಅನಂತರ ಈ ಪೈಕಿ ೪ ಜನರು ಬೇಂಕಿನೊಳಗೆ ನುಗ್ಗಿ ಬೇಂಕಿನ ಖಜಾನ್ಜಿಯನ್ನೂ ಕ್ಲಾರ್ಕರನ್ನೂ ಕೊಂದು ೪೦,೦೦೦ ಪವನುಗಳನ್ನು ಎತ್ತಿ ಹಾಕಿ ಪಾರಿಸ್ ನಗರದತ್ತಕಡೆ ಪಲಾಯನ ಮಾಡಿದರು.

ಆಸ್ಟ್ರೇಲಿಯದಲ್ಲಿ ೩-೪ ದಿವಸಗಳ ವರೆಗೆ ಸುಂಟರಗಾಳಿಯು ಎದ್ದುದರಿಂದ ಅನೇಕ ಕಟ್ಟೋಣಗಳು ಬಿದ್ದು ಹೋದವು, ಹಡಗಗಳು ಒಡದವು. ಇಷ್ಟರ ತನಕ ೧೨ ಮಂದಿ ಮನುಷ್ಯರು ಇದಕ್ಕೆ ತುತ್ತಾದರೆಂಬ ವಾರ್ತೆ ಬಂದದೆ.

ಉತ್ತರ ಹಿಂದುಸ್ಥಾನ.

ಡಾರ್ಜಿಲಿಂಗಿನ ಮುನಿಸಿಪಾಲ್ ಕಮಿಷನರ ಪೈಕಿ ಮಿಸಿಸ್ ಹೇಮಲಾಲ ಸಾರ್‍ಕಾರ್ ಎಂಬ ಒಬ್ಬ ಹೆಂಗಸು ಇರುವಳು. ಇವಳು ಮುನ್ಸಿಪಾಲ್ ಬೋರ್ಡಿಗೆ ಸೇರಿದಂದಿನಿಂದ ಮುನಿಸಿಪಾಲಿಟಿನಲ್ಲಿ ದಿನೇ ದಿನೇ ಉತ್ತಮವಾದ ಬದಲಾವಣೆಗಳು ಆಗುತ್ತಿವೆಯಲ್ಲದೆ ಈಕೆಯು ಮುನಿಸಿಪಾಲ್ ಕಮಿಷನರಲ್ಲಿ ಪ್ರಾಶಸ್ತ್ಯವನ್ನು ಪಡೆದಿರುವಳು.

ವೈಸರಾಯ ಪ್ರಭುಗಳವರು ಇದೇ ತಾ. ೨೭ರಲ್ಲು ಪರಿವಾರಸಹಿತ ಕಲ್ಕತ್ತೆಯಿಂದ ಹೊರಟು ಪಟಿಯಾಲ, ರಾವಲಪಿಂಡಿ, ಪೇಶ್ವಾರ್, ಡೇರಡನ್, ಡಿಲ್ಲಿ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ಎಪ್ರಿಲ್ ತಾ. ೧೮ರಲ್ಲು ಸಿಮ್ಲಕ್ಕೆ ತಲಪುವರು.

ಹಿಂದೂಸ್ಥಾನ ಸರಕಾರದ ಖರ್ಚು ಕಮ್ಮಿ ಮಾಡುವ ಉದ್ದೇಶದಿಂದ ಇದೇ ಬರುವ ಎಪ್ರೀಲ್ ತಾ. ೧ರಿಂದ ಸರಕಾರದವರು ಸಿವಿಲ್ ಪಶುವೈದ್ಯಾ ಇಲಾಖೆಯ ಇನ್ಸ್‍ಪೆಕ್ಟರ್ ಜನರಲ್ ಹುದ್ದೆಯನ್ನು ತೆಗೆದು ಹಾಕುವರು.

ಎಪ್ರೀಲ್ ತಾ. ೧ರಿಂದ ಬಿಹಾರ್ ಮತ್ತು ಒರಿಸ್ಸ ಎಂಬ ಹೊಸ ಸಂಸ್ಥಾನವು ಸ್ಥಾಪಿಸಲ್ಪಟ್ಟು ಅದಕ್ಕೆ ಬಹುಮಾನಪಟ್ಟ ಸರ್ ಚಾರ್ಲ್ಸ್ ಸೊಟ್ಯೆವರ್ಟ್ ಬೈಲಿ, ಕೆ. ಸಿ. ಎಸ್. ಐ.ರವರು ಲೆಪ್ಟನೆಂಟ್ ಗವರ್ನರರಾಗಿರುವರು, ಅದೇ ಪ್ರಕಾರ ಪಶ್ಚಿಮ ಬಂಗಾಳ, ಅಸ್ಸಾಮ್ ಗೋಲ್‍ಪುರ, ಮೊದಲಾದ ಜಿಲ್ಲೆಗಳು ಕೂಡಿದ ಅಸ್ಸಾಮಿಗೆ ಸರ್ ಅರ್ಚ್‍ಡೇಲ್ ಎರ್ಲರವರು ಚೀಫ್ ಕಮಿಷನರಾಗಿರುವರು ಎಂಬ ರಾಜಶಾಸನವು ಹಿಂದೂಸ್ಥಾನದ ಸ್ಟೇಟ್ ಸೆಕ್ರಟರಿಯವರಿಂದ ಬಂದಿರುವದು.

ಮಾರ್ಚಿ ತಾ. ೨೨ರಲ್ಲು ಕೂಡಿದ ಶ್ರೇಷ್ಟ ಸರಕಾರದ ನ್ಯಾಯ ನಿರ್ಮಾಣಕ ಸಭೆಯಲ್ಲಿ ಪ್ರೊವಿನ್ಸಿಯಲ್ ಸಿವಿಲ್ ಸರ್ವಿಸಿನ ಮೆಂಬರರನ್ನು ಹ್ಯಾಕೋರ್ಟು ಜಡ್ಜರಾಗಿ ನೇಮಿಸುವ ಸಂಬಂಧ ಬಹುಮಾನಪಟ್ಟ ಮದನ ಮೋಹಾನ್ ಮಲಾವಿಯವರು ಮಾಡಿದ ಪ್ರಶ್ನೆಗೆ ಉತ್ತರವಾಗಿ ಬಹುಮಾನಪಟ್ಟ ವಿಲ್ಸನ್ ಎಂಬವರು:-ಪ್ರೊವಿನ್ಸಿಯಲ್ ಸರ್ವಿಸಿನ ಮೆಂಬರರ್ಯಾರೂ ಈ ತನಕ ಕಲ್ಕತ್ತೆ ಹ್ಯಾಕೋರ್ಟಿನ ಜಡ್ಜರಾಗಿ ನೇಮಿಸಲ್ಪಡಲಿಲ್ಲವೆಂಬದು ಖರೆ; ಆದರೆ ಎಡ್ವೋಕೇಟರೂ ವಕೀಲರೂ ಅನೇಕಾವೃತ್ತಿ ನೇಮಿಸಲ್ಪಟ್ಟಿದ್ದಾರೆ. ಎಡೆ ದೊರಕಿದಾಗ ಸಮರ್ಥರಾದ ಸಿವಿಲ್ ಪ್ರೊವಿನ್ಸಿಯಲ್ ಸರ್ವಿಸಿನ ಮೆಂಬರರನ್ನೂ ಹ್ಯಾಕೋರ್ಟು ಜಡ್ಜರಾಗಿ ನೇಮಿಸಬೇಕೆಂಬದಾಗಿ ಸರಕಾರದವರು ಆಲೋಚಿಸಿರುವರು ಎಂಬದಾಗಿ ಹೇಳಿದರು.

ಸರಕಾರದಿಂದ ಸಹಾಯ ದೊರಕುವ ವರ್ತಮಾನ ಪತ್ರಿಕೆಗಳ ವಿಷಯವಾಗಿ ಬಹುಮಾನಪಟ್ಟ ದಿಗಪತಿಯವರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಮೆ. ವಿಲ್ಸನರವರು ಮುಂಬಾಯಿಯ 'ಜಗನ್ ವೃತ್' ಪತ್ರಿಕೆಗೆ ಸರಕಾರದಿಂದ ವರುಷ ಒಂದಕ್ಕೆ ೧೫,೦೦೦ ರೂಪಾಯಿ; ಬಂಗಾಳದ 'ಸುಲಾರ್ ಸಮಾಚಾರ' ಪತ್ರಿಕೆಗೆ ವರುಷ ಒಂದಕ್ಕೆ ೬೨,೦೦೦ ರೂಪಾಯಿ, ಪಶ್ಚಿಮ ಬಂಗಾಳದ 'ವಿಶ್ವಭಾರತ' ಎಂಬ ಪತ್ರಿಕೆಗೆ ೩೨,೦೦೦ ರೂಪಾಯಿ ಸಹಾಯ ದ್ರವ್ಯ ದೊರಕುತ್ತದೆಂದು ಹೇಳಿದರು.

ಹಿಂದೂಸ್ಥಾನದಲ್ಲಿ ೧೦ ರೂಪಾಯಿಯ ಚಿನ್ನದ ನಾಣ್ಯವನ್ನು ನಿರ್ಮಿಸಬೇಕೆಂಬದಾಗಿ ಬಹುಮಾನಪಟ್ಟ ಸರ್ ವಿಟಲ್‍ದಾಸ ತೆಕರ್ಸೆಯವರಿಂದ ಇಡೋಣಾದ ಮಸೂದೆಯು ಬಹುಮಾನಪಟ್ಟ ಗೋಖಲೆಯವರಿಂದ ಅನುಮೋದಿಸಲ್ಪಟ್ಟರೂ ಬಹುಮಾನಪಟ್ಟ ಸರ್ ಗ್ಯಾಪ್ಲೀಟ್ ವಿಲ್ಸನರವರು ಚಿನ್ನದ ನಾಣ್ಯವನ್ನು ನಿರ್ಮಿಸುವದು ಅನಾವಶ್ಯ

ಎಂಬದಾಗಿ ತೋರಿಸಿಕೊಟ್ಟದ್ದರಿಂದ ಸರ್ ಎ. ತೆಕರ್ಸೆ ಯವರು ತನ್ನ ಮಸೂದೆಯನ್ನು ಹಿಂದೆಗೆದರು.

~~~~~

ಮಾರ್ಚಿ ತಾ. ೧೬ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೮,೦೧೧ ಮಂದಿಗೆ ಪ್ಲೇಗಬೇನೆಯು ಸೋಂಕಿ ೧೫,೪೦೧ ಮಂದಿ ಮೃತಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟೆಂದರೆ—ಮುಂಬಾಯಿ ೭೮೯; ಮದ್ರಾಸ್ ೧೬೮; ಬಂಗಾಳ ೩,೧೬೩; ಸಂಯುಕ್ತ ಸಂಸ್ಥಾನ ೭೬೩೦; ಪಂಜಾಬು ೩,೯೫೩; ಬರ್ಮ ೯೧; ಮಧ್ಯ ಸಂಸ್ಥಾನ ೧೫೬೭; ಮೈಸೂರು ೮೫; ಹೈದರಾಬಾದ್ ೫೮೩; ಮಧ್ಯ ಇಂಡಿಯ ೨೨೩; ರಜಪುತಾನ ೯೮ ಮರಣಗಳಾದವು.

~~~~~

ತಾ. 23ರಲ್ಲಿ ದಿವಂಗತರಾದ ಸಿಸ್ಟರ್ ನೇವಿದತ್ತರವರ ಜ್ಞಾಪಕಾರ್ಥವಾಗಿ ಕಲ್ಕತ್ತೆಯಲ್ಲಿ ಒಂದು ಸಭೆ ಕೂಡಿತು. ಈ ಸಭೆಗೆ ಯುರೋಪಿಯ ಮತ್ತು ದೇಶೀಯ ಮಾನ್ಯಗೃಹಸ್ಥರು ಹಾಜರಿದ್ದರಲ್ಲದೆ ಡಾಕ್ಟರ್ ರಾಷ್‌ಬಿಹಾರಿ ಘೋಷ್ ರವರು ಅಧ್ಯಕ್ಷರಾಗಿದ್ದು ಕಾಲೋಚಿತ ಭಾಷಣಕೊಟ್ಟು ಭಾಷಣದ ಮಧ್ಯೆ ಸಿಸ್ಟರ್ ನೇವಿದತ್ತರವರು ನಿಜವಾಗಿ ಹೆಂಗಸರೊಳಗೆ ರಾಣಿಯಂತಿದ್ದಳು. ಅವಳು "ನಾವು ನಮ್ಮ ಪ್ರಯೋಜನಾರ್ಥವಾಗಿ ಜನ್ಮವೆತ್ತಲಿಲ್ಲ; ನಮ್ಮ ನೆರೆ ಹೊರೆಯವರಿಗಾಗಿ ಜನ್ಮವೆತ್ತಿದೆವು "ಎಂಬದನ್ನು ಬೋಧಿಸಿದಳೆಂಬಿತ್ಯಾದಿ ಮಾತುಗಳಿಂದ ವಿವಿಧ ತರದಲ್ಲಿ ಅವಳ ಗುಣಕಥನ ಮಾಡಿದರು. ಅನಂತರ ಮೆ| ಸುರೇಂದ್ರನಾಥ ಬೆನರ್ಜಿ, ಮೆ| ಗೋಖಲೆ, ಮದನ ಮೊಹಾನ್ ಮಲವಿಯವರು, ಮೆ| ಭೂಪೇಂದ್ರನಾಥ ಬಾಸು, ಮೆ|ಡಬ್ಲ್ಯು ಹುಸೇನರವರು ಸಿಸ್ಟರ್ ನೇವಿದತ್ತರ ಗುಣಕಥನಮಾಡಿ ಭಾಷಣಕೊಟ್ಟರು. ಕಡೆಗೆ ಸಿಸ್ಟರ್ ನೇವಿದತ್ತರವರ ಜ್ಞಾಪಕಾರ್ಥವಾಗಿ ಅವರಿಂದ ಸ್ಥಾಪಿಸಲ್ಪಟ್ಟ ಹುಡುಗಿಯರ ಶಾಲೆಯನ್ನು ಸಾಶ್ವತಗೊಳಿಸುವರೆ ಹಣಕೂಡಿಸಬೇಕೆಂಬದಾಗಿ ನಿಷ್ಕರ್ಷಿಸಲಾಯಿತು. ಇದ್ದಕ್ಕಿದ್ದಹಾಗೆ ೩೦೦೦ ರೂಪಾಯಿ ವಂತಿಗೆ ಕೂಡಿತು.

~~~~~

ಮದ್ರಾಸ್ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳವರು ಎಪ್ರೀಲ್ ತಾ. 1ರಿಂದ ಬಂಗಾಳದ ಗವರ್ನರರಾಗಿ ನೇಮಿಸಲ್ಪಟ್ಟಿದ್ದಾರೆಂದೂ ಗವರ್ನರರವರ ಕಾರ್ಯನಿರ್ವಾಹಕ ಸಭೆಗೆ ಬಂಗಾಳದ ಈಗಿನ ಲೆಪ್ಟನೆಂಟ ಗವರ್ನರರಾಗಿರುವ ಸರ್ ಪ್ರೆಡ್ರಿಕ್ ವಿಲಿಯಮ್ ಡ್ಯೂಕರವರೂ ರೆವಿನ್ಯೂ ಬೋರ್ಡಿನ ಮೆಂಬರರಾಗಿರುವ ಬಹುಮಾನಪಟ್ಟ ಮೆ| ಪಿ. ಸಿ. ಲಯನ್‌ರವರೂ ಬಹುಮಾನಪಟ್ಟ ಮೌಲ್ವಿ ಸಯ್ಯದ್ ಶಾಮ್ಸಲ್ ಹುದ್ದರವರೂ ನೇಮಿಸಲ್ಪಟ್ಟಿದ್ದಾರೆಂಬ ರಾಜಶಾಸನವು ಜೋರ್ಜ ಚಕ್ರವರ್ತಿಯವರಿಂದ ಬಂದಿರುವುದು.

~~~~~

ನೇಪಾಲ್ ಸರಹದ್ದಿನಲ್ಲಿ ಆಯುಧಪಾಣಿಗಳಾದ 40 ದರೋಡೆ ಕಳ್ಳರು ಸರ್ ಪಿ. ಕುಮಾರ್ ಟಾಗೋರ್ ಎಂಬವರ ಭೂಸ್ವಾಸ್ತ್ಯದ ಒಳನುಗ್ಗಿ ಸುಮಾರು 15,000 ರೂಪಾಯಿಗಳನ್ನು ಕದ್ದೊಯ್ಯುತ್ತಿರುವಾಗ ಪೋಲೀಸಿನವರೂ ಇತರ ಕೆಲವರೂ ಅವರೊಡನೆ ಕಾದಾಡಿದರು. ಕಳ್ಳರು ಕೊಳ್ಳೆಯೊಡನೆ ಪರಾರಿಯಾದರು. ಕಳ್ಳರಲ್ಲಿ ಇಬ್ಬರು ಮಡಿದರು. ಕೆಲವರು ಗಾಯಪಟ್ಟಿರುವರು.

~~~~~

ಬಂಗಾಳದ ಹತ್ತೀ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ೩೦೦೦ ಮಂದಿಯು ತಾ. ೨೩ರಲ್ಲಿ ಮುಷ್ಕರ ಹಿಡಿದರು. ಒಬ್ಬ ಜಮೇದಾರನು ಒಬ್ಬ ನೂಲು ಸುತ್ತುವವನನ್ನು ಗಡ್ಡದಲ್ಲಿ ಹಿಡಿದು ಅಂಗಳಕ್ಕೆ ಎಳದದ್ದೇ ಈ ಮುಷ್ಕರಕ್ಕೆ ಕಾರಣವಾಗಿ ಜಮೇದಾರನನ್ನು ಕೊಲ್ಲುತ್ತೇವೆಂದು ಹೆದರಿಸಿದರು. ಕೂಡಲೇ ಪೋಲೀಸಿನವರು ಆ ಸ್ಥಳಕ್ಕೆ ಕರೆಯಲ್ಪಟ್ಟರು. ಮುಷ್ಕರಗಾರರು ಅವರಿಗೆ ಇಟ್ಟಿಗೆಗಳನ್ನು ಬಿಸಾಡಿ ಲೂಟಿ ಮಾಡಿದರು. ಆದರೆ ಗೊಂದಲವು ಕೂಡಲೇ ನಿಲ್ಲಿಸಲ್ಪಟ್ಟಿತು. ಮುಷ್ಕರಗಾರರು ಪುನಃ ಕೆಲಸ ಪ್ರಾರಂಭಿಸಿದ್ದಾರೆ.

~~~~~

ಸ್ವೀಡೆನಿನ ಯುವರಾಜರವರು ತಾ. ೨೧ರಲ್ಲಿ ಅಹಮ್ಮದಬಾದಿನಿಂದ ಮುಂಬಾಯಿಗೆ ಬಂದು ತಲಪಿರುವರು.

~~~~~

ಡಕ್ಕದ ರಾಜದ್ರೋಹ ಪಿತೂರಿ ಮೊಕದಮೆಯ ಅಪೀಲ್ ತನಕೆಯು ತಾ. ೧೯ರಲ್ಲಿ ಕಲ್ಕತ್ತಾ ಹ್ಯಾಕೋರ್ಟಿನಲ್ಲಿ ನಡೆಯಿತು. ಆಪಾದಿತರ ಕಡೆಯ ವಕೀಲರು—ಡಕ್ಕ ಸಮಿತಿಯ ಮುಂದಾಳಾದ ಪುಲಿನ್ ಎಂಬವರು ಹುಡುಗರಿಗೆ ತಕ್ಕದಾದ ವಿದ್ಯಾಭ್ಯಾಸವನ್ನು ಕೊಡುವದಕ್ಕಾಗಿ ಆ ಸಮಿತಿಯನ್ನು ಸ್ಥಾಪಿಸಿದಲ್ಲದೆ ಸರಕಾರಕ್ಕೆ ವಿರೋಧವಾಗಿ ಜನರನ್ನು ಯುದ್ಧಕ್ಕೆ ತಯಾರಿಸುವರೆ ಸ್ಥಾಪಿಸಿದಲ್ಲ, ಹುಡುಗರ ದೇಹಧಾರ್ಢ್ಯವನ್ನೂ ಮಾನಸಿಕ ಶಕ್ತಿಯನ್ನೂ ಅಭಿವೃದ್ಧಿಪಡಿಸಬೇಕೆಂಬದೇ ಪುಲಿನರ ಉದ್ದೇಶವಾಗಿತ್ತು. ಪುಲಿನರು ಎಂದೂ ರಾಜಕಂಟಕರಾಗಿರಲಿಲ್ಲ. ಅವರು ಅನಾಯಕತ್ವವನ್ನು ಬೋಧಿಸಲೂ ಇಲ್ಲ, ಆ ಸಂಘದಲ್ಲಿ ಒಂದೇ ಒಂದು ರಿವೊಲ್ವರ್ ಕೋವಿಗಳು ದೊರೆಯಲಿಲ್ಲ ಎಂಬದಾಗಿ ವಾದಿಸಿದರು. ಜಡ್ಜರವರು ತೀರ್ಮಾನವನ್ನು ಬಾಕಿ ಇಟ್ಟಿರುತ್ತಾರೆ.

~~~~~

ಕರಾಚಿಯ ಸುಕ್ಕೂರು ರೈಲ್ವೇ ಸ್ಟೇಶನಿಂದ ಪಂಜಾಬಿಗೆ ಹೋಗಲಿಕ್ಕಿದ್ದ ಮಿಸ್ ತಿಯೋಪಿಲಸ್ ಎಂಬ ಹೆಂಗಸು ಸುಕ್ಕೂರು ಸ್ಟೇಶನಿನಲ್ಲಿ ಪಂಜಾಬು ಟ್ರೈನ್ ಬಿಟ್ಟು ಮತ್ತೊಂದು ಟ್ರೈನ್ ಹತ್ತಿದಳು. ಅಗ್ಗಾಡಿಯು ಹೊರಡುವಾಗ ತನ್ನ ತಪ್ಪನ್ನು ತಿಳಕೊಂಡು ಫಕ್ಕನೇ ಅವಸರದಿಂದ ರೈಲ್ವೇ ನಿಲ್ದಾಣಕ್ಕೆ ಹಾರಿ ಟ್ರೈನಿನ ಅಡಿಗೆ ಬಿದ್ದು ಮೃತಪಟ್ಟಳು. ಈ ಹೆಂಗಸಿನ ಕೂಡೆ ಇದ್ದ ೪ ವರುಷದ ಮಗು ಮಾತ್ರ ದೈವವಶಾತ್ ರಕ್ಷಿಸಲ್ಪಟ್ಟಿತು.

~~~~~

ಲಾಹೋರಿನ ನಾದಿರ್ ಎಂಬ ಒಬ್ಬ ದರೋಡೆ ಕಳ್ಳನು ತನ್ನ ಸಂಗಾತಿಗಳೊಡನೆ ಆಯಾ ಬೇಂಕುಗಳನ್ನು ಲೂಟಿ ಮಾಡುತ್ತಾ ೧೩ ಮಂದಿಯನ್ನು ವಧಿಸಿ ತಲೆ ತಪ್ಪಿಸಿಕೊಂಡಿದ್ದನು. ಈತನು ಈಚೆಗೆ ಜೇಲ್ಹಮ್ ಜಿಲ್ಲೆಯಲ್ಲಿ ಹಿಡಿಯಲ್ಪಟ್ಟಿರುವನು. ಇವನನ್ನು ಹಿಡಿದವನಿಗೆ ಸರಕಾರದವರು ೬೦೦ ರೂಪಾಯಿ ಇನಾಂ ಕೊಟ್ಟಿರುವರು.

~~~~~

ದಾಬಾಸಾಂಗ್ ಎಂಬಲ್ಲಿಯ ಕ್ಷಾಮ ನಿವಾರಣಾರ್ಥವಾಗಿ ಕೂಡಿಸಿದ ಹಣದಲ್ಲಿ ೨೬೪೮ ರೂಪಾಯಿಯನ್ನು ಜೈನ್ ಎಂಬ ಪತ್ರಿಕೆಯ ಸಂಪಾದಕರಾದ ಭಾಗುಭಾಯಿ ಶಾತಾ ಎಂಬವರು ದುರುಪಯೋಗ ಮಾಡಿದ್ದಾರೆಂಬ ತಕ್ಷೀರಿನ ಮೇಲೆ ಆಪಾದಿಸಲ್ಪಟ್ಟಿದ್ದಾರೆ.

~~~~~

ಕಲ್ಕತ್ತೆಯ ಹಾಟಕೋಲ ಎಂಬ ಪೋಸ್ಟು ಆಫೀಸಿನ ಒಬ್ಬ ಟಪ್ಪಾಲು ಪೇದೆಯು ಟಪ್ಪಾಲು ಚೀಲದ ಮುದ್ರೆ ಒಡೆದು ೧೯,೦೦೦ ರೂಪಾಯಿಯ ಕರೆನ್ಸಿ ನೋಟುಗಳನ್ನು ಅಪಹರಿಸಿರುವನೆಂಬದಾಗಿ ಕೈದು ಮಾಡಲ್ಪಟ್ಟಿರುವನು.

~~~~~

ದಕ್ಷಿಣಹಿಂದೂಸ್ಥಾನ.

~~~~~

ಮದ್ರಾಸ್ ಸಂಸ್ಥಾನದ ಗವರ್ನರರಾಗಿರುವ ಕಾರ್ಮಿಖಯೇಲ್ ಪ್ರಭುಗಳವರು ಇಂದು ಸಾಯಂಕಾಲ ಕಲ್ಕತ್ತೆಗೆ ತೆರಳುವರೆ ಅಗ್ಗಾಡಿ ಹತ್ತುವರು. ಈ ದಿನ ಮದ್ಯಾನ್ಹ ನಾಲ್ಕು ಗಂಟೆಗೆ ಮದ್ರಾಸ್ ಮುನಿಸಿಪಾಲಿಟಿಯವರು ಪ್ರಭುಗಳವರಿಗೆ ಬಹುಮಾನ ಪತ್ರವನ್ನು ಕೈವರ್ತಿಸುವರು.

ಕಲ್ಕತ್ತೆಯಲ್ಲಿ ಕಾರ್ಮಿಖಯೇಲ್ ಪ್ರಭುಗಳವರ ಖಾಸಗಿ ಸೆಕ್ರಟರಿಯಾಗಿ ಮೆ| ಡಬ್ಲ್ಯು. ಆರ್. ಗೋರ್ಲೆ, ಐ. ಸಿ. ಎಸ್‌ರವರು ನೇಮಿಸಲ್ಪಟ್ಟಿರುವರು.

~~~~~

ಶೃಂಗೇರಿ ಮಠದ ಜಗದ್ಗುರುಗಳಾದ ಶ್ರೀ ಸಚ್ಚಿದಾನಂದ ನರಸಿಂಹ ಭಾರತಿ ಸ್ವಾಮಿಯವರು ತಾ. ೧೯ನೇ ಮಂಗಳವಾರ ಬೆಳಿಗ್ಗೆ ೧೧ ಗಂಟೆಗೆ ಪರವನೈದಿದರು ಎಂದು ತಿಳಿಸಲು ವಿಷಾದಿಸುತ್ತೇವೆ. ಇವರು ತನ್ನ ಬದಲಿಗೆ ಉತ್ತರಾಧಿಕಾರಿಯಾಗಿ ಯಾರನ್ನೂ ನೇಮಿಸದೆ ಯಾ ಇತರ ಯಾವ ಬದಲಾವಣೆಗಳನ್ನೂ ಮಾಡದೆ ಮೃತಪಟ್ಟಿರುವುದರಿಂದ ಇನ್ನು ಸ್ವಾಮಿಗಳಾಗಿ ಒಬ್ಬರನ್ನು ನೇಮಿಸಬೇಕಾಗುವದು.

~~~~~

ಮೈಸೂರಿನ ಮಾಜಿ ದಿವಾನರಾಗಿದ್ದ ಸರ್ ಪಿ. ಎನ್. ಕೃಷ್ಣಮೂರ್ತಿಯವರು ಸರಕಾರದಿಂದ ತನಗೆ ಸಿಕ್ಕುತ್ತಿದ ತಿಂಗಳು ಒಂದರ ರೂ. ೫೦೦ ಪೆನ್ಶನಿನ ಬದಲಿಗೆ ರೂ. ೧೦೦೦ ಸಿಕ್ಕಬೇಕೆಂಬದಾಗಿ ಮೈಸೂರು ಸರಕಾರದವರನ್ನು ಕೇಳಿಕೊಂಡು ೫ ವರುಷಗಳ ತನಕ ತನ್ನ ಪೆನ್ಶನ್ ತಕ್ಕೊಳ್ಳದೆ ಇದ್ದರು. ಕಡೆಗೆ ತಾನು ಸಾಯುವ ಕೆಲವು ಸಮಯದ ಹಿಂದೆ ಹೆಚ್ಚಿಗೆ ಪೆನ್ಶನಿನ ಬದಲಿಗೆ ಎಲಂದೂರಿನಲ್ಲಿರುವ ತನ್ನ ಜಹಗೀರಿಗೆ ಕೆಲವು ಸ್ಥಳಗಳನ್ನಾದರೂ ಕೂಡಿಸಿ ಕೊಡಬೇಕೆಂದು ಸರಕಾರಕ್ಕೆ ಮನವಿ ಮಾಡಿಕೊಂಡರು. ಸರಕಾರದವರು ಇದಕ್ಕೂ ಒಪ್ಪಲಿಲ್ಲ. ಈಚೆಗೆ ಅವರು ಮೃತಪಟ್ಟದ್ದರಿಂದ ಅವರಿಗೆ ಸಲ್ಲತಕ್ಕ ಪೆನ್ಶನಿನ ಬಾಕಿ ರೂಪಾಯಿ೩೫,೦೦೦ವನ್ನು ಅವರ ವಿಧವೆಗೆ ಸರಕಾರದವರು ಕೊಟ್ಟಿರುವರು. ಈ ಹಣವನ್ನು ಅವರ ವಿಧವೆಯು ಮೈಸೂರಿನಲ್ಲಿ ಸಂಸ್ಕೃತ ವಿದ್ಯಾಭ್ಯಾಸಭಿವೃದ್ಧಿಗಾಗಿ ದಾನ ಮ್ಮಾಡಿರುತ್ತಾರೆ ಎಂದು ತಿಳಿಯುತ್ತೇವೆ.

~~~~~

ಮದ್ರಾಸ್ ಗವರ್ನರರಾಗಿರುವ ಕಾರ್ಮಿಖಯೇಲ್ ಪ್ರಭುಗಳ ಸಾನಿಯವರಿಗೆ ತಾ. ೨೬ರಲ್ಲಿ ಮದ್ರಾಸಿನ ಹಿಂದೂ ಸ್ತ್ರೀಯರ ಕ್ಲಬ್ಬಿನವರು ಆಮಂತ್ರಿಸಿ ಅವರಿಗೆ ಸ್ವಸ್ತಿ ವಚನವನ್ನಿತ್ತರು.

~~~~~

ಬೆಂಗಳೂರು ಲಂಡನ್ ಮಿಶ್ಯನ್ ಶಾಲೆಯ ಮತ್ತು ಚೆನ್ನಪಟ್ಟಣ ಗವರ್ನಮೆಂಟ್ ಹ್ಯಾಸ್ಕೂಲಿನ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂಂಡ್ರಿಸಕೂಡದೆಂಬ ತಂತಿಯು ಕಳದ ಶನಿವಾರ ಮದ್ರಾಸ್ ಯುನಿವರ್ಸಿಟಿ ರಿಜಿಸ್ತ್ರಾರರಿಂದ ಪರೀಕ್ಷೆಯ ಮುಖ್ಯ ಸುಪರಿಂಟೆಂಡೆಂಟರಾದ ಬೆಂಗಳೂರು ಸೆಂಟ್ರಲ್ ಕಾಲೇಜಿಯ ಮುಖ್ಯೋಪಧ್ಯಾಯರಿಗೆ ಬಂದದರಿಂದ ವಿದ್ಯಾರ್ಥಿಗಳಲ್ಲಿಯೂ ಆ ಎರಡು ಹ್ಯಾಸ್ಕೂಲುಗಳ ಹೆಡ್ ಮಾಸ್ತರರಲ್ಲಿಯೂ ಬಹಳ ಆಶ್ಚರ್ಯವನ್ನೂ ವಿಷಾದವನ್ನೂ ಉಂಟುಮಾಡಿತು. ಲಂಡನ್ ಮಿಶ್ಯನ್ ಶಾಲೆಯ ಪ್ರಿನ್ಸಿಪಾಲರಾದ ರೆವೆರೆಂಡ್ ರೈಸ್ ದೊರೆಗಳವರು ಕೂಡಲೇ ಸೆಂಟ್ರಲ್ ಕಾಲೇಜಿಯ ಮುಖ್ಯೋಪಧ್ಯಾಯರ ಮತ್ತು ವಿದ್ಯಾಖ್ಯಾತೆಯ ಆಕ್ಟಿಂಗ್ ಇನ್ಸ್‌ಪೆಕ್ಟರ್ ಜನರಲರವರ ಬಳಿಗೆ ಹೋಗಿ ಮಾತಾಡಿ ರಿಜಿಸ್ತ್ರಾರರಿಗೆ ತಂತಿ ಬಿಡಿಸಿದರು. ಅದಕ್ಕೆ ಇತ್ಯರ್ಥವಾಗದೆ ಬಾಕಿಯಲ್ಲಿರುವ ಸಂಶಯವನ್ನು ನಿವಾರಿಸಿದರೆ ವಿದ್ಯಾರ್ಥಿಗಳನ್ನು ಪುನಃ ಪರೀಕ್ಷೆಗೆ ಕೂಂಡ್ರಿಸಬಹುದೆಂಬ ಮರುತ್ತರ ಬಂತು. ಆದರೆ ರಿಜಿಸ್ತ್ರಾರರಿಗೆ ಯಾವ ತರದ ಜವಾಬು ಕೊಡಬೇಕೆಂದು ಈ ಹೆಡ್‌ಮಾಸ್ತರರು ತಿಳಿಯದವರಾಗಿದ್ದಾರೆ. ಲಂಡನ್ ಮಿಶ್ಯನ್ ಶಾಲೆಯಿಂದ ಪರೀಕ್ಷೆಗೆ ನಿಂತ ೨೦ ಹುಡುಗರ ಅರ್ಜಿಯು ರಿಜಿಸ್ತ್ರಾರರ ಆಫೀಸಿಗೆ ಕಳುಹಿಸಲ್ಪಟ್ಟದೆಂದೂ ಈ ಪೈಕಿ ನಾಲ್ಕು ಅರ್ಜಿಗಳು ಹಳೇ ಫೋರ್ಮಿನಲ್ಲಿ ಬರಾಯಿಸಿದ್ದರಿಂದ ಹಿಂದೆ ಕಳುಹಿಸಲ್ಪಟ್ಟದೆಂದೂ ಉಳಿದ ೧೬ರನ್ನು ಕ್ಲಾರ್ಕನು ಕೈತಪ್ಪಿ ಎಲ್ಲಿಯೋ ಇಟ್ಟುಬಿಟ್ಟದ್ದರಿಂದ ಹೀಗಾಯಿತೆಂತಲೂ ವಾರ್ತೆ ಇದೆ. ನಿಜವಾರ್ತೆಯು ತಿಳಿದುಬರಲಿಲ್ಲ.

~~~~~

ದಕ್ಷಿಣ ಕನ್ನಡ.

~~~~~

WANTED.

A good Estate writer with 50 Coolies, pay Rs. 50, a good knowledge of accounts essential.

Apply—**W. H. Reed**

Mavinkere Estate, KALASA P. O.

50 ಕೂಲಿಯಾಳುಗಳ ಸಹಿತ ಒಬ್ಬ ಒಳ್ಳೇ ರೈಟರನು ಬೇಕಾಗಿದೆ. ಸಂಬಳ ರೂ. 50 ಕೊಡೋಣಾಗುವದು. ರೈಟರನು ಲೆಕ್ಕಪತ್ರಗಳನ್ನಿಡುವ ಒಳ್ಳೇ ಅನುಭವವುಳ್ಳವನಾಗಿರಬೇಕು.

ಡಬ್ಲ್ಯು. ಎಚ್. ರೀಡ್.
ಮಾವಿನಕೆರೆ ಎಸ್ಟೇಟ್,
ಕಳಸ ಪೋಸ್ಟು.

~~~~~

ಬಾತ್ಮೀದಾರರಿಗೆ ನೋಟಿಸು:—ಮಂಜೇಶ್ವರ ಪುರವಾಸಿ, ವಿಳಾಸವಿಲ್ಲದ್ದರಿಂದ ಪ್ರಕಟಿಸಲಾರೆವು. ಹೆಸರು ವಿಳಾಸವಿಲ್ಲದ ಬಾತ್ಮಿಗಳಿಗೆ ನಿಗಾಕೊಡಲಾರೆವು.

ಎಡಿಟರ್.

~~~~~

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ೧೦ ಪ್ಲೇಗು ಮರಣಗಳಿದ್ದವು.

ಪುತ್ತೂರು ವರ್ಗದಾರರ ಸಂಘದ ೪ನೇ ವರ್ಷಾಂತಿಕ ಸಭೆಯು ಇದೇ ಬರುವ ಎಪ್ರಿಲ್ ತಾ. ೬ನೇ ಶನಿವಾರ ಮಧ್ಯಾನ್ಹ ೨ ಘಂಟೆಗೆ ಪುತ್ತೂರಲ್ಲಿ ಕೂಡುವದು. ಇಲ್ಲಿಯ ಮ| ರಾ| ರಾ| ಯು. ಸಿ. ಕೃಷ್ಣಭಟ್ಟ ಅವರ್ಗಳರವರು ಸಭಾಧ್ಯಕ್ಷರಾಗಲು ಒಪ್ಪಿಕೊಂಡಿರುವರು.

ನಮ್ಮ ಜಿಲ್ಲೆಯಲ್ಲಿ ಒಂದು ಪಶುವೈದ್ಯ ಔಷಧಾಲಯವನ್ನು ಸ್ಥಾಪಿಸುವರೆ ಹುಕುಂ ಕೊಡಬೇಕಾಗಿ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನವರು ಮದ್ರಾಸ್ ಸರಕಾರದವರನ್ನು ಕೇಳಿಕೊಂಡಿದ್ದರು. ಇದಕ್ಕೆ ಸರಕಾರದವರು ಸಮ್ಮತಿ ಕೊಟ್ಟಿರುವರು. ಈ ಔಷಧಾಲಯವನ್ನು ನಡಿಸಿಕೊಂಡು ಬರುವ ಖರ್ಚನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ವಹಿಸಿಕೊಳ್ಳುವ ಪಕ್ಷದಲ್ಲಿ ಕಟ್ಟೋಣಕ್ಕೆ ಬೇಕಾದ ಖರ್ಚು ಪ್ರೊವಿನ್ಶಿಯಲ್ ಫಂಡಿನಿಂದ ಕೊಡೋಣಾಗುವುದು.

ಕಳದ ವರುಷ ಇಲ್ಲಿಯ ಪಟ್ಟ ಎಂಬ ಮೊಚ್ಚೆಗಾರನಿಗೂ ಆತನ ಭಾವನೆಂಟನಾದ ರಾಮು ಎಂಬವನಿಗೂ ಚರ್ಮದ ಸಂಬಂಧ ಜಗಳ ಉಂಟಾಗಿ ಪಟ್ಟ ಎಂಬವನು ರಾಮು ಎಂಬವನಿಗೆ ಪಲ್ಲಂಡಿಯಿಂದ ಹೊಡೆದು ಕೊಂದನೆಂಬದಾಗಿ ಆಪಾದಿಸಲ್ಪಟ್ಟು ಇಲ್ಲಿಯ ಸೆಶ್ಯನ್ಸ್ ಜಡ್ಜರವರಿಂದ ದೇಹಾಂತ ಶಿಕ್ಷೆ ವಿಧಿಸಲ್ಪಟಿದ್ದನು ಎಂಬದಾಗಿ ತಿಳಿಸಿತ್ತಷ್ಟೆ. ಅನಂತರ ಈತನು ಮದ್ರಾಸ್ ಹ್ಯಾಕೋರ್ಟಿಗೆ ಅಪೀಲ್ ಮಾಡಿಕೊಂಡಲ್ಲಿ ಇದೇ ತಾ. ೨೬ರಲ್ಲಿ ಜಸ್ಟಿಸ್ ಬೆನ್ಸನರವರೂ ಜಸ್ಟಿಸ್ ಸದಾಶಿವ ಐಯ್ಯರವರೂ ಅಪೀಲು ತನಕಿ ನಡಿಸಿ ದೇಹಾಂತ ಶಿಕ್ಷೆಯನ್ನು ವಜಾ ಪಡಿಸಿ ಆತನಿಗೆ ಮರಣಾಂತ ಟಾಪು ಶಿಕ್ಷೆ ವಿಧಿಸಿದರು. ಆಪಾದಿತನ ಕಡೆಯಿಂದ ಎಡ್ವೊಕೇಟ್ ಕೆ. ರಾಮನಾಥ ಶ್ಯಾನುಭಾಗರು ವ್ಯವಹರಿಸಿದರು.

ಇಲ್ಲಿ ಆಕ್ಟಿಂಗ್ ಜಿಲ್ಲಾ ಕಲೆಕ್ಟರರಾಗಿದ್ದು ಮಲಬಾರಿಗೆ ವರ್ಗಾಯಿಸಲ್ಪಟ್ಟ ಮೆ| ಡಬ್ಲ್ಯು ಎ. ಡ್ಯೂಗ್ ದೊರೆಗಳವರು ಮಲಬಾರಿನಿಂದ ನೀಲಗಿರಿ ಜಿಲ್ಲೆಯ ಕೂನೂರು ಡಿವಿಜನಿಗೆ ವರ್ಗಾಯಿಸಲ್ಪಟ್ಟಿರುವರು.

ಕಳದ ವಾರ ಬಲ್ಮಠದ ಮೂರು ಮಿಶ್ಯನೆರಿಗಳ ಬಂಗ್ಲೆಗಳಿಂದ ಕೆಲವು ಒಳ್ಳೇ ವಸ್ತ್ರಗಳನ್ನೂ ಕೋಳಿ ಮೊಟ್ಟೆ ಇತ್ಯಾದಿ ಚಿಲ್ಲರೆ ವಸ್ತುಗಳನ್ನೂ ಯಾರೋ ಕದ್ದೊಯ್ದಿರುವರು.

ಬಾಸೆಲ್ ಜರ್ಮನ್ ಮಿಶ್ಯನಿನ ದಕ್ಷಿಣಕನ್ನಡಾ ಮತ್ತು ಉತ್ತರಕನ್ನಡಾ ಜಿಲ್ಲಾ ಸೀನಿಯರ್ ಮಿಶ್ಯನೆರಿಗಳಾಗಿ ರೆವರೆಂಡ್ ಬೇಕ್ಲೆ ದೊರೆಗಳು ಆರಿಸಲ್ಪಡುವ ಸಂಭವವಿದೆಯೆಂದು ತಿಳಿಸಿತ್ತಷ್ಟೆ. ಆದರೆ ಇವರು ಸದ್ಯಾ ರಜೇ ಮೇಲೆ ಶೀಮೆಗೆ ತೆರಳಲಿಕ್ಕಿರುವುದರಿಂದ ಓಟುಗಳ ಹೆಚ್ಚು ಸಂಖ್ಯೆಯು ಕಾರ್ಕಳದ ರೆವರೆಂಡ್ ಫಿಶ್ಯರ್ ದೊರೆಗಳಿಗೆ ಸಿಕ್ಕಿರುವುದೆಂದು ಕೇಳುತ್ತೇವೆ.

ಬೊಕ್ಕಪಟ್ಟಣ ಬಬ್ಬರ್ಯ ಭೂತಸ್ಥಾನದಲ್ಲಿ ತಾ. ೨೬ರಲ್ಲಿ ನಡೆದ ಜಾತ್ರೆಯಲ್ಲಿ ಕೂಡಿದ್ದ ಮೊಗೇರರ ಜಾತಿವರು ಕಳ್ಳು ಸರಾಯಿ ಕುಡಿಯಬಾರದೆಂಬ ಕಟ್ಟು ಮಾಡಿಕೊಂಡಿರುವರು.

ಬಲ್ಮಠದಲ್ಲಿ ಮಿಶ್ಯನೆರಿಗಳು ಗೇಟು ಹಾಕಿಸಿದ್ದರಿಂದ ಮಾಜಿ ಮೆಜಿಸ್ಟ್ರೇಟರಾದ ಮೆ. ಟಿ. ರೋಬರ್ಟರವರು ಸದರಿ ಗೇಟಿನ ತಾತ್ಕಾಲಿನ ಇಂಜಕ್ಶನ್ ತೆಗೆಯಿಸಿರುವರೆಂದು ತಿಳಿಸಿತ್ತಷ್ಟೆ. ಕೆಳಕೋರ್ಟಿನವರು ಕೊಟ್ಟ ತಾತ್ಕಾಲಿನ ಇಂಜಕ್ಸನ್ ನ್ಯಾಯವಾದದ್ದಲ್ಲವೆಂಬ ವಾದದ ಮೇಲೆ ಮಿಶ್ಯನ್ ಏಜಂಟರಾದ ರೆವರೆಂಡ್ ಬುನ್ಸ್ ದೊರೆಗಳು ಜಡ್ಜರಲ್ಲಿ ಅಪೀಲು ಮಾಡಿಕೊಂಡಿರುವರು. ಅಪೀಲು ತನಕಿಯು ಎಪ್ರೀಲ್ ತಾ. ೪ಕ್ಕೆ ಪ್ರಾರಂಭವಾಗುವದು.

ಸೋಮವಾರ ಬೆಳಿಗ್ಯೆ ಮೈಲ್ ಟ್ರೇನ್ ಓಡುವಾಗ ಉಲ್ಲಾಳ ಸಂಕದ ಆಚೆ ಕಡೆ ಬಂಟರ ಜಾತಿಯ ಒಬ್ಬ ಯೌವನಸ್ಥನು ಅಗ್ಗಾಡಿಯಿಂದ ಕೆಳ ಬಿದ್ದು ಚೂರು ಚೂರಾಗಿ ಹೋದನು.

ಮಂಗಳೂರಿನಿಂದ ಉಳ್ಳಾಲಕ್ಕೆ ಹೋಗಿದ್ದ ಇಬ್ಬರು ಮಾಪಿಳ್ಳೆಯವರು ಕಳದ ಬುಧವಾರ ದಿನ ಪ್ಲೇಗಿನಿಂದ ಮೃತಪಟ್ಟಿರುತ್ತಾರೆ.

ಇಲ್ಲಿಯ ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಇಲಿ ಬಿದ್ದ ಸಂಬಂಧ ಪ್ರಕೃತ ಶಾಲೆಯನ್ನು ಕೆನರಾ ಹ್ಯಾಸ್ಕೂಲಿಗೆ ವೈದಿರುವರು.

ಹೆಡ್ ಕ್ವಾಟರ್ಸ್ ಡಿಪ್ಯುಟಿ ಕಲೆಕ್ಟರರವರು ಸರ್ಕೀಟಿನಿಂದ ಈ ದಿನ ಇಲ್ಲಿಗೆ ಬಂದು ತಲಪುವರು.

ಮಂಗಳೂರು ತಾಲೂಕು ಬಜ್ಪೆ ಗ್ರಾಮದಲ್ಲಿ ವಿನ್ಸೆಂಟ್ ಬ್ರಿತೊ ಎಂಬವರು ಪಂಜಿಗ್ರಹ ರೋಗದಿಂದ ಪೀಡಿತರಾಗಿ ಭಾವಿಗೆ ಬಿದ್ದು ಮೃತಪಟ್ಟದ್ದರು. ತನಖಿಗೆ ಹೋದ ಪೋಲೀಸ್ ಹೆಡ್ ಕನ್‌ಸ್ಟೇಬಲ ದೇವಣ್ಣ ಪೈ ಎಂಬವನು ಶವವನ್ನು ಮೆಡಿಕಲ್ ಪರೀಕ್ಷೆಗೆ ಕಳುಹಿಸುತ್ತೇನೆಂತ ವಗ್ಯೆರೆ ಹೆದರಿಸಿ ಮೃತನ ಮಗ ಸಾಲ್ವದೋರು ಬ್ರಿತರಿಂದ ೮ ರೂಪಾಯಿ ಲಂಚವನ್ನು ತೆಗೆದುಕೊಂಡದ್ದರಿಂದ ಪೋಲೀಸ್ ಆಕ್ಟು ಪ್ರಕಾರ ಸದರಿ ಹೆಡ್ ಕನ್‌ಸ್ಟೇಬಲನಿಗೆ ೧ ತಿಂಗಳ ಕಠಿಣ ಸಜಾ ೨೦ ರೂಪಾಯಿ ಜುರುಮಾನೆ, ತಪ್ಪಿದರೆ ೨ ಹಪ್ತೆ ಕಠಿಣ ಸಜೆಯೂ ವಿಧಿಸಲಾಯಿತು.

~~~~~

ಕಾಸರಗೋಡು. ಒಂದು ಒಂದುವರೆ ತಿಂಗಳುಗಳಿಂದೀಚೆಗೆ ಯಾವುದೋ ದ್ವೇಶದ ಮೇಲೆಯೋ ಮತ್ಸರದ ಮೇಲೆಯೋ ಇಲ್ಲಿಯ ಉಪಾಧ್ಯಾಯಿನಿಯರಿರುವ ಚಿಕ್ಕ ಬಿಡಾರಕ್ಕೆ ಕೆಲವು ಪೋಕ್ರಿಗಳು ಕೂಡಿ ಕಲ್ಲುಗಳನ್ನೆಸೆಯುತ್ತಿದ್ದರು. ಈ ಮನೆಯ ಒತ್ತಿಗೆ ಒಬ್ಬ ಉಪದೇಶಿಯ ಮನೆ ಇರುತ್ತದೆ. ಇದೇ ಹಿತ್ತಲಲ್ಲಿ ಮಿಶ್ಯನೆರಿಗಳು ಸೆಕೆಂಡರಿ ಶಾಲಾ ಕಟ್ಟೋಣವನ್ನು ಕಟ್ಟಿಸಲಿಕ್ಕಿರುವದರಿಂದಲೂ ಇನ್ನು ಬೇರೆ ಕಾರಣಗಳ ಮೇಲೂ ಮಿಶ್ಯನ್ ಮೆನೇಜರ ದೊರೆಗಳು ಇವರನ್ನು ಒಕ್ಕಲು ಎಬ್ಬಿಸಿದ್ದರು. ಇದರಿಂದ ಪೋಕ್ರಿಗಳಿಗೆ ಹೆಚ್ಚು ಹಟವೂ ಅನುಕೂಲವೂ ಆಗಿ ಕಳದ ಸೋಮವಾರ ರಾತ್ರಿ ಉಪಾಧ್ಯಾಯಿನಿಗಳಿರುವ ಬಿಡಾರಕ್ಕೆ ಎಂದಿನಂತೆ ಕಲ್ಲುಗಳನ್ನೆಸೆದು ತಣಿದ ಸ್ವಲ್ಪ ಹೊತ್ತಿನೊಳಗೆ ಎಲ್ಲರೂ ಗಾಢ ನಿದ್ರೆಯಲ್ಲಿರುವ ಸಂದರ್ಭ ನೋಡಿ ಪೋಕ್ರಿಗಳಲ್ಲೊಬ್ಬನು ರಾತ್ರಿ ಒಂದುವರೆ ಘಂಟೆ ಹೊತ್ತಿಗೆ ಚಿಲುಕು ಜಡಿದ ಬಾಗಲುಗಳಲ್ಲೊಂದನ್ನು ಬಡದು ಮೆಲ್ಲನೆ ಎಬ್ಬಿಸಿ ಒಳನುಗ್ಗಿ ಸಾಲಾಗಿ ಮಲಗಿರುವ ಐವರಲ್ಲಿ ಮೊದಲಿನವಳೊಬ್ಬಳನ್ನು ಮೆಲ್ಲನೆ ಸವರಿ ನೋಡುವಾಗ ಈಕೆ ಬೆಕ್ಕೆಂದು ಗ್ರಹಿಸಿ ಕೈ ಜಾಡಿಸಿ ಸ್ವಲ್ಪ ಸಮಯದೊಳಗೆ ಪುನಹ ಇದೇ ತರದ ಸ್ಪರ್ಶವಾಗುವುದನ್ನು ನೋಡಿ, ಕಡ್ಡಿಗೀರಿ ದೀಪ ಹಚ್ಚುವುದರೊಳಗೆ ದಡಬಡ ಶಬ್ದ ಮಾಡಿ ಓಡುವುದೇನಿದು ಎಂದು ನೋಡ ಆಚೆ ಹೋಗುವಾಗ ಬಾಗಲುಗಳು ತೆರೆದಿರುವುದನ್ನು ಕಂಡು ಬೊಬ್ಬಿಡ ಹತ್ತಲು ಸಮೀಪದ ಪಾಸ್ತರರ ಮನೆಯಿಂದ ಸಹಾಯಕ್ಕೆ ಬರುವ ಸಮಯದಲ್ಲೂ ಹಿಂದಿನ ಬಾಗಲಿಗೂ ಕಿಟಕಿಗಳಿಗೂ ಒದೆದು ಸಪ್ಪಳ ಮಾಡುವ ಈ ತಿರುಕುಳಿ ಚಾಂಡಾಳರ ಧೈರ್ಯವೇನೆಂದು ಬಣ್ಣಿಸಲಿ! ಜವಾನರ ಬೀಟೂ, ಜನ ಸಂಚಾರವೂ ಲಾಟಾನು ಸ್ಥಂಭಗಳೂ, ನೆರೆಹೊರೆ ಮನೆಗಳೂ ಹತ್ತರ ಆಸ್ಪತ್ರಿಯ ಪಹರೆಯ ಜವಾನರೂ ಇರುವ ಶಹರದ ಹಾದಿ ಮಗ್ಗುಲಲ್ಲಿ ಇಂಥಾ ಅಕೃತ್ಯಗಳು ನಡೆಯುವುದು ಆಶ್ಚರ್ಯವೇ ಸೈ!

ಕಳದ ವಾರ ಮಂಗಳವಾರದಿಂದ ೫ ದಿವಸಗಳ ವರೆಗೆ ಇಲ್ಲಿಯ ಊರ ಜಾತ್ರೆಯು ಬಹೂ ಆಡಂಬರದಿಂದ ಜರಗಿತು. ಜಿಲ್ಲಾ ಕಲೆಕ್ಟರರ ಸವಾರಿಯು ಮಂಗಳವಾರ ಇಲ್ಲಿಗೆ ಬಂದಿರುತ್ತದೆ. ನಾಳೆ ನಾಡದು ಇಲ್ಲಿಯೇ ಇರುವರು.

ಮಲಬಾರ ಸರ್ಕಸ ಕಂಪೆನಿಯವರು ಬುಧವಾರದಿಂದ ಇಲ್ಲಿ ಸರ್ಕಸುಗಳನ್ನು ಆಡತೊಡಗಿರುತ್ತಾರೆ.

~~~~~

ಗುರುಪುರ. ಇಲ್ಲಿ ಗುರುಪುರ ಸಮೀಪ ಪೆರಮಕ್ಕಿ ಇಡ್ಮೆ ಎಂಬಲ್ಲಿ ಒಂದು ಭೂತವು ಪ್ರತ್ಯಕ್ಷ ಜನರು ಮಾತಾಡುವಂತೆ ಮಾತಾಡುತ್ತದೆಂತ ಕೇಳಿ ನಾವು ಕೆಲವರು ಆ ಸ್ಥಳಕ್ಕೆ ಹೋದೆವು. ನಾವು ಹೋದಾಕ್ಷಣ ಆ ಭೂತವು ತಾಳ ಮೃದಂಗ ಶಂಖಧ್ವನಿ ಜಾಗಟೆಗಳ ಮತ್ತು ಜನಸ್ತೋಮದ ಧ್ವನಿಯಂತೆ ಕೇಳುವ ಕೋಲಾಹಲರವದಿಂದ ನಾವಿದ್ದೆಡೆಗೆ ಬಂದು ನಮ್ಮ ಕೂಡೆ ಇದ್ದ ಮೆ. ತಿಮ್ಮಯ ಸೆಟ್ರನ್ನು ಕರೆದು ತುಳು ಭಾಷೆಯಲ್ಲಿ ಮಾತಾಡಿ ಗಂಭೀರವಾದ ಆರ್ಭಟ ಮಾಡಿ ಸಮೀಪವಿದ್ದ ತೆಂಗಿನ ಮರಕ್ಕೆ ತನ್ನ ಕೈಯಲ್ಲಿದ್ದ ಕೊಡಲಿಯಿಂದ ಘಾಯ ಮಾಡಿ ಹೊರಟು ಹೋಯಿತು.
~~~~~

ಇಲ್ಲಿ ರಸ್ಸೆ ವ ಸ್ಟಾಂಪುಗಳ ಮಾರಾಟವಿಲ್ಲದೆ ಸ್ಥಳೀಕ ಜನರು ಬಹಳ ಕಷ್ಟಪಡುತ್ತಿದ್ದರು. ಈಗ ರಸ್ಸೆ ಕಾಗ್ದಗಳನ್ನು ಮಾರುವರೆ ಇದೇ ಮಾರ್ಚಿ ತಾ. ೧೧ರಲ್ಲು ಇಲ್ಲಿಯ ರಾ। ಗಣಪತಿ ಪ್ರಭುಗಳಿಗೆ ಲೈಸನ್ಸ್ ಸಿಕ್ಕಿರುವುದರಿಂದ ಲೈಸನ್ಸ್ ಕೊಟ್ಟ ಮೇಲಾಫಿಸರರಿಗೆ ಕೃತಜ್ಞರಾಗಿದ್ದೇವೆ.

ಗುರುಪುರ ಬಂಗ್ಲೆಯ ಸಮೀಪ ವಾರಕೊಂದಾವರ್ತಿ ಕೂಡುವ ಬುಧವಾರ ಸಂತೆಯಲ್ಲಿ ಕಳೆದ ಬುಧವಾರ ದಿವಸ ಕರಿಯಕುಡುಂಬಿ ಜಾತಿಯ ಸುಮಾರು ೫೦ ವರುಷ ಪ್ರಾಯದ ಒಬ್ಬ ಹೆಂಗಸಿನ ಮೇಲೆ ಒಬ್ಬ ಮುಸಲ್ಮಾನನು ಓಡಿಸಿಕೊಂಡು ಬರುತ್ತಿದ್ದ ಕುದುರೆಯು ಹಾದು ಹೋಗಿ ಅವಳಿಗೆ ಬಹಳ ಜಕಂ ಆಗಿರುವುದು. ಬಹು ಮಂದಿ ಕೂಡುವಂಥಾ ಸಂತೇ ಸ್ಥಳಗಳಲ್ಲಿ ಈ ಪ್ರಕಾರ ಸವಾರಿ ಮಾಡಿದರೆ ಹೆಂಗಸರು ಮಕ್ಕಳು ಅಂಥಾ ಸ್ಥಳಕ್ಕೆ ಹೋಗುವದು ಕಷ್ಟ.

~~~~~~

ಪೊಳಲಿ. ಶ್ರೀ ಮನ್ಮಹಾದೇವದೇವೋತ್ತುಮ ಪೊಳಲಿ ಶ್ರೀ ರಾಜರಾಜೇಶ್ವರಿ ಅಮ್ಮನವರ ವರ್ಷಾವಧಿ ಉತ್ಸಹವು ರಿವಾಜು ಪ್ರಕಾರ ಇದೇ ಕಳೆದ ತಾ. ೧೩—೩—೧೨ಕ್ಕೆ ಧ್ವಜಾರೋಹಣವಾಗಿ ಕಡೆ ಚೆಂಡು ಮಹೋತ್ಸಹವು ಇದೇ ಬರುವ ಎಪ್ರೀಲ್ ತಾ. ೭ನೇ ರವಿವಾರ ದಿವಸ ಜರುಗುವುದು.

ಇದೇ ಕಳೆದ ತಾ. ೧೫ನೇ ಶುಕ್ರವಾರ ಬೆಳಿಗ್ಯೆ ಒಂಭತ್ತುವರೆ ಘಂಟೆ ಸಮಯಕ್ಕೆ ದೇವಸ್ಥಾನದ ಎದುರು ಇರುವ ರಂಜಗುಡ್ಡೆಯಿಂದ ಒಂದು ದೊಡ್ಡ ಹುಲಿ ಇಳಿದುಕೊಂಡು ಚೆಂಡಿನ ಗದ್ದೆಗೆ ಬಂತು. ಆಗ್ಯೆ ಅಲ್ಲಿ ತಿರುಗುತ್ತಿದ್ದ ದನಕರುಗಳು ದಿಗಿಲುಪಟ್ಟು ಓಡ್ಯಾಡುವುದನ್ನು ದೇವಸ್ಥಾನದಲ್ಲಿ ಬೆಳಗಿನ ಬಲಿಗೆ ಕೂಡಿದ ಶುಮಾರು ೪೦೦ಕ್ಕೆ ಮಿಕ್ಕಿದ ಜನರು ನೋಡಿ ಘಾಬರಿ ಪಟ್ಟರು. ಆ ಪೈಕಿ ಕೆಲವರು ಧೈರ್ಯದಿಂದ ಅದನ್ನು ಅಟ್ಟಿಕೊಂಡು ಹೋದರು. ಈ ಪೈಕಿ ಪುಂಚ್ಮೆ ಮೋನು ಶೆಟ್ರು ಅದಕ್ಕೆ ಗುಂಡು ಹೊಡೆದರು. ಆದರೆ ಅದು ಈಡನ್ನು ತಪ್ಪಿಸಿಕೊಂಡು ಗುಂಡಿ ಕುಮೇರೆಂಬ ಕಾಡಿಗೆ ಓಡಿ ಅಡಗಿಕೊಂಡಿತು. ಇಷ್ಟರ ವರೆಗೆ ಈ ಪ್ರಕಾರ ಹಗಲು ಬಲಿಯ ಸಮಯ ಹುಲಿಗಳು ಬಂದದ್ದಿಲ್ಲ.

ಇತ್ತಲಾಗೆ ಮಳಲಿ ಪಾಚಪ್ಪ ಶೆಟ್ರಿಂದ ಏರ್ಪಡಿಸಿದ ಕರ್ನಾಟಕ ಮಿತ್ರಮಂಡಲಿ ನಾಟಕ ಕಂಪೆನಿಯು ಪೊಳಲಿಗೆ ಬಂದದೆ. ಇದೇ ತಾ. ೨೩—೩—೧೨ನೇ ದಿವಸ ರಾತ್ರೆ ಪ್ರಭಾವತಿ ದರ್ಬಾರ್ ನಾಟಕವನ್ನು ಆಡಿ ತೋರಿಸಿದರು. ಈ ಕಂಪೆನಿಯಲ್ಲಿ ಇದೇ ಪ್ರಥಮ ಸಾರಿ ಆಡಿದ ನಾಟಕವಾಗಿರುತ್ತದೆ. ಇವರು ಇನ್ನು ಶುಮಾರು ೧ ತಿಂಗಳ ವರೆಗೆ ಪೊಳಲಿಯಲ್ಲಿರುವರು.

~~~~~~

ಮಿಜಾರು. ಮಂಗಳೂರು ತಾಲೂಕು ಬೋರ್ಡಿನವರು ಮಿಜಾರು ಬೋರ್ಡು ಶಾಲೆಗೋಸುಗ ಒಂದು ನವೀನ ಕಟ್ಟೋಣವನ್ನು ಕಟ್ಟಿಸಿರುತ್ತಾರೆ. ಸದರಿ ಶಾಲೆಯ ಪ್ರತಿಷ್ಠಾ ಮಹೋತ್ಸವವು ಇದೇ ತಿಂಗಳ ತಾರೀಕು ೨೫ನೇ ಸೋಮವಾರ ಬಹಳ ವಿಜೃಂಭಣೆಯಿಂದ ನಡಿಸಲ್ಪಟ್ಟಿತು. ಮಾನ್ಯ ಗೃಹಸ್ಥರೂ ಸ್ಥಳೀಕ ಮಹನೀಯರೂ ಈ ಸಂದರ್ಭದಲ್ಲಿ ಕೂಡಿ ಸಭೆಯನ್ನು ಅಲಂಕರಿಸುವವರಾದರು.

~~~~~~

ಹೊಸದುರ್ಗ. ಇಲ್ಲಿಯ ಹೆಗ್ಗಡೆ ಮತಸ್ಥರು ಹೆಚ್ಚು ಕಾಲಗಳಿಂದ ಎರಡು ಮೂರು ಭಾಗದವರಾಗಿ ತಮ್ಮೊಳಗೆ ದ್ವೇಷಿಕರಾಗಿ ನಡದು ಬರುತ್ತಿದ್ದರು. ಈಗ ಕೆಲವು ದಿವಸದಿಂದ ತಮ್ಮ ಪೂರ್ವದ ದ್ವೇಷಗಳನ್ನು ಹೋಗಲಾಡಿಸಿ ಏಕ ಮತದಿಂದ ನಡಕೊಳ್ಳಬೇಕೆಂಬ ಅಭಿಪ್ರಾಯದ ಪಂಚಾಯತಿಗೆಗಳನ್ನು ಮಾಡುತ್ತಲಿದ್ದಾರೆ.

~~~~~~

ಕಾಂಞಂಗಾಡು. ಇಲ್ಲಿಯ ಮಲಿಯಾಳಿ ಬಿಲ್ಲವರು ತಮ್ಮೊಳಗೆ ವಿರೋಧದಿಂದ ೨-೩ ತಂಡದವರಾಗಿ ದ್ವೇಶದಿಂದ ನಡದುಬರುವದರಿಂದ ಇವರೊಳಗೆ ಯಾವಾಗಲೂ ಕಲಹವು ತಪ್ಪುವದೇ ಇಲ್ಲ. ಕಳೆದ ಗುರುವಾರ ದಿವಸ ತಮ್ಮೊಳಗೆ ಜಗಳವಾಡಿ ಕೋರ್ಟಿನಲ್ಲಿ ಫಿರ್ಯಾದಿ ವಗ್ಯೆರೆ ಮಾಡಿಕೊಂಡಿರುತ್ತಾರೆ. ಒಟ್ಟಾರೆ ಇವರ ದೇವಸ್ಥಾನದಲ್ಲಿ ವಾಡಿಕೆಯಾಗಿ ನಡದು ಬರುವ "ಪೂರಂ" ಎಂಬ ಉತ್ಸವವನ್ನು ನಿಲ್ಲಿಸಬೇಕೆಂತ ಒಂದು ಭಾಗದವರ ಅಭಿಪ್ರಾಯದಿಂದಲೂ ಇನ್ನೊಂದು ಭಾಗದವರಿಗೆ ವಾಡಿಕೆ ಪ್ರಕಾರ ನಡಿಸಬೇಕೆಂಬ ಅಭಿಪ್ರಾಯದಿಂದಲೂ ಉಭಯತರೊಳಗೆ ವಿವಾದವು ಹೆಚ್ಚುತ್ತಲಿದೆ. ಕಳೆದ ಒಂದು ವರುಷದ ಮೊದಲು ಸಹಾ ಹೀಗೆ ನಡದಿತ್ತು. ಆಗ್ಯೆ ಒಂದು ಭಾಗದವರು ಪೋಲೀಸ್ ಸಹಾಯ ಕೊಡಬೇಕೆಂತ ಅಪೇಕ್ಷಿಸಿದ್ದಲ್ಲಿ ಆಗಿನ ಸಬ್ ಇನ್ಸ್‌ಪೆಕ್ಟರರಾದ ರಾ. ಶಿವ ಭಟ್ಟ್ರಯವರು ಹೋಗಿ ಇವರೊಳಗೆ ರಾಜಿ ಮಾಡಿಸಿದರು. ಪುನಹಾ ಈ ವರುಷ ಈ ರೋಗ ತೊಡಗಿಯದೆ.

~~~~~~

ಉಡುಪಿ. ಇಲ್ಲಿಯ ಒನರರಿ ಮೆಜಿಸ್ಟ್ರೇಟರಾದ ಮೆ. ಪಿ. ವೈಕುಂಠ ನ್ಯಾಕರ ಅವಧಿಯು ಬೇಗನೇ ಮುಗಿಯುವುದು. ಇವರ ಬದಲಿಗೆ ನಿಲ್ಲಲು ಕೆಲವು ಉಮೇದ್ವಾರರು ಈಗಲೇ ತಯಾರಾಗಿದ್ದಾರೆ. ಇವರ ಬದಲಿಗೆ ಯಾರು ನೇಮಿಸಲ್ಪಡುತ್ತಾರೆಂಬ ಲವಲವಿಕೆಯು ಜನರಲ್ಲಿ ಬಹಳವಾಗಿದೆಯಲ್ಲದೆ ಜನಪ್ರೀತರಾಗಿರುವ ಮತ್ತು ಜನರ ಸ್ಥಿತಿಗತಿಯನ್ನರಿತಿರುವವರೇ ಒನರರಿ ಮೆಜಿಸ್ಟ್ರೇಟರಾಗಿ ನೇಮಿಸಲ್ಪಡಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದಾರೆ. ಜಿಲ್ಲಾ ಕಲೆಕ್ಟರವರು—ಈ ಸಂದರ್ಭದಲ್ಲಿ ಸಂಪನ್ನರಲ್ಲದಿದ್ದರೂ ಜನ ಪ್ರೀತರಾಗಿರುವ ತಕ್ಕವರನ್ನೇ ಈ ಹುದ್ದೆಗೆ ನೇಮಿಸುವರೆಂಬ ಭರವಸವುಳ್ಳವರಾಗಿದ್ದೇವೆ.

ಕಳೆದ ಆದಿತ್ಯವಾರ ಉಡ್ಪಿ ಟ್ರಾನ್ಸಿಟ್ ಕಂಪೆನಿಯ ಬೆಳಗ್ಗಿನ ಗಾಡಿಯು ಉಡ್ಪಿಯನ್ನು ಬಿಟ್ಟು ಕೆಲವು ಮೈಲು ಹೋಗುವುದರೊಳಗೆ ಕವಚಿ ಬಿದ್ದು ಭಯಂಕರವಾದ ಅವಘಡ ಸಂಭವಿಸಿತೆಂದು ಕೇಳುತ್ತೇವೆ. ಜಡ್ಕಾ ಬಂಡಿಗಳ ಅವಘಡಗಳು ಅನೇಕಾವೃತ್ತಿ ಕೇಳಬರುತ್ತವೆ. ಇದಕ್ಕೆ ರಥಿಕರೂ ಕುದುರೆಗಳೂ ಕಾರಣವೆಂದು ಹೇಳಬಹುದಾದರೂ ಕಂಪೆನಿಯ ಮೆನೇಜರರು ಸಹಾ ತಕ್ಕ ರಥಿಕರನ್ನು ನೇಮಿಸಿ ಪ್ರಯಾಣಿಕರಿಗುಂಟಾಗುವ ಕಷ್ಟನಷ್ಟಗಳನ್ನು ನಿವಾರಿಸುವುದು ವಿಹಿತವು. ಉಡ್ಪಿಯಲ್ಲಿ, ಕೆಲವು ಸಮಯಗಳ ವರೆಗೆ ಇದ್ದು ನಾಟಕವನ್ನಾಡಿ ಶ್ರೀ ಪಲ್ಮಾರ್ ಸ್ವಾಮಿಗಳವರಿದ್ದೆಡೆಗೆ ಹೋಗಿ ನಾಟಕವನ್ನಾಡ ಬೇಕೆಂದಿದ್ದರಿಂದ ಅವರು ರತ್ನಾವಳಿ ಕಂಪೆನಿಯವರಿಗೆ ಈ ಅವಘಡವು ಸಂಭವಿಸಿದ್ದ ಇನ್ನೊಂದೆರಡು ವಾರಗಳ ತನಕ ತಮ್ಮ ನಾಟಕಗಳನ್ನು ಆಡದಂತಾದದ್ದಕ್ಕೆ ಟ್ರೇನ್ಸಿಟ್ ಕಂಪೆನಿಯವರಿಗೆ ಕೃತಜ್ಞರಾಗಿರಬೇಕು.

ಮಂಗಳೂರು ಗವರ್ನಮೆಂಟ ಕಾಲೇಜಿಯಲ್ಲಿ ಗಾಯನವನ್ನಾಡಿದ ಮೆ। ಮೂರ್ತಿಯವರು ಇಲ್ಲಿಗೆ ಬಂದು ಕೆಲವು ಸ್ನೇಹಿತರ ಮನೆಗಳಲ್ಲಿಯೂ ಉಪನಯನದ ಹಂದರಗಳಲ್ಲಿಯೂ ತನ್ನ ಗಾಯನವನ್ನಾಡಿ ಜನರನ್ನು ಸಂತೋಷಪಡಿಸುತ್ತಿರುವರು.

ಸುಮಾರು ಒಂದು ತಿಂಗಳ ಹಿಂದೆ ರಾ। ಪಿ. ರಾಮಚಂದ್ರರಾಯರಿಂದ ಇಲ್ಲಿ ಒಂದು ನಿರಾಶ್ರಿತ ಜನ ಸಹಾಯಕ ಸಂಘವು ಸ್ಥಾಪಿಸಲ್ಪಟ್ಟಿರುವುದು. ಇವರು ಪುತ್ತೂರಲ್ಲಿ ಒಂದು ಮಾದರಿ ಗ್ರಾಮವನ್ನು ಸ್ಥಾಪಿಸುವರೆ ಸ್ಥಳವನ್ನು ಕೊಡಿಸಬೇಕೆಂದು ಡಿವಿಜನಲ್ ಆಫೀಸರರಿಗೆ ಮನವಿ ಮಾಡಿಕೊಂಡಿದ್ದರು. ಇವರಿಗೆ ಬೇಗನೇ ತಕ್ಕ ಸ್ಥಳವು ಕೊಡಲ್ಪಡುವುದೆಂದು ನಿರೀಕ್ಷಿಸಲ್ಪಟ್ಟಿದೆ. ಈ ಸಂಘದವರು ಇಲ್ಲಿಯ ಜನರ ಸಹಾಯವನ್ನೂ ಅಪೇಕ್ಷಿಸಿ ಒಂದು ವಂತಿಗೆ ಪುಸ್ತಕ ಮಾಡಿದಲ್ಲಿ ಡಿವಿಜನಲ್ ಆಫೀಸರರಾದ ಮೆ। ಮೆಕ್ವಿನರವರು ರೂ. ೧೦೦; ಮೆ। ಅಬ್ದುಲ್ಲ ಹಾಜಿ ಕಾಶಿಮರವರು ರೂ. ೧೨೦; ಮೆ। ಎ. ಎಸ್. ಅಬ್ಬಾ ಸಾಹೇಬರವರು ರೂ. ೭೫; ಮೆ। ಪಿ. ಅಳ್ವರವರು ರೂ. ೧೦೦ ವಂತಿಗೆ ಕೊಟ್ಟಿರುವರಲ್ಲದೆ ಮೆ। ಅಬ್ದುಲ್ಲ ಹಾಜಿಕಾಶೀಮರವರು ಈ ಸಂಘದ ಪ್ರೆಸಿಡೆಂಟರಾಗಲು ಒಪ್ಪಿರುವುದರಿಂದ ಸಂಘವು ಬೇಗನೇ ಅಭಿವೃದ್ಧಿಯನ್ನು ಹೊಂದುವುದೆಂದು ನಂಬಿರುವೆವು.

ಕಳೆದ ಶನಿವಾರ ಇಲ್ಲಿಯ ಜುಬುಲಿ ಯೂನ್ಯನ್ ಕ್ಲಬಿನಲ್ಲಿ ಒಂದು ಗಾಯನ ಬೈಟಿಕವು ನಡೆಯಿತು. ಒಂದು ತಿಂಗಳು ಕಳೆಯುವುದರೊಳಗೆ ಈ ಕ್ಲಬಿನಲ್ಲಿ ಕೆಲವು ತರದ ಬೈಟಿಕಗಳು ಜರುಗಿದವು. ಜನವರಿಯಲ್ಲಿ ಒಂದು ಸಾರಿ ಸೋಶ್ಯಲ್ ಗೇದರಿಂಗ್ ಕೂಡಿತ್ತು. ಅನಂತರ ಎರಡು ಗಾಯನ ಬೈಟಿಕಗಳೂ ಎರಡು ಇತರ ತರದ ವಿನೋದಾಟಗಳೂ ಜರುಗಿದವು!!

~~~~~~

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಮಸ್ಕತಿ ಅಕ್ಕಿ	5—4—0—5—5—0
ಗುಡ್ಡು ಮಸ್ಕತಿ... ...	4-13—0—4-15—0
ಮಸ್ಕತಿ ದುಯಂ... ...	4-13—0—4-15—0
ಗುಡ್ಡು ,, ...	4-11—0—4-12—0
ಮಸ್ಕತಿ ಬೆಳ್ತಿಗೆ ,, ...	5—9—0—5-10—0
ರಂಗೂನ್ ಬೆಳ್ತಿಗೆ ಗೋಣಿ	10—0—0
ಹುರುಳಿ ಗೋಣಿ ೧, ಮುಡಿ 2ರ ...	6—0—0
ಉಪ್ಪು ಗೋಣಿ ೧ರ	3-10—0
ಕೊಬ್ರಿ ಖಂಡಿ ೧ರ	100—0—0
ಕೊಬ್ರಿ ಎಣ್ಣೆ ಮಣ ೧ರ	6-14—0
ಕಾಫಿ ಖಂಡಿ ೧ರ	270—0—0
ಕಾಳು ಮೆಣಸು ಖಂಡಿ	175—0—0-180—0—0
ಬಿಳಿ ಗೋಟು ಅಡಿಕೆ	82—0—0—83—0—0
ಕರಿ ಗೋಟು ...	60—0—0—62—0—0
ಯಾಲದಕಾಯಿ ಮಣ೧ರ	48—0—0—52—0—0
ಗೇರುಬೀಜ ಮುಡಿ ೧ರ	2—4—0
ಶೀಗೆಕಾಯಿ ಖಂಡಿ ೧ರ	35—8—0-38—8—0
ಕಾಸ್ರ ಕಿನ ಬೀಜ ಖಂಡಿ೧ರ	22—0—0-25—0—0
ದಾಲಚೀನಿ ಹ್ವು ಮಣ೧ರ	2—2—0—2-12—0
ಅಂಟವಾಳಕಾಯಿ ಮುಡಿ ೧ರ	1—6—0—1—7—0
ಅಣಿಲೆ ಕಾಯಿ ಖಂಡಿ ೧ರ	5—0—0-12—4—0
ಪಚ್ಚೆ ಹೆಸರು	4—10—0—5—0—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—6—0
ಗೋದಿ ಗೋಣಿ ೧ಕ್ಕೆ	10—8—0
ಊರು ಬೆಲ್ಲ ಖಂಡಿ ೧ರ	35—0—0
ಮೋರಿಸ್ ಸಕ್ಕರೆ ಮಣ ೧ರ	3-13—0
ಕಡಲೆ ಗೋಣಿ ೧ರ	7—6—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—4—0-4—8—0
ಕೊಬ್ರಿ ಹಿಂಡಿ ಖಂಡಿ ೧ರ	31—0—0
ರಾಮಪತ್ರೆ	5—4—0—5—6—0
ರಾಮಗೋಟು	2—0—0

~~~~~~



ಪೊಪ್ಯುಲರ್ ಹಂಬರ್ ಕ್ರಯ ರೂಪಾಯಿ 120.

ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯಾಕಲುಗಳನ್ನು ಪಡಿಯಲು ಸಾಧ್ಯವಲ್ಲ.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಶೋಸಿಯೇಷನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.


ಸಿಂಗರ್ ರೊಯಲ್ ಕ್ರಯ ರೂಪಾಯಿ 115.

"ಅಮೇರಿಕದ ವಿಶಿಷ್ಟತೆ"

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವುದಕ್ಕೆ ಅಥವಾ ಕಾರ್ಯ ಗೈಯ್ಯುವದಕ್ಕೆ ಬಿಡಲೊಲ್ಲದೆ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿ ಬರುವ ಕ್ಷಾಮವೂ, ಆ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ, ಅತಿಶ್ರಮದಿಂದ ಮತ್ತು ದುವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗ್ಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಂಮಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಆಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹ ಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವುದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯ ಪ್ರಥೆ "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಬೆಲೆ ಸೀಸೆ 1ಕ್ಕೆ ರೂ. 2-0-0 ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ ತ್ತದೆ. ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮೆ.ಜೇ.ಸಿ. ಬ್ರಿತೋ (ಪೊಂಡ್-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದ ನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು. ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮ. ಜಿ. ಆರ್. ಗಾಯಿಕವಾಡ, ಸಕ್ರಿಯ ಮಾಮುಲತದಾರರು—ವಿ. ಪಿ. ದ್ವಾರಾ ಆದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳ ಉತ್ತಮವಿದೆ.

The Anglo Indian Drug & Chemical Company,
155, Jumma Musjid, BOMBAY.
~~~~~~

ಉಪನ್ಯಾಸಗಳ ಉತ್ತಮಾಲಯ) **ಮಧುರವಾಣಿ** (ಗ್ರಂಥಗಳ ಭಾಂಡಾಗಾರ.

ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತ ಪ್ರಣೀತ ನಾಟಕ, ಕಾದಂಬರಿ. ಜೀವನ ಚರಿತೆ ಮುಂತಾದ ಗ್ರಂಥಗಳೂ ಸಾಮಾಜಿಕ ನೀತಿ, ಮತ ವಿದ್ಯೆ, ತತ್ವಶಾಸ್ತ್ರಕ್ಕೆ ಸಮ್ಮಂಧಪಟ್ಟ ಉತ್ತಮೋಪನ್ಯಾಸಗಳೂ ಇನ್ನೂ ಅನೇಕ ಉಪಯುಕ್ತ ವಿಷಯಗಳು ಬೇರೆಬೇರೆ ಪುಟಗಳೊಡನೆ ಪ್ರತಿ ತಿಂಗಳಲ್ಲಿಯೂ ತಪ್ಪದೆ ಪ್ರಕಟಿಸಲ್ಪಡುವವು. ಚಂದಾದಾರರಿಗೆ ಅನೇಕ ಪುಸ್ತಕಗಳು ಬಹುಮಾನವಾಗಿ ದೊರೆವವು.

ವಿಳಾಸ:—

ಹನುಮಾನ್ ಮತ್ತು ಕಂಪೆನಿ.

ಮೈಸೂರ ು

ಮಹನೀಯರೇ ನಿಮ್ಮ ರೋಗಗಳಿಂದ ಧೈರ್ಯಗುಂದ ಬೇಡಿ! ನೋಡಿರಿ ಬೆಲೆಯಲ್ಲಿ ಅಗ್ಗ!! ಗುಣದಲ್ಲಿ ಪೆಟ್ಟೊಂದು ತುಂಡೆರಡು!!! ರೋಗಗಳಿಂದ ಅಧೈರ್ಯ ಪಟ್ಟವರಿಗೆ ಸಂಪೂರ್ಣ ನಂಬಿಕೆಯನ್ನುಂಟುಮಾಡುವುದು!!! ಆ ನಂಬಿಕೆಯೇ

ಜ್ವರಾಮೃತ.

ಈ ಔಷಧವು ಮಲೇರಿಯ ಜ್ವರ, ದಿನ ತಪ್ಪಿ ದಿನ ಬರುವ ಜ್ವರ, ಕಾಲಕಾಲದ ಜ್ವರ, ಬೆಳದಗೆಡ್ಡೆ ಮತ್ತು ಕೊಂಬೆಯಿಂದುಂಟಾಗುವ ಜ್ವರಗಳನ್ನು ನೆಕ್ಕುವ ಮಾರಿಯೇ ಜ್ವರಾಮೃತ. ಎಲ್ಲಾ ತರದ ಔಷಧಗಳನ್ನು ಸೇವನೆ ಮಾಡಿ ಗುಣಹೊಂದದೆ ಇರುವ ಖಾಯಿಲಸ್ಥರೇ ಒಂದು ಸಾರಿ ಈ ಜ್ವರಾಮೃತವೆಂಬ ಔಷಧವನ್ನು ಸೇವನೆ ಮಾಡಿ ನಿಮ್ಮನ್ನು ದಿನನಿತ್ಯವೂ ಪೀಡಿಸುವ ಬಾಧೆಗಳನ್ನು ನಿವಾರಣೆ ಮಾಡಿಕೊಂಡು ಆರೋಗ್ಯಸ್ಥರಾಗಿರಿ. ಬೆಲೆ ಸೀಸೆ 1ಕ್ಕೆ ಆಣೆ 0—8—0 ದೊಡ್ಡ ಸೀಸೆ 1ಕ್ಕೆ ಆಣೆ 0—14—0 ಸಣ್ಣ ಸೀಸೆ ಡಜನ್ 1ಕ್ಕೆ ರೂ. 5—8—0 ದೊಡ್ಡ ಸೀಸೆ ಡಜನ್ 1ಕ್ಕೆ ರೂ. 10—0—0. ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಟೆನಟನ್ ಚೂರ್ಣ.

ಈ ಚೂರ್ಣವು ಹುಳ ಕಡ್ಡಿ ಮತ್ತು ಇತರ ಎಲ್ಲಾ ತರದ ರೋಗಗಳನ್ನು ಕ್ಷಣಮಾತ್ರದಲ್ಲಿಯೇ ಗುಣಪಡಿಸುವುದು. ಯಾವ ತರದ ಕೇಡನ್ನುಂಟುಮಾಡದ ಔಷಧಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಹಚ್ಚುವುದರಿಂದ ಉರಿಯು ಸಹ ಉಂಟಾಗುವುದಿಲ್ಲ ಮತ್ತು ಒಳ್ಳೇ ಸುವಾಸನೆಯುಳ್ಳದ್ದಾಗಿರುತ್ತದೆ. ಇದನ್ನು ಹಚ್ಚಿದ ಎರಡು ಮೂರು ದಿವಸಗಳಲ್ಲಿಯೇ ಇದರ ಗುಣತ್ವವು ತಿಳಿಯಬರುವುದು. ಬೆಲೆ ಡಬ್ಬಿ 1ಕ್ಕೆ ಆಣೆ 0—4—0 ಡಜನ್ 1ಕ್ಕೆ ರೂ 2—12—0 ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಕೇಶಮಂಜರಿ ಎಣ್ಣೆ.

ಈ ಎಣ್ಣೆಯನ್ನು ಅನೇಕ ಔಷಧಗಳಿಂದ ತಯಾರುಮಾಡಲ್ಪಟ್ಟಿರುತ್ತದೆ. ಇದನ್ನು ಉಪಯೋಗಿಸುವುದರಿಂದ ಮೆದುಳನ್ನು ತಂಪಾಗಿಯೂ, ಕೂದಲನ್ನು ಕಪ್ಪಾಗಿಯೂ, ರೇಷ್ಮೆಯಂತೆ ನುಣುಪಾಗಿಯೂ ಮಾಡುವುದಲ್ಲದೆ ಕೂದಲು ಅಧಿಕಧಿಕವಾಗಿ ಬೆಳೆಯುವಂತೆ ಮಾಡಿ ಉದುರುವ ಕೂದಲನ್ನು ನಿಲ್ಲಿಸುತ್ತದೆ. ಅಧಿಕ ಮೆದುಳು ಕೆಲಸ ಮಾಡುವವರು ಈ ಎಣ್ಣೆಯನ್ನು ಆಗತ್ಯವಾಗಿ ಉಪಯೋಗಿಸಬೇಕಾಗಿರುತ್ತದೆ. ಈ ಎಲ್ಲಾ ಗುಣಾತಿಶಯಗಳಿಂದೊಡಗೂಡಿರುವುದಲ್ಲದೆ ಇದನ್ನು ತಲೆಯ ಮೇಲೆ ಹಚ್ಚಿಕೊಂಡು ಹೋದಲ್ಲಿ ಆಜುಬಾಜಿನ ಜನರು ಇದರ ಸುವಾಸನೆಗೆ ಬೆರಗಾಗುವರು. ಆದ್ದರಿಂದ ಪ್ರತಿಯೊಂದು ಮನೆಯಲ್ಲಿ ಒಂದು ಶೀಸೆ ಯಾವಾಗ್ಯೂ ಇಟ್ಟಿರಬೇಕಾಗಿರುತ್ತದೆ. ಬೆಲೆ ಸೀಸೆ 1ಕ್ಕೆ ಆಣೆ 0—12—0 ಡಜನ್ 1ಕ್ಕೆ ರೂ. 8—8—0 ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಆದ್ದರಿಂದ ರೋಗಗಳಿಂದ ಪೀಡಿತರಾಗಿರುವ ಪ್ರತಿಯೊಬ್ಬರು ಒಂದು ಸಾರಿ ಈ ಔಷಧಗಳನ್ನು ಉಪಯೋಗಿಸಿ ಬಾಧಿಸುತ್ತಿರುವ ರೋಗಗಳಿಂದ ಗುಣವನ್ನು ಹೊಂದಿಕೊಂಡು ದೀರ್ಘಾನಂದ ಪಡೆಯಿರಿ. ಸಂತೋಷವೇ ಯೌವ್ವನ! ಚಿಂತೆಯೇ ಮುಪ್ಪು!!

ವಿಳಾಸ:—ಟಿ. ಡಿ. ಮುಕರ್ಜಿ ಅಂಡ್ ಕೊ, ಚೌಕ್ ಬೆನಾರೆಸ್ ಸಿಟಿ.

Address:—**T. D. Mukherjee & Co.,** *Chowk, Benares City.*

ವಿಶ್ವಾಂಜನ ಪೈನ್ ಬಾಂ.

ಎಲ್ಲಾ ಭಾಗ್ಯಕ್ಕಿಂತಲೂ ಆರೋಗ್ಯ ಭಾಗ್ಯವು ದೊಡ್ಡದು. ಈ ಭಾಗ್ಯವನ್ನು ಕೊಡುವುದು ಯಾವದು? ನಮ್ಮ ವಿಶ್ವಾಂಜನ ಪೈನ್ ಬಾಂ ಅಲ್ಲವೇ? ಇದರಿಂದ ತಲೆ ವೇದನೆ, ವಕ್ರಶೂಲ, ವಾತ, ಸಂಧುವಾತ, ಕಡತ, ಜಜ್ಜಿದ ಘಾಯ, ಶೀತ, ಗಂಟ್ಲುನೋವು, ಸೊಂಟನೋವು, ಜಖಮು, ಉಳುಕು, ಎದೆನೋವು, ಆನೆಕಾಲು, ವ ಇತರ ಎಲ್ಲಾ ತೆರದ ನೋವುಗಳು ನಿಸ್ಸಂಶಯವಾಗಿ ಗುಣ ಹೊಂದುತ್ತವೆ. ಎಲ್ಲಾ ಔಷಧಗಳಿಗಿಂತಲೂ ಶ್ರೇಷ್ಠವಾದುದೆಂದು ಅನೇಕ ಜನರಿಂದ ಶಿಫಾರಸು ಮಾಡಲ್ಪಟ್ಟಿದೆ. ಬಾಟ್ಲಿ 1ಕ್ಕೆ—0—8—0. 3 ಬಾಟ್ಲಿ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಇಲ್ಲ.

ವಿಳಾಸ:—ಬಿ. ವಿ. ಪಿ. ಭಂಡಾರಕರ್, ವಿಶ್ವಾಂಜನ ಡಿಪೋ, ಗೋಕಿಕಟ್ಟೆಬಜಾರ, ಮಂಗಳೂರು ದ. ಕ.

ಪ್ರಕಟಣೆ.

ಉತ್ತರ ಆರ್ಕಾಡು ಜಿಲ್ಲೆಯ ಅರ್ನಿ ಮತ್ತು ಒನ್ನುಪುರಾಮಿನಲ್ಲಿ ನೇಯಲ್ಪಡುವ ರೂ 13ರಿಂದ ರೂ 150 ವರೆಗಿನ ಕ್ರಯದ ಸ್ತ್ರೀಯರ ಉಪಯೋಗಾರ್ಥವಾದ ರೇಶ್ಮೆ ಮತ್ತು ಗೋಟು ತೆಗೆದ ವಸ್ತ್ರಗಳು ರಿಯಾಯತಿ ದರದಲ್ಲಿ ಮಾರಲ್ಪಡುವವು. ವಸ್ತ್ರ ಕೊಂಡುಕೊಳ್ಳುವ ವ್ಯಾಪಾರಸ್ಥರಿಗೆ ಹಣ ಪಾವತಿ ಮಾಡುವರೆ ಒಂದು ತಿಂಗಳ ಸಮಯ ಕೊಡೋಣಾಗುವುದು. ಒಂದೆರಡು ವಸ್ತ್ರಗಳನ್ನು ಕೊಂಡುಕೊಳ್ಳುವವರಿಗೆ ವಿ. ಪಿ. ಮೂಲಕ ಕಳುಹಿಸೋಣಾಗುವುದು. ಒನ್ನುಪುರಾಮಿನ ರುದ್ರಾಶ ಪೇಟೆಯಲ್ಲಿ ತಯಾರಿಸಲ್ಪಡುವ ವಿವಿಧ ಬಣ್ಣದ ಸ್ತ್ರೀಯರ ವಸ್ತ್ರಗಳೂ ಸಹಾ ಅಗ್ಗವಾಗಿ ಅಂದರೆ ರೂ. 3-15-6ರಿಂದ ರೂ. 7-12-0 ದರದಲ್ಲಿ ಮಾರಲ್ಪಡುವವು. ಗಿರಾಕಿಗಳು ವಸ್ತ್ರದ ಬಣ್ಣವನ್ನೂ ನಮೂನೆಯನ್ನೂ ಪರೀಕ್ಷಿಸಿ ನೋಡ ಬಹುದು. ಈ ವಸ್ತ್ರಗಳನ್ನು ಒಂದು ಸಾರಿ ಕೊಂಡು ಕೊಂಡವರು ಇತರರಿಂದ ವಸ್ತ್ರಗಳನ್ನು ಕೊಂಡುಕೊಳ್ಳರೆಂಬದು ನಿಶ್ಚಯ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ವಿಳಾಸ:—ಅತ್ತೂರು ವೈಕುಂಟ ಪ್ರಭು.
ರೇಶ್ಮೆ ಮತ್ತು ಗೋಟಿನ ವಸ್ತ್ರ ವ್ಯಾಪಾರಸ್ಥ.
ತಿರುವೆತ್ತಿಪುರಂ, ಉತ್ತರ ಆರ್ಕಾಡುಜಿಲ್ಲೆ.

ಅತ್ಯುಪಯುಕ್ತವಾದ ಕೆಲವು ಪುಸ್ತಕಗಳು.

ಕುಮುದಾ ...	0—8—0
ಮಹಾರಾಣಿ ಗೃಹಶೀಲೆ ...	0—2—0
ಮುಕ್ತಹಾರ ...	0—1—6
ಸನಾತನ ಧರ್ಮ ಪ್ರಶ್ನೋತ್ತರ...	0—1—0
ಕೃಷ್ಣಜನ್ಮ ನಾಟಕ ...	0—4—0
ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನೆ ...	0—3—0
ಪ್ರಾತಃರಾಹ್ನಿಕ ಪದ್ಧತಿ ...	0—3—0
ದೇವಪೂಜಾ ಪದ್ಧತಿ ...	0—3—0
ಬ್ರಹ್ಮಯಜ್ಞ ವೈಶ್ವದೇವ ...	0—3—0
ವಿಷ್ಣು ಸಹಸ್ರನಾಮ ಕೃಷ್ಣಾಷ್ಟೋತ್ತರ ನಾಮಾವಳಿ ...	0—2—6
ವಾಯುಸ್ತುತಿ ...	0—2—0
ದ್ವಾದಶ ಸ್ತೋತ್ರ ...	0—2—0
ಲಕ್ಷ್ಮೀ ಶೋಭಾನೆ ಹಾಡು ...	0—2—0
ಹರಿಭಕ್ತಿಸಾರ ...	0—1—0
ಉದಯರಾಗ ...	0—4—0
ಸ್ವಪ್ನಪದ, ಮಧ್ವನಾಮ ...	0—2—0
ಇಂಗ್ಲಿಷ ರಶೀದಿ 50 ಫೋರ್ಮುಗಳ ಪುಸ್ತಕ ...	0—6—0
ಕನ್ನಡ ರಶೀದಿ 25 ಫೋರ್ಮುಗಳ ಪುಸ್ತಕ ...	0—2—0
,, 50 ,, ...	0—4—0
ಗೇಣಿ ರಶೀದಿ 25 ಫೋರ್ಮುಗಳ ಪುಸ್ತಕ ...	0—3—0
,, 50 ,, ...	0—6—0
ರಿಜಿಸ್ಟ್ರಿ ಕಾರ್ಡುಗಳು 100ಕ್ಕೆ ...	0—8—0
ಪರ್ಮಿಟು ಫೋರ್ಮು 100ಕ್ಕೆ ...	0—10—0
ಗೇಣಿಚೀಟು ಫೋರ್ಮು 100ಕ್ಕೆ ...	0—10—0
ಪ್ರೊಮಿಸರಿ ನೋಟು ಫೋರ್ಮು 100ಕ್ಕೆ ...	0—6—0
ಚಕ್‌ರೋಲ್ 25 ಪುಟಗಳ ಪುಸ್ತಕ ...	0—8—0
,, 50 ,, ...	0—14—0
,, 100 ,, ...	1—8—0
ಡೆಲಿವರಿ ಪುಸ್ತಕ ...	0—6—0

ಫರ್ಲೋಂಗ್ ಬೂಕುಗಳೂ ವಿವಿಧ ನಮೂನೆಯ ನೋಟುಬೂಕುಗಳೂ ಅಂಗಡಿ ಭಂಡಸಾಲೆ ವಗೈರೆ ವ್ಯಾಪಾರಸ್ಥರಿಗೆ ಬೇಕಾಗುವ ವರ್ಗ ಊಳಿಗದ ಪುಸ್ತಕಗಳೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಲಾ ರಿಪೋರ್ಟು ವ ಇತರ ಪುಸ್ತಕಗಳು ಉತ್ಕೃಷ್ಟವಾದ ಮಾರ್ಬಲ್ ಕೆಲಿಕೊ ಚರ್ಮ ಮೊದಲಾದವುಗಳಿಂದ ಬಹಳ ನಾಜೂಕಾಗಿ ಬ್ಯಾಂಡು ಮಾಡಲ್ಪಡುತ್ತವೆ.

ಲಗ್ನ ಪತ್ರಿಕೆಗಳು, ಲೆಟರ ಪೇಪರುಗಳು, ಬಿಲ್‌ಫೋರ್ಮುಗಳು, ವಿಜಿಟಿಂಗ್ ಕಾರ್ಡುಗಳು, ಅರ್ಜಿಗಳು ವಗೈರೆ ಎಲ್ಲಾ ತರದ ಛಾಪೆಯ ಕೆಲಸಗಳನ್ನು ಬಹಳ ಅಗ್ಗವಾದ ದರದಲ್ಲಿ ಮಾಡಿಕೊಡುವರು. ದರಗಳಿಗೂ ಇತರ ಎಲ್ಲಾ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೊನ್‌ರವರು.

1911ನೇ ಇಸವಿ ಜೂನ್ ತಾರೀಕು 3ರ೦ಲಾಗಾಯಿತು ವಿಶೇಷ ಲಕ್ಷಣಗಳುಳ್ಳ ದಂತ್ಯ ಚಿಕಿತ್ಸೆಗಳ ಉಪಯೋಗ ಮೂಲ ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ಧಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೋಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗೆಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದುನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನ್ನಿಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೋಲೇಜಿನ ಎದುರು
ಮಂಗಳೂರು.

ಫೊಟಗ್ರಾಫ್ ಬ್ರೈಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42″ × 25″ ರೂ. 75. ಅರ್ಧ ಸ್ಯಾಜ್ 21″ × 15″ ರೂ. 40. ಬಸ್ಟ್ ಸ್ಯಾಜ್ 18″ × 12″ ರೂ. 20. ಸಣ್ಣ ಸ್ಯಾಜ್ 12″ × 10″ ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೊಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೊಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,
ಆರ್ಟಿಸ್ಟ್, ಕೂಡ್ಲ ಪೋಸ್ಟು, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಸಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹೆ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳೂ ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಸರ್ವೋತ್ಕೃಷ್ಟವಾದ ಅತ್ತರುಗಳು.

ಇನ್ನು ಮೇಲಾದರೂ ಬಜಾರಿನಲ್ಲಿ ದೊರಕುವ ಹೀನವಾದ ಅತ್ತರುಗಳನ್ನು ಕೊಂಡುಕೊಳ್ಳದಿರಿ. ನಮ್ಮ ಈ ಅತ್ತರುಗಳು ಅತಿಶಯ ಪ್ರಯಾಸ ಪ್ರಯತ್ನಗಳಿಂದ ಸಿದ್ಧಮಾಡಲ್ಪಟ್ಟಿವೆ. ಇವುಗಳ ಸುಗಂಧವು ನೂತನವಾಗಿ ಅರಳಿ ಗಮುಗಮಿಸುವ ಪುಷ್ಪಗುಚ್ಛದ ಪರಿಮಳವನ್ನು ವಿಶೇಷತಃ ಮಿಂಚುತ್ತದೆ. ಮತ್ತು ಯಾವಾಗ್ಲಲೂ ಒಂದೇ ಲೆಕ್ಕವಾಗಿರುತ್ತದೆ.

ಕಾಮಿನಿಯಾ ಡೈಜೀ (ರಿಜಿಸ್ಟರ್ಡ್)ಇದು ದೊಡ್ಡ ಮಲ್ಲಿಗೆಯ ಹೂಗಳಿಂದ ಸಂಗ್ರಹಿಸಿದ ಅತ್ತರು. 'ಮಲ್ಲಿಗೆ' ಎಂಬ ಈ ಶಬ್ದವು ಕಿವಿಗೆ ಬೀಳುತ್ತಲೇ ಅದರ ಸುವಾಸನೆಯನ್ನು ಕುರಿತು ಯಾವನೊಬ್ಬನ ಮನಸ್ಸಿನಲ್ಲಿಯಾದರೂ ಕಲ್ಪನೆಯು ಆಗದಿರದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 3-0—0

ಕಾಮಿನಿಯಾ ಸುರಂಗಿ (ರಿಜಿಸ್ಟರ್ಡ್) ಇದು ಬಹಳ ಪರಿಮಳ ಉಳ್ಳದ್ದು. ಕಾಲು ತೊಲೆಯ ಕುಪ್ಪಿಗೆ ಬೆಲೆ ರೂ. 1-4-0 ಅಂಚೆಯ ವೆಚ್ಚ ಬೇರೆ.

ಕಾಮಿನಿಯಾ (ರಿಜಿಸ್ಟರ್ಡ್) ಇದಾದರೂ ವಸಂತಮಾಸದ ಸಂಪಗೆಯ ಹೂಗಳಿಂದ ಸಂಗ್ರಹಿಸಿದುದು. ಇದರ ಸುರಭಿಯು ಅತ್ಯಂತ ಮಧುರವಿದೆ. ಕಾಲು ತೊಲೆಯ ಕುಪ್ಪಿಗೆ ರೂ. 1—8—0 ಅಂಚೆಯ ವೆಚ್ಚ ಬೇರೆ.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.,** *155 Jumma Musid, Market, Bombay.*

ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಅಗ್ಗವಾದ ಮಾಲುಗಳು!!

KASHI VISHWESHWAR   S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೇ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—**S. U. Naravanacharya & Co.**

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ ಗುಳಿಗೆಗಳು.	30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ತಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷದಾಲಯ
22 ಬ್ರಾಡ್ವೇ ಮತ್ತು 96 ಮೌಂಟ್ ರೋಡ್ ಮದರಾಸು.
ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.
ಮತ್ತು ಜಾಮ್ ನಗರ ಕಾಠ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವವಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಡ್ಡಿಂಗ್ಸ್,
ಮಂಗಳೂರು, ದ. ಕನ್ನಡ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಆವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯು ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ „ „	6—0—0	B ಅರಗಜ „ „	1—0—0
ಕಸ್ತೂರಿ ಬತ್ತಿ „ „	3—0—0	ಕಸ್ತೂರಿ ಬಿಲ್ಲೆ„ „	2—0—0
ಜವಾಜಿ ಬತ್ತಿ „ „	2—0—0	ಜವಾಜಿ ಬಿಲ್ಲೆ„ „	1—0—0
ಪುಣಗಿನ ಬತ್ತಿ „ „	1—8—0	ಕೇಸರಿ ಬಿಲ್ಲೆ „ „	0—8—0
A ಪನ್ನೀರ್ ಬತ್ತಿ „ „	0-12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ „ „	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:—
ಮ. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—
ಎನ್. ಎಂ. ಸುಬ್ರಾವ್,
"ಸುಗಂಧವಿಲಾಸ"
ಮಂಗಳೂರು.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

The Original BABA BUDAN-GHIRY COFFEE POWDER PROPRIETORS J.S. SOUZA & Co. MANGALORE

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಗುಣವಾಗದಿದ್ದರೆ ಹಣ ಪರತ.

ಪಿಶಾಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವರಿತ್ತು ತೆಗದುಕೊಂಡರೆ ಕೊಲೆರಾ ಅಥವಾ ಉಖಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ 1ರ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡುಜ್ವರ ಸಹ ಖಂಡಿತವಾಗಿ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೇ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪ್ಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ!   (ಸತ್ಯಮೇವಜಯತೆ)   ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷದಧ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.   ವಿಳಾಸ:—

ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ.

ಬಿ. ವೆಂಕಟಕೃಷ್ಣಪ್ಪ ಬಿ. ಎ., ಇವರಿಂದ ರಚಿತವಾದ ಹೊಸಕನ್ನಡದ
ನವೀನ ಪ್ರಬಂಧ (ನಾವಲ್)ಗಳು.

ಶ್ಯಾಮಕುಬ್ಜ.

(Sir Walter Scott's "Black Dwarf")

ಈ ಕಥೆಯನ್ನೋದುವುದರಿಂದ ಭೂತಪಿಶಾಚಿಗಳ ನಿಜಸ್ಥಿತಿಯು ತಿಳಿಯ ಬಂದು ಮೂಢಭಯವು ತೊಲಗುವುದಲ್ಲದೆ ಅನೇಕ ಲೋಕರಹಸ್ಯಗಳೂ ನೀತಿತತ್ವಗಳೂ ತಿಳಿಯಬರುವುವು. ಇದು ಈ ಪ್ರಪಂಚದ ವಿಷಯದಲ್ಲಿ ಜೇಹಾಸೆಗೊಂಡು ವನವಾಸಿಯಾದ ಒಬ್ಬ ಕುರೂಪಿಯಾದ ಶ್ರೀಮಂತನ ಕಥೆ. ಇದನ್ನೋದುತ್ತೋದುತ ಕಣ್ಣೀರನ್ನು ತಡೆಯುವುದು ಕಷ್ಟವಾಗುವುದು. ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಕ್ಲಿಷ್ಟಪದಗಳ ನಿಘಂಟನ್ನು ಸೇರಿಸಿದೆ.

ಅಂದವಾದ ಮುದ್ರಣ, ಉತ್ತಮವಾದ ಕಾಗದ, ಭದ್ರವಾದ ಬೈಂಡ್, ಕ್ರಯ ೮ ಆಣೆ.

ಮಹಾಲಕ್ಷ್ಮಿ.

ಬಾಲ್ಯವಿವಾಹದಿಂದಲೂ, ನವನಾಗರಿಕರೆನಿಸಿಕೊಂಡ ಕುಡಿಕರ ಸಹವಾಸದಿಂದಲೂ ಆಧುನಿಕ ಯುವಕರಿಗೆ ಸಂಭವಿಸಬಹುದಾದ ಕಷ್ಟನಷ್ಟಗಳು ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. ಮುದ್ದಾದ ಹಸ್ತಪುಸ್ತಕ. ಕ್ರಯ ೨ ಆಣೆ.

ಕನ್ನಡ ವರ್ಣಮಾಲಾ.

ಅಕ್ಷರಾಭ್ಯಾಸ ಮಾಡಿಸಲು ಅನುಕೂಲಿಸುವಂತೆ ಅ,ಕಾರ ಮೊದಲು ೞ,ಕಾರದ ವರಿವಿಗೆ ಎಲ್ಲಾ ಅಕ್ಷರಗಳನ್ನು ದೊಡ್ಡ ಆಕಾರದಲ್ಲಿ ಅಚ್ಚುಮಾಡಿಸಿರುತ್ತೆ ಗೋಡೆಗೆ ಅಂಟಿಸಲು ಅನುಕೂಲಿಸುವಂತೆಯೂ ಬಾಲಕರಿಗೆ ಜಾಗ್ರತೆ ಅವಗಾಹನೆಯಾಗುವಂತೆಯೂ ಇರುವದು. ಬೆಲೆ ೧ಕ್ಕೆ ೬ ಪೈ, ೫೦ಕ್ಕೆ ೮ ಆಣೆ.

ಟೀಕಾ ತಾತ್ಪರ್ಯ ಸಹಿತ ಮಹಿಮ್ನ ಸ್ತೋತ್ರ	... ...	೦—೩—೦.
ಡಿ. ಮುಕುಂದಮಾಲಾ ಸ್ತೋತ್ರ	... ...	೦—೪—೦.
ವಚನ ಜ್ಯೋತಿಸ್ಸಂಗ್ರಹ	... ...	೦—೪—೦.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—

ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ. ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು ಟೀಕಾ ತಾತ್ಪರ್ಯ ಶಬ್ದಸಮಾಸ ಸಹಿತವಾದ ೧ನೇ ಪರ್ವ ರಘುವಂಶ ರೂ. ೧—೦—೦ ೨ನೇ ಪರ್ವ ರೂ. ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶಾಮಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ ಸಹಿತವಾಗಿ ಈಗತಾನೆ ಪೂರೈಸಿರುತ್ತೆ. ಉತ್ತಮವಾದ ಕ್ಯಾಲಿಕೊ ಬೈಂಡು ರೂ. ೨—೪—೦. ಋಗ್ವೇದ ನಿತ್ಯಕರ್ಮ ೦—೪—೦. ಎಲ್ಲಾ ಪುಸ್ತಕದಪಟ್ಟಿಯೂ ಬೇಕಾದಲ್ಲಿ ಸುಮ್ಮನೇ ಪಡೆಯಬಹುದು.

ಬಿ. ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್, ಬೆಂಗಳೂರು ಸಿಟಿ.

ಶ್ರೀ ರಾಮಕೃಷ್ಣ ವಿವೇಕಾನಂದ

ವಚನಾಮೃತವು.

ಅಭಿನವ ಭರತಖಂಡದ ಪರಮ ಗುರುಗಳಾಗಿಯೂ, ಭಕ್ತಿ ಜ್ಞಾನ ಯೋಗ ವೈರಾಗ್ಯಗಳಲ್ಲಿ ಅದ್ವಿತೀಯರಾಗಿಯೂ, ವೇದ ವೇದಾಂತ ಮಹಮ್ಮದೀಯ ಮತ್ತು ಕ್ರೈಸ್ತಮತಗಳಲ್ಲಿ ಪಾರಂಗತರಾಗಿಯೂ, ಬ್ರಹ್ಮನಿಷ್ಠರಾಗಿಯೂ, ಆತ್ಮವಿದರಾಗಿಯೂ, ಅವತಾರ ಪುರುಷರಾಗಿಯೂ ಇದ್ದ ಶ್ರೀ ರಾಮಕೃಷ್ಣ ಪರಮಹಂಸರವರ ಸೂಕ್ತಿ ಮುಕ್ತಾವಲಿಯೂ, ಅವರ ಶಿಷ್ಯರಾಗಿ, ಪ್ರಾಚ್ಯ ಪಾಶ್ಚಾತ್ಯ ವಿದ್ಯೆಗಳಲ್ಲಿ ಪಂಡಿತರಾಗಿ, ಅಮೇರಿಕಾ ಯೂರೋಪ್‌ಖಂಡಗಳಲ್ಲಿ ಸನಾತನಧರ್ಮದ ಉತ್ಕೃಷ್ಟತೆಯನ್ನು ಕುರಿತೂ ಉತ್ತಮೋಪನ್ಯಾಸ ಮಾಡಿ, ಜಗದ್ಗುರುಗಳಾಗಿ, ಭಾರತೀಯರ ಪ್ರಕೃತ ಧರ್ಮಗಳನ್ನು ತಿಳಿಸಿ, ದೇಶಭಕ್ತಾಗ್ರೇಸರರಾಗಿದ್ದ ಶ್ರೀ ವಿವೇಕಾನಂದ ಸ್ವಾಮಿಗಳವರು ಬರೆದ ಕಾಗದಗಳ ಮತ್ತು ಉಪನ್ಯಾಸಗಳ ಸಾರಾಂಶವೂ ಲಲಿತವಾದ ಹೊಸಗನ್ನಡದಲ್ಲಿ ಬರೆಯಲ್ಪಟ್ಟಿವೆ. ಅದರಲ್ಲಿ ಆಸ್ತಿಕ, ಬ್ರಹ್ಮಲಕ್ಷಣ, ಮೋಕ್ಷೋಪಾಯ, ಭಕ್ತಿ, ವಿರಕ್ತಿ. ಮತ ಮತಾಂತರಗಳು ಮುಂತಾದ ಪಾರಮಾರ್ಥಿಕ ವಿಷಯಗಳೂ, ಭಾರತೀಯರ ಸ್ಥಿತಿ, ಕರ್ತವ್ಯ, ಇತರ ಜನಾಂಗಗಳ ನಾಗರಿಕತೆ ಮುಂತಾದ ಲೌಕಿಕ ವಿಷಯಗಳೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಪ್ರತಿಯೊಬ್ಬ ದೇಶಾಭಿಮಾನಿಯೂ, ಮತಾಭಿಮಾನಿಯೂ, ಆಸ್ತಿಕನೂ ಮುಮುಕ್ಷುವೂ ಈ ಗ್ರಂಥದ ಒಂದು ಪ್ರತಿಯನ್ನಾದರೂ ಇಟ್ಟುಕೊಂಡಿರಬೇಕು. ಇದರಲ್ಲಿ ಆ ಸದ್ಗುರುಗಳಿಬ್ಬರ ಸಂಸ್ಕೃತ ಕರ್ಣಾಟಕ ಸ್ತೋತ್ರಗಳೂ ಜೀವನ ಚರಿತ್ರೆಗಳೂ ಭಾವಚಿತ್ರಗಳೂ ಅಡಗಿವೆ. ಸರ್ವರಿಗೂ ಸಂಗ್ರಾಹ್ಯ.—ಬೇಗನೆ ಬರೆಯಿರಿ

ವಿಳಾಸ:—ಮ್ಯಾನೇಜರ್,
"ಸುಮತಿ ಗ್ರಂಥಮಾಲಾ" ಆಫೀಸು
ಬೆಂಗಳೂರು ಸಿಟಿ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕೆಳುಹಲಾಗುತ್ತವೆ. ಪುಸ್ತುಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಲಾಸ (ಪತ್ತೆ) ☞ ವೇದವಾಹಿನೀ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

14 ಕ್ಯಾರ್ರು ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ನಮ್ಮಲ್ಲಿ ಅನೇಕ ನಮೂನೆಗಳಲ್ಲಿ (ಅಂದರೆ) ಇಂಗ್ಲೀಷು, ಕನ್ನಡ, ಬಾಳಬಂದು, ಉರುದು, ಅರವ, ತೆಲುಗು ಈ ಎಲ್ಲಾ ಭಾಷೆಗಳಲ್ಲಿಯೂ ರಬ್ಬರು ಮೊಹರು ತಯಾರುಮಾಡುತ್ತೇವೆ. ಬೇಕಾದವರು ಬರದು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ರಬ್ಬರು ಮೊಹರುಗಳ ನಮೂನೆ ನೋಡಬೇಕಾದವರು ನಮ್ಮ ಕಂಪೆನಿಗೆ ಬರದರೆ ಕ್ಯಾಟಲಾಗ್ ರವಾನಿಸುತ್ತೇವೆ. ಇದೂ ಅಲ್ಲದೆ ನಮ್ಮ ಕಂಪೆನಿಯಲ್ಲಿ ತರಹೆವಾರಿ ಫೌಂಟಿನ್‌ಪೆನ್‌ಗಳೂ ಮತ್ತು ಜರ್ಮನ್ ಅಮೆರಿಕಾ ದೇಶದ ಸುವಾಸನೆಯುಳ್ಳ ಸೆಂಟ್ಸ್ ಎಂಬ ಹೂವ್ವಿನ ಸಾರಗಳು ಮಾ... ಡುತ್ತೇವೆ ಇದರ ಕ್ರಯ ಬುದ್ಧಿ 1ಕ್ಕೆ 1—0—0. ವಿ.ಪಿ. ಚಾರ್ಜು ಅಲಾಯಿದ.

ಏಜಂಟುಗಳು ಬೇಕಾಗಿವೆ. ಅಧಿಕ ಲಾಭವುಂಟು.

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

Registered No. M. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ
ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 14.

ಮಂಗಳೂರು ತಾ. 5ನೇ ಶುಕ್ರವಾರ
ಎಪ್ರಿಲ್ 1912.

Amrutanjan Depot, Bombay.

(Regd.) **ಅಮೃತಾಂಜನ.** (ರಿಜಿಸ್ಟರ್ಡ್.)

ಅಮೃತಾಂಜನ	ಅಮೃತಾಂಜನ
ಸರ್ವ ನೋವಿಗೆ	ಸರ್ವ ನೋವಿಗೆ,
ಸಂಜೀವನ.	ಸಿದ್ಧಾಮೃತ.
ಬಾಟ್ಲಿ ಒಂದರ ರೂ. 0—8—0.	ಬಾಟ್ಲಿ ಒಂದರ ರೂ. 0—8—0.

ಅಮೃತಾಂಜನ.

ಎಲ್ಲಾ ಔಷಧಾಲಯಗಳಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವದು.

ವಿಜ್ಞಾಪನೆ:—ನಮ್ಮ ಟ್ರೇಡ್‌ಮಾರ್ಕ್ ಉಳ್ಳ ಹೊರಗಿನ ಟನ್ನಿನ ಕರಡಿಗೆಗಳು ವಿಲಾಯತಿಯಿಂದ ಬಾರದೆ ಇರುವದರಿಂದ ಮುಂಚಿನ ಹಾಗೆ ಕಾಗದದಲ್ಲಿ ಪೇಕ್ ಮಾಡಿದ್ದೇವೆ.

ಗಜಕರ್ಣದ ಮುಲಾಮು.

ಎಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ತಾಗಿಸುವದರೊಳಗೆ ನಾಶವಾಗಿ ಹೋಗುವದು.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ನೋವು, ಹಲ್ಲುಗಳ ವಾಸನೆ ಇತ್ಯಾದಿಗಳಿಗೆ ರಾಮಬಾಣದಂತಿದೆ.

ಗಜಕರ್ಣದ ಮುಲಾಮು.

ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತು 0—6—0.

ದಂತಮಂಜನ.

ಇದರ ಉಪಯೋಗದಿಂದ ಹಲ್ಲುಗಳು ಘಟ್ಟಿಯಾಗುವವು. ಮತ್ತು ಬೆಳ್ಳಗಾಗುವವು ಡಬ್ಬಿ ಒಂದರ ಕಿಮ್ಮತು 0—2—0.

ರಾಜಾರಾಣಿ ನಕ್ಷೆಗಳುಳ್ಳ ಈ ವರ್ಷದ ಸುಂದರವಾದ ಕೆಲೆಂಡರ್ (ತಾರೀಕು ತೋರಿಸುವ ಪಟ್ಟಿ) ಕ್ರಯ 1ರ ವಿ.ಪಿ. ಸಮೇತ 0—4—0.

ಕೇಶವರ್ಧಿನಿ ತೈಲ! ಕೇಶವರ್ಧಿನಿ ತೈಲ!! ಕೇಶವರ್ಧಿನಿ ತೈಲ!!!

ಎಲ್ಲಾ ತೈಲಗಳಿಗಿಂತಲೂ, ಸುವಾಸಿಕವಾಗಿಯೂ, ಮನೋಹರವಾದ ಪರಿಮಳ ಉಳ್ಳದ್ದಾಗಿಯೂ, ಸ್ಪಿರಿಟು ವಗೈರೆ ಇಲ್ಲದೆಯೂ, ತಯಾರಿಸಲ್ಪಟ್ಟದ್ದಾಗಿರುತ್ತದೆ. ಇದರಿಂದ ಕೂದಲುಗಳು ಕಪ್ಪಾಗುವವು, ಉದ್ದವಾಗಿಯೂ ನಯವಾಗಿಯೂ ಬೆಳಿಯುವವು. ಬಾಟ್ಲಿ 1ರ 1-0-0 3ಬಾಟ್ಲಿಗಳಿಗೆ 2-10-0

ನಮ್ಮ ಔಷಧಗಳು ಮಂಗಳೂರಲ್ಲಿ ಈ ಕೆಳಗಿನ ಕಂಪೆನಿಗಳಲ್ಲಿ ದೊರಕುವದು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್, ಪರ್ಲ ಎಂಡ್ ಸನ್ಸ್, ಇಬ್ರಾಹಿಮ್ ಎಲಿಯಾಸ್, ಅರ್ನೊನ್ ಎಂಡ್ ಐಮನ್.

ಕೆಟಲಾಗು ಅಪೇಕ್ಷಿಸುವವರು ದಯಮಾಡಿ ಬರಿಯಿರಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅನ್ವಯಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.
ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.
ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನತ್ವಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೊಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ಮಲೇ ಪೊಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿ ಲ್ಯಾಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಓಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)- ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19–1–0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20--6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೊ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ವರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತಾ ತಯಾರಿಸಿರುವೆವು. ರಕ್ತವನ್ನು ವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1–8–0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.
ಸರ್ವರೂ ತಲಿಸಿಕೊಂಡು ಸಂತೋಷ ಪಡಿ.
ಬರುವ ಮೂರು ತಿಂಗಳು ಅಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.
ರೈಲ್ವೆ ರೆಗ್ಯುಲೇಟರ್ ವಾಚ್.
ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯ ಮಾತ್ರ!! 5 ವರುಷಗಳ ಗ್ಯಾರೆಂಟಿ!!
ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಜೂಕವಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಷೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷೆ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಶಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಡಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ $\frac{1}{2}$ ಪೈಸೆ. 200 ಹಾಳೆಗಳಿಗೆ ರೂ. 1–0–0 ವಿ. ಪಿ. ಮೂಲಕ 1–3–0. 2000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0–15–0. 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.
M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1910ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಪುಗಳನೂ ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್ಸ್,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಪುಗಳಿಗೆ ಇತರ ಫೋಟೋಗ್ರಾಪುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಪುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.
ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಪು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ಪಕ್ಕೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.
ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,

ಸಿದ್ಧೌಷಧ!] **ಹಾರ್ಲೆಮ್ ಆಯ್‌ಲ್ (Haarlem Oil).** [ಪರೀಕ್ಷಿಸಿ ನೋಡಿ!

ಹಾರ್ಲೆಮ್ ಆಯ್‌ಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸೆಯಿಂದ ಎಂಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕುಕಜ್ಜ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0–12–0. ಮೂರು ಬಾಟ್ಲಿಗಳಿಗೆ 2–0–0 12 ಬಾಟ್ಲಿಗಳಿಗೆ 7–0–0.

ಜ್ವರದ ಗುಳಿಗೆ.

ಜಗಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕರ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1–0–0 4 ಬಾಟ್ಲಿಗಳಿಗೆ 3–0–0 12 ಬಾಟ್ಲಿಗಳಿಗೆ 8–0–0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ ಧಾತುಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಚಳಿಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು ರೂ.	0–4–0
ಸರ್ಸ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ „	1–4–0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ. „	0–4–0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ „	0–8–0

ವಿಲಾಸ:—

ಗಣೇಶ ರಾಮಚಂದ್ರ ಕರ್ಕಿ ಕಂಪೆನಿ,
ಗಿರಗಾಂ ಮುಂಬಯಿ.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ.

ಸಾರ್ಸಾಪರಿಲಾ.

ಪೂರ್ವದ ಸ್ಥಿತಿ.

ಜಗಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷಪಾತಾದಿ ಭಯಂಕರ ರೋಗಗಳು—ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗ್ಯೆರೆ; ಹಾಗೆಯೇ ಸಂಧಿವಾತ, ಗಂಡಮಾಲೆ,ಬಹಳ ದಿನಗಳ ಹಳೇ ಪ್ರಮೇಹ ಇಡೀಮೈಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ಕ್ಷತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶೆರಿಕೆ ಹೊಡಿಯೋಣ ವಗ್ಯೆರೆ.



ನಂತರದ ಸ್ಥಿತಿ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಲಾಸ:— ಪ್ರೊಪ್ರ್ಯಾಯಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೋಶಿಟ್ ಟಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 5ನೇ ಎಪ್ರಿಲ್ 1912.

ಈತಿಂಗಳಲ್ಲಿ ಕೂಡಿದ ಮದ್ರಾಸು ನ್ಯಾಯನಿರ್ಮಾಣಸಭೆಯ ವೃತ್ತಾಂತವು.

ಮದ್ರಾಸು ಸರಕಾರದವರ ಆದಾಯ ವೆಚ್ಚಗಳ ಅಂದಾಜು ಪಟ್ಟಿಯು ಕಡೇ ಸರ್ತಿಗೆ ಈ ತಿಂಗಳಲ್ಲಿ ಕೂಡಿದ ನ್ಯಾಯನಿರ್ಮಾಣ ಸಭೆಯಲ್ಲಿ ಪರ್ಯಾಲೋಚಿಸಲ್ಪಟ್ಟು ಮಂಜೂರಾಯಿತು. ಈ ಆದಾಯ ವೆಚ್ಚಗಳ ಪಟ್ಟಿ ಪ್ರಕಾರ ಸರಕಾರದವರಿಗೆ ಹುಟ್ಟುವಳಿಯು ೬೨॥ ಲಕ್ಷವೂ ಖರ್ಚು ೭೫॥ ಲಕ್ಷವೂ ಆಗಿರುತ್ತದೆ. ಹೀಗೆ ಈ ಅಂದಾಜಿನ ಪ್ರಕಾರ ಹುಟ್ಟುವಳಿಗೆ ಮಿಕ್ಕಿ ೬೫ ಲಕ್ಷ ರೂಪಾಯಿ ಖರ್ಚಿಗೆ ಬೇಕಾಗುವವು. ಅಂದಾಜು ಪಟ್ಟಿಯು ಪ್ರಥಮ ಫೆಬ್ರವರಿ ತಿಂಗಳಲ್ಲಿ ಸಭೆಯಲ್ಲಿ ಇಡಲ್ಪಟ್ಟ ಮೇಲೆ ಸ್ವಲ್ಪ ತಿದ್ದುಪಡಿಯನ್ನು ಹೊಂದಿರುತ್ತದೆ. ಸ್ತ್ರೀಯರ ಮತ್ತು ಮಕ್ಕಳ ಆಸ್ಪತ್ರೆಗಳಿಗೆ ಹೆಚ್ಚಾದ ಸಹಾಯವು ಕೊಡೋಣಾಗುವಂತೆ ೩೦,೦೦೦ ರೂಪಾಯಿಗಳು ಈ ಬಗ್ಯೆ ವಿಂಗಡಿಸಲ್ಪಟ್ಟ ಮೊಬಲಗಿಗೆ ಕೂಡಿಸಲ್ಪಟ್ಟಿರುವವು. ಖರ್ಚಿಗೆ ಕಡಮೆಯಾಗುವ ೬೫ ಲಕ್ಷ ರೂಪಾಯಿಯ ಮೊಬಲಗು ಸರಕಾರದವರ ಗತ ವರುಷಗಳ ೧೦೦ ಲಕ್ಷ ರೂಪಾಯಿಗಳ ಸಿಲುಕಿನಿಂದ ಒದಗಿಸಲ್ಪಡುವುದು.

ಈ ಸರ್ತಿ ಕೂಡಿದ ಸಭೆಯಲ್ಲಿ ಸಹ ಪ್ರಜಾಹಿತಚಿಂತನೆಯ ಕೆಲವು ಪ್ರಶ್ನೆಗಳು ಕೇಳಲ್ಪಟ್ಟವಲ್ಲದೆ ಹಲವು ನಿರ್ಣಯಗಳು ಸಹ ವಾದಿಸಲ್ಪಟ್ಟವು. ರೆವಿನ್ಯು ಬೋರ್ಡಿನ ಸ್ಟೇಂಡಿಂಗ್ ಆರ್ಡರುಗಳ ಮಾಹಿತಿಯು ರೈತರಿಗೂ ಇತರ ಸಾಮಾನ್ಯ ಜನರಿಗೂ ಅಗತ್ಯವಾದ್ದರಿಂದ ಈ ಸ್ಟೇಂಡಿಂಗ್ ಆರ್ಡರುಗಳ ವಿಶೇಷ ತಿದ್ದುಪಡಿಗಳನ್ನು ಇನ್ನು ಮುಂದೆ ಪತ್ರಸಂಪಾದಕರಿಗೆ ದೊರಿಯುವ ಏರ್ಪಾಡು ಸರಕಾರದವರಿಂದ ಮಾಡೋಣಾಗುವುದು. ಈ ಸಂಸ್ಥಾನದಲ್ಲಿರುವ ವ್ಯಾಪಾರಸ್ಥರೆಲ್ಲರಿಂದ ಉಪಯೋಗಿಸಲ್ಪಡುವ ಅಳತೆಯ ಸಾಮಗ್ರಿ ಮತ್ತು ತೂಕದ ಪಡಿಗಳು ಎಲ್ಲಾ ಕಡೆಗಳಲ್ಲಿಯೂ ಒಂದೇ ವಿಧವಾಗುವಂತೆ ಈ ಬಗ್ಯೆ ಏನಾದರೂ ಹೊಸ ಕಾನೂನು ಮಸೂದೆಯು ಅಗತ್ಯವಿರದೆಂದು ಸರಕಾರದವರು ಅಭಿಪ್ರಾಯಪಟ್ಟಿರುವರು. ಆದರೆ ಸಂಸ್ಥಾನದ ಎಲ್ಲಾ ಕಡೆಗಳಲ್ಲಿ ತೂಕದ ಮತ್ತು ಅಳತೆಯ ಪಡಿಗಳು ಒಂದೇ ರೀತಿ ಇರುವಂತೆ ೨೪ ತೊಲೆಗಳ ೪೦ ಸೇರುಗಳ ಮಣ ಒಂದನ್ನು ಸ್ಟೇಂಡಾರ್ಡ್ ಮಣವೆಂತಲೂ ಮತ್ತು ೮೦ ತೊಲೆಗಳ ಪಕ್ಕಾ ಸೇರು ೧೨೦ ತೊಲೆಗಳ ಮದ್ರಾಸು ಅಳತೆಯು ಸ್ಟೇಂಡಾರ್ಡ್ ಅಳತೆಯವುಗಳೆಂತಲೂ ಸೂಚಿಸಿರುವರಲ್ಲದೆ ಪ್ರತಿ ಜಿಲ್ಲೆಯಲ್ಲಿಯೂ ಅಳತೆ ಮತ್ತು ತೂಕದ ಸಾಹಿತ್ಯಗಳಿಗೆ ಮೊಹರು ಹೊಡಿಯುವ ಸಿಬಂದಿಯವರು ಮೇಲೆ ಸೂಚಿಸಿರುವ ಸ್ಟೇಂಡಾರ್ಡ್ ಅಳತೆಗಳ ಸಾಹಿತ್ಯಗಳಿಗೆ ಮಾತ್ರ ಮೊಹರು ಹಾಕಬೇಕೆಂತ ಸಹ ಅಪ್ಪಣೆಕೊಡಿಸಿರುವರು. ಈ ಅಳತೆಯ ಮತ್ತು ತೂಕದ ಪಡಿಗಳು ಸರ್ವರಿಗೂ ಅನುಕೂಲವಾಗಿ ದೊರಕುವಂತೆ ಇವುಗಳ ಮಾರಾಟದ ಬಗ್ಯೆ ಸಹ ಏರ್ಪಾಡು ಮಾಡಲ್ಪಟ್ಟಿರುವುದಾಗಿ ತಿಳಿದು ಬರುವುದು. ಪ್ರತಿ ವರುಷದಲ್ಲಿ ಒಬ್ಬೊಬ್ಬ ಪ್ರೊಬೆಷನರಿ ಡಿಪ್ಯುಟಿ ಕಲೆಕ್ಟರರವರು ಮೂರು ವರುಷಗಳ ವರೆಗೆ ನೇಮಿಸಲ್ಪಡುವರೆ ಇಂಡಿಯಾ ಸರಕಾರದವರ ಸೆಂಕ್ಷನು ಮದ್ರಾಸು ಸರಕಾರದವರಿಗೆ ಸಿಕ್ಕಿರುವುದಾದರೂ ಇಂಥಾ ನೇಮಕವು ಯಾವ ರೀತಿಯಲ್ಲಿ ಮಾಡಬೇಕೆಂಬುದು ಸರಕಾರದವರಿಂದ ಇಷ್ಟರ ವರೆಗೆ ನಿರ್ಣಯಿಸಲ್ಪಡಲಿಲ್ಲ.

ಸಭೆಯ ಮುಂದಿಟ್ಟ ನಿರ್ಣಯಗಳಲ್ಲಿ ಸುರಕ್ಷಿತ ಕಾಡುಗಳಲ್ಲಿ ಕುರಿ ಆಡುಗಳ ವಿನಹ ಆಯಾ ಸ್ಥಳೀಕ ರೈತರ ಜಾನುವಾರುಗಳನ್ನು ಫೀಸನ್ನು ತಕ್ಕೊಳ್ಳದೆ ಮಾಫಿಯಾಗಿ ಮೇಯಲು ಬಿಡಬೇಕೆಂಬುದು ಒಂದಾಗಿತ್ತು. ಜಂಗ್ಲಿ ಇಲಾಖೆಯವರಿಂದ ರೈತರು ಪಡುವ ಸಂಕಷ್ಟಗಳನ್ನು ಆಗಿಂದಾಗ್ಯೆ ಸರಕಾರದವರ ಲಕ್ಷ್ಯಕ್ಕೆ ತಂದು ಅವುಗಳ ನಿವಾರಣೆಯನ್ನು ಸಾಧಿಸುತ್ತ ರೈತರೆಲ್ಲರ ಕೃತಜ್ಞತೆಗೆ ಪಾತ್ರರಾದ ಬಹುಮಾನಪಟ್ಟ ಪಿ. ಕೇಶವ ಪಿಳ್ಳೆಯವರು ಈ ನಿರ್ಣಯವನ್ನು ಸಭೆಯ ಮುಂದಿಟ್ಟರು. ರೈತರ ಜಾನುವಾರುಗಳನ್ನು ಸುರಕ್ಷಿತ ಕಾಡುಗಳಲ್ಲಿ ಮೇಯಲು ಬಿಡುವ ಬಗ್ಯೆ ಫೀಸುಗಳನ್ನು ವಸೂಲುಮಾಡುವುದು ಅನ್ಯಾಯವೆಂತ ರಾ। ಕೇಶವ ಪಿಳ್ಳೆಯವರು ರುಜುಪಡಿಸಿರುವರು. ೧೮೮೨ರಲ್ಲಿ ಫೊರೆಸ್ಟ್ ಅಕ್ಟು ಮಂಜೂರಾದಂದಿನಿಂದ ಕಾಡುಗಳನ್ನು ಹೆಚ್ಚೆಚ್ಚಾಗಿ ಸುರಕ್ಷಿತಪಡಿಸಬೇಕೆಂಬ ಕುತೂಹಲವು ಈ ಇಲಾಖೆಯವರಲ್ಲಿ ಹುಟ್ಟಿತು. ಆದರೆ ಕಾಡುಗಳನ್ನು ಹೀಗೆ ಸುರಕ್ಷಿತಪಡಿಸಿದ್ದಲ್ಲಿ ಪ್ರಜೆಗಳು ಬಹಳ ಕಷ್ಟಕ್ಕೊಳಗಾಗುವರೆಂಬ ಭಾವನೆಯಿಂದ ಮದ್ರಾಸು ಸರಕಾರದವರು ೪೫೦ ಚದರ ಮೈಲುಗಳ ಕಾಡುಗಳನ್ನು ಸುರಕ್ಷಿತಪಡಿಸದೆ ಬಿಟ್ಟುಬಿಡಬೇಕೆಂತ ಅಪ್ಪಣೆ ಪಾಲಿಸಿದರು. ಗ್ರಾಮಸ್ಥರ ಉಪಯೋಗದ ಕಾಡುಗಳನ್ನು ರಚಿಸಿ ಅವುಗಳ ಆಡಳಿತೆಯಲ್ಲವನ್ನು ಗ್ರಾಮಸ್ಥರಿಗೆನೇ ಒಪ್ಪಿಸಿಕೊಡಬೇಕೆನ್ನುವ ಆಲೋಚನೆಯು ಈ ತನ್ಮಧ್ಯ ಫೊರೆಸ್ಟ್ ಆಕ್ಟನ್ನು ಏರ್ಪಡಿಸಿದ್ದವರಲ್ಲಿ ಉಂಟಾಯಿತು. ಆದರೆ ರೆವಿನ್ಯು ಬೋರ್ಡಿನವರು ಈ ಆಲೋಚನೆಯನ್ನು ಮಾರ್ಪಡಿಸಿದರು. ಸರಕಾರದವರು ಬಿಟ್ಟುಬಿಡಬೇಕೆಂದ ೪೫೦ ಚದರ ಮೈಲುಗಳ ವಿಸ್ತೀರ್ಣದಲ್ಲಿ ಕಾಡುಗಳನ್ನು ಸುರಕ್ಷಿತಪಡಿಸದೆ ಬಿಡುವುದುಚಿತವಲ್ಲ. ರೈತರಿಗೆ ಇಂಥಾ ಕಾಡುಗಳಲ್ಲಿದ್ದ ಹಕ್ಕುಗಳನ್ನು ಊರ್ಜಿತವಿಟ್ಟು ೪೫೦ ಚದರ ಮೈಲುಗಳ ವಿಸ್ತೀರ್ಣದಲ್ಲಿ ಕಾಡನ್ನು ಸುರಕ್ಷಿತಪಡಿಸಿದರೆ ಪ್ರಜೆಗಳಿಗೆ ಏನೊಂದು ಅಡಚಣೆಯುಂಟಾಗದೆಂದು ವಾದಿಸಿ ಈ ವಿಸ್ತೀರ್ಣದಲ್ಲಿ ಸಹ ಕಾಡುಗಳನ್ನು ಸುರಕ್ಷಿತಪಡಿಸಿದರು. ಹೀಗೆ ಫೊರೆಸ್ಟ್ ಇಲಾಖೆಯ ಚರಿತ್ರೆಯನ್ನು ವರ್ಣಿಸುತ್ತ ಮದ್ರಾಸು ಸರಕಾರದವರು ಕ್ರಮೇಣ ರೈತರ ಸಂಕಷ್ಟಗಳನ್ನು ಲೆಕ್ಕಿಸದೆ ಮೇಯುವ ಫೀಸನ್ನು ವಸೂಲುಮಾಡುವ ಏರ್ಪಾಡನ್ನು ಹ್ಯಾಗೆ ಜ್ಯಾರಿಗೆ ತಂದರೆಂಬುದನ್ನು ಸರಕಾರಿ ದಾಖ್ಲೆಗಳ ಮುಖಾಂತರ ರಾ। ಪಿಳ್ಳೆಯವರು ಸಭಿಕರೆಲ್ಲರಿಗೆ ತಿಳಿಯಹೇಳಿದರು. ಕಾಡುಗಳಿಂದ ದೇಶಕ್ಕುಂಟಾಗುವ ಪ್ರಯೋಜನವನ್ನು ವಿಸ್ತಾರವಾಗಿ ಹೇಳಿ ಪಿಳ್ಳೆಯವರ ನಿರ್ಣಯವು ಸರಕಾರ ಕಡೆಯ ಮೆಂಬರರು ವಿರೋಧಿಸಿದರು. ಆದರೆ ಸಾಗುವಳಿ ಭೂಮಿಯ ಸರಹದ್ದುಗಳಲ್ಲಿರುವ ಕಾಡುಗಳಲ್ಲಿ ಜಾನುವಾರು ಮೇಯುವುದರಿಂದ ಸುರಕ್ಷಿತ ಕಾಡುಗಳೆಲ್ಲವು ಹಾಳಾಗುವವೆಂಬ ವಾದವನ್ನು ಸರಕಾರದವರು ಮುಂದೊತ್ತಿದರೂ ಪಿಳ್ಳೆಯವರ ನಿರ್ಣಯವನ್ನು ಪರ್ಯಾಲೋಚಿಸಿದ ನಂತರ ಮೇವಿನ ಫೀಸಿನ ವಿಷಯ ತನಖಿಗೆ ಎಡೆವಿರುವುದೆಂತ ಎರಡು ಜನ ಸರಕಾರ ಕಡೆಯಿಂದಲೂ ಎರಡು ಜನ ಪ್ರಜಾ ಕಡೆಯಿಂದಲೂ ಕೂಡಿರುವ ನಾಲ್ವರ ಕಮಿಟಿಯೊಂದು ಈ ಬಗ್ಯೆ ವಿಚಾರ ನಡಿಸುವರೆ ನೇಮಿಸಲ್ಪಡುವುದಾಗಿ ಸರಕಾರದವರ ಅಪ್ಪಣೆಯಾಯಿತು. ಪಿಳ್ಳೆಯವರು ಕೃತಜ್ಞತೆಯಿಂದ ತಮ್ಮ ನಿರ್ಣಯವನ್ನು ಹಿಂತೆಗೆದಿರುತ್ತಾರೆ. ಬಹುಮಾನಪಟ್ಟ ಮ। ಹೊರ್ನರವರು ಈ ಕಮಿಟಿಯ ಅಧ್ಯಕ್ಷರಾಗಿರುತ್ತಾರೆ.

ನಮ್ಮ ಸಂಸ್ಥಾನಕ್ಕೆ ಚಕ್ರವರ್ತಿಗಳ ೫೦ ಲಕ್ಷ ರೂಪಾಯಿಯ ವಿದ್ಯಾವರದಾನದಿಂದ ಸಿಕ್ಕಿದ ೮ ಲಕ್ಷ ರೂಪಾಯಿಗಳ ಪೈಕಿ ಎರಡು ಲಕ್ಷ ರೂಪಾಯಿಗಳನ್ನು ಮುನಿಸಿಪಾಲಿಟಿಗಳಲ್ಲಿ ಮೂಲ ವಿದ್ಯಾಪ್ರಸರಣೆ ಬಗ್ಯೆ ಕೊಡೋಣಾಗಬೇಕೆಂಬ ಬಹುಮಾನಪಟ್ಟ ರಾವ್‌ಬಹದ್ದೂರ್ ಎನ್. ಸುಬ್ರಾವ್‌ರವರ ನಿರ್ಣಯವು ಸಭೆಯವರಿಂದ ಮನ್ನಿಸಲ್ಪಡಲಿಲ್ಲ. ಶೇಂದಿ ಅಂಗಡಿಗಳನ್ನು ಮುಂಜಾನೆ ೯ ಘಂಟೆಯ ನಂತರ ತೆರಿಯಬೇಕೆಂಬ ಇನ್ನೊಂದು ನಿರ್ಣಯವು ಸಹ ಸ್ವೀಕರಿಸಲ್ಪಡಲಿಲ್ಲ. ಹಿಂದೂಗಳಿಗೆ ಧರ್ಮಶಾಸನಗಳ ಬಗ್ಯೆ ಪ್ರತ್ಯೇಕ ವಿಧಿಯನ್ನು ಸೂಚಿಸುವ ಕಾನೂನು ಮಸೂದೆಯು ಸಭೆಯ ಮುಂದಿಡುವರೆ ಬಹುಮಾನಪಟ್ಟ ಟಿ. ವಿ. ಶೇಷಗಿರಿ ಅಯ್ಯರರವರಿಗೆ ದೊರಕಿರುತ್ತದೆ. ಈ ಪ್ರತ್ಯೇಕ ವಿಧಿಯು ಏನೆಂಬುದನ್ನು ಇನ್ನೊಂದು ಸಂಚಿಕೆಯಲ್ಲಿ ಪ್ರಕಟಿಸುವೆವು.

ಪುತ್ತೂರು ವರ್ಗದಾರರ ಸಂಘವು.

ಈ ಸಂಘದವರ ವಾರ್ಷಿಕ ಸಭೆಯು ನಾಳೆ ಮಧ್ಯಾನ್ಹ ೨ ಗಂಟೆಗೆ ಹ್ಯಾಕೋರ್ಟು ವಕೀಲ ಯು. ಸಿ. ಕೃಷ್ಣ ಭಟ್ಟರವರ ಅಧ್ಯಕ್ಷತೆಯಲ್ಲಿ ಪುತ್ತೂರಲ್ಲಿ ಕೂಡುವುದು. ವರ್ಗದಾರರಿಗೆ ಸಂಬಂಧಪಟ್ಟ ಹಲವು ವಿಷಯಗಳು ಚರ್ಚಿಸಲ್ಪಟ್ಟು ನಿರ್ಣಯಗಳ ಮೂಲಕ ತಮ್ಮ ಸಂಕಷ್ಟಗಳ ನಿವೃತ್ತಿಯನ್ನು ಸರಕಾರದವರಿಂದ ಕೇಳಿಕೊಳ್ಳುವರು. ಸುರಕ್ಷಿತಪಡಿಸಿದ ಕಾಡುಗಳ ವಿಷಯ ದೊರಿಯಬೇಕಾದ ರಿಯಾಯತಿಗಳು, ಆನೆ, ಹುಲಿ ಮೊದಲಾದ ಹಿಂಸ್ರಜಂತುಗಳ ನಾಶಕ್ಕೆ ಬೇಕಾದ ಉಪಾಯ ಕಲ್ಪನೆಯು, ಗ್ರಾಮಪಂಚಾಯತ ಸಭೆಗಳ ಅವಶ್ಯಕತೆ, ಎಲಿಮೆಂಟರಿ ವಿದ್ಯಾಭ್ಯಾಸದ ಪ್ರಸರಣೆ ಈ ಮೊದಲಾದವುಗಳ ಕುರಿತು ಸೌಕರ್ಯಗಳನ್ನು ಸರಕಾರದಿಂದ ವರ್ಗದಾರರ ಸಂಘದವರು ಎಂದಿನಂತೆಯೇ ಕೇಳಲು ಸಾಕು. ಇವುಗಳಲ್ಲದೆ ಮೂಲಗೇಣಿ ಆಸ್ತಿಗಳಲ್ಲಿ ಏರಿದ ತೀರ್ವೆಯನ್ನು ಪಟ್ಟಾದಾರರ ಮೇಲೆಯೇ ಹೊರಿಸಿದ ಅನ್ಯಾಯದ ನಿವೃತ್ತಿಯನ್ನು ಕೂಡಲೇ ಪಡಿಯುವಂತೆ ಈ ಸಂಘದವರು ಸಾಧಿಸುವುದು ಅತ್ಯಗತ್ಯವಾಗಿದೆ. ಬಹುಮಾನಪಟ್ಟ ಹ್ಯಾಕೋರ್ಟು ಜಡ್ಜರವರೂ ಸ್ಥಳೀಕ ಅಧಿಕಾರಿಗಳೂ ಈ ಅನ್ಯಾಯದ ನಿವೃತ್ತಿ ಬಗ್ಯೆ ಒಂದು ಕಾನೂನು ಮಸೂದೆಯು ಅಗತ್ಯವೆಂತ ಅಭಿಪ್ರಾಯಪಟ್ಟರೂ ಸರಕಾರದವರು ಈ ತನಕ ಈ ವಿಷಯದಲ್ಲಿ ಪೂರ್ಣ ಅಭಾವವನ್ನು ತೋರಿರುವುದು ತೃಪ್ತಿಕರವಲ್ಲ. ಈ ಬಗ್ಯೆ ಬೇಕಾದ ಬಲವತ್ತಾದ ಪ್ರಜಾಭಿಪ್ರಾಯದ ಕಳಕಳವನ್ನೆಬ್ಬಿಸಲು ತಕ್ಕ ವ್ಯವಸ್ಥೆಯು ನಮ್ಮ ಜಿಲ್ಲೆಯಲ್ಲಿಲ್ಲದಿರುವುದರಿಂದ ಈ ಅನ್ಯಾಯದ ನಿವೃತ್ತಿಯು ನಮಗೆ ಈ ವರೆಗೆ ದೊರಕಿರುವುದಿಲ್ಲ. ಪುತ್ತೂರು ವರ್ಗದಾರರ ಸಂಘದವರಾದರೂ ನಮ್ಮ ಜಿಲ್ಲೆಯ ಪ್ರಜಾಭಿಪ್ರಾಯ ವ್ಯವಸ್ಥೆಯ ದೀನದೆಸೆಗೆ ಗಮನಕೊಟ್ಟು ಸರಕಾರದವರಿಂದ ಇದರ ನಿವೃತ್ತಿಯನ್ನು ಜಿಲ್ಲೆಯವರೆಲ್ಲರ ಪರವಾಗಿ ಕೇಳಬೇಕಾಗಿದೆ. ಜಿಲ್ಲೆಯ ಪ್ರತಿನಿಧಿಗಳಾಗಿ ಮದ್ರಾಸು ನ್ಯಾಯನಿರ್ಮಾಣ ಸಭೆಯಲ್ಲಿ ಎರಡು ಜನ ಬಹುಮಾನಪಟ್ಟ ಮೆಂಬರರಿರುವರು. ಈ ಅಪರೂಪ ಬಹುಮಾನವೂ ಸಂದರ್ಭವೂ ನಮ್ಮ ಜಿಲ್ಲೆಗೆ ಪ್ರಕೃತವಿರುವುದರಿಂದ ಪ್ರಜಾಪ್ರತಿನಿಧಿಗಳಾದ ಈ ಮೆಂಬರರ ಮೂಲಕ ನ್ಯಾಯನಿರ್ಮಾಣ ಸಭೆಯಲ್ಲಿ ಇದರ ಇತ್ಯರ್ಥವನ್ನು ಈಗಲೀಗ ಕೇಳುವರೆ ಅನುಕೂಲ.

ಪುತ್ತೂರು ವರ್ಗದಾರರ ಸಂಘದವರೂ ನಮ್ಮ ಜಿಲ್ಲೆಯ ಇತರರೂ ಸಹ ಈ ವಿಷಯಕ್ಕೆ ಇನ್ನಾದರೂ ಗಮನಕೊಟ್ಟಾರೆಂಬದಾಗಿ ನಂಬಿರುವೆವು.

ತಾಲೂಕು ಪಟ್ಟಣವಾಗಿರುವ ಪುತ್ತೂರಲ್ಲಿದ್ದ ಸೆಕಂಡರಿ ಬೋರ್ಡು ಶಾಲೆಯನ್ನು ತೆಗದುಹಾಕಿದ ದೆಸೆಯಿಂದ ವರ್ಗದಾರರೂ ಇತರರೂ ತಮ್ಮ ಚಿಕ್ಕ ಚಿಕ್ಕ ಮಕ್ಕಳನ್ನು ಸೆಕೆಂಡರಿ ವಿದ್ಯಾಭ್ಯಾಸಕ್ಕಾಗಿ ಮಂಗಳೂರಿಗ್ಗೆ ಕಳುಹಿಸಿಕೊಡುವರೆ ಬಹಳ ತೊಂದರೆಗೊಳ್ಳುವರು. ವರ್ಗದಾರರ ಸಂಘದವರು ಬೋರ್ಡಿನವರಿಂದ ಇಂಥಾದೊಂದು ಶಾಲೆಯನ್ನು ಸ್ಥಾಪಿಸುವಂತೆ ಪ್ರಯತ್ನಿಸುವುದುಚಿತ. ಲೋಕಲ್ ಬೋರ್ಡುಗಳಿಗೆ ಜನರಲ್ಲಿ ಶಿಕ್ಷಣ ಪ್ರಸರಣೆಗೆಂತ ಸರಕಾರದವರಿಂದ ವಿಶೇಷ ದ್ರವ್ಯಸಹಾಯವು ದೊರಕುತ್ತಿರುವುದು. ಇಂಥಾ ಸಂದರ್ಭದಲ್ಲಿ ಪುತ್ತೂರಲ್ಲಿ ಸೆಕೆಂಡರಿ ಶಾಲೆಯ ಅವಶ್ಯಕತೆಯನ್ನು ಪುತ್ತೂರು ವರ್ಗದಾರರ ಸಂಘದವರು ಸರಕಾರದವರಿಗೆ ಮನ ಒಪ್ಪುವಂತೆ ವ್ಯಕ್ತಗೊಳಿಸಿದ್ದಲ್ಲಿ ವರ್ಗದಾರರ ಇಂಥಾ ವಿಜ್ಞಾಪನೆಯು ಸರಕಾರದವರಿಂದ ಮನ್ನಿಸಲ್ಪಡುವುದೆಂದು ಕೋರುತ್ತೇವೆ.

ಪುತ್ತೂರು ವರ್ಗದಾರರ ಸಂಘದ ನಾಳೆ ಕೂಡುವ ವರ್ಷಾವಧಿ ಸಭೆಯು ಸಭಾಕಾರ್ಯಗಳೆಲ್ಲವು ಜಯಹೊಂದಲೆಂತ ಈ ಮೂಲಕ ಅಪೇಕ್ಷಿಸಿರುವೆವು.

ಮಂಗಳೂರಿನಲ್ಲಿ ತಲೆದೋರಿರುವ ಪ್ಲೇಗು ಜಾಡ್ಯವು.

ಕಳದ ಕೆಲವು ವಾರಗಳಿಂದ ಪ್ರತಿ ವಾರದಲ್ಲಿಯೂ ಪ್ಲೇಗುಜಾಡ್ಯದಿಂದ ಮೃತಪಡುವವರ ಸಂಖ್ಯೆಯು ಕಡಮೆಯಾಗುವಂತೆ ತೋರುವುದಿಲ್ಲ. ರೋಗದ ಸೋಂಕನ್ನು-ಮುಂದಾಗಿ ಸೂಚಿಸುವ ಇಲಿಗಳ ಮರಣವು ಪಟ್ಟಣದ ಎಲ್ಲಾ ಕಡೆಗಳಲ್ಲಿಯೂ ಸಂಭವಿಸುತ್ತಿರುವುದು. ಪ್ಲೇಗುಜಾಡ್ಯವು ತಲೆದೋರಿದ ಕಳದ ಹತ್ತು ವರುಷಗಳಲ್ಲಿ ರೋಗದ ಸೋಂಕು ಪಟ್ಟಣದಲ್ಲಿ ವ್ಯಾಪಿಸುವ ವಿಧವು ಈ ಸರ್ತಿ ಬಹಳವಾಗಿ ಮಾರ್ಪಟ್ಟಿರುತ್ತದೆ. ಹಂಪನಕಟ್ಟೆ ಪ್ರಾಂತ್ಯದಲ್ಲಿ ಜನವರಿ ಫೆಬ್ರವರಿ ತಿಂಗಳುಗಳಲ್ಲಿ ಪ್ಲೇಗಿನ ಸೋಂಕು ತಲೆದೋರುತ್ತಿದ್ದರೆ ಈ ತಿಂಗಳುಗಳಲ್ಲಿ ರಥಬೀದಿ ಮೊದಲಾದ ಕಡೆಗಳು ಸೋಂಕಿಲ್ಲದೆ ಸುರಕ್ಷಿತವಾಗಿದ್ದವು. ಗೋಳಿಕಟ್ಟೆಯಲ್ಲಿ ಪ್ಲೇಗುಮರಣಗಳು ಸಂಭವಿಸುವಾಗ ಪಟ್ಟಣದ ಇತರ ವಟಾರಗಳಲ್ಲಿ ಮರಣಗಳು ಸಂಭವಿಸುತ್ತಿರಲಿಲ್ಲ. ಈ ಸರ್ತಿ ಸೋಂಕಿಲ್ಲದ ವಟಾರವು ಪಟ್ಟಣದಲ್ಲಿ ಅಪರೂಪವೆಂತ ಹೇಳಬಹುದು. ಹೀಗೆ ಪಟ್ಟಣದ ಎಲ್ಲಾ ಕಡೆಗಳಲ್ಲಿ ರೋಗವು ಪ್ರಬಲವಾಗಿ ವ್ಯಾಪಿಸುವ ಕಾರಣವೇನೆಂತ ಹೇಳಲಸಾಧ್ಯ. ಪುರಜನರಲ್ಲಿ ಹೆಚ್ಚಿನವರು ಪ್ಲೇಗುಜಾಡ್ಯದ ಸ್ವಭಾವವನ್ನು ಅರಿತಿರುವರು. ಸೋಂಕಿರುವ ಪ್ರಾಂತ್ಯವನ್ನು ಕೆಲವು ಸಮಯದ ವರೇಗೆ ಬಿಟ್ಟುಬಿಡುವುದೇ ಪ್ಲೇಗಿನಿಂದ ತಪ್ಪಿಸಿಕೊಳ್ಳುವ ಒಂದೇ ಸಾಧನೆಯೆಂತ ಪಟ್ಟಣಿಗರು ಕಳದ ತಮ್ಮ ಹತ್ತು ವರುಷಗಳ ಅನುಭವದಿಂದ ಚನ್ನಾಗಿ ತಿಳಿದಿರುತ್ತಾರೆ. ಆದರೆ ನಮ್ಮ ಪಟ್ಟಣದಲ್ಲಿ ಈ ಸಾಧನೆಯು ಸರ್ವರಿಗೂ ಶುಲಭಸಾಧ್ಯವಲ್ಲ. ವರುಷಕ್ಕೆ ಎರಡು ಮೂರಾವರ್ತಿ ಮನೆಸಾಮಾನುಗಳನ್ನು ಅತ್ತಿತ್ತ ವಯ್ಯಲಾರದವರೂ ಸೋಂಕಿಲ್ಲದ ಪ್ರಾಂತ್ಯಗಳಲ್ಲಿ ವಿಪರೀತ ಮನೆ ಬಾಡಿಗೆಗಳನ್ನು ಕೊಡಲಾರದವರೂ ಹಲವರಿರುವರು. ಇಂಥವರಿಗೆ ಸೋಂಕಿನಿಂದ ಬಿಡುಗಡೆಯು ಹ್ಯಾಗೆ ಸಾಧ್ಯ? ಜೀವದಾಸೆಯಿಂದ ಪಟ್ಟಣ ಬಿಟ್ಟುಹೋಗುವವರಿಗೆ ಸಹ ತಕ್ಕದಾದ ವಾಸ್ತವ್ಯವು ದೊರಕದಿರುವುದು ಈ ಪಟ್ಟಣದ ಮತ್ತೊಂದಡಚಣೆ. ಪ್ಲೇಗಿನ ಸೋಂಕಿರುವ ವಟಾರಗಳನ್ನು ಬಿಡಬೇಕೆಂತ ಮುನ್ಸಿಪಲ್ ಅಧಿಕಾರಿಗಳ ವತ್ತಾಯದ ಧಾವತಿಯೊಂದು, ರೋಗದಂಜಿಕೆ ಮತ್ತೊಂದು, ಈ ಕಾರಣಗಳಿಂದ ಕಂಗೆಟ್ಟು ಮನೆ ಬಿಟ್ಟುಹೋಗುವವರು ಪ್ಲೇಗಿನ ಅಂಟಿನಿಂದ ತಪ್ಪಿಸಿಕೊಳ್ಳುವಾಗ ಹಲವು ಸಂದರ್ಭಗಳಲ್ಲಿ ವಿಷಮಜ್ವರ, ಕೋರಾ ಮೊದಲಾದ ಮಹಾ ರೋಗಗಳ ಸೋಂಕಿರುವ ಸ್ಥಾನಗಳನ್ನು ಸೇರುವುದುಂಟು. ನೀರಿನ ಸರಬರಾಯಿಯು ಈ ಪಟ್ಟಣಕ್ಕೆ ಹ್ಯಾಗೂ ಇಲ್ಲ. ಕಳದ ಕಾಲ ಸುಕಾಲ ವೃಷ್ಟಿಯಿಲ್ಲದೆ ಮನೆ ಬಿಟ್ಟುಹೋದ ನಿವಾಸಿಕರು ತಿಳಿನೀರು ಕುಡಿಯಲಿಕ್ಕಿಲ್ಲದೆ ಹೊಲಸು ನೀರನ್ನು ಕುಡಿದು ಇನ್ನು ಕೆಲವು ಜಾಡ್ಯಗಳನ್ನು ಬರಮಾಡಿಕೊಳ್ಳುವುದುಂಟು. ಪ್ಲೇಗಿನ ಸೋಂಕಿನಿಂದ ನಾನಾ ಬಗೆಯಲ್ಲಿ ಬಳಲುತ್ತಿರುವ ಈ ನಮ್ಮ ಪಟ್ಟಣಿಗರಿಗೆ ಯಾವ ವಿಧಾನಗಳಿಂದ ಸಹಾಯವನ್ನಿತ್ತು ಅಸಂಖ್ಯಾತ ಕಷ್ಟ ಪೇಚಾಟಗಳಿಂದುಳಿಸಬಹುದೆಂಬುದನ್ನು ಮುನ್ಸಿಪಲ್ ಕೌನ್ಸಿಲಿನವರೂ ಸ್ಥಳೀಕ ಸರಕಾರದವರೂ ಪದೇ ಪದೇ ಪರ್ಯಾಲೋಚಿಸಬೇಕಾಗಿದೆ.

ಪ್ಲೇಗುಜಾಡ್ಯವು ನಮ್ಮ ಪಟ್ಟಣದಲ್ಲಿ ಕಾಲೂರಿ ಹತ್ತು ವರುಷಗಳಾದರೂ ಈ ಪಟ್ಟಣದಿಂದ ಇದರ ಸೋಂಕು ಅಜುಬಾಜಿನ ಹಳ್ಳಿ ಊರುಗಳಿಗೆ ವ್ಯಾಪಿಸದಿದ್ದಕ್ಕೆ ಸರ್ವರಕ್ಷಕನಾದ ಪರಮಾತ್ಮನಿಗೆ ಕೃತಜ್ಞರಾಗಿರತಕ್ಕದ್ದು. ಹ್ಯಾಗೂ ಪಾಸುಪೋರ್ಟುಗಳ ಏರ್ಪಾಡಿನ ಮೂಲಕ ಈ ವ್ಯಾಧಿಗೆ ಅಜುಬಾಜುಗಳಲ್ಲಿ ವ್ಯಾಪಿಸುವರೆ ಎಡೆ ದೊರಕಲಿಲ್ಲವೆಂತ ಹೇಳಬಹುದು. ಆದರೆ ಈ ಪಟ್ಟಣಕ್ಕೆ ಪ್ಲೇಗು ತಗಲದ ಹಾಗೆ ಮುಂಬಯಿಂದ ಬರುವ ಪ್ರಯಾಣಿಕರನ್ನೂ ಸಾಮಗ್ರಿಗಳನ್ನೂ ಕೊರಂಟೀನ್ ಮೊದಲಾದವುಗಳಲ್ಲಿಟ್ಟು ಈ ಮಾರಿಬೇನೆಯಿಂದ ಪುರವನ್ನು ರಕ್ಷಿಸಬೇಕೆಂತ ಪಾಸುಪೋರ್ಟುಗಳ ಜಾರಿ ನಡಿಸಿದರೂ ಪ್ಲೇಗುಜಾಡ್ಯವು ಇಲ್ಲಿ ಬಂದು ನೆಲೆಯಾಯಿತು. ಆದ್ದರಿಂದ ರೋಗಕ್ಕೆ ಸರಿಯಾದ ತಡೆಯನ್ನುಂಟುಮಾಡುವುದು ಪಾಸುಪೋರ್ಟು ಮೂಲಕ ಮಾತ್ರ ಪೂರ್ಣ ಸಾಧ್ಯವಲ್ಲ. ಅದಲ್ಲದೆ ವಾಯು ಗುಣದಲ್ಲಿಯೂ ಪ್ರಕೃತಿ ಲಕ್ಷಣದಲ್ಲಿಯೂ ನಮ್ಮ ಜಿಲ್ಲೆಗೆ ಸಮಾನವಾಗಿದ್ದು ಪಶ್ಚಿಮಕರಾವಳಿಯಲ್ಲಿರುವ ಮಲೆಬಾರಿನ ಕೆಲವು ಪಟ್ಟಣಗಳಲ್ಲಿ ಎರಡು ಮೂರು ವರುಷಗಳಿಂದ ಪ್ಲೇಗು ತಲೆದೋರಿರುವುದಾದರೂ ನಮ್ಮಲ್ಲಿರುವಂತೆ ವರುಷದ ಎಲ್ಲಾ ಭಾಗಗಳಲ್ಲಿಯೂ ಇದು ಉಲ್ಬಣವಾಗಿರುವಂತೆ ತೋರುವುದಿಲ್ಲ. ಉಲ್ಬಣವಾದರೂ ಆ ಪ್ರಾಂತ್ಯಗಳಲ್ಲಿ ಇದು ಬೇಗನೆ ಶಮನವಾಗುವುದು. ಹೀಗಿರುತ್ತಾ ಮಂಗಳೂರಲ್ಲಿ ಮಾತ್ರ ಪ್ಲೇಗು ಹೆಚ್ಚು ಕಡಿಮೆ ವರುಷದ ಎಲ್ಲಾ ಭಾಗಗಳಲ್ಲಿಯೂ ತೋರಿಸಿಕೊಳ್ಳುವರೆ ಕಾರಣವೇನು? ಇದಕ್ಕೆ ನಿವಾರಣೆಯ ಪ್ರಯತ್ನವೇನು.

ಜನಪದವು ಹೆಚ್ಚುತ್ತಾ ಬರುವ ಈ ಕಾಲದ ಆರೋಗ್ಯ ಸೂತ್ರಗಳಿಗೆ ಪಟ್ಟಣದ ರಚನೆಯು ಅನುಕೂಲವಾಗಿಲ್ಲದಿರುವುದೇ ಪ್ಲೇಗು ಇಲ್ಲಿ ಪ್ರಾಪ್ತಿಸಲು ಕಾರಣವಲ್ಲದಿದ್ದರೂ ಅದು ಇಲ್ಲಿ ಸ್ಥಿರವಾಗಿ ನೆಲೆಗೊಳ್ಳಲು ಕಾರಣವಾಗಿರಬೇಕೆಂದು ಊಹಿಸಬಹುದು. ಪೇಟೆಗಳಲ್ಲಿ ಒಂದರಮಾಡು ವ ಗೋಡೆಗಳು ಇನ್ನೊಂದು ಕಟ್ಟೋಣದಲ್ಲಿ ಅಮರಿಕೊಂಡಿರುವ ಮನೆ ಅಂಗಡಿ ಸಾಲುಗಳಲ್ಲಿ ಇಲಿಗಳಿಗೆ ಪ್ಲೇಗಿನ ಸೋಂಕನ್ನು ಬೀದಿಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಯ್ಯುವುದಕ್ಕೆ ಬಹಳ ಅನುಕೂಲ. ಆದ್ದರಿಂದ ಒಂದು ಮನೆ ವ ಅಂಗಡಿಯಲ್ಲಿ ಇಲಿ ಬಿದ್ದರೆ ಅದೇ ಸಾಲಿನಲ್ಲಿರುವ ಬೇರೆ ಕಟ್ಟೋಣಗಳಲ್ಲಿ ಸಹ ಇಲಿ ಬೀಳುವ ಸಂಭವವು ನಿಶ್ಚಯ. ಸೀಮೆ ಎಣ್ಣೆಯ ನೀರಿನಿಂದ ಇಂಥಾ ಕಟ್ಟೋಣಗಳಲ್ಲಿರಬಹುದಾದ ಪ್ಲೇಗು ರೇಣುಗಳನ್ನು ತೊಳದು ಕಟ್ಟಡಗಳನ್ನು ಶುದ್ಧವಾಗಿ ಮಾಡುವುದು ಸಾಧ್ಯವಲ್ಲ. ಯಾಕಂದರೆ ಪ್ಲೇಗು ಪ್ರಬಲವಾಗಿ ತಲೆದೋರುವ ಈ ಪಟ್ಟಣ ಪ್ರಾಂತ್ಯಗಳಲ್ಲಿ ಎರಡು ಯಾ ಮೂರು ಶತಮಾನಗಳ ಹಿಂದಿನಿಂದಿರುವ ಮಣ್ಣಿನ ಕಟ್ಟೋಣಗಳು ಒಂದೊಂದಾದರೂ ಇವೆ. ಇಂಥಾ ಕಟ್ಟೋಣಗಳಲ್ಲಿ ಇಲಿಗಳಿಂದ ಗೋಡೆಗಳ ಕೆಳಭಾಗದಲ್ಲಿಯೂ ಇತರ ಇಕ್ಕಟ್ಟಿನ ಸ್ಥಳಗಳಲ್ಲಿಯೂ ಮಾಡಲ್ಪಟ್ಟ ಸುರಂಗಗಳು ನೂರಾರು ಫೀಟು ಉದ್ದಕ್ಕಿವೆ. ಇಲಿಗಳಿಂದ ವಯ್ಯಲ್ಪಟ್ಟ ಪ್ಲೇಗುರೋಗ ರೇಣುಗಳು ಈ ಸುರಂಗಗಳಲ್ಲಿ ಭದ್ರವಾಗಿದ್ದು ಸಂದರ್ಭಾನುಸಾರ ರೋಗೋದ್ಭವಕ್ಕೆ ಕಾರಣವಾಗುವವು. ಇಂಥಾ ಮನೆಗಳಿರುವ ವಟಾರಗಳನ್ನಾಗಲಿ ಪೇಟೆಗಳನ್ನಾಗಲಿ ಸೋಂಕಿನಿಂದ ಭದ್ರಪಡಿಸುವುದು ಹೇಗೆ ಸಾಧ್ಯ? ಸರ್ವ ರೋಗ ಅಣುಗಳಿಗೆ ಜನ್ಮವನ್ನೀಯುವ ಹೊಲಸು ತುಂಬಿರುವ ವಟಾರಗಳು ಹಲವು ಇನ್ನೂ ಪಟ್ಟಣದ ಅನೇಕ ಕಡೆಗಳಲ್ಲಿರುವವು. ಆರೋಗ್ಯ ಏರ್ಪಾಡುಗಳಿಗೋಸ್ಕರ ಸರಕಾರದವರು ಮುನಿಸಿಪಾಲಿಟಿ ಮೊದಲಾದ ಲೋಕಲ್ ಬೋರ್ಡುಗಳಿಗೆ ಇತ್ತಿತ್ತ ದ್ರವ್ಯಸಹಾಯವನ್ನು ಕೊಡುತ್ತಿರುವರು. ಈ ಸಹಾಯದಿಂದ ನಮ್ಮ ಮುನಿಸಿಪಾಲಿಟಿಯವರು ಸಹ ಹೊಲಸು ತುಂಬಿರುವ ವಟಾರಗಳನ್ನು ಸರಿಪಡಿಸಿ ನಿರ್ಮಲವಾದ ವಾಯುಚಲನೆಯು ಪಟ್ಟಣದಲ್ಲಿ ಸರಿಯಾಗಿರುವಂತೆ ಅಲ್ಲಲ್ಲಿ ಹೊಸ ರಸ್ತೆಗಳನ್ನು ಹಾಕಿಸಲು ಪ್ರಾರಂಭಿಸಿರುವರು. ಆದರೆ ಈ ಕೆಲಸವು ಪಟ್ಟಣದ ಅನಾರೋಗ್ಯ ಸ್ಥಿತಿಯನ್ನು ಪರ್ಯಾಲೋಚಿಸಿದ್ದಲ್ಲಿ ಶೀಘ್ರವಾಗಿ ನಡಿಯುವಂತೆ ತೋರುವುದಿಲ್ಲ. ಈ ಏರ್ಪಾಡಿನ ಜ್ಯಾರಿಯನ್ನು ಬಹಳ ಅವಸರಪಟ್ಟು ನಡಿಸಬೇಕಾಗಿದೆ. ಇಲಿಗಳ ಸುರಂಗಗಳಿಂದ ತುಂಬಿಕೊಂಡಿದ್ದು ಹೊಲಸಿನಿಂದ ಕೊಳೆಯುತ್ತಿರುವ ಮತ್ತು ಎರಡು ಮೂರು ಶತಮಾನಗಳ ಹಿಂದಿನ ಮಣ್ಣಮುದ್ದೆಯು ನಿವಾಸಕ್ಕೆ ಅಪಾಯಕರವಾದ ಮನೆಗಳನ್ನು ನಿವಾಸಿಕರು ಸರಿಪಡಿಸುವಂತೆ ಅನುಕೂಲಿಸುವುದುಚಿತವಾಗಿರುತ್ತದೆ. ಇಂಥಾ ಒಂದೊಂದು ಮನೆಯನ್ನು ಸರಿಪಡಿಸಿದ್ದಲ್ಲಿ ಆ ಮನೆ ಇರುವ ವಟಾರಕ್ಕೂ ಪೇಟೆಗೂ ಕ್ಷೇಮ ದೊರಕುವುದು.

ಮುನಿಸಿಪಾಲಿಟಿಯ ಆರೋಗ್ಯ ಮತ್ತು ಪ್ಲೇಗು ಇಲಾಖೆಯ ಸಿಬಂದಿಯವರು ಆಯಾ ಮನೆ ವಟಾರಗಳನ್ನು ಪ್ಲೇಗು ಉಲ್ಬಣವಾದ ಕಾಲದಲ್ಲಿ ಮಾತ್ರ ಸಂದರ್ಶಿಸುವುದಕ್ಕಿಂತ ಪ್ಲೇಗು ಬೇನೆಯು ಶಮನವಾಗಿರುವ ಕಾಲಗಳಲ್ಲಿಯೂ ಸಹ ಇವುಗಳನ್ನು ಸಂದರ್ಶಿಸಿ ನಿವಾಸಿಗಳ ಮೂಲಕ ಈ ವಟಾರಗಳನ್ನು ನಿರ್ಮಲವಿಡುವಂತೆ ಪ್ರಯತ್ನಿಸಿದರೆ ಇವರ ಶ್ರಮವು ಸಾರ್ಥಕವಾಗುವುದು.

ಪುರಜನರೆಲ್ಲರೂ ಪ್ಲೇಗು ಸೋಂಕಿನಿಂದ ಧಾವತಿ ಪಡಿಯುವ ಈ ವೇಳೆಯಲ್ಲಿ ಇವರ ಶ್ರಮಾಯಾಸಗಳನ್ನು ಕಡಿಮೆ ಮಾಡುವ ಜನಶ್ರೇಷ್ಠರ ಸಾಧನೆಯು ವಂದನೀಯವಾಗುವುದು. ಆಪತ್ತಿನಲ್ಲಿ ನೆರವಾದ ಜನಶ್ರೇಷ್ಠರು ಜನರಾಪ್ತರಾಗುವರು.

ಪಿತೃಪ್ರೇಮ.

(ಕಳದ ಸಂಚಿಕೆಯಿಂದ ಮುಂದರಿಸಿದುದು)

೩

ಕ್ರಿಸ್ತಶಕ ಹನ್ನೊಂದನೇ ಶತಮಾನದ ಪ್ರಥಮ ವರುಷ. ಆ ವೇಳೆಯಲ್ಲಿ ನಮ್ಮ ಸನಾತನ ಧರ್ಮದ ಉದ್ಭಿಜ್ಜವು ತನ್ನ ಪ್ರಾಚೀನ ವಿರಾಟ್ ಸ್ವರೂಪವನ್ನು ಧರಿಸಿತ್ತು. ಈಗ ಭವ್ಯವಾಗಿ ಕಟ್ಟಲ್ಪಟ್ಟ ಹರ್ಮ್ಯಗಳಿದ್ದಲ್ಲಿ ನಿಬಿಡವಾದ ತರುರಾಜಿಯು ಪ್ರಚಂಡ

ವಾಗಿ ಬೆಳದಿತ್ತು. ಚಂಡಪ್ರತಾಪಿ ಸೂರ್ಯ ಕಿರಣಗಳು ಮಧ್ಯಾಹ್ನದಲ್ಲಿಯೂ ಅಲ್ಲಿ ಪ್ರವೇಶ ಮಾಡುತ್ತಿರಲಿಲ್ಲ.—ಗಗನ ಮಂಡಲವನ್ನೇ ಭೇದಿಸಲೆಳಸಿದ ತುಂಗೊತ್ತುಂಗ ವೃಕ್ಷಸಂಘ, ತಮ್ಮ ಲಂಬಾಯಮಾನವಾದ ಕರಗಳಿಂದ ಆವರಿಸಲ್ಪಡುವ ಕಂಟಕವಲ್ಲಿ, ಗಾವುದಗಾವುದ ವಿಸ್ತರಿಸಲ್ಪಟ್ಟ ನ್ಯಗ್ರೋಧ ವೃಕ್ಷ, ಫಲಸದ ವಿಸ್ತೀರ್ಣ, ರಕ್ತ ಕುಸುಮ ಪೂರಿತವಾದ ಅಸಂಖ್ಯತರುನಿಚಯ, ಗಗನ ಚುಂಬಿತವಾದ ಚೂತವೃಕ್ಷ, ಪಕ್ಷಿಗಳಿಗೂ ಸಂಚರಿಸಲದಳವಾದ ನಿಬಿಡತೆ, ಪ್ರಾಚೀನ ಕಾಲದಲ್ಲಿ ಮುರಿದು ಬಿದ್ದ ಗಿರಿಕುಹರ ನವಕುಸುಮಗಳಿಂದ ಕೂಡಿ ಪ್ರಿಯ ಪತಿಗಳನ್ನನುರಾಗದಿಂದ ಕೂಡಿದ ನವ ವಧುವಿನಂತೆಸೆವ ಕೋಮಲ ಲತಾವಳಿಯಿಂದ ವಿಸ್ತೀರ್ಣವಾದ ವಿಂಧ್ಯಾದ್ರಿಯ ಉತ್ತರ ದಿಕ್ಕಿನ ಅರಣ್ಯ ಪ್ರದೇಶದಲ್ಲಿ ಚಿತೋಡ ಸಂಸ್ಥಾನದಧಿಪತಿಯಾದ ಪರಾಕ್ರಮಿ ವೃದ್ಧ ಅಮರರಾಯನು ತನ್ನ ಚತುರ್ದಶ ವರುಷ ಪ್ರಾಯದ ಯುವರಾಜತೇಜ ಸಿಂಹನೊಡನೆ ಸೈನ್ಯ ಸಮೇತನಾಗಿ ಮೃಗಯಾಕ್ರೀಡೆಗೆ ಬಂದಿದ್ದನು. ಈ ಸಮಯವು ಬೆಳಗಿನ ಜಾವವಾದರೂ ಅರಣ್ಯದಲ್ಲೆಲ್ಲಾ ಕತ್ತಲೆಯು ಕವಿದಿತ್ತು. ಸಿಂಹ, ವ್ಯಾಘ್ರ, ವರಾಹಗಳ ಸುಳುವಿನಿಂದಲೂ, ಚೀತ್ಕಾರದಿಂದಲೂ ಹೃದಯಕಂಪನವುಂಟಾಗುತ್ತಿತ್ತು. ಕ್ರೂರ ಮೃಗಗಳು ನಡು ಹಗಲಿನಲ್ಲಿಯೇ ಪ್ರಾಣಿಗಳನ್ನು ನಿಶಂಕವಾಗಿ ಹಿಂಸಿಸುತ್ತಿದ್ದವು. ಪ್ರಜೆಗಳ ಮೊರೆ ಕೇಳಿ ರಾಜಾ ಅಮರರಾಯನು ಮೃಗಯಜ್ಞಕ್ಕೆ ಚಿತ್ತೈಸಿದ್ದನು. ರಾಜಾ ಯುವರಾಜರು ಗಜಗಳನ್ನೇರಿಯೂ ರಾಹುತರು ಅಶ್ವಾರೂಢರಾಗಿಯೂ ಪದಾತಿಯು ಕಾಲ್ನಡೆಯಿಂದಲೂ ಮೃಗಯಾವಿನೋದವನ್ನು ಮಾಡುತ್ತಿದ್ದರು.

ರಾಜನು ತ್ವೇಷಯುಕ್ತನಾಗಿ ಪ್ರಾತಃಕಾಲದಿಂದ ಈ ವರೇಗೂ ಪಶುಯಜ್ಞವನ್ನು ಮಾಡುತ್ತಿದ್ದನು. ರಾಜನು ಆವೇಶಯುಕ್ತನಾಗಿ ಯುವರಾಜನೊಡನೆ ಮೂರು ನಾಲ್ಕು ಸವಾರರೊಂದಿಗೆ ನಿಬಿಡವಾದ, ಭಯಂಕರವಾದ ಅರಣ್ಯದ ಮಧ್ಯ ಭಾಗಕ್ಕೆ ಬಂದು ಸೇರಿದನು. ಶರೀರವೆಲ್ಲಾ ಘರ್ಮದಿಂದ ಪೂರ್ಣ ತುಂಬಿತ್ತು. ಎಲ್ಲರೂ ವಿಶ್ರಾಂತಿಯನ್ನೆದುರುನೋಡುತ್ತಿರುವಲ್ಲಿ, ಚತುರ್ದಿಕ್ಕುಗಳಿಂದಲೂ, ಹಿಂಸ್ರಜಂತುಗಳ ಭಯಂಕರ ಘರ್ಜನೆಯು ಆಲಿಸಿದರು. ನಮ್ಮ ಈ ಸಣ್ಣ ಯೋದ್ಧಮಂಡಲಿಯು ತಮ್ಮ ಆಯುಧಗಳನ್ನಣಿ ಮಾಡುವಷ್ಟರಲ್ಲಿ, ಕಾಲಸ್ವರೂಪೀ, ಬಲಾಢ್ಯ, ನಾಲ್ಕು ವ್ಯಾಘ್ರಗಳು ತಮ್ಮ ವಿಕರಾಳ ಡಾಡೆಗಳನ್ನು ತೆರದು ಓಡಿ ಬಂದವು. ರೌದ್ರಾವೇಶದಿಂದ ಎರಡು ಗಜಗಳ ಮೇಲೆ ಹಾರಿದವು. ಒಂದನ್ನು ಗಜವು ತನ್ನ ಸುಂಡಾದಂಡದಲ್ಲಿ ಹಿಡಿದರೂ ಮಾವುತನನ್ನು ಕಾಲನರ ಮನೆಗೆ ಕಳುಹಿಸಿ ತಾನೂ ನಡೆಯಿತು. ತೇಜಸಿಂಹನ ಗಜಕ್ಕೆ ದಿಕ್ಕು ತೋರದು. ವ್ಯಾಘ್ರವು ತನ್ನ ವೈರಿಯನ್ನು ಯಾವಾಗ ನೋಡುವೆನೆಂದು ಅಂಬಾರಿಯನ್ನು ಹೊಕ್ಕಿತು. ಯುವರಾಜ ತೇಜಸಿಂಹನ ಸುಕೋಮಲವಾದ ಗಾತ್ರಗಳನ್ನೀಕ್ಷಿಸಿ ಅಪಾರ ಸಂತೋಷಪಟ್ಟಿತು. ತೇಜಸಿಂಹನಿಗೆ ಸ್ಮೃತಿ ತಪ್ಪಿತು. ಪೂರ್ವ ದಿಕ್ಕಿನಿಂದ ಒಂದರಮೇಲೊಂದರಂತೆ ನಾಲ್ಕಂಬುಗಳು ಕ್ರೂರಮೃಗದ ಶಿರವನ್ನು ಕತ್ತರಿಸಿದವು. ಇನ್ನು ಎರಡು ವ್ಯಾಘ್ರಗಳು ಇದ್ದೇ ಇದ್ದವು. ಅವುಗಳಿಗೆ ತ್ವೇಷವೇರಿ ಕಾದಾಡಲಾರಂಭಿಸಿದವು. ಅಶ್ವಾರೋಹಿಗಳು ವ್ಯಾಘ್ರಗಳೊಡನೆ ಕಾದಾಡಿ ಒಂದನ್ನು ತಮ್ಮ ಸಂಗಡ ಯಮಪುರಿಗೆ ಕೊಂಡುಹೋದರು. ಮಾವುತರು ಮಡಿದರು. ಸೈನಿಕರು ಸಂದರು. ರಾಜಾ ಯುವರಾಜರು ಮೂರ್ಛಿತರಾದದ್ದನ್ನು ನೋಡಿ ಶೇಷ ವ್ಯಾಘ್ರವು ತನ್ನಾರ್ಭಟೆಯಿಂದ ಪ್ರಲಯವನ್ನುಂಟುಮಾಡುತ್ತಾ ಒಂದಾನೆಯನ್ನು ಗಾಯಮಾಡಿತು. ಎದುರಿನಿಂದ ಬರುವ ಅದೃಶ್ಯರೂಪವಾದ ಬಾಣಗಳನ್ನು ತಡೆಯಲಾರದೆ ಅತ್ತಕಡೆ ತಿರುಗಿತು. ಆಗ ಕವಚಧಾರಿಯಿಂದ ಸತತವಿಜಯಿಯಾದ ತನ್ನ ಬಿಲ್ಲನ್ನೇರಿಸಿ ಬಲಶಾಲಿಯಾದ ವೀರಾಗ್ರೇಸರನೊಬ್ಬನು ಮುಂದುವರಿದನು. ಬಿಲ್ಲಿನಲ್ಲಿ ಅಂಬನ್ನೇರಿಸಿ ಗುರಿಹಿಡಿದು ಎದುರಿಗೆ ಬರುವ ವ್ಯಾಘ್ರದ ಮಸ್ತಕವನ್ನಿರಿದನು. ಮೂರು ಬಾಣಗಳನ್ನು ತೆರೆದ ಭಯಂಕರವಾದ ಅದರ ಬಾಯಿಯಲ್ಲಿ ತುಂಬಿದನು. ಅಂಬು ಭೋಜನದಿಂದ ತೃಪ್ತಿಹೊಂದಿದಂತೆ ವ್ಯಾಘ್ರವು ಕಾಲುಗಳನ್ನೀಡಿ ಶಯನ ಮಾಡಿತು. ಪ್ರಾಣೋತ್ಕ್ರಮಣ ಕಾಲದಲ್ಲಿ ಮಾಡಿದ ನಾದವು ದಿಕ್ಕುಗಳನ್ನು ಕಂಪನಮಾಡಿತು.

ರಾಜನು ಕವಚಧಾರಿಯಾದ ವೀರಯುವಕನ ಪರಾಕ್ರಮವನ್ನೂ, ತನ್ನ ಪುತ್ರನ ಹೇಡಿತನವನ್ನೂ ನೋಡಿ ವೀರ ಯುವಕನಿಗೆ ಧನ್ಯವಾದವನ್ನಿತ್ತನು. ರಾಜನು ತನ್ನ ಅಂಬಾರಿಯನ್ನಿಳಿದು ಸ್ನೇಹಭರದಿಂದ ಮುಂದುವರಿದು "ಶೂರಾಗ್ರೇಸರನೇ ಇತ್ತಬಾ, ಬಾ. ಚಿತೋಡಾಧಿಪತಿ ಅಮರರಾಯನು ನಿನ್ನನ್ನು ಅಂಗೀಕರಿಸುವರೆ ಉತ್ಸುಕನಾಗಿರುವನು. ಇಂದು ನೀನಲ್ಲದಿದ್ದರೆ ನಮ್ಮ ಗತಿಯು ವಿಪರೀತವಾಗುತ್ತಿತ್ತು" ಎಂದು ಬಾಹುದಂಡವನ್ನು ಪಸರಿಸಿದನು.

ಕವಚಧಾರಿಯು ಸ್ತಬ್ಧನಾದನು. ಏಕೆ? ಕೇಳಿರಿ, ಅವನು ತನ್ನಷ್ಟಕ್ಕೆನೇ ಗುಣಗುಣಿಸುವನು. "ಏನಾಶ್ಚರ್ಯ! ಪ್ರತ್ಯಕ್ಷ ನನ್ನ ಶತ್ರುವು ನನ್ನಿಂದಲೇ ರಕ್ಷಿಸಲ್ಪಟ್ಟನು! ಅವನೇ ಸ್ವತಃ ಆಲಿಂಗಿಸಲಿಚ್ಛಿಸುವನು. ಇವನಿಗೆ ಭ್ರಮೆಯಲ್ಲಿರಿಸುವದು ಸರಿಯಲ್ಲ. ಆದರೆ ಬೇಡ. ಈತನ ಸಂಗಡಲೇ ಚಿತೋಡಕ್ಕೆ ಹೋಗಿ ಅಲ್ಲಿ ವಿವರಿಸುವೆನು. ಈಗ ಈತನನ್ನಾಲಿಂಗಿಸುವರೆ ಆತಂಕವೇನು? ಸಮರಾಂಗಣದಲ್ಲಿ ಶತ್ರುತ್ವವಲ್ಲದೆ ಇಲ್ಲಿ ಇಲ್ಲವೇನು? ಈ ಕೃತ್ಯವು ಲೀಲಾವತಿಬಾಯಿಗೆ ಪ್ರಿಯವಾದೀತೇನು? ಅವಳ ಉಪದೇಶವು ಹಾಗೆಯೇ ಇರುವದು. ಇದು ನೀತಿವಿರುದ್ಧವಲ್ಲ."

ವಿಚಾರಮಾಲಿಕೆಯು ಪೂರೈಸಿತು. ಅಮರರಾಯನನ್ನಾಲಿಂಗಿಸಿದನು. ಇತರ ಸೈನ್ಯವು ಬಂದು ಸೇರಿತು. ಅಮರರಾಯನು, ಆ ಯುವಕ, ಯುವರಾಜ ತೇಜಸಿಂಹ, ಮೃತಪಟ್ಟ ಸವಾರರೊಡನೆ ಸುರಕ್ಷಿತರಾಗಿ ಬಿಡಾರಕ್ಕೆ ಬಂದು ಮುಟ್ಟಿದನು. ಆ ಕವಚಧಾರಿವೀರನಿಗೆ ಒಂದು ಶೃಂಗರಿಸಲ್ಪಟ್ಟ ಪಟಗೃಹದಲ್ಲಿ ಇಳಿಸಿದರು. ಮೃತರಿಗೆ ದಹನಸಂಸ್ಕಾರ ಮಾಡಿಸಿ ಶಿಕಾರಿಯನ್ನು ಪೂರೈಸಿ ಚಿತೋಡಕ್ಕೆ ಹಿಂತೆರಳಿದರು.

(ಮುಂದೆಸಾಗುವುದು.)

M. V. L. Prabhu.

ಪಶ್ವಾದಿಗಳಿಂದ ಮನುಷ್ಯರು ಕಲಿಯತಕ್ಕ ನಡತೆ.

ಸಕಲ ಪ್ರಾಣಿ ವರ್ಗಗಳಲ್ಲಿಯೂ ಶ್ರೇಷ್ಠತ್ವವನ್ನು ಹೊಂದಿದ ಮನುಷ್ಯ ವರ್ಗದಲ್ಲಿ ನಾಗರೀಕತೆಯು ವೃದ್ಧಿಯಾಗುತ್ತಾ ಬಂದ ಹಾಗೆಲ್ಲಾ ರೋಗಾದಿವ್ಯಸನಗಳೂ ಹೆಚ್ಚಾಗುತ್ತಾ ಬರುತ್ತಿವೆ. ಅನಾಗರೀಕರೆಂದನ್ನಿಸಿಕೊಂಡ ಪ್ರಾಚೀನ ಮನುಷ್ಯ ವರ್ಗದವರು ಈಗ ಪ್ರಬಲವಾಗಿ ಹಬ್ಬಿಕೊಂಡಿರುವ ಅನೇಕ ರೋಗಗಳನ್ನು ಎಂದೂ ಅನುಭವಿಸಿಲ್ಲವು. ಇನ್ನೂ ಹಳ್ಳಿಪಳ್ಳಿಗಳಲ್ಲಿ ವಾಸಮಾಡುವ ಸಾಧಾರಣ ಜನರು ಪೇಟೆ ಪಟ್ಟಣಗಳಲ್ಲಿ ವಾಸಿಸುವ ನಾಗರಿಕರೆಂದನ್ನಿಸಿಕೊಳ್ಳುವವರಿಗಿಂತ ಎಷ್ಟೋ ಆರೋಗ್ಯ ಸ್ಥಿತಿಯಲ್ಲಿ ಇರುವರು. ಮನುಷ್ಯರು ಎಡೆಬಿಡದೆ ರೋಗಾದಿಗಳಿಂದ ಸಂಕಟಪಡುತ್ತಿರುವಂತೆ ಮೃಗಪಕ್ಷಿಗಳು ಸಂಕಟಪಡುವದಿಲ್ಲ. ಅವುಗಳಲ್ಲಿಯೂ ಮನುಷ್ಯರು ಸಾಕಿದ ಪ್ರಾಣಿಗಳಿಗೆ ಸಂಭವಿಸುವಷ್ಟು ರೋಗಗಳು ಕಾಡು ಪ್ರಾಣಿಗಳಿಗೆ ಸಂಭವಿಸುವದಿಲ್ಲ. ಇಷ್ಟು ಮಾತ್ರವಲ್ಲ, ಮೃಗಪಕ್ಷಿಗಳಿಗೆ ದಿವ್ಯವಾದ ಭವಿಷ್ಯತ್ ಜ್ಞಾನ ಶಕ್ತಿಯು ಇರುವದೆಂದು ಅವುಗಳ ನಡತೆಯಿಂದ ವ್ಯಕ್ತವಾಗುವುದು. ಅವುಗಳು ಅನೇಕಾವರ್ತಿ ಮುಂದಕ್ಕೆ ಸಂಭವಿಸಲಿಕ್ಕಿರುವ ಬಿರುಗಾಳಿ, ಭೂಕಂಪವೇ ಮೊದಲಾದ ಉತ್ಪಾತಗಳನ್ನು ಕೆಲವು ಚಿಹ್ನೆಗಳಿಂದ ಸೂಚಿಸುವವು. ಜಟಾಯುವು ತನ್ನ ದೀರ್ಘ ದರ್ಶನಾಶಕ್ತಿಯಿಂದ ಬಹು ದೂರ ಪ್ರದೇಶಗಳಲ್ಲಿ ನಡೆಯುವ ಸಂಗತಿಗಳನ್ನು ಹೇಳುತ್ತಿದ್ದನೆಂದು ರಾಮಾಯಣದಲ್ಲಿ ಹೇಳಿಯದೆ. ಪಕ್ಷಿ ವರ್ಗಕ್ಕೆ ಇಂಥಾ ದೀರ್ಘದರ್ಶನಾ ಶಕ್ತಿಯು ಹ್ಯಾಗುಂಟಾಯಿತೆಂದು ಆತನನ್ನು ಕೇಳಲು, ಆತನು ಕೊಟ್ಟ ಉತ್ತರವೇನಂದರೆ,—ನಮ್ಮಲ್ಲಿ ದಂಪತಿಗಳು ಯುಕ್ತಕಾಲದಲ್ಲಿ ಅಲ್ಲದೆ ಎಂದಿಗೂ ಜತೆಯಾಗಲಾರರು. ಮಲಮೂತ್ರಾದಿಗಳನ್ನು ಎಂದಿಗೂ ಶರೀರದಲ್ಲಿರಗೊಡಿಸದೆ ಕೂಡಲೇ ವಿಸರ್ಜನೆ ಮಾಡುವರು. ಇದೇ ನಮ್ಮ ಪಕ್ಷಿ ವರ್ಗದ ದಿವ್ಯ ಶಕ್ತಿಯ ಅಂತರ್ಯವು. ಜಟಾಯುವಿನ ಉತ್ತರವು ಬಹಳ ಅಲ್ಪವಾಗಿ ಕಂಡು ಬಂದರೂ ಅದು ಶ್ರೇಷ್ಠವಾದ ಯೋಗ ಶಾಸ್ತ್ರದಲ್ಲಿಯೂ ವೈದ್ಯಸಾರದಲ್ಲಿಯೂ ಹೇಳಿದ್ದಕ್ಕನುಸಾರವಾಗಿಯೇ ಇರುವದು. ಮೃಗ ಪಶ್ವಾದಿ ತಿರ್ಯಗ್ಜಂತುಗಳು ಹಸಿವೆಯಿಲ್ಲದೆ ಎಂದೂ ತಿನ್ನಲಾರವು; ತೃಷೆಯಿಲ್ಲದೆ ಎಂದೂ ಕುಡಿಯಲಾರವು. ಮಲಮೂತ್ರಾದಿ ದುರ್ಗಂಧಗಳನ್ನು ಹೆಚ್ಚು ಸಮಯ ಶರೀರದಲ್ಲಿ ಇರಗೊಡಿಸದೆ ಅವಶ್ಯ ತೋರಿದ ಕೂಡಲೇ ವಿಸರ್ಜನೆ ಮಾಡುವವು. ಅವುಗಳಲ್ಲಿ ಗಂಡು ಹೆಣ್ಣು ತಕ್ಕ ಸಮಯ ಹೊರತು ಎಂದಿಗೂ ಜತೆಯಾಗಲಾರವು. ಗರ್ಭವು ನಿಲ್ಲುತ್ತಲೇ ಹೆಣ್ಣು ಪ್ರಾಣಿಯು ಗಂಡು ಪ್ರಾಣಿಯನ್ನು ಹತ್ತರ ಬರಲೀಸದು. ಈ ರೀತಿಯಾಗಿ ಅವುಗಳು ಸರ್ವ ವಿಧದಲ್ಲಿಯೂ ಪ್ರಕೃತಿ ಧರ್ಮಕ್ಕನುಸಾರವಾಗಿಯೇ ವರ್ತಿಸುವವು. ಈ ಪ್ರಕೃತಿ ಧರ್ಮವೇ ಅವುಗಳ ಆರೋಗ್ಯಾದಿ ಸರ್ವ ಸಂಪತ್ತುಗಳಿಗೂ ಮೂಲ ಕಾರಣವು.

ಹೀಗಿರುತ್ತಾ ಪ್ರಾಣಿ ವರ್ಗದಿಂದ ಉತ್ಪನ್ನವಾಗಿ ಶ್ರೇಷ್ಠತ್ವವನ್ನು ಪಡೆದಿರುವ ನರ ವರ್ಗದಲ್ಲಿ ಆರೋಗ್ಯಾದಿ ಮೇಲೆ ವಿವರಿಸಿದ ಮಹಾ ಸಂಪತ್ತುಗಳು ಕಡಿಮೆಯಾಗಲು ಕಾರಣವೇನು? ಪ್ರಕೃತಿ ಧರ್ಮವನ್ನು ತಿರಸ್ಕರಿಸಿ ನಡದದ್ದೇ ಮನುಷ್ಯನ ಸರ್ವ ಸಂಕಷ್ಟಗಳಿಗೂ ಮೂಲ ಕಾರಣವು. ಮನುಷ್ಯನ ಸ್ವಾಭಾವಿಕ ಆಹಾರವು ಕಂದ ಮೂಲ ಫಲಗಳೇ ಆಗಿದ್ದರೂ ಮೀನು ಮಾಂಸಾದಿ ಅಯೋಗ್ಯ ಪದಾರ್ಥಗಳನ್ನು ಮಸಾಲೆ ಒಗ್ಗರಣೆಗಳಿಂದ ರುಚಿಪಡಿಸಿ ತಿಂದುಕೊಂಡು ಹೊಟ್ಟೆಯನ್ನು ಒಂದು ಸ್ಮಶಾನವನ್ನಾಗಿ ಮಾಡಿಟ್ಟುಕೊಳ್ಳುವನು. ಶುದ್ಧ ನೀರನ್ನು ಕುಡಿದು ದಾಹವನ್ನು ತಣಿಸಿಕೊಳ್ಳುವ ಬದಲಿಗೆ ಕಾಫಿ, ಚಾ, ಮೊದಲಾದ ಮದುಪಾನಗಳನ್ನು ಕುಡಿಯುವುದರಲ್ಲಿ ಆಸಕ್ತನಾಗುವನು. ನಿಯಮಿಸಿದ ಗಂಟೆ ಪ್ರಕಾರ ಹಸಿಯು ಬಾಯಾರಿಕೆಗಳಿಲ್ಲದಿದ್ದರೂ ತಿಂದು ಕುಡಿಯದೆ ಎಂದಿಗೂ ಬಿಡನು. ಕೆಲವು ವೇಳೆ ರುಚಿಕರ ಪದಾರ್ಥಗಳೇನಾದರೂ ಸಿಕ್ಕುತ್ತಲೇ ತನ್ನ

ಹೊಟ್ಟೆಯು ಒಂದು ಹಸಿಬಿ ಚೀಲವೋ ಎಂಬಂತೆ ಒತ್ತೊತ್ತಿ ತುಂಬಿಸುವನು. ಅನೇಕಾವರ್ತಿ ಉದಾಸೀನದಿಂದಾಗಲೀ ಕೆಲಸದ ಭರದಿಂದಾಗಲೀ ಅಗತ್ಯವಿದ್ದಾಗ ಮಲಮೂತ್ರ ವಿಸರ್ಜನೆಯನ್ನು ಮಾಡದೆ ಬಹಳ ಸಮಯದ ವರೆಗೆ ಶರೀರದಲ್ಲಿ ಕಟ್ಟಿಕೊಳ್ಳುವನು. ಸ್ತ್ರೀಸಂಗ ಮಾಡುವುದಕ್ಕೆ ಅವನು ಅಕಾಲ ಈ ಕಾಲವೆಂದು ನೋಡದೆ ಸದಾ ಕಾಲವೂ ಇಚ್ಛಾನುಸಾರ ವರ್ತಿಸುವನು. ಗರ್ಭ ಕಾಲದಲ್ಲಿಯೂ ಪ್ರಸವ ಕಾಲದಲ್ಲಿಯೂ ಸ್ತ್ರೀಯರಿಗೆ ಉಂಟಾಗುವ ಅನೇಕ ಆಪತ್ತುಗಳಿಗೆ ಈ ವಿಧದ ಅಹಿತ ಸಮ್ಮೇಲನವೇ ಕಾರಣವು. ಮನುಷ್ಯರಲ್ಲಿ ಈ ಆತುರವು ನೆಲೆಗೊಂಡಿರುವದು ಸಂತಾನಾಭಿವೃದ್ಧಿಗಲ್ಲದೆ ಬೇರೆ ಸುಖಕಲ್ಲವೆಂಬದನ್ನು ಮರೆತು ಬಿಟ್ಟು ಸ್ತ್ರೀ ಪುರುಷರು ಗರ್ಭೋತ್ಪನ್ನವಾದ ತರುವಾಯ ಸಮ್ಮೇಲನವಾದರೆ ಜನನೇಂದ್ರಿಯದ ಬಳಿಗೆ ರಕ್ತವು ಹೆಚ್ಚಾಗಿ ಪ್ರವಹಿಸಿ ಗರ್ಭಪಿಂಡವನ್ನು ಸಂಕಟ ಪಡಿಸುವದು. ಹೀಗೆ ಚೆನ್ನಾಗಿ ಪರಿಶೀಲಿಸಿ ನೋಡಿದರೆ ಮನುಷ್ಯ ವರ್ಗವು ಪ್ರಕೃತಿ ಧರ್ಮವನ್ನು ಬಿಟ್ಟು ನಾಗರಿಕತೆಯ ನವ ಧರ್ಮವನ್ನು ಹೆಚ್ಚೆಚ್ಚಾಗಿ ಅನುಸರಿಸಿ ಬರುತ್ತಾ ದೇಹಪ್ರಕೃತಿಯು ಹೆಚ್ಚೆಚ್ಚಾಗಿ ಕೆಡುತ್ತಾ ಬರುವುದು.

ಆನಂದ.

ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನ.

ಸೋಯಾಬೀನ್ ಎಂಬ ಅವರೆ ಕಾಳಿನ ಪ್ರಯೋಜನವು.

ಸೋಯಾ ಅವರೆ ಕಾಳಿನ ಬೇಸಾಯದ ಕುರಿತು ಇದೇ ಪತ್ರಿಕೆಯ ೩ನೇ ಸಂಚಿಕೆಯಲ್ಲಿ ಎಲ್ಲೂರು ಸುಬ್ಬರಾಯರು ಬರೆದ ಲೇಖನವು ವಾಚಕರಲ್ಲಿ ಜ್ಞಾಪಕವಿರಬಹುದಷ್ಟೆ. ಈಚೆಗೆ ಅಮೆರಿಕದ ಒಂದು ವೈದ್ಯಕ ಪತ್ರಿಕೆಯಲ್ಲಿ ಈ ಕಾಳು ಶೀಮೂತ್ರ ಬಹುಮೂತ್ರ ಇತ್ಯಾದಿ ಮೂತ್ರ ರೋಗಗಳಿಗೆಲ್ಲಾ ಬಹು ಒಳ್ಳೇದು. ಸೋಯಾಬೀನಿನಲ್ಲಿ ಸ್ಟಾರ್ಚ್ ಎಂಬ ಗಂಜಿ ಪದಾರ್ಥವು ಹೆಚ್ಚಿಲ್ಲದಿರುವುದೇ ಇದು ಮೂತ್ರ ರೋಗಗಳಿಗೆ ಗುಣಕಾರಿಯಾಗಲು ಕಾರಣ. ಒಬ್ಬ ಫ್ರೆಂಚ ವೈದ್ಯನು ಈ ಕಾಳಿನಿಂದ ರೊಟ್ಟಿಮಾಡುವ ವಿಧಾನವನ್ನು ಕಂಡುಕೊಂಡು ಅಲ್ಜೀರಿಯ ಎಂಬಲ್ಲಿಯ ಮೂತ್ರರೋಗಿಗಳಲ್ಲಿ ಅನೇಕರಿಗೆ ಪ್ರಯೋಗಿಸಿದಲ್ಲಿ ಹೆಚ್ಚಿನ ಗುಣಾಂಶ ಕಂಡುಬಂದದ್ದು ಪ್ರಕಟವಾಗಿದೆ. ನಮ್ಮಲ್ಲಿ ಈ ಬೀಜದ ರೊಟ್ಟಿಯ ಪ್ರಯೋಗವು ಈ ವರೆಗೆ ಇಲ್ಲದ್ದರಿಂದ ಇದನ್ನು ಅವರೆ ಕಾಳಿನಂತೆ ಮೇಲೋಗರ ಮಾಡಿ ಉಪಯೋಗಿಸಿಕೊಳ್ಳಬಹುದು. ಮೇಲೋಗರ ಮಾಡುವ ಮೊದಲು ಈ ಕಾಳನ್ನು ೧೨ ಯಾ ೧೬ ತಾಸುಗಳ ವರೆಗೆ ಅದರ ಮೇಲ್ದೊಗಟೆಯು ಎದ್ದೇಳುವ ತನಕ ನೀರಲ್ಲಿ ನೆನೆಯ ಹಾಕಬೇಕು. ಅನಂತರ ಉಪ್ಪು ನೀರಲ್ಲಿ ಬೇಯಿಸಿ ಒಣಗಿಸಿ ಇತರ ಅವರೆ ಕಾಳಿನಂತೆಯೇ ಮೇಲೋಗರ ಮಾಡಬೇಕು. ಈ ಕಾಳಿನ ಹಿಟ್ಟು ಮಾಡಿ ಹಿಟ್ಟಿನಿಂದ ಸಾರು ಮಾಡಿ ಕುಡಿಯುವದು, ಯಾ ಬಿಸ್ಕುಟು ಮಾಡಿ ತಿನ್ನುವದು ಬಹಳ ಹಿತಕರ.

ಈ ಉತ್ಕೃಷ್ಟತೆಯು ಸೋಯಾ ಅವರೆ ಕಾಳಿನಲ್ಲಿರುವುದಲ್ಲದೆ ಇದರಿಂದ ಎಣ್ಣೆಯೂ, ಹಿಂಡಿನಿಂದ ಸಾರವತ್ತಾದ ಗೊಬ್ಬರವೂ ದನಕರುಗಳಿಗೆ ಪುಷ್ಟಿಕರವಾದ ಸತ್ವ ಕೂಡಿದ ಆಹಾರವೂ ದೊರಕಬಹುದಾದ್ದರಿಂದ ಈ ನಮ್ಮ ಜಿಲ್ಲೆಯಲ್ಲಿಯೂ ಈ ಸೋಯಾ ಅವರೆ ಕಾಳನ್ನು ಬೆಳೆಯಿಸಿ ಇದರಿಂದುಂಟಾಗುವ ಪ್ರಯೋಜನವನ್ನು ಹೊಂದುವುದು ವಿಹಿತವು.

ಶ್ರೀ. ಶ್ರೀ.

ಎಮ್ಮೆ.

ಎಮ್ಮೆಗಳಿಂದ ಆರಂಬಗಾರರಿಗೆ ಬಹಳ ಪ್ರಯೋಜನ ಉಂಟೆಂಬದನ್ನು ಎಷ್ಟು ಹೇಳಿದರೂ ಕೊಂಚವೇ ಆಗಿರುತ್ತದೆ. ಹೀಗಿದ್ದಾಗ್ಯೂ ಎಮ್ಮೆಗಳ ತಳಿಗಳನ್ನು ಅಭಿವೃದ್ಧಿ ಪಡಿಸಲು ನಾವು ಸ್ವಲ್ಪವೂ ಪ್ರಯತ್ನಪಡದಿರುವುದು ಬಹಳ ಅನ್ಯಾಯವೇ ಸರಿ. ಹಾಲು ಕೊಡತಕ್ಕ ವಿಷಯದಲ್ಲಿ ಎಮ್ಮೆಯು ಯೂರೋಪು ದೇಶದ ಹಸುಗಳಿಗೆ ಹೆಚ್ಚು ಕಡಿಮೆ ಸಮಾನವಾಗಿದೆ; ಮತ್ತು ಇಂಡಿಯಾ ದೇಶದ ದನಕರುಗಳಲ್ಲೆಲ್ಲಾ ಎಮ್ಮೆಯನ್ನು ಸಾಕುವುದು ಅತಿ ಸುಲಭ. ಇಂಡಿಯಾದೇಶದ ಬಹಳ ಶ್ಲಾಘ್ಯವಾದ ತಳಿಯ ಹಸುವು ಸಹಾ ಒಂದು ಸಾಧಾರಣವಾದ ಎಮ್ಮೆಯಷ್ಟು ಹಾಲು ಕೊಡುವುದಿಲ್ಲ. ಅಲ್ಲದೆ ಎಮ್ಮೆಯು ಯಾವ ಮೇವನ್ನು ಹಾಕಿದರೂ ತಿನ್ನುವುದಲ್ಲದೆ ಹಗಲು ಮತ್ತು ರಾತ್ರೆ ಎರಡು ವೇಳೆಗಳಲ್ಲೂ ಮೇಯುವುದು. ಹಸುವಿಗೆ ಕಸ ಕಡ್ಡಿಯಿಂದ ಕೂಡಿದ ಕಶ್ಮಲವಾದ ಮೇವನ್ನು ತಿನ್ನಿಸಕೂಡದು; ಎಮ್ಮೆಗಾದರೋ ಯಾವ ಮೇವನ್ನು ಬೇಕಾದರೂ ಹಾಕಬಹುದು. ಎಮ್ಮೆಯ ಹಾಲಿನಲ್ಲಿ ಹಸುವಿನ ಹಾಲಿಗಿಂತ ಹೆಚ್ಚು ಬೆಣ್ಣೆಯು ಸಿಕ್ಕುವುದು. ಅಂತೂ ವರುಷಕ್ಕೆ ಒಂದು ಎಮ್ಮೆಯಿಂದ ೮೦ ರೂಪಾಯಿ ವರಮಾನವು ದೊರಿಯುವುದೆಂದು ಹೇಳಬಹುದು. ಹೀಗಿದ್ದಾಗ್ಯೂ ಬೀಜಕ್ಕೆ ಅತ್ಯುತ್ತಮವಾದ ತಳಿಗಳ ಕೋಣಗಳನ್ನು ಆರಿಸಿಟ್ಟುಕೊಂಡು ಅವುಗಳಿಂದ ಎಮ್ಮೆಗಳ ತಳಿಯನ್ನು ಅಭಿವೃದ್ಧಿಗೊಳಿಸಲು ಯಾರೂ ಸ್ವಲ್ಪವೂ ಪ್ರಯತ್ನ ಪಟ್ಟಿಲ್ಲ. ಗಾಡಿಗಳನ್ನೆಳದು ಅರ್ಧಜೀವವಾಗಿರುವ ಕೋಣಗಳನ್ನೆಲ್ಲಾ ಬೀಜಕ್ಕೆ ಉಪಯೋಗಿಸುವರು. ಹೀಗೆ ಮಾಡುವುದರಿಂದ ಎಮ್ಮೆಗಳು ದಿನೇ ದಿನೇ ಕ್ಷೀಣಗತಿಯನ್ನು ಹೊಂದುವುವು.

ದಿನ ಒಂದಕ್ಕೆ ನಾಲ್ಕು ಸೇರು ಮೊದಲ್ಗೊಂಡು ನಾಲ್ವತ್ತು ಸೇರಿನ ವರವಿಗೂ ಹಾಲು ಕೊಡತಕ್ಕ ಅನೇಕ ತರಹ ಎಮ್ಮೆಯ ತಳಿಗಳಿವೆ. ಯಾವದಾದರೊಂದು ಗ್ರಾಮದಲ್ಲಿರಬಹುದಾದ ನಾಲ್ಕು ಸೇರು ಹಾಲನ್ನು ಕರೆಯುವ ಎಮ್ಮೆಗಳ ತಳಿಗಳನ್ನು ಅಭಿವೃದ್ಧಿಗೊಳಿಸಿ ೧೬ ಸೇರು ಹಾಲು ಕರೆಯುವ ತಳಿಗಳನ್ನಾಗಿ ಮಾಡಿದರೆ ಅಲ್ಲಿನ ವರಮಾನವೂ ಸಹಾ ಒಂದಕ್ಕೆ ನಾಲ್ಕರಷ್ಟಾಗುತ್ತದೆಂಬುವುದರಲ್ಲಿ ಅನುಮಾನವೇ ಇಲ್ಲ. ಆದ್ದರಿಂದ ಪ್ರತಿ ಗ್ರಾಮಸ್ಥರೂ ಒಳ್ಳೇ ಶ್ರೇಷ್ಠವಾದ ತಳಿಗಳಿಗೆ ಸೇರಿದ ಉತ್ತಮವಾದ ಕೋಣಗಳನ್ನು ಆರಿಸಿಟ್ಟುಕೊಂಡು ಅವುಗಳನ್ನು ಬೀಜಕ್ಕೆ ಉಪಯೋಗಿಸಿದರೆ ಅವರುಗಳ ವರಮಾನವು ಹೆಚ್ಚಿ ಅವರು ಐಶ್ವರ್ಯವಂತರಾಗುವುದಲ್ಲದೆ ಹಾಲು, ಮೊಸರು ಮತ್ತು ಬೆಣ್ಣೆಯು ಸಮೃದ್ಧಿಯಾಗಿ ಬಡಬಗ್ಗರೆಲ್ಲಾ ಸುಲಭ ಖರೀದಿಗೆ ಹಾಲು, ಮೊಸರು ಬೆಣ್ಣೆಯನ್ನು ಕೊಳ್ಳಲು ಅನುಕೂಲವಾಗುವುದು.

ಇಂಗ್ಲೆಂಡು ದೇಶದ ಹಸುಗಳು ವಿಶೇಷವಾಗಿ ಹಾಲು ಕರೆಯುವುದಕ್ಕೆ ಒಂದು ಶಾಸ್ತ್ರಕ್ಕೆ ಅನುಸಾರವಾಗಿ ಅವುಗಳ ತಳಿಯನ್ನು ಅಭಿವೃದ್ಧಿಗೊಳಿಸಿ ಅವುಗಳನ್ನು ಪೋಷಿಸುವುದೇ ಕಾರಣವಾಗಿದೆ. ಇವು ಹಾಲು ಕೊಡುವ ಯಂತ್ರಗಳಾಗಿ ಪರಿಣಮಿಸಿವೆ. ಕರುಗಳಿಲ್ಲದೇ ಇವು ಹಾಲು ಕೊಡುವುದೇ ಇದಕ್ಕೆ ದೊಡ್ಡ ನಿದರ್ಶವಾಗಿದೆ. ಆ ದೇಶದಲ್ಲಿ ಸಾಮಾನ್ಯವಾಗಿ ಕರುಗಳನ್ನು ಮಾರಿಬಿಡುವರು. ಇಂಡಿಯಾ ದೇಶದಲ್ಲಾದರೋ, ಕರುಗಳು ಸತ್ತು ಹೋದರೆ ಹಸುಗಳು ಕರೆಯುವದಿಲ್ಲ; ಆದರೆ ಎಮ್ಮೆಗಳು ಮಾತ್ರ ಕರುಗಳು ಇಲ್ಲದಿದ್ದರೂ ಕರೆಯುವವು.

ಎಮ್ಮೆಗಳ ತಳಿಗಳನ್ನು ಅಭಿವೃದ್ಧಿಗೊಳಿಸಬೇಕಾದರೆ ಕಾಡು ಕೋಣಗಳನ್ನು ಬೀಜಕ್ಕೆ ಉಪಯೋಗಿಸಬೇಕೆಂದು ಕೆಲವರು ಹೇಳುತ್ತಾರೆ; ಆದರೆ ಹೀಗೆ ಮಾಡಿದರೆ ಕರುಗಳು ಹೆಚ್ಚು ಬಲವುಳ್ಳವುಗಳಾಗುವುವೇ ಹೊರ್ತು ಅವುಗಳು ದೊಡ್ಡವುಗಳಾದಾಗ್ಯೆ ಹೆಚ್ಚು ಹಾಲು ಕೊಡುವುದು ಅನುಮಾನಾಸ್ಪದವಾಗಿದೆ.

ಮುಖ್ಯವಾಗಿ ಇಂಡಿಯಾ ದೇಶದ ಜನರಿಗೆ ಬೇಕಾದ ಹಾಲಿನ ಹೆಚ್ಚು ಭಾಗವು ಎಮ್ಮೆಗಳಿಂದ ಒದಗಿಸಲ್ಪಡುತ್ತದೆ. ಆದ್ದರಿಂದ ಇವುಗಳ ತಳಿಯನ್ನು ಅಭಿವೃದ್ಧಿಪಡಿಸುವುದು ಪ್ರತಿ ರೈತನ ಕರ್ತವ್ಯವಾಗಿದೆ. ಈ ಕೆಲಸಕ್ಕಾಗಿ ಪ್ರತಿ ರೈತನೂ ಬೀಜಕ್ಕಾಗಿ ಕೊನೇಪಕ್ಷ, ಒಳ್ಳೇ ತಳಿಯ ಒಂದು ಕೋಣವನ್ನಾದರೂ ಇಟ್ಟುಕೊಂಡಿರುವುದು ಉತ್ತಮವಾದ ಏರ್ಪಾಡಾಗಿದೆ.

ರೆ. ಗೆ.

ಪ್ರಕಟಣೆ.

ದಿ. ಜನರಲ್ ಎಶ್ಯೂರೆನ್ಸ್ ಸೊಸೈಟಿ, (ಲಿಮಿಟೆಡ್)
ಹೆಡ್ ಆಫೀಸು, ಅಜ್ಮೀರ್.

ಅತ್ಯಂತ ಉತ್ತಮ ಮತ್ತು ಅತ್ಯಧಿಕ ಉಪಯುಕ್ತವಾದ ಆಫೀಸ್. ಅತ್ಯಂತ ಕಡಿಮೆ ವಿಮೆ ಮುಂಗಡ ಅಥವಾ ಪ್ರೀಮಿಯಂ ದರಗಳು ಮತ್ತು ಸಂಪೂರ್ಣ ಗವರ್ನಮೆಂಟ್ ಸೆಕ್ಯೂರಿಟಿಯುಳ್ಳದ್ದು.

ಹಕ್ಕಿನ ಇತ್ಯರ್ಥವು ಕಾಲ ವಿಳಂಬವಿಲ್ಲದೆ ಮಾಡಲ್ಪಡುವದು.

ಲಾಭಾಂಶ ವಿಷಯದಲ್ಲಿ ಎಲ್ಲಾ ಎಶ್ಯೂರೆನ್ಸ್ ವಿಮೆ ಸಂಘಗಳಿಗೆ ಮೇಲಾಗಿರುತ್ತದೆ.

ಈ ಸಂಘದ ವಿಮೆದಾರರಿಗೆ ಸುವಿಶೇಷವಾದ ಸೌಕರ್ಯಗಳು ಲಭ್ಯವಾಗುತ್ತವೆ.

ವಿಮೇ ಕಾರ್ಯಭಾಗದ ನಮೂನೆಗಳಲ್ಲಿಯೂ, ವಿಮೆದಾರರೊಡನೆ ನೀತಿಯಿಂದ ಕಾರ್ಯನಿರ್ವಾಹಣ ವಿಷಯದಲ್ಲಿಯೂ, ಜೀವವಿಮೆ ಸಂಘದ ಭದ್ರತೆ, ಸೌಲಭ್ಯ ಮತ್ತು ಸುಪ್ರತಿಷ್ಠೆ ಇವುಗಳ ವಿಷಯದಲ್ಲಿ ಅವಶ್ಯಕವಾದ ಸರ್ವ ವಸ್ತುಗಳ ವಿಷಯದಲ್ಲಿಯೂ "ದಿ ಎಶ್ಯೂರೆನ್ಸ್" ಎಂಬ ವಿಮೆ ಸಂಘವು ಅಸದೃಶವಾಗಿರುತ್ತದೆ.

"ಮನೋಗತವಾದ ವಿಮೆ ಪತ್ರವು" ಧಾರಾಳವಾಗಿ ಸಾಲಕೊಡೋಣಾಗುವುದು. ವಿಮೇ ಪತ್ರಗಳನ್ನು ಸಂಘದವರೇ ಬೆಲೆಗೆ ಕೊಂಡುಕೊಳ್ಳುವುದು. ಗ್ಯಾರಂಟೀಡ್ ಪೇಡಪ್ ಪಾಲಿಸಿಗಳು ನಿಬಂಧನೆಗಳ ಸಂಗ್ರಹ ಮತ್ತು ದರಗಳ ಪಟ್ಟಿ ಬಗ್ಗೆ ಕೆಳಗಣ ವಿಳಾಸದಾರರಿಗೆ ಬರಕೊಳ್ಳುವುದು.

ಮಹ. ಜಿ. ಬಿ. ಅರಾಂಞ,
ದಕ್ಷಿಣ ಕನ್ನಡ ಜಿಲ್ಲೆಗೆ ಏಜಂಟ್,
ಮಾರ್ಕೆಟ್ ರೋಡ್, ಮಂಗಳೂರು.

ವಿದೇಶ ವೃತ್ತಾಂತ.

ಇಂಗ್ಲಾಂಡಿನ ಬುನೋಸ್ ಏಮಿರೆಸ್ ಎಂಬಲ್ಲಿ ಸುಂಟರ ಗಾಳಿ ಎದ್ದು ೮ ಮಂದಿ ಮೃತಪಟ್ಟರು. ೩೦ ಮಂದಿ ಗಾಯಪಟ್ಟಿರುವರು. ಇದೇ ಸುಂಟರ ಗಾಳಿಯ ಜುನಿನ್ ಎಂಬ ಜಿಲ್ಲೆಯಲ್ಲಿಯೂ ಬೀಸಿ ೧೦ ಮಂದಿ ಮೃತಪಟ್ಟರು, ೨೦ ಮಂದಿ ಗಾಯವೊಡೆದಿರುವರು.

ಪ್ರಿನ್ಸ್ ಒಫ್ ವೇಲ್ಸರವರು ಇದೇ ತಾ. ೧ರಲ್ಲು ಪಾರೀಸ್ ನಗರಕ್ಕೆ ಹೋಗಿ ಅಲ್ಲಿ ನಾಲ್ಕು ತಿಂಗಳ ವರೆಗೆ ಉಳಕೊಂಡು ಅಲ್ಲಿಯ ಭಾಷೆಯನ್ನೂ ನಾಟಕ ಮೊದಲಾದ ವಾಙ್ಮಯ ಜ್ಞಾನವನ್ನೂ ಅಭ್ಯಾಸಿಸುವರು.

ಸೇಲಮಿನ ಜ್ವೊಯಿಂಟ್ ಮೆಜಿಸ್ಟ್ರೇಟರಾದ ಮೆ| ಜೆಕ್ಸನರವರು ಸಲಾಮು ಮಾಡಿದ ಬಾಲಕನಿಗೆ ಜುರುಮಾನೆ ವಿಧಿಸಿದ ಪ್ರಸ್ತಾಪವನ್ನು ಬ್ರಿಟಿಷ್ ಪಾರ್ಲಿಮೆಂಟ್ ಮೆಂಬರರಾದ ಮೆ| ಮೆಕ್ಲಮ್ ಸ್ಕೊಟ್‌ರವರು ಪಾರ್ಲಿಮೆಂಟ್ ಸಭೆಯ ಮುಂದೆ ಇಟ್ಟರು. ಇದಕ್ಕೆ ಉತ್ತರವಾಗಿ ಹಿಂದೂಸ್ಥಾನದ ಉಪಸೆಕ್ರೆಟರಿಗಳಾದ ಮೆ| ಮೊಂಟೇಗರವರು ಮೆಜಿಸ್ಟ್ರೇಟರ ಈ ವರ್ತನೆಯಿಂದ ಮದ್ರಾಸ್ ಸರಕಾರದವರು ಬಹಳ ಬೇಸರಪಟ್ಟು ಮೆಜಿಸ್ಟ್ರೇಟರು ವಿಧಿಸಿದ ಶಿಕ್ಷೆಯನ್ನು ತಳ್ಳಿಹಾಕುವರೆ ಹ್ಯಾಕೋರ್ಟಿನವರನ್ನು ಕೇಳಿಕೊಂಡಿರುವರೆಂದು ಹೇಳಿದರು. ಹ್ಯಾಕೋರ್ಟಿನವರು ಅದನ್ನು ತಳ್ಳಿ ಹಾಕಿದರೋ ಎಂದು ಮೆ| ಸ್ಕೊಟರವರು ಕೇಳಿದ್ದಕ್ಕೆ ಈ ತನಕ ತಳ್ಳಿಹಾಕಲಿಲ್ಲವೆಂದು ಉತ್ತರ ಕೊಟ್ಟರು. ಮೆ| ಸ್ಕೊಟರವರು ಪುನಃ—ಮೆಜಿಸ್ಟ್ರೇಟರು ತಾನೇ ಆ ಮೊಕದಮೆಯನ್ನು ತೆಗೆದು ಹಾಕುವುದೋ ಯಾ ಬಾಲಕನಿಗೆ ವಿಧಿಸಿದ ಜುರುಮಾನೆಯನ್ನು ಅವರು ತಾನೇ ಹಿಂದೆ ಕೊಡುವುದೋ ಎಂದು ಕೇಳಿದ್ದಕ್ಕೆ ಮೊಂಟೇಗರವರು: ಮೆ| ಜೆಕ್ಸನರು ಜುರುಮಾನೆ ವಿಧಿಸಿದ ಸಂಗತಿ ನನಗೆ ತಿಳಿದಾಕ್ಷಣ ಹಿಂದೂಸ್ಥಾನಕ್ಕೆ ತಂತೀ ಬಿಟ್ಟಿದ್ದೆನು. ಅದಕ್ಕೆ ಮೇಲೆ ಹೇಳಿದ ಉತ್ತರ ಮಾತ್ರ ಬಂದಿರುತ್ತದೆ. ಆದ್ದರಿಂದ ಆ ವಿಷಯ ಹೆಚ್ಚಿಗೆ ಹೇಳಲಾರೆನು ಎಂದು ವಿಜ್ಞಾಪಿಸಿಕೊಂಡರು.

ಫೊನಗ್ರಾಪ್ ಇತ್ಯಾದಿ ವಿಚಿತ್ರ ಯಂತ್ರಗಳನ್ನು ಕಂಡುಹಿಡಿದು ಲೋಕದಲ್ಲೆಲ್ಲಾ ಪ್ರಖ್ಯಾತಿ ಪಡೆದಿರುವ ಎಡಿಸನ್ ಎಂಬವರಿಗೆ ಈಗ ತಾನೇ ೬೫ ವರ್ಷ ವಯಸ್ಸು ತುಂಬಿತು. ಆದರೂ ಅವರು ೨೫ ವರ್ಷ ಪ್ರಾಯದವರಷ್ಟು ಚುರುಕಾಗಿದ್ದಾರೆ. ಅವರು ಅರ್ಧ ರಾತ್ರಿ ವರೆಗೆ ಮಲಗುವುದಿಲ್ಲ. ಬೆಳಿಗ್ಯೆ ೪-೩೦ ಗಂಟೆಗೆ ಹಾಸಿಗೆಯಿಂದೇಳುವರು. ಇದರಿಂದ ಕೆಲಸಕ್ಕೆ ತುಂಬಾ ಅವಕಾಶ ಸಿಗುತ್ತದೆಂದೂ ಸಾಮಾನ್ಯವಾಗಿ ಜನರು ಬಹಳ ಹೆಚ್ಚಾಗಿ ಊಟ ಮಾಡುವುದರಿಂದ ಆಯುಷ್ಕಾಲವು ಕಮ್ಮಿಯಾಗುತ್ತದೆಂದೂ ಹೇಳುವರು.

ಡಿಲ್ಲಿ ದರ್ಬಾರಿನ ಕಿರೀಟವು ಲಂಡನಿನ ಟವರಿನಲ್ಲಿ ರಾಜ ಚಿನ್ಹೆಗಳ ಸಹಿತ ಇರಿಸೋಣಾಗುವದು. ಇದಕ್ಕೆ ತಗಲುವ ಖರ್ಚು ಹಿಂದೂಸ್ಥಾನ ಸರಕಾರದಿಂದ ಕೊಡಲ್ಪಡುವುದು.

ಪಾರಿಸ್ ನಗರದ ಚೇಂಟಿಲ್ಲಿ ಎಂಬಲ್ಲಿ ಮೋಟೋರು ಬಂಡಿಯ ಸಹಾಯದಿಂದ ಬೇಂಕಿನ ಹಣವನ್ನು ಸುಲಿಗೆ ಮಾಡಿದ ಕಳ್ಳರನ್ನು ಹಿಡಿದು ಕೊಡುವವರಿಗೆ ೪೦೦ ಪವನುಗಳ ಉಡಿಗೆ ರೆಕೊಡಲ್ಪಡುವುದೆಂದು ಸರಕಾರದವರು ಪ್ರಕಟಿಸಿರುತ್ತಾರೆ.

ಆಸ್ಟ್ರೇಲಿಯದಲ್ಲಿ ಈಚೆಗೆ ಬೀಸಿದ ಸುಂಟರ ಗಾಳಿಯಿಂದ ಒಟ್ಟಿಗೆ ೬೨ ಮಂದಿ ಮೃತಪಟ್ಟರು. ೪೮ ಪ್ರಯಾಣಿಕರೂ ೬೬ ಕಲಾಸಿಗಳೂ ಇದ್ದ ಒಂದು ಹಡಗದ ಸುಳುವೇ ಇಲ್ಲ.

ಲೋಕದಲ್ಲೆಲ್ಲಾ ಒಟ್ಟಿಗೆ ಈಗ ೨,೦೦೦,೦೦೦ ಕುರುಡರು ಇದ್ದಾರೆ. ಯುರೋಪು ಖಂಡದಲ್ಲಿ ೩೦೨,೦೦೦ ಮಂದಿ, ರುಷ್ಯದಲ್ಲಿ ೧೯೨,೦೦೦ ಮಂದಿ ಕುರುಡರಿರುವರು. ಫ್ರಾನ್ಸ್, ಇಂಗ್ಲಾಂಡ್, ಜರ್ಮನಿ, ಇಟಾಲಿ, ಸ್ಪೈನ್ ದೇಶದ ಜನಸಂಖ್ಯೆಯಲ್ಲಿ ೧೦೦೦ಕ್ಕೆ ಒಂದರಂತೆ ಕುರುಡರಿರುವರು.

ಆಸ್ಟ್ರೀಯದ ಡ್ರೆಸ್ಡೆನ್ ಎಂಬಲ್ಲಿ ಲೂಕಸ್ ನಾಗಿ ಎಂಬವನು ತನ್ನ ಚರ್ಮವನ್ನು ಜಾರಿಸಿದನಂತರ ದೇಹವನ್ನು ಸಭ್ಯತೆಯಿಂದ ಭೂಸ್ಥಾಪನೆ ಮಾಡಬೇಕೆಂಬ ಶರ್ತದ ಮೇಲೆ ದೇಹದ ಚರ್ಮವನ್ನು ೩೨ ಪವನಿಗೆ ಒಂದು ವಿಚಿತ್ರ ವಸ್ತುಪ್ರದರ್ಶನಾಲಯದವರಿಗೆ ಮಾರಿರುವನು.

ಜಿನೋವದ ಅರಾನ್ ಎಂಬ ಪಟ್ಟಣದಲ್ಲಿ ಸಿಪಲೆನ್ ಎಂಬ ಒಬ್ಬ ಒಕ್ಕಲಿಗನು ಒಂದೇ ಹೆಂಗಸನ್ನು ನಾಲ್ಕು ಸಾರಿ ಮದುವೆ ಆಗಿ ನಾಲ್ಕು ಸಾರಿ ತ್ಯಾಗಪತ್ರ ಕೊಟ್ಟಿರುವನು. ಈತನು ಒಂದು ಸಾರಿ ತ್ಯಾಗಪತ್ರ ಕೊಟ್ಟು ತನ್ಮಧ್ಯೆ ಮತ್ತೊಬ್ಬ ಹೆಂಗಸನ್ನು ವಿವಾಹವಾದನು. ಈ ಕಾಲದಲ್ಲಿ ಈಕೆಯು ತನ್ನ ತಾಯಿಯ ಮನೆಗೆ ಹೋಗಿ ಸುಮ್ಮನೆ ಕೂತುಕೊಂಡಳು. ಕೆಲವು ಸಮಯದ ನಂತರ ಪುನಃ ಆಕೆಯನ್ನೇ ಮದುವೆಯಾದನು. ಹೀಗೆ ಅವಳೊಬ್ಬಳನ್ನೇ ನಾಲ್ಕಾವರ್ತಿ ವಿವಾಹವಾದನು. ಹೀಗೆ ಎಂಟು ವರುಷದೊಳಗೆ ಉಭಯತರೊಳಗೆ ೪ ವಿವಾಹಗಳು ಜರುಗಿದವು.

ಸ್ಕೊತಾಳದ ಮೆ. ಜೋರ್ಜ ಫಾರ್ಕ್ಯುಹಾರ್ಸನ್ ಎಂಬವರು ಹಿಂದೂಸ್ಥಾನದ ದಾರ್ಜಿಲಿಂಗಿನಲ್ಲಿರುವ ದುರ್ಗಮ್ಮ ಎಂಬ ಒಬ್ಬ ಹೆಂಗಸಿಗೆ ಯಾ ಆಕೆಯ ಮಕ್ಕಳಿಗೆ ತನ್ನ ಆಸ್ತಿಯಲ್ಲಿ ವರುಷಂಪ್ರತಿ ೧೨೦ ಪವನುಗಳು ಅಂದರೆ ೨೪೦೦ ರೂಪಾಯಿ ಕೊಡಬೇಕೆಂದು ವಿಲ್‌ನಾಮೆ ಬರೆದು ೧೮೯೯ನೇ ಇಸವಿಯಲ್ಲಿ ಮೃತಪಟ್ಟಿದ್ದರು. ಮೆ. ಫಾರ್ಕ್ಯು ಹಾರ್ಸನರವರಿಗೆ ೧೦೦,೦೦೦ ಪವನಿನ ಆಸ್ತಿ ಇದೆ. ಈ ಆಸ್ತಿಯ ಮೊಕ್ತೇಸರರು ಕ್ರಮಪ್ರಕಾರ ಆಕೆಗೆ ೧೨೦ ಪವನುಗಳು ಕೊಡುತ್ತಾ ಬಂದಿದ್ದರು. ಆ ವಿಲ್‌ನಾಮೆ ಬರೆಯಲ್ಪಟ್ಟಾಗ ಇಂಗ್ಲಾಂಡಿನ ಒಂದು ಶಿಲಿಂಗ್ ೨ ಪೆನ್ಸ್ ಎಂಬದು ಇಲ್ಲಿಯ ಒಂದು ರೂಪಾಯಿಗೆ ಸರಿಸಮಾನವಾಗಿತ್ತು. ಅನಂತರ ಒಂದು ರೂಪಾಯಿಗೆ ಒಂದು ಶಿಲಿಂಗ್ ೪ ಪೆನ್ಸ್ ಆಯಿತು. ಆ ವಿಲ್‌ನಾಮೆಯ ಪ್ರಕಾರ ೨೪೦೦ ರೂಪಾಯಿ ಅಂದರೆ ಈಗ ೧೬೦ ಪವನಿಗೆ ಸರಿಯಾಗುತ್ತದೆ. ಆದ್ದರಿಂದ ಆಕೆಯು ತನಗೆ ೧೨೦ ಪವನಿನ ಬದಲಿಗೆ ೧೬೦ ಪವನು ಕೊಡಬೇಕೆಂದು ಆ ಮೊಕ್ತೇಸರರ ಮೇಲೆ ಎಡಿನ್‌ಬರ್ಗಿನ ಸೆಶ್ಶನ್ಸ್ ಕೋರ್ಟಿನಲ್ಲಿ ದಾವೆ ಮಾಡಿದ್ದಳು. ಜಡ್ಜರವರು ತನಖೆ ನಡಿಸಿ ವಿಲ್‌ನಾಮೆಯ ಪ್ರಕಾರ ೧೨೦ ಪವನೇ ಆಕೆಗೆ ಸಿಕ್ಕತಕ್ಕದ್ದಲ್ಲದೆ ೧೬೦ ಪವನು ಸಿಕ್ಕಕೂಡದೆಂದು ತೀರ್ಮಾನ ಕೊಟ್ಟರು.

ಇಂಗ್ಲಾಂಡಿನ ಗಣಿ ಕೂಲಿಯಾಳುಗಳ ಸಂಘಗಳವರು ಈ ತನಕ ೧,೦೪೩,೨೫೦ ಪವನುಗಳನ್ನು ಕೆಲಸವಿಲ್ಲದ ಕೂಲಿಯವರಿಗೆ ಹಂಚಿದರು. ಈ ಸಂಘದಲ್ಲಿ ಇನ್ನು ಕೇವಣಾತಿ ಇಡಲ್ಪಟ್ಟ ೯೫೦,೦೦೦ ಪವನುಗಳು ಮಾತ್ರ ಉಳಿದಿರುವವು. ನೊರ್ಥ್‌ವೇಲ್ಸ್, ವಾರ್‌ವಿಕ್‌ಶಯರ್ ಚಂಬರ್‌ಲೇಂಡ್, ಸೊಮರ್‌ಸೆಟ್ ಮತ್ತು ಬ್ರಿಸ್ಟಲ್ ಎಂಬೀ ಸ್ಥಳದ ಸಂಘದ ಹಣವು ಪೂರಾ ಮುಗಿಯಿತು. ಇತರ ಕೆಲವು ಜಿಲ್ಲೆಗಳ ಸಂಘದ ಹಣವು ಇನ್ನು ಬೇಗನೇ ಮುಗಿಯುವುದು.

ಇಂಗ್ಲಾಂಡಿನ ಮುಷ್ಕರಗಾರರು ಕೆಲವು ಕಡೆಗಳಲ್ಲಿ ಕೆಲಸ ಪ್ರಾರಂಭಿಸಿರುವರು. ಕೆಲಸ ಪ್ರಾರಂಭಿಸಿದವರಿಗೆ ಮುಷ್ಕರಗಾರರು ಲೂಟಿ ಮಾಡದ ಹಾಗೆ ಪೋಲೀಸಿನವರು ಕಾಯುತ್ತಿರುವರು. ಪಶ್ಚಿಮ ಯೋರ್ಕ್‌ಶಯರಿನಲ್ಲಿ ಸುಮಾರು ೮೦ ಕೂಲಿಯವರು ಗಣಿಯಲ್ಲಿ ಕೆಲಸ ಮಾಡುವರೆ ಇಳಿದಾಗ ಇತರ ಮುಷ್ಕರಗಾರರು ಮೇಲಿಂದ ಸಾಮಾನುಗಳನ್ನು ಗಣಿಯೊಳಗೆ ಬಿಸಾಡಿ ಹತ್ತರವಿದ್ದ ಗುಡಿಸಲಿಗೆ ಬೆಂಕಿ ಕೊಟ್ಟರಲ್ಲದೆ ಇನ್ನು ವಿವಿಧತರದ ಉಪದ್ರ ಮಾಡಿ ನಷ್ಟಪಡಿಸಿದರು. ಪೋಲೀಸಿನವರಿಗೆ ಈ ಉಪದ್ರವನ್ನು ನಿಲ್ಲಿಸಲು ಸಾಧ್ಯವಾಗದೆ ಹೋಯಿತು. ಕಲ್ಲಿದ್ದಲು ಗಣಿಗಳ ಸಹಾಯಾರ್ಥವಾಗಿ ಹತ್ತು ಸಾವಿರ ಸೈನೀಕರು ಆಯಾ ಗಣಿಗಳಿಗೆ ಕಳುಹಿಸಲ್ಪಡುವರು. ರೈಲ್ವೇ ಕಂಪೆನಿಯವರು ಎಪ್ರೀಲ್ ತಾ. ೩ರಿಂದ ತಾ. ೯ರ ವರೆಗೆ ಸಾಮಾನಿನ ಗಾಡಿಗಳನ್ನು ನಿಲ್ಲಿಸಿ ಬಿಡುವರೆ ಆಲೋಚಿಸಿರುವರು. ತನ್ಮಧ್ಯೆ ಆಹಾರಸಾಮಾಗ್ರಿಗಳ ಗಾಡಿಗಳನ್ನು ಮಾತ್ರ ನಡಿಸುವರು. ಹೊಟ್ಟೆಗಿಲ್ಲದೆ ಅನೇಕರು ಸಾಯುತ್ತಿರುವರು. ಎರ್ಲ್ ಬ್ರಾನ್‌ಲೋ ಎಂಬವರು ತನ್ನ ಭೂಮಿಯ ಕಾಡಿನಿಂದ ಮರಗಳನ್ನು ಕಡಿದು ಬಡವರಿಗೆ ಹಂಚುತ್ತಿರುವರು.

ಚೀನದ ಪೆಕಿಂಗಿನಲ್ಲಿ ಪ್ರಜಾಧಿಪತ್ಯದ ಮಂತ್ರಿ ಸಭೆಯು ಸ್ಥಾಪಿಸಲ್ಪಟ್ಟದೆ. ಆದರೆ ಚೀನದ ವರ್ತಮಾನ ಪತ್ರಿಕೆಗಳು ಈ ಮಂತ್ರಿ ಸಭೆಯ ವಿಷಯ ಆಯಾ ಲೇಖನಗಳನ್ನು ಪ್ರಕಟಿಸಿ ಮಂತ್ರಿ ಸಭೆಯಲ್ಲಿ ರಾಜಕೀಯ ಅನುಭವಿಲ್ಲದ ಕೆಲವು ಮಂತ್ರಿಗಳು ಸೇರಿರುತ್ತಾರಾದ್ದರಿಂದ ಈ ಮಂತ್ರಿ ಸಭೆಯು ನಿಷ್ಪ್ರಯೋಜನವಾದದ್ದೆಂದು ಖಂಡಿಸುತ್ತಲಿವೆ.

ನಾನ್‌ಕಿಂಗ್‌ನಲ್ಲಿ ಸೋಲ್ಜರರು ದಂಗೆ ಎದ್ದು ಸೂರೆ ಸುಳಿಗೆ ಮಾಡುತ್ತಿದ್ದಾರೆಂಬದಾಗಿ ಪೆಕಿಂಗಿಗೆ ತಂತೀ ಬಂದಿರುತ್ತದೆ.

ಕಲಿಫೋರ್ನಿಯದ ಸ್ಟೇಂಫರ್ಡ್ ವಿಶ್ವವಿದ್ಯಾ ಕಲಾಶಾಲೆಯಲ್ಲಿ ಜೋರ್ಜ್ ಹೊರೈನ್ ಎಂಬವನು ೬ ಅಡಿ ೬॥ ಅಂಗುಲ ಎತ್ತರಕ್ಕೆ ಹಾರಿ ಜಯಪ್ರಧನಾದನು.

ಪೊಸ್ಡಮಿನ ನಾನೆನ್ ಎಂಬಲ್ಲಿ ಬಿರುಗಾಳಿ ಎದ್ದು ಅಲ್ಲಿಯ ತಂತೀ ಇಲ್ಲದ ಟೆಲಗ್ರಾಪ್ ಸ್ಟೇಶನಿನ ೬೫೦ ಅಡಿ ಎತ್ತರದ ಕಬ್ಬಿಣದ ಗೋಪುರವು ತುಂಡಾಗಿ ಕೆಳಗೆ ಬಿತ್ತು. ಈ ಗೋಪುರವು ಈಚೆಗೆ ಕಟ್ಟಲ್ಪಟ್ಟದ್ದಾಗಿದೆ.

ಪೋರ್ಚುಗಲ್ಲಿಗೆ ಸೇರಿದ ಮಿನ್ಹೋ ಎಂಬಲ್ಲಿಯ ಕಾರಾಗ್ರಹದಲ್ಲಿದ್ದ ೯೦ ಮಂದಿ ಬಂದಿವಾನರು ಸಮುದ್ರ ದಡದ ವರೆಗೆ ಭೂಮಿಯಲ್ಲಿ ಸುರಂಗವನ್ನು ಕೊರೆದು ಅದರೊಳಗಿಂದ ಹೊರಗೆ ಬಂದು ದಡದಲ್ಲಿದ್ದ ಬೆಸ್ತರ ದೋಣಿಯನ್ನು ಹಿಡಿದುಕೊಂಡು ಅದರೊಳಗಿದ್ದ ೧೫ ಜನ ಬೆಸ್ತರನ್ನು ಸಮುದ್ರದೊಳಗೆ ಬಿಸಾಡಿ ದೋಣಿಯನ್ನು ನಡಿಸಿಕೊಂಡು ಹೋಗುವಾಗ ಫಿರಂಗಿ ಇಟ್ಟಿರುವ ಸರಕಾರಿ ದೋಣಿಯು ಅವರ ದೋಣಿಯನ್ನು ಹಿಂಬಾಲಿಸಿ ಅದಕ್ಕೆ ಫಿರಂಗಿ ಹೊಡೆದು ಆ ದೋಣಿಯನ್ನು ಮುಣುಗಿಸಿತು. ಇದರಿಂದ ಬಂದಿಗಳಲ್ಲಿ ೮ ಮಂದಿ ನೀರಲ್ಲಿ ಮುಣುಗಿದರು. ಬಾಕಿಯವರು ಸೆರೆ ಹಿಡಿಯಲ್ಪಟ್ಟರು.

ಉತ್ತರ ಹಿಂದುಸ್ಥಾನ.

ಬಹುಮಾನಪಟ್ಟ ಗೋಖಲೆಯವರು ಈ ಬೇಸಿಗೆಗಾಲದಲ್ಲಿ ಯೂರೋಪು ಖಂಡಗಳನ್ನು ಸಂಚರಿಸುವರೆ ತೆರಳುವರು ಎಂದು ತಿಳಿದು ಬರುತ್ತದೆ.

ಡಿಲ್ಲಿಯ ಕೆಲವು ಗೃಹಸ್ಥರು ಸರಕಾರಿ ಹುದ್ದೆದಾರರಿಗೆ ಬೇಕಾಗಿ ತಮ್ಮ ಸ್ವತಃ ಖರ್ಚಿನಿಂದ ಹತ್ತು ಹಂಗಾಮಿ ಬಂಗ್ಲೆಗಳನ್ನು ಕಟ್ಟಿಸಿಕೊಡುವರೆ ಮಾತು ಕೊಟ್ಟಿರುವರೆಂಬ ವಾರ್ತೆ ಬಂದಿರುವುದು.

ಕಳದ ತಾ ೨೭ರಲ್ಲು ಪೇಶ್ವಾರದ ಈಶಾನ್ಯ ಕಡೆಯಲ್ಲಿ ಬೆಂಕಿ ಬಿದ್ದು ಸುಮಾರು ಒಂದು ಲಕ್ಷ ರೂಪಾಯಿ ಕ್ರಯಬಾಳುನ ಕಟ್ಟೋಣಗಳು ಸುಟ್ಟು ಹೋದವು.

ಆರಾಣೆಯ ಹೊಸ ಟಪ್ಪಾಲು ಚೀಟುಗಳು ಇದೇ ತಿಂಗಳ ೧೯ನೇ ತಾರೀಕಿನಿಂದ ಎಲ್ಲಾ ಟಪ್ಪಾಲು ಆಫೀಸುಗಳಲ್ಲಿ ಮಾರಾಟಕ್ಕೆ ದೊರೆಯುವವು.

ಕಲ್ಕತ್ತೆಯ ಹ್ಯಾಕೋರ್ಟಿನ ವಕೀಲರೂ ದೊಡ್ಡ ಜಾಮೀನ್ದಾರರೂ ಆಗಿರುವ ಮನಮೋಹನಾ ಘೋಷರವರು ವಸಂತಪೂಜೆಗೆ ಹಾಜರಾಗಲು ಕಲ್ಕತ್ತೆಯಿಂದ ಚಂದ್ರನಾಗೂರಿನಲ್ಲಿರುವ ತನ್ನ ಕುಟುಂಬದ ಮನೆಗೆ ಹೋಗುತ್ತಿರುವಾಗ ಯಾರೋ ಹಿಂದಿನಿಂದ ಅವರಿಗೆ ಗುಂಡು ಹೊಡೆದರು. ಗುಂಡು ಅವರ ಎಡತೋಳಿಗೆ ತಾಗಿತು. ಕೂಡ್ಲೇ ಸಿವಿಲ್ ಸರ್ಜನರು ಆ ಸ್ಥಳಕ್ಕೆ ಬಂದು ಪರೀಕ್ಷಿಸಿ ಜೀವಕ್ಕೆ ಅಪಾಯವಾಗಲಿಕ್ಕಿಲ್ಲವೆಂದು ಹೇಳಿದರು. ಘಾತುಕರು ಪತ್ತೆಯಾಗಲಿಲ್ಲ.

ಪಂಜಾಬ್ ಕ್ಲಬ್ಬಿನ ಮೇಲ್ಮಾಳಿಗೆಯ ಕೋಣೆಯಲ್ಲಿ ವಾಸವಾಗಿದ್ದ ಲಾಹೋರ್ ಚೀಫ್ ಕೋರ್ಟಿನ ರಿಜಿಸ್ತ್ರಾರರಾದ ಮೆ| ಡೆನ್ಸನರವರು ಕಳದ ತಾ. ೨೭ನೇ ಬೆಳಿಗ್ಯೆ ನೋಡುವಾಗ ಮಾಳಿಗೆಯಿಂದ ಕೆಳಬಿದ್ದು ಮೃತಪಟ್ಟಿದ್ದರು. ಅವರು ಬಿದ್ದ ಸಪ್ಪಳವಾದರೂ ಯಾರಿಗೂ ಕೇಳಿಸಲಿಲ್ಲ. ಬೆಳಿಗ್ಯೆ ಒಬ್ಬ ಕೆಲಸದವನು ಹಾದು ಹೋಗುವಾಗ ಇವರ ಹೆಣವನ್ನು ನೋಡಿದನು. ಮಧ್ಯಾನ್ಹಕ್ಕೆ ಇವರ ಸಮಾಧಿ ಮಾಡಲಾಯಿತು. ಇವರ ಜ್ಞಾಪಕಾರ್ಥವಾಗಿ ಚೀಫ್ ಕೋರ್ಟಿಗೆ ಆ ದಿನ ರಜೆ ಇತ್ತು.

ಅಲ್ಲಹಾಬಾದಿನ ಜಸ್ಟಿಸ್ ಬೆನರ್ಜಿಯವರ ಪತ್ನಿಯವರು ಕಳದ ತಾ. ೨೭ನೇ ಬೆಳಿಗ್ಯೆ ಪರಮಪದವಿಯನ್ನೈದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ತಂತೀ ಇಲ್ಲದ ಟೆಲಗ್ರಾಫನ್ನು ಕಲ್ಕತ್ತೆ, ಅಲ್ಲಹಾಬಾದ್, ಡಿಲ್ಲಿ, ಸಿಮ್ಲದಲ್ಲಿ ಸ್ಥಾಪಿಸುವುದಕ್ಕೋಸ್ಕರ ೧೯೧೦-೧೧ನೇ ವರುಷದಲ್ಲಿ ಸರಕಾರದವರಿಗೆ ೪೯,೦೦೦ ರೂಪಾಯಿ ವೆಚ್ಚವಾಯಿತು. ಈ ಕೆಲಸವು ಮುಂದರಿದು ಮುಂಬಾಯಿ, ಕರಾಚಿ, ನಾಗಪುರ, ಲಾಹೋರಿನಲ್ಲಿಯೂ ಸ್ಥಾಪಿಸಲ್ಪಟ್ಟಿತು. ಹೀಗೆ೧೯೧೧-೧೨ನೇ ವರುಷದಲ್ಲಿ ಇದಕ್ಕಾಗ್ಯೆ ರೂ. ೬೦,೦೦೦ ಖರ್ಚಾಯಿತು. ೧೯೧೨-೧೩ನೇ ವರುಷದಲ್ಲಿ ಈ ಕೆಲಸಕ್ಕಾಗಿ ಎರಡು ಲಕ್ಷ ರೂಪಾಯಿಯನ್ನು ಇಂಡಿಯಾ ಸರಕಾರದವರು ಪ್ರತ್ಯೇಕಿಸಿಟ್ಟಿರುವರು.

ಪೇಶ್ವಾರದಲ್ಲಿ ಕಳದ ಬುಧವಾರ ರಾತ್ರಿ ಪುನಃ ಬೆಂಕಿ ಉಂಟಾಗಿ ಸುಮಾರು ಎರಡು ಲಕ್ಷ ರೂಪಾಯಿಯ ನಷ್ಟ ಉಂಟಾಯಿತು.

ಹಿಂದೂಸ್ಥಾನದಲ್ಲಿ ಪ್ಲೇಗ್ ಬೇನೆಯ ಹಾವಳಿಯು ಹೆಚ್ಚುವಂತೆ ತೋರುತ್ತದೆ. ಕಳದ ವಾರ ಹಿಂದೂಸ್ಥಾನದಲ್ಲೆಲ್ಲಾ ೧೫,೦೫೫ ಮಂದಿಗೆ ಪ್ಲೇಗ ಬೇನೆಯು ತಗಲಿ ೧೫,೪೯೯ ಮಂದಿ ಮೃತಪಟ್ಟರು. ಸಂಯುಕ್ತ ಸಂಸ್ಥಾನ ಒಂದರಲ್ಲಿಯೇ ೭,೮೦೫ ಮಂದಿ ಇದಕ್ಕೆ ತುತ್ತಾದರು. ಇತರ ಸಂಸ್ಥಾನಗಳ ಸಂಖ್ಯೆ ಎಷ್ಟೆಂದರೆ:—ಬಂಗಾಳ ೩,೪೮೬; ಮುಂಬಾಯಿ ೭೫೩; ಮದ್ರಾಸ್ ೯೩; ಪಂಜಾಬು ೧,೪೮೦; ಬರ್ಮ ೯೭; ಮಧ್ಯ ಸಂಸ್ಥಾನ ೧೫೩; ಹೈದರಾಬಾದ್ ೭೩; ಮೈಸೂರು ೬೨; ಮಧ್ಯ ಹಿಂದೂಸ್ಥಾನ ೧೬೫; ರಜಪುತಾನ ೧೧ ಮರಣಗಳಾದವು.

ಹಿಂದೂಸ್ಥಾನ ಸರಕಾರದ ಕಾರ್ಯನಿರ್ವಾಹಕ ಸಭೆಯ ವಿದ್ಯಾಖ್ಯಾತೆಯ ಮೆಂಬರರಾಗಿರುವ ಬಹುಮಾನಪಟ್ಟ ಸರ್ ಎಚ್. ಬಟ್ಲರರವರು ಈ ತಿಂಗಳಲ್ಲಿ ಮದ್ರಾಸ್, ಬೆಂಗಳೂರು, ಉದಕಮಂಡಲ, ಪೇಶ್ವಾರ್ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ತಾ. ೩೦ರಲ್ಲು ಸಿಮ್ಲಕ್ಕೆ ಹೋಗುವರು.

ಕಳದ ತಾ. ೨೪ರಲ್ಲು ಕಲ್ಕತ್ತೆಯಲ್ಲಿ ಕಠಿಣ ಸಿಡಿಲು ಮಳೆ ಗರೆಯಿತು. ಸರಕಾರ ಮಂದಿರದ ಮೇಲೆ ಇಟ್ಟಿದ್ದ ಬಾವಟೆಗೆ ಸಿಡಿಲು ಬಡದು ಬಾವಟೆಯು ಚೂರುಚೂರಾಯಿತು.

ತಾ. ೨೭ರಲ್ಲು ವ್ಯಾಸರಾಯರವರು ಕಲ್ಕತ್ತೆಯನ್ನು ಬಿಟ್ಟು ಸಾಯಂಕಾಲ ೭ ಗಂಟೆಗೆ ಅಗ್ನಿಬಂಡಿ ಹತ್ತಿ ಪಟಿಯಾಲ ಮೊದಲಾದ ಸ್ಥಳಗಳನ್ನು ಸಂದರ್ಶಿಸುವರೆ ತೆರಳಿದರು.

ಕಳದ ತಾ. ೨೮ರಲ್ಲು ಮುಂಬಾಯಿಯ ಎಸ್. ಎಸ್. ಲೋರ್ಡ್ ಅರ್ನೊಂಡೆ ಎಂಬ ಹಡಗದಲ್ಲಿ ಒಂದು ಪೀಪ ಪರಾಫೈನ್ ಎಂಬ ಎಣ್ಣೆಯನ್ನು ಎತ್ತುವಾಗ ಅದು ಅಕಸ್ಮತ್ತಾಗಿ ಜಾರಿ ಕೆಳಅಂತಸ್ಥಿನಲ್ಲಿ ಮೇಣದ ಬತ್ತಿ ಹಿಡಕೊಂಡು ಕೆಲಸ ಮಾಡುತ್ತಿದ್ದ ೧೨ ಕೂಲಿಯಾಳುಗಳ ಮೇಲೆ ಬಿದ್ದು ದೊಡ್ಡ ಬೆಂಕಿ ಉಂಟಾಯಿತು. ೧೨ ಕೂಲಿಯಾಳುಗಳು ಉಸುರು ಕಟ್ಟಿ ಮೃತಪಟ್ಟರು. ಒಬ್ಬ ಯೂರೋಪಿಯನ್ ನಾವಿಕನಿಗೆ ಬೆಂಕಿ ತಾಗಿ ಅರೆಪ್ರಾಣದಲ್ಲಿರುವನು.

ವ್ಯಾಸರಾಯ ಕಾರ್ಯನಿರ್ವಾಹಕ ಸಭೆಯು ಸಿಮ್ಲದಲ್ಲಿ ಬರುವ ಮೆ| ತಾ. ೧೮ ನಂತರ ಕೂಡುವುದು. ಮುಖ್ಯ ಸೇನಾಧಿಪತಿ ಮುಂತಾದ ಕೆಲವು ಹುದ್ದೆದಾರರು ಸಿಮ್ಲಕ್ಕೆ ಹೋಗಿ ತಲಪಿರುವರು. ಮೆ| ಅಲಿ ಇಮಾಮರವರು ಇದೇ ತಾ. ೭ರಲ್ಲೂ ಬಹುಮಾನಪಟ್ಟ ಸರ್ ಗ್ಯಾಯಿ ಫ್ಲೀಟ್ ವುಡ್ ವಿಲ್ಸನರವರು ತಾ. ೨೭ರಲ್ಲೂ ವ್ಯಾಸರಾಯರವರು ಕಾಲ್ಕ ಎಂಬಲ್ಲಿಂದ ಮೇ ತಾರೀಕು ೧೮ರಲ್ಲೂ ಸಿಮ್ಲಕ್ಕೆ ಹೋಗುವರು ಎಂದು ತಿಳಿದು ಬರುತ್ತದೆ.

ಕಲ್ಕತ್ತೆಯ ಮಚ್ಛೆ ಬಜಾರ್ ರಸ್ತೆಯಲ್ಲಿ ಒಬ್ಬ ಮಾರ್ವಾರಿಯು ಎರಡು ಲಕ್ಷ ರೂಪಾಯಿಗೆ ಒಂದು ಸ್ಥಳವನ್ನು ಪಡಕೊಂಡು ಅಲ್ಲಿದ್ದ ಹಳೆ ಕಟ್ಟೋಣಗಳನ್ನು ಕೆಡವಿ ಸರಿಪಡಿಸುತ್ತಿರುವಾಗ ಒಂದು ಸಣ್ಣ ಗುಡಿಸಲಿನೊಳಗೆ ಎರಡು ಸರ್ಪಗಳು ಹೊಕ್ಕಿದವು. ಕೂಲಿಯವರು ಸರ್ಪವನ್ನು ಹುಡಿಕ್ಯಾಡಿ ಗುಡಿಸಲಿನೊಳಗೆ ಹೋಗಲು ಅಲ್ಲಿ ಸರ್ಪವು ಕಾಣಲಿಲ್ಲ; ಆದರೆ ಗುಡಿಸಲಿನ ನೆಲದ ಮೇಲೆ ಅರಬಿ ಅಕ್ಷರದಿಂದ ಕೆತ್ತಲ್ಪಟ್ಟ ಒಂದು ಹಡಲಿಗೆ ಸಿಕ್ಕಿತು. ಹಡಲಿಗೆಯ ಈ ಬರಹವನ್ನು ಓದಲು ಇದು ೨೫೦ ವರುಷಗಳ ಹಿಂದೆ ಮೃತಪಟ್ಟ ಸೈಯ್ಯದ್ ವಂಶದ ಮಹಮ್ಮದೀಯ ಗುರುವಿನ ಜ್ಞಾಪಕಾರ್ಥವಾದ ಸಮಾಧಿ ಎಂದು ತಿಳಿದು ಬಂತು. ಈ ವಾರ್ತೆಯನ್ನು ಕೇಳುತ್ತಲೇ ಆ ಸ್ಥಳಕ್ಕೆ ಮಹಮ್ಮದೀಯ ಯಾಚಕರನೊಬ್ಬನು ಬಂದು ಆ ಸ್ಥಳವನ್ನು ಪುಷ್ಪಗಳಿಂದ ಶೃಂಗರಿಸಿ ಪೂಜೆ ಇತ್ಯಾದಿ ನಡಿಸಿದನಲ್ಲದೆ ಅದು ಪರಿಶುದ್ಧ ಸ್ಥಳವಾದ್ದರಿಂದ ತಾನು ಆ ಸ್ಥಳವನ್ನು ಬಿಡಲಾರೆನೆಂದು ಹಟಹಿಡಿದು ಆ ಸ್ಥಳವನ್ನು ಬಿಟ್ಟು ಏಳಲಿಲ್ಲ. ಅದ್ದರಿಂದ ಆ ಸ್ಥಳ ಮಾಲೀಕನಾದ ಮಾರ್ವಾರಿ ಗೃಹಸ್ಥನು ಈ ಯಾಚಕನ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲು ಪೋಲೀಸಿನವರು ಆತನನ್ನು ಕೈದು ಮಾಡಿ ಜಾಮೀನಿನ ಮೇಲೆ ಬಿಟ್ಟರು. ಈಗ ಆ ಸ್ಥಳದ ವಿಷಯ ಹೆಚ್ಚಿಗೆ ತನಿಖೆ ನಡಿಸಿದ್ದಲ್ಲಿ ಆ ಸ್ಥಳಕ್ಕೆ ಪೂರ್ವದಲ್ಲಿ ಪಕೀರ್-ಕ-ಟಕಿಯ ಅಂದರೆ ಯಾಚಕರ ಆಶ್ರಯ ಎಂಬ ಹೆಸರಿತ್ತೆಂತ ತಿಳಿದು ಬರುತ್ತದಲ್ಲದೆ ಆ ಸ್ಥಳದಲ್ಲಿ ಸಮಾಧಿಯ ಚಿನ್ನೆಗಳು ಕಾಣುತ್ತಿರುವುದರಿಂದ ಅದು ಪೂರ್ವದಲ್ಲಿ ಮಹಮ್ಮದೀಯರ ಸಮಾಧಿ ಸ್ಥಳವಾಗಿರಬೇಕೆಂದು ಊಹಿಸುತ್ತಾರೆ.

ಮಿಡ್ನಾಪುರ ಮಾನನಷ್ಟ ಮೊಕದ್ದಮೆಯ ಅಪೀಲ್ ತನಖಿಯು ಇದೇ ತಾ. ೪ಕ್ಕೆ ಕಲ್ಕತ್ತೆಯ ಹ್ಯಾಕೋರ್ಟಿನಲ್ಲಿ ಪ್ರಾರಂಭವಾಗುವುದು.

ಪೇಶ್ವಾರದಲ್ಲಿ ಉಂಟಾದ ಬೆಂಕಿಯಿಂದ ಒಟ್ಟು ೧೦ ಲಕ್ಷ ರೂಪಾಯಿಗಳ ನಷ್ಟ ಉಂಟಾಯಿತೆಂಬದಾಗಿ ಅಂದಾಜಾಗಿಯದೆ.

ಕಲ್ಕತ್ತೆಯ ಸುರೇಶಚಂದ್ರ ಎಂಬ ಒಬ್ಬ ವಿದ್ಯಾರ್ಥಿಯು ಮೈತ್ರಿಪೂಜ ಎಂಬ ಒಂದು ರಾಜದ್ರೋಹಕರವಾದ ಪಹಿಯನ್ನು ಪ್ರಕಟಿಸಿದ್ದನೆಂಬದಾಗಿ ಅಪಾದಿಸಲ್ಪಟ್ಟದ್ದರಿಂದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಆತನಿಗೆ ಎರಡು ವರ್ಷಗಳ ಸಜಾ ವಿಧಿಸಿದರು. ಆತನು ಕಲ್ಕತ್ತೆಯ ಹ್ಯಾಕೋರ್ಟಿಗೆ ಅಪೀಲು ಮಾಡಿಕೊಂಡಲ್ಲಿ ಜಸ್ಟಿಸರವರು ಆತನಿಂದ ಈ ಪಹಿಯು ಬರೆಯಲ್ಪಟ್ಟಿತ್ತೆಂಬದಕ್ಕೆ ತಕ್ಕ ಆಧಾರವಿಲ್ಲವೆಂದು ಅಭಿಪ್ರಾಯಪಟ್ಟು ಆತನನ್ನು ಖುಲಾಸುಪಡಿಸಿದರು.

ಪಟಿಯಾಲದ ಮಹಾರಾಜರವರಿಗೆ ಡಿಲ್ಲಿ ದರ್ಬಾರಿನಲ್ಲಿ ಜಿ. ಸಿ. ಐ. ಇ. ಎಂಬ ಬಹುಮಾನ ಬಿರುದು ಶಿಕ್ಕಿರುತ್ತದಷ್ಟೆ. ಈ ಜ್ಞಾಪಕಾರ್ಥವಾಗಿ ಪಟಿಯಾಲದ ಮಹಾರಾಜರವರು ತನ್ನ ರಾಜ್ಯದ ಆಯಾ ಪಟ್ಟಣಗಳನ್ನು ಉಜ್ಜಾಯ ಸ್ಥಿತಿಗೆ ತರುವರೆ ಒಂದುವರೆ ಲಕ್ಷ ರೂಪಾಯಿ; ಮಾದ್ರಿ ಕ್ಷೇಮಂಕರವಾದ ಗ್ರಾಮಗಳನ್ನು ಸ್ಥಾಪಿಸುವರೆ ೫೦,೦೦೦ ರೂಪಾಯಿ; ಸ್ತ್ರೀ ವಿದ್ಯಾಭ್ಯಾಸಕ್ಕೋಸ್ಕರ ೬೦,೦೦೦ ರೂಪಾಯಿ; ಪ್ರಾಮರಿ ವಿದ್ಯಾಭ್ಯಾಸಕ್ಕಾಗಿ ೨೦,೦೦೦ ರೂಪಾಯಿ; ಪ್ರಾಮರಿ ಶಾಲೆಗಳಿಗೆ ಹೆಚ್ಚಿನ ಗ್ರಾಂಟಾಗಿ ೧೦,೦೦೦ ರೂಪಾಯಿಗಳನ್ನು ದಾನ ಮಾಡುವರೆ ವಾಗ್ದಾನ ಮಾಡಿದರಲ್ಲದೆ ಸ್ಥಳೀಕ ಮಹೀಂದ್ರ ಕಾಲೇಜಿಗೆ ಎಮ್. ಎ. ತರಗತಿಯನ್ನು ಸೇರಿಸುವರೆಯೂ ಅದಕ್ಕೆ ಬೇಕಾದ ಉಪಾಧ್ಯಾಯರನ್ನು ನೇಮಿಸುವರೆಯೂ ಈ ಕಾಲೇಜಿಗೆ ಗಾಯನ ವಿದ್ಯೆಯ ಒಂದು ಶಾಖೆಯನ್ನು ಕೂಡಿಸುವರೆಯೂ ಬೇಕಾದ ಖರ್ಚನ್ನು ಕೊಡುವರೆ ಒಪ್ಪಿರುವರು.

ಲಾಲಾ ಲಜಪತ್‌ರಾಯರವರ ಪ್ರೇರಣೆಯಿಂದ ಪಂಜಾಬ್ ಹಿಂದೂ ವಿದ್ಯಾ ಕನ್ಫರೆನ್ಸ್ ಎಂಬ ಮಹಾಸಭೆಯು ಇದೇ ಎಪ್ರೀಲ್ ತಾ. ೬ನೇ ಅನೇ ದಿವಸ ಲಾಹೋರಿನಲ್ಲಿ ಜರುಗುವುದು.

ಮೈಸೂರು ರಾಜ ಕುಟುಂಬಕ್ಕೆ ಸೇರಿದ ಪ್ರಿನ್ಸ್ ಬೆರೋಜ್ಜಿ ಎಂಬವರು ದಗೆ ಮತ್ತು ಕಳ್ಳ ದಸ್ತತು ಮಾಡಿ ಶಕಾಯಿಸಿದ್ದಾರೆಂಬದಾಗಿ ಕಲ್ಕತ್ತೆಯ ಪೋಲೀಸಿನವರು ಕಳೆದ ತಾ. ೨೧ರಲ್ಲು ಅವರನ್ನು ಕೈದು ಮಾಡಿರುವರು. ಕೆಲವು ಸಮಯದ ಹಿಂದೆ ಮೆಸರ್ಸ್ ಕೇಪ್, ಕೂಫರ್ ಕಂಪೆನಿಯವರು ಕಲ್ಕತ್ತೆಯ ಚಟರ್ಜಿ ಕಂಪೆನಿಯವರ ಹೆಸರಲ್ಲಿ ಒಂದು ಹುಂಡೀ ಚೀಟು ಕಳುಹಿಸಿದ್ದರು. ಅದು ಚಟರ್ಜಿ ಕಂಪೆನಿಯವರಿಗೆ ತಲಪಲೇ ಇಲ್ಲ. ಈ ಹುಂಡೀ ಚೀಟಿಗೆ ಪ್ರಿನ್ಸರವರು ಚಟರ್ಜಿ ಕಂಪೆನಿಯ ದಸ್ಕತು ಹಾಕಿ ಹಿಂದೂಸ್ಥಾನವೆಂಬ ಬೇಂಕಿನಲ್ಲಿ ಶೀಘಹಾಕಿ ಇಟ್ಟು ೩೦೦ ರೂಪಾಯಿ ತಕ್ಕೊಂಡಿರುವರೆಂಬದಾಗಿ ಇವರನ್ನು ಅನುಮಾನದ ಮೇಲೆ ಹಿಡಿದಿರುವರು. ಈ ಪ್ರಿನ್ಸರವರ ಮೇಲೆ ಇದೇ ತರದ ಇನ್ನೊಂದು ಮೊಕದ್ದಮೆಯೂ ಇರುವುದು.

ಬಂಗಾಳದ ಗವರ್ನರರಾಗಿ ನೇಮಿಸಲ್ಪಟ್ಟ ಕಾರ್ಮಿಖಯೇಲ್ ಪ್ರಭುಗಳು ಪರಿವಾರ ಸಹಿತ ತಾ. ೧೮ರಲ್ಲು ಕಲ್ಕತ್ತೆಗೆ ತಲಪಿ ಬಹಳ ಮರ್ಯಾದೆಪೂರ್ವಕವಾಗಿ ಸ್ವಾಗತ ಮಾಡಲ್ಪಟ್ಟರು.

ನಾರಾಯಣಗಂಜ್ ಎಂಬಲ್ಲಿಯ ಎಕ್‌ಟೆಂಟ್ ಜನರಲರವರು ಸ್ಟೀಮರಿನಲ್ಲಿ ಕಲ್ಕತ್ತೆಗೆ ಬರುತ್ತಿರುವಾಗ ಅಕಸ್ಮತ್ತಾಗಿ ಹಡಗದ ಕಲ್ಲಿದ್ದಲಿನ ಕೋಣೆಗೆ ಬಿದ್ದು ತಲೆಗೆ ಕಠಿಣ ಗಾಯವಾಗಿ ಮೋಡಂಡ ಸ್ಥಿತಿಯಲ್ಲಿರುವರು.

ಹಿಂದೂಸ್ಥಾನದ ಪ್ರಖ್ಯಾತ ಜಟ್ಟಿಗಳಾದ ಮಹಮ್ಮದೀಯನಾದ ಗಾಮ ಎಂಬವನಿಗೂ ಹಿಂದೂವಾದ 'ವಿಡ್ಡೋ' ಎಂಬವನಿಗೂ ಲಾಹೋರಿನಲ್ಲಿ ತಾ. ೨೪ರಲ್ಲು ಪಂಥವೆಸಗಿತು. ವಿಡ್ಡೋ ಎಂಬ ಜಟ್ಟಿಯು ಭೀಮ ಪರಾಕ್ರಮಿಯಾದ ಪ್ರೊಫೆಸರ್ ಕೃಷ್ಣಮೂರ್ತಿಯೊಡನೆ ಯೂರೋಪ ಖಂಡಗಳನ್ನು ಸಂಚರಿಸಿ ಬಂದವರು. ಈ ಪಂದ್ಯಾಟವನ್ನು ನೋಡುವರೆ ಸುಮಾರು ೫೦,೦೦೦ ಜನರು ಕೂಡಿದ್ದರು. ಸ್ವಲ್ಪ ಸಮಯ ಕಾದಾಡಿ ಗಾಮನು ಜಯಶಾಲಿಯಾದನು.

ದಕ್ಷಿಣಹಿಂದೂಸ್ಥಾನ.

ಕಳದ ವಾರ ರಂಗೂನಿನಲ್ಲಿ ಆಯುಧಪಾಣಿಗಳಾದ ೨೫ ಮಂದಿ ದರೋಡೆ ಕಳ್ಳರು ಬರ್ಮಾನ್ ಎಂಬ ಗ್ರಾಮಕ್ಕೆ ಹೊಕ್ಕು ಅಲ್ಲಿಯ ಮನೆಗಳನ್ನು ಕೊಳ್ಳೆ ಹೊಡೆದು ಮನೆಗಳನ್ನು ಸುಟ್ಟು ಹಾಕಿ ಪಲಾಯನ ಮಾಡಿದರು.

ಹಿಂದೂಸ್ಥಾನದ ಕ್ರೈಸ್ತರನ್ನು 'ನೇಟಿವ್ ಕ್ರಿಶ್ಚನ್' ಎಂಬದಾಗಿ ಕರೆಯುವುದರಲ್ಲಿ ಏನೊಂದು ಅರ್ಥವಿಲ್ಲದಿರುವುದರಿಂದ ತಮ್ಮನ್ನು 'ಇಂಡಿಯನ್ ಕ್ರೈಸ್ತನ್' ಎಂಬದಾಗಿ ಕರೆಯಬೇಕೆಂಬದಾಗಿ ಮದ್ರಾಸ್ ಸಂಸ್ಥಾನದ ದೇಶೀಯ ಕ್ರೈಸ್ತವೈದಿಕರು ಮದ್ರಾಸ್‌ಸರಕಾರಕ್ಕೆ ವಿಜ್ಞಾಪನೆ ಮಾಡಿಕೊಂಡಿದ್ದರು. ಮದ್ರಾಸ್ ಸರಕಾರದವರು ಈ ವಿಜ್ಞಾಪನೆಗೆ ಕಳೆದ ತಾ. ೧೯ರಲ್ಲು ಸಮಂಜಸವಾದ ಉತ್ತರ ಕೊಟ್ಟು ಈ ವಿಜ್ಞಾಪನೆಯ ಬಹಳ ವಿಳಂಬವಾಗಿ ಬಂದದರಿಂದ ಕಳೆದ ಖಾನೆಸುಮಾರಿಯ ವರದಿಯಲ್ಲಿ ಬರೆಯಲ್ಪಟ್ಟ ನೇಟಿವ್ ಕ್ರಿಶ್ಚನ್ ಎಂಬದನ್ನು ಇಂಡಿಯನ್ ಕ್ರಿಶ್ಚನ್ ಎಂಬದಾಗಿ ಬದಲಾಯಿಸುವುದು ಈಗ ಸಾಧ್ಯವಿಲ್ಲ, ಆದರೆ ಇನ್ನು ಮುಂದಕ್ಕೆ ಎಲ್ಲಾ ತರದ ಸರಕಾರಿ ದಿವಾನಗಳಲ್ಲಿ 'ಇಂಡಿಯನ್ ಕ್ರಿಶ್ಚಿಯನ್' ಎಂಬದಾಗಿ ಪ್ರಯೋಗಿಸಲ್ಪಡುವುದೆಂದು ತಿಳಿಸಿರುವರು.

ಮೈಸೂರಿನ ಕುಂಜು ಸಿಟಿಯಿಂದ ಬೆಂಗಳೂರಿನ ಟ್ರೆಜರಿ ಆಫೀಸರರಿಗೆ ಕಳುಹಿಸಲ್ಪಟ್ಟ ೨೦೦೦ ರೂಪಾಯಿಯ ಒಂದು ಇನ್ಶೂರ್ ಮಾಡಿದ ಕಾಗದವು ಕಳವಾಗಿರುವುದು. ಪೋಲೀಸಿನವರು ಪತ್ತೆತರದೂದು ಮಾಡುತ್ತಲಿದ್ದಾರೆ. ಇಬ್ಬರು ಕ್ಲಾರ್ಕರು ಕೈದು ಮಾಡಲ್ಪಟ್ಟರುವರು.

ಬೆಂಗಳೂರಿನ ಡಿಸ್ಟ್ರಿಕ್ಟ್ ಜಡ್ಜರಾಗಿರುವ ಮೆ| ರಾಮಯ ಪೂಂಜ ಬಿ. ಎ. ಬಿ. ಎಲ್.ರವರಿಗೆ ಕೆಲಸದ ಅವಧಿಯು ತೀರುತ್ತಾ ಬಂತು. ಆದರೆ ಬ್ರಿಟಿಷ್ ಸರಕಾರದವರು ಇನ್ನೊಂದು ವರುಷ ಹೆಚ್ಚಿಗೆ ಕೆಲಸ ನೋಡುವರೆ ಅವರಿಗೆ ಸಮ್ಮತಿ ಕೊಟ್ಟರುವರು.

ರಂಗೂನಿನಲ್ಲಿ ಅಕ್ಕಿಗೆ ಬಹಳ ಕ್ರಯವೇರಿದ್ದರಿಂದ ಬಡಜನರು ಹೊಟ್ಟೆಗಿಲ್ಲದೆ ಬಲಳುತ್ತಿರುವರೆಂದು ತಿಳಿದು ಬರುತ್ತದೆ. ಈ ಸಂಬಂಧ ಸ್ಥಳಿಕ ಸರಕಾರದವರು ಪರದೇಶಕ್ಕೆ ಕಳುಹಿಸುವ ಅಕ್ಕಿಯ ಮೇಲಿರುವ ಸುಂಕವನ್ನು ಹೆಚ್ಚಿಸಬೇಕೆಂದು ನಿಶ್ಚಯಿಸಿರುವರು.

ಕಳೆದ ತಾ. ೩೧ರಲ್ಲು ರಂಗೂನಿನಲ್ಲಿ ಮಹಬಿನ್ ಎಂಬ ಸ್ಥಳದಿಂದ ಹೊರಟ ಪಂಜಾಬಿ ಎಂಬ ಒಂದು ನಾವೆಯಲ್ಲಿ ಕೆಲವು ಚೆಟ್ಟಿಗಳೂ ಮೂರು ಬರ್ಮಿಯರೂ ಇದ್ದರು. ನಾವೆಯು ಮಧ್ಯ ರಾತ್ರಿಯಲ್ಲಿ ಟೋನ್ಕೈನ್ ಎಂಬ ಗ್ರಾಮಕ್ಕೆ ಸಮೀಪಿಸುತ್ತಲೇ ನಾವೆಯಲ್ಲಿದ್ದ ಬರ್ಮಿಯರು ಫಕ್ಕನೇ ಎದ್ದು ರಿವೋಲ್ವರನ್ನು ಹಿಡಿದು ಇತರ ಪ್ರಯಾಣಸ್ಥರನ್ನೂ ನಾವಿಕರನ್ನೂ ಹೆದರಿಸಿ ನಾವೆಯಲ್ಲಿದ್ದ ಎಲ್ಲಾ ಗಂಟು ಮೂಟೆಗಳನ್ನು ಕೊಡಬೇಕೆಂದು ಹೆದರಿಸಿದ್ದಲ್ಲದೆ ಕೆಲವರಿಗೆ ಗುಂಡು ಹೊಡೆದು ೧೫,೦೦೦ ರೂಪಾಯಿ ಹಿಡಕೊಂಡರು. ನಾವೆಯು ಆ ಗ್ರಾಮಕ್ಕೆ ತಲಪುತ್ತಲೇ ಇವರು ಕರೆಗೆ ಹಾರಿ ಪಲಾಯನ ಮಾಡಿದರು.

ಮದ್ರಾಸ್ ನ್ಯಾಯವಿಧಾಯಕ ಸಭೆಯು ತಾ. ೨ರಲ್ಲು ಮದ್ರಾಸಿನಲ್ಲಿ ಕೂಡಿ ಬಂತು. ಈ ಸಭೆಗೆ ಹೆಚ್ಚು ಕಡಿಮೆ ಎಲ್ಲಾ ಮೆಂಬರರು ಹಾಜರಿದ್ದರು. ಬಹುಮಾನಪಟ್ಟ ಸರ್ ಹರೋಲ್ಡು ಸ್ಟ್ಯೂವಾರ್ಟರವರು ೧೯೧೨-೧೩ನೇ ವರುಷದ ಜಮಾ ಖರ್ಚಿನ ಅಂದಾಜು ಪಟ್ಟಿಯನ್ನು ಸಭೆಯ ಮುಂದಿಟ್ಟರು. ಈ ವಿಷಯವಾದ ವಿಮರ್ಶೆಯು ತಾ. ೩ರಿಂದ ನಡೆಯುವುದು.

ದಕ್ಷಿಣ ಕನ್ನಡ.

ಮಂಗಳೂರು: ಕಳದ ವಾರ ಮುನ್ಸಿಪಾಲಿಟಿಯಲ್ಲಿ ೬ ಪ್ಲೇಗು ಮರಣಗಳಿದ್ದವು.

ರಾಜೇಶ್ರೀ ಸಿ. ವಿ. ಮೂರುತಿ ಅಯ್ಯಂಗಾರರು ಗವರ್ನಮೆಂಟ್ ಕೋಲೇಜಿನಲ್ಲಿ ಮಾಡಿದ ಗಾಯನದ ಸಂಬಂಧವಾಗಿ ಟಿಕೇಟುಗಳ ಮಾರಾಟದಿಂದ ರೂ. 198—6—0 ವಸೂಲಾದವು. ಖರ್ಚು ರೂ. 32—12—0 ಕಳೆದು ಉಳಿದ ರೂಪಾಯಿ 165—10—0ಲ್ಲಿ ಒಂದು ಮೂರನೇ ಅಂಶ ರೂ. 55-4-0 ಗುಜರಾತಿನ ಕ್ಷಾಮನಿವಾರಣೆ ಫಂಡಿಗೆ ಕೊಡುವಗೋಸ್ಕರ ಬಹುಮಾನಪಟ್ಟ ಗೋಪಾಲ ಕೃಷ್ಣ ಗೋಖಲೆಯವರಿಗೆ ಕಳುಹಿಸಿಯದೆ. ಬಾಕಿ ರೂಪಾಯು 110—6—0 ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘದ ಬಗ್ಯೆ ಉಪಯೋಗಿಸಿಕೊಳ್ಳೋಣಾಗುವುದು ಎಂಬದಾಗಿ ನಿರಾಶ್ರಿತ ಜನಸಹಾಯಕ ಸಂಘದ ಸೆಕ್ರೆಟೆರಿಗಳಾದ ರಾ| ಕುದ್ಮುಲ್ ರಂಗರಾಯರವರು ತಿಳಿಸಿರುವರು.

ಮಂಗಳೂರು ನಿರಾಶ್ರಿತ ಜನಸಹಾಯಕ ಸಂಘದ ಬಿಜೈ ತೋಟದಲ್ಲಿ ಮ. ರಾ. ರಾ. ಕುದ್ಮುಲ ರಂಗರಾಯರು ಕಡಿಸಿಟ್ಟ ೬೦೦ ಮುರ ಕಲ್ಲುಗಳ ಪೈಕಿ ೪೮೦ ಕಲ್ಲುಗಳು ಕಳವಾಗಿ ಹೋದ ಕಾರಣ ಅವರು ಕೊಟ್ಟ ಪಿರ್ಯಾದಿ ಮೊಕದ್ದಮೆಯಲ್ಲಿ ಝಡ್ತಿಯಲ್ಲಿ ಶುಮಾರು ೪೦೦ ಕಲ್ಲುಗಳು ಶಿಕ್ಕಿದವು. ಮುದ್ದೆಯಾಳೆಲು ದೇರೆಬೈಲ ಗ್ರಾಮದ ಗಾಡಿಗಾರ ಲುಯ್ಸ, ದುಜಪ್ಪ ನ್ಯಾಕ ಮತ್ತು ಪೆದ್ರು ನ್ಯಾಕ ಎಂಬ ಮೂವರಲ್ಲಿ ಲುಯ್ಸಿಗೆ ರೂ. ೩೫ ಜುರುಮಾನೆ ವಸೂಲು ಕೊಡದಿದ್ದರೆ ಒಂದು ತಿಂಗಳ ಸಜಾ ಬಾಕಿ ಇಬ್ಬರಿಗೆ ಒಂದೊಂದು ತಿಂಗಳ ಪ್ರಕಾರ ಕಠಿಣ ಕೈದು ಶಿಕ್ಷೆ ಎಂಬದಾಗಿ ಮಂಗಳೂರ ತಾಲೂಕು ಸ್ಪೇಶನರಿ ಮೇಜಿಸ್ಟ್ರೇಟರು ಈ ತಿಂಗಳ ತಾ. ೪ಲ್ಲು ತೀರ್ಮಾನ ಕೊಟ್ಟರು.

ಹಳೆ ತಾಲೂಕು ಕಚೇರಿಯಲ್ಲಿದ್ದ ಗವರ್ನಮೆಂಟ್ ಟ್ರೈನಿಂಗ್ ಶಾಲೆಯು ಡಿಸ್ಟ್ರಿಕ್ಟ್ ಜೈಲಿದ್ದ ಕಟ್ಟೋಣಕ್ಕೆ ವಯ್ಯಲ್ಪಡುವ ಸಂಭವವಿರುವುದೆಂತಲೂ ಈಗಿನ ಗವರ್ನಮೆಂಟ್ ಟ್ರೈನಿಂಗ್ ಶಾಲೆಯ ಕಟ್ಟೋಣದಲ್ಲಿ ಉಪಾಧ್ಯಾಯಿನಿಯರನ್ನು ತರಬೇತು ಪಡಿಸುವ ಸರಕಾರಿ ಶಾಲೆಯು ಸ್ಥಾಪಿಸಲ್ಪಡುವುದೆಂಬುದಾಗಿಯೂ ಕೇಳುತ್ತೇವೆ.

ಮೂಡಬಿದ್ರೆ ತಾಲೂಕು ಆಫೀಸು ಮೂಡಬಿದ್ರೆಯಿಂದ ಕಾರ್ಕಳಕ್ಕೆ ವಯ್ಯಕೂಡದಾಗಿ ಮೂಡಬಿದ್ರೆ ತಾಲೂಕಿನ ವರ್ಗದಾರರು ಮಾಡಿದ ಮನವಿಯನ್ನು ಮದ್ರಾಸು ಸರಕಾರದವರು ಇಲ್ಲಿಯ ಕಲೆಕ್ಟರರ ರಿಪೋರ್ಟಿನ ಬಗ್ಯೆ ಕಳುಹಿಸಿರುವರಾಗಿ ವರ್ತಮಾನವಿರುವುದು.

ಈಗಿನ ಖಜಾನಾ ಡಿಪ್ಯುಟಿ ಕಲೆಕ್ಟರರವರು ಒಂದು ತಿಂಗಳ ರಜೆ ಪಡೆಯುವರೆಂಬದಾಗಿ ಕೇಳುತ್ತೇವೆ. ಇವರ ಗೈರಹಾಜರಿನಲ್ಲಿ ಪುತ್ತೂರು ಡಿವಿಜನಲ್ ಆಫೀಸರರವರು ಖಜಾನಾ ಚಾರ್ಜನ್ನು ಸಹ ವಹಿಸಿಕೊಳ್ಳುವರು.

ಬೆಳ್ತಂಗಡಿ ಡಿಪ್ಯುಟಿ ಮೇಜಿಸ್ಟ್ರೇಟರಾದ ರಾ| ಡಿ. ವಾಸುದೇವ ರಾಯರಿಗೆ ಕುಂದಾಪುರಕ್ಕೂ ಕುಂದಾಪುರದ ಸಬ್ ಮೇಜಿಸ್ಟ್ರೇಟರಾಗಿದ್ದ ರಾ| ಪಿ. ಎನ್. ಕೃಷ್ಣರಾಯರವರಿಗೆ ಬೆಳ್ತಂಗಡಿಗೂ ವರ್ಗವಾಗಿರುವುದು.

ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರವರಲ್ಲಿ ತನಿಖೆಯಾಗುತ್ತಿದ್ದ ರಾ| ಬಂಗ್ಲೆನಾರಾಯಣ ಕಾಮತರವರ ಮಾನನಷ್ಟದ ದಾವೆಯ ತನಖಿಯು ಈ ವಾರದಲ್ಲಿ ನಡದು ಮುಂದಿನ ತನಖಿ ಬಗ್ಯೆ ಇದನ್ನು ಈ ತಿಂಗಳ ತಾ. ೪ಕ್ಕೆ ಮಂಗಳೂರ ಮೊಕ್ಕಾಮಿನಲ್ಲಿಯೇ ಇಟ್ಟಿರುತ್ತಾರೆ.

ಇಲ್ಲಿಯ ಸೆಂಟ್ ಅಲೋಶಿಯಸ್ ಕಾಲೇಜಿನಲ್ಲಿ ಕಟ್ಟಿಸುತ್ತಲಿರುವ 'ಗ್ಯಾಸ್‌ಟೇಂಕ್' ಎಂಬ ಕೊಂಡಕ್ಕೆ ತಗಲುವ

WANTED.

A good Estate writer with 50 Coolies, pay Rs. 50, a good knowledge of accounts essential.

Apply—W. H. Reed

Mavinkere Estate, KALASA P. O.

೫೦ ಕೂಲಿಯಾಳುಗಳ ಸಹಿತ ಒಬ್ಬ ಒಳ್ಳೇ ರೈಟರನು ಬೇಕಾಗಿದೆ. ಸಂಬಳ ರೂ. 50 ಕೊಡೋಣಾಗುವದು. ರೈಟರನು ಲೆಕ್ಕಪತ್ರಗಳನ್ನಿಡುವ ಒಳ್ಳೇ ಅನುಭವವುಳ್ಳವನಾಗಿರಬೇಕು.

ಡಬ್ಲ್ಯು. ಎಚ್. ರೀಡ್.
ಮಾವಿನಕೆರೆ ಎಸ್ಟೇಟ್,
ಕಳಸ ಪೋಸ್ಟ್.

ಖರ್ಚಿಯಲ್ಲಿ ⅓ನೇ ಅಂಶ ಯಾ ರೂ. ೧೪೬೬೩ಕ್ಕೆ ಮಿಕ್ಕದ ಮೊಬಲಗನ್ನು ಮದ್ರಾಸ್ ಸರಕಾರದವರು ಕೊಡ ಒಪ್ಪಿರುವರು.

ಬಲ್ಮಠ ಗೇಟಿನ ವಿವಾದದ ಅಫೀಲ್ ತನಖಿಯನ್ನು ಜಡ್ಜರವರು ಶಿಖಕಾಲದ ರಜೆಯನಂತರಕ್ಕೆ ಮುಂದರಿಸಿಟ್ಟಿರುವರು.

ಇದೇ ಬರುವ ತಾ. ೭ನೇ ಆದಿತ್ಯವಾರ ಬಲ್ಮಠ ಕ್ರಿಶ್ಚಿಯನ್ ಪ್ರೆಂಡ್-ಇನ್-ನೀಡ್ ಸೊಸೈಟಿಯ ಪ್ರಥಮ ವಾರ್ಷಿಕ ವರ್ಧಂತಿಯು ಜರುಗುವುದು.

ಮಂಗಳೂರು ಮೊಗೇಯರರ ಶ್ರೀ ಜ್ಞಾನೋದಯ ಸಮಾಜದವರ ಎರಡನೇ ವಾರ್ಷಿಕ ಮಹಾ ಸಭೆಯು ಇದೇ ತಿಂಗಳ ತಾರೀಕು ೧೩ನೇ ಶನಿವಾರ ಬೋಳಾರ ಶ್ರೀ ಬಬ್ಬರಿಯ ದೈವಸ್ಥಾನದ ಚಾವಡಿಯಲ್ಲಿ ಹಗಲು ಘಂಟೆ ೩-೩೦ಕ್ಕೆ ಜರುಗುವದು. ಈ ಸಂದರ್ಭದಲ್ಲಿ ಅಧ್ಯಕ್ಷಸ್ಥಾನವನ್ನಲಂಕರಿಸಲು ಮಹಾರಾಜೇಶ್ರಿ ರಾಯಿಸಾಹೇಬ್ ಯಂ. ಗೋಪಾಲರಾವ್ ಅವರ್ಗಳ್ ಬಿ. ಎ. ಬಿ. ಎಲ್. ರವರು ಸಮ್ಮತಿಸಿರುತ್ತಾರೆ.

ರಾ| ಎಸ್. ಶ್ರೀನಿವಾಸರಾವ್ ಎಂಬವರು ಜನರಲ್ ಡ್ಯೂಟಿ ಡಿಪ್ಯುಟಿ ಕಲೆಕ್ಟರರಾಗಿ ನಮ್ಮ ಜಿಲ್ಲೆಗೆ ನೇಮಿಸಲ್ಪಟ್ಟಿರುವರು. ಇಲ್ಲಿಯ ಕುಂದಾಪುರ ಡಿವಿಜನಿನ ಆಫೀಸರರಾಗಿ ಇವರು ಮೆ| ಮೆಕ್ವಿನ್ ದೊರೆಗಳವರಿಂದ ಚಾರ್ಜು ಪಡಿಯುವರಾಗಿ ಕೇಳುತ್ತೇವೆ.

ಬಂಟರ ಯಾ ನಾಡವರ ಸಂಘ, ಮಂಗಳೂರು. ಈ ಸಂಘದವರಿಂದ ಸ್ಥಾಪಿಸಲ್ಪಟ್ಟ ಶ್ರೀ ರಾಮಕೃಷ್ಣ ವಿದ್ಯಾರ್ಥಿಭವನದ ವಿದ್ಯಾರ್ಥಿಗಳು ಈ ತಿಂಗಳಿನಿಂದ ಶಿಕ್ಕಿರುವ ತಮ್ಮ ರಜೇ ಕಾಲದಲ್ಲಿ ತಂತಮ್ಮ ಊರಲ್ಲಿಯೂ ಆಜುಬಾಜುಗಳಲ್ಲಿರುವ ಹಳ್ಳಿಗಳಲ್ಲಿಯೂ ಸ್ವಜಾತಿ ಗೃಹಸ್ಥರುಗಳಿಂದ ಸಂಘದ ಸಹಾಯಾರ್ಥವಾಗಿ ಚಂದಾಹಣವನ್ನು ಒಟ್ಟುಕೂಡಿಸಲು ಹೋಗುವರೆ ನಿಶ್ಚಯಿಸಿರುವರು. ಸಂಘವು ಯಾವ ಉದ್ದಿಶ್ಯಗಳಿಂದ ಸ್ಥಾಪಿಸಲ್ಪಟ್ಟಿರುವುದೆಂಬುದು ಬಂಟರ ಯಾ ನಾಡವರ ಜಾತಿಯ ಸದ್ಗೃಹಸ್ಥರೆಲ್ಲರಿಗೂ ತಿಳಿದಿರಬೇಕು. ವಿದ್ಯಾರ್ಥಿಗಳೇ ಸಂಘದಿಂದುಂಟಾಗುವ ಪ್ರಯೋಜನಗಳನ್ನು ತಿಳಿದು ಸಂಘದ ಏಳಿಗೆಗೆ ಬೇಕಾದ ದ್ರವ್ಯಸಂಗ್ರಹವನ್ನು ಕೂಡಿಸುವರೆ ಕೈಕೊಂಡಿರುವಂಥಾದ್ದು ಶ್ಲಾಘನೀಯವಾಗಿದೆ. ನಾಡವರ ಜಾತಿಯ ಗೃಹಸ್ಥರು ವಿದ್ಯಾರ್ಥಿಗಳ ಮೇಲಣ ಪುತ್ರವತ್ ವಾತ್ಸಲ್ಯದಿಂದ ವಿದ್ಯಾರ್ಥಿಗಳನ್ನು ತಮ್ಮ ಈ ಸ್ತುತ್ಯವಾದ ಪ್ರಯತ್ನಗಳಲ್ಲಿ ನಿರಾಶಗೊಳಿಸಲಿಕ್ಕಿಲ್ಲವೆಂಬದಾಗಿ ಕೋರುತ್ತೇವೆ.

ಬಂಟರ ಯಾ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಬಂಗಾಳದ ತನ್ನ ಅನುಭವದ ವಿಷಯ ರಾ| ವಕೀಲ ಗಂಗೊಳ್ಳಿ ಕೃಷ್ಣರಾಯರವರು ಒಂದು ಭಾಷಣವನ್ನು ಕೊಟ್ಟರು. ಸಬ್ ಜಡ್ಜರವರು ಈ ಸಂದರ್ಭದಲ್ಲಿ ಸಭಾಧ್ಯಕ್ಷರಾಗಿದ್ದರು.

ಟ್ರೇನ್ಸಿಟ್ ಗಾಡಿಗಳ ಇನ್ನೊಂದು ಅವಘಡವು. ಕಳೆದ ವಾರ ಇಲ್ಲಿಯ ಡಾಕ್ಟರ್ ಕೆ. ವಿಟ್ಟಳರಾಯರವರು ತಮ್ಮ ಕುಟುಂಬ ಸಮೇತ ಉಡುಪಿಗೆ ಹಿಂದೂ ಟ್ರೆನ್ಸಿಟ್ ಕಂಪೆನಿಯ ಗಾಡಿಗಳೊಂದರಲ್ಲಿ ಹೋಗುತ್ತಿದ್ದಾಗ ಗಾಡಿಯು ಕೂಳೂರು ರಸ್ತೆಯ ನಾಲ್ಕನೆಯ ಮೈಲು ಕಲ್ಲಿನ ಸಮೀಪವಿರುವ ಗದ್ದೆಗಳಿಗೆ ಬಿದ್ದು ಗಾಡಿಯಲ್ಲಿದ್ದ ಪ್ರಯಾಣಿಕರೆಲ್ಲರಿಗೆ ವಿಶೇಷ ಜಖಂ ಉಂಟಾಗಿರುತ್ತದೆ. ಒಬ್ಬ ವೃದ್ಧ ಸ್ತ್ರೀಯ ಕೈ ಎಲುಬು ಪೂರ್ಣ ಮುರಿದುಹೋಗಿರುವುದು. ಮುರಿದ ಕೈಯು ಸರಿಯಾಗದೆಂದು ಡಾಕ್ಟರರು ಅಭಿಪ್ರಾಯಪಡುವರೆಂತ ಕೇಳುತ್ತೇವೆ. ಡಾ| ಕೆ. ವಿಟ್ಟಳರಾಯರವರು ಕಾಲುಗಳಲ್ಲಿ ಕೆಲವು ದಿವಸಗಳ ವರೆಗೆ ಗುಣವಾಗದಂಥಾ ಘಾಯಗಳನ್ನು ಪಡದಿರುವರು. ಮತ್ತು ಕೆಲವು ಸ್ತ್ರೀಮಕ್ಕಳು ಸಹ ವಿಶೇಷ ಜಖಂ ಪಡದು ಜಜ್ಜಿಹೋಗಿರುವರು. ಈ ಅವಘಡವು ಉಂಟಾಗಲಿಕ್ಕೆ ಸರಿಯಾದ ಕಾರಣವೇನೆಂತ ತಿಳಿದುಬರುವುದಿಲ್ಲ. ಆದರೆ ಗಾಡಿಗಳಿಗೆ ಕಟ್ಟಿದ ಕುದುರೆಗಳು ಸಣ್ಣವಾಗಿಯೂ ಗಾಡಿಯನ್ನು ಸರಿಯಾಗಿ ಎಳೆಯಲಾರದವುಗಳಾಗಿಯೂ ಇದ್ದು ಇಳಿಜಾರಿನಲ್ಲಿ ಕೆಳಗೆ ಓಡುತ್ತಿದ್ದಾಗ ತಮ್ಮ ದಣಿವಿನಿಂದ ರೇಗಿಕೊಂಡು ಗಾಡಿಯನ್ನು ಮಾರ್ಗದ ಪಕ್ಕದಲ್ಲಿರುವ ರಸ್ತೆಗೆ ಎಳೆದುಹಾಕಿದವೆಂತಲೂ ಗಾಡಿ ಹೊಡೆಯುವವನು ಸಹ ಅನುಭವರಹಿತನಾದ್ದರಿಂದ ಕುದುರೆಗಳನ್ನು ತಕ್ಕ ಕಾಲದಲ್ಲಿ ಆಟೋಪಿಸಲಶಕ್ತನಾದನೆಂತಲೂ ಕೇಳುತ್ತೇವೆ. ಜಟ್ಕಾ ಟ್ರೆನ್ಸಿಟು ಗಾಡಿಗಳ ಅವಘಡವು ದಿನೇ ದಿನೇ ಹೆಚ್ಚುತ್ತಿರುವುದರಿಂದ ಪ್ರಜಾಹಿತಾರ್ಥವಾಗಿ ಇಂಥಾ ಅವಘಡಗಳಲ್ಲಿ ಸರಿಯಾದ ತನಖಿಯನ್ನು ನಡಿಸಿ ಯಾವ ಕಾರಣಗಳಿಂದ ಇಂಥಾ ಅವಘಡಗಳು ಸಂಭವಿಸುತ್ತಿರುವವೆಂಬುದನ್ನು ಸರಕಾರದವರು ತಿಳಕೊಳ್ಳುವುದು ಅಗತ್ಯವಾಗಿದೆ. ಸರಕಾರಿ ಆಫೀಸರರ ಮೇಲ್ವಿಚಾರವು ಇಂಥಾ ಅವಘಡಗಳಲ್ಲಿ ಸರಿಯಾಗಿದ್ದಲ್ಲಿ ಇಂಥಾ ಜೀವಕ್ಕಪಾಯವನ್ನುಂಟುಮಾಡುವ ಅವಘಡಗಳು ಕಡಮೆಯಾಗುವವು. ಮೇಲೆ ಪ್ರಸ್ತಾಪಿಸಿದ ಆಪತ್ತು ಯಾವ ಕಾರಣಗಳಿಂದ ಉಂಟಾಯಿತೆಂಬುದರ ವಿಷಯ ತನಖಿಯು ಅಗತ್ಯವಾಗಿರುವುದು. ಸರಕಾರದವರು ಇದಕ್ಕೆ ತಕ್ಕ ನಿಗಾ ಕೊಡುವರಾಗಿ ನಂಬಿದ್ದೇವೆ.

~~~~~

ಪಾಣೆಮಂಗಳೂರು. ಮೊಗರ್ನಾಡ ದಾಮರ್ಸಪೈ ದೇವಸ್ಥಾನದಲ್ಲಿ ವೇದಮೂರ್ತಿ ಉಪೇಂದ್ರಕೃಷ್ಣಭಟ್ಟರವರು ನಮ್ಮ ವಿದ್ವದ್ವೈದಿಕ ಸದ್ಗೃಹಸ್ಥರ ಉದಾರಾಶ್ರಯದಿಂದ ಋಗ್ವೇದ ಶಾಕಲಶಾಕಾಂತರ್ಗತ ಋಗ್ವೇದ ಸಂಹಿತಾ ಹೋಮವೆಂಬ ಮಹಾಯಜ್ಞವನ್ನು ಮಂಗಳೂರು ಜೋಡುಮಠ ಶ್ರೀ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ ಸಂಸ್ಥಾಪಿತವಾದ ಶ್ರೀ ಬ್ರಹ್ಮವಿದ್ಯಾಪ್ರಬೋಧಿನೀ ವೇದಪಾಠಶಾಲಾಧ್ಯಕ್ಷ ವ ಉಪಾಧ್ಯಾಯರು ವಗೈರೆ ೧೬ ಋತ್ವಿಜರಿಗೆ ಆಮಂತ್ರಣ ಮಾಡಿ ಇದೇ ಪರಿಧಾವಿ ಸಂವತ್ಸರದ ಚೈತ್ರ ಬಹುಳ ೩ ಗುರುವಾರ ತಾ. 4-4-1912ರಲ್ಲು ಪ್ರಾರಂಭ ಮಾಡಿದ್ದಾರೆ. ಅಲೌಕಿಕ ಪುಣ್ಯಪ್ರದವಾದ ಈ ಮಹಾಯಜ್ಞವನ್ನು ಮಾಡುವರೆ ಶ್ರೀ ವಿಷ್ಣು ಭಕ್ತಿಯುಳ್ಳ ಸದ್ಗೃಹಸ್ಥರು ಉದಾರಾಶ್ರಯ ಕೊಟ್ಟು ಪುಣ್ಯಕಾರ್ಯವನ್ನು ಪೂರೈಸುವರಾಗಿ ನಂಬುತ್ತೇವೆ.

~~~~~

ಮುಂಬಾಯಿ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಿಂದ ಬಾರಕೂರು ವರೆಗೆ ಪಶ್ಚಿಮ ಕರಾವಳಿಯಲ್ಲಿ ವಾಶಿಸುವ ಮೊಗೇರ ಜಾತಿಯವರ ಕುಲಗುರುಯಾನೆ ಮಂಗಳಪೂಜಾರಿಯವರು ಇದೇ ಚೈತ್ರ ಶುದ್ಧ ೧ನೇ ಗುರುವಾರ ದಿವಸ (ತಾರೀಕು 28-3-1912ರಲ್ಲು) ಮುಂಬಾಯಿಗೆ ಬಂದು ಮುಂಬಾಯಿಯಲ್ಲಿ ವಾಸಿಸುವ ತನ್ನ ಶಿಷ್ಯಮಂಡಳಿಯವರಾದ ದಕ್ಷಿಣ ಕನ್ನಡ ಜಿಲ್ಲೆಯ ಮೊಗೇರ ಜಾತಿಯವರಿಂದ ಸನ್ಮಾನ ಹೊಂದುತ್ತಲಿರುತ್ತಾರೆ. ಇವರು ಮುಂಬಾಯಿಯ ಬಂದರದಲ್ಲಿ ಇಳಿಯುವಾಗ ಬಹು ಮಂದಿ ಬಂದರಿಗೆ ಹೋಗಿ ಇವರನ್ನು ಎದುರುಗೊಂಡು ಬಹು ಸನ್ಮಾನದಿಂದ ಕರಕೊಂಡು ಬಂದಿರುತ್ತಾರೆ. ಇವರು ಸದ್ಯಾ ಸ್ವದೇಶಕ್ಕೆ ತೆರಳಲಿಕ್ಕಿರುತ್ತಾರೆ. ಇವರಿಗೆ (ಮುಂಬಾಯಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೊಗೇರ ಜಾತಿಯವರು ಸ್ಥಾಪಿಸಿರುವ) ಮಂಗಳೂರು ಮೊಗೇರ ವ್ಯವಸ್ಥಾಪಕ ಮಂಡಳಿಯವರು ಬಹುಮಾನಾರ್ಥವಾಗಿ ಒಂದು ಮಾನಪತ್ರವನ್ನು ಬೆಳ್ಳಿಯ ಕರಡಿಗೆಯಲ್ಲಿಟ್ಟು ಇದೇ ಚೈತ್ರ ಬಹುಳ ೬ರಲ್ಲು (ತಾರೀಕು 7—4—1912ರಲ್ಲು) ಅರ್ಪಿಸುವರು. Y. K. A.

~~~~~

ಕೀರ್ತಿಶೇಷ ಅಮ್ಮೆಂಬಳ ಸುಬ್ರಾಯ ಪೈ ಮೆಮೋರಿಯಲ್ ಫಂಡು.

~~~~~

ಕಳೆದ ೧೯೧೧ನೇ ಇಸವಿ ದಶಂಬರ ತಿಂಗಳ ತಾ. ೨೨ನೇ ಸಂಚಿಕೆಯಲ್ಲಿ ತೋರುವ ಪ್ರಕಾರ ವಸೂಲಿ ಜುಮುಲಾ ರೂ. 10,118—4—0.

ನಂತರದ ವಸೂಲಿ ವಿವರ:—

ಮ| ರಾ| ರಾ| ಗುರುಪುರ ಮೂಡ್ಲಗಿರಿ ಶ್ಯಾನಭಾಗರು ರೂ. 10. ರಾ| ಬಂಗ್ರಮಂಜೇಶ್ವರ ಸುಬ್ರಾಯ ಭಕ್ತ ವ ಮಕ್ಕಳು ರೂ. 15. ರಾ| ಮಂಗಳೂರು ರಂಗಪ್ಪ ಭಂಡಾರಿಗಳು (ಅಂಶ) ರೂ. 9. ರಾ| ಕಲ್ಯಾಣಪುರ ಸಾಂತೆಪ್ಪ ಪಡಿಯಾರರು ರೂ. 50. ರಾ| ಒಬ್ಬ ಹಿತಚಿಂತಕರು (ಅಂಶ) ರೂ. 50. ರಾ| ಬಂಗ್ರಮಂಜೇಶ್ವರ ಅಣ್ಣಪ್ಪ ಕಮ್ತಿಗಳು (ಡಾಕ್ಟರ್) ರೂ. 51. ರಾ| ಗುಜ್ಜಾಡಿ ಸಾಂತಪ್ಪ ನ್ಯಾಕರು (ಅಂಶ) ರೂ. 8. ರಾ| ಕುಂದಾಪುರ ಶ್ರೀನಿವಾಸ ಭಂಡಾರಿಗಳು ವ ಸಹೋದರರು (ಅಂಶ) ರೂ. 20. ರಾ| ಮಂಜೇಶ್ವರ ವೈಕುಂಠ ಭಕ್ತರು (ಅಂಶ) ರೂ. 250.

ಒಟ್ಟು ಜುಮುಲಾ ರೂ... 10581—4—0.

K. P. Rama Rau,
ತಾ. 28—3—12. *for Secretary.*

~~~~~

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಮಸ್ಕತಿ ಅಕ್ಕಿ	5—5—0—5—7—0
ಗುಡ್ಡು ಮಸ್ಕತಿ... ...	4—14—0—5—0—0
ಮಸ್ಕತಿ ದುಯಂ... ...	4—14—0—5—0—0
ಗುಡ್ಡು ,, ...	4—12—0—4—13—0
ಮಸ್ಕತಿ ಬೆಳ್ತಿಗೆ ,, ...	5—10—0—5—12—0
ರಂಗೂನ್ ಬೆಳ್ತಿಗೆ ಗೋಣಿ	10—8—0
ಹುರುಳಿ ಗೋಣಿ ೧, ಮುಡಿ 2ರ ...	6—0—0
ಉಪ್ಪು ಗೋಣಿ ೧ರ	3—10—0
ಖೊಬ್ರಿ ಖಂಡಿ ೧ರ	100—0—0
ಖೊಬ್ರಿ ಎಣ್ಣೆ ಮಣ ೧ರ	6—14—0
ಕಾಫಿ ಖಂಡಿ ೧ರ	270—0—0
ಕಾಳು ಮೆಣಸು ಖಂಡಿ	180—0—0
ಬಿಳಿ ಗೋಟು ಅಡಿಕೆ	80—0—0—83—0—0
ಕರಿ ಗೋಟು	60—0—0
ಯಾಲದಕಾಯಿ ಮಣ೧ರ	50—0—0
ಗೇರುಬೀಜ ಮುಡಿ ೧ರ	2—4—0
ಶೀಗೆಕಾಯಿ ಖಂಡಿ ೧ರ	37—0—0—38—0—0
ಕಾಸ್ರ ಕಿನ ಬೀಜ ಖಂಡಿ೧ರ	24—0—0
ದಾಲಚೀನಿ ಹೂ ಮಣ೧ರ	2—8—0
ಅಂಟವಾಳಕಾಯಿ ಮುಡಿ ೧ರ	1—6—0—1—7—0
ಅಣಿಲೆ ಕಾಯಿ ಖಂಡಿ ೧ರ	5—0—0—12—4—0
ಪಚ್ಚೆಹೆಸರು	4—10—0—5—0—0
ಬೊಂಬಾಯಿ ಉದ್ದು ಗೋಣಿ ೧ಕ್ಕೆ ...	9—6—0
ಗೋದಿ ಗೋಣಿ ೧ಕ್ಕೆ...	10—8—0
ಊರು ಬೆಲ್ಲ ಖಂಡಿ ೧ರ	35—0—0
ಮೋರಿಸ್ ಸಕ್ಕರೆ ಮಣ ೧ರ	3—13—0
ಕಡಲೆ ಗೋಣಿ ೧ರ	7—6—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	4—4—0—4—8—0
ಖೊಬ್ರಿ ಹಿಂಡಿ ಖಂಡಿ ೧ರ	31—0—0
ರಾಮಪತ್ರೆ	5—12—0
ರಾಮಗೋಟು	2—0—0

~~~~~



ಪೊಪ್ಯುಲರ್ ಹಂಬರ್ ಕ್ರಯ ರೂಪಾಯಿ 120.

ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯಾಕಲುಗಳನ್ನು ಪಡಿಯಲು ಸಾಧ್ಯವಲ್ಲ.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಶೋಸಿಯೇಷನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.



ಸಿಂಗರ್ ರೊಯಲ್ ಕ್ರಯ ರೂಪಾಯಿ 115.

"ಅಮೇರಿಕದ ವಿಶಿಷ್ಟತೆ"

ಪ್ರೊಫಸರ್ ಜೇಮ್ಸರವರ "ಇಲೆಕ್ಟ್ರೋ ಟೊನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವುದಕ್ಕೆ ಅಥವಾ ಕಾರ್ಯ ಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿ ಬರುವ ಕ್ಷಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಗ್ಲಾನಿಯೂ, ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ್ಪ ಪದಾರ್ಥಗಳಿರುವವರ—ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹ ಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವುದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು-ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ.2-0-0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮ. ಜೇ. ಸಿ. ಬ್ರಿತೋ (ಪೊಂಡಾ.-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದ ನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮ. ಜೆ. ಆರ್. ಗಾಯಕವಾಡ, (ಸಕ್ರಿಯ ಮಾಮಲತದಾರರು)—ವಿ. ಪಿ. ದ್ವಾರಾ ಆದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ-ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳ ಉತ್ತಮವಿದೆ.

The Anglo Indian Drug & Chemical Company,

ಉಪನ್ಯಾಸಗಳ ಉತ್ತಮಾಲಯ } **ಮಧುರವಾಣಿ** { ಗ್ರಂಥಗಳ ಭಾಂಡಾಗಾರ.

ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತ ಪ್ರಣೀತ ನಾಟಕ, ಕಾದಂಬರಿ. ಜೀವನ ಚರಿತೆ ಮುಂತಾದ ಗ್ರಂಥಗಳೂ ಸಾಮಾಜಿಕ ನೀತಿ, ಮತ ವಿದ್ಯೆ, ತತ್ವಶಾಸ್ತ್ರಕ್ಕೆ ಸಮ್ಮಂಧಪಟ್ಟ ಉತ್ತಮೋಪನ್ಯಾಸಗಳೂ ಇನ್ನೂ ಅನೇಕ ಉಪಯುಕ್ತ ವಿಷಯಗಳು ಬೇರೆಬೇರೆ ಪುಟಗಳೊಡನೆ ಪ್ರತಿ ತಿಂಗಳಲ್ಲಿಯೂ ತಪ್ಪದೆ ಪ್ರಕಟಿಸಲ್ಪಡುವವು. ಚಂದಾದಾರರಿಗೆ ಅನೇಕ ಪುಸ್ತಕಗಳು ಬಹುಮಾನವಾಗಿ ದೊರೆವವು.

ವಿಳಾಸ:—

ಹನುಮಾನ್ ಮತ್ತು ಕಂಪೆನಿ.

ಮೈಸೂರು

ಮಹನೀಯರೇ ನಿಮ್ಮ ರೋಗಗಳಿಂದ ಧೈರ್ಯಗುಂದ ಬೇಡಿ! ನೋಡಿರಿ ಬೆಲೆಯಲ್ಲಿ ಅಗ್ಗ!! ಗುಣದಲ್ಲಿ ಪೆಟ್ಟೊಂದು ತುಂಡೆರಡು!!! ರೋಗಗಳಿಂದ ಅಧೈರ್ಯ ಪಟ್ಟವರಿಗೆ ಸಂಪೂರ್ಣ ನಂಬಿಕೆಯನ್ನುಂಟುಮಾಡುವುದು!!! ಆ ನಂಬಿಕೆಯೇ

ಜ್ವರಾಮೃತ.

ಈ ಔಷಧವು ಮಲೇರಿಯ ಜ್ವರ, ದಿನ ತಪ್ಪಿ ದಿನ ಬರುವ ಜ್ವರ, ಕಾಲಕಾಲದ ಜ್ವರ, ಬೆಳದಗೆಡ್ಡೆ ಮತ್ತು ಕೊಂಬೆಯಿಂದುಂಟಾಗುವ ಜ್ವರಗಳನ್ನು ನೆಕ್ಕುವ ವಾರಿಯೇ ಜ್ವರಾಮೃತ. ಎಲ್ಲಾ ತರದ ಔಷಧಗಳನ್ನು ಸೇವನೆ ಮಾಡಿ ಗುಣಹೊಂದದೆ ಇರುವ ಖಾಯಿಲಸ್ಥರೇ ಒಂದು ಸಾರಿ ಈ ಜ್ವರಾಮೃತವೆಂಬ ಔಷಧವನ್ನು ಸೇವನೆ ಮಾಡಿ ನಿಮ್ಮನ್ನು ದಿನನಿತ್ಯವೂ ಪೀಡಿಸುವ ಬಾಧೆಗಳನ್ನು ನಿವಾರಣೆ ಮಾಡಿಕೊಂಡು ಆರೋಗ್ಯಸ್ಥರಾಗಿರಿ. ಬೆಲೆ ಸೀಸೆ 1ಕ್ಕೆ ಆಣೆ 0—8—0 ದೊಡ್ಡ ಸೀಸೆ 1ಕ್ಕೆ ಆಣೆ 0—14—0 ಸಣ್ಣ ಸೀಸೆ ಡಜನ್ 1ಕ್ಕೆ ರೂ. 5—8—0 ದೊಡ್ಡ ಸೀಸೆ ಡಜನ್ 1ಕ್ಕೆ ರೂ. 10—0—0. ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಟೆನಟನ್ ಚೂರ್ಣ.

ಈ ಚೂರ್ಣವು ಹುಳ ಕಡ್ಡಿ ಮತ್ತು ಇತರ ಎಲ್ಲಾ ತರದ ರೋಗಗಳನ್ನು ಕ್ಷಣಮಾತ್ರದಲ್ಲಿಯೇ ಗುಣಪಡಿಸುವುದು. ಯಾವ ತರದ ಕೇಡನ್ನುಂಟುಮಾಡದ ಔಷಧಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಹಚ್ಚುವುದರಿಂದ ಉರಿಯು ಸಹ ಉಂಟಾಗುವುದಿಲ್ಲ ಮತ್ತು ಒಳ್ಳೇ ಸುವಾಸನೆಯುಳ್ಳದ್ದಾಗಿರುತ್ತದೆ. ಇದನ್ನು ಹಚ್ಚಿದ ಎರಡು ಮೂರು ದಿವಸಗಳಲ್ಲಿಯೇ ಇದರ ಗುಣತ್ವವು ತಿಳಿಯಬರುವುದು. ಬೆಲೆ ಡಬ್ಬಿ 1ಕ್ಕೆ ಆಣೆ 0—4—0 ಡಜನ್ 1ಕ್ಕೆ ರೂ 2—12—0 ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಕೇಶ್ಮಂಜರಿ ಎಣ್ಣೆ.

ಈ ಎಣ್ಣೆಯನ್ನು ಅನೇಕ ಔಷಧಗಳಿಂದ ತಯಾರುಮಾಡಲ್ಪಟ್ಟಿರುತ್ತದೆ. ಇದನ್ನು ಉಪಯೋಗಿಸುವುದರಿಂದ ಮೆದುಳನ್ನು ತಂಪಾಗಿಯೂ, ಕೂದಲನ್ನು ಕಪ್ಪಾಗಿಯೂ, ರೇಷ್ಮೆಯಂತೆ ನುಣುಪಾಗಿಯೂ ಮಾಡುವುದಲ್ಲದೆ ಕೂದಲು ಅಧಿಕಧಿಕವಾಗಿ ಬೆಳೆಯುವಂತೆ ಮಾಡಿ ಉದುರುವ ಕೂದಲನ್ನು ನಿಲ್ಲಿಸುತ್ತದೆ. ಅಧಿಕ ಮೆದುಳು ಕೆಲಸ ಮಾಡುವವರು ಈ ಎಣ್ಣೆಯನ್ನು ಅಗತ್ಯವಾಗಿ ಉಪಯೋಗಿಸಬೇಕಾಗಿರುತ್ತದೆ. ಈ ಎಲ್ಲಾ ಗುಣಾತಿಶಯಗಳಿಂದೊಡಗೂಡಿರುವುದಲ್ಲದೆ ಇದನ್ನು ತಲೆಯ ಮೇಲೆ ಹಚ್ಚಿಕೊಂಡು ಹೋದಲ್ಲಿ ಆಜುಬಾಜಿನ ಜನರು ಇದರ ಸುವಾಸನೆಗೆ ಬೆರಗಾಗುವರು. ಆದ್ದರಿಂದ ಪ್ರತಿಯೊಂದು ಮನೆಯಲ್ಲಿ ಒಂದು ಶೀಸೆ ಯಾವಾಗ್ಯೂ ಇಟ್ಟಿರಬೇಕಾಗಿರುತ್ತದೆ. ಬೆಲೆ ಸೀಸೆ 1ಕ್ಕೆ ಆಣೆ 0—12—0 ಡಜನ್ 1ಕ್ಕೆ ರೂ. 8—8—0 ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಆದ್ದರಿಂದ ರೋಗಗಳಿಂದ ಪೀಡಿತರಾಗಿರುವ ಪ್ರತಿಯೊಬ್ಬರು ಒಂದು ಸಾರಿ ಈ ಔಷಧಗಳನ್ನು ಉಪಯೋಗಿಸಿ ಬಾಧಿಸುತ್ತಿರುವ ರೋಗಗಳಿಂದ ಗುಣವನ್ನು ಹೊಂದಿಕೊಂಡು ದೀರ್ಘಾನಂದ ಪಡೆಯಿರಿ. ಸಂತೋಷವೇ ಯೌವ್ವನ! ಚಿಂತೆಯೇ ಮುಪ್ಪು!!

ವಿಳಾಸ:—ಟಿ. ಡಿ. ಮುಕರ್ಜಿ ಅಂಡ್ ಕೊ,
ಚೌಕ್ ಬೆನಾರೆಸ್ ಸಿಟಿ.

Address:—**T. D. Mukherjee & Co.,**
Chowk, Benares City.

ವಿಶ್ವಾಂಜನ ಪ್ಯೆನ್ ಬಾಂ.

ಎಲ್ಲಾ ಭಾಗ್ಯಕ್ಕಿಂತಲೂ ಆರೋಗ್ಯ ಭಾಗ್ಯವು ದೊಡ್ಡದು. ಈ ಭಾಗ್ಯವನ್ನು ಕೊಡುವುದು ಯಾವದು? ನಮ್ಮ ವಿಶ್ವಾಂಜನ ಪ್ಯೆನ್ ಬಾಂ ಅಲ್ಲವೇ? ಇದರಿಂದ ತಲೆ ವೇದನೆ, ವಕ್ರಶೂಲ, ವಾತ, ಸಂಧುವಾತ, ಕಡತ, ಜಜ್ಜಿದ ಘಾಯ, ಶೀತ, ಗಂಟ್ಲುನೋವು, ಸೊಂಟನೋವು, ಜಖಮು, ಉಳುಕು, ಎದೆನೋವು, ಆನೆಕಾಲು, ವ ಇತರ ಎಲ್ಲಾ ತರದ ನೋವುಗಳು ನಿಸ್ಸಂಶಯವಾಗಿ ಗುಣ ಹೊಂದುತ್ತವೆ. ಎಲ್ಲಾ ಔಷಧಗಳಿಗಿಂತಲೂ ಶ್ರೇಷ್ಠವಾದುದೆಂದು ಅನೇಕ ಜನರಿಂದ ಶಿಫಾರಸು ಮಾಡಲ್ಪಟ್ಟಿದೆ. ಬಾಟ್ಲಿ 1ಕ್ಕೆ—0—8—0. 3 ಬಾಟ್ಲಿ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಇಲ್ಲ.

ವಿಳಾಸ:—ಬಿ. ವಿ. ಪಿ. ಭಂಡಾರಕರ್,
ವಿಶ್ವಾಂಜನ ಡಿಪೊ,
[illegible] ಮಂಗಳೂರು ದ. ಕ.

ಪ್ರಕಟಣೆ.

ಉತ್ತರ ಆರ್ಕಾಡು ಜಿಲ್ಲೆಯ ಅರ್ನಿ ಮತ್ತು ಒನ್ನುಪುರಾಮಿನಲ್ಲಿ ನೇಯಲ್ಪಡುವ ರೂ 13ರಿಂದ ರೂ 150 ವರೆಗಿನ ಕ್ರಯದ ಸ್ತ್ರೀಯರ ಉಪಯೋಗಾರ್ಥವಾದ ರೇಶ್ಮೆ ಮತ್ತು ಗೋಟು ತೆಗೆದ ವಸ್ತ್ರಗಳು ರಿಯಾಯತಿ ದರದಲ್ಲಿ ಮಾರಲ್ಪಡುವವು. ವಸ್ತ್ರ ಕೊಂಡುಕೊಳ್ಳುವ ವ್ಯಾಪಾರಸ್ಥರಿಗೆ ಹಣ ಪಾವತಿ ಮಾಡುವರೆ ಒಂದು ತಿಂಗಳ ಸಮಯ ಕೊಡೋಣಾಗುವುದು. ಒಂದೆರಡು ವಸ್ತ್ರಗಳನ್ನು ಕೊಂಡುಕೊಳ್ಳುವವರಿಗೆ ವಿ. ಪಿ. ಮೂಲಕ ಕಳುಹಿಸೋಣಾಗುವುದು. ಒನ್ನುಪುರಾಮಿನ ರುದ್ರಾಕ್ಷ ಪೇಟೆಯಲ್ಲಿ ತಯಾರಿಸಲ್ಪಡುವ ವಿವಿಧ ಬಣ್ಣದ ಸ್ತ್ರೀಯರ ವಸ್ತ್ರಗಳೂ ಸಹಾ ಅಗ್ಗವಾಗಿ ಅಂದರೆ ರೂ. 3-15-6ರಿಂದ ರೂ. 7-12-0 ದರದಲ್ಲಿ ಮಾರಲ್ಪಡುವವು. ಗಿರಾಕಿಗಳು ವಸ್ತ್ರದ ಬಣ್ಣವನ್ನೂ ನಮೂನೆಯನ್ನೂ ಪರೀಕ್ಷಿಸಿ ನೋಡ ಬಹುದು. ಈ ವಸ್ತ್ರಗಳನ್ನು ಒಂದು ಸಾರಿ ಕೊಂಡು ಕೊಂಡವರು ಇತರರಿಂದ ವಸ್ತ್ರಗಳನ್ನು ಕೊಂಡುಕೊಳ್ಳರೆಂಬದು ನಿಶ್ಚಯ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ವಿಳಾಸ:—ಅತ್ತೂರು ವೈಕುಂಟ ಪ್ರಭು.
ರೇಶ್ಮೆ ಮತ್ತು ಗೋಟಿನ ವಸ್ತ್ರ ವ್ಯಾಪಾರಸ್ಥ.
ತಿರುವೆತ್ತಿಪುರಂ, ಉತ್ತರ ಆರ್ಕಾಡುಜಿಲ್ಲೆ.

ಅತ್ಯುಪಯುಕ್ತವಾದ ಕೆಲವು ಪುಸ್ತಕಗಳು.

ಕುಮುದಾ	0—8—0
ಮಹಾರಾಣಿ ಗಹಶೀಲೆ	0—2—0
ಮುಕ್ತಹಾರ	0—1—6
ಸನಾತನ ಧರ್ಮ ಪ್ರಶ್ನೋತ್ತರ	0—1—0
ಕೃಷ್ಣಜನ್ಮ ನಾಟಕ	0—4—0
ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನೆ	0—3—0
ಪ್ರಾತಃರಾಹ್ನಿಕ ಪದ್ಧತಿ	0—3—0
ದೇವಪೂಜಾ ಪದ್ಧತಿ	0—3—0
ಬ್ರಹ್ಮಯಜ್ಞ ವೈಶ್ವದೇವ	0—3—0
ವಿಷ್ಣು ಸಹಸ್ರನಾಮ ಕೃಷ್ಣಾಷ್ಟೋತ್ತರ ನಾಮಾವಳಿ	0—2—6
ವಾಯುಸ್ತುತಿ	0—2—0
ದ್ವಾದಶ ಸ್ತೋತ್ರ	0—2—0
ಲಕ್ಷ್ಮೀ ಶೋಭಾನೆ ಹಾಡು	0—2—0
ಹರಿಭಕ್ತಸಾರ	0—1—0
ಉದಯರಾಗ	0—4—0
ಸ್ವಪ್ನಪದ, ಮಧ್ವನಾಮ	0—2—0
ಇಂಗ್ಲಿಷ ರಶೀದಿ 50 ಫೋರ್ಮುಗಳ ಪುಸ್ತಕ	0—6—0
ಕನ್ನಡ ರಶೀದಿ 25 ಫೋರ್ಮುಗಳ ಪುಸ್ತಕ	0—2—0
ಗೇಣಿ ರಶೀದಿ 25 ಫೋರ್ಮುಗಳ ಪುಸ್ತಕ	0—3—0
ಪವಿರ್ಟು ಫೋರ್ಮು 100ಕ್ಕೆ	0-10-0
ಗೇಣಿಚೀಟು ಫೋರ್ಮು 100ಕ್ಕೆ	0-10-0
ಪ್ರೊಮಿಸರಿ ನೋಟು ಫೋರ್ಮು 100ಕ್ಕೆ	0-6-0
ಚಕ್‌ರೋಲ್ 25 ಪುಟಗಳ ಪುಸ್ತಕ	0-8-0
„ 50 „	0-14-0
„ 100 „	1-8-0

ಫರ್ಲೊರಿಂಗ್ ಬೂಕುಗಳೂ ವಿವಿಧ ನಮೂನೆಯ ನೋಟುಬೂಕುಗಳೂ ಅಂಗಡಿ ಭಂಡಸಾಲೆ ವಗೈರೆ ವ್ಯಾಪಾರಸ್ಥರಿಗೆ ಬೇಕಾಗುವ ವರ್ಗ ಊಳಿಗದ ಪುಸ್ತಕಗಳೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಲಾ ರಿಪೋರ್ಟು ವ ಇತರ ಪುಸ್ತಕಗಳು ಉತ್ಕೃಷ್ಟವಾದ ಮಾರ್ಬಲ್ ಕೆಲಿಕೊ ಚರ್ಮ ಮೊದಲಾದವುಗಳಿಂದ ಬಹಳ ನಾಜೂಕಾಗಿ ಬೈಂಡು ಮಾಡಲ್ಪಡುತ್ತವೆ.

ಲಗ್ನ ಪತ್ರಿಕೆಗಳು, ಲೆಟರ ಪೇಪರುಗಳು, ಬಿಲ್‌ಫೋರ್ಮುಗಳು, ವಿಜಿಟಿಂಗ್ ಕಾರ್ಡುಗಳು, ಅರ್ಜಿಗಳು ವಗೈರೆ ಎಲ್ಲಾ ತರದ ಛಾಪೆಯ ಕೆಲಸಗಳನ್ನು ಬಹಳ ಅಗ್ಗವಾದ ದರದಲ್ಲಿ ಮಾಡಿಕೊಡುವರು. ದರಗಳಿಗೂ ಇತರ ಎಲ್ಲಾ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ನೂತನ ಸೃಷ್ಟಿ! ಸುಲಭ ಕ್ರಯ!

20ನೇ ಶತಮಾನದ ಆಶ್ಚರ್ಯಕರವಾದ ರೋಮಸಂಹಾರಿ ಸಬ್ಬು.

ಈ ಸಾಬೂನನ್ನು ಒಂದು ಸಲ ಉಪಯೋಗಿಸುವದರಿಂದ ದೇಹದ ಯಾವ ಭಾಗದಿಂದಲಾದರೂ ಸೆಗೆ, ಉರಿ ಮುಂತಾದ ಯಾವ ಬಾಧೆಗಳೂ ಇಲ್ಲದೆ ರೋಮವನ್ನು ತೆಗೆಯಬಹುದು. ಅನುಭವದಿಂದ ತಿಳಿಯತಕ್ಕದ್ದು ಮಾತಿನಿಂದ ತಿಳಿಯುವುದಿಲ್ಲವು. ಒಂದು ಉಪಯೋಗಿಸಿದರೆ ಇದರ ನಿಜಾಂಶವು ತಿಳಿಯುವುದು. 3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ ರೂ. 1-4-0 ಅಂಚೆ ಹಾಸಲು ಮಾಫಿ. ಒಂದು ಸಾಬೂನು ಕ್ರಯ ಆಣೆ 0-10-0 ಅಂಚೆ ಹಾಸಲು ಮಾಫಿ.

ಸಿ. ಜೆ. ಆರ್. ಚಂದ್ರ
29 ಲಿಂಗಿಚೆಟ್ಟಿ ಬೀದಿ ಮದ್ರಾಸು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹವ ದಂತಮಂಜವ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ಇಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜವ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ನಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ತು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, **(Cholera Pills)**

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೊಲೆರಾ ಅಥವಾ ಉಬ್ಬಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ 1ರ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವಾಹಿಕ, ತ್ರಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮುಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ [illegible] ರೋಗತ್ವನೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ [illegible] ಬೇಕಾಗುವವು. ಕಿಮ್ಮತ್ತಿಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ ೪ ರೂಪಾಯಿಗಳಿಗೆ ಕೊ[illegible] ಡಲೇ ಕಳುಹಿಸುವೆವು. ನಿಸುವೆವು.

Anglo Indian Drug & Chemical Co.,
155 Jumma Musid, Market, Bombay.

ಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಬಿ. ವೆಂಕಟಕೃಷ್ಣಪ್ಪ ಬಿ. ಎ., ಇವರಿಂದ ರಚಿತವಾದ ಹೊಸಕನ್ನಡದ ನವೀನ ಪ್ರಬಂಧ (ನಾವಲ್)ಗಳು.

ಶ್ಯಾಮಕುಬ್ಜ.

(Sir Walter Scott's "Black Dwarf")

ಈ ಕಥೆಯನ್ನೋದುವುದರಿಂದ ಭೂತಪಿಶಾಚಿಗಳ ನಿಜಸ್ಥಿತಿಯು ತಿಳಿಯ ಬಂದು ಮೂಢಭಯವು ತೊಲಗುವುದಲ್ಲದೆ ಅನೇಕ ಲೋಕರಹಸ್ಯಗಳೂ ನೀತಿತತ್ವಗಳೂ ತಿಳಿಯಬರುವುವು. ಇದು ಈ ಪ್ರಪಂಚದ ವಿಷಯದಲ್ಲಿ ಜೀಹಾಸೆಗೊಂಡು ವನವಾಸಿಯಾದ ಒಬ್ಬ ಕುರೂಪಿಯಾದ ಶ್ರೀಮಂತನ ಕಥೆ. ಇದನ್ನೋದುತೋದುತ ಕಣ್ಣೀರನ್ನು ತಡೆಯುವುದು ಕಷ್ಟವಾಗುವುದು. ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಕ್ಲಿಷ್ಟಪದಗಳ ನಿಘಂಟನ್ನು ಸೇರಿಸಿದೆ.

ಅಂದವಾದ ಮುದ್ರಣ, ಉತ್ತಮವಾದ ಕಾಗದ, ಭದ್ರವಾದ ಬೈಂಡ್, ಕ್ರಯ ೮ ಆಣೆ.

ಮಹಾಲಕ್ಷ್ಮಿ.

ಬಾಲ್ಯವಿವಾಹದಿಂದಲೂ, ನವನಾಗರಿಕರೆನಿಸಿಕೊಂಡ ಕುಡಿಕರ ಸಹವಾಸದಿಂದಲೂ ಆಧುನಿಕ ಯುವಕರಿಗೆ ಸಂಭವಿಸಬಹುದಾದ ಕಷ್ಟನಷ್ಟಗಳು ಹೃದಯಂಗಮವಾಗಿ ವರ್ಣಿಸಲ್ಪಟ್ಟಿವೆ. ಮುದ್ದಾದ ಹಸ್ತಪುಸ್ತಕ. ಕ್ರಯ ೨ ಆಣೆ.

ಕನ್ನಡ ವರ್ಣಮಾಲಾ.

ಅಕ್ಷರಾಭ್ಯಾಸ ಮಾಡಿಸಲು ಅನುಕೂಲಿಸುವಂತೆ ಅ,ಕಾರ ಮೊದಲು ಳ,ಕಾರದವರಿವಿಗೆ ಎಲ್ಲಾ ಅಕ್ಷರಗಳನ್ನು ದೊಡ್ಡ ಆಕಾರದಲ್ಲಿ ಅಚ್ಚುಮಾಡಿಸಿರುತ್ತೆ ಗೋಡೆಗೆ ಅಂಟಿಸಲು ಅನುಕೂಲಿಸುವಂತೆಯೂ ಬಾಲಕರಿಗೆ ಜಾಗ್ರತೆ ಅವಗಾಹನೆಯಾಗುವಂತೆಯೂ ಇರುವದು. ಬೆಲೆ ೧ಕ್ಕೆ ೬ ಪೈ, ೨೫ಕ್ಕೆ ೮ ಆಣೆ.

ಟೀಕಾ ತಾತ್ಪರ್ಯ ಸಹಿತ ಮಹಿಮ್ನ ಸ್ತೋತ್ರ, ...	೦—೩—೦.
ಡಿ. ಮುಕುಂದಮಾಲಾ ಸ್ತೋತ್ರ	೦—೪—೦.
ವಚನ ಜ್ಯೋತಿಸ್ಸಂಗ್ರಹ	೦—೪—೦.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—

ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

———o———

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ. ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು ಟೀಕಾ ತಾತ್ಪರ್ಯ ಶಬ್ದಸಮಾಸ ಸಹಿತವಾದ ೧ನೇ ಪರ್ವ ರಘುವಂಶ ರೂ. ೧—೦—೦ ೨ನೇ ಪರ್ವ ರೂ. ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶಾಮಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ [illegible] ಇಷ್ಟದ ಛಾಯ, [illegible] ರೈಸಿರುತ್ತೆ. ಉತ್ತಮವಾದ ಕ್ಯಾಲಿಕೊ ಬೈಂಡು [illegible] —೪—೦. ಎಲ್ಲಾ ಪು[illegible]ನು.

ವಿಳಾಸ:— ಬಿ. ವಿ. ಪಿ. ಭಂಡಾರಕರ್,
ವಿದ್ಯಾಂಬನ ಡಿ. ಬೆಂಗಳೂರು ಸಿಟಿ.

ದನೋವು, ಆನೆಕಾಲು, ವ ಇತರ ಎಲ್ಲಾ ತರದ ನೋವುಗಳು ನಿಸ್ಸಂಶಯ[illegible]
ಎಲ್ಲಾ ಔಷಧಗಳಿಗಿಂತಲೂ ಶ್ರೇಷ್ಠವಾದುದೆಂದು ಅನೇಕ ಜನರಿಂದ ಶಿಫಾರಸು ಮಾಡಲ್ಪ[illegible]
1ಕ್ಕೆ —0—8—0. 3 ಬಾಟ್ಲಿ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಇಲ್ಲ.

ಶ್ರೀ ರಾಮಕೃಷ್ಣ ವಿವೇಕಾನಂದ

ವಚನಾಮೃತವು.

ಅಭಿನವ ಭರತಖಂಡದ ಪರಮ ಗುರುಗಳಾಗಿಯೂ, ಭಕ್ತಿ ಜ್ಞಾನ ಯೋಗ ವೈರಾಗ್ಯಗಳಲ್ಲಿ ಅದ್ವಿತೀಯರಾಗಿಯೂ, ವೇದ ವೇದಾಂತ ಮಹಮ್ಮದೀಯ ಮತ್ತು ಕ್ರೈಸ್ತಮತಗಳಲ್ಲಿ ಪಾರಂಗತರಾಗಿಯೂ, ಬ್ರಹ್ಮನಿಷ್ಠರಾಗಿಯೂ, ಆತ್ಮವಿದರಾಗಿಯೂ, ಅವತಾರ ಪುರುಷರಾಗಿಯೂ ಇದ್ದ ಶ್ರೀ ರಾಮಕೃಷ್ಣ ಪರಮಹಂಸರವರ ಸೂಕ್ತಿ ಮುಕ್ತಾವಲಿಯೂ, ಅವರ ಶಿಷ್ಯರಾಗಿ, ಪ್ರಾಚ್ಯ ಪಾಶ್ಚಾತ್ಯ ವಿದ್ಯೆಗಳಲ್ಲಿ ಪಂಡಿತರಾಗಿ, ಅಮೇರಿಕಾ ಯೂರೋಪ್‌ಖಂಡಗಳಲ್ಲಿ ಸನಾತನಧರ್ಮದ ಉತ್ಕೃಷ್ಟತೆಯನ್ನು ಕುರಿತೂ ಉತ್ತಮೋಪನ್ಯಾಸ ಮಾಡಿ, ಜಗದ್ಗುರುಗಳಾಗಿ, ಭಾರತೀಯರ ಪ್ರಕೃತ ಧರ್ಮಗಳನ್ನು ತಿಳಿಸಿ, ದೇಶಭಕ್ತಾಗ್ರೇಸರರಾಗಿದ್ದ ಶ್ರೀ ವಿವೇಕಾನಂದ ಸ್ವಾಮಿಗಳವರು ಬರೆದ ಕಾಗದಗಳ ಮತ್ತು ಉಪನ್ಯಾಸಗಳ ಸಾರಾಂಶವೂ ಲಲಿತವಾದ ಹೊಸಗನ್ನಡದಲ್ಲಿ ಬರೆಯಲ್ಪಟ್ಟಿವೆ. ಅದರಲ್ಲಿ ಆಸ್ತಿಕ, ಬ್ರಂಲಕ್ಷಣ, ಮೋಕ್ಷೋಪಾಯ, ಭಕ್ತಿ, ವಿರಕ್ತಿ. ಮತ ಮತಾಂತರಗಳು ಮುಂತಾದ ಪಾರಮಾರ್ಥಿಕ ವಿಷಯಗಳೂ, ಭಾರತೀಯರ ಸ್ಥಿತಿ, ಕರ್ತವ್ಯ, ಇತರ ಜನಾಂಗಗಳ ನಾಗರಿಕತೆ ಮುಂತಾದ ಲೌಕಿಕ ವಿಷಯಗಳೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ. ಪ್ರತಿಯೊಬ್ಬ ದೇಶಾಭಿಮಾನಿಯೂ, ಮತಾಭಿಮಾನಿಯೂ, ಆಸ್ತಿಕನೂ ಮುಮುಕ್ಷುವೂ ಈ ಗ್ರಂಥದ ಒಂದು ಪ್ರತಿಯನ್ನಾದರೂ ಇಟ್ಟುಕೊಂಡಿರಬೇಕು. ಇದರಲ್ಲಿ ಆ ಸದ್ಗುರುಗಳಿಬ್ಬರ ಸಂಸ್ಕೃತ ಕರ್ಣಾಟಕ ಸ್ತೋತ್ರಗಳೂ ಜೀವನ ಚರಿತ್ರೆಗಳೂ ಭಾವಚಿತ್ರಗಳೂ ಅಡಗಿವೆ. ಸರ್ವರಿಗೂ ಸಂಗ್ರಾಹ್ಯ.—ಬೇಗನೆ ಬರೆಯಿರಿ

ವಿಳಾಸ:—ಮ್ಯಾನೇಜರ್,
"ಸುಮತಿ ಗ್ರಂಥಮಾಲಾ" ಆಫೀಸು
ಬೆಂಗಳೂರು ಸಿಟಿ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಲಾಸ (ಪತ್ತೆ)☞ ವೇದವಾಹಿನೀ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.



14 ಕ್ಯಾರ್ರು ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ನಮ್ಮಲ್ಲಿ ಅನೇಕ ನಮೂನೆಗಳಲ್ಲಿ (ಅಂದರೆ) ಇಂಗ್ಲೀಷು, ಕನ್ನಡ, ಬಾಳಬಂದು, ಉರುದು, ಅರವ, ತೆಲುಗು ಈ ಎಲ್ಲಾ ಭಾಷೆಗಳಲ್ಲಿಯೂ ರಬ್ಬರು ಮೊಹರು ತಯಾರುಮಾಡುತ್ತೇವೆ. ಬೇಕಾದವರು ಬರದು ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ರಬ್ಬರು ಮೊಹರುಗಳ ನಮೂನೆ ನೋಡಬೇಕಾದವರು ನಮ್ಮ ಕಂಪೆನಿಗೆ ಬರದರೆ ಕ್ಯಾಟಲಾಗ್ ರವಾನಿಸುತ್ತೇವೆ. ಇದೂ ಅಲ್ಲದೆ ನಮ್ಮ ಕಂಪೆನಿಯಲ್ಲಿ ತರಹೆವಾರಿ ಫೌಂಟೆನ್‌ಪೆನ್‌ಗಳೂ ಮತ್ತು ಜರ್ಮನ್ ಅಮೆರಿಕಾ ದೇಶದ ಸುವಾಸನೆಯುಳ್ಳ ಸೆಂಟ್ಸ್ ಎಂಬ ಹೂವ್ವಿನ ಸಾರಗಳು ಮಾ[illegible]ಡುತ, ವ ಇದರ ಕ್ರಯ ಬುದ್ದಿ 1ಕ್ಕೆ 1—0—0. ವಿ.ಪಿ. ಚಾರ್ಜು ಅಲಾಯಿದ.

ಏಜಂಟುಗಳು ಬೇಕಾಗಿವೆ. ಅಧಿಕ ಲಾಭವುಂಟು.

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

SURGEON DENTIST P. K. R. MENON

ದಂತ ಶಸ್ತ್ರವೈದ್ಯರಾದ

ಪಿ. ಕೆ. ಆರ್. ಮೆನೋನ್‌ರವರು.

1911ನೇ ಇಸವಿ ಜೂನ್ ತಾರೀಕು 3ರ್ ಲಾಗಾಯಿತು ವಿಶೇಷ ಲಕ್ಷಣಗಳುಳ್ಳ ಪಾಶ್ಚಾತ್ಯ ಚಿಕಿತ್ಸೆಗಳ ಉಪಯೋಗ ಮೂಲ[illegible] ಎಷ್ಟು ಮಾತ್ರವೂ ನೋವು ಉಂಟಾಗದ ರೀತಿಯಲ್ಲಿ ಹಲ್ಲುಗಳನ್ನು ಎಳದು ಉಪಯುಕ್ತ ಚಿಕಿತ್ಸೆ ಮಾಡುತ್ತಿದ್ದಾರೆ.

ನೋಯುವ, ರಕ್ತ ಸುರಿಯುವ, ಮತ್ತು ಕೀವು ಸೋರುವ ವಸಡುಗಳು ಔಷಧೋಪಚಾರಗಳಿಂದ ವಾಶಿ ಮಾಡಲ್ಪಡುವವು. ಸಾಧಾರಣವಾಗಿ ಅಲಗುವ ಹಲ್ಲುಗಳು ಸಿರ ಮಾಡಲ್ಪಡುವುವು. ಟೊಳ್ಳು ಇದ್ದ ದಂತಗಳು ಚಿಕಿತ್ಸೆ ಮೂಲಕ ರೋಗ ಶಾಂತಿಮಾಡಲ್ಪಟ್ಟು, ಯುಕ್ತವಾದ ಜೀನಸುಗಳಿಂದ ತುಂಬಿಸಲ್ಪಡುವುವು. ಮಾತಾಡುವುದಕ್ಕೂ ಅಗಿಯುವಿಕೆಗೂ ಸಹಕಾರಿಯಾಗುವಂತೆ ಕೃತಕ ದಂತಗಳು ಸಹ ವದಗಿಸಿಕೊಳ್ಳಬಹುದು. ದಂತ ಸಂಬಂಧವಾದ ಎಲ್ಲ ವ್ಯಾಧಿಗಳಿಗೆ ಪರಿಹಾರವು ಲಭಿಸುವುದು. ಇವುಗಳಿಗೆಲ್ಲ ಬಹು ಅಲ್ಪ ಖರ್ಚು ತಗಲುವುದು.

ಮಂಗಳೂರಲ್ಲಿಯೇ ದಂತ ಚಿಕಿತ್ಸೆ ಹೊಂದುವವರು ಪ್ರತಿನಿತ್ಯ ಬರುತ್ತಿರುವುದರಿಂದ ಇವರ ಅನುಕೂಲತೆಗಾಗಿ ತಲಚೇರಿಗೆ ಹೋಗದೆ ಇಲ್ಲಿ ಎಲ್ಲಾ ಸಮಯದಲ್ಲಿಯೂ ಇರುವರೆ ನಿಶ್ಚಯಿಸಿರುವರು.

ಠಾಣೆ:—ಮಂಗಳೂರು ಗವರ್ನಮೆಂಟ್ ಕೋಲೇಜಿನ ಎದುರಿನಲ್ಲಿ.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದುನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜ್ಯೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ವಸ್ಕೆಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೋಲೇಜಿನ ಎದುರು
ಮಂಗಳೂರು.

ಫೊಟಗ್ರಾಫ್ ಬ್ರೈಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42" × 25" ರೂ. 75. ಅರ್ಧ ಸ್ಯಾಜ್ 21" × 15" ರೂ. 40. ಬಸ್ಟ್ ಸ್ಯಾಜ್ 18" × 12" ರೂ. 20. ಸಣ್ಣ ಸ್ಯಾಜ್ 12" × 10" ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೋಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೋಗಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,
ಆರ್ಟಿಸ್ಟ್, ಕೂಡ್ ರೋಸ್ತು, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಸಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ--ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ೧ಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2-10-0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

30—5—11 ಮೆ. ನೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ "ಕಾಮಿನಿಯಾ ಓೈಯಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ. ಯಿಂದ ರವಾನಿಸಿರಿ.

28—7—11 ಮೆ| ವಿ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓೈಯಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓೈಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1—7—11 ಮೆ| ಸಿ. ಆರ್. ನಾಯಡು ಪ. ವ. ಡಿ. ಟಾಶಿಬ, (ಬರ್ಮಾ) ನನ್ನ ಮಿತ್ರರು "ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳಬಹುದು.

Address—**Anglo Indian Drug & Chemical Co.,**
155 Jumma Musid, Market, Bombay.

ಸೋಲ್ ಏಜೆಂಟ್ಸ್:—ದಿ. ಊಲನ್‌ವೊರ್ಟ್, ಮಂಗಳೂರು.

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಟಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾಡಾ ಕಾರ್ಡುಗಳು, ೨ವಿಶ್ವೇಶ್ವರ ಪಟಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—S. U. Naryanacharya & Co.

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ ಗುಳಿಗೆಗಳು.	30 ವರುಷಗಳಿಂದ ಉಪಯೋಗಿ ಸಲ್ಪಡುತ್ತಲಿವೆ

ಆವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ?? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಯಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—„ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ 22 ಬ್ರಾಡ್ವೇ ಮತ್ತು 96 ಮೌಂಟ್ ರೋಡ್ ಮದರಾಸು. { ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಮತ್ತು ಜಾಮ್ ನಗರ ಕಾಠ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಜಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕು ಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12—0—0	A ಅರಗಜ ತೊಲೆ	1ಕ್ಕೆ	2—0—0
ಅಂಬರ್ ಬತ್ತಿ	„ „	6—0—0	B ಅರಗಜ	„ „	1—0—0
ಕಸ್ತೂರಿ ಬತ್ತಿ	„ „	3—0—0	ಕಸ್ತೂರಿ ಬಿಲ್ಲೆ	„ „	2—0—0
ಜವಾಜಿ ಬತ್ತಿ	„ „	2—0—0	ಜವಾಜಿ ಬಿಲ್ಲೆ	„ „	1—0—0
ಪುಣಗಿನ ಬತ್ತಿ	„ „	1—8—0	ಕೇಸರಿ ಬಿಲ್ಲೆ	„ „	0—8—0
A ಪನ್ನೀರ್ ಬತ್ತಿ	„ „	0.12—0	ತಾಂಬೂಲರತ್ನ ಸೀಸೆ	1ಕ್ಕೆ	0—4—0
ಮಸಾಲಾ ಬತ್ತಿ	„ „	0—6—0	ದಶಾಂಗ ಡಬ್ಬಿ	1ಕ್ಕೆ	0—4—0

ನಮ್ಮ ಏಜಂಟರು:—
ಮ. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—
ಎನ್. ಎಂ. ಸುಬ್ರಾವ್,
„ಸುಗಂಧವಿಲಾಸ"
ಮಂಗಳೂರು.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

Registered No. M. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 15.

ಮಂಗಳೂರು ತಾ. 12ನೇ ಶುಕ್ರವಾರ ಎಪ್ರಿಲ್ 1912.

Amrutanjan Depot, Bombay.

(Regd.) ಅಮೃತಾಂಜನ. (ರಿಜಿಸ್ಟರ್ಡ್.)

ಅಮೃತಾಂಜನ ಅಮೃತಾಂಜನ

ಸರ್ವ ನೋವಿಗೆ ಸರ್ವ ನೋವಿಗೆ,

ಸಂಜೀವನ. ಸಿದ್ಧಾಮೃತ.

ಬಾಟ್ಲಿ ಒಂದರ ರೂ. 0—8—0. ಬಾಟ್ಲಿ ಒಂದರ ರೂ. 0—8—0.

ಅಮೃತಾಂಜನ.

ಎಲ್ಲಾ ಔಷಧಾಲಯಗಳಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವದು.

ವಿಜ್ಞಾಪನೆ:—ನಮ್ಮ ಟ್ರೇಡ್‌ಮಾರ್ಕ್ ಉಳ್ಳ ಹೊರಗಿನ ಟನ್ನಿನ ಕರಡಿಗೆಗಳು ವಿಲಾಯತಿಯಿಂದ ಬಾರದೆ ಇರುವದರಿಂದ ಮುಂಚಿನ ಹಾಗೆ ಕಾಗದದಲ್ಲಿ ಪೇಕ್ ಮಾಡಿದ್ದೇವೆ.

ಗಜಕರ್ಣದ ಮುಲಾಮು.

ಎಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ತಾಗಿಸುವದರೊಳಗೆ ನಾಶವಾಗಿ ಹೋಗುವದು.

ಗಜಕರ್ಣದ ಮುಲಾಮು.

ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತು 0—6—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ನೋವು, ಹಲ್ಲುಗಳ ವಾಸನೆ ಇತ್ಯಾದಿಗಳಿಗೆ ರಾಮಬಾಣದಂತಿದೆ.

ದಂತಮಂಜನ.

ಇದರ ಉಪಯೋಗದಿಂದ ಹಲ್ಲುಗಳು ಘಟ್ಟಿಯಾಗುವವು. ಮತ್ತು ಬೆಳ್ಳಗಾಗುವವು ಡಬ್ಬಿ ಒಂದರ ಕಿಮ್ಮತು 0—2—0.

ರಾಜಾರಾಣಿ ನಕ್ಷೆಗಳುಳ್ಳ ಈ ವರ್ಷದ ಸುಂದರವಾದ ಕೆಲೆಂಡರ್ (ತಾರೀಕು ತೋರಿಸುವ ಪಟ್ಟಿ) ಕ್ರಯ 1ರ ವಿ.ಪಿ. ಸಮೇತ 0—4—0.

ಕೇಶವರ್ಧಿನಿ ತೈಲ! ಕೇಶವರ್ಧಿನಿ ತೈಲ!! ಕೇಶವರ್ಧಿನಿ ತೈಲ!!!

ಎಲ್ಲಾ ತೈಲಗಳಿಗಿಂತಲೂ, ಸುವಾಸಿಕವಾಗಿಯೂ, ಮನೋಹರವಾದ ಪರಿಮಳ ಉಳ್ಳದ್ದಾಗಿಯೂ, ಸ್ಪಿರಿಟು ವಗೈರೆ ಇಲ್ಲದೆಯೂ, ತಯಾರಿಸಲ್ಪಟ್ಟದ್ದಾಗಿರುತ್ತದೆ. ಇದರಿಂದ ಕೂದಲುಗಳು ಕಪ್ಪಾಗುವವು, ಉದ್ದವಾಗಿಯೂ ನಯವಾಗಿಯೂ ಬೆಳಿಯುವವು. ಬಾಟ್ಲ 1ರ 1-0-0 3ಬಾಟ್ಲಗಳಿಗೆ 2-10-0

ನಮ್ಮ ಔಷಧಗಳು ಮಂಗಳೂರಲ್ಲಿ ಈ ಕೆಳಗಿನ ಕಂಪೆನಿಗಳಲ್ಲಿ ದೊರಕುವದು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್, ಪರ್ಲ ಎಂಡ್ ಸನ್ಸ್, ಇಬ್ರಾಹಿಮ್ ಎಲಿಯಾಸ್, ಅನೋನ್ ಎಂಡ್ ಐಮನ್.

ವಿಶೇಷ ಸೂಚನೆಗಳು.

ಅಗ್ಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೀ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—S. U. Narayanacharya & Co.

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ ಗುಳಿಗೆಗಳು.	30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಕಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಪ್ಪು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ 22 ಬ್ರಾಡ್ವೇ ಮತ್ತು 96 ಮೌಂಟ್ ರೋಡ್ ಮದರಾಸು. { ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಮತ್ತು ಜಾಮ್ ನಗರ ಕಾಠ್ಯಾವಾರ್.

ಅಶ್ವಿನಿ ಗವರ್ನ್‌ಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವವಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕ್ಕೊಂಡಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.

ಜನರಲ್ ಏಜಂಟ್, ಬ್ರಿಟೋ ಬಿಡ್ಡಿಂಗ್ಸ್,

ಮಂಗಳೂರು, ದ. ಕನ್ನಡ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಆವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯು ಆರೋಗ್ಯಾಭಿವೃದ್ಧಿಗೆ ಆಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12–0–0	A ಅರಗಜ ತೊಲೆ 1ಕ್ಕೆ	2–0–0
ಅಂಬರ್ ಬತ್ತಿ ,, ,,	6–0–0	B ಅರಗಜ ,, ,,	1–0–0
ಕಸ್ತೂರಿ ಬತ್ತಿ ,, ,,	3–0–0	ಕಸ್ತೂರಿ ಬಿಲ್ಲೆ,, ,,	2–0–0
ಜವಾಜಿ ಬತ್ತಿ ,, ,,	2–0–0	ಜವಾಜಿ ಬಿಲ್ಲೆ,, ,,	1–0–0
ಪುಣಗಿನ ಬತ್ತಿ ,, ,,	1–8–0	ಕೇಸರಿ ಬಿಲ್ಲೆ ,, ,,	0–8–0
A ಪನ್ನೀರ್ ಬತ್ತಿ ,, ,,	0.12–0	ತಾಂಬೂಲರತ್ನ ಸೀಸೆ 1ಕ್ಕೆ	0–4–0
ಮಸಾಲಾ ಬತ್ತಿ ,, ,,	0–6–0	ದಶಾಂಗ ಡಬ್ಬಿ 1ಕ್ಕೆ	0–4–0

ನಮ್ಮ ಏಜಂಟರು:—

ಮ. ಟಿ. ಸುಬ್ಬಣ್ಣ ಭಟ್ಟರು, ಹೆಡ್ ಮಾಸ್ತರ್, ಮಿತ್ತನಡ್ಕ, ಉಪ್ಪಿನಂಗಡಿ ತಾಲೂಕು.

ವಿಳಾಸ:—

ಎನ್. ಎಂ. ಸುಬ್ರಾವ್, "ಸುಗಂಧವಿಲಾಸ" ಮಂಗಳೂರು.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ್, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,

ಮನೋಹರ ಬಿಲ್ಡಿಂಗ್, ಲವರಜಾಲ, ಮುಂಬಯಿ.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1–0–0 ವಿ. ಪಿ. ಮೂಲಕ 1–3–0. 2000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0-12-0 ವಿ. ಪಿ. ಮೂಲಕ 0–15–0. 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋದಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲು ಚಾರ್ಜು ವಿನಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,

ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,

Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕ್ಯಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ

ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನೂ ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜವರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯು ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ಪಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ.

ನವೀನ ಪುಸ್ತಕಗಳು! ಕ್ರಯ 12 ಆಣೆ. **ಶೋಭನೆ** ನವೀನಕಾದಂಬರಿಗಳು!! ಕ್ರಯ 12 ಆಣೆ.

ಶ್ರೀ ಸುರೇಂದ್ರನಾಥ ಮುಖ್ಯೋಪಾಧ್ಯಾಯರಿಂದ ರಚಿತವಾದ 'ಶೋಭನಾ' ಎಂಬ ಬಂಗಾಳಿ ನಾವಲಿನ ಕನ್ನಡ ಭಾಷಾಂತರ. ಸಂಸಾರ ಚಿತ್ರವು ಸರ್ವರಿಗೂ ಹೃದಯಂಗಮವಾಗುವ ಹಾಗೆ ವರ್ಣಿತವಾಗಿ ಅತ್ಯುತ್ತಮವಾದ ನೀತಿಗಳನ್ನೊಳಗೊಂಡಿದೆ. ಸುಂದರವಾದ ಮುದ್ರಣ. ಉತ್ತಮವಾದ ಕಾಗದ. ಡೆಮ್ಮಿ 154 ಪುಟಗಳು.

ಸೋಮ ಸುಂದರ:–ಬಂಗಾಳಿ ನಾವಲನ್ನು ಹೋಲುವ ಹೊಸಕಥೆ. ವಿದ್ಯಾರ್ಥಿಗಳಿಗೂ ಮಾತಾಪಿತೃಗಳಿಗೂ ಅನೇಕ ನೀತಿಗಳನ್ನೂ ಬೋಧಿಸುವುದು. ಕ್ರಯ 10 ಆಣೆ.

ಇವುಗಳಲ್ಲದೆ ನಮ್ಮಲ್ಲಿ ಪ್ರಸಿದ್ಧ ಕಾದಂಬರಿ ಲೇಖಕರಾದ ಮ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟ ವಿಶಿಷ್ಟ ಕಾದಂಬರಿಗಳೂ–ಕರ್ಣಾಟಕ, ಚಂದ್ರಿಕಾ, ಸೀರೀಸ್ ಪುಸ್ತಕಗಳೂ ವಗೈರೆ ದೊರೆಯುವುವು. ಪುಸ್ತಕದ ಪಟ್ಟಿ ಉಚಿತ.

ವಿಳಾಸ:— ಯಂ. ಸುಬ್ಬರಾವ್,
ಜಿ. ಬಿ. ಎ. ಪ್ರೆಸ್, ಮೈಸೂರು.

THE ARYAN WEAVING Co.
General Merchants, Commission Agents and Auctioneers
MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದುನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನ್ನಿಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಸಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,
ಗವರ್ನಮೆಂಟು ಕೋಲೇಜಿನ ಎದುರು
ಮಂಗಳೂರು.

ಫೊಟೊಗ್ರಾಫ್ ಆಯಿಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42″ × 25″ ರೂ. 75. ಅರ್ಧ ಸ್ಯಾಜ್ 21″ × 15″ ರೂ. 40. ಬಸ್ಟ್ ಸ್ಯಾಜ್ 18″ × 12″ ರೂ. 20. ಸಣ್ಣ ಸ್ಯಾಜ್ 12″ × 10″ ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೊಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೊಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ್ಗ,
ಆರ್ಟಿಸ್ಟ್, ಕೋರ್ಟ್ ರೋಡ್ಸ್, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟು, ವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದು ಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ಗಸೀಸೆಗೆ ರೂ. 1–0–0 ಅಂಚೆಯ ವೆಚ್ಚ 0–4–0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2–10–0 ಅಂಚೆಯ ವೆಚ್ಚ 0–7–0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ,

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

30–5–11 ಮೆ. ನೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ. ಯಿಂದ ರವಾನಿಸಿರಿ.

28–7–11 ಮೆ| ಎ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1–7–11 ಮೆ| ಸಿ. ಆರ್. ನಾಯುಡು ಪ. ವ. ಡಿ. ಟಾಶಿಬ, (ಬರ್ಮಾ) ನನ್ನ ಮಿತ್ರರು "ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.,**
155 Jumma Musid, Market, Bombay.

ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 12ನೇ ಎಪ್ರಿಲ್ 1912.

ಮಂಗಳೂರು ನಿವಾಸಿಕರು ಗಮನಿಸತಕ್ಕ ವಿಷಯವು.

ನಾವು ತಿಳಿಯಬೇಕಾದ ವಿಷಯಗಳೇನಿರುವವು ಎಂಬುದನ್ನು ಗೊತ್ತುಮಾಡಿಕೊಳ್ಳಬೇಕಾದರೆ ನಮ್ಮ ಪಟ್ಟಣವನ್ನು ಬಿಟ್ಟು ಯಾತ್ರಸ್ಥರಾಗಿ ದೇಶದ ಇತರ ಕಡೆಗಳನ್ನು ನೋಡಿ ನಮ್ಮ ಊರಿನ ಸ್ಥಿತಿಯನ್ನು ಬೇರೆ ಊರುಗಳ ಸ್ಥಿತಿಗಳೊಂದಿಗೆ ಸರಿಹೋಲಿಸಬೇಕು. ನಮ್ಮ ಯಥಾರ್ಥ ಸ್ಥಿತಿಯು ಆಗ್ಯೆ ನಮಗೆ ಏನೆಂತ ತಿಳಿದು ಬಂದು ನಾವು ಗಮನಿಸತಕ್ಕ ವಿಷಯಗಳು ಯಾವ್ಯಾವವೆಂಬುದು ಗೋಚರವಾಗುವುದು. ಕಲ್ಕತ್ತೆಯನ್ನು ಕಳದ ದಶಂಬರ ತಿಂಗಳಲ್ಲಿ ಸಂದರ್ಶಿಸಿ ಬಂದ ಇಲ್ಲಿಯ ವಕೀಲ ಮ| ರಾ| ರಾ| ಗಂಗೊಳ್ಳಿ ಕೃಷ್ಣರಾಯರವರು ಬಂಟರ ಯಾ ನಾಡವರ ವಿದ್ಯಾರ್ಥಿಭವನದಲ್ಲಿ ಕೂಡಿದ ಸಭಿಕರಿಗೆ ಹೇಳಿದ ತಮ್ಮ ಪ್ರಯಾಣದ ಅನುಭವದಲ್ಲಿ ನಾವೆಲ್ಲರು, ಮುಖ್ಯವಾಗಿ ಮಂಗಳೂರು ನಿವಾಸಿಕರು ಲಕ್ಷ್ಯಕೊಟ್ಟು ತಿಳಿಯಬೇಕಾದ ಒಂದೆರಡು ಸಂಗತಿಗಳಿವೆ. ಇಂಥವುಗಳನ್ನು ಸ್ವದೇಶಾಭಿಮಾನಿಯಲ್ಲಿ ಸಂದರ್ಭ ದೊರಕಿದಂತೆ ಈ ಮೊದಲೇ ಸೂಚಿಸಿರುವೆವಾದರೂ ಇವುಗಳಿಗೆ ತಕ್ಕ ನಿಗಾ ಕೊಡೋಣಾಗಿ ಇವುಗಳು ಕಾರ್ಯರೂಪುಗೊಳ್ಳುವ ವರೆಗೆ ಆಗಿಂದಾಗ್ಯೆ ಇವುಗಳ ಪ್ರಸ್ತಾಪವನ್ನೆತ್ತುವುದು ಅಗತ್ಯವಾಗಿರುವುದು.

ಆಯಾ ಜಾತಿಗಳ ಮತ್ತು ವಿವಿಧ ವೃತ್ತಿಗಳನ್ನನುಸರಿಸುವ ಪಟ್ಟಣಿಗರು ಆಗಿಂದಾಗ್ಯೆ ಒಟ್ಟು ಕೂಡಲು ಸಾಧ್ಯವಾಗುವಂತೆ ಕ್ಲಬ್ಬುಗಳೆಂಬ ವಾಚನ ಮಂದಿರಗಳಾಗಲಿ 'ಟೌನ್‌ಹೋಲ್'ಗಳೆಂಬ ಪಟ್ಟಣ ಸಭಾಮಂದಿರಗಳಾಗಲಿ ನಮಗಿಲ್ಲದಿರುವುದು ಶೋಚನೀಯವಾಗಿರುವುದೆಂಬುದು ಕೃಷ್ಣರಾಯರವರ ಪ್ರಯಾಣದನುಭವದಿಂದ ನಾವು ತಿಳಕೊಳ್ಳಬೇಕಾಗಿರುವುದು. ಕಲ್ಕತ್ತೆಗೆ ಹೋಗುವಾಗ ದಾರಿಯಲ್ಲಿ ಕೋಕನಾಡಿನಲ್ಲಿ ಸಹ ಇರುವ ವಾಚನ ಮಂದಿರ ಮೊದಲಾದವುಗಳ ವಿಷಯ ರಾ| ಕೃಷ್ಣರಾಯರು ಪ್ರಸ್ತಾಪಿಸಿದರು. ವಿದ್ಯೆಯಲ್ಲಿ ನಾವು ಕೋಕನಾಡಿನವರನ್ನು ಮಿಕ್ಕಿರುವೆವಾದರೂ ಒಂದು ಕ್ಲಬ್ಬನ್ನಾದರೂ ಇಷ್ಟರ ತನಕ ಏರ್ಪಡಿಸಲಶಕ್ತರಾಗಿರುವುದು ನಮ್ಮಲ್ಲಿ ಪುರಾಭಿಮಾನವು ಎಷ್ಟರಮಟ್ಟಗಿರುವುದೆಂಬುದನ್ನು ವ್ಯಕ್ತಗೊಳಿಸುವುದು. ರಾ| ಕೃಷ್ಣರಾಯರು ಹೇಳಿದಂತೆ ನಮ್ಮ ಪಟ್ಟಣದಲ್ಲಿ ಒಬ್ಬರನ್ನಿನ್ನೊಬ್ಬರು ಕಾಣಸಿಕ್ಕಬೇಕಾದರೆ ಮೈದಾನಿಗೆ ಹೋಗಬೇಕು. ಮೈದಾನು ವರ್ಷದ ಎಲ್ಲಾ ಸಮಯಗಳಲ್ಲಿಯೂ ಒಟ್ಟು ಕೂಡಲು ತಕ್ಕದಾದ ಸ್ಥಳವಲ್ಲ. ಪಟ್ಟಣ ನಿವಾಸಿಕರಾಗಿರುವ ವಿವಿಧ ತರಗತಿಯವರೂ, ವೃದ್ಧರೂ, ವಯಸ್ಕರೂ, ತರುಣರೂ, ವಕೀಲರೂ, ಸರಕಾರಿ ಆಫೀಸರರೂ, ವರ್ತಕರೂ, ವ್ಯಾಪಾರಿಗಳೂ ಪರಸ್ಪರ ಪರಿಚಿತಿಯನ್ನು ಚನ್ನಾಗಿ ಮಾಡಿಕೊಂಡು ಸ್ನೇಹಭಾವವನ್ನು ಬೆಳಸದೆ ಅಪರಿಚಿತರಾಗಿದ್ದರೆ ಪರಸ್ಪರ ಅಭಾವಕ್ಕೆ ಎಡೆದೊರಕುವುದು. ಅಭಾವವಿದ್ದಲ್ಲಿ ವೈಷಮ್ಯವು ತಾನಾಗಿಯೇ ಹುಟ್ಟುವುದು. ಪ್ರಜಾ ಐಕ್ಯವು ಅತ್ಯಗತ್ಯವಾಗಿ ಬೇಕಾದ ಈ ಕಾಲದಲ್ಲಿ ಸ್ನೇಹಕ್ಕೂ ಐಕ್ಯಕ್ಕೂ ಎಡೆಗೊಡುವ ಸಾಧನಗಳನ್ನು ಕೈಕೊಳ್ಳದೆ ಸುಮ್ಮನಿರುವುದು ಉಚಿತವೇ? ರಾಜ್ಯದಾಡಳಿತೆ ವಿಷಯಗಳಲ್ಲಿ ಪ್ರಜಾಭಿಪ್ರಾಯವೇನೆಂತ ತಿಳಕೊಂಡು ಇತ್ತಿತ್ತ ಸರಕಾರದವರು ಪ್ರಜಾಭಿಪ್ರಾಯವನ್ನು ಮನ್ನಿಸುತ್ತಿರುವುದರಿಂದ ಯಥಾರ್ಥವಾದದ್ದೂ ಬಲವತ್ತಾದದ್ದೂ ಆದ ಪ್ರಜಾಭಿಪ್ರಾಯವು ದೊರಿಯಬೇಕಾದರೆ ಒಂದು ವರ್ಷದಲ್ಲಿ ಒಂದಾವರ್ತಿಯಾದರೂ ಒಟ್ಟು ಕೂಡಲು ಸಾಧ್ಯವಿರಬೇಕಲ್ಲ? ನಮ್ಮ ಜಿಲ್ಲೆಯ ತಾಲೂಕು ಪಟ್ಟಣಗಳಾದ ಉಡುಪಿ ಪುತ್ತೂರು ಪಟ್ಟಣಗಳಲ್ಲಿ ಸಹ ಕ್ಲಬ್ಬುಗಳಿರುವವು. ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಲ್ಲಿಲ್ಲದಿರುವುದು ಸರಿಯಲ್ಲ. 'ಟೌನ್‌ಹೋಲ'ನ್ನು ಕೂಡಲೆ ಕಟ್ಟಿಸುವರೆ ಸಾಧ್ಯವಲ್ಲವಾದರೂ ಒಂದು ಕ್ಲಬ್ಬನ್ನಾದರೂ ಏರ್ಪಡಿಸುವುದು ಈ ನಗರದ ವಿದ್ಯಾವಂತರ ಕರ್ತವ್ಯವಾಗಿರುವುದು. ನಮ್ಮ ವಿದ್ಯೆಗೆ ತಕ್ಕಂಥಾ ವರ್ತನವೂ ಸಹ ನಮ್ಮಲ್ಲಿರಗೊಡಿಸಬೇಕು.

ಯಾವ ಜಾತಿಯವನಾಗಲಿ ಯಾವ ಮತಸ್ಥನಾಗಲಿ ತಮ್ಮ ಜಾತಿ ಮತ ಭೇದಗಳನ್ನು ಲೆಕ್ಕಿಸದೆ ಪರಸ್ಪರ ಸಂಪರ್ಕವನ್ನು ಬೆಳಿಸುವ ವಿಶೇಷ ಗುಣವು ಕಲ್ಕತ್ತೆಯವರಲ್ಲಿರುವುದೆಂತ ರಾ| ಕೃಷ್ಣರಾಯರವರು ಹೇಳಿರುವರು. ಬ್ರಹ್ಮಸಮಾಜದ ಸಭೆಗಳಲ್ಲಿ ಹಿಂದುಗಳು ಅತಿಥಿಗಳಾಗಿ ಬರುವರು. ಹಿಂದುಗಳ ಸಭೆಗಳಿಗೆ ಬ್ರಹ್ಮಸಮಾಜದವರು ಹೋಗುವರು. ಕಾಯಸ್ಥರಿಂದ ನಡಿಸೋಣಾಗುವ ಸಾರ್ವಜನಿಕ ಪ್ರಯತ್ನಗಳಲ್ಲಿ ಬ್ರಾಹ್ಮಣರ ಸಹಾಯವಿರುವುದು. ಯಾವ ಜಾತಿಯವನೇ ಆಗಲಿ ಆತನು ಶ್ರೇಷ್ಠನೆಂತಾದರೆ ಸರ್ವರೂ ಆತನು ತಮ್ಮವನೆಂಬ ಭಾವನೆಯಿಂದ ಮನ್ನಿಸುವರು. ಕಲ್ಕತ್ತೆಯವರ ಇಂಥಾ ವಿಶೇಷ ಗುಣವನ್ನು ನಾವು ಸಹ ಅಭ್ಯಾಸಿಸಲು ಪ್ರಯತ್ನಪಡುವುದು ಉಚಿತ. ನಮ್ಮಲ್ಲಿ ನಾನಾ ಜಾತಿಗಳಿವೆ. ಆಯಾ ಜಾತಿಗಳ ಬಗ್ಗೆ ಏಂತ ಸ್ಥಾಪಿಸಲ್ಪಟ್ಟ ಸಂಸ್ಥೆಗಳಿವೆ. ಇಂಥಾ ಸಂಸ್ಥೆಗಳಿಗೆ ಸಂಬಂಧಪಟ್ಟ ಆಯಾ ಜಾತಿಯವರು ತಂತಮ್ಮ ಜಾತಿಗಳಿಗೋಸ್ಕರವೇ ಪ್ರಯತ್ನಪಡುವಾಗ ಆಯಾ ಜಾತಿಗಳ ಈ ಸಂಸ್ಥಾನಾಯಕರಲ್ಲಿ ಪರಸ್ಪರ ಮೈತ್ರಿ ಸಂಪರ್ಕಗಳಿಗೆ ಅವಕಾಶವಿರಬೇಕು. ಇಲ್ಲದಿದ್ದರೆ ಈ ಜಾತಿ ಸಂಸ್ಥೆಗಳಿಂದ ಪ್ರಜಾಐಕ್ಯಕ್ಕೆ ತೊಡಕು ಉಂಟಾಗಬಹುದು. ದ್ರಾವಿಡಬ್ರಾಹ್ಮಣ, ಅಥವಾ ಸಾರಸ್ವತ, ಗೌಡಸಾರಸ್ವತ, ನಾಡವ ಮೊದಲಾದ ಈ ಜಾತಿಗಳಲ್ಲಿ ಯಾವನೊಬ್ಬನಾದರೂ ಸಾರ್ವಜನಿಕ ಕೆಲಸಕ್ಕೊಂದಕ್ಕೆ ಕೈ ಹಚ್ಚಿದರೆ ಎಲ್ಲಾ ಜಾತಿಯವರ ಸಹಾಯವು ಆತನಿಗೆ ಬೇಕಾಗುವುದೆಂಬುದನ್ನು ಸಹ ನಾವು ಮರೆತುಬಿಡಬಾರದು.

ನಮ್ಮ ಪಟ್ಟಣದ ಮುಂದಾಳುಗಳು ಪ್ರಜಾಐಕ್ಯವನ್ನು ಸಾಧಿಸಲುದ್ದೇಶಿಸುವ ಇಂಥಾ ವಿಚಾರಗಳಿಗೆ ಆಗಿಂದಾಗ್ಯೆ ಗಮನ ಕೊಡುತ್ತಾ ಇದ್ದರೆ ಈ ಪರವಾಗಿ ನಮ್ಮಲ್ಲಿರುವ ಕುಂದುಕವು ಬೇಗನೇ ಮಾಜಿಹೋಗುವುದು.

ಗಂಗೊಳ್ಳಿ ಬಂದರು.

ನಮ್ಮ ಜಿಲ್ಲೆಯ ಮುಖ್ಯ ಬಂದರುಗಳಲ್ಲಿ ಗಂಗೊಳ್ಳಿ ಬಂದರು ಒಂದಾಗಿರುತ್ತದೆಂಬುದನ್ನು ವಾಚಕರಿಗೆ ಹೇಳುವುದು ಅಗತ್ಯವಿಲ್ಲ. ಕುಂದಾಪುರ ತಾಲೂಕಿನಲ್ಲಿ ಪೈದಾಸಾಗುತ್ತಿರುವ ಅಕ್ಕಿ, ಭತ್ತ ಮೊದಲಾದವು ಗೋವಾ, ಮಲೆಬಾರ ಮೊದಲಾದ ಪ್ರಾಂತ್ಯಗಳಿಗೆ ಈ ಬಂದರು ಮುಖಾಂತರವೇ ಮುಖ್ಯವಾಗಿ ರಫ್ತಾಗುತ್ತಿರುವುದಲ್ಲದೆ ಮುಂಬಯಿ ಮೊದಲಾದ ಹೊರ ಪ್ರಾಂತ್ಯಗಳಿಂದ ಈ ತಾಲೂಕಿಗೆ ಬೇಕಾಗುವ ಜೀನಸುಗಳು ಈ ಬಂದರಿನಲ್ಲಿಯೇ ಆಮದಾಗುವವು. ಹೆಚ್ಚುಕಡಿಮೆ ೧೬ ಯಾ ೧೭ ಲಕ್ಷ ರೂಪಾಯಿಗಳ ಮೌಲ್ಯದ ಜೀನಸುಗಳ ಆಮದು ರಫ್ತು ವ್ಯಾಪಾರವು ಈ ಬಂದರದಲ್ಲಿ ನಡದು ಹಲವು ಜನ ವ್ಯಾಪಾರಸ್ಥರು ಪ್ರಯೋಜನವನ್ನು ಪಡಿಯುವರಲ್ಲದೆ ಸರಕಾರದವರೂ ಸಹ ಶುಮಾರು ೪೫೦೦ ರೂಪಾಯಿಗಳನ್ನು ಈ ಬಂದರಿನಿಂದ ಹುಟ್ಟುವಳಿಯಾಗಿ ಪಡಿಯುವರು.

ಸಮುದ್ರ ಕರಾವಳಿಯಲ್ಲಿರುವ ಈ ಬಂದರು ಕಳದ ಹತ್ತು ಹದಿನೈದು ವರುಷಗಳಿಂದ ಸಮುದ್ರದ ಅಲೆಗಳಿಂದ ಕೊರೆಯಲು ಪ್ರಾರಂಭವಾಗಿದೆ. ಈ ತನಕ ಬಂದರಿನ ದಕ್ಷಿಣ ಭಾಗದಲ್ಲಿದ್ದು ಬಂದರನ್ನು ಸಮುದ್ರದ ಆಕ್ರಮಣದಿಂದ ರಕ್ಷಿಸುತ್ತಿದ್ದ ಬಂಜರಾಗಿದ್ದ ಅರ್ಧ ಮೈಲು ವಿಸ್ತೀರ್ಣದ ಹೊಗೆಯ ದಂಡೆಯು ಪೂರ್ಣವಾಗಿ ಕೊರೆದು ಹೋಗಿರುವುದಲ್ಲದೆ ೫ ಭಂಡಸಾಲೆಗಳೂ, ಹಳೆ ಕಸ್ಟಮ್ಸ್ ಆಫೀಸೂ ಹಲವು ಖಾಸಗಿ ಮನೆಗಳೂ, ತೋಟಗಳೂ ಇದ್ದ ಬಂದರಿನ ಒಂದಂಶವು ಪೂರ್ಣವಾಗಿ ಕೊರೆದು ಹೋಗಿ ಸಮುದ್ರದ ಪಾಲಾಗಿರುತ್ತದೆ. ಇತ್ತಲಾಗೆನೇ ರಾ| ನಾಗಪ್ಪನ್ಯಾಕರೆಂಬವರ ಶುಮಾರು ರೂಪಾಯಿ ೧೦,೦೦೦ ಕ್ರಯಬಾಳುವ ಭಂಡಸಾಲೆಯು ತೆರೆಗಳ ಆಕ್ರಮಣದಿಂದ ಬಿದ್ದುಹೋಗಿರುವುದು. ಸಮುದ್ರವು ಹೀಗೆ ಇನ್ನೂ ಇನ್ನೂ ಈ ಬಂದರನ್ನು ಆಕ್ರಮಿಸುತ್ತಿರುವುದು.

ಹದಿನೈದು ವರುಷಗಳ ಹಿಂದೆ ಸುರಕ್ಷಿತವಾಗಿದ್ದ ಈ ಬಂದರಿಗೆ ಈ ದುರದೃಷ್ಟವು ಪ್ರಾಪ್ತಿಸಲು ಕಾರಣವೇನೆಂಬುದನ್ನು ತಿಳಿಯುವುದಸಾಧ್ಯ. ಸಮುದ್ರ ತೆರೆಗಳ ಪ್ರವಾಹವು ಹೀಗೆ ಬಂದರನ್ನು ಕೊರೆಯಲು ಕಾರಣವೇನೆಂಬುದನ್ನು ನಿರ್ಧರಿಸಲು ಸಮುದ್ರ ಪ್ರವಾಹ ಮೊದಲಾದವುಗಳ ಮಾಹಿತಿಯುಳ್ಳ ಪ್ರಕೃತಿ ಶಾಸ್ತ್ರಜ್ಞರಿಗೆನೇ ಸಾಧ್ಯವಾಗಿರುವುದು. ಸರಕಾರದವರು ಗಂಗೊಳ್ಳಿ ಬಂದರಿನ ಈ ದುಃಸ್ಥಿತಿಗೆ ಲಕ್ಷ್ಯಕೊಟ್ಟು ಹತ್ತನೆರಡು ವರುಷಗಳ ಹಿಂದೆ ತೆರೆಗಳ ಪ್ರವಾಹವನ್ನು ತಡೆದು ಬಂದರು ಕೊರೆದು ಹೋಗದಂತೆ ತೆರೆಗಳಿಗೆ ಅಡ್ಡವಾಗಿ ಕೆಲವು ಸಾವಿರ ರೂಪಾಯಿಗಳ ಖರ್ಚು ತಗಲಿಸಿ ಮರಗಳ ಭಿತ್ತಿ ಮೊದಲಾದವುಗಳನ್ನು ಕಟ್ಟಿಸಿದರು. ಆದರೆ ಈ ಭಿತ್ತಿಯು ಕ್ರಮೇಣ ಬಿದ್ದುಹೋದ್ದರಿಂದ ತೆರೆಗಳ ಶಳವು ಬಂದರನ್ನು ಯಥಾ ಪ್ರಕಾರ ಕೊರೆಯುತ್ತಿರುವುದು. ಪ್ರಕೃತ ಹೊಸ ಕಸ್ಟಮ್ಸ್ ಆಫೀಸು, ಭಂಡಸಾಲೆಗಳು, ತೆಂಗಿನ ಮರದ ತೋಟಗಳು ಮೊದಲಾದವು ಕೂಡಿ ಒಂದೆರಡು ಲಕ್ಷ ಮೌಲ್ಯದ ಈ ಬಂದರಿರುವ ಸ್ಥಳವು ಸಮುದ್ರದಿಂದ ಅರ್ಧ ಫರ್ಲಂಗಿನಷ್ಟು ದೂರವಿದೆ. ಆಕ್ರಮಿಸಿ ಬರುತ್ತಿರುವ ಸಮುದ್ರದ ತೆರೆಗಳು ಈ ಸ್ಥಳವನ್ನು ಸಹ, ತೆರೆಗಳ ಶಳವನ್ನು ನಿಲ್ಲಿಸುವರೆ ಯತ್ನನಡಿಸದೆ ಇದ್ದಲ್ಲಿ, ಬೇಗನೆ ಸಮುದ್ರ ಪಾಲಾಗಿ ಮಾಡಿಬಿಡುವವು.

ಬಂದರನ್ನು ಸಮುದ್ರ ಪಾಲಾಗಿ ಮಾಡುವ ಶಳವನ್ನು ನಿಲ್ಲಿಸಲು ಸಾಧ್ಯವೋ, ಈ ಶಳವಿನ ಸ್ವಭಾವವು ಹ್ಯಾಗಿರುವುದು, ಬಂದರಿಗೆ ತಾಗಿರುವ ಪ್ರಾಂತ್ಯಗಳನ್ನು ಸಹ ಕ್ರಮೇಣ ನಶಿಸಿಬಿಡುವುದೋ ಏನೆಂಬುದನ್ನು ಸರಕಾರದವರು ತಿಳಕೊಂಡು ಈ ಅಪಾಯಕ್ಕೆ ತಕ್ಕ ತಡೆ ಕಟ್ಟುವ ಏರ್ಪಾಡನ್ನು ಶೀಘ್ರದಲ್ಲಿ ಮಾಡಿ ಜನರಲ್ಲಿ ತೋರಿರುವ ಅಂಜಿಕೆಯನ್ನು ಹೋಗಗೊಳಿಸಬೇಕಾಗಿರುವುದು. ಮಳೆಗಾಲದಲ್ಲಿ ತೆರೆಗಳ ಈ ಪ್ರವಾಹಕ್ಕೆ ಉಸುಬನ್ನು ಕೊರೆಯುವ ವಿಶೇಷ ಲಕ್ಷಣವಿರದೆಂದು ತಿಳಿಯುತ್ತೇವೆ. ಇನ್ನೂ ಗಂಗೊಳ್ಳಿ ಬಂದರಿನ ಸಮುದ್ರದ ತೆರೆಗಳ ಶಳವಿನ ಇತರ ಲಕ್ಷಣಗಳನ್ನು ಚನ್ನಾಗಿ ತಿಳಕೊಂಡು ಪ್ರಜಾ ಜನರಾದ ಆ ಬಂದರದ ನಿವಾಸಿಕರಿಗೂ ಸಾಹುಕಾರರಿಗೂ ನಷ್ಟಕಷ್ಟಗಳುಂಟಾಗದಂತೆ ತಕ್ಕ ಏರ್ಪಾಡು ಸರಕಾರದವರಿಂದ ಆದಷ್ಟು ಶೀಘ್ರವಾಗಿ ನಡಿಯಬೇಕಾಗಿದೆ.

ಪುತ್ತೂರು ವರ್ಗದಾರರ ಸಂಘದ ಸಭಾ ವೃತ್ತಾಂತವು.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ಪುತ್ತೂರು ವರ್ಗದಾರರ ಸಂಘದ ಸಭೆಯು ತಾ. ೬ನೇ ಶನಿವಾರ ಪುತ್ತೂರಲ್ಲಿ ಕೂಡಿತು. ಕಳೆದ ವರುಷಗಳಂತೆ ಈ ಸಾರಿ ಸಭೆಗೆ ಹೆಚ್ಚು ಮಂದಿ ಹಾಜರಿಲ್ಲದಿದ್ದರೂ ಆಯಾ ಕಡೆಯಿಂದ ವರ್ಗದಾರರ ಪ್ರತಿನಿಧಿಗಳು ಬಂದಿದ್ದರು. ಕಾರ್ಕಳದಿಂದ ರಾ. ಸದಾಶಿವ ಭಟ್ಟರೂ ರಾ. ರಾಮ ಹೆಗ್ಗಡೆಯುರೂ ಬಂದಿದ್ದರು. ಸಭೆಗೆ ಹಾಜರಾಗ ಅನುಕೂಲವಿಲ್ಲದವರ ಪೈಕಿ ಮಧುರೆಯ ಬಹುಮಾನಪಟ್ಟ ದಿವಾನ್ ಬಹದ್ದೂರ್ ರಾಮಭದ್ರ ನ್ಯಾಡುಗಾರು, ಬಹುಮಾನಪಟ್ಟ ಕೊಲ್ಲಂಗೋಡು ರಾಜರವರು, ಪಿ. ಎಫ್. ಎಕ್ಸ್. ಸಲ್ಡಾಂಞಾ, ದಿವಾನ್ ಬಹದ್ದೂರು ಎ. ಪಿಂಟೋ, ಮಾಜಿ ಡಿಪ್ಯುಟಿ ಕಲೆಕ್ಟರರಾದ ರಾವ್ ಬಹದ್ದೂರ್ ಆರ್. ರಾಮರಾವ್, ಮಾಜಿ ಸಬ್ ಜಡ್ಜರಾದ ರಾ. ಎಸ್. ರಘುನಾಥಯ್ಯನವರು ಮೊದಲಾದ ಗೃಹಸ್ಥರು ಸಂಘದ ಮೇಲೆ ತಮಗಿರುವ ಸಹಾನುಭೂತಿಯನ್ನು ತಂತೀ ಮೂಲಕ ತೋರ್ಪಡಿಸಿದರು.

ಸಭಾರಂಭದಲ್ಲಿ ಸಂಘದ ಸೆಕ್ರಿಟೆರಿಗಳಲ್ಲೊಬ್ಬರಾದ ರಾ। ಎಮ್. ಶಿವರಾಯರವರು ಸ್ವಾಗತ ಭಾಷಣವನ್ನು ಓದಿದರು. ಈ ಭಾಷಣದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ, ಗ್ರಾಮ ಪಂಚಾಯತಿ ಕೋರ್ಟು, ಪರಸ್ಪರ ಸಹಾಯಕ ಸಂಘಗಳು, ಗ್ರಾಮ ಕೋರ್ಟುಗಳು, ಮಧುಪಾನ ಮತ್ತು ಕಾಡುಗಳಿಂದ ರೈತರಿಗೆ ಬಂದೊದಗುವ ಸಂಕಟ ಮೊದಲಾದ ವಿಷಯಗಳು ಅಡಕವಾಗಿದ್ದವು.

ಈ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ವೆ. ಯು. ಕೃಷ್ಣ ಭಟ್ಟರಲ್ಲಿರುವ ಗುಣಾತಿಶಯಗಳನ್ನು ರಾ. ಬಿ. ವೆಂಕಟಕೃಷ್ಣ ರಾಯರು ತಿಳಿಸಿ ಇವರನ್ನು ಅಧ್ಯಕ್ಷರಾಗಿ ಆರಿಸಬೇಕೆಂತ ಸೂಚಿಸಿದಲ್ಲಿ ರಾ. ಬಿ. ನಾರಾಮರಾಯರು ಅನುಮೋದಿಸಿದರು. ರಾ. ಯು. ಕೃಷ್ಣ ಭಟ್ಟರವರು ಅಧ್ಯಕ್ಷತೆಯನ್ನು ಸ್ವೀಕರಿಸಿ ಯೂರೋಪು ಖಂಡದ ವ್ಯವಸಾಯದ ಸ್ಥಿತಿಯು ಉಚ್ಚಸ್ಥಾನವನ್ನು ಪಡೆಯಲು ಪರಸ್ಪರ ಸಹಾಯಕ ಸಂಘಗಳು ಹ್ಯಾಗೆ ಕಾರಣವಾಯಿತೆಂಬದನ್ನೂ ಗ್ರೇಟ್ ಬ್ರಿಟನ್ ಮತ್ತು ಇತರ ಯೂರೋಪು ದೇಶಗಳು ಐಶ್ವರ್ಯದಲ್ಲಿಯೂ ಶಕ್ತಿಯಲ್ಲಿಯೂ ಪ್ರಖ್ಯಾತಿ ಪಡೆಯಲು ವ್ಯವಸಾಯದ ಉಚ್ಚಸ್ಥಿತಿಯೇ ಮೂಲಕಾರಣವೆಂಬದನ್ನೂ ಸಭಿಕರಿಗೆ ಮನದಟ್ಟಾಗುವ ರೀತಿಯಲ್ಲಿ ತಿಳಿಯಪಡಿಸಿ ನಮ್ಮಲ್ಲಿಯ ವರ್ಗದಾರರು ಹಲವು ಸಂದರ್ಭಗಳಲ್ಲಿ ಸಮಯವನ್ನೂ ಹಣವನ್ನೂ ವೃಥಾ ವೆಚ್ಚ ಮಾಡುವ ಬದಲಿಗೆ ಒಗ್ಗಟ್ಟಾಗಿ ಪರಸ್ಪರ ಸಹಾಯಕ ಸಂಘಗಳನ್ನು ಏರ್ಪಡಿಸಿಕೊಂಡು ಜನಸಾಮಾನ್ಯರೆಲ್ಲರ ಮತ್ತು ದೇಶದಭಿವೃದ್ಧಿಗಾಗಿ ಧಾವತಿಪಡುವದು ಅಗತ್ಯವೆಂಬದಾಗಿ ಅಲ್ಲಿ ಕೂಡಿದ್ದ ವರ್ಗದಾರರನ್ನು ಮನಃಕರಗುವ ರೀತಿಯಲ್ಲಿ ವಿಜ್ಞಾಪಿಸಿಕೊಂಡರು. ವರ್ಗದಾರರು ಒಟ್ಟು ಕೂಡಿದರೆ ಅನೇಕ ಸುಕಾರ್ಯಗಳನ್ನು ನಡಿಸಬಹುದೆಂತಲೂ ವರ್ಗದಾರರಿಗಿರುವ ಹಲವು ಪರಿತಾಪಗಳು ಸರಕಾರದವರ ಸಹಾಯವಿಲ್ಲದೇನೇ ಪರಿಹಾರವಾಗಬಹುದೆಂತಲೂ ಅಧ್ಯಕ್ಷರು ಸೂಚಿಸಿ ಪ್ರತಿಒಬ್ಬನು ಈ ಸಂಘದಲ್ಲಿ ಹೆಚ್ಚಿನ ಪ್ರೋತ್ಸಾಹವುಳ್ಳವನಾಗಿ ತಂತಮ್ಮ ತನುಮನಧನವನ್ನು ವೆಚ್ಚ ಮಾಡಬೇಕಾಗಿ ಬೇಡಿಕೊಂಡರು.

ಅಧ್ಯಕ್ಷರವರು ಭಾಷಣಾಂತ್ಯದಲ್ಲಿ ಮಧುರೆಯ ಬಹುಮಾನಪಟ್ಟ ವಿ. ರಾಮಭದ್ರ ನ್ಯಾಡುಗಾರುರವರೂ, ಕೊಲ್ಲಂಗೋಡು ರಾಜರವರೂ ಇತರರೂ ಈ ಸಂಘದ ಮೇಲಿರುವ ಸಹಾನುಭೂತಿಯನ್ನು ತೋರ್ಪಡಿಸಿದಕ್ಕಾಗಿ ಅವರಿಗೆ ಕೃತಜ್ಞರಾಗಿರಬೇಕೆಂದೂ ನಮ್ಮನ್ನರಿಯದ ಅಷ್ಟು ದೂರದಲ್ಲಿರುವ ಈ ಮಹಾನೀಯರು ಈ ಸಂಘದ ವಿಷಯ ಇಷ್ಟು ಪ್ರೋತ್ಸಾಹವನ್ನು ತೋರಿಸುವುದಾದರೆ ಇಲ್ಲಿಯವರು ಎಷ್ಟೋ ಹೆಚ್ಚಾಗಿ ಈ ಸಂಘಕ್ಕೆ ಪ್ರೋತ್ಸಾಹವನ್ನು ಕೊಡುವವರಾಗಿರಬೇಕೆಂಬದನ್ನು ಶ್ರುತಪಡಿಸಿದರು. ಕೂಡಿದ ಸಭಿಕರನ್ನು ತಾಂಬೂಲಾದಿಗಳಿಂದ ಸತ್ಕರಿಸಿದನಂತರ ಸಭೆಯು ಅಗಲಿತು.

ಈ ಸಭೆಯ ಮುಂದಿಡೋಣಾದ ಮಸೂದೆಗಳ ಮುಖ್ಯ ಸಾರಾಂಶ:—ಚಕ್ರವರ್ತಿಯವರು ಹಿಂದೂಸ್ಥಾನಕ್ಕೆ ಚಿತ್ತೈಸಿದರಿಂದುಂಟಾದ ಅಪಾರವಾದ ಪ್ರಯೋಜನಗಳಿಗಾಗಿ ಈ ಸಂಘದವರು ತಮ್ಮ ಹೃತ್ಪೂರ್ವಕವಾದ ಕೃತಜ್ಞತೆಯನ್ನೂ ಸ್ವಾಮಿಭಕ್ತಿಯನ್ನೂ ತೋರ್ಪಡಿಸಿದರು.

ಬೆಳ್ತಂಗಡಿ ರೆವಿನ್ಯು ಪಿರ್ಕಿಯನ್ನು ಪುತ್ತೂರು ಡಿವಿಜನಿನಿಂದ ಮೂಡಬಿದ್ರೆ ತಾಲೂಕಿಗೆ ಸೇರಿಸಿದ್ದು ಉಪ್ಪಿನಂಗಡಿ ವರ್ಗದಾರರಿಗೂ ಮುಖ್ಯವಾಗಿ ಬೆಳ್ತಂಗಡಿ ವರ್ಗದಾರರಿಗೂ ಬಹಳ ಕಷ್ಟ ಮತ್ತು ಅನನುಕೂಲವಾಗಿದೆ. ಪುತ್ತೂರು ಡಿವಿಜನಿನಿಂದ ಬೆಳ್ತಂಗಡಿಯನ್ನು ಪ್ರತ್ಯೇಕಿಸುವದು ಅಗತ್ಯವಲ್ಲ. ಮಿ। ಆರ್. ಎ. ಗ್ರೇಹೆಮ್ ದೊರೆಗಳು ಇತ್ತಲಾಗೆ ಸೂಚಿಸಿರುವ ತಾಲೂಕು ಏರ್ಪಾಡು ತಿದ್ದುಪಡಿಯನ್ನು ಜ್ಯಾರಿಗೆ ತಂದು ಬೆಳ್ತಂಗಡಿ ಪಿರ್ಕಿಯನ್ನು ಪುತ್ತೂರು ಡಿವಿಜನಿಗೆ ಸೇರಿಸಬೇಕೆಂತಾಗಿರುವುದು.

ರಿಜರ್ವ್ ಕಾಡುಗಳಿಂದುಂಟಾಗುವ ಪರಿತಾಪಗಳು ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ಬಡಜನರ ಸಂಕಷ್ಟಗಳನ್ನು ಹೋಗಲಾಡಿಸುವರೆ ರಿಜರ್ವ್ ಕಾಡುಗಳ ಹತ್ತರ ಇರುವ ರೈತರಿಗೆ ಅಂಥಾ ಕಾಡುಗಳಿಂದ ಸೊಪ್ಪುಸದೆಗಳನ್ನು ಅಲ್ಪಕ್ರಯಕ್ಕೆ ಕೊಡುವದು, ಹಿಂಸ್ರ ಮೃಗಗಳಿಂದ ಉಂಟಾಗುವ ಅನಾಹುತಗಳನ್ನು ತಗ್ಗಿಸುವರೆ ಬೇಸಾಯಗಾರರಿಗೆ ಹೆಚ್ಚಾಗಿ ಕೋವಿ ಲೈಸನ್ಸುಗಳನ್ನು ಕೊಡುವದು, ಪುತ್ತೂರು ಫೋರೆಸ್ಟ್ ಇಲಾಖೆಯವರು ಒಂದು ಕಟ್ಟಿಗೆ ಡಿಪೋ ತೆರೆಯುವದು, ಎಂಬಿತ್ಯಾದಿ ನಿರ್ಣಯಗಳು ಸಭೆಯ ಮುಂದಿಡಲಾಯಿತಲ್ಲದೆ, ಸುಳ್ಯದಲ್ಲಿ ಒಂದು ಸಬ್ ರಿಜಿಸ್ಟ್ರಾರರ ಆಫೀಸು ತೆರೆಯುವದು, ಟಪ್ಪಾಲು ಇಲಾಖೆಯವರು ಕೆಲವು ಬ್ರೇಂಚ್ ಪೋಸ್ಟಾಫೀಸುಗಳನ್ನು ಮುಚ್ಚಿದ್ದರಿಂದ ಗ್ರಾಮದ ಜನರಿಗೆ ಉಂಟಾದ ಕಷ್ಟ, ಕೆಲವು ಪೋಲಿಸ್ ಸ್ಟೇಶನುಗಳನ್ನು ತೆಗೆದುಹಾಕಿದ್ದರಿಂದ ತಾಲೂಕಿನಲ್ಲಿ ಹೆಚ್ಚಿನ ಉಪದ್ರ ಉಂಟಾಗುತ್ತಿರುವುದರಿಂದ ಪುನಃ ಕೆಲವು ಸ್ಟೇಶನುಗಳನ್ನು ತೆರೆಯುವದು, ಗ್ರಾಮ ಕೋರ್ಟುಗಳಿಂದ ಹೆಚ್ಚಿನ ಪ್ರಯೋಜನವುಂಟಾಗುವಂತೆ ಪಟೇಲರಲ್ಲದಿದ್ದರೂ ಬುದ್ಧಿವಂತರಾದ ವರ್ಗದಾರರನ್ನು ಗ್ರಾಮಕೋರ್ಟುಗಳಲ್ಲಿ ನೇಮಿಸುವದು, ಕಾಡುಮೃಗಗಳಿಂದ ಮತ್ತು ಬಂಬುಚ್ಚಿಯಿಂದ ಬೇಸಾಯಗಾರರಿಗೆ ನಷ್ಟ ಉಂಟಾಗುವಾಗ ಅವರಿಂದ ಸರಕಾರದವರು ಕಂದಾಯವನ್ನು ವಸೂಲು ಮಾಡದಿರುವದು, ತಾಲೂಕಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಹೆಚ್ಚಿನ ಅವಶ್ಯಕತೆ, ಈ ಮೊದಲಾದ ನಿರ್ಣಯಗಳಿಗೆ ಸರಕಾರದವರು ಲಕ್ಷ್ಯ ಕೊಡಬೇಕೆಂದೂ ಮೂಲಗೇಣಿ ಆಸ್ತಿಗಳಲ್ಲಿ ಏರಿದ ತೀರ್ವೆಯನ್ನು ಪಟ್ಟಾದಾರರ ಮೇಲೆ ಹೊರಿಸಿದ ಅನ್ಯಾಯದ ನಿವೃತ್ತಿಯನ್ನು ಸರಕಾರದವರು ಬೇಗನೇ ಮಾಡಬೇಕೆಂಬಿತ್ಯಾದಿ ಮಸೂದೆಗಳು ಈ ಸಭೆಯಲ್ಲಿ ಅನುಮೋದಿಸಲಾಯಿತು.

ಕಡೆಗೆ ಈ ಮಸೂದೆಗಳನ್ನು ಜಿಲ್ಲಾ ಕಲೆಕ್ಟರರ ಮುಂದಿಡುವರೆ ಪುತ್ತೂರು ವರ್ಗದಾರರ ಸಂಘದ ಮೂರು ಮೆಂಬರು ಕೂಡಿದ ಒಂದು ಪ್ರತಿನಿಧಿ ಮಂಡಳಿಯು ಸ್ಥಾಪಿಸಲ್ಪಡಬೇಕೆಂಬದಾಗಿ ನಿಷ್ಕರ್ಷಿಸಲ್ಪಟ್ಟಿರುವದು.

ಜಹಂಗೀರ ಚಕ್ರವರ್ತಿಯ ಮಿತಪಾನದ ನಿಬಂಧನೆಗಳು.

ಮೊಗಲಾಯ ಚಕ್ರವರ್ತಿಗಳಲ್ಲಿ ಬಾಬರನು ಮದುಪಾನ ಸೇವನೆ ಮಾಡುವವನಾಗಿದ್ದನು. ಆದರೆ ಈ ಸೇವನೆಯು ಕೆಟ್ಟದೆಂಬದಾಗಿ ಆತನಿಗೆ ತಿಳಿದು ಬಂದನಂತರ ಈ ಅಭ್ಯಾಸವನ್ನು ಪೂರ್ಣವಾಗಿ ತ್ಯಜಿಸಿದನು. ಅಕ್ಬರ ಚಕ್ರವರ್ತಿಯು ಮಧುಪಾನ ವರ್ಜಿತನಾಗಿದ್ದನು. ಜಹಂಗೀರನ ವಿಷಯವಾಗಿ ಹೇಳುವುದಾದರೆ ಆತನು ಇತಿಹಾಸದಲ್ಲಿ ಕೀರ್ತಿಪಡೆದ ಮದುಪಾಯಿ ಎಂಬದಕ್ಕೆ ಸಂಶಯವಿಲ್ಲ. ತಂದೆಯೊಂದಿಗೆ ಅಫ್ಘಾನ್ ಯುದ್ಧಕ್ಕೆ ಹೋಗಿದ್ದ ಜಹಂಗೀರನು ಒಂದು ದಿನ ವಿಹಾರಾರ್ಥವಾಗಿ ಕಾಡಿಗೆ ಹೋದನು. ಅಲ್ಲಿ ಆತನಿಗೆ ಒಂದಾಪತ್ತು ಸಂಭವಿಸಿತು. ಆಗ ಆತನ ಪರಿವಾರದವರು ತುಸ ವ್ಯಾನ್ ಕುಡಿದರೆ ದಣಿವೂ, ಶ್ರಮವೂ ಹೋಗಿಬಿಡುವುದೆಂದು ಹೇಳಿದ್ದರಿಂದ ಯೌವ್ವನ ಪ್ರಾಯದ ಈ ಯುವರಾಜನು ದ್ರಾಕ್ಷೆ ರಸ ಕುಡಿದನು. ಆ ದಿನದಿಂದ ಆತನು ಮದುಪಾನ ಸೇವನೆಯ ಅಭ್ಯಾಸವನ್ನು ಕೈಕೊಂಡವನಾಗಿ ದಿನದಿಂದ ದಿನಕ್ಕೆ ಹೆಚ್ಚೆಚ್ಚು ಕುಡಿಯ ಪ್ರಾರಂಭಿಸಿದನು. ಕಾಲಕ್ರಮೇಣ ದ್ರಾಕ್ಷೆರಸವು ಈತನಿಗೆ ಮೆಚ್ಚಲಿಲ್ಲ. ಭಟ್ಟೀತೆಗೆದ ವಿಶೇಷ ಮಾದಕ ಪದಾರ್ಥವಿರುವ ಪಾನವು ಅವಶ್ಯವಾಯಿತು. ಮೊದಲನೇ ಸಾರಿ ಕಾಡಿನಲ್ಲಿ ದ್ರಾಕ್ಷೆರಸ ಕುಡಿದ ೯ ವರ್ಷದ ನಂತರ ಜಹಂಗೀರನಿಗೆ ದಿನ ಒಂದಕ್ಕೆ ಭಟ್ಟಿತೆಗೆದ ೨೦ ಕಪ್ ಮದುಪಾನ ಬೇಕಾಯಿತು. ಇದರಲ್ಲಿ ೧೪ ಕಪ್ ಹಗಲಲ್ಲಿಯೂ ೬ ಕಪ್ ರಾತ್ರಿಯಲ್ಲಿಯೂ ಪಾನಮಾಡುತ್ತಿದ್ದನು. ಅನಂತರ ಜಹಂಗೀರನು ಕುಡಿಯುವುದರಲ್ಲಿ ಮತ್ತೂ ಆಸಕ್ತನಾದನು. ಆತನು ಕುಡಿಯುವ ಬಟ್ಟಲನ್ನು ತನ್ನ ಸ್ವತಃ ಕೈಯಿಂದ ಎತ್ತಲಾರದಷ್ಟು ಅಮಲು ಮಾಡಿಕೊಳ್ಳುತ್ತಿದ್ದನು. ಇಂಥಾ ಕಾಲದಲ್ಲಿಯೂ ಇತರರು ಆತನ ಬಾಯಲ್ಲಿ ಮದುಪಾನದ ಬಟ್ಟಲನ್ನು ಇಡಬೇಕಾಯಿತು. ಈ ಮಧ್ಯೆ ಜಹಂಗೀರನು ಅಫೀಮು ತಿನ್ನುವ ಅಭ್ಯಾಸವನ್ನೂ ಕಲಿತುಕೊಂಡನು. ಆತನು ತನ್ನ ೪೬ ವಯಸ್ಸಿನಲ್ಲಿ "ಆಹಾ! ನನಗೆ ಈಗ ೪೬ನೇ ವಯಸ್ಸು, ಆದರೂ ನಾನು ದಿವಸಕ್ಕೆ ೮ ಸರ್ಕ್ಸ್ ಅಫೀಮು ತಕ್ಕೊಳ್ಳುತ್ತೇನೆ. ದಿವಸದ ೫ ತಾಸು ದಾಟಿದನಂತರ ಉಳಿದ ೬ ಸರ್ಕ್ಸ್ ಅಫೀಮನ್ನು ಅಸ್ತಮಾನವಾಗಿ ಒಂದು ತಾಸಿನೊಳಗೆ ತಕ್ಕೊಳ್ಳುವೆನು" ಎಂದೆಂದು ಹಿಗ್ಗಿಕೊಳ್ಳುತ್ತಿದ್ದನು.

ಜಹಂಗೀರನು ಕುಡಿಕನಾಗಿದ್ದುದರಿಂದ ಬೇಗನೇ ಮೃತಪಟ್ಟನು. ಈತನು ಮಿತಿಮೀರಿ ಕುಡಿಯುವವನಾಗಿದ್ದರೂ ಮಧುಪಾನದಿಂದುಂಟಾಗುವ ಕೇಡನ್ನು ಅರಿತವನಾಗಿದ್ದನೆಂಬದು ಆತನು ತನ್ನ ರಾಜ್ಯದಲ್ಲಿ ಏರ್ಪಡಿಸಿದ ಕೆಲವು ನಿಬಂಧನೆಗಳಿಂದ ವಿದಿತವಾಗುತ್ತದೆ. ಹೊಗೆಸೊಪ್ಪು ಮನುಷ್ಯರ ದೇಹವನ್ನೂ ಮಾನಸಿಕ ಶಕ್ತಿಯನ್ನೂ ಕುಂದಿಸಿ ಹಾಳುಮಾಡುತ್ತಾದ್ದರಿಂದ ಯಾರಾದರೂ ಅದನ್ನು ಸೇವಿಸಬಾರದು. ತನ್ನ ದೇಶದಲ್ಲಿ ಯಾರಾದರೂ ದ್ರಾಕ್ಷೆರಸ ಮಾಡಕೂಡದೆಂತಲೂ ಮಾರಕೂಡದೆಂತಲೂ ಕಟ್ಟು ಮಾಡಿದ್ದನು.

ಪಿತೃಪ್ರೇಮ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

೪.

ಅಭ್ರರಹಿತ ಆಕಾಶವು ತನ್ನ ನೀಲಕಾಂತಿಯನ್ನು ಸಗರ್ವದಿಂದ ಪ್ರಕಾಶ ಮಾಡುತ್ತಿತ್ತು. ರಜನೀನಾಥ ಚಂದ್ರಮನು ತನ್ನ ನಿರ್ಮಲ ಸತೇಜಿ ಬಿಂಬವನ್ನು ಜನಸಮೂಹದ ಹೃದಯದಲ್ಲಿ ತುಂಬಿಸುತ್ತಿದ್ದನು.

ನಿಶಾಸಾಲೀನ ಮಂದಮಾರುತದಿಂದ ಉದ್ಯಾನಸ್ಥ ಸುಂದರ ನೂತನ ತರುರಾಜಿಯು ಕಂಪಿತವಾಗುತ್ತಿತ್ತು. ಸರೋವರದ ಪ್ರಸನ್ನ ಸಲಿಲದಲ್ಲಿ ಕಂಪಿತವಾಗುವ ಲಹರೀಮಯ ಸುಧಾಂಶುವನ್ನು ತೀರಸ್ಥ ಕುಸುಮಕುಂಜದಲ್ಲಿ ಕುಳಿತು ಅನಿಮಿಷ ನೇತ್ರಗಳಿಂದ ಒಬ್ಬ ವೀರ ಯುವಕನು ಈಕ್ಷಿಸುತ್ತಿದ್ದನು. ಅವನ ಹೃದಯವು ಪ್ರೇಮತರಂಗದಿಂದ ತರಂಗಿಸುತ್ತಿತ್ತು. ದುಃಖಿತ ಸ್ವರದಿಂದ "ಮನಸ್ಸೇ! ನೀನು ವಿಕಾರವಶದಿಂದ ನನ್ನ ಕರ್ತವ್ಯದ ವಿಸ್ಮೃತಿಯನ್ನುಂಟುಮಾಡುವೆಯಾ? ಹಾ ದುರ್ದೈವ! ಮತ್ತೇನು? ನನ್ನ ಶತ್ರುವಿನ ಕನ್ಯೆ, ನಾನು ಯಾರ ನಿಃಪಾತ ಮಾಡಲೆಳಸಿದೆನೋ—ಅವನ—ಆ ದುಷ್ಟ ಅಮರರಾಯನ ಯಃಕಶ್ಚಿತ್ ಅಬಲಾ! ಅವಳು ನನ್ನ ಹೃದಯವನ್ನು ಹರಣ ಮಾಡುವುದೇನು? ಇದಕ್ಕಿಂತ ಇನ್ನು ನನ್ನ ದುರದೃಷ್ಟವೇನು? ಲಲಿತಾದೇವೀ! ನಾಮವೆಷ್ಟು ಮಧುರ! ಸ್ವರೂಪದಲ್ಲಿ ಸ್ವರ್ಗೀಯ ದೇವತೆ! ಅಹಾಹಾ! ಲಲಿತೆ, ನೀನು ನನ್ನವಳಾಗುವಿಯಾ? ನನ್ನ ಮಾತುಗಳು ಅವಳಿಗೆ ಆಲಿಸುವ ಬಗೆ ಹೇಗೆ?"

ಮಧುರಾಲಾಪದಿಂದ ಗಾಯನ ಮಾಡುವ ಹಾಗೆ ಭಾವನೆಯುಂಟಾಯಿತು. ಆ ಆಲಾಪಲಹರಿಯು ಅವನ ಮನಸನ್ನಾಕರ್ಷಿಸಿತು. ಆ ಗಾಯನ ದೇವತೆಯ ಮಧುರ ಕಂಠದಿಂದ ಪ್ರವಹಿತರಾದ ಸಂಗೀತಾಲಾಪವು ಅಂಥಾ ನಿಸ್ತಬ್ಧ ನಿಶೀಥ ಕಾಲದಲ್ಲಿ ಆ ಸಮಂತಾತ್ ಪ್ರತಿ ಧ್ವನಿತವಾಗಲಾರಂಭಿಸಿತು. ಗಾಯನವು ನವ ಯೌವ್ವನೆಯಾದ ಸ್ತ್ರೀ ಕಂಠವಾಗಿತ್ತು. ರೂಪವತಿಯಾದರೂ ಅವಳ ಮುಖಕಮಲವು ನಿಸ್ತೇಜವಾಗಿತ್ತು. ಕ್ಷೀಣ ಸ್ವರದಿಂದ "ತಾರಾನಾಥ! ನಿನಗೇನು ಹೇಳಲಿ? ನನ್ನ ಹೃದಯೇಶ ಅಜಿತನು ನಿನ್ನ ಅಮೃತಕರಗಳಿಗೆ ಸಿಕ್ಕಿದರೆ ಆ ಸುಧಾಕರಗಳಿಂದ ನನ್ನನ್ನು ಅಲ್ಲಿಗೆ ಕರದೊಯ್ಯು."

"ಲಲಿತೆ, ನೀನು ಪ್ರತಿಯೊಬ್ಬನನ್ನು ತನ್ನ ಕರ್ತವ್ಯ ಪರಾಙ್ಮುಖನನ್ನಾಗಮಾಡುವುದು ನಿನ್ನಂಥಾ ಮಂತ್ರಿನಂದನೆಗೆ ಶೋಭಿಸುವುದೇನೊ? ನಿಶಾನಾಥನು ಈಶ್ವರಾಜ್ಞೆಯಂತೆ ನಡಿಯುವನು. ನಾನೂ ಹಾಗೆಯೇ ನಡಿಯುವೆನು."

"ಕುಮಾರ! ನನ್ನನ್ನು "ಮಂತ್ರಿನಂದಿನೀ" ಎಂದು ಹೇಳಿ ಎಂಥಾಪರಾಧವನ್ನು ಮಾಡಿದೆ ಎಂದು ಯೋಚಿಸಿ ನೋಡು." ತರುಣಿಯು ನಡುವೆಯೇ ನುಡಿದಳು.

"ರಾಜ ಕನ್ಯೆಯು ನೀನಾಗಿರುವೆಯಾ? ಎಂಥಾ ಮಹತ್ವಾಕಾಂಕ್ಷೆ? ಈ ಶಬ್ದವು ನನ್ನ ಹೃದಯಸ್ಥ ಪ್ರೇಮಮೂರ್ತಿಯ ಮುಖಾರವಿಂದದಿಂದ ಹೊರಡುತ್ತದೆಯಲ್ಲವೇ? ಲಲಿತೆ, ನಾನು ಪ್ರೇಮಾಂಧನಲ್ಲವು. ನಾನು ರಾಜನಾಗಿ ಈ ದುರ್ಗಾಧಿಪತಿಯಾಗಿರುವೆನು. ನೀನು ನನ್ನ ಅಧಿಷ್ಠಾತ್ರಿ ದೇವತೆ—ಮಂತ್ರಿ ಕನ್ಯೆಯಾಗಿರುವೆ! ಇಂದಿಗೆ ದಶ ರಾತ್ರೆಗಳು ಕಳೆದವು. ತೇಜಸಿಂಹನ ಅಸ್ವಸ್ಥದಿಂದ ಇದರ ವ್ಯವಸ್ಥೆ ಮಾಡಲಾಗಲಿಲ್ಲ. ಆದರೆ ಮಾಡುವುದೇನು? ವಿಕಾರವಶದಿಂದ ಪ್ರಣಯಾಲಾಪವನ್ನಾಲಿಸುತ್ತಾ ಕುಳಿತೆನು. ನನ್ನ ಪುರಸ್ಕರ್ತೆಯಾದ ಲೀಲಾವತೀ ದೇವಿಯು ಏನನ್ನುವಳು? ಸಾಕು. ನಾನು ರಾಜನೆಂಬುವುದನ್ನೂ, ಅಮರರಾಯನು ಮಹಾಪಾಪಿ ರಾಜದ್ರೋಹಿಯೆಂಬುವುದನ್ನೂ ವ್ಯಕ್ತಗೊಳಿಸುವೆನು. ಲಲಿತೆ! ನೀನು ಯಾವ ಪಕ್ಷವನ್ನು ಸ್ವೀಕರಿಸುವಿ? ಪ್ರೇಮವನ್ನು ಮರೆಮಾಡು. ವಿಚಾರಮಾಡಿ ನೋಡು. ನಾನು ಪಿತೃ ಪ್ರೇಮಕ್ಕಾಗಿ ನನ್ನ ಲಲಿತಮಯವಾದ ಹೃದಯವನ್ನು ಪ್ರೇಮದಿಂದ ವಿಲೀನಮಾಡಿ ಶತ್ರುಮರ್ದನ ಯೋಗ್ಯವಾದ ಕಠೋರ ಹೃದಯವನ್ನು ನೆಲೆಗೊಳಿಸಿರುವೆನು. ನನ್ನ ಪಕ್ಷವು ಸತ್ಯವು. ನಾನು ಈ ರಾಜ್ಯಾಧಿಕಾರಿಯಾಗಿರುವೆನು. ಅಮರರಾಯನು ತನ್ನ ದುಷ್ಟ ವಾಸನೆಗಳಿಂದ ರಾಜಾಸನವನ್ನು ದೂಷಿತಮಾಡಿರುವನು. ಅವನನ್ನು ಯೋಗ್ಯ ರೀತಿಯಿಂದ ಶಿಕ್ಷಿಸುವುದು ನನ್ನ ಕರ್ತವ್ಯವಾಗಿರುವುದು. ನಿನಗೆ ಯಾವ ಪಕ್ಷವು ಪ್ರೀಯಕರವಾಗಿರುವುದು?"

ಅಜಿತಸಿಂಹನ ಈ ಆವೇಶಯುಕ್ತವಾದ ಪ್ರೇಮ ವಿರೋಧನ ಮಾಡುವ ವಿಲಕ್ಷಣ ಆತ್ಮ ಸಂಯಮನವನ್ನು ಕಂಡು ಲಲಿತಾ ದೇವಿಯು ಚಕಿತಳಾದಳು. ಪ್ರಾಣೇಶ ಮೇಲೆ ಅಧಿಕ ತರವಾದ ಪೂಜ್ಯ ಬುದ್ಧಿಯು ದೃಢವಾಯಿತು. ಅವಳ ಹೃದಯದಲ್ಲಿಯೂ ಪಿತೃಪ್ರೇಮವು ಒಸರಲಾರಂಭವಾಯಿತು. ತನ್ನ ಹೃದಯವನ್ನು ಪರಿಶೀಲಿಸಿ ದೃಢ ನಿಶ್ಚಯ ಮಾಡಿ—"ಅಜಿತಸಿಂಹ ನಾನು ನನ್ನ ಅಜಿತ ಪ್ರೇಮಮಯ ಹೃದಯವನ್ನು ಇದರಲ್ಲಿಯೇ ವಿಲೀನಮಾಡುವೆನು. ನನಗೆ ತಮ್ಮ ಮೇಲಣ ಪ್ರೇಮಕ್ಕಿಂತಲೂ ಪಿತೃಪ್ರೇಮವು ಶ್ರೇಷ್ಠವೆಂದು ತೋರುವುದು. ಹೇ ನಾಥ! ನಾನು ಸಾರಿ ಸಾರಿ ಹೇಳುತ್ತೇನೆ. ತಾವು ನನ್ನ ಮನಸ್ಸನ್ನು ಸೆಳದುಕೊಂಡರೂ ಈ ದೇಹವು ಪಿತೃಪ್ರೇಮಕ್ಕಾಗಿ ಪತನವಾಗುವುದು. ನನಗೆ ಯುದ್ಧಕ್ಕಾಗಿ ವೀರ ಭೂಮಿಯ ಮೇಲೆ ಬರಬೇಕಾದರೂ, ಪಿತೃ ವಿಜಯಾರ್ಥವಾಗಿ ತಮ್ಮ ಪ್ರಾಣಾಪಹಾರ ಮಾಡಬೇಕಾದರೂ, ಅಂಥಾ ದುರ್ಧರ ಪ್ರಸಂಗದಲ್ಲಿಯೂ ನನ್ನ ಮನಸ್ಸು ಚಲಿಸಲಾರದು. ಪಿತೃಕಾರ್ಯ ಪರಿಸಮಾಪ್ತಿಯಾದಲ್ಲಿ ತಮ್ಮ ದೆಸೆಯೇ ನಾನೂ ಅನುಭವಿಸುವೆನು. ತಾವು ಸ್ವರ್ಗವನ್ನೇರಿದರೆ ನಾನೂ ಸ್ವರ್ಗವನ್ನೇರುವೆನು."

"ಬೇಡ! ನೀನು ಶೂರಳಾಗಿ ಧೈರ್ಯಯುಕ್ತ ಯುದ್ಧ ಕುಶಲೆಯಾಗಿರುವೆ. ನಡಿ. ಇನ್ನು ಪ್ರಣಯ ಪ್ರಲಾಪವನ್ನುಡಿಯದೆ ರಾಜಪುತ್ರಿಯ ಉಚಿತವಾದ ಕರ್ಮವನ್ನಾಚರಿಸು. ನಡಿ. ಸ್ವರ್ಗಸ್ಥ ಪಿತೃದೇವತೆಗಳಿರಾ! ನನ್ನ ಮನಸ್ಸು ಕ್ಷಣ ಮಾತ್ರ ವಿಕಾರವಾಗಿ ಕರ್ತವ್ಯ ಪರಾಙ್ಮುಖವಾದುದಕ್ಕೆ ಕ್ಷಮಿಸಿರಿ. ನಾನು ಕ್ಷಣ ಮಾತ್ರ ವಿರಾಮವಿಲ್ಲದೆ ಆ ಕಾರ್ಯವನ್ನಾಚರಿಸುವೆನು.

ಆ ಗಂಭೀರವಾದ ನಿಶೀಥಕಾಲದಲ್ಲಿ ಅಜಿತಸಿಂಹನ ಮುಖದಿಂದ ಹೊರಟ ಧ್ವನಿಯು ಪ್ರತಿಧ್ವನಿತವಾಯಿತು.

ಮುಂದರಿಯುವದು.

M. V. L. Prabhu.

ಭ್ರಾಂತಿ ಭಾವನೆಯ ಸಾಮರ್ಥ್ಯ.

ಒಂದು ದಿನ ಒಬ್ಬ ಬೇಂಕಿನ ಕ್ಲಾರ್ಕನು ಬೇಸಿಗೆ ಕಾಲದ ಸೆಖೆಯಿಂದ ಆಸತ್ತು ಬೇಸತ್ತವನಾಗಿ ತನಗೆ ಏನೋ ಅಸ್ವಸ್ಥವಿದೆಂದು ಭಾವಿಸಿ ಒಬ್ಬ ವೈದ್ಯರ ಬಳಿಗೆ ಹೋಗಿ ಪರೀಕ್ಷಿಸಿಕೊಂಡನು. ವೈದ್ಯರು ಆತನ ಶ್ವಾಸಕೋಶ ಇತ್ಯಾದಿಗಳನ್ನು ಪರೀಕ್ಷಿಸಿ ನಾಳೆ ಹೇಳುತ್ತೇನಂದರು. ಮರುದಿನ ವೈದ್ಯರಿಂದ ಬರೆಯಲ್ಪಟ್ಟ ಒಂದು ಪತ್ರವು ಆತನಿಗೆ ಸಿಕ್ಕಿತು. ಅದರಲ್ಲಿ "ನಿನ್ನ ಬಲ ಪಾರ್ಶ್ವದ ಶ್ವಾಸಕೋಶವು ಪೂರಾ ಹಾಳಾಗಿಯದೆ, ಗುಂಡಿಗೆಯು ವಿಫಲವಾಗಿಯದೆ, ಆದ್ದರಿಂದ ಆದಷ್ಟು ಜಾಗ್ರತೆ ಮಾಡು; ಹ್ಯಾಗೂ ನೀನು ಇನ್ನೊಂದು ವಾರ ಬದುಕುವಿ, ಅಷ್ಟರೊಳಗೆ ನಿನ್ನ ಮನೆವಾರ್ತೆಯ ವಿಷಯವಾಗಿರುವ ತೊಂದರೆಗಳನ್ನೆಲ್ಲಾ ತೀರಿಸು" ಎಂಬದಾಗಿ ಬರದಿತ್ತು.

ಸ್ವಾಭಾವಿಕವಾಗಿ ಈ ಕಾಗದವನ್ನು ನೋಡುವಾಗ ಯಾರಿಗಾದರೂ ಭಯವಾಗದೆ ಇದ್ದೀತೇ? ಅಂದಿನವರೆಗೆ ಕೆಲಸಕ್ಕೆ ಹೋಗುತ್ತಿದ್ದ ಆ ಕ್ಲಾರ್ಕನು ಈ ದುಃಖಕರವಾದ ಪತ್ರವನ್ನು ಓದುತ್ತಲೇ ಆ ದಿನ ಬೆಳಿಗ್ಯೆ ಕೆಲಸಕ್ಕೆ ಹೋಗಲಿಲ್ಲ. ಬೆಳಗ್ಗಿನ ತನಕ ಸುಖವಾಗಿದ್ದವನಿಗೆ ಮಧ್ಯಾಹ್ನವಾಗುತ್ತಲೇ ಗುಂಡಿಗೆ ಬಡಿಯಲು ಪ್ರಾರಂಭವಾಗಿ ಎದೆಯಲ್ಲಿ ಕಠಿಣ ನೋವು ತೊಡಗಿತು. ದಿನವೆಲ್ಲಾ ಎದ್ದೇಳಲಿಲ್ಲ. ರಾತ್ರಿಯಾಗುತ್ತಲೇ ಈಗ ಸಾಯುತ್ತಾನೋ ಮತ್ತೆ ಸಾಯುತ್ತಾನೋ ಎಂಬಂತಾದ್ದರಿಂದ ಆತನ ಬಂಧುಬಳಗದವರು ಮಧ್ಯರಾತ್ರಿಗೆ ಡಾಕ್ಟರರ ಬಳಿಗೆ ಹೋಗಿ ಡಾಕ್ಟರರನ್ನು ಕರಕೊಂಡು ಬಂದರು.

ಡಾಕ್ಟರರು ಕ್ಲಾರ್ಕನ ಮನೆಗೆ ಬಂದೊಡನೆ ಆಶ್ಚರ್ಯದಿಂದ "ಇದೇನು? ನಿನ್ನೆ ಈತನಲ್ಲಿ ಈ ಲಕ್ಷಣವೇನೂ ಇರಲಿಲ್ಲ. ನಿನಗೇನಾಗಿಯದೆ?" ಎಂದು ಕೇಳಲು ಕ್ಲಾರ್ಕನು ಎದೆಯ ಮೇಲೆ ಕೈಯಿಟ್ಟು ಮೃದು ಸ್ವರದಿಂದ "ನೋವಾಗುತ್ತದೆ" ಎಂದನು.

ಡಾಕ್ಟರರು: "ಗುಂಡಿಗೆಯೋ–ನಿನ್ನೆ ಏನೂ ಇರಲಿಲ್ಲ, ಏನಾದರೂ ವಿಪರೀತ ಮಧುಪಾನ ಮಾಡಿದಿಯೋ? ನೀನು ಮಧುಪಾಯಿಯಂತೆ ತೋರುವದಿಲ್ಲ; ನಿನಗೇನು ಸಂಭವಿಸಿತು?" ಎಂದರು.

ಕ್ಲಾರ್ಕನು: "ಡಾಕ್ಟರರೇ ನಿಮ್ಮ ಪತ್ರ! ನಾನು ಒಂದು ವಾರ ಮಾತ್ರ ಬದುಕುವೆನೆಂದು ನೀವು ಬರದಿರಿ" ಅಂದನು.

ಡಾಕ್ಟರರು: ಹುಚ್ಚು! ನಿನಗೆ ಭ್ರಮೆ ತಾಗಿತೋ? ನೀನು ಒಂದು ತಿಂಗಳ ರಜೆ ತಕ್ಕೊಂಡು ಹವೆ ಬದಲಾಯಿಸಿ ವಿಶ್ರಾಂತಿ ತಕ್ಕೊಂಡರೆ ನಿನಗೆ ಪೂರ್ಣ ಸೌಖ್ಯವಾಗುವುದು ಎಂದು ಬರೆದೆನಷ್ಟೆ" ಎಂದರು.

ಕ್ಲಾರ್ಕನು ತನ್ನ ಮಂಚದ ಸಮೀಪವಿದ್ದ ಮೇಜಿಯ ಮೇಲಿಂದ ದಾಕ್ತಾರರ ಪತ್ರವನ್ನು ತೆಗದು ತೋರಿಸಲು ಡಾಕ್ಟರರು ಆಶ್ಚರ್ಯದಿಂದ ಚಲೋದು, ಇದೊಂದು ವಿಚಿತ್ರ, ಈ ಕಾಗದವು ಮತ್ತೊಬ್ಬನಿಗೆ ಬರದದ್ದಾಗಿದೆ, ನಿನಗಲ್ಲ; ನನ್ನ ಸೆಕ್ರಿಟರಿಯು ತಪ್ಪಾಗಿ ಇದನ್ನು ನಿನಗೆ ಕಳುಹಿಸಿರಬೇಕು ಎಂದು ಹೇಳಿದರು. ಕೂಡಲೇ ಮಲಗಿದ್ದ ಕ್ಲಾರ್ಕನು ಎದ್ದು ಕೂತು ನೆಗಾಡಿದನು. ಅಂದೇ ರಾತ್ರಿ ಪುನಃ ಆತನಿಗೆ ಗುಣವಾಯಿತು.

ಕ್ಲಾರ್ಕನಿಗೆ ಸಿಕ್ಕಿದ ಈ ಪತ್ರವು ಸಾಯುವ ಮಂಚದಲ್ಲಿದ್ದ ಒಬ್ಬ ಕ್ಷಯರೋಗಿಗೆ ಬರದದ್ದಾಗಿತ್ತು. ಈಗ ತಪ್ಪಾಗಿ ಕ್ಲಾರ್ಕನ ಪತ್ರವು ಆ ಕ್ಷಯರೋಗಿಗೆ ಸಿಕ್ಕಿತು. ನಿರಾಶೆಯಲ್ಲಿದ್ದ ಆ ಕ್ಷಯರೋಗಿಯು ಈ ಪತ್ರವನ್ನು ಓದಿ ಮನೋಲ್ಲಾಸಪಟ್ಟು ಹವೆ ಬದಲಾಯಿಸಲು ಮತ್ತೊಂದು ಸ್ಥಳಕ್ಕೆ ಹೊರಟುಹೋದನು. ಅಲ್ಲಿ ಪೂರ್ಣ ಗುಣಹೊಂದಿದನು. ಮೃತ್ಯುವಿನ ಬಾಯಲ್ಲಿದ್ದ ಆ ಕ್ಷಯರೋಗಿಯು ಈ ಕಾಗದದ ಬಲದಿಂದ ಈಗಲೂ ಪೂರ್ಣ ಸೌಖ್ಯದಿಂದಿರುವನು.

ವೃಥಾಕಲ್ಪನೆಯ ವ್ಯರ್ಥ! ಆಲೋಚನೆಯಿಂದ ಅನೇಕಾವರ್ತಿ ಹೆಚ್ಚಿನವರು ನಷ್ಟಕ್ಕೂ ಕಷ್ಟಕ್ಕೂ ಒಳಗಾಗುತ್ತಾರೆ. ಒಬ್ಬನಿಗೆ ತುಸ ಕೆಮ್ಮು ಇದ್ದರೆ ಆತನು ತನಗೆ ಕ್ಷಯರೋಗ ಉಂಟಾಗುತ್ತದೋ ಏನೋ ಎಂಬದಾಗಿ ಮನದಲ್ಲಿಯೇ ಭಾವಿಸುತ್ತಾ ಇದ್ದರೆ ಆತನಿಗೆ ಕ್ಷಯರೋಗವು ಅಂಟುತ್ತದೆಂಬದು ನಿಶ್ಚಯ. ಎಂಥಾ ಕಠಿಣ ಅಸ್ವಸ್ಥದಲ್ಲ್ಯಾದರೂ "ಅಸ್ವಸ್ಥ ಇಲ್ಲ, ಇಲ್ಲ" ಎಂಬದಾಗಿ ಭಾವಿಸಿಕೊಂಡದ್ದರಿಂದ ಅನೇಕ

ರೋಗಿಗಳು ಗುಣಹೊಂದಿರುವರು. ಆದರೆ ರೋಗವಿಲ್ಲದಿದ್ದರೂ ರೋಗವಿದೆ ಎಂದು ಮನದಲ್ಲೇ ಭಾವಿಸಿ ಚಿಂತೆಪಟ್ಟದ್ದರಿಂದ ಅನೇಕರು ಪರವನ್ನೈದಿರುವರು ಎಂಬದಕ್ಕೆ ಹಲವು ದೃಷ್ಟಾಂತಗಳಿವೆ. ಆದ್ದರಿಂದ ಯಾವ ಸಂದರ್ಭದಲ್ಲಾದರೂ ಭ್ರಾಂತಿ ಭಾವನೆಯನ್ನು ಕಲ್ಪಿಸದಿರುವುದು ವಿಹಿತವು.

S. A.

ಹೊಟ್ಟೆ ಉಬ್ಬರ.

ದನಕರುಗಳಿಗೆ ಮೊದಲನೇ ಆಹಾರಕೋಶದಲ್ಲಿ ವಾಯುವು ತುಂಬಿಕೊಳ್ಳುವುದರಿಂದ ಈ ರೋಗವು ಪ್ರಾಪ್ತವಾಗುತ್ತದೆ.

ರೋಗಕ್ಕೆ ಕಾರಣಗಳು:—ಸಾಧಾರಣವಾಗಿ ಚನ್ನಾಗಿ ಒಗ್ಗಿದ ಮೇವನ್ನು ಬಿಟ್ಟು ಬೇರೆ ಮೇವನ್ನು ತಿನ್ನುವುದೇ ಈ ರೋಗಕ್ಕೆ ಕಾರಣವಾಗಿದೆ. ಬೇಸಿಗೆಯಲ್ಲಿ ಮೇವು ಕಡಿಮೆಯಾಗಿರುವುದರಿಂದ ಸ್ವಲ್ಪ ಸ್ವಲ್ಪ ಮೇವನ್ನು ತಿನ್ನುತ್ತಿದ್ದು, ಮಳೆಬಿದ್ದು ಹುಲ್ಲು ಚಿಗುರಿದೊಡನೆಯೇ ಅತಿಯಾಗಿ ಮೇಯುವ ದನಗಳು ಈ ರೋಗಕ್ಕೆ ಗುರಿಯಾಗುತ್ತವೆ. ಇದು ಅಂಟು ಜಾಡ್ಯವಲ್ಲ: ಆದರೆ ಏಕಕಾಲದಲ್ಲಿ ಅನೇಕ ರಾಸುಗಳಿಗೆ ರೋಗವು ತಗಲುವುದರಿಂದ ಇದು ಮತ್ಯಾವುದೋ ಒಂದು ಅಂಟು ಜಾಡ್ಯವೆಂದು ಜನರು ತಪ್ಪು ತಿಳಿದುಕೊಳ್ಳುತ್ತಾರೆ.

ರೋಗವು ತಗಲಿದ ಬಹಳ ಸ್ವಲ್ಪಕಾಲದಲ್ಲಿ ದನವು ಸತ್ತುಹೋಗುವುದರಿಂದ, ವಿಷಪದಾರ್ಥವನ್ನು ತಿಂದು, ಅಥವಾ ಹಾವಿನಿಂದ ಕಚ್ಚಲ್ಪಟ್ಟು, ಅಥವಾ ಯಾರಿಂದಲೋ ವಿಷ ಹಾಕಲ್ಪಟ್ಟು ದನವು ಸತ್ತಿತೆಂದು ಜನರು ಹೇಳಿಕೊಳ್ಳುತ್ತಾರೆ. ದನವು ರೋಗ ತಗಲಿದನಂತರ ಮೂರು ಘಂಟೆಗಳ ಮೇಲೆ ೨೦ ಘಂಟೆಗಳ ಒಳಗೆ ಸಾಯುವುದು.

ರೋಗದ ಲಕ್ಷಣ:—ಎಡಪಾರ್ಶ್ವದ ಹಿಂಭಾಗವು ಉಬ್ಬರಿಸಿಕೊಳ್ಳುವುದು, ಬೆಟ್ಟಿನಿಂದ ಮಿಡಿದರೆ ಕರಳಿನೊಳಗೆ ವಾಯುವು ಸೇರಿದಂತೆ ಶಬ್ದವಾಗುವುದು. ಉಸುರು ಬಿಡುವುದು ಬಹಳ ಪ್ರಯಾಸವಾಗಿ ದನವು ಕತ್ತನ್ನು ಮುಂದಕ್ಕೆ ಚಾಚುವುದು, ಬಹು ಜಾಗ್ರತೆಯಾಗಿ ಎದ್ದು ನಿಲ್ಲುವುದು, ಮತ್ತು ಪ್ರತಿನಿಮಿಷದಲ್ಲೂ ಹೊಟ್ಟೆ ಉಬ್ಬರವು ಹೆಚ್ಚುತ್ತಿರುವುದು, ದನವು ಮಲಗಿಕೊಂಡರೆ ಉಸುರಾಡುವುದು ಬಹಳ ಕಷ್ಟವಾಗುವುದರಿಂದ ಜಾಗ್ರತೆಯಾಗಿ ತಕ್ಷಣವೇ ಎದ್ದು ನಿಲ್ಲುವುದು, ಒಳಗಿರುವ ಗಾಳಿಯು ಹೊರಕ್ಕೆ ಬರುವಂತೆ ಮಾಡದಿದ್ದರೆ ಉಸುರಾಡುವುದು ಅತಿಕಷ್ಟವಾಗಿ ಕೊನೆಗೆ ಉಸಿರುಕಟ್ಟಿ ದನವು ಸಾಯುವುದು.

ಚಿಕಿತ್ಸೆ:—ಹೊಟ್ಟೆ ಉಬ್ಬರದ ರೋಗವೆಂದು ತಿಳಿದಕೂಡಲೆ ಕೆಳಗೆ ಕಂಡ ಔಷಧಿಯನ್ನು ಕುಡಿಸಬೇಕು.

ಹೆಂಡ ೨ ಚಟಾಕು. ಒಣಶುಂಠಿಯ ಪುಡಿ ೧ ಚಟಾಕು. ಕರಿಮೆಣಸು ೪| ತೊಲ.

ಈ ಔಷಧದಿಂದ ಅನುಕೂಲವಾಗುವ ಸಂದರ್ಭದಲ್ಲಿ ದನವು ತೇಗುವುದಕ್ಕೆ ಆರಂಭಿಸುವುದು. ಕ್ರಮೇಣ ಹೊಟ್ಟೆ ಉಬ್ಬರವು ಇಳಿದು ಕ್ರಮವಾಗಿ ಉಸಿರಾಡುವುದು. ಮೇಲ್ಕಂಡ ಔಷಧಿಯಿಂದ ಗುಣಮುಖವಾಗದಿದ್ದರೆ ಒಂದು ದಬ್ಬಳ, ಅಥವಾ ಮತ್ಯಾವ ಹರಿತವಾದ ಪದಾರ್ಥದಿಂದ ಹೊಟ್ಟೆಯನ್ನು ಚುಚ್ಚಿ ಗಾಳಿಯನ್ನು ಹೊರಕ್ಕೆ ಹೊರಡಿಸಬೇಕಾಗುವುದು. ಕೊನೆಯ ಪಕ್ಕೆಲುಬಿಗೂ ಮತ್ತು ಕಿಬ್ಬೊಟ್ಟೆಯ ಮೂಳೆಗೂ ಮಧ್ಯೆ ಚುಚ್ಚಬೇಕಾಗುವುದು. ಈ ಕೆಲಸವನ್ನು ಸ್ವಲ್ಪ ಅನುಭವಸ್ತರಾಗಿ ನಾಲ್ಕಾರುವೇಳೆ ಕೆಲಸಮಾಡಿರತಕ್ಕವರೇ ಮಾಡಬೇಕು. ಹೀಗೆ ಚುಚ್ಚಿದನಂತರ ಆ ತೂತಿನಿಂದ ಸುಮಾರು ಕಿರುಬೆರಳು ಗಾತ್ರವಿರುವ ಆರು ಅಂಗುಲ ಉದ್ದವಾದ ಕೊಳವಿಯನ್ನು ಒಳಕ್ಕೆ ಇಟ್ಟರೆ ಗಾಳಿಯು ಹೊರಕ್ಕೆ ಬರುವುದು. ಕೊಳವಿಯ ಹೊರಗಿನ ತುದಿಗೆ ಕೊಳವಿಯು ಹೊಟ್ಟೆಯೊಳಕ್ಕೆ ಜಾರಿಹೋಗದಂತೆ ಸುಮಾರು ಮೂರು ಅಂಗುಲ ಉದ್ದವಾದ ಒಂದು ಅಡ್ಡಕಡ್ಡಿಯನ್ನು ಕಟ್ಟಬೇಕು. ಕೊಳವಿಯನ್ನು ಎರಡು ಗಂಟೆಗಳ ಕಾಲ ಅಥವಾ ಉಬ್ಬರವು ಸಂಪೂರ್ಣವಾಗಿ ಇಳಿದು ಹೋಗುವವರೆವಿಗೂ ಹೊಟ್ಟೆಯೊಳಗೆ ಇಟ್ಟಿರಬೇಕು. ನಂತರ ಕೊಳವಿಯನ್ನು ತೆಗೆದು ೪ ಚಟಾಕು ಸಾಸಿವೆ ಎಣ್ಣೆ, ೨ ಚಟಾಕು ಗಂಧಕದ ಪುಡಿ ಮತ್ತು ೧| ತೊಲ ಒಣಶುಂಠಿ ಪುಡಿಯನ್ನು ಸೇರಿಸಿ ಕುಡಿಸಬೇಕು.

ಪಥ್ಯ:—ಹೆಚ್ಚು ಮೇವನ್ನು ಕೊಡದಂತೆ ನೋಡಿಕೊಳ್ಳಬೇಕು. ಸ್ವಲ್ಪ ಹಸುರು ಹುಲ್ಲನ್ನು ಕೊಡಬಹುದು. ಒಂದು ಮಂದೆಯಲ್ಲಿ ಯಾವುದಾದರೊಂದು ಹಸುವಿಗೆ ಹೊಟ್ಟೆ ಉಬ್ಬರಣೆಯು ಬಂದರೆ ಕೂಡಲೇ ಮಂದೆಯಲ್ಲಿರತಕ್ಕ ಇತರ ಹಸುಗಳ ಮೇವನ್ನು ಕಡಿಮೆ ಮಾಡಬೇಕು. ಹೀಗೆ ಮಾಡಿದರೆ ಅವುಗಳಿಗೆ ರೋಗದ ಬಾಧೆಯಿಲ್ಲದಂತಾಗುವುದು.

ಕೆ. ಗೆ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಮೂಡಬಿದ್ರೆ ತಾಲೂಕು.

ಅಯ್ಯಾ ಪತ್ರಕರ್ತರೇ,

ಸಾಧನೆ ಮಾಡಿದರೆ ಸಬಲ ನುಂಗಬಹುದೆಂಬ ಲೋಕೋಕ್ತಿಯನ್ನು ಕಾರ್ಕಳ ನಿವಾಸಿಕರು ದೃಷ್ಟಾಂತಪೂರ್ವಕ ತೋರಿಸಿರುವರು. ದಕ್ಷಿಣ ಕನ್ನಡಾ ಜಿಲ್ಲೆಗೆ ಆರನೇದು ಒಂದು ತಾಲೂಕು ಅಗತ್ಯವಾಗಿರುವುದೆಂತ ಕಂಡುಬಂದಂದಿನಿಂದ ಸರಕಾರ ಆಡಳಿತೆಯ ವಿಶೇಷ ಅನುಭವವುಳ್ಳ ಅಧಿಕಾರಿಗಳೂ ಮಾಜಿ ಗವರ್ನರ ದೊರೆಗಳೂ ಸಹ ಮೂಡಬಿದ್ರೆ ಪಟ್ಟಣವೇ ಈ ನವೀನ ತಾಲೂಕು ಆಗಲಿಕ್ಕೆ ಯೋಗ್ಯವಾದದ್ದೆಂತ ಗ್ರಹಿಸಿದ್ದರಿಂದ ತಾಲೂಕು ಆಫೀಸು ಮೂಡಬಿದ್ರೆಯಲ್ಲಿಯೇ ಸ್ಥಾಪಿಸಲ್ಪಟ್ಟಿತು. ಕಾರ್ಕಳದಿಂದ ೧೦ ಮೈಲು ದೂರಕ್ಕಿರುವ ಮೂಡಬಿದ್ರೆಗೆ ಕಾರ್ಕಳದಲ್ಲಿರುವ ಮುನ್ಸೀಫ ಕೋರ್ಟು ಮೊದಲಾದ್ದು ಕ್ರಮೇಣ ವಯ್ಯಲ್ಪಟ್ಟು ತಮಗೆ ಅನನುಕೂಲ ಉಂಟಾಗುವದೆಂಬ ಅಂಜಿಕೆಯಿಂದ ಕಾರ್ಕಳದಲ್ಲಿ ವಾಸಿಸಿಕೊಂಡಿರುವ ವಕೀಲರೂ ಈ ವಕೀಲರ ಪ್ರೇರೇಪಣೆಯಿಂದ ಅದೇ ಪಟ್ಟಣದಲ್ಲಿರುವ ಇತರರು ಕೆಲವರೂ ಸಹ ವಕೀಲರನ್ನು ಕೂಡಿಕೊಂಡು ಭಾರೀ ಸಾಧನೆಯನ್ನು ನಡಿಸಿ ಮೂಡಬಿದ್ರೆ ತಾಲೂಕು ಇದ್ದದ್ದು ಕಾರ್ಕಳ ತಾಲೂಕಾಗಿ ಮಾಡುವುದರಲ್ಲಿ ಜಯಹೊಂದಿದರು ಅಥವಾ ಪ್ರಕೃತ ಸಂದರ್ಭದಲ್ಲಿ ಅಲ್ಪಸ್ವಲ್ಪ ಜಯಹೊಂದಿದರೆಂತಲೂ ಹೇಳಬಹುದು.

ಮೂಡಬಿದ್ರೆ ತಾಲೂಕು ಪ್ರತ್ಯೇಕವಾಗಿ ಸ್ಥಾಪಿಸಲ್ಪಟ್ಟು ಹಲವು ವರುಷಗಳು ಕಳೆದು ಹೋಗಲಿಲ್ಲ. ಈ ಹೊಸ ತಾಲೂಕು ಏರ್ಪಡಿಸಲ್ಪಟ್ಟದ್ದರಿಂದ ಇತರ ತಾಲೂಕು ಆಫೀಸುಗಳ ಕಾರ್ಯನಿರ್ವಾಹಕ್ಕಿದ್ದ ಅಡಚಣೆಯು ಎಷ್ಟರಮಟ್ಟಿಗೆ ಕಡಿಮೆಯಾಯಿತು, ಮೂಡಬಿದ್ರೆ ತಾಲೂಕಿಗೆ ಪ್ರಕೃತ ಸೇರಿಸಲ್ಪಟ್ಟ ಗ್ರಾಮಗಳ ಚಕಬಂದಿಯು ಸರಿಯಾದದ್ದೊ, ಪ್ರಕೃತವಿದ್ದ ಗ್ರಾಮಗಳ ಚಕಬಂದಿಯು ಸರಿಯಾಗಿರುವುದಿಲ್ಲವಾದರೆ ತಾಲೂಕು ಆಫೀಸನ್ನು ಮೂಡಬಿದ್ರೆಯಲ್ಲಿಯೇ ಇಟ್ಟು ಇಂಥಾ ಚಕಬಂದಿಯನ್ನು ಸರಿಗೊಳಿಸಬಹುದೊ, ಸರಕಾರದವರ ಸರಿಯಾದ ಆಡಳಿತೆಗೂ ವರ್ಗದಾರರ ಅನುಕೂಲತೆಗೂ ಮೂಡಬಿದ್ರೆಯಲ್ಲಿ ತಾಲೂಕು ಆಫೀಸನ್ನು ಇರಗೊಡಿಸುವುದು ಉಚಿತವೋ? ತಾಲೂಕು ಆಫೀಸು ಸ್ಥಾಪನೆಗೆ ಮೂಡಬಿದ್ರೆಯಲ್ಲಿರುವ ಸೌಕರ್ಯಗಳೇನು? ಮೂಡಬಿದ್ರೆಯ ಮತ್ತು ಕಾರ್ಕಳದ ಮಾಹಿತಿಯನ್ನು ಚನ್ನಾಗಿ ತಿಳಿದು ತಾಲೂಕು ಆಫೀಸು ಮೂಡಬಿದ್ರೆಯಲ್ಲಿಯೇ ಇರಿಸಬೇಕೆಂಬ ಅಧಿಕಾರಿಗಳ ಅಭಿಪ್ರಾಯವನ್ನೆಲ್ಲಾ ಒಂದೇ ಕ್ಷಣದಲ್ಲಿ ತೃಣೀಕರಿಸಿ ಕಾರ್ಕಳದಲ್ಲಿ ತಾಲೂಕು ಆಫೀಸನ್ನು ಸ್ಥಾಪಿಸುವ ಆಲೋಚನೆಗೆ ಅಂಥಾ ಬಲವಾದ ಕಾರಣಗಳ್ಯಾವವು, ಹೊಸ ತಾಲೂಕು ಮೊದಲಾದವುಗಳನ್ನು ಸ್ಥಾಪಿಸುವ ಏರ್ಪಾಡುಗಳಿಗೆ ವಿಶೇಷವಾದ ಲಕ್ಷ್ಯಕೊಟ್ಟು ನಿಧಾನದಿಂದ ಕಾರ್ಯನಿರ್ವಾಹ ಮಾಡುತ್ತಿರುವ ಸರಕಾರದವರು ಒಮ್ಮಿಂದೊಮ್ಮೆಯೇ ಕಾರ್ಕಳಕ್ಕೆ ಮೂಡಬಿದ್ರೆ ತಾಲೂಕು ಆಫೀಸನ್ನು ವಯ್ಯಲು ಸಮ್ಮತಿಸಿದ ಕಾರಣವೇನು, ಒಂದು ವೇಳೆ ಕಾರ್ಕಳ ನಿವಾಸಿಕರು ಅಂಜುವಂತೆ ಮೂಡಬಿದ್ರೆ ತಾಲೂಕು ಆಫೀಸು ಮೂಡಬಿದ್ರೆಯಲ್ಲಿಯೇ ಸ್ಥಾಪಿಸಲ್ಪಟ್ಟು ಕ್ರಮೇಣ ಕಾರ್ಕಳದಲ್ಲಿರುವ ಮುನ್ಸಿಫ ಕೋರ್ಟು ಮೂಡಬಿದ್ರೆಗೆ ವಯ್ಯಲ್ಪಟ್ಟರೆ ಕಾರ್ಕಳ ಪಟ್ಟಣಿಗರಿಗೆ ಉಂಟಾಗುವ ನಷ್ಟವು ಯಾವ ತರದ್ದು, ಅಂಥಾ ನಷ್ಟಕ್ಕೆ ಸರಕಾರದವರು ಎಷ್ಟರಮಟ್ಟಿನ ಗಮನ ಕೊಡಬೇಕಾಗಿರುವದು,—ಈ ಎಲ್ಲ ವಿಷಯಗಳು ತಾಲೂಕು ಆಫೀಸು ಮೂಡಬಿದ್ರೆಯಲ್ಲಿ ಯಾ ಕಾರ್ಕಳದಲ್ಲಿ ಸ್ಥಿರವಾಗಿ ಸ್ಥಾಪಿಸಲ್ಪಡುವ ಮೊದಲೇ ಚನ್ನಾಗಿ ಆಲೋಚಿಸಲ್ಪಡಬೇಕಾಗಿವೆ.

ಮಂಗಳೂರು ತಾಲೂಕು ಆಫೀಸಿನಲ್ಲಿರುವ ಕೆಲಸದ ಅಡಚಣೆಯನ್ನು ಕಡಿಮೆ ಮಾಡಲಿಕ್ಕೂ ತಾಲೂಕು ಆಫೀಸುಗಳಿಂದ ಪ್ರಜಾ ಜನರಿಗೆ ಸಿಕ್ಕುವ ಪ್ರಯೋಜನವೂ ಅನುಕೂಲವೂ ಮೂಡಬಿದ್ರೆ ಅತ್ತಕಡೆಯವರಿಗೆ ಚನ್ನಾಗಿ ದೊರಿಯುವಂತೆಯೂ ಮೂಡಬಿದ್ರೆ ತಾಲೂಕು ಹೊಸತಾಗಿ ಏರ್ಪಡಿಸಲ್ಪಟ್ಟಿತು. ಈ ತಾಲೂಕು ಏರ್ಪಾಡಿನೊಂದಿಗೆ ಬಂಟವಾಳದಲ್ಲಿದ್ದ ಡಿಪ್ಯುಟಿ ತಹಸೀಲದಾರರ ಆಫೀಸು ಸಹ ಬಂಟವಾಳದಿಂದ ತೆಗದು ಹಾಕಲ್ಪಟ್ಟದ್ದರಿಂದ ಬಂಟವಾಳ ಡಿಪ್ಯುಟಿ ತಹಸೀಲದಾರರ ಮೂಲಕ ಮಂಗಳೂರು ತಾಲೂಕಿನ ಕೆಲಸದಲ್ಲಿ ಮಂಗಳೂರು ತಹಸೀಲದಾರರಿಗೆ ಸಿಕ್ಕುವ ಸಹಾಯವು ತಪ್ಪಿ ಹೋಯಿತು. ಆದ್ದರಿಂದ ಮಂಗಳೂರು ತಾಲೂಕಿನ ಕೆಲವು ಗ್ರಾಮಗಳು ಮೂಡಬಿದ್ರೆ ತಾಲೂಕಿಗೆ ಕೂಡಿಸಲ್ಪಟ್ಟರೂ ಮಂಗಳೂರು ತಾಲೂಕು ಆಫೀಸಿಗಿರುವ ಕೆಲಸದ ಡಚಣೆಯು ವಿಶೇಷವಾಗಿ ಕಡಿಮೆಯಾಗಲಿಲ್ಲ.

(ಮುಂದರಿಯುವುದು).

ವಿದೇಶ ವೃತ್ತಾಂತ.

ಲೊಹಿಯ ಮತ್ತು ಕೆಮರಾನ್ ಎಂಬ ಬಂದರಗಳನ್ನು ಅಡ್ಡಗಟ್ಟುತ್ತೇವೆ ಎಂಬದಾಗಿ ಇಟಾಲಿಯರು ಪ್ರಕಟಿಸಿರುವರು. ಇವು ಪುಣ್ಯಕ್ಷೇತ್ರಗಳಿಗೆ ಪ್ರಯಾಣ ಮಾಡುವ ಮಹಮ್ಮದೀಯ ಯಾತ್ರಿಕರು ಇಳಿಯುವ ಮುಖ್ಯ ಬಂದರಗಳಾಗಿರುವುದರಿಂದ ಇಟಾಲಿಯರು ಈ ಬಂದರಗಳನ್ನು ಅಡ್ಡಕಟ್ಟಿದರೆ ಯಾತ್ರಿಕರಿಗೆ ಬಹಳ ಅಡಚಣೆಯುಂಟಾಗುವುದು.

ಹೆಂಗಸರಿಗೆ ಪಾರ್ಲಿಮೆಂಟ್ ಸಭೆಯಲ್ಲಿ ಗಂಡಸರಂತೆಯೇ ಹಕ್ಕು ಸ್ವಾತಂತ್ರ್ಯಗಳನ್ನು ಕೊಡಬಹುದೆಂಬ ಮಸೂದೆಯು ಸ್ವೀಡನ್ ಪಾರ್ಲಿಮೆಂಟ್ ಸಭೆಯ ಮುಂದೆ ಇಡಲ್ಪಟ್ಟು ಮಂಜೂರಾತಿ ಪಡೆದಿರುವದು. ಆದರೆ ಮೂರು ವರುಷಗಳ ವರೆಗೆ ತೆರಿಗೆ ಕಂದಾಯಗಳನ್ನು ಕೊಡದವನ ಹೆಂಡತಿಗೆ ಓಟು ಕೊಡುವ ಸ್ವತಂತ್ರವಿಲ್ಲವೆಂಬದಾಗಿ ನಿರ್ಣಯಿಸಲ್ಪಟ್ಟಿರುತ್ತದೆ.

ಪರ್ಶಿಯದ ಮಾಜಿ ಟ್ರೆಜರರ್ ಜನರಲರಾದ ಮೆ. ಶುಸ್ತರರವರು ನ್ಯೂಯೋರ್ಕಿನ ಬೇಂಕಿನ ದಕ್ಷಿಣ ಅಮೇರಿಕದ ಪ್ರತಿನಿಧಿಯಾಗಿ ನೇಮಿಸಲ್ಪಟ್ಟಿರುತ್ತಾರೆ.

ಆಸ್ಟ್ರೇಲಿಯದಲ್ಲಿ ಈಚೆಗುಂಟಾದ ಸುಂಟರ ಗಾಳಿಗೆ ಸಿಕ್ಕೊಂಡ ಒಂದು ಹಡಗದ ಸುಳುವು ಈತನಕವಿಲ್ಲ. ಈ ಹಡಗದಲ್ಲಿ ಒಟ್ಟಿಗೆ ೧೩೦ ಜನರಿದ್ದರು.

ಪಾರಿಸ್ ನಗರದ ಚೇಂಟಿಲ್ಲಿನಲ್ಲಿ ಮೋಟೊರ್ ಭಂಡಿಯ ಸಹಾಯದಿಂದ ಬೇಂಕನ್ನು ಲುಟಾಯಿಸಿದ ದರೋಡೆ ಕಳ್ಳರಲ್ಲಿ ಒಬ್ಬನನ್ನು ಅಲ್ಲಿಯ ಪೋಲೀಸಿನವರು ಕೈದು ಮಾಡಿದರು. ಆತನು ಕೂಡಲೇ ವಿಷ ನುಂಗಿಬಿಟ್ಟನು. ಆದರೆ ವೈದ್ಯರು ಬಹಳ ಪ್ರಯತ್ನದಿಂದ ಆತನನ್ನು ಉಪಚರಿಸಿ ಬದುಕಿಸಿದರು.

ಈ ದರೋಡೆಗಾರರಲ್ಲಿ ಇಷ್ಟರವರೆಗೆ ೧೩ ಜನರು ಹಿಡಿಯಲ್ಪಟ್ಟರು. ಇವರು ಒಟ್ಟಿಗೆ ೧೭ ಮಂದಿ ಇರುವರೆಂದು ತಿಳಿದು ಬಂದಿದೆ. ಇವರ ಮುಖ್ಯಸ್ಥನಾದ 'ಕೊಲೆಮ್ ಎಂಬವನನ್ನೂ ಪೋಲಿಸಿನವರು ಹಿಡಿದರು. ಆತನಲ್ಲಿ ೩ ಪಿಸ್ತೂಲುಗಳು ಇದ್ದವು.

ಅಮೇರಿಕದ ಮಿಸಿಸಿಪಿ ನದಿಯಲ್ಲಿ ನೆರೆ ಬಂದು ಕೆಲವು ಪಟ್ಟಣಗಳು ನೆರೆಯ ಪಾಲಾಯಿತು. ಸಾವಿರಾರು ಜನರು ನಿರ್ಗತಿಕರಾಗಿರುವರು. ಕೈರೋ ಎಂಬಲ್ಲಿಯ ನದಿಯು ೫೦ ಮೈಲು ಅಗಲಕ್ಕೆ ವಿಸ್ತರಿಸಿಕೊಂಡಿತು. ಮಿಸಿಸಿಪಿ ನದಿಯು ಉಕ್ಕಿ ಬಂದು ಕರಾವಳಿಯಲ್ಲಿರುವ ನೆಲವನ್ನು ಬಡಕೊಂಡು ಹೋದೀತೆಂಬ ಭಯವಿರುವುದರಿಂದ ಕರಾವಳಿಯಲ್ಲಿ ವಾಸಿಸುವ ೫೦೦೦ ಜನರು ತಂತಮ್ಮ ಮನೆಮಾರುಗಳನ್ನು ಬಿಟ್ಟು ಬೇರೆ ಕಡೆಗೆ ಹೋಗಿರುವರು.

ಇಂಗ್ಲಾಂಡಿನ ಗಣಿ ಕೂಲಿಯಾಳುಗಳಲ್ಲಿ ಈಗ ೨೧೧,೦೧೩ ಮಂದಿ ಪುನಃ ಕೆಲಸಕ್ಕೆ ಹೋಗ ಮನಸ್ಸು ಮಾಡಿರುವರು. ಈಗ ೪೩,೦೦೦ ಮಂದಿ ಗಣಿ ಕೆಲಸಗಾರರು ಕೆಲಸ ಪ್ರಾರಂಭಿಸಿರುವರು.

ಕಲ್ಲಿದ್ದಲಿನ ಗಣಿ ಕೂಲಿಯಾಳುಗಳ ಮುಷ್ಕರವನ್ನು ನಿಲ್ಲಿಸುವರೆ ಕೂಲಿಯಾಳುಗಳ ಸಂಘದ ಮುಖ್ಯಸ್ಥರು ಮಾಡಿದ ಪ್ರಯತ್ನವು ಕೈಗೂಡಿ ಈಗ ದೇಶದ ಎಲ್ಲಾ ಕಡೆಯಲ್ಲಿಯೂ ಹೆಚ್ಚಿನ ಆಳುಗಳು ಕೆಲಸ ಪ್ರಾರಂಭಿಸಿರುವರು. ಕೆಲಸ ಪ್ರಾರಂಭಿಸಿದ ಕೂಲಿಯಾಳುಗಳಿಗೆ ಮುಷ್ಕರಗಾರರು ಉಪದ್ರ ಕೊಡುತ್ತಿರುವುದರಿಂದ ಅಲ್ಲಲ್ಲಿ ಪೋಲೀಸಿನವರ ಸಹಾಯ ಅಗತ್ಯವಿರುವದು. ಸ್ಕೋತ್‌ಲಾಂಡಿನ ಆಳುಗಳೆಲ್ಲಾ ಕೆಲಸ ಪ್ರಾರಂಭಿಸಿರುವರು.

ಟರ್ಕಿಗೆ ವೆರ್ನದಿಂದ ಬಂದ ಕಿಲ್ಕರ್ ಮತ್ತು ಸೀಮೋನ್ ಎಂಬವನನ್ನು ಪೋಲೀಸಿನವರು ಕೈದು ಮಾಡಿದ್ದಲ್ಲಿ ಅವರಲ್ಲಿ ಡೈನಾಮೆಟ್ ಎಂಬ ಸಿಡಿಮದ್ದುಗಳೂ ಎಂಟು ಬೊಂಬುಗಳೂ ದೊರಕಿದವು. ಇವರಿಬ್ಬರು ಮೆಕದೋನಿಯದ ಅನ್ಯಾಯಕತ್ವ ಮಂಡಳಿಗೆ ಸೇರಿದವರೆಂದು ತಿಳಿದು ಬರುತ್ತದೆ.

ಹಿಂದೂಸ್ಥಾನದಲ್ಲಿ ಪರೀಕ್ಷಾರ್ಥವಾಗಿ ೫ ರೂಪಾಯಿಯ ಚಿನ್ನದ ನಾಣ್ಯಗಳು ಟಂಕಹೊಡಿಸಲ್ಪಡುವುದೆಂದು ಇಂಗ್ಲಾಂಡಿನ ಮೆಸ್ಸರ್ಸ್ ಸಾಮುವೆಲ್ ಮೊಂಟೇಗೋ ಎಂಬ ಚಿನ್ನದ ಕಂಪೆನಿಯವರು ಪ್ರಕಟಿಸಿರುವರು.

ಅಮೇರಿಕದ ನೆರೆಯಿಂದ ಇಷ್ಟರ ತನಕ ೧೦,೦೦೦ ಮಂದಿ ಮನೆಮಾರು ಇಲ್ಲದೆ ಕಷ್ಟಕ್ಕೊಳಗಾಗಿದ್ದಾರೆ. ಈ ನೆರೆಯಿಂದ ಒಟ್ಟಿಗೆ ೪೦,೦೦೦ ಮಂದಿ ನಿರ್ಗತಿಕರಾಗುವರೆಂದು ಅಂದಾಜಾಗಿಯದೆ. ಕೆಲವು ಜನರೂ ಅಲ್ಲಲ್ಲಿ ನೆರೆಯ ಪಾಲಾದರು.

ಹಿಂದೂಸ್ಥಾನದಲ್ಲಿರುವ ಯೂರೋಪಿಯರ ವಿದ್ಯಾಭ್ಯಾಸಕ್ಕಾಗಿ ಇಂಗ್ಲಾಂಡಿನಲ್ಲಿ ಹಣ ಕೂಡಿಸುತ್ತಿರುವರಷ್ಟೆ. ಈ ಸಂಬಂಧ ೯೭,೦೦೦ ಪವನುಗಳು ಕೂಡಿಕೆಯಾಗಿದೆ.

ಡಿಲ್ಲಿ ದರ್ಬಾರಿನ ಜ್ಞಾಪಕಾರ್ಥವಾಗಿ ತಿಲಕರನ್ನು ಶೆರೆಯಿಂದ ಬಿಡುಗಡೆ ಮಾಡುವದಕ್ಕೆ ಹಿಂದೂಸ್ಥಾನದ ಸೆಕ್ರಿಟರಿಯಾಗಿರುವ ಕ್ರ್ಯೂ ಪ್ರಭುಗಳಿಗೂ ವೈಸರಾಯರಾಗಿರುವ ಹಾರ್ಡಿಂಗ್ ಪ್ರಭುಗಳಿಗೂ ಮನಸ್ಸಿತ್ತು. ಆದರೆ ಅವರನ್ನು ಬಿಡುವ ಸಂಬಂಧ ಜನರ ಅಭಿಮತವು ಏಕಪ್ರಕಾರವಾಗಿಲ್ಲದ್ದರಿಂದ ಬಿಡುಗಡೆ ಮಾಡಲಿಲ್ಲವೆಂಬದಾಗಿ ಲಂಡನಿನ ಬಾತ್ಮಿದಾರರೊಬ್ಬರು ತಿಳಿಸುವರು.

ಉತ್ತರ ಹಿಂದುಸ್ಥಾನ.

ಬರೋಡಾ ಗಾಯಕವಾಡ್ ಮಹಾರಾಜರವರ ಕುಮಾರರಾದ ಪ್ರಿನ್ಸ್ ಜಯಸಿಂಗರವರು ಅಮೇರಿಕದಲ್ಲಿಯ ಹಾರ್ವರ್ಡ್ ಸರ್ವವಿದ್ಯಾನಿಲಯದಲ್ಲಿ ಓದುತ್ತಿದ್ದರು. ಇವರಿಗೆ ವಾರ ಒಂದಕ್ಕೆ ಮಹಾರಾಜರವರು ೧೫೦೦ ರೂಪಾಯಿಗಳನ್ನು ಕಳುಹಿಸುತ್ತಿದ್ದರು. ಆದರೆ ಇವರು ಅಮೇರಿಕಾ ಕೋಟೀಶ್ವರರ ಮಕ್ಕಳೊಂದಿಗೆ ಸೇರಿ ವಾಹೆ ಒಂದಕ್ಕೆ ೭೦೦೦ ರೂಪಾಯಿ ಧಾಮುಧೂಮು ಖರ್ಚು ಮಾಡುತ್ತಾರೆಂದು ತಿಳಿದು ಮಹಾರಾಜರವರು ತಿಂಗಳಿಗೆ ೩೦೦೦ ರೂಪಾಯಿಗಳನ್ನು ಮಾತ್ರವೇ ಕಳುಹಿಸಲುಜ್ಜುಗಿಸಿದರು. ಈ ಮೊಬಲಗು ಖರ್ಚಿಗೆ ಸಾಲದೆ ರಾಜ ಕುಮಾರರು ಯಾವ ಪ್ರಾಶಸ್ತ್ಯವನ್ನೂ ಪಡೆಯದೆ ಅಮೇರಿಕದಿಂದ ಹೊರಟು ಬಂದರು.

ಕಲ್ಕತ್ತೆಯಲ್ಲಿ ಐರೋಪಿಯನಾದ ಐ. ಜೆ. ಲಯನೆಟ್ ಎಂಬವನು ಒಂದು ಬೆಳ್ಳಿಯ ಕಿಶೆಗಡಿಯಾರವನ್ನು ಕದ್ದಿದ್ದಾನೆಂಬ ಆಪಾದನೆಯ ಮೇಲೆ ಪೋಲೀಸಿನವರು ಆತನನ್ನು ಕಲ್ಕತ್ತೆಯ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಲ್ಲಿ ಹಾಜರು ಪಡಿಸಿದ್ದರು. ಮೆಜಿಸ್ಟ್ರೇಟರು ತನಖಿ ನಡಿಸಿ ಆತನನ್ನು ಖುಲಾಸುಪಡಿಸಿದರಲ್ಲದೆ ಕಿಶೆಗಡಿಯಾರವನ್ನು ಎಲ್ಲಿಂದ ಕೊಂಡುಕೊಂಡಿ ಎಂಬದಾಗಿ ಆಪಾದಿತನನ್ನು ವಿಚಾರಿಸುವ ಅಧಿಕಾರವು ಪೋಲೀಸಿನವರಿಗೆ ಇಲ್ಲ. ಪ್ರತಿ ಮನುಷ್ಯನು ತನ್ನ ದಿನಾವಹಿ ಕೆಲಸದಲ್ಲಿ ಪ್ರಯೋಗಿಸುವ ವಸ್ತುಗಳು ಎಲ್ಲಿಯವುಗಳೆಂದು ವಿಚಾರಿಸುವ ಸ್ವತಂತ್ರವು ಪೋಲೀಸಿನವರಿಗೆ ಇರುವುದಾದರೆ ಅದು ಬಹಳ ಕಷ್ಟವೇ ಸೈ ಎಂಬದಾಗಿ ಹೇಳಿದರು.

ಮಾರ್ಚಿ ತಿಂಗಳ ೩೧ಕ್ಕೆ ಅಂತ್ಯವಾಗುವ ವಾರದ ವರೆಗೆ ಗುಜರಾಥ್ ಕ್ಷಾಮ ನಿವಾರಣಾ ಫಂಡಿಗೆ ೨೨೦,೭೮೩ ರೂಪಾಯಿ ಜಮೆಯಾಗಿರುವುದು. ಈ ಕಮಿಟಿಯವರು ಈ ತನಕ ೧೯೭,೭೦೫ ರೂಪಾಯಿಯನ್ನು ಪಶ್ವಾದಿಗಳ ಕ್ಷಾಮ ನಿವಾರಣಾರ್ಥವಾಗಿಯೂ ರೂ. ೭೮,೫೫೦ ಮನುಷ್ಯರಿಗಾಗಿಯೂ ರೂ. ೪,೮೫೦ ಧಾವಿಗಳನ್ನು ತೋಡಿಸುವರೆಯೂ ಪ್ರಯೋಗಿಸಿರುವರು.

ಆಲಿಪುರದ ಮಹೇಂದ್ರ ಎಂಬವನು ಕೆಲವು ಸಮಯದ ಹಿಂದೆ ಮಿಡ್ನಾಪುರದ ಶ್ರೀನಾಥ ದಾಸ ಎಂಬವನ ಮೇಲೆ ಒಂದು ಪಿರ್ಯಾದಿ ಕೊಟ್ಟು ಶ್ರೀನಾಥನು ಆತನ ಹೆಂಡತಿಯನ್ನು ಕೊಂದು ಆಕೆಯ ದೇಹವನ್ನು ಅಡಗಿಸಿಟ್ಟಿರುವನಲ್ಲದೆ ತನ್ನನ್ನು ಒಂದು ದೇವತೆಗೆ ಬಲಿಕೊಡಲು ಕೆರೆಯ ಸಮೀಪ ಕೊಂಡ್ಹೋಗಿ ಕೆರೆಯಲ್ಲಿ ಮುಣುಗಿಸಿ ತನ್ನನ್ನು ದೇವತೆಗೆ ಅರ್ಪಿಸಲಿಕ್ಕಿರುವಾಗ ಕೆಲವು ಜನರು ಬಂದದರಿಂದ ತನ್ನನ್ನು ಬಿಟ್ಟುಬಿಟ್ಟನು ಎಂಬದಾಗಿ ವಾಜೂಲ ಕೊಟ್ಟನು. ಪೋಲೀಸಿನವರ ವಿಚಾರಣೆಯಲ್ಲಿ ಮಹೇಂದ್ರನು ಕೊಟ್ಟ ಪಿರ್ಯಾದಿ ಸುಳ್ಳೆಂತ ಕಂಡು ಬಂದದರಿಂದ ಸೆಶ್ಶನ್ಸ್ ಜಡ್ಜರವರು ಮಹೇಂದ್ರನು ಸುಳ್ಳು ಪಿರ್ಯಾದಿ ಕೊಟ್ಟದ್ದರಿಂದ ಆತನನ್ನು ಯಾಕೆ ಶಿಕ್ಷೆಗೆ ಗುರಿಪಡಿಸಕೂಡದೆಂದು ಕೇಳಿರುವರು.

ಡಕ್ಕ ರಾಜದ್ರೋಹ ಪಿತೂರಿ ಮೊಕದಮೆಯಲ್ಲಿ ಶಿಕ್ಷೆ ವಿಧಿಸಲ್ಪಟ್ಟ ೩೫ ಮಂದಿಯು ಕಲ್ಕತ್ತೆಯ ಹ್ಯಾಕೋರ್ಟಿಗೆ ಅಪೀಲು ಮಾಡಿಕೊಂಡಿದ್ದರೆಂದು ತಿಳಿಸಿತ್ತಷ್ಟೆ. ಎಪ್ರೀಲ್ ತಾ. ೨ರಲ್ಲು ತನಖಿಯ ತೀರ್ಮಾನವು ಹೇಳಲ್ಪಟ್ಟು ೩೫ ಜನರಲ್ಲಿ ೨೧ ಜನರು ಖುಲಾಸು ಮಾಡಲ್ಪಟ್ಟರು. ಉಳಿದ ೧೪ ಮಂದಿಯ ಶಿಕ್ಷೆಯು ಕಮ್ಮಿ ಮಾಡಲ್ಪಟ್ಟಿತು. ಬಂಗಾಳದ ರಾಜದ್ರೋಹ ಪಿತೂರಿ ಮೊಕದಮೆಯಲ್ಲಿ ಇದೇ ಕಡೇದು.

ಕಲ್ಕತ್ತೆಯ ಹ್ಯಾಕೋರ್ಟು ವಕೀಲರಾದ ಮನಮೋಹನ ಘೋಷರವರಿಗೆ ಗುಂಡು ಹೊಡೆದ ಸಂದರ್ಭದಲ್ಲಿ ಹೂಗ್ಲಿ ಪೋಲೀಸಿನವರು ಆರ್. ಘೋಷ್, ಮತ್ತು ಲಾಲ್ ಮೋಹಾನ್ ಘೋಷ್ ಎಂಬ ಇಬ್ಬರನ್ನು ಕೈದು ಮಾಡಿರುತ್ತಾರೆ. ಮೆ. ಘೋಷರವರಿಗೆ ಗುಂಡು ತಾಗಿ ಉಂಟಾದ ಗಾಯಗಳು ಗುಣವಾಗುತ್ತಾ ಬರುತ್ತಿವೆ.

ಬೋಪಾಲದ ಬೇಗಮರವರು ತನ್ನ ರಾಜ್ಯದಲ್ಲಿ ಸ್ತ್ರೀ ವಿದ್ಯಾಭ್ಯಾಸವನ್ನು ಅಭಿವೃದ್ಧಿಗೆ ತರುವರೆ ಬಹಳ ಧಾವತಿ ಪಡುವರು. ಸ್ತ್ರೀ ಶಿಕ್ಷಣವು ಬಡವರಿಗೂ ದೊಡ್ಡವರಿಗೂ ಏಕ ರೀತಿಯಲ್ಲಿ ದೊರಕುವ ಏರ್ಪಾಡು ಮಾಡಬೇಕಾದರೆ ೧೨ ಲಕ್ಷ ರೂಪಾಯಿ ಬೇಕಾಗುವುದು. ಇದಕ್ಕಾಗಿ ಬೇಗಮರವರು ರಾಜ ಭಂಡಾರದಿಂದ ಒಂದು ಲಕ್ಷ ರೂಪಾಯಿ, ತನ್ನ ಸ್ವಂತ ಹಣದಿಂದ ೨೦,೦೦೦ ರೂಪಾಯಿ ಕೊಟ್ಟಿರುವರು. ಅವರ ಸೊಸೆಯು ರೂ. ೧೫,೦೦೦ ಕೊಡುವರೆ ವಾಗ್ದಾನ ಮಾಡಿರುವರು. ಇವರ ಈ ಆದರ್ಶವನ್ನು

ಇತರ ದೇಶೀಯ ಸಂಸ್ಥಾನಗಳ ರಾಜರುಗಳೂ ಕೈಕೊಂಡರೆ ಅಧೋಸ್ಥಿತಿಯಲ್ಲಿರುವ ಸ್ತ್ರೀ ಶಿಕ್ಷಣವು ದೇಶದಲ್ಲೆಲ್ಲಾ ಉಚ್ಛಸ್ಥಾನವನ್ನು ಹೊಂದಿ ಹಿಂದೂಸ್ಥಾನವು ಬೇಗನೇ ಉತ್ತರೋತ್ತರಭಿವೃದ್ಧಿಯನ್ನು ಹೊಂದುವದು.

ಬಂಕಿಪುರದಲ್ಲಿ ಪ್ಲೇಗು ಬೇನೆಯು ಬಹಳ ಉಲ್ಬಣ ಸ್ಥಿತಿಯಲ್ಲಿದೆ.

ಶೇಕ್ ಮಹಮ್ಮದ್ ಯಾಕೂಬು ಖಾನರಿಂದ ಬರೆಯಲ್ಪಟ್ಟ "ಹಜರತ್ ಆಲಿ ಮತ್ತು ಹೇರೊ ಹನುಮಾನರೊಳಗಿನ ಹೆಣಗಾಟ" ಎಂಬ ಹೆಸರಿನ ಪುಸ್ತಕಕ್ಕೆ ಸರಕಾರದವರು ಮುಟ್ಟುಗೋಲು ಹಾಕಿದ್ದಾರೆ.

ಮುಲ್ತಾನಿನ ಆಯುರ್ವೇದಿಕ್ ವೈದ್ಯರಾದ ಹಕೀಮ್ ಜಿತಾನಂದರವರು ತನ್ನ ಮಗುವಿಗೆ ಡಾಕು ಹಾಕಿಸಲು ಬಿಡಲಿಲ್ಲವಾದ್ದರಿಂದ ಅವರಿಗೆ ಎರಡು ವಾರಗಳ ಸಜಾ ವಿಧಿಸಲ್ಪಟ್ಟಿತು. ಈ ಮೊದಲು ಇದೇ ತಕ್ಸೀರಿಗಾಗಿ ಅವರಿಗೆ ಎರಡಾವರ್ತಿ ಜುರುಮಾನೆ ವಿಧಿಸಲ್ಪಟ್ಟಿತ್ತು.

ರಾವಲಪಿಂಡಿಯಲ್ಲಿ ದರೋಡೆ ಕಳ್ಳರು ಸಾಹುಕಾರರ ಅಂಗಡಿಗಳ ಒಳನುಗ್ಗಿ ಸೂರೆಸುಳಿಗೆ ಮಾಡುವ ಉಪಟಳವು ಇತ್ತಿತ್ತಲಾಗೆ ಹೆಚ್ಚಾಗುತ್ತಾ ಬಂದಿರುವದರಿಂದ ಅಲ್ಲಿಯ ಸಾಹುಕಾರರು ಲೈಸನ್ಸ್ ಇಲ್ಲದೆ ಆಯುಧ ಪ್ರಯೋಗಿಸಬಹುದೆಂಬದಾಗಿ ಸ್ಥಳೀಕ ಕಮಿಷನರು ಹುಕುಂ ಕೊಟ್ಟಿದ್ದಾರೆ.

ಕಳೆದ ೩೦ನೇ ಮಾರ್ಚಿಗೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನವಲ್ಲೆಲ್ಲಾ ೧೬,೦೭೮ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೧೩,೯೪೦ ಮಂದಿ ಪರವಸ್ತೈದಿದರು. ಈ ಪೈಕಿ ಮುಂಬಾಯಿಯಲ್ಲಿ ೬೯೯; ಮದ್ರಾಸ್ ೧೦೮; ಬಂಗಾಳ ೧೩೭೮; ಬರ್ಮ ೫೪; ಮಧ್ಯ ಸಂಸ್ಥಾನ ೮೯೧; ಮೈಸೂರು ೫೪; ಹೈದರಾಬಾದ್ ೮೪೭; ಮಧ್ಯ ಹಿಂದೂಸ್ಥಾನ ೧೭೮; ರಜಪುತಾನ ೧೧೦; ಕಾಶ್ಮೀರ ೭೮ ಮರಣಗಳಾಯಿತು; ಆಯಾ ಸಂಸ್ಥಾನಗಳ ಪ್ರಧಾನ ಪಟ್ಟಣಗಳಲ್ಲಿ ಪಾಟ್ನದಲ್ಲಿ ೧೩೩; ಮುಂಬಾಯಿಯಲ್ಲಿ ೧೦೭; ಅಲ್ಲಹಬಾದ್ ೩೩; ಲಾಹೋರು ೪; ರಂಗೂನು ೧೦; ಕಲ್ಕತ್ತ ೧೩೩ ಮರಣಗಳಾದವು. ಡಿಲ್ಲಿ ಮತ್ತು ಮದ್ರಾಸ್ ಪಟ್ಟಣಗಳಲ್ಲಿ ಮಾತ್ರ ಪ್ಲೇಗ್ ಮರಣಗಳಿಲ್ಲ.

ಬಂಗಾಳದ ಹೊಸ ಗವರ್ನರಾಗಿ ನೇಮಿಸಲ್ಪಟ್ಟ ಕಾರ್ಮಿಖಯೇಲ್ ಪ್ರಭುಗಳು ಕಲ್ಕತ್ತೆಗೆ ಹೋದನಂತರ ಸ್ಥಳಿಕ ಆರು ಸಂಘಗಳವರು ಪ್ರಭುಗಳಿಗೆ ವಿಜ್ಞಾಪನಾ ಪತ್ರಗಳನ್ನು ಕೈವರ್ತಿಸಿದರು. ಪ್ರಭುಗಳವರು ಹೃದಯಂಗಮವಾದ ಉತ್ತರಗಳನ್ನು ಕೊಟ್ಟು ತನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಬಂಗಾಳ ಸಂಸ್ಥಾನದ ಏಳಿಗೆಗೆ ಪ್ರಯತ್ನ ಪಡುವೆನೆಂದು ಅಭಯವನ್ನಿತ್ತರು. ಮಾಜಿ ವ್ಯಾಸರಾಯರಾದ ಕರ್ಜನ್ ಪ್ರಭುಗಳು ಹೊಸ ಬಂಗಾಳಾಧಿಪತ್ಯವು ಸ್ಥಾಪಿಸಲ್ಪಟ್ಟದ್ದರಿಂದ ಹೊಸ ಬಂಗಾಳದ ಗವರ್ನರರಾಗುವವರು ಕನಿಷ್ಠಪಕ್ಷಕ್ಕೆ ವರುಷದಲ್ಲಿ ಎರಡು ತಿಂಗಳುಗಳನ್ನು ಪಶ್ಚಿಮ ಬಂಗಾಳದಲ್ಲಿ ಕಳೆಯಬೇಕೆಂಬದಾಗಿ ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿದ ಮಾತನ್ನು ತಾನು ಓದಿದಾಗ ಎರಡು ತಿಂಗಳು ಪಶ್ಚಿಮ ಬಂಗಾಳದಲ್ಲಿರಬೇಕೆಂದು ಕರ್ಜನ್ ಪ್ರಭುಗಳು ಅಭಿಪ್ರಾಯಪಡುವುದಾದರೆ ನಾನು ೩ ತಿಂಗಳು ಅಲ್ಲಿರುವೆನು ಎಂದು ತನ್ನಲ್ಲಿ ತಾನೇ ಆಲೋಚಿಸಿಕೊಂಡೆನೆಂದು ಹೇಳಿದರು.

ಅಲ್ಲಹಾಬಾದ್ ಯುನಿವರ್ಸಿಟಿಯ ವ್ಯಾಸ್ ಚೇನ್ಸಲ್ಲರಾಗಿದ್ದ ಬಹುಮಾನಪಟ್ಟ ಸರ್ ಹೆನ್ರಿ ರಿಚ್ಚಾರ್ಡರವರು ರಾಜಿಕೊಟ್ಟಿರುವುದರಿಂದ ಇವರ ಬದಲಿಗೆ ಬಹುಮಾನಪಟ್ಟ ಡಾಕ್ಟರ್ ಸುಂದರಲಾಲ್ ರಾಯಿಬಹದ್ದೂರು, ಬಿ. ಎ. ಎಲ್. ಎಲ್. ಡಿ. ಸಿ. ಐ. ಇ ರವರು ನೇಮಿಸಲ್ಪಟ್ಟರು.

ಕಳೆದ ವಾರದಲ್ಲಿ ಕ್ಷಾಮ ನಿವಾರಣಾರ್ಥ ಫಂಡಿನಿಂದ ಮುಂಬಾಯಿಯಲ್ಲಿ ೯೩,೭೧೦ ಮಂದಿ, ಕಾಥ್ಯವಾಡದಲ್ಲಿ ೫೪೦೩ ಮಂದಿ, ಮಧ್ಯ ಇಂಡಿಯದಲ್ಲಿ ೧೧,೦೮೯ ಮಂದಿ ಸಂರಕ್ಷಿಸಲ್ಪಟ್ಟರು.

ಬಂಗಾಳದ ಗವರ್ನರರಾದ ಕಾರ್ಮಿಖಯೇಲ್ ಪ್ರಭುಗಳೂ ಪತ್ನಿಯವರೂ ತಾ. ೮ರಲ್ಲು ಕಲ್ಕತ್ತೆಯಿಂದ ಡಾರ್ಜಿಲಿಂಗಿಗೆ ಹೋಗಿರುವರು.

ಕಲ್ಕತ್ತೆಯ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರರಾಗಿದ್ದ ಡಾಕ್ಟರ್ ಪಿ. ಆರ್. ರೋಯಿ ಎಂಬವರು ಒಬ್ಬ ಪ್ಲೇಗ್ ರೋಗಸ್ಥನನ್ನು ನೋಡಲಿಕ್ಕೆ ಹೋಗಿದ್ದರು. ಅಲ್ಲಿಂದ ಹಿಂತೆರಳಿದನಂತರ ಇವರಿಗೆನೇ ಪ್ಲೇಗ ಬೇನೆ ಸೋಂಕಿ ತಾ. ೭ರಲು ಮೃತಪಟ್ಟರು.

ಬಂಗಾಳದ ಸೋಶ್ಯಲ್ ಕನ್ಫರೆನ್ಸ್ ಎಂಬ ಸಭೆಯು ಚಿತಗೊಂಗಿನಲ್ಲಿ ತಾ. ೮ರಲ್ಲು ಮೆ|| ಸುರೇಂದ್ರನಾಥ ಬೆನರ್ಜಿಯವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಅಧ್ಯಕ್ಷರವರು ಬಾಲವಿವಾಹವನ್ನು ಖಂಡಿಸಿ ಸ್ತ್ರೀಶಿಕ್ಷಣವನ್ನೂ ಪತಿತ ಜನರ ಶಿಕ್ಷಣವನ್ನೂ ಅಭಿವೃದ್ಧಿಗೆ ತರಬೇಕೆಂಬೀ ವಿಷಯ ಚಲೋ ಭಾಷಣ ಕೊಟ್ಟರು. ಕಡೆಗೆ ಹುಡುಗಿಯರಿಗೆ ೧೬ ವರುಷ ವಯಸ್ಸಿನ ಮೊದಲು ವಿವಾಹ ಮಾಡಕೂಡದು, ವಿಧವೆಯರಿಗೆ ಪುನರ್ವಿವಾಹ ಮಾಡುವುದು, ಪತಿತ ಜನರನ್ನು ಉದ್ಧರಿಸುವುದು ಮೊದಲಾದ ಮಸೂದೆಗಳು ಸಭೆಯು ಮುಂದೆ ಇಡಲ್ಪಟ್ಟು ಸಭಿಕರಿಂದ ಅನುಮೋದಿಸಲಾಯಿತು.

ತಾ. ೫ರಲ್ಲು ಲಾಹೋರಿನಲ್ಲಿ ಪ್ರಥಮ ಹಿಂದೂ ವಿದ್ಯಾ ಮಹಾಸಭೆಯು ಕೂಡಿತು. ಈ ಸಭೆಗೆ ವಿದ್ಯಾ ಇಲಾಖೆಯ ಡಿರೆಕ್ಟರರಾದ ಬಹುಮಾನಪಟ್ಟ ಗೋಡ್ಲಿಯವರು ಹಾಜರಾಗಿದ್ದರು. ಈ ಸಭೆಯು ಕೈಗಾರಿಕೆ ವಿದ್ಯಾಭ್ಯಾಸ, ಎಲಿಮೆಂಟರಿ ವಿದ್ಯಾಭ್ಯಾಸ, ಸ್ತ್ರೀ ಶಿಕ್ಷಣ, ನಿರಾಶ್ರಿತ ಜನರ ವಿದ್ಯಾಭ್ಯಾಸ ಎಂಬ ನಾಲ್ಕು ಭಾಗಗಳಾಗಿ ವಿಭಾಗಿಸಲ್ಪಟ್ಟಿತ್ತು. ಕೈಗಾರಿಕೆ ವಿದ್ಯಾಭ್ಯಾಸ ಸಂಬಂಧದ ಸಭೆಗೆ ಹರಿ ಶಿಗಾನ್ ಲಾಲರವರು ಅಧ್ಯಕ್ಷರಾಗಿದ್ದು ಕೈಗಾರಿಕೆ ವಿದ್ಯಾಭ್ಯಾಸದ ಅವಶ್ಯಕತೆಯನ್ನು ಸಭಿಕರಿಗೆ ಶ್ರುತಪಡಿಸಿ ಈ ವಿದ್ಯೆಯನ್ನು ಮೇಲಕ್ಕೆ ತರುವರೆ ಜನಸಾಮಾನ್ಯರ ಮತ್ತು ಸರಕಾರದವರ ಪ್ರೋತ್ಸಾಹವು ಅವಶ್ಯವೆಂದು ಹೇಳಿದರು. ಎಲಿಮೆಂಟರಿ ವಿದ್ಯಾಭ್ಯಾಸ ಸಂಬಂಧವಾದ ಸಭೆಗೆ ಡಿ. ಎ. ವಿ. ಕಾಲೇಜಿಯ ಮಾಜಿ ಪ್ರಿನ್ಸಿಪಾಲರಾದ ಮೆ|| ಹನ್ಸರಾಜರವರು ಅಧ್ಯಕ್ಷರಾಗಿದ್ದು ಪ್ರಾಥಮಿಕ ವಿದ್ಯಾಭ್ಯಾಸವನ್ನು ಜನಸಮುದಾಯಕ್ಕೆ ಕೊಡುವರೆ ಅರಸನೂ ಪ್ರಜೆಯೂ ಪರಸ್ಪರ ಒಗ್ಗಟ್ಟಾಗಿ ಧಾವತಿಪಡಬೇಕೆಂತ ಮನಸ್ಮೃತಿಯ ಆಧಾರದ ಮೇಲೆ ಎಲಿಮೆಂಟರಿ ವಿದ್ಯಾಭ್ಯಾಸದ ಮಹತ್ತನ್ನು ವಿವರಿಸಿ ಭಾಷಣ ಮಾಡಿದರು.

ಪಟಿಯಾಲ ಮಹಾರಾಜರವರು ಯೂರೋಪು ಖಂಡಗಳಿಗೆ ಸಂಚರಿಸುವ ಆಲೋಚನೆಯನ್ನು ಸದ್ಯಾ ಬಿಟ್ಟು ಬೇಗನೇ ಸಿಮ್ಲಕ್ಕೆ ಹೋಗುವರು.

ಬೈಸಿಕಲ್ ಕದ್ದುಕೊಂಡು ಶಿಕ್ಷೆ ಹೊಂದಿದ ಕಲ್ಕತ್ತೆಯ ಒಬ್ಬ ಯೂರೇಶಿಯಾನನಾದ ಡಿ. ಕ್ರುಜ್ ಎಂಬವನ ಹೇಳಿಕೆಯ ಮೇರೆಗೆ ಪೋಲೀಸಿನವರು ಸೇರಂಪೂರೆಂಬಲ್ಲಿ ೭೦ ಕಳ್ಳ ಸ್ಯಾಕಲುಗಳನ್ನು ಕಂಡು ಹಿಡಿದಿರುವರು. ಈ ೭೦ ಸ್ಯಾಕಲುಗಳೂ ಕಲ್ಕತ್ತೆಯ ಸರದಾರರ ಮತ್ತು ಸ್ತ್ರೀಯರ ಸ್ಯಾಕಲುಗಳಾಗಿವೆ.

ದಕ್ಷಿಣ ಹಿಂದೂಸ್ಥಾನ.

ತಿನ್ನವೆಲ್ಲಿಯಲ್ಲಿ ಕಲೆಕ್ಟರರಾಗಿದ್ದು ಕೊಲ್ಲಲ್ಪಟ್ಟ ಎಷ್ ದೊರೆಗಳವರ ಸ್ಮಾರಕ ಕಾರ್ಯಾರಂಭೋತ್ಸವವು ತಾ. 3ರಲ್ಲು ತುತುಕುಡಿಯಲ್ಲಿ ಜರುಗಿತು. ಈ ಸಂಬಂಧ ತುತುಕುಡಿಯ ಸಬ್ ಕಲೆಕ್ಟರರಾಗಿರುವ ಮೆ|| ಎ. ಆರ್. ಕೊಕ್ಸರವರು ಬುನಾದಿ ಕಲ್ಲನ್ನಿಟ್ಟು ಎಷ್ ದೊರೆಗಳವರ ಗುಣ ಕಥನವನ್ನು ಮಾಡಿದರು.

ಕಲ್ಕತ್ತೆಯಿಂದ ಕರಾಚಿಗೆ ಕಲ್ಲಿದ್ದಲು ಕೊಂಡೊಯ್ಯುತ್ತಿದ್ದ ಎಸ್. ಎಸ್. ಪಿನ್ನ ಎಂಬ ಹಡಗಕ್ಕೆ ಕೊಮೊರಿನ್ ಭೂಶಿರದ ಬಳಿಯಲ್ಲಿ ಬೆಂಕಿ ಹಿಡಿಯಿತು. ಈ ಹಡಗದಲ್ಲಿದ್ದ ೫೭ ನಾವಿಕರೂ ೧೧ ಯೂರೋಪಿಯರೂ ಸುರಕ್ಷಿತವಾಗಿ ಬಂದರಕ್ಕಿಳಿದರು. ಹಡಗದ ತಾಂಡೇಲನೂ ಇತರರೂ ಹಡಗವನ್ನುಳಿಸಬೇಕೆಂದು ಭಾಗೀರಥ ಪ್ರಯತ್ನ ಮಾಡಿದರೂ ಬೆಂಕಿಯಾರಿಸ ಕೂಡಲಿಲ್ಲ. ಈ ಹಡಗ ಸುಟ್ಟು ಹೋದ್ದರಿಂದ ಒಟ್ಟಿಗೆ ೫೦,೦೦೦ ಪವನುಗಳಷ್ಟು ನಷ್ಟವಾಯಿತು.

ಶೃಂಗಗಿರಿ ಮಠದ ಶ್ರೀ ಸ್ವಾಮಿಗಳವರ ಬದಲಿಗೆ ಮೈಸೂರು ಮಹಾರಾಜರವರು ಗೋಪಿ ಶಾಸ್ತ್ರಿ ಎಂಬವರ ಪುತ್ರರಾಗಿರುವ ನರಶಿಂಹ ಶಾಸ್ತ್ರಿ ಎಂಬವರನ್ನು ನೇಮಿಸಿರುವರು. ನರಸಿಂಹ ಶಾಸ್ತ್ರಿಗಳಿಗೆ ಈಗ ೧೯ ವರ್ಷ ಪ್ರಾಯ. ಇವರು ಮೀಮಾಂಸ ಮತ್ತು ವೇದಾಂತವನ್ನು ಬೆಂಗಳೂರಿನ ಶೃಂಗಗಿರಿ ಮಠ ಪಾಠಶಾಲೆಯಲ್ಲಿ ಅಭ್ಯಾಸುತ್ತಿದ್ದು ಸುಗುಣ ಭರಿತರಾದ ಬ್ರಹ್ಮಚಾರಿಯಾಗಿರುತ್ತಾರೆ. ಶೃಂಗಗಿರಿಯ ಮಾಜಿಸ್ವಾಮಿಗಳವರು ಪರಂಧಾಮವನ್ನು ಹೊಂದುವ ಮೊದಲು ಇವರನ್ನು ಕರೆಯ ಕಳುಹಿಸಿದ್ದರು. ಆದರೆ ಇವರು ಶೃಂಗಗಿರಿಗೆ ಬಂದು ತಲಪುವ ಮುಂಚಿತವಾಗಿ ಮೃತಪಟ್ಟರು. ಸ್ವಾಮಿಗಳವರು ಮೃತಪಡುವ ಎರಡು ದಿವಸಗಳ ಮೊದಲು ಇವರು ಶೃಂಗಗಿರಿಗೆ ತಲಪುತ್ತಿದ್ದರೆ ಸ್ವಾಮಿಗಳವರೇ ಇವರಿಗೆ ಉಪದೇಶ ಕೊಡುತ್ತಿದ್ದರು. ಈ ಕಾರಣಗಳಿಂದ ಮೈಸೂರು ಮಹಾರಾಜರು ಇವರನ್ನೇ ಶೃಂಗಗಿರಿಯ ಸ್ವಾಮಿಗಳಾಗಿ ನೇಮಿಸಲು ಅಪ್ಪಣೆಇತ್ತರು. ಕಳೆದ ಆದಿತ್ಯವಾರ ಮಾಜಿ ದಿವಾನರಾದ ಮಾಧವರಾಯರು ಶೃಂಗಗಿರಿಗೆ ಹೋಗಿ ನರಶಿಂಹ ಶಾಸ್ತ್ರಿಗಳವರನ್ನು ವೇದಾಂತಧರ್ಮ ವಿಧಿಗನುಸಾರವಾಗಿ ಪ್ರತಿಷ್ಠಾಪನೆ ಮಾಡಿದರು.

ಮದ್ರಾಸ್ ಸಂಸ್ಥಾನದ ಹಂಗಾಮಿ ಗವರ್ನರರಾಗಿರುವ ಸರ್ ಮುರೆ ಹೆಮಿಕರವರು ಪರಿವಾರ ಸಹಿತವಾಗಿ ತಾ. ೮ರಲ್ಲು ಉದಕಮಂಡಲಿಗೆ ತೆರಳಿದರು.

ಉದಕಮಂಡಲಿನ ಸ್ಥಳೀಕ ಪೇಟೆಯ ರೌತರ್ ಕಂಪೆನಿಯ ಒಬ್ಬ ಕೆಲಸದವನು ೫ ರೂಪಾಯಿಯ ಒಂದು ಕಳ್ಳ ನೋಟನ್ನು ಕೊಟ್ಟು ಶೀಮೆಯೆಣ್ಣೆಯನ್ನು ಕೊಂಡುಕೊಂಡನು. ಈ ಸಂಗತಿಯು ಹೊರಬಿದ್ದದರಿಂದ ಪೋಲಿಸಿನವರು ಅತನನ್ನು ಕೈದುಮಾಡಿರುವರು.

ಮಂಗಳೂರು. ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೭ ಪ್ಲೇಗು ಮರಣಗಳಿದ್ದವು.

ಈ ತಿಂಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಬರುವ ತಾ. ೨೨ಕ್ಕೆ ಜರಗುವದು.

ಡಿಸ್ಟ್ರಿಕ್ಟ್ ಕಲೆಕ್ಟರ ದೊರೆಗಳವರು ಕಾರ್ಕಳ ಅತ್ತಕಡೆ ಸರ್ಕೀಟಿಗೆ ತೆರಳಿರುವರು.

ಹೆಡ್‌ಕ್ವಾರ್ಟರ್ಸ್ ಡಿಪ್ಯುಟಿ ಕಲೆಕ್ಟರರವರು ಉಡ್ಪಿ ಅತ್ತಕಡೆಯಿಂದ ಈ ದಿನ ಇಲ್ಲಿಗೆ ತಲಪುವರಾಗಿ ತಿಳಿಯುತ್ತೇವೆ.

ಉಡ್ಪಿ ತಹಸೀಲದಾರರಾಗಿರುವ ಮೆ. ವಿ. ಎಮ್. ಫೆರ್ನಾಂದಿಸರವರು ೩ ತಿಂಗಳ ರಜೆ ಪಡಕೊಂಡಿರುವದರಿಂದ ಅವರ ಬದಲಿಗೆ ಉಪ್ಪಿನಂಗಡಿ ತಹಸೀಲದಾರರಾಗಿರುವ ಮ. ರಾ. ರಾ. ಕಾರ್ಕಳ ಶ್ರೀನಿವಾಸರಾಯರು ನೇಮಕಪಟ್ಟಿರುವರು.

ಮೂಡಬಿದ್ರೆ ಹೆಡ್ ಅಕೌಂಟಾಂಟರಾದ ಮ. ರಾ. ರಾ. ಡಿ. ವೆಂಕಟರಾಯರಿಗೆ ೩ ತಿಂಗಳ ರಜೆ ದೊರಕಿರುವದರಿಂದ ಮೂಡಬಿದ್ರೆ ರೆವಿನ್ಯು ಇನ್ಸ್‌ಪೆಕ್ಟರರಾದ ಮೆ. ಆರ್. ಎಲ್. ನಜರತ್‌ರವರು ಅವರ ಬದಲಿಗೆ ಮೊಕರೂರಾಗಿರುವರು.

ಹಜೂರು ಆಫೀಸಿನ ಕ್ಲಾರ್ಕ ರಾ. ಬಿ. ಸೋಮಪ್ಪನವರು ಮೂಡಬಿದ್ರೆ ರೆವಿನ್ಯು ಇನ್ಸ್‌ಪೆಕ್ಟರರಾಗಿ ನೇಮಕಪಟ್ಟಿರುವರು.

ಉಡ್ಪಿ ಸ್ಟೇಶನರಿ ಮೆಜಿಸ್ಟ್ರೇಟರಾದ ರಾ|| ಬಿ. ಮಂಜುನಾಥ ಬಾಳಿಗರವರು ಮೂರು ವಾರಗಳ ಪ್ರಿವಿಲೆಜ್ ರಜೆ ಪಡದಿರುವರು.

ಕುಂದಾಪುರ ಹೆಡ್ ಅಸಿಸ್ಟಾಂಟ್ ಕಲೆಕ್ಟರರಾದ ಮೆ|| ಎಕ್ವಿನ್ ದೊರೆಗಳವರಿಗೆ ಇದೇ ಮಾರ್ಚಿ ತಿಂಗಳಾರಂಭದಿಂದ ಪ್ರಿವೆಲೆಜ್ ರಜೆ ಸಹಿತವಾದ ಒಂದು ವರುಷದ ಫರ್ಲೋ ರಜೆ ಕೊಡಲ್ಪಟ್ಟಿರುವುದು.

ಕುಂದಾಪುರ ಡಿವಿಜನಿನ ಚಾರ್ಜನ್ನು ಮೆ|| ಎಸ್. ಶ್ರೀನಿವಾಸರಾವ್ ಪಂತುಲುಗಾರುರವರು ಈ ದಿನ ಮೆ|| ಕೆ. ಚಂತನರವರಿಂದ ತಕ್ಕೊಳ್ಳುವರು.

ಇಲ್ಲಿಯ ತಾಲೂಕು ಮೆಜಿಸ್ಟ್ರೇಟರಾಗಿರುವ ರಾ|| ಹಟ್ಟಂಗಡಿ ಶಂಕರರಾಯರಿಗೆ II ಕ್ಲಾಸು ಮೆಜಿಸ್ಟ್ರೇಟರ ಪವರು ಸಿಕ್ಕಿರುವದು.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ತಾ. ೭ನೇ ಆದಿತ್ಯವಾರ ಬಲ್ಮಠ ಫ್ರೆಂಡ್-ಇನ್-ನೀಡ್ ಸೊಸ್ಯಾಟಿಯ ಪ್ರಥಮ ವಾರ್ಷಿಕ ವರ್ಧಂತಿಯು ಬಹಳ ವಿಜೃಂಭಣೆಯಿಂದ ಜರಗಿತು. ರೆವರೆಂಡ್ ಟಿ. ಪುರ್ತಾದರವರು ಭಗವತ್ಪ್ರಾರ್ಥನೆಯಿಂದ ಸಭಾರಂಭವನ್ನು ಮಾಡಿದನಂತರ ರೆವರೆಂಡ್ ಜೆ. ಬಿ. ಸೋನ್ಸರವರು ಒಂದು ಭಾಷಣವನ್ನು ಕೊಟ್ಟರು. ಅನಂತರ ಕೆಲವು ಸದ್ಗೃಹಸ್ಥರು ದೇವತಾಭಜನೆ ಮಾಡಿದರು. ಕಡೆಗೆ ಮೆ|| ಜಿ. ಹೆರ್ಬರ್ಟರವರು ಸಂಘದ ಏಳಿಗೆಗಾಗಿ ಬೇಕಾದ ಕೆಲವು ಚಲೋ ಸೂಚನೆಗಳಿಂದೊಡಗೂಡಿದ ಕಾಲೋಚಿತ ಭಾಷಣ ಕೊಟ್ಟು ಒಗ್ಗಟ್ಟಿನಿಂದ ಉಂಟಾಗಬಹುದಾದ ಪ್ರಯೋಜನಗಳನ್ನು ದೃಷ್ಟಾಂತ ಪೂರ್ವಕ ವಿವರಿಸಿ ಸಭಿಕರನ್ನು ಉತ್ತೇಜನಗೊಳಿಸಿದರು. ಸಂಘದ ಸೆಕ್ರಿಟರಿಯವರು ಓದಿದ ರಿಪೋರ್ಟಿನಿಂದ ಈ ಸೊಸ್ಯಾಟಿಯು ತನ್ನ ಎಳೇ ಪ್ರಾಯದಲ್ಲಿಯೇ ಉತ್ಕೃಷ್ಟವಾದ ಕೆಲಸವನ್ನು ಕೈಕೊಂಡದೆಂಬದಾಗಿ ತಿಳಿದು ಸಂಘದವರೊಂದಿಗೆ ತಾನೂ ಸಂತೋಷ ಪಡುತ್ತೇನೆಂತಲೂ ಈ ಸಂಘವು ಭವಿಷ್ಯದಲ್ಲಿಯೂ ಒಳ್ಳೇ ರೀತಿಯಲ್ಲಿ ಮುಂದರಿದರೆ ಕ್ರೈಸ್ತ ಸಭೆಗೆ ಒಂದು ಭೂಷಣದಂತಾಗಲು ಏನೊಂದೂ ಅನುಮಾನವಿಲ್ಲವೆಂಬದಾಗಿಯೂ ಒಬ್ಬ ಬಾತ್ಮೀದಾರರು ಬರದಿರುವರು.

ಪುತ್ತೂರು ಸಬ್ ಮೆಜಿಸ್ಟ್ರೇಟರಿಂದ ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ಖೂನಿ ಮೊಕದಮೆಯ ತೀರ್ಮಾನವನ್ನು ಜಡ್ಜರವರು ತಾ. ೨೦ಕ್ಕೆ ಕೊಟ್ಟಿರುವರು. ಈ ಮೊಕದಮೆಯಲ್ಲಿ ಐತಾಳ್ವ ಎಂಬವನು ಒಂದರೆ ಖಾಸಗಿ ದ್ವೇಶದಿಂದ ಪಡನ್ನೂರು ಗ್ರಾಮದ ಪಕ್ರ್ರಾಇಾ ಬ್ಯಾರಿಯನ್ನು ಗುಂಡು ಹೊಡೆದು ಕೊಂದಿರುವನೆಂದೂ ಕೃಷ್ಣಭಟ್ಟ ಎಂಬವನು ಇದಕ್ಕೆ ಸಹಾಯಕನಾಗಿದ್ದನೆಂತಲೂ ಆಪಾದಿಸಲ್ಪಟ್ಟಿದ್ದರು. ಎಸ್ಸೆಸರುಗಳಲ್ಲಿ ಒಬ್ಬರು ಆಪಾದಿತರು ತಪ್ಪಿತಸ್ಥರಲ್ಲವೆಂದೂ ಮತ್ತೊಬ್ಬರು ತಪ್ಪಿತಸ್ಥರೆಂದೂ ಅಭಿಪ್ರಾಯಪಟ್ಟರು. ಜಡ್ಜರವರು ಆಪಾದಿತರಲ್ಲಿ ಇಬ್ಬರನ್ನೂ ಖುಲಾಸು ಪಡಿಸಿದರು.

ಪುತ್ತೂರು ಸಬ್ ಮೆಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಇನ್ನೊಂದು ಮೊಕದಮೆಯು ಸೆಶ್ಶನ್ಸಿನಲ್ಲಿ ತನಖಿಯಾಗುತ್ತಲಿದೆ. ಈ ಮೊಕದಮೆಯಲ್ಲಿ ನೇರಂಕಿ ಗ್ರಾಮದಲ್ಲಿಯ ಮಾರಿ ಹೊಲೆಯ ಹುಕ್ರ ಎಂಬವನಿಗೂ ಅದೇ ಜಾತಿಯ ಮುಡ್ಡ ಎಂಬವನಿಗೂ ಸೇಂದಿ ಅಂಗಡಿಯಲ್ಲಿ ಜಗಳ ಉಂಟಾಗಿ ಕುಡುಗೋಲಿನಿಂದ ಹೊಡದ್ದರಿಂದ ಮುಡ್ಡ ಎಂಬವನು ಮೃತಪಟ್ಟದ್ದಾಗಿರುತ್ತದೆ.

ಕಾಸರಗೋಡು. ಮುಂಚಿನ ಸಂಚಿಕೆಯಲ್ಲಿ ಸೂಚಿಸಿದ ಮಲಬಾರ ಸರ್ಕಸ ಕಂಪೆನಿಯವರು ಕಳೆದ ಆದಿತ್ಯವಾರ ಕಡೇ ಸರ್ಕಸನ್ನು ಆಡಿ ಈ ಊರನ್ನು ಬಿಟ್ಟು ಹೋಗಿರುವರು.

ಮುಂಚೆ ಇಲ್ಲಿ ಪೋಲಿಸ್ ಇನ್ಸ್‌ಪೆಕ್ಟರರಾಗಿ ಯಾವದೋ ಒಂದು ಮೊಕದಮೆಯಲ್ಲಿ ಅಮಾನತು ಮಾಡಲ್ಪಟ್ಟಿದ್ದ ಇನ್ಸಪೆಕ್ಟರರ ತಕ್ಸೀರು ತಳ್ಳಿಹಾಕಲ್ಪಟ್ಟದ್ದರಿಂದ ಇಲ್ಲಿಗೆ ತಿರಿಗಿ ವರ್ಗಾಯಿಸಲ್ಪಟ್ಟದ್ದಾರೆಂದು ಕೇಳುತ್ತೇನೆ.

ಕಳೆದ ಶನಿವಾರ ಉಪಾಧ್ಯಾಯರ ತ್ರೈಮಾಸಿಕ ಸಮ್ಮೇಲನವು ಜರಗಿತು.

ಇಲ್ಲಿಯ ನೇಟಿವ್ ಪಾಸ್ತರರು ಕೆಲಸಕ್ಕೆ ಪ್ರತಿಷ್ಟವಾದ ೩೨ನೇ ವರ್ಧಂತಿಯನ್ನು ಮಿತ್ರರೊಡಗೂಡಿ ನಿನ್ನೆ ದಿನ ಆಚರಿಸಿದರೆಂದು ತಿಳಿಸಲು ಸಂತೋಷಪಡುತ್ತೇವೆ.

ಹೊಸ ಮಿಶ್ಯನ್ ಸೆಕೆಂಡರಿ ಶಾಲೆಗೆ ಪಂಚಾಂಗ ಹಾಕುವ ಕೆಲಸ ತೊಡಗಿರುವದು. ಈ ಕಟ್ಟೋಣವು ಹುಡುಗಿಯರ ಶಾಲೆಯ ಎಡಗಡೆ, ಆಸ್ಪತ್ರಿಯ ಬಡಗುಕಡೆ, ಪಟ್ಟಣದ ಮಧ್ಯ, ಹಾದಿ ಬದಿಯಲ್ಲಿ ಕಟ್ಟಲ್ಪಡುವದು.

ಪಾಣೆಮಂಗಳೂರು:—ಕಳೆದ ಸಂಚಿಕೆಯಲ್ಲಿ ಪ್ರಸ್ತಾಪಿಸಿದಂತೆ ಇಲ್ಲಿಗೆ ಸಮೀಪ ಮೊಗರ್ನಾಡ ಎಂಬಲ್ಲಿ ಕೀರ್ತಿಶೇಷ ನಗರ ದಾಮರ್ಸ ಪೈಗಳವರು ನೂರಾರು ವರ್ಷಗಳ ಹಿಂದೆ ಸ್ಥಾಪಿಸಿದ ಶ್ರೀ ಲಕ್ಷ್ಮೀ ನೃಶಿಂಹ ದೇವಾಲಯದಲ್ಲಿ ಮೊಕ್ತೇಸರ ಅರ್ಚಕ ಬ್ರಹ್ಮಶ್ರೀ ಉಪೇಂದ್ರ ಕೃಷ್ಣ ಭಟ್ಜೀಯವರು ಆರಂಭಿಸಿದ "ಸಂಹಿತ ಹೋಮ" ವೇದವಿಧಿಯುಕ್ತವಾಗಿ ನಡೆಯುತ್ತಲಿದೆ. ಈ ಪ್ರಾಂತ್ಯದ ಊರೂರುಗಳಲ್ಲಿಯ ಮಾನ್ಯ ಗ್ರಹಸ್ತರು, ಅವರವರ ಇಚ್ಛಾನುಸಾರ ಕೊಟ್ಟಿರುವ ಹಣ, ಸಾಹಿತ್ಯ ವಂತಿಗೆಗಳಿಂದ ಇಂಥ ಮಹತ್ಕಾರ್ಯದಲ್ಲಿ ತಮಗಿರುವ ಆಸಕ್ತಿ, ಸಹಾನುಭೂತಿಗಳನ್ನು ತೋರ್ಪಡಿಸುವಾಗ ನಮ್ಮೂರ ಕೆಲಗೃಹಸ್ತರು, ಹೋ ತಪ್ಪಿದೆ, ತಪ್ಪಾಯ್ತು, ಕ್ಷಮಿಸಿರಿ, ಮಹಾನುಭವರು, ಸಂಹಿತಾ ಹೋಮದ ಪೂರ್ಣಾಹುತಿಯು ದಿನವಾದ ನಾಳಿನ ಗುರುವಾರ ದಿವಸವೇ ನಮ್ಮ ಶ್ರೀ ವಿಟ್ಠಲ ದೇವಸ್ಥಾನದಲ್ಲಿ ಈ ವರ್ಷ ನೂತನವಾಗಿ ಅಬಾಲವೃದ್ಧರಿಗೊಂದು ಸಮಾರಾಧನೆ ನಡಿಸಲಿಕ್ಕೆ ನಿಶ್ಚೈಸಿರುವರು. ಇದರ ಉದ್ದೇಶವು ಪುಣ್ಯಾರ್ಜನೆಯೋ-ಕೀರ್ತಿಯ ಕಾಂಕ್ಷೆಯೋ ಅಥವಾ ಕೇವಲ ಅಸೂಯೆಯೋ ಎಂತ ನನ್ನಿಂದ ಹೇಳಲಸಾಧ್ಯ. ಹ್ಯಾಗೂ ಇರಲಿ, ಸ್ವಭಾವತ: ಭೋಜನ ಪ್ರಿಯರೆಂತ ಹೆಸರುವಾಸಿಯಾದ ನಮ್ಮ ಬ್ರಾಹ್ಮಣ ಸಮುದಾಯಕ್ಕೆ ಒಂದೂಟ ಹೆಚ್ಚಿಗೆ ಶಿಕ್ಕುವದೆಂಬದು ನಿಜವಷ್ಟೆ.

ಉಡುಪಿ. ತಾ. ೮ನೇ ದಿನ ಇಲ್ಲಿಯ ಜುಬ್ಲಿ ಯೂನ್ಯನ್ ಕ್ಲಬ್ಬಿನಲ್ಲಿ ಪೇಶಾವರದ ಪ್ರೊಪೆಸರ್ ವಿಲಾಯತ್ ಆಲಿ ಎಂಬವರು ವಿವಿಧ ತರದ ಸುಮಾರು ೧೮ ಚಲೋ ಗಾಯನಗಳನ್ನು ಹರ್ಮೋನಿಯ ಸಹಿತವಾಗಿ ಹಾಡಿದರು. ಇವರ ಗಾಯನವನ್ನು ಕೇಳುವರೆ ಕ್ಲಬ್ಬಿನ ಒಳಗೂ ಹೊರಗೂ ಜನರು ಕಿಕ್ಕಿರಿದು ನಿಂತು ಆನಂದ ಪರವಶರಾದರು. ಗಾಯನದನಂತರ ಕ್ಲಬ್ಬಿನ ಸೆಕ್ರಿಟರಿಯವರು ವಿಜ್ಞಾಪಿಸಿಕೊಂಡ ಮೇರೆಗೆ ಸಭೆಗೆ ಹಾಜರಿದ್ದ ಮಾಜಿ ಸಬ್ ಜಡ್ಜರಾದ ಮ|| ರಾ|| ಸುಜೀರ ರಘುನಾಥಯ್ಯನವರು ಕಾಲೋಚಿತ ಭಾಷಣದೊಂದಿಗೆ ನೂರು ರೂಪಾಯಿಯ ಒಂದು ಚೀಲವನ್ನು ಪ್ರೊಪೆಸರರಿಗೆ ಉಚಿತಮಾಡಿದರು. ರಾ|| ಸುಜೀರ ರಘುನಾಥಯ್ಯನವರು ಕ್ಲಬ್ಬಿಗೆ ದಯಮಾಡಿದ್ದಕ್ಕಾಗಿ ಕ್ಲಬ್ಬಿನ ಸೆಕ್ರಿಟರಿಯವರು ಉಪಕಾರಸ್ಮರಣೆ ಹೇಳಿದನಂತರ ಸಭೆಯು ಅಗಲಿತು.

ಇಲ್ಲಿ ಖಾಲಿ ಬಿದ್ದಿರುವ ಒನರರಿ ಮೆಜಿಸ್ಟ್ರೇಟರ ಕೆಲಸಕ್ಕೆ ಪೆನ್ಶನು ಹೊಂದಿದ ಸರಕಾರಿ ಹುದ್ದೆದಾರರೊಬ್ಬರು ನೇಮಿಸಲ್ಪಡುವರೆಂಬದಾಗಿ ಗುಜುಗುಜು ವಾರ್ತೆ ಇದೆ. ಇದು ಹೌದಾದರೆ ಸರಕಾರದವರು ಕೈಕೊಂಡಿರುವ ಈಗಿನ ಪ್ರಜಾಪ್ರತಿನಿಧಿ ಆಡಳಿತೆಯ ಸಿದ್ಧಾಂತಕ್ಕೆ ಒಪ್ಪುವಂಥಾದಾದೀತೇ? ಪೆನ್ಶನು ಹೊಂದಿದ ಹುದ್ದೆದಾರರು ತಾವು ಗಳಿಸಿಕೊಂಡ ವಿಶ್ರಾಮ ಕಾಲದಲ್ಲಿ ಮನಃಪ್ರಸಾದವನ್ನೊಂದಿಕೊಂಡಿರುವುದು ವಿಹಿತವಲ್ಲವೇ? ಸರಕಾರದವರು ಒನರರಿ ಮೆಜಿಸ್ಟ್ರೇಟರ ಕೆಲಸಕ್ಕೆ ಹುದ್ದೆದಾರರಲ್ಲದ ಗೃಹಸ್ಥರನ್ನು ನೇಮಿಸುವುದು ತಕ್ಕುದಾಗಿದೆ. ಹುದ್ದೆದಾರರಲ್ಲದವರಿಂದ ಪಂಚಾಯತಿ ಕೋರ್ಟುಗಳಲ್ಲಿ ಸಿವಿಲ್ ದಾವೆಗಳನ್ನು ಇತ್ಯರ್ಥಪಡಿಸಕೂಡುವುದಾದರೆ ಅತ್ಯಲ್ಪವಾದ ಕ್ರಿಮಿನಲ್ ಮೊಕದಮೆಗಳನ್ನು ಇತ್ಯರ್ಥಪಡಿಸಲಿಕ್ಕೆ ಯಾಕಾಗದು? ಸರಕಾರದವರು ಮೇಲಿನ ಸಂಗತಿಗೆ ಗಮನಕೊಟ್ಟು ಹುದ್ದೆದಾರರಲ್ಲದವರನ್ನೇ ಒನರರಿ ಮೆಜಿಸ್ಟ್ರೇಟರಾಗಿ ನೇಮಿಸುವರೆಂಬದಾಗಿ ಹಾರೈಸುತ್ತೇವೆ.

ಟ್ರೇನ್ಸಿಟ್ ಕಂಪೆನಿಗಳು ಜನರ ಪ್ರಯಾಣಕ್ಕೆ ಅತ್ಯವಶ್ಯವಾದುದೆಂಬುದಕ್ಕೆ ಏನೇನೂ ಅನುಮಾನವಿಲ್ಲ. ಆದರೆ ಈ ಕಂಪೆನಿಗಳ ಅವಘಡಗಳು ಆಗ್ಗಾಗ್ಯೆ ಕೇಳಸಿಕ್ಕುವುದೂ ಪ್ರಯಾಣಿಕರು ತಮ್ಮ ಅವಯವಗಳನ್ನು ಮುರಿಸಿಕೊಳ್ಳುವುದೂ ವಿಷಾದಕ್ಕೆ ಕಾರಣವಾಗಿದೆ. ಮನುಷ್ಯರ ಪ್ರಾಣವೂ ಅವಯವಗಳೂ ಸಂತೆಯಲ್ಲಿ ಮಾರಾಟಕ್ಕೆ ಸಿಕ್ಕುವಂಥವುಗಳಲ್ಲವಲ್ಲಾ! ಆಗ್ಗಾಗ್ಯೆ ಸಂಭವಿಸುತ್ತಿರುವ ಈ ಅವಘಡಗಳ ವಿಷಯವಾಗಿ ಸರಕಾರದವರು ನಿಗಾಕೊಡುವುದು ವಿಹಿತವಲ್ಲವೇ? ಕಳೆದ ಶ್ರೀ ಶುಕ್ರವಾರ ದಿನ ಮುಲ್ಕಿಯ ಸಮೀಪ ಹಿಂದೂ ಟ್ರೇನ್ಸಿಟ್ ಕಂಪೆನಿಯ ಗಾಡಿಗಳೊಂದರಲ್ಲಿ ಪುನಃ ಅವಘಡ ಸಂಭವಿಸಿತೆಂದು ಕೇಳುತ್ತೇವೆ. ಆದರೆ ಆ ದಿನ ಪ್ರಯಾಣಸ್ಥರ ಪ್ರಾಣಕ್ಕೇನೂ ಅಪಾಯ ಉಂಟಾಗದ್ದಕ್ಕೆ ಭಗವಂತನಿಗೆ ಸ್ತೋತ್ರವಾಗಲಿ. ಪ್ರಯಾಣಸ್ಥರಿಗೆ ತುಸ ಗಾಯಗಳಾದರೂ ಜೀವ ಉಳಿದದ್ದು ಅವರ ನಕ್ಷತ್ರ ಶುಭ ಫಲವೇ ಎಂದ್ಹೇಳಬೇಕು. ಪ್ರಜಾಹಿತಚಿಂತನೆಯ ಸರಕಾರದವರು ಈ ಅವಘಡಗಳು ಉಂಟಾಗುವ ಕಾರಣಗಳನ್ನು ತಿಳಕೊಂಡು ತಕ್ಕ ಏರ್ಪಾಡನ್ನು ಮಾಡುವವರಾಗಲಿ.

ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಯ ಇನಾಮು ಹಂಚೋಣವು ಇದೇ ವಾರದಲ್ಲಿ ಜರುಗುವುದು. ಮಿಸಿಸ್ ರಜಕರವರು ಈ ಸಂದರ್ಭದಲ್ಲಿ ಅಧ್ಯಕ್ಷರಾಗಿರುವರು.

ಹಗಲಲ್ಲಿ ಬಹಳ ಶೆಖೆ, ರಾತ್ರಿಯಲ್ಲಿ ಮೋಡ. ಪಟ್ಟಣದಲ್ಲಿ ಕುಡಿಯ ನೀರು ಇಲ್ಲದೆ ಜನರು ಕಷ್ಟಪಡುತ್ತಿರುವರು. ದವಸ ಧಾನ್ಯಗಳ ಧಾರಣೆಯು ಚಡಾವಾಗಿದೆ. ಜನರು ಮಳೆಗಾಗಿ ಭಗವತ್ಪ್ರಾರ್ಥನೆ ಮಾಡುತ್ತಿರುವರು.

ಇಲ್ಲಿಯ ಮುನ್ಸಿಫ್ ಕೋರ್ಟು ಶೆಖೆ ಕಾಲದ ಸಂಬಂಧ ತಾ. ೧೯ಕ್ಕೆ ಮೊಕೋಪಾಗುವದು. ಹೊಸತಾಗಿ ಮುನ್ಸಿಫರಾಗಿ ಬಂದ ಮ. ರಾ. ರಾ. ಬ. ವೆಂಕಟ್ರಾಯರವರು ಕೋರ್ಟಿನಲ್ಲಿ ತುಂಬಿಕೊಂಡಿದ್ದ ದಾವೆಗಳೆಲ್ಲವನ್ನು ತೀರಿಸಿದರೆಂದು ಹೇಳಬಹುದು. ಕೋರ್ಟು ರಜೆ ಸಮಯದಲ್ಲಿ ವಕೀಲರುಗಳಿಗೆ ಹೆಚ್ಚಿನ ವಿರಾಮ ಸಮಯ. ಇಂಥಾ ಸಮಯವನ್ನು ಪ್ರಜಾಹಿತಚಿಂತನೆಯಲ್ಲಿಯೂ ಸಹ ಅಲ್ಪಸ್ವಲ್ಪ ವಿನಿಯೋಗಿಸ್ಯಾರೆಂಬದಾಗಿ ಕೋರಬಹುದೋ?

ಕುಂದಾಪುರ:—ಕಳದವಾರ ಕೋಟೇಶ್ವರ ಸಮೀಪವಿರುವ ಭೀಜಾಡಿಯಲ್ಲಿ ಒಂದು ಹೆಂಗುಸಿನ ಶವವು ಮರದ ಮೇಲೆ ತೂಗಲ್ಪಟ್ಟದ್ದನ್ನು ಆಸ್ಪತ್ರಿಗೆ ತಂದು ಪರೀಕ್ಷೆ ಮಾಡಿದ್ದಲ್ಲಿ ಅದು ಆತ್ಮಹತ್ಯವಲ್ಲವೆಂಬದಾಗಿ ಅಭಿಪ್ರಾಯಪಟ್ಟದ್ದರಿಂದ ಪೋಲೀಸಿನವರು ತನಕಿ ನಡಿಸಿ ಮೃತಳ ಅತ್ತೆ, ಮೈದಿನ ಅತ್ತಿಗೆ ಈ ಮೂವರನ್ನು ಕೈದಿ ಮಾಡಿ ತಂದಿರುತ್ತಾರೆ. ಪೋಲೀಸು ಸುಪರಿಂಟೆಂಡೆಂಟರು ತನಕಿ ಗೋಸ್ಕರ ಬರುವರು ಎಂಬದಾಗಿ ವಾರ್ತೆ ಇದೆ.

ಇತ್ತಲಾಗೆ ಗಂಗೊಳ್ಳಿಯಲ್ಲಿ ಸಮುದ್ರವು ಮುಂದರಿಸಿ ಸಾವುಕಾರ ರಾಜೆಶ್ರೀ ನಾಗಪ್ಪ ನಾಯ್ಕರ ಬಂಡಸಾಲೆಯನ್ನು ನೆಲಸಮ ಮಾಡಿದೆ.

ವಿವಿಧ ವಿಷಯಗಳು.

ಕಠಿಣವಾಗಿ ರಕ್ತಧಾರೆ ಹರಿಯುತ್ತಿರುವಾಗ ಬಿಸಿ ನೀರಿನ ಒತ್ತಡ ಇಟ್ಟರೆ ರಕ್ತಧಾರೆ ನಿಲ್ಲುವದು.

ಲೋಕದ ಜನರ ಒಂದು ಏಳನೇ ಅಂಶ ಜನರು ಮಕ್ಕ ಯಾತ್ರೆಗೆ ಹೋಗುತ್ತಿರುವರೆಂದು ತಿಳಿದು ಬಂದದೆ.

ಸುಟ್ಟ ಘಾಯಗಳಿಗೆ ಎಪ್ಸಮ್ ಸೋಲ್ಟ್ (ಮೆಗ್ನೇಶಿಯ ಸಲ್ಫೇಟ್) ಎಂಬ ಔಷಧದ ದ್ರಾವಕವನ್ನು ನೀರಲ್ಲಿ ಮಿಶ್ರಮಾಡಿ ಹಚ್ಚುವದು ಬಹಳ ಗುಣಕಾರಿ.

ಜಪಾನ್ ಸಮುದ್ರಗಳಲ್ಲಿ ಒಂದು ವಿಚಿತ್ರ ತರದ ಏಡಿಗಳು ದೊರಕುತ್ತವೆ. ಅದರ ದೇಹವು ಅಡ್ಡಲಾಗಿ ಒಂದು ಅಡಿ ಇದೆ. ಅದರ ಕೊಂಕುಗುರುಗಳು ೧೨ ಅಡಿ ಉದ್ದವಿದೆ.

ತುಸ ಪೆಟ್ಲುಪ್ಪನ್ನು ನೀರಲ್ಲಿ ಹಾಕಿ ಅದರ ಮೇಲೆ ಹೂಗಳನ್ನು ಇಟ್ಟರೆ ಹೂ ಕೆಲವು ಕಾಲದ ವರೆಗೆ ಬಾಡುವುದಿಲ್ಲ. ಆ ನೀರಲ್ಲಿ ಸಕ್ಕರೆ ಹಾಕಿದರೆ ನೀರಿಗೆ ದುರ್ವಾಸನೆ ಹುಟ್ಟುವದಿಲ್ಲ.

ಕಳದ ಕ್ರಿಸ್ಮಸ್ ಹಬ್ಬದ ಕಾಲದಲಿ ಕೆನಡಾ ಎಂಬ ಒಂದೇ ಶೀಮೆಯಿಂದ ಬ್ರಿಟಾನಿಗೆ ೧೨,೦೦೦ ಟರ್ಕಿಗಳು ಕಳುಹಿಸಲ್ಪಟ್ಟಿರುವುದು.

ರುಷ್ಯಾ ದೇಶದ ಕೆಲವು ಕಡೆಗಳಲ್ಲಿ ಯೌವನಸ್ಥೆಯರನ್ನು ಕ್ರಯಕ್ಕೆ ಕೊಂಡುಕೊಳ್ಳುವ ಪದ್ಧತಿಯು ಇನ್ನೂ ವಾಡಿಕೆ ಇದೆ. ಮಾನ್ಯ ಕುಟುಂಬಸ್ಥರ ಚಂದವಾದ ಹುಡಿಗಿಯರನ್ನು ಮದುವೆ ಆಗಬೇಕಾದರೆ ಸುಮಾರು ೨೦-೪೦ ಪವನುಗಳ ವರೆಗೆ ಕೊಡಬೇಕಾಗುವದು. ಹಳ್ಳಿಯ ಬಡ ಜನರ ಹುಡಿಗಿಯರಿಗೆ ಕಮ್ಮಿಯಂದರೆ ೫ ಪವನು ಕೊಡಬೇಕಾಗುವದು. ಹಣ ಕೊಡದಿದ್ದರೆ ಮದುವೆಯಾಗಕೂಡದು.

ಬರ್ಮಿಂಗ್ಹಾಮ್ ಎಂಬ ಪಟ್ಟಣದಲ್ಲಿ ಹಾಳಾದ ಚರ್ಮವನ್ನು ಕೂಡಿಸಿ ದಾರಿಯ ಮೇಲೆ ಹಾಸಿ ಅದರ ಮೇಲೆ ರಾಳ ಬಳಿದಿರುವರು. ಇದರಿಂದ ದಾರಿಯು ಮಳೆಯಲ್ಲಿ ಹಾಳಾಗುವದಿಲ್ಲ. ದಾರಿಯ ಮೇಲೆ ತುಂಬಾ ಧೂಳೇಳುವದಿಲ್ಲವಲ್ಲದೆ ಗಾಡಿಗಳು ಓಡ್ಯಾಡುವಾಗ ಶಬ್ದವಾಗುವದಿಲ್ಲ. ಕುದುರೆಗಳಿಗೂ ಪ್ರಯಾಸವಾಗುವದಿಲ್ಲ.

ಲೋಕದಲ್ಲೆಲ್ಲಾ ದೊಡ್ಡದಾದ ಒಂದು ರೊಟ್ಟಿ ಕಾರ್ಖಾನೆಯು ಪ್ರಶ್ಯ ದೇಶದಲ್ಲಿ ಇದೆ. ಈ ಕಾರ್ಖಾನೆಯಲ್ಲಿ ರಾತ್ರಿ ಹಗಲು ಕೆಲಸ ನಡೆಯುತ್ತಿದೆ. ಎಲ್ಲಾ ಕೆಲಸವು ಯಂತ್ರದ ಮೂಲಕವಾಗುತ್ತದೆ. ದಿವಸಕ್ಕೆ ೨೦೦೦ ರಾತ್ಲ ಗೋಧಿ ಹಿಟ್ಟಿರುವಂಥಾ ೨೫೦ ಗೋಣಿ ಗೋಧಿ ಹಿಟ್ಟು ಖರ್ಚಾಗುತ್ತದೆ. ಇದರಿಂದ ಪ್ರತಿ ದಿನ ೨೫,೦೦೦ ಸಣ್ಣ ೨೫,೦೦೦ ದೊಡ್ಡ ರೊಟ್ಟಿಗಳು ಆಗುತ್ತವೆ. ಯಂತ್ರದ ಒಂದು ಕಡೆಯಲ್ಲಿ ಗೋಧಿ ಹಾಕಿದರೆ ಮತ್ತೊಂದು ಕಡೆಯಲ್ಲಿ ರೊಟ್ಟಿಯಾಗಿ ಕೆಳಗೆ ಬೀಳುತ್ತದೆ. ಇದರಲ್ಲಿ ೭೦ ಜನ ಕೆಲಸಗಾರರು ಇದ್ದು ದಿವಸಕ್ಕೆ ೧೧ ತಾಸು ಕೆಲಸ ಮಾಡುತ್ತಾರೆ. ಇವರಲ್ಲಿ ಒಬ್ಬೊಬ್ಬನು ಆಯಾ ಕೆಲಸಕ್ಕೆ ದಿವಸಕ್ಕೆ ೮ ಸಾರಿ ತಂತಮ್ಮ ಕೈಗಳನ್ನು ತೊಳಕೊಳ್ಳುತ್ತಾರೆ.

ಈಗಿನ ಕಾಲದ ಹುಡಿಗಿಯರು ಮಿಲ್ಟನ್ ಎಂಬ ಮಹಾ ಕವಿಯ ಗ್ರಂಥಗಳಿಂದ ಮಾತುಗಳನ್ನು ಎತ್ತಿ ಹೇಳುವರು. ಕರಕೌಶಲ್ಯ ವಿದ್ಯೆಯನ್ನು ಕುರಿತು ವಿಮರ್ಶಿಸಬಲ್ಲರು, ಆದರೆ ಕಾಲ್ಚೀಲಕ್ಕೆ ತೇಪೆ ಹಾಕಲಿಕ್ಕೂ ಬಟಾಟೆ ತುಂಡು ಮಾಡಲಿಕ್ಕೂ ಅರಿಯರು ಎಂಬದಾಗಿ ವೈಟ್ಸೆಡ್ ಎಂಬ ಆರ್ಚಿಬಿಶೋಪರವರು ಹೇಳುವರು.

ರಿಚ್ಮ್ಸ್ಲ್ಯ ಎಂಬ ಹೊಟೇಲಿನ ಮೇಜಿಯ ಮೇಲೆ ಒಂದು ವಿಚಿತ್ರ ತರದ ಭಕ್ಷವು ಇಡಲ್ಪಟ್ಟಿತ್ತು. ಅತಿಥಿಗಳು ಈ ಭಕ್ಷವನ್ನು ತುಂಡು ಮಾಡಲಿಕ್ಕಿರುವಾಗ ಅದರಿಂದ ಚಲೋ ಉಡಿಗೆ ತೊಡಿಗೆಗಳನ್ನುಟ್ಟಿರುವ ಒಬ್ಬ ಚಿಕ್ಕ ಹುಡುಗಿಯು ಹೊರಟು ಬಂದು ಅತಿಥಿಗಳಿಗೆ ನಮಸ್ಕರಿಸಿದಳು. ಇವಳು ಲೋಕದಲಿ ಬರೇ ಚಿಕ್ಕ ಹೆಂಗಸಾಗಿರುತ್ತಾಳೆ. ಇವಳು ೨೫ ಅಂಗಲ ಉದ್ದವಿದ್ದಾಳೆ. ೧೨ ರಾತ್ಲ ಭಾರವಿರುವಳು. ಇವಳು ಆ ಹೊಟೇಲಿನಲಿದ್ದುಕೊಂಡು ಅತಿಥಿಗಳನ್ನು ವಿವಿಧ ರೀತಿಯಲ್ಲಿ ಸಂತೋಷಪಡಿಸುತ್ತಿರುವಳು.

ಒಬ್ಬ ಆಂಗ್ಲೇಯನು ತಾನು ಒಂದು ವರ್ಷದಲ್ಲಿ ೧೮೦ ದೊಡ್ಡ ರೊಟ್ಟಿ ೧೮೦ ರಾತ್ಲ ಮಾಂಸ, ೬೦ ಗೆಲನ್ ಹಾಲು, ೩೦೦ ಮೊಟ್ಟೆಯನ್ನು ತಿಂದಿದ್ದೇನೆಂಬ ಲೆಕ್ಕವನ್ನು ಬರದಿಟ್ಟಿರುವನು.

ಎಡಿನ್ಬರ್ಗಿನಲಿ ಒಬ್ಬ ಹೆಂಗಸಿಗೆ ಮೀನಿನ ಹೊಟ್ಟೆಯಲ್ಲಿ ೧೨ ವಜ್ರಗಳು ಕೂಂಡ್ರಿಸಿದ ಒಂದು ಕಿವಿಯೊಂಟೆ ಸಿಕ್ಕಿರುವುದು.

ಕೇಲಿಫೋರ್ನಿಯದಲ್ಲಿ ಒಂದು ದೇವಾಲಯವು ಒಂದೇ ಮರದಿಂದ ಕಟ್ಟಲ್ಪಟ್ಟಿರುವುದು. ಈ ಮರದ ಅರ್ಧ ವ್ಯಾಸವು ೮೦ ಅಡಿ. ಈ ಮರಕ್ಕೆ ಸುಮಾರು ೮೦೦ ವರ್ಷ ಪ್ರಾಯವಾದೀತಂತೆ.

ವೈಯೋಮಿಂಗ್ ಎಂಬಲ್ಲಿ ಒಂದು ಜಾತಿಯ ವಿಚಿತ್ರ ತರದ ಹಾವು ಇದೆ. ಈ ಹಾವಿನ ಹಿಂದಿನ ಭಾಗ ೧೩ ಅಡಿ. ಕುತ್ತಿಗೆಯ ಹಿಂಭಾಗ ೧೨ ಅಡಿ ಎತ್ತರವಿದೆ. ಕುತ್ತಿಗೆಯೂ ತಲೆಯೂ ೨೪ ಅಡಿ ಉದ್ದವಿದೆಯಲ್ಲದೆ ಬಾಲವು ಸುಮಾರು ೫೦ ಅಡಿ ಉದ್ದ ಇದೆ. ಇದನ್ನು ಕಾರ್ನೆಜಿಸ್ ಡಿಪ್ಲೋಡಿಕಸ್ ಎಂಬದಾಗಿ ಕರೆಯುತ್ತಾರೆ. ಅದು ನೋಟಕ್ಕೆ ಸಸ್ತನ ಪ್ರಾಣಿಯಂತೆ ಕಂಡರೂ ಅದರ ದೇಹರಚನೆಯು ಹಾವಿನ ಹಾಗೆ ಇದೆ.

ಕಣ್ಣಿನಿಂದ ಅತಿರೇಕ ಕೆಲಸ ಮಾಡುವದು, ಕೆಟ್ಟ ವಾಯುವನ್ನು ಶ್ವಾಸೋಚ್ಛ್ವಾಸ ಮಾಡುವದು, ಮಾದಕ ಪದಾರ್ಥ ಕುಡಿಯುವದು, ಇವೆಲ್ಲಾ ತಲೆಶಿಡಿತಕ್ಕೆ ಮುಖ್ಯ ಕಾರಣವಾಗಿವೆ.

ಕೊಹಿನೂರ್ ಎಂಬ ವಜ್ರವನ್ನು ಐದು ಸಾವಿರ ವರ್ಷಗಳ ಹಿಂದೆ ಒಬ್ಬ ಚಕ್ರವರ್ತಿಯು ಧರಿಸಿದ್ದನು. ಅನಂತರ ಒಬ್ಬರ ಕೈಯಿಂದ ಒಬ್ಬರಿಗೆ ಬಂದು ಪಂಜಾಬಿಗೆ ಬಂದು ಈಗ ಇಂಗ್ಲಿಷರ ಕೈಸೇರಿತು. ಕೊಹಿನೂರು ಯಾರ ಕೈಯಲ್ಲಿದೆಯೋ ಅವರ ಕೈಯಲ್ಲಿ ಹಿಂದೂಸ್ಥಾನವು ಕೈಸೇರುವದು, ಇದನ್ನು ಗಂಡಸು ಧರಿಸಿದರೆ ಆಪತ್ತು ಸಂಭವಿಸುವುದು ಎಂಬದಾಗಿ ಈ ವಜ್ರದ ವಿಷಯ ಪುರಾಣ ಮಾತಿದೆ. ಎಡ್ವರ್ಡ್ ಚಕ್ರವರ್ತಿಯವರು ತನ್ನ ಕಿರೀಟದಲ್ಲಿ ಇದನ್ನು ಇಡುವರೆ ಆಲೋಚಿಸಿದಾಗ ಆ ಆಲೋಚನೆಯನ್ನು ಬಿಟ್ಟುಬಿಡಬೇಕಾಗಿ ಹಿಂದೂಸ್ಥಾನದಿಂದ ಎಡ್ವರ್ಡ್ ಮಹಾರಾಜರಿಗೆ ಹಲವು ಪತ್ರಗಳು ಹೋಗಿದ್ದವು.

ಒಡೇಸ ಎಂಬಲ್ಲಿ ಪೋಲಿಸಿನವರಿಗೆ ಬಹು ಪ್ರಯೋಜನಕಾರಿಯಾದ ಒಂದು ನಾಯಿ ಇದೆ. ಒಡೇಸದ ಒಂದು ಹಳ್ಳಿಯಲ್ಲಿ ಒಬ್ಬನು ಖೂನಿ ಮಾಡಲ್ಪಟ್ಟನು. ಘಾತುಕರ ಪತ್ತೆ ಹಿಡಿಯುವುದು ಪೋಲಿಸಿನವರಿಂದ ಅಸಾಧ್ಯವಾಯಿತು. ಆದರೆ ಪೋಲಿಸಿನವರು ಈ ನಾಯಿಯನ್ನು ಜತೆಯಲಿ ಹಿಡಕೊಂಡು ಘಾತುಕರ ಪತ್ತೆ ಹುಡುಕಲು ಹೋದಾಗ ಈ ನಾಯಿಯು ಪೋಲಿಸಿನವರನ್ನು ಒಡೇಸಕ್ಕೆ ೨೦ ಮೈಲು ದೂರ ಇರುವ ಒಂದು ಹಳ್ಳಿಗೆ ನಡಿಸಿಕೊಂಡು ಹೋಗಿ ಒಂದು ಕೊಲೇಜಿಯ ಹತ್ತರ ನಿಂತಿತು. ಪೋಲಿಸಿನವರು ಬಾಗಲು ತೆರದಾಗ ನಾಯಿಯು ಒಳಕೋಣೆಗೆ ಓಡಿ ರಕ್ತ ಕಲೆಗಳಿರುವ ಕೆಲವು ವಸ್ತ್ರ ಚಿಂದಿಗಳನ್ನು ಗೋಡೆಯ ಮೇಲಿನ ಗೂಟಗಳಿಂದ ಎಳದು ಕೆಳಗೆ ಹಾಕಿತು. ಅನಂತರ ನಿಕಲೋಯಿ ಎಂಬ ಒಬ್ಬ ಕ್ಲಾರ್ಕನ ಕಾಲಿಗೆ ಹೋಗಿ ಕಚ್ಚಿತು. ಪೋಲಿಸಿನವರು ಆತನನ್ನು ಹಿಡಿದಾಗ ಆತನು ಸತ್ಯಾರ್ಥವನ್ನು ಅರಿಕೆಮಾಡಿದನು. ಈ ನಾಯಿಯ ಸಹಾಯದಿಂದಲೇ ಕಳವಾದ ಮ್ಹಾಲುಗಳನ್ನು ಪೋಲಿಸಿನವರು ಕಂಡು ಹಿಡಿದರು. ಈ ನಾಯಿಯು ೧೮ ತಿಂಗಳಿಂದ ಈ ವಿಧದ ಕೆಲಸ ಮಾಡುತ್ತಿದೆ.



ಪೊಪ್ಯುಲರ್ ಹಂಬರ್ ಕ್ರಯ ರೂಪಾಯಿ 120.

ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯ್ಕಾಕಲುಗಳನ್ನು ಪಡಿಯಲು ಸಾಧ್ಯವಲ್ಲ.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಶೋಸಿಯೇಷನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.



ಸಿಂಗರ್ ರೊಯಲ್ ಕ್ರಯ ರೂಪಾಯಿ 115.

"ಅಮೇರಿಕದ ವಿಶಿಷ್ಟತೆ"

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವುದಕ್ಕೆ ಅಥವಾ ಕಾರ್ಯ ಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿ ಬರುವ ಕ್ಷಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಗ್ಲಾನಿಯೂ, ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ್ಪಪದಾರ್ಥಗಳಿರುವದರ—ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹ ಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವುದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು-ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ.2-0-0; ಒಂದು ಸೀಸೆಯಲ್ಲಿ 40 ಗಳಿಗೆಗಳಿವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮ. ಜೇ. ಸಿ. ಬ್ರಿತೋ (ಪೊಂಡಾ-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದ ನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮ. ಜಿ. ಆರ್. ಗಾಯಕವಾಡ, (ಸಕ್ರಿಯ ಮಾಮಲತದಾರರು)—ವಿ. ಪಿ. ದ್ವಾರಾ ಆದಷ್ಟು ತ್ವರೆಯಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳ ಉತ್ತಮವಿದೆ.

The Anglo Indian Drug & Chemical Company.

ಉಪನ್ಯಾಸಗಳ ಉತ್ತಮಾಲಯ) **ಮಧುರವಾಣೀ.** (ಗದ್ಯಗ್ರಂಥಗಳ ಭಾಂಡಾಗಾರ.

ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತ ಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಗ್ರಂಥಗಳೂ ಸಾಮಾಜಿಕ, ನೀತಿ, ಮತ, ವಿದ್ಯೆ, ತತ್ವಶಾಸ್ತ್ರಕ್ಕೆ ಸಬಂಧಪಟ್ಟ ಉತ್ತಮೋತ್ತಮ ಉಪನ್ಯಾಸಗಳೂ ಅನೇಕ ಉಪಯುಕ್ತ ವಿಷಯುಗಳೂ ಬೇರೆಬೇರೆ ಪುಟಗಳೊಡನೆ ಪ್ರತಿ ತಿಂಗಳಲ್ಲಿಯೂ ತಪ್ಪದೆ ಪ್ರಕಟಿಸಲ್ಪಡುವವು. ಕರ್ಣಾಟಕದಲ್ಲಿ ಪ್ರಖ್ಯಾತರಾದ ಲೇಖಕರೆಲ್ಲಾ ಮಧುರವಾಣಿಯ ಲೇಖಕರಾಗಿರುವರು. ಚಂದಾದಾರರಿಗೆ ಅನೇಕ ಪುಸ್ತಕಗಳು ಅರ್ಧ ಬೆಲೆಗೆ ದೊರೆಯುವವು. ಮಾದರಿ ಸಂಚಿಕೆಗೆ ಬೆಲೆ ಇಲ್ಲ. ಕ್ರಯದ ಪಟ್ಟಿಯನ್ನು ಅಪೇಕ್ಷಕರಿಗೆ ಮುಫತ್ತಾಗಿ ರವಾನಿಸುವೆವು.

ವಿಳಾಸ:— ಹನುಮಾನ್ ಮತ್ತು ಕಂಪೆನಿ.
ಮೈಸೂರು.

ಮಹನೀಯರೇ ನಿಮ್ಮ ರೋಗಗಳಿಂದ ಧೈರ್ಯಗುಂದ ಬೇಡಿ! ನೋಡಿರಿ ಬೆಲೆಯಲ್ಲಿ ಅಗ್ಗ!! ಗುಣದಲ್ಲಿ ಪೆಟ್ಟೊಂದು ತುಂಡೆರಡು!!! ರೋಗಗಳಿಂದ ಅಧೈರ್ಯ ಪಟ್ಟವರಿಗೆ ಸಂಪೂರ್ಣ ನಂಬಿಕೆಯನ್ನುಂಟುಮಾಡುವುದು!!! ಆ ನಂಬಿಕೆಯೇ

ಜ್ವರಾಮೃತ.

ಈ ಔಷಧವು ಮಲೇರಿಯ ಜ್ವರ, ದಿನ ತಪ್ಪಿ ದಿನ ಬರುವ ಜ್ವರ, ಕಾಲಕಾಲದ ಜ್ವರ, ಬೆಳದಗೆಸ್ತೆ ಮತ್ತು ಕೊಂಬೆಯಿಂದುಂಟಾಗುವ ಜ್ವರಗಳನ್ನು ನೆಕ್ಕುವ ಮಾರಿಯೇ ಜ್ವರಾಮೃತ. ಎಲ್ಲಾ ತರದ ಔಷಧಗಳನ್ನು ಸೇವನೆ ಮಾಡಿ ಗುಣಹೊಂದದೆ ಇರುವ ಖಾಯಿಲಸ್ಥರೇ ಒಂದು ಸಾರಿ ಈ ಜ್ವರಾಮೃತವೆಂಬ ಔಷಧವನ್ನು ಸೇವನೆ ಮಾಡಿ ನಿಮ್ಮನ್ನು ದಿನನಿತ್ಯವೂ ಪೀಡಿಸುವ ಬಾಧೆಗಳನ್ನು ನಿವಾರಣೆ ಮಾಡಿಕೊಂಡು ಆರೋಗ್ಯಸ್ಥರಾಗಿರಿ. ಚಿಕ್ಕ ಸೀಸೆ 1ಕ್ಕೆ ಆಣೆ 0—8—0 ದೊಡ್ಡ ಸೀಸೆ 1ಕ್ಕೆ ಆಣೆ 0—14—0 ಸಣ್ಣ ಸೀಸೆ ಡಜನ್ 1ಕ್ಕೆ ರೂ. 5—8—0 ದೊಡ್ಡ ಸೀಸೆ ಡಜನ್ 1ಕ್ಕೆ ರೂ. 10—0—0. ಪೋಸ್ಟೇಜು ಪ್ಯಾಕಿಂಗ್ ವಗ್ಗೈರೆ ಪ್ರತ್ಯೇಕ.

ಟೆನಟನ್ ಚೂರ್ಣ.

ಈ ಚೂರ್ಣವು ಹುಳ ಕಡ್ಡಿ ಮತ್ತು ಇತರ ಎಲ್ಲಾ ತರದ ರೋಗಗಳನ್ನು ಕ್ಷಣಮಾತ್ರದಲ್ಲಿಯೇ ಗುಣಪಡಿಸುವುದು. ಯಾವ ತರದ ಕೇಡನ್ನುಂಟುಮಾಡದ ಔಷಧಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಹಚ್ಚುವುದರಿಂದ ಉರಿಯು ಸಹ ಉಂಟಾಗುವುದಿಲ್ಲ ಮತ್ತು ಒಳ್ಳೇ ಸುವಾಸನೆಯುಳ್ಳದ್ದಾಗಿರುತ್ತದೆ. ಇದನ್ನು ಹಚ್ಚಿದ ಎರಡು ಮೂರು ದಿವಸಗಳಲ್ಲಿಯೇ ಇದರ ಗುಣತ್ವವು ತಿಳಿಯಬರುವುದು. ಬೆಲೆ ಡಬ್ಬಿ 1ಕ್ಕೆ ಆಣೆ 0—4—0 ಡಜನ್ 1ಕ್ಕೆ ರೂ 2—12—0 ಪೋಸ್ಟೇಜು ಪ್ಯಾಕಿಂಗ್ ವಗ್ಗೈರೆ ಪ್ರತ್ಯೇಕ.

ಕೇಶಮಂಜರಿ ಎಣ್ಣೆ.

ಈ ಎಣ್ಣೆಯನ್ನು ಅನೇಕ ಔಷಧಗಳಿಂದ ತಯಾರುಮಾಡಲ್ಪಟ್ಟಿರುತ್ತದೆ. ಇದನ್ನು ಉಪಯೋಗಿಸುವುದರಿಂದ ಮೆದುಳನ್ನು ತಂಪಾಗಿಯೂ, ಕೂದಲನ್ನು ಕಪ್ಪಾಗಿಯೂ, ರೇಷ್ಮೆಯಂತೆ ನುಣುಪಾಗಿಯೂ ಮಾಡುವುದಲ್ಲದೆ ಕೂದಲು ಅಧಿಕಧಿಕವಾಗಿ ಬೆಳೆಯುವಂತೆ ಮಾಡಿ ಉದುರುವ ಕೂದಲನ್ನು ನಿಲ್ಲಿಸುತ್ತದೆ. ಅಧಿಕ ಮೆದುಳು ಕೆಲಸ ಮಾಡುವವರು ಈ ಎಣ್ಣೆಯನ್ನು ಅಗತ್ಯವಾಗಿ ಉಪಯೋಗಿಸಬೇಕಾಗಿರುತ್ತದೆ. ಈ ಎಲ್ಲಾ ಗುಣಾತಿಶಯಗಳಿಂದೊಡಗೂಡಿರುವುದಲ್ಲದೆ ಇದನ್ನು ತಲೆಯ ಮೇಲೆ ಹಚ್ಚಿಕೊಂಡು ಹೋದಲ್ಲಿ ಅಜುಬಾಜಿನ ಜನರು ಇದರ ಸುವಾಸನೆಗೆ ಬೆರಗಾಗುವರು. ಆದ್ದರಿಂದ ಪ್ರತಿಯೊಂದು ಮನೆಯಲ್ಲಿ ಒಂದು ಶೀಸೆ ಯಾವಾಗ್ಯೂ ಇಟ್ಟಿರಬೇಕಾಗಿರುತ್ತದೆ. ಬೆಲೆ ಸೀಸೆ 1ಕ್ಕೆ ಆಣೆ 0—12—0 ಡಜನ್ 1ಕ್ಕೆ ರೂ. 8—8—0 ಪೋಸ್ಟೇಜು ಪ್ಯಾಕಿಂಗ್ ವಗ್ಗೈರೆ ಪ್ರತ್ಯೇಕ.

ಆದ್ದರಿಂದ ರೋಗಗಳಿಂದ ಪೀಡಿತರಾಗಿರುವ ಪ್ರತಿಯೊಬ್ಬರು ಒಂದು ಸಾರಿ ಈ ಔಷಧಗಳನ್ನು ಉಪಯೋಗಿಸಿ ಬಾಧಿಸುತ್ತಿರುವ ರೋಗಗಳಿಂದ ಗುಣವನ್ನು ಹೊಂದಿಕೊಂಡು ದೀರ್ಘಾನಂದ ಪಡೆಯಿರಿ. ಸಂತೋಷವೇ ಯೌವ್ವನ! ಚಿಂತೆಯೇ ಮುಪ್ಪು!!

ವಿಳಾಸ:—ಟಿ. ಡಿ. ಮುಕರ್ಜಿ ಅಂಡ್ ಕೊ,
ಚೌಕ್ ಬೆನಾರೆಸ್ ಸಿಟಿ.

Address:—**T. D. Mukherjee & Co.,**
Chowk, Benares City.

ವಿಶ್ವಾಂಜನ ಪೈನ್ ಬಾಂ.

ಎಲ್ಲಾ ಭಾಗ್ಯಕ್ಕಿಂತಲೂ ಆರೋಗ್ಯ ಭಾಗ್ಯವು ದೊಡ್ಡದು. ಈ ಭಾಗ್ಯವನ್ನು ಕೊಡುವುದು ಯಾವದು? ನಮ್ಮ ವಿಶ್ವಾಂಜನ ಪೈನ್ ಬಾಂ ಅಲ್ಲವೇ? ಇದರಿಂದ ತಲೆ ವೇದನೆ, ವಕ್ರಶೂಲ, ವಾತ, ಸಂಧುವಾತ, ಕಡತ, ಜಜ್ಜಿದ ಘಾಯ, ಶೀತ, ಗಂಟ್ಲುನೋವು, ಸೊಂಟನೋವು, ಜಖಮು, ಉಳುಕು, ಎದೆನೋವು, ಆನೆಕಾಲು, ವ ಇತರ ಎಲ್ಲಾ ತರದ ನೋವುಗಳು ನಿಸ್ಸಂಶಯವಾಗಿ ಗುಣ ಹೊಂದುತ್ತವೆ. ಎಲ್ಲಾ ಔಷಧಗಳಿಗಿಂತಲೂ ಶ್ರೇಷ್ಠವಾದುದೆಂದು ಅನೇಕ ಜನರಿಂದ ಶಿಫಾರಸು ಮಾಡಲ್ಪಟ್ಟಿದೆ. ಬಾಟ್ಲಿ 1ಕ್ಕೆ —0—8—0. 3 ಬಾಟ್ಲಿ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಇಲ್ಲ.

ವಿಳಾಸ:—ಬಿ. ವಿ. ಪಿ. ಭಂಡಾರಕರ್,
ವಿಶ್ವಾಂಜನ ಡಿಪೋ,
ಗೋಳಿಕಟ್ಟೆಬಜಾರ್, ಮಂಗಳೂರು ದ. ಕ.

ಪ್ರಕಟಣೆ.

ಉತ್ತರ ಆರ್ಕಾಡು ಜಿಲ್ಲೆಯ ಅರ್ನಿ ಮತ್ತು ಒನ್ನುಪುರಾಮಿನಲ್ಲಿ ನೇಯಲ್ಪಡುವ ರೂ 13ರಿಂದ ರೂ 150 ವರೆಗಿನ ಕ್ರಯದ ಸ್ತ್ರೀಯರ ಉಪಯೋಗಾರ್ಥವಾದ ರೇಶ್ಮೆ ಮತ್ತು ಗೋಟು ತೆಗೆದ ವಸ್ತ್ರಗಳು ರಿಯಾಯತಿ ದರದಲ್ಲಿ ಮಾರಲ್ಪಡುವವು. ವಸ್ತ್ರ ಕೊಂಡುಕೊಳ್ಳುವ ವ್ಯಾಪಾರಸ್ಥರಿಗೆ ಹಣ ಪಾವತಿ ಮಾಡುವರೆ ಒಂದು ತಿಂಗಳ ಸಮಯ ಕೊಡೋಣಾಗುವುದು. ಒಂದೆರಡು ವಸ್ತ್ರಗಳನ್ನು ಕೊಂಡುಕೊಳ್ಳುವವರಿಗೆ ವಿ. ಪಿ. ಮೂಲಕ ಕಳುಹಿಸೋಣಾಗುವುದು. ಒನ್ನುಪುರಾಮಿನ ರುದ್ರಾಕ್ಷ ಪೇಟೆಯಲ್ಲಿ ತಯಾರಿಸಲ್ಪಡುವ ವಿವಿಧ ಬಣ್ಣದ ಸ್ತ್ರೀಯರ ವಸ್ತ್ರಗಳೂ ಸಹಾ ಅಗ್ಗವಾಗಿ ಅಂದರೆ ರೂ. 3-15-6ರಿಂದ ರೂ. 7-12-0 ದರದಲ್ಲಿ ಮಾರಲ್ಪಡುವವು. ಗಿರಾಕಿಗಳು ವಸ್ತ್ರದ ಬಣ್ಣವನ್ನೂ ನಮೂನೆಯನ್ನೂ ಪರೀಕ್ಷಿಸಿ ನೋಡ ಬಹುದು. ಈ ವಸ್ತ್ರಗಳನ್ನು ಒಂದು ಸಾರಿ ಕೊಂಡು ಕೊಂಡವರು ಇತರರಿಂದ ವಸ್ತ್ರಗಳನ್ನು ಕೊಂಡುಕೊಳ್ಳರೆಂಬದು ನಿಶ್ಚಯ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ವಿಳಾಸ:—ಅತ್ತೂರು ವೈಕುಂಟ ಪ್ರಭು.
ರೇಶ್ಮೆ ಮತ್ತು ಗೋಟಿನ ವಸ್ತ್ರ ವ್ಯಾಪಾರಸ್ಥ.
ತಿರುವೆತ್ತಿಪುರಂ, ಉತ್ತರ ಆರ್ಕಾಡುಜಿಲ್ಲೆ.

ಅತ್ಯುಪಯುಕ್ತವಾದ ಕೆಲವು ಪುಸ್ತಕಗಳು.

ಕುಮುದಾ	0—8—0
ಮಹಾರಾಣಿ ಗುಣಶೀಲೆ	0—2—0
ಮುಕ್ತಹಾರ	0—1—6
ಸನಾತನ ಧರ್ಮ ಪ್ರಶ್ನೋತ್ತರ...	0—1—0
ಕೃಷ್ಣಜನ್ಮ ನಾಟಕ	0—4—0
ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನೆ	0—3—0
ಪ್ರಾತಃರಾಹ್ನಿಕ ಪದ್ಧತಿ	0—3—0
ದೇವಪೂಜಾ ಪದ್ಧತಿ	0—3—0
ಬ್ರಹ್ಮಯಜ್ಞ ವೈಶ್ವದೇವ	0—3—0
ವಿಷ್ಣು ಸಹಸ್ರನಾಮ ಕೃಷ್ಣಾಷ್ಟೋತ್ತರ ನಾಮಾವಳಿ ...	0—2—6
ವಾಯುಸ್ತುತಿ	0—2—0
ದ್ವಾದಶ ಸ್ತೋತ್ರ	0—2—0
ಲಕ್ಷ್ಮೀ ಶೋಭಾನೆ ಹಾಡು	0—2—0
ಹರಿಭಕ್ತಸಾರ	0—1—0
ಉದಯರಾಗ	0—4—0
ಸ್ವಪ್ನಪದ, ಮಧ್ವನಾಮ	0—2—0
ಇಂಗ್ಲಿಷ ರಶೀದಿ 50 ಫೋರ್ಮುಗಳ ಪುಸ್ತಕ	0—6—0
ಕನ್ನಡ ರಶೀದಿ 25 ಫೋರ್ಮುಗಳ ಪುಸ್ತಕ	0—2—0
ಗೇಣಿ ರಶೀದಿ 25 ಫೋರ್ಮುಗಳ ಪುಸ್ತಕ	0—3—0
ಪರ್ಮಟು ಫೋರ್ಮು 100ಕ್ಕೆ	0—10—0
ಗೇಣಿಚೀಟು ಫೋರ್ಮು 100ಕ್ಕೆ	0—10—0
ಪ್ರೊಮಿಸರಿ ನೋಟು ಫೋರ್ಮು 100ಕ್ಕೆ	0—6—0
ಚೆಕ್‌ರೋಲ್ 25 ಪುಟಗಳ ಪುಸ್ತಕ	0—8—0
„ 50 „	0—14—0
„ 100 „	1—8—0

ಫರ್ಲೋಂಗ್ ಬೂಕುಗಳೂ ವಿವಿಧ ನಮೂನೆಯ ನೋಟುಬೂಕುಗಳೂ ಅಂಗಡಿ ಭಂಡಸಾಲೆ ವಗ್ಗೈರೆ ವ್ಯಾಪಾರಸ್ಥರಿಗೆ ಬೇಕಾಗುವ ವರ್ಗ ಊಗದ ಪುಸ್ತಕಗಳೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಲಾ ರಿಪೋರ್ಟು ವ ಇತರ ಪುಸ್ತಕಗಳು ಉತ್ಕೃಷ್ಟವಾದ ಮಾರ್ಬಲ್ ಕೆಲಿಕೊ ಚರ್ಮ ಮೊದಲಾದವುಗಳಿಂದ ಬಹಳ ನಾಜೂಕಾಗಿ ಬೈಂಡು ಮಾಡಲ್ಪಡುತ್ತವೆ.

ಲಗ್ನ ಪತ್ರಿಕಗಳು, ಲೆಟರ ಪೇಪರುಗಳು, ಬಿಲ್ ಫೋರ್ಮುಗಳು, ವಿಜಿಟಿಂಗ್ ಕಾರ್ಡುಗಳು, ಆರ್ಡರುಗಳು ವಗ್ಗೈರೆ ಎಲ್ಲಾ ತರದ ಛಾಪೆಯ ಕೆಲಸಗಳನ್ನು ಬಹಳ ಅಗ್ಗವಾದ ದರದಲ್ಲಿ ಮಾಡಿಕೊಡುವರು. ದರಗಳಿಗೂ ಇತರ ಎಲ್ಲಾ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ನೂತನ ಸೃಷ್ಟಿ! ಸುಲಭ ಕ್ರಯ!

20ನೇ ಶತಮಾನದ ಆಶ್ಚರ್ಯಕರವಾದ ರೋಮಸಂಹಾರಿ ಸಬ್ಬು.

ಈ ಸಾಬೂನನ್ನು ಒಂದು ಸಲ ಉಪಯೋಗಿಸುವದರಿಂದ ದೇಹದ ಯಾವ ಭಾಗದಿಂದಲಾದರೂ ಸೆಗೆ, ಉರಿ ಮುಂತಾದ ಯಾವ ಬಾಧೆಗಳೂ ಇಲ್ಲದೆ ರೋಮವನ್ನು ತೆಗೆಯಬಹುದು. ಅನುಭವದಿಂದ ತಿಳಿಯತಕ್ಕದ್ದು ಮಾತಿನಿಂದ ತಿಳಿಯುವುದಿಲ್ಲವು. ಒಂದು ಉಪಯೋಗಿಸಿದರೆ ಇದರ ನಿಜಾಂಶವು ತಿಳಿಯುವುದು. 3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ ರೂ. 1-4-0 ಅಂಚೆ ಹಾಸಲು ಮಾಫಿ. ಒಂದು ಸಾಬೂನು ಕ್ರಯ ಆಣೆ 0-10-0 ಅಂಚೆ ಹಾಸಲು ಮಾಫಿ.

ಸಿ. ಜೆ. ಆರ್. ಚಂದ್ರ
29 ಲಿಂಗಿಚೆಟ್ಟಿ ಬೀದಿ ಮದ್ರಾಸು.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.
ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.
ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿಲೈಫ್‌ಎಶ್ಯುರೆನ್ಸ್‌ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜೆ. ಪಿ. ಇಂಡಿಯಾ ಬೇಂಕ್ ಮುಂಬಯಿ ಕೋಓಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ ಎಫ್, ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬ್ದಾರಿಗಳಲ್ಲಿಯೂ ಹಿಂದೂಸ್ತಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಸೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗ್ರಂಥಿಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.
ಸರ್ವರೂ ತರಿಸಿಕೊಂಡು ಸಂತೋಷ ಪಡಿ.
ಬರುವ ಮೇ ತಿಂಗಳು ಅಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಜೂಕಾದ ಕೈರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಸೆ (5) ಸ್ಟೋನ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷೆ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಷೆಯಾದ ಹಾವು ಇರುತ್ತದೆ.) 12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ... ವೆಂಕಟಾಚಲಯ್ಯರ್ ಬೀದಿ ಮದ್ರಾಸು.

ಫೌಂಟನ್‌ಪೆನ್,



14 ಕ್ಯಾರ್ರ್ಯ ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ಇಂಗ್ಲೀಷ್ ಅಕ್ಷರದ ಪೆಟ್ಟಿಗೆ.

ಇದರಲ್ಲಿ "ಎ" A ಮೊದಲುಗೊಂಡು "ಸಡ್" Z ವರೆಗಿನ ಇಪ್ಪತ್ತಾರು ಅಕ್ಷರಗಳೂ 1ರಿಂದ 10ರ ವರೆಗಿನ ಅಂಕೆಗಳೂ ಆಯಾ ಅಕ್ಷರದ ಉಪಯೋಗದಂತೆ ಪ್ರತಿಯೊಂದು 5 10-12 ಈ ರೀತಿ ಇವೆ. ಇವು ಉತ್ತಮವಾದ ರಬ್ಬರಿನಲ್ಲಿ ಅರ್ಧ ಕಾಲು ಇಂಚು ದಪ್ಪವಾಗಿ ತಯಾರುಮಾಡಲ್ಪಟ್ಟಿವೆ. ಅಚ್ಚಿಟ್ಟರೆ ಬಲು ಸುಂದರವಾಗಿಯೂ ಸ್ಫುಟವಾಗಿಯೂ ಇರುವವು. ಈ ಅಕ್ಷರಗಳನ್ನು ಬೇಕುಬೇಕಾದಂತೆ ಹಿಡಿಯಲ್ಲಿ ಜೋಡಿಸಿ ಅಚ್ಚಿಡಬಹುದು. ಹೆಸರು ವಿಳಾಸಗಳನ್ನೂ ಕಾರ್ಡು ಕವರುಗಳನ್ನೂ ಇತರ ಸಣ್ಣ ವಿಷಯಗಳನ್ನೂ ಈ ಅಕ್ಷರಗಳಿಂದಲೇ ಪ್ರಿಂಟು ಮಾಡಬಹುದು. ಹಿಡಿಯು ಒಳ್ಳೆಯ ಗಟ್ಟಿ ಲೋಹದಲ್ಲಿ ತಯಾರುಮಾಡಲ್ಪಟ್ಟಿದೆ. ಇಂಕಿಯ ಅಟ್ಟೆಯು ಸ್ವತಃ ಶಾಯಿನ್ನು ಒದಗಿಸಿಕೊಳ್ಳತಕ್ಕದ್ದು. ಎರಡು ಮೂರು ವರುಷಗಳ ವರೆಗೂ ಅದರಲ್ಲಿ ಮಶಿಯು ಒಣಗುವುದೇ ಇಲ್ಲ. ರಬ್ಬರು ಅಕ್ಷರಗಳೂ ಹಿಡಿಯೂ, ಅಟ್ಟೆಯೂ ಉಳ್ಳ ಈ ಮುದ್ದಾದ ಪೆಟ್ಟಿಗೆಯು ಜೇಬಿನಲ್ಲಿದ್ದರೆ ಸಣ್ಣ ಮುದ್ರಣಾಲಯವೇ ಸಂಗಡ ಇದ್ದಂತೆ. ಆದಕಾರಣ ವರ್ತಕರೂ, ಪಟೇಲ ಶಾನುಭೋಗರೂ. ಜಮೀನ್‌ದಾರರೂ, ವಿದ್ಯಾರ್ಥಿಗಳೂ, ವಿಶೇಷ ಕರೆಸ್‌ಪಂಡೆನ್ಸ್ ಉಳ್ಳ ಜನರೂ ಈ ಪೆಟ್ಟಿಗೆಯನ್ನು ಅವಶ್ಯ ಸಂಗ್ರಹಿಸಬೇಕು. ಸರ್ವರಿಗೂ ಅನುಕೂಲಿಸುವಂತೆ ಬೆಲೆಯನ್ನು ಸುಲಭವಾಗಿ ಇಟ್ಟಿದೆ.

ಒಟ್ಟು 127 ಅಕ್ಷರಗಳುಳ್ಳದ್ದು. ಬೆಲೆ ರೂ. 3—0—0
247 ,, ,, 4—0—0

ಟಪ್ಪಾಲು ಹಾಸಲು ಬೇರೆ.
ವ್ಯಾಪಾರಸ್ಥರಿಗೆ ಕಮಿಶನ್ ಕೊಡುತ್ತೇವೆ.

ನಮ್ಮಲ್ಲಿ ರಬ್ಬರು ಮೊಹರುಗಳೂ, ಅರಗಿನ ಸೀಲುಗಳೂ ತಯಾರಾಗುತ್ತವೆ. ಫೌಂಟನ್‌ಪೇನು ಮೊದಲಾದ ಸಾಮಾನುಗಳು ದೊರೆಯುತ್ತವೆ.

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

—o—

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ. ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು ಟೀಕಾ ತಾತ್ಪರ್ಯ ಶಬ್ದ ಸಮಾಸ ಸಹಿತವಾದ ೧ನೇ ಪರ್ವ ರಘುವಂಶ ರೂ. ೧—೦—೦ ೨ನೇ ಪರ್ವ ರೂ. ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶಾಮಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ ಸಹಿತವಾಗಿ ಈಗತಾನೆ ಪೂರೈಸಿರುತ್ತೆ. ಉತ್ತಮವಾದ ಕ್ಯಾಲಿಕೊ ಬೈಂಡು ರೂ. ೨—೪—೦. ಋಗ್ವೇದ ನಿತ್ಯಕರ್ಮ ೦—೪—೦. ಎಲ್ಲಾ ಪುಸ್ತಕದಪಟ್ಟಿಯೂ ಬೇಕಾದಲ್ಲಿ ಸುಮ್ಮನೇ ಪಡೆಯಬಹುದು.

ಬಿ. ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್, ಬೆಂಗಳೂರು ಸಿಟಿ.

ಇಂದ್ರ ವಜ್ರ.

(1) ಇಂದ್ರ ವಜ್ರ (2) ವಿಕ್ರಮಪೀಠ (3) ಸಸೇಮಿರಾ ಎಂಬ ಬಾಲಕರ ಕಥೆಗಳು. "ಮೊಡರ್ನ್ ರೆವ್ಯೂ" ಮುಂತಾದ ಮಾಸ ಪುಸ್ತಕಗಳಲ್ಲಿಯೂ, ಸಿಸ್ಟರ್ ವಿವೇದಿಕಾಯವರ "ಹಿಂದೂ ಮಕ್ಕಳ ಕಥೆ"ಗಳಲ್ಲಿಯೂ ಇಂಗ್ಲೀಷಿನಲ್ಲಿರುವ ಕಥೆಗಳನ್ನು ತಿದ್ದಿ, ಪರಿಷ್ಕರಿಸಿ, ಸಂಸ್ಕೃತ ಮೂಲಾನುಸಾರವಾಗಿ ಬೆಳೆಸಿ ಈ ಪುಸ್ತಕವು ರಚಿಸಲ್ಪಟ್ಟಿವೆ. ವಿಕ್ರಮಾದಿತ್ಯನ ಸಿಂಹಾಸನದ ಮೇಲಿನ ಗೊಂಬೆಗಳ ಮುವ್ವತ್ತೆರಡು ಕಥೆಗಳೂ, ಭೋಜರಾಜನ ಕಥೆಗಳೂ ಅಡಕವಾಗಿವೆ. ನೀತಿಬೋಧಕವಾಗಿಯೂ ಮನೋರಂಜಕವಾಗಿಯೂ, ಸಚಿತ್ರವಾಗಿಯೂ ಇದೆ. ಪುಟಗಳು 70 ಬೆಲೆ 4½ ಅಣೆ.

ಬಿ. ವೆಂಕಟಕೃಷ್ಣಪ್ಪ ಬಿ. ಎ., ಇವರಿಂದ ರಚಿತವಾದ ಹೊಸಕನ್ನಡದ ನವೀನ ಪ್ರಬಂಧ (ನಾವಲ್)ಗಳು.

ಶ್ಯಾಮ ಕುಬ್ಜ.

(Sir Walter Scott's "Black Dwarf")

ಈ ಕಥೆಯನ್ನೋದುವುದರಿಂದ ಭೂತಪಿಶಾಚಿಗಳ ನಿಜಸ್ಥಿತಿಯು ತಿಳಿಯ ಬಂದು ಮೂಢಭಯವು ತೊಲಗುವುದಲ್ಲದೆ ಅನೇಕ ಲೋಕರಹಸ್ಯಗಳೂ ನೀತಿತತ್ವಗಳೂ ತಿಳಿಯಬರುವುವು. ಇದು ಈ ಪ್ರಪಂಚದ ವಿಷಯದಲ್ಲಿ ಜೀಹಾಸೆಗೊಂಡು ವನವಾಸಿಯಾದ ಒಬ್ಬ ಕುರೂಪಿಯಾದ ಶ್ರೀಮಂತನ ಕಥೆ. ಇದನ್ನೋದುತ್ತೋದುತ ಕಣ್ಣೀರನ್ನು ತಡೆಯುವುದು ಕಷ್ಟವಾಗುವುದು. ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಕ್ಲಿಷ್ಟಪದಗಳ ನಿಘಂಟನ್ನು ಸೇರಿಸಿದೆ.

ಅಂದವಾದ ಮುದ್ರಣ, ಉತ್ತಮವಾದ ಕಾಗದ, ಭದ್ರವಾದ ಬೈಂಡ್, ಕ್ರಯ ೮ ಆಣೆ.

ಚಮತ್ಕಾರ ಚಿಂತಾಮಣಿ.

ಇದೊಂದು ಚಮತ್ಕಾರವಾದ ಕಥೆ. ಇದರ ಸಂವಿಧಾನವು ಮನೋಹರವಾಗಿರುವುದಲ್ಲದೆ ನೀತಿಬೋಧಕವಾಗಿದೆ. ಶೈಲಿಯು ಅತಿ ಕ್ಲಿಷ್ಟವೂ, ಅತಿ ಪೇಲವವೂ ಆಗಿರದೆ ಮಧುರವೂ ಗಂಭೀರವೂ ಆಗಿದೆ. ಇದರಲ್ಲಿ ಅನೇಕ ವಿಧವಾದ ಲೌಕಿಕ ನ್ಯಾಯಗಳೂ, ಉಪಮಾನ ಉಪಮೇಯ ವಿಶೇಷಗಳೂ ತುಂಬಿವೆ. ಕಥೆಯ ಸ್ವಾರಸ್ಯಕ್ಕೋಸ್ಕರ ಮಾತ್ರವೇ ಅಲ್ಲದೆ ಭಾಷಾ ಪಾಂಡಿತ್ಯಕ್ಕಾಗಿಯೂ ಈ ಪುಸ್ತಕವು ಓದಲ್ಪಡತಕ್ಕುದಾಗಿದೆ. ಈ ಗ್ರಂಥದ ಪ್ರತಿಯೊಂದು ಪುಟದಲ್ಲಿಯೂ ಅಪೂರ್ವವಾದ ವರ್ಣನಾ ವೈಖರಿಯೂ, ಶಬ್ದವೈಚಿತ್ರ್ಯವೂ ಕಾಣಬರುತ್ತಿವೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ಗ್ರಂಥವನ್ನು ಪಠಿಸುವುದರಿಂದ ನೀತಿವಂತನೂ, ಜ್ಞಾನವಂತನೂ, ಸರಸಿಯೂ, ವಾಕ್ಚಾತುರನೂ ಆಗುವನು. ಪುಟಗಳು 178 ಡೆಮ್ಮಿ ಕಾಗದವೂ ಮುದ್ರಣವೂ ಉತ್ತಮತರದವು. ಬೈಂಡು ಭದ್ರವಾಗಿದೆ. ಬೆಲೆ 10 ಆಣೆ ಮಾತ್ರ.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—

ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತುಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಳಾಸ (ಪತ್ರ) ☞ ವೇದವಾಹಿನೀ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

ಅನುಭವಸಿದ್ಧವಾದ ವನೌಷಧಗಳು.



೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ನಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳೆಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, **(Cholera Pills)**

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೋಲೆರಾ ಅಥವಾ ಉಬ್ಬಾಲುಜು ಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ 1ರ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಶ್ಚರ್ **(Ague Mixture)**.

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವಾಹಿಕ, ತ್ರಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಲಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು.

ವಿಳಾಸ:—
ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನ್ನಡ.

ಸಿದ್ಧೌಷಧ!] **ಹಾರ್ಲೆಮ್ ಆಯ್ಲ್ (Haarlem Oil).** [ಪರೀಕ್ಷಿಸಿ ನೋಡಿ!

ಹಾರ್ಲೆಮ್ ಆಯ್ಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣಿನೋವು, ನಾನಾ ವಿಧದ ಚರ್ಮರೋಗವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸನೆಯಿಂದ ಎಂಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕುಕಜ್ಜಿ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವದು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0. ಮೂರು ಬಾಟ್ಲಿಗಳಿಗೆ 2—0—0 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗಪ್ರಸಿದ್ಧ ತತ್ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಆಶ್ಚರ್ಯಕರ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ ಧಾತುಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಚಳಿಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ತಾಗಿಸುವದರೊಳಗೆ ಗುಣವಾಗುವದು ರೂ.	0—4—0
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ 1—4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ.	„ 0—4—0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	„ 0—8—0

ವಿಳಾಸ:—

ಗಣೇಶ ರಾಮಚಂದ್ರ ಕರ್ಕಿ ಕಂಪೆನಿ,

ಗಿರಗಾಂ ಮುಂಬಯಿ.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ.

ಸಾರ್ಸಾಪರಿಲಾ.

ಪೂರ್ವದ ಸ್ಥಿತಿ.

ನಂತರದ ಸ್ಥಿತಿ.

ಜಗಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು—ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ, ಬಹಳ ದಿನಗಳ ಹಳೇ ಪ್ರಮೇಹ ಇದೀಮೈ ಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತೆ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶೆರಿಕೆ ಹೊಡಿಯೋಣ ವಗೈರೆ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಲಾಸ:— ಪ್ರೊಪ್ರೈಟರ್,

ಗೌತಮರಾವ್ ಕೇಶವ

ಮೆಡಿಕಲ್ ಪ್ರೆಕ್ಟಿಶನರ್

ಒಪೋಸಿಟ್ ಠಾಕೂರ್ ದ್ವಾರ್ ಪೋಸ್ಟ ಆಫೀಸು, ಮುಂಬಾಯಿ.

ಚಂದಾನಿರ್ಣಯ:—

ವರ್ಷ ೧ಕ್ಕೆ ರೂ. 1-4-0.

ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 16.

ಮಂಗಳೂರು ತಾ. 19ನೇ ಶುಕ್ರವಾರ ಎಪ್ರಿಲ್ 1912.

Amrutanjan Depot, Bombay.

(Regd.) **ಅಮೃತಾಂಜನ.** (ರಿಜಿಸ್ಟರ್ಡ್.)

ಅಮೃತಾಂಜನ — ಅಮೃತಾಂಜನ

ಸರ್ವ ನೋವಿಗೆ — ಸರ್ವ ನೋವಿಗೆ,

ಸಂಜೀವನ. — ಸಿದ್ಧಾಮೃತ.

ಬಾಟ್ಲಿ ಒಂದರ ರೂ. 0—8—0. — ಬಾಟ್ಲಿ ಒಂದರ ರೂ. 0—8—0.

ಅಮೃತಾಂಜನ.

ಎಲ್ಲಾ ಔಷಧಾಲಯಗಳಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವದು.

ವಿಜ್ಞಾಪನೆ:—ನಮ್ಮ ಟ್ರೇಡ್‌ಮಾರ್ಕ್ ಉಳ್ಳ ಹೊರಗಿನ ಟನ್ನಿನ ಕರಡಿಗೆಗಳು ವಿಲಾಯತಿಯಿಂದ ಬಾರದೆ ಇರುವದರಿಂದ ಮುಂಚಿನ ಹಾಗೆ ಕಾಗದದಲ್ಲಿ ಪೇಕ್ ಮಾಡಿದ್ದೇವೆ.

ಗಜಕರ್ಣದ ಮುಲಾಮು.

ಎಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ತಾಗಿಸುವದರೊಳಗೆ ನಾಶವಾಗಿ ಹೋಗುವದು.

ಗಜಕರ್ಣದ ಮುಲಾಮು.

ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತು 0—6—0.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ನೋವು, ಹಲ್ಲುಗಳ ವಾಸನೆ ಇತ್ಯಾದಿಗಳಿಗೆ ರಾಮಬಾಣದಂತಿದೆ.

ದಂತಮಂಜನ.

ಇದರ ಉಪಯೋಗದಿಂದ ಹಲ್ಲುಗಳು ಘಟ್ಟಿಯಾಗುವವು. ಮತ್ತು ಬೆಳ್ಳಗಾಗುವವು ಡಬ್ಬಿ ಒಂದರ ಕಿಮ್ಮತು 0—2—0.

ರಾಜಾರಾಣಿ ನಕ್ಷೆಗಳುಳ್ಳ ಈ ವರ್ಷದ ಸುಂದರವಾದ ಕೆಲೆಂಡರ್ (ತಾರೀಕು ತೋರಿಸುವ ಪಟ್ಟಿ) ಕ್ರಯ 1ರ ವಿ.ಪಿ. ಸಮೇತ 0—4—0.

ಕೇಶವರ್ಧಿನಿ ತೈಲ! ಕೇಶವರ್ಧಿನಿ ತೈಲ!! ಕೇಶವರ್ಧಿನಿ ತೈಲ!!!

ಎಲ್ಲಾ ತೈಲಗಳಿಗಿಂತಲೂ, ಸುವಾಸಿಕವಾಗಿಯೂ, ಮನೋಹರವಾದ ಪರಿಮಳ ಉಳ್ಳದ್ದಾಗಿಯೂ, ಸ್ಪಿರಿಟು ವಗೈರೆ ಇಲ್ಲದೆಯೂ, ತಯಾರಿಸಲ್ಪಟ್ಟದ್ದಾಗಿರುತ್ತದೆ. ಇದರಿಂದ ಕೂದಲುಗಳು ಕಪ್ಪಾಗುವವು, ಉದ್ದವಾಗಿಯೂ ನಯವಾಗಿಯೂ ಬೆಳೆಯುವವು. ಬಾಟ್ಲಿ 1ರ 1—0—0 3ಬಾಟ್ಲಿಗಳಿಗೆ 2—10—0

ನಮ್ಮ ಔಷಧಗಳು ಮಂಗಳೂರಲ್ಲಿ ಈ ಕೆಳಗಿನ ಕಂಪೆನಿಗಳಲ್ಲಿ ದೊರಕುವದು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್, ಪರ್ಲ ಎಂಡ್ ಸನ್ಸ್, ಇಬ್ರಾಹಿಮ್ ಎಲಿಯಾಸ್, ಅರ್ನೋನ್ ಎಂಡ್ ಐಮನ್.

ಕೆಟಲಾಗು ಅಪೇಕ್ಷಿಸುವವರು ದಯಮಾಡಿ ಬರಿಯಿರಿ.

ನವೀನ ಪುಸ್ತಕಗಳು! **ಶೋಭನೆ** ನವೀನಕಾದಂಬರಿಗಳು!!
ಕ್ರಯ 12 ಆಣೆ. ಕ್ರಯ 12 ಆಣೆ.

ಶ್ರೀ ಸುರೇಂದ್ರನಾಥ ಮುಖ್ಯೋಪಾಧ್ಯಾಯರಿಂದ ರಚಿತವಾದ 'ಶೋಭನಾ' ಎಂಬ ಬಂಗಾಳಿ ನಾವಲಿನ ಕನ್ನಡ ಭಾಷಾಂತರ. ಸಂಸಾರ ಚಿತ್ರವು ಸರ್ವರಿಗೂ ಹೃದಯಂಗಮವಾಗುವ ಹಾಗೆ ವರ್ಣಿತವಾಗಿ ಅತ್ಯುತ್ತಮವಾದ ನೀತಿಗಳನ್ನೊಳಗೊಂಡಿದೆ. ಸುಂದರವಾದ ಮುದ್ರಣ. ಉತ್ತಮವಾದ ಕಾಗದ. ಡೆಮ್ಮಿ 154 ಪುಟಗಳು.

ಸೋಮ ಸುಂದರ:–ಬಂಗಾಳಿ ನಾವಲನ್ನು ಹೋಲುವ ಹೊಸಕಥೆ. ವಿದ್ಯಾರ್ಥಿಗಳಿಗೂ ಮಾತಾಪಿತೃಗಳಿಗೂ ಅನೇಕನೀತಿಗಳನ್ನೂ ಬೋಧಿಸುವುದು. ಕ್ರಯ 10 ಆಣೆ.

☞ಇವುಗಳಲ್ಲದೆ ನಮ್ಮಲ್ಲಿ ಪ್ರಸಿದ್ಧ ಕಾದಂಬರಿ ಲೇಖಕರಾದ ಮ। ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟ ವಿಶಿಷ್ಟ ಕಾದಂಬರಿಗಳೂ–ಕರ್ಣಾಟಕ, ಚಂದ್ರಿಕಾ, ಸೀರೀಸ್ ಪುಸ್ತಕಗಳೂ ವಗೈರೆ ದೊರೆಯುವುವು. ಪುಸ್ತಕದ ಪಟ್ಟಿ ಉಚಿತ.

ವಿಳಾಸ:— ಯಂ. ಸುಬ್ಬರಾವ್,
ಜಿ. ಟಿ. ಎ. ಪ್ರೆಸ್, ಮೈಸೂರು.

THE ARYAN WEAVING Co.

General Merchants, Commission Agents and Auctioneers
MANGALORE.

ಸ್ವದೇಶೀ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?
ನಮ್ಮ ಕಂಪೆನಿಗೆ ಒಂದು ಸಲ ಬಂದುನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನೆಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,
ಗವರ್ನ್‌ಮೆಂಟು ಕೋಲೇಜಿನ ಎದುರು
ಮಂಗಳೂರು.

ಫೋಟೋಗ್ರಾಫ್ ಬ್ಲೌಪ್ಹೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42"×25" ರೂ. 75. ಅರ್ಧ ಸ್ಯಾಜ್ 21"×15" ರೂ. 40. ಬಸ್ಟ್ ಸ್ಯಾಜ್ 18"×12" ರೂ. 20. ಸಣ್ಣ ಸ್ಯಾಜ್ 12"×10" ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೋಟೋಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸ ನಮ್ಮ ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೋಟೋಗ್ರಾಫನ್ನು ಕಾರಾಂಶ ಮುಂಗಡ ಹಣ ಸಹಿತ ಕಳುಹಿಸಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,
ಆರ್ಟಿಸ್ಟ್, ಕೊಡ್ಲ್ ಪೋಸ್ಟು, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಲು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೇನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಸಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟಿದಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".
(ರಿಜಿಸ್ಟರ್ಡ್)

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ್ದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಿಕ್ಕಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ.

ಇದರ ಬೆಲೆ ಗಸೀಸೆಗೆ ರೂ. 1–0–0 ಅಂಚೆಯ ವೆಚ್ಚ 0–4–0 ಬೇರೆ ತೆರಬೇಕು. 3 ಸೀಸೆಗಳಿಗೆ ರೂ. 2–10–0 ಅಂಚೆಯ ವೆಚ್ಚ 0–7–0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕವಲ ಪ್ಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲ ತೈಲವನ್ನು ವಿ.ಪಿ. ಮೂಲಕ ಕಳುಹಿಸಿರಿ.

30–5–11 ಮೆ. ನೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ "ಕಾಮಿನಿಯಾ ಆಯಿಲ್" ಇದರಿಂದ ಕೂದಲುಗಳು ಬೆಳೆದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲ ಒಂದನ್ನು ವಿ. ಪಿ. ಯಿಂದ ರವಾನಿಸಿರಿ.

28–7–11 ಮೆ। ವಿ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನಾರಗುಡಿ ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಆಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಆಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1–7–11 ಮೆ। ಸಿ. ಆರ್. ನಾಯುಡು ಪ. ವ. ಡಿ. ಠಾಣಿಬ, (ಬರ್ಮಾ) ನನ್ನ ಮಿತ್ರರು "ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಶಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರೆಯಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.,**
155 Jumma Musjid, Market, Bombay.

ಸೋಲ್ ಏಜಂಟ್ಸ್:—ದಿ. ಉಲನ್‌ಮಾರ್ಟ್, ಮಂಗಳೂರು.

ಎಂ. ಡಿ. ರಾಣೆ ಎಂಡ್ ಕೋ.,
ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಕು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವ್ಯಥಾ ನಷ್ಟಕ್ಕೊಳಗಾಗುವುದೇತಕ್ಕೆ?

M. D. RANE & Co. INDIA TRADE MARK DECCAN INK

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ಲಕ್ಷನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1–3–0; 1000 ಹಾಳೆಗಳಿಗೆ 10–0–0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ. 1–0–0 ವಿ. ಪಿ. ಮೂಲಕ 1–3–0. 2000 ಹಾಳೆಗಳಿಗೆ 10–0–0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ವಡಿ, ಪೊಟ್ಟಣ ಒಂದಕ್ಕೆ 0–0–3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0–15–0. 1000 ಪೊಟ್ಟಣಕ್ಕೆ 8–0–0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ! 1000 ಮಾತ್ರೆಗೆ 0–13–0. ವಿ. ಪಿ. ಮೂಲಕ 1–0–0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1–4–0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಆರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನ್ನೂ ಭಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡ್,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೋಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡವರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ.

ನಮ್ಮ ದೇವಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇವಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ಏಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟುಡಿಯೋ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಿಂದಲೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ಒಕ್ಕೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ವಿಶೇಷ ಸೂಚನೆಗಳು.

ಅಗವಾದ ಮಾಲುಗಳು!!

KASHI VISHWESHWAR S.U.N. & Co. BENARES CITY.

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟು ಅಲ್ಲವೊ ಹಾಗಾದರೆಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯೂರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮಿರದ ಶಾಲುಗಳೂ, ರುದ್ರಾಕ್ಷಿ ಇದು ೧೩ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೇ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯ ಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬೆನಾರಿಸ ಸಿಟಿ; ಶ್ರೀ ಕ್ಷೇತ್ರ ಕಾಶಿ.

Address:—**S. U. Narayanacharya & Co.**

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ **ಗುಳಿಗೆಗಳು.**	30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಬಾಧ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ತಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ 22 ಬ್ರಾಡ್ವೇ ಮತ್ತು 96 ಮೌಂಟ್ ರೋಡ್ ಮದರಾಸು. | ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವದಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕುಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಡ್ಡಿಂಗ್ಸ್,
ಮಂಗಳೂರು, ದ. ಕನ್ನಡ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ " "	6—0—0	B ಅರಗಜ " "	1—0—0
ಕಸ್ತೂರಿ ಬತ್ತಿ " "	3—0—0	ಕಸ್ತೂರಿ ಬಿಲ್ಲೆ " "	2—0—0
ಜವಾಜಿ ಬತ್ತಿ " "	2—0—0	ಜವಾಜಿ ಬಿಲ್ಲೆ " "	1—0—0
ಪುಣಗಿನ ಬತ್ತಿ " "	1—8—0	ಕೇಸರಿ ಬಿಲ್ಲೆ " "	0—8—0
A ಪನ್ನೀರ್ ಬತ್ತಿ " "	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ " "	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:—
ಮ. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—
ಎನ್. ಎಂ. ಸುಬ್ರಾವ್,
"ಸುಗಂಧವಿಲಾಸ"
ಮಂಗಳೂರು.

ಕವಿ ಎಂಡ್ ಸನ್ಸ್

ಜನರಲ್ ಮರ್ಚಂಟ್ಸ್, ಮಂಗಳೂರು, ದಕ್ಷಿಣ ಕನ್ನಡಾ.

ನಮ್ಮಲ್ಲಿ ಎಲ್ಲಾ ತರದ ಚೀಟು ಬಟ್ಟೆ ವ ಕೋಟಿಂಗ್, ಸ್ಟೇಶನರಿ, ಕಟ್ಲೆರಿ, ಗ್ಲಾಸವೇರ, ಒಯಲ್‌ಮೆನ್ ಸ್ಟೋರ್ಸ, ಮುಂತಾದ ಅನೇಕ ಸಾಮಾನುಗಳೂ ವಿಲಾಯತಿ ಎಲ್ಲಾ ನಮೂನೆಯ ಸಾಬೂನುಗಳೂ ಮಳೆಗಾಲಕ್ಕೆ ಉಪಯೋಗವಾಗುವ ಫ್ಲೆನೆಲು ಎಲ್ಲಾ ಜಾತಿಯ ಕೊಡೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಕಮ್ಮಿ ಮುನಾಫೆಯಿಂದ ಮಾರುತ್ತೇವೆ. ವಿಶೇಷ ಮಾಹಿತಿಗೆ ಪತ್ರವ್ಯವಹಾರ ಮಾಡಿದರೆ ಖಾತ್ರಿಯಾದೀತು.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಉವರಚಾಲ, ಮುಂಬಯಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 19ನೇ ಎಪ್ರಿಲ್ 1912.

ಮಂಗಳೂರು ಮಹಿಳಾ ಸಭಾ.

ಮಂಗಳೂರು ಕುಲಸ್ತ್ರೀಯರ ಈ ಸಭೆಯು ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟು ಕೆಲವು ಸಮಯವಾಯಿತು. ಈ ಸಭೆಯು ಕಲಾಪವು ಸ್ವರ್ಗಸ್ಥ ಮಾಜಿ ಡೆಪ್ಯುಟಿ ಕಲೆಕ್ಟರ್ ರಾ| ಧಾರೇಶ್ವರ ಅನಂತಯ್ಯನವರ ಮನೆಯಲ್ಲಿ ನಡೆಯುತ್ತದೆ. ಅನಂತಯ್ಯನವರ ಪತ್ನಿಯವರು ಧಾರೇಶ್ವರ ಗಿರಿಜಾಬಾಯಿಯವರು ಅಧ್ಯಕ್ಷಿಣಿ, ಇಲ್ಲಿಯ ವಕೀಲರಾಗಿರುವ ರಾ| ಕಾರ್ನಾಡ ಸದಾಶಿವರಾವ್ ಬಿ. ಎ. ಎಲ್. ಎಲ್. ಬಿ. ಇವರ ಪತ್ನಿ ಕಾರ್ನಾಡ ಸೌ| ಶಾಂತಾಬಾಯಿಯವರು ಈ ಸಭೆಯ ಕಾರ್ಯದರ್ಶಿಗಳೂ ಆಗಿರುತ್ತಾರೆ. ಪ್ರತಿ ಆದಿತ್ಯವಾರವೂ ಸಭಾ ಮೆಂಬರರಾದ ಕುಲಸ್ತ್ರೀಯರು ಒಟ್ಟುಕೂಡಿ ಸ್ತ್ರೀಯರ ಅಭಿವೃದ್ಧಿಗೆ ಉಪಯುಕ್ತವಾದ ವಿಷಯಗಳ ಕುರಿತು ಪ್ರಸ್ತಾಪಿಸುವರು. ರಾಮಾಯಣ, ಭಾರತ, ಭಾಗವತ ಮೊದಲಾದ ಹಿಂದೂಗಳ ಪವಿತ್ರ ಗ್ರಂಥಗಳಿಂದ ಇತಿಹಾಸಗಳು ಓದಲ್ಪಟ್ಟು ಸಭಿಕರೆಲ್ಲರಿಗೆ ವಿವರಿಸೋಣಾಗುವವು. ಈ ಸಭಾ ಮೆಂಬರರು ಪುನೆಯಲ್ಲಿರುವ ಪ್ರೊಫೆಸರ್ ಕರ್ವೆಯವರ ಅನಾಥ ಬಾಲಿಕಾಶ್ರಮದ ಸಹಾಯಾರ್ಥವಾಗಿ ಕಳದ ಆದಿತ್ಯವಾರ ಪಟ್ಟಣದ ಮಾನ್ಯ ಗೃಹಸ್ಥರನ್ನೂ ಸ್ತ್ರೀಯರನ್ನೂ ಆಮಂತ್ರಿಸಿ ಸೋಶಿಯಲ್ ಗಾದರಿಂಗ್ ಎಂಬ ವಿನೋದಪರವಾದ ಸಭೆಯನ್ನು ಜರುಗಿಸಿದರಲ್ಲದೆ ನೆರೆದಿದ್ದ ಸಭಿಕರಿಂದ ಚಂದಾದ್ರವ್ಯವನ್ನು ಸಂಗ್ರಹಿಸಿಕೊಂಡು ಪ್ರೊಫೆಸರ್ ಕರ್ವೆಯವರಿಗೆ ಕಳುಹಿಸಿಕೊಟ್ಟಿರುತ್ತಾರೆ. ನಿರಾಶ್ರಿತ ಭಗಿನಿಯರ ಸಲುವಾಗಿ ಇವರು ಕಳದ ಆದಿತ್ಯವಾರದ ಸಭೆಯಲ್ಲಿ ತಾವೇ ಸ್ವತಃ ಹಾಡಿ ರಾಗಮಾಲಿಕೆಯ ಪೆಟ್ಟಿಗೆಯನ್ನು ತಾವೇ ಸ್ವತಹ ಬಾರಿಸಿ, ಸಭಿಕರನ್ನು ವಿನೋದಗೊಳಿಸಿದರು. ಬಹುಮಾನಪಟ್ಟ ರಾವ್‌ಬಹದ್ದೂರ್ ಎನ್. ಸುಬ್ಬರಾವ್‌ರವರ ಪತ್ನಿಯರಾದ ಸೌ| ಲಲಿತಾಬಾಯಿಯವರು ಕಳದ ದಶಂಬರ ತಿಂಗಳಲ್ಲಿ ಉತ್ತರ ಹಿಂದೂಸ್ಥಾನದಲ್ಲಿ ತಾವು ಮಾಡಿದ ಪ್ರಯಾಣದ ಅನುಭವಗಳ ವಿಷಯ ಸುರಸವಾದೊಂದುಪನ್ಯಾಸವನ್ನು ಇಂಗ್ಲಿಷ ಭಾಷೆಯಲ್ಲಿ ಓದಿ ಹೇಳಿ ಸಭಿಕರನ್ನು ಆಹ್ಲಾದಪಡಿಸಿದರು. ತಮ್ಮ ಅನಾಥ ಭಗಿನಿಯರ ಸಲುವಾಗಿ ಮಂಗಳೂರು ಮಹಿಳಾ ಸಭಾಸದರು ತೋರ್ಪಡಿಸಿದ ಸಹಾನುಭೂತಿಯು ಸ್ತುತ್ಯವಾಗಿರುವುದು.

ಈ ಸಂದರ್ಭದಲ್ಲಿ ಸೌ| ಲಲಿತಾಬಾಯಿಯವರ ಉಪನ್ಯಾಸವು ಸಭಿಕರೆಲ್ಲರ ವಿಶೇಷವಾದ ಶ್ಲಾಘನೆಯನ್ನು ಹೊಂದಿರುವುದೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ಇಂಗ್ಲೀಷು ಭಾಷಾ ಪರಿಚಿತಿಯಿಲ್ಲದ ಸ್ತ್ರೀಯರ ಸಲುವಾಗಿ ಬರುವ ಆದಿತ್ಯವಾರ ಇದೇ ಉಪನ್ಯಾಸವನ್ನು ಕೊಂಕಣಿ ಭಾಷೆಯಲ್ಲಿ ಲಲಿತಾಭಾಯಿಯವರು ಮಂಗಳೂರು ಮಹಿಳಾ ಸಭೆಯ ಠಿಕಾಣೆಯಲ್ಲಿ ಕೊಡುವರೆಂಬದಾಗಿ ಕೇಳುತ್ತೇವೆ. ತಾವು ನೋಡಿದ ವಸ್ತು ವರ್ಣನೆಯನ್ನು ಕೇಳುವವರಿಗೆ ಮನದಣಿಯದಂತೆ ಹೇಳುವ ವಿಶೇಷ ಭಾಷಾಶಕ್ತಿಯನ್ನು ಲಲಿತಾಬಾಯಿಯವರು ತಮ್ಮ ಈ ಉಪನ್ಯಾಸದಲ್ಲಿ ತೋರ್ಪಡಿಸಿರುವರು. ಮುಂಬಯಿಯಲ್ಲಿ ಅನಾಥರ, ದಿಕ್ಕಿಲ್ಲದವರ ಸೇವೆಗಾಗಿ ಸ್ಥಾಪಿಸಲ್ಪಟ್ಟಿರುವ ಸೇವಾಸದನದ ಹಿಂದೂ ಮುಸಲ್ಮಾನ ಪಾರ್ಶಿ ಶಾಖೆಗಳಲ್ಲಿ ಈ ಮೂರು ಮತದ ಸ್ತ್ರೀಯರು ಹ್ಯಾಗೆ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವರೆಂಬುದನ್ನು ತಿಳಿಯ ಹೇಳಿ ಇಂಥಾದೊಂದು ಸಂಸ್ಥೆಯು ನಮ್ಮಲ್ಲಿರಬೇಕೆಂಬ ಅಪೇಕ್ಷೆಯನ್ನು ವ್ಯಕ್ತಗೊಳಿಸಿದರು. ಸೇವಾಸದನದ ಹಿಂದೂ ಶಾಖೆಯ ಪೂರ್ಣ ಆಡಳಿತೆಯು ಮಂಗಳೂರಿನ ಸಾರಸ್ವತ ಸ್ತ್ರೀಯರಾದ ಕೆ. ಸುಶೀಲಾಬಾಯಿಯವರಿಂದ ನಡಿಸಲ್ಪಡುತ್ತಿರುವುದೆಂಬುದನ್ನು ಈ ಸಂದರ್ಭದಲ್ಲಿ ತಿಳಿಯಲು ಸಂತೋಷಪಡುತ್ತೇವೆ. ಮುಂಬಯಿಯಲ್ಲಿ ನೋಡಿದಂಥವುಗಳ ವಿಶೇಷ ವರ್ಣನೆಯನ್ನು ಹೇಳಿ ತೀರಿಸಿದನಂತರ ಬರೋಡಾದಲ್ಲಿ ಗೈಕ್ವಾಡರ ಅರಮನೆಗಳು, ಅಲ್ಲಿಯ ವಿದ್ಯಾಸ್ಥಿತಿ, ನಿರಾಶ್ರಿತ ಜನರ ಬಗ್ಯೆ ಸ್ಥಾಪಿಸಲ್ಪಟ್ಟ ವಿದ್ಯಾಶಾಲೆಗಳ ವಿಷಯ ಪ್ರಸ್ತಾಪಿಸಿ ಡಿಲ್ಲಿಯಲ್ಲಿ ಜರುಗಿದ ಡಿಲ್ಲಿ ದರ್ಬಾರಿನ ವೃತ್ತಾಂತ ವಿಶೇಷವನ್ನು ವರ್ಣಿಸಿದರು. ಆಗ್ರಾದಲ್ಲಿ ಮೊಗಲ ಬಾದಷಾಯ ಷಹಜಾನನಿಂದ ಕಟ್ಟಿಸಲ್ಪಟ್ಟ ತಾಜಮಹಾಲಿನ ವರ್ಣನೆಯ ಬಳಿಕ ಹಿಂದುಗಳ ಪರಿಶುದ್ಧ ಕ್ಷೇತ್ರವಾದ ಬನಾರಿಸಿನ ವಿವರವು ಲಲಿತಾಬಾಯಿಯವರ ಉಪನ್ಯಾಸದಲ್ಲಿತ್ತು. ರಾಜಮಹೇಂದ್ರಿ ಕೋಕನಾಡಿಗಾಗಿ ಮಂಗಳೂರಿಗೆ ಹಿಂತಿರುಗಿ ಬರುತ್ತಿದ್ದಾಗ ರಾಜಮಹೇಂದ್ರಿಯಲ್ಲಿ ಸಂಘಸುಧಾರಕರ ಮಾರ್ಗದರ್ಶಿಗಳಾದ ಮಹನೀಯ ವಿರೇಶಲಿಂಗಂ ಪಂತ್ಲುಗಳವರ ದರ್ಶನ ವಿಶೇಷವನ್ನು ತಮ್ಮ ಉಪನ್ಯಾಸದಲ್ಲಿ ಪ್ರಸ್ತಾಪಿಸಿದರು. ಹಿಂದೂ ವಿಧವೆಯರಿಗಾಗಿ ಪಂತ್ಲುರವರು ಪಡುತ್ತಿರುವ ಶ್ರಮವನ್ನು ಕೊಂಡಾಡಿ ಸಮಾಜವನ್ನು ಉದ್ಧರಿಸುವ ವಿಧವಾ ಗೃಹಗಳಂಥಾ ಸಂಸ್ಥೆಗಳನ್ನು ಪ್ರಕೃತ ನಮ್ಮಲ್ಲಿ ಸ್ಥಾಪಿಸುವುದು ಅಸಾಧ್ಯವಾದರೂ ಇಂಥಾ ಸಂಸ್ಥೆಗಳ ಪರವಾಗಿ ನಮ್ಮಲ್ಲಿರುವ ಸಹಾನುಭೂತಿಯನ್ನು ತೋರ್ಪಡಿಸುವುದಕ್ಕೆ ಸಭೆಯಲ್ಲಿ ಕೂಡಿದ ಭ್ರಾತೃಭಗಿನಿಯರು ಕರ್ವೆಯವರ ಹಿಂದೂ ವಿಧವಾ ಗ್ರಹದ ಸಹಾಯಾರ್ಥವಾಗಿ ತಮ್ಮ ಯಥಾನುಶಕ್ತಿ ದ್ರವ್ಯಸಹಾಯವನ್ನು ಮಾಡಬೇಕೆಂದು ವಿಜ್ಞಾಪಿಸಿ ಲಲಿತಾಬಾಯಿಯವರು ತಮ್ಮ ಉಪನ್ಯಾಸವನ್ನು ಮುಗಿಸಿದ ರೀತಿಯು ಸಹ ಅತ್ಯುಪಯುಕ್ತವಾಗಿತ್ತು.

ಮಂಗಳೂರು ಮಹಿಳಾ ಸಭೆಯಂಥಾ ಕುಲಸ್ತ್ರೀಯರ ಸಂಘಗಳು ಸ್ತ್ರೀ ಶಿಕ್ಷಣದಲ್ಲಿ ಬಹಳ ಹಿಂದುಳಿದಿರುವ ಭಾರತೀಯ ಸ್ತ್ರೀಯರೆಲ್ಲರಿಗೆ ಅಗತ್ಯವಾಗಿ ಬೇಕಾಗಿರುವವು. ಬಾಲಿಕಾ ಪಾಠಶಾಲೆಗಳಲ್ಲಿ ಹುಡುಗಿಯರು ಶಿಕ್ಷಣವನ್ನು ಹೊಂದುತ್ತಿರುವಾಗ ಈಗಿನ ವಿದ್ಯಾ ಮಾಹಿತಿಯೂ ಪ್ರಪಂಚದ ನವೀನ ವಿಷಯಗಳ ಪರಿಚಿತಿಯೂ ಇಲ್ಲದೆ ಅಶಿಕ್ಷಿತರಾಗಿರುವ ಹುಡುಗಿಯರ ಮಾತೆಗಳಿಗೆ ಅಗತ್ಯವುಳ್ಳ ವಿಷಯಗಳನ್ನು ತಿಳಿಯ ಹೇಳುವರೆ ಇಂಥಾ ಮಹಿಳಾ ಸಭೆಗಳು ಅನುಕೂಲವಾದ ಸಂಸ್ಥೆಗಳಾಗಿರುವವು. ಪುನೆಯಲ್ಲಿ ಸ್ವರ್ಗಸ್ಥ ಹ್ಯಾಕೋರ್ಟ ಜಡ್ಜರಾಗಿದ್ದ ರಾನಡೆಯವರ ಪತ್ನಿ ರಮಾಬಾಯಿ ರಾನಡೆಯವರು ಇಂಥಾದೊಂದು ಮಹಿಳಾ ಸಭೆಯನ್ನು ನಡೆಸುವುದನ್ನು ನಾವು ಕಣ್ಣಾರೆ ಕಂಡಿರುವೆವು. ರಮಾಬಾಯಿ ರಾನಡೆಯವರ ಮನೆಯಲ್ಲಿ ಪ್ರತಿ ಹಪ್ತೆಯಲ್ಲಿಯೂ ಎರಡಾವರ್ತಿ ಪುನೆಯ ಕುಲಸ್ತ್ರೀಯರನೇಕರು ಕೂಡುವರು. ಹೀಗೆ ಕೂಡಿ ಬಂದ ಸ್ತ್ರೀಯರಿಗೆ ವಿದ್ಯಾಸಂಪನ್ನರಾದ ಸ್ತ್ರೀಯರೂ ಕೆಲವು ಸಂದರ್ಭಗಳಲ್ಲಿ ಭಾರತ ಸೇವಾಸಂಘದ ಮೆಂಬರ ದೇವದರ್ ಮೊದಲಾದ ಸದ್ಗೃಹಸ್ಥರಂಥಾ ಪುರುಷರೂ ತಾವು ತಿಳಿದ ವಿಷಯಗಳನ್ನು ಹೇಳಿಕೊಡುವುದುಂಟು. ಇದೇ ಮಾದರಿಯಲ್ಲಿ ಮಂಗಳೂರು ಮಹಿಳಾ ಸಭೆಯವರು ವರ್ತಿಸಬಹುದು. ರಮಾಬಾಯಿ ರಾನಡೆಯವರಂತೆಯೇ ದಾರೇಶ್ವರ ಗಿರಿಜಾಬಾಯಿಯವರ ಆಶ್ರಯವು ಈ ಮಹಿಳಾ ಸಭೆಗೆ ದೊರಕಿರುತ್ತದೆ. ಅಶಿಕ್ಷಿತ ಭಗಿನಿಯರನ್ನು ತಮ್ಮ ಸಭೆಗೆ ಕ್ರಮವಾಗಿ ಬರಮಾಡಿಕೊಳ್ಳುವಂತೆ ಬಹಳ ಜಾಗರೂಕತೆಯ ಪ್ರಯತ್ನಗಳು ನಮ್ಮಲ್ಲಿ ಬೇಕಾಗಿವೆ. ವಿದ್ಯೆಯನ್ನು ಕಲಿತರೆ ಮೈಗಳ್ಳತನದಿಂದ ಕಾರ್ಯಪ್ರಯತ್ನಗಳನ್ನು ದ್ವೇಶಿಸುವ ಅಭ್ಯಾಸವು ಬಾಲೆಯರಿಗೆ ತಗಲದೆಂದು ಮಹಿಳಾ ಸಭೆಯವರು ತಮ್ಮ ಅಶಿಕ್ಷಿತ ಭಗಿನಿಯರಿಗೆ ತೋರಿಸಿಕೊಡಬೇಕು. ಅಶಿಕ್ಷಿತರ ಭಾವನೆ ಊಹನೆಗಳಿಗೆ ಸರಿಯಾದ ಲಕ್ಷ್ಯಕೊಟ್ಟು ತಮ್ಮ ವರ್ತನೆಯಿಂದ ನುಡಿನಡೆಗಳಿಂದ ಅಶಿಕ್ಷಿತರನ್ನು ಲೆಕ್ಕಿಸರೆಂಬ ಭಾವಕ್ಕೆ ಆಸ್ಪದಕೊಡದಂತೆ ಜಾಗರೂಕರಾಗಿರಬೇಕು. ಮಹಿಳಾ ಸಭೆಯ ಕೆಲಸ ಕಾರ್ಯಗಳನ್ನು ಕೈಕೊಂಡಿರುವ ವಿದ್ಯಾವಂತ ಭಗಿನಿಯರು ವಿನಯದಿಂದ ತಮ್ಮ ಕಾರ್ಯಸಾಧನೆಯನ್ನು ಮಾಡಬೇಕಾಗಿದೆ. ಮಂಗಳೂರು ಮಹಿಳಾ ಸಭೆಯ ಮುಂದಿರುವ ಕಾರ್ಯಪ್ರಯತ್ನಗಳ ಭಾರವು ಅಧಿಕವಾಗಿರುವುದು. ವಿದ್ಯಾವಂತ ಸ್ತ್ರೀಪುರುಷರೆಲ್ಲರೂ ಈ ಸಭೆಗೆ ತಕ್ಕ ಆದರಣೆಯನ್ನು ಕೊಟ್ಟು ಅದು ಚಿರಕಾಲ ಬಾಳುವಂತೆ ಪ್ರಯತ್ನಪಡುವರೆಂಬದಾಗಿ ನಂಬಿದ್ದೇವೆ.

ಜಪಾನ ದೇಶದ ಹೊಲೆಯನು.

ಜಪಾನ ದೇಶದ ಹೊಲೆಯನಿಗೆ "ಎಟಾ" ಎಂತ ಹೆಸರು. ೧೮೭೧ರ ವರೆಗೆ ಇವನಿಗೆ ಸರ್ವ ಸಾಮಾನ್ಯವಾಗಿ ಇತರ ನಿವಾಸಿಕರಿಗಿರುವ ಹಕ್ಕು ಸ್ವಾತಂತ್ರ್ಯಗಳು ಇರಲಿಲ್ಲ. ಈಗಿನ ಜಪಾನ ಚಕ್ರವರ್ತಿಗಳು ೧೮೭೧ರ ನಂತರ ಜಪಾನ ಹೊಲೆಯರಿಗೆ ಈ ಸ್ವಾತಂತ್ರ್ಯಗಳನ್ನು ದಯಪಾಲಿಸಿದರು. ಜಪಾನ ದೇಶದ ಹೊಲೆಯರಂದರೆ ಅಲ್ಲಿಯ ಮೂಲ ನಿವಾಸಿಗಳು, ಮೇಲು ಜಾತಿಯ ಜಪಾನೀಯರಿಂದ ಯುದ್ಧದಲ್ಲಿ ಸೋಲಿಸಲ್ಪಟ್ಟವರು, ಅಥವಾ ಸೆರೆ ಹಿಡಿಯಲ್ಪಟ್ಟವರು. ಹಿಂದೂಸ್ಥಾನದಲ್ಲಿ ಮೇಲು ಜಾತಿಯವರು ನಾಯಿಗಳನ್ನು ಕೊಲ್ಲುವುದು ಮೊದಲಾದ ಹೀನ ಕೃತ್ಯಗಳನ್ನು ಮಾಡಲಿಕ್ಕೆ ಅಂಜಿ ಇಂಥವುಗಳನ್ನು ಮಾದೀಗರೆಂಬ ಹೊಲೆಯರಿಂದ ಮಾಡಿಸುವರು. ಹಾಗೆಯೇ ಜಪಾನ ದೇಶದಲ್ಲಿ ಸಹ ಮೇಲು ಜಾತಿಯ ಜಪಾನೀಯರು ಬೌದ್ಧ ಮತಸ್ಥರಾದ್ದರಿಂದ ಜಂತುಗಳ ಚರ್ಮವನ್ನು ಸಹ ಮುಟ್ಟಲು ಹೇಸುವುದರಿಂದ 'ಎಟಾ'ರೆಂಬ ಜಪಾನ ಹೊಲೆಯರು ಜಪಾನಿನಲ್ಲಿ ಮಾದಿಗರ ವೃತ್ತಿ ಮೊದಲಾದವುಗಳನ್ನು ಮಾಡಿಕೊಂಡಿದ್ದರು. ಹಿಂದೂಸ್ಥಾನದಲ್ಲಿ ಯುರೋಪಿಯರಿಗೆ ಬಟ್ಲರು ಅಥವಾ ಬಟ್ಲರುಗಳ ಕೈಕೆಳಗಿನ ಕೃತ್ಯಕ್ಕೆ ಹೊಲೆಯರು ದೊರಕುವಂತೆ, ಜಪಾನ ದೇಶದಲ್ಲಿಯೂ ಸಹ ವಿದೇಶಸ್ಥರಿಗೆ ಮನೆ ಚಾಕರಿಗೆ ನೌಕರರಾಗಿ 'ಎಟಾ'ರವರ ಜಾತಿಯವರೇ ದೊರಕುವದಿತ್ತು. ಆದರೆ ಈಗ ಜಪಾನಿಯ ಹೊಲೆಯರಿಗೆ ಚಕ್ರವರ್ತಿಗಳಿಂದ ಇತರ ನಿವಾಸಿಗಳಂತೆ ಹಕ್ಕು ಸ್ವಾತಂತ್ರ್ಯಗಳು ಕೊಡೋಣಾದ ಮೇಲೆ ಇವರ ಸ್ಥಿತಿ ಕ್ರಮೇಣ ಒಳ್ಳೆದಾಗುತ್ತಾ ಬಂತು. ಈಗ ಈ ಜಾತಿಯವರು ಜಪಾನ ದೇಶದ ಜಿಲ್ಲೆಗಳ ಸ್ಥಳೀಕ ಸರಕಾರದ ಮೆಂಬರರು ಸಹ ಆಗಿರುವರು. ಕಳದ ನಾಲ್ವತ್ತು ವರುಷಗಳಲ್ಲಿ ಮೇಲು ಜಾತಿಯವರಿಗೂ ಈ ಹೊಲೆಯರಿಗೂ ವಿವಾಹ ಮೊದಲಾದ ಪರಸ್ಪರ ಸಂಪರ್ಕಗಳು ಬೆಳದು ಹೋಗಿ ಜಪಾನ ಹೊಲೆಯರ ಮೂಲವನ್ನು ಈಗಲೀಗ ತಿಳಿಯಲು ಸಾಧ್ಯವಲ್ಲ. ಜಪಾನೀಯರ ಇಂಥಾ ನಡವಳಿಕೆಯ ಕಾರಣವೇನು?

ಪಿತೃಪ್ರೇಮು.

(ಕಳದ ಸಂಚಿಕೆಯಿಂದ ಮುಂದರಿಸಿದುದು)

೫.

ಬಾಲಸೂರ್ಯನು ತನ್ನ ಆರಕ್ತ ಮುಖಕಮಲವನ್ನು ತೋರಿಸಿ ತೇಜಸ್ವಿಯಾದ ಕರಗಳಿಂದ ಸ್ಥಿರಚರ ಪದಾರ್ಥಗಳನ್ನು ಪ್ರಕಾಶಿತ ಮಾಡಲಾರಂಭಿಸಿದನು. ಚಿತೋಡ ನಗರವಾಸಿಗಳು ನಿತ್ಯಕರ್ಮಗಳನ್ನು ಧ್ರುತಗತಿಯಿಂದ ನೆರವೇರಿಸಿ ರಾಜಾಸ್ಥಾನದ ಕಡೆ ಬರಲಾರಂಭಿಸಿದರು. ಆ ಸ್ಥಾನವು ವೀರಸೇನಾಧಿಪತಿಗಳಿಂದಲೂ, ಪಂಡಿತರುಗಳಿಂದಲೂ ಕವಿಗಳಿಂದಲೂ, ಸಾವಂತರಿಂದಲೂ, ರಾಜಭಕ್ತಿಯುತ ಪ್ರಜೆಗಳಿಂದಲೂ, ಕರ್ಮನಿಷ್ಠರಾದ ಸೇವಕರಿಂದಲೂ ತುಂಬಿತ್ತು. ಸಿಂಹಾಸನಾಧೀಶ್ವರ ಅಮರರಾಯನು ನಿರ್ವಿಕಾರ ಮುದ್ರೆಯಿಂದ ಅಧೋವದನನಾಗಿ ಕುಳಿತಿದ್ದನು. ಎರಡು ಸುಂದರವಾದ ಬಾಲಕರು–ರಾಜಕುಮಾರ ತೇಜಸಿಂಹ, ರಾಜಕುಮಾರಿ ಲಲಿತಾದೇವಿ, ಎಡಬಲದಲ್ಲಿ ಸಿಂಹಾಸನಾರೂಢರಾಗಿದ್ದರು. ಅವರ ಮುಖಕಮಲಗಳು ಉತ್ಸುಕತೆಯಿಂದ ಕೂಡಿದ್ದುವು. ಕವಚಧಾರಿಯಾದ ವೀರಯುವಕ ಅಜಿತಸಿಂಹನು ಸಿಂಹಾಸನದೆದುರಿಗೆ ಸಾಭಿಮಾನಯುಕ್ತ ನಿಂತಿದ್ದನು. ಅವನ ವಿಲಕ್ಷಣ ರಾಜತೇಜಯುಕ್ತ ಮುಖಾರವಿಂದವನ್ನೀಕ್ಷಿಸಿ ಸಭಾಸದರು ಚಕಿತರಾಗಿ ಅವನನ್ನೇ ನೋಡುತ್ತಿದ್ದರು. ವೃದ್ಧ ವೀರಯೋದ್ಧರ ಪೂರ್ವಸ್ಮೃತಿ ಪರಂಪರೆಗಳು ಜಾಗ್ರತಹೊಂದುತ್ತಿದ್ದುವು. ದರಬಾರ ನಿಯಮದಂತೆ ರಾಜನು ಎಲ್ಲರ ವಂದನೆಗಳನ್ನು ಸ್ವೀಕರಿಸುತ್ತಿದ್ದನು. ಈ ಕ್ಷಣ ಏನೋ ಚಮತ್ಕಾರಿಕವಾದ ಕ್ರಾಂತಿ ನಡಿಯುವದೆಂದು ಎಲ್ಲರೂ ಎದುರು ನೋಡುತ್ತಿದ್ದರು.

"ಸರ್ವಸಾಮಂತ, ಸರದಾರ, ಪ್ರಧಾನ, ಪೌರಜನಗಳೇ!" ಅಮರರಾಯನು ಗಂಭೀರತೆಯಿಂದ ನುಡಿದನು. "ಇಂದು ಮಹತ್ವವಾದ ರಾಜಕ್ರಾಂತಿಯು ನಡಿಯುವುದು. ಇದು ಮಹಾರಾಜಾ ಸಜ್ಜನಸಿಂಹರ ಪೂಜ್ಯವಾದ ಸಿಂಹಾಸನವು. ನಾನು ತಾರುಣ್ಯಮದದಿಂದ ಅಂಧನಾಗಿ, ಸ್ವಾಭಿಲಾಷೆಯುತರಾದ ಅವಿಚಾರಿ ರಾಜಪತ್ನ್ಯರುಗಳಿಂದ ಹುರಿದುಂಬಿದವನಾಗಿ ನನ್ನ ದುಷ್ಟಪದಾಘಾತದಿಂದ ಮಲಿನಮಾಡಿದೆನು. ಅದರ ಪ್ರಾಯಶ್ಚಿತ್ತ ಪಡಿಯುವರೆ ವೃದ್ಧಾಪ್ಯದಲ್ಲಿ ಯಾವ ಪ್ರಧಾನರಿಂದ, ಯಾವ ವೀರಸೇನಾಧಿಪತಿಗಳಿಂದ, ಯಾವ ನನ್ನ ಶೂರ ಸೈನಿಕರಿಂದ, ಯಾವ ಪೌರಜನರಿಂದ ಸಿಂಹಾಸನಾಧೀಶ್ವರನೆಂತ ಕಾರ್ಯಗಳನ್ನು ನಡಿಸುತ್ತಾ, ವಂದನೆಗಳನ್ನು ಕೈಕೊಳ್ಳುತ್ತಾ ಬಂದೆನೋ ಅಂಥಾ ಈ ಸಿಂಹಾಸದಿಂದ ಸರ್ವರ ಸಮಕ್ಷ ನಿರ್ಮತ್ಸರದಿಂದ ಕೆಳಗಿಳಿಯುವೆನು. ಯಾರಿಗೆ ಈ ಸಿಂಹಾಸನಾರೋಹಣವಾಗಲಿಚ್ಛೆಯುಂಟೋ? ಯಾರು ಆರೋಹಣೆ ಮಾಡಬಂದಿರುವನೋ ಅವನು ಯೋಗ್ಯವಾದ ಸಾಕ್ಷ್ಯಗಳನ್ನು ಕೊಟ್ಟು ಸಿಂಹಾಸನವನ್ನೇರುವುದು. ನಂತರ ಸಿಂಹಾಸನದಧಿಕಾರಿಯು ಶಾಸಿಸಿದ ಶಾಸನವನ್ನು ನಾನು ಅನುಭವಿಸುವೆನು. ನನ್ನ ಪೂರ್ವ ಚರಿತ್ರೆಯು ಸ್ಮೃತಿಗೆ ಬಂದರೆ ನನ್ನ ಶಿರವು ಭ್ರಮಣ ಹೊಂದುವುದು; ಚತುರ್ದಿಕ್ಕಿನಲ್ಲೂ ಕಾರ್ಗತ್ತಲೆ ಕಾಣುವುದು; ಶರೀರವು ಕಂಪಿತವಾಗುವುದು; ಮಹಾರಾಜರ ಕ್ರೂರಮೂರ್ತಿಯು ನನ್ನೆದುರು ಬಂದು ನಿಲ್ಲುವುದು. ಅಮಮಾ ಪರಮೇಶಾ? ತಾರುಣ್ಯದಲ್ಲಿ ನೀನು ಮನುಷ್ಯರಿಂದ ಎಂಥೆಂಥಾ ಅನನ್ವಿತ ಕೃತ್ಯಗಳನ್ನು ಮಾಡಿಸುತ್ತೀಯೆ? ಆಗ ಯಾವ ಯೋಚನೆಯೂ ಇರುವುದಿಲ್ಲ. ಕನಕಕಾಮಿನಿಗಾಗಿ ದುಷ್ಕೃತ್ಯಗಳನ್ನು ಮಾಡಲಿಕ್ಕೆ ಪ್ರವೃತ್ತರಾಗುವೆವು. ಮುಂದಾಲೋಚನೆಯನ್ನು ಯೋಚಿಸುವುದಿಲ್ಲ. ಅಂಥಾ ತಾರುಣ್ಯವು ಸುಡಲಿ!"

ಅಮರರಾಯನ ಈ ನುಡಿಗಳು ಆಸ್ಥಾನ ಮಂಟಪದಲ್ಲಿ ಪ್ರತಿಧ್ವನಿತವಾಗುತ್ತಿದ್ದವು. ಅಮರರಾಯನು ಸಿಂಹಾಸನವನ್ನಿಳಿದ ಕೂಡಲೇ ಸಭಾನಾಯಕರು ಪೂಜ್ಯಭಾವದಿಂದ ಎದ್ದು ನಿಂತರು. ಲಲಿತೆಯೂ, ತೇಜಸಿಂಹನೂ ಆಶ್ಚರ್ಯಚಕಿತರಾಗಿ ಪಿತನ ಮುಖಾವಲೋಕನಮಾಡುತ್ತಿದ್ದರು.

ಸರ್ವರ ಶಾಂತ–ನಿಸ್ತಬ್ಧತೆಯನ್ನವಲೋಕಿಸಿ ಅಜಿತಸಿಂಹನು "ನನ್ನ ಪರಿಚಯವು ಈ ಸಭೆಯಲ್ಲಿ ಯಾರಿಗೂ ಇರಲಾರದು; ನನ್ನನ್ನು ಗುರುತಿಸುವುದೂ ಅಶಕ್ಯವು. ಆದರೆ ಸ್ವಾಮಿಭಕ್ತ ರಾಜಸೇವಕರು ಇದ್ದಲ್ಲಿ ನನ್ನನ್ನು ಕಿಂಚಿತ್ ಗುರುತಿಸ್ಯಾರು. ನಾನು ಸ್ವರ್ಗವಾಸಿ ಪೂಜ್ಯ ಮಹಾರಾಜಾ ಸಜ್ಜನಸಿಂಹನಿಂದ ಪ್ರಿಯ ಪತ್ನಿಯಾದ ವಿಮಲಕುಮಾರಿಯಲ್ಲಿ ಜನಿಸಿದ ಪುತ್ರನು. ನಾನು ಇಂದಿಗೆ ಇಪ್ಪತ್ತು ವರುಷಗಳನ್ನು ಅಡವಿಯಲ್ಲಿ ಕಳೆದೆನು. ಶೂರ ಸರದಾರರೇ!! ಬುದ್ಧಿಕುಶಲ ಅಮಾತ್ಯರೇ!! ಸ್ವಾಮಿಭಕ್ತ ರಾಜಸೇವಕರೇ!!! ಇಪ್ಪತ್ತು ವರ್ಷಗಳ ಪೂರ್ವದ ವಸಂತಋತುವನ್ನು ಸ್ಮರಿಸಿರಿ! ಸಂಧ್ಯಾಕಾಲದ ಸಮಯ. ಆ ಕೃತಘ್ನ ಮಂತ್ರಿಯು ಉದ್ಯಾನವನದ ಪಹರೆಯವರನ್ನು ಕೈವಶಮಾಡಿ ಹತ್ತು ಯಮದೂತರನ್ನು ನನ್ನನ್ನೂ, ಪ್ರಿಯ ಮಾತೆಯನ್ನೂ, ನನ್ನ ಪೂಜ್ಯ ಪಿತನನ್ನೂ ಘಾತಿಸುವರೆ ರಾಜೋದ್ಯಾನವನಕ್ಕೆ ಕಳುಹಿ ಚಿತೋಡಾಧಿಪತಿಯ ರಕ್ತದಿಂದ ರಾಜನಿಷ್ಠ ಸೇವಕರ ಶೋಣಿತದಿಂದ ಆ ಕುಸುಮ ಗಂಧಪೂರಿತ, ಹೃದಯಾನಂದದಾಯಿ ಭೂಮಿಯನ್ನು ಕಳಂಕಿತ ಮಾಡಿದಂಥಾ ವೇಳೆಯು ಇದರಲ್ಲಿಯ ಒಬ್ಬ ರಜಪೂತ ವೀರನಿಗಾದರೂ ಸ್ಮರಣೆಯುಂಟೇ? ರಣಕ್ಷೇತ್ರದಲ್ಲಿ ಅಸಿಲತೆಯನ್ನು ಬೀಸಿ ತಮ್ಮ ಕೀರ್ತಿಯಿಂದ ಹಿಮವತ್ಪರ್ವತದ ಉತ್ತುಂಗ ಶಿಖರಗಳನ್ನು ಭೇದಿಸಿದ ಶೂರರಣದಕ್ಷ ವೀರರ ರಕ್ತಪ್ರವಾಹವು ಪ್ರತಿಯೊಂದು ಧಮನಿಯಿಂದ ಪ್ರತಿಯೊಂದು ರೋಮಕೂಪದಿಂದ ಹರಿಯುತ್ತಿದ್ದರೆ, ರಣರಂಗದ ದುಂದುಭಿನಿನಾದ, ಅಸಿಲತೆಗಳ ಝಣಝಣತ್ಕಾರ, ಉಹ್ಲಾಟಯಂತ್ರದ ಹೃದಯಭೇದಿ ಘರ್ಜನೆ ಯಾವ ವೀರರ ಕರ್ಣಕುಹರವನ್ನು ತುಂಬಿರುವದೋ ಅಂಥಾ ಎಂಭತ್ತು ವರ್ಷದ ವಯೋವೃದ್ಧರಾಗಿ ಶಿರಕಂಪನವುಂಟಾಗಿ ಕರದಲ್ಲಿ ಖಡ್ಗಧಾರಣಾಶಕ್ತಿ ಕುಂದಿದರೂ ಈ ಸಮಯದಲ್ಲಿ ಸತ್ಪಕ್ಷ ಬಿಟ್ಟು ಅನ್ಯಪಕ್ಷವನ್ನು ಸೇರಲಾರರು. ನನ್ನ ಪೂಜ್ಯ ಪಿತ ರಾಜರಾಜೇಶ್ವರನ ಪೂರ್ಣ ಪರಿಚಯದ ಆ ಉದ್ಯಾನವನ ಭೂಮಿಯು ರಾಜರಕ್ತಸಿಂಚನದ ದಿನವು ಸ್ಮರಣೆಗೆ ಬಂದಲ್ಲಿ ಅವರು ನಾನು ಯಾರೆಂಬುದನ್ನು ಹೇಳಶಕ್ಯರು."

ಮುಂದರಿಯುವದು.

M. V. L. Prabhu.

ಅತ್ಯುತ್ಕೃಷ್ಟವಾದ ಪರೋಪಕಾರ ಯಾವುದು?

ನಾವು ಗರ್ಭಾವಸ್ಥೆಯಲ್ಲಿರುವಾಗ ನಮ್ಮನ್ನು ಭಗವಂತನು ಪೋಷಿಸಿದ್ದಾನೆ. ಶೈಶವಾವಸ್ಥೆಯಲ್ಲಿ ತಾಯಿಯು ಬಹು ಅಕ್ಕರೆಯಿಂದ ಮೊಲೆಹಾಲನ್ನುಣ್ಣಿಸಿ ಸಾಕಿ ಸಲಹಿದ್ದಾಳೆ. ಬಾಲ್ಯಾವಸ್ಥೆಯಲ್ಲಿ ಹಸುವಿನ ಹಾಲಿನಿಂದ ಜೀವಿಸಿ ಇದ್ದೇವೆ. ಬಾಲ್ಯಾವಸ್ಥೆಯಿಂದ ಮರಣಾಂತರದ ವರೆಗಿನ ಬಾಳ್ವೆಯಲ್ಲಿ ರೈತರು ಬೆಳೆಯಿಸುವ ದವಸಧಾನ್ಯಗಳಿಂದ ಜೀವಿಸುತ್ತೇವೆ. ಗರ್ಭಾವಸ್ಥೆಯಲ್ಲಿ ಪೋಷಿಸಿದ ಸರ್ವ ಶಕ್ತನೂ ಸರ್ವ ವ್ಯಾಪಕನೂ ಆದ ಪರಮಾತ್ಮನನ್ನು ಧ್ಯಾನಿಸಿ ಆತನಿಗೆ ಸದಾ ಸ್ತೋತ್ರಮಾಡುವವರಾಗಿರಬೇಕು. ಶೈಶವದಲ್ಲಿ ಕಾಪಾಡಿದ ತಾಯಿಗೆ ಭಕ್ತಿಪೂರ್ವಕವಾದ ವಿಶ್ವಾಸಶ್ರದ್ಧೆಯಿಂದ ಪ್ರೀತಿಸುವವರಾಗಿದ್ದು ಆಕೆಯ ಶ್ರೇಯ ಪ್ರಾರ್ಥನೆಯನ್ನು ಮಾಡಿ ಕಷ್ಟಕಾಲದಲ್ಲಿ ಆಕೆಯನ್ನು ಕಾಪಾಡಿ ಸಲಹಬೇಕು. ಬಾಲ್ಯಾವಸ್ಥೆಯಲ್ಲಿ ನಮಗೆ ಹಾಲನ್ನುಣ್ಣಿಸುವ ಗೋವನ್ನು ವಧಿಸಿ ಅದರ ಮಾಂಸವನ್ನು ತಿನ್ನುವುದಲ್ಲ, ಯಾ ಅದನ್ನು ಪೀಡಿಸುವುದಲ್ಲ, ಅದನ್ನು ತಾಯಂತೆ ಭಾವಿಸಿ ಪ್ರೀತಿಸಬೇಕು. ಬಾಲ್ಯಾವಸ್ಥೆಯಿಂದ ನಮ್ಮ ಆಯುಷ್ಕಾಲವೆಲ್ಲಾ ನಮ್ಮನ್ನು ಕಾಪಾಡುವದಕ್ಕೆ ಗೇಯುತ್ತಿರುವ ರೈತರ ಕಡೆಗೆ ನಾವು ಹ್ಯಾಗಿರಬೇಕು?

ಬಾಂಧವರೇ, ತಾಯಿಯ ಹಾಲು 1–2 ವರುಷದ ವರೆಗೂ, ಗೋವಿನ ಹಾಲು ಬಾಲ್ಯದಲ್ಲಿಯೂ ಕಾಯಿಲೆ ಕಸಾರಿಕೆಗಳಲ್ಲಿಯೂ ಪ್ರಾಮುಖ್ಯವಾದ ಆಹಾರವಾಗಿರುತ್ತದೆ. ರೈತನು ಬೆಳೆಯಿಸುವ ಧಾನ್ಯವು ಮೃತ್ಯುವನ್ನೈದುವವರೆಗೂ ನಮಗೆ ಆಹಾರವಲ್ಲವೇ? ಹಾಗಾದರೆ ಎಲ್ಲವರಕ್ಕಿಂತ ಪರೋಪಕಾರಿಗಳು ಯಾರು? ರೈತರು. ಆದ್ದರಿಂದ ರೈತರನ್ನು ತಾಯಿಯಂತೆಯೂ ಗೋವಿನಂತೆಯೂ ಭಾವಿಸಿ ಪೂಜಿಸಬೇಕು. ಪರೋಪಕಾರವಿಲ್ಲದ ಮನುಷ್ಯರಿಂದೇನು ಪ್ರಯೋಜನ?

ಪರೋಪಕಾರ ಶೂನ್ಯಸ್ಯಧಿಕ್ ಮನುಷಸ್ಯ ಜೀವಿತಮ್ । ಧನ್ಯಾಸ್ತೆ ಪಶವೋಯೇಷಾಂ ಚರ್ಮಾಪ್ಯುಪ ಕರಿಷ್ಯತಿ ॥ ಅಂದರೆ ಪರೋಪಕಾರ ರಹಿತನಾದ ಮನುಷ್ಯನನ್ನು ಸುಡು । ಪಶುಗಳಾದರೂ ಧನ್ಯವು. ಅವುಗಳ ಚರ್ಮ ಸಹ ಕೆಲಸಕ್ಕೆ ಬೀಳುತ್ತದೆ ಎಂತ ಉಂಟಲ್ಲಾ! ಆದ್ದರಿಂದ ರೈತರಿಗೆ ಮಾಡತಕ್ಕ ಉಪಕಾರವು ತಾಯಿಗೂ ಗೋವಿಗೂ ಮಾಡಿದಂಥಾ ಸೇವೆಗಿಂತಲೂ ಉತ್ತಮವೆಂದಣಿಸಲ್ಪಡುವದು. ರೈತರಿಗೆ ಮಾಡಲ್ಪಡುವ ದ್ರೋಹಚಿಂತನೆಯು ತಾಯಿಗೂ ಗೋವಿಗೂ ಮಾಡುವ ದ್ರೋಹಚಿಂತನೆಯಂತಾದೀತು. ಆದಕಾರಣ ಪರೋಪಕಾರಗಳಲ್ಲೆಲ್ಲಾ ರೈತರಿಗೆ ಮಾಡುವ ಉಪಕಾರವೇ ಉತ್ಕೃಷ್ಟವಾದ್ದು. ಅದೇ ಇಹಪರ ಸಾಧಕವಾದ್ದು. ರೈತರೇ ಸ್ವತಂತ್ರ ವೃತಿಯಲ್ಲಿ ಇರುವವರು. ಅವರ ಸ್ವತಂತ್ರ ವೃತಿಯನ್ನು ಯಾರು ಹಾಳುಮಾಡಿ ಕೆಡಿಸ ನೋಡುತ್ತಾನೋ ಅವನಿಗೆ ಗೋವನ್ನೂ ತಾಯನ್ನೂ ವಧಿಸಿದ ಪಾತಕವು ತಟ್ಟುವುದು. **S. A.**

ವ್ಯಾಕರಣದ ಶಿಕ್ಷಣೆಯ ಕುರಿತು.

ಲಂಡನಿನ ಟೈಮ್ಸು ಪತ್ರದಲ್ಲಿ ಪತ್ರಸಂಪಾದಕರು ಮೂಲ ವ ಸೆಕೆಂಡರಿ ಶಾಲಾ ಉಪಾಧ್ಯಾಯರಿಗೆ ವಿಜ್ಞಾಪಿಸಿದ್ದನ್ನು ಈ ಕೆಳಗೆ ಎತ್ತಿ ಬರೆದಿರುವೆನು.

ವ್ಯಾಕರಣದ ಶಿಕ್ಷಣೆಯು ಈಗಿನ ಮಟ್ಟಿಗೆ ವಿದ್ಯಾರ್ಥಿಗಳಿಗೆ ಸಹಾಯಕವಾಗಿರುವುದಿಲ್ಲ. ವ್ಯಾಕರಣವು ಭಾಷಾಜ್ಞಾನದ ಮೊದಲು ಮಕ್ಕಳಿಗೆ ಬರುವುದೆಂದು ಉಪಾಧ್ಯಾಯರು ನಂಬುವುದು ಶುದ್ಧ ತಪ್ಪು. ವ್ಯಾಕರಣವೆಂದರೆ ಭಾಷೆಯನ್ನಾಡಲೂ ಬರೆಯಲೂ ಉಂಟಾದ ಸೂತ್ರ ಸ್ಥಾಪನೆಯೆಂದೂಹಿಸುವುದೂ, ಆ ಸೂತ್ರಗಳನ್ನು ಚಿಕ್ಕವರಿಗೆ ಗಿಳಿಪಾಠ ಮಾಡಿಸುವದೂ ಅನ್ಯಾಯ. ಇಂಥ ನಂಬಿಕೆಯು ಬೆತ್ತದ ತುದಿಯಿಂದ ಶಿಕ್ಷಣವನ್ನು ತಲೆಯೊಳ ಹೊಕ್ಕಿಸುವ ಪುರಾತನ ದಿನಗಳಲ್ಲಿ ಉಂಟಾದುದೇ ಹೊರತು ಬೇರೆ ಅಲ್ಲ.

ವ್ಯಾಕರಣದ ಮಟ್ಟಿಗೆ ಮಕ್ಕಳ ತಪ್ಪುಗಳನ್ನು ತಿದ್ದುವಾಗ, "ಹೀಗನ್ನಬೇಕು" ಎಂದು ಧೃಡೀಕರಿಸುವುದು ಒಳ್ಳೆಯದು. ಹೊರತು, ಪ್ರತಿಯೊಂದರ ಸೂತ್ರಾಧಾರವನ್ನು ವಿವರಿಸುವುದಾಗಲಿ, ವಿವರಿಸಿದ್ದಲ್ಲಿ ಮಕ್ಕಳು ಸಂಪೂರ್ಣ ಅದನ್ನು ಗ್ರಹಿಸುವುದಾಗಲಿ ಸಾಧ್ಯವಲ್ಲ. ಮಕ್ಕಳು ತಮ್ಮ ಹೆತ್ತವರ ಅಥವ ಉಪಾಧ್ಯಾಯರ ಹೇಳಿಕೆಗಳಲ್ಲಿ ಅನೇಕವನ್ನು ಕಣ್ಣು ಮುಚ್ಚಿ ನಂಬುವುದು ಕೆಲವು ಕಡೆಗಳಲ್ಲಿ ಅಗತ್ಯ.

ಅನುಭವದಿಂದ, ಮಕ್ಕಳು ಹೀಗೆ ಯಾಕೆ ಸುಮ್ಮನೆ ನಂಬಬೇಕೆಂಬುದು ತನ್ನಷ್ಟಕ್ಕೆ ಉಪಾಧ್ಯಾಯನಿಗೆ ತಿಳಿಯುವುದು. ಆದರೆ "ಹೀಗನ್ನಬೇಕು" "ಹೀಗನ್ನಬಾರದು" ಎಂಬುದನ್ನು ಬಾಲ್ಯದಲ್ಲಿ ಮಕ್ಕಳು ಅರಿತೊಡನೆ, ಸೂತ್ರವಿಭಿನ್ನವಾದ ವ್ಯಾಕರಣವು ಇರಲಾರದೆಂದೂ, ವ್ಯಾಕರಣವೆಂಬುದೊಂದಿದೆಯೆಂದೂ ಮಕ್ಕಳು ತಾವಾಗಿ ತಿಳಕೊಳ್ಳುವರು.

ದುಷ್ಟವ್ಯಾಕರಣವು ಎರಡು ತೆರನಾಗಿರುವುದು: (1) ವ್ಯಾಕರಣದ ಸೂತ್ರಗಳ ಅಜ್ಞಾನ. (2) ಮೂಢತನದ ಗಲಿಬಿಲಿ ಅಥವಾ ಆಲೋಚನೆಯ ಪರಸ್ಪರ ಮಿಶ್ರಣ. ಸರಿಯಾದ ಓದುಬರಹವರಿಯದ ಜನರಲ್ಲಿ ಮೊದಲನೆಯ ದೋಷವಿರುವುದು. ಆದರೂ ಅವರ ಮಾತಾಗಲಿ, ಒಕ್ಕಣೆಯಾಗಲಿ ತೊಡಕುಗಳಿಂದ ದೂಷಿತವಾಗುವುದಿಲ್ಲ. ಅವರಲ್ಲಿ ವಾಕ್ಯರಚನೆಯು ಸರಳವಾಗಿಯೆ ಇರುವುದು. ಎರಡನೆಯ ದೋಷವು ಅಪೂರ್ಣಜ್ಞಾನಹೊಂದಿದ ಅರ್ಧ ಕಲಿತವರಲ್ಲಿರುವುದು. ಇವರ ವಾಕ್ಯರಚನೆಯು ಸರಳವಾಗಿದ್ದರೂ, ಇವರು ಏನು ಹೇಳಲು ಕುತೂಹಲಪಡುವರೆಂಬುದು ಸ್ಪಷ್ಟವಾಗುವುದಿಲ್ಲ. ಎರಡನೆಯ ದೋಷಕ್ಕೆ ವ್ಯಾಕರಣ ಸಾರದ ಪಠನೆಯು ತಕ್ಕ ಔಷಧ. ಅದರಿಂದ ವಿದ್ಯಾರ್ಥಿಯು ತನ್ನ ಹೇಳಿಕೆಯನ್ನು ಹೇಗೆ ತಯಾರಿಸಿಡಬೇಕೆಂದು ತಿಳಿಯುವನು. ತನ್ನ ಯೋಚನೆಗಳು ಸರಿಯೋ ಎಂದು ತಾನೇ ತಿಳಿವನು.

ಭಾವನೆಗಳು ಸರಿಯಿದ್ದಲ್ಲಿ ವಾಕ್ಯಗಳೂ ಮಾತುಗಳೂ ಸರಿಯಾಗಿ ಉಂಟಾಗುವುವು. ಆಲೋಚನೆಯು ಪ್ರಥಮದಲ್ಲಿಯಲ್ಲದೆ ಮಾತುಗಳಲ್ಲ. ಭಾವನೆಗಳನ್ನು ಸರಿಯಾಗಿ ಪೋಣಿಸಲು ಕಲಿಸಿದಲ್ಲದೆ ಪಾಣಿನಿಯ ಸೂತ್ರಗಳಿಂದಲಾದರೂ ಪ್ರಯೋಜನವಿರದು. ಮಾತುಗಳ ಸೂಕ್ಷ್ಮವಾದ ಪರಸ್ಪರ ಭೇದಾಭೇದಗಳನ್ನು ಕಲಿಸುವುದೂ, ಭಾವನೆಗಳನ್ನು ಮಾತುಗಳಿಂದ ಅಡಕಣಗೊಳಿಸುವುದೂ ಉಪಾಧ್ಯಾಯರ ಪ್ರಾಮುಖ್ಯ ಕರ್ತವ್ಯ.

ಈಗ ಕಲಿಸಿದಂತೆ ವ್ಯಾಕರಣವು ಶಾಲೆಗಳಲ್ಲಿ ಬಾಲಕರು ಸರಿಯಾಗಿ ಭಾವನೆಗಳನ್ನೂ ಮಾತುಗಳನ್ನೂ ಜೋಡಿಸುವರೆ ಸಹಾಯಕವಾಗಿರುವುದಿಲ್ಲ. ಕೆಲಸಕ್ಕೆ ಬಾರದ ಕೆಲವು ತಪ್ಪುಗಳನ್ನು ತಿದ್ದುವ ಸೂತ್ರವನ್ನು ಕಲಿಸುವುದಲ್ಲದೆ, ಆ ತಪ್ಪುಗಳಿಲ್ಲದವನು ಅತೀ ಚಲೋವಾಗಿ ಬರವನೆಂಬ ಭಾವನೆಯನ್ನು ಮಕ್ಕಳು ಈಗಲೀಗ ಗ್ರಹಿಸುವರು.

ಭಾಷಾರಚನೆಯಿಂದ, ಮಾದರಿ ಲೇಖನಗಳಿಂದ, ಸರಿಯಾಗಿ ಸಂಭಾಷಣೆಯಿಂದ ವ್ಯಾಕರಣವನ್ನು ಕಲಿಸುವುದು ಒಳ್ಳೆಯದಲ್ಲದೆ ಬೆತ್ತದಿಂದ ವ್ಯಾಕರಣವು ಚಿಗುರಿಸಲಾರದು.

M. N. Kamath.

ಜರಲೆ ಯಾ ಅಕ್ಕಳೆ.

ಜರಲೆಯು ಪ್ರತಿ ಒಂದು ಮನೆಯಲ್ಲಿ, ಮುಖ್ಯವಾಗಿ ಅಡಿಗೆ ಕೋಣೆಯಲ್ಲಿಯ ಸಂದುಗೊಂದುಗಳಲ್ಲಿ ತುಂಬಿಕೊಂಡಿರುತ್ತದೆ. ಈ ಪ್ರಾಣಿಯಿಂದ ಯಾವದೊಂದು ತರದ ಅಪಾಯವಿಲ್ಲವೆಂಬದಾಗಿ ಜನರು ಭಾವಿಸುವುದರಿಂದ ಅದನ್ನು ಯಾರಾದರೂ ಕೊಲ್ಲುವುದಿಲ್ಲ. ಆದರೆ ಈ ಭಾವನೆಯು ತಪ್ಪು. ಈ ಅಕ್ಕಳೆಯಿಂದ ವಿವಿಧ ತರದ ಕೇಡುಗಳುಂಟಾಗುತ್ತವೆ. ಅಕ್ಕಳೆಯಲ್ಲಿ ಒಂದು ವಿಧದ ಹುಳಿ ಅಂಟು ಪದಾರ್ಥವಿದೆ. ಇದು ಮೇಜಿಯ ಮೇಲಿಟ್ಟ ಹಾಲಿಗೆ ತನ್ನ ಬಾಯನ್ನು ಹಾಕುತ್ತದೆ. ಅದರಿಂದ ಹಾಲು ಹುಳಿಯಾಗುತ್ತದೆ. ಅದರ ಹೊಟ್ಟೆಯಲ್ಲಿ ಒಂದು ತರದ ಅಂಟುವ ದ್ರವವಿದೆ. ಈ ದ್ರವವನ್ನು ನಮ್ಮ ಆಹಾರಕ್ಕೂ ಹಾಲಿಗೂ ತಾಗಿಸಿ ಕೆಡಿಸುತ್ತದಲ್ಲದೆ ತನ್ನ ಹಿಕ್ಕೆಯನ್ನು ನಾವು ತಿನ್ನುವ ಆಹಾರಕ್ಕೆ ಹಾಕಿ ಅದನ್ನು ಹೊಲಸುಮಾಡುತ್ತದೆ.

ಅಕ್ಕಳೆಗೆ ನಮ್ಮ ಎಂಜಲಿನ ಮೇಲೆ ಬಹು ಪ್ರೀತಿ. ಆರೋಗ್ಯಶಾಲಿಗಳ ಯಾ ರೋಗಪೀಡಿತರ ಎಂಜಲು ಎಂಬದಾಗಿ ಭಾವಿಸದೆ ನೆಕ್ಕುತ್ತದೆ. ಇದೇ ಎಂಜಲು ತಿಂದ ಬಾಯನ್ನು ನಾವು ತಕೊಳ್ಳುವ ಆಹಾರದಲ್ಲಿ ಹಾಕುತ್ತದೆ, ಹಾಗಾದರೆ ನಾವು ಯಾವದನ್ನು ತಿಂದು ಕುಡಿಯುತ್ತೇವೆ.? ಕ್ಷಯರೋಗ ಇತ್ಯಾದಿ ಅಂಟುರೋಗಿಗಳ ಎಂಜಲಿನಲ್ಲಿರುವ ಅಣುಪ್ರಾಣಿಗಳನ್ನಲ್ಲವೇ?

ಈಗಿನ ವೈದ್ಯರು ಅಕ್ಕಳೆಯು ಕೂಡಾ ಕ್ಷಯರೋಗ ಇತ್ಯಾದಿ ಅಂಟುರೋಗಗಳ ಉಲ್ಬಣಕ್ಕೆ ಮೂಲಕಾರಣವೆಂದು ಪರೀಕ್ಷಿಸಿ ತಿಳಕೊಂಡಿರುವರು. ಇದು ನಮ್ಮ ಆಹಾರವನ್ನು ಕೆಡಿಸಿ ವಿಷವನ್ನು ಪಸರಿಸುವ ಜಂತುವಾಗಿದೆಂಬುದಕ್ಕೆ ಏನೇನೂ ಅನುಮಾನವಿಲ್ಲ. ಆದ್ದರಿಂದ ಅಕ್ಕಳೆಯು ಅಪಾಯವನ್ನುಂಟುಮಾಡದ ಪ್ರಾಣಿಯೆಂದೆಣಿಸದೆ ನಮ್ಮ ನಮ್ಮ ಮನೆಗಳ ಕತ್ತಲೆ ಕೋಣೆಗಳಲ್ಲಿಯೂ ಅಡಿಗೆ ಕೋಣೆಗಳಲ್ಲಿಯೂ ತುಂಬಿಕೊಂಡಿರುವ ಅಕ್ಕಳೆಗಳನ್ನು ನಶಿಸಬೇಕು. **S. A.**

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಮೂಡಬಿದ್ರೆ ತಾಲೂಕು.

(ಕಳದ ಸಂಚಿಕೆಯಿಂದ ಮುಂದರಿಸಿದುದು).

ಅಯ್ಯಾ ಪತ್ರಕರ್ತರೇ,

ಮೂಡಬಿದ್ರೆ ತಾಲೂಕು ಏರ್ಪಡಿಸಿದ್ದರಿಂದ ಮಂಗಳೂರು ತಾಲೂಕು ಆಫೀಸಿನ ಕೆಲಸದಡಚಣಿಯು ವಿಶೇಷವಾಗಿ ಕಡಿಮೆಯಾಗಲಿಲ್ಲವೆಂಬದಾಗಿ ಕಳದ ಸಂಚಿಕೆಯಲ್ಲಿ ಹೇಳಲಾಯಿತು. ಇಷ್ಟೇ ಅಲ್ಲ. ಬಂಟವಾಳದಲ್ಲಿದ್ದ ಮೆಜಿಸ್ಟ್ರೇಟ ಕಚೇರಿಯು ಮೂಡಬಿದ್ರೆಗೆ ವಯ್ಯಲ್ಪಟ್ಟದ್ದರಿಂದ ಇನ್ನೊಂದು ಕಡೆಯಿಂದ ಸಹ ಆಕ್ಷೇಪವು ಕೇಳಿಸುತ್ತಿರುವದು. ಘಟ್ಟಗಳಿಂದ ಕಾಫಿ ಮೊದಲಾದ ಜೀನಸುಗಳು ತುಂಬಿ ಬರುವ ಗಾಡಿಗಳ ಮೊದಲಾದ ವ್ಯಾಪಾಟವು ಬಂಟವಾಳದಲ್ಲಿ ಹೆಚ್ಚಾಗಿರುವದರಿಂದ ಬಂಟವಾಳದಿಂದ ಮೆಜಿಸ್ಟ್ರೇಟರ ಆಫೀಸನ್ನು ತೆಗದು ಹಾಕಿದ್ದು ಸರಿಯಲ್ಲವೆಂಬ ಮತ್ತೊಂದು ಮಾತಿದೆ. ಸ್ವದೇಶಾಭಿಮಾನಿಯ ಕಳದ ಶುಕ್ರವಾರದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ ಪುತ್ತೂರು ವರ್ಗದಾರರ ಸಂಘದ ಸಭೆಯ ವೃತ್ತಾಂತದಿಂದ ಮೂರನೇದೊಂದು ಆಕ್ಷೇಪವು ಸಹ ಜನನಕ್ಕೆ ಬಂದಿರುತ್ತದೆ. ವರ್ಗದಾರರ ಸಂಘವು ಪುತ್ತೂರಲ್ಲಿ ಹುಟ್ಟಿದಂದಿನಿಂದ ಅದನ್ನು ನೋಡದೆ ಇದ್ದ ಅಪರೂಪ ಅತಿಥಿಗಳಾದ ಕಾರ್ಕಳದ ವಕೀಲರು, ರಾ| ಸದಾಶಿವ ಭಟಜೀ ಮತ್ತು ರಾ| ರಾಮಹೆಗ್ಗಡೆಯವರು ಕಳದ ಪುತ್ತೂರು ವರ್ಗದಾರರ ಸಂಘದ ಸಭೆಯಲ್ಲಿ ಹಾಜರಿರುತ್ತಾ ಬೆಳ್ತಂಗಡಿ ರೆವಿನ್ಯು ತರ್ಫು ಮೂಡಬಿದ್ರೆಗೆ ಕೂಡಿಸಲ್ಪಟ್ಟದ್ದರಿಂದ ಆ ತರ್ಫಿನ ವರ್ಗದಾರರಿಗೆ ವಿಶೇಷ ಅನಾನುಕೂಲತೆ ಉಂಟಾಗಿದೆಂಬದಾಗಿಯೂ ಇಂಥಾ ಅನಾನುಕೂಲತೆಯ ನಿವಾರಣೆಗೆ ಗ್ರೇಹೆಮ್ ದೊರೆಗಳವರು ಸೂಚಿಸಿರುವ ನವೀನ ತಾಲೂಕಿನ ಏರ್ಪಾಡಿನ ಪ್ರಕಾರ ಬೆಳ್ತಂಗಡಿಯ ತರ್ಫನ್ನು ಉಪ್ಪಿನಂಗಡಿ ತಾಲೂಕಿಗೆ ಪುನಹ ಸೇರಿಸಬೇಕೆಂತಲೂ ನಿರ್ಣಯವು ವರ್ಗದಾರರ ಸಭೆಯಲ್ಲಿ ಮಂಜೂರು ಮಾಡಲ್ಪಟ್ಟಿರುವುದು. ಭಲರೇ! ಶಹಬಾಸ್! ಕಾರ್ಕಳದವರ ಪ್ರಯತ್ನಗಳು!

ಮೂಡಬಿದ್ರೆ ತಾಲೂಕು ಆರನೇದೊಂದು ತಾಲೂಕಾಗಿ ಸ್ಥಾಪಿಸಲ್ಪಟ್ಟಿತು. ಇಂಥಾ ಸ್ಥಾಪನೆಯಲ್ಲಿ ಕೆಲವು ಕುಂದುಗಳಿರಬಹುದು. ಇಂಥವುಗಳನ್ನು ಆ ತಾಲೂಕು ವ್ಯವಹಾರದ ಅನುಭವದಿಂದ ಕ್ರಮೇಣ ತಿದ್ದುವ ಬದಲಿಗೆ ಮೂಡಬಿದ್ರೆ ತಾಲೂಕಿನ ಏರ್ಪಾಡನ್ನೇ ಪೂರ್ಣವಾಗಿ ರದ್ದುಪಡಿಸುವ ಆಲೋಚನೆಯು ಸರಿಯಲ್ಲ. ತಾಲೂಕಾಫೀಸನ್ನು ಮೂಡಬಿದ್ರೆಯಲ್ಲಿಯೇ ಇಟ್ಟು ಮಂಗಳೂರು ತಾಲೂಕು ಆಫೀಸಿನ ಕೆಲಸದಡಚಣೆಯನ್ನು ಕಡಮೆ ಮಾಡಲು ಇತರ ಶುಲಭ ಉಪಾಯಗಳಿವೆ. ಮಂಗಳೂರಿಗೆ ಸಮೀಪವಿರುವ ಗ್ರಾಮಗಳನ್ನು ಮಾತ್ರ ಬಿಟ್ಟು, ಈಗ ಮಂಗಳೂರು ತಾಲೂಕಿಗೆ ಸೇರಿರುವ ಮುಲ್ಕಿ ರೆವಿನ್ಯು ಫಿರ್ಕಿನ ಗ್ರಾಮಗಳನ್ನು ಮೂಡಬಿದ್ರೆ ತಾಲೂಕಿಗೆ ಸೇರಿಸಬಹುದು. ವಿಶೇಷ ಕೆಲಸವುಳ್ಳ ಕರಾವಳಿ ಗ್ರಾಮಗಳುಳ್ಳ ಈ ರೆವಿನ್ಯು ಇನ್ಸ್‌ಪೆಕ್ಟರರ ತರ್ಫು ಮೂಡಬಿದ್ರೆ ತಾಲೂಕಿಗೆ ಸೇರಿಸಲ್ಪಡುವದರಿಂದ ಮಂಗಳೂರಿನ ತಹಸೀಲದಾರರಿಗೆ ಕೆಲಸದಡಚಣೆಯು ಕಡಮೆಯಾಗುವದು. ಮುಲ್ಕಿ ಪ್ರಾಂತ್ಯಗಳ ನಿವಾಸಿಕರಿಗೆ ಸಹ ಮೂಡಬಿದ್ರೆಯು ಮಂಗಳೂರಿನಷ್ಟೆ ಅನುಕೂಲವಾಗಿರುವದು.

ಹೀಗೆ ಮುಲ್ಕಿ ಡಿವಿಜನ್ ಈ ಹೊಸ ತಾಲೂಕಿಗೆ ಸೇರಿಸಲ್ಪಟ್ಟರೆ ಬೆಳ್ತಂಗಡಿ ಡಿವಿಜನನ್ನು ಪುನಹ ಉಪ್ಪಿನಂಗಡಿ ತಾಲೂಕಿಗೆ ಸೇರಿಸುವರೆ ಸಹ ಆಕ್ಷೇಪವಿರದು. ಬಂಟವಾಳ ಡಿಪ್ಯುಟಿ ತಹಸೀಲದಾರರ ಅಗತ್ಯವು ಸಹ ಮೇಲಿನ ಸೂಚನೆ ಪ್ರಕಾರ ಮಂಗಳೂರು ತಾಲೂಕಿಗೆ ಅಗತ್ಯವಿಲ್ಲ. ಆದರೆ ಬಂಟವಾಳ ಅತ್ತಕಡೆಯು ಮೆಜಿಸ್ಟ್ರೇಟ ಇಲಾಖಾ ಸಂಬಂಧವಾದ ಕೆಲಸಗಳ ನಿವೃತ್ತಿಯು ಈ ಏರ್ಪಾಡಿನಿಂದ ದೊರೆಯದೆಂತ ಈ ಏರ್ಪಾಡಿಗೆ ಕೆಲವರು ಆಕ್ಷೇಪ ಹೇಳಬಹುದು. ಇಂಥಾ ಆಕ್ಷೇಪ ನಿವಾರಣೆಗೆ ಸಹ ಮಾರ್ಗವಿದೆ. ಮಂಗಳೂರಿನ ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ಮೆಜಿಸ್ಟ್ರೇಟರಿಗೆ ಕೆಲಸವು ಬಹಳ ವಿಪರೀತವಾಗಿದ್ದು ಮಂಗಳೂರು ಡಿವಿಜನಲ್ ಆಫೀಸಿನ ಇತರ ಕೆಲಸಗಳನ್ನು ಸಮರ್ಪಕವಾಗಿ ಮಾಡುವದು ಅತಿ ಪ್ರಯಾಸವಾಗಿ ಬರುತ್ತಲಿದೆ. ಇಂಥಾ ಸಂದರ್ಭದಲ್ಲಿ ಒಂದನೇ ಕ್ಲಾಸ್ ಅಧಿಕಾರವುಳ್ಳ ಒನರೆರಿ ಮೆಜಿಸ್ಟ್ರೇಟರರನ್ನು ಮಂಗಳೂರು ಡಿಪ್ಯುಟಿ ಮೆಜಿಸ್ಟ್ರೇಟರ ಸಹಾಯಕ್ಕಾಗಿ ನೇಮಿಸಿದ್ದಲ್ಲಿ ಇಲ್ಲಿಯ ಸ್ಟೇಶನರಿ ಸಬ್ ಮೆಜಿಸ್ಟ್ರೇಟರ ಆಫೀಸನ್ನು ಅತ್ಯಗತ್ಯವಾದ್ದಲ್ಲಿ ಬಂಟವಾಳಕ್ಕೆ ವಯ್ಯಬಹುದು. ಒಂದು ವೇಳೆ ಒನರೆರಿ ಮೆಜಿಸ್ಟ್ರೇಟರ ನೇಮಕವು ಸದ್ಯಕ್ಕೆ ಅನುಕೂಲವಲ್ಲವೆಂತ ಕಂಡು ಬಂದರೆ ಮತ್ತು ಬಂಟವಾಳಕ್ಕೆ ಒಬ್ಬ ಸಬ್ ಮೆಜಿಸ್ಟ್ರೇಟರ ಆಫೀಸು ಅಗತ್ಯ ಬೇಕಾಗಿರುವುದೆಂತ ಅಭಿಪ್ರಾಯಪಟ್ಟರೆ ಇದಕ್ಕೆ ತಕ್ಕದಾದ ವ್ಯವಸ್ಥೆಯನ್ನು ಮೂಡಬಿದ್ರೆ ತಾಲೂಕನ್ನೇ ಊರ್ಜಿತವಿಟ್ಟು ಮಾಡಲಿಕ್ಕೆ ಮತ್ತೊಂದು ರೀತಿಯಲ್ಲಿ ಅನುಕೂಲವಿರುತ್ತದೆ. ಹ್ಯಾಗಂದರೆ, ಮುಲ್ಕಿ ರೆವಿನ್ಯು ಡಿವಿಜನನ್ನು ಮೂಡಬಿದ್ರೆ ತಾಲೂಕಿಗೆ ಕೂಡಿಸುವದಕ್ಕಿಂತ ಕಾರ್ಕಳ ರೆವಿನ್ಯು ಇನ್ಸ್‌ಪೆಕ್ಟರರ ಡಿವಿಜನನ್ನು ಸೇರಿಸಿಕೊಳ್ಳಬಹುದು. ಈ ಡಿವಿಜನನ್ನು ಮೂಡಬಿದ್ರೆ ತಾಲೂಕಿಗೆ ಕೂಡಿಸುವದರಿಂದ ಕಾರ್ಕಳದಲ್ಲಿ ಉಡ್ಪಿ ತಾಲೂಕ್ಕು ತಹಸೀಲದಾರರ ಸಹಾಯಾರ್ಥವಾಗಿರುವ ಡಿಪ್ಯುಟಿ ತಹಸೀಲದಾರರ ಅಗತ್ಯವು ಉಡ್ಪಿ ತಾಲೂಕಿಗಿರದು. ಹಾಗೆ ಉಡ್ಪಿ ತಾಲೂಕಿಗೆ ಕೆಲಸವು ವಿಶೇಷವೆಂತ ಕಂಡುಬಂದರೂ ಕುಂದಾಪುರ ತಾಲೂಕಿನ ಸರಹದ್ದಿನಲ್ಲಿರುವ ಉಡ್ಪಿ ತಾಲೂಕಿನ ಕೆಲವು ಗ್ರಾಮಗಳನ್ನು ಸಣ್ಣ ತಾಲೂಕಾಗಿರುವ ಕುಂದಾಪುರ ತಾಲೂಕಿಗೆ ಸೇರಿಸೋಣಾಗಬಹುದು. ಕಾರ್ಕಳದಲ್ಲಿರುವ ಡಿಪ್ಯುಟಿ ತಹಸೀಲದಾರರ ಆಫೀಸನ್ನು ಬಂಟವಾಳಕ್ಕೆ ವಯ್ಯಲಿಕ್ಕೆ ಈ ಮೂಲಕ ಸಾಧ್ಯವಾಗಿ ಬಂಟವಾಳ ಮೆಜಿಸ್ಟ್ರೇಟರಿಯಲ್ ಕೆಲಸಕ್ಕೂ ಮಂಗಳೂರು ತಾಲೂಕು ಆಫೀಸಿನ ಕೆಲಸದಡಚಣೆಯ ಭಾರವನ್ನು ತಗ್ಗಿಸಲಿಕ್ಕೂ ಅವಕಾಶ ದೊರಕುತ್ತದೆ.

(ಮುಂದರಿಯುವುದು).

"ಚಿಮಿಕಿಸುತ್ತಿರುವ" ಊರಿಗೆ ಕುರುಡ ಎಂಬ ಅಂಗ್ರೇಜು ವೈದ್ಯ.

ಅಯ್ಯಾ,

ನಾನು ಸ್ವದೇಶಾಭಿಮಾನಿಗೆ ಪತ್ರ ಬರಿಯದೆ ಕೆಲವು ಸಮಯವಾಯಿತು. ಪತ್ರ ಬರಿಯುವ ಒಂದು ಸಂದರ್ಭ ದೊರಕಿರುತ್ತದೆ. ಎಲ್ಲರ ಪ್ರಯೋಜನಾರ್ಥವಾಗಿರುವ ಈ ವಿಷಯಕ್ಕೆ ನಿಮ್ಮ ಪತ್ರದಲ್ಲಿ ಕೊಂಚ ಸ್ಥಳವನ್ನು ದಯಪಾಲಿಸುವರಾಗಿ ನಂಬುತ್ತೇನೆ.

ನಮ್ಮ ಊರಲ್ಲಿ ಅಂಗ್ರೇಜ್ ವೈದ್ಯರ ಸಂಗತಿ ಆಗಾಗ್ಯೆ ನನ್ನ ತಿಳುವಳಿಕೆಗೆ ಬಂದು ನಾನು ಸ್ವತಃ ಪರೀಕ್ಷೆ ಮಾಡಿದ್ದಲ್ಲದೆ ಆ ಸತ್ಯ ಕುರಿತು ನಿಮ್ಮ ಪತ್ರವನ್ನು ತರಿಸಿಕೊಳ್ಳುವವರಿಗೂ ಸ್ನೇಹಿತರಿಗೂ ನಾನು ತಿಳಿಸದೆ ಹೋದರೆ ಬಡಜನರು ಕಷ್ಟದಲ್ಲಿ ಬಿದ್ದು ದುಃಖವನ್ನು ಅನುಭವಿಸುವ ಪಾಪಕ್ಕೆ ನಾನು ಗುರಿಯಾಗುವೆನಲ್ಲದೆ ನನ್ನ ಅತಿ ಮಿತ್ರರಾದ ವೈದ್ಯರು ಸಹ ನನ್ನ ಮೇಲೆ ಶಿಟ್ಟಾಗಿ ನನ್ನನ್ನು ದೂರುವರು ಎಂಬದರಿಂದ ಯುಕ್ತವೆಂತ ಭಾವಿಸಿ ಬರದುಕೊಂಡಿದ್ದೇನೆ.

ನಾನು ಮದ್ರಾಸು ಸಂಸ್ಥಾನದಲ್ಲಿಯೂ, ಬೊಂಬಾಯಿ ಸಂಸ್ಥಾನದಲ್ಲಿಯೂ ಪ್ರಯಾಣವನ್ನು ಬೆಳಸಿ ಅನೇಕ ಅಂಗ್ರೇಜ ವೈದ್ಯರ ಚಿಕಿತ್ಸೆಯನ್ನು ಸಹ ಅನುಭವಿಸಿದವನಾಗಿರುತ್ತೇನೆ. ಆದರೆ ನಮ್ಮಲ್ಲಿಯ ವೈದ್ಯರ ವಿಶೇಷ ತರದ ಕಾರ್ಯಗಳು—ಮತ್ತು ಅತ್ಯಾಶ್ಚರ್ಯಕರವಾದ ಅವರಿಂದ ಸಿಕ್ಕುವ ಪ್ರಯೋಜನಗಳು—ದೇವರ ವರದಿಂದಲೋ ಇಲ್ಲವೆ ಭೂತಪಿಶಾಚಿಗಳ ಭಜನೆಗಳಿಂದಲೋ—ಜೀವದಿಂದಿದ್ದವರು ದೇವಲೋಕ ನೋಡುತ್ತಾರೆ, ಮೃತಪಟ್ಟವರು ಪುನರ್ಜೀವಿತರಾಗಿ ನಮ್ಮನ್ನು ಕಾಣುತ್ತಾರೆಂಬದಕ್ಕೆ ಈ ಕೆಳಗಿನ ದೃಷ್ಟಾಂತಗಳಿಂದ ಪೂರ್ಣ ತೃಪ್ತಿಯಾದೀತು.

ಇದೇ ತಿಂಗಳ ಒಂದಾನೊಂದು ಶುಕ್ರವಾರ ದಿವಸ ನಮ್ಮಲ್ಲಿಯ ಕಸಬೆಯ ಮೂರು ಮಾರ್ಗ ಕೂಡಿರುವ ಒಂದು ರಸ್ತೆಯ ಬದಿಯಲ್ಲಿ ಒಂದು ಕೊಂಕಣಸ್ತ ಹೆಂಗಸು ಏಳು ತಿಂಗಳ ಗರ್ಭಿಣಿಯಾಗಿ ಅಕಸ್ಮಾತ್ತಾಗಿ ಮೃತಪಟ್ಟದ್ದಳು. ಆದರೆ ಅವಳ ಕುಟುಂಬದವರು ಅವಳು ಮೃತಪಟ್ಟ ವಿಷಯ ಸಂಶಯವನ್ನು ದೂರಪಡಿಸುವ ಉದ್ದೇಶದಿಂದ ನನ್ನ ಪ್ರಿಯ ವೈದ್ಯರ ಸಹಾಯವನ್ನು ಪಡೆದು ಶವವನ್ನು ಪರಿಶೋಧಿಸಿದರು. ಮೇಲೆ ಬರದ ವರಪ್ರದಾನಗಳ ಬಲದಿಂದ ಮೃತಪಡಿಯಲಿಲ್ಲವೆಂಬ ಅಭಿಪ್ರಾಯವನ್ನು ಮಿತ್ರರಾದ ವೈದ್ಯರು ತೋರಿಸಿ ಮುಖವನ್ನು ಭೂಮಿದೇವಿಗೆ ಕಾಣಿಸಿ ಮುಕ್ಕಿದ ಮುಂಡೆಗೆ ಶಿಕ್ಕಿದ್ದೇ ಲಾಭವೆಂದು ಖಚಿತಮಾಡಿ ಧರ್ಮದಯಾಳುಗಳಾದ ಕಾರ್ಯಕರ್ತೃಗಳು ಬಡವರಿಗೋಸ್ಕರಇಟ್ಟಂಥಾ ಮದ್ದನ್ನು ಶವಕ್ಕೆ ರವಾನಿಸಿದರು. ಶವ ಜೀವವನ್ನು ಹೊಂದಲಿಲ್ಲ.

ಅಯ್ಯಾ, ಇದು ಒಂದು ಆಶ್ಚರ್ಯ ಅಲ್ಲ; ಇನ್ನೊಂದು ಸಂಗತಿ—ಬಡವರಿಗೆ ಕಷ್ಟ ಸಮಯದಲ್ಲಿ ಯಾರು ಗತಿ—ಎಲ್ಲಿಂದ ಸಹಾಯ ಶಿಕ್ಕುವದು. ಇನ್ನೊಂದು ದಿನ ಒಬ್ಬ ಬ್ರಾಹ್ಮಣನ ಹೆಂಡತಿ ಶುಮಾರು ೪೦ ವರುಷ ಪ್ರಾಯದವಳು ೯ ತಿಂಗಳ ಗರ್ಭಿಣಿಯಾಗಿ ಶಿಶು ಹೊಟ್ಟೆಯಲ್ಲೆ ಮೃತ ಪಟ್ಟಿರುತ್ತಾ ಆ ಹೆಂಗಸನ್ನು ಪ್ರಸವಗೋಸ್ಕರ ನಮ್ಮಲ್ಲಿಯ ಔಷಧಾಲಯಕ್ಕೆ ಬೆಳಿಗ್ಯೆ ಶುಮಾರು ೯–೧೦ ಗಂಟೆಗೆ ತಂದು ವೈದ್ಯರ ಸಹಾಯವನ್ನು ಕೇಳಿದರು. ದಯಾಳು ವೈದ್ಯರು ಮಧ್ಯಾನ್ಹ ೨ ಗಂಟೆಗೆ ತನ್ನ ಸಹಾಯವನ್ನು ತೋರಿಸಿದರು. ಹೆಂಗಸು ಪ್ರಕೃತ ಯಮಪುರದಲ್ಲಿರುವಳು.

ಅಯ್ಯಾ ನಾನು, ಮೇಲೆ ಹೇಳಿದ ಪ್ರಕಾರ ಸತ್ತವರು ಬದುಕುತ್ತಾರೆ, ಬದುಕಿದವರು ಸಾಯುತ್ತಾರೆ ಎಂಬದಕ್ಕೆ ಸತ್ಯವಾದ ಉದಾಹರಣೆಗಳಿಂದ ಸ್ವಮಾಧಾನ ಪಡಿಸಿದ್ದೇನೆ. ಇದನ್ನೆಲ್ಲಾ ನೋಡುವವರ್‍ಯಾರು?

'ವಾರ್ತಾದಾಯಕ'.

ಠೀಪರಾಕ್ ಕುಟ್ಟಿಚ್ಚಾತ!

ಪ್ರಿಯ ಸ್ವದೇಶಾಭಿಮಾನಿ ಪತ್ರಿಕಾಕರ್ತರೇ!

ಪುಟ್ಟ ಚೋದ್ಯವೊಂದು ತಮ್ಮ ಪರಾಮರ್ಶಕ್ಕೆ ತರಲೇ? ಮರಳಿಯ ಪ್ರಾಂತ್ಯದಲ್ಲಿ ಯಾವುದೋ ಒಂದು ದೈವವು ಹಗಲು ಸಮಯದಲ್ಲಿಯೇ ರೂಪ ಮರಸಿಕೊಂಡು ಜನರನ್ನು ಕರದು ಮಾತನಾಡಿಸಿ ಹರಿಕೆ ಮುಂತಾದ್ದನ್ನು ಪಡಿಯಲು ಸಿದ್ಧವಾಗಿದೆ ಎಂದು ತಮ್ಮ ಮನೋರಂಜಕ ಪತ್ರಿಕೆಯಲ್ಲಿ ಪ್ರಚುರವಾದ ವರ್ತಮಾನ ಸಂಗ್ರಹದಿಂದ ತಿಳಿದು ಅಡಿಗಡಿಗೆ ಬೆರಗಾಗುತ್ತಿರುವ ವೇಳೆಯಲ್ಲಿ ಒಂದು ವಾರದ ಇತ್ತಲಾಗೆ ನೇತ್ರಾವತಿ ಹೊಳೆಯ ತೆಂಕು ಪಾರ್ಶ್ವದಲ್ಲಿ ಸಮುದ್ರ ತೀರದಲ್ಲಿ ಇರುವ ಒಂದು ಚಲೋ ವಿಹಾರೋದ್ಯಾನದಲ್ಲಿ ನಡಿಯಿತೆಂದು ನಾನು ಕೇಳುವ ಮತ್ತೊಂದು ಚೋದ್ಯವನ್ನು ಇಲ್ಲಿ ವಿವರಿಸಿ ಬಿಡುತ್ತೇನೆ. ಒಬ್ಬ ಪ್ರಭುಗಳು ತನ್ನ ಆಪ್ತರಾದ ಎರಡು ಮೂರು ಸದ್ಗೃಹಸ್ಥರ ಒಡನಾಟದಲ್ಲಿ ಪತ್ತನದಿಂದ ಹೊರಟು ಸಾಯಾನ್ಹ ಸಮಯ ಘರ್ಮಾಧಿಕ್ಯವನ್ನು ತಡೆಯಲಾರದೆ ಮಂದಮಾರುತನು ದಯದೋರಲೆಂದು ಹೊಳೆಯನ್ನು ದಾಟಿ ಆ ಉದ್ಯಾನದೊಳಗೆ ಪ್ರವೇಶಿಸಿ ಆನಂದಚಿತ್ತರಾಗಿ ಮುಹೂರ್ತ ಮಾಡಿಕೊಂಡಾಗ ಫಕ್ಕನೆ ಅವರು ಕೂತುಕೊಂಡಿದ್ದ ಕಟ್ಟಡದ ಮೇಲ್ಭಾಗದಿಂದ ಒಂದು ಶಬ್ದವಾಯಿತಂತೆ. ಅವರು ವಿಸ್ಮಿತರಾಗಿ ಕಣ್ಣೆತ್ತಿ ನೋಡುವಾಗ ಉಸುಬಿನ ಹಗ್ಗಗಳಿಂದ ಬಂಧಿಸಲ್ಪಟ್ಟು ಕೆಳಭಾಗಕ್ಕೆ ಇಳಕೊಂಡು ಬರುವ ಒಂದು ಬುಟ್ಟಿಯು ಕಂಗೊಳಿಸಿತು. ಈ ನೋಟವು ಅವರ ಮನಸ್ಸಿಗೆ ಒಂದು ಅವಗಡವಾಗಿ ತೋರಿದ ಕಾರಣ ಅವರು ರವಷ್ಟು ಚಕಿತರಾಗಿ ಯೋಚಿಸುತ್ತಿರುವಷ್ಟರಲ್ಲಿಯೇ ಆ ಬುಟ್ಟಿಯು ಅವರು ಕೂತಿರುವ ಮೇಜಿನ ಮಧ್ಯದಲ್ಲಿ ಕಾಣಗೊಂಡಿತು. ಅದರಲ್ಲಿ ದಿವ್ಯವಾದ ತೀನಿಯೂ ಉತ್ಕೃಷ್ಟವಾದ ಪಾನವೂ ಪುಷ್ಪ ತಾಂಬೂಲಾದಿ ಉಪಸಾಮಗ್ರಿಯೂ ವ್ಯಕ್ತವಾದವು. ಓಹೋ! ಹೆದರಬೇಕೇಕೆ? ನನ್ನ ಇಷ್ಟ ದೇವತೆಯಾದ ಕುಟ್ಟಿಚ್ಚಾತ ದೈವದ ಪ್ರಸಾದವು ಈಗ ಕೈವಶವಾಯಿತ್ತು. ಇದನ್ನು ಈಗಲೇ ಸ್ವೀಕರಿಸಿ ನಮ್ಮ ಕೃತಜ್ಞತೆಯನ್ನು ದೈವಕ್ಕೆ ನಿವೇದಿಸೋಣ ಎಂದು ಸಭೆಯ ಯಜಮಾನರ ಅಪ್ಪಣೆಯಾಯಿತು. ಸಂಗಡಿಗರು ತಥಾಸ್ತು ಎಂದರು. ಸರ್ವರು ಚೇಟರನ್ನು ಹೊರಬಾಗಲಲ್ಲಿ ಕಾವಲು ನಿಲ್ಲಿಸಿ ಆರೋಗಣೆಯನ್ನು ತೀರಿಸಿದರು. ಆಗಲೇ ಅಷ್ಟು ವ್ಯಕ್ತಿಗಳಿಗೂ ಮರೆಯಾಗಿ ಕುರ್ಚಿಗಳಲ್ಲಿ ಕೂತುಕೊಳ್ಳಲಿಕ್ಕೆ ಕೂಡದೆ ಅಸ್ಥವ್ಯಸ್ಥವಾಯಿತು. ವಾಚಶೂನ್ಯವಾಯಿತು, ಚಕ್ಷುರುನ್ಮೀಲನಕ್ಕೆ ಅವಕಾಶವಾಗಲಿಲ್ಲ. ಚೇಟರಿಗೆ ಹೆದರಿಕೆಯಾಯಿತು. ಕೂಡಲೆ ಹೊರಗೆ ಬಂದು ನೋಡುವಾಗ ಒಂದು ಕಲ್ಲು ಬಂಡಿಯು ಬೀದಿಯಲ್ಲಿ ಇತ್ತು. ಸಾರಟುಗಳು ಅಲ್ಲಿ ದೊರಕುವದಿಲ್ಲ. ನಾಲ್ಕು ಜನ ಯಜಮಾನರನ್ನೂ ಹೊತ್ತುಕೊಂಡು ಚೇಟರು ಆ ಬಂಡಿಯಲ್ಲಿ ಮಲಗಿಸಿದರು ಮತ್ತು ಪತ್ತನದಲ್ಲಿರುವ ಅವರವರ ಮನೆಗೆ ತಲಪಿಸಿದರು. ಕೇಳುವದಕ್ಕೆ ಇದು ಒಂದು ಕಟ್ಟುಕಥೆಯಂತೆ ತೋರುವದು, ಆದರೆ ಯಥಾರ್ಥವಾಗಿ ನಡದ ವೃತ್ತಾಂತವಂತೆ. ದೈವಗಳ ಪ್ರತಾಪವು ಸಾಮಾನ್ಯವೇ!

ವಿದೇಶ ವೃತ್ತಾಂತ.

ಇಂಗ್ಲಾಂಡಿನ ಕಲ್ಲಿದ್ದಲು ಗಣಿಗಳ ಮುಷ್ಕರಗಾರರಲ್ಲಿ ಈಗ ಸುಮಾರು ಅರ್ಧ ಮಿಲಿಯ ಜನರು ಪುನಃ ಕೆಲಸ ತೊಡಗಿದ್ದಾರೆ. ಆದರೆ ಕೆಲಸ ಪ್ರಾರಂಭಿಸದೆ ಇನ್ನೂ ಹಟದಿಂದಿರುವವರು ಈ ಕೆಲಸಗಾರರ ಮೇಲೆ ಬಿದ್ದು ಲೂಟಿ ಮಾಡುತ್ತಿರುವುದರಿಂದ ಪೋಲೀಸಿನವರು ಆಯಾ ಗಣಿಗಳಲ್ಲಿ ಗಸ್ತಿಮಾಡುತ್ತಿರುವರು. ಕೆಲವು ಕಡೆಗಳಲ್ಲಿ ಪೋಲೀಸಿನವರ ಮೇಲೆಯೂ ಲೂಟಿಗಾರರು ಕಲ್ಲುಗಳನ್ನು ಬಿಸಾಡುತ್ತಿರುವರು. ಆದರೆ ದಿನೇ ದಿನೇ ಹೆಚ್ಚೆಚ್ಚು ಆಳುಗಳು ಕೆಲಸ ತೊಡಗುವುದರಿಂದ ಬೇಗನೇ ಈ ಲೂಟಿ ನಿಂತು ಹೋದೀತೆಂಬದಾಗಿ ನಿರೀಕ್ಷಿಸಲ್ಪಟ್ಟದೆ.

ಮೊರಕ್ಕೋದಲ್ಲಿ ಜೈಬ್ಬು ಎಂಬಲ್ಲಿ ಸುಮಾರು ೨೫೦೦ ಬರ್ಬರರು ಪ್ರೆಂಚ ಸೈನ್ಯದ ಮೇಲೆ ಬಿದ್ದರು. ಉಭಯತರೊಳಗೆ ಕಾದಾಟವಾಗಿ ಬರ್ಬರರು ವಿಶೇಷ ನಷ್ಟಪಟ್ಟು ಓಡಿಹೋದರು. ಪ್ರೆಂಚರಲ್ಲಿ ೨೦ ಮಂದಿ ಮಡಿದರು, ೨೩ ಮಂದಿಗೆ ಗಾಯವಾಯಿತು.

ಅಮೇರಿಕದಲ್ಲಿ ಮಿಸಿಸಿಪಿ ನದಿಯಲ್ಲಿ ನೆರೆ ಬಂದದರಿಂದ ಅರ್ಕಾನ್‌ಸಾಸ್ ಎಂಬಲ್ಲಿಯ ಈಶಾನ್ಯ ದಿಕ್ಕಿನಲ್ಲಿರುವ ಅರ್ಧ ಮಿಲಿಯ ಎಕ್ರೆ ಫಲವತ್ತಾದ ಗದ್ದೆಗಳು ನೀರಿನ ಪಾಲಾಯಿತು. ಐದು ಪಟ್ಟಣಗಳು ಮುಣುಗಿಹೋಗಿ ನೆಲದ ಮೇಲೆ ೧೦ ಅಡಿ ಎತ್ತರಕ್ಕೆ ನೀರು ನಿಂತದೆ.

ರೋಮನ್ ಕಥೋಲಿಕರ ಪೋಪಸ್ವಾಮಿಗಳವರು ಮೃತಪಟ್ಟರೆಂಬ ಖಾಸಗಿ ತಂತೀ ವಾರ್ತೆಯು ಮೆಡ್ರಿಡ್ ಎಂಬಲ್ಲಿಗೆ ಬಂದಿರುವದು.

ಕೈರೋ ಎಂಬಲ್ಲಿ ಒಂದು ಹಡಗವು ಮತ್ತೊಂದು ಹಡಗಕ್ಕೆ ತಾಗಿ ಹಡಗವು ಒಡೆಯಿತು. ಹಡಗದಲ್ಲಿದ್ದ ೩೦೦ ಮಂದಿ ಪ್ರಯಾಣಿಕರಲ್ಲಿ ಕೆಲವರು ಸಂರಕ್ಷಿಸಲ್ಪಟ್ಟರು. ಸುಮಾರು ೨೦೦ ಮಂದಿ ಮುಣುಗಿ ಹೋದರು. ೧೨ ಶವಗಳು ಮಾತ್ರ ಶಿಕ್ಕಿಯವೆ.

ಟ್ರಪೋಲಿಯ ಟಬ್ರೂಕ್ ಎಂಬಲ್ಲಿಯ ತುರ್ಕಿಯರ ಸೇನಾಧಿಪತಿಯು ಕೈರೋ ಎಂಬಲ್ಲಿಗೆ ಬಂದಿರುವನು. ಅವನು ಟ್ರಪೋಲಿಯಲ್ಲಿ ತುರ್ಕಿಯರರಿಗೆ ಇನ್ನೂ ೧೦ ಸಾವಿರ ತುರ್ಕಿ ಸೈನಿಕರೂ ಇನ್ನೂರು ಸಾವಿರ ಅರಬಿ ಸೈನಿಕರೂ ಇರುವುದರಿಂದ ಇನ್ನೊಂದು ವರ್ಷದ ವರೆಗೆ ಇಟಲಿಯರೊಡನೆ ಕಾದಾಡ ಬಹುದೆಂದು ಹೇಳುವನು. ತುರ್ಕಿಯರು ಈಚೆಗೆ ಬೆಂಗಾಜಿಯಲ್ಲಿ ಇಟಾಲಿಯರ ವಾಯುನಾವೆಗೆ ಗುಂಡು ಹೊಡೆದು ಕೆಳಗೆ ಕೆಡವಿದರು.

ಪೋಪರವರು ಮೃತಪಟ್ಟರೆಂಬ ವಾರ್ತೆಯು ಸತ್ಯವಲ್ಲ. ಪೋಪ ಗುರುಗಳ ನಿಯೋಗಿಗಳೊಬ್ಬರ ತಂದೆಯು ಮೃತಪಟ್ಟರೆಂಬ ತಂತೀ ವಾರ್ತೆಯು ಬಂದಿತ್ತು. ಟೆಲಗ್ರಾಪ್ ಇಲಾಖೆಯವರು ಪಪ್ಪ ಎಂಬದರ ಬದಲಿಗೆ ಪೋಪ್ ಎಂಬದಾಗಿ ಗ್ರಹಿಸಿ ಮಂತ್ರಿಯಾದ ಕೆನಾಲಿಜಸರಿಗೆ ತಿಳಿಸಿದರು. ಕೆನಾಲಿಜಸರು ವರ್ತಮಾನ ಪತ್ರಿಕೆಯವರಿಗೆ ತಿಳಿಸಿದರು. ಅನಂತರ ತಂದೆಯು ಮೃತಪಟ್ಟ ನಿಯೋಗಿಯು ಟೆಲಗ್ರಾಪ್ ಇಲಾಖೆಯ ತಪ್ಪಾಭಿಪ್ರಾಯವನ್ನು ತಿಳಿಯ ಪಡಿಸಿದನು.

ಇಟಾಲಿಯರು ಟ್ರಪೋಲಿಯ ಸಮೀಪವಿರುವ ಮೆಕಾಬೆಕ್ಸ್ ಎಂಬ ಅರ್ಧದ್ವೀಪವನ್ನು ಹಿಡಿದು ತಾ. ೧೧ರಲ್ಲು ಅದರಲ್ಲಿದ್ದ ಒಂದು ಕೋಟೆಯನ್ನು ವಶಮಾಡಿಕೊಂಡರು. ಈ ಕೋಟೆಯು ಟ್ಯೂನಿಸಿನ ಸರಹದ್ದುಗಳಿಗೆ ಬೀಗದ ಕೈಯಂತೆ ಇದೆ.

ಜೋರ್ಜ ಸಾರ್ವಭೌಮರವರು ಡಿಲ್ಲೀದರ್ಬಾರ್ ಸಮಯದಲ್ಲಿ ಕುಳಿತ್ತಿದ್ದ ಕುದುರೆಯನ್ನು ಲಂಡನಿಗೆ ತಕ್ಕೊಂಡು ಹೋಗಿರುತ್ತಾರೆ. ಅದಕ್ಕೆ ಡಿಲ್ಲಿ ಎಂಬ ನಾಮಕರಣವನ್ನಿಟ್ಟು ಬಕ್ಕಿಂಗ್ಹಾಮ್ ಅರಮನೆಯಲ್ಲಿರುವ ಅಶ್ವಶಾಲೆಯಲ್ಲಿ ಇಟ್ಟಿದ್ದಾರೆ.

ನ್ಯೂಯೋರ್ಕಿನ ಸೆಶ್ಶನ್ಸ್ ಜಡ್ಜರವರನ್ನು ಕೊಲ್ಲುವ ಪ್ರಯತ್ನದಿಂದ ಒಂದು ಯಂತ್ರವು ಟಪ್ಪಾಲು ಮೂಲಕ ಅವರಿಗೆ ಕಳುಹಿಸಲ್ಪಟ್ಟಿತು. ಅವರು ಅನುಮಾನಪಟ್ಟು ರಸಾಯನ ಶೋಧಕರನ್ನು ಕರೆಯಿಸಿ ಅದರ ಗುಟ್ಟು ಬಿಚ್ಚಿಸಲು ಅದು ಹಾರಿ ಆ ಪರೀಕ್ಷಕರ ಬೆರಳು ತುಂಡಾಯಿತು. ಅವರ ಕುತ್ತಿಗೆ ಮುಖಗಳೆಲ್ಲವೂ ಸುಟ್ಟು ಹೋಯಿತು.

ಚೀನಾ ರಾಜ್ಯದ ಪ್ರಜಾಪ್ರಭುತ್ವದವರಿಗೆ ಬೆಲ್ಜಮಿನ ಬೇಂಕಿನವರು ೩ ಕೋಟಿ ರೂಪಾಯಿಗಳನ್ನು ಸಾಲಕೊಟ್ಟಿರುವರು. ಚೀನದ ಉತ್ತರಭಾಗದಲ್ಲಿ ಸೈನಿಕರು ಪ್ರಜಾಪ್ರಭುತ್ವಸ್ಥಾಪನೆಯಿಂದ ಅಸಂತೃಪ್ತರಾಗಿದ್ದಾರೆ. ನಾನ್‌ಕಿಂಗಿನ ಸೈನಿಕರು ದಂಗೆ ಎದ್ದು ಅಂಗಡಿ ಮನೆಗಳನ್ನು ಸೂರೆಸುಲಿಗೆ ಮಾಡುತ್ತಿದ್ದಾರೆ.

ಅಮೇರಿಕದ ಯುನೈಟೆಡ್ ಸ್ಟೇಟಿನ ಪ್ರೆಸಿಡೆಂಟರಾದ ಮೆ| ಟಾಪ್ಟರವರ ಅವಧಿಯು ತೀರಿರುವುದರಿಂದ ಈಗ ಹೊಸ ಪ್ರೆಸಿಡೆಂಟರವರನ್ನು ಆರಿಸುವ ಸಂಬಂಧ ಮಾಜಿ ಪ್ರೆಸಿಡೆಂಟರಾದ ರೊಸ್‌ವೆಲ್ಟರವರಿಗೂ ಮೆ| ಟಾಪ್ಟರವರಿಗೂ ಮೇಲಾಟವೆದ್ದದೆ. ಮೊದಲು ಟಾಪ್ಟರವರಿಗೆನೇ ಜಯವಾಗುವ ಸಂಭವ ತೋರುತ್ತಿದ್ದರೂ ಈಗ ಕೆಲವು ಜಿಲ್ಲೆಗಳಲ್ಲಿ ಹೆಚ್ಚಿನ ಓಟುಗಾರರು ರೊಸ್‌ವೆಲ್ಟರವರಿಗೆ ಸೇರಿಕೊಂಡಿದ್ದಾರೆ. ರೊಸ್‌ವೆಲ್ಟರವರ ಅನಿರೀಕ್ಷಿತವಾದ ಈ ಜಯದಿಂದ ಪ್ರೆಸಿಡೆಂಟರನ್ನು ಆರಿಸಿಕೊಳ್ಳುವಾಗ ಇರುವ ಗಲಭೆಯು ಹೆಚ್ಚಾದೀತು ಎಂಬದಾಗಿ ಭಾವಿಸಲು ಕಾರಣವಿದೆ. ಈ ಪ್ರಜಾಪ್ರಭುತ್ವ ಸರಕಾರಕ್ಕೆ ಪ್ರೆಸಿಡೆಂಟರವರನ್ನು ಆರಿಸಿಕೊಳ್ಳುವ ರಾಷ್ಟ್ರೀಯ ಮಹಾ ಸಭೆಯಲ್ಲಿ ಟಾಪ್ಟರವರ ಪಕ್ಷದವರು ಭಾಷಣಕೊಡುತ್ತಿರುವಾಗ ರೊಸ್‌ವೆಲ್ಟರವರ ಕಡೆಯವರು ಕಿಟಿಕಿ ಬಾಗಲುಗಳನ್ನು ಹಾರಿ ಸಭಾಸದನದ ಒಳಗೆ ಹೋದುದಲ್ಲದೆ ಟಾಪ್ಟರ ಪಕ್ಷದ ಚೇಯರ್‌ಮೇನರು ಎದ್ದು ಮಾತಾಡುವಾಗ ರೊಸ್‌ವೆಲ್ಟರ ಕಡೆಯ ನಾಯಕನೂ ಮಾತಾಡ ತೊಡಗಿದನು. ಚೇಯರ್‌ಮೇನರು ಈತನನ್ನು ಕೆಳಗೆ ದೂಡಿದ್ದರಿಂದ ಮುಷ್ಟಿಕಾಳಗವೆಸಗಿತು.

ಉತ್ತರ ಹಿಂದುಸ್ಥಾನ.

ಮುಂಬಾಯಿಯಲ್ಲಿರುವ ಗೌಡಸಾರಸ್ವತ ವೃಂದದವರು ಚಾರ್ನಿ ರಸ್ತೆಯಲ್ಲಿರುವ ಗೌಡಸಾರಸ್ವತ್ ಬ್ರಹ್ಮಮಂಡಲ ಸಭಾಸದನದಲ್ಲಿ ಮಂಗಳೂರಿನ ಕೀರ್ತಿಶೇಷರಾದ ಶ್ರೀಯುತ ಎ. ಸುಬ್ಬರಾವ್. ಬಿ. ಎ. ಬಿ. ಎಲ್‌ರವರ ಸ್ಮಾರಕ ಭಾವಚಿತ್ರವನ್ನು ಇಡುವ ಸಮಾರಂಭವನ್ನು ಎಪ್ರೀಲ್ ತಾ. ೫ರಲ್ಲು ಜರುಗಿಸಿದರು. ಸಭಾಸದನವನ್ನು ಚಲೋದಾಗಿ ಶೃಂಗರಿಸಿ ಪುಷ್ಪಗಳಿಂದ ಅಲಂಕೃತವಾದ ಕೀರ್ತಿಶೇಷರ ಭಾವಚಿತ್ರವನ್ನು ಸಭಾಸದನದಲ್ಲಿ ಇಟ್ಟನಂತರ ಆ ದಿನದ ಸಭೆಗೆ ಮೆ| ಎಸ್. ವೈ. ದಾಲ್ವಿ. ಬಿ. ಎ. ಎಲ್. ಎಲ್. ಬಿ. ಯವರನ್ನು ಅಧ್ಯಕ್ಷರಾಗಿ ಆರಿಸಬೇಕೆಂದು ಮಂಡಲದ ಖಾಯಂ ಪ್ರೆಸಿಡೆಂಟರಾದ ಮೆ| ಎ. ಜಿ. ಪಗ್ನಿಸರವರು ಸಭಿಕರನ್ನು ಕೇಳಿಕೊಂಡ ಮೇರೆಗೆ ಮೆ| ದಾಲ್ವಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಭಗವತ್ ಪ್ರಾರ್ಥನೆಯಿಂದ ಸಭಾರಂಭವನ್ನು ತೊಡಗಿದನಂತರ ಮೆ| ಆರ್. ಆರ್. ಮೊರಾಮ್‌ಕಾರರು ವಿಜ್ಞಾಪಿಸಿಕೊಂಡ ಮೇರೆಗೆ ಕೀರ್ತಿಶೇಷರ ಭಾವಚಿತ್ರವು ಸಭಾಧ್ಯಕ್ಷರಿಂದ ಪ್ರತಿಷ್ಠಿಸಲಾಯಿತು. ಕೂಡಲೇ ಮೆ| ಎಮ್. ಪಿ. ಕಿಣಿಯವರು ಕೀರ್ತಿಶೇಷರ ಸಂಕ್ಷಿಪ್ತ ಜೀವಚರಿತ್ರೆಯನ್ನು ಓದಿ ಅವರು ತನ್ನ ಜೀವಕಾಲದಲ್ಲಿ ಗೌಡಸಾರಸ್ವತ ವೃಂಧದವರ ಮೇಲ್ಮೆಯನ್ನು ಬಯಸಿ ಕೈಕೊಂಡ ಮುಖ್ಯ ಸಾಧನೆಗಳನ್ನೂ ಅವರಿಂದುಂಟಾದ ಪ್ರಯೋಜನಗಳನ್ನೂ ಸಭಿಕರಿಗೆ ಶ್ರುತ ಪಡಿಸಿಕೊಟ್ಟರು. ಬಳಿಕ ಮೆಸರ್ಸ್ ಡಿ. ಬಿ. ಚಿಟ್ನಿಸ್, ಎ. ಜಿ. ಪಗ್ನಿಸ್ ಮತ್ತು ಸಿ. ಎಸ್. ಮಸೂರೆಕಾರ್‌ರವರು ಅರ್ಥಗರ್ಭಿತವಾದ ಕಾಲೋಚಿತ ಭಾಷಣಗಳನ್ನು ಕೊಟ್ಟರು. ಮೆ| ಮಸೂರೆಕಾರರವರು ಮಂಗಳೂರಿನ ಸ್ವಜಾತಿ ಬಂಧುಗಳು ಮುಂಬಾಯಿಯಲ್ಲಿರುವ ಸ್ವಜಾತಿ ಭಾತೃಗಳೊಡನೆ ಈ ಸಂಸ್ಥೆಗೆ ಕೂಡಿಕೊಂಡು ಪರಸ್ಪರ ಐಕ್ಯವಾಗಿರುವದು ವಿಹಿತವೆಂದೂ ಕೀರ್ತಿಶೇಷರ ಈ ಸ್ಮಾರಕ ಕಾರ್ಯಾರಂಭೋತ್ಸವವನ್ನು ನಡಿಸುವರೆ ಮಂಗಳೂರಿನ ಭಾತೃಗಳೂ ನೆರವಾಗಿದ್ದದ್ದು ಪರಸ್ಪರ ಮೈತ್ರಿಯಿಂದಿರಲು ಅವರಿಗಿರುವ ಕಾಂಕ್ಷೆಯನ್ನು ತೋರಿಸುತ್ತದೆಂದೂ ಹೇಳಿದರು. ಬಳಿಕ ಅಧ್ಯಕ್ಷರವರು ಭಾಷಣಕೊಟ್ಟು ಕೀರ್ತಿಶೇಷ ಸುಬ್ಬರಾಯರವರ ಹೆಜ್ಜೆಜಾಡೆಯನ್ನು ಹಿಡಿದು ನಡಿಯಬೇಕೆಂದು ಕೂಡಿದ್ದ ಸಭಿಕರನ್ನು ಪ್ರೋತ್ಸಾಹಿಸಿ ಕೀರ್ತಿಶೇಷರು ಕೈಕೊಂಡ ಪ್ರತಿ ಕಾರ್ಯಗಳಲ್ಲಿ ಸಫಲಹೊಂದಲು ಅವರಲ್ಲಿದ್ದ ಸ್ವಾರ್ಥತ್ಯಾಗವೂ ಉದಾರ ಚರಿತೆಯೂ ಕಾರಣವೆಂದರು. ಭಾಷಣದನಂತರ ರಾವ್‌ಸಾಹೇಬ್ ಎ. ಕೆ. ಪೈರವರು ಕೂಡಿದ್ದ ಸಭಿಕರಿಗೂ ಮುಖ್ಯವಾಗಿ ಈ ಮಂಡಲದ ಸದಸ್ಯರಿಗೂ ಪೈಗಳವರ ಕುಟುಂಬದ ಪರವಾಗಿ ಉಪಕಾರಸ್ಮರಣೆ ಹೇಳಿ ಈ ಸ್ಮಾರಕ ಕಾರ್ಯೋತ್ಸವದ ಸಂಗತಿಯನ್ನು ಮಂಗಳೂರಿನಲ್ಲಿರುವ ಕೀರ್ತಿಶೇಷ ಪೈಗಳವರ ಸಹೋದರರಿಗೆ ತಿಳಿಸುವೆನೆಂದರು. ಕಡೆಗೆ ಈ ಮಂಡಲದ ಮೆನೇಜಿಂಗ್ ಕಮಿಟಿಯ ಚೇಯರ್‌ಮೇನರಾದ ಎಸ್. ಎ. ರೇಗೆರವರು ಈ ಭಾವಚಿತ್ರವನ್ನು ಮಂಡಲಕ್ಕೆ ಧರ್ಮಾರ್ಥವಾಗಿ ಉಚಿತ ಮಾಡಿದ ರಾ| ಎಸ್. ಎನ್. ಕೊಟ್ನೀಸರವರಿಗೆ ಕೃತಜ್ಞತೆಯನ್ನು ಹೇಳಿದನಂತರ ಸಭಾಧ್ಯಕ್ಷರಿಗೂ ಈ ಸ್ಮಾರಕ ಕಾರ್ಯೋತ್ಸವವನ್ನು ಜರುಗಿಸುವರೆ ಸಹಾಯವನ್ನು ಮಾಡಿದವರಿಗೂ ಮುಖ್ಯವಾಗಿ ಈ ಕಾರ್ಯದಲ್ಲಿ ಮುಂದಾಳಾಗಿದ್ದ ಮೆ| ಎಮ್ ಪಿ. ಕಿಣಿಯವರಿಗೂ ಆಯಾ ಗೃಹಸ್ಥರು ಧನ್ಯವಾದವನ್ನಿತ್ತು ಪುಷ್ಪ ತಾಂಬೂಲಾದಿಗಳನ್ನು ಸ್ವೀಕರಿಸಿ ಸ್ವಸ್ತಿ ಗಾಯನದೊಂದಿಗೆ ಸಭೆಯು ಅಗಲಿತು.

ಸಂಯುಕ್ತ ಪ್ರಾಂತ್ಯಗಳ ಪರಸ್ಪರ ಸಹಾಯಕ ಸಂಘಗಳ ರಿಜಸ್ಟ್ರಾರವರು ಸಂಘಗಳಿಂದ ಉಂಟಾಗಿರ ತಕ್ಕ ಪ್ರಯೋಜನಗಳನ್ನು ಕುರಿತು ಕೆಳಗೆ ಕಂಡ ರೀತಿ ಬರದಿರುತ್ತಾರೆ:—ಸಂಘಗಳನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ಹಳ್ಳಿಯ ಜನರಿಗೆ ದಿನೇ ದಿನೇ ನಿಜವಾದ ಉತ್ಸಾಹವು ಹೆಚ್ಚುತ್ತಾ ಇದೆ. ಕೆಲವು ಸ್ಥಳಗಳಲ್ಲಿ ಸಂಘದ ಮೆಂಬರುಗಳು ತಾವು ಮೆಂಬರುಗಳಾಗಿರುವುದು ಅತ್ಯಂತ ಗೌರವಾಸ್ಪದವೆಂದು ಭಾವಿಸಿ ಸ್ವಲ್ಪ ಅನುಮಾನಾಸ್ಪದ

ವಾದ ನಡೆ ನುಡಿಗಳುಳ್ಳ ಜನರನ್ನು ಮೆಂಬರುಗಳಾಗಿ ಸೇರಿಸುವದೇಇಲ್ಲ. ಅಲ್ಲದೆ ಸಂಘಗಳ ಮೆಂಬರುಗಳಾಗಿರತಕ್ಕವರು ಯಾವನಾದರೊಬ್ಬ ಮೆಂಬರನು ಕಷ್ಟದಲ್ಲಿ ಶಿಕ್ಕಿಬಿದ್ದಿರುವಾಗ ಬಹಳ ಉದಾರವಾಗಿ ಸಹಾಯ ಮಾಡಿ ಅವನ ಕಷ್ಟವನ್ನು ನಿವಾರಣೆ ಮಾಡುತ್ತಿದ್ದಾರೆ. ಕಾಶೀ ಪಟ್ಟಣದಲ್ಲಿ ಒಂದು ಸಹಾಯಕ ಸಂಘಕ್ಕೆ೫೭ ರೂಪಾಯಿಗಳನ್ನು ಸಾಲವಾಗಿ ಕೊಡಬೇಕಾಗಿದ್ದ ಒಬ್ಬ ಮೆಂಬರು ಸತ್ತು ಹೋಗಲ್ಪು. ಅವನ ಹೆಂಡತಿ ಮಕ್ಕಳು ಸಾಲವನ್ನು ತೀರಿಸಲು ಅನುಕೂಲವಿಲ್ಲದಿದ್ದರಿಂದ ಇತರ ಮೆಂಬರುಗಳೆಲ್ಲಾ ಸೇರಿ ಚಂದಾಎತ್ತಿ ಮೇಲ್ಕಂಡ ಸಾಲವನ್ನು ತೀರಿಸಿದರು. ಮತ್ತೊಂದು ಊರಿನಲ್ಲಿ ಒಬ್ಬ ಮೆಂಬರು ಪದೇ ಪದೇ ತನ್ನ ಪ್ಯಾಸ್ ಪುಸ್ತುಕವನ್ನು ಕಳದುಕೊಂಡದ್ದಕ್ಕಾಗಿ ಇತರ ಮೆಂಬರುಗಳೆಲ್ಲಾ ಸೇರಿ ಪಂಚಾಯಿತಿ ಮಾಡಿ ಅವನಿಂದ ನಾಲ್ಕಾಣೆ ಜುಲ್ಮಾನೆಯನ್ನು ವಸೂಲು ಮಾಡಿ ಆ ದುಡ್ಡಿನಿಂದ ಊರಿನ ಹುಡುಗರಿಗೆಲ್ಲಾ ಮಿಠಾಯನ್ನು ತೆಗೆದು ಹಂಚಿದರು. ಹೀಗೆ ಮಾಡಿದ್ದರಿಂದ ಒಂದು ಊರಿನಲ್ಲಿ ಪರಸ್ಪರ ಸಹಾಯಕ ಸಂಘವಿರುವುದರಿಂದ ತುಂಬಾ ಪ್ರಯೋಜನವುಂಟೆಂದು ಆ ಸಣ್ಣ ಸಣ್ಣ ಹುಡುಗರಿಗೂ ತಿಳಿಯ ಪಡಿಸಿದಂತಾಯಿತು. ಪ್ರತಿ ಮೆಂಬರಿಗೂ ತನ್ನ ಪ್ಯಾಸುಬುಕ್ಕನ್ನು ತಾನೇ ಓದಬೇಕು, ಮತ್ತು ಪ್ರೋನೋಟುಗಳಿಗೆ ತಾನೇ ರುಜುಮಾಡಬೇಕೆಂಬ ಆಶೆ ಇರುವುದರಿಂದ ವಿದ್ಯಾಭ್ಯಾಸ ಮಾಡಬೇಕೆಂಬ ಕುತೂಹಲವುಂಟಾಗಿದೆ. ಆದ್ದರಿಂದ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದಾರೆ.

~~~~~~

ಅಲ್ಲಹಾಬಾದಿನ ಬಾಬು ರಖಲ್‌ದಾಸ ಎಂಬ ವರ್ತಕನು ಈಸ್ಟ್ ಇಂಡಿಯ ರೈಲ್ವೇ ಕಂಪೆನಿಯಲ್ಲಿ ಪ್ರಯಾಣಮಾಡುವಾಗ ಒಮ್ಮೆ ಪ್ರಯೋಗಿಸಿದ ೨ನೇ ತರಗತಿಯ ಟಿಕೇಟನ್ನು ಪುನಃ ಪ್ರಯೋಗಿಸಿ ಕಂಪೆನಿಯವರಿಗೆ ದಗೆ ಮಾಡಿದನೆಂಬ ತಪ್ಪಿಗೆ ಗುರಿಯಾದನು. ಅಲ್ಲಹಬಾದ್ ಜ್ಯೊಂಟ್ ಮೆಜಿಸ್ಟ್ರೇಟರು ಆತನಿಗೆ ಮೂರು ತಿಂಗಳ ಕಠಿಣ ಸಜೆ ೧೫೦ ರೂಪಾಯಿ ಜುರುಮಾನೆ ವಿಧಿಸಿದರು. ಈತನು ಅಪೀಲು ಮಾಡಿಕೊಂಡಿರುವುದರಿಂದ ಜಾಮೀನಿನ ಮೇಲೆ ಬಿಟ್ಟಿರುವರು.

~~~~~~

ಎಂಟಾಳಿ ಎಂಬಲ್ಲಿ ಪಶುವೈದ್ಯ ಇಲಾಖೆಯ ಡಾಕ್ಟರ್ ಪೌಲು ಎಂಬವರಲ್ಲಿ ಹುಚ್ಚುತಾಗಿದ ಒಂದು ನಾಯಿಯನ್ನು ಔಷಧೋಪಚಾರ ಮಾಡುವರೆ ತಂದಿದ್ದರು. ಡಾಕ್ಟರರು ಪರೀಕ್ಷಿಸುತ್ತಿರುವಾಗ ಅದು ಅವರ ಮೇಲಕ್ಕೆ ಹಾರಿ ಎಡಗಣ್ಣಿನ ಕೆಳಗೆ ಕಚ್ಚಿತು. ಡಾಕ್ತರರು ಕೌಸಾಲಿಯ ಹುಚ್ಚರ ಆಸ್ಪತ್ರಿಗೆ ಹೋಗುವ ಬದಲಿಗೆ ಚಂದ್ರನಾಗೋರಿಗೆ ಹೋಗಿ ಶೈತೋಪಚಾರ ಮಾಡಿಕೊಂಡರು. ಆದರೆ ಅಲ್ಲಿ ಗುಣವಾಗದ್ದರಿಂದ ಕೌಸಾಲಿಗೆ ಹೋಗ ಆಲೋಚಿಸುವಷ್ಟರಲ್ಲಿ ಮೃತಪಟ್ಟರು.

~~~~~~

ವ್ಯಾಸರಾಯರ ಸ್ಪೆಶ್ಯಲ್ ಟ್ರೈನಿನಲ್ಲಿ ಡ್ಯೂಟಿಯ ಮೇಲಿದ್ದ ಕನ್‌ಸ್ಟೇಬಲನೊಬ್ಬನು ರಜೆ ಪಡಕೊಳ್ಳದೆ ತನ್ನ ಕೆಲಸವನ್ನು ಬಿಟ್ಟು ಇತರ ಏಳು ಮಂದಿಯೊಡನೆ ಒಂದು ಗ್ರಾಮಕ್ಕೆ ಹೋಗಿ ದರೋಡೆ ಕಳವುಮಾಡಿದನೆಂಬ ತಪ್ಪಿಗೆ ಗುರಿಯಾಗಿರುವನು.

~~~~~~

ಮುಸಲ್ಮಾನರ ವಿಶ್ವವಿದ್ಯಾಕಲಾಶಾಲೆಯ ಫಂಡಿಗೆ ಈ ತನಕ ೨೬ ಲಕ್ಷ ರೂಪಾಯಿ ಕೂಡಿಕೆಯಾಗಿದೆ ಎಂದು ತಿಳಿದು ಬರುತ್ತದೆ. ಇನ್ನು ಒಂದು ಲಕ್ಷ ಕೂಡಿದರೆ ಬೇಕಾದ ಹಣ ಕೂಡಿದಂತಾಯಿತು.

~~~~~~

ತಾ. ೯ರಲ್ಲು ಕಲ್ಕತ್ತೆಯಲ್ಲಿ ಬೀಸಿದ ಸುಂಟರ ಗಾಳಿಯಿಂದ ಪಬ್ನ ಜಿಲ್ಲೆಯ ಎರಡು ಗ್ರಾಮಗಳು ಸುಟ್ಟುಹೋಯಿತು. ಅಲ್ಲಿಯ ಜನರು ಮನೆಮಾರು ಇಲ್ಲದೆ ನಿರ್ಗತಿಕರಾಗಿರುವರು.

~~~~~~

ಮುಂಬಾಯಿ ಸಂಸ್ಥಾನದ ಲನಾವ್ಲ ಎಂಬದರ ಸಮೀಪವಿರುವ ಕಾರೆ ಎಂಬಲ್ಲಿ ಕಟ್ಟಸಲ್ಪಟ್ಟ ಹಿಂದೂ ಕ್ಷಯ ರೋಗಿಗಳ ಭಿತ್ತಿಯನ್ನು ತಾ. ೧೪ರಲ್ಲು ಮುಂಬಾಯಿ ಗವರ್ನರರವರು ಪ್ರತಿಷ್ಟೆ ಮಾಡಿದರು.

~~~~~~

ಮುಜಾಫರ್‌ಜಂಗ್ ಜಿಲ್ಲೆಯ ಜಯೋತಿಯ ಜ್ಯೆಲ್ ದಾರನಾದ ಸಯ್ಯದ್‌ಖಾನ್ ಎಂಬವನ ಮೇಲೆ ಮುಲ್ತಾನ್ ಡಿಸ್ಟ್ರಿಕ್ಟ್ ಜಡ್ಜ್ ಕೋರ್ಟಿನಲ್ಲಿ ಎರಡು ಸಿವಿಲ್ ದಾವೆಗಳಿದ್ದವು. ಸಯ್ಯದ್‌ಖಾನನು ೧೦೦ ರೂಪಾಯಿಯ ಚೀಲದೊಂದಿಗೆ ಡಿಸ್ಟ್ರಿಕ್ಟ್ ಜಡ್ಜರಾದ ಮೆ| ಪ್ರೊಬ್ಬರಲ್ಲಿಗೆ ಹೋಗಿ ಅವರಿಗೆ ಲಂಚ ಕೊಡಲಿಕ್ಕಿದ್ದನೆಂಬದಾಗಿ ಸರಕಾರಿ ಕಡೆಯ ವಕೀಲರು ಸಯ್ಯದ್‌ಖಾನನ ಮೇಲೆ ಮುಲ್ತಾನಿನ ಡ್ಯುಪಿಟಿ ಕಮಿಷನರ್ ಕೋರ್ಟಿನಲ್ಲಿ ಪಿರ್ಯಾದಿ ಮಾಡಿರುವರು. ಮೆ| ಪ್ರೊಬ್ಬರು ಆತನ ಮೇಲಿರುವ ಸಿವಿಲ್‌ದಾವೆಯನ್ನು ತನ್ನ ಕೋರ್ಟಿನಿಂದ ಇತರ ಕೋರ್ಟಿಗೆ ರವಾನಿಸಬೇಕೆಂದು ಚೀಫ್ ಕೋರ್ಟಿನವರನ್ನು ಕೇಳಿಕೊಂಡಿರುವರು.

~~~~~~

ಕಾಶಿಪುರದ ರಾಜರ ಸಹೋದರನಾದ ಆನಂದ ಸಿಂಘ್ ಎಂಬವರು ನಾನಿಟಾಲ್ ಜಿಲ್ಲೆಯ ಕಾಡಿನಲ್ಲಿ ಶಿಕಾರಿ ಮಾಡುತ್ತಿರುವಾಗ ಒಂದು ಚಿರತೆಯು ಅವರಿಗೆ ಎದುರಾಯಿತು. ಇವರು ಅದಕ್ಕೆ ಕೋವಿ ಹೊಡೆದರು. ಆದರೆ ಗುರಿತಪ್ಪಿ ಚಿರತೆಯು ಇವರ ಮೇಲೆ ಹಾರಿ ಮೋರೆಗೆ ಕಚ್ಚಿ ಗಾಯ ಪಡಿಸಿತು. ಸಿಂಘರು ಧ್ಯೆರ್ಯಗೆಡದೆ ಅದರ ಬಾಯೊಳಕ್ಕೆ ತನ್ನ ಕೈಯನ್ನು ತೂರಿ ಅದನ್ನು ಕೆಡವಿ ತನ್ನ ಹತ್ತರವಿದ್ದ ಸಂಗಾತಿಯಿಂದ ಕತ್ತಿಯನ್ನು ತಕ್ಕೊಂಡು ಅದನ್ನು ತಿವಿದು ಬಿಟ್ಟರು. ಮೋರೆಯ ಗಾಯಗಳೊಂದಿಗೆ ಕೈಯಲ್ಲಿಯೂ ಗಾಯವಾಯಿತು. ಈಗ ಶೈತೋಪಚಾರ ಹೊಂದುತ್ತಲಿದ್ದಾರೆ.

~~~~~~

ಮುಸಲ್ಮಾನ್ ಮತಸ್ಥಾಪಕನ ಜೀವಚರಿತ್ರೆಯನ್ನು ಬರಿಯುವವನಿಗೆ ಮಾಹೆ ಒಂದಕ್ಕೆ ರೂ. ೨೦೦ ಕೊಡುತ್ತೇನೆಂದು ಬೋಪಾಲಿನ ಬೇಗಮರವರು ವಾಗ್ದಾನ ಮಾಡಿರುವರು. ಶಾಮ್ಸುಲ್ಲಾಮ ಮೌಲಾನ ಸಹೇಬಿ ನೋಮಾನಿ ಎಂಬವರು ಈ ಕೆಲಸವನ್ನು ವಹಿಸಿಕೊಳ್ಳಲಿಕ್ಕಿದ್ದಾರೆ.

~~~~~~

ಈಸ್ಟ್ ಇಂಡಿಯ ರೈಲ್ವೇ ಕಂಪೆನಿಯಲ್ಲಿ ಈಚೆಗೆ ಪ್ರಯಾಣ ಮಾಡುತ್ತಿದ್ದ ಪ್ರಯಾಣಿಕರಿಗೆ ಅವಗಡ ಸಂಭವಸಿತು. ಪ್ರಯಾಣಿಕರಲ್ಲಿ ಘಾಯಪಟ್ಟವರ ಪೈಕಿ ಮೇಜರ್ ಕಿರ್ಕ್‌ವೂಡು ಮತ್ತು ಅವರ ಪತ್ನಿಯವರು ರೈಲ್ವೇಕಂಪೆನಿಯವರ ಮೇಲೆ ೩೦,೦೦೦ ರೂಪಾಯಿಗೂ ಮಿಸ್‌ವಾಟ್ಲಿಂಗ್ ಎಂಬವಳು ೧೫,೦೦೦ ರೂಪಾಯಿಗೂ ದಾವೆ ತಂದಿರುವರು.

~~~~~~

ಕಲ್ಕತ್ತೆಯ ಪೌಡ್ನಾ ಟ್ರೈನಿನಲ್ಲಿ ಪ್ರಯಾಣ ಮಾಡುತ್ತಿದ್ದ ಕಲ್ಕತ್ತೆಯ ಪೋಲೀಸ್ ಕೋರ್ಟಿನ ಒಬ್ಬ ವಕೀಲನು ಟ್ರೈನ್ ಓಡುತ್ತಿರುವಾಗ ಅವಘಡ ಸೂಚನೆಯ ಸರಪಣಿಯನ್ನು ಎಳೆದು ಬಿಟ್ಟನು. ಕೂಡ್ಲೇ ಟ್ರೈನ್ ನಿಲ್ಲಿಸಲ್ಪಟ್ಟು ವಿಚಾರಣೆ ನಡೆದಾಗ ಯಾವದೊಂದು ತರದ ಅವಘಡವು ಕಂಡು ಬಾರದ್ದರಿಂದ ರೈಲ್ವೇ ಪೋಲೀಸಿನವರು ವಕೀಲನನ್ನು ಶಿಕ್ಷೆಗೆ ಗುರಿ ಪಡಿಸಿದರು. ಒಬ್ಬ ಭಾರತೀಯ ಪ್ರಯಾಣಿಕನು ಗಾಡಿಯಿಂದ ಕೆಳಗೆ ಹಾರಿದಂತೆ ತನಗೆ ಕಂಡದ್ದರಿಂದ ತಾನು ಆ ಸರಪಣಿ ಎಳೆದೆನೆಂದು ವಕೀಲನು ಹೇಳಿರುವನು.

~~~~~~

ಒಬ್ಬ ಯೌವ್ವನ ಪ್ರಾಯದ ಬಿ.ಎ. ಪಾಸಾದವನು ಈಚೆಗೆ ವ್ಯಾಸರಾಯರಿಗೆ ಭೇಟಿಕೊಟ್ಟು ತನ್ನನ್ನು ಸರಕಾರಿ ಕೆಲಸದಲ್ಲಿ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡನು. ವ್ಯಾಸರಾಯರವರು ಸಮ್ಮತಿಕೊಟ್ಟಿರುವರು. ಕ್ರಮ ಪ್ರಕಾರ ಇತರರ ಮೂಲಕ ವ್ಯಾಸರಾಯರವರಿಗೆ ಅರ್ಜಿಮಾಡಿದರೆ ತನ್ನ ಕೆಲಸವು ಸಾರ್ಥಕವಾಗಲಿಕ್ಕಿಲ್ಲವೆಂಬದಾಗಿ ಭಾವಿಸಿದ್ದರಿಂದ ಖುದ್ದಾಗಿ ಬೇಟಿಕೊಟ್ಟೆನೆಂಬದಾಗಿ ಆ ಯೌವ್ವನಸ್ಥನು ಹೇಳುವನು ಎಂಬದಾಗಿ ಇಂಗ್ಲಿಷ್‌ಮೇನ್ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ.

~~~~~~

ಕಳದ ಖಾನೆಶುಮಾರಿ ಲೆಕ್ಕದ ಪ್ರಕಾರ ಹಿಂದೂಸ್ಥಾನದಲ್ಲಿರುವ ೨,೬೮೦,೦೦೪ ಕ್ರೈಸ್ತರ ಪೈಕಿ ೨,೩೦೦,೦೦೦ ಮಂದಿ ನಿರಕ್ಷರಕುಕ್ಷಿಗಳೆಂದೂ ಹಿಂದೂಸ್ಥಾನದ ಒಟ್ಟು ಜನಸಂಖ್ಯೆಯ ೨೯೪, ೩೬೨, ೦೦೦ ಮಂದಿಯಲ್ಲಿ ೨೭೭,೭೨೮,೦೦೦ ಮಂದಿ ನಿರಕ್ಷರಕುಕ್ಷಿಗಳೆಂದೂ ತಿಳಿದು ಬರುತ್ತದೆ.

~~~~~~

ಚಿನ್ನ ವ್ಯಾಪಾರದ ಸಾಮುವೇಲ್ ಮೊಂಟೇಗೋ ಕಂಪೆನಿಯವರು ಹಿಂದೂಸ್ಥಾನದಲ್ಲಿ ೫ ರೂಪಾಯಿಯ ಚಿನ್ನದ ನಾಣ್ಯಗಳು ಟಂಕಹೊಡಿಸಲ್ಪಡುವುದೆಂದು ಪ್ರಕಟಸಿದ್ದರಷ್ಟೆ. ಆದರೆ ೫ ರೂಪಾಯಿ ನಾಣ್ಯದ ಪ್ರಸ್ತಾಪವು ಈ ವರೆಗೆ ಹಿಂದೂಸ್ಥಾನ ಸರಕಾರದ ಮುಂದೆ ಇಡಲ್ಪಡಲಿಲ್ಲ.

~~~~~~

ಈಸ್ಟರ್ ಹಬ್ಬದ ಸಮಯ ಸಿಯಾಲ್ ಕೋಟೆ ಎಂಬಲ್ಲಿ ಜರುಗಿದ ಸಿಕ್ಕ ವಿದ್ಯಾಭ್ಯಾಸ ಪರಿಷದದ ಸಮಯ ವಿದ್ಯಾಭ್ಯಾಸ ಫಂಡಿಗೆ ೪೦,೦೦೦ ರೂಪಾಯಿ ಕೂಡಿತು.

~~~~~~

ಎಪ್ರೀಲ್ ತಾ. ೬ನೆಗೆ ಅಂತ್ಯವಾದ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೨,೧೧೮ ಮಂದಿ ಪ್ಲೇಗಿನಿಂದ ಮೃತಪಟ್ಟರು. ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ೪೪೭; ಮದ್ರಾಸ್ ೪೫: ಬಂಗಾಳ ೧೯; ಬಿಹಾರ್ ೨,೦೮೪; ಸಂಯುಕ್ತ ಸಂಸ್ಥಾನ ೪,೭೫೨; ಪಂಜಾಬು ೧,೭೮೨; ಬರ್ಮ ೩೪; ಮಧ್ಯ ಸಂಸ್ಥಾನ ೬೬೩; ಮೈಸೂರು ೨೯; ಹೈದರಾಬಾದ್ ೩೪೦; ಮಧ್ಯ ಇಂಡಿಯ ೧೨೮; ರಜಪುತಾನ ೭೭; ಕಾಶ್ಮೀರ್ ೪ ಮರಣಗಳಾದವು. ಡಿಲ್ಲಿ ಪಟ್ಟಣದಲ್ಲಿ ೩ ಜನರಿಗೆ ಪ್ಲೇಗ್ ತಗಲಿದ್ದಲ್ಲಿ ಒಬ್ಬನು ಮಾತ್ರ ಮೃತಪಟ್ಟನು.

~~~~~~

ತಾ.೧೫ರಲ್ಲು ಸಿಮ್ಲದ ಯುನೈಟೆಡ್ ಸರ್ವಿಸ್ ಕ್ಲಬ್ಬಿನಲ್ಲಿ ಮಲಗಿದ್ದ ಕೆಪ್ಟನ್ ಲೊಕ್ ಎಂಬವರನ್ನು ಕೊಲ್ಲಲಿಕ್ಕೆ ಯತ್ನಿಸಿ ಮುಖದ ಮೇಲೆ ಯಾರೋ ಚೂರಿಯನ್ನು ಹಾಕಿದಾಗ ಅವರಿಗೆ ಫಕ್ಕನೆ ಎಚ್ಚರಿಗೆಯಾಗಿ ಕತ್ತಲೆಯಲ್ಲಿ ಗಾತುಕನೊಡನೆ ಕಾದಾಡಿದರು. ಗಾತುಕನು ಓಡಿಹೋದನು. ಕೆಪ್ಟನ್ ಲೊಕ್‌ರವರಿಗೆ ಮೈಮೇಲೆ ತುಂಬಾ ಗಾಯಗಳಾದವು. ಗಾತುಕನು ಪತ್ತೆಯಾಗಲಿಲ್ಲ.

~~~~~~

ಆಲಿಗರದಲ್ಲಿ ಮಹಮ್ಮದೀಯರ ಯುನಿವರ್ಸಿಟಿ ಸ್ಥಾಪಿಸುವರೆ ಸ್ಟೇಟ್ ಸೆಕ್ರಟರಿಯವರು ಸಮ್ಮತಿ ಕೊಟ್ಟಿರುವರೆಂದು 'ಕಮ್ರೇಡ್' ಎಂಬ ಪತ್ರಿಕೆಯು ಹೇಳುತ್ತದೆ.

~~~~~~

ದಕ್ಷಿಣ ಹಿಂದೂಸ್ಥಾನ.

~~~~~~

೧೯೧೦—೧೧ನೇ ಇಸವಿಯಲ್ಲಿ ಮದ್ರಾಸ್ ಸಂಸ್ಥಾನದಲ್ಲಿ ಒಟ್ಟಿಗೆ ೩೪೪೫ ಹುಡುಗರ ಪ್ರಾೖಮರಿ ಶಾಲೆಗಳೂ ೯೦೦ ಹುಡಿಗಿಯರ ಪ್ರಾೖಮರಿ ಶಾಲೆಗಳೂ ಇದ್ದವು. ಈ ಶಾಲೆಗಳಲ್ಲಿ ಕಲಿಯುತ್ತಿದ್ದ ಒಟ್ಟು ಬಾಲಕರ ಸಂಖ್ಯೆ ೧,೨೫,೭೫. ಈ ವಿದ್ಯಾಬ್ಯಾಸಕ್ಕಾಗಿ ಆಗುವ ಖರ್ಚು ರೂ ೧,೨೭,೬೮,೦೦೦; ೧೯೦೬-೧೯೦೭ನೇ ವರ್ಷದಲ್ಲಿ ವಿದ್ಯಾಭ್ಯಾಸಕ್ಕಾಗಿ ೯,೭೬೪,೦೦೦ ರೂಪಾಯಿ ಖರ್ಚಾಗಿತ್ತು.

~~~~~~

ಮೈಸೂರು ರಾಜ್ಯದಿಂದ ೧೯೧೦—೧೧ನೇ ವರ್ಷದಲ್ಲಿ ಇತರ ದೇಶಗಳಿಗೆ ಚಿನ್ನ, ಕಾಫಿ, ಸುಗಂಧ ದ್ರವ್ಯಗಳು, ದವಸಧಾನ್ಯಗಳು, ಬೆಲ್ಲ, ಹತ್ತಿ, ರೇಶ್ಮೆ ಇತ್ಯಾದಿ ೪,೨೩,೯೮,೪೬೭ ರೂಪಾಯಿ ಕ್ರಯ ಬಾಳುವ ವಸ್ತುಗಳು ಕಳುಹಿಸಲ್ಪಟ್ಟವು. ವಸ್ತ್ರ, ಗೋದಿ ಶೀಮೆ ಎಣ್ಣೆ ಇತ್ಯಾದಿ ೨,೮೩,೮೯,೨೫ ರೂಪಾಯಿಯ ವಸ್ತುಗಳು ಪರದೇಶದಿಂದ ಮೈಸೂರಿಗೆ ಬಂದವು. ಮೈಸೂರಿನಲ್ಲಿ ಒಟ್ಟಿಗೆ ೧೫ ಗಣಿಗಳಲ್ಲಿ ಕೆಲಸ ನಡೆಯುತ್ತವೆ. ಇವುಗಳಲ್ಲಿ ಹತ್ತು ಚಿನ್ನದ ಗಣಿಗಳು, ಮೂರು ಮೆಂಗನೀಸ್ ಎಂಬ ಲೋಹದ ಗಣಿಗಳು, ೨ ಮೈಕ ಎಂಬ ಲೋಹದ ಗಣಿಗಳಾಗಿವೆ. ಚಿನ್ನದ ಗಣಿಗಳಲ್ಲಿ ಕಳದ ವರ್ಷ ಒಟ್ಟಿಗೆ ೫೨,೮೫೭ ಔನ್ಸ್ ಚಿನ್ನ ಸಿಕ್ಕಿರುವುದು. ಇದರ ಕ್ರಯ ಸುಮಾರು ೩,೧೭,೯೨೮ ರೂಪಾಯಿಗಳಾಗಿವೆ.

~~~~~~

ಮಲಬಾರಿನ ಶೆರನೂರು ಎಂಬಲ್ಲಿ ತಾ. ೧೨ರಲ್ಲು ಒಬ್ಬ ಮಲೆಯಾಳಿ ಹೆಂಗಸು ಶೆರನೂರು ಸ್ಟೇಶನಿಗೆ ಸುಮಾರು ಒಂದು ಮೈಲು ದೂರದಲ್ಲಿ ಸ್ನಾನಮಾಡುತ್ತಿರುವಾಗ ಒಂದು ಹ್ಯೊಗೆ ರಾಶಿಯು ಅಲ್ಲಾಡುತ್ತಿರುವುದನ್ನು ಕಂಡು ಸಮೀಪ ಹೋಗಿ ಹ್ಯೊಗೆಯನ್ನು ತೆಗೆದು ನೋಡಲು ಹ್ಯೊಗೆಯ ಅಡಿಯಲ್ಲಿ ಸುಮಾರು ೨ ವರ್ಷದ ಜೀವವುಳ್ಳ ಒಂದು ಮಗು ಹುಗಿಯಲ್ಪಟ್ಟಿತ್ತು. ಇವಳು ಆಶ್ಚರ್ಯದಿಂದ ಅದನ್ನು ಮೇಲಕ್ಕೆ ಎತ್ತಿ ಕೆರೆಗೆ ತಕ್ಕೊಂಡು ಹೋಗಿ ಅದರ ಮೈಯಲ್ಲಿ ಅಂಟಿಹೋಗಿದ್ದ ಹ್ಯೊಗೆಯನ್ನು ತೊಳೆಯಲು ಮಗುವು ಚೇತರಿಸಿಕ್ಕೊಂಡಿತು. ಅಷ್ಟರೊಳಗೆ ಅನೇಕ ಜನರು ಅಲ್ಲಿ ಕೂಡಿಕೆಯಾಗಿ ಆ ಹೆಂಗಸಿಗೆ ಇನಾಮುಗಳನ್ನು ಕೊಟ್ಟರು. ಈ ಸಂಗತಿಯು ಪೋಲೀಸಿನವರಿಗ ತಿಳಿಸಿದ್ದಲ್ಲಿ ಪೋಲೀಸಿನವರು ಪತ್ತೆತರದೂದು ನಡಿಸಿ ಆ ಮಗುವಿನ ತಾಯಿಯು ಒಬ್ಬ ಚೆಟ್ಟಿ ಜಾತಿಯ ಹೆಂಗಸೆಂದು ತಿಳಕೊಂಡು ಆಕೆಯನ್ನು ಕೈದುಮಾಡಲು ಅವಳು ತನ್ನ ತಪ್ಪನ್ನು ಆರಿಕೆಮಾಡಿ ಬಡತನದಿಂದ ಮಗುವನ್ನು ಸಂರಕ್ಷಿಸಕೂಡದೆ ಹೀಗೆ ಮಾಡಿದೆನೆಂದು ಹೇಳಿಕೊಂಡಳು.

~~~~~~

ದಕ್ಷಿಣ ಕನ್ನಡ.

~~~~~~

ಎಂ. ಎಸ್. ನಂಜಪ್ಪನವರು, ಪ್ಲೀಡರ್, ಮೈಸೂರು ಇವರಿಂದ ಬರೆಯಲ್ಪಟ್ಟ ನ್ಯಾಯದರ್ಪಣ ಎಂಬ ಹೊಸ ಪುಸ್ತಕದ ಜಾಹಿರಾತನ್ನೂ, ಮದ್ರಾಸ್ ರಾಜ ವೈದ್ಯ ನಾರಾಯಣಜೀ ಕೇಶವಜೀ ಎಂಬವರಿಂದ ಕಳುಹಿಸಲ್ಪಟ್ಟ ಔಷಧ ಪಟ್ಟಿಯನ್ನೂ ಈ ಸಂಚಿಕೆಯೊಂದಿಗೆ ಕಳುಹಿಸಿರುವೆವು.

~~~~~~

ಮಂಗಳೂರು. ಕಳದ ವಾರ ಮುನ್ಸಿಪಾಲಿಟಿಯಲ್ಲಿ ೮ ಪ್ಲೇಗ್ ಮರಣಗಳಿದ್ದವು.

ಕಳದ ಸಂಚಿಕೆಯಲ್ಲಿ ತಿಳಿಸಿದ ಮಾರಿಹೊಲೆಯುಹುಶನು ಇಂಡಿಯನ್ ಪಿನಲ್ ಕೋಡಿನ ೩೦೪ನೇ ಪ್ರಕರಣದ ತಪ್ಪಿಗೆ ಗುರಿಯಾಗುತ್ತಾನೆಂದು ಜಡ್ಜರವರು ಅಭಿಪ್ರಾಯ ಪಟ್ಟು ಆತನಿಗೆ ಐದು ವರ್ಷಗಳ ಕಠಿಣ ಸಜಾ ವಿಧಿಸಿದರು.

ಪುತ್ತೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಮೊಕದಮೆಯು ಈಗ ಸೆಶ್ಯನ್ಸಿನಲ್ಲಿ ತನಖಿಯಾಗುತ್ತಲಿದೆ. ಈ ಮೊಕದಮೆಯಲ್ಲಿ ಇಬ್ಬರು ಮಾಪಿಳ್ಳೆಯರು ಜನವರಿ ತಾ. ೨೯ರಲ್ಲು ಹೊಸದುರ್ಗದಲ್ಲಿ ಕಳವು ಮಾಡಿ ಬಡ್ವಬ್ಯಾರಿ ಎಂಬವನನ್ನು ಕೊಂದದ್ದಾಗಿರುತ್ತದೆ.

ಇಲ್ಲಿಯ ಸಬ್ ಕೋರ್ಟು ಇನ್ನೊಂದು ವರ್ಷದ ವರೆಗೆ ಇಲ್ಲಿಯೇ ಇರುವ ಸಂಭವವಿದೆ ಎಂದು ತಿಳಿಯುತ್ತೇವೆ.

ಕಳದ ಮಂಗಳವಾರ ಸಾಯಂಕಾಲ ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರವರು ವಕೀಲರನ್ನೂ ಕೆಲವು ಸ್ಥಳೀಕ ಗೃಹಸ್ಥರನ್ನೂ ತನ್ನ ಬಂಗ್ಲೆಗೆ ಹೋಮ್ ಪಾರ್ಟಿಗೆ ಆಮಂತ್ರಿಸಿದ್ದರು.

ಇದೇ ಬರುವ ತಾ. ೨೨ನೇ ಸೋಮವಾರ ಕಲೆಕ್ಟರರವರು ರಾ| ರಗಡೆರಾಮರಾವ್ ಅವರ್ಗಳರವರಿಗೆ ರಾವ್ ಬಹದ್ದೂರ್ ಎಂಬ ಸನ್ನದನ್ನು ಕೊಡುವರೆ ಗವರ್ನಮೆಂಟ್ ಕಾಲೇಜಿಯಲ್ಲಿ ದರ್ಬಾರು ಜರುಗಿಸುವರು.

ಮಂಗಳೂರು ಮಹಿಳಾ ಸಭೆಯ ಕುಲಸ್ತ್ರೀಯರು ಕಳದ ಆದಿತ್ಯವಾರ ಜರುಗಿಸಿದ 'ಸೋಸಿಯಲ್ ಗಾದರಿಂಗ್'ನಲ್ಲಿ ಪುನೆಯಲ್ಲಿರುವ ಪ್ರೊಫೆಸ್ಸರ ಕರ್ವೆಯವರ ಅನಾಥ ಬಾಲಿಕಾಶ್ರಮದ ಸಹಾಯಾರ್ಥವಾಗಿ ರೂ. ೭೯-೮-೦ನ್ನು ಚಂದಾಹಣವಾಗಿ ಕೂಡಿಸಿದ್ದರು. ಇದರಲ್ಲಿ ರೂಪಾಯಿ ೯—೮—೦ನ್ನು ಆ ದಿನದ ಸಭಾ ಕಾರ್ಯಗಳ ಖರ್ಚಿಗೆ ತೆಗದು ರೂ. ೭೦-೦-೦ನ್ನು ಪುನೆಗೆ ಪ್ರೊಫೆಸ್ಸರ ಕರ್ವೆಯವರಿಗೆ ಕಳುಹಿಸಿಕೊಟ್ಟಿರುತ್ತಾರೆ.

~~~~~~

ಬಂಟ್ವಾಳ. ತಾ. ೧೨ರಲ್ಲು ಏರಂಡಿ ರೇಶ್ಮೆ ಕೈಗಾರಿಕೆಯ ವಿದ್ಯೆಯನ್ನು ಕಲಿತು ಬಂದಿರುವ ಮೆ| ಮೆಲೊತರವರು ಇಲ್ಲಿಯ ಟೆಂಪಲ್ ಸೆಕಂಡರಿ ಶಾಲೆಯಲ್ಲಿ ಒಂದು ಭಾಷಣಕೊಟ್ಟು ಕೈಗಾರಿಕೆಗಳನ್ನು ಮೇಲಕ್ಕೆ ತರುವುದರಿಂದ ನಿರಾಶ್ರಿತ ಜನರೂ ದಿನೇ ದಿನೇ ಅಧೋಗತಿಯನ್ನು ಹೊಂದುತ್ತಲಿರುವ ಭಾರತೀಯರೂ ಕಳದುಕೊಂಡಿರುವ ತಮ್ಮ ಉಚ್ಛಸ್ಥಿತಿಯನ್ನು ಪುನಃ ಹೇಗೆ ಪಡೆಯಬಹುದೆಂಬದನ್ನು ಖಾತ್ರಿ ಪಡಿಸಿದರು. ಅವರ ಭಾಷಣದನಂತರ ಶಾಲಾ ಹೆಡ್‌ಮಾಸ್ತರರಾದ ರಾ| ಎಮ್. ಎನ್. ಕಾಮತರವರು ರಾ| ಮೆಲೊತರವರಿಗೆ ವಿದ್ಯಾರ್ಥಿಗಳ ಪರವಾಗಿ ಉಪಕಾರಸ್ಮರಣೆಮಾಡಿದರು.

~~~~~~

ಉಡ್ಪಿ. ಕಳದ ಸಂಚಿಕೆಯಲ್ಲಿ ತಿಳಿಸಿದಂತೆ ತಾ. ೧೧ಲ್ಲು ಮಿಸಿಸ್ ರಜಕರವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಬೋರ್ಡು ಹುಡಿಗಿಯರ ಶಾಲೆಯ ಬಾಲಕಿಯರಿಗೆ ಇನಾಮು ಹಂಚುವ ಸಮಾರಂಭವು ಜರುಗಿತು. ಈ ಉದ್ದೇಶಕ್ಕಾಗಿ ಮಂಗಳೂರಿಂದ ಇಲ್ಲಿತನಕ ಬಂದಿದ್ದ ಮಿಸಿಸ್ ರಜಕರವರು ಶಾಲೆಗೆ ತಲಪುತ್ತಲೇ ಶಾಲಾ ಮುಖ್ಯೋಪಧ್ಯಾಯಿನಿಯಾದ ಮಿಸಿಸ್ ಪಿ. ಎಲ್. ಕಾಂತಮ್ಮರವರೂ ತಾಲೂಕು ಬೋರ್ಡು ಪ್ರೆಸಿಡೆಂಟರೂ ಅವರನ್ನು ಸ್ವಾಗತ ಮಾಡಿಕೊಂಡು ಪತಾಕೆ ತೋರಣಗಳಿಂದ ಶೃಂಗರಿಸಲ್ಪಟ್ಟಿದ್ದ ಶಾಲೆಯೊಳಗೆ ಕರಕೊಂಡು ಹೋದರು. ಮಿಸಿಸ್ ರಜಕರವರು ಆಸೀನರಾದ ನಂತರ ಮುಖ್ಯೋಪಧ್ಯಾಯಿನಿಯು ಶಾಲಾ ವರದಿಯನ್ನು ಓದಿ ೧೯೧೦ನೇ ಇಸವಿಯಲ್ಲಿ ಡಿವಿಜನಲ್ ಆಫೀಸರರಾದ ಮೆ| ಡ್ಯೊಗ್ ದೊರೆಗಳ ಪ್ರಯತ್ನದಿಂದ ೭೦ ಹುಡಿಗಿಯರಿಂದಲೂ ಇಬ್ಬರು ಉಪಾಧ್ಯಾಯಿನಿಯರಿಂದಲೂ ತೊಡಗಿದ ಈ ಶಾಲೆಯು ಈಗ ೨೦೫ ಹುಡಿಗಿಯರಿಂದಲೂ ೪ ಉಪಾಧ್ಯಾಯಿನಿಯರಿಂದಲೂ ಕಂಗೊಳಿಸುತ್ತಿದೆಂದೂ ಶಾಲೆಯಲ್ಲಿ ೫ ತರಗತಿಗಳಿವೆಯೆಂದೂ ತಿಳಿಸಿ ಬೋರ್ಡಿನವರು ಒಂದು ದೊಡ್ಡ ಶಾಲಾ ಕಟ್ಟೋಣವನ್ನು ಕಟ್ಟಸಿಕೊಟ್ಟು ತರಬೇತಾದ ಹೆಚ್ಚಿನ ಉಪಾಧ್ಯಾಯರನ್ನು ನೇಮಿಸಿ ಶಾಲೆಗೆ ಬೇಕಾದ ಸಾಮಾನುಗಳನ್ನು ಒದಗಿಸಿ ಕೊಡಬೇಕೆಂದೂ ಬೋರ್ಡಿನವರನ್ನು ವಿಜ್ಞಾಪಿಸಿಕೊಂಡರು. ಅನಂತರ ಅಧ್ಯಕ್ಷರಾಗಿದ್ದ ಮಿಸಿಸ್ ರಜಕರವರು ಶಾಲಾ ಮಕ್ಕಳಿಗೆ ಇನಾಮುಗಳನ್ನು ಹಂಚಿ ಕಾಲೋಚಿತ ಭಾಷಣಕೊಟ್ಟರು. ಬಳಿಕ ಕೆಪ್ಟನ್ ರಜಕರವರು ಮಾತಾಡಿ ಸ್ತ್ರೀಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವವರಾದರು. ತರುವಾಯ ತಾಲೂಕು ಬೋರ್ಡಿನ ಪ್ರೆಸಿಡೆಂಟರವರು ಬೇಗನೇ ಶಾಲೆಗೆ ಹೆಚ್ಚಿನ ಮೂರು ಉಪಾಧ್ಯಾಯಿನೆಯರು ನೇಮಿಸಲ್ಪಡುವರೆಂದು ತಿಳಿಸಿದರು. ಕಡೆಗೆ ಅಧ್ಯಕ್ಷರಿಗೂ ಕೂಡಿಬಂದಿದ್ದ ಗೃಹಸ್ಥ ಗೃಹಸ್ಥೆಯರಿಗೂ ಧನ್ಯವಾದವನ್ನಿತ್ತನಂತರ ಸಭೆಯು ಆಗಲಿತು. ಇನಾಮು ಹಂಚುವರೆ ಮಿಸಿಸ್ ಗ್ರೇಹಮ್‌ರವರು ರೂ, ೧೫; ಉಡ್ಪಿ ವಕೀಲರುಗಳು ರೂ. ೧೨; ಸಾಹುಕಾರರು ರೂ. ೧೨ ಕೊಟ್ಟಿರುವರೆಂದು ತಿಳಿಯಲು ಸಂತೋಷ ಪಡುತ್ತೇವೆ. ಸಭಾ ಮಧ್ಯೆ ಶಾಲಾ ಬಾಲಕಿಯರು ಕಿಂಡರ್ ಗಾರ್ಟನ್ ಪದಗಳನ್ನೂ ಆಟಗಳನ್ನೂ ಆಡಿದರು.

ಡಿವಿಜನಲ್ ಆಫೀಸರರಾದ ಇಲ್ಲಿಯ ತಾಲೂಕು ಬೋರ್ಡಿನ ಪ್ರೆಸಿಡೆಂಟರು ನಿರಾಶ್ರಿತ ಜನರನ್ನು ಉದ್ಧರಿಸುವ ಸಂದರ್ಭದಲ್ಲಿ ಬಹಳ ಪ್ರೋತ್ಸಾಹಕೊಡುವವರಾಗಿದ್ದಾರೆ. ಇಲ್ಲಿಯ ನಿರಾಶ್ರಿತ ಜನಸಹಾಯಕ ಮಿಶ್ಯನಿನವರು ಅದರ ಪ್ರೆಸಿಡೆಂಟರಾದ ಖಾನ್ ಸಹೇಬ್ ಅಬ್ದುಲ್ಲ ಹಾಜಿ ಕಾಶಿಮರವರ ಮೂಲಕ ಪುತ್ತೂರು ಗ್ರಾಮದಲ್ಲಿ ನಿರಾಶ್ರಿತ ಜನರ ಪರವಾಗಿ ಒಂದು ಸ್ಥಳವನ್ನು ಕೊಡಬೇಕಾಗಿ ಕೇಳಿಕೊಂಡಿದ್ದರು. ಡಿವಿಜನಲ್ ಆಫಿಸರರು ನಿರಾಶ್ರಿತ ಜನಸಹಾಯಕ ಮಿಶ್ಯನಿನ ಪ್ರೆಸಿಡೆಂಟರನ್ನೊಡಗೂಡಿಕೊಂಡು ಆ ಸ್ಥಳಕ್ಕೆ ಹೋಗಿ ಎಲ್ಲಾ ಸಂಗತಿಯನ್ನು ಪ್ರೆಸಿಡೆಂಟರಿಂದ ಕೇಳಿ ತಿಳಕೊಂಡು ಈ ವಿಷಯಕ್ಕೆ ತಕ್ಕ ನಿಗಾ ಕೊಡುವೆನೆಂದು ಅಭಯವನ್ನಿತ್ತಿರುವರು.

ತಾ. ೧೧ರಲ್ಲು ಡಿವಿಜನಲ್ ಆಫೀಸರರು ಪಂಚಮರ ಶಾಲೆಗೆ ಚಿತ್ತೈಸಿದರು. ಶಾಲೆಯ ಹಾಜರು ಪಟ್ಟಿಯಲ್ಲಿರುವ ೪೧ ಹುಡುಗರಲ್ಲಿ ಆ ದಿನ ೩೭ ಹುಡುಗರು ಹಾಜರಿದ್ದರು. ಈ ಶಾಲೆಯಲ್ಲಿ ೩ ದರ್ಜೆಗಳು ಮಾತ್ರವಿವೆ. ತಾಲೂಕು ಬೋರ್ಡಿನವರು ಈ ಶಾಲೆಗೆ ತಿರಿಗಿ ಒಬ್ಬ ಘುಟ್ಟಿಗ ಉಪಾಧ್ಯಾಯನನ್ನು ನೇಮಿಸುವರೆಂಬ ಭರವಸವಿದೆ. ಈ ಶಾಲೆಯು ಬೇಗನೇ ಅಭಿವೃದ್ಧಿಯನ್ನು ಹೊಂದಿ ಯಾರಿಗೋಸ್ಕರವಾಗಿ ಸ್ಥಾಪಿಸಲ್ಪಟ್ಟಿತೋ ಅವರ ಪ್ರಯೋಜನಾರ್ಥವಾಗಿ ಚಿರಕಾಲ ಬಾಳಲಿ ಎಂಬದೇ ನಮ್ಮ ಅಪೇಕ್ಷೆಯಾಗಿರುತ್ತದೆ. ಈ ಶಾಲೆಯು ಇರುವ ಸ್ಥಳವು ಖಾನ್‌ಸಾಹೇಬ್ ಅಬ್ದುಲ್ಲ ಕಾಶಿಮರವರಿಗೆ ಸೇರಿದ್ದಾಗಿರುತ್ತದೆ. ಅವರು ಆ ಸ್ಥಳದ ಗೇಣಿ ಶಾಲೆಗೆನೇ ಬಿಟ್ಟಿರುವದು ಸ್ತುತ್ಯವಾದದ್ದೇ ಸೈ.

ಯುರೋಪು ಖಂಡಗಳನ್ನು ಸಂಚರಿಸಿ ಖ್ಯಾತಿ ಪಡೆದಿರುವ ಪೈಲ್‌ವಾನ್ ಮೆ| ಮಹಬಲ್ ಖಾನರವರು ಇಲ್ಲಿಗೆ ಬಂದು ತನ್ನ ಚಮತ್ಕಾರಿಕ ಆಟಗಳನ್ನು ತೋರಿಸ ಪ್ರಾರಂಭಿಸಿರುವರು.

ರೆವಿನ್ಯು ಬೋರ್ಡಿನವರು ಒಬ್ಬ ಸಾಹುಕಾರರ ಪ್ರಯೋಜನಾರ್ಥವಾಗಿ ಮಲ್ಪೆಯಲ್ಲಿ ತಿರಿಗಿ ಒಂದು ಮೀನು ಒಣಗಿಸುವ ಹೊಸ ಅಂಗಳವನ್ನು ಕಟ್ಟಸುವರೆ ಸಮ್ಮತಿ ಕೊಡಲಿಕ್ಕಿದ್ದಾರೆಂಬ ವಾರ್ತೆ ಇದೆ. ಈಗ ಇರುವ ಅಂಗಳ ಮೀನು ಸಿಗಿಯುವ ಸ್ಥಳದಿಂದ ಸುಮಾರು ಒಂದು ಫರ್ಲಾಂಗ್ ದೂರವಿದ್ದು ೧೦೦೦ ಬೈಗೆ ಮೀನಿಗೆ ಉಪ್ಪು ಹಾಕಲು
~~~~~~

ಸುಮಾರು ೧೪ ಆಣೆ ತಗಲುತ್ತದೆ. ಒಬ್ಬ ಸಾಹುಕಾರನಿಗೆ ಮಾತ್ರ ಗುತ್ತಿಗೆ ಕೊಡ ಆಲೋಚಿಸಿ ಕಟ್ಟಿಸುವ ಈ ಅಂಗಳವು ಮೀನು ಸಿಗಿಯುವ ಸ್ಥಳದಲ್ಲಿಯೇ ಕಟ್ಟಿಸಲ್ಪಡಲಿಕ್ಕಿದೆ. ಇದರಿಂದ ಆ ಒಬ್ಬ ಸಾಹುಕಾರನಿಗೆ ೧೦೦೦ ಬೈಗೆಗೆ ಉಪ್ಪು ಹಾಕಲು ೭ ಯಾ ೮ ಆಣೆಮಾತ್ರ ತಗಲುವುದು. ಇಷ್ಟು ಸುಲಭ ಖರ್ಚಿನಿಂದ ಮೀನಿಗೆ ಉಪ್ಪು ಹಾಕಲಿಕ್ಕಾಗುವುದರಿಂದ ಆ ಸಾಹುಕಾರನು ಇತರ ಸಾಹುಕಾರರಿಗಿಂತ ಅಗ್ಗವಾಗಿ ಮೀನನ್ನು ಮಾರಬಹುದು. ಹೆಚ್ಚು ಖರ್ಚಿನಿಂದ ಉಪ್ಪು ಹಾಕುವ ಸಾಹುಕಾರರಿಗೆ ವ್ಯಾಪಾರವಾಗದು. ಒಬ್ಬ ಸಾಹುಕಾರನಿಗೆ ಸುಲಭ ಉಪಾಯವನ್ನು ಕಲ್ಪಿಸಿಕೊಟ್ಟು ಇತರ ಸಾಹುಕಾರರನ್ನು ಕಷ್ಟನಷ್ಟಕ್ಕೊಳಪಡಿಸುವುದು ಯಾತರ ನ್ಯಾಯ? ಈ ಸಾಹುಕಾರನು ಹೊಸ ರೀತಿಯಿಂದ ಮೀನನ್ನು ಒಣಗಿಸುವ ಹೊಸ ವಿಧವನ್ನು ಕಂಡುಕೊಂಡವನಾಗಿದ್ದರೆ ಈಗ ಇರುವ ಅಂಗಳದಲ್ಲಿಯೇ ಆತನಿಗೆ ಪ್ರತ್ಯೇಕ ಸ್ಥಳವನ್ನು ಒದಗಿಸಿಕೊಡಬಹುದಲ್ಲವೇ? ಇಲ್ಲವೆ ಹೊಸತಾಗಿ ಕಟ್ಟಿಸಲಾಲೋಚಿಸಿರುವ ಅಂಗಳವನ್ನು ಈಗ ಇರುವ ಅಂಗಳದಷ್ಟೇ ದೂರದಲ್ಲಿ ಕಟ್ಟಿಸುವುದು ವಿಹಿತವಲ್ಲವೇ? ಹೀಗೆ ಮಾಡಿದರೆ ಇತರ ವ್ಯಾಪಾರಸ್ಥರ ದೂರಾಟಕ್ಕೆ ಕಾರಣವಿಲ್ಲವಲ್ಲ! ಸರಕಾರದವರು ಮೇಲಿನ ಸಂಗತಿಯನ್ನು ಚಿತ್ತಕ್ಕೆ ತಂದು ಈಗ ಇರುವ ಅಂಗಳದಲ್ಲಿ ಪ್ರತ್ಯೇಕ ಸ್ಥಳವನ್ನು ಈ ಸಾಹುಕಾರನಿಗೆ ಕೊಟ್ಟು ಯೂ ಇದಕ್ಕೆ ಕೂಡಿಸಿ ಮತ್ತೊಂದು ಅಂಗಳವನ್ನು ಕಟ್ಟಿಸಿ ಕೊಡಬೇಕಾದುದಲ್ಲದೆ ಮೀನು ಸಿಗಿಯುವ ಸ್ಥಳದಲ್ಲಿಯೇ ಒಬ್ಬ ಸಾಹುಕಾರನಿಗೆ ಮಾತ್ರ ಪ್ರಯೋಜನಾರ್ಥವಾಗುವ ಹೊಸ ಅಂಗಳವನ್ನು ನಿರ್ಮಿಸಿ ಕೊಡುವುದು ವಿಹಿತವಲ್ಲ.

ಕುಂದಾಪುರ. ಬೋರ್ಡು ಹ್ಯಾಸ್ಕೂಲು ಮಾಸ್ತರರಾದ ಜಪ್ಪು ನಾರಾಯಣರಾಯರು ತನ್ನ ಅಂಗಿಯನ್ನು ಶಾಲೆಯ ಕಿಟಕಿಯಲ್ಲಿ ಇಟ್ಟಿದ್ದರಂತೆ. ಅಂಗೀ ಜೇಬಿನಲ್ಲಿದ್ದ ಆರು ಪವನು ಕ್ರಯದ ನಾಲ್ಕು ಚಿನ್ನದ ಬಳೆಗಳನ್ನು ಯಾರೋ ಎತ್ತಿ ಹಾಕಿದರು. ಕಳ್ಳರು ಪತ್ತೆಯಾಗದ್ದರಿಂದ ತಾ. ೧೬ನೇ ದಿನ ಶಾಲೆಗೆ ಒಬ್ಬ ಮಂತ್ರವಾದಿಯನ್ನು ಕರೆಯಿಸಿದಲ್ಲಿ ಆತನು ಒಂದು ತೆಂಗಿನಕಾಯನ್ನು ಮಂತ್ರಿಸಿದನು. ಅನಂತರ ಇಲ್ಲಿಯ ಶಾಲಾ ಮಾಸ್ತರರೂ ಹುಡುಗರೂ ತೆಂಗಿನಕಾಯನ್ನು ಮುಟ್ಟಿದರಂತೆ. ಈ ಮಂತ್ರದ ಮೂಲಕ ಕಳ್ಳನು ಹುಚ್ಚನಾಗುವನಂತೆ! ಇದೊಂದು ಚೋದ್ಯವಲ್ಲವೇ!!

ತಾ. ೧೬ರಲ್ಲು ಇಲ್ಲಿ ಬಿರುಮಳೆ ಗರೆದಿರುವದು. ಹಗಲಲ್ಲಿ ಬಿಸಲಿನ ತಾಪ, ರಾತ್ರಿಯಲ್ಲಿ ಕಠಿಣ ಶೆಖೆ, ಈ ವರ್ಷದಷ್ಟು ಶೆಖೆ ಕಳದ ವರ್ಷಗಳಲ್ಲಿ ಇರಲಿಲ್ಲವು.

ವಿವಿಧ ವಿಷಯಗಳು.

ಬ್ರಿಟಿಷ್ ಸರಕಾರದವರಿಗೆ ಸುಮಾರು ೨೫,೦೦೦ ಒಂಟೆಗಳು ಇವೆ.

ಅಮೆರಿಕದ ಯುನೈಟೆಡ್ ಸ್ಟೇಟಿನಲ್ಲಿ ನೂರುಸಾವಿರಕ್ಕಿಂತಲೂ ಹೆಚ್ಚಿಗೆ ಜನರು ವಕೀಲ ವೃತ್ತಿಯವರಿರುವರು.

೧೯೧೧ನೇ ಇಸವಿಯಲ್ಲಿ ಲಂಡನಿನಲ್ಲಿ ಮದುಪಾನ ಮಾರಾಟಮಾಡುವ ೬೭೭೮ ಅಂಗಡಿಗಳು ಇದ್ದವು. ಈ ಪೈಕಿ ೪೫೦ ಅಂಗಡಿಗಳು ಲಂಡನ್ ನಗರದಲ್ಲಿಯೇ ಇದ್ದವು.

ಪೋಪ ಗುರುಗಳು ತನ್ನ ಖಾಸಗಿ ಪತ್ರಗಳಿಗೆ ಚಿನ್ನದ ಲೇಖನಿಯಿಂದ ನಿಶಿಹಾಕುವರು. ಆದರೆ ಮತ ಸಂಬಂಧವಾದ ಎಲ್ಲಾ ಪತ್ರವ್ಯವಹಾರಗಳಿಗೆ ಪಾರಿವಾಳದ ಗರಿಯ ಲೇಖನಿಯಿಂದ ದಸ್ಕತು ಮಾಡುವರು. ಈ ಗರಿಯ ಲೇಖನಿಯು ಕೆಲವು ವರ್ಷಗಳ ವರೆಗೆ ಹಾಳಾಗುವುದಿಲ್ಲ.

ಲಂಡನಿನಲ್ಲಿ ಈಗ ಹೆಂಗಸರ ೩೦ ಕ್ಲಬ್ಬುಗಳಿವೆ. ಈ ೩೦ ಕ್ಲಬ್ಬುಗಳಲ್ಲಿ ೩೦,೦೦೦ ಸ್ತ್ರೀ ಮೆಂಬರರಿರುವರು, ಅಲ್ಲಿ ಹೆಂಗಸರ ೩೦ ಕ್ಲಬುಗಳಿರುವಾಗ ನಮ್ಮಲ್ಲಿರುವ ಗಂಡಸರ ಕ್ಲಬ್ಬುಗಳೆಷ್ಟು? ಹೆಂಗಸರ ಕ್ಲಬ್ಬುಗಳೆಷ್ಟು?

ಬೊಗೋಟ ಎಂಬಲ್ಲಿ ಕಾಫಿ ಬೀಜದ ತೊಗಟೆಯಿಂದ ಒಂದು ವಿಧದ ಮದುಪಾನವನ್ನು ತಯಾರಿಸ ಪ್ರಾರಂಭಿಸಿರುವರು.

ನಾಲ್ಕು ಗೆಲನ್ ನೀರಿಗೆ ಒಂದು ಮೇಜು ಸೌಟು ಪರಿಮಾಣದಲ್ಲಿ ಪಟಿಗಾರದ ಚೂರ್ಣವನ್ನು ಹಾಕಿದರೆ ನೀರು ಶುದ್ಧವಾಗುವುದು.

ಆಸ್ಟ್ರೇಲಿಯದಲ್ಲಿ ರೆಕ್ಕೆ ಇಲ್ಲದ ಒಂದು ಜಾತಿಯ ಪಕ್ಷಿ ಇದೆ. ಅದರ ತುಪ್ಪಳವು ಕೂದಲಿನ ಹಾಗೆ ಇದೆ. ಅದಕ್ಕೆ ನಾಲ್ಕು ಮೊನೆಯಾದ ಕೊಂಕುಗುರುಗಳಿರುವವು. ಅದರಿಂದ ಪರಚಿ ದೊಡ್ಡ ಗಾಯಗಳನ್ನು ಮಾಡ ಬಲ್ಲುದು.

ಚೀನದ ಒಂದು ವೈದ್ಯ ಕಂಪೆನಿಯವರು ಲೋಕದಲ್ಲೆಲ್ಲಾ ದೊಡ್ಡದಾದ ಒಂದು ಪುಸ್ತಕವನ್ನು ತಯಾರಿಸಿರುವರು. ಈ ಪುಸ್ತಕವು ೧,೨೦೪ ರಾತ್ಲ ಭಾರವಿದೆ. ೭ಅಡಿ ಉದ್ದ ೩॥ ಅಡಿ ಎತ್ತರವಿದೆ.

ಅನೇಕಾವರ್ತಿ ವಿವಿಧ ಕಾರಣಗಳಿಂದ ಮನುಷ್ಯರ ಧ್ವನಿ ಬಿದ್ದು ಹೋಗುವುದುಂಟಷ್ಟೆ. ಇದಕ್ಕೆ ಮೊಟ್ಟೆಯ ಬಿಳಿ ಲೋಳೆಗೆ ನಿಂಬೆಹಣ್ಣಿನ ರಸ ಮತ್ತು ತುಸ ಸಕ್ಕರೆ ಹಾಕಿ ಕುಡಿದರೆ ಪುನಃ ಧ್ವನಿ ಸರಿಯಾಗುವದು. ಸರ್ತಿಗೆ ಒಂದು ಚಾಸೌಟಿನ ಪ್ರಕಾರ ಆಗ್ಗಾಗ್ಯೆ ತಕ್ಕೊಳ್ಳುತ್ತಿರಬೇಕು.

ರುಷ್ಯಾ ದೇಶದಲ್ಲಿ ವೂಲ್ಫಹೌಂಡ್ ಎಂಬ ಜಾತಿಯ ನಾಯಿಯು ಒಂದು ಸೆಕುಂದದಲ್ಲಿ ೨೪ ಗಜ ಅಂದರೆ ಒಂದು ನಿಮಿಷದಲ್ಲಿ ಮುಕ್ಕಾಲು ಮೈಲು, ಗಂಟೆಗೆ ೪೫ ಮೈಲು ಪ್ರಕಾರ ಓಡುವುದು. ಲೋಕದಲ್ಲೆಲ್ಲಾ ತೀವ್ರವಾಗಿ ಓಡುವ ನಾಯಿಗಳಲ್ಲಿ ಇದೇ ಜಾತಿಯ ನಾಯಿ ಪ್ರಾಮುಖ್ಯವಾದದ್ದು. ತೀವ್ರವಾಗಿ ಓಡುವ ಜಿಂಕೆಗಳು ನಿಮಿಷಕ್ಕೆ ೨೭ ಗಜ, ಗಂಟೆಗೆ ಸುಮಾರು ಒಂದು ಮೈಲು ಪ್ರಕಾರ ಓಡುವವು.

ಮಾಜಿ ಬೆರೊನೆಟ್ ಬರ್ಡೆಡ್ ಎಂಬವರ ಹತ್ತರ ೧೪ ಅಂಗುಲ ಎತ್ತರದ ಒಂದು ಕುದುರೆ ಇತ್ತು. ಈಗ ಪರ್ಶಿಯದ ಶಾಹರವರ ಬಳಿಯಲ್ಲಿ ೧೨॥ ಅಂಗುಲ ಎತ್ತರದ ಒಂದು ಕುದುರೆ ಇದೆ. ಇದೇ ಲೋಕದಲ್ಲಿರುವ ಕದುರೆಗಳಲ್ಲಿ ಅತೀ ಚಿಕ್ಕದ್ದು.

ಅಬಸೀನಿಯದ ದೇಶೀಯರಿಗೆ ಯಾರಾದರೂ ಮಧುಪಾನ ಮಾರಿದಂಥವನು ಗುಂಡು ಹಾಕಿ ಕೊಲ್ಲಲ್ಪಡುವನೆಂಬದಾಗಿ ಅಬಸೀನಿಯದ ಅರಸನು ಪ್ರಕಟಿಸಿರುವನು.

ಗ್ರೇಟ್ ಬ್ರಿಟಾನಿನಲ್ಲಿ ಹೊಗೆಸೊಪ್ಪು ಸೇದುವುದಕ್ಕೆ ವರ್ಷ ಒಂದಕ್ಕೆ ೨೯,೧೬೪,೬೮೭ ಪವನು ಖರ್ಚಾಗುತ್ತದೆ. ವರ್ಷ ಒಂದಕ್ಕೆ ೩,೦೦೦,೦೦೦ ರಾತ್ಲ ಹೊಗೆಸೊಪ್ಪು ವೆಚ್ಚವಾಗುತ್ತದೆ.

ಅವಘಡದಿಂದ ಇಲ್ಲವೆ ಇತರ ಕಾರಣಗಳಿಂದ ಫಕ್ಕನೇ ನಿಂತು ಹೋಗುವ ಉಸುರಾಟವನ್ನು ಸರಿಪಡಿಸಿ ಹೊಸ ಜೀವವನ್ನು ಕೊಡುವ ಒಂದು ಯಂತ್ರವನ್ನು ಜರ್ಮನಿ ದೇಶಸ್ಥನೊಬ್ಬನು ನಿರ್ಮಿಸಿರುವನು. ಈ ಯಂತ್ರವನ್ನು ಚಿಕಾಗೋ ಪಟ್ಟದಲ್ಲಿ ಪ್ರಯೋಗಿಸುತ್ತಿರುವರು. ಇದನ್ನು ಪ್ರಥಮಸಾರಿ ಉಸುರಾಟ ನಿಂತಿದ್ದ ೬೫ ವರ್ಷದ ಒಬ್ಬ ವಕೀಲನಿಗೆ ಪ್ರಯೋಗಿಸಿದಲ್ಲಿ ಆತನು ಅರ್ಧ ತಾಸಿನಲ್ಲಿ ಪುನರ್ಜೀವಿತನಾದನು. ಅನಂತರ ಈ ಯಂತ್ರದಿಂದ ಹಲವು ಮಂದಿ ಸಂರಕ್ಷಿಸಲ್ಪಟ್ಟರು. ಯಂತ್ರವು ೨೧ ಅಡಿ ಉದ್ದ ೩॥ ಅಡಿ ಅರ್ಧವ್ಯಾಸವುಳ್ಳ ಕಬ್ಬಿಣದ ಕೊಳವಿಯಂತೆ ಇದೆ. ಈ ಕೊಳವಿಯೊಳಗೆ ೨೮೦೦ ರಾತ್ಲ ಪ್ರಾಣವಾಯುವನ್ನು ತುಂಬಿಸಿಡಲಾಗುತ್ತದೆ. ಇದರೊಳಗಿದ್ದ ಪ್ರಾಣವಾಯುವನ್ನು ಜೀವಿತರಾಗಿರುವಾಗ ವಾಯುವನ್ನು ಶ್ವಾಸಿಸುವ ರೀತಿಯಲ್ಲಿ ಒಳ ಬಿಡಲಿಕ್ಕೆ ಸಾಧ್ಯವಾಗುವುದರಿಂದ ಉಸುರಾಟ ನಿಂತು ಹೋಗಿದ್ದ ಮನುಷ್ಯರು ತುಸ ಹೊತ್ತಿನಲ್ಲಿ ಪುನಃ ಉಸುರಾಡ ಪ್ರಾರಂಭಿಸುವರು. ಈ ಯಂತ್ರದ ಹೆಸರು ಪಲ್‍ಮೋ... ಎಂಬದಾಗಿದೆ.

ನಿಂಬೆ ಹಣ್ಣನ್ನು ತುಂಡುಮಾಡಿ ಬೂಟ್ಸಿನ ಮೇಲೆ ತಿಕ್ಕಿ ಬಿಸಲಲ್ಲಿ ಇಟ್ಟು ನಂತರ ಬ್ರಸಿನಿಂದ ಚೆನ್ನಾಗಿ ತಿಕ್ಕಿದರೆ ಬೂಟ್ಸು ಒಳ್ಳಿತಾಗಿ ಮಿಂಚುವುದು.

ಪಾರಿಸಿನಲ್ಲಿ ಈಚೆಗೆ ಒಂದು ಕೋಳಿಮರಿಗೆ ೪ ಕಾಲುಗಳೂ ೪ ರೆಕ್ಕೆಗಳೂ ಇದ್ದವು. ತಾಯಿ ಹೇಂಟೆಯು ಆ ಕೋಳಿಮರಿಯನ್ನು ಕೂಡಲೇ ಕೊಂದುಬಿಟ್ಟಿತು.

ಶೀತಕ್ಕೆ ಕಾರಣ:—ಮನುಷ್ಯರಿಗೆ ಆಗಾಗ್ಯೆ ಶೀತ ತಗಲುವುದಕ್ಕೆ ಧೂಳಲ್ಲಿರುವ ಅಣುಪ್ರಾಣಿಗಳೇ ಒಂದು ಕಾರಣ. ಪಟ್ಟಣಗಳಲ್ಲಿ ಹಳ್ಳಿಗಳಿಗಿಂತಲೂ ಧೂಳು ಹೆಚ್ಚಿರುವುದರಿಂದ ಪಟ್ಟಣ ವಾಸಿಗಳು ಹೆಚ್ಚಾಗಿ ಶೀತಕ್ಕೆ ತುತ್ತಾಗುವರು. ಧೂಳಲ್ಲಿರುವ ಅಣುಪ್ರಾಣಿಗಳು ಗಂಟಲಿನ ಮತ್ತು ಮೂಗಿನ ತೆಳ್ಳಗಾದ ಪರೆಗಳನ್ನು ಬೇಗನೇ ಕೆಡಿಸುತ್ತವೆ.

ಅಲೆಕ್ಷಂಡ್ರ ರಾಣಿಯವರ ಹತ್ತರ ಒಂದು ... ಇದೆ. ಈ ಕ್ರೂಜೆಯು ಧರಿಸಿದವರು ಅದೃಷ್ಟ ಶಾಲಿಗಳೆಂಬ ಮಾತಿದೆ. ಈ ಕ್ರೂಜೆಯು ಡಾಗ್ಮಾರ್ ಎಂಬ ರಾಣಿಯ ಸಮಾಧಿಯಲ್ಲಿ ಅಲೆಕ್ಷಾಂದ್ರ ರಾಣಿಯ ತಂದೆಯಾದ ಕಿಶ್ಚಿಯನ್ ಅರಸರಿಗೆ ದೊರಕಿದ್ದಾಗಿದೆ. ಅಲೆಕ್ಷಂದ್ರ ರಾಣಿಯ ವಿವಾಹದ ದಿವಸ ಅದನ್ನು ತಂದೆಯು ಮಗಳಿಗೆ ಉಡಿಗೆರೆ ಮಾಡಿದ್ದನು.

ಫ್ರಾನ್ಸಿನಲ್ಲಿ ಒಂದು ವಿಧದ ಕನ್ನಡಿಯನ್ನು ತಯಾರಿಸುತ್ತಿರುತ್ತಾರೆ. ಈ ಕನ್ನಡಿಯನ್ನು ಕಿಟಕಿಗಳಿಗೆ ಹಾಕುವರು. ಕಳ್ಳರು ಈ ಕನ್ನಡಿಯನ್ನು ಒಡದಾಕ್ಷಣ ಫಕ್ಕನೆ ಗಂಟೆ ಬಾರಿಸಿದಂತಾಗಿ ಮನೆಯವರನ್ನು ಎಚ್ಚರಿಸುವದು.

ಕೀರ್ತಿಶೇಷ ಎಡ್ವರ್ಡ್ ಚಕ್ರವರ್ತಿಯವರ ವೈದ್ಯ ಇಲಾಖೆಯವರಿಗೆ ವರ್ಷ ಒಂದಕ್ಕೆ ೨೭೦೦ ಪವನು ಸಂಬಳ ಸಲ್ಲುತ್ತಿತ್ತು.

ಕೆಲವು ವರ್ಷಗಳ ಹಿಂದೆ ಆಫ್ರೀಕದಲ್ಲಿ ಗುಂಡು ಹೊಡೆಯಲ್ಪಟ್ಟ ಗೊರಿಲ್ಲ ಜಾತಿಯ ಕಪಿಯು ೭ ಅಡಿ ೬ ಅಂಗುಲ ಎತ್ತರವಿತ್ತು. ಅದು ಭುಜದಿಂದ ಭುಜಕ್ಕೆ ೪ ಅಡಿ ಅಗಲವಿತ್ತು.



ಪೊಪ್ಯುಲರ್ ಹಂಬರ್ ಕ್ರಯ ರೂಪಾಯಿ 120.

ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯಾಕಲುಗಳನ್ನು ಪಡಿಯಲು ಸಾಧ್ಯವಲ್ಲ.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಶೋಸಿಯೇಷನ್,

ಸ್ಯಾಕಲ್ ಏಜಂಟ್ಸ್,

ಮಂಗಳೂರು, ದಕ್ಷಿಣ ಕನ್ನಡ.



ಸಿಂಗರ್ ರೋಯಲ್ ಕ್ರಯ ರೂಪಾಯಿ 115.

"ಅಮೇರಿಕದ ವಿಶಿಷ್ಟತೆ"

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೊನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ನಾಶಮಾಡುತ್ತದ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವುದಕ್ಕೆ ಅಥವಾ ಕಾರ್ಯ ಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಯನ್ನು ಶಕ್ತರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿ ಬರುವ ಕ್ಷಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಗ್ಲಾನಿಯೂ, ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವವರಿ—ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹ ಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವುದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ಜಾಡರ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು-ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ.2-0-0;ಒಂದು ಸೀಸೆಯಲ್ಲಿ 40ಗುಳಿಗೆಗಳವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮೆ.ಜೇ.ಸಿ. ಬ್ರೀತೋ (ಪೊಂಡಾ-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದ ನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮೆ. ಜಿ. ಆರ್. ಗಾಯಿಕವಾಡ, (ಸಕ್ರಿಯ ಮಾಮಲತದಾರರು)—ವಿ. ಪಿ. ದ್ವಾರಾ ಆದಷ್ಟು ತ್ವರೆಯಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳ ಉತ್ತಮವಿದೆ.

ಏಜಂಟರು:—ಡಿ. ಉಲನ್‍ವಾರ್ಟ್, ಮಂಗಳೂರು.

The Anglo Indian Drug & Chemical Company,
155, Market, Jumma Musjid, Bombay.

ಉಪನ್ಯಾಸಗಳ ಉತ್ತಮಾಲಯ } ಮಧುರವಾಣೀ. { ಗದ್ಯಗ್ರಂಥಗಳ ಭಾಂಡಾಗಾರ.

ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತ ಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಗ್ರಂಥಗಳೂ ಸಾಮಾಜಿಕ, ನೀತಿ, ಮತ, ವಿದ್ಯೆ, ತತ್ವಶಾಸ್ತ್ರಕ್ಕೆ ಸಬಂಧಪಟ್ಟ ಉತ್ತಮೋತ್ತಮ ಉಪನ್ಯಾಸಗಳೂ ಅನೇಕ ಉಪಯುಕ್ತ ವಿಷಯಗಳೂ ಬೇರೆಬೇರೆ ಪುಟಗಳೊಡನೆ ಪ್ರತಿ ತಿಂಗಳಲ್ಲಿಯೂ ತಪ್ಪದೆ ಪ್ರಕಟಿಸಲ್ಪಡುವವು. ಕರ್ಣಾಟಕದಲ್ಲಿ ಪ್ರಖ್ಯಾತರಾದ ಲೇಖಕರೆಲ್ಲಾ ಮಧುರವಾಣಿಯ ಲೇಖಕರಾಗಿರುವರು. ಚಂದಾದಾರರಿಗೆ ಅನೇಕ ಪುಸ್ತಕಗಳು ಅರ್ಧ ಬೆಲೆಗೆ ದೊರೆಯುವವು. ಮಾದರಿ ಸಂಚಿಕೆಗೆ ಬೆಲೆ ಇಲ್ಲ. ಕ್ರಯದ ಪಟ್ಟಿಯನ್ನು ಅಪೇಕ್ಷಕರಿಗೆ ಮುಫತ್ತಾಗಿ ರವಾನಿಸುವೆವು.

ವಿಳಾಸ:— ಹನುಮಾನ್ ಮತ್ತು ಕಂಪೆನಿ.
ಮೈಸೂರು.

ಮಹನೀಯರೇ ನಿಮ್ಮ ರೋಗಗಳಿಂದ ಧೈರ್ಯಗುಂದ ಬೇಡಿ! ನೋಡಿರಿ ಬೆಲೆಯಲ್ಲಿ ಅಗ್ಗ!! ಗುಣದಲ್ಲಿ ಪೆಟ್ಟೊಂದು ತುಂಡೆರಡು!!! ರೋಗಗಳಿಂದ ಅಧೈರ್ಯ ಪಟ್ಟವರಿಗೆ ಸಂಪೂರ್ಣ ನಂಬಿಕೆಯನ್ನುಂಟುಮಾಡುವುದು!!! ಆ ನಂಬಿಕೆಯೇ

ಜ್ವರಾಮೃತ.

ಈ ಔಷಧವು ಮಲೇರಿಯ ಜ್ವರ, ದಿನ ತಪ್ಪಿ ದಿನ ಬರುವ ಜ್ವರ, ಕಾಲಕಾಲದ ಜ್ವರ, ಬೆಳದಗೆಡ್ಡೆ ಮತ್ತು ಕೊಂಬೆಯಿಂದುಂಟಾಗುವ ಜ್ವರಗಳನ್ನು ನೆಕ್ಕುವ ಮಾರಿಯೇ ಜ್ವರಾಮೃತ. ಎಲ್ಲಾ ತರದ ಔಷಧಗಳನ್ನು ಸೇವನೆ ಮಾಡಿ ಗುಣಹೊಂದದೆ ಇರುವ ಖಾಯಿಲಸ್ಥರೇ ಒಂದು ಸಾರಿ ಈ ಜ್ವರಾಮೃತವೆಂಬ ಔಷಧವನ್ನು ಸೇವನೆ ಮಾಡಿ ನಿಮ್ಮನ್ನು ದಿನನಿತ್ಯವೂ ಪೀಡಿಸುವ ಬಾಧೆಗಳನ್ನು ನಿವಾರಣೆ ಮಾಡಿಕೊಂಡು ಆರೋಗ್ಯಸ್ಥರಾಗಿರಿ. ಬೆಲೆ ಸೀಸೆ 1ಕ್ಕೆ ಆಣೆ 0—8—0 ದೊಡ್ಡ ಸೀಸೆ 1ಕ್ಕೆ ಆಣೆ 0—14—0 ಸಣ್ಣ ಸೀಸೆ ಡಜನ್ 1ಕ್ಕೆ ರೂ. 5—8—0 ದೊಡ್ಡ ಸೀಸೆ ಡಜನ್ 1ಕ್ಕೆ ರೂ. 10—0—0. ಪೋಸ್ಟೇಜು ಪ್ಯಾಕಿಂಗ್ ವಗ್ಯೆರೆ ಪ್ರತ್ಯೇಕ.

ಟೆನಟನ್ ಚೂರ್ಣ.

ಈ ಚೂರ್ಣವು ಹುಳ ಕಡ್ಡಿ ಮತ್ತು ಇತರ ಎಲ್ಲಾ ತರದ ರೋಗಗಳನ್ನು ಕ್ಷಣಮಾತ್ರದಲ್ಲಿಯೇ ಗುಣಪಡಿಸುವುದು. ಯಾವ ತರದ ಕೇಡನ್ನುಂಟುಮಾಡದ ಔಷಧಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಹಚ್ಚುವುದರಿಂದ ಉರಿಯು ಸಹ ಉಂಟಾಗುವುದಿಲ್ಲ ಮತ್ತು ಒಳ್ಳೇ ಸುವಾಸನೆಯುಳ್ಳದ್ದಾಗಿರುತ್ತದೆ. ಇದನ್ನು ಹಚ್ಚಿದ ಎರಡು ಮೂರು ದಿವಸಗಳಲ್ಲಿಯೇ ಇದರ ಗುಣತ್ವವು ತಿಳಿಯಬರುವುದು. ಬೆಲೆ ಡಬ್ಬಿ 1ಕ್ಕೆ ಆಣೆ 0—4—0 ಡಜನ್ 1ಕ್ಕೆ ರೂ 2—12—0 ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಕೇಶ್ರಂಜರಿ ಎಣ್ಣೆ.

ಈ ಎಣ್ಣೆಯನ್ನು ಅನೇಕ ಔಷಧಗಳಿಂದ ತಯಾರುಮಾಡಲ್ಪಟ್ಟಿರುತ್ತದೆ. ಇದನ್ನು ಉಪಯೋಗಿಸುವುದರಿಂದ ಮೆದುಳನ್ನು ತಂಪಾಗಿಯೂ, ಕೂದಲನ್ನು ಕಪ್ಪಾಗಿಯೂ, ರೇಷ್ಮೆಯಂತೆ ನುಣುಪಾಗಿಯೂ ಮಾಡುವುದಲ್ಲದೆ ಕೂದಲು ಅಧಿಕಧಿಕವಾಗಿ ಬೆಳೆಯುವಂತೆ ಮಾಡಿ ಉದುರುವ ಕೂದಲನ್ನು ನಿಲ್ಲಿಸುತ್ತದೆ. ಅಧಿಕ ಮೆದುಳು ಕೆಲಸ ಮಾಡುವವರು ಈ ಎಣ್ಣೆಯನ್ನು ಅಗತ್ಯವಾಗಿ ಉಪಯೋಗಿಸಬೇಕಾಗಿರುತ್ತದೆ. ಈ ಎಲ್ಲಾ ಗುಣಾತಿಶಯಗಳಿಂದೊಡಗೂಡಿರುವುದಲ್ಲದೆ ಇದನ್ನು ತಲೆಯ ಮೇಲೆ ಹಚ್ಚಿಕೊಂಡು ಹೋದಲ್ಲಿ ಆಜುಬಾಜಿನ ಜನರು ಇದರ ಸುವಾಸನೆಗೆ ಬೆರಗಾಗುವರು. ಆದ್ದರಿಂದ ಪ್ರತಿಯೊಂದು ಮನೆಯಲ್ಲಿ ಒಂದು ಶೀಸೆ ಯಾವಾಗ್ಲೂ ಇಟ್ಟಿರಬೇಕಾಗಿರುತ್ತದೆ. ಬೆಲೆ ಸೀಸೆ 1ಕ್ಕೆ ಆಣೆ 0—12—0 ಡಜನ್ 1ಕ್ಕೆ ರೂ. 8—8—0 ಪೋಸ್ಟೇಜು ಪ್ಯಾಕಿಂಗ್ ವಗ್ಯೆರೆ ಪ್ರತ್ಯೇಕ.

ಆದ್ದರಿಂದ ರೋಗಗಳಿಂದ ಪೀಡಿತರಾಗಿರುವ ಪ್ರತಿಯೊಬ್ಬರು ಒಂದು ಸಾರಿ ಈ ಔಷಧಗಳನ್ನು ಉಪಯೋಗಿಸಿ ಬಾಧಿಸುತ್ತಿರುವ ರೋಗಗಳಿಂದ ಗುಣವನ್ನು ಹೊಂದಿಕೊಂಡು ದೀರ್ಘಾನಂದ ಪಡೆಯಿರಿ. ಸಂತೋಷವೇ ಯೌವ್ವನ! ಚಿಂತೆಯೇ ಮುಪ್ಪು!!

ವಿಳಾಸ:—ಟಿ. ಡಿ. ಮುಕರ್ಜಿ ಅಂಡ್ ಕೊ,
ಚೌಕ್ ಬೆನಾರೆಸ್ ಸಿಟಿ.

Address:—**T. D. Mukherjee & Co.,**
Chowk, Benares City.

ವಿಶ್ವಾಂಜನ ಪೈನ್ ಬಾಂ.

ಎಲ್ಲಾ ಭಾಗ್ಯಕ್ಕಿಂತಲೂ ಆರೋಗ್ಯ ಭಾಗ್ಯವು ದೊಡ್ಡದು. ಈ ಭಾಗ್ಯವನ್ನು ಕೊಡುವುದು ಯಾವದು? ನಮ್ಮ ವಿಶ್ವಾಂಜನ ಪೈನ್ ಬಾಂ ಅಲ್ಲವೇ? ಇದರಿಂದ ತಲೆ ವೇದನೆ, ವಕ್ರಶೂಲ, ವಾತ, ಸಂಧುವಾತ, ಕಡತ, ಜಜ್ಜಿದ ಘಾಯಿ, ಶೀತ, ಗಂಟ್ಲುನೋವು, ಸೊಂಟನೋವು, ಜಖಮು, ಉಳುಕು, ಎದೆನೋವು, ಆನೆಕಾಲು, ವ ಇತರ ಎಲ್ಲಾ ತರದ ನೋವುಗಳು ನಿಸ್ಸಂಶಯವಾಗಿ ಗುಣ ಹೊಂದುತ್ತವೆ. ಎಲ್ಲಾ ಔಷಧಗಳಿಗಿಂತಲೂ ಶ್ರೇಷ್ಠವಾದುದೆಂದು ಅನೇಕ ಜನರಿಂದ ಶಿಫಾರಸು ಮಾಡಲ್ಪಟ್ಟಿದೆ. ಬಾಟ್ಲಿ 1ಕ್ಕೆ —0—8—0. 3 ಬಾಟ್ಲಿ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಇಲ್ಲ.

ವಿಳಾಸ:—ಬಿ. ವಿ. ಪಿ. ಭಂಡಾರಕರ್,
ವಿಶ್ವಾಂಜನ ಡಿಪೋ,
ಗೋಳಿಕಟ್ಟೆಬಜಾರ್, ಮಂಗಳೂರು ದ. ಕ.

ಪ್ರಕಟಣೆ.

ಉತ್ತರ ಆರ್ಕಾಡು ಜಿಲ್ಲೆಯ ಅರ್ನಿ ಮತ್ತು ಒನ್ನುಪುರಾಮಿನಲ್ಲಿ ನೇಯಲ್ಪಡುವ ರೂ 13ರಿಂದ ರೂ 150 ವರೆಗಿನ ಕ್ರಯದ ಸ್ತ್ರೀಯರ ಉಪಯೋಗಾರ್ಥವಾದ ರೇಶ್ಮೆ ಮತ್ತು ಗೋಟು ತೆಗೆದ ವಸ್ತ್ರಗಳು ರಿಯಾಯತಿ ದರದಲ್ಲಿ ಮಾರಲ್ಪಡುವವು. ವಸ್ತ್ರ ಕೊಂಡುಕೊಳ್ಳುವ ವ್ಯಾಪಾರಸ್ಥರಿಗೆ ಹಣ ಪಾವತಿ ಮಾಡುವರೆ ಒಂದು ತಿಂಗಳ ಸಮಯ ಕೊಡೋಣಾಗುವುದು. ಒಂದೆರಡು ವಸ್ತ್ರಗಳನ್ನು ಕೊಂಡುಕೊಳ್ಳುವವರಿಗೆ ವಿ. ಪಿ. ಮೂಲಕ ಕಳುಹಿಸೋಣಾಗುವುದು. ಒನ್ನುಪುರಾಮಿನ ರುದ್ರಾಕ್ಷ ಪೇಟೆಯಲ್ಲಿ ತಯಾರಿಸಲ್ಪಡುವ ವಿವಿಧ ಬಣ್ಣದ ಸ್ತ್ರೀಯರ ವಸ್ತ್ರಗಳೂ ಸಹಾ ಅಗ್ಗವಾಗಿ ಅಂದರೆ ರೂ. 3-15-6ರಿಂದ ರೂ. 7-12-0 ದರದಲ್ಲಿ ಮಾರಲ್ಪಡುವವು. ಗಿರಾಕಿಗಳು ವಸ್ತ್ರದ ಬಣ್ಣವನ್ನೂ ನಮೂನೆಯನ್ನೂ ಪರೀಕ್ಷಿಸಿ ನೋಡ ಬಹುದು. ಈ ವಸ್ತ್ರಗಳನ್ನು ಒಂದು ಸಾರಿ ಕೊಂಡು ಕೊಂಡವರು ಇತರರಿಂದ ವಸ್ತ್ರಗಳನ್ನು ಕೊಂಡುಕೊಳ್ಳರೆಂಬದು ನಿಶ್ಚಯ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ವಿಳಾಸ:—ಅತ್ತೂರು ವೈಕುಂಟ ಪ್ರಭು.
ರೇಶ್ಮೆ ಮತ್ತು ಗೋಟಿನ ವಸ್ತ್ರ ವ್ಯಾಪಾರಸ್ಥ.
ತಿರುವೆತ್ತಿಪುರಂ, ಉತ್ತರ ಆರ್ಕಾಡುಜಿಲ್ಲೆ.

ಅತ್ಯುಪಯುಕ್ತವಾದ ಕೆಲವು ಪುಸ್ತಕಗಳು.

ಕುಮುದಾ	0—8—0
ಮಹಾರಾಣಿ ಗಹಶೀಲೆ	0—2—0
ಮುಕ್ತಹಾರ	0—1—6
ಸನಾತನ ಧರ್ಮ ಪ್ರಶ್ನೋತ್ತರ...	0—1—0
ಕೃಷ್ಣಜನ್ಮ ನಾಟಕ	0—4—0
ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನೆ	0—3—0
ಪ್ರಾತಃರಾಹ್ನಿಕ ಪದ್ಧತಿ	0—3—0
ದೇವಪೂಜಾ ಪದ್ಧತಿ	0—3—0
ಬ್ರಹ್ಮಯಜ್ಞ ವೈಶ್ವದೇವ	0—3—0
ವಿಷ್ಣು ಸಹಸ್ರನಾಮ ಕೃಷ್ಣಾಷ್ಟೋತ್ತರ ನಾಮಾವಳಿ ...	0—2—6
ವಾಯುಸ್ತುತಿ	0—2—0
ದ್ವಾದಶ ಸ್ತೋತ್ರ	0—2—0
ಲಕ್ಷ್ಮೀ ಶೋಭಾನೆ ಹಾಡು	0—2—0
ಹರಿಭಕ್ತಿಸಾರ	0—1—0
ಉದಯರಾಗ	0—4—0
ಸ್ವಪ್ನಪದ, ಮಧ್ವನಾಮ	0—2—0
ಇಂಗ್ಲಿಷ ರಶೀದಿ 50 ಫೋರ್ಮುಗಳ ಪುಸ್ತಕ	0—6—0
ಕನ್ನಡ ರಶೀದಿ 25 ಫೋರ್ಮುಗಳ ಪುಸ್ತಕ	0—2—0
ಗೇಣಿ ರಶೀದಿ 25 ಫೋರ್ಮುಗಳ ಪುಸ್ತಕ	0—3—0
ಪರ್ಮಿಟು ಫೋರ್ಮು 100ಕ್ಕೆ	0-10-0
ಗೇಣಿಚೀಟು ಫೋರ್ಮು 100ಕ್ಕೆ	0-10-0
ಪ್ರೊಮಿಸರಿ ನೋಟು ಫೋರ್ಮು 100ಕ್ಕೆ	0-6-0
ಚಕ್‌ರೋಲ್ 25 ಪುಟಗಳ ಪುಸ್ತಕ	0-8-0
,, 50 ,, ...	0-14-0
,, 100 ,, ...	1-8-0

ಫರ್ಲೋಂಗ್ ಬೂಕುಗಳೂ ವಿವಿಧ ನಮೂನೆಯ ನೋಟುಬೂಕುಗಳೂ ಅಂಗಡಿ ಭಂಡಸಾಲೆ ವಗೈರೆ ವ್ಯಾಪಾರಸ್ಥರಿಗೆ ಬೇಕಾಗುವ ವರ್ಗ ಊಳಿಗದ ಪುಸ್ತಕಗಳೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಲಾ ರಿಪೋರ್ಟು ವ ಇತರ ಪುಸ್ತಕಗಳು ಉತ್ಕೃಷ್ಟವಾದ ಮಾರ್ಬಲ್ ಕೆಲಿಕೊ ಚರ್ಮ ಮೊದಲಾದವುಗಳಿಂದ ಬಹಳ ನಾಜೂಕಾಗಿ ಬೈಂಡು ಮಾಡಲ್ಪಡುತ್ತವೆ.

ಲಗ್ನ ಪತ್ರಿಕೆಗಳು, ಲೆಟರ ಪೇಪರುಗಳು, ಬಿಲ್‌ಫೋರ್ಮುಗಳು, ವಿಜಿಟಿಂಗ್ ಕಾರ್ಡುಗಳು, ಅರ್ಜಿಗಳು ವಗೈರೆ ಎಲ್ಲಾ ತರದ ಛಾಪೆಯ ಕೆಲಸಗಳನ್ನು ಬಹಳ ಅಗ್ಗವಾದ ದರದಲ್ಲಿ ಮಾಡಿಕೊಡುವರು. ದರಗಳಿಗೂ ಇತರ ಎಲ್ಲಾ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ನೂತನ ಸೃಷ್ಟಿ! ಸುಲಭ ಕ್ರಯ!

20ನೇ ಶತಮಾನದ ಆಶ್ಚರ್ಯಕರವಾದ ರೋಮಸಂಹಾರಿ ಸಬ್ಬು.

ಈ ಸಾಬೂನನ್ನು ಒಂದು ಸಲ ಉಪಯೋಗಿಸುವದರಿಂದ ದೇಹದ ಯಾವ ಭಾಗದಿಂದಲಾದರೂ ಸೆಗೆ, ಉರಿ ಮುಂತಾದ ಯಾವ ಬಾಧೆಗಳೂ ಇಲ್ಲದೆ ರೋಮವನ್ನು ತೆಗೆಯಬಹುದು. ಅನುಭವದಿಂದ ತಿಳಿಯತಕ್ಕದ್ದು ಮಾತಿನಿಂದ ತಿಳಿಯುವುದಿಲವು. ಒಂದು ಉಪಯೋಗಿಸಿದರೆ ಇದರ ನಿಜಾಂಶವು ತಿಳಿಯುವುದು. 3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ ರೂ. 1-4-0 ಅಂಚೆ ಹಾಸಲು ಮಾಫಿ. ಒಂದು ಸಾಬೂನು ಕ್ರಯ ಆಣೆ 0-10-0 ಅಂಚೆ ಹಾಸಲು ಮಾಫಿ.

ಸಿ. ಜೆ. ಆರ್. ಚಂದ್ರು
29 ಲಿಂಗಿಚೆಟ್ಟಿ ಬೀದಿ ಮದ್ರಾಸು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೊಲೆರಾ ಅಥವಾ ಉಬ್ಬಾಲುಬು ಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ 1ರ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವಾಹಿಕ, ತ್ರಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೋ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವುವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟೆ ರವಾನಿಸುವೆವು.

ವಿಳಾಸ:—
ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,

ಸಿದ್ಧೌಷಧ!] [ಪರೀಕ್ಷಿಸಿ ನೋಡಿ!

ಹಾರ್ಲೆಮ್ ಆಯ್‌ಲ್ (Haarlem Oil).

ಹಾರ್ಲೆಮ್ ಆಯ್‌ಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧವ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸೆಯಿಂದ ಎಂಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! ಬಾಲಾಮೃತ. ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂರುಕೆಮ್ಮು, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವವು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0. ಮೂರು ಬಾಟ್ಲಿಗಳಿಗೆ 2—0—0 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಆಶ್ಚರ್ಯಕರ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ ಧಾತುಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಚಳಿಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು ರೂ. 0—4—0
ಸರ್ಸಪರಿಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ „ 1—4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ. „ 0—4—0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ „ 0—8—0

ವಿಳಾಸ:—

ಗಣೇಶ ರಾಮಚಂದ್ರ ಕರ್ಕಿ ಕಂಪೆನಿ,
ಗಿರಗಾಂ ಮುಂಬಯಿ.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ.

ಸಾರ್ಸಾಪರಿಲಾ.



ಪೂರ್ವದ ಸ್ಥಿತಿ.

ಜಗಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು—ಉದಾಹರಣೆಯಾಗಿ, ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ, ಬಹಳ ದಿನಗಳ ಹಳೇಪ್ರಮೇಹ ಇಡೀಮೈ

ನಂತರದ ಸ್ಥಿತಿ.

ಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶರಿಕೆ ಹೊಡಿಯೋಣ ವಗೈರೆ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಳಾಸ:— ಪ್ರೊಪ್ರೈಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೊಸಿಟ್ ಟಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.
ವಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.
ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಐ. ಪಿ. ಇಂಡಿಯಾ ಬೇಂಕ್ ಮುಂಬಯಿ ಕೊಓಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬ್ದಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ,

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸೃಗ್ಧರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತಾ ತಯಾರಿಸಿರುವೆವು. ರಕ್ತವನ್ನು ವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವು ಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.

ಸರ್ವರೂ ತರಿಸಿಕೊಂಡು ಸಂತೋಷ ಪಡಿ.

ಬರುವ ಮೇ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗಿ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖಿ (3) ನಾಜೂಕವಾದ ಕರವಸ್ತ್ರ. (4) ಲಿವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಶೆ (5) ಷೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವ್ವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷಿ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಷಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಪ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಸಿದ್ಧೌಷಧ!] **ಹಾರ್ಲೆಮ್ ಆಯಿಲ್ (Haarlem Oil).** [ಪರೀಕ್ಷಿಸಿ ನೋಡಿ!

ಹಾರ್ಲೆಮ್ ಆಯ್‌ಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣುನೋವು, ನಾನಾ ವಿಧವ ಚರ್ಮರೋಗ ವ್ರಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸೆಯಿಂದ ಎಂಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ಮೇಲ್ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! **ಬಾಲಾಮೃತ.** ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂರಕಜ್ಜಿ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವವು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0. ಮೂರು ಬಾಟ್ಲಿಗಳಿಗೆ 2—0—0 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್‌ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕರ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ ಧಾತುಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಚಳಿಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು ರೂ. 0—4—0
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ " 1—4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ. " 0—4—0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ " 0—8—0

ವಿಳಾಸ:—

ಗಣೇಶ ರಾಮಚಂದ್ರ ಕರ್ಕಿ ಕಂಪೆನಿ,
ಗಿರಗಾಂ, ಮುಂಬಯಿ.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ.

ಸಾರ್ಸಾಪರಿಲಾ.



ಪೂರ್ವದ ಸ್ಥಿತಿ.

ನಂತರದ ಸ್ಥಿತಿ.

ಜಗಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗುವ ಪಕ್ಷವಾತಾದಿ ಭಯಂಕರ ರೋಗಗಳು—ಉದಾಹರಣೆಯಾಗಿ, ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮೆಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ, ಬಹಳ ದಿನಗಳ ಹಳೇ ಪ್ರಮೇಹ ಇದೀ ಮೈಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶರಿಕೆ ಹೊಡಿಯೋಣ ವಗೈರೆ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಲಾಸ:— ಪ್ರೊಪ್ರಾಯಿಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೋಸಿಟ್ ಟಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.
ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.
ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಐ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜವಾನುದಾರರು—ವಿಮೇದಾರರ ಡಿರೆಕ್ಟರರವರು. ಮೆ॥ ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬ್ದಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,
ಚೀಫ್ ಏಜಂಟ್ಸ್:—ಮಲಬಾರ ಮತ್ತು ದಕ್ಷಿಣ ಕನ್ನಡ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸ್ಥಿಗಳರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.
ಸರ್ವರೂ ತರಿಸಿಕೊಂಡು ಸಂತೋಷ ಪಡಿ.
ಬರುವ ಮೇ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖಿ (3) ನಾಜೂಕಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಶೆ (5) ಮೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ಹಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷೆ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗೆದಲ್ಲಿ ತಮಾಷಿಯಾದ ಹಾವು ಆರುತ್ತದೆ) 12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:— ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,
ನಂಬರು 7 ಕೋಬ್ ವೆಂಕಟಾಚಲಯ್ಯರ್ ಬೀದಿ, ಮದ್ರಾಸು.

ಫೌಂಟನ್‌ಪೆನ್,



14 ಕ್ಯಾರ್ರು ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ಇಂಗ್ಲೀಷ್ ಅಕ್ಷರದ ಪೆಟ್ಟಿಗೆ.

DEPUTY COMMISSIONER'S OFFICE, CHITALDROOG DISTRICT. ಚಿತ್ರದುರ್ಗ ಡಿ. ಕಮಿಷನರ್ ಸಾಹೇಬರವರ ಆಫೀಸು.

ಇದರಲ್ಲಿ "ಎ" A ಮೊದಲುಗೊಂಡು "ಜೆಡ್" Z ವರೆಗಿನ ಇಪ್ಪತ್ತಾರು ಅಕ್ಷರಗಳೂ 1ರಿಂದ 10ರ ವರೆಗಿನ ಅಂಕೆಗಳೂ ಆಯಾ ಅಕ್ಷರದ ಉಪಯೋಗದಂತೆ ಪ್ರತಿಯೊಂದು 5 10-12 ಈ ರೀತಿ ಇವೆ. ಇವು ಉತ್ತಮವಾದ ರಬ್ಬರಿನಲ್ಲಿ ಅರ್ಧ ಕಾಲು ಇಂಚು ದಪ್ಪವಾಗಿ ತಯಾರುಮಾಡಲ್ಪಟ್ಟಿವೆ. ಅಚ್ಚಿಟ್ಟರೆ ಬಲು ಸುಂದರವಾಗಿಯೂ ಸ್ಫುಟವಾಗಿಯೂ ಇರುವವು. ಈ ಅಕ್ಷರಗಳನ್ನು ಬೇಕುಬೇಕಾದಂತೆ ಹಿಡಿಯಲ್ಲಿ ಜೋಡಿಸಿ ಅಚ್ಚಿಡಬಹುದು. ಹೆಸರು ವಿಳಾಸಗಳನ್ನೂ ಕಾರ್ಡು ಕವರುಗಳನ್ನೂ ಇತರ ಸಣ್ಣ ವಿಷಯಗಳನ್ನೂ ಈ ಅಕ್ಷರಗಳಿಂದಲೇ ಪ್ರಿಂಟು ಮಾಡಬಹುದು. ಹಿಡಿಯು ಒಳ್ಳೆಯ ಗಟ್ಟಿ ಲೋಹದಲ್ಲಿ ತಯಾರುಮಾಡಲ್ಪಟ್ಟಿದೆ. ಇಂಕಿಯ ಅಟ್ಟೆಯು ಸ್ವತಃ ಶಾಯಿನ್ನು ಒದಗಿಸಿಕೊಳ್ಳತಕ್ಕದ್ದು. ಎರಡು ಮೂರು ವರುಷಗಳ ವರೆಗೂ ಅದರಲ್ಲಿ ಮಶಿಯು ಒಣಗುವುದೇ ಇಲ್ಲ. ರಬ್ಬರು ಅಕ್ಷರಗಳೂ ಹಿಡಿಯೂ, ಅಟ್ಟೆಯೂ ಉಳ್ಳ ಈ ಮುದ್ದಾದ ಪೆಟ್ಟಿಗೆಯು ಜೇಬಿನಲ್ಲಿದ್ದರೆ ಸಣ್ಣ ಮುದ್ರಣಾಲಯವೇ ಸಂಗಡ ಇದ್ದಂತೆ. ಅದಕಾರಣ ವರ್ತಕರೂ, ಪಟೇಲ ಶಾನುಭೋಗರೂ. ಜಮೀನ್‌ದಾರರೂ, ವಿದ್ಯಾರ್ಥಿಗಳೂ, ವಿಶೇಷ ಕರೆಸ್‌ಪಂಡೆನ್ಸ್ ಉಳ್ಳ ಜನರೂ ಈ ಪೆಟ್ಟಿಗೆಯನ್ನು ಅವಶ್ಯ ಸಂಗ್ರಹಿಸಬೇಕು. ಸರ್ವರಿಗೂ ಅನುಕೂಲಿಸುವಂತೆ ಬೆಲೆಯನ್ನು ಸುಲಭವಾಗಿ ಇಟ್ಟಿದೆ.

ಒಟ್ಟು 127 ಅಕ್ಷರಗಳುಳ್ಳದ್ದು. ಬೆಲೆ ರೂ. 3—0—0
247 „ „ 4—0—0

ಟಪ್ಪಾಲು ಹಾಸಲು ಬೇರೆ.
ವ್ಯಾಪಾರಸ್ಥರಿಗೆ ಕಮಿಶನ್ ಕೊಡುತ್ತೇವೆ.
ನಮ್ಮಲ್ಲಿ ರಬ್ಬರು ಮೊಹರುಗಳೂ, ಅರಗಿನ ಸೀಲುಗಳೂ ತಯಾರಾಗುತ್ತವೆ. ಫೌಂಟನ್‌ಪೇನು ಮೊದಲಾದ ಸಾಮಾನುಗಳು ದೊರೆಯುತ್ತವೆ.

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೩—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ. ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು ಟೀಕಾ ತಾತ್ಪರ್ಯ ಶಬ್ದಸಮಾಸ ಸಹಿತವಾದ ೧ನೇ ಪರ್ವ ರಘುವಂಶ ರೂ. ೧—೦—೦ ೨ನೇ ಪರ್ವ ರೂ. ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶಾಮಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ ಸಹಿತವಾಗಿ ಈಗತಾನೆ ಪೂರೈಸಿರುತ್ತೆ. ಉತ್ತಮವಾದ ಕ್ಯಾಲಿಕೊ ಬೈಂಡು ರೂ. ೨—೪—೦. ಋಗ್ವೇದ ನಿತ್ಯಕರ್ಮ ೦—೪—೦. ಎಲ್ಲಾ ಪುಸ್ತಕದಪಟ್ಟಿಯೂ ಬೇಕಾದಲ್ಲಿ ಸುಮ್ಮನೇ ಪಡೆಯಬಹುದು.

ಬಿ. ಆದಿನಾರಾಯಣ ಶಾಸ್ತ್ರಿ.
ವಿದ್ಯಾನಂದ ಆಫೀಸ್, ಬೆಂಗಳೂರು ಸಿಟಿ.

ಇಂದ್ರ ವಜ್ರ.

(1) ಇಂದ್ರ ವಜ್ರ (2) ವಿಕ್ರಮಪೀಠ (3) ಸಸೇಮಿರಾ ಎಂಬ ಬಾಲಕರ ಕಥೆಗಳು. "ಮೊಡರ್ನ್ ರೆವ್ಯು" ಮುಂತಾದ ಮಾಸ ಪುಸ್ತಕಗಳಲ್ಲಿಯೂ, ಸಿಸ್ಟರ್ ನಿವೇದಿತಾಯವರ "ಹಿಂದೂ ಮಕ್ಕಳ ಕಥೆ"ಗಳಲ್ಲಿಯೂ ಇಂಗ್ಲೀಷಿನಲ್ಲಿರುವ ಕಥೆಗಳನ್ನು ತಿದ್ದಿ, ಪರಿಷ್ಕರಿಸಿ, ಸಂಸ್ಕೃತ ಮೂಲಾನುಸಾರವಾಗಿ ಬೆಳೆಸಿ ಈ ಪುಸ್ತಕವು ರಚಿಸಲ್ಪಟ್ಟಿವೆ. ವಿಕ್ರಮಾದಿತ್ಯನ ಸಿಂಹಾಸನದ ಮೇಲಿನ ಗೊಂಬೆಗಳ ಮುವ್ವತ್ತೆರಡು ಕಥೆಗಳೂ, ಭೋಜರಾಜನ ಕಥೆಗಳೂ ಅಡಕವಾಗಿವೆ. ನೀತಿಬೋಧಕವಾಗಿಯೂ ಮನೋರಂಜಕವಾಗಿಯೂ, ಸಚಿತ್ರವಾಗಿಯೂ ಇದೆ. ಪುಟಗಳು 70 ಬೆಲೆ 4½ ಅಣೆ.

ಬಿ. ವೆಂಕಟಕೃಷ್ಣಪ್ಪ ಬಿ. ಎ., ಇವರಿಂದ ರಚಿತವಾದ ಹೊಸಕನ್ನಡದ
ನವೀನ ಪ್ರಬಂಧ (ನಾವಲ್)ಗಳು.

ಶ್ಯಾಮ ಕುಬ್ಜ.

(Sir Walter Scott's "Black Dwarf")

ಈ ಕಥೆಯನ್ನೋದುವುದರಿಂದ ಭೂತಪಿಶಾಚಿಗಳ ನಿಜಸ್ಥಿತಿಯು ತಿಳಿಯ ಬಂದು ಮೂಢಭಯವು ತೊಲಗುವುದಲ್ಲದೆ ಅನೇಕ ಲೋಕರಹಸ್ಯಗಳೂ ನೀತಿತತ್ವಗಳೂ ತಿಳಿಯಬರುವುವು. ಇದು ಈ ಪ್ರಪಂಚದ ವಿಷಯದಲ್ಲಿ ಜೀಹಾಸೆಗೊಂಡು ವನವಾಸಿಯಾದ ಒಬ್ಬ ಕುರೂಪಿಯಾದ ಶ್ರೀಮಂತನ ಕಥೆ. ಇದನ್ನೋದುತೋದುತ ಕಣ್ಣೀರನ್ನು ತಡೆಯುವುದು ಕಷ್ಟವಾಗುವುದು. ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಕ್ಲಿಷ್ಟಪದಗಳ ನಿಘಂಟನ್ನು ಸೇರಿಸಿದೆ.

ಅಂದವಾದ ಮುದ್ರಣ, ಉತ್ತಮವಾದ ಕಾಗದ, ಭದ್ರವಾದ ಬೈಂಡ್, ಕ್ರಯ ೮ ಆಣೆ.

ಚಮತ್ಕಾರ ಚಿಂತಾಮಣಿ.

ಇದೊಂದು ಚಮತ್ಕಾರವಾದ ಕಥೆ. ಇದರ ಸಂವಿಧಾನವು ಮನೋಹರವಾಗಿರುವುದಲ್ಲದೆ ನೀತಿಬೋಧಕವಾಗಿದೆ. ಶೈಲಿಯು ಅತಿ ಕ್ಲಿಷ್ಟವೂ, ಅತಿ ಪೇಲವವೂ ಆಗಿರದೆ ಮಧುರವೂ ಗಂಭೀರವೂ ಆಗಿದೆ. ಇದರಲ್ಲಿ ಅನೇಕ ವಿಧವಾದ ಲೌಕಿಕ ನ್ಯಾಯಗಳೂ, ಉಪಮಾನ ಉಪಮೇಯ ವಿಶೇಷಗಳೂ ತುಂಬಿವೆ. ಕಥೆಯ ಸ್ವಾರಸ್ಯಕ್ಕೋಸ್ಕರ ಮಾತ್ರವೇ ಅಲ್ಲದೆ ಭಾಷಾ ಪಾಂಡಿತ್ಯಕ್ಕಾಗಿಯೂ ಈ ಪುಸ್ತಕವು ಓದಲ್ಪಡತಕ್ಕುದಾಗಿದೆ. ಈ ಗ್ರಂಥದ ಪ್ರತಿಯೊಂದು ಪುಟದಲ್ಲಿಯೂ ಅಪೂರ್ವವಾದ ವರ್ಣನಾವೈಖರಿಯೂ, ಶಬ್ದವೈಚಿತ್ರ್ಯವೂ ಕಾಣಬರುತ್ತಿವೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ಗ್ರಂಥವನ್ನು ಪಠಿಸುವುದರಿಂದ ನೀತಿವಂತನೂ, ಜ್ಞಾನವಂತನೂ, ಸರಸಿಯೂ, ವಾಕ್ಚಾತುರನೂ ಆಗುವನು. ಪುಟಗಳು 178 ಡೆಮ್ಮಿ ಕಾಗದವೂ ಮುದ್ರಣವೂ ಉತ್ತಮ ತರದವು. ಬೈಂಡು ಭದ್ರವಾಗಿದೆ. ಬೆಲೆ 10 ಆಣೆ ಮಾತ್ರ.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—
ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಲಾಸ (ಪತ್ರ) ☞ ವೇದವಾಹಿನೀ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

Printed & published by V. S. Kamath, at the Mangalore Trading Association's Sharada Press, Mangalore.

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಸೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಸಲ್ಪಡುವುದು.

ಸ್ವದೇಶಾಭಿಮಾನಿ

ಪುಸ್ತಕ 6. ಸಂಚಿಕೆ 17.
ಮಂಗಳೂರು ತಾ. 26ನೇ ಶುಕ್ರವಾರ ಏಪ್ರಿಲ್ 1912.

Amrutanjan Depot, Bombay.

(Regd.) **ಅಮೃತಾಂಜನ.** (ರಿಜಿಸ್ಟರ್ಡ್.)

ಅಮೃತಾಂಜನ — ಸರ್ವ ನೋವಿಗೆ — ಸಂಜೀವನ. — ಬಾಟ್ಲ ಒಂದರ ರೂ. 0—8—0.

ಅಮೃತಾಂಜನ — ಸರ್ವ ನೋವಿಗೆ, — ಸಿದ್ಧಾಮೃತ. — ಬಾಟ್ಲ ಒಂದರ ರೂ. 0—8—0.

ಅಮೃತಾಂಜನ.

ಎಲ್ಲಾ ಔಷಧಾಲಯಗಳಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವದು.

ವಿಜ್ಞಾಪನೆ:— ನಮ್ಮ ಟ್ರೇಡ್‌ಮಾರ್ಕ್ ಉಳ್ಳ ಹೊರಗಿನ ಟಿನ್ನಿನ ಕರಡಿಗೆಗಳು ವಿಲಾಯತಿಯಿಂದ ಬಾರದೆ ಇರುವದರಿಂದ ಮುಂಚಿನ ಹಾಗೆ ಕಾಗದದಲ್ಲಿ ಪೇಕ್ ಮಾಡಿದ್ದೇವೆ.

ಗಜಕರ್ಣದ ಮುಲಾಮು.
ಎಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ತಾಗಿಸುವದರೊಳಗೆ ನಾಶವಾಗಿ ಹೋಗುವದು.

ದಂತಮಂಜನ.
ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ನೋವು, ಹಲ್ಲುಗಳ ವಾಸನೆ ಇತ್ಯಾದಿಗಳಿಗೆ ರಾಮಬಾಣದಂತಿದೆ.

ಗಜಕರ್ಣದ ಮುಲಾಮು.
ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತು 0—6—0.

ದಂತಮಂಜನ.
ಇದರ ಉಪಯೋಗದಿಂದ ಹಲ್ಲುಗಳು ಘಟ್ಟಿಯಾಗುವವು. ಮತ್ತು ಬೆಳ್ಳಗಾಗುವವು ಡಬ್ಬಿ ಒಂದರ ಕಿಮ್ಮತು 0—2—0.

ರಾಜಾರಾಣಿ ನಕ್ಷೆಗಳುಳ್ಳ ಈ ವರ್ಷದ ಸುಂದರವಾದ ಕೆಲೆಂಡರ್ (ತಾರೀಕು ತೋರಿಸುವ ಪಟ್ಟಿ) ಕ್ರಯ 1ರ ವಿ.ಪಿ. ಸಮೇತ 0—4—0.

ಕೇಶವರ್ಧಿನಿ ತೈಲ! ಕೇಶವರ್ಧಿನಿ ತೈಲ!! ಕೇಶವರ್ಧಿನಿ ತೈಲ!!!

ಎಲ್ಲಾ ತೈಲಗಳಿಗಿಂತಲೂ, ಸುವಾಸಿಕವಾಗಿಯೂ, ಮನೋಹರವಾದ ಪರಿಮಳ ಉಳ್ಳದ್ದಾಗಿಯೂ, ಸ್ಪಿರಿಟು ವಗೈರೆ ಇಲ್ಲದೆಯೂ, ತಯಾರಿಸಲ್ಪಟ್ಟದ್ದಾಗಿರುತ್ತದೆ. ಇದರಿಂದ ಕೂದಲುಗಳು ಕಪ್ಪಾಗುವವು, ಉದ್ದವಾಗಿಯೂ ನಯವಾಗಿಯೂ ಬೆಳೆಯುವವು. ಬಾಟ್ಲ 1ರ 1-0-0 3ಬಾಟ್ಲಗಳಿಗೆ 2-10-0

ನಮ್ಮ ಔಷಧಗಳು ಮಂಗಳೂರಲ್ಲಿ ಈ ಕೆಳಗಿನ ಕಂಪೆನಿಗಳಲ್ಲಿ ದೊರಕುವದು.
ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್, ಪರ್ಲ ಎಂಡ್ ಸನ್ಸ್, ಇಬ್ರಾಹಿಮ್ ಎಲಿಯಾಸ್, ಅರ್ನೋನ್ ಎಂಡ್ ಐಮನ್.
ಕೆಟಲಾಗು ಅಪೇಕ್ಷಿಸುವವರು ದಯಮಾಡಿ ಬರಿಯಿರಿ.

ಅಮೃತಾಂಜನ ಡಿಪೊ, ಮುಂಬಯಿ.

ಸಿದ್ಧೌಷಧ!]

ಹಾರ್ಲೆಮ್ ಆಯ್ಲ್ (Haarlem Oil). [ಪರೀಕ್ಷಿಸಿ ನೋಡಿ!

ಹಾರ್ಲೆಮ್ ಆಯ್ಲ್ ಎಂದೆನ್ನಿಸಿಕೊಳ್ಳುವ ಈ ಔಷಧವು ನರಸಂಸಾರವನ್ನು ಕಾಡುತ್ತಿರುವ ಎಲ್ಲಾ ಸಾಮಾನ್ಯ ಕಾಯಿಲೆ ಕಸಾರಿಕೆಗಳಿಗೆ ಕೈಕಂಡ ಔಷಧವಾಗಿದೆ. ಇದನ್ನು ಯೂರೋಪ ಅಮೇರಿಕ ಖಂಡಗಳಲ್ಲಿ 200 ವರುಷಗಳಿಂದ ಉಪಯೋಗಿಸುತ್ತಿರುವರು. ಇದರ ಅತಿಶಯ ಸಾಫಲ್ಯವನ್ನು ಕಂಡು ಮಹಾನುಭವರು ಇದಕ್ಕೆ "ದೇವಾನುಮೋದಿತ ಔಷಧ" (Medicamentum Gracia Probatum) ಎಂತಲೂ ನಾಮಕರಣ ಮಾಡಿದ್ದಾರೆ. ಮೂತ್ರಗುಡ್ಡು (Kidney), ಮೂತ್ರಕೋಶ, ಅನ್ನಕೋಶ, ಕಲಿಜೆ (ಯಕೃತ್ತು) ಮೊದಲಾದ ಇಂದ್ರಿಯಗಳಲ್ಲಿಯೂ ನರನಾಡಿಗಳಲ್ಲಿಯೂ ಇರುವ ರೋಗಗಳಿಗೆ ಇದರ ಸಮಾನೌಷಧ ಇನ್ನೊಂದಿಲ್ಲ. ಅಶ್ಮರೀಕಲ್ಲನ್ನಾದರೂ ನೀರು ಮಾಡಿ ಮೂತ್ರಕೋಶದಿಂದ ಹೊರಕ್ಕೆ ಅಟ್ಟಿಬಿಡುವದು. ನೇವಸ, ಕೆಮ್ಮು, ಅಗ್ನಿಮಾಂದ್ಯ, ಹೊಟ್ಟೆನೋವು, ಹೊಟ್ಟೆಯೊಳಗಿನ ಕ್ರಿಮಿಬಾಧೆ, ತಲೆನೋವು, ಕಿವಿನೋವು, ಕಣ್ಣು ನೋವು, ನಾನಾ ವಿಧದ ಚರ್ಮರೋಗ ವೃಣಾದಿಗಳು, ಸೂತಕದ ಅಕ್ರಮಗಳು ಈ ಮದ್ದಿನಿಂದ ಬೇಗನೆ ಉಪಶಮನವಾಗುವವು. ಸಾಫಲ್ಯವು ಆಯಾ ದೇಹಪ್ರಕೃತಿಗನುಸಾರವಾಗಿದೆ. ಮೂರೇ ದಿನದ ಚಿಕಿತ್ಸೆಯಿಂದ ಎಂಥಾ ಜ್ವರವಾದರೂ ಮಣಿಯುವದು.

ಚಿಕಿತ್ಸಾ ಕ್ರಮ.

ವ್ಯಾಧಿಯ ಸ್ವಭಾವದ ಮೇಲೆ ಸರ್ತಿಗೆ ೧೫—೩೦ ತೊಟ್ಟು ಔಷಧವನ್ನು ಹಾಲಿನಲ್ಲಿ, ಜೇನುತುಪ್ಪದಲ್ಲಿ, ದ್ರಾಕ್ಷಾರಸದಲ್ಲಿ ಅಥವಾ ಹುಳಿಯ ರುಚಿಯಿಲ್ಲದ ಯಾವದಾದರೊಂದು ಪದಾರ್ಥದಲ್ಲಿ ಬೆರಸಿ ಸೇವಿಸಬಹುದು. ಮಕ್ಕಳಿಗೆ ಅವರವರ ಪ್ರಾಯದಷ್ಟೇ ತೊಟ್ಟು ಔಷಧ ಸಾಕು, ಅಂದರೆ ೬ ವರ್ಷದ ಮಗುವಿಗೆ ೬ ತೊಟ್ಟು, ೧೦ ವರ್ಷದ ಮಗುವಿಗೆ ೧೦ ತೊಟ್ಟು. ಊಟಕ್ಕೆ ಮೊದಲು ಅಥವಾ ಊಟವಾದ ಮೇಲೆ ದಿನಕ್ಕೆ ಎರಡು ಸಾರಿ ಸೇವಿಸಿದರೆ ಸಾಕು. ಒಂದೊಂದು ಸೀಸೆಯ ಜತೆಯಲ್ಲಿ ಇಂಗ್ಲಿಷ ಭಾಷೆಯಲ್ಲಿ ಮುದ್ರಿಸಿದ ದೊಡ್ಡ ಪತ್ರವಿದೆ. ಆಯಾ ರೋಗಕ್ಕೆ ತಕ್ಕ ಚಿಕಿತ್ಸಾಕ್ರಮವು ಅದರಲ್ಲಿ ವಿವರವಾಗಿ ಹೇಳಿಯದೆ. ಮದ್ದಿನ ಸೀಸೆಯನ್ನು ಬಿಗಿಯಾಗಿ ಮುಚ್ಚಿಟ್ಟರೆ ಎಷ್ಟು ವರ್ಷಕ್ಕೂ ಕೆಡುವದಿಲ್ಲ.

ಸೀಸೆ 1ಕ್ಕೆ ಕ್ರಯ 4 ಆಣೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು:—

ಮರ್ಕೆಂಟೈಲ್ ಮಿಶ್ಯನ್ ಬ್ರಾಂಚ್, ಮಂಗಳೂರು.

ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪೆನಿ, ಮುಂಬಯಿ.

ಅಗ್ಗ! ಅಗ್ಗ!! ಬಾಲಾಮೃತ. ಅಗ್ಗ! ಅಗ್ಗ!!

ಇದು ಅಮೂಲ್ಯವಾದ ಔಷಧಗಳಿಂದ ತಯಾರಿಸಲ್ಪಟ್ಟು ಬಹು ರುಚಿಕರವಾಗಿರುತ್ತದೆ. ನಮ್ಮ ಬಾಲಾಮೃತದಿಂದ ಹುಡುಗರ ಅನೇಕ ವಿಕಾರಗಳು ಕೆಮ್ಮು, ದಮ್ಮು, ಉಬ್ಬಸ, ಗೂಕುಕಜ್ಜಿ, ಅಜೀರ್ಣತೆ, ಮಲಬದ್ಧತೆ, ಅನೇಕ ಕಾರಣಗಳಿಂದ ಉಂಟಾಗುವ ಅಶಕ್ತತೆ ಮೊದಲಾದವುಗಳು ಇದರಿಂದ ಖಾತ್ರಿಯಾಗಿ ನಿಲ್ಲುವವು. ಹುಡುಗರು ಪುಷ್ಟರಾಗುತ್ತಾರೆ. ನಿರೋಗಿಗಳಾಗುತ್ತಾರೆ. ಲಕ್ಷಗಟ್ಟಲೆ ಬಾಟ್ಲಿಗಳು ಮಾರಲ್ಪಟ್ಟವು. ಬಾಟ್ಲಿ ಒಂದರ 0—12—0. ಮೂರು ಬಾಟ್ಲಿಗಳಿಗೆ 2—0—0 12 ಬಾಟ್ಲಿಗಳಿಗೆ 7—0—0.

ಜ್ವರದ ಗುಳಿಗೆ.

ಜಗತ್ಪ್ರಸಿದ್ಧ ತತ್ಕ್ಷಣವೇ ಗುಣ. ಅನೇಕ ಪ್ರಕಾರದ ಜ್ವರಗಳ ಮೇಲೆ ಸಂಜೀವಿನಿಯಂತೆ ಇದೆ. ಬಹಳೇ ಶ್ಲಾಘ್ಯವಾದವು. ಅತ್ಯಾಶ್ಚರ್ಯಕರ. ಅನೇಕ ಜನರು ನಿರಾಶೆಯಾದವರು ನಮ್ಮ ಜ್ವರದ ಗುಳಿಗೆಗಳಿಂದ ಪೂರ್ಣ ಗುಣಹೊಂದಿರುತ್ತಾರೆ. ಬಹಳೇ ಖಾತ್ರಿ. ಬಾಟ್ಲಿ ಒಂದರ 1—0—0 4 ಬಾಟ್ಲಿಗಳಿಗೆ 3—0—0 12 ಬಾಟ್ಲಿಗಳಿಗೆ 8—0—0.

ಶಕ್ತಿವರ್ಧಕ ಗುಳಿಗೆಗಳು.

ಬಾಟ್ಲಿಗೆ ೧ ರೂ. ೪ ಬಾಟ್ಲಿಗೆ ರೂ. ೩, ೧೨ ಬಾಟ್ಲಿಗೆ ೮ ರೂ.

ಸ್ವಪ್ನದಲ್ಲಿ, ಮೂತ್ರದಲ್ಲಿ, ಮಲದಲ್ಲಿ ಧಾತುಹೋಗುವದು, ಧಾತು ಕಡಿಮೆಯಾಗುವದು ಬೇರೆ ಬೇರೆ ಕಾರಣಗಳಿಂದ ಬಂದ ಅಶಕ್ತತೆ, ಚಳಿಜ್ವರ, ಜನನೇಂದ್ರಿಯದ ಅಶಕ್ತತೆ, ನಿತ್ಯ ತಲೆನೋವು ಮಲಶೋಧನೆ ಸರಿಯಾಗಿ ಆಗದಿರುವದು ಕಡಿಮೆಯಾದ ಪಚನಶಕ್ತಿ, ಹೊಟ್ಟೆಯಲ್ಲಿ ವಾಯು, ಹೊಟ್ಟೆನೋವು, ರಕ್ತ ಕಡಿಮೆಯಾಗಿರುವದು ಇವೆಲ್ಲ ಖಾತ್ರಿಯಿಂದ ಗುಣ. ವೀರ್ಯವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕ, ಗುಣಕಾರಿ.

ಗಜಕರ್ಣದ ಮುಲಾಮು: ಮೂರು ಸಾರಿ ಹಾಗಿಸುವದರೊಳಗೆ ಗುಣವಾಗುವದು	ರೂ. 0—4—0
ಸರ್ಸಪರೀಲಾ:—ರಕ್ತಶುದ್ಧಿ ರಕ್ತವೃದ್ಧಿ ಧಾತುಪುಷ್ಟಿ	„ 1—4—0
ದಂತ ಚೂರ್ಣ:—ಹಲ್ಲುಗಳು ಘಟ್ಟಿಯಾಗುತ್ತವೆ.	„ 0—4—0
ರೊಯಲ್ ಇಂಡಿಯನ್ ಬಾಂ:—ತಲೆನೋವಿಗೆ ವಾತಕ್ಕೆ ಸಂಧಿವಾತಕ್ಕೆ	„ 0—8—0

ವಿಳಾಸ:—

ಗಣೇಶ ರಾಮಚಂದ್ರ ಕರ್ಕಿ ಕಂಪೆನಿ,
ಗಿರಗಾಂವ್ ಮುಂಬಯಿ.

ಮುಂಬಯಿ, ಕಾಶಿ, ಸುರತ, ಪಂಡರಪುರ, ಉಮರಾವತಿ ಮುಂತಾದ ಪ್ರದರ್ಶನಗಳಲ್ಲಿ ಪದಕಗಳು ಬಕ್ಷಿಸು ಸಿಕ್ಕಿರುತ್ತವೆ.

ಸಾರ್ಸಾಪರಿಲಾ.

ಪೂರ್ವದ ಸ್ಥಿತಿ.

ಜಗಪ್ರಸಿದ್ಧವಾದ ಈ ಸಾರ್ಸಾಪರಿಲವು ಅನೇಕ ರೋಗಗಳ ಮೇಲೆ ಹೆಸರುಗೊಂಡಿದ್ದು ಕೆಳಗೆ ತೋರಿಸಿದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ. ಉಪದಂಶಜನ್ಯ ವಿಕಾರ (ಗರ್ಮಿ) ಮತ್ತು ಅದರ ಮೂಲಕ ಉಂಟಾಗು ಪಕ್ಷವಾತಾದಿ ಭಯಂಕರ ರೋಗಗಳು—ಉದಾಹರಣೆಯಾಗಿ ಅರ್ಧಾಂಗವಾಯು, ಕೈಕಾಲು ಸೊಟ್ಟಾಗುವದು, ಬಾಯಿ ಒಮ್ಮಿಂದೊಮ್ಮೆ ಡೊಂಕಾಗೋಣ, ಸ್ಮರಣಶಕ್ತಿ ಕಡಿಮೆ ಕಡಿಮೆಯಾಗೋಣ, ಮಾತನಾಡಲು ಆಗದೇ ಇರೋಣ, ವಗೈರೆ; ಹಾಗೆಯೇ ಸಂಧಿವಾತ, ಗಂಡಮಾಲೆ, ಬಹಳ ದಿನಗಳ ಹಳೇ ಪ್ರಮೇಹ ಇದೀನ್ನೈ ಮೇಲೆ ಹುರುಕು ಏಳೋಣ, ಮೈಲಿಯಂತೆ ಬೊಕ್ಕೆ ಏಳೋಣ, ಅಂಗೈ ಅಂಗಾಲುಗಳ ಮೇಲೂ ಇಡೀ ಮೈಮೇಲೂ ಕಪ್ಪು ಕ್ಷತಗಳು ಬೀಳೋಣ, ನೆತ್ತಿಗೆ ಕ್ಷತ ಬೀಳೋಣ, ಬಾಯಿಯಲ್ಲಿ ಮತ್ತು ಗಂಟಲಲ್ಲಿ ಬೊಕ್ಕೆ ಬೀಳೋಣ, ಮೂಗು ತಗ್ಗುವದು, ಕೈಕಾಲುಗಳ ಸ್ಪರ್ಶಜ್ಞಾನ ಕಡಿಮೆಯಾಗುತ್ತ ಹೋಗೋಣ, ಬೀಗು ಬರೋಣ, ಶೆರಿಕೆ ಹೊಡಿಯೋಣ ವಗೈರೆ.

ನಂತರದ ಸ್ಥಿತಿ.

ಬಾಟ್ಲಿ ಒಂದರ ಕಿಮ್ಮತು 1—4—0. 4 ಬಾಟ್ಲಿಗಳಿಗೆ ವಿ. ಪಿ. ಖರ್ಚು ಕೂಡಾ 4—12—0.

ವಿಲಾಸ:— ಪ್ರೊಪ್ರೈಟರ್,
ಗೌತಮರಾವ್ ಕೇಶವ
ಮೆಡಿಕಲ್ ಪ್ರೆಕ್ಟಿಶನರ್
ಒಪೊಶಿಟ್ ಟಾಕೂರ್ ದ್ವಾರ್ ಪೋಸ್ಟು ಆಫೀಸು, ಮುಂಬಾಯಿ.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.
ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.
ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿ ಲೈಫ್ ಎಶ್ಯುರೆನ್ಸ್ ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್, ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟವೆ. ಕಂಪೆನಿಯ ಆಡಳಿತೆಯಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬ್ದಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂ ಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಡಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರೀಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಚ್ಚಿಕಾರ ಬ್ರದರ್ಸ್ ಉಡುಪಿ,

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಷಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಅಸೃಗ್ವರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.

ಸರ್ವರೂ ತರಿಸಿಕೊಂಡು ಸಂತೋಷ ಪಡಿ.

ಬರುವ ಮೇ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಠವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಚ್ ಸರಪಣಿ. (2) ಉತ್ತರ ಮುಖ (3) ನಾಜೂಕಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಮೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಭಂಗಾರದ ವಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷೆ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗದಲ್ಲಿ ತಮಾಷಿಯಾದ ಹಾವು ಇರುತ್ತದೆ) (12) ಷರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.

ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ವಿಶೇಷ ಸೂಚನೆಗಳು.

ಅಗವಾದ ಮಾಲುಗಳು!!

KASHI VISHWESHWAR

೧. ತಾವು ನಿತ್ಯವೂ ಉಡುವ ಮಡಿಯಾವದು? ಕಾಶಿಪಟ್ಟೆ ಅಲ್ಲವೊ ಹಾಗಾದರೆಇಲ್ಲಿ ನೋಡಿ. ೨. ಲೋಕದಲ್ಲಿ ಎಲ್ಲರೂ ಮಡಿಗೆ ಪ್ರಖ್ಯಾತಿ ಮಾಡುವ ಸ್ಥಳವ್ಯಾವುದು? ಶ್ರೀ ಕಾಶೀಕ್ಷೇತ್ರವಲ್ಲವೆ? ೩. ಜರೀ ಕೆಲಸಗಳನ್ನು ಮತ್ತು ರೇಶ್ಮೆ ಕೆಲಸಗಳನ್ನು ಉತ್ತಮ ತರಹ ಮಾಡುವ ಸ್ಥಳವ್ಯಾವುದು? ಶ್ರೀ ಕ್ಷೇತ್ರ ಕಾಶಿಯಲ್ಲವೆ? ಹಾಗಾದರೆ ಈ ಕೆಳಗೆ ಬರೆದಿರುವ ವಿಷಯವನ್ನು ಗಮನಿಸಿರಿ. ಇದೇ ಕಾಶೀ ಕ್ಷೇತ್ರದಲ್ಲಿ ತಯಾರಾಗುವ ಪಟ್ಟೆ ಮಡಿ ಜರಿ ಸಾದಾ ಸೀರೆಗಳೂ, ಜರೀ ಕಣಗಳೂ ಕಾಶ್ಮೀರದ ಶಾಲುಗಳೂ, ರುದ್ರಾಕ್ಷಿ ಇದು ೧೪ ಮುಖದಿಂದ ೩ ಮುಖದ ವರೆಗೆ ಉತ್ತಮವಾಗಿರುವವು. ಮತ್ತು ಪೂಜೇ ಸಾಮಾನುಗಳು ಜಗನ್ನಾಥ ಜಾಂಗಟೆಗಳೂ, ಸ್ಫಟಿಕ ಲಿಂಗಗಳೂ, ಬಾಣಲಿಂಗಗಳೂ ಅನೇಕ ತರಹ ಅತ್ತರುಗಳೂ ಪಠಗಳೂ ವಗೈರೆ ಸಾಮಾನುಗಳೂ ಬನಾರಿಸಿನಲ್ಲಿ ಎಲ್ಲಾ ವ್ಯಾಪಾರಿಗಳಿಗಿಂತಲೂ ಸಹಜ ರೀತಿ ಯೋಗ್ಯವಾದ ಕ್ರಯಕ್ಕೆ ಖಾತ್ರಿ ಮಾಲುಗಳನ್ನು ಕಳುಹಿಸುವೆವು. ಈ ಸಾಮಾನುಗಳ ತಪಶೀಲು ತಿಳಿಯಬೇಕಾದಲ್ಲಿ ಫಕ್ತ ಪೋಸ್ಟೇಜಿಗೆ ಅರ್ಧ ಆಣೆ ಸ್ಟಾಂಪುಗಳು ಕಳುಹಿಸಿದರೆ 4ಸಾದಾ ಕಾರ್ಡುಗಳು, ೨ವಿಶ್ವೇಶ್ವರ ಪಠಗಳೂ, ೩ ನಮ್ಮ ವಿಳಾಸದ ಸಾದಾ ಕಾರ್ಡುಗಳೂ, ೧ ನಮ್ಮ ಕ್ಯಾಟ್ಲಾಗ್ ಇನಾಮಾಗಿ ತಾವು ಬರೆದು ಕಳುಹಿಸುವ ವಿಳಾಸಕ್ಕೆ ಕಳುಹಿಸುವೆವು.

ವಿಳಾಸ:—ಯಸ್. ಯು. ನಾರಾಯಣಚಾರ್ಯ ಅಂಡ ಕೊ,

ಪಿತಾಂಬರ ವ್ಯಾಪಾರಿ, ಬನಾರಿಸ ಸಿಟಿ, ಶ್ರೀ ಕ್ಷೇತ್ರ ಕಾಶಿ.

Address:—S. U. Narayanacharya & Co.

Leading Silk Manufacturers, Benares City.

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ ಗುಳಿಗೆಗಳು.	30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಜಾಡ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಯಾವೌಧವು ಸೇವಿಸುತ್ತಾ—ಈ ಗುಳಿಗೆಗಳನ್ನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—„ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ, 22 ಬ್ರಾಡ್ವೇ ಮತ್ತು 96 ಮೌಂಟ್ ರೋಡ್ ಮದರಾಸು. } ವೈದ್ಯ ಶಾಸ್ತ್ರಿ, ಮಣಿಶಂಕರ ಗೋವಿಂದಜಿ.

ಮತ್ತು ಜಾಮ್ ನಗರ ಕಾಠ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಣ, ಮತ್ತು ಮದ್ರಾಸು

ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮ ದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯ ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವವಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ವಡಕಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯು ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ „ „	6—0—0	B ಅರಗಜ „ „	1—0—0
ಕಸ್ತೂರಿ ಬತ್ತಿ „ „	3—0—0	ಕಸ್ತೂರಿ ಬಿಲ್ಲೆ „ „	2—0—0
ಜವಾಜಿ ಬತ್ತಿ „ „	2—0—0	ಜವಾಜಿ ಬಿಲ್ಲೆ „ „	1—0—0
ಪುನಗಿನ ಬತ್ತಿ „ „	1—8—0	ಕೇಸರಿ ಬಿಲ್ಲೆ „ „	0—8—0
A ಪನ್ನೀರ್ ಬತ್ತಿ „ „	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ „ „	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:—
ಮ. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ವಿಟ್ಲನಡ್ಕ,
ಉಪ್ಪಿನಂಗಡಿ ತಾಲೂಕು.

ವಿಳಾಸ:—
ಎನ್. ಎಂ. ಸುಬ್ರಾವ್,
„ಸುಗಂಧವಿಲಾಸ"
ಮಂಗಳೂರು.

CHEAP JACK
FANCY UMBRELLA MART.

ಚಿತ್ರವಿಚಿತ್ರಮಾದ ಕೊಡೆಗಳು.

ಕಂ॥ ಧರೆಯೊಳ್ ಮೆರೆ ಮಹಾಶಯ । ರಿರಃ ನಾವಿನಿಸುಂದಿನಂ ಕೊಡೆಯ ವಿಕ್ರಯಮಂ ॥ ಇರಿಸಿರ್ದೊಡುಂ ವಿಮುಖರಾ । ಗಿರುವುದೇನಚ್ಚರಿಯೊ । ತಿಳಿಯದರಿರಮಂ ॥೧॥ ಕೊಡುವೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ ದುರ್ಜನರುಮಂ ಪಳಿವೋಲ್ ॥ ಕೊಡೆಕೊಡೆ ಯೆಂಬಾವಮಾತಿಂ । ಗೆಡೆಯಾಗಿಯೆ ನೆರಲನೀವ ಕೊಡೆಯಿಲ್ಲಿ ಕರ್ಗಂ ॥ ೨ ॥

ವಿಳಾಸ:— ಕವಿ ಎಂಡ್ ಸನ್ಸ್.
ಮಂಗಳೂರು, ದ. ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 26ನೇ ಎಪ್ರಿಲ್ 1912.

ಭಾರತೀಯ ಜನಾಂಗದ ಬೆಳವಣಿಗೆಯು.

ಬಂಗಾಳದಲ್ಲಿ ಪ್ರಕಟವಾಗುತ್ತಿರುವ ಕಳದ ಫೆಬ್ರುವರಿ ತಿಂಗಳ 'ಮೊಡರ್ನ್ ರಿವ್ಯೂ' ಎಂಬ ಅಂಗ್ಲ ಭಾಷೆಯ ಮಾಸಿಕ ಪತ್ರದಲ್ಲಿ ಭಾಯಿ ಪರಮಾನಂದರೆಂಬವರು ಭಾರತೇಯ ಜನಾಂಗದ ಬೆಳವಣಿಗೆಯನ್ನು ಸೂಚಿಸಿ ಒಂದು ಲೇಖವನ್ನು ಬರೆದಿರುವರು. ಇದರ ಪರಿಶೀಲನೆಯಿಂದ ಸಮುದ್ರ ಪ್ರಯಾಣ ಮೂಲಕ ವಿದೇಶ ಯಾತ್ರೆಯನ್ನು ಮಾಡುವುದು ಜನಾಂಗದ ಬೆಳವಣಿಗೆಗೆ ದೋಷಕರವೋ ಎಂಬುದನ್ನು ನಿರ್ಧರಿಸಲು ವಾಚಕರು ಶಕ್ತರಾಗುವರಲ್ಲದೆ ನಮ್ಮ ಬಂಧುವರ್ಗದವರು ಭೂಲೋಕದ ಹಲವು ಪ್ರಾಂತ್ಯಗಳಲ್ಲಿ ವಸ್ತಿಗಳನ್ನು ಸ್ಥಾಪಿಸಿ ಭಾರತೇಯ ಜನಾಂಗದ ವಿಸ್ತಾರ ಸಾಧನೆಯನ್ನು ಹ್ಯಾಗೆ ಕೈಕೊಂಡಿರುವರೆಂಬುದನ್ನು ತಿಳಿದು ನಿಜವಾದ ಸಂತೋಷವನ್ನು ತಾಳದೆ ಇರಲಾರರು.

ಜನಾಂಗಗಳು ಚೇತನದಿಂದ ಸಜೀವವಾಗಿ ಇರಬೇಕಾದರೆ ಇವುಗಳೊಳಗೆ ಕ್ಷೇಮಕರವಾದ ಸ್ಪರ್ಧೆ ಯಾ ಮೇಲಾಟವು ಇರಲೇಬೇಕು. ಬುದ್ಧಿ ಚಮತ್ಕಾರದಲ್ಲಿ, ವಿದ್ವಾಂಸತನದಲ್ಲಿ, ಕಾರ್ಯಸಾಧನೆಯಲ್ಲಿ ತಾನು ಮೇಲಾಗಬೇಕು, ತಾನು ಮೇಲಾಗಬೇಕೆಂಬ ಪ್ರಯತ್ನವು ಆಯಾ ಜನಾಂಗಗಳಲ್ಲಿರಬೇಕು. ಇಂಥಾ ಸಾಧನೆ ಪ್ರಯತ್ನಗಳು ಒಬ್ಬರನ್ನೊಬ್ಬರು ನೋಡದೆ ಸಾಧ್ಯವಲ್ಲ. ಪಾಶ್ಚಾತ್ಯ ದೇಶಗಳ ಹಲವು ಜನಾಂಗಗಳ ಶ್ರೇಷ್ಠತ್ವವು ಇಂಥಾ ಮೇಲಾಟದಿಂದಲೇ ನೆರವೇರಿದ್ದಾಗಿರುತ್ತದಲ್ಲದೆ, ಈ ಮೇಲಾಟನೇ ಪಾಶ್ಚಾತ್ಯ ಜನಾಂಗಗಳನ್ನು ಸಜೀವವಾಗಿ ಇರಗೊಡಿಸಿರುತ್ತದೆ. ಇಂಥಾ ಮೇಲಾಟವು ಯಾವ ಜನಾಂಗಗಳಲ್ಲಿ ಅದೃಶವಾಗುವುದೋ ಆ ಜನಾಂಗವು ಬೇಗನೇ ಅಳಿದುಹೋಗುವುದು. ಸಾಮಾಜಿಕ ವ್ಯವಹರಣೆಯ ಈ ಸೂತ್ರಗಳನ್ನು ಭಾಯಿ ಪರಮಾನಂದರವರು ಉದಹರಿಸಿ ಭಾರತೇಯರಿಗೆ ಈಗಿನ ದುಸ್ಥಿತಿಯು ಹ್ಯಾಗೆ ಪ್ರಾಪ್ತಿಸಿತೆಂಬದನ್ನು ತೋರಿಸಿರುವರು. ಹಿಂದೊಮ್ಮೆ ಹಿಂದುಗಳು ಮೇಲು ಸ್ಥಿತಿಯಲ್ಲಿದ್ದರೂ ಮಹಮ್ಮದೀಯರು ಹಿಂದೂಸ್ಥಾನಕ್ಕೆ ದಂಡೆತ್ತಿ ಪ್ರಥಮ ಸರ್ತಿಗೆ ಬಂದ ಕೆಲವು ಶತಮಾನಗಳ ಮೊದಲೇ ಅನ್ಯ ಜನಾಂಗಗಳೊಡನೆ ಒಡನಾಟವನ್ನು ಇವರು ಸಂಪೂರ್ಣವಾಗಿ ಬಿಟ್ಟುಬಿಟ್ಟು ಅನ್ಯರ ವಿದ್ಯೆ ಬುದ್ಧಿ ಬಾಹುಬಲಗಳ ಪರಿಚಿತಿಯು ಹಿಂದುಗಳಿಗೆ ಇಲ್ಲದೆ ಹೋಯಿತು. ಇದರಿಂದ ತಮಗೆ ಮಿಕ್ಕಿದವರಿಲ್ಲವೆಂಬ ಭಾವನೆಗೆ ಆಸ್ಪದ ದೊರಕಿತು. ಕ್ರಮೇಣ ಹಿಂದೂಸ್ಥಾನದಿಂದ ಬೇರೊಂದು ಕಡೆಗೆ ಪ್ರಯಾಣವನ್ನು ಸಹ ಬೆಳಿಸುವುದು ಪಾಪಕರವೆಂತ ಕಂಡು ಬಂದು ಅನ್ಯ ದೇಶಗಳಿಗೆ ಹೋಗದಂತೆ ಬ್ರಾಹ್ಮಣರಿಂದ ಶಾಸನಗಳು ಮಾಡಲ್ಪಟ್ಟವು. ಈ ಶಾಸನಗಳು ಇತರರೆಲ್ಲರಿಂದಲೂ ಮನ್ನಿಸಲ್ಪಟ್ಟವು. ಪರರೊಡನೆ ಮೇಲಾಟಕ್ಕೆ ಆಸ್ಪದವಿಲ್ಲದೆ ಜನಾಂಗ ಅಭಿವೃದ್ಧಿಯಲ್ಲಿ ಉಪಯೋಗಿಸಲ್ಪಡಬೇಕಾದ ಜನಾಂಗ ಶಕ್ತಿಯೂ ಜನರ ಸಾಹಸ ಗುಣವೂ ಕ್ರಮೇಣ ಕುಂದುತ್ತ ಬಂದು ತಮ್ಮೊಳಗೆನೇ ಶ್ರೇಷ್ಠತ್ವಕ್ಕಾಗಿ ಹೊಟ್ಟೆಕಿಚ್ಚಿನಿಂದ ಹಿಂದುಗಳು ಕಾದಾಟ ಪ್ರಾರಂಭಿಸಿದರು. ಈ ದುರ್ಗುಣವು ನಮ್ಮಲ್ಲಿ ಬೆಳದುಹೋಗಿ ಈ ದೀನಸ್ಥಿತಿಯನ್ನು ಹೊಂದಿದೆವು. ಇಂಥಾ ದೀನಸ್ಥಿತಿಯಿಂದ ಉಳಿಗಾಲವು ನಮಗೆ ಪ್ರಾಪ್ತಿಸಬೇಕಾದರೆ ಹಿಂದೂಸ್ಥಾನಕ್ಕೆ ಭೂಲೋಕದ ಇತರ ಪ್ರಾಂತ್ಯಗಳೊಡನೆ ಒಡನಾಟವಿರುವುದು ಅಗತ್ಯ. ಹೀಗೆ ಭೂಲೋಕದ ಇತರ ಪ್ರಾಂತ್ಯಗಳನ್ನು ನೋಡಿ ಅನುಭವ ಪಡೆಯದ ಭಾರತೇಯನು ಯತಾರ್ಥವಾದ ದೇಶವತ್ಸಲನಲ್ಲೆಂಬುದಾಗಿ ಭಾಯಿ ಪರಮಾನಂದರವರು ಹೇಳಿರುವರು.

ಭಾರತೇಯರಿಗೆ ಪರದೇಶ ಪ್ರವಾಸದ ಅವಶ್ಯಕತೆಯನ್ನು ಹೀಗೆ ವಿವರಿಸಿ ಬ್ರಿಟಿಷ ಆಳುವಿಕೆಯಲ್ಲಿ ಇಂಥಾ ಪ್ರವಾಸದಿಂದ ಪ್ರಯೋಜನ ಹೊಂದಿದವರ ಪ್ರಸ್ತಾಪವನ್ನು ಭಾಯಿ ಪರಮಾನಂದರವರು ಮಾಡಿರುತ್ತಾರೆ. ಬ್ರಿಟಿಷ ಆಳುವಿಕೆಯಲ್ಲಿ ವಿದೇಶ ಪಂಡಿತರನ್ನು ನೋಡಿ ಭಾರತೇಯರಲ್ಲಿ ಸಂಪನ್ನವರ್ಗದವರು ಈ ಪಾಂಡಿತ್ಯಕ್ಕೆ ಬೇಕಾದ ವಿದ್ಯಾಭ್ಯಾಸವನ್ನು ಪಡಿಯುವರೆ ವಿದೇಶಕ್ಕೆ ಹೋಗುತ್ತಿರುವರು. ಈ ಸಂಪನ್ನ ವರ್ಗದವರ ಮಾದರಿಯನ್ನು ನೋಡಿ ನಡುತರಗತಿಯವರು ತಮ್ಮ ಕೂಡೆ ಸಾಕಾದಷ್ಟು ಹಣವಿಲ್ಲದಿದ್ದರೂ ಅಮೇರಿಕಾ, ಜಪಾನ್ ದೇಶಗಳಿಗೆ ಹೋಗಿ ನೌಕರರಾಗಿ ಹಣ ಸಂಪಾದಿಸಿ ವಿದ್ಯಾಭ್ಯಾಸವನ್ನು ಪಡೆಯುತ್ತಿರುವರು. ಈ ಎರಡು ವರ್ಗದವರ ಹೊರತು ಜನಾಂಗದಭಿವೃದ್ಧಿಗೆ ಕಾರಣಭೂತರಾದ ಭಾರತೇಯರ ಮತ್ತೊಂದು ವರ್ಗದವರ ವಿವರವನ್ನು ಭಾಯಿ ಪರಮಾನಂದರವರು ತಮ್ಮ ಲೇಖದಲ್ಲಿ ವಿಸ್ತಾರವಾಗಿ ಬರದಿರುವರು.

೧೮೩೪ರಲ್ಲಿ ಸೇವಕರನ್ನು ದಾಸ್ಯದಲ್ಲಿಡುವ ಪದ್ಧತಿಯು ರದ್ದಾದ ಬಳಿಕ ಅಮೇರಿಕಾ ಮತ್ತು ಅಫ್ರಿಕ ಖಂಡಗಳಿಗೆ ಕೂಲಿಯಾಳುಗಳು ಬಹಳವಾಗಿ ಬೇಕಾದರು. ಹಿಂದೂಸ್ಥಾನದಿಂದ ಅನೇಕ ಜನ ಕೂಲಿ ಕೆಲಸದವರು ಅಮೇರಿಕಾ, ಆಫ್ರಿಕಾ ಖಂಡಗಳಿಗೆ ಕೂಲಿ ಕೆಲಸಕ್ಕಾಗಿ ಹೋದರು. ಹೀಗೆ ಹೋದವರ ಪೈಕಿ ಅನೇಕ ಜನರು ಅಲ್ಲಿಯೇ ವಸ್ತಿಗಳನ್ನು ಮಾಡಿಕೊಂಡು ಈಗಲೂ ಆ ಪ್ರಾಂತ್ಯಗಳಲ್ಲಿ ಹಿಂದುಗಳಾಗಿರುವರು. ಇವರಿರುವ ವಸ್ತಿಗಳು ಅಭಿವೃದ್ಧಿಯಾಗುತ್ತಾ ಹಿಂದೂಸ್ಥಾನದಿಂದ ವೃತ್ತಿ ಇಲ್ಲದ ಇನ್ನಷ್ಟು ಜನರಿಗೆ ಜೀವನ ನಡಿಸುವರೆ ಈ ಪ್ರಾಂತ್ಯಗಳಲ್ಲಿ ಆಶ್ರಯ ದೊರಕಿ ಭಾರತೇಯ ಜನಾಂಗ ಅಭಿವೃದ್ಧಿಗೆ ವಿಶೇಷ ಎಡೆ ದೊರಕುವುದು. ಹೀಗೆ ಹಿಂದೂಸ್ಥಾನವನ್ನು ಬಿಟ್ಟು ಭೂಲೋಕದ ಇತರ ಪ್ರಾಂತ್ಯದಲ್ಲಿರುವ ಭಾರತೇಯರು ಸಮಾಜ ಸೌಕರ್ಯಕ್ಕಾಗಿ ಹಿಂದೂ ಧರ್ಮವನ್ನು ಬಿಟ್ಟು ಕ್ರೈಸ್ತ ಮತವನ್ನವಲಂಬಿಸದಂತೆ ಹಿಂದು ಧರ್ಮ ಶಿಕ್ಷಣೆಗೆ ತಕ್ಕ ಏರ್ಪಾಡನ್ನು ಅವರಿದ್ದಲ್ಲಿಗೆ ಹೋಗಿ ಹಿಂದೂಸ್ಥಾನದಲ್ಲಿರುವ ಹಿಂದೂ ಯುವಕರು ಕೈಕೊಳ್ಳಬೇಕಾಗಿರುತ್ತದೆ. ಅಗ್ಯೆ ಹಿಂದೂಸ್ಥಾನದಲ್ಲಿಯೂ ಭೂಲೋಕದ ಇತರ ಕಡೆಗಳಲ್ಲಿಯೂ ಇರುವ ಭಾರತೇಯರು ಏಕಧರ್ಮ ಪ್ರೇರಿತರಾಗಿದ್ದರೆ ಭಾರತೇಯ ಜನಾಂಗದ ಬೆಳವಣಿಗೆಗೆ ವಿಶೇಷ ಆಸ್ಪದ ದೊರಕುವುದು. ಇಲ್ಲಿ ವೃತ್ತಿ ಇಲ್ಲದ ಯುವಕರಿಗೆ ಆ ವಸಾಹತಿಗಳಲ್ಲಿ ವೃತ್ತಿಗೆ ಸಹ ವಿಶೇಷ ಅನುಕೂಲವಿರುವದೆಂದು ಭಾಯಿ ಪರಮಾನಂದರವರು ಹೇಳಿರುವರು.

ಪರದೇಶ ಸಂಚಾರ ಮಾತ್ರವಲ್ಲ, ಪರದೇಶಗಳಲ್ಲಿ ವಸ್ತಿಗಳನ್ನು ಸಹ ಮಾಡಿಕೊಂಡು ಹಿಂದೂಧರ್ಮ ಪರಾಯಣರಾಗಿದ್ದರೆ ಭಾರತೇಯ ಜನಾಂಗ ಬೆಳವಣಿಗೆಯು ಹ್ಯಾಗೆ ಸಾಗುವುದೆಂಬುದನ್ನು ಪರಮಾನಂದರವರು ಹೀಗೆ ಸೂಚಿಸಿರುವರು. ಭೂಲೋಕದ ಇತರ ಪ್ರಾಂತ್ಯಗಳಲ್ಲಿರುವ ಹಿಂದೂಗಳ ವಿವರವನ್ನು ಪರಮಾನಂದರವರು ಕೊಟ್ಟಂತೆ ಇನ್ನೊಂದು ಸಂಚಿಕೆಯಲ್ಲಿ ಪ್ರಕಟಿಸುವೆವು.

ಟ್ರಾನ್ಸಿಟ್ ಕಂಪೆನಿಗಳು.

ನಮ್ಮ ಜಿಲ್ಲೆಯಲ್ಲಿ ಪ್ರಯಾಣಿಕರ ಅನುಕೂಲತೆ ಒಗ್ಯೆ ಟ್ರಾನ್ಸಿಟ್ ಕಂಪೆನಿಗಳು ಸ್ಥಾಪಿಸಲ್ಪಟ್ಟು ಹಲವು ವರುಷಗಳಾದವು. ಒಂದೆರಡು ವರುಷಗಳ ಹಿಂದೆ ಈ ಕಂಪೆನಿಗಳ ಒಂದೊಂದು ಗಾಡಿಯಲ್ಲಿ ಒಣ ಮೀನಿನ ಮೂಟೆಗಳಂತೆ ಹದಿನಾಲ್ಕು ಹದಿನಾರು ಜನರನ್ನು ಒಂದೇ ಸಲ ತುಂಬಿಸುವ ವಾಡಿಕೆಯು ಹೆಕ್ನೆ ಮತ್ತು ಸ್ಟೇಟ್ ಕೆರಿಯೇಜ್ ಆಕ್ಟು ನಮ್ಮಲ್ಲಿ ಜಾರಿಗೆ ಬಂದಂದಿನಿಂದ ನಿಂತಿರುವುದು. ಆದರೆ ಟ್ರಾನ್ಸೀಟು ಟಿಕೇಟುಗಳ ದರಗಳಲ್ಲಿ ಮೇಲಾಟ ಉಂಟಾದ್ದರಿಂದ ಈಚೀಚೆಗೆ ಈ ಕಂಪೆನಿಗಳ ಮಾಲಿಕರು ತಮ್ಮ ಗಾಡಿಗಳ ದುಸ್ಥಿತಿಗಾಗಲಿ, ಕುದುರೆಗಳ ನಿಗಾವನೆಗಾಗಲಿ ಗಾಡಿ ಹೊಡಿಯುವವರ ಗುಣಾವುಗುಣಗಳಿಗಾಗಲಿ ತಕ್ಕದಾದ ನಿಗಾ ಕೊಡುವುದಿಲ್ಲವೆಂಬದಾಗಿ ತೋರುತ್ತದೆ. ಇದರಿಂದ ಟ್ರಾನ್ಸೀಟುಗಳ ಅವಗಡಗಳು ಆಗಿಂದಾಗ್ಯೆ ಸಂಭವಿಸುತ್ತಿರುವವು ಇತ್ತಲಾಗೆ ಸ್ವಲ್ಪ ಸಮಯದಲ್ಲಿಯೇ ಸ್ವದೇಶಾಭಿಮಾನಿಯಲ್ಲಿ ಮೂರು ಯಾ ನಾಲ್ಕಾವರ್ತಿ ಈ ಅವಗಡಗಳ ಕುರಿತು ವಾಚಕರು ಓದಿರಬಹುದು. ಕಳದ ವಾರ ಇನ್ನೊಂದು ಅವಗಡವು ಮುಲ್ಕಿ ಚರಂತಿಬೆಟ್ಟಿನ ಸಮೀಪ ರೋಮನ್ ಕೆಥೋಲಿಕರ ದೇವಾಲಯದ ಎದುರಿರುವ ಇಳಿಜಾರಿನ ರಸ್ತೆಯಲ್ಲಿ ಸಂಭವಿಸಿತು. ಆದರೆ ಗಾಡಿಯು ಮುರಿದುಹೋದ್ದಲ್ಲಿ ರಸ್ತೆಯು ಅಗಲವಾಗಿದ್ದದ್ದರಿಂದ ಗಾಡಿಯಲ್ಲಿದ್ದ ಪ್ರಯಾಣಿಕರಿಗೆ ಆಪತ್ತೇನೂ ಸಂಭವಿಸಲಿಲ್ಲ. ಗಾಡಿಗೆ ಕುದುರೆಗಳನ್ನು ಕಟ್ಟುವ ಗಣೆಯು ತುಂಡಾಗಿ ಹೋದದ್ದಲ್ಲದೆ ಗಣೆಯ ಸಮೀಪವಿರುವ ಕಬ್ಬಿಣದ ಸಾಮಾನುಗಳು ಬಗ್ಗಿಹೋಗಿ ಎದುರಿನ ಎರಡು ಗಾಲಿಗಳು ಹಿಂದಿನ ಗಾಲಿಗಳೊಂದಿಗೆ ಜಜ್ಜಿ ಹೋಗಿದ್ದವು. ಈ ಅವಗಡವು ಸಂಭವಿಸಿದ ಅರೆ ತಾಸಿನಲ್ಲಿಯೇ ಮುರಿದು ಬಿದ್ದ ಗಾಡಿಯನ್ನು ನೋಡುವ ಅವಕಾಶವು ನಮಗೆ ಸ್ವತಹ ದೊರಕಿದ್ದರಿಂದ ಈ ಅವಗಡದ ಯತಾರ್ಥ ವೃತ್ತಾಂತವನ್ನು ತಿಳಿಯುವರೆ ಸಾಧ್ಯವಾಯಿತು. ಮುರಿದು ಬಿದ್ದ ಗಾಡಿಯು ಯಾವ ಕಂಪೆನಿದೆಂದು ತಿಳಕೊಳ್ಳಲಿಕ್ಕೆ ಈ ಗಾಡಿಯ ಮೇಲಿರಬೇಕಾದ ನಂಬರು ಹೆಸರು ಇತ್ಯಾದಿ ನಮಗೆ ಫಕ್ಕನೆ ನೋಡಲು ಸಿಕ್ಕಲಿಲ್ಲ. ನಾವು ಕೂತುಕೊಂಡು ಪ್ರಯಾಣ ಮಾಡುತ್ತಿದ್ದ ಗಾಡಿ ಹೊಡಿಯುವವನು ಇದು ತಮ್ಮ ಕಂಪೆನಿಯವರ ಗಾಡಿ ಎಂತ ಹೇಳಿದ್ದರಿಂದ ಮುರಿದು ಹೋದ ಗಾಡಿಯು ಹಿಂದೂ ಟ್ರಾನ್ಸಿಟ್ ಕಂಪೆನಿಯವರದೆಂಬದಾಗಿ ನಾವು ತಿಳಿದೆವು. ಬ್ರೇಕು ಮೊದಲಾದ ಸಾಹಿತ್ಯಗಳು ಸರಿ ಇಲ್ಲದ ಗಾಡಿಗಳೂ ಹಲವು ರಕ್ತ ಸುರಿಯುವ ವೃಣಗಳಿಂದ ಕೂಡಿರುವ ಕುದುರೆಗಳೂ ರಾತ್ರೆ ಕಾಲದಲ್ಲಿ ಲಾಟನುಗಳಿಲ್ಲದೇನೇ ಟ್ರಾನ್ಸೀಟು ಗಾಡಿಗಳನ್ನು ಹೊಡಿಯುವ ಪದ್ಧತಿಯೂ ಟ್ರಾನ್ಸೀಟು ಕಂಪೆನಿಗಳಲ್ಲಿರುವವೆಂಬುದು ಇತ್ತಲಾಗೆ ನಾವು ಸ್ವತಹ ಉಡುಪಿ ತನಕ ಮಾಡಿದ ಪ್ರಯಾಣದನುಭವವಾಗಿರುತ್ತದೆ. ಟ್ರಾನ್ಸೀಟು ಕಂಪೆನಿಗಳ ಮಾಲಿಕರು ಈ ವಿಷಯಕ್ಕೆ ಗಮನಕೊಡಬೇಕೆಂದು ವಿಜ್ಞಾಪಿಸಿಕೊಳ್ಳುವೆವು. ಪೋಲೀಸು ಅಧಿಕಾರಿಗಳು ಸಹ ಆಗಿಂದಾಗ್ಯೆ ಗಾಡಿಗಳ ಮತ್ತು ಕುದುರೆಗಳ ಸ್ಥಿತಿಗೆ ಸಹ ಲಕ್ಷ್ಯಕೊಡಬೇಕಾಗಿರುತ್ತದೆ. ಹೆಕ್ನೆಕೇರಿಯೇಜ್ ಆಕ್ಟು ಜ್ಯಾರಿಗೆ ಬಂದು ಒಂದೆರಡು ವರುಷಗಳಾದರೂ ಈ ಆಕ್ಟಿನಿಂದ ನಮ್ಮಲ್ಲಿಯ ಪ್ರಜಾ ಜನರಿಗೂ ಬಾಯಿ ಬಾರದ ಬಡ ಕುದುರೆಗಳಿಗೂ ಕ್ಷೇಮ ಉಂಟಾಗುವಂತೆ ಪೋಲೀಸಿನವರ ಸಾಧನೆಯು ಅಪರೂಪವೆಂತ ತೋರುತ್ತದೆ.

ಪಿತೃಪ್ರೇಮ.

(ಕಳೆದ ಸಂಚಿಕೆಯಿಂದ ಮುಂದರಿಸಿದುದು)

ಈ ದೀರ್ಘ ಭಾಷಣವನ್ನಾಲಿಸಿ ಸರ್ವ ಸಭೆಯೂ ಚಕಿತವಾಯಿತು. ಅಮರರಾಯನು ನತಶಿರನಾಗಿ ಸ್ತಂಭಿತನಾಗಿದ್ದನು. ವೃದ್ಧವೀರರೆಲ್ಲರೂ ಶಿರವನ್ನಲ್ಲಾಡಿಸಿ "ಓಹೋ! ರಾಜಾಸ್ಥಾನಕ್ಕೆ ಕಲಂಕತಾಗುವ ದಿನವು ಸ್ಮರಿಸುವುದು. ಆಗ ಎಲ್ಲರ ಬುದ್ಧಿಯೂ ಕ್ಷೀಣತೆಯನ್ನೈದಿತ್ತು. ಮಂತ್ರಿ ಶ್ರೇಷ್ಠ ಅಮರರಾಯನು ರಾಜಕಾರ್ಯತತ್ಪರ ಕುಶಲನಾಗಿದ್ದರೂ, ಆ ವೇಳೆಯಲ್ಲಿ ಅಂಥಾ ದುರ್ವಾಸನೆಗೊಳಗಾಗಿ ಬಲಿಬಿದ್ದನು. ಹಾಗೂ ಹೀಗೂ ಆ ವೇಳೆಯು ಭಯಂಕರವಾಗಿತ್ತು. ರಾಜಪುತ್ರರಾದ ನಮಗೆ ಆ ದಿನ ಸ್ಮರಿಸಿತೆಂದರೆ ಮೈಮೇಲೆ ರೋಮಾಂಚವುಂಟಾಗುವದು. ಎಲೆ ಶೂರ ತರುಣನೇ! ಈ ಭಾಷಣದಿಂದಲೇ ನೀನು ಯುವರಾಜನೆಂತ ನಾವು ಹೇಗೆ ತಿಳಿಯಲಿ?" ಈ ಪ್ರಶ್ನೆಯು ಪೂರೈಸುವಷ್ಟರಲ್ಲಿ ವಿದ್ಯುಲ್ಲತೆಯಂತೆ ಲೀಲಾವತಿಯು ರಾಜ ಸಭಾಸ್ಥಾನವನ್ನೈದಿದಳು. ಅವಳ ಮುಖವು ರೋಷದಿಂದ ಆರಕ್ತವಾಗಿತ್ತು. ಅವಳು ಪರಿಧಾನ ಮಾಡಿದ ಶುಭ್ರವಸನವು ಕೆದರಿದ ಕೇಶಕಲಾಪಗಳೊಂದಿಗೆ ಪವನಗತಿಯಿಂದ ಕ್ರೀಡಿಸುತ್ತಿತ್ತು. ಎಲ್ಲರೂ ಆಶ್ಚರ್ಯದಿಂದ ಅವಳನ್ನೆದುರು ನೋಡುತ್ತಿದ್ದರು. ಗಂಭೀರತೆಯಿಂದ "ವಿಸ್ಮಯಚಕಿತರಾದ ಸಾಮಂತ, ಸರದಾರ, ಪೌರಜನರೇ! ನಾನು ಯಾರೆಂಬದು ನಿಮಗೆ ವೇದ್ಯವಿದೆಯೇ? ಪರಲೋಕವಾಸಿ ಮಹಾರಾಜ ಸಜ್ಜನಸಿಂಹನ ಅಮಾನುಷ ರೀತಿಯಿಂದ ವಧಿಸಿ— ಕೊಲೆ ಮಾಡಿ ಪತಿವ್ರತೆಯಾದ ಅವನ ಮಹಿಷಿಯ ಲೋಭದಿಂದ ಆ ವೇಳೆ—ಎರಡು ಮಾಸ ಪ್ರಾಯದ ಈ ಅಜಿತನ ನಾಶಕ್ಕೆ ಪ್ರವೃತ್ತರಾದ, ಪಾಷಾಣಕ್ಕಿಂತಲೂ ಕಠಿಣ ಹೃದಯರಾದ ಘಾತುಕರ ಕೈಯಿಂದ ತಪ್ಪಿಸಿ ಅಜಿತ ವ ಅವನ ಮಾತೆ ವಿಮಲಕುಮಾರಿಯನ್ನು ರಕ್ಷಿಸಿದ, ಆ ರಾಜದ್ರೋಹಿ ಕುಲಕಂಟಕರ ಮುಯ್ಯಿ ತೀರಿಸುವರೆ ರಾಜಬೀಜವನ್ನು ಪ್ರಾಣಕ್ಕಿಂತಲೂ ಜೋಪಾನವಾಗಿ ಸಲಹಿದ ಲೀಲಾವತಿಯು! ಆ ಕ್ರೂರಕರ್ಮದಿಂದ ರಂಗಿಸಲ್ಪಟ್ಟ ಪಟವನ್ನು ಸ್ಪಷ್ಟರೀತಿಯಿಂದ ದೃಷ್ಟಿಸಿದವರೆಲ್ಲರು ಇಲ್ಲದಿದ್ದರೂ—ಕೆಲವು ರಾಜಭಕ್ತವೀರರು ಸಜೀವರಾಗಿ ಈಗ ನನ್ನೆದುರಿಗೆ ನಿಂದಿರುವರು. ನುಡಿಯಿರಿ! ನುಡಿಯಿರಿ! ಆ ನೀಚ ಅಧಮಾಧಮ ಕೃತ್ಯವನ್ನು ನೋಡಿದವರು, ಆ ಕ್ರೂರ ಕರ್ಮರು ಈ ಎಳೇ ಸುಕುಮಾರ ಬಾಲಕನ ಕುಸುಮವಿನಿಂದಿತ ಶರೀರದ ಮೇಲೆ ಪ್ರಹರಿಸುವಾಗ ವಿಚಾರಮಾಡದಿರುವಂಥವನು ತನ್ನಪರಾಧವನ್ನು ಒಪ್ಪಿ ಈ ಅಜಿತನ್ಯಾರೆಂಬುವುದನ್ನು ಅವನ ಶಿರದ ಮೇಲೂ ಮುಖದ ಮೇಲೂ ಇರುವ ಘಾಯಗಳ ಗುರುತಿನಿಂದ ತಿಳಿಯ ಹೇಳುವುದು, ಅಮರರಾಯ? ಅಪರಾಧಿಯನ್ನು ಶೋಧಿಸಿಕೊಳ್ಳುವುದು ರಾಜಧೀನವು."

ಇದನ್ನಾಲಿಸಿದವರೆಲ್ಲರೂ ನಿಸ್ತಬ್ಧರಾದರು. ಕಿಂಚಿತ್ ಸಮಯದಲ್ಲಿ ವಯೋವೃದ್ಧ ಸರದಾರನೊಬ್ಬನು ಮುಂದಕ್ಕೆ ಸರಿದು ಲೀಲಾವತಿಗೆ ಪ್ರಣಾಮ ಮಾಡಿ ಅಧೋವದನನಾಗಿ—"ನಾನು ಉಚ್ಚ ತರಗತಿಯವನಲ್ಲವಿದ್ದರೂ ಸಮಸ್ತರೂ ನನ್ನ ಮಾತನ್ನಾಲಿಸುವರೆಂತ ಭಾವಿಸುವೆನು. ಲೀಲಾವತೀ! ನಾನು ನಿನ್ನನ್ನೂ, ನಿನ್ನ ಭಕ್ತಿಯನ್ನೂ ಮುಯ್ಯಿಗೆ ಮುಯ್ಯಿ ತೀರಿಸುವ ಅತಿಕ್ರಾಂತ ಪರಿಶ್ರಮವನ್ನೂ ಅರಿಯುವೆನು. ಈ ರಾಜಾಸ್ಥಾನದ ಸಭಿಕರೆಲ್ಲರೂ ಅಪರಾಧಿಗಳಾದರೂ ಮುಖ್ಯಾಪರಾಧವು. ಈ ನೀಚ ಮಂತ್ರಿಯದ್ದಾಗಿರುತ್ತದೆ." ಅಮರರಾಯನು ನಡುವೆಯೇ ಉಚ್ಚರಿಸಿದನು.

ಅಮರರಾಯನ ವಾಕ್ಯವು ಅಪೂರ್ಣವಾಯಿತು. ಒಬ್ಬ ತೇಜಸ್ವಿಯಾದ ಯೋಗಿ ವರನು ಸಭೆಗೆ ಬಂದನು. ತನ್ನ ವರದ ಹಸ್ತವನ್ನೆತ್ತಿ ಗಂಭೀರ ರವದಿಂದ "ಸತ್ಯಮೇವಜಯತೇ! ಸತ್ಯಮೇವಜಯತೇ!! ಸತ್ಯಮೇವಜಯತೇ!!! ಸರ್ವ ಸತ್ ಮತ್ತು ಅಸತ್ ಪಕ್ಷಿಯ ರಜಪೂತವೀರರೇ! ಯಾರೊಬ್ಬ ಮನುಷ್ಯನ ಬುದ್ಧಿಯನ್ನು ಭ್ರಂಶ ಮಾಡುವುದು, ಅವನಿಂದ ಅವನ್ಹಿತ ಕೃತ್ಯಗಳನ್ನು ಮಾಡಿಸುವುದು, ಅವನು ಲೋಕನಿಂದೆಗೆ ಯಾ ಸ್ತುತಿಗೆ ಪಾತ್ರನಾಗುವುದು ಈಶ್ವರೇಚ್ಛೆಯಿಂದ ಸಂಘಟಿಸುವುದು. ಯಾರು ಪೂರ್ವ ಜನ್ಮದಲ್ಲಿ ಪಾಪಪುಣ್ಯ ಮಾಡಿದರೆ ಅದರಂತೆ ಈ ಜನ್ಮದಲ್ಲಿ ಬುದ್ಧಿಯು ಹುಟ್ಟುವದು. ಇದರಿಂದ ಆ ಮನುಷ್ಯನಿಗೂ, ಈಶ್ವರನಿಗೂ, ದೋಷವಿಲ್ಲವು. ಈಗ ಆ ಮನುಷ್ಯನಿಗೆ ಶಿಕ್ಷಿಸುವುದು ಶಿಕ್ಷಿಸತಕ್ಕದ್ದೇ. ಏಕೆಂದರೆ, ಅವನಿಂದ ದುಷ್ಕೃತ ಮಾಡಿಸಿ ಶಿಕ್ಷಿಸುವುದು ಅಪರಾತ್ಪರನ ಆಜ್ಞೆಯೇ. ಲೀಲಾವತೀ! ನಾನು ರಾಜನಿಗೆ ಅಂದೇ ನುಡಿದುದೇನಂದರೆ—"ನಿನ್ನ ಮನೋಪ್ಸಿತವು ಪೂರ್ಣವಾದರೆ ಕ್ಲೇಶವನ್ನನುಭವಿಸುವುದಲ್ಲದೆ ಪ್ರಾಣವನ್ನೂ ತೊರೆಯಬೇಕಾಗುವುದು." ಆದರೆ ಆತನ ಆಗ್ರಹದಿಂದ ಅವನ್ನಿಚ್ಛೆಯನ್ನು ಪೂರೈಸಿದೆನು. ನಾನು ನುಡಿದದೇ ನಡಿಯಿತು. ಇದರಿಂದ ಅಮರರಾಯನಲ್ಲಿ ದೋಷವಿಲ್ಲ. ಅವನ ಪೂರ್ವಾರ್ಜಿತ ಪಾಪದಿಂದ ಆತನಿಗೆ ಆಗ ವಾಸನೆಯುಂಟಾಯಿತು. ಈಗ ಆತನಂತಃಕರಣವು ಶುದ್ಧವಾಗಿರುವುದು. ಈಗ ಲೌಕೀಕ ಶಿಕ್ಷೆಯು ಕೊಡತಕ್ಕದ್ದು. ಆ ಕೆಲಸವು ನೀವು ಸರ್ವರೂ ಮಾನ್ಯ ಮಾಡಿದ ನೂತನ ರಾಜಾ ಅಜಿತಸಿಂಹನದಾಗಿರುವುದು.

"ತಾವು ನಮ್ಮೆಲ್ಲವರ ಸಂಶಯವನ್ನಿವಾರಿಸಿದಿರಿ. ನಾವು ತಮಗೆ ಕೃತಜ್ಞರಾಗಿರುವೆವು" ಎಂದು ಸಭಾಸದರೆಲ್ಲರೂ ಯೋಗಿಗೆ ಸಾಷ್ಟಾಂಗ ನಮಸ್ಕರಿಸಿದರು.

ಮುಂದರಿಯುವದು.

M. V L. Prabhu.

ಸ್ತ್ರೀಶಿಕ್ಷಣೆಯ ನಿಜವಾದ ಮಹತ್ವವು.

(ಒಬ್ಬ ಹಿಂದೂ ಕುಲಸ್ತ್ರೀಯ ಇಂಗ್ಲೀಷ್ ಭಾಷಣದ ಸಾರಾಂಶ).

ಅನೇಕ ಸುಶಿಕ್ಷಿತ ಜನರ ಲಕ್ಷ್ಯವು ಸ್ತ್ರೀಶಿಕ್ಷಣೆಯ ಕಡೆಗೆ ದಿನೇ ದಿನೇ ಅಧಿಕವಾಗುತ್ತಾ ಬರುವುದು ಎಂಬ ಸಂಗತಿಯು ಅತಿ ಆನಂದಕರವೇ ಸರಿ. ನಾಲ್ವತ್ತು ಐವತ್ತು ವರುಷಗಳ ಹಿಂದೆ ಬಾಲಕಿಯರು ವಿದ್ಯೆಯನ್ನು ಸಂಪಾದಿಸಿ ಬಿ. ಎ. ಪದವಿಯನ್ನು ಪಡೆಯುವುದು ಯಾರಿಗೂ ಶಕ್ಯವೆಂದು ಕಾಣಬರುತ್ತಿದ್ದಿಲ್ಲ. ಆದರೆ ಯಾವ ವಿಷಯವು ನಮ್ಮ ಹಿರಿಯರ ಕಲ್ಪನಾ ಸೃಷ್ಟಿಯಲ್ಲಿ ಸಹಾ ಇದ್ದಿರಲಿಲ್ಲವೊ, ಆ ಸಂಗತಿಯೇ ಈಗ ನಮ್ಮ ದೃಶ್ಯ ಸೃಷ್ಟಿಯಲ್ಲಿ ಬಂದಿರುವುದು. ಇದುವರೆಗೂ ಬಿ. ಎ. ಪಾಸಾದ ಸ್ತ್ರೀಯರು ಬಹಳ ಮಂದಿ ಕಾಣುವುದಿಲ್ಲವಾದರೂ ಸ್ತ್ರೀಶಿಕ್ಷಣೆಯ ಪ್ರಸಾರವು ದೊಡ್ಡದಾದ ಪರಿಮಾಣದಲ್ಲಿ ನಡಿಯುತ್ತಿದೆ ಎಂಬುವದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಆದಕಾರಣ, ಇಂಥಾ ಸಮಯದಲ್ಲಿ ವಿದ್ಯಾಭ್ಯಾಸದ ನಿಜವಾದ ಲಕ್ಷಣಗಳು ಯಾವವು? ಮತ್ತು ಅದರ ಮುಖ್ಯವಾದ ಮಹತ್ವವು ಯಾವುದರಲ್ಲಿದೆ? ಎಂಬ ವಿಷಯದಲ್ಲಿ ತುಸಕಾಲದಲ್ಲಿಯೇ ಆಲೋಚಿಸಿ ನೋಡೋಣ.

ವಿದ್ಯಾಭ್ಯಾಸವೆಂದರೆ ಬರೇ ಪುಸ್ತಕ ವಿದ್ಯೆ ಎಂಬದಾಗಿ ಯಾರಿಗೂ ಒಂದು ಬಾರಿ ತೋರುವ ಸಂಭವವಿದೆ; ಆದರೆ ಇದು ತಪ್ಪು ಗಣನೆಯು. ಪುಸ್ತಕಗಳನ್ನು ಓದಿ ಪ್ರಾಪ್ತವಾಗುವ ಜ್ಞಾನವು ಸಂಪೂರ್ಣವಲ್ಲ. ಯಾವುದೊಂದು ವಸ್ತುವೂ ಪೂರ್ಣವಾಗಿ ಸುಂದರವಾಗಿದ್ದರೇನೇ ಅದಕ್ಕೆ ಶೋಭೆಯು ಇರುವುದು. ಅದರ ಒಂದು ಭಾಗವು ಮಾತ್ರವೇ ಅತೀ ಚಂದವಾಗಿದ್ದು ಮಿಕ್ಕುದೆಲ್ಲಾ ಸೌಂದರ್ಯ ಹೀನವಾಗಿದ್ದರೆ ಅಂಥಾ ವಸ್ತುವನ್ನು ಯಾರಾದರೂ ಪ್ರೀತಿಸುವರೇ? ಇತಿಹಾಸ, ಭೂಗೋಲ, ಕವಿತೆ, ಗಣಿತ ಇವೆಲ್ಲಾ ಉಪಯೋಗವುಳ್ಳವುಗಳೇ ಸರಿ; ಆದರೆ ಅವುಗಳನ್ನು ಮಾತ್ರವೇ ತಿಳಿಯುವುದರಿಂದ ಮನುಷ್ಯನು ಎಂದೆಂದಿಗೂ ನಿಜವಾದ ಉನ್ನತಿಗೆ ಬಾರನು. ನಾವು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಪಟ್ಟಿರಬಹುದು; ಆದರೆ ಇದುವರೆಗೂ ನಾವು ಸಂಪೂರ್ಣ ಜ್ಞಾನವನ್ನು ಪಡೆದಿರುವೆವೆಂದು ಎಂದೂ ತಿಳಿಯಕೂಡದು. ಇನ್ನೂ ಅನೇಕ ವಿಷಯಗಳು ನಾವು ಕಲಿಯಲಿಕ್ಕಿವೆ. ಶಿಕ್ಷಣೆಯ ಪೂರ್ಣತೆಯು ಬಿ. ಎ. ಪದವಿಯಲ್ಲಿಲ್ಲ. ಅದು ಸದ್ವರ್ತನೆಯಲ್ಲಿದೆ. ಬಿ. ಎ. ಪದವಿಯನ್ನು ಹೊಂದಿದವರಿಗೆ ಸುಚರಿತವು ಪ್ರಾಪ್ತಿಸಬೇಕೆಂಬುದಿಲ್ಲ.

"ಅಲ್ಪ ವಿದ್ಯಾ ಮಹಾಗರ್ವಿ" ಎಂಬುದನ್ನು ನಾವು ಅನೇಕಾವರ್ತಿ ಕೇಳಿಯೂ ಕಣ್ಣಾರೆ ಉದಾಹರಣೆಗಳನ್ನು ನೋಡಿಯೂ ಬಲ್ಲೆವಷ್ಟೆ? ನಮ್ಮ ಸ್ಥಿತಿಯೂ ಹೀಗೆಯೇ ಬಿ. ಎ. ಪಾಸಾದೊಡನೆ ನಮ್ಮ ತಂದೆ ತಾಯಿಗಳ ಮಾತಿಗೆ ಸಹಾ ನಾವು ಲಕ್ಷ್ಯವನ್ನೇ ಕೊಡುವುದಿಲ್ಲ. ನಾವೇ ಅವರಿಗಿಂತಲೂ ಬಲ್ಲವರೆಂದು ತಿಳಿಯುತ್ತೇವೆ. ಅವರ ಆವರದಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತೇವೆ. ಇಂಗ್ಲಿಷ್ ಕಲಿಯದ ಸ್ತ್ರೀಯರು ಶೀಲದಲ್ಲಿ ಎಷ್ಟು ಜಾಣೆಯರಾಗಿದ್ದರೂ ಅವರಿಗಿಂತಲೂ ನಾವೇ ಶ್ರೇಷ್ಠರೆಂದು ಭಾವಿಸುತ್ತೇವೆ. ಸಹೋದರಿಯರೇ, ಇಂಥಾ ಸ್ಥಿತಿಯು ಯೋಗ್ಯವಲ್ಲ. ಬರೇ ಪುಸ್ತಕ ವಿದ್ಯೆಯೇ ಸಂಪೂರ್ಣವಲ್ಲ ಎಂಬುದನ್ನು ತಿಳಿದು ನಮ್ಮ ವರ್ತನೆಯಲ್ಲಿ ಸುಧಾರಣೆಯನ್ನು ಮಾಡಿದರೆ ಅದು ನಮಗೆನೇ ಭೂಷಣವಲ್ಲವೆ?

"ವಿದ್ಯಾವಿನಯೇನ ಶೋಭತೆ" ಆದುದರಿಂದ ಒಂದು ಬಿ. ಎ. ಪದವಿಯು ದೊರಕಿದ್ದರೂ ನಾವು ಬೇರೊಂದು ಬಿ. ಎ. (B. A.=Be Able) ಪದವಿಯನ್ನು ಸಂಗ್ರಹಿಸೋಣ. Be Able ಅಂದರೆ ಒಳ್ಳೆಯವರಾಗಿರುವುದು, ಸಮರ್ಥರಾಗಿರುವುದು, ದಕ್ಷರಾಗಿರುವುದು. ಆದರೆ ಇದು ಯಾವ ವಿಷಯದಲ್ಲಿ? ನಮ್ಮ ದಿನಂಪ್ರತಿಯ ವ್ಯವಹಾರದಲ್ಲಿ. ವ್ಯಾಕರಣ, ಗಣಿತ ಮೊದಲಾದವುಗಳಲ್ಲಿ ಒಬ್ಬಳು ನಿಪುಣಳಾಗಿರಬಹುದು; ಆದರೆ ಅಂಥವಳಿಗೆ ತನ್ನ ಮನೆಯನ್ನು ಒಳ್ಳೆಯ ವ್ಯವಸ್ಥೆಯಲ್ಲಿಡಲಿಕ್ಕಾಗಲಿ, ತನ್ನವರೊಡನೆ ಯೋಗ್ಯ ರೀತಿಯಲ್ಲಿ ಮಾತನಾಡಲಿಕ್ಕಾಗಲಿ, ಅಥವಾ ಯಾರೊಬ್ಬರ

ಕೋಪವನ್ನು ತನ್ನ ಸವಿನುಡಿಗಳಿಂದ ನಿವಾರಿಸಲಿಕ್ಕಾಗಲಿ ತಿಳಿಯದಿದ್ದರೆ ಅಂಥವಳು ಸುಶಿಕ್ಷಿತ ಸ್ತ್ರೀಯಲ್ಲ. ಯಾವ ಸ್ತ್ರೀಯಲ್ಲಿ ಪ್ರಸಂಗಾವಧಾನ, ಇಂದ್ರಿಯದಮನ, ಉಪಕಾರ ಶೀಲತ್ವ, ಶಾಂತಿ, ಇಷ್ಟೆಲ್ಲಾ ಗುಣಗಳಿರುವುದಿಲ್ಲವೋ ಅಂಥವಳು ಸುಶಿಕ್ಷಿತ ಸ್ತ್ರೀಯಲ್ಲ. ಮತ್ತು ಈ ಗುಣಗಳು ಇದ್ದು, ತನ್ನದೊಂದೇ ವಿಚಾರವನ್ನು ಮಾಡದೆ ಪರರ ಕಲ್ಯಾಣಕ್ಕೋಸ್ಕರ ಯಾವಳು ಪ್ರಯಾಸಪಡುವಳೋ ಅಂಥವಳೇ ಸುಶಿಕ್ಷಿತ ಸ್ತ್ರೀಯು. ಅಂಥವಳಿಗೆ ಬಿ. ಎ. (Bachelor of Arts) ಪದವಿಯು ಇಲ್ಲದಿದ್ದರೂ ಬಿ. ಎ. (Be Able) ಪದವಿಯು ಇರುವುದು.

ಬಿ. ಎ. (Bachelor of Arts) ಪದವಿಯು ಸಿಗಬೇಕಾದರೆ ಬಹಳ ಹಣವು ಖರ್ಚಾಗುವುದು. ಆದರೆ ಬಿ. ಎ. (Be Able) ಪದವಿಯು ದೊರಕಬೇಕಾದರೆ ಸುಚರಿತಕ್ಕೆ ಬೇಕಾದ ಶಿಕ್ಷಣರೂಪ ದಣುವೇ ಬಹಳ ಖರ್ಚಾಗುವುದು. ಇದು ಯಾವುದೆಂದರೆ-ಸಹಾನುಭೂತಿಯ ಖರ್ಚು, ಪರೋಪಕಾರದ ಖರ್ಚು, ಸಹನಶೀಲತೆಯ ಖರ್ಚು ಪರರ ದುಃಖದಲ್ಲಿ ಭಾಗವನ್ನು ತೆಗೆದುಕೊಳ್ಳುವ ಖರ್ಚು ಇವೇ ಮೊದಲಾದವುಗಳು. ಈ ಪ್ರಕಾರದ ಖರ್ಚು ಮಾಡಿ ಒಂದು ಪದವಿಯನ್ನು ಪಡೆಯುವುದು ಸಾಮಾನ್ಯವಾದ ಮಾತಲ್ಲ. ಬಾಯಿ ಮಾತಿನ ಸಹಾನುಭೂತಿಯು ಬೇರೆ, ಇದರ ಕ್ರಿಯಾರೂಪವು ಬೇರೆ. ಸುಮ್ಮನೆ "ಕುಕ್ಕೆ ತುಂಬ ಮಾತು, ಗುಂಜಿಯಷ್ಟು ಅರ್ಥ"ವಾದರೆ ಪ್ರಯೋಜನವೇನು?

ಮೇಲೆ ಹೇಳಿದುದರಲ್ಲಿ ಸಹನಶೀಲತೆಯೊಂದರ ಖರ್ಚನ್ನು ನಾವು ಎಷ್ಟೆಂದು ನೋಡೋಣ. ಅನೇಕಾವರ್ತಿ ನಮ್ಮ ತಪ್ಪು ಇದ್ದಾಗಲೀ ಇಲ್ಲದೆ ಆಗಲೀ ಬೇರೊಬ್ಬರು ನಮಗೆ ತಪ್ಪಿ ಮಾತನಾಡುತ್ತಾರೆ, ಅಥವಾ ಅನೇಕ ಕಠಿಣೋಕ್ತಿಗಳನ್ನು ನಮ್ಮ ಕಡೆಗೆ ಎಸೆಯುತ್ತಾರೆ, ಅಥವಾ ನಮ್ಮ ಹೇತುವನ್ನೇ ಹಾಯ್ದು ಬೀಸಲು ಪ್ರಯತ್ನಿಸುತ್ತಾರೆ. ಇಂಥಾ ಸಮಯದಲ್ಲಿ ಅವರ ಮೇಲೆ ಸಿಟ್ಟುಗೊಳ್ಳದೆ, ಶಾಂತತೆಯಿಂದ ಮತ್ತು ನಯನುಡಿಗಳಿಂದ ಅವರ ಕೋಪವನ್ನು ನಿವಾರಿಸಲಿಕ್ಕೆ ಸದ್ವರ್ತನೆಯ ಖರ್ಚು ಎಷ್ಟು ತಗಲುವುದು ಎಂಬುದನ್ನು ಲೆಕ್ಕಿಸಲಿಕ್ಕಾಗಬಹುದೆ?

ಇಂತಹ ಸದ್ವರ್ತನೆಯು ಇಲ್ಲದೆ ಬಿ. ಎ. (Bachelor of Arts) ಪದವಿಯನ್ನು ಮಾತ್ರವೇ ಹೊಂದಿದ ಸ್ತ್ರೀಯ ಶಿಕ್ಷಣೆಯು ಏಕಾಂಗ ಸುಂದರವಾಗಿರುವುದು. ಅಂಥಾ ವಿದ್ಯೆಯು ಎಂದೂ ಕೆಲಸಕ್ಕೆ ಬೀಳಲಿಕ್ಕಿಲ್ಲ. ನಿಜವಾದ ಧರ್ಮ ಶಿಕ್ಷಣೆಯನ್ನು ಹೊಂದಿದ ಸ್ತ್ರೀಯು ತನ್ನ ಬಂಧುಭಗಿನಿಯರ ಸೇವೆಯಲ್ಲಿ ಆನಂದವನ್ನು ಮಾನಿಸುವಳು; ಏಕೆಂದರೆ ಅಂಥವಳ ಮನಸ್ಸಿನಲ್ಲಿ, ಸೇವೆಯನ್ನು ಮಾಡುವುದು ಅಧಿಕಾರವನ್ನು ನಡೆಯಿಸುವುದಕ್ಕಿಂತಲೂ ಶ್ರೇಷ್ಠವಾದುದ್ದೆಂಬುದು ಇದ್ದೇ ಇರುವುದು. ಇಂಥಾ ಸುವಿಚಾರಿಯಾದ ಸ್ತ್ರೀಯು ಪಡೆದಿರುವ ವಿದ್ಯೆಯೇ ಸರ್ವಾಂಗ ಸುಂದರವೆನ್ನಬಹುದು.

ಸಹೋದರಿಯರೇ, ಹಿಂದೂಸ್ಥಾನದ ಕಲ್ಯಾಣವಾಗಬೇಕೆಂಬ ಇಚ್ಛೆಯು ನಿಮ್ಮಲ್ಲಿ ಇದ್ದರೆ ಇಂಥಾ ಸುಚರಿತಕ್ಕೆ ಬೇಕಾದ ವಿದ್ಯೆಯನ್ನು ಪಡೆಯುವುದರಲ್ಲಿ ಉದಾಸೀನ ಮಾಡಬೇಡಿರಿ.

K. P.

ಭೂಗೋಲ ಶಾಸ್ತ್ರವೂ ಇತಿಹಾಸವೂ.

ಒಂದು ದೇಶದ ಭೂಗೋಲಶಾಸ್ತ್ರವನ್ನೂ ಅದರ ಇತಿಹಾಸವನ್ನೂ ಸಮ್ಮಿಲಿತವಾದ ಒಂದೇ ವಿಷಯದಂತೆ ಕಲಿಸುವುದು ಯೋಗ್ಯವೆಂತ ಹಲವು ಸಾರಿ ಶಾಲಾ ಮೇಲುದ್ಯೋಗಸ್ಥರು ಹೇಳುವುದುಂಟು. ಅದಲ್ಲದೆ ಅನೇಕ ಇತಿಹಾಸಿಕ ಸಂಗತಿಗಳಲ್ಲಿ ಆಯಾ ದೇಶದ ಭೂಗೋಲಶಾಸ್ತ್ರದ ಸ್ಥಿತಿಗತಿಗಳಿಂದ ಅಂಥ ಸಂಗತಿಗಳ ಮಾರ್ಪಾಟಗಳುಂಟಾದುದೂ ಇದೆ. ಇಂಥ ಸೂತ್ರಗಳನ್ನಾದರಿಸಿ ಈಚೆಗೆ ವಿಲಾಯತಿಯವರು ಅನೇಕ ಪುಸ್ತಕಾವಳಿಗಳನ್ನು ಹೊರಡಿಸಿರುವರು. ಪ್ರಥಮತಃ ಭೂಮಿಯ ಪ್ರಾಮುಖ್ಯ ರಾಜ್ಯಗಳ ಕುರಿತು ಚಿಕ್ಕ ವಿವರಗಳನ್ನು ಕಥಾರೂಪವಾಗಿಯಾಗಲಿ, ವಸ್ತುಪಾಠಗಳ ರೂಪದಿಂದಾಗಲಿ, ಅಥವಾ ಚಿತ್ರಗಳ ವ ಉದ್ಭಿಜ ವ್ಯಾಪಾರಗಳ ಸಹಾಯದಿಂದಾಗಲಿ ಮಕ್ಕಳಲ್ಲಿ ಭೂಗೋಲಶಾಸ್ತ್ರವನ್ನು ಕಲಿಯಲು ಕುತೂಹಲ ಹುಟ್ಟಿಸಿ, ತನ್ನ ಗ್ರಾಮದ, ನೆರೆಯ, ಜಿಲ್ಲೆಯ ಮುಂತಾಗಿ ಭೂರೂಪಗಳ ಕುರಿತು ಅಲ್ಪ ಸ್ವಲ್ಪ ಜ್ಞಾನಲಾಭವನ್ನು ಮಕ್ಕಳು ತಾವಾಗಿಯೇ ಕಲ್ಪಿಸಿಕೊಳ್ಳುವ ಸದಾಸೆಯನ್ನು ಉಂಟುಮಾಡುವರು. ಪ್ರತಿಯೊಂದರಲ್ಲಿಯೂ ಹೇತುಗಳ ಮೂಲಕ ರಚನೆ, ಮಾರ್ಪಾಟ, ಫಲಗಳನ್ನು ಕಲಿಸುವರೇ ಹೊರತಾಗಿ, ಸಹಸ್ರನಾಮಾವಳಿಯನ್ನಾಗಲೀ, "ಇಸ್ವಿ" ಅಂಕೆಗಳ ಕೋಶಗಳನ್ನಾಗಲಿ ಗಿಳಿಪಾಠ ಮಾಡಿಸುವುದಿಲ್ಲ. ನೌಕಾನಾಯಕನಿಗೆ ಬೆಳಕುಗೂಡುಗಳಂತೆ ವಿಷಯದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸುಲಭವಾಗಿ ಕಲಿಸಿ ಹೋಗಲು ಪ್ರಾಮುಖ್ಯವಾದ ವಿಶೇಷ ಚಿನ್ಹೆಗಳನ್ನು ಕಲಿಸುವರೇ ಹೊರತು ಬೇರಿಲ್ಲ. ಭೂಗೋಲವೇಯಾಗಲಿ, ಇತಿಹಾಸವಾಗಲಿ, ಪ್ರತ್ಯಕ್ಷ ಪ್ರಮಾಣಗಳಿಂದ ಕಲಿಸುವರೇ ಹೊರತು ಪುಸ್ತಕದ 'ಬದನೆಕಾಯಿಗಳನ್ನು' ಸಿದ್ಧಾಂತಗಳಾಗಿ ಕಲಿಸುವುದಿಲ್ಲ. ಮನುಷ್ಯನು, ಜೀವನದ ಮೇಲೆ ಅಧಿಕಾರಿವರ್ತಿಯಾದ ವಾಯುಗುಣ, ಸಮುದ್ರ ಪ್ರದೇಶ, ಖನಿಜೋತ್ಪತ್ತಿ, ಪರ್ವತಾವಳಿಯ ಮುಚ್ಚಿಗೆ, ಆಕಾಶದ ಗುಡಾರ, ಮುಂತಾದವುಗಳನ್ನಾದರಿಸಿ, ಎಂಥೆಂತಹ ವಿದ್ಯಮಾನಗಳಲ್ಲಿ ಹೇಗೆ ಅನುವರ್ತಿಸುವನೆಂದು ಸಾಧಾರಣ ಹೊರಡಿಸಿ, ನಂತರ ಉಂಟಾದ ವಿದ್ಯಮಾನಗಳ ಫಲಿತಾಂಶಗಳನ್ನು ವಿವರಿಸುವರು. ಹೀಗೆ ಕಲಿಸಲು, "ಸೇವನವಿಲ್ಲದೆ ಮರಣವಿಲ್ಲ" ಎಂಬಂತೆ ಕಾರಣಭಿನ್ನವಾದ ಸಿದ್ಧಾಂತಗಳನ್ನು ಮಕ್ಕಳು ಕಲಿಯಲು ಆತುರಪಡದೆ, ಕಾರಣ ಹುಡುಕಲು ಆಸಕ್ತರಾಗುವರು. ಸ್ವದೇಶದ ಭೂಗೋಲದ ವ ಇತಿಹಾಸದ ಮೇಲೆ ಪರದೇಶದ ಇತಿಹಾಸಗಳು ಹೇಗೆ ಕೈ ನಡಿಸುವುದೆಂದು ಕಲಿಸಿ ಅಂಥ ಕೈ ಮುಂದರಿಸಲು ಆ ದೇಶಗಳ ಭೂಸ್ಥಿತಿಯು ಹೇಗೆ ಬಲಪಡಿಸಿತೆಂದು ತಿಳಿಸುವರು. ಈ ಕ್ರಮಗಳನ್ನು ಕೈಕೊಂಡು ಕಲಿಸಿದ ಅನೇಕ ಉಪಾಧ್ಯಾಯರು ತಮ್ಮ ಫಲಿತಾಂಶದಿಂದ ಉತ್ತೇಜಿತರಾಗಿರುವರೆಂದೂ ತಿಳಿಸಿರುವರು. ಈ ತರದ ಶಿಕ್ಷಣವು ೭ ವರುಷ ಪ್ರಾಯದ ಬಾಲರ ವರ್ಗದಿಂದ ಪ್ರಾರಂಭಿಸಲ್ಪಡುವುದು.

M. N. Kamath.

ಮಾವಿನ ಫಲಕ್ಕೆ ಮುತ್ತುವ ನುಸಿಗಳು.

ಇಂಡಿಯಾ ದೇಶವು ಈ ನುಸಿಗಳಿಗೆ ತೌರುಮನೆ ಎಂದು ಹೇಳುತ್ತಾರೆ. ಇವು ಬಿತ್ತದ ಜತೆಯಲ್ಲಿ ದೇಶದಿಂದ ದೇಶಕ್ಕೆ ವ್ಯಾಪಿಸುವುವೆಂದು ತೋರುತ್ತದೆ. ಈ ನುಸಿಗಳು ಮಾವಿನ ಹಣ್ಣಿನ ತಿರುಳಿನಲ್ಲಿ ಮೊಟ್ಟೆಗಳನ್ನಿಡುವುವು. ಮೊಟ್ಟೆಯೊಡದು ಸಣ್ಣ ಹುಳುವು ಅಲ್ಲಿಂದ ವಾಟೆಯನ್ನು ಕೊರೆದುಕೊಂಡು ಅದರ ಒಳಗೆ ಸೇರಿಕೊಳ್ಳುವುದು. ಇದು ವಾಟೆಯಲ್ಲಿ ಮಾಡಿದ ತೂತು ಸ್ವಲ್ಪ ಕಾಲದಲ್ಲಿ ಮುಚ್ಚಿಹೋಗಿ ಹುಳುವು ಒಳಭಾಗದಲ್ಲಿಯೇ ಬೆಳೆಯುತ್ತಿರುವುದು. ಆದ್ದರಿಂದಲೇ ಹಣ್ಣಿನಲ್ಲಿ ಈ ನುಸಿಯು ಇರುವುದು ಹೊರಕ್ಕೆ ಗೊತ್ತಾಗುವುದಿಲ್ಲ. ನುಸಿಯು ಕಾಲು ಅಂಗುಲ ಉದ್ದವಾಗಿಯೂ ಮತ್ತು ಕಪ್ಪುಮಿಶ್ರವಾದ ಕಂದುಬಣ್ಣದ್ದಾಗಿಯೂ ಇರುವುದು. ಇದು ವಾಟೆಯೊಳಗೇ ಇರುವುದರಿಂದ ಬಿತ್ತನೆಗಾಗಿ ಸ್ಥಳದಿಂದ ಸ್ಥಳಕ್ಕೆ ಕಳುಹಿಸಲ್ಪಡುವ ಬಿತ್ತಗಳ ಮತ್ತು ಹಣ್ಣುಗಳ ಮೂಲಕವಾಗಿ ಇದರ ಕಾಟವು ವ್ಯಾಪಿಸುವುದು.

ಇದು ವಾಟೆಯೊಳಗೆ, ಅದರಲ್ಲೂ ಬಿತ್ತದ ಒಳಭಾಗದಲ್ಲಿ ಸೇರಿಕೊಂಡಿರುವುದರಿಂದ ದ್ರಾವಕಗಳ ಹೊಗೆಯನ್ನು ಹಾಕಿ ಇವುಗಳನ್ನು ನಾಶಮಾಡಬಹುದೆಂದು ಹೇಳಲಾಗುವುದಿಲ್ಲ. ಹಣ್ಣುಗಳಲ್ಲಿ ಇವುಗಳು ಇರುವುದನ್ನು ತಿಳಿದುಕೊಳ್ಳಬೇಕಾದರೆ ಒಂದೇ ಉಪಾಯ ಉಂಟು. ಅದು ಯಾವುವಂದರೆ, ವಾಟೆಯನ್ನು ಶೀಳಿ ಬಿತ್ತದ ಮೇಲ್ಭಾಗದಲ್ಲಿ ಕಾಗದದಂತಿರುವ ಪರೆಯನ್ನು ತೆಗೆದರೆ ಹುಳವು ಒಳಭಾಗವನ್ನೆಲ್ಲಾ ಕವರಿರುವುದೂ, ಅಲ್ಲಿಯೇ ಮಲವಿಸರ್ಜನೆ ಮಾಡಿರುವುದೂ ಮತ್ತು ಬಿತ್ತದ ಬಣ್ಣ ಕೆಟ್ಟಿರುವುದೂ ಕಂಡುಬರುತ್ತವೆ. ಆದ್ದರಿಂದ ಬಿತ್ತನೆಗೆ ಉಪಯೋಗಿಸುವ ವಾಟೆಗಳನ್ನೆಲ್ಲಾ ಮೇಲ್ಕಂಡ ರೀತಿಯಲ್ಲಿ ಶೀಳಿ ಅಜಮಾಯಿಷಿ ಮಾಡಿ ಹುಳುಗಳು ಶೇರಿಕೊಂಡಿದ್ದ ಅಥವಾ ಶೇರಿಕೊಂಡಿರಬಹುದಾದ ವಾಟೆಗಳನ್ನೆಲ್ಲಾ ಸುಟ್ಟುಬಿಡಬೇಕು. ನುಸಿಗಳು ತಗಲದೆ ಇರಬಹುದಾದ ವಾಟೆಗಳನ್ನು ಒಂದು ಪೆಟ್ಟಿಗೆಯಲ್ಲಿ ಮಣ್ಣು ತುಂಬಿ ಅದರಲಿ ಹೂಳಿ ಪೆಟ್ಟಿಗೆಯ ಮೇಲೆ ತಂತಿಯ ಜಲ್ಲಡಿಯನ್ನು ಮುಚ್ಚಿ ಸೊಸಿಗಳನ್ನು ಎಬ್ಬಿಸುವುದು ಒಳ್ಳೇದು. ಈ ನುಸಿಗಳು ಬಹಳ ಕಾಲ ಬದುಕುವುವಾಗಿರುವುವು. ಮತ್ತು ರೈಲು ಬಂಡಿಗಳಲ್ಲಿ ಸ್ಥಳದಿಂದ ಸ್ಥಳಕ್ಕೆ ಹೋಗಿ ಸೇರುವುವು. ಮಾವಿನ ಗಿಡ ಹೊರ್ತು ಮತ್ತ್ಯಾವ ಗಿಡವೂ ಇವಕ್ಕೆ ಆಹಾರವಲ್ಲವಾದ್ದರಿಂದ ಮಾವಿನ ಮರಗಳಿಲ್ಲದ ಸ್ಥಳಗಳಲ್ಲಿ ಇವುಗಳ ಭೀತಿ ಏನೂ ಇರುವುದಿಲ್ಲ. ಈ ನುಸಿಗಳು ಹಣ್ಣುಗಳ ವಾಟೆಯನ್ನು ನಾಶಮಾಡುವುವಲ್ಲದೆ ಇವು ಮುತ್ತಿದ ಕಾಯಿಗಳು ಬಹಳ ಜಾಗ್ರತೆಯಾಗಿ ಹಣ್ಣಾಗಿ ತೊಟ್ಟು ಕಳಚಿ ಕೆಳಗೆ ಬಿದ್ದುಬಿಡುವುವು.

ಈ ನುಸಿಗಳು ವಾಟೆಯೊಳಗೇ ಬೆಳೆಯುವ ಕಾರಣ ಕ್ರಿಮಿನಾಶಕ ಚೂರ್ಣಗಳ ಮತ್ತು ದ್ರಾವಕಗಳ ಹೊಗೆ ಹಾಕುವುದರಿಂದ ಇವುಗಳನ್ನು ನಾಶಮಾಡಲು ಖಂಡಿತವಾಗಿಯೂ ಆಗಲಾರದು. ಗಿಡದಿಂದ ಕೆಳಗೆ ಬಿದ್ದ ಹಣ್ಣುಗಳನ್ನೂ ಮತ್ತು ನುಸಿಯು ತಗಲಿರಬಹುದೆಂದು ಕಂಡು ಬರುವ ಹಣ್ಣುಗಳನ್ನೂ ಕೂಡಿಸಿ ನಾಶಮಾಡುವುದು ಇವುಗಳ ಕಾಟವನ್ನು ಕಡಿಮೆ ಮಾಡಿಕೊಳ್ಳುವುದಕ್ಕೆ ಒಂದೇ ಒಂದು ಉಪಾಯವಾಗಿದೆ. ಹೊರ ದೇಶಗಳಿಂದ ಮಾವಿನ ಬೀಜಗಳನ್ನೂ ಮತ್ತು ಸೊಸಿಗಳನ್ನು ತರಿಸಿ ವ್ಯವಸಾಯ ಮಾಡುವವರು ಮೇಲ್ಕಂಡ ವಿಷಯಗಳಿಗೆ ಗಮನ ಕೊಡುವುದು ಒಳ್ಳೇದು.

ರಿ. ಗೆ.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

———o———

ಅಯ್ಯಾ ಪತ್ರಾಧಿಪರೇ,

ಇತ್ತಲಾಗೆ ಬೋರ್ಡಿನವರೂ ಊರಿನವರೂ ಕೂಡಿ ಸಾರ್ವಭೌಮ ೫ನೇಯ ಜೋರ್ಜರ ಹೆಸರಿನಲ್ಲಿ ಈ ಊರಿಗೆ ಏಳು ಲಾಂದರು ಹಚ್ಚುವರೆ ಏರ್ಪಾಡು ಮಾಡಿದ್ದರು. ಈ ಏಳು ಲಾಂದರುಗಳು ಸಹ ಹಿಂದುಗಳ ಜನಸ್ತೋಮವಿದ್ದು ಮಧ್ಯರಾತ್ರಿಯ ವರೇಗೆ ಅಂಗಡಿ, ಮನೆ, ಬಾಗಲುಗಳಲ್ಲಿ ನಿತ್ಯ ದೀಪ ಉರಿಯುವ ಸ್ಥಳಗಳಲ್ಲಿಯೇ ನೆಟ್ಟಿರುತ್ತಾರೆ. ಅಲ್ಲದೆ ಊರಿನ ಜನರು ಪರ ಊರಿಗೆ ಹೋಗಬೇಕಾದರೆ ರಾತ್ರಿಯಲ್ಲಿ ದೋಣಿಯಲ್ಲಿ ಕೂತುಕೊಳ್ಳಬೇಕಾಗುತ್ತದೆ. ಅಂಥಾ ಸ್ಥಳವು ಕಗ್ಗತ್ತಲೆಯಾದ ದಾರಿಯಿಂದ ಮುಕ್ಕಾಲು ಮೈಲು ದೂರವಿರುತ್ತದೆ. ಕತ್ತಲೆಯಾದ ಮಾಪಿಳ್ಳೆಯವರ ಪೇಟೆಯಲ್ಲಿ ಒಂದೇ ಒಂದು ಲಾಟನು ಸ್ಥಂಭ ಇಲ್ಲದೆ ಇದ್ದದ್ದು ಪ್ರಯಾಣಿಕರ ಅದೃಷ್ಟವೊ ಮಾಪಿಳಾ ಪೇಟೆಯ ಅದೃಷ್ಟವೋ ಎಂಬದು ನಾನರಿಯೆ. ರಾಜರ ಹೆಸರಲ್ಲಿ ಏರ್ಪಡಿಸಿದ ಲಾಟನುಗಳು ಸರ್ವರ ಪ್ರಯೋಜನಕ್ಕೆ ಬೀಳತಕ್ಕದ್ದೇ ಸರಿ. ಆದದರಿಂದ ಇನ್ನಾದರೂ ದಯಾಳು ಬೋರ್ಡಿನವರು ಸದರಿ ಸ್ಥಳಗಳಲ್ಲಿ ಒಂದೆರಡು ಲಾಟನನ್ನಾದರೂ ಇಡಿಸುತ್ತಿದ್ದರೆ ಕತ್ತಲೆಯಲ್ಲಿ ಖನಿಗೆ ಬೀಳುವ ಜನರಿಗೆ ಕೈಹಿಡಿದಂತೆ ಆಗುತ್ತಿತ್ತು.

ಬಂಟ್ವಾಳ. ಪುರವಾಸಿ.

ಮೂಡಬಿದ್ರೆ ತಾಲೂಕು.

(ಕಳದ ಸಂಚಿಕೆಯಿಂದ ಮುಂದರಿಸಿದುದು).

ಅಯ್ಯಾ ಪತ್ರಕರ್ತರೇ,

ಮೂಡಬಿದ್ರೆಯ ತಾಲೂಕನ್ನೇ ಊರ್ಜಿತವಿರಿಸಿ ಮಂಗಳೂರು ತಾಲೂಕು ಆಫೀಸಿನ ಕೆಲಸದಡಚಣೆಯನ್ನು ಹ್ಯಾಗೆ ಕಡಮೆ ಮಾಡಬಹುದೆಂಬದರ ವಿಷಯ ನಮ್ಮ ಅಲ್ಪಮತಿಗೆ ತೋರುವ ಸೂಚನೆಗಳನ್ನು ತಮ್ಮ ಪತ್ರ ಮೂಲಕ ಸರಕಾರದವರ ಲಕ್ಷ್ಯಕ್ಕೆ ತರುವಿರುವೆವು. ಈಗ ಸರಕಾರದವರ ಆಲೋಚನೆಯಲ್ಲಿರುವದೆಂತ ನಾವು ಕೇಳುತ್ತಿರುವ ಕಾರ್ಕಳ ತಾಲೂಕಿನ ಯುಕ್ತಾಯುಕ್ತತೆಯ ಕುರಿತು ನಮಗೆ ತೋರಿ ಬರುವ ಅಭಿಪ್ರಾಯಗಳನ್ನು ಈ ಮೂಲಕವೇ ಸರಕಾರದವರಿಗೆ ವಿಜ್ಞಾಪಿಸಿಕೊಳ್ಳುವೆವು.

ಈ ಮೊದಲು ನಮ್ಮ ಜಿಲ್ಲೆಯ ಕಲೆಕ್ಟರರಾಗಿದ್ದ ಮೆ. ಆರ್. ಎ. ಗ್ರೇಹೆಮ ದೊರೆಗಳವರು ಕಾರ್ಕಳ ತಾಲೂಕಿನ ಸ್ಥಾಪನೆಯನ್ನು ಸರಕಾರದವರಿಗೆ ಈ ಕೆಳಗೆ ಕೊಟ್ಟ ಕಾರಣಗಳಿಂದ ಸೂಚಿಸಿರಬಹುದೆಂದು ಗ್ರಹಿಸುತ್ತೇವೆ. ಕೆಲಸದ ಜೋರಾವರಿಯು ಮಂಗಳೂರು ತಾಲೂಕು ಆಫೀಸಿನಲ್ಲಿ ಮಾತ್ರವಲ್ಲ, ಉಡುಪಿ ತಾಲೂಕು ಆಫೀಸಿನಲ್ಲಿ ಸಹ ಇರುವುದರಿಂದ ನವೀನ ತಾಲೂಕು ಆಫೀಸನ್ನು ಸ್ಥಾಪಿಸುವಾಗ ಉಡುಪಿ ತಾಲೂಕಾಫೀಸಿನ ಕೆಲಸದಡಚಣೆಯನ್ನು ಸಹ ಹೋಗಲಾಡಿಸುವುದುಚಿತ. ಮಂಗಳೂರು ಡಿವಿಜನಿನ ಆಫೀಸರರಿಗೆ ಕೆಲಸವು ವಿಪರೀತವಿರುವದರಿಂದ ನವೀನವಾಗಿ ಏರ್ಪಡುವ ತಾಲೂಕಿನ ಮೇಲ್ವಿಚಾರವನ್ನು ಮಂಗಳೂರ ಡಿವಿಜನಿಗೆ ಕೊಡದೆ ಕುಂದಾಪುರ ಡಿವಿಜನ್ ಆಫೀಸರರಿಗೆ ಕೊಡುವದು ಲೇಸು. ಹೀಗೆ ಕುಂದಾಪುರ ಡಿವಿಜನಲ್ ಆಫೀಸರರ ತಾಬೆಯಲ್ಲಿ ಈ ನವೀನ ತಾಲೂಕು ಇರಬೇಕಾದ್ದರಿಂದ ತಾಲೂಕಾಫೀಸನ್ನು ಕಾರ್ಕಳದಲ್ಲಿ ಏರ್ಪಡಿಸಬೇಕಾಗಿರುವುದು. ಈ ನವೀನ ಏರ್ಪಾಡಿನಿಂದ ಬಂಟವಾಳಕ್ಕೆ ಡಿಪ್ಯುಟಿ ತಹಸಿಲ್‌ದಾರರ ಆಫೀಸನ್ನು ಇರಗೊಡಿಸಲು ಸಾಧ್ಯವಾಗಿ ಮಂಗಳೂರು ತಾಲೂಕಾಫೀಸಿನ ಕೆಲಸದ ಜೋರಾವರಿಯು ಸಹ ಕಡಮೆಯಾಗುವುದು. ಈ ಕಾರಣಗಳಿಂದ ಮೂಡಬಿದ್ರೆ ತಾಲೂಕನ್ನು ರದ್ದು ಪಡಿಸಿ ಇದರ ಬದಲಾಗಿ ಕಾರ್ಕಳ ತಾಲೂಕಾಫೀಸನ್ನು ಸ್ಥಾಪಿಸಬೇಕೆಂತ ಮೆ| ಗ್ರೆಹೆಮ್ ದೊರಗಳವರು ಸರಕಾರದವರಿಗೆ ಸೂಚಿಸಿರಬಹುದು.

ಆದರೆ ಇಂಥಾ ಏರ್ಪಾಡು ಬಹಳ ಅನುಕೂಲವೆಂತ ಪ್ರಥಮ ಸರ್ತಿಗೆ ಕಂಡು ಬರಬಹುದಾದರೂ ಇದರಿಂದ ಅಧಿಕಾರಿಗಳಿಗೂ ವರ್ಗದಾರರಿಗೂ ಉಂಟಾಗುವ ಅನಾನುಕೂಲತೆಗಳು ಬಹಳವಾಗಿವೆ. ಉಡುಪಿ ತಾಲೂಕಾಫೀಸಿನ ಕೆಲಸದಡಚಣೆಯನ್ನು ಕಡಮೆಮಾಡಬೇಕೆಂತ ಅಗತ್ಯ ತೋರಿದ್ದಲ್ಲಿ ಕಾರ್ಕಳದಲ್ಲಿ ನವೀನ ತಾಲೂಕಾಫೀಸನ್ನು ಸ್ಥಾಪಿಸಬೇಕೆಂತಿಲ್ಲ. ನಾವು ಈ ಮೊದಲು ಸೂಚಿಸಿರುವಂತೆ ಮೂಡಬಿದ್ರೆ ತಾಲೂಕಿನ ಸರಹದ್ದಿನಲ್ಲಿರುವ ಉಡುಪಿ ತಾಲೂಕಿನ ಗ್ರಾಮಗಳನ್ನು ಮೂಡಬಿದ್ರೆ ತಾಲೂಕಿಗೂ ಕುಂದಾಪುರ ತಾಲೂಕು ಸರಹದ್ದಿಗೆ ಸಮೀಪವಿರುವ ಗ್ರಾಮಗಳನ್ನು ಕುಂದಾಪುರ ತಾಲೂಕಿಗೂ ಸೇರಿಸಿಕೊಂಡು ಉಡುಪಿ ತಾಲೂಕಾಫೀಸಿನ ಕೆಲಸವನ್ನು ಕಡಮೆ ಮಾಡಬಹುದು. ಅದಲ್ಲದೆ ನವೀನ ತಾಲೂಕನ್ನು ಕುಂದಾಪುರ ಡಿವಿಜನಲ್ ಆಫೀಸರರ ತಾಬೆಯಲ್ಲಿ ಇರಗೊಡಿಸುವುದರಿಂದ ನವೀನ ತಾಲೂಕಿನ ಪ್ರಾಂತ್ಯಗಳಲ್ಲಿ ಕುಂದಾಪುರ ತಾಲೂಕಿನ ಉತ್ತರ ಪ್ರಾಂತ್ಯಗಳಿಂದ ಸರ್ಕೀಟು ಬೆಳಸುವದು ಕುಂದಾಪುರ ಡಿವಿಜನಲ್ ಆಫೀಸರರಿಗೆ ಶುಲಭಸಾಧ್ಯವಲ್ಲ. ಹಾಗೆಯೇ ನವೀನವಾಗಿ ಏರ್ಪಡಿಸಬೇಕೆಂತಿರುವ ಕಾರ್ಕಳ ತಾಲೂಕು ಚಕಬಂದಿಗೆ ಸೇರುವಂಥ ವೇಣೂರು, ಬಜ್ರೆ, ಕುಕ್ಕೇಡಿ, ನಿಟ್ಟಡೆ, ನಾಲ್ಕೂರು, ಬಳಂಜೆ ಈ ಪ್ರಾಂತ್ಯಗಳಲ್ಲಿರುವ ವರ್ಗದಾರರಿಗೂ ಇತರ ಪ್ರಜೆಯವರಿಗೂ ೮೦ ಮೈಲು ದೂರವಿರುವ ಕುಂದಾಪುರ ಡಿವಿಜನಲ್ ಆಫೀಸಿಗೆ ಆಗಿಂದಾಗ್ಯೆ ಹೋಗಿಬರುವದು ಸಹ ತುಂಬಾ ಪ್ರಯಾಸವಾಗಿದೆ. ಈ ಗ್ರಾಮಗಳಿಂದ ಕುಂದಾಪುರಕ್ಕೆ ಹೋಗುವ ರಸ್ತೆಯಲ್ಲಿ ಕೆಲವು ನದಿಗಳನ್ನು ದಾಟಲಿಕ್ಕಿರುವದರಿಂದ ಮಳೆಕಾಲದಲ್ಲಿ ಕುಂದಾಪುರಕ್ಕೆ ಹೋಗುವದು ಕೆಲವು ಸಾರಿ ಅಸಾಧ್ಯವಾಗಲೂ ಬಹುದು. ಇದರಿಂದ ರೆವಿನ್ಯು ಕ್ರಿಮಿನಲ್ ಇತ್ಯಾದಿ ಕೆಲಸಗಳ ಮೇಲ್ವಿಚಾರಣೆಯು ನವೀನ ತಾಲೂಕಿನಲ್ಲಿ ಕುಂದಾಪುರ ಡಿವಿಜನಲ್ ಆಫೀಸರರಿಂದ ಸರಿಯಾಗಿ ಸಾಗದು ಕುಂದಾಪುರ ಡಿವಿಜನಲ್ ಆಫೀಸರರಿಗೆ ಮಂಗಳೂರು ಡಿವಿಜನಲ್ ಆಫೀಸರರಿಗಿಂತ ಕೆಲಸವು ಕಡಿಮೆ ಇರುವದು ಸಂಶಯಕರ. ಒಂದು ವೇಳೆ ಹಾಗೆ ಕಡಿಮೆ ಇರುವುದೆಂತ ಕಂಡು ಬಂದು "ಹೊಸ" ತಾಲೂಕಾಫೀಸನ್ನು ಅವರ ತಾಬೆಯಲ್ಲಿರಿಸುವುದು ಯುಕ್ತವಲ್ಲ. ಯಾಕಂದರೆ ಮೂಡಬಿದ್ರೆ ಪ್ರಾಂತ್ಯಗಳಲ್ಲಿ ಮುಖ್ಯವಾಗಿ ಮೂಡಬಿದ್ರೆಯ ಪೂರ್ವ ದಿಕ್ಕಿನಲ್ಲಿರುವ ಘಟ್ಟಗಳ ಕೆಳಗಿರುವ ಗ್ರಾಮಗಳಲ್ಲಿ ರೆವಿನ್ಯು ಮೆಜಿಸ್ಟೇರಿಯಲ್ ಪೋಲೀಸು ಆಡಳಿತೆಗಳ ಮೇಲ್ವಿಚಾರವು ಡಿವಿಜನಲ್ ಆಫೀಸರಿಂದ ಸರಿಯಾಗಲಿಕ್ಕೆ ಹೊಸ ತಾಲೂಕು ಏರ್ಪಾಡು ಮಾಡಿದ್ದಾಯಿತು. ಇಂಥಾ ತಾಲೂಕಿನ ಮೇಲ್ವಿಚಾರವನ್ನು ಕುಂದಾಪುರ ಡಿವಿಜನಿನ ಆಫೀಸರರ ಕೈಕೆಳಗೆ ಇರಿಸಿದ್ದಲ್ಲಿ ಇದು ಸಮರ್ಪಕವಾದ ರೀತಿಯಲ್ಲಿ ಆಗುವರೆ ಸಾಧ್ಯವೋ? ಕುಂದಾಪುರ ಡಿವಿಜನಲ್ ಆಫೀಸಿಗೂ ಕಾರ್ಕಳ ತಾಲೂಕಿಗೆ ಸೇರಿಸಲ್ಪಡುವ ಹಲವು ಗ್ರಾಮಗಳಿಗೂ ಮಧ್ಯವಿರುವ ದೂರವೇ ಇದಕ್ಕೆ ಬಹಳ ಆಕ್ಷೇಪಕರವಾಗಿರುತ್ತದೆ. ಮಂಗಳೂರು ಡಿವಿಜನಲ್ ಆಫೀಸರರ ವಿನಹ ಮತ್ತ್ಯಾವ ಡಿವಿಜನಲ್ ಆಫೀಸರರಿಂದಾದರೂ ಹೊಸ ತಾಲೂಕಿನ ಮೇಲ್ವಿಚಾರವು ಸರಿಯಾಗಿ ಸಾಧ್ಯವಾಗುವುದು ನಮಗೆ ತೋರುವುದಿಲ್ಲ. ಆಫೀಸರರಿಗೆ ಕೆಲಸ ಭಾರವು ಅಧಿಕವಾಗಿರುವದು ಹೌದು. ಇಂಥಾ ಕೆಲಸ ಭಾರವನ್ನು ತಗ್ಗಿಸಲಿಕ್ಕೆ ಇವರಿಗೆ ಮೆಜಿಸ್ಟ್ರೇಟ ಇಲಾಖಾ ಕೆಲಸದಲ್ಲಿ ಸಹಕಾರ ದೊರಕಿದರೆ ಸಾಧ್ಯವಾಗುತ್ತದೆ. ನವೀನ ತಾಲೂಕಿನ ಮೇಲ್ವಿಚಾರವು ಮಂಗಳೂರು ಡಿವಿಜನಲ್ ಆಫೀಸರರಿಗೆ ಕೊಟ್ಟರೂ ಅಥವಾ ಕೊಡದಿದ್ದರೂ ಇವರ ಮೆಜಿಸ್ಟ್ರೇಟ ಇಲಾಖಾ ಕೆಲಸಕ್ಕೆ ಒಬ್ಬ ಸಹಾಯಕ ಆಫೀಸರರನ್ನು ನೇಮಿಸುವುದು ಅತ್ಯಗತ್ಯವಾಗಿದೆ. ಇಂಥಾ ಸಹಾಯಕ ಆಫೀಸರರು ನೇಮಕಪಟ್ಟರೆ ಪ್ರಕೃತ ಮಂಗಳೂರು ಡಿವಿಜನಲ್ ಆಫೀಸಿನ ಆಡಳಿತೆಯೊಳಗಿರುವ ಪ್ರಜೆಗಳಿಗೆ ಬಹಳ ಅನುಕೂಲವಾಗುವವಲ್ಲದೆ ಮೂಡಬಿದ್ರೆ ತಾಲೂಕಿನ ಮೇಲ್ವಿಚಾರವನ್ನು ಏನೂ ಅಡಚಣೆಯಿಲ್ಲದೆ ಈ ಆಫೀಸರರ ಕೈಕೆಳಗೆ ಇಡಲಿಕ್ಕೆ ಮಾರ್ಗ ದೊರಿಯುವದು. ಈ ಸಂದರ್ಭದಲ್ಲಿ ಕಳದ ಒಂದೆರಡು ವರುಷಗಳಲ್ಲಿ ಮೂಡಬಿದ್ರೆ ತಾಲೂಕನ್ನು ಮಂಗಳೂರು ಡಿವಿಜನಿಗೆ ಕೂಡಿಸಿದ್ದರಿಂದ ಈ ಡಿವಿಜನಿನ ಕೆಲಸ ನಿರ್ವಾಹಕ್ಕೆ ಎಂಥಾ ವಿಶೇಷ ಅಡಚಣೆಯು ಸಂಭವಿಸಿರುವುದೆಂಬುದನ್ನು ಸಹ ಸರಕಾರದವರು ಪರ್ಯಾಲೋಚಿಸಬೇಕಾಗಿರುವುದು.

ಮೂಡಬಿದ್ರೆ ಪ್ರಾಂತ್ಯಗಳಲ್ಲಿ ಮೆಜಿಸ್ಟ್ರೇಟ ಇಲಾಖಾ ಕೆಲಸವು ಹಿಂದೊಮ್ಮೆ ಕಾರ್ಕಳ ಡಿಪ್ಯುಟಿ ತಹಸೀಲದಾರರಿಂದ ನಿರ್ವಹಿಸಲ್ಪಟ್ಟಿತ್ತೆಂಬ ವಾದವು ಕಾರ್ಕಳ ತಾಲೂಕಿನ ಪರವಾಗಿ ಮುಂದೊತ್ತಲ್ಪಟ್ಟಿರುವದೆಂತ ಕೇಳಿಸುತ್ತಿರುವದು. ಆದರೆ ಇಂಥಾ ವಾದವು ಪೂರ್ಣ ಸತ್ಯವಲ್ಲ. ಯಾಕಂದರೆ ಕಾರ್ಕಳ ಸಮೀಪವಿರುವ ಮೂಡಬಿದ್ರೆಯ ಕೆಲವು ಹಳ್ಳಿಗಳಲ್ಲಿ ಸೆಕೆಂಡ್ ಕ್ಲಾಸ್ ಮೊಕದಮೆಗಳ ತನಕಿಯು ಕಾರ್ಕಳದ ಡಿಪ್ಯುಟಿ ತಹಸೀಲದಾರರಿಂದ ನಡಿಸಲ್ಪಡುತ್ತಿತ್ತು. ಒಂದನೇ ತರಗತಿಯ ಈ ಪ್ರಾಂತ್ಯದ ಕ್ರಿಮಿನಲ್ ಮೊಕದಮೆಗಳೆಲ್ಲಾ ಮಂಗಳೂರು ಡಿವಿಜನಲ್ ಆಫೀಸರರಿಂದಲೇ ತನಖಿಯಾಗುತ್ತಿದ್ದವು.

ಹೀಗೆ ಉಡುಪಿ ತಾಲೂಕಾಫೀಸಿನ ಕೆಲಸದ ಭಾರವನ್ನು ತಗ್ಗಿಸಲಿಕ್ಕೆ ಕಾರ್ಕಳ ತಾಲೂಕಿನ ಅಗತ್ಯವಿಲ್ಲ. ಕುಂದಾಪುರ ಡಿವಿಜನಲ್ ಆಫೀಸಿಗೆ ನವೀನ ತಾಲೂಕನ್ನು ಸೇರಿಸುವುದರಿಂದ ಮೂಡಬಿದ್ರೆಯ ಪೂರ್ವಕ್ಕಿರುವ ಘಟ್ಟದ ಕೆಳಗಿರುವ ಪ್ರಾಂತ್ಯಗಳ ರೆವಿನ್ಯು ಕ್ರಿಮಿನಲ್ ಪೋಲಿಸು ಆಡಳಿತೆಗಳ ಮೇಲ್ವಿಚಾರವು ಸರಿಯಾಗಿ ಸಾಗದು, ಅದ್ದರಿಂದ ಕಾರ್ಕಳ ತಾಲೂಕು ರಚನೆಯು ಬಹಳ ಆಕ್ಷೇಪಕರವೆಂಬುದು ಮೇಲಿನ ವಿವರದಿಂದ ಸರ್ವರಿಗೂ ಖಚಿತವಾಗುವದು. ಮುಂದುವರಿಯುವದು.

ವಿದೇಶ ವೃತ್ತಾಂತ.

ನ್ಯೂಯೊರ್ಕಿಗೆ ಹೋಗುತ್ತಿದ್ದ ಬ್ರಿಟಿಷ್ ಟಿಟಾನಿಕ್ ಎಂಬ ದೊಡ್ಡ ಹಡಗವು ತಾ. ೧೪ನೇ ಆದಿತ್ಯವಾರ ಹಿಮಗಡ್ಡೆಯ ಗುಡ್ಡಕ್ಕೆ ತಾಗಿ ಒಡದು ಹೋಯಿತು ಎಂಬ ದುಃಖಕರವಾದ ವಾರ್ತೆ ಬಂದದೆ. ತಾ. ೧೪ನೇ ಆದಿತ್ಯವಾರ ರಾತ್ರಿ ೧೧-೪೫ ಘಂಟೆಗೆ ಹಿಮಗಡ್ಡೆಯು ಹಡಗಕ್ಕೆ ತಾಗಿದಾಕ್ಷಣ ತಂತೀ ಇಲ್ಲದ ಟೆಲಗ್ರಾಫಿನ ಮೂಲಕ ೨೦೦-೩೦೦ ಮೈಲು ದೂರದಲ್ಲಿದ್ದ ಇತರ ಹಡಗಗಳಿಗೆ ತಿಳಿಸಿ ಸಹಾಯ ಕೇಳಿಕೊಂಡರು. ಆ ಹಡಗಗಳಲ್ಲಿ 'ಕಾರ್ಪೇತ್ಯ' ಎಂಬ ಹಡಗವು ಬೇಗನೇ ಸಹಾಯಮಾಡಲು ಬಂತು. ಆದರೆ ಅದು ಬರುವುದರೊಳಗೆ ಟಿಟಾನಿಕ್ ಹಡಗವು ಮುಣುಗಿತು. ಆದ್ದರಿಂದ ಟಿಟಾನಿಕ್ ಹಡಗದಲ್ಲಿದ್ದ ಹೆಂಗಸರೂ ಮಕ್ಕಳೂ ಇನ್ನು ಕೆಲವು ಗಂಡಸರೂ 'ಲ್ಯಾಫ್ ಬೋಟ್' ಎಂಬ ದೋಣಿಯಲ್ಲಿ ಕೆಳಗಿಳಿಸಲ್ಪಟ್ಟರು. ಹೆಚ್ಚಿನವರು ಮುಣುಗಿ ಸತ್ತರು. ಟಿಟಾನಿಕ್ ಎಂಬ ಹಡಗವು ಲೋಕದಲ್ಲ ದೊಡ್ಡ ಹಡಗ. ಈ ಹಡಗದಲ್ಲಿದ್ದ ಪ್ರಯಾಣಿಕರು ಅಮೇರಿಕದ ಶ್ರೀಮಂತರು ಮತ್ತು ಕೋಟ್ಯಾಧಿಪರು. ಇವರು ಇಂಗ್ಲಾಂಡ್ ಮತ್ತು ಇತರ ಯೂರೋಫ್ ದೇಶಗಳನ್ನು ಸಂಚರಿಸಿ ತಮ್ಮ ಮನೆಗೆ ಹಿಂದೆರಳುವವರಾಗಿದ್ದರು. ಹಡಗದಲ್ಲಿ ಒಟ್ಟಿಗೆ ೨,೩೪೦ ಪ್ರಯಾಣಿಕರಿದ್ದರು. ಹಡಗದಲ್ಲಿ ಸುಮಾರು ೫೦ ಟನ್ ರಬ್ಬರು ಮತ್ತು ಚಾ, ವಜ್ರ ಮೊದಲಾದ ಸುಮಾರು ಒಂದು ಮಿಲಿಯ ಪವನು ಕ್ರಯ್ಯ ಬಾಳುವ ಚಿನ್ನಾಭರಣಗಳು ಇದ್ದವು. ಹಡಗದಲ್ಲಿದ್ದ ಪ್ರಯಾಣಿಕರು ಹೆಚ್ಚಿನವರು ಮೊದಲಿನ ಮತ್ತು ಎರಡನೇ ತರಗತಿಯ ಪ್ರಯಾಣಿಕರು. ಟಿಟಾನಿಕ್ ಎಂಬ ಹಡಗವು ೧,೧೫೫,೦೦೦ ಪವನು ಕ್ರಯಬಾಳುವಂಥಾದ್ದು. ಇಷ್ಟು ಕ್ರಯದ ಹಡಗವನ್ನು ಅಷ್ಟೇ ಬೆಲೆಗೆ ಇನ್ಸೂರು ಮಾಡಲಿಕ್ಕೆ ಯಾವ ಇನ್ಸೂರು ಕಂಪೆನಿಯವರಾದರೂ ಶಕ್ತರಲ್ಲವಾದ್ದರಿಂದ ಒಂದು ಮಿಲಿಯ ಪವನಿಗೆ ಇನ್ಸೂರು ಆಗಿತ್ತು. ಈ ಹಡಗದಲ್ಲಿದ್ದ ಸಾಮಾನುಗಳೆಲ್ಲವೂ ಬಹಳ ಕ್ರಯಬಾಳುವಂಥವುಗಳಾಗಿದ್ದವು. ಹಡಗದಲ್ಲಿದ್ದ ಒಬ್ಬ ಅಮೆರಿಕದ ಹೆಂಗಸಿನ ಹತ್ತರವೇ ೧,೨೧,೦೦೦ ಪವನಿನ ರತ್ನಗಳಿದ್ದವು. ಇಂಥಾ ದೊಡ್ಡ ಹಡಗ ನಷ್ಟವು ಈ ವರೆಗೆ ಉಂಟಾಗಲಿಲ್ಲ. ಹಡಗ ನಷ್ಟದ ಈ ವಾರ್ತೆ ಕೇಳುತ್ತಲೇ ಎಲ್ಲೆಲ್ಲಿಯೂ ಮಹಾ ದುಃಖಕ್ಕೆ ಕಾರಣವಾಯಿತು. ಹಡಗದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಜೋರ್ಜಸಾರ್ವಭೌಮರವರೂ, ರಾಣಿಯವರೂ, ಪ್ರಭುಗಳೂ, ಇತರ ದೇಶಗಳ ರಾಜರುಗಳೂ ತಂತೀ ಕಳುಹಿಸಿ ಕೊಟ್ಟರು. ಪ್ರಾಣನಷ್ಟ ಪಟ್ಟವರ ಕುಟುಂಬಗಳಿಗೆ ಸಹಾಯಾರ್ಥವಾಗಿ ಸಾವಿರಾರು ಪವನುಗಳು ವಂತಿಗೆ ಕೂಡುತ್ತಲಿವೆ. ಜೋರ್ಜಸಾರ್ವಭೌಮರವರು ಈ ಸಹಾಯ ಫಂಡಿಗೆ ೫೦೦ ಪವನು, ಮೇರಿ ರಾಣಿಯವರು ೨೦೦ ಪವನು ಕೊಟ್ಟರುವರು.

ಹಡಗದ ಲೈಫ್ ಬೋಟುಗಳಲ್ಲಿ ಇಳಿದಿದ್ದ ಪ್ರಯಾಣಿಕರನ್ನು ಸಂರಕ್ಷಿಸಿದ ಕಾರ್ಪೇತಿಯ ಎಂಬ ಹಡಗವು ಕಳದ ಶುಕ್ರವಾರ ನ್ಯೂಯೊರ್ಕಿಗೆ ತಲಪಿತು. ಹಡಗವು ತಲಪುತ್ತಲೇ ಸಾವಿರಾರು ಜನರು ಬಂದರಕ್ಕೆ ಬಂದು ಅಪಾರವಾದ ಶೋಕವನ್ನು ತೋರ್ಪಡಿಸಿದರು. ಒಂದು ಕಂಪೆನಿಯವರು ಸಾಹಾಯಾರ್ಥವಾಗಿ ಕೂಡಿಸಿದ ಹಣದಲ್ಲಿ ೨೦ ಸಾವಿರ ಪವನುಗಳನ್ನು ಹಂಚಿದರಲ್ಲದೆ ಅವರನ್ನು ಪರಾಂಬರಿಸುವರೆ ಡಾಕ್ತರರನ್ನೂ ಇತರ ಸಹಾಯಕರನ್ನೂ ಒದಗಿಸಿ ಕೊಟ್ಟರು. ಈ ಅವಘಡದಲ್ಲಿ ಸಂರಕ್ಷಿಸಲ್ಪಟ್ಟವರು ತಮಗೆ ಬಂದೊದಗಿದ ಸಂಕಷ್ಟವನ್ನು ಈ ರೀತಿ ವರ್ಣಿಸುವರು:—ಎಪ್ರೀಲ್ ತಾ. ೧೪ನೇ ಆದಿತ್ಯವಾರ ರಾತ್ರಿ ೧೧॥ ಗಂಟೆಗೆ ಹಡಗವು ಹಿಮದ ಗುಡ್ಡಕ್ಕೆ ತಾಗಿತು. ಕೂಡ್ಲೆ ಹಡಗದ ಹುದ್ದೆದಾರರೂ ನಾವಿಕರೂ ಪ್ರಯಾಣಿಕರನ್ನು ರಕ್ಷಿಸುವದಕ್ಕೆ ಆದಷ್ಟು ಧಾವತಿ ಪಡುವವರಾದರು. ಆಯಾ ಹಡಗಗಳಿಗೆ ತಂತೀ ಇಲ್ಲದ ಟೆಲಗ್ರಾಪಿನ ಮೂಲಕ ತಮ್ಮ ಸಂಕಷ್ಟವನ್ನು ತಿಳಿಸಿದರು. ಕಾರ್ಪೇತ್ಯ ಹಡಗಕ್ಕೆ ಮಧ್ಯ ರಾತ್ರಿ ಈ ವಾರ್ತೆ ಸಿಕ್ಕಿ ಬೇಗನೇ ಸಾಹಾಯಾರ್ಥವಾಗಿ ಹೊರಟು ಸೋಮವಾರ ಬೆಳಿಗ್ಯೆ ಹಡಗವೊಡೆದ ಸ್ಥಳಕ್ಕೆ ಮುಟ್ಟಿ ಲ್ಯಾಪ್ ಬೋಟುಗಳಲ್ಲಿದ್ದ ಹತಶೇಷರನ್ನು ಸೇರಿಸಿಕೊಂಡಿತು.

ಟಿಟ್ಯಾನಿಕ್ ಹಡಗದಲ್ಲಿ ೩೫೦೦ ಪ್ರಯಾಣಿಕರನ್ನು ತುಂಬಿಸ ಬಹುದಿತ್ತು. ಆದರೆ ೨೩೪೦ ಪ್ರಯಾಣಿಕರು ಮಾತ್ರವೇ ಇದ್ದರು. ಈ ಪೈಕಿ ೨೧೦ ಮೊದಲನೇ ತರಗತಿಯ ಪ್ರಯಾಣಿಕರು, ೧೨೫ ಎರಡನೇ ತರಗತಿಯವರು, ೨೦೦ ಮೂರನೇಯ ತರಗತಿಯವರು, ೪ ಹಡಗದ ಹುದ್ದೆದಾರರು, ೩೯ ನಾವಿಕರು, ೯೬ ಸ್ಟ್ಯುವಾರ್ಡರು, ೭೧ ಬೆಂಕಿಯ ಕೆಲಸದವರು ಸಂರಕ್ಷಿಸಲ್ಪಟ್ಟರು. ಉಳಿದವರು ಸಮುದ್ರ ಪಾಲಾದರು. ಇಷ್ಟು ಮಂದಿ ಪ್ರಯಾಣಿಕರಿದ್ದ ಹಡಗದಲ್ಲಿ ೯೫೦ ಮಂದಿಯನ್ನು ಬದುಕಿಸುವ ಲ್ಯಾಪ್ ಬೋಟುಗಳು ಮಾತ್ರವೇ ಇದ್ದವು. ಆದ್ದರಿಂದ ಎಲ್ಲಾ ಹಡಗದಲ್ಲಿ ಎಷ್ಟು ಪ್ರಯಾಣಿಕರಿರುತ್ತಾರೋ ಅಷ್ಟೇ ಪ್ರಯಾಣಿಕರನ್ನು ಬದುಕಿಸಲಾಗುವಷ್ಟು ಲ್ಯಾಪ್ ಬೋಟುಗಳನ್ನು ಇಡುವ ವಿಲೆವಾರಿಯನ್ನು ಹಡಗ ಕಂಪೆನಿಯವರು ಕೂಡ್ಲೇ ಮಾಡತಕ್ಕದ್ದೆಂದು ಇವರು ವಿಜ್ಞಾಪಿಸಿಕೊಂಡಿರುವರು. ಹತಶೇಷರಲ್ಲಿ ಹೆಚ್ಚಿನವರು ಹೆಂಗಸರೂ ಮಕ್ಕಳೂ ಆಗಿದ್ದಾರೆ. ಒಡೆದು ಹೋದ ಟಿಟಾನಿಕ್ ಹಡಗದಿಂದ ಕಾರ್ಪೇತ್ಯಯ ಹಡಗಕ್ಕೆ ಪ್ರಯಾಣಿಕರು ಇಳಿಯುವ ನೋಟವು ಬಹಳ ಕರುಣೆಗೆ ಯೋಗ್ಯವಾಗಿತ್ತು. ದೊಡ್ಡವರ ಸೊಂಟಕ್ಕೆ ಹಗ್ಗಗಳನ್ನು ಬಿಗಿದು, ಮಕ್ಕಳನ್ನೂ ಮೊಲೆಕೂಸುಗಳನ್ನೂ ಚೀಲಗಳಲ್ಲಿ ತುಂಬಿಸಿ ಕಾರ್ಪಾತ್ಯಕ್ಕೆ ಮೇಲಕ್ಕೆತ್ತಿದರು. ಕೆಲವು ಪ್ರಯಾಣಿಕರು ರಾತ್ರಿಯ ವಸ್ತ್ರದಲ್ಲಿಯೂ ಕೆಲವರು ಕಂಬಳಿಗಳನ್ನು ಹೊದ್ದುಕೊಂಡೂ ಚಳಿಯಿಂದ ನಡುಗುತ್ತಿದ್ದರು. ೫ ತಾಸುಗಳ ವರೆಗೆ ಕಠಿಣ ಚಳಿ ಇತ್ತು. ಮೊದಲಾಗಿ ಹೆಂಗಸರೂ ಮಕ್ಕಳೂ ಲ್ಯಾಪ್ ಬೋಟುಗಳಿಗೆ ಇಳಿಯಬೇಕೆಂಬ ಅಪ್ಪಣೆಯಾಯಿತು. ಕೆಲವು ಹೆಂಗಸರು ಇಳಿದರು. ಆದರೆ ಕೆಲವರು ತಮ್ಮ ಗಂಡಂದಿಯರನ್ನು ಬಿಡಲಾರದೆ ಅವರ ಒಟ್ಟಿಗನೇ ಸಮುದ್ರ ಪಾಲಾದರು. ಪತ್ನಿಯರನ್ನು ಬಿಡಲೊಲ್ಲದ ಕೆಲವು ಹೆಂಗಸರು ಬಲತ್ಕಾರದಿಂದ ದೋಣಿಗೆ ಇಳಿಸಲ್ಪಟ್ಟರು. ಇಂಥಾ ಅವಘಡದ ಸಮಯದಲ್ಲಿ ಹೆಂಗಸರ ಕೂಗಾಟವು ಕೇಳಲ್ಪಡಲಿಲ್ಲ. ಒಟ್ಟಿಗೆ ೧,೫೯೫ ಮಂದಿ ಮೃತ ಪಟ್ಟರು. ಹಡಗದ ತಾಂಡೇಲನೂ ಇಂಜಿನಿಯರನೂ ಗುಂಡು ಹೊಡೆದು ಸ್ವಘಾತ ಮಾಡಿಕೊಂಡರು ಎಂಬದಾಗಿ ಕೆಲವರು ಹೇಳುವರು. ಅವರು ಸ್ವಘಾತ ಮಾಡಿಕೊಳ್ಳಲಿಲ್ಲ. ನೀರಿನ ಬಡತಕ್ಕೆ ಸಿಕ್ಕಿ ಮುಣುಗಿ ಹೋದರು ಎಂಬದಾಗಿ ಪ್ರಯಾಣಿಕರ ಪೈಕಿ ಜೋರ್ಜ ಬಾರ್ಡೆನ್ ಎಂಬವರು ಹೇಳುವರು. ಲ್ಯಾಪ್ ಬೋಟಿಗೆ ಇಳಿಯುವಾಗ ಕೆಲವರ ಕಾಲು ತುಂಡಾಯಿತು. ಕೆಲವರು ಆಯಾಸದಿಂದ ಮೃತ ಪಟ್ಟರು.

ಟಿಟಾನಿಕ್ ಹಡಗವು ಒಡೆದು ಹೋಗಿ ಸತ್ತವರಲ್ಲಿ ಲೋಕದ ಜನರೆಲ್ಲರ ಸ್ನೇಹಿತನೆಂದೆನ್ನಿಸಿಕೊಂಡು "ರಿವ್ಯೂ ಅಫ್ ರಿವ್ಯೂಸ್" ಎಂಬ ಪತ್ರದ ಸಂಪಾದಕರಾಗಿದ್ದ ಮೆ| ಡಬ್ಲ್ಯು, ಟಿ, ಸ್ಟೆಡ್‌ರವರು ಸಮುದ್ರ ಪಾಲಾದರೆಂಬದು ತಿಳಿಯುವುದು ಬಹಳ ವಿಷಾಧಕರವಾಗಿದೆ. ಮೆ| ಸ್ಟೆಡ್‌ರವರು ೧೮೪೯ನೇ ಇಸವಿಯಲ್ಲಿ ಹುಟ್ಟಿ ತನ್ನ ೧೪ನೇ ವರ್ಷದಲ್ಲಿ ಸ್ಥಳೀಕ ವರ್ತಮಾನ ಪತ್ರಿಕೆಯೊಂದರಲ್ಲಿ ಕೆಲಸ ಮಾಡ ಪ್ರಾರಂಭಿಸಿದರು. ಈ ಪತ್ರದಲ್ಲಿ ೧೮೮೦ನೇ ಇಸವಿ ವರೆಗೆ ಸಂಪಾದಕರಾಗಿದ್ದು ಅನಂತರ ಪಾಲ್ ಮಾಲ್ ಗಜೆಟ್ ಎಂಬ ಪತ್ರಿಕೆಗೆ ಸೇರಿದರು. ೧೮೯೦ನೇ ಇಸವಿ ಇವರು ತಾನಾಗಿ "ರಿವ್ಯೂ ಅಫ್ ರಿವ್ಯೂಸ್" ಎಂಬ ಪ್ರಖ್ಯಾತ ಪತ್ರಿಕೆಯನ್ನು ಹೊರಡಿಸಿ ಲೋಕ ಪ್ರಖ್ಯಾತರೂ ಲೋಕ ಪ್ರಿಯರೂ ಎಂದನ್ನಿಸಿಕೊಂಡರು. ೧೮೮೫ನೇ ಇಸವಿಯಲ್ಲಿ ಇವರು "ಮೈಡೆನ್ ಟ್ರಿಬ್ಯೂಟ್ ಫೋರ್ ಮೋಡರ್ನ್ ಬಬಿಲೋನ್" ಎಂಬ ಪುಸ್ತಕವನ್ನು ರಚಿಸಿದ್ದರಿಂದ ಇಂಗ್ಲಾಂಡಿನಲ್ಲಿ ಬಹಳ ಕಳವಳ ಉಂಟಾಗಿ ಇವರು ವಿಚಾರಣೆಗೆ ಗುರಿ ಮಾಡಲ್ಪಟ್ಟು ೩ ತಿಂಗಳ ಸಜಾ ಹೊಂದಿದರು. ಅನಂತರ ಪುನಃ ಲೋಕ ಪ್ರಯೋಜನವಾದ ಹಲವು ಪುಸ್ತಕಗಳನ್ನು ರಚಿಸಿದರು. ಹೇಗಿನ ಪಂಚಾಯತಿ ಕೋರ್ಟನ್ನು ಸ್ಥಾಪಿಸಲಿಕ್ಕೆ ಕಾರ್ನಿಜಿಯವರ ಕೂಡೆ ಧಾವತಿ ಪಟ್ಟವರಲ್ಲಿ ಇವರೇ ಮೂಲ ಪುರುಷರು, ಟ್ರಾನ್ಸ್‌ವಾಲ್ ಯುದ್ಧ ಮಾಡಕೂಡದೆಂಬದಾಗಿ ಬಹಳವಾಗಿ ವಿರೋಧಿಸಿದವರಲ್ಲಿ ಮುಂದಾಳು. ಬೂವರ್‍ರ ಯುದ್ಧ ಕಾಲದಲ್ಲಿ ಅವರು "ನಾನು ನನ್ನ ಸಹೋದರರಾದ ಬೂವರ್‍ರನ್ನು ಕೊಲ್ಲಲೋ" ಎಂಬ ಒಂದು ವಹಿಯನ್ನು ಪ್ರಕಟಿಸಿದ್ದರು. ಸರಕಾರದವರು ಆ ವಹಿಯು ಯುದ್ಧ ರಂಗಕ್ಕೆ ಮುಟ್ಟದ ಹಾಗೆ ಮಾಡಿದರು. ಲೋಕದಲ್ಲಿ ಸಮಾಧಾನವನ್ನುಂಟು ಮಾಡಬೇಕೆಂಬದೇ ಮೆ| ಸ್ಟೆಡರವರ ಮುಖ್ಯ ಪ್ರಯತ್ನವಾಗಿತ್ತು. ಕೆಲವು ವರ್ಷದ ಹಿಂದೆ ಮೆ| ಸ್ಟೆಡರವರು ದಿನಾ ವಹಿಯ ಒಂದು ಪತ್ರಿಕೆಯನ್ನು ಹೊರಡಿಸಿದರು. ಆದರೆ ಅವರ ಅನಾರೋಗ್ಯದಿಂದ ಬೇಗನೇ ಅದು ನಿಂತು ಹೋಯಿತು. ಮಕ್ಕಳ ಮೇಲೆ ಇವರಿಗೆ ಬಹಳ ಪ್ರೀತಿ. ಆದ್ದರಿಂದಲೇ "ಬುಕ್ ಫೋರ್ ದಿ ಬ್ರೈನ್ಸ್" ಎಂಬ ಮಕ್ಕಳಿಗೆ ಪ್ರಯೋಜನಾರ್ಥವಾದ ಪುಸ್ತಕಗಳನ್ನು ರಚಿಸಿದರು. ಇಂಗ್ಲಾಂಡಿನ ಎಲ್ಲಾ ವರ್ತಮಾನ ಪತ್ರಿಕೆಗಳಿಗಿಂತಲೂ ಇವರು ಪ್ರಕಟಿಸುತ್ತಿದ್ದ "ರಿವ್ಯೂ ಅಫ್ ರಿವ್ಯೂಸ್ ಎಂಬ ಪತ್ರಿಕೆಯು ಇಂಗ್ಲಾಂಡಿನ ರಾಜರಿಂದ ಹಿಡಿದು ಬಡವರ ವರೆಗಿನವರನ್ನು ನ್ಯಾಯನೀತಿಯಲ್ಲಿ ನಡಿಸುವ ಚುಕ್ಕಾನಿಯಂತಿತ್ತು. ಭಾರತೀಯರನ್ನು ಇವರು ಬಹಳವಾಗಿ ಪ್ರೀತಿಸುವವರಾಗಿದ್ದರು. ಭಾರತೀಯರ ಕಷ್ಟಗಳನ್ನು ಅರಿತುಕೊಂಡವರಾಗಿ ಅನೇಕಾವೃತ್ತಿ ಅವರಿಗಾಗಿ ಏನೊಂದೂ ಭಯವಿಲ್ಲದೆ ಹೋರಾಡಿದ್ದರು. ಅವರ ಲೇಖನಿಯು ಯಾವಾಗಲೂ ಕೆಟ್ಟದನ್ನು ಕಂಡು ಹಿಡಿದು ಸರಿಪಡಿಸುವಂಥಾದಾಗಿತ್ತು. ಒಟ್ಟಾರೆ ಈ ಲೋಕವು ಅತೀ ಪ್ರಯೋಜನವಾದ ಒಬ್ಬ ಮನುಷ್ಯನನ್ನು ಕಳೆದುಕೊಂಡಿತು ಎಂಬದಾಗಿ ಆಯಾ ಪತ್ರಿಕೆಗಳು ಟೀಕಿಸುತ್ತಿವೆ.

ಟಿಟಾನಿಕ್ ಹಡಗವು ಮುಣುಗಿದಾಗ ಕೋಟ್ಯಾಧಿಪರೂ, ಶ್ರೀಮಂತರೂ ಮೃತ ಪಟ್ಟು ಬಡ ಹೆಂಗಸರೂ ಮಕ್ಕಳೂ ರಕ್ಷಿಸಲ್ಪಟ್ಟದ್ದು ಒಂದು ವಿಶೇಷ ಲಕ್ಷಣವಾಗಿದೆ. ಅಮೇರಿಕದ ಕೋಟ್ಯಾಧಿಪತಿಗಳಾದ ವೈಡ್‌ನರ್ ಮತ್ತು ಹೇರಿಸ್ ಎಂಬವರು ತಮ್ಮ ಪತ್ನಿಯರನ್ನು ದೋಣಿಗೆ ಇಳಿಸಿದನಂತರ ಮೃತ ಪಟ್ಟರು. ಹತಶೇಷರಲ್ಲಿ ಕರ್ನಲ್ ಗ್ರೇಸಿ ಎಂಬವರು ಹಡಗದೊಂದಿಗೆ ಒಂದು ಸಲ ಕೆಳಗೆ ಹೋದರೂ ಹಡಗದ ಜಂತಿಯನ್ನು ಹಿಡಕೊಂಡು

ಮೇಲಕ್ಕೆ ಬಂದು ಬದುಕಿದರು. "ನಾವು ನಮಗೆ ಸಹಾಯ ದೊರಕುವ ವರೆಗೆ ದೇವರಿಗೆ ಪ್ರಾರ್ಥಿಸುತ್ತಾ ಇದ್ದೆವು" ಎಂಬದಾಗಿ ಕರ್ನೆಲ್ ಗ್ರೇಸಿಯವರು ಹೇಳು ವರು. ಹತಶೇಷರಲ್ಲಿ ಈಗ ೧೪೦ ಮಂದಿ ನ್ಯೂಯೋರ್ಕಿನ ಆಸ್ಪತ್ರಿಯಲ್ಲಿ ಶೈತ್ಯೋಪಚಾರ ಹೊಂದುತ್ತಲದ್ದಾರೆ.

ಪ್ರೆಸಿಡೆಂಟ್ ಟಾಫ್ಟರವರು ದುಃಖ ಸೂಚಕವಾದ ಬಾವಟೆ ಏರಿಸ ಬೇಕೆಂದು ಹುಕುಂ ಮಾಡಿರುವರು.

ಹತಶೇಷರ ಸಹಾಯಕ ಫಂಡಿಗೆ ಸಾವಿರಗಟ್ಲೆ ಪವನುಗಳು ಕೂಡುತ್ತಲಿವೆ. ಪ್ರಿನ್ಸ್ಆಪ್ ವೇಲ್ಸರವರು ಈ ಫಂಡಿಗೆ ೨೫೦ ಪವನುಗಳನ್ನೂ ಬರೋಡೆಯ ಮಹಾರಾಜರವರು ೫೦೦ ಪವನುಗಳನ್ನೂ ಕೊಟ್ಟಿರುವರು.

ಅಮೇರಿಕದ ಇಲಿನ್ಯೊಸ್ ಎಂಬ ಕೋರ್ಟಿನ ಜಡ್ಜರಾದ ಬಿಮೇನ್ ಎಂಬವರು ತನ್ನ ಹೆಂಡತಿಗೆ ಕೋರ್ಟುಧಿಕ್ಕಾರ ಎಂಬ ತಕ್ಷೀರಿನ ಮೇಲೆ ೫ ಪವನು ಜುರುಮಾನೆ ವಿಧಿಸಿ ಜುರುಮಾನೆಯನ್ನು ಒಂದು ತಾಸಿನೊಳಗೆ ಕೊಡದಿದ್ದರೆ ಆಕೆಯನ್ನು ಬಂದಿಕಾನೆಯಲ್ಲಿ ಹಾಕಬೇಕೆಂದು ಅಪ್ಪಣೆ ಇತ್ತರು. ಬಿಮೇನರು ಕೋರ್ಟಿನಲ್ಲಿ ಒಂದು ಮೊಕದಮೆ ತನಕಿ ನಡಿಸುತ್ತಿರುವಾಗ ಬಿಮೇನರ ಹೆಂಡತಿಯು ಕೋರ್ಟು ಕೋಣೆಗೆ ಬಂದು ಜಡ್ಜರ ಸಮೀಪದಲ್ಲಿ ಕೂತುಕೊಂಡು ಜಡ್ಜರೊಡನೆ ಪೇಟೆಗೆ ಹೋಗುವದಕ್ಕೋಸ್ಕರ ಕಾಯುತ್ತಿದ್ದಳು. ಜಡ್ಜರವರು ವಿಲಿಯಮ್ ಲೌಂಟನ್ ಎಂಬ ಒಬ್ಬ ಯೌವನಸ್ಥನ ಮೇಲಿದ್ದ ಒಂದು ಮೊಕದಮೆಯನ್ನು ತನಕಿ ನಡಿಸಿ ಆತನಿಗೆ ಎರಡು ಪವನು ಜುರುಮಾನೆ ವಿಧಿಸಿದರು. ಲೌಂಟನಿನ ಕೈಯಲ್ಲಿ ೨ ಪವನುಗಳಿಲ್ಲದ್ದರಿಂದ ಆತನನ್ನು ಬಂದಿಕಾನೆಯಲ್ಲಿ ಹಾಕಬೇಕೆಂದು ಹುಕುಂ ಮಾಡಿದರು. ಹತ್ತರವಿದ್ದ ಜಡ್ಜರ ಹೆಂಡತಿಯು ಕೂಡ್ಲೇ "ಇದೆಂಥಾ ಅನ್ಯಾಯ" ಎಂದು ಕೂಗಿದಳು. ಜಡ್ಜರವರು "ಬಾಯಿ ಮುಚ್ಚು" ಎಂದು ಹೇಳಿದರು. ಆದರೆ ಆಕೆ ಮೌನವಾಗದೆ ಕೋರ್ಟು ನಡುಗುವ ರೀತಿಯಲ್ಲಿ (ತನ್ನ ಗಂಡನಿಗೆ) ಜಡ್ಜರಿಗೆ ಹೆದರಿಸಿದಳು. ಜಡ್ಜರು ಕೂಡ್ಲೇ ಆಕೆಗೆ ೫ ಪವನು ಜುರುಮಾನೆ, ಒಂದು ತಾಸಿನೊಳಗೆ ಜುರುಮಾನೆ ಕೊಡದಿದ್ದರೆ ಬಂದಿಕಾನೆಯಲ್ಲಿ ಹಾಕಬೇಕೆಂದು ಅಪ್ಪಣೆಯಿತ್ತರಲ್ಲದೆ ಬೈಲಿಫ್ ನ್ಯೂಟನ್ ಎಂಬ ಪೋಲೀಸ್ ಆಫೀಸರನನ್ನು ಕರೆದು ಆಕೆಯನ್ನು ಕೈದು ಮಾಡ ಹೇಳಿದರು. ನ್ಯೂಟನರು ಆಕೆಯನ್ನು ಕೈಯಲ್ಲಿ ಹಿಡಿದು ಹೊರಗೆ ತಕ್ಕೊಂಡು ಹೋದರು. ಆಕೆಯು ಬಿಕ್ಕಿಬಿಕ್ಕಿ ಅಳುತ್ತಾ ಹೊರ ಹೋದಳು. ಅಲ್ಲಿಂದ ಆಕೆಯು ಪೋಲೀಸ್ ಆಫೀಸರನೊಡನೆ ಒಂದು ಬೇಂಕಿಗೆ ಹೋಗಿ ತನ್ನ ಖಾಸಗಿ ಲೆಕ್ಕದಲ್ಲಿ ೫ ಪವನು ತಕ್ಕೊಂಡು ಜುರುಮಾನೆ ಕೊಟ್ಟು ಕೈದಿಯಿಂದ ಬಿಡಿಸಿಕೊಂಡು ಮನೆಗೆ ಹೋದಳು. ಅನಂತರ ಜಡ್ಜರು ಮನೆಗೆ ಹೋಗಿ ಕೋರ್ಟಿನ ಮರ್ಯಾದೆಯನ್ನುಳಿಸುವದಕ್ಕೋಸ್ಕರ ತಾನು ಹೀಗೆ ಮಾಡಿದೆನೆಂದು ಹೇಳಿದರು. ಇನ್ನು ಮುಂದಕ್ಕೆ ತಾನು ಗಂಡನ ಕೆಲಸದಲ್ಲಿ ಕೈಹಾಕುವದಿಲ್ಲವೆಂದು ಆಕೆ ಮಾತು ಕೊಟ್ಟಳು.

ಮೊರೊಕ್ಕದಲ್ಲಿ ದಂಗೆಗಾರರೊಡನೆ ಪ್ರೆಂಚರು ಕಾದಾಡಿ ಪೆಜ್ ಪಟ್ಣವನ್ನು ವಶಮಾಡಿಕೊಂಡಿರುವರು.

ಇತ್ತಲಾಗೆ ನ್ಯೂಯೊರ್ಕಿನ ಬಾಲ್ಟಿಮೊರ್ ಎಂಬಲ್ಲಿ ವಿಲಿಯಂ ಬರ್ಕ್‌ನ್ನರ್ ಎಂಬ ಒಬ್ಬ ದೊಡ್ಡ ಮನುಷ್ಯನಿಗೆ ಮೂರ್ಛೆ ಹೊಂದುವ ರೋಗವು ತಗಲಿತು. ದಾಕ್ತಾರರು ಪರೀಕ್ಷಿಸಿ ಆತನ ಮೆದುಳು ಅರ್ಧ ಹಾಳಾಗಿರುವುದೆಂದೂ ಉಳಿದ ಅರ್ಧ ಭಾಗವೂ ಮೆಲ್ಲನೇ ಕೆಡುತ್ತಾ ಬರುತ್ತದೆಂದೂ ತಿಳಕೊಂಡರು. ಅದೇ ದಿನ ಸ್ಥಳೀಕ ಸೆಂಟ್ ಜೋನ್ ಆಸ್ಪತ್ರಿಯಲ್ಲಿ ಒಂದು ಮಗು ಹುಟ್ಟಿ ಸತ್ತುಹೋಯಿತು. ದಾಕ್ತಾರರು ಕೂಡ್ಲೇ ಆ ಸತ್ತ ಮಗುವಿನ ಮೆದುಳನ್ನು ತೆಗೆದುಕೊಂಡು ಬಂದು ಪ್ರಥಮತಾ ಬರ್ಕ್‌ನ್ನರರ ಮಸ್ತಿಷ್ಕದ ಎಲ್ಲಾ ಮೆದುಳನ್ನು ತೆಗೆದರು. ಮೆದುಳನ್ನು ತೆಗೆದ ನಂತರ ಗುಂಡಿಗೆ ಬಡಿಯುವದನ್ನು ಕಣ್ಣಾರೆ ಕಂಡರು. ಅನಂತರ ಆ ಮಗುವಿನ ಮೆದುಳನ್ನು ಡಾಕ್ಟರ್ ಕಶ್ಶಿಂಗ್‌ರವರು ಬರ್ಕ್‌ನ್ನರರ ಮಸ್ತಿಷ್ಕಕ್ಕೆ ತುಂಬಿಸಿದರು, ಮತ್ತೊಬ್ಬ ಸರ್ಜನರು ಈ ಹಾಳಾದ ಮೆದುಳನ್ನು ಆ ಮಗುವಿನ ಮಸ್ತಿಷ್ಕಕ್ಕೆ ತುಂಬಿಸಿ ಸರಿ ಪಡಿಸಿದರು. ಈಗ ಮೆ| ಬರ್ಕ್‌ನ್ನರ್‌ರವರು ಆಸ್ಪತ್ರಿಯಲ್ಲಿ ಶೈತ್ಯೋಪಚಾರ ಹೊಂದುತಿದ್ದು ಗುಣವಾಗುತ್ತಾ ಬರುತ್ತಾರೆ.

ಇಟಾಲಿಯರ ಯುದ್ಧ ಹಡಗುಪಡೆಯು ಡರ್ಡೆನೆಲ್ಸಿಗೆ ಒಳಹೊಕ್ಕಿರುವುದೆಂದೂ ಅವರ ಒಂದು ಹಡಗವು ಮುಣುಗಿರುವುದೆಂದೂ ಕನ್‌ಸ್ತಂತಿನೋಪಲಿನಿಂದ ತಂತೀ ಬಂದಿರುವುದು. ಇಟಾಲಿಯರ ಯುದ್ಧ ಹಡಗಗಳು ಡರ್ಡೆನೆಲ್ಸಿನ ಕೋಟೆಗೆ ಗುಂಡು ಹಾರಿಸಲು ಪ್ರಾರಂಭಿಸಿಯವೆ. ಸೆದಿಲ್ಬಾರ್ ಒರೆನಿಸ್ ಮತ್ತು ಕೊಮೆಕೆಲ್ಲ ಎಂಬ ಕೋಟೆಗಳ ಶಿಬಿರಕ್ಕೆ ತುಸ ನಷ್ಟವಾಗಿಯದೆ. ಒರೆನಿಸ್ ಕೋಟೆಯ ಪಾಳೆಯದವರು ಇಟಾಲಿಯರ ಹಡಗಗಳಿಗೆ ಗುಂಡು ಹಾರಿಸಿದ್ದರಿಂದ ಇಟಾಲಿಯರ ಒಂದು ಹಡಗಕ್ಕೆ ಬೆಂಕಿ ತಾಗಿತು. ಇಟಾಲಿಯರು ಸಾಮೊಸ್, ಮೆಟಲೇನೆ ಮತ್ತು ರೋದೆಸ್ ಎಂಬೀ ಸ್ಥಳಗಳ ಮೇಲೆ ತೋಪು ಹಾರಿಸಿ ಅವುಗಳನ್ನು ಹಿಡದುಕೊಂಡ ನಂತರ ಡರ್ಡೆನಿಲ್ಸಿಗೆ ಬಂದಿರುವರು. ಇಟಾಲಿಯರ ಹಡಗು ಪಡೆಯಲ್ಲಿ ಒಟ್ಟಿಗೆ ೩೯ ಹಡಗಗಳಿವೆ. ತುರ್ಕೀ ಸುಲ್ತಾನರು ಕನ್‌ಸ್ತಂತಿನೋಪಲಿನ ಪಾರ್ಲಿಮೆಂಟ್ ಸಭೆಯಲ್ಲಿ ಮಾಡಿದ ಭಾಷಣದಲ್ಲಿ "ತುರ್ಕಿ ಅರಸನ ಭಾಧ್ಯತೆಯನ್ನು ಕಾಪಾಡುವ ಪಕ್ಷದಲ್ಲಿ ಮಾತ್ರ ನಮಗೆ ಸಮಾಧಾನವಾಗಲು ಮನಸ್ಸದೆ" ಎಂದು ಹೇಳಿದ್ದರು.

ಡರ್ಡೆನೆಲ್ಸಿಗೆ ಹೋಗಿರುವ ಇಟಾಲಿಯರ ಹಡಗು ಪಡೆಯು ಡರ್ಡೆನೆಲ್ಸಿನ ಭೂಸೈನ್ಯವನ್ನಾಗಲೀ ನೌಕಾವಳಿಯನ್ನಾಗಲೀ ಅಭಿಯೋಗ ಮಾಡಲಿಕ್ಕೆ ಹೋದದಲ್ಲ, ತುರ್ಕರನ್ನು ಕೆಣಕಿ ಅವರ ಹಡಗು ಪಡೆಯು ಮುಂದೆ ಬಂದು ಕಾಳಗಮಾಡಬೇಕೆಂಬ ಉದ್ದೇಶದಿಂದ ಹೋದದ್ದೆಂಬದಾಗಿ ರೋಮಪುರದಲ್ಲಿ ಮಾತಿದೆ. ಇಟಾಲಿಯರ ಹಡಗು ಪಡೆಯು ೨ ತಾಸುಗಳ ವರೆಗೆ ಡರ್ಡೆನೆಲ್ಸಿನ ಕೋಟೆಗೆ ತೋಪುಹಾರಿಸಿ ಬರಿದಾಗಿ ಹೋಗಿ ಬಿಟ್ಟಿತು. ಸಮುದ್ರ ಅಡಿಯಲ್ಲಿ ಹೋಗುವ ಕೆಲವು ಹಡಗಗಳ ಗಾತ್ರತಂತಿಗಳನ್ನು ಮಾತ್ರ ಕಡಿದು ಬಿಟ್ಟಿತು. ತುರ್ಕರು ಡರ್ಡೆನೆಲ್ಸನ್ನು ಮುಚ್ಚುವ ಹಾಗೆ ಬಲತ್ಕರಿಸ ಬೇಕೆಂಬದಕ್ಕಾಗಿಯೇ ಇಟಾಲಿಯರ ಹಡಗು ಪಡೆಯು ಅಲ್ಲಿಗೆ ಹೋಗಿರುವುದೆಂದು ಇಟಲಿ ದೇಶದ ಪತ್ರಗಳು ಹೇಳುವವು. ತುರ್ಕರು ಡರ್ಡೆನಲ್ಸನ್ನು ಅಡ್ಡಕಟ್ಟಿರುವರು. ಇಟಾಲಿಯರು ತಮ್ಮ ಉದ್ದೇಶವು ಕೈಗೂಡಿದ್ದರಿಂದ ಹಿಂದೆ ಹೋದರು. ಡರ್ಡೆನಲ್ಸನ್ನು ಅಡ್ಡಕಟ್ಟಿಸಬೇಕೆಂಬ ಇಟಾಲಿಯರ ಪ್ರಯತ್ನವು ಅವರಿಗೆ ಟ್ರಿಪೋಲಿಯಲ್ಲಿ ಜಯವಾಗಲಿಲ್ಲವೆಂಬದಕ್ಕೆ ದೃಷ್ಟಾಂತವಾಗಿದೆ ಎಂಬದಾಗಿ ಕೆಲವು ವರ್ತಮಾನ ಪತ್ರಿಕೆಗಳು ಹೇಳುವವು. ಇಟಾಲಿಯರ ಹಡಗು ಪಡೆಯು ಆಸ್ಯ ಮೈನರ್ ಮತ್ತು ತುರ್ಕೀ ಆರ್ಚಿಪೆಲಾಗೋವಿನ ಮಧ್ಯೆ ತುರ್ಕರ ಒಂದು ಹಡಗವನ್ನು ಮುಣುಗಿಸಿತು ಎಂದು ತಿಳಿದು ಬರುತ್ತದೆ. ಡರ್ಡೆನೆಲ್ಸನ್ನು ಮುಚ್ಚಿದ್ದರಿಂದ ಬ್ರಿಟಿಷ್, ರುಷ್ಯರ ಇತ್ಯಾದಿಹಡಗಗಳಿಗೆ ಹೋಗಲಿಕ್ಕೆ ಅಭ್ಯಂತರವಾಗಿ ವೈಮನಸ್ಸಿಗೆ ಕಾರಣವಾಗುವುದರಿಂದ ತುರ್ಕರು ಪುನಃ ಡರ್ಡೆನೆಲ್ಸನ್ನು ತೆರೆಯುವರು.

ತುರ್ಕಿ ಸರಕಾರಕ್ಕೂ ಇಟಾಲಿಯುವರಿಗೂ ಇರುವ ಟ್ರಿಪೋಲಿಯ ಸಂಬಂಧವಾಗಿರುವ ವಿವಾದವನ್ನು ಇತ್ಯರ್ಥಪಡಿಸುವರೆ ಯಾವ ಶರ್ತದ ಮೇಲೆ ತರ್ಕರು ಒಪ್ಪಿಕೊಳ್ಳಬಹುದೆಂಬದಾಗಿ ಶ್ರೇಷ್ಠ ಸರಕಾರಗಳ ಪ್ರತಿನಿಧಿಗಳು ತುರ್ಕಿ ಸರಕಾರದವರನ್ನು ಕೇಳಿದ್ದರು. ಅದಕ್ಕೆ ತುರ್ಕಿ ಸರಕಾರದವರು—ಟ್ರಿಪೋಲಿಯ ಮೇಲೆ ತುರ್ಕೀ ಕಿರೀಟ ಪತಿಯ ಸ್ವಾತಂತ್ರ್ಯವನ್ನು ಕಾಪಾಡುವದಾದರೆ ಮಾತ್ರ ತಾವು ಸಮಾಧಾನಕ್ಕೆ ಒಡಂಬಡುವೆವೆಂದು ಉತ್ತರ ಕೊಟ್ಟಿರುವರು.

ಡರ್ಡೆನೆಲ್ಸನ್ನು ಮುಚ್ಚಿದ್ದರಿಂದ ರುಷ್ಯ ದೇಶದ ಧಾನ್ಯದ ವ್ಯಾಪಾರಸ್ಥರ ಹಡಗುಗಳು ಅತ್ತಿತ್ತ ಹೋಗಲಿಕ್ಕಾಗದೆ ಸಾಹುಕಾರರಲ್ಲಿ ಬಹಳ ಅಸಮಾಧಾನವುಂಟಾಗಿದೆ. ಡರ್ಡೆನೆಲ್ಸನ್ನು ಅಡ್ಡ ಕಟ್ಟಿಸ ಕೂಡದೆಂಬದಾಗಿ ರುಷ್ಯ ಸರಕಾರದವರು ಎದುರಿಸಿದ್ದಾರೆ.

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಮೆ| ಆಕ್‌ಲೇಂಡರವರು ಡರ್ಡೆನೆಲ್ಸನ್ನು ತುರ್ಕರು ಅಡ್ಡ ಕಟ್ಟಲಿಲ್ಲವೆಂದು ಹೇಳಿದರು. ಬ್ರಿಟಿಷ್ ಸರಕಾರದವರು ತುರ್ಕೀ ಸರಕಾರದವರೊಟ್ಟಿಗೆ ಈ ಸುಬಂಧ ಪತ್ರವ್ಯವಹಾರ ನಡಿಸಿದ್ದಲ್ಲಿ ಡರ್ಡೆನೆಲ್ಸ್ ಬೇಗನೇ ತೆರೆಯೋಣಾಗುವದೆಂದು ಉತ್ತರ ಸಿಕ್ಕಿರುವುದೆಂದು ತಿಳಿದು ಬರುತ್ತದೆ.

ಮೊರೊಕ್ಕದ ಪೆಜ್ ಎಂಬಲ್ಲಿ ಪ್ರೆಂಚರಿಗೂ ದಂಗೆಗಾರರಿಗೂ ಉಂಟಾದ ಯುದ್ಧದಲ್ಲಿ ಪ್ರೆಂಚರು ದಂಗೆಗಾರರಲ್ಲಿ ೮೦೦ ಮಂದಿಯನ್ನು ಕೊಂದರು. ದಂಗೆಗಾರರು ಅಲ್ಲಿರುವ ಯೆಹೂದ್ಯರನ್ನು ಅಮಾನುಷ ರೀತಿಯಲ್ಲಿ ಪೀಡಿಸಿ ಮನೆಯ ಮಾಡಿನಿಂದ ಯೆಹೂದಿ ಹೆಂಗಸರನ್ನೂ ಮಕ್ಕಳನ್ನೂ ಕೆಳಗೆ ಬಿಸಾಡುತ್ತಿದ್ದರು. ಈಗ ೪೦೦೦ ಯೆಹೂದ್ಯರು ಅರಮನೆಯಲ್ಲಿ ಮರೆ ಹೊಕ್ಕೊಂಡಿರುವರು.

ಈಗ ಪೆಜಿನಲ್ಲಿ ಸಮಾಧಾನ ನೆಲೆಗೊಂಡದೆ. ಪ್ರೆಂಚರಲ್ಲಿ ೧೫ ಆಫೀಸರರು ಮಡಿದರು, ೪ ಮಂದಿಗೆ ಘಾಯವಾಯಿತು. ಸೈನೀಕರಲ್ಲಿ ೪೦ ಮಂದಿ ಕೊಲ್ಲಲ್ಪಟ್ಟರು. ೭೦ ಮಂದಿಗೆ ಘಾಯವಾಯಿತಲ್ಲದೆ ಸಿವಿಲ್ ಹುದ್ದೆದಾರರಲ್ಲಿ ೧೩ ಮಂದಿ ಕೊಲ್ಲಲ್ಪಟ್ಟರು.

ಉತ್ತರ ಹಿಂದೂಸ್ಥಾನ.

ಎಪ್ರೀಲ್ ತಾ. ೧೩ನೆಗೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೧೩,೪೯೦ ಮಂದಿ ಪ್ಲೇಗ್ ಬೇನೆಯಿಂದ ಮೃತಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟಂದರೆ:—ಮುಂಬಾಯಿ ಸಂಸ್ಥಾನ ೪೧೪; ಮದ್ರಾಸ್ ೪೬; ಬಂಗಾಳ ೧೫೫; ಬೀಹಾರ್ ೨,೩೯೬; ಸಂಯುಕ್ತ ಸಂಸ್ಥಾನ ೫,೨೫೫; ಪಂಜಾಬು ೨೧೨೫; ಬರ್ಮ ೪೬; ಮಧ್ಯ ಸಂಸ್ಥಾನ ೪೩೨; ಮೈಸೂರು ೨೯; ಹೈದರಾಬಾದ್ ೯೫; ಮಧ್ಯ ಇಂಡಿಯ ೧೭೧; ರಜಪುತಾನ ೯೫; ಕಾಶ್ಮೀರ ೧೭; ವಾಯವ್ಯಸರಹದ್ದು ೧ ಮರಣಗಳಾದವು.

ಅಮೃತಸಾರ್ ಎಂಬಲ್ಲಿ ೧೬ ವರ್ಷದ ಒಬ್ಬ ಕ್ಷತ್ರಿಯ ಹುಡಗನನ್ನು ಕೆಲವು ಮಹಮ್ಮದೀಯರು ಬಲತ್ಕಾರದಿಂದ ಮುಸಲ್ಮಾನ ಮತಕ್ಕೆ ಸೇರಿಸಿದ್ದಾರೆಂಬದಾಗಿ ವಾರ್ತೆ ಇರುವುದರಿಂದ ಆತನ ತಂದೆಯು ಡಿಸ್ಟ್ರಿಕ್ಟ್ ಜಡ್ಜರಲ್ಲಿ ಪಿರ್ಯಾದಿ ಕೊಟ್ಟಿರುವನು. ಆ ಹುಡುಗನನ್ನು ಕೋರ್ಟಿನಲ್ಲಿ ಹಾಜರು ಪಡಿಸಬೇಕೆಂತ ಎದುರ್ಗಡೆಯವರಿಗೆ ಡಿಸ್ಟ್ರಿಕ್ಟ್ ಜಡ್ಜರವರು ಹುಕುಂ ಕೊಟ್ಟಿರುತ್ತಾರೆ.

ಎಪ್ರೀಲ್ ತಾ. ೧೮ನೇ ಸಾಯಂಕಾಲ ಲಾಹೋರಿನಲ್ಲಿ ಸೂರ್ಯ ಗ್ರಹಣವು ಕಾಣಿಸಿಕೊಂಡದೆ. ಸುಮಾರು ಅರ್ಧ ತಾಸು ತನಕ ಸೂರ್ಯ ಗ್ರಹಣ ತೋರುತ್ತಿತ್ತು.

ತಂತೀ ಇಲ್ಲದ ಟೆಲಗ್ರಾಫ್ ವ್ಯವಹಾರವು ಕಲ್ಕತ್ತೆಯ ವಿಲಿಯಂ ಕೋಟೆಯಿಂದ ಡಿಲ್ಲಿ, ಅಲ್ಲಹಾಬಾದ್ ವರೆಗೆ ನಡೆಯುತ್ತದೆ. ಈಗ ಸದ್ಯಾ ಈ ಟೆಲಗ್ರಾಫ್ ಸರಕಾರಿ ಸಂಬಂಧವಾದ ಪತ್ರ ವ್ಯವಹಾರಗಳನ್ನು ನಡಿಸಲಿಕ್ಕೆ ಮಾತ್ರ ಪ್ರಯೋಗಿಸಲ್ಪಡುತ್ತದೆ.

ಇದೇ ವರ್ಷದ ಜನವರಿ ೨೩ನೇ ತಾರೀಕಿನಿಂದ ಮಾರ್ಚಿ ತಿಂಗಳ ವರೆಗೆ ಕಲ್ಕತ್ತೆಯಲ್ಲಿ ೨೨೧ ಮಂದಿ ಮೋಟರ್ ಗಾಡಿಗಳ ಮಾಲೀಕರ ಮೇಲೆ ಪಿರ್ಯಾದಿ ಆಯಿತು.

ಬಂಗಾಳಾಧಿಪತ್ಯದ ಕಾರ್ಯನಿರ್ವಾಹಕ ಸಭೆಯು ತಾ. ೧೭ರಲ್ಲು ಡಾರ್ಜಿಲಿಂಗಿನಲ್ಲಿ ಕೂಡಿತು. ಈ ಆಧಿಪತ್ಯದ ನ್ಯಾಯವಿಧಾಯಕ ಸಭೆಗೆ ಹುದ್ದೆದಾರರಲ್ಲದ ಮೆಂಬರರು ಸಪ್ಟಂಬರ ತಿಂಗಳಲ್ಲಿ ಆರಿಸಲ್ಪಡುವರೆಂದೂ ನವಂಬರ ತಿಂಗಳ ತನಕ ನ್ಯಾಯವಿಧಾಯಕ ಸಭೆಯು ಕೂಡಲಾರದೆಂದೂ ತಿಳಿದು ಬರುತ್ತದೆ.

ಬಿಂಘು ರಾಜದ ಪ್ರತಾಪಸಿಂಘ್ ಸಿ. ಎಸ್. ಐರವರು ಬಾಹರೆಷ್ ಎಂಬಲ್ಲಿರುವ 'ಬಿಂಘುರಾಜ ಆಸ್ಪತ್ರಿ'ಗೆ ಒಬ್ಬ ದಾಕ್ತಾರಳನ್ನು ಇಡುವರೆ ೧೦,೫೦೦ ರೂಪಾಯಿ ದಾನ ಮಾಡಿರುವರು.

ಮದ್ರಾಸ್ ಸಂಸ್ಥಾನದ ಆಯಾ ಜಿಲ್ಲೆಗಳಲ್ಲಿ ಕಲೆಕ್ಟರರಾಗಿದ್ದು ಕೊಟಾಪಕೊಂಡ ದಂಗೆ ಮೊಕದಮೆಯ ಸಂದರ್ಭದಲ್ಲಿ ಮದ್ರಾಸ್ ಸರಕಾರದವರಿಂದ ಕೆಳತರಗತಿಗೆ ನೇಮಿಸಲ್ಪಟ್ಟದ್ದರಿಂದ ಕಲೆಕ್ಟರ್ ಕೆಲಸಕ್ಕೆ ರಾಜಿನಾಮೆ ಕೊಟ್ಟು ಮುಂಬಾಯಿಯಲ್ಲಿ ವಾಸಿಸುತ್ತಿದ್ದ ಮೆ| ಆರ್. ಕೆರ್ಷಪರವರು ತಾ. ೨೦ರಲ್ಲು ಪಕ್ಷವಾತ ರೋಗದಿಂದ ಮೃತಪಟ್ಟರು. ಇವರು ಪಾರ್ಶಿ ಕುಲದವರಾಗಿದ್ದು ತನ್ನ ಕಡೇಕಾಲವನ್ನು ಪಾರ್ಶಿಯರ ಏಳಿಗಾಗಿ ವೆಚ್ಚ ಮಾಡುವವರಾಗಿದ್ದರು. ಕೆಲವು ವರ್ಷಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂದಾಪುರ ಡಿವಿಜನಿನ ಹೆಡ್ ಅಸಿಸ್ಟಾಂಟ ಕಲೆಕ್ಟರರಾಗಿದ್ದರು. ಸಾಯುವಾಗ ಅವರಿಗೆ ೪೦ ವರ್ಷ ಪ್ರಾಯ.

ತಾ. ೨೦ನೇ ಶನಿವಾರ ಮುಂಬಾಯಿಯ ಮೆ| ಸೆಕ್ಸನ್ ಡೇವಿಸ್ ಎಂಬವರು ತನ್ನ ಮನೆಯ ಐದನೇ ಅಂತಸ್ಥಿನಲ್ಲಿ ಮಲಗಿದ್ದರು. ಮಧ್ಯ ರಾತ್ರಿಯಲ್ಲಿ ಯಾರೋ ಒಬ್ಬನು ಕಿಡಿಕಿಯನ್ನು ಹಾರಿ ಒಳಗೆ ಬರುವಾಗ ಅವರಿಗೆ ಎಚ್ಚರಿಗೆಯಾಯಿತು. ಕೂಡ್ಲೇ ಆ ಕಳ್ಳನು ಡೇವಿಸರ ಮೇಲೆ ಹಾರಿದನು. ಹೀಗೆ ಉಭಯತರೊಳಗೆ ಕಾದಾಟವಾಗಿ ಡೇವಿಸರು ಬಹಳ ಕಷ್ಟದಿಂದ ಆ ಕಳ್ಳನನ್ನು ಕೆಳಗೆ ದೂಡಿಬಿಟ್ಟರು. ಪೋಲಿಸಿನವರು ಮೋದಂಡ ಸ್ಥಿತಿಯಲ್ಲಿದ್ದ ಆ ಕಳ್ಳನನ್ನು ಆಸ್ಪತ್ರಿಗೆ ವೈದರು. ಆತನಿಗೆ ಈ ಮೊದಲು ೬ ಸಾರಿ ಶಿಕ್ಷೆ ವಿಧಿಸಲ್ಪಟ್ಟಿತ್ತೆಂದೂ ರಜಪುತಾನದವನೆಂದೂ ತಿಳಿದು ಬಂತು. ಅಂದೇ ಆತನು ಆಸ್ಪತ್ರಿಯಲ್ಲಿ ಮೃತಪಟ್ಟನು. ಮೆ| ಡೇವಿಸರಿಗೂ ತುಸ ಘಾಯವಾಗಿಯದೆ. ಆದರೆ ಸೌಖ್ಯದಿಂದಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

"ಹಿಂದೂಸ್ಥಾನದಲ್ಲಿ ರಾಷ್ಟ್ರೀಯ ಐಕ್ಯವನ್ನುಂಟುಮಾಡುವುದು ಹೇಗೆ" ಎಂಬ ಹೆಸರಿನಿಂದ ಪುದುಚೇರಿಯಲ್ಲಿ ಬಾಪಿಸೋಣಾಗುವ ಒಂದು ವಹಿಯನ್ನು ಯಾರೂ ಓದಕೂಡದೆಂದು ಸರಕಾರದವರು ಮುಟ್ಟುಗೋಳು ಹಾಕಿದ್ದಾರೆ.

ತಿನ್ನವೆಲ್ಲಿ ರಾಜದ್ರೋಹ ಮೊಕದಮೆಯಲ್ಲಿ ಹ್ಯಾಕೋರ್ಟಿನಲ್ಲಿ ತನಖಿಯಾಗಿ ತೀರ್ಮಾನ ಹೇಳಲ್ಪಟ್ಟಾಗ ಜಡ್ಜರುಗಳ ಅಭಿಪ್ರಾಯವು ಏಕ ಪ್ರಕಾರವಿಲ್ಲದ್ದರಿಂದ ಶಿಕ್ಷೆ ವಿಧಿಸಲ್ಪಟ್ಟವರಲ್ಲಿ ಕೆಲವು ಅಪಾದಿತರ ಕಡೆಯ ವಕೀಲರು ಪುನಃ ತನಖಿ ನಡಿಸಬೇಕೆಂದು ಹ್ಯಾಕೋರ್ಟಿನವರನ್ನು ಕೇಳಿಕೊಂಡದ್ದರಿಂದ ಜಸ್ಟಿಸ್ ಬೆನ್ಸನ್, ಜಸ್ಟಿಸ್ ವಾಲಿಸ್, ಜಸ್ಟಿಸ್ ಮಿಲ್ಲರ್, ಜಸ್ಟಿಸ್ ಅಬ್ದುಲು ರಹಿಮ್, ಜಸ್ಟಿಸ್ ಸುಂದರ ಅಯ್ಯರರವರು ಪುನಃ ತನಖಿ ನಡಿಸಿ ಮೊದಲನೇ ಶಿಕ್ಷೆಯನ್ನೇ ಕಾಯಂ ಮಾಡಿ ಆಪೀಲನ್ನು ತಳ್ಳಿ ಹಾಕಿದರು.

ಕೂನೂರಿನಲ್ಲಿ ಕಠಿಣ ಬಿರು ಮಳೆ ಬಂದಿರುವುದರಿಂದ ಅಲ್ಲಲ್ಲಿ ನೆರಬಂದಿರುವುದು. ರೈಲ್ವೇ ಲ್ಯಾನುಗಳು ಹಾಳಾಗಿ ರೈಲ್ವೆ ಗಾಡಿಗಳು ತಕ್ಕ ಸಮಯಕ್ಕೆ ತಲಪಲಿಲ್ಲ.

ಚೆಂಗಲ್ಪಟ್ಟಿನ ಜ್ಯೊಂಟ್ ಮೆಜಿಸ್ಟ್ರೇಟರಾದ ಜೇಕ್ಸನರವರು ಸಲಾಂ ಮಾಡಿದ ೫ವರ್ಷದ ಬಾಲಕನಿಗೆ ಜುರುಮಾನೆ ವಿಧಿಸಿದ ಮೊಕದಮೆಯಲ್ಲಿ ಹುಡುಗನ ತಂದೆಯು ಮದ್ರಾಸ್ ಹ್ಯಾಕೋರ್ಟಿಗೆ ಅಪೀಲು ಮಾಡಿಕೊಂಡಿದ್ದರೆಂದು ತಿಳಿಸಿತ್ತಷ್ಟೆ. ಸರಕಾರ ಕಡೆ ವಕೀಲರು ಮೆ| ಜೆಕ್ಸನರಿಂದ ವಿಧಿಸಲ್ಪಟ್ಟ ಶಿಕ್ಷೆಯು ಕಾನೂನಿಗೆ ವಿರುದ್ಧವಾದ್ದರಿಂದ ತಾನು ಮೆ| ಜೆಕ್ಸನರ ಪರವಾಗಿ ವಾದಿಸಲಾರೆನೆಂದೂ ಜುರುಮಾನೆಯ ಹಣವನ್ನು ಅಪೀಲುದಾರನಿಗೆ ಹಿಂದೆ ಕೊಡಬೇಕೆಂದೂ ಹೇಳಿದರು. ಜಸ್ಟಿಸರವರು ಸರಕಾರಿ ಕಡೆಯ ವಕೀಲರು ಹೇಳಿದ ತೀರ್ಮಾನವನ್ನೇ ಕೊಟ್ಟರು.

ಮದ್ರಾಸ್ ಸಂಸ್ಥಾನದ ಆಯಾ ಜಿಲ್ಲೆಗಳ ರಸ್ತೆ ಮತ್ತು ಸಂಕಗಳಿಗಾಗಿ ಪ್ರಯೋಗಿಸುವರೆ 1912–13ನೇ ವರ್ಷದ ಬಜೇಟಿನಲ್ಲಿ ಪ್ರತ್ಯೇಕಿಸಿಡಲ್ಪಟ್ಟ ರೂಪಾಯಲ್ಲಿ ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡಿನವರಿಗೆ ೨೦,೦೦೦ ರೂಪಾಯಿ, ಅನಂತಪುರ ರೂ. ೪೦,೦೦೦, ಉತ್ತರಾರ್ಕಾಡು ರೂ ೪೦,೦೦೦; ಬಳ್ಳಾರಿ ರೂ. ೩೭,೦೦೦; ಚೆಂಗಲ್ಪಟ್ಟ ರೂ. ೩೯.೦೦೦; ಚಿತ್ತೂರು ರೂ. ೪೦,೦೦೦; ಗಂಜಾಮು ರೂ. ೨೦,೦೦೦; ಕೊರಾಪಟ್ ರೂ. ೧೦,೦೦೦; ಕರ್ನೂಲು ರೂ. ೫೦,೦೦೦; ನೆಲ್ಲೂರು ರೂ. ೨೦,೦೦೦; ನೀಲಗಿರಿ ರೂ. ೮,೯೦೦; ರಾಮ್ನಾಡ್ ರೂ. ೫೦೦೦; ಸೇಲಮ್ ರೂ. ೪೦,೦೦೦; ದೊರಕುವದು.

ಮದ್ರಾಸ್ ಎಡ್ವೋಕೆಟ್ ಜನರಲರಾಗಿದ್ದ ಮೆ| ಪಿ. ಎಸ್. ಶಿವಸ್ವಾಮಿಯವರು ಮದ್ರಾಸ್ ಸರಕಾರದ ಕಾರ್ಯನಿರ್ವಾಹಕ ಸಭೆಗೆ ನೇಮಿಸಲ್ಪಟ್ಟಿರುತ್ತಾರಷ್ಟೆ, ಇವರ ಬದಲಿಗೆ ಮದ್ರಾಸಿನ ಎಡ್ವೊಕೆಟ್ ಜನರಲರಾಗಿ ಮೆ| ಪ್ರೇಡ್ರಿಕ್ ಎಚ್. ಎಮ್. ಕೊರ್ಬೆಟ್ ಬೆರಿಷ್ಟರ್ ಎಟ್ ಲಾ ರವರು ನಿಯಮಿಸಲ್ಪಟ್ಟಿರುವರು. ಇವರು ಸೀಲೋನಿನಲ್ಲಿ ಬೇರಿಷ್ಟರರಾಗಿದ್ದು ಬಹಳ ಕೀರ್ತಿಯನ್ನು ಪಡೆದು ೧೮೯೩ನೇ ಇಸವಿಯಲ್ಲಿ ಇಂಗ್ಲಾಂಡಿಗೆ ಹೋಗಿದ್ದರು. ಕೊರ್ಬೆಟರವರು ಶರತ್ಕಾಲ ದಾಟಿದನಂತರ ಹಿಂದೂಸ್ಥಾನಕ್ಕೆ ಹೊರಡುವರು.

ಇದೇ ಕಳದ ತಾ. ೧೭ರಲ್ಲು ಕುಂಭಕೋಣದ "ಪೇಲೆಸ್ ಗಾರ್ಡನ್" ಎಂಬ ಉದ್ಯಾವನದಲ್ಲಿ ಕಲ್ಕತ್ತೆಯ ಮಿಸ್ ಗೋಹರ್‌ಜಾನ್ ಎಂಬವಳು ಗಾಯನ ಬೈಟಕವನ್ನು ನಡಿಸಿದಳು. ಇದನ್ನು ನೋಡುವುದಕ್ಕೆ ನೂರಾರು ಮಂದಿ ಟಿಕೇಟು ತಕ್ಕೊಂಡು ಒಳಗೆ ಹೊಕ್ಕಿದರು. ಆದರೆ ಬಹಳ ಜನರು ಬರತೊಡಗಿದ್ದರಿಂದ ಡೇರೆಯ ಬಾಗಲು ಮುಚ್ಚಿ ಬಿಟ್ಟರು. ಇದರಿಂದ ಜನದೊಳಗೆ ಗಲಿಬಿಲಿಗೆ ಕಾರಣವಾಯಿತು. ಆದರೆ ರಾತ್ರಿ ೯ ಘಂಟೆಯ ತನಕ ಪೋಲೀಸಿನವರ್‍ಯಾರೂ ಆ ಸ್ಥಳಕ್ಕೆ ಬಂದೋಬಸ್ತಿ ಬಗ್ಯೆ ಬರಲಿಲ್ಲ. ಸುಮಾರು ೯ ಘಂಟೆಗೆ ಪೋಲೀಸಿನವರು ಆ ಸ್ಥಳಕ್ಕೆ ಬಂದರು. ಡೇರೆಯ ಬಾಗಲಲ್ಲಿ ಪೋಲೀಸಿನವರೂ ಜನರೂ ಒಬ್ಬರನೊಬ್ಬರು ದೂಡಿಕೊಂಡರು. ಅನಂತರ ಡೇರೆಯ ಒಳಗೆ ಡಿಸ್ಟ್ರಿಕ್ಟ್ ಮುನ್ಸಿಪರಾದ ಮೆ| ಆರ್. ಎಸ್. ಶಂಕರ ಅಯ್ಯರ್ ಎಂಬವರಿಗೂ ಟೌನ್ ಪೋಲೀಸ್ ಇನ್ಸ್‌ಪೆಕ್ಟರರಿಗೂ ಮಾತಾಗಿ ಇನ್ಸ್‌ಪೆಕ್ಟರರೂ, ಒಬ್ಬ ಹೆಡ್ ಕನ್‌ಸ್ಟೇಬಲನೂ, ಮತ್ತೊಬ್ಬ ಕನ್‌ಸ್ಟೇಬಲನೂ ಡಿಸ್ಟ್ರಿಕ್ಟ್ ಮುನ್ಸಿಪರಿಗೆ ಚನ್ನಾಗಿ ಮುಷ್ಟಿ ಪೂಜೆ ಮಾಡಿದರು. ಹೀಗೆ ಆ ದಿನ ಗಾಯನ ಬೈಟಕದಲ್ಲಿ ಬಹಳ ಗಲಭೆಯುಂಟಾಯಿತು. ತಾ. ೧೮ರಲ್ಲು ಬಹುಮಾನಪಟ್ಟ ರಾವ್ ಬಹದ್ದೂರ್ ಕೃಷ್ಣ ಸ್ವಾಮಿ ಅಯ್ಯರರ ಅಧ್ಯಕ್ಷತೆಯಲ್ಲಿ ಊರ ಮಾನ್ಯ ಗೃಹಸ್ಥರೂ ಸಾಹುಕಾರರೂ ಸಭೆ ಕೂಡಿ ಡಿಸ್ಟ್ರಿಕ್ಟ್ ಮುನ್ಸೀಪರ ಕಡೆಗೆ ಪೋಲೀಸಿನವರು ವರ್ತಿಸಿದ ರೀತಿಯಲ್ಲಿ ತಮಗಿರುವ ವಿಷಾದವನ್ನು ತೋರ್ಪಡಿಸಿದರಲ್ಲದೆ ಈ ಸಂಗತಿಯನ್ನು ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೂ, ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರವರಿಗೂ, ಇನ್ಸ್‌ಪೆಕ್ಟರ್ ಜನರಲರವರಿಗೂ ತಂತೀ ಮೂಲಕ ತಿಳಿಯಪಡಿಸಿದರು.

ದಕ್ಷಿಣ ಕನ್ನಡ.

ಮನೆ ಮಾರಾಟ.

ಮಂಗಳೂರು ಟೌನ್ ಮಾರ್ಕೆಟ್‌ವಾರ್ಡ ಗೌರಿಮಠ ರಸ್ತೆಯಲ್ಲಿರುವ ಮುನ್ಸಿಪಲ್ ನಂಬ್ರ III. 37-1. 2. 3. 4. ಈ ನಾಲ್ಕು ಮನೆ, ಹಟ್ಟಿಕೊಟ್ಟಿಗೆ, ಪ್ರಿವಿ, 2 ಬಾವಿಗಳು ಇರುವ ಹಿತ್ಲು ಒಂದು ಮಾರಾಟಕ್ಕೆ ಸಿದ್ಧವಿದೆ. ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯ ಬಹುದು.

ಟಿ. ಬಾಬುರಾವು—ಗೊಲ್ಲರಕೇರಿ, ಮಂಗಳೂರು.

ಮಂಗಳೂರು. ಕಳದ ವಾರ ಮುನಿಸಿಪಾಲಿಟಿಯಲ್ಲಿ ೧೩ ಪ್ಲೇಗು ಮರಣಗಳಿದ್ದವು.

ಪುತ್ತೂರು ಸಬ್ ಡಿವಿಜನಲ್ ಮೇಜಿಸ್ಟ್ರೇಟರವರಿಂದ ಸೆಶ್ಶನ್ಸಿಗೆ ಕಮಿಟ್ ಮಾಡಲ್ಪಟ್ಟ ಖೂನಿ ಮೊಕದಮೆಯು ತಾ. ೧೮ಕ್ಕೆ ತೀರಿತು. ಈ ಮೊಕದಮೆಯಲ್ಲಿ ಇಬ್ರಾಯಿನೆ ಎಂಬವನೂ ಮತ್ತೊಬ್ಬನೂ ತಾ. ೨೯ನೇ ರಾತ್ರಿ ಕಳವು ಮಾಡುವ ಉದ್ದೇಶದಿಂದ ಒಬ್ಬ ಮುದೀ ಮಾಪಿಳೆಯ ಕೊರಳುಹಿಸಿಕಿ ಕೊಂದದ್ದಾಗಿರುತ್ತದೆ. ಮೃತಪಟ್ಟ ಮಾಪಿಳೆಯು ಹೊಸದುರ್ಗದಲ್ಲಿ ಕೀರ್ತಿಪಡೆದ ಲೋಭಿಯಾಗಿದ್ದನು. ಸೆಶ್ಶನ್ಸ್ ಕೋರ್ಟಿನಲ್ಲಿ ಈ ಮೊಕದಮೆಯು ಕೋರ್ಟುಸಾಕ್ಷವಾಗಿ ತಿರುಗಿದ ಇಬ್ರಾಯಿನೆಯ ಸಹಪರಾಧಿಯ ವಾಜ್ಮೂಲದ ಮೇಲೆ ಆತುಕೊಂಡಿದ್ದದರಿಂದ ಜಡ್ಜರವರು ಸಹಪರಾಧಿಯ ವಾಜ್ಮೂಲವನ್ನು ನಂಬದೆ ಅಪಾದಿತರನ್ನು ಕುಲಾಸು ಪಡಿಸಿದರು. ಎಪ್ರೀಲ್ ಸೆಶ್ಶನ್ಸಿಗೆ ಇದೇ ಕಡೇ ಮೊಕದಮೆಯಾಗಿದೆ. ಎಪ್ರೀಲ್ ತಾ. ೨೨ರಿಂದ ಸೆಶ್ಶನ್ಸ್ ಕೋರ್ಟಿಗೆ ಶೆಖೆ ಕಾಲದ ರಜೆಯು ಪ್ರಾರಂಭವಾಗಿಯದೆ.

ಅಡೂರು ಗ್ರಾಮದ ಅಚ್ಚು ಬ್ಯಾರಿ ಮತ್ತು ೧೪ ಜನರು ಕಾದ್ರಿ ಬ್ಯಾರಿ ಎಂಬವರ ೩೦ ಮುಡಿ ಅಕ್ಕಿಯನ್ನು ಎತ್ತಿಹಾಕಿದ್ದಾರೆಂಬದಾಗಿ ಕೈದು ಮಾಡಲ್ಪಟ್ಟು ಇಲ್ಲಿಯ ತಾಲೂಕು II ಕ್ಲಾಸ್ ಮೆಜಿಸ್ಟ್ರೇಟರ ಮುಂದೆ ಪಿರ್ಯಾದು ಆಗಿತ್ತು. ವಕೀಲರು ಮೊದಲನೇ ಆಪಾದಿತ ಅಚ್ಚು ಬ್ಯಾರಿಯನ್ನೂ ಇತರರನ್ನೂ ಜಾಮೀನಿನ ಮೇಲೆ ಬಿಡಬೇಕೆಂದು ಇಲ್ಲಿಯ ಸೆಶ್ಯನ್ಸಿನಲ್ಲಿ ಮನವಿ ಮಾಡಿಕೊಂಡಲ್ಲಿ ಸರಕಾರ ಕಡೆಯ ವಕೀಲರು ವಿರೋಧಿಸಿದ್ದರಿಂದ ಜಡ್ಜರವರು ಆಪಾದಿತರನ್ನು ಜಾಮೀನಿನ ಮೇಲೆ ಬಿಡಲಿಲ್ಲ. ಕೂಡಲೇ ಮದ್ರಾಸ್ ಹ್ಯಾಕೋರ್ಟಿನಲ್ಲಿ ಡಾಕ್ಟರ್ ಸ್ವಾಮಿನಾಥನ್ ಬಾರ್ ಎಟ್ ಲಾರವರು ಆಪಾದಿತರ ಪರವಾಗಿ ವಾದಿಸಿದರು. ತನಖಿ ನಡಿಸುವ ಮೇಜಿಸ್ಟ್ರೇಟರಿಗೆ ಇಷ್ಟವಿದ್ದರೆ ಆಪಾದಿತರನ್ನು ೧೦೦೦ ರೂಪಾಯಿ ಸ್ವತಃ ಜಾಮೀನು ಮತ್ತು ೫೦೦ ರೂಪಾಯಿಯ ಇತರ ಎರಡು ಜಾಮೀನಿನ ಮೇಲೆ ಬಿಡಬಹುದೆಂದು ಹ್ಯಾಕೋರ್ಟಿನಲ್ಲಿ ಅಪ್ಪಣೆಯಾಗಿರುವದು.

ಮ. ರಾ. ರಾ. ಹ್ಯೊಗೆ ಕೊರಗಪ್ಪನವರು ಮಂಗಳೂರು ತಾಲೂಕು ಬೋರ್ಡು ಮೆಂಬರರಾಗಿ ನೇಮಕಪಟ್ಟಿರುತ್ತಾರೆ.

ಜಿಲ್ಲಾ ಕಲೆಕ್ಟರ್ ದೊರೆಗಳವರು ಇದೇ ಬರುವ ತಾ. ೨೭ಕ್ಕೆ ಕಾಸರಗೋಡು ಅತ್ತಕಡೆ ಸರ್ಕೀಟು ಬೆಳಸಿ ಮೇ ತಾ. ೧೯ಕ್ಕೆ ಹಿಂತಿರುಗುವರು.

ಮ. ರಾ. ರಾ. ಕಂಬಳ ಶೇಷಗಿರಿರಾಯರು ಒಂದು ತಿಂಗಳ ರಜಾ ಪಡಕೊಂಡಿರುವುದರಿಂದ ರಾ| ಎಚ್. ರಾಮಪ್ಪನವರಿಗೆ ರೂ. ೬೦, ರಾ. ಎಮ್. ನಾರಾಯಣ ಕಾಮತ್ ರೂ. ೫೦, ರಾ| ಕಾಪ ರಾಮರಾವ್ ರೂ. ೪೦ರ ಕೆಲಸಕ್ಕೆ ಮೊಕರೂರಾಗಿರುವರು.

ಗವರ್ನಮೆಂಟ್ ಟೆಕ್ನಿಕಲ್ ಪರೀಕ್ಷೆಗಳೆಲ್ಲ ಈ ದಿನ ಶುರುವಾಗುವವು.

ಲೋಕಲ್ ಫಂಡ್ ಮತ್ತು ಮುನಿಸಿಪಾಲಿಟಿ ಎಲಿಮೆಂಟರಿ ಶಾಲೆಗಳ ಬಗ್ಯೆ ಹೊಸ ಕಟ್ಟೋಣಗಳನ್ನು ಕಟ್ಟಿಸುವರೆ ರೂ. ೨೫೦೦ರಕ್ಕೆ ಮಿಕ್ಕದ ಮೊಬಲಗನ್ನು ಎಲ್ಲಾ ಮುನಿಸಿಪಾಲಿಟಿಗಳಿಗೆ ಕೊಡುವರೆ ಗವರ್ನಮೆಂಟಿನವರು ನಿಶ್ಚಯಿಸಿರುವರು.

ಕಲ್ಲಮುಂಡ್ಕೂರು ರವಳಪ್ಪ ಕಮ್ತಿರ ಅಂಗಡಿಯಲ್ಲಿ ಆದ ಕನ್ನಕಳವಿನ ಮೊಕದಮೆಯಲ್ಲಿ ಬಸಪ್ಪಪೂಜಾರಿ ಎಂಬವಗೆ ಗುಮಾನಿನ ಮೇಲೆ ಹಿಡಿದು ಕಳವಿನ ವಿಷಯಗಳನ್ನು ತಿಳಕೊಳ್ಳುವದಕ್ಕಾಗಿ ಅವನನ್ನು ಅಂಗಡಿ ಕೋಣೆಯೊಳಗೆ ಹಾಕಿ ಹಿಂಸಿಸಿದ್ದರೆಂತ ಸದರಿಯವನು ಕೊಟ್ಟ ಫಿರ್ಯಾದಿ ಪ್ರಕಾರ ಒಬ್ಬ ಕನ್‌ಸ್ಟೇಬಲ ಮತ್ತು ೮ ಜನರನ್ನು ಪೊಲೀಸಿನವರು ಚಾರ್ಜು ಮಾಡಿದ್ದರು. ಈ ಮೊಕದಮೆಯು ಟೌನ್ ಮೆಜಿಸ್ಟ್ರೇಟರಲ್ಲಿ ತನಕಿಯಾಗಿ ಇಬ್ಬರಿಗೆ ಖುಲಾಸು ಪಡಿಸಿ ಉಳಿದ ೭ ಜನರಿಗೆ ೩೩೦-೩೪೨ನೇ ಸೆಕ್ಷನ್ ಪ್ರಕಾರ ಸೆಶ್ಯನ್ಸಿಗೆ ಕಮಿಟ್ ಮಾಡಿರುವರು.

ಮಂಗಳೂರು ಮುಕುಂದ ಪೈಗಳ ಮಗ ವಾಮನ ಪೈಗಳ ಬಾಬ್ತು ರೂ. ೫೦ರ ಡಿಮಾಂಡ್ ನೋಟನ್ನು ವೆಂಕಪ್ಪ ಕುಡ್ವರ ಮಗ ಗಣಪತಿ ಕುಡ್ವರು ಬಾಯಿಯಲ್ಲಿ ಹಾಕಿ ನುಂಗಿಬಿಟ್ಟಿರುತ್ತಾರೆಂಬ ಫಿರ್ಯಾದು ಟೌನ್ ಮೆಜಿಸ್ಟ್ರೇಟರಲ್ಲಿ ದಾಖಲಾಗಿ ತನಕಿ ಬಗ್ಯೆ ತಾ. ೨೭ಕ್ಕೆ ಇಟ್ಟಿರುವರು.

ಕಳದ ಸಂಚಿಕೆಯಲ್ಲಿ ತಿಳಿಸಿದಂತೆ ತಾ. ೨೨ನೇ ಸೋಮವಾರ ಜಿಲ್ಲಾ ಕಲೆಕ್ಟರರವರು ಗವರ್ನಮೆಂಟ್ ಕಾಲೇಜಿಯಲ್ಲಿ ದರ್ಬಾರು ನಡಿಸಿ ಉದ್ಯೋಗ ನಿವೃತರಾದ ಡಿಪ್ಯುಟಿ ಕಲೆಕ್ಟರ್ ರಗಡೆ ರಾಮರಾಯರು ರಾವ್ ಬಹದ್ದೂರ್ ಎಂಬ ಸನ್ನದನ್ನು ಪಡೆಯಲು ಹೇಗೆ ಅರ್ಹರಾದರೆಂಬದನ್ನು ಕಾಲೋಚಿತ ಭಾಷಣದೊಂದಿಗೆ ಸಭಿಕರಿಗೆ ತಿಳಿಸಿ ಸನ್ನದನ್ನು ದಯಪಾಲಿಸಿದರು. ರಾ. ರಗಡೆ ರಾಮರಾಯರು ಸರಕಾರದವರಿಗೂ, ಕಲೆಕ್ಟರರಿಗೂ, ಕೂಡಿ ಬಂದ ಸಭಿಕರಿಗೂ ಉಪಕಾರಸ್ಮರಣೆ ಹೇಳಿ ವಂದಿಸಿದನಂತರ ಸಭೆಯು ಅಗಲಿತು.

ಮಂಗಳೂರು ಡಿವಿಜನಲ್ ಆಫೀಸಿನಲ್ಲಿ ಕಳದ ವಾರ ಒಂದು ವಿಶೇಷವಾದ ಕ್ರಿಮಿನಲ್ ಮೊಕದಮೆಯ ತನಖಿಯು ನಡದು ಮುದ್ದೈಯಾಲೆಗಳಿಗೆ ಡಿಪ್ಯುಟಿ ಮೆಜಿಸ್ಟ್ರೇಟರಿಂದ ರೂ. ೫೦ ಪರಿಹಾರ ದ್ರವ್ಯವು ಕೊಡಿಸೋಣಾಯಿತು. ಹೆಜ್ಮಾಡಿ ವೈಕುಂಟಶ್ಯಾನಭಾಗರೆಂಬವರು ಉಡ್ಪಿ ರಾ| ಪುತ್ತು ಸಾಹೇಬ ಮತ್ತು ಪೊಲೀಸು ಸಬ್ ಇನ್ಸ್‌ಪೆಕ್ಟರ್ ರಾ| ಬೇಕಲ ರಾಮರಾವ್ ಇವರಿಬ್ಬರ ಮೇಲೆ ಪಿನಲ್‌ಕೋಡಿನ ೩೪೨, ೪೨೦ ಮತ್ತು ೩೮೦ ಪ್ರಕರಣದ ಪ್ರಕಾರ ಫಿರ್ಯಾದು ದಾಖಲು ಮಾಡಿದ್ದರು. ಮೆಜಿಸ್ಟ್ರೇಟರು ಹಿಂದೂ ಟ್ರೇನ್ಸಿಟ್ ಕಂಪೆನಿಯ ಮಾಲಿಕರಾದ ರಾ. ಸುಬ್ಬಯ್ಯ ಸೆಟ್ರು ಮೊದಲಾದ ಕೆಲವು ಜನ ಮುದ್ದೈ ಕಡೆಯ ಸಾಕ್ಷಿಗಾರರನ್ನು ವಿಚಾರಿಸಿ ಮುದ್ದೈಯಾಲೆಗಳಾದ ಪೊಲೀಸು ಸಬ್ ಇನ್ಸ್‌ಪೆಕ್ಟರರಿಗೂ ಪುತ್ತು ಸಾಹೇಬರಿಗೂ ಪರಿಹಾರ ದ್ರವ್ಯವನ್ನು ಕೊಡಿಸಿರುತ್ತಾರೆ. ಪುತ್ತು ಸಾಹೇಬರು ಮೇಲಾಟದಿಂದ ಒಂದು ನವೀನ ಟ್ರೇನ್ಸಿಟ್ ಕಂಪೆನಿಯನ್ನು ಸ್ಥಾಪಿಸಿರುವುದಕ್ಕೂ ಈ ಟ್ರಾನ್ಸೀಟು ಕಂಪೆನಿಗೆ ರಾ. ಬೇಕಲ ರಾಮರಾಯರ ಸಹೋದರರು ಸಹಾಯ ಮಾಡುತ್ತಿರುವುದರಿಂದಲೂ ಕ್ರಿಮಿನಲ್ ಮೊಕದಮೆಯು ಮುದ್ದೈಯಾಲೆಗಳ ಮೇಲೆ ರಾ| ಸುಬ್ಬಯ್ಯ ಸೆಟ್ರ ಪ್ರೇರಣೆಯಿಂದ ಏರ್ಪಡಿಸಲ್ಪಟ್ಟಿತೆಂತ ಮುದ್ದೈಯಾಲೆಗಳು ತಮ್ಮ ಹೇಳಿಕೆಯಲ್ಲಿ ಹೇಳಿರುವರೆಂತ ಕೇಳುತ್ತೇವೆ.

ಮಂಗಳೂರ ಶ್ರೀ ವೆಂಕಟ್ರಮಣ ದೇವಸ್ಥಾನದ ಅರ್ಚಕ ವೇದಮೂರ್ತಿ ವಾಸುದೇವ ಮಾಧವ ಭಟ್ಟರು ದೇವಸ್ಥಾನದಲ್ಲಿ ೮ ದಿವಸಗಳ ವರೆಗೆ ಆಗತಕ್ಕ ಋಗ್ವೇದ ಸಂಹಿತಾಹೋಮವೆಂಬ ಮಹಾಯಜ್ಞ ಮಾಡುವರೆ ನಾರಾಯಣ ಕೇಶವಾಚಾರ್ಯ, ಕೃಷ್ಣ ನಾರಾಯಣಾಚಾರ್ಯ, ಮತ್ತು ಜೋಡು ವ.ಠ ಶ್ರೀ ಗೋಪಾಲ ಕೃಷ್ಣ ದೇವರ ಸನ್ನಿಧಿಯಲ್ಲಿ ಸದ್ಗೃಹಸ್ಥರಿಂದ ಸಂಸ್ಥಾಪಿತ ಶ್ರೀ ಬ್ರಹ್ಮ ವಿದ್ಯಾ ಪ್ರಬೋಧಿನೀ ಪಾಠಶಾಲಾಧ್ಯಕ್ಷ, ಗೋಪಾಲ ಕೃಷ್ಣ, ರಾಮಚಂದ್ರ ಭಟ್ಟ ಉಪಾಧ್ಯಾಯ ಮಂಜೇಶ್ವರ ಕೇಶವ ಗೋವಿಂದ ಶರ್ಮಾ, ಮತ್ತು ವಿದ್ಯಾರ್ಥಿಗಳು ಮೊದಲಾದ ವೇದಧ್ಯಾಯಿಗಳಾದ ೧೬ ಋಗ್ವಿಜರಿಗೆ ಆಮಂತ್ರಣ ಮಾಡಿ, ಪರಿಧಾವಿ ಸಂವತ್ಸರ ವೈಶಾಖ ಶು. ೩ ಶನಿವಾರ ದಿನ ಮಹಾ ಸಂಭ್ರಮದಿಂದ ಈ ಯಜ್ಞವನ್ನು ಪ್ರಾರಂಭ ಮಾಡಿರುತ್ತಾರೆ.

ಪುತ್ತೂರು. ಕೆಲವು ಸಮಯದ ಹಿಂದೆ ಇಲ್ಲಿಗೆ ಬೇಕಲ ಶ್ರೀ ಅಂಬಾನಾಟಕ ಕಂಪೆನಿಯವರು ಚಿತ್ತೈಸಿ ಕಳದ ಎರಡು ತಿಂಗಳಿಂದ ನಾಟಕಗಳನ್ನು ಆಡಿ ತಾ. ೧೯ರಲ್ಲು ಅರದಂತಿ ಸುಂದರಿ ಪರಿಣಯ ನಾಟಕವನ್ನು ಆಡಿದರು. ಇವರು ಆಡಿದ ಎಲ್ಲಾ ನಾಟಕಗಳು ಒಳ್ಳೇದಿದ್ದು ಪುತ್ತೂರಿನ ಜನರಿಂದ ಪ್ರೋತ್ಸಾಹಿಸಲ್ಪಟ್ಟಿತು. ತಾ. ೧೯ರಲ್ಲು ನಾಟಕ ಕಂಪೆನಿಯ ಮುಲ್ಕಿ ಶ್ರೀನಿವಾಸ್ ಕಮತ್‌ರವರಿಗೆ ನಾಟಕ ರಂಗದಲ್ಲಿ ೧೫ ರೂ. ಕ್ರಯದ ಒಂದು ಶಾಲು ಇನಾಂ ಕೊಡಲ್ಪಟ್ಟಿತು. ತಾ. ೯ರಲ್ಲು ಕಂಪೆನಿಯ ಮೆನೇಜರದಾದ ರಾ| ಬಿ. ಎಮ್. ವಿನಾಯಕರವರಿಗೂ ಪುತ್ತೂರು ಗೌಡಸಾರಸ್ವತ ಬ್ರಾಹ್ಮಣರು ಒಂದು ಚಿನ್ನದ ಪದಕವನ್ನು ಉಡಿಗೆರೆ ಮಾಡಿದ್ದರು.

ಪೊಳಲಿ. ಶ್ರೀಮನ್ಮಹಾದೇವದೇವೋತ್ತಮ ಪೊಳಲಿ ಶ್ರೀ ರಾಜರಾಜೇಶ್ವರಿ ಅಮ್ಮನವರ ಕಡೇ ಚೆಂಡು ಮಹೋತ್ಸಹವು ಇದೇ ತಾ. ೭ನೇ ಆದಿತ್ಯವಾರ ದಿವಸ ಬಹು ವಿಜೃಂಭಣೆಯಿಂದ ನೆರವೇರಿತು. ತಾ. ೮ನೇ ರಥೋತ್ಸವ ದಿವಸ ಮ. ರಾ. ತಾಲೂಕ ಮೆಜಿಸ್ಟ್ರೇಟರವರು ದಯಮಾಡಿಸಿದ್ದರು.

ತಾ. ೯ನೇ ಮಂಗಳವಾರ ಅವಭ್ರತದ ದಿನ ಸಾಯಂಕಾಲ ಶುಮಾರು ೪ ಗಂಟೆ ಸಮಯಕ್ಕೆ ಕೋಳಿ ಜೂಜಿಗೆ ಬಂದಿದ್ದ ಬಾರಿಂಜೆ ಸುಬ್ಬಪ್ಪಸೆಟ್ಟಿ ಯೆಂಬವನಿಗೆ ಕೋಳಿ ಕತ್ತಿಯ ಪೆಟ್ಟು ತಾಗಿ ಆ ಸ್ಥಳದಿಂದ ಅವರ ಮನೆಗೆ ಅವನನ್ನು ತಕ್ಕೊಂಡು ಹೋಗುವದರೊಳಗೆನೇ ಆತ್ಮವು ಪರಮಾತ್ಮನನ್ನು ಶೇರಿಕೊಂಡಿತು. ಶವವನ್ನು ಮರುದಿನ ದಹನಮಾಡಿದರು. ಬಂಧುಗಳಿರಾ! ಇಂಥಾ ಕಷ್ಟಗಳನ್ನಾದರೂ ನೋಡಿ ಧನ ಮಾನ ಪ್ರಾಣಕ್ಕೂ ಕೂಡಾ ಹಾನಿಯಾಗ್ಗಿರುವ ಕೋಳಿ ಜೂಜೆಂಬ ದುರ್ವೃತ್ತಿಯನ್ನು ಬಿಟ್ಟು ಬಿಡಬಾರದೇ?

ಇದೇ ತಾ. ೧೧ನೇ ಗುರುವಾರ ರಾತ್ರೆ ಶುಮಾರು ೯|| ಘಂಟೆ ಸಮಯಕ್ಕೆ ಸರಿ ಮಧ್ಯ ಆಕಾಶದಿಂದ ಒಂದು ದೊಡ್ಡ ನಕ್ಷತ್ರವು ಪೂರ್ವ ಮುಖವಾಗಿ ಫುರ್ಜನ್ ಬಾಣದಂತೆ ಇಳಿಯುತ್ತಿರುವ ಸಮಯಕ್ಕೆ ಊರಿಗೆಲ್ಲ ದೊಡ್ಡ ಗ್ಯಾಸ್‌ಲ್ಯಾಟ್ ಹಚ್ಚಿದಂತೆಯೇ ಕಂಡಿತು.

ಶ್ರೀ ಧರ್ಮಸ್ಥಳ. ಇಲ್ಲಿ ಮಾಮೂಲು ಪ್ರಕಾರ ಶ್ರೀ ಮಂಜುನಾಥ ಸ್ವಾಮಿ ಸನ್ನಿಧಿಯಲ್ಲಿ ನಡಿಯತಕ್ಕ ಜಾತ್ರೆ ಮಹೋತ್ಸವವು ಇದೇ ತಿಂಗಳ ತಾ. ೧೭ಕ್ಕೆ ಪ್ರಾರಂಭವಾಗಿ ಮಹಾ ವೈಭವದೊಡನೆ ತಾ. ೨೧ಕ್ಕೆ ಮುಕ್ತಾವಾಯಿತು. ಈ ತನ್ಮಧ್ಯ ಬ್ರಹ್ಮಹೋಮಮದೇವತಾ ಎಂಬ ವೇದೋಕ್ತನುಸಾರವಾಗಿಯೂ ಶ್ರೀ ಭಗವಂತನ ಜ್ಞಾಪಕಾರ್ಥವಾಗಿಯೂ ಪೂಜಾ ಬ್ರಾಹ್ಮಣರಿಗೆ ಯಥೇಚ್ಛ ದಕ್ಷಿಣೆ ಕೊಡಲ್ಪಟ್ಟವು.

ಬಹುಮಾನಪಟ್ಟ ಮ. ರಾ. ರಾ. ನೆರ್ಯ ಸುಬ್ರಾಯ ಹೆಬ್ಬಾರರವರು, ಅಡಿಕೆಯ ತೆಂಗಿನ ತೋಟಗಳನ್ನೂ ಹೊಲಗದ್ದೆಗಳನ್ನೂ ನಾಶಪಡಿಸುತ್ತಿರುವ ಕಾಡಾನೆಗಳನ್ನು ಹಿಡಿಯಬೇಕೆಂದು ತಮ್ಮ ಏಲಕ್ಕಿ ಮಲೆಯ ಸಮೀಪ ಹೊಂಡವನ್ನು ತೋಡಿಸಿದ್ದರು. ಇಂದಿಗೆ ೧೫ ದಿವಸಕ್ಕೆ ಮೊದಲು ಒಂದು ಹೆಣ್ಣು ಆನೆಯೂ ಅದರ ಮರಿಯೂ ಕೂಡಾ ಆ ಗುಳಿಯಲ್ಲಿ ಬಿದ್ದು ಹೆಣ್ಣಾನೆಗೆ ಆ ಗುಳಿಯ ಮೇಲೆ ಹಾಕಿದ ಬೈನಿ ಮರದ ದಬ್ಬೆಗಳು ತಾಗಿ ಅದು ಮೃತಪಟ್ಟಿರುತ್ತದೆ. ಮರಿಆನೆಯು ಸುರಕ್ಷಿತವಾಗಿರುತ್ತದೆಂತಲೂ ಅದನ್ನು ಧರ್ಮಸ್ಥಳದ ಶ್ರೀ ಮಂಜುನಾಥ ದೇವರಿಗೆ ಹರಿಕೆಯಾಗಿ ಒಪ್ಪಿಸುತ್ತಾರೆಂತಲೂ ವರ್ತಮಾನವಿದೆ.

ಕುಂದಾಪುರ. ಇದೇ ತಿಂಗಳ ತಾರೀಕು ೧೮ರಲ್ಲು ನಮ್ಮ ಡಿವಿಜನ್ ಆಫೀಸರರಾದ ರಾ. ಶ್ರೀನಿವಾಸರಾವ್ ಪಂತಲುಗಾರು ಎಂಬವರು ಇಲ್ಲಿಗೆ ಬಂದಿರುವರು.

ಇಲ್ಲಿಗೆ ಮೆಜಿಸ್ಟ್ರೇಟರಾಗಿ ನೇಮಿಸಲ್ಪಟ್ಟ ದೇರೆಬೈಲ್ ವಾಸುದೇವರಾಯರು ತಾರೀಕು ೨೩ರಲ್ಲು ಬಂದಿರುವರು.

ಪುತ್ತೂರಿನಲ್ಲಿ ಸ್ಥಾಪಿಸಿದ ಹಾಗೆ ಇಲ್ಲಿ ಸಹಾ ಕೊಓಪರೇಟಿವ್ ಸೊಸ್ಯಾಟಿಯನ್ನು ಸ್ಥಾಪಿಸಬೇಕೆಂಬ ಆಲೋಚನೆಯಿಂದ ಪುತ್ತೂರು ಅತ್ತಕಡೆಯಿಂದ ಇಬ್ಬರು ವಕೀಲರು ಬಂದಿರುತ್ತಾರೆ. ಆ ಬಗ್ಯೆ ಇಲ್ಲಿ ವಕೀಲರೂ ಸಾಹುಕಾರರೂ ವಗೈರೆರು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸಭೆ ಕೂಡಿರುತ್ತಾರೆ. ಬೇರೆ ಎಲ್ಲಾ ಕಡೆಯಲ್ಲಿ ಇದ್ದ ಹಾಗೆ ಇಲ್ಲಿಯೂ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಿದರೆ ಜನರಿಗೆ ಬಹಳ ಪ್ರಯೋಜನವಾಗುತ್ತಿತ್ತು.

ರಾಜೇಶ್ರಿ ನಾಗಪ್ಪ ನಾಯ್ಕರ ಭಂಡಸಾಲೆಗೆ ತಾಗಿ ಇದ್ದ ರಾಜೇಶ್ರಿ ಭಾಂಡ್ಯ ನಾರಾಯಣ ಪೈಗಳವರ ಭಂಡಸಾಲೆಯೂ ಸಮುದ್ರಕ್ಕೆ ಆಹುತಿ ಆಯಿತೆಂದು ತಿಳಿಸಲು ಬಹಳ ವಿಷಾದಪಡುತ್ತೇವೆ. ಅಮವಾಸೆ ಹುಣ್ಣಮೆಗೆ ಒಂದೊಂದು ಭಂಡಸಾಲೆಯು ಹೋದರೆ ಮಳೆಗಾಲದ ಒಳಗೆ ಗಂಗೊಳ್ಳಿ ಬಂದರವೇ ಉಳಿಯುವದು ಬಹಳ ಸಂಶಯಕರ.

ಇಲ್ಲಿಯ ರೆವರೆಂಡ್ ಫಾದರ್ ಕ್ಯೊಲೋರವರಿಗೆ ವರ್ಗವಾದ ಸಂದರ್ಭದಲ್ಲಿ ಎಲ್ಲಾ ಜನರು ಬಹಳ ಕರಕರೆಪಟ್ಟು ಇವರ ವರ್ಗದ ಹುಕುಮನ್ನು ರದ್ದುಪಡಿಸಿ ಇವರನ್ನು ಇಲ್ಲಿಯೇ ಇರಗೊಡಿಸುವ ಹಾಗೆ ಕೆಲವು ತಂತಿಗಳನ್ನು ಬಿಶೋಪ ಸಾಹೇಬರಿಗೆ ಬಿಟ್ಟಿದ್ದಲ್ಲದೆ ಇಲ್ಲಿಯ ವಕೀಲರೂ ,ಆಫೀಸರರೂ, ಸಾಹುಕಾರರೂ, ವರ್ಗದಾರರೂ ಜಾತಿವಿಜಾತಿ ಎಂಬ ಭೇದವಿಲ್ಲದೆ ಅಂದರೆ (ಹಿಂದುಗಳೂ ಮುಸಲ್ಮಾನರೂ ಪ್ರೊಟೆಸ್ಟಾಂಟರೂ)ಒಂದು ವಿಜ್ಞಾಪನಾ ಪತ್ರ ಕಳುಹಿಸಿರುತ್ತಾರೆ.



ಪೊಪ್ಯುಲರ್ ಹಂಬರ್ ಕ್ರಯ ರೂಪಾಯಿ 120.

ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯಾಕಲುಗಳನ್ನು ಪಡಿಯಲು ಸಾಧ್ಯವಲ್ಲ.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಶೋಸಿಯೇಷನ್,

ಸ್ಯಾಕಲ್ ಏಜಂಟ್ಸ್,

ಮಂಗಳೂರು, ದಕ್ಷಿಣ ಕನ್ನಡ.


ಸಿಂಗರ್ ರೊಯಲ್ ಕ್ರಯ ರೂಪಾಯಿ 115.

"ಅಮೇರಿಕದ ವಿಶಿಷ್ಟತೆ"

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೊನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತವೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನು ಹೋಗಲಾಡಿಸುತ್ತವೆ; ಕಲಿಯುವುದಕ್ಕೆ ಅಥವಾ ಕಾರ್ಯ ಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿ ಬರುವ ಕ್ಷಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಗ್ಲಾನಿಯೂ, ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವವರ—ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹ ಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ. ಈ ಗುಳಿಗೆಗಳ ಅಮೃತಕರವಾದ ಸುಫಲವು ಇವುಗಳನ್ನು ಸೇವಿಸುವುದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು-ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಕವಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ.2-0-0;ಒಂದು ಸೀಸೆಯಲ್ಲಿ 40ಗುಳಿಗೆಗಳಿವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮಿ.ಜೀ.ಸಿ. ಬ್ರಿತೋ (ಪೊಂಡಾ-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದ ನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮ. ಜೀ. ಆರ್. ಗಾಯಿಕವಾಡ, (ಸಕ್ರಿಯ ಮಾಮಲತದಾರರು)—ವಿ. ಪಿ. ದ್ವಾರಾ ಆದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳ ಉತ್ತಮವಿದೆ.

The Anglo Indian Drug & Chemical Company,

ಉಪನ್ಯಾಸಗಳ ಉತ್ತಮಾಲಯ } **ಮಧುರವಾಣೀ.** { ಗದ್ಯಗ್ರಂಥಗಳ ಭಾಂಡಾಗಾರ.

ವಾರ್ಷಿಕ ಚಂದಾ ರೂ. 1—8—0 ಮಾತ್ರ.

ಇದರಲ್ಲಿ ಕಾಲಕ್ಕೆ ತಕ್ಕ ಭಾಷಾಶೈಲಿ, ಚಮತ್ಕಾರ, ಪರಿಹಾಸ, ವಿವೇಕಗಳಿಂದ ಕೂಡಿದ ಪಂಡಿತ ಪ್ರಣೀತ ನಾಟಕ, ಕಾದಂಬರಿ, ಜೀವನ ಚರಿತೆ ಮುಂತಾದ ಗ್ರಂಥಗಳೂ ಸಾಮಾಜಿಕ, ನೀತಿ, ಮತ, ವಿದ್ಯೆ, ತತ್ವಶಾಸ್ತ್ರಕ್ಕೆ ಸಬಂಧಪಟ್ಟ ಉತ್ತಮೋತ್ತಮ ಉಪನ್ಯಾಸಗಳೂ ಅನೇಕ ಉಪಯುಕ್ತ ವಿಷಯಗಳೂ ಬೇರೆಬೇರೆ ಪುಟಗಳೊಡನೆ ಪ್ರತಿ ತಿಂಗಳಲ್ಲಿಯೂ ತಪ್ಪದೆ ಪ್ರಕಟಿಸಲ್ಪಡುವವು. ಕರ್ಣಾಟಕದಲ್ಲಿ ಪ್ರಖ್ಯಾತರಾದ ಲೇಖಕರೆಲ್ಲಾ ಮಧುರವಾಣಿಯ ಲೇಖಕರಾಗಿರುವರು. ಚಂದಾದಾರರಿಗೆ ಅನೇಕ ಪುಸ್ತಕಗಳು ಅರ್ಧ ಬೆಲೆಗೆ ದೊರೆಯುವವು. ಮಾದರಿ ಸಂಚಿಕೆಗೆ ಬೆಲೆ ಇಲ್ಲ. ಕ್ರಯದ ಪಟ್ಟಿಯನ್ನು ಅಪೇಕ್ಷಕರಿಗೆ ಮುಫತ್ತಾಗಿ ರವಾನಿಸುವೆವು.

ವಿಳಾಸ:— ಹನುಮಾನ್ ಮತ್ತು ಕಂಪೆನಿ.
ಮೈಸೂರು.

ಮಹನೀಯರೇ ನಿಮ್ಮ ರೋಗಗಳಿಂದ ಧೈರ್ಯಗುಂದ ಬೇಡಿ! ನೋಡಿರಿ ಬೆಲೆಯಲ್ಲಿ ಅಗ್ಗ!! ಗುಣದಲ್ಲಿ ಪೆಟ್ಟೊಂದು ತುಂಡೆರಡು!!! ರೋಗಗಳಿಂದ ಅಧೈರ್ಯ ಪಟ್ಟವರಿಗೆ ಸಂಪೂರ್ಣ ನಂಬಿಕೆಯನ್ನುಂಟುಮಾಡುವುದು!!! ಆ ನಂಬಿಕೆಯೇ

ಜ್ವರಾಮೃತ.

ಈ ಔಷಧವು ಮಲೇರಿಯ ಜ್ವರ, ದಿನ ತಪ್ಪಿ ದಿನ ಬರುವ ಜ್ವರ, ಕಾಲಕಾಲದ ಜ್ವರ, ಬೆಳದಗೆಡ್ಡೆ ಮತ್ತು ಕೊಂಬೆಯಿಂದುಂಟಾಗುವ ಜ್ವರಗಳನ್ನು ನೆಕ್ಕುವ ವಾರಿಯೇ ಜ್ವರಾಮೃತ. ಎಲ್ಲಾ ತರದ ಔಷಧಗಳನ್ನು ಸೇವನೆ ಮಾಡಿ ಗುಣಹೊಂದದೆ ಇರುವ ಖಾಯಿಲಸ್ಥರೇ ಒಂದು ಸಾರಿ ಈ ಜ್ವರಾಮೃತವೆಂಬ ಔಷಧವನ್ನು ಸೇವನೆ ಮಾಡಿ ನಿಮ್ಮನ್ನು ದಿನನಿತ್ಯವೂ ಪೀಡಿಸುವ ಬಾಧೆಗಳನ್ನು ನಿವಾರಣೆ ಮಾಡಿಕೊಂಡು ಆರೋಗ್ಯಸ್ಥರಾಗಿರಿ. ಬೆಲೆ ಸೀಸೆ 1ಕ್ಕೆ ಆಣೆ 0—8—0 ದೊಡ್ಡ ಸೀಸೆ 1ಕ್ಕೆ ಆಣೆ 0—14—0 ಸಣ್ಣ ಸೀಸೆ ಡಜನ್ 1ಕ್ಕೆ ರೂ. 5—8—0 ದೊಡ್ಡ ಸೀಸೆ ಡಜನ್ 1ಕ್ಕೆ ರೂ. 10—0—0. ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಟೆನಟನ್ ಚೂರ್ಣ.

ಈ ಚೂರ್ಣವು ಹುಳ ಕಡ್ಡಿ ಮತ್ತು ಇತರ ಎಲ್ಲಾ ತರದ ರೋಗಗಳನ್ನು ಕ್ಷಣಮಾತ್ರದಲ್ಲಿಯೇ ಗುಣಪಡಿಸುವುದು. ಯಾವ ತರದ ಕೇಡನ್ನುಂಟುಮಾಡದ ಔಷಧಗಳಿಂದ ತಯಾರಿಸಲ್ಪಟ್ಟಿರುತ್ತದೆ. ಇದನ್ನು ಹಚ್ಚುವುದರಿಂದ ಉರಿಯು ಸಹ ಉಂಟಾಗುವುದಿಲ್ಲ ಮತ್ತು ಒಳ್ಳೇ ಸುವಾಸನೆಯುಳ್ಳದ್ದಾಗಿರುತ್ತದೆ. ಇದನ್ನು ಹಚ್ಚಿದ ಎರಡು ಮೂರು ದಿವಸಗಳಲ್ಲಿಯೇ ಇದರ ಗುಣತ್ವವು ತಿಳಿಯಬರುವುದು. ಬೆಲೆ ಡಬ್ಬಿ 1ಕ್ಕೆ ಆಣೆ 0—4—0 ಡಜನ್ 1ಕ್ಕೆ ರೂ 2—12—0 ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಕೇಶಮಂಜರಿ ಎಣ್ಣೆ.

ಈ ಎಣ್ಣೆಯನ್ನು ಅನೇಕ ಔಷಧಗಳಿಂದ ತಯಾರುಮಾಡಲ್ಪಟ್ಟಿರುತ್ತದೆ. ಇದನ್ನು ಉಪಯೋಗಿಸುವುದರಿಂದ ಮೆದುಳನ್ನು ತಂಪಾಗಿಯೂ, ಕೂದಲನ್ನು ಕಪ್ಪಾಗಿಯೂ, ರೇಷ್ಮೆಯಂತೆ ನುಣುಪಾಗಿಯೂ ಮಾಡುವುದಲ್ಲದೆ ಕೂದಲು ಅಧಿಕಧಿಕವಾಗಿ ಬೆಳಿಯುವಂತೆ ಮಾಡಿ ಉದುರುವ ಕೂದಲನ್ನು ನಿಲ್ಲಿಸುತ್ತದೆ. ಅಧಿಕ ಮೆದುಳು ಕೆಲಸ ಮಾಡುವವರು ಈ ಎಣ್ಣೆಯನ್ನು ಅಗತ್ಯವಾಗಿ ಉಪಯೋಗಿಸಬೇಕಾಗಿರುತ್ತದೆ. ಈ ಎಲ್ಲಾ ಗುಣಾತಿಶಯಗಳಿಂದೊಡಗೂಡಿರುವುದಲ್ಲದೆ ಇದನ್ನು ತಲೆಯ ಮೇಲೆ ಹಚ್ಚಿಕೊಂಡು ಹೋದಲ್ಲಿ ಅಜುಬಾಜಿನ ಜನರು ಇದರ ಸುವಾಸನೆಗೆ ಬೆರಗಾಗುವರು. ಆದ್ದರಿಂದ ಪ್ರತಿಯೊಂದು ಮನೆಯಲ್ಲಿ ಒಂದು ಶೀಸೆ ಯಾವಾಗ್ಯೂ ಇಟ್ಟಿರಬೇಕಾಗಿರುತ್ತದೆ. ಬೆಲೆ ಸೀಸೆ 1ಕ್ಕೆ ಆಣೆ 0—12—0 ಡಜನ್ 1ಕ್ಕೆ ರೂ. 8—8—0 ಪೋಸ್ಟೇಜು ಪ್ಯಾಕಿಂಗ್ ವಗೈರೆ ಪ್ರತ್ಯೇಕ.

ಆದ್ದರಿಂದ ರೋಗಗಳಿಂದ ಪೀಡಿತರಾಗಿರುವ ಪ್ರತಿಯೊಬ್ಬರು ಒಂದು ಸಾರಿ ಈ ಔಷಧಗಳನ್ನು ಉಪಯೋಗಿಸಿ ಬಾಧಿಸುತ್ತಿರುವ ರೋಗಗಳಿಂದ ಗುಣವನ್ನು ಹೊಂದಿಕೊಂಡು ದೀರ್ಘಾನಂದ ಪಡೆಯಿರಿ. ಸಂತೋಷವೇ ಯೌವ್ವನ! ಚಿಂತೆಯೇ ಮುಪ್ಪು!!

ವಿಳಾಸ:—ಟಿ. ಡಿ. ಮುಕರ್ಜಿ ಅಂಡ್ ಕೊ,
ಚೌಕ್ ಬೆನಾರೆಸ್ ಸಿಟಿ.

Address:—**T. D. Mukherjee & Co.,**
Chowk, Benares City.

ವಿಶ್ವಾಂಜನ ಪೈನ್ ಬಾಂ.

ಎಲ್ಲಾ ಭಾಗ್ಯಕ್ಕಿಂತಲೂ ಆರೋಗ್ಯ ಭಾಗ್ಯವು ದೊಡ್ಡದು. ಈ ಭಾಗ್ಯವನ್ನು ಕೊಡುವುದು ಯಾವದು? ನಮ್ಮ ವಿಶ್ವಾಂಜನ ಪೈನ್ ಬಾಂ ಅಲ್ಲವೇ? ಇದರಿಂದ ತಲೆ ವೇದನೆ, ವಕ್ರಶೂಲ, ವಾತ, ಸಂಧುವಾತ, ಕಡತ, ಜಜ್ಜಿದ ಘಾಯ, ಶೀತ, ಗಂಟ್ಲುನೋವು, ಸೊಂಟನೋವು, ಜಖಮು, ಉಳುಕು, ಎದೆನೋವು, ಆನೆಕಾಲು, ವ ಇತರ ಎಲ್ಲಾ ತರದ ನೋವುಗಳು ನಿಸ್ಸಂಶಯವಾಗಿ ಗುಣ ಹೊಂದುತ್ತವೆ. ಎಲ್ಲಾ ಔಷಧಗಳಿಗಿಂತಲೂ ಶ್ರೇಷ್ಠವಾದುದೆಂದು ಅನೇಕ ಜನರಿಂದ ಶಿಫಾರಸು ಮಾಡಲ್ಪಟ್ಟಿದೆ. ಬಾಟ್ಲಿ 1ಕ್ಕೆ —0—8—0. 3 ಬಾಟ್ಲಿ ತರಿಸಿಕೊಳ್ಳುವವರಿಗೆ ವಿ. ಪಿ. ಖರ್ಚು ಇಲ್ಲ.

ವಿಳಾಸ:—ಬಿ. ವಿ. ಪಿ. ಭಂಡಾರಕರ್,
ವಿಶ್ವಾಂಜನ ಡಿಪೊ,
ಗೋಳಿಕಟ್ಟೆಬಜಾರ, ಮಂಗಳೂರು ದ. ಕ.

ಪ್ರಕಟಣೆ.

ಉತ್ತರ ಆರ್ಕಾಡು ಜಿಲ್ಲೆಯ ಅರ್ನಿ ಮತ್ತು ಒನ್ನುಪುರಾಮಿನಲ್ಲಿ ನೇಯಲ್ಪಡುವ ರೂ 13ರಿಂದ ರೂ 150 ವರೆಗಿನ ಕ್ರಯದ ಸ್ತ್ರೀಯರ ಉಪಯೋಗಾರ್ಥವಾದ ರೇಶ್ಮೆ ಮತ್ತು ಗೋಟು ತೆಗೆದ ವಸ್ತ್ರಗಳು ರಿಯಾಯತಿ ದರದಲ್ಲಿ ಮಾರಲ್ಪಡುವವು. ವಸ್ತ್ರ ಕೊಂಡುಕೊಳ್ಳುವ ವ್ಯಾಪಾರಸ್ಥರಿಗೆ ಹಣ ಪಾವತಿ ಮಾಡುವರೆ ಒಂದು ತಿಂಗಳ ಸಮಯ ಕೊಡೋಣಾಗುವುದು. ಒಂದೆರಡು ವಸ್ತ್ರಗಳನ್ನು ಕೊಂಡುಕೊಳ್ಳುವವರಿಗೆ ವಿ. ಪಿ. ಮೂಲಕ ಕಳುಹಿಸೋಣಾಗುವುದು. ಒನ್ನುಪುರಾಮಿನ ರುದ್ರಾಕ್ಷ ಪೇಟೆಯಲ್ಲಿ ತಯಾರಿಸಲ್ಪಡುವ ವಿವಿಧ ಬಣ್ಣದ ಸ್ತ್ರೀಯರ ವಸ್ತ್ರಗಳೂ ಸಹಾ ಅಗ್ಗವಾಗಿ ಅಂದರೆ ರೂ. 3-15-6ರಿಂದ ರೂ. 7-12-0 ದರದಲ್ಲಿ ಮಾರಲ್ಪಡುವವು. ಗಿರಾಕಿಗಳು ವಸ್ತ್ರದ ಬಣ್ಣವನ್ನೂ ನಮೂನೆಯನ್ನೂ ಪರೀಕ್ಷಿಸಿ ನೋಡ ಬಹುದು. ಈ ವಸ್ತ್ರಗಳನ್ನು ಒಂದು ಸಾರಿ ಕೊಂಡು ಕೊಂಡವರು ಇತರರಿಂದ ವಸ್ತ್ರಗಳನ್ನು ಕೊಂಡುಕೊಳ್ಳರೆಂಬದು ನಿಶ್ಚಯ. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು.

ವಿಳಾಸ:—ಅತ್ತೂರು ವೈಕುಂಟ ಪ್ರಭು.
ರೇಶ್ಮೆ ಮತ್ತು ಗೋಟಿನ ವಸ್ತ್ರ ವ್ಯಾಪಾರಸ್ಥ.
ತಿರುವೆತ್ತಿಪುರಂ, ಉತ್ತರ ಆರ್ಕಾಡುಜಿಲ್ಲೆ.

ಅತ್ಯುಪಯುಕ್ತವಾದ ಕೆಲವು ಪುಸ್ತಕಗಳು.

ಕುಮುದಾ	0—8—0
ಮಹಾರಾಣಿ ಗಹಶೀಲೆ	0—2—0
ಮುಕ್ತಹಾರ	0—1—6
ಸನಾತನ ಧರ್ಮ ಪ್ರಶ್ನೋತ್ತರ...	0—1—0
ಕೃಷ್ಣಜನ್ಮ ನಾಟಕ	0—4—0
ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನೆ	0—3—0
ಪ್ರಾತಃರಾಹ್ನಿಕ ಪದ್ಧತಿ	0—3—0
ದೇವಪೂಜಾ ಪದ್ಧತಿ	0—3—0
ಬ್ರಹ್ಮಯಜ್ಞ ವೈಶ್ವದೇವ	0—3—0
ವಿಷ್ಣು ಸಹಸ್ರನಾಮ ಕೃಷ್ಣಾಷ್ಟೋತ್ತರ ನಾಮಾವಳಿ ...	0—2—6
ವಾಯುಸ್ತುತಿ	0—2—0
ದ್ವಾದಶ ಸ್ತೋತ್ರ	0—2—0
ಲಕ್ಷ್ಮೀ ಶೋಭಾನೆ ಹಾಡು	0—2—0
ಹರಿಭಕ್ತಿಸಾರ	0—1—0
ಉದಯರಾಗ	0—4—0
ಸ್ವಪ್ನಪದ, ಮಧ್ವನಾಮ	0—2—0
ಇಂಗ್ಲಿಷ ರಶೀದಿ 50 ಫೋರ್ಮುಗಳ ಪುಸ್ತಕ	0—6—0
ಕನ್ನಡ ರಶೀದಿ 25 ಫೋರ್ಮುಗಳ ಪುಸ್ತಕ	0—2—0
ಗೇಣಿ ರಶೀದಿ 25 ಫೋರ್ಮುಗಳ ಪುಸ್ತಕ	0—3—0
ಪರ್ಮಿಟು ಫೋರ್ಮು 100ಕ್ಕೆ	0-10-0
ಗೇಣಿಚೀಟು ಫೋರ್ಮು 100ಕ್ಕೆ	0-10-0
ಪ್ರೊಮಿಸರಿ ನೋಟು ಫೋರ್ಮು 100ಕ್ಕೆ	0-6-0
ಚಕ್‌ರೋಲ್ 25 ಪುಟಗಳ ಪುಸ್ತಕ	0-8-0
„ 50 „	0-14-0
„ 100 „	1-8-0

ಫರ್ಲೋಂಗ್ ಬೂಕುಗಳೂ ವಿವಿಧ ನಮೂನೆಯ ನೋಟುಬೂಕುಗಳೂ ಅಂಗಡಿ ಭಂಡಸಾಲೆ ವಗೈರೆ ವ್ಯಾಪಾರಸ್ಥರಿಗೆ ಬೇಕಾಗುವ ವರ್ಗ ಊಳಿಗದ ಪುಸ್ತಕಗಳೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಲಾ ರಿಪೋರ್ಟು ವ ಇತರ ಪುಸ್ತಕಗಳು ಉತ್ಕೃಷ್ಟವಾದ ಮಾರ್ಬಲ್ ಕೆಲಿಕೊ ಚರ್ಮ ಮೊದಲಾದವುಗಳಿಂದ ಬಹಳ ನಾಜೂಕಾಗಿ ಬೈಂಡು ಮಾಡಲ್ಪಡುತ್ತವೆ.

ಲಗ್ನ ಪತ್ರಿಕೆಗಳು, ಲೆಟರ ಪೇಪರುಗಳು, ಬಿಲ್ ಫೋರ್ಮುಗಳು, ವಿಜಿಟಿಂಗ್ ಕಾರ್ಡುಗಳು, ಅರ್ಜಿಗಳು ವಗೈರೆ ಎಲ್ಲಾ ತರದ ಛಾಪೆಯ ಕೆಲಸಗಳನ್ನು ಬಹಳ ಅಗ್ಗವಾದ ದರದಲಿ ಮಾಡಿಕೊಡುವರು. ದರಗಳಿಗೂ ಇತರ ಎಲ್ಲಾ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ಮ್ಯಾನೇಜರ್,
ಶಾರದಾ ಛಾಪಖಾನೆ, ಮಂಗಳೂರು.

ನೂತನ ಸೃಷ್ಟಿ! ಸುಲಭ ಕ್ರಯ!

20ನೇ ಶತಮಾನದ ಆಶ್ಚರ್ಯಕರವಾದ ರೋಮಸಂಹಾರಿ ಸಬ್ಬು.

ಈ ಸಾಬೂನನ್ನು ಒಂದು ಸಲ ಉಪಯೋಗಿಸುವದರಿಂದ ದೇಹದ ಯಾವ ಭಾಗವಿಂದಲಾದರೂ ಸೆಗೆ, ಉರಿ ಮುಂತಾದ ಯಾವ ಬಾಧೆಗಳೂ ಇಲ್ಲದೆ ರೋಮವನ್ನು ತೆಗೆಯಬಹುದು. ಅನುಭವದಿಂದ ತಿಳಿಯತಕ್ಕದ್ದು ಮಾತಿನಿಂದ ತಿಳಿಯುವುದಿಲವು. ಒಂದು ಉಪಯೋಗಿಸಿದರೆ ಇದರ ನಿಜಾಂಶವು ತಿಳಿಯುವುದು. 3 ಸಾಬೂನುಗಳಿರುವ ಪೆಟ್ಟಿಗೆ ಕ್ರಯ ರೂ. 1-4-0 ಅಂಚೆ ಹಾಸಲು ಮಾಫಿ. ಒಂದು ಸಾಬೂನು ಕ್ರಯ ಆಣೆ 0-10-0 ಅಂಚೆ ಹಾಸಲು ಮಾಫಿ.

ಸಿ. ಜೆ. ಆರ್. ಚಂದ್ರು
29 ಲಿಂಗಿಚೆಟ್ಟಿ ಬೀದಿ ಮದ್ರಾಸು.

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಳಾನಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. **ಪ್ರಮೇಹರಿಪು ಬಿಂದು.** ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. **ಕಾಮೇಶ್ವರ ಮಾತ್ರೆ.** ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. **ಪಂಚಜೀರಕ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. **ಸೂರಣಾವ ಲೇಹ.** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. **ಜಗನ್ಮೋಹನ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. **ಸರಳಭೇದಿ ಮಾತ್ರೆ.** ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. **ಮಹಾಜ್ವರಾಂಕುಶ ಮಾತ್ರೆ.** ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. **ವಾಸಾವ ಲೇಹ.** ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. **ಶಾಲ್ಮಲೀ ಪಾಕ.** ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. **ವಾತಮುರಾರಿ ಬಾಮ್.** ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯು ವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ **ಸನ್ವೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. **ಪ್ರಜ್ಞಾ ಸಾರಸ್ವತ ಚೂರ್ಣ.** ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೊಲೆರಾ ಅಥವಾ ಉಬ್ಬಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ 1ರ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವಾಹಿಕ, ತ್ರಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೊಸ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವುವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟೆ ರವಾನಿಸುವೆವು.

ವಿಳಾಸ:—
ವೈದ್ಯ ಜೆ. ಎಲ್. ಜೋಶಿ ಮತ್ತು ಕಂಪೆನಿ,
[illegible]

ನವೀನ ಪುಸ್ತಕಗಳು! **ಶೋಭನೆ** ನವೀನ ಕಾದಂಬರಿಗಳು!!
ಕ್ರಯ 12 ಆಣೆ. ಕ್ರಯ 12 ಆಣೆ.

ಶ್ರೀ ಸುರೇಂದ್ರನಾಥ ಮುಖ್ಯೋಪಾಧ್ಯಾಯರಿಂದ ರಚಿತವಾದ 'ಶೋಭನಾ' ಎಂಬ ಬಂಗಾಳಿ ನಾವಲಿನ ಕನ್ನಡ ಭಾಷಾಂತರ. ಸಂಸಾರ ಚಿತ್ರವು ಸರ್ವರಿಗೂ ಹೃದಯಂಗಮವಾಗುವ ಹಾಗೆ ವರ್ಣಿತವಾಗಿ ಅತ್ಯುತ್ತಮವಾದ ನೀತಿಗಳನ್ನೊಳಗೊಂಡಿದೆ. ಸುಂದರವಾದ ಮುದ್ರಣ. ಉತ್ತಮವಾದ ಕಾಗದ. ಡೆಮ್ಮಿ 154 ಪುಟಗಳು.

ಸೋಮ ಸುಂದರ:-ಬಂಗಾಳಿ ನಾವಲನ್ನು ಹೋಲುವ ಹೊಸಕಥೆ. ವಿದ್ಯಾರ್ಥಿಗಳಿಗೂ ಮಾತಾಪಿತೃಗಳಿಗೂ ಅನೇಕ ನೀತಿಗಳನ್ನೂ ಬೋಧಿಸುವುದು. ಕ್ರಯ 10 ಆಣೆ.

ಇವುಗಳಲ್ಲದೆ ನಮ್ಮಲ್ಲಿ ಪ್ರಸಿದ್ಧ ಕಾದಂಬರಿ ಲೇಖಕರಾದ ಮ|| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟ ವಿಶಿಷ್ಟ ಕಾದಂಬರಿಗಳೂ-ಕರ್ನಾಟಕ ಚಂದ್ರಿಕಾ ಸೀರೀಸ್ ಪುಸ್ತಕಗಳೂ ವಗೈರೆ ದೊರೆಯುವುವು. ಪುಸ್ತಕದ ಪಟ್ಟಿ ಉಚಿತ.

ವಿಳಾಸ:— ಯಂ. ಸುಬ್ಬರಾವ್,
ಜಿ. ಟಿ. ಎ. ಪ್ರೆಸ್, ಮೈಸೂರು.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದುನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನ್ನಿಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾಗುತ್ತದೆ.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೆ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯಾವಶ್ಯತೆಯುಳ್ಳದ್ದು.

ತಮ್ಮ ಮಹಾಲುಗಳನ್ನು ಎಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ಕ್ಷಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಎಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೋಲೇಜಿನ ಎದುರು
ಮಂಗಳೂರು.

ಫೊಟೋಗ್ರಾಫ್ ಬ್ಯುಲ್ಸ್ಪೆಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42″ × 25″ ರೂ. 75. ಅರ್ಧ ಸ್ಯಾಜ್ 21″ × 15″ ರೂ. 40. ಬಸ್ಟ್ ಸ್ಯಾಜ್ 18″ × 12″ ರೂ. 20. ಸಣ್ಣ ಸ್ಯಾಜ್ 12″ × 10″ ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೋಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೋಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,
ಆರ್ಟಿಸ್ಟ್, ಕೂಡ್ಲು ಪೋಸ್ಟು, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಲು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮುದಲನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೇನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಾಣುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟು. ವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ--ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಹೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಅಗ್ರಾಗ್ರೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ.

ಇದರ ಬೆಲೆ ಸೀಸೆಗೆ ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು. 3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ, ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲ ಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ.ಪಿ. ಮೂಲಕ ಕಳುಹಿಸಿರಿ.

30—5—11 ಮೆ. ನೇಗಿನಪಾಳಕರ ಬ್ರದರ್ಸ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ "ಕಾಮಿನಿಯಾ ಹೈಯಲ್" ಇದರಿಂದ ಕೂದಲುಗಳು ಬೆಳೆದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ. ಯಿಂದ ರವಾನಿಸಿರಿ.

28—7—11 ಮೆ|| ಎ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನಾರಗುಡಿ ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಹೈಯಲ್" ಅತ್ಯಂತ ಉತ್ಕೃಷ್ಟವಾಗಿ ಪೆಟ್ಟಿಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಹೈಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1—7—11 ಮೆ|| ಸಿ. ಆರ್. ನಾಯಡು ಪ. ವ. ಡಿ. ಟಾಶಿಬ, (ಬರ್ಮಾ) ನನ್ನ ಮಿತ್ರರು "ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರೆಯಿಂದ ವಿ. ಪಿ. ಮೂಲಕ ರವಾನಿಸ ತಕ್ಕದ್ದು.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.,**
155 Jumma Musid, Market, Bombay.

ಸೋಲ್ ಏಜಂಟ್ಸ್—ದಿ. ಊಲನ್‌ಮಾರ್ಟ್, ಮಂಗಳೂರು.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯ ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1—3—0; 1000 ಹಾಳೆಗಳಿಗೆ 10—0—0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1—0—0 ವಿ. ಪಿ. ಮೂಲಕ 1—3—0. 2000 ಹಾಳೆಗಳಿಗೆ 10—0—0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0—0—3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0—15—0. 1000 ಪೊಟ್ಟಣಕ್ಕೆ 8—0—0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0—13—0. ವಿ. ಪಿ. ಮೂಲಕ 1—0—0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1—4—0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ.

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಲಾಲ್, ಬೆಳ್ಳಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೋಗ್ರಾಫುಗಳನ್ನೂ ಛಾಯಾಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೋಗ್ರಾಫುಗಳಿಗೆ ಇತರ ಫೋಟೋಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೋಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.

ನಮ್ಮ ದರಗಳು ಬಡಜನರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ-ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸ್ಟೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ವಕ್ಷ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.

ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,

ಫೌಂಟನ್‌ಪೆನ್.



14 ಕ್ಯಾರ್ರು ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ಇಂಗ್ಲೀಷ್ ಅಕ್ಷರದ ಪೆಟ್ಟಿಗೆ.



ಇದರಲ್ಲಿ "ಏ" A ಮೊದಲುಗೊಂಡು "ಸೆಡ್" Z ವರೆಗಿನ ಇಪ್ಪತ್ತಾರು ಅಕ್ಷರಗಳೂ 1ರಿಂದ 10ರ ವರೆಗಿನ ಅಂಕೆಗಳೂ ಆಯಾ ಅಕ್ಷರದ ಉಪಯೋಗದಂತೆ ಪ್ರತಿಯೊಂದು 5 10-12 ಈ ರೀತಿ ಇವೆ. ಇವು ಉತ್ತಮವಾದ ರಬ್ಬರಿನಲ್ಲಿ ಅರ್ಧ ಕಾಲು ಇಂಚು ದಪ್ಪವಾಗಿ ತಯಾರುಮಾಡಲ್ಪಟ್ಟಿವೆ. ಅಚ್ಚಿಟ್ಟರೆ ಬಲು ಸುಂದರವಾಗಿಯೂ ಸ್ಪುಟವಾಗಿಯೂ ಇರುವವು. ಈ ಅಕ್ಷರಗಳನ್ನು ಬೇಕುಬೇಕಾದಂತೆ ಹಿಡಿಯಲ್ಲಿ ಜೋಡಿಸಿ ಅಚ್ಚಿಡಬಹುದು. ಹೆಸರು ವಿಳಾಸಗಳನ್ನೂ ಕಾರ್ಡು ಕವರುಗಳನ್ನೂ ಇತರ ಸಣ್ಣ ವಿಷಯಗಳನ್ನೂ ಈ ಅಕ್ಷರಗಳಿಂದಲೇ ಪ್ರಿಂಟು ಮಾಡಬಹುದು. ಹಿಡಿಯು ಒಳ್ಳೆಯ ಗಟ್ಟಿ ಲೋಹದಲ್ಲಿ ತಯಾರುಮಾಡಲ್ಪಟ್ಟಿದೆ. ಇಂಕಿಯ ಅಟ್ಟೆಯು ಸ್ವತಃ ಶಾಯಿನ್ನು ಒದಗಿಸಿಕೊಳ್ಳತಕ್ಕದ್ದು. ಎರಡು ಮೂರು ವರುಷಗಳ ವರೆಗೂ ಅದರಲ್ಲಿ ಮಶಿಯು ಒಣಗುವುದೇ ಇಲ್ಲ. ರಬ್ಬರು ಅಕ್ಷರಗಳೂ ಹಿಡಿಯೂ, ಅಟ್ಟೆಯೂ ಉಳ್ಳ ಈ ಮುದ್ದಾದ ಪೆಟ್ಟಿಗೆಯು ಜೇಬಿನಲ್ಲಿದ್ದರೆ ಸಣ್ಣ ಮುದ್ರಣಾಲಯವೇ ಸಂಗಡ ಇದ್ದಂತೆ. ಆದಕಾರಣ ವರ್ತಕರೂ, ಪಟೇಲ ಶಾನುಭೋಗರೂ, ಜಮೀನ್‌ದಾರರೂ, ವಿದ್ಯಾರ್ಥಿಗಳೂ, ವಿಶೇಷ ಕರೆಸ್‌ಪಂಡೆನ್ಸ್ ಉಳ್ಳ ಜನರೂ ಈ ಪೆಟ್ಟಿಗೆಯನ್ನು ಅವಶ್ಯ ಸಂಗ್ರಹಿಸಬೇಕು. ಸರ್ವರಿಗೂ ಅನುಕೂಲಿಸುವಂತೆ ಬೆಲೆಯನ್ನು ಸುಲಭವಾಗಿ ಇಟ್ಟಿದೆ.

ಒಟ್ಟು 127 ಅಕ್ಷರಗಳುಳ್ಳದ್ದು. ಬೆಲೆ ರೂ. 3—0—0

247 „ „ 4—0—0

ಟಪ್ಪಾಲು ಹಾಸಲು ಬೇರೆ.

ವ್ಯಾಪಾರಸ್ಥರಿಗೆ ಕಮಿಶನ್ ಕೊಡುತ್ತೇವೆ.

ನಮ್ಮಲ್ಲಿ ರಬ್ಬರು ಮೊಹರುಗಳೂ, ಅರಗಿನ ಸೀಲುಗಳೂ ತಯಾರಾಗುತ್ತವೆ. ಫೌಂಟನ್‌ಪೇನು ಮೊದಲಾದ ಸಾಮಾನುಗಳು ದೊರೆಯುತ್ತವೆ.

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

——o——

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ. ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು. ಟೀಕಾ ತಾತ್ಪರ್ಯ ಶಬ್ದಸಮಾಸ ಸಹಿತವಾದ ೧ನೇ ಪರ್ವ ರಘುವಂಶ ರೂ. ೧—೦—೦ ೨ನೇ ಪರ್ವ ರೂ. ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶ್ಯಾಮಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ ಸಹಿತವಾಗಿ ಈಗ ತಾನೆ ಪೂರೈಸಿರುತ್ತೆ. ಉತ್ತಮವಾದ ಕ್ಯಾಲಿಕೊ ಬೈಂಡು ರೂ. ೨—೪—೦. ಋಗ್ವೇದ ನಿತ್ಯಕರ್ಮ ೦—೪—೦. ಎಲ್ಲಾ ಪುಸ್ತಕದಪಟ್ಟಿಯೂ ಬೇಕಾದಲ್ಲಿ ಸುಮ್ಮನೇ ಪಡೆಯಬಹುದು.

ಬಿ. ಆದಿನಾರಾಯಣ ಶಾಸ್ತ್ರಿ,

ವಿದ್ಯಾನಂದ ಆಫೀಸ್, ಬೆಂಗಳೂರು ಸಿಟಿ.

ಇಂದ್ರ ವಜ್ರ.

(1) ಇಂದ್ರ ವಜ್ರ, (2) ವಿಕ್ರಮಪೀಠ (3) ಸಸೇಮಿರಾ ಎಂಬ ಬಾಲಕರ ಕಥೆಗಳು. "ಮೊಡರ್ನ್ ರೆವ್ಯು" ಮುಂತಾದ ಮಾಸ ಪುಸ್ತಕಗಳಲ್ಲಿಯೂ, ಸಿಸ್ಟರ್ ನಿವೇದಿತಾಯವರ "ಹಿಂದೂ ಮಕ್ಕಳ ಕಥೆ"ಗಳಲ್ಲಿಯೂ ಇಂಗ್ಲೀಷಿನಲ್ಲಿರುವ ಕಥೆಗಳನ್ನು ತಿದ್ದಿ, ಪರಿಷ್ಕರಿಸಿ, ಸಂಸ್ಕೃತ ಮೂಲಾನುಸಾರವಾಗಿ ಬೆಳೆಸಿ ಈ ಪುಸ್ತಕವು ರಚಿಸಲ್ಪಟ್ಟಿದೆ. ವಿಕ್ರಮಾದಿತ್ಯನ ಸಿಂಹಾಸನದ ಮೇಲಿನ ಗೊಂಬೆಗಳ ಮುವ್ವತ್ತೆರಡು ಕಥೆಗಳೂ, ಭೋಜರಾಜನ ಕಥೆಗಳೂ ಅಡಕವಾಗಿವೆ. ನೀತಿಬೋಧಕವಾಗಿಯೂ ಮನೋರಂಜಕವಾಗಿಯೂ, ಸಚಿತ್ರವಾಗಿಯೂ ಇದೆ. ಪುಟಗಳು 70 ಬೆಲೆ 4½ ಆಣೆ.

ಬಿ. ವೆಂಕಟಕೃಷ್ಣಪ್ಪ ಬಿ. ಎ., ಇವರಿಂದ ರಚಿತವಾದ ಹೊಸಕನ್ನಡದ ನವೀನ ಪ್ರಬಂಧ (ನಾವಲ್)ಗಳು.

ಶ್ಯಾಮಕುಬ್ಜ.

(Sir Walter Scott's "Black Dwarf")

ಈ ಕಥೆಯನ್ನೋದುವುದರಿಂದ ಭೂತಪಿಶಾಚಿಗಳ ನಿಜಸ್ಥಿತಿಯು ತಿಳಿಯ ಬಂದು ಮೂಢಭಯವು ತೊಲಗುವುದಲ್ಲದೆ ಅನೇಕ ಲೋಕರಹಸ್ಯಗಳೂ ನೀತಿತತ್ವಗಳೂ ತಿಳಿಯಬರುವುವು. ಇದು ಈ ಪ್ರಪಂಚದ ವಿಷಯದಲ್ಲಿ ಜೀಹಾಸೆಗೊಂಡು ವನವಾಸಿಯಾದ ಒಬ್ಬ ಕುರೂಪಿಯಾದ ಶ್ರೀಮಂತನ ಕಥೆ. ಇದನ್ನೋದುತ್ತೋದುತ ಕಣ್ಣೀರನ್ನು ತಡೆಯುವುದು ಕಷ್ಟವಾಗುವುದು. ಇಂಗ್ಲಿಷ್ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಕ್ಲಿಷ್ಟಪದಗಳ ನಿಘಂಟನ್ನು ಸೇರಿಸಿದೆ.

ಅಂದವಾದ ಮುದ್ರಣ, ಉತ್ತಮವಾದ ಕಾಗದ, ಭದ್ರವಾದ ಬೈಂಡ್, ಕ್ರಯ ೮ ಆಣೆ.

ಚಮತ್ಕಾರ ಚಿಂತಾಮಣಿ.

ಇದೊಂದು ಚಮತ್ಕಾರವಾದ ಕಥೆ. ಇದರ ಸಂವಿಧಾನವು ಮನೋಹರವಾಗಿರುವುದಲ್ಲದೆ ನೀತಿಬೋಧಕವಾಗಿದೆ. ಶೈಲಿಯು ಅತಿ ಕ್ಲಿಷ್ಟವೂ, ಅತಿ ಪೇಲವವೂ ಆಗಿರದೆ ಮಧುರವೂ ಗಂಭೀರವೂ ಆಗಿದೆ. ಇದರಲ್ಲಿ ಅನೇಕ ವಿಧವಾದ ಲೌಕಿಕ ನ್ಯಾಯಗಳೂ, ಉಪಮಾನ ಉಪಮೇಯ ವಿಶೇಷಗಳೂ ತುಂಬಿವೆ. ಕಥೆಯ ಸ್ವಾರಸ್ಯ ಕ್ಕೋಸ್ಕರ ಮಾತ್ರವೇ ಅಲ್ಲದೆ ಭಾಷಾ ಪಾಂಡಿತ್ಯಕ್ಕಾಗಿಯೂ ಈ ಪುಸ್ತಕವು ಓದಲ್ಪಡತಕ್ಕದಾಗಿದೆ. ಈ ಗ್ರಂಥದ ಪ್ರತಿಯೊಂದು ಪುಟದಲ್ಲಿಯೂ ಅಪೂರ್ವವಾದ ವರ್ಣನಾ ವೈಖರಿಯೂ, ಶಬ್ದವೈಚಿತ್ರ್ಯವೂ ಕಾಣಬರುತ್ತಿವೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಈ ಗ್ರಂಥವನ್ನು ಪಠಿಸುವುದರಿಂದ ನೀತಿವಂತನೂ, ಜ್ಞಾನವಂತನೂ, ಸರಸಿಯೂ, ವಾಕ್ಚಾತುರನೂ ಆಗುವನು. ಪುಟಗಳು 178 ಡೆಮ್ಮಿ ಕಾಗದವೂ ಮುದ್ರಣವೂ ಉತ್ತಮತರದವು. ಬೈಂಡು ಭದ್ರವಾಗಿದೆ. ಬೆಲೆ 10 ಆಣೆ ಮಾತ್ರ.

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—

ಎಚ್. ಎನ್. ರಾವ್ ಅಂಡ್ ಬ್ರದರ್ಸ್,

ಬೆಂಗಳೂರು ಸಿಟಿ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವ ಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಲಾಸ (ಪತ್ರ)☞ ವೇದವಾಹಿನೀ ಆಫೀಸ್,

ಶಂಕರಪುರ, ಬೆಂಗಳೂರು ಸಿಟಿ.

Registered No. M. 433

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಸೇರಿ ರೂ. 2-1-0.

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 18.

ಮಂಗಳೂರು ತಾ. 3ನೇ ಶುಕ್ರವಾರ ಮೇ 1912.

Amrutanjan Depot, Bombay.

(Regd.) **ಅಮೃತಾಂಜನ.** (ರಿಜಿಸ್ಟರ್ಡ್.)

ಅಮೃತಾಂಜನ — ಅಮೃತಾಂಜನ

ಸರ್ವ ನೋವಿಗೆ — ಸರ್ವ ನೋವಿಗೆ,

ಸಂಜೀವನ. — ಸಿದ್ಧಾಮೃತ.

ಬಾಟ್ಲಿ ಒಂದರ ರೂ. 0—8—0. — ಬಾಟ್ಲಿ ಒಂದರ ರೂ. 0—8—0.

ಅಮೃತಾಂಜನ.

ಎಲ್ಲಾ ಔಷಧಾಲಯಗಳಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವದು.

ವಿಜ್ಞಾಪನೆ:— ನಮ್ಮ ಟ್ರೇಡ್‌ಮಾರ್ಕ್ ಉಳ್ಳ ಹೊರಗಿನ ಟಿನ್ನಿನ ಕರಡಿಗೆಗಳು ವಿಲಾಯತಿಯಿಂದ ಬಾರದೆ ಇರುವದರಿಂದ ಮುಂಚಿನ ಹಾಗೆ ಕಾಗದದಲ್ಲಿ ಪೇಕ್ ಮಾಡಿದ್ದೇವೆ.

ಗಜಕರ್ಣದ ಮುಲಾಮು.

ಎಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ತಾಗಿಸುವದರೊಳಗೆ ನಾಶವಾಗಿ ಹೋಗುವದು.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ನೋವು, ಹಲ್ಲುಗಳ ವಾಸನೆ ಇತ್ಯಾದಿಗಳಿಗೆ ರಾಮಬಾಣದಂತಿದೆ.

ಗಜಕರ್ಣದ ಮುಲಾಮು.

ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತು 0—6—0.

ದಂತಮಂಜನ.

ಇದರ ಉಪಯೋಗದಿಂದ ಹಲ್ಲುಗಳು ಘಟ್ಟಿಯಾಗುವವು. ಮತ್ತು ಬೆಳ್ಳಗಾಗುವವು ಡಬ್ಬಿ ಒಂದರ ಕಿಮ್ಮತು 0—2—0.

ರಾಜಾರಾಣಿ ನಕ್ಷೆಗಳುಳ್ಳ ಈ ವರ್ಷದ ಸುಂದರವಾದ ಕೆಲೆಂಡರ್ (ತಾರೀಕು ತೋರಿಸುವ ಪಟ್ಟಿ) ಕ್ರಯ 1ರ ವಿ.ಪಿ. ಸಮೇತ 0—4—0.

ಕೇಶವರ್ಧಿನಿ ತೈಲ! ಕೇಶವರ್ಧಿನಿ ತೈಲ!! ಕೇಶವರ್ಧಿನಿ ತೈಲ!!

ಎಲ್ಲಾ ತೈಲಗಳಿಗಿಂತಲೂ, ಸುವಾಸಿಕವಾಗಿಯೂ, ಮನೋಹರವಾದ ಪರಿಮಳ ಉಳ್ಳದ್ದಾಗಿಯೂ, ಸ್ಪಿರಿಟು ವಗೈರೆ ಇಲ್ಲದೆಯೂ, ತಯಾರಿಸಲ್ಪಟ್ಟದ್ದಾಗಿರುತ್ತದೆ. ಇದರಿಂದ ಕೂದಲುಗಳು ಕಪ್ಪಾಗುವವು, ಉದ್ದವಾಗಿಯೂ ನಯವಾಗಿಯೂ ಬೆಳಿಯುವವು. ಬಾಟ್ಲಿ 1ರ 1-0-0 3ಬಾಟ್ಲಿಗಳಿಗೆ 2-10-0

ನಮ್ಮ ಔಷಧಗಳು ಮಂಗಳೂರಲ್ಲಿ ಈ ಕೆಳಗಿನ ಕಂಪೆನಿಗಳಲ್ಲಿ ದೊರಕುವದು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್, ಪರ್ಲ ಎಂಡ್ ಸನ್ಸ್, ಇಬ್ರಾಹಿಮ್ ಎಲಿಯಾಸ್, ಅರ್ನೋನ್ ಎಂಡ್ ಐಮನ್.

ಕೆಟಲಾಗು ಅಪೇಕ್ಷಿಸುವವರು ದಯಮಾಡಿ ಬರಿಯಿರಿ.

ಅಮೃತಾಂಜನ ಡಿಪೋ, ಮುಂಬಯಿ.

ಫೌಂಟನ್ ಪೆನ್,



14 ಕ್ಯಾರ್‍ರು ಚಿನ್ನದ ಮುಳ್ಳು ಹಾಕಿದ್ದು ಇದರ ಕ್ರಯ 1—14—0

ಇಂಗ್ಲೀಷ್ ಅಕ್ಷರದ ಪೆಟ್ಟಿಗೆ.

ಇದರಲ್ಲಿ "ಎ" A ಮೊದಲುಗೊಂಡು "ಸೆಡ್" Z ವರೆಗಿನ ಇಪ್ಪತ್ತಾರು ಅಕ್ಷರಗಳೂ 1ರಿಂದ 10ರ ವರೆಗಿನ ಅಂಕೆಗಳೂ ಆಯಾ ಅಕ್ಷರದ ಉಪಯೋಗದಂತೆ ಪ್ರತಿಯೊಂದು 5 10-12 ಈ ರೀತಿ ಇವೆ. ಇವು ಉತ್ತಮವಾದ ರಬ್ಬರಿನಲ್ಲಿ ಅರ್ಧ ಕಾಲು ಇಂಚು ದಪ್ಪವಾಗಿ ತಯಾರುಮಾಡಲ್ಪಟ್ಟಿವೆ. ಅಚ್ಚಿಟ್ಟರೆ ಬಲು ಸುಂದರವಾಗಿಯೂ ಸ್ಫುಟವಾಗಿಯೂ ಇರುವವು. ಈ ಅಕ್ಷರಗಳನ್ನು ಬೇಕುಬೇಕಾದಂತೆ ಹಿಡಿಯಲ್ಲಿ ಜೋಡಿಸಿ ಅಚ್ಚಿಡಬಹುದು. ಹೆಸರು ವಿಳಾಸಗಳನ್ನೂ ಕಾರ್ಡು ಕವರುಗಳನ್ನೂ ಇತರ ಸಣ್ಣ ವಿಷಯಗಳನ್ನೂ ಈ ಅಕ್ಷರಗಳಿಂದಲೇ ಪ್ರಿಂಟು ಮಾಡಬಹುದು. ಹಿಡಿಯು ಒಳ್ಳೆಯ ಗಟ್ಟಿ ಲೋಹದಲ್ಲಿ ತಯಾರುಮಾಡಲ್ಪಟ್ಟಿದೆ. ಇಂಕಿಯ ಅಟ್ಟೆಯು ಸ್ವತಃ ಶಾಯಿನ್ನು ಒದಗಿಸಿಕೊಳ್ಳತಕ್ಕದು. ಎರಡು ಮೂರು ವರುಷಗಳ, ವರೆಗೂ ಅದರಲ್ಲಿ ಮಶಿಯು ಒಣಗುವುದೇ ಇಲ್ಲ. ರಬ್ಬರು ಅಕ್ಷರಗಳೂ ಹಿಡಿಯೂ ಅಟ್ಟೆಯೂ ಉಳ್ಳ ಈ ಮುದ್ದಾದ ಪೆಟ್ಟಿಗೆಯು ಜೇಬಿನಲ್ಲಿದ್ದರೆ ಸಣ್ಣ ಮುದ್ರಣಾಲಯವೇ ಸಂಗಡ ಇದ್ದಂತೆ. ಅದಕಾರಣ ವರ್ತಕರೂ, ಪಟೇಲ ಶಾನುಭೋಗರೂ, ಜುಮೀನ್ದಾರರೂ, ವಿದ್ಯಾರ್ಥಿಗಳೂ, ವಿಶೇಷ ಕರೆಸ್‌ಪಂಡೆನ್ಸ್ ಉಳ್ಳ ಜನರೂ ಈ ಪೆಟ್ಟಿಗೆಯನ್ನು ಅವಶ್ಯ ಸಂಗ್ರಹಿಸಬೇಕು. ಸರ್ವರಿಗೂ ಅನುಕೂಲಿಸುವಂತೆ ಬೆಲೆಯನ್ನು ಸುಲಭವಾಗಿ ಇಟ್ಟಿದೆ.

ಒಟ್ಟು 127 ಅಕ್ಷರಗಳುಳ್ಳದ್ದು. ಬೆಲೆ ರೂ. 3—0—0
247 „ „ 4—0—0

ಟಪ್ಪಾಲು ಹಾಸಲು ಬೇರೆ.
ವ್ಯಾಪಾರಸ್ಥರಿಗೆ ಕಮಿಶನ್ ಕೊಡುತ್ತೇವೆ

ನಮ್ಮಲ್ಲಿ ರಬ್ಬರು ಮೊಹರುಗಳೂ, ಅರಗಿನ ಸೀಲುಗಳೂ ತಯಾರಾಗುತ್ತವೆ. ಫೌಂಟನ್‌ಪೇನು ಮೊದಲಾದ ಸಾಮಾನುಗಳು ದೊರೆಯುತ್ತವೆ.

ಮಿಲ್ಲರ್ ಮತ್ತು ಕಂಪೆನಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ವಿದ್ಯಾನಂದ ಮಾಸಪತ್ರಿಕೆ.

ವಾರ್ಷಿಕ ಚಂದಾ ಹಾಸಲು ಸೇರಿ ೨—೪—೦.

ಈ ೧೯೧೨ರಿಂದ ವಿಷ್ಣುಪುರಾಣ, ಭಗವದ್ಗೀತೆ, ಶ್ರೀಮಚ್ಛಂಕರಾಚಾರ್ಯಕೃತ ಉಪದೇಶ ಸಾಹಸ್ರೀ ಇವುಗಳು ಕನ್ನಡಿಸಲ್ಪಡುತ್ತಲಿವೆ ಮೂರು ವರ್ಷಗಳಿಂದಲೂ ಕ್ರಮವಾಗಿ ನಡೆದುಬಂದಿರುವುದು, ಗ್ರಾಹಕರಿಗೆ ವರ್ಷ ೧ಕ್ಕೆ ಉತ್ತಮವಾದ ಗ್ಲೇಜು ಕಾಗದದಲ್ಲಿ ೬೦೦ ಪುಟಗಳು ಕೊಡಲಾಗುವುದು. ಮಾದ್ರಿ ಸಂಚಿಕೆ ಬೇಕಾದಲ್ಲಿ ಕಳುಹಿಸುವೆವು ಮತ್ತು ವಿದ್ಯಾನಂದ ಪತ್ರಿಕೆಯಲ್ಲಿ ಇದುವರಿವಿಗೆ ಪೂರೈಸಿ ಬಿಕರಿಗೆ ಸಿದ್ಧವಾಗಿರುವ ಪುಸ್ತಕಗಳು ಟೀಕಾ ತಾತ್ಪರ್ಯ ಶಬ್ದಸಮಾಸ ಸಹಿತವಾದ ೧ನೇ ಪರ್ವ ರಘುವಂಶ ರೂ. ೧—೦—೦ ೨ನೇ ಪರ್ವ ರೂ. ೧—೦—೦ (೧—೨ನೇ ಪರ್ವ ಸೇರಿದ ಕ್ಯಾಲಿಕೊ ಬೈಂಡು ರೂ. ೨—೪—೦. ಮುಕುಂದಮಾಲಾ ಸ್ತೋತ್ರ ೦—೪—೦. ಮಹಿಮ್ನ ಸ್ತೋತ್ರ ೦—೨—೦. ಚಮತ್ಕಾರ ಚಿಂತಾಮಣಿ ಕಥೆ ೦—೧೦—೦. ಶಾಮುಕುಬ್ಜ ಕಥೆ ೦—೮—೦. ಶ್ರೀಮಚ್ಛಂಕರಾಚಾರ್ಯಕೃತ ವಿವೇಕ ಚೂಡಾಮಣಿ ಪ್ರತಿಪದ ಟೀಕಾ ತಾತ್ಪರ್ಯ ಸಹಿತವಾಗಿ ಈಗ ತಾನೆ ಪೂರೈಸಿರುತ್ತೆ. ಉತ್ತಮವಾದ ಕ್ಯಾಲಿಕೊ ಬೈಂಡು ರೂ. ೨—೪—೦. ಋಗ್ವೇದ ನಿತ್ಯಕರ್ಮ ೦—೪—೦. ಎಲ್ಲಾ ಪುಸ್ತಕದಪಟ್ಟಿಯೂ ಬೇಕಾದಲ್ಲಿ ಸುಮ್ಮನೇ ಪಡೆಯಬಹುದು.

ಬಿ. ಆದಿನಾರಾಯಣ ಶಾಸ್ತ್ರಿ,
ವಿದ್ಯಾನಂದ ಆಫೀಸ್, ಬೆಂಗಳೂರು ಸಿಟಿ.

ಸಂಗೀತ ಪಾರಿಜಾತ.

ವೇ। ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಂದ ರಚಿತವಾದ್ದು. ಇದು ವಿವಾಹೋಪನಯನಾದಿ ಶುಭ ಮಹೋತ್ಸವ ಕಾಲಗಳಲ್ಲಿ ಹೇಳುವ ಹಾಡಿನ ಪುಸ್ತಕ. ಅದರಲ್ಲಿ ಈಗಿನ ಕಾಲಕ್ಕೆ ಅನುಗುಣವಾಗಿ ಹೊಸ ಬಗೆಯ ರಾಗ ರಚನೆಗಳಲ್ಲಿ ಹಾಡುಗಳು ಬರೆಯಲ್ಪಟ್ಟಿವೆ. ಇದು ಮನೆಗಳಲ್ಲಿ ಸುವಾಸಿನಿಯರಿಗೆ ಅತ್ಯಾವಶ್ಯಕವೆನ್ನುವುದು. ಓದಿ ನೋಡಿದರೆ ವ್ಯಕ್ತವಾಗುತ್ತೆ: ಕ್ರಯ ೪ ಆಣೆ.

ದೇವೀ ಚೌಧುರಾಣಿ

ಮ। ಬಿ. ವೆಂಕಟಾಚಾರ್ಯರಿಂದ ರಚಿತವಾದದ್ದು. ಈ ಪುಸ್ತಕವು ಸ್ತ್ರೀಯರಿಗೆ ಪತಿ ಸೇವೆಯೇ ಸಕಲ ಧರ್ಮಾಚರಣೆ ಎಂತಲೂ, ಕರ್ಮ ಪರಾಯಣರಾಗಿ ಸಂಸಾರವನ್ನು ನಿರ್ವಾಹಮಾಡುವುದೇ ಅವರಿಗೆ ಮುಖ್ಯ ಕರ್ತವ್ಯವೆಂತಲೂ ಬೋಧಿಸುವುದು. ಜ್ಞಾನಯೋಗ, ಭಕ್ತಿಯೋಗ ಮೊದಲಾದುವೆಲ್ಲ ಇದರಲ್ಲಿ ಐಕ್ಯವಾಗಿದೆ. ಕ್ರಯ ರೂ. ೧—೬—೦

ರಾಜಸಿಂಹ

ಮ। ಬಿ. ವೆಂಕಟಾಚಾರ್ಯರಿಂದ ರಚಿತವಾದದ್ದು. ಇದು ಓದುವುದಕ್ಕೆ ಅತಿ ಮನೋಹರವಾದ ಚರಿತ್ರೆಯು. ಈ ಗ್ರಂಥದಲ್ಲಿ ಹಿಂದೂ ಜನರು ಬಾಹು ಬಲದಲ್ಲಿ ದೇಶೀಯರಾದ ಇತರ ಜನರಿಗಿಂತ ಕಡಮೆಯಾಗಿರಲಿಲ್ಲವೆಂಬ ವಿಷಯವು ಮುಖ್ಯವಾಗಿ ಪ್ರತಿಪಾದಿಸಲ್ಪಟ್ಟಿದೆ. ಕ್ರಯ ರೂ. ೧—೬—೦.

ಅಲಿಗರ್ ಬೀಗಗಳು.

ಭದ್ರವಾಗಿಯೂ, ಮಜಬೂತಾಗಿಯೂ, ಭಾರವಾಗಿಯೂ, ನೋಡುವದಕ್ಕೆ ಅಂದವಾಗಿಯೂ ಇರುವವು. ಆರು ಚಕ್ರಗಳಿವೆ. ಭಾರಿ ಮನೆಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಸಹ ಹಾಕುವುದಕ್ಕೆ ಉಪಯೋಗಿಸಬಹುದು.

ಸೈಜು.

	1ನೇ ನಂಬರು.	2ನೇ ನಂಬರು.
ಹಿತ್ತಾಳಿ ಬೀಗ	2—8—0	3—0—0
ಕಬ್ಬಿಣದ ಬೀಗ	1—8—0	2—0—0

ಹಾಸಲು ಪ್ರತ್ಯೇಕ ಬೀಳುವುದು.

ದೊರಿಯುವ ಸ್ಥಳ:—
ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಬೆಂಗಳೂರು ಸಿಟಿ.

ವೇದವಾಹಿನೀ.

(ವರ್ಗಣಿ) ೨ ರೂ. ಮಾಸಪತ್ರಿಕೆ ಚಂದಾಹಾಸಲು ಸೇರಿ 2 ರೂ.

ಈ ಮಾಸಪತ್ರಿಕೆಯ ಮೂಲಕ ವೇದಶಾಖೆಗಳಾದ ಅಷ್ಟಾದಶ ಮಹಾಪುರಾಣಗಳೂ ಸುಲಭವಾದ ಕನ್ನಡ ಕಥಾರೂಪಗಳಾಗಿ ಪ್ರಕಟಿಸಬೇಕೆಂದು ಮೊದಲು ಧರ್ಮ, ಕರ್ಮ, ನೀತಿ, ಭಕ್ತಿ, ಜ್ಞಾನ, ವೈರಾಗ್ಯ ಮುಂತಾಗಿ ವೇದವೇದಾಂತ ವಿಷಯಗಳನ್ನೊಳಕೊಂಡಿರುವ ಶ್ರೀ ಶಿವಮಹಾ ಪುರಾಣ, ದೇವೀ ಭಾಗವತ ಪುರಾಣಗಳೆರಡೂ ಪ್ರಕಟವಾಗುತ್ತಿರುವವು. ಸ್ತ್ರೀಪುರುಷರಿಗೂ ಬಾಲಕ ಬಾಲಕಿಯರಾದಿಯಾಗಿ ಎಲ್ಲರಿಗೂ ಅನುಕೂಲವಾಗಿರುವದೆಂಬುವುದು ವಾಚಕರಿಗೆ ತಿಳಿಯದಿರಲಾರದು. ಚಂದಾದಾರರಿಗೆ ಇದುವರಿಗೂ ಆಗಿರುವ ಸಂಚಿಕೆಗಳನ್ನೆಲ್ಲಾ ಕಳುಹಲಾಗುತ್ತವೆ. ಪುಸ್ತುಕಗಳಾದ ಬಳಿಕ ಬೆಲೆ ಹೆಚ್ಚು ಈ ದೊಡ್ಡ ಕೆಲಸಕ್ಕೆ ಆಸ್ತಿಕಾಭಿಮಾನಿಗಳೆಲ್ಲಾ ಪ್ರೋತ್ಸಾಹಿಸಬೇಕೆಂದು ಪ್ರಾರ್ಥನಾ.

ತಿಂಗಳು 1ಕ್ಕೆ 48 ಕೋಪಿಗಳು ಗ್ರಾಹಕರ ಕರಗತವಾಗುವವು.

ವಿಲಾಸ (ಪತ್ರೆ) ವೇದವಾಹಿನೀ ಆಫೀಸ್,
ಶಂಕರಪುರ, ಬೆಂಗಳೂರು ಸಿಟಿ.

ರೇಷ್ಮೆ ಪೀತಾಂಬರ್ ಮತ್ತು ಕಂಪೆನಿ, ಬನಾರಿಸ್ ಪಟ್ಟಣ.

ಪ್ರಸಿದ್ಧವಾದ
ರೇಷ್ಮೆ ಬಟ್ಟೆಗಳು! ಪೀತಾಂಬರದ ಶೀರೆಗಳು!!

ಒಪ್ಪಲ್ಪಡದೆ ಇದ್ದರೆ ವಾಪಾಸು ತೆಗೆದುಕೊಳ್ಳಲ್ಪಡುವುದು.

ಪೀತಾಂಬರದ ಶೀರೆಗಳು.

ಬನಾರಸ್ ಪೀತಾಂಬರದ ಶೀರೆಗಳು:—೧೬ ಮೊಳ ಉದ್ದ ೨॥ ಮೊಳ ಅಗಲ, ಸೆರಗೂ ಅಂಚು ಉತ್ತಮವಾದ ಜರತಾರಿ ಉಳ್ಳದ್ದು. ಕೆಂಪು, ಹಸರು, ಊದಾ ಮತ್ತು ಗುಲಾಬೀ ರಂಗುವುಳ್ಳ ಅಂಚುಗಳು, ಒಳಭಾಗವು ಸಾದಾ, ಸಾಮಾನ್ಯವಾದ ಶೀರೆಗಳಿಗೆ ಬೆಲೆಯು ೨೦ರಿಂದ ೩೫ ರೂಪಾಯಿನ ವರೆಗೂ ಇರುವುದು. ಅತ್ಯುತ್ತಮವಾದವುಗಳಿಗೆ ೪೦ರಿಂದ ೨೦೦ರ ವರೆಗೂ ಬೆಲೆಯಾಗುವುದು.

ಪೀತಾಂಬರದ. ಬೂಟಾ ಶೀರೆಗಳು.

ಪೀತಾಂಬರದ ಬೂಟಾ ಶೀರೆಗಳು ಮೈದಾನದಲ್ಲಿ ಜರಿತಾರಿ ಹುವ್ವುಗಳು ಅಥವಾ ಬೂಟಾಗಳು ಇರುವವು. ಇವುಗಳಲ್ಲಿ ಸಾಮಾನ್ಯವಾದ ಶೀರೆಗಳಿಗೆ ೨೫ರಿಂದ ೩೫ ರೂಪಾಯಿನ ವರೆಗೂ ಆಗುವುದು. ಉತ್ತಮವಾದವುಗಳಿಗೆ ೪೦ ರೂಪಾಯಿಗಳಿಂದ ೨೫೦ ರೂಪಾಯಿಗಳ ವರೆಗೂ ಆಗುವುದು.

ಪೀತಾಂಬರದ ಕಣಗಳು.

ಜರತಾರಿ ಅಂಚು, ಮೈದಾನದಲ್ಲಿ ಹೂವಿನ ಕೆಲಸ, ರಂಗು ಕೆಂಪು, ಹಸರು, ಊದಾ ಮತ್ತು ಗುಲಾಬಿ, ಸಾದಾ ಮೈದಾನವುಳ್ಳ ಕಣ ಒಂದಕ್ಕೆ ೨ ರೂಪಾಯಿನಿಂದ ೮ ರೂಪಾಯಿ ವರೆಗೂ ಕ್ರಯವಾಗುವುದು. ಬೂಟಾ ಮೈದಾನವುಳ್ಳದ್ದು ಕಣ ೧ಕ್ಕೆ ೨॥ ರೂಪಾಯಿನಿಂದ ೨೫ ರೂಪಾಯಿನ ವರೆಗೂ ಆಗುವುದು.

ರುಮಾಲುಗಳು ಅಥವಾ ಪೇಟಾಗಳು.

ಎಲ್ಲಾ ರಂಗಿನ ರುಮಾಲುಗಳು ಮತ್ತು ಪೇಟಾಗಳು ೨೫ ರೂಪಾಯಿ ಮೊದಲ್ಗೊಂಡು ೧೦೦ ರೂಪಾಯಿನ ವರೆಗೂ ಬೆಲೆಯುಳ್ಳವುಗಳಾಗಿರುತ್ತವೆ.

ಮಕ್ಕಳ ಆಟದ ಪಾತ್ರೆಗಳು.

ಚಿಕ್ಕದಾಗಿಯೂ, ಸುಂದರವಾಗಿಯೂ, ಹೊಳೆಯತಕ್ಕವುಗಳಾಗಿಯೂ ಇರುತ್ತವೆ. ಇವುಗಳಲ್ಲಿ ದೊಡ್ಡದಾಗಿರತಕ್ಕ ಪಾತ್ರೆಗಳ ಸೆಟ್ಟಿಗೆ ೪ ರೂಪಾಯಿ ಚಿಕ್ಕ ಸೆಟ್ಟಿಗೆ ೨ ರೂಪಾಯಿ.

. ಬನಾರಸ್ ಪಟ್ಟಣದಲ್ಲಿರತಕ್ಕ ರೇಷ್ಮೆ ಪಿತಾಂಬರ ಕಂಪೆನಿ ಮ್ಯಾನೇಜರಿಗೆ ಬರೆದುಕೊಂಡರೆ ಇದರ ತಪಶೀಲುವಾರು ಕ್ಯಾಟಲಾಗು ಕೊಡಲ್ಪಡುವುದು.

ಉಚಿತ! ಉಚಿತ!! ಉಚಿತ!!!

ರಾಯಿಸಾಹೇಬ್ ಡಾಕ್ಟರ್ ಕೆ. ಸಿ. ದಾಸರವರ

ಹೆಲ್ತ್ ರಿಸ್ಟೋರರ್.

ಯೌವ್ವನಸ್ಥರಿಗೂ ಮುದುಕರಿಗೂ ಪ್ರತಿ ದಿನದ ವಹಿವಾಟಗಳಲ್ಲಿ ಅತ್ಯವಶ್ಯವಾದ ಪುಸ್ತಕವು. ಈ ಪುಸ್ತಕವು ಪುಂಸ್ತ್ರೀ ಧರ್ಮನ್ನು ಬೋಧಿಸಿ ಯೌವ್ವನಸ್ಥರ ಅಜಾಗ್ರತೆಯಿಂದ ಹುಟ್ಟುವ ರೋಗ ಪರಿಹಾರ ವಿಧಾನವನ್ನು ಕಲಿಸಿಕೊಡುವಂಥಾದ್ದಾಗಿದೆ. ಧರ್ಮಾರ್ಥವಾಗಿ ಹಂಚಲ್ಪಡುವವು. ಟಪ್ಪಾಲು ಚಾರ್ಜು ಉಚಿತ.

The Swasthy-Sahaya Pharmacy.
30-2, Harrison Road, CALCUTTA

ಒಂದೊಂದು ಗುಳಿಗೆಯು ಅಂದರೆ ಸರ್ವ ಆರೋಗ್ಯವು	ಆತಂಕ ನಿಗ್ರಹ **ಗುಳಿಗೆಗಳು.**	30 ವರುಷಗಳಿಂದ ಉಪಯೋಗಿಸಲ್ಪಡುತ್ತಲಿವೆ

ಅವು ಯಾತಕ್ಕೆಂಬುವದು ನಿಮಗೆ ತಿಳಿಯುವದೋ? ಒಳ್ಳೇದು,—ನಪುಂಸಕವು—ರಕ್ತ ಕೆಡುವಿಕೆಯು—ಎಲ್ಲಾ ತರದ ಬಲಹೀನಗಳು—ಇಂದ್ರಿಯ ಮತ್ತು ಮೂತ್ರ ವ್ಯಾಧಿಗಳು—ಬಲಹೀನವಾದ ಜ್ಞಾಪಕಶಕ್ತಿಯೂ:—ತಾವು ಮೇಲೆ ಹೇಳಿದ ಯಾವದೊಂದು ಬಾಧ್ಯಗಳಿಂದಲಾದರೂ ಶ್ರಮಹೊಂದಿರುವಿರಾ? ಅಂಥವುಗಳಿಂದ ನಿಮಗೆ ತಪ್ಪಿಸಿಕೊಳ್ಳಬೇಕಾಗ್ನಿದೆಯೋ? ಹಾಗಾದರೆ, ಏತಕ್ಕೆ ತಾವು ಆತಂಕನಿಗ್ರಹ ಗುಳಿಗೆಗಳ ಸಹಾಯವು ಹೊಂದಬಾರದು? ಪ್ರಯತ್ನಪೂರ್ವಕವಾಗಿ ಮತ್ಕಾವೌಧವು ಸೇವಿಸುತ್ತಾ—ಈ ಗುಳಿಗೆಗಳನು ಉಪಯೋಗಿಸಿ ಬಾಧೆಗಳಿಂದ ತೊಲಗಬಹುದು.—"ಸಮಯದ ಒಂದು ಹೊಲಿಗೆ ಒಬ್ಬಂತರಷ್ಟು" ಫಲವೆಂದು ತಿಳಿಯಬೇಕು.

32 ಗುಳಿಗೆಗಳ ಕುಪ್ಪಿ 1ಕ್ಕೆ ರೂಪಾಯಿ 1. ಅಂಚೆಯು ಪ್ರತ್ಯೇಕ.

ಆತಂಕನಿಗ್ರಹ ಔಷಧಾಲಯ
22 ಬ್ರಾಡ್ವೇ ಮತ್ತು 96 ಮೌಂಟ್ ರೋಡ್ ಮದರಾಸು.
ವೈದ್ಯ ಶಾಸ್ತ್ರಿ,
ಮಣಿಶಂಕರ ಗೋವಿಂದಜಿ.
ಮತ್ತು ಜಾಮ್ ನಗರ ಕಾಠ್ಯಾವಾರ್.

ಅಶ್ವಿನಿ ಗವರ್ನಮೆಂಟ್ ಸೆಕ್ಯೂರಿಟಿ

ಲೈಫ್ ಎಶ್ಯೂರೆನ್ಸ್ ಕಂಪೆನಿ.

ಲಿಮಿಟೆಡ್.

ಆಫೀಸು. ವಿಶಾಖಪಟ್ಟಣ, ಮತ್ತು ಮದ್ರಾಸು
ಟ್ರಸ್ಟೀ:— ಮದ್ರಾಸು ಆಫೀಸಿಯಲ್ ಟ್ರಸ್ಟಿಗಳು.

ಸ್ವಲ್ಪ ಅನುಕೂಲತೆಯವರಿಗೂ ಕೇವಲ ಬಡವರಿಗೂ ಸಾಧ್ಯವಾಗುವ ಅನೇಕ ಪ್ರಯೋಜನ ಉಳ್ಳದ್ದಾಗಿರುವುದು.

೧೦೦ ರೂಪಾಯಿಗಳಿಂದ ೫೦೦೦ ರೂಪಾಯಿ ವರೇಗಿನ ಮೊಬಲಗುಗಳಿಗೆ ಜೀವ ವಿಮೇ ಅತಿ ಕಮ್ಮಿಯಾದರೂ ಭದ್ರವಾದ ವಿಮೇ ದರಗಳಲ್ಲಿ ಉತ್ತರಾಯಿಸ ಬಹುದು.

ಇತರ ಯಾವ ಜೀವವಿಮೇ ಕಂಪೆನಿಗಳಲ್ಲಿ ಉತ್ತರಾಯಿಸುವ ಮೊದಲು ನಮ್ಮದರಗಳನ್ನೂ ನಮ್ಮ ಕಂಪೆನಿಯಿಂದ ದೊರಕುವ ಇತರ ಪ್ರಯೋಜನಗಳನ್ನೂ ಬರೆದು ತಿಳಕೊಳ್ಳಿ.

ಕಂಪೆನಿಯು ಮೂಲಧನವೆಲ್ಲವೂ ಸರಕಾರದ ಭದ್ರತಾಪತ್ರಗಳಲ್ಲಿ ಠೀವಹಾತಿಯಾಗಿಟ್ಟಿರುವುದು.

ಹೆಂಗಸರೂ ಜೀವವಿಮೇ ಉತ್ತರಾಯಿಸ ಬಹುದು.

ಪ್ರಖ್ಯಾತಿಗೊಂಡ ಶ್ರೀಕೃಷ್ಣನ್ ಬ್ರದರ್ಸರವರ ನಾನಾ ತರದ ದೃಷ್ಟಿಚಕ್ರಗಳನ್ನು, ದೃಷ್ಟಿಗಳನ್ನು ಪರೀಕ್ಷಿಸಿ ಅಲ್ಪ ಮೊಬಲಗಿನಿಂದ ತರಿಸಿಕೊಡುವವಲ್ಲದೆ ದೃಷ್ಟಿಚಕ್ರಗಳ ಯಾವದೊಂದು ಭಾಗವು ಒಡಕುಬಂದಲ್ಲಿ ಬೇರೆ ಸರಿಯಾದವುಗಳಿಂದ ಜಾಗ್ರತೆಯಾಗಿ ಕಮ್ಮಿ ದರದಲ್ಲಿ ದುರುಸ್ತಿಮಾಡಲ್ಪಡುವದು.

ಎಲ್ಲೂರು ರಾಮರಾವ್.
ಜನರಲ್ ಏಜಂಟ್, ಬ್ರಿಟೋ ಬಿಲ್ಡಿಂಗ್ಸ್,
ಮಂಗಳೂರು, ದ. ಕನ್ನಡ

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳು ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ ಸೇರು 1ಕ್ಕೆ	12—0—0	A ಅರಗಜ ತೊಲೆ 1ಕ್ಕೆ	2—0—0
ಅಂಬರ್ ಬತ್ತಿ „ „	6—0—0	B ಅರಗಜ „ „	1—0—0
ಕಸ್ತೂರಿ ಬತ್ತಿ „ „	3—0—0	ಕಸ್ತೂರಿ ಬಿಲ್ಲೆ „ „	2—0—0
ಜವಾಜಿ ಬತ್ತಿ „ „	2—0—0	ಜವಾಜಿ ಬಿಲ್ಲೆ „ „	1—0—0
ಪುಣಗಿನ ಬತ್ತಿ „ „	1—8—0	ಕೇಸರಿ ಬಿಲ್ಲೆ „ „	0—8—0
A ಪನ್ನೀರ್ ಬತ್ತಿ „ „	0.12—0	ತಾಂಬೂಲರತ್ನ ಸೀಸೆ 1ಕ್ಕೆ	0—4—0
ಮಸಾಲಾ ಬತ್ತಿ „ „	0—6—0	ದಶಾಂಗ ಡಬ್ಬಿ 1ಕ್ಕೆ	0—4—0

ನಮ್ಮ ಏಜಂಟರು:— ವಿಳಾಸ:—

ಮ. ಟಿ. ಸುಬ್ಬಣ್ಣ ಭಟ್ಟರು,
ಹೆಡ್ ಮಾಸ್ತರ್, ಮಿತ್ತನಡ್ಕ,
ಉಪ್ಪಿನಂಗಡಿ ತಾಲೂಕು.

ಎನ್. ಎಂ. ಸುಬ್ರಾವ್,
"ಸುಗಂಧವಿಲಾಸ"
ಮಂಗಳೂರು

CHEAP JACK
FANCY UMBRELLA MART.
ಚಿತ್ರವಿಚಿತ್ರವಾದ ಕೊಡೆಗಳು.

ಕಂ॥ ಧರೆಯೊಳ್ ಮೆರೆ ಮಹಾಶಯ । ರಿರಃ ನಾವಿನಿಸುಂದಿನಂ ಕೊಡೆಯ ವಿಕ್ರಯಮಂ ॥ ಇರಿಸಿರ್ದೊಡುಂ ವಿಮುಖರಾ । ಗಿರುವುದೇನಚ್ಚರಿಯೊ । ತಿಳಿಯದರಿರಮಂ ॥೧॥ ಕೊಡುವೆಂ ಕೊಡುವೆನೆನುತ್ತಂ । ಕಡೆಯೊಳ್ ಕೊಡದಿರ್ಪ ದುರ್ಜನರುಮಂ ಪಳಿವೋಲ್ ॥ ಕೊಡೆಕೊಡೆ ಯೆಂಬಾಮಾತಿಂ । ಗೆಡೆಯಾಗಿಯೆ ನೆರಲನೀವ ಕೊಡೆಯಿಲ್ಲಿರ್ಕುಂ ॥ ೨ ॥

ವಿಳಾಸ:— ಕವಿ ಎಂಡ್ ಸನ್ಸ್.
ಮಂಗಳೂರು, ದ. ಕ.

1888ನೇ ಇಸವಿಯಿಂದ ಬೊಂಬಾಯಿಯಲ್ಲಿ ಸ್ಥಾಪಿಸಿದ ವ್ಯಾಪಾರ ಸಂಘ ಉತ್ತರ ವ ದಕ್ಷಿಣ ಕನ್ನಡದ ಎಲ್ಲಾ ವ್ಯಾಪಾರಸ್ಥರಿಗೆ ಹೆಚ್ಚಿನ ಪರಿಚಿತಿಯುಳ್ಳದ್ದಾಗಿರುತ್ತದೆ. ಎಲ್ಲಾ ತರದ ಸಾಮಾನುಗಳನ್ನು ಕಮಿಶನ ಮೂಲಕ ರವಾನಿಸುತ್ತೇವೆ. ವಿಶೇಷ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಅರ್ಧಾಣೆ ಸ್ಟಾಂಪು ಸಮೇತ ಪತ್ರವ್ಯವಹಾರ ನಡಿಸಿದಲ್ಲಿ ಖಾತ್ರಿಯಾಗುತ್ತದೆ.

ವಿಳಾಸ:— ರಂಗಪ್ಪಾ ರಾಮಕೃಷ್ಣ ಕವಿ,
ಮನೋಹರ ಬಿಲ್ಡಿಂಗ್, ಲವರಚಾಲ, ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಿಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವನನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನು ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೊಲೆರಾ ಅಥವಾ ಉಬ್ಬಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ 1ರ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೆಸೂ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಜೇರೆ. ಅನುಪಾನ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟೆ ರವಾನಿಸುವೆವು.

ವಿಳಾಸ:—
ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪೆನಿ,

ಸ್ವದೇಶಾಭಿಮಾನಿ.

☞ ಮಂಗಳೂರು, ಶುಕ್ರವಾರ ತಾರೀಕು 3ನೇ ಮೇ 1912. ☜

ಭೂಲೋಕದ ಇತರ ಕಡೆಗಳಲ್ಲಿರುವ ಭಾರತೇಯರು.

ಆಫ್ರಿಕ ಅಮೇರಿಕಾ ಖಂಡಗಳ ಕೆಲವು ಪ್ರಾಂತ್ಯಗಳಲ್ಲಿಯೂ ಮೊರಿಸಿಯಸ್ ಮೊದಲಾದ ದ್ವೀಪಗಳಲ್ಲಿಯೂ ಭಾರತೇಯರು ಪಡುವಂಥಾ ಸಂಕಷ್ಟಗಳನ್ನು ವಾಚಕರು ಕೇಳಿರಬಹುದು. ಅಂಥಾ ಸಂಕಷ್ಟಗಳ ನಿವಾರಣೆ ಬಗ್ಯೆ ಮಿ| ಗಂಧಿಯವರಂಥಾ ವೀರ ಪುರುಷರು ದಕ್ಷಿಣ ಅಫ್ರಿಕ ಮೊದಲಾದ ಪ್ರಾಂತ್ಯಗಳಲ್ಲಿಯೂ ನಾಮದಾರ ಗೋಖಲೆಯವರಂಥಾ ದೇಶವತ್ಸಲರು ಹಿಂದೂಸ್ಥಾನದಲ್ಲಿಯೂ ಹ್ಯಾಗೆ ಪೇಚಾಡುತ್ತಿರುವರೆಂಬುದನ್ನು ವಾಚಕರು ತಿಳಿದಿರಲಿಕ್ಕೆ ಸಾಕು. ಆದರೆ ಭಾರತೇಯರು ಹಿಂದೂಸ್ಥಾನದ ಹೊರತು ಮಿಕ್ಕ ಕಡೆಗಳಲ್ಲಿ ಎಲ್ಲೆಲ್ಲಿರುವರು, ಯಾವ ವೃತ್ತಿಗಳನ್ನು ಮಾಡಿಕೊಂಡು ಎಂಥೆಂಥಾ ಸ್ಥಿತಿಯಲ್ಲಿರುವರು, ಅವರಿಗೆ ಪ್ರಕೃತ ಭರತ ಮಾತೆಯಿಂದ ದೊರಕಬೇಕಾದ ಸಹಾಯವೇನು—ನಮ್ಮೆಲ್ಲವರಲ್ಲಿ ಯಥಾರ್ಥವಾದ ಗೌರವವನ್ನೂ ಅಭಿಮಾನವನ್ನೂ ಉಂಟುಮಾಡುವ ಇವರ ಈ ವೃತ್ತಾಂತವು ಅಂಗ್ಲ ಪತ್ರಗಳನ್ನು ಓದಲು ತಿಳಿಯುವವರಿಗೆ ಗೊತ್ತಿದ್ದರೂ ಅಂಗ್ಲ ಭಾಷಾ ಪರಿಚಿತಿಯಿಲ್ಲದ ನಮ್ಮಲ್ಲಿಯ ಅನೇಕರಿಗೆ ಇದು ಈ ವರೆಗೆ ತಿಳಿಯದ ವಿಷಯವಾಗಿರುವುದು. ಭೂಲೋಕದ ಇತರ ಕಡೆಗಳಲ್ಲಿರುವ ಭಾರತೇಯರ ರಾಜಕೀಯ ಸಂಕಷ್ಟಗಳ ಹೊರತು ಇವರ ಮಿಕ್ಕ ವೃತ್ತಾಂತವೇನೆಂಬುದನ್ನು ತಿಳಿಯುವ.

ಭಾರತೇಯರಿರುವ ಭೂಲೋಕದ ಇತರ ಪ್ರಾಂತ್ಯಗಳನ್ನು ಮೂರು ಪಾಲಾಗಿ ವಿಂಗಡಿಸ ಬಹುದು. ಹಿಂದೂ ಸಾಗರದತ್ತಕಡೆಯಿರುವ ಆಫ್ರಿಕಾ ಖಂಡದ ಕರಾವಳಿಯು ಭಾರತೇಯರು ನಿವಾಸಿಸಿದ ಪ್ರಾಂತ್ಯಗಳಲ್ಲಿ ಒಂದಾಗಿರುವುದು. ಮುಂಬಯಿಂದ ಒಂದು ವಾರದ ಪ್ರಯಾಣದೊಳಗೆ ಹೋಗಿ ತಲ್ಪಬಹುದಾದ ಆಫ್ರಿಕದ ಕರಾವಳಿಯಲ್ಲಿ ಲಾಮು ಎಂಬ ಪಟ್ಟಣವಿರುವುದು. ಈ ಪಟ್ಟಣದಲ್ಲಿ ಕೆಲವು ಹಿಂದುಗಳ ವ್ಯಾಪಾರ ಭಂಡಸಾಲೆಗಳಿವೆ. ಈ ಭಂಡಸಾಲೆಗಳು ಕೆಲವು ಶತಮಾನಗಳಿಂದ ಇಲ್ಲಿರುವವು. ವರ್ತಕರು ಮುಂಬಯಿ ಪ್ರಾಂತ್ಯದವರಾಗಿರುವರು. ಆದರೆ ಹಿಂದೂಸ್ಥಾನದಿಂದ ಹೊಸತಾಗಿ ಈ ವರ್ತಕ ಮಂಡಳಿಯವರಿಗೆ ಬಂದು ಸೇರಿದವರಿಲ್ಲ. ಲಾಮು ಪಟ್ಟಣದಿಂದ ಸ್ವಲ್ಪ ದೂರದಲ್ಲಿ ಮೊಂಬಾಸಾ ಎಂಬ ಮುಖ್ಯ ಪಟ್ಟಣವಿದೆ. ಈ ಪಟ್ಟಣವು ಹಿಂದೂಸ್ಥಾನದ ಪಟ್ಟಣಗಳಂತೆಯೇ ಕಾಣುವುದು. ವಾಯುಗುಣವು ಸಹ ಹಿಂದೂಸ್ಥಾನದಂತೆಯೇ ಸಾಕಷ್ಟು ಉಷ್ಣಕರವಾಗಿರುವುದು. ಇಲ್ಲಿ ಸರಕಾರಿ ನೌಕರರಲ್ಲಿಯೂ ಸಾವುಕಾರರಲ್ಲಿಯೂ ಹೆಚ್ಚಿನವರು ಭಾರತೇಯರಾಗಿರುವರು. ಬಿಳಿ ಜನರಿಗೆ ಇಲ್ಲಿಯ ಹವೆಯು ಒಪ್ಪದ್ದರಿಂದ ಇವರ ಜನ ಸಂಖ್ಯೆಯು ಇಲ್ಲಿ ವಿಶೇಷವಿಲ್ಲ, ಈ ಪಟ್ಟಣದಲ್ಲಿ ಭಾರತೇಯರು ಜಮೀನುಗಳನ್ನು ಅಗ್ಗವಾದ ದರದಲ್ಲಿ ಪಡಕೊಳ್ಳಬಹುದು. ಚಲಾವಣೆಯಲ್ಲಿರುವ ನಾಣ್ಯ ಇತ್ಯಾದಿಗಳು ಸಹ ಹಿಂದೂಸ್ಥಾನದವುಗಳಾಗಿರುವವು. ಇಲ್ಲಿಂದ ವಿಕ್ಟೋರಿಯಾ ನಿಯಾಂಜಾ ಎಂಬ ಸರೋವರವಿರುವ ಪ್ರಾಂತ್ಯಕ್ಕೆ ೬೦೦ ಮೈಲುಗಳ ವಿಸ್ತೀರ್ಣದ ರೈಲ್ವೆ ಮಾರ್ಗವು ಭಾರತೇಯ ಪಂಜಾಬಿ ಕೆಲಸಗಾರರಿಂದಲೇ ಹಾಕಲ್ಪಟ್ಟಿರುವುದು. ಈ ರೈಲ್ವೆಗಳಲ್ಲಿ ನೌಕರರು ಪಂಜಾಬಿಗಳಾಗಿರುವರು. ಮೊಂಬಾಸಾದಿಂದ ೩೦೦ ಮೈಲು ದೂರಕ್ಕಿರುವ ನೈರೊಬಿ ಎಂಬ ಪಟ್ಟಣದಲ್ಲಿ ಹಿಂದೂಸ್ಥಾನದ ಪಂಜಾಬಿಗಳಲ್ಲಿ ಅನೇಕರು ವಾಸಮಾಡಿಕೊಂಡಿರುವರು. ಮೊಂಬಾಸದಿಂದ ಒಂದು ದಿವಸದ ಪ್ರಯಾಣದೊಳಗೆ ಜಂಜಿಬಾರ ಎಂಬಲ್ಲಿಗೆ ಬಂದು ತಲ್ಪಬಹುದು. ಇದು ಬ್ರಿಟಿಷರ ಆಶ್ರಿತ ಪಟ್ಟಣವಾಗಿದ್ದು ಇದರಲ್ಲಿಯ ವ್ಯಾಪಾರಸ್ಥರಲ್ಲಿ ಹೆಚ್ಚಿನವರು ಮುಂಬಯಿಂದ ಬಂದ ಹಿಂದೂ ಮಹಮ್ಮದೀಯರಾಗಿರುತ್ತಾರೆ. ಜರ್ಮನರ ಮತ್ತು ಪೊರ್ತುಗೀಸರ ಪೂರ್ವ ಆಫ್ರಿಕದ ವಸಾಹತಿಗಳಲ್ಲಿ ಹಿಂದೂ ಮುಸಲ್ಮಾನ ವ್ಯಾಪಾರಸ್ಥರಿರುವರು. ಈ ಎಲ್ಲಾ ವಸಾಹತಿಗಳ ಸಮೀಪ ಹಿಂದೂಸಾಗರದಲ್ಲಿರುವ ಮೊರಿಸಿಯಸ್ ಎಂಬ ದ್ವೀಪದಲ್ಲಿ ಅರೆವಾಸಿ ಜನರು ಭಾರತೇಯರಾಗಿರುವರು ಇವರಲ್ಲಿ ಕೆಲವರು ಶ್ರೀಮಂತರಾಗಿರುವರು. ಮಹಮ್ಮದೀಯ ನಿವಾಸಿಗಳಲ್ಲಿ ಕೆಲವರು ಕಬ್ಬಿನ ತೋಟಗಳ ಮಾಲಿಕರಾಗಿರುತ್ತಾರೆ. ಭಾರತೇಯರು ಇಲ್ಲಿ ಹಿಂದಿ ಭಾಷೆಯನ್ನಾಡುವರು. ಆಫ್ರಿಕದ ಕೇಪ್‌ಕೊಲೊನಿ, ನೆಟಾಲ್, ಟ್ರಾನ್ಸವಾಲ್ ಮತ್ತು ಪೊರ್ತುಗೀಸ ಸರಕಾರದ ಡೆಲ್‌ಗೋವಾಬೆ ಎಂಬಲ್ಲಿ ಸಹ ಭಾರತೇಯರಿರುವರು. ಕೆಪ್‌ಕೊಲೊನಿಯ ಪೋರ್ಟ ಎಲಿಜಿಬೆತ್, ಈಸ್ಟ್ ಲಂಡನ್ ಮತ್ತು ಕಿಂಬರ್ಲೆ ಪಟ್ಟಣಗಳಲ್ಲಿ ಫಲವಸ್ತುಗಳ ಮಾರಾಟದಿಂದಲೂ ಕೂಲಿಕೆಲಸದಿಂದಲೂ ಅನೇಕ ಜನ, ಮದ್ರಾಸು ಪ್ರಾಂತ್ಯದವರು ತಮ್ಮ ಜೀವನವನ್ನು ನಡಿಸುತ್ತಿರುವರು. ಇವರಲ್ಲಿ ವರ್ತಕರಾಗಿರುವರು ಬಹಳ ಕಡಮೆ. ಶಿಕ್ಷಿತರು ಇವರಲ್ಲಿ ಇಲ್ಲವೇ ಇಲ್ಲ. ಶಿಕ್ಷಣ ಹೊಂದಿದ ಮದ್ರಾಸು ಪ್ರಾಂತ್ಯಗಳ ಯುವಕರಿಗೆ ಅಲ್ಪಸ್ವಲ್ಪ ಭಂಡವಾಳದಿಂದ ಒಳ್ಳೇದಾಗಿ ಜೀವನ ನಡಿಸುವರೆ ಅಲ್ಲಿ ಆಸ್ಪದವಿದೆ. ಟ್ರಾನ್ಸವಾಲಿನ ಜೋನ್ಸ್‌ಬರ್ಗ್ ಮತ್ತು ಪ್ರಿಟೋರಿಯಾ ಪಟ್ಟಣಗಳಲ್ಲಿ ಭಾರತೇಯರು ಹಲವರಿರುವರು. ಇವರಲ್ಲಿ ಕೆಲವರು ದೊಡ್ಡ ವರ್ತಕರಾಗಿರುವರು. ಮಿಕ್ಕವರು ಕೂಲಿಕೆಲಸದಿಂದಲೂ ಹಣ್ಣು ಹಂಪಲುಗಳ ವ್ಯಾಪಾರದಿಂದಲೂ ಜೀವಿಸುತ್ತಾರೆ. ಆದರೆ ಇಲ್ಲಿ ಬಿಳಿ ಜನರ ಹೊಟ್ಟೆಕಿಚ್ಚಿನಿಂದ ಭಾರತೇಯರು ಬಹಳ ಧಾವತಿ ಪಡುತ್ತಿರುವರು. ಭಾರತೇಯರ ಇಲ್ಲಿಯ ಜನಸಂಖ್ಯೆಯು ಈ ಸಂಕಷ್ಟದಿಂದ ತಗ್ಗುತ್ತಾ ಬರುತ್ತದೆ. ನೇಟಾಲಿನಲ್ಲಿ ಅರೆವಾಸಿಗಿಂತ ಹೆಚ್ಚು ಜನರು ಹಿಂದುಸ್ಥಾನದವರಾಗಿರುತ್ತಾರೆ. ಇಲ್ಲಿಯ ಕೈಗಾರಿಕೆ ಕಾರ್ಖಾನೆಗಳು ಹೆಚ್ಚಾಗಿ ಭಾರತೇಯರಿಂದಲೇ ನಡಿಸಲ್ಪಡುತ್ತವಲ್ಲದೆ ವ್ಯವಸಾಯ ಗನಿಗಳ ಕೆಲಸ ಮೊದಲಾದವು ವಿಶೇಷವಾಗಿ ಭಾರತೇಯರಿಂದಲೇ ಆಗಬೇಕಾಗಿರುವುದು. ಇಲ್ಲಿಯ ಭಾರತೇಯರ ಜನಸಂಖ್ಯೆಯು ಹೆಚ್ಚುಕಡಿಮೆ ಒಂದು ಲಕ್ಷವಾಗಿರುತ್ತದೆ. ಮದ್ರಾಸು ಮುಂಬಯಿ ಯುನ್ಯಾಟೆಡ್ ಪ್ರೊವಿನ್ಸುಗಳಿಂದ ಬಂದು ವಾಸಿಸಿಕೊಂಡವರು ಇಲ್ಲಿ ಹೆಚ್ಚಾಗಿರುವರು. ರಾಜಕೀಯ ಹಕ್ಕು ಸ್ವಾತಂತ್ರ್ಯಗಳೂ ಸರಕಾರದಿಂದ ಕೊಡೋಣಾಗುವ ವಿದ್ಯಾಪ್ರಯೋಜನವೂ ಇವರಿಗಿಲ್ಲದ್ದರಿಂದ ಇವರ ಅಭಿವೃದ್ಧಿಗೆ ವಿಶೇಷ ತೊಡಕುಂಟಾಗಿಯದೆ.

ದಕ್ಷಿಣ ಅಮೇರಿಕ ಮತ್ತು ಉತ್ತರ ಅತ್ಲಾಂತಿಕ ಸಾಗರದಲ್ಲಿಯ ವೆಸ್ಟ್ ಇಂಡಿಯಾ ದ್ವೀಪಗಳ ಕೆಲವು ರಾಜ್ಯಗಳು ಭಾರತೇಯರಿರುವ ಮತ್ತೊಂದು ಪ್ರಾಂತ್ಯವಾಗಿವೆ. ಇದರಲ್ಲಿ ದಕ್ಷಿಣ ಅಮೇರಿಕದಲ್ಲಿರುವ ಬ್ರಿಟಿಷ ಗಿಯಾನಾ ಎಂಬುದೇ ಒಂದನೇದಾಗಿರುವುದು. ಬ್ರಿಟಿಷ ಗಿಯಾನಾ ಪ್ರಾಂತ್ಯವು ಬಹಳ ದೊಡ್ಡದು ಮತ್ತು ವಿಶೇಷ ಫಲವತ್ತಾದದ್ದೂ ಆಗಿದ್ದು ಇಲ್ಲಿ ಇನ್ನೂ ಅನೇಕ ಜನರಿಗೆ ಬಂದು ವಸತಿ ಮಾಡುವರೆ ಅನುಕೂಲವಿರುವುದು. ಭಾರತೇಯರಿಗೆ ಈ ವಸಾಹತಿಯಲ್ಲಿಯೇ ಮಾತ್ರ ರಾಜಕೀಯ ಹಕ್ಕು ಸ್ವಾತಂತ್ರಗಳಿವೆ. ಒಂದೂವರೆ ಲಕ್ಷ ಭಾರತೇಯರು ಇಲ್ಲಿರುವರು. ಕೂಲಿಯಾಳುಗಳಾಗಿ ಇಲ್ಲಿಗೆ ಬಂದು ಸೇರಿ ಭಾರತೇಯರು ಪ್ರಕೃತ ದೊಡ್ಡ ದೊಡ್ಡ ಸಾವುಕಾರರಾಗಿಯೂ ಸಹ ಇರುವರು. ಅಕ್ಕಿಯನ್ನು ಇಲ್ಲಿ ಬೆಳಸುವರೆ ಪ್ರಾರಂಭಿಸಿದ್ದು ಭಾರತೇಯರಾದ್ದರಿಂದ ಅಕ್ಕಿ ಬೆಳಿಯುವ ಆಸ್ತಿಗಳೂ ಅಕ್ಕಿಯ ಕಾರ್ಖಾನೆಗಳೂ ಇಲ್ಲಿ ಭಾರತೇಯರಿಗಿವೆ. ಇಲ್ಲಿ ಮಕ್ಕಳ ಶಿಕ್ಷಣವು ಕಡ್ಡಾಯವಾಗಿರುವುದು. ಶಿಕ್ಷಣವು ಕ್ರೈಸ್ತಮಿಶನರಿಗಳಿಂದ ಕೊಡೋಣಾಗುವುದರಿಂದ ಭಾರತೇಯರು ಮತಾಂತರ ಹೊಂದುವ ಸಂಭವವು ವಿಶೇಷವಿದೆ. ಹಿಂದೂ ಶಿಕ್ಷಣಾಲಯಗಳನ್ನು ಸ್ಥಾಪಿಸುವುದು ಇಲ್ಲಿ ಹೀಗೆ ಅಗತ್ಯವಾಗಿರುವುದು. ಡಾಕ್ಟರ್ ರಾಮನಾರಾಯಣ ಶರ್ಮ ಎಂಬವರು ಇಲ್ಲಿ ಹಿಂದೂ ಶಿಕ್ಷಣಾಲಯಗಳನ್ನು ಸ್ಥಾಪಿಸುವ ಕೆಲಸವನ್ನು ಕೈಕೊಂಡಿರುವರು. ಇವರಿಗೆ ಹಿಂದೂಸ್ಥಾನದಿಂದ ಶಿಕ್ಷಣಹೊಂದಿದ ಹಿಂದೂ ಯುವಕರ ಸಹಾಯವು ಅಗತ್ಯವಾಗಿ ಬೇಕಾಗಿರುವುದು. ಬ್ರಿಟಿಷ ಗಿಯಾನಾದ ಹಾಗೆಯೇ ದಕ್ಷಿಣ ಅಮೇರಿಕದ ಟ್ರಿನಿದಾದ್ ಡಚ್ಚ್‌ಗಿಯಾನದಲ್ಲಿಯೂ ಸಹ ಭಾರತೇಯರಿರುವರು. ವೆಸ್ಟ್ ಇಂಡಿಯಾ ದ್ವೀಪಗಳ ಜಮಿಯಕ್ಕಾದಲ್ಲಿ ಹತ್ತು ಸಾವಿರ ಭಾರತೇಯರಿರುವರು. ಇವರು ಸಹ ಕ್ರೈಸ್ತಮತವನ್ನವಲಂಬಿಸುವ ಸಂಭವವು ಹೆಚ್ಚಾಗಿರುವದು.

ಶಾಂತ ಸಾಗರದ ಕರಾವಳಿಯಲ್ಲಿ ಉತ್ತರ ಅಮೇರಿಕದಲ್ಲಿರುವ ಕೆಲಿಫೋರ್ನಿಯಾ ಎಂಬಲ್ಲಿ ಕೆಲವು ಸಾವಿರ ಸಿಕ್ಕ್ ಮತದ ಭಾರತೇಯ ಕೂಲಿಯಾಳುಗಳಿರುವರು. ಇವರಲ್ಲಿ ಅನೇಕರು ತಮ್ಮ ಕೂಲಿ ಕೆಲಸದ ಅವಧಿ ತೀರಿದೊಡನೆ ರೈತರಾಗಿ ಅಲ್ಲಿಯೇ ಉಳಕೊಳ್ಳುವರೆ ಪ್ರಯತ್ನ ಪಡುವರು. ಈ ಸಿಕ್ಕ್ ಮತದವರೊಂದಿಗೆ ಅವರವರ ಹೆಂಡರಿಲ್ಲದ್ದರಿಂದಲೂ ಇನ್ನು ಭಾರತೇಯರನ್ನು ಇಲ್ಲಿಗೆ ಬರಬಿಡದ್ದರಿಂದಲೂ ಇವರ ಅಭಿವೃದ್ಧಿಗೆ ಉಪಾಯ ತೋರುವದಿಲ್ಲ. ಉತ್ತರ ಅಮೇರಿಕದ ಬ್ರಿಟಿಷ ಕೊಲುಂಬಿಯಾದಲ್ಲಿ ಹಲವು ಸಾವಿರ ಸಿಕ್ಕ್ ಮತಸ್ಥರು ಇದೇ ಸ್ಥಿತಿಯಲ್ಲಿರುವರು. ಇಲ್ಲಿಯವರು ವೆಂಕೋವರ್ ಎಂಬಲ್ಲಿ ಹೇರಳ ಆಸ್ತಿಯುಳ್ಳ ಒಂದು ದೇವಸ್ಥಾನವನ್ನು ಸ್ಥಾಪಿಸಿರುತ್ತಾರೆ. ಫಿಜಿ ದ್ವೀಪಗಳು, ಸ್ಟ್ರೇಟ್ ಸೆಟ್ಲಮೆಂಟ ಎಂಬ ಪ್ರಾಂತ್ಯಗಳಲ್ಲಿ ಸಹ ಸಾವಿರಾರು ಭಾರತೇಯರಿರುವರು.

ಈ ಎಲ್ಲಾ ಪ್ರಾಂತ್ಯಗಳಲ್ಲಿರುವ ಭಾರತೇಯರು ಅಭಿವೃದ್ಧಿ ಹೊಂದಬೇಕಾದರೆ ಹಿಂದೂಸ್ಥಾನದಿಂದ ವಿದ್ಯಾವಂತ ಯುವಕರ ಸಹಾಯವು ಇವರಿಗೆ ಬೇಕಾಗಿರುವುದು. ವಿದ್ಯಾವಂತ ಯುವಕರು ಈ ಪ್ರಾಂತ್ಯಗಳಿಗೆ ಹೋಗುವುದರಿಂದ ಯುಕ್ತವಾದ ವೃತ್ತಿಗೆ ಮಾರ್ಗವು ಇವರಿಗೆ ದೊರಕುವದಲ್ಲದೆ ಅಲ್ಲಿರುವ ತಮ್ಮ ಬಂಧು ವರ್ಗದವರಿಗೂ ಸಹ ಸಹಾಯಮಾಡಿದಂತಾಗುವದು.

ಪರಿಧಾವಿ ಸಂವತ್ಸರದ ಮದ್ರಾಸ್ ವ್ಯವಸಾಯ ಪಂಚಾಂಗವು.

ವ್ಯವಸಾಯ ಇಲಾಖೆಯವರು ಕಳುಹಿಸಿಕೊಟ್ಟಿರುವ ಈ ಪಂಚಾಂಗ ಪ್ರತಿಯೊಂದನ್ನು ಕೃತಜ್ಞತಾಪೂರ್ವಕ ಸ್ವೀಕರಿಸಿರುವೆವು. ಪಂಚಾಂಗದಲ್ಲಿ ತಾರೀಕು, ವಾರ ತಿಥಿ, ನಕ್ಷತ್ರ, ವೃತ ಹಬ್ಬಗಳು ಮೊದಲಾದವುಗಳನ್ನು ಸೂಚಿಸಿರುವುದಲ್ಲದೆ, ಜಾನುವಾರುಗಳ ಸಂತೆ, ವ್ಯವಸಾಯ ಸಂಬಂಧದ ವಸ್ತುಗಳು ತೋರಿಸುವ ಸ್ಥಳಗಳು ಎಲ್ಲೆಲ್ಲಿ ಯಾವ್ಯಾವ ಸಮಯದಲ್ಲಿರುವವೆಂಬುದು ಸಹ ಈ ಪಂಚಾಂಗದಿಂದ ತಿಳಿದುಕೊಳ್ಳಬಹುದು. ರೈತರ ಅನುಭವದ ಬಗ್ಯೆ ಶುಲಭವಾದ ಕನ್ನಡ ಭಾಷೆಯಲ್ಲಿ ವ್ಯವಸಾಯ ಸಂಬಂಧವಾದ ಹಲವು ಉಪಯುಕ್ತ ವಿಷಯಗಳು ಈ ಪಂಚಾಂಗದಲ್ಲಿ ಅಡಕವಾಗಿರುವವು. ಜಮೀನು ವ್ಯವಸಾಯದ ಬಗ್ಯೆ ಭಂಡವಾಳವಿಲ್ಲದ ರೈತರಿಗೆ ಮುಬಾದಿಲೆಗಳು ಹ್ಯಾಗೆ ಕೊಡೋಣಾಗುವವೆಂಬುದಕ್ಕೆ ಬೇಕಾದ ಸೂಚನೆಯು ಇದರಲ್ಲಿರುತ್ತದೆ. ವ್ಯವಸಾಯ ಇಲಾಖೆಯು ಸರಕಾರದವರಿಂದ ಯಾವ ಬಗ್ಯೆ ರಚಿಸಲ್ಪಟ್ಟಿರುವುದೆಂಬ ಪೂರ್ಣ ವಿವರವು ಈ ಪಂಚಾಂಗದಲ್ಲಿ ಪ್ರಕಟಿಸಲ್ಪಟ್ಟಿರುತ್ತದೆ. ರೈತರಿಗೆ ಬೇಕಾದ ಎಲ್ಲಾ ಬೋಧನೆಯೂ ಸಹಾಯವೂ ಪ್ರತಿಫಲ ತೆಗದುಕೊಳ್ಳದೇನೇ ಈ ವ್ಯವಸಾಯ ಇಲಾಖೆಯವರಿಂದ ಕೊಡೋಣಾಗುವುದು. ವ್ಯವಸಾಯದ ಕುರಿತು ಏನಾದರೂ ಅನುಭವ ಬೇಕಾದರೆ ನಮ್ಮ ಪ್ರಾಂತ್ಯದಲ್ಲಿರುವವರು ತಿರುಚಿನಾಪಳ್ಳಿಯಲ್ಲಿರುವ ಎಗ್ರಿಕಲ್ಚರ್ ಡಿಪ್ಯುಟಿ ಡ್ಯಾರೆಕ್ಟರ ಸಾಹೇಬರಿಗೆ ಬರಕೊಳ್ಳಬೇಕು. ಈ ವ್ಯವಸಾಯ ಇಲಾಖೆಯವರಿಂದ ಸಹಾಯವೂ ಬೋಧನೆಯೂ ರೈತರಿಗೆ ಯಾವ ರೀತಿಯಲ್ಲಿ ದೊರಕುವದೆಂಬುದು ಈ ಕೆಳಗಿನ ವಿವರದಿಂದ ವ್ಯಕ್ತವಾಗುವುದು:—

ಅವರವರ ಭೂಮಿಗಳ ಮಣ್ಣನ್ನೂ, ಗೊಬ್ಬರಗಳನ್ನೂ ಪರೀಕ್ಷಿಸುವದಕ್ಕೆ ಅಪೇಕ್ಷೆಯುಳ್ಳ ರಹಿತರು, ಮಣ್ಣಿನ, ಗೊಬ್ಬರದ-ಯಾ-ನೀರಿನ ಮಾದರಿಯನ್ನು ಕೊಯಂಬುತ್ತೂರಿನಲ್ಲಿರುವ ಎಗ್ರಿಕಲ್ಚರ್ ಕೆಮಿಸ್ಟರವರಿಗೆ ಪರೀಕ್ಷೆ ಬಗ್ಯೆ ಕಳುಹಿಸಿಕೊಡಬೇಕು. ಆಯಾ ಮಣ್ಣುಗಳಿಗೆ ಗೊಬ್ಬರ ಅವಶ್ಯಕವೊ, ಯಾವ ಗೊಬ್ಬರ ಅವಶ್ಯಕವು, ಉಪಯೋಗಿಸಲ್ಪಡುವ ಗೊಬ್ಬರವು ಅದರ ಕ್ರಯಕ್ಕೆ ತಕ್ಕ ಬೆಲೆ ಉಳ್ಳದ್ದೊ--ಅಂಥಾ ಗೊಬ್ಬರಕ್ಕಿಂತ ಅಗ್ಗವಾದ ಗೊಬ್ಬರವನ್ನು ಉಪಯೋಗಿಸಿ ಅಷ್ಟೇ ಫಲ ಪಡೆಯುವದಕ್ಕೆ ಸಾಧ್ಯವೋ ಎಂತ ಎಲ್ಲಾ ಅನುಭವವನ್ನು ಎಗ್ರಿಕಲ್ಚರ್ ಕೆಮಿಸ್ಟರವರು ಹೇಳಿಕೊಡುವರು. ಪೈರುಗಳಿಗೆ ಕರಿನೋವು-ಯಾ-ಕಾಡಿಗೆ ಮುಂತಾದ್ದ 'ಫಂಗಸ್' ರೋಗಗಳು ತಗಲಿದ ಪಕ್ಷದಲ್ಲಿ, ರೋಗತಗಲಿದ ತೆನೆಗಳನ್ನು ಕೊಯಂಬುತ್ತೂರಿನಲ್ಲಿರುವ ಮ್ಯಾಕೊಲೊಜಿಸ್ಟ ಎಂಬ ಶಸ್ತ್ರಜ್ಞರಿಗೆ ಕಳುಹಿಸಿಕೊಡಬೇಕು. ಆಗ ಅವರು ಅದನ್ನು ಪರೀಕ್ಷಿಸಿ ನೋಡಿ, ಮುಂದಿನ ವರ್ಷಕ್ಕೆ ಆ ನೋವು ತಗಲದ ಹಾಗೆ ಉಪಾಯಗಳು ಇದ್ದರೆ ಅವುಗಳನ್ನು ಹೇಳುವರು. ತೆಂಗು, ಅಡಿಕೆ, ತಾಳೆ ಮರಗಳಿಗೆ ರೋಗ ತಗಲಿ, ಅನೇಕ ಸಂಖ್ಯೆಯಲ್ಲಿ ಅವುಗಳು ಸಾಯುವದಾದರೆ, ಅಂಥಾ ಮರಗಳ ಮ್ಹಾಲಿಕರು, ಮ್ಯಾಕೊಲೊಜಿಸ್ಟ ಶಾಸ್ತ್ರಜ್ಞರಿಗೆ, ಬೋಧನೆ ವ ಸಹಾಯದ ಬಗ್ಯೆ ಕೂಡಲೇ ಬರಕೊಳ್ಳಬೇಕು. ಪೈರುಗಳಿಗೆ ಕ್ರಿಮಿರೋಗಗಳು ಯಾ ಹುಳಗಳು ತಗಲಿದರೆ, ಅವುಗಳ ಮಾದರಿಯನ್ನು ಒಂದು ಸಣ್ಣ ಘಟ್ಟಿಯಾದ ಪೆಟ್ಟಿಗೆಯಲ್ಲಿ ಕಟ್ಟಿ, ಕೊಯಂಬುತ್ತೂರಿನಲ್ಲಿರುವ ಎನ್ಟೊಮೊಲೊಜಿಸ್ಟರಿಗೆ ಟಪ್ಪಾಲದ್ವಾರಾ ಕಳುಹಿಸಿಕೊಡತಕ್ಕದ್ದು. ಈ ವಿದ್ವಾಂಸರು, ಈ ಹುಳಗಳ ಕಾಟವನ್ನು ಕ್ಷೀಣಪಡಿಸಲಿಕ್ಕೆ ಯಾವುದಾದರೂ ಉಪಾಯವನ್ನು ಹೇಳಿಕೊಡುವರು; ಮತ್ತು ಸಾಧ್ಯವಾದರೆ ಹುಳಗಳನ್ನು ಹ್ಯಾಗೆ ನಾಶಪಡಿಸುವದು ಎಂತ ತೋರಿಸುವದಕ್ಕೆ ಒಬ್ಬ ನೌಕರನನ್ನು ಕಳುಹಿಸಿಕೊಡುವರು.

ಎಲ್ಲಾ ವರ್ಗದಾರರು ಅವರ ಮಕ್ಕಳ ಪೈಕಿ ಯಾ ಸಂಬಂಧಿಕರ ಪೈಕಿ ಒಬ್ಬರನ್ನು ಕೊಯಂಬುತ್ತೂರಿನಲ್ಲಿರುವ ಎಗ್ರಿಕಲ್ಚರ್ (ವ್ಯವಸಾಯ) ಕೊಲೇಜಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸಿಕೊಡತಕ್ಕದ್ದು. ಅಲ್ಲಿ ಅವರು ಸುಧಾರಣೆಪಟ್ಟ ವ್ಯವಸಾಯ ಕ್ರಮಗಳನ್ನು ಕಲಿತುಕೊಂಡು ಕುಟುಂಬದ ಭೂಮಿಯ ಪಾರುಪತ್ಯವನ್ನು ನೋಡಲಿಕ್ಕೂ, ಸುಧಾರಣೆಪಟ್ಟ ವ್ಯವಸಾಯ ಕ್ರಮಗಳನ್ನು ಪ್ರಚಾರಿಸಲಿಕ್ಕೂ ಭೂಮಿಯಿಂದ ಉಂಟಾಗುವ ಉತ್ಪತ್ತಿಯನ್ನು ವೃದ್ಧಿಗೊಳಿಸುವದಕ್ಕೂ ಶಕ್ತರಾಗುವರು.

ಪಂಚಾಂಗ ಪ್ರತಿಯು ಸರ್ವರಿಂದಲೂ ಪಡಿಯಲು ಸಾಧ್ಯನಾಗುವ ಹಾಗೆ. ಇದಕ್ಕೆ ಬಹಳ ಕಡಿಮೆಯಾದ ಕ್ರಯವನ್ನಿಟ್ಟಿರುವರು. ಪ್ರತಿಯೊಂದಕ್ಕೆ ಕ್ರಯವು ಒಂದಾಣೆಯಾಗಿರುತ್ತದೆ. ವ್ಯವಸಾಯ ಇಲಾಖೆಯವರಿಗೆ ಬರದು ಇವನ್ನು ತರಿಸಿಕೊಳ್ಳಬಹುದು.

ಪಿತೃಪ್ರೇಮ.

(ಕಳದ ಸಂಚಿಕೆಯಿಂದ ಮುಂದರಿಸಿದುದು)

ಎಲ್ಲರ ವಂದನೆಗಳನ್ನು ಕೈಕೊಳ್ಳುತ್ತಾ ಅಜಿತಸಿಂಹನು ಸಿಂಹಾಸನವನ್ನೇರಿದನು. ಲೀಲಾವತಿಯು ಹರ್ಷಿತಳಾದಳು. ಯೋಗಿವರನು ರಾಜನಿಂದ ಕೊಡಲ್ಪಟ್ಟ ಆಸನವನ್ನಲಂಕರಿಸಿದನು. ಸಭಾಸದರೂ ಪೌರ ಜನರೂ ಸಕೌತುಕದೃಷ್ಟಿಯಿಂದೀಕ್ಷಿಸುತ್ತಾ ನೂತನ ರಾಜನನ್ನು ಅಭಿವಂದಿಸುತ್ತಿದ್ದರು. ಲಲಿತೆಯು ಉತ್ಸುಕತೆಯಿಂದ ಶಿಕ್ಷೆಯನ್ನೆದುರು ನೋಡುತ್ತಿದ್ದಳು. ಅವಳು ಅಜಿತಸಿಂಹನ ಮುಖವನ್ನೀಕ್ಷಿಸುತ್ತಾ ತನ್ನ ಪಿತನಿಗೆ ಪುನಃ ಮಂತ್ರಿಪದ ಸಿಕ್ಕುವುದೆಂತ ಭಾವಿಸುತ್ತಿದ್ದಳು. ಸರ್ವ ಸಭೆಯು ಚಿತ್ರಿತವಾಗಿತ್ತು.

"ನಾನು ಈಗ ರಾಜನೆಂಬ ಭಾವನೆಯಿಂದ ಪೂರ್ವಜರಿಗೆ ನಮಸ್ಕರಿಸಿ ನುಡಿಯುವೆನು. ಸರ್ವ ಜನರೂ ದಂಗೆ ಗಲಾಟೆ ಮಾಡದೆ ನನಗೆ ರಾಜ್ಯ ಪ್ರಾಪ್ತಿಮಾಡಿಕೊಟ್ಟದರಿಂದ ಅವರ ನನ್ನ ಮೇಲಣ ಪ್ರೀತಿ ವಿಶ್ವಾಸಗಳು ವ್ಯಕ್ತವಾಗುವುವು. ಇಂಥಾ ರಾಜಭಕ್ತ ಪ್ರಜೆಗಳನ್ನು ಯಾವ ರಾಜನು ಪ್ರೇಮದಿಂದ ಸಲಹನು? ನಾನು ನನ್ನ ಪ್ರಧಾನ ಕಾರ್ಯವನ್ನು ಪಕ್ರಮಿಸುವೆನು."

"ಸರ್ವ ಮಾನ್ಯರಾಗಿ ನನಗೆ ಪೂಜನೀಯರಾದ ಈ ಯೋಗೀಂದ್ರರು ಅಧ್ಯಾತ್ಮಿಕ ದೃಷ್ಟಿಯಿಂದ ರಾಜಘಾತಕಿ ಅಪರಾಧವನ್ನು ನುಡಿದುದು ಸರ್ವರಿಗೂ ನನಗೂ ಮಾನ್ಯವಾಗಿರುವುದು. ಅವರನುಜ್ಞೆಯಂತೆ ನಡಿಯುವುದು ನನ್ನ ಕರ್ತವ್ಯವಾಗಿರುವುದು. ರಾಜಘಾತ್ರ ರಾಜದ್ರೋಹದಂಥಾ ಭಯಂಕರ, ನೀಚಕೃತ್ಯಗಳಿಗೆ ದೇಹಾಂತ್ಯ ಶಿಕ್ಷೆಯು ಶಾಸ್ತ್ರದಲ್ಲಿ ಹೇಳಿದೆ. ಈ ದಿನದ ಆನಂದ ಪ್ರೀತ್ಯರ್ಥವಾಗಿಯೂ, ಮಂತ್ರಿ ಅಮರರಾಯನ ವೃದ್ಧತ್ವದ ಕಡೆಗೂ ಸಾತ್ವಿಕವೃತ್ತಿಯುಕ್ತ ಪಶ್ಚಾತ್ತಾಪಪಟ್ಟು ನಿರ್ಮಲ ಹೃದಯದ ಕಡೆಗೂ ಲಕ್ಷಕೊಟ್ಟು, ಗಡೀಪಾರಿನ ಶಿಕ್ಷೆಯನ್ನಾಜ್ಞಾಪಿಸುವೆನು. ರಾಜಘಾತಕಿ ಅಮರರಾಯನು ಇಂದಿನಿಂದೆರಡು ದಿನಗಳೊಳಗೆ ತನ್ನ ಪರಿವಾರ ಸಮಾಯುಕ್ತನಾಗಿ ವಿಂಧ್ಯಾಚಲವನ್ನುಲ್ಲಂಘಿಸಿ ದಕ್ಷಿಣ ಕಡೆಗೆ ನಡಿಯುವುದು. ಈತನ ವಂಶಜರು ಮುಂದೆಂದಿಗೂ ಚಿತ್ತೋಡದ ಸರಹದ್ದನ್ನು ಪ್ರವೇಶಿಸಕೂಡದು. ಮಿಕ್ಕಪರಾಧಿಗಳ ಶಾಸನವು ನಾಳೆಗೆ ನಡಿಯುವುದು."

ಆನಂದ, ದುಃಖದಿಂದೊಡಗೂಡಿದ ಸಭಾಸದರಾದ ಸರದಾರರು ಮೆಲ್ಲಮೆಲ್ಲಗೆ ಅಗಲಿದರು. ಲಲಿತೆಯು ಶಾಶ್ರುನಯನಗಳಿಂದ ಅಜಿತಸಿಂಹನನ್ನವಲೋಕಿಸಿದಳು. ಅಜಿತನ ನಯನಗಳಿಂದ ಅಶ್ರುಬಿಂದುದ್ವಯಗಳು ಉದುರಿದವು. ಸದ್ಗದಿತ ಕಂಠದಿಂದ ಲೀಲಾವತಿ ಯೋಗಿವರರ ದಾಕ್ಷಿಣ್ಯವಿಡದೆ ಲಲಿತೆಯನ್ನುದ್ದೇಶಿಸಿ "ನಿರ್ಮಲ ಹೃದಯೆ ಲಲಿತೆ! ನಾನು ನನ್ನ ಮನಸ್ಸನ್ನೊಮ್ಮೆಯೇ ಅರ್ಪಣಮಾಡುವೆನು. ನಡಿ. ನೀನಲ್ಲದೆ ಅನ್ಯಸ್ತ್ರೀಯು ನನಗೆ ಮಾತೆಗೆ ಸಮಾನಳು! ಇಹದಲ್ಲಿ ಅಲ್ಲದಿದ್ದರೂ ಪರದಲ್ಲಿ ನಾವು ಸ್ವರ್ಲೋಕದಲ್ಲಿ ವಿವಾಹಿತರಾಗುವಾ. ನನ್ನ ಸರ್ವಸ್ವವೂ ನೀನಾಗಿರುವೆ. ಮಾತೃ ಪಿತೃ ಪ್ರೇಮಕ್ಕಾಗಿಯೇ ಈ ಚಿರಕಾಲ ವಿರಹವನ್ನನುಭವಿಸುವಾ."

"ಸ್ಮೃತಿನಷ್ಟ ಅಜಿತಾ! ನೀನು ಪ್ರೇಮಾಧೀನನಾಗಿ ಕುಲನಾಶಮಾಡಿದೆಯಾ? ನೀವು ವಿವಾಹಿತರಾಗುವುದಿಲ್ಲವೇಕೆ?" ಲೀಲಾವತಿಯು ನುಡಿದಳು.

"ಆಹಾ! ಪಿತೃಪ್ರೇಮಕ್ಕಾಗಿ ಇವಳು ನನ್ನನ್ನು ಲಗ್ನಮಾಡಿಕೊಳ್ಳುವುದು ಶಿಕ್ಷೆಯ ವಿರುದ್ಧವು. ಇವಳು ಗಡೀಪಾರುಮಾಡಲ್ಪಟ್ಟ ಅಪರಾಧಿಯ ಕನ್ಯೆಯು! ಇವರಿಗೆ ಶಿಕ್ಷೆ ಮಾಡದಿದ್ದರೆ ಪಿತ್ರಾಜ್ಞಾ, ಪಿತೃಪ್ರೇಮವು ವಿರೋಧಿಸುವುದು. ನಮ್ಮ ಹೃದಯವು ಪರಸ್ಪರ ಹೃದಯಗಳಿಗೆ ಸಂಲಗ್ನವಾದುದರಿಂದ ನಾನು ಅದನ್ನು ಅನ್ಯರಮಣಿಗೆ ಅರ್ಪಣೆಮಾಡಲಾರೆನು! ಒಬ್ಬರನ್ನೊಬ್ಬರು ಸ್ಮರಿಸುತ್ತಾ ಚಿರ ವಿರಹದಿಂದ ಕಾಲ ಕಳೆಯುವುದೇ ಶ್ರೇಯಸ್ಕರವು." ಅಜಿತನು ನುಡಿದನು.

"ಲೀಲಾವತೀ! ಇದು ಉದಾತ್ತ ಪ್ರೇಮದ ತರಂಗವು. ನಡಿ. ಈ ಪ್ರೇಮ, ದುಃಖ, ವಿರಹಮಯವಾದ ಜಗತ್ತಿನಲ್ಲಿ ನಿಲ್ಲದೆ ಹಿಮಾಲಯದ ಅತ್ಯುಚ್ಚ ಶಿಖರದಲ್ಲಿ ಈಶಾನಂದದಿಂದ ಆಯುರ್ದಾಯವನ್ನು ಕಳೆಯುವದೇ ಶ್ರೇಯಸ್ಕರವು." ಯೋಗಿವರನು ವಿರಕ್ತತೆಯಿಂದ ನುಡಿದನು.

ಲೀಲಾವತಿಯು ಮಾರ್ನುಡಿಯದೆ ಒಂದು ದುಃಖದ ದೀರ್ಘ ನಿಶ್ವಾಸವನ್ನು ತೊರೆದು ತೇಜಸ್ವಿಯಾದ ಯೋಗಿವರನನ್ನು ಹಿಂಬಾಲಿಸಿದಳು. ಅಜಿತಸಿಂಹನು ಸಜಲನಯನನಾಗಿ ಅವಳ ಪಾದಗಳನ್ನಪ್ಪಿ "ಅಪ್ಪಾ! ದೀನನಾದ ನನ್ನಗಲಿ ಹೋಗುವರೆ ನಿನಗೆ ಏನೂ ಕರುಣೆಯಿಲ್ಲವೇ? ಇನ್ನು ನನ್ನವರೆಂಬುವರು ಯಾರಿರುವರು? ನನ್ನ ಮೇಲೆ ಕೋಪಿಸಬೇಡ" ಎಂದು ಬಿಕ್ಕಿ ಬಿಕ್ಕಿ ಅತ್ತನು.

"ಬಾಲ ಅಜಿತ! ನಾನು ನಿನ್ನ ಮೇಲೆ ಕೋಪಿಸಲಿಲ್ಲವು. ನಿಸ್ಸಾರವಾದ ಈ ಜಗತ್ತಿನ ಬೇಸರವು ನನಗೆ ಹುಟ್ಟಿರುವದು. ನೀನು ದೀರ್ಘಾಯುಷ್ಯವಂತನಾಗಿ ಸುಖದಿಂದ ರಾಜ್ಯವನ್ನಾಳು."

ಲೀಲಾವತಿಯು ಸಮಾಧಾನೋಕ್ತಿಗಳನ್ನುಡಿದು ನಡೆದಳು. ಅಜಿತಸಿಂಹನು ವಿಷಣ್ಣವದನನಾಗಿ ಹಿಂದಿರುಗಿದನು. ಲಲಿತೆಯು ಅಶ್ರುಮೋಚನ ಮಾಡುತ್ತಾ ಪಿತನನ್ನನುಸರಿಸಿದಳು.

೫.

ತಿಮಿರಮಯವಾದ ನಿಶೀಥವು ನಿಬಿಡವಾದ ಅರಣ್ಯವನ್ನು ಗಂಭೀರಭಾವದಿಂದ ಆಳುತ್ತಿತ್ತು. ನೀಲಾಕಾಶದಲ್ಲಿ ವಿಲಕ್ಷಣವಾದ ಕೃಷ್ಣ ಮೇಘಗಳ ನಡುವೆ ನಡುವೆ ತಾರಾಗಣಗಳು ಹಣಕಿ ನೋಡುತ್ತಿದ್ದವು. ಮೃದು ಮಂದಮಾರುತವು ಸಂಚರಿಸುತ್ತಿತ್ತು. ಸರ್ವತ್ರ ನಿಸ್ತಬ್ಧತೆ. ವಿರಳವಾಗಿ ಹಿಂಸ್ರ ಜಂತುಗಳ ಭಯಂಕರ ಚೀತ್ಕಾರವು ಆಲಿಸುತ್ತಿತ್ತು. ಕಿಂಚಿತ್ ಸಮಯದಲ್ಲಿ ಆರ್ತಸ್ವರದಿಂದ ವಿರಹಾಲಾಪವು ಹೃದಯದ್ರಾವಕ ಮಾಡುವಂತೆ ಕೇಳಿಸಿತು. ಅದು ಯಾರದು? ಒಂದು ಚಿರವಿರಹಿಣಿಯಾದ ನವಯೌವ್ವನೆಯಾದ ರಮಣಿಯ ಕೋಮಲ ಕಂಠದಿಂದ ಹೊರಹೊಮ್ಮಿದುದು.

"ಮಗೂ, ಲಲಿತೆ? ನೀನು ಏಕೆ ಹೀಗೆ ಶೋಕಿಸುತ್ತೀ?" ವನಪ್ರಾಂತರದಿಂದ ವೀಣಾಧ್ವನಿಯನ್ನು ನಿಂದಿಸುವ ಧ್ವನಿಯಿಂದ "ಪಿತೃಪ್ರೇಮಕ್ಕಾಗಿ!" ಎಂದು ಮಾರುತ್ತರವು ಕೇಳಿಸಿತು.

ಪರಾತ್ಪರನೇ ಅವರ ವಿರಹವೇದನೆಯನ್ನು ಪರಿಹರಿಸು!

ಸಂಪೂರ್ಣ.

M. V. L. Prabhu.

ಹಿಂದೂ ದೇಶದ ಐತಿಹಾಸಿಕ ಶಿಕ್ಷಣಾಕ್ರಮದ ಕುರಿತು ವಿಮರ್ಶೆ.

ಈಗಿನ ಶಿಕ್ಷಣಾಕ್ರಮದಲ್ಲಿ ಐತಿಹಾಸಿಕ ಶಿಕ್ಷಣಾಕ್ರಮದಷ್ಟು ಶೀಘ್ರವಾಗಿ ಮಾರ್ಪಾಟ ಹೊಂದಿದ್ದುದು ಅನ್ಯವ್ಯಾವುದೂ ಇಲ್ಲ. ಪ್ರಾಚೀನ ಪದ್ಧತಿಗಳಿಗನುಸಾರವಾಗಿ ಶಿಕ್ಷಣೆಯನ್ನೀಯುವ ಹಳ್ಳಿಪಳ್ಳಿಗಳ ಗುರುಮಹಾಶಯರು ಕೂಡಾ ಈಗಿನ ಅರ್ವಾಚೀನ ಕ್ರಮಗಳಿಗೆ ಕೈಕೊಡುವಂತಿದೆ. ಭರತಖಂಡದಲ್ಲಿ ಮಾರ್ಪಾಟಗಳು ಅಪರೂಪ; ಮಾರ್ಪಾಟಗಳು ನಡೆದರೂ ಅವುಗಳ ಅನುಕ್ರಮವು ಮತ್ತೂ ಮಂದಗಾಮಿ. ಹೀಗಿರಲು, ಮೇಲುದ್ಯೋಗಸ್ಥರು ಇಂತಹ ಪದ್ಧತಿಯನ್ನಾಚರಿಸಬೇಕೆಂದೊಮ್ಮೆ ಅಪ್ಪಣೆ ಇತ್ತರಂದರೆ,—ಆ ಪದ್ಧತಿಯ ಅವಸಾನವು ಏನಾಗುವುದೊ ಎಂದು ಉಪಾಧ್ಯಾಯರು ದಿಗಿಲು ಪಡುವರು. ಮೇಲುದ್ಯೋಗಸ್ಥರಂತೂ ಕಾರ್ಯಾಸಕ್ತಿಯಿಂದ ಅತ್ಯಾತುರಗೊಂಡವರಾದರೂ, ಶಾಲೆಯ "ವಿಜಿಟ್" ಅಥವಾ "ಇಂಪ್ರೂವ್‌ಮೆಂಟ್" ನೋಡಲು ಬಂದೊಡನೆ

ಕಿಸೆಗಡಿಯಾರವನ್ನು ಗಳಿಗೆಗಳಿಗೆ ನೋಡುತ್ತ, 'ಬ್ಯಾಸಿಕಲಿನ ಬ್ರೇಕು'ಗಳ ಅಥವಾ ಜಟಕದ ಕುದುರೆಗಳ 'ಹುಸ್ತುವಾರಿಕೆ'ಯಲ್ಲಿ ಸಮಯವನ್ನು ಸಮರ್ಪಿಸಿ, ಕೆಲವು 'ರಿಮಾರ್ಕು'ಗಳನ್ನೂ ಗದರಿಕೆಗಳನ್ನೂ, ಜ್ಯಾರಿ ನಡೆಯಿಸಿ ಸರ್ಕೀಟು ಬೆಳೆಯಿಸುವರಲ್ಲದೆ, ಈ ಪದ್ಧತಿಗಳನ್ನನುಸರಿಸಿ ಪಾಠಗಳನ್ನು ಮಾದರಿಗಳಾಗಿ ಕೊಡಲು ಅವರಿಗೆ ಅವರ ಮೇಲುದ್ಯೋಗಸ್ಥರು ಅವಕಾಶ ಕೊಡುವುದಿಲ್ಲ. ಉಪಾಧ್ಯಾಯರು ಗುಣುಗುಟ್ಟುತ್ತ ಮುಂದೆ ಕಲಿಸಬೇಕಾದ ಪದ್ಧತಿಗಳು ಹೇಗೆಂತ ತಮ್ಮತಮ್ಮೊಳಗೆ ಚರ್ಚಿಸಿ, ಚಂದಾ ಎತ್ತಿ, ಹಲವು ಪುಸ್ತಕಗಳನ್ನು ತರಿಸಿ, ಸಮಯವಿದ್ದಲ್ಲಿ ಕಲಿತು, ಶಾಲೆಯ ಶಾರದಾಂಬೆಗೆ ಆ 'ಬದನೆಕಾಯಿ'ಗಳನ್ನು ಸಮರ್ಪಿಸುವರು. ಮುಖ್ಯವಾಗಿ ಹೇಳತಕ್ಕುದೇನೆಂದರೆ:- ಪದ್ಧತಿಗಳನ್ನನುಸರಿಸಲು ಅಪ್ಪಣೆಕೊಡುವುದರಿಂದ ಅವುಗಳು ಸರಿಯಾಗಿ ಅನುಸರಿಸಲ್ಪಡಲಾರವು; ಉಪಾಧ್ಯಾಯರಲ್ಲಿ ಆಸಕ್ತಿಯುಂಟಾಗಲಾರದು. ವಿದ್ಯಾವಂತ ಮೇಲುದ್ಯೋಗಸ್ಥರೇ ಮೇಲುಪಂಕ್ತಿ ಹಾಕಲು ತೊಡಗುವುದೊಳ್ಳೆಯದು.

ಇತಿಹಾಸವನ್ನು ಚಿಕ್ಕ ಮಕ್ಕಳಿಗೆ ಕಲಿಸುವುದು ಸಾಮಾನ್ಯವಾದ ಕೆಲಸವಲ್ಲ. ಇತಿಹಾಸವನ್ನು ಕಲಿಸುವ ಉಪಾಧ್ಯಾಯನು ಸಾಧಾರಣ ೪ ಗಂಟೆಗಳಲ್ಲಿ ಪರಿಶ್ರಮದಿಂದ, ಒಂದು ಐತಿಹಾಸಿಕ ಸಂಗತಿಯ ಕುರಿತು ಆದಷ್ಟು ಸಂಪೂರ್ಣ ಜ್ಞಾನವನ್ನು ಗಳಿಸಿಕೊಂಡನೆಂದರೆ ಅವನ ಪಾಠವು ಕಾಲು ತಾಸಿನಲ್ಲಿಯೇ ಮುಗಿಯುವುದು ಎಂಬುದೊಂದು ಅತಿಶಯೋಕ್ತಿಯಲ್ಲ. ದೇಶ ಸಂಚರಣೆ, ಪುಸ್ತಕ ಸಹಾಯ, ಆಯಾ ಕಾಲಸ್ಥಿತಿಯ ಅಥವಾ ಆಳಿಕೆಯ ಕುರಿತಾದ ಪ್ರಾಮುಖ್ಯ ಲೇಖನಗಳು, ಚಿತ್ರಪಠ, ನಾಣ್ಯ ಮೊದಲಾದವುಗಳ ಸಹಾಯವಿದ್ದರೇನೇ ಆ ಪಾಠಕ್ಕೆ ಮಾಸ್ತರನು ಸಿದ್ಧನೆಂತಾಗಲಿ, ಬಾಲಕರು ಆಸಕ್ತರೆಂತಾಗಲಿ ಎಣಿಸಲು ಅಸಾಧ್ಯ. ಹತ್ತೆಂಟು ರೂಪಾಯಿ ತಿಂಗಳುಗಟ್ಲೆ ತಲಬಿನ ಉಪಾಧ್ಯಾಯನು ಇತಿಹಾಸವನ್ನಾಗಲಿ ಭೂಗೋಲ ಶಾಸ್ತ್ರವನ್ನಾಗಲಿ ಮನಃಪೂರ್ತಿಯಿಂದ ಕಲಿಸುವನೆಂದರೆ ಮನೆಗೆ ಉಪವಾಸ. ಕೋಟೆಕೊತ್ತಲಗಳು, ನೌಕಾಸೈನ್ಯಗಳು, ನಾಣ್ಯ, ಶಾಸನಗಳು, ಪುಸ್ತಕ ಭಂಡಾರಗಳು ಬೆಳ್ಳಿಯ ಬೀಗದ ಕೈ ಇಲ್ಲದೆ ನೋಡಸಿಕ್ಕವು. ಹೀಗಿರಲು ಬಡ ಉಪಾಧ್ಯಾಯನು ತನ್ನ ಸಿದ್ಧತೆಗೆ ತಕ್ಕ ಜ್ಞಾನವನ್ನು ಹೇಗೆ ನಿರಾಯಾಸವಾಗಿ ಸಂಪಾದಿಸಬಲ್ಲನು?

ಇತಿಹಾಸವನ್ನು ಸಾಂಗವಾಗಿ ಕಲಿಸಲು ಮೂಲಶಾಲೋಪಾಧ್ಯಾಯರ ವ ಇತರ ಗುರುಮಹಾಶಯರ ಬಗ್ಯಾಗಿ ಹಲವು ಪುಸ್ತಕಗಳು ರಚಿಸಲ್ಪಟ್ಟಿವೆ. "ಇಂಗ್ಲಿಷು" ಅರಿಯದಿದ್ದರೆ ಮಾತ್ರ ಮೋಸ. ಈ ಪುಸ್ತಕಗಳಲ್ಲಿ ಉಪಾಧ್ಯಾಯನಿಗೆ ಯಾವತ್ತು ಸಾಮಗ್ರಿಗಳೂ ಒದಗಿಸಲ್ಪಟ್ಟಿವೆ. ಪದ್ಧತಿಯ ಮೂಲಸೂತ್ರಗಳನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ವಿವರಿಸುವೆವು.

ಪಾಠವನ್ನು ಬಾಯಿಯಿಂದ ಹೇಳಿ ಕೊಡುವುದೇ ಹೊರತಾಗಿ ಬಾಲಕರ ಹತ್ತರ ಛಾಪಾ ಪುಸ್ತಕವ್ಯಾವುದಾದರೂ ಅಗತ್ಯವಿಲ್ಲ. ಪಾಠದ ಸಣ್ಣ ಟಿಪ್ಪಣಿಯನ್ನು ಉಪಾಧ್ಯಾಯನು ಪಾಠಾಂತ್ಯದಲ್ಲಿ ಹೇಳಿಕೊಟ್ಟದ್ದನ್ನು ಮಕ್ಕಳು ಚಿಕ್ಕದೊಂದು ಪುಸ್ತಕದಲ್ಲಿ ಬರೆದಿಡುವರು.

ಪಾಠಗಳು ಮೊಟ್ಟಮೊದಲು ಅಜ್ಜಿಕಥಾ ರೂಪದಲ್ಲಿಯೇ ತೊಡಗುವುವು. ಒಬ್ಬ ಮಹನೀಯನ ಜೀವನ ಚರಿತೆ, ಆತನ ಕಾಲ, ದೇಶ ಸ್ಥಿತಿ, ಯುದ್ಧ, ಅಥವಾ ಆಶ್ಚರ್ಯಕರವಾದ ಯಾವುದೊಂದು ಸಂಗತಿಯ ಕುರಿತು ಪ್ರಾರಂಭಿಸಲ್ಪಡುವವು.

ಕಾಲಸ್ರೋತಕ್ಕೆ ಸರಿಯಾಗಿ ಈ ಮುಖ್ಯ ಪಾಠಗಳು ಒಂದಕ್ಕೊಂದು ಪೂರ್ವಾಪರವಿದ್ದೇ ಮುಂದರಿಸುವವು. ಮಕ್ಕಳಿಗೆ ಕಾಲಸ್ರೋತಕ್ಕೆ ಸರಿಯಾಗಿ ಈ ಕಥಾ ಚಿತ್ರಗಳು ಮನಸ್ಸಿನಲ್ಲಿ ಶುಲಭವಾಗಿ ನೆಲೆಗೊಳ್ಳುವವು.

ಶಿಕ್ಷಣೆಯು ಮುಂದರಿಸಿ ಹೋದಂತೆ ಚರಿತ್ರೆಯ ಪಾಠ ಪುಸ್ತಕವೂ ಅಗತ್ಯವಾಗಿ ಕಂಡು ಬರುವುದು. ಉಪಾಧ್ಯಾಯನು ಅಂತಹ ಪುಸ್ತಕವನ್ನೋದಿಸಿ ಅರ್ಥ ಹೇಳಿಸಿ ವಿವರಿಸಿ ಕನ್ನಡದ ಪಾಠಕದಂತೆ ಎಣಿಸದೆ ಅತಿ ಜಾಗರೂಕನಾಗಿರಬೇಕು.

'ಜಾಟ್ಲೆ ಹಾಲು' ಕೊಡುವ ಹಾಗೆ ಪಾಠವನ್ನು ಮಕ್ಕಳ ಮೆದುಳಲ್ಲಿ ತುಂಬಿಸಿ ಮಾನಸಿಕ ಅಜೀರ್ಣತೆಯುಂಟುಮಾಡಲಾಗದು. ಆಲೋಚನೆಯನ್ನು ಹೊರಡಿಸುವ ಪ್ರಶ್ನೆಗಳ ಮೂಲಕ, ಕಾರಣಗಳಿಂದ ಪರ್ಯವಸಾನವನ್ನು ಗಣಿಸಿ ಸಿದ್ಧಾಂತಗೊಳಿಸುವ ಮೂಲಕ, ಮಕ್ಕಳಿಂದ ಆಗಾಗ್ಯೆ ಪಾಠ ವಿಮರ್ಶಿಸಿ ಹೇಳಿಸುವುದರ ಮೂಲಕ, ಬೇಕಾದ ನಕ್ಷೆ, ಪ್ಲೇನು ಮುಂತಾದವುಗಳನ್ನು ಮಕ್ಕಳಿಂದ ಮಾಡಿಸುವುದರ ಮೂಲಕ ಬಾಲಕರು ತಕ್ಕಮಟ್ಟಿಗೆ ಸ್ವಾರ್ಜಿತ ಜ್ಞಾನವನ್ನು ಗಳಿಸುವಂತೆ ಮಾಡುವುದು ಉಪಾಧ್ಯಾಯನ ಕರ್ತವ್ಯ. ಈ ರೀತಿಯಲ್ಲಿ ಕೈಗೂ, ಕಣ್ಣಿಗೂ ಕೆಲಸಕೊಟ್ಟು ಮೆದುಳಿನ ಭಾರವನ್ನು ವರ್ಗಾಯಿಸಬೇಕು.

ಹಲವು ವರ್ಷಗಳಲ್ಲಿ ಹಲವು ಪದ್ಧತಿಗಳಿಂದ ಹಲವು ಗ್ರಂಥಕಾರರ ಹಲವು ಪ್ರಬಂಧ ಶೈಲಿಗಳಿಂದ ಕಲಿಸುವುದಕ್ಕಿಂತಲೂ ಒಬ್ಬನೇ ಉಪಾಧ್ಯಾಯನು ತನ್ನ ಟಿಪ್ಪಣಿಗಳನ್ನೇ ಅಷ್ಟು ವರ್ಷ ಕಾಲವೂ ಕೊಡುತ್ತಿರುವುದು ಒಳ್ಳೆಯದು. ಈ "ನೋಟ್ಸು"ಗಳ ಭಾಷಾ ಶೈಲಿಯು ಕಷ್ಟವಾದ್ದಲ್ಲಿ ಮಕ್ಕಳು ಗ್ರಹಿಸದೆ ಬಾಯಿಪಾಠ ಮಾಡದಂತೆ ನೋಡಬೇಕು.

ಭಾರತ ಭೂಮಿಯ ಇತಿಹಾಸವೆಂತಾದರೂ ಅನ್ಯಜನಾಂಗ, ಅನ್ಯದೇಶ ಅಥವಾ ಸ್ವದೇಶಿಯ ಭಿನ್ನಭಿನ್ನ ರಾಷ್ಟ್ರಗಳ ಕುರಿತು ಅಲ್ಪಸ್ವಲ್ಪವಾದರೂ ಈ ಇತಿಹಾಸಕ್ಕೆ ಸಂಬಂಧಿಸುವ ಮಟ್ಟಿಗೆ ಕಲಿಸಬೇಕು. ಇಷ್ಟಲ್ಲದೆ ಈಚೆಯ ಪುಸ್ತಕಗಳಲ್ಲಿ ಕಂಡು ಬರುವಂತೆ ಇಂಗ್ಲಿಷ ಜನಾಂಗವು ಹಿಂದುಸ್ಥಾನಕ್ಕೆ ಬಂದಂದಿನಿಂದ ಚರಿತ್ರೆಯನ್ನು ಲಂಬವಾಗಿ ಹೇಳಿಕೊಟ್ಟು, ಸ್ವದೇಶಿಯ ರಾಜ್ಯಗಳ ರಾಜರ ಮತ್ತು ಪ್ರಾಚೀನ ಚರಿತ್ರೆಗಳನ್ನು "ಚುಟುಕಾಯಿಸು"ವುದು ಬರೇ ದೂಷಣಕರ.

ಏಳೆಂಟು ವರ್ಷದ ಬಾಲಕರಿಗೆ ಪ್ರಾಕೃತ ಹಿಂದೂಸ್ಥಾನದ ಗವರ್ನಮೆಂಟ್ ದರಬಾರದ ಕುರಿತು ಕುಲಾಂಕುಶವಾಗಿ ವರ್ಣಿಸಿ ಇತಿಹಾಸದಲ್ಲಿಯೇ ಅರುಚಿಯನ್ನುಂಟುಮಾಡಲಾಗದು. ರಾಜಭಕ್ತಿಯನ್ನು ಕಲಿಸಲು ಸೆಕ್ರಿಟರಿಯಟ್ ಸಿಬಂದಿಯ ಖಾನೆಸುಮಾರಿ ಮೂಲಕ ಬರೇ ಅಸಾಧ್ಯವಾಗುವುದು.

ಭೂಗೋಲ ಶಾಸ್ತ್ರವನ್ನೂ ಚರಿತ್ರೆಯನ್ನೂ ವಿಭಾಗಿಸಿ ಕೊಡಲಾಗದು. ಅವೆರಡೂ ಎಣ್ಣೆ ನೀರಿನಂತಿಲ್ಲ; ಹಾಲು ಸಕ್ಕರೆಯಂತಿರುವವು.

ಕಾವ್ಯವನ್ನು ಬರೆದೋದುವುದರಿಂದ ಅದು ಹೇಗೆ ಮನಸ್ಸಿನಲ್ಲಿ ಖಚಿತವಾಗುವುದೋ ಹಾಗೆಯೇ ಭೂಗೋಲ ಶಾಸ್ತ್ರದಲ್ಲಿಯಾಗಲೀ ಇತಿಹಾಸದಲ್ಲಿಯಾಗಲೀ ಪಠ, ನಕ್ಷೆಗಳ ಮೂಲಕ ಮಕ್ಕಳು ಸುಲಭವಾಗಿ ಗಟ್ಟಿಗರಾಗುವರು.

M. N. Kamath.

Bantval.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಮೂಡಬಿದ್ರೆ ತಾಲೂಕು.

(ಕಳದ ಸಂಚಿಕೆಯಿಂದ ಮುಂದರಿಸಿದುದು).

ಅಯ್ಯಾ ಪತ್ರಕರ್ತರೇ,

ನನ್ನ ಲೇಖನದ ಈ ಕಡೇ ಅಂಶವನ್ನು ತಮ್ಮಲ್ಲಿಗೆ ರವಾನಿಸುವಷ್ಟರಲ್ಲಿ ಮಂಗಳೂರಿಂದ ೩ ಹೊಸ ತಾಲೂಕು ಏರ್ಪಾಡಿನ ವಿಷಯ ಏನೇನೋ ನಮ್ಮಲ್ಲಿ ವರ್ತಮಾನಗಳು ಕೇಳಿಸುತ್ತಿರುವವು. ಹೊಸ ತಾಲೂಕು ಕಾರ್ಕಳ ತಾಲೂಕಾಗಿಯೇ ಏರ್ಪಡಿಸುವ ಸಂಭವಗಳು ಹೆಚ್ಚಾಗಿವೆ ಎಂತ ಈ ನಮ್ಮ ಪ್ರಾಂತ್ಯದಲ್ಲಿ ಗುಜುಗುಜು ವಾರ್ತೆ. ಒಂದು ವೇಳೆ ಈ ವಾರ್ತೆ ಆಧಾರವಿದ್ದದ್ದೆಂತಾದರೂ ಮೂರು ಸಂಚಿಕೆಗಳಿಂದ ಪ್ರಕಟಿಸಲ್ಪಡುತ್ತಿರುವ ಮೂಡಬಿದ್ರೆ ತಾಲೂಕು ಪರವಾದ ಈ ನನ್ನ ಲೇಖನವನ್ನು ಹ್ಯಾಗೂ ಮುಗಿಸಲೇ ಬೇಕು. ನನ್ನ ಈ ಲೇಖಕ್ಕೆ ತಾವು ತಮ್ಮ ಪತ್ರದಲ್ಲಿ ಆಶ್ರಯಕೊಟ್ಟದ್ದಕ್ಕೆ ತಮ್ಮ ಉಪಕಾರವನ್ನು ಧ್ಯಾನಿಸುತ್ತಾ ನನ್ನ ಲೇಖನದ ಈ ಕಡೇ ಅಂಶವನ್ನು ಪ್ರಕಟಣೆ ಬಗ್ಯೆ ಕಳುಹಿಸಿಕೊಟ್ಟಿರುತ್ತೇನೆ.

ಕಾರ್ಕಳದಲ್ಲಿ ತಾಲೂಕು ಆಫೀಸನ್ನು ಏರ್ಪಡಿಸಿ ಕಾರ್ಕಳ ತಾಲೂಕನ್ನು ನವೀನವಾಗಿ ರಚಿಸುವುದು ಎಷ್ಟರಮಟ್ಟಿಗೆ ಅಯುಕ್ತವೆಂತ ಹಿಂದಿನ ಸಂಚಿಕೆಯಲ್ಲಿ ವಿವರಿಸಲ್ಪಟ್ಟದೆ, ಅದಲ್ಲದೆ ನವೀನ ತಾಲೂಕು ಯಾವ ಬಗ್ಯೆ ಏರ್ಪಡಿಸುವುದು ಅಗತ್ಯವೆಂತ ಕಂಡುಬಂದದ್ದೆಂಬದನ್ನು ಇನ್ನೊಮ್ಮೆ ತಿಳಿದರೆ ಕಾರ್ಕಳ ತಾಲೂಕಿನಿಂದ ಉಂಟಾಗುವ ಅನನುಕೂಲತೆಗಳು ಮತ್ತಷ್ಟು ಚನ್ನಾಗಿ ತಿಳಿದು ಬರುವವು. ಮೂಡಬಿದ್ರೆಯ ಪೂರ್ವ ಪ್ರಾಂತ್ಯದ ಘಟ್ಟಗಳ ಕೆಳಗಿರುವ ಗ್ರಾಮಗಳ ಸಿವಿಲ್, ರೆವಿನ್ಯು, ಕ್ರಿಮಿನಲ್ ಆಡಳಿತೆಯ ಮೇಲ್ವಿಚಾರವು ಚನ್ನಾಗಿ ಆಗುವಂತೆ ತಾಲೂಕಾಫೀಸನ್ನು ಮೂಡಬಿದ್ರೆಯಲ್ಲಿಯೇ ಇಟ್ಟು ಮಂಗಳೂರು ಡಿವಿಜನಲ್ ಆಫೀಸರವರ ತಾಬೆಯಲ್ಲಿ ಇದರ ಮೇಲ್ವಿಚಾರವಿದ್ದರೆ ಆ ಘಟ್ಟಗಳ ಪ್ರಾಂತ್ಯಗಳ ಗ್ರಾಮಗಳ ಮೇಲ್ವಿಚಾರವು ಸರಿಯಾಗಿ ಆದೀತೆಂಬ ಅಭಿಪ್ರಾಯದಿಂದ ಮೂಡಬಿದ್ರೆ ತಾಲೂಕು ಏರ್ಪಡಿಸಲ್ಪಟ್ಟು ಮಂಗಳೂರು ಡಿವಿಜನಿಗೆ ಸೇರಿಸಲ್ಪಟ್ಟಿತು. ಮಿಕ್ಕ ಡಿವಿಜನಲ್ ಆಫೀಸರರಿಗಿಂತ ಮಂಗಳೂರು ಡಿವಿಜನಲ್ ಆಫೀಸಿಗೆ ಕೆಲಸವು ವಿಪರೀತವೆಂತಾದರೂ ಈ ಪ್ರಾಂತ್ಯಗಳ ಮೇಲ್ವಿಚಾರವು ಮಂಗಳೂರು ಡಿವಿಜನಲ್ ಆಫೀಸರರಿಂದ ನಡಿಸಲಿಕ್ಕೆ ಅನುಕೂಲವಾದುವಷ್ಟು ಇತರ ಯಾವ ಡಿವಿಜನಲ್ ಆಫೀಸರರಿಗೂ ಅನುಕೂಲವಾಗಲಿಕ್ಕಿಲ್ಲ. ಇತರ ಜಿಲ್ಲೆಗಳ ವಿಶೇಷ ಉದಾಹರಣೆಗಳನ್ನು ಕೊಟ್ಟು ಕುಂದಾಪುರ ಡಿವಿಜನಿನ ಆಫೀಸರರಿಗೆ ನವೀನ ತಾಲೂಕನ್ನು

ಕಾರ್ಕಳ ತಾಲೂಕಾಗಿ ವಹಿಸಿ ಕೊಡುವ ವ್ಯವಸ್ಥೆಯನ್ನು ಶುಲಭವಾಗಿ ಬರಿಯಬಹುದು. ಆದರೆ ಹೀಗೆ ಬರಿಯುತ್ತಿರುವಾಗ ವರ್ಗದಾರರ ಅದರಲ್ಲಿಯೂ ಚಿಕ್ಕ ಚಿಕ್ಕ ಬಡ ಹಿಡುವಳಿದಾರರ ಅಂದರೆ ಮೂಡಬಿದ್ರೆ ಪ್ರಾಂತ್ಯದ ಹಿಡುವಳಿದಾರರ ಸ್ಥಿತಿಗತಿಯು ಏನಾದೀತೆಂಬದನ್ನು ಸಹ ಚನ್ನಾಗಿ ಗ್ರಹಿಸಬೇಕು. ಇತ್ತಿತ್ತ ಬಡ ವರ್ಗದಾರರ ಇರವೇ ಅಸಾಧ್ಯವಾಗಿ ಬರುತ್ತಲಿದೆ. ಬಡವರ್ಗದಾರರ ನೆರೆಯಲ್ಲಿರ ಬಹುದಾದ ಹೇರಳ ಆಸ್ತಿಗಳ ಶ್ರೀಮಂತರೊಡನೆ ದರಕಾಸ್ತು ಮೊಕದಮೆಗಳಲ್ಲಾಗಲಿ ಕ್ರಿಮಿನಲ್ ಮೊಕದಮೆಗಳಲ್ಲಾಗಲಿ ಹೋರಾಡುವುದು ನಿಕೃಷ್ಟ ಸ್ಥಿತಿಯ ವರ್ಗದಾರರಿಗೆ ಬಹಳ ಕಷ್ಟ. ಹೀಗಿರುತ್ತಾ ಒಂದನೇ ಕ್ಲಾಸ್ ಮೆಜಿಸ್ಟ್ರೇಟರ ಕಚೇರಿಯೂ, ದರಕಾಸ್ತು ಮೊದಲಾದ ರೆವಿನ್ಯು ಅಪೀಲುಗಳ ಬಗ್ಯೆ ಡಿವಿಜನಲ್ ಆಫೀಸರರ ಆಫೀಸೂ ಬಹಳ ದೂರವಿದ್ದರೆ ಅಲ್ಲಿ ತನಕ ಹೋಗಿ ನ್ಯಾಯಾಧಿಕಾರಿಗಳ ಮುಂದೆ ಸತ್ಯವನ್ನು ಪಡಿಯುವದು ಅಸಾಧ್ಯವಾಗುವದು. ಹೊಸ ತಾಲೂಕು ಏರ್ಪಾಡಿನಲ್ಲಿ ವ ಇತರ ಯಾವ ಸರಕಾರಿ ಏರ್ಪಾಡಗಳಲ್ಲಿ ಸಹ ದೀನರ ಅಡಚಣೆಗಳಿಗೆ ಹೆಚ್ಚಿನ ಲಕ್ಷ್ಯ ಕೊಡಬೇಕು. ಯಾಕಂದರೆ ಪ್ರಜೆಗಳಲ್ಲಿ ದೀನರೆ ಬಹಳವಾಗಿರುವರು.

ನಾವು ಕೇಳಿರುವಂತೆ ಮೆ. ಗ್ರೆಹೆಮ್ ದೊರೆಗಳವರ ಕಾರ್ಕಳ ತಾಲೂಕಿನ ಏರ್ಪಾಡು ನಮ್ಮ ಅಭಿಪ್ರಾಯದ ಮೇರೆಗೆ ಹೀಗಾಗಿರುವುದು. ದೊರೆಗಳವರು ಕಾರ್ಕಳ ತಾಲೂಕು ಆಗಬೇಕೆಂಬದನ್ನು ಸಿದ್ಧಾಂತವಾಗಿ ಮಾಡಿಕೊಂಡು ಇಂಥಾ ಸಿದ್ಧಾಂತವನ್ನು ರುಜುಪಡಿಸುವರೆ ಕಾರಣಗಳನ್ನು ಹುಡುಕಿಕೊಟ್ಟಿರುವಂತೆ ತೋರುತ್ತದಲ್ಲದೆ ಸರ್ ವಿಲಿಮ್ ಮೇಯರ್ ದೊರೆಗಳು ಯಾವ ಕಾರಣಗಳಿಂದ ಮೂಡಬಿದೆ ತಾಲೂಕನ್ನು ರಚಿಸಬೇಕೆಂದು ಉದ್ದೇಶಿಸಿದ್ದರೋ ಆ ಕಾರಣಗಳ ಪ್ರಕಾರ ನವೀನ ತಾಲೂಕು ಏರ್ಪಾಡನ್ನು ಪರ್ಯಾಲೋಚಿಸಿದ್ದಾರೋ ಏನೆಂಬುದರ ವಿಷಯ ಅನುಮಾನಪಡಬೇಕಾಗಿರುತ್ತದೆ. ಇಂಥಾ ಏರ್ಪಾಡುಗಳಲ್ಲಿ ನಮ್ಮ ಜಿಲ್ಲೆಯ ಸ್ಥಿತಿಯನ್ನು ಇತರ ಜಿಲ್ಲೆಯವುಗಳೊಂದಿಗೆ ಸರಿ ಹೋಲಿಸುವಾಗ ನಮ್ಮ ಜಿಲ್ಲೆಯ ವಾಯುಗುಣ, ಪ್ರಕೃತಿ ಲಕ್ಷಣ, ಇಲ್ಲಿಯ ಪ್ರಜಾ ಜನರಲ್ಲಿ ಹಲವರು ಆಚರಿಸುವ ಅಳಿಯ ಸಂತಾನ ಪದ್ಧತಿ ಈ ಮೊದಲಾದ ವಿಷ್ಯಮಾನಗಳನ್ನು ಸಹ ಆಲೋಚನೆಗೆ ತಂದುಕೊಂಡು ಹೊಸ ತಾಲೂಕನ್ನು ಅತಿ ದೂರವಿರುವ ಆಫೀಸರರ ಮೇಲ್ವಿಚಾರದಲ್ಲಿಟ್ಟರೆ ನಮ್ಮ ಜಿಲ್ಲೆಯ ಈ ವಿಶೇಷ ಲಕ್ಷಣಗಳಿಂದ ಏನೇನು ಆಪತ್ತು ಪ್ರಜಾಜನರಿಗೆ ಸಂಭವಿಸಬಹುದೆಂಬದನ್ನು ಸಹ ಮೊದಲಾಗಿ ನಿಶ್ಚಯಿಸುವದು ಧರ್ಮವಾಗಿರುವದು. ಅಳಿಯ ಸಂತಾನ ಪದ್ಧತಿಯವರಲ್ಲಿ ಕಲಹಗಳಿಂದ ಎಂತೆಂಥಾ ವಿಪರೀತ ಅವಘಡಗಳು ಸಂಭವಿಸುತ್ತಿರುವವು ಎಂಬೀ ಮೊದಲಾದ ವಿವರವನ್ನು ಈ ಸಂದರ್ಭದಲ್ಲಿ ಅಧಿಕಾರಿಗಳ ಮುಂದೆ ತರುವ ಅಗತ್ಯವಿಲ್ಲ! ಇಂಥಾ ಕಲಹದ ಪ್ರಾಂತ್ಯಗಳಲ್ಲಿ ಸರಕಾರದ ಮೇಲ್ವಿಚಾರವು ಚನ್ನಾಗಿರಬೇಕೆಂಬದನ್ನು ಅಧಿಕಾರಿಗಳು ಹೊಸ ತಾಲೂಕು ರಚನೆಯ ಈ ಸಂದರ್ಭದಲ್ಲಿ ಮರೆಯಕೂಡದು.

ನವೀನ ತಾಲೂಕಾಫೀಸನ್ನು ಕಾರ್ಕಳದಲ್ಲಿರಗೊಡಿಸಬೇಕೆಂದು ಕಾರ್ಕಳದಲ್ಲಿಯ ಕೆಲವರು ಯಾಕೆ ಸಾಧಿಸುವರೆಂಬದನ್ನು ಈಗ ತಿಳಕೊಳ್ಳುವ. ಮೂಡಬಿದ್ರೆಯಲ್ಲಿ ತಾಲೂಕಾಫೀಸು ಸ್ಥಾಪಿತವಾದದ್ದು ಊರ್ಜಿತವಿದ್ದರೆ ಮುನ್ಸಿಫ ಕೋರ್ಟೂ ಸಹ ಕ್ರಮೇಣ ಕಾರ್ಕಳದಿಂದ ಹೋಗಿ ಮನೆ ಮೊದಲಾದವುಗಳನ್ನು ಕಟ್ಟಿಸಿ ಅನುಕೂಲತೆಯಿಂದ ಇರುವ ವಕೀಲರಿಗೂ ಕೆಲವು ಸಾಹುಕಾರರಿಗೂ ನಷ್ಟವುಂಟಾಗುವ ಅಂಜಿಕೆಯೇ ಕಾರ್ಕಳದವರ ಸಾಧನೆಯ ಮುಖ್ಯ ಕಾರಣವಾಗಿರುವದು. ವಕೀಲರಾದರೋ ಸಂಖ್ಯೆಯಲ್ಲಿ ಬಹಳ ಸ್ವಲ್ಪ ಜನರಾಗಿರುವರು. ಇವರ ಬಗ್ಯೆ ಇವರಕ್ಕಿಂತಲೂ ಹೆಚ್ಚಾಗಿರುವ ವರ್ಗದಾರರು ಮೊದಲಾದವರು ಅಡಚಣೆಗೆ ಗುರಿಯಾಗುವುದು ಸರಿಯಲ್ಲ. ಸಾಹುಕಾರರಲ್ಲಿ ಇರಬಹುದಾದ ಅಂಜಿಕೆಯಾದರೋ ಸಹಜವಾದದ್ದೆಂತ ಹೇಳಬಹುದು. ಆದರೆ ಇಂಥಾ ಸಾಹುಕಾರರು ವ್ಯಾಪಾರವೈವಾಟದಿಂದ ಪೂರೋಭಿವೃದ್ಧಿಯು ಉಂಟಾಗಬೇಕಾದರೆ ಸರಕಾರಿ ಆಫೀಸುಗಳು ತಮ್ಮ ಊರಲ್ಲಿರುವಂತೆ ಮಾಡುವದು ಅತ್ಯಗತ್ಯವೋ ಎಂಬದನ್ನು ಆಲೋಚಿಸಬೇಕು. ವ್ಯಾಪಾರವು ಬಹಳಮಟ್ಟಿಗೆ ವಯ್ಯೋಣದ ಅನುಕೂಲತೆಗಳುಳ್ಳ ಸ್ಥಳಗಳಲ್ಲಿ ಬೆಳೆಯುವುದು. ಇಂಥಾ ವಯ್ಯೋಣದ ಅನುಕೂಲತೆಗಳೊಂದಿಗೆ ಅಂಥಾ ಸ್ಥಳಗಳಲ್ಲಿರುವ ಜನರ ಕೂಡೆ ಭಂಡವಾಳವಿದ್ದರೆ ವ್ಯಾಪಾರವು ಬಹಳ ಹೆಚ್ಚಾಗುವದು. ಸರಕಾರಿ ಆಫೀಸುಗಳಿಂದಲೇ ವ್ಯಾಪಾರ ಅಭಿವೃದ್ಧಿಯು ಬಹಳವಾಗಿ ಸಾಗದು. ಉದಾಹರಣೆಗಾಗಿ ಕುಂದಾಪುರದಲ್ಲಿ ಸಬ್ ಕಲೆಕ್ಟರರ ಮೊದಲಾದ ಆಫೀಸುಗಳಿದ್ದರೂ ಕುಂದಾಪುರವು ಉಡುಪಿಯಷ್ಟು ವಿಶೇಷವಲ್ಲ. ಪುತ್ತೂರಿನಲ್ಲಿ ಸರಕಾರಿ ಆಫೀಸುಗಳು ವಿಶೇಷವಿದ್ದರೂ ಪುತ್ತೂರು ಪೇಟೆಯು ಮುಲ್ಕಿಯಷ್ಟು ದೊಡ್ಡದಲ್ಲ. ಬಂಟವಾಳದಿಂದ ಡಿಪ್ಯುಟಿ ತಹಸಿಲದಾರರ ಆಫೀಸು ಹೋದರೂ ಅಲ್ಲಿಯ ವ್ಯಾಪಾರವು ತಗ್ಗಿದಂತೆ ಕಾಣುವುದಿಲ್ಲ. ಆದ್ದರಿಂದ ಕಾರ್ಕಳದ ಸಾಹುಕಾರರು ವಿಶೇಷ ಅಂಜಿಕೆಪಡುವರೆ ಕಾರಣವಿಲ್ಲ. ಕಾರ್ಕಳದ ವಕೀಲರಲ್ಲಿ ಕೆಲವರಿಂದಲೇ ಈ ಕಳಕಳವೆಲ್ಲವು ಎಬ್ಬಿಸೋಣಾಗಿದೆ. ಸ್ವಾರ್ಥವನ್ನು ಬಿಟ್ಟುಬಿಟ್ಟು ಚನ್ನಾಗಿ ಪರಿಗ್ರಹಿಸಿದರೆ ಕಾರ್ಕಳದವರು ಸಹ ಹೊಸ ತಾಲೂಕಾಫೀಸನ್ನು ಮೂಡಬಿದ್ರೆಯಲ್ಲಿಯೇ ಇರಗೊಡಿಸುವುದುಚಿತವೆಂತ ಅಭಿಪ್ರಾಯಪಡದೆ ಇರಲಾರರು.

ಹವಾಗುಣ, ಪಟ್ಟಣ ಬೆಳವಣಿಗೆ ಮೊದಲಾದವುಗಳಿಗೂ ಮೂಡಬಿದ್ರೆಯು ಕಾರ್ಕಳಕ್ಕಿಂತ ಯೋಗ್ಯವಾಗಿರುವುದೆಂಬುದನ್ನು ವಿವರವಾಗಿ ವರ್ಣಿಸಬೇಕೆಂತಿಲ್ಲ. ಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿಗೆ ಮೂಡಬಿದ್ರೆಯು ಸಮೀಪವಾಗಿರುವುದರಿಂದಲೂ ಮಂಗಳೂರು ಡಿವಿಜನಿಗೆ ಮೂಡಬಿದ್ರೆ ತಾಲೂಕನ್ನು ಸೇರಿಸುವುದರಿಂದಲೂ ಮೂಡಬಿದ್ರೆಯ ಪ್ರಾಂತ್ಯದ ಜನರಿಗೆ ಇದರಿಂದ ವಿಶೇಷ ಪ್ರಯೋಜನ ದೊರಕುವದು. ಮಂಗಳೂರಿನಲ್ಲಿ ತೋರುವ ಶಿಕ್ಷಿತ ಜನರನ್ನು ನೋಡುತ್ತಾ ಅವರೊಡನೆ ಒಡನಾಡುತ್ತಾ ಶಿಕ್ಷಣ ಪ್ರಯೋಜನವು ಮೂಡಬಿದ್ರೆ ತಾಲೂಕಿನವರಿಗೆ ಕ್ರಮೇಣ ದೊರಕದೆ ಇರದು. ಕುಂದಾಪುರ ಡಿವಿಜನಿಗೆ ಈ ಹೊಸ ತಾಲೂಕನ್ನು ಕೂಡಿಸುವುದರಿಂದ ಈ ಪ್ರಯೋಜನಗಳ್ಯಾವವೂ ದೊರಕಲಾರವು.

ಆದ್ದರಿಂದ ಕಾರ್ಕಳದ ಕೆಲವರಿಂದ ಎಬ್ಬಿಸೋಣಾದ ಕಳಕಳದಿಂದ ತಪ್ಪು ಅಭಿಪ್ರಾಯಪಡದೆ ತಾಲೂಕಾಫೀಸನ್ನು ಮೂಡಬಿದ್ರೆಯಲ್ಲಿಯೇ ಇರಗೊಡಿಸ ಬೇಕೆಂದು ಸರಕಾರದವರನ್ನು ಈ ಮೂಲಕ ವಿಜ್ಞಾಪಿಸಿಕೊಂಡಿರುವೆವು. ಮೂಡಬಿದ್ರೆಯಲ್ಲಿಯೇ ತಾಲೂಕಾಫೀಸನ್ನು ಹ್ಯಾಗೆ ಇರಗೊಡಿಸಬಹುದೆಂಬದರ ಬಗ್ಯೆ ನಮಗೆ ತೋರಿದ ಸೂಚನೆಗಳನ್ನು ಈ ಮೊದಲೇ ಬರೆದಿರುತ್ತೇವೆ.

~~~~~~~~

ಅಯ್ಯಾ,

ಸರಕಾರದಿಂದ ಸ್ಥಾಪಿಸೋಣಾದ ಫಿಸ್ಕ್ಯೂರಿಂಗ್ ಯಾರ್ಡಿನಲ್ಲಿ ಮಾತ್ರ ಸರಕಾರದಿಂದ ಒದಗಿಸಿ ಕೊಡಲ್ಪಡುವ ಉಪ್ಪಿನಿಂದ ಮೀನು ಒಣಗಿಸುವ ಬಗ್ಯೆ ಹಲವು ಜಾತಿಯವರು ಟಿಕೇಟುಗಳನ್ನು ಪಡದು, ಹಲವು ಜಾತಿಯವರಿಂದ ಕೆಲಸ ಮಾಡಿಸಿ ಮೀನಿನ ವ್ಯಾಪಾರ ಮಾಡುತ್ತಾರೆ. ಮೀನು ಶಿಕಾರಿ ಕಸಬಿನಿಂದಲೇ ಜೀವನ ಮಾಡುವ ಕಡು ಬಡವರಾದ ಮೊಗೇರ ಜಾತಿಯ ಅನೇಕ ಮಂದಿ ಮಲ್ಪೆ ಬಂದರದ ಆಜುಬಾಜಿನಲ್ಲಿ ವಾಸವಾಗಿದ್ದಾರೆ. ಇತರ ಜಾತಿಯವರ ಸಂಪರ್ಕದಲ್ಲಿದ್ದು ತಮ್ಮ ಹೆಂಗಸರು ಯಾರ್ಡಿನಲ್ಲಿ ಮೀನಿನ ಕೆಲಸ ಮಾಡುವದು ಕಾರಣಾಂತರದಿಂದ ಯುಕ್ತವಲ್ಲವೆಂತ ಏರ್ಪಡಿಸಿದ ದೀರ್ಘ ಕಾಲದಿಂದ ನಡದು ಬಂದ ಅವರ ಜಾತಿಯ ಕಟ್ಟಳೆಯ ನಿಬಂಧನೆ ಮೇರೆಗೆ ಅವರನ್ನು ಕೆಲಸಕ್ಕೆ ಕಳುಹದೆ ತಮ್ಮ ಮೀನು ಶಿಕಾರಿಯಿಂದಲೇ ಸಿಕ್ಕುವ ಅಲ್ಪ ಲಾಭದಿಂದ ಹೆಚ್ಚು ಸಂಕಷ್ಟ ಪಡುತ್ತಾ ಕುಟುಂಬ ಸಂರಕ್ಷಣೆ ಮಾಡುತ್ತಿದ್ದಾರೆ. ಪ್ರಯುಕ್ತ ಸದರಿ ಮೊಗೇರ ಜಾತಿಯ ಮೀನು ವ್ಯಾಪಾರವಿದ್ದ ಒಬ್ಬ ಗೃಹಸ್ಥನು ಸ್ವಜಾತಿ ಅಭಿವೃದ್ಧಿಗೋಸ್ಕರ ಗುನಾವೊ ಫೆಕ್ಟರಿ ಸ್ಥಾಪಿಸುವ ಬಗ್ಯೆ ಮತ್ತು ಹೊಸ ನಮೂನೆಯಲ್ಲಿ ಮೀನಿಗೆ ಉಪ್ಪು ಹಾಕಿ ಒಣಗಿಸುವರೆ ಅನುಕೂಲವಾಗುವ ಹಾಗೆ ತನಗೆ ಸರಕಾರದಿಂದ ಚಾಲಗೇಣಿಗೆ ಮಲ್ಪೆ ಸಮುದ್ರ ಕಿನಾರೆಯಲ್ಲಿಯೇ ಕೊಡೋಣಾದ ಸ್ಥಳದಲ್ಲಿ ಸರಕಾರದಿಂದ ಉಪ್ಪು ಕೊಡೋಣಾದರೆ, ತಾನೇ ಸ್ವತಹ ಯಾರ್ಡನ್ನು ಏರ್ಪಡಿಸುತ್ತೇನೆಂತ ಒಪ್ಪಿ ಸರಕಾರದವರಿಂದ ಒದಗಿಸಿ ಕೊಡೋಣಾಗುವ ನಕ್ಷೆಯಂತೆ ಆ ಸ್ಥಳದಲ್ಲಿ ಸ್ವಂತ ಖರ್ಚಿನಿಂದ ಶೆಡ್ ಕಟ್ಟಿಸಿಕೊಟ್ಟು ಅದಕ್ಕೆ ಬೇಕಾಗುವ ಶಿಬಂದಿಯ ತಲಬು ಕೂಡಾ ತಾನು ಕೊಡುತ್ತೇನೆಂತ ಮದ್ರಾಸು ಫಿಶ್ಯರಿ ಡಿಪಾರ್ಟಮೆಂಟ್ ಪರಿಮುಖ ಬೋರ್ಡಿನವರಿಗೆ ಮನವಿ ಮಾಡಿದ್ದಾನಾಗಿ ವಾರ್ತೆ ಇದೆ. ಇದು ನಿಜವಾದರೆ ಆತನ ಕಂಪೌಂಡಿನಲ್ಲಿ ಮೊಗೇರರ ಹೆಂಗಸರು ಇತರ ಜಾತಿಯವರ ಸಂಪರ್ಕವಿಲ್ಲದೆಯೂ ಮತ್ತು ದೀರ್ಘ ಕಾಲದಿಂದ ನಡದು ಬಂದ ಅವರ ಜಾತಿ ಕಟ್ಟಳೆ ನಿಬಂಧನೆಗೆ ಸಹಾ ನ್ಯೂನತೆ ಇಲ್ಲದೆಯೂ ಮೀನಿನ ಕೆಲಸವನ್ನು ಮಾಡಬಹುದು. ಈ ಸಂದರ್ಭದಲ್ಲಿ ಮಲ್ಪೆಯಾರ್ಡಿನ ಇತರ ಟಿಕೇಟುದಾರರಿಗೆ ಮಿಕ್ಕ ಜಾತಿಯ ಕೂಲಿಯವರು ಬೇಕಾದಾಗ ದೊರಕುವರಲ್ಲದೆ, ವೃತ್ತಿ ಇಲ್ಲದೆ ಹೀನಸ್ಥಿತಿಯಲ್ಲಿದ್ದ ಮೊಗೇರ ಜಾತಿಯ ಅನೇಕ ಹೆಂಗಸರು ಈ ಕೆಲಸಕ್ಕೆ ಒದಗಿ ಅವರ ಹೀನ ಸ್ಥಿತಿಯನ್ನು ಕಳೆದು ಹೆಚ್ಚಿನ ಪ್ರಯೋಜನ ಹೊಂದುವ ಸಂಗತಿಯಲ್ಲಿ ಸರಕಾರದವರು ಇದನ್ನು ಲಕ್ಷಕ್ಕೆ ತಂದುಕೊಂಡು ಸದರಿ ಮೊಗೇರ ಜಾತಿಯ ವ್ಯಾಪಾರಸ್ಥನ ಶ್ಲಾಘನೀಯವಾದ ಕೋರಿಕೆಯನ್ನು ನೆರವೇರಿಸುವದು ಯುಕ್ತವಲ್ಲವೇ? ಮಲ್ಪೆಯಲ್ಲಿ ಮೀನು ವ್ಯಾಪಾರ ನಡಿಸುವ ಇತರ ಟಿಕೇಟುದಾರರ ಆಕ್ಷೇಪಗಳು ಅಸೂಯೆಯಿಂದಲೇ ಮಾಡಿದ್ದಾಗಿರುತ್ತದೆಂಬದು ಮೇಲಿನ ಕಾರಣಗಳಿಂದ ಸರಕಾರದ ಸುಚಿತ್ತಕ್ಕೆ ತೋರದೆ ಇದ್ದೀತೇ?

ಇಂತಿ ಮೊಗೇರರ ಹಿತೈಷಿ.

~~~~~~~~

ವಿದೇಶ ವೃತ್ತಾಂತ.

~~~~~~~~

ಅಮೇರಿಕದ ಯುನೈಟೆಡ್ ಸ್ಟೇಟಿನಲ್ಲಿ ಡೈನಾಮೆಟ್ ಎಂಬ ಸಿಡಿಮದ್ದನ್ನು ಭೂಮಿಗೆ ಹಾಕಿ ಭೂಮಿಯನ್ನು ಹಸನು ಮಾಡುತ್ತಿರುವ ಪದ್ಧತಿಯು ರೂಢಿಗೆ ಬಂದಿರುವದು. ೧೮೬೮ನೇ ಇಸವಿಯಲ್ಲಿ ಸಿಡಿಮದ್ದು ಕಾರ್ಖಾನೆಯುವನೊಬ್ಬನು ಬೇಸಾಯಗಾರರಿಗೆ ೫೦,೦೦೦ ರಾತ್ತು ಸಿಡಿಮದ್ದು ಮಾರಿದ್ದನು. ೧೮೯೮ರಲ್ಲಿ ೭೫೦,೦೦೦ ರಾತ್ತು; ೧೯೧೦ರಲ್ಲಿ ೧,೫೦೦,೦೦೦ ರಾತ್ತು; ೧೯೧೧ರಲ್ಲಿ ೩,೦೦೦,೦೦೦ ರಾತ್ತು; ಹೀಗೆ ಇದರ ಪ್ರಯೋಗವು ಬೇಸಾಯಗಾರರಲ್ಲಿ ಹೆಚ್ಚುತ್ತಾ ಬಂತು. ಈ ರೀತಿ ಭೂಮಿಯನ್ನು ಹಸನು ಮಾಡುವುದರಿಂದ ಭೂಮಿಯ ಮಣ್ಣು ತಕ್ಕ ರೀತಿಯಲ್ಲಿ ಅಡಿಮೇಲಾಗಿ ಬಿತ್ತಿದ ಪೈರು ಉತ್ತಮವಾದ ಮತ್ತು ಹೆಚ್ಚಿನ ಫಲ ಕೊಡುವುದು. ಈಗ ಅಲ್ಲಿ ಭೂಮಿಯನ್ನು ಉಳುವ ಉದ್ದೇಶಕ್ಕಾಗಿ ಡೈನಾಮೆಟ್ ತಯಾರ್ಮಾಡುವ ೧೨ ಕಾರ್ಖಾನೆಗಳು ಇವೆ ಎಂಬದಾಗಿ ಒಂದು ಪತ್ರವು ಹೇಳುವದು.

~~~~~~~~

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಮುಂದೆ ಇಂಡಿಯಾ ಸರಕಾರದ ಮಸೂದೆಯು ಎರಡನೇ ಸಾರಿ ಓದಲ್ಪಟ್ಟು ಮಂಜೂರು ಪಡೆಯಿತು.

~~~~~~~~

ದಕ್ಷಿಣ ಅಪ್ರೀಕದ ಮೊರಕ್ಕದ ಫೆಜಿನಲ್ಲಿ ಪ್ರೆಂಚರ ಜನರಲ್ ಮ್ಯೊನಿಯರರು ಪಾಶರನ್ನು ಕೆಲಸದಿಂದ ತಳ್ಳಿ ಹಾಕಿದ್ದಾರೆ. ಇವರ ಬದಲಿಗೆ ಗವರ್ನರರನ್ನು ನೇಮಿಸುವರು. ದಂಗೆಗಾರರ ಮುಂದಾಳುಗಳನ್ನು ಹಿಡಿದು ವಿಚಾರಣೆಗೆ ಗುರಿ ಮಾಡಿರುವರು. ದಂಗೆಕಾಲದಲ್ಲಿ ಅಲ್ಲಿಯ ತಂತೀ ಇಲ್ಲದ ಟೆಲಗ್ರಾಪ್ ಆಫೀಸಿನಲ್ಲಿ ಹೆಚ್ಚಿನ ಗೊಂದಲ ನಡೆಯಿತು. ದಂಗೆಗಾರರು ಈ ಆಫೀಸಿಗೆ ಹೊಕ್ಕು ಆಫೀಸರರನ್ನು ಅಡ್ಡ ಕಟ್ಟಿದರು. ಅವರ ಕೈಯಲ್ಲಿ ಒಂದು ರಿವೋಲ್ವರ್ ಕೋವಿ ಮಾತ್ರ ಇತ್ತು. ಆದರೂ ಅವರು ದಂಗೆಗಾರರಲ್ಲಿ ೧೫ ಜನರನ್ನು ಕೊಂದರು. ಅನಂತರ ದಂಗೆಗಾರರು ಮಾಡಿನ ಮೇಲೆ ಹತ್ತಿ ಕೋಣೆಯಲ್ಲಿದ್ದವರ ಮೇಲೆ ಬಿಸಿ ಎಣ್ಣೆಯನ್ನು ಚೆಲ್ಲಿದರು. ಇದರಿಂದ ಒಬ್ಬ ಆಫೀಸರನು ಸತ್ತನು. ಇತರ ಮೂರು ಜತೆಗಾರರು ದೇಶೀಯ ದಂಗೆಗಾರರ ಕೈಯಲ್ಲಿ ಬಿದ್ದು ಸಾಯುವುದಕ್ಕಿಂತ ಸ್ವಘಾತಮಾಡಿಕೊಳ್ಳುವದೇ ಲೇಸೆಂದು ಭಾವಿಸಿ ತಮ್ಮನ್ನು ತಾವೇ ಕೊಂದುಕೊಂಡರು.

ಫೆಜಿನಲ್ಲಿ ದಂಗೆಗಾರರಾದ ಮೂರರಿಂದ ೫೧ ಯೆಹೂದ್ಯರು ಕೊಲ್ಲಲ್ಪಟ್ಟರು. ೩೭ ಮಂದಿಗೆ ಗಾಯವಾಯಿತು. ಫೆಜಿನಿಂದ ತಪ್ಪಿಸಿಕೊಂಡು ಓಡಿಹೋದ ಏಳುಸಾವಿರ ಯೆಹೂದ್ಯರು ಸುಲ್ತಾನರ ಉದ್ಯಾವನದಲ್ಲಿ ಮರೆಹೊಕ್ಕೊಂಡಿರುವರು. ಅವರಲ್ಲಿ ಅನೇಕರು ಸುಲ್ತಾನರ ಮೃಗಶಾಲೆಯಲ್ಲಿದ್ದ ಖಾಲಿ ಮೃಗ ಪಂಜರಗಳಲ್ಲಿ ಅಡಗಿಕೂತಿರುವರು, ಅದರಲ್ಲಿಯೂ ಸ್ಥಳ ದೊರಕದೆ ಇದ್ದವರಿಗೆ ಸುಲ್ತಾನರು ಸಣ್ಣ ಸಣ್ಣ ಡೇರೆಗಳನ್ನು ಕಟ್ಟಿಸಿಕೊಟ್ಟಿರುವರು.

~~~~~~~~

ಡರ್ಡನೆಲ್ಸನ್ನು ಪುನಃ ತೆರೆಯುವರೆ ತುರ್ಕೀ ಪಾರ್ಲಿಮೆಂಟ್ ಸಭೆಯವರು ನಿರ್ಧರಿಸಿರುವದಾದರೂ ಇಟಾಲಿಯರು ಆಗ್ಗಾಗ್ಯೆ ಆರ್ಖಿಪೆಲಾಗೋವಿನಲ್ಲಿ ಬಂದು ಉಪದ್ರ ಕೊಡುತ್ತಿರುವುದರಿಂದ ಡರ್ಡನೆಲ್ಸನ್ನು ತೆರೆಯುವ ಜವಾಬ್ದಾರಿಕೆಯನ್ನು ತಾನು ತಕ್ಕೊಳ್ಳಲಾರೆನೆಂದು ಡರ್ಡನೆಲ್ಸ್ ಕೋಟೆಯ ಸೇನಾಧಿಪತಿಯು ಹೇಳಿರುವನು. ಡರ್ಡನೆಲ್ಸ್ ಅಡ್ಡಕಟ್ಟಿರುವದರಿಂದ ನೂರಾರು ವ್ಯಾಪಾರ ಹಡಗಳು ಬೊಸ್ಪರಸಿನಲ್ಲಿ ನಿಂತು ಕಾಯುತ್ತಿರುವವು.

ಇಟಾಲಿಯರು ಸೆಂಟ್ ಅಂಪಾಲಿಯ ಎಂಬ ದ್ವೀಪವನ್ನು ವಶಮಾಡಿಕೊಂಡಿರುವರು. ಈ ದ್ವೀಪವು ಕಳ್ಳ ಹಡಗುಗಳನ್ನು ತಡೆ ಕಟ್ಟುವರೆ ಅನುಕೂಲವಾದ ಸ್ಥಳವಾಗಿದೆ.

ತುರ್ಕರ ಕಡೆಯ ಮುಖ್ಯ ಸೇನಾಧಿಪತಿಯಾದ ಎನವರ್ ಬೇಐರವರು ಈಚೆಗೆ ಆದ ಕದನದಲ್ಲಿ ಗಾಯಪಟ್ಟು ಮಾರ್ಯಾಟ್ ಎಂಬಲ್ಲಿ ಮೃತಪಟ್ಟರೆಂಬದಾಗಿಯೂ ತುರ್ಕರು ಅವರು ಮೃತಪಟ್ಟ ಸಂಗತಿಯನ್ನು ಅಡಗಿಸುವದಕ್ಕಾಗಿ ಸುಲ್ತಾನರು ಎನವರ್ ಬೇರವರನ್ನು ಪಾಶರಾಗಿ ನೇಮಿಸಿ ಕನ್‌ಸ್ತಂತಿನೋಪಲಿಗೆ ಕರೆಯಿಸಿದ್ದಾರೆಂಬದಾಗಿ ಸುಳ್ಳು ವಾರ್ತೆ ಹಬ್ಬಿಸಿರುವರೆಂತಲೂ ಕೈರೋದಿಂದ ವಾರ್ತೆ ಬಂದದೆ. ಎನವರ್‌ಬೇರವರು ಬದಲಿಗೆ ಸದ್ಯಾಅಜೆಜ್ ಬೇರವರು ನೇಮಿಸಲ್ಪಡುವರೆಂತಲೂ ಅನಂತರ ಮುಖ್ಯ ಸೇನಾಧಿಪತಿಯಾಗಿ ಅಯ್ಯುಬುಸಾಬ್ರಿ ಬೇರವರು ನೇಮಿಸಲ್ಪಡುವರೆಂತಲೂ ವಾರ್ತೆ ಇದೆ. ಆದರೆ ಎನವರ್ ಬೇರವರು ಮೃತಪಡಲಿಲ್ಲವೆಂಬದಾಗಿ ರೂಟರ್ಸ್ ಬಾತ್ಮೀದಾರರು ತಿಳಿಸುವರು. ೨೫ನೇ ತಾರೀಕಿಗೆ ಮೆಕ್‌ಬೆಜ್ ಅರ್ಧ ದ್ವೀಪದ ಬಳಿಯಲ್ಲಿ ಆದ ಯುದ್ಧದಲ್ಲಿ ಇಟಾಲಿಯರಲ್ಲಿ ೭ ಮಂದಿ ಮಡಿದರು. ೭೦ ಮಂದಿ ಗಾಯವೊಡೆದರು. ಡರ್ಡನೆಲ್ಸನ್ನು ಮುಚ್ಚಿರುವುದರಿಂದ ಬರಲಿಕ್ಕಿರುವ ತೊಂದರೆಗಳನ್ನು ಸೂಚಿಸಿ ರುಷ್ಯಾ ಸರಕಾದವರು ತುರ್ಕೀ ಸರಕಾರದವರಿಗೆ ಪತ್ರ ಬರೆದಿರುವರು. ತುರ್ಕೀ ಮಂತ್ರಿಗಳು ಡರ್ಡನಲ್ಸಿನ ಸಂಬಂಧವಾಗಿ ಆಲೋಚಿಸುವರೆ ಸಭೆ ಕೂಡಿ ಕೆಲವು ತಾಸುಗಳ ವರೆಗೆ ಚರ್ಚಿಸಿದರು. ಆದರೆ ಯಾವದೊಂದು ತರದ ಖಂಡಿತವಾದ ನಿಷ್ಕರ್ಷೆಯನ್ನು ಮಾಡದೆ ಸಭೆಯು ಅಗಲಿತು.

ಇಟಾಲಿಯರು ಡರ್ಡನೆಲ್ಸಿಗೆ ಗುಂಡುಹಾರಿಸಿ ಕುಮಕೆಲ್ಲಾ ಎಂಬ ಕೋಟೆಯನ್ನು ಕೆಡವಿ ೩೦೦ ತುರ್ಕರನ್ನು ಕೊಂದರು ಎಂಬ ವಾರ್ತೆ ಬಂದಿರುವದು.

~~~~~~~~

ಬರ್ಮದಲ್ಲಿ ಒಂದು ವಿಶ್ವಾವಿದ್ಯಾ ಕಲಾಶಾಲೆಯನ್ನು ಸ್ಥಾಪಿಸುವರೆ ಇಂಡಿಯಾ ಸರಕಾರದವರು ಆಲೋಚಿಸಿರುವರೆಂದು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಹಿಂದೂಸ್ಥಾನದ ಉಪಸೆಕ್ರೆಟರಿಯವರಾದ ಮೆ। ಮೊಂಟೇಗರವರು ಹೇಳಿರುವರು.

~~~~~~~~

ಡರ್ಬೆಶಯರ್ ಎಂಬಲ್ಲಿ ಒಂದು ದನದ ಕರುವಿಗೆ ಎರಡು ಸರಿಯಾದ ತಲೆಗಳೂ ೪ ಕಣ್ಣುಗಳೂ ೨ ಮೂಗುಗಳೂ ಎರಡು ಕಿವಿಗಳೂ ಇದ್ದವು.

~~~~~~~~

ಪಾರಿಸ್ ನಗರದ ಚೇಂಟಿಲ್ಲಿ ಎಂಬಲ್ಲಿ ಮೋಟರ್ ಬಂಡಿಯ ಮೂಲಕ ಬೇಂಕನ್ನು ಲುಟಾಯಿಸಿದ ದಕಾಯಿತರು ಪಾರಿಸಿಗೆ ೬ ಮೈಲು ದೂರದಲ್ಲಿರುವ ಒಂದು ಮನೆಯಲ್ಲಿ ಅವಿತುಕೊಂಡಿದ್ದಾರೆಂಬದಾಗಿ ಪೋಲೀಸಿನವರಿಗೆ ತಿಳಿದು ಬಂದು ಅಲ್ಲಿಗೆ ಹೋದರು. ಅಲ್ಲಿ ದಕಾಯಿತರು ಪೋಲೀಸಿನವರ ಮೇಲೆ ಗುಂಡು ಹೊಡೆಯಲು ಪ್ರಾರಂಭಿಸಿದರು. ಆದ್ದರಿಂದ ಪೋಲೀಸಿನವರು ಡೈನಾಮೆಟ್ ಇಂಜಿನಿಯರನ್ನು ಕರೆಯಿಸಿ ಆ ಮನೆಗೆ ಡೈನಾಮೆಟ್ ಹಾಕಲು ಅಪ್ಪಣೆವಿತ್ತರು. ಇಂಜಿನಿಯರರು ಆ ಮನೆಗೆ ಎರಡು ಬೊಂಬುಗಳನ್ನು ಹಾಕಿದನಂತರ ಮನೆಯೊಳಗೆ ನುಗ್ಗಲು ಬೊನ್ನೊಟ್ ಎಂಬ ದಕಾಯಿತನು ಅಪಾಯಕರವಾದ ಘಾಯ ಪಡೆದಿದ್ದನು. ಮನೆ ಯಜಮಾನನು ಮೃತ ಪಟ್ಟಿದ್ದನು. ಬೊನ್ನೊಟ್ಟನನ್ನು ಕೂಡ್ಲೆ ಆಸ್ಪತ್ರಿಗೆ ವೈದರು. ಆದರೆ ಅಲ್ಲಿ ಆತನು ಮೃತ ಪಟ್ಟನು.

~~~~~~~~

ಸರ್ ವಿಲಿಯಮ್ ರಾಮ್ಸೆ ಎಂಬ ಒಬ್ಬ ಆಗ್ಲೇಯ ಶಾಸ್ತ್ರಂಜ್ಞನು ಕಲ್ಲಿದ್ದಲನ್ನು ಗಣಿಯಿಂದ ಮೇಲಕ್ಕೆ ತೆಗೆಯದೆನೇ ಅದರಿಂದುಂಟಾಗುವ ಪ್ರಯೋಜನವನ್ನು ಪಡೆಯುವ ರೀತಿಯನ್ನು ಕಂಡುಕೊಂಡಿದ್ದಾನೆ. ಕಲ್ಲಿದ್ದಲಿನ ಗಣಿಗಳಲ್ಲಿ ಎರಡು ಅಡಿ ಅಗಲದ ತೂತುಗಳನ್ನು ಆಳವಾಗಿ ಕೊರೆದು ಅದಕ್ಕೆ ಬೆಂಕಿ ಹಚ್ಚುವದು. ಆ ಗಣಿಯ ಮೇಲಕ್ಕೆ ಮೂರು ಕೊಳವೆಯನ್ನು ಇಡಲ್ಪಟ್ಟಿರುವುದು. ಒಂದರ ಮೂಲಕವಾಗಿ ಗಾಳಿಯನ್ನು ಗಣಿಯೊಳಕ್ಕೆ ತುಂಬಿ ಬೆಂಕಿಯು ಚೆನ್ನಾಗಿ ಉರಿಯುವಂತೆ ಮಾಡಿದರೆ ಉಳಿದೆರಡು ಕೊಳವಿಗಳ ಮಾರ್ಗವಾಗಿ ಗಣಿಯೊಳಗಿಂದ ಕಲ್ಲಿದ್ದಲಿನ ವಾಯುವು ಹೊರ ಬರುವದು. ಈ ವಾಯುವನ್ನು ಅಲ್ಲಿಯೇ ವಿದ್ಯುಚ್ಛಕ್ತಿಯಾಗಿ ಮಾರ್ಪಡಿಸಿ ತಂತಿಗಳ ಮೂಲಕ ಬೇಕಾದ ಕಡೆಗೆ ಸಾಗಿಸುವದು. ಈ ಶಕ್ತಿಯನ್ನು ಇಂಗ್ಲಾಂಡು ದೇಶದ ಯಾವ ಕಡೆಗೆ ಬೇಕಾದರೂ ಸಾಗಿಸಿಕೊಳ್ಳಬಹುದೆಂತಲೂ ಎಲ್ಲಾ ಕಾರ್ಖಾನೆಗಳ ಯಂತ್ರಗಳನ್ನೂ ಹೊಗೆ ಬಂಡಿಗಳನ್ನೂ ಈ ಶಕ್ತಿಯಿಂದಲೇ ನಡಿಸಬಹುದೆಂದೂ ಮನೆ ಮನೆಯವರು ಇದರಿಂದ ಅಡಿಗೆ ಕೆಲಸವನ್ನು ಪೂರೈಸಿಕೊಂಡು ದೀಪವನ್ನು ಉರಿಸಬಹುದೆಂದೂ ಈ ಶಾಸ್ತ್ರಂಜ್ಞನು ಹೇಳುತ್ತಾನೆ. ಕಲ್ಲಿದ್ದಲಿಗೆ ಕೊಡುತ್ತಿದ್ದ ಮೌಲ್ಯದಲ್ಲಿ ಒಂದು ಐದನೇ ಅಂಶದಷ್ಟು ಮಾತ್ರವೇ ಇದಕ್ಕೆ ವೆಚ್ಚವಾಗುವದು ಕಾರ್ಖಾನೆಗಳಿಂದ ಹೊರಡುತ್ತಿರುವ ಹೊಗೆಯು ಈ ಸಾಧನದಿಂದ ತಪ್ಪಿಹೋಗುವ ಕಾರಣ ಪಟ್ಟಣಗಳಲ್ಲಿ ಆರೋಗ್ಯವಾಗುವದು. ಗಣಿಗಳಲ್ಲಿ ಈಗ ೧೦ ಲಕ್ಷ ಕೂಲಿಯಾಳುಗಳಿಂದ ಕೆಲಸ ಮಾಡಿಸುವ ಮತ್ತು ಅವರಿಗೆ ಅಷ್ಟು ಕೂಲಿಯನ್ನು ಕೊಡುವ ಭಾರವು ನಿಲ್ಲುವದು. ಕೂಲಿಯಾಳುಗಳು ಈಚೆಗೆ ನಡಿಸಿದಂತೆ ಮುಷ್ಕರ ಹಾಕಿದರೂ ಯಾವ ತೊಂದರೆಯೂ ಉಂಟಾಗದು, ಈಗಿನ ಕ್ರಮದ ಪ್ರಕಾರ ಕಲ್ಲಿದ್ದಲನ್ನು ತೆಗೆಯುತ್ತಾ ಬಂದರೆ ೧೦೦ ವರ್ಷಗಳೊಳಗೆ ಕಲ್ಲಿದ್ದಲೆಲ್ಲಾ ಮುಗಿದು ಹೋಗುವದು. ಆದರೆ ತಾನು ಸೂಚಿಸುವ ಕ್ರಮವನ್ನು ಕೈಕೊಂಡರೆ ಎಷ್ಟೋ ಶತಮಾನದ ವರೆಗೆ ಕಲ್ಲಿದ್ದಲು ಮುಗಿಯದು ಎಂಬದಾಗಿ ಹೇಳುವನು. ಈ ಕ್ರಮವನ್ನು ಕೈಕೊಳ್ಳುವರೆ ಈಗ ಒಬ್ಬ ಗಣಿಯಧಿಕಾರಿಯು ಪ್ರಾರಂಭ ಮಾಡಿರುವನು.

~~~~~~~~

ಜರ್ಮನಿಯಲ್ಲಿ ಟಪ್ಪಾಲು ಕಾರಕೂನನೊಬ್ಬನು ಸಾವಿರ ಪವನುಗಳನ್ನು ಅಪಹರಿಸಿ ಬೇರೊಂದೂರಿಗೆ ಹೋಗಿ ಅವಿತುಕೊಂಡನು. ಅವನ ರೂಪ ವಿವರನ್ನು ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟಿಸಿ ಅವನನ್ನು ಹಿಡಿದು ಕೊಟ್ಟವರಿಗೆ ದೊಡ್ಡ ಬಹುಮಾನವನ್ನು ಕೊಡುತ್ತೇವೆಂದು ಸರಕಾರದವರು ಪ್ರಕಟಿಸಿದ್ದರು. ಒಂದು ದಿನ ಕಳ್ಳನು ಒಂದು ಹೊಟೇಲಿನಲ್ಲಿ ಕೂತು ಪತ್ರಿಕೆಯಲ್ಲಿದ್ದ ಆ ಪ್ರಕಟನೆಯನ್ನು ಓದಿ ತಾನು ದೊಡ್ಡ ಕೆಲಸವನ್ನು ಮಾಡಿ ಒಬ್ಬರಿಗೂ ಸಿಕ್ಕದೆ ಇರುವೆನೆಂದು ಹಿಗ್ಗಿಯೋ ಏನೋ ಫಕ್ಕನೇ ನಕ್ಕನು. ಅವನು ಫಕ್ಕನೇ ಹಾಗೆ ನಗುವುದಕ್ಕೆ ಪತ್ರದಲ್ಲಿ ಅಂಥಾ ವಿಶೇಷವೇನಿದೆಂದು ಹೊಟೇಲಿನ ಆಳುಗಳು ಯೋಚಿಸಿ ಬಗ್ಗಿಕೊಂಡು ಅವನು ಓದುತ್ತಿದ್ದ ಪತ್ರಿಕೆಯನ್ನು ನೋಡುವಲ್ಲಿ ಅದರಲ್ಲಿ ಪ್ರಕಟಿಸಿರುವ ಮನುಷ್ಯನ ಲಕ್ಷಣಗಳೇ ಈತನಲ್ಲಿ ಕಂಡು ಬಂದದರಿಂದ ಕೂಡಲೇ ಪೋಲೀಸಿನವರಿಗೆ ತಿಳಿಸಿದರು. ಅವರು ಬಂದು ಈತನನ್ನು ಕೈದು ಮಾಡಿದರು.

~~~~~~~~

ವಿದ್ಯುಚ್ಛಕ್ತಿಯ ಶಕ್ತಿಯು ಶಾಲಾ ಮಕ್ಕಳಲ್ಲಿ ಬದಲಾವಣೆಯನ್ನು ಮಾಡುವದೋ ಏನೆಂಬುದನ್ನು ಪರೀಕ್ಷಿಸುವ ಬಗ್ಯೆ ಈಚೆಗೆ ಸ್ಟೊಕ್‌ಹೊಲ್ಮು ಎಂಬಲ್ಲಿಯ ಒಂದು ಶಾಲೆಯ ಕೋಣೆಗೂ ಮಾಡಿಗೂ ವಿದ್ಯುಚ್ಛಕ್ತಿಯ ಸರಿಗೆ ಹಾಕಿ ಆ ಕೋಣೆಯಲ್ಲಿ ೫೦ ಬಾಲಕರನ್ನು ಇರಿಸಿದರು. ಮತ್ತೊಂದು ಕೋಣೆಯಲ್ಲಿ ವಿದ್ಯುಚ್ಛಕ್ತಿಯ ಸರಿಗೆಯನ್ನಿಡದೆ ೫೦ ಮಕ್ಕಳನ್ನು ಇರಿಸಿದರು. ಆರು ತಿಂಗಳನಂತರ

ಎರಡು ಕೋಣೆಗಳ ಮಕ್ಕಳನ್ನು ಪರೀಕ್ಷಿಸಿದಲ್ಲಿ ವಿದ್ಯುಚ್ಛಕ್ತಿಯ ಸರಿಗೆಗಳು ಇದ್ದ ಕೋಣೆಯ ಮಕ್ಕಳು ಸರಾಸರಿ ೨॥ ಅಂಗುಲಕ್ಕೆ ಹೆಚ್ಚು ಬೆಳೆದರು. ಆದರೆ ಮತ್ತೊಂದು ಕೋಣೆಯ ಮಕ್ಕಳು ೧॥ ಅಂಗುಲ ಮಾತ್ರ ಬೆಳೆದರು. ಅದಲ್ಲದೆ ವಿದ್ಯುಚ್ಛಕ್ತಿಯ ಕೋಣೆಯ ಮಕ್ಕಳು ಭಾರದಲ್ಲಿಯೂ ಉದ್ದದಲ್ಲಿಯೂ ಮತ್ತೊಂದು ಕೋಣೆಯ ಮಕ್ಕಳಿಗಿಂತ ಹೆಚ್ಚಾಗಿದ್ದರು. ವಿದ್ಯಾಭ್ಯಾಸದಲ್ಲಿಯೂ ಸೇಕಡಾ ೯೨ರಂತೆ, ೧೫ ಮಂದಿ ಸೇಕಡಾ ೧೦೦ರಂತೆ ಅಭಿವೃದ್ಧಿಯನ್ನು ಪಡೆದರು. ವಿದ್ಯುಚ್ಛಕ್ತಿಯ ಕೋಣೆಯಲ್ಲಿರದ ಮಕ್ಕಳು ಸೇಕಡಾ ೭೫ರಂತೆ ಮಾತ್ರ ಅಭಿವೃದ್ಧಿ ಹೊಂದಿದರು. ವಿದ್ಯುಚ್ಛಕ್ತಿಯ ಕೋಣೆಯ ಮಕ್ಕಳೂ ಉಪಾಧ್ಯಾಯರೂ ಏನೊಂದೂ ಪ್ರಯಾಸವಿಲ್ಲದೆ ತಮ್ಮ ಕೆಲಸವನ್ನು ಮಾಡಬಹುದಾಯಿತು ಎಂಬದಾಗಿ ಪ್ರಕಟವಾಗಿದೆ.

~~~~~

ಬ್ರಿಟಿಷ್ ಸಾಮ್ರಾಜ್ಯದ ಒಟ್ಟು ಕ್ಷೇತ್ರ ಫಲವು — ೧೧,೩೦೬,೦೭೦ ಚದರ ಮೈಲು, ಇದರಲ್ಲಿರುವ ಒಟ್ಟು ಜನ ಸಂಖ್ಯೆ ೪೧೬,೩೧೮,೦೦೦ ಮಂದಿ, ಈ ಪೈಕಿ ಹಿಂದೂಸ್ಥಾನದಲ್ಲಿಯೇ ೩೧೫ ಮಿಲಿಯ ಜನರಿರುವರು. ಬ್ರಿಟಿಷ್ ಸಾಮ್ರಾಜಕ್ಕೆ ಹಿಂದೂಸ್ಥಾನವು ಶಿರೋಮಣಿಯಂತಿದೆಂಬದು ಈ ಜನ ಸಂಖ್ಯೆಯಿಂದಲೇ ಖಾತ್ರಿಯಾಗುತ್ತದೆ. ಒಂದು ಚಚ್ಚೌಕ ಮೈಲಿನಲ್ಲಿ ಸರಾಸರಿ ಸೇಕಡಾ ೩೬.೮ ರಂತೆ ಜನರಿದ್ದಾರೆ. ಕಳೆದ ನಾಲ್ಕು ಖಾನೆಸುಮಾರಿ ಲೆಕ್ಕದ ಪ್ರಕಾರ ಬ್ರಿಟಿಷ್ ಸಾಮ್ರಾಜ್ಯದ ಜನಸಂಖ್ಯೆಯು ಈ ತೆರನಾಗಿದೆ:—೧೮೮೧ನೇ ಇಸವಿ-೨೦೬,೯೮೪,೦೦೦ ಜನರು, ೧೮೯೧ನೇ ಇಸವಿ—೩೪೫,೩೫೫,೦೦೦; ೧೯೦೧—೩೯೮,೩೯೮,೦೦೦; ೧೯೧೧-೪೧೬,೩೧೮,೦೦೦; ೧೯೧೧ನೇ ಖಾನೆಸುಮಾರಿಯ ಪ್ರಕಾರ ಗ್ರೇಟ್ ಬ್ರಿಟನನ್ನು ಬಿಟ್ಟು ಹೊರ ಪ್ರದೇಶಗಳ ಜನ ಸಂಖ್ಯೆಯು ಈ ರೀತಿ ಇದೆ:— ಮುಂಬಾಯಿ ೯೭೭,೯೩೦; ಕಲ್ಕತ್ತೆ ೮೯೦,೪೯೩; ಸಿಡ್ನೆ ೬೨೯,೫೪೧; ಮೆಲ್ಬೋರ್ನ್ ೫೮೮,೯೭೨; ಮದ್ರಾಸ್ ೫೧೮,೦೦೦; ಮೊಂಟ್ರೀಯಲ್ ೪೭೭,೧೯೭ ಜನರಿರುವರು. ೧೯೧೧ನೇ ವರ್ಷದಲ್ಲಿ ಬ್ರಿಟಿಷ್ ಸಾಮ್ರಾಜವು ಇತರ ದೇಶಗಳೊಂದಿಗೆ ೧,೩೧೭,೮೭೪,೦೦೦ ಪವನುಗಳು ಬೆಲೆ ಬಾಳುವ ವ್ಯಾಪಾರವನ್ನೂ ತನ್ನ ಒಳದೇಶಗಳೊಂದಿಗೆ ೪೬೦,೭೨೪,೦೦೦ ಪವನುಗಳು ಬೆಲೆ ಬಾಳುವ ವ್ಯಾಪಾರವನ್ನೂ ನಡಿಸಿಯದೆ. ಸಾಮ್ರಾಜದಲ್ಲಿ ೧೯೧೦ನೇ ಇಸವಿಯಲ್ಲಿ ೧೨೩,೯೦೦,೦೦೦ ಪವನಿನ ಕಲ್ಲಿದಲು, ೫೪,೭೦೦,೦೦೦ ಪವನು ಕ್ರಯದ ಚಿನ್ನ; ೪,೩೫೩,೦೦೦ ಪವನಿನ ಬೆಳ್ಳಿ; ೯,೦೦೦,೦೦೦ ಪವನಿನ ತವರ; ೮,೪೯೧,೦೦೦ ಪವನಿನ ವಜ್ರ ದೊರಕಿರುತ್ತದಲ್ಲದೆ ಅದೇ ವರ್ಷದಲ್ಲಿ ೧೪೯,೨೭೦,೦೦೦ ರಾತ್ಲು ಚಾ, ೧೪೩,೫೭೨,೦೦೦ ರಾತ್ಲು ಕೊಕ್ಕೊ, ೧,೭೭,೩೭೫,೦೦೦ ರಾತ್ಲು ಹತ್ತಿ, ೭೮೦,೯೦೦,೦೦೦ ಅಳತೆ (ಬುಸೆಲ್ಸ್) ಗೋಧಿ ಬೆಳೆದಿರುವದು.

~~~~~

ಲೋಕದಲ್ಲೆಲ್ಲಾ ದೊಡ್ಡದಾಗಿ ಕಟ್ಟಲ್ಪಟ್ಟ ಟಿಟಾನಿಕ್ ಹಡಗವು ತನ್ನ ಮೊದಲನೇ ಪ್ರಯಾಣದಲ್ಲಿಯೇ ಒಡೆದು ಹೋಗಿ ಅಪಾರವಾದ ನಷ್ಟವನ್ನೂ ದುಃಖವನ್ನೂ ಉಂಟು ಮಾಡಿತ್ತಷ್ಟೆ. ಅದನ್ನು ಬಿಟ್ಟು ಲೋಕದಲ್ಲಿ ದೊಡ್ಡದಾಗಿರುವ ಒಲಿಂಪಿಕ್ ಎಂಬ ಹಡಗವು ಸೌತ್‌ಹೆಮ್ಟನ್ ಎಂಬ ಸ್ಥಳದಿಂದ ಪ್ರಯಾಣ ಹೊರಡಲಿಕ್ಕಿರುವಾಗ ಅದರ ಇಂಜಿನ್ ಕೆಲಸದವರು ಹಡಗದಲ್ಲಿ ಹೊಸ ತರದ ಲ್ಯಾಫ್ ಬೋಟುಗಳೆಂಬ ರಕ್ಷಣಾದೋಣಿಗಳನ್ನು ಇಡುವ ಮೊದಲು ಪ್ರಯಾಣವನ್ನು ಮುಂದರಿಸಲಾರೆವೆಂದು ಹಟ ಹಿಡಿದರು. ಆದ್ದರಿಂದ ಒಲಿಂಪಿಕ್ ಹಡಗವು ಮುಂದರಿಯಲಿಲ್ಲ. ಅದು ಮುಂದರಿಯ ಬೇಕಾದರೆ ೨೦೦ ಇಂಜಿನ್ ಕೆಲಸದವರು ಬೇಕಾಗುವರು. ಮುಷ್ಕರಗಾರರು ಪುನಃ ಕೆಲಸಕ್ಕೆ ಸೇರಿದರು. ಹಡಗ ಕಂಪೆನಿಯವರು ೧೮ ಮಂದಿಯನ್ನು ಕೆಲಸದಿಂದ ತೆಗೆದು ಹಾಕಿ ಲಿವರ್‌ಪೂಲಿನಿಂದ ಹೊಸ ಕೆಲಸದವರನ್ನು ತರಿಸಿ ನೇಮಿಸಿದರು. ಇವರು ಕೆಲಸಗಾರರ ಸಂಘದ ಮೆಂಬರರಲ್ಲವಾದ್ದರಿಂದ ಹಡಗದ ನಾವಿಕರು ತಾವು ಪ್ರಯಾಣ ಮುಂದರಿಸಲಾರೆವೆಂದು ಹಟ ಮಾಡಿದರು. ಕೆಲವು ನಾವಿಕರು ಹಡಗದಲ್ಲಿದ್ದ ಸಣ್ಣ ನಾವೆಗೆ ಹಾರಿದರು. ಆದ್ದರಿಂದ ಒಲಿಂಪಿಕ್ ಹಡಗದ ಹುದ್ದೆದಾರರು ತಂತೀ ಮೂಲಕ ಈ ಸಂಗತಿಯನ್ನು ಪೋರ್ಟ್ಸ್‌ಮೌತಿನ ಪೋಲೀಸಿಗೆ ತಿಳಿಸಿದರಲ್ಲದೆ ಹಡಗದ ತಾಂಡೇಲನು ಸಣ್ಣ ನಾವೆಯಲ್ಲಿದ್ದ ನಾವಿಕರ ಬಳಿಗೆ ಹೋಗಿ "ನೀವು ಹೀಗೆ ಮಾಡುವುದು ಶುದ್ಧ ಅನ್ಯಾಯ, ದಂಗೆ ಏಳಲು ನೀವು ಮನಸ್ಸು ಮಾಡಿದ್ದೀರಿ, ಇದು ಸಮವಲ್ಲ ಎಂಬಿತ್ಯಾದಿ ಮಾತುಗಳಿಂದ ಬುದ್ಧಿವಾದ ಹೇಳಿದರೂ ಅವರು ಕೇಳಲಿಲ್ಲ. ಅನಂತರ ಪೋಲೀಸಿನವರು ಹಡಗಕ್ಕೆ ಬಂದು ಪ್ರಯಾಣ ಮುಂದರಿಸಲು ನಿರಾಕರಿಸಿದವರಲ್ಲಿ ೫೦ ನಾವಿಕರನ್ನು ಕೈದು ಮಾಡಿ ಈ ಪೈಕಿ ೧೫ ಜನರನ್ನು ಚಾರ್ಜು ಮಾಡಿದರು. ಹಡಗದ ೫ನೇ ಆಫೀಸರನು ಹಡಗದಲ್ಲಿರುವ ಲ್ಯಾಫ್ ಬೋಟುಗಳಲ್ಲಿ ಒಂದಲ್ಲದೆ ಎಲ್ಲವೂ ಒಳ್ಳೇ ಸ್ಥಿತಿಯಲ್ಲಿದೆ ಎಂಬದಾಗಿ ವಾಜ್ಮೂಲ ಕೊಟ್ಟಿರುವನು. ಹಡಗದ ಕೆಲಸದಲ್ಲಿ ಹೊಸತಾಗಿ ಸೇರಿಸಲ್ಪಟ್ಟ ಬೆಂಕಿ ಕೆಲಸದವರಲ್ಲಿ ಯಾರಿಗೂ ತಕ್ಕ ಕೆಲಸ ಗೊತ್ತಿಲ್ಲವೆಂಬದಾಗಿ ಈ ನಾವಿಕರು ಹೇಳುವರು. ಈಗ ನಾವಿಕರ ಮೇಲೆ ವಿಚಾರಣೆ ನಡಿಯುತ್ತಿದೆ.

~~~~~

ಫ್ರಾನ್ಸ್ ದೇಶದಲ್ಲಿ ಈಚೆಗೆ ಮೊಟೋರ್ ಗಾಡಿಯ ಮೂಲಕ ಬೇಂಕನ್ನು ಲೂಟಿಮಾಡಿದ ಕಳ್ಳರ ಸಂಬಂಧ ಹೆಚ್ಚಿನ ಪತ್ತೆ ತರದೂದು ನಡಿಸುತ್ತಿದ್ದ ಗುಪ್ತ ಪೋಲೀಸ್ ಇಲಾಖೆಯ ಡ್ಯುಪಿಟಿ ಚೀಫ್ ಡಿಟೆಕ್ಟಿವರಾದ ಮೆ। ಎಮ್. ಜೊಯಿನ್ ಮತ್ತು ಚೀಫ್ ಇನ್ಸ್‌ಪೆಕ್ಟರರಾದ ಮೆ। ಕೋಮರ್ ಎಂಬವರ ಮೇಲೆ ಒಬ್ಬನು ಗುಂಡು ಹೊಡೆದನು. ಜೋಯಿನರವರು ಕೂಡಲೇ ಮೃತಪಟ್ಟರು. ಕೋಮರರವರು ಮೋಬಂಡ ಸ್ಥಿತಿಯಲ್ಲಿರುವರು. ಘಾತುಕನು ಪರಾರಿಯಾಗಿರುವನು.

~~~~~

ಉತ್ತರ ಹಿಂದೂಸ್ಥಾನ.

~~~~~

ಕಲ್ಕತ್ತೆಯ ಹೆಲ್ತ್ ಆಫೀಸರರಾಗಿದ್ದು ಈಚೆಗೆ ಪ್ಲೇಗಿನಿಂದ ಮೃತಪಟ್ಟ ಡಾಕ್ಟರ್ ಪಿ. ಆರ್. ರೋಯಿರವರ ವಿಧವೆಗೆ ಕಲ್ಕತ್ತೆಯ ಮುನ್ಸಿಪಾಲಿಟಿಯವರು ೧೨ ಸಾವಿರ ರೂಪಾಯಿ ಕೊಡುವರೆ ನಿಷ್ಕರ್ಷಿಸಿರುವರು.

~~~~~

ಪಂಡಿತ ಮದನಮೊಹಾನ್ ಮಲವಿಯವರು ಸಂಯುಕ್ತ ಸಂಸ್ಥಾನದ ಶ್ರೇಷ್ಠ ನ್ಯಾಯ ವಿಧಾಯಕ ಸಭೆಯ ಮೆಂಬರುತನಕ್ಕೂ ಪಂಡಿತ ಮೋತಿಲಾಲ್‌ರವರು ಸಂಯುಕ್ತ ಸಂಸ್ಥಾನದ ಮುನ್ಸಿಪಾಲ್ ಕೌನ್ಸಿಲಿಗೂ ಅಲ್ಲಹಬಾದ್ ಡಿವಿಜನಿನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುತನಕ್ಕೂ ಉಮೇದ್ವಾರರಾಗಿ ನಿಂತಿರುವರೆಂದು ತಿಳಿದು ಬರುತ್ತದೆ.

~~~~~

ಅಟಾಕ್ ಜಿಲ್ಲೆಯಲ್ಲಿ ಇಬ್ಬರು ಹಿಂದೂ ಸಾಹುಕಾರರ ಮನೆಯಲ್ಲಿ ದರೋಡೆ ಕಳವು ನಡೆದಿರುವದು. ಆಯುಧಪಾಣಿಗಳಾದ ದರೋಡೆಕಾರರು ಒಬ್ಬ ಹಿಂದೂ ಸಾಹುಕಾರನ ಮನೆಗೆ ನುಗ್ಗಿ ಆತನನ್ನು ಚೆನ್ನಾಗಿ ಹೊಡೆದು ಅಪಾರವಾದ ಚಿನ್ನಾಭರಣಗಳನ್ನೂ ಹಣವನ್ನೂ ಎತ್ತಿ ಹಾಕಿದರು. ಅದೇ ಜಿಲ್ಲೆಯ ಪಟ್ನಾ ಎಂಬ ಗ್ರಾಮದಲ್ಲಿಯೂ ಒಬ್ಬ ಸಾಹುಕಾರನ ಮನೆಗೆ ನುಗ್ಗಿ ಕೆಲವು ಸಾವಿರ ರೂಪಾಯಿಗಳನ್ನೂ ಚಿನ್ನಾಭರಣಗಳನ್ನೂ ಕದ್ದೊಯ್ದರು.

~~~~~

ಇಂಡಿಯಾ ಸರಕಾರದ ನ್ಯಾಯ ವಿಧಾಯಕ ಇಲಾಖೆಯ ಡ್ಯೂಪಿಟಿ ಸೆಕ್ರೆಟರಿಗಳಾದ ಮೆ। ಮುಡ್ಡಿಮಾನ್ ಎಂಬವರು ಪ್ರಿವಿಲೇಜ್ ರಜೆಯ ಮೇಲೆ ಶೀಮೆಗೆ ತೆರಳುವುದರಿಂದ ಅವರ ಬದಲಿಗೆ ಮೆ। ವಿಲ್ಬರ್‌ಫೋರ್ಸ್ ಎಂಬವರು ನೇಮಿಸಲ್ಪಟ್ಟಿರುವರು.

~~~~~

ಹೂಗ್ಲಿ, ಹೌರ, ಆಲಿಪುರ ಜಿಲ್ಲೆಗಳಲ್ಲಿ ದರೋಡೆಕಾರರ ಉಪದ್ರವು ದಿನೇ ದಿನೇ ಹೆಚ್ಚಾಗುತ್ತಾ ಬರುತ್ತದೆ. ಪ್ರತಿದಿನವೂ ಇಂಥಾ ಒಂದೆರಡು ವಾರ್ತೆಗಳು ಕೇಳ ಸಿಕ್ಕುತ್ತವೆ. ಮನೆ ಯಜಮಾನರನ್ನು ಪೀಡಿಸಿ ಅನೇಕಾವರ್ತಿ ಕೊಂದು ಹಣ, ಚಿನ್ನಾಭರಣಗಳನ್ನು ಸೂರೆಸುಳಿಗೆ ಮಾಡುತ್ತಿರುವರು. ಈ ಜಿಲ್ಲೆಗಳ ಮೇಲಾಧಿಕಾರಿಗಳು ಊರ ಜನರ ಸಹಾಯದಿಂದ ಕೆಲವು ದರೋಡೆಕಾರರನ್ನು ಹಿಡಿದಿರುವರು.

~~~~~

ತಾ. ೨೭ರಲ್ಲು ಪಶ್ಚಿಮ ಬಂಗಾಳದಲ್ಲಿ ಬಿರುಗಾಳಿ ಎದ್ದು ಅಪಾರವಾದ ನಷ್ಟವನ್ನುಂಟು ಮಾಡಿರುವುದು. ನದಿಯಲ್ಲಿದ್ದ ದೋಣಿಗಳೂ ಹಡಗಗಳೂ ಕವಚಿ ಬಿದ್ದು ಬಂಡೆ ಕಲ್ಲುಗಳಿಗೆ ತಾಗಿ ಒಡೆದುಹೋದವು. ನೆಲದ ಮೇಲೆ ಅನೇಕ ಮನೆಗಳೂ ರೈಲ್ವೇ ಸ್ಟೇಶನುಗಳೂ ನೆಲಸಮವಾದವು. ಅಗ್ನಿಬೋಟುಗಳು ಕವಚಿ ಬಿದ್ದು ರೈಲ್ವೇ ಕಂಪೆನಿಯವರಿಗೆನೇ ೧೦ ಸಾವಿರ ರೂಪಾಯಿಗಿಂತಲೂ ಹೆಚ್ಚಿಗೆ ನಷ್ಟವಾಯಿತು. ಪ್ರಾಣ ನಷ್ಟ ಮಾತ್ರ ಸಂಭವಿಸಲಿಲ್ಲ.

~~~~~

ಕಳೆದ ತಾ. ೨೪ರಲ್ಲು ಡಿಲ್ಲಿ ಕೋಟೆಯ ಆಯುಧ ಶಾಲೆಯಲ್ಲಿಟ್ಟಿದ್ದ ಕೋವಿ ಮದ್ದು ಹಾರಿ ಭಯಂಕರವಾದ ಅವಗಡ ಸಂಭವಿಸಿತು. ೧೧ ಕಲಾಶಿಗಳು ಒಬ್ಬ ಸಾರ್ಜೆಂಟನ ಕೈಕೆಳಗೆ ಈ ಆಯುಧ ಶಾಲೆಯಲ್ಲಿ ಹಳೇ ಮದ್ದು ಗುಂಡುಗಳನ್ನು ಸರಿ ಪಡಿಸುತ್ತಿರುವಾಗ ಅಕಸ್ಮಾತ್ತಾಗಿ ಒಂದು ಗುಂಡು ಹಾರಿದ್ದರಿಂದ ಎಲ್ಲಾ ಗುಂಡುಗಳು ಸಿಡಿದು ೫ ಭಾರತೀಯ ಕಲಾಶಿಗಳು ನುಚ್ಚುನೂರಾಗಿ ಅವರ ಎಲುಬುಗಳು ತುಂಡುತುಂಡಾಗಿ ಕೋಟೆಯ ಸುತ್ತಲೆಲ್ಲಾ ಹಾರಿ ಬಿದ್ದವು. ಸಾರ್ಜೆಂಟನೂ ಮತ್ತೊಬ್ಬ ಹಿಂದೂ ಕಲಾಶಿಯೂ ತುಸ ಹೊತ್ತಿನ ಮೇಲೆ ಮೃತಪಟ್ಟರು. ಉಳಿದವರು ಈ ಅವಗಡ ಸಂಭವಿಸುವ ಎರಡು ನಿಮಿಷಗಳ ಮೊದಲು ಆಯುಧ ಶಾಲೆಯಿಂದ ಹೊರಟು ಹೋಗಿದ್ದರಿಂದ ಸುರಕ್ಷಿತವಾಗಿ ಉಳಿದರು.

~~~~~

ತಾ. ೨೦ನೇ ಎಪ್ರೀಲಿಗೆ ಅಂತ್ಯವಾಗುವ ವಾರದಲ್ಲಿ ಹಿಂದುಸ್ಥಾನದಲ್ಲೆಲ್ಲಾ ೧೧,೫೫೧ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೯೧೪ ಮಂದಿ ಮೃತ ಪಟ್ಟರು. ಆಯಾ ಸಂಸ್ಥಾನಗಳ ಸಂಖ್ಯೆ ಎಷ್ಟೆಂದರೆ:—ಮುಂಬಾಯಿ ೪೩೫; ಮದ್ರಾಸು ೩೧; ಬಂಗಾಳ ೧೮೧; ಬಿಹಾರ್ ಮತ್ತು ಒರಿಸ್ಸ ೧೫೦೩; ಸಂಯುಕ್ತ ಸಂಸ್ಥಾನ ೩,೮೮೩; ಪಂಜಾಬು ೩೦೯; ಬರ್ಮ ೬೩; ಮಧ್ಯ ಸಂಸ್ಥಾನ ೩೦೭; ಮೈಸೂರು ೨೭; ಹೈದರಾಬಾದ್ ೧೨೭; ಮಧ್ಯ ಹಿಂದೂಸ್ಥಾನ ೬೮; ರಜಪುತಾನ ೧೧೭; ಕಾಶ್ಮೀರ ೨೭; ಡಿಲ್ಲಿ ಪಟ್ಟಣ ೭; ಡಿಲ್ಲಿ ಡಿಸ್ಟ್ರಿಕ್ಟ್ ೨೭ ಮರಣಗಳಾದವು.

~~~~~

ಕಲ್ಕತ್ತೆಯ ಮುನ್ಸಿಪಾಲಿಟಿಯಲ್ಲಿ ಅಲೆದಾಡುವ ದಿಕ್ಕಿಲ್ಲದ ನಾಯಿಗಳಲ್ಲಿ ೧೯೧೦ನೇ ಇಸವಿಯಲ್ಲಿ ೭೦೦೦; ೧೯೧೧ನೇ ಇಸವಿಯಲ್ಲಿ ೧೨,೫೮೯ ನಾಯಿಗಳು ಕೊಲ್ಲಲ್ಪಟ್ಟವು. ಒಂದು ನಾಯಿ ಕೊಂದದಕ್ಕೆ ಕೊಡುವ ಒಂದು ಪೈಸೆಯನ್ನು ಒಂದಾಣೆಗೆ ಹೆಚ್ಚಿಸುತ್ತಿದ್ದರೆ ಇದಕ್ಕಿಂತಲೂ ಹೆಚ್ಚಿಗೆ ನಾಯಿಗಳು ಕೊಲ್ಲಲ್ಪಡುತ್ತಿದ್ದವು ಎಂದು ಅಲ್ಲಿಯ ಪೋಲೀಸ್ ಕಮಿಷನರು ಹೇಳಿರುವದರಿಂದ ಕಮಿಟಿಯವರು ಒಂದು ನಾಯಿ ಕೊಂದರೆ ಅರ್ಧಾಣೆ ಉಡುಗೆರೆ ಕೊಡಲು ನಿಷ್ಕರ್ಷಿಸಿರುವರು.

~~~~~

ಜೋರ್ಜಸಾರ್ವಭೌಮರವರ ಆಗಮನದ ಜ್ಞಾಪಕಾರ್ಥವಾಗಿ ಮುಂಬಾಯಿಯಲ್ಲಿ ಕಟ್ಟಿಸಲಿಕ್ಕಿರುವ "ಹಿಂದೂಸ್ಥಾನದ ಹೆಬ್ಬಾಗಲು" ಎಂಬ ಕಟ್ಟಡಕ್ಕೆ ಮುಂಬಾಯಿ ಮುನ್ಸಿಪಾಲಿಟಿಯವರು ಒಂದು ಲಕ್ಷ ರೂಪಾಯಿ ಕೊಡುವರೆ ನಿಷ್ಕರ್ಷಿಸಿರುವರು.

~~~~~

ವ್ಯಾಸರಾಯರ ಕಾರ್ಯನಿರ್ವಾಹಕ ಸಭೆಯ ಫಿನೇನ್ಸ್ ಇಲಾಖೆಯ ಸರ್ ಗ್ಯಾಫ್ಲೀಟ್‌ವುಡರವರು ಅನಾರೋಗ್ಯ ಸಂಬಂಧ ತನ್ನ ಕೆಲಸಕ್ಕೆ ರಾಜಿ ಕೊಡುವುದರಿಂದ ಆ ಕೆಲಸಕ್ಕೆ ಬಹುಮಾನ ಪಟ್ಟ ಗೋಖಲೆಯವರನ್ನು ನೇಮಿಸುವರೆ ಹಿಂದೂಸ್ಥಾನದ ಸ್ಟೇಟ್ ಸೆಕ್ರೆಟರಿಯವರಾದ ಕ್ರ್ಯೂ ಪ್ರಭುಗಳು ಆಲೋಚಿಸಿರುವರೆಂತಲೂ ಈ ಸಂಬಂಧ ಬಹುಮಾನ ಪಟ್ಟ ಗೋಖಲೆಯವರನ್ನು ಇಂಗ್ಲಾಂಡಿಗೆ ಕರೆಯಿಸಿರುವರೆಂತಲೂ ವಾರ್ತೆ ಇದೆ.

~~~~~

ಇಂಗ್ಲಾಂಡಿಗೆ ಸೇರಿದ ಫೋಕ್‌ಸ್ಟನ್ ಪಟ್ಟಣದಲ್ಲಿ ಹೇಸ್ಟಿಂಗ್ಸ್ ಎಂಬ ಹೆಂಗಸಿನ ನಗಗಳು ಕಳವಾಗಿದ್ದವು. ಈ ಪೈಕಿ ೧೦,೫೦೦ ರೂಪಾಯಿ 'ಬಾಳುವ ವಜ್ರಗಳ' ಪದಕವೊಂದು ರಂಗೂನ್ ಪಟ್ಟಣದಲ್ಲಿ ಈಗ ಸಿಕ್ಕಿರುತ್ತದೆ. ಟೇನ್ ಸಾನ್ ಚ್ಯಾ ಎಂಬ ಚೀನಿಯನು ಅದನ್ನು ೪೦೦೦ ರೂಪಾಯಿಗೆ ವಾನ್‌ಬೆಂಟ್ ಎಂಬಾತನಿಂದ ಕೊಂಡುಕೊಂಡದ್ದರಿಂದ ಆ ಹಣ ಕೊಟ್ಟರೆ ನಗವನ್ನು ಕೊಟ್ಟು ಬಿಡುವದಾಗಿ ಹೇಳುತ್ತಾನೆ. ವಾನ್‌ಬೆಂಟ್ ಎಂಬಾತನು ಆ ನಗವನ್ನು ಹೊಲ್ಲೆಂಡಿನ ರಾಜಧಾನಿಯಾದ ಅಂಸ್ಟರ್‌ಡೆಮ್ ಪಟ್ಟಣದಲ್ಲಿ ೩೦೦೦ ರೂಪಾಯಿ ಕೊಟ್ಟು ಕೊಂಡದ್ದಾಗಿ ಹೇಳುವನು.

~~~~~

ಮದ್ರಾಸ್ ಸಂಸ್ಥಾನದ ಗವರ್ನರರಾಗಿದ್ದು ಈಚೆಗೆ ಬಂಗಾಳದ ಗವರ್ನರರಾಗಿ ನೇಮಿಸಲ್ಪಟ್ಟ ಕಾರ್ಮಿಖಯೇಲ್ ಪ್ರಭುಗಳವರು ಈಗ ದಾರ್ಜಿಲಿಂಗಿನಲ್ಲಿರುವರು. ಇವರ ವಿಷಯವಾಗಿ ದಾರ್ಜಿಲಿಂಗಿನ ಒಬ್ಬ ಬಾತ್ಮೀದಾರರು ಈ ರೀತಿ ಬರೆಯುವರು:— ಕಾರ್ಮಿಖಯೇಲ್ ಪ್ರಭುಗಳವರು ಖುದ್ದಾಗಿ ಆಯಾ ಸಂಗತಿಗಳನ್ನು ಪರಿಶೋಧಿಸುವರು. ತನ್ನ ಪತ್ನಿಯೊಡನೆ ಪಟ್ಟಣದ ಆಯಾ ಭಾಗಗಳನ್ನು ಮುಖ್ಯವಾಗಿ ಬಡ ಜನರು ವಾಸಿಸುವ ಸ್ಥಳಗಳನ್ನು ಸಂದರ್ಶಿಸಿ ಅವರ ಕ್ಷೇಮಲಾಭವನ್ನು ತಿಳಕೊಳ್ಳುವರು. ಕಳೆದ ಬುಧವಾರ ಪ್ರಭುಗಳು "ಪರಿವಾರವಿಲ್ಲದೆ ತಾನಾಗಿ ಕಾರ್ಯನಿರ್ವಾಹಕ ಸಭೆಯ ಮೆಂಬರರಾದ ಬಹುಮಾನ ಪಟ್ಟ ಮೆ। ಶಾಮ್ಸುಲ್ ಹುದ್ದರವರ ಮನೆಗೆ ಹೋಗಿ ಅಲ್ಲಿಂದ ಅವರನ್ನೊಡಗೂಡಿಕೊಂಡು ಪೇಟೆಯ ಆಯಾ ಭಾಗಗಳನ್ನು ಸಂದರ್ಶಿಸಿ ಜನರೊಡನೆ ಸಾಧಾರಣ ಮನುಷ್ಯರಂತೆ ಹೊಕ್ಕುಬಳಿಕೆಯಲ್ಲಿದ್ದು ಬಡಜನರ ಅವಶ್ಯಕತೆಯನ್ನು ತಾನಾಗಿ ಕೇಳಿಕೊಂಡರು ಎಂಬದಾಗಿ ಬರೆಯುವರು.

~~~~~

ಈಗಿನ ಮುಂಬಾಯಿ ಗವರ್ನರರವರ ಅವಧಿಯು ನವಂಬರ ತಿಂಗಳಿಗೆ ಮುಗಿಯುವದು. ಇವರ ಬದಲಿಗೆ ಮುಂಬಾಯಿ ಗವರ್ನರರಾಗಿ ಸರ್ ಲೋರೆನ್ಸ್ ಜನ್ಕಿನ್ಸರವರು ನೇಮಿಸಲ್ಪಡುವರೆಂಬದಾಗಿ ವಾರ್ತೆ ಇದೆ.

~~~~~

ಇಂಡಿಯಾ ಸರಕಾರದ ಫಿನೇನ್ಸ್ ಇಲಾಖೆಯ ಮೆಂಬರರಾದ ಗ್ಯಾ ಫ್ಲೀಟ್ ವುಡ್ ವಿಲ್ಸನರವರು ಕ್ಷೇಮ ಹೊಂದುತ್ತಾ ಬರುತ್ತಾರೆ. ಆದರೆ ಡಾಕ್ಟರರು ಕೂಡ್ಲೇ ಹವೆ ಬದಲಾಯಿಸಿ ವಿಶ್ರಾಂತಿ ತಕ್ಕೊಳ್ಳಬೇಕೆಂದು ಹೇಳಿರುವುದರಿಂದ ಅವರು ಫರ್ಲೋ ರಜೆ ಮೇಲೆ ಇದೇ ತಾ. ೧೮ರಲ್ಲು ಶೀಮೆಗೆ ತೆರಳುವರು.

~~~~~

ಕಳೆದ ತಾ. ೩೦ರಲ್ಲು ಮುಂಬಾಯಿಯಲ್ಲಿ ಎರಡು ಕಾರ್ಖಾನೆಗಳಿಗೆ ಬೆಂಕಿ ಬಿದ್ದು ಸುಟ್ಟು ಹೋದವು. ಇದರಿಂದ ಒಂದು ಕಾರ್ಖಾನೆಗೆ ೨೧,೦೦೦ ರೂಪಾಯಿ ಮತ್ತೊಂದಕ್ಕೆ ೩೦,೦೦೦ ರೂಪಾಯಿಗಳ ನಷ್ಟವಾಯಿತು.

~~~~~

ದಕ್ಷಿಣ ಹಿಂದೂಸ್ಥಾನ.

~~~~~

ಬೆಂಗಳೂರಿನಲ್ಲಿ ಈಚೆಗೆ ಎರಡು ಚೀನಿ ಪಾತ್ರೆಗಳು ೧೫೦೦ ರೂಪಾಯಿಗೆ ಏಲಮಿನಿಂದ ಮಾರಲ್ಪಟ್ಟವು. ಈ ಪಾತ್ರೆಗಳು ಬೋಕ್ಸರ್ರ ದಂಗೇ ಕಾಲದಲ್ಲಿ ಚೀನದ ಒಂದು ದೇವಸ್ಥಾನದಿಂದ ಹಿಂದೂಸ್ಥಾನಕ್ಕೆ ತರಲ್ಪಟ್ಟು ಮಿಲ್ಲರ್ ಎಂಬ ಒಬ್ಬ ಆಂಗ್ಲೇಯನಿಗೆ ಮಾರಲ್ಪಟ್ಟವು. ಇದನ್ನು ಕ್ರಯಕ್ಕೆ ಪಡಕೊಂಡು ಒಂದು ವರ್ಷದನಂತರ ಮಿಲ್ಲರ್ ಎಂಬವನು ಸ್ವಘಾತಮಾಡಿಕೊಂಡದ್ದರಿಂದ ಅವನ ಸಾಮಾನುಗಳು ಏಲಂ ಮಾಡಲ್ಪಟ್ಟವು ಆ ಕಾಲದಲ್ಲಿ ಒಬ್ಬ ರೈಲ್ವೇ ಕೆಲಸದವನು ಅದನ್ನು ಕೊಂಡು ಕೊಂಡು ಸಿಂಘಪುರಕ್ಕೆ ಕೊಂಡ್ಹೋದನು. ಹಿಂದೂಸ್ಥಾನದ ಸರ್ವಸೇನಾನಿಯಾಗಿದ್ದ ಕಿಚನರ್ ಪ್ರಭುಗಳು ಅದನ್ನು ೪೫೦೦ ರೂಪಾಯಿಗೆ ಕೇಳಿದ್ದರು. ಆದರೆ ಹೆಚ್ಚು ಕ್ರಯ ಬರಬೇಕೆಂಬ ಇರಾದೆಯಿಂದ ಆಗ ಅದನ್ನು ಕೊಡಲಿಲ್ಲ. ಅನಂತರ ಹ್ಯಾಗೋ ಅದು ಬೆಂಗಳೂರಿನ ಮೆಸ್ಸರ್ ಲವೆಂಡರ್ ಮತ್ತು ಕಂಪೆನಿಯವರ ಕೈಸೇರಿತು. ಅವರು ಅದನ್ನು ಈಚೆಗೆ ಏಲಮು ಮಾಡಿದಲ್ಲಿ ೧೫೦೦ ರೂಪಾಯಿ ಮಾತ್ರ ಸಿಕ್ಕಿತು. ಕಿಚನರ್ ಪ್ರಭುಗಳಿಗೆ ಅದನ್ನು ಕೊಡದ್ದರಿಂದ ಈಗ ೩೦೦೦ ರೂಪಾಯಿ ನಷ್ಟವಾದ ಹಾಗಾಯಿತು.

~~~~~

ಬೆಂಗಳೂರಲ್ಲಿ ಟಪ್ಪಾಲು ಪೆಟ್ಟಿಗೆಗಳಿಂದ ಕಾಗದಗಳನ್ನು ತೆಗೆಯುವ ಒಬ್ಬ ಟಪ್ಪಾಲ್ ಪ್ಯಾದೆಯು ಹಲವು ಪತ್ರಗಳನ್ನು ಆಫೀಸಿಗೆ ಕೊಂಡ್ಹೋಗದೆ ಕಳವು ಮಾಡಿದ್ದಾನೆಂಬದಾಗಿ ತಿಳಿದು ಬಂದದರಿಂದ ಪೋಲೀಸಿನವರು ಆತನ ಮನೆಯನ್ನು ಜಡ್ತಿಮಾಡಿದಲ್ಲಿ ೨೦೦ ಕಾಗದಗಳೂ ಮಿತಿ ಇಲ್ಲದಷ್ಟು ಟಪ್ಪಾಲು ಚೀಟುಗಳೂ, ಹುಂಡೀ ಚೀಟುಗಳೂ ದೊರಕಿದವು.

~~~~~

ಮಲಬಾರಿನ ಪೊನ್ನಾನಿ ತಾಲೂಕಿನ ಒಬ್ಬ ಡೋಬಿ ಕೆಲಸದವನು ಒಂದು ಬಾವಿ ಅಗಿಯುತ್ತಿರುವಾಗ ಆತನಿಗೆ ಒಂದು ವಿಧದ ಮಣ್ಣಿನ ಕೊಡೆ ಬೆಳ್ಳಿಯ ಬೀಡು ಸಿಕ್ಕಿತು. ಈ ಸಂಗತಿಯು ಕಲೆಕ್ಟರರಿಗೆ ತಿಳಿದು ಬಂದದರಿಂದ ಆ ಬೀಡನ್ನು ಮದ್ರಾಸಿನ ವಿಚಿತ್ರ ವಸ್ತುಪ್ರದರ್ಶನಾ ಶಾಲೆಗೆ ಕಳುಹಿಸಿರುವರು.

~~~~~

ಬೊಬ್ಬಿಲಿ ರಾಜರವರೂ ರಾಣಿಯವರೂ ಬೇಸಿಗೆ ಕಾಲವನ್ನು ಕಳೆಯುವರೆ ಕುನ್ನೂರಿಗೆ ಹೋಗಿರುವರು.

~~~~~

ಉದಕ ಮಂಡಲಿಗೆ ಪ್ರಯಾಣ ಮಾಡುತ್ತಿದ್ದ ಬರೋಡೆಯ ಗಾಯಕವಾಡರವರೂ ಮಹಾರಾಣಿಯವರೂ ಪರಿವಾರ ಸಹಿತ ಬೆಂಗಳೂರಿಗೆ ಬಂದರು. ಅಲ್ಲಿ ಗಾಯಕವಾಡರು ಮಾತ್ರ ಅಗ್ನಿಬಂಡಿಯಿಂದಿಳಿದು ಮೆ। ಮಾಧವರಾಯರಲ್ಲಿಗೆ ಹೋಗಿ ೧೫ ನಿಮಿಷ ಅವರ ಕೂಡೆ ಮಾತಾಡಿ ಪುನಃ ತಮ್ಮ ಪ್ರಯಾಣವನ್ನು ಮುಂದರಿಸಿದರು. ಇವರು ಮೈಸೂರು ಮತ್ತು ಸೆವಗುರು ಘಟ್ಟದ ಮಾರ್ಗವಾಗಿ ಉದಕಮಂಡಲಿಗೆ ಹೋಗುವರು.

~~~~~

ಮದ್ರಾಸ್ ನ್ಯಾಯವಿಧಾಯಕ ಸಭೆಯು ಇದೇ ತಿಂಗಳ ತಾ. ೨೪ನೇ ಶುಕ್ರವಾರ ಮಧ್ಯಾನ ೧೨ ಗಂಟೆಗೆ ಉದಕಮಂಡಲದಲ್ಲಿ ಕೂಡುವುದು.

~~~~~

ತಿನ್ನವೆಲ್ಲಿಯಲ್ಲಿ ಕೊಲೆ ಪಟ್ಟ ಮಾಜಿ ಎಷ್ ದೊರೆಗಳವರ ಪತ್ನಿಯವರು ಕಳೆದ ೧೦ ತಿಂಗಳಲ್ಲಿ ಕೊಡೆಯಕನಲಿನಲ್ಲಿದ್ದರು. ಕಳೆದ ತಾ. ೨೪ರಲ್ಲು ತನ್ನ ಮಕ್ಕಳೊಂದಿಗೆ ಶೀಮೆಗೆ ತೆರಳಿದರು.

~~~~~

ಕಲ್ಕತ್ತೆಯ ಒಬ್ಬ ಸಾಹುಕಾರನ ಮಗನಾದ ೨೫ ವರ್ಷ ವಯಸ್ಸಿನ ಅಬ್ದುಲುರಹಿಮ್ ಸಾಹೇಬ್ ಎಂಬ ಒಬ್ಬ ಯುವಕನು ಈಚೆಗೆ ಮದ್ರಾಸಿಗೆ ಬಂದು ಅಲ್ಲಲ್ಲಿ ಕಳವು ಮಾಡಿದನೆಂತ ತಿಳಿದು ಬಂದು ಪೋಲಿಸಿನವರು ಆತನನ್ನು ಕೈದುಮಾಡಿರುವರು. ಆತನು ಒಂದು ಜೋಡು ಕೈ ಬಳೆಯನ್ನು ಜಿನಿವಾರರಿಗೆ ಮಾರುತ್ತಿರುವಾಗ ಸಿಕ್ಕಿಬಿದ್ದನು. ಪೋಲೀಸಿನವರು ಪತ್ತೆತರದೂದು ನಡಿಸಿದ್ದಲ್ಲಿ ಆತನು ಕೆಲವು ಸಮಯದಿಂದ ಮದ್ರಾಸಿನ ಆಯಾ ಶಾಲೆಗೆ ಶಾಲೆ ಕೈದಾಗುವ ಸಮಯದಲ್ಲಿ ಸಂದರ್ಶಿಸುತ್ತಿದ್ದು ಶಾಲಾ ಮಕ್ಕಳನ್ನು ಅವರವರ ಮನೆಗೆ ಬಿಡುತ್ತೇನೆಂದು ನಂಬಿಸಿ ರಿಕ್‌ಶಾ ಎಂಬ ಗಾಡಿಯಲ್ಲಿ ಕೂಡ್ರಿಸಿ ದಾರಿಯಲ್ಲಿ ಮಕ್ಕಳು ಧರಿಸಿರುವ ಆಭರಣಗಳನ್ನು ಜಾರಿಸಿ ಅವರನ್ನು ದಾರಿಯಲ್ಲೇ ಬಿಟ್ಟು ಹೋಗುತ್ತಿದ್ದನು. ಆದರೆ ಯಾರನ್ನೂ ಕೊಲೆಮಾಡಲಿಲ್ಲ ಎಂಬದಾಗಿ ತಿಳಿದು ಬಂತು.

~~~~~

ದಕ್ಷಿಣ ಕನ್ನಡ.

~~~~~

ಮನೆ ಮಾರಾಟ.

~~~~~

ಮಂಗಳೂರು ಟೌನ್ ಮಾರ್ಕೆಟ್‌ವಾರ್ಡ ಗೌರಿಮಠ ರಸ್ತೆಯಲ್ಲಿರುವ ಮುನ್ಸಿಪಲ್ ನಂಬ್ರ III. 37-1. 2. 3. 4. ಈ ನಾಲ್ಕು ಮನೆ, ಹಟ್ಟಿಕೊಟ್ಟಿಗೆ, ಪ್ರಿವಿ, 2 ಬಾವಿಗಳು ಇರುವ ಹಿತ್ಲು ಒಂದು ಮಾರಾಟಕ್ಕೆ ಸಿದ್ಧ ಎದೆ. ಹೆಚ್ಚಿನ ಮಾಹಿತಿಯನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯ ಬಹುದು.

ಟಿ. ಬಾಬುರಾವು—ಗೊಲ್ಲರಕೇರಿ, ಮಂಗಳೂರು.

~~~~~

ಬಾತ್ಮೀದಾರರಿಗೆ ನೋಟಿಸು:—ಪುತ್ತೂರು ಶೀಮೆ ಬಾತ್ಮೀದಾರರು; ಹಿಂದೂ ಜನರ ಸದಾಚರಣೆಗಳು—K. P. P. ಪೂರ್ಣ ಹೆಸರು ವಿಳಾಸವಿಲ್ಲದ್ದರಿಂದ ಪ್ರಕಟಿಸಲಾರೆವು. ಬಾತ್ಮೀದಾರರು ನಮ್ಮ ತಿಳುವಳಿಕೆಗೋಸ್ಕರ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆದು ತಿಳಿಸತಕ್ಕದ್ದು ಮತ್ತು ಬಾತ್ಮಿಗಳನ್ನು ಕಾಗದದ ಎರಡು ಪಕ್ಕಗಳಲ್ಲಿ ಬರೆಯಕೂಡದು. ಇಂಥವುಗಳಿಗೆ ನಾವು ನಿಗಾ ಕೊಡಲಾರೆವು.

ಟ್ರೇನ್ಸಿಟ್ ಅವಗಡಗಳಿಂದ ತಪ್ಪಿಸಿಕೊಳ್ಳುವ ಬಗೆ ಹೇಗೆ?—ಪ್ರಯಾಣಿಕ, ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸುವೆವು.

~~~~~

ಮಂಗಳೂರು. ಕಳೆದ ವಾರ ಮುನಿಸಿಪಾಲಿಟಿಯಲ್ಲಿ ೪ ಪ್ಲೇಗು ಮರಣಗಳಿದ್ದವು.

ಕೊಡಿಯಾಲ್‌ಬೈಲ್ ವಾರ್ಡಿನ ಮುನ್ಸಿಪಾಲ್ ಕೌನ್ಸಿಲರಾಗಿ ಪುನಃ ರಾ. ರಾ. ಪೇಜಾವರ ಭೋಜರಾಯರವರೆ ಆರಿಸಲ್ಪಟ್ಟಿರುವರು.

ಕಳದ ಸಂಚಿಕೆಯಲ್ಲಿ ತಿಳಿಸಿದ ವೆಂಕಪ್ಪ ಕುಡ್ವರ ಮಗ ಗಣಪತಿ ಕುಡ್ವರ ಮೇಲಿದ್ದ ಮೊಕದಮೆಯನ್ನು ಟೌನ್ ಮೆಜಿಸ್ಟ್ರೇಟರು ತನಖಿ ನಡಿಸಿ ಮುದ್ದೈಯಾಲೆ ಕಡೆಯಿಂದ ತಕ್ಕ ರುಜುವಾತಿಲ್ಲದ್ದರಿಂದ ಮುದ್ದೈಯನ್ನು ಖುಲಾಸು ಪಡಿಸಿರುವರು.

ಮಂಗಳೂರು ತಾಲೂಕು ತಹಸೀಲದಾರರಾದ ರಾ. ಎಕ್ಕಾರ್ ರಾಮಕೃಷ್ಣ ರಾಯರವರು ಅಸ್ವಸ್ಥ ಸಂಬಂಧ ಒಂದುವರೆ ತಿಂಗಳ ರಜೆ ಪಡೆದಿರುವರು.

ಬಲ್ಮಠದ ಹೊಸ ರಸ್ತೆಯ ಬದಿಯಲ್ಲಿ ವಾಸಿಸುವ ರಾ. ಬೆತುವೇಲ್ ಜೋನರೆಂಬವರ ಮನೆಯಿಂದ ತಾ. ೧ನೇ ರಾತ್ರಿ ಯಾರೋ ಕಳ್ಳರು ಒಂದು ತಾಂಬ್ರದ ಗುಡಾಣ ಎತ್ತಿ ಹಾಕಿರುವರೆಂದು ಕೇಳುತ್ತೇವೆ. ರಾತ್ರಿ ಕಾಲ ಬೀದಿಯಲ್ಲಿ ರೋಂದು ಮಾಡುವ ಪೋಲೀಸಿನವರು ತಕ್ಕ ನಿಗಾ ಕೊಡುವದು ಏಹಿತವು.

ಒಬ್ಬ ಬಾತ್ಮೀದಾರರಿಂದ:—ನಾನು ಇಂದು ಬೆಳಿಗ್ಯೆ ಬಂಟ್ವಾಳದಿಂದ ಮಂಗಳೂರಿಗೆ ಓಡುವ ಹಿಂದೂ ಟ್ರೇನ್ಸಿಟು ಕಂಪೆನಿಯ ಟ್ರೇನ್ಸಿಟನಲ್ಲಿ ಕೂತುಕೊಂಡು ಬರುವಾಗ್ಯೆ ಮಂಗಳೂರಿಂದ ೪ನೇ ಮೈಲು ಕಲ್ಲಿನ ಬಳಿಯಲ್ಲಿ ಗಾಡಿ ನಿಲ್ಲಿಸಲ್ಪಟ್ಟಿತು. ಅಲ್ಲಿ ಬೇರೆ ಕುದುರೆಗಳನ್ನು ಕಟ್ಟಿ ಗಾಡಿ ಬಿಡುತ್ತಲೇ ಗಾಡಿ ಕವಚಿ ಬಿತ್ತು. ಆದರೆ ಏನೊಂದು ಅಪಾಯ ಸಂಭವಿಸಲಿಲ್ಲ.

ತಾ. 30—4—12.

ಉಡ್ಪಿ. ಕಳದ ತಾ. ೧೯ರಲ್ಲು ಮುಲ್ಕಿ ಕಡವಿನ ಸಮೀಪ ಟ್ರಾನ್ಸೀಟು ಗಾಡಿಯಲ್ಲಿ ಇನ್ನೊಂದು ಅವಗಡವು ಸಂಭವಿಸಿರುವದು. ಉಡ್ಪಿ ಮತ್ತು ಮಂಗಳೂರು ಪ್ರಯಾಣಿಕರು ನದಿಯ ಬದಿಯಲ್ಲಿ ಟ್ರಾನ್ಸೀಟುಗಳನ್ನು ಕಾಯುತ್ತಿರುವಾಗ ಒಂದು ಟ್ರಾನ್ಸೀಟು ಬಹಳ ರಭಸದಿಂದ ಓಡಿ ಬಂತು. ಕುದುರೆಗಳನ್ನು ಅಂಕೆಯಲ್ಲಿಡುವುದು ಗಾಡಿ ಹೊಡೆಯುವವನಿಗೆ ಕಷ್ಟವಾಯಿತು. ನದಿಯ ಬದಿಯ ರಸ್ತೆಯು ಇಳಿಜಾರಾದ್ದರಿಂದ ಬಂಡಿಯು ನದಿಗೆ ಬೀಳುವ ಸಂಭವವಿತ್ತು. ಗಾಡಿಗಾರನು ಕಡಿವಾಣವನ್ನೆಳದರೂ ಕುದುರೆಗಳು ನಿಲ್ಲಲಿಲ್ಲ. ಆದರೆ ದೈವವಶಾತ್ ಕುದುರೆಗಳು ಅಲ್ಲಿದ್ದ ಒಂದು ಒಳ್ಳೇ ಮನೆಗೆ ತಾಗಿತು. ಗಾಡಿಗಾರನು ಕೆಳಗೆ ಬಿದ್ದನು. ಕುದುರೆಗಳಿಗೆ ಮುಂದರಿಯಲಿಕ್ಕಾಗಲಿಲ್ಲ. ಮತ್ತೊಬ್ಬ ಗಾಡಿಗಾರನು ಬಂದು ಕೆಳಬಿದ್ದ ಗಾಡಿಗಾರನನ್ನು ಮೇಲಕ್ಕೆತ್ತಿದನು. ಕುದುರೆಗಳು ಮನೆಗೆ ತಾಗಿ ನಿಂತದ್ದರಿಂದ ಗಾಡಿಯಲ್ಲಿದ್ದ ಪ್ರಯಾಣಿಕರೆಲ್ಲರೂ ಸುರಕ್ಷಿತವಾಗಿ ಉಳಿದರು. ಇಲ್ಲವಾದರೆ ಅವರ ಅಂತ್ಯವೇನಾಗುತ್ತಿತ್ತೋ ಏನೋ? ಅನಂತರ ಗಾಡಿಗಾರನು ಎದ್ದು ಕುದುರೆಗಳನ್ನು ಬಹಳ ಅಮಾನುಷ ರೀತಿಯಲ್ಲಿ ನಡಿಸಿದನೆಂಬದನ್ನು ತಿಳಿಸಲು ವಿಷಾದ ಪಡುತ್ತೇನೆ. ಕುದುರೆಗೆ ಚಬುಕಿನಿಂದ ಹೊಡೆದು, ಒದೆದು, ಕಚ್ಚಿ ವಿಧ ತರವಾಗಿ ಪೀಡಿಸಿದನ್ನು ನೋಡುವಾಗ ನಾವು ಹಿಂದೂಸ್ಥಾನದಲ್ಲಿ ವಾಸಿಸುತ್ತೇವೋ ಕಾಡಾಡಿಗಳ ಮಧ್ಯದಲ್ಲಿ ವಾಸಿಸುತ್ತೇವೋ ಎಂಬ ಅನುಮಾನವು ಹುಟ್ಟಿತು. ಇದಕ್ಕೆ ಟ್ರಾನ್ಸೀಟು ಕಂಪೆನಿಗಳ ಮಾಲೀಕರೇ ಉತ್ತರವನ್ನೀಯಲಿ.

ತಾ. ೨೫ರಲ್ಲು ಕೊಓಪರೇಟಿವ್ ಸೊಸ್ಯಾಟಿಗಳ ರಿಜಿಸ್ಟ್ರಾರಾದ ಡಾಕ್ಟರ್ ಸ್ವಾಮಿ ಕಣ್ಣುಪಿಳ್ಳೆಯವೆರು ಉಡ್ಪಿಗೆ ಚಿತ್ತೈಸಿ ೨೫ನೇ ಸಾಯಂಕಾಲ ಜುಬಿಲಿ ಯೂನ್ಯನ್ ಕ್ಲಬ್ಬಿನ ಸಭಾಸದನದಲ್ಲಿ ಪರಸ್ಪರ ಸಹಾಯಕ ಸಂಘಗಳನ್ನು ಕುರಿತು ಅರ್ಥಗರ್ಭಿತವಾದ ಭಾಷಣ ಮಾಡಿದರು. ಇವರ ಭಾಷಣಾನಂತರ ಪುತ್ತೂರಿನಿಂದ ಬಂದ ರಾ| ಮೊಳಹಳ್ಳಿ ಶಿವರಾಯರವರು ಪುತ್ತೂರಲ್ಲಿ ಸ್ಥಾಪಿಸಲ್ಪಟ್ಟ ಪರಸ್ಪರ ಸಹಾಯಕ ಸಂಘದ ಕೆಲಸವನ್ನು ಕುರಿತು ಸಭಿಕರಿಗೆ ಮಂದಟ್ಟಾಗುವ ರೀತಿಯಲ್ಲಿ ಹೇಳಿ ಇಲ್ಲಿಯೂ ಅಂಥಾ ಒಂದು ಸಂಘವನ್ನು ಏರ್ಪಡಿಸಬೇಕೆಂದು ವಿಜ್ಞಾಪಿಸಿಕೊಂಡರು. ಜುಬ್ಲಿ ಯೂನ್ಯನ್ ಕ್ಲಬ್ಬಿನ ಪ್ರೆಸಿಡೆಂಟರ ಭಾಷಣದೊಂದಿಗೆ ಕೂಡಿದ ಸಭೆಯು ಅಂತ್ಯವಾಯಿತು. ಉಡ್ಪಿಯಲ್ಲಿಯೂ ಖಾನ್ ಸಾಹೇಬ್ ಅಬ್ದುಲ್ಲ ಹಾಜಿ ಕಾಶೀಮರವರು ಮುಂದಾಳಾಗಿದ್ದುಕೊಂಡು ಒಂದು ಪರಸ್ಪರ ಸಹಾಯಕ ಸಂಘವನ್ನು ಬೇಗನೇ ಸ್ಥಾಪಿಸುವರೆಂದು ಕೇಳುತ್ತೇನೆ.

ಮಾರಣೇ ದಿನ ಡಾಕ್ಟರ್ ಸ್ವಾಮಿ ಕಣ್ಣುಪಿಳ್ಳೆಯರವರು ಉದ್ಯಾವರದಲ್ಲಿಯೂ ತಾ. ೨೯ರಲ್ಲು ಕಲ್ಯಾಣಪುರದಲ್ಲಿಯೂ ಭಾಷಣಗಳನ್ನು ಕೊಟ್ಟು ಆ ಸ್ಥಳಗಳಲ್ಲಿಯೂ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸುವರೆ ಜನರನ್ನು ಪ್ರೇರೇಪಿಸಿದರು. ಅನಂತರ ಕಲ್ಯಾಣಪುರದಿಂದ ಕುಂದಾಪುರದತ್ತ ಕಡೆ ಪ್ರಯಾಣ ಬೆಳೆಸಿರುವರು. ಕುಂದಾಪುರದಿಂದ ಬೈಂದೂರಿಗೆ ಹೋಗಿ ರಾ| ಹೊಲ್ಲರವರ ಸಹಾಯದಿಂದ ಅಲ್ಲಿಯೂ ಇಂಥಾ ಸಂಘವನ್ನು ಸ್ಥಾಪಿಸುವರೆ ಪ್ರಯತ್ನಿಸುವರು. ರಾ| ಮೊಳಹಳ್ಳಿ ಶಿವರಾಯರು ಉಡ್ಪಿಗೆ ಒಂದು ಇಂಥಾ ಸಂಘವನ್ನು ಏರ್ಪಡಿಸುವರೆ ಜನರನ್ನು ಪ್ರೋತ್ಸಾಹಿಸಿದಕ್ಕೆ ಇಲ್ಲಿಯವರು ಅವರಿಗೆ ಕೃತಜ್ಞರಾಗಿದ್ದಾರೆ.

ಕೆ. ನಾರಾಯಣ ಹೆಗ್ಗಡೆಯವರು ತನ್ನ ನಾಟಕ ಮಂಡಳಿಯೊಡನೆ ಇಲ್ಲಿಗೆ ಬಂದಿರುವರು.

ಆರಗ. ಇಲ್ಲಿಯ ಶ್ರೀ ಕಲಾನಾಥ ದೇವರಿಗೆ ಕಳದ ತಿಂಗಳಿನಲ್ಲಿ ಪೂಜಾ ವಗ್ಯೆರೆ ವಿನಿಯೋಗವಿಲ್ಲದ್ದನ್ನು ಮ. ರಾ. ರಾ. ಡಿಪ್ಯುಟಿ ಕಮಿಶನ ಸಾಹೇಬರವರು ವಿಚಾರಿಸಿದ್ದರಲ್ಲಿ ಮ| ರಾ| ರಾ| ಮೊಕ್ತೇಸರರು ಶರಜಾ ಮಂಜಪ್ಪನವರಿಂದ ಲೋಪವೇ ಹೊರತು ವಿನಿಯೋಗದಾರರ ಅಜಾಗರೂಕತೆಯಲ್ಲವೆಂದೇ ಹೇಳಿಕೆಯನ್ನು ಕೊಟ್ಟಿರುವುದಾಗಿಯೂ ಸದರಿ ಮೊಕ್ತೇಸರರ ಆಡಳಿತೆ ತಪ್ಪಿಸುವುದಾಗಿಯೂ ವರ್ತಮಾನ ಕೇಳುತ್ತೇನೆ.

ಹಂಡೇಗಿರಿ. ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿಯ ವಾರ್ಷಿಕೋತ್ಸವವು ವೈಶಾಖ ಶು. ೧೫ಗೆ ಶನಿವಾರ (20-4-12.) ದಿವಸ ವಿಜೃಂಭಣೆಯಿಂದ ನೆರವೇರಿತು. ಏಜಂಟರಾದ ಮ| ರಾ| ರಾ| ಶರಜಾ ಮಂಜಪ್ಪನವರ ದರ್ಶನವು ಶ್ರೀ ದೇವರಿಗೆ 20—4—12ನೇ ಮಧ್ಯಾನ್ಹ 12 ಘಂಟೆಗೆ ದೊರೆಯಿತೆಂತಲೂ ಶ್ರೀ ದೇವರ ನಗಗಳನ್ನು 20ನೇ ಮಧ್ಯಾನ್ಹ 12 ಘಂಟೆಗೆ ತೆಗಿಸಿಕೊಂಡು ಬರುವಷ್ಟರಲ್ಲೇ ಕಾಲ ವಿಳಂಭದಿಂದ ಗಂಧ, ಪುಷ್ಪಾದಿಗಳಿಂದ ಅಡಿಗಳು ಅಲಂಕರಿಸಿದ್ದರು. ಶ್ರೀ ದೇವರು ರಥಾ ಆರೋಹಣಕ್ಕೆ ಸನ್ನದ್ಧರಾಗಿದ್ದದ್ದರಿಂದ ಅಲಂಕಾರ ವಿಸರ್ಜನೆಯನ್ನು ಮಾಡಿ ಪುನಃ ನಗವನ್ನು ಇಡಲಾಗುವುದಿಲ್ಲವೆಂದು ಅಡಿಗಳು ಅಪ್ಪಣೆ ಕೊಡಿಸಿ ನಗವನ್ನು ವಾಪಸು ಮಾಡಿದರು. ದರ್ಶನಾರ್ಥಿಗಳಾಗಿ ಬಂದ ಹಲವರು ಏಜಂಟರನ್ನು ಎಡಗಣ್ಣಿನಿಂದ ನೋಡಿದರು. ರಥಕ್ಕೆ ಬಳ್ಳಿಯನ್ನು ಹಾಕಿ ಎಳಿಸಿದ್ದರಿಂದ ಬಳ್ಳಿಯು ತುಂಡಾಗಿ ಅಪಾಯ ಸಂಭವಿಸುತ್ತಿತ್ತು. ಆದರೂ ಶ್ರೀ ದೇವರ ದಯದಿಂದ ನೆಲೆಗೆ ನಿಲ್ಲಿಸಲ್ಪಟ್ಟಿತು. ಈ ಗ್ರಾಮದ ಪಟೇಲರ ನಿಗಾ ಕಡಮೆಯೆಂಬುದು ಸಕಲ ಭಕ್ತಾದಿಗಳಿಗೂ ತಿಳಿಯಬಂತು. ಇಂಥಾ ಗ್ರಾಮಶ್ಯಾಂತಿಗಳಿಗೆ ಏಜಂಟರು ಮತ್ತು ಸರಕಾರದವರೇ ಮುಂತಾದವರ ನಿಗಾ ಅವಶ್ಯವಾಗಿರುವಲ್ಲಿ ಇಂಥಾ ಸಂಗತಿಗಳನ್ನು ಗಮನಕ್ಕೆ ತಾರದೇನೇ ಬಿಡುವದು ಅಜಾಗರೂಕತೆಯಲ್ಲವೇ? ಇನ್ನು ಮುಂದೆಯಾದರೂ ಇಂಥಾ ಮುಜರಾಯಿ ಸಂಬಂಧದ ದೇವಸ್ಥಾನದ ಮೇಲೆ ಹೆಚ್ಚಾದ ನಿಗಾ ಇಟ್ಟುಕೊಂಡು ಕೆಲಸವನ್ನು ಸಾಂಗವಾಗಿ ಸಾಗಿಸಿ ಯಶಃಕೀರ್ತಿಯನ್ನು ಸಂಪಾದಿಸಲೆಂದು ಹಾರೈಸುವ ದರ್ಶನಾರ್ಥಿ.

ವಿವಿಧ ವಿಷಯಗಳು.

ಚಿಕ್ಕ ಬಾಲಕರ ಮನಸ್ಸಿನ ಏಕಾಗ್ರತೆಯು:— ಆರು ವರುಷದ ವಯಸ್ಸಿನಲ್ಲಿ ಚಿಕ್ಕ ಹುಡುಗರ ಮನಸ್ಸು ೨ ನಿಮಿಷಗಳಿಗಿಂತಲೂ ಹೆಚ್ಚು ವೇಳೆ ಒಂದೇ ವಿಷಯದಲ್ಲಿ ಸ್ಥಿರವಾಗಿರುವುದಿಲ್ಲ. ಹುಡುಗರು ೮ ವರುಷದವರಾದರೆಂದರೆ ಅದು ೧೦ ನಿಮಿಷಗಳ ವರೆಗೆ ಮಾತ್ರ ಸ್ಥಿರವಾಗಿರುವದು. ೧೨ ವರುಷದ ವಯಸ್ಸಿನಲ್ಲಿ ಹುಡುಗರ ಮನಸ್ಸನ್ನು ೧೨ ನಿಮಿಷಗಳಿಗಿಂತಲೂ ಹೆಚ್ಚಿಗೆ ಹೊತ್ತು ಒಂದೇ ವಿಷಯದಲ್ಲಿ ತೊಡಗಿಸಲಿಕ್ಕೆ ಬರುವುದಿಲ್ಲ. ಮನಸ್ಸನ್ನು ಈ ಪ್ರಕಾರ ಗೊತ್ತಾದ ವೇಳೆಗಿಂತಲೂ ಹೆಚ್ಚಿಗೆ ಹೊತ್ತು ಕೆಲಸಕ್ಕೆ ಹಚ್ಚಿದರೆ ಅದು ದಣಿದು ದುರ್ಬಲವಾಗುತ್ತದೆ. ಸುಮಾರು ೧೪-೧೫ ವರುಷದ ವಯಸ್ಸಿನಲ್ಲಿ ಹುಡುಗರ ಮಿದುಳು ಕೆಲವಂಶದಿಂದ ಆಕುಂಚಿತವಾಗಿ ಎರಡು ವರುಷಗಳ ಪೂರ್ವದಲ್ಲಿ ಇದ್ದದ್ದಕ್ಕಿಂತಲೂ ಹಗುರಾಗುತ್ತದೆ. ಈ ಕಾರಣದಿಂದಲೇ ಬಹಳ ಮಾಡಿ ಆ ವಯುಸ್ಸಿನಲ್ಲಿ ಹುಡುಗರು ಆಸ್ಥೆಯಿಲ್ಲವರೂ, ಆಲಸ್ಯವೃತ್ತಿಯವರೂ, ಕೆಲಸಕ್ಕೆ ಬಾರದಂಥವರೂ ಆಗುತ್ತಾರೆ. ಚಿಕ್ಕ ಹುಡುಗರ ಮಿದುಳು ಪ್ರಾಥಃಕಾಲದ ೮॥ ಘಂಟೆಯಿಂದ ೧೧॥ ಘಂಟೆಯ ವರೆಗೆ ಯಾವಾಗಲೂ ಚುರುಕಾಗಿರುವದು. ವಿಚಾರ ಶಕ್ತಿಯನ್ನು ಉಪಯೋಗ ಮಾಡಬೇಕಾದಂಥ ಎಲ್ಲಾ ವಿಷಯಗಳನ್ನು ಈ ವೇಳೆಯಲ್ಲಿ ಸಾಗಿಸುವದು ಏಹಿತವು. ಆದ್ದರಿಂದ ಶಿಕ್ಷಕರು ತಮ್ಮ ಶಾಲೆಗಳ ವೇಳಾಪತ್ರಿಕೆಯನ್ನು (Time Table) ಸಿದ್ಧಪಡಿಸುವಾಗ ಈ ಮೇಲಿನ ಸಂಗತಿಗಳನ್ನು ಲಕ್ಷ್ಯದಲ್ಲಿಡುವದು ಅತ್ಯವಶ್ಯಕವಲ್ಲವೇ?

Ernst.

ಜರಲೆಗಳು ಯಾ ಅಕ್ಕಳೆಗಳು ಹೆಚ್ಚಿರುವ ಸ್ಥಳದಲ್ಲಿ ಟರ್ಪಾಂಟೈನ್ ಎಂಬ ಎಣ್ಣೆಯನ್ನು ಚಿಮಿಕಿಸಿದರೆ ಅವು ನಾಶವಾಗಿ ಹೋಗುವವು.

ಲಂಡನಿನಲ್ಲಿ ವರ್ಷ ಒಂದಕ್ಕೆ ೪೫೦,೦೦೦ ಪವನು ಕ್ರಯದ ನೀರ್ಕಲ್ಲು ಖರ್ಚಾಗುತ್ತದೆ. ಒಂದು ಟನ್ ನೀರ್ಕಲ್ಲಿಗೆ ೧೧ ಪವನು ಕ್ರಯವಿದೆ.

ಕೆಲವು ದೇಶಗಳಲ್ಲಿ ಜನರಿಗೆ ಹಸಿವೆ ಪ್ರಾರಂಭವಾದ ಕೂಡ್ಲೇ ಕಠಿಣ ಹಲ್ಲು ನೋವು ತೊಡಗುತ್ತದೆ. ಊಟ ಮಾಡಿದ ಕ್ಷಣ ಹಲ್ಲು ನೋವು ನಿಲ್ಲುತ್ತದೆ.

ಬಾಂಕೊಕ್ ಸಿಯಾಮಿನಲ್ಲಿ ಪ್ರಯಾಣಸ್ಥರ ಮರವೆಂಬ ಹೆಸರಿನ ಕಲ್ಪ ವೃಕ್ಷ ಜಾತಿಯ ಮರಗಳಿವೆ. ಈ ಮರಗಳ ಕಾಂಡವು ೨೦ ಅಡಿ ಉದ್ದವಿದೆ. ಮರದಲ್ಲಿ ಸುಮಾರು ೩೦ ಅಡಿ ಅಗಲಕ್ಕೆ ಪಸರಿಕೊಳ್ಳುವ ೨೦-೪೦ ಮಡಲುಗಳು ಇವೆ. ಎಲೆಗಳ ದಂಟುಗಳಿಂದ ಒಂದು ತರದ ಶೀತಳವಾದ ನೀರು ದೊರೆಯುತ್ತದೆ. ಇದನ್ನು ಪ್ರಯಾಣಿಕರು ಕುಡಿದು ದಣುವಾರಿಸಿಕೊಳ್ಳುವರು.

ಕೇರಿಕ್ ಎಂಬಲ್ಲಿ ಈಚೆಗೆ ಮೃತ ಪಟ್ಟ ಮಿಸಿಸ್ ನಾಶ್ವಿಕೆಲ್ಲೆ ಎಂಬ ಹೆಂಗಸಿಗೆ ೧೧೦ ವರ್ಷ ಪ್ರಾಯ. ಆಕೆಗೆ ೮೦ ವರ್ಷ ಪ್ರಾಯದ ಒಬ್ಬ ಮಗಳೂ ೬೦ ವರ್ಷ ಪ್ರಾಯದ ಒಬ್ಬ ಮಗನೂ ಇರುವರು.

ಬೂಟ್ಸುಗಳನ್ನು ಹಾಲಿನಿಂದ ತಿಕ್ಕಿದರೆ ಥಳಥಳಿಸುವದು.

ಸರಕಾರದ ಭರವಸೆಗಳುಳ್ಳ

ದಿ ನೇಶನಲ್ ಜೀವವಿಮೆ

ಮತ್ತು ಬೆಂಕಿಂಗ್ ಕಂಪೆನಿ ಅಮೃತಸಾರ.

1882ನೇ ಇಸವಿ ಇಂಡಿಯನ್ ಕಂಪೆನೀಸ್ VIನೇ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.

ಕಂಪೆನಿಯ ಮೂಲಧನ ರೂ. 10,00,000.
ಮಿಕ್ಕಿದ ಧನ ರೂ. 7,00,000ಕ್ಕೆ ಹೆಚ್ಚಿರುತ್ತದೆ.
ವಿಮೆ ಮಾಡಿರುವವರ ಸಂಖ್ಯೆ 30,000ಕ್ಕೆ ಹೆಚ್ಚಿರುತ್ತದೆ.

ಇದರಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ.

ರದ್ದಾದ ವಿಮೆ ಪತ್ರಗಳನ್ನು ಸುಲಭವಾಗಿ ಪುನರುಜ್ಜೀವನ ಮಾಡಿ ಊರ್ಜಿತಪಡಿಸಲಾಗುತ್ತದೆ.

ಸ್ತ್ರೀಯರ ವಿಮೆಗಳು ಸ್ವೀಕರಿಸಲ್ಪಡುತ್ತವೆ.

ಪ್ರೀಮಿಯಮ್‌ಗಳನ್ನು ಎಷ್ಟರಮಟ್ಟಿಗೆ ತಗ್ಗಿಸಲು ಅನುಕೂಲ ಮತ್ತು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಅವನ್ನು ತಗ್ಗಿಸಿಯದೆ.

'ಪ್ರೀಮಿಯಮ್'ಗಳನ್ನು—ತಿಂಗಳಿಗೆ ಒಂದು ಬಾರಿ, ಮೂರು ತಿಂಗಳಿಗೆ ಒಂದು ಬಾರಿ, ಆರು ತಿಂಗಳಿಗೆ ಒಂದು ಬಾರಿ ಅಥವಾ ವರುಷಕ್ಕೆ ಒಂದು ಬಾರಿ ಈ ವಿಧದಲ್ಲಿ ಪೋಲಿಸಿ ಹೊಂದಿದವರು ತಮ್ಮ ಅನುಕೂಲತೆಗೆ ಸರಿಯಾಗಿ ತೆರಬಹುದು.

ಅಗತ್ಯವುಳ್ಳ ಪತ್ರಗಳನ್ನು ಜಾಹೀರು ಪಡಿಸುತ್ತಲೇ ಪೋಲಿಸಿಯ ಮೊಬಲಗು ಕೂಡಲೇ ಕೊಡಲ್ಪಡುವುದು.

ಇದಕ್ಕಿಂತ ಹೆಚ್ಚಿನ ಮಾಹಿತಿಯನ್ನೂ ಇತರ ವಿವರವನ್ನೂ ತಿಳಿದುಕೊಳ್ಳಲಪೇಕ್ಷಿಸುವವರು ಈ ಕೆಳಗೆ ಹೆಸರು ಕಾಣಿಸಿದವರಿಗೆ ಬರೆದುಕೊಳ್ಳುವುದು.

ಮಲಬಾರ ಮತ್ತು ಕನ್ನಡಾ ಜಿಲ್ಲೆಗಳಿಗೆ ನಂಬಿಗೆಯುಳ್ಳ ಮತ್ತು ಚಟುವಟಿಕೆಯುಳ್ಳ ಏಜಂಟರು ಬೇಕು. ನಮ್ಮ ವಿಳಾಸ:—

ಕೆ. ಭವಾನಿರಾವ್ ಎಂಡ್ ಸನ್,
ಮಲಬಾರ್ ಮತ್ತು ಕನ್ನಡ ಜಿಲ್ಲೆಗಳಿಗೆ ಮುಖ್ಯ ಏಜಂಟರು,
ಮಂಗಳೂರು, ದ. ಕ.

ಸ್ವದೇಶಿಲ್ಯಾಫ್‌ಎಶ್ಯುರೆನ್ಸ್‌ಕಂಪೆನಿ,

ಲಿಮಿಟೆಡ್ ಮುಂಬಯಿ.

ಬಹುಮಾನಪಟ್ಟ ಶ್ರೀಯುತ ಲಾಲುಭಾಯಿ ಸಮಲ್ದಾಸರವರು. (ಜಿ. ಪಿ. ಇಂಡಿಯಾ ಬೇಂಕ್ ಮುಂಬಯಿ ಕುಒಪರೇಷನ್ ಬೇಂಕ್ ಟಾಟಾ ಹ್ಯಾಡ್ರೊ ಇಲೆಕ್ಟ್ರಿಕ್ ಕಂಪೆನಿ ಇವುಗಳ ಡಿರೆಕ್ಟರರವರು)—ಅಗ್ರಸ್ಥರು. ಡಾಕ್ಟರ್ ಆರ್. ರಾವ್‌ರವರು, ಎಮ್. ಡಿ. (ಲಂಡನ್) ಡಿ. ಎಸ್. ಸಿ. (ಲಂಡನ್)—ಆಲೋಚನೆ ಹೇಳುವ ವೈದ್ಯರು ಮತ್ತು ಡಿರೆಕ್ಟರರವರು.

ಶ್ರೀಯುತ ಮಂಜೇಶ್ವರ ವೈಕುಂಠ ಭಕ್ತರವರು ಜಮೀನುದಾರರು—ವಿಮೇದಾರರ ಡಿರೆಕ್ಟರರವರು. ಮೆ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)—ಲೆಖ್ಖಪತ್ರಗಳ ಅನುಭವ ಕೊಡುವವರು. ಶ್ರೀಯುತ ಕೆ. ಸುಬ್ರಮಣ್ಯಯ್ಯರವರು ಬಿ.ಎ. ಜಿ. ಪಿ. ಎಫ್. ಎಸ್. ಎ. ಎ.(ಲಂಡನ್)—ಆಡಳಿತೆದಾರರು.

ಕಂಪೆನಿಯು ಒಳ್ಳೇ ಕ್ರಮಗಳಿಂದ ಸುವ್ಯವಸ್ಥಿತವಾಗಿರುವದಲ್ಲದೆ ವಿಮೆದರಗಳೆಲ್ಲವು ಲೆಕ್ಕಮಾಹಿತಿಯ ಸಮರ್ಥರಾದವರಿಂದ ತಯ್ಯಾರಿಸಲ್ಪಟ್ಟಿವೆ. ಕಂಪೆನಿಯ ಆಡಳಿತೆಯೆಲ್ಲವು ದೇಶೀಯರಿಂದಲೇ ನಡಿಸಲ್ಪಡುವುದು.

ಕಂಪೆನಿಯ ಹಣವು ಸರಕಾರಿ ಭದ್ರತಾಪತ್ರಗಳಲ್ಲಿಯೂ ಇಂಡಿಯನ್ ಟ್ರಸ್ಟ್ ಆಕ್ಟಿನಿಂದ ಅಧಿಕೃತವಾದ ಜವಾಬ್ದಾರಿಗಳಲ್ಲಿಯೂ ಹಿಂದೂಸ್ಥಾನದಲ್ಲಿಯೇ ಇಡೋಣಾಗಿರುವುದು. ಮುನಾಫೆಯ ಸೇಕಡಾ 90ರಷ್ಟು ಅಂಶವು ಕಂಪೆನಿಗೆ ಒಬ್ಬ ಡಿರೆಕ್ಟರರನ್ನು ಮತ್ತು ಲೆಕ್ಕ ಪರಿಶೋಧಕರನ್ನು ಆರಿಸುವ ಹಿಶೆಯ ಹಕ್ಕುದಾರರಾಗಿರುವ ವಿಮೇದಾರರಿಗೆ ಕೊಡೋಣಾಗುವುದು.

ವಿಮೆ ಮೊಬಲಗುಗಳನ್ನು ವಾರೀಸದಾರರು ಪಡಿಯುವರೆ ಅಗತ್ಯವುಳ್ಳ ಪ್ರೊಬೇಟ್ ವಾರೀಸು ಸರ್ಟಿಫಿಕೇಟು ಇವುಗಳೇನೂ ಪಡಿಯದೆ ವಿಮೆದಾರನು ತಾನು ಅಪೇಕ್ಷಿಸಿದವನಿಗೆ ವಿಮೆ ಹಣವು ಸಿಕ್ಕುವಂತೆ ಪೋಲೀಸಿಗಳನ್ನು ಏರ್ಪಡಿಸುವ ವಿಶೇಷ ಕ್ರಮವು ಈ ಕಂಪೆನಿಯವರಲ್ಲಿರುವುದು.

20 ವರುಷದ ಪ್ರಾಯದವನೊಬ್ಬನು ಮೃತಪಟ್ಟ ನಂತರ ಸಿಕ್ಕಬಹುದಾದ ರೂ. 1000ಕ್ಕೆ ವಿಮೆ ಮಾಡುವದಾದರೆ ವರುಷಕ್ಕೆ ರೂ. 19—1—0 ಪ್ರಕಾರ ಪ್ರಿಮಿಯಮ್ ಕೊಡಬೇಕಾಗುವುದು. ಆದರೆ ವರುಷ ಒಂದಕ್ಕೆ ಈತನು ರೂ. 20—6—0 ಪ್ರಕಾರ ಕೊಟ್ಟರೆ ರೂ. 1000 ಆತನ 65ನೇ ವರುಷದಲ್ಲಿ ಈತನಿಗೆ ಕೊಡಲ್ಪಡುವದು. ಒಂದೇ ಒಂದು ಸರ್ತಿ ಹಣ ಕಟ್ಟಿ ಮೃತಪಟ್ಟ ಸಂಗತಿಗಳಲ್ಲಿಯೂ ಸಹ ಪೂರಾ ವಿಮೇ ಹಣವು ಕೊಡಲಾಗುವುದು.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿರುವರು. ಇತರ ಮಾಹಿತಿ ಬಗ್ಯೆ ಈ ಕೆಳಗಿನ ವಿಳಾಸಕ್ಕೆ ಬರಿಯುವುದು.

ಕೊಬ್ಬಿಕಾರ ಬ್ರದರ್ಸ್ ಉಡುಪಿ,

ಯವ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕ್ರತ್, ಪ್ಲೀಹ, ಹೃದಯ ಅಸೃಗ್ಧರಗಳೆಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನು ವೃದ್ಧಿಪಡಿಸಿ ಜೀವನವಾಗಿ ಆರೋಗ್ಯವಾಗಿ ಬಾಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನು ತರಿಸಿ ಕೆಲವು ಸಮಯ ಸೇವನೆ ಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನ್ನು ತಕ್ಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.
ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯವ್. ವಿ. ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಸಂತೋಷಕರವಾದ ಪ್ರಕಟಣೆ.
ಸರ್ವರೂ ತರಿಸಿಕೊಂಡು ಸಂತೋಷ ಪಡಿ.
ಬರುವ ಮೇ ತಿಂಗಳು ಆಖೈರು ವರಿಗೂ ಇದೇ ಕ್ರಯಕ್ಕೆ ರವಾನಿಸುತ್ತೇವೆ.

ರೈಲ್ವೆ ರೆಗ್ಯುಲೇಟರ್ ವಾಚ್.

ಈಗಿನ ಕ್ರಯ! 12 ಬಹುಮಾನ ಸಮೇತ!! 4 ರೂಪಾಯಿ ಮಾತ್ರ!! 5 ವರುಷಗಳ ಗ್ಯಾರೆಂಟಿ!!!

ಘನವಂತರೇ,



ಈ ವಾಚ್ ಭೂಮಂಡಲದಲ್ಲೆಲ್ಲಾ ಶ್ರೇಷ್ಟವಾದ ಲೀವರ್ ಕೇಸಿನಿಂದ ತಯಾರಾದದ್ದು. ಒಳಗೆ ಚಕ್ರಗಳ ಮೇಲೆ ಕೆಂಪುಗಳು ಕೆತ್ತಿರುತ್ತೆ. ಕೆಂಪುಗಳು ಕೆತ್ತಿರುವ ವಾಚ್ ಬಹಳಕಾಲ ಬಾಳಿಕೆ ಬರುವದು ಮತ್ತು ಸರಿಯಾದ ಕಾಲವನ್ನು ತೋರಿಸುವದು, ಎಂಬ ವಿಷಯವು ಸರ್ವರಿಗೂ ತಿಳಿದ ವಿಷಯವೇ ಸರಿ. ಖಾತ್ರಿಯಾದದ್ದು, ಅನೇಕ ವರುಷಗಳ ಪರ್ಯಂತರ ಬಾಳಿಕೆ ಬರುವಂಥಾದ್ದು, ಸುಂದರವಾದದ್ದು.

ಇದರ 12 ಬಹುಮಾನಗಳ ತಪಸೀಲು.

(1) ಸುಂದರವಾದ ಎಲೆಕ್ಟ್ರಿಕ್ ಗಿಲ್ಟು ಛಂಗಾರದ ವಾಚ್ ಸರಪಣಿ. (2) ಉತ್ತರ ಮುಖಿ (3) ನಾಜೂಕವಾದ ಕರವಸ್ತ್ರ. (4) ಲೆವೆಂಡರ್ ವಾಟರ್ ಎಂಬ ಪರಿಮಳ ವಾಸನ ದ್ರವ್ಯವುಳ್ಳ ಶೀಷೆ (5) ಷೋಕ್ ಉಂಗುರ. (6) ಸರ್ಪಾಕಾರದ ಉಂಗುರ. (7) ಎಲೆಕ್ಟ್ರಿಕ್ ಗಿಲ್ಟು ಛಂಗಾರದ ನಾಗರು. (8) ಎಲೆಕ್ಟ್ರಿಕ್ ಗಿಲ್ಟು ಶಾವಂತಿಗೆ ಹುವು. (9) ಫೌಂಟನ್‌ಪೆನ್. (10) ಮಕ್ಕಳ ತಮಾಷೆ ಬೊಂಬೆ. (11) ಸುಂದರವಾದ ಹಾವುಳ್ಳ ಡಬ್ಬಿ (ಡಬ್ಬಿಯನ್ನು ತೆಗೆದಲ್ಲಿ ತಮಾಷಿಯಾದ ಹಾವು ಇರುತ್ತದೆ) (12) ಪರ್ಟು ಗುಂಡಿ ಸೆಟ್ಟು.

ಈ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಿ.
ವಿಳಾಸ:—ಬಿ. ಆರ್. ವೆಂಕಟರಮಣ ಅಂಡ್ ಕಂಪೆನಿ,

ನವೀನ ಪುಸ್ತಕಗಳು! **ಶೋಭನೆ** ನವೀನಕಾದಂಬರಿಗಳು!!
ಕ್ರಯ 12 ಆಣೆ. ಕ್ರಯ 12 ಆಣೆ.

ಶ್ರೀ ಸುರೇಂದ್ರನಾಥ ಮುಖ್ಯೋಪಾಧ್ಯಾಯರಿಂದ ರಚಿತವಾದ 'ಶೋಭನಾ' ಎಂಬ ಬಂಗಾಳಿ ನಾವಲಿನ ಕನ್ನಡ ಭಾಷಾಂತರ. ಸಂಸಾರ ಚಿತ್ರವು ಸರ್ವರಿಗೂ ಹೃದಯಂಗಮವಾಗುವ ಹಾಗೆ ವರ್ಣಿತವಾಗಿ ಅತ್ಯುತ್ತಮವಾದ ನೀತಿಗಳನ್ನೊಳಗೊಂಡಿದೆ. ಸುಂದರವಾದ ಮುದ್ರಣ. ಉತ್ತಮವಾದ ಕಾಗದ. ಡೆಮ್ಮಿ 154 ಪುಟಗಳು.

ಸೋಮ ಸುಂದರ:—ಬಂಗಾಳಿ ನಾವಲನ್ನು ಹೋಲುವ ಸಣ್ಣಕಥೆ. ವಿದ್ಯಾರ್ಥಿಗಳಿಗೂ ಮಾತಾಪಿತೃಗಳಿಗೂ ಅನೇಕ ನೀತಿಗಳನ್ನು ಬೋಧಿಸುವುದು. ಕ್ರಯ 10 ಆಣೆ.

☞ ಇವುಗಳಲ್ಲದೆ ನಮ್ಮಲ್ಲಿ ಪ್ರಸಿದ್ಧ ಕಾದಂಬರಿ ಲೇಖಕರಾದ ಮ. ಪಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟ ವಿವಿಧ ಕಾದಂಬರಿಗಳೂ ಕರ್ನಾಟಕ ಚಂದ್ರಿಕಾ ಸೀರೀಸ್ ಪುಸ್ತಕಗಳೂ ವಗೈರೆ ದೊರೆಯುವುವು. ಪುಸ್ತಕದ ಪಟ್ಟಿ ಉಚಿತ.

ವಿಳಾಸ: [illegible] ರಾವ್,
[illegible], ಮೈಸೂರು

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶೀ [illegible] ಅಪೇಕ್ಷಿಸುವಿರೋ?

ನಮ್ಮ ಕಂಪೆನಿಗೆ ಬಂದು [illegible] ನೋಡಿರಿ!

ನಮ್ಮಲ್ಲಿ [illegible] ಸೀರೆ, ಮತ್ತು ಇತರ ಸೀರೆಗಳು [illegible] ಯಲ್ಲಿಯೂ ಸಿಗುತ್ತವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ [illegible] ಕೊಡಲಾಗುತ್ತದೆ.

ವಿದ್ಯಾರ್ಥಿಗಳಿಗೆ ವಿಶೇಷ [illegible] ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಕ್ಕೆ [illegible] ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೆ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅನುಭವಸ್ಥತೆಯುಳ್ಳದ್ದು.

ತಮ್ಮ ಮಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ.

ಗವರ್ನಮೆಂಟು ಕೋಲೇಜಿನ ಎದುರು
ಮಂಗಳೂರು.

ಫೋಟೋಗ್ರಾಫ್ ಆಯಿಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾರ್ಜ್ ಸ್ಸೈಜ್ 42″×25″ ರೂ. 75. ಅರ್ಧ ಸ್ಸೈಜ್ 21″×15″ ರೂ. 40. ಬಸ್ಟ್ ಸ್ಸೈಜ್ 18″×12″ ರೂ. 20. ಸಣ್ಣ ಸ್ಸೈಜ್ 12″×10″ ರೂ. 12.

ಫೆಮಿಲಿ ಸ್ಸೈಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೋಟೋಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸ ನಮ್ಮ ಹತ್ತಿರ ಸಿಕ್ಕುತ್ತದೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೋಟೋಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ಜಾಗ್ರತೆ ಕೆಲಸಮಾಡಿ ಕೊಡುವೆವು. ಬಾಕಿ ಹಣವು ವಿ. ಪಿ. ಮೂಲಕ [illegible]. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. [illegible],
[illegible]

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿ ಯದೆ

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ,

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಗಳು [illegible] ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮಿದುವಾಗಿ ಚಕಚಕಿಸುತ್ತಿರಬೇಕು; ಅಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು [illegible] ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಜಿಸ್ಟರ್ಡ್)

ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಶೀಘ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳ ಚಂದಗೈಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ತಮವು. ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಿನ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ [illegible] ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು
3 [illegible] ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲದ ವಿಷಯ ಈ ರೀತಿ ಬರೆಯುವರು – ನಾನು ನಿಮ್ಮ ಕಾಮಿನಿಯ ತೈಲವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯೊಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

[illegible]—11 ಮೆ. ನೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿ ಕೊಟ್ಟ "ಕಾಮಿನಿಯಾ ಓಯಿಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28—7—11. ಮ ಎ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ "ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1—7—11. ಮೆ. ಸಿ. ಆರ್. ನಾಯುಡು ಪ್ರ. ಪ. ಡಿ. ಕಾಸಿಟ, (ಟನಾರ್)—ನನ್ನ ಮಿತ್ರರ್ "ಕಾಮಿನಿಯಾ" ತೈಲ ಸಮ್ಮಂಧವಾಗಿ ವಿಶೇಷ ಪ್ರಸಂಶೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರೆಯಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಮೇಲಣ ವಸ್ತುಗಳಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡೆಕೊಳ್ಳಬಹುದು.

Address—Anglo Indian Drug & Chemical Co.,
155 Jumma Musid, Market, Bombay.

ಸೋಲ್ ಏಜೆಂಟ್ಸ್:—ಡಿ. ಊಲನ್‌ನೆಹರ್ಟ್, ಮಂಗಳೂರು



ಪೋಪ್ಯುಲರ್ ಹಂಬರ್ ಕ್ರಯ ರೂಪಾಯಿ 120.

ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯಾಕಲುಗಳನ್ನು ಪಡಿಯಲು ಸಾಧ್ಯವಲ್ಲ.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.



ಸಿಂಗರ್ ರೋಡ್ಸ್ಟರ್ ಕ್ರಯ ರೂಪಾಯಿ 115.

"ಅಮೇರಿಕದ ವಿಶಿಷ್ಟತೆ."

ಪ್ರೊಫೆಸರ್ ಜೇಮ್ಸರವರ "ಎಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು [illegible] ರೋಗಗಳನ್ನು, [illegible] ವಾತರೋಗವನ್ನು, [illegible] ಬುದ್ಧಿಯ ಮತ್ತು ಮೆದುಳಿನ [illegible] ಕಾರ್ಯಕ್ಕೆ [illegible] ಸಂಭವಿಸುವ ಕ್ಷೀಣತೆಯೂ ಈ ಮೌಕ್ತಿಕಗಳನ್ನು ಸೇವಿಸುವದರಿಂದ ಕಡಿಗಿಹೋಗುತ್ತವೆ. ಇವುಗಳಲ್ಲಿ ವೀರ್ಯವಾಯುಗಳಾದ [illegible] ಪದಾರ್ಥಗಳಿರುವದರಿಂದ—ದೇಶಯಿಂದ ಇವು ವಿದ್ಯಾರ್ಥಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ವಾಂಸರಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾವದೋ ವಿಸ್ಮಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮುಳಿ ಚಿಕಿತ್ಸೆಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ, ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮೆ. ಜೀ. ಸಿ. ಬ್ರೀತೋ (ಪೊಂಡಾ-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದ ನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿರಿ.

ಮೆ. ಜಿ. ಆರ್. ಗಾಯಿಕವಾಡ, (ಸಕ್ರಿಯ ಮಾಮಲತದಾರರು—ಏ.ಸಿ. ದ್ವಾರಾ) ಆದಷ್ಟು ತ್ವರೆಯಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳ ಉತ್ತಮವಿದೆ.

ಏಜಂಟರು:—ಡಿ. ಊಲನ್‌ನೆಹರ್ಟ್, ಮಂಗಳೂರು.

The Anglo Indian Drug & Chemical Company,
155, Market, Jumma Musid, Bombay.

ನವೀನ ಪುಸ್ತಕಗಳು! **ಶೋಭನೆ** ನವೀನಕಾದಂಬರಿಗಳು!!
ಕ್ರಯ 12 ಆಣೆ. ಕ್ರಯ 12 ಆಣೆ.

ಶ್ರೀ ಸುರೇಂದ್ರನಾಥ ಮುಖ್ಯೋಪಾಧ್ಯಾಯರಿಂದ ರಚಿತವಾದ 'ಶೋಭನಾ' ಎಂಬ ಬಂಗಾಳಿ ನಾವಲಿನ ಕನ್ನಡ ಭಾಷಾಂತರ. ಸಂಸಾರ ಚಿತ್ರವು ಸರ್ವರಿಗೂ ಹೃದಯಂಗಮವಾಗುವ ಹಾಗೆ ವರ್ಣಿತವಾಗಿ ಅತ್ಯುತ್ತಮವಾದ ನೀತಿಗಳನ್ನೊಳಗೊಂಡಿದೆ. ಸುಂದರವಾದ ಮುದ್ರಣ. ಉತ್ತಮವಾದ ಕಾಗದ. ಡೆಮ್ಮಿ 154 ಪುಟಗಳು.

ಸೋಮ ಸುಂದರ:—ಬಂಗಾಳಿ ನಾವಲನ್ನು ಹೋಲುವ ಹೊಸಕಥೆ. ವಿದ್ಯಾರ್ಥಿಗಳಿಗೂ ಮಾತಾಪಿತೃಗಳಿಗೂ ಅನೇಕ ನೀತಿಗಳನ್ನೂ ಬೋಧಿಸುವುದು. ಕ್ರಯ 10 ಆಣೆ.

☞ ಇವುಗಳಲ್ಲದೆ ನಮ್ಮಲ್ಲಿ ಪ್ರಸಿದ್ಧ ಕಾದಂಬರಿ ಲೇಖಕರಾದ ಮ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟ ವಿಶಿಷ್ಟ ಕಾದಂಬರಿಗಳೂ-ಕರ್ಣಾಟಕ ಚಂದ್ರಿಕಾ ಸೀರೀಸ್ ಪುಸ್ತಕಗಳೂ ವಗೈರೆ ದೊರೆಯುವುವು. ಪುಸ್ತಕದ ಪಟ್ಟಿ ಉಚಿತ.

ವಿಳಾಸ:— ಯಂ. ಸುಬ್ಬರಾವ್,
ಜಿ. ಟಿ. ಎ. ಪ್ರೆಸ್, ಮೈಸೂರು.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದುನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದ ಛೇಪ್ಪಿಗಳೂ ಸ್ವತಃ ಮೇಲ್ವಿಚಾರಣೆಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ

ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅತ್ಯವಶ್ಯತೆಯುಳ್ಳದ್ದು.

ತಮ್ಮ ಮಶಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,

ಗವರ್ನಮೆಂಟು ಕೋಲೇಜಿನ ಎದುರು
ಮಂಗಳೂರು.

ಫೊಟೊಗ್ರಾಫ್ ಬ್ರೈಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಯಾಜ್ 42" × 25" ರೂ. 75. ಅರ್ಧ ಸ್ಯಾಜ್ 21" × 15" ರೂ. 40. ಬಸ್ಟ್ ಸ್ಯಾಜ್ 18" × 12" ರೂ. 20. ಸಣ್ಣ ಸ್ಯಾಜ್ 12" × 10" ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೊಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೊಗ್ರಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ನಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,
ಆರ್ಟಿಸ್ಟ್, ಕೊಡ್ಡ ಪೋಸ್ಟು, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿ ಯದೆ

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತಿವೆ, ನಯವಾಗುತ್ತಿವೆ, ಚಕಚಕಿಸುತ್ತಿವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತಿವೆ.

ಇದರ ಬೆಲೆ ಗಸೀಸೆಗೆ ರೂ. 1-0-0 ಅಂಚೆಯ ವೆಚ್ಚ 0-4-0 ಬೇರೆ ತೆರಬೇಕು
3 ಸೀಸೆಗಳಿಗೆ ರೂ. 2-10-0 ಅಂಚೆಯ ವೆಚ್ಚ 0-7-0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲ್ಯದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲ್ಯದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲ್ಯವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30-5-11 ಮೆ. ಸೇಗಿನಪಾಳಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ „ಕಾಮಿನಿಯಾ ಓೈಯಲ್" ಇದರಿಂದ ಕೂದಲುಗಳು ಬೆಳದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28-7-11. ಮೆ. ಎ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನಾರಗುಡಿ—ತಾವು ಕಳುಹಿಸಿಕೊಟ್ಟ „ಕಾಮಿನಿಯಾ ಓೈಯಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲ್ಯಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓೈಯಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1-7-11. ಮೆ. ಸಿ. ಆರ್. ನಾಯುಡು ಪ. ವ. ಡ. ಟಾಶಿಬ, (ಬರ್ಮಾ)—ನನ್ನ ಮಿತ್ರರು "ಕಾಮಿನಿಯಾ" ತೈಲ್ಯ ಸಮ್ಮಂಧವಾಗಿ ವಿಶೇಷ ಪ್ರಸಂಸೆಯನ್ನು ಮಾಡುವದರಿಂದ ಕೊಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

ಮೇಲಣ ವಸ್ತುಗಳೆಲ್ಲವನ್ನು ಕೆಳಗೆ ಹೆಸರು ಕಾಣಿಸಿರುವವರಿಂದ ಪಡಕೊಳ್ಳಬಹುದು.

Address—**Anglo Indian Drug & Chemical Co.,**
155 Jumma Musid, Market, Bombay.

ಸೋಲ್ ಏಜಂಟ್ಸ್:—ದಿ. ಊಲನ್‌ವರ್ಟ್ಸ್, ಮಂಗಳೂರು



ಪೊಪ್ಯುಲರ್ ಹಂಬರ್ ಕ್ರಯ ರೂಪಾಯಿ 120.

ಈ ಜಿಲ್ಲೆಯಲ್ಲಿ ಇತರರಿಂದ ಈ ಕೆಳಗಿನ ಕ್ರಯಕ್ಕೆ ಕೆಳಗೆ ನಮೂದಿಸಿರುವ ಸ್ಯಾಕಲುಗಳನ್ನು ಪಡಿಯಲು ಸಾಧ್ಯವಲ್ಲ.

ರೈಲ್ವೆ ಮತ್ತು ಪೇಕಿಂಗ್ ಚಾರ್ಜು ವಿನಹ.

ಪತ್ರ ಬರಿಯುವ ವಿಳಾಸ:—

ಮಂಗಳೂರು ಟ್ರೇಡಿಂಗ್ ಎಶೋಸಿಯೇಷನ್,
ಸ್ಯಾಕಲ್ ಏಜಂಟ್ಸ್,
ಮಂಗಳೂರು, ದಕ್ಷಿಣ ಕನ್ನಡ.



ಸಿಂಗರ್ ರೋಯಲ್ ಕ್ರಯ ರೂಪಾಯಿ 115.

"ಅಮೇರಿಕದ ವಿಶಿಷ್ಟತೆ."

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯ್ಯುವದಕ್ಕೆ ಬಿಡಲೊಲ್ಲದ ಆಸಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರಿಂದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. „ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು-ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2-0-0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮೆ. ಜೀ. ಸಿ. ಬ್ರೀತೋ (ಪೊಂಡಾ-ಗೋವೆ) ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮೆ. ಜಿ. ಆರ್. ಗಾಯಿಕವಾಡ, (ಸಕ್ರಿಯ ಮಾಮಲತದಾರರು—ವಿ.ಪಿ. ದ್ವಾರಾ ಆದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳ ಉತ್ತಮವಿದೆ.

ಏಜಂಟರು:—ದಿ. ಊಲನ್‌ವರ್ಟ್ಸ್, ಮಂಗಳೂರು.

The Anglo Indian Drug & Chemical Company,
155, Market, Jumma Musid BOMBAY.

ಎಂ. ಡಿ. ರಾಣೆ ಎಂಡ್ ಕೋ.,

ಮುಂಬಯಿ.

ನಮ್ಮಲ್ಲಿ ಅತ್ಯುತ್ತಮವಾದ ವಿವಿಧ ಬಣ್ಣದ ಶಾಯಿಯು ಕಾಗದಗಳು ಮಾರಾಟಕ್ಕಿವೆ. ಹಾಳು ಶಾಯಿಯ ಪೊಟ್ಟಣಗಳನ್ನು ಕೊಂಡುಕೊಂಡು ವೃಥಾ ನಷ್ಟಕ್ಕೊಳಗಾಗುವುದೇತಕ್ಕೆ?

ಶಾಯಿ ಕಾಗದದ ಹಾಳೆಗಳು.

1. ಬ್ಲೂಬ್ಲೇಕ್, 2. ಕೆಂಪು, 3. ಹಸುರು, 4. ರಕ್ತನೀಲವರ್ಣ, 5. ನೀಲ ಬಣ್ಣದ ಹಾಳೆ ಒಂದಕ್ಕೆ ಮೂರು ಪೈ; 100 ಹಾಳೆಗಳಿಗೆ 1-3-0; 1000 ಹಾಳೆಗಳಿಗೆ 10-0-0. ಟಪ್ಪಾಲು ಚಾರ್ಜು ಸಹಿತ.

ವಿದ್ಯಾರ್ಥಿಗಳ ಶಾಯಿ ಹಾಳೆಗಳು.

5 ಬಣ್ಣಗಳ ಶಾಯಿ ಹಾಳೆಗಳು ಒಂದೊಂದಕ್ಕೆ ½ ಪೈಸೆ. 200 ಹಾಳೆಗಳಿಗೆ ರೂ.1-0-0 ವಿ. ಪಿ. ಮೂಲಕ 1-3-0. 2000 ಹಾಳೆಗಳಿಗೆ 10-0-0.

ಟಪ್ಪಾಲು ಚಾರ್ಜು ಮಾಫಿ.

ಸಣ್ಣ ಶಾಯಿ ಪೊಟ್ಟಣಗಳು.

ಐದು ಬಣ್ಣದ ಶಾಯಿ ಪುಡಿ, ಪೊಟ್ಟಣ ಒಂದಕ್ಕೆ 0-0-3. 100 ಪೊಟ್ಟಣಕ್ಕೆ 0.12.0 ವಿ. ಪಿ. ಮೂಲಕ 0-15-0. 1000 ಪೊಟ್ಟಣಕ್ಕೆ 8-0-0 ವಿ. ಪಿ. ಚಾರ್ಜು ಸಹಿತ.

ಬ್ಲೂಬ್ಲೇಕ್ ಶಾಯಿಯ ಗುಳಿಗೆಗಳು ಮಾತ್ರ.

ಕ್ರಯ 1000 ಮಾತ್ರೆಗೆ 0-13-0. ವಿ. ಪಿ. ಮೂಲಕ 1-0-0.

50 ಹಾಳೆಗಳು ಮತ್ತು ವಿದ್ಯಾರ್ಥಿಗಳ 100 ಹಾಳೆಗಳಿಗೆ ಕಮ್ಮಿಯಾಗಿ ಕಳುಹಿಸೋಣಾಗಲಿಕ್ಕಿಲ್ಲ.

ಸ್ಪೆಶ್ಯಲ್ ಆಫೀಸ್ ಶಾಯಿ.

ದೊಡ್ಡ ಬ್ಲೂಬ್ಲೇಕ್ ಶಾಯಿಯ ಪೊಟ್ಟಣಗಳು, ಪ್ರತಿ ಒಂದು ಪೊಟ್ಟಣದಲ್ಲಿ 28 ಔನ್ಸ್ ಒಳ್ಳೇ ಶಾಯಿ ಮಾಡಬಹುದು. ಕ್ರಯ ಒಂದು ಡಜನ್ ಪೊಟ್ಟಣಕ್ಕೆ ರೂ. 1-4-0. (ಟಪ್ಪಾಲು ಚಾರ್ಜು ವಿನಹಾ). ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಕೊಡಲಾದೀತು.

ಇವರ ವಿಳಾಸ:—ಎಮ್. ಡಿ. ರಾಣೆ ಎಂಡ್ ಕೋ.,
ಪೋಸ್ಟು, ಗ್ರೆಂಟ್ ರೋಡ್ ಮುಂಬಯಿ

M. D. Rane & Co.,
Post, Grant Road, Bombay

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣ ವನಮ್, ವನ್ನಾರ್ ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲ್ಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯೆರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧ ಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅರಿವೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ:—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

THE CANARA ARTS BUREAU.

ದಿ ಕೆನರಾ ಆರ್ಟ್ಸ್ ಬ್ಯೂರೋ

ಎಂಬ

ಕಲಾಕೌಶಲ ಮಂದಿರ.

ಜನಸಾಮಾನ್ಯಕ್ಕೆ ಈ ಊರಲ್ಲಿ ಅತ್ಯುತ್ತಮವಾದ ಫೋಟೊಗ್ರಾಫುಗಳನ್ನೂ ಛಾವಚಿತ್ರಗಳನ್ನೂ, ಹೆಸರುಪಾಟಿಗಳನ್ನೂ (ಸ್ಯಾನ್ ಬೋರ್ಡು,) ಅತೀ ಅಗ್ಗದಲ್ಲಿ ಒದಗಿಸಿಕೊಡುವದೇ ಈ ಮಂದಿರದ ಮುಖ್ಯ ಉದ್ದೇಶವಾಗಿದೆ.

ಸೂಚನೆ:—ಶವಗಳ ಫೋಟೊಗ್ರಾಫುಗಳಿಗೆ ಇತರ ಫೋಟೊಗ್ರಾಫುಗಳಷ್ಟೆ ಚಾರ್ಜು ವಸೂಲುಮಾಡಲಾದೀತು. ಮಕ್ಕಳ ಮತ್ತು ಚಲಿಸುವ ವಸ್ತುಗಳ ಫೋಟೊಗ್ರಾಫುಗಳಿಗೆ ಸಾಮಾನ್ಯ ದರಕ್ಕಿಂತ ಸ್ವಲ್ಪ ಹೆಚ್ಚಿಗೆ ಖರ್ಚು ಬೀಳುವದು.
ನಮ್ಮ ದರಗಳು ಬಡಜವರಿಗೆ ಸಹ ಅನುಕೂಲವಾಗುವಷ್ಟು ಕಮ್ಮಿಯಾಗಿವೆ

ನಮ್ಮ ದೇಖಾವೆ ಕೋಣೆಯ ತಮ್ಮ ಕೆಲಸದ ಅನೇಕ ಮಾದರಿಗಳಿಂದ ಕೂಡಿದ್ದು ಪ್ರಾತಃಕಾಲ 9 ಘಂಟೆಯಿಂದ ಸಾಯಂಕಾಲ 7 ಘಂಟೆ ವರೆಗೆ ತೆರೆದಿಡಲಾಗುತ್ತದೆ. ನಮ್ಮ ಕೆಲಸದ ವಿಷಯವಾಗಿ ಸಮಾಧಾನ ಹೊಂದಬೇಕಾದರೆ ಈ ದೇಖಾವೆ ಕೋಣೆಯನ್ನು ಆಗಾಗ ಬಂದು ನೋಡಬೇಕಾಗುವದು ಅಗತ್ಯ.

ಫೋಟೋಗ್ರಾಫು ತೆಗಿಯುವ ಮತ್ತು ಚಿತ್ರಗಾರರಿಗೆ ಬೇಕಾದ ಅನೇಕಾನೇಕ ಸಾಮಗ್ರಿಗಳನ್ನು ವಿಕ್ರಯಿಸಲಿಕ್ಕೆ ನಾವು ಇಲ್ಲಿ ವಿಲೇವಾರಿ ಮಾಡಿದ್ದೇವೆ. ಅಂಥಾ ಕೆಲಸಗಳನ್ನು ಕಲಿಯಲು ಮನಸ್ಸಿದ್ದವರಿಗೆ ತಕ್ಕ ಸೌಕರ್ಯಗಳನ್ನುಂಟುಮಾಡಲಿಕ್ಕೆ ನಾವು ಸಿದ್ಧರಾಗಿಯೇ ಇದ್ದೇವೆ.

ಮದ್ರಾಸಿನಲ್ಲಿ ಹೆಸರುವಾಸಿಯಾದ ವಿಸ್ಲರ್ ಸೂಡಿಯೊ (Whistler Studio) ಎಂಬ ಚಿತ್ರಶಾಲೆಗೆ ಸ್ಥಳೀಯ ಏಜಂಟರು ನಾವೇ ಆಗಿರುವದರಿಂದ ಚಿತ್ರಗಾರರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮಂತೆಯೇ ಅಗ್ಗವಾಗಿ ಒದಗಿಸಿ ಕೊಡಲಿಕ್ಕೆ ಇಲ್ಲಿ ಇತರರಿಗೆ ಸಾಧ್ಯವಾಗಲಾರದು.

ಪರೀಕ್ಷಾರ್ಥವಾಗಿ ನಮ್ಮಲ್ಲಿಂದ ಪಕ್ಷೆ ತೆಗಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ.
ನಮ್ಮ ದರಗಳಿಗೆ ದಯಮಾಡಿ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಿ. ಕೆನರಾ ಆರ್ಟ್ಸ್ ಬ್ಯೂರೋ,

Registered No. M. 498

ಚಂದಾನಿರ್ಣಯ:—
ವರ್ಷ ೧ಕ್ಕೆ ರೂ. 1-4-0.
ಟಪ್ಪಾಲು ಹಾಸಲು ಶೇರಿ ರೂ. 2-1-0.

ಪ್ರತಿ ಶುಕ್ರವಾರವೂ
ಪ್ರಕಟಿಸಲ್ಪಡುವುದು.

ಸ್ವದೇಶಾಭಿಮಾನಿ.

ಪುಸ್ತಕ 6. ಸಂಚಿಕೆ 19.

ಮಂಗಳೂರು ತಾ. 10ನೇ ಶುಕ್ರವಾರ
ಮೇ 1912.

Amrutanjan Depot, Bombay.

(Regd.) ಅಮೃತಾಂಜನ. (ರಿಜಿಸ್ಟರ್ಡ್.)

ಅಮೃತಾಂಜನ
ಸರ್ವ ನೋವಿಗೆ
ಸಂಜೀವನ.
ಬಾಟ್ಲಿ ಒಂದರ ರೂ. 0—8—0.

ಅಮೃತಾಂಜನ
ಸರ್ವ ನೋವಿಗೆ,
ಸಿದ್ಧಾಮೃತ.
ಬಾಟ್ಲಿ ಒಂದರ ರೂ. 0—8—0.

ಅಮೃತಾಂಜನ.

ಎಲ್ಲಾ ಔಷಧಾಲಯಗಳಲ್ಲಿಯೂ, ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವದು.
ವಿಜ್ಞಾಪನೆ:—ನಮ್ಮ ಟ್ರೇಡ್‌ಮಾರ್ಕ್ ಉಳ್ಳ ಹೊರಗಿನ ಟನ್ನಿನ ಕರಡಿಗೆಗಳು ವಿಲಾಯತಿಯಿಂದ ಬಾರದೆ ಇರುವದರಿಂದ ಮುಂಚಿನ ಹಾಗೆ ಕಾಗದದಲ್ಲಿ ಪೇಕ್ ಮಾಡಿದ್ದೇವೆ.

ಗಜಕರ್ಣದ ಮುಲಾಮು.

ಎಂಥಾ ಕಠಿಣವಾದ ಗಜಕರ್ಣವಾದರೂ ಮೂರು ಸಾರಿ ತಾಗಿಸುವದರೊಳಗೆ ನಾಶವಾಗಿ ಹೋಗುವದು.

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ನೋವು, ಹಲ್ಲುಗಳ ವಾಸನೆ ಇತ್ಯಾದಿಗಳಿಗೆ ರಾಮಬಾಣದಂತಿದೆ.

ಗಜಕರ್ಣದ ಮುಲಾಮು.

ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಡಬ್ಬಿ ಒಂದರ ಕಿಮ್ಮತು 0—6—0.

ದಂತಮಂಜನ.

ಇದರ ಉಪಯೋಗದಿಂದ ಹಲ್ಲುಗಳು ಘಟ್ಟಿಯಾಗುವವು. ಮತ್ತು ಬೆಳ್ಳಗಾಗುವವು ಡಬ್ಬಿ ಒಂದರ ಕಿಮ್ಮತು 0—2—0.

ರಾಜಾರಾಣಿ ನಕ್ಷೆಗಳುಳ್ಳ ಈ ವರ್ಷದ ಸುಂದರವಾದ ಕೆಲೆಂಡರ್ (ತಾರೀಕು ತೋರಿಸುವ ಪಟ್ಟ) ಕ್ರಯ ೧ರ ವಿ.ಪಿ. ಸಮೇತ 0—4—0.

ಕೇಶವರ್ಧಿನಿ ತೈಲ! ಕೇಶವರ್ಧಿನಿ ತೈಲ!! ಕೇಶವರ್ಧಿನಿ ತೈಲ

ಎಲ್ಲಾ ತೈಲಗಳಿಗಿಂತಲೂ, ಸುವಾಸಿಕವಾಗಿಯೂ, ಮನೋಹರವಾದ ಪರಿಮಳ ಉಳ್ಳದ್ದಾಗಿಯೂ, ಸ್ಪಿರಿಟು ವಗ್ಯೆರೆ ಇಲ್ಲದೆಯೂ, ತಯಾರಿಸಲ್ಪಟ್ಟದ್ದಾಗಿರುತ್ತದೆ. ಇದರಿಂದ ಕೂಧಲುಗಳು ಕಪ್ಪಾಗುವವು, ಉದ್ದವಾಗಿಯೂ ನಯವಾಗಿಯೂ ಬೆಳಿಯುವವು. ಬಾಟ್ಲಿ ೧ರ 1-0-0 3ಬಾಟ್ಲಿಗಳಿಗೆ 2-10-0

ನಮ್ಮ ಔಷಧಗಳು ಮಂಗಳೂರಲ್ಲಿ ಈ ಕೆಳಗಿನ ಕಂಪೆನಿಗಳಲ್ಲಿ ದೊರಕುವದು.
ಮಂಗಳೂರು ಟ್ರೇಡಿಂಗ್ ಎಸೋಸಿಯೇಷನ್, ಪರ್ಲ್ ಎಂಡ್ ಸನ್ಸ್, ಇಬ್ರಾಹಿಮ್ ಎಲಿಯಾಸ್, ಆರ್ನೋಜನ್ ಎಂಡ್ ಐಮನ್.
ಕೆಟಲಾಗು ಅಪೇಕ್ಷಿಸುವವರು ದಯಮಾಡಿ ಬರಿಯಿರಿ.

ನವೀನ ಪುಸ್ತಕಗಳು! **ಶೋಭನೆ** ನವೀನಕಾದಂಬರಿಗಳು!!

ಕ್ರಯ 12 ಆಣೆ. ಕ್ರಯ 12 ಆಣೆ.

ಶ್ರೀ ಸುರೇಂದ್ರನಾಥ ಮುಖ್ಯೋಪಾಧ್ಯಾಯರಿಂದ ರಚಿತವಾದ 'ಶೋಭನಾ' ಎಂಬ ಬಂಗಾಳಿ ನಾವಲಿನ ಕನ್ನಡ ಭಾಷಾಂತರ. ಸಂಸಾರ ಚಿತ್ರವು ಸರ್ವರಿಗೂ ಹೃದಯಂಗಮವಾಗುವ ಹಾಗೆ ವರ್ಣಿತವಾಗಿ ಅತ್ಯುತ್ತಮವಾದ ನೀತಿಗಳನ್ನೊಳಗೊಂಡಿದೆ. ಸುಂದರವಾದ ಮುದ್ರಣ. ಉತ್ತಮವಾದ ಕಾಗದ. ಡೆಮ್ಮಿ 154 ಪುಟಗಳು.

ಸೋಮ ಸುಂದರ:—ಬಂಗಾಳಿ ನಾವಲನ್ನು ಹೋಲುವ ಹೊಸಕಥೆ. ವಿದ್ಯಾರ್ಥಿಗಳಿಗೂ ಮಾತಾಪಿತೃಗಳಿಗೂ ಅನೇಕ ನೀತಿಗಳನ್ನು ಬೋಧಿಸುವುದು. ಕ್ರಯ 10 ಆಣೆ.

☞ ಇವುಗಳಲ್ಲದೆ ನಮ್ಮಲ್ಲಿ ಪ್ರಸಿದ್ಧ ಕಾದಂಬರಿ ಲೇಖಕರಾದ ಮ। ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟ ವಿಶಿಷ್ಟ ಕಾದಂಬರಿಗಳೂ-ಕರ್ಣಾಟಕ ಚಂದ್ರಿಕಾ ಸೀರೀಸ್ ಪುಸ್ತಕಗಳೂ ವಗೈರೆ ದೊರೆಯುವುವು. ಪುಸ್ತಕದ ಪಟ್ಟಿ ಉಚಿತ.

ಶ್ರೀ ಸದಾಶಿವೇಂದ್ರ ಸರಸ್ವತಿ (ಶ್ರೀ ಸದಾಶಿವ ಬ್ರಹ್ಮ)

ಈ ಮಹನೀಯರ ಮಹತ್ವಾದ ಜೀವನಚರಿತ್ರೆಯು ..ಶೋಭನೆ"ಯ ಗ್ರಾಹಕರಿಗೆಲ್ಲಾ ಉಚಿತವಾಗಿ ಸಮರ್ಪಿಸಲ್ಪಡುವದು.

ವಿಳಾಸ:— ಯಂ. ಸುಬ್ಬರಾವ್,
ಜಿ. ಟಿ. ಎ. ಪ್ರೆಸ್, ಮೈಸೂರು.

THE ARYAN WEAVING Co.

General Merchants, Commission Agents and Auctioneers

MANGALORE.

ಸ್ವದೇಶಿ ಕೈಗಾರಿಕೆಗಳಿಗೆ ಪ್ರೋತ್ಸಾಹಿಸಲು ಅಪೇಕ್ಷಿಸುವಿರೇ?

ನಮ್ಮ ಕಂಪೆನಿಗೆ ಒಂದು ಸಲ ಬಂದುನೋಡಿರಿ!

ನಮ್ಮಲ್ಲಿ ಕೋಟಿನ ಒಳ್ಳೇ ವಸ್ತ್ರ, ಶರ್ಟಿನ ವಸ್ತ್ರ, ಉತ್ತಮವಾದ ರೇಶ್ಮೆ ಶೀರೆ, ಮತ್ತು ಇತರ ಶೀರೆಗಳೂ, ಜೋಡು ಎಲವಸ್ತ್ರಗಳೂ, ನಾಜೂಕಾದವೇಷ್ಟಿಗಳೂ ಸ್ವತಃ ಮೇಲ್ಮನೆಯಲ್ಲಿಯೇ ನೇಯಿಸುತ್ತಿದ್ದೇವೆ.

ಬಂದು ನೋಡಿರಿ! ಕ್ರಯ ಕಮ್ಮಿ!! ಬೇಗನೆ ಕೊಂಡುಕೊಳ್ಳಿರಿ!!!

ವ್ಯಾಪಾರಸ್ಥರಿಗೆ ಒಳ್ಳೇ ಡಿಸ್ಕೌಂಟು ಕೊಡಲಾದೀತು.

ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯಿತಿ ಮಾಡಲಾಗುವುದು.

ಕೊಂಡುಕೊಳ್ಳುವುದಕ್ಕೆ ಸುಲಭಸಾಧ್ಯವಾಗುವಂತೆ ಇತರ ಎಲ್ಲಾ ತರದ ವಸ್ತ್ರಗಳನ್ನು ಸಹ ತರಿಸಿಟ್ಟಿರುವೆವು.

ನಿಮ್ಮ ಕುಟುಂಬಿಕರಿಗೆ ಹಣಗಳಿಸಿಡಲು ಇಚ್ಛಿಸುವಿರೋ?

ನಮ್ಮಲ್ಲಿ ಬಂದು ಮೊಕ್ತಾ ಮಾತಾಡಿರಿ! ಯಾ ಪತ್ರ ಮೂಲಕ ಬರಕೊಳ್ಳಿರಿ ದೇಶೀಯರಿಂದಲೇ ನಡಿಸಲ್ಪಡುವ ನಂಬಿಕೆಗೆ ಯೋಗ್ಯವಾದ ಭಾರತ ಜೀವ ವಿಮೆಯ ಕಂಪೆನಿಯಿಂದ (The Bharat Insurance Co.) ಜೀವ ವಿಮೇ ಮಾಡಿಸಿ ಕೊಡುವೆವು.

ಅನೇಕರಿಗೆ ದೀರ್ಘಕಾಲದಿಂದ ಅವಶ್ಯತೆಯುಳ್ಳದ್ದು.

ತಮ್ಮ ಮಸಾಲುಗಳನ್ನು ಏಲಂ ಮೂಲಕ ವಿಕ್ರಯಿಸಲು ಮನಸ್ಸುಳ್ಳವರು ನಮಗೆ ಕಳುಹಿಸಿಕೊಡಬಹುದು.

ಆದಿತ್ಯವಾರ ಮಾತ್ರ ಸಾಮಾನುಗಳನ್ನು ಏಲಂ ಮಾಡುವೆವು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಆರ್ಯ ನೇಯಿಗೆ ಕಂಪೆನಿ,
ಗವರ್ನಮೆಂಟು ಕೋಲೇಜಿನ ಎದುರು
ಮಂಗಳೂರು.

ಫೊಟಗ್ರಾಫ್ ಬ್ಲೈಲ್‌ಪೈಂಟಿಂಗ್ ಎನ್‌ಲಾರ್ಜ್‌ಮೆಂಟ್.

ದರ:—ಲ್ಯಾಫ್ ಸ್ಕ್ಯಾಜ್ 42″ × 25″ ರೂ. 75. ಅರ್ಧ ಸ್ಯಾಜ್ 11″ × 15″ ರೂ. 40. ಬಸ್ಟ್ ಸ್ಯಾಜ್ 18″ × 12″ ರೂ. 20. ಸಣ್ಣ ಸ್ಯಾಜ್ 22″ × 10″ ರೂ. 12.

ಫೆಮಿಲಿ ಸ್ಯಾಜಿಗೆ ಪ್ರತ್ಯೇಕ ದರ.

ಗಂಡಸರ ಹೆಂಗಸರ ಮಕ್ಕಳ ವಗೈರೆ ಎಲ್ಲಾ ತರದ ಫೊಟೊಗ್ರಾಫಿನ ಎನ್‌ಲಾರ್ಜ್‌ಮೆಂಟಿನ ಕೆಲಸವನ್ನು ಒದಗಿಸಿಕೊಡುತ್ತೇವೆ.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಫೊಟೊಗಾಫನ್ನು ಕಾಲಾಂಶ ಮುಂಗಡ ಹಣ ಸಹಿತ ಕಳುಹಿಸಿದ್ದಲ್ಲಿ ಸಾಜೂಕ್ ಕೆಲಸಮಾಡಿ ಕೊಡುವೆವು. ಬಾಕಿ ಹಣಕ್ಕೆ ವಿ. ಪಿ. ಮಾಡಲಾದೀತು. ಹೆಚ್ಚಿನ ವಿವರ ಪತ್ರಮೂಲಕ ತಿಳಿಯಬಹುದು.

ಕೆ. ಎಸ್. ಶ್ಯಾಮಭೋಗ,
ಆರ್ಟಿಸ್ಟ್, ಕೋರ್ಟ್ ರೋಡ್, ಕಾಸರಗೋಡು.

ಮೈಸೂರಿನ ದಸರಾ ಪ್ರದರ್ಶನದಲ್ಲಿ ನಮಗೆ ಚಿನ್ನದ ಪದಕವು ದೊರಕಿಯದೆ.

ಕೀಳು ಎಣ್ಣೆಗಳನ್ನು ಉಪಯೋಗಿಸಿ ನಿಮ್ಮ ಹಣವನ್ನೂ ಮೆದುಳನ್ನೂ ಹಾಳು ಮಾಡಿಕೊಳ್ಳದಿರಿ.

ನಮೂನೆಯು ಪುಕ್ಕಟೆಯಾಗಿ ಕೊಡಲ್ಪಡುವದು!

ನಮೂನೆಯು ಬೆಲೆ ಇಲ್ಲದೆನೇ ಕೊಡಲ್ಪಡುವದು!!

ಸುಂದರವಾದ ಕೇಶ ರಾಶಿಯು! ಅಂದವಾದ ಕೂದಲುಗಳು!!

ಇವೇ ಪ್ರತಿಯೊಬ್ಬ ಹೆಂಗಸಿನ ಸೌಭಾಗ್ಯಮಯವಾದ ಅಲಂಕಾರವಾಗಿದೆ. ಆದರೆ ಎಷ್ಟು ಸ್ತ್ರೀಯರಿಗೆ ತಾನೇ ಸುಂದರವಾದ ಮತ್ತು ನಿಬಿಡವಾದ ಕೇಶ ರಾಶಿ ಇದೆ? ಕೇಶಪಾಶವು ಸುಂದರವಾಗಿ ಕಂಡುಬರಬೇಕಾದರೆ ಅವು ರೇಶಿಮೆಯಂತೆ ಮೆದುವಾಗಿ ಚಕಚಕಿಸುತ್ತಿರಬೇಕು; ಅದಲ್ಲದೆ ತುರುಬನ್ನು ಯಾವ ಆಕೃತಿಯಿಂದಲಾದರೂ ಕಟ್ಟುವಂತೆ, ಅವು ನಯವಾಗಿಯೂ, ಪುಷ್ಕಳವಾಗಿಯೂ ಇರಬೇಕು.

"ಕಾಮಿನಿಯಾ ತೈಲವು".

(ರಿಜಿಸ್ಟರ್ಡ್)



ಇದನ್ನು ತಕ್ಕುದಾದ ಜೋಕೆಯಿಂದ ಉಪಯೋಗಿಸಿದರೆ ಪುರಾತನ ಕಾಲದಿಂದ ಸುಂದರವಾದ ಕೇಶದಾಮಕ್ಕೆ ಎಂತಹ ಮಹತ್ವವು ಕೊಡಲ್ಪಟ್ಟಿದೆಯೋ, ಅಂಥಾ ಮಹತ್ವಕ್ಕೆ ಉಚಿತವಾದ ಚಂದವಾದ ಕೂದಲುಗಳು ಕ್ಷಿಪ್ರದಲ್ಲಿಯೇ ಬೆಳೆಯುವವು.

ಕಾಮಿನಿಯಾ ತೈಲ—ಇದು, ಕೂದಲುಗಳನ್ನು ಚಂದಗೈಯ್ಯುವ ಸರ್ವ ತೈಲಗಳಲ್ಲಿ ಮೊದಲನೆಯದು. ಮತ್ತು ಅತ್ಯುತ್ಕೃಷ್ಟವು, ಕೂದಲುಗಳು ಹೇಗೂ ಇರಲಿ. ಪ್ರತಿಯೊಬ್ಬ ಸ್ತ್ರೀಯಳು ಈ "ಕಾಮಿನಿಯಾ" ತೈಲವನ್ನು ಅವಶ್ಯವಾಗಿ ಉಪಯೋಗಿಸಲೇ ಬೇಕು. ಇದರಿಂದ ಕೂದಲುಗಳು ಎಷ್ಟು ಮೆದುವಾಗುತ್ತವೆ ಅಂದರೆ, ಈಗಣ ಸುಧಾರಣೆಯ ಕಾಲದಲ್ಲಿ ಪ್ರಚಾರಕ್ಕೆ ಬಂದಿರುವ ವಿವಿಧ ಆಕೃತಿಗಳಿಂದ ಮುಡಿಯನ್ನು ಕಟ್ಟಲಾಗುತ್ತದೆ.

ಕಾಮಿನಿಯಾ ತೈಲದಿಂದ ಕೂದಲುಗಳು ವಿಪುಲವಾಗುತ್ತವೆ, ನಯವಾಗುತ್ತವೆ, ಚಕಚಕಿಸುತ್ತವೆ, ಮತ್ತು ನಿಬಿಡವಾದ ನೀಲ ಬಣ್ಣದಿಂದೊಡಗೂಡಿ, ಆಗ್ಗಾಗ್ಗೆ ಹರಿದುಬಿದ್ದುಹೋಗದೆ ದಟ್ಟವಾಗಿ ಬೆಳೆಯುತ್ತವೆ.

ಇದರ ಬೆಲೆ ಗಸೀಸೆಗೆ ರೂ. 1—0—0 ಅಂಚೆಯ ವೆಚ್ಚ 0—4—0 ಬೇರೆ ತೆರಬೇಕು.

3 ಸೀಸೆಗಳಿಗೆ ರೂ. 2—10—0 ಅಂಚೆಯ ವೆಚ್ಚ 0—7—0.

ನಮೂನೆಯು ಬೇಕೆಂದಾದರೆ ಒಂದು ಅರ್ಧಾಣೆಯ ಚೀಟನ್ನು ಕಳುಹಿಸಿರಿ.

ಕಾಮಿನಿಯಾ ತೈಲದ ಕುರಿತು ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ಕಮಲಪುರದ ಸಿವಿಲ್ ಸರ್ಜನರಾದ ಡಾಕ್ಟರ್ ಹರಿನಾರಾಯಣರವರು ಈ ತೈಲದ ವಿಷಯ ಈ ರೀತಿ ಬರೆಯುವರು:—ನಾನು ನಿಮ್ಮ ಕಾಮಿನಿಯ ತೈಲವನ್ನು ಪ್ರಯೋಗಿಸಿದ್ದಲ್ಲಿ ಅದು ಇತರ ಕೇಶ ತೈಲಗಳಿಗಿಂತಲೂ ಅತ್ಯುತ್ತಮವಾದ್ದೆಂದು ನನಗೆ ಖಾತ್ರಿಯಾಯಿತು. ದಯಮಾಡಿ ಮೂರು ಬಾಟ್ಲಿ ತೈಲವನ್ನು ವಿ. ಪಿ. ಮೂಲಕ ಕಳುಹಿಸಿರಿ.

30—5—11 ಮೆ. ಸೇಗಿಸರ್ವಾಕರ ಬ್ರದರ್ಸ್ ಬಸವನಗಲ್ಲಿ ಬೆಳಗಾಂ, ನೀವು ಕಳುಹಿಸಿಕೊಟ್ಟ ,,ಕಾಮಿನಿಯಾ ಓಯಿಲ್" ಇದರಿಂದ ಕೂದಲುಗಳು ಬೆಳೆದು ಅತಿ ಸೌಂದರ್ಯವನ್ನುಂಟುಮಾಡುತ್ತದೆ. ಇಡೀ ಶರೀರವನ್ನು ಸುಂದರಗೊಳಿಸುವ ಕೂದಲುಗಳಿಗೆ ಇದು ಮೂಲಕಾರಣವಾಗಿದೆ. ಪುನಃ ಬಾಟ್ಲಿ ಒಂದನ್ನು ವಿ. ಪಿ.ಯಿಂದ ರವಾನಿಸಿರಿ.

28—7—11. ಮೆ. ಪಿ. ಡಿ. ಮಾದವಸಿಂಗ್, ರುಕ್ಮಿಣಿವಿಲಾಸ, ಮನ್ನರಗುಡಿ—ತಾವು ಕಳುಹಿಸಿಕೊಟ್ಟ ,,ಕಾಮಿನಿಯಾ ಓಯಿಲ್" ಅತ್ಯಂತ ಉತ್ಕೃಷ್ಟವಾಗಿ ಪೇಟೆಯಲ್ಲಿ ಸಿಕ್ಕುವ ಎಲ್ಲಾ ತೈಲಗಳಲ್ಲಿ ಇದು ಪ್ರಥಮ ತರಗತಿಯನ್ನು ಹೊಂದಿದೆ. ಮತ್ತು ಇದಕ್ಕೆ ಸರಿಸಮಾನವಾದ ಹೆಯರ್ ಓಯಿಲ್ ಬೇರೆ ಇಲ್ಲ ಎಂದು ನನ್ನ ಅಭಿಮತವಿರುವದು.

1—7—11. ಮೆ. ಸಿ. ಆರ್. ನಾಯುಡು ಪ. ವ. ಡಿ. ಟಾಹಿಬ, (ಬರ್ಮಾ)—ನನ್ನ ಮಿತ್ರರು ,,ಕಾಮಿನಿಯಾ" ತೈಲ ಸಮ್ಬಂಧವಾಗಿ ವಿಶೇಷ ಪ್ರಸಂಶೆಯನ್ನು ಮಾಡುವದರಿಂದ ಕೂಡಲೇ 6 ಶೀಸೆಗಳನ್ನು ತ್ವರ್ಯದಿಂದ ವಿ. ಪಿ. ಮೂಲಕ ರವಾನಿಸತಕ್ಕದ್ದು.

Address—**Anglo Indian Drug & Chemical Co,**
155 Jumma Musid, Market, Bombay.

ಸೋಲ್ ಏಜಂಟ್ಸ್:—ದಿ. ಊಲನ್‌ಮಾರ್ಟ್, ಮಂಗಳೂರು.

ಸರ್ದಾರ್ ವೆಜಿಟೋನ್.

ಧಾತುಪುಷ್ಟಿ ಮಾತ್ರೆಗಳು.

ಈ ಮಾತ್ರೆಗಳು ಬಾಲ್ಯದಲ್ಲಿ ಬುದ್ಧಿಹೀನತೆಯಿಂದ ಬರುಮಾಡಿಕೊಂಡ ಬಲಹೀನತೆ, ನಪುಂಸಕತ್ವ, ಧಾತುನಷ್ಟ, ನರಗಳ ದುರ್ಬಲತೆ, ಅಜೀರ್ಣ, ಮಲಬದ್ಧತೆ ಮುಂತಾದ ಸಕಲ ರೋಗಗಳನ್ನು ನಿರ್ಮೂಲಗೈಸಿ, ರಕ್ತವನ್ನು ಶುದ್ಧಿಮಾಡಿ ವೃದ್ಧಿಪಡಿಸಿ ವೀರ್ಯವನ್ನು ಗಟ್ಟಿಮಾಡಿ ದೇಹಕ್ಕೆ ಅಸಾಧಾರಣವಾದ ಕಾಂತಿಯನ್ನು ಕೊಡುವದರಲ್ಲಿ ಸಮಾನರಹಿತವಾದವು. ರೋಗಿಗಳು, ನಿರೋಗಿಗಳು, ಗಂಡಸರು, ಹೆಂಗಸರು, ಎಲ್ಲಾ ತರಹದ ಶೀತೋಷ್ಣ ಸ್ಥಿತಿಗಳಲ್ಲಿಯೂ ನಿರ್ಭಯವಾಗಿ ಉಪಯೋಗಿಸುವದಕ್ಕೆ ಲಾಯಕಾದವು. ಪಥ್ಯವಿಲ್ಲದೆ ರೋಗವನ್ನು ತೀರಿಸುವ ಔಷಧಿಯು ಇದು ಒಂದೇ.

40 ಮಾತ್ರೆಗಳಿರುವ ಡಬ್ಬಿ ಕ್ರಯ ರೂ. 1—4—0.

ಕೋರಿದವರಿಗೆ ನಮ್ಮ ಕಂಪೆನಿಯ ಕೆಟಲಾಗು ಇನಾಮಾಗಿ ಅಂಚೆಹಾಸಲು ಮಾಫಿಯಾಗಿ ಕಳುಹಿಸಲ್ಪಡುವದು.

ಪಿ. ಪಿ. ರಜಾಕ್ ಅಂಡ್ ಕೊ.,
10 ಎಸ್ಪ್ಲನೇಡ್, ಮದ್ರಾಸು.

ಸುಲಭ ಕ್ರಯ! ಸುಲಭ ಕ್ರಯ!! ಸುಲಭ ಕ್ರಯ!!

ಡಾಕ್ಟರ್ ಜಿ. ಬಿ. ಯವರ

ಸುಗಂಧ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿ ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ ಸಾವಿರಾಂತಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವದೆಂದರೆ:—

ಪೀನಸ, ಒಂಟಿ ತಲೆನೋವು, ತಲೆನೋವು, ತಲೆಯಲ್ಲಿನ ರೋಗಗಳು ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ಕಂಠಕ್ಕೆ ಮೇಲ್ಪಟ್ಟ 96 ವ್ಯಾಧಿಗಳನ್ನು ಮೆದಳಿಗೆ ಸೇರಿದ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕಶಕ್ತಿಯನ್ನು ಹೆಚ್ಚುಮಾಡಿ ಮನೋಲ್ಲಾಸವನ್ನುಂಟುಮಾಡುವದು. ಯಾವ ಔಷಧವೂ ಇಷ್ಟು ಸುಲಭ ಕ್ರಯಕ್ಕೂ ಇಷ್ಟು ಪ್ರಸಿದ್ಧಿಯಾದದ್ದಾಗಿಯೂ, ಮೇಲೆ ಹೇಳಲ್ಪಟ್ಟ ವ್ಯಾಧಿಗಳನ್ನೆಲ್ಲಾ ಪರಿಹರಿಸತಕ್ಕದ್ದಾಗಿಯೂ ಎಲ್ಲಿಯೂ ಸಿಗುವದಿಲ್ಲ. ಕೆಳಗೆ ಹೇಳಲ್ಪಟ್ಟ ಕಂಪೆನಿಯವರಿಂದ ತಯಾರಾಗುವ ಈ ನಶ್ಯ ಸಾಧಾರಣ ನಶ್ಯವನ್ನು ಹತ್ತು ಹದಿನೈದುಸಾರಿ ಉಪಯೋಗಿಸುವವರು ಈ ಸುಗಂಧ ನಶ್ಯವನ್ನು ಎರಡು ಸಾರಿ ಉಪಯೋಗಿಸಿದರೆ 15ಸಾರಿ ಉಪಯೋಗಿಸುವದಕ್ಕಿಂತಲೂ ಎಷ್ಟೋ ಗುಣವಾಗಿ ಕಾಣಬರುವದು. ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಸಾಧಾರಣ ನಶ್ಯದ ಹಾಗೆ ಒಂದೆರಡು ದಿವಸಗಳಲ್ಲಿ ಇದರ ನೂತನ ಸ್ವಾಭಾವಿಕಗುಣವೂ, ಪರಿಮಳವೂ, ಕಾರವೂ ಹೋಗುವದಿಲ್ಲ. ಬುಡ್ಡಿ 1ಕ್ಕೆ ಕ್ರಯ ರೂ. 0-4-0. ವಿ. ಪಿ. ಚಾರ್ಜು 0-3-0 ಡಜನ್ 1ಕ್ಕೆ ಕ್ರಯ ರೂ. 2-8-0. ವಿ.ಪಿ. ಚಾರ್ಜು 0-6-0.

ಪುಕಟ! **Free Sample Coupon** ಪುಕಟ!!

ದಯವಿಟ್ಟು ಕೆಳಗಿನ ವಿಳಾಸಕ್ಕೆ ಡಾಕ್ಟರ್ ಜಿ. ಬಿ. ಯವರ ಸುಗಂಧನಶ್ಯದ ಪುಡಿಯ ಮಾದರಿ ಬಾಟ್ಲಿ ಒಂದನ್ನು ಕಳುಹಿಸಬೇಕು.

ಹೆಸರು

(*Registered*) ☞ ವಿಳಾಸ:—ಗುರುಬಸವ ಅಂಡು ಕಂಪೆನಿ, ಮದ್ರಾಸು

"ಅಮೇರಿಕದ ವಿಶಿಷ್ಟತೆ."

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿ ಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯ್ಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ-ಕಾಲದಲ್ಲಿ ಸಂಭವಿಸುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವುದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲುಪ ಪದಾರ್ಥಗಳಿರುವದರ—ದೆಸೆಯಿಂದ ಇವು ವಿದ್ಯಾವ್ಯಾಸಂಗಿಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಬಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯ್ಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ; ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, ಸುಖ ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ, ಹಸಿವು ಆಶ್ಚರ್ಯಕರವಾಗಿ-ಆರೋಗ್ಯ ಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ-ತೋರಿಬರುತ್ತದೆ. ,,ನಾಡಿ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು-ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ. ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ. ಬೆಲೆ: ಸೀಸೆ 1ಕ್ಕೆ ರೂ. 2—0—0; ಒಂದು ಸೀಸೆಯಲ್ಲಿ 40 ಗುಳಿಗೆಗಳಿವೆ.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಎರಡನ್ನು ಇಲ್ಲಿ ಕೊಡುವೆವು.

ಮೆ.ಜೇ.ಸಿ. ಬ್ರಿತೋ(ಫೊಂಡಾ-ಗೋವೆ)ಪ್ರೊ. ಜೇಮ್ಸರ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳೆಂಬ ಗುಳಿಗೆಗಳಿಂದನಾನು ಹೊಂದಿದ ಆರೋಗ್ಯಸುಖವು ಬೇರೆ ಯಾವ ಇತರ ಮದ್ದುಗಳಿಂದಲಾದರೂ ನನಗೆ ದೊರಕಲಿಲ್ಲವು; ಅಥವಾ ಎಂಥಾ ಅದ್ಭುತವಾದ ವಿದ್ಯುಚ್ಛಕ್ತಿಯ ಸೇವನವಾದರೂ ನನಗೆ ಅಷ್ಟು ಸುಖವನ್ನು ಕೊಡಲಿಲ್ಲವು. ದಯಮಾಡಿ ಕೂಡಲೇ ಈ ಗುಳಿಗೆಗಳ ಇನ್ನೆರಡು ಸೀಸೆಗಳನ್ನು ನನಗೆ ಕಳುಹಿಸಿಕೊಡಿರಿ.

ಮೆ. ಜಿ. ಆರ್. ಗಾಯಕವಾಡ, (ಸಕ್ರಿಯ ಮಾಮುಲತದಾರರು—ವಿ.ಪಿ. ದ್ವಾರಾ ಅದಷ್ಟು ತ್ವರ್ಯದಲ್ಲಿ ನನಗೆ ಇನ್ನೆರಡು ಬಾಟ್ಲಿ ಪ್ರೊ. ಜೇಮ್ಸರ ಗುಳಿಗೆಗಳನ್ನು ಕಳುಹಿಸಿರಿ. ಅವುಗಳ ಪರಿಣಾಮವು ಬಹಳ ಉತ್ತಮವಿದೆ.

ಏಜಂಟರು:—ದಿ. ಊಲನ್‌ಮಾರ್ಟ್, ಮಂಗಳೂರು.

The Anglo Indian Drug & Chemical Company,
155, Market, Jumma Musid Bomb

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ,

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨ ರೂ.

೩. ಕಾಮೇಶ್ವರ ಮಾತ್ರೆ. ಧಾತು ವರ್ಧಕವೂ ಉತ್ತೇಜಕವೂ ಸ್ತಂಭಕವೂ ಪುಂಸಕತ್ವ ನಾಶಕವೂ ಆಗಿದೆ. ಅರ್ಧ ತೊಲೆಗೆ ೨ ರೂ.

೪. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೫. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೬. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೧ ರೂ. ೮ ಆಣೆ.

೭. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೮. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

೯. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೧೦. ವಾಸಾವ ಲೇಹ. ಕೆಮ್ಮು, ಗುರ್ಲುಬ್ಬಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೧. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೨. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ದೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೩. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು. ಉರಿಯುವದಿಲ್ಲ. ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೪ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೫. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗು ಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು; ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

ತಮ್ಮ ವಿಳಾಸ:—ಬಿ. ಎಮ್ ನಾಥ್ ಮತ್ತು ಕಂಪೆನಿ,
ವೆಪರಿ ಪೋಸ್ಟು ಮದರಾಸು.

B. M. Nath & Co., *Ayurvedic Chemists,*
Vepery Post. MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಗುಣವಾಗದಿದ್ದರೆ ಹಣ ಪರತ.

ಟಿ. ಬಾಬುರಾಯರ

ವಿಶೂಚಿ ಸಂಹಾರಿ, (Cholera Pills)

ಈ ಮಾತ್ರೆಯನ್ನು ಅನುಪಾನವನ್ನರಿತು ತೆಗದುಕೊಂಡರೆ ಕೊಲೆರಾ ಅಥವಾ ಉಷ್ಣಾಲುಜುಲಾಬು ಒಂದೇ ಮಾತ್ರೆಯೊಳಗೆ ಖಂಡಿತವಾಗಿ ಗುಣವಾಗುತ್ತದೆ. ಮಾತ್ರೆ 1ರ 0—4—0 ಡಜನ್ ಒಂದರ 2—12—0.

ಎಗ್ಯು ಮಿಗ್ಸ್ಚರ್ (Ague Mixture)

ಇದರ 10 ಬೊಟ್ಟುಗಳನ್ನು 1 ಔನ್ಸ್ ತಣ್ಣೀರಿನಲ್ಲಿ ಹಾಕಿ ತಕ್ಕೊಂಡರೆ ಛಳಿಜ್ವರ, ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕಜ್ವರ, ವಿಷಮಜ್ವರ, ಮಲೆನಾಡು ಜ್ವರ ಸಹ 2 ಡೋಸುಗಳನ್ನು ತೆಗದುಕೊಳ್ಳುವದರೊಳಗೆ ಖಂಡಿತವಾಗಿ ಗುಣವಾಗುತ್ತದೆ. 1 ಔನ್ಸಿನ ಶೀಸೆಗೆ ರೂ. 1-0-0.

ನಮ್ಮಲ್ಲಿ ಇನ್ನು ಅನೇಕ ಔಷಧಿಗಳೂ ಶಾಯಿಗಳೂ ಇರುವದರಿಂದ ನಮ್ಮ ಹೆಸೂ ಕೆಟಲಾಗಿಗೆ ಬರಿಯಿರಿ.

ವಿಳಾಸ;—ಪರಿಮಳಾಂಜನ ಡಿಪೊ,
ಗೊಲ್ಲರಕೇರಿ ಮಂಗಳೂರು.

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

ಗುಣವಾಗದಿದ್ದರೆ ಹಣ ಪರತು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಹಕ, ಗರ್ಮಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ ಮುಂತಾದವು ಅತಿ ತ್ವರ್‍ಯ ಗುಣವುಂಟಾಗಿ ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳ ವರೆಗೆ ಬೇಕಾಗುವವು. ಕಿಮ್ಮತ್ತು ೧೨ ಗುಳಿಗೆಗಳಿಗೆ ೧ರೂ. ಒಮ್ಮೆಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂಪಾಯಿಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಪಾನ ಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟೆ ರವಾನಿಸುವೆವು.

ವಿಳಾಸ:—
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪೆನಿ,
ಪೋಸ್ಟ್, ಬನವಾಸಿ, ಜಿಲ್ಲ ಉತ್ತರಕನ್ನಡಾ.

ಸ್ವದೇಶಾಭಿಮಾನಿ.

☞ ಮಂಗಳೂರು, ಶುಕ್ರವಾರ ತಾರೀಕು 10ನೇ ಮೇ 1912. ☜

ಬಾಲವಿವಾಹ ಪದ್ಧತಿ.

ಸಮಾಜವನ್ನು ಕಾಡುವ ಅರಿಷ್ಟಗಳೊಳಗೆ ಬಾಲವಿವಾಹದಷ್ಟು ಚಿಂತಾಸ್ಪದವಾದ ವಿಷಯವು ಸುಧಾರಕರಿಗೆ ಬೇರೊಂದಿಲ್ಲ. ಈ ಪದ್ಧತಿಯು ಇತರ ಅನೇಕ ಸಾಮಾಜಿಕ ಬಾಧೆಗಳ ಮೂಲ ಬೀಜವಾಗಿದೆಂಬದು ಈ ಕೆಳಗಿನ ವೃತ್ತಾಂತದಿಂದ ಸ್ಪಷ್ಟವಾಗುವುದು. ಬಹುವಿಧ ಸಂಕಷ್ಟ ಕಾರಣವಾದ ಈ ಕಟ್ಟಳೆಯನ್ನು ಸರಿಗೊಳಿಸಿದರೆ ಅನೇಕ ತೊಂದರೆಗಳು ಒಂದೇ ಬಾರಿ ಪರಿಹಾರವಾಗುವವೆಂದು ಕಲ್ಕತ್ತಾ ಮದ್ರಾಸು, ಬೊಂಬಾಯಿ ಮುಂತಾದ ಮುಖ್ಯ ನಗರಗಳಲ್ಲಿ ಕಲ್ಕತ್ತಾ ಹ್ಯಾಕೋರ್ಟು ಜಡ್ಜರಾದ ಅಶುತೋಷ ಮುಕರ್ಜಿ, ಮದ್ರಾಸು ಹ್ಯಾಕೋರ್ಟು ಜಡ್ಜರು ಬಹುಮಾನಪಟ್ಟ ಸುಂದರ ಅಯ್ಯರವರೂ ಹಿಂದು ವಿವಾಹ ಸಂಸ್ಕರಣ ಸಮಾಜಗಳನ್ನು ಸ್ಥಾಪಿಸಿರುವರು. ಆದರೆ ಇಂಥಾ ಸುಧಾರಣೆಗಳು ನೆರವೇರುವಂತೆ ಜನಸಾಮಾನ್ಯರ ಅನುಮತಿ ಸಹಕಾರಗಳು ಅವಶ್ಯಕವಾದ್ದರಿಂದ ಅತ್ತಕಡೆ ವಾಚಕರ ಲಕ್ಷ್ಯವನ್ನೆಳೆಯುವೆವು.

ಸಾಮಾಜಿಕ ಕಟ್ಟಳೆಗಳಲ್ಲಿ ಪರಿಪೂರ್ಣ ತೃಪ್ತಿಕರವಾದ, ದೋಷರಹಿತವಾದ ಪದ್ಧತಿಗಳು ಯಾವದಾದರೂ ಉಂಟೆಂದು ಯಾರೂ ಹೇಳಲಾರರು. ಆ ಸಂಘ ಸುಧಾರಕರ ಉದ್ದೇಶವು ದೇಶ, ಕಾಲ, ವಿದ್ಯಮಾನಗಳಿಗನುಸಾರವಾಗಿ ತಮ್ಮ ವಿವೇಕ, ಅನುಭವಗಳ ಬಲದಿಂದ ಸಮಾಜಕ್ಕೆ ಅತ್ಯಂತ ಹಿತಕರವೂ ಅತ್ಯಲ್ಪ ಬಾಧಕಕರವೂ ಆದ ಕಟ್ಟಳೆಗಳನ್ನು ಆರಿಸುವದೇ. ಆದ್ದರಿಂದ ಪ್ರೌಢ ವಿವಾಹ ಪದ್ಧತಿಯಿಂದ ಯಾವ ತರದ ಅನಾನುಕೂಲತೆಗಳೂ ಒದಗಲಿಕ್ಕಿಲ್ಲವೆಂದು ಸಂಘಸುಧಾರಕರು ವಾದಿಸುವರೆಂತ ಪರಪಕ್ಷದವರು ಎಣಿಸಕೂಡದು. ಆದರೆ ಬಾಲವಿವಾಹವು ಎಷ್ಟುಮಟ್ಟಿಗೆ ಸಮುದಾಯದ ಕ್ಷೀಣತೆಗೆ ಕಾರಣವಾಗಿದೆಯೋ ಅಷ್ಟೇ ಮಟ್ಟಿಗೆ ಪ್ರೌಢ ವಿವಾಹವೂ ಸಮಾಜಕ್ಕೆ ಹಿತಕರವಾಗಿದೆಂದು ಅವರು ನಿಶ್ಚಯವಾಗಿಯೂ ನಂಬಿರುವರು. ಬಾಲವಿವಾಹ ಪದ್ಧತಿಯ ಅರಿಷ್ಟಗಳನ್ನು ದೈಹಿಕ, ಸಾಮಾಜಿಕ, ಸಾಂಪತ್ತಿಕಗಳನ್ನಾಗಿ ವಿಭಾಗಿಸಬಹುದು.

ತಮ್ಮ ಪ್ರಾಯಕ್ಕೆ ಮಿಕ್ಕಿರುವ ಭಾರವನ್ನು ಹೊರಿಸಿದರೆ ಚಿಕ್ಕವರ ಬೆಳವಣಿಗೆಯು ಕುಗ್ಗುವದೆಂಬುದು ಸ್ಪಷ್ಟ. ಆದ್ದರಿಂದಲೇ ಕಾರ್ಖಾನೆಗಳಲ್ಲಿ ಚಿಕ್ಕ ಮಕ್ಕಳನ್ನು ಗೇಯಗೊಡದಂತೆ ಸರಕಾರದವರು ಕಠಿಣ ಕಾನೂನುಗಳನ್ನು ಮಾಡಿರುವರು. ಚಿಕ್ಕ ಹುಡುಗಿಗೆ ಶೈಶವ ದಾಟುವಷ್ಟರಲ್ಲಿ ಸಂಸಾರದ ಅನುಭವ ದೊರೆಯುವ ಮೊದಲೇ ಮದಿವೆ ಮಾಡಿ ದಾಂಪತ್ಯದ ಜವಾಬ್ದಾರಿಗಳನ್ನೂ, ಗಂಡನ ಮನೆಯ "ಆದರಣೆ"ಯ ಸುಖವನ್ನೂ, ಅವಳ ಮೇಲೆ ಹೊರಿಸುವದನ್ನು ನಿಷೇಧಿಸಲಿಕ್ಕೆ ಮಾತ್ರವೇ ಕಾನೂನು ಇಲ್ಲ. ಇನ್ನೊಂದು ಸಂಗತಿ. ನಮ್ಮ ಅವಯವವು ಬೆಳವಣಿಗೆಯ ಚಿಹ್ನೆಯನ್ನು ತೋರಿದೊಡನೆ ಅದು ಪಕ್ವವಾಯಿತೆಂದು ನಿಶ್ಚಯವಾಗಿ ನಿರ್ಧರಿಸಕೂಡದು ಎಂದು ಶರೀರ ಶಾಸ್ತ್ರಜ್ಞರು ಹೇಳುವರು. ಮಗುವು ಹಾಲಿನ ಒಂದು ಹಲ್ಲು ಉದುರಿಸಿದೊಡನೆ ಅದಕ್ಕೆ ಗಟ್ಟಿ ಪದಾರ್ಥಗಳನ್ನು ಕರಗಿಸುವ ಶಕ್ತಿ ಬಂತೆಂದು ಎಣಿಸಕೂಡದು. ಹಾಗೆಯೇ ಹುಡುಗಿಯಲ್ಲಿ ರಜೋದರ್ಶನವಾದೊಡನೇ ಅವಳು ಮಾತೃಸ್ಥಾನಕ್ಕೆ ಯೋಗ್ಯಳಾದಳೆಂದು ಎಣಿಸಕೂಡದು. ಬಾಲವಿವಾಹದಿಂದಲೂ ಬಾಲ್ಯದಲ್ಲೇ ಮಾತೆಯರಾಗುವದರಿಂದಲೂ ಹುಡುಗ ಹುಡುಗಿಯರಲ್ಲಿ ಕಾಲಕ್ಕೆ ಮೊದಲು ಬೆಳವಣಿಗೆಯು ತೋರುವದು. ಆದರೆ ಅದು ಕಾಲಕ್ಕೆ ಮುಂಚೆ ನಿಂತು ವೃದ್ಧಿಗೆ ಹಾನಿಯೇ ಆಗುವದು. ಬಾಲವಿವಾಹವನ್ನನುಸರಿಸುವದರಲ್ಲಿ ಹುಡುಗಿಯರು ಚಿಕ್ಕ ಪ್ರಾಯದಲ್ಲಿಯೇ ನೆರೆಯಲಿಕ್ಕೂ ಬೇಗನೇ ಕುಗ್ಗಲಿಕ್ಕೂ ಇದೊಂದು ಕಾರಣ. ಹುಡುಗಿಯಾಗಿರುವಾಗಲೇ ಗರ್ಭ ತಾಳುವದರಿಂದ ಅವರು ಅನೇಕ ಕಡೆಗಳಲ್ಲಿ ಎರಡು ಮೂರು ಮಕ್ಕಳಾಗುವಷ್ಟರಲ್ಲಿ ಒಂದಲ್ಲ ಒಂದು ರೋಗಕ್ಕೆ ತುತ್ತಾಗುವರು, ಅಥವಾ ಬದುಕಿದರೂ ಕೃಶವಾಗಿಯೇ ಇರುವರು. ಗಂಡಸರಲ್ಲಿ ಮೂತ್ರ ವ್ಯಾಧಿ, ಕ್ಷಯ, ಮತ್ತು ಅಕಾಲ ವೃದ್ಧಾಪ್ಯಗಳು ಬಾಲವಿವಾಹದ ಪರಿಣಾಮವೆಂದು ಗೊತ್ತಾಗಿದೆ. ಬಾಲವಿವಾಹದಿಂದ ಹುಟ್ಟಿದ, ಆದ್ದರಿಂದ ಸ್ವಭಾವದಲ್ಲಿ ದುರ್ಬಲವಾದ ಹುಡುಗನು, ವಿದ್ಯಾಭ್ಯಾಸದಿಂದ ದೇಹವನ್ನು ದಂಡಿಸಿ ವಿದ್ಯೆಯು ತೀರುವ ಮೊದಲೇ ಮದುವೆಯಾಗಿ ದುಡಿಯಲಾರಂಭಿಸುವಷ್ಟರಲ್ಲಿ ಸಂಸಾರದ ಭಾರವನ್ನು ವಹಿಸಬೇಕಾದರೆ ಅವನಲ್ಲಿ ದೇಹದಾರ್ಢ್ಯವು ಇರುವ ಬಗೆ ಹೇಗೆ? ಜೀವನಾರ್ಥ ಕಲಹವು ದಿನೇ ದಿನೇ ಕಠಿಣವಾಗುತ್ತಾ ಬರುವುದರಿಂದ ಬಲಿಷ್ಠ ದೇಹಿಗಳು ಜಯಿಸುವರು. ಇಂತಹ ಸಂಧಿಯಲ್ಲಿ ವಿವೇಕಿಗಳು ತಮ್ಮ ಸಮಾಜದಲ್ಲಿ ದೇಹದಾರ್ಢ್ಯವು ಹೆಚ್ಚುವ ಉಪಾಯಗಳನ್ನು ಅಂಗೀಕರಿಸಲೂ ಸಮಾಜಕ್ಕೆ ಘಾತುಕವಾದ ಕಟ್ಟಳೆಗಳನ್ನು ತಿದ್ದಲೂ ತಕ್ಕುದು.

ಹುಡುಗಿಯರಿಗೆ ವಿವಾಹವನ್ನು ರಜೋದರ್ಶನ ಪೂರ್ವದಲ್ಲಿ ವಿಧಿಸಿರುವದರಿಂದ ಅನೇಕ ಸಾರಿ ಅನುಕೂಲ ದಾಂಪತ್ಯ ದೊರೆಯುವದಿಲ್ಲ. ಕಾಲ ಮೀರುವದೆಂದು ಹೆದರಿ ಇಷ್ಟವಿಲ್ಲದ ವರನಿಗೆ ಮಗಳನ್ನು ಕೊಡಬೇಕಾಗುವದು. ಇದರಿಂದ ಪರಸ್ಪರ ಪ್ರೇಮದ ಬದಲಿಗೆ ವೈಷಮ್ಯವನ್ನು ಬಿತ್ತಿದಂತಾಗುವದು. ವಧೂವರರಲ್ಲಿ ಪರಸ್ಪರ ಸ್ವಭಾವ ಸ್ನೇಹವಿದೆಯೋ ಅವರ ದಾಂಪತ್ಯವು ಸುಖಕರವಾಗುವದೋ ಎಂಬ ಮುಖ್ಯ ಪ್ರಶ್ನೆಗೆ ಈ ಕಟ್ಟಳೆಯಲ್ಲಿ ಆಸ್ಪದವೇ ಇಲ್ಲ. ಇಷ್ಟೇ ಅಲ್ಲ ಬಾಲವಿವಾಹವು ಅನುಕೂಲ ದಾಂಪತ್ಯಕ್ಕೆ ವಿರೋಧವಾಗಿದೆ. ಪ್ರೌಢ ವಿದ್ಯಾಭ್ಯಾಸ ಹೊಂದಿದ ಯುವಕನ ಅಭಿಮತಗಳನ್ನು ಅರಿಯಬೇಕಾದರೆ ಸುಶಿಕ್ಷಿತವಾದ ಸಹಧರ್ಮಿಣಿಯು ಅವಶ್ಯಕ. ಹುಡುಗಿಗೆ ಹತ್ತು ವರ್ಷದಲ್ಲಿ ಮದುವೆಯು ಅವಶ್ಯಕವಾದ್ದರಿಂದ ಅವಳ ವಿದ್ಯಾಭ್ಯಾಸಕ್ಕೆ ಅದೇ ಸಮಾಪ್ತಿ. ಪತಿಯ ವಿಚಾರಗಳನ್ನು ಒಳಕೊಂಡು ಅವನ್ನನುಸರಿಸುವ ಶಿಕ್ಷಣವಿಲ್ಲದ್ದರಿಂದಲೂ ಪ್ರಾಯ ಬಾರದ್ದರಿಂದಲೂ ಅನೇಕ ಸಾರಿ ದಂಪತಿಗಳಲ್ಲಿ ಒಡಂಬಡಿಕೆಗೆ ಕಷ್ಟವಾಗುವದು. ಬಾಲವಿವಾಹವು ಕಡ್ಡಾಯವಲ್ಲದ ಸಮುದಾಯದ ಹುಡುಗಿಯರು ಪ್ರೌಢ ವಿದ್ಯಾಭ್ಯಾಸ ಪಡೆದು ಸಮಾಜಕ್ಕೆ ಸಹಕಾರಿಗಳಾಗುವಾಗ ವಿದ್ಯೆಯ ಉಪಾಸಕರಾದ ಬ್ರಾಹ್ಮಣರ ಹುಡುಗಿಯರು ಅಜ್ಞಾನವನ್ನು ಅಂಗೀಕರಿಸಬೇಕಾಗಿ ಬಂದದ್ದು ಎಷ್ಟು ಶೋಚನೀಯವಲ್ಲ?

ದವಸಧಾನ್ಯಗಳಿಗೆ ಬೆಲೆ ಏರಿದಂತೆಯೇ ವರನಿಗೂ ಇತ್ತಿತ್ತ ಬೆಲೆ ಏರಿದೆ. ವಧುವಿನ ತಂದೆಯು ಈಗ ಮಗಳಿಗೆ ಆಭರಣಗಳ ವಿನಹಾ ವರನಿಗೆ ವಿದ್ಯಾಭ್ಯಾಸವನ್ನು ಸಹಾ ಕೊಡಬೇಕಾಗಿದೆ. ಶೇಕಡ ೬೦ ಕುಟುಂಬಗಳಲ್ಲಿ ಸಾಲ ಹೊರತು ಮದುವೆಯಾಗುವದಿಲ್ಲ. ವಿವಾಹವು ವ್ಯಾಪಾರವಾಗಿದೆ. ಪವಿತ್ರ ಸಂಸ್ಕಾರವಾದ ವಿವಾಹವು ವಿವಿಧ ಚಿಂತೆಗಳ ಆಕಾರವಾಗಿ ಪರಿಣಮಿಸಿಯದೆ. ಚಿನ್ನಾಭರಣಗಳಲ್ಲಿ ಕಟ್ಟಿಡುವ ಹಣದಿಂದ ತಂದೆಯು ಮಗಳಿಗೆ ಪ್ರೌಢ ವಿದ್ಯೆ ಎಂಬ ಆಭರಣವನ್ನು ತೊಡಿಸಿದರೆ ಮುಂದಕ್ಕೆ ಅವಳಿಗೂ ಅವಳ ವರನಿಗೂ ಮಕ್ಕಳಿಗೂ ಸಮಾಜಕ್ಕೂ ಶ್ರೇಯಸ್ಕರವಾಗುವದು.

ಇಷ್ಟು ತನಕ ಈ ಕಟ್ಟಳೆ ನಡೆಯಲಿಲ್ಲವೇ? ಇನ್ನು ಮುಂದಕ್ಕೂ ಯಾಕೆ ಕೂಡದೆಂದು ವಾದಿಸುವವರಿರಬಹುದು. ಈ ಕಟ್ಟಳೆಯು ಪೂರ್ವ ಕಾಲದಿಂದ ಇರಲಿಲ್ಲವೆಂದೂ ಕೆಲವು ಶತಮಾನಗಳಿಂದೀಚೆ ಪ್ರಚಾರಕ್ಕೆ ಬಂತೆಂದೂ ನಿಶ್ಚಯವಾಗಿದೆ.

ಒಂದು ಸಮಾಜದ ಜೀವನವನ್ನು ಶತಮಾನಗಳಿಂದ ಎಣಿಸಬೇಕಾದ್ದರಿಂದ ಅದರಲ್ಲಿ ಆದ ಬದಲಾವಣೆಗಳ ಫಲವು ಕೆಲವು ಶತಮಾನಗಳ ವಿನಹ ತೋರಿಬರುವದಿಲ್ಲ. ಈ ಕಟ್ಟಳೆಗೆ ಮುಂಚೆ ಪೂರ್ವಜರು ಸಂಚಯಿಸಿಟ್ಟ ಪುಣ್ಯ ಬಲದಿಂದ ಇದರ ಹಾವಳಿಯನ್ನು ಇಷ್ಟು ತನಕ ಸಹಿಸಿದೆವು. ಆದರೆ ಈಗಲೀಗ ಇದರ ದೋಷಗಳು ಪೂರ್ಣತೆಯನ್ನು ಹೊಂದುತ್ತಿರುವದರಿಂದ ಪ್ರತಿಕ್ರಿಯೆಯು ಅವಶ್ಯವಾಗಿದೆ. ಆದ್ದರಿಂದ ಇನ್ನೊಮ್ಮೆ ಹೇಳುವದೇನಂದರೆ— ಸಮಾಜಕ್ಕೆ ತಿಲಕ ಪ್ರಾಯರಾದ ವಿದ್ಯಾವಂತರು ಮಾಡುವ ನಿಷ್ಕಾಮ ಪ್ರಯತ್ನಗಳಲ್ಲಿ ಜನ ಸಾಮಾನ್ಯರು ಸಹಕಾರಿಗಳಾಗಿ ಅವನ್ನು ಈಡೇರಿಸತಕ್ಕದ್ದು. ಸದಸದ್ವಿವೇಚನೆಯಿಂದ ಶುಭಕರವಾದ ಮಾರ್ಗವನ್ನು ಅನುಸರಿಸತಕ್ಕದ್ದು.

ಮೂಲಶಾಲೆಗಳಲ್ಲಿ ಚಿತ್ರಲೇಖನ.

ಸರಳವಾಗಿ ತೊಡಕಾಗದಂತೆ ಓದುವುದಕ್ಕೂ ಬರೆಯುವದಕ್ಕೂ ಪ್ರತಿ ಒಂದು ಮಗುವಿಗೆ ಕಲಿಸಲು ಹೇಗೆ ಸಾಧ್ಯವಿದೆಯೋ, ಹಾಗೆಯೇ ವಸ್ತುಗಳ ರೂಪಗಳನ್ನೂ ಮಾನಸಿಕದೃಷ್ಟಿಯಿಂದ ಓದುವುದಕ್ಕೂ ಅವುಗಳ ಆಕಾರಗಳನ್ನು ಸುಲಭವಾಗಿ ಕೈಯಿಂದ ಬಿಡಿಸುವುದಕ್ಕೂ ಕಲಿಸುವುದು ಸುಲಭವಾಗಿದ್ದರೂ, ಚಿತ್ರಲೇಖನದಲ್ಲಿ ಎಲ್ಲಾ ಮಕ್ಕಳು ಪಠನ ವಾಚನಗಳಲ್ಲಿ ಇದ್ದಷ್ಟೇ ಆಸಕ್ತಿಯಿಂದ ವೃದ್ಧಿ ಹೊಂದುತ್ತಾರೆಂಬುವುದು ಸಂಶಯಾಸ್ಪದವಾದ ಮಾತು.

ವಿವೇಚಿಸಿ ನೋಡುವುದಾದರೆ ಪ್ರಖ್ಯಾತ ಚಿತ್ರಗಾರರಲ್ಲಿ ತೋರುವ ಉಪಾಧಿಗಳೆಲ್ಲವೂ ಸಾಮಾನಿನ ತಿಳುವಳಿಕೆಯ ಮಕ್ಕಳು ಚಿತ್ರ ಬಿಡಿಸುವಾಗ ಕಂಡು ಬರುವವು.

ಸೃಷ್ಟಿಕರ್ತನ ಅಪಾರ ಕರುಣೆಯಿಂದ ಸುಚಿತ್ರಕರಾಗುವಂತೆ ಒಬ್ಬರಿಬ್ಬರಿಗೆ ಮಾತ್ರ ಅಪ್ರತಿಮ ಶಕ್ತಿ ಉಂಟಾಗುವದಾದರೂ ತನ್ನ ಮನಸ್ಸು ಗ್ರಹಿಸಿದ್ದನ್ನು ಒಂದು ಮಗುವು ಕೈಯಿಂದ ಬಿಡಿಸಿತೆಂದರೆ ಆ ಮಗುವಿನ ಚಿತ್ರಲೇಖನದ ಮಟ್ಟಿಗೆ ಮಾತ್ರವಾಗಿಯಾದರೂ ಪ್ರಖ್ಯಾತ ಚಿತ್ರಗಾರನ ಮಾನಸಿಕ ಶಕ್ತಿಯ ಮೂಲಾಂಶಗಳೆಲ್ಲವೂ ಕಂಡು ಬರುವವು. ಉಪಾಧ್ಯಾಯರು ಮಾಡುವ ಕೆಲವು ಕುಂದಕಗಳು ಯಾವುವೆಂದರೆ (1) ಪ್ರತಿ ಒಂದು ಚಿತ್ರವೂ ಒಮ್ಮೆಯೇ ಅತ್ಯುಚ್ಛವಾಗುವಂತೆ ಕುತೂಹಲ ಪಡುವುದು. (2) ಮಕ್ಕಳಿಗೋಸ್ಕರ ಒಂದು ಚಿತ್ರವನ್ನು ಸಂಪೂರ್ಣವಾಗಿ ಬಿಡಿಸಿ ಬಿಟ್ಟು ಅದರ ನಕಲು ತೆಗಿಸಲು 'ಹುಕುಂ' ಕೊಡುವುದು. (3) ಚಿತ್ರಲೇಖನ ಪಾಠದಲ್ಲಿ ವಿದ್ಯಾಭ್ಯಾಸದ ಮೂಲಸೂತ್ರಗಳನ್ನು ಮರೆತು ಬಿಡುವುದು. (4) ಮೇಲುದ್ಯೋಗಸ್ಥರಿಂದ 'ಗ್ರೇಂಟಿನ' ಶಿಫಾರಸು ಹೊಂದುವ ಹಾಗೆ ಮಕ್ಕಳ ಕೆಲಸವನ್ನು ತಾವಾಗಿ ತಿದ್ದುವುದು.

ವಿದ್ಯಾಭ್ಯಾಸದ ಮೂಲಸೂತ್ರಗಳ ಪ್ರಕಾರ ಈ ರೀತಿಯಲ್ಲಿ ಕಲಿಸುವದು ಒಳ್ಳೇಯದು. ಮಕ್ಕಳ ಸಾಮಾನ್ಯ ತಿಳುವಳಿಕೆಗೆ ಮಕ್ಕಳಿಗೆ ಗೋಚರವಾಗುವಂತೆ ಚಿತ್ರಗಳನ್ನು ಬಿಡಿಸಲು ಕುತೂಹಲ ಹುಟ್ಟಿಸುವುದು. ಇದರಲ್ಲಿ ವಸ್ತುಗಳ ಸ್ಥೂಲಾಕಾರಗಳಿಂದ ಮೊದಲಾಗಿ ವಸ್ತುಗಳ ಸೂಕ್ಷ್ಮ ಭಾಗಗಳನ್ನು ಬಿಡಿಸಲು ಕಲಿಸುವುದು. ಪ್ರಾಮುಖ್ಯವಾದ ಒಂದು ವಸ್ತುವನ್ನು ಮಕ್ಕಳ ಕಣ್ಣೆದುರಿಗಿಟ್ಟು ಅದರ ಆಕಾರ, ಉಪಯೋಗ, ಮುಂತಾದವುಗಳ ಕುರಿತು ವಿನೋದದಿಂದ ಪರಸ್ಪರ ಸಂಭಾಷಿಸಿ ಆ ವಸ್ತುವಿನ ಆಕಾರವು ಮಾನಸಿಕದೃಷ್ಟಿಯಲ್ಲಿ ಸರ್ವ ಪ್ರಕಾರವಾಗಿ ಖಚಿತವಾಗುವಂತೆ ಮಾಡಬೇಕು. ಮಕ್ಕಳಿಗೆ ಅತಿಯಾಗಿ ಸಹಾಯಮಾಡಬಾರದು—ಮಟ್ಟಮೊದಲು ಮಕ್ಕಳ ಚಿತ್ರಗಳು ವಿರೂಪವಾಗಿಯೂ ಹಾಸ್ಯಾಸ್ಪದವಾಗಿಯೂ ಇರಬಹುದು. ಆದರೆ ಆಯಾ ಮಕ್ಕಳ ಮಾನಸಿಕ ಶಕ್ತಿಯು ವೃದ್ಧಿಹೊಂದಬೇಕಾದರೆ ಹೀಗೆಯೇ ಪ್ರಾರಂಭಿಸಬೇಕು. ಚಿತ್ರದಲ್ಲಿ ಏನೋ ತಪ್ಪಿರಬೇಕೆಂದು ತಿಳಿಸಬೇಕಲ್ಲದೆ ಉಪಾಧ್ಯಾಯನು ಸ್ವತಹ ತಿದ್ದಬಾರದು. ರಬ್ಬರನ್ನು ಹೆಚ್ಚಾಗಿ ಉಪಯೋಗಿಸಲು ಕಲಿಸಬಾರದು. ಕೆಳ ದರ್ಜೆಗಳಲ್ಲಿ ರಬ್ಬರೇ ಇರಬಾರದು.

ಜ್ಞಾಪಕದಿಂದ ಮಕ್ಕಳು ಚಿತ್ರ ಬಿಡಿಸುವಂತೆ ಹೆಚ್ಚು ಅಭ್ಯಾಸ ಮಾಡಬೇಕು. ಇದರಷ್ಟು ಪ್ರಯೋಜನಕರವ್ಯಾವುದೂ ಇಲ್ಲ. ಒಂದು ವಸ್ತುವನ್ನು ಚನ್ನಾಗಿ ಪ್ರತೀಕ್ಷಿಸಿ ಅದರ ಭಾವನೆಯು ಮನಸ್ಸಿನಲ್ಲೇ ನೆಲೆಗೊಳ್ಳುವ ಹಾಗೆ ಕಲಿಸಬೇಕು. ಕಣ್ಣಿಟ್ಟು ನೋಡುವುದೆಂದರೆ ಕಣ್ಣು ಬಿಟ್ಟು ನೋಡುವದೆಂದಲ್ಲವೆಂದು ಉಪಾಧ್ಯಾಯನು ಚನ್ನಾಗಿ ತಿಳಿದಿರಬೇಕು.

ಶಾಲೆಯಲ್ಲಿ ತೂಗಾಡಿಸಲ್ಪಡುವ ಚಿತ್ರಗಳು ಗೋಡೆಗಳಿಗೆ ಅಲಂಕಾರವಾಗಿ ಮಾತ್ರವಲ್ಲ. ಮಕ್ಕಳ ಮನಸ್ಸು ಅವುಗಳ ಕಡೆಗೆ ಚಲಿಸುವಂತೆಯೂ ಅವುಗಳ ವಿಷಯ ಪ್ರಶ್ನೋತ್ತರ ನಡಿಸುವಂತೆಯೂ ಉಪಾಧ್ಯಾಯನು ಜಾಗರೂಕರನಾಗಿರಬೇಕು.

'ನೇಚರ್ ಸ್ಟಡಿ' ಎಂಬ ವಸ್ತುಪಾಠಗಳಲ್ಲಿ ಮತ್ತು ಕಥಾ ಪಾಠಗಳಲಿ, ವಿಷಯಗಳನ್ನು ಸಮ್ಮಿಲಿತವಾಗಿ ಕಲಿತು ಮಕ್ಕಳು ಮುಂದರಿಸುವ ಹಾಗೆಯೇ ಚಿತ್ರಲೇಖನದಲ್ಲಿಯೂ ವಿಶ್ವವೆಂಬ ವಿದ್ಯಾಲಯದ ಪ್ರತಿಯೊಂದು ತರಗತಿಯ ವಸ್ತುಗಳ ಭಾವನಾರೂಪಗಳನ್ನು ಮಕ್ಕಳು ಬಿಡಿಸುವುದು ಒಳ್ಳೇದು. ಶೀಘ್ರದಲ್ಲಿಯೂ ನಿರಾಯಾಸದಿಂದಲೂ ಸರಿಯಾಗಿ ಪ್ರತೀಕ್ಷಿಸಿ ಚಿತ್ರಗಳನ್ನು ಬಿಡಿಸುವ ಹಾಗೆ ಕಲಿಸಬೇಕು. ಆದರೆ ವಸ್ತುವಿನ ಪ್ರತಿಯೊಂದು ಭಾಗದ ಕುಲಂಕುಶವು ಅಗತ್ಯವಿರುವುದಿಲ್ಲ.

ವಸ್ತುಗಳ ಭಾಗಗಳ ಪರಸ್ಪರ ಪರಿಮಾಣ ಸಂಬಂಧಗಳನ್ನು ಜಾಗ್ರತೆಯಿಂದ ಕಲಿಸುವುದೊಳ್ಳೆಯದು.

M. N. Kamath.
Bantval.

ಹಿಂದೂ ಜನರ ಸದಾಚರಣೆಗಳು.

ಈ ಯುಗವನ್ನು ಕಲಿಯುಗವೆಂದೆನ್ನುವರೆ ಕುರುಹುಗಳ್ಯಾವವು? ಇದು ಜ್ಞಾನೋದಯದ್ದಲ್ಲವೇ! ಕ್ರಿಸ್ತಿಯ ವಿದ್ಯಾಮಂಡಲಿಯ (Christain Literary Society) ಪುಸ್ತಕಗಳನ್ನು ತುಸಹೊತ್ತು ವಿಮರ್ಶಿಸಿರಿ. ಅದಂತಿರಲಿ. ಪಾಶ್ಚಾತ್ಯರ ಆಗಮನವು ನಮ್ಮ ನಾಗರಿಕತೆಯ ಕಾರಣವೆಂದೆನ್ನುವಾ. ಈ ಸುಧಾರಣೆಯಲ್ಲಿ ಮಗ್ನರಾಗಿ ವಿದ್ಯೆ ದ್ರವ್ಯಾದಿಗಳಿಂದ ಮೆರೆಯುತ್ತಾ ಸುಖಿಗಳಾಗಿರಬೇಕೆಂಬದು ಈ ನಾಗರಿಕತೆಯ ಉದ್ದಿಶ್ಯವಿರಲು, ಇವುಗಳಿಂದ ಲೌಕಿಕ ಸುಖ ತುಲಾಕೋಟಿಯನ್ನು ಜನರು ಪಡೆಯಲು ಕಲಿ ಎಲ್ಲಿ? ಯುಗವೆಲ್ಲಿ? ಅದಲ್ಲದೆ ಅಲ್ಪಸ್ವಲ್ಪ ವಿದ್ಯೆಯನ್ನು ಪಡೆದು ಇಂತಹ ನಾಗರಿಕತೆಯನ್ನು ಶ್ಲಾಘಿಸಿ ನಮ್ಮ ಪೂರ್ವ ಜನರನ್ನು ಮೂಢರೆಂದೆಣಿಸುತ್ತಾ ಇಂಥಾ ನಾಗರಿಕತೆಯ ಬಾಹ್ಯವನ್ನವಲಂಬಿಸಿ ಇದೇನೋ ಕಲಿಯುಗವೋ ಎಂದು ಹೀಯಾಳಿಸುವ ಜನರ ಸಂಖ್ಯೆಯು ಅಷ್ಟಿಷ್ಟಲ್ಲಾ! ಏನೊಂದನ್ನೂ ಪರ್ಯಾಲೋಚಿಸದೆ ನಮ್ಮ ಹಿರಿಯರ ನಿಯಮ ಧರ್ಮ ಕಟ್ಟುಗಳಲ್ಲಿ ಮೂಢ್ಯತೆಯನ್ನಾರೋಪಿಸಿ ಆಧುನಿಕ ವಿದ್ಯೆಯಲ್ಲದೆ ಮತ್ತೊಂದಿಲ್ಲವೆಂದು ಭಾವಿಸಿಕೊಂಡು ಪ್ರಾಚೀನ ಹಿಂದೂ ಋಷಿಗಳ ಸದ್ಧರ್ಮಗಳನ್ನು ಮನಃಪೂರ್ವಕವಾಗಿ ತ್ಯಜಿಸುವದಲ್ಲದೆ ಈಗಿನ ಕ್ರಿಸ್ತಿಯ ಮತವನ್ನಾದರೋ ಸ್ವೀಕರಿಸದೆ, ದೇವದೈವವೆಂಬುದರಗೊಡವೆ ತಾರದೆ ನಾಸ್ತಿಕರಂತೆ ಅಲೆಯುವ ಇಂಥವರ ಸ್ಥಿತಿಯನ್ನು ನೋಡಿದ್ದಲ್ಲಿ ಇದು ಕಲಿಯುಗವೊ ಇದರ ಮತ್ತಿನ ಕಲಿಯುಂಟೋ ಎಂಬದನ್ನು ವಾಚಕರೇ ನಿಷ್ಕರ್ಷಿಸಲಿ.

ಆಚಾರ ಶಾಸ್ತ್ರಗಳಲ್ಲಿ ಜನಾಭಿಮಾನವು ಹೀಗಿರುತ್ತಾ, ಮಿಶ್ಯನೆರಿಗಳು ಜನರನ್ನೆಲ್ಲಾ ಮತಾಂತರವನ್ನಂಗೀಕರಿಸಲುದ್ಯುಕ್ತರಾಗಿರುತ್ತಾ ಈ ಹಿಂದೂ ಮತವು ಅಳಿದು ಹೋಗದೆ ಇದ್ದದ್ದನ್ನು ನೋಡುವಾಗ ಇದರ ನಿಯಮಗಳಲ್ಲಿ ಮಹಾತ್ಮ್ಯವಿರಲವಶ್ಯ. ಈ ಮಹಾತ್ಮ್ಯವನ್ನು ಪಾಶ್ಚಾತ್ಯರಲ್ಲಿ ಕೊಂಚ ಮಂದಿ ಕಂಡು ಹಿಡಿದಿದ್ದಾರಷ್ಟೆ. ಇದರ ಪ್ರತಿ ಹಿಂದೂ ಜನರು ಕೂಡಾ ತಮ್ಮ ಏಳಿಗೆಗೆ ಯುಕ್ತವಾದ ಪಾಶ್ಚಾತ್ಯರ ಹಲವು ಯಶಸ್ಕರ ಗುಣಗಳನ್ನು ಲಕ್ಷೀಕರಿಸದೆ, ಅವರಲ್ಲಿಯ ಇಹ ಸುಖ ವ ಸೌಲಭ್ಯವನ್ನೇ ನಿರೀಕ್ಷಿಸಿ, ತಂತಮ್ಮ ಆಚಾರಭ್ರಷ್ಟರಾಗಿ, ನಾಗರಿಕತೆಯ ಪ್ರಾಮುಖ್ಯಾಂಶವೇ ಇದೆಂದು ಪರಸುಖವನ್ನೆಷ್ಟುಮಟ್ಟಿಗೂ ಬಯಸದೆ ತಮ್ಮ ಜೀವಮಾನವನ್ನು ವೃಥಾ ಕಳೆಯುವದುಂಟು.

ಪರಸುಖ ಸಾಧನೆಯಮಟ್ಟಿಗೆ ಇಹಸುಖ ತ್ಯಾಗವು ನಮ್ಮ ಹಿಂದೂ ಮತದ ಯಶೋತಿಲಕವಲ್ಲವೇ! ಇದನ್ನು ಸಾಧಿಸುವರೆ ದೇಶಭ್ರಷ್ಟರಾಗಿ ವನಗುಹೆಗಳ ವಾಸವೂ ಕಾಷಾಯ ವಸ್ತ್ರಧಾರಣವೂ ಅವಶ್ಯಕವಲ್ಲವು. ಲೌಕಿಕ ವಿಷಯಗಳಲ್ಲೇ ಮನಸನ್ನಿಡದೆ ಜೀವ ಸಂರಕ್ಷಣೆಗೆ ಬೇಕಾದವುಗಳನ್ನನುಸರಿಸಿ, ಕರ್ತವ್ಯವೆಂಬಂತೆ ಪರಮಾತ್ಮನಲ್ಲಿ ಧ್ಯಾನವಿಡುವದು ಇದರ ಸಾರಂಶವು. ಇಚ್ಛೆ ಅನಿಚ್ಛೆಗಳಿಲ್ಲದವನೇ ನಿತ್ಯ ಸನ್ಯಾಸಿಯೆಂದು ಶ್ರೀ ಕೃಷ್ಣ ಭಗವಂತನು ಹೇಳಿರುತ್ತಾನೆ. ಇಂಥಾ ವೈರಾಗ್ಯವು ಹಿಂದೂಸ್ಥಾನದಲ್ಲಲ್ಲದೆ ಅನ್ಯಪ್ರಾಂತ್ಯಗಳಲ್ಲಿ ಅಪೂರ್ವವು. ನಮ್ಮ ಬಾಳ್ವೆಯ ಉದ್ದಿಶ್ಯವು ಧನಮಾನಸುಖವಲ್ಲ; ಪರಮಾತ್ಮನಲ್ಲಿ ಐಕ್ಯವಾಗುವ ಸಾಧನೆಯೇ. ನಮ್ಮ ಪೂರ್ವಜರಲ್ಲದೆ ಅನ್ಯಜನಾಂಗದವರು ಇಂಥಾ ಸಾಧನೆಯಿಂದ ಜೀವ ಸಾಫಲ್ಯವನ್ನು ಹೊಂದಿದ್ದಿಲ್ಲಾ. ಧರ್ಮಕ್ಕನುಗುಣವಾಗಿ ನಡಿಯುವದೇ ಕರ್ಮವೆಂದು ಋಷಿಗಳ ಅಭಿಪ್ರಾಯವು. ಕಾಮಗಳಲ್ಲಿ ಆಸಕ್ತರಾಗದೆ ಸಾಧ್ಯವಿದ್ದಷ್ಟುಮಟ್ಟಿಗೆ ಅವುಗಳನ್ನು ಜೈಸುವದೂ ಭ್ರಾತೃಭಾವವು ಜನರಲ್ಲಿ ಉದ್ಭವಿಸುವಂತೆ ನಡಿಯುವದೂ ಸದ್ಕರ್ಮದ ಸಾರವು. ಮಹಾಜ್ಞಾನಿಯಾದ ಕ್ರಿಸ್ತನು ಈ ಸಂಗತಿಗಳನ್ನು ಬೋಧಿಸುವ ಸಾವಿರಾರು ವರುಷಗಳ ಮುಂಚೆಯೇ ನಮ್ಮ ಮಹರ್ಷಿಗಳು ಈ ಸುಜ್ಞಾನವನ್ನು ಜನರಿಗೆ ತಿಳಿಸಿದ್ದಾರೆ.

ಸಾರ್ಜೆಂಟ್ ಬೆಲೆಂಟ್ಯಾನರೆಂಬ (Serjeant Ballantyne) ಇಂಗ್ಲಿಷು ಬ್ಯಾರಿಷ್ಟರರೊಬ್ಬರು ಇಂಡಿಯಾ ದೇಶಕ್ಕೆ ಬಂದಿದ್ದಾಗ "ಕಂಫರ್ಟ್" (Comfort) ಎಂಬ ಇಂಗ್ಲಿಷು ಶಬ್ದಕ್ಕೆ ತುಲ್ಯ ಶಬ್ದವು ಈ ದೇಶದ ಭಾಷೆಗಳಲ್ಲಿ ಕಂಡುಬರುವದಿಲ್ಲವೆಂತ ಹೇಳುತ್ತಿದ್ದರಂತೆ. ಹೀಗಿರುವಾಗ ನಮ್ಮ ಪೂರ್ವಜರು ಎಷ್ಟರಮಟ್ಟಿಗೆ ಇಹಸುಖಿಗಳಾಗಿದ್ದರೋ ಪರಮಾತ್ಮನೇ ಬಲ್ಲಾ. ಈಗಾದರೋ ಇಹಸುಖವೇ ದೇವಾಂಶವೆಂಬ ಗಣನೆಯುಂಟು.

ಮಂಗಳೂರು.
ತಾ. 2–5–1912 } K. P. P.

ಪಶ್ಚಿಮ ಕರಾವಳಿಯ ಕುಷ್ಕಿ ಭೂಮಿಗಳಲ್ಲಿ ಸ್ಥಿರವಾಗಿ ಮಾಡಲ್ಪಡಬಹುದಾದ ಕೃಷಿ.

ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಗುಡ್ಡದ ನೆಲ್ಲನ್ನು ಹಂಗಾಮಿಯಾಗಿ ಬೆಳೆಸುವದಕ್ಕಾಗಿ ಗುಡ್ಡದ ಪಕ್ಕೆಗಳಲ್ಲಿರುವ ಕಾಡು ವನಸ್ಪತಿಯನ್ನು ಸುಟ್ಟು ನಾಶಮಾಡುವದು ಆ ಪ್ರದೇಶದ ಮುಂದಿನ ವ್ಯವಸಾಯದ ಅಭಿವೃದ್ಧಿಗೆ ಒಂದು ವಿಶೇಷವಾದ ಗಂಡಾಂತರವಾಗಿಯದೆ. ಹಿಂದಿನ ಕಾಲದಲ್ಲಿ ಬಹಳ ಕಾಲಕ್ಕೆ ಒಮ್ಮೆ, ಹೀಗೆ ಗುಡ್ಡ ಪಕ್ಕೆಗಳ ವನಸ್ಪತಿಯನ್ನು ಹಸನಮಾಡುತ್ತಿದ್ದರು; ಇದರಿಂದ ವನಸ್ಪತಿಗೆ ತಿರಿಗಿ ಮೊಳೆಯುವದಕ್ಕಾದರೂ ಆಸ್ಪದವಿತ್ತು. ಆದರೆ ಈ ಕಾಲದಲ್ಲಿ ಜನಸಂಖ್ಯೆಯು ಹೆಚ್ಚಾಗಿ ಸ್ವಲ್ಪ ಕಾಲದ ಅಂತರದೊಳಗೇನೇ ಹಾಗೆ ಹಸನಮಾಡುತ್ತಾರೆ. ಈ ಕಾರಣದಿಂದ ಕಾಡುಗಳು ಅದೃಶ್ಯವಾಗುವವು ಅಥವಾ ಬಹಳ ತ್ವರ್ಯದಲ್ಲಿ ಅದೃಶ್ಯವಾಗುತ್ತಿರುವವು. ಇಂಥಾ ಗುಡ್ಡಪಕ್ಕೆಗಳು ಬಹಳ ಕಮ್ಮಿ ಮೌಲ್ಯ ಉಳ್ಳವುಗಳಾದರೂ, ಪಶ್ಚಿಮ ಕರಾವಳಿಯ ನೆಲ್ಲು ಸಾಗುವಳಿಗೆ ಒಂದು ಮುಖ್ಯವಾದ ಆಧಾರವಾಗಿರುತ್ತದೆ. ನೆಲ್ಲುಗದ್ದೆ ಸಾಗುವಳಿಯು ಹೆಚ್ಚು ಲಕ್ಷ್ಯವಿಟ್ಟು ಮಾಡಲ್ಪಡುವ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೆಲವು ಒಳ್ಳೇ ಸಾಗುವಳಿದಾರರು ಈ ಸಂಗತಿಯನ್ನು ಗಣನೆಗೆ ತಕ್ಕೊಂಡು ತಮ್ಮ ನೆಲ್ಲು ಗದ್ದೆಗಳ ಸಮೀಪವಿರುವ ಕಾಡುಗಳನ್ನು ಹೆಚ್ಚು ಜಾಗ್ರತೆಯಿಂದ ಕಾಪಾಡುತ್ತಾರೆ. ಈ ಕಾಡು ವನಸ್ಪತಿಯು ಮಳೆಕಾಲದಲ್ಲಿ ಗುಡ್ಡಪಕ್ಕೆಗಳಿಂದ ನೀರು ಓಡಿ ಹೋಗದ ಹಾಗೆ ಆತಂಕಿಸುವದರಿಂದ ಮಳೆ ನೀರು ಭೂಮಿಯೊಳಗೆ ಹೀರಲ್ಪಟ್ಟು ಊಟೆಗಳನ್ನು ಸಮೃದ್ಧಿಗೊಂಡು ಕಾಲಿವೆ ಹಳ್ಳಗಳಾಗಿ ಹರಿಯುವವು. ಈ ಕಾಲಿವೆ ಹಳ್ಳಗಳ ನೀರು ಪೈರುಗಳಿಗೆ ನೀರು ಕಟ್ಟುವದಕ್ಕೆ ಉಪಯೋಗಿಸಲ್ಪಡುವದು. ಹೀಗಿರುವದರಿಂದ ಈ ಗುಡ್ಡೆ ಪಕ್ಕೆಗಳಲ್ಲಿರುವ ಕಾಡುವನಸ್ಪತಿಯು ನೀರು ಕೂಡಿಸಿಡುವ ಕೆರೆಯ ಆಧಾರ ಗೋಡೆಯ ಹಾಗೆ, ಒಂದು ಸ್ವಾಭಾವಿಕವಾದ ಆಧಾರ ಗೋಡೆಯಾಗಿರುವದು. ಈ ಕಾಡು ವನಸ್ಪತಿಯು ಅಲ್ಲವಾದರೆ, ಮಳೆಗಾಲದಲ್ಲಿ ಹರಿಯುವ ನೀರು ಗುಡ್ಡಪಕ್ಕೆಗಳಲ್ಲಿ ಪ್ರವಾಹಗಳಲ್ಲಿ ಇಳಿದು, ಕಂದರ ಕಣಿವೆಗಳನ್ನು ತುಂಬಿ, ತಗ್ಗುಗಳಲ್ಲಿರುವ ನೆಲ್ಲು ಪೈರುಗಳನ್ನು ಕೆಡಿಸಿ, ಪ್ರವಾಹದಲ್ಲಿ ಎಳಕೊಂಡು ಬಂದ ಕೀಳು ಸ್ವಭಾವದ ಕಲ್ಲುಮಣ್ಣನ್ನು ಆ ತಗ್ಗು ಭೂಮಿಗಳಲ್ಲಿಟ್ಟು ಭೂಮಿಯನ್ನು ಕೆಡಿಸುವದು. ಈ ಕಾಡು ವನಸ್ಪತಿಯು ಇದ್ದರೆ, ತಗ್ಗುಗಳಲ್ಲಿ ಮಾಡಲ್ಪಡುವ ನೆಲ್ಲು ಪೈರುಗಳಿಗೆ ಎಲೆ ಗೊಬ್ಬರವನ್ನು ಒದಗಿಸಿ, ಗದ್ದೆಗಳ ಸಾರವತ್ತನ್ನು ಕಾಪಾಡುವದು. ಇತ್ತಟ್ಟಿನಲ್ಲಿಯೂ ಗುಡ್ಡಪಕ್ಕೆಗಳಿದ್ದು ನಡುವೆ ಇರುವ ತಗ್ಗುಭೂಮಿಗಳು ಎಷ್ಟು ಸಾರವತ್ತಾದ ಗದ್ದೆಗಳೆಂತ ಪ್ರತಿ ಒಬ್ಬನಿಗೆ ಗೊತ್ತಿರುವದು. ಆದ್ದರಿಂದ ಹಂಗಾಮಿ ಸಾಗುವಳಿಗಾಗಿ ಗುಡ್ಡದ ಪಕ್ಕೆಗಳ ಕಾಡು ವನಸ್ಪತಿಯನ್ನು ಹೋಗಲಾಡಿಸುವದರಿಂದ, ಪಶ್ಚಿಮ ಕರಾವಳಿ ಪ್ರದೇಶದ ಮುಖ್ಯ ಆಹಾರ ಜೀನಸಾದ ನೆಲ್ಲಿನ ಸಾಗುವಳಿಗೆ ನಿಜವಾದ ಗಂಡಾಂತರ ಉಂಟಾಗುವದೆಂತ ಸ್ಪಷ್ಟವಾಗುವದು. ಮೇಲೆ ಹೇಳಿದ ಕಾರಣಗಳನ್ನು ಅಂಗೀಕರಿಸಿದರೆ, ಇಂಥಾ ಹಂಗಾಮಿ ಸಾಗುವಳಿಯನ್ನು ಬೇಗನೇ ಬಿಟ್ಟಷ್ಟು ಒಳ್ಳೇದೆಂಬದು ನಿಸ್ಸಂಶಯಕರವಾಗಿರುತ್ತದೆ, ಗುಡ್ಡದ ನೆಲ್ಲಿನ ಸಾಗುವಳಿಯು ಯಾವಾಗಲೂ ನಿಶ್ಚಯವಿಲ್ಲದ ವ್ಯಾಪಾರವಾಗಿರುವದು. ಯಾಕಂದರೆ, ಆ ಪೈರು ನೆಲದಲ್ಲಿ ಸ್ಥಿರಗೊಳ್ಳುವ ಮುಂಚೆ, ಅಧಿಕ ಮಳೆಯಿಂದ ಕೆಟ್ಟುಹೋಗಬಹುದು; ಅಥವಾ ದುರ್ಭಿಕ್ಷದಿಂದಲೂ ಕೆಟ್ಟುಹೋಗಬಹುದು; ಅಥವಾ ಕಾಡುಮೃಗಗಳಿಂದಲೂ ಕೆಡಿಸಲ್ಪಡಬಹುದು. ಈ ಗುಡ್ಡ ಪಕ್ಕೆಗಳಲ್ಲಿ ಸಾಗುವಳಿ ಮಾಡುವದನ್ನು ಬಿಟ್ಟುಬಿಡುವದರಿಂದ ಉಂಟಾಗುವ ಹುಟ್ಟುವಳಿ ನಷ್ಟವನ್ನು ಕಾಡು ವನಸ್ಪತಿಯ ಮೂಲಕ ತಗ್ಗು ಭೂಮಿಗಳಲ್ಲಿ ಉಂಟಾಗುವ ಅಭಿವೃದ್ಧಿಯು ಸಲ್ಲಿಸುವದು. ಜನಸಂಖ್ಯೆಯು ಹೆಚ್ಚುತ್ತಲೇ, ವ್ಯವಸಾಯ ವೃತ್ತಿಯ ಜನರಿಗೆ ವೃತ್ತಿಯು ಬೇಕಾಗುವದು. ನೆಲ್ಲು ಸಾಗುವಳಿಗೆ ವರುಷದ ಕೆಲವು ಕಾಲಗಳಲ್ಲಿ ಮಾತ್ರ ಕೆಲಸವಿರುವದು. ಆದದರಿಂದ ದಿನದಿನ ಕೂಲಿ ಕೆಲಸ ಮಾಡಿ ಜೀವಿಸುವ ಅನೇಕರಿಗೆ, ಬಾಕಿ ಕಾಲದಲ್ಲಿ ಕೆಲಸ ಸಿಕ್ಕದೆ, ವೈಗಳ್ಳರಾಗಿ, ಜೀವನೋಪಾಯವಿಲ್ಲದೆ ಇರುವರು. ಈ ಕಾರಣದಿಂದ ಈಗ ಅನೇಕರು ಊರು ಬಿಟ್ಟು ಪರದೇಶಕ್ಕೆ ಹೋಗುವರು. ಇದಕ್ಕೆ ವಿಶೇಷವಾದ ನಿವೃತ್ತಿಯಾಗಿ, ಲಾಭಕರವಾದ ಭಾರಿ ಕೃಷಿಯನ್ನು (Intensive cultivation) ಹುಡುಕಬೇಕಾಗಿಯದೆ. ನೆಲ್ಲು ವ್ಯವಸಾಯಕ್ಕೆ ಬೇಕಾದ ಎಲೆ ಗೊಬ್ಬರ ಒದಗಿಸುವದಕ್ಕೆ ಉಪಯೋಗವಿಲ್ಲದ ಗುಡ್ಡಪಕ್ಕೆಗಳಲ್ಲಿರುವ ಸಾಧಾರಣವಾಗಿ ಸಮತಟ್ಟುಳ್ಳ ನೆಲಗಳಲ್ಲೇ ಈ ಭಾರಿ ಕೃಷಿಯು ಸಾಧ್ಯವಾಗಿರುವದು. ಇಂಥಾ ನೆಲಗಳು ಮಿತಿಯಾಗಿರುವದರಿಂದ ಅವುಗಳಲ್ಲಿ ಮಾಡಲ್ಪಡುವ ಕೃಷಿಯು ಭಾರಿ ತರದ್ದಾಗಿಯೂ ಸ್ಥಿರವಾಗಿಯೂ ಇರಬೇಕು. ಭಾರಿ ಕೃಷಿಯು ಯಾವಾಗಲೂ ಲಾಭಕರವು. ಸ್ಥಿರವಾಗಿಯೂ ಲಾಭಕರವಾಗಿಯೂ ಭಾರಿ ಕೃಷಿಮಾಡಬೇಕಾದರೆ ಅಂಥಾ ಭೂಮಿಯ ಸುತ್ತಲೂ ಬೇಲಿಯನ್ನು-ಯಾ-ಗೋಡೆಯನ್ನು ಹಾಕಬೇಕು ಮತ್ತು ಭೂಮಿಯನ್ನು ಸಮತಟ್ಟಾದ ಅಂಶಗಳಾಗಿ ವಿಭಾಗಿಸಬೇಕು. ಪೈರನ್ನು ಬೆಳಸಿ, ಅದನ್ನು ಕಾಡ ಹಂದಿ, ಮುಳ್ಳುಹಂದಿ, ಹೆಗ್ಗಣ ಮುಂತಾದವುಗಳಿಂದ ನಾಶಪಡಿಸಲು ಬಿಡುವದು ಉಚಿತವಲ್ಲ. ಸ್ಥಳವನ್ನು ಸ್ಥಿರವಾದ ಕೃಷಿಗೆ (permanent cultivation) ಉಪಯೋಗಿಸಲ್ಪಡಬೇಕಾದರೆ, ಗೇಣಿದಾರನಿಗೆ ಅನೇಕ ವರುಷಗಳ ವರೇಗೆ ಗೇಣಿಗೆ ಕೊಡತಕ್ಕದ್ದು. ಇದರಿಂದ ಧನಿಯನಿಗೂ ಗೇಣಿದಾರನಿಗೂ ಒಳ್ಳೇದು. ಕಾಯಂ ಗೇಣಿದಾರನಾದರೆ ಭೂಮಿಯನ್ನು ಲಕ್ಷದಿಂದ ನೋಡುವನು. ಸ್ವಲ್ಪ ಕಾಲಕ್ಕೆ ಮಾತ್ರ ಸಾಗುವಳಿ ಮಾಡುವ ಗೇಣಿದಾರನು ಆ ಸ್ಥಳದಿಂದ ಆದಷ್ಟು ಉತ್ಪತ್ತಿಯನ್ನು ಹೊಂದಿದ ನಂತರ ಸ್ಥಳವನ್ನು ಬಿಟ್ಟುಬಿಡುವದು ಸಹಜವೇ. ಅನಂತರ ಆ ಸ್ಥಳಕ್ಕೆ ಬೇರೆ ಗೇಣಿದಾರನು ಅನೇಕ ವರುಷಗಳ ವರೇಗೆ ಸಿಕ್ಕುವದಕ್ಕೆ ಕಷ್ಟವಾಗುವದು. ಆದ್ದರಿಂದ ಹೆಚ್ಚು ವರ್ಷಗಳ ವರೇಗೆ ಗೇಣಿಗೆ ಕೊಡುವದು ಇತ್ತಟ್ಟಿಗೂ ಒಳ್ಳೇದು. ಮಲೆಬಾರ ಜಿಲ್ಲೆಯಕ್ಕಿಂತಲೂ ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಇಂಥಾ ಸ್ಥಿರ ಸ್ವಭಾವದ ಕುಷ್ಕಿ ವ್ಯವಸಾಯವು ಹೆಚ್ಚು ವಾಡಿಕೆಯಾಗಿಯೂ ಹೆಚ್ಚು ಶ್ರದ್ಧೆಯಿಂದಲೂ ಮಾಡಲ್ಪಡುವದು. ಭಾರಿ ಕೃಷಿ ಮಾಡುವದಕ್ಕೆ ಹೆಚ್ಚು ಗೊಬ್ಬರವು ಬೇಕಾಗಿರುವದರಿಂದ, ಅಂಥಾ ಕೃಷಿ ಮಾಡಕೊಡುವ ವಿಸ್ತೀರ್ಣವು ರಹಿತನಿಗೆ ಕೈಲಾಗುವ ಗೊಬ್ಬರದ ಮೇಲೆ ಹೊಂದಿರುತ್ತದೆ. ಹೆಚ್ಚು ಮೇಹನತ್ತು ಇರುವ ಇಂಥಾ ಕೃಷಿಯನ್ನು ಗೊಬ್ಬರ ಉಪಯೋಗಿಸದೆನೇ ಮಾಡುವದು ಪ್ರಯೋಜನವಿಲ್ಲ. ಗೊಬ್ಬರ ಉಪಯೋಗಿಸದೇನೇ ಅಂಥಾ ಕೃಷಿಯು ಎಂದೂ ಲಾಭಕರವಾಗುವದಿಲ್ಲ. ಅದಲ್ಲದೆ ಒಂದೇ ಸ್ಥಳದಲ್ಲಿ ವರ್ಷ ವರ್ಷವೂ ಅಂಥಾ ಕೃಷಿಯು ಮಾಡಲು ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದ ಭಾರಿ ಕೃಷಿಗೆ ಬೇಕಾದ ವಿಸ್ತೀರ್ಣದ ನಾಲ್ಕು ಪಾಲಷ್ಟು ಹೆಚ್ಚು ಸ್ಥಳವನ್ನು ಸಾಗುವಳಿಯಲ್ಲಿ ತಂದರೆ ಪೈರುಗಳನ್ನು ಬದಲಾಯಿಸಕೂಡುವದು. ದಕ್ಷಿಣಕನ್ನಡಾ ಜಿಲ್ಲೆಯಲ್ಲಿ ಬೇಲಿಹಾಕಲ್ಪಟ್ಟ ಒಂದೇ ಸ್ಥಳದಲ್ಲಿ ಅನೇಕ ವಿಧದ ಪೈರುಗಳು ಬೆಳಸುವದನ್ನು ನೋಡಬಹುದು ಈ ಪೈರುಗಳಲ್ಲಿ ಕೆಲವು, ಸಾಧಾರಣವಾದ ತೋಟದ ಪೈರುಗಳು ಅಂದರೆ ನೆಲ್ಲು, ರಾಗಿ, ಮತ್ತು ದ್ವಿಧಳ ಧಾನ್ಯಗಳು, ಇವುಗಳನ್ನು ಬೆಳಸುವುದಕ್ಕೆ ಅಷ್ಟು ಮೇಹನತ್ತು ಇಲ್ಲ. ಇವುಗಳು ಬಹಳ ಲಾಭಕರವಾದ ಪೈರುಗಳಲ್ಲಾದರೂ, ಭೂಮಿಯನ್ನು ಹೆಚ್ಚು ಬಳಲಿಸುವ ಪೈರುಗಳಿಂದ ಬಿಡುಗಡೆಮಾಡಿ, ವಿಶ್ರಾಂತಿಗೊಳಿಸುತ್ತದೆ. ಅದೇ ಸ್ಥಳದ ಇತರ ಅಂಶಗಳಲ್ಲಿ ಹೆಚ್ಚು ಗೊಬ್ಬರಹಾಕಿಮಾಡಿದ ಭಾರಿಕೃಷಿಯೂ ನೋಡಸಿಕ್ಕುವದು. ಈ ಭಾರಿ ಕೃಷಿಯಿಂದ ಒಳ್ಳೇ ಲಾಭದೊರಕುವದು, ಅಲ್ಲದೆ ಇತರ ಬದಲಾವಣೆ ಪೈರುಗಳಿಂದ ಸಾಗುವಳಿಗಾರನಿಗೆ ಬರುವ ಕಮ್ಮಿ ಹುಟ್ಟುವಳಿಗಾಗಿ ಪ್ರತಿಫಲ ಸಹಾ ದೊರಕುವದು. ಈ ಭಾರಿ ಕೃಷಿಯ ಪೈರುಗಳು ಯಾವವಂದರೆ-ಶುಂಠಿ, ಮೆಣಸಿನಕಾಯಿ, ಬದನೆಕಾಯಿ, ಗೆಣಸು ಮತ್ತು ಇತರ ಕಂದಮೂಲಪೈರುಗಳು. ಪಶ್ಚಿಮ ಕರಾವಳಿಯ ಜಿಲ್ಲೆಗಳಲ್ಲಿ ಸರ್ವಸಾಧಾರಣವಾದ ಗುಡ್ಡ ಪಕ್ಕೆಗಳ ಹಂಗಾಮಿ ಸಾಗುವಳಿಯನ್ನು ಬಿಟ್ಟುಬಿಟ್ಟು ಮೇಲೆ ಹೇಳಿದ ರೀತಿಯಲ್ಲಿ ಕುಷ್ಕಿ ಬೇಸಾಯವನ್ನು ನಡಿಸಿದರೆ, ಕೂಲಿಜನರ ಅಭ್ಯುದಯಕ್ಕೆ ಕಾರಣವಾಗುವದಲ್ಲದೆ, ವ್ಯವಸಾಯಾಭಿವೃದ್ಧಿಗೂ ಕಾರಣವಾಗುವದು. ಈ ಕೆಳಗಿನ ಪೈರುಗಳೂ ವಿವಿಧ ಕಂದಮೂಲಪೈರುಗಳೂ ಪಶ್ಚಿಮ ಕರಾವಳಿಪ್ರದೇಶದ ಬೇರೆ ಬೇರೆ ಕಡೆಗಳಲ್ಲಿ ಮಳೆ ಆಧಾರದಿಂದ ಬೆಳಸಲ್ಪಡುವವು.

ಧಾನ್ಯಗಳು.—ನೆಲ್ಲು, ರಾಗಿ, ಶಾಮೆ (2 ವಿಧಗಳು), ವರಗು, ಮಕ್ಕೆ ಜೋಳ.
ದ್ವಿದಳ ಧಾನ್ಯಗಳು.—ಉದ್ದು, ಹುರುಳಿ ಅಲಸಂದೆ, ತೊಗರಿ, ನೆಲಗಡೆ.
ಭಾರಿಕೃಷಿಯ ಪೈರುಗಳು.—ಶುಂಠಿ ಮೆಣಸಿನಕಾಯಿ, ಗೆಣಸು, ಕಾಡುಗೆಣಸು.

ಎಚ್. ಸಿ. ಸೆಂಪ್ಸನ್,
ಡೆಪ್ಯುಟಿ. ಡ್ಯಾರೆಕ್ಟರ್ ಅಪ್ ಎಗ್ರಿಕಲ್ಚರ್. (ವ್ಯ. ಪ.)

ಬಾಲಕರೂ ಶರ್ಕರಪಿಷ್ಟಾದಿ ವಸ್ತುಗಳೂ.

ಮಕ್ಕಳೆಲ್ಲರಿಗೆ ಸಿಹಿ ಪದಾರ್ಥಗಳ ಮೇಲೆ ಬಹು ಪ್ರೀತಿ. ಮಕ್ಕಳ ದೇಹ ಪ್ರಕೃತಿಗೆ ಸಹಜವಾಗಿ ಉಷ್ಣವನ್ನುಂಟುಮಾಡುವ ವಸ್ತುಗಳು ಅವಶ್ಯ. ದೇಹವನ್ನು ಸಕ್ಕರೆ ಹಿಟ್ಟು ಮುಂತಾದ ಶರ್ಕರಪಿಷ್ಟಾದಿ ವಸ್ತುಗಳು ಬಿಸಿಯಲ್ಲಿರಗೊಡುತ್ತವೆ. ಒಲೆಗೆ ಕಟ್ಟಿಗೆ ಹ್ಯಾಗೋ ಹಾಗೆಯೇ ಈ ಶರ್ಕರಪಿಷ್ಟಾದಿ ವಸ್ತುಗಳು ದೇಹಕ್ಕೆ ಕಟ್ಟಿಗೆಯಂತಿವೆ. ಪ್ರಾಯಸ್ಥರಿಗಿಂತಲೂ ಮಕ್ಕಳಿಗೆ ಇಂಥಾ ಕಟ್ಟಿಗೆಯು ಹೆಚ್ಚಾಗಿ ಬೇಕು. ಇಲ್ಲಿ ಒಬ್ಬ ಹುಡುಗನಿದ್ದಾನೆಂಬದಾಗಿ ಭಾವಿಸುವಾ. ಅವನು 30 ರಾತ್ತು ಭಾರವಿದ್ದಾನೆ. ಸುಮಾರು 10 ಚೌಚೌಕ ಅಡಿ ಚರ್ಮವು ಅವನ ದೇಹದಲ್ಲಿದೆ. ಆದರೆ ಈ ಹುಡುಗನಿಗಿಂತಲೂ 6 ನಾರಿ ಹೆಚ್ಚಿಗೆ ಭಾರವಿರುವ ಮನುಷ್ಯನ ದೇಹದಲ್ಲಿ ಹುಡುಗನ ದೇಹಕ್ಕಿಂತ ಸುಮಾರು ಎರಡಷ್ಟು ಹೆಚ್ಚಿಗೆ ಮಾತ್ರ ಚರ್ಮವಿದೆ.

ಶರ್ಕರ ಪಿಷ್ಟಾದಿ ವಸ್ತುಗಳು ದೇಹದಲ್ಲಿಯ ಚರ್ಮವನ್ನು ಬಿಸಿಯಾಗಿರಗೊಡಿಸುವಂಥವುಗಳಾಗಿರುವುದರಿಂದ ಪ್ರಾಯಸ್ಥರಿಗಿಂತಲೂ ಮಕ್ಕಳು ಹೆಚ್ಚಿಗೆ ಸಕ್ಕರೆ ಇತ್ಯಾದಿ ಸಿಹಿ ಪದಾರ್ಥಗಳು ತಿನ್ನುವುದು ಅವಶ್ಯ ಮಾತ್ರವಲ್ಲದೆ ತನ್ನಷ್ಟಕ್ಕೆನೇ ಅವರ ಪ್ರಕೃತಿಯು ಸಿಹಿ ಜೀನಸುಗಳನ್ನು ಅಪೇಕ್ಷಿಸುವಂಥಾದ್ದಾಗಿದೆ. ಆದರೆ ಮಕ್ಕಳಿಗೆ ಸಿಹಿ ಪದಾರ್ಥಗಳನ್ನು ಕೊಡುವಾಗ ಅವರ ದೇಹ ಪ್ರಕೃತಿಗೆ ಬೇಕಾದ್ದದಕ್ಕಿಂತಲೂ ಹೆಚ್ಚಿಗೆ ಕೊಡಬಾರದು. ಊಟದ ಸಮಯದಲ್ಲಿ ಮಾತ್ರ ಇತರ ಆಹಾರದೊಂದಿಗೆ ಸಿಹಿ ಪದಾರ್ಥವನ್ನು ಕೊಡಬಹುದಲ್ಲದೆ ಇತರ ಸಮಯದಲ್ಲಿ ಅನ್ಯಥಾ ಕೊಡಬಾರದು. ಮಕ್ಕಳು ಕೇಳಿ ಕೇಳಿದಾಗ ಸಿಹಿ ಪದಾರ್ಥವನ್ನು ತಿನ್ನಕೊಡುವುದರಿಂದ ಅವರ ಹೊಟ್ಟೆಯಲ್ಲಿ ಅಜೀರ್ಣ ಉಂಟಾಗುವದಲ್ಲದೆ ಮಕ್ಕಳ ಬರಿದೆ ಹೊಟ್ಟೆಯಲ್ಲಿ ಆಹಾರವನ್ನು ಆಶಿಸುತ್ತಿರುವ ಹುಳಗಳ ಬೆಳವಣಿಗೆಗೆ ಮಾರ್ಗ ಮಾಡಿ ಕೊಟ್ಟಂಥಾಗುವದು.

ಮಕ್ಕಳಿಗೆ ಸಕ್ಕರೆ, ಮಿಠಾಯಿ ಇತ್ಯಾದಿ ಸಿಹಿ ವಸ್ತುವನ್ನು ತಿನ್ನಕೊಡುವುದಕ್ಕಿಂತ ಹಣ್ಣುಗಳನ್ನು ಕೊಡುವುದು ಒಳ್ಳೆಯದು. ಹಣ್ಣಿನಲ್ಲಿ ಸ್ವಭಾವಿಕವಾಗಿರುವ ಸಿಹಿ ಪದಾರ್ಥವು ದೇಹದೊಂದಿಗೆ ಸೇರಿಕೊಳ್ಳುತ್ತವೆ. ಮಾವಿನ ಹಣ್ಣು, ದಾಳಿಂಬ, ಕಿತ್ತಳೇ ಹಣ್ಣು, ಮಕ್ಕಳಿಗೆ ಬಹು ಒಳ್ಳೇದು. ಆದರೆ ತಿನ್ನಕೊಡುವಂಥಾ ಹಣ್ಣುಗಳು ಪೂರ್ಣ ಪಕ್ವವಾದದ್ದಾಗಿರಬೇಕು. ಪಕ್ವವಾಗದ ಹಣ್ಣುಗಳನ್ನು ತಿನ್ನುವುದರಿಂದ ಹೊಟ್ಟೆಯು ಕೆಟ್ಟು ವಿವಿಧ ತರದ ರೋಗವು ಹುಟ್ಟುವದು. ಸಿಹಿ ಪದಾರ್ಥವನ್ನು ಅಪೇಕ್ಷಿಸುವ ಮಕ್ಕಳನ್ನು ತೃಪ್ತಿಪಡಿಸುವದಕ್ಕೋಸ್ಕರ ಹೆತ್ತವರು ಅನೇಕಾವರ್ತಿ ಕಬ್ಬಿನಿಂದ ಮಾಡಿದ

ಬೆಲ್ಲ ಸಕ್ಕರೆ ಕೊಡುವರು. ಆದರೆ ಇದು ಒಳ್ಳೇದಲ್ಲ. ಹಣ್ಣುಗಳಲ್ಲಿರುವಷ್ಟು ಸ್ವಭಾವಿಕವಾದ ಶರ್ಕರ ಪಿಷ್ಟಾದಿ ವಸ್ತುಗಳು ಬೆಲ್ಲ ಸಕ್ಕರೆಯಲ್ಲಿರುವದಿಲ್ಲ. ಈ ಬೆಲ್ಲ, ಸಕ್ಕರೆಇತ್ಯಾದಿ ತಿನ್ನುವುದರಿಂದ ಮೂತ್ರರೋಗಗಳು ಹುಟ್ಟುವವು. ಆದ್ದರಿಂದ ಮಕ್ಕಳೂ ಪ್ರಾಯಸ್ಥರೂ ಬರೇ ಸಕ್ಕರೆ ಬೆಲ್ಲವನ್ನು ತಿನ್ನುವುದರ ಬದಲಿಗೆ ಹಣ್ಣುಗಳನ್ನು ತಿಂದು ಅದರಲ್ಲಿರುವ ಸಕ್ಕರೆಯನ್ನು ತಮ್ಮ ದೇಹದಲ್ಲಿ ತುಂಬಿಸಿಕೊಳ್ಳುವದು ಒಳ್ಳೇಯದು. ಈಗಿನ ಕಾಲದ ಮನುಷ್ಯರಲ್ಲಿ ಹಂಡಿಕೊಂಡಿರುವ ನಾನಾ ರೋಗಗಳು ಹಣ್ಣುಗಳಲ್ಲಿರುವ ಶರ್ಕರಪಿಷ್ಟಾದಿ ವಸ್ತುಗಳನ್ನು ದೇಹದೊಳಗೆ ಸೇರಿಸಿಕೊಳ್ಳುವುದರಿಂದ ಹೋಗಿಬಿಡುವುದೆಂಬದಕ್ಕೆ ಅನುಮಾನವಿಲ್ಲ. ತಿನ್ನುವಂಥಾ ಹಣ್ಣುಗಳನ್ನು ಮಾತ್ರ ಊಟದ ಕಾಲದಲ್ಲಿಯೇ ಪ್ರಯೋಗಿಸಬೇಕೆಂಬದನ್ನು ಮರೆಯಬಾರದು.

S. A.

ಪತ್ರವ್ಯವಹಾರ.

(ಬಾತ್ಮೀದಾರರು ಕೊಡುವ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ)

ಟ್ರೆನ್ಸಿಟ್ ಅವಗಡಗಳಿಂದ ತಪ್ಪಿಸಿಕೊಳ್ಳುವ ಬಗೆ ಹೇಗೆ?

ಅಯ್ಯಾ ಪತ್ರಕರ್ತರೇ,

ಇತ್ತಲಾಗೆ ತಮ್ಮ 'ಸ್ವದೇಶಾಭಿಮಾನಿ'ಯ ಹಲವು ಸಂಚಿಕೆಗಳಲ್ಲಿ ಟ್ರೆನ್ಸಿಟು ಅವಗಡಗಳ ವಿಷಯವಾಗಿ ಕೇಳುತ್ತಿರುವೆವು. ಪ್ರಯಾಣಿಕರ ಅನುಕೂಲತೆಗಳ ಬಗ್ಯೆ ಸ್ಥಾಪಿಸಲ್ಪಟ್ಟ ಈ ಟ್ರೆನ್ಸಿಟುಗಳು ಹೀಗೆ ಹಲವು ಪಥಿಕರಿಗೆ ಅಪಾಯವನ್ನುಂಟುಮಾಡುತ್ತಿರುವುದು ಶೋಚನೀಯವೇ ಸರಿ. ಇಂತಹ ಬಂಡಿಗಳು ಪಥಿಕರನ್ನು ನಿಯಮಿತ ಸಮಯದಲ್ಲಿ ಕಡಿಮೆ ಕಾಲದಲ್ಲಿಯೇ ಒಯ್ಯುತ್ತಿರುವುದು ಮಾತ್ರವಲ್ಲ, ಇವರ ಪ್ರಾಣ ಸಾಮಾನುಗಳಿಗೆ ಅಪಾಯವಾಗದಂತೆ ಭದ್ರವಾಗಿರುವಂಥವುಗಳೂ ಆಗಿರಬೇಕಷ್ಟೆ. ಆದರೆ ತಮ್ಮ ಹಿಂದಿನ ಒಂದು ಸಂಚಿಕೆಯಲ್ಲಿ ಹೇಳಿದಂತೆ ಪ್ರಕೃತ ಚಲಾವಣೆಯಲ್ಲಿರುವ ಬಂಡಿಗಳಲ್ಲಿ ಸಾಹಿತ್ಯಗಳು ಸರಿಯಾಗಿಲ್ಲ, ಕತ್ತಲೆಯಲ್ಲಿ ಬೇಕಾದ ಲಾಟನುಗಳಿಲ್ಲ; ಅವುಗಗಳನ್ನು ಎಳೆಯಲಿಕ್ಕಾದರೋ ರಕ್ತ ಸುರಿಸುವ ವ್ರಣಗಳಿರುವ ಕುದುರೆಗಳು; ಸಾರಥಿಗಳಾದರೋ ಇವುಗಳನ್ನೆಲ್ಲಾ ಗಣನೆಗೆ ತಾರದೆ ಹಗಲು ಕತ್ತಲೆಯೆಂದೆಣಿಸದೆ ಸಮನೆಲದಲ್ಲಿಯೂ ಏರು ಇಳಿಜಾರುಗಳಲ್ಲಿಯೂ ಏಕರೀತಿಯಿಂದ ಬಂಡಿಗಳನ್ನು ಹೊಡೆಯುತ್ತಿರುವರು. ಇಂತಹ ದುಃಸ್ಥಿತಿಯಲ್ಲಿ ಅವಗಡಗಳು ಸಂಭವಿಸದಿರುವುದು ಹೇಗೆ?

ಈ ದುಃಸ್ಥಿತಿಗೆ ಕಾರಣವಾದ ರಹಸ್ಯವ್ಯಾವುದು? ಈ ಟ್ರೆನ್ಸಿಟ್ ಕಂಪೆನಿಗಳಲ್ಲಿ ಬಂಡಿಗಳನ್ನು ಹೊಡೆಯುವವರಿಗೆ ತಿಂಗಳುಗಟ್ಲೆ ಸಂಬಳವು ದೊರಕುವುದರಿಂದ ಬಂಡಿ ಕುದುರೆಗಳ ಹೆಚ್ಚಿನ ಎಚ್ಚರಿಕೆಯನ್ನು ನೋಡುವ ಅವಶ್ಯವು ಅವರಿಗಿಲ್ಲ. ಇನ್ನೂ ಪ್ರಯಾಣಿಕರಿಗೆ ಬಂಡಿ ಓಡಿಸುವುದರಲ್ಲಿ ತಮಗಿರುವ ಕೌಶಲವನ್ನು ತೋರಿಸಿ ಪುರಸ್ಕಾರವನ್ನು ಪಡೆಯುವ ಇಚ್ಛೆಯಿಂದ, ಇವರು ಯಾವದರ ಅಪಾಯವನ್ನೂ ಗಣನೆಗೆ ತಾರದೆ "ಊರಿನ ಮೇಲೆ ಊರು ಬಿದ್ದರೆ,........" ಎಂಬ ಗಾದೆಯಂತೆ, ಚಮತ್ಕಾರಿಕವಾದ ವೇಗದಿಂದ ಬಂಡಿಗಳನ್ನು ಓಡಿಸುವುದರಿಂದ ಇವುಗಳ ಬ್ರೇಕ್ ಮೊದಲಾದ ಸಾಹಿತ್ಯಗಳು ಮುರಿದುಹೋಗುವವಲ್ಲದೆ, ಕುದುರೆಗಳೂ ಕ್ರೂರತನದಿಂದ ನಡೆಸಲ್ಪಟ್ಟು ರೋಗಗಳಿಗೆ ತುತ್ತಾಗುವವು. ಹಾಗೆ ಮುರಿದುಹೋದ ಸಾಮಾನುಗಳು ತಕ್ಕ ಸಮಯದಲ್ಲಿ ದುರುಸ್ತು ಮಾಡಲ್ಪಡುವದಿಲ್ಲವಾದುದರಿಂದ ಅನಾಹುತಗಳು ಆಗಾಗ್ಯೆ ತಲೆದೋರುವವು. ಕುದುರೆಗಳ ಆರೈಕೆಯಲ್ಲಿಯೂ ಕೂಡ, ಪೋಷಕನು ಕುದುರೆಗಳಿಗಾಗಿ ಕೊಟ್ಟ ಹುರುಳಿಯಲ್ಲಿ, ತನಗೆ ಸರಿತೋರಿದ ಪಾಲನ್ನೇ ಅವುಗಳಿಗೆ ಕೊಡುವನು. ಇವನು ಸಾರಥಿಯ ಕ್ರೂರತನವನ್ನು ದೂರಿ ತಾನು ತಲೆ ತಪ್ಪಿಸಿಕೊಳ್ಳುವನು. ಸಾರಥಿಯಾದರೋ ಪೋಷಕನ ಅಜಾಗ್ರತೆಯನ್ನು ದೂರಿ ತನ್ನನ್ನು ರಕ್ಷಿಸಿಕೊಳ್ಳುವನು. ಅಂತೂ ಬಡಕುದುರೆಗಳಿಗೆ ಕೆಡುಗಾಲ! ಪ್ರಿಯ ವಾಚಕ ಮಹಾಶಯರುಗಳಿರಾ! "ಆಳು ಮಾಡಿದ್ದು ಹಾಳು" ಎಂಬ ಲೋಕೋಕ್ತಿಯು ಇಲ್ಲಿ ಶಬ್ದಶಃ ಉದಹರಿಸಲ್ಪಟ್ಟಿರುವಲ್ಲಿ—ಈ ಟ್ರೆನ್ಸಿಟು ಕಂಪೆನಿಗಳ ದುಃಸ್ಥಿತಿಗೆ ಮತ್ತೇನು ಕಾರಣವು ಬೇಕು?

ಇಂತಹ ಸಂದರ್ಭದಲ್ಲಿ ಹೆಕ್ನಿ ಮತ್ತು ಸ್ಟೇಟ್ ಕೆರಿಯೆಜ್ ಆಕ್ಟಿನ ಜಾರಿಯಾಗಲೀ, ಸರಕಾರದ ಬೇರೆ ನಿಬಂಧನೆಗಳಾಗಲೀ, ಪೋಲೀಸು ಅಧಿಕಾರಸ್ಥರ ಪರಿಶ್ರಮವಾಗಲೀ ಕೆಲಸಕ್ಕೆ ಬರುವವೇ? ಕುದುರೆಗಳ ಒಂದೊಂದು ಠಾಣೆಯಲ್ಲಿಯೂ ಒಂದೊಂದು ಬಂಡಿಯ ಮೇಲೆಯೂ ಇದ್ದು ಈ ಸ್ಥಿತಿಯನ್ನು ಮಾರ್ಪಡಿಸಲು ಮಾಲಿಕರಿಗಾದರೂ ಸಾಧ್ಯವೇ? ಆದುಕಾರಣ ಈ ಅನಾಹುತಗಳಿಗೆ ಕಾರಣವಾದ ರಹಸ್ಯವನ್ನೆ ಕಂಡುಹಿಡಿದು ಅದಕ್ಕೆ ತಕ್ಕ ಉಪಾಯವನ್ನು ಸಾಧಿಸಲು ಯತ್ನಿಸದೆ ಸರಕಾರಕ್ಕಾಗಲೀ ಮಾಲಿಕರಿಗಾಗಲೀ ಕೇಳಿಕೊಳ್ಳುತ್ತಿರುವುದು ಬರಿದೆ ಅರಣ್ಯರೋದನವಲ್ಲವೇ?

ಈಗ ಇದರ ನಿವಾರಣೆಯನ್ನು ಕುರಿತು ತುಸ ಆಲೋಚಿಸೋಣ. ಮಂಗಳೂರಿನಲ್ಲಿ ಒಂಟಿ ಕುದುರೆಯ ನೂರಾರು ಗಾಡಿಗಳು ಪ್ರತ್ಯಹವೂ ಓಡಾಡುತ್ತಲಿದ್ದರೂ ಇಂತಹ ಅನಾಹುತಗಳು ಅಲ್ಲಿ ಆಗಾಗ್ಯೆ ಸಂಭವಿಸುವದಿಲ್ಲವೇಕೆ? ಅಲ್ಲಿಯ ಭಂಡಿಗಳನ್ನೆಲ್ಲಾ ಮಾಲಿಕರೇ ಓಡಿಸುವುದರಿಂದ ಸವಾರಿ ಮಾಡುವವರ ಅಪಾಯವನ್ನು ಅವರು ಹೆಚ್ಚಾಗಿ ಲೆಕ್ಕಿಸದಿದ್ದರೂ ತಮ್ಮ ಜೀವನ ಸರ್ವಸ್ವಕ್ಕೆ ಸಾಧನಾಭೂತವಾದ ಬಂಡಿ ಕುದುರೆಗಳಿಗಾದರೂ ಅಪಾಯ ಉಂಟಾಗದಂತೆ ಬಹು ಎಚ್ಚರದಿಂದ ನೋಡುವವರಾದುದರಿಂದ "ತಾನು ಮಾಡಿದ್ದು ಉತ್ತಮ"ವೆಂಬ ಮಾತಿನಂತೆ ಬಂಡಿಗಳನ್ನು ಅತೀ ಜಾಗರೂಕತೆಯಿಂದ ಓಡಿಸುತ್ತಿರುವುದರಿಂದ ಇಂತಹ ಅವಗಡಗಳಿಗೆ ಅಲ್ಲಿ ಅಷ್ಟೊಂದು ಅವಕಾಶವಿಲ್ಲ. ಆ ಕ್ರಮವನ್ನೇ ಈಗಣ ಟ್ರೆನ್ಸಿಟ್ ಕಂಪೆನಿಗಳ ಬದಲಾಗಿ ಉಪಯೋಗಿಸಿದರೆ ಪಥಿಕರ ಪ್ರಾಣ ಸಾಮಾನುಗಳಿಗೆ ಭದ್ರತೆಯೂ ಸಿಗುವುದಲ್ಲ! ಹೀಗೆ ಮಾಡುವಲ್ಲಿ ಈಗ ಟ್ರೆನ್ಸಿಟ್ ಬಂಡಿಗಳಲ್ಲಿರುವ ಅನುಕೂಲತೆಗಳನ್ನೆಲ್ಲಾ ಲಭಿಸುವಂತೆ ಮಾಡಒಹುದು. ಇದರಲ್ಲಿ ನನ್ನ ಅಲ್ಪ ಮತಿಗೆ ತೋರಿದ ಒಂದು ಸಾಧನೋಪಾಯವನ್ನು ನಾನು ಇಲ್ಲಿ ಸೂಚಿಸುವೆನು.

ಮಂಗಳೂರಿನಲ್ಲಿಯೂ ಉಡುಪಿಯಲ್ಲಿಯೂ ಒಂಟಿ ಕುದುರೆಯ ಭಂಡಿಗಳು ಬಾಡಿಗೆಗೆ ಸಿಗುವವು. ಈ ಎರಡು ಊರುಗಳಲ್ಲಿಯೂ ಒಬ್ಬೊಬ್ಬರು ಏಜಂಟರಾಗಿ ನಿಲ್ಲುವುದು. ಮಟ್ಟಮೊದಲು ಮಾದರಿಗಾಗಿ ಮಂಗಳೂರಿನಿಂದ ಒಂದು ದಿನ ನಾಲ್ಕು ಪ್ರಯಾಣಸ್ಥರಿಗೆ ಟಿಕೇಟನ್ನು ಕೊಟ್ಟು ಒಂದು ಒಂಟಿ ಕುದುರೆಯ ಭಂಡಿಯನ್ನು ಮೂಲ್ಕಿಯ ತನಕ ನಿಯಮಿತ ಸಮಯದಲ್ಲಿ ಬಿಡುವುದು. ಆ ಭಂಡಿಯು ಆ ದಿನ ಮೂಲ್ಕಿಯಲ್ಲಿಯೇ ಉಳಿದು ಮರುದಿನ ಮಧ್ಯಾನ್ಹ, ಈ ರೀತಿಯಲ್ಲಿಯೇ ಉಡುಪಿಯ ಏಜಂಟರಿಂದ ಬಿಟ್ಟ ಭಂಡಿಯಲ್ಲಿ ಬಂದ ನಾಲ್ಕು ಪ್ರಯಾಣಸ್ಥರನ್ನು ಮಂಗಳೂರಿಗೆ ಒಯ್ಯುವುದು. ಆ ದಿನವೇ ಮಂಗಳೂರಿನಿಂದ ಬೇರೊಂದು ಭಂಡಿಯು ನಾಲ್ಕು ಪಥಿಕರನ್ನು ಮೂಲ್ಕಿಗೆ ಒಯ್ದು ಅಲ್ಲಿ ಆ ದಿನ ಉಳಿದು ಮರುದಿನ ಎಂದಿನಂತೆ ಉಡುಪಿಯಿಂದ ಬಂದ ಪ್ರಯಾಣಿಕರೊಡನೆ ಮಂಗಳೂರಿಗೆ ಪುನಃ ಹೊರಡುವುದು. ಈ ದಿನವೂ ಮಂಗಳೂರಿನಿಂದ ಮೊದಲನೆಯ ಭಂಡಿಯು ಮೂಲ್ಕಿಗೆ ಬರುವುದು.

ಉಡುಪಿಯಿಂದಲೂ ಈ ತೆರವಾಗಿಯೇ ಒಂದು ದಿನ ಒಂದು ಭಂಡಿಯನ್ನು ಮರುದಿನ ಇನ್ನೊಂದನ್ನು ಮೂಲ್ಕಿಗೆ ಬಿಡುವುದು. ಇವುಗಳಲ್ಲಿ ಬಂದ ಪಥಿಕರು ಆಯಾ ದಿನ ಮಂಗಳೂರಿಗೆ ಹೋಗುವ ಬಂಡಿಗಳಲ್ಲಿ ಅಂದೇ ಮಂಗಳೂರಿಗೆ ಹೋಗುವುದು. ಮೂಲ್ಕಿಗೆ ಬಂದ ಈ ಬಂಡಿಗಳು ತಾವು ಬಂದ ಆಯಾ ದಿನ ಅಲ್ಲಿಯೇ ಉಳಿದು ಮರುದಿನ ಪುನಃ ಉಡುಪಿಗೆ ಮಂಗಳೂರಿನಿಂದ ಬಂದ ಪ್ರಯಾಣಿಕರನ್ನು ಒಯ್ಯುವದು.

ಹೀಗೆ ಮಂಗಳೂರಿನಿಂದ ಎರಡು ಭಂಡಿಗಳನ್ನೂ ಉಡ್ಪಿಯಿಂದ ಎರಡನ್ನೂ ಈ ಪ್ರಕಾರ ಉದ್ಯೋಗಿಸಿದರೆ ಈಗ ಟ್ರೆನ್ಸಿಟ್ ಭಂಡಿಗಳು ಬಿಡುವಂತೆಯೇ ನಿಯಮಿತ ಸಮಯದಲ್ಲಿ ಬಿಡಲಿಕ್ಕೂ ಮೂಲ್ಕಿಯಲ್ಲಿ ಭಂಡಿಗಳನ್ನು ಬದಲಾಯಿಸಿಕೊಂಡು ಅಂದೇ ಪ್ರಯಾಣಿಕರು ಮಂಗಳೂರಿಗೋ ಉಡುಪಿಗೋ ತಲಪಲಿಕ್ಕೂ ಸಾಧ್ಯವು. ಈ ಕ್ರಮವನ್ನು ಉಪಯೋಗಕ್ಕೆ ತರಲು ಏಜಂಟರಿಗೆ ಭಂಡವಾಳವೇನೂ ಅವಶ್ಯವಿಲ್ಲ. ಕುದುರೆಗೂ ದಿನಕ್ಕೆ ಮೂರೇ ತಾಸಿನ ಕೆಲಸವು ಹೆಚ್ಚಲ್ಲ. ಈಗಿನ ಟ್ರೆನ್ಸಿಟ್ ದರಗಳಂತೆ ಮಂಗಳೂರಿನಿಂದ ಮೂಲ್ಕಿಗೆ ಟಿಕೆಟ್ ಒಂದಕ್ಕೆ ಒಂದು ರೂಪಾಯಿಯೆಂದರೆ ಗಾಡಿ ಒಂದಕ್ಕೆ ತಿಂಗಳಿಗೆ ನೂರಿಪ್ಪತ್ತು ರೂಪಾಯಿ; ಹದಿನೆರಡಾಣೆಯೆಂದರೂ ತೊಂಭತ್ತು ರೂಪಾಯಿ—ಒಂದು ಬಂಡಿಗಾರನಿಗೂ ಏಜಂಟನಿಗೂ ತಕ್ಕಷ್ಟು ಪ್ರತಿಫಲ ಸಿಗುವದು. ಇದೇ ರೀತಿಯಲ್ಲಿ ಉಡ್ಪಿಯಿಂದ ಬಿಡುವ ಒಂದೊಂದು ಬಂಡಿಯ ಮೇಲೂ ಅಲ್ಲಿಯ ಏಜಂಟರಿಗೂ ಬಂಡಿಗಾರನಿಗೂ ಇಷ್ಟೇ ಲಾಭವು ಸಿಗುವದು. ಇನ್ನು ಪ್ರಯಾಣಿಕರು ಹೆಚ್ಚಿದರೆ ಹೆಚ್ಚಿಗೆ ಬಂಡಿಗಳನ್ನು ಉಪಯೋಗಿಸಿಕೊಳ್ಳಬಹುದು. ಹೀಗೆ ಎಲ್ಲಾ ಅನುಕೂಲತೆಗಳನ್ನು ಒದಗಿಸುತ್ತಿರುವ ಈ ಕ್ರಮಕ್ಕೆ ಪ್ರಯಾಣಿಕ ವರ್ಗವು ಸಹಜವಾಗಿಯೇ ಪ್ರೋತ್ಸಾಹವನ್ನು ಕೊಡುವುದು. ಒಂಟಿ ಕುದುರೆಯ ಭಂಡಿಗಳೇ ಉಪಯೋಗಿಸಲ್ಪಡಬೇಕೆಂಬದು ನನ್ನ ಅಭಿಪ್ರಾಯವಲ್ಲ. ಈಗಣ ಜಟ್ಕಾ ಭಂಡಿಗಳಾದರೂ ಆಗಬಹುದು. ಹಾಗೂ ಮಾಲಿಕರೇ ಸಾರಥಿಗಳಾದರೆ ಸರಿ.

ಇದರಲ್ಲಿ ಬೇಕಾದ ತಿದ್ದುಪಾಟುಗಳನ್ನು ಮಾಡಿಕೊಂಡು ಈ ಉಪಾಯವನ್ನು ಅನುಸರಿಸಿದ್ದಲ್ಲಿ ಅನಾಹುತಗಳು ಅದೃಶವಾಗುವವು. ಇನ್ನೂ ಇದರಲ್ಲಿ ಅಸಂಭವ ಸಂಗತಿಗಳು ತಮ್ಮ ವಾಚಕ ವರ್ಗದಲ್ಲಿ ಯಾರಿಗಾದರೂ ತೋರಿದುದಾದರೆ ಅದನ್ನು ತಮ್ಮ ಪತ್ರದ ಮೂಲಕ ತಿಳಿದುಕೊಳ್ಳಲು ಅಪೇಕ್ಷಿಸುತ್ತೇನೆ.

ನಾನು ಮೇಲೆ ಸೂಚಿಸಿದ ಉಪಾಯವು ಸುಲಭಸಾಧ್ಯವಾದುದರಿಂದ ಪಟ್ಟಣಿಗರಾರೂ ಇದನ್ನು ಸ್ವತಃ ಅನುಭವಕ್ಕೆ ತಂದು ತಕ್ಕ ಪ್ರತಿಫಲವನ್ನು ಹೊಂದುವುದು ಮಾತ್ರವಲ್ಲ; ಇಂಥಾ ಅವಗಡಗಳನ್ನು ತಪ್ಪಿಸಿ ಪ್ರಯಾಣಿಕರ ಪ್ರಾಣ ಸಾಮಾನುಗಳಿಗೆ ಭದ್ರತೆಯನ್ನು ಕೊಡುವುದರಿಂದ ಅವರ ಕೃತಜ್ಞತೆಗೂ ಪಾತ್ರರಾಗುವದರಲ್ಲಿ ಸಂದೇಹವೇನು?

ಪ್ರಯಾಣಿಕ.

ವಿದೇಶ ವೃತ್ತಾಂತ.

ಇಟಾಲಿಯರು ಇನ್ನು ಮುಂದಕ್ಕೆ ಡರ್ಡನೆಲ್ಸಿಗೆ ಬಂದು ಉಪದ್ರಕೊಡುವುದಿಲ್ಲವೆಂಬದಕ್ಕೆ ಶ್ರೇಷ್ಠ ಸರಕಾರದವರು ಜಾಮೀನಾಗುವ ಪಕ್ಷಕ್ಕೆ ಮಾತ್ರ ತುರ್ಕೀ ಸರಕಾರದವರು ಡರ್ಡನೆಲ್ಸನ್ನು ತೆರೆಯುವರೆಂಬದಾಗಿ ತುರ್ಕೀಯಲ್ಲಿರುವ ವಿದೇಶಿ ರಾಯಭಾರಿಗಳು ಶ್ರೇಷ್ಠ ಸರಕಾರಗಳಿಗೆ ತಿಳಿಸಿದ್ದಾರೆ.

ರುಷ್ಯ ಸರಕಾರದವರು ತುರ್ಕೀ ಸರಕಾರಕ್ಕೆ ಕಳುಹಿಸಿಕೊಟ್ಟ ಪತ್ರಕ್ಕೆ ಪ್ರತ್ಯುತ್ತರವಾಗಿ ಡರ್ಡನೆಲ್ಸಿನ ಸಂಬಂಧವಾಗಿರುವ ಒಪ್ಪಂದದ ಪ್ರಕಾರ ಡರ್ಡನೆಲ್ಸನ್ನು ಮುಚ್ಚುವ ಸ್ವತಂತ್ರವೂ ಅದರ ವಿಷಯವಾದ ಪೂರ್ಣ ಅಧಿಕಾರವೂ ತಮಗೆ ಇದೆ ಎಂದೂ ತುರ್ಕೀ ಸರಕಾರದವರು ತಿಳಿಸಿರುವರು.

ಡರ್ಡನೆಲ್ಸಿನ ಸುತ್ತಲು ಈಗ ವ್ಯಾಪಾರಸ್ಥರ ೯೯ ಹಡಗಗಳು ನಿಂತಿರುವದೆಂದೂ ಈ ಹಡಗಗಳಲ್ಲಿ ಸುಮಾರು ೪ ಮಿಲಿಯ ಪವನುಗಳು ಕ್ರಯ ಬಾಳುವ ಸಾಮಾನುಗಳಿವೆಂದೂ ಗೊತ್ತಾಗಿದೆ. ಶೆಕೆಯು ಬಹಳವಾಗಿರುವುದರಿಂದ ಜೋಳ ತುಂಬಿಸಿದ ಹಡಗದವರು ತಮ್ಮ ಜೋಳದ ಹೊರೆಯನ್ನು ಅಲ್ಲಿಯೇ ಇಳಿಸಬೇಕೆಂದಿರುವರು.

ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಮೆ। ಅಕ್‌ಲೇಂಡರವರು ಡರ್ಡನೆಲ್ಸ್ ಮುಚ್ಚಿದ್ದರಿಂದ ಉಂಟಾಗುವ ವ್ಯಾಪಾರ ನಷ್ಟದ ವಿಷಯ ಸರಕಾರದವರು ಕೂಡಲೇ ತಕ್ಕ ನಿಗಾ ಕೊಡಬೇಕೆಂದು ಹೇಳಿದರು. ಡರ್ಡನೆಲ್ಸಿನಿಂದ ವ್ಯಾಪಾರ ಹಡಗಗಳನ್ನು ದಾಟ ಬಿಡುವ ಹಾಗೆ ಕೂಡಲೇ ತಕ್ಕ ವಿಲೆವಾರಿ ಮಾಡಬೇಕೆಂದು ಸರ್ ಎಡ್ವರ್ಡ್ ಗ್ರೇರವರು ತುರ್ಕೀ ಸರಕಾರದವರನ್ನು ಕೇಳಿಕೊಂಡಿರುವರು.

ಅವಶ್ಯ ಬಿದ್ದಾಗ ಪುನಃ ಮುಚ್ಚುವೆವೆಂಬ ಶರ್ತದ ಮೇಲೆ ಡರ್ಡನೆಲ್ಸನ್ನು ತೆರೆಯಲು ತುರ್ಕೀ ಪಾರ್ಲಿಮೆಂಟ್ ಸಭೆಯವರು ನಿಷ್ಕರ್ಷಿಸಿರುವರು.

ಕೆಲವು ಆಫೀಸರರು ಚಿಕ್ಕ ದೋಣಿಯಲ್ಲಿ ಕೂತು ಡರ್ಡನೆಲ್ಸನ್ನು ಪರೀಕ್ಷಿಸುತ್ತಿರುವಾಗ ಸಮುದ್ರದ ಅಡಿಯಲ್ಲಿರುವ ತಂತಿಯಲ್ಲಿ ಅನಾಹುತ ಸಂಭವಿಸಿ ಅದು ಮೇಲಕ್ಕೆ ಹಾರಿ ಮೂರು ಹುದ್ದೆದಾರರೂ ೧೨ ಸೋಲ್ಜರರೂ, ಕೆಲವು ಕಲಾಶಿಗಳೂ ಮುಣುಗಿ ಹೋದರು. ಮೃತರ ಕುಟುಂಬ ಸಂರಕ್ಷಣಾರ್ಥವಾಗಿ ವಂತಿಗೆ ಕೂಡುತ್ತಲಿದೆ.

ಅಜಿಜಿಯ, ಸುವಾನ್ನ, ಬೆನಾಡೆನ್ ಎಂಬಲ್ಲಿ ಇಟಾಲಿಯರ ವಿಮಾನಗಳು ತುರ್ಕರ ಮೇಲೆ ಬೊಂಬುಗಳನ್ನು ಹಾಕಿ ಕೆಲವರನ್ನು ನಾಶಮಾಡಿತು.

ಇಟಾಲಿಯರು ಲೆಬ್ಡ ಎಂಬ ಪಟ್ಟಣವನ್ನು ಹಿಡಿದಿರುವರು. ಈ ಯುದ್ಧದಲ್ಲಿ ತುರ್ಕರಲ್ಲಿ ೩೦೦ ಮಂದಿ ಮಡಿದರು. ಇಟಾಲಿಯರು ಅಲ್ಪಸ್ವಲ್ಪ ನಷ್ಟ ಪಟ್ಟರು.

ಎಡಿಮಿರಲ್ ವಿಯೇಲರವರು ರೋದೆಸ್ ದ್ವೀಪವನ್ನು ಏನೊಂದೂ ಕಷ್ಟವಿಲ್ಲದೆ ವಶಮಾಡಿ ಕೊಂಡರು. ರೋದೆಸನ್ನು ವಶ ಮಾಡಿಕೊಳ್ಳುವರೆ ಮೂರು ತಾಸು ಸಮಯ ಮಾತ್ರ ತಗಲಿತು. ತುರ್ಕರ ಸೈನೀಕರು ಗುಡ್ಡಗಳಿಗೆ ಓಡಿ ಹೋದರು.

ಡರ್ಡನೆಲ್ಸನ್ನು ತೆರೆಯುವ ಕೆಲಸ ಪ್ರಾರಂಭವಾಗಿದೆ. ರೋದೆಸ್ ದ್ವೀಪದಲ್ಲಿ ಇಟಾಲಿಯರು ತಮ್ಮ ಬಾವಟೆಯನ್ನು ಏರಿಸಿದರು. ಈ ಕದನದಲ್ಲಿ ಇಟಾಲಿಯರಲ್ಲಿ ೭ ಮಂದಿ ಗಾಯ ಪಟ್ಟರು. ತುರ್ಕರು ಅತಿರೇಕ ನಷ್ಟ ಪಟ್ಟಿರುವರು.

ಇಟಲಿ ಮತ್ತು ತುರ್ಕರ ಯುದ್ಧರಂಗದಲ್ಲಿರುವ ಲಂಡನ್ ಟ್ಯಾಮ್ಸ್ ಪತ್ರಿಕಾ ಪ್ರತಿನಿಧಿಯು ಬರದಿರುವ ಲೇಖನದಿಂದ ಈ ಯುದ್ಧದ ಪರಿಸ್ಥಿತಿಯು ಗೊತ್ತಾಗುತ್ತದೆ:—"ತಮ್ಮ ಮತದವರನ್ನು ರೇಗಿಸಿ ಇಟಾಲಿಯರ ಮೇಲೆ ತಿರುಗಿ ಬೀಳಿಸುವುದರಲ್ಲಿ ತುರ್ಕರನ್ನು ಮೀರಿದವರಿಲ್ಲ. ತುರ್ಕರೆಲ್ಲರೂ ಒಂದೇ ಕಟ್ಟಿನಂತಿದ್ದು ಇಟಾಲಿಯವರ ಕಷ್ಟವನ್ನು ಒಂದಕ್ಕೆ ನಾಲ್ಕರಂತೆ ಹೆಚ್ಚಿಸುತ್ತಲಿದ್ದಾರೆ. ಮಧ್ಯ ದೇಶದಲ್ಲಿ ಹೆಸರು[illegible]ಾದ ಒಬ್ಬ ಗುರುವು ಇಟಾಲಿಯರ ಮೇಲೆ ಯುದ್ಧಕ್ಕೆ ಸರ್ವರೂ ಬನ್ನಿ ಎಂದು ಪ್ರೋತ್ಸಾಹಿಸುವ ಸಾವಿರಾರು ಅಕ್ಷರಗಳನ್ನು ಒಂದು ದೊಡ್ಡ ರೇಶ್ಮೆಯ ಪತಾಕೆಯಲ್ಲಿ ಬರೆಯಿಸಿ ಎಲ್ಲಾ ಕಡೆಗೂ ಕಳುಹಿಸುತ್ತಿದ್ದಾನೆ. ಈತನು ಕಳುಹಿಸಿಕೊಟ್ಟ ಮೊದಲನೇಯ ಸೇನೆಯು ಅಜಿಜಿಯಕ್ಕೆ ಒಂದು ಸೇರಿರುತ್ತದೆ. ಈ ಸೇನೆಯ ಮುಂದಾಳುಗಳು ಕತ್ತಿಯನ್ನು ಹಿಡಿದು ನಾವು ಸಿಂಹದ ಮರಿಗಳೆಂದು [illegible]ಕೊಂಡು ಅತ್ಯಂತರೋಷಾವೇಶದಿಂದ ಯುದ್ಧ[illegible] ಗುತ್ತಲಿದ್ದಾರೆ. ಇವರ ಕೈಯಲ್ಲಿ ಒಂದೊಂದು [illegible]ಲ್ಲಿಯೂ ಒಂದೊಂದು ತುಪಾಕಿಯೂ ಇರುತ್ತದೆ. [illegible]ವರೆಲ್ಲರೂ ಯುದ್ಧದಲ್ಲಿ ಗೆಲ್ಲಬೇಕು, ಇಲ್ಲವೆ ಸಾಯಬೇಕು ಎಂಬ ಬದ್ಧಕಂಕಣರಾಗಿ ಬಂದಿರುವರು. ತುರ್ಕರು ಅರಬಿಯರಿಗೆ ತಕ್ಕ ಸಂಬಳವನ್ನೂ ಆಹಾರವನ್ನೂ ಕೊಡುತ್ತಿರುವುದರಿಂದ ಅವರು ಸಂತೋಷದಿಂದ ಯುದ್ಧಕ್ಕೆ ಸನ್ನಧರಾಗುತ್ತಾರೆ. ತನ್ಮಧ್ಯೆ ಅರಬ್ಬೀಸೇನಾನಾಯಕನು ಇಟಲಿ ಸೇನಾಧಿಪತಿಗೆ ಪತ್ರ ಬರೆದು 'ಇದೇನು, ಯುದ್ಧವನ್ನು ಮಾಡದೆ ವೃಥಾ ಕಾಲಹರಣೆ ಮಾಡುವುದು ಪುರುಷತ್ವವೇ' ಎಂದು ಕೇಳಿದ್ದನಂತೆ. ತುರುಕರ ಸೇನಾ ಬಲವು ಈ ರೀತಿ ಇರುತ್ತದೆ" ಎಂಬದಾಗಿ ಬರದಿರುವನು.

ರೋದೆಸ್ ದ್ವೀಪವನ್ನು ವಶಮಾಡಿಕೊಂಡ ಸಂಗತಿಯನ್ನು ಇಟಾಲಿಯರು ಈ ರೀತಿ ತಿಳಿಸುವರು. ರೋದೆಸ್ ಪಟ್ಟಣಕ್ಕೆ ಎಂಟು ಮೈಲು ದೂರದಲ್ಲಿರುವ ಕಾಲಿಟಿಯ ಆಖಾತದಲ್ಲಿ ತಮ್ಮ ಸೈನ್ಯವು ಮುಂದರಿದು ರೋದೆಸ್ ಪಟ್ಟಣದ ಸಮೀಪಿಸಿ ಗುಂಡಿನ ಮಳೆಯನ್ನು ಗರೆಯಿಸುವ ಮೊದಲೇ ತುರ್ಕರು ಪಟ್ಟಣವನ್ನು ಬಿಟ್ಟು ಹೋದರು. ಸಾಯಂಕಾಲ ೭ ಗಂಟೆಗೆ ಇಟಾಲಿಯರ ಸೈನ್ಯವು ಪಟ್ಟಣದೊಳಗೆ ಹೋಯಿತು. ರೋದೆಸಿನ ಗವರ್ನರರಿಗೆ ಶರಣಾಗತನಾಗಬೇಕೆಂಬ ಒಂದು ಪತ್ರವು ಕಳುಹಿಸಲ್ಪಟ್ಟಿತು. ಇಟಾಲಿಯರನ್ನು ಎದುರಿಸಲೂ ಪಟ್ಟಣವನ್ನು ಕಾಪಾಡಲೂ ತನಗೆ ಶಕ್ತಿಇಲ್ಲದ್ದರಿಂದ ಶರಣಾಗತನಾಗುವೆನೆಂಬ ಉತ್ತರ ಬಂತು. ಕೂಡ್ಲೇ ಇಟಾಲಿಯರು ತಮ್ಮ ಬಾವಟೆಯನ್ನು ಏರಿಸಿದರು.

ಮೊರೊಕ್ಕದ ಎಲ್ಕೆಸಾಬೆಜ್‌ನಲ್ಲಿ ಫ್ರೆಂಚರಿಗೂ ಮೂರರಿಗೂ ಆದ ಯುದ್ಧದಲ್ಲಿ ಫ್ರೆಂಚರಲ್ಲಿ ೨೨ ಮಂದಿ ಮಡಿದರು. ೩೦ ಮಂದಿ ಗಾಯವೊಡೆದರು.

ಲಂಡನಿನ ವೆಸ್ಟ್ ಎಂಡಿನಲ್ಲಿ ೧೫,೦೦೦ ಹೊಲಿಗೆ ಕೆಲಸಗಾರರು ಮುಷ್ಕರ ಹಾಕಿರುವರು. ಹೊಲಿಗೆ ಕಂಪೆನಿಯವರು ಇವರಿಗೆ ತುಸ ಸಂಬಳವನ್ನು ಕೊಡುವದೇ ಈ ಮುಷ್ಕರಕ್ಕೆ ಕಾರಣ. ಮೆ। ಅಸ್ಕ್ವಿತ್, ಮೆ। ಲ್ಯೊಡ್ ಜೋರ್ಜ, ಸರ್ ಎಡ್ವರ್ಡ್‌ಗ್ರೇ ಮೊದಲಾದ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯ ಮುಂದಾಳುಗಳು ಈ ಮುಷ್ಕರದ ತಕ್ಕ ಕಾರಣವನ್ನು ವಿಚಾರಿಸಲು ಪ್ರಾರಂಭಿಸಿದ್ದಾರೆ.

ಮಿಕಾದೋ ರಾಜರವರಿಗೆ ದಲಾಲಿ ಲಾಮರವರು ಚಿನ್ನದಿಂದ ಮಾಡಿದ ಬುದ್ಧನ ಪ್ರತಿಮೆಯನ್ನು ಕೊಡಲಿಕ್ಕಿದ್ದಾರೆಂಬ ವಾರ್ತೆ ಇದೆ.

ಮೊರೊಕ್ಕದ ಎಲ್ಕೆಸಾಬೆಜ್ ಎಂಬಲ್ಲಿ ಮೂರರು ಫ್ರೆಂಚ್ ಸೈನೀಕರ ಮೇಲೆ ಬಿದ್ದು ೭ ಮಂದಿಯನ್ನು ಕೊಂದರು. ಒಬ್ಬ ಆಫೀಸರನೂ ೭ ಸೈನೀಕರೂ ಕಾಣದೆ ಹೋಗಿರುವರು. ಮೂವತ್ತು ಜನರು ಗಾಯ ಪಟ್ಟಿರುವರು, ಈ ಪೈಕಿ ೭ ಮಂದಿ ಮೋದಂಡ ಸ್ಥಿತಿಯಲ್ಲಿರುವರು.

ಒಲಿಂಪಿಕ್ ಎಂಬ ಹಡಗದಲ್ಲಿ ಮುಷ್ಕರ ಹಿಡಿದ ನಾವಿಕರು ಕೈದು ಮಾಡಲ್ಪಟ್ಟು ವಿಚಾರಣೆಗೆ ಗುರಿ ಮಾಡಲ್ಪಟ್ಟಿದ್ದರೆಂದು ತಿಳಿಸಿತ್ತಷ್ಟೆ. ಮೆಜಿಸ್ಟ್ರೇಟರು ತನಖಿ ನಡಿಸಿ ಅವರು ಪುನಃ ಕೆಲಸಕ್ಕೆ ಹಾಜರಾಗುವರೆಂದು ನಿರೀಕ್ಷಿಸುತ್ತೇನೆಂದು ಹೇಳಿ ಅವರನ್ನು ಖುಲಾಸು ಪಡಿಸಿದರು.

ಬ್ರಿಟಿಷ್ ಸರಕಾರದವರು ೭೦ ಆಕಾಶ ನಾವೆಗಳನ್ನು ಕೊಂಡು ಕೊಂಡಿರುವರಲ್ಲದೆ ಪುನಃ ೧೦೦ ಅಂಥಾ ನಾವೆಗಳನ್ನು ತಯಾರಿಸಲು ಒಂದು ಕಂಪೆನಿಯವರನ್ನು ಕೇಳಿಕೊಂಡಿರುವರು.

ಚೀನ ದೇಶದಲ್ಲಿ ಒಂದು ಬೇಂಕಿನ ಮಾಲಿಕನಾದ ಸೂಂಗ್ ಯು ತ್ಸಾಂಗ್ ಎಂಬವನನ್ನು ಜೆಸ್‌ನೆಲ್ಡ್ ಎಂಬಲ್ಲಿಂದ ನಾನ್ಕೊ ಎಂಬಲ್ಲಿಗೆ ಕದ್ದೊಯ್ದಿರುವರು, ಅವನು ಒಂದು ದಿನ ಕೂತುಕೊಂಡಿರುವಾಗ ಅವನ ಕೆಲವು ಸ್ನೇಹಿತರು ಆತನಲ್ಲಿಗೆ ಒಂದು ಯುನೈಟೆಡ್ ಸ್ಟೇಟಿನಲ್ಲಿ ವಿದ್ಯಾವ್ಯಾಸಂಗ ಮಾಡಿ ಹಿಂದೆರಳಿರುವ ಒಬ್ಬ ಸ್ನೇಹಿತನ ಬಹುಮಾನಾರ್ಥವಾಗಿ ತಯಾರಿಸಿರುವ ಔತನಕ್ಕೆ ಆಮಂತ್ರಿಸಿದರು. ಈತನು ಏನೊಂದೂ ಅನುಮಾನ ಪಡದೆ ಆಮಂತ್ರಣವನ್ನು ಸ್ವೀಕರಿಸಿ ಗಾಡಿಯಲ್ಲಿ ಕೂತು ನಿಯಮಿತ ಸಮಯಕ್ಕೆ ಔತನದ ಮನೆಯ ಒಳಗೆ ಹೋದನಂತರ ಮತ್ತೊಂದು ಗಾಡಿಯಲ್ಲಿ ವಿದೇಶಿ ಉಡುಪು ಧರಿಸಿದ ೧೦-೧೨ ಮಂದಿ ಇದೇ ಮನೆಗೆ ಬಂದು ಮನೆಯೊಳಗೆ ನುಗ್ಗಿ ಊಟ ಮಾಡುತ್ತಿದ್ದ ಬೇಂಕರನನ್ನು ಹಿಡಿದು ಬೇಂಕಿನ ಪುಸ್ತಕ ಪರಿಶೋಧನೆ ಮಾಡಲಿಕ್ಕಿರುವುದರಿಂದ ತಮ್ಮೊಡನೆ ಬರಬೇಕೆಂದು ಹೇಳಿ ಬಲತ್ಕಾರದಿಂದ ಆತನನ್ನು ಹೊರಗೆ ವೈದರು. ಈ ಕಳ್ಳರು ಆಯುಧ ಪಾಣಿಗಳಾಗಿದ್ದದರಿಂದ ಈತನೊಡನೆ ಊಟಕ್ಕೆ ಕೂತಿದ್ದವರಲ್ಲಿ ಯಾರೂ ಶಬ್ದವೆತ್ತಲಿಲ್ಲ. ಅನಂತರ ಈತನನ್ನು ಗಾಡಿಯಲ್ಲಿ ಕೂಂಡ್ರಿಸಿ ನದಿಯ ಬದಿಗೆ ತಕ್ಕೊಂಡು ಹೋಗಿ ದೋಣಿಯಲ್ಲಿ ಹಾಕಿ ನಾನ್ಕೊ ಎಂಬಲ್ಲಿಗೆ ವೈದರು. ಮಾರಣೇ ದಿನ ಆ ಬೇಂಕರನಿಂದ ತಾನು ಸೌಖ್ಯದಲ್ಲಿದ್ದೇನೆ, ತನ್ನನ್ನು ಚೆನ್ನಾಗಿ ಪರಂಬರಿಸುತ್ತಾರೆಂಬದಾಗಿ ತಿಳಿಸುವ ಒಂದು ಪತ್ರವು ಜೆಸ್‌ನೆಲ್ಡಿನ ಬೇಂಕಿನ ಹುದ್ದೆದಾರರಿಗೆ ತಲಪಿತು.

ಟೆಕ್ಸಾಸ್ ಎಂಬ ಒಂದು ಹಡಗವು ಸ್ಮಿರ್ನದ ಹತ್ತರ ಸಮುದ್ರದಡಿಯ ಸರಿಗೆಗಳಿಗೆ ತಾಗಿ ಮುಣುಗಿ ಹೋಯಿತು. ೧೮೦ ಮಂದಿ ಮೃತಪಟ್ಟರು.

ಟಿಟಾನಿಕ್ ಹಡಗ ನಷ್ಟದ ವಿಷಯವಾಗಿ ಅಮೇರಿಕದಲ್ಲಿಯೂ ಇಂಗ್ಲಾಂಡಿನಲ್ಲಿಯೂ ತಕ್ಕ ವಿಚಾರ ನಡೆಯುತ್ತಿದೆ. ಟಿಟಾನಿಕ್ ಹಡಗದಲ್ಲಿ ಮೃತ ಪಟ್ಟ ಲುಯಿಸ್ ರೊಬಿನ್ಸ್ ಎಂಬವರ ಪತ್ನಿಯು ಹ್ವೈಟ್ ಸ್ಟಾರ್ ಹಡಗ ಕಂಪೆನಿಯ ಮೇಲೆ ದಾವೆ ಮಾಡಲಿಕ್ಕಿದ್ದಾಳೆ.

ಮೃತರ ಶವಗಳನ್ನು ಹುಡುಕಲಿಕ್ಕೆ ಹೋದ ಮೆಕಾಯಿ ಬೆನ್ನೆಟ್ ಎಂಬ ಹಡಗವು ೧೯೦ ಹೆಣಗಳನ್ನು ಹಾಲಿಫಾಕ್ಸ್ ಬಂದರಕ್ಕೆ ತಂದಿರುವುದು. ಹಡಗವು ತಲಪುತ್ತಲೇ ಶೋಕಾರ್ಥವಾಗಿ ದೇವಾಲಯದ ಗಂಟೆಗಳು ಬಾರಿಸಲಾಯಿತು. ಈ ಹಡಗದವರು ೧೧೭ ಮಂದಿಯ ಹೆಣಗಳನ್ನು ಹಡಗೆ